# ಯುರೋಪ್ ಚರಿತ್ರೆಯ ವಿವಿಧ ಆಯಾಮಗಳು

## ಪ್ರಧಾನ ಸಂಪಾದಕರ ಮಾತು

ಚರಿತ್ರೆ ಬರವಣಿಗೆ ಕ್ರಮದಲ್ಲಿ ಮಹತ್ತರ ಬದಲಾವಣೆಯನ್ನು ಕಳೆದ ಶತಮಾನದಲ್ಲಿ ಮತ್ತು ಈ ಶತಮಾನದ ಮೊದಲ ದಶಕದಲ್ಲಿ ನೋಡಬಹುದು. ನಮ್ಮ ದೇಶದ ಅಥವಾ ನಮ್ಮ ಪ್ರದೇಶದ ಚರಿತ್ರೆ ಬರೆಯುವ ಸಂದರ್ಭದಲ್ಲಿ ನಮಗೆ ನಮ್ಮನ್ನು ಅರ್ಥ ಮಾಡಿಕೊಳ್ಳುವ ಚರಿತ್ರೆಯನ್ನು ರೂಪಿಸಲು ಸಾಧ್ಯವಾಗಲಿಲ್ಲವಲ್ಲ ಎಂಬ ವಿಚಾರ ಗಮನಾರ್ಹವಾದುದು. ವಸಾಹತುಶಾಹಿ ಚರಿತ್ರೆಕಾರರು ಹಾಕಿಕೊಟ್ಟ ಚೌಕಟ್ಟಿನೊಳಗೆ ನಮ್ಮ ಬಹುತೇಕ ಚರಿತ್ರೆ ಬರವಣಿಗೆಗಳು ರೂಪಿಸಲ್ಪಟ್ಟಿವೆ. ವಸಾಹತುಶಾಹಿ ಚರಿತ್ರೆ ಬರವಣಿಗೆ ಯನ್ನು ಉಗ್ರವಾಗಿ ಟೀಕಿಸಿದ ರಾಷ್ಟ್ರೀಯವಾದಿಗಳಾಗಲಿ ಅಥವಾ ಈ ಎರಡೂ ಕ್ರಮಗಳನ್ನು ತೀವ್ರವಾಗಿ ವಿಶ್ಲೇಷಣೆಗೆ ಒಳಪಡಿಸಿದ ಮಾರ್ಕ್ಸ್‌ವಾದಿ ಬರವಣಿಗೆ ಕ್ರಮವಾಗಲಿ ಇದಕ್ಕೆ ಹೊರತಲ್ಲ. ವಸಾಹತ್ತೋತ್ತರ ದಿನಗಳಲ್ಲಿ ಹೊರಬಂದ ರಾಷ್ಟ್ರೀಯವಾದಿ ಮತ್ತು ಮಾರ್ಕ್ಸ್‌ವಾದಿ ಹಿನ್ನೆಲೆಯ ಅತ್ಯದ್ಭುತ ಕೃತಿಗಳೆಲ್ಲ ಇದಕ್ಕೆ ಸಾಕ್ಷಿಯಾಗಿವೆ. ವ್ಯವಸ್ಥೆಯನ್ನು ಅರ್ಥ ಮಾಡಿಕೊಳ್ಳುವ ಸಂದರ್ಭದಲ್ಲಾಗಲಿ, ವಸಾಹತು ವಿರೋಧಿ ಹೋರಾಟದ ಸಂದರ್ಭದಲ್ಲಾಗಲಿ, ರಾಷ್ಟ್ರೀಯ ಹೋರಾಟದ ಸಂದರ್ಭದಲ್ಲಾಗಲಿ ಅಥವಾ ಹೊಸ ರಾಷ್ಟ್ರದ ನಿರ್ಮಾಣದ ಸಂದರ್ಭದಲ್ಲಾಗಲಿ ಈ ಕ್ರಮಗಳೆಲ್ಲ ಭಾರತದ ನೆಲದಲ್ಲಿ ಅಥವಾ ಹೊರಗೆ ದೊರೆತ ಎಲ್ಲ ಬಗೆಯ ಲಭ್ಯ ಆಕರಗಳನ್ನು ಆಧರಿಸಿ ಚರಿತ್ರೆಯನ್ನು ಬರೆಯುವ ಪ್ರಯತ್ನವನ್ನು ಮಾಡಿದವು. ಸೈದ್ಧಾಂತಿಕವಾಗಿ ವಿರೋಧಾಭಾಸಗಳಿದ್ದರೂ ರಾಷ್ಟ್ರೀಯವಾದಿ ಹಾಗೂ ಮಾರ್ಕ್ಸ್‌ವಾದಿ ಬರಹಗಳು ಆಯಾ ವಿದ್ವಾಂಸರು ಆಶಿಸಿದ ಭವಿಷ್ಯದ ಭಾರತವನ್ನು ಕಟ್ಟಲು ಚರಿತ್ರೆಯ ಬರವಣಿಗೆಗೆ ಮಾರು ಹೋದದ್ದನ್ನು ಗಮನಿಸಬಹುದು.

ಚರಿತ್ರೆಯನ್ನು ತಳದಿಂದ ನೋಡಬೇಕು ಎನ್ನುವ ಸಬಾಲ್ಟರ್ನ್‌ಚರಿತ್ರೆಕಾರರೂ ಇದಕ್ಕೆ ಹೊರತಾಗಿಲ್ಲ. ಸಬಾಲ್ಟರ್ನ್‌ಚರಿತ್ರೆ ಬಿಟ್ಟು ಉಳಿದೆಲ್ಲ ಚರಿತ್ರೆಗಳು 'ಎಲೈಟ್' ಚರಿತ್ರೆ ಎಂದು ಬಲವಾಗಿ ನಂಬಿದ ಸಬಾಲ್ಟರ್ನ್‌ಚರಿತ್ರೆಕಾರರು ಕೂಡ ಈ ನಿಟ್ಟಿನಲ್ಲಿ ಮಾರ್ಕ್ಸ್‌ವಾದಿ ಚರಿತ್ರೆಕಾರರಂತೆ `ಒಪ್ಪಿತ ಚರಿತ್ರೆಗೆ' ಸವಾಲುಗಳನ್ನು ಹಾಕಿದರು ಮತ್ತು ಸವಾಲುಗಳನ್ನು ಹಾಕಿಸಿಕೊಂಡರು. ಚರಿತ್ರೆ ಬರವಣಿಗೆ ಪರಂಪರೆಯಲ್ಲಿ ಇದೊಂದು ನಿರಂತರ ಪ್ರಕ್ರಿಯೆ.

ಭಾರತದ ಚರಿತ್ರೆಯನ್ನೇ ಪುನಾರಚಿಸಬೇಕೆಂಬ ಪುನರುತ್ಥಾನವಾದಿಗಳಿಗಿಂತ ಭಿನ್ನ ಸೈದ್ಧಾಂತಿಕತೆಯಿರುವ ಅನೇಕ ವಿದ್ವಾಂಸರು ಈ ದಿಸೆಯಲ್ಲಿ ಚರಿತ್ರೆಯ ಘಟನೆಗಳನ್ನು ಮತ್ತು ಚರಿತ್ರೆಕಾರರನ್ನು ತೀವ್ರವಾಗಿ ವಿಶ್ಲೇಷಿಸುತ್ತಾ ಅವರವರ ಬದುಕಿಗೆ ಹತ್ತಿರವಿರುವ ಸತ್ಯಗಳನ್ನು ಹುಡುಕುತ್ತಿರುವುದು ಸರಿಯಷ್ಟೆ. ಭಾರತ ಉಪಖಂಡದ ಚರಿತ್ರೆಯನ್ನು ರೂಪಿಸಲು ಪಡುತ್ತಿರುವ ಸಂಕೀರ್ಣ ಸಂದರ್ಭದಲ್ಲಿ ವಿಶ್ವದ ವಿವಿಧೆಡೆಯ ಚರಿತ್ರೆಯನ್ನು ಕನ್ನಡದಲ್ಲಿ ಚರ್ಚಿಸುವುದರ ಸವಾಲು ಭಿನ್ನ ರೀತಿಯದು. ಪಾಶ್ಚಾತ್ಯರು ಭಾರತವನ್ನು ನೋಡಿದ ರೀತಿಯಲ್ಲಿ ಭಾರತೀಯರು ತಮ್ಮ ಅನುಭವದ ಮೂಲಕ ಪಾಶ್ಚಾತ್ಯರನ್ನು, ಆಫ್ರಿಕಾದವರನ್ನು ನೋಡಬೇಕೆಂಬ ತವಕ ನಮಗಿದ್ದರೂ ಬರವಣಿಗೆ ಕ್ರಮದ ಅನೇಕ ಮಿತಿಗಳು ನಮ್ಮನ್ನು ಬಿಡಲಿಲ್ಲ. ಕನ್ನಡ ವಿಶ್ವವಿದ್ಯಾಲಯದಲ್ಲಿ ಇಂತಹ ಪ್ರಶ್ನೆಗಳು ಎದುರಾದಾಗಲೆಲ್ಲ ಅವುಗಳನ್ನು ಬಗೆಹರಿಸುವುದು ಹೇಗೆ ಎಂಬ ಚಿಂತನೆಯೂ ಆರಂಭವಾಗುತ್ತದೆ. ಇಂತಹ ಚಿಂತನೆಯ ಹಿನ್ನೆಲೆಯಲ್ಲಿ ನಾವು `ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟಗಳನ್ನು' ಹೊರತರುತ್ತಿದ್ದೇವೆ.

ಚರಿತ್ರೆಯು ಪ್ರತಿಯೊಬ್ಬರ ಜೀವನದ ಭಾಗವಾಗಿ ಕೆಲಸ ಮಾಡುತ್ತಿರುವ ಪ್ರತಿ ಸಮುದಾಯಃವರ್ಗದ ನೆರಳಾಗಿ ಕಾಡುತ್ತಾ, ಸಮಸ್ಯೆಗಳನ್ನು ಅರ್ಥ ಮಾಡಿಕೊಳ್ಳುತ್ತಿರುವ ಜ್ಞಾನಶಿಸ್ತಾಗಿ ರೂಪುಗೊಂಡ ಬಗೆಗಳನ್ನು ಪ್ರಸ್ತುತ ಸಂಪುಟಗಳು ಅನಾವರಣಗೊಳಿಸಲು ಯತ್ನಿಸಿವೆ. ಜನರಲ್ ನಾಲೆಡ್ಜ್‌ನ ಭಾಗವಾಗಿ ಚರಿತ್ರೆಯನ್ನು ನೋಡುವ ಕ್ರಮಕ್ಕಿಂತ ಭಿನ್ನವಾದ ಕ್ರಮ ಇದು. ನಮ್ಮದಲ್ಲದ ಸಂಸ್ಕೃತಿ, ನಾಗರಿಕತೆ, ರಾಜಕೀಯ ಬೆಳವಣಿಗೆಗಳು, ರಾಜ್ಯಗಳ ರೂಪುಗೊಳ್ಳುವಿಕೆ, ವ್ಯವಸ್ಥೆಯ ವಿವಿಧ ಮಜಲುಗಳು, ಸಂಘರ್ಷ, ಹೋರಾಟ ಮುಂತಾದ ಪ್ರಕ್ರಿಯೆಗಳನ್ನು ಏಷ್ಯಾ, ಯುರೋಪ್, ಆಫ್ರಿಕಾಗಳ ಸಂದರ್ಭದಲ್ಲಿ ದಾಖಲಿಸಲು ಪ್ರಸ್ತುತ ಸಂಪುಟಗಳು ಪ್ರಯತ್ನಿಸಿವೆ.

ಭಾರತ ಉಪಖಂಡ ಸಂಪುಟಗಳು ಹಾಗೂ ಸಮಕಾಲೀನ ಸಂಪುಟವು ನಮ್ಮೊಳಗಿನ ಸಂಕೀರ್ಣ ವ್ಯವಸ್ಥೆ, ಸಂಘರ್ಷ, ಸೌಹಾರ್ದತೆ ಮತ್ತು ವೈರುಧ್ಯಗಳ ವಿವಿಧ ಆಯಾಮಗಳನ್ನು ಒಳಗೊಳ್ಳುವ ಪ್ರಯತ್ನಗಳನ್ನು ಮಾಡಿವೆ. ಚರಿತ್ರೆ ಬರವಣಿಗೆ ಕ್ರಮ ಮತ್ತು ವಿಧಾನದ ಸಂಪುಟವು ಜಗತ್ತಿನ ಬೇರೆ ಬೇರೆ ಪರಂಪರೆಗಳ ಬೌದ್ಧಿಕ ವಾಙ್ಮಯಗಳನ್ನು ಕನ್ನಡದಲ್ಲಿ ಚರ್ಚಿಸುವ ಪ್ರಯತ್ನವನ್ನು ಮಾಡಿದೆ.

ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಡಾ. ಎಚ್.ಜೆ.ಲಕ್ಕಪ್ಪಗೌಡ ಅವರ ಸಂದರ್ಭದಲ್ಲಿ ಎ೨೦೦೧ರಲ್ಲಿಏ ಬಿಡುಗಡೆಯಾದ `ಚರಿತ್ರೆ ವಿಶ್ವಕೋಶ'ಕ್ಕೆ ನಂತರದ ದಿನಗಳಲ್ಲಿ ಅಷ್ಟೊಂದು ಬೇಡಿಕೆ ಇರುತ್ತದೆ ಎಂದು ನಾನಾಗಲಿ ಅಥವಾ ನಮ್ಮ ಸಂಪಾದಕ ಬಳಗದ ಸದಸ್ಯರಾಗಲಿ ಅಂದುಕೊಂಡಿರಲಿಲ್ಲ. ೧೯೯೬ರಲ್ಲಿ ನಮ್ಮ ಆರಂಭಿಕ ಕುಲಪತಿ ಗಳಾಗಿದ್ದ ಡಾ. ಚಂದ್ರಶೇಖರ ಕಂಬಾರ ಹಾಗೂ ಆಗಿನ ಕುಲಸಚಿವರಾಗಿದ್ದ ಡಾ. ಕೆ.ವಿ.ನಾರಾಯಣ ಅವರ ಒತ್ತಾಸೆಯ ಫಲವೇ ಚರಿತ್ರೆ ವಿಶ್ವಕೋಶ ಎಂದರೆ ಅತಿಶಯೋಕ್ತಿ ಯೇನಲ್ಲ. ನಂತರದ ಕುಲಪತಿಗಳಾಗಿದ್ದ ಡಾ. ಬಿ.ಎ.ವಿವೇಕ ರೈ ಅವರ ಮಾರ್ಗದರ್ಶನದಲ್ಲಿ ಮತ್ತು ಚರಿತ್ರೆ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ಕೆ.ಮೋಹನ್‌ಕೃಷ್ಣ ರೈ ಅವರ ಸಹಕಾರದಿಂದ ವಿಭಾಗದ ಯೋಜನೆಯಾಗಿ ಬಲು ಬೇಡಿಕೆಯಿದ್ದ ಚರಿತ್ರೆ ವಿಶ್ವಕೋಶವನ್ನು ಬಿಡಿ ಬಿಡಿ ಪುಸ್ತಕಗಳನ್ನಾಗಿ ತರುವ ಯೋಜನೆಯನ್ನು ೨೦೦೫ರಲ್ಲಿ ಕೈಗೆತ್ತಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಸಂಶೋಧಕರಿಗೆ, ಅಧ್ಯಾಪಕರಿಗೆ ಮತ್ತು ಬಹಳ ಮುಖ್ಯವಾಗಿ ವಿದ್ಯಾರ್ಥಿಗಳಿಗೆ ಸುಲಭ ಬೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ಸಂಪುಟಗಳು ಸಿಗುವಂತೆ ಯೋಜನೆಯನ್ನು ಕಾರ್ಯಗತಗೊಳಿಸಲಾಯಿತು. ಹೀಗಾಗಿ ಚರಿತ್ರೆ ವಿಶ್ವಕೋಶದ ಪ್ರತಿ ಬಿಡಿ ಭಾಗಗಳನ್ನು ಪರಿಷ್ಕಾರಕ್ಕೆ ಒಳಪಡಿಸಬೇಕೆಂದು ತೀರ್ಮಾನಿಸಿ ಅದಕ್ಕೆ ಸಂಬಂಧಿಸಿದ ಕೆಲಸಗಳನ್ನು ಆರಂಭಿಸಲಾಯಿತು. ಹಾಗೆಯೇ ಅನೇಕ ಬಿಡಿ ಭಾಗಗಳಲ್ಲಿ ತೀರಾ ಅಗತ್ಯವಾಗಿ ಬೇಕಾಗಿದ್ದ ಇನ್ನೂ ಕೆಲವು ಲೇಖನಗಳನ್ನು ಸಿದ್ಧಪಡಿಸಿ ಪ್ರತಿ ಸಂಪುಟವು ಓದುಗರ ಅಪೇಕ್ಷೆಯನ್ನು ಪೂರ್ಣಗೊಳಿಸುವಂತೆ ಅವಿರತ ಶ್ರಮವನ್ನು ಹಾಕಲಾಯಿತು. ಚರಿತ್ರೆ ವಿಶ್ವಕೋಶದ ಸಂಪಾದಕೀಯ ಸಮಿತಿಯಲ್ಲಿದ್ದ ಡಾ. ಕೆ.ಮೋಹನ್‌ಕೃಷ್ಣ ರೈ ಹಾಗೂ ಡಾ. ಎನ್.ಚಿನ್ನಸ್ವಾಮಿ ಸೋಸಲೆ ಅವರೊಂದಿಗೆ ಈ ಯೋಜನೆಯಲ್ಲಿ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ಪಾಲ್ಗೊಂಡು ಪರಿಷ್ಕೃತ ಆವೃತ್ತಿಗಳನ್ನು ಯಶಸ್ವಿಯಾಗಿ ಹೊರತರಲು ಶ್ರಮ ವಹಿಸಿದರು. ಈ ಹಿನ್ನೆಲೆಯಲ್ಲಿ ಚರಿತ್ರೆ ಬರವಣಿಗೆ ಕ್ರಮ ಮತ್ತು ವಿಧಾನ, ಭಾರತ ಉಪಖಂಡದ ವಸಾಹತುಪೂರ್ವ ಚರಿತ್ರೆ, ಭಾರತ ಉಪಖಂಡದ ಆಧುನಿಕ ಚರಿತ್ರೆ, ಏಷ್ಯಾ, ಯುರೋಪ್, ಆಫ್ರಿಕಾ, ಅಮೆರಿಕ ಹಾಗೂ ಸಮಕಾಲೀನ ಕರ್ನಾಟಕದ ಮೇಲೆ ವಿವಿಧ ಸಂಪುಟಗಳನ್ನು ಸಿದ್ಧಪಡಿಸಲಾಗಿದೆ. ಏಷ್ಯಾ ಮತ್ತು ಯುರೋಪ್‌ನ ಸಂಪುಟಗಳ ಸಂಪಾದಕರಾಗಿ ಡಾ. ಕೆ.ಮೋಹನ್‌ಕೃಷ್ಣ ರೈ ಅವರು, ಆಫ್ರಿಕಾ ಹಾಗೂ ಸಮಕಾಲೀನ ಕರ್ನಾಟಕ ಸಂಪುಟಗಳ ಸಂಪಾದಕರಾಗಿ ಡಾ. ಎನ್.ಚಿನ್ನಸ್ವಾಮಿ ಸೋಸಲೆ ಅವರು, ಅಮೆರಿಕ ಸಂಪುಟದ ಸಂಪಾದಕರಾಗಿ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು, ಚರಿತ್ರೆ ಬರವಣಿಗೆ ಕ್ರಮ ಮತ್ತು ವಿಧಾನ ಸಂಪುಟದ ಸಂಪಾದಕರಾಗಿ ಡಾ. ವಿಜಯ್ ಪೂಣಚ್ಚ ತಂಬಂಡ ಮತ್ತು ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಅವರು ಹಾಗೂ ಡಾ. ವಿಜಯ್ ಪೂಣಚ್ಚ ತಂಬಂಡ ಸಂಪಾದಕತ್ವದಲ್ಲಿ `ಭಾರತ ಉಪಖಂಡ ವಸಾಹತುಪೂರ್ವ ಮತ್ತು ಆಧುನಿಕ ಚರಿತ್ರೆ' ಎಂಬ ಸಂಪುಟಗಳು ಹೊರಬಂದಿವೆ. ಪ್ರಧಾನ ಸಂಪಾದಕನಾಗಿ ಈ ಎಂಟು ಸಂಪುಟಗಳನ್ನು ಹೊರತರಬೇಕೆಂದು ಹಾಕಿಕೊಂಡ ಯೋಜನೆಯ ಸಫಲತೆಗೆ ಕಾರಣರಾದ ಸಂಪಾದಕ ಮಂಡಳಿಯ ನನ್ನ ಸಹೋದ್ಯೋಗಿಗಳಿಗೆ, ಸಂಪುಟಗಳಲ್ಲಿ ಲೇಖನಗಳನ್ನು ಬರೆದ ಎಲ್ಲ ಲೇಖಕರಿಗೆ ಹಾಗೂ ಅನುವಾದಕರಿಗೆ ನಾನು ಆಭಾರಿಯಾಗಿದ್ದೇನೆ.

ಏಕೀಕರಣಪೂರ್ವ ಕರ್ನಾಟಕ ಚರಿತ್ರೆಯನ್ನು ಕನ್ನಡ ವಿಶ್ವವಿದ್ಯಾಲಯವು ಈಗಾಗಲೇ ಏಳು ಸಂಪುಟಗಳಲ್ಲಿ ಪ್ರಕಟಿಸಿರುವುದರಿಂದ ಅವುಗಳನ್ನು ಇಲ್ಲಿ ಪೂರ್ಣ ಪ್ರಮಾಣದಲ್ಲಿ ಚರ್ಚಿಸಿಲ್ಲ. ಪ್ರಸ್ತುತ ಎಂಟು ಕೃತಿಗಳಲ್ಲಿ ಪ್ರಾಚೀನ ಹಾಗೂ ಮಧ್ಯಯುಗೀನ ಚರಿತ್ರೆಗಳಿಗೆ ಸಂಬಂಧಿಸಿದಂತೆ ಇರುವ ಅನೇಕ ವಿವರಗಳನ್ನು ಮತ್ತು ಚರಿತ್ರೆ ಬರವಣಿಗೆ ಕ್ರಮದಲ್ಲಿನ ಸಮಸ್ಯೆಗಳನ್ನು ಚರ್ಚಿಸಲಾಗಿದೆ. ಭಾರತ ಉಪಖಂಡದ ವಸಾಹತುಪೂರ್ವ ಸಂಪುಟ ಬಿಟ್ಟರೆ ಉಳಿದ ಸಂಪುಟಗಳು ಆಧುನಿಕ ಚರಿತ್ರೆಯನ್ನು ಪ್ರಮುಖವಾಗಿ ವಿಶ್ಲೇಷಿಸಿವೆ. ಸಾಮ್ರಾಜ್ಯಶಾಹಿ ಶಕ್ತಿಗಳು ಬೇರೆ ಬೇರೆ ಖಂಡಗಳ ಅನೇಕ ದೇಶಗಳನ್ನು ವಸಾಹತುಗಳನ್ನಾಗಿ ಮಾಡಿದ ಹಾಗೂ ಆ ವಸಾಹತುಶಾಹಿ ಸರಕಾರಗಳಿಗೆ ವಿರೋಧವಾಗಿ ಜನಾಂದೋಲನಗಳನ್ನು ಸಂಘಟಿಸಿದ ಸ್ಥಳೀಯ ರಾಷ್ಟ್ರೀಯ ಹೋರಾಟಗಳನ್ನು ಇವು ಒಳಗೊಂಡಿವೆ. ಹೋರಾಟದ ಪ್ರತಿಕ್ರಿಯೆಗಳ ಪ್ರಕ್ರಿಯೆಗಳನ್ನು ಈ ಸಂಪುಟಗಳು ವಿವರವಾಗಿ ಚರ್ಚಿಸಲು ಪ್ರಯತ್ನಿಸಿವೆ. ಆಫ್ರಿಕಾ ಮತ್ತು ಅಮೆರಿಕಾಗಳಲ್ಲಿನ ಮೂಲನಿವಾಸಿ ಬುಡಕಟ್ಟುಗಳು ಸಾಮ್ರಾಜ್ಯಶಾಹಿಗಳ ತುಳಿತಕ್ಕೆ ನೇರವಾಗಿ ಬಲಿಯಾದ ಚರಿತ್ರೆಯ ವಿವಿಧ

ಘಟ್ಟಗಳನ್ನು ದಾಖಲು ಮಾಡಲು ಪ್ರಯತ್ನಿಸಲಾಗಿದೆ. ಈ ಮೂಲನಿವಾಸಿಗಳ ಪ್ರತಿಭಟನೆಯನ್ನು ಅವರ ಸಾಂಸ್ಕೃತಿಕ ಗುರುತೇ ಇಲ್ಲದ ರೀತಿಯಲ್ಲಿ ಮಟ್ಟ ಹಾಕಿ ವಸಾಹತುಶಾಹಿಗಳು ಭದ್ರವಾಗಿ ಬೇರುಬಿಟ್ಟ ಬಗೆಗಳನ್ನು ಅರಿಯಲು ಈ ಸಂಪುಟಗಳು ಪ್ರಯತ್ನಿಸಿವೆ.

ವಸಾಹತುಶಾಹಿಗಳು ಇದೇ ರೀತಿಯಲ್ಲಿ ಏಷ್ಯಾದ ದೇಶಗಳನ್ನೂ ಸುಲಿಗೆ ಮಾಡಿ ಜನರ ಹೋರಾಟಗಳನ್ನು ಸುಮಾರು ಒಂದೂವರೆ ಶತಮಾನಗಳ ಕಾಲ ದಮನಿಸಿದವು. ಆದರೂ, ದ್ವಿತೀಯ ಮಹಾಯುದ್ಧದ ನಂತರ ಮುಖ್ಯವಾಗಿ ಏಷ್ಯಾದಲ್ಲಿ ತಮ್ಮದೇ ಗುರುತನ್ನು ಸ್ಥಾಪಿಸಲು ಈ ರಾಷ್ಟ್ರೀಯ ಹೋರಾಟಗಳಿಗೆ ಸಾಧ್ಯವಾಯಿತು. ವಸಾಹತುಶಾಹಿ ಚರಿತ್ರೆಯನ್ನು ವಿಶ್ಲೇಷಿಸು ವುದರೊಂದಿಗೆ ಪ್ರಸಕ್ತ ವಿದ್ಯಮಾನಗಳನ್ನು ಸಂದರ್ಭೋಚಿತವಾಗಿ ನಮ್ಮ ಸಂಪುಟಗಳಲ್ಲಿ ವಿದ್ವಾಂಸರು ಚರ್ಚಿಸಿದ್ದಾರೆ. ಭಿನ್ನ ಭಿನ್ನ ಬೌದ್ಧಿಕ ಸಿದ್ಧಾಂತಗಳು, ಸಾಮಾಜಿಕ ಹಾಗೂ ರಾಷ್ಟ್ರೀಯ ಪ್ರಶ್ನೆಗಳು ಧ್ರುವೀಕರಣಗೊಳ್ಳುವ ಭಿನ್ನ ಭಿನ್ನ ಬಗೆಗಳನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನಗಳನ್ನು ಪ್ರಸ್ತುತ ಸಂಪುಟಗಳು ಮಾಡಲು ಪ್ರಯತ್ನಿಸಿವೆ. ಇದರೊಂದಿಗೆ ಪ್ರಥಮ ಮತ್ತು ದ್ವಿತೀಯ ಮಹಾಯುದ್ಧಗಳು, ಶೀತಲಯುದ್ಧ, ಸೋವಿಯತ್ ರಷ್ಯಾದ ವಿಘಟನೆ ಹಾಗೂ ಜಾಗತೀಕರಣ ಪ್ರಕ್ರಿಯೆಗಳ ರಾಜಕೀಯಸಾಮಾಜಿಕಸಾಂಸ್ಕೃತಿಕ ಸಂಘರ್ಷಗಳನ್ನು ದಾಖಲಿಸುವ ಯತ್ನವನ್ನು ಮಾಡಲು ನಮ್ಮ ಸಂಪುಟಗಳು ಪ್ರಯತ್ನಿಸಿವೆ. ಹಾಗೆಯೇ ಬೇರೆ ಬೇರೆ ದೇಶಗಳ ಮತ್ತು ಜನರ ಸಾಮಾಜಿಕ, ಆರ್ಥಿಕ ಸಾಮ್ಯತೆಗಳನ್ನು, ಭಿನ್ನತೆಗಳನ್ನು, ಸಾಮರಸ್ಯಗಳನ್ನು, ಸಂಘರ್ಷಗಳನ್ನು ಮತ್ತು ಸಂಕೀರ್ಣ ಸಂಬಂಧಗಳನ್ನು ಪ್ರಸ್ತುತ ಸಂಪುಟಗಳು ವಿಶ್ಲೇಷಿಸುವ ಪ್ರಯತ್ನಗಳನ್ನು ಮಾಡಿವೆ.

ಆಧುನಿಕ ಚರಿತ್ರೆ ಎಂದರೆ ಯುರೋಪಿನ ಚರಿತ್ರೆಯೇ ಎನ್ನುವಷ್ಟರ ಮಟ್ಟಿಗಿನ ಮಾತು ಉತ್ಪ್ರೇಕ್ಷೆಯಂತೆ ಕಂಡರೂ ಅದು ಉತ್ಪ್ರೇಕ್ಷೆಯಲ್ಲ. ಐರೋಪ್ಯ ರಾಷ್ಟ್ರಗಳು ತಮ್ಮ ತಮ್ಮ ರಾಷ್ಟ್ರೀಯತೆಗಳನ್ನು ಬಲಪಡಿಸಿಕೊಳ್ಳುತ್ತಲೇ ಶಕ್ತಿಶಾಲಿಗಳಾಗಿ ರೂಪುಗೊಂಡವು. ಹಾಗೆಯೇ ಅವುಗಳು ಶಕ್ತಿ ರಾಜಕಾರಣದಲ್ಲಿ ಪರಸ್ಪರ ಕಾದಾಡಿಕೊಂಡು ಶಕ್ತಿ ಸಂವರ್ಧನೆ ಮಾಡಿಕೊಂಡ ದ್ದನ್ನು ನಾವು ಗಮನಿಸಬಹುದು. ಅವರ ಘರ್ಷಣೆ, ಕಾದಾಟ, ಯುದ್ಧ, ಮಹಾಯುದ್ಧಗಳು ಯುರೋಪಿನಲ್ಲಿ ಆರಂಭವಾದರೂ ಅವುಗಳ ಪರಿಣಾಮದಿಂದ ಇಡೀ ಜಗತ್ತೆ ತತ್ತರಿಸು ವಂತಾಯಿತು. ಅವರ ಮೇಲಾಟಗಳಿಂದಾಗಿ ಯುರೋಪಿನಿಂದಾಚೆಗೆ ವಸಾಹತುಗಳು ನಿರ್ಮಾಣವಾದವು. ಅವುಗಳನ್ನು ಹಿಂಡಿ ಯುರೋಪ್ ಜಗತ್ತು ವಿರಾಟ ಸ್ವರೂಪವನ್ನು ಪಡೆದು ಇಪ್ಪತ್ತು ಮತ್ತು ಇಪ್ಪತ್ತೊಂದನೆಯ ಶತಮಾನದಲ್ಲಿಯೂ ತನ್ನದಲ್ಲದ ಜಗತ್ತಿನ ಎಲ್ಲ ವ್ಯವಹಾರಗಳಲ್ಲಿಯೂ ಮೂಗು ತೂರಿಸುವ ಸಾಮರ್ಥ್ಯವನ್ನು ಪಡೆಯಿತು. ವಸಾಹತುಗಳು ನಿರ್ವಸಾಹತೀಕರಣಗೊಂಡ ಸಂಕ್ರಮಣ ಕಾಲಘಟ್ಟದಲ್ಲಿ ಐರೋಪ್ಯ ರಾಷ್ಟ್ರಗಳು ಅಮೆರಿಕ, ಆಫ್ರಿಕಾ ಮತ್ತು ಏಷ್ಯಾಗಳೊಡನೆ ಸ್ವಲ್ಪ ಹೊಂದಿಕೊಂಡು ಹೋಗುವ ವಾತಾವರಣ ನಿರ್ಮಾಣವಾಯಿತು. ಈ ಎಲ್ಲ ಸಂವಾದಗಳನ್ನು ಪ್ರಸ್ತುತ 'ಯುರೋಪ್ ಚರಿತ್ರೆಯ ವಿವಿಧ ಆಯಾಮಗಳು' ಎನ್ನುವ ಸಂಪುಟ ಹಿಡಿದಿಟ್ಟುಕೊಳ್ಳಲು ಪ್ರಯತ್ನಿಸಿದೆ. ಪ್ರಸ್ತುತ ಸಂಪುಟದ ಸಂಪಾದಕರಾದ ಡಾ.ಕೆ.ಮೋಹನ್ ಕೃಷ್ಣ ರೈ ಅವರಿಗೆ ಅಭಿನಂದನೆಗಳು.

ಡಾ. ಎಸ್.ಎ.ಬಾರಿ ಹಾಗೂ ಡಾ. ರಾಜಾರಾಮ ಹೆಗಡೆ ಅವರ ಮಾರ್ಗದರ್ಶನದಲ್ಲಿ ಚರಿತ್ರೆ ವಿಶ್ವಕೋಶವನ್ನು ಸಮರ್ಥವಾಗಿ ರಚಿಸಲು ಸಾಧ್ಯವಾದದ್ದನ್ನು ನಾನು ನೆನಪಿಸಿ ಕೊಳ್ಳಲೇಬೇಕು. ಪ್ರಸ್ತುತ ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ. ಎಸ್.ಎ.ಬಾರಿ ಹಾಗೂ ಚರಿತ್ರೆ ವಿಭಾಗದ ಪ್ರಾಧ್ಯಾಪಕರಾದ ಡಾ. ರಾಜಾರಾಮ ಹೆಗಡೆ ಅವರು ನಮ್ಮ ಸಂಪುಟಗಳ ವಿಷಯತಜ್ಞರಾಗಿ ಸಾಕಷ್ಟು ಸಲಹೆಸೂಚನೆ ನೀಡಿದ ಹಿನ್ನೆಲೆಯಲ್ಲಿ ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟಗಳನ್ನು ಯಶಸ್ವಿಯಾಗಿ ಹೊರತರಲು ಸಾಧ್ಯವಾಯಿತು. ಈ ಇಬ್ಬರು ವಿದ್ವಾಂಸರಿಗೆ ಸಂಪಾದಕ ಮಂಡಳಿಯು ಆಭಾರಿಯಾಗಿದೆ.

ಪ್ರಸ್ತುತ ಸಂಪುಟಗಳನ್ನು ಹೊರತರಲು ನಮಗೆ ಎಲ್ಲ ಬಗೆಗಳಿಂದಲೂ ಪ್ರೋ ನೀಡಿದ ಮಾನ್ಯ ಕುಲಪತಿಗಳಾದ ಡಾ. ಎ.ಮುರಿಗೆಪ್ಪ ಅವರಿಗೆ, ಕುಲಸಚಿವರಾದ ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ. ಮಂಜುನಾಥ ಬೇವಿನಕಟ್ಟಿ ಅವರಿಗೆ, ಹಿಂದಿನ ಕುಲಸಚಿವರಾದ ಡಾ. ಹಿ.ಚಿ.ಬೋರಲಿಂಗಯ್ಯ ಅವರಿಗೆ, ಪ್ರಸಾರಾಂಗದ ಹಿಂದಿನ ನಿರ್ದೇಶಕರಾದ ಡಾ. ಮೋಹನ ಕುಂಟಾರ್ ಅವರಿಗೆ ಸಂಪಾದಕ ಮಂಡಳಿಯ ಪರವಾಗಿ ನಾನು ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಚರಿತ್ರೆ ವಿಭಾಗದ ಮುಖ್ಯಸ್ಥರಾದ ಡಾ. ಎನ್.ಚಿನ್ನಸ್ವಾಮಿ ಸೋಸಲೆ ಅವರ ಸಹಕಾರಕ್ಕಾಗಿ ನಾನು ಆಭಾರಿ ಯಾಗಿದ್ದೇನೆ. ಪ್ರಸ್ತುತ ಸಂಪುಟ ಹೊರಬರಲು ನಿರಂತರವಾಗಿ ನಮಗೆ ಸಹಕರಿಸಿದ

ಚರಿತ್ರೆ ವಿಭಾಗದ ಸಹೋದ್ಯೋಗಿ ಡಾ. ಸಿ.ಆರ್.ಗೋವಿಂದರಾಜು ಹಾಗೂ ಪ್ರೊ. ಲಕ್ಷ್ಮಣ್ ತೆಲಗಾವಿ ಇವರಿಗೆ ಸಂಪಾದಕ ಮಂಡಳಿ ಆಭಾರಿಯಾಗಿದೆ.

ಪ್ರಸ್ತುತ ಸಂಪುಟಗಳ ಪುಟವಿನ್ಯಾಸ ಮಾಡಿದ ಪ್ರಸಾರಾಂಗದ ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನಮೂರ್ತಿ ಅವರಿಗೆ, ಮುಖಪುಟ ವಿನ್ಯಾಸ ಮಾಡಿದ ಶ್ರೀ ಯು.ಟಿ.ಸುರೇಶ್ ಅವರಿಗೆ, ಅಕ್ಷರ ಜೋಡಣೆ ಮಾಡಿದ ಶ್ರೀ ಸಾವಳಗಿ ಶಿವಲಿಂಗೇಶ್ವರ ಗ್ರಾಫಿಕ್ಸ್‌ನ ಶ್ರೀಮತಿ ರಶ್ಮಿ ಕೃಪಾಶಂಕರ್ ಅವರಿಗೆ ಹಾಗೂ ಸಂಪುಟಗಳನ್ನು ಮುದ್ರಿಸಿದ ಲಕ್ಮೀ ಮುದ್ರಣಾಲಯ ದವರಿಗೆ ನನ್ನ ಕೃತಜ್ಞತೆಗಳು.

## ಸಂಪುಟ ಸಂಪಾದಕರ ಮಾತು

**ಡಾ.ಕೆ.ಮೋಹನ್‌ಕೃಷ್ಣ ರೈ**

ಯುರೋಪ್ ತಾನು `ಆಧುನಿಕ' ಎಂಬುದಾಗಿ ಸ್ವಯಂ ಘೋಷಿಸಿಕೊಂಡು ಪ್ರಪಂಚವನ್ನು ಆಳಿದ್ದು ಜಾಗತಿಕ ಚರಿತ್ರೆ ಅಧ್ಯಯನ ಸಂದರ್ಭದಲ್ಲಿ ಕಂಡುಬರುವ ಬಹುಮುಖ್ಯ ಸಂಗತಿ. ಯುರೋಪಿನ ದೃಷ್ಟಿಕೋನದಿಂದಲೇ ಇತರ ಭೂಖಂಡಗಳ ಚರಿತ್ರೆಯನ್ನು ನಿರ್ಮಿಸುವ ಯುರೋಪ್ ಕೇಂದ್ರಿತ ಅಧ್ಯಯನ ವಿಧಾನವನ್ನು ಹುಟ್ಟು ಹಾಕಲಾಯಿತು. ಇದು ಯಾವುದೇ ದೇಶದ ಚರಿತ್ರೆ ನಿರ್ಮಾಣ ಸಂದರ್ಭದಲ್ಲಿ ತುಂಬ ಪ್ರಭಾವಶಾಲಿಯಾಗಿ ಹಾಗೂ ಸೈದ್ಧಾಂತಿಕವಾಗಿಯೂ ಅಷ್ಟೇ ಗಟ್ಟಿಯಾಗಿ ತನ್ನ ಛಾಪನ್ನು ಮೂಡಿಸುವ ಕೆಲಸವನ್ನು ಮಾಡಿಕೊಂಡು ಬಂದಿದೆ. ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿ ವ್ಯವಸ್ಥೆಗಳ ಮೂಲಕ ಈ ವಿಧಾನ ಅಧಿಕೃತತೆಯನ್ನು ಪಡೆದುಕೊಂಡಿತು. ಚರಿತ್ರೆ ಅಧ್ಯಯನದಲ್ಲಿ ಹೊಸ ಆಯಾಮಗಳು ಕಾಣಿಸಿಕೊಂಡ ಬಳಿಕ ಯುರೋಪ್ ಕೇಂದ್ರಿತ ಅಧ್ಯಯನ ಕ್ರಮದಲ್ಲಿ ಸ್ವಲ್ಪಮಟ್ಟಿನ ಸಡಿಲಿಕೆ ಕಾಣಿಸಿಕೊಂಡಿತು. ಏಕೆಂದರೆ ಈ ವಿಧಾನದಲ್ಲಿ ಅಧ್ಯಯನಕ್ಕೆ ಒಳಪಡುವ ವಿಚಾರ ಸ್ವತಂತ್ರವಾಗಿ ಚರ್ಚಿತವಾಗಲು ಸಾಧ್ಯವಿಲ್ಲ. ಅದು ಹೇರಲ್ಪಟ್ಟ ಸಿದ್ಧಾಂತದ ಚೌಕಟ್ಟಿನಲ್ಲಿಯೇ ವ್ಯವಹರಿಸಬೇಕಾದ ಮಿತಿಗೆ ಒಳಪಟ್ಟಿರುತ್ತದೆ. ಆದರೆ ಇಂದು ಚರಿತ್ರೆ ಅಧ್ಯಯನವು ಈ ಹೇರಲ್ಪಟ್ಟ ಅಧ್ಯಯನ ಮಾದರಿಯಿಂದ ಬಿಡುಗಡೆಗೊಂಡು ಆಯಾ ಪ್ರದೇಶದ ಚರಿತ್ರೆ, ಸಂಸ್ಕೃತಿಯ ಹಿನ್ನೆಲೆಯಲ್ಲಿ ವ್ಯಾಖ್ಯಾನಗೊಳ್ಳುವತ್ತ ಸಾಗುತ್ತಿದೆ. ಇದರರ್ಥ ಚರಿತ್ರೆ ಹಾಗೂ ಚರಿತ್ರೆಕಾರ ಸ್ವತಂತ್ರವಾಗಿ ವ್ಯವಹರಿಸುವಂತಾಗಿದೆ ಎಂದಲ್ಲ. ಬಂಡವಾಳಶಾಹಿ ವ್ಯವಸ್ಥೆಯೊಳಗೇ ಸ್ವಲ್ಪಮಟ್ಟಿನ ಸ್ವಾತಂತ್ರವನ್ನು ಕಂಡುಕೊಳ್ಳುವ ಪ್ರಯತ್ನ ನಡೆಯುತ್ತಿದೆ ಎನ್ನುವುದಷ್ಟೇ ಸತ್ಯ.

ಯುರೋಪ್ ಕೇಂದ್ರಿತ ಅಧ್ಯಯನ ವಿಧಾನಕ್ಕೆ ಸಂಬಂಧಪಟ್ಟಂತೆ ಇಲ್ಲಿ ಚರ್ಚಿಸಿರುವುದಕ್ಕೂ ಈ ಸಂಪುಟಕ್ಕೂ ನೇರ ಸಂಬಂಧವಿದೆ. ಪ್ರಸ್ತುತ ಸಂಪುಟವು ಯುರೋಪಿನ ಚರಿತ್ರೆಯನ್ನು ಪ್ರಾಚೀನದಿಂದ ಆಧುನಿಕ ಸಂದರ್ಭದವರೆಗೆ ವಿಶ್ಲೇಷಿಸುವ ಪ್ರಯತ್ನವನ್ನು ಮಾಡಿದೆ. ಯುರೋಪಿನ ಚರಿತ್ರೆಯನ್ನು ಅರ್ಥೈಸಿಕೊಂಡಾಗ ಮಾತ್ರ ಯುರೋಪ್ ಕೇಂದ್ರಿತ ಅಧ್ಯಯನ ವಿಧಾನದ ಹಿಂದಿನ ಧೋರಣೆಗಳು ಒಂದೊಂದಾಗಿ ಮನವರಿಕೆಯಾಗಲು ಸಾಧ್ಯ. ಯುರೋಪಿಯನ್ನರು ತಮ್ಮ ಚರಿತ್ರೆಯನ್ನು ಕಟ್ಟಿಕೊಂಡ ಬಗೆ ಹಾಗೂ ಅದನ್ನು ಇನ್ನಿತರ ದೇಶಗಳ ಚರಿತ್ರೆಗಿಂತ ಭಿನ್ನವಾಗಿ ನಿರೂಪಿಸಿರುವ ಬಗೆಗಳೆರಡೂ ಕುತೂಹಲಕರವಾದ ಅಧ್ಯಯನಕ್ಕೆ ಎಡೆಮಾಡಿಕೊಡುತ್ತವೆ. ಈ ಸಂಪುಟದಲ್ಲಿರುವ ಎಲ್ಲ ಲೇಖನಗಳೂ ಯುರೋಪಿನ ಆಯಾ ಕಾಲಘಟ್ಟದ ಚರಿತ್ರೆಯನ್ನು ದಾಖಲಿಸುವುದರ ಜೊತೆ ಜೊತೆಗೆ ವಿಶ್ಲೇಷಿಸುವ ಪ್ರಯತ್ನವನ್ನೂ ಮಾಡಿವೆ. ಈ ಸಂಪುಟವು ಗ್ರೀಕ್ ನಾಗರಿಕತೆಯ ಪೂರ್ವದ ಯುರೋಪ್ ಎನ್ನುವ ಆರಂಭದ ಲೇಖನದಿಂದ ಜಾಗತೀಕರಣ ಎನ್ನುವ ಕೊನೆಯ ಲೇಖನದವರೆಗೆ ಯುರೋಪಿನಲ್ಲಾದ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಧಾರ್ಮಿಕ ಸ್ಥಿತ್ಯಂತರಗಳ ವಿವರಗಳನ್ನು ನೀಡುತ್ತದೆ. ಯುರೋಪಿನಲ್ಲಿ ಚರ್ಚ್ ಹಿನ್ನೆಲೆಯ ಸಂಪ್ರದಾಯವಾದಿ ಧೋರಣೆಯನ್ನು ವಿಜ್ಞಾನ, ತಂತ್ರಜ್ಞಾನ ಹಾಗೂ ವಿಚಾರಗಳು ಮುಖಾಮುಖಿಯಾಗಿರುವುದು ಹಾಗೂ ಆ ಮೂಲಕ ವೈಜ್ಞಾನಿಕ ಮನೋಧರ್ಮವನ್ನು ಹುಟ್ಟುಹಾಕಿರುವುದು ಇಲ್ಲಿ ಹೆಚ್ಚು ಚರ್ಚಿತವಾಗಿವೆ.

ಪುನರುಜ್ಜೀವನ, ಸುಧಾರಣೆ, ವೈಜ್ಞಾನಿಕ ಕ್ರಾಂತಿ, ಹಸಿರು ಕ್ರಾಂತಿ, ಕೈಗಾರಿಕಾ ಕ್ರಾಂತಿ ಹಾಗೂ ವಿಚಾರಗಳ ಕ್ರಾಂತಿ ಮುಂತಾದ ಹಲವಾರು ಮೊದಲುಗಳನ್ನು ಕಂಡಿರುವ ಯುರೋಪ್ ಅವುಗಳ ಮೂಲಕ ತನ್ನ ಅಸ್ತಿತ್ವವನ್ನು ಭದ್ರಪಡಿಸಿಕೊಂಡು ಇತರರ ಅಸ್ತಿತ್ವ ವನ್ನು ನಿರಾಕರಿಸುವುದರ ಕುರಿತಾಗಿಯೂ ಪ್ರಸ್ತುತ ಸಂಪುಟದಲ್ಲಿ ಚರ್ಚಿಸಲಾಗಿದೆ. ಪ್ರಪಂಚ ಕಂಡ ಎರಡು ಜಾಗತಿಕ ಯುದ್ಧಗಳು ಯುರೋಪನ್ನು ಕೇಂದ್ರವಾಗಿಟ್ಟು ಕೊಂಡಿದ್ದರೂ, ಅದರಲ್ಲಿ ಯುರೋಪೇತರ ದೇಶಗಳೂ ಭಾಗಗಳಾಗಿದ್ದವು. ಈ ಯುದ್ಧಗಳಲ್ಲಿ ಯಾವ ದೇಶಗಳು ಆಂತರಿಕವಾಗಿ ಹಾಗೂ ಬಾಹ್ಯವಾಗಿ ಕ್ಷೀಣಿಸಿದವು ಹಾಗೂ ವೃದ್ಧಿಸಿದವು ಎನ್ನುವುದು ಅಂದಿನ ಸಂದರ್ಭದ ಅಂತಾರಾಷ್ಟ್ರೀಯ ಮಟ್ಟದ ರಾಜಕಾರಣಕ್ಕೆ ಸಂಬಂಧಿಸಿದ ಪ್ರಶ್ನೆಯಾಗುತ್ತದೆ. ಈ ಪ್ರಶ್ನೆಗೆ ಸಂಬಂಧಿಸಿದಂತೆಯೂ ಉತ್ತರಗಳನ್ನು ಹುಡುಕುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಜಾಗತಿಕ ಯುದ್ಧಗಳ ಸಂದರ್ಭದಲ್ಲಿ ಅಮೆರಿಕಾ, ಬ್ರಿಟನ್ ಮುಂತಾದ ದೇಶಗಳು ಮತ್ತೊಂದು ಸೂಪರ್‌ಪವರ್ ಆಗಿ ಹೊರಹೊಮ್ಮಿದ ಸೋವಿಯೆತ್ ಒಕ್ಕೂಟವನ್ನು ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಕ್ಷೀಣಿಸುವಂತೆ ಮಾಡುಲು ಪ್ರಯತ್ನಪಟ್ಟವು. ಬಂಡವಾಳಶಾಹಿ ಹಾಗೂ ಸಮಾಜವಾದಿ ಬಣಗಳ ಮಧ್ಯದ ಈ ಪೈಪೋಟಿ ಶೀತಲಸಮರಕ್ಕೆ ಕಾರಣವಾಗಿ ವಿಶ್ವವನ್ನೇ ಎರಡು ಬಣಗಳನ್ನಾಗಿ ವಿಂಗಡಿಸಿತು. ಇದರ ಪರಿಣಾಮಗಳ ಕುರಿತು ಇಲ್ಲಿ ಸವಿಸ್ತಾರವಾದ ಚರ್ಚೆಯನ್ನು ಮಾಡಲಾಗಿದೆ. ಸೋವಿಯೆತ್ ಒಕ್ಕೂಟ ವಿಘಟನೆಗೊಂಡು ಬಂಡವಾಳ ಶಾಹಿಯೇ ಏಕೈಕ ಸೂಪರ್‌ಪವರ್ ಆಗಿ ಹೊರಹೊಮ್ಮಿದ್ದುದರ ಪರಿಣಾಮವೇ ಜಾಗತೀಕರಣ. ಇದು ವಿಜ್ಞಾನ, ತಂತ್ರಜ್ಞಾನ ಹಾಗೂ ಬಂಡವಾಳದ ಮೂಲಕ ಪ್ರಪಂಚ ವನ್ನು ಒಂದುಗೂಡಿಸುವ ಪ್ರಯತ್ನ ಮಾಡಿದರೂ, ಇದರ ಹಿಂದಿರುವ ಧೋರಣೆಗಳು ಜಾತಿಯಾಧಾರಿತ ಶ್ರೇಣೀಕೃತ ಸಮಾಜ ವ್ಯವಸ್ಥೆಗಿಂತ ಯಾವ ರೀತಿಯಲ್ಲೂ ಹೊರತಾಗಿಲ್ಲ. ಜಾಗತೀಕರಣದ ಹುಟ್ಟು, ಬೆಳವಣಿಗೆ ಹಾಗೂ ಅದು ಅಭಿವೃದ್ಧಿಶೀಲ ದೇಶಗಳ ಮೇಲೆ ಬೀರಿದ ಪರಿಣಾಮಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಯುರೋಪಿನ ಚರಿತ್ರೆಯ ಅಧ್ಯಯನ ನಡೆಸುವಾಗ ಅದರ ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಸಂದರ್ಭಗಳಲ್ಲಿ ಜಾಗತಿಕ ಸಂಬಂಧದ ವಿಚಾರವಾಗಿ ಹಲವಾರು ಸಾಮ್ಯತೆಗಳು ಕಂಡುಬರುತ್ತವೆ. ಇದು ಚರಿತ್ರೆ ಚಲನಶೀಲವಾದದ್ದು ಹಾಗೂ ನಿರಂತರ ಪ್ರಕ್ರಿಯೆಗಳಿಗೆ ಸಂಬಂಧಪಟ್ಟದ್ದು ಎನ್ನುವ ಚಾರಿತ್ರಿಕ ವಿಶ್ಲೇಷಣೆಗೆ ಸಂಬಂಧಪಟ್ಟ ವಿಚಾರವಾದರೂ, ಇಲ್ಲಿ ಮುಖ್ಯವೆನಿಸುವುದು ಈ ಕಾಲಘಟ್ಟಗಳಲ್ಲಿನ ರಾಜಕಾರಣ. ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳು ವಿದೇಶಿ ವ್ಯಾಪಾರ ಸಂಪರ್ಕದ ಮೂಲಕ ಜಾಗತಿಕ ಸಂಬಂಧವನ್ನು ಹೊಂದಿದ್ದವು. ಮಧ್ಯಕಾಲೀನ ಸಂದರ್ಭದ ಯುರೋಪ್ ಹೊಸ ಶೋಧ, ಆವಿಷ್ಕಾರಗಳ ಪ್ರಯೋಗಶಾಲೆಯಾಗಿ ಕಂಡುಬರುತ್ತದೆ. ಜಲಮಾರ್ಗಗಳ ಆವಿಷ್ಕಾರ ಯುರೋಪಿನ ರಾಷ್ಟ್ರಗಳ ಸ್ವರೂಪವನ್ನೇ ಬದಲಾಯಿಸಿತು. ವ್ಯಾಪಾರದ ಜೊತೆ ಜೊತೆಗೆ ಹೊಸ ಭೂಪ್ರದೇಶಗಳನ್ನು `ವಸಾಹತುಶಾಹಿ' ಎನ್ನುವ ಪರಿಕಲ್ಪನೆಯೊಂದಿಗೆ ಆಕ್ರಮಿಸಿಕೊಳ್ಳುವ ಪ್ರಯತ್ನಗಳು ಆರಂಭವಾಗತೊಡಗಿದವು. ಹೀಗಾಗಿ ವಸಾಹತುಗಳಾಗಿ ಪರಿವರ್ತನೆಗೊಂಡ ದೇಶಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡವು. ಆಧುನಿಕ ಸಂದರ್ಭದಲ್ಲಿ ಎರಡು ಘಟ್ಟಗಳನ್ನು ಗುರುತಿಸಬಹುದಾಗಿದೆ. ಒಂದನೆಯದು ಯುರೋಪಿನಯ್ನರ ವಿರುದ್ಧ ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಗಳು ಹಾಗೂ ಆ ಸಂದರ್ಭದಲ್ಲಿ ಯುರೋಪಿಯನ್ ರಾಷ್ಟ್ರಗಳು ಹೊಂದಿದ್ದ ಧೋರಣೆಗಳು. ಎರಡನೆಯದು ಸ್ವತಂತ್ರಗೊಂಡ ರಾಷ್ಟ್ರಗಳಿಗೆ ಜಾಗತೀಕರಣದ ಮೂಲಕ ಮರು ಪ್ರವೇಶ ಪಡೆದಿರುವುದು. ಆಧುನಿಕ ಸಂದರ್ಭದಲ್ಲಿ ಯುರೋಪ್ ವ್ಯಾಪಾರ ಹಾಗೂ ಕೈಗಾರಿಕಾ ಬಂಡವಾಳದ ಮೂಲಕ ಜಗತ್ತಿನ ರಾಷ್ಟ್ರಗಳಿಗೆ ಪ್ರವೇಶ ಪಡೆಯಿತು. ಇಂದು ಜಾಗತೀಕರಣವು ಅಮೆರಿಕಾ ಕೇಂದ್ರಿತವಾಗಿ ಕಂಡುಬಂದರೂ ಅದರ ತವರೂರು ಯುರೋಪ್ ಎನ್ನುವುದು ವಾಸ್ತವ ಸಂಗತಿ. ಈ ಮೂರು ಕಾಲಘಟ್ಟಗಳಲ್ಲಿ ವ್ಯಾಪಾರ ಮತ್ತು ವಾಣಿಜ್ಯ ಪ್ರಧಾನ ಅಂಶವಾಗಿ ಕಂಡುಬಂದರೂ ರಾಜಕಾರಣ ಮಾತ್ರ ಬೇರೆ ಬೇರೆಯದ್ದೇ ಆಗಿತ್ತು. ವ್ಯಾಪಾರದ ಜೊತೆಗೆ ಸಾಮ್ರಾಜ್ಯಶಾಹಿ ಹಾಗೂ ಬಂಡವಾಳಶಾಹಿ ಧೋರಣೆಗಳು ಸ್ಪಷ್ಟವಾಗಿ ಕಾಣಿಸಿಕೊಂಡದ್ದು ಆಧುನಿಕ ಸಂದರ್ಭದಲ್ಲಿ. ಈ ಲಕ್ಷಣಗಳನ್ನು ಪ್ರಾಚೀನ ಸಂದರ್ಭದಲ್ಲಿ ಗುರುತಿಸಲು ಸಾಧ್ಯವಾಗುವುದಿಲ್ಲವಾದರೂ, ಮಧ್ಯಕಾಲೀನ ಸಂದರ್ಭದಲ್ಲಿ ಈ ಲಕ್ಷಣಗಳು ಚಿಗುರೊಡೆದಿರುವುದನ್ನು ಕಾಣಬಹುದಾಗಿದೆ. ಯುರೋಪಿನ ಈ ಮೂರು ಕಾಲಘಟ್ಟಗಳನ್ನು ಸಮರ್ಥವಾಗಿ ಗ್ರಹಿಸುವ ಪ್ರಯತ್ನವನ್ನು ಈ ಸಂಪುಟದ ಲೇಖನಗಳು ಮಾಡಿವೆ.

ಪ್ರಸ್ತುತ ಸಂಪುಟವು ಚರಿತ್ರೆ ವಿಶ್ವಕೋಶದಲ್ಲಿ ಒಂದು ಭಾಗವಾಗಿ ಈ ಹಿಂದೆ ಪ್ರಕಟ ವಾಗಿತ್ತು. ಅಲ್ಲಿದ್ದ ಲೇಖನಗಳನ್ನು ಪರಿಷ್ಕರಿಸಿ ಹಾಗೂ ಕೆಲವು ಹೊಸ ಲೇಖನಗಳನ್ನು ಸೇರಿಸುವುದರ ಮೂಲಕ ಈ ಸಂಪುಟವು ಹೊಸ ಆಲೋಚನೆಗಳೊಂದಿಗೆ ಹೊಸದಾಗಿ ರೂಪುಗೊಂಡಿದೆ. ಚರಿತ್ರೆ ವಿಶ್ವಕೋಶ ಯೋಜನೆಯು ಆರಂಭಗೊಂಡಿದ್ದು ಕನ್ನಡ ವಿಶ್ವವಿದ್ಯಾಲಯದ ಮೊದಲ ಕುಲಪತಿಗಳಾದ ಡಾ.ಚಂದ್ರಶೇಖರ ಕಂಬಾರ ಅವರ ಅವಧಿಯಲ್ಲಿ. ಅವರು ನೀಡಿದ ಸ್ಫೂರ್ತಿಯೇ ಇಂದು ಈ ಸಂಪುಟ ಪ್ರಕಟಗೊಳ್ಳುತ್ತಿರುವುದಕ್ಕೆ ಮೂಲ ಕಾರಣ. ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಪ್ರಸ್ತುತ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಅವರು ಈ ಸಂಪುಟವನ್ನು ಹೊರತರುವಲ್ಲಿ ಎಲ್ಲ ರೀತಿಯ ಸಹಕಾರ ನೀಡಿದ್ದಾರೆ. ಅವರನ್ನು ವಿಶೇಷವಾಗಿ ನೆನೆಯುತ್ತೇನೆ. ಈ ಸಂಪುಟವು ಹೊರಬರುವಲ್ಲಿ ನೆರವಾದ ಕುಲಸಚಿವರಾದ ಹಾಗೂ ಪ್ರಸಾರಾಂಗದ ನಿರ್ದೇಶಕರಾದ ಡಾ.ಮಂಜುನಾಥ ಬೇವಿನಕಟ್ಟಿ ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಚರಿತ್ರೆ ವಿಭಾಗದ ಮುಖ್ಯಸ್ಥರಾದ ಡಾ.ಎನ್.ಚಿನ್ನಸ್ವಾಮಿ ಸೋಸಲೆ ಅವರ ಎಲ್ಲ ರೀತಿಯ ಸಹಕಾರಗಳಿಗಾಗಿ ಕೃತಜ್ಞನಾಗಿದ್ದೇನೆ. ಈ ಸಂಪುಟದ ಪ್ರಧಾನ ಸಂಪಾದಕರಾದ ಡಾ.ತಂಬಂಡ ವಿಜಯ್ ಪೂಣಚ್ಚ ಅವರು ಪ್ರತಿಯೊಂದು ಹಂತದಲ್ಲೂ ಸೂಕ್ತ ಸಲಹೆ ಸೂಚನೆ ಹಾಗೂ ನೆರವನ್ನು ನೀಡಿ ಸಂಪುಟ ರೂಪುಗೊಳ್ಳುವುದಕ್ಕೆ ಕಾರಣರಾಗಿದ್ದಾರೆ. ಅವರಿಗೆ ನಾನು ಆಭಾರಿಯಾಗಿದ್ದೇನೆ. ಈ ಸಂಪುಟದ ವಿಷಯತಜ್ಞರಾಗಿ ಸಾಕಷ್ಟು ಸಲಹೆ ಸೂಚನೆ ನೀಡಿದ ಕುವೆಂಪು ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎಸ್.ಎ.ಬಾರಿ ಹಾಗೂ ಕುವೆಂಪು ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪ್ರಾಧ್ಯಾಪಕರಾದ ಡಾ.ರಾಜಾರಾಮ ಹೆಗಡೆ ಅವರಿಗೆ ಅಭಾರಿಯಾಗಿದ್ದೇನೆ. ಚರಿತ್ರೆ ವಿಭಾಗದ ನನ್ನ ಸಹೋದ್ಯೋಗಿಗಳಾದ ಪ್ರೊ.ಲಕ್ಷ್ಮಣ್ ತೆಲಗಾವಿ, ಡಾ.ಸಿ.ಆರ್. ಗೋವಿಂದರಾಜು ಹಾಗೂ ಡಾ.ವಿರೂಪಾಕ್ಷಿ ಪೂಜಾರಹಳ್ಳಿ ಅವರ ನೆರವನ್ನು ಕೃತಜ್ಞತೆಯಿಂದ ನೆನೆಯುತ್ತೇನೆ. ಈ ಸಂಪುಟಕ್ಕೆ ಲೇಖನಗಳನ್ನು ಬರೆದುಕೊಟ್ಟ ಎಲ್ಲ ವಿದ್ವಾಂಸರಿಗೆ ಹಾಗೂ ಇಂಗ್ಲಿಶ್ ಲೇಖನಗಳನ್ನು ಕನ್ನಡದಲ್ಲಿ ಅನುವಾದ ಮಾಡಿಕೊಟ್ಟ ಭಾಷಾಂತರಕಾರರಿಗೆ ನಾನು ಕೃತಜ್ಞನಾಗಿದ್ದೇನೆ. ವಿಷಯಸೂಚಿಯನ್ನು ಸಿದ್ಧಪಡಿಸುವಲ್ಲಿ ನೆರವಾದ ವಿಭಾಗದ ಸಂಶೋಧನಾ ವಿದ್ಯಾರ್ಥಿಗಳಾದ ಹಿರೇಬಿದ್ರಿ ಹೊಳಿಬಸಪ್ಪ, ಎಸ್.ಮುನಿರಾಜ್, ಆಲ್ಕೋಡ್ ಅಮರೇಶ ಹಾಗೂ ವೆಂಕಟೇಶ್ ಅವರಿಗೆ ಕೃತಜ್ಞತೆಗಳು. ಸಂಪುಟವನ್ನು ಅಚ್ಚುಕಟ್ಟಾಗಿ ಹೊರತರುವಲ್ಲಿ ನೆರವಾದ ಪ್ರಸಾರಾಂಗದ ಹಿಂದಿನ ನಿರ್ದೇಶಕರಾದ ಡಾ.ಎ.ಮೋಹನ ಕುಂಟಾರ್ ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಸಂಪುಟದ ಪುಸ್ತಕವಿನ್ಯಾಸ ಮಾಡಿದ ಶ್ರೀ ಬಿ.ಸುಜ್ಞಾನಮೂರ್ತಿ ಅವರಿಗೆ, ಮುಖಪುಟ ವಿನ್ಯಾಸವನ್ನು ಮಾಡಿದ ಶ್ರೀ ಯು.ಟಿ. ಸುರೇಶ್ ಅವರಿಗೆ ಹಾಗೂ ಅಕ್ಷರ ಸಂಯೋಜನೆ ಮಾಡಿದ ಶ್ರೀಮತಿ ರಶ್ಮಿಕೃಪಾಶಂಕರ್ ಅವರಿಗೆ ನನ್ನ ಕೃಜ್ಞತೆಗಳು.

## ಶಬ್ದಪಾರಮಾರ್ಗಮಶಕ್ಯಂ

ಕರ್ನಾಟಕದ ಆಧುನಿಕ ಚರಿತ್ರೆಯಲ್ಲಿ ಕರ್ನಾಟಕ ಏಕೀಕರಣ ಒಂದು ಮಹತ್ವಪೂರ್ಣ ಐತಿಹಾಸಿಕ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆಯೂ ಮತ್ತೊಂದು ಮಹತ್ವದ ಘಟನೆ. ಕನ್ನಡ-ಕನ್ನಡಿಗ-ಕರ್ನಾಟಕ ಸಂಸ್ಕೃತಿಯ ಕಲ್ಪನೆಯಡಿಯಲ್ಲಿ ಅಸ್ತಿತ್ವಕ್ಕೆ ಬಂದ ಕನ್ನಡ ವಿಶ್ವವಿದ್ಯಾಲಯದ ಹರವು ವಿಸ್ತಾರವಾದದ್ದು. ಈ ಕಾರಣದಿಂದ ಕನ್ನಡ ವಿಶ್ವವಿದ್ಯಾಲಯದ ಆಶಯ ಮತ್ತು ಗುರಿ ಇತರ ವಿಶ್ವವಿದ್ಯಾಲಯಗಳಿಗಿಂತ ಭಿನ್ನ ಹಾಗೂ ಪ್ರಗತಿಪರ. ಕನ್ನಡದ ಸಾಮರ್ಥ್ಯವನ್ನು ಎಚ್ಚರಿಸುವ ಕಾಯಕವನ್ನು ಉದ್ದಕ್ಕೂ ಅದು ನೋಂಪಿಯಿಂದ ಮಾಡಿಕೊಂಡು ಬಂದಿದೆ. ಕರ್ನಾಟಕತ್ವದ 'ವಿಕಾಸ' ಈ ವಿಶ್ವವಿದ್ಯಾಲಯದ ಮಹತ್ತರ ಆಶಯವಾಗಿದೆ.

ಕನ್ನಡ ಅಧ್ಯಯನ ಮೂಲತಃ ಶುದ್ಧ ಜ್ಞಾನದ, ಕಾಲ, ದೇಶ, ಜೀವನ ತತ್ವದ ಪರವಾಗಿರುವುದರ ಜೊತೆಗೆ ಅಧ್ಯಯನವನ್ನು ಒಂದು ವಾಗ್ವಾದದ ಭೂಮಿಕೆ ಎಂದು ನಾವು ಭಾವಿಸಬೇಕಾಗಿದೆ. ಕನ್ನಡ ಬದುಕಿನ ಚಿಂತನೆಯ ಭಾಗವೆಂದೇ ಅದನ್ನು ರೂಪಿಸಿ ವಿವರಿಸಬೇಕಾಗಿದೆ. ಅಂದರೆ, ದೇಸಿ ಬೇರುಗಳ ಗುರುತಿಸುವಿಕೆ ಕನ್ನಡ ಅಧ್ಯಯನದ ಮುಖ್ಯ ಭಿತ್ತಿಯಾಗಬೇಕಾಗಿದೆ. ಕನ್ನಡ ಸಂಸ್ಕೃತಿಯು ಬಹುತ್ವದ ನೆಲೆಗಳನ್ನು ಆಧರಿಸಿದೆ. ಸಮಾಜಮುಖಿ ಚಿಂತನೆಗಳ ವ್ಯಾಪಕ ಅಧ್ಯಯನ ಬದುಕಿನ ಸಂಕೀರ್ಣ ಲಕ್ಷಣಗಳ ಸ್ವರೂಪವನ್ನು ಇದು ಪರಿಚಯಿಸುತ್ತದೆ. ನಾವು ಇದನ್ನು ಎಲ್ಲ ವಲಯಗಳಲ್ಲಿ ಕನ್ನಡದ ಅನುಷ್ಠಾನದ ಮೂಲಕ ಉಳಿಸಿ,

ಬೆಳೆಸಬೇಕಾಗಿದೆ. ಆಗ ಕನ್ನಡ ಸಂಸ್ಕೃತಿಯು ವಿಶ್ವಪ್ರಜ್ಞೆಯಾಗಿ ರೂಪುಗೊಳ್ಳಲು ಸಾಧ್ಯವಾಗುತ್ತದೆ. 'ಕನ್ನಡದ್ದೇ ಮಾದರಿ'ಯ ಶೋಧ ಇಂದಿನ ಮತ್ತು ಬರುವ ದಿನಗಳ ತೀವ್ರ ಅಗತ್ಯವಾಗಿದೆ.

ಕನ್ನಡ ಸಂಸ್ಕೃತಿಯ ಭಾಗವಾಗಿರುವ ಕನ್ನಡ ಅಧ್ಯಯನವು ಕಾಲದಿಂದ ಕಾಲಕ್ಕೆ ಹೊಸ ತಿಳಿವಳಿಕೆಯನ್ನು ತನ್ನ ತೆಕ್ಕೆಗೆ ಜೋಡಿಸಿಕೊಳ್ಳುತ್ತ ಬಂದಿದೆ. ಹೀಗಾಗಿ ವಿದೇಶಿ ಮತ್ತು ದೇಶಿ ವಿದ್ವಾಂಸರು ತೊಡಗಿಸಿಕೊಂಡ ಈ ವಿದ್ವತ್‌ಕ್ಷೇತ್ರದಲ್ಲಿ ಮುಂದಿನ ವಿದ್ವಾಂಸರು ಕಾಲದಿಂದ ಕಾಲಕ್ಕೆ ಹೊಸಬೆಳೆಯನ್ನು ತೆಗೆಯುತ್ತ ಬಂದಿದ್ದಾರೆ. ಕನ್ನಡ ಅಧ್ಯಯನ ಪಳೆಯುಳಿಕೆಯ ಶಾಸ್ತ್ರವಾಗದೆ, ಬದಲಾಗುತ್ತಿರುವ ಕಾಲಮಾನದಲ್ಲಿ ಎದುರಾಗುತ್ತಿರುವ ಆಹ್ವಾನಕ್ಕೆ ತಕ್ಕಂತೆ ತನ್ನ ಗತಿಯನ್ನು ಬದಲಾಯಿಸಿಕೊಳ್ಳುತ್ತ ಬಂದಿರುವುದು ಗಮನಿಸತಕ್ಕ ಅಂಶ. ಸಾಂಪ್ರದಾಯಿಕ ಚಿಂತನೆಗಳು ಆಧುನೀಕರಣದ ಈ ಕಾಲಘಟ್ಟದಲ್ಲಿ ಸಕಾಲಿಕಗೊಳ್ಳುವುದು ಅನಿವಾರ್ಯ ವಾಗಿದೆ. ಮಾಹಿತಿ ತಂತ್ರಜ್ಞಾನದ ಮೂಲಕ ಜಗತ್ತಿನ ಜ್ಞಾನಪ್ರವಾಹವೇ ನಮ್ಮ ಅಂಗೈಯೊಳಗೆ ಚುಳುಕಾಗುವ ಈ ಸಂದರ್ಭದಲ್ಲಿ ಕನ್ನಡದ ಚಹರೆ ಮತ್ತು ಕನ್ನಡ ಭಾಷೆಯ ಚಲನಶೀಲತೆ ಯನ್ನು ಶೋಧಿಸಲು ಭಾಷಾ ಆಧುನೀಕರಣ ಮತ್ತು ಪ್ರಮಾಣೀಕರಣದ ಪ್ರಕ್ರಿಯೆಗಳ ನೆಲೆಯಲ್ಲಿ ಅಧ್ಯಯನದ ಹೊಸ ಸಾಧ್ಯತೆಗಳನ್ನು ಅನುಲಕ್ಷಿಸಿ, ಭಾಷಾನೀತಿ, ಭಾಷಾಯೋಜನೆ ರೂಪಿಸುವುದು ಅನಿವಾರ್ಯ ಹಾಗೂ ಅವಶ್ಯವಾಗಿದೆ. ಆಗ ಅಧ್ಯಯನದ ಸ್ವರೂಪ ಹಾಗೂ ಬಳಕೆಯ ವಿಧಾನದಲ್ಲಿ ಪರಿವರ್ತನೆ ಸಾಧ್ಯವಾಗುತ್ತದೆ.

ನಮ್ಮೆದುರು ನುಗ್ಗಿ ಬರುತ್ತಿರುವ ಜಾಗತೀಕರಣಕ್ಕೆ ಪ್ರತಿರೋಧವಾಗಿ ನಮ್ಮ ದೇಶೀಯ ಜ್ಞಾನಪರಂಪರೆಯನ್ನು ಮರುಶೋಧಿಸಿ ಆ ಮೂಲಕ ಕುಸಿಯುತ್ತಿರುವ ನಮ್ಮ ಬೇರುಗಳನ್ನು ಬಲಗೊಳಿಸಿಕೊಳ್ಳಬೇಕಾಗಿದೆ. ಭಾಷೆ, ಸಾಹಿತ್ಯ, ವ್ಯಾಕರಣ, ಛಂದಸ್ಸು, ಚರಿತ್ರೆ, ಕೃಷಿ, ವೈದ್ಯ, ಪರಿಸರ ಮುಂತಾದ ಅಧ್ಯಯನ ವಿಷಯಗಳನ್ನು ಹೊಸ ಆಲೋಚನೆಯ ನೆಲೆಯಲ್ಲಿ ವಿಶ್ಲೇಷಿಸಬೇಕಾಗಿದೆ. ಆಧುನಿಕ ವಿಜ್ಞಾನ, ತಂತ್ರಜ್ಞಾನವೇ 'ಜ್ಞಾನ' ಎಂದು ರೂಪಿಸಿರುವ ಇಂದಿನ ಆಲೋಚನೆಗೆ ಪ್ರತಿಯಾಗಿ ಈ ಜ್ಞಾನಶಾಖೆಗಳಲ್ಲಿ ಹುದುಗಿರುವ ದೇಶಿ ಪರಂಪರೆಯ ಜ್ಞಾನದ ಹುಡುಕಾಟ ನಡೆಯಬೇಕಾಗಿದೆ. ಅಂತಹ ಪ್ರಯತ್ನಗಳಿಗೆ ಬೇಕಾದ ಮಾರ್ಗದರ್ಶಕ ಸೂತ್ರಗಳ ಹಾಗೂ ಆಕರ ಪರಿಕರಗಳ ನಿರ್ಮಾಣದ ನೆಲೆ ತುಂಬ ಮುಖ್ಯವಾಗಿದೆ. ಕನ್ನಡ ವಿಶ್ವವಿದ್ಯಾಲಯವು ಕಳೆದ ಹದಿನಾರು ವರ್ಷಗಳಿಂದ ಈ ಕೆಲಸಗಳನ್ನು ಹಲವು ಯೋಜನೆಗಳ ಮೂಲಕ ರೂಪಿಸಿಕೊಂಡಿದೆ, ರೂಪಿಸಿಕೊಳ್ಳುತ್ತಿದೆ. ಇದೊಂದು ಚಲನಶೀಲ ಪ್ರಕ್ರಿಯೆಯಾಗಿದೆ. ಸಮಕಾಲೀನ ಭಾಷಿಕ, ಸಾಂಸ್ಕೃತಿಕ ಸಮಸ್ಯೆಗಳಿಗೆ ಮುಖಾಮುಖಿಯಾಗುತ್ತ ಕನ್ನಡ ನಾಡುನುಡಿಯನ್ನು ಹೊಸದಾಗಿ ಶೋಧಿಸುತ್ತಾ, ವಿವರಿಸುತ್ತಾ ಬಂದಿದೆ. ಅಂದರೆ ಕನ್ನಡದ ಅರಿವಿನ ವಿಕೇಂದ್ರೀಕರಣವೇ ವರ್ತಮಾನದ ಹೊಸ ಬೆಳವಣಿಗೆ. ಇದು ಕನ್ನಡ ವಿಶ್ವವಿದ್ಯಾಲಯದ ಜೀವಧಾತುವಾಗಿದೆ.

ಪ್ರಮುಖ ಚರಿತ್ರೆ ಕೃತಿಗಳನ್ನು ಕೊಡುಗೆಯಾಗಿ ನೀಡಿರುವ ಚರಿತ್ರೆ ವಿಭಾಗವು ಸಂಘಟಿತ ಕೆಲಸಗಳನ್ನು ವಿಭಾಗದ ಯೋಜನೆಗಳನ್ನಾಗಿ ಯಶಸ್ವಿಯಾಗಿ ನಿರ್ವಹಿಸುತ್ತಾ ಬಂದಿದೆ. ಕರ್ನಾಟಕದ ಮನೆಮಾತಾಗಿರುವ ಬಿ. ಷೇಕ್ ಅಲಿ ಅವರ ಸಂಪಾದಕತ್ವದ ಕರ್ನಾಟಕ ಚರಿತ್ರೆಯ ಏಳು ಸಂಪುಟಗಳು (೧೯೯೭), ವಿಜಯ್ ಪೂಣಚ್ಚ ತಂಬಂಡ ಅವರ ಸಂಪಾದಕತ್ವದ ಚರಿತ್ರೆ ವಿಶ್ವಕೋಶ (೨೦೦೧), ಚರಿತ್ರೆ ವಿಭಾಗವು ಹೊರತಂದಿರುವ ಏಕೀಕರಣೋತ್ತರ ಕರ್ನಾಟಕದ ಪ್ರಮುಖ ಚಳುವಳಿಗಳು (೨೦೦೦) ಮತ್ತು ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಗೆ ಸಂಬಂಧಿಸಿದ ನಾಲ್ಕು ಗ್ರಂಥಗಳು (೨೦೦೪-೦೬) ಇವುಗಳಲ್ಲಿ ಪ್ರಮುಖವಾದವು. ಕಳೆದ ಐದು ವರ್ಷಗಳ ಪರಿಶ್ರಮದಿಂದ ಚರಿತ್ರೆ ವಿಭಾಗದ ವಿದ್ವಾಂಸರು ಹೊರತಂದ ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟಗಳು ಕನ್ನಡ ವಿಶ್ವವಿದ್ಯಾಲಯದ ಬೌದ್ಧಿಕ ಪರಂಪರೆಗೆ ಒಂದು ಹೊಸ ಸೇರ್ಪಡೆ.

ದೇಶದ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ವಿದ್ವಾಂಸರೊಂದಿಗೆ ನಾಡಿನ ಪ್ರಮುಖ ವಿದ್ವಾಂಸರ ಬರಹಗಳನ್ನು ಮತ್ತು ಅನುವಾದಗಳನ್ನು ಈ ಸಂಪುಟಗಳು ಒಳಗೊಂಡಿವೆ. ಚರಿತ್ರೆ ಅಥವಾ ಸಮಾಜವಿಜ್ಞಾನಗಳ ಜ್ಞಾನಶಿಸ್ತಿನಲ್ಲಿ ಕನ್ನಡದಲ್ಲಿ ಚರ್ಚೆಗಳು ಕಡಿಮೆ ಎನ್ನುವ ಮಿತಿಗಳನ್ನು ಈ ಸಂಪುಟಗಳು ಮೀರಿವೆ. ದೇಸೀ ಭಾಷೆಗಳಲ್ಲಿ ಜಗತ್ತಿನ ಜ್ಞಾನ ಪ್ರಕಾರಗಳನ್ನು ಸಮರ್ಥವಾಗಿ ನಿಭಾಯಿಸುವುದು ನಮ್ಮ ಭಾಷೆ, ಪರಂಪರೆ ಹಾಗೂ ಅನನ್ಯತೆಗಳನ್ನು ಕಾಪಾಡುವ ಬಗೆ ಈ ಪ್ರಯತ್ನದ ಒಂದು ಆಯಾಮವಾಗಿದೆ. ಹಾಗೆಯೇ ಕನ್ನಡದ ಸಂದರ್ಭದಲ್ಲಿ ಪಾಶ್ಚಾತ್ಯ ಜಗತ್ತು ಅಥವಾ ಕರ್ನಾಟಕೇತರ ಜಗತ್ತು ನಿರ್ಣಯಿಸುವ ಮತ್ತು ನಿಯಂತ್ರಿಸುವ ಬೌದ್ಧಿಕ ಆಕ್ರಮಣಗಳನ್ನು

ಮತ್ತು ಸವಾಲುಗಳನ್ನು ಕನ್ನಡ ವಿಶ್ವವಿದ್ಯಾಲಯದ ಬೌದ್ಧಿಕ ಪರಂಪರೆ ಸಮರ್ಥವಾಗಿ ನಿಭಾಯಿಸುತ್ತಿದೆ. ಸಮಾಜವಿಜ್ಞಾನಗಳ ಬೌದ್ಧಿಕ ಪರಂಪರೆಗಳು ಕನ್ನಡದಲ್ಲಿ ಈ ಬಗೆಯಲ್ಲಿ ಮೂಡಿಬರುತ್ತಿರುವುದು ಈ ದಿಶೆಯಲ್ಲಿ ಒಂದು ಪ್ರಮುಖ ಹೆಜ್ಜೆ. ಚರಿತ್ರೆ ವಿಭಾಗವು ಈ ಹಿನ್ನೆಲೆಯಲ್ಲಿ ಹೊರತರುತ್ತಿರುವ ಕನ್ನಡ ವಿಶ್ವವಿದ್ಯಾಲಯ ಚರಿತ್ರೆ ಸಂಪುಟಗಳು ಒಂದು ಮೈಲುಗಲ್ಲು. ಚರಿತ್ರೆ ಲೇಖನ ಮತ್ತು ವಿಧಾನ, ಭಾರತ ಉಪಖಂಡ ಆಧುನಿಕಪೂರ್ವ ಚರಿತ್ರೆ, ಭಾರತ ಉಪಖಂಡ ಆಧುನಿಕ ಚರಿತ್ರೆ, ಏಷ್ಯಾ, ಯುರೋಪ್, ಅಮೆರಿಕಾ, ಆಫ್ರಿಕಾ ಹಾಗೂ ಸಮಕಾಲೀನ ಕರ್ನಾಟಕಕ್ಕೆ ಸಂಬಂಧಿಸಿದ ವಿವಿಧ ಆಯಾಮಗಳನ್ನು ಈ ಎಂಟು ಸಂಪುಟಗಳು ಚರ್ಚಿಸಿವೆ. ಇವೆಲ್ಲವನ್ನು ಕನ್ನಡದಲ್ಲಿ ಪ್ರಕಟಿಸಿ ಕನ್ನಡ ಓದುಗರಿಗೆ ಕನ್ನಡ ವಿಶ್ವವಿದ್ಯಾಲಯವು ಅರ್ಪಿಸುತ್ತಿದೆ.

ಪ್ರಧಾನ ಸಂಪಾದಕರಾದ ಪ್ರೊ. ವಿಜಯ್ ಪೂಣಚ್ಚ ತಂಬಂಡ ಅವರು ಮತ್ತು ಸಂಪುಟ ಸಂಪಾದಕರಾದ ಡಾ.ಕೆ.ಮೋಹನ್‌ಕೃಷ್ಣ ರೈ ಅವರು **ಯುರೋಪ್: ಚರಿತ್ರೆಯ ವಿವಿಧ ಆಯಾಮಗಳು** ಸಂಪುಟವನ್ನು ಸಮರ್ಥವಾಗಿ ಹೊರತಂದಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳು.

ಈ ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತರುತ್ತಿರುವ ಪ್ರಸಾರಾಂಗದ ನಿರ್ದೇಶಕರಾದ ಡಾ.ಮಂಜುನಾಥ ಬೇವಿನಕಟ್ಟಿ ಮತ್ತು ಸಹಾಯಕ ನಿರ್ದೇಶಕರಾದ ಶ್ರೀ ಬಿ.ಸುಜ್ಞಾನಮೂರ್ತಿ ಅವರಿಗೆ ಆಭಾರಿಯಾಗಿದ್ದೇನೆ.

## ಸಂಪಾದಕರು, ಲೇಖಕರು ಮತ್ತು ಅನುವಾದಕರ ವಿಳಾಸಗಳು

**ಪ್ರಧಾನ ಸಂಪಾದಕರು**

ಡಾ.ವಿಜಯ್ ಪೂಣಚ್ಚ ತಂಬಂಡ,
ಪ್ರಾಧ್ಯಾಪಕರು, ಚರಿತ್ರೆ ವಿಭಾಗ,
ಕನ್ನಡ ವಿಶ್ವ ವಿದ್ಯಾಲಯ,
ಹಂಪಿ, ವಿದ್ಯಾರಣ್ಯ

**ಸಂಪಾದಕರು**
ಡಾ.ಕೆ.ಮೋಹನ್‌ಕೃಷ್ಣ ರೈ,
ಸಹ ಪ್ರಾಧ್ಯಾಪಕರು, ಚರಿತ್ರೆ ವಿಭಾಗ,
ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ

**ಲೇಖಕರು**
**೧. ಡಾ.ಆ್ಯಂಟನಿ ಪಾಲಾಟಿ,**
ವಿಶ್ರಾಂತ ಸಮಾಜಶಾಸ್ತ್ರ ಪ್ರಾಧ್ಯಾಪಕರು,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ, ಮಂಗಳೂರು

**೫. ಡಾ.ಎನ್.ಚಿನ್ನಸ್ವಾಮಿ ಸೋಸಲೆ,**
ಮುಖ್ಯಸ್ಥರು ಹಾಗೂ ಸಹ ಪ್ರಾಧ್ಯಾಪಕರು,
ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ

**೬. ಡಾ.ಎಸ್.ಎ.ಜಾವೇದ್,**
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ,
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ,
ಶಿವಮೊಗ್ಗ

**೭. ಜುಬೇರ್,**
ಸಹ ಪ್ರಾಧ್ಯಾಪಕರು, ಚರಿತ್ರೆ ವಿಭಾಗ,
ಸಂತ ಫಿಲೋಮಿನಾ ಕಾಲೇಜು,
ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ

**೮. ಸಿ.ನಂಜುಂಡಪ್ಪ,**
ಇ.ಎಂ.ಎಸ್.ಭವನ,
ಎ.ಕೆ.ಗೋಪಾಲನ್ ಸ್ಮಾರಕ ಸಾಮಾಜಿಕ ಶಿಕ್ಷಣ ದತ್ತಿ(ರಿ),
ನಂ.೩೭, ೪ನೆಯ ಅಡ್ಡರಸ್ತೆ,
ಬಿ.ಎನ್.ಇ.ಎಸ್.ಕಾಲೇಜು ಎದುರು,
ಮಹಾಲಕ್ಷ್ಮಿ ಲೇಔಟ್, ಬೆಂಗಳೂರು

**೯. ನಾಬರ್ಟ್,**
ಸಹ ಪ್ರಾಧ್ಯಾಪಕರು, ಚರಿತ್ರೆ ವಿಭಾಗ,
ಸಂತ ಫಿಲೋಮಿನಾ ಕಾಲೇಜು,
ಪುತ್ತೂರು, ದಕ್ಷಿಣ ಕನ್ನಡ ಜಿಲ್ಲೆ

**೧೦. ಸಿ.ಆರ್.ಭಟ್**
ನಂ.೪, ಶಕ್ತಿ ಅಪಾರ್ಟ್‌ಮೆಂಟ್ಸ್,
ಶ್ರೀದೇವಿನಗರ, ವಿದ್ಯಾಗಿರಿ,
ಧಾರವಾಡ

**೧೧. ಡಾ.ಬಿ.ಎಸ್.ಬಿರಾದಾರ,**
ಪ್ರಾಧ್ಯಾಪಕರು, ಚರಿತ್ರೆ ವಿಭಾಗ,
ನೃಪತುಂಗ ಕಾಲೇಜು,
ಸೇಡಂ

**೧೨. ಡಾ.ಬಿ.ಸಿ.ಮಹಾಬಲೇಶ್ವರಪ್ಪ,**
ನಿರ್ದೇಶಕರು, ಪ್ರಾದೇಶಿಕ ಕಚೇರಿ,
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ,
ದಾವಣಗೆರೆ

**೧೩. ಡಾ.ಕೆ.ಮೋಹನ್‌ಕೃಷ್ಣ ರೈ,**
ಸಹ ಪ್ರಾಧ್ಯಾಪಕರು,
ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ, ವಿದ್ಯಾರಣ್ಯ

**೧೪. ಶ್ರೀಮತಿ ರೀನಾ ಪೂಣಚ್ಚ,**
ನಂ.೬೮೦, ೫ನೇ ಕ್ರಾಸ್, ಶಿವಾನಂದ ನಗರ,
ನ್ಯೂ ತಿಪ್ಪಸಂದ್ರ ಬೆಂಗಳೂರು

**೧೫. ಶ್ರೀಮತಿ ರೂಪಾ ಪೂಣಚ್ಚ,**
ಪ್ಲಾಟ್ ನಂ.ಡಿ ೧/೨,
ವಿಜಯಕಿರಣ್ ಅಪಾರ್ಟ್‌ಮೆಂಟ್ಸ್ ವಿಕ್ಟೋರಿಯಾ ರಸ್ತೆ,
ಬೆಂಗಳೂರು

**೧೬. ಡಾ.ರೇಚಲ್ ಕುರಿಯನ್,**
ಪ್ರಾಧ್ಯಾಪಕರು, ಇಂಗ್ಲಿಶ್ ವಿಭಾಗ,
ಕುವೆಂಪು ವಿಶ್ವವಿದ್ಯಾಲಯ ಜ್ಞಾನಸಹ್ಯಾದ್ರಿ,
ಶಂಕರಘಟ್ಟ, ಶಿವಮೊಗ್ಗ

**೧೭. ಡಾ.ಕೆ.ಎಂ.ಲೋಕೇಶ್,**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಂಗಳೂರು ವಿಶ್ವವಿದ್ಯಾನಿಲಯ,
ಮಂಗಳಗಂಗೋತ್ರಿ, ಮಂಗಳೂರು

**೧೮. ಎನ್.ಕೆ.ವಸಂತರಾಜ್,**
೪೦೫, ೧ನೆಯ ಅಡ್ಡರಸ್ತೆ,
ಡಾಲರ್ಸ್‌ಕಾಲೋನಿ, ಜೆ.ಪಿ.ನಗರ,
೪ನೆಯ ಹಂತ, ಬೆಂಗಳೂರು

**೧೯. ಡಾ.ಎನ್.ವಿಘ್ನೇಶ್ ಭಟ್,**
ವಿಶ್ರಾಂತ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ,
ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ,
ಶಂಕರಘಟ್ಟ, ಶಿವಮೊಗ್ಗ

**೧೦. ಡಾ.ಶೇಖ್ ಮಸ್ತಾನ್,**
ಸಹ ಪ್ರಾಧ್ಯಾಪಕರು, ಚರಿತ್ರೆ ವಿಭಾಗ,
ಬೆಂಗಳೂರು ವಿಶ್ವವಿದ್ಯಾಲಯ,
ಜ್ಞಾನಭಾರತಿ, ಬೆಂಗಳೂರು

**೧೧. ಡಾ.ಸತೀಶ್ ಕುಮಾರ್ ಶೆಟ್ಟಿ,**
ಸಹ ಪ್ರಾಧ್ಯಾಪಕರು, ಚರಿತ್ರೆ ವಿಭಾಗ,
ಬೆಸೆಂಟ್ ಸಂಜೆ ಕಾಲೇಜು,
ಮಂಗಳೂರು

**೧೨. ಡಾ.ಜೆ.ಎಸ್.ಸದಾನಂದ,**
ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ,
ಕುವೆಂಪು ವಿಶ್ವವಿದ್ಯಾಲಯ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ,
ಶಿವಮೊಗ್ಗ

**೧೩. ಡಾ.ಜಿ.ಸರ್ವಮಂಗಳ,**
ಸಹ ಪ್ರಾಧ್ಯಾಪಕರು,
ಚರಿತ್ರೆ ಮತ್ತು ಪುರಾತತ್ವ ವಿಭಾಗ,
ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ,
ಶಂಕರಘಟ್ಟ, ಶಿವಮೊಗ್ಗ

**೧೪. ಡಿ.ಎಸ್. ಸೋಮಶೇಖರ್,**
ಪ್ರಾಧ್ಯಾಪಕರು, ಚರಿತ್ರೆ ವಿಭಾಗ,
ತುಂಗಾ ಮಹಾವಿದ್ಯಾಲಯ,
ತೀರ್ಥಹಳ್ಳಿ, ಶಿವಮೊಗ್ಗ

**೧೫. ಡಾ.ಹನುಮ ನಾಯಕ,**
ಸಹ ಪ್ರಾಧ್ಯಾಪಕರು, ಇತಿಹಾಸ ವಿಭಾಗ,
ಮಂಗಳೂರು ವಿಶ್ವವಿದ್ಯಾಲಯ,
ಮಂಗಳಗಂಗೋತ್ರಿ, ಮಂಗಳೂರು

**ಅನುವಾದಕರು**

**೧. ಆರ್.ಎಲ್.ಅನಂತರಾಮಯ್ಯ,**
# ೧೦೦೫, ೨ನೆಯ ಮಹಡಿ,
೨ನೆಯ ಕ್ರಾಸ್, ೬ನೆಯ ಮುಖ್ಯರಸ್ತೆ,
ವಿವೇಕಾನಂದನಗರ, ಮೈಸೂರು

**೨. ಶ್ರೀಮತಿ ಟಿ.ಎಸ್.ಕುಮುದವಲ್ಲಿ,**
ಸಿ.ಹೆಚ್.೭೩, ೭ನೆಯ ಮುಖ್ಯರಸ್ತೆ,
ಸರಸ್ವತಿಪುರಂ, ಮೈಸೂರು

**೩. ಪ್ರೊ.ಮಹದೇವ,**
ಮುಖ್ಯಸ್ಥರು, ಇಂಗ್ಲಿಶ್ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ,
ಮಾನಸಗಂಗೋತ್ರಿ, ಮೈಸೂರು

**೪. ಡಾ.ಎಸ್.ಸಿರಾಜ್ ಅಹಮದ್,**
ಸಹ ಪ್ರಾಧ್ಯಾಪಕರು, ಇಂಗ್ಲಿಶ್ ವಿಭಾಗ,
ಸಹ್ಯಾದ್ರಿ ಕಲಾ ಮತ್ತು ವಾಣಿಜ್ಯ ಕಾಲೇಜು,
ಶಿವಮೊಗ್ಗ

* * *

# ೧. ಯುರೋಪಿನ ಪೂರ್ವೇತಿಹಾಸ

ಯುರೋಪ್ ವೈವಿಧ್ಯಮಯ ಹವಾಮಾನಗಳಿಂದಲೂ ಮತ್ತು ಭೌಗೋಳಿಕ ಅಂಶಗಳಿಂದಲೂ ಕೂಡಿದ ಖಂಡ. ಯುರೋಪಿನ ತುಂಬೆಲ್ಲ ದ್ವೀಪಗಳು, ನದಿ ಕಣಿವೆಗಳು, ಫಲವತ್ತಾದ ಬಯಲು ಪ್ರದೇಶಗಳು ಮತ್ತು ಪರ್ವತಗಳಿಂದ ಕೂಡಿದ್ದು, ಅದರ ಪ್ರಮುಖ ಭೌಗೋಳಿಕ ಅಂಶಗಳೆಂದರೆ ಉತ್ತರದ ಮತ್ತು ಪೂರ್ವದ ಪ್ರಖ್ಯಾತ ಬಯಲು - ಉಕ್ರೈನ್ ಹುಲ್ಲುಗಾವಲಿನಿಂದ ಬಾಲ್ಟಿಕ್ ಸಮುದ್ರದ ಮಣ್ಣಿನ ಹೆಬ್ಬಂಡೆಗಳವರೆಗೆ ಮತ್ತು ದಕ್ಷಿಣದ ಪರ್ವತ ಶ್ರೇಣಿಗಳು, ಅದರಲ್ಲಿ ಪ್ರಮುಖವಾಗಿ ಆಲ್ಪ್ಸ್, ಪಿರಾನಿಸ್ ಮತ್ತು ಕಾರ್‌ಪೆಥಿಯನ್ಸ್ ಮುಂತಾದವು. ಇಲ್ಲಿಯ ಹವಾಗುಣವು ವೈವಿಧ್ಯಮಯವಾಗಿದ್ದು, ಮೆಡಿಟರೇನಿಯನ್ ವಲಯದ ಒಣ ಉಷ್ಣ ಬೇಸಿಗೆಗಳಿಂದ ಹಿಡಿದು, ಶೀತ ಹಾಗೂ ಹವಾಮಾನದಿಂದ ಅಟ್ಲಾಂಟಿಕ್ ಸಮುದ್ರ ತೀರದ ತೇವಾಂಶದ ಹಾಗೂ ಸಮಶೀತೋಷ್ಣ ಹವೆಯವರೆಗೆ ಮತ್ತು ಪೂರ್ವಯುರೋಪ್ ಅತ್ಯಂತ ತೀವ್ರ ಚಳಿಗಾಲದಂತಹ ಹವಾಮಾನದವರೆಗೂ ವೈವಿಧ್ಯಮಯವಾಗಿದೆ.

ಯುರೋಪಿನ ಕಲ್ಪನೆ ಮತ್ತು ಹೆಸರು ಕ್ರಿ.ಪೂ.೬ ಮತ್ತು ೫ನೇ ಶತಮಾನದ ಗ್ರೀಸ್‌ನ ಭೌಗೋಳಶಾಸ್ತ್ರಜ್ಞರ ಸೃಷ್ಟಿಯಾಗಿದೆ. ಇತಿಹಾಸ ಪಿತಾಮಹ ಹೆರೊಡೊಟಸ್ ಬರವಣಿಗೆ ಗಳಲ್ಲಿ ಸಿಗುವಂತೆ, ಮನುಷ್ಯನ ವಾಸದ ತಾಣಗಳನ್ನು ಮೂರು ಭಾಗಗಳಾಗಿ ವಿಂಗಡಿಸಿ ದ್ದಾನೆ. ಅವುಗಳೆಂದರೆ ಯುರೋಪ್, ಏಷ್ಯಾ, ಲಿಬಿಯಾ (ಆಫ್ರಿಕಾ). ನಂತರದ ಲೇಖಕರು ಸಾಮಾನ್ಯವಾಗಿ ಇದೇ ಹೆಸರನ್ನು ಮುಂದುವರೆಸಿದರು.

ಇಷ್ಟಾದರೂ ಗ್ರೀಕ್ ಪೂರ್ವದ ಯುರೋಪಿನ ಬಗ್ಗೆ ತಿಳಿಯಲು ನಾವು ಪ್ರಾಗೈತಿಹಾಸಿಕ ಸಂಸ್ಕೃತಿಗಳಿಂದ ಪ್ರಾರಂಭಿಸಬೇಕಾಗುತ್ತದೆ. ಇದನ್ನು ನಾವು ನಮ್ಮ ಅಭ್ಯಾಸದ ಅನುಕೂಲಕ್ಕಾಗಿ ಈ ಕೆಳಕಂಡ ಉಪಶೀರ್ಷಿಕೆಗಳೊಂದಿಗೆ ಅಭ್ಯಸಿಸಬಹುದಾಗಿದೆ.

೧. ಪ್ಲೆಯಿಸ್ಟೋಸಿನ ಯುಗ
೨. ಮಾನವನ ವಿಕಾಸ
೩. ಹಳೆಯ ಶಿಲಾಯುಗ
೪. ಮಧ್ಯ ಶಿಲಾಯುಗ
೫. ನವ ಶಿಲಾಯುಗ
೬. ಲೋಹಗಳ ಬಳಕೆಯ ಕಾಲ
೭. ಗ್ರೀಕ್‌ರ ಪೂರ್ವದ ನಾಗರಿಕತೆಗಳು

**ಪ್ಲೆಯಿಸ್ಟೋಸಿಸ್ ಯುಗ**

ಯುರೋಪಿನ ಸಾಂಸ್ಕೃತಿಕ ಪಳೆಯುಳಿಕೆಗಳು ನಿರ್ದಿಷ್ಟವಾಗಿ ಹಿಮಯುಗಕಾಲದ (ಗ್ಲೇಷಿಯರ್) ಮತ್ತು ಅಂತರ ಹಿಮಯುಗದ (ಇಂಟರ್ ಗ್ಲೇಷಿಯರ್) ಅವಶೇಷಗಳೊಂದಿಗೆ ಸಂಬಂಧವನ್ನು ಹೊಂದಿರುವುದರಿಂದ ಯೂರೋಪಿನ ವಿಜ್ಞಾನಿಗಳು ಮತ್ತು ಪ್ರಾಕ್ತನ ಶಾಸ್ತ್ರಜ್ಞರಿಗೆ ಯುರೋಪ್ ಪ್ರದೇಶದ ಕಾಲಮಾನದ ಬಗ್ಗೆ ಚೆನ್ನಾಗಿ ತಿಳಿಯಲು ಅನುಕೂಲಕರವಾಗಿದೆ. ಏಷ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿ ಪ್ಲೆಯಿಸ್ಟೋಸಿನ ಸಂಸ್ಕೃತಿ ದೊರೆತಿದ್ದರೂ ಯುರೋಪಿನ ನಿಖರತೆ ಕಾಣುವುದಿಲ್ಲ.

ಈ ಪ್ಲೆಯಿಸ್ಟೋಸಿನ ಯುಗ ಸುಮಾರು ೨-೪ ಮಿಲಿಯನ್‌ಗಳ ಕಾಲವನ್ನು ಹೊಂದಿತ್ತೆಂದು ಭೂಗರ್ಭಶಾಸ್ತ್ರೀಯ ಕಾಲಮಾನದ ಪ್ರಕಾರ ನಿರ್ಧರಿಸಲಾಗಿದೆ. ಈ ಕಾಲದಲ್ಲಿ ಯುರೋಪಿನ ಖಂಡದಲ್ಲಿ ಬಹಳಷ್ಟು ಹವಾಮಾನದ ವೈಚಾರಿಕತೆಗಳು ಕಂಡುಬಂದಿದ್ದು, ಇದೇ ಕಾಲದಲ್ಲಿ ಪ್ರಥಮ ಬಾರಿಗೆ ಆದಿಮಾನವನ ವಿಕಾಸಗೊಂಡ ಕಾಲವು ಆಗಿತ್ತು. ಈ ಪ್ಲೆಯಿಸ್ಟೋಸಿನ ಮತ್ತು ಮುಂದೆ ಬಂದಂತಹ ಹೊಲೋಸಿನ್ ಯುಗವನ್ನು ಭೂಗರ್ಭಶಾಸ್ತ್ರದ ಪ್ರಕಾರ ಕ್ವಾರ್ಟನರಿ ಕಾಲ ಎಂದು ಕರೆಯುತ್ತಾರೆ. ಹಾಗೆಯೇ ಸುಮಾರು ೧೦,೦೦೦ ವರ್ಷಗಳ ಹಿಂದೆ ಪ್ಲೆಯಿಸ್ಟೋಸಿನ್ ಕಾಲವು ಕೊನೆ ಗೊಂಡಿದ್ದು ಹೊಲೋಸಿನ್ ಯುಗದ ಪ್ರಾರಂಭವನ್ನು ಗುರುತಿಸಲಾಗಿದೆ.

ಈ ಪ್ಲೆಯಿಸ್ಟೋಸಿನ ಕಾಲವನ್ನು ಅಭ್ಯಾಸದ ಅನುಕೂಲಕ್ಕಾಗಿ ಮೂರು ಹಂತಗಳನ್ನಾಗಿ ವಿವರಿಸಬಹುದಾಗಿದೆ. ಅದ್ಯಾವುದೆಂದರೆ ಆದಿ ಪ್ಲೆಯಿಸ್ಟೋಸಿನ ಕಾಲ, ಮಧ್ಯದ ಪ್ಲೆಯಿಸ್ಟೋಸಿನ ಹಾಗೂ ನಂತರದ ಪ್ಲೆಯಿಸ್ಟೋಸಿನ ಕಾಲ.

ಹಾಗೆಯೇ ಭೂ ವಿಜ್ಞಾನಿಗಳ ಪ್ರಕಾರ ಈ ಯುರೋಪಿನ ಕ್ವಾರ್ಟನರಿ ಕಾಲವನ್ನು ಮತ್ತೊಮ್ಮೆ ತಮ್ಮ ಅನುಕೂಲಕ್ಕಾಗಿ ನಾಲ್ಕು ಪ್ರಮುಖ ಹಿಮಯುಗದ ಕಾಲವನ್ನಾಗಿ ವಿಂಗಡಿಸಲಾಗಿದೆ. ಅದು ಯಾವುದೆಂದರೆ ಗುಂಜ್, ಮಿಂಡೆಲ್, ರಿಸೆ ಮತ್ತು ವುರ್ಮ. ಈ ಹೆಸರುಗಳನ್ನು ಅಲ್ಪೈನ್ ಕಣಿವೆಗಳಿಂದ ತೆಗೆದುಕೊಳ್ಳಲಾಗಿದೆ.

ಒಟ್ಟಿನಲ್ಲಿ ಈ ಪ್ಲೆಯಿಸ್ಟೋಸಿಸ್ ಯುಗವನ್ನು ನಾವು ಒಂದು ಸಂಸ್ಕೃತಿಯ ಹಿನ್ನೆಲೆ ಯಾಗಿ ಅಭ್ಯಸಿಸಬಹುದಾಗಿದೆ. ಅದನ್ನೇ ನಾವು ಶಿಲಾಯುಗ ಸಂಸ್ಕೃತಿ ಕಾಲ ಎಂದು ಕರೆಯುತ್ತೇವೆ.

ಆದರೆ ಈ ಶಿಲಾಯುಗ ಸಂಸ್ಕೃತಿಯನ್ನು ವಿವರವಾಗಿ ಅಭ್ಯಸಿಸುವ ಮುನ್ನ ನಾವು ಪ್ಲೆಯಿಸ್ಟೋಸಿಸ್ ಯುಗದ ಪ್ರಮುಖ ಅಂಶಗಳನ್ನು ಚರ್ಚಿಸಿ ಮುಂದುವರೆಯಬಹುದು.

**ಆದಿ ಪ್ಲೆಯಿಸ್ಟೋಸಿಸ್**

ಪ್ಲಿಯೋಸಿನ್ ಕಾಲದ ಕೊನೆ ಮತ್ತು ಪ್ಲೆಯಿಸ್ಟೋಸಿಸ್ ಕಾಲದ ಪ್ರಾರಂಭವನ್ನು ಸಾಮಾನ್ಯವಾಗಿ ೧.೮ ಮಿಲಿಯನ್ ವರುಷಗಳ ಹಿಂದೆ ಎಂದು ಗುರುತಿಸಬಹುದಾಗಿದೆ. ಈ ರೀತಿಯ ವಿಭಜನೆಯನ್ನು ಸಾಮಾನ್ಯವಾಗಿ ಪಳೆಯುಳಿಕೆಗಳ ಮತ್ತು ಹವಾಮಾನದ ವೈಪರೀತ್ಯಗಳ ಮೇಲೆ ವಿಭಾಗಿಸಲಾಗಿದೆ. ಕೆಳಗಿನ ಪ್ಲೆಯಿಸ್ಟೋಸಿಸ್ ಕಾಲದಲ್ಲಿ ಇದ್ದಂತಹ ಪ್ರಾಣಿ ವರ್ಗಗಳು ಸಾಮಾನ್ಯವಾಗಿ ಪ್ಲಿಯೋಸಿನ್‌ನ ಕಾಲದಲ್ಲಿ ಜೀವಿಸಿದ್ದ ಹಾಗೂ ಪ್ಲೆಯಿಸ್ಟೋಸಿಸ್ ಕಾಲದವರೆಗೂ ಬದುಕಿದ ಜೀವಿಗಳ ಪಳೆಯುಳಿಕೆಗಳು ಆಗಿವೆ. ಇದರ ಜೊತೆಗೆ ಪ್ರಪ್ರಥಮ ಬಾರಿಗೆ ಕೆಳಗಿನ ಪ್ಲೆಯಿಸ್ಟೋಸಿಸ್ ಕಾಲದಲ್ಲಿ ಕಾಣಿಸಿಕೊಂಡ ಪ್ರಾಣಿಗಳು ಯಾವುದೆಂದರೆ ಕಾಡು ಕುದುರೆ, ದನಗಳು, ಆನೆಗಳು ಮತ್ತು ಒಂಟೆಗಳಾಗಿವೆ. ಇದೇ ಕಾಲದಲ್ಲಿ ಮೊಟ್ಟ ಮೊದಲನೆ ಬಾರಿಗೆ ಹೋಮ್ ಎರಕ್ಟ್‌ಸ್ ಸಂತತಿಯ ವಿಕಾಸ ಆಫ್ರಿಕಾದಲ್ಲಿ ಆಗಿ, ನಿಧಾನವಾಗಿ ಆಫ್ರಿಕಾ ಖಂಡದಿಂದ ಏಷ್ಯಾ ಮತ್ತು ಯುರೋಪಿನ ಖಂಡಗಳ ಕಡೆ ವಲಸೆ ಬಂದಿರುವುದನ್ನು ಕಾಣಬಹುದಾಗಿದೆ.

**ಮಧ್ಯ ಪ್ಲೆಯಿಸ್ಟೋಸಿಸ್ ಯುಗ**

ಮಧ್ಯ ಪ್ಲೆಯಿಸ್ಟೋಸಿಯ ಯುಗದ ಬಹಳ ಪ್ರಮುಖವಾದ ಬದಲಾವಣೆಗಳನ್ನು ಸಸ್ಯ ಕ್ಷೇತ್ರದಲ್ಲಿ ಗುರುತಿಸಬಹುದಾಗಿದೆ. ಕಾರಣವೇನೆಂದರೆ ಮಧ್ಯ ಹಾಗೂ ನಂತರದ ಪ್ಲೆಯೋಸ್ಟೋಸಿಸ್ ಕಾಲವು ಸುಮಾರು ಎರಡು ಮಧ್ಯಂತರ ಹಿಮಯುಗವನ್ನು ಕಂಡಂತಹ ಕಾಲವಾಗಿದೆ. ಈ ಕಾಲದಲ್ಲಿ ಯುರೋಪಿನಲ್ಲಿ ಮತ್ತು ಉತ್ತರ ಆಫ್ರಿಕಾದಲ್ಲಿ ಮರಗಳಿಲ್ಲದ ಸ್ಟೇಪ್ಪಿ ಮತ್ತು ಥಾಂಡ್ರಗಳಂತಹ ಬಯಲುಗಳು ಕಂಡುಬಂದಿದೆ. ಆದರೆ ಮುಂದೆ ಬಂದ ಅಂತರ್-ಹಿಮಯುಗ ಕಾಲದಲ್ಲಿ ಸಮಶೀತೋಷ್ಣ ವಲಯದ ಹಿಮಗಳು ಈ ಪ್ರದೇಶಗಳಲ್ಲಿ ಕಾಣಿಸಿಕೊಳ್ಳುತ್ತವೆ. ಈ ಅಂತರ್ ಹಿಮ ಯುಗದ ಬೆಚ್ಚಗಿನ ಅಥವಾ ಪ್ರತಿಕೂಲ ವಾತಾವರಣದಲ್ಲಿ ನಮಗೆ ಮಾನವನ ನೆಲೆಗಳು ಕಾಣಿಸಿಕೊಳ್ಳುತ್ತವೆ. ಆದರೆ ಆ ಮಾನವರು ದೊಡ್ಡ ಸಂಖ್ಯೆಯಲ್ಲಿ ಒಟ್ಟಾಗಿ ಒಂದೇ ಪ್ರದೇಶದಲ್ಲಿ ವಾಸ ಮಾಡುವವರಂತಾಗಿರದೆ ಅವರು ಅಲೆಮಾರಿ ಜನಾಂಗದ ಸಣ್ಣ ಸಣ್ಣ ಗುಂಪುಗಳೂ ಬೇಟೆಯಲ್ಲಿ ನಿಷ್ಣಾತತೆಯನ್ನು ಪಡೆದ ಗುಂಪುಗಳೂ ಆಗಿದ್ದು ಸಾಮಾನ್ಯವಾಗಿ ಯುರೋಪಿನ ನದಿ ಕಣಿವೆ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತಾರೆ.

**ಮೇಲಿನ ಪ್ಲೆಯಿಸ್ಟೋಸಿಸ್**

ಈ ಕಾಲವು ಕೊನೆಯ ಅಂತರ್ ಹಿಮಯುಗ ಮತ್ತು ಹಿಮಯುಗದ ಕಾಲಕ್ಕೆ ಜೊತೆ ಜೊತೆಯಾಗಿ ಕಾಣಿಸಿಕೊಳ್ಳುತ್ತವೆ. ಈ ಕಾಲದಲ್ಲಿ ಹೆಚ್ಚಿನ ಸಮಶೀತೋಷ್ಣವಲಯದ ಕಾಡುಗಳು ಯುರೋಪಿನಲ್ಲೆಲ್ಲಾ ಕಾಣಿಸಿಕೊಂಡವು. ಕೊನೆಯ ಹಿಮಯುಗ ಹಿಂದೆ ಸರಿದ ನಂತರದ

ಅಥವಾ ಇತ್ತೀಚಿನ ಕಾಲವನ್ನು ಹೊಲೊಸಿನ್ ಎಂದೂ ಸಹ ಕರೆಯುತ್ತಾರೆ. ಹಾಗೆಯೇ ಈ ಕಾಲ ಶೀಘ್ರವಾಗಿ ಬಹಳಷ್ಟು ಬದಲಾವಣೆಗಳನ್ನು ಕಂಡ ಕಾಲವಾಗಿದೆ.

ಒಟ್ಟಿನಲ್ಲಿ ಪ್ಲೆಯಿಸ್ಟೋಸಿಸ್ ಯುಗ ಮಾನವನ ಪ್ರಾಗೈತಿಹಾಸಕ್ಕೆ ಒಂದು ಸಮರ್ಪಕವಾದ ಚೌಕಟ್ಟನ್ನು ನೀಡುತ್ತದೆ. ಹಾಗೆಯೇ ಈ ಕಾಲದ ಅಭ್ಯಾಸವನ್ನು ಮಾಡುವುದರಿಂದ ನಮಗೆ ಮಾನವ ವಿಕಾಸದ ಬಗ್ಗೆ ತಿಳಿದುಕೊಳ್ಳಲು ಅನುವು ಮಾಡಿಕೊಡುತ್ತದೆ. ಹೀಗೆ ವಿಸ್ತಾರ ವಾಗಿ ನಾವು ಪ್ಲೆಯಿಸ್ಟೋಸಿಸ್ ಯುಗವನ್ನು ಅಭ್ಯಾಸ ಮಾಡಿದರೆ ನಮಗೆ ಮಾನವನ ದೈಹಿಕ ಹಾಗೂ ಸಾಮಾಜಿಕ ವಿಕಾಸವನ್ನು ಹಂತ ಹಂತವಾಗಿ ತಿಳಿಯಲು ಸಾಧ್ಯವಾಗುತ್ತದೆ. ಹಾಗೆಯೇ ಈ ಯುಗದ ಬಗ್ಗೆ ಅಭ್ಯಸಿಸುವುದರಿಂದ, ಅಂದಿನ ಕಾಲದಲ್ಲಿ ಪರಿಸರದಲ್ಲಿ ಆದಂತಹ ಗುರುತರ ಬದಲಾವಣೆಗಳನ್ನು ತಿಳಿದುಕೊಳ್ಳಲು ಸಹಾಯಕವಾಗಿದೆ. ಈ ಕಾಲವನ್ನು ಮನುಕುಲಯುಗ ಎಂದೂ ಸಹ ಕರೆಯಲಾಗಿದೆ. ಕಾರಣವೇನೆಂದರೆ ಮೊಟ್ಟ ಮೊದಲು ಈ ಕಾಲದಲ್ಲಿ ಮನುಷ್ಯನು ಪ್ರಪಂಚದ ಎಲ್ಲಾ ಭೌಗೋಳಿಕ ನೆಲೆಗಳಲ್ಲಿ ತನ್ನ ವಾಸ ಸ್ಥಾನವನ್ನು ಮಾಡಿಕೊಂಡು ಹಾಗೆಯೇ ತನ್ನದೇ ಆದ ಸಮಾಜದ ನಿರ್ಮಾಣ ಮಾಡಿಕೊಳ್ಳುವುದನ್ನು ತಿಳಿದುಕೊಳ್ಳಬಹುದಾಗಿದೆ. ಹೀಗೆ ವಿಕಾಸ ಹೊಂದಿದ ಮಾನವ ನಂತರ ಒಂದೇ ಸ್ಥಳದಲ್ಲಿ ನೆಲೆ ನಿಂತು ತೀವ್ರ ವ್ಯವಸಾಯ ಪದ್ಧತಿಯನ್ನು ತನ್ನ ಆರ್ಥಿಕ ಜೀವನದ ಆಧಾರವನ್ನಾಗಿ ಮಾಡಿಕೊಂಡಂತಹ ವಿಚಾರವನ್ನು ನಾವು ಗುರುತಿಸಬಹುದಾಗಿದೆ.

ಆದರೆ ನಾವು ಯುರೋಪಿನಲ್ಲಿ ಉಂಟಾದ ಮಾನವನ ಸಂಸ್ಕೃತಿಯ ಬೆಳವಣಿಗೆಯನ್ನು ವಿಸ್ತಾರವಾಗಿ ತಿಳಿದುಕೊಳ್ಳುವ ಮುನ್ನ ಮೊಟ್ಟಮೊದಲ ಬಾರಿಗೆ ಮಾನವ ಯಾವಾಗ ಯುರೋಪಿನಲ್ಲಿ ಕಾಣಿಸಿಕೊಂಡ ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ತಿಳಿದುಕೊಂಡರೆ ಮುಂದಿನ ಅವನ ಸಂಸ್ಕೃತಿಯ ವಿಕಾಸವನ್ನು ತಿಳಿದುಕೊಳ್ಳಲು ಅನುಕೂಲವಾಗುತ್ತದೆ.

**ಯುರೋಪಿನಲ್ಲಿ ಮಾನವನ ವಿಕಾಸ**

೧೮೫೯ರಲ್ಲಿ ಡಾರ್ವಿನ್‌ನ ನೈಸರ್ಗಿಕ ಆಯ್ಕೆಯ ವಿಕಾಸ ಸಿದ್ಧಾಂತದ ಪ್ರಕಟಣೆಯೊಂದಿಗೆ ಮನುಷ್ಯನ ವಿಕಾಸದ ಪುರಾವೆಯ ಬಗ್ಗೆ ಮತ್ತು ಅದನ್ನು ಕೂಲಂಕಷವಾಗಿ ತಿಳಿಯುವುದರ ಬಗ್ಗೆ ಶೋಧ ಪ್ರಾರಂಭವಾಯಿತು. ಆದರೆ ಮಾನವನ ವಿಕಾಸದ ಅಧ್ಯಯನ ಪಳೆಯುಳಿಕೆ ಮತ್ತು ಬದಲಾದ ದೃಷ್ಟಿಕೋನಗಳನ್ನು ಆಧರಿಸಿತ್ತು.

ಇದರ ಪ್ರಕಾರವಾಗಿ ಏಳು ಮಿಲಿಯನ್ ವರ್ಷಗಳ ಹಿಂದೆ ಮೊದಲು ಆದಿಮಾನವನ ವಿಕಾಸದೊಂದಿಗೆ ಮಾನವನ ವಿಕಾಸ ಪ್ರಾರಂಭವಾಯಿತು. ಆದಿಮಾನವ ಎಂಟರಿಂದ ಆರು ಮಿಲಿಯನ್ ವರ್ಷಗಳ ಹಿಂದೆ ಮೊಟ್ಟ ಮೊದಲ ಆಫ್ರಿಕಾದಲ್ಲಿ ಕಾಣಿಸಿಕೊಂಡ. ಆದರೆ ಈವರೆವಿಗೂ ಅದು ಪಳೆಯುಳಿಕೆ ಪುರಾವೆಯಿಂದ ಸಾಬೀತಾಗಿಲ್ಲ. ಆದರೆ ಐದು ಮಿಲಿಯನ್ ವರ್ಷಗಳ ಹಿಂದೆ ವಿವಾದಾತೀತ ಆದಿಮಾನವರ ಪಳೆಯುಳಿಕೆಗಳು ಕಾಣಿಸಿ ಕೊಂಡವು. ಇವು ಪ್ರಥಮ ಬಾರಿಗೆ ಪೂರ್ವ ಆಫ್ರಿಕಾದಲ್ಲಿ ಸಿಕ್ಕಿದ್ದು, ಆಫ್ರಿಕಾವೇ ಆದಿಮಾನವನ ಮೂಲ ಭೂಮಿ ಎಂಬುವನ್ನು ದೃಢಪಡಿಸುತ್ತವೆ. ಹೀಗೆ ಗೊತ್ತಿರುವ ಕಾಲಘಟ್ಟದಿಂದ ಎರಡು ಮಿಲಿಯನ್ ವರ್ಷಗಳ ಹಿಂದಿನವರೆಗೆ ಮೊದಲ ಆದಿಮಾನವ ಮತ್ತು ತರುವಾಯದ ಆದಿಮಾನವರ ವಿಶ್ಲೇಷಣೆಯಿಂದ ಪ್ರಾರಂಭವಾದ ಆದಿಮಾನವನ ವಿಕಾಸದ ಬಗ್ಗೆ ತಿಳಿದುಕೊಳ್ಳಲು ಉತ್ತಮ ಸಾಕ್ಷಿಯನ್ನು ಒದಗಿಸುತ್ತದೆ. ಹಾಗೆಯೇ ಈ ವಿಕಾಸದ ಅಧ್ಯಯನದಿಂದ ಸಾಮಾನ್ಯವಾಗಿ ಅಸ್ಟ್ರಲೋಪೆಥಿಸಿನ್ ಎಂದು ಕರೆಯಲ್ಪಡುವ ಜೀವಿಗಳ ವಿಕಾಸದ ಬಗ್ಗೆಯು ಹೆಚ್ಚಿನ ಮಾಹಿತಿಗಳು ತಿಳಿಯುತ್ತದೆ. ಈ ಅಸ್ಟ್ರಲೋಪಿಥಿಸಿನ್ ಗುಂಪಿನಲ್ಲಿಯೇ ಹಲವಾರು ಪ್ರಭೇದಗಳು ಕಂಡುಬಂದಿವೆ. ಅಸ್ಟ್ರಲೋಪೆಥಿಸಿನ್ ದ್ವಿಪಾದಿ ಗಳಾಗಿದ್ದು, ಮನುಷ್ಯನ ಮುಂದಿನ ವಿಕಾಸದ ಪ್ರಮುಖ ಲಕ್ಷಣಗಳಲ್ಲಿ ಒಂದೆನಿಸುವುದರ ಜೊತೆಗೆ ಉಳಿದವುಗಳಿಂದ ಬೇರ್ಪಟ್ಟ ಆದಿಮಾನವನಾಗಿದ್ದಾನೆ. ಆದರೆ ಈ ಆದಿಮಾನವನಿಗೆ ಯಾವುದೇ ತಂತ್ರಜ್ಞಾನದ ತಿಳುವಳಿಕೆ ಇರಲಿಲ್ಲ.

ನಂತರ ೨-೫ ಮಿಲಿಯನ್ ವರ್ಷಗಳಿಂದ ೨ ಮಿಲಿಯನ್ ವರ್ಷದ ಪೂರ್ವದಲ್ಲಿ ಆದಿಮಾನವನ ವಿಕಾಸದಲ್ಲೇ ನಿರ್ದಿಷ್ಟ ಮನುಷ್ಯ ಪ್ರಭೇದ ಕಾಣಸಿಗಲಿಲ್ಲ. ನಂತರದ ಕಾಲದಲ್ಲಿ ಪ್ರಪ್ರಥಮ ಬಾರಿಗೆ ಮನುಷ್ಯ ಸಂತತಿ ಜಿನಸ್ ಹೋಮೋ ಕಾಣಿಸಿಕೊಂಡಿತು. ಈ ಪ್ರಭೇದದ ಮುಖ್ಯ ಗುಣಲಕ್ಷಣಗಳಾವುವೆಂದರೆ ಬೆಳೆದಂತಹ ಮೆದುಳು (ಅಂದರೆ ವಾನರಗಿಂತ ದೊಡ್ಡದಾದ ಮೆದುಳು). ಈ ಪ್ರಥಮ ವಿಕಾಸ

ಹೊಂದಿದ ಪ್ರಭೇದವನ್ನು ಹೋಮೋ ಹೇಬಿಲಸ್ ಎಂದು ಕರೆಯಲಾಗಿದೆ. ಅದು ನೋಡಲು ಸಣ್ಣ ದೇಹಾಕೃತಿಯನ್ನು ಹೊಂದಿದ್ದು, ಹಾಗೆಯೇ ಅಸ್ಟ್ರಲೋಪೆಥಿಸಿನ್‌ನ ಅನೇಕ ಪ್ರಮುಖ ಗುಣ ಲಕ್ಷಣಗಳನ್ನು ಹೊಂದಿದ್ದು, ಆದರೆ ದೊಡ್ಡದಾದ ಮೆದುಳಿನ ಗಾತ್ರವನ್ನು ಹೊಂದಿದ್ದವುದಾಗಿದೆ.

ನಂತರದ ವಿಕಸನ ಹಂತದಲ್ಲಿ ಮನುಷ್ಯನ ಬಾಹ್ಯ ಆಕಾರ ಹಾಗೂ ಈ ಪ್ರಭೇದದ ವಂಶವಾಹಿನಿ ನಿರ್ಧಾರಗೊಂಡು ಅದನ್ನು ಹೋಮೋ ಎರೆಕ್ಟಸ್ ಎಂಬ ಹೆಸರಿನಿಂದ ಗುರುತಿಸಲ್ಪಟ್ಟಿದೆ. ಇದರ ಪ್ರಮುಖ ಲಕ್ಷಣಗಳು ಯಾವುದೆಂದರೆ ಅವನು ಪೂರ್ತಿಯಾಗಿ ನೆಟ್ಟನೆ ನಿಲ್ಲುತ್ತಿದ್ದನು. ಅವನ ಮೆದುಳು ನಿರ್ದಿಷ್ಟವಾಗಿ ಬೆಳೆದು ಅತಿಗಾತ್ರದ ದೇಹವನ್ನು ಹೊಂದಿದ್ದನು, ಹಾಗೂ ಕೆಲವೊಂದು ನಿರ್ದಿಷ್ಟ ಗುಣಲಕ್ಷಣಗಳನ್ನು ಹೊಂದಿದ್ದನು. ಉದಾಹರಣೆಗೆಹರಣೆಗೆ ಹೋಮೋ ಎರೆಕ್ಟ್ಸ್‌ಗೆ ಪ್ರಪ್ರಥಮ ಬಾರಿಗೆ ಪೂರ್ವ ಮತ್ತು ದಕ್ಷಿಣ ಆಫ್ರಿಕಾ ದಲ್ಲಿ ಕಂಡುಬಂದಿದ್ದು ನಂತರ ನಿಧಾನವಾಗಿ ಆಫ್ರಿಕಾ ಖಂಡದ ಬೇರೆ ಬೇರೆ ಪ್ರಾಂತ್ಯಗಳಲ್ಲಿ ಹರಡಿಕೊಂಡಿರುವುದನ್ನು ನೋಡಬಹುದಾಗಿದೆ. ಸುಮಾರು ಒಂದು ಮಿಲಿಯನ್ ವರ್ಷ ಗಳ ಸುಮಾರಿಗೆ ಹೋಮೋ ಎರೆಕ್ಟಸ್ ಏಷ್ಯಾದ ಕೆಲವೊಂದು ಶೀತಲ ಪ್ರದೇಶಗಳಲ್ಲೂ ಹಾಗೂ ಸಮಶೀತೋಷ್ಣ ವಲಯದ ಯುರೋಪಿನ ಪ್ರಾಂತ್ಯಗಳಲ್ಲೂ ಹರಡಿರುವುದನ್ನು ಗಮನಿಸಬಹುದಾಗಿದೆ. ಈ ಹೋಮೋ ಎರೆಕ್ಟಸ್‌ನ ವಿಕಾಸದೊಂದಿಗೆ ಶಿಲಾಯುಗದ ತಂತ್ರಜ್ಞಾನವಾದ ಆಯುಧ ತಯಾರಿಕೆಗಳು ಪ್ರಾರಂಭವಾಯಿತೆಂದು ನಿಖರವಾಗಿ ಹೇಳಬಹುದು.

ಒಟ್ಟಿನಲ್ಲಿ ಹೋಮೋ ಎರೆಕ್ಟಸ್‌ನ ವಿಕಾಸ ಹಾಗೂ ಬೆಳವಣಿಗೆ ಹಾಗೂ ಅವನು ಪ್ರಪಂಚದ ಬೇರೆ ಬೇರೆ ಸ್ಥಾನಗಳಿಗೆ ವಲಸೆ ಹೋಗಿರುವುದು ಅತಿ ಗಮನಾರ್ಹ ಅಂಶವಾಗಿದೆ.

ಈ ಮನುಷ್ಯನ ವಿಕಾಸದ ಕೊನೆಯ ಹಂತವೇ ಹೋಮೋ ಸಿಪಿಯನ್ಸ್ ಎಂದು ಕರೆಯಲ್ಪಡುವ ಮಾನವ ಸಂಕುಲವಾಗಿದೆ. ಆದರೆ ಹೋಮೋ ಎರೆಕ್ಟ್ಸ್‌ನಿಂದ ಬೇರೆ ಬೇರೆ ರೀತಿಯ ಗುಣಲಕ್ಷಣಗಳನ್ನು ಉಳ್ಳ ಅನೇಕ ಪ್ರಭೇದಗಳು ಬೇರೆ ಯಾವುದೇ ಸಂಸ್ಕೃತಿಯ ನೆರವಿನಿಂದ ಹುಟ್ಟಿಕೊಂಡು ಹಾಗೆಯೇ ತನ್ನ ಸುತ್ತಲಿನ ವಾತಾವರಣಕ್ಕೆ ಅನುಗುಣವಾಗಿ ವಿಕಾಸ ಹೊಂದಿದ ಕಾರಣದಿಂದ ಮನುಷ್ಯನ ಬಾಹ್ಯ ರೂಪದಲ್ಲಿ ಅನೇಕ ಬದಲಾವಣೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಆದರೆ ಈ ವಿಷಯದ ನಿಖರತೆಯ ಬಗ್ಗೆ ವಿದ್ವಾಂಸರಲ್ಲಿ ಒಮ್ಮತದ ಅಭಿಪ್ರಾಯ ಇನ್ನೂ ಮೂಡಿಲ್ಲ.

ಆದರೆ ಯುರೋಪ್ ಖಂಡದಲ್ಲಿ ಹಿಮಯುಗದ ಕಾಲದಲ್ಲಿ ಮೊಟ್ಟ ಮೊದಲ ಬಾರಿಗೆ ಈ ಹೋಮೋ ಎರೆಕ್ಟ್ಸ್ ಗುಂಪಿಗೆ ಸೇರಿದ ನಿಯಾನ್‌ಡರ್ತಲ್ ಮಾನವನ ಉಗಮವಾಯಿತು. ಈ ಪ್ರಭೇದದ ಕಾಲವನ್ನು ಸುಮಾರು ೧೦೦,೦೦೦ ವರ್ಷಗಳ ಹಿಂದೆ ಆಗಿರಬಹುದೆಂದು ಅಂದಾಜು ಮಾಡಲಾಗಿದೆ. ಇಡೀ ಯುರೋಪಿನ ಪ್ಲೆಯಿಸ್ಟೋಸಿಸ್ ಯುಗದಲ್ಲಿ ಬಹಳ ಆರ್ಕೈಕ್ ಆದ ಗುಂಪು ಇದಾಗಿದೆ.

ಈ ನಿಯಾನ್‌ಡರ್ತಲ್ ಮನುಷ್ಯನಿಗೆ ಬೆಳೆದಂತಹ (ದೊಡ್ಡವಾದ) ಮೆದುಳು ಇದ್ದು, ಅವನು ಪೂರ್ತಿಯಾಗಿ ದ್ವಿಪಾದಿಯಾಗಿದ್ದನು. ಹಾಗೆಯೇ ಅವನಿಗೆ ಕಲ್ಲಿನ ಆಯುಧಗಳ ಬಳಕೆ ಹಾಗೂ ಉಪಯೋಗವು ತಿಳಿದಿತ್ತು. ಅವನ ಕಾಲ ಹಿಮಯುಗದ ಕಾಲವಾದ್ದರಿಂದ ಅತಿ ಶೀತದ ವಾತಾವರಣವನ್ನು ಎದುರಿಸಲು ಅವನು ಕಲ್ಲಿನ ಗುಹೆಗಳನ್ನು ತನ್ನ ವಾಸಸ್ಥಾನ ಮಾಡಿಕೊಂಡಿರುವುದು ಕಂಡುಬರುತ್ತದೆ. ಹಾಗೂ ಬೇರೆ ಬೇರೆ ರೀತಿಯ ಆಯುಧ ತಯಾರಿಕೆಯ ತಂತ್ರಜ್ಞಾನ ಇವನಿಗೆ ತಿಳಿದಿತ್ತು. ಇವನ ಕಾಲದ ಸಮಾಜ ಒಂದು ರೀತಿಯ ಬೇಟೆ ಹಾಗೂ ಆಹಾರ ಸಂಗ್ರಹಿಸುವ ಗುಂಪು ಆಗಿತ್ತು. ಹಾಗೆಯೇ ಪ್ರಪಂಚದಲ್ಲಿ ಮೊಟ್ಟ ಮೊದಲನೆ ಬಾರಿಗೆ ಸತ್ತವರನ್ನು ವಿಧಿ ವಿಧಾನಗಳೊಂದಿಗೆ ಶವಸಂಸ್ಕಾರ ಮಾಡುತ್ತಿದ್ದ ಜನಾಂಗ ಇದಾಗಿತ್ತು.

ಸುಮಾರು ೩೫,೦೦೦ ವರ್ಷಗಳ ಹೊತ್ತಿಗೆ ಹೋಮೇ ಸೇಪಿಯನ್ ಅಲ್ಲಿ ನೆಲೆಸುವ ತನಕ ಈ ನಿಯಾನ್‌ಡರ್ತಲ್ ಸೆಪಿಯನ್ ಎಂಬ ಮನುಷ್ಯನ ಗುಂಪು ಯುರೋಪಿನಲ್ಲಿ ಕಂಡುಬರುತ್ತದೆ.

**ಯುರೋಪಿನ ಹಳೆಯ ಶಿಲಾಯುಗ ಸಂಸ್ಕೃತಿ**

ಈ ಶಿಲಾಯುಗ ಸಂಸ್ಕೃತಿಯು ಕಾಕತಾಳೀಯವಾಗಿ ಯುರೋಪಿನ ಹಿಮಯುಗ (ಗ್ಲೇಸಿಯರ್) ಮತ್ತು ಹಿಮಯುಗಗಳ ನಡುವಿನ ಕಾಲ (ಇಂಟರ್ ಗ್ಲೇಸಿಯರ್) ಕಾಲಾವಧಿಯಲ್ಲಿ ಬರುತ್ತದೆ. ಇದು ಸುಮಾರು ೭೦೦,೦೦೦ ವರ್ಷಗಳ ಹಿಂದೆ ಹಳೇ ಪ್ರಪಂಚದಿಂದ ಹೊಸ ಪ್ರಪಂಚಕ್ಕೆ ಕಾಲಿಟ್ಟು ಪ್ರಾರಂಭವಾಯಿತು ಹಾಗೂ ಆದಿಮಾನವರ ವಿಕಾಸದೊಂದಿಗೆ ಮುಂದುವರೆದು ೧೦,೩೦೦೦ ವರ್ಷಗಳ ಹಿಂದೆ ಮುಕ್ತಾಯಗೊಂಡಿತು. ಈ ಕಾಲದಲ್ಲಿ ಯುರೋಪಿನ ಎಲ್ಲಾ ಭಾಗಗಳಲ್ಲೂ ನಿರಂತರವಾಗಿ ಜನಜೀವನ ಇರಲಿಲ್ಲ. ಅ ಕಾಲದಲ್ಲಿ ಮನುಷ್ಯ ಬದಲಾಗುತ್ತಿದ್ದ ಹವಾಮಾನ ವೈಪರೀತ್ಯಕ್ಕೆ ಹೊಂದಿಕೊಳ್ಳಬೇಕಾಗಿತ್ತು. ತನ್ನ ನೆಲೆಯನ್ನು ಒಂದು ಜಾಗದಿಂದ ಮತ್ತೊಂದು ಜಾಗಕ್ಕೆ ಬದಲಾಯಿಸಬೇಕಾಗಿತ್ತು. ಯಾಕೆಂದರೆ ಮನುಷ್ಯ ಆಗ ಬೇಟೆಗಾರ ಹಾಗೂ ಆಹಾರ ಸಂಗ್ರಹಗಾರನಾಗಿದ್ದ. ಅಂದಿನ ಮನುಷ್ಯನ ಚಟುವಟಿಕೆಯ ಮೂಲಭೂತ ಸಾಕ್ಷಿಯಾಗಿ ವಿವಿಧ ರೂಪದ ಕಲ್ಲಿನ ಆಯುಧಗಳು ಮತ್ತು ಅವುಗಳ ತಯಾರಿಕೆಯ ಸಂದರ್ಭದ ಉಳಿದ ಚೂರುಗಳು ಮತ್ತು ಪ್ರಾಣಿಗಳ ಮೂಳೆಗಳು ಹಾಗೂ ಮಾನವರುಗಳ ಅಸ್ಥಿಗಳು ದೊರೆತಿವೆ. ಈ ಮೇಲೆ ತಿಳಿಸಿದ ವಸ್ತುಗಳು ಸಾಮಾನ್ಯವಾಗಿ ಗುಹೆಗಳಲ್ಲಿ ಕಲ್ಲಿನ ಆಶ್ರಯಗಳಲ್ಲಿ ಬಯಲುಗಳಲ್ಲಿ ಹಾಗೂ ನದಿಗಳ ಸ್ತರಗಳಲ್ಲಿ ಕಂಡುಬಂದಿದೆ. ಸಾಂಪ್ರದಾಯಿಕವಾಗಿ ಶಿಲಾಯುಗದ ಕಾಲವನ್ನು ಕೆಳ, ಮಧ್ಯಮ ಮತ್ತು ಮೇಲಿನ ಶಿಲಾಯುಗಗಳೆಂದು ಉಪ ವಿಭಾಗಿಸಲಾಗಿದೆ. ಕೆಳ ಶಿಲಾಯುಗದ ಕಾಲ ೭೦೦,೦೦೦ ವರ್ಷಗಳ ಹಿಂದೆ ಪ್ರಾರಂಭವಾಗುತ್ತದೆ. ಮಧ್ಯ ಶಿಲಾಯುಗ ಈಗ್ಗೆ ೨೫೦,೦೦೦ ವರ್ಷಗಳ ಮೊದಲು ಪ್ರಾರಂಭವಾಗಿರಬಹುದೆಂದು ನಂಬಲಾಗಿದೆ. ಹಾಗೆಯೇ ಮೇಲಿನ ಶಿಲಾಯುಗ ಕಾಲವು ಮಧ್ಯ ಮತ್ತು ಮೇಲಿನ ಪ್ಲೆಯಿಸ್ಟೋಸಿಸ್ ಹವಾಮಾನ ಕಾಲ ದೊಂದಿಗೆ ಸಮಕಾಲೀನವಾಗಿದ್ದು, ಇದರ ಕಾಲವನ್ನು ೧,೩೦,೦೦೦ ವರ್ಷಗಳೆಂದು ಅಂದಾಜಿಸಲಾಗಿದೆ.

ಈ ಕೆಳ, ಮಧ್ಯಮ ಮತ್ತು ಮೇಲಿನ ಶಿಲಾಯುಗದ ಕಾಲಗಳ ಉಪ ವಿಭಾಗಗಳನ್ನು ತಯಾರಿಸಲ್ಪಟ್ಟ ಶಿಲಾ ಆಯುಧಗಳ ಮಾದರಿಯ ಮೇಲೆ ವ್ಯಾಖ್ಯಾನಿಸಲಾಗಿದೆ. ಉದಾಹರಣೆಗೆ. ಕೆಳ ಶಿಲಾಯುಗದಲ್ಲಿ ನಮಗೆ ಸರಳವಾಗಿ ಕಲ್ಲಿನಿಂದ ತಯಾರಿಸಿದ ಕೈಕೊಡಲಿಗಳು ಕಂಡುಬಂದರೆ, ಮಧ್ಯಶಿಲಾಯುಗದ ಕಾಲದಲ್ಲಿ ಲೆವಲ್ಲೈಸ್ ತಂತ್ರಜ್ಞಾನದಿಂದ ತಯಾರಿಸಿದ ಚಿಕ್ಕ ಆಯುಧಗಳ ಬಳಕೆ ಹಾಗೂ ನಂತರ ಮೇಲಿನ ಶಿಲಾಯುಗದ ಕಾಲದಲ್ಲಿ ಕಲ್ಲಿನ ಬ್ಲೇಡುಗಳ ಬಳಕೆ ಕಂಡುಬರುತ್ತದೆ.

ಹೀಗೆ ಶಿಲಾಯುಗದ ಯುರೋಪ್ ನಿರಂತರವಾಗಿ ಆದಿಮಾನವರ ಪ್ರಭೇದಗಳ ನೆಲೆಯಾಯಿತು. ಈ ಪ್ರಭೇದಗಳಲ್ಲಿ ಹೋಮೋ ಎರೆಕ್ಟಸ್, ಹೋಮೋ ಸಪೈನ್ ಮತ್ತು ಕೊನೆಯದು ಹೋಮೋ ಸೆಪೆಯನ್ ಸೆಪಿಯಸ್ ಅಥವಾ ಆಧುನಿಕ ಮಾನವನ ವಿಕಾಸವಾಯಿತು. ಹೀಗೆ ಆಫ್ರಿಕಾದ ಪ್ರಭೇದಗಳ ಹರಡುವಿಕೆಯಿಂದಾಗಿ ಯುರೋಪಿನಲ್ಲಿ ಮೊದಲು ಹೋಮೋ ಎರೆಕ್ಟ್‌ಸ್‌ಗಳು ಕಾಣಿಸಿಕೊಂಡವು. ಆದರೆ ನಿಯಾನ್‌ಡರ್ತಲ್‌ವನ್ನು ಯುರೋಪಿನ ನಿರ್ದಿಷ್ಟ ಪರಿಸರದ ಸ್ಥಿತಿಗಳಿಗೆ ಪ್ರತ್ಯುತ್ತರವಾಗಿ ಹುಟ್ಟಿಕೊಂಡ ಪ್ರಭೇದವೆಂದು ಪರಿಗಣಿಸಲಾಗಿದೆ.

**ಯುರೋಪಿನ ಹಳೆಯ ಶಿಲಾಯುಗ ಸಂಸ್ಕೃತಿ**

ಹೀಗೆ ಯುರೋಪಿನ ಹಳೇ ಶಿಲಾಯುಗವು ಪ್ಲೆಯಿಸ್ಟೋಸಿಸ್ ಯುಗದೊಂದಿಗೆ ಸಮೀಕರಿಸಲ್ಪಟ್ಟಿದೆ. ಈ ಹೋಮಿನಿಡ್ ಗುಂಪು ಯುರೋಪಿನ ವಿವಿಧ ಪರಿಸರದ ಸ್ಥಿತಿಗತಿಗೆ ಹೊಂದಿಕೊಂಡು ತಮ್ಮದೇ ಆದಂತಹ ಬೇಟೆಗಾರ ಹಾಗೂ ಆಹಾರ ಸಂಗ್ರಹ ಕಾರರಾಗಿ ಹೊಂದಿಕೊಂಡರು.

**ಯುರೋಪಿನ ಆದಿ ಹಳೆಯ ಶಿಲಾಯುಗ ಸಂಸ್ಕೃತಿ**

ಆದಿಮಾನವರು ಮೊದಲು ಯಾವಾಗ ಯುರೋಪಿನಲ್ಲಿ ಕಾಣಿಸಿಕೊಂಡರು ಮತ್ತು ಯಾವ ಸಂಪನ್ಮೂಲಗಳನ್ನು ಬಳಸಿದರು ಎಂಬ ಮೂಲಭೂತ ಪ್ರಶ್ನೆಯೊಂದಿಗೆ ಕೆಳ ಶಿಲಾಯುಗದ ಅಧ್ಯಯನ ಪ್ರಾರಂಭವಾಗುತ್ತದೆ.

ಇಟಲಿಯ ಎಂಬ ವಸತಿ ಪ್ರದೇಶ ಯುರೋಪಿನಲ್ಲಿ ಸಿಕ್ಕ ಮೊಟ್ಟ ಮೊದಲನೆಯ ನಿರ್ದಿಷ್ಟ ನೆಲೆಯೆಂದು ಪ್ರಾಕ್ತನ ಶಾಸ್ತ್ರಾಧಾರಗಳಿಂದ ತಿಳಿದುಬಂದಿದೆ. ಇದರ ಕಾಲಮಾನ ಇಂದಿನ ಸುಮಾರು ೭೦೦೦,೦೦೦ ವರ್ಷ ಹಿಂದೆ ಎಂದು ನಿರ್ಧರಿಸಲ್ಪಟ್ಟಿದ್ದು, ಅಲ್ಲಿ ಅಂದಿನ ಕಾಲದ ಶಿಲಾ ಆಯುಧೋಪಕರಣಗಳು ಹಾಗೂ ಪ್ರಾಣಿಗಳ ಮೂಳೆಗಳ ಅವಶೇಷಗಳು ದೊರೆತಿವೆ. ಆದರೆ ಇಂದಿಗೆ ೫೦೦,೦೦೦ ವರ್ಷಗಳ ಹಿಂದೆ ಯುರೋಪಿನ ಹೆಚ್ಚಿನ ಪ್ರದೇಶಗಳಲ್ಲಿ ಮನುಷ್ಯನ ನೆಲೆಗಳು ದೊರೆತಿವೆ. ಈಗಾಗಲೇ ಮೇಲೆ ತಿಳಿಸಿರು ವಂತೆ ಅವನು ತಯಾರಿಸಿದ ಸರಳವಾದ ಕಲ್ಲಿನ ಆಯುಧಗಳ ವಿಶೇಷವಾಗಿ ಕೈಕೊಡಲಿಗಳು ನಮಗೆ ದೊರೆತಿವೆ. ಅಶುಲಿಯನ್ ವಿಧಾನದ ಶಿಲಾಯುಧದ ಮಾದರಿಯನ್ನು ಅನುಸರಿಸಿ ಆಯುಧಗಳನ್ನು ತಯಾರಿಸುತ್ತಿದ್ದರು. ಸೇಂಟ್ ಅಶುಲ್ ಎಂಬುದು ಫ್ರಾನ್ಸ್‌ದಲ್ಲಿರುವ ಒಂದು ಪ್ರದೇಶವಾಗಿದ್ದು, ಅಲ್ಲಿ ಮೊಟ್ಟ ಮೊದಲನೆಯ ಬಾರಿಗೆ ಈ ಆಯುಧಗಳು ಸಿಕ್ಕಿವೆ. ದೊರೆತಿರುವ ಆಯುಧಗಳಲ್ಲಿ ವಿವಿಧ ಗಾತ್ರದ ಕೈಕೊಡಲಿಗಳು ಹಾಗೂ ಚಾಪರ್ ಟೂಲ್ಸ್‌ಗಳು ಒಳಗೊಂಡಿವೆ. ಅಶುಲಿಯನ್ ಕೈಕೊಡಲಿಗಳು ಪ್ರಮಾಣಬದ್ಧವಾಗಿದ್ದು, ತೀರ ಸೂಕ್ಷ್ಮವಾಗಿ ಹಾಗೂ ನೀಟಾಗಿ ಕೆತ್ತಲ್ಪಟ್ಟಿರುತ್ತವೆ ಯಾದ್ದರಿಂದ ಆದಿ ಹಳೆಶಿಲಾ ಯುಗದಲ್ಲೇ ಒಂದು ತಂತ್ರಜ್ಞಾನದ ಪ್ರೌಢಾವಸ್ಥೆ ಎಂದು ಇದನ್ನು ಗುರುತಿಸುತ್ತಾರೆ.

ದೊರೆತಿರುವ ಪುರಾವೆಗಳಲ್ಲಿ ಅನೇಕ ದೊಡ್ಡ ಗಾತ್ರದ ಪ್ರಾಣಿಗಳ ಮೂಳೆಗಳು ಸಿಕ್ಕಿದ್ದು, ಪ್ರಾಯಶಃ ಪ್ರಾರಂಭದ ಆದಿಮಾನವರಿಂದ ಬೇಟೆಯಾಡಲ್ಪಟ್ಟಿದ್ದವು. ಉದಾಹರಣೆಗೆ. ಆನೆ. ಆದರೆ ಇತ್ತೀಚಿನ ಸಿದ್ಧಾಂತಗಳ ಪ್ರಕಾರ ಪ್ರಾರಂಭದ ಆದಿಮಾನವರು ದೊಡ್ಡ ಪ್ರಾಣಿಗಳನ್ನು ಬೇಟೆಯಾಡುತ್ತಿರಲಿಲ್ಲ. ಚಳಿಗಾಲದಲ್ಲಿ ವಲಸೆ ಹೋಗುವ ಇತರ ಮೃಗಗಳನ್ನು ಕೊಂದು ಮಾಂಸವನ್ನು ಬಹುಶಃ ಸಂಗ್ರಹಿಸುತ್ತಿದ್ದರೆಂದು ಊಹಿಸಲಾಗಿದೆ.

**ಮಧ್ಯ ಹಳೆ ಶಿಲಾಯುಗ**

ಕೆಳ ಹಳೆ ಶಿಲಾಯುಗ ಮತ್ತು ಮಧ್ಯ ಹಳೆ ಶಿಲಾಯುಗಗಳ ನಡುವೆ ಯಾವುದೇ ನಿರ್ದಿಷ್ಟ ಸೀಮಾರೇಖೆಯನ್ನು ಎಳೆಯುವಂತಿಲ್ಲ. ಇದರ ಕಾಲವನ್ನು ಇಂದಿಗೆ ೧೫೦,೦೦೦ ವರ್ಷ ಪೂರ್ವದಿಂದ ಎಂದು ನಿರ್ಧಾರವಾಗಿದ್ದು, ಆ ಕಾಲದ ಸಂಸ್ಕೃತಿಗಳು ಬಹಳಷ್ಟು ಬದಲಾವಣೆಗಳನ್ನು ಪರಿಸ್ಥಿತಿಗೆ ಅನುಗುಣವಾಗಿ ಮಾಡಿಕೊಂಡಿರುವುದನ್ನು ಕಾಣಬಹು ದಾಗಿದೆ. ಹಾಗೇ ಅವರಲ್ಲಿ ಇನ್ನೂ ಹೆಚ್ಚಿನ ಸಂಘಟನೆಯ ಪ್ರಯತ್ನಿಗಳು ನಡೆದಿರುವುದನ್ನು ತಿಳಿಯಬಹುದಾಗಿದೆ.

ಕಲ್ಲಿನ ಚಕ್ಕೆಗಳ ಶಿಲಾಯುಧ ಉತ್ಪಾದನೆ (ಕೈಗಾರಿಕೆಗಳು) ಗೊತ್ತಿದ್ದ ಆದಿಮಾನವ ವರ್ಗದೊಂದಿಗೆ ಈ ಕಾಲವನ್ನು ಗುರುತಿಸಲಾಗಿದೆ. ಅವರ ಆಯುಧಗಳ ಸಂಗ್ರಹಕ್ಕೆ ಮುಸ್ಟೇರಿಯನ್ ಎಂದು ಕರೆಯಲಾಗಿದ್ದು, ಇದು ಲಿ ಮೆಸ್ಟೆರ್ ಎಂಬ ದಕ್ಷಿಣ ಫ್ರಾನ್ಸ್‌ನ ಒಂದು ಪ್ರದೇಶವಾಗಿದೆ. ಅವರ ಆಯುಧಗಳನ್ನು ಸಿದ್ಧಪಡಿಸಿದ ತಿರುಳುಗಳ ಆಯುಧ ತಂತ್ರಜ್ಞಾನದಿಂದ ತಯಾರಿಸಲ್ಪಟ್ಟಿದ್ದು. ಅವರ ಪ್ರಮುಖವಾದ ಆಯುಧಗಳಲ್ಲಿ ಕಲ್ಲಿನ ಬ್ಲೇಡ್ (ಹೆರೆಗತ್ತಿ) ಮುಂತಾದವುಗಳಿವೆ. ಈ ನಿಯಾನ್‌ಡರ್ತಲ್ ಎಂಬ ಪ್ರಭೇದದ ಮನುಷ್ಯರು ಅತಿ ಹೆಚ್ಚಿನ ಶೀತದ ವಾತಾವರಣಕ್ಕೆ ತಮ್ಮನ್ನು ತಾವು ಹೊಂದಿಸಿಕೊಂಡಿದ್ದರು. ಅವರ ಅನೇಕ ಅಸ್ಥಿಪಂಜರಗಳು ಯುರೋಪಿನ ಬೇರೆಬೇರೆ ಪ್ರಾಂತ್ಯಗಳಲ್ಲಿ ಅದರಲ್ಲೂ ಫ್ರಾನ್ಸ್ ಮತ್ತು ಸ್ಪೈನ್ ಪ್ರದೇಶಗಳಲ್ಲಿ ದೊರೆತಿವೆ.

**ಮೇಲಿನ ಹಳೆ ಶಿಲಾಯುಗ**

ಮಧ್ಯ ಹಾಗೂ ಮೇಲಿನ ಹಳೆ ಶಿಲಾಯುಗ ಸಂಸ್ಕೃತಿಯ ನಡುವೆ ಹಲವು ದಮನೀಯ ವ್ಯತ್ಯಾಸಗಳಿದ್ದವು. ದೇಹ ರಚನೆಯಲ್ಲಿ ಆಧುನಿಕ ಕ್ರೊಮ್ಯಾಗ್ನನ್ ಮಾನವ ಪ್ರಭೇದದ ಆಗಮನದೊಂದಿಗೆ ನಿಯಾನ್‌ಡರ್ತಲ್ ಪ್ರಭೇದ ಮರೆಯಾದದ್ದು ಕ್ಷಿಪ್ರವೆಂದು ನಂಬಲಾಗಿದೆ. ಇದರೊಂದಿಗೆ ಮಧ್ಯ ಹಾಗೂ ಮೇಲಿನ ಹಳೆಯ ಶಿಲಾಯುಗಗಳಲ್ಲಿ ಪರಿವರ್ತನೆ ಪಶ್ಚಿಮ ಯುರೋಪಿನಲ್ಲಿ ಬೇಗ ಆಯಿತು. ಈ ಕಾಲದಲ್ಲಿ ಕಲ್ಲು ಮತ್ತು ಮೂಳೆಗಳಲ್ಲಿ ಸುಧಾರಿಸಿದ ಆಯುಧಗಳನ್ನು ತಯಾರಿಸಿದ್ದು ಕಂಡು ಬಂದಿದೆ. ಈ ಕಾಲದಲ್ಲಿ ವರ್ಣಚಿತ್ರ ಹಾಗೂ ಕೆತ್ತನೆ ಚಿತ್ರಕಲೆ ಒಂದೇ ಪ್ರಾಣಿಯನ್ನು ಬೇಟೆಯಾಡು ವುದರಲ್ಲಿ ನಿಷ್ಣಾತ, ಹೊಸ ಪರಿಸರಗಳನ್ನು ಬಳಸಿಕೊಳ್ಳುವ ಕಲೆ ಹಾಗೂ ಹೊಸ

ತಾಣಗಳ ಶೋಧ ಮುಖ್ಯವಾಗಿ ಕಂಡುಬರುತ್ತದೆ. ಸುಮಾರು ೩೫,೦೦೦ ವರ್ಷಗಳ ಹಿಂದೆ ಈ ಕಾಲ ಪ್ರಾರಂಭವಾಗಿ ಮುಂದಿನ ಹತ್ತು ಸಾವಿರ ವರುಷದವರೆಗೆ ಮನುಷ್ಯನ ನಡಾವಳಿಯಲ್ಲಿ ನಿರಂತರ ಬದಲಾವಣೆಗಳನ್ನು ತಂದಿತು.

ಮೇಲಿನ ಹಳೆ ಶಿಲಾಯುಗದ ಕಾಲದಲ್ಲಿ ಬ್ಲೇಡ್‌ಗಳನ್ನು ಹೆರೆಗತ್ತಿ ಹಾಗೂ ಸೂಕ್ಷ್ಮ ಕಲ್ಲಿನ ಆಯುಧಗಳನ್ನು ಬಳಸುತ್ತಿದ್ದರು. ಜೊತೆಗೆ ಭರ್ಜಿಗಳನ್ನು ಮತ್ತು ಅನಂತರ ಬಿಲ್ಲು ಬಾಣಗಳನ್ನು ಉಪಯೋಗಿಸಲು ಕಲಿತರು. ಅವರು ಬಳಸಿರುವ ಕಚ್ಚಾ ಸಾಮಗ್ರಿಗಳ ಆಧಾರದ ಮೇಲೆ ವಿವಿಧ ಭೌಗೋಳಿಕ ಪ್ರದೇಶಗಳೊಂದಿಗಿದ್ದ ವ್ಯಾಪಾರೀ ಸಂಬಂಧ ಅಥವಾ ವಿಶಾಲವಾದ ವಿಭಿನ್ನ ಭೌಗೋಳಿಕ ವಲಯಗಳನ್ನು ಅವರು ಬಳಸಿಕೊಂಡ ರೀತಿಯ ಕುರಿತು ತಿಳಿಯಬಹುದು.

ಆಯುಧಗಳನ್ನು ನಿಖರವಾಗಿ ಪ್ರಾದೇಶಿಕ ಗುಂಪುಗಳಾಗಿ ವಿಂಗಡಿಸಿರುವುದು ಪ್ರಾಯಶಃ ಪ್ರತ್ಯೇಕ ಪ್ರಾದೇಶಿಕ ಸಂಸ್ಕೃತಿಯನ್ನು ಸೂಚಿಸುತ್ತದೆ. ಇವುಗಳು ಈ ಕೆಳಗಿನ ಸಾಮಾಜಿಕ ಗುಂಪುಗಳಾಗಿ ವಿಂಗಡಿಸಲ್ಪಟ್ಟಿದೆ.

೧. ಫ್ರಾನ್ಸಿನ ಚಟಲ್‌ಪೆರೋನಿಯನ್
೨. ಆರಿಗ್ನೇಶಿಯನ್ ಸಂಸ್ಕೃತಿ
೩. ಗ್ರೇವೆಲಸಿಯನ್ ಸಂಸ್ಕೃತಿ
೪. ಸೊಲಿಟ್ರಯನ್ ಮತ್ತು ಮ್ಯಾಗಡಲೇನಿಯನ್

ಒಟ್ಟಿನಲ್ಲಿ ಸಾಮಾನ್ಯವಾಗಿ ವಿಸ್ತಾರವಾದ ಮೇಲೆ ಹಳೇ ಶಿಲಾಯುಗದ ಸಂಸ್ಕೃತಿಯ ನೆಲೆಗಳು ನಮಗೆ ಸಂಪನ್ಮೂಲಭರಿತವಾದ ರೇನ್‌ಡಿರ್ ಮುಂದಿರುವ ಪ್ರದೇಶಗಳಲ್ಲಿ ಕಂಡುಬಂದಿದೆ, ಹಾಗೂ ಅಲ್ಲಿ ಹೆಚ್ಚಿನ ಜನ ವಸತಿ ಇದ್ದು ಅವರು ಒಟ್ಟಾಗಿ ರೇನ್‌ಡಿರ್‌ನ ಬೇಟೆ ಮಾಡುತ್ತಿದ್ದರೆನ್ನಲಾಗಿದೆ. ಅವರ ನೆಲೆಗಳು ಸಾಮಾನ್ಯವಾಗಿ ಸಣ್ಣ ಪ್ರಮಾಣದಲ್ಲಿದ್ದು ಅದು ಬೇಟೆ ಹಾಗೂ ಆಹಾರ ಹುಡುಕುವ ಸಮಾಜದ ನೆಲೆಗಳಾಗಿದ್ದವು. ಈ ಗುಂಪುಗಳು ಪ್ರಾರಂಭದಲ್ಲಿ ಕೆಲವು ಕೈ ಕೆಲಸಗಳನ್ನು ಮತ್ತು ಹೊಸ ನಡವಳಿಕೆಗಳನ್ನು ಆರಂಭಿಸಿದ್ದು, ಈ ಕಾಲದ ಪ್ರಕಾರದಲ್ಲಿ ಕಂಡುಬರುತ್ತದೆ. ಈ ಕಲೆಯಲ್ಲಿ ಪ್ರಾತಿನಿಧಿಕ ಮತ್ತು ಅಮೂರ್ತ ಎಂದು ಎರಡು ಬಗೆಯನ್ನು ಕಾಣಬಹುದು. ಪ್ರಾತಿನಿಧಿಕ ಕಲೆಯಲ್ಲಿ ಕೊರೆದ ಸ್ತ್ರೀ ಪ್ರತಿಮೆಗಳು ಯುರೋಪಿನಾದ್ಯಂತ ದೊರೆತಿವೆ. ವಾಯುವ್ಯ ಯುರೋಪಿನ ಕ್ಲೆವ್‌ಸಾಕ್ಸ್ ಮತ್ತು ಅಲ್ಟಮೀರು, ಫ್ರಾನ್ಸ್ ಮತ್ತು ಸ್ಪೈನ್ ಗುಹೆಗಳಲ್ಲಿ ವರ್ಣ ಚಿತ್ರಗಳು ದೊರೆತಿವೆ. ಈಗ ಸಿಕ್ಕಿರುವ ಇಂತಹ ಗುಹೆಗಳ ಸಂಖ್ಯೆ ೨೦೦ಕ್ಕೆ ಮೀರಿದೆ. ಪ್ರಾಯಶಃ ಕೆಲವು ನಿರ್ದಿಷ್ಟ ವಿಧಿಗಳ ಮುಖೇನ ಈ ಕಲೆ ಕೆಲವು ವಿಶೇಷ ಮಾಹಿತಿಯನ್ನು ಸಂಕೇತ ಭಾಷೆಯ ಮೂಲಕ ಸೂಚಿಸುತ್ತದೆ.

ಅವರ ಚಿತ್ರಕಲೆಯಲ್ಲಿ ಪ್ರಕೃತಿ ಸಹಜವಾದ ಪ್ರಾಣಿಗಳ ಚಿತ್ರಗಳು, ಕೆಲವೊಂದು ಮನುಷ್ಯ ರೂಪದ ಕೆಲವೊಮ್ಮೆ ಮನುಷ್ಯಾಕೃತಿಯನ್ನು ಹೋಲುವ ಚಿತ್ರಗಳ ಜೊತೆಗೆ, ಹತ್ತು ಹಲವು ನಿಗೂಢ ಚಿನ್ಹೆಗಳೂ ಅವರ ಬೇಟೆ ಚಿತ್ರಕಲೆಯ ಮುಖ್ಯ ವಿಷಯಗಳಾಗಿವೆ. ಈ ಕಲಾ ಪ್ರಕಾರಗಳ ಅರ್ಥಗಳನ್ನು ವಿಶ್ಲೇಷಿಸುವುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯ ಗಳಿವೆ. ಒಂದು ಗುಂಪಿನ ವಿದ್ವಾಂಸರ ಪ್ರಕಾರ ದೃಶ್ಯ ಸಂಜ್ಞೆಗಳು ಮಾನವ ಪರಿಸರ ಮತ್ತು ಋತು ಚಕ್ರದ ಸಂಬಂಧಿಸಿ ಇವೆ. ಆದರೆ ಇನ್ನೊಂದು ಗುಂಪಿನ ವಿದ್ವಾಂಸರ ಪ್ರಕಾರ ಈ ಕಲಾ ಪ್ರಕಾರಗಳು ಧಾರ್ಮಿಕ ಮಾಂತ್ರಿಕ ಅರ್ಥಗಳನ್ನು ಸೂಚಿಸುತ್ತವೆ.

ಮೇಲಿನ ಹಳೆ ಶಿಲಾಯುಗದ ಕಾಲದ ಕೆಲವು ನಿರ್ದಿಷ್ಟ ನೆಲೆಗಳನ್ನು ಪರೀಕ್ಷಿಸಿದಾಗ ಅಲ್ಲಲ್ಲಿ ಅವರು ವಾಸ ಮಾಡಿದಂತಹ ಗುಡಿಸಲುಗಳು, ಅವರು ಬಳಸಿದಂತಹ ಕಲ್ಲಿನ ಒಲೆಗಳು, ಹಾಗೂ ಆಹಾರ ಶೇಖರಣೆಗಾಗಿ ತೋರಬಹುದಾದ ಆಳವಾದ ಗುಂಡಿಗಳು ಕಂಡುಬಂದಿವೆ. ಈ ಸಂಸ್ಕೃತಿಯ ಜನ ಪರಿಣಿತ ಬೇಟೆಗಾರರಾಗಿದ್ದರು. ರೇಂಡೀರ್‌ನಂತಹ ದೊಡ್ಡ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಇಷ್ಟೇ ಅಲ್ಲದೆ ಅವರಿಗೆ ಕಾಡೆಮ್ಮೆ, ಕುದುರೆ, ಗಡ್ಡದ ಹೋತಗಳು ವೂಲಿ ಭೇಂಡಾ ಮೃಗಗಳು ಹಾಗೂ ಕಾಡು ದನದಂತಹ ಸಸ್ತನಿಗಳ ಪರಿಚಯವು ಇತ್ತು. ನೀಲಿ ಬಿರ್ಟ ಹಣ್ಣು ಹಾಗೂ ಕೆಂಪು ಚೆರ‍್ರಿ ಹಣ್ಣುಗಳಲ್ಲದೆ ಹಲವು ಸಸ್ಯಾಹಾರವೂ ಆ ಕಾಲದ ಜನರಿಗೆ ಗೊತ್ತಿತ್ತು.

ಬೇಟೆ ಮತ್ತು ಆಹಾರ ಸಂಗ್ರಹಣೆ ಸಂಬಂಧಿಸಿದಂತೆ ಮೇಲಿನ ಹಳೇ ಶಿಲಾಯುಗದ ಜನರು ನಿರಂತರ ಹವಾಮಾನದ ಬದಲಾವಣೆಗಳನ್ನು ಅನುಸರಿಸಿ ತಮ್ಮ ಆಹಾರ ಪದ್ಧತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಬೇಕಾಗಿತ್ತು.

**ಯುರೋಪಿನ ಮಧ್ಯ ಶಿಲಾಯುಗದ ಕಾಲ**

ಮೆಸೊಲಿಥಿಕ್ ಎಂದರೆ ಮಧ್ಯ ಶಿಲಾಯುಗ ಎಂದು ಅರ್ಥ. ಇದು ಹಳೆ ಮತ್ತು ಹೊಸ ಶಿಲಾಯುಗಗಳ ನಡುವಿನ ಕಾಲವಾಗಿತ್ತು. ಈ ಕಾಲ ಯುರೋಪಿನ ಕೊನೆ ಹಿಮಯುಗದ ಅಂತ್ಯವನ್ನು ಸೂಚಿಸುವುದರ ಜೊತೆಗೆ ಪ್ರಾರಂಭಿಕ ವ್ಯವಸಾಯದ ಸಂಸ್ಕೃತಿಗೂ ಪೂರ್ವದ ಕಾಲವಾಗಿದೆ. ಹಿಮಯುಗ ಹಿಂದೆ ಸರಿದಂತೆ ಯುರೋಪಿನಲ್ಲಿ ಬೇಟೆ ಹಾಗೂ ಆಹಾರ ಸಂಗ್ರಹಣೆಯಲ್ಲಿ ತೊಡಗಿದ್ದ ಮನುಷ್ಯ ಬದಲಾದ ಬೆಚ್ಚನೆಯ ಹವಾಮಾನಕ್ಕೆ ಹೊಂದಿಕೊಳ್ಳಬೇಕಾಯಿತು. ನಂತರ ಹವಾಮಾನದ ಯುಗಾಂತರದಲ್ಲಿ ಆಗಿನ ಮನುಷ್ಯ ವಾತಾವರಣಕ್ಕೆ ತಕ್ಕಂತೆ ತನ್ನ ಸಾಮಾಜಿಕ ಆರ್ಥಿಕ ಬದುಕನ್ನು ರೂಪಿಸಿ ಕೊಳ್ಳಬೇಕಾಗಿ ಬಂತು. ಈ ಕಾಲವನ್ನು ಇಂದಿಗೆ ೧೩೦೦೦ ದಿಂದ ೧೦೦೦೦ ವರ್ಷಗಳ ಹಿಂದಿನ ಕಾಲ ಎಂದೂ ಅಂದಾಜು ಮಾಡಬಹುದು. ಮತ್ತು ಆ ಕಾಲದಲ್ಲೇ ಕೊನೆ ಹಿಮಯುಗ ಹಿಂಜರಿಯುತ್ತಿತ್ತು. ಆಗ್ನೇಯ ಯುರೋಪ್‌ನಲ್ಲಿ ಇಂದಿಗೆ ೮೦೦೦ ವರ್ಷ ಗಳ ಹಿಂದೆ ಮತ್ತು ಉತ್ತರ ಅಟ್ಲಾಂಟಿಕ್ ನದಿಗಳಲ್ಲಿ ಈಗ್ಗೆ ೫೦೦೦ ವರ್ಷದ ಹಿಂದೆ ಯುರೋಪಿನ ಮಧ್ಯ ಶಿಲಾಯುಗದ ಕಾಲವಾಗಿತ್ತು.

ಹಿಮಯುಗೋತ್ತರದ ಯುರೋಪಿನಲ್ಲಿ ಈ ಮಧ್ಯೆ ಶಿಲಾಯುಗದ ಕಾಲವು ಮನುಷ್ಯ ಜೀವಿಸುತ್ತಿದ್ದುದಕ್ಕಾಗಿ ಮಾಡುತ್ತಿದ್ದ ಬೇಟೆ ಮತ್ತು ಆಹಾರ ಸಂಗ್ರಹಣೆಯನ್ನು ಸೂಚಿಸು ತ್ತದೆ. ಜೊತೆಗೆ ಯುರೋಪಿನಾದ್ಯಂತ ಭೌತಿಕ ಸಂಸ್ಕೃತಿಯ ವೈವಿಧ್ಯತೆಯೊಂದಿಗೆ ಸಾಮಾಜಿಕ ಆರ್ಥಿಕ ಜೀವನದ ಸಂಘಟನೆಯಲ್ಲಿಯೂ ಬದಲಾವಣೆಗಳನ್ನು ಕಾಣಬಹು ದಾಗಿದೆ. ಹಿಮಯುಗೋತ್ತರದ ಕಾಲದಲ್ಲಿ ಹಿಮದ ಹಿಂಜರಿಕೆಯಿಂದ ಸಮುದ್ರದ ಮಟ್ಟ ಏರಿತ್ತು. ಇದರಿಂದ ತೀರ ಪ್ರದೇಶ ಮತ್ತು ಭೂಮಿಯ ಮೇಲ್ಮೈಯಲ್ಲೂ ಬದಲಾವಣೆ ಗಳಾದವು. ಸಮುದ್ರದ ಮಟ್ಟ ಏರಿದ ಪ್ರಯುಕ್ತ ಮೊದಲು ಬೇಟೆಯಾಡಲು ಯೋಗ್ಯ ವಾಗಿದ್ದ ಎಷ್ಟೋ ಕಾಡುಗಳು ಸಮುದ್ರದಲ್ಲಿ ಮುಳುಗಿದ್ದು, ವಿಶ್ವದಾದ್ಯಂತ ಕ್ಷಿಪ್ರವಾಗಿ ಹೆಚ್ಚಾದ ಶಾಖದಿಂದಾಗಿ ಯುರೋಪಿನಲ್ಲಿಯು ಪ್ರಾಣಿ ಮತ್ತು ಸಸ್ಯ ಸಂಕುಲಗಳಲ್ಲಿ ಬಹಳಷ್ಟು ಬದಲಾವಣೆಗಳಾಯಿತು. ಪುಷ್ಪ ಪರಾಗಗಳ ವಿಸ್ತೃತವಾದ ವಿಶ್ಲೇಷಣೆಯಿಂದ ದಾಖಲಾಗಿರುವಂತೆ ಉತ್ತರ ಯುರೋಪಿನ ಕೊನೆ ಹಿಮಯುಗದ ಬಯಲು ಥಾಂಡ್ರ ಹವಾಮಾನದಿಂದ ೮೦೦೦ ವರ್ಷಗಳ ಹಿಂದೆ ಮಿಶ್ರ ಓಕ್ ವೃಕ್ಷ ತಾಣಗಳವರೆಗೆ ಆದ ಸ್ಥಿತ್ಯಂತರವನ್ನು ತಿಳಿಯಬಹುದು. ಈ ಕಾಲದಲ್ಲಿ ಹಿಮಾಸಾರಂಗನಂತಹ ದೊಡ್ಡ ಸಸ್ಯಾಹಾರಿಗಳು ಯುರೋಪಿನ ಉತ್ತರಕ್ಕೆ ವಲಸೆ ಹೋದರೆ, ಕೆಂಪು ಜಿಂಕೆಗಳು ರೈನ್‌ಡೀರ್ ಚಿಕ್ಕ ಚಿಕ್ಕ ಮಂದೆಗಳಲ್ಲಿ ವಾಸ ಮಾಡುತ್ತ ಕಾಡಿನ ಪರಿಸರಕ್ಕೆ ಹೊಂದಿ ಕೊಂಡವು. ದೈತ್ಯಾಕಾರದ ಪ್ರಾಣಿಗಳು ಮಾಯವಾದರೆ ರೈನ್‌ಡೀರ್ ಮತ್ತು ಕಾಡುಹಂದಿಗಳು ತಮ್ಮ ಸಂಖ್ಯೆಯನ್ನು ಹೆಚ್ಚಿಸಿಕೊಂಡವು. ಜೊತೆಗೆ ಅನೇಕ ಚಿಕ್ಕ ಚಿಕ್ಕ ಹೊಸ ಪ್ರಾಣಿಗಳು ಕಾಣಿಸಿಕೊಂಡವು.

ಇಷ್ಟಾದರೂ ದಕ್ಷಿಣ ಯುರೋಪಿನ ಪ್ಲೆಯಿಸ್ಟೋಸಿನ್ ಮತ್ತು ಹೊಲೋಸಿನ್ ಯುಗಗಳ ನಡುವೆ ಪ್ರಾಣಿಗಳ ಮತ್ತು ಸಸ್ಯ ಸಂಕುಲಗಳ ಯಾವುದೇ ಬದಲಾವಣೆಗಳು ಇರದೆ ಮನುಷ್ಯನ ಬದುಕಿನಲ್ಲಿ ದೊಡ್ಡ ಪ್ರಮಾಣದ ಆರ್ಥಿಕ ಮುಂದುವರಿಕೆಯನ್ನು ಕಾಣುತ್ತೇವೆ. ಮಧ್ಯ ಶಿಲಾಯುಗದಲ್ಲಿ ಸಂಬಂಧಿಸಿದಂತೆ ಪ್ರಾಕ್ತನಶಾಸ್ತ್ರಾಧಾರ ಮನುಷ್ಯನ ಹೊಸ ಪರಿಸರಗಳ ಅನ್ವೇಷಣೆಯನ್ನು ಮತ್ತು ಅವುಗಳನ್ನು ಬಳಸಿಕೊಂಡದ್ದನ್ನು ತಿಳಿಸುತ್ತದೆ. ಈ ಕಾಲದಲ್ಲಿ ನಿರಂತರವಾಗಿ ತಂತ್ರಜ್ಞಾನದಲ್ಲಿ ಹೊಸತನವನ್ನು ನೋಡುತ್ತೇವೆ. ಮಧ್ಯ ಶಿಲಾಯುಗದ ಅತಿ ಗಮನೀಯ ಅಂಶವೆಂದರೆ ಅತಿಸೂಕ್ಷ್ಮ ಶಿಲಾಯುಧಗಳ ತಯಾರಿಕೆ ಮತ್ತು ಉಪಯೋಗ. ಈ ಸೂಕ್ಷ್ಮ ಶಿಲಾಯುಧಗಳು ವಿವಿಧ ಆಕಾರ ಮತ್ತು ಗಾತ್ರದಿಂದ ಕೂಡಿದ್ದು, ದಕ್ಷಿಣ ಸ್ಕ್ಯಾಂಡಿನೇವಿಯದಂತಹ ಪ್ರದೇಶದಲ್ಲಿ ಕಾಲಮಾನವನ್ನು ನಿರ್ಧರಿಸಲು ಸಹಾಯಕವಾಗಿದೆ. ಮಧ್ಯಶಿಲಾಯುಗದ ಸಂಸ್ಕೃತಿಯನ್ನು ಮೂರು ಪ್ರಮುಖ ವಿಭಾಗಗಳಾಗಿ ಅಭ್ಯಸಿಸಬಹುದು. ಅವೆಂದರೆ-

ಎ. ಮ್ಯಾಗ್ಲೇಮೋಸ್ - ೯೫೦೦ ರಿಂದ ೭೭೦೦

ಬಿ. ಕೊಂಗೀಮೋಸ್ - ೭೭೦೦ ರಿಂದ ೬೫೦೦

ಸಿ. ದಿ ಎರ್ ಟೆಬೋಲ್ - ೬೫೦೦ ರಿಂದ ೫೦೦೦

ಈ ಸಂಸ್ಕೃತಿಗೆ ಸೇರಿದ ಕಲ್ಲಿನ ಪುಟ್ಟ ಆಯುಧಗಳಲ್ಲಿ ಪ್ರಮುಖವಾಗಿ ಮೊನೆಗಳು, ಕುಳಿಗಳು ಇರುತ್ತಿದ್ದವು. ಅಂದು ತಯಾರಿಸುತ್ತಿದ್ದ ಮೀನು ಹಿಡಿಯುವ ಗಾಳ, ಸಣ್ಣ ದೋಣಿ ಹಾಗೂ ಹೊಲಿದ ಬಟ್ಟೆಗಳು ಕಂಡುಬಂದಿವೆ.

ಮಧ್ಯ ಶಿಲಾಯುಗದ ಕಾಲದಲ್ಲಿ ಆದ ಕ್ಷಿಪ್ತ ಪರಿಸರದ ಬದಲಾವಣೆ ಹಾಗೂ ಯುರೋಪಿನಾದ್ಯಂತ ಇದ್ದ ವೈವಿಧ್ಯಮಯ ಪ್ರಾಣಿ ಮತ್ತು ಸಸ್ಯ ಸಂಕುಲಗಳು ಆ ಕಾಲದ ಆರ್ಥಿಕ ಜೀವನದ ಬಗ್ಗೆ ಅಧ್ಯಯನ ಮಾಡಲು ಸಹಾಯಕವಾಗುತ್ತವೆ. ಅವರು ಜಿಂಕೆಗಳನ್ನು ಬೇಟೆಯಾಡುತ್ತಿದ್ದರು. ಅವರ ಬದುಕಿನಲ್ಲಿ ಸಮುದ್ರ ಸಂಪನ್ಮೂಲಗಳು ಹೆಚ್ಚು ಪ್ರಮುಖ ಪಾತ್ರವಹಿಸಿದಂತೆ ಕಂಡುಬರುತ್ತದೆ. ಇದಲ್ಲದೆ ಸಸ್ಯಗಳ ಆಹಾರವು ವಿಪುಲವಾಗಿ ದೊರೆಯುತ್ತಿತ್ತು. ವ್ಯವಸಾಯದ ಆರಂಭದ ಕೆಲವೊಂದು ಲಕ್ಷಣಗಳು ಕಂಡುಬಂದಿದ್ದು, ನಿರ್ದಿಷ್ಟ ಗಿಡಗಳ ಕೃಷಿ ಮಾಡಿರಬಹುದಾದ ಸಾಧ್ಯತೆಗಳು ಕಂಡುಬಂದಿದೆ. ವಿಶೇಷ ಚಟುವಟಿಕೆಗಳಾಗಿ ಬೇಟೆ ತಾಣಗಳು ಮತ್ತು ಮೀನು ಹಿಡಿಯುವ ಬಲೆಗಳು ಕಂಡುಬಂದಿದ್ದು, ಆ ಕಾಲದ ಜನ ಒಂದು ನಿರ್ದಿಷ್ಟ ನೆಲೆಗಳಲ್ಲಿ ವಾಸಿಸುತ್ತಿದ್ದರು ಎನ್ನ ಬಹುದು. ಹೀಗೆ ಅವರ ಜೀವನೋಪಾಯ ಮತ್ತು ಜೀವನ ವಿಧಾನ ಹೆಚ್ಚು ಸಂಕೀರ್ಣ ವಾಗಿತ್ತು.

ಮಧ್ಯ ಶಿಲಾಯುಗದ ಮನುಷ್ಯ ಮರದ ತೊಗಟೆ ಮತ್ತು ಮರಗಳನ್ನು ಹಾಸಿದ ನೆಲೆಗಳ ದೊಡ್ಡ ದೊಡ್ಡ ಗುಡಿಸಲುಗಳಲ್ಲಿ ವಾಸಿಸುತ್ತಿದ್ದನು. ಸತ್ತವರನ್ನು ಸ್ಮಶಾನಗಳಲ್ಲಿ ವಿವಿಧ ಭಂಗಿಗಳಲ್ಲಿ ಹೂಳುವ ಪದ್ಧತಿ ಕಂಡುಬಂದಿದೆ. ಕೆಲವು ಸಮೂಹಗಳ ಅಧ್ಯಯನ ದಿಂದ ಮಧ್ಯ ಶಿಲಾಯುಗದ ಸಮಾಜಗಳು ವಂಶಪಾರಂಪರಿಕ ಸಾಮಾಜಿಕ ಸ್ಥಾನಮಾನಗಳನ್ನು ಗುರುತಿಸಿರುವಂತೆ ತೋರುತ್ತದೆ.

ಆ ಕಾಲದ ಆರ್ಥಿಕ ಮತ್ತು ಸಾಮಾಜಿಕ ಅಭ್ಯುದಯಕ್ಕೆ ಹೆಚ್ಚುತ್ತಿದ್ದ ಸಮುದ್ರ ಮಟ್ಟ ಮತ್ತು ಬೆಳೆಯುತ್ತಿದ್ದ ಜನಸಂಖ್ಯೆಗಳ ಅಸಮತೋಲನ ಕಾರಣವಾಗಿದ್ದಿರಬಹುದು. ಇದಲ್ಲದೆ ವಲಸೆ ಹೋಗುವ ಮೀನುಗಳು ಹಾಗೂ ದೊರೆಯುತ್ತಿದ್ದ ಅತ್ಯಂತ ಹೆಚ್ಚಿನ ಸಂಪನ್ಮೂಲಗಳು ಅವರಿಗೆ ಆರ್ಥಿಕ ಭದ್ರತೆಯನ್ನು ಒದಗಿಸಿದ್ದಲ್ಲದೆ ಸಂಪತ್ತು ಮತ್ತು ಅಧಿಕಾರವನ್ನು ಗಳಿಸಲು ಒಂದು ಮಾಧ್ಯಮವಾಗಿರುವಂತೆಯೂ ತೋರುತ್ತದೆ.

ಉತ್ತರ ಜರ್ಮನಿಯಲ್ಲಿ ಪ್ರಾರಂಭದ ತಂತ್ರಜ್ಞಾನವನ್ನು ಅಳವಡಿಸಿಕೊಂಡ ಬಹಳ ಕಾಲದ ನಂತರವೂ ದಕ್ಷಿಣ ಸ್ಕ್ಯಾಂಡಿನೇವಿಯಾದಲ್ಲಿ ಬೇಟೆಯಾಡುವ ಮತ್ತು ಆಹಾರವನ್ನು ಸಂಗ್ರಹಿಸುವ ಆರ್ಥಿಕ ಚಟುವಟಿಕೆ ಮುಂದುವರೆದಿದ್ದು ಕಂಡುಬಂದಿದೆ. ಹಾಗೆಯೇ ಯುರೋಪಿನ ಉಳಿದ ಪ್ರದೇಶಗಳಲ್ಲಿ ವ್ಯವಸಾಯದ ಪ್ರಸಾರ ವಲಸೆ ಬರುತ್ತಿದ್ದ ಜನಗಳ ಮತ್ತು ಸ್ಥಳೀಯ ಆರ್ಥಿಕ ಬೆಳವಣಿಗೆ ಸಂಕೀರ್ಣವಾಗಿ ತೋರುತ್ತದೆ.

ಯುರೋಪಿನ ಇತಿಹಾಸಪೂರ್ವ ಕಾಲದಲ್ಲಿ ಮಧ್ಯ ಶಿಲಾಯುಗದ ಸಂಸ್ಕೃತಿ ಪರಿವರ್ತನೆಯ ಪ್ರಮುಖವಾದ ಘಟ್ಟವಾಗಿದೆ. ಮಧ್ಯ ಶಿಲಾಯುಗ ಸಂಸ್ಕೃತಿಯ ಅಂತ್ಯ ಕಾಲದಲ್ಲಾದ ಮೂರು ಪ್ರಮುಖ ಬೆಳವಣಿಗೆಗಳು ನಂತರದ ಇತಹಾಸಪೂರ್ವ ಯುಗದ ಸಾಮಾಜಿಕ ಹಾಗೂ ಆರ್ಥಿಕ ಬೆಳವಣಿಗೆಯನ್ನು ತಿಳಿಯಲು ಗಮನಾರ್ಹವಾಗಿದೆ. ಆ ಬೆಳವಣಿಗೆಗಳೆಂದರೆ-

ಎ. ಶ್ರೇಣೀಕೃತ ಸಮಾಜಗಳ ಹುಟ್ಟು
ಬಿ. ವ್ಯವಸಾಯ ಪ್ರಧಾನ ಆರ್ಥಿಕ ವ್ಯವಸ್ಥೆಯ ಅಳವಡಿಕೆ ಮತ್ತು
ಸಿ. ಬದಲಾದ ಪರಿಸರಕ್ಕೆ ಹೊಂದಿಕೊಂಡು ಜೀವನವನ್ನು ನಡೆಸುವುದು

**ಯುರೋಪಿನ ನವ ಶಿಲಾಯುಗ ಕಾಲ**

ಸಾಂಪ್ರದಾಯಿಕವಾಗಿ ಯುರೋಪಿನ ನವಶಿಲಾಯುಗ ಬೆಳೆಗಳನ್ನು ಬೆಳೆದಿದ್ದು ಪ್ರಾಣಿಗಳನ್ನು ಪಳಗಿಸುವುದರೊಂದಿಗೆ ಎಂದು ವಿವರಿಸಲಾಗಿದೆ. ಈ ಕಾಲದ ಸಂಸ್ಕೃತಿಯ ಪ್ರಮುಖ ಲಕ್ಷಣಗಳೆಂದರೆ, ಮಡಿಕೆ ಕುಡಿಕೆಗಳ ತಯಾರಿಸುವಿಕೆ, ನುಣುಪಾದ ಕಲ್ಲಿನ ಆಯುಧಗಳ ಗಳಿಕೆ, ವಸ್ತುಗಳ ಹೆಚ್ಚಳ ಮತ್ತು ಜನಸಂಖ್ಯಾಭಿವೃದ್ಧಿ ಆಗಿದೆ. ಒಟ್ಟಾರೆ ಬಹಳ ಅಲ್ಪ ಕಾಲದಲ್ಲಿ ಹಲವು ಬದಲಾವಣೆಗಳನ್ನು ಈ ಯುಗದಲ್ಲಿ ನೋಡುತ್ತೇವೆ.

ಆ ಕಾಲದ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಹೊಂದಲು ಯುರೋಪ್ ಖಂಡ ವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಬಹುದು.

ಎ. ಆಗ್ನೇಯ ಯುರೋಪ್

ಬಿ. ಉತ್ತರ ಯುರೋಪ್ ಮತ್ತು ಅಲ್ಪೈನ್ ವಲಯ

ಸಿ. ಮಧ್ಯ ಯುರೋಪ್

ಡಿ. ಪಶ್ಚಿಮ ಯುರೋಪ್

**ಆಗ್ನೇಯ ಯುರೋಪ್ :** ಯುರೋಪಿನ ನವಶಿಲಾಯುಗದ ಸಮುದಾಯಗಳು ಮೊದಲು ಗ್ರೀಸ್, ಬಾಲ್ಕನ್ ಮತ್ತು ಆಗ್ನೇಯ ಭಾಗಗಳಲ್ಲಿ ತಲೆದೋರಿದವು. ಉತ್ತರ ಪೂರ್ವದಲ್ಲಿ ಸಸ್ಯಕೃಷಿ ಮತ್ತು ಪ್ರಾಣಿಗಳನ್ನು ಪಳಗಿಸಿದ ಕೇಂದ್ರಗಳಿಗೆ ಮೇಲಿನ ಪ್ರದೇಶಗಳು ನಿಕಟ ಸಂಪರ್ಕ ಹೊಂದಿದ್ದವು. ಮೇಲಿನ ಪ್ರದೇಶಗಳಿಗೆ ಸಂಬಂಧಿಸಿದಂತೆ ಪ್ರಾರಂಭದ ವ್ಯವಸಾಯವನ್ನು ಇಂದಿನ ಆರು ಸಾವಿರ ವರ್ಷಗಳ ಹಿಂದಕ್ಕೆ ಕೊಂಡೊಯ್ಯಲಾಗಿದೆ. ಈ ಪ್ರದೇಶದಲ್ಲಿ ಮೊದಲು ಬೆಳೆದ ಬೆಳೆಗಳನ್ನು ಹಾಗೂ ಸಾಕು ಪ್ರಾಣಿಗಳನ್ನು ಅಂತೋಲಿಯ ದಿಂದ ತರಲಾಗಿತ್ತು. ಉದಾಹರಣೆಗೆಹರಣೆಗೆ ಎಮ್ಮರ್, ಗೋಧಿ, ಆಡು ಮತ್ತು ಕುರಿ. ಇಲ್ಲಿ ಮೊದಲು ತಯಾರಿಸಿದ ಮಡಿಕೆ ಕುಡಿಕೆಗಳಲ್ಲೂ ಹತ್ತಿರ ಪೂರ್ವದೊಂದಿಗೆ ಹೋಲಿಕೆ ಕಂಡುಬಂದಿದೆ. ಈ ಮೂಲಕ ವಸ್ತುಗಳನ್ನು ವಲಸೆ ಬಂದ ಜನ ಇಲ್ಲಿಗೆ ತಂದರೆ? ಅಥವಾ ಇಲ್ಲಿಯ ಮೂಲ ನಿವಾಸಿಗಳು ಅವುಗಳನ್ನು ಅಳವಡಿಸಿಕೊಂಡರೆ? ಎಂಬುದು ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆಗಳಾಗಿದೆ. ಆದರೆ ಇತ್ತೀಚಿನ ವೈಜ್ಞಾನಿಕ ಅಧ್ಯಯನಗಳು ಸ್ಥಳೀಯ ಅಳವಡಿಕೆಯ ವಾದವನ್ನು ಆಧಾರ ಗಳೊಂದಿಗೆ ದೃಢಪಡಿಸುತ್ತವೆ.

ಆಗ್ನೇಯ ಯುರೋಪಿನ ನವಶಿಲಾಯುಗದ ಸಮುದಾಯಗಳು ಬಿಸಿಲಿನಲ್ಲಿ ಒಣಗಿಸಿ ಮಾಡಿದ ಮಣ್ಣಿನ ಇಟ್ಟಿಗೆಗಳು ಆಯತಾಕಾರದಲ್ಲಿ ಕಟ್ಟಿದ ಮನೆಗಳಲ್ಲಿ ವಾಸಿಸುತ್ತಿದ್ದರು. ಈ ಮೊದಲು ತಿಳಿಸಿರುವಂತೆ ಆಗ್ನೇಯ ಯುರೋಪಿನ ನವಶಿಲಾಯುಗದ ನೆಲೆಗಳು ಕ್ರಿ.ಪೂ.೭೦೦೦ ವರ್ಷಗಳ ಹಿಂದೆ ಅಸ್ಥಿತ್ವದಲ್ಲಿದ್ದವು ಅಥವಾ ಇನ್ನು ಸ್ವಲ್ಪ ಹಿಂದೆಯೇ ಅಸ್ಥಿತ್ವದಲ್ಲಿದ್ದರಲಿಕ್ಕೂ ಸಾಕು. ಭೌಗೋಳಿಕವಾಗಿ ಮತ್ತು ಕಾಲಮಾನದ ದೃಷ್ಟಿಯಿಂದ ಯುರೋಪಿನ ಉಳಿದ ಪ್ರದೇಶಗಳಲ್ಲಿ ನವಶಿಲಾಯುಗದ ಈ ಲಕ್ಷಣಗಳು ಪ್ರಸರಿಸುವುದರಲ್ಲಿ ಅದು ಮೊದಲಿನದಾಗಿತ್ತು. ಆದರೆ ನವಶಿಲಾಯುಗದ ವಸಾಹತೀಕರಣದ ಪ್ರಕ್ರಿಯೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿತ್ತು.

ನವಶಿಲಾಯುಗದ ಸಂಸ್ಕೃತಿಯ ಅಂಶಗಳು ಯುರೋಪಿನಾದ್ಯಂತ ಹರಡುವುದರಲ್ಲಿ ಎರಡು ಪ್ರಮುಖ ಮಾರ್ಗಗಳನ್ನು ಗುರುತಿಸಬಹುದು. ಜನುಬಿ ಮತ್ತು ರೈನ್ ನದಿಗಳ ಕಣಿವೆಗಳ ಮುಖೇಣ (ಮಧ್ಯಯುರೋಪ್) ಹರಡಿದ್ದು ಒಂದು ಮಾರ್ಗವಾದರೆ, ಮತ್ತೊಂದು ಮಾರ್ಗ ದಕ್ಷಿಣ ತೀರದ ಮುಖೇನ ಮೆಡಿಟರೇನಿಯನ್ ಪ್ರದೇಶದ ಸ್ಥಳೀಯ ಸಮುದಾಯಗಳಲ್ಲಿ. ಬಂದರ್ ಮಿಕ್ ರೈತರು ಮಾಡಿದ ವಸಾಹತೀಕರಣ ಮೊದಲ ಮಾರ್ಗದೊಂದಿಗೆ ಸಮೀಕರಿಸಬಹುದಾಗಿದೆ. ಎರಡನೆ ಮಾರ್ಗದ ಮುಖೇನ ಸಾಕುಪ್ರಾಣಿಗಳು ಮತ್ತ ಕೃಷಿ ಮಾಡಿದ ಸಸ್ಯಗಳ ಹರಡುವಿಕೆ ಹಾಗೂ ಅಚ್ಚು ಗುರುತಿನ ಮಡಿಕೆಗಳನ್ನು ಉದಾಹರಣೆಗೆಹರಿಸಬಹುದು.

**ಬಂದರ್‌ಮಿಕ್ ಕೃಷಿಕರು**

ಯುರೋಪಿನ ಆಗ್ನೇಯ ಭಾಗದ ದನುಬಿ ನದಿಕಣಿವೆ ಮತ್ತು ಹಂಗೇರಿಯನ್ ಬಯಲುಗಳಲ್ಲಿ ಕ್ರಿ.ಪೂ.೬೦೦೦ರ ಹೊತ್ತಿಗೆ ಮಡಿಕೆ ಕುಡಿಕೆಗಳು ಮತ್ತು ನವಶಿಲಾಯುಗದ ಇತರ ಲಕ್ಷಣಗಳು, ಕೃಷಿ ಆಧಾರಿತ ನೆಲೆಗಳಲ್ಲಿ ಸ್ಪಷ್ಟವಾಗಿ ಬೇರೂರಿರುವುದು ತಿಳಿಯು ತ್ತದೆ. ಈ ಸಂಸ್ಕೃತಿಯನ್ನು ಡನೂಬಿಯನ್ನರ ಸಂಸ್ಕೃತಿ ಎಂದು ಕರೆಯುತ್ತಾರೆ. ಮಧ್ಯ ಯುರೋಪಿನ ಈ ಕೃಷಿ ಆಧಾರಿತ ನೆಲೆಗಳನ್ನು ಆ ಜನರು ಮಡಿಕೆಗಳ ಮೇಲೆ ಗೀರಿ ಅಲಂಕರಿಸಿದ ಬಂಡರ್‌ಮಿಕ್ ಹೆಸರಿನಿಂದಲೇ ಗುರುತಿಸಲಾಗಿದೆ. ಈ ಸಂಸ್ಕೃತಿಯು ಮಧ್ಯ ಯುರೋಪಿನ ಪ್ರಮುಖ ನದಿ ಕಣಿವೆಗಳಲ್ಲಿ ಶೀಘ್ರವಾಗಿ ಹಬ್ಬುವುದರ ಜೊತೆಗೆ ಬಂದರ್‌ಮಿಕ್ ರೈತರು ಪೂರ್ವ ಫ್ರಾನ್ಸ್ ಮತ್ತು ಕೆಳಗಿನ ಪ್ರದೇಶಗಳಲ್ಲಿ ನೆಲೆಯೂರಿದರು. ಈ ಸಂಸ್ಕೃತಿ ದೊರೆತರೆಲ್ಲ ಅದು ಏಕರೂಪವಾಗಿರು ವುದರೊಂದಿಗೆ ಈ ಸಂಸ್ಕೃತಿಯನ್ನು ಆಗ್ನೇಯ ಪ್ರದೇಶದ ರೈತರ ವಸಾಹತುಕರಣದ ಚಲನೆಯೆಂದು ವಿವರಿಸಲಾಗಿದೆ.

ಈ ಕೃಷಿಕರು ಈಗಿನ ಕಾಲದ ದೊಡ್ಡ ಹಳ್ಳಿಗಳನ್ನು ಹೋಲುವಂತಹ ಸಮುದಾಯಗಳಲ್ಲಿ ವಾಸಿಸುತ್ತಿದ್ದರು. ಅವರ ಮನೆಗಳು ತಳಪಾಯದಲ್ಲಿ ಆಯತಾಕಾರವಾಗಿದ್ದು ೩೦ ರಿಂದ ೪೦ ಮೀಟರ್ ಉದ್ದವಾಗಿರುತ್ತಿತ್ತು. ಹಿಂದಿನ ಬಿಸಿಲಿನಲ್ಲಿ ಒಣಗಿಸಿದ ಇಟ್ಟಿಗೆಯ ಜಾಗ ದಲ್ಲಿ ಮರದಿಂದ ಕಟ್ಟಿದ ಹುಲ್ಲಿನ ಚಾವಣಿಗಳನ್ನು ಹೊಂದಿದ ಮನೆಗಳು ಕಂಡುಬಂದವು. ಆಗಾಗ ವಾಸದ ನೆಲೆಗಳ ಬದಲಾವಣೆಯೊಂದಿಗೆ ವ್ಯವಸಾಯದ ತಾಣಗಳೂ ಬದಲಾದವು. ಅವರ ಕೃಷಿಯಲ್ಲಿ ಎಮ್ಮರ್, ಗೋಧಿ ಮತ್ತು ಆಗಸೆ ನಾರಿನಂತಹ ಕಿರು ಬೆಳೆಗಳನ್ನು ಬೆಳೆಯುತ್ತಿದ್ದರು. ನಾಯಿ, ದನ, ಕುರಿ ಮತ್ತ ಮೇಕೆಗಳನ್ನು ಪಳಗಿಸಿದ್ದರು. ಅವರು ಶವಸಂಸ್ಕಾರ ಪದ್ಧತಿಯನ್ನು ಅನುಸರಿಸುತ್ತಿದ್ದು, ಅದರಲ್ಲಿ ಹೆಣಗಳನ್ನು ಪೂರ್ತಿಯಾಗಿ ಮುದುರಿಸಿ ಮಲಗಿಸಿದ ರೀತಿಯಲ್ಲಿ ಕಂಡುಬಂದಿದೆ.

**ಉತ್ತರ ಯುರೋಪ್ ಮತ್ತು ಅಲ್ಪೈನ್ ಭೂವಲಯ :** ಪಶ್ಚಿಮ ಸ್ವಿಜರ್‌ಲೆಂಡಿನಲ್ಲಿ ಮೊದಲು ಸರೋವರವಾಗಿದ್ದ ವಾವಿಲ್ ಹತ್ತಿರದ ತೀರದ ಹಳ್ಳಿಯೊಂದು ಮೊಟ್ಟ ಮೊದಲು ಅಲ್ಪೈನ್ ವಲಯದ ನವಶಿಲಾಯುಗ ಸಂಸ್ಕೃತಿಯ ನೆಲೆಯನ್ನು ಪ್ರತಿನಿಧಿಸುತ್ತದೆ. ಕ್ರಿ.ಪೂ.೫,೦೦೦ ಹಳೆಯದೆಂದು ಹೇಳಬಹುದಾದ ಬೇಳೆಕಾಳುಗಳು, ಪಳಗಿಸಿದ ಪ್ರಾಣಿಗಳು, ಆಯತಾಕಾರದ ಮರದ ಮನೆಗಳು ಹಾಗೂ ತಳ ದುಂಡಾಕಾರವಾಗಿರುವ ಮಡಿಕೆ ಕುಡಿಕೆ ಗಳು ಇವುಗಳೆಲ್ಲವೂ ಆ ನೆಲೆಗಳಲ್ಲಿ ದೊರೆತಿರುವ ಅವಶೇಷಗಳಾಗಿವೆ. ಇವು ನವ ಶಿಲಾಯುಗದ ಪ್ರಕೃತಿ ಲಕ್ಷಣಗಳಾಗಿದ್ದರೂ ಇಲ್ಲಿನ ಮತ್ತು ಉಳಿದ ಅಲ್ಪೈನ್ ಪ್ರದೇಶದ ಅರ್ಥ ವ್ಯವಸ್ಥೆ ದಕ್ಷಿಣ ಮತ್ತು ಮಧ್ಯ ಯುರೋಪಿನ ನವಶಿಲಾಯುಗದ ನೆಲೆಗಳಿಗಿಂತ ತುಂಬಾ ಭಿನ್ನವಾಗಿತ್ತು. ಇಂದಿನವರೆಗೂ ಮುಂದುವರೆದಿರುವಂತೆ ಅಲ್ಪೈನ್ ಆಹಾರಕ್ರಮದಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರ ತುಂಬಾ ಪ್ರಮುಖ ಪಾತ್ರ ವಹಿಸಿದ್ದವು.

ಕ್ರಿ.ಪೂ.೪೦೦೦ ವರ್ಷಗಳ ಹಿಂದೆ ಉತ್ತರ ಯುರೋಪಿನ ಬಯಲು ಪ್ರದೇಶದ ಬೇಟೆಗಾರ ಮೀನುಗಾರ ಜನಸಮುದಾಯ, ದಾನುಬಿಯನ್ ಒಕ್ಕಲುಗಳ ಪ್ರಭಾವಕ್ಕೆ ಒಳಗಾಗಿರುವಂತೆ ತೋರುತ್ತದೆ. ಇದರ ಪರಿಣಾಮವಾಗಿ ಹೊಸ ಸಂಸ್ಕೃತಿಯೊಂದು ಉದಯಿಸಿತು. ಇದರ ಮುಖ್ಯ ಲಕ್ಷಣವೇನೆಂದರೆ ಆ ಕಾಲದ ಜನರದು ಬೇಟೆಗಾರಿಕೆ, ಮೀನುಗಾರಿಕೆ ಮತ್ತು ಕೃಷಿಪ್ರಧಾನ ಆರ್ಥಿಕ ವ್ಯವಸ್ಥೆಯನ್ನು ಒಳಗೊಂಡಂತಹ ಸಂಸ್ಕೃತಿಯಾಗಿತ್ತು ಹಾಗೂ ಪ್ರಾಕ್ತನಾಶಾಸ್ತ್ರಧಾರಗಳು ಮೇಲಿನ ಸಂಸ್ಕೃತಿಯ ಕೆಲವು ಅಂಶಗಳನ್ನು ದೃಢಪಡಿಸುತ್ತದೆ. ಉದಾಹರಣೆಗೆಹರಣೆಗೆ ತಳಚೂಪಾದ ಮಡಿಕೆಗಳು ಹಾಗೂ ಫ್ಲಿಂಟ್ ಮತ್ತು ಕೊಂಬಿನಿಂದ ತಯಾರಿಸಲ್ಪಟ್ಟ ವಸ್ತುಗಳು ಮುಖ್ಯವಾದವು. ಒಟ್ಟಿನಲ್ಲಿ ಈ ಸಂಸ್ಕೃತಿಯ ಮಧ್ಯ ಶಿಲಾಯುಗದಿಂದ ಮುಂದುವರೆದ ಸಂಸ್ಕೃತಿಯ ಲಕ್ಷಣವಾಗಿದ್ದು ಇದರ ಪ್ರಾರಂಭದ ಕಾಲವನ್ನು ಸುಮಾರು ಕ್ರಿ.ಪೂ.೫೩೦೦ ವರ್ಷಗಳೆಂದು ಗುರುತಿಸ ಬಹುದಾಗಿದೆ. ಹಾಗೆಯೆ ಇದು ಅಂದಿನಿಂದ ಸುಮಾರು ೧,೦೦೦ ವರ್ಷಗಳವರೆಗೂ ಮುಂದುವರೆದಿರುವಂತೆ ಕಂಡುಬರುತ್ತದೆ.

ಅಂತೆಯೇ ಕ್ರಿ.ಪೂ.೪೦೦೦ ವರ್ಷಗಳ ಸುಮಾರಿಗೆ ಸ್ಕಾಂಡಿನೇವಿಯಾ ಪ್ರದೇಶ ಸಾಕು ಪ್ರಾಣಿಗಳ ಮತ್ತು ಕೃಷಿಯೊಂದಿಗೆ ನವಶಿಲಾಯುಗ ಕಾಲಕ್ಕೆ ಪರಿವರ್ತನೆಗೊಂಡಿತು. ಮತ್ತು ಅಲ್ಲಿನ ಜನರು ಒಂದು ಹೊಸ ಮಡಿಕೆ ತಯಾರಿಸಿದ ವಿಧಾನವನ್ನು ಪರಿಚಯಿಸಿದ್ದು ಅದು ಮುಂದೆ ಮಧ್ಯ ಯುರೋಪಿನಲ್ಲಿ ಅಭಿವೃದ್ಧಿ ಹೊಂದಿತು.

**ಮಧ್ಯ ಯುರೋಪ್ (ಕ್ರಿ.ಪೂ.೪೫೦೦-೩೫೦೦)**

ಕ್ರಿ.ಪೂ.೪೫೦೦ ಹೊತ್ತಿಗೆ ಬಂದರ್‌ಮಿಕ್ ಕಾಲ ಮುಕ್ತಾಯವಾಯಿತು. ಮತ್ತು ಮಧ್ಯ ಯೂರೋಪಿನ ಬಹುಭಾಗಗಳಲ್ಲಿ ಏಕರೂಪ (ಸಂಸ್ಕೃತಿಯ, ನೆಲೆಗಳು) ಜೀವನಕ್ರಮ, ಹೆಚ್ಚು ಪ್ರದೇಶ ಸಂಸ್ಕೃತಿಯ ಬೆಳವಣಿಗೆಗೆ ಅವಕಾಶ ಮಾಡಿಕೊಟ್ಟಿತು. ಇವುಗಳನ್ನು ಅವರ ಮಡಿಕೆ ಕುಡಿಕೆಗಳ ಶೈಲಿಗಳಿಂದ ಗುರುತಿಸಲ್ಪಟ್ಟಿದ್ದು ಅದು ಕೆಲವು ನಿರ್ದಿಷ್ಟ ಗುಂಪುಗಳನ್ನು ಅಥವಾ ಸಂಸ್ಕೃತಿಗಳನ್ನು ನಿಷೇಧಿಸುತ್ತದೆ. ಹಂಗೇರಿ, ಯುಗೋಸ್ಲೋ ಝೆಕ್ (ಝೆಕಾಸ್ಲೋವಾಕಿಯಾ) ಮತ್ತು ಪೂರ್ವ ಜರ್ಮನ್ ಮುಖ್ಯ ಮುಂದುವರಿಕೆಯಾಗಿ ಲೆಂಗಯರ್ ಸಂಸ್ಕೃತಿ ಕಂಡುಬರುತ್ತದೆ. ಹಾಗೆಯೇ ರೈನ್‌ಲ್ಯಾಂಡ್ ಮತ್ತು ಪಶ್ಚಿಮ ಜರ್ಮನಿಯಲ್ಲಿ ಮುಖ್ಯವಾಗಿ ಕಂಡುಬಂದದ್ದು ರೋಸನ್ ಸಂಸ್ಕೃತಿ. ಈ ಸಂಸ್ಕೃತಿ ಮತ್ತು ವೈವಿಧ್ಯಪೂರ್ಣವಾದ ಬದಲಾವಣೆಗಳನ್ನು ಹೊಂದಿ ಸುಮಾರು ಕ್ರಿ.ಪೂ.೪೨೦೦ ಹೊತ್ತಿಗೆ ಕೆಲವೊಂದು ಹೊಸ ಸಂಸ್ಕೃತಿಗಳು ಹುಟ್ಟಿಕೊಂಡವು. ಅವುಗಳಲ್ಲಿ ಪ್ರಮುಖವಾದುವೆಂದರೆ ಪಶ್ಚಿಮದಲ್ಲಿ ಮೈಕೆಲ್ಲಾಬರ್ಗ್ ಹಾಗೂ ಟ್ರೆಚ್ಚರ್ ಬೆಕ್ಕರ್.

ಟ್ರೆಚ್ಚರ್ ಬೆಕ್ಕರ್ (ಟಿ.ಆರ್.ಬಿ) ಸಂಸ್ಕೃತಿ ಉತ್ತರ ಯುರೋಪಿನ ಮತ್ತು ಹಿಂದಿನ ಬಂದರ್‌ಮಿಕ್ ಪ್ರದೇಶಗಳನ್ನು ತನ್ನಲ್ಲಿ ಸೇರಿಸಿಕೊಂಡಿದ್ದರಿಂದ ಒಂದು ಪ್ರಮುಖ ಸಂಸ್ಕೃತಿಯು ಬೆಳವಣಿಗೆಯಾಗಿ ಮತ್ತು ಒಗ್ಗೂಡಿದ ಹಂತವಾಗಿ ಕಂಡುಬರುತ್ತದೆ. ಇಲ್ಲಿ ವಸ್ತುಗಳು ಮತ್ತು ಕಲ್ಪನೆಗಳು ಬಹುದೂರದವರೆಗೆ ಸಾಮಾನ್ಯವಾಗಿ ಸಾಗುತ್ತಿದ್ದವು. ಈ ಕಾಲಘಟ್ಟದಲ್ಲಿ ಟಿ.ಆರ್.ಬಿ. ಸಂಸ್ಕೃತಿಯ ಉತ್ತರದ ಗಡಿಯಲ್ಲಿ ಮೊಟ್ಟಮೊದಲ ಬಾರಿಗೆ ತಾಮ್ರದ ವಸ್ತುಗಳ ಬಳಕೆ ಕಂಡುಬರುತ್ತದೆ.

ಹೀಗೆ ಒಟ್ಟಾರೆ ಮಧ್ಯಯುರೋಪಿನಲ್ಲಿ ನವಶಿಲಾಯುಗ ಸಂಸ್ಕೃತಿಯ ಹಲವು ಸಾಮಾನ್ಯ ಬೆಳವಣಿಗೆಗಳು ಈ ಪ್ರದೇಶದಲ್ಲಿ ಕ್ರಿ.ಪೂ.೫೦೦೦ ಕೊನೆಯಲ್ಲಿ ಮತ್ತು ೪೦೦೦ ಮೊದಲಿನಲ್ಲಿ ಕಂಡುಬರುತ್ತದೆ. ಅವುಗಳಲ್ಲಿ ಕೆಲವು ಪ್ರಮುಖ ಬದಲಾವಣೆ ಗಳೆಂದರೆ.

ಅ. ಬಂದರ್‌ಮಿಕ್ ಚಟುವಟಿಕೆ ನದಿ ಕಣಿವೆಗಳ ಕೇಂದ್ರವನ್ನು ಮೀರಿ ವ್ಯವಸಾಯದ ತಾಣಗಳು ನಿಧಾನವಾಗಿ ಹಬ್ಬಿತ್ತು.

ಆ. ಮನೆಯ ನಿರ್ಮಾಣದಲ್ಲಿ ನಿಧಾನವಾಗಿ ಆದ ಬದಲಾವಣೆ

ಉದಾಹರಣೆಗೆ : ಮನೆಯ ಶೈಲಿಯಲ್ಲಿ ಆಯತಾಕಾರದ ಮತ್ತು ಸಮಾನಾಂತರ ಪಾರ್ಶ್ವಗಳ ಮನೆಗಳಿದ್ದರೆ, ಇವುಗಳ ಬದಲಾಗಿ ವಿಷಮ ಚತುರ್ಭುಜದ ಉದ್ದನೆಯ ಮನೆಗಳು ಬಳಕೆಯಲ್ಲಿ ಬಂದವು. ಈ ಬದಲಾವಣೆ ಬದಲಾದ ಸಾಮಾಜಿಕ ವ್ಯವಸ್ಥೆಯನ್ನು ಪ್ರತಿನಿಧಿಸುವುದರ ಜೊತೆಗೆ ಸಾಮಾಜಿಕ ಶ್ರೇಣಿಯಲ್ಲಾದ ಬದಲಾವಣೆಯನ್ನು ಪ್ರಾಯಶಃ ಪ್ರತಿನಿಧಿಸುತ್ತದೆ.

**ಪಶ್ಚಿಮ ಯುರೋಪ್:** ಪಶ್ಚಿಮ ಯುರೋಪಿನ ಮೇಲೆ ಮಧ್ಯ ಯುರೋಪಿನ ನವ ಶಿಲಾಯುಗ ಸಂಸ್ಕೃತಿಯ ಪ್ರಭಾವವಿತ್ತು. ಆದರೂ ಈ ಪ್ರಭಾವದೊಂದಿಗೆ ಇತರೆ ಅಂಶಗಳು ತಮ್ಮದೇ ಪಾತ್ರವಹಿಸಿದವು. ಇಲ್ಲಿ ದೊರೆತಿರುವ ಮಡಿಕೆ ಕುಡಿಕೆಗಳ ಆಧಾರದ ಮೇಲೆ ಅಲ್ಲಿ ಉಂಟಾಗಿರುವ ಪ್ರಭಾವವನ್ನು ಗುರುತಿಸಬಹುದಾಗಿದೆ. ಅಚ್ಚೊತ್ತಿದ ಮಡಿಕೆಗಳ ಉಪಯೋಗ ಕೃಷಿ ಮಾಡಿದ ಮರ ಗಿಡಗಳು ಮತ್ತು ಪಳಗಿದ ಪ್ರಾಣಿಗಳು ದಕ್ಷಿಣ ಐಬೀರಿಯಾ ಮತ್ತು ಮೆಡಿಟರೇನಿಯನ್ ಫ್ರಾನ್ಸಿನ ಸುತ್ತ ಕ್ರಿ.ಪೂ.೬೦೦೦ದ ಅವಧಿಯಲ್ಲಿ ಪ್ರಚಲಿತದಲ್ಲಿ ಬಂದವು. ಆದರೆ ಯುರೋಪಿನ ಇತರೆ ಪ್ರಮುಖ ಪ್ರದೇಶ ಗಳ ಪ್ರಭಾವಕ್ಕೊಳಗಾಗಿ ಕ್ರಿ.ಪೂ.೪೦೦೦ದ ಹೊತ್ತಿಗೆ ಬ್ರಿಟಿಷ್ ದ್ವೀಪಗಳಲ್ಲಿ ನವಶಿಲಾಯುಗ ಸಂಸ್ಕೃತಿ ಬೆಳೆಯಿತು.

ಪಶ್ಚಿಮ ಯುರೋಪಿನ ನವಶಿಲಾಯುಗ ವಿಸ್ತೃತ ವ್ಯವಸಾಯಕ್ಕೆ ಪ್ರಸಿದ್ಧವಾಗಿರದೆ, ಬೃಹತ್ ಶಿಲಾ ಸ್ಮಾರಕಗಳ ಸಂಸ್ಕೃತಿಗೆ ಪ್ರಸಿದ್ಧವಾಗಿದೆ. ಇವುಗಳು ಪ್ರಮುಖವಾಗಿ ಸ್ವಿಜರ್ಲೆಂಡ್, ಫ್ರಾನ್ಸಿನ ಬ್ರಿಟಿಷ್ ದ್ವೀಪಗಳು ಮತ್ತು ಐಬೀರಿಯದಲ್ಲಿ ದೊರೆತಿದೆ. ಅವರ ಬೃಹತ್ ಶಿಲಾ ಸಂಸ್ಕೃತಿಯ ಸ್ಮಾರಕಗಳ ಅಧ್ಯಯನ ನಮಗೆ ಅವರ ಶವಸಂಸ್ಕಾರ ವಿಧಿಗಳನ್ನು ಮತ್ತು ಸಾರ್ವಜನಿಕ ವಿಧಿ ಚಟುವಟಿಕೆಗಳನ್ನು ತಿಳಿಯಲು ಸಹಾಯಕವಾಗಿದೆ. ನಮಗೆ ತಿಳಿದಿರುವ ಬೃಹತ್ ಶಿಲಾ ಸ್ಮಾರಕಗಳೆಂದರೆ ಕ್ರಿ.ಪೂ.೩೦೦೦ಕ್ಕಿಂತ ಸುಮಾರಿಗೆ ಸೇರುವ ರೋಗ್ ಸಮಾಧಿಗಳು. ಈ ಕೋಣೆ ಸಮಾಧಿಗಳನ್ನು ನೈಸರ್ಗಿಕ ಬಂಡೆಗಳಿಂದ ಕೊರೆಯಲ್ಪಟ್ಟಿರುವುದು ಒಂದು

ವಿಧವಾದರೆ, ಇನ್ನೊಂದು ವಿಧಾನದಲ್ಲಿ ಅವರು ದೊಡ್ಡ ದೊಡ್ಡ ಕಲ್ಲುಗಳನ್ನು ಜೋಡಿಸಿ ಅದರ ಸುತ್ತ ಚಿಕ್ಕ ಪುಟ್ಟ ಕಲ್ಲುಗಳ ಸಾಲುಗಳನ್ನು ಇರಿಸಿ ಮಾಡಿರುವಂತಹದಾಗಿದೆ. ಈ ಶವ ಸಂಸ್ಕಾರ ಸ್ಮಾರಕಗಳೇ ಅಲ್ಲದೆ ಈ ಜನರು ದೊಡ್ಡ ಕಲ್ಲಿನ ಕಂಬಗಳು ಅಥವಾ ಏಕ ಶಿಲಾ ಸಮಾಧಿ ಕಲ್ಲುಗಳನ್ನು ನಿಲ್ಲಿಸುತ್ತಿದ್ದರು. ಜೊತೆಗೆ ವಿಸ್ತಾರದ ಕಲ್ಲುಗಳನ್ನು ಮತ್ತು ದುಂಡನೆಯ ಸ್ಮಾರಕಗಳನ್ನು ದೊಡ್ಡ ಪ್ರಮಾಣದಲ್ಲಿ ರಚಿಸುತ್ತಿದ್ದರು.

ಉತ್ತರ ಮಧ್ಯ ಮತ್ತು ಪೂರ್ವ ಯುರೋಪಿನಲ್ಲಿ ಕ್ರಿ.ಪೂ.ಮೂರನೆಯ ಸಹಸ್ರದ ಕೊನೆಯ ಶತಮಾನಗಳಲ್ಲಿ ಮತ್ತು ಎರಡನೆ ಸಹಸ್ರದ ಪ್ರಾರಂಭದ ಶತಮಾನಗಳಲ್ಲಿ ಹೆಚ್ಚು ಬೃಹತ್ ಶಿಲಾಯುಗ ಸಂಸ್ಕೃತಿಯ ಅಳವಡಿಕೆಯನ್ನು ನೋಡುತ್ತೇವೆ. ಈ ಕಾಲ ದಲ್ಲಿ ಮಿಶ್ರ ವ್ಯವಸಾಯ ಜೀವನಾಧಾರವಾಗಿತ್ತು ಮತ್ತು ಜಾರಿಯಲ್ಲಿದ್ದ ಹಗುರವಾದ ನೇಗಿಲುಗಳನ್ನು ಉಪಯೋಗಿಸುತ್ತಿದ್ದರ ಬಗ್ಗೆ ಆಧಾರಗಳಿವೆ. ಈ ಕಾಲದಲ್ಲಿ ಸಾಮೂಹಿಕ ಸಮಾಧಿ ಕಟ್ಟಡಗಳನ್ನು ಕಟ್ಟಿಸುವುದನ್ನು ನಿಲ್ಲಿಸಿದರು.

ಯುರೋಪಿನಾದ್ಯಂತ ನವಶಿಲಾಯುಗದ ಅಂಶಗಳು ಪಸರಿಸಿದ ಎರಡು ಪ್ರಮುಖ ಮಾರ್ಗಗಳೆಂದರೆ ಅ. ಪ್ರಮುಖ ನದಿ ಕಣಿವೆಗಳು, ಆ. ಮೆಡಿಟರೇನಿಯನ್ ಸಮುದ್ರ ತೀರ. ಈ ಎರಡೂ ಆಟ್ಲಾಂಟಿಕ್ ಗಡಿಯಲ್ಲಿ ಮತ್ತೆ ಸಂಧಿಸುತ್ತವೆ. ಬಂದರ್‌ಮಿಕ್ ಸಂಸ್ಕೃತಿಯ ಪ್ರಭಾವ ಹೆಚ್ಚಾಗಿದ್ದ ಸಂದರ್ಭದಲ್ಲಿ ಬ್ರಿಟಿಷ್ ದ್ವೀಪಗಳಲ್ಲಿ ಪ್ರಮುಖ ಸಂಬಂಧ ಯುರೋಪಿನ ಭೂಖಂಡದಲ್ಲಿನ ಅಕ್ಕಪಕ್ಕದ ಪ್ರದೇಶಗಳೊಂದಿಗೆ ಇತ್ತು. ಐಬೇರಿಯಾದಲ್ಲಿ ನವಶಿಲಾಯುಗದ ಸಂಸ್ಕೃತಿಯ ಲಕ್ಷಣಗಳ ಪ್ರಮುಖ ಪ್ರಭಾವಗಳು ಮೆಡಿಟರೇನಿಯನ್ ವಲಯದ ಕಡೆಯಿಂದ ಕಂಡುಬರುತ್ತದೆ. ಫ್ರಾನ್ಸ್‌ನಲ್ಲಿ ಮೆಡಿಟರೇನಿಯನ್ ಹಾಗೂ ಮಧ್ಯ ಯುರೋಪಿನ ಲಕ್ಷಣಗಳೆರಡೂ ಒಟ್ಟಾಗಿ ಪಾತ್ರ ನಿರ್ವಹಿಸುವಂತೆ ಕಾಣುತ್ತದೆ. ಈ ಎಲ್ಲಾ ಪಶ್ಚಿಮ ಯುರೋಪಿನ ಪ್ರದೇಶಗಳಲ್ಲಿ ನವಶಿಲಾಯುಗಕ್ಕೆ ಆದ ಪರಿವರ್ತನೆ ಸಾಂಸ್ಕೃತಿಕ ಬದಲಾವಣೆಯ ಪ್ರಕ್ರಿಯೆಯಾಗಿತ್ತು. ಇನ್ನು ಉಳಿದಿದ್ದು ಎದ್ದು ಕಾಣುವ ಅವರ ಬೃಹತ್ ಶಿಲಾ ಸಮಾಧಿ ಅವರ ಸಂಸ್ಕೃತಿಯ ಮುಖ್ಯ ಅವಶೇಷಗಳಾಗಿದ್ದು ಅದಕ್ಕೆ ಸರಿಸಮವಾದ ಅವಶೇಷಗಳು ಮಧ್ಯ ಯುರೋಪ್ ಮತ್ತು ಸ್ಥಳೀಯ ಮಧ್ಯ ಶಿಲಾಯುಗ ಕಾಲದಲ್ಲೂ ಕಂಡುಬರುವುದಿಲ್ಲ. ಒಟ್ಟಿನಲ್ಲಿ ಪಶ್ಚಿಮ ಯುರೋಪಿನ ನವಶಿಲಾಯುಗ ಸಂಸ್ಕೃತಿಯ ಸಮುದಾಯಗಳು ತಮ್ಮದೇ ಆದ ಸ್ವಂತಿಕೆಯನ್ನು ಹೊಂದಿದ್ದು, ಇದರಿಂದಲೇ ಅವರು ತಮ್ಮ ವಿಶೇಷ ಸಾಮಾಜಿಕ ಮತ್ತು ಆಧ್ಯಾತ್ಮಿಕ ಜೀವನವನ್ನು ರೂಢಿಸಿಕೊಳ್ಳುವುದು ಸಾಧ್ಯವಾಯಿತು.

**ಯುರೋಪಿನಲ್ಲಿ ತಾಮ್ರದ ಬಳಕೆಯ ಪ್ರಾರಂಭ**

ಯುರೋಪಿನಾದ್ಯಂತ ಇನ್ನೂ ವ್ಯವಸಾಯ ಹಬ್ಬುತ್ತಿದ್ದಾಗ ಮೊದಲು ಯುರೋಪಿನ ದಕ್ಷಿಣ ಭಾಗದಲ್ಲಿ ತಾಮ್ರಲೋಹದ ಉಪಯೋಗ ಪ್ರಾರಂಭವಾಯಿತು. ಕ್ರಿ.ಪೂ. ೩೦೦೦ರಲ್ಲಿ ಮಿಶ್ರ ಲೋಹದ ಬಳಕೆ ಬರುವವರೆಗೂ ತಾಮ್ರದ ಉಪಯೋಗ ಮುಂದು ವರೆಯಿತು. ಈ ತಾಮ್ರದ ಲೋಹದ ಉದ್ಯಮ ಮುಖ್ಯವಾಗಿ ಬಾಲ್ಕನ್ ಪ್ರದೇಶಕ್ಕೆ ಮತ್ತು ಕಾರ್‌ಪೇಥಿಯಾ ಪ್ರದೇಶಗಳಿಗೆ ಸಮೇತವಾಗಿತ್ತು. ಇದೇ ಸಂದರ್ಭದಲ್ಲಿ ನವಶಿಲಾಯುಗದ ಸಂಸ್ಕೃತಿ ಯುರೋಪಿನ ಇತರ ಭಾಗದಲ್ಲಿ ಅಸ್ತಿತ್ವದಲ್ಲಿತ್ತು. ಬಾಲ್ಕನ್ ಪ್ರದೇಶದ ಸಂಸ್ಕೃತಿ ಕೇವಲ ತಾಮ್ರ ಮತ್ತು ಚಿನ್ನದ ಲೋಹದ ಉದ್ಯಮಗಳಿಗೆ ಮಾತ್ರ ಹೆಸರುವಾಸಿಯಾಗಿರದೆ ಚಿತ್ರಕಲೆಯಿಂದ ಕುಡಿದ ಮಡಿಕೆ ಕುಡಿಕೆಗಳಿಗೂ ಪ್ರಸಿದ್ಧವಾಗಿತ್ತು. ಪ್ರಾರಂಭದ ಕಾಲದಲ್ಲಿ ಯುರೋಪ್ ಸಂಸ್ಕೃತಿ ಪ್ರತ್ಯೇಕವಾಗಿ ಬೆಳೆದಂತಿದೆ. ಕ್ರಿ.ಪೂ. ೩೦೦೦ದ ಉತ್ತರಾರ್ಧದ ಹೊತ್ತಿಗೆ ಅದು ದೊಡ್ಡ ಸಮುದಾಯದ ರಚನೆ ಮತ್ತು ಬೆಳವಣಿಗೆಯನ್ನು ಕಂಡಿತು. ವ್ಯವಸಾಯದ ಜೊತೆಯಲ್ಲಿ ಆ ಜನರು ಪ್ರಾಣಿಗಳ ಸಾಕಾಣಿಕೆಯಲ್ಲಿ ತಜ್ಞರಾಗಿದ್ದರು. ಅಲ್ಲದೆ ಪಶ್ಚಿಮ ಯುರೋಪಿನಲ್ಲಿ ಬೃಹತ್ ಶಿಲಾ ಸಮಾಧಿ ಸ್ಮಾರಕಗಳನ್ನು ನಿರ್ಮಿಸಲು ಪ್ರಾರಂಭಿಸಿದ್ದರು. ಯುರೋಪಿನ ವಿವಿಧ ಭಾಗ ಗಳಲ್ಲಿ ಉಪಯೋಗದೊಂದಿಗೆ ನಿಖರವಾದ ಹೊಸ ಕೃಷಿ ನೆಲೆಗಳು ಅಭಿವೃದ್ಧಿ ಹೊಂದಿದವು.

ಕ್ರಿ.ಪೂ.೪೦೦೦ದ ಕೊನೆಯ ಭಾಗದಲ್ಲಿ ಹತ್ತಿರ ಪೂರ್ವದಲ್ಲಾದ ನಗರೀಕರಣ ಮತ್ತು ವ್ಯಾಪಾರಾಭಿವೃದ್ಧಿಯ ಅಂತಿಮ ಪರಿಣಾಮಗಳು ಯುರೋಪಿನಲ್ಲಿ ಕಾಣಿಸಿಕೊಂಡವು. ಅಂತಿಮ ಪರಿಣಾಮಗಳು ಕಾರ್‌ಫೇಥ್ ಮತ್ತು ಬಾಲ್ಕನ್ ಪ್ರದೇಶಗಳಲ್ಲಿ ಹೆಚ್ಚು ನೇರವಾಗಿ ಕಾಣಿಸಿಕೊಂಡಿದ್ದು ಅಲ್ಲಿನ ಮಡಿಕೆ ಕುಡಿಕೆ ಶೈಲಿಯಿಂದ ಗೊತ್ತಾಗುತ್ತದೆ.

ಹೊರ ಯುರೋಪಿನಲ್ಲಿ ಮತ್ತು ವಿಶೇಷವಾಗಿ ದೂರದ ಉತ್ತರ ಮತ್ತು ಪಶ್ಚಿಮದಲ್ಲಿ ಈ ಮಾರ್ಪಾಡು ನಿಧಾನವಾಗಿ ಒಳಹೊಕ್ಕವಾದರೂ ಪ್ರಾರಂಭದಲ್ಲಿ ಅಸ್ತಿತ್ವದಲ್ಲಿದ್ದ ಸಾಂಸ್ಕೃತಿಕ ನಮೂನೆಗಳನ್ನು ಬದಲಿಸಲಿಲ್ಲ. ದಕ್ಷಿಣ ಐಬೀರಿಯಾದಲ್ಲಿ ದೊರೆಯುತ್ತಿದ್ದ ತಾಮ್ರ ನಿಕ್ಷೇಪಗಳ ಕಾರಣ ಸರಳವಾದ ತಾಮ್ರ ಲೋಹ ಶೋಧನ ವಿಧಾನ ಅವರಿಗೆ ತಿಳಿದಿದ್ದು ಬೃಹತ್ ಶಿಲಾಯುಗ ಸಮಾಧಿ ಸ್ಮಾರಕಗಳಲ್ಲಿ ದೊರೆಯುವ ತಾಮ್ರ ವಸ್ತುಗಳೊಡನೆ ಹೋಲಿಸಿದಾಗ ಅದು ದೃಢಪಡುತ್ತದೆ. ಒಟ್ಟಿನಲ್ಲಿ ಯುರೋಪಿನ ಸಂಸ್ಕೃತಿಗಳ ಸ್ವರೂಪದಲ್ಲಿ ತಾಮ್ರಯುಗ ಹೀಗೆ ಮೂಲಭೂತ ಬದಲಾವಣೆಗಳಿಗೆ ಕಾರಣವಾಯಿತು.

**ಯುರೋಪಿನ ಕಂಚಿನ ಯುಗ**

ಕಂಚಿನ ಯುಗ ಯುರೋಪಿನಲ್ಲಿ ಕ್ರಿ.ಪೂ.೨೩೦೦ರ ಸುಮಾರಿನಿಂದ ಕ್ರಿ.ಪೂ.೮೦೦ರ ಸುಮಾರಿನವರೆಗೆ ಇತ್ತು. ಈ ಕಾಲದಲ್ಲಿ ತಾಮ್ರದೊಂದಿಗೆ ಬೇರೆ ಬೇರೆ ಲೋಹಗಳನ್ನು ಬೆರೆಸಿ ಮಿಶ್ರಲೋಹ ತಯಾರಿಸುವುದನ್ನು ಕಲಿತರು. ಅದರಲ್ಲೂ ವಿಶೇಷವಾಗಿ ತಾಮ್ರಕ್ಕೆ ಸತುವನ್ನು ಮಿಶ್ರ ಮಾಡಿ ಕಂಚಿನಂತಹ ಗಟ್ಟಿ ಲೋಹವನ್ನು ತಯಾರಿಸುವ ಕಲೆ ಅವರಿಗೆ ಗೊತ್ತಿತ್ತು. ಹೀಗೆ ಈ ಕಾಲದಲ್ಲಿ ಲೋಹಶಾಸ್ತ್ರ ವಿಫಲವಾಗಿ ಅಭಿವೃದ್ಧಿ ಹೊಂದಿತು. ಯುರೋಪಿನ ವಿಶಾಲ ಮತ್ತು ವಿವಿಧ ಭೌಗೋಳಿಕ ಪ್ರದೇಶಗಳು ಕಂಚಿನ ಯುಗದ ವಿವಿಧ ಗುಂಪಿನ ಜನಗಳಿಗೆ ಮತ್ತು ಸಂಸ್ಕೃತಿಗಳಿಗೆ ಆಸರೆ ನೀಡಿದ್ದರೂ, ಎಲ್ಲಾ ಪ್ರದೇಶಗಳಲ್ಲಿ ಸಂಸ್ಕೃತಿಗಳಲ್ಲಿ ಕೆಲವೊಂದು ಸಾಮಾನ್ಯ ಲಕ್ಷಣಗಳನ್ನು ಕಾಣಬಹುದಾಗಿದೆ.

ಹೊಸ ಲೋಹಗಳ ಬಳಕೆಯೊಂದಿಗೆ ಬದಲಾವಣೆಗಳು ಕಂಡುಬಂದಿದ್ದು ಮಾತ್ರವಲ್ಲದೆ ಅವರ ಆರ್ಥಿಕ ಸಾಮಾಜಿಕ ಬದುಕಿನಲ್ಲೂ ಬದಲಾವಣೆಗಳು ಕಾಣಿಸಿಕೊಂಡವು. ಉದಾಹರಣೆಗೆ. ಸಮಾಜದಲ್ಲಿ ಶ್ರೇಣೀಕರಣ ವ್ಯವಸ್ಥೆ ಇತ್ತು. ಅವರಲ್ಲಿ ದೊರಕಿರುವ ವಿವಿಧ ಶವಸಂಸ್ಕಾರ ಪದ್ಧತಿಗಳಲ್ಲಿ ಹಾಗೂ ಅವುಗಳಲ್ಲಿ ದೊರೆತಿರುವ ಶವಸಾಮಗ್ರಿಗಳನ್ನು ಅಭ್ಯಸಿಸಿದಾಗ ತಿಳಿದುಬರುತ್ತದೆ. ಹಾಗೆಯೇ ಅವರಲ್ಲಿ ಜನಸಂಖ್ಯೆಯ ಹೆಚ್ಚಳ ಉಂಟಾಗಿದ್ದು ವ್ಯಾಪಾರ ಮತ್ತು ವಾಣಿಜ್ಯವು ವೃದ್ಧಿಯಾಯಿತು. ನೀರು ಮತ್ತು ಭೂಮಿಯ ಮುಖೇನ ವ್ಯಾಪಾರ ಸಂಪರ್ಕವು ಅಭಿವೃದ್ಧಿ ಹೊಂದಿತು. ದಿಬ್ಬಗಳ ಮೇಲೆ ನಿರ್ಮಾಣವಾದ ಕೋಟೆಗಳಿಂದ ರಕ್ಷಿತ ನೆಲೆಗಳು ಅಧಿಕವಾಗುವುದ ರೊಂದಿಗೆ ಆ ಕಾಲದ ಜನಜೀವನದಲ್ಲಿ ಗಮನೀಯ ಬದಲಾವಣೆಯನ್ನು ಕಾಣುತ್ತೇವೆ. ಈ ರಕ್ಷಿತ ನೆಲೆಗಳ ಸುತ್ತ ಮರದ ಚೌಕಟ್ಟಿರುವ ಮಣ್ಣಿನ ಕೋಟೆಗಳು ಕಂಡುಬಂದಿವೆ. ಸರಿಯಾದ ಅಭ್ಯಾಸದ ಅನುಕೂಲಕ್ಕಾಗಿ ಯುರೋಪಿನ ಕಂಚಿನ ಯುಗವನ್ನು ಮೂರು ನಿರಂತರ ಭಾಗಗಳಾಗಿ ವಿಂಗಡಿಸಬಹುದು. ಕ್ರಿ.ಪೂ.೧೫೦೦ ರಿಂದ ೧೨೦೦ರ ಕಾಲಘಟ್ಟದಲ್ಲಿ ಪ್ರಾರಂಭಿಕ, ಮಧ್ಯಮ ಮತ್ತು ನಂತರದ ಭಾಗಗಳನ್ನು ಪ್ರತ್ಯೇಕಿಸಬಹುದು.

**ಗ್ರೀಕ್ ಮತ್ತು ಎಗ್ರಾನ್**

ಹೀಗೆ ಗ್ರೀಕ್, ಕ್ರೇಟ್ ಮತ್ತು ಸೈಕ್ಲೋಡ್ಸ್‌ಗಳಲ್ಲಿ ಯಾವಾಗಲೂ ಪ್ರಾರಂಭದ ಕಂಚಿನ ಯುಗದಲ್ಲಿ ಲೋಹದ ವಸ್ತುಗಳಿಗೆ ಕೊರತೆ ಇತ್ತು. ಆದರೆ ಟ್ರೇ ೧ ಮತ್ತು ೧೧ರಲ್ಲಿ ಈ ಲೋಹ ವಿಪುಲವಾಗಿ ದೊರಕುತ್ತಿದ್ದು ಈ ಪ್ರದೇಶದ ನಿಪುಣತೆ ಹೊಂದಿದ ಲೋಹಗಾರರಿಗೆ ಆಧಾರ ನೀಡಿತ್ತು. ಆದರೆ ಏಜಿಯಿನ್ ಪ್ರದೇಶಕ್ಕೆ ಸತು ಲೋಹ ಹೇಗೆ ಪ್ರವೇಶಿತೆಂಬುದನ್ನು ಇನ್ನೂ ಉತ್ತರಿಸಬೇಕಾಗಿದೆ. ಏಕೆಂದರೆ ಈವರೆವಿಗೂ ಈ ಭಾಗದಲ್ಲಿ ಸತು ಲೋಹದ ನಿಕ್ಷೇಪದ ಬಗ್ಗೆ ಮಾಹಿತಿ ದೊರೆತಿಲ್ಲ. ಪ್ರಾಯಶಃ ವ್ಯಾಪಾರದ ಮುಖೇನ ಅದನ್ನು ಆಮದು ಮಾಡಿಕೊಂಡಿರಬಹುದೆಂದು ಊಹಿಸಲಾಗಿದೆ. ಇಂತಹ ವ್ಯಾಪಾರ ಸಂಪರ್ಕದ ಮೂಲಕವೇ ಚಿನ್ನ-ಬೆಳ್ಳಿ, ಲೇಪಿಸ್-ಲೇಜುಲಿ ಹಾಗು ಸಿದ್ಧ ವಸ್ತುಗಳು ಕೂಡ ಬಂದಿರಬಹುದಾಗಿದೆ. ಇದರೊಂದಿಗೆ ಕುಶಲತೆಗಳಲ್ಲಿ ನಿಷ್ಣಾತತೆ ಮತ್ತು ದಾಖಲಿಸಲ್ಪಟ್ಟಿರುವ ಉತ್ತಮ ಚಿನ್ನದ ಆಭರಣಗಳು ಮತ್ತು ಬೆಳ್ಳಿಯ ಪಾತ್ರೆಗಳನ್ನು ನೋಡಬಹುದು.

ಏಜಿಯನ್ ತೀರದಲ್ಲಿ ಉತ್ತಮ ಬಂದರುಗಳನ್ನು ಹಾಗೂ ಪರ್ಯಾಯ ವ್ಯಾಪಾರಿ ಮಾರ್ಗಗಳನ್ನು ಹೊಂದಿದ್ದವು. ಆದ್ದರಿಂದ ದ್ವೀಪದಿಂದ ದ್ವೀಪಕ್ಕೆ ವರ್ಷದ ಹೆಚ್ಚಿನ ಕಾಲ ಸಂಪರ್ಕವಿರುವುದು ಕಂಡುಬಂದಿದೆ. ಗ್ರೀಸ್ ಮತ್ತು ಏಜಿಯನ್‌ಗಳಲ್ಲಿ ವ್ಯಾಪಾರ ಜಾಲ ಹೊಸ ಹೊಸ ವಸ್ತುಗಳ ಮತ್ತು ವಿಚಾರಗಳ ಆಗಮನಕ್ಕೆ ಕಾರಣವಾಯಿತು.

ನಗರ ಜೀವನದ ಆರಂಭ, ಸಾಂಸ್ಕೃತಿಕ ವೈವಿಧ್ಯತೆ ಕಾರಣವಾದುದ್ದಲ್ಲದೆ ಸಾಮಾಜಿಕ ಮತ್ತು ರಾಜಕೀಯ ಸಂಘಟನೆಯಲ್ಲಿ ಸಂಕೀರ್ಣತೆಯನ್ನು ಉಂಟು ಮಾಡಿತ್ತು. ಭವ್ಯ ನಾಗರಿಕತೆಯಿದ್ದ ಕ್ರೇಟ್‌ನಲ್ಲಿ ಇದು ದಾಖಲಾಗಿರುವಷ್ಟು ಇನ್ನೆಲ್ಲಿಯೂ ಆಗಿಲ್ಲ. ಇದಕ್ಕೆ ವಿರುದ್ಧವಾಗಿ ವಿಗ್ರಾನ್ ಮುಖ್ಯ ಪ್ರದೇಶ ನಾಗರಿಕತೆಯ ಬೆಳವಣಿಗೆಯಲ್ಲಿ ಹಿಂದೆ ಬಿದ್ದಿತು. ಕ್ರೇಟ್‌ನ ಈ ನಾಗರಿಕತೆ ಏಜಿಯನ್ ಪ್ರದೇಶವನ್ನು ಮಾತ್ರವಲ್ಲದೆ ಪೂರ್ವ ಮೆಡಿಟರೇನಿಯನ್ ಪ್ರದೇಶವನ್ನು ಆವರಿಸಿಕೊಂಡಿತು.

**ಮಿನೋವಾ ಮತ್ತು ಮೈಸೀನಿಯಾ ನಾಗರಿಕತೆ**

ಮುಖ್ಯ ಗ್ರೀಕ್ ಭೂಮಿ ಹಾಗೂ ಉಳಿದ ದ್ವೀಪಗಳಿಂದ ಕ್ರೇಟ್ ನಾಗರಿಕತೆಯ ಇತಿಹಾಸಪೂರ್ವ ಕಂಚಿನ ಯುಗವನ್ನು ಬೇರ್ಪಡಿಸಲು ಮಿನೋವನ್ ಎಂಬ ಪದವನ್ನು ಬಳಸಲಾಗಿದೆ. ಕ್ರೇಟ್ ಭೂಭಾಗ ಪರ್ವತಮಯವಾಗಿದ್ದು ಸ್ವಲ್ಪವೇ ಫಲವತ್ತಾದ ಭೂಮಿಯಿಂದ ಕೂಡಿತ್ತು. ಆದ್ದರಿಂದ ವ್ಯವಸಾಯ ಯೋಗ್ಯ ಭೂಮಿ ಸೀಮಿತವಾಗಿತ್ತು. ಅಲ್ಲಿನ ವ್ಯವಸಾಯ ಚಟುವಟಿಕೆಗಳಲ್ಲಿ ಮುಖ್ಯವಾಗಿ ಧಾನ್ಯಗಳು ಹಾಗೂ ಹಣ್ಣುಗಳನ್ನು ನೋಡುತ್ತೇವೆ. ಏಕೆಂದರೆ ಇಲ್ಲಿ ಮೆಡಿಟರೇನಿಯನ್ ಪರಿಸರವಿದೆ.

ಮಿನೋವನ್ ಎಂದು ಕರೆಯಲ್ಪಡುವ ಈ ಕಂಚಿನ ಯುಗ ಸಾಮಾನ್ಯವಾಗಿ ಕ್ರಿ.ಪೂ. ೩೦೦೦ ದಿಂದ ಕ್ರಿ.ಪೂ.೧೦೦೦ ವರೆಗೆ ವ್ಯಾಪಿಸಿತ್ತು. ಆ ಸಂದರ್ಭದಲ್ಲಿ ನಡೆದ ಕೆಲವು ಮುಖ್ಯ ಘಟನೆಗಳೆಂದರೆ ಕ್ರಿ.ಪೂ.೧೯೦೦ರಲ್ಲಿ ನೋಸ್ಸಸ್ ಅರಮನೆಗೆ ಬುನಾದಿಯನ್ನು ಹಾಕಿದ್ದು ಕ್ರಿ.ಪೂ.೧೫೦೦ರಲ್ಲಿ ಥೆರಾ ಅಗ್ನಿಪರ್ವತ ಸಿಡಿದಿದ್ದು ಮತ್ತು ಕ್ರಿ.ಪೂ.೧೩೭೫ರಲ್ಲಿ ಅರಮನೆಯ ನಾಶ, ಇವುಗಳನ್ನು ಕರಾರುವಕ್ಕಾಗಿ ಈಜಿಪ್ಟಿನ ಪಂಚಾಂಗದಿಂದ ಲೆಕ್ಕ ಹಾಕಬಹುದಾಗಿದೆ. ಇದಕ್ಕೆ ಕಾರಣ ಅವರಿಗೆ ಈಜಿಪ್ಟಿನೊಂದಿಗಿದ್ದ ಸಂಬಂಧ.

ಕಂಚಿನ ಯುಗದ ಆರಂಭವೆಂದು ಗುರುತಿಸಬಹುದಾದ ತಂತ್ರಜ್ಞಾನದ ಪ್ರಗತಿಯನ್ನು ಏಷ್ಯ ಮೈನರ್‌ನ ಪ್ರದೇಶದಿಂದ ವಿದೇಶಿ ವಲಸೆಗಾರರು ತಂದಿರಬಹುದು ಎಂದು ಊಹಿಸಲಾಗಿದೆ. ಇದಕ್ಕೆ ಮೂಲಾಧಾರವೆಂದರೆ ಅಲ್ಲಿ ಸಿಕ್ಕಿರುವ ಮಡಿಕೆಗಳ ಆಕಾರ ಮತ್ತು ಆಕೃತಿಗಳು. ಮಿನೋವಾ ಸಮಾಜವನ್ನು ಸಾಲಾಗಿ ಅನೇಕ ಚಿಕ್ಕ ರಾಜ ಮತ್ತು ಆರ್ಥಿಕ ಘಟಕಗಳಾಗಿ ವಿಭಾಗಿಸಲ್ಪಟ್ಟಿತ್ತು. ಅಂದಿನ ಕಾಲದ ಅನೇಕ ಸಮಾಧಿಗಳನ್ನು ಶವಸಾಮಗ್ರಿ ಗಳೊಂದಿಗೆ ಅನ್ವೇಷಣೆ ಮಾಡಲಾಗಿದೆ. ಅಲ್ಲಿನ ಶವಸಾಮಗ್ರಿಗಳಲ್ಲಿ ಕಂಡುಬಂದಿರುವ ಪ್ರಮುಖ ವಸ್ತುಗಳೆಂದರೆ ಆಭರಣಗಳು, ಪಾತ್ರೆಗಳ ಮೇಲೆ ಕೆತ್ತಿರುವ ಪೂಜಾ ಚಿತ್ರಗಳು ಮುಂತಾದವು.

ಆಯತಾಕಾರದ ತಳ ವಿನ್ಯಾಸ ಹೊಂದಿದ, ಬಿಸಿಲಿನಲ್ಲಿ ಒಳಣಗಿಸಿದ ಮಣ್ಣು ಇಟ್ಟಿಗೆಗಳಿಂದ ಕಟ್ಟಿದ ಗುಡಿಸಲುಗಳಲ್ಲಿ ಅವರು ವಾಸಿಸುತ್ತಿದ್ದುದು ಕಂಡುಬರುತ್ತದೆ. ಆ ಮನೆಗಳಲ್ಲಿ ಉಗ್ರಾಣಗಳು ಹಾಗೂ ಮಲಗುವ ಕಟ್ಟೆಗಳು ಇರುತ್ತಿದ್ದವು. ನೋಸ್ಸಸ್ ಮೊದಲ ಅರಮನೆಯನ್ನು ಅಂದಾಜು ೩೯೦೦ ವರ್ಷಗಳ ಹಿಂದೆ ಕಟ್ಟಿರಬೇಕು. ಆಯತಾಕಾರದ ತೆರೆದ ಅಂಗಳದ ಸುತ್ತ ನಿರ್ಮಾಣವಾಗಿದ್ದ ಅನೇಕ ದೊಡ್ಡ ಕೊಠಡಿಗಳನ್ನು ಹೊಂದಿದ ದೊಡ್ಡ ಕಟ್ಟಡ ಆದಾಗಿತ್ತು. ನೆಲೆಗಳಲ್ಲಿ ವಿವಿಧ ಸ್ತರಗಳಲ್ಲಿ ದೊರೆತಿರುವ ಮಡಿಕೆ ಕುಡಿಕೆಗಳ ಶೈಲಿಯ ಆಧಾರದ ಮೇಲೆ ಮಿನೋವಾದ ನಾಗರಿಕತೆಯ ಒಂಬತ್ತು ಸಾಂಸ್ಕೃತಿಕ ಕಾಲಘಟ್ಟಗಳನ್ನು ಗುರುತಿಸಲಾಗಿದೆ. ಆ ಕಾಲದಲ್ಲಿ ಸಮುದ್ರದ ಮುಖೇನ ಈಜಿಪ್ಟ್ ಸೈಪ್ರೆಸ್ ಮತ್ತು ಸಮೀಪ ಪ್ರಾಶ್ಚ್ಯದೊಂದಿಗೆ ವಿಸ್ತೃತ ಸಂಪರ್ಕವನ್ನು ಬೆಳೆಸಿಕೊಳ್ಳಲಾಗಿತ್ತು.

ಗ್ರೀಸ್‌ನಲ್ಲೇ ಮಿನೋವನ್ನರು ಸಾಂಸ್ಕೃತಿಕವಾಗಿ ಹಿರಿದಾದ ಸ್ಥಾನ ಪಡೆದರು ಎಂಬುದಕ್ಕೆ ಅರ್ಥವೆಂದರೆ ಅವರ ಕಲೆಯನ್ನು ಉಳಿದವರು ಅನುಸರಿಸಿ ದ್ವೀಪಾದ್ಯಂತ ಅಳವಡಿಸಿಕೊಂಡರು. ಇದಕ್ಕೆ ಮೇಲು ವರ್ಗದ ಜನರೂ ಹೊರತಾಗಿರಲಿಲ್ಲ.

ಅಲ್ಲಿನ ಪೂಜಾ ಚಿತ್ರಗಳು ಮತ್ತು ಸಾಮಗ್ರಿಗಳನ್ನು ಆಧರಿಸಿ ಮಿನೋವಾದ ನಾಗರಿಕತೆಯಲ್ಲಿ ಧರ್ಮ ಒಂದು ಪ್ರಮುಖ ಪಾತ್ರ ವಹಿಸಿರುವಂತೆ ಕಂಡುಬರುತ್ತದೆ. ಅವರು ಫಲವತ್ತತೆಯ ಆರಾಧನೆ ಮತ್ತು ಪ್ರಕೃತಿ ಪೂಜೆಯನ್ನು ಮಾಡುತ್ತಿದ್ದರು. ಮಿನೋವಾದ ಧರ್ಮ ಬಹುದೇವತಾರಾಧನೆ ಹೊಂದಿತ್ತೆ ಅಥವಾ ಏಕ ದೇವತಾರಾಧನೆಯನ್ನು ಹೊಂದಿತ್ತೆ ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದ್ದರೂ ಖಂಡಿತವಾಗಿಯೂ ಸ್ತ್ರೀ ದೇವತೆಯ ಆರಾಧನೆ ಮುಖ್ಯ ಪಂಥದ ವಿಷಯವಾಗಿದ್ದು, ಈ ದೇವತೆ ಬಹುರೂಪಿ ಆಗಿದ್ದಳು.

ಅಂತ್ಯದಲ್ಲಿ ಮಿನೋವನ್ನರು ಪ್ರಕೃತಿಯ ವಿಕೋಪಕ್ಕೆ ಒಳಗಾಗಿ ನಾಶ ಹೊಂದಿದರು. ಇಷ್ಟಾದರೂ ಈ ನಾಗರಿಕತೆ ಕ್ರಿ.ಪೂ.೧೦೦೦ದ ವರೆಗೆ ಉಳಿದು ಬಂತು.

ಕೊಲಿನ್ ರೆನ್ ಫ್ರ್ಯೂರ (೧೯೭೩) ಮಿನೋವಾದ ಸಮಾಜವನ್ನು ಮತ್ತು ಅದರ ನಂತರ ಅಸ್ತಿತ್ವಕ್ಕೆ ಬಂದ ಗ್ರೀಕ್ ಮುಖ್ಯ ಪ್ರದೇಶದ ಮೈಸೀನಿಯನ್ನರ ಸಮಾಜವನ್ನು ನಾಗರಿಕತೆಗಳೆಂದು ವಿವರಿಸುತ್ತಾನೆ. ಇದಕ್ಕೆ ಅವನು ನೀಡುವ ಸಮಜಾಯಿಸಿ ಅಂದರೆ ಆ ಕಾಲದಲ್ಲಿದ್ದ ಸಂಕೀರ್ಣ ಸಾಮಾಜಿಕ ಪದ್ಧತಿ. ಅರಮನೆಯ ರೂಪದಲ್ಲಿದ್ದ ಭವ್ಯ ವಾಸ್ತುಶಿಲ್ಪ, ವಿಸ್ತಾರವಾದ ಸಮಾಧಿಗಳು, ಅವರ ಆರ್ಥಿಕ ಹೆಚ್ಚುವರಿ, ಅವರ ದೂರದ ವ್ಯಾಪಾರಿ ಚಟುವಟಿಕೆಗಳು, ಅವರ ಸುಧಾರಿಸಿದ ಕಲೆ ಮತ್ತು ಲೋಹಗಾರಿಕೆ, ಹಾಗೂ ಆಹಾರದ ಪುನರ್ ಹಂಚಿಕೆಯ ರೀತಿಗಳು ಮುಂತಾದವುಗಳಾಗಿವೆ. ಈ ಎರಡೂ ಸಂಸ್ಕೃತಿಯ ಜನರು ಭವ್ಯವಾದ ಕಟ್ಟಡಗಳನ್ನು ನಿರ್ಮಿಸಲಿಲ್ಲ ಹಾಗೂ ನಗರಗಳಲ್ಲಿ ವಾಸಿಸಲಿಲ್ಲ. ರೆನ್ ಫ್ರ್ಯೂರ ಪ್ರಕಾರ ಈ ಎರಡು ನಾಗರಿಕತೆ ಸ್ಥಳೀಯ ಸಾಮಾಜಿಕ ಬದಲಾವಣೆ ಮತ್ತು ಪ್ರಾಪಂಚಿಕ ವಿಷಯದ ಅಭಿವೃದ್ಧಿಯ ಫಲಿತಾಂಶವಾಗಿ ಉದಯಿಸಿದವೇ ಹೊರತು ಹೊರಗಡೆಯ ಜನಸಂಖ್ಯೆಯ ಚಟುವಟಿಕೆಯಿಂದ ಅಲ್ಲ ಬ್ರಿಯಾನ್ ಎಂ. ಫೆಗನ್ ಮೊದಲು ಊಹೆ ಮಾಡಿದ್ದಂತೆ ಹೊಸ ಜನ ಗ್ರೀಸ್‌ಗೆ ಉತ್ತರದಿಂದ ಬಂದರು ಅಥವಾ ಅನಟೋಲಿಯಾದ ಹೊಸ ಸಾಂಸ್ಕೃತಿಕ ವಿಚಾರಗಳು ಅಥವಾ ಪೂರ್ವದ ಮೆಡಿಟರೇನಿಯನ್ ಪ್ರದೇಶದ ಜನ ಈ ಸಂಸ್ಕೃತಿಯ ಉದಯಕ್ಕೆ ಕಾರಣರಾದರು ಎಂಬುದಕ್ಕಿಂತ ಮೇಲಿನ ಸಿದ್ಧಾಂತ ಸಂಪೂರ್ಣವಾಗಿ ಬೇರೆಯೇ ಆಗಿದೆ.

**ಮೈಸೀನಿಯನ್ನರು**

ಕ್ರಿ.ಪೂ.೧೭೦೦ ರಿಂದ ಕ್ರಿ.ಪೂ.೧೬೦೦ ಒಳಗೆ ಗ್ರೀಸ್‌ನ ಪ್ರಮುಖ ಪ್ರದೇಶದಲ್ಲಿ ಮೈಸೀಯನ್ನರ ಸಂಸ್ಕೃತಿ ಉದಯಿಸಿತು. ಕ್ರಿ.ಪೂ.೧೪೦೦ರ ಹೊತ್ತಿಗೆ ಈ ಸಂಸ್ಕೃತಿಯ ಪ್ರಭಾವ ಏಜಿಯನ ಸಮುದ್ರದ ಎಲ್ಲಾ ದ್ವೀಪಗಳಲ್ಲಿ ಹಾಗೂ ಏಷ್ಯ ಮೈನರ್‌ನ ತೀರ ಪ್ರದೇಶಗಳಲ್ಲಿ ಹಬ್ಬಿತು. ಕ್ರಿ.ಪೂ.೧೨೦೦ ರಿಂದ ೧೧೦೦ರ ನಡುವೆ ಸಂಸ್ಕೃತಿಯು ಅವನತಿ ಹೊಂದಿತು.

ಸಾಮಾನ್ಯವಾಗಿ ಇವರು ಯುದ್ಧಪ್ರಿಯರಾಗಿದ್ದರೆಂದು ನಂಬಲಾಗಿದ್ದು ಗ್ರೀಸ್‌ನ ಮುಖ್ಯ ಭೂಮಿಯಲ್ಲಿದ್ದ ಕೋಟೆಗಳಲ್ಲಿ ವಾಸಿಸುತ್ತಿದ್ದರು. ಉತ್ಪಾದನೆಯ ಹೆಚ್ಚಳದ ಕಾರಣದಿಂದ ಅವರ ಸಮಾಜವನ್ನು ಸ್ತರಗಳಾಗಿ ವಿಭಾಗಿ ಸಿದ್ದರು. ಅವರ ಸೈನಿಕ ಮುಖ್ಯರನ್ನು ಕಂಬಗಳಿಂದ ಕೂಡಿದ ಸಮಾಧಿಗಳಲ್ಲಿ ಹುಗಿಯು ತ್ತಿದ್ದರು. ಈ ಸಮಾಧಿಗಳಲ್ಲಿ ತಾಮ್ರ ಮತ್ತು ಚಿನ್ನದಿಂದ ಸಿಂಗರಿಸಿದ ಆಯುಧಗಳು ಇರುತ್ತಿದ್ದವು. ಜೊತೆಗೆ ಮೃತನ ಮುಖವನ್ನು ಹೋಲುವ ಚಿನ್ನದ ಮುಖವಾಡವೂ ಇರುತ್ತಿದ್ದವು. ಅವರು ಹೊಂದಿದ್ದ ದೂರದ ವ್ಯಾಪಾರಿ ಸಂಪರ್ಕಗಳಿಂದಲೂ ಹೇರಳ ಆರ್ಥಿಕ ಅಭಿವೃದ್ಧಿಯಾಯಿತು. ಅವರ ರಾಜರುಗಳ ನಿಷ್ಣಾತ ರಥಸಾರಥಿಗಳಾಗಿದ್ದರು ಹಾಗೂ ಉತ್ತಮ ಕುದುರೆ ಸವಾರರು ಆಗಿದ್ದರು.

ಮೈಸೀನಿಯನ್ನರು ಒಂದು ಲಿಪಿಯನ್ನು ಬಳಸುತ್ತಿದ್ದರು. ಆದರೆ ಈ ಬರವಣಿಗೆ ಪದ್ಧತಿಯನ್ನು ಕಂಡುಹಿಡಿದವರು ಮಿನೋವನ್ನರು. ಏನೇ ಆದರೂ ಮೈಸೀನಿಯನ್ನರು ಈ ಬರವಣಿಗೆ ಪದ್ಧತಿಯನ್ನು ಅಭಿವೃದ್ಧಿಪಡಿಸಿದರು. ಲೀನ್ಯಾರ್ ಬಿ ಎಂದು ಕರೆಯಲ್ಪಡುವ ಗ್ರೀಸ್ ಭಾಷೆಯಲ್ಲಿ ಬರೆಯಲ್ಪಟ್ಟ ಲಿಪಿಯನ್ನು ಬಳಸಿದರು. ಅದೊಂದು ಸರಳ ಚಿತ್ರ ಲಿಪಿಯಾಗಿತ್ತು.

ಮೈಸೀನಿಯನ್ನರು ಕುರಿತಂತೆ ಕಾವ್ಯಗಳು ರಚನೆಯಾದವು. ಹೋಮರನ ಮಹಾಕಾವ್ಯ ಗಳಲ್ಲಿ ತಿಳಿಸಿರುವ ಗ್ರೀಕರು ಮತ್ತು ಪ್ರಾಕ್ತನ ಶಾಸ್ತ್ರದಲ್ಲಿ ನಮೂದಿಸಿರುವ ಮೈಸೀನಿಯಾದ ಸಂಬಂಧದ ನಡುವೆ ಪ್ರಬಲ ಆಸಕ್ತಿ ಮೂಡುತ್ತದೆ. ಅನೇಕ ಪ್ರಾಕ್ತನಶಾಸ್ತ್ರಜ್ಞರು ಅಭಿಪ್ರಾಯ ಪಡುವಂತೆ ಮೈಸೀನಿಯನ್ನರ ಮತ್ತು ಆರಂಭದ ಗ್ರೀಕರ ನಡುವೆ ಹೋಮರನ ಬರವಣಿಗೆಗಳು ಸಾಂಸ್ಕೃತಿಕ ಮುಂದುವರಿಕೆಯ ಸಾಕ್ಷಿಗಳಾಗಿವೆ.

ಗ್ರೀಸ್‌ನ ಮುಖ್ಯ ಪ್ರದೇಶದಲ್ಲಿ ಮಧ್ಯ ಹೆಲಿಡ್ಯರ್ ಎಂದು ಕರೆಯಲ್ಪಡುವ ಮಧ್ಯ ಕಂಚಿನಯುಗದ ವಿಸ್ತರಣೆಯೆ ಮೈಸೀನಿಯಾದ ಸಂಸ್ಕೃತಿ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಮಧ್ಯ ಹೆಲಿಡಿಕ್ ಮತ್ತು ನಂತರ ಹೆಲಿಡಿಕ್ ಯುಗಗಳ ಪರಿವರ್ತನೆ ಏಜಿಯನಾ ದ್ವೀಪಗಳು ಮತ್ತು ಕ್ರೇಟೆ ಜೊತೆ ವಿಸ್ತೃತ ಸಂಬಂಧಗಳೊಂದಿಗೆ ಗುರುತಿಸಲಾಗಿದೆ. ಅವರ ನೆಲೆಗಳು ಹೆಚ್ಚು ದೊಡ್ಡದಾಗುವುದರ ಜೊತೆಗೆ ಸಂಕೀರ್ಣವೂ ಆದವು. ಹಲವು ನೆಲೆಗಳಲ್ಲಿ ಸರಳ ಕೋಟೆಗಳ ನಿರ್ಮಾಣವನ್ನು ಗುರುತಿಸಲಾಗಿದೆ ಹಾಗೆ ವಿಸ್ತೃತವಾದ ಸಮಾಧಿಗಳನ್ನು ಪತ್ತೆ ಹಚ್ಚಲಾಗಿದೆ.

ಮೈಸೀನಿಯಾ ನಾಗರಿಕತೆ ಅವನತಿ ಹೊಂದಲು ಕಾರಣಗಳೇನೆಂದರೆ ಕುಸಿದ ವ್ಯಾಪಾರ, ಪೂರ್ವ ಮೆಡಿಟರೇನಿಯನ್ ರಾಜಕೀಯ, ಭೌಗೋಳದಲ್ಲಿ ಅಸಮತೋಲನೆ ಹಾಗೂ ಸಾಮಾಜಿಕ ಜೀವನದಲ್ಲಿ ಉಂಟಾದ ವೈರುಧ್ಯಗಳು. ಕ್ರಿ.ಪೂ.೧೦೫೦ರ ಹೊತ್ತಿಗೆ ಮೈಸೀನಿಯಾ ಸಂಸ್ಕೃತಿಯ ಎಲ್ಲಾ ಪ್ರಮುಖ ಅಂಶಗಳು ಕಾಣೆಯಾದವು. ಪರಿಣಾಮವಾಗಿ ಅಲ್ಲಿ ಆರ್ಥಿಕ ಅವನತಿಯಾಗಿ ಅವರ ನೆಲೆಗಳು ಕೇವಲ ಉಳಿವಿಗಾಗಿ ದುಡಿಯುವ ಮಟ್ಟಕ್ಕೆ ತಲುಪಿದವು. ಕುಶಲ ವಸ್ತುಗಳ ಉತ್ಪಾದನೆ ಸ್ಥಗಿತವಾಯಿತು. ಜನಸಂಖ್ಯೆಯು ನಾಶವಾಗುತ್ತಾ ಬಂದಿತು. ಈ ಸ್ಥಿತಿ ಸಾಮಾನ್ಯ ಕ್ರಿ.ಪೂ. ೮ನೆಯ ಶತಮಾನದಲ್ಲಿ ಅಭಿಜಾತ ಗ್ರೀಕ್ ನಗರ ರಾಜ್ಯಗಳು ಉದಯವಾಗುವವರೆಗೆ ಇತ್ತು. ಗ್ರೀಕರ ಹಲವು ವ್ಯವಸಾಯ ಯೋಗ್ಯ ಫಲವತ್ತಾದ ಭೂಮಿಗಳು ಬೆಟ್ಟಗುಡ್ಡಗಳಿಂದ ಬೇರ್ಪಟ್ಟಿದ್ದವು. ಏಜಿಯನ್ ದ್ವೀಪದ ಮತ್ತು ಗ್ರೀಕ್ ಮುಖ್ಯ ಪ್ರದೇಶದ ವ್ಯಾಪಾರಿಗಳು ಮತ್ತು ಸಮುದ್ರ ವರ್ತಕರು ರಾಜ್ಯಗಳ ಒಂದು ಕಾರ್ಯಜಾಲವನ್ನು ರೂಪಿಸಿದರು. ಈ ಪ್ರಯುಕ್ತ ನಗರ ರಾಜ್ಯಗಳಲ್ಲಿ ವ್ಯಾಪಾರ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸ್ಪರ್ಧೆ ಉಂಟಾಯಿತು. ಈ ನಗರ ರಾಜ್ಯಗಳಲ್ಲಿ ಅಥೆನ್ಸ್ ದೊಡ್ಡ ಮತ್ತು ಸಂಪದ್ಭರಿತ ನಗರ ರಾಜ್ಯವಾಗಿತ್ತು.

<u>ಪರಾಮರ್ಶನ ಗ್ರಂಥಗಳು</u>


೧. ಗೋರ್ಡನ್ ಚೈಲ್ಡ್, ೧೯೬೪. **ವಾಟ್ ಹೆಪ್ಪನ್ಡ್ ಇನ್ ಹಿಸ್ಟರಿ,** ಲಂಡನ್: ಪೆಂಗ್ವಿನ್ ಬುಕ್ಸ್.

೨. ವಿಲ್ ಡ್ಯುರಾಂಟ್, ೧೯೫೪. **ಅವರ್ ಓರಿಯಂಟಲ್ ಹೆರಿಟೇಜ್, ದಿ ಸ್ಟೋರಿ ಆಫ್ ಸಿವಿಲೈಸೇಷನ್,** ಭಾಗ-೧, ನ್ಯೂಯಾರ್ಕ್: ಸೈಮನ್.

೩. ಗ್ರಹಾಮ್ ಕ್ಲರ್ಕ್, ೧೯೯೭. **ವರ್ಲ್ಡ್ ಪ್ರಿ ಹಿಸ್ಟರಿ ಇನ್ ನ್ಯೂ ಪರ್‌ಸ್ಪೆಕ್ಟಿವ್,** ಮೂರನೆಯ ಆವೃತ್ತಿ, ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್.


## ೨. ಗ್ರೀಕ್ ಯುಗ ಸಮಾಜ ಹಾಗೂ ಸಂಸ್ಕೃತಿ

"ಕುರುಡು ಪ್ರಾಕೃತಿಕ ಶಕ್ತಿಗಳನ್ನು ಬಿಟ್ಟು, ಗ್ರೀಕ್ ಮೂಲವಲ್ಲದ ಯಾವುದೂ ಈ ಪ್ರಪಂಚದಲ್ಲಿ ಚಾಲನೆಯನ್ನು ಪಡೆದಿಲ್ಲ. ಮತ್ತು ಯಾವುದೇ ನಾಗರಿಕ ರಾಷ್ಟ್ರದ ಬೌದ್ಧಿಕ ಚಟುವಟಿಕೆಯ ಕ್ಷೇತ್ರ ಗ್ರೀಕರ ವಸಾಹತು." ೧೯ನೆಯ ಶತಮಾನದ ಅಂತ್ಯದಲ್ಲಿ ಹೆನ್ರಿಮೆಯು ಹೇಳಿದ ಈ ಮಾತು, ಪ್ರಾಚೀನ ಈಜಿಪ್ಷಿಯನ್, ಇಂಡಿಯನ್ ಮತ್ತು ಚೀನಿ ನಾಗರಿಕತೆಗಳ ಪರಿಚಯವಿರುವ ಯಾರಿಗಾದರೂ ಉತ್ಪ್ರೇಕ್ಷೆಯೆನಿಸಿದರೂ ಪ್ರಾಚೀನ ಗ್ರೀಕರ ಬಗ್ಗೆ ತಿಳಿಯಬೇಕೆನ್ನುವ ನಮ್ಮ ಕೌತುಕವನ್ನು ಯಾವುದೇ ಕಾರಣಕ್ಕೂ ಕಡಿಮೆ ಮಾಡುವುದಿಲ್ಲ. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬಂತೆ ಪ್ರಾಚೀನ ಗ್ರೀಕರು ಚಿಂತಿಸದ ವಸ್ತು ವಿಷಯಗಳೆ ವಿರಳ. ಭೌಗೋಳಿಕ ಪ್ರದೇಶಾಧಾರಿತ ರಾಜ್ಯ ವ್ಯವಸ್ಥೆಯನ್ನು ಮನುಷ್ಯರ ನಡುವಿನ ಇತರ ಕೂಟಗಳಿಗಿಂತ (ಸಂಘ) ಹೆಚ್ಚು ಮುಖ್ಯವೆಂದು ಗ್ರೀಕರು ಪರಿಗಣಿಸಿದರು. ಅಲ್ಲದೇ ಪ್ರಪಂಚ ಮತ್ತು ಮನುಷ್ಯ ಈ ಕುರಿತಂತೆ ನಿಗೂಢ ಕಾಣ್ಕೆಗಳ ಬದಲು ಪ್ರಾಕೃತಿಕ ನಿಯಮಗಳ ಮೂಲಕ ವಿವರಣೆ ನೀಡಲು ಯತ್ನಿಸಿದರು.

ಗ್ರೀಕರ ಚಿಂತನೆ, ರೋಮನ್ನರ ಕಾಯವೆ ಮತ್ತು ಕ್ರೈಸ್ತ ಧರ್ಮ ಯುರೋಪಿನ ಸಂಸ್ಕೃತಿಯ ಆಧಾರ ಸ್ತಂಭಗಳಾಗಿದ್ದರೂ ಅರ್ನಾಲ್ಡ ಟಯನ್‌ಬೀ ಅವರು ಅಭಿಪ್ರಾಯ ಪಡುವಂತೆ "ಗ್ರೀಕ್ ಸಮಾಜದ ಕಾಯದಲ್ಲಿ ಯುರೋಪಿನ ನಾಗರಿಕತೆಯು ಬೆಳೆಯಿತು."

ಆಧುನಿಕ ಕಾಲದಲ್ಲಿ ಯೂರೋಪಿಯನ್ನರ ವಸಾಹತುಶಾಹಿಯೊಂದಿಗೆ ಯುರೋಪ್ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದ್ದ ಗ್ರೀಕರ ಅನೇಕ ವಿಚಾರಗಳು ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತವಾದವು. ಉದಾಹರಣೆಗೆ ಸ್ಕೂಲ್, ಜಮ್ನಾಷಿಯಂ, ಅರ್ಥಮೆಟಿಕ್, ಜಿಯೋಮಿಟ್ರಿ, ಹಿಸ್ಟರಿ, ರೆಟೋರಿಕ್, ಫಿಸಿಕ್ಸ್, ಬಯೋಲಜಿ, ಅನಾಟಮಿ, ಹೈಜಿನ್, ಥೆರಪಿ, ಕೋಸಮೆಟಿಕ್ಸ್, ಪೊಯರ್ಚಿ, ಮ್ಯೂಸಿಕ್, ಟ್ರಾಜಿಡಿ, ಕಾಮಿಡಿ, ಫಿಲಾಸಫಿ, ಥಿಯಾಲಜಿ, ಅಗ್ನೋಸಿಸಿಸಂ, ನೆಟ್ಟಿಸಿಸಂ, ಸ್ಟಾಯಸಿಸಂ, ಎಪಿಕ್ಯೂರಿಯನಿಸಂ, ಎಥಿಕ್ಸ್, ಪೊಲಿಟಿಕ್ಸ್, ಐಡಿಯಲಿಸಂ, ಫಿಲಾನಧ್ರಪಿ, ಟಲ್‌ಸಿ, ಪ್ಲೂಟೋಕ್ರಸಿ, ಡೆಮೋಕ್ರಸಿ, ರಿಪಬ್ಲಿಕ್ ಮೊದಲಾದವುಗಳು. ಇಷ್ಟಾದರೂ, ಅಸಾಮಾನ್ಯ ಸಾಂಸ್ಕೃತಿಕ ಹಿರಿಮೆಯನ್ನು ಹೊಂದಿದ್ದ ಈ ಗ್ರೀಕರು ಆಧುನಿಕ ಕಾಲದಲ್ಲಿ ಟರ್ಕಿಷ್ ಸಾಮ್ರಾಜ್ಯದ ಒಂದು ಭಾಗವಾಗಿ, ಸ್ವಾತಂತ್ರ್ಯವನ್ನು ಕಳೆದುಕೊಂಡು, ನರಳಿ, ಅನಂತರ ಹೋರಾಡಿ ಕ್ರಿಸ್ತ ಶಕ ೧೮೨೯ರಲ್ಲಿ ಸ್ವತಂತ್ರರಾಗಿ ನಳನಳಿಸಿದ್ದು ಇತಿಹಾಸದ ಒಂದು ಭಾಗವೇ.

**ಭೌಗೋಳಿಕ ಹಿನ್ನೆಲೆ**

ಪ್ರಾಚೀನ ಗ್ರೀಕರು ತಮ್ಮ ನಾಡನ್ನು 'ಹೆಲ್ಲಾಸ್ ' ಎಂದೂ ತಮ್ಮನ್ನು 'ಹೆಲನ್ಸ್' (ಹೆಲನಿಸ್ ) ಎಂದು ಕರೆಯುತ್ತಿದ್ದರು. ಗ್ರೀಸ್ ದಕ್ಷಿಣ ಯುರೋಪಿನಲ್ಲಿ ಮೆಡಿಟರೇನಿಯನ್ ಸಮುದ್ರದಲ್ಲಿರುವ ಒಂದು ಪರ್ಯಾಯ ದ್ವೀಪ. ಏಜಿಯನ್ ಸಮುದ್ರವು ಗ್ರೀಸನ್ನು ಏಷ್ಯಾ ಮೈನರಿನಿಂದ ಬೇರ್ಪಡಿಸಿದೆ. ಏಜಿಯನ್ ಸಮುದ್ರದಲ್ಲಿ ಅನೇಕ ದ್ವೀಪಗಳಿವೆ. ಬೆಟ್ಟಗಳೂ ಸಹ ಗ್ರೀಕನ್ನು ವಿವಿಧ ಪ್ರದೇಶಗಳಾಗಿ ವಿಭಾಗಿಸಿವೆ. ಪ್ರಾಚೀನ ಕಾಲದಲ್ಲಿ ಈ ಪ್ರದೇಶಗಳು ತಮ್ಮ ತಮ್ಮ ಸಾರೂಪ್ಯತ್ವವನ್ನು ಕಾಪಾಡಿಕೊಂಡು ತಮಗೆ ಸೂಕ್ತವಾದ ರೀತಿಯಲ್ಲಿ ಬೆಳೆದವು. ಪರ್ಷಿಯಾ ಮತ್ತು ಭಾರತ ದೇಶಗಳ ಮೇಲೆ ದಾಳಿ ನಡೆಸಿದ ಜನರ ಹಾಗೆ ಗ್ರೀಕರು ಸಹ ಇಂಡೋ ಯುರೋಪಿಯನ್ನರಾಗಿದ್ದರು. ಕ್ರಿಸ್ತಪೂರ್ವ ೮ನೇ ಶತಮಾನದ ವೇಳೆಗೆ ಅವರು 'ಡೋರಿಯನ್ನರು', 'ಅಯೋಲಿಯನ್ನರು' ಮತ್ತು 'ಅಯೋನಿಯನ್ನರು' ಎಂದು ಮೂರು ಪಂಗಡಗಳಾಗಿ ವಿಭಜಿಸಲ್ಪಟ್ಟಿದ್ದರು. ಸ್ಪಾರ್ಟಾ, ಅಥೆನ್ಸ್, ಕಾರಿಂಥ್, ಥೀಟ್ಸ್, ಅಯಿಗೋಸ್, ಯಪಿಸಸ್ ಮತ್ತು ಮಿಲಟಸ್ ಗ್ರೀಕ್ ಸಂಸ್ಕೃತಿಯ ಪ್ರಮುಖ ಕೇಂದ್ರಗಳಾಗಿದ್ದವು.

ಭೂಗೋಳವು ಜನರ ವ್ಯಕ್ತಿತ್ವ ಮತ್ತು ಜೀವನದ ಮೇಲೆ ಪರಿಣಾಮ ಉಂಟು ಮಾಡುತ್ತದೆಂಬುದೂ ಮತ್ತು ಆ ಜನತೆ ತಮ್ಮ ದೇಶದ ಇತಿಹಾಸದ ಮೇಲೆ ಪ್ರಭಾವ ಬೀರುವರೆಂಬುದೂ ಸ್ವತಃ ಸಿದ್ಧಸತ್ಯಾಂಶವಾಗಿದೆ. ಪರ್ವತ ಪ್ರದೇಶವಾಗಿರುವ ಗ್ರೀಸ್ ದೇಶವು ಕೃಷಿಗೆ ಯೋಗ್ಯವಾಗಿರಲಿಲ್ಲ. ಆದರೆ ನೌಕಾವಿದ್ಯೆಗೆ ಇರುವ ಸಹಜ ಸೌಕರ್ಯಗಳು ಈ ಕೊರತೆಯನ್ನು ನೀಗಿವೆ. ಏಜಿಯನ್ ಸಮುದ್ರದಲ್ಲಿ ಪುಟ್ಟ ದ್ವೀಪಗಳಿದ್ದವು. ಈ ದ್ವೀಪ ನಿವಾಸಿಗಳು ಒಳ್ಳೆಯ ನಾವಿಕರಾಗಲೂ ಮತ್ತು ಸಾಹಸಿಗಳಾಗಲು ಉತ್ತೇಜನವಿತ್ತಿತು. ಸಮುದ್ರ ತೀರದಲ್ಲಿರುವ ಸ್ವಾಭಾವಿಕ ಬಂದರುಗಳು ಸಮುದ್ರ ವ್ಯಾಪಾರಕ್ಕೆ ಉತ್ತೇಜನ ಕೊಟ್ಟವು. ಇದು ಜನರ ಆರ್ಥಿಕ ಅಭಿವೃದ್ಧಿಗೆ ಕಾರಣವಾಯಿತು. ಗ್ರೀಸ್ ದೇಶ ಮತ್ತು ಜನರು ಸಣ್ಣ ಸಣ್ಣ ಭಾಗಗಳಾಗಿ ವಿಭಾಗಿಸಲ್ಪಡಲು ಪರ್ವತ ಶ್ರೇಣಿಗಳು ಮತ್ತು ಭೂಮಿ ಯನ್ನು ಸಮುದ್ರ ಗರಗಸದ ಮಾದರಿಯಲ್ಲಿ ಕೊರೆದಿರುವುದೂ ಕಾರಣವಾಗಿದೆ. ಇದರಿಂದಾಗಿ ಈ ಜನರು ಯಾವ ಸಂಪರ್ಕವೂ ಇಲ್ಲದೇ ಪ್ರತ್ಯೇಕವಾಗಿ ಜೀವಿಸಬೇಕಾಯಿತು. ಈ ಹಿನ್ನೆಲೆಯು 'ಪೋಲಿಸ್' ಅಥವಾ ನಗರ ರಾಜ್ಯಗಳ ಉದಯಕ್ಕೆ ಸೂಕ್ತ ವಾತಾವರಣ ವನ್ನು ಕಲ್ಪಿಸಿತು. ಪುರಾತನ ಗ್ರೀಸ್ ದೇಶವು ಅಮೃತ ಶಿಲೆಯನ್ನು ಒದಗಿಸಿತು. ಸಮುದ್ರ ಹಾಗೂ ಅಮೃತಶಿಲೆ ಇವುಗಳು ಗ್ರೀಕರು ಉತ್ಕೃಷ್ಟವಾದ ನಾಗರಿಕತೆಯನ್ನು ಸ್ಥಾಪಿಸಲು ಸಹಾಯಕವಾದವು.

**ಐತಿಹಾಸಿಕ ಹಿನ್ನೆಲೆ**

ಆರ್ಯರ ಆಗಮನಕ್ಕೆ ಪೂರ್ವದಲ್ಲಿ ಗ್ರೀಕ್ ದ್ವೀಪಗಳಲ್ಲಿ ಏಜಿಯನ್ ನಾಗರೀಕತೆಯು ಅಭಿವೃದ್ಧಿಯಲ್ಲಿತ್ತು. ಆ ಪ್ರದೇಶದಲ್ಲಿ ವಾಸಿಸುತ್ತಿದ್ದವರನ್ನು 'ಮಿನೋಯನ್ಸ್' ಎಂದೂ ಕರೆಯುತ್ತಿದ್ದರು. ಈ ನಾಗರಿಕತೆಯು ಮೊದಲಿಗೆ ಕ್ರೀಟ್‌ನಲ್ಲಿ ಬೆಳೆಯಿತು. ಪೌರಾಣಿಕ ದೊರೆಯ ಹೆಸರಿನ ಮೇಲೆ ಕ್ರೀಟನ್ನು 'ಮಿನೋಸ್' ಎಂದು ಕರೆಯುತ್ತಿದ್ದುದರಿಂದ ಅಲ್ಲಿನ ನಾಗರಿಕತೆಗೆ 'ಮಿನೋಯನ್'

ನಾಗರಿಕತೆಯೆಂದು ಹೆಸರಾಯಿತು. ಅಲ್ಲಿನ ಗೋರಿಗಳಲ್ಲಿ ದೊರೆತಿರುವ ಸುಂದರವಾದ ಕತ್ತಿಗಳು, ಚೂರಿಗಳು, ಆಭರಣಗಳು, ದಂತದ ಕೆತ್ತನೆಗಳು ಮತ್ತು ಪುಷ್ಪ ಕುಂಭಗಳು ಈ ನಾಗರಿಕತೆಯ ಹಿರಿಮೆಯನ್ನು ಸ್ಪಷ್ಟಪಡಿಸುತ್ತವೆ.

ಸುಮಾರು ಕ್ರಿ.ಪೂ.೧೧೧೦ರಲ್ಲಿ ಗ್ರೀಕರು ಉತ್ತರದಿಂದ ನುಗ್ಗಿ ಅಲ್ಲಿನ ಮೊದಲ ಸಂಸ್ಕೃತಿಯನ್ನು ಮುಗಿಸಿ, ಟೆರನೀಯರು ಮತ್ತು ಮೈಸೀನಿಯರನ್ನು ನಾಶ ಮಾಡಿದರು. ಏಜಿಯನ್ ನಾಗರಿಕತೆಯ ಅವಶ್ಯವಾದ ಭಾವಗಳನ್ನು ಅಳವಡಿಸಿಕೊಂಡು ಒಂದು ಹೊಸ ನಾಗರಿಕತೆಯನ್ನು ಬೆಳೆಸಿದರು. ಇದು ಗ್ರೀಕ್ ನಾಗರಿಕತೆಯೆಂದು ಹೆಸರಾಗಿದೆ. ಕಾಲಾನುಕ್ರಮ ದಲ್ಲಿ ಗ್ರೀಕರು ಒಂದು ವರ್ಣಮಾಲೆಯನ್ನು ರಚಿಸುವುದರ ಜೊತೆಗೆ ಹಣದ ಚಲಾವಣೆ ಯನ್ನು ಜಾರಿಗೆ ತಂದರು. ಕ್ರಿ.ಪೂ.೬೭೦ರಲ್ಲಿ ಅವರ ಮೊದಲ ಟಂಕಸಾಲೆ ಸ್ಥಾಪಿತವಾಯಿತು.

ಗ್ರೀಕರು ಕ್ರಮವಾದ ಜೀವನವನ್ನು ಆರಂಭಿಸಿದರು. ಕೃಷಿ ಅವರ ಮುಖ್ಯ ಕಸುಬಾಯಿತು. ಅವರು ಸುಮಾರು ಕ್ರಿ.ಪೂ.೧೦೦೦ದ ವೇಳೆಗೆ ಏಜಿಯನ್ ಸಮುದ್ರದಾಟಿ ಏಷ್ಯಾ ಮೈನರ್ ವರೆಗೆ ವಿಸ್ತರಿಸಿದರು. ಕ್ರಿ.ಪೂ.೭೫೦ ರಿಂದ ೫೫೦ರ ನಡುವಿನಲ್ಲಿ ಅವರು ದೂರದಲ್ಲಿರುವ ಕಪ್ಪು ಸಮುದ್ರದ ತೀರದಲ್ಲೂ ಮತ್ತು ಮೆಡಿಟರೇನಿಯನ್ ಸಮುದ್ರದ ಪಶ್ಚಿಮ ಮತ್ತು ದಕ್ಷಿಣ ಭಾಗಗಳಲ್ಲೂ ಗ್ರೀಕ್ ನಗರಗಳನ್ನು ಸ್ಥಾಪಿಸಿದರು. ಈ ಕಾಲದಲ್ಲಿ ಶ್ರೀಮಂತ ಆಳ್ವಿಕೆ ತುಂಬಾ ಗಮನಾರ್ಹ ಅಂಶವಾಗಿದೆ. ಆದರೆ ಮೇಲೇರುತ್ತಿದ್ದ ವರ್ತಕರು ಮತ್ತು ಶ್ರೀಮಂತರ ನಡುವೆ ಸ್ಪರ್ಧೆ ನಡೆದು ವರ್ತಕರ ಕೈಮೇಲಾಯಿತು.

**ಟೈರೆಂಟ್ಸ್ (ನಿರಂಕುಶ ಪ್ರಭುಗಳು)**

ಶ್ರೀಮಂತರ ಪತನದೊಂದಿಗೆ ಗ್ರೀಕ್ ಚರಿತ್ರೆಯಲ್ಲಿ ರಾಜಕೀಯವಾಗಿ ಎರಡನೇ ಹಂತ ಆರಂಭವಾಯಿತು. ಇದೇ ನಿರಂಕುಶ ಪ್ರಭುಗಳ ಆಳ್ವಿಕೆಯ ಆರಂಭ. ಪ್ರಭುತ್ವಕ್ಕಾಗಿ ನಡೆಯುತ್ತಿದ್ದ ಸತತ ಹೋರಾಟದಲ್ಲಿ ಸಾಹಸಗಾರನಾದ ನಾಯಕನು ದಂಗೆ, ಪಿತೂರಿಗಳನ್ನು ನಡೆಸಿ, ಅಧಿಕಾರವನ್ನು ಕಸಿದುಕೊಳ್ಳುವ ಅವಕಾಶವಾಯಿತು. ಅಧಿಕಾರಕ್ಕೆ ಬಂದ ಅಂಥ ನಾಯಕನನ್ನು ಗ್ರೀಕರು ನಿರಂಕುಶ ಪ್ರಭು ಎಂದು ಕರೆಯುತ್ತಿದ್ದರು. ಗ್ರೀಕರ ಪ್ರಕಾರ ಟೈರೆಂಟ್ ಬಂದ ವ್ಯಕ್ತಿ ಅರ್ಥವೇ ಹೊರತು, ಕ್ರೂರಿ ಅಥವಾ ನಿರ್ದಯಿಯಾದವನು ಎಂದಲ್ಲ. ಬೇರೆ ಹೇಳುವುದಾದರೆ ಈ ಪದ ಸಮುಚ್ಛಯವು ಆಡಳಿತಗಾರನ ಸ್ವಭಾವವನ್ನು ಸೂಚಿಸುತ್ತಿರಲಿಲ್ಲ. ಕೆಲವರು ಸಮರ್ಥ ಆಡಳಿತಗಾರರಾಗಿದ್ದು ಪ್ರಜೆಗಳ ಹಿತಕ್ಕಾಗಿ ಶ್ರಮಿಸಿದರು. ಅವರಲ್ಲಿ ಇಬ್ಬರು ಪ್ರಸಿದ್ಧರಾಗಿದ್ದರು. ಅವರೆಂದರೆ ಕಾರಿಂಥನ್ ಪೆರಿಯಾಂಡರ್ (ಕ್ರಿ.ಪೂ.೬೨೫-೫೮೫) ಮತ್ತು ಅಥೆನ್ಸ್‌ನ ಪಿಸಿಸ್ಟ್ರಾಟಸ್. ನಿರಂಕುಶ ಪ್ರಭುಗಳ ಆಳ್ವಿಕೆಯು ವರ್ತಕ ಮತ್ತು ಕೈಕಸುಬು ವರ್ಗದವರಿಗೆ ಅನುಕೂಲಕರವಾಗಿತ್ತು. ಆದರೆ ಈ ಆಳ್ವಿಕೆಯು ಬಹುಕಾಲ ಉಳಿಯಲಿಲ್ಲ. ಕ್ರಿ.ಪೂ.೫೦೦ರ ಹೊತ್ತಿಗೆ ಗ್ರೀಸ್‌ನ ಎಲ್ಲೆಡೆಯಲ್ಲಿಯೂ ಈ ರೀತಿಯ ಆಳ್ವಿಕೆಯು ನಾಶ ಹೊಂದಿ ಪ್ರಜಾಪ್ರಭುತ್ವದ ಸ್ಥಾಪನೆಗೆ ಎಡೆ ಮಾಡಿಕೊಟ್ಟಿತು.

**ನಗರ ರಾಜ್ಯಗಳು**

ಗ್ರೀಕ್ ಭಾಷೆಯಲ್ಲಿ 'ಪೋಲಿಸ್ ' ಎಂದರೆ ನಗರರಾಜ್ಯ. 'ಪೋಲೀಸ್ ' ಪದದಿಂದಲೇ 'ಪೊಲಿಟಿಕ್ಸ್' ಎಂಬ ಪದ ಬಂದಿರುವುದು. ಪ್ರಾಚೀನ ಗ್ರೀಸ್‌ನಲ್ಲಿ ಹಲವು ನಗರ ರಾಜ್ಯಗಳಿದ್ದರೂ ಅಥೆನ್ಸ್ ಮತ್ತು ಸ್ಪಾರ್ಟಾಗಳು ತುಂಬಾ ಮುಖ್ಯವಾಗಿ ಕಂಡುಬರುತ್ತವೆ. ಪ್ರತಿ ನಗರ ರಾಜ್ಯದಲ್ಲೂ ಒಂದೇ ಒಂದು ನಗರವಿದ್ದು, ಆ ನಗರದ ಸುತ್ತ ಇನ್ನೂರು ಅಥವಾ ಮುನ್ನೂರು ಚದುರ ಮೈಲಿ ಕೃಷಿ ಭೂಮಿ ಇರುತ್ತಿತ್ತು. ಈ ನಗರ ರಾಜ್ಯಗಳ ಬೆಳವಣಿಗೆಯು ಒಕ್ಕೂಟ ರಾಷ್ಟ್ರದ ಸ್ಥಾಪನೆಗೆ ಆಡಚಣೆಯಾಯಿತು. ಪ್ರತಿ ರಾಜ್ಯದ ಜನರ ಚಲನವಲನಗಳು ಅವರವರ ರಾಜ್ಯಕ್ಕೆ ಸೀಮಿತವಾಗಿತ್ತು. ಅವರು ತಮ್ಮ ರಾಜ್ಯಕ್ಕೆ ನಿಷ್ಠವಾಗಿದ್ದರೇ ವಿನಃ ಸಹ ಇಡೀ ರಾಷ್ಟ್ರಕ್ಕಲ್ಲ. ಪ್ರತಿ ನಗರ ರಾಜ್ಯ ತನ್ನದೇ ಆದ ವಿಶಿಷ್ಟ ಸಾಮಾಜಿಕ, ಆರ್ಥಿಕ ಬದುಕನ್ನು ಬೆಳೆಸಿಕೊಂಡಿತ್ತು.

**ಅಥೆನ್ಸ್ ನಗರರಾಜ್ಯ**

ಕ್ರಿ.ಪೂ.೪೯೦ರ ಮ್ಯಾರಾಥಾನ್ ಕದನದಲ್ಲಿ ಪರ್ಶಿಯರನ್ನರನ್ನು ಸೋಲಿಸಿದ ನಂತರ ಅಥೆನ್ಸ್ ತುಂಬ ಮುಖ್ಯವಾದ ನಗರರಾಜ್ಯವಾಗಿ ಬೆಳೆಯಿತು. ಮೊದಲಿಗೆ ಅಲ್ಲಿ ರಾಜತ್ವ ಇತ್ತು. ನಂತರ ಶ್ರೀಮಂತ ಪ್ರಭುತ್ವ ಅಥವಾ ಕುಲೀನರ ಸರ್ಕಾರ ಸ್ಥಾಪನೆಯಾಯಿತು. ಶ್ರೀಮಂತರು (ಅರ್ಕನರು) ಒಂದು ವರ್ಷದ ಅವಧಿಗೆ ಕುಲೀನರಿಂದ ಚುನಾಯಿಸಲ್ಪಡು ತ್ತಿದ್ದರು. ಅವರ ಆಳ್ವಿಕೆಯಲ್ಲಿ ಬಡ ರೈತ ವರ್ಗದವರು ಅತೃಪ್ತರಾಗಿ ಹೊಸ ಸುಧಾರಣೆ ಗಳಿಗೆ ಒತ್ತಾಯಿಸಿದರು.

ಕ್ರಿ.ಪೂ.೬೨೪ರಲ್ಲಿ ಕಾನೂನುಗಳನ್ನು ಸೂಕ್ತೀಕರಿಸುವ ಕಾರ್ಯವನ್ನು ಡ್ರೇಕೋ ಎಂಬಾತನಿಗೆ ವಹಿಸಲಾಯಿತು. ಕ್ರಿ.ಪೂ.೬೨೧ರಲ್ಲಿ ಅವುಗಳನ್ನು ಬರೆಯಲಾಯಿತು. ಡ್ರೇಕೋನ ಸಂಹಿತೆಯು ಬಹಳ ನಿರ್ದಯವಾಗಿತ್ತು. ಆದ್ದರಿಂದ ೩೦ ವರ್ಷಗಳ ನಂತರ ಕ್ರಿ.ಪೂ.೫೯೪ರಲ್ಲಿ ಸುಧಾರಣೆಗಳನ್ನು ತರಲು ಸೋಲಾಸ್ ಎಂಬಾತನು ಆರ್ಕನ್ ಆಗಿ ಚುನಾಯಿತನಾದನು. ಆತನು ಋಣಂ ಗುಲಾಮಗಿರಿಯನ್ನು ನಿರ್ಮೂಲನಗೊಳಿಸಿದನು. ಅಥೆನ್ಸ್‌ಗೆ ಹೊಸ ಸಂವಿಧಾನವನ್ನು ಕೊಟ್ಟನು. ಕಾಯಿದೆಗಳನ್ನು ಮಾಡುವ ಮತ್ತು ಅಂಗೀಕರಿಸುವ ಕಾರ್ಯದಲ್ಲಿ ಭಾಗವಹಿಸಲು ಜನಸಾಮಾನ್ಯರಿಗೆ ಅವಕಾಶ ಕಲ್ಪಿಸಿದನು. ಆದರೆ ಸರ್ಕಾರದ ಹತೋಟಿಯು ಮಾತ್ರ ಶ್ರೀಮಂತರ ಕೈಯಲ್ಲಿಯೇ ಉಳಿಯಿತು.

ಸೋಲಾಸ್ ನಿವೃತ್ತನಾದ ಮೇಲೆ ಅರಾಜಕತೆ ಉಂಟಾಯಿತು. ನಿರಂಕುಶ ಪ್ರಭುವಾದ ಪಿಸಿಸ್ಟ್ರಾಟಿಸ್ ಅಧಿಕಾರಕ್ಕೆ ಬರಲು ಇದು ಸಹಾಯಕವಾಯಿತು. ಆತನ ಮರಣಾನಂತರ ಪುನಃ ಅರಾಜಕತೆಯುಂಟಾಯಿತು. ಈ ಅರಾಜಕತೆಯನ್ನು ಕ್ಲೈಸ್ತನೀಸನು ಕೊನೆಗಾಣಿಸಿದನು. ಗ್ರೀಕ್ ಪ್ರಜಾಪ್ರಭುತ್ವದ ಪಿತಾಮಹನೆಂದು ಗೌರವಿಸಲ್ಪಡುವ ಕ್ಲೈಸ್ತನೀಸನು ಗಮನಾರ್ಹ ವಾದ ಸುಧಾರಣೆಗಳನ್ನು ಜಾರಿಗೆ ತಂದನು. ರಾಜ್ಯವನ್ನು ಪುನರ್ ವ್ಯವಸ್ಥೆಗೊಳಿಸಿ ಅದನ್ನು ಮತ್ತಷ್ಟು ಪ್ರಜಾಸತ್ತೆಯಾಗಿಸಿದನು. ಬುಡಕಟ್ಟಿನ ಆಧಾರದ ಮೇಲೆ ರಚಿಸಲ್ಪಡುತ್ತಿದ್ದ ಸರ್ಕಾರವನ್ನು ಕೊನೆಗಾಣಿಸಿದನು. ಸಂವಿಧಾನವನ್ನು ವಿಸ್ತರಿಸಿ, ಪ್ರಜೆಗಳ ಸಭೆಯನ್ನು ಬಲಪಡಿಸಿ, ಸರದಿಯ ಪ್ರಕಾರ ಅಧಿಕಾರವನ್ನು ನೇಮಿಸಿದನು.

ಅಥೆನ್ಸ್ ಪೆರಿಕ್ಲಿಸ್ (ಕ್ರಿ.ಪೂ.೪೬೨-೪೨೯)ನ ಕಾಲದಲ್ಲಿ ಸುವರ್ಣ ಯುಗವನ್ನು ಕಂಡಿತು. ಅಥೆನ್ಸ್‌ನ ಪ್ರಸಿದ್ಧಿಯು ತನ್ನ ಪರಾಕಾಷ್ಠೆಯನ್ನು ಮುಟ್ಟಿತು. "ಅತಿ ಮೇಧಾವಿ ಯಾದ ಪ್ರಜಾತಂತ್ರ ನಾಯಕ" ಅಥವಾ 'ಅಥೆನ್ಸ್‌ನ ರಾಜಕೀಯ ಯಜಮಾನ' ಎಂಬುದಾಗಿ ಆತನನ್ನು ಕರೆಯುತ್ತಿದ್ದರು. ಆತನು ಅನೇಕ ರಾಜಕೀಯ ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತಂದನು. ಅಥೆನ್ಸ್‌ನಲ್ಲಿ ನೇರ ಪ್ರಜಾಪ್ರಭುತ್ವದ ಬೆಳವಣಿಗೆಗೆ ಆತನ ಕೊಡುಗೆ ಮಹತ್ವದ್ದಾಗಿದೆ. ಚುನಾಯಿತರಾದ ಹಿರಿಯರ ಕೂಟವು ತನ್ನ ಹೆಚ್ಚಿನ ಅಧಿಕಾರವನ್ನು ಕಳೆದುಕೊಂಡಿತು. ವರ್ಷಕ್ಕೊಮ್ಮೆ ಅದೃಷ್ಟದಿಂದ ಚುನಾಯಿಲ್ಪಡುತ್ತಿದ್ದ ೫೦೦ ಸದಸ್ಯರ ಮಂಡಳಿಯು ಆಡಳಿತವನ್ನು ನಿರ್ವಹಿಸುತ್ತಿತ್ತು. ಸಾರ್ವಜನಿಕರ ಸೇವೆಗೆ ಸಂಬಳವನ್ನು ನಿಗದಿಪಡಿಸಿದನು. ಪೆರಿಕ್ಲಿಸ್‌ನ ಕಾಲದಲ್ಲಿ ಅಥೆನ್ಸ್ ರಾಜಕೀಯವಾಗಿ ಮಾತ್ರವಲ್ಲದೇ ಸಾಹಿತ್ಯ, ಕಲೆ, ವಾಸ್ತುಶಿಲ್ಪ ಮೊದಲಾದ ಕ್ಷೇತ್ರಗಳಲ್ಲಿ ಸರ್ವೋತ್ಕೃಷ್ಟತೆಯನ್ನು ಸಾಧಿಸಿತು. ಪೆರಿಕ್ಲಿಸ್ ನಾಮಕರಣ ಮಾಡಿದಂತೆ, ಅಥೆನ್ಸ್ ಯತಾರ್ಥವಾಗಿ 'ಹೆಲಾಸ್'ನ ಪಾಠಶಾಲೆ ಆಗಿತ್ತು.

ಸಾರ್ಕಟಸ್, ಪ್ಲೇಟೋ, ಅರಿಸ್ಟಾಟಲ್ ಮೊದಲಾದ ಚಿಂತಕರು, ದಾರ್ಶನಿಕರು ಮತ್ತು ವಿಚಾರವಂತರು ಅಥೆನ್ಸ್‌ಗೆ ಸೇರಿದವರಾಗಿದ್ದರು. ಅಥೆನಿಯನ್ನರು, ಸ್ಪಾರ್ಟಾದವರಂತೆ ದೈಹಿಕ ಬಲಕ್ಕೇ ಹೆಚ್ಚಿನ ಮಹತ್ವ ಕೊಡದೇ ಚಿಂತನ-ಮಂಥನ, ವ್ಯಕ್ತಿ ಸ್ವಾತಂತ್ರ್ಯ, ಸೌಂದರ್ಯಪ್ರಜ್ಞೆ ಮೊದಲಾದವುಗಳಿಗೂ ಆದ್ಯತೆಯನ್ನು ನೀಡಿದ್ದರು. ಪೆರಿಕ್ಲಿಸ್‌ನ ಮಾತಿನಲ್ಲಿ ಹೇಳುವುದಾದರೆ "ನಾವು ಸೌಂದರ್ಯೋಪಾಸಕರಾದರೂ ಅಭಿರುಚಿಗಳಲ್ಲಿ ಸರಳರು ಮತ್ತು ಪೌರುಷವನ್ನು ಕ್ಷೀಣಿಸಲು ಬಿಡದೆ ಮನಸ್ಸನ್ನು ಸಂಸ್ಕರಿಸುವವರು."

**ಸ್ಪಾರ್ಟಾ ನಗರರಾಜ್ಯ**

ಸ್ಪಾರ್ಟಾದಲ್ಲಿ ಆಳುವವರು ಅಲ್ಪಸಂಖ್ಯಾತರಾಗಿದ್ದರು. ಇದರ ಪರಿಣಾಮವಾಗಿ ಆ ರಾಜ್ಯವು ಸೈನ್ಯಾಡಳಿತಕ್ಕೆ ಒಳಪಟ್ಟ ರಾಜ್ಯದಂತೆ ವ್ಯವಸ್ಥಿತವಾಗಿತ್ತು. ಸ್ಪಾರ್ಟನ್ನರು ಶಾರೀರಿಕ ಬೆಳವಣಿಗೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದರು. ಇವರು ಸೈನಿಕ ವಿಚಾರಗಳಿಗೇ ಹೆಚ್ಚು ಮಹತ್ವ ನೀಡಿದ್ದರಿಂದ ಅಥೆನೀಯರ ಭಾವನಾಶಕ್ತಿ ಹಾಗೂ ಮುಂದಾಳುತನವನ್ನು ಹೊಂದಿರಲಿಲ್ಲ.

ಸ್ಪಾರ್ಟಾ ರಾಜ್ಯವು ಸೈನ್ಯವನ್ನು ಅವಲಂಬಿಸಿತ್ತು. ಈ ಕಾರಣದಿಂದಾಗಿ ಅಲ್ಲಿನ ಪ್ರಜೆಗಳು ತಮ್ಮ ಏಳನೇ ವರ್ಷದಿಂದಲೇ ಕಠಿಣವಾದ ತರಬೇತಿಯನ್ನು ಪಡೆಯಬೇಕಾಗಿತ್ತು. ಈ ತರಬೇತಿಯು ೧೨ ವರ್ಷಗಳ ಅವಧಿಯದಾಗಿತ್ತು. ತರಬೇತಿಯ ನಂತರ ಅವರು ತಮ್ಮ ೬೦ನೇ ವಯಸ್ಸಿನವರೆಗೆ ಕಡ್ಡಾಯವಾಗಿ ಸೇನೆಯಲ್ಲಿ ಸೇವೆ ಸಲ್ಲಿಸಬೇಕಿತ್ತು. ಸಹನೆ, ಧೈರ್ಯ, ಶಿಸ್ತು ಮತ್ತು ಸೈನಿಕ ಸಾಮರ್ಥ್ಯ ಇವುಗಳನ್ನು ಬೆಳೆಸುವುದು ಇದರ ಗುರಿಯಾಗಿತ್ತು. ಸ್ತ್ರೀಯರೂ ಸಹ ದೈಹಿಕ ಶಿಕ್ಷಣವನ್ನು ಪಡೆಯಬೇಕಿತ್ತು. ಪುರುಷರಂತೆ ಸ್ತ್ರೀಯರೂ ಕ್ರೀಡೆಗಳಲ್ಲಿ ಹಾಗೂ ಸೈನಿಕ ವಿಚಾರಗಳಲ್ಲಿ ತರಬೇತಿ ಪಡೆಯಬೇಕಿತ್ತು. ಈ ರೀತಿಯ ಸೈನಿಕವಾದ ಸ್ಪಾರ್ಟನ್ನರನ್ನು ಗ್ರೀಸ್‌ನಲ್ಲೇ ಅತ್ಯುತ್ತಮ ಸಿಪಾಯಿಗಳನ್ನಾಗಿ ಮಾಡಿತು. ಆದರೆ ಅವರು ಮನಸ್ಸು ಹಾಗೂ ಆತ್ಮದ ಅತ್ಯುತ್ತಮ ಗುಣಗಳನ್ನು ಬೆಳೆಸಿಕೊಳ್ಳಲಾರದೇ ಹೋದರು. ಆದ್ದರಿಂದ ಗ್ರೀಕರ ಕಲೆ ಮತ್ತು ನಾಗರಿಕತೆಗೆ ಸ್ಪಾರ್ಟನ್ನರ ಕೊಡುಗೆ ಇಲ್ಲವಾಗಿದೆ.

ಸ್ಪಾರ್ಟನ್ನರ ಸರ್ಕಾರವು ರಾಜಸತ್ತೆಯಾಗಿದ್ದರೂ, ವಾಸ್ತವವಾಗಿ ಅದು ಕೆಲವರ ಪ್ರಭುತ್ವವಾಗಿತ್ತು. ಸ್ಪಾರ್ಟಾವನ್ನು ಇಬ್ಬರು ರಾಜರು ಆಳುತ್ತಿದ್ದರೂ ೨೮ ಸದಸ್ಯರನ್ನೊಳ ಗೊಂಡ ಜಿರೂಸಿಯ ಅಥವಾ ಹಿರಿಯರ ಸಭೆಯು ಶಾಸನಕ್ಕೆ ಸಂಬಂಧಿಸಿದ ವಿಚಾರಗಳನ್ನು ಚರ್ಚಿಸುತ್ತಿತ್ತು. ಅನಂತರ ಪೂರ್ಣ ಪ್ರಜಾ ಹಕ್ಕುಗಳನ್ನು ಹೊಂದಿದ್ದ ಮತ್ತು ಮೇಲು ವರ್ಗದ ಸದಸ್ಯರನ್ನೊಳಗೊಂಡ 'ಅಪೆಲ್ಲಾ' ಅಥವಾ ಜನರ ಸಭೆಗೆ ಅವುಗಳನ್ನು ಕಳುಹಿಸಲಾಗುತ್ತಿತ್ತು. ಇಮೊರೇಟ್ ಅಥವಾ ಮೇಲ್ವಿಚಾರಕರ ಮಂಡಳಿಯಲ್ಲಿ ಮುಖ್ಯ ಅಧಿಕಾರವು ಕೇಂದ್ರೀಕೃತವಾಗಿತ್ತು. ಸರ್ಕಾರದ ಆಡಳಿತದ ಮೇಲ್ವಿಚಾರಣೆಗಾಗಿ ಪ್ರಜೆಗಳಿಂದ ವರ್ಷಕ್ಕೊಮ್ಮೆ ಚುನಾಯಿತರಾದ ಐದು ಮಂದಿ 'ಇಫೋರ್ಸ್ ' ಅಥವಾ ಮೆಜಿಸ್ಟ್ರೇಟರು ಗಳಿರುತ್ತಿದ್ದರು. ಅವು ರಾಜನು ಅಂಕೆ ಮೀರದಂತೆ ನೋಡಿಕೊಳ್ಳುತ್ತಿದ್ದರು.

**ಸಮಾಜ**

ಇಲ್ಲಿ ವಿಶೇಷವಾಗಿ ಅಥೆನ್ಸ್‌ನ ಸ್ಥಿತಿಗತಿಗಳನ್ನು ಗಮನದಲ್ಲಿಟ್ಟುಕೊಂಡು ಬರೆಯಲಾಗಿದೆ ಯಾದರೂ ಅನೇಕ ಅಂಶಗಳು ಗ್ರೀಸ್‌ನ ಇತರೆಡೆಗಳಲ್ಲಿ ಸಾಮಾನ್ಯವಾಗಿದ್ದವು.

**ಶೈಶವ**

ಪ್ರತಿಯೊಬ್ಬರಿಗೂ ಮಕ್ಕಳನ್ನು ಹೊಂದಬೇಕೆಂಬ ನಿರೀಕ್ಷೆ ಇತ್ತು. ಮಕ್ಕಳಿರದವರನ್ನು ಮೂದಲಿಸಿ, ಅಣಕಿಸುವ ಪರಿಪಾಠವೂ ಇತ್ತು. ಮಕ್ಕಳಿರದವರು ದತ್ತು ಸ್ವೀಕರಿಸುವುದನ್ನು ಸಮಾಜ ಒಪ್ಪಿಕೊಂಡಿತ್ತು. ಜನಸಂಖ್ಯೆಯನ್ನು ನಿಯಂತ್ರಿಸುವ ಹಾಗೂ ಭೂಮಿಯ ಮರು ವಿಭಜನೆಯನ್ನು ತಡೆಗಟ್ಟಲು ಶಿಶುವಧೆ ಕಾಯಿದೆ ಮತ್ತು ಸಾರ್ವಜನಿಕ ಅಭಿಪ್ರಾಯ ಸಮ್ಮತಿಸಿತ್ತು. ಕುಟುಂಬ ನಿಯಂತ್ರಣ ಕ್ರಮಗಳನ್ನು ಗ್ರೀಕರು ಅನುಸರಿಸುತ್ತಿದ್ದರ ಬಗ್ಗೆ ಯಾವ ಪುರಾವೆಯೂ ದೊರಕಿಲ್ಲ. ವೃದ್ಧರಿಂದ ಹುಟ್ಟಿದ ಮತ್ತು ದುರ್ಬಲ ಮಕ್ಕಳನ್ನು ಮುಗಿಸುವಂತೆ ಪ್ಲೇಟೋ ತಿಳಿಸುತ್ತಾನೆ. ಆದರೆ, ಅರಿಸ್ಟಾಟಲ್ ಶಿಶುಹತ್ಯೆಗಿಂತ ಗರ್ಭಸ್ರಾವವನ್ನು ಅನುಮೋದಿಸುತ್ತಾನೆ. ವೈದ್ಯಕೀಯ ಪಿತಾಮಹ ಹಿಪೊಕ್ರೆಟ್ಸ್‌ನ ವೈದ್ಯಕೀಯ ನೀತಿ ಗರ್ಭಸ್ರಾವವನ್ನು ನಿಷೇಧಿಸುತ್ತದೆ. ಇಷ್ಟಾದರೂ ನಿಷ್ಣಾತ ಗ್ರೀಕ್ ದಾದಿಯರು ಈ ಕೆಲಸವನ್ನು ಮಾಡುತ್ತಿದ್ದರು.

ಸಾಮಾನ್ಯವಾಗಿ ಹತ್ತನೇ ದಿನ ಅಥವಾ ಅದಕ್ಕೆ ಮೊದಲು ಮಗುವನ್ನು ಆಧರಿಸಿ ಕುಟುಂಬದ ಸದಸ್ಯನನ್ನಾಗಿ ಸ್ವೀಕರಿಸಲಾಗುತ್ತಿತ್ತು. ಆಗ ಕೆಲವು ಧಾರ್ಮಿಕ ವಿಧಿಗಳನ್ನು ಆಚರಿಸುತ್ತಿದ್ದರು. ಜೊತೆಗೆ ಮಗುವಿಗೆ ಉಡುಗೊರೆಗಳನ್ನು ಕೊಡುತ್ತಿದ್ದರು. ಮಗುವಿಗೆ ನಾಮಕರಣ

ಮಾಡುತ್ತಿದ್ದರು. ಗ್ರೀಕರಲ್ಲಿ ಸಾಮಾನ್ಯವಾಗಿ ಒಂದೇ ಹೆಸರಿರುತ್ತಿದ್ದರೂ, ಮನೆಯಲ್ಲಿ ಹುಟ್ಟಿದ ಹಿರಿಯ ಗಂಡು ಮಗುವಿಗೆ ಅಜ್ಜನ ಹೆಸರನ್ನು (ತಂದೆಯ ತಂದೆ) ಇಡುವ ಕ್ರಮ ಇತ್ತು. ಮಗುವನ್ನು ಪ್ರೀತ್ಯಾದರಗಳಿಂದ ಪಾಲಿಸುತ್ತಿದ್ದರು. ಮಕ್ಕಳಿಗೆ ಅನೇಕ ಆಟಿಕೆಗಳನ್ನು ಕೊಟ್ಟು ರಂಜಿಸುತ್ತಿದ್ದರು. ಆದರೆ ಗುಲಾಮರಿಗೆ ಮಾತ್ರ ತಮ್ಮ ಮಕ್ಕಳನ್ನು ಸಾಕುವ ಅಧಿಕಾರವಿರಲಿಲ್ಲ.

**ಅತಿಥಿ ಸತ್ಕಾರ**

ಗ್ರೀಕರಲ್ಲಿ ಅತಿಥಿ ಸತ್ಕಾರಕ್ಕೆ ಮಹತ್ವ ಕೊಡಲಾಗಿತ್ತು. ಆಗಂತುಕರನ್ನು ಆಧರಿಸಲಾಗು ತ್ತಿತ್ತು. ಪರಿಚಯದವರಿಂದ, ಸ್ನೇಹಿತರಿಂದ ಪತ್ರ ತಂದವರನ್ನು ಚೆನ್ನಾಗಿ ನೋಡಿಕೊಳ್ಳ ಲಾಗುತ್ತಿತ್ತು. ಆಹ್ವಾನದ ಮೇಲೆ ಬಂದ ಅತಿಥಿಗಳಿಗೆ ಹೆಚ್ಚಿನ ಮಾನ್ಯತೆ ಮತ್ತು ಸವಲತ್ತು ಗಳು ದೊರೆಯುತ್ತಿದ್ದವು. ಅಂತಹ ಅತಿಥಿಗಳು ಹೊರಟು ಹೋಗುವಾಗ ನೆನಪಿನ ಕಾಣಿಕೆಗಳನ್ನು ನೀಡುತ್ತಿದ್ದರು.

**ವಿದ್ಯಾಭ್ಯಾಸ**

'ವಿದ್ಯೆ ಇರದವರು ಸತ್ತಂತೆ' ಎಂಬ ನಂಬಿಕೆ ಗ್ರೀಕ್ ಚಿಂತಕರಲ್ಲಿತ್ತು. ಸ್ವತಂತ್ರ ಗ್ರೀಕರು ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸವನ್ನು ನೀಡುತ್ತಿದ್ದರು. ಪ್ಲೆಟೋ ಸರ್ಕಾರಿ ಶಾಲೆಗಳನ್ನು ಪ್ರತಿಪಾದಿಸಿದರೂ, ಖಾಸಗೀ ಶಾಲೆಗಳೇ ಹೆಚ್ಚು ಅಸ್ತಿತ್ವದಲ್ಲಿದ್ದವು. ಪ್ರಾಯಶಃ ಇದಕ್ಕೆ ಕಾರಣ ಶಿಕ್ಷಣ ಕ್ಷೇತ್ರದಲ್ಲೂ ಸ್ಪರ್ಧೆ ಅತ್ಯುತ್ತಮ ಫಲಿತಾಂಶವನ್ನು ನೀಡುತ್ತದೆಂಬ ಕಲ್ಪನೆ ಅಥೆನಿಯರದಾಗಿತ್ತು.

ವೃತ್ತಿಪರ ಶಿಕ್ಷಕರು ನಡೆಸುತ್ತಿದ್ದ ಶಾಲೆಗಳಿಗೆ ಸ್ವತಂತ್ರವಾಗಿ ಜನಿಸಿದ ಗಂಡು ಮಕ್ಕಳನ್ನು ಅವರ ೬ನೆಯ ವರ್ಷದಲ್ಲಿ ಕಳುಹಿಸಿ ವಿದ್ಯಾರಂಭ ಮಾಡುತ್ತಿದ್ದರು. ಸ್ಕೂಲ್ ಗಳಲ್ಲಿ ಡೆಸ್ಕಗಳಿರುತ್ತಿರಲಿಲ್ಲ. ಕೇವಲ ಬೆಂಚುಗಳು ಮಾತ್ರ ಇರುತ್ತಿದ್ದವು. ಶಿಕ್ಷಕರು ಆತ್ಮೀಯತೆಯಿಂದ ಎಲ್ಲಾ ವಿಷಯಗಳನ್ನೂ ಬೋಧಿಸುತ್ತಿದ್ದರು. ಸಾಮಾನ್ಯವಾಗಿ ಕಲಿಕೆ ಯಲ್ಲಿ ಓದುವುದು, ಬರೆಯುವುದು, ಸಂಗೀತ, ಜಿಮ್ನಾಸ್ಟಿಕ್ಸ್, ಚಿತ್ರ ಬರೆಯುವುದು ಇತ್ಯಾದಿ ವಿಷಯಗಳಿರುತ್ತಿದ್ದವು. ಈಜಲು ಬಾರದ, ಕುಸ್ತಿ ಕಲಿಯದ, ಬಿಲ್ಲಿಗೆ ಹೆದೆಯೇರಿಸಿ ಬಾಣಬಿಡಲು ಬಾರದ ಯಾವುದೇ ವ್ಯಕ್ತಿಯನ್ನು ವಿದ್ಯಾವಂತನೆಂದು ಕರೆಯುತ್ತಿರಲಿಲ್ಲ.

ಹೆಣ್ಣು ಮಕ್ಕಳ ವಿದ್ಯಾಭ್ಯಾಸ ಮನೆಯಲ್ಲೇ ನಡೆಯುತ್ತಿತ್ತು. 'ಅವರಿಗೆ' 'ಗೃಹವಿಜ್ಞಾನ' ವನ್ನು ಕಲಿಸುತ್ತಿದ್ದರು. ಆದರೆ, ಸ್ಪಾರ್ಟಾದಲ್ಲಿ ಮಾತ್ರ ಪರಿಸ್ಥಿತಿ ಬೇರೆಯೇ ಆಗಿತ್ತು. ಸಾಮಾನ್ಯವಾಗಿ ತಾಯಂದಿರೇ ಅಥವಾ ಕೆಲವೊಮ್ಮೆ ದಾದಿಯರು ಹೆಣ್ಣು ಮಕ್ಕಳಿಗೆ ಓದುವುದು, ಬರೆಯುವುದು, ನೂಲುವುದು, ನೇಯುವುದು, ಕಸೂತಿ ಮಾಡುವುದು, ಸಂಗೀತಾಭ್ಯಾಸ, ವಾದ್ಯಗಳನ್ನು ನುಡಿಸುವುದು, ಅಡಿಗೆ ಮಾಡುವುದು ಇತ್ಯಾದಿಗಳನ್ನು ಕಲಿಸುತ್ತಿದ್ದರು.

ಯುವಕರಿಗೆ ಉನ್ನತ ವಿದ್ಯಾಭ್ಯಾಸವನ್ನು ವೃತ್ತಿಪರ ವಾಗ್ಮಿಗಳು ಮತ್ತು ಸೋಫಿಸ್ಟ್ ಗಳು ನೀಡುತ್ತಿದ್ದರು. ಇಲ್ಲಿ ಭಾಷಣಕಲೆ, ವಿಜ್ಞಾನ, ತತ್ವಜ್ಞಾನ ಮತ್ತು ಇತಿಹಾಸವನ್ನು ಮುಖ್ಯವಾಗಿ ಬೋಧಿಸುತ್ತಿದ್ದರು. ಹದಿನಾರು ವರ್ಷದ ಪ್ರಾಯದಿಂದ ಯುವಕರಿಗೆ ಹೆಚ್ಚಿನ ದೈಹಿಕ ವಿದ್ಯಾಭ್ಯಾಸವನ್ನು ನೀಡಲಾಗುತ್ತಿತ್ತು.

ಒಟ್ಟಾರೆ ಬೋಧನೆ - ಚಿಂತನೆ, ಸಂಯಮ, ಶಿಸ್ತು, ಆತ್ಮ ಗೌರವ, ದೇಶಪ್ರೇಮ, ಪ್ರಧಾನವಾಗಿದ್ದು ಆ ವಿದ್ಯಾಭ್ಯಾಸವನ್ನು ಪಡೆಯುತ್ತಿದ್ದ ಯುವಕರು ತಮ್ಮ ೨೧ನೇ ವಯಸ್ಸಿಗೆ ರಾಜ್ಯದ ಪೌರರಾಗುತ್ತಿದ್ದರು.

**ಗ್ರೀಕರ ದೈಹಿಕ ನಿಲುವು**

ಕ್ರಿ.ಪೂ.೫ನೇ ಶತಮಾನದಲ್ಲಿ ಗ್ರೀಕರು ಮಧ್ಯ ಎತ್ತರದ ಗಡ್ಡಧಾರಿಗಳಾಗಿದ್ದರು. ಎಲ್ಲರೂ ಸರ್ವಾಂಗ ಸುಂದರರೆಂದು ಹೇಳಲು ಬರುವುದಿಲ್ಲ. ಗ್ರೀಕರು ಸಾಮಾನ್ಯವಾಗಿ ಕಪ್ಪು ಕೂದಲಿನವರಾಗಿದ್ದು ಕೆಲವು ವರ್ಣೀಯರಾಗಿದ್ದರು. ಆದರೂ ಕೆಲವು ಕೆಂಗೂದಲಿ ನವರು ಇರುತ್ತಿದ್ದರು. ಬಿಳಿಕೂದಲಿಗೆ ಬಣ್ಣ ಹಚ್ಚಿ ಕಪ್ಪಾಗಿಸುವ ಅಥವಾ ಕೆಂಚಗಾಗಿಸುವ ಕ್ರಮ ಹಲವು ಗ್ರೀಕರಲ್ಲಿ ಇತ್ತು. ಇದರ ಉದ್ದೇಶ ತಮ್ಮ

ವಯಸ್ಸನ್ನು ಮುಚ್ಚಿಕೊಳ್ಳುವುದೇ ಆಗಿತ್ತು. ಕೂದಲಿನ ರಕ್ಷಣೆಗಾಗಿ ಮತ್ತು ಬೆಳವಣಿಗೆಗಾಗಿ ಸ್ತ್ರೀ-ಪುರುಷರು ಕೂದಲಿಗೆ ಎಣ್ಣೆ ಸವರುತ್ತಿದ್ದರು. ಇಂಥ ಎಣ್ಣೆಗೆ ಸುಗಂಧ ದ್ರವ್ಯಗಳನ್ನು ಬೆರೆಸುತ್ತಿದ್ದರು. ಕ್ರಿ.ಪೂ. ೬ನೇ ಶತಮಾನದಲ್ಲೂ ಸ್ತ್ರೀ-ಪುರುಷರು ತಲೆಗೂದಲನ್ನು ಉದ್ದ ಬೆಳೆಸಿ ಹಿಂದುಗಡೆ ಕಟ್ಟುತ್ತಿದ್ದರು. ಸ್ತ್ರೀಯರು ಕೂದಲನ್ನು ಕಟ್ಟಲು ಟೇಪ್‌ಗಳನ್ನು ಬಳಸಿ ತಮ್ಮ ಹಣೆಯನ್ನು ಒಡವೆಗಳಿಂದ ಸಿಂಗರಿಸುತ್ತಿದ್ದರು. ವ್ಯಾರಥಾನ್ ಕದನದ ನಂತರ ಪುರುಷರು ತಮ್ಮ ಉದ್ದ ಕೂದಲನ್ನು ಕತ್ತರಿಸಲು ಪ್ರಾರಂಭಿಸಿದರು. ಅಲೆಗ್ಸಾಂಡರ್‌ನ ತರುವಾಯ ಗಡ್ಡ-ಮೀಸೆಗಳನ್ನು ಬೋಳಿಸುವುದು ರೂಢಿಗೆ ಬಂದಿತು. ಯಾವುದೇ ಗ್ರೀಕ್ ಗಡ್ಡ-ಮೀಸೆ ಯನ್ನು ಹೊಂದಿರುತ್ತಿದ್ದ ಅಥವಾ ಎರಡನ್ನೂ ಬೋಳಿಸಿರುತ್ತಿದ್ದ, ಕೇವಲ ಮೀಸೆಯನ್ನು ಬಿಡುವ ಕ್ರಮ ಗ್ರೀಕರಲ್ಲಿರಲಿಲ್ಲ. ಗಡ್ಡವಿದ್ದಲ್ಲಿ ಅಚ್ಚುಕಟ್ಟಾಗಿ ಟ್ರಿಮ್ ಮಾಡಿರುತ್ತಿದ್ದರು.

ಸ್ಥಿತವಂತ ಸ್ತ್ರೀಯರು ಹಲವಾರು ಕನ್ನಡಿಗಳು, ಹೇರಪಿನ್‌ಗಳು, ನೇಪ್ಪಿಪಿನ್‌ಗಳು, ಬಾಚಣಿಗೆಗಳು, ಸುಗಂಧದ ಕರಂಡಕಗಳು ಮತ್ತು ಲೇಪನದ ಕ್ರೀಮ್‌ಗಳ ಭರಣಿಗಳನ್ನು ಹೊಂದಿರುತ್ತಿದ್ದರು. ತುಟಿಗಳಿಗೆ ಮತ್ತು ಕಪೋಲಗಳಿಗೆ ಬಣ್ಣ ಹಚ್ಚಿ ರಂಗು ಬರಿಸುತ್ತಿದ್ದರು. ಹುಬ್ಬುಗಳನ್ನು ತೀಡಿ ತಿದ್ದಿ ಕಣ್ ಕೂದಲನ್ನು ಇನ್ನೂ ಕಪ್ಪಾಗಿಸುವ ಸೌಂದರ್ಯ ಪ್ರಜ್ಞೆ ಅವರಲ್ಲಿತ್ತು. ಹೆಂಗಸರು ಕೈಕಡಗ, ಕಂಠಾಭರಣ, ಕಿವಿಯುಂಗುರ, ಸರ ಮತ್ತು ಬ್ರೂಚಸ್ ಗಳನ್ನು ಒಡವೆಗಳಾಗಿ ಧರಿಸುತ್ತಿದ್ದರೆ, ಗಂಡಸರು ಕನಿಷ್ಟ ಒಂದು ಉಂಗುರವನ್ನಾದರೂ ಧರಿಸುತ್ತಿದ್ದರು. ಕುಲೀನರು ಮಾತ್ರ ದಿನಂಪ್ರತಿ ಒಂದೆರಡು ಬಾರಿ ಸ್ನಾನ ಮಾಡುತ್ತಿದ್ದರು. ಬಟ್ಟೆಗಳನ್ನು ಹೊಲಿಯದೆ ಒಂದನ್ನುಟ್ಟು ಮತ್ತೊಂದನ್ನು ಹೊದೆಯುತ್ತಿದ್ದರು. ನಗರದಿಂದ ನಗರಕ್ಕೆ ಈ ವಿಚಾರದಲ್ಲಿ ಸ್ವಲ್ಪ ವ್ಯತ್ಯಾಸವಿದ್ದರೂ ಇದೇ ಕ್ರಮ ಅವ್ಯಾಹತವಾಗಿ ಮುಂದುವರೆದಿತ್ತು.

**ವಿವಾಹ**

ಗ್ರೀಕರಲ್ಲಿ ವಿವಾಹ ಪದ್ಧತಿ ಇತ್ತು. ಪ್ರೇಮಿಸಿ ವಿವಾಹವಾಗುವ ಕ್ರಮ ಇದ್ದರೂ, ಸರ್ವೆಸಾಮಾನ್ಯ ಹಿರಿಯರು ನೋಡಿ ವಿವಾಹ ಮಾಡುತ್ತಿದ್ದುದೇ ಅಧಿಕವಾಗಿತ್ತು. ವಿವಾಹಕ್ಕೆ ಮೊದಲು ನಿಶ್ಚಿತಾರ್ಥ ನಡೆಯುತ್ತಿತ್ತು. ನಿಶ್ಚಿತಾರ್ಥ ಇಲ್ಲದೆ ವಿವಾಹ ಸಿಂಧು ವಾಗುತ್ತಿರಲಿಲ್ಲ. ಗ್ರೀಕರಲ್ಲಿ ವರದಕ್ಷಿಣೆ ನೀಡುವ ಕ್ರಮವಿತ್ತು. ಇದು ಕನ್ಯಾಪಿತೃಗಳ ಶಕ್ತಿಯನ್ನು ಅವಲಂಬಿಸಿರುತ್ತಿತ್ತು. ವಿವಾಹದ ಸಂದರ್ಭದಲ್ಲಿ ಹಲವು ವಿಧಿಗಳನ್ನು ಆಚರಿಸಿ, ಕೊನೆಗೆ ವಧುವನ್ನು ವರನ ಮನೆಗೆ ಕರೆದುಕೊಂಡು ಹೋಗಿ ಕೆಲವು ಆಚರಣೆ ಗಳೊಂದಿಗೆ ಮನೆ ತುಂಬಿಸಿಕೊಳ್ಳಲಾಗುತ್ತಿತ್ತು.

ವಿವಾಹವಾದ ಪತ್ನಿಯೇ ಅಲ್ಲದೇ ಉಪಪತ್ನಿಯರೂ ಇರುತ್ತಿದ್ದರು. ಸಲ್ಲಾಪಗಳಿಗಾಗಿ ಆಸ್ಥಾನದ ಸ್ತ್ರೀಯರನ್ನು ಬಳಸುತ್ತಿದ್ದರು. ಉಪಪತ್ನಿಯರು ಆಮೋದ-ಪ್ರಮೋದಗಳಿಗಾಗಿದ್ದು, ಉತ್ತರಾಧಿಕಾರಿಯನ್ನು ಹೆತ್ತುಕೊಟ್ಟು ಮನೆಗಳನ್ನು ನೋಡಿಕೊಳ್ಳಲು ಪತ್ನಿಯ ಅವಶ್ಯಕತೆ ಇತ್ತು. ವಿದ್ಯಾವಂತ ಸ್ತ್ರೀಯರು ಅಪರೂಪವಾಗಿದ್ದರಿಂದ ಪತಿ-ಪತ್ನಿಯರ ನಡುವೆ ಬೌದ್ಧಿಕ ಕಂದಕವೇರ್ಪಟ್ಟು ಪುರುಷರು ಇತರ ಸ್ತ್ರೀಯರ ಒಡನಾಟವನ್ನು ಬಯಸುತ್ತಿದ್ದರು. ಪುರುಷರು ಸುಮಾರು ೩೦ರ ವಯಸ್ಸಿನಲ್ಲಿ ವಿವಾಹವಾದರೆ, ಯುವತಿ ಯರಿಗೆ ೧೫ ವರ್ಷದ ಒಳಗೆ ವಿವಾಹ ಮಾಡುತ್ತಿದ್ದರು. ಸ್ತ್ರೀಯ ಯೌವನ ಬೇಗ ಕುಂದುವುದರಿಂದ, ವಿವಾಹದಲ್ಲಿ ಸ್ತ್ರೀ-ಪುರುಷರ ವಯಸ್ಸಿನಲ್ಲಿ ಸಾಕಷ್ಟು ಅಂತರವಿರುತ್ತಿತ್ತು. ವಿವಾಹ ಪೂರ್ವ ಲೈಂಗಿಕ ಸಂಬಂಧಗಳನ್ನು ಪ್ರಶ್ನಿಸುತ್ತಿರಲಿಲ್ಲ. ವೃದ್ಧ ಪುರುಷರ ಯುವ ಪತ್ನಿಯರೊಂದಿಗೆ ಪರಪುರುಷರು ಹಲವೊಮ್ಮೆ ಸಲಿಗೆಯಿಂದ ಇರುತ್ತಿದ್ದರು. ವಿವಾಹವಾಗದವರನ್ನು, ವಿವಾಹವನ್ನು ವಿಳಂಬ ಮಾಡಿದವರನ್ನು ಮತ್ತು ಮಕ್ಕಳಾಗದವರನ್ನು ಸಾರ್ವಜನಿಕವಾಗಿ ಅಣಕಿಸಿ ಹಂಗಿಸಲಾಗುತ್ತಿತ್ತು. ಗ್ರೀಕ್ ಸಮಾಜದಲ್ಲಿ ವಿವಾಹ ವಿಚ್ಛೇದನವಿದ್ದು ಅದು ಪುರುಷರಿಗೆ ಸುಲಭವಾಗಿತ್ತು. ಕಾರಣವನ್ನೆ ನೀಡದೆ ಪತಿ ತನ್ನ ಪತ್ನಿಯನ್ನು ವಿಚ್ಛೇದಿಸಬಹುದಾಗಿತ್ತು. ಸಾಮಾನ್ಯವಾಗಿ ಬಂಜೆತನ ವಿಚ್ಛೇದನಕ್ಕೆ ಕಾರಣ ವಾಗಿರುತ್ತಿತ್ತು. ಏಕೆಂದರೆ ವಿವಾಹದ ಉದ್ದೇಶವೇ ಸಂತಾನ ಪಡೆಯುವುದಾಗಿತ್ತು. ಪ್ರಾಚೀನ ಭಾರತದಲ್ಲಿದ್ದಂತೆ ಗ್ರೀಕರಲ್ಲಿಯೂ ನಿಯೋಗ ಪದ್ಧತಿ ಇತ್ತು. ಗಂಡನು ನಿರ್ವೀರ್ಯನಾದರೆ ಸಂಬಂಧಿಯಿಂದ ತನ್ನ ಪತ್ನಿಯಲ್ಲಿ ಮಗುವನ್ನು ಪಡೆಯಬಹುದಾಗಿತ್ತು. ಇದಕ್ಕೆ ಸಾರ್ವಜನಿಕ ಅಭಿಪ್ರಾಯದ ಬೆಂಬಲವೂ ಕಾನೂನಿನ ಮನ್ನಣೆಯೂ ಇದ್ದಿತು. ಹಾಗೆ ಹುಟ್ಟಿದ ಮಗನು ನಿರ್ವೀರ್ಯ ಗಂಡಸಿಗೆ (ತಂದೆ) ಮಗನ ಸ್ಥಾನದಲ್ಲಿ ಮಾಡ ಬೇಕಾದ ಧಾರ್ಮಿಕ ವಿಧಿಗಳನ್ನು, ಪಿತೃಕಾರ್ಯವನ್ನು ಮಾಡಬೇಕಾಗಿದ್ದಿತು. ಪತಿಯಿಂದ ಕ್ರೌರ್ಯ ಮತ್ತು ಸವತಿಯರು ಹೆಚ್ಚಿದರೆ ಪತ್ನಿಯೂ ಸಹ ಪತಿಯಿಂದ ವಿವಾಹ ವಿಚ್ಛೇದನವನ್ನು ಪಡೆಯಬಹುದಿತ್ತು.

ಗ್ರೀಕ್ ಸಮಾಜದಲ್ಲಿ ಸಲಿಂಗರತಿ ಇತ್ತು. ಸಲಿಂಗ ಕಾಮಿಗಳಿಂದ ಆಕರ್ಷಿತರಾದ ಪೌರರು ಅಥೆನ್ಸ್‌ನಲ್ಲಿ ತಮ್ಮ ಮತದಾನದ ಹಕ್ಕನ್ನು ಕಾಯಿದೆ ಪ್ರಕಾರ ಕಳೆದುಕೊಳ್ಳುತ್ತಿದ್ದರು. ಸಲಿಂಗ ಕಾಮಿಗಳನ್ನು ಸಾರ್ವಜನಿಕರು ಗೇಲಿ ಮಾಡುವುದರ ಮೂಲಕ ಸಹಿಸಿಕೊಳ್ಳುತ್ತಿದ್ದರು. ಆದರೆ ಕ್ರೀಟ್ ಮತ್ತು ಸ್ಪಾರ್ಟಾಗಳಲ್ಲಿ ಸಲಿಂಗರತಿಯ ಮೇಲೆ ಯಾವುದೇ ನಿರ್ಬಂಧ ಇರಲಿಲ್ಲ. ಸೂಳೆಗಾರಿಕೆ ಮತ್ತು ಮದ್ಯಪಾನದಂಥ ಸಾಮಾಜಿಕ ಪಿಡುಗುಗಳು ಗ್ರೀಕ್ ಸಮಾಜವನ್ನು ಭಾದಿಸಿದ್ದವು.

**ಮಹಿಳೆಯರು**

ಹೆರಡೋಟಸ್‌ನ ಬರವಣಿಗೆಯಲ್ಲಿ ಸ್ತ್ರೀ ಸಂಬಂಧಿ ವಿಚಾರಗಳು ಹೆಚ್ಚಾಗಿ ಕಂಡು ಬರುತ್ತವೆ. ಆದರೆ ಥುಸಿಡೈಡಿಸ್‌ನ ಬರವಣಿಗೆಗಳಲ್ಲಿ ಆಕೆಯ ವಿಚಾರ ವಿರಳ. ವಿಲ್ ಡ್ಯೂರೆಂಟರು ಅಭಿಪ್ರಾಯ ಪಡುವಂತೆ “ಗ್ರೀಕ್ ಸಾಹಿತ್ಯದಲ್ಲೆಲ್ಲಾ ಸ್ತ್ರೀಯರು ಮಾಡುವ ತಪ್ಪುಗಳ ಬಗ್ಗೆ ಪದೇ ಪದೇ ಉಲ್ಲೇಖಗಳಿವೆ.” ಉದಾರಿ ಪ್ಲೂಟಾರ್ಕನೂ ಸಹ ಥೂಸಿಡೈಡಿಸ್‌ನನ್ನು ಅನುಕರಿಸುತ್ತಾ ಕೊನೆಗೆ “ಒಬ್ಬಳು ಸಭ್ಯ ಸ್ತ್ರೀ ಹೇಗೆ ಮನೆಯೊಳಗೇ ಇರಬೇಕೋ (ನಾಲ್ಕು ಗೋಡೆಗಳ ನಡುವೆ) ಹಾಗೆಯೇ ಅವಳ ಹೆಸರೂ ಸಹ” ಎಂದು ಮುಗಿಸುತ್ತಾನೆ. ಇದು ಅಥೆನ್ಸ್‌ನಲ್ಲಿದ್ದ ಸ್ಥಿತಿಯಾದರೆ, ಡೋರಿಯನ್ನರಲ್ಲಿ ಮತ್ತು ಸ್ಪಾರ್ಟನ್ನರಲಿ ಈ ಸ್ಥಿತಿ ಇರಲಿಲ್ಲ. ತಾಯಿಯ ಮುಖೇನ ಬರುತ್ತಿದ್ದ ಆಸ್ತಿ (ತಾಯಿ ಕಡೆಯಿಂದ) ನಿಂತ ನಂತರ ಮತ್ತು ಬದುಕನ್ನು ವ್ಯಾಪಾರೀ ಧೋರಣೆಯಿಂದ ನೋಡುವ ದೃಷ್ಟಿ ಬೆಳೆದು, ಸ್ತ್ರೀಯರನ್ನು ಉಪಯುಕ್ತತೆಯ ದೃಷ್ಟಿಯಿಂದ ಪುರುಷರು ಕಾಣುವಂತಾಗಿ, ಕೊನೆಗೆ ಸ್ತ್ರೀಯರನ್ನು ಗೃಹಕೃತ್ಯಕ್ಕೆ ಮಾತ್ರ ಅಥೆನ್ಸ್‌ನಲ್ಲಿ ಸೀಮಿತಗೊಳಿಸಿರುವಂತೆ ಕಾಣುತ್ತದೆ. ಪೌರ್ವಾತ್ಯ ಸ್ವರೂಪದ ವಿವಾಹವನ್ನು ಅನುಸರಿಸಿದ ಸಂದರ್ಭದಲ್ಲಿ ವಿವಾಹ ಕಾಲದಲ್ಲಿ ಗ್ರೀಕರೂ ಪರದಾ ಪದ್ಧತಿಯನ್ನು (ಅವಕುಂಠಣ) ಅಳವಡಿಸಿಕೊಳ್ಳುತ್ತಿದ್ದರು. ವಿವಾಹದ ನಂತರ ವಧು ತನ್ನವರನ್ನು ತೊರೆದು, ಬೇರೆ ವಾತಾವರಣಕ್ಕೆ ಹೊಂದಿಕೊಂಡು ಚಾಕರಿ ಮಾಡು ವುದರ ಜೊತೆಗೆ ಇತರರ ದೇವತೆಗಳನ್ನು ಪೂಜಿಸಬೇಕಾಗುತ್ತಿತ್ತು. “ಏನೇ ಆದರೂ ಅಥೆನ್ಸ್‌ನ ಸಾಮಾನ್ಯ ಪುರುಷ ತನ್ನ ಪತ್ನಿಯನ್ನು ಪ್ರೀತಿಸುತ್ತಾನೆ. ಈ ವಿಚಾರ ವನ್ನು ಅವನು ಮುಚ್ಚಿಡುವುದೂ ಇಲ್ಲ.” ಒಟ್ಟಾರೆ ಸಮಾಜದಲ್ಲಿ ಸ್ತ್ರೀಯರನ್ನು ಗೌರವ ಭಾವದಿಂದ ನೋಡಲಾಗುತ್ತಿತ್ತು.

**ವೃದ್ಧಾಪ್ಯ**

ಜೀವನ ಪ್ರೇಮಿಗಳಾಗಿದ್ದ ಗ್ರೀಕರು ವೃದ್ಧಾಪ್ಯಕ್ಕೆ ಅಂಜಿ ಖಿನ್ನರಾಗುತ್ತಿದ್ದರು. ಗ್ರೀಕರ ಇತಿಹಾಸದಲ್ಲಿ ವೃದ್ಧರ ಬಗ್ಗೆ ಇತರರಿಗಿದ್ದ ಸ್ವಾರ್ಥದ ಅನಾದರಣೆಯ ಬಗ್ಗೆ ಉಲ್ಲೇಖಗಳಿವೆ. ಸತ್ತ ವ್ಯಕ್ತಿಯನ್ನು ಸುಡುವ ಅಥವಾ ಹೂಳುವ ಕ್ರಮ ಗ್ರೀಕರಲ್ಲಿತ್ತು. ಹಾಗೆ ಮಾಡದಿದ್ದರೆ ಸತ್ತ ವ್ಯಕ್ತಿಯ ಆತ್ಮ ಅಶಾಂತಿಯಿಂದ ಅರೆದು ಸಂಬಂಧಪಟ್ಟವರ ಮೇಲೆ ಸೇಡು ತೀರಿಸಿಕೊಳ್ಳುತ್ತದೆ ಎಂಬ ನಂಬಿಕೆ ಗ್ರೀಕರಲ್ಲಿತ್ತು. ಅಥವಾ ಸತ್ತ ವ್ಯಕ್ತಿ ಭೂತ-ಪ್ರೇತವಾಗಿ ಬಂದು ರೋಗ ರುಜಿನ, ಕೇಡನ್ನು ತಂದು ಸಸ್ಯ ಸಂಕುಲಗಳನ್ನು ನಾಶ ಮಾಡಬಹುದೆಂಬ ನಂಬಿಕೆಯೂ ಇತ್ತು. ಸತ್ತ ವ್ಯಕ್ತಿಯ ಶವಕ್ಕೆ ಸ್ನಾನ ಮಾಡಿಸಿ, ಸುಗಂಧ ಲೇಪಿಸಿ ಹೂಗಳಿಂದ ಸಿಂಗರಿಸಿ, ಕುಟುಂಬದ ಯೋಗ್ಯತಾನುಸಾರ ಸಾಧ್ಯವಾಗುವ ಉತ್ಕೃಷ್ಟ ಬಟ್ಟೆಯನ್ನು ಹೊದಿಸಿ, ಮಣ್ಣಿನ ಮಡಕೆ ಅಥವಾ ಮರದ ಶವಪೆಟ್ಟಿಗೆಯಲ್ಲಿಟ್ಟು, ರಸ್ತೆಯಲ್ಲಿ ಮೆರವಣಿಗೆಯಲ್ಲಿ ತರುವಾಗ, ಕಪ್ಪು ಬಟ್ಟೆಗಳನ್ನು ಉಟ್ಟು ಶೋಕಿಸುತ್ತಿದ್ದರು. ಸ್ತ್ರೀಯರು ಎದೆ-ಬಾಯಿಗಳನ್ನು ಬಡಿದುಕೊಂಡು ರೋದಿಸುತ್ತಿದ್ದರು. ಶವಯಾತ್ರೆಯ ಸಂದರ್ಭದಲ್ಲಿ ಅಳುವ ವೃತ್ತಿ ಪರರನ್ನು ಹಣ ಕೊಟ್ಟು ಕರೆಸುವ ಕ್ರಮವೂ ಇತ್ತು. ಶೋಕಿಸುವವರು ಸಮಾಧಿಯ ಮೇಲೆ ಹೂಗುಚ್ಛಗಳನ್ನಿಟ್ಟು ಗೌರವವನ್ನು ಸೂಚಿಸುತ್ತಿದ್ದರು. ಕೊನೆಯಲ್ಲಿ ಎಲ್ಲರೂ ಸಂಸ್ಕಾರ ಭೋಜನಕ್ಕೆ ತೆರಳುತ್ತಿದ್ದರು.

**ಗ್ರೀಕರ ಧರ್ಮ**

ಮೊದಲ ನೋಟಕ್ಕೆ ಗ್ರೀಕ್ ಧರ್ಮ ನೈತಿಕತೆಗೆ ಬಹುಮುಖ್ಯ ಪ್ರಭಾವವಾಗಿದ್ದಂತೆ ತೋರುವುದಿಲ್ಲ. ಅದರ ಧರ್ಮ ಅದರ ಮೂಲದಲ್ಲಿ ಒಂದು ‘ಮ್ಯಾಜಿಕ್’ ಆಗಿ ಕಾಣು ತ್ತದೆಯೇ ಹೊರತು ನೀತಿಯಾಗಿ ಅಲ್ಲ. ಕೊನೆಯವರೆಗೂ ಗ್ರೀಕ್ ಧರ್ಮ ಕರ್ಮತಂತ್ರಗಳ ಕರಾರುವಕ್ಕಾದ ಆಚರಣೆಯಾಗಿ ಕಾಣುತ್ತದೆಯೇ ವಿನಃ ಶೀಲಕ್ಕೆ ಹೆಚ್ಚಿನ ಮಹತ್ವಕೊಟ್ಟಂತೆ ತೋರುವುದಿಲ್ಲ. ಹೇಳಬೇಕೆಂದರೆ ಕೆಲವು ದೇವತೆಗಳು ಒಲಂಪಸ್ ಮೇಲೆ ಅಥವಾ ಭೂಮಿಯ ಮೇಲೆ ತಾವೇ ಗುಣಪೂರ್ಣರಾಗಿ ಅಥವಾ ಪ್ರಾಮಾಣಿಕರಾಗಿ ಕಂಡುಬರುವುದಿಲ್ಲ.

ಗ್ರೀಕರಲ್ಲಿ ಅತ್ಯಂತ ಕರ್ಮಠ ಆಸ್ತಿಕರು ಮತ್ತು ನಾಸ್ತಿಕರು ಇದ್ದರು. ಅಮುಖ್ಯ ದೇವತೆಗಳನ್ನು ಆಕಾಶ ದೇವತೆಗಳು, ಭೂದೇವತೆಗಳು ಫಲವತ್ತತೆಯ ದೇವತೆಗಳು, ಪ್ರಾಣ ದೇವತೆಗಳು ಮತ್ತು ಪಾತಾಳ ದೇವತೆಗಳೆಂದು ವಿಭಾಗಿಸಬಹುದು.

ಗ್ರೀಸ್‌ನ ದೊಡ್ಡ ದೇವತೆಗಳು ಒಲಂಪಸ್ ಬೆಟ್ಟದ ಮೇಲೆ ವಾಸಿಸುತ್ತಾರೆಂಬ ನಂಬಿಕೆ ಇತ್ತು. ಗ್ರೀಕರು ದೊಡ್ಡ ದೊಡ್ಡ ದೇಗುಲಗಳನ್ನು ನಿರ್ಮಿಸಿದರು. ಕ್ರಿ.ಪೂ.೭ನೇ ಶತಮಾನದ ತರುವಾಯ ಪ್ರತಿ ಗ್ರೀಕ್ ರಾಜ್ಯ ತನ್ನದೇ ಒಲಂಪಿಯನ್ ದೇವರನ್ನು ಹೊಂದಿತ್ತು. ಒಂದು ಶತಮಾನದ ನಂತರ ಡಯೋಸೈಸಿಸ್ ದೇವರ ಆರಾಧನೆ ಜನಪ್ರಿಯ ವಾಯಿತು. ಈ ದೇವರ ಪೂಜಾ ಸಂದರ್ಭದಲ್ಲಿ ಹೆಚ್ಚು ಗದ್ದಲ ಗಲಾಟೆಗಳು ಇದ್ದು, ಸ್ತ್ರೀಯರೂ ಸಹ ಹಾಡಿ ನರ್ತಿಸುತ್ತಿದ್ದರು. ಕಾಲಾನುಕ್ರಮದಲ್ಲಿ 'ಆರ್ಫಿಕ್ ಧರ್ಮದ ವಿಕಾಸವನ್ನು ಕಾಣುತ್ತೇವೆ. ಈ ಧರ್ಮೀಯರು ಉಪವಾಸ, ವ್ರತಗಳೊಂದಿಗೆ ಪ್ರಾಪಂಚಿಕ ಭೋಗಗಳನ್ನು ತ್ಯಜಿಸುತ್ತಿದ್ದರು.

ಗ್ರೀಕ್ ದೇವತೆಗಳಲ್ಲೆಲ್ಲಾ ಪ್ರಮುಖ ಮತ್ತು ಪ್ರಖ್ಯಾತ ದೇವರೆಂದರೆ ಅಪೊಲೊ. ಇವನು ಶ್ರೀಮಂತರ ದೇವನಾಗಿದ್ದನು. ಪ್ರೀತಿ, ನ್ಯಾಯ, ಕರುಣೆ, ಔದಾರ್ಯಗಳ ಪ್ರತೀತನಾಗಿ ಅಪೋಲೋನನ್ನು ಪರಿಗಣಿಸಿದ್ದರ ಜೊತೆಗೆ ಅವನನ್ನು ನವಯುವಕನಾಗಿ, ಸಂಗೀತ-ಕ್ರೀಡೆಗಳ ಪ್ರವೀಣನಾಗಿ ಪರಿಭಾವಿಸಲಾಗಿತ್ತು. ಎಲ್ಲಾ ಜನರೂ ದೇವವಾಣಿಯನ್ನು ಕೇಳಲು ಡೆಲ್ಫಿಗೆ ಹೋಗುತ್ತಿದ್ದರು. ಡೆಲ್ಫಿಯಲ್ಲಿ ಪುರೋಹಿತರು ಜನರು ಕೇಳುವ ಪ್ರಶ್ನೆಗಳಿಗೆ ದೇವರಿಂದ ಉತ್ತರಗಳನ್ನು ಪಡೆದು ತಿಳಿಸುತ್ತಿದ್ದರು. ಕ್ರಿ.ಪೂ.೭೭೬ರಲ್ಲಿ ತಮ್ಮ ಧರ್ಮಕ್ಕೆ ಸಂಬಂಧಿಸಿದಂತೆ ಒಲಂಪಿಯಾದಲ್ಲಿ ಒಂದು ದೊಡ್ಡ ಹಬ್ಬವನ್ನು ಏರ್ಪಡಿಸಿದ್ದರು. ದೇವರ ಗೌರವಾರ್ಥ ಈ ಹಬ್ಬದಲ್ಲಿ ಸ್ಪರ್ಧೆಗಳನ್ನು ಏರ್ಪಡಿಸಿದ್ದರು. ಜಯುಸ್ ಮತ್ತು ಅಥೆನಾ ದೇವತೆಗಳು ಗ್ರೀಕರ ಮತ್ತೆರಡು ಪ್ರಮುಖ ದೇವರುಗಳಾಗಿದ್ದರು.

ಇಷ್ಟೇ ಅಲ್ಲದೇ ಗ್ರೀಕರಲ್ಲಿ ನಾಗಪೂಜೆ ಮತ್ತು ಶಿಶ್ನ ಪೂಜೆಗಳೂ ಇದ್ದವು. ಯುದ್ಧಕ್ಕೆ ಮೊದಲು ಮತ್ತು ಬಹುಮುಖ್ಯ ಕಾರ್ಯಗಳಿಗೆ ಮೊದಲು ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಗ್ರೀಕರಲ್ಲಿತ್ತು. ಹಂದಿ, ಬಸವ ಮತ್ತು ಕುರಿಗಳನ್ನು ದೇವರುಗಳ ಪ್ರೀತ್ಯಾರ್ಥ ಬಲಿಕೊಡುವ ಕ್ರಮವಿತ್ತು. ಕ್ರೈಸ್ತಧರ್ಮದ ಆಗಮನದವರೆವಿಗೂ ಪ್ರಾಣಿಗಳನ್ನು ಬಲಿಕೊಡುವ ಪದ್ಧತಿ ಗ್ರೀಸ್‌ನಲ್ಲಿ ಮುಂದುವರೆಯಿತು. ಅಲಿವ್ ಮರವನ್ನು ಜೀವವೃಕ್ಷ ವೆಂದು ಗ್ರೀಕರು ಪರಿಗಣಿಸಿದ್ದರು. ಮತ್ತು ಅದು ಅವರ ಜೀವನದ ಅವಿಭಾಜ್ಯ ಅಂಗವಾಗಿತ್ತು.

ಗ್ರೀಕರಲ್ಲಿಯೂ ಬಹುಬಗೆಯ ಮೂಢನಂಬಿಕೆಗಳು ಮನೆ ಮಾಡಿಕೊಂಡಿದ್ದವು. ಕೆಲವೊಮ್ಮೆ ಗ್ರೀಕರ ಆಚರಣೆಗಳು ಕಾಲದಿಂದ ಕಾಲಕ್ಕೆ ಪ್ರದೇಶದಿಂದ ಪ್ರದೇಶಕ್ಕೆ ಬೇರೆಯೇ ಆಗಿರುತ್ತಿದ್ದವು. ಒಟ್ಟಾರೆ ಗ್ರೀಕ್ ಧರ್ಮವು ವಿಭಿನ್ನವೂ ತೊಡಕಿನದೂ ಆಗಿದ್ದು ಪೌರ್ವಾತ್ಯ ಧರ್ಮದಲ್ಲಿ ಕಂಡುಬರುವ ಸರ್ವಸ್ವತಂತ್ರ ಸೃಷ್ಟಿತತ್ವವನ್ನು ಅವರು ಅನುಸರಿಸಲಿಲ್ಲ.

**ಆರ್ಥಿಕ ಜೀವನ**

ಕೃಷಿಯು ಸಣ್ಣ ಪ್ರಮಾಣದ್ದಾಗಿದ್ದರೂ ಅದು ಸಾಮಾನ್ಯ ಗ್ರೀಕನ ಉದ್ಯೋಗವಾಗಿತ್ತು. ಅವರು ಗೋಧಿ, ಜವೆಗೋಧಿ ಬಟಾಣಿ, ಆಲೀವ್, ದ್ರಾಕ್ಷಿ, ಅಂಜೂರ ಮೊದಲಾದವುಗಳನ್ನು ಬೆಳೆಯುತ್ತಿದ್ದರು. ಅವರ ಆರ್ಥಿಕ ವ್ಯವಸ್ಥೆಯಲ್ಲಿ ಅಲೀವ್ ಬಹುಮುಖ್ಯ ಪಾತ್ರವನ್ನು ವಹಿಸಿತ್ತು. ಪೆಲೋಪೋನೀಶಿಯನ್ ಯುದ್ಧಗಳಲ್ಲಿ ಆಲೀವ್ ತೋಟಗಳು ನಾಶವಾದದ್ದ ರಿಂದ ಅಥೆನ್ಸ್‌ನ ಅವನತಿಯ ಅನಿವಾರ್ಯವಾಯಿತು. ಗ್ರೀಸ್‌ನಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದ್ದರಿಂದ ನೀರನ್ನು ಸಂಗ್ರಹಿಸಲು ವಿಶೇಷ ಗಮನ ಕೊಡಲಾಗಿತ್ತು.

ಗ್ರೀಸ್ ದೇಶವು ಅಮೃತಶಿಲೆ, ಕಬ್ಬಿಣ, ಸತುವು, ಬೆಳ್ಳಿ ಮೊದಲಾದ ಸ್ವಾಭಾವಿಕ ಸಂಪನ್ಮೂಲಗಳಿಗೆ ಹೆಸರುವಾಸಿಯಾಗಿತ್ತು. ಈ ಸಂಪನ್ಮೂಗಳನ್ನು ಅವರು ಪೂರ್ತಿಯಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಜೀತದಾಳುಗಳು(ಸ್ತ್ರೀಯರೂ ಸೇರಿದಂತೆ) ಗಣಿ ಕೈಗಾರಿಕೆ ಗಳಲ್ಲಿ ದುಡಿಯುತ್ತಿದ್ದರು. ಗಣಿಗಳಲ್ಲಿ ಅಹೋರಾತ್ರಿ ಕೆಲಸ ನಡೆಯುತ್ತಿದ್ದು ಕೆಲಸಗಾರರು ೧೦ ಗಂಟೆಯ ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಿದ್ದರು.

ದ್ರಾಕ್ಷಾರಸ, ಆಲೀವ್ ಎಣ್ಣೆ ಮತ್ತು ಇತರ ಕೈಗಾರಿಕಾ ವಸ್ತುಗಳ ತಯಾರಿಕೆಯು ಅಧಿಕವಾದುದ್ದರಿಂದ ಈ ಸಿದ್ಧವಸ್ತುಗಳನ್ನು ಮಾರಲು ಮತ್ತು ತಮಗೆ ಅವಶ್ಯವಾದ ಪದಾರ್ಥಗಳನ್ನು ಕೊಂಡುಕೊಳ್ಳಲು ಅಸೋಟೋಲಿಯದ ಗ್ರೀಕರಿಗೆ ಮಾರುಕಟ್ಟೆಗಳನ್ನು ಹುಡುಕುವ ಅಗತ್ಯ ಉಂಟಾಯಿತು. ಇಟಲಿ ಮತ್ತು ಸಿಸಿಲಿ, ಬಾಲ್ಕನ್ ಪರ್ಯಾಯ ದ್ವೀಪ, ಜಲಸಂಧಿಗಳು ಮತ್ತು ಕಪ್ಪು ಸಮುದ್ರಗಳಿಂದ ಮೀನು ಮತ್ತು ಧಾನ್ಯಗಳನ್ನು ತರಿಸಿಕೊಳ್ಳುತ್ತಿದ್ದರು. ಅವರಿಗೆ ಅಗತ್ಯವಿದ್ದ ಬೆಳ್ಳಿ, ಚಿನ್ನ, ತಾಮ್ರ, ಕಬ್ಬಿಣ ಮೊದಲಾದ ವುಗಳನ್ನು ಇತರ ದೇಶಗಳಿಂದ ಪಡೆಯುತ್ತಿದ್ದರು. ತಮ್ಮ ನೆರೆಯವರಾದ ಏಷ್ಯಾ ಮೈನರ್‌ನ ಒಳ ಪ್ರದೇಶಗಳಿಂದ ಚರ್ಮ ಮತ್ತು ಉಣ್ಣೆಯನ್ನು ಅಧಿಕ ಪ್ರಮಾಣದಲ್ಲಿ ಅಮದು ಮಾಡಿಕೊಳ್ಳುತ್ತಿದ್ದರು. ಸಮುದ್ರಗಳ್ಳತನದಲ್ಲೂ ಅವರು ತೊಡಗಿದ್ದರು.

ಗ್ರೀಕರು ನೌಕಾಯಾನ, ಬ್ಯಾಂಕಿಂಗ್ ಮೊದಲಾದ ಸೇವೆಗಳನ್ನು ನಿರ್ವಹಿಸುತ್ತಿದ್ದರು. ಹಣದ ಬಳಕೆಯ ಹೆಚ್ಚಳದಿಂದಾಗಿ ಬ್ಯಾಂಕುಗಳು ಅಭಿವೃದ್ಧಿಗೊಂಡವು. ಪ್ರತಿ ನಗರ ರಾಜ್ಯಕ್ಕೂ ತನ್ನದೇ ಆದ ನಾಣ್ಯ ಪದ್ಧತಿ ಇದ್ದರೂ ಅಥೆನ್ಸ್‌ನ ನಾಣ್ಯಗಳನ್ನು ಎಲ್ಲರೂ ಸ್ವೀಕರಿಸುತ್ತಿದ್ದರು. ಹಣವನ್ನು ವರ್ಗ ಮಾಡುವ ಉದ್ದೇಶಗಳಿಗಾಗಿ ಗ್ರೀಕ್ ಬ್ಯಾಂಕರ್‌ಗಳು ಜಮಾ ಪತ್ರ, ವಿನಿಮಯ ಪತ್ರ ಮತ್ತು ವ್ಯಕ್ತಿಗಳ ಖಾತೆಯಲ್ಲಿ ಪರಸ್ಪರ ಚುಕ್ತ ಮಾಡುವ ವಿಧಾನ, ಈ ವ್ಯವಹಾರಗಳನ್ನು ಪ್ರಾರಂಭಿಸಿದರು. ವ್ಯಾಪರ ವಸ್ತುಗಳು ನಿಯತ ಸ್ಥಾನವನ್ನು ತಲುಪದಿದ್ದರೆ ಆಧಾರ ಸಾಲವನ್ನು ತೀರಿಸಬೇಕಾಗಿರಲಿಲ್ಲ. ಅಪಾಯಗಳನ್ನು ನಿವಾರಿಸಲು ಪಡೆಯುತ್ತಿದ್ದ ಈ ವಿಮೆಯ ಕಂತಿನಲ್ಲಿ ವಿಮಾ ಯೋಜನೆಯ ಪ್ರಥಮ ಪ್ರಯತ್ನವನ್ನು ಕಾಣಬಹುದಾಗಿದೆ. ಡೆಲ್ಫಿಯಲ್ಲಿದ್ದ ಅಪೊಲೋ ದೇವಸ್ಥಾನ ಅಂತಾರಾಷ್ಟ್ರೀಯ ಬ್ಯಾಂಕಿನಂತೆ ಕೆಲಸ ನಿರ್ವಹಿಸುತ್ತಿತ್ತು. ಇದು ಪ್ರಾಚೀನ ಭಾರತದ ದೇವಾಲಯಗಳ ಬ್ಯಾಂಕಿಂಗ್ ಕೆಲಸವನ್ನೇ ನೆನಪಿಗೆ ತರುತ್ತದೆ. ವಿಶೇಷವೆಂದರೆ, ಗ್ರೀಕ್ ಸ್ತ್ರೀಯರು ಉತ್ಪಾದನಾ ಕ್ಷೇತ್ರದಲ್ಲಿ ಸಕ್ರಿಯವಾಗಿ ತೊಡಗಿದ್ದರೂ ವ್ಯಾಪಾರ ಮಾಡುವುದಕ್ಕೆ ಅವರಿಗೆ ಅನುಮತಿ ಇರಲಿಲ್ಲ.

**ವರ್ಗಗಳು**

ಗ್ರೀಕರಲ್ಲಿ ಜಾತಿ ಪದ್ಧತಿ ಇಲ್ಲದಿದ್ದರೂ ವರ್ಗಗಳು ಇದ್ದವು. ಯಾವುದೇ ಸ್ವತಂತ್ರ ವ್ಯಕ್ತಿ ಸ್ವಪ್ರಯತ್ನದಿಂದ ಮೇಲೇರಬಹುದಿತ್ತು. ಅಥೆನ್ಸ್ ಮತ್ತು ಥೀಬ್ಸ್‌ಗಳಲ್ಲಿ ಮನುಷ್ಯನೇ ಮನುಷ್ಯನನ್ನು ಶೋಷಿಸುತ್ತಿದ್ದುದು ರೋಮ್‌ಗಿಂತ ಕಡಿಮೆ ಇದ್ದರೂ, ಶೋಷಣೆ ಸಮಾಜದಲ್ಲಿ ಒಂದು ವಾಸ್ತವಾಂಶವಾಗಿತ್ತು. ಗಣಿಗಳನ್ನು ಹೊರತುಪಡಿಸಿ ಉಳಿದ ಉತ್ಪಾದನಾ ಕ್ಷೇತ್ರಗಳಲ್ಲಿ ಉದ್ಯೋಗಿ ಮತ್ತು ಉದ್ಯೋಗದಾತರ ನಡುವೆ ಅಷ್ಟು ತೀಕ್ಷ್ಣ ವರ್ಗ ವ್ಯತ್ಯಾಸ ಇರಲಿಲ್ಲ. ಸಾಮಾನ್ಯವಾಗಿ ಯಜಮಾನನೂ ಕೆಲಸಗಾರರೊಂದಿಗೆ ಕೆಲಸ ಮಾಡುತ್ತಿದ್ದರಿಂದ ಸಂಬಂಧ ಅಷ್ಟೇನೂ ವಿಷಮವಾಗಿರುತ್ತಿರಲಿಲ್ಲ.

ಒಬ್ಬ ಮನುಷ್ಯ ಒಂದು ತಿಂಗಳಿಗೆ ೧೨೦ ಡ್ರಾಕ್‌ಮಾಸ್ (೧೨೦ ಡಾಲರ್)ಗಳಲ್ಲಿ ನೆಮ್ಮದಿಯ ಬದುಕನ್ನು ನಡೆಸಬಹುದಿತ್ತು. ಆದರೆ ಕಾರ್ಮಿಕನೊಬ್ಬನಿಗೆ ತಿಂಗಳೊಂದಕ್ಕೆ ೩೦ ಡ್ರಾಕ್‌ಮಾಸ್ ಕೂಲಿ ಸಿಗುತ್ತಿದ್ದುದರಿಂದ ಅವನ ಜೀವನ ಸ್ಥಿತಿಯನ್ನು ಯಾರೂ ಊಹಿಸಬಹುದು. 'ಬಡತನ ರೇಖೆಗಿಂತ ಕಡಿಮೆ ಇರುವುದು' ಎಂಬ ನಮ್ಮ ಈಗಿನ ಕಲ್ಪನೆಗೆ ಆಗಿನ ಕಾರ್ಮಿಕರ ಸ್ಥಿತಿ ಪ್ರಾಯಶಃ ಹೊಂದುತ್ತಿತ್ತು. ಆದರೂ ತುರ್ತು ಪರಿಸ್ಥಿತಿಯಲ್ಲಿ ಸರ್ಕಾರ ಕಾರ್ಮಿಕರಿಗೆ ನಾಮ ಮಾತ್ರ ಬೆಲೆಗೆ ಆಹಾರ ಧಾನ್ಯಗಳನ್ನು ಮಾರುತ್ತಿತ್ತು. ಗಮನಾರ್ಹ ಅಂಶವೆಂದರೆ

*ಸ್ವಾತಂತ್ರ್ಯ ದೇವತೆ ಸಮಾನತೆಯ ದೇವತೆಗೆ ಗೆಳತಿಯಲ್ಲವೆಂಬುದು ವೇದ್ಯ ಅಂಶವಾಗಿದ್ದು, ಪ್ರಬಲರು ಇನ್ನೂ ಪ್ರಬಲರಾಗುತ್ತಿದ್ದರು. ಶ್ರೀಮಂತರು ಮತ್ತೂ ಧನಿಕರಾಗುತ್ತಿದ್ದರು; ಆದರೆ ಬಡವರು ಮಾತ್ರ ಇನ್ನೂ ಬಡವರಾಗಿ ಉಳಿಯುತ್ತಿದ್ದರು.*

ಪರ್ಶಿಯ-ಗ್ರೀಸ್‌ಗಳ ನಡುವಿನ ಅತಿ ಕಹಿ ಯುದ್ಧಗಳಿಗಿಂತ ಅಥವಾ ಅಥೆನ್ಸ್-ಸ್ಪಾರ್ಟಾಗಳ ನಡುವಿನ ತಿಕ್ಕಾಟಗಳಿಗಿಂತ ಗ್ರೀಕ್ ರಾಜ್ಯಗಳಲ್ಲಿದ್ದ ವರ್ಗ-ವರ್ಗಗಳ ನಡುವಿನ ಸಂಘರ್ಷ ಅತ್ಯಂತ ಕಹಿಯ ವಾತಾವರಣವನ್ನು ನಿರ್ಮಿಸಿತು.

*ಪ್ಲೇಟೋ ಕಮ್ಯುನಿಸಂ ಬಗ್ಗೆ ಮಾತನಾಡಿದ್ದರೂ, ಕ್ರಿ.ಪೂ.೫ನೇ ಶತಮಾನದ ಹೊತ್ತಿಗೆ ಜನನಾಯಕರು ಭೂತಕಾಲದಲ್ಲಿ ಎಲ್ಲರೂ ಆಸ್ತಿಪಾಸ್ತಿಗಳನ್ನು ಸಮಾನವಾಗಿ ಹೊಂದಿದ್ದ ಅನುಪಮ ಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದರೆ ವಿನಾಹ ವಾಸ್ತವದಲ್ಲಿ ಆ ಸ್ಥಿತಿಯ ಸ್ಥಾಪನೆಗೆ ಎಳ್ಳಷ್ಟೂ ಪ್ರಯತ್ನಿಸುತ್ತಿರಲಿಲ್ಲ.*

ಆಗ ಅರಿಸ್ಟೋಕ್ರಾಟಿಕ್ ಕಮ್ಯುನಿಸಂ ಬಗ್ಗೆ ಜನರ ಮನಸ್ಸಿನಲ್ಲಿ ಕಲ್ಪನೆ ಇತ್ತೇ ಹೊರತು, ರಾಜ್ಯದಿಂದ ಭೂಮಿಯ ರಾಷ್ಟ್ರೀಕರಣದ ಬಗ್ಗೆ ಅಲ್ಲ. ಆದರೆ ಪೌರರಲ್ಲಿ ಭೂಮಿಯನ್ನು ಸಮಾನವಾಗಿ ಹಂಚುವ ಕಲ್ಪನೆ ಆವರಿಗಿದ್ದಿತು. ಪ್ರಾಕ್ಸಗೋರ ಎಂಬ ಮಹಿಳಾ ಕಮ್ಯೂನಿಸ್ಟಳನ್ನು ಅರಿಸ್ಟೋಫನೀಸ್ ಅವಳ ಈ ಕೆಳಗಿನ ಮಾತಿನಿಂದ ನಮಗೆ ಪರಿಚಯಿಸುತ್ತಾನೆ.

*ಪ್ರತಿಯೊಬ್ಬರಿಗೂ ಪ್ರತಿಯೊಂದರಲ್ಲಿಯೂ ಪಾಲಿಸಬೇಕು, ಮತ್ತು ಎಲ್ಲಾ ಆಸ್ತಿಗಳೂ ಎಲ್ಲರಿಗೂ ಸಾಮಾನ್ಯವಾಗಿರಬೇಕು. ಬಡವರು ಶ್ರೀಮಂತರೆಂಬ ಭೇದ ಇನ್ನು ಮುಂದೆ ಇರುವುದಿಲ್ಲ. ಕೆಲವರು ಸತ್ತರೆ ಹೂಳಲು ಸ್ಥಳವಿರದ ಪರಿಸ್ಥಿತಿಯಲ್ಲಿ ಕೇವಲ ಒಬ್ಬ ವ್ಯಕ್ತಿ ಮಾತ್ರ ವಿಸ್ತಾರ ವ್ಯವಸಾಯ ಕ್ಷೇತ್ರದಲ್ಲಿ ಸುಗ್ಗಿ ಮಾಡುವುದನ್ನು ಇನ್ನು ಮುಂದೆ ಕಾಣುವುದಿಲ್ಲ... ಪ್ರತಿಯೊಬ್ಬರಿಗೂ ಏಕ ಪ್ರಕಾರ ಜೀವನ ಸ್ಥಿತಿ ಇರುವುದನ್ನು ನಾನು ಬಯಸುತ್ತೇನೆ.... ಹಣ, ಭೂಮಿ ಪ್ರತಿಯೊಂದೂ ಖಾಸಗೀ ಆಸ್ತಿಯಾಗಿರುವುದನ್ನು, ಎಲ್ಲರಿಗೂ ಸಾಮಾನ್ಯವಾಗಿರು ವಂತೆ ಮಾಡುವುದರೊಂದಿಗೆ ಪ್ರಾರಂಭಿಸುತ್ತೇನೆ. ಎಲ್ಲಾ ಸ್ತ್ರೀಯರೂ ಎಲ್ಲ ಪುರುಷರಿಗೂ ಸಾಮಾನ್ಯವಾಗಿ ಸೇರಿದವರಾಗಿರುತ್ತಾರೆ(ಸ್ತ್ರೀಯರೂ ಆಸ್ತಿಯೆಂಬ ಕಲ್ಪನೆ?).*

ಆದರೆ ಯಾರು ಕೆಲಸ ಮಾಡುತ್ತಾರೆ? ಎಂದು ಬ್ಲಿಪೈರಸ್ ಕೇಳುವ ಪ್ರಶ್ನೆಗೆ ಪ್ರಾಕ್ಸ್‌ಗೋರಳ ಉತ್ತರ "ಗುಲಾಮರು."

**ಗುಲಾಮಗಿರಿ**

'ವಿರಾಮ ರಹಿತ ಬದುಕಿನಲ್ಲಿ ಅಭಿರುಚಿಗಳಿಲ್ಲ, ಕಲಾಭಿರುಚಿ ಇಲ್ಲ ಮತ್ತು ನಾಗರಿಕತೆಯೇ ಇಲ್ಲ. ತರಾತುರಿಯಲ್ಲಿರುವ ಮನುಷ್ಯ ನಾಗರಿಕನಲ್ಲ' ಎಂಬುದು ಪ್ರಾಚೀನ ಗ್ರೀಕರ ಅಭಿಪ್ರಾಯವಾಗಿತ್ತು. ಅಂದರೆ ಕೆಲವರಿಗಾಗಿ ಹಲವರು ದುಡಿಯಬೇಕಿತ್ತು ಎಂಬ ವಿಚಾರವನ್ನು ಇದು ಪರೋಕ್ಷವಾಗಿ ಪ್ರತಿಪಾದಿಸುತ್ತಿದೆ.

ಗ್ರೀಕ್ ಸಮಾಜದಲ್ಲಿ ನಾಗರಿಕರು (ಪೌರರು), ಮೆಟಿಕ್ಸ್, ಸ್ವತಂತ್ರಗೊಳಿಸಲ್ಪಟ್ಟವರು (ಗುಲಾಮರು) ಮತ್ತು ಗುಲಾಮರು ಎಂಬ ನಾಲ್ಕು ಪ್ರಭೇದಗಳಿದ್ದವು. ಅದರಲ್ಲಿ ಗುಲಾಮರ ಸ್ಥಿತಿ ತುಂಬಾ ಕರುಣಾಜನಕವಾಗಿತ್ತು. ಆಶ್ಚರ್ಯವೆಂದರೆ, ಜೀವನೋಪಾಯಕ್ಕಾಗಿ ದುಡಿಯುವುದು ಅಗೌರವವೆಂಬ ಭಾವನೆ ಪ್ರಾಚೀನ ಗ್ರೀಸ್‌ನಲ್ಲಿತ್ತು; ವೃತ್ತಿಪರ ಸಂಗೀತ, ಮೂರ್ತಿಶಿಲ್ಪ ಮತ್ತು ಚಿತ್ರಕಲಾ ಬೋಧನೆಗಳನ್ನು ಅನೇಕ ಗ್ರೀಕರು 'ಕ್ಷುಲ್ಲಕ ವೃತ್ತಿ' ಯೆಂದು ಪರಿಗಣಿಸಿದ್ದರು.

ಯುದ್ಧ ಕೈದಿಗಳು ಗುಲಾಮಗಿರಿಗಾಗಿ ನಡೆದ ಆಕ್ರಮಣದಲ್ಲಿ ಸಿಕ್ಕವರು, ಬಾಹ್ಯ ಒಡನಾಟ ಇಲ್ಲದೆ ಚಿಕ್ಕಂದಿನಿಂದ ಸಾಕಲ್ಪಟ್ಟ ತಬ್ಬಲಿಗಳು, ಅಪರಾಧಿಗಳು ಮತ್ತು ನಿಷ್ಕ್ರಿಯ ಸೋಮಾರಿಗಳನ್ನು ಗುಲಾಮರನ್ನಾಗಿಸುತ್ತಿದ್ದರು. ಪ್ರಾಚೀನ ಗ್ರೀಕರು ಇತರರನ್ನು ಸ್ವಾಭಾವಿಕ ಗುಲಾಮರೆಂದು ಪರಿಗಣಿಸಿದ್ದರು. ಕಾರಣ ಇತರರು ರಾಜನಿಗೆ ಸಂಪೂರ್ಣ ವಿಧೇಯರಾಗಿರುತ್ತಾರೆಂಬುದೇ ಆ ನಂಬಿಕೆಗೆ ಬುನಾದಿ. ಗ್ರೀಕ್ ವ್ಯಾಪಾರಿಗಳು ಗುಲಾಮರನ್ನು ಮಾರುಕಟ್ಟೆಗಳಲ್ಲಿ ಕೊಂಡು ಬೇರೆ ಬೇರೆ ನಗರಗಳಲ್ಲಿ ಲಾಭಕ್ಕೆ ಮಾರಾಟ ಮಾಡುವ ಕ್ರಮವೂ ಇತ್ತು. ಗುಲಾಮರನ್ನು ಕೊಂಡು - ಮಾರುವ ದಂಧೆಯಲ್ಲಿದ್ದ ಮೆಟಿಕ್ಸ್ ಗುಂಪಿನ ವ್ಯಾಪಾರಿಗಳು ಅತ್ಯಂತ ಶ್ರೀಮಂತರಾಗಿದ್ದರು. ಅಥೆನ್ಸ್‌ನ ಪೇಟೆಯಲ್ಲಿ ತಮ್ಮನ್ನು ಕೊಳ್ಳುವ ಗಿರಾಕಿಗಳ ಮುಂದೆ ಗುಲಾಮರು ಪರೀಕ್ಷೆಗಾಗಿ ಯಾವುದೇ ಕಾಲದಲ್ಲೂ ನಗ್ನರಾಗಿ ನಿಲ್ಲಲು ಸಿದ್ಧರಿದ್ದರು. ಪ್ರತಿ ಗುಲಾಮನ ಕಿಮ್ಮತ್ತು 'ಅರ್ಧಮಿನ'ದಿಂದ 'ಹತ್ತುಮಿನ'ದವರೆಗಿತ್ತು. ಅಂದರೆ ೫೦ ರಿಂದ ೧೦೦ ಡಾಲರ್ ಆಗುತ್ತಿತ್ತು. ಅಥೆನ್ಸ್‌ನ ಸರ್ಕಾರ ಗುಲಾಮರನ್ನು, ಕಾರಕೂನರಾಗಿ, ಸೇವಕರಾಗಿ, ಗಾಣ ಅಧಿಕಾರಿಗಳಾಗಿ, ಪೋಲೀಸ್ ಪೇದೆಗಳಾಗಿ ನೇಮಿಸಿ ಅವರಿಗೆ ಬಟ್ಟೆ, ಭತ್ಯೆ ನೀಡುವುದರ ಜೊತೆಗೆ ಎಲ್ಲಿ ಬೇಕಿದ್ದರೂ ವಾಸಿಸಲು ಅನುಮತಿ ನೀಡಿತ್ತು. ಸ್ತ್ರೀ-ಪುರುಷರು ಗುಲಾಮರನ್ನು ಕೊಂಡು ಅವರ ಶ್ರಮವನ್ನು ನೇರವಾಗಿ ಬಳಸಿಕೊಳ್ಳುವ ಅಥವಾ ಗುಲಾಮರನ್ನು ಮನೆ, ಕಾರ್ಖಾನೆ, ಗಣಿ ಮೊದಲಾದ ಸ್ಥಳಗಳಿಗೆ 'ಶ್ರಮ

ಎರವಲಾಗಿ' ಕೊಟ್ಟು ತುಂಬ ಲಾಭ ಸಂಪಾದಿಸುತ್ತಿದ್ದರು. ತೀರಾ ಬಡ ಗ್ರೀಕನೂ (ಪೌರ) ಒಬ್ಬ ಅಥವಾ ಇಬ್ಬರು ಗುಲಾಮರನ್ನು ಹೊಂದಿರುತ್ತಿದ್ದನು. ಶ್ರೀಮಂತರ ಮನೆಗಳಲ್ಲಿ ವಿಪರೀತ ಗುಲಾಮರಿರುತ್ತಿದ್ದರು. ಗ್ರಾಮಾಂತರ ಗ್ರೀಸ್‌ನಲ್ಲಿ ಗುಲಾಮರ ಸಂಖ್ಯೆ ಕಡಿಮೆ ಇತ್ತು, ಅಂದರೆ ನಗರಗಳಲ್ಲೇ ಅಧಿಕವಾಗಿತ್ತು. ಗಂಡು ಗುಲಾಮ ಹೊರಗೆ ದುಡಿದರೆ, ಹೆಣ್ಣು ಗುಲಾಮಳು ಮನೆಯಲ್ಲಿ ದುಡಿಯುವುದು ಸಾಮಾನ್ಯ ಕ್ರಮವಾಗಿತ್ತು.

ಗುಲಾಮರು ತಮ್ಮ ಮಕ್ಕಳನ್ನು ಬೆಳೆಸುವುದನ್ನು ಧಣಿಗಳು ಇಷ್ಟಪಡುತ್ತಿರಲಿಲ್ಲ. ಏಕೆಂದರೆ ಮಗುವೊಂದನ್ನು ಸಾಕಲು ತಗಲುವ ಖರ್ಚಿಗಿಂತ ಬೇರೆ ಗುಲಾಮರನ್ನು ಕೊಳ್ಳುವುದೇ ಹೆಚ್ಚು ಲಾಭದಾಯಕವಾಗಿತ್ತು. ಅಂದರೆ ಗುಲಾಮರು ತಮ್ಮ ಮಕ್ಕಳನ್ನು ಬೆಳಸುವ ಸ್ವಾತಂತ್ರ್ಯದಿಂದಲೂ ವಂಚಿತರಾಗಿದ್ದಾರೆಂದು ಇದರಿಂದ ವೇದ್ಯವಾಗುತ್ತದೆ. ಗುಲಾಮರು ಸರಿಯಾಗಿ ನಡೆದುಕೊಳ್ಳದಿದ್ದರೆ ಅವರಿಗೆ ಛಡಿ ಏಟು ಬೀಳುತ್ತಿತ್ತು. ಪೌರನೊಬ್ಬ ದಂಡಿಸುವಾಗ ಗುಲಾಮನು ಸುಮ್ಮನಿರಬೇಕಿತ್ತು. ಆದರೆ, ಗುಲಾಮರನ್ನು ಕೊಲ್ಲುವ ಅಧಿಕಾರ ಅವರ ಧಣಿಗಳಿಗಿರಲಿಲ್ಲ. ವಿಧೇಯರಾಗಿದ್ದ ಗುಲಾಮರನ್ನು ಚೆನ್ನಾಗಿ ನೋಡಿಕೊಳ್ಳಲಾಗುತ್ತಿತ್ತು. ಗುಲಾಮರ ಗಳಿಕೆಗೆ ತೆರಿಗೆ ಇರಲಿಲ್ಲ. ಗುಲಾಮರು ಸೈನ್ಯದಲ್ಲಿ ಸೇವೆ ಸಲ್ಲಿಸಬೇಕಾಗಿರಲಿಲ್ಲ. ಸಾಮಾನ್ಯವಾಗಿ ಗುಲಾಮರ ಮೇಲ್ವಿಚಾರಣೆಯಯನ್ನು ನೋಡಿಕೊಳ್ಳಲು ಪೂರ್ವಾಶ್ರಮದಲ್ಲಿ ಗುಲಾಮನಾಗಿದ್ದ ವ್ಯಕ್ತಿಯೇ ಹೆಚ್ಚು ಸೂಕ್ತವೆಂದು ಭಾವಿಸಲಾಗಿತ್ತು. ಮುಪ್ಪು, ರೋಗ ಮತ್ತು ಕೆಲಸ ಇಲ್ಲದಂಥ ಸಂದರ್ಭದಲ್ಲಿ ಯಜಮಾನ ಗುಲಾಮರನ್ನು ಸಾಮಾನ್ಯವಾಗಿ ಹೊರ ಹಾಕುತ್ತಿರಲಿಲ್ಲ. ಯಜಮಾನ ತನ್ನ ಮುಪ್ಪಿನ ಮತ್ತು ಸಾವಿನ ಸಂದರ್ಭದಲ್ಲಿ ಅನೇಕ ಗುಲಾಮರನ್ನು ಸ್ವತಂತ್ರಗೊಳಿಸಿದ ಉದಾಹರಣೆಗಳೂ ಇವೆ. ಏನೇ ಆದರೂ ಗುಲಾಮಗಿರಿ ಸಮರ್ಥನೀಯವೆನಿಸುವುದಿಲ್ಲ. ಪ್ರಾಚೀನ ಗ್ರೀಸ್‌ನಲ್ಲಿದ್ದ ಗುಲಾಮರ ಸಂಖ್ಯೆಯನ್ನು ೧,೫೦,೦೦೦ರಿಂದ ೪,೭೦,೦೦೦ವೆಂದು ವಿವಿಧ ಹೇಳಿಕೆಗಳಿಂದ ಅಂದಾಜು ಮಾಡಬಹುದಾಗಿದೆ.

ಗ್ರೀಕರು ಗ್ರೀಕರನ್ನೆ ಗುಲಾಮರನ್ನಾಗಿಸಿಕೊಳ್ಳುವುದನ್ನು ಪ್ಲೇಟೋ ಖಂಡಿಸುತ್ತಾನೆ. ಆದರೆ ಉಳಿದವರನ್ನು ಗುಲಾಮರನ್ನಾಗಿಸಿಕೊಳ್ಳುವುದಕ್ಕೆ ಅವನ ತಕರಾರಿಲ್ಲ. ಕಾರಣ ಇತರರ ಮಾನಸಿಕ-ಬೌದ್ಧಿಕ ಬಡತನ. ಅರಿಸ್ಟಾಟಲ್ ಗುಲಾಮರನ್ನು ಜೀವಂತ ಉಪಕರಣಗಳಂತೆ ನೋಡುತ್ತಾನೆ. ಅವನ ಅಭಿಪ್ರಾಯದಲ್ಲಿ "ಚಿಕ್ಕ ಪುಟ್ಟ ಕೆಲಸವನ್ನೂ ಸ್ವಯಂಚಾಲಿತ ಯಂತ್ರಗಳು ಮಾಡುವ ಕಾಲ ಬರುವವರೆಗೆ ಗುಲಾಮಗಿರಿ ಒಂದಿಲ್ಲೊಂದು ರೂಪದಲ್ಲಿ ಮುಂದುವರೆಯುತ್ತದೆ." ಪ್ಲೇಟೋ ಮತ್ತೊಮ್ಮೆ ಹೇಳಿದಂತೆ "ಅದೃಷ್ಟವಶಾತ್ ನಾನು ಗ್ರೀಕನಾಗಿ ಜನಿಸಿದ್ದೇನೆ. ಬಾರ್ಬೇರಿಯನ್ ಅಲ್ಲ (ಗ್ರೀಕೇತರರು). ಪುರುಷನಾಗಿ ಜನಿಸಿದ್ದೇನೆ, ಸ್ತ್ರೀಯಾಗಿ ಅಲ್ಲ. ಸ್ವತಂತ್ರ ಪೌರನಾಗಿ ಜನಿಸಿದ್ದೇನೆ, ಗುಲಾಮನಾಗಿ ಅಲ್ಲ." ಇದರಿಂದ ಅಂದಿನ ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯರ ಪರಿಸ್ಥಿತಿ ಮತ್ತು ಗುಲಾಮರ ಶೋಚನೀಯ ಸ್ಥಿತಿ ಯಾರಿಗಾದರೂ ಅರಿವಾಗುತ್ತದೆ.

ಫ್ರೆಂಚ್ ಕ್ರಾಂತಿಯ ಮುಂಭರದಲ್ಲಿ ಜೀವಿಸಿದ್ದ ರೂಸೊ ಅಭಿಪ್ರಾಯಪಟ್ಟಂತೆ "ದೇವರು ಭೂಮಿಗೆ ಎಲ್ಲಾ ಮನುಷ್ಯರನ್ನು ಸ್ವತಂತ್ರರನ್ನಾಗಿ ಕಳುಹಿಸಿದ್ದಾನೆ ಮತ್ತು ಪ್ರಕೃತಿ ಯಾವ ಮನುಷ್ಯನನ್ನು ಗುಲಾಮನನ್ನಾಗಿ ಮಾಡಿಲ್ಲ." ಆದ್ದರಿಂದ ಮನುಷ್ಯ, ಮನುಷ್ಯನನ್ನೇ ಗುಲಾಮನನ್ನಾಗಿಸಿಕೊಳ್ಳುವ ನೈತಿಕ ಹಕ್ಕು ಎಲ್ಲಿದೆ? ಆಧುನಿಕ ಕಾಲದಲ್ಲಿಯೂ ಗುಲಾಮಗಿರಿ ನಿರ್ಮೂಲನೆಗಾಗಿ ನಡೆದ ಹೋರಾಟಗಳು ನಮ್ಮ ಹೃದಯಗಳನ್ನು ನೊಂದು ಬಂದವರ ಪರವಾಗಿ ಕಲಕುತ್ತವೆ.

**ಗ್ರೀಕರ ತತ್ವಜ್ಞಾನ**

ಗ್ರೀಕರ ತತ್ವಜ್ಞಾನ ಜಗದ್ವಿಖ್ಯಾತವಾಗಿದೆ. ಅವರ ಚಿಂತನೆ ಅವರ ತತ್ವಜ್ಞಾನದಲ್ಲಡಗಿದೆ. ಅವರ ಚಿಂತನೆಗಳು ಏಕಪ್ರಕಾರವಾಗಿರದೆ ವೈವಿಧ್ಯಮಯವಾಗಿದ್ದವು. ಗ್ರೀಕ್ ಚಿಂತಕರಲ್ಲಿ ಸೋಫಿಸ್ಟ್ ಅಥವಾ ಬುದ್ಧಿವಂತ ಜನರು ಮೊದಲಿಗರು. ಪ್ರಭಾವ ಬೀರುವಂತೆ ಮಾತನಾಡುವುದು, ಬರವಣಿಗೆ, ವಾಕ್ಚಾತುರ್ಯ, ಅಲಂಕಾರ ಶಾಸ್ತ್ರ, ಗಣಿತ, ರೇಖಾಗಣಿತ, ಖಗೋಳಶಾಸ್ತ್ರ ಮುಂತಾದುವನ್ನು ಅವರು ಜನರಿಗೆ ತಿಳಿಸಿದರು. ಅವರು ಜಾಣರೂ ತರ್ಕ ಮಾಡುವುದರಲ್ಲಿ ಚತುರರೂ ಆಗಿದ್ದರು. ಜ್ಞಾನವು ಅಸ್ವತಂತ್ರ, ಆದರೆ ಮಾನವನಿಗೆ

ಸಾಪೇಕ್ಷವಾಗಿರುತ್ತದೆ ಎಂದು ವಾದಿಸಿದರು. ಅಂತೆಯೇ ಒಳ್ಳೆಯದು ಮತ್ತು ಕೆಟ್ಟದ್ದು ಸಹ ಪರಿಪೂರ್ಣವಾದವುಗಳಲ್ಲ. ಅವು ಮಾನವನ ದೃಷ್ಟಿಕೋನವನ್ನು ಅವಲಂಬಿಸಿರುತ್ತದೆ ಎಂದು ಅವರು ತಿಳಿಸಿದರು.

**ಸಾಕ್ರೆಟಿಸ್ (ಕ್ರಿ.ಪೂ.೪೬೯–ಕ್ರಿ.ಪೂ.೩೯೯)**

ಇವನನ್ನು ಸಾಮಾನ್ಯವಾಗಿ ಪ್ರಪಂಚದ ಮೊದಲ 'ವಿಚಾರವಾದಿ'ಯೆಂದು ಕರೆಯಲಾಗಿದೆ. ಅವನ ಸಮಕಾಲೀನ ಗ್ರೀಸ್‌ನಲ್ಲಿ ಅವನಷ್ಟು ಪ್ರೀತಿಸಲ್ಪಟ್ಟ ಮತ್ತು ದ್ವೇಷಕ್ಕೊಳಗಾದ ವ್ಯಕ್ತಿ ಮತ್ತೊಬ್ಬನಿರಲಿಲ್ಲ.

**ಜೀವನ**

ಕ್ರಿ.ಪೂ. ೪೬೯ರಲ್ಲಿ ಸಾಕ್ರಟಿಸ್ ಅಥೆನ್ಸ್‌ನಲ್ಲಿ ಜನಿಸಿದನು. ಅವನ ತಂದೆ ಒಬ್ಬ ಕಲ್ಲುಕುಟಿಗ. ತಾಯಿ ಸೂಲಗಿತ್ತಿ. ಅವನಲ್ಲಿ ಸದಾ ತುಡಿಯುತ್ತಿದ್ದ ಹಾಸ್ಯವೆಂದರೆ ತಾನು ತನ್ನ ತಾಯಿಯ ಉದ್ಯೋಗವನ್ನು ಮುಂದುವರೆಸಿ ಜನರು ತಮ್ಮ ಅನಿಸಿಕೆ ಮತ್ತು ಭಾವನೆಗಳನ್ನು ವ್ಯಕ್ತಪಡಿಸಲು ಸೂಲಗಿತ್ತಿಯಂತೆ(ಬೌದ್ಧಿಕ) ಕೆಲಸ ಮಾಡುವುದು. ಅವನು ವ್ಯಾಯಾಮಕ್ಕೆ ಹೆಚ್ಚಿನ ಗಮನಕೊಟ್ಟು ಆರೋಗ್ಯವನ್ನು ಚೆನ್ನಾಗಿ ಕಾಪಾಡಿಕೊಂಡಿದ್ದ. ಪಿಲೋಪೋನೇಶಿಯನ್ ಯುದ್ಧದಲ್ಲಿ ಭಾಗವಹಿಸಿ ಉತ್ತಮ ಯೋಧನೆಂದು ಹೆಸರು ಮಾಡಿದ್ದ. ಜಾನ್ ತಿಪ್ ಎಂಬುವವಳನ್ನು ವಿವಾಹವಾಗಿದ್ದ. ಸಂಸಾರವನ್ನು ನಿರ್ಲಕ್ಷಿಸಿದ್ದಕ್ಕಾಗಿ ಅವನ ಪತ್ನಿ ಅವನನ್ನು ನಿಂದಿಸುವುದನ್ನು ಸಾಕ್ರಟಿಸ್ ಶಾಂತನಾಗಿ ಸ್ವೀಕರಿಸುತ್ತಿದ್ದ. ಪತಿ-ಪತ್ನಿ ಸಂಬಂಧ ಸಾಮರಸ್ಯವಿಲ್ಲದೆ ಸಾಕ್ರೆಟಿಸ್‌ನಿಗೆ ಮತ್ತೊಬ್ಬ ಪತ್ನಿ ಇದ್ದಂತೆ ತೋರುತ್ತದೆ (ಯುದ್ಧದಲ್ಲಿ ಪುರುಷರು ಹೆಚ್ಚಿನ ಸಂಖ್ಯೆಯಲ್ಲಿ ಸಾಯುತ್ತಿದ್ದರಿಂದ ತಾತ್ಕಾಲಿಕವಾಗಿ ಬಹುಪತ್ನಿತ್ವವನ್ನು ಕಾಯಿದೆ ಪ್ರಕಾರ ಮನ್ನಿಸಲಾಗಿತ್ತು).

ಹೆಚ್ಚಿನ ವಸ್ತುಗಳನ್ನು ಸಂಚಯಿಸುವುದರಲ್ಲಿ ಸಾಕ್ರೆಟಿಸ್‌ನಿಗೆ ನಂಬಿಕೆ ಇರಲಿಲ್ಲ. ವರ್ಷಪೂರ್ತಿ ಅಚ್ಚುಕಟ್ಟಾಗಿರದ ಅದೇ ಬಟ್ಟೆಗಳನ್ನು ಧರಿಸುತ್ತಿದ್ದನು. ಕಾಲಿಗೆ ಚಪ್ಪಲಿ ಹಾಕದೇ ಬರೀ ಕಾಲಿನಲ್ಲಿಯೇ ನಡೆಯುತ್ತಿದ್ದನು. ಒಮ್ಮೆ ಮಾರುಕಟ್ಟೆಯಲ್ಲಿ ಮಾರಾಟಕ್ಕಿದ್ದ ಅಪಾರ ವಸ್ತುಗಳನ್ನು ಕಂಡು "ನನಗೆ ಬೇಡವಾದ ವಸ್ತುಗಳು ಎಷ್ಟೊಂದಿದೆ" ಅಂದನಂತೆ. "ತನ್ನ ಬಡತನವೇ ಎಷ್ಟೊಂದು ಶ್ರೀಮಂತವಾಗಿದೆ" ಎಂದು ಉದ್ಗಾರ ತೆಗೆದಂತೆ, ಆತ್ಮ ಸಂಯಮ, ಸಜ್ಜನಿಕೆಗಳು ಅವನಲ್ಲಿ ತುಂಬಿದ್ದರೂ ಅವನೇನೂ ಸಂತನಾಗಿರಲಿಲ್ಲ. ಸಂತೋಷಕ್ಕಾಗಿ, ಯೋಚನೆಗಳನ್ನು ಮರೆಯಲು ಕುಡಿಯುತ್ತಿದ್ದ. ಆದರೆ ಕುಡುಕನಾಗಿರಲಿಲ್ಲ. ಒಳ್ಳೆಯ ಸಹವಾಸವನ್ನು ಅವನು ಬಯಸುತ್ತಿದ್ದರೂ, ಧನಿಕರ ಮತ್ತು ರಾಜರ ಆಹ್ವಾನ ಹಾಗೂ ಕಾಣಿಕೆಗಳನ್ನು ತಿರಸ್ಕರಿಸುತ್ತಿದ್ದ. ಭೋಗಕ್ಕಾಗಿ ಗುಣವನ್ನು ಬಿಟ್ಟುಕೊಟ್ಟವನಲ್ಲ ಮತ್ತು ಒಳಿತು-ಕೆಡಕುಗಳಿಗಿರುವ ವ್ಯತ್ಯಾಸವನ್ನು ಬೇಗ ಗುರುತಿಸುತ್ತಿದ್ದ. ಪ್ಲೇಟೋ ತಿಳಿಸಿರುವಂತೆ "ಅತ್ಯಂತ ಬುದ್ಧಿವಂತ, ನ್ಯಾಯ ಪಕ್ಷಪಾತಿ ಮತ್ತು ತನಗೆ ತಿಳಿದಂತೆ ಗೊತ್ತಿರುವ ಮನುಷ್ಯರಲ್ಲೆಲ್ಲಾ ಅತ್ಯಂತ ಉತ್ತಮನಾದವನು" ಸಾಕ್ರೆಟಿಸ್ ಆಗಿದ್ದ.

**ಸಾಕ್ರೆಟಿಸ್‌ನ ವಿಚಾರಧಾರೆ**

ಸಾಕ್ರೆಟಿಸ್ ಧಾರ್ಮಿಕ ವ್ಯಕ್ತಿಯಲ್ಲದಿದ್ದರೂ ಧರ್ಮದ ವಿರುದ್ಧ ಒಡಕು ಮಾತು ಗಳನ್ನಾಡುತ್ತಿರಲಿಲ್ಲ. ತನ್ನ ನಗರ ದೇವತೆಗಳಿಗೆ ಕೇವಲ ಸೌಜನ್ಯಕ್ಕಾಗಿ ಸೇವೆ ಸಲ್ಲಿಸು ತ್ತಿದ್ದ, ಹಾಗೂ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಳ್ಳುತ್ತಿದ್ದ. ಬಾಹ್ಯ ವಿಷಯಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮೊದಲು "ನಿನ್ನನ್ನು ನೀನು ತಿಳಿ" ಎಂಬುದು ಅವನ ನಂಬಿಕೆಯಾಗಿತ್ತು. ಎಲ್ಲಾ ಅಧ್ಯಯನಗಳಿಗಿಂತ ಮನುಷ್ಯನ ಕುರಿತ ಅಧ್ಯಯನ ಮತ್ತು ಸಮಾಜದಲ್ಲಿ ಅವನು ಹೇಗೆ ಬಾಳಬೇಕೆಂದು ತಿಳಿಯುವುದೇ ಅತ್ಯಂತ ಮಹತ್ವದ ಅಧ್ಯಯನವೆಂದು ಅವನು ಸಾರಿದನು. ಟೀಕೆಗೊಳಗಾದ ಬದುಕು, ಬದುಕಲೇ ಅಯೋಗ್ಯ ವೆಂದನು. ಧಾರ್ಮಿಕತೆಯೇ ಇಲ್ಲದೆ ನೀತಿವಂತಿಕೆ ಸಾಧ್ಯವಿಲ್ಲವೆ ಎಂದು ಸಾಕ್ರೆಟಿಸ್ ಪ್ರಶ್ನಿಸಿದನು. ದೇವರ ಕಲ್ಪನೆಯೇ ಇರದೆ ನೈತಿಕತೆ ಇರಲು ಸಾಧ್ಯವಿಲ್ಲವೇ? ಎಂದು ಕೇಳಿದನು. ಧರ್ಮಮುಕ್ತ ಮತ್ತು ನೈತಿಕ ಸಂಹಿತೆ ನಾಗರಿಕತೆಯ ಚಿಂತನಾ ಸ್ವಾತಂತ್ರ್ಯವನ್ನು ಉಳಿಸಲು ಸಾಧ್ಯವೆ ಎಂದು ಪ್ರಶ್ನಿಸಿದನು. ಜ್ಞಾನವೇ ಅತ್ಯುತಷ್ಟವಾದದ್ದು, ಮತ್ತು ಅಜ್ಞಾನವೇ ವ್ಯಸನವೆಂದನು. ಅತ್ಯುತ್ತಮವಾದದ್ದೆ ಸಂತೋಷ. ಅದಕ್ಕೆ ಮೂಲವೇ ಜ್ಞಾನ ಎಂಬುದು ಅವನ ನಂಬಿಕೆಯಾಗಿತ್ತು.

ಸಾಕ್ರೆಟಿಸ್ ಪ್ರಜಾಪ್ರಭುತ್ವದ ವಿರೋಧಿಯಾಗಿದ್ದು, ಶ್ರೀಮಂತ ಪ್ರಭುತ್ವವನ್ನು (ಅರಿಸ್ಟೋಕ್ರಸಿ) ಪ್ರತಿಪಾದಿಸಿದನು. ಜ್ಞಾನ ಮತ್ತು ದಕ್ಷತೆ ಮಾತ್ರ ಅಥೆನ್ಸ್‌ನ ಸರ್ಕಾರವನ್ನು ಉಳಿಸೀತು ಎಂದನು. ಪ್ರಶ್ನಿಸದೆ ಏನನ್ನು ಸ್ವೀಕರಿಸದಿರುವಂತೆ ಸಾಕ್ರೆಟಿಸ್ ತನ್ನ ಶಿಷ್ಯರಿಗೆ ತಿಳಿಸಿದನು. ಇಷ್ಟಾದರೂ ಅಥೆನ್ಸ್‌ನ ಬಹುಸಂಖ್ಯಾತರಿಗೆ ಅವನ ವಿಚಾರಗಳು ಕಿರಿಕಿರಿಯುಂಟು ಮಾಡಿದವು. ಧರ್ಮದಲ್ಲಿಲ್ಲದೆ ಮನಸಾಕ್ಷಿಯಲ್ಲಿ ನೈತಿಕತೆಯನ್ನು ಹುಡುಕುವಂತೆ ಅವನು ಹೇಳಿದ್ದು ಅನೇಕರನ್ನು ರೇಗಿಸಿತು. ಸಾಕ್ರೆಟಿಸ್‌ನ ಮನುಷ್ಯ ಪ್ರಧಾನ ಅಧ್ಯಯನ, ವಿಜ್ಞಾನದ ಅಧ್ಯಯನ ಮತ್ತು ಬೆಳವಣಿಗೆಗೆ ಮಾರಕವಾಯಿತು.

ಆ ಕಾಲದಲ್ಲಿದ್ದ ಅಧಾರ್ಮಿಕತೆಗೆ ಕಿರಿಯರು, ಹಿರಿಯರ ಬಗೆಗೆ ಹೊಂದಿದ್ದ ಅವಿಧೇಯತೆಗೆ ಮತ್ತು ವಿದ್ಯಾವಂತ ಜನಾಂಗದಲ್ಲಿದ್ದ ನೈತಿಕ ಅಧಃಪತನಕ್ಕೆ ಸಾಕ್ರೆಟಿಸ್ ನನ್ನು ಗುರಿ ಮಾಡಿ ಕೊನೆಗೆ ಮರಣದಂಡನೆ ವಿಧಿಸಿದರು. ವಿಚಾರಣೆಯ ಸಂದರ್ಭದಲ್ಲಿ ಸಾಕ್ರೆಟಿಸ್ ಕೇಳಿದ ಒಂದೇ ಪ್ರಶ್ನೆಯೆಂದರೆ "ಸಮಾಜವನ್ನು ನಾನು ಭ್ರಷ್ಟಗೊಳಿಸಿರುವೆನೆಂದು ಹೇಳುವುದಾದರೆ ನನ್ನನ್ನು ಭ್ರಷ್ಟಗೊಳಿಸಿದವರು ಯಾರು"? ಕಾರಾಗೃಹದಲ್ಲಿದ್ದಾಗ ತಪ್ಪಿಸಿಕೊಳ್ಳುವ ಅವಕಾಶವಿದ್ದರೂ, ಅವನು ಹಾಗೆ ಮಾಡಲಿಲ್ಲ. ಕಾರಣ ಸಾಕ್ರೆಟಿಸ್ ತನ್ನ ತತ್ವಗಳಲ್ಲಿ ಅಚಲವಾದ ನಂಬಿಕೆಯನ್ನು ಹೊಂದಿದ್ದು ಮಾತ್ರವಲ್ಲದೆ ಅಮೋಘ ನೈತಿಕ ಶಕ್ತಿಯನ್ನು ಹೊಂದಿದ್ದ. ಕೊನೆಗೆ ಅಂಜದೆ, ಅಳುಕದೆ, ದುಃಖಿಸದೆ ಹೆಮ್ಲಾಕ್ ವಿಷವನ್ನು ಕುಡಿದು ಶಾಂತಿಯಿಂದಲೇ ಪ್ರಾಣಬಿಟ್ಟ. ಆಗ ಅವನಿಗೆ ೭೦ ವರ್ಷ. ತನ್ನ ಪ್ರಾಣಕ್ಕಿಂತ ತನ್ನ ತತ್ವ ಕೊನೆಗೂ ಮುಖ್ಯವಾಯಿತು.

**ಪ್ಲೇಟೊ (ಕ್ರಿ.ಪೂ.೪೨೭-೩೪೭)**

ಸಾಕ್ರೆಟಿಸ್‌ನ ಶಿಷ್ಯನಾದ ಪ್ಲೇಟೋ ತತ್ವಜ್ಞಾನವನ್ನು ಉಪದೇಶಿಸಲು ಒಂದು ವಿದ್ವತ್ ಪರಿಷತ್ತನ್ನು ಸ್ಥಾಪಿಸಿದನು. ಸಾಕ್ರೆಟಿಸ್‌ನ ರಾಜಕೀಯ ಚಿಂತನೆಗಳನ್ನು ಬರೆದಿಟ್ಟನು. ಏಕೆಂದರೆ ಸಾಕ್ರೆಟಿಸ್ ಸ್ವತಃ ಏನನ್ನೂ ಬರೆಯಲಿಲ್ಲ. ಪ್ಲೇಟೋನ ಆದರ್ಶ ರಾಜ್ಯದ ಕಲ್ಪನೆಯನ್ನು ಅವನು ಬರೆದ ಎರಡು ಗ್ರಂಥಗಳಾದ 'ರಿಪಬ್ಲಿಕ್' ಮತ್ತು 'ಲಾಸ್' ಗಳಲ್ಲಿ ಕಾಣಬಹುದು. ಪರಿಷತ್ ವಿಧಾನದ ಶಿಕ್ಷಣದಲ್ಲಿ ತರಬೇತಿ ಹೊಂದಿದ್ದ "ಪೋಷಕರು" ಮಾತ್ರ ರಾಜ್ಯವನ್ನು ಆಳಬೇಕೆಂದು ಸೂಚಿಸಿದನು. ಅಲ್ಲದೇ ಈ ಪೋಷಕರು ಸ್ವಂತ ಆಸ್ತಿ-ಪಾಸ್ತಿ ಏನನ್ನೂ ಹೊಂದದೆ ಕುಟುಂಬ ರಹಿತರಾಗಿ ನಿಸ್ವಾರ್ಥದಿಂದ ರಾಜ್ಯವಾಳಬೇಕೆಂದು ಸೂಚಿಸಿದನು. ಸ್ವಯಂ ಪರಿಪೂರ್ಣ ವಸ್ತುಗಳು ಮತ್ತು ಉತ್ಕೃಷ್ಟ ಕಲ್ಪನೆಗಳಿವೆಯೆಂದು ಪ್ಲೇಟೋ ಹೇಳಿದನು. 'ಕಮ್ಯುನಿಸಂ' ಎಂಬ ಪದವನ್ನು ಮೊದಲು ಬಳಸಿದವನು ಪ್ಲೇಟೋ. ಆದರೆ, ಆ ಪದವನ್ನು ಕಾರ್ಲ್‌ಮಾರ್ಕ್ಸ್‌ರ ಅರ್ಥದಲ್ಲಿ ಬಳಸಿಲ್ಲ. ಇವನು ಒಬ್ಬ ಪ್ರಖ್ಯಾತ ಕಲಾವಿಮರ್ಶಕನೂ ಆಗಿದ್ದ.

**ಅರಿಸ್ಟಾಟಲ್**

ಅರಿಸ್ಟಾಟಲ್ ಪ್ಲೇಟೋನ ಆತ್ಮೀಯ ಶಿಷ್ಯ ಮತ್ತು ಅಲೆಗ್ಸಾಂಡರ್‌ನ ಉಪಾಧ್ಯಾಯ ನಾಗಿದ್ದ. ಅವನನ್ನು "ಚಲಿಸುವ ವಿಶ್ವವಿದ್ಯಾನಿಲಯ' ಎಂದು ಕರೆಯುತ್ತಿದ್ದರು. ಅರಿಸ್ಟಾಟಲ್ ಸಂವಿಧಾನಾತ್ಮಕ ಸರ್ಕಾರವನ್ನು ಬೆಂಬಲಿಸಿದನು. ಪ್ರಜೆಗಳು ಮಾಡಿದ ಕಾಯಿದೆಗಳು ಸರ್ಕಾರದ ಮೂಲವಾಗಿರಬೇಕೆಂಬುದು ಅವನ ಅಭಿಪ್ರಾಯ. ಮಾನವರು ಸಮಾಜ ಜೀವಿಗಳು. ಅವರು ರಾಜ್ಯವನ್ನು ರಚಿಸುವುದು ಸ್ವಾಭಾವಿಕ. ರಾಜ್ಯಗಳು ಎಲ್ಲರ ಹಿತರಕ್ಷಣೆಗಾಗಿ ಮಾನವನ ನೈತಿಕ ವಿಕಾಸಕ್ಕಾಗಿ ಹುಟ್ಟಿವೆ ಎಂದು ತಿಳಿಸಿದನು. ತರ್ಕಶಾಸ್ತ್ರ, ಜೀವಶಾಸ್ತ್ರ, ಪ್ರಾಣಿಶಾಸ್ತ್ರ, ಸಸ್ಯಶಾಸ್ತ್ರ, ಅಲಂಕಾರ ಶಾಸ್ತ್ರ, ನೀತಿ ಶಾಸ್ತ್ರ ಮುಂತಾದ ವಿಸ್ಮಯಗೊಳಿಸುವ ವಿಭಿನ್ನ ವಿಷಯಗಳ ಮೇಲೆ ಗ್ರಂಥಗಳನ್ನು ರಚಿಸಿದನು. ಅರಿಸ್ಟಾಟಲ್ ನನ್ನು ರಾಜಕೀಯ ಶಾಸ್ತ್ರದ ಪಿತಾಮಹನೆಂದು ಕರೆದಿದ್ದಾನೆ.

**ಗ್ರೀಕರಲ್ಲಿ ಇತಿಹಾಸ ಪ್ರಜ್ಞೆ**

ಇತಿಹಾಸವನ್ನು ಒಂದು ಸ್ವತಂತ್ರ ಶಾಸ್ತ್ರವಾಗಿ ಮೊದಲು ಬೆಳೆಸಿದವರು ಗ್ರೀಕರು. ಮನುಷ್ಯನ ಗತಕಾಲದ ಬದುಕನ್ನು ಕುರಿತು ವಸ್ತುನಿಷ್ಟವಾಗಿ ಬರೆಯಲು ಗ್ರೀಕರು ಮೊದಲು ಪ್ರಾರಂಭಿಸಿದರು. ಕ್ರಿ.ಪೂ.೫ನೇ ಶತಮಾನದಲ್ಲಿ ಬದುಕಿದ್ದ ಹೆರಡೋಟಸ್ ನನ್ನು ಇತಿಹಾಸದ ಪಿತಾಮಹನೆಂದು ಕರೆಯುತ್ತಾರೆ. ಚರಿತ್ರೆಯನ್ನು ಗದ್ಯರೂಪದಲ್ಲಿ ಮೊದಲು ಬರೆದವನು ಹೆರಡೋಟಸ್ . ಇವನು ಬರೆದ

'ಹಿಸ್ಟರೀಸ್' ಪುಸ್ತಕ ಈಜಿಪ್ಟ್ ಮತ್ತು ಪರ್ಶಿಯಾಗಳ ಬಗ್ಗೆ ಸಾಕಷ್ಟು ಮಾಹಿತಿ ನೀಡುತ್ತದೆ. ಇವನ ನಂತರ ಇತಿಹಾಸವನ್ನು ಇನ್ನು ಪ್ರಬುದ್ಧವಾಗಿ ಬರೆದವನು ಥೂಸಿಡೈಡಿಸ್. ಹೆರಡೋಟಸ್‌ಗೂ ಮತ್ತು ಇವನಿಗೂ ಸುಮಾರು ೫೦ ವರ್ಷಗಳ ಅಂತರವನ್ನು ಕಾಣಬಹುದು. ಥೂಸಿಡೈಡಿಸ್ ಬರೆದ "ಪಿಲೊಫೋನೇಶಿಯನ್ ಯುದ್ಧ"ಎಂಬ ಗ್ರಂಥದಲ್ಲಿ ಇತಿಹಾಸ ರಚನಾಕ್ರಮ ಕುರಿತ ಹೆರಡೋಟಸ್‌ನ ಪ್ರಬುದ್ಧತೆ ಇವನಲ್ಲೂ ಕಾಣಬಹುದು. ಒಟ್ಟಾರೆ ಗ್ರೀಕರು ಪ್ರಾರಂಭಿಸಿದ ಇತಿಹಾಸ ರಚನಾ ಕಲೆ ಅನಂತರ ಬೇರೆ ಬೇರೆ ಕಡೆಗಳಿಗೆ ಪ್ರವಹಿಸಿತು.

## ಪ್ರಾಚೀನ ಗ್ರೀಸ್‌ನಲ್ಲಿ ವಿಜ್ಞಾನ

ವಿಜ್ಞಾನವನ್ನು ಧರ್ಮಶಾಸ್ತ್ರದಿಂದ ಬೇರ್ಪಡಿಸಿ, ಸ್ವತಂತ್ರ ವೈಜ್ಞಾನಿಕ ಸಂಶೋಧನೆಗಳನ್ನು ಪ್ರಾರಂಭಿಸಿದ ಕೀರ್ತಿ ಗ್ರೀಕರಿಗೆ ಸಲ್ಲುತ್ತದೆ. ಮಿಲಿಟಸ್‌ನ ಥೆಲ್ಸ್ ಎಂಬಾತನು ಗ್ರಹಣಗಳನ್ನು ಕರಾರುವಾಕ್ಕಾಗಿ ಪ್ರತಿಪಾದಿಸಿದನಲ್ಲದೆ ರೇಖಾಗಣಿತವನ್ನು ಪ್ರಚಾರಕ್ಕೆ ತಂದನು. ಪೈಥಾಗೊರಸ್ (ಕ್ರಿ.ಪೂ.೫೮೨-೫೦೧) ಗಣಿತ ಶಾಸ್ತ್ರಜ್ಞನಾಗಿದ್ದನು. ರೇಖಾ ಗಣಿತದಲ್ಲಿ ಪ್ರಮೇಯಗಳ ಮತ್ತು ಪ್ರಮಾಣಗಳ ವಿಧಾನ ಗಳನ್ನು ಪ್ರಚಾರಕ್ಕೆ ತಂದನು. ಇಂದಿಗೂ ಶಾಲೆಗಳಲ್ಲಿ ವಿದ್ಯಾರ್ಥಿಗಳು ಅಧ್ಯಯನ ಮಾಡುವ ಫೈಥಾಗರಸ್‌ನ ಪ್ರಮೇಯವನ್ನು ಪ್ರಮಾಣ ಪಡಿಸಿದನು.

ಮನುಷ್ಯನು ಮೀನಿನಿಂದ ಉದ್ಭವಿಸಿದನು. ಆಕಾಶದ ಅಂಗಗಳಿಂದ ಆವರಿಸಲ್ಪಟ್ಟ ಭೂಮಿಯು ಬಾಹ್ಯಾಕಾಶದಲ್ಲಿ ನೇತಾಡುತ್ತಿದೆ ಎಂದು ಅನ್ ಮ್ಯಾಂಡರ್ (ಕ್ರಿ.ಪೂ.೬೧೧-೫೪೭) ಅಭಿಪ್ರಾಯಪಟ್ಟನು. ಅನಕ್ಸ್‌ಗೊರಸ್ (ಕ್ರಿ.ಪೂ.೫೦೦-೪೨೮) ಪ್ರಾಣಿಗಳನ್ನು ಕೊಯ್ದು ಅವುಗಳ ಅಂಗರಚನೆಗಳನ್ನು ಅಧ್ಯಯನ ಮಾಡಿದನು. ಅನಕ್ಸ್‌ಗೊರಸ್ ಮತ್ತು ಎಪಿಡೋಕ್ಲೀಸರು ವಿಕಾಸವಾದದ ರೂಪುರೇಷೆಗಳನ್ನು ಎಳೆದಿದ್ದರು. ಹಿಪ್ಪೊರೇಟ್ಸ್ (ಕ್ರಿ.ಪೂ.೪೬೦-೩೭೭) ವೈದ್ಯಶಾಸ್ತ್ರದ ಪಿತಾಮಹನಾಗಿದ್ದಾನೆ. ರೋಗಗಳು ಬರಲು ಹಾಗೂ ಗುಣವಾಗಲು ಸ್ವಾಭಾವಿಕ ಸಂಗತಿಗಳು ಕಾರಣವೇ ವಿನಃ ಅಲೌಕಿಕ ಕಾರಣಗಳಲ್ಲವೆಂದು ತಿಳಿಸಿದನು. ಮನಸ್ಸನ್ನು ಆಲೋಚನೆಯ ಕೇಂದ್ರವೆಂದು ತಿಳಿಸಿ, ಆಪ್ಟಿಕ್‌ನವರನ್ನು ಮೊದಲು ಗುರುತಿಸಿ ನಿದ್ದೆಯನ್ನು ವಿವರಿಸಿದವನು ಹಿಪ್ಪೊರೇಟ್ಸ್. "ಕಾಪಸ್ ಹಿಪಪೊಕ್ರಟಿಕಂ" ಕ್ರಿ.ಪೂ.೫ನೇ ಶತಮಾನದಿಂದ ಕ್ರಿ.ಪೂ.೨ನೇ ಶತಮಾನದವರೆಗೆ ಅನೇಕ ಲೇಖಕರಿಂದ ಬರೆಯಲ್ಪಟ್ಟ ಗ್ರಂಥ. ಇಂದಿಗೂ ಎಲ್ಲಾ ವೈದ್ಯ ಪದವೀಧರರು ಸ್ವೀಕರಿಸುವ "ಹಿಪೋಕ್ರಟ್ಸ್ ಪ್ರಮಾಣ ವಚನ" ಪ್ರಖ್ಯಾತವಾಗಿದೆ. ವೈದ್ಯರು ಅನುಸರಿಸ ಬೇಕಾದ ನೀತಿನಿಯಮಾವಳಿಗಳು ಆ ಪ್ರಮಾಣವಚನ ದಲ್ಲಿ ಅಡಕವಾಗಿದೆ. ಏಟ್ನಾದ ಎಂಪಿಡೋಕ್ಲಿಸ್ ಪ್ರಕಾರ ನಿರಂತರ ಚಲನೆಯಲ್ಲಿರುವ ಆಗೋಚರ ಅಣುಗಳ ಆಕಸ್ಮಿಕ ಜೋಡಣೆಗಳಿಂದ ಎಲ್ಲಾ ವಸ್ತುಗಳು ಉಂಟಾಗುತ್ತವೆ. ಮತ್ತೆ ಗ್ರೀಕ್ ಗಣಿತಜ್ಞರು ತ್ರಿಕೋಣಮಿತಿ ಮತ್ತು ಕ್ಯಾಲ್‌ಕ್ಯುಲಸ್‌ಗಳ ಬುನಾದಿಯನ್ನು ಹಾಕಿದರು. ಶಂಕುವಿನ ಪರಿಚ್ಛೇದಗಳ ಅಧ್ಯಯನವನ್ನು ಪ್ರಾರಂಭಿಸಿ ಪೂರ್ಣಗೊಳಿಸಿದರು. ಮೂರು ಆಯಾಮಗಳ ಜ್ಯಾಮಿತಿಯನ್ನು ಗ್ರೀಕರು ಸಾಪೇಕ್ಷವಾಗಿ ಎಂಥ ಪರಿಪೂರ್ಣ ಗೊಳ್ಯದ್ದರೆಂದು ಡೆಕಾರ್ಟ್, ಪ್ಯಾಸ್ಕಲ್ ಮತ್ತು ಇ್‌ಯಾರಟೋಸ್ಥೀನ್ಸ್ ಮೊದಲಾದವರು ಭೂಮಿಯನ್ನು ಅಳೆದು ನಕ್ಷೆ ತಯಾರಿಸುವವರೆಗೆ ಜ್ಯಾಮಿತಿಯು ಗ್ರೀಕರು ತಲುಪಿದ ಹಂತದಲ್ಲಿಯೇ ಇತ್ತು. ಅರಿಸ್ಟಾಟಲ್ ಮತ್ತು ಥಿಯೋ ಪ್ರಾಸ್ತಸರು ಪ್ರಾಣಿ ಹಾಗೂ ಸಸ್ಯ ಪ್ರಪಂಚವನ್ನು ವರ್ಗೀಕರಿಸಿದುದೇ ಅಲ್ಲದೇ ವಿಜ್ಞಾನದ ಶಾಖೆಗಳಾದ ಪವನಶಾಸ್ತ್ರ, ಪ್ರಾಣಿಶಾಸ್ತ್ರ, ಭ್ರೂಣಶಾಸ್ತ್ರ ಮತ್ತು ಸಸ್ಯಶಾಸ್ತ್ರಗಳನ್ನು ಹೆಚ್ಚಿನಂಶ ರೂಪಿಸಿದ್ದರು. ಭೌತಶಾಸ್ತ್ರದಲ್ಲಿ ಅರ್ಕಿಮಿಡಿಸ್ ಒಬ್ಬ ಪ್ರಖ್ಯಾತ ವಿಜ್ಞಾನಿಯಾಗಿದ್ದ.

## ಗ್ರೀಕ್ ಸಾಹಿತ್ಯ

ಸಾಹಿತ್ಯ ಕ್ಷೇತ್ರದಲ್ಲಿಯೂ ಗ್ರೀಕರ ಕೊಡುಗೆ ಉಜ್ವಲವಾಗಿದೆ : ಬುದ್ಧಿ ಹಾಗೂ ಸೌಂದರ್ಯಶಾಸ್ತ್ರಗಳ ಕ್ಷೇತ್ರದಲ್ಲಿ ಪ್ರಾಯಶಃ ಗ್ರೀಕರು ಮಹಾಸೌಭಾಗ್ಯವಂತರಾಗಿದ್ದರು. ವಾಸ್ತವವಾಗಿ ಈ ಎರಡು ಕ್ಷೇತ್ರಗಳಲ್ಲಿಯೂ ಸರ್ವಕಾಲದಲ್ಲಿಯೂ ಅತ್ಯಂತ ಪ್ರಖ್ಯಾತವೆನಿಸಿದ ಸಾಧನೆಗಳು ಗ್ರೀಕರಿಂದ ಬಂದವು. ಹೋಮರ್ ಗ್ರೀಕ್ ಕವಿಗಳಲ್ಲಿ ಮೊದಲಿಗ. "ಇಲಿಯಡ್" ಮತ್ತು "ಒಡೆಸಿ" ಎಂಬ ಎರಡು ಮಹಾಕಾವ್ಯಗಳನ್ನು ರಚಿಸಿದ. ಇವನು ಕ್ರಿ.ಪೂ. ೯ನೇ ಶತಮಾನದಲ್ಲಿ ಜೀವಿಸಿದ್ದನು. ಗ್ರೀಸ್‌ನ ಶಾಲೋಪಾಧ್ಯಾಯ ಎಂದು

ಕರೆಸಿಕೊಂಡ. ಹೋಮರನ ಕೃತಿಗಳ ಹಸ್ತಕೌಶಲ ಹಾಗೂ ಕಲಾಕೌಶಲ್ಯದ ಹಂಚಿಕೆಯಲ್ಲಿ ಹೆಮ್ಮೆಯನ್ನು ತೋರುತ್ತವೆ. ಅವು ಗೌರವ, ಧೈರ್ಯ, ಶಿಸ್ತು ಮತ್ತು ದೇಶಪ್ರೇಮ ಇವುಗಳನ್ನು ಸದ್ಗುಣಗಳೆಂದು ಸ್ಥಾಪಿಸಿವೆ. ಅಲ್ಲದೆ ದೇವರ ಕೃಪೆಯನ್ನು ಪಡೆಯುವುದರಲ್ಲಿ ಮಾನವ ಮತ್ತು ಅವನ ಶಕ್ತಿಯನ್ನು ಶ್ಲಾಘಿಸಿವೆ.

ಮಹಾಕಾವ್ಯಗಳ ನಂತರ ಭಾವಗೀತೆ, ದುರಂತ ಮತ್ತು ಸುಖಾಂತ ರೂಪದ ಸಾಹಿತ್ಯ ರಚನೆ ಪ್ರಾರಂಭವಾಯಿತು. ಭಾವಗೀತೆಗಳಲ್ಲಿ ಪ್ರೇಮಗೀತೆಗಳು, ಶೋಕ ಗೀತೆಗಳು ಮತ್ತು ಚಾಟು ಪದ್ಯಗಳು ಸೇರಿವೆ. 'ಗಾನದೇವರು' ಎಂಬ ಸಮಕಾಲೀನರು ಪರಿಗಣಿಸಿದ್ದಾಗ ಪಿಂಡಾರ ಆ ಕಾಲದ ಪ್ರಸಿದ್ಧ ಭಾವಕವಿಯಾಗಿದ್ದನು. ಇತಿಹಾಸದ ಪ್ರಥಮ ಕವಯತ್ರಿಯಾದ ಸಾಪೊ(ಕ್ರಿ.ಪೂ.೬ನೇ ಶತಮಾನ) ಹೋಮರ್‌ನಷ್ಟೇ ಮೆಚ್ಚುಗೆಯನ್ನು ಗಳಿಸಿದ್ದಳು. ಪ್ಲೇಟೋ ಆಕೆಯನ್ನು ಹತ್ತನೇ ಕಾವ್ಯ ದೇವತೆ ಎಂದು ಕರೆದಿದ್ದಾನೆ. 'ಡ್ರಾಮ' ಎಂಬ ಪದವನ್ನು ಮೊದಲು ಬಳಸಿದವರು ಗ್ರೀಕರು. ನಾಟಕ ಕ್ಷೇತ್ರದಲ್ಲಿ(ಅದರಲ್ಲೂ ರುದ್ರನಾಟಕ) ಗ್ರೀಕರ ಸಾಧನೆ ಅತ್ಯಂತ ವಿಶಿಷ್ಟವೂ ಹಾಗೂ ಉಜ್ವಲವೂ ಅಗಿದೆ. ನಾಟಕಕಾರರಲ್ಲಿ ಮೊದಲು ಪ್ರಖ್ಯಾತನೆಂದರೆ ಈಸ್ಕಿಲಾನ್(ಕ್ರಿ.ಪೂ.೫ನೇ ಶತಮಾನ). ಇವನು ಬರೆದ ಎಪ್ಪತ್ತು ನಾಟಕಗಳಲ್ಲಿ ಕೇವಲ ಏಳು ಮಾತ್ರ ಉಳಿದಿವೆ. ಇವುಗಳಲ್ಲಿ ಅತ್ಯಂತ ಪ್ರಖ್ಯಾತವಾದುದು 'ಪ್ರೊಮಿಡಿಯಸ್ ಬಾಂಡ್'. 'ಅಗಮೆಮ್ನಾನ್' ಇವನ ಇನ್ನೊಂದು ಪ್ರಸಿದ್ಧ ನಾಟಕ. ಸೊಮೊಕ್ಲಿಸ್ ಮತ್ತೋರ್ವ ಪ್ರಖ್ಯಾತ ರುದ್ರನಾಟಕಕಾರ. ಇವನು ೧೧೩ ನಾಟಕಗಳನ್ನು ಬರೆದರೂ ಕೇವಲ ಏಳು ನಾಟಕಗಳು ಮಾತ್ರ ದೊರೆತಿವೆ. ಜೀವನದಲ್ಲಿ ಇವನು ಸಂಪತ್ತು, ಸೌಂದರ್ಯ, ಬುದ್ಧಿ ಮತ್ತು ಆರೋಗ್ಯವನ್ನು ಪಡೆದ ಸೌಭಾಗ್ಯಶಾಲಿಯಾಗಿದ್ದ. ಜೊತೆಗೆ ಸಂಗೀತಗಾರನೂ, ಕುಸ್ತಿಪಟುವೂ ಆಗಿದ್ದು, ಅಭಿನಯ ದಲ್ಲಿ ಚತುರನಾಗಿದ್ದನು. ಅಥೆನ್ಸ್‌ನ ರಾಜ್ಯ ಪೆರಿಕ್ಲಿಸ್‌ನ ಆತ್ಮೀಯ ಸ್ನೇಹಿತನೂ ಆಗಿದ್ದು ಯುದ್ಧದಲ್ಲಿ ಪಾಲ್ಗೊಳ್ಳುತ್ತಿದ್ದನು. ನಿರಂತರವಾಗಿ ೩೦ ವರ್ಷಗಳ ಕಾಲ ನಾಟಕ ರಂಗ ವನ್ನು ಆಳಿದನು. 'ಈಡಿಪಸ್ ದಿ ಕಿಂಗ್', 'ಅಂತಿಗೊನೆ', 'ಎಲಿಕ್ಟ್ರಾ' ಮತ್ತು 'ಈಡಿಪಸ್ ಆಟ್ ಕಲೋನಸ್' ಇವನ ಜಗದ್ವಿಖ್ಯಾತ ನಾಟಕಗಳು. ಮನೋವಿಜ್ಞಾನದಲ್ಲಿ ಬಳಸುವ 'ಈಡಿಪಸ್ ಕಾಂಪ್ಲೆಕ್ಸ್' ಮತ್ತು 'ಎಲಿಕ್ಟ್ರಾಕಾಂಪ್ಲೆಕ್ಸ್'ಗಳು ಇವನ ನಾಟಕಗಳಿಂದಲೇ ತೆಗೆದುಕೊಂಡವುಗಳು.

**ಯೂರಿಪಿಡಿಸ್**

ಇವನು ಮೂಲತಃ ಒಬ್ಬ ರಮ್ಯ ಕವಿಯಾದುದರಿಂದ, ತತ್ವಶಾಸ್ತ್ರದ ಕಡೆಗೆ ಆಗಾಗ್ಗೆ ಇವನು ಗಮನಹರಿಸಿದ್ದರಿಂದ ಅವನು ರಚಿಸಿದ ನಾಟಕಗಳು ಪರಿಪೂರ್ಣತೆಯನ್ನು ಪಡೆಯಲಿಲ್ಲವೆಂದು ಅಭಿಪ್ರಾಯ ಪಡಲಾಗಿದೆ. ಯೂರಿಪಿಡಿಸ್ ಒಟ್ಟು ೭೫ ನಾಟಕಗಳನ್ನು ರಚಿಸಿದನು. ಇವುಗಳಲ್ಲಿ ೧೮ ಉಳಿದು ಬಂದಿದೆ. 'ಮೀಡಿಯ' 'ಹಿಮೊಲೈಟಸ್' ಮತ್ತು 'ದಿ ಟ್ರ್ಯೂಜಾನ್ ವಿಮೆನ್' ಇವನು ಬರೆದ ಪ್ರಖ್ಯಾತ ನಾಟಕಗಳು. ಅರಿಸ್ಟೋವೆನಿಸ್ ಪ್ರಾಚೀನ ಗ್ರೀಸ್‌ನಲ್ಲಿ ಸುಖಾಂತ ನಾಟಕಗಳನ್ನು ಬರೆದ ನಾಟಕಕಾರನಾಗಿದ್ದ. ಇಂದು ಸಹ ಸಾಹಿತ್ಯದಲ್ಲಿ ಬಳಸುವ ಲಿರಿಕ್, ಓಡ್, ನೊವೆಲ್, ಎಸ್ಸೆ, ಒರೇಶನ್, ಬಯಾಗ್ರಫಿ ಮೊದಲಾದವುಗಳು ಗ್ರೀಕರಿಂದ ಬಂದವುಗಳು.

**ಕಲೆ ಮತ್ತು ವಾಸ್ತುಶಿಲ್ಪ**

ಪ್ರಾರಂಭದಲ್ಲಿ ಗ್ರೀಕರ ಕಲೆಯು ಈಜಿಪ್ಷಿಯನ್ ಮತ್ತು ಸಿರಿಯನ್ ಶೈಲಿಗಳಿಂದ ಪ್ರಭಾವಿತವಾದರೂ ಕ್ರಿ.ಪೂ.೬ನೆಯ ಶತಮಾನದಿಂದ ಸ್ವತಂತ್ರ ಸ್ಥಾನಮಾನವನ್ನು ಕಂಡುಕೊಂಡಿತು. ಗ್ರೀಕ್ ಕಲಾಪದ್ಧತಿಯಲ್ಲಿ ಮುಖ್ಯವಾಗಿ ಮೂರು ಪ್ರಧಾನ ಶೈಲಿಗಳನ್ನು ಗುರುತಿಸಬಹುದು. ಡೋರಿಕ್ , ಅಯೋನಿಕ್ ಮತ್ತು ಕೊರಿಂಥಿಯನ್ ಇವೇ ಆ ಮೂರು ಶೈಲಿಗಳು. ಈ ಮೂರು ಶೈಲಿಗಳಲ್ಲೂ ದೇವಾಲಯಗಳನ್ನು ನಿರ್ಮಿಸಿದರು. ಡೋರಿಕ್ ಶೈಲಿಯು ಸರಳವಾಗಿದ್ದರೆ, ಅಯೊನಿಕ್ ಮತ್ತು ಕೊರಿಂಥಿಯನ್ ಶೈಲಿಗಳು ಹೆಚ್ಚು ಅಲಂಕಾರಗಳಿಂದ ಕೂಡಿದ್ದವು. ಮೂರ್ತಿಶಿಲ್ಪವನ್ನು ಗ್ರೀಕರು ಮೂಲಭೂತವಾಗಿ ಶೃಂಗಾರದ ಸಾಧನವಾಗಿ ಬಳಸಿದರು.

ಗ್ರೀಕರು ಹೊಂದಿದ್ದ ದೇವಾಲಯದ ಕಲ್ಪನೆ ಪೌರ್ವಾತ್ಯ ದೇಶಗಳಿಗಿಂತ ಭಿನ್ನವಾಗಿತ್ತು. ಅವರ ಪ್ರಕಾರ ದೇವಾಲಯವು ದೇವರ ಅವಾಸಸ್ಥಾನವಾಗಿರಲಿಲ್ಲ. ಬದಲಾಗಿ ದೈವಾಂಶವುಳ್ಳ ಮತ್ತು ಆಶ್ಚರ್ಯಕರವಾದ ವಸ್ತುವಿನ ಗೌರವ ಸೂಚಕವಾಗಿತ್ತು. ಅವರ ಪ್ರಾಚೀನ ದೇವಾಲಯಗಳಲ್ಲಿ ಡೋರಿಕ್ ಶೈಲಿಯಲ್ಲಿರುವ ಅಥವಾ ದೇವಾಲಯ ಮತ್ತು ಪಾರ್ಥಿಯಾನ್ ಹೆಚ್ಚು ಪ್ರಸಿದ್ಧವಾಗಿವೆ.

ಪೆರಿಕ್ಲಿಸ್‌ನ ಕಾಲದಲ್ಲಿ ಅಕ್ರೊಪೊಲಿಸ್‌ನಲ್ಲಿ ಕಟ್ಟಿಸಿದ ಈ ದೇವಾಲಯವು ಈ ಭಗ್ನಾವಸ್ಥೆಯಲ್ಲಿದ್ದರೂ ಸಹ, ಗ್ರೀಕ್ ವಾಸ್ತುಶಿಲ್ಪದ ಉತ್ತಮ ರಚನೆಯಾಗಿದೆ. ಅದರ ಹತ್ತಿರದಲ್ಲಿಯೇ ಕಟ್ಟಿಸಿರುವ 'ಇರೆಕ್ಲಿಥಿಯಂ' ಅಯೋನಿಕ್ ಶೈಲಿಯಲ್ಲಿದೆ. ಅಥೆನ್ಸ್ ನಲ್ಲಿರುವ ಲಿಫಿಕ್ರೆಟಸ್‌ನ ಸ್ಮಾರಕ ಕಾರಿಂಥಿಯನ್ ಶೈಲಿಯಲ್ಲಿದೆ. ಹೆಲನಿಕ್ ವಾಸ್ತುಶಿಲ್ಪವು ಹೆಚ್ಚಾಗಿ ಲೌಕಿಕ ಕಟ್ಟಡಗಳಲ್ಲಿ ಕಾಣಬರುತ್ತದೆ.

ಪ್ರಾಚೀನ ಗ್ರೀಕರು ಮಾನವ ಮತ್ತು ಮಾನವ ಸೌಂದರ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದರು. ಆದ್ದರಿಂದ ಕಲಾಕಾರರು ಮನುಷ್ಯನನ್ನು ಸ್ವಾಭಾವಿಕವಾಗಿ ರಚಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಿದರು. ಅವರಿಗೆ ಮಾನವ ದೇಹದ ಅಂಗರಚನೆಯ ಪೂರ್ಣ ಪರಿಚಯವಿದ್ದಿತು. ಮಾನವನಂತೆಯೇ ರಚಿಸುವ ಕಾಲ ನೈಪುಣ್ಯತೆಯನ್ನು ಅವರು ಪಡೆದಿ ದ್ದರು. ಒಲಿಂಪಿಕ್ ಕ್ರೀಡೆಗಳ ಸಂದರ್ಭದಲ್ಲಿ ಬತ್ತಲಾಗಿ ಭಾಗವಹಿಸುತ್ತಿದ್ದ ಕ್ರೀಡಾ ಪಟುಗಳ ಅಂಗಸೌಷ್ಠವವೂ ಗ್ರೀಕ್ ಕಲಾಕಾರರಿಗೆ ಸ್ಪೂರ್ತಿ ನೀಡಿತು. ಹೆಲನ್ ಶಿಲ್ಪಗಳು ಶ್ರೇಷ್ಠತೆಗೆ ಹೆಸರಾಗಿವೆ. ಪರ್ಗಮಮ್‌ನಲ್ಲಿರುವ 'ಡಯಿಂಗ್ ಗಾಲ್', ರೋಡ್ಸ್‌ನಲ್ಲಿರುವ 'ಲವೊಕೂನ್' ಮತ್ತು 'ವಿಕ್ಟರಿ ಆಫ್ ಸಮೋಕ್ರೇಸ್' ಮತ್ತು ಅಲೆಗ್ಸಾಂಡ್ರಿಯನ್ ಶಾಲೆಯ 'ವೀನಸ್ ಅಫ್‌ಮಿಲೊ" ಈ ಪ್ರತಿಮೆಗಳು ನಿರುಪಮ ರಚನೆಗಳಾಗಿವೆ. 'ಲವೊಕೋನ್' ಪ್ರತಿಮೆಯನ್ನು ಮೈಕೆಲಾಂಜಲೊ ಕಲಾಕೌತುಕವೆಂದು ಕರೆದು ತನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾನೆ. ಭಾರತದ ಮೇಲೆ ಅಲೆಗ್ಸಾಂಡರ್‌ನ ಆಕ್ರಮಣದ ನಂತರ ಬ್ಯಾಕ್ಟ್ರಿಯಾದಲ್ಲಿ ನೆಲೆಸಿದ್ದ ಗ್ರೀಕರ ಪ್ರಭಾವಕ್ಕೆ ಭಾರತದ ಗಾಂಧಾರಕಲೆಯೂ ಒಳಗಾಯಿತು.

ಗ್ರೀಕರು ಚಿತ್ರಕಲೆಯನ್ನು ಮೊದಲು ಪುಷ್ಪಕರಂಡಕಗಳ ಮೇಲೆ ಪ್ರಾರಂಭಿಸಿದರು. ಹೆಲಿನಿಸ್ಟಿಕ್ ಕಾಲದಲ್ಲಿ ಕಲಾಕಾರನು ಸೃಷ್ಟಿಯ ರಮ್ಯನೋಟಕ್ಕೆ ಹೆಚ್ಚು ಗಮನವನ್ನು ಕೇಂದ್ರೀಕರಿಸಿದ್ದರಿಂದ ಚಿತ್ರಗಳು ಹೆಚ್ಚು ಅಲಂಕೃತವಾಗಿದ್ದವು. ಕ್ರಮೇಣ ಗ್ರೀಕರ ಚಿತ್ರಕಲೆಯು ಹೆಚ್ಚು ಐಹಿಕವೂ ಅಲಂಕೃತವೂ ಆಯಿತು.

ಗ್ರೀಕರು ಸಂಗೀತ ಮತ್ತು ನೃತ್ಯಕ್ಕೂ ಮಹತ್ವ ನೀಡಿದ್ದರು. ಸಂಗೀತವು ಸ್ಫೂರ್ತಿದಾಯಕ ವಾಗಿರುವುದಕ್ಕಿಂತಲೂ ವೃತ್ತಿದಾಯಕವಾಗಿತ್ತು. ಒಟ್ಟಾರೆ ಗ್ರೀಕ್ ಕಲೆಯಲ್ಲಿ ನಾವು ಸ್ವಭಾವದ ಅಧ್ಯಯನ ಮತ್ತು ಆತ್ಮದ ಚಿತ್ರಗಳ ಅಭಾವವವನ್ನು ಕಾಣುತ್ತೇವೆ. ದೈಹಿಕ ಸೌಂದರ್ಯ ಹಾಗೂ ಆರೋಗ್ಯದ ಬಗ್ಗೆ ಗ್ರೀಕ್ ಕಲೆಗಿರುವ ವ್ಯಾಮೋಹ ಅದನ್ನು ಪಕ್ವತೆಯಲ್ಲಿ ಈಜಿಪ್ಟ್‌ನ ಪೌರುಷಯುಕ್ತ ಶಿಲ್ಪ ಅಥವಾ ಚೀನಾದ ಅಭಿಜ್ಞ ವರ್ಣಚಿತ್ರಗಳಿಗಿಂತ ಕಡಿಮೆಯಾಗಿಸಿದೆ.

**ಕ್ರೀಡೆಗಳು**

ಧರ್ಮ ಗ್ರೀಸನ್ನು ಒಂದುಗೂಡಿಸುವುದರಲ್ಲಿ ವಿಫಲವಾದರೂ, ಈ ದಿಶೆಯಲ್ಲಿ ಆಗಿಂದಾಗ್ಗೆ ಕ್ರೀಡೆಗಳು ಯಶಸ್ವಿಯಾದವು. ಕ್ರೀಡೆಗಳ ಸಮಯದಲ್ಲಿ ಗ್ರೀಕರು ಆರೋಗ್ಯ, ಸೌಂದರ್ಯ ಮತ್ತು ಶಕ್ತಿಗಳನ್ನು ತಮ್ಮ ಧರ್ಮವಾಗಿ ಆಚರಿಸುವುದನ್ನು ಕಾಣುತ್ತೇವೆ. ಪ್ರಾಚೀನ ಕಾಲದಲ್ಲಿ ಯುದ್ಧವು ದೈಹಿಕಬಲ ಮತ್ತು ಯುಕ್ತಿಯನ್ನು ಮುಖ್ಯವಾಗಿ ಅವಲಂಬಿಸಿದ್ದರಿಂದ ಅವುಗಳನ್ನು ಗಳಿಸುವುದು ಕ್ರೀಡೆಗಳ ಮುಖೇನ ಸಾಧ್ಯವಾಗುತ್ತಿತ್ತು. ಜೊತೆಗೆ ಕ್ರೀಡೆಗಳಿಂದ ಸ್ಥಾನ ಮಾನ ಪ್ರಸಿದ್ಧಿಗಳೂ ಲಭ್ಯವಾಗುತ್ತಿದ್ದವು.

ಗ್ರೀಕ್ ಕ್ರೀಡೆಗಳು ಖಾಸಗೀ, ಸ್ಥಳೀಯ, ಮುನಿಸಿಪಲ್ ಮತ್ತು ಪಾನ್‌ಹೆಲೆನಿಕ್ ಮಟ್ಟ ದಲ್ಲಿ ನಡೆಯುತ್ತಿದ್ದವು. ಗ್ರೀಕ್ ಕ್ರೀಡೆಗಳಲ್ಲಿ ಅತ್ಯಂತ ಮುಖ್ಯವಾದದ್ದು ಒಲಂಪಿಕ್ಸ್ ಕ್ರೀಡಾಕೂಟ. ಇದು ಕ್ರಿ.ಪೂ. ೭೭೬ರಲ್ಲಿ ಒಲಂಪಿಯಾದಲ್ಲಿ ಪ್ರಾರಂಭವಾಯಿತು. ಸ್ವತಂತ್ರವಾಗಿ ಜನಿಸಿದ ಗ್ರೀಕರು ಮಾತ್ರ ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಅರ್ಹರಾಗುತ್ತಿದ್ದರು. ಸ್ಥಳೀಯ ಮತ್ತು ಮುನಿಸಿಪಲ್ ಮಟ್ಟದಲ್ಲಿ ಆಯ್ಕೆಯಾದ ಕ್ರೀಡಾಪಟುಗಳಿಗೆ ೧೦ ತಿಂಗಳ ಕಠಿಣ ತರಬೇತಿ ನೀಡಿ ಒಲಂಪಿಕ್ಸ್ ಕ್ರೀಡಾಕೂಟಕ್ಕೆ ಕಳುಹಿಸುತ್ತಿದ್ದರು. ಒಲಂಪಿಯಾಕ್ಕೆ ಬಂದಾಗ ಅವರನ್ನು ಪರೀಕ್ಷಿಸಲಾಗುತ್ತಿತ್ತು ಹಾಗೂ ಎಲ್ಲಾ ಕ್ರೀಡಾಪಟುಗಳೂ ತಾವು ಕ್ರೀಡಾ ನಿಯಮಗಳಿಗೆ ಬದ್ಧರಾಗುವುದಾಗಿ ಪ್ರತಿಜ್ಞೆ ಸ್ವೀಕರಿಸುತ್ತಿದ್ದರು. ಇಷ್ಟಾದರೂ ಕ್ರೀಡೆಗಳು ಸಂಪೂರ್ಣ ಕ್ರೀಡಾ ಮನೋಭಾವದಿಂದಲೇ ನಡೆಯುತ್ತಿದ್ದವೆಂದು ಹೇಳಲಾಗುವುದಿಲ್ಲ.

ವಯಸ್ಸು ಮತ್ತು ಸ್ಥಾನದ ಭೇದವಿಲ್ಲದೇ ಎಲ್ಲಾ ಕ್ರೀಡಾಪಟುಗಳೂ ಹೆಚ್ಚಿನ ಸಂದರ್ಭದಲ್ಲಿ ನಗ್ನರಾಗಿರುತ್ತಿದ್ದರು. ಇದಕ್ಕೆ ಒಮ್ಮೊಮ್ಮೆ ಅಪವಾದವೂ ಇರುತ್ತಿತ್ತು. ದಿನಪೂರ್ತಿ ಕ್ರೀಡಾಂಗಣದಲ್ಲಿ ಸುಮಾರು ೪೫೦೦೦ ಪ್ರೇಕ್ಷಕರು, ಕೀಟಗಳು, ಸೆಖೆ, ಬಾಯಾರಿಕೆಯ ಹಂಗು

ತೊರೆದು ಹ್ಯಾಟ್ ಧರಿಸದೇ ಕ್ರೀಡೆಗಳನ್ನು ವೀಕ್ಷಿಸುತ್ತಿದ್ದರು. 'ಉದ್ದಜಿಗಿತ', ಡಿಸ್ಕಸ್ ಎಸೆತ, ಜಾವಲಿನ್ ಎಸೆತ, ಸ್ಟೇಡಿಯಂ ಸುತ್ತ ಓಡುವುದು, ಕುಸ್ತಿ, ಬಾಕ್ಸಿಂಗ್, ರಥಗಳ ಸ್ಪರ್ಧೆ ಇತ್ಯಾದಿ ತುಂಬಾ ಮುಖ್ಯ ಆಕರ್ಷಣೆಯಾಗಿದ್ದವು. ಮೊಲ-ಕುದುರೆಗಳ ಜೊತೆ ಓಟದಲ್ಲಿ ಸ್ಪರ್ಧಿಸಿ ಗೆದ್ದ ವೀರರ ಕಥೆಗಳೂ ಸಾಕಷ್ಟಿವೆ.

**ಮ್ಯಾರಥಾನ್**

ಕ್ರಿ.ಪೂ.೪೯೦ರಲ್ಲಿ ಗ್ರೀಕರಿಗೂ ಪರ್ಶಿಯನ್ನರಿಗೂ ನಡೆದ ಮ್ಯಾರಥಾನ್ ಕದನದಲ್ಲಿ ಗ್ರೀಕರಿಗೆ ಜಯ ಲಭಿಸಿತು. ಆ ಕದನದಲ್ಲಿ ಸುಮಾರು ೧ ಲಕ್ಷ ಪರ್ಶಿಯನ್ನರೂ, ೨೦ ಸಾವಿರ ಗ್ರೀಕರೂ ಭಾಗವಹಿಸಿದ್ದರು. ಗ್ರೀಕರಿಗೆ ದೊರೆತ ಈ ವಿಜಯದ ಸಂತೋಷ ಸುದ್ದಿಯನ್ನು ಯುದ್ಧಭೂಮಿಯಾದ ಮ್ಯಾರಥಾನ್‌ನಿಂದ ಅಥೆನ್ಸ್‌ವರೆಗೆ ೨೪ ಮೈಲಿದೂರ ಓಡಿ ಹೋಗಿ ಪೆಯ್ಡಿ ಪೈಡಸ್ ಎಂಬು ಸೈನಿಕ ತಿಳಿಸಿದ ನಂತರ ಕುಸಿದು ಸತ್ತ. ಪ್ರಾಚೀನ ಕಾಲದಲ್ಲಿ ಮ್ಯಾರಥಾನ್ ಓಟ ಇರಲಿಲ್ಲ. ಆದರೆ, ಈಗ ಆ ಸೈನಿಕನ ಗೌರವಾರ್ಥ ಮ್ಯಾರಥಾನ್ ಓಟ ಒಲಂಪಿಕ್ಸ್‌ನಲ್ಲಿದೆ. ಒಲಂಪಿಕ್ಸ್ ಕ್ರೀಡಾಕೂಟ ತುಂಬ ರಂಜನೀಯವೂ, ರೋಮಂಚಕವೂ ಆಗಿರುತ್ತಿತ್ತು.

**ಸಮಾರೋಪ**

ಜೀವನ ಹಾಗೂ ಸಂಸ್ಕೃತಿಯ ಎಲ್ಲಾ ಅಂಶಗಳಿಗೂ ಸಂಬಂಧಿಸಿದ ಒಂದು ಶ್ರೀಮಂತ ಆಸ್ತಿಯನ್ನು ಗ್ರೀಕರು ನಮಗೆ ಬಿಟ್ಟಿದ್ದಾರೆ. ಸರ್ಕಾರ ಜನತೆಗೆ ಜವಾಬ್ದಾರವಾಗಿರಬೇಕೆಂಬುದು, ಜೂರಿ ಪದ್ಧತಿ, ಆಲೋಚನೆ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಬರವಣಿಗೆಯ ಸ್ವಾತಂತ್ರ್ಯ, ಸಭೆ-ಸಮಾರಂಭಗಳ ಹಕ್ಕು, ಪೂಜಾ ಸ್ವಾತಂತ್ರ್ಯಗಳೇ ಅಲ್ಲದೇ ಪ್ರಜಾಪ್ರಭುತ್ವ, ಸರ್ವಾಧಿಕಾರಗಳೇ ಮೊದಲಾದವುಗಳು ಗ್ರೀಕರ ಕಾಲದಿಂದ ಬಂದವುಗಳು. ನಮಗೆ ಪರಿಚಯವಾಗಿರುವ ಸ್ಕೂಲ್, ಯೂನಿವರ್ಸಿಟಿ, ಜಿಮ್ಯಾಸಿಯಂ, ಸ್ಟೇಡಿಯಂ, ಅಥ್ಲೆಟಿಕ್ಸ್, ಒಲಂಪಿಕ್ಸ್, ಕ್ರೀಡೆಗಳು ಇತ್ಯಾದಿ ಗ್ರೀಕರ ಕಾಲದಿಂದ ಬಂದಿವೆ.

ವಾಸ್ತವವಾದ (ರಿಯಾಲಿಸಂ), ನಾಮಮಾತ್ರವಾದ (ನಾಮಿನಾಲಿಸಂ), ಆದರ್ಶವಾದ (ಐಡ್ಯಾಲಿಸಂ), ಭೌತವಾದ (ಮೆಟೀರ್ಯಾಲಿಸಂ), ಏಕದೇವತಾವಾದ (ಮೊನೋತೀಯಿಸಂ), ನಿರೀಶ್ವರವಾದ (ಅಥೀಯಿಸಂ), ಸ್ತ್ರೀವಾದ (ಫೆಮಿನಿಸಂ), ಕಮ್ಯುನಿಸಂ (ಕಮ್ಯುನಿಸಂ), ಕ್ಯಾಂಟಿಯನ್ ವಿಮರ್ಶೆ, ಕೋಪನಹೇರ್‌ನ ನಿರಾಶಾವಾದ, ರೂಸೋನ ಆದಿಮವಾದ, ನೀಶೆ ನಿತ್ಯಾತೀತತೆ, ಸ್ಪೆನ್ಸರ್‌ನ ಸಂಯೋಜನವಾದ, ಫ್ರಾಯ್ಡನ ಮನೋವಿಶ್ಲೇಷಣೆ ಇವೆಲ್ಲವನ್ನೂ ತತ್ವಶಾಸ್ತ್ರದ ಜನ್ಮ ಭೂಮಿಯಾದ ಗ್ರೀಸ್‌ನಲ್ಲಿ ಕಾಣಬಹುದು.

ಆಧುನಿಕ ಯುಗದ ಮುಂಜಾವಿನಲ್ಲಿ ಕಾಣಿಸಿಕೊಂಡ ಯುರೋಪಿನ ಪುನರುಜ್ಜೀವನ ಕಾಲದ ಚಿಂತನೆಗಳಿಗೆ ಪ್ರಾಚೀನ ಗ್ರೀಕರ ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳು ಸ್ಫೂರ್ತಿ ನೀಡಿ ಮನುಷ್ಯನನ್ನು ಮಾನಸಿಕ ಬೌದ್ಧಿಕ ಬರಡುತನದಿಂದ ಮುಕ್ತಿಗೊಳಿಸಿದವು. ಯಾವುದೇ ನಾಗರಿಕತೆ ಸಾಯುವುದಿಲ್ಲ. ಅದು ವಲಸೆ ಹೋಗುತ್ತದೆ. ಅದು ತನ್ನ ಮೂಲ ನೆಲೆ ಮತ್ತು ಸ್ವರೂಪವನ್ನು ಬದಲಿಸುತ್ತದೆ. ಆದರೆ ನಿರಂತರವಾಗಿ ಮುಂದುವರೆಯುತ್ತಿದೆ. ಹಾಗೇ ಪ್ರಾಚೀನ ಗ್ರೀಕರ ಸಂಘ ಸಂಸ್ಥೆಗಳು ನಾಶವಾದರೂ ಅವರ ಆಲೋಚನೆ ಮತ್ತು ಸಂಸ್ಕೃತಿಗಳು ಮುಂದುವರೆದಿವೆ.

**ಪರಾಮರ್ಶನ ಗ್ರಂಥಗಳು**

೧. ವಿಲ್ ಡ್ಯುರಾಂಟ್, **ದಿ ಸ್ಟೋರಿ ಆಫ್ ಸಿವಿಲೈಸೇಷನ್ : ಪಾರ್ಟ್-II ದಿ ಲೈಫ್ ಆಫ್ ಗ್ರೀಸ್.**

೨. ರೀಲ್ಲೀ ಕೆವಿನ್, **ರೀಡಿಂಗ್ಸ್ ಇನ್ ವರ್ಲ್ಡ್ ಸಿವಿಲೈಸೇಷನ್ಸ್,** ವಾಲ್ಯುಮ್-I ದಿ ಗ್ರೇಟ್ ಟ್ರೆಡೀಷನ್ಸ್(ಎರಡನೆಯ ಆವೃತ್ತಿ).

೩. **ಎನ್‌ಸೈಕ್ಲೋಪೀಡಿಯಾ ಬ್ರಿಟೀನಿಕಾ,** ಸಂಪುಟ ೧೦.

೪. ಶೆಟ್ಟರ್ ಎಸ್., **ವರ್ಲ್ಡ್ ಹಿಸ್ಟರಿ – ಲ್ಯಾಂಡ್ ಮಾರ್ಕ್ಸ್ ಇನ್ ಹ್ಯೂಮನ್ ಸಿವಿಲೈಸೇಷನ್.**

# ೩. ಪ್ರಾಚೀನ ಗ್ರೀಕ್ ಚಿಂತನೆ

ಯುರೋಪ್ ಖಂಡದ ಮೇಲೆ ಅತ್ಯಂತ ಪ್ರಭಾವ ಬೀರಿದ ಅಂಶಗಳೆಂದರೆ, ಕ್ರೈಸ್ತಧರ್ಮ ಹಾಗೂ ಗ್ರೀಕ್ ಚಿಂತನೆ. ಪುರಾತನ ಗ್ರೀಕ್ ಚಿಂತಕರು ಬೌದ್ಧಿಕ ಸಂಸ್ಕೃತಿಯ ಚರಿತ್ರೆಯಲ್ಲಿ ಅದರಲ್ಲೂ ರಾಜಕೀಯ ಹಾಗು ನ್ಯಾಯ ಚಿಂತನೆಯಲ್ಲಿ ಅತ್ಯುತ್ತಮ ಕೊಡುಗೆಯನ್ನು ನೀಡಿದ್ದಾರೆ. ನಿಸರ್ಗ ಮತ್ತು ಸಮಾಜದ ಅಧ್ಯಯನಕ್ಕೆ ಒಂದು ಸೈದ್ಧಾಂತಿಕ ಅನುಸಂಧಾನದ ನೆಲೆಗಟ್ಟನ್ನು ಅವರು ಹಾಕಿಕೊಟ್ಟಿದ್ದಾರೆ. ಕಾಲ್ಪನಿಕ ಪರ್ಯಾ ಲೋಚನೆಗಳನ್ನು ಆಧರಿಸಿದ ಪೌರಾಣಿಕ ಲೋಕ ದೃಷ್ಟಿ ಮತ್ತು ನಿಗೂಢ ಭವಿಷ್ಯ ಜ್ಞಾನಗಳಿಂದ ವೈಚಾರಿಕ ಅರಿವು ಮತ್ತು ಅರಿವಿನ ವ್ಯಾಖ್ಯಾನದತ್ತ ಸ್ಥಿತ್ಯಂತರಗೊಳ್ಳುವುದನ್ನು ಸಾಧಿಸಿದ ಕೀರ್ತಿಯು ನ್ಯಾಯವಾಗಿ ಅವರಿಗೇ ಸಲ್ಲಬೇಕು.

ನಂಬುಗೆಗಿಂತಲೂ ಅರಿವಿನ ಅಗತ್ಯವಿದೆಯೆಂಬುದರಿಂದ ಮೊದಲುಗೊಂಡ ಪ್ರಭುತ್ವ, ನ್ಯಾಯ ಮತ್ತು ರಾಜಕೀಯಗಳಿಗೆ ಸಂಬಂಧಿಸಿದ ಮೂಲಭೂತ ಸಮಸ್ಯೆಗಳನ್ನು ಎತ್ತಿದ ವರಲ್ಲಿ ಈ ಗ್ರೀಕ್ ತತ್ವಜ್ಞಾನಿಗಳೇ ಮೊದಲಿಗರು. ಅವರು ಸೂಚಿಸಿದ ಪರಿಹಾರಗಳಲ್ಲಿ ರಾಜಕೀಯ ಚಿಂತನೆಯ ಭವಿಷ್ಯದ ಬೆಳವಣಿಗೆಗೆ ಸಂಬಂಧಿಸಿದ ಅನೇಕ ಅಂಶಗಳ ಮುನ್ಸೂಚನೆಗಳಿವೆ. ಅವು ನಮ್ಮ ಕಾಲದಲ್ಲಿ ಪ್ರಸ್ತುತ.

ಸಾಂಸ್ಕೃತಿಕ ಇತಿಹಾಸದಲ್ಲಿ ಗ್ರೀಕ್ ತತ್ವಜ್ಞಾನವು ಹೊಂದಿರುವ ವಿಶಿಷ್ಟ ಸ್ಥಾನದ ಬಗ್ಗೆ ಏಂಗೆಲ್ಸ್ ಹೀಗೆ ಹೇಳುತ್ತಾನೆ.

*ಗ್ರೀಕ್ ಪರಿಗಣಿಸಿದಂತೆ ಆಧ್ಯಾತ್ಮವು ನಿರ್ದಿಷ್ಟ ಅಂಶಗಳಲ್ಲಿ ಔಚಿತ್ಯಪೂರ್ಣ ವಾಗಿದ್ದರೆ, ಆಧ್ಯಾತ್ಮಕ್ಕೆ ಸಂಬಂಧಿಸಿದಂತೆ ಗ್ರೀಕರು ಸಾಮಾನ್ಯ ಅಂಶಗಳಲ್ಲಿ ಔಚಿತ್ಯಪೂರ್ಣ ಧೋರಣೆ ಹೊಂದಿದ್ದಾರೆ. ಇತರೇ ಹಲವಾರು ಕ್ಷೇತ್ರಗಳಂತೆಯೇ ತತ್ವಶಾಸ್ತ್ರದಲ್ಲಿ ಮಾನವ ಅಧ್ಯಯನದ ಚರಿತ್ರೆಯಲ್ಲಿ ಅವರು ಪಡೆದುಕೊಂಡ ಸ್ಥಾನ ಅದ್ವಿತೀಯವಾದುದು. ಈ ಕಾರಣ ಕ್ಕಾಗಿಯೇ ಮತ್ತೆ ಮತ್ತೆ ತತ್ವಶಾಸ್ತ್ರಗಳಲ್ಲಿ ಇವರ ಸಾಧನೆಗಳನ್ನು ಎತ್ತಿ ಹಿಡಿಯುತ್ತಿದ್ದೇವೆ. ಮತ್ತೊಂದು ಕಾರಣವೇನೆಂದರೆ ಗ್ರೀಕ್ ತತ್ವಶಾಸ್ತ್ರದ ಹಲವು ಪ್ರಕಾರದ ಮೂಲಗಳು, ನಂತರದ ಪ್ರಾಪಂಚಿಕ ದೃಷ್ಟಿಕೋನಗಳ ಮಾದರಿಗಳನ್ನು ಹೋಲುತ್ತವೆ.*

ಐನ್‌ಸ್ಟೈನ್ ಸಹ ಗ್ರೀಕರ ಕೊಡುಗೆಗಳನ್ನು ಮೆಚ್ಚಿಕೊಳ್ಳುತ್ತಾನೆ. ಅವನ ಪ್ರಕಾರ ಪಾಶ್ಚಾತ್ಯ ನಾಗರಿಕತೆಗೆ ಗ್ರೀಕರ ಶಾಶ್ವತ ಕೊಡುಗೆ ಎಂದರೆ ವೈಚಾರಿಕತೆಯ ಮೂಲಕ ಪ್ರಕೃತಿ ಮತ್ತು ಮನುಷ್ಯನನ್ನು ಮಣಿಸಬಹುದು ಎನ್ನುವುದು. ಗ್ರೀಕ್ ಪೂರ್ವ ಪ್ರಪಂಚದಲ್ಲಿ ಮುಂದುವರಿದ ಜನರು ತಾಳ್ಮೆಯ ಅವಲೋಕನದಿಂದಲೇ ಪ್ರಕೃತಿಯ ಹಲವಾರು ರಹಸ್ಯಗಳನ್ನು ಹೆಕ್ಕಿ ತೆಗೆದು, ಅವುಗಳನ್ನು ಲಾಭದಾಯಕ ಕಾರಣಗಳಿಗಾಗಿ ಬಳಸಿಕೊಳ್ಳುವುದರ ಮೂಲಕ ಬದುಕಲು ಕಲಿತರು. ಆದರೆ ಇಂತಹ ಪ್ರಾಯೋಗಿಕ ಜ್ಞಾನವು ಪೈಶಾಚಿಕ ಮತ್ತು ದಂತಕಥೆಗಳು, ಭಯಗಳು ಮತ್ತು ನಿರೀಕ್ಷೆಗಳು, ಶಿಕ್ಷೆಗಳು ಮತ್ತು ಬಹುಮಾನಗಳು ಇಂತಹವುಗಳ ನಿಕಟ ಸಂಬಂಧಗಳಿಂದ ಮುಕ್ತವಾಗಿರಲಿಲ್ಲ. ಈ ಗ್ರೀಕ್ ಪೂರ್ವದ ಪ್ರಕೃತಿಯ ಜ್ಞಾನ, ಭೌತಿಕ ಸಂಗತಿಗಳು ಸಾಮಾನ್ಯವಾದುವೂ ಸಾರ್ವತ್ರಿಕವೂ ನಿರೀಕ್ಷಿತವೂ ಆಗಿರುವ ಬದಲು ಅವಶ್ಯವಾಗಿ ವಿಶಿಷ್ಟವೂ ಅನನ್ಯವೂ ಅಸಂಖ್ಯವೂ ಆಗಿದ್ದಿತು. ಅಜೈವಿಕ ಸಂಗತಿಗಳ ಪುನರಾವರ್ತನೆ ಹೊಂದುವ ಕ್ರಮಗಳ ಬಗ್ಗೆ ಯೋಚಿಸಿದವರಲ್ಲಿ ಗ್ರೀಕರೇ ಮೊದಲಿಗರಲ್ಲ; ಆದರೆ ಅವಲೋಕನ ಹಾಗೂ ಅರಿವಿನ ಆಚೆಗೆ ಹೋಗಿ ಒಂದು ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಿದವರಲ್ಲಿ ಮೊದಲಿಗರು. ಪ್ರಪಂಚಕ್ಕೆ ದೊರಕಿದ ಈ ಹೊಸ ವಿಧಾನವು ಪಾಶ್ಚಾತ್ಯ ಬದುಕಿನ ವಿಭಿನ್ನ ಮೂಲಾಂಶಗಳಲ್ಲಿ ಒಂದಾಗಿದೆ. ಮಾನವ ಸಂಬಂಧಗಳಲ್ಲಿಯೂ ಸಹ ಗ್ರೀಕರ ಹೊಸತನ ಹಾಗೂ ಶೋಧಕ ಮನೋಭಾವಗಳು ಯಾವುದೋ ಒಂದು ನಿರ್ದಿಷ್ಟ ರಾಜಕೀಯ ಶಾಸ್ತ್ರದ ರಾಜಕೀಯದ ವೈಜ್ಞಾನಿಕ ಅಧ್ಯಯನವನ್ನು ಕಂಡು ಹಿಡಿದುದೇ ಆಗಿದೆ.

ಗ್ರೀಕರ ರಾಜಕೀಯ ಚಿಂತನೆಯನ್ನು ಸರಿಯಾಗಿ ವಿಶ್ಲೇಷಣೆ ಮಾಡಿದ ಯಾರಾದರೂ ಈ ಕೆಳಗೆ ತಿಳಿಸಿದ ವಿಶಿಷ್ಟವಾದ ಲಕ್ಷಣಗಳನ್ನು ಗಮನಿಸಬಹುದು.

ಅ. ವಿಚಾರದಿಂದ ಮನುಷ್ಯ ಹಾಗೂ ಪ್ರಕೃತಿಯನ್ನು ಮಣಿಸಬಹುದು ಎಂಬುದು ಗ್ರೀಕ್ ರಾಜಕೀಯ ಚಿಂತನೆಯ ಒಂದು ಅವಿನಾಶಿ ಲಕ್ಷಣ.

ಆ. ವಿಶ್ವವನ್ನು ನಿಯಂತ್ರಿಸುವ ಪ್ರಾಥಮಿಕ ತತ್ವಗಳು ಅಥವಾ ಪ್ರಮುಖ ನಿಯಮಗಳ ಬಗೆಗಿನ ಆಸಕ್ತಿಯೇ ಗ್ರೀಕ್ ಚಿಂತನೆಯ ಮತ್ತೊಂದು ಲಕ್ಷಣ. ತಾನು ಪರ್ಷಿಯಾದ ರಾಜನಾಗುವುದಕ್ಕಿಂತಲೂ ಒಂದು ಸಾಮಾನ್ಯ ನಿಯಮವನ್ನು ಕಂಡುಹಿಡಿಯುವುದರಲ್ಲೇ ತನ್ನ ಆದ್ಯತೆ ಇದೆ ಎಂದು ತತ್ವಜ್ಞಾನಿ ಘೋಷಿಸಿದ್ದ. ವಿಶ್ವವು ಒಂದು ಸೃಜನಾತ್ಮಕ ವಿಚಾರದಿಂದ ಉತ್ಪನ್ನವಾದುದು ಎಂಬುದು ಗ್ರೀಕರ ಕಲ್ಪನೆ. ವಿಶ್ವವನ್ನು ತಿಳಿಯ ಬೇಕಾದರೆ ಅದರ ನಿಯಂತ್ರಣ ತತ್ವಗಳನ್ನು ಹುಡುಕಬೇಕು ಎಂಬುದು ಅವರ ವಿಶ್ವಾಸ ವಾಗಿದ್ದಿತು. ಇಂತಹ ವಿವೇಚನೆಯಿಂದ ಕಾರ್ಯಕಾರಣ ಸಂಬಂಧಗಳನ್ನು ಹುಡುಕಲು ಸಾಧ್ಯವಾಯಿತು.

ಇ. ಈ ಭೂಮಿಯ ಮೇಲೆ ಹಲವು ಸಂಗತಿಗಳು ವಿಧಿನಿಯಮಗಳಿಂದ ನಿರ್ಧರಿತವಾಗಿದೆ ಹಾಗೂ ಆ ಕಾರಣಕ್ಕಾಗಿ ಅದು ಮನುಷ್ಯನ ನಿಯಂತ್ರಣವನ್ನು ಮೀರಿದೆ ಎಂಬುದು ಗ್ರೀಕರ ಬಲವಾದ ನಂಬುಗೆಯಾಗಿತ್ತು. ಈ ಧರ್ಮನಿಷ್ಟ ಹಿನ್ನೆಲೆಯಿಂದಾಗಿ ಗ್ರೀಕರು ಹೆಚ್ಚಾಗಿ ಅಂಜುತ್ತಿರಲಿಲ್ಲ. ಹಾಗಾಗಿ ಅವರು ಮಾನವನು ಕಾಣದ ಶಕ್ತಿಗಳ ಕೈವಾಡವಿದ್ದಾಗಲೂ ಸಮಾಜವನ್ನು ತಾನೇ ರೂಪಿಸಿಕೊಳ್ಳಲು ಹೊಂದಿರುವ ಸಾಮರ್ಥ್ಯದ ಬಗ್ಗೆ ಅತ್ಯಂತ ಆಸಕ್ತಿ ವಹಿಸಿದ್ದರು.

ಈ. ಸಮಾಜದಲ್ಲಿದ್ದ ಸ್ವಾತಂತ್ರ್ಯದಿಂದಾಗಿ ಯಾವುದೇ ರೀತಿಯ ನಿರ್ಬಂಧಗಳಿಲ್ಲದೆ ಗ್ರೀಕರಿಗೆ ಬೌದ್ಧಿಕವಾಗಿ ಚಿಂತಿಸಲು, ಪರಿಶೀಲಿಸಲು ಅವಕಾಶವಿದ್ದಿತು. ಕ್ಯಾಟಲಿನ್ ಹೇಳುವಂತೆ ಗ್ರೀಕರು ಪ್ರಜಾಪ್ರಭುತ್ವ, ಬರವಣಿಗೆ ಹಾಗೂ ಚಿಂತನೆಯ ಸ್ವಾತಂತ್ರ್ಯ, ಸ್ತ್ರೀವಾದ, ಗರ್ಭಪಾತ, ವಿರಾಮದ ಸಮಸ್ಯೆಗಳಂತಹ ಎಲ್ಲಾ ವಿಷಯಗಳ ಬಗ್ಗೆಯೂ ಚರ್ಚಿಸುತ್ತಿದ್ದರು.

ಉ. ಗ್ರೀಕರ ಅಭಿಪ್ರಾಯದಲ್ಲಿ ಮಾನವರು ಪ್ರಕೃತಿ ಮತ್ತು ಸಕಾರಣಗಳಿಗನುಗುಣವಾಗಿ ಬದುಕಬೇಕು. ಮಾನವರಿಗೆ ವಿಚಾರಶಕ್ತಿ ಇರುವುದರಿಂಧ ಅವರ ಸೌಮರ್ಥ್ಯಗಳನ್ನು ಬೆಳೆಸಿಕೊಳ್ಳುವುದು ಅವರ ಕರ್ತವ್ಯವಾಗಿದೆ. ಅವರು ಬದುಕುವುದಷ್ಟೇ ಅಲ್ಲ, ಚೆನ್ನಾಗಿ ಬದುಕಬೇಕು ಎನ್ನುವ ಸಿದ್ಧಾಂತಕ್ಕೆ ಬದ್ಧರಾಗಿದ್ದರು. ಈ ಗುರಿ ಸಾಧನೆಗೆ ಸಾಮಾಜಿಕ ಮತ್ತು ರಾಜಕೀಯ ಬದುಕು ಅತ್ಯಗತ್ಯ. ಮಾನವನಂತೆಯೇ ರಾಜ್ಯವೂ ಸಹ ಪ್ರಕೃತಿಯ ಒಂದು ಕೊಡುಗೆಯಾಗಿದೆ ಎಂಬುದು ಅವರ ಅಭಿಪ್ರಾಯ. ಆದ್ದರಿಂದ ಮಾನವನು ಸ್ವಾಭಾವಿಕವಾಗಿ ಒಂದು ಸಾಮಾಜಿಕ ಮತ್ತು ರಾಜಕೀಯ ಪ್ರಾಣಿಯಾಗಿದ್ದಾನೆ.

ಊ. ಗ್ರೀಕರ ಕಲ್ಪನೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ರಾಜ್ಯದ ಒಂದು ಅವಿಭಾಜ್ಯ ಅಂಗವಾಗಿರುವುದರಿಂದ ಪ್ರತಿಯೊಬ್ಬ ನಾಗರಿಕನೂ ಸಕ್ರಿಯವಾಗಿ ರಾಜಕೀಯದಲ್ಲಿ ಪಾಲ್ಗೊಳ್ಳಲೇಬೇಕು.

ಋ. ರಾಜ್ಯದ ಮೂಲಕವೇ ಮಾನವನು ಅತ್ಯುಚ್ಛ ಗುರಿಗಳನ್ನು ಸಾಧಿಸಲು ಸಾಧ್ಯವಾಗು ವುದರಿಂದ, ರಾಜ್ಯವು ಕೈಗೊಳ್ಳುವ ಎಲ್ಲಾ ಚಟುವಟಿಕೆಗಳಲ್ಲೂ ತಾರ್ಕಿಕ ಮಿತಿಗಳನ್ನು ಹಾಕಲಾಗದು. ಅವರು ರಾಜ್ಯ ಮತ್ತು ರಾಜ್ಯಶಾಸ್ತ್ರಕ್ಕೆ ಬಹಳ ಪ್ರಾಮುಖ್ಯತೆಯನ್ನು ನೀಡಿ, ರಾಜ್ಯ ಮತ್ತು ರಾಜ್ಯನೀತಿಯನ್ನು ಅಧ್ಯಯನ ಮಾಡಿದ್ದರಿಂದ ರಾಜ್ಯಶಾಸ್ತ್ರವನ್ನು ಅವರು ಶ್ರೇಷ್ಠ ವಿಜ್ಞಾನವೆಂದು ಪರಿಗಣಿಸುತ್ತಿದ್ದರು.

ಗ್ರೀಕ್ ಚಿಂತನೆಯ ಪರಂಪರೆ ಎಂದರೆ ನಾವು ಅರ್ಥಮಾಡಿಕೊಳ್ಳುವುದು ಅವರಲ್ಲಿ ಸಾಕ್ರೆಟೀಸ್, ಪ್ಲೇಟೋ, ಅರಿಸ್ಟಾಟಲ್ ನಂತಹ ತತ್ವಜ್ಞಾನಿಗಳು ಚಿಂತಕರು ಇರುತ್ತಾರೆ ಎಂದು. ಆದರೆ ವಾಸ್ತವವಾಗಿ ಗ್ರೀಸ್‌ನಲ್ಲಿ ಸಾಕ್ರೆಟಿಸ್, ಅರಿಸ್ಟಾಟಲ್‌ರ ಹಿಂದೆಯೇ ಬಹಳಷ್ಟು ಜನ ತತ್ವಜ್ಞಾನಿಗಳಿದ್ದರು. ಅವರು ಸಪ್ತ ಋಷಿಗಳು, ಪೈಥಾಗೊರಸ್ ಮತ್ತು ಅವನ ಪಂಥದವರು, ಹಿರಾಕ್ಲಟಸ್, ಡೆಮಾಕ್ರಟೀಸ್ ಹಾಗೂ ಸೋಫೋವಾದಿಗಳು. ಆದರೆ ಈ ಲೇಖನದಲ್ಲಿ ಸಾಕ್ರೆಟಿಸ್, ಅರಿಸ್ಟಾಟಲ್, ಸೋಫೋಕ್ಲಿಸ್‌ರ ಕೊಡುಗೆಗಳನ್ನು ಮಾತ್ರ ಗಮನಿಸುತ್ತೇವೆ. ಏಕೆಂದರೆ ಅವರ ಅದ್ಭುತ ಪ್ರಭಾವವು ಪಶ್ಚಿಮದಲ್ಲಿ ನಂತರದ ತತ್ವಜ್ಞಾನಿಗಳ ಮೇಲೂ, ನಂತರ ಆ ಸಮಾಜದ ಮೇಲೂ ಬೀರಿತ್ತು.

ಸಾಕ್ರೆಟೀಸ್‌ನು(೪೭೯-೩೯೯ ಕ್ರಿ.ಪೂ) ಮನುಕುಲದ ಬೌದ್ಧಿಕ ಚರಿತ್ರೆಯಲ್ಲಿ ಅತ್ಯಂತ ಗಮನಾರ್ಹ ವ್ಯಕ್ತಿಗಳಲ್ಲೊಬ್ಬ. ಸುಮಾರು ಎರಡೂವರೆ ಸಾವಿರ ವರ್ಷಗಳ ಅವಧಿಗೂ ಮೀರಿ ಆತನ ಕೀರ್ತಿ ಹರಡಿತ್ತು ಹಾಗೂ ವ್ಯಕ್ತಿತ್ವವು ನಿಗೂಢವಾಗಿತ್ತು. ಸಾಕ್ರೆಟೀಸ್‌ನು "ಗ್ರೀಕ್ ತತ್ವಶಾಸ್ತ್ರದ ಜನಕ" ಮತ್ತು "ವಿವೇಕಿ" ಎಂದು ಯುವ ಮಾರ್ಕ್ಸ್ ತನ್ನ "ಡೆಮಕ್ರೀಟ್ ಮತ್ತು ಮಕ್ಯೂರ್‌ಸ್‌ರ ಪ್ರಕೃತಿಯ ತತ್ವಶಾಸ್ತ್ರಗಳಲ್ಲಿಯ ಭಿನ್ನತೆ" ಎಂಬ ಪ್ರಬಂಧದಲ್ಲಿ ಹೀಗೆ ಬಣ್ಣಿಸುತ್ತಾ ಬರೆಯುತ್ತಾನೆ.

*ಹಿಂದಿನ ತತ್ವಶಾಸ್ತ್ರಕಾರರಂತೆಯೇ ಆತನೊಬ್ಬ ಗಟ್ಟಿಯಾದ ವ್ಯಕ್ತಿ. ಆದರೆ ಆತ್ಮನಿಷ್ಠೆಯ ವಿಷಯದಲ್ಲಿ ಆತನು ತನ್ನೊಳಗೇ ಆವರಿಸಿಕೊಳ್ಳದೆ ದೇವತೆಗಳ ಪ್ರತಿರೂಪದಂತಿರದೆ, ಮಾನವ ರೂಪಿಯಾಗಿ, ನಿಗೂಢತೆ ಇಲ್ಲದೆ ಸ್ಪಷ್ಟ ಮತ್ತು ಕಾಂತಿಯುತವಾಗಿ, ಕಾವ್ಯಜ್ಞಾನಿಯಂತಲ್ಲದೆ ಸ್ನೇಹಪರ ಮಾನವನಾಗಿ ಬಾಳಿದ್ದನು.*

"ಸಾಕ್ರೆಟೀಸ್‌ನು ಪಶ್ಚಿಮದ ರಾಜಕೀಯ ತತ್ವಶಾಸ್ತ್ರದ ಪಿತಾಮಹನಂತೆಯೂ ಹಾಗೂ ವೈಚಾರಿಕ ನೀತಿಶಾಸ್ತ್ರದ ಜನಕದಂತೆಯೂ ಇದ್ದನೆಂದು" ಜಾರ್ಜ್ ಕಾಟ್ಲಿಸ್‌ನು ಪರಿಗಣಿಸುತ್ತಾನೆ. "ನಾನೇನು ಅರಿತಿಲ್ಲವೆಂಬುದೇ ನಾನು ಅರಿತಿರುವ ಸಂಗತಿ" ಎನ್ನುವುದು ಆತನ ತತ್ವಶಾಸ್ತ್ರದ ಮೊದಲ ಅಂಶ. ತನ್ನದೇ ಆದ ವಿಶಿಷ್ಟ ರೀತಿಯ ಪಾಟೀ ಸವಾಲಿನ ಪದ್ಧತಿಯ ಮೂಲಕ ಬೇರೆಯವರು ಎಷ್ಟು ಅಜ್ಞಾನಿಗಳು ಎಂದು ಅವರಿಗೆ ತೋರಿಸುವುದು ತನ್ನ ಕರ್ತವ್ಯವೆಂದು ಬಗೆದಿದ್ದನು. ಸಂದೇಹವಾದಿ ಮತ್ತು ವಿಚಿಕಿತ್ಸಕ ಮನೋಭಾವವನ್ನು ಹೊಂದಿದ್ದು, ಯಾವುದನ್ನೂ ನಂಬುಗೆಯಿಂದ ಅಂಗೀಕರಿಸುವುದಕ್ಕೆ ಬದಲಾಗಿ ಎಲ್ಲವೂ ವಿಚಾರ ಪೂರ್ವಕವಾಗಿ ತಂತಾನೇ ಪಡೆದುಕೊಳ್ಳುತ್ತವೆ- ಎಂದು ತತ್ವಜ್ಞಾನಿಗೆ ಯಾವಾಗಲೂ ಇರಬೇಕಾದ ಈ ಅಂಶದ ಪ್ರತಿನಿಧಿಯಂತಿದ್ದನು. ಆತನ ಪ್ರಕಾರ ತತ್ವಜ್ಞಾನವು ಸಂದೇಹ ಪಡುವುದನ್ನು ಕಲಿಯುವುದರ ಮೂಲಕ ಅದರಲ್ಲೂ ತಾವು ಬೆಳಸಿಕೊಂಡ ನಂಬುಗೆಗಳು, ಸೂತ್ರಗಳು, ತತ್ವಗಳ ಬಗ್ಗೆ ಸಂದೇಹ ಪಡುವುದರ ಮೂಲಕ ಪ್ರಾರಂಭವಾಗುತ್ತದೆ. ಬೆಳಸಿಕೊಂಡ ನಂಬುಗೆಗಳು ಹೇಗೆ ಖಚಿತತೆ ಪಡೆದುಕೊಳ್ಳುತ್ತವೆಯೋ ಯಾರಿಗೆ ಗೊತ್ತು? ಮತ್ತು ಅದು ಚಿಂತನೆಯ ದಿರಿಸಿನಲ್ಲಿ ಅಡಗಿದ ನಮ್ಮ ಗುಪ್ತ ಆಸೆಯೇನೋ? ಮನಸ್ಸು ಹಿಂತಿರುಗಿ ತನ್ನನ್ನು ತಾನೇ ಶೋಧಿಸಿಕೊಳ್ಳುವವರೆಗೂ ಅದು ನಿಜವಾದ ತತ್ವಶಾಸ್ತ್ರವಾಗಲಾರದು. 'ನಿನ್ನನ್ನು ತಿಳಿ' ಎನ್ನುವುದೇ ಸಾಕ್ರೆಟೀಸ್‌ನ ಅಗ್ರಹವಾಗಿತ್ತು.

ಅರಿಸ್ಟಾಟಲನು ಹೇಳುವಂತೆ ಮಾನವೀಯ ಸಮಸ್ಯೆಗಳಲ್ಲಿ ಸಾಕ್ರೆಟೀಸನಿಗಿರುವ ಆಸಕ್ತಿಗೆ ಆತನು ಅಪೋಲೋನ ಡೆಲ್ಫಿಯನ್ ದೇವಾಲಯದ ಮೇಲೆ ಕೆತ್ತಲಾಗಿದ್ದ "ನಿನ್ನನ್ನು ತಿಳಿ" ಎಂಬ ಪ್ರಖ್ಯಾತ ಸೂಕ್ತಿಯನ್ನು ಕಂಡದ್ದೇ ಕಾರಣವಾಗಿದೆ. ಅದು ಸಾಕ್ರೆಟೀಸ್‌ನ ಮೇಲೆ ಎಷ್ಟು ಮಹತ್ವದ ಪರಿಣಾಮವನ್ನು ಬೀರಿತ್ತೆಂದರೆ ಆತನು ಪ್ರಾಕೃತಿಕ ವಿಜ್ಞಾನವನ್ನು ತಿರಸ್ಕರಿಸಿ, ನೈತಿಕ ತತ್ವಶಾಸ್ತ್ರದ ಅಧ್ಯಯನವನ್ನು ಕೈಗೆತ್ತಿಕೊಂಡದ್ದು, ನಂತರ ತನ್ನ ಬದುಕಿನಲ್ಲೇ ಇದೊಂದು ಸ್ಥಿತ್ಯಂತರದ ಗಳಿಗೆ ಎಂದು ಬಗೆದಿದ್ದನು. ಸಾಕ್ರೆಟಿಸ್‌ನು ಆತ್ಮದ ನೈಜ ಶೋಧಕನಾಗಿದ್ದ. ಚಾರ್ವಾಕರ ಬೋಧನೆಗಳಲ್ಲಿ "ನಿನ್ನನ್ನು ದೃಢಪಡಿಸಿಕೋ" ಎನ್ನುವ ಧೋರಣೆಗಳಿದ್ದರೆ, ಸಾಕ್ರೆಟಿಸ್‌ನ ಬದುಕು ಹಾಗೂ ಬರಹಗಳಲ್ಲಿ "ನಿನ್ನನ್ನು ತಿಳಿ" ಎನ್ನುವ ಆದರ್ಶವೇ ತುಂಬಿತ್ತು. ನಿನ್ನ ಮನಸ್ಸನ್ನೇ ತಿಳಿದುಕೋ ಅನ್ನುವುದೇ ಆತನ ವ್ಯಾಖ್ಯಾನವಾಗಿತ್ತು. ಆ ತಾರ್ಕಿಕ ಸ್ಪಷ್ಟತೆಗೆ ಮತ್ತು ಬೌದ್ಧಿಕ ಪ್ರಾಮಾಣಿಕತೆಗೆ ಒತ್ತಾಸೆ ನೀಡಲು ಸಾಕ್ರೆಟಿಸ್‌ನು ಇವುಗಳ ಮೇಲೆಯೇ ನೈತಿಕ ಆರೋಗ್ಯ ಹಾಗೂ ರಾಜಕೀಯ ಮುಕ್ತಿಯು ನಿಂತಿದೆ ಎಂಬ ದೃಢ ಸಂಕಲ್ಪದಲ್ಲಿ ತನ್ನ ಬದುಕನ್ನು ಮುಡಿಪಾಗಿಟ್ಟಿದ್ದನು. ಇದೇ ರೀತಿಯೇ ಮಾನವರೆಲ್ಲರೂ ಬದುಕಿನ ಕರ್ತವ್ಯಗಳನ್ನು ಶ್ರದ್ಧೆ ಯಿಂದ ವಿಶ್ಲೇಷಣೆ ಮಾಡಿಕೊಂಡು, ತಮ್ಮ ಉದ್ದೇಶಗಳ ಒಂದು ಸ್ಪಷ್ಟ ಕಲ್ಪನೆಯನ್ನು ಹೊಂದಿರಬೇಕೆಂಬುದು ಆತನ ಆಕಾಂಕ್ಷೆಯಾಗಿತ್ತು. ನೈತಿಕ ಆರೋಗ್ಯದ ಇಂತಹ ಬೆಳವಣಿಗೆಯೊಂದಿಗೆ ರಾಜಕೀಯ ಒಗ್ಗೂಡಿಸಿದ್ದು, ಆ ಬೆಸುಗೆಯು ಪ್ಲೇಟೋನ ರಾಜಕೀಯ ಸಿದ್ಧಾಂತಗಳ ಮೇಲೆ ಪ್ರಭಾವ ಬೀರಿವೆ.

ಸಾಕ್ರೆಟಿಸ್‌ನು ತನ್ನ ಇನ್ನೊಂದು ಜನಪ್ರಿಯ ಎರಡು ಅರಿವುಗಳ ಸಿದ್ಧಾಂತ ಅಥವಾ "ಸದ್ಗುಣವೇ ಅರಿವು" ಎನ್ನುವ ಸಿದ್ಧಾಂತದಿಂದಲೂ ಗುರುತಿಸಲ್ಪಡುತ್ತಾನೆ ಮತ್ತು ಪ್ರಖ್ಯಾತನಾಗಿದ್ದಾನೆ. ಇದು ಪ್ಲೇಟೋನ ರಾಜಕೀಯ ಚಿಂತನೆಯಲ್ಲಿ ಒಂದು ಮೈಲಿಗಲ್ಲಾ ಗಿದೆ. ಸಾಕ್ರೆಟಿಸ್‌ನು ಹೇಳುವಂತೆ ಎರಡು ರೀತಿಯ ತಿಳಿವಳಿಕೆಗಳಿವೆ. ಒಂದು ರೀತಿಯದು ಅಭಿಪ್ರಾಯ ಮತ್ತು ನಂಬುಗೆಗಳನ್ನು ಆಧರಿಸಿದ್ದು ಸುವ್ಯಕ್ತವಾಗಿದೆ. ಇನ್ನೊಂದು ನಿಜವಾದ ಅರಿವು. ಈ ನೈಜ ಅರಿವನ್ನಾಧರಿಸಿದ ಸದ್ಗುಣವು ಸುಭದ್ರವಾಗಿದ್ದು, ಅಭಿಪ್ರಾಯವನ್ನಾಧರಿಸಿದ ಸದ್ಗುಣವು ಅಭದ್ರ ಅಥವಾ ಚಂಚಲವಾಗಿದ್ದು ಅದು ಶೀಘ್ರವಾಗಿ ಮರೆತು ಹೋಗ ಬಹುದಂತಹದ್ದು.

ಪ್ರಸ್ತುತದಲ್ಲಿ ಸಾಕ್ರೆಟೀಸನಿಗಿಂತಲೂ ಹೆಚ್ಚಾಗಿ ಆತನ ಶಿಷ್ಯನಾದ ಪ್ಲೇಟೋ ಸ್ಮರಣೆ ಯಲ್ಲಿದ್ದಾನೆ. ಅಥೆನ್ಸಿನ ಒಂದು ಶ್ರೀಮಂತ ಕುಟುಂಬದಲ್ಲಿ ಕ್ರಿ.ಪೂ. ೪೨೭ರಲ್ಲಿ ಜನಿಸಿದ ಪ್ಲೇಟೋ ಕ್ರಿ.ಪೂ.೩೪೭ರವರೆಗೂ ಜೀವಿಸಿದ್ದನು. ಆತನ ಪೂರ್ವನಾಮವು ಅರಿಸ್ಟೋಕ್ಲೆಸ್ ಎಂದಿತ್ತು. ನಂತರ 'ಪ್ಲೇಟೋ' ಎಂಬ ಅಡ್ಡ ಹೆಸರು ಬಂದದ್ದು ಆತನ ವಿಸ್ತಾರವಾದ ಭುಜಗಳು ಹಾಗೂ ಹುಬ್ಬುಗಳ ವೈಶಾಲ್ಯದಿಂದ. ಕ್ರಿ.ಪೂ. ೪೦೭ರಲ್ಲಿ ಸಾಕ್ರೆಟಸ್‌ನ ಮಾರ್ಗದರ್ಶನದಲ್ಲಿ ತತ್ವಶಾಸ್ತ್ರವನ್ನು ಕಲಿಯಲು ಆತನ ಬಳಗಕ್ಕೆ ಪ್ಲೇಟೋ ಸೇರಿಕೊಂಡನು.

ಸಾಕ್ರೆಟಿಸ್‌ನ ಪ್ರಭಾವದಿಂದ ಆತನು ಒಬ್ಬ ಶ್ರೇಷ್ಟ ಜ್ಞಾನ ಪ್ರೇಮಿಯಾದನು. ಮೊದಲಿ ನಿಂದಲೂ ಆತನು ಅಥೆನ್ಸ್‌ನಲ್ಲಿ ಒಂದು ರಾಜಕೀಯ ವೃತ್ತಿಯನ್ನು ಆಯ್ದುಕೊಳ್ಳಲು ನಿರ್ಧರಿಸಿದ್ದನು. ಆದರೆ ಸಾಕ್ರೆಟಿಸ್‌ನ ಸಾವಿನಿಂದಾಗಿ ತಂತ್ರಜ್ಞಾನವನ್ನು ಅಭ್ಯಾಸ ಮಾಡುವ ಕಸುಬಿಗೆ ಸೇರಿಕೊಂಡನು. ಸಾಕ್ರೆಟಿಸ್‌ನ ದುರಂತ ಸಾವು ಪ್ಲೇಟೋನ ಚಿಂತನೆಯ ಎಲ್ಲಾ ಹಂತದಲ್ಲು ತನ್ನ ಪ್ರಭಾವ ಬೀರಿದೆ. ಅದು ಆತನು ಪ್ರಜಾಪ್ರಭುತ್ವದ ವಿರುದ್ಧ ಎಷ್ಟರ ಮಟ್ಟಿಗೆ ತಿರಸ್ಕಾರ ಬೆಳೆಯುವಂತೆ, ಗುಂಪಿನ ವಿರುದ್ಧ ದ್ವೇಷ ಬೆಳೆಯುವಂತೆ ಮಾಡಿ ತೆಂದರೆ ಆತನ ಶ್ರೀಮಂತ ಮನೆತನ ಮತ್ತು ಬೆಳವಣಿಗೆಗಳೂ ಸಹ ಆತನನ್ನು ಬೆಳೆಸಲಿಲ್ಲ. ಪ್ರಜಾಪ್ರಭುತ್ವವನ್ನು ನಾಶಪಡಿಸಲೇಬೇಕೆಂಬ ಹಾಗೂ ಅದರ ಬದಲಾಗಿ ಅತ್ಯುತ್ಕೃಷ್ಟರ ಮತ್ತು ಜ್ಞಾನಿಗಳ ಸಾಮ್ರಾಜ್ಯ ತರಬೇಕೆಂಬ ದೃಢ ನಿಶ್ಚಯ ಹುಟ್ಟಿತು. ಇಂತಹ ಜ್ಞಾನಿಗಳನ್ನು ಮತ್ತು ಅತ್ಯುತ್ಕೃಷ್ಟರನ್ನು ಕಂಡುಹಿಡಿಯುವ ಮಾರ್ಗೋಪಾಯವನ್ನು ಪತ್ತೆ ಹಚ್ಚಿ, ಅದನ್ನು ಆಳ್ವಿಕೆಗೆ ಸಿದ್ಧಗೊಳಿಸಿ ಹುರಿದುಂಬಿಸುವ ಕಾರ್ಯವೇ ಆತನಿಗೆ ಒಂದು ಮಹತ್ವದ ಸಮಸ್ಯೆಯಾಯಿತು.

ಸಾಕ್ರೆಟಿಸ್‌ನ ಜೀವ ಉಳಿಸಲು ಪ್ಲೇಟೋ ಅತಿ ಹೆಚ್ಚಿನ ಆಸಕ್ತಿ ವಹಿಸಿದ್ದರಿಂದ, ಅಥೆನ್ಸ್‌ನ ಪ್ರಜಾಪ್ರಭುತ್ವವಾದಿ ನಾಯಕರು ಆತನನ್ನು ಶಂಕೆಯಿಂದ ಗಮನಿಸುತ್ತಿದ್ದರು. ಆತನು ಅಥೆನ್ಸ್‌ನಲ್ಲಿ ಬದುಕುವುದು ದುಸ್ತರವಾಯಿತು. ತನ್ನ ಸ್ನೇಹಿತರ ಸಲಹೆಯಂತೆ ಸಾಕ್ರೆಟಿಸ್ ಕ್ರಿ.ಪೂ.೩೯೯ರಲ್ಲಿ ದೀರ್ಘವಾದ ಪ್ರವಾಸ ಹೊರಟನು. ಈಜಿಪ್ಟ್ , ಸಿಸಿಲಿ, ಇಟಲಿ ಮುಂತಾದ ಹಲವಾರು ದೇಶಗಳ ಪ್ರವಾಸವನ್ನು ಈ ಸಂದರ್ಭದಲ್ಲಿ ಮಾಡಿದನೆಂದು ಹೇಳಲಾಗುತ್ತದೆ. ಪ್ರಯಾಣದ ಸಂದರ್ಭದಲ್ಲಿ ಗಂಗಾನದಿಯ ತೀರ ಪ್ರದೇಶಕ್ಕೆ ಬಂದು ಹಿಂದೂಗಳ ನಿಗೂಢ ಧ್ಯಾನಗಳನ್ನು ಕಲಿತನೆಂದು ಹೇಳಲಾಗಿದ್ದರೂ ಅದಕ್ಕೆ ಯಾವ ಪುರಾವೆಗಳೂ ದೊರೆತಿಲ್ಲ. ಹಲವಾರು ದೇಶಗಳ, ಜನರ ಜ್ಞಾನಸಂಪರ್ಕದಿಂದಾಗಿ ಪ್ರೌಢತ್ವವನ್ನು ಪಡೆದ ೪೦ ವರ್ಷದ ಸಾಕ್ರೆಟಿಸ್ ಕ್ರಿ.ಪೂ.೩೮೭ರಲ್ಲಿ ಅಥೆನ್ಸಿಗೆ ಹಿಂದಿರುಗಿದನು. ಮರಗಳ ನೆರಳಿನಲ್ಲಿ ನಾಲ್ಕು ಗೋಡೆಗಳ ಆಚೆ ತನ್ನ "ಅಕಾಡಮಿ"ಯನ್ನು ಕಂಡುಕೊಂಡನು.

ತನ್ನ ಅಗಾಧ ಪಾಂಡಿತ್ಯ ಹಾಗೂ ಅನುಭವಗಳಿಂದ ಪ್ಲೇಟೋ ಬರೆದ "ದಿ ರಿಪಬ್ಲಿಕ್" ಗ್ರಂಥವನ್ನು ಜಗತ್ತಿನಾದ್ಯಂತ ಎಲ್ಲಾ ಕಾಲಕ್ಕೂ ಅತ್ಯಂತ ಶ್ರೇಷ್ಠವಾದ ಪುಸ್ತಕವೆಂದು ಪರಿಗಣಿಸಲಾಗುತ್ತಿದೆ. 'ರಿಪಬ್ಲಿಕ್' ಗ್ರಂಥದ ಸಾಹಿತ್ಯಿಕ ರೂಪ 'ಸಂವಾದ' ಮಾದರಿಯದಾಗಿದ್ದು, ಇದರಲ್ಲಿ ಸಾಕ್ರೆಟಿಸ್‌ನು ನಿರೂಪಕನೂ ಮತ್ತು ಮುಖ್ಯ ಪಾತ್ರ ಧಾರಿಯೂ ಆಗಿದ್ದಾನೆ. ವಾಸ್ತವವಾಗಿ ಸಂಭಾಷಣೆ ಮುಂದುವರಿಯುತ್ತಾ ಹೋದಂತೆ, ಸಂಭಾಷಣೆಯಲ್ಲಿ ಪಾಲ್ಗೊಂಡ ಇತರರು ಹೆಚ್ಚು, ಹೆಚ್ಚಾಗಿ ಮೌನದಿಂದಲೇ ತಲೆಯಾಡಿಸಿ ಸಮ್ಮತಿ ಸೂಚಿಸುತ್ತಿದ್ದುದರಿಂದ ಅದೊಂದು ಸ್ವಗತ ಭಾಷಣದಂತೆ ಆಗುತ್ತದೆ. ಇದರಿಂದಾಗಿ ಸಾಕ್ರೆಟಿಸ್ ತನ್ನ ವಾದ ಸರಣಿಯನ್ನು ಮುಂದುವರಿಸಲು ಅನುವು ಮಾಡಿಕೊಡುತ್ತಿದ್ದನು. ಈ ಸಂಭಾಷಣೆಯು ಶ್ರೀಮಂತ ನಿವೃತ್ತ ವ್ಯಾಪಾರಿಯಾದ ಸೆಫಲಸ್ ಎಂಬುವನ ಮನೆಯಲ್ಲಿ ಪ್ರಾರಂಭವಾಗುತ್ತದೆ. ಈ ಸಂಭಾಷಣೆಯಲ್ಲಿ ಸೆಫಲಸ್‌ನ ಮಗ ಪಾಲಿಮೆರಾಕಸ್, ಪ್ಲೇಟೋನ ಇಬ್ಬರು ಹಿರಿಯ ಸೋದರರಾದ ಗ್ಲಾಕನ್ ಮತ್ತು ಅಡಿಮೆಂಟಾಸ್ ಮತ್ತು ಒಬ್ಬ ನಾಸ್ತಿಕ ಭಾಗವಹಿಸುತ್ತಾರೆ.

ಈ ಚರ್ಚೆಯು ಬಹುಬೇಗನೆ 'ರಿಪಬ್ಲಿಕ್'ನ ಕೇಂದ್ರ ಪ್ರಶ್ನೆಯಾದ 'ನ್ಯಾಯವೆಂದರೇನು?' ಎಂಬುದರ ಕಡೆಗೆ ತಿರುಗುತ್ತದೆ. ಅದನ್ನು ಮೊದಲು ಸೆಫಲಿಸ್‌ನು ತನ್ನ ದೀರ್ಘವಾದ ಪ್ರಾಯೋಗಿಕ ಅನುಭವಗಳ ಆಧಾರದ ಮೇಲೆ ಹೀಗೆ ವ್ಯಾಖ್ಯಾನಿಸುತ್ತಾನೆ: "ನ್ಯಾಯ ಎಂದರೆ ಪ್ರಾಮಾಣಿಕತೆ ಮತ್ತು ದೇವತೆಗಳು ಮತ್ತು ಮಾನವರಿಗೆ ಸಲ್ಲಬೇಕಾದ್ದನ್ನು ಸಲ್ಲಿಸುವುದು." ಪ್ಲೇಟೋ ಇದನ್ನು ಟೀಕಿಸುತ್ತಾನೆ. ಅವನ ಟೀಕೆಗೆ ಹಲವಾರು ಕಾರಣಗಳಿದ್ದವು. ಈ ಸೂತ್ರಕ್ಕೆ ಅಂಟಿಕೊಂಡಿರುವುದು ಔಚಿತ್ಯದ ತತ್ವವನ್ನು ಹಲವೊಮ್ಮೆ ವಿರೋಧಿಸಿದಂತಾಗುತ್ತದೆ ಮತ್ತು ಈ ಸೂತ್ರವನ್ನು ಬದುಕಿನ ದೃಢವಾದ ಸಾರ್ವತ್ರಿಕ ನೀತಿಯಾಗಿ ಪರಿಗಣಿಸಲು ಸಾಧ್ಯವಿಲ್ಲ. ಹುಚ್ಚು ಹಿಡಿದ ವ್ಯಕ್ತಿಯ ಮೇಲೆ ಮಾರಕಾಸ್ತ್ರಗಳನ್ನು ಪ್ರಯೋಗಿಸುವುದು ಉಚಿತವಲ್ಲ. ಪಾಲಿಮೆರಾಕಸ್‌ನು ಮುಂದೆ 'ನ್ಯಾಯ'ವನ್ನು 'ತನ್ನ ಸ್ನೇಹಿತರಿಗೆ ನೆರವಾಗುವುದು, ಶತ್ರುಗಳಿಗೆ ತೊಂದರೆ ಕೊಡುವುದು' ಎಂಬರ್ಥವನ್ನು ಸೂಚಿಸುತ್ತಾನೆ. ಆದರೆ ಪ್ಲೇಟೋ ಈ ವ್ಯಾಖ್ಯಾನವನ್ನು ನಿರಾಕರಿಸುತ್ತಾನೆ. ಏಕೆಂದರೆ ಸ್ನೇಹಿತರಿಗೆ ಒಳಿತನ್ನು, ಶತ್ರುಗಳಿಗೆ ಕೆಡುಕನ್ನು ಮಾಡಬೇಕೆಂದು ಹೇಳುವುದು ಬಹಳ ಸುಲಭ. ಆದರೆ ಸ್ನೇಹಿತರಂತೆ ಕಂಡುಬರುವ ಆದರೆ ಶತ್ರುವಾಗಿರುವವನ ಬಗ್ಗೆ ಹೇಗೆ ತೀರ್ಮಾನಿಸುವುದು. ಎಲ್ಲಕ್ಕಿಂತ ಹೆಚ್ಚಾಗಿ ತನ್ನ ಶತ್ರುವಿಗೆ ಕೆಡುಕನ್ನು ಉಂಟು ಮಾಡುವುದು ಎನ್ನುವ ವಾದ ನೈತಿಕತೆಯ ಮೂಲಭೂತ ಕಲ್ಪನೆಗೆ ಹೊಂದಿಕೊಳ್ಳುವುದಿಲ್ಲ.

ಈ ಹಂತದಲ್ಲಿ ತ್ರ್ಯಾಸಿಮ್ಯಾಕಸ್‌ನು ಸಂವಾದದಲ್ಲಿ ಭಾಗವಹಿಸುತ್ತಾ, 'ನ್ಯಾಯ ಎಂದರೆ ಬಲಿಷ್ಠ ಗುಂಪಿನ ಇಚ್ಛೆಗೆ ಅನುಗುಣವಾಗಿ ಇರುವುದು' ಎಂಬ ಅಭಿಪ್ರಾಯವನ್ನು ಮಂಡಿಸುತ್ತಾನೆ. ಪ್ಲೇಟೋ ಒಂದು ಉದಾಹರಣೆಯ ಮೂಲಕ ಈ ವಾದವನ್ನು ಖಂಡಿಸುತ್ತಾನೆ. ಪ್ಲೇಟೋನ ಸಮಕಾಲೀನನಾದ ಪ್ರಸಿದ್ಧ ಆಟಗಾರನಾದ ಪೌಲಿಡಾಮಸ್‌ನ ಇಚ್ಛೆ ಗೋಮಾಂಸ ತಿನ್ನುವುದಾಗಿತ್ತು. ಹಾಗಾಗಿ ಪೌಲಿಡಾಮಸ್‌ನು ಇತರರ ಬಾಯಿಗೆ ಗೋಮಾಂಸವನ್ನು ತುರುಕುವುದು ನ್ಯಾಯವಾಗುತ್ತದೆ. ನೈತಿಕವಾಗಿ ಇದು ತಪ್ಪು. ಆದ್ದರಿಂದ ಇದನ್ನು ನ್ಯಾಯವೆಂದು ಪರಿಗಣಿಸಲಾಗದು.

ಈ ಸಂದರ್ಭದಲ್ಲಿ ಎಲ್ಲಾ ವ್ಯಾಖ್ಯಾನಗಳನ್ನು ಖಂಡಿಸುತ್ತ, ಟೀಕಿಸುತ್ತಾ ಇದ್ದುದರಿಂದ ಪ್ಲೇಟೋನನ್ನು ಎಲ್ಲರೂ ನ್ಯಾಯವನ್ನು ವ್ಯಾಖ್ಯಾನಿಸಬೇಕೆಂದು ಆಗ್ರಹಪಡಿಸಿದರು. ಪ್ಲೇಟೋನ ಪ್ರಕಾರ ನ್ಯಾಯ ಎಂದರೆ "ತನ್ನ ಕರ್ತವ್ಯದ ಪರಿಧಿಯೊಳಗೆ ಏಕಾಗ್ರತೆ ಸಾಧಿಸುವ ಕೌಶಲ್ಯ ಮತ್ತು ಇತರರ ಪರಿಧಿಯೊಳಗೆ ಪ್ರವೇಶಿಸದಿರುವುದು." ಪ್ಲೇಟೋನ ನ್ಯಾಯದ ಕಲ್ಪನೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಆತನು ಮಾನವ ಹಾಗೂ ಸಾಮಾಜಿಕ ರಚನೆಗಳ ನಡುವೆ ಸಾದೃಶ್ಯಗಳನ್ನು ನೀಡುತ್ತಾನೆಂಬುದನ್ನು ಗಮನಿಸಬೇಕು. ಆತನ ಪ್ರಕಾರ ಮಾನವ ಸಂರಚನೆಯಲ್ಲಿ ವಿಚಾರ, ಚೈತನ್ಯ ಮತ್ತು ಆಕಾಂಕ್ಷೆ ಎಂಬ ಮೂರು ಮೂಲ ಧಾತುಗಳಿರುತ್ತವೆ. ಮನಶಾಸ್ತ್ರೀಯವಾಗಿ ಈ ಮೂರು ಗುಣಗಳು ಮೂರು ಪ್ರಮುಖ ಶಕ್ತಿಗಳನ್ನು ಸೂಚಿಸುತ್ತವೆ. ಇದರಲ್ಲಿ ಆಕಾಂಕ್ಷೆ ಅಥವಾ ಪೋಷಕ ಸಾಮರ್ಥ್ಯ ಅವನು ಊಹಿಸುವಂತೆ ವಪೆಯ ಕೆಳಗೆ ಇದ್ದು, ಸ್ಫೂರ್ತಿಯು ಎದೆಯಲ್ಲಿ ನೆಲಸಿದ್ದು, ಅರಿಯುವ ಅಥವಾ ಯೋಚಿಸುವ ವಿವೇಕ ಅಥವಾ ವಿಚಾರವು ತಲೆಯ ಭಾಗದಲ್ಲಿರುತ್ತದೆ. ಈ ಮೂರು ಮೂಲಧಾತುಗಳಿಗೆ ಪೂರಕವಾಗಿ ಮಾನವ ರಚನೆಯಲ್ಲಿ ಮೂರು ವರ್ಗಗಳಿರುತ್ತವೆ. ವಿಚಾರವನ್ನು ಪ್ರತಿನಿಧಿಸುವ ತಾತ್ವಿಕ ಅಥವಾ ಆಳುವ ವರ್ಗ, ಚೈತನ್ಯವನ್ನು ಪ್ರತಿನಿಧಿಸುವ ಸೈನಿಕ ವರ್ಗ ಹಾಗೂ ಅಕಾಂಕ್ಷೆಯನ್ನು ಪ್ರತಿನಿಧಿಸುವ ರೈತರು, ಕುಶಲಕರ್ಮಿಗಳು ಹಾಗೂ ಇತರರು ಇರುತ್ತಾರೆ. ಹೀಗೆ ಮಾನವ ಮತ್ತು ಸಾಮಾಜಿಕ ರಚನೆಗಳನ್ನು ಸೇರಿಸಿ, ಬೆಸೆಯುತ್ತಾ, ಪ್ರತಿಯೊಂದು ಸಾಮಾಜಿಕ ವರ್ಗದಿಂದಲೂ ಕ್ರಿಯಾತ್ಮಕ ವೈಶಿಷ್ಟ್ಯವು ಬದುಕಿನ ಹಂತಗಳಲ್ಲಿ ತನಗೆ ನಿಗದಿತಗೊಳಿಸಲಾದ ಹಂತದಲ್ಲಿ ವೈಶಿಷ್ಟ್ಯವನ್ನು ಕಾಪಾಡಿಕೊಂಡಿರಬೇಕೆಂದು ಬಯಸುತ್ತಾನೆ ಎಂದು ಪ್ಲೇಟೋ ಒತ್ತಿ ಹೇಳುತ್ತಾನೆ. ಹೀಗೆ ಇವರ ಆಧಾರದ ಮೇಲೆ ನ್ಯಾಯವನ್ನು ಪ್ಲೇಟೋ ವ್ಯಾಖ್ಯಾನಿಸುತ್ತಾನೆ.

'ಗಣರಾಜ್ಯ'ದಲ್ಲಿ ಆದರ್ಶದ ಅಥವಾ ಉತ್ತಮ ರಾಜ್ಯವ್ಯವಸ್ಥೆ ವಿಚಾರ ಸರಣಿಯನ್ನು ಕಟ್ಟುವ ಪ್ರಯತ್ನ ಮಾಡುತ್ತಾನೆ. ಪ್ಲೇಟೋ ದೃಷ್ಟಿಯಲ್ಲಿ ರಾಜ್ಯ ವ್ಯವಸ್ಥೆ ಎನ್ನುವುದು ವ್ಯಕ್ತಿಯ ಒಂದು ವಿಸ್ತೃತ ರೂಪವೇ ಆಗಿದೆ. ಈ ಹಿಂದೆ ವಿವರಿಸಿದಂತೆ ಮಾನವ ರಚನೆಯು ಮೂರು ಮೂಲಧಾತುಗಳನ್ನೊಳಗೊಂಡ ರೀತಿಯಲ್ಲೇ, ರಾಜ್ಯವ್ಯವಸ್ಥೆಯೂ ಇದೆ. ವ್ಯಕ್ತಿಗಳ ಒಳ್ಳೆಯ ಬದುಕೇ ಇಂತಹ ವ್ಯವಸ್ಥೆಯ ಗುರಿಯಾಗಿದೆ. ಪ್ಲೇಟೋನ ಆದರ್ಶ ರಾಜ್ಯವ್ಯವಸ್ಥೆಯು ಮೂರು ಹಿರಿಯ ನಿಯಮಗಳ ಆಧಾರದ ಮೇಲೆ ಕಟ್ಟಲಾಗಿದ್ದು ಅವುಗಳನ್ನು ಅಡಿಪಾಯದ ಕಲ್ಲುಗಳೆಂದೂ ಹೇಳಬಹುದು.

ಅ. ಗಂಡಸರು ಮತ್ತು ಹೆಂಗಸರು ವಿವಿಧ ರೀತಿಯಲ್ಲಿ ವರ್ತಿಸುತ್ತಾರೆ. ಇದನ್ನು ಹೇಗೆ ವಿಂಗಡಿಸುವುದು? ಇದು ವಿದ್ಯಾಭ್ಯಾಸದ ಮೂಲಕ ಮಾತ್ರ ಸಾಧ್ಯವಾಗುತ್ತದೆ.

ಆ. ವೈಚಾರಿಕ ಹಾಗೂ ಚೈತನ್ಯಮಯ ವರ್ಗಗಳಲ್ಲಿ ಖಾಸಗಿ ಕುಟುಂಬ ಮತ್ತು ಆಸ್ತಿಯನ್ನು ರದ್ದುಗೊಳಿಸುವುದು.

ಇ. ತತ್ವಜ್ಞಾನಿ ರಾಜರ ಆಳ್ವಿಕೆ.

**ಇಂತಹ ಒಂದು ಆದರ್ಶ ರಾಜ್ಯವ್ಯವಸ್ಥೆಯಲ್ಲಿರುವ ಒಬ್ಬ ಆದರ್ಶ ನಾಗರಿಕನು ಈ ಕೆಳಕಂಡ ಗುಣಗಳನ್ನು ಹೊಂದಿರುತ್ತಾನೆ.**

೧. ದೈಹಿಕ ಸೌಂದರ್ಯ

೨. ಬೌದ್ಧಿಕ ತೀಕ್ಷ್ಣತೆ

೩. ಜ್ಞಾನದಾಹ ಮತ್ತು ಸಾಮರ್ಥ್ಯ ಹಾಗೂ ಚುರುಕಾದ ಚಾತುರ್ಯ

೪. ಸೌಂದರ್ಯ ಕಾಣ್ಕೆ

೫. ದೋಷದ ಬಗೆಗಿನ ದ್ವೇಷ

೬. ತನ್ನ ಸಹವರ್ತಿಗಳ ಬಗ್ಗೆ ಪ್ರೀತಿ.

**ಆದರ್ಶರಾಜ್ಯದ ಮೊದಲ ಸೂತ್ರವಾದ ಶಿಕ್ಷಣವನ್ನು ಮತ್ತೊಮ್ಮೆ ಅವಲೋಕಿಸಿದಾಗ ಪ್ಲೇಟೋ ಅದರ ಅಗತ್ಯ ಮತ್ತು ಮಹತ್ವದ ಕುರಿತು ಹೀಗೆನ್ನುತ್ತಾನೆ.**

೧. ದೋಷಯುಕ್ತ ಸಮಾಜವನ್ನು ಪುನರ್‌ರೂಪಿಸುವ ಆಸೆಯನ್ನು ಶಿಕ್ಷಣವು ಜೀವಂತ ವಾಗಿಸುತ್ತದೆ.

೨. ಸಾರ್ವಜನಿಕ ಕರ್ತವ್ಯ ಪಾಲಿಸುವಾಗ ಬೇಕಾಗುವ ತಾದ್ಯಾತ್ಮ್ಯ ಮತ್ತು ಶ್ರೇಷ್ಠತೆಯ ಚೈತನ್ಯವನ್ನು ಶಿಕ್ಷಣವು ಸೃಷ್ಟಿಸುತ್ತದೆ.

೩. ಶಿಕ್ಷಣವು ಮಾನವನಲ್ಲಿ ಶಿಸ್ತಿನ ಜೀವನ, ಬದುಕಿನ ಮೂಲಭೂತ ಅಗತ್ಯಗಳು, ಸತ್ಯದ ಬಗ್ಗೆ ಪ್ರೀತಿ ಇತ್ಯಾದಿಗಳನ್ನು ಧ್ಯಾನಿಸುವ ಜೀವನ ಇತ್ಯಾದಿಗಳನ್ನು ಒದಗಿ ಸುತ್ತದೆ.

೪. ಶಿಕ್ಷಣದ ಮೂಲಕ ರಾಜ್ಯವ್ಯವಸ್ಥೆಯು ಅಪರಾಧಗಳನ್ನು ತಡೆಹಿಡಿದು, ನ್ಯಾಯ ಹಾಗೂ ಔಚಿತ್ಯಪೂರ್ಣ ಕ್ರಿಯೆಗಳನ್ನು ನಿರ್ವಹಿಸಬಹುದು.

೫. ವ್ಯಕ್ತಿಯು ತನ್ನನ್ನು ತಾನು ಅರಿತುಕೊಳ್ಳಲು ಶಿಕ್ಷಣ ಸಹಕಾರಿ.

೬. ವ್ಯಕ್ತಿಯು ಸಮಾಜದಲ್ಲಿ ಸುಸಂಗತವಾಗಿ ಎಲ್ಲರೊಡನೆ ಬೆರೆಯಲು, ಸಮಾಜಕ್ಕೆ ಉಪಕಾರಿಯಾಗಲೂ ಸಹಕಾರಿಯಾಗುತ್ತದೆ.

ಪ್ಲೇಟೋವಿನ ಶಿಕ್ಷಣ ಪದ್ಧತಿಯು ಅತ್ಯಂತ ಕ್ರಮಬದ್ಧವಾಗಿದ್ದು, ಸಮಾಜದ ಎಲ್ಲಾ ವರ್ಗದ ಸ್ತ್ರೀ ಹಾಗೂ ಪುರುಷರಿಗೆ ಮುಕ್ತವಾಗಿದ್ದಿತು. ಶಿಕ್ಷಣವು ಎರಡು ಕ್ರಮದ್ದಾಗಿತ್ತು. ಶಾರೀರಿಕ ಹಾಗೂ ಬೌದ್ಧಿಕ. ನಂತರ ಇದನ್ನು ಮತ್ತೆ ಎರಡು ಭಾಗವಾಗಿ ವಿಂಗಡಿಸಬಹುದು.

**೧. ಪ್ರಾಥಮಿಕ ಶಿಕ್ಷಣ**

ಪ್ರಾಥಮಿಕ ಶಿಕ್ಷಣವು ೧೦ನೆಯ ವಯಸ್ಸಿನಲ್ಲಿ ಪ್ರಾರಂಭವಾಗಿ, ೧೬ ರಿಂದ ೨೦ ವರ್ಷದವರೆಗೂ ಮುಂದುವರೆಯುತ್ತದೆ. ಶಾರೀರಿಕ ಬೆಳವಣಿಗೆಗಾಗಿ ಶಾರೀರಿಕ ವ್ಯಾಯಾಮ ಮತ್ತು ಅಂಗಸಾಧನೆ ಮುಂತಾದವು ಗಳಿದ್ದವು. ವಿದ್ಯಾರ್ಥಿಗಳಿಗೆ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಅಗತ್ಯವಾದ ಆಹಾರ ಮತ್ತು ಅದರ ವಿಧಗಳ ಬಗ್ಗೆಯೂ ಹೇಳಿಕೊಡಲಾಗುತ್ತಿತ್ತು. ಬೌದ್ಧಿಕ ಬೆಳವಣಿಗೆಯಲ್ಲಿ ಸಂಗೀತ ಕಲಿಕೆಯು ಅಗತ್ಯ. ಏಕೆಂದರೆ ಇದು ಸಾಂಸ್ಕೃತಿಕ ಬೆಳವಣಿಗೆಗೆ ಸಹಕಾರಿ. ಸಂಗೀತದ ಮೂಲಕ ಮಹಾಕಾವ್ಯಗಳನ್ನು ಓದಲು, ಅರ್ಥೈಸಲು(ಅಭಿನಯ ಮತ್ತು ಸಂಗೀತ)ಸಹಕಾರಿ. ಉದಾತ್ತ ನಾಯಕರ, ವೀರರ ಕುರಿತ ಕಾವ್ಯಗಳನ್ನು, ಸಣ್ಣ ಕಥೆಗಳನ್ನು ಕಲಿಸಬೇಕೆಂಬುದರ ಬಗ್ಗೆ ಬಹಳ ನಿಖರವಾಗಿದ್ದ. ಪ್ಲೇಟೋ ಹೇಡಿಗಳ ಮತ್ತು ಖಳನಾಯಕನನ್ನು ಕುರಿತು ಕಲಿಸಬಾರದು ಎಂದು ಖಡಾಖಂಡಿತವಾಗಿ ವಾದಿಸುತ್ತಿದ್ದ.

## ೨. ಉನ್ನತ ಶಿಕ್ಷಣ

೨೦ನೆಯ ವಯಸ್ಸಿನಲ್ಲಿ ಉನ್ನತ ಶಿಕ್ಷಣಕ್ಕೆ ಅಗತ್ಯವಾದ ಒಂದು ಅರ್ಹತಾ ಪರೀಕ್ಷೆ ಯನ್ನು ನಡೆಸಲಾಗುತ್ತಿತ್ತು. ಅನುತ್ತೀರ್ಣರಾದವರನ್ನು ಆಕಾಂಕ್ಷ ವರ್ಗದ ಸದಸ್ಯರೆಂದು ಪರಿಗಣಿಸಲಾಗುತ್ತಿತ್ತು. ಉನ್ನತ ಶಿಕ್ಷಣವು ೨೦ ರಿಂದ ೩೦ ಮತ್ತು ೩೦ ರಿಂದ ೩೫ ವಯೋಮಿತಿಯ ಎರಡು ವರ್ಗಗಳದ್ದಾಗಿತ್ತು. ೨೦ರಿಂದ ೩೦ರ ವಯೋಮಾನದ ಶಿಕ್ಷಣವು ಕ್ರಮಬದ್ಧವೂ ವೈಜ್ಞಾನಿಕ ರೀತಿಯದೂ ಆಗಿತ್ತು. ಅಲ್ಲಿ ಅಂಕಗಣಿತ, ರೇಖಾಗಣಿತ(ರೇಖಾಗಣಿತವನ್ನು ಸರಳ ಹಾಗೂ ಘನವಾದ ರೇಖಾಗಣಿತವೆಂದು ಎರಡು ಭಾಗವೆಂದು ವಿಭಾಗಿಸಲಾಗಿತ್ತು. ಪ್ಲೇಟೊ ಘನರೇಖಾಗಣಿತಕ್ಕೆ ಪ್ರಾಧಾನ್ಯತೆ ನೀಡುತ್ತಿದ್ದ) ಮತ್ತು ಖಗೋಳಶಾಸ್ತ್ರಗಳನ್ನು ಬೋಧಿಸಲಾಗುತ್ತಿತ್ತು.

೩೦ನೆಯ ವಯಸ್ಸಿನಲ್ಲಿ, ಎರಡನೇ ಹಂತದ ಅರ್ಹತಾ ಪರೀಕ್ಷೆಯನ್ನು ನಡೆಸಲಾಗು ತ್ತಿದ್ದು, ಅದರಲ್ಲಿ ಉತ್ತೀರ್ಣರಾದವರಿಗೆ ಮುಂದಿನ ೫ ವರ್ಷಗಳ ಉನ್ನತ ಶಿಕ್ಷಣವನ್ನು ನೀಡಲಾಗುತ್ತಿತ್ತು. ಇಲ್ಲಿ ತತ್ವಶಾಸ್ತ್ರ, ತರ್ಕಶಾಸ್ತ್ರಗಳ ಬಗ್ಗೆ ಕಲಿಸಲಾಗುತ್ತಿತ್ತು. ಜೊತೆಗೆ ಉನ್ನತ ಮಟ್ಟದ ಸೈನಿಕ ತರಬೇತಿಯನ್ನು ನೀಡಲಾಗುತ್ತಿತ್ತು. ಅಂತಿಮವಾಗಿ ೩೫ ರಿಂದ ೫೦ ರವರೆಗಿನ ವಯಸ್ಸಿನವರೆಗೆ ೧೫ ವರ್ಷಗಳ ನಂತರ ಉತ್ತೀರ್ಣರಾದವರನ್ನು ಸರ್ಕಾರ ದಲ್ಲಿ ಸೈನ್ಯದಲ್ಲಿ ಪ್ರತ್ಯಕ್ಷ ಅನುಭವ ನೀಡುವುದರ ಮೂಲಕ ಪರೀಕ್ಷಿಸುತ್ತಿದ್ದರು. ೫೦ನೆಯ ವಯಸ್ಸಿನಲ್ಲಿ ಈ ಪರೀಕ್ಷೆಗಳನ್ನು ಎದುರಿಸಿ ಯಶಗಳಿಸಿದವರು ರಾಜರಾಗಲು ಅರ್ಹರಾಗುತ್ತಿದ್ದರು.

ಆಸ್ತಿ ಹಾಗೂ ಸಾಮೂಹಿಕ ಒಡೆತನ ಆದರ್ಶರಾಜ್ಯದ ಎರಡನೆಯ ಅಂಶ. ಪೋಷಕ ವರ್ಗಗಳಿಗೆ ಆಸ್ತಿ ಹಾಗೂ ಕುಟುಂಬದ ಮೇಲೆ ಸಮತಾವಾದವನ್ನು ಅನ್ವಯಿಸುವಲ್ಲಿ ಪ್ಲೇಟೋಗೆ ಇದ್ದ ಉದ್ದೇಶಗಳೆಂದರೆ:

೧. ಸಮತಾವಾದವು ಆತ್ಮವನ್ನು ಒಂದು ಪ್ರತ್ಯೇಕ ಘಟಕವೆಂದು ಪರಿಗಣಿಸುವ ಹುಸಿಕಲ್ಪನೆಯನ್ನು ನಾಶಗೊಳಿಸಿ, ಸಾಮಾಜಿಕ ಪೂರ್ಣತ್ವದ ಒಂದು ಅವಿಚ್ಛಿನ್ನ ಹಾಗೂ ಉಪಯುಕ್ತ ಅಂಗವೆಂಬ ಪರಿಕಲ್ಪನೆಯನ್ನು ಮೂಡಿಸುತ್ತದೆ.

೨. ನೈಪುಣ್ಯತೆಗೆ ಅವಕಾಶ ಮಾಡಿಕೊಡುವಂತಹ ಮನಸ್ಸು ಮತ್ತು ಆಸಕ್ತಿಗಳು ನಾಶವಾಗುವುದನ್ನು ಇದು ತಪ್ಪಿಸುತ್ತದೆ.

೩. ಕುಟುಂಬದಲ್ಲಿ ಹೆಂಗಸರಿಗೆ ಸ್ವಾತಂತ್ರ್ಯವನ್ನೂ, ವಿಮುಕ್ತಿಯನ್ನೂ ನೀಡುತ್ತದೆ.

ಎರಡು ಸ್ವರೂಪಗಳನ್ನೊಳಗೊಂಡ ಪ್ಲೇಟೋನ ಸಮತಾವಾದವು ವಿಚಾರ ಮತ್ತು ಚೈತನ್ಯಮಯ ವರ್ಗವನ್ನು ಮಾತ್ರ ಬೆಂಬಲಿಸುತ್ತದೆ. ಮೊದಲನೆಯದು ಮನೆ, ಭೂಮಿ ಕಾಣಿಕೆ, ಹಣ ಮತ್ತು ಇಂತಹವುಗಳೆಲ್ಲವನ್ನು ಒಳಗೊಂಡಂತಹ ಸ್ವಂತ ಆಸ್ತಿಯ ರದ್ಧತಿ. ಎರಡನೆಯದು ಕುಟುಂಬ ವ್ಯವಸ್ಥೆಯ ರದ್ಧತಿ. ಇದರಿಂದ ಏಕ ಸಂಗಾತಿವುಳ್ಳ ಶಾಶ್ವತ ಲೈಂಗಿಕ ಸಂಬಂಧಗಳು ರದ್ದಾಗುತ್ತವೆ. ಇದಕ್ಕೆ ಬದಲಾಗಿ ಪ್ರಭುಗಳ ಅಣತಿಯ ಮೇರೆಗೆ ಉತ್ತಮ ಸಂತತಿಯನ್ನು ಪಡೆಯಲು ಒಂದು ನಿಯಮಿತ ಪೋಷಣಾ ವ್ಯವಸ್ಥೆಯನ್ನು ಬೆಳೆಸುವುದು. ಪೋಷಕ ವರ್ಗದ ಸದಸ್ಯರು ಆಕಾಂಕ್ಷ ವರ್ಗವು ನೀಡುವ ಕೊಡುಗೆ ರೂಪದ ಸಂಬಳದ ಮೇಲೇಯೇ ಬದುಕಬೇಕು. ಅವರು ಸಾರ್ವಜನಿಕ ಪಾಳಯದಲ್ಲಿ ಬದುಕಬೇಕು. ಇವುಗಳಿಗೆ ಯಾವಾಗಲೂ ಮುಕ್ತ ಹಾಗೂ ಸಾರ್ವಜನಿಕ ಪ್ರವೇಶ ವಿರುತ್ತದೆ. ಈ ರೀತಿಯಾಗಿ ಪ್ಲೇಟೋವಿನ ಸಮತಾವಾದದ ವ್ಯವಸ್ಥೆಯು ಒಂದು ಹೊಸ ಸಾಮಾಜಿಕ ಶಿಸ್ತನ್ನು ಕಂಡುಕೊಳ್ಳುತ್ತದೆ. ಇದರಲ್ಲಿ ಪೋಷಕ ವರ್ಗವು ತಮ್ಮ ಕುಟುಂಬ ಹಾಗೂ ಆಸ್ತಿಗಳನ್ನು ಒಪ್ಪಿಸಿಕೊಟ್ಟು, ಸಮತಾವಾದಕ್ಕೆ ಅರ್ಪಿಸಿಕೊಳ್ಳುತ್ತಾರೆ.

ಇನ್ನೊಂದು ಅಂಶವೆಂದರೆ ತತ್ವಜ್ಞಾನಿ ದೊರೆಯ ಆಡಳಿತ. ಅಶಕ್ತ, ಸ್ವಾರ್ಥ ರಾಜಕಾರಣಿಗಳ ಆಡಳಿತದಿಂದ ಬೇಸತ್ತಿದ್ದ ಪ್ಲೇಟೋ ಉತ್ತಮ ದಕ್ಷ ಆಡಳಿತಕ್ಕೆ ತತ್ವಜ್ಞಾನಿ ದೊರೆಯೇ ಸರಿ ಎಂದು ಚಿಂತಿಸಿದ್ದ. “ತತ್ವಜ್ಞಾನಿಯು ರಾಜನಾಗುವುದು ಅಥವಾ ಈ ಪ್ರಪಂಚದ ರಾಜರು ಅಥವಾ ದೊರೆಗಳು ತಾತ್ವಿಕ ಪ್ರೇರಣೆಯನ್ನು ಹೊಂದಿಲ್ಲದಿದ್ದರೆ ನಗರಗಳು ಅವರ ಕೆಡಕುಗಳಿಂದ ಮುಕ್ತವಾಗಲು ಸಾಧ್ಯವಿಲ್ಲ” ಎಂದು ಪ್ಲೇಟೋ ಬರೆಯುತ್ತಾನೆ. ಪ್ಲೇಟೋವು ತತ್ವಜ್ಞಾನಿಯೆಂದರೆ ಜ್ಞಾನವನ್ನು ನಿಷ್ಠೆಯಿಂದ ಅರಸುವ ವ್ಯಕ್ತಿಯಲ್ಲ; ಬದಲಾಗಿ ಅದನ್ನು ಪಡೆದನು. ತತ್ವಶಾಸ್ತ್ರದ ಆಡಳಿತವೆಂದರೆ ಪಾಂಡಿತ್ಯದ ಆಡಳಿತ ಅಥವಾ ಪ್ರಜ್ಞೆಯ ಆಡಳಿತ. ತತ್ವಜ್ಞಾನಿಗಳು ದೊರೆಗಳಾಗುವ

ಸರ್ಕಾರದ ಸ್ವರೂಪವನ್ನು ನೈಜ ಶಿಷ್ಟ ಪ್ರಭುತ್ವ ಅಥವಾ ಶ್ರೇಷ್ಠತೆಯ ನಿರಂಕುಶ ಪ್ರಭುತ್ವ ಎಂದು ಕರೆಯಬಹುದು. ಅವರು ತಮ್ಮ ವೈಯಕ್ತಿಕ ಸಂತೋಷಗಳನ್ನು ತ್ಯಜಿಸಿ, ಜನರ ಏಳಿಗೆಗಾಗಿ ಸರ್ವಸ್ವವನ್ನೂ ಅರ್ಪಿಸುತ್ತಾರೆ. ಒಬ್ಬ ತತ್ವಜ್ಞಾನಿ ದೊರೆಯ ಬದುಕು ಕ್ರಿಯೆ ಹಾಗೂ ಧ್ಯಾನಗಳಿಂದ ಕೂಡಿರುತ್ತದೆ. ಆತನು ಪ್ರಾಮಾಣಿಕನಾಗಿ, ಶಿಸ್ತುಬದ್ಧನಾಗಿ, ವಿವೇಕವಂತನಾಗಿ, ಅವ್ಯರ್ಥನಾಗಿ, ಶುದ್ಧನಾಗಿದ್ದು ಒಳ್ಳೆಯ ಗುಣಗಳನ್ನು ಪಡೆದಿರುತ್ತಾನೆ.

ಈ ಆದರ್ಶ ರಾಜ್ಯದ ವಾದವು ಬಹುವಾಗಿ ಟೀಕೆಗೊಳಗಾಯಿತು. ಇದಕ್ಕೂ ಮಿಗಿಲಾದ ಸಿರಾಕ್ಯೂಬ್‌ನ ಎರಡನೆಯ ಡೈನೋಶಿಯಸ್‌ನ ಅಧಿಪತ್ಯದಲ್ಲಿ ಸಿಸಿಲಿಯ ದೊರೆಗಳನ್ನು ತತ್ವಜ್ಞಾನಿ ದೊರೆಗಳನ್ನಾಗಿ ತಯಾರು ಮಾಡುವ ಪ್ಲೇಟೋನ ರಾಜಕೀಯ ಪ್ರಯೋಗಗಳು ಸಂಪೂರ್ಣವಾಗಿ ಸೋಲುಂಡವು. ತನ್ನ 'ಗಣರಾಜ್ಯ'ದಲ್ಲಿನ ಅತಿಯಾದ ಆದರ್ಶದಿಂದ ಉಂಟಾದ ದೋಷಗಳನ್ನು ಮನಗಂಡು, ಆತನು "ರಾಜಕೀಯ ಮುತ್ಸದ್ದಿ ಹಾಗೂ ನಿಯಮಗಳು" ಎಂಬ ಇನ್ನೊಂದು ಮೇರುಕೃತಿಯ ರಚನೆಗೆ ತೊಡಗಿದನು. ಇದರಲ್ಲಿ ಆದರ್ಶ ರಾಜ್ಯದ ಒಂದು ಹೊಸ ವಾದಸರಣಿಯನ್ನು ಮುಂದಿಡಲು ಪರಿಷ್ಕೃತ ಪ್ರಯತ್ನ ನಡೆಸಿದನು. ಈ ವಾದದಲ್ಲಿ ಕೆಳಕಂಡ ವಿಶಿಷ್ಟ ಲಕ್ಷಣಗಳಿವೆ.

ಅ. ಕಾನೂನಿನ ಪ್ರಾಧಾನ್ಯತೆ

ಆ. ರಾಜ್ಯದ ಭೂಪ್ರದೇಶದ ಪರಿಸ್ಥಿತಿ

ಇ. ರಾಜ್ಯದ ಜನಸಂಖ್ಯೆ

ಈ. ಆಸ್ತಿಯ ವ್ಯವಸ್ಥೆ ಹಾಗೂ ರಾಜ್ಯದ ಅರ್ಥಶಾಸ್ತ್ರ

ಉ. ಕುಟುಂಬ ಮತ್ತು ಮದುವೆಯ ಪದ್ಧತಿ

ಊ. ರಾಜ್ಯದ ರಾಜಕೀಯ ವ್ಯವಸ್ಥೆ

ಋ. ಶಿಕ್ಷಣ ವ್ಯವಸ್ಥೆ

ಎ. ಧರ್ಮ

ಮತ್ತೊಬ್ಬ ಮಹತ್ವದ ಗ್ರೀಕ್ ರಾಜಕೀಯ ಚಿಂತನೆಂದರೆ ಅರಿಸ್ಟಾಟಲ್ . ಈತನನ್ನು ರಾಜಕೀಯ ವಿಜ್ಞಾನದ ಜನಕನೆಂದು ಪರಿಗಣಿಸಲಾಗುತ್ತಿದೆ. ಕ್ರಿ.ಪೂ.೩೮೪ರಲ್ಲಿ ಥ್ರಾಸ್ ನಲ್ಲಿರುವ ಕಾಲ್ಸಿಡೈಸ್ ಪರ್ಯಾಯ ದ್ವೀಪದ ಪೂರ್ವತೀರ ಪ್ರದೇಶದಲ್ಲಿ ಇರುವ ಸ್ಟನೀರ ಎಂಬ ಒಂದು ಗ್ರೀಕ್ ಕಾಲೋನಿಯಲ್ಲಿ ಜನಿಸಿದನು. ಶ್ರೇಷ್ಠ ಚಿಂತಕನಾದ ಈತ ಅಲೆಗ್ಸಾಂಡರ್ ಚಕ್ರವರ್ತಿಯ ಗುರುವಾಗಿದ್ದನು. ಪ್ಲೇಟೋನಂತೆ ಅರಿಸ್ಟಾಟಲ್ ಸಹ 'ಲೈಸಿಯಂ' ಎನ್ನುವ ಸಂಸ್ಥೆಯೊಂದನ್ನು ಹುಟ್ಟುಹಾಕಿದನು. ಇಲ್ಲಿ ಎಲ್ಲ ಪ್ರಜೆಗಳೂ ಅಭ್ಯಾಸ ಮಾಡುತ್ತಿದ್ದರು ಹಾಗೂ ಕಲಿಯುತ್ತಿದ್ದರು. 'ರಾಜಕೀಯ' ಎಂಬುದು ಆತನ ಒಂದು ಉತ್ಕೃಷ್ಟ ರಾಜಕೀಯ ಗ್ರಂಥ. ತನ್ನ ಬಳಿಗೆ ಬಂದವರೆಲ್ಲರಿಗೂ ಆತನು ದಾರಿ ದೀಪವಾಗುತ್ತಿದ್ದನು. ಈ ಗ್ರಂಥವು ಪ್ರಪಂಚದ ರಾಜಕೀಯ ಶಾಸ್ತ್ರಜ್ಞರೆಲ್ಲರಿಗೂ ಪ್ರೇರಣೆ ಯೊದಗಿಸಿದೆ. 'ಪಾಲಿಟಿಕ್ಸ್' ಗ್ರಂಥವು ರಾಜಕೀಯ ತತ್ವಶಾಸ್ತ್ರದ ಕ್ರಮಬದ್ಧವಾದ ಅಧ್ಯಯನವಾಗಿರದೆ, ಆಡಳಿತ ಕಲೆಯ ಬಗ್ಗೆ ನಿರೂಪಿಸುವ ಒಂದು ಗ್ರಂಥವಾಗಿದೆ. ಆತನು ಆಯ್ದುಕೊಂಡಿರುವ ಸಾಮಾನ್ಯ ಸೂತ್ರ ವಿಧಾನವು ವಿಶ್ಲೇಷಣಾತ್ಮಕ ವೈಜ್ಞಾನಿಕವೂ ನಿರೀಕ್ಷಣಾತ್ಮಕವೂ ತೌಲನಿಕವೂ ಆಗಿರುವುದಲ್ಲದೆ, ಮೂಲಸಂಕಲ್ಪವಾದಿಯೂ ಆದು ದಾಗಿದೆ. ಮೂಲಸಂಕಲ್ಪವಾದವೆಂದರೆ ವಸ್ತು ವಿಷಯಗಳ ಅಂತಿಮ ಕಾರಣಗಳ ಬಗ್ಗೆ ವಿವರಣೆ ನೀಡುವ ಸಿದ್ಧಾಂತ. ಈ ವಿಧಾನದ ಆಧಾರದ ಮೇಲೆ ಅರಿಸ್ಟಾಟಲನು ಅನೇಕ ರಾಜಕೀಯ ನಿಯಮಗಳನ್ನು ರಚಿಸಿದನು. ಅವುಗಳಲ್ಲಿ ಕೆಲವನ್ನು ಸಂಕ್ಷಿಪ್ತವಾಗಿ ಈ ಲೇಖನದಲ್ಲಿ ನೀಡಲಾಗಿದೆ.

ತನ್ನ ಗುರುವಾದ ಪ್ಲೇಟೋವಿನ ಪ್ರಭಾವದಿಂದ ಅರಿಸ್ಟಾಟಲನು ಸಹ ಆದರ್ಶ ಅಥವಾ ಉತ್ಕೃಷ್ಟ ರಾಜ್ಯದ ಸಿದ್ಧಾಂತವನ್ನು ರೂಪಿಸಿದ. ಅವನ ಪ್ರಕಾರ ಒಂದು ಉತ್ತಮ ರಾಜ್ಯದಲ್ಲಿ ಈ ಕೆಳಕಂಡ ಅಂಶಗಳು ಇರುವುದು.

೧. ಆದರ್ಶ ಜನಸಂಖ್ಯೆ

೨. ಗಡಿ ಮಿತಿ

೩. ರಾಜ್ಯದ ಪರಿಸ್ಥಿತಿ

೪. ಪ್ರಜೆಗಳ ಸ್ವಭಾವ

೫. ರಾಜ್ಯದ ಭಾಗಗಳು

೬. ಆದರ್ಶ ರಾಜ್ಯದಲ್ಲಿ ಕಾರ್ಯ ಹಂಚಿಕೆ

ಈ ಅಂಶಗಳನ್ನು ವಿವರಿಸುವಾಗ ಅರಿಸ್ಟಾಟಲನು "ಸುವರ್ಣ ಮಧ್ಯಮ ಸೂತ್ರ"ವನ್ನು ಅನುಸರಿಸುತ್ತಾನೆಂಬುದನ್ನು ಗಮನಿಸಬೇಕು. ಆದರ್ಶರಾಜ್ಯದಲ್ಲಿ ಒಬ್ಬ ನಾಗರಿಕನು ನ್ಯಾಯಾಂಗದ ವ್ಯವಸ್ಥೆಯಲ್ಲಿ ಹಾಗೂ ಅಂತಹ ಆಡಳಿತದ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾನೆ. ಅರಿಸ್ಟಾಟಲನು ನಾಗರಿಕನಾಗಲು ಒಬ್ಬ ವ್ಯಕ್ತಿಯು ಹೊಂದಿರಬೇಕಾದ ಅರ್ಹತೆಗಳನ್ನು ಖಚಿತವಾಗಿ ಸೂಚಿಸುತ್ತಾನೆ. ಅವೆಂದರೆ:

ಅ. ಆತನು ಆಸ್ತಿವಂತನಾಗಿದ್ದು ಬಿಡುವಿನ ಕಾಲವನ್ನು ಹೊಂದಿರಬೇಕು.

ಆ. ಆತನು ತನ್ನ ಜೀವನೋಪಾಯಕ್ಕಾಗಿ ಇತರರನ್ನು ಅವಲಂಬಿಸಿರಬಾರದು.

ಇ. ಆತನು ಯಾವುದೇ ರೀತಿಯ ಭೌತಿಕ ಮತ್ತು ಆರ್ಥಿಕ ತೊಂದರೆಗಳಿಂದ ಮುಕ್ತ ನಾಗಿರಬೇಕು.

ಈ ರೀತಿಯ ಅರ್ಹತೆಗಳನ್ನು ಗಮನಿಸಿದರೆ, ಯಂತ್ರಕರ್ಮಿಗಳು, ಕಾರ್ಮಿಕರು, ಗುಲಾಮರು, ನಾಗರಿಕರಾಗಲು ಸಾಧ್ಯವಿಲ್ಲವೆಂದು ತೀರ್ಮಾನಿಸಬಹುದು. ಹೆಂಗಸರೂ ಸಹ ನಾಗರಿಕರಾಗಲು ಸಾಧ್ಯವಿಲ್ಲ. ಏಕೆಂದರೆ ಮೊದಲು ಅವರು ಪೋಷಕರನ್ನು, ನಂತರ ಉದ್ಯೋಗದ ಮಾಲಿಕರನ್ನು, ಮದುವೆಯ ನಂತರ ಗಂಡನನ್ನು ಆಧರಿಸಿರುತ್ತಾರೆ.

ಗುಲಾಮಿ ಪದ್ಧತಿಯ ಬಗ್ಗೆ ಹೇಳುವುದಾದರೆ, ಅರಿಸ್ಟಾಟಲನು ಗುಲಾಮರ ಅಗತ್ಯ ವನ್ನು ಪ್ರತಿಪಾದಿಸಿ, ಸಮರ್ಥಿಸುತ್ತಾನೆ. ಆದರೆ ಹಾಗೆ ಬೆಂಬಲಿಸುವಾಗ, ಆರ್ಟಿಕ್ ಗುಲಾಮರನ್ನು ಮಾತ್ರ ಪರಿಗಣಿಸುತ್ತಾನೆಯೇ ಹೊರತು ಏಷ್ಯಾ ಮೈನರ್‌ನ ಗುಲಾಮರನ್ನಲ್ಲ. ಏಕೆಂದರೆ ಅವರನ್ನು ಪ್ರಾಣಿಗಳಂತೆಯೇ ಅಮಾನವೀಯವಾಗಿ ನೋಡಿಕೊಳ್ಳುತ್ತಿತ್ತು. ಆದರೆ ಆರ್ಟಿಕ್‌ನ ಗುಲಾಮರನ್ನು ಮಾನವೀಯವಾಗಿ ಪೋಷಿಸಿಕೊಂಡು, ಅವರನ್ನು ಒಡೆಯರ ಮನೆಗಳಲ್ಲಿ ತಮ್ಮ ಕುಟುಂಬದ ಸದಸ್ಯರಂತೆಯೇ ಪರಿಗಣಿಸುತ್ತಿದ್ದರು.

'ಪಾಲಿಟಿಕ್ಸ್'ನ ಮೊದಲನೆಯ ಭಾಗದಲ್ಲಿ ಆತನು ಗುಲಾಮಿ ಪದ್ಧತಿಯನ್ನು ವಿವರಿಸುತ್ತಾನೆ. ಆತನು ಹೇಳುವಂತೆ "ಪ್ರತಿಯೊಂದು ಕಲೆಗೂ ಸರಿಯಾದ ಉಪಕರಣಗಳ ಅಗತ್ಯವಿರುತ್ತದೆ". ಅದೇ ರೀತಿ ಮನೆಯನ್ನು ನೋಡಿಕೊಳ್ಳಲು ಸಜೀವ ಹಾಗೂ ನಿರ್ಜೀವವಾದ ಎರಡು ರೀತಿಯ ಆಸ್ತಿಗಳು ಬೇಕಾಗುತ್ತದೆ. ಸಜೀವ ಆಸ್ತಿಯೆಂದರೆ ಪ್ರಾಣಿಗಳು ಹಾಗೂ ಗುಲಾಮರು. ನಿರ್ಜೀವ ಆಸ್ತಿಯೆಂದರೆ ಪೀಠೋಪಕರಣಗಳು, ಪಾತ್ರೆ ಪಗಡಿಗಳು, ಉಪಕರಣಗಳು, ಭೂಮಿ ಇತ್ಯಾದಿಗಳು. ಇವೆರಡೂ ಒಡೆಯನ ಮಾಲಿಕತ್ವ ಹಾಗೂ ನಿಯಂತ್ರಣದಲ್ಲಿರುತ್ತವೆ. ಆದ್ದರಿಂದ ಗುಲಾಮನು ಒಡೆಯನ ಆಸ್ತಿ.

ಅರಿಸ್ಟಾಟಲನು ಗುಲಾಮಿ ಪದ್ಧತಿಯನ್ನು ಪ್ರಕೃತಿಯ ನಿಯಮಗಳಿಗನುಸಾರವಾಗಿ ಸಮರ್ಥನೆ ಮಾಡುತ್ತಾನೆ. ಆತನು ಹೇಳುವ ಹಾಗೆ ಹಲವರು ತಮ್ಮ ಹುಟ್ಟಿನಿಂದಲೇ ಪಾರತಂತ್ರರಾಗಿರುತ್ತಾರೆ. ಮತ್ತೆ ಕೆಲವರು ಆಳುವವರಾಗಿರುತ್ತಾರೆ. ಪ್ರಕೃತಿಯಲ್ಲಿ ಸಾರ್ವತ್ರಿಕವಾಗಿ ಉತ್ತಮ ಮತ್ತು ಅಧಮ, ಮಾನವ ಮತ್ತು ಪ್ರಾಣಿ, ಹೆಣ್ಣು ಮತ್ತು ಗಂಡು, ವಿವೇಕ ಮತ್ತು ಆಕಾಂಕ್ಷೆ ಎನ್ನುವ ವಿಭಿನ್ನತೆ ಇದ್ದೇ ಇರುತ್ತದೆ. ಸಂಗೀತದಲ್ಲಿ ಸಹ ಒಂದು ಪ್ರಭಾವೀ ತಂತು ಇರುತ್ತದೆ. ಅಧಮರನ್ನು ಉತ್ತಮರು ಆಳುವುದರಿಂದ ಇಬ್ಬರಿಗೂ ಲಾಭವಿದೆ.

"ಕ್ರಾಂತಿಗಳ ಸೂತ್ರ" ಎನ್ನುವುದು ಅರಿಸ್ಟಾಟಲನ ಮತ್ತೊಂದು ರಾಜಕೀಯ ಸೂತ್ರ. ಆತನು ಹೇಳುವಂತೆ, ಒಬ್ಬ ರಾಜಕೀಯ ಮುತ್ಸದ್ದಿಯ ಪ್ರಮುಖ ಆಡಳಿತ ಕರ್ತವ್ಯವೆಂದರೆ, ಆಂತರಿಕ ಭದ್ರತೆಯನ್ನು ನೀಡುವುದು ಹಾಗೂ ಸರ್ಕಾರದ ವ್ಯವಸ್ಥೆಯು ಹದಗೆಡದಂತೆ ಕಾಪಾಡುವುದು. ಮುತ್ಸದ್ದಿ ಹಾಗೂ ರಾಜಕೀಯ ಪಂಡಿತರು, ರಾಜಕೀಯ ವ್ಯವಸ್ಥೆಯ ವೈದ್ಯರಿದ್ದಂತೆ. ಅವರು ರಾಜಕೀಯ ವ್ಯವಹಾರವನ್ನು ಸರಿಯಾಗಿ ಪರಿಶೀಲಿಸಿ, ಪರಿಹಾರಗಳನ್ನು ಸೂಚಿಸುತ್ತಾರೆ. ಅರಿಸ್ಟಾಟಲನ ಪ್ರಕಾರ ನಾಲ್ಕು ರೀತಿಯ ಕ್ರಾಂತಿಗಳು ಸಂಭವಿಸುತ್ತವೆ.

ಅ. ಸಂವಿಧಾನದಲ್ಲಿ ಬದಲಾವಣೆ ತರುವಂತಹ ಕ್ರಾಂತಿಯು ಮೊದಲನೆಯ ವಿಧಾನ..

ಆ. ಎರಡನೆಯದರಲ್ಲಿ ಬದಲಾವಣೆಯು ಸಂವಿಧಾನದ ಮೇಲೆ ಪರಿಣಾಮ ಬೀರುವಂತ ಹುದಾಗಿರುವುದಿಲ್ಲ. ಆದರೆ ಬೇರೆಯವರು ಆಡಳಿತವನ್ನು ತಮ್ಮ ಕೈಗೆತ್ತಿಕೊಳ್ಳಲು ಪ್ರಯತ್ನಿಸುತ್ತಾರೆ.

ಇ. ಪ್ರಸ್ತುತ ರಾಜಕೀಯ ವ್ಯವಸ್ಥೆಯಲ್ಲಿ ಸಣ್ಣ ಬದಲಾವಣೆಯನ್ನು ತರುವಂತಹುದು ಮೂರನೆಯ ವಿಧಾನ.

ಈ. ಪ್ರಸ್ತುತ ಸಂವಿಧಾನದ ಒಂದು ಅಂಶವನ್ನು ಬದಲಾಯಿಸುವುದು ನಾಲ್ಕನೆಯ ವಿಧಾನ.

ಕ್ರಾಂತಿಯು ಸಂಭವಿಸುವ ಕಾರಣಗಳನ್ನು ವಿಶ್ಲೇಷಿಸುತ್ತಾ ಅರಿಸ್ಟಾಟಲನು ಎರಡು ವಿಭಾಗಗಳನ್ನು, ಗುರುತಿಸುತ್ತಾನೆ.

ಅ. ಸಾಮಾನ್ಯ ಆ. ನಿರ್ದಿಷ್ಟ. ನಿರ್ದಿಷ್ಟ ವಿಭಾಗದಲ್ಲಿ ಇರುವ ಒಂದೇ ಕಾರಣವೆಂದರೆ ಸಮಾನತೆಯ ಅಕಾಂಕ್ಷೆ. ಅಧಮರು ಸಮಾನರಾಗಲು ಕ್ರಾಂತಿ ನಡೆಸಿದರೆ ಸಮಾನರು ಶ್ರೇಷ್ಟರಾಗಲು ಬಯಸುತ್ತಾರೆ. ಈ ನಿರ್ದಿಷ್ಟ ವಿಭಾಗದಲ್ಲಿ ಏಳು ಕಾರಣಗಳಿವೆ.

ಅ. ಉದ್ಧಟತನ ಮತ್ತು ಧನಲಾಭ

ಆ. ಪ್ರೀತಿ ಮತ್ತು ಶ್ರೇಷ್ಠತೆ

ಇ. ಹೆದರಿಕೆ

ಈ. ರಾಜ್ಯದ ಹಲವು ವಿಭಾಗಗಳಲ್ಲಿ ಅಸಮಾನ ಬೆಳವಣಿಗೆ

ಉ. ಚುನಾವಣೆಯ ಒಳಸಂಚುಗಳು

ಊ. ಅವಿಧೇಯ ವ್ಯಕ್ತಿಗಳಿಗೆ ಅಧಿಕಾರ ನೀಡಿಕೆಯಲ್ಲಿ ಬೇಜವಾಬ್ದಾರಿ

ಋ. ತಿರಸ್ಕಾರ

ಸಂಭವಿಸಬಹುದಾದ ಯಾವುದೇ ರೀತಿಯ ಕ್ರಾಂತಿಯನ್ನು ಸಹ ತಡೆಗಟ್ಟಬಹುದು. ಕ್ರಾಂತಿಯ ಸೂತ್ರಗಳಲ್ಲಿ ಪರಿಹಾರಗಳೂ ಅಡಕವಾಗಿವೆ. ಅರಿಸ್ಟಾಟಲನು ಸೂಚಿಸುವ ಪರಿಹಾರಗಳ ಪಟ್ಟಿ ಹೀಗಿದೆ:

ಅ. ಅಂತಹ ಕೆಡಕುಗಳು ಹುಟ್ಟುವಾಗಲೇ ಎಚ್ಚರಿಕೆಯಿಂದ ವ್ಯವಹರಿಸುವುದು ಮೊದಲನೆಯ ಉತ್ತಮ ಪರಿಹಾರ.

ಆ. ಆಳುವ ವರ್ಗಗಳು ಯಾರು ಸರಕಾರದಲ್ಲಿ ಭಾಗವಹಿಸುವುದಿಲ್ಲವೋ ಅಂತಹವನ ಮೇಲೆ ಅವಿಚಾರವೆಸಗಬಾರದು. ಬದಲಾಗಿ ಅವರಲ್ಲಿ ಮಾರ್ಗದರ್ಶಕ ಚೈತನ್ಯವನ್ನು ತುಂಬಬೇಕು.

ಇ. ಆಳುವ ವರ್ಗದ ಸಂಖ್ಯಾಬಲವು ಅತಿ ಹೆಚ್ಚಾದರೆ, ಅಧಿಕಾರದ ಅವಧಿಯನ್ನು ಕಡಿತ ಗೊಳಿಸಿದಾಗ ಅದು ಅನುಕೂಲಕರ ಪರಿಣಾಮವನ್ನು ಬೀರುತ್ತದೆ.

ಈ. ಭಯೋತ್ಪಾದನೆಯನ್ನು ಹುಟ್ಟು ಹಾಕುವುದರ ಮೂಲಕ ದೂರದ ಆತಂಕಗಳನ್ನು ಹತ್ತಿರದಿಂದ ತೋರಿಸುವುದರ ಮೂಲಕ ಜನರ ದೇಶಭಕ್ತಿಯನ್ನು ತಾರಕಸ್ಥಾಯಿಯಲ್ಲಿ ಉಳಿಸಬೇಕು.

ಉ. ಸರ್ಕಾರ ಹಾಗೂ ಅಧಿಕಾರಿಗಳು ಭ್ರಷ್ಟರಾಗುವುದನ್ನು ತಪ್ಪಿಸಬೇಕು.

ಊ. ಸರ್ಕಾರದ ಕಾರ್ಯ ವಿಧಾನದ ಬಗ್ಗೆ ತಿಳುವಳಿಕೆ ನೀಡುವುದು.

ಪ್ರಾಚೀನ ಗ್ರೀಕರು ಪಶ್ಚಿಮದ ರಾಜಕೀಯ ಚಿಂತನೆಗೆ ಒಂದು ಸರಿಯಾದ ಬುನಾದಿ ಯನ್ನು ಹಾಕಿದವರು ಎಂದು ಅಂತಿಮವಾಗಿ ಹೇಳಬಹುದು. ಪ್ಲೇಟೋನ ರಾಜಕೀಯ ಆಲೋಚನೆಗಳನ್ನು ಅತಿ ಆದರ್ಶದ ಅಪ್ರಾಯೋಗಿಕ ಕಲ್ಪನೆಗಳೆಂದು ಟೀಕಿಸಿದರೂ, ಇನ್ನೂ ಬಹಳಷ್ಟು ರಾಜಕೀಯ ಚಿಂತಕರು ಆತನಿಗೆ ಅಭಾರಿಯಾಗಿದ್ದಾರೆ. ಉದಾಹರಣೆಗೆ : ಸಿಸಿರೋನ ಎರಡು ಪ್ರಖ್ಯಾತ ಕೃತಿಗಳಾದ 'ದಿ ರಿಪಬ್ಲಿಕ್ ಮತ್ತು ದಿ ಲೆಜಿಬಸ್' ಪ್ಲೇಟೋನ ಗಣರಾಜ್ಯ ಕೃತಿಯನ್ನು ಹೋಲುತ್ತವೆ. ಪ್ರಸಕ್ತ ಶಿಕ್ಷಣ ವ್ಯವಸ್ಥೆಯು ಬಹು ವಿಧವಾಗಿ ಪ್ಲೇಟೋನ ಶಿಕ್ಷಣದ ಸೂತ್ರವನ್ನು ಹೋಲುತ್ತದೆ. ಅದೇ ರೀತಿ ಅರಿಸ್ಟಾಟಲನ ತತ್ವಶಾಸ್ತ್ರವು ಅನೇಕ ರೀತಿಯ ಆಲೋಚನಾ ಸರಣಿಗಳ ಮೇಲೆ ಪ್ರಭಾವ ಬೀರಿದೆ ಯೆಂಬುದನ್ನು ನಾವು ಕಾಣಬಹುದು. ಪ್ರೊ.ಡ್ಯಾನಿಂಗ್ ಹೇಳುವಂತೆ "ಅತ್ಯಂತ ವಿಭಿನ್ನವಾದ ವ್ಯವಸ್ಥೆಗಳಾದ ವೇದಾಂತದ ಮಧ್ಯಯುಗ, ಮಿಲಿಟರಿ ಆಡಳಿತದ ರೋಂ ಆಗಲಿ, ಭೌತಿಕವಾದಿ ನವೀನಯುಗದ ಸಮಾಜವಾಗಲಿ, ರಾಜಕೀಯ ವ್ಯವಸ್ಥೆಯ ಅವಶ್ಯಕ ಅಂಶಗಳ ಹಾಗೂ ವಿಶದೀಕರಣಗೊಳ್ಳುವ ಕ್ರಿಯೆಗಳು ಹಾಗೂ ಯತಾರ್ಥವಾದ ವಿವರಣೆಗಳಲ್ಲಿ ಅರಿಸ್ಟಾಟಲನ ವಿಶ್ಲೇಷಣ ನಿಯಮಗಳನ್ನು ಅನುಸರಿಸಬೇಕಾಗುತ್ತದೆ." ಮಧ್ಯಯುಗದ ರಾಜಕೀಯ ಚಿಂತನೆಯಲ್ಲಿ ರಾಜ್ಯವ್ಯವಸ್ಥೆಯ ಈ ಚರ್ಚಿನ ಬೆಂಬಲಿಗರು ತಮ್ಮ ಸ್ಫೂರ್ತಿಯನ್ನು ಅರಿಸ್ಟಾಟಲನ ಬರಹಗಳಿಂದ ಪಡೆದುಕೊಂಡಿದ್ದರು. ಆಧುನಿಕ ಯುಗದಲ್ಲಿ ಮೆಕವಿಲೆಯು ಅರಿಸ್ಟಾಟಲನ ರಾಜಕೀಯ ಚಿಂತನೆಯಿಂದ ಬಹುವಾಗಿ ಪ್ರಭಾವಿತವಾಗಿದ್ದ ಮತ್ತು ಆತನ "ರಾಜಕುಮಾರ" ಗ್ರಂಥವನ್ನು ಅರಿಸ್ಟಾಟಲನ ಕ್ರಾಂತಿಯ ಸೂತ್ರದ ಮೇಲಿನ ವ್ಯಾಖ್ಯಾನವೆಂದು ಪರಿಗಣಿಸಲಾಗುತ್ತದೆ. ಹೀಗೆ ಪ್ರಾಚೀನ ಗ್ರೀಕ್ ರಾಜಕೀಯ ಚಿಂತಕರ ಬಹಳಷ್ಟು ರಾಜಕೀಯ ಪರಿಕಲ್ಪನೆಗಳು ೨೦ನೆಯ ಶತಮಾನದ ರಾಜಕೀಯ ಚಿಂತನೆಯ ಪ್ರಮುಖ ಅಂಶಗಳಾಗಿವೆ.


<u>ಪರಾಮರ್ಶನ ಗ್ರಂಥಗಳು</u>

೧. ಫ್ರೆಡರಿಕ್ ಏಂಗಲ್ಸ್, ೧೯೭೪. **ಡೈಲೆಕ್ಟಿಕ್ಸ್ ಆಫ್ ನೇಚರ್,** ಮಾಸ್ಕೋ.

೨. ವಿಲ್ ಡ್ಯೂರಾಂಟ್, ೧೯೫೪. **ದಿ ಸ್ಟೋರಿ ಆಫ್ ಫಿಲಾಸಫಿ,** ಯು.ಎಸ್.ಎ.

# ೪. ರೋಮನ್ ಸಾಮ್ರಾಜ್ಯ ಕ್ರಿ.ಪೂ.೪ನೆಯ ಶತಮಾನದವರೆಗೆ

ರೋಮನ್ನರ ನಾಗರಿಕ ಜೀವನವನ್ನು ಗ್ರೀಕರ ನಾಗರಿಕ ಜೀವನದ ಮುಂದುವರಿದ ಅಧ್ಯಾಯವೆನ್ನಬಹುದು. ಕಲಾ ವಿಭಾಗದಲ್ಲೂ ಗ್ರೀಕರ ಮಾದರಿಯೇ ರೋಮನ್ನರಿಗೆ ಆದರ್ಶವಾಗಿತ್ತು. ಕೊನೆಗೆ ರಾಜಕೀಯ ವ್ಯವಸ್ಥೆಯಲ್ಲೂ ಸಹ ರೋಮನ್ನರು ಗ್ರೀಕರನ್ನೇ ಅನುಸರಿಸಿ, ನಗರ ರಾಷ್ಟ್ರದಿಂದಲೇ ಆಡಳಿತ ಪ್ರಾರಂಭಿಸಿ ವಿಸ್ತಾರವಾದ ಸಾಮ್ರಾಜ್ಯವನ್ನು ಕಟ್ಟಿದರು. ರೋಮನ್ನರಲ್ಲಿ ಸ್ವಂತ ಕಲ್ಪನೆ ಯಾವ ಕ್ಷೇತ್ರದಲ್ಲೂ ಕಾಣಬರುತ್ತಿರಲಿಲ್ಲ. ಆದರೆ ಬೇರೆಯವರಿಂದ ಪಡೆದ ವಿಚಾರಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಳ್ಳುವ ವಿಚಾರದಲ್ಲಿ ರೋಮನ್ನರಿಗೆ ಸಮನಾದ ಬೇರೊಂದು ಸಮುದಾಯವಿಲ್ಲ. ರೋಮನ್ನರು ಜೀವನದ ಎಲ್ಲಾ ವಿಚಾರಗಳಲ್ಲಿಯೂ ತಮ್ಮ ಕೃತಿಗಳ ಉಪಯುಕ್ತತೆಯ ಕಡೆಗೆ ಗಮನ ಕೊಟ್ಟರು. "ರೋಮಿನ ನಿರ್ಮಾಣ ಒಂದು ದಿನದ ಕಾರ್ಯವಲ್ಲ" ಎಂಬ ನಾಣ್ನುಡಿ ಅವರು ತಾಳ್ಮೆಯಿಂದ ಸಾಮ್ರಾಜ್ಯ ಸ್ಥಾಪನೆಗೆ ಕಾರಣರಾದುದನ್ನು ತಿಳಿಸುತ್ತದೆ. ಧಾರ್ಮಿಕ ಜೀವನದಲ್ಲಿ, ತತ್ವಶಾಸ್ತ್ರದಲ್ಲಿ, ಕಲೆಯಲ್ಲಿ, ಅವರು ರೂಢಿಯಲ್ಲಿಟ್ಟುಕೊಂಡಿದ್ದ ವಿಷಯ ಗಳೆಲ್ಲವೂ ಗ್ರೀಕರಿಂದ ಪಡೆದದ್ದೇ ಆಗಿತ್ತು. ಮುಂದೆ ರೋಮನ್ನರ ಗಮನ ವ್ಯಾಪಾರ ಜೀವನ, ಕಾನೂನು ನಿಬಂಧನೆಗಳು, ಸರ್ಕಾರ ವ್ಯವಸ್ಥೆ ಮತ್ತು ಯುದ್ಧ ಕಲೆಯ ಕಡೆಗೆ ತಿರುಗಿತು. ಈ ವಿಷಯದಲ್ಲಿ ಮಾತ್ರ ಅವರ ವ್ಯಕ್ತಿಗತ ಸಾಧನೆ ಕಂಡುಬರುತ್ತದೆ.

**ರೋಂ ನಗರದ ಸ್ವರೂಪ ಮತ್ತು ವ್ಯಾಪ್ತಿ**

ಯುರೋಪಿನ ದಕ್ಷಿಣ ಭಾಗದಲ್ಲಿ ಕಾಣುವ ಮೂರು ಮುಖ್ಯ ಪರ್ಯಾಯ ದ್ವೀಪಗಳಲ್ಲಿ ಇಟಲಿಯೂ ಒಂದು. ಇಟಲಿಯ ಮಧ್ಯಭಾಗವೇ ರೋಮನ್ನರ ಜನ್ಮ ಭೂಮಿಯಾಗಿತ್ತು. ರೋಮನ್ನರ ಸಾಮ್ರಾಜ್ಯ ಉಚ್ಛ್ರಾಯ ಸ್ಥಿತಿಗೆ ಬಂದ ಕಾಲದಲ್ಲಿ ಮೆಡಿಟರೇನಿಯನ್ ಸಮುದ್ರದ ತೀರವನ್ನೂ, ಆಫ್ರಿಕದ ಉತ್ತರ ಭಾಗವನ್ನೂ, ಈಶಾನ್ಯ ಪ್ರದೇಶವನ್ನೂ ಆಕ್ರಮಿಸಿತ್ತು. ಅಪೆನ್ನೈನ್ ಪರ್ವತ ದೇಶಕ್ಕೆ ಬೆನ್ನೆಲುಬಿನ ರೂಪದಲ್ಲಿ ಸಹಾಯಕವಾಯಿತು. ಆಲ್ಪ್ಸ್ ಪರ್ವತ ಅದನ್ನು ಉತ್ತರ ಯೂರೋಪಿನ ಮಧ್ಯಭಾಗದಿಂದ ಪ್ರತ್ಯೇಕಿಸುತ್ತದೆ. ಉತ್ತರ ಭಾಗದಲ್ಲಿ ಕಾಣುವ ಪೋ ನದಿಯ ಬಯಲು ಬಹಳ ಫಲವತ್ತಾಗಿದೆ. ದಕ್ಷಿಣದಲ್ಲಿ ಅತ್ಯಂತ ಅಪ್ರಯೋಜಕವಾದ ವಿಶಾಲ ಪ್ರದೇಶವಿದೆ. ಪಶ್ಚಿಮ ಭಾಗದಲ್ಲಿ ಉಪಯುಕ್ತ ರೇವುಗಳಿವೆ. ಟೈಬರ್ ನದಿಯ ಸುತ್ತಲಿನ ಪ್ರದೇಶವೇ ಹೆಚ್ಚು ಫಲವತ್ತಾಗಿ ಕಾಣುವ ಭಾಗ. ಪ್ರಪಂಚದ ಮಧ್ಯಭಾಗದಲ್ಲಿ ನೆಲೆಗೊಂಡ ರೋಮನ್ನರ ಚಕ್ರಾಧಿಪತ್ಯ ಅನೇಕ ನಾಗರಿಕತೆಗಳ ಮಿಲನಕ್ಕೆ ಯೋಗ್ಯ ಸ್ಥಳವಾಗಿತ್ತು. ಇದನ್ನು ಸಂಶೋಧನೆಯ ಮೂಲಕ, ನಾಗರಿಕ ಜೀವನ ಪ್ರಥಮ ಹಂತದಿಂದಲೂ ಆಗಿ ಹೋದುದಕ್ಕೆ ಗುರುತುಗಳನ್ನು ಕಂಡುಹಿಡಿಯಲಾಗಿದೆ. ಇಟಲಿಯಲ್ಲಿ ಹಳೆಯ ಶಿಲಾಯುಗದ ಮತ್ತು ಕಂಚು, ಕಬ್ಬಿಣ ಯುಗಗಳ ಅವಶೇಷಗಳೂ ದೊರೆತಿವೆ. ಕ್ರಿ.ಪೂ.೧೦೦೦ ಹೊತ್ತಿಗೆ ಟೈಬರ್ ನದಿಯ ಉತ್ತರ ಭಾಗದಲ್ಲಿ ಎಟ್ರುಸ್ಕನ್ ಜನರು ನೆಲಸಿ ಎಟ್ರೂರಿಯಾ ಎಂಬ ಭಾಗದ ಸ್ಥಾಪನೆಗೆ ಕಾರಣರಾದರು. ಇವರು ಒಳ್ಳೆಯ ಶಿಲ್ಪಿಗಳೂ, ತಂತ್ರಜ್ಞರೂ ಆಗಿದ್ದರು. ತ್ರಾಮವನ್ನೂ, ಕಬ್ಬಿಣವನ್ನೂ ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಹಡಗುಗಳನ್ನು ಕಟ್ಟಿ ವ್ಯಾಪಾರ ಮಾಡಲು ಪ್ರಾರಂಭಿಸಿದ್ದರು. ಇಟಲಿಯಲ್ಲಿದ್ದ ಜನರು ಗ್ರೀಕರೊಂದಿಗೆ ಸಾಕಷ್ಟು ಸಂಬಂಧವನ್ನು ಹೊಂದಿದ್ದರೆಂಬುದನ್ನು ಅವರಲ್ಲಿ ಕಾಣುವ ಹೋಲಿಕೆಯಿಂದಲೇ ತಿಳಿಯಬಹುದು. ಜನಾಂಗದ ವಿಷಯದಲ್ಲಿ ಹೇಳಬೇಕಾದರೆ ಎಟ್ರಾಸ್ಕನ್ನರ ಗುಂಪು ಯಾವ ಮೂಲಜನಾಂಗಕ್ಕೆ ಸೇರಿದ್ದೆಂದು ನಿರ್ಧಾರವಾಗಿ ಹೇಳಲು ಅವಕಾಶವಿರುವುದು ಕಂಡು ಬರುವುದಿಲ್ಲ. ಕ್ರಿ.ಪೂ. ೨೦೦೦ ವೇಳೆಗೆ ಕೆಲವು ಮಂದಿ ಗ್ರೀಕರು ಇಟಲಿಗೆ ಹೋಗಿ ಕಾಲೋನಿಗಳನ್ನು ಸ್ಥಾಪಿಸಿದ್ದುಂಟು. ಈ ಮಧ್ಯೆ ಎಟ್ರಾಸ್ಕನ್ , ಇಟ್ಯಾಲಿಯನ್ ಮತ್ತಿತರ ಗುಂಪುಗಳ ಆಕ್ರಮಣ ನಡೆದಿತ್ತು. ಕೊನೆಗೆ ಲ್ಯಾಟಿನ್ ಗುಂಪು ಬಲಶಾಲಿಯಾಗಿ ಆಕ್ರಮಣ ಮಾಡಿ ಜಯಶಾಲಿಗಳಾಗಿದ್ದರು. ಹೀಗೆ ಬೇರೆ ಬೇರೆ ಗುಂಪುಗಳ ಸಂಮಿಶ್ರಣದ ಫಲವಾಗಿ ರೋಮನ್ನರೆನ್ನುವ ಒಂದು ಗುಂಪು ಸಿದ್ಧವಾಯಿತು. ಫೀನೀಷಿಯನ್ ಗುಂಪಿಗೆ ಪ್ರತಿನಿಧಿಯ ರೂಪದಲ್ಲಿ ಸಿದ್ಧವಾದ ಕಾರ್ಥೇಜ್ ಪಟ್ಟಣ, ರೋಮನ್ನರ ಪ್ರತಿಸ್ಪರ್ಧಿಯ ರೂಪದಲ್ಲಿ ರಾಜಕೀಯ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಘರ್ಷಣೆಗೆ ಕಾರಣವಾಗಿ ಕೆಲವು ಕಾಲ ಉಳಿದಿತ್ತು. ಈ ಸಂಘರ್ಷಣೆಯನ್ನು ಎದುರಿಸಿ ನಿಂತ ಮೇಲೆ ಸಾಮ್ರಾಜ್ಯದ ವಿಸ್ತಾರವನ್ನು ಕೈಗೊಳ್ಳಲಾಯಿತು.

**ರೋಮನ್ನರ ಆಡಳಿತ ಪದ್ಧತಿ**

ರೋಂ ನಗರದ ಸ್ಥಾಪನೆಯ ಬಗ್ಗೆ ಇರುವ ದಂತಕಥೆಯು ರೋಮ್ಯುಲಸ್ ಮತ್ತು ರೀಮಸ್ಸ್ ಎಂಬಿಬ್ಬರು ಸಹೋದರರು ರಾಜ್ಯದ ಸ್ಥಾಪನೆಗೆ ಮತ್ತು ವಿಸ್ತರಣೆಗೆ ಪ್ರಯತ್ನ ಪಟ್ಟವರೆಂದು ತಿಳಿಸುತ್ತದೆ. ವಿಧವಿಧವಾಗಿ ಹಂಚಿಹೋಗಿದ್ದಂತಹ ಎಲ್ಲಾ ಗುಂಪುಗಳನ್ನು ಒಂದುಗೂಡಿಸಿ ಅಲ್ಲಿ ರಾಜನ ಅಧಿಕಾರವನ್ನು ಸ್ಥಾಪಿಸಿದ ಕೀರ್ತಿಗೆ ಇವರು ಭಾಗಿಗಳಾಗಿದ್ದಾರೆ. ಇವರಿಂದ ಪ್ರಾರಂಭವಾದ ಲ್ಯಾಟಿನ್ನರ ಪ್ರಮುಖ ನಗರವಾದ "ರೋಂ" ಮೊದಲು ನಗರ ರಾಷ್ಟ್ರವಾಗಿದ್ದಿತು. ಈ ನಗರ ರಾಷ್ಟ್ರದ ಅಧಿಪತಿ ರಾಜನಾಗಿದ್ದನು. ಎಟ್ರಸ್ಕನ್ ಗುಂಪಿನವರ ಪ್ರಭಾವ ಹೆಚ್ಚಾಗಿದ್ದ ಸಮಯದವರೆಗೆ ನಗರ ರಾಜ್ಯ ಪದ್ಧತಿ ನಡೆದುಬಂದಿತು. ರಾಜರು ಚುನಾವಣೆಯ ಮೂಲಕ ನೇಮಿತರಾಗಿ ಹಿರಿಯರ ಸಭೆಯ ಸಹಾಯದಿಂದ ಆಳುತ್ತಿದ್ದರು. ಸಾಮಾನ್ಯ ಸಭೆ ಇದ್ದರೂ ಸಹ ಅದರ ಬೆಲೆ ಬಹಳ ದಿವಸದವರೆಗೂ ಗಣನೆಗೆ ಬಂದಿರಲಿಲ್ಲ. ಈ ಸಭೆಯಲ್ಲಿ ಇರುತ್ತಿದ್ದ ಪ್ರತಿನಿಧಿಗಳು ರಾಜ್ಯದ ಸಾಮಾಜಿಕ ಗುಂಪುಗಳ ಪ್ರತಿನಿಧಿಗಳಾಗಿದ್ದು ಅವರ ಸಲಹೆ ಕೇಳುವ ಪದ್ಧತಿಯಿತ್ತು. ಆದರೆ ಯಾವುದೇ ರೀತಿಯ ಕಾನೂನನ್ನು ರೂಢಿಸುವ ಅಧಿಕಾರವನ್ನು ಪಡೆದಿರಲಿಲ್ಲ. ಅದಲ್ಲದೆ "ಕಮಿಷಿಯಾ ಕ್ಯೂರಿಯಾಟ" ಎಂಬ ಮತ್ತೊಂದು ಸಭೆಯಿದ್ದಿತು. ಶ್ರೀಮಂತರ ಗುಂಪು ರಾಜನ ಅಧಿಕಾರದಲ್ಲಿ ಹೆಚ್ಚು ಪಾಲುಗೊಳ್ಳಲು ಪ್ರಾರಂಭಿಸಿತು. ರಾಜನ ಆಡಳಿತವು, ಸ್ವಾತಂತ್ರ್ಯ ಪ್ರಿಯರಾದ ರೋಮನ್ನರಿಗೆ ಕೆಲ ದಿವಸಗಳಲ್ಲಿಯೇ ದೋಷಮಯ ಎಂದು ಕಂಡುಬಂದು ಗಣರಾಜ್ಯದ ತತ್ವಗಳನ್ನು ರೂಢಿಗೆ ತರುವ ಪ್ರಯತ್ನವನ್ನು ನಡೆಸಿದರು.

ರೋಮನ್ ಚಕ್ರಾಧಿಪತ್ಯವು ತನ್ನ ಜೀವಿತಕಾಲದಲ್ಲಿ ಹೆಚ್ಚಿನ ಪಾಲು ಗಣರಾಜ್ಯದ ವ್ಯವಸ್ಥೆಯಲ್ಲಿಯೇ ಕಳೆಯಿತು. ಈ ವ್ಯವಸ್ಥೆಯ ಪ್ರಕಾರವಾಗಿ ರೋಮನ್ ಚಕ್ರಾಧಿಪತ್ಯದ ಪ್ರಮುಖನಾಗಿದ್ದವನು "ಕಾನ್ಸೆಲ್" ಎಂಬ ಅಧಿಕಾರಿ. ಈ ಅಧಿಕಾರಿಯ ಸ್ಥಾನವು ಚುನಾವಣೆಯ ಮೂಲಕ ಭರ್ತಿ ಮಾಡಲ್ಪಡುತ್ತಿತ್ತು. ಇಬ್ಬರು ಕಾನ್ಸೆಲ್ ಅಧಿಕಾರಿ ಗಳಿರುತ್ತಿದ್ದರು. ಇಬ್ಬರು ಅಧಿಕಾರಿಗಳನ್ನೇ ನಿಯಮಿಸುತ್ತಿದ್ದ ಉದ್ದೇಶ ಬಹಳ ಉಪ ಯುಕ್ತವಾಗಿದ್ದಿತು. ಒಬ್ಬ ಅಧಿಕಾರಿಯ ಅಭಿಪ್ರಾಯಗಳನ್ನು, ಮತ್ತೊಬ್ಬಾತ ವಿಮರ್ಶಿ ಸುವುದಕ್ಕೂ ಖಂಡಿಸುವುದಕ್ಕೂ ಅವನ ಸುಧಾರಣೆಗಳನ್ನು ಅಡ್ಡಿಪಡಿಸುವುದಕ್ಕೂ ಅಧಿಕಾರವಿದ್ದಿತು. ಇದರಿಂದ ಆಡಳಿತದ ಮುಖ್ಯ ಗುರಿಯಾದ ಪ್ರಜಾಹಿತವು ರೂಢಿಗೆ ಬರಲು ಅವಕಾಶವಿತ್ತು. ಆದರೆ ಅಧಿಕಾರಿಗಳು ಶ್ರೀಮಂತ ವರ್ಗದವರಾಗಿರುತ್ತಿದ್ದುದರಿಂದಲೇ ತಮ್ಮ ಗುಂಪಿನ ಹಿತವೇ ಅವರಲ್ಲಿ ಕಾಣಬರುತ್ತಿತ್ತು. ಮತ್ತಾವುದಾದರೂ ಅತ್ಯಂತ ಜಟಿಲ ಸಮಸ್ಯೆ ತಲೆದೋರಿದಾಗ "ಸೆನೆಟ್ " ಮಹಾಸಭೆಯ ಅನುಮತಿ ಅವಶ್ಯಕವಾಗಿರುತ್ತಿತ್ತು. ಹೀಗೆಯೇ ಆ ಸಭೆಯ ಬೆಲೆ ಹೆಚ್ಚಿತು. ಒಂದು ವೇಳೆ ಯುದ್ಧ ಸಂಭವಿಸಿದಲ್ಲಿ, ದೇಶದ ಪರಿಸ್ಥಿತಿ ವಿಪರೀತವಾಗಿ ತೊಂದರೆಗೆ ಸಿಲುಕಿದ ಸಂದರ್ಭದಲ್ಲಿ ಚುನಾವಣೆಯ ಮೂಲಕ ಕಾನ್ಸೆಲ್ ಅಧಿಕಾರಿಗಳನ್ನು ನಿಯಮಿಸುವ ಬದಲು "ಡಿಕ್ಟೇಟರ್" ಅಥವಾ "ಸರ್ವಾ ಧಿಕಾರಿ" ಎಂದು ಕರೆಯಲ್ಪಡುತ್ತಿದ್ದ ಅಧಿಕಾರಿಯನ್ನು ನೇಮಕ ಮಾಡುವ ಪದ್ಧತಿ ಯಿತ್ತು. ರಾಜ್ಯದಲ್ಲಿ ಕಾಣಬರುತ್ತಿದ್ದ ಅಧಿಕಾರಿಯನ್ನು ನೇಮಕ ಮಾಡುವ ಪದ್ಧತಿಯಿತ್ತು. ರಾಜ್ಯ ದಲ್ಲಿ ಕಾಣಬರುತ್ತಿದ್ದ ಸೆಟ್ರೀಷಿಯನ್ ಮತ್ತು ಪ್ಲೆಬಿಯನ್ ಎಂಬ ಎರಡು ಗುಂಪಿನ ಪ್ರಜಾವರ್ಗದ ಮಧ್ಯೆ ತೋರುತ್ತಿದ್ದ ಅಧಿಕಾರವು ಹೆಚ್ಚಾದಂತೆ ವೈಷಮ್ಯವೂ ಉಂಟಾಗಿ ಪ್ಲೆಬಿಯನ್ನರೆಂಬ ಸಾಮಾನ್ಯರ ಗುಂಪು, ಸಮಾನ ಹಕ್ಕು ಬಾಧ್ಯತೆಗಳಿಗೆ ಹೋರಾಟ ನಡೆಸಿ ತಮ್ಮ ಪರವಾಗಿ 'ಟ್ರಿಬ್ಯೂನ್' ಎಂದು ಕರೆಯಲ್ಪಡುತ್ತಿದ್ದ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಅವಕಾಶ ಪಡೆದುಕೊಂಡರು. ಈ ಅಧಿಕಾರಿಗಳು ಪ್ಲೆಬಿಯನ್ನರ ರಕ್ಷಣೆಗಾಗಿ ಸೆನೆಟ್ ಸಭೆಯಲ್ಲಿ ಹೋರಾಡಬೇಕಾಗಿತ್ತು. ಚಕ್ರಾಧಿಪತ್ಯವು ವಿಸ್ತಾರವಾದಂತೆ ಅಧಿಕಾರಿಗಳ ಸಂಖ್ಯೆ ಹೆಚ್ಚಿತು. ಹಣಕಾಸಿನ ವ್ಯವಹಾರವನ್ನು ನೋಡಿಕೊಳ್ಳಲು 'ಕ್ವೆಸ್ಟಸ್' ಎಂಬ ಅಧಿಕಾರಿಗಳೂ, ನ್ಯಾಯತೀರ್ಮಾನದ ವಿಚಾರದಲ್ಲಿ "ಪ್ರೀಟಾರ್ಸ್" ಎಂಬ ಅಧಿಕಾರಿಗಳೂ, ತೆರಿಗೆಯ ವಸೂಲಿಯ ಮೇಲ್ವಿಚಾರಣೆಗಾಗಿ "ಸೆನ್ ಸಾರ್ಸ್" ಎಂಬ ಅಧಿಕಾರಿಗಳೂ ನೇಮಕರಾಗತೊಡಗಿದರು. ಸಾಮಾನ್ಯ ಜನರು ಶ್ರಿಮಂತ ರಂತೆ ಆಡಳಿತದಲ್ಲಿ ಸಮಾನವಾದ ಹಕ್ಕುಗಳನ್ನು ಪಡೆದುಕೊಳ್ಳಲು ನಡೆದ ಪ್ರಯತ್ನ ಕಾನೂನು ಸಂಗ್ರಹಣೆಯ ಘಟನೆಯಿಂದ ಪ್ರಾರಂಭವಾದುದಾಗಿರುತ್ತಿತ್ತು. ಕ್ರಿ.ಪೂ.೪೫೦ ರಲ್ಲಿ ಕಾನೂನು ಕುಗ್ಗುವಂತಾಯಿತು. ಆರಂಭದಲ್ಲಿ ಹನ್ನೆರಡು ಕಾನೂನುಗಳನ್ನು ತಾಮ್ರಪತ್ರಗಳ ಮೇಲೆ ಬರೆದು ಸಂಗ್ರಹಿಸಿದರು. "ಟ್ವೆಲ್ವ್ ಟೇಬಲ್ಸ್"ಎಂಬ ಹೆಸರನ್ನು ಪಡೆದ ಈ ಕಾನೂನುಗಳ ಸಹಾಯದಿಂದಲೇ ಮುಂದೆ ರೋಮನ್ನರ ವಿಸ್ತಾರಗೊಂಡ ನ್ಯಾಯಪದ್ಧತಿಯೂ ಮತ್ತು ಇತ್ತೀಚಿನ ಪಾಶ್ಚಿಮಾತ್ಯ ದೇಶಗಳ ನ್ಯಾಯ ಪದ್ಧತಿಯು ಬೆಳೆಯುವುದನ್ನೂ ನಾವು ಕಾಣಬಹುದು. ಕಮೀಷಿಯೂ ಸಂಚಾರಿಯಾಟ ಎಂಬ ಸಭೆಯು ರಾಜಕೀಯದಲ್ಲಿ ಪ್ರಮುಖ ಸಭೆಯಾಗಿ

ಮಾರ್ಪಟ್ಟಿತು. ಹನ್ನೆರಡು ಕಾನೂನುಗಳ ಜೊತೆಗೆ ಕ್ರಿ.ಪೂ.೩೬೭ರಲ್ಲಿ ನಡೆದಂತಹ "ಲೈಸಿನಿಯನ್" ಕಾನೂನಿನಿಂದ ರೋಮನ್ ಶ್ರೀಮಂತರಲ್ಲಿ ಇರಬಹುದಾದ ಕ್ಷೇತ್ರಗಳ ಪರಿಮಿತಿಯು ನಿಗದಿಯಾಗಿ ಭೂ ವ್ಯವಸ್ಥೆ ಬದಲಾವಣೆಯನ್ನು ಪಡೆಯಿತು. ಮುಂದುವರಿದಂತೆ ಕ್ರಿ.ಪೂ. ೩೧೩ರಲ್ಲಿ ಸಾಲ ಪಡೆದಂತಹ ವ್ಯಕ್ತಿಗೆ ಸಾಲಕೊಟ್ಟ ವ್ಯಕ್ತಿಯಿಂದ ಉಂಟಾಗುತ್ತಿದ್ದ ಬಂಧನವೂ ತಪ್ಪಿತು. ಈ ಸುಧಾರಣೆಗಳೇ ಮುಂದೇ ವಿಸ್ತಾರಗೊಂಡು ರೋಮನ್ನರ ಪ್ರಪಂಚದ ಇತಿಹಾಸದಲ್ಲಿ ತಮ್ಮ ಪ್ರಮುಖ ಕಾಣಿಕೆಯಾದ ನ್ಯಾಯಪದ್ಧತಿಯನ್ನು ಬಿಟ್ಟು ಹೋಗಲು ಕಾರಣವಾಯಿತು. ಪ್ಲೆಬಿಯನ್ನರ ವಿಜಯ ಕ್ರಿ.ಪೂ.೩೦೪ರಲ್ಲಿ ಸೆನೆಟ್ ಸಭೆಗೆ ಪ್ರವೇಶ ಪಡೆಯುವುದರೊಂದಿಗೆ ಸಂಪೂರ್ಣವಾಯಿತು.

**ರೋಮ್ ನಗರದ ವಿಸ್ತಾರ**

ಇಟಲಿ ಪರ್ಯಾಯ ದ್ವೀಪದಲ್ಲಿ ಸಣ್ಣ ನಗರ ರಾಷ್ಟ್ರದ ರೂಪದಲ್ಲಿ ಆರಂಭವಾದ ರೋಮ್ ಪಟ್ಟಣವು "ಪ್ರಪಂಚದ ರಾಣಿ" ಎಂಬ ಹೆಸರಿನಿಂದ ಮೆರೆಯುವಷ್ಟು ಸಂಪದ್ಯುಕ್ತವಾಗಿಯೂ ವಿಸ್ತಾರವಾಗಿಯೂ ಆದುದು ನಿಜವಾಗಿಯೂ ಆಸಕ್ತಿಯಿಂದ ಕೂಡಿದ ವಿಷಯ. "ಲ್ಯಾಟಯಂ" ಎಂಬ ಪ್ರದೇಶದಲ್ಲಿ ನಡೆದ ಅಕ್ರಮಣವನ್ನು ಎದುರಿ ಸುತ್ತಾ ಹೊರಟು "ಸ್ಯಾಮನೈಟ್" ಎಂಬ ಜನರನ್ನು ಸೋಲಿಸಿ ತಮ್ಮ ನಗರವನ್ನು ಶೈಶ ವಾವಸ್ಥೆಯಲ್ಲಿ ರಕ್ಷಿಸಿಕೊಂಡರು. ಕ್ರಿ.ಪೂ.೨೯೫ರ ವೇಳೆಗೆ "ಆರ್‌ನಸ್"ಎಂಬ ನದಿಯ ಪ್ರದೇಶದಿಂದ ದಕ್ಷಿಣದಲ್ಲಿದ್ದ ಗ್ರೀಕ್ ಜನರ ವಸಾಹತುಗಳ ವ್ಯವಹಾರದ ಜೊತೆಯಲ್ಲಿ ರೋಮನ್ನರಿಗೂ ಗ್ರೀಕರಿಗೂ ಕದನವಾಯಿತು. ಆ ಗ್ರೀಕ್ ವಸಾಹತುಗಳನ್ನು ಎದುರಿಸಲು ರೋಮನ್ ಜನರು ಕಾರ್ಥೇಜ್ ಪಟ್ಟಣದ ನಿವಾಸಿಗಳ ಸಹಾಯವನ್ನು ಪಡೆದುಕೊಂಡರು. ಗ್ರೀಕರೊಡನೆ ನಡೆದ ಕದನದಲ್ಲಿ ರೋಮನ್ನರಿಗೆ ಜಯವಾಯಿತು. ರೋಮ್ ನಿವಾಸಿಗಳ ಅಧಿಕಾರವು ಹೆಚ್ಚಾಗುತ್ತಿದ್ದುದನ್ನು ಕಂಡ ಕಾರ್ಥೇಜ್ ಪಟ್ಟಣಿಗರು ತಮ್ಮ ವ್ಯಾಪಾರವನ್ನು ಕಾಪಾಡಿಕೊಳ್ಳುವುದಕ್ಕೆ ಯುದ್ಧ ಅನಿವಾರ್ಯ ಎಂದು ನಂಬಿ ರೋಮನರೊಡನೆ ಯುದ್ಧ ಹೂಡಿದರು. ಈ ಎರಡು ದೇಶಗಳ ಮಧ್ಯೆ ನಡೆದಂತಹ ಯುದ್ಧಕ್ಕೆ "ಪ್ಯೂನಿಕ್ ಯುದ್ಧ"ಎಂಬ ಹೆಸರು ಬಂದಿದೆ. ಕ್ರಿ.ಪೂ.೨೪೬ ರವರೆಗೆ ಮೂರು ಬಾರಿ ರೋಮನ್ನರೂ, ಕಾರ್ಥೇಜಿನವರೂ ಯುದ್ಧವನ್ನು ಮಾಡಿದರು. ಮೊದಲಬಾರಿ ಕ್ರಿ.ಪೂ.೨೪೧ರಲ್ಲಿ ಕೊನೆಗೊಂಡ ಹೋರಾಟದಲ್ಲಿ ರೋಮನ್ನರು ಕಾರ್ಥೇಜಿಯನ್ನರನ್ನು ಪರಾಜಿತಗೊಳಿಸಿದರು. ಎರಡನೆಯ ಪ್ಯೂನಿಕ್ ಯುದ್ಧದಲ್ಲಿ ಕಾರ್ಥೇಜಿಯನ್ನರ ಕಡೆ "ಹ್ಯಾನಿಬಾರ್" ಎಂಬ ವೀರಯೋಧನು ಹೋರಾಟ ನಡೆಸಿ ರೋಮ್ ನಗರವನ್ನು ಇಟಲಿಯ ಉತ್ತರ ಭಾಗದಿಂದ ಆಕ್ರಮಿಸಲು ಪ್ರಯತ್ನಿಸಿದನು. ಆತನಿಗೆ ಸಮನಾಗಿ ರೋಮನರ ಕಡೆ "ಸಿಪಿಯೋ" ಎಂಬ ಸೈನ್ಯಾಧಿಕಾರಿ ಇದ್ದನು. ಸಿಪಿಯೋವಿನ ಆಕ್ರಮಣ ವನ್ನು ಎದುರಿಸ ಲಾರದೆ ಹ್ಯಾನಿಬಾರ್ ತನ್ನ ದೇಶಕ್ಕೆ ಹಿಂತಿರುಗಿದನು. ಕೊನೆಯದಾಗಿ ಕ್ರಿ.ಪೂ.೧೪೬ರಲ್ಲಿ ಮೂರನೆಯ ಪ್ಯೂನಿಕ್ ಯುದ್ಧದಲ್ಲಿ ಕಾರ್ಥೇಜ್ ನಗರವು ರೋಮನ್ನರ ವಶವಾಯಿತು. ಪೂರ್ವಭಾಗದಲ್ಲಿದ್ದ ಗ್ರೀಸಿನ ಪ್ರದೇಶಗಳನ್ನು ಆಕ್ರಮಿಸಲು ಪ್ರಯತ್ನಗಳಾದವು. ಆ ಪ್ರಯತ್ನದಿಂದ ರೋಮ್ ನಗರವು ಮೆಡಿಟರೇನಿಯನ್ ಸಮುದ್ರದ ಪೂರ್ವ ಪ್ರದೇಶಗಳಲ್ಲಿ ತನ್ನ ಚಕ್ರಾಧಿಪತ್ಯವನ್ನು ವಿಸ್ತರಿಸಿತು. ಮ್ಯಾಸಿಡೋನಿಯಾ ರೋಮನ್ನರ ವಶವಾಯಿತು. ಕಾರಿಂತ್ ಅವರ ಅಧೀನಕ್ಕೆ ಬಂದಿತು. ಮುಂದುವರಿದ ರೋಮನ್ನರು ಈಜಿಪ್ಟ್‌ನ್ನು ತಮ್ಮ ಅಧೀನ ಭಾಗವನ್ನಾಗಿ ಮಾಡಿಕೊಂಡರು. ರೋಮ್‌ನ ವಿಸ್ತರಣಾ ರೀತಿ ಮುಂದುವರಿಯುತ್ತಾ ಬಂದು ಕ್ರಿ.ಶ.೧೧೩ರ ಹೊತ್ತಿಗೆ ಅತ್ಯಂತ ವಿಶಾಲ ಭೂಭಾಗ ವನ್ನೊಳಗೊಳ್ಳುವಂತಾಯಿತು. ಜೂಲಿಯಸ್ ಸೀಸರನ ಅಧಿಕಾರ ನಡೆದ ದಿನಗಳಲ್ಲಿಯೂ ಯೂರೋಪಿನಿಂದ ದೂರವಾಗಿ ಪಶ್ಚಿಮದಲ್ಲಿ ಬ್ರಿಟೀಷ್ ದ್ವೀಪಗಳಲ್ಲಿ ರೋಮನರ ಅಧಿಕಾರ ನೆಲೆಸಿತ್ತು.

ರಾಜ್ಯವು ಯಾವ ದಿನಗಳಲ್ಲಿ ಹೊರನೋಟಕ್ಕೆ ಅತ್ಯಂತ ವಿಶಾಲವಾದ ರಾಜ್ಯವೆನಿಸಿ ಕೊಂಡಿತೋ, ವೈಭವಯುತ ಜೀವನ ನಡೆಸುತ್ತಿತ್ತೋ ಆ ದಿನಗಳಲ್ಲಿಯೇ ಆ ರಾಜ್ಯದ ಅವನತಿಗೆ ಬೇಕಾಗುವ ಘಟನೆಗಳು ನಡೆಯುತ್ತಿದ್ದವು. ಈ ವಿಸ್ತಾರವನ್ನು ಕಂಡ ಕೆಲವೇ ದಿನಗಳಲ್ಲಿ ರೋಂ ಚಕ್ರಾಧಿಪತ್ಯ ಇಳಿಮುಖವಾಗುವುದಕ್ಕಾರಂಭವಾಯಿತು. ಸಾಮ್ರಾಜ್ಯ ವಿಸ್ತಾರವಾಗುತ್ತಿದ್ದ ಹಾಗೆಯೇ ಅದು ಹಿಂದಿನಂತೆ ಸರಳವಾದ ಗಣರಾಜ್ಯ ಪದ್ಧತಿಗೆ ಅಂಟಿಕೊಂಡಿರುವುದು ಸಾಧ್ಯವಿರಲಿಲ್ಲ. ಪರಿಸ್ಥಿತಿಗೆ ತಕ್ಕಂತೆ ಪ್ರತಿನಿಧಿಗಳ ಸಹಾಯದಿಂದ ನಡೆಯುವಂತಹ ವ್ಯವಸ್ಥೆಯನ್ನು ಅಧಿಕಾರಿಗಳು ಕೈಗೊಳ್ಳಲಿಲ್ಲ. ಇದರ ಫಲವಾಗಿ ರಾಜ್ಯವು ಒಡೆದು ಹೋಗುವ ಪರಿಸ್ಥಿತಿ ಬಂದು ಎಲ್ಲಾ ಮಟ್ಟದಲ್ಲೂ ಲಂಚ-ಅವ್ಯವಹಾರ ರೂಢಿಗೆ ಬಂದಿತು. ಸೆನೆಟ್ ಸಭೆ ಕೇವಲ ಶ್ರೀಮಂತ ಗುಂಪಿನ ಸೌಲಭ್ಯವನ್ನು ದೃಷ್ಟಿ ಯಲ್ಲಿಟ್ಟುಕೊಂಡು ಆಡಳಿತ ನಡೆಸುವ ಸಭೆಯಾಗಿ ಮಾರ್ಪಟ್ಟಿತು. ಆ ಸಮಯದಲ್ಲಿ ಕೆಲವು ಜನನಾಯಕರು ಆ ಸಭೆಯ ಪರಿವರ್ತನೆಗಾಗಿ ಪ್ರಯತ್ನಿಸಿದರು.

ಇಂತಹ ನಾಯಕರಲ್ಲಿ ಗ್ರಾಕೈ ಮನೆತನಕ್ಕೆ ಸೇರಿದ "ಟೈಬೀರಿಯಸ್ ಗ್ರಾಕಸ್" ಮತ್ತು "ಕೈಯಸ್ ಗ್ರಾಕಸ್" ಸಹೋದರರು ಸಭೆಯ ದೋಷಗಳನ್ನು ಸರಿಪಡಿಸುವುದರಲ್ಲಿ ತಮ್ಮ ಜೀವನವನ್ನೇ ಅರ್ಪಿಸಿದರು. ಟೈಬೀರಿಯಸ್ ಕ್ರಿ.ಪೂ.೧೩೩ರಲ್ಲಿ ಟ್ರಿಬ್ಯೂನ್ ಆಗಿ ಪದವಿಗೆ ಬಂದು ಸಭೆಯಲ್ಲಿ ಸುಧಾರಣೆಗಳನ್ನು ತರಲು ಪ್ರಯತ್ನಿಸಿದನು. ಆದರೆ ಅದು ಸಭೆಯ ಶ್ರೀಮಂತ ಸದಸ್ಯರಿಗೆ ಒಪ್ಪಿಗೆ ಆಗದೆ ಕೊಲೆಗೀಡಾದನು. ಆತನ ನಂತರ ಕೆಯಸ್ ಗ್ರಾಕಸ್ ನಾಯಕನಾಗಿ ನಿಂತು ಸಹೋದರನ ಕೆಲಸವನ್ನು ಮುಂದುವರಿಸಲು ಪ್ರಯತ್ನಪಟ್ಟನು. ಅತ್ಯಲ್ಪ ಕಾಲದಲ್ಲಿಯೇ ವಿಫಲಗೊಂಡು ಆತ್ಮಹತ್ಯೆಗೆ ಶರಣ ಹೋದನು. ಈತನ ನಂತರ "ಮೇರಿಯಸ್" ಎಂಬ ಸೇನಾಪತಿಯ ಕಾಲ ಆರಂಭವಾಯಿತು. ಉತ್ತರ ಆಫ್ರಿಕಾದಲ್ಲಿ ನಡೆದ ಯುದ್ಧದಲ್ಲಿ ಮೇರಿಯಸ್‌ನ ಜನನಾಯಕತೆ ಕಂಡುಬಂದಿತು. ಕ್ರಿ.ಪೂ. ೧೦೭ರಲ್ಲಿ ಕಾನ್ಸುಲ್ ಆಗಿ ಬಂದನು. ಸೈನ್ಯಾಧಿಪತಿಯಾಗಿ ಯಶಸ್ವಿಯಾದರೂ ರಾಜನೀತಿಜ್ಞನಂತೆ ಯಶಸ್ಸು ಪಡೆಯಲಾಗಲಿಲ್ಲ. ಸಣ್ಣಪುಟ್ಟ ಅವಕಾಶಗಳನ್ನು ಉಪಯೋಗ ಮಾಡಿಕೊಳ್ಳುವ ಆತನು ತನ್ನ ಸ್ವಭಾವದಲ್ಲಿ ಉತ್ತಮ ಅಧಿಕಾರಿಯಾಗುವುದಕ್ಕೆ ಸರಿಯಾದ ಅಧಿಕಾರ ವಿಲ್ಲವೆಂದು ಭಾವಿಸಿ ಅಧಿಕಾರವನ್ನು ಬಿಟ್ಟುಕೊಟ್ಟನು. ಮೇರಿಯಸ್‌ನ ನಾಯಕತ್ವವು ಕೊನೆಗೊಂಡ ಮೇಲೆ ರೋಂ ಸಾಮ್ರಾಜ್ಯದಲ್ಲಿ ಅಂತರ್ಯುದ್ಧ ನಡೆಯುವ ಪರಿಸ್ಥಿತಿ ಒದಗಿತ್ತು. ಈ ಸಮಯದಲ್ಲಿ "ಸಲ್ಲಾ" ಎಂಬ ಸರ್ವಾಧಿಕಾರಿಯು ನೇಮಕವಾದನು. ಕ್ರಿ.ಪೂ. ೮೨ರಲ್ಲಿ ನೇಮಕನಾದ ಈತನು ಹಿಂದಿನ ಮುಖಂಡರಂತೆ ಅಲ್ಲದೆ ಸೆನೆಟ್ ಸಭೆಯ ಮೂಲಕ ತನ್ನ ಅಧಿಕಾರವನ್ನು ಹೆಚ್ಚಿಸಿಕೊಳ್ಳಲು ಹೊರಟನು. ಸರ್ವಾಧಿಕಾರಿ ಯಾಗಿದ್ದ ಅಧಿಕಾರವನ್ನೆಲ್ಲಾ ಸೆನೆಟ್ ಸಭೆಗೆ ವಹಿಸಿಕೊಟ್ಟು ಅದರ ಬೆಂಬಲದ ಮೇಲೆ ತನ್ನ ಆಡಳಿತವನ್ನು ನಡೆಸಲು ಹೊರಟನು. ಈತ ಆಡಳಿತದಿಂದ ರೋಂ ನಗರದಲ್ಲಿ ನಡೆಯಬಹುದಾಗಿದ್ದ ಅಂತರ್ಯುದ್ಧವನ್ನು ತಡೆಗಟ್ಟಲಾಯಿತು. ಸಲ್ಲಾನ ತರುವಾಯ "ಪಾಂಪೆ" ಕ್ರಿ.ಪೂ.೭೦ರಲ್ಲಿ ಕಾನ್‌ಸೆಲ್ ಪದವಿಯನ್ನು ಪಡೆದು ರೋಮನರ ಆಡಳಿತಗಾರ ನಾಗಿ ಬಂದನು. ಪೂರ್ವ ಪ್ರದೇಶಗಳಲ್ಲಿ ಪಾಂಪೆ ನೆಲೆಸಿದ್ದಾಗ ರೋಂ ಪ್ರದೇಶದಲ್ಲಿ "ಜೂಲಿಯಸ್ ಸೀಸರ್" ಪ್ರಸಿದ್ಧಿಗೆ ಬರತೊಡಗಿದನು. ಸೀಸರ್, ಪಾಂಡೆ ಮತ್ತು ಕ್ರಾಸೆಸ್ ಎಂಬ ಮೂವರಿಗೂ ಅಧಿಕಾರದ ಹಂಚಿಕೆ ನಡೆದು ಆಳಬೇಕೆಂದು ಒಪ್ಪಿಗೆಯಾಯಿತು. ಸೀಸರ್ ಎಲ್ಲರಿಗಿಂತ ಪ್ರಬಲನಾದುದನ್ನು ಕಂಡು ಪಾಂಪೆ ಸೆನೆಟ್ ಸಭೆಯಲ್ಲಿ ಎತ್ತಿಕಟ್ಟಿ ಸೀಸರನನ್ನು ಅಡ್ಡಿಪಡಿಸಿದನು. ಇದರ ಪರಿಣಾಮವಾಗಿ ಸೀಸರ್ ಉದ್ರೇಕಗೊಂಡು ಪಾಂಪೆಯನ್ನು ಸೋಲಿಸಿ ತಾನೊಬ್ಬನೇ ಅಧಿಕಾರವನ್ನು ಪಡೆಯುವಂತಾಯಿತು. ಈತನ ಹೆಚ್ಚಿನ ಪ್ರಾಬಲ್ಯವೇ ಬ್ರೂಟಸ್‌ನನ್ನೂ, ಉಳಿದ ರೋಮನರನ್ನೂ ಸೀಸರನ ಕೊಲೆಗೆ ಪ್ರೇರೇಪಿಸಿತು. ಅನಂತರ ಆಂಟೋನಿ, ಲಿಪಿಸಸ್, ಆಕ್ಟೇವಿಯಸ್ ಈ ಮೂವರು ಮುಖಂಡರು ಅಧಿಕಾರವನ್ನು ಉಳಿಸಿಕೊಂಡರು. ಈ ಮೂವರಲ್ಲಿ ಆಕ್ಟೇವಿಯಸ್ ಹೆಚ್ಚು ಪ್ರಬಲನಾಗಿ "ಅಗಸ್ಟಸ್" ಎಂಬ ಬಿರುದನ್ನು ಉಪಯೋಗಿಸಿಕೊಂಡು ರೋಮ್ ಸಾಮ್ರಾಜ್ಯದ ಅಧಿಪತಿಯಾದನು. ಅಗಸ್ಟಸ್ ಎಂಬ ಪದವು ಗಾಂಭೀರ್ಯ ಎಂಬ ಅರ್ಥ ಕೊಡುವುದು. ಆತನಿಗೆ "ಪ್ರಿನ್‌ಸೆಪ್" ಎಂಬ ಮತ್ತೊಂದು ಪದವನ್ನು ಉಪಯೋಗಿಸುವ ವಾಡಿಕೆಯಿತ್ತು. ಈ ಪದಕ್ಕೆ ಪ್ರಥಮ ನಾಗರಿಕನೆಂಬ ಅರ್ಥ ಬರುವುದು. "ಇಂಟರೇಟಕ್" ಅಂದರೆ ವಿಜಯಿಯಾದ ಸೇನಾಧಿಪತಿಯಂತೆ ಈತನನ್ನು ಗೌರವಿಸುತ್ತಿದ್ದರು.

ಆಗಸ್ಟ್‌ಸ್ ಸೀಸರ್ ಕ್ರಿ.ಪೂ.೨೭ರಿಂದ ಕ್ರಿ.ಶ.೧೪ ರವರೆಗೆ ರೋಮ್ ಸಾಮ್ರಾಜ್ಯಕ್ಕೆ ಸಲ್ಲಿಸಿದ ಸೇವೆ ಮುಖ್ಯವಾಗಿದೆ. ಅಗಸ್ಟಸ್ ಸೀಸರ್‌ನ ಆಳ್ವಿಕೆ, ರೋಮ್ ಸಾಮ್ರಾಜ್ಯದಲ್ಲಿ ತೆರೆಯ ಮರೆಯಲ್ಲಿ ನಡೆದ ಸರ್ವಾಧಿಕಾರಿಯ ಆಡಳಿತ ಎನ್ನುವಂತಿತ್ತು. ರಾಜ ತನ್ನದೇ ಆದ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರೂ, ಆತನು ಸೆನೆಟ್ ಸಭೆಯನ್ನು ಮುಂದಿಟ್ಟು ಕೊಂಡು ಆಳ್ವಿಕೆ ನಡೆಸಿದುದರಿಂದ ರೋಮ್ ಪ್ರಜೆಗಳ ಮನಸ್ಸಿನಲ್ಲಿ ಸರ್ವಾಧಿಕಾರದ ಅಭಿಪ್ರಾಯ ಬರಲಿಲ್ಲ. ಪ್ರಾಂತ್ಯಾಧಿಕಾರದಲ್ಲಾಗಲೀ, ಕೇಂದ್ರ ಸರ್ಕಾರದಲ್ಲಾಗಲೀ ಆಡಳಿತ ಕ್ರಮ ಸ್ವಲ್ಪವೂ ಏರುಪೇರಾಗದಂತೆ ವ್ಯವಸ್ಥೆ ನಡೆಸಿದನು. ಪ್ರತಿಯೊಂದು ಪ್ರಾಂತ್ಯಗಳಿಗೆ ಗೌನರರುಗಳನ್ನು ನೇಮಿಸಿ ರಾಜ್ಯದಲ್ಲಿ ಹಣವು ಪೋಲಾಗದಂತೆ ಎಚ್ಚರಿಕೆ ವಹಿಸಿದನು. ರೋಮನ್ನರ ದಿಗ್ವಿಜಯವನ್ನು ಸಾರುವಂತಹ ಕಟ್ಟಡಗಳ ನಿರ್ಮಾಣಕ್ಕಾಗಿ ಆ ದಿನಗಳಲ್ಲಿ ಕಂಡುಬಂದ ರೋಮನ್ ಕಲಾವಿದರಿಗೆ ಬೆಂಬಲಿಗನಾಗಿ ನಿಂತನು. ಇವೆಲ್ಲ ಸಾಧನೆಗಳಿಂದಾಗಿ ಆತನ ಆಡಳಿತದ ಕಾಲವನ್ನು "ಸುವರ್ಣಯುಗ" ಎಂದು ಕರೆಯಲಾಗಿದೆ. ಇಷ್ಟಾದರೂ ಅಗಸ್ಟಸ್ ಸೀಸರ್ ತಾನು ರಾಜನೆಂದು ಮಾತ್ರ ಸಾರಲಿಲ್ಲ. ಅಲ್ಲದೆ ರೋಮನ್‌ರಲ್ಲಿ ವಂಶಾನುಗತವಾಗಿ ಬರುವ ರಾಜತ್ವದಲ್ಲಿ ಗೌರವವಿಲ್ಲವೆಂಬುದು ಆತನಿಗೆ ಅರಿವಾಗಿತ್ತು. ಹಾಗಿದ್ದೂ ಸಹ ವಂಶಾನುಗತವಾಗಿ ಅಧಿಕಾರ ಪಡೆದ ಯಾವ ರಾಜನಿಗೂ ಕಡಿಮೆಯಿಲ್ಲದಂತೆ ಆಳ್ವಿಕೆ ನಡೆಸಿ ಮರೆಯಾದನು. ಆತನ ನಂತರದಲ್ಲಿ ಬಂದವರು ಕ್ರಮೇಣ ರಾಜತ್ವದ ಸ್ಥಾಪನೆಗೆ ಅವಕಾಶಕೊಟ್ಟರು. ಸೀಸರನ ಕಾಲದಿಂದಲೇ ಸಾಮ್ರಾಜ್ಯದಲ್ಲಿ ರಾಜ್ಯಾಡಳಿತ ಪದ್ಧತಿ

ಬಲವಾಗಿ ಬೇರೂರಿತು. ಈ ಪದ್ಧತಿ ಮುಂದುವರಿದು "ಡಯೊಕ್ಲಿಟಿಯನ್" ಎಂಬುವನ ಕಾಲದಲ್ಲಿ ಪೂರ್ವ ದೇಶಗಳ ರಾಜ್ಯಾಡಳಿತ ಪದ್ಧತಿ ಅನುಸರಿಸಲ್ಪಟ್ಟಿತು. "ಕಾನ್ ಸ್ಟೆಂಟೈನ್" ಚಕ್ರವರ್ತಿಯ ಕಾಲಕ್ಕೆ ಚಕ್ರವರ್ತಿಯನ್ನು ದೇವರೆಂದು ಆರಾಧಿಸುವಷ್ಟು ಮಟ್ಟಿಗೆ ಸಾಮ್ರಾಟನ ಸ್ಥಾನ ಭದ್ರವಾಗಿತ್ತು. ಆತನ ಹೆಸರು ಅತ್ಯುತ್ತಮ ಚಕ್ರವರ್ತಿಗಳಲ್ಲಿ ಒಬ್ಬನಾಗಿ ಉಳಿದಿರುವುದು. ಅಷ್ಟು ಹೊತ್ತಿಗೆ ರೋಮನ್ ಸಾಮ್ರಾಜ್ಯವು ತನ್ನ ಬೆಳವಣಿಗೆಯ ಪರಾಕಾಷ್ಟತೆಯನ್ನು ಮುಟ್ಟಿತು. ಪಶ್ಚಿಮ ರಾಜ್ಯಗಳನ್ನು ವಶಪಡಿಸಿ ಕೊಂಡಿದ್ದುದೂ ಅಲ್ಲದೆ ಪೂರ್ವದಲ್ಲಿಯೇ ವಿಶಾಲವಾದ ರಾಜ್ಯಕ್ಕೆ ಅವರು ಒಡೆಯರೆನಿಸಿ ಕೊಂಡಿದ್ದರು. ಆದ್ದರಿಂದಲೇ ಪೂರ್ವದ ಪ್ರದೇಶಗಳ ಆಡಳಿತದ ಸೌಲಭ್ಯ ಕ್ಕಾಗಿಯೇ ಒಂದು ಮುಖ್ಯ ಪಟ್ಟಣದ ಅವಶ್ಯಕತೆಯು ತಲೆದೋರಿತ್ತು. ಅದಕ್ಕಾಗಿ ಕಾನ್‌ಸ್ಟೆಂಟೈನ್ ತನ್ನ ಹೆಸರಿನಲ್ಲಿ "ಕಾನ್‌ಸ್ಟಾಂಟಿನೋಪಲ್" ಎಂಬ ಹೊಸ ಪಟ್ಟಣದ ಸ್ಥಾಪನೆಗೆ ಕಾರಣನಾದನು. ಕಾನ್‌ಸ್ಟೆಂಟೈನನ ಆಡಳಿತ ಮುಗಿದ ದಿನಗಳಲ್ಲಿ ಮಧ್ಯ ಯುರೋಪಿನಲ್ಲಿ ನಡೆದ ಬದಲಾವಣೆಯೊಂದು ರೋಮನ್ ಸಾಮ್ರಾಜ್ಯದ ಮೇಲೆಯೂ ಪರಿಣಾಮವನ್ನುಂಟು ಮಾಡಿತು. ಅಲ್ಲಿಂದ ಬೇರೆ ಬೇರೆ ಪ್ರದೇಶಗಳಿಗೆ ಹೊರಟು ಬಂದ ಗಾಥ್ಸ್ ಮತ್ತು ವಿಸಿಗಾಥ್ಸ್ ಗುಂಪಿನ ಜನರು ರೋಮ್ ಸಾಮಾಜ್ಯದ ಪ್ರದೇಶಗಳನ್ನು ವಶಪಡಿಸಿ ಕೊಳ್ಳಲಾರಂಭಿಸಿದರು. ರೋಮಿನ ವೈಭವ ಮತ್ತೊಮ್ಮೆ "ಜಸ್ಟಿನಿಯನ್" ಚಕ್ರವರ್ತಿಯ ಕಾಲಕ್ಕೆ ಪುನರುಜ್ಜೀವನ ಕಾಣುವಂತಾಯಿತು. ರಾಜ್ಯದ ಎಲ್ಲೆಯಲ್ಲಿ ರಕ್ಷಣಾ ಪಡೆಗಳನ್ನು ಏರ್ಪಡಿಸಿ ಪೂರ್ವ ಮತ್ತು ಪಶ್ಚಿಮ ವಿಭಾಗಗಳನ್ನು ಒಂದುಗೂಡಿಸಿ, ಆಡಳಿತದಲ್ಲಿ ಉತ್ತಮ ವ್ಯವಸ್ಥೆಯನ್ನು ತಂದು ಅವರ ವೈಭವವನ್ನು ಹಿಡಿದಿಡಲು ಪ್ರಯತ್ನಿಸಿದನು. ಆತನ ಮರಣದ ಸಮಯಕ್ಕೆ ಖಜಾನೆಯು ಬರಿದಾಗಿ ದೇಶದ ಒಳಭಾಗದಲ್ಲಿ ವ್ಯವಸ್ಥೆ ಹದಗೆಟ್ಟಿತು. ಜಸ್ಟಿನಿಯನ್ನನ ಅನಂತರ ರೋಂ ಸಾಮ್ರಾಜ್ಯದ ಖಜಾನೆಯು ಬರಿದಾಗಿ ದೇಶದ ರಾಜಕೀಯ ಕ್ಷೇತ್ರವು ಅವನತಿಯಾಗುವ ಲಕ್ಷಣಗಳು ಹೆಚ್ಚಾಗಿ ಕಂಡುಬಂದವು.

ರಾಜಕೀಯ ಜೀವನದಲ್ಲಿ ಅವರು ಮುಂದಿನ ಜನಾಂಗಗಳಿಗೆ ಒದಗಿಸಿಕೊಟ್ಟ ಕಾಣಿಕೆಗಳೆಂದರೆ ವ್ಯಾಪಕವಾದ ಸಾಮ್ರಾಜ್ಯ, ಅದನ್ನು ಸಾಧಿಸುವುದರಲ್ಲಿ ನಾಗರಿಕ ಮತ್ತು ಆಡಳಿತಗಾರರ ಹೊಣೆ ಏನೆಂಬುದು, ವ್ಯವಸ್ಥಿತ ಆಡಳಿತ ಕ್ರಮ, ಎಲ್ಲಕ್ಕೂ ಮಿಗಿಲಾಗಿ ಅನೇಕ ಶತಮಾನಗಳ ಕಾಲ ಯುರೋಪಿನ ಜನರಿಗೆ ಮಾದರಿಯಾಗಿ ಉಳಿದ ನ್ಯಾಯ ನಿಬಂಧನೆಗಳು, ಕ್ರಿ.ಪೂ.೫ನೆಯ ಶತಮಾನದಲ್ಲಿ ಕೇವಲ ಹನ್ನೆರಡು ಕಾನೂನುಗಳ ರೂಪದಲ್ಲಿದ್ದುದು ಬದಲಾವಣೆಯಾಗಿ ಅನೇಕ ಹೊಸ ತೀರ್ಮಾನಗಳನ್ನೊಳಗೊಂಡ ಸಂಗ್ರಹಣೆಯಾಯಿತು. ಈ ನಿಬಂಧನೆಗಳ ಅರ್ಥವಿವರಣೆಗಾಗಿ ನ್ಯಾಯಮೂರ್ತಿಗಳ ಅವಶ್ಯಕತೆ ತಲೆದೋರಿತು. ನ್ಯಾಯವು ನಿಷ್ಪಕ್ಷಪಾತವಾಗಿ ದೊರಕಬೇಕೆಂಬ ಇಚ್ಛೆಯಿಂದ ಹೊಸ ಏರ್ಪಾಡುಗಳು ಹುಟ್ಟಿಕೊಂಡವು. ನ್ಯಾಯಶಾಸ್ತ್ರದಲ್ಲಿ ವಿಶೇಷ ರೀತಿಯ ಪರಿಚಯ ಪಡೆದ ಜನರು ತೀರ್ಮಾನ ಕೊಡುವ ಮೊದಲು ಚರ್ಚೆ ನಡೆಸುವುದಕ್ಕಾಗಿ ಪಂಚಾಯತಿ ಗಳಿರುತ್ತಿದ್ದವು. ಇದಕ್ಕಾಗಿಯೇ ತರಬೇಕಾದ "ಪೌಲಸ್", 'ಉಲ್ಪಿಯನ್' ಮತ್ತು 'ಪೇಟಸ್' ಎಂಬ ಪ್ರಮುಖ ಪಂಚಾಯಿತರ ಹೆಸರುಗಳನ್ನು, ಅತ್ಯಂತ ಮುಖ್ಯವಾದ "ಪೆಪಿನಿಯಸ್"ಎಂಬ ನ್ಯಾಯ ಶಾಸ್ತ್ರಜ್ಞನನ್ನು ನಾವು ಈ ಗುಂಪಿನಲ್ಲಿ ಕಾಣಬಹುದು. ಪಂಚಾಯಿತಿದಾರರ ಸಹಾಯದಿಂದ ಪೇಟರ್ಸ್ ಎಂಬ ಅಧಿಕಾರಿಗಳು ನ್ಯಾಯ ತೀರ್ಮಾನ ಮಾಡುತ್ತಿದ್ದರು. ಇಂದಿಗೂ ಸಹ ಪಾಶ್ಚಿಮಾತ್ಯ ನ್ಯಾಯಪದ್ಧತಿಗೆ ರೋಮನ್ನರ ಈ ಕಾನೂನು ಸಂಗ್ರಹಣೆಯ ವಿಸ್ತಾರ ತಳಹದಿಯಾಗಿದೆ. ಹೆಚ್ಚಾಗಿ ರೋಮನ್ನರ ನ್ಯಾಯ ಪದ್ಧತಿಯು "ವೈಯಕ್ತಿಕ ಆಸ್ತಿ" ಮತ್ತು ಅದರ ರಕ್ಷಣೆಯ ವಿಚಾರವನ್ನು ಒಳಗೊಂಡಿದೆ. ವೈಯಕ್ತಿಕ ಆಸ್ತಿಯ ಜೊತೆಗೆ ಸಮಾಜದ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಸೇರುವಂತೆಯೂ ಆಸ್ತಿಯನ್ನು ರಕ್ಷಿಸಿಕೊಳ್ಳುವ ಅವಕಾಶ ರೋಮನ್ನರಿಂದಲೇ ದೊರಕಿತು. ಸಮಾಜದ ಒಪ್ಪಂದದ ಮೂಲಕ ವ್ಯವಹಾರ ನಡೆಸುವ ಪದ್ಧತಿಯನ್ನು ಇದರಲ್ಲಿ ಕಾಣಬಹುದಾಗಿತ್ತು. ಮೊಟ್ಟ ಮೊದಲಾಗಿ ಈ ಕಾನೂನುಗಳನ್ನು ಬರೆದಿಡುವ ಪದ್ಧತಿಯ ಪ್ರಯತ್ನ ಕ್ರಿ.ಶ.೪ನೇ ಶತಮಾನದಲ್ಲಿ ಕಂಡುಬರುತ್ತದೆ. ಈ ಬಗೆಯ ಸಂಗ್ರಹಣೆಯಲ್ಲಿ ಎರಡನೆಯ ಮೆಟ್ಟಿಲೆಂದರೆ "ಥಿಯೊಡೋಸಿಯನ್ ಕೋಡ್"ಎಂಬ ಹೆಸರು ಪಡೆದ ಕಾನೂನು ಸಂಗ್ರಹಣೆಯ ಪ್ರಯತ್ನ. ಈ ಸಂಗ್ರಹಣೆಯಲ್ಲಿ ಜರ್ಮನ್ ಪದ್ಧತಿಯ ಕೆಲವು ಹೇಳಿಕೆಗಳು ಸೇರಿರುವುದು ಕಂಡುಬರುತ್ತದೆ. ಆದರೆ ಅದು ಜಸ್ಟೀನಿಯನ್ ಚಕ್ರವರ್ತಿಯ ಕಾಲಕ್ಕೆ ಸರಿಯಾದ ರೂಪವನ್ನು ಪಡೆಯಿತು. "ಜಸ್ಟಿನಿಯನ್" "ಟ್ರೈಬೋನಿಯನ್" ಎಂಬ ಅಧ್ಯಕ್ಷನ ಅಧೀನದಲ್ಲಿ ಒಂದು ಸಮಿತಿಯನ್ನು ಸ್ಥಾಪಿಸಿ ನ್ಯಾಯಶಾಸ್ತ್ರಗಳ ರಚನೆಗೆ ಆಜ್ಞೆ ಮಾಡಿದನು. ಮೊದಲನೆಯದಾಗಿ "ದಿ ಕೋಡ್"ಎಂಬುದರಲ್ಲಿ ರಾಜಾಜ್ಞೆಗಳೆಲ್ಲವೂ ಬರೆಯಲ್ಪಟ್ಟಿವೆ. ಎರಡನೆಯದಾಗಿ "ದಿ ಡೆಜೆಸ್ಟ್" ಎಂಬ ಗ್ರಂಥದಲ್ಲಿ ಕಾನೂನುಗಳ ವಿಮರ್ಶೆಯನ್ನು ಕಾಣಬಹುದಾಗಿದೆ. ನ್ಯಾಯಶಾಸ್ತ್ರದ ವಿದ್ಯಾರ್ಥಿಗಳಿಗೆ ಈ ಗ್ರಂಥವು ತುಂಬ ಉಪಯುಕ್ತವಾಗಿದೆ. ಮೂರನೆಯದಾಗಿ "ನಾವೆಲ್ಸ್" ಎಂದು ಕರೆಯಲ್ಪಟ್ಟ ಗ್ರಂಥದಲ್ಲಿ "ದಿ ಕೋಡ್" ಎಂಬ ಕಾನೂನುಗಳ ಮಾರ್ಪಾಡುಗಳನ್ನು, ಅವುಗಳಲ್ಲಿ ಕಾಣಬಹುದಾದ ಅನಿರ್ದಿಷ್ಟ ಪದಗಳ

ಬಗ್ಗೆ ಹೊಸ ವಿವರಣೆಯನ್ನು ಕಾಣಬಹುದು. ನಾಲ್ಕನೆಯದಾದ "ಕಾರ್ಪಸ್ ಜೂರಿಸ್ ಸಿವಿಲಿಸ್" ಎಂಬ ವಿಭಾಗದಲ್ಲಿ ರೋಮನ್ನರ ಪೌರಜೀವನದ ಅಧ್ಯಯನಕ್ಕೆ ತಕ್ಕ ವಿಷಯಗಳು ಸಂಗ್ರಹವಾಗಿವೆ. ಆಧುನಿಕ ರಾಜಕೀಯ ಪರಿಸ್ಥಿತಿಯಲ್ಲಿ ಪ್ರಸಿದ್ಧವಾಗಿರುವ "ಪ್ರಜಾಪ್ರಭುತ್ವ ಮತ್ತು ವ್ಯಕ್ತಿ ಸ್ವಾತಂತ್ರ್ಯ" ಎಂಬ ಪದಗಳ ಆರಂಭದ ಉಪಯೋಗವನ್ನೂ ರೋಮನ್ನರ ಕಾನೂನುಗಳಲ್ಲಿ ಕಾಣಬಹುದು. ರೋಮನ್ನರು ಪ್ರಪಂಚಕ್ಕೆ ಸಲ್ಲಿಸಿರುವ ವಿಶಿಷ್ಟ ಕಾಣಿಕೆ ಎಂದರೆ ನ್ಯಾಯ ನಿಬಂಧನೆಗಳೆಂದು ಹೇಳುವ ರೂಢಿಯಿದೆ. ರೋಮ್ ಸಾಮ್ರಾಜ್ಯ ಅನಾಗರಿಕ ಎನ್ನಿಸಿಕೊಂಡು ಜನರ ಆಕ್ರಮಣಕ್ಕೆ ತುತ್ತಾಗಿ ಹರಿದು ಹಂಚಿಹೋದ ಮೇಲೆ, ಸರ್ಕಾರ ನಿಯಮಿತವಾಗಿರುವ ಪ್ರದೇಶದಲ್ಲಿ ಮಾತ್ರವೇ ಅಧಿಕಾರವನ್ನು ಹೊಂದಿದಂತೆ ಇದ್ದರೂ ಈ ಕಾನೂನುಗಳು ಮಾತ್ರ ತಮ್ಮ ಪ್ರಭಾವವನ್ನು ಒಂದೇ ರೀತಿಯಲ್ಲಿ ಉಳಿಸಿಕೊಂಡಿದ್ದವು. ವಿಶ್ವ ಸರ್ಕಾರ ಸ್ಥಾಪನೆಗೆ ಇನ್ನೂ ಪ್ರಯತ್ನಗಳು ನಡೆಯುತ್ತಿರುವುದುಂಟು. ಹಾಗಿದ್ದೂ ಕ್ರಿಸ್ತಪೂರ್ವದಲ್ಲೇ ಅಸಮಾನ ರೀತಿಯಲ್ಲಿ ವಿಸ್ತಾರ ಸಾಮ್ರಾಜ್ಯವನ್ನು ಕಟ್ಟಿ ಅದರ ಆಡಳಿತವನ್ನು ಸಮರ್ಪಕಗೊಳಿಸಿ, ರೋಮ್‌ನವರು ತಮ್ಮ ಮತ್ತೊಂದು ವಿಶೇಷ ರೀತಿಯ ಸಾಧನೆಯನ್ನು ವ್ಯಕ್ತಪಡಿಸಿದರು. ಇವೆರಡು ಆಧಾರಗಳ ಮೇಲೆ ಇವರ ಉಳಿದ ಸಾಧನೆಗಳು ನಿಂತಿವೆ ಎಂದರೆ ಸ್ವಲ್ಪವೂ ದೋಷವಾಗಲಾರದು.

**ಸಾಮಾಜಿಕ ಮತ್ತು ಆರ್ಥಿಕ ಜೀವನ**

ರೋಮನ್ನರ ಮುಖ್ಯ ಉದ್ಯೋಗ ವ್ಯವಸಾಯವಾಗಿತ್ತು. ರೋಂ ನಗರ ವಿಸ್ತಾರವಾದಂತೆ ಚಿಕ್ಕ ಚಿಕ್ಕ ಹಿಡುವಳಿದಾರರು ಸಂಖ್ಯೆಯಲ್ಲಿ ಕಡಮೆಯಾಗುತ್ತಾ, ಜಹಗೀರುಗಳನ್ನು ಪಡೆದಿದ್ದವರ ಸಂಖ್ಯೆ ಅಧಿಕವಾಗುತ್ತಾ ಬಂತು. ರೋಮನ್ನರಲ್ಲಿ ಗುಲಾಮರ ಪ್ರಮುಖ ಪಾತ್ರವನ್ನು ಕಾಣುತ್ತೇವೆ. ಯಾವಾಗ ಚಿಕ್ಕ ಚಿಕ್ಕ ಹಿಡುವಳಿದಾರರು ವ್ಯವಸಾಯ ಕ್ಷೇತ್ರ ವನ್ನು ಬಿಟ್ಟು ಪಟ್ಟಣಗಳಲ್ಲಿ ಜೀವನೋಪಾಯವನ್ನು ಕಲ್ಪಿಸಿಕೊಂಡು ನೆಲೆಸಲು ಪ್ರಾರಂಭಿಸಿದರೋ ಆಗ ವ್ಯವಸಾಯಕ್ಕಾಗಿ ಗುಲಾಮರನ್ನು ಗೊತ್ತುಮಾಡಿಕೊಳ್ಳುವುದು ಅತ್ಯವಶ್ಯಕವಾಯಿತು. ರೋಮನ್ನರು ವ್ಯವಸಾಯ ಕ್ಷೇತ್ರದಲ್ಲಿ ತಮ್ಮದೇ ಆದ ಪದ್ಧತಿಯನ್ನು ಅನುಸರಿಸುತ್ತಿದ್ದುದನ್ನು ಕಾಣಬಹುದು. ಒಂದೇ ಬಗೆಯ ಬೆಳೆಯನ್ನು ಪ್ರತಿವರ್ಷವೂ ಬೆಳೆದಲ್ಲಿ ಭೂಮಿಯ ಸಾರ ಕಡಿಮೆಯಾಗುವುದರಿಂದ ವರ್ಷ ವರ್ಷವೂ ಬೇರೆ ಬೇರೆ ಬಗೆಯ ಬೆಳೆಯನ್ನು ಅವರು ಬೆಳೆಯುತ್ತಿದ್ದರು. ಭೂಮಿಯ ಸಾರವನ್ನು ಕಾಪಾಡಲು ಗೊಬ್ಬರವನ್ನು ಉಪಯೋಗಿಸುತ್ತಿದ್ದರು. ಬಾರ್ಲಿ, ಗೋಧಿ, ಮೆಕ್ಕೆಜೋಳ ಇವುಗಳನ್ನು ಬೆಳೆಯುತ್ತಿದ್ದರು. ಹಣ್ಣಿನ ತೋಟಗಳು, ಅದರಲ್ಲಿಯೂ ದ್ರಾಕ್ಷಿಯ ತೋಟ, ಅಂಜೂರದ ಹಣ್ಣುಗಳು ಮತ್ತು ಆಲೀವ್ ಬೆಳೆ ಇವು ಸಾಮಾನ್ಯವಾಗಿದ್ದವು. ಕುದುರೆಗಳ, ದನಕರು ಗಳ, ಆಡುಗಳ ಉಪಯೋಗ ರೂಢಿಯಲ್ಲಿತ್ತು. ರೋಮನ್ನರು ವ್ಯಾಪಾರವನ್ನು ಬಹಳ ಬೇಗ ಆರಂಭಿಸಿದ್ದರು. ಪಶ್ಚಿಮದಲ್ಲಿ ವ್ಯಾಪಾರ ಅಭಿವೃದ್ಧಿಗೆ ಬರುವುದು ತಡವಾಯಿತು. ಅವರು ಗಾಜಿನ ಸಾಮಾನುಗಳನ್ನು, ದ್ರಾಕ್ಷಾರಸ, ಆಲೀವ್ ಹಣ್ಣುಗಳು ಮತ್ತು ಎಣ್ಣೆ, ಲೋಹಗಳು ಇವುಗಳನ್ನು ಹೆಚ್ಚಾಗಿ ಬೇರೆ ರಾಷ್ಟ್ರಗಳಿಗೆ ಸಮುದ್ರದ ಮೂಲಕ ರಫ್ತು ಮಾಡುತ್ತಿದ್ದರು. ಸಿದ್ಧ ವಸ್ತುಗಳನ್ನು, ಧಾನ್ಯವನ್ನು, ಬೆಲೆ ಬಾಳುವ ಹರಳುಗಳು, ರತ್ನಗಂಬಳಿ, ಮನೆಗೆ ಉಪಯೋಗಿಸುತ್ತಿದ್ದ ಪರದೆಗಳು, ಹತ್ತಿ ಬಟ್ಟೆಗಳು, ಮುತ್ತುಗಳನ್ನು ಅಮದು ಮಾಡಿಕೊಳ್ಳುತ್ತಿದ್ದರು. ತವರವನ್ನು ಬ್ರಿಟನ್ನಿನಿಂದಲೂ, ಉಳಿದ ಪಶ್ಚಿಮ ಯೂರೋಪಿನ ಭಾಗಗಳಿಂದ ಕಬ್ಬಿಣದ ಸಾಮಾನುಗಳನ್ನು, ಚರ್ಮ, ಮಾಂಸದ ಪದಾರ್ಥ ಗಳನ್ನು ತರಿಸಿಕೊಳ್ಳುತ್ತಿದ್ದರು. ಇವರು ಸಮುದ್ರ ವ್ಯಾಪಾರದಲ್ಲಿ ನುರಿತರಾಗಿದ್ದುದಕ್ಕೆ ರೋಮನ್ನರಲ್ಲಿ ಅನೇಕ ಖಾಸಗೀ ಹಡಗುಗಳು ಮತ್ತು ಸರ್ಕಾರಕ್ಕೆ ಸೇರಿದ ಹಡಗುಗಳು ಇದ್ದುದೇ ಉದಾಹರಣೆಯಾಗಿದೆ. ಕೈಗಾರಿಕಾ ಉದ್ಯಮಗಳಲ್ಲಿ ಜನರಿಗಿದ್ದ ಸ್ವಾತಂತ್ರ್ಯ ಕಡಿಮೆ. ಹಣಕಾಸಿನ ವ್ಯವಹಾರಕ್ಕೆ ಅಷ್ಟೇನೂ ಪ್ರಾಮುಖ್ಯತೆ ದೊರಕಿರಲಿಲ್ಲ. ಕ್ರಿ.ಪೂ. ೩೬೯ರವರೆಗೂ ರೋಮ್‌ನಲ್ಲಿ ನಾಣ್ಯ ಪದ್ಧತಿ ಇರಲಿಲ್ಲ. ನಾಣ್ಯಗಳು ರೂಢಿಗೆ ಬಂದ ಮೇಲೆ ಎರಡು ಬಗೆಯ ನಾಣ್ಯಗಳು ಮುಖ್ಯ ನಾಣ್ಯಗಳಂತೆ ರೂಢಿಗೆ ಬಂದವು. ಕಂಚು ಮತ್ತು ಬೆಳ್ಳಿಯ ಲೋಹಗಳನ್ನು ನಾಣ್ಯಗಳ ತಯಾರಿಕೆಯಲ್ಲಿ ಉಪಯೋಗಿಸುತ್ತಿದ್ದುದು ಹೆಚ್ಚು. ದೇಶದಲ್ಲಿ ಆರಂಭವಾಗಿದ್ದ ಹಣಕಾಸಿನ ವ್ಯವಹಾರದ ಕೆಲಸವನ್ನು ನೋಡಿಕೊಳ್ಳಲು ಅಲ್ಲಿನ ಅಧಿಕಾರಿಗಳು ತಮ್ಮದೇ ಒಂದು ಗುಂಪನ್ನು ಆರಂಭಿಸಿಕೊಂಡಿದ್ದರು. ಅಲ್ಲಿನ ಕಮ್ಮಾರರು, ಚಮ್ಮಾರರು, ನೇಯ್ಗೆಯವರು, ಕಲ್ಲಿನ ಕೆಲಸ ಮಾಡುವವರು ಮತ್ತು ಕಸಾಯಿ ಅಂಗಡಿಯವರು ತಮ್ಮ ತಮ್ಮ ಗುಂಪುಗಳನ್ನು ಕಟ್ಟಿಕೊಂಡಿದ್ದುದನ್ನು ನಾವು ಕಾಣುತ್ತೇವೆ. ಸಾಮ್ರಾಜ್ಯವು ಪೂರ್ವದಿಕ್ಕಿಗೆ ಹರಡಿದ ಮೇಲೆ ವ್ಯವಸಾಯ ವಿಚಾರದಲ್ಲಿ ಅನೇಕ ಪೂರ್ವದೇಶದ ರೂಢಿಗಳು ರೋಮನ್ನರಲ್ಲಿ ಪ್ರಚಾರಕ್ಕೆ ಬಂದವು.

ಸಾಮಾಜಿಕ ಜೀವನದಲ್ಲಿ ರೋಮನ್ನರು ಗ್ರೀಕರಿಗಿಂತಲೂ ಹೆಚ್ಚು ಸ್ವಾತಂತ್ರ್ಯ ಪ್ರಿಯತೆಯನ್ನು ತೋರಿಸಿದ್ದರು. ಸಮಾಜದಲ್ಲಿ ವ್ಯವಸಾಯ ಕ್ಷೇತ್ರವನ್ನು ಪಡೆದಿದ್ದ ಶ್ರೀಮಂತ ವರ್ಗ ಉಳಿದ ವರ್ಗಗಳಿಗಿಂತ ಬಲಯುಕ್ತವಾಗಿತ್ತು. ಗಣರಾಜ್ಯವು ಚಕ್ರಾಧಿಪತ್ಯ ವಾಗಿ ಬದಲಾಯಿಸಿದಾಗ ಸಮಾಜದ ಜೀವನದಲ್ಲಿ ಪರಿವರ್ತನೆ ಉಂಟಾಯಿತು. ಸೆನೆಟ್ ಸಭೆಗಾಗಲೀ, ಸಮಾಜ ಜೀವನದ ಮತ್ತಾವ ಸಂಸ್ಥೆಗೇ ಆಗಲಿ ಸದಸ್ಯರಾಗಬೇಕಾದರೆ ಆಸ್ತಿಯ ಅರ್ಹತೆ ಬೇಕಾಗಿತ್ತು. ಉದ್ಯೋಗವನ್ನು ಪಡೆಯುವುದರಲ್ಲೂ ಜನರಿಗೆ ಸಮಾನ ಅವಕಾಶ ಹೆಚ್ಚಾಗಿ ದೊರಕಿರಲಿಲ್ಲ. ಒಟ್ಟಿನಲ್ಲಿ ಸಮಾಜದಲ್ಲಿ ವರ್ಗದ ಅಂತರವು ಹೆಚ್ಚಾಗಿ ಕಾಣುತ್ತಿತ್ತು. ಕುಟುಂಬದಲ್ಲಿ ತಂದೆಯು ಅಪರಿಮಿತ ಅಧಿಕಾರ ಪಡೆದಿದ್ದನು. ತನ್ನ ಕುಟುಂಬದ ಉಪಜೀವನದ ರಕ್ಷಣೆಗಾಗಲೀ ಅಥವಾ ಅಳಿವಿಗಾಗಲೀ ಆತನಿಗೇ ಹೆಚ್ಚಿನ ಅಧಿಕಾರವಿದ್ದಿತು. ರಾಜ್ಯದಲ್ಲಿ ರಾಜನ ಅಧಿಕಾರ ಎಷ್ಟು ದರ್ಪಯುತವಾಗಿರುತ್ತಿತ್ತೋ ತಂದೆಯ ಅಧಿಕಾರ ಮನೆಯಲ್ಲಿ ಅಷ್ಟೇ ಇದ್ದಿತು. ಮನೆತನಕ್ಕೆ ಸಲ್ಲಿಸುತ್ತಿದ್ದ ಗೌರವ ಬಹಳ ಹೆಚ್ಚಿನದಾಗಿರುತ್ತಿತ್ತು. ಸಮಾಜದಲ್ಲಿ ಸ್ತ್ರೀಯರಿಗೆ ಗೌರವ ಸಲ್ಲುತ್ತಿತ್ತು. ಜೊತೆಗೆ ಅವರಿಗೆ ಹೆಚ್ಚಿನ ಸ್ವಾತಂತ್ರ್ಯವೂ ಇತ್ತು. ಗ್ರೀಸಿನ ಸ್ತ್ರೀಯರಂತಲ್ಲದೆ ರೋಮಿನ ಸ್ತ್ರೀಯರು ಎಲ್ಲಾ ಸಮಾರಂಭಗಳಲ್ಲೂ ಪಾಲುಗೊಳ್ಳುವುದಾಗಲೀ ಸ್ವತಂತ್ರವಾಗಿ ವ್ಯವಹಾರವನ್ನು ನಡೆಸುವುದಾಗಲೀ ಸಾಧ್ಯವಾಗಿತ್ತು.

**ರೋಮನ್ನರ ಕಲಾ ಚಟುವಟಿಕೆ**

ಕ್ರಿಸ್ತಪೂರ್ವದಲ್ಲಿ ರೋಮನ್ನರು ಗ್ರೀಕ್ ಜನರ ಹಾವ-ಭಾವ ನಡೆ-ನುಡಿ-ಉಡುಗೆ-ತೊಡಿಗೆಗಳ ತಳಹದಿಯ ಮೇಲೆ ಸಾಗಿದ್ದರೆಂಬುದನ್ನು ನೆನಪಿನಲ್ಲಿಟ್ಟಲ್ಲಿ ಅವರ ಮುಂದಿನ ಮಾದರಿ ಏನೆಂಬುದನ್ನು ಸುಲಭವಾಗಿ ಊಹಿಸಬಹುದು. ಅದರಲ್ಲಿಯೂ ಮೊದಮೊದಲು ಅವರ ಕಲ್ಪನೆ ಗ್ರೀಕರ ಮಾದರಿಯನ್ನು ಬಿಟ್ಟು ಬೇರೆ ಕಡೆಗೆ ಹೋಗಲೇ ಇಲ್ಲ. "ಪಾಂಪೆ" ಎಂಬ ಪಟ್ಟಣದಲ್ಲಿ ಸಂಶೋಧನೆ ನಡೆದಾಗ ಅನೇಕ ಗುರುತುಗಳು ಸಿಕ್ಕಿವೆ. ರೋಮ್ ನವರಿಂದ ನಿರ್ಮಿತವಾದ ಕಟ್ಟಡಗಳ ವಿಗ್ರಹಗಳಲ್ಲಿ ಗ್ರೀಕರ ಪದ್ಧತಿಯು ಹೆಚ್ಚಿನ ಪ್ರಮಾಣದಲ್ಲಿ ಒಂದೇಯಾಗಿತ್ತು. ಆದರೆ ರೋಮನ್ನರಲ್ಲಿದ್ದ ಉಪಯುಕ್ತತೆಯ ದೃಷ್ಟಿ ಅವರ ಕಲಾಕೃತಿಗಳಲ್ಲಿಯೂ ಕಾಣಬರುತ್ತದೆ. ಅಲಂಕಾರಕ್ಕಾಗಿ ಮಾಡಲ್ಪಡುತ್ತಿದ್ದ ಕೆಲಸ ರೋಮನ್ನರ ದೃಷ್ಟಿಯಲ್ಲಿ ಅನಿವಾರ್ಯವೆಂಬುದಾಗಿರಲಿಲ್ಲ. ಕೆಲಸ ಪೂರೈಸಿದ ಮೇಲೆ ಅಲಂಕಾರದ ಕಡೆಗೆ ಸ್ವಲ್ಪ ಗಮನ ಕೊಡುತ್ತಿದ್ದರು. ಸ್ತಂಭಗಳ, ಕಮಾನುಗಳ ಉಪಯೋಗ ಸಾಕಷ್ಟಿತ್ತು. ಕಮಾನುಗಳ ಉಪಯೋಗದ ಆಧಾರದ ಮೇಲೆಯೇ ಮಧ್ಯಯುಗದಲ್ಲಿ ಯೂರೋಪಿನಲ್ಲಿ "ಗಾಥಿಕ್" ಎಂಬ ಹೆಸರಿನಲ್ಲಿ ಕಟ್ಟಡದ ಹೊಸ ಮಾದರಿಯೊಂದನ್ನು ಬಳಸಿಕೊಳ್ಳು ವಂತಾಯಿತು. ವಾಸ್ತುಶಿಲ್ಪದಲ್ಲಿಯೂ ಸಹ ರೋಮನ್ನರ ವಿಶೇಷ ಕಾಣಿಕೆಯು ಕಂಡು ಬರುತ್ತದೆ. ಇಂದಿಗೂ ಸಹ ಅವರ ನೆನಪಿಗಾಗಿ ಉಳಿದಿರುವ ಕಟ್ಟಡ ಗಳೆಂದರೆ ಸೇತುವೆಗಳು, ಅಣೆಕಟ್ಟೆಗಳು, ರಸ್ತೆಗಳು, ಸಾರ್ವಜನಿಕ ಸ್ನಾನದ ಗೃಹಗಳು, ಅರಮನೆಗಳು ಇತ್ಯಾದಿ. ರೋಮನ್ನರು ಹೆಚ್ಚಾಗಿ ಸಾಮಾನ್ಯ ವ್ಯಕ್ತಿಗಳ ವಿಗ್ರಹಗಳನ್ನು ಮಾಡಿದ್ದುಂಟು. ರೋಮನ್ನರು ಚಿತ್ರಕಲೆಯ ಬಳಕೆಗೆ ಅತ್ಯಲ್ಪ ಗಮನ ನೀಡಿದರು. ಆದರೆ ಅವರ ಉದ್ದೇಶ ಹೆಚ್ಚಾಗಿ ಸೌಂದರ್ಯೋಪಾಸನೆ ಎನ್ನುವುದಕ್ಕಿಂತಲೂ ಹೆಚ್ಚಾಗಿ ರಾಜಕೀಯ ವಿಷಯಗಳ ಪ್ರಸಾರವೆನ್ನಬಹುದು. ಕಟ್ಟಡ ನಿರ್ಮಾಣದ ಜೊತೆಗೆ ರಸ್ತೆಗಳ ನಿರ್ಮಾಣ, ಸೇತುವೆಗಳು ಮತ್ತು ಅಣೆಕಟ್ಟುಗಳನ್ನು ಕಟ್ಟುವುದು, ಈ ವಿಷಯದಲ್ಲಿ ರೋಮನ್ನರನ್ನು ಮೀರಿಸುವ ಜನಾಂಗವೇ ಇರಲಿಲ್ಲವೆನ್ನಬಹುದು. ಧಾರ್ಮಿಕ ವಿಷಯಗಳ ಬೆಂಬಲದ ಮೇಲೆ ನಿರ್ಮಿತವಾದ ಕಟ್ಟಡಗಳು ಕಡಿಮೆ. ಕ್ರಿಸ್ತಪೂರ್ವದಲ್ಲಿಯೇ ರೋಮನ್ನರ ರಸ್ತೆಗಳ ಬಗ್ಗೆ ಒಂದು ನಾಣ್ಣುಡಿ ಜಾರಿಯಲ್ಲಿತ್ತಂತೆ. ಅದೆಂದರೆ "ಎಲ್ಲಾ ಹೆದ್ದಾರಿಗಳೂ ರಾಜಧಾನಿಯಾದ ರೋಮಿಗೆ ಕೊಂಡೊಯ್ಯುತ್ತವೆ". ಈ ಮಾತಿಗೆ ಸರಿಯಾಗಿಯೇ ವಿಶಾಲವಾದ ಸಾಮ್ರಾಜ್ಯದ ಬೇರೆ ಬೇರೆ ಭಾಗಗಳನ್ನು ರಾಜಧಾನಿಯೊಂದಿಗೆ ಕೂಡಿಸುವುದಕ್ಕಾಗಿ ವಿಸ್ತಾರವಾದ ರಸ್ತೆಗಳು ನಿರ್ಮಿತವಾದವು. ನೀರಾವರಿಯ ಕೆಲಸದ ಸಹಾಯಕ್ಕಾಗಿ, ಸೈನ್ಯದ ಸಾಗಾಣಿಕೆಗಾಗಿ ಅಲ್ಲಲ್ಲಿ ಅಣೆಕಟ್ಟುಗಳು, ಸೇತುವೆಗಳು ಕ್ರಮವಾಗಿ ಕಟ್ಟಲ್ಪಟ್ಟವು. ರೋಮನ್ನರು ವಾಸ್ತು ಶಿಲ್ಪಕ್ಕೆ ಹೆಸರುವಾಸಿಯಾದದ್ದು ನಗರ ರಾಷ್ಟ್ರವು ಗಣರಾಜ್ಯವಾಗಿ, ಗಣರಾಜ್ಯವು ಚಕ್ರಾಧಿಪತ್ಯವಾಗಿ ಮಾರ್ಪಟ್ಟಂತಹ ಕಾಲದಲ್ಲಿ. ಪಾಂಪೆ ಎಂಬಲ್ಲಿ ನಡೆದ ಸಂಶೋಧನೆಯ ಮೂಲಕ ಕೆಲವು ಕಟ್ಟಡಗಳ ಮಾದರಿ ದೊರಕಿದೆ. ಅದರಲ್ಲಿ ನಾಟಕ ಶಾಲೆಯೊಂದು ಉದಾಹರಣೆಗೆ "ಫೋರಂ"ಎಂದು ಕರೆಯಲ್ಪಟ್ಟ, ಭಾಷಣಗಳನ್ನು ಏರ್ಪಡಿಸುತ್ತಿದ್ದ, ವ್ಯಕ್ತಿಗಳನ್ನು ವಿಚಾರಣೆಗೆ ಗುರಿಮಾಡುತ್ತಿದ್ದ ದೊಡ್ಡ ಸಭಾಂಗಣವು ರೋಮನ್ನರ ವಾಸ್ತುಶಿಲ್ಪದ ಮುಖ್ಯ ಅಂಗವಾಗಿದೆ. "ಕಲೋಸಿಯಂ" ಎಂಬ ಹೆಸರಿನಲ್ಲಿ ಕರೆಯಲ್ಪಡುವ ಕ್ರೀಡಾಂಗಣದಂತೆ ಉಪಯೋಗವಾಗುವ ವಿಶಾಲ ಕಟ್ಟಡ ರೋಮನ್ನರ ವಾಸ್ತುಶಿಲ್ಪದ ಅತ್ಯುತ್ತಮ ಮತ್ತು ವಿಶಿಷ್ಟ ಕೃತಿಯಾಗಿದೆ. ಯುದ್ಧದ ಘಟನೆಗಳ

ನೆನಪಿಗಾಗಿ ನಿರ್ಮಿತವಾದ ಕಮಾನಿನಂತಹ ಕಟ್ಟಡವೂ ಮುಖ್ಯವಾಗಿದೆ. ಇದು ಅತ್ಯಂತ ಬೃಹದಾಕಾರದ್ದಾಗಿಯೂ, ಪ್ರಸಿದ್ಧ ಕಟ್ಟಡವಾಗಿಯೂ ಇದೆ. ಅವರ ಶಿಲ್ಪಕಲೆಯಲ್ಲಿ ನೈಜತೆ ಮತ್ತು ಹಾವಭಾವಗಳ ಸರಿಯಾದ ಪ್ರದರ್ಶನ ಚೆನ್ನಾಗಿ ಕಂಡುಬರುತ್ತದೆ. "ಅಪರಿಚಿತನಾದ ರೋಮನ್ ಪ್ರಜೆ"ಎಂಬ ಹೆಸರು ಪಡೆದಿರುವ ರೋಂ ಯುವಕನ ವಿಗ್ರಹ ಅವರ ಶಿಲ್ಪದ ಉದಾಹರಣೆಯಾಗಿದೆ. ಗ್ರೀಕರ ಮಾದರಿಯನ್ನು ಬಿಟ್ಟು ಹೊರಟ ಶಿಲ್ಪಿಗಳು ಕೆಲವೇ ದಿನಗಳಲ್ಲಿ ತಮ್ಮ ವ್ಯಕ್ತಿಗತ ಸಾಧನೆಯ ಮುಕ್ತಾಯವನ್ನು ಕಂಡರು. ಪಾಂಪೆ ಎಂಬಲ್ಲಿ ಸಿಕ್ಕಿರುವ ವಿಗ್ರಹ, ಚಿತ್ರಗಳು ಮಾತ್ರ ಪೌರಾಣಿಕ ವಸ್ತುಗಳನ್ನು ಅನುಸರಿಸಿ ನಿರ್ಮಿತವಾಗಿವೆ ಎಂದರೆ ತಪ್ಪಾಗಲಾರದು. ಪ್ರಕೃತಿ ದೃಶ್ಯಗಳನ್ನು ಚಿತ್ರಿಸುವುದರಲ್ಲಿ ರೋಮನ್ನರು ಗ್ರೀಕರಿಗಿಂತ ಮುಂದುವರಿದಿದ್ದರು. ಆದರೆ ಲೋಹದ ಕೆಲಸದಲ್ಲಿ ಅವರು ಗ್ರೀಕರಿಗಿಂತ ಹೆಚ್ಚಿನ ಅಭಿವೃದ್ಧಿಯನ್ನು ಸಾಧಿಸಲಾಗದಿದ್ದುದು ಕಂಡುಬರುತ್ತದೆ.

**ರೋಮನ್ನರ ಧರ್ಮ**

ಕ್ರಿಸ್ತಪೂರ್ವದಲ್ಲಿ ರೋಮನ್ನರು ಇಟಾಲಿಯನ್ನರ ಗುಂಪಿಗೆ ಸೇರಿದವರಾಗಿ ಹೊರಗಿನವರ ಸಂಪರ್ಕವನ್ನು ಪಡೆಯದೇ ಇದ್ದಂತಹ ಕಾಲದಲ್ಲಿ ಕುಟುಂಬ ದೇವತೆಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದು ಕಂಡುಬರುತ್ತಿತ್ತು. ಪಿತೃದೇವತೆಯ ಪೂಜೆ ರೂಢಿಯಲ್ಲಿತ್ತು. ವ್ಯವಸಾಯವನ್ನೇ ಮುಖ್ಯ ಕಸುಬನ್ನಾಗಿಟ್ಟುಕೊಂಡಿದ್ದ ಕಾಲದಲ್ಲಿ ಅವರು ಪೊಮೋನಾ, ಸಿರಿಸ್ ಮತ್ತು ಪೆಲೆಸ್ ಎಂಬ ದೇವತೆಗಳನ್ನು ಪೂಜಿಸುತ್ತಿದ್ದರು. ಆರಾಧನೆಯ ಸಂದರ್ಭ ದಲ್ಲಿ ಮನೆಗೆ ಹಿರಿಯನಾಗಿದ್ದ ತಂದೆಯೇ ಎಲ್ಲಾ ಕಾರ್ಯಗಳನ್ನೂ ನಡೆಸುತ್ತಿದ್ದನು. ನಗರ ರಾಷ್ಟ್ರಗಳು ಬೆಳೆದು ಹೊರಗಿನ ಜನರೊಂದಿಗೆ ಸಂಪರ್ಕ ಪ್ರಾರಂಭವಾದ ಮೇಲೆ ಹೊಸ ದೇವಿ-ದೇವತೆಗಳ ಪೂಜೆ ನಡೆಯುತ್ತಿತ್ತು. ಮಾರ್ಸ್ ಎಂಬ ಯುದ್ಧಕ್ಕೆ ಅಧಿದೇವತೆಯಾದ ದೇವರ ಪೂಜೆ ಹೀಗೆ ಪರಿಚಿತವಾದುದರಲ್ಲಿ ಒಂದು. ಕೊನೆಗೆ ಎಲ್ಲಾ ದೇವ-ದೇವತೆಗಳನ್ನು ಹಿಂದೆ ಸರಿಸಿ ಪ್ರಖ್ಯಾತವಾದ ದೇವರೆಂದರೆ "ಜ್ಯೂಪಿಟರ್". ಪೂಜಾಪದ್ಧತಿ ಬೆಳೆದ ಹಾಗೆ ಪುರೋಹಿತರ ಪ್ರಾಬಲ್ಯ ಸ್ಥಾಪಿತವಾದರೂ ಅವರೆಂದೂ ಅತಿ ಪ್ರಬಲರಾಗಲಿಲ್ಲ. ರಾಜ್ಯದ ಅಧಿದೇವತೆಯಾದ ಜ್ಯೂಪಿಟರ್‌ನನ್ನು ಗೌರವಿಸಲು ಆಗಾಗ್ಗೆ ಸಮಾರಂಭಗಳು ನಡೆಯುತ್ತಿದ್ದುದುಂಟು. ಪುರೋಹಿತ ವರ್ಗದವರ ಅನುಕೂಲಕ್ಕಾಗಿ ಒಂದು ಪಾಠಶಾಲೆ ಸಿದ್ಧವಾಯಿತು. ಎಟ್ರಸ್ಕೇನ್ ಗುಂಪಿನವರು ರೂಢಿಯಲ್ಲಿಟ್ಟುಕೊಂಡಿದ್ದ "ಮಿನಾರ್ವಾ" ಮತ್ತು "ಡಿಯಾನಾ" ಎಂಬ ದೇವತೆಗಳ ಪೂಜೆಯೂ ಹೆಚ್ಚಾಗಿ ಪ್ರಚಾರ ಗೊಂಡಿತ್ತು. ರೋಮನ್ನರಲ್ಲಿ ಧರ್ಮವು ಬಹಳ ಕಾಲ ಅತ್ಯಂತ ಮೇಲ್ಮಟ್ಟದ ತತ್ವ ವಿಷಯವನ್ನು ಹೊಂದಿರಲಿಲ್ಲ. ಆದರೆ ಅವರ ಧರ್ಮದಲ್ಲಿ ಕಾಣಬರುತ್ತಿದ್ದ ಆಚರಣೆಗಳಲ್ಲಿ ಬೇರೆ ಬೇರೆ ಅರ್ಥವನ್ನು ಹೊಂದಿದ್ದ ಪದ್ಧತಿಗಳು ಕೆಲವಿದ್ದರೂ, ಅವುಗಳನ್ನು ಪ್ರಕಟಿಸಲು ಅನುಸರಿ ಸುತ್ತಿದ್ದ ಆಚರಣೆಗಳು ಹಾಸ್ಯಾಸ್ಪದವಾಗಿಯೂ, ಅರ್ಥಹೀನವಾಗಿಯೂ ಇದ್ದುವು. ಜೀವನದಲ್ಲಿ ಹೊಸ ಹೊಸದನ್ನು ತಿಳಿಯುವ ಪ್ರಯತ್ನ ಅವರಲ್ಲಿ ನಡೆದ ದ್ದೆಂದರೆ ಕೇವಲ ಪೂರ್ವದ ದೇಶಗಳ ಸಂಪರ್ಕವಾದ ಮೇಲೆ. ಅದರಿಂದಾಗಿ ಎರಡನೆಯ ವಿಭಾಗದ ರೂಪದಲ್ಲಿ "ಮಿತ್ರೇಯಿಸಂ" ಎಂಬ ಧಾರ್ಮಿಕ ಗುಂಪಿನ ಪ್ರಾರಂಭವನ್ನು ಕಾಣುತ್ತೇವೆ. ಈ ಹೊಸಪದ್ಧತಿ ಬಳಕೆಗೆ ಬಂದ ಮೇಲೆ ಅದುವರೆಗೂ ಉಳಿದುಬಂದಿದ್ದ ಕೆಲವು ಅರ್ಥಹೀನವಾದ ಪದ್ಧತಿಗಳನ್ನು ಕೊನೆಗಾಣಿಸಿದ್ದುಂಟು. ಜನರಲ್ಲಿ ಅನುಭವಿಸದ ಗುಂಪು (ವಂಚಿತವಾದಂತಹ) ಪ್ರಾರಂಭವಾಯಿತು. ಇದರೊಂದಿಗೆ ಮೂವತ್ತು ಸಣ್ಣ ಶಾಖೆಗಳನ್ನೊಳಗೊಂಡ "ಗ್ನಾಸ್ಟಿಸಿಸಂ"ಎಂಬ ಮತ್ತೊಂದು ಗುಂಪು ಮೊದಲಾಗಿತ್ತು. ಈ ಗುಂಪಿನ ಅನುಯಾಯಿಗಳು ಎರಡು ಮುಖ್ಯ ನಂಬಿಕೆಗಳನ್ನಿಟ್ಟು ಕೊಂಡಿದ್ದರು.

೧. ಮನುಷ್ಯನಲ್ಲಿರುವ ಜಡತ್ವ ಸಾಮಾನ್ಯವಾಗಿ ಆತನನ್ನು ದುಷ್ಕೃತ್ಯದೆಡೆಗೆ ಆಕರ್ಷಿಸು ವುದೆಂದೂ

೨. ವಿಶೇಷ ರೀತಿಯ ಜ್ಞಾನವಿಲ್ಲದೆ ಮೋಕ್ಷ ದೊರಕಲಾರದೆಂದೂ ನಂಬಿಕೆಯನ್ನು ಇಟ್ಟು ಕೊಂಡಿದ್ದರು.

ಆಗಸ್ಟಸ್ ಸೀಸರನ ಕಾಲಕ್ಕೆ "ಇಂಪೀರಿಯಲ್ ಕಲ್ಟ್" ಎಂಬ ರೂಪದಲ್ಲಿ ಚಕ್ರವರ್ತಿ ಯನ್ನು ದೇವರೆಂದು ಆರಾಧಿಸುವ ಗುಂಪು ಮೊದಲಾಯಿತು.

## ಕ್ರಿ.ಪೂ.೪ನೆಯ ಶತಮಾನದಿಂದಾಚೆಗಿನ ರೋಮನ್ನರ ತತ್ವಶಾಸ್ತ್ರ

ರೋಮನ್ನರಲ್ಲಿ ಕಂಡುಬಂದ ವ್ಯವಹಾರ ಕುಶಲತೆ ಯಾವುದೇ ಮಟ್ಟದ ತತ್ವಜ್ಞಾನವು ಆಳವಾಗಿರಲು ಆಸ್ಪದ ಕೊಟ್ಟಿರಲಿಲ್ಲ. ತತ್ವಜ್ಞಾನವನ್ನೆಲ್ಲಾ ಗ್ರೀಸಿನಿಂದಲೇ ಕೊಡುಗೆಯಾಗಿ ಪಡೆದದ್ದು. "ಪಶ್ಚಿಮದ ಸಾಕ್ರಟೀಸ್" ಎಂದು ಹೆಸರು ಪಡೆದಿದ್ದ "ಕ್ರೇಟೋ" (ಕ್ರಿ.ಪೂ. ೨೩೪ ರಿಂದ ೧೪೮) ಎಂಬಾತನೇ ರೋಮನ್ನರ ಮೊದಲನೆಯ ತತ್ವಜ್ಞ. ರೋಮನ್ನರು ಗ್ರೀಕರನ್ನು ಅನುಸರಿಸುತ್ತಿದ್ದ ವಿಚಾರಗಳನ್ನು ಆತನು ಖಂಡಿಸಿ ತಮ್ಮ ಪೂರ್ವೀಕರಾದ ಲ್ಯಾಟಿನ್ ಗುಂಪಿನವರ ಪದ್ಧತಿಯನ್ನು ಮತ್ತು ಅದರ ಸರಳತೆಯನ್ನು ರಕ್ಷಿಸಿ ಅದನ್ನು ಮುಂದುವರೆಸಿಕೊಳ್ಳುವಂತೆ ಉಪದೇಶಿಸಿದನು. ಗ್ರೀಕರಲ್ಲಿ ರೂಢಿಗೆ ಬಂದಿದ್ದ ಎಪಿಕ್ಯೂರಿ ಯನ್ ತತ್ವಗಳು ಮತ್ತು ಸ್ಟೋಯಿಕ್ ತತ್ವಗಳು ಕ್ರಮೇಣ ರೋಂನಲ್ಲಿ ಹರಡಿದವು. ಶಿಸ್ತಿನ ಯೋಧರಂತೆ ಇರಲು ಬಯಸುತ್ತಿದ್ದ ರೋಮನ್ನರಿಗೆ ಸ್ಟೋಯಿಕ್ ತತ್ವವೇ ಹೆಚ್ಚು ಪ್ರಿಯವಾಯಿತು. ಪೆನೇಷಿಯನ್ ಎನ್ನುವಾತ ಆ ತತ್ವಗಳನ್ನು ರೋಮನ್ನರಿಗೆ ಪರಿಚಯ ಮಾಡಿಕೊಟ್ಟನು. ಪ್ರಚಾರದಲ್ಲಿದ್ದ ಕೆಲವು ದಂತಕಥೆಗಳು ಸುಳ್ಳೆಂದು ಸಾರಿ ಏಕಬ್ರಹ್ಮೋ ಪಾಸನೆಗೆ ಬೇಕಾಗುವ ಮನೋಧರ್ಮವನ್ನು ಬೆಳೆಸಲು ಪ್ರಯತ್ನಪಟ್ಟನು. ಲ್ಯುಕ್ರೇಷಿಯನ್ ಎಂಬುವನು ಎಪಿಕ್ಯೂರ್ ಎಂಬ ಗ್ರೀಕ್ ಹೇಳಿಕೆಯನ್ನು ರೋಮನ್ನರಲ್ಲಿ ಹರಡಿದನು. ರೋಮನ್ನರ ಕೊಡುಗೆಯ ರೂಪದಲ್ಲಿ ತತ್ವಶಾಸ್ತ್ರದ ಯಾವ ಅಂಶವೂ ಕಾಣುವುದಿಲ್ಲ. ಭಾಷಣಕಾರನೆಂದು ಪ್ರಸಿದ್ಧನಾದ "ಸಿಸಿರೋ" ಎಂಬ ದಾರ್ಶನಿಕನು ವಿಶ್ವಕೋಶ ಒಂದನ್ನು ರಚಿಸಿ ರೋಮನ್ನರ ತತ್ವಶಾಸ್ತ್ರದ ವಿಷಯವನ್ನು ಸಂಗ್ರಹಿಸಿಟ್ಟನು ಎಂಬುದು ರೋಮ್‌ನವರ ತತ್ವಶಾಸ್ತ್ರದ ಬೆಳವಣಿಗೆಯಲ್ಲಿ ತಿಳಿದುಬರುತ್ತದೆ.

## ರೋಮನ್ನರ ಸಾಹಿತ್ಯ

ಪ್ರಪಂಚದ ಜನತೆಗೆ ರೋಮನ್ನರು ತಮ್ಮದಾಗಿ ಕೊಟ್ಟಿರುವ ಅಮೂಲ್ಯ ಅಂಶಗಳೆಂದರೆ ರೋಮನ್ನರ ಕಾನೂನು, ವ್ಯಾಸ್ತುಶಿಲ್ಪದಲ್ಲಿ ಅವರ ವ್ಯಾವಹಾರಿಕ ಕುಶಲತೆ, ಸಾಮ್ರಾಜ್ಯದ ವಿಸ್ತರಣೆ, ಅವರ ಆಡಳಿತ ಮತ್ತು ಲ್ಯಾಟಿನ್ ಭಾಷೆ. ಅನೇಕ ಭಾಷೆಗಳ ಮಾತೃವಾಗಿ ಲ್ಯಾಟಿನ್ ಭಾಷೆ ಉಳಿದಿದೆ. ಅವರು ರಚಿಸಿರುವ ಗ್ರಂಥಗಳಲ್ಲಿ ಐತಿಹಾಸಿಕ ಘಟನೆಯನ್ನು ತಿಳಿಸುವ ಗ್ರಂಥಗಳು ಉತ್ತಮವೆನಿಸಿದೆ. ಪಶ್ಚಿಮ ದೇಶಗಳಲ್ಲಿ ಐತಿಹಾಸಿಕ ಗ್ರಂಥಗಳನ್ನು ಬರೆದಿಟ್ಟವರಲ್ಲಿ ಗ್ರೀಕರೇ ಮೊದಲನೆಯವರಾದರೂ ಅವರಲ್ಲಿ ಉತ್ಪ್ರೇಕ್ಷೆ ಕಾಣುತ್ತಿತ್ತು. ಜೂಲಿಯಸ್ ಸೀಸರ್ ಅತ್ಯುತ್ತಮ ಐತಿಹಾಸಿಕ ಬರಹಗಾರನಾಗಿದ್ದಾನೆ. ಅವನು 'ಅಂತರ್ಯುದ್ಧಗಳು' ಎಂಬ ಪುಸ್ತಕವನ್ನೂ ಬರೆದಿದ್ದಾನೆ. 'ಗ್ಯಾಲಿಕ್ ಯುದ್ಧಗಳು' ಎಂಬ ಹೆಸರಿನ ಗ್ರಂಥದಲ್ಲಿ ಸ್ವಂತ ಅನುಭವಗಳನ್ನು ಬರೆದಿದ್ದಾನೆ. ಆತನಾದ ಮೇಲೆ "ಸಾಲ್ಲಸ್ಟ್" ಮತ್ತು "ಲಿವಿ" ಎನ್ನುವ ಇತಿಹಾಸಕಾರರು ಕಾಣಿಸಿಕೊಂಡು ಮರೆಯಾದರು. ಲಿವಿಯಿಂದ ಬರೆಯಲ್ಪಟ್ಟ "ರೋಮನ್ನರ ಇತಿಹಾಸವು"ಪೂರ್ಣವಾಗಿಲ್ಲ. 'ಟ್ಯಾಸಿಟಸ್' ಎಂಬ ಮತ್ತೊಬ್ಬ ಇತಿಹಾಸಜ್ಞ ರೋಂ ನಗರದ ಕೊನೆಯ ದಿನಗಳ ಬಗ್ಗೆ ಗ್ರಂಥವನ್ನು ಬರೆದಿದ್ದಾನೆ. ಸಾಹಿತ್ಯದ ಉಳಿದ ಭಾಗಗಳಲ್ಲಿ ಅದರಲ್ಲೂ ಮಹಾಕಾವ್ಯವನ್ನು ಬರೆದ ವಿಚಾರದಲ್ಲಿ "ವರ್ಜಿಲ್"ನ ಹೆಸರು ಇಂದಿಗೂ ಸಹ ನೆನಪಿನಲ್ಲಿ ಉಳಿದಿದೆ. ಆತನು "ಔರ್ಜಿಕ್ಸ್" ಮತ್ತು "ಏನಿಯಾಡ್" ಎಂಬ ಹೆಸರಿನಲ್ಲಿ ಕವಿತೆಗಳನ್ನು ರಚಿಸಿದ್ದಾನೆ.

## ರೋಮನ್ನರ ವಿದ್ಯಾಭ್ಯಾಸ

ರೋಮನ್ನರು ವಿದ್ಯಾಭ್ಯಾಸದ ಬಗ್ಗೆ ಬಹಳ ಕಾಲ ಸರಿಯಾದ ಗಮನ ಕೊಟ್ಟಿರಲಿಲ್ಲ. ಅವರು ಪಡೆದ ವಿದ್ಯಾಭ್ಯಾಸವೆಲ್ಲಾ ಗ್ರೀಕರಿಂದ ಪಡೆದುದ್ದೇ ಆಗಿತ್ತು. ವಿದ್ಯೆಯ ಬೆಲೆಯನ್ನು ತಾವಾಗಿ ಅರಿಯದಿದ್ದ ರೋಮನ್ನರು ತಿಳಿವಳಿಕೆ ಬಂದೊಡನೆ ಅದನ್ನು ಗೌರವಿಸಲು ಮೊದಲು ಮುಂದೆ ಬಂದರು. ಶ್ರೀಮಂತರು ತಮ್ಮ ಮಕ್ಕಳನ್ನು ಗ್ರೀಸಿಗೆ ಕಳುಹಿಸಿ ವಿದ್ಯಾರ್ಜನೆಗೆ ಏರ್ಪಾಡು ಮಾಡಿದರು. ಕ್ಯಾಟೋ ಮತ್ತು ವ್ಯಾರೋ ಎಂಬ ಮುಖಂಡರು ಲ್ಯಾಟಿನ್ ಭಾಷೆಯನ್ನು ಉಪಯೋಗಿಸಿಕೊಂಡು ಅನೇಕ ಗ್ರಂಥಗಳನ್ನು ಬರೆದರು. ಭಾಷೆ, ಅಲಂಕಾರಶಾಸ್ತ್ರ, ವ್ಯಾಕರಣ, ಧರ್ಮ ಮತ್ತು ರೋಮನ್ನರ ಜೀವನ ಪದ್ಧತಿ ಈ ವಿಚಾರಗಳು ಸಾಮಾನ್ಯ ಅಧ್ಯಯನದ ವಿಷಯಗಳಾಗಿದ್ದವು. ರೋಮನ್ನರ ವಿದ್ಯಾಭ್ಯಾಸಕ್ಕಾಗಿ ಕಷ್ಟಪಟ್ಟವರಲ್ಲಿ "ಸಿಸಿರೋ" ಗಣ್ಯನಾಗಿದ್ದಾನೆ. ನಾಗರಿಕ ಕರ್ತವ್ಯದ ವಿಷಯಗಳು ವಿದ್ಯಾಭ್ಯಾಸದ ಒಂದು ಅಂಗವಾಗಿರಬೇಕೆಂದು ಈತನ ಅಭಿಪ್ರಾಯವಾಗಿತ್ತು. ರೋಮನ್ನರು ಭಾಷಣ ಕಲೆಗೂ ಪ್ರಾಮುಖ್ಯತೆ

ಕೊಟ್ಟಿದ್ದರು. ಈ ಪ್ರಯತ್ನಗಳಿಂದಾಗಿ ರೋಮನ್ ಸಾಮ್ರಾಜ್ಯವನ್ನು "ಹೇಡ್ರಿಯನ್"ಎಂಬಾತ ಆಳುತ್ತಿದ್ದಾಗ ಪ್ರಥಮ ವಿಶ್ವವಿದ್ಯಾಲಯವೊಂದು ಸ್ಥಾಪಿತವಾಯಿತು.

**ವಿಜ್ಞಾನ ಮತ್ತು ಶಿಲ್ಪ**

ವೈಜ್ಞಾನಿಕ ವಿಷಯಗಳಲ್ಲಿ ರೋಮನ್ನರು ಸಾಧಿಸಿದ್ದು ಬಹಳ ಕಡಿಮೆ. "ಫ್ಲಿನೀ ದಿ ಎಲ್ಡರ್" ಎಂಬಾತನು "ನೈಸರ್ಗಿಕ ಚರಿತ್ರೆ" ಎಂಬ ಗ್ರಂಥದಲ್ಲಿ ಸಸ್ಯಗಳ, ಪ್ರಾಣಿಗಳ ವಿಚಾರವಾಗಿ ಬರೆದಿರುವನು. ಸರಳವಾದ ರೇಖಾಗಣಿತದ ಜ್ಞಾನವನ್ನು ಉಪಯೋಗ ಮಾಡಿಕೊಳ್ಳುತ್ತಿದ್ದರು. "ಸ್ಟ್ರಾಬೊ"ಎಂಬ ಮತ್ತೊಬ್ಬ ವಿದ್ವಾಂಸನು ಭೂಗೋಳಶಾಸ್ತ್ರದ ಮೇಲೆ ಒಂದು ಗ್ರಂಥ ಬರೆದಿರುವನು. 'ಟಾಲೆಮಿ' ಎಂಬಾತನು 'ತ್ರಿಕೋನಮಿತಿ' ಎಂಬ ಗಣಿತ ವಿಭಾಗದ ಬಗ್ಗೆ ಪ್ರಾರಂಭದ ತತ್ವಗಳನ್ನು ತಿಳಿಯಪಡಿಸಿದನು. ಅವನು ಇದರ ಜೊತೆಗೆ ಭೂಗೋಳ ಮತ್ತು ಜ್ಯೋತಿಷ್ಯದಲ್ಲಿ ವಿದ್ವಾಂಸನಾಗಿದ್ದನೆಂದು ತಿಳಿದುಬರುತ್ತದೆ. ರೋಮನ್ ಚಕ್ರವರ್ತಿಗಳ ಹೆಸರಿನ ಮೇಲೆ ತಿಂಗಳುಗಳನ್ನು ಗೊತ್ತುಮಾಡಲಾಗಿತ್ತು. ಸೌರಮಾನ ಪದ್ಧತಿಯನ್ನನುಸರಿಸಿ ೩೬೫ ದಿನಗಳಿಂದಲೂ ಮತ್ತು ಅಧಿಕ ದಿನದಿಂದಲೂ ಕೂಡಿದ್ದ ಪಂಚಾಂಗವು ಕ್ರಿ.ಪೂ. ೪೫ರಲ್ಲಿ ರೂಢಿಗೆ ಬಂದಿತು. ವೈದ್ಯಕೀಯದಲ್ಲಿ ಮಾತ್ರ ರೋಮನ್ನರ ವಿಶೇಷ ರೀತಿಯ ಸಾಧನೆಯೊಂದು ಆಸ್ಪತ್ರೆಗಳ ಸ್ಥಾಪನೆಯ ಮೂಲಕ ನಿಚ್ಚಳವಾಗಿ ಕಂಡುಬಂದಿದೆ. ಡೈಯೋಸ್ಕೋರಿಡಸ್ ಮತ್ತು ಸೆಲ್ಸಸ್ ಇವರು ಮೊದಮೊದಲ ಮುಖ್ಯ ವೈದ್ಯರುಗಳಾಗಿದ್ದರು ಎಂದು ತಿಳಿದುಬರುತ್ತದೆ. "ಫ್ರಾಂಟನಸ್" ಎಂಬಾತನು ಎಂಜಿನಿಯರ್‌ಗಳಿಗೆ ಸಹಾಯವಾಗುವಂತೆ "ಅಣೆಕಟ್ಟುಗಳು" ಎಂಬ ಹೆಸರಿನಲ್ಲಿ ಒಂದು ಗ್ರಂಥವನ್ನು ರಚಿಸಿದನು. ಇದು ಇಂದಿಗೂ ಸಹ ಅನೇಕ ರೀತಿಯಲ್ಲಿ ಸಹಕಾರಿಯಾಗಿದೆ.

<u>ಪರಾಮರ್ಶನ ಗ್ರಂಥಗಳು</u>

೧. ಕೃಷ್ಣಸ್ವಾಮಿ ಅಯ್ಯಂಗಾರ್ ಬಿ.ಎಸ್., **ರೋಮ್ ಚಕ್ರಾಧಿಪತ್ಯದ ಚರಿತ್ರೆ,** ಮೈಸೂರು.

೨. ಕೃಷ್ಣಸ್ವಾಮಿ ಅಯ್ಯಂಗಾರ್ ಬಿ.ಎಸ್., **ಗ್ರೀಸ್ ದೇಶದ ಚರಿತ್ರೆ,** ಮೈಸೂರು: ಗೀತಾ ಬುಕ್ ಹೌಸ್.

೩. ಡೋನಾಲ್ಡ್ ಮೇಕಾಜಿಎ., **ಏನ್ಸಿಯೆಂಟ್ ಸಿವಿಲಿಜೇಷನ್,** ಲಂಡನ್.

೪. ಜೇಮ್ಸ್ ಜಿ.ಎಸ್., **ಎ ಹಿಸ್ಟರಿ ಆಫ್ ವರ್ಲ್ಡ್ ಸಿವಿಲೈಜೇಶನ್,** ದೆಹಲಿ.

## ೫. ಬುಡಕಟ್ಟು ಜನಾಂಗಗಳ ಪ್ರತಿರೋಧ ಹಾಗೂ ರೋಮ್ ಸಾಮ್ರಾಜ್ಯದ ಪತನ

ಪಾಶ್ಚಿಮಾತ್ಯ ಸಂಸ್ಕೃತಿಯ ಐತಿಹಾಸಿಕ ದಾಖಲೆಗಳನ್ನು ಬಿಟ್ಟು ಹೋಗಿರುವ ಸಂಸ್ಕೃತಿಗಳಲ್ಲಿ ಒಂದಾಗಿದ್ದು ಯಾವ ಕಾರಣಕ್ಕೂ ಅತ್ಯಂತ ಪ್ರಾಚೀನವಾದುದಲ್ಲ. ಪ್ರಾಚೀನ ನಾಗರಿಕತೆಗಳು ಯೂರೋಪನ್ನು ಮತ್ತು ಪಶ್ಚಿಮವನ್ನು ಕೇವಲ ಅಲ್ಪಪ್ರಮಾಣ ದಲ್ಲಿ ಮಾತ್ರ ಮುಟ್ಟಲು ಸಾಧ್ಯವಾಯಿತು ಮತ್ತು ಅವುಗಳೂ ಈಜಿಪ್ಟ್, ಸಮೀಪದ ಪಶ್ಚಿಮ(ಪ್ಯಾಲೆಸ್ಟೈನ್ ಪ್ರದೇಶ) ಮತ್ತು ಚೀನಾದ ನದಿಕಣಿವೆಗಳಲ್ಲಿ ಕೇಂದ್ರಿಕೃತ ಗೊಂಡಿದ್ದವು. ಕ್ರಿ.ಪೂ.೧೦೦೦ದ ಈಚೆಗೆ ಗ್ರೀಕ್ ನಗರ-ರಾಜ್ಯಗಳು ಕಾಣಿಸಿಕೊಂಡಾಗ 'ಯುರೋಪಿಯನ್' ಎಂದು ಕರೆಸಿಕೊಳ್ಳುವ ನಾಗರಿಕತೆಯ ಉಗಮವಾಯಿತು. ಗ್ರೀಕರು ತಮ್ಮ ನೆರೆಹೊರೆಯ ನಾಗರಿಕತೆಗಳಿಂದ ಬಹಳಷ್ಟು ಪಡೆದುಕೊಂಡರು. ಆದರೆ ಹಾಗೆ ಪಡೆದುಕೊಂಡ ಅಂಶಗಳನ್ನು ಸೇರಿಸಿದರು. ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಸುಮಾರು ಇಪ್ಪತ್ತೈದು ಸಾವಿರ ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದ ಸಂಘಟನೆಯ ವಿಚಾರಗಳು, ಹಾಗೂ ಸ್ವರೂಪಗಳು ಮೊದಲಬಾರಿಗೆ ಪುರಾತನ ಗ್ರೀಸಿನಲ್ಲಿ ಕಾಣಿಸಿಕೊಳ್ಳುತ್ತವೆ.

ರೋಮನ್ನರು ಮುಂದೆ ಮೆಡಿಟರೇನಿಯನ್ ಭಾಷೆಯಲ್ಲಿ ಮುಖ್ಯ ಜನಾಂಗವಾಗಿ ಗ್ರೀಕರನ್ನು ಅನುಸರಿಸಿದರು. ಅವರು ಕೂಡ ಗ್ರೀಕರಂತೆ, ತಮ್ಮ ಪೂರ್ವಿಕರಿಂದ (ಗ್ರೀಕರು) ಬೇಕಾ ದಷ್ಟು ಪಡೆದುಕೊಂಡರು; ಹಳೆಯದನ್ನು ಹೊಸರೀತಿಯಲ್ಲಿ ಪುನರ್ಸಂಘಟನೆ ಮಾಡಿದರು; ತಮ್ಮದೆ ಆದ ವಿಚಾರಗಳನ್ನು ಅವುಗಳಲ್ಲಿ ಮುಖ್ಯವಾಗಿ ಸರ್ಕಾರ ಪದ್ಧತಿ ಮತ್ತು ಕಾನೂನು ವ್ಯವಸ್ಥೆಯನ್ನು ಸೇರಿಸಿದರು. ರೋಮನ್ ಸಂಸ್ಕೃತಿಯು ಆಧುನಿಕ ಐರೋಪ್ಯ ರಾಷ್ಟ್ರಗಳ ನಾಗರಿಕತೆಯ ನೇರ ಪೂರ್ವಿಕ ಎಂದರೆ ತಪ್ಪಾಗಲಾರದು. ಗ್ರೀಕೊ-ರೋಮನ್ ನಾಗರಿಕತೆಯು ಪಾಶ್ಚಿಮಾತ್ಯವೂ ಅಲ್ಲ, ಐರೋಪ್ಯವು ಅಲ್ಲ, ಅದು ಮೆಡಿಟರೇನಿಯನ್ ಆಗಿದೆ.

ರೋಮನ್ ಸಂಸ್ಕೃತಿಯು ಹೇಗೆ ಗ್ರೀಕ್ ಸಂಸ್ಕೃತಿಯಿಂದ ಪ್ರಭಾವಿತರಾಗಿ ಬೆಳೆದು ರಾಜಕೀಯವಾಗಿ, ಆಡಳಿತಾತ್ಮಕವಾಗಿ ಹಾಗೂ ಸಾಂಸ್ಕೃತಿಕವಾಗಿ ಬೇರೆ ಬೇರೆ ಆವಿಷ್ಕಾರ ಗಳನ್ನು ಪಡೆಯಿತು ಮತ್ತು ಕ್ರಿ.ಶ.ನಾಲ್ಕು ಮತ್ತು ಐದನೆಯ ಶತಮಾನಗಳಲ್ಲಿ ಅದು ಯಾವ ರೀತಿಯಲ್ಲಿ ತೀವ್ರ ಬಿಕ್ಕಟಿಗೆ ಈಡಾಯಿತು ಎನ್ನುವುದು ಚರ್ಚೆಯ ವಿಷಯವಾಗಿದೆ. ರೋಮನ್ ಸಂಸ್ಕೃತಿಯು, ರೋಮ್ ಸಾಮ್ರಾಜ್ಯದ ಸ್ಥಾಪನೆಯ ನಂತರ ನಾಲ್ಕು ಮತ್ತು ಐದನೆಯ ಶತಮಾನಗಳಲ್ಲಿ ಬರ್ಬರ ಜನಾಂಗಗಳ ತೀವ್ರ ದಾಳಿಗಳಿಗೊಳಗಾಗಿ ಬಿಕ್ಕಟ್ಟನ್ನು ಎದುರಿಸಬೇಕಾಯಿತು. ಈ ಬಿಕ್ಕಟ್ಟಿನಿಂದ ಹೊರಬರಲಾರದೆ ಪಶ್ಚಿಮ ರೋಮ್ ಸಾಮ್ರಾಜ್ಯ ಪತನವಾಗಿ, ಸಾಂಸ್ಕೃತಿಕ ಏಳಿಗೆ ತೀವ್ರ ಹಿನ್ನಡೆಗೊಂಡದ್ದನ್ನು ಇಲ್ಲಿ ಅವಲೋಕಿಸ ಲಾಗಿದೆ.

ಪಶ್ಚಿಮದ ಡೇರಿಯಸ್‌ನಿಗಾಗಲಿ ಮ್ಯಾಸಿಡೋನಿಯಾದ ಅಲೆಗ್ಸಾಂಡರಿಗಾಗಲಿ ಅಥವಾ ಹೆಲೆನಿಕ್ ರಾಜರುಗಳಿಗಾಗಲಿ ಸಾಧ್ಯವಾಗದೇ ಇದ್ದ ಪುರಾತನ ಪ್ರಪಂಚದ ಏಕೀಕರಣವನ್ನು ಸಾಧಿಸಿದ ಕೀರ್ತಿ ರೋಮಿಗೆ ಸಲ್ಲುತ್ತದೆ. ಡೇರಿಯಸ್ ಅಥವಾ ಅಲೆಗ್ಸಾಂಡರನ ದಿನ ಗಳಲ್ಲಿ ಈ ಕಾರ್ಯವನ್ನು ಸಾಧಿಸಲು ರೋಮ್ ಖಂಡಿತವಾಗಿ ಶಕ್ತವಾಗಿರಲಿಲ್ಲ ಹಾಗೂ ಶಕ್ತವಾಗಿರಲೂ ಸಾಧ್ಯವಿರಲಿಲ್ಲ. ಏಕೆಂದರೆ ರೋಮ್ ಆಗ ಒಂದು ಸಣ್ಣ ನಗರವಾಗಿತ್ತು. ಒಳ್ಳೆಯ ಬಂದರಾಗಲಿ, ಉತ್ತಮ ವಾಣಿಜ್ಯವಾಗಲಿ ಇಲ್ಲದೆ ಇಟಲಿ ಪರ್ಯಾಯ ದ್ವೀಪದ ಒಂದು ಭಾಗವನ್ನು ಮಾತ್ರ ತನ್ನ ಹತೋಟಿಯಲ್ಲಿಟ್ಟುಕೊಂಡಿತ್ತು. ರೋಮಿನ ನಿವಾಸಿಗಳು ಗ್ರೀಕರ ದೃಷ್ಟಿಕೋನದಲ್ಲಿ, ನಿರಕ್ಷರಸ್ಥರೂ ಅಸಂಸ್ಕೃತರೂ ಆಗಿದ್ದರು. ಪಶ್ಚಿಮ ಮೆಡಿಟರೇನಿ ಯನ್ ಭಾಗವು ಹೆಚ್ಚು ಶ್ರೀಮಂತ, ಉನ್ನತ ಸಂಸ್ಕೃತಿಯನ್ನು ಹೊಂದಿದ್ದ ಹಾಗೂ ರೋಮಿನಷ್ಟು ಬಲಶಾಲಿಯಾಗಿದ್ದ ನಗರಗಳನ್ನು ಒಳಗೊಂಡಿತ್ತು. ಆದರೆ ಪೌರ್ವಾತ್ಯ ನಗರಗಳು ಹಾಗೂ ರಾಜ್ಯಗಳು ಮತ್ತಷ್ಟು ಮುಂದುವರಿದಿದ್ದವು. ಈ ವೇಳೆಯಲ್ಲಿ ಆದ ರೋಮಿನ ಅಪೂರ್ವ ಏಳಿಗೆ ಎಲ್ಲಾ ಕಾಲದ ಇತಿಹಾಸಕಾರರಿಗೆ ಒಂದು ಸೋಜಿಗವಾಗಿದೆ. ಗ್ರೀಕ್ ಇತಿಹಾಸಕಾರ ಪೊಲಿಬಿಯಾಸ್‌ನು ರೋಮಿನ ಬೆಳವಣಿಗೆಯನ್ನು ನೋಡಿದವನು. ರೋಮಿನ ವಿಸ್ತರಣೆ ಹೇಗೆ ಸಾಧ್ಯವಾಯಿತು? ಎಂದು ಪ್ರಶ್ನಿಸಿದ ಪೊಲಿಬಿಯಾಸ್ ಅದಕ್ಕೆ ರಾಜಕೀಯ ಅಂಶಗಳನ್ನು ಕಾರಣವಾಗಿ ನೀಡುತ್ತಾನೆ. ಉತ್ತಮ ಸಂವಿಧಾನದ ಅಸ್ತಿತ್ವ, ತನ್ನ ಮಿತ್ರರಾಜ್ಯಗಳ ರಾಜನಿಷ್ಠೆಯನ್ನು ಉಳಿಸಿಕೊಳ್ಳುವ ಪ್ರಜ್ಞೆ ರೋಮಿನ ಯಶಸ್ಸಿಗೆ ಕಾರಣ ಎನ್ನುತ್ತಾನೆ.

ಇಟಲಿ ಪರ್ಯಾಯ ದ್ವೀಪವು ನಿರ್ದಿಷ್ಟವಾದ ಭೌಗೋಳಿಕ ಇರುವನ್ನು ಪಡೆದಿದ್ದರೂ ಅದರ ಮೇಲೆ ದಾಳಿ ಮಾಡಲು ಎಂದೂ ಕಷ್ಟವಾಗಿರಲಿಲ್ಲ. ರೋಮನ್ನರ ಪೂರ್ವಜನರು ಕ್ರಿ.ಪೂ.೨೦೦೦ರಲ್ಲಿ ರೋಮಿಗೆ ಬಂದಾಗ ಇಟಲಿಯ ಮಿಶ್ರ ಜನಾಂಗದಿಂದ ಕೂಡಿತ್ತು. ಕ್ರಮೇಣವಾಗಿ ರೋಮನ್ನರು ಅವರನ್ನು ತಮ್ಮಲ್ಲಿ ಮೇಳವಿಸಿಕೊಂಡರು.

ಇಟಲಿಯನ್ನು ಗೆದ್ದು ಸಾಗರೋತ್ತರ ವಿಸ್ತರಣೆಯನ್ನು ಮಾಡುತ್ತಾ ರೋಮನ್ನರು ಕ್ರಿ.ಪೂ.೧೪೬ರ ವೇಳೆಗೆ ಇಟಲಿ, ಸಿಸಿಲಿ, ಸಾರ್ಡಿನಿಯಾ, ಕೋರ್ಸಿಕಾ ಹಾಗೂ ಪಶ್ಚಿಮದಲ್ಲಿ ಸ್ಪೇಯಿನ್, ಉತ್ತರ ಆಫ್ರಿಕದ ಕೆಲವು ಭಾಗಗಳು ಹಾಗೂ ಗ್ರೀಸಿನ ಕೆಲವು ಭಾಗಗಳನ್ನು ಗೆದ್ದುಕೊಂಡು ತಮ್ಮ ಆಡಳಿತವನ್ನು ಹೇರಿದರು.

ಆದರೆ ರೋಮ್ ಸಾಮ್ರಾಜ್ಯದ ಸಮಸ್ಯೆಗಳು ಸಾಮ್ರಾಜ್ಯವು ಪೂರ್ಣಗೊಳ್ಳುವ ಬಹಳ ಮೊದಲೇ ಅಸ್ತಿತ್ವದಲ್ಲಿದ್ದವು. ಯಾವ ರೀತಿಯಲ್ಲಿ ನಗರ-ರಾಜ್ಯಗಳು ಸಂಸ್ಥೆಗಳನ್ನು ಈಗ ರೋಮಿನ ಹತೋಟಿಯಲ್ಲಿರುವ ವಿಶಾಲ ಭೂಭಾಗಗಳನ್ನು ಆಳಲು ಉಪಯೋಗಿಸಬೇಕು? ರೋಮಿನ ಜನರು ಹಾಗೂ ರೋಮಿನ ಪ್ರಜೆಗಳ ನಂಟಿಗೆ ಹಾಗೂ ವಿಧೇಯತೆಗಳನ್ನು ಪಡೆದು ಆಳುವ ನಾಯಕರನ್ನು ಹೇಗೆ ಸೃಷ್ಟಿಸಬೇಕು? ಬೃಹತ್ ಕೃಷಿ ಘಟಕಗಳ ಬೆಳವಣಿಗೆ, ಗ್ರಾಮೀಣ ಋಣಭಾದೆ, ವಾಣಿಜ್ಯ ಸುಲಿಗೆಯಾದ ಶತ್ರುಗಳಿಂದ ಹಾಗೂ ಕಪ್ಪಕಾಣಿಕೆ

ಕೊಡುವ ಪ್ರಾಂತ್ಯಗಳಿಂದ ಹರಿದು ಬಂದ ಸಂಪತ್ತು ಸಹಸ್ರಾರು ಗುಲಾಮರ ಆಮದು ಇತ್ಯಾದಿಗಳು ಉಂಟುಮಾಡಿದ ತೀವ್ರತರದ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಗಳಿಗೆ ರೋಮ್ ಹಾಗೂ ಇಟಲಿಗಳು ಹೇಗೆ ಹೊಂದಿಕೊಳ್ಳಬೇಕು? ಸಾಮ್ರಾಜ್ಯವು ಗಣರಾಜ್ಯವೂ ಆಗಿದ್ದು, ಎಲ್ಲಿ ಪ್ರಧಾನ ಧರ್ಮವಾಗಲಿ, ದೇವ-ಸಾಮ್ರಾಟನಾಗಲಿ ಅಥವಾ ರಾಜ್ಯಮುಖ್ಯಸ್ಥನಾಗಲಿ ಇರಲಿಲ್ಲವೊ ಅಂತಹ ರೋಮಿನಲ್ಲಿ ಹೇಗೆ ವಿಧೇಯತೆಯ ಕೇಂದ್ರಬಿಂದುವನ್ನು ಕಂಡುಹಿಡಿಯಬೇಕು? ಈ ಪ್ರಶ್ನೆಗಳು ಕ್ರೈಸ್ತನ ನಂತರ ಮೊದಲೆರಡು ಶತಮಾನಗಳ ಕಾಲ ರೋಮನ್ನರನ್ನು ಕಾಡಿತು ಮತ್ತು ಅವುಗಳಿಗೆ ಅಂಶಿಕವಾಗಿ ಮಾತ್ರ ಉತ್ತರ ಕೊಡಲು ಅವರಿಗೆ ಸಾಧ್ಯವಾಯಿತು. ಇದರಿಂದುಂಟಾದ ಅತೃಪ್ತಿ, ಅಸಮಾಧಾನ ರೋಮನ್ ಗಣರಾಜ್ಯವನ್ನು ಹಾಗೂ ಅನೇಕತ್ವ ನಾಯಕತ್ವವನ್ನು ನಾಶಮಾಡಿತ್ತಲ್ಲದೆ, ಏಕವ್ಯಕ್ತಿ ನಾಯಕತ್ವದ ಸಾಮ್ರಾಜ್ಯ ಸೃಷ್ಟಿಗೆ ಅವಕಾಶ ಮಾಡಿಕೊಟ್ಟಿತು. ಜೂಲಿಯಸ್ ಸೀಜರ್‌ನಂತಹ ಸೈನಿಕ ನಾಯಕರನ್ನು ಸೃಷ್ಟಿಸಿದ ರೋಮನ್ ಗಣರಾಜ್ಯ ಅಗಸ್ಟಸ್ ಸೀಜರ್‌ನ(ಕ್ರಿ.ಪೂ.೨೭ - ಕ್ರಿ.ಶ.೧೪) ಕಾಲದಲ್ಲಿ ಸಾಮ್ರಾಜ್ಯವಾಗಿ ಸಾಂಸ್ಕೃತಿಕವಾಗಿ ಭೌಗೋಳಿಕ ವಿಸ್ತೀರ್ಣದಲ್ಲಿ ತನ್ನ ಔನ್ನತ್ಯವನ್ನು ಮುಟ್ಟಿತ್ತಲ್ಲದೆ ಕ್ರಿ.ಶ.೧೮೦ರವರೆಗೆ ಆ ಪ್ರತಿಷ್ಠೆಯನ್ನು ಕಾಪಾಡಿಕೊಂಡಿತು.

ಕ್ರಿ.ಪೂ.ಎರಡನೆಯ ಶತಮಾನದಲ್ಲಿ ರೋಮನ್ ಸಾಮ್ರಾಜ್ಯವು ಪ್ರಾಚೀನ ಪ್ರಪಂಚವನ್ನು ದೀರ್ಘಕಾಲ ಕಾಡಿದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಂಡ ಹಾಗೆ ಗೋಚರವಾಯಿತು. ಮೆಡಿಟರೇನಿಯನ್ ಸುತ್ತಮುತ್ತ ವಾಸಿಸುತ್ತಿದ್ದ ಜನಾಂಗಗಳನ್ನು ರಾಷ್ಟ್ರವಾಗಲು ಒಂದುಗೂಡಿಸಿ, ರೋಮನ್ ಸಾಮ್ರಾಜ್ಯವು ವಿಶಾಲ ಪ್ರದೇಶದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಒದಗಿಸಿತು. ಆಡಳಿತ ಸುಧಾರಣೆ ಹಾಗೂ ರೋಮನ್ ಪೌರತ್ವದ ನೀಡಿಕೆ, ಇವುಗಳು ಅಧೀನ (ಸೋಲಿಸಲ್ಪಟ್ಟ) ಪ್ರಜೆಗಳಲ್ಲಿ ತಮ್ಮನ್ನು ಸೋಲಿಸಿದ ರೋಮನ್ ನಾಯಕರ ಬಗ್ಗೆ ಇದ್ದ ಸಿಟ್ಟನ್ನು ಕಡಿಮೆಗೊಳಿಸಿತು. ಲಕ್ಷೋಪಲಕ್ಷ ಜನರು ಒಂದೇ ಅಭಿರುಚಿಗಳನ್ನು ಹೊಂದಿದ್ದು ಒಂದೇ ಸಂಸ್ಕೃತಿಯನ್ನು ಹಂಚಿಕೊಳ್ಳತೊಡಗಿದರು. ಅಲ್ಲದೆ ಉದ್ಯಮಶೀಲ ವರ್ತಕರಿಗೆ ಈ ಅಧೀನ ಜನರು ಬೃಹತ್ ಮಾರುಕಟ್ಟೆಯನ್ನು ಒದಗಿಸಿದರು. ಮೂರನೆಯ ಶತಮಾನವು ಈ ಕಾರಣಗಳಿಗೋಸ್ಕರ ಹೆಚ್ಚು ಸಂಪದ್ಭರಿತ ಹಾಗೂ ಶಕ್ತಿಯುತ ರೋಮ್ ಸಾಮ್ರಾಜ್ಯವನ್ನು ಕಾಣಬೇಕಿತ್ತು. ಆದರೆ ಅದು ನಿರಂತರವಾಗಿ ಬಿಕ್ಕಟ್ಟುಗಳನ್ನು ಎದುರಿಸಬೇಕಾಯಿತು.

ಮೂರನೆಯ ಶತಮಾನದ ಬಿಕ್ಕಟ್ಟಿನ ನಂತರ ಕೂಡ ರೋಮನ್ ಸಾಮ್ರಾಜ್ಯವು ಎರಡು ಮಹತ್ವದ ಸ್ವತ್ತನ್ನು ಹೊಂದಿತ್ತು; ಒಂದು, ಸುವ್ಯವಸ್ಥಿತ ಸೈನ್ಯ, ಇನ್ನೊಂದು ಸಂಘಟಿತ ನೌಕರಶಾಹಿ. ಈ ಎರಡು ಸಂಸ್ಥೆಗಳು ಇನ್ನೊಂದು ಶತಮಾನದವರೆಗೆ ರೋಮನ್ ಪ್ರಪಂಚದಲ್ಲಿ ಶಿಸ್ತು ಮತ್ತು ಏಕತೆಯನ್ನು ಕಾಪಾಡುವಲ್ಲಿ ಯಶಸ್ವಿಯಾದವು. ರೋಮನ್ ರಾಜ್ಯದ ಪುನರುತ್ಥಾನ ನಾಗರಿಕತೆಯ ಇತಿಹಾಸದ ಮೇಲೆ ಮಹತ್ತರ ಪರಿಣಾಮವನ್ನುಂಟುಮಾಡಿತು. ಏಕೆಂದರೆ ನಾಲ್ಕನೆಯ ಶತಮಾನದಲ್ಲಿ ಕ್ರೈಸ್ತಮತವು ಮತ್ತೆ ಒಂದಾದ ರೋಮ್ ಸಾಮ್ರಾಜ್ಯದ ಅಧಿಕೃತ ಧರ್ಮವಾಗಿ ಪಾಶ್ಚಿಮಾತ್ಯ ಪ್ರಪಂಚ ದಲ್ಲಿ ದೃಢವಾದ ನೆಲೆಯನ್ನು ಪಡೆಯಿತು.

ಡಯೋಕ್ಲೇಟನ್ ಹಾಗೂ ಕಾನ್‌ಸ್ಟಾಂಟೈನ್ ಇವರ ಕಾಲದಲ್ಲಿ ಮತ್ತೆ ಪ್ರತಿಷ್ಠೆಯನ್ನು ಪಡೆದುಕೊಂಡ ರೋಮ್ ಸಾಮ್ರಾಜ್ಯ, ನಾಲ್ಕನೆಯ ಶತಮಾನದಲ್ಲಿ ಬರ್ಬರ ಜನಾಂಗಗಳ ಬೆದರಿಕೆಯನ್ನು ಎದುರಿಸಬೇಕಾಯಿತು. ಆದರೆ ಕಾನ್‌ಸ್ಟಾಂಟೈನ್‌ನ ಉತ್ತಾರಾಧಿಕಾರಿಗಳು ಆಗ ಅವಶ್ಯ ಬೇಕಾಗಿದ್ದ ಸೈನಿಕ ಗುಣಗಳನ್ನು ಹೊಂದಿದ್ದ ಕಾರಣ, ಅವರು ಸಾಮ್ರಾಜ್ಯ ವನ್ನು ಹಿಡಿದಿಟ್ಟು ಅದರ ಗಡಿಗಳನ್ನು ರಕ್ಷಿಸುವುದರಲ್ಲಿ ಯಶಸ್ವಿಯಾದರು.

ರೋಮ್ ಸಾಮ್ರಾಜ್ಯದ ಗಡಿಯಾಚೆಗೆ ಬರ್ಬರ ಜನಾಂಗಗಳ ಪ್ರಪಂಚವಿದ್ದು ಅದು ಯಾವತ್ತು ರೋಮನ್ ನಾಗರಿಕತೆಗೆ ಬೆದರಿಕೆಯಾಗಿತ್ತು. (ನಾಗರಿಕತೆ ಹಾಗೂ ಸಂಸ್ಕೃತಿಯ ದೃಷ್ಟಿಯಿಂದ ಬಹಳಷ್ಟು ಮುಂದುವರಿದಿದ್ದ ರೋಮನ್ನರಿಗೆ, ಈ ಹೊರಗಿನ ದಾಳಿಕೋರ, ಜರ್ಮನ್ ಜನಾಂಗಗಳು, ತಮ್ಮ ನಡೆ, ನುಡಿ, ಜೀವನ ಶೈಲಿ ಹಾಗೂ ತೋರಿಕೆಯಲ್ಲಿ ಅನಾಗರಿಕರೂ ಹಾಗೂ ಅಸಂಸ್ಕೃತರ ಹಾಗೆ ಕಂಡುಬಂದ ಕಾರಣ ಅವರನ್ನು ಬರ್ಬರ (ಬಾರ್ಬೇರಿಯನ್ಸ್)ರೆಂದು ಕರೆದರು. ರೋಮನ್ ರಾಜಕಾರಣಿಗಳು, ಉತ್ತರ ರೈನ್, ದನುಬೆ ನದಿಗಳ ತಟಗಳಲ್ಲಿ ವಾಸವಾಗಿದ್ದ ಈ ಸಮಾಧಾನಿ ಹಾಗೂ ಯುದ್ಧಕೋರ ಜನಾಂಗಗಳ ಬಗ್ಗೆ ಎಚ್ಚರವನ್ನಿಟ್ಟಿದ್ದರು ಹಾಗೂ ಜೂಲಿಯಸ್ ಸೀಜರ್‌ನ ಕಾಲದಿಂದಲೂ ಇವರನ್ನು ಹಿಂದೂಡಲು ಆಗಾಗ್ಗೆ ಸೈನ್ಯದ ಬಳಕೆಯಾಗುತ್ತಿತ್ತು. ನಾಲ್ಕನೆಯ ಶತಮಾನದವರೆಗೂ ರೋಮನ್ನರು ಈ ಕಾರ್ಯದಲ್ಲಿ ಯಶಸ್ವಿಯಾಗಿದ್ದರು. ಆದರೆ ಸಾಮ್ರಾಜ್ಯದ ಅಧಃಪತನ

ಪ್ರಾರಂಭವಾದಾಗ ಅದು ದುರ್ಬಲವಾಗತೊಡಗಿತು. ಮತ್ತು ಬರ್ಬರರ ದಾಳಿಗಳನ್ನು ಹಿಮ್ಮೆಟ್ಟಿಸುವುದು ಬಹಳ ಕಷ್ಟವಾಗತೊಡಗಿತು. ಈ ವೇಳೆಗಾಗಲೇ ಹಲವು ಜರ್ಮನ್ ಜನಾಂಗಗಳು ದೊಡ್ಡ ಸಂಖ್ಯೆಯಲ್ಲಿ ಶಾಂತಯುತವಾಗಿ ಸಾಮ್ರಾಜ್ಯವನ್ನು, ಸಣ್ಣ ಗುಂಪುಗಳಾಗಿ ಸೇರಿ ಸೈನ್ಯದಲ್ಲೊ ಅಥವಾ ಬೃಹತ್ ತೋಟಗಳಲ್ಲೊ ಕೆಲಸ ಮಾಡತೊಡಗಿದರು. ಸಾಮ್ರಾಜ್ಯದೊಳಗಡೆ ನೆಲೆಗೊಂಡ ನಂತರ ಬರ್ಬರ ವಲಸೆಗಾರರು ಕಾಲಕ್ರಮೇಣ 'ರೋಮನೀಕರಣ'ಗೊಂಡರು. ಅವರ ಸಂಖ್ಯೆ ವೃದ್ಧಿಸಿದಂತೆಲ್ಲಾ ಅದು ನಿಸ್ಸಂಶಯವಾಗಿ ರೋಮನ್ ನಾಗರಿಕತೆಯ ಸಾಮಾನ್ಯಮಟ್ಟ ಕೆಳಗಿಳಿಯಲು ಅನುವು ಮಾಡಿಕೊಟ್ಟಿತ್ತು. ರೋಮನ್ ಸಾಮ್ರಾಜ್ಯವು ಬರ್ಬರ ಜನಾಂಗಗಳ ನಿಧಾನಗತಿಯ ನುಸುಳುವಿಕೆಯನ್ನು ತನ್ನಲ್ಲಿ ಜೀರ್ಣಿಸಿಕೊಂಡರೂ ಅವರು ಬೃಹತ್ ಸಂಖ್ಯೆಯಲ್ಲಿ ಸಶಸ್ತ್ರರಾಗಿ ದಾಳಿಯಿಟ್ಟಾಗ, ಇಡೀ ರಾಷ್ಟ್ರಗಳನ್ನು ತನ್ನಲ್ಲಿ ಹೀರಿಕೊಳ್ಳುವ ಸಾಮರ್ಥ್ಯ ವಿಲ್ಲದಾಯಿತು. ಬೃಹತ್ ಪ್ರಮಾಣದ ದಾಳಿಗಳು ಕ್ರಿ.ಪೂ.೩೭೬ರಿಂದ ಪ್ರಾರಂಭವಾಯಿತು. ಆ ವರ್ಷ ವಿಸಿಗೋಥರು ತನುಬೆ ಗಡಿಯನ್ನು ದಾಟಿ ರೋಮ್ ಸಾಮ್ರಾಜ್ಯವನ್ನು ಪ್ರವೇಶಿಸಿದಾಗ, ಇತರ ಬುಡಕಟ್ಟು ಜನಾಂಗಗಳು ಕೂಡ ಉತ್ತರಗಡಿಯ ಎಲ್ಲಾ ಕಡೆಗಳಿಂದ ರೋಮಿನ ಮೇಲೆ ನುಗ್ಗಿಬರಲು ಪ್ರಾರಂಭಿಸಿದರು. ಪ್ರವಾಹದೋಪಾದಿಯಲ್ಲಿ ಬರ್ಬರರು ಉತ್ತರದ ಮುರಿದ ಗಡಿಯನ್ನು ದಾಟಿ ಮುಂದಿನ ನೂರುವರ್ಷಗಳವರೆಗೆ ರೋಮಿನೊಳಗಡೆ ಬರತೊಡಗಿದಾಗ ಆ ಪ್ರವಾಹದಲ್ಲಿ ಪಾಶ್ಚಿಮಾತ್ಯ ಸಾಮ್ರಾಜ್ಯವು ಮುಳುಗಿಹೋಯಿತು.

ಜರ್ಮನ್ ಜನಾಂಗಗಳ ಪ್ರಭಾವ, ಈಗಾಗಲೇ ಕ್ರೈಸ್ತಮತದ ಪ್ರಚಾರದಿಂದಾಗಿ ಮೂಲದಲ್ಲಿ ಬದಲಾಗತೊಡಗಿದ ರೋಮ್ ಸಂಸ್ಕೃತಿಯ ಮೇಲೆ ಬೀಳತೊಡಗಿತು. ಜರ್ಮನರ ಅಥವಾ ಟಿಟಾನ್‌ರ ಮೂಲಸ್ಥಾನವು ಆಧುನಿಕ ಜರ್ಮನಿಯ ಉತ್ತರ ಭಾಗದಲ್ಲಿರುವ ಬಾಲ್ಟಿಕ್ ತೀರ ಮತ್ತು ಸ್ಕಾಂಡಿನೇವಿಯಾ ಪರ್ಯಾಯ ದ್ವೀಪದ ದಕ್ಷಿಣ ಭಾಗದ ಸಮುದ್ರತೀರವಿರಬಹುದೆಂದು ನಿರ್ಧರಿಸಲಾಗಿದೆ. ಅವರ ಜನಸಂಖ್ಯೆ ವೃದ್ಧಿಗೊಂಡಂತೆ ನಿಧಾನವಾಗಿ ಪಶ್ಚಿಮದಲ್ಲಿ ಉತ್ತರ ಸಮುದ್ರದವರೆಗೆ, ದಕ್ಷಿಣ, ಆಗ್ನೇಯ ಹಾಗೂ ನೈಋತ್ಯದಲ್ಲಿ ರೈನ್ ಮತ್ತು ದನುಬೆ ನದಿಯವರೆಗೆ ಪ್ರಸರಿಸಿದರು. ಅವರು ಜೂಲಿಯಸ್ ಸೀಜರನ ಕಾಲದಲ್ಲಿ ರೈನ್‌ನ ಉತ್ತರಕ್ಕಿರುವ ಎಲ್ಲಾ ಭೂ ಭಾಗಗಳನ್ನು ಗೆದ್ದುಕೊಂಡರು. ರೋಮನ್ ವ್ಯಾಪಾರದೊಡನೆ ಅವರಿಗಿದ್ದ ಸಂಬಂಧದಿಂದ ಅವರಿಗೆ ಉತ್ತಮವಾದ ಪರಿಕರಗಳು, ಆಯುಧಗಳು ದೊರೆತ ಕಾರಣ ಜೀವನ ನಿರ್ವಹಣೆ ಸುಲಭವಾಗಿ ಜನಸಂಖ್ಯೆ ವೇಗವಾಗಿ ವೃದ್ದಿಸಲು ಕಾರಣವಾಯಿತು. ಸಾಮ್ರಾಜ್ಯದ ಗಡಿಯಾಚೆಗೆ ಜನಸಂಖ್ಯೆಯ ಒತ್ತಡ ಜಾಸ್ತಿಯಾದಂತೆ ಜರ್ಮನ್ನರು ರೋಮಿನೊಳಗಡೆ ಬಂದರಲ್ಲದೆ ಅಲ್ಲಿಯೆ ವೃತ್ತಿನಿರತರಾದರು. ಕಾನ್‌ಸ್ಟಾಂಟ್‌ಟೈನ್‌ನ ವೇಳೆಗೆ ಬರ್ಬರ ಜನಾಂಗಗಳ ಸಂಖ್ಯೆ ಸೈನ್ಯದಲ್ಲಿ ಜಾಸ್ತಿಯಾಯಿತ್ತಲ್ಲದೆ ಮುಂದಿನ ಎರಡು ಶತಮಾನಗಳಲ್ಲಿ ಮುಖ್ಯವಾಗಿ ಪಶ್ಚಿಮದಲ್ಲಿ ಸಾಮ್ರಾಜ್ಯದ ಸೈನ್ಯದಲ್ಲಿ ಹಾಗೂ ಅಧಿಕಾರಿಗಳ ಮಟ್ಟದಲ್ಲಿ ಹೆಚ್ಚಿನವರು ಜರ್ಮನ್ನರಾಗಿದ್ದರು. ಶಾಂತರೀತಿಯಲ್ಲಿ ಕೃಷಿಕರಾಗಿ ಸಾಮ್ರಾಜ್ಯಕ್ಕೆ ಬಂದವರಲ್ಲಿ ಕೆಲವರಿಗೆ ರಾಜ್ಯವೇ ಭೂಮಿಯನ್ನು ನೀಡಿತು. ಮತ್ತೆ ಕೆಲವರು ಬೃಹತ್ ಖಾಸಗಿ ಎಸ್ಟೇಟ್‌ಗಳಲ್ಲಿ ಗೇಣಿಯಾಳುಗಳಾಗಿ ಸೇರಿಕೊಂಡರು. ಇದರಿಂದಾಗಿ ಅರ್ಧಗುಲಾಮರಾದ ಕೃಷಿ ಕೆಲಸಗಾರರ ಸಂಖ್ಯೆ ವೃದ್ಧಿಯಾಯಿತು. ಇನ್ನು ಕೆಲವರು ಬುಡಕಟ್ಟು ಗುಂಪುಗಳಾಗಿ ಮಿತ್ರರಾಗಿ (ಫೊಡೆರಾಟಿ) ಪ್ರವೇಶಿಸಿದಾಗ ಅವರಿಗೂ ಭೂಮಿಯನ್ನು ಕೊಡಲಾಯಿತು ಹಾಗೂ ಭವಿಷ್ಯದ ದಾಳಿಗಳನ್ನು ಹಿಮ್ಮೆಟ್ಟಿಸುವುದರಲ್ಲಿ ಅವರು ಸಹಾಯ ಮಾಡಬೇಕೆಂಬ ಷರತ್ತನ್ನು ವಿಧಿಸಲಾಯಿತು. ಬರ್ಬರ ಜನಾಂಗದ ವಲಸೆ ರೋಮನ್ ಸಂಸ್ಕೃತಿಯ ಸಾಮಾನ್ಯಮಟ್ಟವನ್ನು ಕೆಳತಂದರೂ ಬೃಹತ್ ದಾಳಿಗಳಿಂದುಂಟಾಗುವ ಆಘಾತವನ್ನು ಕಡಿಮೆ ಮಾಡಿತು. ಏಕೆಂದರೆ ಈ ವೇಳೆಗಾಗಲೇ ರೋಮನ್ ಪ್ರಾಂತ್ಯಗಳು ಜರ್ಮನ್ ಪದ್ಧತಿಗಳ ಪರಿಚಯವನ್ನು ಮಾಡಿಕೊಂಡಿತ್ತು. ಅಲ್ಲದೆ ಸ್ವಲ್ಪಮಟ್ಟಿಗೆ ರೋಮನೀಕರಣ ಗೊಂಡು ನೆಲೆನಿಂತ ತಮ್ಮದೇ ಜನಾಂಗಗಳನ್ನು ದಾಳಿಕೋರರು ಕಂಡಾಗ ದಾಳಿಗಳ ಹಾಗೂ ಲೂಟಿಯ ತೀವ್ರತೆಯನ್ನು ಕಡಿಮೆ ಮಾಡಿದರು.

ನಾಲ್ಕನೆಯ ಶತಮಾನದಲ್ಲಿ ಕಂಡುಬರುವ ಜರ್ಮನ್ ಬರ್ಬರ ಜನಾಂಗಗಳಲ್ಲಿ ಮುಖ್ಯವಾದುವುವೆಂದರೆ ಫ್ರಾಂಕರು, ಅಲಮನ್ನರು, ಸ್ಯಾಕ್ಸನ್ನ್‌ರು, ಆಂಗ್ಲರು, ಜೂಟರು, ಬರ್ಗುಡಿಯನ್ನರು, ವಂಡಾಲರು, ಲೊಂಬಾರ್ಡರು, ಗೋಥರು-ವಿಸಿಗೋಥರು (ಪಶ್ಚಿಮ ಗೋಥರು) ಹಾಗೂ ಓಸ್ಟ್ರಗೋಥರು (ಪೂರ್ವಗೋಥರು) ಮುಂತಾದವರು. ಕ್ರೈಸ್ತಮತದ ಪ್ರಭಾವಕ್ಕೊಳಗಾದವರು ಇವರಲ್ಲಿ ಕೆಲವರು, ಮುಖ್ಯವಾಗಿ ವಿಸಿಗೋಥರು.

ವಿಸಿಗೋಥರು ನಾಲ್ಕನೆಯ ಶತಮಾನದ ಕೊನೆಯ ಭಾಗದಲ್ಲಿ ರೋಮ್ ಸಾಮ್ರಾಜ್ಯದ ಮೇಲೆ ದಾಳಿಯನ್ನು ಪ್ರಾರಂಭಿಸಿದರು. ಏಷ್ಯಾದ ಬರ್ಬರ ಜನಾಂಗಗಳಲ್ಲೊಂದಾದ ಹೂಣರು ಪಶ್ಚಿಮದ ಕಡೆ ನುಗ್ಗಿದಾಗ ಪೂರ್ವದ ಓಸ್ಟ್ರಗೋಥರು ಸೋತುಹೋದರು. ಮುಂದುವರಿದ ಹೂಣರ ದಾಳಿಯ ಬೆದರಿಕೆಯು ವಿಸಿಗೋಥರನ್ನು ಬಾಧಿಸಿದಾಗ ಅವರು ರೋಮನ್ ಸಾಮ್ರಾಜ್ಯದಲ್ಲಿ ಆಶ್ರಯ ಪಡೆಯಲು ನಿರ್ಧರಿಸಿ ರೋಮನ್ನರಿಂದ ಅನುಮತಿ ಯನ್ನು ಬೇಡಿದಾಗ ಈಗಾಗಲೆ ದುರ್ಬಲರಾಗಿದ್ದ ರೋಮನ್ನರಿಗೆ ನಿರಾಕರಿಸಲು ಸಾಧ್ಯ ವಾಗಲಿಲ್ಲ. ಆದರೆ ಒಳನುಗ್ಗಿದ ವಿಸಿಗೋಥರನ್ನು ರೋಮನ್ನರು ನೆಲೆನಿಲ್ಲಿಸುತ್ತಿದ್ದಂತಹ ಸಂದರ್ಭದಲ್ಲಿ ಆ ಶೋಷಣೆಯಿಂದ ರೋಷಗೊಂಡ ವಿಸಿಗೋಥರು ದಂಗೆ ಎಂದು ಸೂರೆಗೆಯ್ಯಲು ಪ್ರಾರಂಭಿಸಿದರಲ್ಲದೆ ಪೂರ್ವ ರೋಮ್ ಸಾಮ್ರಾಜ್ಯದ ದೊರೆ ವಲೇನ್ಸ್ ನನ್ನು ಹಾಗೂ ಅವರ ಸೈನ್ಯದ ಮೂರನೆಯ ಎರಡು ಭಾಗವನ್ನು ಸಂಹರಿಸಿದರು. ಈ ರೀತಿ ಇತಿಹಾಸದಲ್ಲಿ ಮೊದಲಬಾರಿಗೆ ಅತಿಥಿಗಳಾಗಿ ಬಂದ ಬರ್ಬರರು ಹೆಚ್ಚು ಕಡಿಮೆ ಅಜೇಯರಾಗಿದ್ದ ರೋಮನ್ ಸೈನ್ಯವನ್ನು ನಾಶಮಾಡಿದರು.

ಮುಂದೆ ಪೂರ್ವದ ಸಾಮ್ರಾಟನಾದ ಥಿಯೋಡೊಸಿಯಸನ ಕಾಲದಲ್ಲಿ ಸ್ವಲ್ಪಮಟ್ಟಿಗಿನ ಶಾಂತಿ ಇದ್ದರೂ ಅವನ ನಂತರ ರೋಮನ್ ಸಾಮ್ರಾಜ್ಯವು ಗೊಂದಲದ ಸುಳಿಗೆ ಸಿಕ್ಕಿತು. ವಿಸಿಗೋಥರು ತಮ್ಮ ನಾಯಕ ಅಲಾರಿಕ್‌ನ ನಾಯಕತ್ವದಲ್ಲಿ ಪೂರ್ವ ರೋಮನ್ ಸಾಮ್ರಾಜ್ಯದಲ್ಲಿ ಗಲಭೆ ಎಬ್ಬಿಸಲು ಪ್ರಾರಂಭಿಸಿ ಪಶ್ಚಿಮದತ್ತ ಚಲಿಸಿ ಇಟಲಿಯ ಮೇಲೆ ದಾಳಿನಡೆಸಿದರು ಹಾಗೂ ಸ್ವಲ್ಪ ಕಾಲದಲ್ಲಿ ಅಂದರೆ ಕ್ರಿ.ಶ.೪೧೦ರಲ್ಲಿ ರೋಮ್ ನಗರವನ್ನು ಮುತ್ತಿಗೆ ಹಾಕಿ ಅದನ್ನು ಸಂಪೂರ್ಣ ಸುಲಿಗೆ ಮಾಡಿದರು. ಮತ್ತೊಮ್ಮೆ ರೋಮ್ ಸಾಮ್ರಾಜ್ಯದಲ್ಲಿ ಭೀತಿಯ ಅಲೆ ಸೃಷ್ಠಿಯಾಯಿತು. ಹಲವಾರು ವರ್ಷಗಳಿಂದ ರೋಮ್ ನಗರವು ಸಾಮ್ರಾಜ್ಯದ ನಿಜವಾದ ರಾಜಧಾನಿಯಾಗಿರದಿದ್ದರೂ ಅದು ಸಾಮ್ರಾಜ್ಯದ ಚೆನ್ಹೆಯಾಗಿತ್ತು. ಆದ್ದರಿಂದ ರೋಮಿನ ಪತನ ಸಾಮ್ರಾಜ್ಯದ ಪ್ರತಿಷ್ಠೆಗೆ ಬಿದ್ದ ದೊಡ್ಡ ಹೊಡೆತವಾಗಿತ್ತು(ಪ್ರಾಚೀನ ಧರ್ಮಗಳನ್ನು ಹಾಗೂ ದೇವತೆಗಳನ್ನು ಬಿಟ್ಟು, ಕ್ರೈಸ್ತ ಪಂಥವನ್ನು ಅಪ್ಪಿಕೊಂಡಿದ್ದೆ ರೋಮಿನ ಮೇಲೆ ದಾಳಿ ನಡೆಯಲು ಕಾರಣ ವಾಯಿತು ಎಂಬ ನಂಬಿಕೆ ಹರಡತೊಡಗಿತು. ಸೈಂಟ್ ಆಗಸ್ಟಿನ್‌ನನ್ನು ತನ್ನ ಪುಸ್ತಕ 'ದೇವರನಗರ'ದಲ್ಲಿ ಮೇಲಿನ ಆರೋಪವನ್ನು ತಳ್ಳಿಹಾಕಿ ಕ್ರೈಸ್ತಮತವನ್ನು ಬಲವಾಗಿ ಸಮರ್ಥಿಸಿಕೊಳ್ಳುವುದನ್ನು ಕಾಣಬಹುದು).

ಅಲಾರಿಕ್‌ನ ಮರಣನಂತರ ವಿಸಿಗೋಥರು ಗಾಲ್ (ಫ್ರಾನ್ಸ್) ಪ್ರದೇಶಕ್ಕೆ ಮುಂದುವರಿ ದರಲ್ಲದೆ ಸ್ಪೇಯಿನ್‌ನಲ್ಲಿದ್ದ ವಂಡಾಲರನ್ನು, ಸಾಮ್ರಾಜ್ಯದ ಮಿತ್ರರಾಗಿ ಸೋಲಿಸಿದರು. ಗಾಲ್‌ನಲ್ಲಿ ವಿಸಿಗೋಥರ ರಾಜ್ಯವು ಮುಂದೆ ಆರನೆಯ ಶತಮಾನದಲ್ಲಿ ಫ್ರಾಂಕರು ಬರುವವರೆಗೂ ಮುಂದುವರಿಯಿತು. ಮತ್ತು ಸ್ಪೇಯಿನ್‌ನಲ್ಲಿ ಮಹಮ್ಮದಿಯರು ಬರುವವರೆಗೆ ಮುಂದುವರಿಯಿತು.

ವಂಡಾಲರು ಪೂರ್ವ ಜರ್ಮನಿಯ ಕಡೆಯಿಂದ ಕ್ರಿ.ಶ.೪೦೯ರಲ್ಲಿ ಸ್ಪೇಯಿನ್‌ಗೆ ನುಗ್ಗಿ ದಾಗ ರೋಮನ್ನರ ಹಾಗೂ ವಿಸಿಗೋಥರ ವಿರೋಧದಿಂದಾಗಿ ಅಲ್ಲಿ ನೆಲೆ ನಿಲ್ಲಲಾಗದೆ, ಉತ್ತರ ಆಫ್ರಿಕದ ಕಡೆ ಪ್ರಯಾಣಿಸಿ ಹಲವು ಪಟ್ಟಣಗಳನ್ನು ಲೂಟಿಗೈದು, ಕಾರ್ಥೇಜನ್ನು ವಶಪಡಿಸಿಕೊಂಡರು. ಇದರಿಂದಾಗಿ ರೋಮನ್ ಸಾಮ್ರಾಜ್ಯವು ಉತ್ತರ ಆಫ್ರಿಕಾದ ತನ್ನ ಪ್ರಾಂತ್ಯಗಳನ್ನು ಅವರಿಗೆ ಬಿಟ್ಟುಕೊಡಬೇಕಾಯಿತು. ನೆಲೆನಿಂತ ವಂಡಾಲರು ಕಾರ್ಥೇಜ್ ಕೇಂದ್ರದಿಂದ ಮೆಡಿಟರೇನಿಯನ್ ತೀರದಲ್ಲಿ ರೋಮನ್ ವ್ಯಾಪಾರವನ್ನು, ಬಂದರು ನಗರಗಳನ್ನು ಕೊಳ್ಳೆ ಹೊಡೆಯ ತೊಡಗಿದರು. ಈ ರೀತಿಯ ವ್ಯವಸ್ಥಿತ ದರೋಡೆಯು ಸಾಮ್ರಾಜ್ಯದಲ್ಲಿ ಕುಸಿಯುತ್ತಿದ್ದ ವ್ಯಾಪಾರಕ್ಕೆ ಮಾರಣಾಂತಿಕ ಹೊಡೆತವನ್ನು ನೀಡಿತು. ಅಲ್ಲದೆ ಆಫ್ರಿಕದಿಂದ ಬರುತ್ತಿದ್ದ ಕಾಳು ಹಾಗೂ ತೆರಿಗೆಗಳು ನಿಂತು ಹೋದ ಕಾರಣ ಮೊದಲೇ ದುರ್ಬಲವಾಗಿದ್ದ ಸಾಮ್ರಾಜ್ಯದ ಖಜಾನೆಯು ಬರಿದಾಗತೊಡಗಿತು. ವಂಡಾಲರ ರಾಜ್ಯವು ಕ್ರಿ.ಶ.೫೩೪ರವರೆಗೆ ಸುಮಾರು ನೂರು ವರ್ಷಗಳ ಕಾಲ ಅಸ್ತಿತ್ವದಲ್ಲಿದ್ದು ಜಸ್ಟಿನಿಯನ್‌ನ ಸೈನ್ಯದಿಂದ ನಾಶವಾಯಿತು.

ಸಾಮ್ರಾಜ್ಯದಲ್ಲಿ ಈ ವೇಳೆಗೆ ಪೂರ್ವದಲ್ಲಿ ಹೂಣರ ದಾಳಿಯ ಸಾಧ್ಯತೆ ಹೆಚ್ಚಾಗ ತೊಡಗಿತು. ಅವರ ದೊರೆ ಅಟ್ಟಿಲನ ನಾಯಕತ್ವದಲ್ಲಿ ಕ್ರಿ.ಶ.೪೫೧ರಲ್ಲಿ ಹೂಣರು ಗಾಲ್‌ನ ಮೇಲೆ ದಾಳಿ ನಡೆಸಿದರು. ಇದು ಪಶ್ಚಿಮದಲ್ಲಿ ಭೀತಿಯ ಅಲೆಯನ್ನೆಬ್ಬಿಸಿತು. ಅಟ್ಟಿಲನ ದಾಳಿಯು, ರೋಮನ್ನರು ಹಾಗೂ ಜರ್ಮನ್ ಬರ್ಬರರು ಸಂಘಟಿತರಾಗಲು ಪ್ರೇರೇಪಿಸಿತ್ತಲ್ಲದೆ, ಅಟ್ಟಿಲನನ್ನು ಹಿಮ್ಮೆಟ್ಟುವಂತೆ ಮಾಡಿತು. ಈ ಸಂಘಟಿತ-ಪ್ರತಿರೋಧದಲ್ಲಿ ರೋಮ್ ಸಾಮ್ರಾಜ್ಯದ ಪರವಾಗಿ ರೋಮನ್ನರ ಮಿತ್ರರು, ಬರ್ಗು ಡಿಯನ್ನರು, ವಿಸಿಗೋಥರು

ಪಾಲ್ಗೊಂಡಿದ್ದರು. ಗಾಲ್‌ನಿಂದ ಹಿಮ್ಮೆಟ್ಟಿದ ಅಟ್ಟಿಲ, ಉತ್ತರ ಇಟಲಿಯನ್ನು ಸೂರೆಗೈದನು. ಆದರೆ, ಅಸಹಾಯಕ ರೋಮ್ ನಗರದ ಮೇಲೆ ದಾಳಿ ಮಾಡದೆ ರಾಜಧಾನಿ ಹಂಗೇರಿಗೆ ಹಿಂದಿರುಗಿ ಅಲ್ಲಿಯೇ ಕ್ರಿ.ಶ.೪೫೩ರಲ್ಲಿ ಮರಣಹೊಂದಿದನು.

ಅಟ್ಟಿಲನ ಕಣ್ಮರೆಯಿಂದ ರೋಮನ್ನರು ನೆಮ್ಮದಿಯ ನಿಟ್ಟುಸಿರು ಬಿಟ್ಟರೂ ಆ ನೆಮ್ಮದಿ ಬಹಳ ದಿನಗಳುಳಿಯಲಿಲ್ಲ. ರೋಮನ್ ರಾಜಮನೆತನದಲ್ಲಿ ಉಂಟಾದ ರಾಜಕೀಯ ಗೊಂದಲವು ಉತ್ತರ ಆಫ್ರಿಕಾದ ವಂಡಾಲರನ್ನು ರೋಮಿನ ಮೇಲೆ ದಾಳಿಯಿಡುವಂತೆ ಪ್ರೇರೇಪಿಸಿತು. ವಂಡಾಲರು ಕಾಥೇಜ್‌ನಿಂದ ಸಮುದ್ರದಾಟಿ ಯಾವುದೇ ಪ್ರತಿರೋಧವಿಲ್ಲದೆ ರೋಮ್ ನಗರವನ್ನು ಪ್ರವೇಶಿಸಿ ಅದನ್ನು ಎರಡು ವಾರಗಳ ಕಾಲ ಲೂಟಿ ಮಾಡಿದರು. ಕ್ರೈಸ್ತ ಗುರು ಪೋಪ್ ಒಂದೆನೆಯ ಲಿಯೋನ ಮಧ್ಯ ಪ್ರವೇಶ ದಿಂದಾಗಿ ರೋಮ್ ನಗರದ ನಾಗರಿಕರ ಪ್ರಾಣಕ್ಕೆ ಹಾನಿಯುಂಟಾಗಲಿಲ್ಲ.

ಪಾಶ್ಚಿಮಾತ್ಯ ರೋಮ್ ಸಾಮ್ರಾಜ್ಯ ಈಗ ಪತನದತ್ತ ದಾಪುಗಾಲನಿಕ್ಕತೊಡಗಿತು. ಪ್ರಾಂತ್ಯಗಳಲ್ಲಿ ಉಳಿದಿದ್ದ ರೋಮನ್ ಆಡಳಿತದ ಕುರುಹುಗಳು ಮಾಯವಾಗತೊಡಗಿದವು. ಇಟಲಿಯ ನಿಜವಾದ ಆಡಳಿತಗಾರರಾಗಿ ಬರ್ಬರ ಸೈನ್ಯಾಧಿಕಾರಿಗಳು ಮೇಲೇರತೊಡಗಿದರು. ಬರ್ಬರ ಸೈನ್ಯಾಧಿಕಾರಿಗಳಾಗಿದ್ದ ಸ್ಟಿಲಿಕೋ ಹಾಗೂ ಏಟಿಯಸ್‌ರಿಂದ ಸ್ಫೂರ್ತಿ ಪಡೆದು ಆಳತೊಡಗಿದ ಇವರು, ತಮಗಿಷ್ಟ ಬಂದಂತೆ ಸಾಮ್ರಾಟರನ್ನು ಸೃಷ್ಟಿಸಿ ಬೇಡವೆನಿಸಿದಾಗ ಕಿತ್ತೆಸೆಯತೊಡಗಿದರು. ಅಂತಿಮವಾಗಿ ಕ್ರಿ.ಶ.೪೭೬ರಲ್ಲಿ ದನುಬೆಯ ಉತ್ತರದ ಬರ್ಬರರ ಸೈನ್ಯದ ನಾಯಕನಾಗಿದ್ದ ಒಡವಕಾರ್‌ನು ನಾಮಮಾತ್ರ ಸಾಮ್ರಾಟನಾಗಿದ್ದ ಪಶ್ಚಿಮ ರೋಮ್ ರಾಜ್ಯದ ದೊರೆ ರೊಮ್ಯುಲಸ್ ಅಗಸ್ಟಲಸ್‌ನನ್ನು ಕಿತ್ತೆಸೆದು ತಾನೇ ಸರ್ಕಾರ ನಡೆಸತೊಡಗಿದನು. ಆದರೆ ಹೆಸರಿಗೆ ಮಾತ್ರ ಪೂರ್ವ ಸಾಮ್ರಾಜ್ಯದ ದೊರೆಯ ಸಾರ್ವಭೌಮತ್ವವನ್ನು ಒಪ್ಪಿಕೊಂಡನು (ಕಾನ್‌ಸ್ಟಾಂಟಟೈನ್‌ನು ೩೦೭-೩೩೭). ರೋಮ್ ಸಾಮ್ರಾಜ್ಯದ ಪೂರ್ವ ಪ್ರಾಂತ್ಯಗಳ ಮೇಲೆ ಯಶಸ್ವಿಯಾಗಿ ಹತೋಟಿಯನ್ನಿಟ್ಟುಕೊಳ್ಳುವ ಉದ್ದೇಶದಿಂದ ಪ್ರಾಚೀನ ಗ್ರೀಕ್ ನಗರ ಬೈಜಾಂಟಿಯಮ್‌ನ್ನು ಇನ್ನೊಂದು ರಾಜಧಾನಿಯನ್ನಾಗಿ ಮಾಡಿದನು. ಅವನ ಮರಣಾನಂತರ ಬೈಜಾಂಟಿಯಮ್ ಕಾನ್ ಸ್ಟಾಂಟಿನೋಪಲ್ ಎಂದು ಕರೆಯಲ್ಪಟ್ಟು ಪೂರ್ವ ರೋಮ್ ಸಾಮ್ರಾಜ್ಯದ ರಾಜಧಾನಿ ಯಾಯಿತು. ವಾಸ್ತವಿಕವಾಗಿ ಒಡವಕಾರ್‌ನು ಒಬ್ಬ ಸ್ವತಂತ್ರ್ಯ ಆಡಳಿತಗಾರನಾಗಿದ್ದನು. ಈ ರೀತಿ ಪಶ್ಚಿಮದಲ್ಲಿ ರೋಮ್ ಸಾಮ್ರಾಜ್ಯ ಅಸ್ತಂಗತವಾಯಿತು. ರೊಮ್ಯುಲಸ್‌ನ ಕಿತ್ತೆಸೆಯುವಿಕೆ ರೋಮ್ ಸಾಮ್ರಾಜ್ಯದ ಪತನವನ್ನು ಸೂಚಿಸುತ್ತದೆ.

ಯೂರೋಪಿನ ಬೇರೆ ಕಡೆಗಳಲ್ಲಿ ಇದೇ ವೇಳೆಗೆ ಕೆಲವು ಬದಲಾವಣೆಗಳಾದವು. ಹೂಣರ ದಾಳಿಯ ಬೆದರಿಕೆ ಕಡಿಮೆಯಾದಂತೆ ಪೂರ್ವದಲ್ಲಿದ್ದ ಒಸ್ಟ್ರೊಗೋಥರು ಅವರ ನಾಯಕ ಥಿಯೋಡೋರಿಕ್‌ನ ನಾಯಕತ್ವದಲ್ಲಿ ರೋಮಿನ ಮೇಲೆ ದಾಳಿ ಮಾಡಿದರು ಮತ್ತು ರೋಮಿನ ನಾಯಕ ಒಡವಕಾರನನ್ನು ಕೊಂದು ಕ್ರಿ.ಶ.೪೯೩ರಲ್ಲಿ ಇಟಲಿಯ ಮೇಲೆ ತಮ್ಮ ಪ್ರಭುತ್ವವನ್ನು ಸಾಧಿಸಿದರು. ಥಿಯೋಡೋರಿಕ್‌ನು ಸುಮಾರು ಮೂವತ್ತಮೂರು ವರ್ಷಗಳ ಕಾಲ ಇಟಲಿಗೆ (ಪಶ್ಚಿಮ ರೋಮ್ ಸಾಮ್ರಾಜ್ಯಕ್ಕೆ) ನ್ಯಾಯಪರ ಹಾಗೂ ಸೌಮ್ಯ ಸರ್ಕಾರವನ್ನು ಒದಗಿಸಿದನು. ಅವನ ನಾಯಕತ್ವದಲ್ಲಿ ಶಾಂತಿ, ಭದ್ರತೆ ಹಾಗೂ ಆರ್ಥಿಕ ಪುನರುಜ್ಜೀವನವನ್ನು ರೋಮ್ ಕಂಡಿತು. ಓಸ್ಟ್ರೊಗೋಥರ ರಾಜ್ಯವು ಮುಂದೆ ಜಸ್ಟಿನಿಯನ್‌ನ ದಾಳಿಯಿಂದ ನಾಶವಾಯಿತು.

ಇದೇ ವೇಳೆಗೆ, ಬಹಳಷ್ಟು ಸಮಯ, ಯೂರೋಪಿನ ಮುಖ್ಯವಾಹಿನಿಯಿಂದ ದೂರ ವಿದ್ದ ಬ್ರಿಟನ್‌ನಿಂದ ರೋಮನ್ನರು ಕ್ರಿ.ಶ.ಐದನೆಯ ಶತಮಾನದಲ್ಲಿ ತಮ್ಮ ಸೈನ್ಯವನ್ನು ಗಾಲ್ ಹಾಗೂ ಇಟಲಿಯ ರಕ್ಷಣೆಗಾಗಿ ವಾಪಾಸು ಕರೆಸಿಕೊಂಡಾಗ ಬ್ರಿಟನ್ನರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕಾಯಿತು. ಮುಂದಿನ ಎರಡು ಶತಮಾನಗಳಲ್ಲಿ ಈ ದ್ವೀಪವು ರೋಮನ್ನರ ಅರಿವಿಗೆ ನಿಲುಕದಂತೆ, ಉತ್ತರ ಪೂರ್ವ ಜರ್ಮನ್ ರಾಷ್ಟ್ರಗಳ ಅಂದರೆ ಜೂಟರು, ಆಂಗ್ಲರು ಹಾಗೂ ಸ್ಯಾಕ್ಸನ್ನರ ದಾಳಿಗೊಳಗಾಗಿ ಇಂಗ್ಲಿಷ್ ಜನರ ಅಸ್ತಿತ್ವಕ್ಕೆ ಅಡಿಗಲ್ಲು ಹಾಕಲ್ಪಟ್ಟಿತು. ಆದರೆ ಅದುವರೆಗೆ ರೋಮನೀಕರಣಕ್ಕೊಳಗಾಗಿದ್ದ ಸೆಲ್ಟರು ಒಂದೊ ನಾಶವಾದರು ಇಲ್ಲವೆ ವೇಲ್ಸ್ ಮತ್ತು ಕಾರ್ನ್‌ವಾಲ್‌ಗೆ ಓಡಿಸಲ್ಪಟ್ಟರು. ಅವರ ಪ್ರಭಾವ ಯಾವುದೇ ರೀತಿಯಲ್ಲಿ ದಾಳಿಕೋರರ ಧರ್ಮ, ಭಾಷೆ ಅಥವಾ ಸ್ವಭಾವಗಳ ಮೇಲೆ ಬೀಳಲಿಲ್ಲ. ಈ ರೀತಿ ಇಂಗ್ಲೆಂಡಿನ ಮೇಲಿನ ಬರ್ಬರರ ದಾಳಿ ಇತರರ ದಾಳಿ ಗಳಿಗಿಂತ ಹೆಚ್ಚು ಯಶಸ್ವಿಯಾಯಿತು.

ಫ್ರಾಂಕರು ಬರ್ಬರ ಜನಾಂಗಗಳಲ್ಲಿ ಅತ್ಯಂತ ಪ್ರಮುಖರಾದವರು. ಐದನೆಯ ಶತಮಾನದ ಕೊನೆಯ ವರ್ಷಗಳಲ್ಲಿ ಒಗ್ಗೂಡಿದ ಫ್ರಾಂಕ್ ಬುಡಕಟ್ಟು ಜನಾಂಗಗಳು ಗಾಲ್‌ನ ಮೇಲೆ ದಾಳಿ ಪ್ರಾರಂಭಿಸಿ ಆರನೆಯ ಶತಮಾನದ ಆರಂಭದಲ್ಲಿ ಮುಕ್ತಾಯಗೊಳಿಸಿದವು.

**ಉಪಸಂಹಾರ**

ಐದನೆಯ ಶತಮಾನದ ಕೊನೆಯ ಭಾಗದಲ್ಲಿ ಪಾಶ್ಚಿಮಾತ್ಯ ಯುರೋಪಿನಲ್ಲಿ ರೋಮನ್ ಸರ್ಕಾರವು ಸಂಪೂರ್ಣವಾಗಿ ಮಾಯವಾಯಿತು ಮತ್ತು ಅದರ ಸ್ಥಾನವನ್ನು ಬೇರೆ ಬೇರೆ ಬರ್ಬರ ರಾಜ್ಯಗಳು ಆಕ್ರಮಿಸಿದವು. ಒಸ್ಟ್ರೋಗೋಥರು ಇಟಲಿಯನ್ನು, ವಂಡಾಲರು ಉತ್ತರ ಆಫ್ರಿಕವನ್ನು, ಅಂಗ್ಲೋ ಸ್ಯಾಕ್ಸನ್ನರು ಬ್ರಿಟನ್‌ನನ್ನು, ವಿಸಿಗೋಥರು ನೈಋುತ್ಯ ಗಾಲ್ ಹಾಗೂ ಸ್ಪೇಯಿನ್‌ನ್ನು, ಬರ್ಗುಡಿಯನ್ನರು ಆಗ್ನೆಯ ಗಾಲನ್ನೂ, ಫ್ರಾಂಕರು ಉಳಿದ ಗಾಲ್ ಪ್ರದೇಶವನ್ನು ಆಳತೊಡಗಿದರು. ಇವರಲ್ಲಿ ಕೇವಲ ಫ್ರಾಂಕರು ಹಾಗೂ ಆಂಗ್ಲೊ-ಸ್ಯಾಕ್ಸನ್‌ರು ಮಾತ್ರ ತಮ್ಮ ಪ್ರದೇಶಗಳ ಮೇಲೆ ಹತೋಟಿಯನ್ನುಳಿಸಿ ಕೊಂಡರು. ಉಳಿದವರು ಕ್ರಮೇಣವಾಗಿ ತಮ್ಮ ರಾಜಕೀಯ ಅನನ್ಯತೆಯನ್ನು, ಕೆಲವು ಬಾರಿ ಜನಾಂಗೀಯ ಪ್ರತ್ಯೇಕತೆಯನ್ನು ಕೂಡ ಕಳೆದುಕೊಂಡು ತಾವು ಯಾರ ಮಧ್ಯೆ ವಾಸಿಸುತ್ತಿದ್ದರೊ ಅವರಲ್ಲಿ ಕರಗಿ ಹೋದರು.

ಕ್ರಿ.ಶ.೪೭೬ರಲ್ಲಿ ನಡೆದ ಪಶ್ಚಿಮ ರೋಮ್ ಸಾಮ್ರಾಟನ ಉಚ್ಛಾಟನೆಯನ್ನು ಸಾಮ್ರಾಜ್ಯದ ಪತನದೊಡನೆ ಸಮೀಕರಿಸಲಾಗಿದೆ. ಆದರೆ ಇತಿಹಾಸಕಾರರ ಅಭಿಪ್ರಾಯ ಅರ್ಥಹೀನವಾದುದು. ಏಕೆಂದರೆ ಪಶ್ಚಿಮದಲ್ಲಿ ಪತನವಾಗಲು ಏನೂ ಉಳಿದಿರಲಿಲ್ಲ ಮತ್ತು ಪೂರ್ವದಲ್ಲಿ ಸಾಮ್ರಾಜ್ಯವು ಶಕ್ತಿಶಾಲಿಯಾಗಿ ಉಳಿದು ಬೆಳೆಯಿತು. ಆದರೂ ಲ್ಯಾಟಿನ್ ಮಾತನಾಡುತ್ತಿದ್ದ ಸಾಮ್ರಾಜ್ಯದ ಭಾಗ, ಜರ್ಮನ್ ಆಳ್ವಿಕೆಗೆ ಒಳಪಟ್ಟಾಗ ಇತಿಹಾಸದಲ್ಲಿ ಒಂದು ಮುಖ್ಯ ಘಟ್ಟ ಆರಂಭವಾಯಿತು. ಸರ್ಕಾರ ಮತ್ತು ಕಾನೂನುಗಳ ಮೂಲತತ್ವಗಳು ಲ್ಯಾಟಿನ್ ಪಶ್ಚಿಮದಿಂದ ಬಂದಿತು. ಒಂದು ಸಾಮ್ರಾಜ್ಯ, ಯಾವುದು ಹೆಚ್ಚಾಗಿ ಗ್ರೀಕ್ ಆಗಿತ್ತೊ, ಅದು ರೋಮನ್ ಸಾಮ್ರಾಜ್ಯವಾಗಿರಲು ಸಾಧ್ಯವಿರಲಿಲ್ಲ. ಲ್ಯಾಟಿನ್ನರು ಜರ್ಮನ್ನರ ಆಳ್ವಿಕೆಯಲ್ಲಿ ಬರ್ಬರದ ಸಂಸ್ಕೃತಿಯನ್ನು ಅಳವಡಿಸಿಕೊಂಡರು. ಅದೇ ಪೂರ್ವ ರೋಮನ್ ಸಾಮ್ರಾಜ್ಯದ ಗ್ರೀಕರು ಹೆಚ್ಚುಹೆಚ್ಚು ಏಷ್ಯಾದ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರು. ಹೀಗಾಗಿ ರೋಮನ್ ಪ್ರಪಂಚದ ಎರಡು ಭಾಗಗಳು, ಒಂದರಿಂದ ಇನ್ನೊಂದು ದೂರ ದೂರ ಕೊಚ್ಚಿ ಹೋಗಿ ಪೂರ್ವ ಮತ್ತು ಪಶ್ಚಿಮ ಎಂದು ಎರಡು ಹೋಳಾದವು.

ಹಾಗಾದರೆ, ಸಾಮ್ರಾಜ್ಯದಲ್ಲಿ ಆವಿರ್ಭವಿಸಿದ್ದ ಸಂಸ್ಕೃತಿಯು ಪಶ್ಚಿಮದಲ್ಲಿ ಏಕೆ ನಾಶವಾಯಿತು? ಮತ್ತು ಪೂರ್ವದಲ್ಲೇಕೆ ಉಳಿಯಿತು? ಎನ್ನುವ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಪೂರ್ವ ಸಾಮ್ರಾಜ್ಯವು ಕೂಡ ಒಂದೇ ರೀತಿಯ ಸಾಮಾಜಿಕ ರೋಗಗಳಿಂದ ನರಳುತಿತ್ತು. ಒಟ್ಟಾರೆ ಹೇಳುವುದಾದರೆ, ಪೂರ್ವದ ಸಾಮ್ರಾಜ್ಯಕ್ಕೆ ಭೌಗೋಳಿಕ ಅಂಶಗಳು, ಆರ್ಥಿಕ ಹಾಗೂ ಆಧ್ಯಾತ್ಮಿಕ ಅಂಶಗಳ ನೆರವು, ಪಶ್ಚಿಮಕ್ಕಿಂತ ಹೆಚ್ಚಿತ್ತು. ಪರ್ಶಿಯಾವು ತಟಸ್ಥವಾಗಿದ್ದು, ಏಷ್ಯಾಮೈನರ್, ಸಿರಿಯಾ ಹಾಗೂ ಈಜಿಪ್ಟ್‌ಗಳು ಕಾನ್‌ಸ್ಟಾಂಟಿನೋಪಲ್ ನಿಂದ ರಕ್ಷಿತವಾಗಿದ್ದವು. ಕ್ರೈಸ್ತ ಧರ್ಮದ ಹರಡುವಿಕೆ ಕೂಡ ಸಾಮ್ರಾಜ್ಯವನ್ನು ರಕ್ಷಿಸಿಕೊಳ್ಳಲು ಜನರಲ್ಲಿ ಧಾರ್ಮಿಕ ಕಾಳಜಿಯನ್ನುಂಟು ಮಾಡಿತು.

ಆದರೆ ಪೂರ್ವ ಸಾಮ್ರಾಜ್ಯವು ಬಹಳಷ್ಟು ದಿನ ಬರ್ಬರರ ದಾಳಿಯಿಂದ ತಪ್ಪಿಸಿ ಕೊಳ್ಳಲು ಆಗಲಿಲ್ಲ. ಮುಂದೆ ಅರಬ್ಬರ ಮಹಾದಾಳಿಗಳು ಅದನ್ನು ದುರ್ಬಲ ಗೊಳಿಸಿದವು. ಇಲ್ಲಿದ್ದ ಮೂಲ ಸಮಸ್ಯೆಯೆಂದರೆ ಸಾಮ್ರಾಜ್ಯದ ಬಹಳ ಕಡಿಮೆ ನಾಗರಿಕರು ತಮ್ಮ ಪ್ರಾಚೀನ ನಾಗರಿಕತೆಯು ರಕ್ಷಣೆಗೆ ಅರ್ಹವೆಂದು ಭಾವಿಸಿದ್ದರು. ಹಾಗೆ ನೋಡಿದರೆ ದಾಳಿಕೋರರ ಒಟ್ಟು ಸಂಖ್ಯೆ ಎಂದೂ ರೋಮನ್ನರ ಒಟ್ಟು ಸಂಖ್ಯೆಯನ್ನು ಮೀರಿರಲಿಲ್ಲ. ಅದು ಸಾಧ್ಯವೂ ಇರಲಿಲ್ಲ. ದಾಳಿಕೋರರು ಅಲ್ಪ ಸಂಖ್ಯಾತರಾಗಿದ್ದರು. ಆದುದರಿಂದ ರೋಮ್ ಸಾಮ್ರಾಜ್ಯದ ಪತನ ಕ್ರಿ.ಶ.೪೭೬ರ ಒಂದು ರಾಜಕೀಯ ಉಪಕಥೆಯಲ್ಲ. ಅದು ಬದಲು ನಾಗರಿಕತೆಯ ಇತಿಹಾಸದಲ್ಲಿ ಒಂದು ಭೀಕರ ಬಿಕ್ಕಟ್ಟು ಎನ್ನಬಹುದು.

<u>ಪರಾಮರ್ಶನ ಗ್ರಂಥಗಳು</u>

೧. ಡೆವಿಸ್ ನಾರ್ಮನ್. ೧೯೯೬. **ಯುರೋಪ್ ಎ ಹಿಸ್ಟರಿ,** ಆಕ್ಸ್‌ಫರ್ಡ್.

೨. ಎಡ್ವಡ್ ಗಿಬ್ಬನ್, **ಡಿಕ್ಲೈನ್ ಆ್ಯಂಡ್ ಫಾಲ್ ಆಫ್ ದಿ ರೋಮನ್ ಎಂಪೈರ್,** ಲಂಡನ್.

# ೬. ಮಧ್ಯಯುಗದ ಯುರೋಪ್: ಸಂಸ್ಥೆಗಳು ಹಾಗೂ ಪದ್ಧತಿಗಳ ಬೆಳವಣಿಗೆ (ಕ್ರಿ.ಶ.೮ರಿಂದ ೧೪ರವರೆಗೆ)

ರೋಮನ್ ಸಾಮ್ರಾಜ್ಯ ದುರಂತವಾಗಿ ಕುಸಿದು ಬಿದ್ದ ಸ್ಪಷ್ಟ ಚಿತ್ರವನ್ನು ಎಡ್ವರ್ಡ್ ಗಿಬ್ಬನ್ ಅವರ ಅಮರ ಕೃತಿ "ದಿ ಡಿಕ್ಲೈನ್ ಅಂಡ್ ಫಾಲ್ ಆಫ್ ದಿ ರೋಮನ್ ಎಂಪೈರ್" (ರೋಮನ್ ಸಾಮ್ರಾಜ್ಯದ ಅವನತಿ ಮತ್ತು ಪತನ) ನೀಡುತ್ತದೆ. ಕ್ರಿಸ್ತಶಕ ೫ನೆಯ ಶತಮಾನದಲ್ಲಿಯೇ ರೋಮನ್ ಸಾಮ್ರಾಜ್ಯವನ್ನು ಬರ್ಬರರು ನಾಶಮಾಡಿದ್ದರಾದರೂ ಅದರ ಅವನತಿಗೆ ಕಾರಣಗಳು ವ್ಯವಸ್ಥೆಯಲ್ಲಿ ಅಡಗಿದ್ದವು. ಪ್ರಜಾತಂತ್ರ ಮಾದರಿಯ ವ್ಯವಸ್ಥೆಯಿಂದ ಸಾಮ್ರಾಜ್ಯ ವ್ಯವಸ್ಥೆಗೆ ಬದಲಾಗುವಾಗ ವಂಶಪಾರಂಪರ್ಯವಾಗಿ ಅಧಿಕಾರಕ್ಕೆ ಬರುವ ಪದ್ಧತಿಯನ್ನು ಒಪ್ಪಿಕೊಳ್ಳಲಾಯಿತು. ಈ ವ್ಯವಸ್ಥೆ ಯಶಸ್ವಿಯಾಗಲಿಲ್ಲ. ಈ ವ್ಯವಸ್ಥೆ ಯಶಸ್ವಿಯಾಗದ ಕಾರಣ ನಾಯಕನನ್ನು ಪ್ರಿಟೋರಿಯಾ ಗಾರ್ಡ್ ಅವರಿಂದ ಆಯ್ಕೆ ಮಾಡುವ ಪದ್ಧತಿ ಹುಟ್ಟಿಕೊಂಡಿತು. ಆದರೆ ಇದು ಲಂಚದ ವ್ಯವಸ್ಥೆಗೆ ಅವಕಾಶ ನೀಡಿತು. ಈ ಸಭೆಯ ಸದಸ್ಯರು ಚಕ್ರವರ್ತಿಯನ್ನು ಆಯ್ಕೆ ಮಾಡಲು ಅಪಾರ ಮೊತ್ತದ ಹಣವನ್ನು ಅಭ್ಯರ್ಥಿಗಳಿಂದ ವಸೂಲಿ ಮಾಡಲು ಶುರು ಮಾಡಿದರು. ಇದು ಚಕ್ರಾಧಿಪತ್ಯವನ್ನೇ ಹರಾಜಿಗಿಟ್ಟ ವ್ಯವಸ್ಥೆಯಾಗಿ ಪರಿಣಮಿಸಿತು. ಹೆಚ್ಚಿನ ಹಣ ಯಾರು ಕೊಡುವನೊ ಅವನು ಚಕ್ರವರ್ತಿಯಾಗುತ್ತಿದ್ದನು. ಪ್ರತಿಯಾಗಿ, ಚಕ್ರವರ್ತಿಗಳು ಸಾಮಾನ್ಯ ಜನರಿಂದ ಹಣ ಸುಲಿಗೆ ಮಾಡಿ ಸೈನ್ಯಕ್ಕೆ ಲಂಚ ಕೊಡುತ್ತಿ ದ್ದರು. ಇದರ ಜೊತೆಗೆ ರೋಮನ್ ಸಾಮ್ರಾಜ್ಯ ಎಷ್ಟು ವಿಶಾಲವಾಗಿತ್ತೆಂದರೆ ಒಬ್ಬ ವ್ಯಕ್ತಿಯಿಂದ ಇದನ್ನು ಆಳಲು ಸಾಧ್ಯವಾಗುತ್ತಿರಲಿಲ್ಲ. ಸಾಮಾಜಿಕ ವ್ಯವಸ್ಥೆ ನಾರುತ್ತಿತ್ತು. ಕೆಲವೇ ಜನರು ಐಷಾರಾಮ, ಆಡಂಬರದ ಜೀವನ ನಡೆಸುತ್ತಿದ್ದರು. ಆದರೆ ಸಾವಿರಾರು ಜನ ಬಡತನದಲ್ಲಿ ನರಳುತ್ತಿದ್ದರು. ಕ್ರಿಸ್ತಶಕ ೩ ಮತ್ತು ೪ನೆಯ ಶತಮಾನದ ರೋಮನ್ ಸಾಮ್ರಾಜ್ಯವು ಗುಲಾಮಗಿರಿ ವ್ಯವಸ್ಥೆಯ ಆಧಾರದ ಮೇಲೆ ಮಾತ್ರ ಉಳಿದುಕೊಂಡಿತ್ತು. ಸಾಮಾನ್ಯ ಜನರು ತೆರಿಗೆಗಳನ್ನು ಕೊಡುತ್ತಿದ್ದರು, ಗುಲಾಮರು ಎಲ್ಲ ಕೆಲಸಗಳನ್ನು ಮಾಡುತ್ತಿದ್ದರು. ಬಡತನ ಮತ್ತು ಶ್ರಮಜೀವನದ ಭಾರವನ್ನು ಹೊರಲಾಗದೆ ಇವರೂ ಕೂಡ ರಾಜಕೀಯದಲ್ಲಿ ಆಸಕ್ತಿಯನ್ನು ಕಳೆದುಕೊಂಡರು. ಬರ್ಬರರು ರೋಮನ್ ಸಾಮ್ರಾಜ್ಯವನ್ನು ದಾಳಿ ಮಾಡಿದಾಗ ಸಾಮಾನ್ಯ ಜನರ ವಿರೋಧವಿರಲಿಲ್ಲ. ರೋಮನ್ ಸಾಮ್ರಾಜ್ಯಕ್ಕಾಗಿ ಹೋರಾಡುವುದು ಅರ್ಥವಿಲ್ಲದ ಕೆಲಸ ಎಂದು ಭಾವಿಸಿದ್ದರು. ಕ್ರಿ.ಶ.೪೭೬ರಲ್ಲಿ ಪಶ್ಚಿಮ ಗೋಥ್ಸ್‌ಗೆ ಸೇರಿದ್ದ ಓಡೋಸೆರ್ ಎಂಬುವವನು ರೋಮಿನ ಕಡೆಯ ಚಕ್ರವರ್ತಿಯಾದ ರೋಮಲಸ್ ಅಗಸ್ಟಸ್ ಅನ್ನು ಸೋಲಿಸಿ ತಾನೆ ಚಕ್ರಾಧಿಪತಿ ಎಂದು ಘೋಷಿಸಿದನು. ಪಶ್ಚಿಮ ಗೋಥಿನ ಓಸ್ಟ್ರೋಗೋತ್ ಜನರು ಥಿಯೋಡೋರಿಕ್‌ನ ನಾಯಕತ್ವದಲ್ಲಿ ಇಟಲಿಯನ್ನು ದಾಳಿ ಮಾಡಿ ಓಡೋಸೆರ್‌ನನ್ನು ಕೊಂದು ಕ್ರಿ.ಶ.೪೯೩ರಲ್ಲಿ ಓಷ್ಟ್ರೋಗೋಥಿಕ್ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಫ್ರೆಂಚರು ಗಾಲ್‌ನಲ್ಲಿ ಮತ್ತು ಸಾಕ್ಸನ್ನರು ಬ್ರಿಟನ್ನಿನಲ್ಲಿ ತಮ್ಮದೇ ಆದ ರಾಜ್ಯಗಳನ್ನು ಸ್ಥಾಪಿಸಿಕೊಂಡರು.

ಸ್ಕಿಪಿಯೊ ಆಫ್ರಿಕಾನಸ್, ಮೇರಿಯಸ್, ಸುಳ, ಪಾಂಪೆ, ಜೂಲಿಯಸ್ ಸೀಸರ್, ಅಗಸ್ಟಸ್ ಸೀಸರ್ ಮತ್ತು ಟ್ರೋಜನ್ನರ ಬೆವರಿನ ಶ್ರಮದಿಂದ ನಿರ್ಮಿಸಿದ್ದ ರೋಮನ್ ಸಾಮ್ರಾಜ್ಯವು ಸ್ಲಾವಿಕ್, ಅಟ್ಟಿಲ ಮತ್ತು ಜನ್ಸೆರಿಕ್‌ರಿಂದ ಅಧಃಪತನಗೊಂಡಿತು. ರೋಮನ್ ಸಾಮ್ರಾಜ್ಯದ ಮೇಲೆ ಕಗ್ಗತ್ತಲು ಕವಿಯಿತು ಎಂದು ಹೇಳಲಾಗಿದೆ. ಕ್ರಿ.ಶ. ೫ನೆಯ ಶತಮಾನದಿಂದ ೧೦ನೆಯ ಶತಮಾನದವರೆಗೂ ಪಶ್ಚಿಮ ಯೂರೋಪ್ ಬರ್ಬರ ರಾಜ್ಯಗಳಾಗಿ ವಿಂಗಡಿತವಾದವು. ಹಳೆಯ ರೋಮನ್ ಸಾಮ್ರಾಜ್ಯದ ಕಲಾಕೃತಿಗಳು, ಅಧ್ಯಯನ ಕೇಂದ್ರಗಳು ನಾಶವಾದವು. ವ್ಯಾಪಾರ ಮತ್ತು ವಾಣಿಜ್ಯ ಹಿಂದುಳಿಯಿತು. ರಸ್ತೆಗಳು ಮತ್ತು ಸೇತುವೆಗಳು, ನಾಟಕ ರಂಗಗಳು,

ಮಂದಿರಗಳು ಮತ್ತು ಸ್ನಾನದ ಗೃಹಗಳೂ, ರೋಮನ್ ಸಾಮ್ರಾಜ್ಯದ ತಂತ್ರಜ್ಞಾನ ಮತ್ತು ರೋಮನ್ ಸಾಮ್ರಾಜ್ಯದ ಸಂಕೇತಗಳು ನಾಶ ಹೊಂದಿದವು. ಈಜಿಪ್ಟ, ಬೇಬಿಲೋನಿಯಾ, ಗ್ರೀಕ ಮತ್ತು ರೋಮನ್ನ ರಿಂದ ಕೃಷಿಗೊಂಡ ನಾಗರಿಕತೆ ನಾಶವಾಯಿತಾದರೂ, ಇದೊಂದು ತಾತ್ಕಾಲಿಕ ಗ್ರಹಣವಾಗಿತ್ತು. ರೋಮನ್ನರು ತಮಗೆ ಅಧೀನರಾಗಿದ್ದವರಾದರೂ ಜರ್ಮನಿಯ ಗೋಥರಿಗೆ ರೋಮನ್ನರಿಂದ ಕಲಿಯುವ ಶಕ್ತಿ ಮತ್ತು ಇಚ್ಛೆ ಇತ್ತು. ಆರಂಭದಲ್ಲಿಯೇ ಕ್ರಿಶ್ಚಿಯನ್ನರಾಗಿ ಮತಾಂತರ ಗೊಂಡಿದ್ದ ಗೋಥರಿಗೆ, ಯಾವುದೇ ಹಂತದಲ್ಲಿ ಗ್ರೀಕೋ-ರೋಮನ್ ಸಂಸ್ಕೃತಿಯನ್ನು ಒಪ್ಪಿಕೊಳ್ಳುವುದು ಸಾಧ್ಯವಾಯಿತು. ಜರ್ಮನಿಯ ಮತ್ತು ರೋಮನ್ ಎರಡೂ ಸಂಸ್ಕೃತಿಗಳ ಮಿಶ್ರತಳಿಯಾಗಿ ಯುರೋಪಿನ ಮಧ್ಯಯುಗದ ನಾಗರಿಕತೆ ಹುಟ್ಟಿಕೊಂಡಿತು.

**ಪ್ರಾಂಕಿಶರ ರಾಜ್ಯ**

ಪ್ರಾಂಕಿಶರು ಜರ್ಮೇನಿಯಾ (ಜರ್ಮನಿ)ದ ನಿವಾಸಿಗಳಾಗಿದ್ದು, ರೈನ್ ಮತ್ತು ದನುಬೆ ನದಿಗಳ ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸವಾಗಿದ್ದರು. ಇವರು ಟ್ಯುಟೋನಿಕ್ ಭಾಷೆಯನ್ನು ಮಾತನಾಡುತ್ತಿದ್ದರು. ಇವರಲ್ಲಿ ಸೆಕ್ಸೋನ್ಸ್, ವೆಂಡಾಲ್ಸ್, ಲಂಬಾರ್ಡ್, ಬರ್ಗುಂಡ್ಯಯನ್ನರು ಮುಂತಾದ ಬುಡಕಟ್ಟು ಜನಾಂಗಗಳಿದ್ದವು. ಇವರೆಲ್ಲರನ್ನೂ ಪ್ರಾಚೀನ ಗ್ರೀಕರು 'ಬಾರ್ಬೇರಿಯನ್ನರು' ಎಂಬುದಾಗಿ ಕರೆದಿದ್ದರು. ಏಕೆಂದರೆ ಇವ್‌ಯಾರರು ಗ್ರೀಕ್ ಭಾಷೆಯನ್ನು ಬಲ್ಲವರಾಗಿರಲಿಲ್ಲ. ಅದೇ ರೀತಿ ರೋಮನ್ನರೂ ಇವರನ್ನು ಬಾರ್ಬೇರಿಯನ್ನರು ಎಂಬುದಾಗಿ ಕರೆದದ್ದು ಇವರು ರೋಮನ್ ಸಾಮ್ರಾಜ್ಯದ ಹೊರಗಡೆ ಜೀವಿಸುತ್ತಿದ್ದುದಕ್ಕೆ. ರೋಮನ್ ಸಾಮ್ರಾಜ್ಯವನ್ನು ಇವರು ನಾಶಪಡಿಸಿದರು ಎನ್ನುವುದಕ್ಕಾಗಿ ಇವರನ್ನು 'ಅನಾಗರಿಕರು' ಎಂಬ ಹೆಸರಿನಿಂದಲೂ ಕರೆದರು. ಪ್ರಾಚೀನ ರೋಮನ್ ಸಾಮ್ರಾಜ್ಯವನ್ನು ಸಂಹರಿಸಿದವರಲ್ಲಿ ಪ್ರಾಂಕಿಶರೂ ಕೂಡ ತುಂಬ ಪ್ರಮುಖರಾದವರು. ಇವರು ಯುರೋಪಿನ ಇತಿಹಾಸದಲ್ಲಿ ಪ್ರಮುಖ ಪಾತ್ರ ವಹಿಸುವವರಿದ್ದರು. ಮಧ್ಯ ಯೂರೋಪನ್ನು ಫ್ರಾಂಕಿಶರ ಸಂಸ್ಕೃತಿಯೂ ಆವರಿಸಿತು. ಕಾರಣ ಫ್ರಾಂಕಿಶರು ರೋಮನ್ನರ ಹಿರಿತನಕ್ಕೆ ಬಲಿಯಾಗದೆ ತಮ್ಮ ಯೋಧರ ಸದ್ಗುಣಗಳನ್ನು ಉಳಿಸಿಕೊಂಡಿದ್ದರು.

ರಾಜ ಕ್ಲೋರಿಸ್ಸನ (ಕ್ರಮೇಣ ಲೂಯಿಸ್ ಎಂದು ಬದಲಾಗಿದೆ) ನಾಯಕತ್ವದಲ್ಲಿ ಫ್ರಾಂಕರು ರೋಮನ್ ಸಾಮ್ರಾಜ್ಯವನ್ನು ಕ್ರಿ.ಶ.೪೮೬ರಲ್ಲಿ ಸೋಲಿಸಿದರು. ಇದರ ನಂತರ ಇವರ ಸಂಸ್ಕೃತಿ ಗಾಲ್‌ನ ಉದ್ದಗಲಕ್ಕೆ ಬೆಳೆಯಿತು. ಗಾಲ್ ಫ್ರಾನ್ಸ್ ಆಯಿತು, ಫ್ರೆಂಚರ ದೇಶವಾಯಿತು. ಕ್ಲೋರಿಸ್ಸನು ಮಧ್ಯಯುರೋಪಿನ ಸ್ವಲ್ಪ ಭಾಗವನ್ನು ಕೂಡ ಗೆದ್ದುಕೊಂಡನು. ಅಲೆಮನ್ನಿ ಎನ್ನುವ ಜರ್ಮನಿಯ ಬುಡಕಟ್ಟಿನವರನ್ನು ಸಂಪೂರ್ಣವಾಗಿ ಸೋಲಿಸಿದ ನಂತರ ಇವನು ಕ್ರೈಸ್ತ ಮತಸ್ಥನಾದನು. ಕಾರಣ ಯುದ್ಧದಲ್ಲಿ ತನಗೆ ಲಭಿಸಿದ ಜಯ ಕ್ರಿಸ್ತನ ಅನುಗ್ರಹದಿಂದ ಆಯಿತು ಎಂದು ನಂಬಿದ್ದನು. ಫ್ರಾಂಕಿಶ್ ವೀರ ಯೋಧರುಗಳು ತಮ್ಮ ನಾಯಕನ ಕೀಳುಮಟ್ಟದ ತೀರ್ಮಾನವನ್ನು ತೃಪ್ತಿಯಿಂದ ಒಪ್ಪಿ ಕೊಂಡರು. ಸ್ವತಂತ್ರವಾಗಿ ಉಳಿದಿದ್ದ ಬುಡಕಟ್ಟು ಜನಾಂಗಗಳ ಭಾಗಗಳನ್ನು ಇನ್ನೂ ತ್ವರಿತವಾಗಿ ಆಕ್ರಮಿಸಿಕೊಂಡನು. ಕ್ಲೋರಿಸನು ಯುದ್ಧಗಳಲ್ಲಿ ಬರ್ಬರವಾದ ಮತ್ತು ತೀರ ಕೆಳಮಟ್ಟದ ಸೇರ್ಪಡೆಯ ಮಾರ್ಗಗಳನ್ನು ಅನುಸರಿಸಿದನಾದರೂ, ಟೌಸನ ಗ್ರೆಗೋರಿ ತನ್ನ ಪುಸ್ತಕವಾದ, "ಹಿಸ್ಟರಿ ಆಫ್ ಫ್ರಾಂಕ್ಸ್ " (ಫ್ರಾಂಕರ ಇತಿಹಾಸ)ನಲ್ಲಿ "ದೇವರ ಮುಂದೆ ನಿಷ್ಠೆಯಿಂದ ನಡೆದುಕೊಂಡದ್ದರಿಂದ ಇವನ ಎಲ್ಲಾ ಕಾರ್ಯಗಳಲ್ಲೂ ದೇವರು ಜಯವನ್ನು ಕೊಟ್ಟನು" ಎಂದು ಬರೆದಿದ್ದಾನೆ. ಇವನ ಕೆಳಮಟ್ಟದ ಧರ್ಮಶ್ರದ್ಧೆ ಸ್ಪೈಯಿನಿನ ಪಶ್ಚಿಮ ಗೋಥಿಕ್ ಸಾಮ್ರಾಜ್ಯದ ಮೇಲೆ ದಂಡೆತ್ತಿ ಹೋಗುವಂತೆ ಮಾಡಿತು. ಫ್ರಾಂಕಿಶರ ಚರ್ಚ್‌ನಿಂದ ಇವನಿಗೆ ದೊರಕಿದ ಬೆಂಬಲದೊಡನೆ ಸ್ಪೈಯಿನಿನ ರಾಜ ಎರಡನೆ ಅಲರಿಕ್‌ನನ್ನೂ ವೋಗ್ ಯುದ್ಧದಲ್ಲಿ ಸೋಲಿಸಿದನಾದರೂ ಸ್ಪೈಯಿನನ್ನು ತನ್ನ ರಾಜ್ಯಕ್ಕೆ ಸೇರ್ಪಡೆ ಮಾಡಿಕೊಳ್ಳಲಾಗಲಿಲ್ಲ. ಕಾರಣ, ಮಹಾನ್ ಥಿಯೋಡೆರಿಕ್‌ನು ಪ್ರಬಲವಾಗಿ ಮಧ್ಯಪ್ರವೇಶ ಮಾಡಿ ಟ್ಯೂಟೋನಿಕ್ ರಾಜ್ಯಗಳ ನಡುವೆ ಸಮಾನಾವಾದ ಅಧಿಕಾರ ವ್ಯವಸ್ಥೆಯಿರುವುದನ್ನು ಬಯಸಿದನು.

ಕ್ರಿ.ಶ.೫೧೧ರಲ್ಲಿ ಕ್ಲೋರಿಸ್ ಮರಣ ಹೊಂದಿದನು. ಆ ನಂತರ ಸಾಮ್ರಾಜ್ಯವನ್ನು ಇವನ ನಾಲ್ಕು ಮಕ್ಕಳಿಗೆ ಸಮನಾಗಿ ಹಂಚಲಾಯಿತು. ಕ್ಲೋರಿಸ್‌ನ ಮೊದಲನೆಯ ಮಗ ಸಿಸ್ಸನ್ಸ್‌ನ ಕ್ಲೋಟೈನ್ ಎಂಬುವವನು ಕ್ರಿ.ಶ.೫೫೮ರಲ್ಲಿ ರಾಜ್ಯವನ್ನು ಒಂದುಗೂಡಿಸಿದ ನಾದರೂ ಕ್ರಿ.ಶ.೫೬೧ರಲ್ಲಿ ಮತ್ತೆ ರಾಜ್ಯವು ೪ ವಿಭಾಗಗಳಾಗಿ ಎರಡನೆಯ ವಿಭಜನೆ ಹೊಂದಿತು. ಕ್ಲಾರಿಬೆರ್ಟ್‌ನಿಗೆ ಪ್ಯಾರಿಸ್, ಚಿಲ್ಪೆಸಿಕ್‌ನಿಗೆ ನ್ಯೂಸ್ಟ್ರಿಯ, ಸಿಗಿಬೆರ್ಟ್‌ನಿಗೆ ಅಸ್ಟ್ರೇಶಿಯ ಮತ್ತು ಗ್ಯಾಂಟ್ರಾಮನಿಗೆ ಬರ್ಗಂಡಿ ದೊರೆಯಿತು. ಈ ನಾಲ್ಕು ರಾಜರುಗಳನ್ನು

ಮೆರೋವರ್ಜಿಯನ್ ರಾಜರುಗಳೆಂದು ಕರೆಯಲಾಗಿದೆ. ಇವರ ಆಡಳಿತಾವಧಿಯಲ್ಲಿ ರಾಜ್ಯದ ತುಂಬ ಯುದ್ಧಗಳು ಮತ್ತು ಘರ್ಷಣೆಗಳಿದ್ದವು. ಇದರ ಜತೆಗೆ ಆಂತರಿಕ ಅವ್ಯವಸ್ಥೆಗಳು ಮತ್ತು ದಂಗೆಗಳು ಇದ್ದುದರಿಂದ ಫ್ರಾಂಕಿಶ್ ಸಾಮ್ರಾಜ್ಯದ ಹೊಂದಾಣಿಕೆ ಯನ್ನು ಮೆರೋವರ್ಜಿಯನ್ನರ ಆಳ್ವಿಕೆಯಲ್ಲಿ ಸಾಧಿಸಲಾಗಲಿಲ್ಲ. ಮಕ್ಕಳಿಗೆ ರಾಜ್ಯವನ್ನು ಹಂಚಿಕೊಡುವ ಫ್ರಾಂಕಿಶ್ ಪದ್ಧತಿ ರಾಜ್ಯದಲ್ಲಿ ಒಡಕನ್ನು ಮೂಡಿಸಿತು ಮತ್ತು ದುರ್ಬಲರನ್ನಾಗಿಸಿತು. ಕ್ಲೋರಿಸನ ನಂತರ ಸುಮಾರು ಎರಡು ಶತಮಾನಗಳ ಕಾಲ ಫ್ರಾಂಕ್‌ರ ಇತಿಹಾಸವು ವ್ಯರ್ಥ ಯುದ್ಧಗಳಲ್ಲಿ ಮತ್ತು ಭ್ರಾತೃದ್ವೇಷದಲ್ಲಿ ಮುಳುಗಿ ಹೋಯಿತು.

**ಕರೋಲಿಂಜಿಯನ್ ಸಂತತಿ**

ಅರಮನೆಯಲ್ಲಿನ ಕೆಲಸವನ್ನು ನೋಡಿಕೊಳ್ಳಲು ಮತ್ತು ರಾಜಮನೆತನದ ಆಸ್ತಿಪಾಸ್ತಿಗಳ ಉಸ್ತುವಾರಿ ನೋಡಿಕೊಳ್ಳಲು ಮೆರೋವಿಂಜಿಯನ್ ರಾಜರುಗಳು ಮೇಯರ್ಸ್ ಆಫ್ ದಿ ಪ್ಯಾಲೆಸ್ ಅರಮನೆಯ ಪಾಲಕರೆಂಬ ಅಧಿಕಾರಿಗಳನ್ನು ಇಟ್ಟುಕೊಂಡಿದ್ದರು. ರಾಜರು ಗಳ ಸೋಮಾರಿತನದಿಂದಾಗಿ ಮತ್ತು ದುರ್ಬಲತೆಯಿಂದಾಗಿ ಅರಮನೆಯ ಪಾಲಕರು ಹೆಚ್ಚು ಅಧಿಕಾರವುಳ್ಳವರಾಗಿ ಬೆಳೆದು ಸರ್ಕಾರದ ನೀತಿಗಳ ಮೇಲೆ ಪ್ರಭಾವ ಬೀರುವಂತಾದರು. ಸಭೆಗಳನ್ನು ನಡೆಸಿ ನ್ಯಾಯ ತೀರ್ಪು ಕೊಡುತ್ತಿದ್ದರು. ತಮ್ಮದೇ ಆದ ವಿಶೇಷ ಪಡೆಗಳನ್ನು ಸೃಷ್ಟಿಸಿಕೊಂಡರು. ತಮ್ಮ ಕ್ಷೇಮಕ್ಕೆಂದೇ ಈ ಪಡೆಗಳನ್ನು ಬಳಸಿಕೊಳ್ಳುತ್ತಿದ್ದರು.

ಲಂಡನ್ನಿನ ಪೆಪಿನ್ ಎಂಬುವವನು ಕ್ರಿ.ಶ.೬೧೨ರಲ್ಲಿ ಅಸ್ಟೇಸಿಯಾ ಅರಮನೆಯ ಪಾಲಕನಾದಾಗ, ಹೆಚ್ಚು ಪ್ರಬಲವಾಗಿ ಬೆಳೆದನು, ಹೆಚ್ಚು ಭೂಮಿಯನ್ನು ಸಂಪಾದಿಸಿದ್ದನು ಮತ್ತು ಹೆಚ್ಚು ಅಧಿಕಾರವುಳ್ಳವನಾಗಿದ್ದನು. ಇವನ ನಂತರ ಹೆರಿಸ್ಟಾಲಿನ್ ಪೆಪಿನ್ ಕ್ರಿ.ಶ.೬೮೭ರಲ್ಲಿ ಅರಮನೆಯ ಪಾಲಕನಾದನು. ಇವನು ಫ್ರಾಂಕರ ಇತಿಹಾಸಕ್ಕೆ ಹೊಸ ತಿರುವು ನೀಡಿದನು. ಇವನು ಯುದ್ಧ ಭೂಮಿಗೆ ಸೈನ್ಯವನ್ನು ಕೊಂಡೊಯ್ದು, ನ್ಯೂಸ್ಟ್ರಿಯನ್ನ ರನ್ನು ಟೆಸ್ಟ್ರಿ ಯುದ್ಧದಲ್ಲಿ ನಿರ್ಣಾಯಕವಾಗಿ ಸೋಲಿಸಿದನು ಮತ್ತು ಫ್ರಾಂಕರಿಗೆ ತಾತ್ವಿಕ ವಾಗಿಯಲ್ಲವಾದರೂ ಪ್ರಾಯೋಗಿಕವಾಗಿ ಇವನೇ ರಾಜನಾಗಿದ್ದನು. ಅರಮನೆಯ ಪಾಲಕರ ವೃತ್ತಿಗೆ ವಂಶಪಾರಂಪ್ಯರ ಪದ್ಧತಿಯನ್ನು ತಂದನು. ಫ್ರಾಂಕಿಶ್ ಆಡಳಿತವನ್ನು ಅಲೆಮೇನಿಯ, ತುರಿಂಜಿಯ ಮತ್ತು ಬವೇರಿಯಾಗಳಿಗೆ ವಿಸ್ತರಿಸಿದನು.

ಪೆಪಿನ್ನನ ಮರಣದ ನಂತರ, ಇವನ ಅನ್ಯ ಸಂಬಂಧದ ಮಗ ಚಾರ್ಲ್ ಮಾರ್ಟೆಲ್ ಎಂಬುವವನು ಕ್ರಿ.ಶ.೭೧೭ರ ದಂಗೆಯಲ್ಲಿ ಮೋಸದಿಂದ ಅಧಿಕಾರಕ್ಕೆ ಬಂದನು. ಪ್ರಬಲವಾದ ಒಂದು ಸೈನ್ಯವನ್ನು ಕಟ್ಟಿದನು; ಇದಕ್ಕೆ ಬೇಕಾದ ಹಣವನ್ನು ಚರ್ಚಿನ ಆಸ್ತಿ ಶ್ರೀಮಂತರಿಗೆ ಮಾರುವುದರಿಂದ ಸಂಪಾದಿಸಿದನು. ಮುಸ್ಲಿಮರು ಅಥವಾ ಸರಸೆನ್ಸರ ಮೇಲೆ ಯುದ್ಧ ಮಾಡಿದನು. ಕ್ರಿ.ಶ.೭೩೨ರಲ್ಲಿ ನಡೆದ ಟೌರ್ಸ ಯುದ್ಧದಲ್ಲಿ ಮುಸಲ್ಮಾನರನ್ನು ನಿರ್ಣಾಯಕವಾಗಿ ಸೋಲಿಸಿದನು. ಫ್ಯಾಂಕರನ್ನು ಅವರ ಸೆರೆಯಿಂದ ಬಿಡಿಸಿದನು. ಹೀಗಾಗಿ ಈ ಯುದ್ಧವು ಇವನಿಗೆ ಅಪಾರ ಕೀರ್ತಿ ಮತ್ತು ಪ್ರಾಬಲ್ಯವನ್ನು ತಂದುಕೊಟ್ಟಿತು. ಫ್ರಾಂಕಿಶ್ ಕ್ರಿಸ್ತ ಮತಸ್ಥರು. ಇದರಿಂದ ಆಪಾರ ತೃಪ್ತಿ, ಸಂತಸ ಪಟ್ಟರಾದರೂ, ಫ್ರಾಂಕರ ಚರ್ಚು ಇವನನ್ನು ಚರ್ಚಿನ ಆಸ್ತಿ ವಶಪಡಿಸಿಕೊಂಡದ್ದಕ್ಕಾಗಿ ಖಂಡಿಸಿತು.

ಕ್ರಿ.ಶ.೭೧೪ರಲ್ಲಿ ಚಾರ್ಲ್ ಮಾರ್ಟೆಲ್‌ನ ಮರಣಾನಂತರ ಪೆಪಿನ್ ದಿ ಶಾರ್ಟ್ ಮತ್ತು ಕಾಲೋಮ್ಯಾನ್ ಜೊತೆಯಾಗಿ ಅಧಿಕಾರಕ್ಕೆ ಬಂದರು. ಕಾಲೋಮ್ಯಾನ್ "ಮಾರ್ಟೆ ಕೆಸಿನೋ" ಎನ್ನುವ ಮಠಕ್ಕೆ ಹೊರಟು ಹೋದನು. ಪೆಪಿನ್ ರಾಜ್ಯ ವಿಸ್ತರಿಸುವ ಕಾರ್ಯದಲ್ಲಿ ತೊಡಗಿದನು. ಬವೇರಿಯದಲ್ಲಿನ ದಂಗೆಗಳನ್ನು ಅಡಗಿಸಿದನು ಮತ್ತು ಡಚ್ಚ್‌ನ ಮೇಲಿನ ಫ್ರಾಂಕರ ನಿಯಂತ್ರಣವನ್ನು ಬಿಗಿ ಮಾಡಿದನು. ತುಂಬ ಅನಾಗರಿಕವಾದ ಮತ್ತು ಅಂಧಶ್ರದ್ಧೆಯನ್ನು ಖಂಡಿಸಿ ಸಾಮಾನ್ಯ ಜನರ ನೈತಿಕ ಮಟ್ಟವನ್ನು ಉನ್ನತ ಸ್ಥಿತಿಗೆ ಏರಿಸಲಾಯಿತು. ಈ ವೇಳೆಗೆ ಎಲ್ಲಾ ಅಧಿಕಾರವು ಅರಮನೆಯ ಪಾಲಕನ ಕೈಯಲ್ಲಿ ಕೇಂದ್ರೀಕೃತವಾಗಿದ್ದ ಅಂಶವನ್ನು ಪರಿಗಣನೆಯಲ್ಲಿಟ್ಟುಕೊಂಡು, ಪೆಪಿನ್, ಪೋಪ್ ಝುಕಾರಿಸ್‌ನಿಗೆ ರಾಜದೂತನನ್ನು ಕಳುಹಿಸಿ ಮೆರೋವಿಂಜಿಯಾದ ಕೈಗೊಂಬೆ ರಾಜನನ್ನು ಕೆಳಗಿಳಿಸುವ ಕ್ರಮಕ್ಕೆ ಒಪ್ಪಿಗೆ ಸೂಚಿಸಬೇಕೆಂದು ಕೇಳಿಕೊಂಡನು. ಪೆಪಿನ್ನನ ಕೋರಿಕೆಯನ್ನು ಒಪ್ಪಿಕೊಳ್ಳಲಾಯಿತು. ನಂತರ ಕ್ರಿ.ಶ.೭೫೧ರಲ್ಲಿ ಪೋಪ್ ಬೋನಿಫೇಸನು ಪೆಪಿನ್ನನನ್ನು ಫ್ರಾಂಕರ ರಾಜನನ್ನಾಗಿ ಮಾಡಿದನು. ಕರೋವಿಂಜಿಯನ್ ಕ್ರಾಂತಿ ಹೀಗೆ ಪೂರ್ಣಗೊಂಡಿತು. ಪೋಪ್

ಮತ್ತು ಫ್ರಾಂಕಿಶರ ನಡುವಿನ ಈ ಸಂಬಂಧ ಇನ್ನೂ ಗಾಢವಾಗಿ ಬೆಳೆಯಿತು ಹಾಗೂ ಪೆಪಿನ್ನನಿಗೆ ಪೋಪನು ಮಾಡಿದ ಸಹಾಯಕ್ಕೆ ಪ್ರತಿಯಾಗಿ ಋಣ ತೀರಿಸುವ ಅವಕಾಶ ಬಂದಿತು.

ಪೋಪನ ಅಧಿಕಾರವನ್ನು ಮೊಟಕುಗೊಳಿಸಿ, ಇಟಲಿಯನ್ನು ಒಂದುಗೂಡಿಸಿ, ರೋಮನ್ನು ಮತ್ತೆ ಪಡೆಯುವ ಪ್ರಯತ್ನವನ್ನು ಲಂಬಾರ್ಡರು ಮಾಡಿದಾಗ, ಪೋಪ್ ಎರಡನೆಯ ಸ್ಟೀಫನ್ನನು ಲಂಬಾರ್ಡಿಯದ ರಾಜ ಐಸ್ಟಲ್ಫ್‌ನನ್ನು ಅಡಗಿಸಲು ಪೆಪಿನನ್ನ ಸಹಾಯವನ್ನು ಕೇಳಿದನು. ಪೆಪಿನ್ನನು ಸಹಾಯವನ್ನು ಮಾಡಲು ಒಪ್ಪಿದನಲ್ಲದೆ ಪೋಪನು ಫ್ರಾಂಕಿಶ್ ವಸಾಹತುಗಳಿಗೆ ಭೇಟಿ ನೀಡಲು ಅನುಕೂಲವಾಗುವಂತೆ ಸೈನ್ಯದ ಪಡೆಯನ್ನು ಕಳುಹಿಸಿ ಕೊಟ್ಟನು. ಪೆಪಿನ್ನನ ಸಹಾಯ ಮತ್ತು ಸ್ನೇಹ ಸೌಹಾರ್ದತೆಗಳಿಂದ ಮನೋಲ್ಲಾಸಗೊಂಡ ಪೋಪ್ ಎರಡನೆಯ ಸ್ಟೀಫನ್ನನು ಪೆಪಿನ್ನನಿಗೆ ಎರಡನೆಯ ಬಾರಿ ಕ್ರಿ.ಶ.೭೫೪ರಲ್ಲಿ ಪಟ್ಟಾಭಿಷೇಕ ಮಾಡಿಸಿದನು. ಇದರಿಂದ ಚರ್ಚ್ ಮತ್ತು ಫ್ರಾಂಕಿಶರ ಸಂಬಂಧ ಮತ್ತೂ ಬಲಗೊಂಡಿತು. ಮತ್ತೂ ಮುಂದುವರೆದು ಪೆಪಿನ್ ಎರಡು ಬಾರಿ ಐಸ್ಟಲ್ಫ್‌ನ ಮೇಲೆ ಯುದ್ಧ ಮಾಡಿ ಕ್ರಿ.ಶ.೭೫೪ರಲ್ಲಿ ಆಲ್ಪ್ಸ್ ಪರ್ವತಗಳ ಕಣಿವೆಯಲ್ಲಿ ಅವನನ್ನು ಸೋಲಿಸಿದನು. ಇದರ ನಂತರ ಪೆಪಿನ್ನನು "ಪೆಪಿನ್ನನ ಸನ್ನದು"ಎಂಬುದನ್ನು ಹೊರಡಿಸಿದನು. ಇದು ಪೋಪನ ರಾಜ್ಯಗಳೆಂಬ ಹೊಸ ರಾಜ್ಯಗಳನ್ನು ಸೃಷ್ಟಿಸಿತು. ಇದರ ಪರಿಣಾಮವಾಗಿ ಪೋಪರನ್ನು ಮಧ್ಯ ಇಟಲಿಯ ರಾಜಕೀಯ ಸಾರ್ವಭೌಮರನ್ನಾಗಿ ಮಾಡಲಾಯಿತು. ಈ ವ್ಯವಸ್ಥೆ ಕ್ರಿ.ಶ.೧೮೭೦ರವರೆಗೂ ಇತ್ತು. ಒಂದರ್ಥದಲ್ಲಿ ಹೇಳುವುದಾದರೆ ಇಂದಿನ ವ್ಯಾಟಿಕನ್ ನಗರ ಈ ಪೋಪರ ರಾಜ್ಯಗಳ ಪಳೆಯುಳಿಕೆಯ ಒಂದು ಉದಾಹರಣೆಯಾಗಿದೆ.

**ಚಾರ್ಲ್‌ಮೇನ್‌ನ ಕಾಲ**

ಮಧ್ಯಯುಗದ ಯುರೋಪಿನ ಇತಿಹಾಸದಲ್ಲಿ ತುಂಬ ಮುಖ್ಯರಾದ ವ್ಯಕ್ತಿಗಳಲ್ಲಿ ಚಾರ್ಲ್‌ಮೇನ್ ಅತಿ ಮುಖ್ಯನು. ಇವನು ಇತಿಹಾಸದಲ್ಲಿ ಚಾರ್ಲ್ ಮಹಾಶಯ ಎಂದು ಪ್ರಸಿದ್ಧನಾಗಿದ್ದಾನೆ. ಮಹಾನ್ ಶಿಲ್ಪಿ ಚಾರ್ಲ್‌ಮೇನನು ನಿರ್ಮಿಸಿದ ಸಾಮ್ರಾಜ್ಯವನ್ನು ಪುರಾತನ ರೋಮಿಗೆ ಮಾತ್ರ ಹೋಲಿಸಬಹುದಾಗಿದೆ. ಬಹುಮುಖ ಪ್ರತಿಭೆಯ ಈ ವ್ಯಕ್ತಿ ಮಧ್ಯಯುಗದಲ್ಲಿ ಹೊಸ ಸಂಸ್ಥೆಗಳು ಹುಟ್ಟಿಬರಲು ಭದ್ರ ಬುನಾದಿಯನ್ನು ಹಾಕಿದನು. ಇವನು ವಿದ್ಯಾಭ್ಯಾಸಕ್ಕೆ ನೀಡಿದ ಉತ್ತೇಜನ ಸಾಂಸ್ಕೃತಿಕ ಪುನರುತ್ಥಾನವನ್ನು ಉಂಟು ಮಾಡಿತು. ಇದನ್ನು ಕರೋಲಿಂಜಿಯನ್ ಪುನರುತ್ಥಾನ ಎಂದು ಬಣ್ಣಿಸಲಾಗಿದೆ. ಸಮಕಾಲೀನ ಜೀವನ ಚರಿತ್ರಕಾರನಾದ ಐನ್‌ಹಾರ್ಡ್ ಇವನನ್ನು ಶಕ್ತಿಶಾಲಿ, ಚಾಣಾಕ್ಷ, ಅಪರಿಮಿತ ಶಕ್ತಿ ಎಂದೆಲ್ಲ ಬಣ್ಣಿಸಿರುತ್ತಾನೆ.

ಪೆಪಿನ್ ಕ್ರಿ.ಶ.೭೬೮ರಲ್ಲಿ ಮೃತನಾದಾಗ, ಫ್ರಾಂಕಿಶ್ ಸಾಮ್ರಾಜ್ಯವನ್ನು ಇವನ ಮಕ್ಕಳಾದ ಚಾರ್ಲ್‌ಮೇನ್ ಮತ್ತು ಕಾರ್ಲೋನಿಯನ್ ಜತೆಗೂಡಿ ಆಳುತ್ತಿದ್ದರು. ಈ ಇಬ್ಬರು ಸೋದರರು ಘರ್ಷಣೆಯ ವ್ಯಕ್ತಿತ್ವದವರಾಗಿದ್ದು, ಒಬ್ಬರನ್ನೊಬ್ಬರು ಎಂದೂ ಮೆಚ್ಚಿಕೊಂಡವರಲ್ಲ. ಕ್ರಿ.ಶ.೭೭೧ರಲ್ಲಿ, ಒಂದು ವೇಳೆ ಕಾರ್ಲೋನಿಯನ್, ಅಕಾಲವಾಗಿ ಮೃತ್ಯುವಿಗೆ ತುತ್ತಾಗದಿದ್ದರೆ ಒಂದು ಆಂತರಿಕ ಯುದ್ಧವೇ ಆರಂಭವಾಗುತ್ತಿತ್ತು. ಈ ಸಾವು ಚಾರ್ಲ್‌ಮೇನನನ್ನು ವಿಶಾಲವಾದ ಫ್ರಾಂಕಿಶ್ ಸಾಮ್ರಾಜ್ಯಕ್ಕೆ ಏಕೈಕ ಅಧಿಪತಿಯನ್ನಾಗಿ ಸೈನಾಡ್‌ನ ಮಾಡಿತು.

"ಸ್ಯಾಕ್ಸನ್ನರು ಬರ್ಬರರಾಗಿದ್ದರು ಹಾಗೂ ಎಲ್ಬೆ ಮತ್ತು ಓಡರ್ ನದಿಗಳ ಪ್ರದೇಶಗಳಲ್ಲಿ ವಾಸವಾಗಿದ್ದರು. ಇವರು ಬುಡಕಟ್ಟಿನ ಮತ್ತು ಆದಿ ಮಾನವನ ಸಂಸ್ಕೃತಿ ಗಿಂತ ಮೇಲಕ್ಕೆ ಏರಿರಲಿಲ್ಲ" ಎಂದು ಟಾಸಿಟಸ್ ಬಣ್ಣಿಸಿದ್ದಾನೆ. ಫ್ರಾಂಕರಿಗೂ ಸ್ಯಾಕ್ಸನ್ನರಿಗೂ ಗಡಿಯಲ್ಲಿ ಯುದ್ಧ ಶಾಶ್ವತವಾಗಿ ನಡೆಯುತ್ತಿತ್ತು. ಸ್ಯಾಕ್ಸನ್ನರನ್ನು ಸೆರೆ ಹಿಡಿಯುವುದರ ಜತೆಗೆ ಕ್ರಿಶ್ಚಿಯನ್ನರಾಗಿ ಮಾಡಬೇಕೆನ್ನುವ ಆಸೆ ಚಾರ್ಲ್‌ಮೇನ್ನನು ಇವರ ಮೇಲೆ ಯುದ್ಧ ಮಾಡುವಂತೆ ಪ್ರೇರೇಪಿಸಿತು. ಆದ್ದರಿಂದ ಕ್ರಿ.ಶ.೭೭೨ ರಿಂದ ೭೭೪ರಲ್ಲಿ ಇವನು ಸ್ಯಾಕ್ಸನ್ನರನ್ನು ಸೋಲಿಸಿದನು, ಆದರೂ ಇದು ಪಾರ್ಶ್ವ ಸೋಲಾಗಿತ್ತು. ಕೆಲವೇ ವರ್ಷಗಳಲ್ಲಿ ಸ್ಯಾಕ್ಸನ್ನರು ದಂಗೆಯೆದ್ದರು ಮತ್ತು ಫ್ರಾಂಕಿಶ್ ಚರ್ಚಿಗೆ ತೊಂದರೆಯನ್ನುಂಟು ಮಾಡಿದರು. ಚಾರ್ಲ್‌ಮೇನ್ ಕ್ರಿ.ಶ.೭೮೨ರಲ್ಲಿ ಮತ್ತೆ ಸಾಕ್ಸನ್ನರ ಮೇಲೆ ದಾಳಿ ಮಾಡಿದನು. ಈ ದಾಳಿಯು ತುಂಬ ಕ್ರೂರ ಮತ್ತು ಕಠಿಣವಾಗಿತ್ತು. ಒಂದೇ ದಿನದಲ್ಲಿ ಸುಮಾರು ೪೫೦೦ ಸ್ಯಾಕ್ಸನ್ನರ ತಲೆಗಳನ್ನು ಕ್ರಿ.ಶ.೭೮೩ರಲ್ಲಿ ಕತ್ತರಿಸಿ ಹಾಕಿದನೆಂದು ಹೇಳಲಾಗಿದೆ. ಸಾವಿರಾರು ಜನರನ್ನು ಅಲ್ಲಿಂದ ಓಡಿಸಿ ಫ್ರಾಂಕಿಶರಿಗೆ ಹೊಸ ವಸಾಹತುವನ್ನು ನಿರ್ಮಿಸಿದನು.

ಸ್ಯಾಕ್ಸನ್ನರಿಗೆ ಬಲವಂತವಾಗಿ ಕ್ರೈಸ್ತಧರ್ಮ ಬೋಧಿಸಿದನು, ಒಪ್ಪದವರಿಗೆ ಸಾವಿನ ಶಿಕ್ಷೆ ವಿಧಿಸಿದನು. ಇವನ ಕ್ರೂರವಾದ ವಿಧಾನಗಳು ಹೊಸ ಹೊಡೆದಾಟಕ್ಕೆ ದಾರಿ ಮಾಡಿಕೊಟ್ಟವು. ಇದರಿಂದ ಚಾರ್ಲ್‌ಮೇನನು ಬಲವಂತ ಮತ್ತು ಕ್ರೌರ್ಯತೆಗಳ ವ್ಯರ್ಥವನ್ನು ಅರ್ಥಮಾಡಿಕೊಂಡನು. ಆದ್ದರಿಂದ ಚಾರ್ಲ್‌ಮೇನನು ಸ್ಯಾಕ್ಸನ್ನರ ಬಗ್ಗೆ ತನ್ನ ನೀತಿಯನ್ನು ಸುಧಾರಿಸಿಕೊಂಡನು, ಹಾಗೂ ಕ್ರಿ.ಶ.೭೯೭ರಲ್ಲಿ ಒಂದು ಶಾಸನವನ್ನು ಹೊರಡಿಸಿ ಶಾಂತಿ ಮತ್ತು ಹೊಂದಾಣಿಕೆಯನ್ನು ಸ್ಥಾಪಿಸಲು ಸಾಧ್ಯವಾಗುವಂತೆ ಮಾಡಿದನು.

ಸ್ಪೈಯಿನಿನ ಮೇಲೆ ಚಾರ್ಲ್‌ಮೇನನು ಮಾಡಿದ ದಾಳಿಗೆ ಕ್ರೈಸ್ತರು ಮೊಹಮ್ಮದನ ಅನುಯಾಯಿಗಳ ಮೇಲೆ ಮಾಡಿದ ಧಾರ್ಮಿಕ ಯುದ್ಧದ ಮುಖವಾಡವಿದೆ. ಸರಗೊಸ್ಸದ ಬಳಿ ಇವನನ್ನು ತಡೆಯುವವರೆಗೂ ಸ್ಪೈನಿನ ಮೇಲಿನ ಇವನ ಯುದ್ಧವು ಸರಳ, ಸುಗಮವಾಗಿ ಸಾಗಿತ್ತು. ಸರಗೊಸ್ಸದ ಬಳಿ ರೇನ್ಸವಲ್ಲೆಸ್‌ನಲ್ಲಿ ರೊಲ್ಯಾಂಡ್ ಎನ್ನುವ ಬುಡಕಟ್ಟಿನ ಜನ ಫ್ರಾಂಕಿಶ್ ಸೈನ್ಯದ ಮೇಲೆ ಕ್ಷಿಪ್ರ ದಾಳಿ ನಡೆಸಿದರು. ಇದರಲ್ಲಿ ಚಾರ್ಲ್ ಮೇನನ ಸೈನ್ಯಾಧಿಕಾರಿ ಮಡಿದನು. ಇವನ ವೀರ ವ್ಯಕ್ತಿತ್ವದ ಸುತ್ತಮುತ್ತ ಕ್ರಮೇಣ ಶೌರ್ಯ, ಸಾಹಸ ಮತ್ತು ಪ್ರಣಯದ ಕಥೆಗಳು ಹುಟ್ಟಿಕೊಂಡವು.

ಕ್ರಿ.ಶ.೭೮೭ರಲ್ಲಿ ಬವೇರಿಯವು ತನ್ನ ಸ್ವಾತಂತ್ರ್ಯವನ್ನು ಮರಳಿ ಪಡೆಯಲು ಯತ್ನಿಸಿತು. ಸಂತ ಕೊಲಂಬನ್ ಮತ್ತು ಉಳಿದ ಐರ್ಲ್ಯಾಂಡಿನ ಧರ್ಮಪ್ರಚಾರಕರು ಬವೇರಿಯದವರನ್ನು ಕ್ರೈಸ್ತರಾಗಿ ಮತಾಂತರಗೊಳಿಸಿದ್ದರು. ಬವೇರಿಯಾದವರು ಒಂದು ಮಾದರಿಯ ಸೆಲ್ಟಿಕ್ ಆಚರಣೆಗಳನ್ನು ಅಳವಡಿಸಿಕೊಂಡಿದ್ದರು. ಈ ಸೆಲ್ಟಿಕ್ ಪದ್ಧತಿಗಳನ್ನು ಸಂತ ಬೋನಿಫೇಸನ ಅಧ್ಯಕ್ಷತೆಯಲ್ಲಿ ಸುಧಾರಣೆಗಳಿಂದ, ಪೆಪಿನ್ನನ ಸಹಕಾರವನ್ನು ಬಳಸಿಕೊಂಡು ಬಹಿಷ್ಕರಿಸಲಾಗಿತ್ತು. ಇದರಿಂದಾಗಿ ಅತೃಪ್ತಿ ಹೊಗೆಯಾಡಲಾರಂಭಿಸಿ, ಫ್ರಾಂಕಿಶರ ಮತ್ತು ಬವೇರಿಯನ್ನರ ಹೊಂದಾಣಿಕೆಯು ಕಷ್ಟಸಾಧ್ಯವಾಯಿತು. ಚಾರ್ಲ್‌ಮೇನನ ಇಟಲಿ ಬಗ್ಗೆ ಧೋರಣೆಯನ್ನು ಬವೇರಿಯಾದ ಸಾಮಂತ ರಾಜ ಟಸ್ಸಿಲೋ ಕೂಡ ತುಂಬ ಉಗ್ರವಾಗಿ ವಿರೋಧಿಸಿದನು. ಟಸ್ಸಿಲೋನ ದಂಗೆಯನ್ನು ಹತ್ತಿಕ್ಕಲಾಗಿ, ಕ್ರಮೇಣ ಟಸ್ಸಿಲೋನನ್ನು ಬಂಧಿಸಿ, ಫ್ರಾಂಕಿಶರ ಅಧಿಕಾರವನ್ನು ಅವನ ಮೇಲೆ ಹೇರಲಾಯಿತು.

ಚಾರ್ಲ್‌ಮೇನನ ಗಡಿ ನೀತಿಯು ದೂರದೃಷ್ಟಿ ಮತ್ತು ಚೇತೋಹಾರಿಯದಾಗಿತ್ತು. ಅದರ ರಾಜ ಮಾರ್ಕ್‌ಫ್ರೆಂಟಿಯರ್‌ನನ್ನು ಕೊಂದು, ಸ್ಲಾವ್ಸ್‌ಗಳನ್ನು ಚಾರ್ಲ್‌ಮೇನನು ಸದೆಬಡಿದ ಪರಿಣಾಮವಾಗಿ ತೆರಿಂಜಿಯ ಮತ್ತು ಬೊಹೆಮಿಯ ಎಂಬ ಹೊಸ ರಾಜ್ಯಗಳು ಸೃಷ್ಟಿಯಾದವು. ನಾರ್ಸ್‌ಮನ್ನರ ದಾಳಿಗಳನ್ನು ಎದುರಿಸಲು ಡೇನಿಶ್‌ಮಾರ್ಕ್ (ಡೆನ್ಮಾರ್ಕ್) ಅನ್ನು ಸಂಘಟಿಸಲಾಯಿತು. ಪೋಪ್ ಮೂರನೆಯ ಸ್ಟೀಫನ್ನನ ಶತ್ರುವಾಗಿದ್ದ ಲಂಬಾರ್ಡಿಯ ರಾಜ ಡೆಸಿಡೇರಿಯಸ್‌ನ ಮಗಳು ಡೆಸಿಡೆರಟಳನ್ನು ಚಾರ್ಲ್‌ಮೇನನು ಮದುವೆಯಾದನು. ಇದರಿಂದಾಗಿ ಪೋಪ್ ಮತ್ತು ಚಾರ್ಲ್‌ಮೇನರ ನಡುವಿನ ಸಂಬಂಧಕ್ಕೆ ಮೋಡ ಮುಸುಕಿತು. ಚಾರ್ಲ್‌ಮೇನನು ಡೆಸಿಡೆರಟಳನ್ನು ಓಡಿಸಲಾಗಿ ಬಹುಬೇಗ ಅವನ ಮತ್ತು ಪೋಪನ ಸಂಬಂಧ ಹಿಂದಿನ ಸ್ಥಿತಿಗೆ ಮರಳಿತು. ಈ ಸ್ಥಿತಿಯನ್ನು ಸಹಿಸಲಾಗದೆ, ಚಾರ್ಲ್‌ಮೇನನ ಮೃತ ತಮ್ಮನಾದ ಕಾರ್ಲೋನಿಯನ್ನಿನ ಮಕ್ಕಳ ಹಕ್ಕು ಬಾಧ್ಯತೆಗಳ ವಿಷಯವನ್ನು ಮೂಲವಾಗಿಟ್ಟುಕೊಂಡು ಮಾವ ಡೆಸಿಡೇರಿಯಸ್ಸನು ಫ್ರಾಂಕಿಶರಲ್ಲಿ ಆಂತರಿಕ ದಂಗೆಯನ್ನು ಸೃಷ್ಟಿಸಲು ಪ್ರಯತ್ನಪಟ್ಟಾಗ, ಚಾಲ್ ಮೇನ್‌ನು ಕ್ರಿ.ಶ.೭೭೪ರಲ್ಲಿ ಡೆಸಿಡೇರಿಯಸ್ಸನನ್ನು ಸೋಲಿಸಿ ಲಂಬಾರ್ಡಿಯನ್ನು ತನ್ನ ಸಂಸ್ಥಾನವನ್ನಾಗಿ ಮಾಡಿಕೊಂಡನು. ಮೂರನೆಯ ಸ್ಟೀಫನ್ನನ ನಂತರ ಪೋಪನಾದ ಒಂದನೆಯ ಹ್ಯಾಡ್ರಿಯನ್ನನ ಬಹುದಿನಗಳ ಬಯಕೆಯೂ ಇದಾಗಿತ್ತು. ಏಕೆಂದರೆ ಡೆಸಿಡೇರಿಯಸ್ಸನು ಪೋಪನ ಪ್ರದೇಶಗಳಾದ ಫೆರ್ರಾ, ಕೊಮಾಚಿಯ ಮತ್ತು ಪಿಯಾಂಜವನ್ನು ಆಕ್ರಮಿಸಿಕೊಂಡಿದ್ದನು.

ಪೋಪನ ಅಧಿಕಾರ ವ್ಯವಸ್ಥೆಗೆ ಹೊಸದಾಗಿ ಬಂದಿದ್ದ ಒಂದನೆಯ ಹ್ಯಾಡ್ರಿಯನ್ನನಿಗೆ ಅಧಿಕಾರ, ಆಸ್ತಿ ಮತ್ತು ಅಭಯಹಸ್ತಗಳು ತಾನಾಗಿಯೇ ಬಂದವು. ಸಹಜವಾಗಿಯೇ ಗುಂಪುಗಾರಿಕೆ ಮತ್ತು ಪಕ್ಷಪಾತಗಳು ಪೋಪನ ಆಯ್ಕೆಯ ವಿಷಯದಲ್ಲಿ ಕೆಲಸ ಮಾಡಲು ಆರಂಭವಾದವು. ಆದ್ದರಿಂದ ಮೂರನೆ ಲಿಯೋ ಪೋಪನಾದಾಗ ಒಂದನೆಯ ಹ್ಯಾಡ್ರಿಯನ್ ಮಾಡಿದ್ದ ಚರ್ಚಿನ ಎಲ್ಲಾ ನೇಮಕಾತಿಗಳನ್ನು ಸಾರಾಸಗಟಾಗಿ ಕಿತ್ತೊಗೆದನು. ಇದು ಅತೃಪ್ತಿಯನ್ನು ಮತ್ತು ಗಲಭೆಯನ್ನು ಹುಟ್ಟುಹಾಕಿತು. ಇದರ ಪರಿಣಾಮವಾಗಿ ಪೋಪ್ ಮೂರನೆಯ ಲಿಯೋನ ಮೇಲೆ ದಾಳಿ ನಡೆದು ಇವನನ್ನು ಕ್ರಿ.ಶ.೭೯೯ರಲ್ಲಿ ದುಸ್ತರನಾಗಿ ದಂಡಿಸಲಾಗಿತ್ತು. ತನ್ನ ಬೆಂಗಲಿಗರ ಸಹಾಯದಿಂದ ಮೂರನೆ ಲಿಯೋ ಚಾರ್ಲ್‌ಮೇನನನ್ನು ಕಂಡು ತನ್ನನ್ನು ರಕ್ಷಿಸುವಂತೆ ಮತ್ತು ಕಳೆದುಹೋಗಿರುವ ಪದವಿಗೆ ಮತ್ತೆ

ಕೂರಿಸುವಂತೆ ಮೊರೆಹೊಕ್ಕನು. ಸಹಾಯವನ್ನೇ ಅಲ್ಲದೆ ತಪ್ಪಿತಸ್ಥರಿಗೆ ಶಿಕ್ಷೆಯನ್ನು ವಿಧಿಸುವುದಾಗಿಯೂ ಕೂಡ ಚಾರ್ಲ್‌ಮೇನನು ಆಶ್ವಾಸನೆಯಿತ್ತನು. ಪೋಪನೊಡನೆ ಅಂಗರಕ್ಷಕರನ್ನು ಕಳುಹಿಸಿ ಕೊಟ್ಟನಲ್ಲದೆ ಕ್ರಿ.ಶ.೮೦೦ರಲ್ಲಿ ಪೋಪ್ ಮೂರನೆ ಲಿಯೋನ ಮೇಲಾಗಿರುವ ಗಲಭೆಗಳನ್ನು ತಿಳಿದುಕೊಳ್ಳಲು ಚಾರ್ಲ್‌ಮೇನನು ಖುದ್ದಾಗಿ ರೋಮಿಗೆ ಬಂದನು.

ವಿವರವಾಗಿ ವಿಷಯವನ್ನು ಕೇಳಿದ ಚಾರ್ಲ್‌ಮೇನನಿಗೆ ತಪ್ಪಿತಸ್ಥರು ಪಶ್ಚಾಲಿಸ್ ಮತ್ತು ಕ್ಯಾಂಪನಸ್ ಎಂದು ತಿಳಿಯಿತು. ಇವರಿಗೆ ಮೊದಲು ಮರಣದಂಡನೆ ವಿಧಿಸಿ, ಕ್ರಮೇಣ ಕ್ಷಮೆ ನೀಡಲಾಯಿತು. ಚಾರ್ಲ್‌ಮೇನನ ಈ ಔದಾರ್ಯ ಪೋಪ್ ಮೂರನೆಯ ಲಿಯೋನಿಗೆ ಇವನ ಮೇಲಿನ ಅಭಿಮಾನವನ್ನು ಇನ್ನೂ ಹೆಚ್ಚಿಸಿತು; ಚಾರ್ಲ್‌ಮೇನನು ಕ್ರಿ.ಶ.೮೦೦ರ ಕ್ರಿಸ್‌ಮಸ್ ಹಬ್ಬಕ್ಕೆ ರೋಮಿಗೆ ಬಂದು ಸಂತ ಪೀಟರನ ಚರ್ಚ್‌ನಲ್ಲಿ ದೇವರ ಮುಂದೆ ತಲೆಬಾಗಿಸಿ ನಿಂತಾಗ ಮೂರನೆಯ ಲಿಯೋ ಇವನಿಗೆ ಕಿರೀಟಧಾರಣೆ ಮಾಡಿ ಚಕ್ರವರ್ತಿ ಎಂದು ಸಾರುವುದರ ಜೊತೆಗೆ ಕೈ ಮುಗಿದು ನಿಂತನು. ಇದು ಚಾರ್ಲ್ ಮೇನನಲ್ಲಿ ಅತ್ಯಾಶ್ಚರ್ಯವನ್ನು ಉಂಟು ಮಾಡಿತು ಎಂದು ಐನ್‌ಹಾರ್ಡ್ ಬರೆದಿರುತ್ತಾನೆ. ಸೀಸರನ ಅನಂತರ ರೋಮ್ ಸಾಮ್ರಾಜ್ಯಕ್ಕೆ ಚಕ್ರಾಧಿಪತಿಯಾಗುವುದನ್ನು ಚಾರ್ಲ್‌ಮೇನನು ನಿಜವಾಗಿಯೂ ಬಯಸಿದ್ದನು ಮತ್ತು ಬೈಜಾಂಟೈನಿ ಅಧಿಕಾರದ ಒಪ್ಪಿಗೆ ಪಡೆಯಲು ಕಾನ್‌ಸ್ಟಾಂಟಿನೋಪಲ್‌ನ ಜತೆ ಸಂಧಾನ, ಮಾತುಕತೆಗಳನ್ನು ನಡೆಸಲು ಆರಂಭಿಸಿದ್ದನು. ಬೈಜಾಂಟೈನಿನ ಸ್ಥಿತಿಗಳು ತುಂಬ ಹದಗೆಟ್ಟಿದ್ದರಿಂದ ಇದರ ಒಪ್ಪಿಗೆಯೂ ಕೂಡ ಇವನಿಗೆ ಸಿಕ್ಕಿತು. ಪರಿಣಾಮವಾಗಿ ಪಶ್ಚಿಮ ಯೂರೋಪ್ ಮತ್ತೆ ಚೇತರಿಸಿಕೊಂಡಿತು. ಇಷ್ಟೆಲ್ಲ ಆದರೂ, ಚಾರ್ಲ್‌ಮೇನನಿಗೆ ಪೋಪ ಮೂರನೆಯ ಲಿಯೋ ಕಿರೀಟಧಾರಣೆ ಮಾಡಿದ್ದುದು ಇಷ್ಟವಾಗಿರಲಿಲ್ಲ ಎಂದು ಹೇಳಲಾಗಿದೆ. ಇದಕ್ಕೆ ಕಾರಣ, ಇವನಿಗೆ ಚಕ್ರವರ್ತಿಯಾಗಲು ಇಷ್ಟವಿರಲಿಲ್ಲ ಎಂದಲ್ಲ, ಆದರೆ ಹೀಗೆ ಪೋಪನು ಕಿರೀಟ ಧಾರಣೆ ಮಾಡುವುದರಿಂದ ಚಕ್ರವರ್ತಿಯ ಉನ್ನತ ಅಧಿಕಾರವನ್ನು ಕೊಡುವ ಹಕ್ಕು, ಅಧಿಕಾರ ಪೋಪನ ಕೈಯಲ್ಲಿದೆ ಅಥವಾ ಅವನ ಇಚ್ಛೆಯಾಗಿದೆ ಎಂದು ಬರುತ್ತಿದ್ದ ಅಭಿಪ್ರಾಯವು ಚಾರ್ಲ್‌ಮೇನನಿಗೆ ಇಷ್ಟವಾಗಿರಲಿಲ್ಲ.

ಚಾರ್ಲ್‌ಮೇನನು ಬಹಳ ದೊಡ್ಡ ಆಡಳಿತಗಾರನಾಗಿದ್ದನು. ಆಡಳಿತವನ್ನು ಸುಧಾರಿಸಲು "ಕ್ಯಾಪಿಟುಲರೀಸ್" ಎನ್ನುವ ಶಾಸನಗಳನ್ನು ಹೊರಡಿಸಿದನು. ರಾಜ್ಯದ ಆದಾಯದ ಮೂಲಗಳನ್ನು ಬಹುತೇಕವಾಗಿ ಹೆಚ್ಚಿಸಿದನು. ರಾಜಮನೆತನಗಳ ಆಸ್ತಿಪಾಸ್ತಿಗಳಿಂದ ಆದಾಯವನ್ನು ಸೃಷ್ಟಿಸಿದನು; ತೆರಿಗೆ ಮತ್ತು ಸುಂಕ, ನ್ಯಾಯಸ್ಥಾನಗಳಲ್ಲಿ ವಿಧಿಸಿದ ದಂಡ, ರಾಜ್ಯವಶಮಾಡಿಕೊಳ್ಳುವುದರಿಂದ, ದಂಡಯಾತ್ರೆಗಳಿಂದ, ಶ್ರೀಮಂತರ, ಪುರೋಹಿತರ ಉಡುಗೊರೆಗಳಿಂದ ಮತ್ತು ಇನ್ನೂ ಮುಂತಾದ ಮಾರ್ಗಗಳಿಂದ ಬರುತ್ತಿದ್ದ ಆದಾಯಗಳಿಂದ ರಾಜ್ಯದ ಆರ್ಥಿಕ ಸ್ಥಿತಿಯನ್ನು ಭದ್ರಗೊಳಿಸಿದ್ದನು. ತನ್ನ ಅರಮನೆಯನ್ನು ತನಗೆ ಇಷ್ಟವಾದ ಅಚೆನ್ ಅಂದರೆ ಐಲಾ ಚಾಪೆಲ್ಲ ಎನ್ನುವಲ್ಲಿ ನಿರ್ಮಿಸಿಕೊಂಡಿದ್ದನು. ಸರ್ಕಾರದ ಆಡಳಿತ ಕ್ರಮವನ್ನು ಸುಗಮವಾಗಿ ನಡೆಸಲು ಸುಮಾರು ಅಧಿಕಾರಿಗಳನ್ನು ನೇಮಿಸಿದ್ದನು. ಸಾಮಾನ್ಯ ಜನರು ಮತ್ತು ಪುರೋಹಿತರಿಂದ ಕೂಡಿದ "ಮೇಫೀಲ್ಡ್ಸ್" ಎನ್ನುವ ವಾರ್ಷಿಕ ಸಭೆಗಳನ್ನು ರಾಜ್ಯದ ಮತ್ತು ಧಾರ್ಮಿಕ ವಿಷಯಗಳನ್ನು ಚರ್ಚಿಸಲು ಕರೆದನು. ಕಂಟ್ರಿ(ಪ್ರದೇಶ) ಆಡಳಿತದ ಮುಖ್ಯ ಘಟಕವಾಗಿತ್ತು. ಇದನ್ನು ಒಬ್ಬ ಗ್ರಾಫ್ ಎನ್ನುವ ಕೌಂಟ್‌ನು ನಿರ್ವಹಿಸಿದ್ದನು. ಕಂಟ್ರಿಗಳನ್ನು (ಒಂದು ಪ್ರದೇಶವನ್ನು) ನೂರು ಘಟಕಗಳಾಗಿ ವಿಂಗಡಿಸಿ ಇದನ್ನು ಸಂಟನೈರಿ ಅಥವಾ "ನೂರು ಜನರು" ಎಂಬುದರ ಕೈಯಲ್ಲಿ ಇಟ್ಟಿದ್ದನು. ನಿರಂತರ ಮೇಲ್ವಿಚಾರಣೆಗೆ ಅನುಕೂಲವಾಗುವಂತೆ ಸಾಮ್ರಾಜ್ಯವನ್ನು ಸರ್ಕ್ಯೂಟ್‌ಗಳಾಗಿ ವಿಂಗಡಿಸಿದ್ದನು. ಈ ಸರ್ಕ್ಯೂಟ್‌ಗಳನ್ನು "ಮಿಸ್ಸಿ ಡೊಮಿನಸಿ" ಎನ್ನುವ ಅಧಿಕಾರಿಗಳು ವೀಕ್ಷಿಸುತ್ತಿದ್ದರು.

ಚಾರ್ಲ್‌ಮೇನ್ ಒಬ್ಬ ಅವಿದ್ಯಾವಂತನಾದರೂ ವಿದ್ಯಾಭ್ಯಾಸದ ಕಡೆಗೆ ಅಪಾರವಾದ ಗಮನ ಹರಿಸಿದನು. ಕಲಿಕೆಗೆ ಮತ್ತು ವಿದ್ಯಾಭ್ಯಾಸಕ್ಕೆ ಬಹಳ ಉತ್ತೇಜನ ನೀಡಿದನು. ವಿದ್ವಾಂಸರುಗಳು ತನ್ನ ಸುತ್ತ ಸದಾ ಇರುವುದನ್ನು ಬಯಸುತ್ತಿದ್ದನು. ವಿದ್ಯಾವಂತ ಪುರೋಹಿತ ಜನರಿಗೆ ಒಂದು ಶಾಸನವನ್ನು ಹೊರಡಿಸಿ ಅವರು "ಕೀಳು ಸ್ಥಿತಿಯಲ್ಲಿರುವ ಮಕ್ಕಳ ಜತೆಯಲ್ಲೆ ಅಲ್ಲದೆ ಸ್ವತಂತ್ರ ಜನರ (ಗುಲಾಮಗಿರಿಯಿಂದ ಬಿಡುಗಡೆ ಹೊಂದಿದ) ಮಕ್ಕಳ ಜತೆಯೂ ನಿರರ್ಗಳವಾಗಿ ಸಂಪರ್ಕ ಇಟ್ಟುಕೊಳ್ಳುವಂತೆ" ಆಜ್ಞಾಪಿಸಿದನು. "ಶಾಲೆಗಳನ್ನು ತೆರೆದು, ಅಲ್ಲಿ ಗಂಡುಮಕ್ಕಳಿಗೆ ಓದುವುದು, ಬರೆಯುವುದು ಮತ್ತು ಸ್ಸಾಲ್ಮ್‌ನ ಜ್ಞಾನವನ್ನು, ಹಾಡುಗಳನ್ನು, ಋತುಮಾಸದ ದಿನಗಳನ್ನು ಮತ್ತು ವ್ಯಾಕರಣ ಕಲಿಸಬೇಕೆಂದು" ನಿರ್ದೇಶನ ನೀಡಿದ್ದನು ಮತ್ತು "ಎಲ್ಲಾ ಸಾಮಾನ್ಯ ಜನರು ದೇವರ ಪ್ರಾರ್ಥನೆ ಮತ್ತು ಧರ್ಮವನ್ನು ಕಲಿತಿರಬೇಕು" ಎಂದು ಆಜ್ಞೆಯಿತ್ತಿದ್ದನು. ಅವಿದ್ಯಾವಂತ ನಾಗಿದ್ದೂ, ಸರಿಯಾದ ವಿದ್ಯಾಭ್ಯಾಸವಿಲ್ಲದಿದ್ದರೂ ವಿದ್ಯೆಯನ್ನು ಹೇಗೆ ಗೌರವಿಸಬೇಕೆಂದು ಚಾರ್ಲ್‌ಮೇನನಿಗೆ ತಿಳಿದಿತ್ತು. ಆದ ಕಾರಣ ಇವನಲ್ಲಿದ್ದ "ವಿದ್ಯೆಯ

ದಾಹ' ಮನುಕುಲ ಉದ್ಧಾರದ ಎಲ್ಲಾ ಅಂಶಗಳಿಗಿಂತ ಮುಖ್ಯವಾದದ್ದು. ಗ್ರೀಕ್ ಮತ್ತು ರೋಮನ್ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಮುಂದಿನ ತಲೆಮಾರಿಗೆ ಉಳಿಸಿಕೊಟ್ಟ ಖ್ಯಾತಿ ಚಾರ್ಲ್‌ಮೇನನದ್ದು.

**ಕರೋಲಿಂಜಿಯನ್ ಸಾಮ್ರಾಜ್ಯದ ಪತನ**

ಕ್ರಿ.ಶ.೮೧೪ರಲ್ಲಿ ಚಾರ್ಲ್‌ಮೇನನು ಮೃತಪಟ್ಟ ನಂತರ ಇವನ ಮಗ (ದೈವ ಭಕ್ತ) ಲೂಯಿಸ್ ಇಡೀ ಸಾಮ್ರಾಜ್ಯದ ಆಳ್ವಿಕೆಗೆ ಬಂದನು. ಸುಸಂಸ್ಕೃತ ಮತ್ತು ನಾಗರಿಕನೂ ಆದ ಈತನ ಪ್ರಜೆಗಳು ತುಂಬ ಅನಾಗರಿಕರಾಗಿದ್ದರು. ಸಾಮ್ರಾಜ್ಯವನ್ನು ವಿಂಗಡಿಸುವ ಸಲುವಾಗಿ ತನ್ನ ಮೇಲೆ ಇಟಲಿಯಲ್ಲಿ ದಂಗೆಯೆದ್ದಿದ್ದ ಲಂಬಾರ್ಡಿಯದ ರಾಜ ತನ್ನ ಮಲ ಸಹೋದರ ರಾಜ ಬರ್ನಾರ್ಡ್‌ನನ್ನು ಶಿಕ್ಷಿಸಿ, ಸಾಮ್ರಾಜ್ಯವನ್ನು ವಿಭಜಿಸಲಾಗುವುದಿಲ್ಲ ಎಂದು ತೀರ್ಪಿತ್ತನು. ಲೂಯಿಸನಿಗೆ ಪೋಪನ ಮೇಲೆ ಗೌರವ ಭಕ್ತಿಯಿದ್ದರೂ ಸಾಮ್ರಾಜ್ಯಕ್ಕೆ ಆತನೇ ಅಧಿಪತಿ ಎಂದು ಒಪ್ಪಿಕೊಳ್ಳಲು ಸಿದ್ಧನಿರಲಿಲ್ಲ. ಪೋಪನು ಧಾರ್ಮಿಕ ವಿಷಯಗಳಲ್ಲಿ ಮಾತ್ರ ಸಾರ್ವಭೌಮ, ಆದರೆ ಸಾಮ್ರಾಜ್ಯದ ಆಸ್ತಿ, ವಸಾಹತು ಪ್ರದೇಶಗಳಿಗೆ ಸಂಬಂಧಿಸಿದಾಗ ಅವನೊಬ್ಬ ಸಾಮಂತನಷ್ಟೇ ಎಂಬ ಅಭಿಪ್ರಾಯವುಳ್ಳವ ನಾಗಿದ್ದನು. ಈ ವಿಷಯ ರಾಜ್ಯ ಮತ್ತು ಚರ್ಚಿನ ನಡುವೆ ಎಂದು ವಿವಾದವಾಗಿಯೇ ಲೂಯಿಸ್ ಬದುಕಿರುವವರೆಗೆ ಉಳಿದಿತ್ತು.

ಭಕ್ತಿಶ್ರದ್ಧೆಯ ಲೂಯಿಸ್ ಕ್ರಿ.ಶ.೮೪೦ರಲ್ಲಿ ಸತ್ತನಂತರ, ಸಿಂಹಾಸನಕ್ಕಾಗಿ ಇವನ ಮಕ್ಕಳಲ್ಲಿ ಆರಂಭವಾದದ್ದು ಯುದ್ಧ, ಕ್ರಿ.ಶ.೮೪೩ರಲ್ಲಿ ವರ್ಡುನ್ನಲ್ಲಿ ನಡೆದ ಒಪ್ಪಂದದಿಂದ ಅಂತ್ಯವಾಯಿತು. ಈ ಒಪ್ಪಂದದ ಪ್ರಕಾರ ‘ಹೈರನ್ ಪ್ರದೇಶ, ಸುಮಾರು ಮಧ್ಯ ಯುರೋಪಿನ ಪ್ರದೇಶ ಮತ್ತು ಚಕ್ರವರ್ತಿ ಎಂಬ ಬಿರುದು ಲೋಥೈರ್ ಎಂಬುವವನಿಗೆ ದೊರಕಿತು. ಇವನ ಮಲ ತಮ್ಮ ಚಾರ್ಲ್ಸ್ ದಿ ಬೋಲ್ಡ್ ನಿಗೆ ಆಧುನಿಕ ಫ್ರಾನ್ಸ್ ಎಲ್ಲವೂ ಸಿಕ್ಕಿದರೆ, ಜರ್ಮನಿಯ ಲೂಯಿಸನಿಗೆ ಜರ್ಮನಿಯ ಎಲ್ಲ ಭಾಗಗಳು ದೊರೆತವು. ಕ್ರಿ.ಶ.೮೫೫ರಲ್ಲಿ ಲೊಥೈರ್‌ನ ಸಾವಿನ ನಂತರ ಮಧ್ಯ ಯೂರೋಪು ಮತ್ತೆ ವಿಭಜನೆ ಗೊಂಡಿತು. ಚಾರ್ಲ್ಸ್‌ನನ್ನು ಕ್ರಿ.ಶ.೮೭೫ರಲ್ಲಿ ಪಟ್ಟಕ್ಕೇರಿಸಲಾಯಿತು. ಇದಾದ ಸ್ವಲ್ಪ ಸಮಯದಲ್ಲೆ ಜರ್ಮನಿಯನ್ನು ಆಳುತ್ತಿದ್ದ ಜರ್ಮನ್ನಿನ ಲೂಯಿಸ್ ಸತ್ತ ಕೂಡಲೆ ಆ ಪ್ರಾಂತ್ಯಗಳನ್ನು ವಶಪಡಿಸಿಕೊಳ್ಳಲು ಚಾರ್ಲ್ಸ್‌ನು ಪ್ರಯತ್ನ ಪಟ್ಟನು. ಚಾರ್ಲ್ಸನ ಈ ಪ್ರಯತ್ನದಿಂದಾಗಿ ರಾಜ್ಯದಲ್ಲಿ ಘರ್ಷಣೆ ಮತ್ತು ದಂಗೆಗಳು ತಲೆಯೆತ್ತಿದವು. ಕರೋಲಿಂಜಿ ಯನ್ ಸಾಮ್ರಾಜ್ಯದಲ್ಲಿ ಸಂಯುಕ್ತ ಸಂಸ್ಥಾನದ ಲಕ್ಷಣಗಳನ್ನು ಕಾಣಬಹುದಾಗಿತ್ತು. ಒಂಬತ್ತನೆಯ ಶತಮಾನವು ತುಂಬ ಮುಖ್ಯವಾದ ಬದಲಾವಣೆಗಳ ಕಾಲವಾಗಿತ್ತು. ಕ್ರಿ.ಶ.೮೧೪ ರಿಂದ ೮೭೭ರ ವರೆಗೆ ನಾರ್ಸರು ಮತ್ತು ಆಂತರಿಕ ಗಲಭೆಗಳ ಒಟ್ಟಾರೆಯ ಪರಿಣಾಮದಿಂದಾಗಿ ಕರೋಲಿಂಜಿಯನ್ ಸಾಮ್ರಾಜ್ಯವು ಬಿರುಕು ಬಿಡಲು ಆರಂಭಿಸಿತು. ಕೇಂದ್ರೀಕೃತ ಸರ್ಕಾರ ಮುರಿದುಬಿತ್ತು. ಇದರಿಂದಾಗಿ ದಿನನಿತ್ಯದ ವ್ಯಾಪಾರ ವ್ಯವಹಾರಗಳನ್ನು ನಡೆಸಿಕೊಳ್ಳಲು ಸಮಾಜವು ತನ್ನದೇ ಆದ ಪದ್ಧತಿಗಳನ್ನು ಸೃಷ್ಟಿಸಿಕೊಂಡಿತು, ಇದರ ಒಟ್ಟಾರೆ ಪರಿಣಾಮವಾಗಿ ಭೂಮಾಲಿಕ ವ್ಯವಸ್ಥೆ ಅಸ್ತಿತ್ವಕ್ಕೆ ಬಂತು.

**ಪವಿತ್ರ ರೋಮನ್ ಸಾಮ್ರಾಜ್ಯ**

ಕರೋಲಿಂಜಿಯನ್ ವಂಶದ ಕಟ್ಟಕಡೆಯ ರಾಜನೆಂದರೆ ಲೂಯಿಸ್ ದಿ ಚೈಲ್ಡ್ (ಕ್ರಿ.ಶ.೮೯೯-೯೧೧). ಇವನು ಚಾರ್ಲ್‌ಮೇನ ಮತ್ತು ಅರ್ನಫ್ ಎಂಬುವವರ ಅಕ್ರಮ ಸಂಬಂಧದಿಂದ ಹುಟ್ಟಿದವನಾಗಿದ್ದನು. ಇವನ ಸಾವಿನ ನಂತರ ಸ್ಯಾಕ್ಸನ್ನರು ಮತ್ತು ಉಳಿದ ಜರ್ಮನ್ ಶ್ರೀಮಂತರು ಫ್ರೆಂಕೋನಿಯಾದ ಸಾಮಂತನಾಗಿದ್ದ ಕಾನ್ರಾಡ್ (ಕ್ರಿ.ಶ.೯೧೧-೯೧೮) ಅನ್ನು ಮುಂದಿನ ರಾಜನಾಗಿ ಆಯ್ಕೆ ಮಾಡಿದರು. ತುಂಬ ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದ ಸಾಮಂತ ರಾಜರುಗಳ ಮೇಲೆ ಪುನಃ ರಾಜ ಮನೆತನದ ಅಧಿಕಾರವನ್ನು ಸ್ಥಾಪಿಸಲು ಈತ ತನ್ನೆಲ್ಲ ಕಾಲವನ್ನು ಕಳೆದನು. ಆದರೆ ಅಪಾರವಾಗಿ ಬೆಳೆದು ನಿಂತಿದ್ದ ಪ್ರಾಂತೀಯತೆಯಿಂದ ಮತ್ತು ದ್ವೇಷ, ಅಸೂಯೆಗಳಿಂದ ಸೋತನು. ಕ್ರಿ.ಶ.೯೧೮ರಲ್ಲಿ ಕಾನ್ರಾಡನು ಸತ್ತ ನಂತರ ಹೆನ್ರಿ ದಿ ಫೌಲರ್ ಎಂಬುವವನು ಅಧಿಕಾರಕ್ಕೆ ಬಂದು ಡೇನರಿಂದ ಸಾಮ್ರಾಜ್ಯವನ್ನು ರಕ್ಷಿಸಿದನು. ಸಾವಿನ ಮಂಚದಿಂದ ಇವನ ತಂದೆ ಕಾನ್ರಾಡ್ ಶ್ರೀಮಂತ ಜಮೀನುದಾರರ ಆಂತರಿಕ ವಿಷಯಗಳಲ್ಲಿ ಪಾಲ್ಗೊಳ್ಳದಿರಲು ಹೇಳಿದ ಬುದ್ಧಿವಾದವನ್ನು ಅಕ್ಷರಶಹ ಪಾಲಿಸಿದನು. ಹೀಗಾಗಿ, ಜರ್ಮನಿಯ ಶ್ರೀಮಂತರ ಮೇಲೆ ಇವನ ಅಧಿಕಾರ ಬರೇ ತಾತ್ವಿಕವಾಗಿತ್ತು ಹಾಗೂ ಅವರ ಆಂತರಿಕ ವಿಷಯಗಳಲ್ಲಿ ತಲೆಹಾಕುವುದರಿಂದ ದೂರ ಸರಿದಿದ್ದನು.

ಹೆನ್ರಿ ದ ಫೌಲರ್‌ನ ನಂತರ ಅಟ್ಟೋ, (ಅಟ್ಟೋ ದಿ ಗ್ರೇಟ್) "ಸಾರ್ವಭೌಮ ಅಟ್ಟೋ" (ಕ್ರಿ.ಶ.೯೩೬-೯೭೩) ಎಂದು ಕರೆಯಲಾಗಿರುವವನು ಅಧಿಕಾರಕ್ಕೆ ಬಂದನು. ಇವನು ಸಿಂಹಾಸನಕ್ಕೆ ಬರುವ ವಿಷಯದಲ್ಲಿ ಅಪಾರ ವಿರೋಧಗಳು ಮತ್ತು ಸಮಸ್ಯೆಗಳಿದ್ದವು. ಇವನ ಮಲ ತಮ್ಮ ತಾಂಕ್ಮಾರ್ ಎಂಬುವವನು ಕೂಡ ವಿರೋಧಿಸಿದ್ದನು. ಇವನನ್ನು ದುರಾಸೆಯ ಶ್ರೀಮಂತರುಗಳು ಮತ್ತು ಶ್ರೀಮಂತ ಡೇನರು ಕೂಡ ಬೆಂಬಲಿಸಿದ್ದರು. ಆದರೆ ಅಟ್ಟೋ, ಜರ್ಮನಿಯ ಇತಿಹಾಸ ಕಂಡ ಮಹಾ ಆಳ್ವಿಕೆದಾರನಾದ್ದರಿಂದ ಎಲ್ಲಾ ವಿರೋಧಗಳನ್ನು, ದಂಗೆಯನ್ನು ಕಾನ್ರಾಡ್ ದ ರೆಡ್ ಎಂಬುವ ರಾಜಮನೆತನದವನ ಬೆಂಬಲದಿಂದ ಸದೆಬಡಿದನು. ರಾಜಮನೆತನದವರ ಪೂರ್ಣ ಬೆಂಬಲವನ್ನು ಪಡೆದುಕೊಂಡು ಯಾವ ದಂಗೆಗಳೂ ಇಲ್ಲದೆ ಶಾಂತಿಯುತವಾದ ವಾತಾವರಣವನ್ನು ಸೃಷ್ಟಿಸಿದನು. ಸಾಮ್ರಾಜ್ಯದ ಪೂರ್ವ ದಿಕ್ಕಿನಲ್ಲಿ ದಾಳಿ ಮಾಡುತ್ತಿದ್ದ ಮ್ಯಾಗ್ಯಾರ್ಸ್ ಎಂಬುವವರನ್ನು ಇಂದಿನ ಆಧುನಿಕ ಹಂಗೇರಿಯಲ್ಲಿ ನೆಲೆಯೂರುವಂತೆ ಮಾಡಿದನು. ಜರ್ಮನಿಯನ್ನು ಏಕೀಕರಣಗೊಳಿಸಲು ಅಪಾರವಾಗಿ ಪ್ರಯತ್ನಪಟ್ಟನಾದರೂ ಇಟಲಿಯ ವಿಷಯವಾಗಿ ತಳೆದ ನಿಲುವು ಅದಕ್ಕೆ ಆಸ್ಪದ ಕೊಡಲಿಲ್ಲ.

ಪೋಪನ ಸಾಮ್ರಾಜ್ಯ ತುಂಬ ದುಸ್ಥಿತಿಯಲ್ಲಿತ್ತು; ಈ ಸಮಯವು ಇಟಲಿಯ ಆಂತರಿಕ ಸಮಸ್ಯೆಗಳಲ್ಲಿ ಕೈ ಹಾಕುವುದಕ್ಕೆ ಯೋಗ್ಯವಾಗಿತ್ತು. ಕಾರಣ, ಪೋಪನ ಸ್ಥಾನಮಾನ, ಗೌರವ ತುಂಬ ಅಧೋಗತಿಯಲ್ಲಿತ್ತು. ಕ್ರಿ.ಶ.೯೫೧ರಲ್ಲಿ ಅಟ್ಟೊ ಉತ್ತರ ಇಟಲಿಗೆ ಪ್ರವೇಶಿಸಿ ಲಂಬಾರ್ಡಿಯನ್ನು ಗೆದ್ದುಕೊಂಡು ಅಲ್ಲಿನ ಅರಸನಾದ ಮತ್ತು ಅಲ್ಲಿನ ಹಿಂದಿನ ಅರಸನ ಪತ್ನಿ ಅಡಿಲೈಡ್‌ಳನ್ನು ಮದುವೆಯಾದ. ಕ್ರಿ.ಶ.೯೬೨ರಲ್ಲಿ ರೋಮಿಗೆ ಆಗಮಿಸಿ ಹಳೆಯ ಸಾಮ್ರಾಜ್ಯದ ರೀತಿನೀತಿಗಳನ್ನು ಜೀವಂತಗೊಳಿಸಿದನು. ಪೋಪ್ ೧೨ನೆಯ ಜೋಹ್‌ನು ಅಟ್ಟೋ ಮತ್ತು ರಾಣಿ ಅಡಿಲೈಡ್‌ರಿಗೆ ಕಿರೀಟಧಾರಣೆ ಮಾಡಿ ಚಕ್ರವರ್ತಿ ಮತ್ತು ಚಕ್ರವರ್ತಿನಿಯೆಂದು ಘೋಷಿಸಿದನು. ಇದರಿಂದಾಗಿ "ಪವಿತ್ರ ರೋಮನ್ ಸಾಮ್ರಾಜ್ಯ" ಅಸ್ತಿತ್ವಕ್ಕೆ ಬಂತು. "ಪವಿತ್ರ"ವಾದುದು ಏಕೆಂದರೆ ಪೋಪನ ನೇರವಾದ ಸಂಬಂಧ ಇದರಲ್ಲಿತ್ತು.

ಪವಿತ್ರ ರೋಮನ್ ಸಾಮ್ರಾಜ್ಯವು ಸಾವಿರ ವರುಷಗಳ ಕಾಲ ಅಂದರೆ ನೆಪೋಲಿಯನ್ ಇದನ್ನು ಸುಮಾರು ಕ್ರಿ.ಶ.೧೮೦೬ರಲ್ಲಿ ತೆಗೆದು ಹಾಕುವ ತನಕ ಉಳಿದುಕೊಂಡು ಬಂತು. ಪವಿತ್ರ ರೋಮನ್ ಸಾಮ್ರಾಜ್ಯದ ಚಕ್ರವರ್ತಿಗಳೆಲ್ಲ ಜರ್ಮನಿಯವರೇ ಆಗಿದ್ದರು. ಆದ್ದರಿಂದಲೇ ಜರ್ಮನ್ೀಯ ಶ್ರೀಮಂತರುಗಳ ಮೇಲೆ ಚಕ್ರವರ್ತಿಯ ಅಧಿಕಾರ ಬರೇ ತೋರ್ಪಡೆಯದಾಗಿತ್ತು. ಪವಿತ್ರ ರೋಮನ್ ಸಾಮ್ರಾಜ್ಯದ ಚಕ್ರಾಧಿಪತ್ಯಕ್ಕೆ ಆಯ್ಕೆಯ ಪದ್ಧತಿ ಹುಟ್ಟಿಕೊಂಡಿತು. ಚಕ್ರಾಧಿಪತಿಯನ್ನು ಆರಿಸುವವರು ಜರ್ಮನಿಯ ಶ್ರೀಮಂತರಾಗಿ ದ್ದರು. ಎಲಕ್ಟರ್ಸ್ ಹಾಗೂ ಈ ಶ್ರೀಮಂತರುಗಳ ಆಸ್ತಿಪಾಸ್ತಿಗಳು 'ಎಲೆಕ್ಟೋರೇಟ್ಸ್ ' ಆಗಿ ಚುನಾವಣೆಯ ಕ್ಷೇತ್ರಗಳಾದವು.

**ಭೂಹಿಡುವಳಿ ಪದ್ಧತಿ**

ಭೂಹಿಡುವಳಿ ಪದ್ಧತಿಯನ್ನು ಹೀಗೆ ವ್ಯಾಖ್ಯಾನಿಸಬಹುದಾಗಿದೆ : "ಭೂ ಹಿಡುವಳಿಯ ಮತ್ತು ವೈಯಕ್ತಿಕ ಕರಾರುಗಳ ಆಧಾರದ ಮೇಲೆ, ಸರ್ಕಾರದ ಕೆಲಸಗಳನ್ನು ಖಾಸಗಿಯಾಗಿ ನಡೆಸುವ, ಸಮಾಜದ ಸ್ವಯಂಪ್ರೇರಿತವಾದ ಒಂದು ಸಂಘಟನೆ". ಊಳಿಗಮಾನ್ಯ ಪದ್ಧತಿಯು ರೋಮನ್ ಸಾಮ್ರಾಜ್ಯದ ಕೊನೆಯ ದಿನಗಳಲ್ಲಿ ಹುಟ್ಟಿತೆಂದು ತಿಳಿಯ ಬಹುದಾಗಿದೆ. ದೊಡ್ಡ ಹಿಡುವಳಿದಾರರ ವಿರುದ್ಧ ಸ್ಪರ್ಧಿಸಲಾಗದೆ, ತೆರಿಗೆಯ ಹೊರೆಯನ್ನು ಹೊರಲಾಗದೆ ಸಣ್ಣ ಹಿಡುವಳಿದಾರರು ತಮ್ಮ ಭೂಮಾಲಿಕೆಯ ಹಕ್ಕನ್ನು ಶ್ರೀಮಂತ ಹಾಗೂ ಪ್ರಭಾವಶಾಲಿ ಹಿಡುವಳಿದಾರರಿಗೆ ಒಪ್ಪಿಸಿದರು. ಇದಾದ ನಂತರ ತಾವು ಸಲ್ಲಿಸುವ ಸೇವೆ ಮತ್ತು ಬೆಳೆಯಲ್ಲಿ ಒಂದು ಭಾಗವನ್ನು ಕೊಡುವುದರ ಆಧಾರದ ಮೇಲೆ ಭೂಮಿಯ ಮೇಲಿನ ಹಕ್ಕನ್ನು ಪಡೆದುಕೊಂಡರು. ಖಾಸಗಿ ಭೂಮಾಲಿಕರು ತೆಗೆದುಕೊಳ್ಳುವ ನಿರ್ಧಾರಗಳು ಅಂತಿಮವಾಗಿದ್ದವು. ಗುಲಾಮ-ಗೇಣಿದಾರರು ತಾವು ಬೆಳೆದದ್ದರಲ್ಲಿ ಒಂದು ಭಾಗವನ್ನು ಭೂಮಾಲಿಕರಿಗೆ ಇಲ್ಲವೇ ಸರಕಾರಕ್ಕೆ ಕೊಡಬೇಕಾಗಿತ್ತು.

ಅಂತೆಯೇ, ಭೂಹಿಡುವಳಿದಾರ ಪದ್ಧತಿ ದುರ್ಬಲರು ಹಾಗೂ ಬಡವರು, ಶ್ರೀಮಂತರಿಗೆ ತಮ್ಮನ್ನು ತಾವು ಅಡವಿಟ್ಟುಕೊಂಡ ಕಾರಣದಿಂದಾಗಿ ಹುಟ್ಟಿಕೊಂಡಿತು. ತೆರಿಗೆ ವಸೂಲು ಮಾಡುವುದರಿಂದ, ದರೋಡೆಗಳಿಂದ ಹಾಗೂ ನ್ಯಾಯಾಲಯದಲ್ಲಿನ

ಅನ್ಯಾಯಗಳಿಂದ ತಪ್ಪಿಸಿಕೊಳ್ಳಲು ಬಹುತೇಕ ಬಡವರು ಶ್ರೀಮಂತರಿಗೆ ತಮ್ಮನ್ನು ತಾವು ಅಡವಿಟ್ಟುಕೊಂಡು, ಶ್ರೀಮಂತನು ನೀಡಿದ ರಕ್ಷಣೆಗೆ ಪ್ರತಿಯಾಗಿ ಗೊತ್ತುಪಡಿಸಿದ ಕೆಲವೇ ಕೆಲಸಗಳನ್ನು ಮಾಡುತ್ತಿದ್ದರು.

ಹಿಡುವಳಿದಾರಿಕೆ ಒಂದು ರೀತಿಯಲ್ಲಿ ಒಂದು ತರಹದ ಸರಕಾರ ಮತ್ತು ರಾಜಕೀಯ ವ್ಯವಸ್ಥೆ ಎಂದೇ ಹೇಳಬಹುದಾಗಿದೆ. ಭೂಮಾಲಿಕ ಅಥವಾ ಭೂ ಒಡೆಯ ತನ್ನ ಹಿಡುವಳಿದಾರರಿಗೆ ಸರ್ಕಾರದ ಪ್ರತಿನಿಧಿಯಾಗಿರುತ್ತಿದ್ದನು. ಇವನು ತನ್ನದೇ ಆದ ಸೈನ್ಯವನ್ನು ಇಟ್ಟುಕೊಂಡಿದ್ದನು. ಇದಕ್ಕಾಗಿ ತೆರಿಗೆಯನ್ನು ವಸೂಲು ಮಾಡುತ್ತಿದ್ದನು. ಸಂಯುಕ್ತ ನ್ಯಾಯಾಲಯದಲ್ಲಿ ನ್ಯಾಯ ಕೊಡುತ್ತಿದ್ದನು. ಕಾನೂನಿನ ವ್ಯಾಪ್ತಿಯಿಂದ ವಿನಾಯಿತಿಯನ್ನು ನೀಡುವ ಪದ್ಧತಿಯು ಹುಟ್ಟಿಕೊಂಡ ಪರಿಣಾಮವಾಗಿ, ಭೂ ಒಡೆಯರ ಸರ್ಕಾರಿ ಅಧಿಕಾರ ಹೆಚ್ಚಾಗಿ ಬೆಳೆಯಿತೆಂದು ತಿಳಿಯಬಹುದಾಗಿದೆ. ಮೆರೋವಿಂಜಿಯನ್ನರ ಆಳ್ವಿಕೆಯ ಕಾಲದಿಂದಲೂ ಈ ವ್ಯವಸ್ಥೆ ಇತ್ತು. ರಾಜನು ಕಾನೂನು ವಿನಾಯಿತಿಯ ಪತ್ರವೊಂದನ್ನು ನೀಡುತ್ತಿದ್ದನು. ಪರಿಣಾಮವಾಗಿ ಇದನ್ನು ಪಡೆದವರಿಗೆ ಆ ಪತ್ರದಲ್ಲಿ ಹೇಳಲಾಗಿರುವ ವಿಷಯಗಳಲ್ಲಿ ರಾಜ್ಯದ ಕಾನೂನುಗಳಿಂದ ಯಾವುದೇ ಹಸ್ತಕ್ಷೇಪವಿರು ತ್ತಿರಲಿಲ್ಲ. ಈ ಸವಲತ್ತುಗಳು ಮೂಲವಾಗಿ ಪತ್ರ ಪಡೆದವನಿಗೆ ಮಾತ್ರ ಅನ್ವಯಿಸುತ್ತಿತ್ತು ಮತ್ತು ಸೀಮಿತವಾಗಿತ್ತು. ಆದರೆ ರಾಜಮನೆತನದಂತೆ ಈ ಸವಲತ್ತು ಕೂಡ ವಂಶ ಪಾರಂಪರ್ಯವಾಗಿ ಸಿಗಬೇಕು ಎನ್ನುವ ತತ್ವದ ಬೆಳವಣಿಗೆಯನ್ನು ತಡೆಯಲಾಗಲಿಲ್ಲ. ಚಾರ್ಲ್‌ಮೇನನ ಕಾಲವನ್ನು ಬಿಟ್ಟು, ಇನ್ನುಳಿದ ಕಾರೋಲಿಂಜಿಯನ್ನರ ಅವಧಿಯಲ್ಲಿ ವ್ಯಕ್ತಿಗಳು ಮತ್ತು ಧಾರ್ಮಿಕ ಸಂಸ್ಥೆಗಳು ಕಾನೂನು ವಿನಾಯಿತಿಯನ್ನು ಪಡೆಯುವುದು, ಗಣನೀಯವಾಗಿ ಹೆಚ್ಚಾಯಿತು. ಕಡೆಯ ಕರೋಲಿಂಜಿಯನ್ನರ ಆಳ್ವಿಕೆಯಲ್ಲಿ ಎಲ್ಲಾ ನಿಯಮಗಳ ಕಡ್ಡಾಯವನ್ನು ತೂರಿ ಬಿಡಲಾಗಿತ್ತು. ಸುಮಾರು ಜನರು ಯಾವ ಒಂದು ಪತ್ರದ ಅನುಮತಿಯೂ ಇಲ್ಲದೆ ಈ ಸವಲತ್ತನ್ನು ಕಬಳಿಸಿಕೊಂಡಿದ್ದರು.

ಭೂಹಿಡುವಳಿ ಪದ್ಧತಿ ಸಾಮಾಜಿಕ ವ್ಯವಸ್ಥೆಯೂ, ಒಂದು ಆರ್ಥಿಕ ವ್ಯವಸ್ಥೆಯೂ, ಮತ್ತು ಒಂದು ರೀತಿಯ ಸರಕಾರವು ಆಗಿತ್ತು. ಊಳಿಗಮಾನ್ಯ ಪದ್ಧತಿಯ ಉಗಮವನ್ನು ಅರ್ಥಮಾಡಿಕೊಳ್ಳಬೇಕಾದರೆ ಮಧ್ಯಯುಗದ ಯುರೋಪಿನ ಇತಿಹಾಸದ ಪ್ರತಿಪುಟವನ್ನು ಎಚ್ಚರಿಕೆಯಿಂದ ಓದಬೇಕಾಗುತ್ತದೆ. ಯಾವುದೇ ಒಂದು ರಾಜಕೀಯವಾದ ವ್ಯವಸ್ಥೆಯಿಲ್ಲದ ಬರ್ಬರರು ರೋಮನ್ ಸಾಮ್ರಾಜ್ಯ ವ್ಯವಸ್ಥೆಯನ್ನು ನುಚ್ಚುನೂರು ಮಾಡಿ ತಮ್ಮ ಅವ್ಯವಸ್ಥೆಯನ್ನು ಅಲ್ಲಿಗೆ ತುಂಬಿದರು. ಆದ್ದರಿಂದ ಗಲಭೆ ಯುರೋಪಿನ ಉದ್ದಗಲಕ್ಕೆ ಪೂರ್ಣವಾಗಿ ಆವರಿಸಿತು. ಆದರೆ, ಕ್ರೈಸ್ತಚರ್ಚು ಒಂದುಗೂಡಿಸುವ ಪ್ರಭಾವವನ್ನು ಎಲ್ಲಾ ಕ್ರೈಸ್ತರ ಮೇಲೆ ಮತ್ತು ಮತಾಂತರಗೊಂಡ ಎಲ್ಲ ಬರ್ಬರರ ಮೇಲೆ ಪ್ರಯೋಗಿಸಿತ್ತು. ಕರೋಲಿಂಜಿಯನ್ ಸಾಮ್ರಾಜ್ಯ ಸ್ವಲ್ಪ ಕಾಲದವರೆಗೆ ಯುರೋಪಿನಲ್ಲಿ ಅನಾಗರಿಕ ವ್ಯವಸ್ಥೆಯನ್ನು ಸುಧಾರಿಸಿತ್ತು. ಚಾರ್ಲ್‌ಮೇನನ ಸಾವಿನ ನಂತರ ಆಡಳಿತಕ್ಕೆ ಬಂದ ಅವಳ ಮಕ್ಕಳು ಲೂಯಿಸ್‌ದ ಪಾಯಸ್ ಮತ್ತು ಇನ್ನೂ ಪ್ರಭಾವಶಾಲಿಗಳಾದವರು ಸಾಮ್ರಾಜ್ಯವನ್ನು ಯುದ್ಧ ಮಾಡುವ ರಾಜ್ಯಗಳನ್ನಾಗಿ ಹರಿದು ಹಂಚಿದ್ದರು. ಸಾಮಾಜಿಕ ಪರಿಸ್ಥಿತಿಗಳು ಇನ್ನೂ ಡೋಲಾಯಮಾನ ಸ್ಥಿತಿಯಲ್ಲಿದ್ದ ಮಧ್ಯ ಯುರೋಪಿನ ಮೇಲೆ ಪ್ರಾಚೀನ ರೋಮನ್ ಸಾಮ್ರಾಜ್ಯದ ಆಡಳಿತ ವ್ಯವಸ್ಥೆ ಯಾವ ಪ್ರಭಾವವನ್ನೂ ಬೀರಿರಲಿಲ್ಲ. ಭದ್ರ ಸರಕಾರವಿಲ್ಲದ, ಕಾನೂನುಗಳೇ ಇಲ್ಲದ ಸಣ್ಣ ಪುಟ್ಟ ಪ್ರಾಂತ್ಯಗಳಲ್ಲಿ ಬಡಿದಾಟ, ಯುದ್ಧ, ಸಾಮಾಜಿಕ ಅಭದ್ರತೆ ಬಹುತೇಕ ಸಾಮಾನ್ಯ ಹಾಗೂ ಬಡಜನರು ಪ್ರತಿನಿತ್ಯ ಅನುಭವಿಸಬೇಕಾಗಿದ್ದ ವಿಧಿ ಬರಹವಾಗಿತ್ತು. ಇವರುಗಳಿಗೆ ಜೀವನ, ಬದುಕಿಗಾಗಿ ನಡೆಸಿದ ಒಂದು ಯುದ್ಧವಾಗಿತ್ತು. ಇಂಥಹ ಸಾಮಾಜಿಕ ಅಭದ್ರತೆಯಿಂದ ಮುಕ್ತಿಯನ್ನು ಬಯಸುವವರಿಗೆ ಉಳಿದಿದ್ದು ಒಂದೇ ದಾರಿ ಎಂದರೆ ಕೋಟೆ, ಕೊತ್ತಲ, ತಮ್ಮದೇ ಆದ ಸೈನ್ಯವನ್ನು ಇಟ್ಟುಕೊಂಡಿದ್ದ ಪ್ರಬಲರಾದ ಶ್ರೀಮಂತರಿಗೆ ಮಾರಿಕೊಳ್ಳುವುದು. ಇವರಿಗೆ ಕೊಡಬೇಕಾದ ಕಾಣಿಕೆಯೆಂದರೆ ದೋಚುವುದು. ಸಾಮಾನ್ಯ ಜನರು ತಮಗೆ ರಕ್ಷಣೆ ನೀಡಿದವರಲ್ಲಿ ವಿಧೇಯರಾಗಿ ಅವರ ಆಳುಗಳಾಗಿ ಉಳಿದುಕೊಂಡರು.

ಅತಿದೊಡ್ಡವರೆಂದರೆ "ನೋಬಲ್ಸ್" ಅಥವಾ "ಲಾರ್ಡ್ಸ್" ಆಗಿದ್ದರು. ಇವರಿಗೆ ಹೊಡೆದಾಟವು ಒಂದು ಆಟವೂ ಮತ್ತು ವ್ಯಾಪಾರವೂ ಆಗಿತ್ತು. ಇವರಿಗೆ ಅಡಿಯಾಳಾಗಿ ಕೆಲಸ ಮಾಡುತ್ತಿದ್ದವರೆಂದರೆ ಆಡಳಿತ ವ್ಯವಸ್ಥೆಯಲ್ಲಿದ್ದು, ಓದು ಬರಹ ಬಲ್ಲವರಾಗಿದ್ದು, ಲೆಕ್ಕವನ್ನು ಬರೆಯುತ್ತಿದ್ದ ಕರಣಿಕರು ಮತ್ತು ಸೇವಕರು. ರೈತ ಸಮುದಾಯ ಉತ್ತು ಬಿತ್ತು ಹದ ಮಾಡಿದ ಭೂಮಿಯನ್ನು ಭೂ ಒಡೆಯನಿಗೆ ನೀಡಿ ಪ್ರತಿಯಾಗಿ ರಕ್ಷಣೆ ಪಡೆಯುತ್ತಿತ್ತು.

ಭೂ ಒಡೆಯನಿಗಾಗಿ ರಣರಂಗದಲ್ಲಿ ಯುದ್ಧ ಮಾಡುತ್ತಿದ್ದ ಮತ್ತು ಯುದ್ಧಗಳಲ್ಲಿ ಸಹಾಯ ಮಾಡುತ್ತಿದ್ದ ಹಿಡುವಳಿದಾರರೂ ಕೂಡ ಇದ್ದರು. ಹಿಡುವಳಿದಾರರಿಗೆ ಭೂಮಿ ಯನ್ನು ನೀಡುವ ಪದ್ಧತಿಯನ್ನು ಇನ್‌ಫ್ಯೂಡೇಷನ್ ಎಂದು ಕರೆಯುತ್ತಿದ್ದರು. ಹೆಚ್ಚಿನ ಭೂಮಿಯನ್ನು ಭೂ ಒಡೆಯನಿಂದ ಪಡೆದು, ಅದನ್ನು ಅಧೀನರಾಗಿರುವ ಪರರಿಗೂ ಹಂಚುವುದನ್ನು ಸಬ್ ಇನ್‌ಫ್ಯೂಡೇಷನ್ ಎಂದು ಕರೆಯುತ್ತಿದ್ದರು. ಭೂ ಹಿಡುವಳಿದಾರರು ತನ್ನ ಒಡೆಯನಿಗೆ ಹಿಡುವಳಿಯ ವಿಷಯಗಳಿಗೆ ಸಂಬಂಧಿಸಿದಂತೆ ನ್ಯಾಯಸ್ಥಾನದಲ್ಲಿ ಸಹಕರಿಸಲು ಒಪ್ಪಿಗೆ ನೀಡುತ್ತಿದ್ದರು. ಯಾವಾಗಲಾದರೂ ತನ್ನ ಭೂ ಒಡೆಯ ಶತ್ರುಗಳ ಕೈಯಲ್ಲಿ ಬಂಧಿಯಾದಾಗ ಹಿಡುವಳಿದಾರರು ಹಣ ಕೊಟ್ಟು ಬಿಡಿಸಿಕೊಳ್ಳಬೇಕಾಗಿತ್ತು. ಒಡೆಯನ ಹಿರಿಯ ಮಗಳು ಮದುವೆಯಾಗುವಾಗ ಹಿಡುವಳಿದಾರರು, ಅವಳಿಗೆ ಬಳುವಳಿಯನ್ನು ಕೊಡುವ ಪದ್ಧತಿಯೂ ಇತ್ತು. ಅಂತೆಯೇ ಹಿಡುವಳಿದಾರನು, ಭೂ ಒಡೆಯನ ಹಿರಿಯ ಮಗ “ಧೀರ ರಕ್ಷಕ” ಆದಾಗ ಅವನಿಗೆ ರಕ್ಷಕ ಸಂಭಾವನೆ ನೀಡ ಬೇಕಿತ್ತು. ಹಿಡುವಳಿದಾರನು “ಹಿಡುವಳಿ ಬಾಕಿಗಳೆಂಬ”ಹಕ್ಕುಗಳನ್ನು ಅನುಭವಿಸು ತ್ತಿದ್ದನು. ಹಿಡುವಳಿದಾರನು ಸತ್ತ ಮೇಲೆ ಅವನ ಮಗ ಈ ಸ್ಥಾನವನ್ನು ವಂಶ ಪಾರಂಪರ್ಯವಾಗಿ ಪಡೆಯಬಹುದಾಗಿತ್ತು. ಆದರೆ ಸಂಪ್ರದಾಯ ನಿಗದಿಸಿ “ವಿನಾಯಿತಿ” ತೆರಿಗೆಯನ್ನು ಕೊಡಬೇಕಿತ್ತು. ಹಿಡುವಳಿದಾರನ ಮಕ್ಕಳು ಚಿಕ್ಕವರಾಗಿದ್ದರೆ ಅವರು ವಯಸ್ಸಿಗೆ ಬರುವತನಕ ಭೂ ಒಡೆಯನೆ ನೋಡಿಕೊಳ್ಳಬೇಕಾಗಿತ್ತು. ಭೂ ಒಡೆಯ ಮತ್ತು ಹಿಡುವಳಿದಾರರಿಬ್ಬರೂ ಉನ್ನತ ಮಟ್ಟದ ಶ್ರೀಮಂತರಾಗಿರುತ್ತಿದ್ದರು. ಹಿಡುವಳಿದಾರರಾಗುವವರಲ್ಲಿ ಯಾವುದೇ ಕೀಳರಿಮೆಯಿರಲಿಲ್ಲ. ಏಕೆಂದರೆ ರಾಜರುಗಳೂ ಕೂಡ ಕೆಲವೇ ಜಹಗೀರುಗಳಿಗೆ ಹಿಡುವಳಿದಾರರಾಗಿರುತ್ತಿದ್ದರು. ಮಧ್ಯಯುಗದಲ್ಲಿ ದೇವರು ಮೂರು ವರ್ಗಗಳನ್ನು ಸೃಷ್ಟಿಸಿದ್ದಾನೆ ಎಂಬುದು ಸರ್ವೇಸಾಮಾನ್ಯವಾದ ಮಾತಾಗಿತ್ತು; ಯುದ್ಧ ಮಾಡಲು ಶ್ರೀಮಂತರು(ನೋಬಲ್ಸ್), ಪ್ರಾರ್ಥಿಸಲು ಪುರೋಹಿತರು (ಕ್ಲರ್ಜಿ), ಕೆಲಸ ಮಾಡಲು ಸಾಮಾನ್ಯ ಜನರು. ಈ ಹೇಳಿಕೆ ಮಧ್ಯಯುಗದ ಯುರೋಪಿನ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಮತ್ತು ಊಳಿಗಮಾನ್ಯ ಪದ್ಧತಿಗಿದ್ದ ಪ್ರಾಮುಖ್ಯತೆಯನ್ನು ತಿಳಿಸುತ್ತದೆ.

**ಮನೋರಿಯಲ್ ಪದ್ಧತಿ**

ಭೂಮಿಯನ್ನು ಉತ್ತು, ಬಿತ್ತು ವ್ಯವಸಾಯ ಮಾಡುತ್ತಾ ಅಲ್ಲೇ ವಾಸವಾಗಿದ್ದ ಮತ್ತು ಯಾವುದೇ ಸ್ವಾತಂತ್ರ್ಯವನ್ನೂ ಅನುಭವಿಸದ ಕೆಳವರ್ಗದ ಜನರೇ ಜೀತದಾಳುಗಳು. ಸರ್ಫ್ ಅಂದರೆ ಜೀತದಾಳು/ಗುಲಾಮನೆಂದರ್ಥ. ಒಡೆಯನ ಜಮೀನಿನ ಮೇಲೆ ದುಡಿಯುವುದು ಇವನ ಕೆಲಸ ಮತ್ತು ಒಡೆಯನ ಒಪ್ಪಿಗೆಯಿಲ್ಲದೆ ಕೆಲಸ ಬಿಡುವಂತಿರಲಿಲ್ಲ. ಒಡೆಯನ ಕೊತ್ತಲ, ಅದರ ಸುತ್ತಣ ಬೆಳೆಯುವ ಭೂಮಿ ಮತ್ತು ಇವನ ಕೈಕೆಳಗಿನ ಹಿಡುವಳಿ ದಾರರೆಲ್ಲರೂ ಕೂಡಿ ಇರುವ ಸ್ಥಾನವೇ ಮೆನಾರ್. ಜೀತದಾಳನ್ನು ಮತ್ತು ಭೂಮಾಲಿಕರನ್ನು ಭೂ ಒಡೆತನದಲ್ಲಿ ಹಿಡಿದಿಡುವ ಪದ್ಧತಿಯೇ “ಮನೋರಿಯಲ್ ಪದ್ಧತಿ”. ‘ಮೆನಾರ್’ನಲ್ಲಿ ಅಥವಾ ‘ವಿಲ್ಲಾ’ದಲ್ಲಿ ಕೆಲಸ ಮಾಡುವ ಕೂಲಿಕಾರರನ್ನು “ವಿಲ್ಲೀನ್” ಎಂದು ಕರೆಯಲಾಗುತ್ತಿತ್ತು. ಇದೊಂದು ಶ್ರೇಣೀಕೃತ ವ್ಯವಸ್ಥೆಯಾಗಿತ್ತು. ಇದರ ಮೇಲ್ತುದಿಯಲ್ಲಿ ಪ್ರಭು ಇರುತ್ತಿದ್ದು, ಇವನು ರಾಜನನ್ನು ಬೇಕಾದರೆ ಎದುರು ಹಾಕಿಕೊಳ್ಳುವಷ್ಟು ಶಕ್ತಿಯುಳ್ಳವನಾಗಿರುತ್ತಿದ್ದನು. ಅಲ್ಲದೇ, ಯಾರೇ ಹಿಡುವಳಿದಾರ ಅಥವಾ ಜೀತದಾಳು ಇವನ ರಕ್ಷಾ ಪರಿಧಿಯನ್ನು ಬಿಟ್ಟು ಹೊರಗೆ ಹೋಗುವಂತಿರಲಿಲ್ಲ. ಏಕೆಂದರೆ, ಹಾಗೆ ಹೊರಗೆ ಬಂದರೂ ಅಂತವರನ್ನು ಹೊರಗಿನ ಸಮಾಜ ಬೆಂಬಲಿಸುತ್ತಲೂ ಇರಲಿಲ್ಲ, ರಕ್ಷಿಸುತ್ತಲೂ ಇರಲಿಲ್ಲ.

**ಮೂರು ವರ್ಗಗಳು**

ಮಧ್ಯಯುಗದ ಯುರೋಪಿನ ಸಮಾಜ ಮೂರು ವರ್ಗಗಳನ್ನು ಅಥವಾ ಶ್ರೇಣಿಗಳನ್ನು ಹೊಂದಿತ್ತು : ಪುರೋಹಿತರು (ಚರ್ಚು), ಶ್ರೀಮಂತರು (ದಿ ನೊಬಿಲಿಟಿ) ಭೂ ಒಡೆಯರು ಮತ್ತು ಹಿಡುವಳಿದಾರರು ಮತ್ತು ಸಾಮಾನ್ಯ ಜನರು-ಜೀತದಾಳುಗಳು. ಬಿಷಪ್ಪರು ಮತ್ತು ಉಳಿದ ಚರ್ಚ್‌ನ ಅಧಿಕಾರಿಗಳು ಕೂಡ, ರಾಜನಂತೆ ಭೂಮಿಯನ್ನು ಹೊಂದಿರುತ್ತಿದ್ದು, ಅದನ್ನು ಅವರು ಭೂ ಹಿಡುವಳಿದಾರರಿಗೆ ಹಂಚಿರುತ್ತಿದ್ದರು. ಆದ್ದರಿಂದ, ಪುರೋಹಿತರಿಗೆ ಮತ್ತು ಚರ್ಚಿನ ಅಧಿಕಾರಿಗಳಿಗೆ ಇಬ್ಬರು ಯಜಮಾನರಿದ್ದರು; ಒಂದೆಡೆ ಧರ್ಮಾತೀತ ಭೂ ಒಡೆಯನಾದ ರಾಜ, ಮತ್ತೊಂದೆಡೆ ಧಾರ್ಮಿಕ ಮುಖಂಡನಾದ ಪೋಪ್. ಈ ಇಬ್ಬಗೆಯ ಸ್ವಾಮಿನಿಷ್ಠೆ ಮಧ್ಯಯುಗದ ಯುರೋಪಿನ ಸಮಾಜದ ಬಹುತೇಕ ತಪ್ಪುಗಳಿಗೆ ಮತ್ತು ನೋವುಗಳಿಗೆ ಮೂಲವಾಗಿತ್ತು.

ಭೂಮಿಯಿಂದಲೇ ಎಲ್ಲಾ ಐಶ್ವರ್ಯವೂ ಅಂದಿನ ಕಾಲದಲ್ಲಿ ಬರಬೇಕಾಗಿದ್ದುದರಿಂದ ರಾಜನೇ ರಾಜ್ಯದ ಅತಿದೊಡ್ಡ ಭೂಮಾಲೀಕನಾಗಿರುತ್ತಿದ್ದ. ರಾಜ್ಯದ ಎಲ್ಲ ಭೂಮಿಯು ರಾಜನದಾಗಿತ್ತು. ರಾಜನು ತನ್ನ ಜಹಗೀರಿದಾರರಿಗೆ ಭೂ ಒಡೆತನವನ್ನು ವಹಿಸುತ್ತಿದ್ದನು. ರಾಜ ಮತ್ತು ಜಹಗೀರಿದಾರಿಕೆ ಮಧ್ಯ ಸಂಬಂಧ "ಹೊಮೇಜ್" ಸ್ವಾಮಿನಿಷ್ಠೆಯಾಗಿತ್ತು. ಸ್ವಾಮಿನಿಷ್ಠೆಯನ್ನು ತಕ್ಷಣದ ಒಡೆಯನಿಗೆ ತೋರಿಸಬೇಕಾಗಿತ್ತು, ಉಳಿದವರಿಗಲ್ಲ. ಈ ಸ್ವಾಮಿನಿಷ್ಠೆ ಸಮಾಜದಲ್ಲಿ ಒಂದು ದೊಡ್ಡ ನಾಶಕಾರಕ ಅಂಶವಾಗಿ ಕೆಲಸ ಮಾಡಿತು. ತುಂಬ ಪ್ರಬಲನಾದ ಒಬ್ಬ ಭೂ ಒಡೆಯ ರಾಜನನ್ನು ಎದುರಿಸಬೇಕಿದ್ದರೆ, ಅದನ್ನು ಬಹಳ ಸುಲಭವಾಗಿ ಮಾಡಬಹುದಿತ್ತು. ಏಕೆಂದರೆ ಭೂ ಒಡೆಯ ಮಾತ್ರ ರಾಜನಿಗೆ ನಿಷ್ಠೆ ತೋರಿಸಬೇಕಿತ್ತೇ ವಿನಹ ಇವನ ಕೈ ಕೆಳಗಿರುವ ಹಿಡುವಳಿದಾರರಲ್ಲ. ನಾರ್ಮಂಡಿಯ ಸಾಮಂತ ಫ್ರಾನ್ಸಿನ ರಾಜನ ಭೂ ಪ್ರಭುತ್ವದಲ್ಲಿ ಅಧೀನನಾಗಿದ್ದರೂ, ರಾಜನ ವಿರುದ್ಧ ಬಹಳ ಯುದ್ಧಗಳನ್ನು ಮಾಡಿ, ಜಯವನ್ನೂ ಸಾಧಿಸಿದ್ದನು. ನಾರ್ಮಂಡಿಯ ರಾಜ ಕ್ರಮೇಣ ಇಂಗ್ಲೆಂಡಿನ ರಾಜನಾದ ಕೂಡಲೇ, ಎಲ್ಲಾ ಭೂ ಮಾಲಿಕರು ನೇರವಾಗಿ ರಾಜನಿಗೆ ನಿಷ್ಠೆಯಿಂದಿರುವಂತೆ ಕ್ರಿ.ಶ.೧೦೮೬ರಲ್ಲಿ ನಿರ್ದೇಶಿಸಿದನು. ಈ ಮೂಲಕ ಊಳಿಗಮಾನ್ಯ ಪದ್ಧತಿಯ ಬಹಳ ಮುಖ್ಯವಾದ ತತ್ವವೊಂದನ್ನು ಮಾರ್ಪಾಡು ಮಾಡಿದನು.

ಅಂತಿಮವಾಗಿ ಹೇಳುವುದಾದರೆ. ಊಳಿಗಮಾನ್ಯ ಪದ್ಧತಿ ತುಂಬಾ ನಿಧಾನವಾಗಿ ಮತ್ತು ಸಹಜವಾಗಿ ಬೆಳೆದು ಬಂದ ಒಂದು ವ್ಯವಸ್ಥೆಯಾಗಿತ್ತು. ಹಾಗೆಯೇ ಹಳ್ಳಿಗಾಡಿನ ಸಮಾಜ ಎಲ್ಲಿಯತನಕ ಇತ್ತೋ ಅಲ್ಲಿಯತನಕ ಈ ವ್ಯವಸ್ಥೆಯೂ ಇತ್ತು. ಅಂದಿನ ಕಾಲದಲ್ಲಿ ಜನರು ವಿಸ್ತಾರವಾದ ಭೂ ಪ್ರದೇಶದಲ್ಲಿ, ದೂರ ದೂರದಲ್ಲಿ ವಾಸಿಸುತ್ತಿದ್ದರು. ಸರಿ ಯಾದ ಸಂಪರ್ಕ ವ್ಯವಸ್ಥೆ ಇರಲಿಲ್ಲ. ಪಟ್ಟಣಗಳ ಬೆಳವಣಿಗೆ, ವಾಣಿಜ್ಯದ ಬೆಳವಣಿಗೆ, ಹೆಚ್ಚಾದ ಜನಸಂಪರ್ಕ ಮತ್ತು ಚಾಲನೆಗೊಂಡ ಸಮಾಜ, ಹಣ ಮತ್ತು ಆರ್ಥಿಕ ಬೆಳವಣಿಗೆ, ಇದೂ ಅಲ್ಲದೇ ಹೆಚ್ಚಾದ ರಾಜಪ್ರಭುತ್ವ, ಒಳಗೆ ಮತ್ತು ಸಾಗರದಾಚೆಗೂ ವಿಸ್ತಾರಗೊಂಡ ವಸಾಹತುಗಳು ಇವೇ ಮುಖ್ಯ ಕಾರಣಗಳಿಂದಾಗಿ ಊಳಿಗಮಾನ್ಯ ಪದ್ಧತಿ ಅಳಿಸಿ ಹೋಯಿತು.

**ಮಧ್ಯಯುಗದ ಚರ್ಚು**

ಮಧ್ಯಯುಗದ ಯುರೋಪಿನ ಚರ್ಚು ಬರೇ ಒಂದು ಧಾರ್ಮಿಕ ಸಂಸ್ಥೆಯಾಗಿರದೇ ಸಾಮಾಜಿಕ ಮತ್ತು ಶೈಕ್ಷಣೀಯ ಸೇವೆಗಳನ್ನು ತನ್ನ ಮುಷ್ಟಿಯಲ್ಲಿಟ್ಟುಕೊಂಡಿತ್ತು. ಇದೂ ಅಲ್ಲದೇ, ನ್ಯಾಯ ತೀರ್ಮಾನ ಕೊಡುವ ಎಷ್ಟೋ ಕೆಲಸಗಳನ್ನು ಚರ್ಚು ನಡೆಸುತ್ತಿತ್ತು. ಚರ್ಚಿಗೆ ಅಪಾರವಾದ ಆಸ್ತಿ ಇತ್ತು. ಚರ್ಚಿನ ಆಸ್ತಿ ಎಷ್ಟಿತ್ತೆಂದರೆ, ಯುರೋಪಿನಲ್ಲಿ ವ್ಯವಸಾಯ ಮಾಡುತ್ತಿದ್ದ ಭೂಮಿಯಲ್ಲಿ ಮೂರನೆಯ ಒಂದು ಭಾಗದಷ್ಟು. ಇದು ದೇವರ ಹೆಸರಿನಲ್ಲಿ ದತ್ತಿಯಾಗಿ ಚರ್ಚಿನ ಅಧೀನದಲ್ಲಿತ್ತು.

ತುಂಬಾ ವಿಶಾಲವಾದ ಅರ್ಥದಲ್ಲಿ ಹೇಳುವುದಾದರೆ, ಚರ್ಚು ಕ್ರಿಸ್ತನಲ್ಲಿ ನಂಬಿಕೆ ಯುಳ್ಳವರ ಒಂದು ಕೂಟವಾಗಿತ್ತು. ಕ್ರಿಸ್ತನ ಅನುಯಾಯಿಗಳ ಈ ಸಮೂಹವನ್ನು ಎರಡು ಗುಂಪುಗಳಾಗಿ ವಿಂಗಡಿಸಬಹುದಾಗಿದೆ. ಒಂದು, ಪುರೋಹಿತರು. ಎರಡು, ಸಾಮಾನ್ಯ ಜನರು. ಚರ್ಚಿನ ಮತ್ತು ರಾಜ್ಯದ ಆಜ್ಞೆಯ ಪ್ರಕಾರ ಮಕ್ಕಳು ಹುಟ್ಟಿದ ಎರಡು ವಾರಗಳಲ್ಲಿ ಅವರ ಮಾತಾ-ಪಿತೃಗಳು ಬ್ಯಾಪ್ಟೈಸ್ ಮಾಡಿಸಬೇಕಿತ್ತು. ಅಂದರೆ ಧರ್ಮದೀಕ್ಷೆ ಕೊಡಿಸಬೇಕಾಗಿತ್ತು. ಪುರೋಹಿತರು ಚರ್ಚಿನ ಅಧಿಕಾರಿಗಳಾಗಿದ್ದರೆ, ಸಾಮಾನ್ಯ ಜನರು ಅವರ ಹಿಂಬಾಲಕರಾಗಿದ್ದರು. ಪುರೋಹಿತರು ವ್ಯಾಖ್ಯಾನಿಸಿದ ಹಾಗೆ ಮತ್ತು ಉದ್ಧರಿಸಿದ ರೀತಿಯಲ್ಲಿ ಸಾಮಾನ್ಯ ಜನರು ಕ್ರೈಸ್ತ ಧರ್ಮದ ಬೋಧನೆಯನ್ನು ಒಪ್ಪಿಕೊಳ್ಳಬೇಕಾಗಿತ್ತು. ಧರ್ಮಕ್ಕೆ ಅವಿಧೇಯತೆ ತೋರಿಸುವುದಾಗಲೀ ಅಥವಾ ಧಾರ್ಮಿಕ ಕ್ರಿಯೆಗಳನ್ನು ವಿಭಿನ್ನ ರೀತಿಯಲ್ಲಿ ಆಚರಿಸುವುದನ್ನಾಗಲೀ ಮಾಡಿದರೆ ಅದು ಒಂದು ತೀವ್ರ ಅಪರಾಧವಾಗಿತ್ತು. ಇದಕ್ಕೆ ಶಿಕ್ಷೆಯನ್ನು ಚರ್ಚು ಮತ್ತು ರಾಜ್ಯ ನೀಡಬಹುದಿತ್ತು.

ಚರ್ಚಿನ ಅಧಿಕಾರಿಗಳು ಮತ್ತು ಪುರೋಹಿತರುಗಳನ್ನು ಎರಡು ಗುಂಪುಗಳಾಗಿ ವಿಂಗಡಿಸಲಾಗಿತ್ತು. ಪುರೋಹಿತರು ಮತ್ತು ಧರ್ಮಾತೀತ ಪುರೋಹಿತರು ಕಾನೂನಿನ ನಿಯಮಗಳ ಚೌಕಟ್ಟಿನಲ್ಲಿ ಜೀವಿಸುತ್ತಿದ್ದರು. ಈ ಗುಂಪಿಗೆ ಸನ್ಯಾಸಿಗಳು ಮತ್ತು ಸನ್ಯಾಸಿನಿ ಗಳು ಸೇರಿರುತ್ತಿದ್ದರು. ಸನ್ಯಾಸಿಗಳು ಮತ್ತು ಸನ್ಯಾಸಿನಿಗಳು ತುಂಬಾ ಕಠಿಣವಾದ ಸನ್ಯಾಸ ಜೀವನವನ್ನು ನಡೆಸಬೇಕಾಗಿತ್ತು. ವಿವಿಧ

ಆಧ್ಯಾತ್ಮಿಕ ಮಾರ್ಗಗಳನ್ನು ಬೋಧಿಸುವ ಹಲವು ಮಠಗಳು ಅಸ್ತಿತ್ವಕ್ಕೆ ಬಂದವು. ಹತ್ತನೆಯ ಶತಮಾನದ ಚರ್ಚು ಮತ್ತು ಮಠದ ಪದ್ಧತಿಗಳು ಸುಮಾರು ಬದಲಾವಣೆಗಳನ್ನು ಮತ್ತು ಸುಧಾರಣೆಗಳನ್ನು ಕಂಡವು.

ಕ್ಯಾನನ್ಸ್ ಎಂಬುವ ಪುರೋಹಿತರುಗಳು, ಕ್ಯಾಥೆಡ್ರಲ್ ಚರ್ಚ್‌ನಲ್ಲಿ ನಡೆಯುವ ಪೂಜೆ, ಪುರಸ್ಕಾರಗಳಲ್ಲಿ ಬಿಷಪ್ಪರುಗಳಿಗೆ ಸರದಿಯಂತೆ ಸಹಕರಿಸುತ್ತಿದ್ದರು. ಒಂದು ಕ್ಯಾಥೆಡ್ರಲ್‌ಗೆ ಸಂಬಂಧಿಸಿದ "ಕ್ಯಾನನ್ಸ್"ಗಳನ್ನು ಒಂದು ಚ್ಯಾಪ್ಟರ್ ಎಂದು ಕರೆಯುತ್ತಿ ದ್ದರು. ಪ್ರತೀ ಚ್ಯಾಪ್ಟರ್‌ಗೂ ಕೀನ್ ಎಂಬುವ ಮುಖ್ಯ ಅಧಿಕಾರಿಯಿರುತ್ತಿದ್ದನು. ಬಿಷಪ್ಪನನ್ನು ಆಯ್ಕೆ ಮಾಡುವ ಯೋಗ್ಯತೆ ಇದ್ದ ಕ್ಯಾನನ್ಸ್‌ಗಳನ್ನು ಸಫ್ರಗಾಂಡ್ ಎಂದು ಕರೆಯುತ್ತಿದ್ದರು. ಕ್ಯಾನನ್ನರಲ್ಲಿ ಎರಡು ಪಂಥಗಳಿದ್ದವು. ಆಗಸ್ಟೀನಿಯನ್ನರು ಮತ್ತು ಪ್ರೆಮಾನ್‌ಸ್ಟ್ರೆನ್ಸಿಯನ್ನರು.

ಧರ್ಮಾತೀತ ಪುರೋಹಿತರುಗಳೆಂದರೆ ಮಠದಿಂದ ಹೊರಗಡೆ ಇರುವವರು. ಧರ್ಮಾತೀತ ಪುರೋಹಿತರುಗಳಲ್ಲಿ ಏಳು ಶ್ರೇಣಿಗಳಿದ್ದವು. ಬಿಷಪ್ಪನೇ ಈ ಶ್ರೇಣಿಯಲ್ಲಿ ಉನ್ನತ ಸ್ಥಿತಿಯಲ್ಲಿದ್ದವನು ಮತ್ತು ಮೊದಲನೆಯವನು, ಎರಡನೆಯವನು ಪುರೋಹಿತ. ಇನ್ನುಳಿದ ಕೆಳಗಿನವರುಗಳೆಂದರೆ ಕ್ರಮವಾಗಿ ಡೀಕನ್, ಅಕೋಲೈಟ್, ರೀಡರ್ಸ್, ಎಕ್ಸ್‌ಸಿಸ್ಟ್, ಉಪಾಧ್ಯಾಯರುಗಳು, ವಿದ್ಯಾರ್ಥಿಗಳು. ಬಿಷಪ್ಪನೇ ಚರ್ಚಿನ ಬಹುಮುಖ್ಯವಾದ ಅಧಿಕಾರಿ. ಬಿಷಪ್ಪನಿಗೆ ಮಿಗಿಲಾದ ಇನ್ನೊಂದು ಕರಣಿಕ ವ್ಯವಸ್ಥೆಯಿರಲಿಲ್ಲ. ದೊಡ್ಡ ನಗರ ಕೇಂದ್ರಗಳಲ್ಲಿನ ಬಿಷಪ್ಪನನ್ನು ಆರ್ಚ್‌ಬಿಷಪ್ ಎಂದು ಕರೆಯುತ್ತಿದ್ದರು. ರೋಮ್, ಕಾನ್ಸ್‌ಸ್ಟಾಂಟಿನೋಪಲ್, ಆಂಟಿಯೋಪ್, ಈಫೆಸಸ್, ಅಲೆಕ್ಸಾಂಡ್ರಿಯಾ ಮತ್ತು ಜೆರೋಸಲೆಮ್ ಅಂತಹ ಸ್ಥಳಗಳಿಗೆ ಆರ್ಚ್ ಬಿಷಪ್ ಅಥವಾ ಮೆಟ್ರೊಪಾಲಿಟನ್ಸ್ ಆದವರಿಗೆ ಇನ್ನೂ ಹೆಚ್ಚಿನ ಗೌರವದ ಪ್ರೇಟ್ರಿಯಾರ್ಕ್ ಎನ್ನುವ ಬಿರುದು ಇರುತ್ತಿತ್ತು. ರೋಮ್ ಚರ್ಚಿನ ಬಿಷಪ್ ಚರ್ಚಿನ ಅಂತಿಮ ಮುಖ್ಯಾಧಿಕಾರಿಯಾಗಿದ್ದನು. ಪೋಪ್ ಇದರಲ್ಲಿ ಅಂತಿಮ ಧರ್ಮಾಧಿಕಾರಿ ಯಾಗಿದ್ದನು. ಕ್ರಿ.ಶ.೧೦೫೯ರ ನಂತರ ಕಾರ್ಡಿನಲ್‌ಗಳ ಕಾಲೇಜುಗಳಿಂದ ಪೋಪರನ್ನು ಆಯ್ಕೆ ಮಾಡುವ ಪದ್ಧತಿ ಹುಟ್ಟಿಕೊಂಡಿತು. ಚುನಾವಣೆಯು ಸ್ಕ್ರೂಟಿನಿ ಎನ್ನುವ ಕ್ರಮದಿಂದ ನಡೆಯುತ್ತಿತ್ತು. ಅಂದರೆ ತಮಗೆ ಒಪ್ಪಿಗೆಯಾದ ಅಭ್ಯರ್ಥಿಯ ಹೆಸರನ್ನು ಒಂದು ಕಾಗದ ಚೂರಿನ ಮೇಲೆ ಬರೆಯುವುದು, ನಂತರ ಎಣಿಸುವುದು. ಒಬ್ಬ ಪೋಪ್‌ನ ಅಂತಿಮ ಆಯ್ಕೆಯಾಗುವವರೆಗೂ, ಇದೇ ಕ್ರಮವನ್ನು ಅನುಸರಿಸುತ್ತಾ ಹೋಗಬೇಕಿತ್ತು. ಬಿಷಪ್ಪನ ಆಯ್ಕೆಗಳಲ್ಲಿ ಪೋಪನ ಅನುಮತಿಯು ಅವಶ್ಯಕವಾಗಿತ್ತು. ನೀತಿ ಮತ್ತು ನಂಬಿಕೆಯ ವಿಷಯಗಳಿಗೆ ಸಂಬಂಧಿಸಿದಂತೆ ಪೋಪನೇ ಅಂತಿಮ ಅಧಿಕಾರಿಯಾಗಿದ್ದನು.

ಬಿಷಪ್ಪನೇ ಶೈಕ್ಷಣಿಕ ಸೇವೆಗಳ ಮುಖ್ಯಸ್ಥ ಹಾಗೂ ಧರ್ಮದ ನ್ಯಾಯಾಲಯಗಳಲ್ಲಿ ಅಧಿಕಾರಿಯಾಗಿದ್ದನು. "ಆತ್ಮಗಳನ್ನು ಶುದ್ಧಿಗೊಳಿಸಲು" ಇವನು ಜವಾಬ್ದಾರನಾಗಿರು ತ್ತಿದ್ದನು. ನ್ಯಾಯಗಳಿಗೆ ಸಂಬಂಧಿಸಿದ ಅಧಿಕಾರವನ್ನು ಬಿಷಪ್ಪನು ತನ್ನ ಕೆಳಗಿನ ಅಧಿಕಾರಿ ಯಾದ ಆರ್ಚ್‌ಡೀಕನ್ನನಿಗೆ ಒಪ್ಪಿಸುತ್ತಿದ್ದನು. ಸನ್ಯಾಸಿಗಳ ಮತ್ತು ಪುರೋಹಿತರ ಗುಣ ಗಳಿಗೆ ಸಂಬಂಧಿಸಿದಂತೆ ಉಸ್ತುವಾರಿಯನ್ನು ಬಿಷಪ್ಪನೇ ನೋಡುತ್ತಿದ್ದನಾದರೂ, ಇವನ ಇನ್ನೊಂದು ಅತಿ ಮುಖ್ಯವಾದ ಕೆಲಸ ಚರ್ಚಿನ ಆಸ್ತಿಯ ವ್ಯವಸ್ಥೆಯನ್ನು ನೋಡಿಕೊಳ್ಳುವುದು. ಚರ್ಚಿನ ಆಸ್ತಿಯನ್ನು ಉಳುವುದು, ಗಿರಣಿಗಳನ್ನು ನೋಡಿಕೊಳ್ಳುವುದು, ವ್ಯಾಪಾರ ಮತ್ತು ಸಾಗಣೆಯನ್ನು ನೋಡಿಕೊಳ್ಳುವುದು ಇವನ ಕೆಲಸವೇ ಆಗಿರುತ್ತಿತ್ತು. ವಸ್ತುಸ್ಥಿತಿ ಏನೆಂದರೆ, ಚರ್ಚು ಉಳಿಗಮಾನ್ಯ ಪದ್ಧತಿಗೆ ಅಂಟಿಕೊಂಡಿತ್ತು. ಸುಮಾರಷ್ಟು ಆಸ್ತಿಯು ಉಳಿಗಮಾನ್ಯ ಪದ್ಧತಿಗೆ ಒಳಪಟ್ಟಿತ್ತು ಮತ್ತು ಹಿಡುವಳಿದಾರ ಬಿಷಪ್ಪನೇ ಆಗಿದ್ದು, ಭೂ ಒಡೆಯನಿಗೆ ಸೇವೆ ಸಲ್ಲಿಸಬೇಕಿತ್ತು.

ಬಿಷಪ್ಪನ ನಂತರದ ಉನ್ನತ ಸ್ಥಾನವೆಂದರೆ ಪುರೋಹಿತನದಾಗಿತ್ತು. ಇವನಿಗೂ ಕ್ರೈಸ್ತ ಸಮುದಾಯಕ್ಕೂ ಅಥವಾ ಸಾಮಾನ್ಯ ಜನರಿಗೂ ನೇರ ಸಂಬಂಧವಿದ್ದುದರಿಂದ ಇವನು ತುಂಬ ಮುಖ್ಯವಾದ ವ್ಯಕ್ತಿಯಾಗಿದ್ದನು. ಪುರುಷರು ಮಾತ್ರ ಪುರೋಹಿತರಾಗಿರುತ್ತಿದ್ದರು. ಇವರ ಮುಖ್ಯ ಕೆಲಸ ಧಾರ್ಮಿಕ ಕರ್ಮವನ್ನು ಬೋಧಿಸುವುದಾಗಿತ್ತು. ಇವನ ಕೆಳಗಿನ ವರೆಲ್ಲ (ಶ್ರೇಣೀಯಲ್ಲಿ) ಪುರೋಹಿತನ ಸ್ಥಾನಕ್ಕಾಗಿ ಸಿದ್ಧತೆಯಲ್ಲಿರುವವರಾಗಿರು ತ್ತಿದ್ದರು. ಸಾಮಾನ್ಯ ಜನರ ವಿಷಯಗಳಿಗೆ ಸಂಬಂಧಿಸಿದಂತೆ ಡೀಕನ್ ಮತ್ತು ಉಪಡೀಕನ್ನರುಗಳು ಪುರೋಹಿತನಿಗೆ ಸಹಕರಿಸುತ್ತಿದ್ದರು. ಕ್ರಿ.ಶ.೮ನೆಯ ಶತಮಾನದ ವೇಳೆಗೆ ಅಕೋಲೈಟರು ಮತ್ತು ರೀಡರುಗಳು ಪ್ರಾಯೋಗಿಕವಾದ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದರು. ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಧರ್ಮಾತೀತ ಪುರೋಹಿತ ಶ್ರೇಣಿಯಲ್ಲಿ ಕಡೆಯ ಸ್ಥಾನದವರೆಂದು ಪರಿಗಣಿಸಲ್ಪಟ್ಟಿದ್ದರು. ಉಪಡೀಕನ್ನಿನ ಕೆಳಗಿನವರಿಗೆ ಬ್ರಹ್ಮಚರ್ಯೆ ಅವಶ್ಯಕವಾಗಿರಲಿಲ್ಲ.

ಮಧ್ಯಯುಗದ ಯುರೋಪನ್ನು ಆವರಿಸಿದ್ದ ಅಸ್ಥಿರತೆ ಕ್ರೈಸ್ತ ಚರ್ಚು ಬೆಳೆಯಲು ಪೂರಕವಾಗಿ ಕೆಲಸ ಮಾಡಿತು. ಅಂದಿನ ದಿನಗಳಲ್ಲಿ ಬರ್ಬರತೆ ಮತ್ತು ಅಸ್ಪಷ್ಟತೆಗಳೇ ತುಂಬಿದ್ದ ಸಮಾಜದಲ್ಲಿ ತೃಪ್ತಿ ಮತ್ತು ನೆಮ್ಮದಿಯನ್ನು ಕಾಣಲು ಸಾಮಾನ್ಯ ಜನರು ಕ್ರೈಸ್ತ ಪುರೋಹಿತರುಗಳ ಮೊರೆ ಹೊಕ್ಕರು. ಮಧ್ಯ ಮತ್ತು ಪಶ್ಚಿಮ ಯುರೋಪಿನಲ್ಲಿ ಎಲ್ಲ ತರಹದ ಕ್ರೈಸ್ತ ಧರ್ಮ ಪ್ರಭಾವಗಳಿಗೆ ರೋಮ್ ಕೇಂದ್ರವಾಗಿತ್ತು. ರೋಮ್ ನಗರಕ್ಕೂ ಸಂತ ಪೀಟರ್ ಮತ್ತು ಸಂತ ಪಾಲರಿಗೂ ಇದ್ದ ಸಂಬಂಧದಿಂದಾಗಿ ಮತ್ತು ಸಂತ ಪೀಟರ್ ರೋಮ್ ಚರ್ಚಿನ ಮೊದಲ ಬಿಷಪ್ ಆಗಿದ್ದರಿಂದ ರೋಮಿನ ಬಿಷಪ್ಪಿಗೆ ಗೌರವ ಹೆಚ್ಚಾಗಿತ್ತು. 'ಸ್ವರ್ಗದ ಬಾಗಿಲಿನ ಬೀಗದ ಕೈ ಸಂತ ಪೀಟರ್‌ನಲ್ಲಿದೆ' ಎನ್ನುವ ಭಯದಿಂದ ಇದ್ದ ಧರ್ಮಶ್ರದ್ಧೆಯ ಕ್ರಿಶ್ಚಿಯನ್ನರು, ಅವನ ಉತ್ತರಾಧಿಕಾರಿಗಳನ್ನು ಅಪಾರ ಗೌರವ ದಿಂದಲೇ ಕಾಣುತ್ತಿದ್ದರು.

**ಚರ್ಚಿನ ಕಾರ್ಯಕ್ರಮಗಳು**

ಮಧ್ಯಯುಗದಲ್ಲಿ ಚರ್ಚು ಹಲವಾರು ಕೆಲಸಗಳನ್ನು ಮಾಡುತ್ತಿತ್ತು. ಚರ್ಚು ಒಂದು ಧಾರ್ಮಿಕ ಸಂಸ್ಥೆಯಾಗಿ ಮುಕ್ತಿಯ ವಿಷಯಕ್ಕೆ ಸಂಬಂಧಿಸಿದ ಮತ್ತು ಸಾಮಾನ್ಯ ಜನರಿಗೆ ನೆಮ್ಮದಿ ಮತ್ತು ಸಂತಸವನ್ನು ನೀಡುವ ಧಾರ್ಮಿಕ ಕರ್ಮ ಬೋಧೆಯನ್ನು ಮಾಡುವ ಅಧಿಕಾರವನ್ನೂ ಹೊಂದಿತ್ತು. ಪಾಪಗಳನ್ನು ಕ್ಷಮಿಸುವ ಮತ್ತು ಮುಕ್ತಿಯನ್ನು ನೀಡುವ ಕೆಲಸವನ್ನು ನಿರ್ವಹಿಸುತ್ತಿತ್ತು. ಪಾಪದಿಂದ ಬಿಡುಗಡೆಯನ್ನು ನೀಡಿದ ನಂತರ ಪುರೋಹಿತನು ಪ್ರಾಯಶ್ಚಿತ್ತವನ್ನು, ಶಿಕ್ಷೆಯನ್ನು ನಿರ್ಧರಿಸುತ್ತಿದ್ದನು. ಉಪವಾಸ ಮತ್ತು ಪ್ರಾರ್ಥನೆ ಸಣ್ಣಪುಟ್ಟ ತಪ್ಪುಗಳಿಗೆ ನೀಡುವ ಶಿಕ್ಷೆಗಳಾಗಿದ್ದವು. ಯಾತ್ರೆಯ ಶಿಕ್ಷೆಯನ್ನು ಸಾಮಾನ್ಯವಾಗಿ ದೊಡ್ಡ ತಪ್ಪುಗಳನ್ನು ಮಾಡಿದವರಿಗೆ ವಿಧಿಸಲಾಗುತ್ತಿತ್ತು. ಸಾಮಾಜಿಕವಾಗಿ ಹೇಳುವುದಾದರೆ, ಧಾರ್ಮಿಕ ನಿಯಮಗಳು ಮತ್ತು ಪಾಲನೆಗಳ ನಡುವೆ ಚರ್ಚು ಒಂದು ಸೇತುವೆಯಾಗಿತ್ತು. ಧಾರ್ಮಿಕ ಕರ್ಮಬೋಧೆಯ ಮುಖಾಂತರ ಆಗುವ ಮದುವೆಯೇ ಮಧ್ಯಯುಗದ ಕಾನೂನುಬದ್ಧವಿವಾಹವಾಗಿತ್ತು. ಮದುವೆಯನ್ನು "ಚರ್ಚಿನ ಕಣ್ಮುಂದೆಯೇ" ನಡೆಸಲಾಗು ತ್ತಿತ್ತು ಮತ್ತು ಪುರೋಹಿತನೇ ಈ ಮದುವೆಯನ್ನು ಊರ್ಜಿತವೆಂದು ಹೇಳುವ ಸಾಕ್ಷಿಯಾಗಿದ್ದನು.

ಇಂದು ಆಧುನಿಕ ರಾಜ್ಯಗಳು ಏನನ್ನು ಮಾಡುತ್ತಿವೆಯೋ ಆ ಎಲ್ಲಾ ಸಾಮಾಜಿಕ ಸೇವೆಗಳನ್ನು ಮಾಡುವ ವಿಶೇಷವಾದ ಒಂದು ವ್ಯವಸ್ಥೆ ಮಧ್ಯಯುಗದ ಚರ್ಚು ಮಾಡುತ್ತಿತ್ತು. ರಸ್ತೆಗಳನ್ನು ನಿರ್ಮಿಸುವುದು, ಸೇತುವೆಗಳನ್ನು ಕಟ್ಟುವುದು, ಅಸಹಾಯಕರಿಗೆ ಆಹಾರ ನೀಡುವುದು ಮತ್ತು ಬಡವರಿಗೆ ದಾನ ನೀಡುವುದು ಚರ್ಚಿನ ಕೆಲಸವಾಗಿತ್ತು. ಚರ್ಚಿನ ಆಸ್ತಿಪಾಸ್ತಿಗಳಿಂದ ಸಂದಾಯವಾದ ಮೂರನೆಯ ಒಂದು ಭಾಗವನ್ನು ಬಡವರ ಮೇಲೆ, ಅನಾಥಾಲಯ ಮತ್ತು ಮುಂತಾದ ಸಾಮಾಜಿಕ ಸೇವೆಗಳ ಮೇಲೆ ಖರ್ಚು ಮಾಡಲಾಗುತ್ತಿತ್ತು. ಆಸ್ಪತ್ರೆಗಳನ್ನು ನಡೆಸುತ್ತಿದ್ದ ಮತ್ತು ರೋಗಿಗಳನ್ನು ಶುಶ್ರೂಷೆ ಮಾಡುತ್ತಿದ್ದ ಒಂದೇ ಸಂಸ್ಥೆಯೆಂದರೆ, ಚರ್ಚಾಗಿತ್ತು.

ಶಿಕ್ಷಣವನ್ನು ಧರ್ಮಕ್ಕೆ ಪೂರಕವಾದ ಅಂಶ ಎಂದು ಪರಿಗಣಿಸಲಾಗಿತ್ತು. ಚರ್ಚು ಶಾಲೆಗಳನ್ನು ತೆರೆದು, ಪಠ್ಯಕ್ರಮವನ್ನು ಗೊತ್ತುಮಾಡಿ, ಬೋಧಕರುಗಳನ್ನು ನೇಮಿಸುತ್ತಿತ್ತು. ಆರಂಭಿಕ ಶಿಕ್ಷಣವು ಮಠಗಳಲ್ಲಿಯೇ ನಡೆಯುತ್ತಿತ್ತು. ಹೆಣ್ಣು ಮಕ್ಕಳಿಗೆ ವಿಶೇಷವಾಗಿ ಆಶ್ರಮಗಳಲ್ಲಿ ಪಾಠ ಹೇಳಲಾಗುತ್ತಿತ್ತು. ಆರಾಧನಾ ಮಂದಿರದ ಶಾಲೆಗಳಲ್ಲಿ ಸ್ವತಂತ್ರ ಕಲೆಗಳ ಅಧ್ಯಯನಕ್ಕೆ ಉತ್ತೇಜನ ನೀಡಲಾಗುತ್ತಿತ್ತು. ಇವುಗಳಲ್ಲಿ ಧರ್ಮಶಾಸ್ತ್ರ, ಔಷಧಿ, ಕಾನೂನು ಮುಂತಾದವುಗಳು ೧೩ನೆಯ ಶತಮಾನದ ವೇಳೆಗೆ ವಿಶ್ವವಿದ್ಯಾನಿಲಯಗಳ ವಸ್ತು ವಿಷಯವಾಗುವ ಮಟ್ಟಕ್ಕೆ ಬೆಳೆದವು.

ಮಧ್ಯಯುಗದ ಯುರೋಪಿನಲ್ಲಿ ನ್ಯಾಯಿಕ ತೀರ್ಮಾನಗಳನ್ನು ಕೂಡ ಚರ್ಚು ನಿಭಾಯಿಸುತ್ತಿತ್ತು. ಅಪರಾಧ ಮತ್ತು ನಾಗರಿಕ ಕಟ್ಟಳೆಗಳನ್ನು ಚರ್ಚಿನ ನ್ಯಾಯಾಲಯಕ್ಕೆ ತರಲು ಅವಕಾಶವಿತ್ತು. ಸೇವಾ ಮನೋಭಾವದ ಧೋರಣೆ ಮತ್ತು ನಿಜವಾದ ಧರ್ಮಪ್ರಸಾರದ ಶ್ರದ್ಧೆ ಚರ್ಚಿನ ಮತ್ತು ಆಶ್ರಮಗಳ ಗೌರವ, ಘನತೆಯನ್ನು ಸಮಾಜದ ದೃಷ್ಟಿಯಲ್ಲಿ ಹೆಚ್ಚಿಸಿತ್ತು. ಈ ಸಂದರ್ಭದಲ್ಲಿ ಸಂತ ಬೇಸಿಲ್ (ಸು. ೩೩೦-೩೭೦), ಸಂತ ಬೆನಿಡಿಕ್ಟ್(ಸು.೪೮೦-೫೪೩), ಸಂತ ಅಗಸ್ಟೈನ್(ಸು.೬೭೩-೭೩೩)ಮತ್ತು ಸಂತ ಬೆರ್ನಾರ್ಡ್

ಗಳ ಸೇವೆಯನ್ನು ಸ್ಮರಿಸಬಹುದಾಗಿದೆ. ಇಲ್ಲಿ ಈ ಮಹಾನುಭಾವರುಗಳು ಆರಂಭಿಸಿದ ಮಠಗಳ ಚಳವಳಿ ಕ್ರೈಸ್ತ ಧರ್ಮವನ್ನು ಯುರೋಪಿನಲ್ಲಿ ಪ್ರಚಾರ ಮಾಡುವುದರಲ್ಲಿ ಮತ್ತು ಸಮಾಜ ಸೇವೆಯನ್ನು ಹುಟ್ಟು ಹಾಕುವುದರಲ್ಲಿ ಸಹಕಾರಿಯಾಯಿತು.

**ಧರ್ಮ ಯುದ್ಧಗಳು**

ಪೌರಾತ್ಯ ಮತ್ತು ಪಾಶ್ಚಿಮಾತ್ಯ ನಾಗರಿಕತೆಗಳ ನಡುವೆ ಆರಂಭವಾದ ಯುದ್ಧವೇ ಧರ್ಮಯುದ್ಧಗಳು. ಪರ್ಸಿಯನ್ನರು ಗ್ರೀಸನ್ನು ದಾಳಿ ಮಾಡಿದಂದಿನಿಂದ ಇದು ಆರಂಭ ವಾಯಿತು. ಇದು ಕ್ರೈಸ್ತ ಮತ್ತು ಇಸ್ಲಾಂ ಧರ್ಮಗಳ ನಡುವಿನ ಗುದ್ದಾಟದ ಹಂತವೂ ಆಗಿದೆ. ಕ್ರಿ.ಶ.೭ನೆಯ ಮತ್ತು ೮ನೆಯ ಶತಮಾನಗಳಲ್ಲಿ ಇಸ್ಲಾಂ ಧರ್ಮವು ದಮನಕಾರಿ ಯಾಗಿತ್ತು. ಸ್ಪೈಯಿನ್ ರಾಜ್ಯವನ್ನು ಸಂಪೂರ್ಣವಾಗಿ ಗೆದ್ದುಕೊಂಡು ಮುಸಲ್ಮಾನರು ಫ್ರಾನ್ಸಿನ ಮಧ್ಯಭಾಗಕ್ಕೆ ಪ್ರವೇಶ ಮಾಡಿದ್ದರು. ಟೌರ್ಸ್‌ನಲ್ಲಿ ನಡೆದ ಯುದ್ಧದ ನಂತರ ಇವರನ್ನು ಹಿಂದಕ್ಕೆ ಅಟ್ಟಲಾಯಿತು. ಧರ್ಮಯುದ್ಧಗಳು ಕ್ರೈಸ್ತಮತೀಯರು ಮಾಡಿದ ಪ್ರತಿ ದಮನಕಾರವಾಗಿದೆ. ಕ್ರಿಸ್ತನ ಅನುಯಾಯಿಗಳು ಕ್ರೈಸ್ತ ಧರ್ಮ ಒಂದೇ ನಿಜವಾದ ಧರ್ಮ ಎಂದೂ, ಉಳಿದ ಧರ್ಮಗಳು ಪೊಳ್ಳು ಹಾಗೂ ಮೂರ್ತಿ ಆರಾಧನೆಯದೆಂದು ತಿಳಿದಿದ್ದರು. ನಿಜವಾದ ಕ್ರೈಸ್ತ ಧರ್ಮೀಯರು ತಮ್ಮ ಧರ್ಮಾಚರಣೆ ಯಲ್ಲಿ ಮುಕ್ತಿ ಅಡಗಿದೆ ಎಂದು ಭಾವಿಸಿದ್ದರು. ಧರ್ಮಪ್ರಚಾರ ವೊಂದರಿಂದಲೇ ಧರ್ಮವನ್ನು ಕಾಪಾಡಿಸಿಕೊಳ್ಳುವುದು ಅಸಾಧ್ಯವಾದಾಗಲೆಲ್ಲ ಕತ್ತಿ ಮತ್ತು ಶಕ್ತಿಯನ್ನು ಬಳಸುವುದು ನ್ಯಾಯಸಮ್ಮತವಾದದ್ದೆಂದು ನಂಬಿದ್ದರು. ಆದ್ದರಿಂದ ಮಧ್ಯಯುಗದ ಯುರೋಪಿನಲ್ಲಿ ಧರ್ಮಯುದ್ಧಗಳು "ಚರ್ಚಿನ ಹೋರಾಟ" ಎಂಬ ತತ್ತ್ವವನ್ನು ಹೊಂದಿದ್ದವು.

ಬೈಜಾಂಟೈನ್ ಸಾಮ್ರಾಜ್ಯವು ಪತನವಾದ ನಂತರ ಧರ್ಮಯುದ್ಧಗಳಿಗೆ ಮೂಲ ವಾತಾವರಣ ಸೃಷ್ಟಿಯಾಯಿತು. ಬಾರ್ಬೇರಿಯನ್ನರ ವಿರುದ್ಧ ಕೊನೆಗಾಣದ ಯುದ್ಧವು ಅಪಾರವಾದಷ್ಟು ಜೀವಿಗಳನ್ನು ಬಲಿ ತೆಗೆದುಕೊಂಡಿತು. ಇದರ ಜತೆಗೆ ಪರ್ಷಿಯನ್ನರ ಜತೆಗಿನ ಇವರ ಯುದ್ಧ ಮುಗಿದಿತ್ತು. ದೊರೆತನಗಳ ನಡುವಿನ ಬಡಿದಾಟಗಳು ಕಾಲದಿಂದ ಕಾಲಕ್ಕೆ ಮುಂದುವರೆದು ಅಪಾರವಾದ ನಷ್ಟವನ್ನು ಮಾಡಿದ್ದವು. ಧಾರ್ಮಿಕ ಜಗಳಗಳು ಕ್ರೈಸ್ತ ವೈದಿಕತೆಯ ಒಗ್ಗಟ್ಟನ್ನು ನಾಶಪಡಿಸುತ್ತಿದ್ದವು. ರಾಜಪ್ರಭುತ್ವದ ಮಧ್ಯ ಪ್ರವೇಶದಿಂದಾಗಿ ಕಾನ್‌ಸ್ಟಾಂಟಿನೋಪಲ್ಲಿನ ಆರ್ಚ್ ಬಿಷಪ್ ಪೆಟ್ರಿಯಾರ್ಕ್‌ನಿಗೆ ಪಶ್ಚಿಮ ಯುರೋಪಿನಲ್ಲಿನ ಪೋಪ್‌ನಂತೆ ಅಧಿಕಾರ ಚಲಾಯಿಸಲು ಆಗಲಿಲ್ಲ. ಭಾರವಾದ ತೆರಿಗೆ ವಸೂಲಿಯಿಂದಾಗಿ ಆದಾಯದ ಮೂಲಗಳು ಮುಗ್ಗರಿಸಿದವು. ಇಂತಹ ತೆರಿಗೆ ಗಡಿಯಲ್ಲಿ ನಡೆಯುತ್ತಿರುವ ಯುದ್ಧಗಳ ಖರ್ಚನ್ನು ನೋಡಿಕೊಳ್ಳಲು ಅವಶ್ಯಕವಾಗಿತ್ತು.

ಅರಬ್ಬರ ಸಾಮ್ರಾಜ್ಯ ವಿಸ್ತಾರಗೊಂಡಿದ್ದಾಗ ಟರ್ಕರು ಅವರ ಅಡಿಯಾಳುಗಳಾಗಿದ್ದರು. ಆದರೆ ಅರಬ್ಬರ ಸಾಮ್ರಾಜ್ಯ ಪತನಗೊಂಡ ನಂತರ ಟರ್ಕರು ಮತ್ತೆ ತಲೆಯೆತ್ತಿದರು. ಅರಬ್ಬರ ವಿರುದ್ಧ ನಡೆದ ದಂಗೆಯಲ್ಲಿ ಸೆಲ್ಜುಕ್ ಟರ್ಕರ ನಾಯಕನಾಗಿದ್ದನು. ಈ ದಂಗೆಯು ಯಶಸ್ವಿಯಾದ ನಂತರ ಟರ್ಕರು ತಮ್ಮನ್ನು ತಾವು "ಸೆಲ್ಜುಕ್ ಟರ್ಕ್" ಎಂದು ಕರೆದುಕೊಂಡರು. ಸೆಲ್ಜುಕನ ಮೊಮ್ಮಗ ಬಾಗ್ದಾದಿನ ಖಲಿಫತ್‌ನನ್ನು ಸೋಲಿಸಿದನು ಮತ್ತು ಇವನ ಮಗ ಪೂರ್ವ ರೋಮನ್ ಚಕ್ರವರ್ತಿಯನ್ನು ಕ್ರಿ.ಶ.೧೦೦೭ರಲ್ಲಿ ಮಂಜಿಕೆರ್ಟ್ ಎನ್ನುವಲ್ಲಿ ಸೋಲಿಸಿದನು. ಈ ಘಟನೆಯ ನಂತರ ಇಸ್ಲಾಂ ಮತ್ತು ಕ್ರೈಸ್ತ ಧರ್ಮಗಳು ಶತ್ರುಗಳಂತೆ ಬೆಳೆಯಲು ಆರಂಭಿಸಿದವು. ಈ ಪರಿಸ್ಥಿತಿಯು ಮುಂದಿನ ಮಧ್ಯಯುಗದ ಯುರೋಪಿನ ನಾಗರಿಕತೆಯನ್ನು ರೂಪಿಸಿತು. ಮುಸಲ್ಮಾನರು ಹೆಚ್ಚಿನ ಸಂಖ್ಯೆಯಲ್ಲಿದ್ದ ಸ್ಥಳಗಳಲ್ಲಿ ಕ್ರಿಶ್ಚಿಯನ್ನರನ್ನು ಕೀಳಾಗಿ ನಡೆಸಿಕೊಳ್ಳುತ್ತಿದ್ದಾರೆ ಹಾಗೂ ಟರ್ಕರು ಕ್ರಿಶ್ಚಿಯನ್ನರ ಮೇಲೆ ದಬ್ಬಾಳಿಕೆ ಮತ್ತು ಹಿಂಸಾಚಾರ ನಡೆಸುತ್ತಿದ್ದಾರೆ ಎಂಬುವ ಕಥೆಗಳು ಯುರೋಪಿನ ತುಂಬ ಹಬ್ಬಿದವು. ಜೆರುಸಲೆಮಿಗೆ ಬರುತ್ತಿದ್ದ ಯಾತ್ರಾರ್ಥಿಗಳನ್ನು ಕೂಡ ಒಳಗೆ ಬರಲು ಅವಕಾಶ ನೀಡಿರಲಿಲ್ಲ. ಪೋಪ್ ಎರಡನೆಯ ಉರ್ಬನ್ ಎಂಬುವ ವನು ಕ್ರೈಸ್ತ ಧರ್ಮ ಉಳಿಸಿ, ಜೀಸಸನ ಪಂಥವನ್ನು ಉಳಿಸಿ ಎಂದು ಕೂಗೆಬ್ಬಿಸಿ ದನು. ಈ ಕರೆಗೆ ಪೂರ್ವ ರೋಮನ್ ಸಾಮ್ರಾಜ್ಯದ ಚಕ್ರವರ್ತಿ ಒಂದನೇ ಅಲೆಸ್ಯೂಸ್ ಕೂಡ ದನಿಗೂಡಿಸಿದನು.

ಪೋಪನು ಕ್ರಿ.ಶ.೧೦೯೫ರಲ್ಲಿ ಕರೆದಿದ್ದ "ಕ್ಲೆರ್ಮಾಂತ್" ಎನ್ನುವ ಸಭೆಯಲ್ಲಿ ಅಲ್ಲಾನ ಅನುಯಾಯಿಗಳಾದ ಮುಸಲ್ಮಾನರ ವಿರುದ್ಧ ಯುದ್ಧ ಮಾಡುವಂತೆ ಕ್ರೈಸ್ತ ಮತಸ್ಥರಿಗೆ ಕರೆ ನೀಡಿದನು. ಪವಿತ್ರ ಭೂಮಿಗಾಗಿ ಯುದ್ಧ ಮಾಡಬಯಸುವ ಎಲ್ಲ ಯೋಧರಿಗೂ ಶಿಲುಬೆಯನ್ನು

ಹಂಚಲಾಯಿತು. ಅಂದಿನಿಂದ ಅವರನ್ನು "ಧರ್ಮ ಯೋಧರು"(ಕ್ರುಸೇಡರ್ಸ್) ಎಂದೂ ಅವರ ಸಾಹಸಮಯ ಹೋರಾಟವನ್ನು "ಧರ್ಮ ಯುದ್ಧ" (ಕ್ರೂಸೇಡ್ಸ್) ಎಂದೂ ಕರೆಯಲಾಯಿತು.

ಕ್ರಿ.ಶ.೧೧ ರಿಂದ ೧೩ನೆಯ ಶತಮಾನದವರೆಗಿನ ಮಧ್ಯಯುಗದಲ್ಲಿ ಸುಮಾರು ೯ ಧರ್ಮಯುದ್ಧಗಳು ನಡೆದವು. ಕೆಲವು ಧರ್ಮಯುದ್ಧಗಳು ಯಶಸ್ವಿಯಾದವು, ಕೆಲವು ಸೋತವು. ಇನ್ನೂ ಕೆಲವು ಯುದ್ಧಗಳು ಧರ್ಮಯೋಧರಲ್ಲಿದ್ದ ದೈವಿಕತೆ ಹಾಗೂ ಸ್ವಾರ್ಥವನ್ನು ಹೊರಗೆಡವಿದವು.

ಕ್ರಿ.ಶ.೧೦೯೫-೧೦೯೯ರಲ್ಲಿ ಕಟ್ಟಕಡೆಯ ಧರ್ಮಯುದ್ಧ ನಡೆಯಿತು. ಈ ಯುದ್ಧವನ್ನು ಗಾಡ್‌ಫ್ರೆಡಿ ಬುಯಿಲಾನ್, ನಾರ್ಮಂಡಿಯ ರಾಬರ್ಟ್ ಮತ್ತು ಬೊಹೆಮಂಡ್ ಟೆಂಕ್ರಿಡ್ ಎಂಬುವ ಶ್ರೀಮಂತರುಗಳು ಮಾಡಿದರು. ಇವರು ಟರ್ಕರನ್ನು ಸೋಲಿಸಿ ಜೆರುಸಲೇಮನ್ನು ಕ್ರಿ.ಶ.೧೦೯೯ರಲ್ಲಿ ವಶಪಡಿಸಿಕೊಂಡರು.

ಕ್ರಿ.ಶ.೧೧೪೭ರಿಂದ ೧೧೪೯ರವರೆಗೆ ಎರಡನೆಯ ಧರ್ಮಯುದ್ಧವು ನಡೆಯಿತು. ಝುಂಗಿ ಎಂಬುವವನ ಪ್ರಬಲವಾದ ನಾಯಕತ್ವದಲ್ಲಿ ಮುಸಲ್ಮಾನರು ತಲೆಯೆತ್ತಿದರು. ಝುಂಗಿಯು ೨೫ನೆಯ ಡಿಸೆಂಬರ್ ೧೧೪೪ರಲ್ಲಿ ಎಡಿಸ್ಸ ಎಂಬ ಸ್ಥಳವನ್ನು ಆಕ್ರಮಿಸಿ ಕೊಂಡನು. ಇದನ್ನು ಕಡ್ಡಾಯವಾಗಿ ವಿರೋಧಿಸಲಾಯಿತು ಮತ್ತು ಕ್ಲಿವಿಯಾದ ಸಂತ ಬೆರ್ನಾರ್ಡ್ ಎಂಬುವನು ಇದರ ವಿರುದ್ಧ ಕರೆಯೊಂದನ್ನು ನೀಡಿದಾಗ, ಜರ್ಮನಿಯ ಚಕ್ರವರ್ತಿ ಮೂರನೆ ಕಾನ್ರಾಡ್ ಮತ್ತು ಫ್ರಾನ್ಸ್‌ನ ರಾಜ ಏಳನೆಯ ಲೂಯಿ ಕರೆಗೆ ಓಗೊಟ್ಟು ಧಾರ್ಮಿಕ ಜವಾಬ್ದಾರಿಯನ್ನು ಹೊತ್ತುಕೊಂಡರು. ಇವರುಗಳ ಮಧ್ಯ ತಮ್ಮದೇ ಆದ ಸಮಸ್ಯೆಗಳಿದ್ದುದರಿಂದ ಟರ್ಕಿಯ ಝುಂಗಿಯನ್ನು ನೇರವಾಗಿ ಯುದ್ಧಕ್ಕೆ ಕರೆಯದೇ ಬೈಜಾಂಟೈನ್ ಚಕ್ರಾಧಿಪತ್ಯದ ಪ್ರಾಂತ್ಯಗಳ ಮೇಲೆ ದಾಳಿ ಮಾಡಿದರು. ಏಷಿಯಾ ಮೈನರ್, ಪ್ಯಾಲೆಸ್ಟೈನ್‌ನಲ್ಲಿ ಇವರಿಗೆ ಹೆಚ್ಚಿನ ಜಯ ಲಭಿಸಲಿಲ್ಲ. ಇದೊಂದು ದೊಡ್ಡ ವೈಫಲ್ಯವಾಗಿತ್ತು.

ಈ ಮಧ್ಯ, ನೂರ್-ಉದ್ದೀನ್ ಮತ್ತು ಸಲಉದ್ದಿನ್‌ರ ನಾಯಕತ್ವದಡಿಯಲ್ಲಿ ಮುಸಲ್ಮಾನರು ತುಂಬ ಬಿರುಸಾಗಿ ತಲೆಯೆತ್ತಿದರು. ಇವರು ಈಜಿಪ್ಟ್ ಮತ್ತು ಬಾಗ್ದಾದನ್ನು ಗೆದ್ದುಕೊಂಡರು. ಕ್ರಿ.ಶ.೧೧೮೭ನೇ ಅಕ್ಟೋಬರ್ ೭ರಂದು ಜೆರುಸೆಲೇಮನ್ನು ಕೂಡ ವಶಪಡಿಸಿಕೊಂಡರು. ಪೋಪ್ ಮೂರನೆ ಉರ್ಬನ್ ಈ ನೋವಿನಿಂದ ಸತ್ತನೆಂದು ಹೇಳಲಾಗಿದೆ. ಮತ್ತೆ ಇವನ ಉತ್ತರಾಧಿಕಾರಿ ಏಳನೆ ಗ್ರಿಗೋರಿ ಧರ್ಮಯುದ್ಧಕ್ಕೆ ಕರೆ ನೀಡಿ, ಎಲ್ಲಾ ಕ್ರೈಸ್ತರು ಪವಿತ್ರನಗರವನ್ನು ಮರಳಿಪಡೆಯುವ ತನಕ ಯುದ್ಧಮಾಡಬೇಕೆಂದು ಹೇಳಿದನು. ಈ ಮೂರನೆಯ ಧರ್ಮ ಯುದ್ಧವನ್ನು ಇಂಗ್ಲೆಂಡಿನ ರಾಜ ಒಂದನೆ ರಿಚರ್ಡ್ ಮತ್ತು ಫ್ರಾನ್ಸಿನ ರಾಜ ಎರಡನೆಯ ಫಿಲಿಪ್ (ಅಗಸ್ಟಸ್) ಮತ್ತು ಕೆಂಪುಗಡ್ಡದ ಚಕ್ರವರ್ತಿ ಫ್ರೆಡರಿಕ್ ಬಾರ್‌ಬೋರಸ್ಸರು ಜತೆಗೂಡಿ ನಡೆಸಿದರು. ಚಕ್ರವರ್ತಿಯು ರಸ್ತೆಯಲ್ಲಿ ಮಡಿದನು. ಫಿಲಿಪ್ ಮತ್ತು ರಿಚರ್ಡ್ ಜಗಳವಾಡಿಕೊಂಡ ಪರಿಣಾಮವಾಗಿ ಫಿಲಿಪ್ಪನು ಮಧ್ಯದಾರಿಯಿಂದಲೇ ಫ್ರಾನ್ಸಿಗೆ ಮರಳಿದನು. ರಿಚರ್ಡ್ ಯುದ್ಧದಲ್ಲಿ ಕಾದಾಡಿದನಾದರೂ ಜೆರುಸಲೇಂ ಅನ್ನು ಮರಳಿಪಡೆಯಲಾಗದೆ, ಸಲಉದ್ದೀನನ ಜತೆ ಒಂದು ಒಪ್ಪಂದವನ್ನು ಮಾಡಿಕೊಂಡು ಹಿಂತಿರುಗಿದನು. ಜಯ ಎಂಥದ್ದೇ ಆಗಿರಬಹುದು, ಇದು ಸಾಧ್ಯವಾದದ್ದು ಮೂರನೆಯ ಧರ್ಮಯುದ್ಧದಲ್ಲಿ ಮಾತ್ರ. ಇದಕ್ಕೆ ಕಾರಣ ಒಂದನೇ ರಿಚರ್ಡ್‌ನ ಚಾಣಾಕ್ಷತನ ಮತ್ತು ಸಲಉದ್ದೀನನ ಔದಾರ್ಯತೆ.

ಕ್ರಿ.ಶ.೧೨೦೨ ರಿಂದ ೧೨೦೪ರ ನಡುವೆ ನಾಲ್ಕನೆಯ ಧರ್ಮಯುದ್ಧವು ನಡೆಯಿತು. ಚಾಂಪೇನಿನ ಥಿಯೋಬಾಲ್ಡ್, ನ್ಯೂಯೆಲಿಯ ಫೆಲ್ಕ್ ಮತ್ತು ವಿಲ್ಲೆಲಡೌನ್ ಎಂಬುವ ಶ್ರೀಮಂತರುಗಳು ಈ ಯುದ್ಧವನ್ನು ಮಾಡಿದರು. ಈ ಕರೆಯನ್ನು ಪೋಪ್ ಮೂರನೆಯ ಇನ್ನೋಸೆಂಟ್ ನೀಡಿದ್ದನು. ಈಜಿಪ್ಟ್‌ನ ಮಾರ್ಗವಾಗಿ ಹೊರಟರಾದರೂ, ಇವರನ್ನು ಹಿಮ್ಮೆಟ್ಟಿಸಲಾಗಿ, ಇವರು ಬೈಜಾಂಟೈನಿನ ರಾಜಧಾನಿಯನ್ನು ವಶಪಡಿಸಿಕೊಂಡರು. ಜೆರುಸಲೇಮನ್ನು ವಶಪಡಿಸಿಕೊಳ್ಳುವ ಬದಲು ಕಾನ್‌ಸ್ಟಾಂಟಿನೋಪಲ್‌ನ್ನು ಧ್ವಂಸ ಮಾಡಿದರು. ಈ ಧರ್ಮಯುದ್ಧವನ್ನು "ಮಕ್ಕಳ ಯುದ್ಧ" ಎಂದು ಕರೆದಿದ್ದಾರೆ. ಸಾವಿರಾರು ಮಕ್ಕಳು ಒಟ್ಟುಗೂಡಿಕೊಂಡು ಇಸ್ಲಾಂ ಸೈನ್ಯದ ವಿರುದ್ಧ ಯುದ್ಧ ಮಾಡಲು ಹೊರಟರು. ಜರ್ಮನಿಯಲ್ಲಿ ಒಂದುಗೂಡಿಸಲಾಗಿದ್ದ ಒಂದು ಮಕ್ಕಳ ತಂಡವು ಕಲೋನಿನ ನಿಕೋಲಸ್ಸನ ನಾಯಕತ್ವದಲ್ಲಿ ಯುದ್ಧ ಭೂಮಿಗೆ ಹೋಯಿತು. ಮತ್ತೊಂದು ಗುಂಪು ಕ್ಲಾಯ್ಸೆನ ಸ್ಟೀಫನ್ ಎಂಬುವವನ ನಾಯಕತ್ವದಲ್ಲಿ ಫ್ರಾನ್ಸಿನಿಂದ ಬಂದಿತ್ತು. ಇವರು

ಇಟಲಿ ಅಥವಾ ಮಾರ್ಸಿಲಸ್ ಕಡೆಗೆ ಮಂತ್ರಗಳನ್ನು ಮತ್ತು ಪ್ರಾರ್ಥನೆಗಳನ್ನು ಹೇಳುತ್ತ ಹೊರಟರು. ಅವರ ದುಃಖ ದಾರುಣವಾದುದಾಗಿತ್ತು. ಹಸಿವಿನಿಂದ ಮತ್ತು ರಕ್ಷಣೆಯಿಲ್ಲದೆ ನೂರಾರು ಮಕ್ಕಳು ಸಾವನ್ನಪ್ಪಿದರು. ಮಾರ್ಸಲಿಸ್ ಅಥವಾ ಜಿನೀವ ತಲುಪಿದವರು ಮುಸಲ್ಮಾನ ಗುಲಾಮ ವ್ಯಾಪಾರಿಗಳ ಕೈಗೆ ಸಿಕ್ಕಿಬಿದ್ದು, ಈಜಿಪ್ಟಿನ ಮತ್ತು ಸಿರಿಯಾದ ಮಾರುಕಟ್ಟೆಗಳಲ್ಲಿ ಮಾರಾಟವಾದರು. ಪೋಪನ ಆಶೀರ್ವಾದವನ್ನು ಪಡೆಯಲು ರೋಮಿಗೆ ಮರಳಿದ ಕೆಲವರನ್ನು ಪೋಪ್ ಮೂರನೆಯ ಇನ್ನೊಸೆಂಟ್ ಮನೆಗೆ ಮರಳುವಂತೆ ಒತ್ತಾಯಿಸಿದನು. ನಾಲ್ಕನೆಯ ಧರ್ಮಯುದ್ಧವು ಒಂದು ದುರಂತ ಕಥೆ ಎನ್ನುವುದು ಮಧ್ಯಯುಗದ ಕ್ರೌರ್ಯತೆಗೆ ಹಿಡಿದ ಕನ್ನಡಿಯಾಗಿದೆ. ಮಕ್ಕಳನ್ನು ತಪ್ಪು ದಾರಿಗೆಳೆದ, ಧರ್ಮದ, ತತ್ವದ ಹೆಸರಿನಲ್ಲಿ ತ್ಯಾಗವನ್ನು ಬಯಸಿದ ಕಠೋರವಾದ ಮಾನವ ತಪ್ಪಾಗಿತ್ತು. ಇದೊಂದು ದುಃಖದ ಮತ್ತು ನಾಚಿಕೆಯ ದುರಂತವಾಗಿತ್ತು.

ಕ್ರಿ.ಶ.೧೨೧೭ರಿಂದ ೧೨೨೧ರವರೆಗೆ ನಡೆದ ಐದನೆ ಧರ್ಮಯುದ್ಧದ ಮುಂದಾಳತ್ವವನ್ನೂ ರಾಜ ಎರಡನೆಯ ಫ್ರೆಡರಿಕ್ ವಹಿಸಿದ್ದು, ಇದು ಪೋಪರುಗಳ ಮತ್ತು ಹೊಹೆನ್‌ಸ್ಟೆಫೆನ್ ಚಕ್ರವರ್ತಿಗಳ ನಡುವೆ ನಡೆದ ಬಡಿದಾಟವಾಗಿತ್ತು. ಇವನು ಸಾಧಿಸಿದನೆಂದು ಹೇಳಲಾಗಿರುವ ಎಲ್ಲಾ ವಿಜಯಗಳು ಈಜಿಪ್ಟಿನ ಚಕ್ರವರ್ತಿ ಎರಡನೆಯ ಫ್ರೆಡರಿಕನಿಗೆ ವೈಯಕ್ತಿಕವಾಗಿ ನೀಡಿರುವ ರಿಯಾಯಿತಿಗಳಾಗಿವೆ.

ಫ್ರಾನ್ಸಿನ ಒಂಭತ್ತನೆ ಲೂಯಿ ಕ್ರಿ.ಶ.೧೨೪೮ರಲ್ಲಿ ಮತ್ತು ಕ್ರಿ.ಶ.೧೨೭೦ರಲ್ಲಿ ಕ್ರಮವಾಗಿ ಧರ್ಮಯುದ್ಧಗಳ ನಾಯಕತ್ವವನ್ನು ವಹಿಸಿದ್ದನು. ಇವರ ಮುಖ್ಯ ಉದ್ದೇಶ ಈಜಿಪ್ಟನ್ನು ಸೇರ್ಪಡೆ ಮಾಡಿಕೊಂಡು, ಅದನ್ನು ಸಿರಿಯ ಮತ್ತು ಪ್ಯಾಲೆಸ್ಟೈನಿನ ಮೇಲೆ ದಾಳಿ ಮಾಡಲು ಮುಖ್ಯ ಪ್ರದೇಶವನ್ನಾಗಿ ಬಳಸಿಕೊಳ್ಳುವುದಾಗಿತ್ತು. ಮೊದಲನೆಯ ಯುದ್ಧದಲ್ಲಿ ೯ನೆಯ ಲೂಯಿಯನ್ನು ಸೆರೆಹಿಡಿಯಲಾಗಿ, ದುಬಾರಿ ದಂಡಕೊಟ್ಟು ಬಿಡಿಸಿ ಕೊಳ್ಳಲಾಯಿತು. ಆದರೆ ಕ್ರಿ.ಶ.೧೨೭೦ರ ಯುದ್ಧದಲ್ಲಿ ೯ನೆಯ ಲೂಯಿ ಮಡಿದನು. ಇದು ಧರ್ಮಯುದ್ಧಗಳ ಕಾಲಕ್ಕೆ ಅಂತ್ಯವನ್ನು ಹಾಕಿತು.

ಇನ್ನೆರಡು ಧರ್ಮಯುದ್ಧಗಳು ಕಾಲದ ದೃಷ್ಟಿಯಿಂದ ಅಷ್ಟೇನೂ ಮುಖ್ಯವಾದವುಗಳಲ್ಲ. ಮುಸಲ್ಮಾನ ಅಧಿಕಾರವನ್ನು ಕೆಳಗಿಳಿಸಲು ಮಾಡಿದ ನಾಮಮಾತ್ರ ಪ್ರಯತ್ನಗಳಾಗಿದ್ದು, ವೈಫಲ್ಯಗಳಾಗಿವೆ. ೧೩ನೆಯ ಶತಮಾನದ ಕಡೆಯ ವೇಳೆಗೆ ಧರ್ಮಯುದ್ಧಗಳಿಂದ ಸಂಪಾದಿಸಿದ್ದ ಎಲ್ಲಾ ವಸಾಹತುಗಳು ಮತ್ತೆ ಕೈ ಬಿಟ್ಟು ಹೋಗಿದ್ದವು.

ಎಲ್ಲಾ ಧರ್ಮಯುದ್ಧಗಳು ತಮ್ಮ ಮುಖ್ಯ ಗುರಿಯನ್ನು ಸಾಧಿಸುವಲ್ಲಿ ವಿಫಲವಾಗಿದ್ದವು. ಧರ್ಮಯುದ್ಧಗಳು ಬೈಜಾಂಟೈನ್ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಅಪಾರವಾಗಿ ಶ್ರಮಿಸಿದವು. ಹಾಗೆ ಮಾಡಿದಿದ್ದರೆ ೧೧ನೆಯ ಶತಮಾನದಲ್ಲಿ ಟರ್ಕರು ದಾಳಿ ಮಾಡುವ ಮೊದಲೇ ಬೇರೆಯವರ ಕೈವಶವಾಗುತ್ತಿತ್ತು. ರಾಜಮನೆತನದ ಪದ್ಧತಿ ಮತ್ತು ರಾಷ್ಟ್ರೀಯತಾ ಮನೋಭಾವನೆ ಹುಟ್ಟಿಕೊಂಡದ್ದು ಪಶ್ಚಿಮ ರಾಷ್ಟ್ರಗಳ ಉಳಿಗಾಲಕ್ಕೆ ಸಹಾಯಮಾಡಿತು. ಒಂದು ಸಾಮಾಜಿಕ ವ್ಯವಸ್ಥೆಯಾಗಿ ಊಳಿಗಮಾನ್ಯ ಪದ್ಧತಿ ದುರ್ಬಲವಾಗುತ್ತಾ ಬಂದಂತೆ ಪೋಪನ ಸ್ಥಾನಮಾನ ಮತ್ತು ಚರ್ಚಿನ ಅಧಿಕಾರದ ಬಗ್ಗೆ ಪ್ರಶ್ನೆಗಳನ್ನು ಎತ್ತಲಾಯಿತು.

ಧರ್ಮಯುದ್ಧಗಳಿಂದಾದ ಆರ್ಥಿಕ ಆದಾಯಗಳು ತುಂಬ ಪ್ರಾಮುಖ್ಯದ ವಿಷಯ ಗಳಾಗಿವೆ. ವಾಣಿಜ್ಯ ಚೇತರಿಸಿಕೊಂಡಿತು ಮತ್ತು ಹೊಸ ನಗರಗಳು ಹಾಗೂ ಹೊಸ ವಾಣಿಜ್ಯ ಕೇಂದ್ರಗಳು ಹುಟ್ಟಿಕೊಂಡವು. ಶ್ರೀಮಂತಗೊಂಡ ಭೌಗೋಳಿಕ ಅರಿವು ಏಶಿಯಾದ ಮತ್ತು ಪೌರ್ವಾತ್ಯ ರಾಷ್ಟ್ರಗಳ ಸಂಸ್ಕೃತಿ ಪಶ್ಚಿಮಕ್ಕೆ ಪರಿಚಯವಾಯಿತು. ಕ್ರೈಸ್ತ ಯುರೋಪಿನ ಬೌದ್ಧಿಕ ಎಲ್ಲೆ ಇನ್ನೂ ವಿಶಾಲವಾಯಿತು. ಅರಬ್ಬಿನ ವಿಜ್ಞಾನ ಪಾಶ್ಚಿ ಮಾತ್ಯ ರಾಷ್ಟ್ರಗಳನ್ನು ಪ್ರವೇಶಿಸಿತು. ಮುಸಲ್ಮಾನರು ಮತ್ತು ಕ್ರೈಸ್ತರ ನಡುವೆ ಧಾರ್ಮಿಕ ಸಹಿಷ್ಣುತೆ ಬೆಳೆಯುವಂತೆ ಮಾಡಿತು.

ಮಧ್ಯಯುಗದ ಯುರೋಪಿನಲ್ಲಿ ಸೃಷ್ಟಿಯಾದ ಸಾಮಾಜಿಕ ವ್ಯವಸ್ಥೆ ಮತ್ತು ವಾತಾವರಣ ಮುಂದೆ ಎಷ್ಟೋ ಬೆಳವಣಿಗೆಗಳಿಗೆ ಬುನಾದಿಯನ್ನು ಹಾಕಿಕೊಟ್ಟಿತು. ಈ ಕಾಲವು ಅಧ್ಯಯನಕ್ಕೆ ಯೋಗ್ಯವಾದ ವಿಷಯವಾಗಿ ಹೊಸ ಸಂಸ್ಥೆಗಳ ಮತ್ತು ಪದ್ಧತಿ ಗಳನ್ನು ಅಭಿವೃದ್ಧಿಗೊಳಿಸಲು ಸಾಧ್ಯವಾಗಿ, ಅವುಗಳೆಲ್ಲ ಕ್ರಮೇಣ ಐರೋಪ್ಯ ಇತಿಹಾಸದ ಅವಿಭಾಜ್ಯ ಅಂಗಗಳಾದವು. ಹೊಸ ಮಾದರಿಯ

ಸಾಹಿತ್ಯ ಬೆಳವಣಿಗೆಯನ್ನು ಕಂಡಿತು ಹಾಗೂ ನವಶೈಲಿಯ ವಾಸ್ತುಶಿಲ್ಪವೂ ಕೂಡ ಈ ಕಾಲದಲ್ಲೇ ಅಭಿವೃದ್ಧಿಗೊಂಡಿತು. ಈ ಸಾಹಿತ್ಯ ಮತ್ತು ವಾಸ್ತುಶಿಲ್ಪವೆರಡೂ ಕೂಡ ಧಾರ್ಮಿಕ ರೀತಿಯವಾಗಿದ್ದವು. ಮಧ್ಯಯುಗವು ಐರೋಪ್ಯ ಇತಿಹಾಸದಲ್ಲಿ ತನ್ನದೇ ಆದ ವಿಶೇಷತೆಯನ್ನು ಉಳಿಸಿಕೊಂಡಿದೆ ಎಂದು ಹೇಳಬಹುದಾಗಿದೆ.

<u>ಪರಾಮರ್ಶನ ಗ್ರಂಥಗಳು</u>

೧. ಜಾನ್ ಬೌಲ್. ೧೯೭೯. **ಎ ಹಿಸ್ಟರಿ ಆಫ್ ಯುರೋಪ್: ಎ ಕಲ್ಚರಲ್ ಆ್ಯಂಡ್ ಪಾಲಿಟಿಕಲ್ ಸರ್ವೆ,** ಲಂಡನ್.

೨. ಸ್ಟೀಫನ್ ಜೆ.ಲೀ. ೧೯೮೮. **ಆಸ್ಪೆಕ್ಟ್ಸ್ ಆಫ್ ಯುರೋಪಿಯನ್ ಹಿಸ್ಟರಿ,** ಲಂಡನ್: ರೂಟ್ಲೇಜ್.

## ೭. ರಾಜ್ಯ ಹಾಗೂ ಧರ್ಮ ಸಂಬಂಧಗಳ ವ್ಯಾಖ್ಯಾನ

ಮನುಷ್ಯನು ಲೌಕಿಕ ಜೀವನದಲ್ಲಿ ಸಾಮೂಹಿಕ ಬದುಕನ್ನು ಸಾಧ್ಯವಾಗಿಸಿ ಕೊಳ್ಳಲು ಬೇಕಾದ ವಾತಾವರಣವನ್ನು ಕಲ್ಪಿಸಿಕೊಡಲು ಹಾಗೂ ಅಂತಹ ಸಾಮೂಹಿಕ ಬದುಕಿಗೆ ಪ್ರತಿಕೂಲವಾದ ಮನುಷ್ಯನ ಸ್ವಭಾವ, ನಡವಳಿಕೆಗಳನ್ನು ನಿಗ್ರಹಿಸಲು ಅಗತ್ಯವಾದ ನಿಯಮಗಳನ್ನು ರೂಪಿಸುವುದು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಅಸ್ತಿತ್ವಕ್ಕೆ ಬಂದ ಸಂಸ್ಥೆಯೆ ರಾಜ್ಯ. ಆದರೆ ಧರ್ಮ ಮನುಷ್ಯನ ಅಲೌಕಿಕ ಆಸೆಗಳನ್ನು ಪಾರಮಾರ್ಥಿಕ, ಆಧ್ಯಾತ್ಮಿಕ ಅಗತ್ಯಗಳನ್ನು ಪೂರೈಸಲು ಮನುಷ್ಯ ಕಂಡುಕೊಂಡ ಸಂಸ್ಥೆ. ಈ ಎರಡೂ ಸಂಸ್ಥೆಗಳು ಮಾನವನ ಬದುಕಿನ ಲೌಕಿಕ ಹಾಗೂ ಪಾರಮಾರ್ಥಿಕವೆಂಬ ಪ್ರಮುಖ ಆಯಮಗಳಿಗೆ ಸಂಬಂಧಿಸಿದಂತಹಗಳು. ಈ ಎರಡೂ ಆಯಾಮಗಳಿಗೆ ಆಧಾರವಾದ ಮೌಲ್ಯಗಳು ಪರಸ್ಪರ ಪೂರಕವಾದವುಗಳಾಗಿದ್ದರೆ ರಾಜ್ಯ ಹಾಗೂ ಧರ್ಮದ ನಡುವಿನ ಸಂಬಂಧ ಒಂದು ಸಮಸ್ಯಾತ್ಮಕವಾದ ಅಂಶವಾಗುತ್ತಿರಲಿಲ್ಲ. ಮಾನವನ ಮೌಕಿಕ ಆಶೋತ್ತರಗಳಿಗೂ ಆಧ್ಯಾತ್ಮಿಕ ತುಡಿತಗಳಿಗೂ ನಡುವೆ ಘರ್ಷಣೆ ಇರುವುದನ್ನು ನಾವು ಕಾಣುತ್ತೇವೆ. ಇದರ ಪರಿಣಾಮವಾಗಿಯೆ ಲೌಕಿಕ ಬದುಕನ್ನು ಪ್ರತಿನಿಧಿಸುವ 'ರಾಜ್ಯ' ಎಂಬ ಸಂಸ್ಥೆಗೂ ಆಧ್ಯಾತ್ಮಿಕ ಬದುಕನ್ನು ಪ್ರತಿನಿಧಿಸುವ 'ಧರ್ಮ'ಕ್ಕೂ ನಡುವಿನ ಸಂಬಂಧದಲ್ಲಿನ ಘರ್ಷಣೆ ಇತಿಹಾಸದ ಒಂದು ಭಾಗವಾಗಿದೆ.

ರಾಜ್ಯ ಹಾಗೂ ಧರ್ಮದ ನಡುವಿನ ಸಮಸ್ಯೆಯ ಉಗಮವಾದದ್ದು ರೋಮ್‌ನಲ್ಲಿ. ಪ್ರಾರಂಭದಲ್ಲಿ ರಾಜನೆ ದೇವರ ಪ್ರತಿನಿಧಿ ಎಂದು ರಾಜತ್ವವನ್ನೆ ದೈವೀಕರಿಸಿದಾಗ ಯಾವ ಸಮಸ್ಯೆಯೂ ಇರಲಿಲ್ಲ. ಕಾಲಕ್ರಮೇಣ ರಾಜ್ಯದ ಚಟುವಟಿಕೆ ವಿಸ್ತಾರ ಹೆಚ್ಚಾಗುತ್ತಾ ಹೋಗಿ ಧಾರ್ಮಿಕ ಸಂಸ್ಥೆಗಳ ಉದ್ದೇಶ, ಗುರಿಗಳಿಗೆ ಪರ್ಯಾಯವಾದ ಒಂದು ಸಂಸ್ಥೆಯಾಗಿ ರಾಜ್ಯ ಬೆಳೆದಂತೆಲ್ಲ ಎರಡರ ನಡುವಿನ ಸಂಬಂಧದ ಪ್ರಶ್ನೆ ಸುಮಾರು ೧೨ ಶತಮಾನಗಳಷ್ಟು ಕಾಲದವರೆಗೆ ಚರ್ಚೆಗೀಡಾಯಿತು. ರೋಮ್‌ನ ಪ್ರಜೆಗಳು ಇತ್ತ ರಾಜ್ಯಕ್ಕೂ ಅತ್ತ ಧಾರ್ಮಿಕ ಸಂಸ್ಥೆಯಾದ ಇಗರ್ಜಿಗೂ ವಿಧೇಯರಾಗಿರಬೇಕಾಗಿತ್ತು. ಮನುಷ್ಯನ ಮೊದಲ ಆದ್ಯತೆ ದೇವರ ಪ್ರತಿನಿಧಿಯಾದ ಪೋಪ್‌ನಿಗೊ ಅಥವಾ ರಾಜ್ಯದ ಮುಖ್ಯಸ್ಥನಾದ ದೊರೆಗೊ ಎನ್ನುವ ಪ್ರಶ್ನೆ ಉದ್ಭವವಾಯಿತು. ಕ್ರೈಸ್ತಧರ್ಮ ರೋಮ್‌ನ ಲೌಕಿಕ ರಾಜ್ಯವ್ಯವಸ್ಥೆಯಿಂದ ಬೇರ್ಪಟ್ಟ ಒಂದು ಸ್ವತಂತ್ರ ಹಾಗೂ ರಾಜ್ಯಕ್ಕಿಂತ ಉತ್ತಮವಾದ ಸಂಸ್ಥೆ. ರಾಜ್ಯ ಹಾಗೂ ರಾಜ ತನ್ನ ಅಧೀನಕ್ಕೊಳಪಟ್ಟವರು ಎಂದು ಘೋಷಿಸಿಕೊಳ್ಳುವುದರೊಂದಿಗೆ ರಾಜ್ಯ ಹಾಗೂ ಇಗರ್ಜಿಯ ನಡುವಿನ ಸುದೀರ್ಘ ಕದನಕ್ಕೆ ನಾಂದಿಯಾಯಿತು. ಒಬ್ಬ ನಿಷ್ಠಾವಂತ ಕ್ರೈಸ್ತಧರ್ಮೀಯನಿಗೆ ತನ್ನ ಆಧ್ಯಾತ್ಮಿಕ ಸಾಧನೆಯೆ ಅಂತಿಮ ಗುರಿಯಾದಾಗ ಅದಕ್ಕೆ ಪ್ರತಿಕೂಲವಾದಂತಹ ಯಾವುದೇ ಕಾನೂನಿಗೆ, ಅದು ರಾಜ್ಯದ ಕಾನೂನಾದರೂ ಸರಿ, ವಿಧೇಯನಾಗಿರುವುದು ಅಸಾಧ್ಯದ ಮಾತಾಗಿತ್ತು. ದೇವರ ಹಾಗೂ ಅವರ ನಡುವಿನ ಸಂಬಂಧದಲ್ಲಿ ರಾಜ್ಯ ಮಧ್ಯ ಪ್ರವೇಶಿಸುವುದನ್ನು ಅವರು ಸಹಿಸುವುದು ಸಾಧ್ಯವಿರಲಿಲ್ಲ. ಈ ಮೊದಲೆ ತಿಳಿಸಿದಂತೆ ಕ್ರೈಸ್ತಧರ್ಮ ಜನರ

ದಿನನಿತ್ಯದ ಬದುಕಿನ ವಿವರಗಳನ್ನು ನಿಯಂತ್ರಿಸುವಷ್ಟು ಪ್ರಬಲ ಸಂಸ್ಥೆಯಾಗಿ ಬೆಳೆಯುವ ಮೊದಲು ಈ ಸಮಸ್ಯೆ ಇರಲಿಲ್ಲ. ಈ ಕಾರಣದಿಂದಲೆ ರೋಮ್‌ನಲ್ಲಿ ಕ್ರೈಸ್ತ ಧರ್ಮ ಪ್ರವೇಶಿಸುವ ಮೊದಲೆ ಆ ರಾಜ್ಯದಲ್ಲಿ ಹಲವಾರು ಧಾರ್ಮಿಕ ನಂಬಿಕೆಗಳಿದ್ದರೂ ಅಲ್ಲಿಯ ಪ್ರಜೆಗಳಿಗೆ ತಮ್ಮ ಧಾರ್ಮಿಕ ನಂಬಿಕೆಗಳಿಗೂ, ಅದೇ ಸಮಯಕ್ಕೆ ರಾಜ್ಯದ ಕಾನೂನಿಗೂ ವಿಧೇಯರಾಗಿರುವುದರಲ್ಲಿ ಯಾವುದೇ ಗೊಂದಲ ಬರಲಿಲ್ಲ. ಒಬ್ಬ ವ್ಯಕ್ತಿ ರಾಜ್ಯದ ನಿಷ್ಠಾವಂತ ಪ್ರಜೆಯಾಗಿ ರಾಜ್ಯದ ಕಾನೂನು ಗಳಿಗೆ ವಿಧೇಯನಾಗಿದ್ದುಕೊಂಡು ತನ್ನ ಧಾರ್ಮಿಕ ನಂಬಿಕೆಗಳನ್ನು ಉಳಿಸಿಕೊಳ್ಳುವ ಸ್ವಾತಂತ್ರ್ಯ ಇತ್ತು. ಇದಕ್ಕೆ ಪ್ರಮುಖ ಕಾರಣವೆಂದರೆ ರೋಮ್ ಸಾಮ್ರಾಜ್ಯ ಯಾವುದೇ ಧರ್ಮವನ್ನು ಒಂದು ಅಧಿಕೃತ ಧರ್ಮವೆಂದು ಘೋಷಿಸಿಕೊಳ್ಳದೆ ಇದ್ದುದರಿಂದ ಅಲ್ಲಿನ ಪ್ರಜೆಗಳು ತಾವು ನಂಬಿಕೆ ಇರಿಸಿದ ಹಲವಾರು ದೇವತೆಗಳನ್ನು ಪೂಜಿಸುತ್ತಿದ್ದರು ಹಾಗು ಬೇರೆ ಬೇರೆ ಗುಂಪುಗಳು ವಿವಿಧ ರೀತಿಯ ಧಾರ್ಮಿಕ ನಂಬಿಕೆಗಳನ್ನು ಹೊಂದಿದ್ದವರಾಗಿದ್ದರು. ಕ್ರೈಸ್ತಧರ್ಮ ಕಾಲಕ್ರಮೇಣ ರೋಮ್‌ನ ಅಧಿಕೃತ ಧರ್ಮವೆಂದು ಸ್ಥಾಪಿತವಾದಾಗ ಅದಕ್ಕೂ ಮೊದಲಿದ್ದ ಧಾರ್ಮಿಕ ಆಚರಣೆಯನ್ನು ಪಾಲಿಸುವವರನ್ನೆಲ್ಲ ಪೇಗಾನ್‌ಗಳೆಂದು ಕರೆದು ಮನುಷ್ಯ ಹಾಗೂ ದೇವರ ನಡುವಿನ ಸಂಬಂಧಗಳಿಗೆ ಕ್ರೈಸ್ತ ಧರ್ಮದ ವಿಧಿ ವಿಧಾನಗಳ ಆಚರಣೆಯೆ ಅಂತಿಮವಾದುದು ಎನ್ನುವ ನಂಬಿಕೆಯನ್ನು ಜನರಲ್ಲಿ ಪ್ರಚುರಪಡಿಸಿತು.

ಕ್ರೈಸ್ತಧರ್ಮ ರೋಮ್‌ನಲ್ಲಿ ಎಷ್ಟೆ ಪ್ರಬಲವಾಗಿ ಬೆಳೆದರೂ ಅದು ರಾಜ್ಯದ ಅಸ್ತಿತ್ವ ವನ್ನೆ ಕಡೆಗಣಿಸುವಂತಿರಲಿಲ್ಲ. ರೋಮ್‌ನ ಅವನತಿಯ ನಂತರ ತನ್ನ ಅಸ್ತಿತ್ವವನ್ನು ಕಾಪಾಡಿಕೊಳ್ಳಲು ಕ್ರೈಸ್ತಧರ್ಮಕ್ಕೆ ಒಂದು ಸುಭದ್ರ ರಾಜ್ಯದ ಅವಶ್ಯಕತೆ ಕಂಡುಬಂದಿತು. ಅದಕ್ಕೆ ಬಹುಮುಖ್ಯ ಕಾರಣವೆಂದರೆ ರೋಮ್ ಪ್ರಜೆಗಳಿಗೆ ರೋಮ್‌ನ ಅವನತಿಯ ಕಾರಣ ತಮ್ಮ ಹಳೆಯ ದೇವತೆಗಳನ್ನು ಕಡೆಗಣಿಸಿದ್ದರಿಂದ ಎಂದು ಅನಿಸತೊಡಗಿದ್ದು. ಕ್ರೈಸ್ತ ಧರ್ಮದ ಪ್ರವೇಶದಿಂದಾಗಿಯೆ ತಾವೆಲ್ಲ ಹಳೆಯ ಸ್ಥಳೀಯ ಧಾರ್ಮಿಕ ವಿಧಿಗಳನ್ನು ಹಾಗೂ ದೇವತೆಗಳನ್ನು ಕಡೆಗಣಿಸುವಂತಾಯಿತು. ಆ ದೇವತೆಗಳ ಶಾಪದಿಂದಲೆ ರೋಮ್ ಸಾಮ್ರಾಜ್ಯ ಅವನತಿಯಾಯಿತು ಎನ್ನುವ ನಂಬಿಕೆ ಜನರಲ್ಲಿ ಬಲವಾದರೆ ಅದು ಕ್ರೈಸ್ತ ಧರ್ಮಕ್ಕೆ ಅಪಾಯ ಎಂದು ಮನಗಂಡ ಕೆಲವರು ರೋಮ್ ಸಾಮ್ರಾಜ್ಯಕ್ಕೂ ಕ್ರೈಸ್ತಧರ್ಮದ ಧಾರ್ಮಿಕ ಸಂಸ್ಥೆಯಾದ ಚರ್ಚ್‌ಗೂ ನಡುವೆ ಇದ್ದ ಘರ್ಷಣೆಯನ್ನು ಕೊನೆಗೊಳಿಸಿ ಅದಕ್ಕೆ ಒಂದು ಶಾಶ್ವತ ಪರಿಹಾರವನ್ನು ಕಂಡುಹಿಡಿಯಲು ನಿರ್ಧರಿಸಿದರು. ಇದರ ಫಲವಾಗಿಯೆ ನಾಲ್ಕನೆ ಶತಮಾನದ ಮಧ್ಯಭಾಗದಲ್ಲಿ ಸಂತ ಅಗಸ್ಟೀನ್ (ಕ್ರಿ.ಶ.೩೫೪-೪೩೦) ಎನ್ನುವ ಧಾರ್ಮಿಕ ವಿದ್ವಾಂಸ ಧರ್ಮ ಮತ್ತು ರಾಜ್ಯದ ನಡುವಿನ ಸಂಬಂಧದ ಬಗ್ಗೆ ಒಂದು ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದ : ಸಂತ ಆಗಸ್ಟೀನ್ ತನ್ನ 'ಸಿಟಿ ಆಫ್ ಗಾಡ್' ಎನ್ನುವ ಗ್ರಂಥದಲ್ಲಿ ಎರಡು ರಾಜ್ಯದ ಪ್ರತಿಪಾದನೆ ಮಾಡುತ್ತಾನೆ. ಒಂದು ದೇವರ ರಾಜ್ಯ ಹಾಗೂ ಮತ್ತೊಂದು ಲೌಕಿಕ ರಾಜ್ಯ. ಕ್ರೈಸ್ತಧರ್ಮದ ಧಾರ್ಮಿಕ ಸಂಸ್ಥೆಯಾದ ಚರ್ಚ್ ದೇವರ ರಾಜ್ಯದ ಒಂದು ಭಾಗವಾದರೆ, ದೊರೆಯ ಆಡಳಿತಕ್ಕೊಳಪಟ್ಟ ರೋಮ್ ಮಾನವರಾಜ್ಯದ ಪ್ರತೀಕ ಎಂಬುದು ಅವನ ವಾದ. ಸಂತ ಅಗಸ್ಟೀನ್‌ಗೆ ಒಂದು ರಾಜಕೀಯ ಸಿದ್ಧಾಂತವನ್ನು ಮಂಡಿಸುವ ಉದ್ದೇಶವಿರಲಿಲ್ಲ. ಚರ್ಚ್ ಹಾಗೂ ರಾಜ್ಯದ ನಡುವಿನ ಸಂಬಂಧವನ್ನು ಹೇಗೆ ಗ್ರಹಿಸಬೇಕು ಮತ್ತು ಒಂದು ಧಾರ್ಮಿಕ ಸಂಸ್ಥೆಯಾಗಿ ಚರ್ಚ್ ರಾಜ್ಯಕ್ಕಿಂತ ಹೇಗೆ ಉತ್ತಮವಾದುದು ಎಂದು ತಿಳಿಯಪಡಿಸುವುದೇ ಅವನ 'ಸಿಟಿ ಆಫ್ ಗಾಡ್' ಗ್ರಂಥದ ಮುಖ್ಯ ಉದ್ದೇಶವಾಗಿತ್ತು. ಅವನು ಒಬ್ಬ ಪಾದ್ರಿಯಾಗಿ ಚರ್ಚ್‌ಗೆ ನೇರವಾಗಿ ತನ್ನ ವಿಧೇಯತೆಯನ್ನು ತೋರಿಸುತ್ತಿದ್ದುದರಿಂದ ಚರ್ಚ್ ರಾಜ್ಯ ಕ್ಕಿಂತ ಮೇಲು ಎಂದು ವಾದಿಸುವುದು ಸಹಜವೇ ಆಗಿತ್ತು. ಆಗಸ್ಟೀನ್ ಹೇಳುವಂತೆ ಮನುಷ್ಯನಿಗೆ ರಾಜ್ಯದ ಅಗತ್ಯವಿದೆ. ಏಕೆಂದರೆ ಮಾನವ ದೇವರ ರಾಜ್ಯ ಪ್ರವೇಶಿಸಲು ಈ ಲೌಕಿಕ ಜಗತ್ತಿನ ಬದುಕಿನಲ್ಲಿ ಸರಿಯಾದ ಮಾರ್ಗದರ್ಶನ ಪಡೆಯಬೇಕು. ಆದರೆ ಮಾನವನ ಬದುಕಿನ ಅಂತಿಮ ಗುರಿಯಾದ ಅನಂತ ಶಾಂತಿಯನ್ನು ಪಡೆಯಲು ಅವಶ್ಯಕವಾಗಿರುವುದು ಚರ್ಚ್ ಆ ಗುರಿಯನ್ನು ಸಾಧಿಸುವುದು ರಾಜ್ಯದಿಂದ ಸಾಧ್ಯವಿಲ್ಲ. ಆದರೆ ಸರಿಯಾದ ರೀತಿಯಲ್ಲಿ ಬದುಕನ್ನು ಸಾಗಿಸಲು ರಾಜ್ಯ ಒಂದು ಸಾಧನವಾಗಬಹುದು ಅಷ್ಟೆ. ಯಾವ ರೀತಿಯ ಬದುಕು ದೇವರಿಗೆ ಪ್ರಿಯವಾದದ್ದು ಎಂದು ನಿರ್ಧರಿಸುವ ಅಧಿಕಾರ ಚರ್ಚ್‌ನ ಮುಖ್ಯಸ್ಥನಾದ ಪೋಪ್‌ಗೆ ಮಾತ್ರ ಇದೆ. ಪೋಪ್ ಈ ಉದ್ದೇಶಕ್ಕಾಗಿಯೆ ದೇವರಿಂದ ನೇಮಕನಾದವನು. ರಾಜ್ಯದ ಮುಖ್ಯಸ್ಥನಾದ ದೊರೆ ದೇವರಿಂದ ನೇಮಿಸ್ಪಟ್ಟವನಲ್ಲ. ಆದ್ದರಿಂದ ದೊರೆ ಪೋಪ್‌ನ ಆದೇಶದಂತೆ ರಾಜ್ಯಭಾರ ಮಾಡಬೇಕಾಗುತ್ತದೆ. ರಾಜ್ಯ ಹಾಗು ಚರ್ಚ್ ಈ ರೀತಿಯಲ್ಲಿ ಮಾನವನ ಬದುಕಿಗೆ ಅಗತ್ಯವಾದ ಎರಡು ಸಂಸ್ಥೆ ಗಳಾಗಿವೆ. ಈ ಎರಡು ಸಂಸ್ಥೆಗಳ ಉದ್ದೇಶ ಪರಸ್ಪರ ಪೂರಕವಾಗಿರಬೇಕೆ ಹೊರತು ಎರಡರ ನಡುವೆ ಯಾವುದೇ ರೀತಿಯ ವೈರುಧ್ಯವಿರಬಾರದು. ಹೀಗೆ ಆಗಸ್ಟೀನ್ ಎರಡೂ ಸಂಸ್ಥೆಗಳ ಅನಿವಾರ್ಯತೆಯನ್ನು ಸ್ಪಷ್ಟಪಡಿಸುತ್ತಲೆ ರಾಜ್ಯದ ಮೇಲಿನ ಚರ್ಚ್‌ನ ಅಧಿಪತ್ಯವನ್ನು ಪ್ರತಿಪಾದಿಸುತ್ತಾನೆ.

ಐದನೆ ಶತಮಾನದಲ್ಲಿ ಚರ್ಚ್ ಹಾಗೂ ರಾಜ್ಯದ ನಡುವಿನ ಸಂಬಂಧ ಇನ್ನಷ್ಟು ಬಿಗಡಾಯಿಸಿತು. ಕ್ರೈಸ್ತಧರ್ಮವು ರೋಮ್ ರಾಜ್ಯದ ಅಧಿಕೃತ ಧರ್ಮವೆಂದು ಘೋಷಣೆಯಾಯಿತು. ಇದರೊಂದಿಗೆ ರಾಜ್ಯದಲ್ಲಿ ಚರ್ಚ್‌ಗೆ ಸಂಬಂಧಪಟ್ಟ ವ್ಯವಹಾರ ಗಳಲ್ಲಿ ದೊರೆ ತಲೆಹಾಕಬಾರದು, ತನ್ನ ಪರಿಧಿಯಲ್ಲಿ ಚರ್ಚ್ ಒಂದು ಸ್ವಾಯತ್ತ ಸಂಸ್ಥೆಯಾಗಿ ಸರ್ವಾಧಿಕಾರವನ್ನು ಹೊಂದಿದೆ ಎಂಬ ನಿಲುವನ್ನು ಪೋಪ್ ತಳೆದನು. ಚರ್ಚ್‌ನ ಅಧಿಕಾರಿಗಳ ಮೇಲೆ ರಾಜನಿಗೆ ಯಾವ ಅಧಿಕಾರವಿಲ್ಲ ಹಾಗೂ ಚರ್ಚ್‌ಗೆ ಸಂಬಂಧಪಟ್ಟ ಆಸ್ತಿಯ ಮೇಲೆ ತೆರಿಗೆಯನ್ನು ಹಾಕುವ ಅಧಿಕಾರ ರಾಜನಿಗಿಲ್ಲ ಎನ್ನುವ ಸಿದ್ಧಾಂತವನ್ನು ಮಂಡಿಸಲಾಯಿತು. ಇದರಿಂದ ರಾಜ್ಯದ ಬೊಕ್ಕಸಕ್ಕೆ ಭಾರಿ ಹಾನಿ ಯುಂಟಾಯಿತು. ಅಲ್ಲದೆ ರಾಜ್ಯದ ಕಾನೂನು ಯಾವುದೇ ರೀತಿಯಲ್ಲಾದರೂ ಚರ್ಚ್‌ನ ನಿಯಮಗಳಿಗೆ ವಿರುದ್ಧವಾಗಿದ್ದರೆ ಅದನ್ನು ಪ್ರಜೆಗಳು ಪಾಲಿಸಬಾರದು ಎನ್ನುವ ಹುಕುಂ ವಿಧಿಸಲಾಯಿತು. ಇದರಿಂದಾಗಿ ದೊರೆ ಕುಪಿತಗೊಂಡು ಚರ್ಚ್‌ನ ಅಧಿಕಾರದೊಂದಿಗೆ ತೀವ್ರ ಸಂಘರ್ಷಕ್ಕಿಳಿದನು. ಇದರಿಂದ ಉಂಟಾದ ಗೊಂದಲವನ್ನು ನಿವಾರಿಸಲು ಆಗಿನ ಪೋಪ್ ಗೆಲಿಸಿಯಸ್ ತನ್ನ ಒಂದು ಸಿದ್ಧಾಂತವನ್ನು ಪ್ರತಿಪಾದಿಸಿದನು. ಈ ಸಿದ್ಧಾಂತವೇ 'ದ್ವಿಖಡ್ಗ ಸಿದ್ಧಾಂತ' ಎಂದು ಪ್ರಸಿದ್ಧವಾಯಿತು. ಪೋಪ್ ಗೆಲಿಸಿಯಸ್‌ನ ದ್ವಿಖಡ್ಗ ಸಿದ್ಧಾಂತದ ಸಾರಾಂಶ ಈ ರೀತಿ ಇದೆ: ಏಸುಕ್ರಿಸ್ತನೆ ಸರ್ವರ ರಾಜ ಹಾಗೂ ಪುರೋಹಿತ. ಆದರೆ ಮನುಷ್ಯನ ದುರ್ಬಲತೆಯ ಅರಿವಿದ್ದ ಕ್ರೈಸ್ತ ಎರಡು ಅಧಿಕಾರಗಳನ್ನು ಸೃಷ್ಟಿಸುತ್ತಾನೆ. ಒಂದು, ಆಧ್ಯಾತ್ಮಿಕ ಅಧಿಕಾರ. ಎರಡು, ಲೌಕಿಕ ಅಧಿಕಾರ. ಆಧ್ಯಾತ್ಮಿಕ ಅಧಿಕಾರವನ್ನು ಚರ್ಚ್ ವಹಿಸಿಕೊಂಡರೆ, ಲೌಕಿಕ ಅಧಿಕಾರವನ್ನು ರಾಜ್ಯ ಪಡೆಯುತ್ತದೆ. ಈ ಎರಡೂ ಅಧಿಕಾರದ ಮೂಲ ದೇವರೆ ಆದರೂ ತಮ್ಮ ಅಧಿಕಾರದ ಉದ್ದೇಶವನ್ನು ಈಡೇರಿಸಲು ಈ ಎರಡೂ ಸಂಸ್ಥೆಗಳು ತಮ್ಮ ವಲಯದಲ್ಲಿ ಸ್ವತಂತ್ರವಾಗಿದ್ದು ಪರಮಾಧಿಕಾರವನ್ನು ಹೊಂದಿರುತ್ತವೆ. ಇದರರ್ಥ ಅವೆರಡೂ ಸಂಪೂರ್ಣ ಸ್ವಾವಲಂಬಿ ಸಂಸ್ಥೆಗಳು ಎಂದಲ್ಲ. ಅಂತಿಮ ಗುರಿ ದೇವರೆ ಆದ್ದರಿಂದ ಈ ಎರಡೂ ಸಂಸ್ಥೆಗಳನ್ನು ಅವನೇ ಸೃಷ್ಟಿಸಿದುದರಿಂದ ಎರಡೂ ಪರಸ್ಪರ ಅವಲಂಬಿತವಾಗಿರು ತ್ತವೆ. ಚರ್ಚ್ ರಾಜ್ಯವನ್ನು, ರಾಜ್ಯ ಚರ್ಚ್‌ನನ್ನು ಅವಲಂಬಿಸುವುದು ಅವುಗಳ ಸ್ಥಾಪನೆಯ ಉದ್ದೇಶದ ಈಡೇರಿಕೆಗಾಗಿ ಅಗತ್ಯವಾಗಿದೆ. ಪೋಪ್ ಗೆಲಿಸಿಯಸ್‌ನ ಈ ಸಿದ್ಧಾಂತ ಮೇಲುನೋಟಕ್ಕೆ ರಾಜ್ಯ ಹಾಗೂ ಚರ್ಚ್ ಎರಡೂ ಸಮಾನ ಸಂಸ್ಥೆಗಳೆಂದು ಪ್ರತಿಪಾದಿಸುವಂತೆ ಕಂಡು ಬಂದರೂ ಅವರ ವಾದದ ಇಂಗಿತ ಚರ್ಚ್ ರಾಜ್ಯಕ್ಕಿಂತ ಮೇಲು ಎನ್ನುವುದೇ ಆಗಿದೆ. ಏಕೆಂದರೆ ಅವನ ಪ್ರಕಾರ ಆಧ್ಯಾತ್ಮಿಕತೆಯೆ ಮನುಷ್ಯನ ಅಂತಿಮ ಗುರಿ. ಅದನ್ನು ಸಾಧಿಸುವ ಮಧ್ಯವರ್ತಿ ಚರ್ಚ್. ಇವನ ವಾದವನ್ನು ಉಪಯೋಗಿಸಿಕೊಂಡೆ ಮುಂದೆ ಪೋಪ್‌ವಾದಿಗಳು ರಾಜ್ಯದ ಮೇಲೆ ಚರ್ಚ್‌ನ ಅಧಿಪತ್ಯವನ್ನು ಸ್ಥಾಪಿಸಲು ಹೋರಾಟ ಪ್ರಾರಂಭಿಸಿದರು. ದ್ವಿಖಡ್ಗ ಸಿದ್ಧಾಂತದ ಒಂದು ಮುಖ್ಯ ಕೊರತೆ ಎಂದರೆ ರಾಜ್ಯ ಹಾಗೂ ಚರ್ಚ್ ನಡುವಿನ ಘರ್ಷಣೆಯ ಸಾಧ್ಯತೆಯನ್ನೆ ಅದು ಗಮನಿಸದೆ ಇದ್ದುದು.

ರಾಜ್ಯ ಹಾಗೂ ಧರ್ಮಗಳ ನಡುವಿನ ಸಂಬಂಧದಲ್ಲಿ ೧೦ ರಿಂದ ೧೨ನೇ ಶತಮಾನ ಗಳಲ್ಲಾದ ಯುರೋಪಿನ ರಾಜಕೀಯ ಬೆಳವಣಿಗೆ ಮಹತ್ತರವಾದುದು. ಯಾರು ಹೆಚ್ಚು ಅಧಿಕಾರವನ್ನು ಹೊಂದಿರುವವರು ಎನ್ನುವ ವಿಷಯದಲ್ಲಿ ರಾಜರುಗಳಿಗೂ ಹಾಗೂ ಪೋಪ್ ನಡುವೆ ತೀವ್ರವಾದ ಭಿನ್ನಾಭಿಪ್ರಾಯ ತಲೆದೋರಿತ್ತು. ಪೋಪ್‌ನ ಪರವಾಗಿ ಪೋಪ್‌ವಾದಿಗಳು ಸಮಸ್ತ ಅಧಿಕಾರವೂ ಚರ್ಚ್‌ನ ಅಧಿಕಾರಿಗಳಲ್ಲೆ ಕೇಂದ್ರಿಕೃತವಾಗಬೇಕೆಂಬ ವಾದವನ್ನು ಪ್ರಬಲವಾಗಿ ಮಂಡಿಸಲು ಪ್ರಾರಂಭಿಸಿದರು. ಈ ವೇಳೆಗಾಗಲೆ ರಾಜ್ಯದ ಕಾರ್ಯಕ್ಷೇತ್ರ ವಿಸ್ತಾರಗೊಂಡಿತ್ತು. ವಾಣಿಜ್ಯ ಹಾಗು ವ್ಯವಹಾರಗಳಲ್ಲಿ ರಾಜ್ಯ ಪ್ರಮುಖ ಪಾತ್ರವನ್ನು ವಹಿಸಲು ಪ್ರಾರಂಭಿಸಿತ್ತು. ವ್ಯಾಪಾರಗಳಲ್ಲಿ ತೊಡಗಿದ್ದ ಮಧ್ಯಮವರ್ಗದವರ ಸಾಧ್ಯತೆ ಜಾಸ್ತಿಯಾಗಿತ್ತು. ಅವರೆಲ್ಲ ನಿಧಾನವಾಗಿ ರಾಜ್ಯದ ಅಧಿಕಾರವಲಯದ ವಿಸ್ತರಣೆಗೆ ಬೆಂಬಲ ಸೂಚಿಸಲು ಪ್ರಾರಂಭಿಸಿದರು. ಮೊದಲು ರಾಜ್ಯದ ಪರ ವಾದಿಸುವ ಸಾಮ್ರಾಜ್ಯವಾದಿಗಳು ರಾಜ್ಯ ಹಾಗೂ ಚರ್ಚ್‌ಗಳಲ್ಲಿ ಯಾವುದೂ ಮತ್ತೊಂದಕ್ಕಿಂತ ಹೆಚ್ಚು ಅಧಿಕಾರವನ್ನು ಹೊಂದಿಲ್ಲ, ಅವೆರಡು ಸಮಾನವಾದ ಅಧಿಕಾರವನ್ನು ಹೊಂದಿವೆ ಎನ್ನುವ ಸೌಮ್ಯವಾದ ನಿಲುವನ್ನು ತಳೆದಿದ್ದರು. ನಂತರ ಅಂದರೆ ೧೧ನೇ ಶತಮಾನದ ಹೊತ್ತಿಗೆ ರಾಜನಿಗೆ ಹೆಚ್ಚು ಅಧಿಕಾರ ಇರುವುದು ಸೂಕ್ತ ಎನ್ನುವ ನಿಲುವನ್ನು ತಳೆದರು. ಈ ಘರ್ಷಣೆ ವಾಸ್ತವವಾಗಿ ಕೇವಲ ಕೆಲವೇ ಪ್ರದೇಶಕ್ಕೆ ಸೀಮಿತವಾಗಿತ್ತು. ಆದರೆ ತಮ್ಮ ನಿಲುವನ್ನು ಪ್ರಬಲವಾಗಿ ಮಂಡಿಸುವ ಉದ್ದೇಶದಿಂದ ಎರಡೂ ಗುಂಪಿನವರು ತಮ್ಮ ವಾದಕ್ಕೆ ಸಾರ್ವತ್ರಿಕತೆಯನ್ನು ಕಂಡುಕೊಳ್ಳಲು ಪ್ರಯತ್ನಿಸಿದರು. ರಾಜ್ಯ ಹಾಗೂ ಚರ್ಚ್‌ನ ನಡುವಿನ ಅಧಿಕಾರ ಹಂಚುವಿಕೆಯ ಸಮಸ್ಯೆ ಜಟಿಲವಾಗಲು ಮತ್ತೂ ಒಂದು ಕಾರಣವನ್ನು ಇಲ್ಲಿ ನಾವು ಗಮನಿಸಬೇಕಾಗುತ್ತದೆ. ಪೋಪ್ ಕೇವಲ ಚರ್ಚ್‌ನ ಉಸ್ತುವಾರಿಯನ್ನು ನೋಡಿಕೊಳ್ಳುವುದಕ್ಕಷ್ಟೇ ತನ್ನ ಕಾರ್ಯಕ್ಷೇತ್ರವನ್ನು ಮಿತಿಗೊಳಿಸಲಿಲ್ಲ. ಚರ್ಚಿನ ಹೆಸರಿ ನಲ್ಲಿ ಇದ್ದ ಭೂಮಿಯ ಸಮಸ್ತ ಒಡೆತನವನ್ನು ಹೊಂದಿ ಒಂದು ರೀತಿಯಲ್ಲಿ ಪೋಪ್ ಭಾರಿ

ಭೂಮಾಲಿಕನೂ ಆಗಿದ್ದನು. ಇಲ್ಲಿ ಬಂದ ಸಮಸ್ಯೆ ಎಂದರೆ ಭೂಮಿಯ ಒಡೆತನಕ್ಕೆ ಸಂಬಂಧಿಸಿದ ರಾಜ್ಯದ ಕಾನೂನುಗಳು ಪೋಪ್‌ಗೂ ಅನ್ವಯಿಸುತ್ತದೆಯೆ ಎಂಬುದು. ಭೂಮಾಲಿಕನಾಗಿ ಪೋಪ್ ಸಹ ರಾಜ್ಯಕ್ಕೆ ತೆರಿಗೆಯನ್ನು ಸಲ್ಲಿಸಬೇಕು ಎನ್ನುವ ರಾಜ್ಯದ ಸಹಜ ನಿಲುವನ್ನು ಚರ್ಚ್‌ನ ಅಧಿಕಾರಿಗಳು ವಿರೋಧಿಸಿದರು. ಈ ವಿರೋಧವನ್ನು ರಾಜ ಹಗುರವಾಗಿ ಪರಿಗಣಿಸುವಂತಿರಲಿಲ್ಲ. ಏಕೆಂದರೆ ಶೈಕ್ಷಣಿಕ ಅವಕಾಶ ಚರ್ಚ್‌ನ ಅಧಿಕಾರಿಗಳಿಗೆ ಮಾತ್ರ ಇದ್ದುದರಿಂದ ಅವರು ಮಾತ್ರ ಓದು ಬರಹವನ್ನು ಬಲ್ಲವರಾಗಿದ್ದು, ರಾಜ್ಯದ ಆಡಳಿತದಲ್ಲಿ ಬಹು ಮುಖ್ಯ ಪಾತ್ರವನ್ನು ಅವರು ವಹಿಸುತ್ತಿದ್ದರು. ಈ ಅಧಿಕಾರಿಗಳನ್ನು ದೂರವಿರಿಸಿ ರಾಜ್ಯದ ಆಡಳಿತ ನಡೆಸುವುದು ರಾಜನಿಗೆ ಕಷ್ಟ ಸಾಧ್ಯವಾದ ಮಾತಾಗಿತ್ತು. ಅಧಿಕಾರಿಗಳ ನಿಷ್ಠೆ ಚರ್ಚಿನ ಕಾನೂನಿಗೆ ಇತ್ತು. ಯಾವುದೇ ಕಾನೂನು ಚರ್ಚಿನ ನೀತಿಗೆ ವಿರುದ್ಧವಾಗಿದ್ದರೆ ಅಂತಹ ಕಾನೂನನ್ನು ಜಾರಿಗೊಳಿಸುವಂತೆ ತಡೆಯುವ ಸಾಮರ್ಥ್ಯ ಅವರಿಗಿತ್ತು. ಆದ್ದರಿಂದ ಚರ್ಚ್‌ನ ಆಸ್ತಿಗೆ ಸಂಬಂಧಿಸಿದ ಯಾವುದೇ ನಿಯಮವನ್ನು ರಾಜ್ಯ ರೂಪಿಸು ವುದಕ್ಕೆ ಅವರು ವಿರೋಧವಾಗಿದ್ದರು. ಇತ್ತ ಜನರ ಬೆಂಬಲ ಬಾನ್ಸಿಯಾದಂತೆಲ್ಲ ರಾಜ್ಯದ ಅಧಿಕಾರವನ್ನು ಧಿಕ್ಕರಿಸುವ ಚರ್ಚಿನ ಅಧಿಕಾರಿಗಳು ಅದರಲ್ಲೂ ಪ್ರಮುಖವಾಗಿ ಪೋಪ್‌ನ ವಿರುದ್ಧ ಕ್ರಮ ಕೈಗೊಳ್ಳುವ ಧೈರ್ಯವನ್ನು ರಾಜ ಪ್ರದರ್ಶಿಸಲು ಪ್ರಾರಂಭಿಸಿದ. ಈ ಬೆಳವಣಿಗೆಯಿಂದ ರಾಜ್ಯ ಹಾಗೂ ಚರ್ಚ್ ನಡುವಿನ ಭಿನ್ನಾಭಿಪ್ರಾಯ ಒಂದು ಪರಾಕಾಷ್ಠೆಯ ಹಂತವನ್ನು ತಲುಪಿತು. ೧೦೭೬ರಲ್ಲಿ ಜರ್ಮನಿಯ ದೊರೆ ನಾಲ್ಕನೆ ಹೆನ್ರಿಗೂ ಏಳನೆ ಪೋಪ್ ಜಾರ್ಜ್‌ಗೂ ತೀವ್ರವಾದ ಭಿನ್ನಾಭಿಪ್ರಾಯ ತಲೆದೋರಿದಾಗ ದೊರೆ ಹೆನ್ರಿ ಪೋಪ್‌ನಿಗೆ ತನ್ನ ಅಧಿಕಾರ ಬಿಟ್ಟು ಕೆಳಗಿಳಿಯುವಂತೆ ಸೂಚಿಸಿದ. ಇದಕ್ಕೆ ಪ್ರತಿಯಾಗಿ ಪೋಪ್ ದೊರೆಯನ್ನು ದೇಶದಿಂದಲೆ ಹೊರಗಟ್ಟುವ ಆದೇಶ ನೀಡಿದನು. ಈ ಘಟನೆ ಮುಂದೆ ಸುಮಾರು ಇನ್ನೂರು ವರ್ಷಗಳ ಕಾಲ ರಾಜ್ಯ ಹಾಗೂ ಚರ್ಚ್‌ನ ನಡುವಿನ ಸಂಬಂಧಗಳ ಬಗ್ಗೆ ವಿವಿಧ ರೀತಿಯ ಸಿದ್ಧಾಂತಗಳ ಉಗಮಕ್ಕೆ ನಾಂದಿಯಾಯಿತು. ದೊರೆ ಹೆನ್ರಿಗೂ ಪೋಪ್ ಜಾರ್ಜ್‌ಗೂ ನಡೆದ ಈ ಸಮರದಲ್ಲಿ ಗೆಲುವು ದೊರಕಿದ್ದು ಪೋಪ್‌ಗೆ ಎನ್ನುವ ಅಂಶ ಚರ್ಚ್ ಎಷ್ಟು ಪ್ರಬಲವಾಗಿತ್ತು ಎನ್ನುವುದನ್ನು ಸೂಚಿಸುತ್ತದೆ.

ಈ ಮೇಲೆ ತಿಳಿಸಿದ ಘಟನೆಯ ಹಿನ್ನೆಲೆಯಲ್ಲಿ ಕೆಲವು ಪ್ರಮುಖ ಸಿದ್ಧಾಂತಗಳು ಮಂಡಿತವಾದವು. ಜಾನ್ ಆಫ್ ಸಾಲಿಸ್‌ಬರಿ(೧೧೨೦-೧೧೮೦) ಎನ್ನುವ ವಿದ್ವಾಂಸ ಪೋಪ್ ಗೆಲಿಸಿಯಸ್‌ನ ದ್ವಿಖಡ್ಗ ಸಿದ್ಧಾಂತವನ್ನು ಹೆಚ್ಚು ಕಡಿಮೆ ಪುನರುಚ್ಚರಿಸುತ್ತಾನೆ. ಅವನ ಪ್ರಕಾರ ಎರಡು ಖಡ್ಗಗಳು(ಲೌಕಿಕ ಹಾಗೂ ಆಧ್ಯಾತ್ಮಿಕ) ಚರ್ಚಿಗೆ ಸೇರಿದಂತಹವು ಗಳು. ಜನರ ಲೌಕಿಕ ಬದುಕು ಅವರ ಪಾರಮಾರ್ಥಿಕ ಗುರಿಗೆ ಸಹಾಯಕ ಎನ್ನುವುದನ್ನು ಅವನು ಅಲ್ಲಗಳೆಯುವುದಿಲ್ಲ. ಹಾಗೆಯೇ ಲೌಕಿಕ ಬದುಕನ್ನು ಸಾಧ್ಯಗೊಳಿಸಲು ರಾಜ್ಯದ ಹಾಗೂ ರಾಜನ ಮಹತ್ವವನ್ನು ಅವನು ಗುರುತಿಸುತ್ತಾನೆ. ಆದರೆ ಸಾಲಿಸ್‌ಬರಿಯ ಪ್ರಕಾರ ರಾಜ ತನ್ನ ಅಧಿಕಾರವನ್ನು ದೇವರಿಂದ ನೇರವಾಗಿ ಪಡೆಯುವುದಿಲ್ಲ. ಆ ಅಧಿಕಾರ ಅವನಿಗೆ ದೊರೆಯುವುದು ಚರ್ಚ್‌ನ ಮೂಲಕ. ಈ ವಾದದ ಇಂಗಿತವೆಂದರೆ ಚರ್ಚ್‌ನ ಮುಖ್ಯಸ್ಥನಾದ ಪೋಪ್‌ನ ನಿರ್ದೇಶನದಂತೆ ರಾಜ ರಾಜ್ಯಭಾರ ಮಾಡಬೇಕು ಎನ್ನುವುದು. ಸಾಲಿಸ್‌ಬರಿಯ ನಂತರ ಬಂದ ಸಂತ ಥಾಮಸ್ ಅಕ್ವಿನಾಸ್(೧೨೨೬-೧೨೭೪) ಎನ್ನುವ ಮತ್ತೊಬ್ಬ ಧಾರ್ಮಿಕ ಮುಖಂಡ ಈ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚು ಅಮೂರ್ತವಾದ ಸಿದ್ಧಾಂತವನ್ನು 'ಸುಮ್ಮ ಥಿಯಾಲಜಿಕಲ್' ಎನ್ನುವ ಗ್ರಂಥದಲ್ಲಿ ಪ್ರತಿಪಾದಿಸುತ್ತಾನೆ. ಇವನ ಸಿದ್ಧಾಂತಕ್ಕೆ ಪ್ರಮುಖ ಪ್ರೇರಣೆ ಎಂದರೆ ಆಗ ಯುರೋಪಿನಲ್ಲಿ ಹುಟ್ಟಿಕೊಳ್ಳುತ್ತಿದ್ದ ತತ್ವಶಾಸ್ತ್ರ. ಧಾರ್ಮಿಕ ಸಿದ್ಧಾಂತಕ್ಕೆ ಭಿನ್ನವಾದ ರೀತಿಯಲ್ಲಿ ತತ್ವಶಾಸ್ತ್ರ ತನ್ನ ನೆಲೆಯನ್ನು ಗುರುತಿಸಿಕೊಳ್ಳುತ್ತಿತ್ತು. ಧಾರ್ಮಿಕತೆ ಕೇವಲ ನಂಬಿಕೆ, ನಿಷ್ಠೆಯ ಆಧಾರದ ಮೇಲೆ ನಿಂತಿದ್ದರೆ ತತ್ವಶಾಸ್ತ್ರ ತನ್ನ ಅಸ್ತಿತ್ವವನ್ನು ವೈಚಾರಿಕತೆಯ ನೆಲೆಯ ಮೇಲೆ ಕಂಡುಕೊಳ್ಳುತ್ತಿತ್ತು. ಯಾವುದನ್ನು ವೈಚಾರಿಕತೆಯಿಂದ ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲವೋ ಅದನ್ನು ತತ್ವಶಾಸ್ತ್ರ, ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಆ ಕಾಲದಲ್ಲಿ ತತ್ವಶಾಸ್ತ್ರದ ಹೊಸ ಹೊಸ ಪ್ರತಿಪಾದಕರು ಬಂದಂತೆಲ್ಲ ಧಾರ್ಮಿಕ ಮುಖಂಡರಿಗೆ ಮುಜುಗರನ್ನುಂಟುಮಾಡುವ ಪರಿಸ್ಥಿತಿ ಉಂಟಾಗುತ್ತಿತ್ತು. ಆಗ ಹುಟ್ಟಿ ಕೊಳ್ಳುತ್ತಿದ್ದ ವಿಶ್ವವಿದ್ಯಾನಿಲಯಗಳು ಇಂತಹ ತತ್ವಶಾಸ್ತ್ರಜ್ಞರ ಹುಟ್ಟಿನ ಮೂಲವಾಗಿದ್ದವು. ಚರ್ಚ್‌ವಾದಿಗಳಿಗೆ ಇವರನ್ನು ಎದುರಿಸುವುದು ಒಂದು ರೀತಿಯಲ್ಲಿ ರಾಜನನ್ನು ಎದುರಿಸುವುದಕ್ಕಿಂತಲು ಕಷ್ಟವಾಗಿತ್ತು. ಅಕ್ವಿನಾಸ್‌ನ ಸುಮ್ಮ ಥಿಯಾಲಿಜಿಕಲ್ ಈ ಸವಾಲನ್ನು ಎದುರಿಸುವ ದಿಕ್ಕಿನಲ್ಲಿ ಒಂದು ಪ್ರಯತ್ನ ಅಷ್ಟೆ. ಅಕ್ವಿನಾಸ್‌ನ ವಾದದಂತೆ ತತ್ವಶಾಸ್ತ್ರ ವೈಚಾರಿಕತೆಯ ನೆಲೆಯನ್ನು ಆಧರಿಸಿದೆ, ಧರ್ಮದ ನೆಲೆ ನಂಬಿಕೆ ಹಾಗೂ ನಿಷ್ಠೆ. ಈ ಎರಡೂ ಮಾನವನ ಬದುಕಿನ ಎರಡು ಆಯಾಮಗಳು. ಆದರೆ ವೈಚಾರಿಕತೆ ಮಾನವನ ಎಲ್ಲಾ ಸಮಸ್ಯೆಗಳಿಗೂ ಉತ್ತರವನ್ನು ಕಂಡುಕೊಳ್ಳುವುದಿಲ್ಲ. ಅವನ ಬದುಕಿನ ಅಂತಿಮ ಗುರಿಯಾದ ಅನಂತಶಾಂತಿ ದೊರಕುವುದು ದೇವರ ಸಾನ್ನಿಧ್ಯ ದಲ್ಲಿ ಮಾತ್ರ. ಅದನ್ನು

ಸಾಧ್ಯವಾಗಿಸುವುದು ನಂಬಿಕೆ ಹಾಗೂ ಅಚಲ ನಿಷ್ಠೆಯ ಆಧಾರದ ಮೇಲೆ ನಿಂತಿರುವ ಧರ್ಮ. ಆದ್ದರಿಂದ ತತ್ವಶಾಸ್ತ್ರ ಧರ್ಮವನ್ನು ಅವಲಂಬಿಸಬೇಕು, ಅಂತೆಯೇ ರಾಜ್ಯ ಚರ್ಚ್‌ನ್ನು ಅವಲಂಬಿಸಬೇಕು.

ಈ ಮೊದಲೆ ತಿಳಿಸಿದಂತೆ ೧೩ನೇ ಶತಮಾನದಲ್ಲಿ ಮಹತ್ತರ ಬದಲಾವಣೆಗಳಾದವು. ಇಟಲಿಯು ಈ ಬದಲಾವಣೆಗೆ ಹೊರತಾಗಿರಲಿಲ್ಲ. ವಾಣಿಜ್ಯ ಹಾಗೂ ಹಣಕಾಸು ವ್ಯವಹಾರಗಳ ಬೆಳವಣಿಗೆಯಿಂದಾಗಿ ನಗರಗಳು ಹುಟ್ಟಿಕೊಂಡವು. ಇದು ಒಂದು ರೀತಿ ಯಲ್ಲಿ ಕೈಗಾರಿಕಾ ಕ್ರಾಂತಿಗೂ ಮೊದಲಿನ ಬಂಡವಾಳಶಾಹಿ ವ್ಯವಸ್ಥೆಯ ಹುಟ್ಟಿಗೆ ಕಾರಣವಾಯಿತು. ಈ ವ್ಯವಸ್ಥೆಗೆ ಪೂರಕವಾದ ಲೌಕಿಕವಾದ ನಗರಗಳಲ್ಲಿ ಜನಪ್ರಿಯ ವಾಯಿತು. ವ್ಯಾಪಾರ ವ್ಯವಹಾರಗಳನ್ನು ಅವಲಂಬಿಸಿದ ಇಟಲಿಯ ಮಧ್ಯಮವರ್ಗದ ಜನರಿಗೆ ರಾಜ್ಯದ ಅವಶ್ಯಕತೆ ಹಿಂದಿಗಿಂತ ಹೆಚ್ಚಾಗಿತ್ತು. ಆದ್ದರಿಂದ ರಾಜ್ಯದ ಅಸ್ತಿತ್ವವನ್ನು ಬಲಪಡಿಸುವ ಸಿದ್ಧಾಂತದ ಅಗತ್ಯ ಕಂಡುಬಂದಿತು. ಇದರ ಪರಿಣಾಮವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಚರ್ಚಿನ ಪ್ರಭಾವ ಮುಂದುವರಿದರೂ ನಗರ ಪ್ರದೇಶಗಳಲ್ಲಿ ಲೌಕಿಕವಾದಕ್ಕೆ ಬೆಂಬಲ ಜಾಸ್ತಿಯಾಯಿತು. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ನಾವು ವಿದ್ವಾಂಸ ಡಾಂಟೆ (೧೨೬೫-೧೩೨೧)ಯವರ ವಿಚಾರಗಳನ್ನು ಗಮನಿಸಬೇಕು. ಡಾಂಟೆ 'ಆನ್ ಮೊನಾರ್ಕಿ' ಎನ್ನುವ ಗ್ರಂಥದಲ್ಲಿ ರಾಜ್ಯದ ಅಧಿಕಾರದ ಬಗ್ಗೆ ಹಿಂದಿನವರಿಗಿಂತ ಸ್ವಲ್ಪ ಭಿನ್ನವಾದ ಅಭಿಪ್ರಾಯವನ್ನು ಮಂಡಿಸುತ್ತಾರೆ. ಮೊತ್ತ ಮೊದಲ ಬಾರಿಗೆ ರಾಜ್ಯ ತನ್ನ ಅಧಿಕಾರಕ್ಕೆ ಚರ್ಚನ್ನು ಅವಲಂಬಿಸಿಲ್ಲ ಎನ್ನುವ ನಿಲುವನ್ನು ಇವರು ತಳೆಯುತ್ತಾರೆ. ಆದರೆ ಚರ್ಚ್‌ನ ಮಹತ್ವವನ್ನು ಇವರು ಅಲ್ಲಗಳೆಯುವುದಿಲ್ಲ. ಡಾಂಟೆಯವರ ಪ್ರಕಾರ ಮಾನವ ದ್ವಿಮುಖ ಸ್ವಭಾವದವನಾಗಿದ್ದಾನೆ. ದೇಹ ಹಾಗೂ ಆತ್ಮ ಅವನ ಎರಡು ಅವಿಭಾಜ್ಯ ಅಂಗಗಳು. ಈ ಎರಡು ಅಂಗಗಳು ತಮ್ಮದೇ ಆದ ಗುರಿಯನ್ನು ಹೊಂದಿವೆ. ದೇಹಕ್ಕೆ ಸಂಬಂಧಪಟ್ಟ ಗುರಿಯೆಂದರೆ ಲೌಕಿಕ ಜೀವನದಲ್ಲಿ ಸುಖವಾದ ಬದುಕು ಹಾಗೂ ಆತ್ಮಕ್ಕೆ ಸಂಬಂಧಿಸಿದ ಗುರಿ ಸ್ವರ್ಗ. ಇದರಲ್ಲಿ ಮೊದಲನೆಯ ಗುರಿಯನ್ನು ವೈಚಾರಿಕತೆಯಿಂದ ಹಾಗೂ ತತ್ವಶಾಸ್ತ್ರದ ನೆಲೆಯಿಂದ ಕಂಡುಕೊಳ್ಳಬಹುದು. ಎರಡನೆಯ ಗುರಿಯನ್ನು ಸಾಧಿಸಲು ಸಾಧ್ಯವಾಗುವುದು ನಂಬಿಕೆ, ವಿಶ್ವಾಸ ಹಾಗೂ ಧರ್ಮಶಾಸ್ತ್ರಗಳ ಸಹಾಯದಿಂದ. ಈ ದೃಷ್ಟಿಯಿಂದ ರಾಜ್ಯ ಹಾಗೂ ಚರ್ಚ್ ಪರಸ್ಪರ ವಿರುದ್ಧವಾದ ಗುರಿಗಳನ್ನು ಹೊಂದಿರುವ ಸಂಸ್ಥೆಗಳಲ್ಲಿ ಅವೆರಡರ ಗುರಿಗಳು ಒಂದೇ ಆಗಿರುವುದರಿಂದ ಎರಡರ ಅಸ್ತಿತ್ವವೂ ಸಮಾನ ಮಹತ್ವವನ್ನು ಹೊಂದಿರುತ್ತದೆ. ಈ ಎರಡೂ ಸಂಸ್ಥೆಗಳು ತಮ್ಮ ತಮ್ಮ ವಲಯಗಳಲ್ಲಿ ಸ್ವತಂತ್ರ ಸಂಸ್ಥೆಗಳು. ಹೀಗೆ ಹೇಳಿದ ಡಾಂಟೆ ಮತ್ತೊಂದು ಮಹತ್ವದ ಹೇಳಿಕೆಯನ್ನು ನೀಡುತ್ತಾನೆ. ಅದೆಂದರೆ ರಾಜ್ಯ ಚರ್ಚ್ ಹುಟ್ಟುವ ಮೊದಲೆ ತನ್ನ ಅಧಿಕಾರವನ್ನು ಪಡೆದಿತ್ತು ಎಂದು. ಡಾಂಟೆಯ ಈ ಹೇಳಿಕೆ ಆ ಕಾಲದಲ್ಲಿ ಜನರ ಬದಲಾಗುತ್ತಿದ್ದ ಮನೋಧರ್ಮದ ದ್ಯೋತಕವಾಗಿತ್ತು. ಸಂತ ಅಗಸ್ಟೀನ್ ರಾಜ್ಯ ಮಾನವನ ದೌರ್ಬಲ್ಯ ಹಾಗೂ ಪಾಪಗಳ ಕಾರಣದಿಂದ ಹುಟ್ಟಿಕೊಂಡ ಸಂಸ್ಥೆ ಎಂದು ಹೇಳಿದರೆ, ಸಂತ ಅಕ್ವಿನಾಸ್ ರಾಜ್ಯ ಉಗಮವಾದದ್ದು ಮಾನವನ ಸಾಮಾಜಿಕ ಅಗತ್ಯಗಳ ಪೂರೈಕೆಗಾಗಿ ಎಂದು ಹೇಳುತ್ತಾನೆ. ಡಾಂಟೆ ಈ ಎರಡೂ ತತ್ವಗಳನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡುತ್ತಾನೆ. ಅಂದರೆ ರಾಜ್ಯ ಮಾನವ ದೌರ್ಬಲ್ಯದ ಪ್ರತೀಕವೂ ಹೌದು ಹಾಗೆಯೆ ಸಾಮಾಜಿಕ ಅಗತ್ಯಗಳ ಪೂರೈಕೆಗೆ ಸಹಜವಾಗಿ ಹುಟ್ಟಿಕೊಂಡ ಸಂಸ್ಥೆಯೂ ಹೌದು. ಈ ಕಾರಣದಿಂದಲೆ ರಾಜ್ಯಕ್ಕೆ ಮಾನವನನ್ನು ದೌರ್ಬಲ್ಯದಿಂದ ಮುಕ್ತಗೊಳಿಸುವ ಜವಾಬ್ದಾರಿಯಿದೆ. ಈ ನಿಟ್ಟಿನಲ್ಲಿ ಚರ್ಚ್‌ನೊಡನೆ ರಾಜ್ಯ ಸಹಕರಿಸಬೇಕು. ಆದರೆ ರಾಜ್ಯ ತನ್ನ ಕೆಲಸವನ್ನು ನಿರ್ವಹಿಸಲು ಚರ್ಚ್‌ನ ಮಧ್ಯವರ್ತಿತನದ ಅಗತ್ಯವಿಲ್ಲ. ಈ ವಾದ ಡಾಂಟೆಯ ಕಾಲದಲ್ಲಿ ಒಂದು ಕ್ರಾಂತಿಕಾರಿ ವಿಚಾರ ಸರಣಿಯಾಗಿತ್ತು.

೧೩ನೇ ಶತಮಾನದಲ್ಲಿ ಆದ ಮತ್ತೊಂದು ಪ್ರಮುಖ ಬೆಳವಣಿಗೆ ಎಂದರೆ ಫ್ರಾನ್ಸ್ ಹಾಗೂ ಇಂಗ್ಲೆಂಡಿನಲ್ಲಿ ರಾಜನಿಗೂ ಪೋಪ್‌ಗೂ ನಡುವೆ ನಡೆದ ಸಮರ. ಜರ್ಮನಿಯಲ್ಲಿ ದೊರೆ ನಾಲ್ಕನೆ ಹೆನ್ರಿ ಹಾಗೂ ಪೋಪ್ ಏಳನೆ ಚರ್ಚ್‌ಗೂ ನಡುವೆ ೧೦೭೬ರಲ್ಲಿ ನಡೆದ ಘರ್ಷಣೆಯ ತರುವಾಯ ಜರ್ಮನಿಯ ಸಾಮ್ರಾಜ್ಯದ ಮೇಲೆ ಚರ್ಚ್ ತನ್ನ ಸಂಪೂರ್ಣ ಹಿಡಿತವನ್ನು ಸಾಧಿಸಿತ್ತು. ಇಂಗ್ಲೆಂಡ್ ಹಾಗೂ ಫ್ರಾನ್ಸ್‌ನಲ್ಲಿ ಪರಿಸ್ಥಿತಿ ಬೇರೆಯದೆ ಆಗಿತ್ತು. ಆ ಸಮಯದಲ್ಲಿ ಅತ್ಯಂತ ಪ್ರಭಾವಿ ಕೊನೆಯ ಪೋಪ್ ಎನಿಸಿಕೊಂಡ ಪೋಪ್ ಬೋನಿಫೇಸ್(೧೨೯೪-೧೩೦೩) ರಾಜ್ಯಕ್ಕೆ ಚರ್ಚ್‌ನ ಆಸ್ತಿಯ ಮೇಲೆ ಹಾಗೂ ಚರ್ಚಿನ ಅಧಿಕಾರಿಗಳು ಹೊಂದಿದ ಆಸ್ತಿಯ ಮೇಲೆ ತೆರಿಗೆ ವಿಧಿಸುವ ಯಾವುದೇ ಹಕ್ಕಿಲ್ಲ ಎನ್ನುವ ಆಜ್ಞೆ ಹೊರಡಿಸಿದ. ಈ ಆಜ್ಞೆಯಿಂದ ರೊಚ್ಚಿಗೆದ್ದ ಇಂಗ್ಲೆಂಡ್‌ನ ದೊರೆ ಒಂದನೆ ಎಡ್ವರ್ಡ್ ಹಾಗೂ ಫ್ರಾನ್ಸ್‌ನ ರಾಜ ನಾಲ್ಕನೆ ಫಿಲಿಫ್ ಚರ್ಚ್‌ನ ಅಧಿಕಾರದ ವಿರುದ್ಧ ದಂಗೆ ಎದ್ದರು. ೧೩೦೦ರಲ್ಲಿ ನಡೆದ ಮೊದಲನೆ ಕ್ರೈಸ್ತಧರ್ಮ ಮಹೋತ್ಸವದಲ್ಲಿ ಪೋಪ್ ಬೋನಿಫೇಸ್ ಮತ್ತು ಒಂದು ಹೆಜ್ಜೆ ಮುಂದೆ ಹೋಗಿ ಇಡೀ ಜಗತ್ತಿನ ಸಾಮ್ರಾಟ ತಾನೇ ಎಂದು ಘೋಷಿಸಿ,

ಲೌಕಿಕ ಹಾಗೂ ಆಧ್ಯಾತ್ಮಿಕ ಎರಡೂ ಅಧಿಕಾರಗಳು ಚರ್ಚ್‌ನ ಅಧಿಪತ್ಯಕ್ಕೆ ಒಳಪಡುತ್ತವೆ ಎಂದು ಆಜ್ಞೆಯನ್ನು ಹೊರಡಿಸಿದ. ಈ ಆಜ್ಞೆಯನ್ನು 'ಯುನಮ್ ಸ್ಯಾಂಕ್ಟಮ್' ಎಂದು ಕರೆಯಲಾಗಿದೆ. ಈ ಆಜ್ಞೆಯ ಪ್ರಕಾರ ರಾಜ ತಪ್ಪಿತಸ್ಥನಾದರೆ ಅವನನ್ನು ಶಿಕ್ಷಿಸುವ ಅಧಿಕಾರ ಪೋಪ್‌ಗಿದೆ. ಆದರೆ ಪೋಪ್‌ನ ಮೇಲೆ ರಾಜನಿಗೆ ಯಾವ ಅಧಿಕಾರವೂ ಇರುವುದಿಲ್ಲ. ಒಂದು ವೇಳೆ ಪೋಪ್ ತಪ್ಪು ಮಾಡಿದರೆ ಅವನನ್ನು ಶಿಕ್ಷಿಸುವ ಅಧಿಕಾರ ಇರುವುದು ದೇವರಿಗೆ ಮಾತ್ರ.

ಪೋಪ್ ಬೋನಿಫೇಸ್‌ನ ಈ ಸವಾಲನ್ನು ಎದುರಿಸಲು ಫ್ರಾನ್ಸ್‌ನ ನಾಲ್ಕನೆ ಫಿಲಿಪ್ ಸಿದ್ಧನಾದ. ಫಿಲಿಪ್ ದೊರೆ ಇಡಿ ಚರ್ಚಿನ ಅಧಿಕಾರವನ್ನೆ ಪ್ರಶ್ನಿಸಲು ಹೋಗದೆ ಪೋಪ್‌ನ ಮೇಲೆ ಹಲವಾರು ಆಪಾದನೆಗಳನ್ನು ಹೊರಿಸಿ ಅದರ ವಿಚಾರಣೆಗೆ ಚರ್ಚಿನ ಸಾಮಾನ್ಯ ಸಮಿತಿಯ ಮುಂದೆ ಪೋಪ್‌ನನ್ನು ಹಾಜರುಪಡಿಸಬೇಕೆಂದು ಕೋರಿದ. ಸಾಮಾನ್ಯ ಸಮಿತಿಯು ಪೋಪ್‌ನನ್ನು ತಪ್ಪತಸ್ಥ ಎಂದು ಘೋಷಿಸಿತು. ಈ ಸಮಯಕ್ಕಾಗಲೆ ಪೋಪ್ ಬುದ್ಧಿಜೀವಿಗಳ ನಗರವಾಸಿಗಳ, ವಿಶ್ವವಿದ್ಯಾನಿಲಯಗಳ ಬೆಂಬಲವನ್ನು ಕಳೆದುಕೊಂಡಿದ್ದ. ಅವರೆಲ್ಲರ ಸಹಾನುಭೂತಿ ಫಿಲಿಫ್ ದೊರೆಯ ಕಡೆಗಿತ್ತು.

೧೧ನೆಯ ಶತಮಾನದ ಆದಿಭಾಗದಲ್ಲಿ ನಡೆದ ಪೋಪ್ ಹಾಗೂ ಜರ್ಮನಿಯ ದೊರೆಯ ನಡುವಿನ ಕದನಕ್ಕೂ ೧೩ನೇ ಶತಮಾನದಲ್ಲಿ ನಡೆದ ಕದನಕ್ಕೂ ಒಂದು ಬಹುಮುಖ್ಯ ವ್ಯತ್ಯಾಸವಿದೆ. ೧೧ನೆಯ ಶತಮಾನದಲ್ಲಿ ರಾಜ್ಯ ಚರ್ಚ್‌ಗಿಂತ ಸಂಪೂರ್ಣ ಭಿನ್ನವಾದ ಅಸ್ತಿತ್ವವನ್ನು ಇನ್ನೂ ಗುರುತಿಸಿಕೊಂಡಿರಲಿಲ್ಲ. ಸಾಮಾಜಿಕ ಹಾಗೂ ಆರ್ಥಿಕ ವಾಗಿ ರಾಜ್ಯ ಜನರ ಅಗತ್ಯಗಳನ್ನು ಪೂರೈಸುವ ಅನಿವಾರ್ಯ ಸಂಸ್ಥೆಯಾಗಿ ಬೆಳೆದಿರಲಿಲ್ಲ. ಆ ಕಾರಣದಿಂದಾಗಿ ಆಗ ಪೋಪ್‌ಗೆ ಗೆಲುವಾಗಿದ್ದು ಸಹಜವೇ ಆಗಿತ್ತು. ಆದರೆ ೧೩ನೆಯ ಶತಮಾನದ ಹೊತ್ತಿಗೆ ಜನರ ದಿನನಿತ್ಯದ ಬದುಕಿನ ಮೇಲೆ ಚರ್ಚ್ ಪ್ರಮಾಣ ಕಡಿಮೆ ಯಾಗುತ್ತಾ ಹೋಯಿತು. ಪ್ಯಾರಯವಾಗಿ ರಾಜ್ಯ ತನ್ನ ಕಾ್ಯರಕ್ಷೇತ್ರವನ್ನು ವಿಸ್ತರಿಸಿಕೊಳ್ಳುತ್ತ ಹೋದಂತೆ ಜನರಿಗೆ ಅದೊಂದು ಅನಿವಾರ್ಯ ಸಂಸ್ಥೆ ಎನ್ನುವ ನಂಬಿಕೆ ಬೆಳೆಯುತ್ತಾ ಹೋಯಿತು. ಇದರ ಜೊತೆಗೆ ಮತ್ತೊಂದು ಪ್ರಮುಖ ಅಂಶವನ್ನು ನಾವು ಗಮನಿಸಬೇಕು. ಪೋಪ್ ಕೇವಲ ಧಾರ್ಮಿಕ ಆಚರಣೆಗೆ ತನ್ನ ಕಾರ್ಯ ಚಟುವಟಿಕೆಯನ್ನು ಸೀಮಿತ ಗೊಳಿಸಿಕೊಳ್ಳದೆ ಲೌಕಿಕ ವ್ಯವಹಾರಗಳಲ್ಲೂ ತಲೆಹಾಕಲು ಪ್ರಾರಂಭಿಸಿ ಕ್ರಮೇಣ ಭ್ರಷ್ಟವಾಗುತ್ತಾ ಹೋದದ್ದು ಜನರಿಗೆ ಆ ಸಂಸ್ಥೆಯ ಮೇಲೆ ನಂಬಿಕೆ ಹೋಗಲು ಕಾರಣವಾಯಿತು. ಫ್ರಾನ್ಸ್‌ನ ದೊರೆಗೂ ಪೋಪ್ ಬೋಸಿಫೇಸ್‌ಗೂ ನಡುವೆ ಕದನವು ರಾಜ್ಯ ಹಾಗೂ ಧರ್ಮಗಳ ನಡುವೆ ಹೊಸ ಹೊಂದಾಣಿಕೆಗೆ ನಾಂದಿಯಾಯಿತು. ಈ ಘಟನೆಯ ನಂತರ ಅಧಿಕಾರ ವಹಿಸಿಕೊಂಡ ಹೊಸ ಪೋಪ್ ಐದನೆಯ ಕ್ಲೆಮೆಂಟ್ ರಾಜ್ಯದ ಅಧಿಕಾರವನ್ನು ಗುರುತಿಸಿ ಚರ್ಚ್ ಹಾಗೂ ರಾಜ್ಯಗಳ ನಡುವೆ ಹೊಸ ಹೊಂದಾಣಿಕೆ ಮಾಡಿಕೊಂಡನು.

ರಾಜ್ಯ ಕ್ರಮೇಣ ಹೆಚ್ಚು ಅಧಿಕಾರವನ್ನು ಪಡೆಯುವಂತಾಗಿ ಧಾರ್ಮಿಕ ಆಚರಣೆಗೂ ರಾಜ್ಯದ ಚಟುವಟಿಕೆಗೂ ಯಾವುದೇ ಸಂಬಂಧವಿರಬಾರದು ಎನ್ನುವ ಹೊಸ ಲೌಕಿಕವಾದದ ಉಗಮಕ್ಕೆ ಕಾರಣವಾದ ಯುರೋಪಿನಲ್ಲಿ ಕಂಡುಬಂದ ಮತ್ತೊಂದು ಬೆಳವಣಿಗೆ ಪ್ರೊಟೆಸ್ಟೆಂಟ್ ಚಳವಳಿ. ಈ ಚಳವಳಿ ರೋಮ್‌ನ ಕ್ಯಾಥೊಲಿಕ್ ಚರ್ಚಿನ ಬುಡವನ್ನೆ ಅಲುಗಾಡಿಸಿಬಿಟ್ಟಿತ್ತು. ಈ ಚಳವಳಿ ಪ್ರಾರಂಭವಾಗುವವರೆಗೂ ಇಡೀ ಜಗತ್ತಿನ ಕ್ರೈಸ್ತ ಧರ್ಮದ ಅನುಯಾಯಿಗಳಿಗೆ ಏಕೈಕ ಧರ್ಮ ಸಂಸ್ಥೆ ಎನಿಸಿಕೊಂಡಿದ್ದ ರೋಮನ್ ಕ್ಯಾಥೋಲಿಕ್ ಚರ್ಚ್ ಆ ಸ್ಥಾನವನ್ನು ಕಳೆದುಕೊಳ್ಳಲಾರಂಭಿಸಿತು. ಕ್ರಮೇಣ ಹಲವಾರು ಧರ್ಮಸಂಸ್ಥೆಗಳು ಹುಟ್ಟಿಕೊಂಡವು. ರೋಮ್‌ನ ಚರ್ಚ್ ಹೀಗೆ ಹುಟ್ಟಿಕೊಂಡ ಹಲವಾರು ಸಂಸ್ಥೆಗಳಲ್ಲಿ ಒಂದು ಸಂಸ್ಥೆ ಮಾತ್ರ ಎನ್ನವ ಪರಿಸ್ಥಿತಿ ಉಂಟಾಯಿತು. ಈ ಪರಿಸ್ಥಿತಿಯಲ್ಲಿ ರಾಜ್ಯದ ಅವಶ್ಯಕತೆಗೆ ಒಂದು ಹೊಸ ವ್ಯಾಖ್ಯಾನ ನೀಡಿದವರನ್ನು ಮಾರ್ಷಿಲಿಯೋ ಪಡುವ(೧೨೭೫-೧೩೪೩) ಮಧ್ಯಕಾಲೀನ ಯುಗದ ರಾಜ್ಯದ ಕಲ್ಪನೆಯ ಪ್ರವರ್ತಕ ಎಂದು ಕರೆಯಲ್ಪಟ್ಟಿದ್ದಾನೆ. ಅವನು ತನ್ನ ದಿ ಡಿಫೆಂಡರ್ ಆಫ್ ಪೀಸ್ ಎನ್ನುವ ಗ್ರಂಥದಲ್ಲಿ ರಾಜ್ಯದ ಬಗ್ಗೆ ಹೊಸ ವ್ಯಾಖ್ಯಾನ ನೀಡುತ್ತಾನೆ. ಜನರ ಒಪ್ಪಿಗೆಯ ಆಧಾರದ ಮೇಲೆ ರಾಜ್ಯದ ಅಸ್ತಿತ್ವ ನಿಂತಿದೆ ಎನ್ನುವ ಹೊಸ ಸಿದ್ಧಾಂತವನ್ನು ಅವರು ಮುಂದಿಡುತ್ತಾನೆ. ಅವನ ಪ್ರಕಾರ ರಾಜ್ಯದ ಕಾನೂನಿನ ಮೂಲ ಜನರ ಒಪ್ಪಿಗೆ. ಚರ್ಚ್ ಸಹ ಜನರ ಒಪ್ಪಿಗೆ ಪಡೆಯದೆ ಯಾವುದೆ ನೀತಿ ನಿಯಮಗಳನ್ನು ರೂಪಿಸುವಂತಿಲ್ಲ. ದೈವಿಕ ಕಾನೂನು ಮಾನವ ನಿರ್ಮಿತ ಕಾನೂನಿಗಿಂತ ಹೆಚ್ಚಿನದು ಹೌದು, ಆದರೆ ದೈವಿಕ ಕಾನೂನನ್ನು ರಚಿಸುವ ಹಕ್ಕು ಚರ್ಚಿಗಿಲ್ಲ. ಅದರ ಮೂಲ ಬೈಬಲ್ ಮಾತ್ರ. ರಾಜನ ಆಳ್ವಿಕೆ ಜನರ ಇಚ್ಛೆಯನುಸಾರ ಇರಬೇಕು. ಏಕೆಂದರೆ ಅವನ ಅಧಿಕಾರದ ಮೂಲ ದೈವಿಕವಾದುದಲ್ಲ. ಜನರು ಅವನನ್ನು ರಾಜನನ್ನಾಗಿ ಚುನಾಯಿಸಿರುವುದರಿಂದಲೆ ಅವನು

ಅಧಿಕಾರ ಪಡೆಯುತ್ತಾನೆ. ಚರ್ಚ್ ಬೈಬಲ್ಲಿಗನು ಗುಣವಾಗಿ ತನ್ನ ಅಧಿಕಾರವನ್ನು ಚಲಾಯಿಸಬೇಕು. ತಾನೇ ತಾನಾಗಿ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವ ಹಕ್ಕು ಅದಕ್ಕಿಲ್ಲ. ಯಾವುದೇ ವ್ಯಕ್ತಿ ಧರ್ಮಬಾಹಿರನಾದರೆ ಅವನಿಗೆ ಶಿಕ್ಷೆ ಮೇಲಿನ ಜಗತ್ತಿನಲ್ಲಿಯೆ ಹೊರತು ಚರ್ಚಿಗೆ ಅಧಿಕಾರ ಇಲ್ಲ. ನಾಗರಿಕ ಅಪರಾಧಕ್ಕೆ ಶಿಕ್ಷೆ ನೀಡುವ ಹಕ್ಕು ರಾಜ್ಯಕ್ಕಿರುತ್ತದೆ. ಪಡುವ ಹೇಳುವಂತೆ ಚರ್ಚ್ ರಾಜ್ಯದ ಒಂದು ಇಲಾಖೆ ಮಾತ್ರ. ಚರ್ಚ್‌ಗಳು ಎಷ್ಟಿರಬೇಕು ಎಂದು ನಿರ್ಧರಿಸುವ ಹಕ್ಕು ನಾಗರಿಕ ಸರ್ಕಾರಕ್ಕೆ ಮಾತ್ರ ಸೇರಿದ್ದು, ಅಲ್ಲದೆ ಚರ್ಚ್ ಅನಗತ್ಯ ಆಸ್ತಿಯನ್ನು ಹೊಂದುವಂತಿಲ್ಲ. ಪಾದ್ರಿಗಳನ್ನು ಹಾಗೂ ಇತರೆ ಅಧಿಕಾರಿಗಳನ್ನು ಸಾಕಲು ಎಷ್ಟು ಬೇಕೊ ಅಷ್ಟು ಆಸ್ತಿಯನ್ನು ಮಾತ್ರ ಉಳಿಸಿಕೊಂಡು ಹೆಚ್ಚಿನ ಆಸ್ತಿಯನ್ನು ಸರ್ಕಾರಕ್ಕೆ ಕೊಡಬೇಕು.

ಇಲ್ಲಿ ನಾವು ಗಮನಿಸಬೇಕಾದ ಅಂಶವೆಂದರೆ ಮಾರ್ಷಲಿಯೊ ಪಡುವ ವಾದಿಸುತ್ತಿದ್ದುದು ರಾಜ್ಯಕ್ಕೆ ಹೆಚ್ಚು ಅಧಿಕಾರ ಕೊಡಬೇಕು ಎಂದಲ್ಲ. ಅವನ ಮುಖ್ಯ ಕಳಕಳಿ ಪೋಪ್ ಹಾಗೂ ಚರ್ಚ್ ಜನರ ನಂಬಿಕೆಯನ್ನು ಕಳೆದುಕೊಳ್ಳುವಂತಾಗಬಾರದು ಎಂದು. ಪೋಪ್ ಹಾಗೂ ಚರ್ಚಿನ ಅಧಿಕಾರಿಗಳು ತಮ್ಮ ವ್ಯಾಪ್ತಿ ಹಾಗೂ ಸರಳತೆಯನ್ನು ಮೀರಿ ವ್ಯವಹರಿ ಸುತ್ತಿದ್ದುದರಿಂದಲೆ ಚರ್ಚ್ ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಿದೆ ಎಂದು ನಂಬಿದ್ದ ಅವನು ಚರ್ಚಿನ ಘನತೆಯನ್ನು ಪುನರ್ ಪ್ರತಿಷ್ಠಾಪಿಸುವುದಕ್ಕೆ ಮಾಡಿದ ಪ್ರಾಮಾಣಿಕ ಪ್ರಯತ್ನ ಅವನ ಗ್ರಂಥ. ಅವನ ಉದ್ದೇಶ ಏನೇ ಇದ್ದರೂ ಅವನ ವಿಚಾರಧಾರೆ ಬದಲಾಗುತ್ತಿದ್ದ ಚರ್ಚ್ ಹಾಗೂ ರಾಜ್ಯದ ಸ್ಥಾನಮಾನಗಳನ್ನು ತೋರಿಸುತ್ತದೆ. ಮುಂದೆ ಉದಾರವಾದಿ ರಾಜ್ಯಗಳು ಧರ್ಮನಿರಪೇಕ್ಷತೆಯ ನಿಲುವನ್ನು ತೆಗೆದುಕೊಳ್ಳಲು ಕಾರಣವಾದ ಮೂಲವನ್ನು ನಾವು ಇಲ್ಲಿ ಕಂಡುಕೊಳ್ಳಬಹುದು.

ರಾಜ್ಯದ ಅಧಿಕಾರದ ಲೌಕಿಕ ಸಮರ್ಥನೆಯ ವಿಪರೀತಾವಸ್ಥೆಯನ್ನು ನಾವು ೧೫ ಹಾಗೂ ೧೬ನೆಯ ಶತಮಾನದಲ್ಲಿ ಮೆಕೆವಲ್ಲಿ (೧೪೬೯-೧೫೨೭) ಎನ್ನುವ ಇಟಲಿಯ ಶ್ರೇಷ್ಠಚಿಂತಕನ ದಿ ಪ್ರಿನ್ಸ್ ಎನ್ನುವ ಗ್ರಂಥದಲ್ಲಿ ಕಾಣಬಹುದು. ರಾಜನ ಅಧಿಕಾರಕ್ಕೆ ಯಾವ ಮಿತಿಯೂ ಇರಬಾರದು ಎನ್ನುವುದು ಇವನ ವಾದ. ಹಾಗೂ ಅಧಿಕಾರ ಗಳಿಕೆ ಇವನ ಪ್ರಕಾರ ಬೇರೆ ಯಾವುದೋ ಗುರಿ ಸಾಧನೆಯ ಸಾಧನ ಮಾತ್ರವಲ್ಲ. ಅದೇ ಒಂದು ಪ್ರಮುಖ ಗುರಿ. ಈ ಗುರಿ ಸಾಧನೆಗೆ ಯಾವ ಸಾಧನವನ್ನಾದರೂ ಬಳಸಬಹುದು. ಇಲ್ಲಿ ಧರ್ಮಕ್ಕಾಗಲಿ, ಚರ್ಚ್‌ಗಾಗಲೀ ಯಾವುದೇ ಸ್ಥಾನವಿಲ್ಲ. ಮುಂದೆ ಥಾಮಸ್ ಹಾಬ್ಸ್, ಜಾನ್ ಲಾಕ್ ಹಾಗೂ ರೂಸ್ಸೊ ಸಾಮಾಜಿಕ ಒಪ್ಪಂದ ಸಿದ್ಧಾಂತಗಳು ರಾಜ್ಯದ ಉಗಮಕ್ಕೆ ಧರ್ಮವನ್ನು ಹೊರತುಪಡಿಸಿದ ವ್ಯಾಖ್ಯಾನವನ್ನೆ ಕೊಡುತ್ತಾರೆ. ಇಪ್ಪತ್ತನೆ ಶತಮಾನದ ಹೊತ್ತಿಗೆ ಬಂಡವಾಳಶಾಹಿ ವ್ಯವಸ್ಥೆ ಒಂದು ಕಡೆ, ಮತ್ತೊಂದು ಕಡೆ ಸಮತಾವಾದಿ ವ್ಯವಸ್ಥೆಗಳು ಬಲಗೊಂಡಂತೆಲ್ಲ ಧರ್ಮ ಹಾಗೂ ರಾಜ್ಯದ ನಡುವೆ ಇರುವ ಸಂಬಂಧದ ಬಗ್ಗೆ ಹೊಸ ಹೊಸ ವ್ಯಾಖ್ಯಾನಗಳು ಹುಟ್ಟಿಕೊಳ್ಳತೊಡಗಿದವು. ಮಾರ್ಕ್ಸ್ ರ್ ಸಿದ್ಧಾಂತದಿಂದ ಪ್ರಭಾವಿತವಾದ ಸಮತಾವಾದಿ ವ್ಯವಸ್ಥೆಗಳು ಧರ್ಮ ಎನ್ನುವುದು ಜನರ ಶೋಷಣೆಯ ಒಂದು ಸಾಧನ ಎಂದು ಪರಿಗಣಿಸಿ, ಧರ್ಮವನ್ನು ಸಂಪೂರ್ಣ ರಾಜ್ಯದಿಂದ ಉತ್ಪಾದಿಸುವ ನಿಲುವನ್ನು ತೆಗೆದುಕೊಂಡವು(ಇತ್ತೀಚಿನ ದಿನಗಳಲ್ಲಿ ಕಮ್ಯುನಿಸ್ಟ್ ರಾಷ್ಟ್ರಗಳು ಈ ಬಗ್ಗೆ ಮರುಚಿಂತನೆ ನಡೆಸಿವೆ. ಈಗ ನಾವು ಹಲವು ಗಡಿಗಳಲ್ಲಿ ಕಮ್ಯುನಿಸ್ಟ್ ಸರ್ಕಾರ ಧಾರ್ಮಿಕ ಸ್ವಾತಂತ್ರ್ಯವನ್ನು ಪ್ರಜೆಗಳಿಗೆ ಕೊಟ್ಟಿರುವುದನ್ನು ನಾವು ಕಾಣಬಹುದು). ಬಂಡವಾಳಶಾಹಿ ವ್ಯವಸ್ಥೆಯ ಪ್ರಭಾವದಲ್ಲಿ ಹುಟ್ಟಿಕೊಂಡ ಉದಾರವಾದಿ ರಾಜ್ಯಗಳು ಧರ್ಮ ವ್ಯಕ್ತಿಯ ವೈಯಕ್ತಿಕ ನಂಬಿಕೆಗೆ ಸಂಬಂಧಿಸಿದ ಪ್ರಶ್ನೆಯಾದ್ದರಿಂದ ಅದರಲ್ಲಿ ರಾಜ ಪ್ರವೇಶಿಸಬಾರದು, ಆದರೆ ಸಾರ್ವಜನಿಕ ವ್ಯವಹಾರಗಳಲ್ಲಿ ಧರ್ಮ ಯಾವುದೇ ಪಾತ್ರ ವಹಿಸಬಾರದು ಎನ್ನುವ ನಿಲುವನ್ನು ತೆಗೆದುಕೊಂಡಿವೆ. ಈ ಸಮಸ್ಯೆ ಬರುವುದು ಹಲವಾರು ಧರ್ಮಗಳನ್ನು ಅನುಸರಿಸುವ ರಾಷ್ಟ್ರಗಳಲ್ಲಿ. ಉದಾರವಾದಿ ರಾಜ್ಯಗಳ ಈ ನಿಲುವನ್ನೆ ಧರ್ಮನಿರಪೇಕ್ಷತೆ ಎಂದು ಕರೆಯಲಾಗುತ್ತದೆ. ಈ 'ಸೆಕ್ಯುಲರ್' ಎನ್ನುವ ಪದಕ್ಕೆ ಹಲವಾರು ವ್ಯಾಖ್ಯಾನಗಳನ್ನು ನೀಡಲಾಗಿದೆ. ಬೇರೆ ಬೇರೆ ಸಾಮಾಜಿಕ ಸನ್ನಿವೇಶಗಳ ಹಿನ್ನೆಲೆಯಲ್ಲಿ 'ಧರ್ಮನಿರಪೇಕ್ಷತೆ' ಎನ್ನುವುದು ಬೇರೆ ಬೇರೆ ಅರ್ಥವನ್ನು ಪಡೆದುಕೊಳ್ಳುತ್ತದೆ. ಪ್ರಸ್ತುತದಲ್ಲಿ ಹಲವು ರಾಜ್ಯಗಳು(ಮುಖ್ಯವಾಗಿ ಇಸ್ಲಾಂ ರಾಷ್ಟ್ರಗಳು) ಒಂದು ಧರ್ಮವನ್ನು ರಾಜ್ಯದ ಅಧಿಕೃತ ಧರ್ಮವೆಂದು ಘೋಷಿಸಿಕೊಂಡಿರುವುದನ್ನು ನಾವು ನೋಡಬಹುದು. ಇಂತಹ ರಾಷ್ಟ್ರಗಳಲ್ಲಿ ಧಾರ್ಮಿಕ ಹಾಗು ಲೌಕಿಕ ಅಧಿಕಾರಗಳ ನಡುವೆ ಅಂತಹ ವ್ಯತ್ಯಾಸವನ್ನು ನಾವು ಕಾಣುವುದಿಲ್ಲ.

ಭಾರತದಲ್ಲಿ ಧರ್ಮ ಹಾಗೂ ರಾಜ್ಯ ನಡುವಿನ ಸಂಬಂಧ ತುಂಬಾ ವಿಶಿಷ್ಟವಾದ ಇತಿಹಾಸವನ್ನು ಹೊಂದಿದೆ. ಹಿಂದೂ ರಾಜಕೀಯ ಚಿಂತನೆಯಲ್ಲಿ ಧರ್ಮ ಹಾಗೂ ರಾಜ್ಯವನ್ನು ಬೇರ್ಪಡಿಸುವ ಪ್ರಶ್ನೆಯೆ ಉದ್ಭವಿಸಿಲ್ಲ. ವರ್ಣಾಶ್ರಮ ಧರ್ಮದ ರಕ್ಷಣೆಯೆ ರಾಜ್ಯದ ಗುರಿ

ಮತ್ತು ರಾಜನ ಅಧಿಕಾರದ ಮೂಲವಾಗಿತ್ತು. ವರ್ಣಾಶ್ರಮ ಧರ್ಮದ ಪ್ರಕಾರ ಇಡೀ ಜನಸಮುದಾಯವನ್ನು ನಾಲ್ಕು ವರ್ಣಗಳಾಗಿ ವಿಂಗಡಿಸಿ ಪ್ರತಿ ವರ್ಣದ ಜನರೂ ತಮಗೆ ನಿಗದಿಸಲ್ಪಟ್ಟ ವೃತ್ತಿ ಹಾಗೂ ಕರ್ತವ್ಯಗಳನ್ನು ನಿರ್ವಹಿಸುವಂತೆ ನೋಡಿಕೊಳ್ಳುವುದು ರಾಜನ ಜವಾಬ್ದಾರಿಯಾಗಿತ್ತು. ಇಲ್ಲಿ ಧರ್ಮ ಎನ್ನುವುದು ಆಯಾ ವರ್ಣಕ್ಕೆ ವಹಿಸಿದ ಕರ್ತವ್ಯಗಳಾಗಿದ್ದವು. ರಾಜ ಒಬ್ಬ ಕ್ಷತ್ರಿಯ ವರ್ಣಕ್ಕೆ ಸೇರಿದವನಾದ್ದರಿಂದ ಅವನು ಕ್ಷತ್ರಿಯನಾಗಿ ಅನುಸರಿಸಬೇಕಾದ ವಿಶಿಷ್ಟ ಕರ್ತವ್ಯಗಳಿದ್ದವು. ಅದನ್ನು ರಾಜ ಧರ್ಮ ಎಂದು ಕರೆಯಲಾಗಿದೆ. ರಾಜಧರ್ಮ ಜನಸಾಮಾನ್ಯರು ಅನುಸರಿಸುವ ಧರ್ಮಕ್ಕಿಂತ ವಿಶಿಷ್ಟವಾಗಿದ್ದು ಇದು ಕಾಲದಿಂದ ಕಾಲಕ್ಕೆ ಬೇರೆ ಬೇರೆ ರೀತಿಯ ವ್ಯಾಖ್ಯಾನವನ್ನು ಪಡೆದಿದೆ. ಮಹಾಭಾರತದ ರಾಜಧರ್ಮದ ಬಗ್ಗೆ ವಿವರವಾದ ವ್ಯಾಖ್ಯಾನವನ್ನು ಭೀಷ್ಮನು ನೀಡುತ್ತಾನೆ. ಅದರಂತೆ ರಾಜನು ಅನುಸರಿಸಬೇಕಾದ ಧರ್ಮ ಎಲ್ಲ ಕಾಲದಲ್ಲೂ ಒಂದೇ ರೀತಿಯದಾಗಿರುವುದಿಲ್ಲ. ಕಾಲ, ದೇಶಗಳಲ್ಲಿ ಆದ ಬದಲಾವಣೆಗೆ ತಕ್ಕಂತೆ ಧರ್ಮವೂ ಬದಲಾಗುತ್ತದೆ. ಜನಸಾಮಾನ್ಯರಿಗೆ ಯಾವುದು ಅಧರ್ಮವಾಗುತ್ತದೊ ಅದು ರಾಜನಿಗೆ ಧರ್ಮವಾಗುತ್ತದೆ. ಆ ಧರ್ಮದ ಈ ರೀತಿಯ ವ್ಯಾಖ್ಯಾನದಲ್ಲಿ ಅದು ಯುರೋಪಿನ 'ರಿಲಿಜಿಯನ್' ಎನ್ನುವ ಅರ್ಥ ಪಡೆದುಕೊಳ್ಳು ವುದಿಲ್ಲ. ಅಲ್ಲದೆ ಇಲ್ಲಿ ಧರ್ಮದ ಉಸ್ತುವಾರಿಯು ಸಮಸ್ತ ಜವಾಬ್ದಾರಿಯನ್ನು ವಹಿಸಿಕೊಂಡ ರಾಜ್ಯಕ್ಕಿಂತ ಭಿನ್ನವಾದ ಸಂಸ್ಥೆಯ ಅಗತ್ಯತೆ ಕಂಡುಬರುವುದಿಲ್ಲ. ಧರ್ಮದ ಬಗೆಗಿನ ಅಂತಿಮ ವ್ಯಾಖ್ಯಾನ ನೀಡುವ ಅಧಿಕಾರ ಜ್ಞಾನಿಗಳಾದ ಬ್ರಾಹ್ಮಣರಿಗೆ ಇತ್ತು ಎಂದಾಗಲೂ ಅವರಿಗೆ ಧರ್ಮವನ್ನು ಆಚರಣೆಗೆ ತರಲು ಬಲಪ್ರಯೋಗವನ್ನು (ಇದನ್ನು ಹಿಂದೂ ಚಿಂತನೆಯಲ್ಲಿ 'ದಂಡ' ಎಂದು ಕರೆಯಲಾಗಿದೆ) ಮಾಡುವ ಅಧಿಕಾರವಿರಲಿಲ್ಲ. ಅಧಿಕಾರ ಕ್ಷತ್ರಿಯನಾದ ರಾಜನಿಗೆ ಮಾತ್ರ ಇತ್ತು. ಆದರೆ ರಾಜನಿಗೆ ಯಾವುದು ಧರ್ಮ ಮತ್ತು ಯಾವುದು ಅಧರ್ಮ ಎನ್ನುವುದನ್ನು ನಿರ್ಧರಿಸುವ ಅಧಿಕಾರವಿರಲಿಲ್ಲ. ಈ ರೀತಿ ರಾಜ್ಯಭಾರ ನಡೆಸುವ ಹೊಣೆ ಕ್ಷತ್ರಿಯರು ಹಾಗೂ ಬ್ರಾಹ್ಮಣರ ಹೊಂದಾಣಿಕೆಯಿಂದ ಕೂಡಿತ್ತು. ಇಲ್ಲಿ ಯುರೋಪಿನಲ್ಲಿ ಆದಂತೆ ಯಾವುದೇ ರೀತಿಯ ಘರ್ಷಣೆಗೆ ಅವಕಾಶ ವಿರಲಿಲ್ಲ. ಅದಕ್ಕೆ ಕಾರಣ ಆ ಮೊದಲೆ ತಿಳಿಸಿದಂತೆ ಲೌಕಿಕ ಜಗತ್ತನ್ನು ಪ್ರತಿನಿಧಿಸುವ ಸಂಸ್ಥೆ ಹಾಗೂ ಆಧ್ಯಾತ್ಮಿಕ ಜಗತ್ತನ್ನು ಪ್ರತಿನಿಧಿಸುವ ಸಂಸ್ಥೆ ಎನ್ನುವ ಪರ್ಯಾಯವಾದ ಹಾಗೂ ವಿಭಿನ್ನವಾದ ಸಂಸ್ಥೆಗಳು ಬೆಳೆಯದೆ ಇದ್ದುದು. ಭಾರತದಲ್ಲಿಯೇ ಕಂಡುಬರುವ ಬೌದ್ಧ ರಾಜ್ಯವ್ಯವಸ್ಥೆಯಲ್ಲೂ ಸಹ ನಾವು ಈ ಘರ್ಷಣೆಯನ್ನು ಕಾಣುವುದಿಲ್ಲ. ಬೌದ್ಧಧರ್ಮ ವರ್ಣಾಶ್ರಮ ವ್ಯವಸ್ಥೆಯನ್ನು ಒಪ್ಪಿಕೊಳ್ಳದಿದ್ದರೂ ಸಹ ಆ ಧರ್ಮದ 'ಚಕ್ರವರ್ತಿ'ಯ ಪರಿಕಲ್ಪನೆಯಲ್ಲಿ ಧರ್ಮಕ್ಕಿಂತ ಬೇರೆಯದೇ ಆದ ಲೌಕಿಕ ಅಧಿಕಾರದ ಸಮರ್ಥನೆ ಇಲ್ಲ. ಲೌಕಿಕ ವ್ಯವಹಾರಗಳಿಗೆ ಸಂಬಂಧಿಸಿದಂತೆ ರಾಜ ಸಾರ್ವಭೌಮನಾದರೂ ಸಹ ಧಾರ್ಮಿಕ ವಿಚಾರಗಳಲ್ಲಿ ಅವನು ಮೊದಲೆ ನಿಗದಿಪಡಿಸಿದ ಚೌಕಟ್ಟಿನೊಳಗೆ ವ್ಯವಹರಿಸಬೇಕಾಗಿತ್ತು. ಬೌದ್ಧಧರ್ಮದಲ್ಲಿ ಹಿಂದೂ ಧರ್ಮದಲ್ಲಿರುವಂತೆ ರಾಜ ದೈವದತ್ತ ಅಧಿಕಾರ ಪಡೆದವನು ಎನ್ನುವ ಕಲ್ಪನೆ ಇಲ್ಲದಿದ್ದರೂ ಧಾರ್ಮಿಕ ನಂಬಿಕೆಗಳನ್ನು ಅವನು ರಕ್ಷಿಸಬೇಕು ಎನ್ನುವುದು ಆ ಧರ್ಮದ ನಿಲುವಾಗಿತ್ತು.

ಭಾರತಕ್ಕೆ ಇಸ್ಲಾಂಧರ್ಮದ ಅನುಯಾಯಿಗಳಾದ ರಾಜರುಗಳ ಪ್ರವೇಶದ ನಂತರವೂ ಯಾವುದೇ ಧರ್ಮ ರಾಜ್ಯದ ಅಧಿಕೃತ ಧರ್ಮ ಎಂದು ಘೋಷಿತವಾಗಲಿಲ್ಲ. ದೆಹಲಿಯ ಸುಲ್ತಾನರು ತಾತ್ವಿಕವಾಗಿ ಇಸ್ಲಾಂ ರಾಜ್ಯಧರ್ಮ ಎಂದು ಒಪ್ಪಿಕೊಂಡರೂ ಆಚರಣೆಯಲ್ಲಿ ರಾಜ್ಯ ಧರ್ಮಸಹಿಷ್ಣುತೆಯನ್ನು ಅನುಸರಿಸುವುದು ಅನಿವಾರ್ಯವಾಗಿತ್ತು. ಇಲ್ಲಿ ರಾಜ್ಯ ಹಾಗೂ ಧರ್ಮದ ಸಂಬಂಧದ ಬಗ್ಗೆ ಸಮಸ್ಯೆ ಉದ್ಭವವಾದದ್ದು ಆಧುನಿಕ ಪ್ರಜಾಪ್ರಭುತ್ವ ಮಾದರಿ ಸಂಬಂಧದಲ್ಲಿ. ಯುರೋಪಿನ 'ಧರ್ಮನಿರಪೇಕ್ಷ' ಕಲ್ಪನೆಯನ್ನು ಇಲ್ಲಿಯೂ ಅಳವಡಿಸಿಕೊಳ್ಳುವ ದಿಕ್ಕಿನಲ್ಲಿ ಮಾಡಿದ ಪ್ರಯತ್ನದ ಫಲವಾಗಿ ಇಂದು ರಾಜ್ಯ ಹಾಗೂ ಧರ್ಮಗಳ ಸಂಬಂಧದ ಬಗ್ಗೆ ಹೊಸ ಹೊಸ ವ್ಯಾಖ್ಯಾನಗಳು ಹುಟ್ಟಿಕೊಳ್ಳುತ್ತವೆ. ರಾಜ್ಯದ ಒಳಗಿರುವ ಎಲ್ಲ ಧರ್ಮಗಳಿಂದಲೂ ಸಮಾನ ದೂರವನ್ನು ಕಾಪಾಡಿಕೊಳ್ಳುವ ರಾಜ್ಯದ ನೀತಿಯನ್ನು 'ಧರ್ಮನಿರಪೇಕ್ಷತೆ' ಎಂದು ಕರೆಯಲಾಗುತ್ತದೆ.

<u>ಪರಾಮರ್ಶನ ಗ್ರಂಥಗಳು</u>


೧. ಜಾರ್ಜ್ ಷಬ್ಬೈನ್, ೧೯೭೩. **ಹಿಸ್ಟರಿ ಆಫ್ ಪೊಲಿಟಿಕಲ್ ಥಿಯರೀಸ್,** ನ್ಯೂಡೆಲ್ಲಿ : ಐ.ಬಿ.ಹೆಚ್.

೨. ವಿಲಿಯಂ ಐಬನ್ ಸ್ಟೈನ್, ೧೯೭೦. **ಗ್ರೇಟ್ ಪೊಲಿಟಿಕಲ್ ಥಿಂಕರ್ಸ್, ಫ್ರಂ ಪ್ಲೇಟೊ ಟು ದಿ ಪ್ರೆಸೆಂಟ್,** ನ್ಯೂಡೆಲ್ಲಿ : ಐ.ಬಿ.ಹೆಚ್.

೩. ಅಲ್ತೇಕರ್ ಎ.ಎಸ್., ೧೯೮೪. **ಸ್ಟೇಟ್ ಆ್ಯಂಡ್ ಗವರ್ನ್‌ಮೆಂಟ್ ಇನ್ ಏನ್ಸಿಯಂಟ್ ಇಂಡಿಯಾ,** ದೆಹಲಿ : ಮೋತಿಲಾಲ್ ಬನಾರಾಸಿದಾಸ್.

೪. ಶರ್ಮ ಆರ್.ಎಸ್., ೧೯೯೧. **ಆಸ್ಪೆಕ್ಟ್ಸ್ ಆಫ್ ಪೊಲಿಟಿಕಲ್ ಐಡಿಯಾಸ್ ಆ್ಯಂಡ್ ಇನ್‌ಸ್ಟಿಟ್ಯೂಷನ್ಸ್ ಇನ್ ಎನ್ಸಿಯಂಟ್ ಇಂಡಿಯಾ,** ದೆಹಲಿ : ಮೋತಿಲಾಲ್ ಬನಾರಾಸಿದಾಸ್.

# ೮. ಕ್ರೈಸ್ತ ಧರ್ಮೀಯ ಪುರೋಹಿತತ್ವ

ಹದಿನಾರನೆಯ ಶತಮಾನದ ಯುರೋಪಿನಲ್ಲಿ ಆದ ಮಹತ್ವದ ಬದಲಾವಣೆ ಗಳನ್ನು ಧಾರ್ಮಿಕ ಸುಧಾರಣೆ ಎಂದು ಹೆಸರಿಸಬಹುದಾಗಿದೆ. ಕ್ರೈಸ್ತ ಸಮುದಾಯದ ಪ್ರತಿಷ್ಠಿತ ವರ್ಗವು ತಮ್ಮ ಧರ್ಮದಲ್ಲಿ ಅದರ ಆದರ್ಶಗಳಿಗೆ ಅನುಗುಣ ವಾಗಿ ಮತ್ತು ಅಂದಿನ ಸಾಮಾಜಿಕ ಪರಿಸ್ಥಿತಿಗೆ ಹೊಂದುವಂತೆ ಬದಲಾವಣೆಗಳು ಆಗಬೇಕೆಂಬ ಅಭಿಪ್ರಾಯ ಹೊಂದಿತ್ತು. ಅಂದಿನ ಚರ್ಚುಗಳು ಮಧ್ಯಯುಗದ ಸ್ಥಿತಿಗೆ ಮರಳಿದಾಗ ಕ್ರೈಸ್ತಧರ್ಮದ ಪುರೋಹಿತವರ್ಗ, ಅದರ ಸಿದ್ಧಾಂತಗಳು ಮತ್ತು ಆಚರಣೆ, ನಂಬಿಕೆಗಳಲ್ಲಿ ಪರಿವರ್ತನೆಯಾಗಬೇಕೆಂಬ ಬಲವಾದ ಕೂಗು ಕೇಳಿಬಂತು. ಈ ರೀತಿಯ ಬೇಡಿಕೆಗಳು ಆಗ ತಾನೇ ತೀವ್ರಗೊಳ್ಳುತ್ತಿದ್ದ ರಾಷ್ಟ್ರೀಯತೆಯ ಕೂಗಿನೊಂದಿಗೆ ಸೇರಿಕೊಂಡಾಗ ಇದಕ್ಕೆ ಕ್ರೈಸ್ತಧರ್ಮದ ತೀವ್ರ ವಿರೋಧ ಉಂಟಾಯಿತು. ಇದೇ ನಂತರ ಪ್ರಾಟೆಸ್ಟೆಂಟ್ ಧಾರ್ಮಿಕ ಸುಧಾರಣಾವಾದ ಎಂದು ಹೆಸರಾಯಿತು. ಪ್ರಾಟೆಸ್ಟೆಂಟ್ ಚಳವಳಿಯು ಯಶಸ್ವಿಯಾಗು ತ್ತಿದ್ದಂತೆ ಕ್ಯಾಥೊಲಿಕ್ ಚರ್ಚು ತಾನೇ ಧಾರ್ಮಿಕ ಸುಧಾರಣೆಗಳಿಗೆ ಮುಂದಾಯಿತು. ಇದನ್ನು ಪ್ರಾಟೆಸ್ಟೆಂಟರು ಪ್ರತಿಸುಧಾರಣೆ ಎಂದು ಕರೆದರು. ಆದ್ದರಿಂದ ನಾವು ಕ್ರೈಸ್ತಧರ್ಮದಲ್ಲಿ ಧಾರ್ಮಿಕ ಸುಧಾರಣೆ, ಪ್ರಾಟೆಸ್ಟೆಂಟ್ ಧಾರ್ಮಿಕ ಸುಧಾರಣೆ ಮತ್ತು ಪ್ರತಿಸುಧಾರಣೆಗಳೆಲ್ಲವನ್ನೂ ಕಾಣಬಹುದು.

ಮೂಲತಃ ಚರ್ಚಿನಲ್ಲಾದ ಧಾರ್ಮಿಕ ಸುಧಾರಣೆಯನ್ನು ಎಲ್ಲ ಬಗೆಯ ಸರ್ವಾಧಿಕಾರಿ ಪ್ರವೃತ್ತಿಗಳು ಮತ್ತು ಕೇಂದ್ರೀಕೃತ ಅಧಿಕಾರ ವ್ಯವಸ್ಥೆಯ ವಿರುದ್ಧ ಮಾನವ ಚೇತನಗಳು ನಡೆಸಿದ ಹೋರಾಟ ಎಂದು ಅರ್ಥೈಸಬಹುದು. ಆಗಿನ ಕ್ರಿಶ್ಚಿಯನ್ ಧಾರ್ಮಿಕ ವ್ಯವಸ್ಥೆಯು ರಾಜಕೀಯ ಶಕ್ತಿಗಳೊಂದಿಗೆ ಕೈಕೈ ಹಿಡಿದು ನಡೆಯುತ್ತಿತ್ತು. ರೋಮನ್ ಸಾಮ್ರಾಜ್ಯದಲ್ಲಿ ಅಧಿಕಾರಕ್ಕಾಗಿ ನಡೆದ ಹೋರಾಟಗಳು ಕಾನ್‌ಸ್ಟಾಂಟಿನೋಪಲ್‌ನಲ್ಲಿ ಕ್ರೈಸ್ತಧರ್ಮದ ಸ್ಥಾಪನೆಗೆ ಕಾರಣವಾದವು. ಆದ್ದರಿಂದ ಕ್ರೈಸ್ತಧರ್ಮವು ರೋಮನ್ ಸಾಮ್ರಾಜ್ಯದ ರಾಷ್ಟ್ರೀಯ ಧರ್ಮವಾಗಿ ಪರಿಣಮಿಸಿತು.

ಕ್ರೈಸ್ತಧರ್ಮವು ರೋಮನ್ ಸಾಮ್ರಾಜ್ಯದ ಅಧಿಕೃತ ಧರ್ಮವಾದ ಮೇಲೆ ಅದು ಎಲ್ಲ ಕ್ಷೇತ್ರದಲ್ಲಿ ಹರಡತೊಡಗಿತು. ಆದರೆ ಸ್ವಲ್ಪ ಕಾಲದಲ್ಲಿಯೇ ರೋಮ್ ಸಾಮ್ರಾಜ್ಯವು ಇಬ್ಭಾಗವಾಗಿ ಪತನದ ಹಾದಿ ಹಿಡಿಯಿತು. ಆಗ ಉಂಟಾದ ರಾಜಕೀಯ ಶೂನ್ಯತೆಯನ್ನು ತುಂಬಲು ಕ್ರೈಸ್ತ ಚರ್ಚುಗಳು ಕಾತರಗೊಂಡವು. ಚರ್ಚುಗಳ ಪುರೋಹಿತವರ್ಗವು ಆಧ್ಯಾತ್ಮಿಕ ವಿಷಯಗಳನ್ನು ಬಿಟ್ಟು ಅಧಿಕಾರ ಕೇಂದ್ರಗಳ ಸುತ್ತ ಸುಳಿದಾಡಲಾರಂಭಿಸಿತು. ಪೋಪ್‌ಗಳು ಚಕ್ರವರ್ತಿಗಳನ್ನು ನೇಮಿಸುವ ಹಂತಕ್ಕೆ ತಲುಪಿದರು. ರಾಜಕೀಯದ ಸೋಂಕು ಹತ್ತಿದ ಪುರೋಹಿತವರ್ಗವು ಒಂದು ಭ್ರಷ್ಟ, ಅನಾಚಾರದ ವ್ಯವಸ್ಥೆಯಾಗಿ ಮಾರ್ಪಟ್ಟಿತು.

೧೪ನೆಯ ಶತಮಾನದ ವೇಳೆಗೆ ಪ್ಲೇಗ್, ಸಿಡುಬು ಹಾಗೂ ಯುದ್ಧಗಳ ನಡುವೆಯೂ ಯುರೋಪಿನ ಜನಸಂಖ್ಯೆ ಅಧಿಕವಾಗಿ ಬೆಳೆದಿತ್ತು. ಆರ್ಥಿಕ ಪರಿಸ್ಥಿತಿಯಲ್ಲಿ ಮೂಲಭೂತ ಬದಲಾವಣೆಗಳು ಉಂಟಾಗುತ್ತಿದ್ದವು. ವ್ಯಾಪಾರ ಉತ್ಪಾದನೆಗಳು ಕೃಷಿಯ ಮಹತ್ವವನ್ನು ಇಲ್ಲವಾಗಿಸಿದವು. ಅಲ್ಲಿಯವರೆಗೆ ಬಡ್ಡಿಯನ್ನು ತೆಗೆದುಕೊಳ್ಳುವುದು ಇನ್ನೊಬ್ಬರ ಕಷ್ಟದಲ್ಲಿ ಲಾಭ ಪಡೆದುಕೊಳ್ಳುವ ಕೆಟ್ಟ ಪದ್ಧತಿ ಎಂದು ನಂಬಲಾಗಿತ್ತು. ಆದರೆ ೧೫ನೆಯ ಶತಮಾನದ ಕೊನೆಗೆ ಫ್ರಾನ್ಸ್‌ನ ಆರ್ಚ್‌ಬಿಷಪ್ ಅಂಟೋನಿಯೋ ಮತ್ತು ಜರ್ಮನಿಯ ಗೇಬ್ರಿಯಲ್ ಬೈಲ್ ಇಬ್ಬರೂ ಬಡ್ಡಿಯನ್ನು ಲಾಭ ತರುವ ಉತ್ಪಾದನೆಗಳಲ್ಲಿ ಬಳಸು ವುದರಿಂದ ಸಮರ್ಥನೀಯ ಎಂದು ವಾದಿಸಿದರು. ಇದರಿಂದ

ಆರ್ಥಿಕ ಪರಿಸ್ಥಿತಿಯಲ್ಲಿ ಪರಿವರ್ತನೆಯಾಗಿ ಕೃಷಿ ಉತ್ಪನ್ನಗಳ ಬೆಲೆ ಏರಿತು. ಇದರಿಂದ ಸಮಾಜದ ಬಹಳ ವರ್ಗಗಳಿಗೆ, ಮುಖ್ಯವಾಗಿ ಗ್ರಾಮೀಣ ಪ್ರದೇಶದ ಮತ್ತು ನಗರದ ಕೂಲಿಕಾರರಿಗೆ ತೊಂದರೆ ಉಂಟಾಯಿತು.

ಯುರೋಪಿನ ಇತಿಹಾಸದಲ್ಲಿ ಇದು ರಾಷ್ಟ್ರೀಯತೆಯ ಅಭಿವೃದ್ಧಿಯ ಸಂದರ್ಭವಾಗಿದ್ದು ರಾಷ್ಟ್ರ ರಾಜ್ಯಗಳು ಸಹ ಆಗ ಅಸ್ತಿತ್ವಕ್ಕೆ ಬಂದವು. ಭೂಮಿಯಿಂದ ಆವೃತ್ತವಾದ ಪ್ರದೇಶಗಳು ಶಕ್ತಿಯುತ ರಾಷ್ಟ್ರೀಯ ರಾಜ್ಯಗಳಾಗಿ ರೂಪುಗೊಂಡವು ಮತ್ತು ಸಮುದ್ರದಿಂದ ಆವೃತವಾದ ಸಮುದಾಯಗಳು ಸಮುದ್ರದ ಆಚೆಗೆ ತಮ್ಮ ವ್ಯಾಪ್ತಿಯನ್ನು ವಿಸ್ತರಿಸಿ ಕೊಳ್ಳಲು ಆರಂಭಿಸಿದವು. ಧಾರ್ಮಿಕ ಸುಧಾರಣೆ ಅಥವಾ ಪ್ರಾಟೆಸ್ಟೆಂಟ್ ಚಳವಳಿಯು ರೂಪುಗೊಂಡಿದ್ದು ಭೂಮಿಯಿಂದ ಆವೃತವಾದ ಇಂಥ ಶಕ್ತಿಶಾಲಿ ಪ್ರದೇಶಗಳಲ್ಲಿ. ಈ ಸಮುದಾಯಗಳಲ್ಲಿ, ರಾಷ್ಟ್ರೀಯತೆಯ ಹೆಸರಿನಲ್ಲಿ ಬೆಳೆಯುತ್ತಿದ್ದ ಪ್ರತ್ಯೇಕ ರಾಜಕೀಯ ಸಮೂಹದ ಕಲ್ಪನೆ ಮತ್ತು ತಾನೇ ರಾಜಕೀಯ ಅಧಿಕಾರದ ಕೇಂದ್ರ ಎಂದು ನಂಬಿದ್ದ ಪೋಪ್‌ನ ವರ್ತನೆಗೆ ಉಂಟಾದ ವಿರೋಧ ಇವುಗಳ ಪರಿಣಾಮವಾಗಿ ಲೂಥರ್ ಮತ್ತು ಕಾಲ್ವಿನ್ ಇವರುಗಳ ನೇತೃತ್ವದಲ್ಲಿ ಸುಧಾರಣಾ ಚಳವಳಿಯು ಆರಂಭಗೊಂಡಿತು.

ಸಮುದ್ರದಿಂದ ಆವೃತವಾದ ದೇಶಗಳಾದ ಸ್ಪೈನ್ ಮತ್ತು ಪೋರ್ಚುಗಲ್‌ನಂಥ ದೇಶಗಳಲ್ಲಿ ರಾಷ್ಟ್ರೀಯತೆಯ ಹೊರಗಿನ ಪ್ರಪಂಚವನ್ನು ಆವಿಷ್ಕರಿಸುವುದರಲ್ಲಿ ಮತ್ತು ವಸಾಹತುಶಾಹಿ ಆಳ್ವಿಕೆಯನ್ನು ವಿಸ್ತಾರಗೊಳಿಸುವ ಪ್ರಯತ್ನಗಳಲ್ಲಿ ವ್ಯಕ್ತವಾಯಿತು. ಸ್ಪೈನ್‌ನಿಂದ ಹೊರಟ ಕೊಲಂಬಸ್‌ನು ಭಾರತವನ್ನು ತಲುಪುವ ಉದ್ದೇಶದಿಂದ ಅಮೆರಿಕಾದ ಇರುವಿನ ಅರಿವಿಲ್ಲದೆ ಪಶ್ಚಿಮದ ಕಡೆ ಪ್ರಯಾಣ ಬೆಳೆಸಿದ. ಪೋರ್ಚುಗಲ್‌ನ ವಾಸ್ಕೋಡಿಗಾಮನು ಆಫ್ರಿಕಾವನ್ನು ಸುತ್ತು ಹಾಕಿ ೧೪೯೮ರಲ್ಲಿ ಭಾರತದ ಪಶ್ಚಿಮ ಕರಾವಳಿಯನ್ನು ತಲುಪಿದ. ನೆದರ್‌ಲ್ಯಾಂಡ್ ಸಹ ಇದೇ ರೀತಿಯ ಪ್ರಯತ್ನಗಳನ್ನು ನಡೆಸಿ ಪೂರ್ವದ ಕೆಲವು ಪ್ರದೇಶಗಳನ್ನು ವಸಾಹತು ಆಡಳಿತಕ್ಕೆ ಅಧೀನವಾಗಿಸಿತು. ಇತರ ಯುರೋಪಿನ ದೇಶಗಳಂತೆ ವೇಗವಾಗಿ ಅಲ್ಲದಿದ್ದರೂ ಫ್ರಾನ್ಸ್ ಸಹ ವಿಸ್ತಾರವಾದ ಭೂಭಾಗವನ್ನು ಆಕ್ರಮಿಸಿಕೊಂಡಿತು. ಹಾಗೆಯೇ ಇಂಗ್ಲೆಂಡ್ ಸಹ ಭೌಗೋಳಿಕ ಅನ್ವೇಷಣೆಯಲ್ಲಿ ಬಹಳ ಯಶಸ್ಸನ್ನು ಗಳಿಸಿತು.

ಆದರೆ ದಕ್ಷಿಣದ ಇಟಲಿ ಮತ್ತು ಅದರ ಸುತ್ತಮುತ್ತಲಿನ ದೇಶಗಳಲ್ಲಿ ರೋಮನ್ ಸಾಮ್ರಾಜ್ಯದ ಅವಶೇಷಗಳು ಇನ್ನೂ ಉಳಿದಿದ್ದವು. ಅಲ್ಲಿನ ಪೋಪ್‌ಗಳು ರೋಮನ್ ಸಾಮ್ರಾಜ್ಯದ ನೆರಳನ್ನು ಹಿಡಿಯುವ ಪ್ರಯತ್ನದಲ್ಲಿ ತೊಡಗಿದ್ದರು. ಕ್ರೈಸ್ತಧರ್ಮದ ಅಧಿಕಾರದ ಕೇಂದ್ರವಾದ ಪೋಪ್‌ನ ಸ್ಥಾನ ಅತಿ ಹತ್ತಿರದಲ್ಲಿದ್ದರಿಂದ ಅಲ್ಲಿ ಧಾರ್ಮಿಕ ಸುಧಾರಣೆಯ ಪ್ರಯತ್ನಗಳಿಗೆ ಬೆಂಬಲ ಇರಲಿಲ್ಲ.

"ಚರ್ಚು ತನ್ನನ್ನು ತಾನೇ ಪುನರ್ ರೂಪಿಸಿಕೊಳ್ಳುತ್ತದೆ" ಎಂಬುದು ಕ್ಯಾಥೊಲಿಕ್ ಚರ್ಚ್‌ನ ಅಧಿಕೃತ ನಿಲುವಾಗಿತ್ತು. ಸೇಂಟ್ ಪಾಲ್‌ನಿಂದ ಆರಂಭವಾಗಿ, "ಫಾದರ್ಸ್ ಆಫ್ ಚರ್ಚ್"ಗಳವರೆಗೆ ಬಹಳಷ್ಟು ಪ್ರಮುಖ ವ್ಯಕ್ತಿಗಳು ಚರ್ಚ್‌ನಲ್ಲಿ ಸುಧಾರಣೆ ತರಲು ಪ್ರಯತ್ನಿಸಿದ್ದನ್ನು ನಾವು ನೋಡಬಹುದು. ಆದರೆ ಈ ಪ್ರಯತ್ನಗಳಿಂದ ಚರ್ಚ್‌ನ ಉನ್ನತ ಸ್ಥಾನದಲ್ಲಿದ್ದ ವ್ಯಕ್ತಿಗಳ ಪ್ರಾಪಂಚಿಕ ಲೋಭ ಮತ್ತು ದುಷ್ಕೃತ್ಯಗಳನ್ನು ಬದಲಾಯಿಸಲು ಸಾಧ್ಯವಾಗಲಿಲ್ಲ. ಆಗ ತಾನೇ ರೂಪುಗೊಳ್ಳುತ್ತಿದ್ದ ರಾಷ್ಟ್ರೀಯತೆಯ ಸಹ ಯೋಗದೊಂದಿಗೆ ಪ್ರಾಟೆಸ್ಟೆಂಟ್ ಚಳವಳಿಯು ಕ್ರೈಸ್ತ ಸಾಮ್ರಾಜ್ಯವನ್ನು ಇಬ್ಭಾಗವಾಗಿಸಿದರೂ ಮಹತ್ವದ ಬದಲಾವಣೆಯನ್ನು ತಂದಿತು. ೧೬ನೆಯ ಶತಮಾನದ ಧಾರ್ಮಿಕ ಸುಧಾರಣೆಯು ಚರ್ಚ್‌ನಲ್ಲಿ ಯಾವಾಗಲೂ ಆಗುತ್ತಿದ್ದ ಸುಧಾರಣೆಗಿಂತ ಭಿನ್ನವಾಗಿ ಕಾಣುವುದು ಈ ಹಿನ್ನೆಲೆಯಲ್ಲಿಯೇ.

**ಮಧ್ಯಯುಗದ ಹಳೆಯ ಚರ್ಚ್‌ನ ಹಿನ್ನೆಲೆ**

ಪ್ರಾಟೆಸ್ಟೆಂಟ್ ಧಾರ್ಮಿಕ ಚಳವಳಿಯ ಮಹತ್ವವನ್ನು ಅರ್ಥಮಾಡಿಕೊಳ್ಳಬೇಕಾದರೆ ಅದನ್ನು ನಾವು ಮಧ್ಯಯುಗದ ಚರ್ಚ್‌ನ ಹಿನ್ನೆಲೆಯಲ್ಲಿ ನೋಡಬೇಕು. ಕ್ಯಾಥೊಲಿಕ್ ಇತಿಹಾಸಕಾರರು ಪ್ರಾಟೆಸ್ಟೆಂಟ್ ಧಾರ್ಮಿಕ ಸುಧಾರಣೆಗಿಂತ ಮೊದಲು ಬಹಳಷ್ಟು ಸುಧಾರಣೆಗಳು ಚರ್ಚ್‌ನಲ್ಲಿ ನಡೆದಿದ್ದವು ಎಂಬುದನ್ನು ತೋರಿಸುತ್ತಾರೆ. ಇನ್ನೊಂದು ಕಡೆ ಪ್ರಾಟೆಸ್ಟೆಂಟ್ ಇತಿಹಾಸಕಾರರು ತಮ್ಮ ಚಳವಳಿಯನ್ನು ಹಿಂದಿನ ಭ್ರಷ್ಟ ವ್ಯವಸ್ಥೆಗಿಂತ ಸಂಪೂರ್ಣ ವಿಭಿನ್ನ ಎಂದು ವ್ಯಾಖ್ಯಾನಿಸುತ್ತಾರೆ. ಆದ್ದರಿಂದ ಮಧ್ಯಯುಗದ ಹಿನ್ನೆಲೆಯನ್ನು ಅರ್ಥಮಾಡಿಕೊಳ್ಳುವುದು ಕಷ್ಟದ ಕೆಲಸ. ಆದರೆ ೧೫ನೆಯ ಶತಮಾನದಲ್ಲಿ ಆದ ಬದಲಾವಣೆಗಳು, ನಂತರ ಆದ ಸುಧಾರಣಾ

ಚಳವಳಿಗಳಿಗೆ ನಾಂದಿ ಹಾಡಿದವು ಎಂಬುದು ನಿಜ. ಆಗ ಯೂರೋಪ್‌ನಲ್ಲಿ ಆದ ಬೆಳವಣಿಗೆಗಳು ಪೋಪ್‌ನ ಅಧಿಕಾರದ ದುರ್ಬಳಕೆ; ಪುರೋಹಿತರು, ಸನ್ಯಾಸಿಗಳು, ಸನ್ಯಾಸಿನಿಯರ ದುರ್ವತನೆಗಳ ವಿರುದ್ಧ ಉಂಟಾದ ಬೆಳವಣಿಗೆಗಳೇ ಎಂಬುದರಲ್ಲಿ ಎರಡು ಮಾತಿಲ್ಲ. ರಾಷ್ಟ್ರೀಯತೆಯ ಚೈತನ್ಯ ವೃದ್ಧಿಯಾಗು ತ್ತಿದ್ದಂತೆ ಪೋಪ್‌ನ ಅಧಿಕಾರದ ವ್ಯಾಪ್ತಿ ಕಡಿಮೆಯಾಯಿತು. ಪೋಪ್‌ಗಳು ಫ್ರಾನ್ಸ್, ಜರ್ಮನಿ ಮತ್ತು ಇಂಗ್ಲೆಂಡಿನ ರಾಜಕೀಯದಲ್ಲಿ ಬಹಳ ಕಾಲ ಹಸ್ತಕ್ಷೇಪ ನಡೆಸಿದ್ದರು. ಅಲ್ಲಿನ ರಾಜರಿಗೆ ಕೆಲವೊಂದು ಹೊಸ ಅಧಿಕಾರಗಳು ದೊರಕಿದ್ದರಿಂದ ಅವರು ಪೋಪರ ವಿರುದ್ಧ ತಮ್ಮ ಅಧಿಕಾರವನ್ನು ಚಲಾಯಿಸತೊಡಗಿದರು.

ರಾಷ್ಟ್ರೀಯತೆಯ ಪ್ರಜ್ಞೆ ವಿಕಾಸವಾಗುತ್ತಿದ್ದ ಸಂದರ್ಭದಲ್ಲಿ ಬಹಳಷ್ಟು ಜನ ತತ್ವಜ್ಞಾನಿಗಳು ಕ್ಯಾಥೊಲಿಕ್ ಧರ್ಮವನ್ನು ಅದರೊಳಗಿದ್ದುಕೊಂಡೇ ವಿಮರ್ಶೆಗೆ ಗುರಿ ಪಡಿಸಿದರು. ವಿಲಿಯಂ ಓಕ್ ಹ್ಯಾಮ್ ಹನ್ನೆರಡನೆಯ ಪೋಪ್ ಜಾನ್‌ನನ್ನು ಧರ್ಮ ಬಾಹಿರ ವ್ಯಕ್ತಿ(ಪಾಷಂಡಿ) ಎಂದು ಕರೆದಿದ್ದಲ್ಲದೆ, ಪೋಪ್‌ನ ಅಧಿಕಾರ ಮತ್ತು ರಾಜ್ಯಾ ಧಿಪತ್ಯ ಎರಡೂ ಬೇರೆ ಬೇರೆಯಾದ ಕ್ಷೇತ್ರಗಳೆಂದು ಸೂಚಿಸಿದ. ಪೋಪನ ಪಾಷಂಡಿತನದಿಂದ ಚರ್ಚ್‌ಗಳನ್ನು ರಕ್ಷಿಸಲು ರಾಜರಿಗೆ ಮತ್ತು ಸಾಮಾನ್ಯ ಮನುಷ್ಯರಿಗೆ ಕರೆ ನೀಡಿದ. ಜಾನ್ ವೈಕ್ಲಿಫ್ ಇಂಗ್ಲೆಂಡಿನಲ್ಲಿ ರಾಷ್ಟ್ರೀಯತೆಯನ್ನು ಚರ್ಚ್‌ನ ಸುಧಾರಣೆಗಾಗಿ ಬಳಸಿದ ಮತ್ತು ೧೩೮೦ರಲ್ಲಿ ಬೈಬಲ್ ಅನ್ನು ಭಾಷಾಂತರ ಮಾಡಿ ಅದನ್ನು ರಾಜರಿಗೆ, ಪ್ರಜೆಗಳಿಗೆ ಎಲ್ಲರಿಗೂ ದೊರಕುವಂತೆ ಮಾಡಿದ.

ಇಟಲಿಯ ಲೊರೆಂಜೊ ವಲ್ಲಾ(೧೪೦೭-೫೭) ಪೋಪ್‌ನ ರಾಜಕೀಯ ಅಧಿಕಾರದ ಹಕ್ಕುಗಳನ್ನು ಪ್ರಶ್ನಿಸಿದ. ಜೊಹಾನೆಸ್ ರೆಂಕ್ಲಿನ್(೧೪೫೫-೧೫೨೨) ಎಂಬಾತ ಗ್ರೀಕ್ ಮತ್ತು ಹೀಬ್ರೂ ಗ್ರಂಥಗಳನ್ನು ಅಧ್ಯಯನ ಮಾಡಿ ವಿದ್ವಾಂಸರು ಚರ್ಚ್‌ಗಳನ್ನು ಪ್ರಶ್ನಿಸಬಹುದೆಂದು ತೋರಿಸಿಕೊಟ್ಟ. ಹಾಲೆಂಡಿನ ಎರಾಸ್ಮಸ್ ತನ್ನ ಜ್ಞಾನ ಮತ್ತು ಬರಹಗಳಿಂದ ಚರ್ಚ್‌ನ ಆಚರಣೆಗಳನ್ನು ಖಂಡಿಸಿದ.

ಇದರೊಂದಿಗೆ ಆಗ ಬೆಳೆಯುತ್ತಿದ್ದ ಆಧ್ಯಾತ್ಮ ವಾದವು ಚರ್ಚ್‌ನ ಅಸ್ತಿತ್ವಕ್ಕೆ ಧಕ್ಕೆ ಉಂಟುಮಾಡಿತು. ಆಧ್ಯಾತ್ಮವಾದಿಗಳಿಗೆ ಅತೀಂದ್ರಿಯ ಶಕ್ತಿ ಇರಬಹುದೆಂದು ಜನ ನಂಬಿದ್ದರು. ೧೩೨೭-೨೮ರಲ್ಲಿ ಮರಣ ಹೊಂದಿದ ಮೈಸ್ಟರ್ ಎಕ್‌ಹಾರ್ಟ್ ಮತ್ತು ೧೩೬೧ರಲ್ಲಿ ಕಾಲವಾದ ಜೊಹಾನ್ ಟಾಲರ್ ಇಬ್ಬರಿಗೂ ಚರ್ಚ್‌ನ ಆಚರಣೆಗಳಿಗೆ ಅನುಸಾರವಾಗಿ ಸಂಸ್ಕಾರ ನೆರವೇರಲಿಲ್ಲ. ಅವರ ಅನುಯಾಯಿಗಳು ತಮ್ಮ ಆಧ್ಯಾತ್ಮಿಕ ಸಾಧನೆಗಳಿಗಾಗಿ ಅವನತಿಯ ಅಂಚಿನಲ್ಲಿದ್ದ ಪುರೋಹಿತ ವರ್ಗವನ್ನು ಅವಲಂಬಿಸಲಿಲ್ಲ.

ಧಾರ್ಮಿಕ ಸುಧಾರಕರು ಚರ್ಚ್‌ನ ಉನ್ನತ ಸ್ಥಾನಗಳಲ್ಲಿದ್ದ ವ್ಯಕ್ತಿಗಳಿಗಲ್ಲದೆ ಸಾಮಾನ್ಯ ಕ್ಯಾಥೊಲಿಕ್ ಜನಗಳಿಗೂ ಸುಧಾರಣೆಯ ಅಗತ್ಯವನ್ನು ಮನವರಿಕೆ ಮಾಡಿ ಕೊಟ್ಟರು. ಅವರು ಮೇರಿಯ ಬಗ್ಗೆ ಮತ್ತು ಧರ್ಮಗ್ರಂಥಗಳ ಬಗ್ಗೆ ಜನರಲ್ಲಿದ್ದ ಮಿತಿ ಮೀರಿದ ಭಕ್ತಿಯನ್ನು ಮನುಷ್ಯನ ವಿವೇಚನೆ ಹಾಗೂ ಬೈಬಲ್‌ನ ಆಧ್ಯಾತ್ಮಿಕತೆಗೆ ಹೊರತಾದದ್ದು ಎಂದು ತೋರಿಸಿಕೊಟ್ಟರು.

೧೪ನೆಯ ಶತಮಾನದಲ್ಲಿ ವ್ಯಾಪಕವಾಗಿದ್ದ ಪ್ಲೇಗ್‌ನಂಥ ಸಾಂಕ್ರಾಮಿಕ ರೋಗಗಳಿಂದ ಭೀತರಾಗಿದ್ದ ಜನಗಳ ಮನಸ್ಸಿನಲ್ಲಿ ಚರ್ಚಿನ ಅಧಿಕಾರಿಗಳು ನರಕದ ಶಿಕ್ಷೆ, ಮನುಷ್ಯ ಜೀವನದ ಅನಿಶ್ಚಿತತೆ ಇತ್ಯಾದಿಗಳ ಬಗ್ಗೆ ಉಪದೇಶ ನೀಡುತ್ತ ಇನ್ನಷ್ಟು ಭಯ ಭೀತರನ್ನಾಗಿಸಿದರು. ಇದರಿಂದ ಪಾರಾಗಲು ಕ್ಷಮಾಪತ್ರಗಳನ್ನು ಮಾರಾಟ ಮಾಡಲು ಚರ್ಚ್ ಆರಂಭಿಸಿತು. ಇವುಗಳ ಮಾರಾಟದಿಂದ ಬಂದ ಹಣವನ್ನು ಸಾಮಾಜಿಕ ಕಾರ್ಯ ಗಳಿಗೆ ಬಳಸಿದರೂ, ಕ್ಷಮಾಪತ್ರಗಳನ್ನು ಮಾರುವುದಕ್ಕಾಗಿಯೇ ನರಕದ ಭಯವನ್ನು ಉದ್ದೇಶಪೂರ್ವಕವಾಗಿ ಜನರ ಮನಸ್ಸಿನಲ್ಲಿ ತುಂಬಲಾಗುತ್ತಿತ್ತು. ೧೬ನೆಯ ಶತಮಾನದ ವೇಳೆಗೆ ಯುರೋಪಿನ ಬಹುಭಾಗದಲ್ಲಿ ಕ್ಯಾಥೊಲಿಕ್ ಧರ್ಮವು ತರಲಾಗದ ಸುಧಾರಣೆಗಳಿಗಾಗಿ ವ್ಯಾಪಕ ಒತ್ತಾಯ ಕಂಡುಬಂತು.

**ಲೂಥರನ ಪಾತ್ರ**

ಆರಂಭದಲ್ಲಿ ಈ ಕ್ಷಮಾಪತ್ರಗಳನ್ನು ಚರ್ಚ್ ವಿಧಿಸಿದ ಶಿಕ್ಷೆಗಳಿಂದ ಪಾರಾಗಲು ಬಳಸಲಾಗುತ್ತಿತ್ತು. ನಂತರ ಇವುಗಳನ್ನು ಪ್ರಾಯಶ್ಚಿತ್ತದ ಸ್ಥಳ ಮತ್ತು ಪಶ್ಚಾತ್ತಾಪದ ವಿಧಿಗಳನ್ನು ದೂರವಾಗಿಸುವ ರಹದಾರಿಗಳಂತೆ ಬಳಸಲಾರಂಭಿಸಿದ ಮೇಲೆ ಮಾರ್ಟಿನ್ ಲೂಥರನಂಥ ಧರ್ಮನಿಷ್ಟ ವ್ಯಕ್ತಿಗೆ ಇದರ ವಿರುದ್ಧ ಹೋರಾಡದೆ ಬೇರೆ ಮಾರ್ಗವಿರಲಿಲ್ಲ.

ಮಾರ್ಟಿನ್ ಲೂಥರ್‌ನು ವಿಟೆನ್‌ಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕನಾಗಿದ್ದಾಗ ಮೇಯ್‌ನ್ಜ್‌ನ ಆರ್ಚ್‌ಬಿಷಪ್ ಆಗಿದ್ದ ಆಲ್ಬರ್ಟ್ ಕ್ಷಮಾಪತ್ರಗಳನ್ನು ಮಾರಾಟಮಾಡಲು ಎಲ್ಲ ಕಡೆ ಕಳುಹಿಸಿದ್ದ. ಲೂಥರ್ ಅಲ್ಲಿ ಪ್ರಾಧ್ಯಾಪಕನಾಗಿದ್ದರ ಜೊತೆಗೆ ಸ್ಥಳೀಯ ಪಾದ್ರಿಯೂ ಆಗಿದ್ದರಿಂದ, ಅಲ್ಲಿನ ಜನ ಕ್ಷಮಾಪತ್ರಗಳನ್ನು ಒಂದಾದ ಮೇಲೊಂದರಂತೆ ಕೊಳ್ಳುವುದನ್ನು ಕಂಡು ವಿಚಲಿತನಾದ. ೧೫೧೭ರಲ್ಲಿ ೯೫ ಪ್ರಬಂಧಗಳನ್ನು ಬರೆದು ಪೋಪ್‌ನ ಆರ್ಥಿಕ ದುರ್ವ್ಯವಹಾರ ಹಾಗೂ ಕ್ರೈಸ್ತಧರ್ಮದ ಸಿದ್ಧಾಂತಗಳು ದುರುಪಯೋಗದ ವಿರುದ್ಧ ಹೋರಾಟ ಆರಂಭಿಸಿದ. ಅವನ ಪ್ರಕಾರ ಪ್ರಾಯಶ್ಚಿತ್ತದ ಸ್ಥಳದ ಬಗ್ಗೆ ಪೋಪ್‌ಗೆ ಯಾವ ಅಧಿಕಾರವು ಇರಲಿಲ್ಲ. ಬೈಬಲ್ ಒಂದೇ ಚರ್ಚ್‌ನ ಮಹತ್ವದ ಅಂಶ ಎಂದು ಹೇಳಿದ್ದರಿಂದ, ಪೋಪ್ ಅವನನ್ನು ಧರ್ಮಬಾಹಿರ ವ್ಯಕ್ತಿ ಎಂದು ಘೋಷಿಸಿ ಬಹಿಷ್ಕಾರದ ಆಜ್ಞೆ ಹೊರಡಿಸಿದ.

ಪೋಪ್‌ಗಳ ಲೈಂಗಿಕ ದುರಾಚಾರಗಳು, ಸುಲಿಗೆ ಇತ್ಯಾದಿಗಳಿಂದ ರೋಸಿ ಹೋಗಿದ್ದ ಎಲ್ಲ ಬಗೆಯ ಜನರಿಂದ ಲೂಥರ್‌ಗೆ ಬೆಂಬಲ ದೊರೆಯಿತು. ಇಂಗ್ಲೆಂಡ್, ಫ್ರಾನ್ಸ್, ಸ್ಪೈನ್, ರೋಟರ್ ಡ್ಯಾಂ, ನೇಪಲ್ಸ್ ಎಲ್ಲ ದೇಶಗಳ ಪ್ರಮುಖರು ಲೂಥರ್‌ಗೆ ಪ್ರೋ ನೀಡಿದರು.

ಧಾರ್ಮಿಕ ಸುಧಾರಣೆಯ ತನ್ನ ಪ್ರಣಾಳಿಕೆ "ದಿ ಅಡ್ರೆಸ್ ಟು ದಿ ಕ್ರಿಶ್ಚಿಯನ್ ನೊಬಿಲಿಟಿ ಆಫ್ ದಿ ಜರ್ಮನ್ ನೇಷನ್"ನಲ್ಲಿ ಲೂಥರ್ ಕ್ರಿಶ್ಚಿಯನ್ ಚಕ್ರವರ್ತಿಗಳು, ರಾಜರಿಂದ ಚರ್ಚಿನಲ್ಲಿ ಸುಧಾರಣೆ ಸಾಧ್ಯ ಎಂದು ವಾದಿಸಿದ. ದೇವರಲ್ಲಿ ನಂಬಿಕೆ ಇಟ್ಟ ಎಲ್ಲರೂ ಪಾದ್ರಿಗಳೇ ಆಗುವುದರಿಂದ, ಸಾಮಾನ್ಯ ಮನುಷ್ಯನೂ ಸಹ ವೃತ್ತಿಯಿಂದ ಅಲ್ಲದಿದ್ದರೂ ಆಧ್ಯಾತ್ಮಿಕ ನೆಲೆಯಲ್ಲಿ ಪಾದ್ರಿ ಎಂದು ಹೇಳಿದ. ಇದರಿಂದ ಧರ್ಮ ಗುರುವಿಗೂ ಅಥವಾ ಪಾದ್ರಿಗೂ ಮತ್ತು ಸಾಮಾನ್ಯ ಮನುಷ್ಯನಿಗೂ ಯಾವ ಅಂತರವೂ ಇಲ್ಲ. ಇದರ ಪರಿಣಾಮವೇನೆಂದರೆ ರಾಜನೊಬ್ಬ ವೃತ್ತಿಯಿಂದ ಪಾದ್ರಿಯಲ್ಲದಿದ್ದರೂ ಚರ್ಚಿನಲ್ಲಿ ಸುಧಾರಣೆ ತರಲು ಯೋಗ್ಯನಾಗುತ್ತಾನೆ ಎಂದು ಹೇಳಿದ.

ತನ್ನ ಇನ್ನೊಂದು ಚಿಕ್ಕ ಪುಸ್ತಕ "ಬ್ಯಾಬಿಲೋನಿಯನ್ ಕ್ಯಾಪ್ಟಿವಿಟಿ"ಯಲ್ಲಿ ಚರ್ಚು ಕೆಲವು ಆಚರಣೆಗಳನ್ನೇ ತನ್ನ ಹಿಡಿತದಲ್ಲಿಟ್ಟುಕೊಂಡಿದೆ ಎಂದು ಪ್ರತಿಪಾದಿಸಿದ. ಡಿಸೆಂಬರ್ ೧೯, ೧೫೨೦ರಂದು ಮಾರ್ಟಿನ್ ಲೂಥರನು ಪೋಪ್ ಹೊರಡಿಸಿದ ಬಹಿಷ್ಕಾರದ ಆಜ್ಞೆಯನ್ನು ಬಹಿರಂಗವಾಗಿ ಸುಟ್ಟು ಹಾಕಿದ. ಲೂಥರನ ವಿರುದ್ಧ ಬಹಿಷ್ಕಾರದ ಆಜ್ಞೆ ಹೊರಟನಂತರ ಅವನ ಸ್ನೇಹಿತ ಹಾಗೂ ಸಲಹೆಗಾರ ಫ್ರೆಡರಿಕ್ ಅವನನ್ನು ಒಂದು ವರ್ಷದವರೆಗೆ ಅಡಗಿಸಿಟ್ಟ. ಲೂಥರ್ ಈ ಸಮಯದಲ್ಲಿ ಗ್ರೀಕ್‌ನಿಂದ ಹೊಸ ಒಡಂಬಡಿಕೆಯನ್ನು ಜರ್ಮನ್‌ಗೆ ಅನುವಾದಿಸಿದ. ಇದರಿಂದಾಗಿ ಲೂಥರ್‌ಗೆ ಅಪಾರ ಬೆಂಬಲ ದೊರೆಯಿತು.

ಕೆಲವು ಉದಾರವಾದಿ ಕ್ಯಾಥೊಲಿಕ್ ಸುಧಾರಕರಾದ ಎರಾಸ್ಮಸ್ ಮುಂತಾದವರು ಬೈಬಲ್ ಅನ್ನು ವ್ಯಾಖ್ಯಾನಿಸುವಂಥ ಎದೆಗಾರಿಕೆಯನ್ನು ತೋರಿದ ಲೂಥರ್‌ನನ್ನು ಕಂಡು ಅಚ್ಚರಿಗೊಳಗಾದರು. ಲೂಥರನು ಕ್ರಿಸ್ತನ ತತ್ವಗಳನ್ನು ರಕ್ಷಿಸುವುದಕ್ಕಾಗಿ ಖಡ್ಗದ ಬಳಕೆಯನ್ನು ವಿರೋಧಿಸಿದ. ದೇವರ ದಯೆ ಹಾಗೂ ಕ್ರಿಸ್ತನಲ್ಲಿ ಭಕ್ತಿ ಎರಡಕ್ಕೂ ಯಾವ ಅಸ್ತ್ರಗಳ ಅಗತ್ಯವಿಲ್ಲ ಎಂದು ಅವನು ನಂಬಿದ್ದ.

ಕೇಂದ್ರೀಕೃತ ವ್ಯವಸ್ಥೆಯಿಂದ ದೂರ ಸರಿಯುವ ಪ್ರಯತ್ನವಾಗಿ ರೂಪುಗೊಂಡ ರಾಷ್ಟ್ರೀಯತೆಯು ರಾಷ್ಟ್ರೀಯ ಹಾಗೂ ಧಾರ್ಮಿಕ ಪ್ರಾಬಲ್ಯವನ್ನು ವಿರೋಧಿಸಿತು. ಜರ್ಮನ್ ರಾಷ್ಟ್ರೀಯತೆಯ ಚಳವಳಿಯ ಪತನದ ನಂತರ ರಾಷ್ಟ್ರೀಯತೆಯ ಸಹಯೋಗದಲ್ಲಿಯೇ ಹುಟ್ಟಿದ್ದ ಪ್ರಾಟೆಸ್ಟೆಂಟ್ ಚಳವಳಿಯೂ ಸಹ ಮುಂದೆ ಬೇರೆ ಬೇರೆ ಕವಲುಗಳಾಗಿ ಮುಖ್ಯವಾಗಿ ವ್ಯಕ್ತಿವಾದವಾಗಿ ಬೆಳೆಯಿತು.

ಈ ಮಧ್ಯೆ ಸ್ವಿಟ್ಜರ್‌ಲ್ಯಾಂಡ್‌ನ ಸ್ವಿಂಗ್ಲಿಯು ತನ್ನ ದೇಶದಲ್ಲಿ ಪ್ರಾಟೆಸ್ಟೆಂಟ್ ಚಳವಳಿಯ ನೇತೃತ್ವ ವಹಿಸಿದ. ಅರಸರಿಂದ ಸದಾ ಕಿರುಕುಳಕ್ಕೆ ಒಳಗಾಗಿದ್ದ ಹಳೆಯ ಚರ್ಚ್ ವ್ಯವಸ್ಥೆಗೆ ಹಿಂತಿರುಗುವುದು ಸಾಧ್ಯವಿಲ್ಲವಾದ್ದರಿಂದ ಹೊಸ ಇಸ್ರೇಲನ್ನು ಕಟ್ಟಬೇಕೆಂದು ಅಭಿಪ್ರಾಯಪಟ್ಟ. ಈ ಹೊಸ ಇಸ್ರೇಲನ್ನು ಕಟ್ಟಲು ರಾಜಕೀಯ, ಆಧ್ಯಾತ್ಮಿಕ ಶಕ್ತಿಗಳೆರಡನ್ನೂ ಬಳಸಬೇಕೆಂಬುದು ಆತನ ನಂಬಿಕೆಯಾಗಿತ್ತು.

**ಕಾಲ್ವಿನ್‌ನ ಪಾತ್ರ**

ಫ್ರಾನ್ಸ್‌ನ ಜಾನ್‌ಕಾಲ್ವಿನ್ (೧೫೦೯-೬೪) ಕಾನೂನು ಮತ್ತು ಮಾನವಿಕ ಶಾಸ್ತ್ರಗಳನ್ನು ಅಧ್ಯಯನ ಮಾಡಿದ್ದ. ಪ್ರಾಟೆಸ್ಟೆಂಟ್ ಚಳವಳಿಯತ್ತ ಆಕರ್ಷಿತನಾದ ಮೇಲೆ ಫ್ರಾನ್ಸ್ ನಲ್ಲಿ ಇರಲಾಗದೆ ಬಾಸೆಲ್‌ಗೆ ಪ್ರಯಾಣ ಬೆಳೆಸಿದ. ಅಲ್ಲಿ ತನ್ನ ೨೭ನೆಯ ವಯಸ್ಸಿನಲ್ಲಿ ತನ್ನ ಪ್ರಸಿದ್ಧ ಪ್ರಥಮ ಪುಸ್ತಕ "ಇನ್‌ಸ್ಟಿಟ್ಯೂಟ್ಸ್ ಆಫ್ ದಿ ಕ್ರಿಶ್ಚಿಯನ್ ರಿಲಿಜನ್" (೧೫೩೬) ಅನ್ನು ಹೊರತಂದ. ಇದು ಕ್ರಮೇಣ ಪ್ರಾಟೆಸ್ಟೆಂಟ್ ತತ್ವಶಾಸ್ತ್ರದ ಆಕರ ಗ್ರಂಥ ವಾಯಿತು. ಈತನೂ ಸಹ ದೈವದಲ್ಲಿ ನಂಬಿಕೆಯನ್ನು ಸಮರ್ಥಿಸಿದ ಹಾಗೂ ಬೈಬಲ್‌ನ ಅಧಿಕಾರವನ್ನು ಎತ್ತಿಹಿಡಿದ. ಅವನ ಪ್ರಕಾರ ಕ್ರಿಸ್ತನು ಎಲ್ಲ ಕಡೆ ಇರುವವನಾಗಿದ್ದ. ಕಾಲ್ವಿನ್‌ನು ಸಾಮೂಹಿಕವಾಗಿ ಪ್ರಾರ್ಥನೆ, ಸ್ತೋತ್ರಪಠಣ ಮಾಡುವುದನ್ನು ಪ್ರತಿಪಾದಿಸಿದ.

ಜಿನಿವಾದಲ್ಲಿ ನಡೆದ ಕೆಲವು ಘಟನೆಗಳು ಕಾಲ್ವಿನ್‌ಗೆ ತನ್ನ ಧಾರ್ಮಿಕ ತತ್ವಗಳನ್ನು ಪ್ರತಿಪಾದಿಸುವ ಅವಕಾಶ ತಂದುಕೊಟ್ಟವು. ಜಿನಿವಾದ ಬಿಷಪ್ ಮತ್ತು ಡ್ಯೂಕರ ದುರಾಚಾರದ ವರ್ತನೆಯನ್ನು ಸಹಿಸಲಾಗದೆ ಅಲ್ಲಿನ ಜನ ಅವರನ್ನು ದೂರ ಇಟ್ಟಿದ್ದರು. ಇದರಿಂದ ಪ್ರಾಟೆಸ್ಟೆಂಟ್ ಉಪದೇಶಕರು, ಅವರು ಸ್ವಿಟ್ಜರ್‌ಲ್ಯಾಂಡ್‌ನ ಪ್ರಾಟೆಸ್ಟೆಂಟ್ ಒಕ್ಕೂಟವನ್ನು ಸೇರದಿದ್ದರೂ, ಜಿನಿವಾದಲ್ಲಿ ಕ್ರೈಸ್ತಧರ್ಮ ಪ್ರಚಾರ ಮಾಡಲು ಸಾಧ್ಯವಾಯಿತು. ಆ ಸಂದರ್ಭದಲ್ಲಿ ಗ್ವಿಲಾಮೆ ಫಾರೆಲ್ ಎಂಬ ಸ್ವಭಾವತಃ ಜಗಳ ಗಂಟನಾಗಿದ್ದ ಪ್ರಚಾರಕ ಬಂದು ಉಗ್ರ ರೂಪದಲ್ಲಿ ಜನರನ್ನು ಸಂಘಟಿಸತೊಡಗಿದ. ಜನರನ್ನು ನಿಯಂತ್ರಣದಲ್ಲಿಡುವುದು ಅವನಿಗೆ ಸಾಧ್ಯವಾಗದಿದ್ದಾಗ ಕಾಲ್ವಿನ್‌ನ ಸಹಕಾರ ಕೇಳಿದ. ಹೀಗೆ ಜಾನ್ ಕಾಲ್ವಿನ್‌ನಿಗೆ ಜಿನೀವಾವನ್ನು ಶಾಂತಿಯುತ ಪರಿಸ್ಥಿತಿಗೆ ಕೊಂಡೊಯ್ಯುವ ಅವಕಾಶ ದೊರಕಿತು. ಕಾಲ್ವಿನ್ ಅದನ್ನು ದೇವಸದೃಶ ನಗರವನ್ನಾಗಿ ಪರಿವರ್ತಿಸಿದ. ಅದು ಎಲ್ಲ ರೀತಿಯಲ್ಲಿ ಥಾಮಸ್ ಮೂರ್‌ನ ಯುಟೋಪಿಯಾವನ್ನು ಹೋಲುತ್ತಿತ್ತು. ಹಲವಾರು ಅಂಶಗಳು ಈ ಅಭೂತಪೂರ್ವ ಯಶಸ್ಸಿಗೆ ಕಾರಣವಾದವು. ಆ ನಗರದಲ್ಲಿ ಧರ್ಮವಿರೋಧಿಗಳನ್ನು ಹೊರಗಿಡಲಾಗಿತ್ತು. ಪ್ರಾಟೆಸ್ಟೆಂಟ್ ಧರ್ಮವನ್ನು ಒಪ್ಪದ ಕ್ಯಾಥೊಲಿಕ್ ಸಮುದಾಯದವರನ್ನು ನಗರದಿಂದ ಬಹಿಷ್ಕರಿಸಲಾಗಿತ್ತು. ನಗರದ ಜನಸಂಖ್ಯೆ ಚಿಕ್ಕದಾಗಿದ್ದು ಸ್ಥಳೀಯರು ೧೩,೦೦೦ ಸಂಖ್ಯೆಯಲ್ಲಿದ್ದರು. ಇದಕ್ಕೆ ಫ್ರಾನ್ಸ್, ಇಟಲಿ, ಸ್ಪೈನ್ ಮತ್ತು ಇಂಗ್ಲೆಂಡಿನಿಂದ ಬಂದ ೬೦೦೦ ನಿರಾಶ್ರಿತರು ಸೇರಿಕೊಂಡರು. ಇದರಿಂದ ಚರ್ಚ್‌ನ ಪರಿವರ್ತನೆ, ರಾಜ್ಯ ಮತ್ತು ಸಮುದಾಯ ಎಲ್ಲವನ್ನೂ ಒಂದು ಮಾಡಲು ಸಾಧ್ಯವಾಯಿತು.

**ಯುರೋಪಿನಲ್ಲಿ ಧಾರ್ಮಿಕ ಸುಧಾರಣಾ ಚಳವಳಿ**

೧೬ನೆಯ ಶತಮಾನದ ವೇಳೆಗೆ ಉತ್ತರ ಯುರೋಪಿನ ಎಲ್ಲ ಕಡೆ ಲೂಥರನ ಪಂಥ ಪ್ರಚಲಿತವಾಗಿತ್ತು. ವರ್ಟನ್‌ಬರ್ಗ್, ಬ್ರಾಂಡನ್‌ಬರ್ಗ್, ಸ್ಯಾಕ್ಸೊನಿ, ಬ್ರೇಯ್ನಶ್ವಿಗ್, ಪ್ರಷ್ಯಾ, ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಫಿನ್‌ಲ್ಯಾಂಡ್, ಲಿವೋನಿಯಾ, ಎಸ್ಟೋನಿಯಾ, ಆಸ್ಟ್ರಿಯಾ ಮತ್ತು ಮೊರಾವಿಯಾಗಳಲ್ಲಿ ಲೂಥರನ ಪ್ರಭಾವ ಹಬ್ಬಿತ್ತು. ಪೂರ್ವ ಯೂರೋಪ್‌ನಲ್ಲಿ ಪ್ರಾಟೆಸ್ಟೆಂಟ್ ವಾದದ ಬೇರೆ ಬೇರೆ ಪಂಥಗಳು ಬೆಳೆಯತೊಡಗಿದವು. ಡಾನ್‌ಜಿಗ್ ಮತ್ತು ಹಾಬ್ಸ್‌ಬರ್ಗ್‌ನ ಬಹಳಷ್ಟು ಜನ ಲೂಥರ್‌ವಾದಿಗಳು, ಕ್ರೈಸ್ತಧರ್ಮದ ಮುಖ್ಯ ತತ್ವ ಟ್ರಿನಿಟಿ(ತ್ರಿಮೂರ್ತಿ)ಯನ್ನು ವಿರೋಧಿಸುವ ಇಟಲಿಯ ಧರ್ಮ ಸುಧಾರಕರು, ಮತ್ತು ಕೆಲವು ಕಾಲ್ವಿನ್‌ವಾದಿಗಳು ಪೂರ್ವಜರ್ಮನಿಗೆ ವಲಸೆ ಹೋದರು. ಜರ್ಮನಿಗೆ ಲೂಥರನ ಸಿದ್ಧಾಂತವು ಹೆಚ್ಚು ಆಪ್ತವಾಗಲು ಕಾರಣ ಅದು ಜರ್ಮನಿಯದೂ ಅಲ್ಲ, ಹಾಗೇ ಫ್ರಾನ್ಸ್‌ನದೂ ಆಗಿರಲಿಲ್ಲ. ೧೫೭೩ರ ವಾರ್ಸಾ ಒಪ್ಪಂದವು ರೋಮನ್ ಕ್ಯಾಥೊಲಿಕರಿಗೆ, ಲೂಥರ್‌ವಾದಿಗಳಿಗೆ ಮತ್ತು ಕಾಲ್ವಿನ್‌ವಾದಿಗಳಿಗೆ ಸಹಾನುಭೂತಿ ತೋರಿತು. ಆದರೆ ಅದರಲ್ಲಿ ಇಟಲಿಯಿಂದ ಬಂದ ಸೊಸಿನಿಯನ್‌ರಿಗೆ ಯಾವ ಸ್ಥಾನವೂ ಇರಲಿಲ್ಲ. ಟರ್ಕಿಯು ಮೊಹಾಕರ ಯುದ್ಧದಲ್ಲಿ ಜಯ ಗಳಿಸಿದಾಗ ಹಂಗೇರಿಯು ಇಬ್ಭಾಗವಾಯಿತು. ಲೂಥರನ ಅನುಯಾಯಿಗಳು, ಕಾಲ್ವಿನ್‌ವಾದಿಗಳು, ಕ್ರೈಸ್ತಧರ್ಮದ ಟ್ರಿನಿಟಿ ಸಿದ್ಧಾಂತವನ್ನು ವಿರೋಧಿಸುವವರಿಗೆ ಅಲ್ಲಿ ಸ್ಥಾನವಿತ್ತು. ಏಕೆಂದರೆ ಅಲ್ಲಿನ ನಿಶ್ಯಕ್ತ ಸರ್ಕಾರ ಅವರನ್ನು ವಹಿಸಿಕೊಂಡಿತ್ತು.

ಆದರೆ ಧಾರ್ಮಿಕ ಸುಧಾರಣೆಯು ಇಟಲಿ ಅಥವಾ ಸ್ಪೈಯಿನ್‌ನಲ್ಲಿ ತನ್ನ ದೃಢವಾದ ನೆಲೆಯನ್ನು ಸ್ಥಾಪಿಸಲು ಸಾಧ್ಯವಾಗಲಿಲ್ಲ. ಅದಕ್ಕೆ ಹಲವಾರು ಕಾರಣಗಳಿದ್ದವು. ಸ್ಪೈಯಿನ್ ತನ್ನ ರಾಜಕೀಯ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಏಕೀಕರಣವನ್ನು ಅಲ್ಲಿನ ಧರ್ಮಶ್ರದ್ಧೆ

ಇಲ್ಲದವರು, ಯಹೂದಿಗಳು ಮತ್ತು ನೀಗ್ರೋಗಳನ್ನು ಮತಾಂತರ ಮಾಡುವುದರ ಮೂಲಕ ಅಥವಾ ಬಹಿಷ್ಕರಿಸುವುದರ ಮೂಲಕ ಸಾಧಿಸಲು ಪ್ರಯತ್ನಿಸಿತು. ೧೪೮೧ರಲ್ಲಿ ಯಹೂದಿ ಆಚರಣೆಗಳನ್ನು ತೊಡೆದುಹಾಕಲು ಇಂಕ್ವಿಜಿಷನ್ ಅನ್ನು ಪ್ರಾರಂಭಿಸಲಾಯಿತು. ೧೪೯೨ರಲ್ಲಿ ಕ್ರಿಶ್ಚಿಯನ್ನರಲ್ಲದ ಯಹೂದಿಗಳನ್ನು ಬಹಿಷ್ಕರಿಸಲಾಯಿತು. ಗ್ರನಾಡಾವನ್ನು ಆಕ್ರಮಿಸಿಕೊಂಡ ಮೇಲೆ ಅಲ್ಲಿ ಮೇಯ್‌ಸ್ಕೊಸ್ ಮತ್ತು ಮತಾಂತರ ಹೊಂದಿದ ನಿಗ್ರೋಗಳ ವಿಷಯದಲ್ಲೂ ಇದೇ ನೀತಿಯನ್ನು ಅನುಸರಿಸಲಾಯಿತು. ೧೫೨೦ರ ದಶಕದಲ್ಲಿ ಇದು ಯಶಸ್ವಿಯಾದ ಮೇಲೆ ಸ್ಪೈಯಿನಿನ ವಾತಾವರಣ ತಿಳಿಯಾಯಿತು. ಜನ ಬಹಳ ಸಂತೋಷದಿಂದ ಇದ್ದರು. ಉತ್ತರ ಮತ್ತು ಪೂರ್ವ ಯೂರೋಪ್‌ಗಳು ರಾಷ್ಟ್ರೀಯತೆ ಮತ್ತು ಧಾರ್ಮಿಕ ಸುಧಾರಣೆಗಳೆರಡನ್ನೂ ಬೆರೆಸುವ ಯತ್ನ ನಡೆಸುತ್ತಿದ್ದಾಗ ಸ್ಪೈಯಿನ್ ಬಲಶಾಲಿಯಾಗಿ, ಒಗ್ಗಟ್ಟಿನಿಂದ ಹೊಸ ಖಂಡಗಳನ್ನು ಅವಿಷ್ಕರಿಸುವ ಪ್ರಯತ್ನ ನಡೆಸುತ್ತಿತ್ತು. ಸ್ಪೈಯಿನ್‌ನಲ್ಲಿ ಲೂಥರನ ಚಳವಳಿ ಹಬ್ಬತೊಡಗಿದಾಗ ದಮನಕಾರಿ ಶಕ್ತಿಗಳು ಬೆಳೆಯತೊಡಗಿದವು.

ಇಟಲಿಯ ಕಥೆ ಇದಕ್ಕಿಂತ ಸ್ವಲ್ಪ ಭಿನ್ನವಾಗಿತ್ತು. ಅದು ಬೇರೆ ಬೇರೆ ಪಂಥಗಳನ್ನು, ಪಾಷಂಡಿತನವನ್ನು ಮಧ್ಯಯುಗದ ಕೊನೆಯಲ್ಲಿ ಕಂಡಿತ್ತು. ಆದರೆ ಅವುಗಳನ್ನು ಒಂದಾದ ಮೇಲೊಂದರಂತೆ ಹತ್ತಿಕ್ಕಲಾಯಿತು. ಪ್ರಾಟೆಸ್ಟೆಂಟ್‌ವಾದದೊಂದಿಗೆ ಕಾಪೂಜಿನ್‌ಗಳು, ಥಿಯಾಟಿನ್‌ಗಳು ಮತ್ತು ಜೆಸ್ಯೂಟ್‌ಗಳು ಪ್ರತಿಕ್ರಿಯೆ ಆರಂಭಿಸಿದರು. ವೆನಿಸ್, ಲುಕ್ಕಾ ಮತ್ತು ನೇಪಲ್ಸ್ ಗಳಲ್ಲಿ ಪ್ರಾಟೆಸ್ಟೆಂಟ್ ವಾದ ಬೆಳೆಯಿತು. ೧೫೪೨ರ ಇಂಕ್ವಿಜಿಷನ್‌ನಿಂದ ಅವರು ತಮ್ಮಷ್ಟಕ್ಕೆ ಇರುವ, ವಲಸೆ ಹೋಗುವ ಅಥವಾ ಕೊಲ್ಲಲ್ಪಡುವ ಹಾಗೆ ಆಯಿತು. ಇಟಲಿ ಮತ್ತು ಸ್ಪೈಯಿನ್‌ನಲ್ಲಿ ಕ್ರೈಸ್ತಧರ್ಮದ ಟ್ರಿನಿಟಿ ತತ್ವವನ್ನು ವಿರೋಧಿಸುವವರ ಸಿದ್ಧಾಂತವು ಬಹಳ ಪ್ರಖರವಾಗಿದ್ದರೂ ಅದು ಬೆಳೆಯಲಿಲ್ಲ.

**ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡಿನಲ್ಲಿ ಧಾರ್ಮಿಕ ಸುಧಾರಣೆ**

ಇಂಗ್ಲೆಂಡಿನ ರಾಜ ಎಂಟನೆಯ ಹೆನ್ರಿಗೆ (೧೫೦೯-೧೫೪೭) ತನ್ನ ಹೆಂಡತಿ ಕ್ಯಾಥರೀನಳಿಂದ ಗಂಡು ಮಗು ಆಗಲಿಲ್ಲ. ಮಗಳು ರಾಜ್ಯಕ್ಕೆ ವಾರಸುದಾರಳಾಗಬಹುದಿತ್ತಾದರೂ ಹೆನ್ರಿಗೆ ರಾಜ್ಯಭಾರ ಮಾಡಲು ಮಗನಿಲ್ಲದಿದ್ದರೆ ಆಗಬಹುದಾದ ಕಲಹಗಳ ಅರಿವಿತ್ತು. ಕ್ಯಾಥರೀನಳಿಂದ ಹೆನ್ರಿ ವಿಚ್ಛೇದನ ಪಡೆಯಲು ಬಯಸಿದ. ಆದರೆ ಕ್ಯಾಥರೀನಳು ಏಳನೆಯ ಪೋಪ್ ಕ್ಲೆಮೆಂಟ್‌ನನ್ನು ತನ್ನ ಹತೋಟಿಯಲ್ಲಿಟ್ಟುಕೊಂಡಿದ್ದ ಚಕ್ರವರ್ತಿ ಐದನೆಯ ಚಾರ್ಲ್ಸ್‌ನ ಸಹೋದರಿಯಾಗಿದ್ದಳು. ಆದ್ದರಿಂದ ಹೆನ್ರಿಯು ವಿಚ್ಛೇದನಕ್ಕೆ ಅನುಮತಿ ಕೇಳಿದರೂ ಪೋಪ್ ಕೊಡಲಿಲ್ಲ. ೧೫೩೪ರಲ್ಲಿ ಎಂಟನೆಯ ಹೆನ್ರಿಯು ಪೋಪನ ಅಧಿಕಾರ ವನ್ನು ಧಿಕ್ಕರಿಸಿ, ರಾಜನೇ ಅಧ್ಯಕ್ಷನಾಗಿರುವ ಆಂಗ್ಲಿಕನ್ ಚರ್ಚನ್ನು ಸ್ಥಾಪಿಸಿದ.

ಹೆನ್ರಿಯು ಆಂಗ್ಲಿಕನ್ ಚರ್ಚನ್ನು ಸ್ಥಾಪಿಸಿದ್ದು ಒಂದು ರಾಜಕೀಯ ಕ್ರಿಯೆಯಾದರೂ ಅದು ಧಾರ್ಮಿಕ ಸುಧಾರಣೆಗೆ ಇಂಬುಕೊಟ್ಟಿತು. ಲೊಲ್ಲಾರ್ಡ್‌ಗಳು (ಜಾನ್‌ವೈಕ್ಲಿಫ್‌ನ ಅನುಯಾಯಿಗಳು), ಲೂಥರನ ಪಂಥದವರು ಮತ್ತು ಎರಾಸ್ಮಸ್‌ನ ಅನುಯಾಯಿಗಳು -ಎಲ್ಲರೂ ಸಹ ಧಾರ್ಮಿಕ ಸುಧಾರಣೆಗೆ ತಮ್ಮ ಕಾಣಿಕೆ ನೀಡಿದರು. ಮಠಗಳನ್ನು ಹತ್ತಿಕ್ಕಿದ್ದು, ಬೈಬಲ್ ಅನ್ನು ಬೇರೆ ದೇಶೀಯ ಭಾಷೆಗಳಿಗೆ ಭಾಷಾಂತರ ಮಾಡಿದ್ದು ಮತ್ತು ಚರ್ಚಿನ ಪಾದ್ರಿಗಳಿಗೆ ಮದುವೆಯಾಗುವ ಅನುಮತಿ ನೀಡಿದ್ದು -ಇವುಗಳು ಈ ಎಲ್ಲ ಚಳವಳಿಗಳಿಂದ ಆದ ಮುಖ್ಯ ಬದಲಾವಣೆಗಳು. ಪಾದ್ರಿಗಳಿಗೆ ಮದುವೆಯಾಗುವ ಅನುಮತಿಯನ್ನು ಹಿಂತೆಗೆದುಕೊಳ್ಳಲಾಯಿತಾದರೂ ಸುಧಾರಣೆಗಳಿಗೆ ಪ್ರತಿರೋಧ ಉಂಟಾಗಿದ್ದು ಬಹಳ ಕಡಿಮೆ ಎನ್ನಬಹುದು.

೧೫೪೭ರಲ್ಲಿ ಆರನೆಯ ಎಡ್ವರ್ಡನು ಪಟ್ಟಕ್ಕೆ ಬಂದ ನಂತರ ಸಿದ್ಧಾಂತಗಳು, ಪ್ರಾರ್ಥನೆಯ ರೀತಿ ನೀತಿಗಳು ಎಲ್ಲದರಲ್ಲಿ ಸುಧಾರಣೆಗಳು ಭರದಿಂದ ಸಾಗಿದವು. ಪ್ರಾರ್ಥನಾ ಪುಸ್ತಕ ಇತ್ಯಾದಿಗಳಲ್ಲಿ ಬದಲಾವಣೆಗಳು ಉಂಟಾದರೂ, ಧರ್ಮೋಪದೇಶಕರ ಬಗೆಗಿನ ನೀತಿನಿಯಮಗಳಲ್ಲಿ ಬದಲಾವಣೆ ತರಲು ಇಂಗ್ಲಿಷ್ ಶ್ರೀಮಂತ ವರ್ಗ ಪಾರ್ಲಿಮೆಂಟಿನಲ್ಲಿ ತಡೆ ಒಡ್ಡಿತು.

ಆರನೆಯ ಎಡ್ವರ್ಡ್‌ನ ಮರಣದ ನಂತರ ಕ್ಯಾಥೊಲಿಕ್ ಸಮುದಾಯದ ಮೇರಿ ರಾಜ್ಯವಾಳಲು ಆರಂಭಿದಳು. ಈಕೆ ಅಧಿಕಾರಕ್ಕೆ ಬಂದ ತಕ್ಷಣ ಬಹಳಷ್ಟು ಪ್ರಾಟೆಸ್ಟೆಂಟರು ದೇಶ ಬಿಟ್ಟು ಓಡಿಹೋದರು. ಇನ್ನು ಕೆಲವು ಹುತಾತ್ಮರಾದರು. ಇಂಗ್ಲೆಂಡ್‌ನಿಂದ ಬಹಿಷ್ಕೃತರಾದವರು

ರಾಜಾಧಿಪತ್ಯದ ವಿರುದ್ಧ ದಂಗೆ ಏಳಲು ಜನರನ್ನು ಪ್ರೋತ್ಸಾಹಿಸಿದರು. ಜಿನಿವಾದಲ್ಲಿದ್ದವರಿಗೆ ಒಂದು ಮಾದರಿಯಾದ ಚರ್ಚ್‌ನ ಉದಾಹರಣೆ ಅವರೆದುರಿಗೆ ಇತ್ತು. ಬಹಿಷ್ಕೃತಗೊಂಡವರು ಜಾನ್ ಫಾಕ್ಸ್‌ನ "ಆಕ್ಟ್ಸ್ ಅಂಡ್ ಮಾನ್ಯುಮೆಂಟ್ಸ್" (ಇದು ಬುಕ್ ಆಫ್ ಮಾರ್ಟೈರ್ಸ್ ಎಂದು ಜನಪ್ರಿಯವಾಗಿದೆ) ಮತ್ತು "ಜಿನಿವಾ ಬೈಬಲ್" ಎಂಬ ಪುಸ್ತಕಗಳ ಮೂಲಕ ಧಾರ್ಮಿಕ ಸಿದ್ಧಾಂತಗಳನ್ನು ಪ್ರಭಾವಿಸಿದರು.

೧೫೫೮ರಲ್ಲಿ ಪ್ರಾಟೆಸ್ಟೆಂಟಳಾದ ಒಂದನೆಯ ಎಲಿಜಬೆತ್‌ಳ ಆಳ್ವಿಕೆ ಆರಂಭವಾದಾಗ ಮತ್ತೊಮ್ಮೆ ಸುಧಾರಣಾ ಚಳವಳಿ ಆರಂಭವಾಯಿತು. ಈಕೆ "ಆಕ್ಟ್ ಆಫ್ ಸುಪ್ರಿಮೆಸಿ" ಮತ್ತು "ಆಕ್ಟ್ ಆಫ್ ಯುನಿಫಾರ್ಮಿಟಿ" ಎಂಬ ಎರಡು ಕಾಯ್ದೆಗಳನ್ನು ಜಾರಿಗೆ ತಂದಳು. ಎರಡನೆಯ ಕಾಯ್ದೆಯು ಪಾದ್ರಿಯ ಅಧಿಕಾರ ವ್ಯಾಪ್ತಿಯ ಪ್ರದೇಶಗಳಲ್ಲೆಲ್ಲ ಒಂದೇ ಪ್ರಾರ್ಥನಾ ಪುಸ್ತಕವನ್ನು ಬಳಸಬೇಕೆಂಬ ನಿಯಮವನ್ನು ಜಾರಿಗೆ ತಂದಿತು. ಕ್ಯಾಂಟರ್‌ಬರಿ ಮತ್ತು ಯಾರ್ಕ್‌ನ ಸಭೆಗಳು ಆಂಗ್ಲಿಕನ್ ಧರ್ಮವನ್ನು ೩೯ ಅಂಶಗಳಲ್ಲಿ ವಿವರಿಸಿದವು. ಒಂದೇ ಪ್ರಾರ್ಥನಾ ಪುಸ್ತಕ ಮತ್ತು ಇತರ ಶಿಸ್ತುಗಳನ್ನು ಪಾಲಿಸಲು ಸಾಧ್ಯವಾಗದೇ ಹೋದಾಗ ಸುಧಾರಕರು ತಮ್ಮ ಬೆಂಬಲಕ್ಕಾಗಿ ಪಾರ್ಲಿಮೆಂಟಿನ ಮೊರೆ ಹೋದರು.

**ಜಾನ್‌ನಾಕ್ಸ್‌ನ ಪಾತ್ರ**

ಸ್ಕಾಟ್‌ಲ್ಯಾಂಡ್ ಕಾಲ್ವಿನ್ ಪಂಥದತ್ತ ಸರಿಯಿತು. ಜಾನ್‌ನಾಕ್ಸ್‌ನು ಸ್ಕಾಟ್ಲೆಂಡಿನ ಮೇರಿಯನ್ನು ಧಿಕ್ಕರಿಸಿದ. ಯಾಕೆಂದರೆ ಅವನಿಗೆ ಟ್ಯೂಡರ್‌ನ ಮೇರಿ ಇಂಗ್ಲೆಂಡಿಗೆ ತಂದ ಸ್ಥಿತಿಯನ್ನೇ ಈಕೆ ಸ್ಕಾಟ್ಲೆಂಡಿಗೆ ತರಬಹುದೆಂಬ ಭಯ ಇತ್ತು.

ಜಾನ್‌ನಾಕ್ಸ್‌ನಿಗೆ ಸಾಮೂಹಿಕ ಪ್ರಾರ್ಥನೆ ಆಚರಿಸುವುದು ಸಂಪೂರ್ಣವಾಗಿ ಇಷ್ಟ ವಿರಲಿಲ್ಲ. ಇದು ಅವನಿಗೆ ಪೋಪ್‌ನ ಅಧಿಪತ್ಯ ಮತ್ತು ಕ್ಯಾಥೊಲಿಕ್ ಚರ್ಚ್‌ನ ಬಗ್ಗೆ ಇದ್ದ ತೀವ್ರ ವಿರೋಧವನ್ನು ಸೂಚಿಸುತ್ತದೆ.

ಆದರೆ ಈ ಸಮಯದಲ್ಲಿ ಬಹಳಷ್ಟು ಘಟನೆಗಳು ರೋಮ್‌ನಲ್ಲಿ ನಡೆಯುತ್ತಿದ್ದವು. ೧೫೪೨ರಲ್ಲಿ ಮೂರನೆಯ ಪೋಪ್ ಪಾಲ್ ರೋಮನ್ ಇಂಕ್ವಿಜಿಷನ್ ಅನ್ನು ಸ್ಥಾಪಿಸಿದ. ೪ನೆಯ ಪಾಲ್ ಎರಾಸ್ಮಸ್‌ನ ಎಲ್ಲ ಬರಹಗಳನ್ನು ಬಹಿಷ್ಕೃತ ಕೃತಿಗಳು ಎಂದು ಪಟ್ಟಿ ಮಾಡಿದ. ೧೫೪೫ರ ಟ್ರೆಂಟ್‌ನ ಸಮಾವೇಶ ಕ್ಯಾಥೊಲಿಕ್ ಪಂಥದಲ್ಲಿ ಇನ್ನಷ್ಟು ಬಲವಾದ ಕಟ್ಟುಪಾಡುಗಳನ್ನು ಆಚರಿಸಲು ಕಾರಣವಾಯಿತು.

**ಪ್ಯೂರಿಟಾನಿಸಂನ ಉದಯ**

ಒಂದನೆಯ ಎಲಿಜಬೆತ್ ಸಂಪ್ರದಾಯವಾದಿಯಾಗಿದ್ದರೂ ಧಾರ್ಮಿಕ ಸುಧಾರಣೆ ಈಕೆಯ ಅವಧಿಯಲ್ಲಿ ಬಲವಾಗಿ ನಡೆಯಿತು. ೧೬ನೆಯ ಶತಮಾನದ ಕೊನೆಯ ಭಾಗದಲ್ಲಿ ಹಾಗೂ ೧೭ನೆಯ ಶತಮಾನದ ಆದಿಭಾಗದಲ್ಲಿ ಇಂಗ್ಲಿಷ್ ಸಮಾಜದ ಮೇಲೆ ಪ್ರಾಟೆಸ್ಟೆಂಟರ ಪ್ರಭಾವ ಅಧಿಕವಾಯಿತು. ಈ ಪ್ರಕ್ರಿಯೆಯನ್ನು ಪ್ಯೂರಿಟಾನಿಸಂ (ಧರ್ಮಶುದ್ಧಿವಾದ) ಎಂದು ಹೆಸರಿಸಲಾಗುತ್ತದೆ.

ಎಲಿಜಬೆತ್‌ಳ ಆಡಳಿತ ನೆಲೆಗೊಂಡ ನಂತರ ಪಾದ್ರಿಗಳು ಪ್ರಾರ್ಥನಾ ಸಮಯದಲ್ಲಿ ತಮಗೆ ಇಷ್ಟಬಂದ ಉಡುಪುಗಳನ್ನು ಉಡಲು ಆರಂಭಿಸಿದರು. ಆದರೆ ಇದಕ್ಕೆ ಸಂಪ್ರದಾಯವಾದಿಗಳಿಂದ ಆಕ್ಷೇಪಣೆ ಕಂಡುಬಂದ ನಂತರ, ಈಕೆ ೧೫೬೪ರಲ್ಲಿ ಮ್ಯಾಥ್ಯೂ ಪಾರ್ಕರ್‌ಗೆ ಚರ್ಚ್‌ನ ಪ್ರಾರ್ಥನಾ ವಿಷಯಗಳಲ್ಲಿ ಏಕರೂಪತೆ ತರಲು ಕ್ರಮ ಕೈಗೊಳ್ಳು ವಂತೆ ಸೂಚಿಸಿದಳು. ಪಾರ್ಕರ್ ನಿಗದಿಪಡಿಸಿದ ವೇಷಭೂಷಣಗಳನ್ನು ಉಡದೆ ವಿರೋಧ ವ್ಯಕ್ತಪಡಿಸಿದವರನ್ನು "ಪ್ಯೂರಿಟನ್"ಗಳು ಅಥವಾ "ಪ್ರಿಸಿಶಿಯನ್"ಗಳು ಎಂದು ಕರೆಯಲಾಯಿತು. ಯಾಕೆಂದರೆ ಇವರು ಬಟ್ಟೆ ಬರೆಗಳಂಥ ಸಾಮಾನ್ಯ ವಿಷಯ ಗಳಲ್ಲೂ ರಾಣಿಯ ಆಜ್ಞೆಯನ್ನು ಪಾಲಿಸಲು ನಿರಾಕರಿಸಿದರು. ಮುಂದೆ ಈ ಪ್ಯೂರಿಟನ್ನರಿಂದ ಪ್ರಾಟೆಸ್ಟೆಂಟ್ ನೀತಿಶಾಸ್ತ್ರ ಹುಟ್ಟಲು ಕಾರಣವಾಯಿತು ಎಂದು ಮ್ಯಾಕ್ಸ್ ವೆಬರ್ ಗುರುತಿಸುತ್ತಾನೆ.

೧೫೭೦ರಲ್ಲಿ ಥಾಮಸ್ ಕಾರ್ಟ್‌ವೈಟ್ ಕೇಂಬ್ರಿಜ್ ವಿಶ್ವವಿದ್ಯಾನಿಲಯದಲ್ಲಿ ಚರ್ಚ್ ಸರ್ಕಾರದ ಕುರಿತು ಹಲವಾರು ಉಪನ್ಯಾಸ ನೀಡಿದ. ಈತ ಆರ್ಚ್‌ಬಿಷಪ್ ಮತ್ತು ಬಿಷಪ್ ಇತ್ಯಾದಿಗಳ ವ್ಯವಸ್ಥೆಗಿಂತ ಕ್ರೈಸ್ತಧರ್ಮದ ಹಿರಿಯ ಪಾದ್ರಿಗಳ ನೇತೃತ್ವದ ಸರ್ಕಾರ ಎಂದರೆ ಬಿಷಪ್ ಮತ್ತು ಡೀಕನ್ ಕ್ರೈಸ್ತ ಧರ್ಮಾಧಿಕಾರಿಗಳ ನಡುವಿನ ಶ್ರೇಣಿಯ ಹಿರಿಯ ಪಾದ್ರಿ) ಅಥವಾ ಪಾದ್ರಿಗಳು ಮತ್ತು ಜನಸಾಮಾನ್ಯರ ಸಮೂಹವನ್ನೊಳಗೊಂಡ ಸರ್ಕಾರವು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ ಎಂದು ಪ್ರಸ್ತಾಪಿಸಿದ. ಜಾನ್‌ಫೀಲ್ಡ್ ಮತ್ತು ಥಾಮಸ್ ವಿಲ್‌ಕಾಕ್ಸ್‌ರೂ ಸಹ ಕಾರ್ಟ್‌ವೈಟ್‌ನ ಪ್ರಸ್ತಾಪವನ್ನು ಬೆಂಬಲಿಸಿದರು. ಆದರೆ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಜಾನ್ ವಿಟ್ ಗಿಫ್ಟ್ ರಾಜಪ್ರಭುತ್ವಕ್ಕೆ ಸರಿ ಹೊಂದುವ ಪದ್ಧತಿಯನ್ನು ಬೆಂಬಲಿಸಿದ. ಆದರೆ ಬಹಳಷ್ಟು ಜನ ಪ್ಯೂರಿಟನ್ನರು ಬಿಷಪ್‌ಗಳ ಸರ್ಕಾರ ಪದ್ಧತಿಯನ್ನು ಅನುಮೋದಿಸಿದರು. ಇದರಿಂದ ದೂರಾದ ಕೆಲವು ಜನ ತಮ್ಮ ಪಾದ್ರಿಗಳನ್ನು ತಾವೇ ಆಯ್ಕೆ ಮಾಡಿಕೊಂಡು ಸಭೆಗಳನ್ನು ನಡೆಸಲಾರಂಭಿಸಿದರು. ಇವರನ್ನು "ಪ್ರತ್ಯೇಕವಾದಿಗಳು" ಎಂದು ಕರೆಯಲಾಯಿತು. ರಾಬರ್ಟ್ ಬ್ರೌನ್(ಮರಣ: ೧೬೩೩) ಇವರಲ್ಲಿ ಒಬ್ಬನಾಗಿದ್ದ.

ಬಹಿಷ್ಕೃತನಾಗಿದ್ದ ಕಾರ್ಟ್‌ವೈಟ್ ೧೫೮೫ರಲ್ಲಿ ಇಂಗ್ಲೆಂಡಿಗೆ ಹಿಂದಿರುಗಿದ ನಂತರ ಫೀಲ್ಡ್‌ನ ಜೊತೆ ಸೇರಿ ಪ್ರತ್ಯೇಕವಾದಿಗಳನ್ನು ತಿರಸ್ಕರಿಸಿ, ಬಿಷಪ್‌ಗಳ ನೇತೃತ್ವದ ಸರ್ಕಾರದ ವ್ಯವಸ್ಥೆಯ ಒಳಗೇ ಹಿರಿಯ ಪಾದ್ರಿಗಳ ನೇತೃತ್ವದ ಸರ್ಕಾರವನ್ನು ಸ್ಥಾಪಿಸಲು ಪ್ರಯತ್ನಿಸಿದ. ೧೫೮೩ರಲ್ಲಿ ಜಾನ್ ವಿಟ್‌ಗಿಫ್ಟ್ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಆಗಿ ನೇಮಕವಾದ ನಂತರ ಪ್ರತ್ಯೇಕವಾದಿಗಳ ವಿರುದ್ಧ ಕ್ರಮ ಜರುಗಿಸಿ, ಪ್ಯೂರಿಟನ್ನರ ಪ್ರಮುಖ ನಾಯಕರನ್ನು ಬಂಧಿಸಿದ. ವಿಟ್‌ಗಿಫ್ಟ್‌ನ ಇಂಥ ಕಾರ್ಯನೀತಿ ಮತ್ತು ೧೫೮೮-೯೦ರಲ್ಲಿ ಫೀಲ್ಡ್ ಮುಂತಾದ ಇತರ ನಾಯಕರ ಮರಣ-ಇತ್ಯಾದಿ ಕಾರಣಗಳಿಂದ ಆಂಗ್ಲಿಕನ್ ಚರ್ಚನ್ನು ಪುನರ್‌ರೂಪಿಸಬೇಕೆನ್ನುವ ಪ್ಯೂರಿಟನ್ನರ ಮಹದುದ್ದೇಶ ನೆರವೇರಲಿಲ್ಲ. ಧರ್ಮ ಸುಧಾರಣೆಯ ಶಕ್ತಿಗಳು ಬೇರೆ ಬೇರೆ ರೂಪದಲ್ಲಿ ಚದುರಿಹೋದವು. ಇದರಿಂದ ಆಡಳಿತಾತ್ಮಕ ರಚನೆಯ ಮೇಲೆ ಯಾವ ಪರಿಣಾಮ ಉಂಟಾಗದಿದ್ದರೂ ಬಹಳಷ್ಟು ಜನ ಇನ್ನೂ ಉತ್ಸಾಹದಿಂದ ಸುಧಾರಣೆಯ ಸಂದೇಶವನ್ನು ಹರಡುತ್ತಿದ್ದರಿಂದ ಅದರ ಚೈತನ್ಯ ನಾಶವಾಗದೆ ಉಳಿಯಿತು.

೧೬೦೩ರಲ್ಲಿ ಸ್ಕಾಟ್ಲೆಂಡ್‌ನ ಆರನೆಯ ಜೇಮ್ಸ್‌ನಿಂದ ಸ್ಟುವರ್ಟ್‌ಗಳ ಆಳ್ವಿಕೆ ಆರಂಭ ವಾಯಿತು. ೧೬೦೪ರಲ್ಲಿ ಜೇಮ್ಸ್‌ವಿಟ್‌ಗಿಫ್ಟ್‌ನ ನಂತರ ರಿಚರ್ಡ್ ಬ್ಯಾಂಕ್ರಾಫ್ಟ್‌ನನ್ನು ಕ್ಯಾಂಟರ್‌ಬರಿಯ ಅರ್ಚ್‌ಬಿಷಪ್‌ನನ್ನಾಗಿ ನೇಮಿಸಿದ ಮತ್ತು ಆಂಗ್ಲಿಕನ್ ಚರ್ಚನ್ನು ವಿರೋಧಿಸುತ್ತಿದ್ದ ಗುಂಪುಗಳ ವಿರುದ್ಧ ಕಾನೂನು ಕಟ್ಟಳೆಗಳನ್ನು ರಚಿಸಲು ಹುರಿದುಂಬಿಸಿದ. ಬಹಳಷ್ಟು ಜನ ಪಾದ್ರಿಗಳಿಗೆ ದೊರೆತಿದ್ದ ಸ್ಥಾನಗಳು ಇಲ್ಲದಂತಾದವು. ಕಾನೂನುಗಳನ್ನು ಪಾರ್ಲಿಮೆಂಟಿನಲ್ಲಿ ಪ್ರಸ್ತಾಪಿಸದೇ ಇದ್ದುದರಿಂದ ಪಾರ್ಲಿಮೆಂಟಿನ ಸದಸ್ಯರು ಪ್ಯೂರಿಟನ್ನರನ್ನು ಬೆಂಬಲಿಸಿದರು.

ಬಹಳಷ್ಟು ಪ್ರತ್ಯೇಕತಾವಾದಿ ಗುಂಪುಗಳು ರಾಜಿ ಒಪ್ಪಂದಕ್ಕೆ ಒಪ್ಪುವುದಿಲ್ಲ ಎಂಬುದು ಸ್ಪಷ್ಟವಾದ ನಂತರ ಒಂದು ಸಮೂಹವು ವಲಸೆ ಹೋಗಿ ನಂತರ ೧೬೨೦ರಲ್ಲಿ ಉತ್ತರ ಅಮೆರಿಕಾದಲ್ಲಿ ಪ್ಲೈಮೌತ್ ಕಾಲೋನಿಯನ್ನು ಸ್ಥಾಪಿಸಿತು.

ಕಾಲ್ವಿನ್ ಪಂಥದ ಸಾಮಾನ್ಯ ತತ್ವಗಳು ಪ್ಯೂರಿಟನ್ನರು ಹಾಗೂ ಪ್ಯೂರಿಟನ್ನರಲ್ಲದ ವರನ್ನು ಒಂದುಗೂಡಿಸಿದವು. ಆದರೆ ಇದು ಮೊದಲನೆಯ ಚಾರ್ಲ್ಸ್ ದೊರೆಯ ಕಾಲದಲ್ಲಿ ಛಿದ್ರಗೊಂಡಿತು. ಪ್ರಾರ್ಥನಾ ವಿಧಿಗಳು ಹಾಗೂ ಸಂಘಟನೆಯ ವಿಷಯದಲ್ಲಿ ಪ್ಯೂರಿಟನ್ ವಿರೋಧಿ ತತ್ವಗಳು ಕಾಲ್ವಿನಿಸಂ ವಿರೋಧಿ ತತ್ವಗಳಾಗಿ ಪರಿಣಮಿಸಿ, ಕ್ರಮೇಣ ಇಂಗ್ಲೆಂಡಿನ ಚರ್ಚ್‌ನ ಸಿದ್ಧಾಂತಗಳು ಕಾಲ್ವಿನಿಸಂನಿಂದ ಬೇರ್ಪಟ್ಟು ಕ್ಯಾಥೊಲಿಕ್ ಪಂಥದ ತತ್ವಗಳಿಗೆ ಹತ್ತಿರವಾಗತೊಡಗಿದವು. ೧೬೨೪ರಲ್ಲಿ ರಿಚರ್ಡ್ ಮಾಂಟೆಗ್ಯೂ ಕಾಲ್ವಿನಿಸಂ ಅನ್ನು ಹಾಗೂ ಸಾರ್ವತ್ರಿಕ ಮೋಕ್ಷಕ್ಕಾಗಿ ಆರ್ಮೇನಿಯನಿಸಂ ಅನ್ನು ಪಾಲಿಸುವಂತೆ ಸೂಚಿಸಿದ. ಜೇಕಬ್ ಅರ್ಮೇನಿಯನ್‌ನ (೧೫೬೦-೧೬೦೯) ಅನುಯಾಯಿ ಗಳನ್ನು ಅರ್ಮೇನಿಯನ್‌ಗಳು ಎನ್ನುತ್ತಾರೆ. ಆರ್ಮೇನಿಯಸ್ ಕಾಲ್ವಿನ್ ಸಿದ್ಧಾಂತವನ್ನು, ಅದು ಮನುಷ್ಯನಿಗೆ ಸ್ವಾತಂತ್ರ್ಯದ ಅವಕಾಶ ನೀಡುವುದಿಲ್ಲ ಎಂಬ ಕಾರಣಕ್ಕಾಗಿ ತಿರಸ್ಕರಿಸಿದ. ಆರ್ಮೇನಿಯನ್ನರು ಧರ್ಮಶಾಸ್ತ್ರದಲ್ಲಿ ತರ್ಕ, ವಿವೇಚನೆಗೆ ಪ್ರಾಮುಖ್ಯತೆ ನೀಡಿದರು. ಇಂಗ್ಲೆಂಡಿನ ಆರ್ಮೇನಿಯನ್ನರು ಧಾರ್ಮಿಕ ವಿಧಿಗಳು ಹಾಗೂ ಪ್ರಾರ್ಥನಾ ವಿಧಿಗಳಿಗೆ ಹೆಚ್ಚು ಮಹತ್ವ ನೀಡಿದರು.

೧೬೨೮ರಲ್ಲಿ ಪ್ಯೂರಿಟನ್ನರ ಪ್ರಬಲ ನೆಲೆಯಾದ ಲಂಡನ್ನಿನಲ್ಲಿಯೇ ಪ್ಯೂರಿಟನ್ ವಿರೋಧಿ ಚಟುವಟಿಕೆಗಳು ಆರಂಭವಾದವು. ಇದರಿಂದ ಪ್ರತ್ಯೇಕತಾವಾದಿಗಳಲ್ಲದವರ ಪರಿಸ್ಥಿತಿ ಕಷ್ಟಕರವಾಯಿತು.

೧೬೩೩ರಲ್ಲಿ ಲ್ಯಾಂಡ್ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ ಆದ ನಂತರ ಪ್ರಮುಖ ಹುದ್ದೆಗಳಿಗೆ ಆರ್ಮೇನಿಯನ್ನರನ್ನು ನೇಮಿಸಿದ. ಅವನು ಸ್ಕಾಟ್ಲೆಂಡಿನಲ್ಲಿ ಸಾಮಾನ್ಯ ಪ್ರಾರ್ಥನಾ ಪುಸ್ತಕವನ್ನು ಅಳವಡಿಸಿದ. ಇದರ ಪರಿಣಾಮವಾಗಿ ದಂಗೆಗಳು ಆರಂಭವಾಗಿ ಅಲ್ಲಿ ಪ್ಯೂರಿಟನಿಸಂನ ಪುನರ್‌ಸ್ಥಾಪನೆಗೆ ಕಾರಣವಾಯಿತು. ಚಾರ್ಲ್ಸ್‌ನ ಶಕ್ತಿ ಸ್ಕಾಟ್ ಗಳಿಗೆ ಸರಿಸಮನಾಗಿರಲಿಲ್ಲವಾದ್ದರಿಂದ ಅವರು ಉತ್ತರ ಇಂಗ್ಲೆಂಡ್ ಅನ್ನು ಆಕ್ರಮಿಸಿಕೊಂಡು ಪರಿಹಾರಕ್ಕೆ ಒತ್ತಾಯಿಸಿದರು. ಖಜಾನೆ ಬರಿದಾದಾಗ ಚಾರ್ಲ್ಸ್ ಪಾರ್ಲಿಮೆಂಟಿನ ಅಧಿವೇಶನವನ್ನು ಕರೆದ. ಈ ಸಂದರ್ಭವು ಕಾಲ್ವಿನ್ ಪಂಥದವರಿಗೆ ತಮ್ಮ ಅಸ್ತಿತ್ವವನ್ನು ಸ್ಥಾಪಿಸುವ ಅವಕಾಶ ತಂದುಕೊಟ್ಟಿತು.

ಚಾರ್ಲ್ಸ್ ಆರ್ಮೇನಿಯನ್ನರಿಗೆ ಹೆಚ್ಚು ಅನುಕೂಲಕಾರಿಯಾಗಿಯೇ ಆಗಿ ಮುಂದುವರಿದುದರ ಫಲವಾಗಿ ೧೬೪೨ರಲ್ಲಿ ಆಂತರಿಕ ಯುದ್ಧ ಆರಂಭವಾಯಿತು. ಇದು ಪ್ಯೂರಿಟನ್ ಕ್ರಾಂತಿಯ ಭಾಗವೇ ಆಗಿದ್ದು ಕೊನೆಯಲ್ಲಿ ಪ್ರಾಟೆಸ್ಟೆಂಟ್ ಪಂಥ ಹಾಗೂ ಇಂಗ್ಲಿಷ್ ಸಮಾಜವನ್ನು ಇಬ್ಭಾಗ ಮಾಡಿತು.

ವೆಸ್ಟ್‌ಮಿನಿಸ್ಟರ್‌ನಲ್ಲಿ ಪಾರ್ಲಿಮೆಂಟ್ ನೂರು ಜನ ಪಾದ್ರಿಗಳ ಸಮಿತಿಯ ಸಭೆ ಯನ್ನು ಕರೆಯಿತು. ಅವರು ೧ ಜುಲೈ ೧೬೪೩ರಿಂದ ಐದು ವರ್ಷಗಳ ಕಾಲದ ಸರಿಯಾದ ರೀತಿಯ ಚರ್ಚ್ ಸರ್ಕಾರವನ್ನು ಸ್ಥಾಪಿಸುವುದರ ಬಗ್ಗೆ ಚರ್ಚೆ ನಡೆಸಿದರು. ಅವರು ತಿದ್ದುಪಡಿ ಹೊಂದಿದ ಬಿಷಪ್ ಪ್ರಭುತ್ವದ ಮಾದರಿಯನ್ನು ಅಳವಡಿಸಿಕೊಳ್ಳಬಹುದಾಗಿತ್ತು. ಆದರೆ ಪಾರ್ಲಿಮೆಂಟು ಸ್ಕಾಟ್ಲೆಂಡಿಗೆ ಸಹಾಯ ಮಾಡಬೇಕೆಂದು ನಿರ್ಧರಿಸಿದ್ದರಿಂದ ಪಾದ್ರಿಗಳ ನೇತೃತ್ವದ ಸರ್ಕಾರವನ್ನು ಅನುಮೋದಿಸಿದರು.

೧೬೪೯ರಲ್ಲಿ ಆಲಿವರ್ ಕ್ರಾಮ್‌ವೆಲ್‌ನ ನೇತೃತ್ವದಲ್ಲಿ ಆದ ಬಹುಧರ್ಮೀಯ ಒಪ್ಪಂದವು ಇಂಗ್ಲೆಂಡ್‌ನ ಧಾರ್ಮಿಕ ಸುಧಾರಣೆಯನ್ನು ಬೇರೆಲ್ಲ ದೇಶಗಳ ಸುಧಾರಣೆಗಿಂತ ಹೆಚ್ಚು ಪ್ರಭಾವಶಾಲಿಯಾಗಿಸಿತು. ಚರ್ಚುಗಳು ಹಿರಿಯಪಾದ್ರಿಗಳು, ಬ್ಯಾಪ್ಟಿಸ್ಟರು ಮತ್ತು ಇತರರ ನೇತೃತ್ವದಲ್ಲಿ ನಡೆಯಲಾರಂಭಿಸಿದವು. ಇಂಗ್ಲೆಂಡಿನಲ್ಲಿ ಯಹೂದಿಗಳಿಗೆ ಇರಲು ಅವಕಾಶ ನೀಡಲಾಯಿತಾದರೂ, ರೋಮನ್ ಕ್ಯಾಥೊಲಿಕರಿಗೆ ಹಾಗೂ ಏಕದೇವವಾದಿಗಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವಕಾಶ ಇರಲಿಲ್ಲ. ಪಾರ್ಲಿಮೆಂಟು ಸಾಮಾನ್ಯ ಪ್ರಾರ್ಥನಾ ಪುಸ್ತಕವನ್ನು ಮಾನ್ಯ ಮಾಡಲಿಲ್ಲ. ಆದರೆ ಕ್ವೇಕರ್ಸ್ ಎಂದು ಹೆಸರಾದ ಗೆಳೆಯರ ಗುಂಪು ಶಿಕ್ಷೆಗೆ ಒಳಪಟ್ಟಿದ್ದರಿಂದ ಅದು ಪ್ಯೂರಿಟನ್ನರ ಸುಧಾರಣೆಯ ಮಿತಿಯನ್ನು ಸೂಚಿಸುತ್ತದೆ.

**ಪುನರ್ ನಿರ್ಮಾಣ ಯು (೧೬೬೦–೮೫)**

೧೬೫೮ರಲ್ಲಿ ಕ್ರಾಮ್‌ವೆಲ್‌ನ ಮರಣದ ನಂತರ ಇಂಗ್ಲೆಂಡ್‌ನ ರಾಜ್ಯಾಡಳಿತ ಅಲ್ಲೋಲ ಕಲ್ಲೋಲಗೊಂಡಿತು. ಪ್ಯೂರಿಟನ್ನರೂ ಸಹ ಎರಡನೇ ಚಾರ್ಲ್ಸ್‌ನನ್ನು ಪುನರ್ ಸ್ಥಾಪಿಸಬೇಕೆಂದು ಬಯಸಿದರು. ಅವನು ಕೆಲವು ಬದಲಾವಣೆಗಳನ್ನು ತರಬೇಕೆಂದಿದ್ದರೂ ಬಿಷಪ್‌ಗಳ ಪ್ರಭುತ್ವದ ವಿಷಯದಲ್ಲಿ ಪ್ಯೂರಿಟನ್ನರಿಗೆ ಏನೂ ಮಾಡಲಾಗಲಿಲ್ಲ. ೧೬೬೨ರ ಮೇ ೧೯ರಂದು "ಆ್ಯಕ್ಟ್ ಆಫ್ ಯುನಿಫಾರ್ಮಿಟಿ" ಎಂಬ ಕಾಯಿದೆಯನ್ನು ಕವೇಲಿಯರ್ ಪಾರ್ಲಿಮೆಂಟ್ ಅಂಗೀಕರಿಸಿತು. ಇದಕ್ಕೆ ಬಹಳಷ್ಟು ಪಾದ್ರಿಗಳಿಗೆ ಮತ್ತೊಮ್ಮೆ ಧರ್ಮದೀಕ್ಷೆ ಮತ್ತು ಸಾಮಾನ್ಯ ಪ್ರಾರ್ಥನಾ ಪುಸ್ತಕದ ಸಂಪೂರ್ಣ ಸ್ವೀಕೃತಿ ಅಗತ್ಯವಾಗಿತ್ತು. ೧೬೬೦ ಮತ್ತು ೧೬೬೨ರ ನಡುವೆ ಆ್ಯಕ್ಟ್ ಆಫ್ ಯುನಿಫಾರ್ಮಿಟಿಯನ್ನು ಒಪ್ಪದ ೨೦೦೦ ಪ್ಯೂರಿಟನ್ ಮಂತ್ರಿಗಳನ್ನು ತಮ್ಮ ಸ್ಥಾನಗಳಿಂದ ತೆಗೆದು ಹಾಕಲಾಯಿತು.

ಚಾರ್ಲ್ಸ್‌ನ ತಮ್ಮ, ರೋಮನ್ ಕ್ಯಾಥೊಲಿಕ್ ಪಂಥದ ೨ನೆಯ ಜೇಮ್ಸ್ (೧೬೮೫-೮೮)ನ ಅಲ್ಪಕಾಲದ ಅಧಿಕಾರದ ಅವಧಿಯಲ್ಲಿ ಇಂಗ್ಲಿಷ್ ಪ್ರಾಟೆಸ್ಟೆಂಟರು ಒಂದಾಗಿ ೧೯೮೮ರಲ್ಲಿ "ಗ್ಲೋರಿಯಸ್ ರೆವಲ್ಯೂಷನ್"ನ ಉದಯವಾಯಿತು. ಕೊನೆಯದಾಗಿ ಪ್ಯೂರಿಟನ್ನರ ಎಲ್ಲ ಪ್ರಯತ್ನಗಳಿಗೆ ಪಾರ್ಲಿಮೆಂಟಿನಿಂದಾಗಲಿ ಅಥವಾ ಹೊಸ ರಾಜರಿಂದಾಗಲಿ ಬೆಂಬಲ ಸಿಗಲಿಲ್ಲ. ೧೬೮೯ರ "ಆಕ್ಟ್ ಆಫ್ ಟಾಲರೇಷನ್" ಇಂಗ್ಲೆಂಡಿನ ಧಾರ್ಮಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಿ, ಚರ್ಚನ್ನು ಬಿಷಪ್ ಪ್ರಭುತ್ವದ ಅಡಿಯಲ್ಲಿ ನಿರ್ವಹಿಸುವ

ಹಾಗೂ ವಿರೋಧಿ ಗುಂಪುಗಳಿಗೆ ಅನುಮತಿಯ ಮೂಲಕ ಚರ್ಚುಗಳನ್ನು ನಡೆಸಲು ಅವಕಾಶ ನೀಡಿತು. ಇಂಗ್ಲಿಷ್ ರಾಷ್ಟ್ರವನ್ನು ಇನ್ನೂ ಸುಧಾರಣೆಗೆ ಒಳಪಡಿಸಬೇಕೆಂಬ ಪ್ಯೂರಿಟನ್ನರ ಉದ್ದೇಶವು ಮುಂದೆ ಸಂಪೂರ್ಣವಾಗಿ ಧಾರ್ಮಿಕತಾ ವಾದದ ವೈಯಕ್ತಿಕ ಆಧ್ಯಾತ್ಮಿಕ ಅಗತ್ಯಗಳ ರೂಪದಲ್ಲಿ ಅಥವಾ ವಿಚಾರವಾದಿ ಯುಗದ ಪ್ರಾಪಂಚಿಕ ಅಗತ್ಯಗಳ ರೂಪದಲ್ಲಿ ಪರಿವರ್ತನೆಗೊಂಡಿತು.

**ಉತ್ತರ ಅಮೆರಿಕಾದಲ್ಲಿ ಪ್ಯೂರಿಟನಿಸಂನ ಬೆಳವಣಿಗೆ**

ಪ್ಯೂರಿಟನ್ ಧರ್ಮದ ತತ್ವಗಳು, ಕಾಲ್ವಿನ್ ಸಿದ್ಧಾಂತ ಹಾಗೂ ವ್ಯವಸ್ಥೆಯ ದಬ್ಬಾಳಿಕೆಗಳ ಮಿಶ್ರ ಫಲವಾಗಿ ಪ್ಯೂರಿಟನ್ ಜನಾಂಗಗಳು ವಲಸೆ ಹೋಗತೊಡಗಿದವು. ಉತ್ತರ ಅಮೆರಿಕಾದ ಹಲವಾರು ವಸಾಹತುಗಳು ಇದರ ಫಲವಾಗಿ ಹುಟ್ಟಿದವು. ವರ್ಜೀನಿಯಾದ ಜೇಮ್ಸ್ ಟೌನ್, ಮೆಸಾಚುಸೆಟ್ಸ್ ಕೊಲ್ಲಿ, ಪ್ಲೈಮೌತ್, ಕಾನೆಕ್ಟಿಕಟ್, ನ್ಯೂ ಹೇವನ್, ರೋಡ್ ದ್ವೀಪ, ಪೆನ್ಸಿಸಿಲ್ವೇನಿಯಾ, ಮೇರಿಲ್ಯಾಂಡ್ ಇತ್ಯಾದಿಗಳು ೧೭ನೆಯ ಶತಮಾನದ ಆಧಿಭಾಗದಲ್ಲಿ ಪ್ಯೂರಿಟನ್ನರ ಆಳ್ವಿಕೆಗೆ ಒಳಪಟ್ಟಿದ್ದವು. ಅಮೆರಿಕಾದ ಎಲ್ಲ ವಸಾಹತುಗಳೂ ಪ್ಯೂರಿಟನ್ನರ ಪ್ರಭಾವಕ್ಕೆ ಒಂದಲ್ಲ ಒಂದು ರೀತಿ ಒಳಗಾಗಿದ್ದವು.

**ಧಾರ್ಮಿಕತಾವಾದ**

ಇಂಗ್ಲೆಂಡಿನ ಪ್ಯೂರಿಟನ್ ಸಿದ್ಧಾಂತವು ಬಾಕ್ಸ್‌ಟರ್, ಬೇಯ್‌ಲಿ, ಬನ್‌ಯನ್‌ಗಳ ಕೃತಿಗಳಿಂದ ಯುರೋಪಿನ ಭೂಖಂಡವನ್ನು ತಲುಪಿತು. ಧಾರ್ಮಿಕತೆಯು ಒಂದು ಚಳವಳಿಯಾಗಿ ಹಾಲ್ ವಿಶ್ವವಿದ್ಯಾನಿಲಯಗಳಂಥ ಕೇಂದ್ರಗಳಿಂದ ಶಾಲೆಗಳಿಗೆ, ಪ್ರಾರ್ಥನಾ ಸಮೂಹಗಳಿಗೆ ತಲುಪಿತು. ಇದು ವ್ಯಕ್ತಿಗಳ ಧಾರ್ಮಿಕತೆಗೆ ಹಾಗೂ ಚರ್ಚ್‌ನ ಒಳಗೆ ಇದ್ದ ಗುಂಪುಗಳ ಧಾರ್ಮಿಕತೆಗೆ ಪ್ರೋ ನೀಡಿತು ಮತ್ತು ಪ್ರಾರ್ಥನೆ ಮಾಡುವ, ಬೈಬಲ್ ಅನ್ನು ಓದುವ, ನೈತಿಕ ವಿಷಯಗಳನ್ನು ಪರಿಶೀಲಿಸುವ ಮತ್ತು ಉದಾರ ಕೆಲಸಗಳನ್ನು ಮಾಡುವಂತೆ ಪ್ರೇರೇಪಿಸಿತು. ೧೬೭೫ರಲ್ಲಿ ಫಿಲಿಪ್ ಜೇಕಬ್ ಸ್ಪೆನ್ಸರ್ (೧೬೩೫-೧೭೦೫) ನೀಡಿದ ಧರ್ಮೋಪದೇಶವು ಒಂದು ಗುಂಪನ್ನು ಸ್ಥಾಪಿಸಲು ಕಾರಣವಾಯಿತು. ಈ ಗುಂಪನ್ನು 'ಧಾರ್ಮಿಕ ವಾದಿಗಳು' ಎಂದು ಕರೆಯಲಾಯಿತು. ತನ್ನ 'ಪಿಯಾ ಡೆಸಿಡಿರಿಯಾ' ಎಂಬ ಕೃತಿಯಲ್ಲಿ ಸ್ಪೆನ್ಸರ್ ಅಧಿಕಾರಿವರ್ಗ, ಪಾದ್ರಿಗಳು ಮತ್ತು ಜನಸಮೂಹಗಳೆಲ್ಲವನ್ನೂ ಟೀಕಿಸಿದ ಮತ್ತು ಒಂದು ಪವಿತ್ರ ಚರ್ಚನ್ನು ಸ್ಥಾಪಿಸಲು ಕರೆ ನೀಡಿದ. ೧೬೯೦ಳರಲ್ಲಿ ಸ್ಪೆನ್ಸರ್‌ನಿಂದ ಹಾಲ್‌ನಲ್ಲಿ ಸ್ಥಾಪಿಸಲಾದ ಹೊಸ ವಿಶ್ವವಿದ್ಯಾನಿಲಯವು ಧಾರ್ಮಿಕತೆಯ ಕೇಂದ್ರವಾಯಿತು. ಸ್ಪೆನ್ಸರ್‌ನ ಮರಣದ ನಂತರ ಹರ್ಮನ್ ಫ್ರಾಂಕ್ (೧೬೬೩-೧೭೨೭) ಧಾರ್ಮಿಕತಾ ಚಳವಳಿಯ ಕೇಂದ್ರವಾದ ಹಾಲ್ ವಿಶ್ವವಿದ್ಯಾನಿಲಯದ ಪರಿಸರದಲ್ಲಿ ಬೆಳೆಸಿದ ಸಂಸ್ಥೆಗಳು ಧಾರ್ಮಿಕತೆಯ ಚಳವಳಿಯನ್ನು ಜೀವಂತವಾಗಿಟ್ಟವು.

೧೮ನೆಯ ಶತಮಾನದಲ್ಲಿ ಧಾರ್ಮಿಕತೆಯು ಮಧ್ಯ ಯುರೋಪ್ ಮತ್ತು ಇಂಗ್ಲೆಂಡ್ ಗಳಿಗೆ ಹಬ್ಬಿತು. ಇದರಲ್ಲಿ ಗ್ರಾಫ್‌ವಾನ್ ಜಿಂಗೆಂಡಾರ್ಫ್‌ನ ಪಾತ್ರ ಮುಖ್ಯ ವಾದದ್ದು. ಅವನು "ಕ್ರಿಸ್ತನ ಕ್ಷಮೆಯಲ್ಲಿ ಹೆಚ್ಚಿನ ನಂಬಿಕೆಯನ್ನು ಇಡಬೇಕೆಂದು" ಸೂಚಿಸಿದ. ೧೭೨೨ರಲ್ಲಿ ಜಿಂಗೆಂಡಾರ್ಫ್ ಮೊರೆವಿಯನ್ ನಿರಾಶ್ರಿತರನ್ನು ಸೇರಿಸಿ "ಬೊಹಿಮಿಯನ್ ಬ್ರದರನ್ " ಎಂಬ ಗುಂಪನ್ನು ಹುಟ್ಟುಹಾಕಿದ. ಈ ಮೊರಾವಿಯನ್ನರು ಇಂಗ್ಲೆಂಡಿನಲ್ಲಿ ಕ್ರೈಸ್ತಧರ್ಮ ಪ್ರಚಾರಕ್ಕೆ ಇಂಬುಕೊಟ್ಟರು. ಈ ಮೊರಾವಿಯನ್ನರಲ್ಲಿಯೇ ಒಬ್ಬನಾದ ಜಾನ್‌ವೆಸ್ಲಿಯು "ಮೆಥಾಡಿಸಂ" ಪಂಥವನ್ನು ಆರಂಭಿಸಿದ.

**ಮೆಥಾಡಿಸಂ**

ಮೆಥಾಡಿಸಂ ಪಂಥವು ಈ ಹೆಸರನ್ನು ಪಡೆಯಲು ಅದು ಅನುಸರಿಸಿದ ಬೈಬಲ್‌ನ ಕ್ರಮಬದ್ಧ ಅಧ್ಯಯನ ಮತ್ತು ಶಿಸ್ತುಬದ್ಧ ಪ್ರಾರ್ಥನಾ ವಿಧಾನಗಳು ಕಾರಣವಾದವು. ಇಂಗ್ಲೆಂಡಿನ ಜಾನ್ ವೆಸ್ಲಿಯ ನೇತೃತ್ವದಲ್ಲಿ ಮೆಥಾಡಿಸ್ಟ್ ಪಂಥವು ಒಂದು ಚಳವಳಿಯಾಗಿ ಬೆಳೆಯಿತು. ಅದಕ್ಕೆ ಜರ್ಮನಿಯ ಧಾರ್ಮಿಕವಾದವೂ ಒತ್ತಾಸೆಯಾಗಿತ್ತು. ಜಾನ್ ವೆಸ್ಲಿಯು ವಿದ್ಯಾರ್ಥಿಗಳ ಗುಂಪೊಂದರ ಸದಸ್ಯನಾಗಿ ನಿಯಮಿತವಾಗಿ ಬೈಬಲ್‌ನ ಅಧ್ಯಯನ ಮಾಡುವುದು, ಧಾರ್ಮಿಕ ಸಮಾವೇಶಗಳಲ್ಲಿ ಸತತವಾಗಿ ಭಾಗಿಯಾಗುವುದು ಮತ್ತು ಆರ್ಕ್ಸ್‌ಫರ್ಡ್‌ನ ಕೊಳಕು ಜೈಲುಗಳಿಗೆ ಭೇಟಿ ನೀಡುವುದು ಇತ್ಯಾದಿ ಚಟುವಟಿಕೆ ಗಳಲ್ಲಿ ಭಾಗಿಯಾಗಿದ್ದಾಗ, ಅವನಿಗೆ ಮೆಥಾಡಿಸ್ಟ್

ಪಂಥವನ್ನು ಸ್ಥಾಪಿಸುವ ಯೋಚನೆ ಬಂತು. ನಂತರ ಮೊರಾವಿಯನ್ ಸಮಾವೇಶವೊಂದರಲ್ಲಿ ಅದಕ್ಕೊಂದು ಸ್ಪಷ್ಟ ರೂಪ ಸಿಕ್ಕಿತು. ೧೭೪೪ರಲ್ಲಿ ಉಪದೇಶಕರ ಮೊದಲ ಸಮಾದೇಶವು ಜರುಗಿತು. ಸ್ವಲ್ಪ ದಿನಗಳಲ್ಲೇ ಅದು ಒಂದು ವಾರ್ಷಿಕ ಕಾರ್ಯಕ್ರಮವಾಗಿ ಮೆಥಾಡಿಸ್ಟ್ ಪಂಥದ ನಿರ್ವಾಹಕ ಶಕ್ತಿಯಾಯಿತು. ೧೭೮೪ರಲ್ಲಿ ಅದಕ್ಕೊಂದು ಸಂವಿಧಾನ ರಚನೆಯಾಗಿ ಇಂಗ್ಲೆಂಡಿನ ಚರ್ಚು ಮಾಡಲು ಸಾಧ್ಯವಾಗದೇ ಇದ್ದುದನ್ನು ಸಾಧಿಸುವ ಹಂತಕ್ಕೆ ಬೆಳೆಯಿತು.

೧೭೬೮ರಲ್ಲಿ ಮೆಥಾಡಿಸ್ಟರು ನ್ಯೂಯಾರ್ಕ್‌ನಲ್ಲಿ ಮೊದಲ ಚರ್ಚನ್ನು ಸ್ಥಾಪಿಸಿದರು. ನಂತರ ಈ ಪಂಥವು ಅಮೆರಿಕಾದಲ್ಲಿ ನಿಧಾನಕ್ಕೆ ವ್ಯಾಪಿಸತೊಡಗಿ ಅಲ್ಲಿ ಭದ್ರಸ್ಥಾನ ಪಡೆಯಿತು. ಹಾಗೆಯೇ ಸ್ವಿಟ್ಜರ್‌ಲ್ಯಾಂಡಿನಲ್ಲಿ ಸಹ ತನ್ನ ಪ್ರಭಾವವನ್ನು ಬೀರಲಾರಂಭಿಸಿತು.

ಮೆಥಾಡಿಸಂ ಪಂಥವು, ಪ್ರಾಟೆಸ್ಟೆಂಟ್ ಸಂಪ್ರದಾಯವಾದಿಗಳಿಂದ ನಿರ್ಲಕ್ಷ್ಯಕ್ಕೆ ತುತ್ತಾಗಿದ್ದ ಭಾವನಾ ಪ್ರಧಾನವಾದ ಮತ್ತು ಪ್ರಜ್ಞೆಗೆ ಸಂಬಂಧಿಸಿದ ಅಂಶಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿತು. ದಯೆ ಮತ್ತು ನೈತಿಕ ಶ್ರದ್ಧೆಗಳಿಗೆ ಇವರು ನೀಡಿದ ಪ್ರಾಮುಖ್ಯತೆ ಪ್ಯೂರಿಟನ್ನರಲ್ಲಿ ಇದ್ದರೂ ಈ ವಿಷಯಗಳಿಗೆ ತೀವ್ರ ವಿರೋಧ ಕಂಡುಬಂದಿದ್ದರಿಂದ ನಿಧಾನಕ್ಕೆ ಇವು ಮರೆಯಾದವು. ಇಂಗ್ಲಿಷ್ ಮೆಥಾಡಿಸ್ಟರು ಪ್ರಾಟೆಸ್ಟೆಂಟರಿಗಿಂತ ಆಂಗ್ಲಿಕನ್ ಚರ್ಚ್‌ಗೆ ಹೆಚ್ಚು ಹತ್ತಿರವಾಗತೊಡಗಿದರು. ಇದರಿಂದ ಪ್ರಾರ್ಥನಾ ಸ್ತ್ರೋತ್ರಗಳನ್ನು ಇಂಗ್ಲೆಂಡಿನ ಚರ್ಚುಗಳು, ಧಾರ್ಮಿಕ ಸಮಾವೇಶಗಳು ಮತ್ತು ಬ್ಯಾಪ್ಟಿಸ್ಟರು ಒಪ್ಪುವಂತಾಯಿತು. ಜಾನ್‌ವೆಸ್ಲಿಯು ಕಾಲ್ವಿನ್‌ವಾದಿಯಾಗಿರದಿದ್ದರೂ ವೇಲ್ಸ್‌ನ ಮೇಥಾಡಿಸ್ಟರು ಕಾಲ್ವಿನ್‌ವಾದವನ್ನು ಒಪ್ಪಿಕೊಂಡದ್ದರಿಂದ ಅವರನ್ನು ಕಾಲ್ವಿನ್‌ವಾದಿ ಮೆಥಾಡಿಸ್ಟರು ಎಂದು ಕರೆಯಲಾಯಿತು.

**ವಿಚಾರವಾದ (ಆರ್ಮಿನಿಯನಿಸಂ)**

ಪ್ರಾಟೆಸ್ಟೆಂಟ್ ಪಂಥದ ಮೇಲೆ ವಿಚಾರವಾದದ ಪ್ರಭಾವವನ್ನು ೧೬ನೆಯ ಶತಮಾನದ ಕಾಲ್ವಿನ್‌ವಾದದ ವಿಮರ್ಶೆಯಲ್ಲಿಯೇ ಕಾಣಬಹುದು. ಲೆಯ್‌ಡನ್, ನೆದರ್ಲ್ಯಾಂಡ್ಸ್‌ಗಳಲ್ಲಿ ಜಾಕಬ್ಸ್ ಅರ್ಮಿನಿಯಸ್ (೧೫೬೦-೧೬೦೯)ನು ಕಾಲ್ವಿನ್‌ನ ಪೂರ್ವನಿರ್ಧಾರಿತ ವಿಧಿಯ ಪರಿಕಲ್ಪನೆಯನ್ನು ವಿರೋಧಿಸಿದ. ಕಾಲ್ವಿನ್‌ನನ್ನು ವಿರೋಧಿಸಿದವರೆಲ್ಲರನ್ನೂ ಆರ್ಮಿನಿಯನ್ ಗಳು ಎಂದು ಕರೆಯಲಾಯಿತಾದರೂ ಹಾಲೆಂಡ್ ಮತ್ತು ಇಂಗ್ಲೆಂಡ್‌ನ ಕೆಲವು ಆರ್ಮಿನಿಯನ್ ಗುಂಪುಗಳು ಕಾಲ್ವಿನ್‌ನನ್ನು ವಿರೋಧಿಸುವುದಕ್ಕಿಂತ ಹೆಚ್ಚಾಗಿ ತಮ್ಮ ಧರ್ಮಶಾಸ್ತ್ರದಲ್ಲಿ ಹೆಚ್ಚು ವಿಚಾರವಾದವನ್ನು ಅಳವಡಿಸಿಕೊಂಡಿದ್ದರು.

೧೭ನೆಯ ಶತಮಾನದ ವಿಚಾರವಾದಿ ಚಳವಳಿಯು ತತ್ವಶಾಸ್ತ್ರವನ್ನು(ಬೇಕನ್, ಡೆಕಾರ್ಟೆ ಹೇಳುವಂತೆ) ಧರ್ಮಶಾಸ್ತ್ರಕ್ಕಿಂತ ಬೇರೆಯದಾದ ಹಾಗೂ ಸ್ವತಂತ್ರವಾದ ಶಾಸ್ತ್ರವನ್ನಾಗಿ ರೂಪಿಸಿತು. ಐಸಾಕ್ ನ್ಯೂಟನ್ನನು(೧೬೪೨-೧೭೨೭) ವೈಚಾರಿಕತೆಯ ಶಕ್ತಿಯನ್ನು ಬಳಸಿಕೊಳ್ಳುವಂತೆ ಜನರಿಗೆ ಕರೆನೀಡಿದ. ಸ್ಪಿನೋಜಾ, ಲೈಬ್ನ್ಜ್, ಲಾಕ್ ಮುಂತಾದವರು ಸಹ ವೈಚಾರಿಕತೆಯನ್ನು ಅಳವಡಿಸಿಕೊಳ್ಳುವ ಬಗ್ಗೆ ಗಮನ ನೀಡಿದರು. ಆರಂಭದಲ್ಲಿ ವಿರೋಧ ಕಂಡುಬಂದರೂ ೧೭೫೪ರ ವೇಳೆಗೆ ವಿಚಾರವಾದಿಗಳು ಧಾರ್ಮಿಕವಾದಿಗಳನ್ನು ಮೂಲೆಗುಂಪಾಗಿಸಿದರು.

**ಧಾರ್ಮಿಕ ಸುಧಾರಣೆ ಫಲಿತಾಂಶಗಳು**

ಪ್ರಾಟೆಸ್ಟೆಂಟರ್ ಚಳವಳಿಯ ರೂಪದಲ್ಲಿ ವ್ಯಕ್ತಗೊಂಡ ಕ್ರೈಸ್ತ ಧರ್ಮದ ಸುಧಾರಣಾ ಪ್ರಕ್ರಿಯೆಯು ೧೬ನೆಯ ಶತಮಾನದ ಯುರೋಪಿನಲ್ಲಿ ನಡೆದ ಘಟನೆಗಳಿಗೆ ಸೀಮಿತ ವಾಗಲಿಲ್ಲ. ಅದು ಕ್ಯಾಥೊಲಿಕ್ ಚರ್ಚ್‌ನ ಮೇಲೆ ಪರಿಣಾಮ ಬೀರಿತು. ನಂತರ ಅದು ಕ್ಯಾಥೊಲಿಕ್ ಚರ್ಚನ್ನು ಬಿಟ್ಟವರ ಮೇಲೆಯೂ ಸಹ ಬೇರೆ ಬೇರೆ ಸನ್ನಿವೇಶಗಳಲ್ಲಿ ಪ್ರಭಾವಿಸಿತು. ಜರ್ಮನಿಯ ಮತ್ತು ಸ್ಕ್ಯಾಂಡಿನೇವಿಯಾದ ದೇಶಗಳ ಲೂಥರನ ಚರ್ಚುಗಳು; ಸ್ವಿಟ್ಜರ್ಲೆಂಡ್, ಫ್ರಾನ್ಸ್, ನೆದರ್ಲ್ಯಾಂಡ್ಸ್, ಸ್ಕಾಟ್ಲೆಂಡ್ ಮತ್ತು ಪ್ಯೂರಿಟನ್ನರ ಹೊಸ ಇಂಗ್ಲೆಂಡ್‌ನ ಸುಧಾರಿತ ಚರ್ಚುಗಳು ಮತ್ತು ಆಂಗ್ಲಿಕನ್ ಚರ್ಚು -ಇವು ಮೂರನ್ನೂ ಈ ಪ್ರಕ್ರಿಯೆಯಿಂದ ಉಂಟಾದ ಮೂರು ಮುಖ್ಯ ಧಾರೆಗಳು ಎನ್ನಬಹುದು. ಇದರ ಜೊತೆಗೆ ಬ್ಯಾಪ್ಟಿಸ್ಟ್, ಕ್ವೇಕರ್ಸ್, ಫ್ರೆಂಡ್ಸ್ ಇತ್ಯಾದಿ ಹೆಸರಿನ ಕೆಲವು ಸಣ್ಣ ಪ್ರಮಾಣದ, ಸ್ವತಂತ್ರ

ಕ್ರಿಶ್ಚಿಯನ್ ಗುಂಪುಗಳು ಅದಮ್ಯ ಸ್ವಾತಂತ್ರ್ಯದ ಮನೋಭಾವವನ್ನು ಸೂಚಿಸುವ ಸಣ್ಣ ತೊರೆಗಳನ್ನೂ ಕಾಣಬಹುದು. ೧೯೫೦ರಲ್ಲಿ ಅಮೆರಿಕಾ ಒಂದರಲ್ಲೇ ಸುಮಾರು ೨೫೦ರಷ್ಟು ಇಂಥ ಚರ್ಚುಗಳು, ವರ್ಗಗಳು ಅಥವಾ ಗುಂಪುಗಳು ಇದ್ದವು.

ಕ್ರೈಸ್ತಧರ್ಮದ ಏಕತೆಯ ಸಂದೇಶ ಮತ್ತು ಹೆಚ್ಚು ಸಂಖ್ಯೆಯ ಚರ್ಚುಗಳು ಇವೆರಡು ವೈರುಧ್ಯಗಳ ನಡುವೆಯೂ ಪ್ರಾಟೆಸ್ಟೆಂಟ್ ಚಳವಳಿಯು ಇಡೀ ಕ್ರಿಶ್ಚಿಯನ್ ಚರ್ಚನ್ನು ಸಂಘಟಿಸುವ ನಿಟ್ಟಿನಲ್ಲಿ ಬ್ರಿಟಿಷ್ ಕೌನ್ಸಿಲ್ ಆಫ್ ಚರ್ಚಸ್ ಮತ್ತು ವರ್ಲ್ಡ್ ಕೌನ್ಸಿಲ್ ಆಫ್ ಚರ್ಚಸ್ ಎಂಬಂಥ ಸಂಘಟನೆಗಳನ್ನು ಹುಟ್ಟುಹಾಕಿತು. ೧೩ನೆಯ ಪೋಪ್ ಜಾನ್‌ನ ಆಯ್ಕೆಯ ನಂತರ, ಎರಡನೆಯ ವ್ಯಾಟಿಕನ್ ಕ್ಯಾಥೊಲಿಕ್ ಚರ್ಚ್ ಸಹ ಈ ಚಳವಳಿಯಲ್ಲಿ ಆಸಕ್ತಿ ತೋರಿಸಿತು.

ಧಾರ್ಮಿಕ ಸುಧಾರಣೆಯು, ಅದರಲ್ಲೂ ಮುಖ್ಯವಾಗಿ ಪ್ರಾಟೆಸ್ಟೆಂಟ್ ಗುಂಪುಗಳ ನೇತೃತ್ವದಲ್ಲಿ ನಡೆದ ಧಾರ್ಮಿಕ ಸುಧಾರಣೆಯು, ಮನುಷ್ಯನಲ್ಲಿರುವ ಸ್ವಾತಂತ್ರ್ಯದ ಅಪರಿಮಿತ ಹಂಬಲ, ಚೈತನ್ಯದ ಸಂಕೇತವಾಗಿ ಜಗತ್ತಿಗೆ ಕಂಡುಬಂತು. ಇದನ್ನು ಚಾಡ್ವಿಕ್ ಓವೆನ್ (೧೯೯೦-೨೩) ಹೇಳುವ ಮಾತುಗಳಲ್ಲೇ ಹೇಳಬಹುದು.

ಧಾರ್ಮಿಕ ಸುಧಾರಣೆಯು ಯುರೋಪನ್ನು ಧರ್ಮದ ನೆಲೆಯಲ್ಲಿ ಒಡೆಯಿತಾದರೂ ಸಹಿಷ್ಣುತೆಯನ್ನು ಪಾಲಿಸಲು ಕರೆ ನೀಡಿತು. ಮೊದಲು ಜನ ಇದನ್ನು ಸರಿ ಎಂದು ಒಪ್ಪಲು ತಯಾರಿರಲಿಲ್ಲ. ಧರ್ಮದಲ್ಲಿ ಭಿನ್ನತೆ, ಪಂಗಡಗಳು ಉಂಟಾದರೆ ಸಮಾಜವು ಚದುರಿ ಹೋಗುವುದೆಂದು ಜನ ನಂಬಿದ್ದರು. ಕ್ಯಾಥೊಲಿಕ್ ಪ್ರಜೆಗಳು ಪ್ರಾಟೆಸ್ಟೆಂಟ್ ಪ್ರಭುಗಳಿಗೆ ಹಾಗೆಯೇ ಪ್ರಾಟೆಸ್ಟೆಂಟ್ ಪ್ರಜೆಗಳು ಕ್ಯಾಥೊಲಿಕ್ ಅರಸರಿಗೆ ಹೇಗೆ ಅವಿಧೇಯರಾಗಿದ್ದರು ಎಂಬುದು ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಬೇರೆ ಬೇರೆ ಧರ್ಮಗಳು ಎಂದರೆ ಆಂತರಿಕ ಯುದ್ಧ ಅಥವಾ ಬೇರೆ ಬೇರೆ ರಾಜ್ಯಗಳು ಎಂಬ ಭಾವನೆಯಿತ್ತು. ಆದರೆ ನಿಧಾನಕ್ಕೆ ಅವರಿಗೆ ಪ್ರಪಂಚ ಹೇಗೆ ಬದಲಾಗಿದೆ ಎಂಬುದು ಅರಿವಿಗೆ ಬಂತು. ಹಳೆಯ ಕಾಲದಲ್ಲಿ ರಾಜ್ಯಪ್ರಭುತ್ವ ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಕಠಿಣವಾಗಿರಬೇಕಿತ್ತು. ಈಗಿನ ಪರಿಸ್ಥಿತಿಯಲ್ಲಿ ಅದು ಸಹಿಷ್ಣುತೆಯ ಪಾಠ ಕಲಿಯದಿದ್ದರೆ ತನ್ನ ಪತನಕ್ಕೆ ಸಿದ್ಧವಾಗಿರಬೇಕು.

<u>ಪರಾಮರ್ಶನ ಗ್ರಂಥಗಳು</u>


೧. ಕಾರ್ಲ್ ಆರ್ಮಿನಿಯಸ್ ಬ್ಯಾಂಗ್ಸ್, ೧೯೮೫. **ಎ ಸ್ಟಡಿ ಇನ್ ದಿ ಡಚ್ ರಿಫಾರ್ಮೇಷನ್.**

೨. ಡೇವಿಡ್ ಬ್ಯಾರೆಟ್ ಬಿ.(ಸಂ), ೧೯೮೨. **ವರ್ಲ್ಡ್ ಕ್ರಿಶ್ಚಿಯನ್ ಎನ್‌ಸೈಕ್ಲೊಪೀಡಿಯಾ.**

೩. ವಿಲಿಯಂ ಬಾವ್‌ಸ್ಮಾ ಜೆ., ಜಾನ್ ಕಾಲ್ವಿನ್, ೧೯೮೮. **ಎ ಸಿಕ್ಸ್‌ಟೀನ್ತ್ ಸೆಂಚುರಿ ಪೋರ್ಟ್‌ರೇಟ್.**

೪. ಬೊಡೆನ್ ಸೀಕ್, ಜೂಲಿಯಸ್, ೧೯೬೫. **ದಿ ಎನ್‌ಸೈಕ್ಲೊಪೀಡಿಯಾ ಆಫ್ ದಿ ಲೂಥರನ್ ಚರ್ಚ್.**


## ೯. ಪುನರುಜ್ಜೀವನ ಮಾನವತಾವಾದದ ಅಭಿವ್ಯಕ್ತಿ

“ರಿನೈಸಾನ್ಸ್” ಅಥವಾ ಪುನರುಜ್ಜೀವನ ಎಂಬ ಪದವನ್ನು ಸಾಮಾನ್ಯವಾಗಿ ೧೪ನೆಯ ಶತಮಾನದ ಮಧ್ಯಭಾಗದಲ್ಲಿ ಇಟಲಿಯಲ್ಲಿ ಪ್ರಾರಂಭವಾಗಿ ಯುರೋಪಿನ ಉಳಿದ ಭಾಗಗಳಲ್ಲಿ ಹರಡಿಕೊಂಡ ಒಂದು ಸಾಂಸ್ಕೃತಿಕ ಚಳವಳಿಯನ್ನು ನಿರ್ದೇಶಿಸಲು ಉಪಯೋಗಿಸಲಾಗುತ್ತದೆ. ಮೂಲತಃ ಅದು ಫ್ರೆಂಚ್ ಪದ. ಅದರ ಅಕ್ಷರಶಃ ಅರ್ಥ “ಮರುಹುಟ್ಟು” ಎಂಬುದಾಗಿ. ವ್ಯಕ್ತಿಯ ಜೀವನೇತಿಹಾಸದ ಒಂದು ಅನುಭವದಿಂದ ತೊಡಗಿ, ಒಂದು ಯುಗದ ಸಮಗ್ರ ಸಂಸ್ಕೃತಿಯ ಲಕ್ಷಣದವರೆಗೆ ವ್ಯಾಪಕ ವೈವಿಧ್ಯಮಯ ಅಂಶಗಳಿಗೆ ಈ ಉಕ್ತಿಯನ್ನು ಅಲಂಕಾರಿಕವಾಗಿ ಅನ್ವಯಿಸಲಾಗಿದೆ. ಹೀಗೆ ಎರಡೆರಡೂ ರೀತಿಯಲ್ಲಿ ಬಳಸಿರುವುದು ಗೊಂದಲಕ್ಕೆಡೆಗೊಟ್ಟಿದೆ. ಏಕೆಂದರೆ, ಒಂದು ಕಾಲಾವಧಿಯಾಗಿ ರಿನೈಸಾನ್ಸ್‌ನಲ್ಲಿ ಸಂಭವಿಸಿದುದೆಲ್ಲವೂ ಒಂದು ಸಾಂಸ್ಕೃತಿಕ

ಮುದ್ರೆಯನ್ನು ಹೊತ್ತುಕೊಂಡಿದೆ ಎಂದು ತಪ್ಪಾಗಿ ಭಾವಿಸಲಾಗಿದೆ. ಅದು ೧೪ನೆಯ ಶತಮಾನದಲ್ಲಿ ಫ್ಲಾರೆನ್ಸ್ ನಗರದಲ್ಲಿ ಪ್ರಾರಂಭವಾಯಿತು. ಆಮೇಲೆ ನಿಧಾನವಾಗಿ ಹರಡಿತು. ರಿನೈಸಾನ್ಸ್ ಪರಿಕಲ್ಪನೆಯ ಸುತ್ತಲೂ ಎಷ್ಟು ವ್ಯಾಪಕವಾದ ಭಿನ್ನಾಭಿಪ್ರಾಯಗಳು ಬೆಳೆದು ನಿಂತಿವೆಯೆಂದರೆ, ಕೆಲವು ಸಾರಿ ಅವು ವಿದ್ವಾಂಸರ ಗಮನವನ್ನು ಐತಿಹಾಸಿಕ ವಾಸ್ತವಾಂಶಗಳಿಂದ ಬೇರೆ ಕಡೆಗೆ ಸೆಳೆದು ಬಿಡುವ ಅಪಾಯವಿದೆ. ರಿನೈಸಾನ್ಸ್ ಪರಿಕಲ್ಪನೆಯು ವಿಶೇಷವಾಗಿ ಬಲವಾದ ವಿರೋಧವನ್ನು ಕೆರಳಿಸಿದೆ. ಏಕೆಂದರೆ, ಸಂಸ್ಕೃತಿಯನ್ನು ಜಾಗ್ರತಗೊಳಿಸಬೇಕಾಗಿ ಬಂದ ಮಧ್ಯಯುಗವನ್ನು ಅದು ಹೀನೈಸುತ್ತದೆ.

**ಪರಿಕಲ್ಪನೆಯ ಇತಿಹಾಸ**

ಪುನರ್ಜನ್ಮದ ವಿಚಾರವೇನೂ ಹೊಸದಲ್ಲ. ಏಕೆಂದರೆ ಅದು ಸಾಂಪ್ರದಾಯಿಕ (ಕ್ಲಾಸಿಕಲ್) ಮತ್ತು ಕ್ರಿಶ್ಚಿಯನ್ ಸಾಹಿತ್ಯಕ ಮೂಲಗಳಲ್ಲಿ ಸಾಮಾನ್ಯವಾಗಿತ್ತು. ಗ್ರೀಕ್ ಮತ್ತು ರೋಮನ್ ಪುರಾಣ ಮತ್ತು ಧರ್ಮದಲ್ಲಿ, ವ್ಯಕ್ತಿಗಳಲ್ಲಿ ಹಠಾತ್ತನೆ ಮತ್ತು ಪವಾಡ ಸದೃಶವಾಗಿ ಪುನರುಜ್ಜೀವಿಸುವ ಅನೇಕಾನೇಕ ಸಂದರ್ಭಗಳು ಕಂಡುಬರುತ್ತವೆ. ಇನ್ನೂ ವ್ಯಾಪಕ ಪ್ರಮಾಣದಲ್ಲಿ ಇಡೀ ಸಮೂಹವನ್ನೇ ಹೊಸದುಗೊಳಿಸಬಹುದಾಗಿತ್ತು. ಮರಳಿ ಚಾಲ್ತಿಗೆ ತರಬಹುದಾಗಿದ್ದಿತು. ಕ್ರೈಸ್ತ ಧರ್ಮದೊಂದಿಗೆ ಈ ವಿಚಾರಗಳು ಆಧ್ಯಾತ್ಮಿಕ ಒತ್ತಡವನ್ನು ಪಡೆದುವು. ಇದು ಗಾಸ್ಪೆಲ್‌ಗಳ ಕಾಲದಿಂದ ಕ್ರಿಸ್ತನ ಆತ್ಮದ ಪುನರ್ಜನ್ಮವನ್ನು ಸೂಚಿಸಿತು. ಹೀಗೆ ಪ್ರಾಚೀನತೆಯು ಮಧ್ಯಯುಗಕ್ಕೆ ಒಂದು ಜಾತ್ಯತೀತ ಸಂಪ್ರದಾಯವನ್ನು ಬಳುವಳಿಯಾಗಿ ನೀಡಿತು. ಹಾಗೆಯೇ ಇನ್ನೊಂದು ಪರಂಪರೆ, ವ್ಯಕ್ತಿಯ ಮತ್ತು ಸಮಾಜದ ಅವತರಣ ಮತ್ತು ಪುನರುತ್ಥಾನ ಇವುಗಳನ್ನು ಕ್ರೈಸ್ತಧರ್ಮದಿಂದ ಪಡೆದುಕೊಂಡಿತು.

ಅಂತೂ ೧೪, ೧೫ ಮತ್ತು ೧೬ನೆಯ ಶತಮಾನಗಳಲ್ಲಿ ಸಂಸ್ಕೃತಿಯ ಪುನಶ್ಚೇತನದ ಪರಿಕಲ್ಪನೆ ಪ್ರಾರಂಭವಾಯಿತು. ಇಟಲಿಯ ವಿದ್ವಾಂಸರು ಮತ್ತು ಬರಹಗಾರರನ್ನು ಮಾನವತಾವಾದಿಗಳು ಎಂದು ಕರೆಯಲಾಗಿತ್ತು. ಮಾನವನಿಗೆ ಸಂಬಂಧಪಟ್ಟ ಎಲ್ಲವನ್ನೂ, ಅಂದರೆ ಮಾನವಿಕ ವಿಷಯಗಳ ಅಧ್ಯಯನದಲ್ಲಿ ಅವರು ತೊಡಗಿದ್ದರಿಂದ ಅವರನ್ನು ಮಾನವತಾವಾದಿಗಳೆಂದು ಕರೆಯಲಾಯಿತು. ಪ್ರಾಚೀನ ವಿಚಾರಗಳನ್ನು ೧೬ನೆಯ ಶತಮಾನದಲ್ಲಿ ಪುನರ್ ಸಂಶೋಧಿಸಲಾಯಿತು ಮಾತ್ರವಲ್ಲದೆ, ಗ್ರೀಕರಿಗಾಗಲಿ ರೋಮನರಿಗಾಗಲಿ ತಿಳಿದಿರದಿದ್ದ ಅನೇಕ ಸಾಧನೆಗಳು ಈ ಯುಗಕ್ಕೆ ಹೆಚ್ಚಿನ ಕಾಂತಿಯನ್ನು ಒದಗಿಸಿದವು. ನೂತನ ಭೂಪ್ರದೇಶಗಳನ್ನೂ ಜನರನ್ನೂ ಕಂಡುಹಿಡಿಯಲಾಯಿತು. ಮುದ್ರಣ ಮತ್ತು ಸಿಡಿಮದ್ದುಗಳಂತಹ ಆವಿಷ್ಕಾರಗಳು ಘಟಿಸಿದುವು. ಕ್ರೈಸ್ತ ಧರ್ಮಶೀಲತೆಗೆ ಮತ್ತು ಕ್ರೈಸ್ತ ಧರ್ಮದ ವಿಜಯಗಳಿಗೆ ಹೆಚ್ಚಿನ ಅವಕಾಶಗಳು ದೊರೆತುದಕ್ಕೆ ಆಧಾರಗಳಿರುವಂತೆ ತೋರುತ್ತದೆ.

೧೪ ಮತ್ತು ೧೫ನೆಯ ಶತಮಾನದ ಇಟಾಲಿಯನ್ ಪುನರುಜ್ಜೀವನದ ಕಾಲದಲ್ಲಿ ಇತಿಹಾಸ ಮತ್ತು ಐತಿಹಾಸಿಕ ಬೆಳವಣಿಗೆಯ ಒಂದು ನೂತನ ಪರಿಕಲ್ಪನೆಯು ಉದಿಸಿತು. ಪೆಟ್ರಾರ್ಕನಿಗೆ ರೋಮ್ ಇನ್ನೂ ಆದರ್ಶವಾಗಿದ್ದಿತು. "ಇತಿಹಾಸವೆನ್ನುವುದು ರೋಮಿನ ಪ್ರಶಂಸೆಯಲ್ಲದೆ ಬೇರೆ ಇನ್ನೇನು?" ಎಂದು ಅವನು ಕೇಳಿದನು. ಆದರೆ ರೋಮನ್ ಸಾಮ್ರಾಜ್ಯವು ಅಸ್ತವ್ಯಸ್ತವಾಗಿತ್ತು, ಶಿಥಿಲವಾಗಿತ್ತು, ಬರ್ಬರರ ಕೈಗೆ ಸಿಕ್ಕಿ ಹೆಚ್ಚು ಕಡಿಮೆ ಕ್ಷೀಣಿಸಿಹೋಗಿತ್ತು. ಅನಂತರ ಬಂದದ್ದು ಕತ್ತಲಯುಗ. ಈ ಶೋಚನೀಯ ಪರಿಸ್ಥಿತಿಯು ಬದಲಾವಣೆಗೊಳ್ಳದಿದ್ದರೂ ಪೆಟ್ರಾರ್ಕ್ ಆಶಾವಾದಿಯಾಗಿದ್ದನು. ಪೆಟ್ರಾರ್ಕ್‌ನ ಸಮಕಾಲೀನನಾಗಿದ್ದ ಬೋಕಾಸಿಯೋ, ಡಾಂಟೆಯ ಉದಯದಿಂದಾಗಿ ಬೆಳಕಿನ ಮೊದಲ ಕಿರಣವನ್ನು ಕಂಡನು. ೧೫ನೆಯ ಶತಮಾನದ ವೇಳೆಗೆ, ರೋಮಿನ ಪತನದ ಬೆನ್ನಹಿಂದೆಯೇ ಕಾಣಿಸಿಕೊಂಡ ಸುದೀರ್ಘ ಕತ್ತಲಯುಗದ ಸ್ಪಷ್ಟ ಚಿತ್ರವು ಮೂಡಿತ್ತು. ಅದರೊಳಗಿನಿಂದಲೇ, ಪ್ರಜ್ಞಾಪೂರ್ವಕವಾಗಿ ಪ್ರಾಚೀನರ ವಿಚಾರಗಳು ಮತ್ತು ಮೌಲ್ಯಗಳನ್ನೇ ಮತ್ತೆ ಹಿಡಿಯುವ ಮೂಲಕ ವರ್ತಮಾನ ಸ್ಥಿತಿಯು ಉದಯಿಸಿತು.

**ಬರ್ಕ್‌ಹಾರ್ಟ್, ಮಿಚೆಲ್ ಮತ್ತು ಪುನರುಜ್ಜೀವನದ ಮೂಲ–೧೯ನೆಯ ಶತಮಾನದ ದೃಷ್ಟಿಗಳು**

೧೪ ಮತ್ತು ೧೫ನೆಯ ಶತಮಾನಗಳಲ್ಲಿ ನಡೆದ ಸಂಸ್ಕೃತಿಯ ಪುನರುಜ್ಜೀವನದ ಈ ಪರಿಕಲ್ಪನೆಯು ತಿಳಿವಳಿಕೆಯ ಕಾಲದಲ್ಲಿ ನೂತನ ಆಸಕ್ತಿಯನ್ನು ಉತ್ಪತ್ತಿ ಮಾಡಿತು. ಆದರೆ ನಿರ್ದಿಷ್ಟ ಕಾಲಾವಧಿಯಾಗಿ ರಿನೈಸಾನ್ಸ್ ಬಗೆಗೆ ಇನ್ನು ಕೆಲವೇ ಸೂಚನೆಗಳು ಕಂಡುಬಂದಿದ್ದುವು. ಪ್ರಾಚೀನತೆಯ ಪುನರುಜ್ಜೀವನದಿಂದಾಗಿ ಪಾಶ್ಚಾತ್ಯ ನಾಗರಿಕತೆಗೆ ಇತ್ಯಾತ್ಮಕವಾದ ಕೊಡುಗೆಯು ಸಂದಿದೆ ಎಂಬ

ವಿಚಾರವು ಹರಳುಗಟ್ಟಿದ್ದು ೧೯ನೆಯ ಶತಮಾನದಲ್ಲಿ ಅಷ್ಟೆ. ಬೌದ್ಧಿಕ ಮತ್ತು ಸಾಂಸ್ಕೃತಿಕ ಇತಿಹಾಸದ ವಿಶಾಲ ದೃಷ್ಟಿಗಳು, ಕಲೆ ಮತ್ತು ಸಾಹಿತ್ಯ ಇತಿಹಾಸಕಾರರಿಗೆ, ಅವರ ಕ್ಷೇತ್ರಗಳಿಗೂ ಸಮಗ್ರ ಇಟಾಲಿಯನ್ ಸಮಾಜಕ್ಕೂ ಇದ್ದಿರಬಹುದಾದ ಸಂಬಂಧಗಳನ್ನು ಕುರಿತು ಮನನ ಮಾಡಲು ಅವಕಾಶವನ್ನು ಕಲ್ಪಿಸಿದುವು. ಜಾನ್ ರಸ್ಕಿನ್ ಅಂತಹ ವಿಮರ್ಶಕರು, ಪುನರುಜ್ಜೀವನ ಕಾಲವನ್ನು ಕಲೆಯ ಇತಿಹಾಸದಲ್ಲಿ ಒಂದು ನಿರ್ದಿಷ್ಟವಾದ ಖಚಿತ ಕಾಲಾವಧಿ ಎಂದು ವರ್ಣಿಸಿದರು. ಈ ಮಧ್ಯೆ ಜರ್ಮನಿಯಲ್ಲಿ, ಮಾನವತಾವಾದ ಎಂಬ ಪದವನ್ನು, ಒಂದು ಬೌದ್ಧಿಕ ಚಳವಳಿಯನ್ನು ಸೂಚಿಸುವಂತೆ ಬಳಸಲಾಯಿತು. ಅದರ ಪ್ರಾಮುಖ್ಯವು ಕ್ಲಾಸಿಕಲ್ ಶೈಲಿಯ ಮರುಕಳಿಕೆ ಎನ್ನುವುದಕ್ಕಿಂತಲೂ ಬಹಳ ಮುಂದೆ ಹೋಯಿತು. “ದಿ ರಿವೈನಲ್ ಆಫ್ ಕ್ಲಾಸಿಕಲ್ ಆ್ಯಂಟಿಕ್ವಿಟಿ”(೧೮೫೯) ಎಂಬ ಜಾರ್ಗ್‌ವಾಯ್ಟನ ಕೃತಿಯು ಹ್ಯೂಮನಿಸ್ಟರನ್ನು, ವ್ಯಕ್ತಿ ವಿಶಿಷ್ಟತೆಯ ಲಕ್ಷಣವುಳ್ಳ ಒಂದು ನೂತನ ಸಾಹಿತ್ಯಕ ಸಂಸ್ಕೃತಿಯ ಪ್ರತಿನಿಧಿಗಳು ಎಂಬುದಾಗಿ ಪರಿಗಣಿಸಿತು. ವಾಯ್ಟನ ಕೃತಿಯು ಒಂದು ಮಹತ್ವಪೂರ್ಣವಾದ ಅಧ್ಯಯನವಾದರೂ ಅದು ರಿನೈಸಾನ್ಸ್ ಪರಿಕಲ್ಪನೆಯನ್ನು ಹಿಂದಕ್ಕೆ ಒಯ್ದಿತು. ಏಕೆಂದರೆ, ಅದು ಹ್ಯೂಮನಿಸ್ಟರ ಹಳೆಯ ಪರಂಪರೆಯಾಗಿತ್ತು. ತಮ್ಮ ಸಮಾಜದಲ್ಲಿರುವ ಇತ್ಯಾತ್ಮಕವಾದ ಸಮಸ್ತವನ್ನೂ ಅವರು ಸಾಹಿತ್ಯದ ಪುನಶ್ಚೇತನಕ್ಕೆ ಆರೋಪಿಸಿದ್ದರು. ಅದಕ್ಕೆ ಅವರೇ ಹೊಣೆಗಾರರಾಗಿದ್ದರು. ಈ ದಿಸೆಯಲ್ಲಿ ದಾರಿಹಾಕಿ ಕೊಟ್ಟವನು. ಜಿ.ಡಬ್ಲ್ಯೂ ಎಫ್. ಹೆಗಲ್. ಅವನು ಕ್ಲಾಸಿಕಲ್ ಪುನಶ್ಚೇತನವನ್ನು ದರ್ಶಿಸಿ, ಅದೊಂದು ನೂತನವಾದ ಉದಾರ ಐತಿಹಾಸಿಕ ಯುಗದ ಅಭಿವ್ಯಕ್ತಿ ಎಂಬಂತೆ ಕಲ್ಪಿಸಿಕೊಂಡನು.

ರಿನೈಸಾನ್ಸ್‌ನ್ನು ಪ್ರಾಚೀನ ಜಗತ್ತಿನ ಮೌಲ್ಯಗಳ ಪುನರ್ ಜಾಗೃತಿ ಅಥವಾ ಮರುಜನ್ಮ ಎಂಬಂತೆ ನೋಡಿದ್ದೇ ಕ್ಲಾಸಿಕಲ್ ಆಯಿತು; ವಿಶೇಷವಾಗಿ, ಫ್ರೆಂಚ್ ಇತಿಹಾಸಕಾರ ಜೂಲ್ಸ್ ಮಿಚೆಲೆ ಮತ್ತು ಸ್ವಿಸ್ ಜಾಕೋಬ್ ಬರ್ಕ್‌ಹಾರ್ಟ್ ಇವರು ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಅದನ್ನು ರೂಪಿಸಿದ ಮೇಲೆ ಹಿಸ್ಟರಿ ಆಫ್ ಫ್ರಾನ್ಸ್ ಎಂಬ ತನ್ನ ಕೃತಿಯ ರಿನೈಸಾನ್ಸ್ ಎಂಬ ಏಳನೆಯ ಸಂಪುಟದಲ್ಲಿ ಮಿಚೆಲೆಯು ಪುನರುಜ್ಜೀವನವನ್ನು ಕುರಿತ ಆಧುನಿಕ ದೃಷ್ಟಿಯಲ್ಲಿ ಅಡಗಿರುವ ಬಹುತೇಕ ಅಂಶಗಳನ್ನು ಪ್ರಸ್ತಾಪಿಸಿದನು. ಅದು ನಿಸರ್ಗವನ್ನೂ ವಿಜ್ಞಾನವನ್ನೂ ನಿಷೇಧಿಸಿದ್ದ, ಮನುಷ್ಯನು ತನ್ನ ಸ್ವಾತಂತ್ರ್ಯವನ್ನು ತೊರೆದುಕೊಂಡಿದ್ದ ಮಧ್ಯಯುಗಕ್ಕೆ ವಿರುದ್ಧವಾದದ್ದು ಎಂದು ಅವನು ಹೇಳಿದನು. ಆಮೇಲೆ ಕೊಲಂಬಸ್‌ನಿಂದ ಕೋಪರ್ನಿಕಸ್ ಮತ್ತು ಗೆಲಿಲಿಯೋವರೆಗೆ ಮನುಷ್ಯನು ಭೂಮಿಯಿಂದ ಸ್ವರ್ಗದವರೆಗಿನ ಸಂಶೋಧನೆ ಮಾಡಿ ಮರಳಿ ತನ್ನಲ್ಲಿಗೇ ಹಿಂದಿರುಗಿದನು. ತನ್ನದೇ ಆತ್ಮವನ್ನು ಸಂಶೋಧಿಸುವುದರಲ್ಲಿ ಉದ್ಯುಕ್ತನಾದನು. ಮಿಚೆಲೆಗೆ ಮನುಷ್ಯನ ನೈತಿಕ ಸ್ವರೂಪವನ್ನು ಒಳಹೊಕ್ಕ ಮಾರ್ಟಿನ್ ಲೂಥರ್ ಮತ್ತು ಜಾನ್ ಕ್ಯಾಲ್ವಿನ್ ಹೇಗೆ ರಿನೈಸಾನ್ಸ್‌ಗೆ ಸೇರಿದ ವ್ಯಕ್ತಿಗಳೋ ಹಾಗೆಯೇ ನಿಸರ್ಗವನ್ನೂ ವಿಚಾರವನ್ನೂ ಕಲೆಯೊಂದಿಗೆ ಹೊಂದಾಣಿಕೆಗೊಳಿಸಿದ ಫಿಲಿಪೋ ಬುನೆಲೆಸ್ಚಿ ಮತ್ತು ಲಿಯೊನಾರ್ಡೊ ಡ ವಿಂಚಿಯಾಗಲಿ ಪ್ರಾಚೀನತೆಯ ಜ್ಞಾನವನ್ನು ಮರಳಿ ಉಜ್ಜೀವಿಸಿದ ಮಾನವತಾವಾದಿಗಳಾಗಲಿ ರಿನೈಸಾನ್ಸ್‌ಗೆ ಸೇರಿದವರೇ. ಒಂದು ಸುಪ್ರಸಿದ್ಧ ಉಕ್ತಿಯಲ್ಲಿ ಅವನು ರಿನೈಸಾನ್ಸನ್ನು ಕುರಿತು ಹೀಗೆ ಹೇಳಿದನು; ಅದು “....ಜಗತ್ತಿನ ಸಂಶೋಧನೆ ಮತ್ತು ಮಾನವನ ಸಂಶೋಧನೆ”. ರಿನೈಸಾನ್ಸ್ ಎನ್ನುವುದು ಕೇವಲ ಒಂದು ಸಾಂಸ್ಕೃತಿಕ ಪುನರುಜ್ಜೀವನವಾಗದೆ, ಅದಕ್ಕಿಂತ ಹೆಚ್ಚಿನದು ಎಂದು ಹೇಳಿದ ಮೊತ್ತಮೊದಲನೆಯ ಇತಿಹಾಸಕಾರ ಮಿಚೆಲೆ. ವಾಸ್ತವವಾಗಿ ಅದು ಆಧುನಿಕ ಜಗತ್ತಿನ ಪ್ರಾರಂಭವನ್ನು ಕಂಡ ಐತಿಹಾಸಿಕ ಕಾಲವಾಯಿತು. ಮಿಚೆಲೆಯು ತನ್ನ ಗಮನವನ್ನು ಕೇಂದ್ರೀಕರಿಸಿದ್ದು ೧೫ನೆಯ ಶತಮಾನದ ಇಟಲಿಯಿಂದ ೧೬ನೆಯ ಶತಮಾನದ ಫ್ರಾನ್ಸಿನವರೆಗೆ. ೧೯ನೆಯ ಶತಮಾನದ ಉದಾರವಾದೀ ಫ್ರೆಂಚ್ ರಾಷ್ಟ್ರೀಯತೆ ಯಿಂದ ಸಮಗ್ರ ಪ್ರಭಾವಕ್ಕೆ ಒಳಪಟ್ಟ ಮಿಚೆಲೆಯು, ಯೂರೋಪನ್ನು ಮಧ್ಯಯುಗದ ಮಠೀಯ ಮತ್ತು ಊಳಿಗ ಬಂಧನದಿಂದ ವಿಮೋಚನೆಗೊಳಿಸಿದ ಫ್ರೆಂಚ್ ರಾಷ್ಟ್ರವನ್ನು ಚಿತ್ರಿಸಿದನು, ಅದು ತಾನೂ ತೊಡರಿಕೊಂಡಿದ್ದ ಸಮಕಾಲೀನ ಹೋರಾಟದ ಉಲ್ಲೇಖ ವಾಗಿತ್ತು.

ಬರ್ಕ್‌ಹಾರ್ಟನು ರಿನೈಸಾನ್ಸನ್ನು ಕುರಿತು ತಳೆದ ದೃಷ್ಟಿಯು ಮೂಲಭೂತವಾಗಿ ಮಿಚೆಲೆಯದಕ್ಕಿಂತ ಭಿನ್ನವಾಗಿತ್ತು. ಅದು ಶುದ್ಧಾಂಗವಾಗಿ ಇಟಾಲಿಯನ್ ಆಗಿತ್ತು. ಆ ಮೂಲಕ ಅವನು ಹಳೆಯ ಸಂಪ್ರದಾಯಕ್ಕೆ ಹಿಂದಿರುಗಿದನು. ಅವನಿಗೆ ಮಧ್ಯಯುಗವನ್ನು ಕುರಿತು ವಿರೋಧವಿರಲಿಲ್ಲ. ರಿನೈಸಾನ್ಸ್ ಅವನ ಪ್ರಕಾರ ಮಧ್ಯಯುಗವೂ ಅಲ್ಲ, ಆಧುನಿಕ ಯುಗದ ಪ್ರಾರಂಭವೂ ಅಲ್ಲ, ಅದು ೧೪ನೆಯ ಶತಮಾನದಲ್ಲಿ ಪ್ರಾರಂಭವಾಗಿ ೧೬ನೆಯ ಶತಮಾನದಲ್ಲಿ ಕೊನೆಗೊಂಡ ನಿರ್ದಿಷ್ಟ ಕಾಲಾವಧಿ. ಅವನ ಅಮೋಘವಾದ ನಿರ್ಬಂಧ 'ಡೀ ಕುಲ್ಟರ್ ಡೆರ್ ರಿನೈಸಾನ್ಸ್ ಇಮನ್ ಇಟಾಲಿಯೆನ್'' (ದಿ ಸಿವಿಲೈಸೇಷನ್ ಆಫ್ ದಿ ರಿನೈಸಾನ್ಸ್ ಇನ್ ಇಟಲಿ-೧೮೬೦). ಈ ನೂತನ

ನಾಗರಿಕತೆಯ ವಿಭಿನ್ನ ಮಾನಸಿಕ ಲಕ್ಷಣಗಳಲ್ಲಿ ಅವನಿಗೆ ಆಸಕ್ತಿಯಿದ್ದರೂ, ಅದರ ಎಲ್ಲಾ ಮುಖಗಳ ಆಂತರ್ಯದಲ್ಲಿ ಒಂದು ಏಕತೆಯ ಸೂತ್ರವು ಹಾಯ್ದಿರುವುದನ್ನು ಗುರುತಿಸುವನು. ವ್ಯಕ್ತಿ ವಿಶಿಷ್ಟತೆಯ ತತ್ವದ ತನ್ನ ವ್ಯಾಖ್ಯಾನದ ಸುತ್ತಲೂ ಉಜ್ವಲ ನಾಗರಿಕತೆಯ ತನ್ನ ಚಿತ್ರವನ್ನು ಕಟ್ಟಿದನು. ಅವನ ವಿವರಣೆಯ ಪ್ರಕಾರ, ೧೪ನೆಯ ಶತಮಾನದ ಇಟಲಿಯಲ್ಲಿನ ರಾಜಕೀಯ ಪರಿಸ್ಥಿತಿಯು ನೂತನ ಧೋರಣೆಯ ಬೆಳವಣಿಗೆಗೆ ತಕ್ಕ ಪರಿಸ್ಥಿತಿಯನ್ನು ಒದಗಿಸಿತ್ತು. ಚಕ್ರವರ್ತಿಗಳಿಗೂ ಪೋಪರಿಗೂ ನಡುವೆ ನಡೆದ ಬಲವಾದ ಹೋರಾಟಗಳು ಅವರನ್ನು ಸಂಪೂರ್ಣವಾಗಿ ಒಣಗಿಸಿ, ಬರಿದುಮಾಡಿಬಿಟ್ಟುವು, ಬಳಲಿಸಿದುವು. ಇಟಲಿ ಒಂದು ಹೊಸ ಪರಿಸ್ಥಿತಿಗೆ ಸಿಲುಕಿತು. ಫ್ಯೂಡಲಿಸಂ ಪಶ್ಚಿಮದಲ್ಲಿ ಬದಲಾವಣೆ ಹೊಂದಿ ಚಕ್ರಾಧಿಪತ್ಯಗಳಾಗಿ ರೂಪುಗೊಳ್ಳುತ್ತಿದ್ದಿತು. ಇಟಲಿಯೂ ಅನೇಕ ಸ್ವತಂತ್ರ ದೇಶಗಳೊಂದಿಗೆ ಒಂದಾಯಿತು. ಅವುಗಳಲ್ಲಿ ಕೆಲವು ಹಳೆಯವು, ಕೆಲವು ಈಚಿನವು, ಕೆಲವು ನಿರಂಕುಶಾಧಿಕಾರ ದಲ್ಲಿದ್ದವು, ಕೆಲವು ಗಣರಾಜ್ಯಗಳು, ಆದರೂ ಪ್ರತಿಯೊಂದೂ ಸ್ವತಂತ್ರವಾಗಿತ್ತು, ಅದರ ಮೇಲೆ ದಬ್ಬಾಳಿಕೆ ನಡೆಸುವ ಇನ್ನೊಂದು ಪ್ರಭುತ್ವವಿರಲಿಲ್ಲ. ಅಧಿಕಾರಕ್ಕೆ ಮಾತ್ರವೇ ಬೆಲೆಯಿದ್ದ ಈ ದೇಶಗಳಲ್ಲಿ ಬರ್ಕ್‌ಹಾರ್ಟನು "ಯೂರೋಪಿನ ಆಧುನಿಕ ರಾಜಕೀಯ ಸತ್ವವನ್ನು" ಕಂಡನು. ಅದು "ಕಡಿವಾಣವೇ ಇಲ್ಲದ ಅಹಂಕಾರದ ಕೆಟ್ಟ ಲಕ್ಷಣಗಳನ್ನು" ಪ್ರದರ್ಶಿಸುತ್ತಿದ್ದಿತು. ಆದರೆ ".....ರಾಜ್ಯವನ್ನು ಒಂದು ಕಲಾಕೃತಿಯಾಗಿ ರೂಪಿಸುತ್ತಿದ್ದಿತು." ಇಲ್ಲಿ ಅಧಿಕಾರವು ವ್ಯಕ್ತಿಗತ ಸಾಮರ್ಥ್ಯದ ಒಂದು ಕಾರ್ಯವಾಗಿದ್ದಿತೇ ಹೊರತು ಶಾಸನ ಬದ್ಧವಾದ ಅಧಿಕಾರವಾಗಿರಲಿಲ್ಲ. ರಾಜಕೀಯ ರೂಪಗಳು ಶಾಸನ ಮತ್ತು ಸಂಪ್ರದಾಯ ಗಳಿಂದ ಮೂಡಿಬಂದಿರದೆ, ವ್ಯಕ್ತಿಗಳು ಆ ಸಂದರ್ಭಕ್ಕೆ ತಕ್ಕಂತೆ ರೂಪಿಸಿದವಾಗಿದ್ದುವು. ರಾಜ್ಯವು ಚಿಂತನೆಯ ಮತ್ತು ಲೆಕ್ಕಾಚಾರದ ಫಲವಾಗಿದ್ದ ಸಮಯದಲ್ಲಿ ರಚಿತವಾಗಿದ್ದವು. ಬರ್ಕ್‌ಹಾರ್ಟ್ ಬರೆದನು:

*ರಿನೈಸಾನ್ಸಿನ ಏಕಮಾತ್ರ ಹಾಗೂ ಅತಿಮುಖ್ಯ ಲಕ್ಷಣವು ಈ ರಾಜ್ಯಗಳ ಲಕ್ಷಣಗಳಲ್ಲಿ ಅಂತರ್ಗತವಾಗಿದೆ. ಪುನರುಜ್ಜೀವನದ ಮುಖ್ಯ ಲಕ್ಷಣ ವ್ಯಕ್ತಿಗತತ್ವ. ವ್ಯಕ್ತಿಯ ವಿಕಾಸದಿಂದಾಗಿ.... ಜಗತ್ತಿನ ಸಂಶೋಧನೆ ಹಾಗೂ ಮಾನವನ ಸಂಶೋಧನೆಗಳು ಸಾಧ್ಯವಾದವು.*

ಮಿಚೆಲ್ ಬೌದ್ಧಿಕ ಸಾಧನೆಯ ಮೇಲೆ ಒತ್ತುಕೊಟ್ಟರೆ ಬರ್ಕ್‌ಹಾರ್ಟನು ಅದಕ್ಕೆ ಒಂದು ಸಾಮಾಜಿಕ ಮತ್ತು ರಾಜಕೀಯ ರುಚಿಯನ್ನು ಸೇರಿಸಿದನು. ಬರ್ಕ್‌ಹಾರ್ಟನಿಗೆ ಅದು ಪ್ರಾಚೀನತೆಯ ಪುನರುತ್ಥಾನ ಮಾತ್ರವಾಗಿರಲಿಲ್ಲ. ಇಟಾಲಿಯನ್ ಜನತೆಯ ಪ್ರತಿಭೆಯೊಂದಿಗೆ ಸಮ್ಮಿಲನ. ಅದು ಪಾಶ್ಚಾತ್ಯ ಪ್ರಪಂಚದ ವಿಜಯವನ್ನು ಸಾಧಿಸಿದೆ. ಮಿಚೆಲೆಯ ರಾಷ್ಟ್ರೀಯತೆಯನ್ನಾಗಲಿ, ಮಧ್ಯಯುಗದ ಬಗೆಗೆ ವಿರೋಧವನ್ನಾಗಲಿ ಬೆಳೆಸಿಕೊಳ್ಳದೆ ಬರ್ಕ್‌ಹಾರ್ಟನು ತನ್ನದೇ ರಾಷ್ಟ್ರೀಯತಾ ಪ್ರವೃತ್ತಿಗಳನ್ನು ಮಂಡಿಸಿದನು.

**ಇಪ್ಪತ್ತನೆಯ ಶತಮಾನದ ದೃಷ್ಟಿಕೋನಗಳು**

ಮಧ್ಯಯುಗವೆಂದರೆ ಕತ್ತಲ ಮತ್ತು ಬರ್ಬರ ಯುಗ ಎಂಬ ದೃಷ್ಟಿ ಬಹಳ ಕಾಲ ಮುಂದುವರಿಯಿತು. ಮಧ್ಯಯುಗದ ಸಾಧನೆಗಳ ವಿಷಯವಾಗಿ ಉತ್ತಮ ತಿಳುವಳಿಕೆ, ಉತ್ತಮವಾದ ಅರಿವು ದೊರಕಿ ಈ ದೃಷ್ಟಿಯು ಈಗ ಬದಲಾಗಿದೆ. ಇತಿಹಾಸದ ನಿರ್ದಿಷ್ಟ ಕ್ಷೇತ್ರವನ್ನು ಅವಲಂಬಿಸಿ ಕೆಲವು ಇತಿಹಾಸಕಾರರು ಬೇರೆ ಬೇರೆ ರೀತಿಯ ಕಾಲವರ್ಗವನ್ನು ಸೂಚಿಸಿದ್ದಾರೆ. ಸಮಾಜ ರಚನೆಯ ಇತಿಹಾಸಕಾರರು ೧೪ರಿಂದ ೧೮ನೆಯ ಶತಮಾನದವರೆಗಿನ ಕಾಲವನ್ನು ಊಳಿಗಮಾನ್ಯೋತ್ತರ ಅಂದರೆ ಕ್ರಾಂತಿ ಪೂರ್ವ ಸಮಾಜದ ಕಾಲಾವಧಿ ಎಂದು ಕಂಡಿದ್ದಾರೆ. ವಿಚಾರಗಳ ಇತಿಹಾಸಕಾರರು ೧೭ನೆಯ ಶತಮಾನದ ವೈಜ್ಞಾನಿಕ ಕ್ರಾಂತಿಯು ಆಧುನಿಕ ಇತಿಹಾಸದ ಪ್ರಾರಂಭ ಎಂದು ಹೇಳುತ್ತಾರೆ. ಏಕೆಂದರೆ ಇಂದಿನ ನಮ್ಮ ನಾಗರಿಕತೆಗೆ ತಳಹದಿಯಾದ ಒಂದು ಚಿಂತನ ವಿಧಾನವನ್ನು ಒದಸಿಗಿತು. ಇನ್ನು ಇತರ ಇತಿಹಾಸಕಾರರು ಸುಧಾರಣೆಯಲ್ಲಿ ಅಂಥದೇ ಪ್ರಾರಂಭವನ್ನು ಗುರುತಿಸಿದ್ದಾರೆ.

ಕೆಲವು ಆರ್ಥಿಕ ಇತಿಹಾಸಕಾರರು, ವಿಶೇಷವಾಗಿ ಮಾರ್ಕ್ಸ್‌ವಾದಿಗಳು ೧೫ನೆಯ ಶತಮಾನದ ಕೊನೆಯ ಹಾಗೂ ೧೬ನೆಯ ಶತಮಾನದ ಮೊದಲಿನ ದಶಕಗಳು, ಬಂಡವಾಳಶಾಹಿ, ಬೂರ್ಷ್ವಾತನ, ಫ್ಯೂಡಲೇತರ ಮಾರುಕಟ್ಟೆ ಬಲವುಳ್ಳ ವರ್ಗದ ವಿಕಾಸದಲ್ಲಿ ನಿರ್ಣಾಯಕವಾದವು ಎಂದು ಭಾವಿಸುತ್ತಾರೆ. ಈ ಆರ್ಥಿಕ ಇತಿಹಾಸಕಾರರಲ್ಲೇ ಒಮ್ಮತವಿಲ್ಲ. ನಿರ್ದಿಷ್ಟವಾಗಿ ಮಾರ್ಕ್ಸಿಸ್ಟರು ಫ್ಯೂಡಲಿಸಂ ಎಂಬ ಪದದ ವಿಷಯದಲ್ಲಿ ಗೊಂದಲಗಳನ್ನು ಸೃಷ್ಟಿಸಿದ್ದಾರೆ. ಅದನ್ನು ಅವರು ೯ ರಿಂದ ೧೩ನೆಯ ಶತಮಾನದವರೆಗಿನ

ಕಾಲಾವಧಿಯನ್ನು ಸೂಚಿಸಲು ಬಳಸುತ್ತಾರೆ. ಸ್ವಾಮಿಭಕ್ತಿ ಮತ್ತು ಸೈನಿಕ ಸಹಾಯ ಇವುಗಳ ಮೇಲೆ ಹಾಗೂ ಊಳಿಗ, ದಾಸ್ಯಗಳ ಮೇಲೆ ಅವಲಂಬಿಸಿದ ಒಂದು ಸಮಾಜ ರಚನೆಗೂ ಅದನ್ನು ಉಪಯೋಗಿಸುತ್ತಾರೆ. ದೊಡ್ಡ ಭೂಮಾಲಿಕರ ಪ್ರಾಧಾನ್ಯವುಳ್ಳ, ರೈತರಿಗೆ ದುಡಿಮೆಯಲ್ಲಿ ಸ್ವಾತಂತ್ರ್ಯ ವಿಕಾಸ, ಅವರು ಆರ್ಥಿಕವಾಗಿಯೂ ಸಾಮಾಜಿಕ ವಾಗಿಯೂ ಜಮೀನುದಾರರನ್ನು ಅವಲಂಬಿಸಿದ ಯಾವುದೇ ಒಂದು ಸಮಾಜವನ್ನು ಒಳಗೊಳ್ಳುವಂತೆ ಫ್ಯೂಡಲಿಸಂ ಎಂಬ ಪದವನ್ನು ಅವರು ವಿಸ್ತರಿಸಿದ್ದಾರೆ.

ಇನ್ನೊಬ್ಬ ಇತಿಹಾಸಕಾರ ಹಾನ್ಸ್ ಬೇರನ್, ಮಾನವತಾವಾದದ ರಾಜಕೀಯ, ಸಾಮಾಜಿಕ ಮತ್ತು ಐತಿಹಾಸಿಕ ಚಿಂತನೆಯ ಮೂಲ ಸ್ವರೂಪವನ್ನು ಮೌಲ್ಯಮಾಪನ ಮಾಡುವಲ್ಲಿ ಸಂಪೂರ್ಣವಾಗಿ ಬರ್ಕ್‌ಹಾರ್ಟನಿಗೆ ವಿರುದ್ಧವಾದ ನೆಲೆಯನ್ನು ತೋರಿಸುತ್ತಾನೆ. ರಿನೈಸ್ಸಾನ್ಸ್ ಸಂಸ್ಕೃತಿಗೆ ಕಾರಣ, ನಿರಂಕುಶ ರಾಜರ ಆಶ್ರಯಕ್ಕಿಂತಲೂ ಗಣರಾಜ್ಯ ಸ್ವಾತಂತ್ರ್ಯದ ಅನುಭವ ಎಂದು ಅವನು ಪರಿಗಣಿಸಿದನು. ಇನ್ನೂ ಬೇರೆ ಬೇರೆ ರಾಷ್ಟ್ರಗಳ ಸಂಸ್ಕೃತಿಗಳ ವಿಕಾಸವು ಸಮಾನಾಂತರವಾಗಿ ನಡೆಯಿತು ಎಂದು ಇತರ ಕೆಲವರು ಒತ್ತಾಯಪೂರ್ವಕವಾಗಿ ಹೇಳುತ್ತಾರೆ. ಅವರು ಹೇಳುವಂತೆ, ಫ್ರೆಂಚ್, ಜರ್ಮನ್ ಮತ್ತು ಒಂದು ಔತ್ತರೇಯ ಪುನರುಜ್ಜೀವನವು ಸಂಭವಿಸಿತು.

ಬರ್ಕ್‌ಹಾರ್ಟನನ್ನು ಕುರಿತ ಸಾಮಾನ್ಯ ಟೀಕೆ ಇದು. ಆತ ಹೇಳುವ ರಿನೈಸಾನ್ಸ್ ತೀರಾ ಹಠಾತ್ತನೆ ಕಾಣಿಸಿಕೊಳ್ಳುತ್ತದೆ, ತೀರಾ ತೀವ್ರವಾಗಿ ಮಧ್ಯಯುಗದಿಂದ ಬೇರೆಯಾಗುತ್ತದೆ. ಇದಕ್ಕೆ ಬದಲಾಗಿ ವ್ಯಾಲೇಸ್ ಕೆ.ಫರ್ಗ್ಯುಸನ್, ರಿನೈಸಾನ್ಸನ್ನು ಮಧ್ಯಯುಗ ಮತ್ತು ಆಧುನಿಕ ಯುಗದ ನಡುವಣ ಸಂಧಿಕಾಲ ಎಂದು ವರ್ಣಿಸುತ್ತಾನೆ. ಆಗ ಫ್ಯೂಡಲ್ ಮತ್ತು ಮಧ್ಯಯುಗೀನ ಮಠೀಯತೆಯ ಅಂಶಗಳು ನಿಧಾನವಾಗಿ, ಆದರೆ ಸ್ಥಿರ ಗತಿಯಲ್ಲಿ ಪರಿವರ್ತನೆಗೊಳ್ಳುತ್ತಿದ್ದುವು. ಮೊದಲು ಇಟಲಿಯಲ್ಲಿ, ಆಮೇಲೆ ಯೂರೋಪಿನ ಇತರ ಭಾಗಗಳಲ್ಲಿ.

ಇವೆಲ್ಲ ನ್ಯಾಯಸಮ್ಮತವಾದ ದೃಷ್ಟಿಗಳೇ. ಇವುಗಳ ಬಹುತ್ವವು ಇತಿಹಾಸ ರಚನಾ ಶಾಸ್ತ್ರದ ಒಂದು ಸಾಧನ ಎಂಬಂತೆ ಎಚ್ಚರಿಕೆಯನ್ನು ನೀಡಿದೆ. ಇತಿಹಾಸಜ್ಞರು ತಮ್ಮ ಬಳಿ ಇರುವ ಸಾಮಗ್ರಿಯನ್ನು ವ್ಯವಸ್ಥಿತಗೊಳಿಸಿ, ಸರಿಯಾಗಿ ಗ್ರಹಿಸಲು ಉಪಯೋಗಿಸಿದ ಒಂದು ವಿಧಾನವಷ್ಟೆ ಹೊರತು ಅದು ಐತಿಹಾಸಿಕ ಪ್ರಕ್ರಿಯೆಲ್ಲೇ ಅಂತರ್ಗತವಾದ ಒಂದು ವಿನ್ಯಾಸವಲ್ಲ. ಯೂರೋಪಿನ ಬಹುತೇಕ ಇತಿಹಾಸಕಾರರು ಹ್ಯೂಮನಿಸ್ಟ್ ಯೋಜನೆಗೆ ಜೋತುಹಾಕಿಕೊಂಡಿದ್ದಾರೆ. ಹೆಚ್ಚೆಂದರೆ, ಅನೇಕ ವೇಳೆ ಅದನ್ನು ತಮ್ಮ ಪೂರ್ವಕಲ್ಪನೆ ಗಳಿಗನುಗುಣವಾಗಿ ಅಥವಾ ಮೌಲ್ಯನಿರ್ಣಯಕ್ಕನುಗುಣವಾಗಿ ಬದಲಾಯಿಸಿರಬಹುದು. ಸಾಗರೋತ್ತರ ಪ್ರದೇಶಗಳಲ್ಲಿ ಯೂರೋಪಿನ ವಿಸ್ತರಣದ ಅಧ್ಯಯನವು ೧೫ನೆಯ ಶತಮಾನದ ಕೊನೆಯ ಹಾಗೂ ೧೬ನೆಯ ಶತಮಾನದ ಮೊದಲ ಯೂರೋಪಿಯನ್ ಇತಿಹಾಸದಲ್ಲಿ ನಿರ್ಣಾಯಕ ಬದಲಾವಣೆಯ ಪರಿಕಲ್ಪನೆಯನ್ನು ಖಂಡಿತವಾಗಿಯೂ ಬಲಪಡಿಸಿದೆ. ಜಾಗತಿಕ ಇತಿಹಾಸಕ್ಕೆ ಸಂಬಂಧಿಸಿದಂತೆ, ಯೂರೋಪಿಯನ್ನರು ನೇರವಾಗಿ ರಾಜಕೀಯ ಪ್ರಭುತ್ವವನ್ನು ಸಾಧಿಸಿದ್ದ ಯುಗವು ಇಂದು ಕೊನೆಗೊಂಡಿದೆ. ಈಗ ಆ ಯುಗವನ್ನು ನಿರ್ದಿಷ್ಟ ಕಾಲಾವಧಿಯನ್ನಾಗಿ ಗುರುತಿಸಬಹುದು. ಇವೆಲ್ಲದರಿಂದ ಒಂದು ವಿಚಾರವು ಸ್ಪಷ್ಟವಾಗುವಂತೆ ತೋರುತ್ತದೆ. ವಿದ್ವಾಂಸರು ಎಷ್ಟೇ ಉತ್ಸಾಹದಿಂದ ಆಕ್ಷೇಪಣೆಗಳನ್ನು ಎತ್ತಿದರೂ, ರಿನೈಸಾನ್ಸಿನ ವಿಚಾರವಾಗಲಿ, ಆ ಪದವಾಗಲಿ ಐತಿಹಾಸಿಕ ಶಬ್ದ ಭಂಡಾರದಿಂದ ಕಣ್ಮರೆಯಾಗುವ ಲಕ್ಷಣವನ್ನು ತೋರುವುದಿಲ್ಲ.

**ಇಟಲಿಯ ರಿನೈಸಾನ್ಸ್**

ಪಶ್ಚಿಮದಲ್ಲಿ ರೋಮ್ ಸಾಮ್ರಾಜ್ಯವು ಪತನ ಹೊಂದಿದ ಕ್ಷಣದಿಂದಲೇ ಯೂರೋಪಿಯನ್ ಸಮಾಜದಲ್ಲಿ, ಕಳೆದು ಹೋದ ಪ್ರಾಚೀನ ಜಗತ್ತಿನ ನೆನಪುಗಳು, ಅದರ ವೈಭವದ ಕೆಲವು ಅಂಶಗಳನ್ನಾದರೂ ಮರಳಿ ಗಳಿಸಬೇಕೆಂಬ ಬಲವಾದ ಭಾವನೆ ಇವು ಹೆಚ್ಚಾಗಿ ನೆಲೆಗೊಂಡಿದ್ದುದು ವ್ಯಕ್ತವಾಯಿತು. ಮತ್ತೆ ಮತ್ತೆ ಅನೇಕ "ಪುನರುಜ್ಜೀವನ" ಗಳಾಗಿ ಅನುಕರಣೆಯ ಹಂಬಲವು ಮನುಷ್ಯನನ್ನು ನೂತನ ಸಾಧನೆಗಳ ಕಡೆಗೆ ಪ್ರಚೋದಿಸಿತು.

ಮಧ್ಯಯುಗದ ಕೊನೆಯ ಯೂರೋಪಿಯನ್ ಸಮಾಜವು ಇನ್ನೂ ಮೂಲತಃ ಕೃಷಿ ಸಮಾಜವೇ ಆಗಿತ್ತು. ಶೇಕಡಾ ೧೦ ಅಥವಾ ಹೆಚ್ಚೆಂದರೆ ಶೇ.೧೫ಕ್ಕಿಂತಲೂ ಕಡಿಮೆ ಜನರು ನಗರಗಳಲ್ಲಿ ಜೀವಿಸುತ್ತಿದ್ದರು. ಬಹುತೇಕ ನಗರಗಳು ಚಿಕ್ಕವು. ಈ ದೃಷ್ಟಿಯಿಂದ, ಒಂದು

ಸಾವಿರ ವರ್ಷ ಹಿಂದಿನ ಗ್ರೀಕೋ-ರೋಮನ್ ಸಮಾಜದ ಇಸ್ಲಾಮಿಕ್, ಭಾರತೀಯ ಅಥವಾ ಚೀನಾ ಸಮಾಜಕ್ಕಿಂತ ಯೂರೋಪಿಯನ್ ಸಮಾಜವು ತುಂಬಾ ಬೇರೆಯೇನೂ ಆಗಿರಲಿಲ್ಲ. ೧೪ನೆಯ ಶತಮಾನದಲ್ಲಿ ಅನೇಕ ಊಳಿಗಮಾನ್ಯ ವ್ಯವಸ್ಥೆಗಳು ಕೇಂದ್ರೀಕೃತ ಚಕ್ರಾಧಿಪತ್ಯಗಳಾಗಿ ಪರಿವರ್ತಿತವಾಗುತ್ತಿದ್ದಾಗ, ಇಟಲಿಯು ಅನೇಕ ಸ್ವತಂತ್ರ ರಾಜ್ಯಗಳ ಪಂಕ್ತಿಯಲ್ಲಿ ಸೇರಿತು. ಈ ೨೦೦ ಅಥವಾ ೩೦೦ ಸ್ವತಂತ್ರ ಕಮ್ಯೂನು ಗಳು ಪ್ರಾಚೀನತೆಯ ರೋಗಕ್ಕೆ ಬಲಿಯಾದುವು, ದೊಡ್ಡವು ಚಿಕ್ಕವನ್ನು ನುಂಗಿದುವು. ಇದರ ಫಲವಾಗಿ, ನಿರಂತರ ಕಾದಾಟ, ರಾಜ್ಯ ವಿಸ್ತರಣಕ್ಕಾಗಿ ಯುದ್ಧ ಇಲ್ಲವೇ ಆಕ್ರಮಣದ ಭೀತಿಯ ಹಿನ್ನೆಲೆಯಲ್ಲಿ ಮೈತ್ರಿಗಳು ಅಥವಾ ಸಾಮಂತರಾಗಿರುವ ಒಪ್ಪಂದಗಳು ಸಂಭವಿಸಿದವು.

ಅವಿರತ ಜನಕ್ಷೋಭೆಗೆ ಪರಿಹಾರವನ್ನು ಕಂಡುಹಿಡಿಯಲು ಸಾಧ್ಯವಾಗದೆ ಇಟಲಿಯು ೧೪ನೆಯ ಶತಮಾನದಲ್ಲಿ ಗಣರಾಜ್ಯದಿಂದ ಏಕಾಧಿಪತ್ಯಕ್ಕೆ ಪರಿವರ್ತಿತವಾಗಲು ಬಯಸಿತು. ಸಿಗ್ನೋರ್, ಗಣ್ಯ ಅಥವಾ ಪ್ರಭುವು ಸಾಮಾನ್ಯವಾಗಿ ಸ್ಥಳೀಯ ಫ್ಯೂಡಲ್ ಕುಟುಂಬಕ್ಕೆ ಸೇರಿದವನು. ಬರ್ಕ್‌ಹಾರ್ಟ್ ಹೇಳುವುದಕ್ಕೆ ವಿರುದ್ಧವಾಗಿ ಪ್ರಜಾಸತ್ತೆಗಿಂತ ಮಿಗಿಲಾಗಿ ಆನುವಂಶೀಯ ನಾಯಕತ್ವವು ಅಂದಿನ ಸಾಮಾನ್ಯ ಸಂಗತಿಯಾಗಿತ್ತು. ದಕ್ಷಿಣದಲ್ಲಿ ವಿಶೇಷತಃ ನೇಪಲ್ಸಿನಲ್ಲಿ ಫ್ಯೂಡಲಿಸಂ ಭದ್ರವಾಗಿ ತಳವೂರಿತು. ಮಧ್ಯ ಮತ್ತು ಉತ್ತರ ಇಟಲಿಯನ್ನು ಫ್ಯೂಡಲ್ ಒಡೆತನ ಮತ್ತು ರಾಜಪ್ರಭುತ್ವ ಮೌಲ್ಯಗಳು ಮಧ್ಯಕಾಲೀನ ಸಮುದಾಯ ವ್ಯವಸ್ಥೆಗಳೊಂದಿಗೆ ಕೂಡಿ ವಿಶಿಷ್ಟವಾದ ರಿನೈಸಾನ್ಸ್ ಪರಿಸ್ಥಿತಿಯು ಕಾಣಿಸಿ ಕೊಂಡಿತು. ಅದು ಪರಸ್ಪರ ಸಂಘರ್ಷಿಸುವ ಪ್ರವೃತ್ತಿಗಳ ನಡುವಣ ಹೊಂದಾಣಿಕೆಯಾಗಿತ್ತು. ಫ್ಲಾರೆನ್ಸ್‌ನ ಟಸ್ಕನ್ ನಗರದಲ್ಲಿ ನೋಬಲರನ್ನು ರಾಜಕೀಯದಿಂದ ಹೊರಗಿಡಲಾಯಿತು. ಸಿಯೆನಾ, ಪೀಸಾ, ಲುಕ್ಕಾಗಳಲ್ಲೂ ಕೂಡ ಪಾರ್ಲಿಮೆಂಟರಿ ಗಣರಾಜ್ಯ ವ್ಯವಸ್ಥೆ ಹೆಚ್ಚು ಕಾಲ ಉಳಿಯಿತು. ವೆನಿಸ್ ತನ್ನ ಹೆಜ್ಜೆಯನ್ನು ಹಿಂದಕ್ಕೆ ತಿರುಗಿಸಿ, ಕೌನ್ಸಿಲುಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಿತು. ಅಲ್ಲಿ ಎಂದೂ ಫ್ಯೂಡಲ್ ಗಣ್ಯ ವರ್ಗವಿರಲಿಲ್ಲ; ವಣಿಕ ಶ್ರೀಮಂತವರ್ಗವು ಆನುವಂಶಿಕ ಪ್ರಭುತ್ವವನ್ನು ಉಳಿಸಿಕೊಂಡು ಬಂದಿತ್ತು.

ರಿನೈಸಾನ್ಸ್ ನಗರ ರಾಜ್ಯಗಳು ನೂತನ ಮತ್ತು ಸಾಂಪ್ರದಾಯಿಕ ಅಂಶಗಳೆರಡನ್ನೂ ಒಳಗೊಂಡಿದ್ದುವು. ಬದಲಾಗುತ್ತಿದ್ದ ರಾಜಕೀಯ ಮತ್ತು ಆರ್ಥಿಕ ದೃಶ್ಯದಿಂದ ಸರಕಾರವು ಬಾಧಿತವಾಯಿತು. ಇನ್ನೊಂದು ಕಡೆ ಮಾನವತಾವಾದದ ವಿಕಾಸವು ಪೌರತ್ವ, ದೇಶಭಕ್ತಿ ಮತ್ತು ಪೌರ ಇತಿಹಾಸಗಳ ಮೇಲೆ ಪ್ರಭಾವ ಬೀರಿತು. ಪೋಪ್ ನೆಲೆಯ ಸಾಮರ್ಥ್ಯದಲ್ಲಿ ಉಂಟಾದ ಇಳಿತದಿಂದಾಗಿ, ಇಟಲಿಯ ವ್ಯವಹಾರಗಳನ್ನು ನಿರ್ವಹಿಸಲು ಸಾಮ್ರಾಜ್ಯವು ಅಸಮರ್ಥವಾದುದರಿಂದಾಗಿ, ಪ್ರತಿಯೊಂದು ರಾಜ್ಯವೂ ತನ್ನದೇ ಗುರಿಗಳನ್ನು ಸಾಧಿಸಲು ಯತ್ನಿಸಿತು. ಆ ಗುರಿಗಳೆಂದರೆ ರಾಜ್ಯದ ಸುಭದ್ರತೆ ಮತ್ತು ಅಧಿಕಾರ. ಆಗ ಇದ್ದ ನಾಯಕತ್ವವನ್ನು ಕೆಲವು ಇಟಾಲಿಯನ್ ರಾಜ್ಯಗಳು ಮಿಕ್ಕವಕ್ಕಿಂತ ಪ್ರಬಲವಾದವು. ನಿರಂಕುಶ ದೊರೆ ಗಿಯಾಂಗಲೆಜೋ ಎಸ್ ಕೌಂಟಿ(೧೩೫೭-೧೪೦೨)ಯ ನೇತೃತ್ವದಲ್ಲಿ ಮಿಲಾನ್ ತನ್ನ ವೈಭವವನ್ನು ಉಳಿಸಿಕೊಂಡಿತು. ಎಸ್ ಕೌಂಟಿಯು ಮಿಲಾನಿನ ಆಡಳಿತವನ್ನು ಪಡುವಾವರೆಗೆ, ವೆನಿಸ್ ಬಾಗಿಲಿಗೆ, ದಕ್ಷಿಣ ಮುಖವಾಗಿ ಲುಕ್ಕಾ, ಪೀಸಾ ಮತ್ತು ವಿಯೆನಾವರೆಗೆ ಹರಡಿದನು. ಅವನು ಫ್ಲಾರೆನ್ಸನ್ನೂ ಗೆಲ್ಲುತ್ತಿದ್ದನು. ಅದು ವೈರಿಯಿಂದ ಮುತ್ತಲ್ಪಟ್ಟು ರಾಜ್ಯವಾಗಿ ಗಿಯಾಗಲೆಜ್ಜೋ ವಿಸ್ ಕೌಂಟಿಯ ೧೦ ವರ್ಷಗಳ ಆಳ್ವಿಕೆಗೆ ಸಿಕ್ಕಿ ನರಳಬೇಕಾಗಿತ್ತು. ಆದರೆ ವಿಸ್ ಕೌಂಟ ೧೪೦೨ರಲ್ಲಿ ಮೃತನಾದನು. ಈ ಮಧ್ಯ ಮಾಂಟುವಾದ ಮಾರ್ಕ್ವಿಸರು, ಫೆರಾರಾದ ಡ್ಯೂಕರು ಮತ್ತು ಇತರ ರಾಜರು ಹೆಚ್ಚು ದಕ್ಷವಾದ ಮಿಲಿಟರಿ ಶಕ್ತಿಯಿಂದ ತಮ್ಮ ಸಣ್ಣ ರಾಜ್ಯಗಳನ್ನು ಕಾಪಾಡಿಕೊಂಡಿದ್ದರು. ವಾಸ್ತವವಾಗಿ ದುರ್ಭೇದ್ಯವಾದ ದುರ್ಗ ನಗರಗಳಿಂದಲೂ, ಜಾಣತನದ ರಾಜಕಾರಣ ಕೌಶಲದಿಂದಲೂ ಅದನ್ನು ಅವರು ಸಾಧಿಸಿದ್ದರು.

೧೫ನೆಯ ಶತಮಾನದ ಮಧ್ಯಭಾಗದ ಇಟಲಿ ಪರ್ಯಾಯ ದ್ವೀಪವು ಒಳಸಂಚು, ಪಿತೂರಿ, ದಂಗೆ, ಯುದ್ಧ, ನಿಷ್ಠೆಯ ವರ್ಗಾವಣೆ ಇವುಗಳಿಂದ ಕುದಿಯುತ್ತಿತ್ತು. ಆಗ ಸಂಭವಿಸಿದ ಮುಖ್ಯ ಘಟನೆ ಏನೆಂದರೆ ವೆನಿಸ್ಸಿನ ವಿಸ್ತರಣ ಪ್ರಯತ್ನದ ವಿರುದ್ಧವಾಗಿ ಫ್ಲಾರೆನ್ಸ್ ಮತ್ತು ಮಿಲಾನ್‌ಗಳ ನಡುವೆ ಘಟಿಸಿದ ಮೈತ್ರಿ. ಫ್ಲಾರೆನ್ಸ್ ಗಣರಾಜ್ಯದ ಅನಧಿಕೃತ ನಾಯಕ ಕೋಸಿನೋ ಡಿ ಮೆಡಿಚಿ(೧೩೮೯-೧೪೬೪) ಪ್ರಾರಂಭಿಸಿದ ಈ 'ರಾಜಕೀಯ ಕ್ರಾಂತಿ' ಇಟಲಿಯಲ್ಲಿ ರಿನೈಸಾನ್ಸ್ ಕಾಲದಲ್ಲಿ ಕಂಡುಬಂದ ಅಧಿಕಾರ ಸಮತೋಲನ ರಾಜಕಾರಣದ ಅತ್ಯಂತ ಮಹತ್ವದ ನಿದರ್ಶನವಾಗಿತ್ತು. ಇಟಾಲಿಯನ್ ನಗರ ರಾಜ್ಯಗಳು ಸಮತೋಲನವನ್ನು ಸಾಧಿಸಿದುವು. "ಹಿರಿಯ

ಐವರು"(ನೇಪಲ್ಸ್‌ನ ರಾಜ, ಪೋಪ್, ಮಿಲಾನಿನ ಡ್ಯೂಕ್, ವೆನಿಸ್ ಮತ್ತು ಫ್ಲಾರೆನ್ಸ್‌ನ ಗಣರಾಜ್ಯಗಳು) ಈ ಸಮತೋಲನವನ್ನು ಉಳಿಸಿಕೊಳ್ಳಲು ಒಪ್ಪಿದರು.

ರಿನೈಸಾನ್ಸ್ ೧೪ನೆಯ ಶತಮಾನದಲ್ಲಿ ಫ್ಲಾರೆನ್ಸ್‌ನಲ್ಲಿ ಪ್ರಾರಂಭವಾಯಿತು ಎಂದು ಹೇಳಬಹುದು. ನೇಪಲ್ಸ್‌ನೊಂದಿಗೆ ಹೋರಾಟದಲ್ಲಿ ತೊಡಗುತ್ತಾ ಫ್ಲಾರೆನ್ಸ್ ನಗರವು ರಿನೈಸಾನ್ಸ್ ಮಾನವತಾವಾದದ ಕೇಂದ್ರವಾಯಿತು. ೧೩೭೫ರಲ್ಲಿ, ಫ್ಲಾರೆನ್ಸ್‌ನ ಚಾನ್ಸಲರ್ ಕೊಲೂಚಿ ಸಲೂಟೆಟಿ ಫ್ಲಾರೆನ್ಸ್ ನಿರಂಕುಶಾಧಿಕಾರದ ದಬ್ಬಾಳಿಕೆಗೆ ಎದುರಾದ ಸ್ವಾತಂತ್ರ್ಯದ ತಡೆಗೋಡೆ ಎಂದು ಪ್ರಶಂಸಿಸಿದನು. ೧೪೨೭ರಲ್ಲಿ ಚಾನ್ಸಲರ್ ಆಗಿದ್ದ ಲಿಯೋನಾರ್ಡೋ ಬ್ರುನಿಯು ತನ್ನ ಒಡೆಯನ ಮಾದರಿಯನ್ನೇ ಅನುಸರಿಸಿದನು. ಇವನು ಮಾನವತಾವಾದಿಗಳು ವಿಕಾಸಪಡಿಸಿದ್ದ ಗ್ರಂಥ ಸಂಪಾದನಾ ಶಾಸ್ತ್ರದ ವಿಧಾನಗಳನ್ನು ಇತಿಹಾಸಕ್ಕೆ ಅನ್ವಯಿಸಿದವನು. ತನ್ನ ಹಿಸ್ಟರಿ ಆಫ್ ದಿ ಫ್ಲಾರೆಂಟೈನ್ ಪೀಪಲ್ ಕೃತಿಯಲ್ಲಿ ಅವನು ಲಿಪಿಯನ್ನು ಅನುಕರಿಸಿದನು. ಮನುಷ್ಯನು ಪರಿಪೂರ್ಣತೆಯನ್ನು ಸಾಧಿಸುವುದು ರಾಜಕೀಯ ಸಮಾಜದಲ್ಲಿ ಮಾತ್ರ ಎಂದು ಅವನು ಖಚಿತವಾಗಿ ಹೇಳಿದನು. ಕೊಸಿಮೊ ಡಿ ಮೆಡಿಚಿ (೧೩೮೯-೧೪೬೪) ತನ್ನ ಕಾಲದ ಅತಿ ದೊಡ್ಡ ಫ್ಲಾರೆಂಟೈನ್ ಪೋಷಕ. ೧೪೩೪ರ ನಂತರ ನಗರದ ರಾಜಕೀಯದಲ್ಲಿ ಅವನು ಪ್ರಭಾವಶಾಲಿಯಾಗಿದ್ದನು. ಆದರೂ ಸಾಮಾನ್ಯವಾಗಿ ರಿನೈಸಾನ್ಸನ್ನು "ಭವ್ಯವ್ಯಕ್ತಿ" ಎಂದು ಕರೆಯುವ ಕೊಸಿಮೊ ಡಿ ಮೆಡಿಚಿಯೊಂದಿಗೆ ಅನೇಕ ಬಾರಿ ಸಮೀಕರಿಸಲಾಗುತ್ತಿತ್ತು. ಅವನ ಆಳ್ವಿಕೆಯು ಗಣರಾಜ್ಯಗಳ ಅವನತಿಯನ್ನು ಕಂಡಿತು. ವಿದ್ವಾಂಸರು ಅಷ್ಟು ಕ್ರಿಯಾಪರವಲ್ಲದ, ಹೆಚ್ಚು ಚಿಂತನಾತ್ಮಕವಾದ ಜೀವನ ಮಾರ್ಗವನ್ನು ಅನುಸರಿಸುವಂತಾಯಿತು. ಈ ಸಂದರ್ಭದಲ್ಲಿ ಮಾರ್ಸಿಲಿಯೋ ಫಿಸೆನೋ (೧೪೩೩-೯೯), ಪ್ಲೇಟೋ ಸಿದ್ಧಾಂತಗಳ ಮರುಕಳಿಕೆಯಲ್ಲಿ ಅಗ್ರೇಸರನಾದನು.

ರೋಮಿನಲ್ಲಿ ಈ ಚಳವಳಿಯು ಸಾಂಸ್ಕೃತಿಕ ಆಶಯಗಳೊಂದಿಗೆ ಹಾಗೂ ಪೋಪರ ಆಶೀರ್ವಾದದಿಂದ ಬೆಳೆಯತೊಡಗಿತು. ೧೫ನೆಯ ಶತಮಾನದ ಆದಿಭಾಗದಲ್ಲಿ ರೋಂ ಒಂದು ಅಲಕ್ಷಿತವಾದ, ಶಿಥಿಲಗೊಂಡ ನಗರವಾಗಿದ್ದರೂ ಅಲ್ಲಿ ಪೋಪ್ ಮಾರ್ಟಿನನು (೧೪೧೭-೩೧) ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಂಡನು. ಅವನ ನಂತರ ಬಂದವರೂ ಅದನ್ನು ಮುಂದುವರಿಸಿದರು. ನಾಲ್ಕನೆಯ ಪೋಪ್ ಯುಜೀನಿಯಸನ (೧೪೩೧-೪೭) ಗ್ರೀಕ್ ಮತ್ತು ರೋಮನ್ ಚರ್ಚುಗಳನ್ನು ಒಂದುಗೂಡಿಸಬೇಕೆಂಬ ಉದ್ದೇಶದಿಂದ ಒಂದು ಕೌನ್ಸಿಲಿನ ಸಭೆಯನ್ನು ಸೇರಿಸಿದ್ದು ಆ ಕಾಲದ ಮುಖ್ಯ ಘಟನೆ ಯಾಗಿದೆ. ಗ್ರೀಕ್ ಭಾಷೆಯು ಲ್ಯಾಟಿನಿನಷ್ಟು ಮುಖ್ಯವಾಗಿರಲಿಲ್ಲ. ಲೊರೊನ್ಜೋ ವಲ್ಲಾ (೧೪೦೭-೫೭) ತನ್ನ ಎಗೆನಾನ್ಷಿಯೇ ಕೃತಿಯಲ್ಲಿ ಗ್ರೀಕ್ ಭಾಷೆಯನ್ನು ವಿಶ್ವಭಾಷೆ ಎಂದು ಪ್ರಶಂಸಿಸುತ್ತಾನೆ. ಯಾವುದರ ಆಧಾರದ ಮೇಲೆ ಪೋಪನ ಅಧಿಕಾರವು ತನ್ನ ಪ್ರಭುತ್ವವನ್ನು ಸ್ಥಾಪಿಸಿತ್ತು. ಕಾನ್‌ಸ್ಟೆಂಟೈನನ್ನು ಕಾಣಿಕೆಯಾಗಿತ್ತ ದಾಖಲೆಯು ಸುಳ್ಳು, ಮೋಸ ಎಂದು ತೋರಿಸಿ ಕೊಟ್ಟದ್ದು ಅವನ ಇನ್ನೊಂದು ಸಾಧನೆಯಾಗಿತ್ತು. ಮೆಡಿಚಿ ಪೋಪ್ ೧೦ನೆಯ ಲಿಯೋ(೧೫೧೩-೨೧)ನ ಕಾಲದಲ್ಲಿ ರೋಮನ್ ರಿನೈಸಾನ್ಸ್ ತನ್ನ ಶಿಖರವನ್ನು ಮುಟ್ಟಿತು. ಆಗ ಪೋಪ್ ಸಂಬಂಧದ ಕಟ್ಟಡಗಳ ಹಾಗೂ ಖಾಸಗಿ ಕಟ್ಟಡಗಳ ನಿರ್ಮಾಣ ಕಾರ್ಯ ತಡೆಯಿಲ್ಲದೆ ಮುಂದುವರಿಯಿತು. ಚಿತ್ರಕಲೆ, ಶಿಲ್ಪಗಳು ಮತ್ತು ಗ್ರಂಥಾಲಯಗಳೂ ಅಭಿವೃದ್ಧಿಗೊಂಡವು. ಏಳನೆಯ ಕ್ಲೆಮೆಂಟ್‌ನ (೧೫೨೩-೩೪) ಕಾಲದಲ್ಲಿ ರೋಮನ್‌ನ ಪತನದ ಮೂಲಕ ಚರ್ಚಿನ ಸುಧಾರಣೆ ಅಲಕ್ಷಿತವಾಯಿತು. ರಿನೈಸಾನ್ಸ್ ಮೂರನೆಯ ಪಾಂಟಿಫಿಕೇಟ್ ಕಾಲದವರೆಗೂ ಕೊನೆಗೊಳ್ಳಲಿಲ್ಲ (೧೫೩೪-೫೦). ಹಿಂದಿನಯುಗದ ಸಾಂಸ್ಕೃತಿಕ ಮೌಲ್ಯಗಳ ವಿರುದ್ಧವಾಗಿ ಪ್ರತಿಕ್ರಿಯೆ ಆಗ ವ್ಯಕ್ತವಾಯಿತು.

ನೇಪಲ್ಸನಲ್ಲಿ ಐದನೆಯ ಅಲ್ಫಾನ್ಸೋನಂತಹವರ ಕೈಕೆಳಗೆ ಅಲ್ಪಕಾಲಿಕವಾದರೂ ರಿನೈಸಾನ್ಸ್ ಮಹತ್ವಪೂರ್ಣವಾಗಿತ್ತು. ಅವನ ಆಳ್ವಿಕೆಯಲ್ಲಿ ಅರ್ಥವ್ಯವಸ್ಥೆಯು ಉತ್ತಮ ಗೊಂಡಿತು. ಅವನ ಆಶ್ರಯದಲ್ಲಿ ಲೊರೆನ್ಜೊವಲ್ಲಾ (೧೪೦೭-೫೭) ಜೀವಿಸಿದ್ದನು. ಇವನ ಉದಾತ್ತ ಪರಂಪರೆಯನ್ನು ಇವನ ಮಗ ಫೆರಂಟೇ ಮುಂದುವರಿಸಿದನು. ಅವನ ಗ್ರಂಥ ಸಂಗ್ರಹವು ಇಟಲಿಯಲ್ಲೇ ಸುಪ್ರಸಿದ್ಧವಾಯಿತು. ಮಾನವತಾವಾದಿಯೂ, ದಕ್ಷ ಪೌರ ಅಧಿಕಾರಿಯೂ ರಾಜಕಾರಣಿಯೂ ಆದ ಗಿಯೋವನಿ ಪೊಂಟಾನಾ (೧೪೨೬-೧೫೦೩) ಬಹಳ ಮುಖ್ಯವಾದ ವ್ಯಕ್ತಿಯಾಗಿದ್ದನು. ನಿರಂಕುಶಾಧಿಕಾರಿ ಗಿಯಂಗಲೆಜೋ ವಿಸ್ಕಾಂಟಿ (೧೩೫೭-೧೪೦೨)ಯ ಆಳ್ವಿಕೆಯಲ್ಲಿ ಮಿಲಾನಿನ ಜನರು ಮೊದಲಬಾರಿಗೆ ರಿನೈಸಾನ್ಸಿನ ಪ್ರಭಾವವನ್ನು ಅನುಭವಿಸಿದರು. ಈ ಕಾಲದಲ್ಲಿ ಕಟ್ಟಡ ನಿರ್ಮಾಣ ಕಾರ್ಯಕ್ರಮವಲ್ಲದೆ, ಪೇವಿಯಾ ವಿಶ್ವವಿದ್ಯಾನಿಲಯಕ್ಕೆ ಅಧಿಕೃತ ಪ್ರೋ ನೀಡಲಾಯಿತು. ಆದರೆ ಮಿಲಾನಿನ ಪುನರುಜ್ಜೀವನವನ್ನು ೧೪೯೪ರಲ್ಲಿ ಡ್ಯೂಕ್ ಆದ

ಲೊಡೊವಿಕೊ ಸ್ಫೋರ್ಜಾ ಇಲ್ ಮೊರೋನೊಂದಿಗೆ ವಿಶೇಷವಾಗಿ ಸಮೀಕರಿಸಿ ನೋಡಲಾಗಿದೆ. ಇವನ ಪತ್ನಿ ಬಿಯಾಟ್ರಿಸ್ ಡಿಯೇಟೇ ಇವನಿಗೆ ಆಶ್ರಯ ನೀಡಿ ಪ್ರೋ ಅವನ ಆಸ್ಥಾನ ವನ್ನು ಅಲಂಕರಿಸಿದ್ದವರಲ್ಲಿ ಮುಖ್ಯರಾದವರು ಲಿಯೊನಾರ್ಡೊಡಾವಿಂಚಿ ಮತ್ತು ಬ್ರಮಾಂಟೆ. ಆದರೆ ಈ ಉಜ್ವಲವಾದ ಯುಗವು ೧೪೯೭ರಲ್ಲಿ ಬಿಯಾಟ್ರಿಸ್ ಮರಣ ಹೊಂದಿದುದರಿಂದಲೂ ಹಾಗೂ ೧೫೦೦ರಲ್ಲಿ ಫ್ರೆಂಚರು ಆಕ್ರಮಿಸಿಕೊಂಡುದರಿಂದಲೂ ಸಮಾಪ್ತಿ ಹೊಂದಿತೆಂದು ಅಭಿಪ್ರಾಯಪಡಲಾಗಿದೆ.

ಲಿಯೊನೆಲ್ಲಾಡಿ ಎಸ್ಟೇಯ ನೇತೃತ್ವದಲ್ಲಿ ಫೆರಾರಾ, ಇಟಾಲಿಯನ್ ಕಾವ್ಯದ ಬಹುದೊಡ್ಡ ಕೇಂದ್ರವಾಯಿತು. ಆರ್ಲಾಡೋ ಫ್ಯೂರಿಸೋ ಖ್ಯಾತಿಯ ಅರಿಸ್ಟೋ (೧೪೭೪-೧೫೩೩) ಇಲ್ಲಿ ಜೀವಿಸಿದ್ದನು. ಮಾಂಟುವಾದಲ್ಲಿ ಲೊಡೊವಿಕೊ ಗೊನ್ಜಾಗಾ (೧೪೪೪-೭೮) ಅರ್ಬಿನೋದಲ್ಲಿ ಫೆಡರಿಗೋಡ ಮಾಂಟಿಫೆಲ್ರ್ಟೋ (೧೪೪೪-೮೨) ರಿನೈಸಾನ್ಸಿನ ಮುಖ್ಯ ಪೋಷಕರಾಗಿದ್ದರು.

ಬೇರೆ ಸ್ಥಳಗಳಿಗಿಂತ ತಡವಾಗಿ, ಅಂದರೆ ೧೫ನೆಯ ಶತಮಾನದ ಕೊನೆಯ ವೇಳೆಗೆ ಚಳವಳಿಯು ವೆನಿಸ್ ತಲುಪಿತು. ಅದು ಗ್ರಂಥೋದ್ಯಮದ ಮುಖ್ಯ ಕೇಂದ್ರವಾಯಿತು. ಆ ಕಾಲದ ಪರಿಣತ ಮುದ್ರಕರಲ್ಲಿ ಮುಖ್ಯನಾದವನು ಆಲ್ಡಸ್ ಮನೂಷಿಯಸ್ (೧೪೫೦-೧೫೭೫).

೧೪ನೆಯ ಶತಮಾನದ ಇಟಲಿಯಲ್ಲಿ ಕಂಡುಬಂದ ಮಹತ್ವಪೂರ್ಣ ಸುಧಾರಣೆಗಳಲ್ಲಿ ಒಂದು ಗ್ರೀಸ್ ಮತ್ತು ರೋಮ್ ನಾಗರಿಕತೆಗಳನ್ನು ಕುರಿತ ನೂತನ ದೃಷ್ಟಿ ಬೆಳೆದದ್ದು. ಇಟಾಲಿಯನ್ನರು ಇದನ್ನು ಲಾರನಾಸಿಟಾ, ಪುರ್ಜನ್ಮ ಎಂದು ಕರೆದರು. ಏಕೆಂದರೆ ಅದು ಅವರಿಗೆ ೧೦೦೦ ವರ್ಷಗಳ ಬರ್ಬರ ಯುಗದ ನಂತರ ಪ್ರಾಚೀನ ಚೈತನ್ಯದ ಪುನರುತ್ಥಾನ ವಾಗಿತ್ತು. ಇಟಾಲಿಯನ್ ಚೇತನದ ಪ್ರಖರವಾದ ಸೂರ್ಯನ ಬೆಳಕು ಉತ್ತರದ ದಟ್ಟ ಕಾವ್ಯವನ್ನು ಹರಿಯಿಸಿತು; ಸ್ತ್ರೀ ಪುರುಷರು ಸೌಂದರ್ಯವನ್ನು ಅದರ ಸಕಲ ರೂಪಗಳಲ್ಲಿ ಸವಿದು, ಪುನರುಜ್ಜೀವನದ ಆನಂದವನ್ನು ವಾತಾವರಣದ ತುಂಬ ತುಂಬುವುದರಲ್ಲಿದ್ದರು. ಹೀಗೆ ಹೇಳಿದವರು ತಮ್ಮ ಕಾಲದಲ್ಲೇ ವಾಸ್ತವ "ಪುನರ್ಜನ್ಮ"ವು ಸಂಭವಿಸಿದುದನ್ನು ಕಣ್ಣಾರೆ ಕಂಡರು. ವಾಸ್ತವವಾಗಿ ರಿನೈಸಾನ್ಸ್‌ಗೆ ಕೇವಲ ಪ್ರಾಚೀನತೆಯ ಮರುಕಳಿಕೆಗಿಂತ ಮಿಗಿಲಾದ ಅಂಶಗಳು ಅಗತ್ಯವಾದುವು. ಬೂರ್ಷ್ವಗಳಿಂದ ಹಣವನ್ನು ಕಿತ್ತಕೊಂಡರು, ಲೆಕ್ಕಾಚಾರ ಹಾಕಿ ಕಾರ್ಮಿಕರಿಗೆ ಸಾಕಷ್ಟು ಕೊಡದ ಮ್ಯಾನೇಜರುಗಳಿಂದ, ಪೂರ್ವದ ಕಡೆಗೆ ನೌಕಾಯಾನ ಮಾಡುವವರಿಂದ, ಆಲ್ಪ್ಸ್ ಮೊದಲಾದವುಗಳನ್ನು ಬಹು ಕಷ್ಟಪಟ್ಟು ದಾಟಿ ಹೋಗುವವರಿಂದ, ಚರ್ಚುಗಳಿಂದ, ಲೇವಾದೇವಿಗಾರರಿಂದ ಹಣವನ್ನು ವಸೂಲು ಮಾಡಿ ಪ್ರಾಚೀನತೆಗೆ ಮರುಹುಟ್ಟು ನೀಡಿದ ಗ್ರಂಥಗಳನ್ನು ಕೊಳ್ಳಲು ಅದನ್ನು ವಿನಿಯೋಗಿಸಿದರು. ವಿಶ್ವವಿದ್ಯಾಲಯಗಳು ಬೆಳೆದವು; ಜ್ಞಾನ, ದರ್ಶನಗಳು ವಿಸ್ತಾರವಾದವು; ಹೊರ ಜಗತ್ತಿನೊಂದಿಗೆ ಸಂಪರ್ಕ ಹೆಚ್ಚಿತು. ಇವುಗಳಿಂದಾಗಿ ಇಟಾಲಿಯನ್ ಮನಸ್ಸು ಚರ್ಚಿನ ಸಂಕೋಲೆಗಳನ್ನು ಕಳಚಿಹಾಕಿತು. ಈ ನಿರ್ಬಂಧಗಳಿಂದ ಮುಕ್ತನಾದ ಇಟಾಲಿಯನ್ನನು ಗಂಡಸಿನಲ್ಲಿ, ಹೆಂಗಸಿನಲ್ಲಿ ಸೌಂದರ್ಯವನ್ನು ಕಂಡು ಸವಿದನು. ೧೫ ಮತ್ತು ೧೬ನೆಯ ಶತಮಾನಗಳಲ್ಲಿ ರಚನಶೀಲನಾದನು. ಆಮೇಲೆ ನೈತಿಕ ಗೊಂದಲ, ಕ್ಷೀಣಗೊಂಡ ವ್ಯಕ್ತಿವಿಶಿಷ್ಟತೆ ಮತ್ತು ರಾಷ್ಟ್ರೀಯ ಗುಲಾಮಗಿರಿಗಳಿಂದ ದೇಶ ಹಾಳಾಯಿತು. ಈ ಎರಡೂ ಅತಿರೇಕಗಳ ನಡುವಣ ಮಧ್ಯಂತರವೇ ರಿನೈಸಾನ್ಸ್.

ಇಟಾಲಿಯನ್ ಪುನರುಜ್ಜೀವನದ ಕೇಂದ್ರ ವ್ಯಕ್ತಿ ಪೆಟ್ರಾರ್ಕ್(೧೩೦೪-೭೪). ಗಡೀಪಾರಾಗಿದ್ದ ಫ್ಲಾರೆನ್ಸಿನ ನೋಟರಿಯೊಬ್ಬನ ಮಗನಾದ ಅವನು ಯೂರೋಪಿನ ಮೊದಲ ಸ್ವತಂತ್ರ ಸಾಹಿತಿಗಳಲ್ಲಿ ಒಬ್ಬನಾದನು. ಕಳೆದ ರೋಮನ್ ಪ್ರಾಚೀನತೆಯಿಂದ ಇತ್ತೀಚಿನ ತನ್ನ ಕಾಲದವರೆಗಿನ ಅವಧಿಯನ್ನು ಕತ್ತಲಯುಗವೆಂಬುದಾಗಿ ಮೊದಲು ಕಲ್ಪಿಸಿಕೊಂಡವನೇ ಪೆಟ್ರಾರ್ಕ್. ಆ ಪರಿಸ್ಥಿತಿಯನ್ನು ಬದಲಾಯಿಸಿಬಿಡಬಹುದು ಎಂಬ ಆಶಾವಾದ ಅವನಲ್ಲಿರಲಿಲ್ಲವಾದರೂ, ಪ್ರಾಚೀನತೆಯ, ಅದರ ನುಡಿಯ, ಸಾಹಿತ್ಯಕ ಶೈಲಿಯ, ನೈತಿಕ ಚಿಂತನೆಯ ಮರು ಅಧ್ಯಯನ ಮಾಡಬೇಕೆಂದು ಅವನು ಕರೆಕೊಟ್ಟನು. ಪ್ರಾಚೀನ ನಾಗರಿಕತೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಪ್ರಾಚೀನತೆಯ ಒಲವಿರುವ ಅಧ್ಯಯನ ಕಡ್ಡಾಯವಾಗಬೇಕು. ಅಂದರೆ, ಭಾಷೆಯ ಅಧ್ಯಯನದ ಮೇಲೆ ಹೆಚ್ಚು ಒತ್ತಡ ಬಿದ್ದಿತು. ಏಕೆಂದರೆ ಪ್ರಾಚೀನರನ್ನು ಅರ್ಥಮಾಡಿಕೊಳ್ಳಬೇಕಾದರೆ ಭಾಷೆಯೇ ಸಂಪರ್ಕ ಮಾಧ್ಯಮಗಳ ಮೂಲ. ಆದ್ದರಿಂದ ವ್ಯಾಕರಣದ ಅಭ್ಯಾಸ, ಪ್ರಾಚೀನ ಬರಹಗಾರರ ಅನುಕರಣೆಗಳು (ಭಾಷಾ ದೃಷ್ಟಿಯಿಂದ) ಇವು ಪೆಟ್ರಾರ್ಕನ ಕಾರ್ಯಕ್ರಮದ ತಳಹದಿಯಾದುವು. ಮುಂದಿನದು ಮಾತುಗಾರಿಕೆ. ಅವನಿಗೆ, ಅದು ಒಂದು ನಿರರ್ಗಳ ಶೈಲಿಯನ್ನು ಹೊಂದಿರುವುದು ಮಾತ್ರವಲ್ಲ, ಒಲಿಸುವಿಕೆಯ ಶಕ್ತಿಯೂ ಮಾತ್ರವಲ್ಲ,

ಅದು ಎರಡರ ಸಮ್ಮಿಲನ. ಭಾಷೆಯನ್ನೂ ಭಾಷಣ ಕಲೆಯನ್ನೂ ಒಟ್ಟಿಗೆ ಅಧ್ಯಯನ ಮಾಡುವವನು ಒಂದು ನೈತಿಕ ಸದುದ್ದೇಶದಿಂದ ಹಾಗೆ ಮಾಡುತ್ತಾನೆ. "ಸತ್ಯವನ್ನು ತಿಳಿದುಕೊಳ್ಳವುದಕ್ಕಿಂತಲೂ ಒಳಿತನ್ನು ಸಂಕಲ್ಪಿಸುವುದು ಮೇಲು" ಎಂಬ ಅವನ ಮಾತು ಇಲ್ಲಿ ಮುಖ್ಯವಾಗುತ್ತದೆ. ಹೀಗೆ ಪೆಟ್ರಾರ್ಕನು ರಿನೈಸಾನ್ಸಿಗೆ ಸಂಬಂಧಿಸಿದ ಅನೇಕ ವಿಚಾರಗಳನ್ನು ಚರ್ಚಿಸಿದನು. ಮಾನವ ರಚನಶೀಲತೆಯ ವಿಷಯದಲ್ಲಿ ಪ್ರಾಚೀನತೆಯು ಪರಾಕಾಷ್ಠೆಯಾದರೆ ಕತ್ತಲಯುಗವು ಅದರ ಪಾತಾಳ. ಸಂಸ್ಕೃತಿಯ ಪುನರುಜ್ಜೀವನ ಹಾಗೂ ಸಮಾಜದ ಸುಧಾರಣೆ ಇವು ಪ್ರಾಚೀನತೆಯ ಅಧ್ಯಯನವನ್ನು ಅವಲಂಬಿಸಿವೆ ಎಂದು ಅವನು ನಿರೂಪಿಸಿದನು. ಈ ವಿಚಾರಗಳೇ ೧೫ನೆಯ ಶತಮಾನದ ಮಾನವತಾವಾದಿಗಳ ಅತ್ಯಂತ ಗಾಢವಾದ ನಂಬಿಕೆಗಳಾದುವು. ಪೆಟ್ರಾರ್ಕನ ಸಮಕಾಲೀನನಾದ ಬೊಕಾಸಿಯೋನ ಕಾಣಿಕೆಯು ಬಹಳ ಮುಖ್ಯವೇ ಆಗಿತ್ತು. ಸತ್ತು ಹೋಗಿದ್ದ ಕಾವ್ಯಶಕ್ತಿಯನ್ನು ಮರಳಿ ಬದುಕಿಸಿದವನು ಅವನು ಎಂದು ವಾಸ್ತವವಾಗಿ ಹೇಳಬಹುದು. ಗಿಯೋವನಿ ಬೊಕಾಸಿಯೋ (೧೩೧೩-೧೩೭೫), ಪ್ರಾಚೀನ ಜಗತ್ತಿನ ಆಳವಾದ ಪರಿಜ್ಞಾನವನ್ನು ಪಡೆಯಲು ಇಚ್ಛಿಸಿದನು. ಪ್ರಸಿದ್ಧವಾದ ಡಿಕೆಮರಾನ್ (೧೩೫೩) ಅಲ್ಲದೆ ಇತರ ಕೆಲವು ಮುಖ್ಯವಾದ ಕೃತಿಗಳನ್ನು ಲ್ಯಾಟಿನ್ನಿನಲ್ಲಿ ಬರೆದನು. ಪ್ರಾಚೀನ ಪುರಾಣ ಪ್ರಪಂಚ, ಆ ನಾಯಕರು ಮತ್ತು ರಾಜರ ವಿಧಿಗಳನ್ನು ಕುರಿತು ಅವನು ಬರೆದನು. ಆದರೆ ಮುಂದಿನ ಮಾನವತಾವಾದಿಗಳು ಪೆಟ್ರಾರ್ಕನಿಗಿಂತ ಹೆಚ್ಚು ಆಶಾವಾದಿಗಳಾಗಿದ್ದರು. ಅವರ ಕಾರ್ಯಕ್ರಮಗಳಿಗೆ, ವ್ಯವಹಾರಗಳಿಗೆ ಜನತೆಯಿಂದ ಅಪಾರವಾದ ಗೌರವ ದೊರಕಿತು.

**ಮಾನವತಾವಾದ**

ಹ್ಯೂಮನಿಸಂ ಅಥವಾ ಮಾನವತಾವಾದವು ರಿನೈಸಾನ್ಸಿನ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಅಭಿವ್ಯಕ್ತಿ. ಮಾನವತಾವಾದದ ಮೂಲವನ್ನು ಕುರಿತ ಸಮಸ್ಯೆಯು ಬಹುಕಾಲದಿಂದಲೂ ಇತಿಹಾಸಕಾರರ ಮನಸ್ಸನ್ನು ಕಾಡುತ್ತಲೇ ಇದೆ. ಬರ್ಕ್‌ಹಾರ್ಟ್ ಮಾನವತಾವಾದದ ಹುಟ್ಟನ್ನು ನೂತನ ವ್ಯಕ್ತಿತತ್ತ್ವ ವಾದದ ಮಾತುಗಳಲ್ಲಿ ವಿವರಿಸಲು ಪ್ರಯತ್ನಿಸಿದನು. ವ್ಯಕ್ತಿ ವಾದವು ಗ್ರೀಸ್ ಮತ್ತು ರೋಮ್‌ಗಳ ಪ್ರಾಚೀನ ಕೃತಿಗಳ ಸತ್ವವನ್ನು ಅರಗಿಸಿಕೊಂಡಿತ್ತು. ಇತ್ತೀಚಿನ ವಿದ್ವಾಂಸರು ಅದರ ಮೊದಲ ಕುರುಹುಗಳನ್ನು ೧೪ನೆಯ ಶತಮಾನದ ನಗರ ರಾಜ್ಯಗಳಲ್ಲಿ ವಿಶೇಷವಾಗಿ ಫ್ಲಾರೆನ್ಸಿನಲ್ಲಿ ಕಂಡುಬಂದ ಪೌರಪ್ರಜ್ಞೆಯಲ್ಲಿ, ಇಟಲಿ ಸಾಮಾನ್ಯ ಜನರಿಗೆ ಕೊಡಲಾದ ಲ್ಯಾಟಿನ್ ಭಾಷಣಕಲೆಯ ಶಿಕ್ಷಣದಲ್ಲಿ ಕಂಡಿದ್ದಾರೆ. ವ್ಯಕ್ತಿ ವಾದದ ಜೊತೆಜೊತೆಗೆ ಕಾಣಸಿಗುವ ಮಾನವತಾವಾದವು ಜ್ಞಾನ ಸಂಪಾದನೆಗೆ ಭಾಷಾವಿಜ್ಞಾನ ಮತ್ತು ಗ್ರಂಥಸಂಪಾದನಾ ಶಾಸ್ತ್ರಗಳನ್ನು ಆಧಾರವಾಗಿ ಕೊಟ್ಟಿತು. ಆ ಪದವು ಬಂದದ್ದೇ ಮಧ್ಯಕಾಲದ ಕೊನೆಯ ವಿದ್ಯಾರ್ಥಿಗಳ ಆಡುಮಾತಿನಿಂದ. ಸ್ಟಡಿಯಾ ಹ್ಯುಮಾನಿಟಾಟಿಸ್, ಅಂದರೆ ಹ್ಯುಮೇನ್ ಲೆಟರ್ಸ್ ಆಫ್ ಲಿಬರಲ್ ಆರ್ಟ್ಸ್ ಪ್ರಾಧ್ಯಾಪಕನನ್ನು ಊಮನಿಸ್ಟಾ ಎಂದು ಕರೆಯುತ್ತಿದ್ದರು.

ಸ್ಟಡಿಯಾ ಹ್ಯುಮಾನಿಟಾಟಿಸ್ ಪಠ್ಯ ವಿಷಯಗಳಲ್ಲಿ ಭಾಷಣ ಕಲೆ, ನೈತಿಕ ತತ್ತ್ವಶಾಸ್ತ್ರ, ಇತಿಹಾಸ ಮತ್ತು ಕಾವ್ಯ ಸೇರಿದ್ದುವು. ಈ ಪಠ್ಯ ವಿಷಯಗಳು ಮಾನವೀಯ ಮೌಲ್ಯ ಗಳನ್ನು ಎತ್ತಿ ಹಿಡಿಯುತ್ತಿದ್ದವು ಮತ್ತು ಪ್ರತಿಬಿಂಬಿಸುತ್ತಿದ್ದವು. ಈ ಹ್ಯೂಮನಿಸ್ಟರ ಆಸಕ್ತಿಯಿದ್ದದ್ದು ಪ್ರಾಚೀನ ಪರಂಪರೆಯ ಪುನಶ್ಚೇತನ, ಅಧ್ಯಯನ, ವ್ಯಾಖ್ಯಾನ ಮತ್ತು ಪ್ರಸಾರ. ಸಮಕಾಲೀನ ಲ್ಯಾಟಿನ್ನಿನ ಹಾಗೂ ತಾಯ್ನುಡಿಯ ಶೈಲಿಯನ್ನು ವಸ್ತುವನ್ನೂ ಬದಲಾಯಿಸುವ ಒಂದು ಉತ್ಕಟವಾದ ಬಯಕೆಯೂ ಅವರಲ್ಲಿ ಇದ್ದಿತು. ಮತಧರ್ಮಶಾಸ್ತ್ರ ಮತ್ತು ಸೂಕ್ಷ್ಮತರ್ಕ ವಿಧಾನಗಳಿಗಿಂತ ಮಿಗಿಲಾಗಿ ನೈತಿಕವಾಗಿ ಮಾನವೀಯ ತತ್ತ್ವಕ್ಕೆ ಪ್ರಾಧಾನ್ಯ ಕೊಡುವ ಅಪೇಕ್ಷೆ ಇಲ್ಲಿ ವ್ಯಕ್ತವಾಯಿತು. ಪ್ರಾಚೀನ ಗ್ರೀಕಿನ ಅಧ್ಯಯನ-ಅಧ್ಯಾಪನಗಳನ್ನು ಕುರಿತ ಹೊಸ ಆಸಕ್ತಿ, ಕಲೆಯಲ್ಲಿ ಸಹಜತೆಯ ಕಡೆಗೆ ಖಚಿತವಾದ ಒಲವು ಕಂಡುಬಂದುವು.

ಹ್ಯೂಮನಿಸಂ ಒಂದು ಜಾತ್ಯತೀತವೂ ಪ್ರಯೋಗಶೀಲವೂ ಆದ ಆಂದೋಲನ. ಕ್ರೈಸ್ತ ಪುರೋಹಿತ ವರ್ಗದವರಿಗೆ ಅರಿಸ್ಟಾಟಲ್ ತರ್ಕದ ಮೂಲಕ ಮತಧರ್ಮಶಾಸ್ತ್ರವನ್ನು ಹೇಳುವ ಹಳೆಯ ಸಾಂಪ್ರದಾಯಿಕ ರೀತಿಯ ಶಿಕ್ಷಣವನ್ನು ನೀಡಲಾಗುತ್ತಿತ್ತು. ಈ ಜನರ ಭಾಷೆ, ಶೈಲಿ, ಕೊನೆಗೆ ಆಲೋಚನಾ ವಿಧಾನ ಕೂಡ ಅವರನ್ನು ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಲು ಸಿದ್ಧಪಡಿಸುತ್ತಿರಲಿಲ್ಲ. ಏಕೆಂದರೆ ಕಾರ್ಯದರ್ಶಿಗೆ ಭಾಷಾ ಚಾತುರ್ಯ ಬಹಳ ಮುಖ್ಯ. ಇತರ ನೂತನ ಪಂಥಗಳ ಉತ್ತಮ ಭಾಷಾ ನೈಪುಣ್ಯ ಪಡೆದ

ಕಾರ್ಯದರ್ಶಿಗಳೊಂದಿಗೆ ಅವರು ಪತ್ರವ್ಯವಹಾರ ನಡೆಸಬೇಕಾಗಿತ್ತು. ಈ ಪರಿಸ್ಥಿತಿಯಲ್ಲಿ ಮಾನವತಾವಾದದ ಪ್ರತಿಪಾದಕರು ತಮ್ಮ ಬರವಣಿಗೆಗೂ ಬೋಧನೆಗೂ ಒಂದು ಲೌಕಿಕ ಲಕ್ಷಣವನ್ನು ಕೊಟ್ಟಿದ್ದು ಅತ್ಯಂತ ಸಹಜವಾಗಿತ್ತು.

ಮಾನವತಾವಾದವು ಪ್ರಾಯೋಗಿಕವಾದದ್ದರಿಂದ, ಅದರ ವಿನ್ಯಾಸ ಖಚಿತವಾದ ಕಾರ್ಯನಿರ್ವಹಣೆಗೆ ಅನುಕೂಲಿಸುವಂತಿತ್ತು. ಕೊನೆಯ ಪಕ್ಷ ಪ್ರಾರಂಭದ ಹಂತಗಳಲ್ಲಿ ವಿದ್ವಾಂಸರು ತಮ್ಮ ಓದುಗರಿಗೆ ಸರಿಯಾಗಿ ಉಪದೇಶಿಸಿ, ತಮ್ಮ ಬೋಧನೆಯಂತೆ ಅವರು ನಡೆಯುವಂತೆ ಮಾಡಬೇಕಾಗಿತ್ತು. ಆದ್ದರಿಂದ ಲೇಖನ ಚಾತುರ್ಯ ಅವರಿಗೆ ಅತ್ಯಗತ್ಯವಾಗಿತ್ತು. ಅಲ್ಲದೆ, ವಿಷಯಗಳು ತುಂಬಾ ನಿರ್ದಿಷ್ಟವಾಗಿದ್ದು ರಾಜಕಾರಣ ಮತ್ತು ವ್ಯಾಪಾರ ಕ್ಷೇತ್ರಗಳಲ್ಲಿ ಉಪಯೋಗಕ್ಕೆ ಬರುವಂಥದಾಗಬೇಕಾಗಿತ್ತು. ಸೂಕ್ತವಾದ ರೀತಿಯಲ್ಲಿ ವ್ಯಕ್ತಪಡಿಸಿದ ಪದಗಳು ಜನರ ಮೇಲೆ ಮತ್ತು ಘಟನೆಗಳ ಮೇಲೆ ಪ್ರಭಾವ ಬೀರುತ್ತವೆ ಎನ್ನುವುದು ಮಾನವತಾವಾದಿಗಳ ವಿಚಾರವಾಗಿತ್ತು.

ರಿನೈಸಾನ್ಸ್ ಮಾನವತಾವಾದದ ಘೋಷವಾಕ್ಯವಾಗಬಲ್ಲ ಒಂದು ಸೂಕ್ತಿಯಲ್ಲಿ ಪೆಟ್ರಾರ್ಕ್ ಹೀಗೆ ಹೇಳಿದನು. "ಸತ್ಯವನ್ನು ಅರಿಯುವುದಕ್ಕಿಂತಲೂ ಒಳಿತನ್ನು ಬಯಸುವುದೇ ಮೇಲು. ಸತ್ಯವನ್ನು ಸಂಕಲ್ಪಿಸಬೇಕಾದರೆ ಮೊದಲು ಅದನ್ನು ಅರಿಯಬೇಕು." ಪೆಟ್ರಾರ್ಕ್ ಜ್ಞಾನ ಸಂಪಾದನೆಯ ದಾರಿಯನ್ನು ತೆರೆದಿದ್ದನು. ಮನುಷ್ಯನು ಕೇಂದ್ರವಾದ್ದರಿಂದ, ಅವನ ಸಮಸ್ತ ಶಕ್ತಿ ಮತ್ತು ದೇಹ ಸೌಂದರ್ಯಗಳನ್ನು, ಅವನ ಇಂದ್ರಿಯಗಳು ಮತ್ತು ಭಾವನೆಗಳ ಸಮಸ್ತ ನೋವು ನಲಿವುಗಳನ್ನು, ಅವನ ವಿಚಾರಶಕ್ತಿಯ ಕ್ಷಣಿಕ ವೈಭವವನ್ನು ಅಧ್ಯಯನ ಮಾಡಲಾಯಿತು. ಇವೆಲ್ಲವೂ ಪ್ರಾಚೀನ ಗ್ರೀಸ್ ಮತ್ತು ರೋಮ್ ಕಲೆ ಮತ್ತು ಸಾಹಿತ್ಯಗಳಲ್ಲಿ ವಿಪುಲವಾಗಿಯೂ ಸಮರ್ಪಕವಾಗಿಯೂ ವ್ಯಕ್ತವಾಗಿವೆ. ಎಲ್ಲೆಲ್ಲೂ ಮಾವನತಾವಾದದ ಸೆಕ್ಯುಲರ್ ಬೆಳವಣಿಗೆಯ ವಾತಾವರಣವಿದ್ದುದರಿಂದ ಇತಿಹಾಸವು ಅದೇ ದೃಷ್ಟಿಯಿಂದ ಬೆಳೆಯಿತು. ಈ ಮಾನವತಾವಾದಿಗಳು ಗೊಂದಲಮಯವೂ ವಿಚಾರ ರಹಿತವೂ ಆದ ಮಧ್ಯಯುಗೀನ ಕಥನಗಳ ಸರಣಿಯನ್ನು, ಮೂಲಗಳನ್ನು ಸೂಕ್ಷ್ಮವಾಗಿ ಪರಿಸ್ಥಿತಿ ಸಾಮರಸ್ಯಗೊಳಿಸುವುದರ ಮೂಲಕ, ವಿಷಯವನ್ನು ಒಂದು ವ್ಯವಸ್ಥೆ ಮತ್ತು ಸ್ಪಷ್ಟತೆಗೆ ಅಳವಡಿಸುವುದರ ಮೂಲಕ ಕೊನೆಗೊಳಿಸಿದರು. ಇತಿಹಾಸದೊಂದಿಗೆ ಜೀವನ ಚರಿತ್ರೆಯನ್ನು ಬೆರೆಸಿ, ತಮ್ಮ ನಿರೂಪಣೆಯನ್ನು ಕಾರಣಗಳು ವಿಚಾರದ ಹರಿವು ಹಾಗೂ ಪರಿಣಾಮಗಳ ಒಂದು ನಿರ್ದಿಷ್ಟ ಹಂತಕ್ಕೆ ಮೇಲೇರಿಸಿ ಗತಕಾಲಕ್ಕೆ ತುಂಬಿ ಚೈತನ್ಯ ನೀಡಿ ಅದನ್ನು ಮಾನವೀಯಗೊಳಿಸಿದರು.

ಹ್ಯೂಮನಿಸ್ಟರು ಧರ್ಮವನ್ನು ಪರೀಕ್ಷಿಸಿದರು. ಉತ್ತಮ ಜೀವನಕ್ಕಾಗಿ ಶ್ರಮಿಸುತ್ತಾ, ಸ್ವಾರ್ಥ ಭಾವನೆಗಳಿಂದ ಘಾಸಿಗೊಳ್ಳುತ್ತಾ, ಅಮರತ್ವದ ಆಸೆ ಮತ್ತು ಪ್ರಾಪಂಚಿಕವಾದ ಕೀರ್ತಿಗಳ ನಡುವೆ ತಾಕಲಾಡುತ್ತಾ ಇರುವ ಮನುಷ್ಯನು ಬಹು ಜಟಿಲವಾದ ವ್ಯಕ್ತಿಯಾಗಿದ್ದನು. ಅವನು ವರ್ತಿಸುವ, ಇಚ್ಛಿಸುವ, ಸೃಷ್ಟಿಸುವ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವ ವ್ಯಕ್ತಿಯಾಗಿದ್ದನು. ಮಾನವತಾವಾದಿಗಳ ವಿಚಾರ ಬೇರೆಯಾಗಿತ್ತು. ಅದು ಮನುಷ್ಯನ ಇಚ್ಛಾಶಕ್ತಿ ಮತ್ತು ಭಾವನಾತ್ಮಕ ಮುಖಕ್ಕೆ ಪ್ರಾಧಾನ್ಯಕೊಟ್ಟಿತು. ವಿಚಾರಶಕ್ತಿ ಮುಖ್ಯ, ಆದರೆ ಅದು ಸೀಮಿತವಾದದ್ದು. ಅದು ಭಾವಾವೇಶಗಳನ್ನು ಗೆಲ್ಲಲಾರದು ಅಥವಾ ನಿತ್ಯ ರಹಸ್ಯಗಳನ್ನು ಪರಿಹರಿಸಲೂ ಆಗದು. ವಿಚಾರವು ಇಚ್ಛಾಶಕ್ತಿಗೆ ಅಧೀನವಾದದ್ದು, ಇಚ್ಛಾಶಕ್ತಿಯು ಮನುಷ್ಯನ ಭವಿಷ್ಯವನ್ನು ನಿರ್ಧರಿಸು ವಂತದ್ದು.

ಮಾನವತಾವಾದಿಗಳ ಪರಿಶ್ರಮವು ಬಹು ದೂರಸ್ಪರ್ಶಿಯಾದದ್ದು ಮತ್ತು ವೈವಿಧ್ಯ ಪೂರ್ಣವಾದದ್ದು. ಅವರು ಒಂದು ಹೊಸಬಗೆಯ ಶಿಕ್ಷಣ ರೂಪವನ್ನು ಸೃಷ್ಟಿಸಿದರು. ಅದು ಯೂರೋಪು ಮತ್ತು ಅಮೆರಿಕಾಗಳಲ್ಲಿ ಪ್ರಸ್ತುತ ಶತಮಾನದವರೆಗೂ ಪ್ರಭಾವಶಾಲಿಯಾಗಿಯೇ ಉಳಿಯಿತು.

**ರಾಜಕೀಯ ಚಿಂತನೆ**

ಪೆಟ್ರಾರ್ಕ್ ಮತ್ತು ಪಿಕೋ ನಡುವೆ ಬಂದ ಇಟಾಲಿಯನ್ ಚಿಂತಕರಲ್ಲಿ ಯಾರೂ ಮೂಲಚಿಂತಕರಲ್ಲ ಎಂದು ಹೇಳಲಾಗುತ್ತದೆ. ಅವರ ಹಿರಿಮೆಯಿದ್ದುದು ಅವರ ಅಭಿವ್ಯಕ್ತಿ ವಿಧಾನದಲ್ಲಿ, ತಾಂತ್ರಿಕ ವಿದ್ವತ್ ಕ್ಷೇತ್ರದಲ್ಲಿ ಅವರು ತೋರಿಸಿದ ಸಾಧನೆಯಲ್ಲಿ, ಪ್ರಾಚೀನ ಚಿಂತನೆಯ ವಿವಿಧ ವಿಷಯಗಳನ್ನು ಅವರು ಜನಪ್ರಿಯಗೊಳಿಸಿದ ಬಗೆಯಲ್ಲಿ. ಆದರೆ ಈ ಮಾತು ಇಟಲಿಯ ಅತ್ಯಂತ ಶ್ರೇಷ್ಠ ರಾಜಕೀಯ ತತ್ವಜ್ಞಾನಿ

ನಿಕೊಲೋ ಮೆಕೆಯಾವೆಲ್ಲಿ(೧೪೬೯-೧೫೨೭) ವಿಷಯಕ್ಕೆ ಹೇಳಲು ಸಾಧ್ಯವಿಲ್ಲ. ಅವನು ಯಾವುದೇ ಒಂದು ಪಂಥಕ್ಕೆ ಸೇರಿದವನಲ್ಲ. ಅವನದೇ ಒಂದು ವಿಶಿಷ್ಟ ವರ್ಗವಾಯಿತು. ನಿಗೂಢ ವಾದ ವ್ಯಕ್ತಿತ್ವದ ಅವನು ವರ್ಗೀಕರಿಸಲಾಗದ ಒಂದು ಒಗಟು. ಅವನು ಇತಿಹಾಸಕಾರ, ರಾಜನೀತಿಜ್ಞ, ನಾಟಕಕಾರ, ದಾರ್ಶನಿಕ, ಸಿನಿಕ ಮತ್ತು ದೇಶಭಕ್ತ. ಕೈ ಹಾಕಿದ ಎಲ್ಲಾ ಕೆಲಸದಲ್ಲೂ ಸೋಲು ಕಂಡವನು. ಆದರೂ ಇತಿಹಾಸದಲ್ಲಿ ಎಲ್ಲರಿಗಿಂತ ಹೆಚ್ಚಾದ ಛಾಪನ್ನು ಉಳಿಸಿದನು. ರಾಜಕಾರಣದ ನೈತಿಕ ತಳಹದಿಯನ್ನು ಕುರಿತ ಹಿಂದಿನ ದೃಷ್ಟಿಗಳನ್ನು ಬುಡಮೇಲು ಮಾಡಲು ಅಥವಾ ನಿರುದ್ವೇಗದಿಂದ, ನೇರವಾಗಿ ರಾಜಕೀಯ ಜೀವನವನ್ನು ವೀಕ್ಷಿಸಲು ಬೇರೆ ಯಾರೂ ಮೆಕೆಯಾವೆಲ್ಲಿಯಷ್ಟು ಪ್ರಯತ್ನ ಮಾಡಲಿಲ್ಲ. ಅವನ ಬರವಣಿಗೆಗಳು ಇಟಲಿಯ ಅಸಂತುಷ್ಟ ಕಾಲವನ್ನು ಸ್ಪಷ್ಟವಾಗಿ ಚಿತ್ರಿಸುತ್ತವೆ. ೧೫ನೆಯ ಶತಮಾನದ ಕೊನೆಯ ವೇಳೆಗೆ ಇಟಲಿಯು ಅಂತರರಾಷ್ಟ್ರೀಯ ಕ್ಷೋಭೆಯಲ್ಲಿ ಸಿಲುಕಿತು. ಫ್ರಾನ್ಸ್ ಮತ್ತು ಸ್ಪೇಯಿನ್ ಎರಡೂ ದೇಶಗಳು ಇಟಲಿ ಪ್ಯಾರಯ ದ್ವೀಪದ ಮೇಲೆ ದಾಳಿಮಾಡಿ ಇಟಾಲಿಯನ್ ರಾಜ್ಯಗಳನ್ನು ಸ್ವಾಧೀನಪಡಿಸಿಕೊಳ್ಳಲು ಶ್ರಮಪಡುತ್ತಿದ್ದವು. ೧೪೯೮ರಲ್ಲಿ ಮೆಕೆಯಾವೆಲ್ಲಿಯು ಆಗ ತಾನೆ ಸ್ಥಾಪನೆಗೊಂಡಿದ್ದ ಫ್ಲಾರೆನ್ಸ್ ಗಣರಾಜ್ಯದ ಎರಡನೆಯ ಚಾನ್ಸಲರ್ ಹಾಗೂ ಕಾರ್ಯದರ್ಶಿಯಾಗಿ ಸೇವೆಗೆ ಸೇರಿದನು. ರಾಜಕಾರಣ ವ್ಯವಹಾರಗಳಲ್ಲಿ ಆಳವಾಗಿ ಮುಳುಗಿದನು. ೧೫೧೨ರಲ್ಲಿ ಮೆಡಿಚಿಯು ಹಿಂದಿರುಗಿ ಬಂದು ಫ್ಲಾರೆನ್ಸ್ ಗಣರಾಜ್ಯವನ್ನು ಸೋಲಿಸಿದನು. ಮೆಕೆಯಾವೆಲ್ಲಿ ತನ್ನ ಅಧಿಕಾರವನ್ನು ಕಳೆದುಕೊಂಡನು. ನಿರಾಶನಾಗಿ, ಕಹಿಯಾದ ಮನಸ್ಸಿನಿಂದ ಅವನು ತನ್ನ ಉಳಿದ ಜೀವನವನ್ನು ದೇಶಭ್ರಷ್ಟನಾಗಿ ಕಳೆದನು. ತನ್ನ ಸಮಯವನ್ನು ಮುಖ್ಯವಾಗಿ ಬರಹಕ್ಕೆ ಮೀಸಲಾಗಿಟ್ಟನು. ಮಾನವತಾವಾದದ ಸ್ವಯಂಪ್ರೇರಿತ ಮನೋವಿಜ್ಞಾನದಿಂದ ಆಕರ್ಷಿತನಾಗಿ, ಮಾನವ ಸ್ವಾತಂತ್ರ್ಯದಲ್ಲಿ ನಂಬುಗೆಯಿಟ್ಟುಕೊಂಡ ಅವನು ಪ್ರಾಚೀನತೆಯ, ವಿಶೇಷವಾಗಿ ರೋಮಿನ ಭಕ್ತನಾಗಿದ್ದನು. ರಾಜಕೀಯ ನಡವಳಿಕೆಯ ನಿಯಮಗಳನ್ನು ಅವನು ರೋಮಿನಿಂದ ಪಡೆದನು. ಲಿವಿಯನ್ನು ಕುರಿತ ಪ್ರವಚನಗಳಲ್ಲಿ ಅವನು ಪ್ರಾಚೀನ ರೋಮ್ ಗಣರಾಜ್ಯವನ್ನು ಎಲ್ಲಾ ಕಾಲಕ್ಕೂ, ಎಲ್ಲಾ ಇಟಲಿಯನ್ನರಿಗೂ ಮಾದರಿ ಎಂದು ಪ್ರಶಂಸಿಸಿದನು. ಏಕೆಂದರೆ ಇದರಿಂದ ಇಟಾಲಿಯನ್ನರು ತಮ್ಮ ನಾಗರಿಕ ಗುಣಗಳನ್ನು ಬೆಳೆಸಿಕೊಂಡು, ಬಾರ್ಬೇರಿಯನರ ಮುಷ್ಟಿಯಿಂದ ಬಿಡುಗಡೆ ಹೊಂದಲು ಸಹಾಯವಾಗು ತ್ತದೆ ಎಂದು ಅವನು ನಂಬಿದ್ದನು. ಸಾಂವಿಧಾನಿಕತೆ, ಸಮಾನತೆ, ಸ್ವಾತಂತ್ರ್ಯ, ಹೊರಗಿನ ಮಧ್ಯಪ್ರವೇಶವಿಲ್ಲದಿರುವಿಕೆ ಎಂಬ ಅರ್ಥದಲ್ಲಿ ದೇಶದ ಆಸಕ್ತಿಗಳಿಗೆ ಧರ್ಮವು ಅಧೀನವಾಗಿರಬೇಕೆಂಬ ನಂಬಿಕೆಯನ್ನು ಅವನು ಪ್ರಶಂಸಿಸಿದನು. ಆದರೆ ಅವನು ಬರೆದ ದಿ ಪ್ರಿನ್ಸ್ ಎಂಬ ಕೃತಿಯು ಸರಕಾರದ ನೀತಿಗಳನ್ನು, ನಡವಳಿಕೆಗಳನ್ನು, ಆಡಳಿತವನ್ನು ಆದರ್ಶ ರೂಪದಲ್ಲಿ ನಿರೂಪಿಸದೆ, ಅದು ಹೇಗಿದ್ದುವೋ ಹಾಗೆ ಚಿತ್ರಿಸಿದನು. ರಾಜನು ತಾನು ಆಳುತ್ತಿರುವ ದೇಶದ ಅಧಿಕಾರವನ್ನೂ, ಸುಭದ್ರತೆಯನ್ನೂ ಕಾಪಾಡಬೇಕು. ಅದು ಅವನ ಕರ್ತವ್ಯ. ನ್ಯಾಯ, ದಯೆ ಅಥವಾ ಒಪ್ಪಂದಗಳ ಪಾಲನೆ ಇವು ಯಾವುದೇ ಆಗಲಿ, ಅವನ ಕರ್ತವ್ಯ ನಿರ್ವಹಣೆಗೆ ಅಡ್ಡಿಯಾದ ಪಕ್ಷದಲ್ಲಿ ಅದನ್ನು ಲಕ್ಷಿಸಬೇಕಾಗಿಲ್ಲ. ಮನುಷ್ಯನು ಸ್ವಹಿತದಿಂದ ಪ್ರೇರಿತನಾಗುತ್ತನಾದ್ದರಿಂದ ಅವನ ನಿಷ್ಠೆ ಮತ್ತು ವಿಶ್ವಾಸ ಎಲ್ಲಾ ಕಾಲಕ್ಕೂ ತನ್ನ ಕಡೆಗಿದೆ ಎಂದು ರಾಜನು ಭಾವಿಸಿಕೊಳ್ಳಬೇಕಾಗಿಲ್ಲ ಎಂದು ಮೆಕಿಯಾವೆಲ್ಲಿ ಹೇಳಿದನು. ಅವನಿಗೆ ಯಾವುದಾದರೂ ಒಂದು ಆದರ್ಶವಿದ್ದುದೇ ಆದರೆ ಅದು ಇಟಲಿಯ ಏಕೀಕರಣ. ಅದನ್ನು ನಿರ್ದಾಕ್ಷಿಣ್ಯ ವರ್ತನೆಯಿಂದ ಮಾತ್ರವೇ ಸಾಧಿಸಬಹುದಾಗಿತ್ತು. ರಾಜ್ಯಾಡಳಿತವು ಕಾಲರಹಿತವಾದ ನಿಯಮಗಳ ಆಧಾರವನ್ನು ಹೊಂದಿದೆಯೇ ಹೊರತು, ಕ್ರೈಸ್ತಧರ್ಮದ ನೀತಿಶಾಸ್ತ್ರದ ಮೇಲೆ ನಿಲ್ಲುವುದಿಲ್ಲ ಎಂಬುದು ಅವನ ಅಭಿಪ್ರಾಯವಾಗಿತ್ತು.

ಫ್ರಾನ್ಸಿಸೋ ಗಿಸಿಯಾರ್ಡಿನಿ(೧೪೮೩-೧೫೪೦) ಯು ಮೆಕೆಯಾವೆಲ್ಲಿಯ ರಾಜಕೀಯ ನೈತಿಕತೆಯನ್ನು ರಾಜಕಾರಣವನ್ನು ಕುರಿತ ಅವನ ಕಾಳಜಿಯನ್ನೂ ಹಂಚಿಕೊಂಡನು. ಆದರೆ, ಪ್ರಾಚೀನ ರಾಜಕೀಯ ಪರಿಜ್ಞಾನವು ಇಂದು ಇಟಲಿಯ ಸ್ವಾತಂತ್ರ್ಯವನ್ನು ಸಾಧಿಸಿಕೊಡುತ್ತದೆ ಎಂಬ ವಿಷಯದಲ್ಲಿ ಅವನಿಗೆ ಸಂದೇಹವಿತ್ತು. ಫ್ಲಾರೆನ್ಸಿನಲ್ಲಿ ರೋಮನ್ ಶ್ರೀಮಂತ ಕುಟುಂಬವೊಂದರಲ್ಲಿ ಜನಿಸಿದ ಗಿಸಿಯಾರ್ಡಿನಿಯು ಅತ್ಯುತ್ತಮವಾದ ಹ್ಯೂಮನಿಸ್ಟ್ ಸಂಪ್ರದಾಯದ ಶಿಕ್ಷಣವನ್ನು ಪಡೆದು ಬಹು ಬೇಗನೆಯೇ ದೇಶಸೇವೆಗೆ ತೊಡಗಿದನು. ಸಾರ್ವಜನಿಕ ಆಡಳಿತದ ವೃತ್ತಿ ಜೀವನವನ್ನು ಆರಿಸಿಕೊಂಡು, ಇತಿಹಾಸವನ್ನು ಬರೆದನು ಮತ್ತು ರಾಜಕೀಯವನ್ನು ಕುರಿತು ಚಿಂತನೆ ಮಾಡಿದನು. ಇವನು ಅಲೆಸ್ಸಾಂಡ್ರೋ ಡಿ ಮೆಡಿಚಿಯ ಕಾಲದಲ್ಲಿ ಮತ್ತು ಅವನ ಉತ್ತರಾಧಿಕಾರಿಗಳ ಕಾಲದಲ್ಲಿ ಬಹು ಉನ್ನತವಾದ ಪದವಿಗೇರಿದನು. ಫ್ಲಾರೆನ್ಸಿನ ಡ್ಯೂಕ್ , ಅಲೆಸ್ಸಾಂಡ್ರೋ ಡಿ ಮೆಡಿಚಿಯ ಹತ್ಯೆಯ ನಂತರ, ಅವನ ೧೭ ವರ್ಷದ ಮಗ

ಕೋಸಿಮೊ ಡಿ ಮೆಡಿಚಿಯ ಆಳ್ವಿಕೆಯಲ್ಲೂ ತಾನು ಪದವಿಯಲ್ಲಿರಬೇಕೆಂದು ಬಯಸಿದ್ದನು. ಆದರೆ ತರುಣ ಡ್ಯೂಕನಿಗೆ ತನ್ನ ಅಧಿಕಾರದ ಮೇಲೆ ಇನ್ನೊಬ್ಬರ ನಿರ್ಬಂಧವಿರುವುದು ಇಷ್ಟವಾಗಲಿಲ್ಲ. ಪರಿಣಾಮವಾಗಿ, ಗಿಸಿಯಾರ್ಡಿನಿಯಾ ನಿರುದ್ಯೋಗಿಯಾದನು.

ಈ ಬಿಡುವಿನಿಂದಾಗಿ ಗಿಸಿಯಾರ್ಡಿನಿಯ ಶತಮಾನದ ಕೆಲವು ಅತ್ಯುತ್ತಮ ಕೃತಿಗಳನ್ನು ರಚಿಸಲು ಅವಕಾಶವಾಯಿತು. ಉತ್ತಮ ಗುಣಮಟ್ಟದ ಸಾಹಿತ್ಯಕ ಕೃತಿ ರಚನೆಯ ಶ್ರದ್ಧೆಗಳಿಂದಾಗಿ ೨೭ನೆಯ ವಯಸ್ಸಿನಲ್ಲಿಯೇ ಅವನು ಸ್ಟೋರಿಯ ಫ್ಲೋರೆಂಟಿನಾ ಎಂಬ ಕೃತಿಯನ್ನು ರಚಿಸಿದನು. ಅದು ಫ್ಲಾರೆನ್ಸ್ ಇತಿಹಾಸದ ಒಂದು ಭಾಗವಾಗಿ ೧೩೭೮ ರಿಂದ ೧೫೦೯ರ ಕಾಲಾವಧಿಯನ್ನು ನಿರೂಪಿಸುವ ಕೃತಿ. ವಿವರಗಳ ಸ್ಪಷ್ಟತೆ, ಮೂಲಗಳ ವಿಮರ್ಶಾತ್ಮಕ ಪರೀಕ್ಷೆ, ಕಾರಣಗಳ ಒಳಹೊಕ್ಕ ವಿಶ್ಲೇಷಣೆ, ಪಕ್ವವೂ, ನಿಷ್ಪಕ್ಷಪಾತವೂ ಆದ ನಿರ್ಣಯ, ಸೊಗಸಾದ ಇಟಾಲಿಯನ್ ಭಾಷೆಯಲ್ಲಿ ನಿರೂಪಣೆ ಇವುಗಳಿಂದ ಈ ಕೃತಿಯು ಮನೋಜ್ಞವಾಗಿದೆ. ೧೫೩೭ರಲ್ಲಿ ಒಂದೇ ವರ್ಷದಲ್ಲಿ ಹತ್ತು ಸಂಘಟಗಳ ತನ್ನ ಅತ್ಯುತ್ತಷ್ಟ ಕೃತಿ ಸ್ಟೋರಿಯಾ ಡಿ ಇಟಾಲಿಯಾವನ್ನು ರಚಿಸಿದನು. ಅದರ ಉಪಶೀರ್ಷಿಕೆ ಹಿಸ್ಟರಿ ಆಫ್ ವಾರ್ಸ್. ಅದು ಕೃತಿಯ ವಸ್ತುವನ್ನು ಸೈನ್ಯ ಮತ್ತು ರಾಜಕಾರಣಗಳಿಗೆ ಸೀಮಿತಗೊಳಿಸುತ್ತದೆ. ಅದೇ ಸಮಯಕ್ಕೆ ಈ ಕ್ಷೇತ್ರವು ಇಡೀ ಇಟಲಿಯ ಅಧ್ಯಯನವನ್ನು ಒಳಗೊಳ್ಳುತ್ತದೆ. ಯೂರೋಪಿಯನ್ ರಾಜಕೀಯ ವ್ಯವಸ್ಥೆಯನ್ನು ಸಮಗ್ರವಾಗಿ ನೋಡಿದ ಮೊದಲನೆಯ ಇತಿಹಾಸ ಕೃತಿ ಇದು. ಈ ಬೃಹತ್ ಇತಿಹಾಸವನ್ನು, ಅದ್ಭುತ ವಾದ ಸ್ಟೋರಿಯ ಫ್ಲೋರೆಂಟಿನಾವನ್ನು ಒಟ್ಟಾಗಿ ಪರಿಗಣಿಸಿದಾಗ, ಗಿಸಿಯಾರ್ಟಿನಿಯು ೧೬ನೆಯ ಶತಮಾನದ ಅತಿಶ್ರೇಷ್ಠ ಇತಿಹಾಸಕಾರನಾಗಿ ನಿಲ್ಲುತ್ತಾನೆ.

ಮನುಷ್ಯನು ಹೇಗಿದ್ದರು ಎಂಬುದನ್ನು ತೋರಿಸಿಕೊಟ್ಟ ಗಿಸಿಯಾರ್ಡಿನಿಯು ಇಂದಿನ ಪರಿಸ್ಥಿತಿಯನ್ನು ಅವರು ಹೇಗೆ ಮುಟ್ಟಿದರು ಎಂಬುದನ್ನು ವಿವರಿಸಲು ಇತಿಹಾಸವನ್ನು ರಚಿಸಿದನು. ಮಾನವನ ಘನತೆಯಿರುವುದು ತನ್ನ ಇಚ್ಛಾಶಕ್ತಿಯನ್ನು ಭವಿಷ್ಯಕ್ಕಾಗಿ ಬಳಸು ವುದರಲ್ಲಿ ಅಲ್ಲ ಎನ್ನುವ ಇವನು ಅದು ಚಿಂತನೆ ಮಾಡಲು ಮತ್ತು ತನ್ನ ವಿಧಿಯನ್ನು ಸಹಿಸಿಕೊಳ್ಳಲು ತನ್ನ ವಿಚಾರಶಕ್ತಿಯನ್ನು ಬಳಸುವುದರಲ್ಲಿದೆ ಎಂದು ಎಂದನು. ಗಿಸಿಯಾರ್ಡಿನಿಯು ತತ್ವಶಾಸ್ತ್ರವನ್ನು ಗಂಭೀರವಾಗಿ ಪರಿಗಣಿಸಲಿಲ್ಲ. ಅವನ ಅಭಿಪ್ರಾಯ ದಲ್ಲಿ ಮನುಷ್ಯನು ಸಹಜವಾಗಿಯೇ ಸ್ವಾರ್ಥಿ, ಅನೀತಿಯುತ, ನಿಯಮಬಾಹಿರನಾಗಿರುತ್ತಾನೆ. ಪ್ರತಿಹಂತದಲ್ಲೂ, ತಿರುವಿನಲ್ಲೂ ಅವನನ್ನು ತಡೆಯಬೇಕು. ಧರ್ಮ ಈ ಗುರಿಯ ಒಂದು ದಾರಿ. ಆದರೆ ಧರ್ಮದ ಕ್ಷೇತ್ರದಲ್ಲಿರುವ ಭ್ರಷ್ಟಾಚಾರಿಗಳ ಬಗೆಗೆ ಅವನಿಗೆ ತಿರಸ್ಕಾರವಿತ್ತು. ಹಾಗೆಂದು ಅವನೇನೂ ನೈತಿಕವಾಗಿ ಬಹಳ ಮೇಲು ಮಟ್ಟದವನಲ್ಲ. ತಾತ್ಕಾಲಕ್ಕೆ ಯಾವುದು ಪರಮಾಧಿಕಾರದಲ್ಲಿದೆಯೇ ಅದಕ್ಕೆ ಹೊಂದಿಕೊಳ್ಳುವ ಅವನ ನೀತಿ ಸಂಹಿತೆಯು ಮೆಕಯಾವೆಲ್ಲಿಯು ಹೇಳಿದ ರೀತಿಯದು. ಗಿಸಿಯಾರ್ಡಿನಿಗೆ ಜನರಲ್ಲಾಗಲಿ, ಪ್ರಜಾ ಪ್ರಭುತ್ವದಲ್ಲಾಗಲಿ ನಂಬಿಕೆಯಿರಲಿಲ್ಲ. ಅವನ ಮನಸ್ಸು ಆ ಕಾಲದ ಸಂದೇಹಯುತ ಭ್ರಮನಿರಸನವನ್ನು ಸಂಕ್ಷೇಪವಾಗಿ ಹೇಳುತ್ತದೆ. ತೀರಾ ಸಿನಿಕನಾಗಿ, ತೀರಾ ನಿರಾಶಾವಾದಿ ಯಾಗಿದ್ದ ಅವನು ಅತ್ಯಂತ ಕುಶಾಗ್ರಮತಿಗಳಲ್ಲಿ ಒಬ್ಬನಾಗಿದ್ದನು ಮತ್ತು ಕ್ರಿಶ್ಚಿಯನ್ ಎನಿಸಿದ ರಾಜಕೀಯವಾಗಲಿ, ದರ್ಶನವಾಗಲಿ ಯಾವುದರಲ್ಲೇ ಆಗಲಿ ನಂಬಿಕೆ ಇರದ, ಯಾವುದೇ ಕನಸು ಕಾಣದ, ರಿನೈಸಾನ್ಸ್ ಕಾಲದ ಇಟಲಿಯ ಸಹಸ್ರಾರು ಜನರ ಪೈಕಿ ಇವನು ಒಬ್ಬನಾಗಿದ್ದನು.

**ಕಲೆ ಮತ್ತು ಸಾಹಿತ್ಯ**

ರಾಜಕಾರಣದಲ್ಲೂ ಬುದ್ಧಿಮತ್ತೆಯಲ್ಲೂ ಆಗುತ್ತಿದ್ದ ಬೆಳವಣಿಗೆಗಳಿಂದಾಗಿ ಪ್ರಾಚೀನತೆ ಮತ್ತು ಸಾಹಿತ್ಯಕ ಪ್ರೇರಣೆ ಎರಡೂ ಜೊತೆ ಜೊತೆಯಾಗಿಯೇ ಸಾಗಿದ್ದುವು. ಆಲ್ಬರ್ಟಿನೋ ಮುಸ್ಸಾಟೋ, ಲೊವಾಟೋ ಲೊವಟಿ, ಪೊಲಿಶಿಯನ್ ಮತ್ತು ಪಾಂಟೆನೋ ಇವರು ಲಲಿತವಾದ ಮತ್ತು ಶಕ್ತಿಶಾಲಿಯಾದ ಲ್ಯಾಟಿನ್ ಕಾವ್ಯ ಹಾಗೂ ನಾಟಕಗಳನ್ನು ಬರೆದರು. ಇತರರು ಪತ್ರಸಾಹಿತ್ಯ, ಪ್ರಬಂಧ, ಸಂಭಾಷಣೆ, ನಿಬಂಧ, ಇತಿಹಾಸ ಇತ್ಯಾದಿ ಪ್ರಕಾರ ಗಳನ್ನು ಪ್ರಾಚೀನ ಕೃತಿಗಳ ಮಾದರಿಯಲ್ಲಿ ರಚಿಸಿದರು. ಇಟಾಲಿಯನ್, ಫ್ರೊವೆನ್ ಕಾಲ್, ಕ್ಯಾಸ್ಟಿಲಾನ್ ಇತ್ಯಾದಿ ಭಾಷೆಗಳು ಮಧ್ಯಯುಗದಲ್ಲಿ ಸಾಧಿಸಿದ್ದ ಪ್ರಗತಿ ಮತ್ತು ಬೆಳವಣಿಗೆ ಸ್ಥಗಿತಗೊಂಡು ೧೫ನೆಯ ಶತಮಾನದಲ್ಲಿ ಪ್ರಾಚೀನ ಗ್ರೀಸ್ ಮತ್ತು ರೋಮ್ ಸಾಹಿತ್ಯಗಳ ಬಗೆಗೆ ನೂತನೋತ್ಸಾಹ ಚಿಮ್ಮಿತು. ವಿದ್ವಾಂಸರು ಬರಹಗಾರರು ರಾಷ್ಟ್ರಭಾಷೆಯನ್ನು ಅಲಕ್ಷಿಸಿ ಕ್ಲಾಸಿಕಲ್ ಲ್ಯಾಟಿನ್ ಮತ್ತು ಗ್ರೀಕ್ ಬರೆಯುವುದರಲ್ಲಿ ಆಸಕ್ತರಾದರು. ಪೆಟ್ರಾರ್ಕನೇ ಇಟಾಲಿಯನ್ನಿನಲ್ಲಿ ಸೊಗಸಾದ ಸಾನೆಟ್‌ಗಳನ್ನು ಬರೆದಿದ್ದರೂ ಅವುಗಳ ಬಗ್ಗೆ ಅವನಿಗೆ ಗೌರವವಿರಲಿಲ್ಲ. ವಾಸ್ತವಿಕವಾಗಿ ಆತ ತನ್ನ ಲ್ಯಾಟಿನ್ ಬರವಣಿಗೆಯ

ಬಗೆಗೆ ಹೆಮ್ಮೆ ಪಟ್ಟುಕೊಂಡನು. ಅವನ ಅನುಯಾಯಿಗಳು ಅವನನ್ನೇ ಅನುಸರಿಸಿ ದೇಶಭಾಷೆಗಳು ಒರಟು, ಅನಾಗರಿಕ ಎಂದು ತಿರಸ್ಕರಿಸಿದರು. ೧೬ನೆಯ ಶತಮಾನದ ಪ್ರಾರಂಭದಲ್ಲಿ ವಿದ್ವಾಂಸ ಇರಾಸ್ಮಸ್ ಒಂದಿಲ್ಲೊಂದು ಕ್ಲಾಸಿಕಲ್ ಭಾಷೆಯಲ್ಲಿ ತನ್ನ ಮುಖ್ಯ ಕೃತಿಗಳನ್ನು ರಚಿಸುತ್ತಿದ್ದನು. ೧೬ನೆಯ ಶತಮಾನ ಪೂರ್ತಿಯಾಗಿ ರಾಷ್ಟ್ರೀಯ ವಿದ್ವೇಷಗಳು, ಬಹುದೂರದ ಸಂಶೋಧನೆಗಳು, ಬಂಡವಾಳಶಾಹೀ ಚಟುವಟಿಕೆ ಗಳು, ಸಾಮಾಜಿಕ, ಧಾರ್ಮಿಕ ಅಶಾಂತಿ ಎಷ್ಟು ತೀವ್ರವಾಗಿದ್ದುವೆಂದರೆ ಕ್ಲಾಸಿಕಲ್ ಭಾಷೆಗಳೂ ಉಳಿದುಕೊಳ್ಳುವುದು ಕಷ್ಟವಾಯಿತು. ಸಾಮಾನ್ಯರಿಗೆ ಮತ್ತು ಮೇಲುವರ್ಗದ ವರಿಗೆ ಈ ಪ್ರಾಚೀನ ಕೃತಿಗಳ ಬಗೆಗೆ ವಿಶೇಷವಾಗಿ ತಿಳಿ ಹೇಳಬೇಕಾಯಿತು. ಏಕೆಂದರೆ ಅವರಿಗೆ ಅವುಗಳ ಬಗೆಗೆ ಏನೂ ತಿಳಿದಿರಲಿಲ್ಲ. ಈ ಹಿನ್ನೆಲೆಯಲ್ಲಿ ದೇಶಭಾಷೆಯಲ್ಲಿ ರಾಷ್ಟ್ರೀಯ ಸಾಹಿತ್ಯದ ಅಗತ್ಯವು ಕಾಣಿಸಿಕೊಂಡಿತ್ತು.

೧೬ನೆಯ ಶತಮಾನದ ರಾಷ್ಟ್ರೀಯ ಸಾಹಿತ್ಯದ ವಸ್ತು ಬಹಳ ವೈವಿಧ್ಯಪೂರ್ಣವಾಗಿತ್ತು. ಜನಸಾಮಾನ್ಯರ ತಿಳಿವಳಿಕೆಗಾಗಿ ಅನೇಕ ಧಾರ್ಮಿಕ ನಿಬಂಧಗಳು, ಭಕ್ತಿ ಸಾಹಿತ್ಯ ಕೃತಿಗಳು, ಸ್ತೋತ್ರದ ಪುಸ್ತಕಗಳು ಮತ್ತು ಬೈಬಲ್ ಅನುವಾದಗಳು ಬಂದುವು. ೧೬ನೆಯ ಶತಮಾನದಲ್ಲಿ ಧಾರ್ಮಿಕವಾಗಿ ಪ್ರಾಟೆಸ್ಟೆಂಟ್ ಪಂಥವು ಮೇಲೆ ಬಂದದ್ದು, ಮತ್ತು ಮತ ಸುಧಾರಣೆ (ರಿಫಾರ್ಮೇಷನ್)ಗಳು ದೇಶಭಾಷೆಯಲ್ಲಿ ವಿಪುಲವಾಗಿ ವಿವಾದಾಸ್ಪದ ಸಾಹಿತ್ಯವನ್ನು ಸೃಷ್ಟಿಸಲು ಪ್ರೇರಕವಾದುವು. ತೆಗಳಲು ಅಥವಾ ಪ್ರಭಾವ ಬೀರಲು ಈ ಸಾಹಿತ್ಯ ವಿಪುಲ ಪ್ರಮಾಣದಲ್ಲಿ ಸೃಷ್ಟಿಯಾಯಿತು.

ದೇಶಭಾಷೆಯಲ್ಲಿ ರಾಷ್ಟ್ರೀಯ ಸಾಹಿತ್ಯ ರಚನೆ ಬೃಹತ್ ಪ್ರಮಾಣದಲ್ಲಿ ಕಂಡುಬಂದುದು ರಾಜಕಾರಣ, ಇತಿಹಾಸ ಮತ್ತು ಪ್ರವಾಸ ಕ್ಷೇತ್ರಗಳಲ್ಲಿ. ಉದಾಹರಣೆಗೆ, ಮೆಕೆಯಾವೆಲ್ಲಿಯ ಪ್ರಿನ್ಸ್ ಮತ್ತು ಫ್ಲಾರೆಂಟೈನ್ ಇತಿಹಾಸ; ಗಿಸಿಯಾರ್ಡಿನಿಯ ಇಟಲಿಯ ಇತಿಹಾ; ಸರ್ ಥಾಮಸ್ ಮೋರನ ಯುಟೋಪಿಯ(ಇಂಗ್ಲಿಷಿನಲ್ಲಿ); ಬರ್ಟೊಲೋಮ್ ಡಿಲಾಸ್ ಕಾಸರ್‌ನು ಸ್ಪ್ಯಾನಿಷ್‌ನಲ್ಲಿ ಬರೆದ ಇಂಡೀಸ್ ಇತಿಹಾಸ ಇತ್ಯಾದಿ.

ಮನೋಹರವಾದ, ಕ್ಲಾಸಿಕಲ್ ಅಲ್ಲದ ಗದ್ಯ ಶೈಲಿಯ ಬೆಳವಣಿಗೆಯು ಮಾನವತಾ ವಾದದ ಮುಖ್ಯ ಸಾಹಿತ್ಯಕ ಸಾಧನೆ. ಪತ್ರಸಾಹಿತ್ಯ ಅದರ ವಿಶಿಷ್ಟ ಪ್ರಕಾರ. ಸುದೀರ್ಘ ಚರ್ಚೆಗಳಿದ್ದರೆ ಅದಕ್ಕಾಗಿ ಹ್ಯೂಮನಿಸ್ಟರು ಒಂದು ನಿಬಂಧವನ್ನೇ, ಸಂಭಾಷಣೆಯನ್ನೇ ರಚಿಸುತ್ತಿದ್ದರು. ಗಂಭೀರವಾದ ವಿಷಯಗಳ ಚರ್ಚೆಗಾಗಿ ಸಾಹಿತ್ಯಕ ಕಲ್ಪನೆಯನ್ನು ಸಂಭಾಷಣೆಗೆ ಕೂಡಿಸಲಾಯಿತು. ೧೫೨೮ರಲ್ಲಿ ಇಟಾಲಿನಾದಲ್ಲಿ ಬಲ್ದಾಸರೇ ಕ್ಯಾಸ್ಟಿಗ್ಲಿ ಯೋನ್ ರಚಿಸಿದ ದಿ ಕೋರ್ಟಿಯರ್ ಕೃತಿಯನ್ನು ಉದಾಹರಣೆಯಾಗಿ ಹೇಳಬಹುದು. ಪ್ರೇಮದ ಲಲಿತವಾದ ಚರ್ಚೆ, ಸಭ್ಯ ನಡವಳಿಕೆ, ಸುಸಂಸ್ಕೃತ ಸಭ್ಯನ ಆದರ್ಶ ಶಿಕ್ಷಣ ಇವು ಈ ಕೃತಿಯಲ್ಲಿ ಮಿಳಿತವಾಗಿವೆ.

ಲ್ಯಾಟಿನ್ ಮತ್ತು ಇಟಾಲಿಯನ್‌ಗಳ ನಡುವೆ ಉಳಿವು-ಅಳಿವು ಹೋರಾಟ ೧೪ನೆಯ ಶತಮಾನದಲ್ಲಿ ಪ್ರಾರಂಭವಾಯಿತು. ಮಾನವತಾವಾದಿಗಳು ಇಟಾಲಿಯನ್ ಭಾಷೆಗೆ ಮಾರಕ ವೈರಿಗಳಾದರು. ಡಾಂಟೆ, ಪೆಟ್ರಾರ್ಕ್ಸ್ ಮತ್ತು ಬೇಕಾಸಿಯೋಗಳಿದ್ದರೂ ಅದರ ಬೆಳವಣಿಗೆಯನ್ನು ಅಡಗಿಸಿಬಿಟ್ಟರು. ಮೆಕೆಯಾವೆಲ್ಲಿ, ಅರಿಸ್ಟೋ ಮತ್ತು ಕ್ಯಾಸ್ಟಿಗ್ಲಿಯೋನ್ ದೇಶೀಭಾಷೆಯಲ್ಲಿ ಬರೆದದ್ದು ದೇಶೀಭಾಷೆಗಳ ವಿಜಯವನ್ನು ರಿನೈಸಾನ್ಸ್ ಸಂಸ್ಕೃತಿಗೂ ಅದರ ದೇಶೀಯ ಬೇರುಗಳಿಗೂ ನಡುವೆ ಸಂಪರ್ಕ ಉಳಿಸಿದುದನ್ನು ಸೂಚಿಸುತ್ತದೆ.

ಪ್ರಥಮದರ್ಜೆಯ ಇಟಾಲಿಯನ್ ಕಾವ್ಯವು ೧೫ನೆಯ ಶತಮಾನದ ಬಹುಪಾಲಿನುದ್ದಕ್ಕೂ ಹೆಚ್ಚಾಗಿ ಕಾಣಿಸಿಕೊಳ್ಳಲಿಲ್ಲ. ಇದರಿಂದ ಅನೇಕ ಇತಿಹಾಸಕಾರರು "ಇಲಾಬುವಾನ್ ಸೆಕೊಲೊ" ಭಾಷೆಯ ಮಹಾಯುಗವು ಕಳೆದುಹೋದುದಕ್ಕಾಗಿ ವಿಷಾದಿಸುವಂತೆ ಮಾಡಿದೆ. ಹ್ಯೂಮನಿಸ್ಟ್ ಕ್ಲಾಸಿಸಿಸಂ ಪ್ರವರ್ಧಮಾನಕ್ಕೆ ಬರುತ್ತಿದ್ದಂತೆ ಅದು ಕೊನೆಗೊಂಡಿತು ಎಂದು ಹೇಳಲಾಗಿದೆ. ಈ ಸಮಯದಲ್ಲಿ ಸಾಮಾನ್ಯವಾಗಿ ಕಾವ್ಯ ರಚನಶೀಲತೆಯ ಕೊರತೆ ಕಂಡುಬರುತ್ತದೆ. ಲೋರೆಂಜೋ ಡಿ ಮೆಡಿಚಿಯೊಂದಿಗೆ ಪೋಷಣೆಯ ಕಾಲ ಮುಗಿಯಿತೆಂದು ಅಭಿಪ್ರಾಯಪಡಲಾಗಿದೆ. ಬಹಳ ಪ್ರಭಾವಿಯಾಗಿದ್ದ ಲೊರೆಂಜೋ ೧೫ನೆಯ ಶತಮಾನದ ಕೊನೆಯಲ್ಲಿ ಫ್ಲಾರೆನ್ಸನ್ನು ಆಳುತ್ತಿದ್ದನು. ಅವನು ತನ್ನ ಕಾಲದ ಶ್ರೇಷ್ಠ ಕವಿಗಳಲ್ಲಿ ಒಬ್ಬನು. ಅವನು ಪೆಟ್ರಾರ್ಕನ ಪ್ರಭಾವವನ್ನು ತೋರಿಸಿದನು. ಆದರೆ ತನ್ನ ಪ್ರತಿಭೆಯಿಂದ ಅದನ್ನು ಪರಿಷ್ಕರಿಸಿದನು. ಅವನ ಕಾವ್ಯವು ಬಹುಮುಖಿಯಾದ ಮಾನವನ ರಿನೈಸ್ಸಾನ್ಸ್ ಆದರ್ಶವನ್ನು

ಸಂಗ್ರಹಿಸಿಕೊಡುತ್ತದೆ. ಅವನ ಕಾವ್ಯಗಳಲ್ಲಿ ಕಾಡಿನ ದೃಶ್ಯಗಳು ಮತ್ತು ಬೇಟೆಯ ದೃಶ್ಯಗಳ ವರ್ಣನೆ ಹೇಗೆ ಅವನು ಸಾರ್ವಜನಿಕ ಗಲಿಬಿಲಿ ಜೀವನದಿಂದ ಬಿಡುಗಡೆ ಹೊಂದಲು ಬಯಸಿದ್ದನು ಎಂಬುದನ್ನು ಸೂಚಿಸುತ್ತವೆ.

ಫೆರಾರಾದಲ್ಲಿ, ಆಳುವ ಎಸ್ಟೆ ಕುಟುಂಬದ ಆಶ್ರಯದಲ್ಲಿ ಸಾಹಿತ್ಯ ಮತ್ತು ಕಲೆ ಪ್ರವರ್ಧಮಾನಕ್ಕೆ ಬಂದಿತು. ೧೫ನೆಯ ಶತಮಾನವು ಮುಗಿಯುವಷ್ಟರಲ್ಲಿ ಕೊನೆಯ ಪಕ್ಷ ಒಬ್ಬ ಮಹಾಕವಿಯನ್ನು ನೀಡಿತು. ಅವನೇ ಮಾಟ್ಯೊ ಬುಯಿಯಾರ್ಡೊ. ಅವನು ರೋಲೆಂಡಿನ ಮಹಾಕಾವ್ಯವಾದ ಆರ್ಲಂಡೋ ಇನ್ನಾಮೋರಾಟೋ ಎನ್ನುವ ಕೃತಿಯ ಲೇಖಕ. ೧೬ನೆಯ ಶತಮಾನದ ಕೆಲವು ದೇಶೀಭಾಷಾ ಬರವಣಿಗೆಗಳು ಪೇಗನ್ ಪುನರುಜ್ಜೀವನದ ಬೆಳಕಿನಲ್ಲಿ ಕಲ್ಪಿತವಾದವು. ಅವು ಕ್ಲಾಸಿಕಲ್ ಹ್ಯೂಮನಿಸಂನಿಂದ ಹುಟ್ಟಿದವು. ಮಧ್ಯಯುಗವನ್ನು ಕುರಿತ ಹ್ಯೂಮನಿಸ್ಟರ ತಿರಸ್ಕಾರ ಎಷ್ಟೇ ಇರಲಿ, ರಿನೈಸಾನ್ಸಿನ ಇಟಾಲಿಯನ್ನರು, ತಮ್ಮ ಮಧ್ಯಯುಗದ ಪರಂಪರೆಯ ಕ್ಲಾಸಿಸಂನ್ನು ಮೂಲೋತ್ಪಾಟನ ಮಾಡಲು ಬಿಡಲಿಲ್ಲ.

**ಉತ್ತರ ಯುರೋಪ್‌ನಲ್ಲಿ ರಿನೈಸಾನ್ಸ್**

ಇಟಲಿಯಲ್ಲಿ ಹುಟ್ಟಿದ ರಿನೈಸಾನ್ಸ್ ಇತರ ಯೂರೋಪಿಯನ್ ದೇಶಗಳಿಗೆ ಸುಮಾರು ೧೫೦೦ರ ನಂತರ ಹರಡಿದ್ದುದು ಅನಿವಾರ್ಯವಾಗಿತ್ತು. ಇಟಲಿ ಮತ್ತು ಉತ್ತರ ಯೂರೋಪು ಹೆಚ್ಚು ಹೆಚ್ಚು ನಿಕಟವಾಗುತ್ತಿದ್ದಂತೆ ವಿದ್ಯಾರ್ಥಿಗಳು ಮತ್ತು ಕಲಾವಿದರು ಇಟಲಿಯ ಕೇಂದ್ರಗಳಿಗೆ ಬರುವುದೂ ಹೆಚ್ಚಾಯಿತು. ಜರ್ಮನಿಯಿಂದ ರೊಡೋಲ್ಫಸ್ ಅಗ್ರಕೋಲಾ, ಕೊನ್ರಾಡಸ್ ಸೆಲ್ಟಿಸ್ ಮತ್ತು ಆಲ್‌ಬ್ರೆಕ್ಟ್ ಡ್ಯೂರಾರ್, ಫ್ರಾನ್ಸಿನಿಂದ ಜಾಕ್ಯೂಸ್ ಲಾಫೆರೆ ಡಿ ಇಟಾಪ್ಲೆಸ್, ಇಂಗ್ಲೆಂಡಿನಿಂದ ವಿಲಿಯಂ ಗ್ರೋಸಿನ್ ಮತ್ತು ಥಾಮಸ್ ಲಿನಾಕ್ರೆ ಬಂದರು. ಅದೇ ಸಮಯಕ್ಕೆ ಇಟಾಲಿಯನ್ ವಿದ್ವಾಂಸರು ಆಲ್ಪ್ಸ್ ಪರ್ವತದ ಉತ್ತರಕ್ಕೆ ಲಾಭದಾಯಕವಾದ ಉದ್ಯೋಗಗಳನ್ನು, ಬರವಣಿಗೆಯನ್ನು ಇಷ್ಟಪಟ್ಟು ಆಲಿಸುವ ಶ್ರೋತೃಗಳನ್ನು ಪಡೆದರು. ಈ ಬಗೆಯ ಅಂತರ-ವಿನಿಮಯವು ಬೆಳೆದು ೧೫೦೦ರ ಸುತ್ತಮುತ್ತಲಲ್ಲಿ ಉತ್ತರ ಯೂರೋಪಿನ ಬಹುಭಾಗವು ಸಾಕಷ್ಟು ಸಂಪದ್ಭರಿತವೂ, ರಾಜಕೀಯವಾಗಿ ಸುಭದ್ರವೂ ಆಗಿ ಕಲೆ ಮತ್ತು ಸಾಹಿತ್ಯ ಕೃಷಿಗೆ ಹಿತಕರವಾದ ವಾತಾವರಣವನ್ನು ಒದಗಿಸಿತು. ಇವೆಲ್ಲದರ ನಡುವೆ ಇಟಾಲಿಯನ್ ನಾಗರಿಕತೆಯ ಜ್ಞಾನಮಾಧ್ಯಮದ ಮೇಲೆ ತೀವ್ರವಾದ ಹೊಡೆತದ ನಿರ್ಣಾಯಕವಾದ ಘಟನೆಯೆಂದರೆ ಫ್ರೆಂಚ್ ಧಾಳಿ.

ಎಂಟನೆಯ ಚಾರ್ಲ್ಸ್ ಇಟಲಿಯ ಮೇಲೆ ದಾಳಿ ಮಾಡುತ್ತಾನೆ ಎಂಬುದಾಗಿ ೧೪೯೪ರಲ್ಲೇ ಸವೊನರೋಲನು ಭವಿಷ್ಯ ನುಡಿದಿದ್ದನು. ಅದು ಭಗವಂತನೇ ಒದಗಿಸುವ ಶುದ್ಧೀಕರಣ ಕ್ರಿಯೆ ಎಂದು ಅವನು ಸ್ವಾಗತಿಸಿದ್ದನು. ಸ್ವತಃ ರಾಜ ಎಂಟನೆಯ ಚಾರ್ಲ್ಸ್‌ನೇ ಅದನ್ನು ನಂಬಿದ್ದನು. ೧೪೯೪ ಸೆಪ್ಟೆಂಬರಿನಲ್ಲಿ ಅವನು ಅಪೆನ್ನೈನ್ಸ್ ದಾಟಿ ಇಟಲಿಗೆ ನುಗ್ಗಿದನು. ನೇಪಲ್ಸ್ ರಾಜ್ಯವನ್ನು ಫ್ರೆಂಚ್ ಚಕ್ರಾಧಿಪತ್ಯಕ್ಕೆ ಕೂಡಿಸಿಕೊಳ್ಳಲು ದೃಢಸಂಕಲ್ಪ ಮಾಡಿದ್ದನು. ಅವನು ದೈವಾಂಶ ಸಂಭೂತನಾದ ಎರಡನೆಯ ಚಾರ್ಲಿಮೇನ ಎಂದು ಫ್ರೆಂಚ್ ಮತ್ತು ಇಟಾಲಿಯನ್ ಪ್ರವಾದಿಗಳು ಭವಿಷ್ಯ ಹೇಳಿರುವುದನ್ನು ಅನೇಕರು ನಂಬಿದರು. ನೇಪಲ್ಸ್ ರಾಜ್ಯವನ್ನು ಗೆದ್ದುಕೊಳ್ಳುವುದೇನೋ ಅವನಿಗೆ ಸುಲಭವಾಯಿತು. ಆದರೆ ಅದನ್ನು ಉಳಿಸಿಕೊಳ್ಳುವುದು ಬಹು ಕಷ್ಟವಾಯಿತು. ಸ್ಥಳೀಯವಾದ ಬಂಡಾಯಗಳಿಂದ ಅವನು ಹೆದರಿದನು. ಜೊತೆಗೆ ಹೊಸದೊಂದು ಇಟಾಲಿಯನ್ ಮೈತ್ರಿಕೂಟದ ರಚನೆ, ಸಿಸಿಲಿಯಲ್ಲಿ ಸ್ಪ್ಯಾನಿಷ್ ಸೈನ್ಯಗಳ ಒಗ್ಗೂಡಿಕೆಗಳಿಂದಲೂ ಭೀತನಾಗಿ ೧೪೯೫ರ ವಸಂತ ಋತುವಿನಲ್ಲಿ ನೇಪಲ್ಸ್‌ನಿಂದ ಹೊರಟು ಹೋದವನು ಮತ್ತೆ ಹಿಂದಿರುಗಲಿಲ್ಲ. ಇದರ ಪರಿಣಾಮವಾಗಿ ಸವೊನರೊಲೂನನ್ನು ಸುಳ್ಳು ಭವಿಷ್ಯ ಹೇಳಿದ ಪ್ರವಾದಿ ಮತ್ತು ಕಪಟಿ ಪ್ರವಾದಿ ಎಂದು ಆಪಾದಿಸಿ, ಅವನನ್ನು ಹಿಡಿದು ಚಿತ್ರಹಿಂಸೆಗೊಳಪಡಿಸಿ, ೧೪೯೮ರಲ್ಲಿ ನೇಣಿಗೆ ಹಾಕಿ ಸುಡಲಾಯಿತು.

ಫ್ರೆಂಚ್ ಸೈನಿಕರು ಇಟಲಿಯ ದೃಶ್ಯಗಳನ್ನು ನೋಡಿ ದಿಗ್ಭ್ರಮೆಗೊಂಡು ಮರಳಿದರು. ತಮ್ಮೊಂದಿಗೆ ಸಿಫಿಲಿಸ್ ರೋಗವನ್ನು ಕೂಡ ಕೊಂಡೊಯ್ದರು. ೧೫ನೆಯ ಶತಮಾನದ ಕೊನೆಯ ವರ್ಷಗಳಲ್ಲಿ ಈ ರೋಗವು ಸಾಂಕ್ರಾಮಿಕವಾಗಿ ಯೂರೋಪಿನಾದ್ಯಂತ ಹರಡಿತು. ಮೊದಲನೆಯ ಫ್ರೆಂಚ್ ದಾಳಿಯ ನಂತರದ ವರ್ಷಗಳಲ್ಲಿ ಯೂರೋಪಿನ ಬೇರೆ ಬೇರೆ ಭಾಗಗಳಿಂದ ಸೇರಿಸಿಕೊಳ್ಳಲಾಗಿದ್ದ ಯೋಧರು ಇಟಲಿಯ ನಾಗರಿಕ ಜೀವನವನ್ನು ನೋಡಿ ಆನಂದಿಸುವ ಅವಕಾಶವನ್ನು ಪಡೆದರು. ಆ ಮುಂದಿನ ದಶಕಗಳಲ್ಲಿ ಇಟಲಿಯ ವೈಭವ

ಮತ್ತು ಬೆಂಕಿಯ ಹೊಗೆಯ ನಡುವೆ ಕೊಳ್ಳೆ ಹೊಡೆಯುವ ಕೆಲಸ ಅವಿರತವಾಗಿ ನಡೆದು ೧೫೨೭ರಲ್ಲಿ ಅದು ಶಿಖರವನ್ನು ಮುಟ್ಟಿತು. ಆಗ ಸ್ಪ್ಯಾನಿಷ್ ಮತ್ತು ಜರ್ಮನ್ ಕೂಲಿ ಯೋಧರು ಕಾರ್ಡಿನಲ್‌ರ ಅರಮನೆಗಳನ್ನು ಲೂಟಿ ಮಾಡಿದರು ಮತ್ತು ಸಿಸ್ಟಿನ್ ಚಾಪೆಲ್‌ನಲ್ಲಿ ತಮ್ಮ ಕುದುರೆಗಳನ್ನು ಕಟ್ಟಿದರು.

ಎಂಟನೆಯ ಚಾರ್ಲ್ಸ್ ನಡೆಸಿದ ಇಟಲಿಯ ದಂಡಯಾತ್ರೆ ಮಧ್ಯಯುಗದ ಒಬ್ಬ ಅರಸನ ರೊಮಾಂಟಿಕ್ ಸಾಹಸವೆ ಸರಿ. ಅದರೆ ಇದಕ್ಕೆ ಸರಿಯಾದ ಯೋಜನೆಯಿರಲಿಲ್ಲ. ಅದು ಅವನ ಪ್ರಜೆಗಳ ಅಗತ್ಯಕ್ಕೆ ಸಂಪೂರ್ಣವಾಗಿ ವಿರುದ್ಧವಾಗಿತ್ತು. ರಾಜರು ಮುಂದಿನ ಹಲವು ಶತಮಾನಗಳ ಕಾಲ ಹೀಗೆ ವರ್ತಿಸಿದರು ಎಂಬುದನ್ನು ಇಲ್ಲಿ ನೆನಪಿನಲ್ಲಿಡಬೇಕು. ಇಟಲಿಯ ಮೇಲೆ ನಡೆದ ಫ್ರೆಂಚ್ ದಾಳಿಯು ಆಧುನಿಕ ಯುಗದ ಪ್ರಾರಂಭ ಎಂಬುದಾಗಿ ಇತಿಹಾಸಕಾರರು ಹೇಳಿದ ತೀರ್ಪುಗಳನ್ನು ಒಪ್ಪಿಕೊಳ್ಳುವುದಕ್ಕೆ ಮುಂಚೆ ಇದನ್ನು ತಿಳಿದುಕೊಳ್ಳಬೇಕು. ಏನೇ ಇರಲಿ, ಈ ದಾಳಿಯು ಯೂರೋಪಿನ ರಾಜಕಾರಣದಲ್ಲಿ ಹೊಸ ಅಲೆಯ ಆರಂಭವನ್ನಂತೂ ಗುರುತಿಸಿತು. ಫ್ರಾನ್ಸಿನ ವೆಲೋಯಿ ರಾಜರು ಮತ್ತು ಜರ್ಮನಿಯ ಹಾಬ್ಸ್‌ಬರ್ಗರೂ ಇಟಲಿಯ ರಾಜ್ಯಗಳನ್ನು ಪಗಡೆಕಾಯಿಗಳಂತೆ ಬಳಸಿಕೊಂಡು ಪರಸ್ಪರ ಕಚ್ಚಾಡಿದರು. ಮುಂದಿನ ಅರವತ್ತು ವರ್ಷಗಳ ಕಾಲ ಹೆಚ್ಚು ಕಡಿಮೆ ಪ್ರತಿಯೊಬ್ಬ ಫ್ರೆಂಚ್ ದೊರೆಯೂ ಎಂಡನೆಯ ಚಾರ್ಲ್ಸ್‌ನ ವಿಫಲ ಸಾಹಸದಿಂದ ಪಾಠವನ್ನು ಕಲಿಯದೆ, ಇಟಲಿಯನ್ನು ಗೆಲ್ಲುವ ಕನಸು ಕಂಡರು. ದಕ್ಷಿಣದತ್ತ ಹಾದಿಯು ತೆರೆದಿದೆ, ವಿಜಯವು ಬಹು ಸುಲಭವಾಗಿದೆ ಎಂದು ಭಾವಿಸಿದರು. ಇಟಾಲಿಯನ್ ರಾಜಕಾರಣದ ಸ್ವಯಂ ಆಡಳಿತವನ್ನು ನಾಶಮಾಡಿ ಇಟಲಿಯ ರಾಜ್ಯ ವ್ಯವಸ್ಥೆಯನ್ನೇ ಕೊನೆಗೊಳಿಸಿದರು. ಸದ್ಯದಲ್ಲೇ ರೂಪುಗೊಳ್ಳಲಿದ್ದ ಬೃಹತ್ ಯೂರೋಪಿಯನ್ ರಾಜ್ಯವ್ಯವಸ್ಥೆಯೊಳಗೆ ಅವನ್ನು ವಿಲೀನಗೊಳಿಸಿದರು. ಮೊದಲು ಇಟಾಲಿಯನ್ನರೇ ರೂಪಿಸಿದ್ದ ಶಕ್ತಿ ಸಮತೋಲನ ರಾಜಕಾರಣವನ್ನು ಅದರ ಸದಸ್ಯರು ಈಗ ಅನುಸರಿಸಿದರು. ಅದರ ಜೊತೆಗೆ ಗೂಢಚರ್ಯೆ ಮಾಡಿ ಮಾಹಿತಿ ಸಂಗ್ರಹಿಸುತ್ತಿದ್ದ ರಾಯಭಾರಿಗಳನ್ನು ಉಪಯೋಗಿಸಿಕೊಂಡರು. ಇದೂ ಇಟಾಲಿಯನ್ನರ ತಂತ್ರವೇ. ಯುದ್ಧ ಕಲೆಯಲ್ಲೂ ಇಟಾಲಿಯನ್ನರು ಯುರೋಪಿನಲ್ಲೇ ಶ್ರೇಷ್ಠರಾಗಿದ್ದರು. ಕೂಲಿ ಹತ್ಯಕಾರಿಗಳನ್ನು ಬಳಸುವುದರಲ್ಲಿ ದುರ್ಗಗಳು ಮತ್ತು ಬಯಲು ಕೋಟೆಗಳಲ್ಲಿ ಮತ್ತು ಫಿರಂಗಿಗಳನ್ನು ಹೂಡಲು ಅವರು ಅಪ್ರತಿಮರಾಗಿದ್ದರು. ಆದರೆ ಮುಂದೆ ಅವರಿಂದ ಕಲಿತ ಶಿಷ್ಯರು ಅವರನ್ನು ಸೋಲಿಸಿದರು. ೧೫೯೪ರ ವೇಳೆಗೆ ಫ್ರೆಂಚ್ ಪಡೆ ಈ ವಿದ್ಯೆ ಪಡೆದು ಅತ್ಯುತ್ಕೃಷ್ಟವೆನಿಸಿತು. ಕತ್ತಿ ಕಾಳಗದ ದಳವನ್ನು ಸ್ಪೈಯಿನಿನವರು ಬೆಳೆಸಿಕೊಂಡಿದ್ದರು. ಜೊತೆಗೆ ಪರಿಣಾಮಕಾರಿಯಾಗಿ ದುರ್ಗ ನಿರ್ಮಾಣ, ಶಸ್ತ್ರಸಜ್ಜಿಕೆಗಳನ್ನು ಅವರು ಇಟಾಲಿಯನ್ನರಿಂದಲೂ ಸ್ವಿಸ್ ಜನರಿಂದಲೂ ಕಲಿತು ರೂಢಿಸಿಕೊಂಡಿದ್ದರು.

ಈ ಬಗೆಯ ಹಳೆಯ-ಹೊಸದರ ಮಿಶ್ರ ವಿಧಾನಗಳು ಇಟಲಿಯ ವಿಜಯದ ಪ್ರಯತ್ನಗಳಲ್ಲಿ ಪದೇ ಪದೇ ವಿಫಲವಾದವು. ಮಧ್ಯಯುಗದ ವೀರ-ಪರಾಕ್ರಮಗಳ ದಾಳಿ ಹಿಡಿದ ರಾಜರು ರಿನೈಸಾನ್ಸ್ ಕಾಲದ ಯುದ್ಧ ಮತ್ತು ಸಂಧಿಗಳ ತಂತ್ರವನ್ನು ಅನುಸರಿಸಿ ದರು. ೧೬ನೆಯ ಶತಮಾನದ ದಂಡಯಾತ್ರೆಗಳ ಪ್ರಮಾಣವು ಹೊಸ ಬಗೆಯವಾಗಿದ್ದುವು. ಏಕೆಂದರೆ, ಅರಸರ ಬಳಿ ಈಗ ವಿಪುಲವಾಗಿ ಜನ ಬಲವಿತ್ತು, ಸಂಪನ್ಮೂಲವಿತ್ತು. ಯೂರೋಪಿನಾದ್ಯಂತ "ನೂತನ ಚಕ್ರವರ್ತಿಗಳು" ಎಂದು ಹೆಸರು ಗೊಂಡ ಈ ರಾಜರು ಬಹುಕಾಲದ ಅನಿಶ್ಚಯತೆಯ ನಂತರ ತಮ್ಮ ಪ್ರಭುತ್ವವನ್ನು ಸ್ಥಿರಪಡಿಸುತ್ತಿದ್ದರು.

೧೫ನೆಯ ಶತಮಾನದ ಕೊನೆಯ ವೇಳೆಗೆ ವೆಲೊಯಿ ರಾಜರು ಫ್ರೆಂಚ್ ನೆಲದಿಂದ ಇಂಗ್ಲಿಷರನ್ನು ಹೊರಗಟ್ಟಿದ್ದರು. ಆ ಮೂಲಕ ೧೦೦ ವರ್ಷಗಳ ಯುದ್ಧಕ್ಕೆ ತೆರೆಬಿದ್ದಿತು. ಬರ್ಗಂಡಿ ಮತ್ತು ಬ್ರಿಟನ್ನಿನ ಡಚ್ ಫಲವತ್ತಾದ ಪ್ರದೇಶಗಳು ಫ್ರಾನ್ಸಿಗೆ ಸೇರಿಹೋಗಿ, ಫ್ರೆಂಚ್ ರಾಜ್ಯವು ಅಟ್ಲಾಂಟಿಕ್ ಮತ್ತು ಇಂಗ್ಲಿಷ್ ಕಡಲ್ಗಾಲುವೆಯಿಂದ ಐರ್‌ನೀಸ್ ಮತ್ತು ಹೈರನ್‌ವರೆಗೆ ವ್ಯಾಪಿಸಿತು. ಈ ವಿಶಾಲವಾದ ಪ್ರದೇಶವನ್ನು ಆಳಲು ಒಂದು ದಕ್ಷ ವ್ಯವಸ್ಥೆಯನ್ನು ಮಾಡಲಾಯಿತು. ಯುದ್ಧಕಾಲದ ತೆರಿಗೆಗಳು ಈಗ ಖಾಯಂ ಆದುವು. ಅಧಿಕಾರಿಗಳು ದೇಶಾದ್ಯಂತ ಸಂಚರಿಸುತ್ತಾ ಕ್ರೈಸ್ತಪಾದ್ರಿ ವರ್ಗದಿಂದ ತೆರಿಗೆಗಳನ್ನು ವಸೂಲು ಮಾಡಲು ದೇಶಕ್ಕೆ ಸೇವೆ ಸಲ್ಲಿಸುತ್ತಿದ್ದರು ಆದರೆ ಫ್ರಾನ್ಸ್‌ಗೆ ಸಂಪೂರ್ಣ ಕೇಂದ್ರೀಕರಣವನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಆದರೂ ಬೋಡಿನ್ ತನ್ನ ಸಿಕ್ಸ್‌ಬುಕ್ಸ್ ಆಫ್ ದಿ ಕಾಮನ್‌ವೆಲ್ತ್‌ನಲ್ಲಿ ಫ್ರಾನ್ಸಿನ ರಾಜನೇ ಪರಮ ಪ್ರಭುವೆಂದೂ, ಏಕೆಂದರೆ ಒಟ್ಟಾಗಿ ತನ್ನ ಪ್ರಜೆಗಳೆಲ್ಲರಿಗೂ, ವಿಶೇಷವಾಗಿ ಪ್ರತಿಯೊಬ್ಬರಿಗೂ ನ್ಯಾಯವನ್ನು ಕೊಡುವ ಅಧಿಕಾರ ಅವನಿಗೊಬ್ಬನಿಗೇ ಇದೆಯೆಂದೂ ಬರೆದನು.

ಬೋಡಿನ್ ಹೀಗೆ ಬರೆಯಲು ಇನ್ನೊಬ್ಬ ನಿರಂಕುಶ ದೊರೆ ಸ್ಪೆಯಿನಿನ ಫಿಲಿಪನೂ ಪ್ರೇರಕನಾಗಿರಬಹುದು. ಎರಡನೆಯ ಫಿಲಿಪ್ ಬಂದದ್ದು ಯೋಧ ಕುಲದಿಂದ. ಆದರೂ ಅವನು ತನ್ನ ದಿನಗಳನ್ನು ಸಿಸಿಲಿ, ನೇಪಲ್ಸ್, ಮಿಲಾನ್, ಪೆರು, ಮೆಕ್ಸಿಕೋ ಮತ್ತು ಫಿಲಿಪೀನ್ಸ್‌ಗಳಲ್ಲಿದ್ದ ತನ್ನ ಗವರ್ನರುಗಳು ಕಳಿಸುತ್ತಿದ್ದ ಪತ್ರಗಳನ್ನು ಓದುವುದರಲ್ಲಿ, ಬರೆಯುವುದರಲ್ಲಿ "ರಾಜನಾದ ನಾನು" ಎಂದು ಸಹಿಮಾಡಿ ಅವರಿಗೆ ಕಳಿಸುವುದರಲ್ಲಿ ಕಳೆದನು. ಈ ಬೃಹತ್ ಸಾಮ್ರಾಜ್ಯವು ಸ್ಥಾಪನೆಗೊಂಡದ್ದು ೧೪೬೯ರಲ್ಲಿ. ಆಗ ಆರಗಾನಿನ ಎರಡನೆಯ ಫರ್ಡಿನೆಂಡ್ ಮತ್ತು ಕ್ಯಾಸ್ಟಿಲೆಯ ಇಸಬೆಲಾ ಕೂಡ ಎರಡೂ ಹಿಸ್ಪಾನಿಕ್ ರಾಜ್ಯಗಳನ್ನು ಒಂದುಗೂಡಿಸಿ ಒಂದು ರಾಜವಂಶದಿಂದ ಆಳತೊಡಗಿದರು. ಕ್ಯಾಸ್ಟಿಲ್ ಮತ್ತು ಆರಗಾನ್ ಭಾಗೀದಾರಿಕೆ ಅಷ್ಟು ಹಿತಕರವಾಗಲಿಲ್ಲ. ಒಂದು ಕಡೆ ಶುಷ್ಕ ನೆಲದ ಕುರುಬ ಹಾಗೂ ಚರ್ಚಿನ ಭೂಮಾಲಿಕ ವರ್ಗವು ಇನ್ನೊಂದು ಕಡೆ ಯೂರೋಪಿನೊಂದಿಗೆ ಪ್ರಬಲವಾದ ಸಂಬಂಧಗಳನ್ನು ಹೊಂದಿದ್ದ ಕ್ಯಾಸ್ಟಿಲೆಯ ಗಣಿಗಾರ ವರ್ಗಗಳು ಒಂದು ರಾಷ್ಟ್ರವಾಗಿ ಒಂದುಗೂಡಬೇಕಾದ ಅನಿವಾರ್ಯವಿತ್ತು. ಇದರಿಂದ ಅವರಿಗೆ ಜಾಗತಿಕ ಪ್ರಾಧಾನ್ಯ ದೊರಕುತ್ತಿತ್ತು. ಆದರೆ ಅವರು ಅದಕ್ಕೆ ಸಿದ್ಧರಾಗಿರಲಿಲ್ಲ.

೧೫ನೆಯ ಶತಮಾನದ ಕೊನೆಯ ದಶಕದಲ್ಲಿ ಸ್ಪೇನಿಯರ್ಡರು ಉತ್ತರದಲ್ಲಿ ನವರೆ ರಾಜ್ಯವನ್ನು ಜಯಿಸಿದರು. ಸ್ಪೆಯಿನಿನಲ್ಲಿದ್ದ ಕೊನೆಯ ಮುಸ್ಲಿಂ ಕೋಟೆ ಗ್ರನಾಡಾ ರಾಜ್ಯದ ಮೇಲೆ ಕೂಡ ಅವರು ದಾಳಿ ಮಾಡಿದರು. ಮುಸ್ಲಿಮರು ಮತ್ತು ಯೆಹೂದ್ಯರಿಗೆ ಮತಾಂತರ ಹೊಂದಿ ಇಲ್ಲವೇ ಗಡೀಪಾರು ಶಿಕ್ಷೆ ಅನುಭವಿಸಿ ಎಂದು ಹೇಳುವುದರ ಮೂಲಕ ಧಾರ್ಮಿಕ ಏಕೀಕರಣವನ್ನು ಸಾಧಿಸಲು ಪ್ರಯತ್ನಿಸಿದರು. ಒಂದು ನೂತನ ಮತೀಯ ವಿಚಾರಣಾ ವ್ಯವಸ್ಥೆಯನ್ನೂ ಏರ್ಪಡಿಸಲಾಯಿತು. ಅದನ್ನು ರಾಜನ ಕಡೆಯಿಂದ ನಿಯಂತ್ರಿಸಲಾಯಿತು. ದೇಶದ ಎಲ್ಲೆಗಳನ್ನು ಹೊಸದಾಗಿ ರೂಪಿಸಿದ್ದರಿಂದ, ಕೊಲಂಬಸನನ್ನು ಸಂಶೋಧನೆಯ ಮೇಲೆ ಸಮುದ್ರಯಾನಕ್ಕೆ ಕಳಿಸಲಾಯಿತು. ಅದರಿಂದ ಪಶ್ಚಿಮಾರ್ಧ ಗೋಳವು ಮುಕ್ತವಾಗಿ ತೆರೆದಂತಾಯಿತು. ಅಂತಿಮವಾಗಿ ಹಾಬ್ಸ್‌ಬರ್ಗ್ ನೊಂದಿಗೆ ಸ್ಪೈಯಿನಿನವರು ವಿವಾಹ ನಡೆಸಿ ಹೊಸ ಸಂಬಂಧವನ್ನು ಕುದುರಿಸಿಕೊಂಡರು ಯೂರೋಪಿ ಯನ್ ರಾಜಕಾರಣದ ಹೃದಯಕ್ಕೆ ಸ್ಪೆಯಿನ್ ಸೇರಿಕೊಂಡಂತಾಯಿತು.

ಮುಂದಿನ ದಶಕಗಳಲ್ಲಿ ಕ್ಯಾಸ್ಟಿಲಿಯ ಮಧ್ಯಮ ವರ್ಗದವರು ಅಮೆರಿಕನ್ ಇಂಡಿಯನರ ನೆಲ ಮತ್ತು ದುಡಿಮೆಗಳಿಂದ ಅಪಾರವಾಗಿ ಸಂಪತ್ತನ್ನು ಶೇಖರಿಸಿಕೊಂಡರು. ಇತರರು ತಮ್ಮ ರಾಜ್ಯ ಮೊದಲನೆಯ ಚಾರ್ಲ್ಸ್‌ನೊಂದಿಗೆ ಸೈನ್ಯದಲ್ಲಿ ಸೇರಿಕೊಂಡು ನಡೆದರು ಇಲ್ಲವೆ ನೌಕಾಯಾನ ಮಾಡಿದರು. ಈ ಚಾರ್ಲ್ಸ್‌ನೂ ಐದನೆಯ ಚಾರ್ಲ್ಸ್ ನಂತೆಯೇ ೧೫೧೯ರಲ್ಲಿ ತನ್ನ ೧೯ನೆಯ ವಯಸ್ಸಿನಲ್ಲೇ ಪವಿತ್ರ ರೋಮನ್ ಚಕ್ರವರ್ತಿಯಾಗಿ ಆಯ್ಕೆಯಾದನು. ಅವನು ಸ್ಪ್ಯಾನಿಷ್ ಮತ್ತು ಹ್ಯಾಬ್ಸ್‌ಬರ್ಗ್ ಸಾಮ್ರಾಜ್ಯಗಳನ್ನು ಬಳುವಳಿಯಾಗಿ ಪಡೆದಿದ್ದನು. ಈ ವಿಶಾಲವಾದ ಸಾಮ್ರಾಜ್ಯದ ಆಡಳಿತವನ್ನು ನಿರ್ವಹಿಸಲು ಅವನು ದಿನದಿನವೂ ಹೆಚ್ಚುತ್ತಾ ಹೋದ ವೈಸರಾಯಿಗಳು, ಗವರ್ನರರು, ನ್ಯಾಯಾಧೀಶರು, ಸೈನ್ಯ ಕ್ಯಾಪ್ಟನ್‌ಗಳು, ಕ್ಲಾರ್ಕುಗಳ ಪಡೆ -ಇವರಿಂದ ಕೂಡಿದ ಆಡಳಿತ ಶಾಹಿಯ ಅಧ್ಯಕ್ಷತೆ ವಹಿಸುತ್ತಿದ್ದನು. ಹೊಸದಾಗಿ ಸೇರಿಕೊಂಡ ಭೂಭಾಗವನ್ನು ೧೫೨೪ರ ನಂತರ ಪ್ರತ್ಯೇಕವಾದ ಒಂದು ಇಂಡೀಸ್ ಮಂಡಳಿಯು ಆಳುತ್ತಿತ್ತು. ಮೆಕ್ಸಿಕೋದ ಆ ಬೆಳ್ಳಿಗಣಿಯನ್ನು ತೆರೆದ ಮೇಲೆ ಇವರಿಗೆ ಅಮೆರಿಕವು ಭಾರೀ ಸಂಪತ್ತನ್ನು ಒದಗಿಸಿತು. ಆದರೆ ಅವರ ಐದನೆ ಒಂದು ಭಾಗವನ್ನು ಚಕ್ರವರ್ತಿಯು ತೆಗೆದುಕೊಳ್ಳುತ್ತಿದ್ದನು. ಅದನ್ನು ಒಡನೆಯೇ ಸಾಲಿಗರಿಗೆ ಪಾವತಿ ಮಾಡಲಾಗುತ್ತಿತ್ತು. ಏಕೆಂದರೆ ಚಾರ್ಲ್ಸನು ಸಾಲವೆತ್ತಿಯೋ, ತೆರಿಗೆ ವಿಧಿಸಿಯೋ ಸಂಗ್ರಹಿಸಿದ ಹಣವನ್ನೆಲ್ಲಾ ಅವನು ಇಟಲಿ ಮತ್ತು ಬರ್ಗಂಡಿಗಳಲ್ಲಿ ಫ್ರೆಂಚರ ವಿರುದ್ಧವಾದ ಯುದ್ಧಗಳಲ್ಲಿ ಖರ್ಚು ಮಾಡಿಬಿಟ್ಟಿರುತ್ತಿದ್ದನು. ಹಾಗೆಯೇ ಜರ್ಮನಿಯಲ್ಲಿ ಪ್ರಾಟೆಸ್ಟೆಂಟ್ ರಾಜರ ವಿರುದ್ಧ, ಮೆಡಿಟರೇನಿಯನ್ನಿನಲ್ಲಿ ಟರ್ಕರ ವಿರುದ್ಧ ಯುದ್ಧಗಳಾಗುತ್ತಿದ್ದುವು. ಆದರೆ ೧೫೫೫ ವೇಳೆಗೆ ಚಾರ್ಲ್ಸನ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿತ್ತು. ಪರಿಣಾಮವಾಗಿ ಅವನು ಈಗ ತನ್ನ ಬಿರುದುಗಳನ್ನು ತೊರೆಯತೊಡಗಿದನು. ಅವನ ಮಗ ಫಿಲಿಪ್ ಸ್ಪೆಯಿನ್ ಮತ್ತು ನೆದರ್‌ಲ್ಯಾಂಡನ್ನು ಪಡೆದನು. ಅವನ ಸಹೋದರ ಫರ್ಡಿನೆಂಡನಿಗೆ ಜರ್ಮನಿ ಮತ್ತು ಸಾಮ್ರಾಟ ಪದವಿ ದೊರಕಿತು. ಸೈನಿಕರ ಮತ್ತು ನಾವಿಕರ ವೇತನಗಳನ್ನು ಅಮೆರಿಕಾದ ಬೆಳ್ಳಿಯಿಂದ ಪಾವತಿ ಮಾಡಲಾಯಿತು. ಆದರೆ ಸ್ಪ್ಯಾನಿಷ್ ಸೈನ್ಯವು ಯುದ್ಧರಂಗದಲ್ಲೂ ಯುದ್ಧನೌಕೆಗಳು ಸಮುದ್ರದ ಮೇಲೂ ಇರುವಂತೆ ನೋಡಿಕೊಳ್ಳಲಾಯಿತು. ಇವರಿಗೆ ವಸ್ತುಗಳನ್ನು, ಸೇವೆಯನ್ನು ಬಹುತೇಕ ವಿದೇಶೀಯರು ಪೂರೈಸುತ್ತಾ ಅದರ ಫಲವನ್ನೂ ಬಾಚಿಕೊಳ್ಳು ತ್ತಿದ್ದರು. ಆದರೂ ಶತಮಾನದ ಮಿಕ್ಕ ಅವಧಿಯಲ್ಲಿ ಸ್ಪೆಯಿನ್ ಪ್ರಪಂಚದ ಕಣ್ಣೂ ಕುಕ್ಕಿತು. ಹಣಕಾಸಿನ ಕೊರತೆಯ ವಿಷಯ ಯಾರಿಗೂ ಗೋಚರವಾಗಲಿಲ್ಲ. ಏಕೆಂದರೆ, ಬಂದ ಅರಸರೆಲ್ಲ ಧೈರ್ಯವಂತರಾದ

ದಿಟ್ಟ ರಾಜರು. ಇತರ ಸ್ಥಳಗಳಲ್ಲಿ ಅಂದರೆ ಎಂಟನೆಯ ಹೆನ್ರಿಯ ಇಂಗ್ಲೆಂಡಿನಿಂದ ಮೂರನೆಯ ಐವಾನನ ಮಸ್ಕೊವೈಟ್ ರಾಜ್ಯದವರೆಗೆ ಒಂದು ಕೇಂದ್ರೀಕೃತ ರಾಜ್ಯಭಾರ ವ್ಯವಸ್ಥೆಯು ಬೆಳೆದುಬಂದಿತು. ನೂತನ ಚಕ್ರಾಧಿಪತ್ಯವು ಯೂರೋಪಿನಾದ್ಯಂತ ಬೀಸಿದ ಒಂದು ಭಾರೀ ಅಲೆ. ಅದಕ್ಕೆ ಒಂದು ನಿರ್ದಿಷ್ಟ ಕಾರಣವನ್ನು ಕೊಡಲು ಸಾಧ್ಯವಿರಲಿಲ್ಲ. ಅದು ಆರ್ಥಿಕ ಸಾಮಾಜಿಕ ಮತ್ತು ಜನಸಂಖ್ಯಾತ್ಮಕ ಕಾರಣಗಳ ಒಂದು ಮಿಶ್ರಣವಾಗಿತ್ತು. ಅದರಿಂದಾಗಿ ನೂತನ ಶಕ್ತಿಯ ಉದಯವಾಗಿತ್ತು. ಅದು ನೈಸರ್ಗಿಕವಾದ ಬೆಳವಣಿಗೆಯ ಆವರ್ತನದ ತಿರುವು ಎಂಬುದಾಗಿ ಕೆಲವು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಆದರೆ ೧೪ನೆಯ ಶತಮಾನದಲ್ಲಿ ಮತ್ತು ೧೫ನೆಯ ಶತಮಾನದ ಪ್ರಾರಂಭದಲ್ಲಿ ವ್ಯಕ್ತವಾದ ಆರ್ಥಿಕ ಕುಸಿತವು ಅದನ್ನು ತಿದ್ದುಪಡಿ ಮಾಡಿತು. ಈ ಸಂದರ್ಭದಲ್ಲೇ ಕ್ಷಾಮಗಳು ಮತ್ತು ಸಾಂಕ್ರಾಮಿಕಗಳ ಮೂಲಕ ಯೂರೋಪಿನ ಜನತೆ ತಲ್ಲಣಿಸಿತ್ತು. ಈಗ ನೂತನವಾದ ಬೆಳವಣಿಗೆ ಪ್ರಾರಂಭವಾಯಿತು.

ಸಹಜವಾಗಿಯೇ ಮೊತ್ತ ಮೊದಲು ಅಧಿಕವಾಗುತ್ತಿದ್ದ ಆಹಾರದ ಬೇಡಿಕೆಯನ್ನು ಪೂರೈಸಬೇಕಾಯಿತು. ಪ್ರಚಲಿತವಾಗಿದ್ದ ಉತ್ಪಾದನಾ ವಿಧಾನಗಳ ಜೊತೆಗೆ ನೂತನ ವಿಧಾನಗಳನ್ನು ಬಳಕೆಗೆ ತರಲಾಯಿತು. ಉಣ್ಣೆ, ಕಾಳು ಮೊದಲಾದ ವಾಣಿಜ್ಯ ಬೆಳೆಗಳ ಕಡೆಗೆ ಒಲವು ಹೆಚ್ಚಿದ್ದು, ಬಂಡವಾಳ ಹೂಡಿಕೆ ಮತ್ತು ಗುಲಾಮ ಚಾಕರಿಯ ರದ್ಧತಿ ಇವೆಲ್ಲವುಗಳಿಂದಾಗಿ ಕೃಷಿ ಕ್ಷೇತ್ರದಲ್ಲಿ ಜಹಗೀರು ಪದ್ಧತಿಯು ಇನ್ನಷ್ಟು ಕುಂಠಿತವಾಯಿತು. ಆದರೆ ಪೂರ್ವ ಯೂರೋಪಿನಲ್ಲಿ ಹಿಂದೆ ಸ್ವತಂತ್ರರಾಗಿದ್ದ ರೈತರು ಈಗ ವಿಸ್ತಾರಗೊಳ್ಳುತ್ತಿದ್ದ ಪಾಶ್ಚಾತ್ಯ ಮಾರುಕಟ್ಟೆಗೆ ಆಹಾರ ಧಾನ್ಯಗಳನ್ನು ಪೂರೈಸುವ ಸಲುವಾಗಿ ದುಡಿಯ ತೊಡಗಿದರು. ಯುದ್ಧಸಾಮಗ್ರಿಗಳ ಉತ್ಪಾದನೆ ಅಧಿಕವಾಯಿತು. ಹೊಸದಾದ ಗಣಿಗಾರಿಕೆ ಮತ್ತು ಲೋಹ ಉದ್ಯಮಗಳ ಕಡೆಗೆ ಶ್ರೀಮಂತರು ಆಕರ್ಷಿತರಾದರು. ಮಧ್ಯಜರ್ಮನಿ, ಹಂಗರಿ ಮತ್ತು ಆಸ್ಟ್ರಿಯಗಳ ಕಬ್ಬಿಣ, ತಾಮ್ರ, ಚಿನ್ನ ಮತ್ತು ಬೆಳ್ಳಿ ನಿಕ್ಷೇಪಗಳು ಭಾರೀ ಪ್ರಮಾಣದ ಬಂಡವಾಳ ಹೂಡಿಕೆಗೆ ಅವಕಾಶವನ್ನು ಒದಗಿಸಿದುವು.

**ಉತ್ತರ ಯುರೋಪಿನ ಮಾನವತಾವಾದ (ಹ್ಯೂಮನಿಸಂ)**

ಸ್ಥೂಲವಾಗಿ ಹೇಳುವುದಾದರೆ ಉತ್ತರ ಯೂರೋಪಿನ ರಿನೈಸಾನ್ಸ್ ಕಡಿಮೆ ಪ್ರಮಾಣದಲ್ಲಿ ಸೆಕ್ಯುಲರ್ ಆಗಿತ್ತು. ಉತ್ತರ ಭಾಗದ ಮಾನವತಾವಾದವು ಮೂಲ ಸತ್ವದಲ್ಲಿ ಮತ್ತು ಉದ್ದೇಶದಲ್ಲಿ ಕ್ರಿಶ್ಚಿಯನ್ ಆಗಿತ್ತು. ಇದು ಇಟಾಲಿಯನ್ ಮಾನವತಾ ವಾದದ ಸೆಕ್ಯುಲರ್ ಮಾದರಿಗೆ ವಿರುದ್ಧವಾಗಿದ್ದದ್ದು. ಕ್ರಿಶ್ಚಿಯನ್ ಹ್ಯೂಮನಿಸಂ ಕೇವಲ ಒಂದು ವಿದ್ವತ್ ಕಾರ್ಯಕ್ರಮಕ್ಕಿಂತ ಮಿಗಿಲಾದುದಾಗಿತ್ತು. ತಳಹದಿಯಲ್ಲಿ ಅದು ಕ್ರಿಶ್ಚಿಯನ್ ಜೀವನ ವಿಧಾನ. ಮಾನವತಾವಾದವು ಭಾಷಾತ್ಮಕ, ಐತಿಹಾಸಿಕ ಮತ್ತ ನೈತಿಕ ಒಲವಿನಲ್ಲೇ ತಳವೂರಿ ನಿಂತಿತ್ತು. ಗಾಸ್ಪೆಲನ್ನು ಕ್ರೈಸ್ತ ಧಾರ್ಮಿಕತೆಯ ಕೇಂದ್ರವನ್ನಾಗಿ ಮಾಡಿ, ತಾವು ಜನಸಾಮಾನ್ಯರ ಅಗತ್ಯಗಳನ್ನು ಪೂರೈಸುತ್ತಿರುವುದಾಗಿ ಹ್ಯೂಮನಿಸ್ಟರು ನಂಬಿದ್ದರು. ಮತ ಸಿದ್ಧಾಂತವು ಸರಳವಾದ ನಂಬಿಕೆಯ ಅತಿ ಶುಷ್ಕ ಬೌದ್ಧಿಕ ನಿರೂಪಣೆ ಎಂದು ಅವರು ಖಂಡಿಸಿದರು. ಒಬ್ಬ ಪಾದ್ರಿಯ ಮೂಲಕವಾಗಿ ನಡೆಸುವ ಮತೀಯ ಆಚರಣೆಯ ಮಟ್ಟಕ್ಕೆ ಧರ್ಮವು ಇಳಿಯುವುದನ್ನು ಅವರು ಖಂಡಿಸಿದರು. ಅವಶೇಷಗಳಿಗಾಗಿ ಹಂಬಲಿಸುವುದನ್ನು ಮತ್ತು ಅದರಿಂದ ತೃಪ್ತಿಪಡುವುದನ್ನು ಹ್ಯೂಮನಿಸ್ಟರು ತಮ್ಮ ಬರವಣಿಗೆಗಳ ಮೂಲಕವಾಗಿ ಖಂಡಿಸಿದರು. ಕ್ರಿಶ್ಚಿಯನ್ ಹ್ಯೂಮನಿಸ್ಟರ ಪ್ರಕಾರ ಕ್ರೈಸ್ತಧರ್ಮಗಳ ಮೂಲನಿಯಮ ಪ್ರೇಮತತ್ವ. ಕ್ರಿಸ್ತನಲ್ಲಿ ಕಂಡುಬಂದ ಮಾನವ ಪ್ರೇಮ. ಇದು ಗಾಸ್ಪೆಲ್‌ಗಳ ಮೂಲಕ ನಮಗೆ ತಿಳಿದುಬರುತ್ತದೆ. ಪ್ರೇಮ, ಶಾಂತಿ ಮತ್ತು ಸರಳತೆಗಳು ಒಬ್ಬ ಉತ್ತಮ ಕ್ರಿಶ್ಚಿಯನನ್ನು ರೂಪಿಸುತ್ತವೆ ಎಂದು ಅವರು ತಿಳಿದಿದ್ದರು.

ಡೆಸಿಡೇರಿಯಸ್ ಇರಾಸ್ಮಸ್‌ನು(ಸು. ೧೪೬೭-೧೫೩೬) ಉತ್ತರಭಾಗದ ರಿನೈಸಾನ್ಸಿನ ಕೇಂದ್ರವ್ಯಕ್ತಿ. ರಾಷ್ಟ್ರೀಯ ಗಡಿಗಳನ್ನು ದಾಟಿ ಪ್ರಖ್ಯಾತಿ ಪಡೆದ ಒಬ್ಬ ಶ್ರೇಷ್ಠ ವ್ಯಕ್ತಿ. ಉತ್ತಮ ಕ್ರಿಶ್ಚಿಯನನ ಈ ಪ್ರೇಮತತ್ವವನ್ನು ಅವನು ಮೃದುವಾದ ಹಾಸ್ಯದೊಂದಿಗೆ, ಕೆಲವೊಮ್ಮೆ ಚುಚ್ಚುವ ಹಾಸ್ಯದೊಂದಿಗೆ ಬೆರೆಸಿ ಅಭಿವ್ಯಕ್ತಿಸಿದನು. ೧೫೦೯ರಲ್ಲಿ ಅವರು ರಚಿಸಿದ ಪ್ರೈಸ್ ಆಫ್ ಫಾಲೀ ಎಂಬ ಕೃತಿಯು ಶುಷ್ಕ ಪಾಂಡಿತ್ಯವನ್ನೂ, ಮತ ಧರ್ಮ ಔನತ್ಯವನ್ನು ನಗೆಪಾಟಲು ಮಾಡಿತು. ಕಲೊಕೀಸ್(೧೫೧೮) ಎಂಬ ಕೃತಿಯಲ್ಲಿ ಅವನು ಸಮಕಾಲೀನ ಧಾರ್ಮಿಕ ಆಚರಣೆಗಳನ್ನು ವಿಡಂಬನಾತ್ಮಕ ಪರೀಕ್ಷೆಗೆ ಒಡ್ಡಿದನು. ಗಾಸ್ಪೆಲ್‌ಗಳ ಸರಳವಾದ ಬೋಧನೆಯನ್ನು ಮರೆತುದರ ಫಲವಾಗಿಯೇ ತನ್ನ ಕಾಲದ ಸಮಾಜವು ಭ್ರಷ್ಟಾಚಾರ ಮತ್ತು ಅನೈತಿಕತೆಗಳಲ್ಲಿ ಮುಳುಗಿ ಹೋಗಿದೆ ಎನ್ನುವುದು ಇರಾಸ್ಮಸನ

ಕ್ರಿಶ್ಚಿಯನ್ ಮಾನವತಾವಾದಿ ನಂಬಿಕೆಗಳ ಸಾರಾಂಶವಾಗಿತ್ತು. ಶಿಕ್ಷಣ ಮತ್ತು ಸರಿಯಾದ ರೀತಿಯಲ್ಲಿ ಮನಮುಟ್ಟುವಂತೆ ಮಾತನಾಡಿದರೆ ಈ ಸತ್ಯವನ್ನು ಜನರು ಮನಗಾಣುತ್ತಾರೆ ಎಂದು ಅವನೂ ಅವನ ಅನುಯಾಯಿಗಳೂ ದೃಢವಾಗಿ ನಂಬಿದ್ದರು. ಸೈದ್ಧಾಂತಿಕ ವ್ಯತ್ಯಾಸಗಳಲ್ಲಿ ಅವರಿಗೆ ಆಸಕ್ತಿಯಿರದಿದ್ದರೂ ಅವರು ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳದಾದರು. ಏಕೆಂದರೆ ರಿಫಾರ್ಮೇಷನ್ ಕೂಡ ಆ ವೇಳೆಗೆ ಯೂರೋಪನ್ನು ಆವರಿಸಿತ್ತು. ಇರಾಸ್ಮಸ್ ಮತ್ತು ಅವನ ಅನುಚರರನ್ನು ಕ್ಯಾಥೋಲಿಕರು ಹಾಗೂ ಪ್ರಾಟೆಸ್ಟೆಂಟರಿಬ್ಬರೂ ಸಂದೇಹ ದೃಷ್ಟಿಯಿಂದಲೇ ನೋಡಿದರು.

ಜನಸಾಮಾನ್ಯರಲ್ಲಿ ಕ್ರಿಶ್ಚಿಯನ್ ಮಾನವತಾವಾದವು ಅನೇಕ ರೂಪಗಳಲ್ಲಿ ವ್ಯಕ್ತ ವಾಯಿತು. ಅವುಗಳಲ್ಲಿ ಅನುಭಾವ ಮುಖ್ಯವಾದದ್ದು. ೧೪ನೆಯ ಶತಮಾನದಲ್ಲಿ ಅನುಭಾವಿಕ ಉತ್ಸಾಹದ ಒಂದು ಅಲೆಯು ̄ಹೈರನ್ ನದಿಯುದ್ದಕ್ಕೂ ಪ್ರವಹಿಸಿ, ಸ್ತ್ರೀ ಪುರುಷನನ್ನು ದಿವ್ಯಶಕ್ತಿಯ ಉತ್ಕಟವಾದ ನೇರ ಅನುಭವದ ಆವೇಶಕ್ಕೆ ಒಳಪಡಿಸಿತು. ಮೇಸ್ಟರ್ ಎಕ್‌ಹಾರ್ಟ್ ಬೋಧಿಸಿದ ಜೀವನ ವಿಧಾನವನ್ನು ಅನುಸರಿಸುತ್ತಿದ್ದ ಡೊಮಿನಿಕನ್ ಪಂಥದವರ ಗುಂಪುಗಳಲ್ಲಿ ಅದು ಕೇಂದ್ರೀಕೃತವಾಯಿತು. ಕೆಲವರು ಡೊಮಿನಿಕನ್ ಪಂಥವನ್ನು ಸೇರಿಕೊಂಡರು. ಇತರರು ಒಟ್ಟಾಗಿ "ದೇವರ ಮಿತ್ರರು" ಎಂಬ ಹೆಸರಿನ ಗುಂಪಾದರು. ಈ ವಲಯದ ಅಜ್ಞಾತ ವ್ಯಕ್ತಿಯ **ದಿ ಜರ್ಮನ್ ಥಿಯಾಲಜಿ** ಎಂಬ ಕೃತಿಯು ಹೊರಬಂದಿತು. ಬೈಬಲ್ ಮತ್ತು ಸಂತ ಆಗಸ್ಟೈನನ ಬರವಣಿಗೆಗಳ ಹೊರತು ಬೇರಾವುದರಿಂದಲೂ ಪಡೆಯದಷ್ಟು ಮಾಹಿತಿಯನ್ನು ಮಾನವನ ಮತ್ತು ಭಗವಂತನ ಬಗೆಗೆ ಈ ಕೃತಿಯಿಂದ ತಾನು ಪಡೆದುಕೊಂಡುದಾಗಿ ಲೂಥರ್ ಹೇಳಿರುವುದು ಗಮನಾರ್ಹವಾಗಿದೆ.

ನೆದರ್‌ಲ್ಯಾಂಡ್ಸ್‌ನಲ್ಲಿ ಅನುಭಾವಿಕ ಪ್ರೇರಣೆ ಜಾಗ್ರತಗೊಂಡದ್ದು ಗೆರ್‌ಹಾರ್ಡ್ ಗ್ರೂಟ್‌ನಿಂದ. ಅವನು ಸನ್ಯಾಸಿಯೂ ಅಲ್ಲ, ಪಾದ್ರಿಯೂ ಅಲ್ಲ. ಆದರೆ ನಿಜವಾದ ಆಧ್ಯಾತ್ಮಿಕ ಸಂಯೋಗವು ನೈತಿಕ ಸದ್ವರ್ತನೆಯೊಂದಿಗೆ ಬೆರೆತಿರಬೇಕು ಎಂದು ಅವನು ಬೋಧಿಸಿದನು. ಅವನು ಮರಣಹೊಂದಿದಾಗ, ಅವನ ಅನುಯಾಯಿಗಳು ಬ್ರೆದರನ್ ಆಫ್ ದಿ ಕಾಮನ್ ಲೈಫ್ ಎಂಬ ತಂಡವನ್ನು ಕಟ್ಟಿಕೊಂಡರು. ಇದು ಜರ್ಮನಿಯ ಮೂಲಕ ಹರಡಿತು. ಅದಕ್ಕೆ ಮಠೀಯವಾದ ಬದಲಿಯೊಂದನ್ನು ಆರ್ಡರ್ ಆಫ್ ಕ್ಯಾನನ್ಸ್ ರೆಗ್ಯುಲರ್ ಆಫ್ ಸೇಂಟ್ ಅಗಸ್ಟೈನ್ ಎಂದು ಸ್ಥಾಪಿಸಲಾಯಿತು. ಇದನ್ನು ವಿಂಡ್‌ಶೀಮ್ ಕಾಂಗ್ರಿಗೇಶನ್ ಎಂದು ಕರೆಯಲಾಯಿತು. ಇರಾಸ್ಮಸ್ ಮತ್ತು ಲೂಥರ್ ಈ ಎರಡೂ ಪಂಥಗಳಿಂದ ಜನರು ಪ್ರಯೋಜನ ಪಡೆದರು. ಅತ್ಯಂತ ಪ್ರಭಾವಶಾಲಿಯಾದ ಧಾರ್ಮಿಕ ಗ್ರಂಥಗಳಲ್ಲಿ ಒಂದು ಪ್ರಕಟವಾದದ್ದು ಈ ಸಮಯದಲ್ಲೇ. ಅದು ಥಾಮಸ್ ಕೆಂಪಿಸ್‌ನದೆಂದು ಹೇಳಲಾದ ದಿ ಇಮಿಟೇಷನ್ ಆಫ್ ಕ್ರೈಸ್ಟ್ ಎನ್ನುವುದು.

ಇಮಿಟೇಷನ್ ಕೃತಿಯಿಂದಾಗಿ ತನ್ನ ಬದುಕನ್ನು ಬದಲಾಯಿಸಿಕೊಂಡ ಒಬ್ಬ ವ್ಯಕ್ತಿ ಇಗ್ನೇಷಿಯಸ್ ಲಯೋಲಾ. ಸ್ಪೈಯಿನಿನವನಾದ ಇವನು ಸೊಸೈಟಿ ಆಫ್ ಜೀಸಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ಸ್ಪೈಯಿನಿನ ಅನುಭಾವಿಗಳಲ್ಲಿ ಕೆಲವರು ಸಕ್ರಿಯ ಸುಧಾರಕ ರಾಗಿದ್ದರು. ಅವರು ವಿಪುಲವಾಗಿ ಬರೆಯುತ್ತಿದ್ದರು. ಸೇಂಟ್ ಜಾನ್ ಆಫ್ ದಿ ಕ್ರಾಸ್ ಎನ್ನುವವನ ಅನುಭಾವಿಕ ಕಾವ್ಯವು ಸ್ಪ್ಯಾನಿಷ್ ಸಾಹಿತ್ಯದ ಅಪೂರ್ವ ಕೃತಿಗಳಲ್ಲಿ ಒಂದಾಗಿದೆ.

**ದೇಶಿ ಭಾಷಾ ಸಾಹಿತ್ಯದ ಬೆಳವಣಿಗೆ**

೧೫ನೆಯ ಶತಮಾನದ ಪೂರ್ತಿಯಾಗಿ ಸಾಹಿತ್ಯದ ಮಧ್ಯಯುಗೀನ ರೂಪಗಳೇ ಪ್ರಾಧಾನ್ಯವನ್ನು ಪಡೆದಿದ್ದುವು. ಮಧ್ಯಯುಗದ ಕೊನೆಗೆ ಆಶಾದಾಯಕವಾಗಿ ಪ್ರಾರಂಭವಾದರೂ ಸಾಹಿತ್ಯಕ ಸೃಜನಶೀಲತೆಯು ಲ್ಯಾಟಿನ್ ಪ್ರಾಬಲ್ಯದಿಂದ ಕುಂಠಿತವಾಯಿತು. ಇದರ ಫಲವಾಗಿ ದೇಶೀ ಭಾಷೆಗಳು ಸೊರಗಿದುವು. ಲೇಖಕರು ಒಂದು ವೇಳೆ ದೇಶೀ ಭಾಷೆಯಲ್ಲಿ ಬರೆದರೂ ಅದಕ್ಕೆ ಅವರು ಲ್ಯಾಟಿನನ್ನು ತುಂಬಿದರು. ಕೃತಕವಾಗಿ ಆಲಂಕಾರಿಕ ರೂಪಗಳನ್ನು ಅಡಕಿದರು. ಇದಕ್ಕೆ ೧೪ನೆಯ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಅಪವಾದವು ಕಂಡುಬಂದಿತು. ಅಲ್ಲಿ ವಿಲಿಯಂ ಲ್ಯಾಂಗ್ಲೆಂಡ್, ಜಾನ್ ಗೋವರ್ ಮತ್ತು ತುಂಬಾ ಮುಖ್ಯವಾಗಿ ಜಿಯೋಫ್ರಿ ಚಾಸರ್ ಇವರ ಕೃತಿಗಳಲ್ಲಿ ರಾಷ್ಟ್ರೀಯ ಸಾಹಿತ್ಯವು ವಿಜೃಂಭಿಸಿತು. ಕಷ್ಟಕ್ಕೆ ಸಿಲುಕಿದ ೧೫ನೆಯ ಶತಮಾನದಲ್ಲಿ ದುರ್ಬಲವಾದ ಅನುಕರಣಗಳು ಮಾತ್ರ ಸೃಷ್ಟಿಯಾದುವು.

ಇದಕ್ಕೆ ಇನ್ನೊಂದು ಅಪವಾದ ಫ್ರಾನ್ಸಿನಲ್ಲಿ ಕಂಡುಬಂದ ಚರಿತ್ರೆಯ ರಚನೆ. ಈ ಲೇಖಕರಲ್ಲಿ ಮುಖ್ಯರಾದವರು ಜೀನ್ ಫ್ರಾಯಿಸ್ಸ್ರ್ ಮತ್ತು ಫಿಲಿಪ್ ಡಿ ಕಾಮಿನೆಸ್.

೧೬ನೆಯ ಶತಮಾನವು ರಾಷ್ಟ್ರೀಯ ಸಾಹಿತ್ಯದ ನಿಜವಾದ ಪುನರುಜ್ಜೀವನವನ್ನು ಕಂಡಿತು. ಆಗ ಸಂಭವಿಸಿದ ರಿಫಾರ್ಮೇಷನ್‌ನಲ್ಲಿ ಲೂಥರನು ಬೈಬಲನ್ನು ಜರ್ಮನ್ ಭಾಷೆಗೆ ಅನುವಾದ ಮಾಡಿ, ರಾಷ್ಟ್ರಕ್ಕೆ ಅವರದೇ ಆದ ಒಂದು ಸಾಹಿತ್ಯವನ್ನು ನೀಡಿದನು. ಸ್ಪೆಯಿನಿನಲ್ಲಿ ಅನುಭಾವದ ಜೊತೆಗೆ ಸ್ಪ್ಯಾನಿಷ್ ನಾಟಕವೂ ವಿಕಾಸಗೊಂಡಿತು. ಧಾರ್ಮಿಕ ವಿವಾದಗಳು ಪ್ರಕೋಪಕ್ಕೆ ಹೋಗುತ್ತಿದ್ದಂತೆ, ಚರಿತ್ರಕಾರರು ತಮ್ಮ ತಮ್ಮ ನಿರೂಪಣೆಗಳನ್ನು ದೇಶೀಭಾಷೆಗಳಲ್ಲಿ ದಾಖಲಿಸುತ್ತಿದ್ದರು.

ಸುಧಾರಣೆ (ರಿಫಾರ್ಮೇಷನ್)ಯ ವಸ್ತುವನ್ನು ಒದಗಿಸಿದರೂ ಸಾಹಿತ್ಯಕ ವಿಧಾನಗಳನ್ನು, ಮಾದರಿಗಳನ್ನು ಒದಗಿಸಿದ್ದು ಇಟಲಿ. ಪೆಟ್ರಾರ್ಕನ ಸಾನೆಟ್‌ಗಳು ಫ್ರೆಂಚ್, ಇಂಗ್ಲಿಷ್ ಮತ್ತು ಸ್ಪ್ಯಾನಿಷ್ ಕವಿಗಳ ಮೇಲೆ ಪ್ರಭಾವ ಬೀರಿ ಅವರಿಗೆ ಪ್ರೇರಣೆಯನ್ನು ಒದಗಿಸಿದುವು. ರಿನೈಸಾನ್ಸಿನ ನಿಯೋ-ಕ್ಲಾಸಿಕಲ್ ನಾಟಕವು ನಿಧಾನವಾಗಿ ಮಧ್ಯಯುಗದ ನಿಗೂಢ ನಾಟಕವನ್ನು ಕೊನೆಗೊಳಿಸಿತು.

ಎಲ್ಲ ಆಂದೋಲನಗಳು, ಸಾಹಿತ್ಯಕ, ಬೌದ್ಧಿಕ, ಧಾರ್ಮಿಕ ಚಳವಳಿಗಳನ್ನು ಅರಗಿಸಿ ಕೊಂಡ ಫ್ರಾಂಕಾಯ್ ರೆಬೆಲೇ ತನ್ನ ಗರ್ಗಾ ಚುಯಲ್ ಮತ್ತು ಪಂಟಾಗ್ರುಯಲ್ ಕೃತಿಗಳಲ್ಲಿ ಅವೆಲ್ಲವನ್ನೂ ಅಣಕವಾಡಿದನು. ಸ್ಪೆಯಿನಿನವನಾದ ಮಿಗುತ ಡಿ ಸರ್ವಾಟಿಸ್ ತನ್ನ ಸುಪ್ರಸಿದ್ಧ ಡಾನ್ ಕ್ವಿಕ್ಸೋಟ್ ಕೃತಿಯಲ್ಲಿ ತನ್ನ ದೇಶ ಬಾಂಧವರನ್ನು ಅವರ ಆದರ್ಶ ಮತ್ತು ವಾಸ್ತವಗಳಲ್ಲಿ ಸೆರೆಹಿಡಿದನು. ಇಂಗ್ಲೆಂಡಿನಲ್ಲಿ ಕ್ರಿಸ್ಟೋಫರ್ ಮಾರ್ಲೋ ಮತ್ತು ವಿಲಿಯಂ ಷೇಕ್ಸ್‌ಪಿಯರ್ ಇವರ ಪ್ರತಿಭೆಗಳು ಅರಳಿದುವು. ಅವರು ಮಾನವನ ಅಂತರಂಗದ ಆಳಗಳನ್ನು ಹೊಕ್ಕು ತಡಕಲು ರಿನೈಸಾನ್ಸ್ ನಾಟಕ ರೂಪಗಳನ್ನು ಬಳಸಿಕೊಂಡರು.

**ವಿಜ್ಞಾನ ಮತ್ತು ತಂತ್ರಜ್ಞಾನ**

ಮಧ್ಯಯುಗೀನ ವಿಚಾರದಲ್ಲಿ ದ್ರವ್ಯವು ನಾಲ್ಕು ಮೂಲವಸ್ತುಗಳಿಂದಾದದ್ದು ಎಂದು ಅಭಿಪ್ರಾಯಪಡಲಾಗಿದೆ. ಅವು ಯಾವುವೆಂದರೆ ಮಣ್ಣು, ಗಾಳಿ, ಬೆಂಕಿ ಮತ್ತು ನೀರು. ಇವು ನಿಸರ್ಗದ ವಸ್ತುಗಳನ್ನು ಗೋಚರಿಸುವಂತೆ ಮಾಡುತ್ತವೆ. ಪೃಥ್ವಿಯು ಕೇಂದ್ರವಾಗಿದ್ದು ಅದರ ಸುತ್ತ ಅನೇಕ ವಲಯಗಳಲ್ಲಿ ಬ್ರಹ್ಮಾಂಡದಲ್ಲಿ ನಕ್ಷತ್ರಗಳಿವೆ. ಏಷ್ಯಾ, ಯುರೋಪ್, ಮತ್ತು ಆಫ್ರಿಕಾಗಳು ಭೂಮಿಯಾಗಿವೆ. ದಕ್ಷಿಣದ ವಲಯಗಳು ವಾಸಯೋಗ್ಯವಾಗಿಲ್ಲ. ಸೃಷ್ಟಿಯ ಕೇಂದ್ರವಾದ ಮನುಷ್ಯನು ನಾಲ್ಕು ರಸಧಾತುಗಳಿಂದಾಗಿ ದ್ದಾನೆ. ಅವು ಕೃಷ್ಣಪಿತ್ತ, ಹರಿತಪಿತ್ತ, ಶ್ಲೇಷ್ಮ ಮತ್ತು ರಕ್ತ. ಬ್ರಹ್ಮಾಂಡವು ಮಾನವ ಪ್ರಜ್ಞೆಯಿಂದ ಜೀವಂತವಾಗಿದೆ, ನಕ್ಷತ್ರಗಳು ಘಟನೆಗಳ ಮೇಲೆ ಮತ್ತು ಮನುಷ್ಯರ ಆದೃಷ್ಟದ ಮೇಲೆ ಪ್ರಭಾವವನ್ನು ಹೊಂದಿವೆ ಎಂಬಂಥ ವಿಚಾರಗಳನ್ನು ಹೆಚ್ಚಿನವರು ನಂಬಿದ್ದರು.

ಅರಿಸ್ಟಾಟಲನ ಭೌತವಿಜ್ಞಾನ, ಗಲೆನಿಯ ವೈದ್ಯ ವಿಜ್ಞಾನ, ಟಾಲೆಮಿಯ ಖಗೋಳವಿಜ್ಞಾನ ಮತ್ತು ಕ್ರಿಶ್ಚಿಯನ್ ಮತಧರ್ಮಶಾಸ್ತ್ರ ಇವು ಮನುಷ್ಯನ ಅರಿವಿನಲ್ಲಿ ಪ್ರಧಾನವಾದವು. ವಿಜ್ಞಾನದ ಬೆಳವಣಿಗೆಗೆ ತಡೆಯನ್ನುಂಟು ಮಾಡುವುದು ಜನರ ಮೂಢನಂಬಿಕೆಯೇ ಹೊರತು ಚರ್ಚನದಲ್ಲ. ಪ್ರಕಟಣೆಗಳ ಸೆನ್ಸಾರ್ ವಿಜ್ಞಾನಕ್ಕೆ ಒಂದು ತಡೆಯಾಗಲಿಲ್ಲ. ಕೌನ್ಸಿಲ್ ಆಫ್ ಟ್ರೆಂಡ್‌ಅನ್ನು ಅನುಸರಿಸಿ ಕಾಣಿಸಿಕೊಂಡ ಪ್ರತಿಸುಧಾರಣೆಯವರೆಗೂ ಇದು ಹೀಗೆಯೇ ಇತ್ತು. ೧೪ ಮತ್ತು ೧೫ನೆಯ ಶತಮಾನಗಳ ಉದ್ದಕ್ಕೂ ಇಟಲಿಯಲ್ಲಿ ಮತ ವಿಚಾರಣೆಯು ದುರ್ಬಲವಾಗೇ ಇತ್ತು. ಹಾಗಿದ್ದರೂ ಅಲ್ಲಿ ಶಿಕ್ಷಣವು ಬೇರೆ ಯಾವುದೇ ದೇಶಕ್ಕಿಂತ ತುಂಬಾ ಮುಂದುವರಿದಿತ್ತು. ಇಟಲಿಯ ಖಗೋಳ ವಿಜ್ಞಾನ, ನ್ಯಾಯಶಾಸ್ತ್ರ, ವೈದ್ಯ ವಿಜ್ಞಾನ ಮತ್ತು ಸಾಹಿತ್ಯ ಹತ್ತಾರು ನಾಡುಗಳ ವಿದ್ಯಾರ್ಥಿಗಳಿಗೆ ಕಲಿಯಬೇಕಾಗಿದ್ದ ವಿಷಯಗಳಾಗಿದ್ದವು.

ಹೀಗೆ ಅಂಧಶ್ರದ್ಧೆ ಮತ್ತು ಉದಾರವಾದಗಳ ಈ ವಾತಾವರಣದಲ್ಲಿ ವಿಜ್ಞಾನವು ಸ್ವಲ್ಪ ಮಾತ್ರ ಪ್ರಗತಿಯನ್ನು ತೋರಿಸಿದ್ದರೆ, ಅದಕ್ಕೆ ಕಾರಣ ಸಮಸ್ತ ಆಶ್ರಯವೂ ಕಥೆ ಮತ್ತು ಕಾವ್ಯಗಳಿಗೆ ದೊರಕಿದುದು. ಲಿಯೊನಾರ್ಡೋನಂತಹ ಒಬ್ಬ ವ್ಯಕ್ತಿಯು ಸಮಗ್ರವಾದ ವಿಶ್ವದೃಷ್ಟಿಯನ್ನು ಬೀರಬಲ್ಲವನಾಗಿದ್ದನು. ಅದೇ ಉತ್ಸಾಹಪೂರಿತ ಕುತೂಹಲದಿಂದ ಅವನು ಒಂದು ಡಜನ್ ವಿಜ್ಞಾನಗಳಲ್ಲಿ ಕೈಯಾಡಿಸಬಲ್ಲ ಸಮರ್ಥನಾಗಿದ್ದನು. ಆದರೆ ಅದಕ್ಕೆ ತಕ್ಕ ದೊಡ್ಡ ಪ್ರಯೋಗಾಲಯಗಳಿರಲಿಲ್ಲ. ವಿಚ್ಛೇದನ ಪರೀಕ್ಷೆ ಇನ್ನೂ ತಾನೆ

ಆರಂಭ ಸ್ಥಿತಿಯಲ್ಲಿತ್ತು. ಜೀವಶಾಸ್ತ್ರ ಮತ್ತು ವೈದ್ಯಶಾಸ್ತ್ರಗಳಲ್ಲಿ ನೆರವಾಗಲು ಸೂಕ್ಷ್ಮ ದರ್ಶಕವಿರಲಿಲ್ಲ. ನಕ್ಷತ್ರಗಳನ್ನು ದೊಡ್ಡದಾಗಿ ತೋರಿಸಲು ದೂರದರ್ಶಕಗಳಿರಲಿಲ್ಲ. ರಿನೈಸಾನ್ಸ್ ತನ್ನ ಆತ್ಮವನ್ನು ಕಲೆಗೆ ನೀಡಿತು. ಸಾಹಿತ್ಯಕ್ಕೆ ಸ್ವಲ್ಪ ಉಳಿಸಿತು. ತತ್ವಶಾಸ್ತ್ರಕ್ಕೆ ಸ್ವಲ್ಪ ಉಳಿಸಿತು. ವಿಜ್ಞಾನಕ್ಕೆ ತೀರಾ ಅಲ್ಪ.

ರಿನೈಸಾನ್ಸ್ ಅವಧಿಯಲ್ಲಿ ಮನುಷ್ಯನ ಮನಸ್ಸಿನ ಮೇಲೆ ಮಧ್ಯಯುಗವು ಹೊಂದಿದ್ದ ಹಿಡಿತದ ಸ್ಥಾನದಲ್ಲಿ ಕೊಪರ್ನಿಕಸ್, ವಿಲಿಯಂ ಹಾರ್ವೇ, ಗೆಲಿಲಿಯೋ ಮತ್ತು ಐಸಾಕ್ ನ್ಯೂಟನ್ ಇವರ ಪರಿಕಲ್ಪನೆಗಳು ಮತ್ತು ಸಂಶೋಧನೆಗಳು ಬಂದು ನಿಂತುವು. ಇವರಲ್ಲಿ ರಿನೈಸಾನ್ಸ್ ಕಾಲದಲ್ಲಿ ಜನಿಸಿದವನು ಕೋಪರ್ನಿಕಸ್ ಒಬ್ಬನೇ. ವಿಜ್ಞಾನ ಪ್ರಗತಿ ಬಹುತೇಕ ೧೭ನೆಯ ಶತಮಾನದ ಘಟನೆ. ಪ್ರಾಚೀನ ಗ್ರೀಕ್ ವಿಜ್ಞಾನ ಗ್ರಂಥಗಳ ಅನುವಾದಗಳನ್ನು, ಮೂಲಕೃತಿಗಳನ್ನು ಮಾನವತಾವಾದಿಗಳ ವಿದ್ವತ್ತು ಒದಗಿಸಿತು. ರಿನೈಸಾನ್ಸ್ ತತ್ತ್ವಜ್ಞಾನಿ ಜಕೋಪ ಝಬ್ರೆಲ್ಲಾನು ರೂಪಿಸಿದ ಅನುಗಮನ ಮತ್ತು ನಿಗಮನ ತರ್ಕ ವಿಧಾನಗಳ ಮೂಲಕ ವಿಜ್ಞಾನಿಗಳು ಕೆಲಸ ಮಾಡಿದರು.

ರಿನೈಸಾನ್ಸ್ ದಾಪುಗಾಲುಗಳನ್ನಿಟ್ಟಿದ್ದು ಗಣಿತ ವಿಜ್ಞಾನದಲ್ಲಿ. ಹ್ಯೂಮನಿಸ್ಟರು ಲಿಬರಲ್ ಕಲೆಗಳ ಅಧ್ಯಯನ ಪಟ್ಟಿಯಲ್ಲಿ ಅಂಕಗಣಿತವನ್ನು, ರೇಖಾಗಣಿತವನ್ನೂ ಸೇರಿಸಿದರು. ಒಂದು ಸಂಖ್ಯೆಯು ಜಗತ್ತನ್ನು ಆಳುತ್ತದೆ ಎಂದು ಲಿಯೊನಾರ್ಡೋ ಭಾವಿಸಿದನು. ೧೦ನೆಯ ಶತಮಾನದ ಒಬ್ಬ ವಿಜ್ಞಾನ ಇತಿಹಾಸಕಾರನು, ಆಗ ಬೀಜ ಗಣಿತವನ್ನು ಕುರಿತ ಆಸಕ್ತಿಯು ಜ್ವರದಂತೆ ಹರಡುತ್ತಿತ್ತು ಎಂದಿದ್ದಾನೆ. ಅಷ್ಟು ಮಾತ್ರ ವಲ್ಲ, ಪ್ರಥಮ ಶ್ರೇಣಿಯ ತಾತ್ವಿಕರನ್ನು ಅದು ಸೃಷ್ಟಿಸಿತು. ಅವರಲ್ಲಿ ಮುಖ್ಯರಾದವರು ನಿಕ್ಕೋಲಾ ತಾರ್ತಾಗ್ಲಿಯಾ ಮತ್ತು ಗಿರೋಲಾಮಾ ಕಾರ್ದಾನಾ. ತಾರ್ತಾಗ್ಲಿಯನು ಘನ ಸಮಸ್ಯೆಗಳನ್ನು ಬಿಡಿಸುವ ಒಂದು ವಿಧಾನವನ್ನು ಕಂಡುಹಿಡಿದನು. ಅದನ್ನು ಕಾರ್ದಾನಾನಿಗೆ ಕೊಟ್ಟನು. ಅವನು ಅದನ್ನು ತನ್ನದೇ ಎಂಬಂತೆ ಪ್ರಕಟಿಸಿದನು.

ಇಟಲಿಯ ಅವನತಿಯ ಈ ಕಾಲದಲ್ಲಿ ಸ್ವಲ್ಪ ಮಟ್ಟಿಗಾದರೂ ಗಣನೀಯ ಪ್ರಗತಿ ಕಂಡುಬಂದದ್ದು ವೈದ್ಯವಿಜ್ಞಾನದಲ್ಲಿ ಮಾತ್ರ. ಅದರ ತಳಹದಿ ರಿನೈಸಾನ್ಸ್ ಕಾಲಾವಧಿಯ ಅಂಗರಚನಾ ಶಾಸ್ತ್ರ. ಆಧುನಿಕ ಅನಾಟಮಿಯ ಪರಿಭಾಷೆಯೊಂದಿಗೆ ಸಂಬಂಧ ಹೊಂದಿರುವ ಹೆಸರುಗಳಾದ ವರೋಲಿ, ಊಸ್ಟಾಚಿಯೋ ಮತ್ತು ಫಾಲಿಯೋಪಿಯೋ ಈ ಸಂಕ್ಷಿಪ್ತ ಕಾಲಾವಧಿಗೆ ಸೇರಿದವರು. ಮಠೀಯರು ವೈದ್ಯರೊಂದಿಗೆ ಸಹಕರಿಸಿ, ಪರೀಕ್ಷೆಗಾಗಿ ಶವಗಳನ್ನು ಒದಗಿಸುತ್ತಿದ್ದರು. ಆಂಟೋನಿಯೋ ಬೆನಿವೆನಿ, ಅಲೆಸ್ಸಾಂಡ್ರೋ ಅಖಿಲೆನ್, ಅಲೆಸ್ಸಾಂಡ್ರೋ ಬೆನೆಡೆಟ್ಟ್ ಮತ್ತು ಮರ್ಕಂಟೇನಿಯೋ ಡೆಲ್ಲಾ ಡೊರೇ ಇಂತಹ ತಜ್ಞರು ಅನಾಟಮಿಯನ್ನು ಅರಬ್ಬೀ "ದಾಸ್ಯದಿಂದ" ಬಿಡುಗಡೆ ಮಾಡಿದರು. ಹೀಗಾಗಿ ಅವರು ಗಲೆನ್ ಮತ್ತು ಹಿಪ್ಪೊಕ್ರಿಟೀಸ್ ವರೆಗೆ ಹಿಂದಕ್ಕೆ ಹೋದರು. ಈ ಸಂದರ್ಭದಲ್ಲಿ ಅವರು ಪವಿತ್ರ ಪ್ರಮಾಣಗಳ ಉಸ್ತುವಾರದಾರರನ್ನು ಪ್ರಶ್ನಿಸಿದರು. ಇವರು ದೇಹದ ಒಳರಚನೆಯ ಪರಿಜ್ಞಾನಕ್ಕೆ ಒಂದೊಂದೇ ನರವನ್ನು, ಒಂದೊಂದೇ ಸ್ನಾಯುವನ್ನು, ಒಂದೊಂದೇ ಎಲುಬನ್ನು ಕೂಡಿಸುತ್ತಾ ಬಂದರು. ಶಸ್ತ್ರಚಿಕಿತ್ಸೆಯೂ ಪ್ರಾಚೀನ ಈಜಿಪ್ಟ್ ಮಟ್ಟದ ಸಾಮರ್ಥ್ಯದ ಹಂತಕ್ಕೆ ಏರಿತು.

**ತಂತ್ರಜ್ಞಾನ**

ಮಧ್ಯಯುಗದ ದೃಷ್ಟಿಕೋನಗಳ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಾ ೧೫ ಮತ್ತು ೧೬ನೆಯ ಶತಮಾನದ ಎಂಜಿನಿಯರರು ಮತ್ತು ತಂತ್ರಜ್ಞರು ಅದ್ಭುತ ಸಾಧನೆಗಳನ್ನು ಮಾಡಿದರು. ಇದಕ್ಕೆ ಶುದ್ಧವಿಜ್ಞಾನ ತತ್ವಗಳಿಗಿಂತಲೂ, ಬದಲಾಗುತ್ತಿದ್ದ ಸಾಮಾಜಿಕ ಪರಿಸ್ಥಿತಿ ಹೆಚ್ಚು ಕಾರಣವಾಗಿತ್ತು. ಅತ್ಯಂತ ಮುಖ್ಯವಾದ ತಾಂತ್ರಿಕ ಬೆಳವಣಿಗೆಯೆಂದರೆ ಮುದ್ರಣಾಲಯ. ೧೫ನೆಯ ಶತಮಾನದಲ್ಲಿ ಜರ್ಮನಿಯಲ್ಲಿ ಬಿಡಿ ಅಕ್ಷರಗಳನ್ನು ಜೋಡಿಸಿ ಮುದ್ರಿಸುವ ಪದ್ಧತಿಯನ್ನು ಕಂಡುಹಿಡಿಯಲಾಯಿತು. ಇದರಲ್ಲಿ ತೊಡಗಿಸಿ ಕೊಂಡಿದ್ದವರು ಹಲವು ಮಂದಿಯಾದರೂ ಜೋಹಾನ್ ಗುಟೆನ್‌ಬರ್ಗ್‌ನನ್ನು ಅದರ ಸಂಶೋಧಕನೆಂದು ಕೊಂಡಾಡಲಾಗಿದೆ. ೧೨೫೦ ಮತ್ತು ೧೩೫೦ರ ನಡುವೆ ಚೈನಾದಿಂದ ಮರದ ಅಚ್ಚು ಮುದ್ರಣ ಬಂದಿತ್ತು. ಅರಬ್ಬರು ೧೨ನೆಯ ಶತಮಾನದಲ್ಲಿ ಕಾಗದ ತಯಾರಿಕೆಯನ್ನು ಸ್ಪೆಯಿನಿಗೆ ತಂದಿದ್ದರು. ನೂತನ ಮುದ್ರಣ ಮನೆಯ ಮೂಲ ಫ್ಲೆಮಿಷ್ ತೈಲವರ್ಣ ತಂತ್ರ. ಮೇನ್ ನಗರದ ಮೂವರು, ಗುಟೆನ್‌ಬರ್ಗ್ ಮತ್ತು ಅವನ

ಸಮಕಾಲೀನರಾದ ಜೋಹಾನ್‌ಫಸ್ಟ್ ಮತ್ತು ಪೀಟರ್ ಶಾಫರ್ ಅಂತಿಮವಾಗಿ ಲೋಹದ ಅಚ್ಚುಮೊಳೆಗಳನ್ನು ಎರಕ ಹೊಯ್ದು, ಅವುಗಳನ್ನು ಮರದ ಚೌಕಟ್ಟಿನಲ್ಲಿ ಜೋಡಿಸಿ ಬಿಗಿಪಡಿಸಿದರು. ಈ ಸಂಶೋಧನೆಯು ಕಾಡುಗಿಚ್ಚಿನಂತೆ ವೇಗವಾಗಿ ಹರಡಿ ೧೪೬೭ರಲ್ಲಿ ಇಟಲಿಯನ್ನು ತಲುಪಿತು. ೧೪೭೦ರ ವರ್ಷಗಳಲ್ಲಿ ಹಂಗೇರಿ ಮತ್ತು ಪೋಲೆಂಡ್‌ಗಳಿಗೂ, ೧೪೮೩ ವೇಳೆಗೆ ಸ್ಕ್ಯಾಂಡಿನೇವಿಯಕ್ಕೂ ಕಾಲಿಟ್ಟಿತು. ೧೫೦೦ರ ವೇಳೆಗೆ ಯೂರೋಪಿನ ಮುದ್ರಣಾಲಯಗಳು ೬೦೦೦ ಪುಸ್ತಕಗಳನ್ನು ಮುದ್ರಿಸಿದ್ದುವು. ಮುದ್ರಣದ ಈ ಪ್ರಗತಿಯಿಂದ ಸಮೂಹ ಸಂಪರ್ಕದಲ್ಲಿ ಕ್ರಾಂತಿಯೇ ಆಯಿತು. ಅದಿಲ್ಲದೆ ರಿಫಾರ್ಮೇಷನ್ ಅನ್ನು ಕಲ್ಪಿಸಿಕೊಳ್ಳಲು ಕೂಡ ಸಾಧ್ಯವಿರಲಿಲ್ಲ.

**ಭೌಗೋಳಿಕ ಸಂಶೋಧನೆಗಳು**

ಭೌಗೋಳಿಕ ಸಂಶೋಧನೆ ಸುದೀರ್ಘವೂ, ಜಟಿಲವೂ ಹಾಗೂ ಅನೇಕ ಜನರನ್ನು ಒಳಗೊಂಡ ಒಂದು ಪ್ರಕ್ರಿಯೆ. ಅರಬ್ಬರಿಂದ ಪಡೆದ ನೌಕಾಯಾನ ಸಲಕರಣೆಗಳು, ಹಿಸ್ಪಾನಿಕ್ ಮತ್ತು ಪೂರ್ವ ಆಫ್ರಿಕಾದ ಯಹೂದಿಗಳು ತಯಾರಿಸಿದ ಖಗೋಳ ವೈಜ್ಞಾನಿಕ ಪಟ್ಟಿಕೆಗಳು ಮತ್ತು ಸಾಗರ ನಕ್ಷೆಗಳು, ಸ್ಪೇಯಿನಿನವರು ವಿನ್ಯಾಸ ಮಾಡಿದ ಚೌಕಾಕಾರದ ಕಾಲುವೆಗಳಿಂದ ಕೂಡಿದ ಹಡಗುಗಳು ಇವೆಲ್ಲವೂ ಇಟಾಲಿಯನ್ ನಾವಿಕರು ಸಂಶೋಧನೆಯ ಕ್ಷೇತ್ರದಲ್ಲಿ ಅದ್ಭುತ ಸಾಧನೆಗಳನ್ನು ಮಾಡಲು ಕಾರಣವಾದವು.

ರಿನೈಸಾನ್ಸ್ ಸಂಶೋಧನೆಯು ಪ್ರಾರಂಭವಾದದ್ದು ಪೋರ್ಚುಗೀಸರು ಮೊರಾಕೋದ ಸೆಂಟೋವನ್ನು ಗೆದ್ದುದರಿಂದ (೧೪೧೫). ಇದು ಆಫ್ರಿಕಾದ ದಕ್ಷಿಣ ಕರಾವಳಿಯಲ್ಲಿ ಹಡಗುಗಳನ್ನು ಕಳುಹಿಸಿ ಕೊಡಲು ಹೆನ್ರಿಗೆ ಒಂದು ಆಧಾರ ದೊರಕಿದಂತಾಯಿತು. ೧೪೬೦ರಲ್ಲಿ ಅವನು ಮಡಿದನು. ಆ ವೇಳೆಗೆ ಹೆನ್ರಿಯ ಹಡಗುಗಳು ಗಿನಿಯಾ ಕರಾವಳಿ ಯನ್ನು ತಲುಪಿದ್ದುವು. ೧೪೮೭ರ ವೇಳೆಗೆ ಬಾರ್ಥಾಲೋಮ್ಯು ಡಯಾಸ್ ಗುಡ್ ಹೋಪ್ ಭೂಶಿರಕ್ಕೆ ಹೋಗಿದ್ದನು. ೧೪೯೮ರಲ್ಲಿ ವಾಸ್ಕೋಡಿಗಾಮನು ಭಾರತದ ಮಲಬಾರ್ ಕರಾವಳಿಯಲ್ಲಿ, ಸಂಬಾರ ವಸ್ತುಗಳಿಗಾಗಿ ಬಂದರು ಹಾಕಿ ಹಡಗು ನಿಲ್ಲಿಸಿದ್ದನು.

ಸ್ಪರ್ಧೆಗೆ ತುಸು ತಡವಾಗಿ ಬಂದು, ಮಿಕ್ಕವರ ಸಮಕ್ಕೆ ಬರಲು ಸ್ಪೇಯಿನಿನ ಫರ್ಡಿನೆಂಡ್ ಮತ್ತು ಇಸಬೆಲ್ಲಾ ೧೪೯೨ರಲ್ಲಿ ಜೆನೋಯೇಸ್ ಕ್ರಿಸ್ಟೋಫರ್ ಕೊಲಂಬಸನನ್ನು ಅಟ್ಲಾಂಟಿಕ್ ಸಾಗರದ ಮೂಲಕ ಇಂಡೀಸ್ ಕಡೆಗೆ ಕಳುಹಿಸಿದರು. ಕೊಲಂಬಸನು ಕೆರಿಬಿಯನ್ ಪ್ರದೇಶಕ್ಕೆ ನಾಲ್ಕು ಸಾರಿ ಯಾನ ಮಾಡಿದನು. ದೂರ ಪ್ರಾಚ್ಯಕ್ಕೆ ತಾನು ದಾರಿಯನ್ನು ಕಂಡು ಹಿಡಿದಿರುವುದಾಗಿ ನಂಬಿದನು. ಆದರೆ ಅಮೆರಿಗೊ ವೆಸ್‌ಪುಸಿ ೧೫೦೧-೩ರಲ್ಲಿ ನಡೆಸಿದ ನೌಕಾಯಾನಗಳಿಂದ ನಕ್ಷಾಕಾರರಿಗೆ ಮತ್ತು ವಿದ್ವಾಂಸರಿಗೆ ಒಂದು ವಿಷಯವು ಮನವರಿಕೆಯಾಯಿತು. ಅದೇನೆಂದರೆ ಯೂರೋಪಿಗೂ ಏಷ್ಯಕ್ಕೂ ನಡುವೆ ಒಂದು ವಿಶಾಲವಾದ ಭೂಭಾಗವಿದೆ, ಅದು ಇಂಡಿಯಾ ಅಲ್ಲ. ರೋಡ್ರಿಗೋ ಡಿ. ಸಾಂತೇರಾ ಬರೆದಂತೆ, "ಭಾರತಕ್ಕೆ ಎದುರಾಗಿರುವ ಇದುವರೆಗೆ ನಮಗೆ ತಿಳಿದಿರದ ಒಂದು ಜಗತ್ತಿನ ಭಾಗವಾಗಿದೆ." ಅದೇ ವರ್ಷ, ದಕ್ಷಿಣದಲ್ಲಿ ಮಾರ್ಗವೊಂದನ್ನು ಕಾಣಲು ಅಸಮರ್ಥವಾಗಿ ವೆಸ್ಪೂಸಿ ಅದನ್ನು "ನೂತನ ಜಗತ್ತು" ಎಂದು ಕರೆದನು. ೧೫೧೩ರಲ್ಲಿ ವಾಸ್ಕೋನ್ಯೂನಿಜ್ ಡೆ ಬಲ್ಬೋವಾ ಪೆಸಿಫಿಕ್ ಸಾಗರವನ್ನು ಕಂಡುಹಿಡಿದನು. ೧೫೨೧ರಲ್ಲಿ ಫರ್ಡಿನೆಂಡ್ ಮೆಗೆಲಾನ್ ಪಶ್ಚಿಮದ ಮಾರ್ಗವನ್ನು ಕಂಡುಕೊಂಡನು. ಅದರ ಮೂಲಕ ಅಮೆರಿಕದ ದಕ್ಷಿಣ ತುದಿಯನ್ನು ಸುತ್ತಿಕೊಂಡು ಕೊಲ್ಲಿಯ ಮೂಲಕ ಸಾಗಿದನು. ಇಂದು ಆ ಕೊಲ್ಲಿಗೆ ಅವನ ಹೆಸರೇ ಇದೆ. ಫಿಲಿಪೀನರು ಮೆಗೆಲಾನನನ್ನು ಕೊಂದರು. ಆದರೆ ಅವನ ಸಿಬ್ಬಂದಿಯು ಗೋಳದ ಸುತ್ತ ನೌಕಾಯಾನ ಮಾಡುವ ಸಾಹಸವನ್ನು ಪೂರ್ಣ ಗೊಳಿಸಿದರು. ಪಶ್ಚಿಮಗೋಳಾರ್ಧ ಮತ್ತು ಪೆಸಿಫಿಕ್ ಪ್ರದೇಶಗಳ ನಕ್ಷೆ ತಯಾರಿಕೆ, ಭೂಗೋಳವನ್ನು ಕುರಿತ ಪ್ರಾಚೀನ ಜ್ಞಾನಕ್ಕೆ ಸವಾಲಾಯಿತು. ಪರಿಣಾಮವಾಗಿ, ಭೂಗೋಳ ಕುರಿತ ಪ್ರಾಚೀನ ಜ್ಞಾನವನ್ನು ಇವರು ತಿರಸ್ಕರಿಸಿದರು. ಅದರೊಂದಿಗೆ, ಪ್ರಾಚೀನತೆಯು ಯೂರೋಪಿನ ಮನಸ್ಸುಗಳ ಮೇಲೆ ಅಧಿಕೃತವಾಗಿ ಪ್ರಭಾವವನ್ನೂ ಚಲಾಯಿಸಿತು ಎಂಬ ದೃಷ್ಟಿಯೂ ಬಹುಭಾಗ ಕಣ್ಮರೆಯಾಯಿತು.

**ರಿನೈಸಾನ್ಸ್ ಕಲೆ ಮತ್ತು ವಾಸ್ತುಶಿಲ್ಪ**

ಕಲೆಯ ಇತಿಹಾಸದಲ್ಲಿ ರಿನೈಸಾನ್ಸ್ ಅತ್ಯಂತ ಮಹತ್ವದ ಕಾಲ ಎಂದು ಸಾಂಪ್ರದಾಯಿಕ ವಾಗಿ ಗುರುತಿಸಲಾಗಿದೆ. ಕಲೆಗಳಲ್ಲಿ ವರ್ಣಚಿತ್ರಕಲೆ ಅತಿ ಶ್ರೇಷ್ಠವಾದದ್ದೆಂಬುದರಲ್ಲಿ ಸಂದೇಹವಿಲ್ಲ. ಮಾನವೀಯ ಪರಿಸ್ಥಿತಿಗಳು ಮತ್ತು ಅನುಭವ ರಿನೈಸಾನ್ಸ್ ಕಲೆಯ

ಬೇರು. ವರ್ಣಕಲೆಯನ್ನು ಕುರಿತ ನಿರ್ಬಂಧದಲ್ಲಿ ಆಲ್ಬರ್ಟಿಯ ಚಿತ್ರದಲ್ಲಿ ಕಥನದ ಪ್ರಾಮುಖ್ಯ ಎಷ್ಟೆಂಬುದನ್ನು ಚರ್ಚಿಸುತ್ತಾನೆ. ಕುಟುಂಬ, ಧರ್ಮ, ವರ್ಗ, ರಾಜಕೀಯ ನಿಷ್ಠೆ ಅಥವಾ ಇನ್ನಾವುದೇ ಅಂಶಗಳಿಗೆ ಸಚಿತ್ರವಾಗಿ ಸಂಬಂಧಗೊಂಡ ಮಾವನ ಜೀವಿಗಳು ಕಲೆಯ ವಸ್ತುವಾಗಿ ಪ್ರಾಧಾನ್ಯ ಪಡೆಯುತ್ತಾರೆ. ಕಲೆಯು ದೈವಿಕತೆ ಮತ್ತು ಅಮಾನುಷಕತೆಗಳಿಂದ ಸಹ ಸಂಬಂಧಿಯಾದ ಜೀವನ ಮತ್ತು ಜ್ಞಾನಗಳ ಕಡೆಗೆ ತಿರುಗಿತು. ರಿನೈಸಾನ್ಸಿನಲ್ಲಿ ಅತ್ಯಮೂಲ್ಯ ಪರಿಕಲ್ಪನೆಯೆನಿಸಿದ ಮಾನವಾನುಭಾವವು ಇಲ್ಲಿ ಕೇಂದ್ರವಸ್ತುವಾಯಿತು. ಈ ಮಾನವಾನುಭವವನ್ನು ಕಲೆಯಲ್ಲಿ ಸಾಧಿಸಲು ರಿನೈಸಾನ್ಸ್ ಕಲಾವಿದರು ಕಣ್ಣು ಏನನ್ನು ನೋಡಿತೋ ಅದನ್ನು ಹಾಗೆಯೇ ಪುನರುತ್ಪಾದಿಸುವ ತಂತ್ರವನ್ನು ಬೆಳೆಸಿಕೊಂಡರು. ಎರಡು ಆಯಾಮಗಳ ತಲವಿದ್ದ ರೇಖಾತ್ಮಕ ಅಭಿವ್ಯಕ್ತಿಯು ಈಗ ೧೫ನೆಯ ಶತಮಾನದ ಪ್ರಾರಂಭದಲ್ಲಿ ಬ್ರುನೆಲ್ಲೆಶ್ಚಿ ತಮ್ಮು ಆಲ್ಬರ್ಟಿ ಇವರ ಕೃತಿಗಳಲ್ಲಿ ಮೂರು ಆಯಾಮಗಳದ್ದಾಗಿ ಪರಿವರ್ತಿತವಾಯಿತು. ಹಾಗೆಯೇ ಕಲಾವಿದರು ಪ್ರಕೃತಿಯನ್ನು ಇನ್ನು ಉತ್ತಮವಾಗಿ ಅಭಿವ್ಯಕ್ತಿಸಲು ಸಹಾಯಕವಾಗುವಂತೆ ಅಂಗರಚನಾ ಶಾಸ್ತ್ರ, ಜೀವಶಾಸ್ತ್ರ ಮೊದಲಾದ ವಿಜ್ಞಾನಗಳನ್ನು ಅಧ್ಯಯನ ಮಾಡಲು ತೊಡಗಿದರು. ಹೀಗೆ ನೈಸರ್ಗಿಕತೆಯು ರಿನೈಸಾನ್ಸ್ ಕಲೆಯ ಕೇಂದ್ರ ವಸ್ತುಗಳಲ್ಲಿ ಒಂದಾಯಿತು. ವ್ಯಕ್ತಿಚಿತ್ರಗಳು ಹೆಚ್ಚು ಪ್ರಖರವೂ ಸಜೀವವೂ ಆದವು. ೧೫ನೆಯ ಶತಮಾನದ ಕೊನೆಯ ವೇಳೆಗೆ ಪೂರ್ತಿ ಗುಂಡಾದ ಎದೆ ಪ್ರತಿಮೆಗಳನ್ನು ಮತ್ತು ಹಿತ್ತಾಳೆಯ ಅಶ್ವಾರೋಹಿ ವಿಗ್ರಹಗಳನ್ನು ಮತ್ತೆ ಸೃಷ್ಟಿಸಲಾಯಿತು. ಪ್ರಕೃತಿ ದೃಶ್ಯದ ನಿರೂಪಣೆಯೂ ಸತ್ಯ ಸಮೀಪವಾಯಿತು.

ಪ್ರಾಚೀನತೆಯು ವಾಸ್ತುಶಿಲ್ಪಕ್ಕೂ ಸ್ಫೂರ್ತಿಯನ್ನು ನೀಡಿತು. ಬ್ರುನೆಲೆಶ್ಚಿ ಮತ್ತು ಆಲ್ಬರ್ಟಿ ಪ್ರಾಚೀನ ಅವಶೇಷಗಳನ್ನು ಅಳತೆ ಮಾಡಿ, ಅವುಗಳನ್ನು ಹೇಗೆ ಕಟ್ಟಲಾಗಿತ್ತು ಎಂದು ನಿಯಂತ್ರಿಸಲು ಖಚಿತವಾಗಿ ರೋಮಿಗೆ ಪ್ರಯಾಣ ಮಾಡಿದರು. ರೋಮನ್ ವಾಸ್ತುಶಿಲ್ಪ ವಿಟ್ರೂವಿಯಸನ ಟೆಕ್ಸ್ಟ್‌ಬುಕ್ಸ್ ಆನ್ ಆರ್ಕಿಟೆಕ್ಚರ್ ಕೃತಿಯು ಮರಳಿ ಈ ವಾಸ್ತುಶಿಲ್ಪಗಳಿಗೆ ಅವರ ಸಂಶೋಧನೆಯ ಕೆಲಸಕ್ಕೆ ಅಗತ್ಯವಾದ ತಾತ್ವಿಕ ತಳಹದಿಯನ್ನು ವೈಜ್ಞಾನಿಕವಾಗಿ ಪೂರೈಸಿತು. ಇದರ ಫಲವಾಗಿ ರಿನೈಸಾನ್ಸ್ ಕಾಲದ ಕಟ್ಟಡಗಳು ಪ್ರಾಚೀನ ಭಾಷೆಯನ್ನು ಅರಗಿಸಿಕೊಂಡುವು. ಅವುಗಳ ಅಳತೆಯು ಮಾನವ ಶರೀರದ ಅಳತೆಗೆ ಹೊಂದುವ ಪ್ರಮಾಣದಲ್ಲಿತ್ತು. ಅಥವಾ ತರಬೇತಿ ಪಡೆದ, ಮಾನವತಾವಾದದ ರೀತಿಯ ಶಿಕ್ಷಣವನ್ನು ಪಡೆದ ವೈಚಾರಿಕ ಮತಿಯುಳ್ಳ ವಿದ್ಯಾವಂತ ದಾನಿಗಳಿಗೆ ಹಾಗೂ ವೀಕ್ಷಕರಿಗೆ ಗಣಿತೀಯ ಗುಣಗಳಿಂದ ಆಕರ್ಷಕವಾಗಿದ್ದುವು.

೧೫ನೆಯ ಶತಮಾನದ ಕಲಾವಿದರು ನೆರಳು-ಬೆಳಕಿನ ಪರಿಣಾಮದಲ್ಲೂ ಪ್ರಯೋಗ ಮಾಡಿದರು. ಮೊದಲಬಾರಿಗೆ ಅವರು ಮಾನವ ದೇಹದ ಅಂಗರಚನಾಶಾಸ್ತ್ರವನ್ನು ಅಂಗಾಂಗ ಪ್ರಮಾಣಗಳನ್ನು ಅಧ್ಯಯನ ಮಾಡಿದರು. ತೈಲವರ್ಣಗಳ ಬಳಕೆಯೂ ೧೫ನೆಯ ಶತಮಾನದಲ್ಲಿ ಕಂಡುಬಂದಿತು. ಖಾಸಗಿ ಸಂಪತ್ತು ಅಧಿಕವಾದುದರಿಂದ ಕಲೆಯು ಧರ್ಮದ ವಲಯದ ನಿರ್ಬಂಧದಿಂದ ಮುಕ್ತವಾಯಿತು. ಧಾರ್ಮಿಕ ವಸ್ತುಗಳ ಜೊತೆಗೆ ಧಾರ್ಮಿಕವಲ್ಲದ ವಸ್ತುಗಳು ಬೆರೆತುಕೊಂಡುವು. ಮಾನವಾತ್ಮದ ಸುಪ್ತ ರಹಸ್ಯವನ್ನು ಬಯಲುಪಡಿಸುವಂತೆ ವ್ಯಕ್ತಿಚಿತ್ರಗಳ ನಿರ್ಮಾಣ ನಡೆಯಿತು.

ಬಹುತೇಕ ವರ್ಣಚಿತ್ರಕಾರರು ಫ್ಲಾರೆನ್ಸಿನಿಂದ ಬಂದವರು. ಇವರಲ್ಲಿ ಪ್ರಮುಖನಾದವನು ಮೊದಲಿನ ಮಸಾಚಿಯೋ (೧೪೦೧-೧೪೨೮). ಇವನು ರೇಖೆಗಳನ್ನು ನೆರಳುಗಳ ಪರಿಣಾಮವನ್ನು ಬಳಸಿಕೊಂಡು ಪ್ರಕೃತಿಯನ್ನು ಅನುಕರಿಸಿದನು. ಅವನ ಟ್ರಿನಿಟಿ ಹಾಗೂ ಎಕ್ಸ್‌ಪಲ್‌ಶನ್ ಆಫ್ ಆ್ಯಡಂ ಎಂಡ್ ಈವ್ ಫ್ರಂ ದಿ ಗಾರ್ಡನ್ ಬಹಳ ಮಹತ್ವದ ಕಲಾಕೃತಿಗಳು.

ಸಾಂಡ್ರೋ ಬೊಟ್ಟಿಚೆಲ್ಲಿ (೧೪೪೪-೧೫೧೦) ಕೂಡ ಮಸಾಚಿಯೋನನ್ನೇ ನೇರವಾಗಿ ಅನುಸರಿಸಿದನು. ಕ್ಲಾಸಿಕಲ್ ಹಾಗೂ ಧಾರ್ಮಿಕ ವಸ್ತುಗಳನ್ನು ಅವರು ಚಿತ್ರಿಸಿದನು. ಸ್ತ್ರೀ ನಗ್ನ ಚಿತ್ರಗಳಿಗೆ ಅವನು ಪ್ರಸಿದ್ಧನಾಗಿದ್ದಾನೆ. ಆದರೆ ಅವನ ಬಹುಮುಖ್ಯ ಕೊಡುಗೆಯು ನಿಯೋ-ಪ್ಲೇಟಾನಿಸ್ಟ್ ದರ್ಶನದಿಂದ ಮೂಡಿಬಂದುದು. ಅವನ ಪ್ರಸಿದ್ಧವಾದ ಎರಡು ಚಿತ್ರಗಳೆಂದರೆ, ದಿ ಅಲೆಗೊರಿ ಆಫ್ ದಿ ಸ್ಪ್ರಿಂಗ್ ಹಾಗೂ ದಿ ಬರ್ತ್ ಆಫ್ ವೀನಸ್. ಇದು ಪ್ರಾಚೀನ ಪ್ರೇಮದೇವತೆ ವೀನಸ್ ಅಥವಾ ಅಫ್ರೊಡೈಟೆಯನ್ನು ಕುರಿತ ನೂತನ ಪ್ಲೇಟೋ ಸಿದ್ಧಾಂತದ ಪರಿಕಲ್ಪನೆಗಳನ್ನು ಚಿತ್ರಿಸುತ್ತದೆ. ಆಮೇಲೆ ಅವನ ಸವೋನರೊಲಾನ ಪ್ರಭಾವಕ್ಕೆ ಒಳಗಾದನು.

ಕಲಾವಿದರಲ್ಲಿ ಅತ್ಯಂತ ಶ್ರೇಷ್ಠನಾದವನು ಲಿಯೊನಾರ್ಡೋ ಡ ವಿಂಚಿ (೧೪೫೨-೧೫೧೯). ವಾಸ್ತವವಾಗಿ ಅವನು ರಿನೈಸಾನ್ಸ್ ಮನುಷ್ಯನ ಸಾಕಾರವಾಗಿದ್ದನು. ಅವನೊಬ್ಬ ಚಿತ್ರ ಕಲಾವಿದ, ವಾಸ್ತುಶಿಲ್ಪಿ, ಸಂಗೀತಗಾರ, ಗಣಿತಜ್ಞ, ಎಂಜಿನಿಯರ್ ಮತ್ತು ಸಂಶೋಧಕ. ಅವನ ಚಿತ್ರಕಲೆಯು ಇಟಲಿಯಲ್ಲಿ ರಿನೈಸಾನ್ಸಿನ ಅತ್ಯುನ್ನತ ಹಂತವನ್ನು ತೊಡಗಿತು. ನಿಸರ್ಗವಾದಿಯಾಗಿ, ಚಿತ್ರಕಲೆಯನ್ನು ಕುರಿತ ಅವನ ವಿಧಾನ ಎಷ್ಟು ಸಾಧ್ಯವೋ ಅಷ್ಟು ಪ್ರಕಾರವಾಗಿ ನಿಸರ್ಗವನ್ನು ಅನುಕರಿಸುವುದು. ಶವಪರೀಕ್ಷೆಗೂ ಮಾನವಮೃತ ದೇಹಗಳನ್ನು ಪಡೆದು ಅನಾಟಮಿಯ ಬಹು ಸೂಕ್ಷ್ಮ ವಿವರಗಳುಳ್ಳ ಚಿತ್ರವನ್ನು ಬರೆಯಲು ಅವನು ಶಕ್ತನಾದನು. ಅವನ ಅತ್ಯಂತ ಶ್ರೇಷ್ಠ ಕಲಾಕೃತಿಗಳು ವರ್ಜಿನ್ ಆಫ್ ದಿ ರಾಕ್ಸ್, ದಿ ಲಾಸ್ಟ್ ಸಪ್ಪರ್ ಮತ್ತು ಮೋನಾಲಿಸಾ ಎಂಬುದಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ.

ಸುಮಾರು ೧೪೯೦ನೆ ಇಸವಿ ರಿನೈಸಾನ್ಸಿನ ಉನ್ನತ ಹಂತದ ಪ್ರಾರಂಭ ಎಂದು ಹೇಳಬಹುದು. ಆಗಲೇ ವೆನೇಷಿಯನ್ ಪಂಥವು ಉದಯಿಸಿತು. ಅದರ ಮುಖ್ಯ ಸದಸ್ಯರು ಗಿಯೋವನಿ ಬೆಲ್ಲಿನಿ(೧೪೨೬-೧೫೧೬), ಜಿಯೋರ್ಜಿಯೋನ್(೧೪೭೮-೧೫೧೦) ಮತ್ತು ಟಿಟಿಯನ್(೧೪೭೭-೧೫೭೬). ಈ ಲೇಖಕರ ಬಹುತೇಕ ಕೃತಿಗಳು ತಿನೇಷಿಯನ್ ಪಂಥದ ವಾಣಿಜ್ಯ ವ್ಯವಸ್ಥೆಯು ಪ್ರವರ್ಧಮಾನಕ್ಕೆ ಬರುತ್ತಿದ್ದುದನ್ನೂ ಅದ್ದೂರಿಯ ಜೀವನ ಮತ್ತು ಭೋಗಾಸಕ್ತಿಗಳನ್ನೂ ಪ್ರತಿಬಿಂಬಿಸಿದುವು. ಫ್ಲಾರೆಂಟೈನ್ ಪಂಥದ ಲಕ್ಷಣವಾದ ದಾರ್ಶನಿಕ ಹಾಗೂ ಮನೋವೈಜ್ಞಾನಿಕ ವಸ್ತುಗಳಲ್ಲಿ ಅವರಿಗೆ ಕಾಳಜಿ ಇರಲಿಲ್ಲ. ಇಂದ್ರಿಯಗಳಿಗೆ ಆಕರ್ಷಕವಾಗುವ ಗುಣ ಇಲ್ಲಿ ಮುಖ್ಯವಾಗಿತ್ತು. ನೈಸರ್ಗಿಕ ದೃಶ್ಯಗಳಲ್ಲದೆ ಆಭರಣಗಳ ಕೃತಕ ವೈಭವ, ಗಾಢವರ್ಣದ ಸ್ಯಾಟಿನ್ ಇವುಗಳ ಬಳಕೆಯಲ್ಲಿ ಅವರಿಗೆ ತುಂಬಾ ಆಸಕ್ತಿಯಿತ್ತು. ಅವರು ನಿರ್ಮಿಸಿದ ವ್ಯಕ್ತಿಚಿತ್ರಗಳು ಶ್ರೀಮಂತವಾಗಿದ್ದುವು ಮತ್ತು ಶಕ್ತಿಯುತವಾಗಿದ್ದುವು. ರೂಪ ಮತ್ತು ಅರ್ಥಗಳು ಬಣ್ಣಕ್ಕೆ ಅಧೀನವಾದುವು. ಮಧ್ಯಯುಗದಲ್ಲಿ ಬೈಜಾಂಟಿಯಂ ಮೂಲಕ ಇಳಿದು ಬಂದ ಪೌರ್ವಾತ್ಯ ಪ್ರಭಾವ ಕಂಡುಬಂದದ್ದು ಇಲ್ಲಿಯೇ.

ಮಿಕ್ಕ ರಿನೈಸಾನ್ಸ್ ಕಲಾವಿದರು ೧೬ನೆಯ ಶತಮಾನದಲ್ಲಿ ತಮ್ಮ ಸಾಧನೆಯನ್ನು ತೋರಿಸಿದರು. ಅವರಲ್ಲಿ ಅರ್ಬಿನೋದ ರಾಫೇಲ್ (೧೪೮೩-೧೫೨೦) ಮುಖ್ಯನಾದವನು. ಅವನ ಶೈಲಿಯ ಆಕರ್ಷಣೆಗೆ ಬಹುಮಟ್ಟಿಗೆ ಕಾರಣ ಅವನಲ್ಲಿದ್ದ ಉದಾತ್ತ ಮಾನವತಾವಾದ. ಅವನು ಮಾನವರನ್ನು ಸಮಚಿತ್ತ ವೃತ್ತಿಯ, ಜ್ಞಾನಿಗಳಾದ, ಗಂಭೀರ ಸ್ವಭಾವದ ವ್ಯಕ್ತಿಗಳಾಗಿ ಚಿತ್ರಿಸಿದನು. ಲಿಯೋನಾರ್ಡೋನಿಂದ ಪ್ರಭಾವಿತನಾಗಿದ್ದರೂ ರಾಫೇಲನು ಹೆಚ್ಚು ಸಾಂಕೇತಿಕವೂ ಆಲಂಕಾರಿಕವೂ ಆದ ವಿಧಾನವನ್ನು ಅನುಸರಿಸಿದನು. ಅವನ ಡಿಸ್ಪ್ಯೂಟಾ ಕೃತಿಯು, ಸ್ವರ್ಗದಲ್ಲಿನ ಚರ್ಚು ಮತ್ತು ಈ ಲೋಕದಲ್ಲಿನ ಚರ್ಚುಗಳ ನಡುವೆ ಇರುವ ತಾತ್ವಿಕ ಸಂಬಂಧವನ್ನು ಸಂಕೇತಿಸಿತು. ಅವನ ಸ್ಕೂಲ್ ಆಫ್ ಅಥೆನ್ಸ್ ಎನ್ನುವುದು ಪ್ಲೇಟೋನ ಮತ್ತು ಅರಿಸ್ಟಾಟಲ್‌ನ ದರ್ಶನಗಳ ನಡುವಣ ಸಂಘರ್ಷದ ರೂಪಕ ಅಭಿವ್ಯಕ್ತಿ. ರಾಫೇಲ್ ವ್ಯಕ್ತಿಚಿತ್ರಗಳಿಗೆ ಮತ್ತು ಕನ್ಯೆ ಮೇರಿಯ ಚಿತ್ರಗಳಿಗೆ ಪ್ರಸಿದ್ಧನಾಗಿದ್ದಾನೆ. ಮೇರಿ ಚಿತ್ರಗಳಿಗೆ ಒಂದು ವಿಶೇಷ ಮಾರ್ದವತೆಯನ್ನು ಅವನು ಕೊಟ್ಟನು. ಲಿಯೊನಾರ್ಡೋ ಚಿತ್ರಿಸಿದ ತೊಡಕಾದ “ಮೆಡೋನಾ” ಚಿತ್ರಗಳಿಗಿಂತ ಅವು ಬಹುಮಟ್ಟಿಗೆ ಬೇರೆಯಾಗಿದ್ದುವು.

ರಿನೈಸಾನ್ಸ್ ಉಚ್ಛ್ರಾಯದ ಕೊನೆಯ ಕಲಾವಿದ ಮೈಕೇಲೆಂಜಲೋ (೧೪೭೫-೧೫೬೪). ಇವನು ಫ್ಲಾರೆನ್ಸಿನವನು. ಇವನೊಬ್ಬ ಆದರ್ಶವಾದಿ ಮತ್ತು ನಿಯೋಪ್ಲೇಟಾನಿಸಂ ಅನುಸರಿಸಿದವನು. ಹಾಗಾಗಿ, ಶಾಶ್ವತವಾದ, ಅಮೂರ್ತವಾದ ಸತ್ಯಗಳನ್ನು ಅಭಿವ್ಯಕ್ತಿಸು ವುದರಲ್ಲಿ ಅವನಿಗೆ ತುಂಬಾ ಆಸಕ್ತಿಯಿತ್ತು. ಅವನ ವರ್ಣಚಿತ್ರಗಳ ಕೇಂದ್ರ ಮಾನವ ಆಕೃತಿ. ಕಟ್ಟುಮಸ್ತಾದ, ಬೃಹತ್ ಶರೀರದ, ಭವ್ಯ ನಿಲುವಿನ ಮನುಷ್ಯನನ್ನು ಅವನ ಕೃತಿಗಳಲ್ಲಿ ನೋಡಬಹುದು. ಅವನ ಅತಿಶ್ರೇಷ್ಠ ರಚನೆಗಳು ಚಿತ್ರಿತವಾದ ಸ್ಥಳ ರೋಮಿನ ಸಿಸ್ಟೈನ್ ಚಾಪಲ್ ಚಾವಣಿಯ ಮೇಲೆ. “ಜೆನಿಸಿಸ್” ದೃಶ್ಯಗಳನ್ನು ನಿರೂಪಿಸುವ ಭವ್ಯವಾದ ಭಿತ್ತಿಚಿತ್ರಗಳನ್ನು ಅವನು ಚಿತ್ರಿಸಿದ್ದಾನೆ. ಈ ಎಲ್ಲ ಚಿತ್ರಪಟ್ಟಿಕೆಗಳೂ ಒಬ್ಬ ತರುಣ ಕಲಾವಿದನು ಪ್ರಾಚೀನ ಗ್ರೀಕ್ ಸೌಂದರ್ಯಶಾಸ್ತ್ರಕ್ಕೆ, ಸಾಮರಸ್ಯ, ಘನತೆ, ಗಂಭೀರ ಸಂಯಮ ಇವುಗಳಿಗೆ ಬದ್ಧನಾಗಿರುವುದನ್ನು ಸೂಚಿಸುತ್ತವೆ. ಕಾಲು ಶತಮಾನದ ನಂತರ ಅವನು ಸಿಸ್ಟೈನ್ ಚಾಪಲ್‌ಗೆ ಹಿಂದಿರುಗಿದಾಗ ಅವನ ಶೈಲಿ ಮತ್ತು ಭಾವಗಳು ನಾಟಕೀಯವಾಗಿ ಬದಲಾಗಿದ್ದುವು. ೧೫೩೬ರಲ್ಲಿ ಅಟ್ಲಾಸ್ ಗೋಡೆಯ ಮೇಲೆ ಬೃಹದಾಕಾರದ ಒಂದು ಭಿತ್ತಿ ಚಿತ್ರ ಲಾಸ್ಟ್ ಜಡ್ಜ್‌ಮೆಂಟ್ ಅನ್ನು ಮೈಕೇಲೆಂಜಲೋ ರಚಿಸಿದನು. ಅದರಲ್ಲಿ ಬಿಗುವಾದ, ವಿಕೃತವಾದ ಒಂದು ಶೈಲಿ, ಮಾನವತೆಯನ್ನು

ಕುರಿತ ನಿರಾಶಾಯುತ ಪರಿಕಲ್ಪನೆಯುಳ್ಳ, ಹೆದರಿಕೆಯಿಂದ ಜರ್ಜರಿತವಾದ, ಅಪರಾಧಿ ಭಾವದಿಂದ ಕುಗ್ಗಿಹೋದ ಮುದುಕನ ಚಿತ್ರವನ್ನು ಸಂವಹಿಸುವುದಕ್ಕಾಗಿ ಆ ಶೈಲಿಯನ್ನು ರೂಪಿಸಿದ್ದನು.

**ಸಂಗೀತ**

ವರ್ಣಚಿತ್ರ ಮತ್ತು ಶಿಲ್ಪಕಲೆಗಳ ಜೊತೆಗೆ ರಿನೈಸಾನ್ಸ್ ಪರಿಶ್ರಮದ ಅತ್ಯುಜ್ವಲವಾದ ಇನ್ನೊಂದು ಮುಖ ಸಂಗೀತ. ಮಧ್ಯಕಾಲೀನ ಕ್ರೈಸ್ತ ಪ್ರಪಂಚದಲ್ಲಿ ವಿಕಾಸಗೊಂಡಿದ್ದ ಸ್ವತಂತ್ರ ಸಂಗೀತವು ಸಹಜವಾಗಿ ಹರಿದುಬಂದಿತು. ಚರ್ಚಿನ ಸೇವೆಯಲ್ಲಿ ತರಬೇತಿ ಪಡೆದಿದ್ದವರ ನಾಯಕತ್ವವು ದೊರಕಿತು. ಆದರೆ ಸೆಕ್ಯುಲರ್ ಸಂಗೀತಕ್ಕೂ ಈಗ ಮನ್ನಣೆ ದೊರಕಿತು. ಪವಿತ್ರ ಧಾರ್ಮಿಕ ಸಂಗೀತಕ್ಕೆ ರಂಗನ್ನು ಭಾವವಶತೆಯನ್ನು ಲೌಕಿಕ ಸಂಗೀತವು ತುಂಬಿತು. ೧೪ನೆಯ ಶತಮಾನದಲ್ಲಿ ರಿನೈಸಾನ್ಸ್ ಪೂರ್ವ ಅಥವಾ ರಿನೈಸಾನ್ಸ್ ಪ್ರಾರಂಭಿಕವಾದ ಸಂಗೀತ ಚಳವಳಿ ಅರ್ಸ್‌ನೋವಾ(ನೂತನ ಕಲೆ) ಇಟಲಿ ಮತ್ತು ಫ್ರಾನ್ಸ್‌ಗಳಲ್ಲಿ ಪ್ರಚುರವಾಗಿತ್ತು. ಅಸಾಮಾನ್ಯ ಸಂಗೀತ ರಚನೆಕಾರರಲ್ಲಿ ಪ್ರಮುಖರಾದವರು- ಫ್ರಾನ್ಸಿಸ್ಕೋ ಲ್ಯಾಂಡಿನಿ(ಸು.೧೩೨೫-೧೩೯೭) ಮತ್ತು ಗಿಲೋಮ್ ಡಿ ಮಚಾಟ್ (೧೩೦೦-೧೩೭೭). ಅರ್ಸ್‌ನೋವಾಕ್ಕೆ ಸೇರಿದ ಮಾಡ್ರಿಗಲ್‌ಗಳು, ಬ್ಯಾಲಡ್‌ಗಳು, ಹಾಡುಗಳು ಶ್ರೀಮಂತವಾದ ಸೆಕ್ಯುಲರ್ ಸಂಗೀತದ ಹಿನ್ನೆಲೆಯಾಗಿದ್ದಕ್ಕೆ ಸಾಕ್ಷಿಯಾಗಿವೆ. ಆದರೆ ತುಂಬ ಸಂಕೀರ್ಣವಾದ ಆದರೆ ನವುರಾದ ಸ್ವರ ಸಂವಾದ ಶೈಲಿಯನ್ನು ಬೈಬಲ್ ವಚನಗಳ ಹಾಡುಗಾರಿಕೆಗೆ ಅಳವಡಿಸಿದ್ದು ಆ ಕಾಲದ ಅತಿಶ್ರೇಷ್ಠ ಸಾಧನೆಯಾಗಿದೆ.

೧೫ನೆಯ ಶತಮಾನದಲ್ಲಿ ಫ್ರೆಂಚ್, ಫ್ಲೆಮಿಷ್ ಮತ್ತು ಇಟಾಲಿಯನ್ ಸಂಯೋಜನೆ ಯನ್ನು ಸಂಗೀತದಲ್ಲಿ ಗುರುತಿಸಬಹುದು. ಬರ್ಗಂಡಿಯ ಡ್ಯೂಕನ ಆಸ್ಥಾನದಲ್ಲಿ ಈ ಸಂಯೋಜನೆಯ ಉಗಮವಾಯಿತು. ರೋಲಾಂಡ್ ಡಿ ಲಾಸಸ್ (೧೫೩೨-೧೫೯೪) ಆ ಕಾಲದ ಅತ್ಯಂತ ಶ್ರೇಷ್ಠ ಪ್ರತಿಭಾವಂತ ಸಂಗೀತಕಾರನಾಗಿದ್ದ ಮತ್ತು ಇಟಾಲಿಯವನಾದ ನಿಯೋವನಿ ಪೀಲ್ರುಗಿಡ ಪ್ಯಾಲೆಸ್ಟ್ರಿನಾ (ಸು. ೧೫೨೫-೧೫೯೪). ಇವರುಗಳನ್ನು ೧೬ನೆಯ ಶತಮಾನದ ದ್ವಿತೀಯಾರ್ಧದಲ್ಲಿ ರಾಷ್ಟ್ರೀಯ ಫ್ರಾಂಕೋ-ಫ್ಲೆಮಿಷ್ ಶೈಲಿಯ ಮುಂದಾಳು ಗಳು ಎನ್ನಲಾಗಿದೆ. ನಿಯೋವನಿಯು ರೋಮಿನಲ್ಲಿ ಪೋಪರ ಆಶ್ರಯದಲ್ಲಿ ಕ್ಯಾಥೋಲಿಕ್ ಚರ್ಚಿನ ಸರ್ವಿಸ್‌ಗಳಿಗಾಗಿ ಸಮೂಹ ಗಾಯನವನ್ನು ರಚಿಸಿದನು. ತುಂಬ ಸಂಕೀರ್ಣವಾದ ಪೊಲಿಫೋನಿಕ್ ಸಮೂಹಗಾಯನ ಅವನ ವೈಶಿಷ್ಟ್ಯವಾಗಿತ್ತು. ೧೬ನೆಯ ಶತಮಾನದ ಇಂಗ್ಲೆಂಡಿನಲ್ಲಿ ವಿಲಿಯಂ ಬಿರ್ಡ್(೧೫೪೩-೧೬೨೩) ಪ್ರಸಿದ್ಧನು. ಅವನು ರಿನೈಸಾನ್ಸ್ ಕಾಲದ ಶ್ರೇಷ್ಟ ಫ್ಲೆಮಿಷ್ ಮತ್ತು ಇಟಾಲಿಯನ್ ಕೃತಿಕಾರರಿಗೆ ಸಮನಾಗಿದ್ದನು.

ಉಪಸಂಹಾರವಾಗಿ ಹೀಗೆ ಹೇಳಬಹುದು: ರಿನೈಸಾನ್ಸಿನ ಪರಿಕಲ್ಪನೆಯು ಮಿಚೆಲೆಗಾಗಲಿ ಬರ್ಕ್‌ಹಾರ್ಟನಿಗಾಗಲಿ ಕೊನೆಗೆ ರಿನೈಸಾನ್ಸಿನ ಮಾನವವಾದಿಗಳಿಗಾಗಲಿ ಮಿತಿಯಾಗಲಿಲ್ಲ. ಮಧ್ಯಯುಗವನ್ನು ಕತ್ತಲಯುಗವೆಂದು ಕರೆಯುವ ಕಾಲ ಈಗಿಲ್ಲ. ರಿನೈಸಾನ್ಸ್ ಮಧ್ಯ ಯುಗದ ಕತ್ತಲಿನಿಂದ ದಿಢೀರನೆ ಹುಟ್ಟಿಬರಲಿಲ್ಲ. ಮಧ್ಯಯುಗ ಸಮಾಜದ ನಾಗರಿಕ ಸ್ಥಿತಿಗತಿ, ಅತಿ ಸೂಕ್ಷ್ಮವಾದ ಬೌದ್ಧಿಕ ಪರಿಸರ ಇವುಗಳಿಂದ ಜೈವಿಕವಾಗಿ ವಿಕಾಸಗೊಂಡಿತು ಎಂಬ ಅರಿವು ಬೆಳೆಯಿತು.

ಇಂದು ರಿನೈಸಾನ್ಸ್ ಇಟಲಿಯಿಂದ ಯುರೋಪಿನ ಇತರ ಕೇಂದ್ರಗಳಿಗೆ ತನ್ನ ಆಸಕ್ತಿ ಯನ್ನು ವರ್ಗಾಯಿಸಿದೆ. ಇಂದಿನ ಪರಿಕಲ್ಪನೆಯ ರಿನೈಸಾನ್ಸಿನಲ್ಲಿ ನೂತನ ಸಾಮ್ರಾಜ್ಯಗಳ ಬೆಳವಣಿಗೆ, ಮುದ್ರಣದ ವಿಕಾಸ, ಹೊಸ ಭೂಭಾಗಗಳ ಸಂಶೋಧನೆ, ೧೬ನೆಯ ಶತಮಾನದ ಆರ್ಥಿಕ ಚೇತರಿಕೆ ಇವೆಲ್ಲ ಸೇರಿವೆ. ಆದರೂ ಬೌದ್ಧಿಕ ದಿಗಂತದಲ್ಲಿ ಇಟಲಿಯು ತನ್ನ ಪ್ರಭುತ್ವವನ್ನು ಉಳಿಸಿಕೊಳ್ಳುತ್ತದೆ. ಏಕೆಂದರೆ, ಆಧುನಿಕ ಸಂಸ್ಕೃತಿಯ ಮೇಲೆ ಆಗಿರುವ ಇಟಾಲಿಯನ್ ಮಾನವತಾವಾದದ ಪ್ರಭಾವವನ್ನು ಎಷ್ಟು ಮಾತ್ರಕ್ಕೂ ಅವಗಣಿಸುವಂತಿಲ್ಲ. ಲೌಕಿಕ ಸಂಸ್ಕೃತಿ, ನಾಗರಿಕ ಸಮಾಜದ ಬೆಳವಣಿಗೆ ಮತ್ತು ಅಭಿವೃದ್ಧಿ, ಇವು ಕಾಣಿಸಿಕೊಂಡಂತೆ, ಬೌದ್ಧಿಕ, ಕಲಾ ಮತ್ತು ಧಾರ್ಮಿಕ ಜೀವನದ ಮಠೀಯ ನಾಯಕತ್ವವು ಪ್ರಾಬಲ್ಯವನ್ನು ಕಳೆದುಕೊಳ್ಳುತ್ತಾ ಹೋಯಿತು. ಧಾರ್ಮಿಕ ಜೀವನವು ತುಂಬಾ ಕಟ್ಟುನಿಟ್ಟಿನದಾಗಿತ್ತು. ಸಾಮಾನ್ಯರಿಗೆ ಅದನ್ನು ಅನುಸರಿಸುವುದು ಸಾಧ್ಯವಾಗುತ್ತಿರಲಿಲ್ಲ. ಹ್ಯೂಮನಿಸಂ ಎನ್ನುವುದು ಒಂದು ಕ್ರಾಂತಿ,

ಒಂದು ಸೆಕ್ಯುಲರ್ ಜೀವನ ಕ್ರಮದ ಸಮರ್ಥನೆಯಾಯಿತು. ಇಚ್ಛಾಶಕ್ತಿಯನ್ನು ಹ್ಯೂಮನಿಸ್ಟರು ಒತ್ತಿ ಹೇಳಿದರು. ಮನುಷ್ಯನ ಜೀವನವು 'ಪಾತ್ರಧಾರಿ'ಯದೇ ಹೊರತು ಬೇರೆ ಯಾರಿಂದಲೋ ಅಭಿನೀತವಾದ ಪಾತ್ರವಲ್ಲ ಎಂದು ಹೇಳಿದರು.

ರಿನೈಸಾನ್ಸ್ ಮತ್ತು ರಿಫಾರ್ಮೇಷನ್ ಎರಡೂ ಆಧುನಿಕ ಜೀವನದ ಎರಡು ಚಿಲುಮೆಗಳು. ಮನಸ್ಸನ್ನು ನಿರ್ಬಂಧದಿಂದ ಮುಕ್ತಿಗೊಳಿಸಿದುದಕ್ಕಾಗಿ, ಸುಂದರಗೊಳಿಸಿದ್ದ ಕ್ಕಾಗಿ ಜನತೆ ರಿನೈಸಾನ್ಸಿಗೆ ಋಣಿಯಾಗಿರಬೇಕು; ಹಾಗೆಯೇ ಧಾರ್ಮಿಕ ನಂಬಿಕೆಯನ್ನೂ, ನೈತಿಕ ಪ್ರಜ್ಞೆಯನ್ನು ಜಾಗೃತಗೊಳಿಸಿದ್ದಕ್ಕಾಗಿ ರಿಫಾರ್ಮೇಷನ್‌ಗೆ ಅಭಾರಿಯಾಗಿರಬೇಕು.

<u>ಪರಾಮರ್ಶನ ಗ್ರಂಥಗಳು</u>

೧. ಬೇರನ್ ಹ್ಯಾನ್ಸ್,೧೯೬೬. **ದಿ ಕ್ರೈಸಿಸ್ ಆಫ್ ದಿ ಅರ್ಲಿ ಇಟಾಲಿಯನ್ ರಿನೈಸಾನ್ಸ್,** ೨ನೆಯ ಆವೃತ್ತಿ.

೨. ಜೇಕಬ್ ಬರ್ಕ್‌ಹಾರ್ಟ್, ೧೯೫೧. **ದಿ ಸಿವಿಲೈಸೇಷನ್ ಆಫ್ ದಿ ರಿನೈಸಾನ್ಸ್ ಇನ್ ಇಟಲಿ,** ೨ನೆಯ ಆವೃತ್ತಿ.

೩. ಡೋನಿಸ್ ಹೇ, ೧೯೫೭, **ದಿ ನ್ಯೂ ಕೇಂಬ್ರಿಡ್ಜ್ ಮಾಡರ್ನ್ ಹಿಸ್ಟರಿ–ದಿ ರಿನೈಸಾನ್ಸ್ (೧೪೯೩–೧೫೨೦).**

೪. ಕ್ರಿಸ್ಟೆಲರ್, ಪಾಲ್ ಆಸ್ಕರ್, ೧೯೬೧-೬೫. ***ರಿನೈಸಾನ್ಸ್ ಥಾಟ್,*** ೨ನೆಯ ಸಂಪುಟ.

# ೧೦. ಸುಧಾರಣೆ ಯುರೋಪಿನ ಧಾರ್ಮಿಕ ಬಿಕ್ಕಟ್ಟು

ತುಂಬ ಸಂಕುಚಿತ ಹಾಗು ಸಾಮಾನ್ಯ ಅರ್ಥದಲ್ಲಿ, "ಸುಧಾರಣೆ" ಅಂದರೆ ೧೬ನೆಯ ಶತಮಾನದಲ್ಲಿ ಪಾಶ್ಚಿಮಾತ್ಯ ಚರ್ಚನ್ನು ಇಬ್ಭಾಗ ಮಾಡಿದ ಆಧ್ಯಾತ್ಮಿಕ ಬಿಕ್ಕಟ್ಟಿಗೆ ಕೊಟ್ಟಿರುವ ಹೆಸರಾಗಿರುತ್ತದೆ. ಪುನರುತ್ಥಾನದ ಇತಿಹಾಸಕಾರನಾದ ಜಕೋಬ್ ಬರ್ಕ್‌ಹಾರ್ಟ್ ಈ ಸುಧಾರಣಾ ಕಾಲವು ಚರ್ಚನ್ನು ನೆಲಸಮ ಮಾಡಿ ಪೋಪನ ಆಡಳಿತವನ್ನು ಉಳಿಸಿದೆ ಎಂದು ತೀರ್ಮಾನಿಸಿರುತ್ತಾನೆ.

ಸುಧಾರಣೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಸುಧಾರಣೆ ಏಕೆ ಅವಶ್ಯಕವಾಗಿತ್ತು ಮತ್ತು ಯಾವ ವಿಷಯಗಳಿಂದ ಪ್ರೇರಿತವಾಯಿತು ಎಂಬುದನ್ನೂ ಅರ್ಥಮಾಡಿ ಕೊಳ್ಳಬೇಕಾಗುತ್ತದೆ. ಕಾನ್‌ಸ್ಟಾಂಟೈನ್‌ನಿಂದ ಡಾಂಟೆಯವರೆಗೆ ಆರಂಭದ ಸುಮಾರು ಸಾವಿರ ವರ್ಷಗಳ ಕಾಲ ಕ್ರೈಸ್ತ ಧರ್ಮ ಮತ್ತು ಚರ್ಚು, ಜನರಿಗೆ ಮತ್ತು ರಾಜ್ಯಗಳಿಗೆ ಧರ್ಮದ ಕೊಡುಗೆಯನ್ನು ನೀಡುತ್ತಾ ಬಂದಿತ್ತು. ತನ್ನ ಅನುಯಾಯಿಗಳು ನೀಡುತ್ತಿದ್ದ ಸಾಂತ್ವನದಿಂದ, ತನ್ನ ಆಚರಣೆಗಳ ಮಾಂತ್ರಿಕತೆಯಿಂದ, ತನ್ನ ಅವಲಂಬಿಗಳ ಉದಾತ್ತ ನೀತಿಗಳಿಂದ, ತನ್ನ ನ್ಯಾಯಾಲಯಗಳ ಉನ್ನತ ತೀರ್ಪುಗಳಿಂದ ರೋಮನ್ ಸಾಮ್ರಾಜ್ಯದ ಅನಂತರದ ಕತ್ತಲ ಯುಗದಲ್ಲಿ ಶಾಂತಿ ಮತ್ತು ಶಿಸ್ತನ್ನು ನೀಡಿದ ಏಕೈಕ ವ್ಯವಸ್ಥೆ ಕ್ರೈಸ್ತ ಧರ್ಮವಾಗಿತ್ತು ಮತ್ತು ತನ್ನ ಔನ್ನತ್ಯದಲ್ಲಿತ್ತು. ಇಟಲಿ, ಗಾಲ್, ಬ್ರಿಟನ್ ಮತ್ತು ಸ್ಪೈಯಿನ್ ರಾಷ್ಟ್ರಗಳಲ್ಲಿ ಅನಾಗರಿಕತೆ ತುಂಬಿ ತುಳುಕುತ್ತಿದ್ದ ಸಮಯದಲ್ಲಿ ಯೂರೋಪ್ ಖಂಡದ ನಾಗರಿಕತೆಯನ್ನು ಉದ್ದೀಪನಗೊಳಿಸಿದ ಕೀರ್ತಿ ಕ್ರೈಸ್ತ ಧರ್ಮಕ್ಕೆ ಸೇರುತ್ತದೆ. ಸುಮಾರು ಸಾವಿರ ವರ್ಷಗಳ ಕಾಲ ಕ್ರೈಸ್ತ ಧರ್ಮವು ಯುರೋಪಿನ ವಿದ್ವಾಂಸರು, ಉಪಾಧ್ಯಾಯರು, ರಾಜತಂತ್ರಜ್ಞರು, ನ್ಯಾಯಾಧೀಶರನ್ನು ತರಬೇತುಗೊಳಿಸಿತ್ತು; ಮಧ್ಯ ಯುಗದ ರಾಜ್ಯಗಳು ಚರ್ಚನ್ನೇ ಸಂಪೂರ್ಣವಾಗಿ ಅವಲಂಬಿಸಿದ್ದವು. ಯುರೋಪಿನಲ್ಲಿ ಕತ್ತಲಯುಗ ಕೊನೆಗೊಂಡಾಗ, ವಿಶ್ವವಿದ್ಯಾನಿಲಯಗಳು, ಗೋಥಿಕ್ ಮಾದರಿಯ ಗೋಪುರಾಕಾರದ ಚರ್ಚ್‌ಗಳನ್ನು ನಿರ್ಮಿಸಿ ಸದಾಚಾರ ಮತ್ತು ಬೌದ್ಧಿಕತೆಗೆ ಚರ್ಚ್ ಆಶ್ರಯ ನೀಡಿತ್ತು. ಇದೆಲ್ಲಕ್ಕೂ ಮಿಗಿಲಾಗಿ, ಚರ್ಚು ತಾನು ಉತ್ತುಂಗ ಶಿಖರದಲ್ಲಿ ರಾರಾಜಿಸುತ್ತಿದ್ದಾಗ, ಐರೋಪ್ಯ ರಾಷ್ಟ್ರಗಳಿಗೆ ಅಂತರ ರಾಷ್ಟ್ರೀಯ ನೀತಿಗಳನ್ನು, ಸರಕಾರಗಳನ್ನು ಕಲ್ಪಿಸಿಕೊಟ್ಟಿತ್ತು. ಆಧ್ಯಾತ್ಮಿಕ

ನಾಯಕತ್ವ ಮತ್ತು ದೈವಿಕ ನೆಲೆಯ ಮೇಲೆ ಚರ್ಚು ತನ್ನನ್ನೇ ಒಂದು ಅಂತರ ರಾಷ್ಟ್ರೀಯ ನ್ಯಾಯಾಲಯ ಎಂದು ಭಾವಿಸಿಕೊಂಡು, ಉಳಿದೆಲ್ಲ ರಾಷ್ಟ್ರಗಳು ನೈತಿಕವಾಗಿ ಅದಕ್ಕೆ ತಲೆಬಾಗುವಂತೆ ಮಾಡಿತ್ತು. ಏಳನೆಯ ಪೋಪ್ ಗ್ರೆಗೋರಿಯು ಕ್ರೈಸ್ತ ಐರೋಪ್ಯ ಗಣರಾಜ್ಯ ಎಂಬ ನೀತಿಯನ್ನು ರಚಿಸಿದ್ದನು. ಇದನ್ನು ಮತ್ತೆ ಚಕ್ರವರ್ತಿ ನಾಲ್ಕನೆಯ ಹೆನ್ರಿ ಮತ್ತು ಫ್ರೆಡರಿಕ್ ಬಾರ್ಬೋಸೊಸ್, ಮೂರನೆಯ ಅಲೆಗ್ಸಾಂಡರ್‌ಗಳು ಬಲಪಡಿಸಿದರು. ಅನಂತರ ೧೧೯೮ರಲ್ಲಿ ಮೂರನೆಯ ಪೋಪ್ ಇನ್ನೋಸೆಂಟನು ಏಳನೆಯ ಪೋಪ್ ಗ್ರೆಗೊರಿಯ ಕನಸು ನನಸಾಗುವಂತೆ ಪೋಪ್‌ನ ಅಧಿಕಾರವನ್ನು ಮತ್ತು ಘನತೆಯನ್ನು ಹೆಚ್ಚಿಸಿದನು. ಆದರೆ ಈ ಬೃಹತ್ ಕಲ್ಪನೆ ಮನುಷ್ಯನಲ್ಲಿರುವ ಪ್ರಕೃತಿದತ್ತ ದೌರ್ಬಲ್ಯದಿಂದಾಗಿ ಕ್ರಮೇಣ ಮುರಿದುಬಿತ್ತು. ಶ್ರೀಮಂತ ರಾಷ್ಟ್ರವಾಗಿ ಬೆಳೆಯುತ್ತಿದ್ದ ಫ್ರಾನ್ಸಿನ ದೊರೆ ನಾಲ್ಕನೆಯ ಫಿಲಿಪ್ಪನು ತನ್ನ ದೇಶದ ಚರ್ಚಿನ ಆಸ್ತಿಯ ವಿಷಯದಲ್ಲಿ ಏಳನೆಯ ಬೋನಿಫೇಸ್ ಪೋಪನನ್ನು ಪ್ರಶ್ನಿಸಿದನು. ಪೋಪನನ್ನು ಸೆರೆ ಹಿಡಿದು ಬಂಧಿಸಲಾಗಿ ಮೂರು ದಿನಗಳ ನಂತರ ಸೆರೆಯಲ್ಲಿಯೇ ಪೋಪನು ಮರಣ ಹೊಂದಿದನು. ಹೀಗೆ ದೊರೆಗಳು ಪೋಪ್‌ಗಳ ವಿರುದ್ಧ ಎದ್ದ ದಂಗೆಯ ಫಲವಾಗಿ ಸುಧಾರಣಾ ಯುಗ ಆರಂಭವಾಯಿತು.

ಹದಿನಾಲ್ಕನೆಯ ಶತಮಾನದುದ್ದಕ್ಕೂ ಚರ್ಚು ರಾಜಕೀಯವಾಗಿ ಅವಮಾನವನ್ನು ಅನುಭವಿಸಿ ನೈತಿಕ ಅಧಃಪತನವನ್ನು ಹೊಂದಿತು. ಶ್ರದ್ಧೆ ಮತ್ತು ಭಕ್ತಿಯ ವಿರಾಟ್ ಸ್ವರೂಪದಲ್ಲಿ ಆರಂಭವಾದ ಚರ್ಚು, ಕ್ರಮೇಣ ಕೆಲವೇ ಹಿತಾಸಕ್ತಿಗಳ ಕೈ ಸೇರಿ ವೈಯಕ್ತಿಕ ಲಾಭ ಮತ್ತು ಹಣ ಮಾಡುವವರ ತವರಾಗಿ ಅಧೋಗತಿಗೆ ಇಳಿದಿತ್ತು.

ಸುಮಾರು ಒಂದು ಶತಮಾನದ ಹಿಂದೆಯೇ ಕ್ರಾಂತಿಕಾರಕ ಚಿಂತಕರುಗಳು "ಕೌನ್ಸಿಲಿಯರ್ ಚಳವಳಿಯ" ತಾತ್ವಿಕ ನೆಲೆಯನ್ನು ಸ್ಪಷ್ಟಪಡಿಸಿದ್ದರು. ಅದು ಜಯಗಳಿಸಿರಲಿಲ್ಲ. ಫ್ರಾನ್ಸ್‌ನ ದೊರೆ ಏಳನೆಯ ಚಾರ್ಲ್ಸ್ ಧರ್ಮಾಧಿಕಾರಿಗಳ, ಬುದ್ಧಿಜೀವಿಗಳ ಮತ್ತು ವಕೀಲರುಗಳ ಸಭೆಯನ್ನು ಕರೆದನು. ಈ ಸಭೆಯು ಸಾಮಾನ್ಯ ಸಭೆಗಿಂತ ಉನ್ನತಾಧಿಕಾರವಿದೆ ಎಂದು ಸಮರ್ಥಿಸಿ ಕೊಂಡು, ಕೆಲವು ಕಟ್ಟಾಜ್ಞೆಗಳನ್ನು ವಿಧಿಸಿತು(ಬೋರ್ಜಸ್ ಕಟ್ಟಾಜ್ಞೆ ೧೪೩೮). ಧರ್ಮಾಧಿಕಾರಿಗಳನ್ನು ಸ್ಥಳೀಯ ಪುರೋಹಿತರುಗಳು ಚುನಾವಣೆಯ ಮೂಲಕ ಆಯ್ಕೆ ಮಾಡಬೇಕು ಮತ್ತು ಈ ಬಗ್ಗೆ ರಾಜನೂ ಕೂಡ ಶಿಫಾರಸ್ಸು ನೀಡಬಹು ದಾಗಿದೆ. ಈ ಕಟ್ಟಾಜ್ಞೆಯ ಪರಿಣಾಮದಿಂದಾಗಿ ಗ್ಯಾಲಿಕನ್ ಚರ್ಚು ಹುಟ್ಟಿಕೊಂಡಿತು ಮತ್ತು ರಾಜನನ್ನು ಸ್ವತಂತ್ರನನ್ನಾಗಿ ಮತ್ತು ಪ್ರಮುಖನನ್ನಾಗಿ ಮಾಡಿತು. ಜರ್ಮನಿ ಮತ್ತು ಬೊಹೆಮಿದ್ ಈ ನಿಯಮವನ್ನೇ ಅನುಸರಿಸಿದವು. ಆದ್ದರಿಂದಾಗಿ ರೋಮನ್ ಚರ್ಚಿನ ಅಡಿಪಾಯವೇ ಮುರಿದು ಬಿದ್ದಂತಾಯಿತು.

ಪುನರುತ್ಥಾನದ ಕಾಲದ ಪೋಪ್‌ಗಳು ತುಂಬ ಧರ್ಮಶ್ರದ್ಧೆಯುಳ್ಳವರಾಗಿದ್ದರು. ಅಲ್ಲದೆ, ಪ್ರಪಂಚ ಬಹುತೇಕ ಜನರಿಗೆ ದುಃಖದ ನೆಲೆಯಾಗಿದ್ದರೂ, ದೆವ್ವದ ತವರಾಗಿ ದ್ದರೂ, ಅದು ಸುಂದರವಾಗಿಯೂ ಇದೆ, ಬದುಕಿಗೆ ಸಂತೋಷವನ್ನು ನೀಡುವಂತದ್ದಾಗಿದೆ ಎಂಬ ಪುನರುತ್ಥಾನದ ಚಿಂತನೆಯಲ್ಲಿ ನಂಬಿಕೆಯಿಟ್ಟಿದ್ದರಿಂದ ತಮ್ಮ ಧರ್ಮಾಧಿಕಾರವನ್ನು ಅತ್ಯಾನಂದದಿಂದ, ಸಂತೋಷದಿಂದ, ಐಷಾರಾಮವಾಗಿ ಕಳೆಯುವುದನ್ನು ಅಪರಾಧವೆಂದು ಭಾವಿಸಿರಲಿಲ್ಲ. ಈ ನೀತಿಯಿಂದಾಗಿ ಪೋಪ್‌ನ ಸ್ಥಾನವನ್ನು ಅಧಿಕಾರದ ಉತ್ತುಂಗ ಶಿಖರಕ್ಕೆ ಏರಿಸಿದ್ದರು. ಅದು ಕ್ರಮೇಣ ಜನರ ಕೋಪಕ್ಕೆ ಗುರಿಯಾಗಿ ಅನಾಥವಾಗಿತ್ತು.

ಚರ್ಚು ಮತ್ತೆ ತನ್ನ ಭವ್ಯತೆಯನ್ನು, ಅಧಿಕಾರವನ್ನು ಉಳಿಸಿಕೊಳ್ಳಲು ಪ್ರಯತ್ನ ಪಟ್ಟಿತಾದರೂ ಯುರೋಪಿನಲ್ಲಿ ಆಗುತ್ತಿದ್ದ ರಾಜಕೀಯ, ಆರ್ಥಿಕ ಮತ್ತು ಬೌದ್ಧಿಕ ಬದಲಾವಣೆಗಳು ನಿಧಾನವಾಗಿ ಲ್ಯಾಟಿನ್ ಕ್ರೈಸ್ತ ಧರ್ಮದ ವ್ಯವಸ್ಥೆಯನ್ನು ಕಡೆಗಣಿಸಿದವು. ಜ್ಞಾನಾರ್ಜನೆಯ ಕೇಂದ್ರ ಬಿಂದುವಾಗಿದ್ದ ಚರ್ಚು ತಾನೇ ಸೃಷ್ಟಿಸಿದ ಬೌದ್ಧಿಕ ವಾತಾವರಣ ಅದರ ಘನತೆಗೆ ಧಕ್ಕೆ ತರುತ್ತಿತ್ತು. ತಾನೇ ಸೃಷ್ಟಿಸಿದ ಅಲ್ಪ ಸಂಖ್ಯೆಯ ವಿದ್ಯಾವಂತರ ಚಿಂತನೆಗಳು ಚರ್ಚಿಗೆ ಸಂತೋಷ ನೀಡುವಂತಿರಲಿಲ್ಲ. ಧರ್ಮ ಶ್ರದ್ಧೆಯಿಲ್ಲದ ಒಂದೇ ವರ್ಗ ಎಂದು ಹೇಳಬಹುದಾದರೆ ಅದು ವರ್ತಕರುಗಳ ವರ್ಗವಾಗಿತ್ತು. ಏಕೆಂದರೆ ಐಶ್ವರ್ಯ ಎಲ್ಲಿ ಹೆಚ್ಚಾಗುತ್ತೋ ಅಲ್ಲಿ ಧರ್ಮಶ್ರದ್ಧೆ ಕಡಿಮೆಯಾಗುತ್ತದೆ. ಚರ್ಚು ಯುರೋಪಿನಲ್ಲಿ ಅದ್ಭುತವನ್ನು ಸ್ಥಾಪಿಸಿತು. ಆದರೆ ತನ್ನ ಧರ್ಮಯುದ್ಧದಲ್ಲಿ ಕಾನ್‌ಸ್ಟಾಂಟಿನೋಪಲನ್ನು ತುರ್ಕಿಗಳಿಗೆ ಸೋತ ನಂತರ ಅದರ ಘನತೆ ಕ್ಷೀಣಿಸಿತ್ತು. ಕ್ರೈಸ್ತ ದೇವರುಗಳಿದ್ದೂ ಈ ಸೋಲು ಹೇಗೆ ಉಂಟಾಯಿತು ಎಂಬ ಹೊಸ ಪ್ರಶ್ನೆಗೆ ಎಡೆಮಾಡಿ ಕೊಟ್ಟಿತು; ಅರ್ಥಾತ್, ಕ್ರಿಸ್ತ ದೇವರುಗಳಿದ್ದರೆ ಸೋಲುಂಟಾಗುತ್ತಿರಲಿಲ್ಲ; ದೇವರಿಲ್ಲ, ಜಯವೂ ಇಲ್ಲ. ಪುರಾತನ ಕಾಲದ ಪುಸ್ತಕಗಳು

ಶೋಧವಾದುವು, ನಂತರ ಪ್ರಕಟವಾದುವು. ಇದರಿಂದಾಗಿ ಕ್ರೈಸ್ತ ಜಗತ್ತಿಗೆ ಮೊದಲೇ ತಿಳಿದಿದ್ದ ಜ್ಞಾನ ಪ್ರಪಂಚವೊಂದು ಜಗತ್ತಿನ ಬೆಳಕನ್ನು ಕಂಡಿತು. ಪರಿಣಾಮವಾಗಿ ಕ್ರೈಸ್ತ ಧರ್ಮದ ಬಗ್ಗೆ ಅಪನಂಬಿಕೆ ಮೂಡಲಾರಂಭಿಸಿತು.

ಮಾರ್ಟಿನ್ ಲೂಥರನಿಗಿಂತ ನಾಲ್ಕು ವರ್ಷ ಮುಂಚೆಯೇ ಮ್ಯಾಕಿವೆಲ್ಲಿ ಎಂಬುವವನು "ಜನರು ರೋಮನ್ ಚರ್ಚಿಗೆ, ಧರ್ಮದ ಮುಖಂಡನಿಗೆ ಸನಿಹವಿದ್ದಷ್ಟೂ ಅವರಲ್ಲಿ ಧಾರ್ಮಿಕತೆ ಕಡಿಮೆಯಾಗುತ್ತದೆ" ಎಂದು ಭವಿಷ್ಯ ನುಡಿದಿದ್ದನು.

ಚರ್ಚಿನಲ್ಲಿರುವ ಎಲ್ಲರೂ ಹಣವನ್ನು ಪ್ರೀತಿಸುತ್ತಿದ್ದರು. ೧೩ನೆಯ ಶತಮಾನದಲ್ಲಿ ಫ್ರಾನ್ಸಿಸ್ಕನ್ನರು, ಡೊಮೆನಿಕನ್ನರು, ಕಾರ್ಮೆಲೈಟರು, ಅಗಸ್ಟಿನಿಯನ್ನರು ಎಂಬ ನಾಲ್ಕು ಪ್ರಕಾರವಾದ ಧರ್ಮಭಿಕ್ಷುಗಳು ಹುಟ್ಟಿಕೊಂಡರು. ಇವರಲ್ಲಿ ಅಗಸ್ಟಿಯನ್ನರನ್ನು ಬಿಟ್ಟರೆ ಉಳಿದ ಪಂಥದವರೆಲ್ಲ ಧರ್ಮಶ್ರದ್ಧೆಯ ಹೆಸರಿನಲ್ಲಿ ಅಪರಾಧವನ್ನೇ ಎಸಗುತ್ತಿದ್ದರು.

ಲ್ಯಾಟಿನ್ ಕ್ರೈಸ್ತ ಜಗತ್ತಿನ ಉದ್ದಗಲಕ್ಕೆ ಚರ್ಚಿನ ಮುಖ್ಯಸ್ಥನಿಂದ ಹಿಡಿದು ಕೆಳಗಿನ ಅಧಿಕಾರಿಯವರೆಗೆ ಸುಧಾರಣೆಯಾಗಬೇಕೆಂದು ಸಾರ್ವಜನಿಕರು ದನಿ ಎತ್ತಿದರು. ಭಾವಾತೀತರಾದ ಇಟಲಿಯನ್ನರಲ್ಲಿ ಬ್ರೆಸ್ಸಿಯಾನದ ಆರ್ನಾಲ್ಡ್, [flwo]ೀರ್‌ನ ಜೋಚಿನ್, ಫ್ರಾನ್ಸ್‌ನ ಸವೋನರೋಲ ಎಂಬುವವರು ಈ ದಿಸೆಯಲ್ಲಿ ಕೆಲಸ ಮಾಡಿದರು. ಆದರೆ ಇವರಲ್ಲಿ ಇಬ್ಬರು ಬೆಂಕಿಗೆ ಆಹುತಿಯಾಗಬೇಕಾಯಿತು. ಸಾಮಾನ್ಯ ಸಭೆಗಳು ಚರ್ಚನ್ನು ಸುಧಾರಿಸಲು ಪ್ರಯತ್ನಪಟ್ಟವು. ಆದರೆ ಅಧಿಕಾರ ವ್ಯವಸ್ಥೆ ಮತ್ತು ಕಾರ್ಡಿನಲ್‌ಗಳು ಇವುಗಳನ್ನು ಮೆಟ್ಟಿಹಾಕಿದರು. ಜೀವನದ ಎಲ್ಲಾ ರಂಗದಲ್ಲೂ ಚರ್ಚಿನ ವಿರೋಧವನ್ನು ಕಾಣಬಹುದಿತ್ತು. ಸಾಹಿತ್ಯದಲ್ಲಂತೂ ತುಂಬಿ ತುಳುಕುತ್ತಿತ್ತು. ಇದು ದಿನ ಕಳೆದಂತೆ ಗಹನವಾಗಿ ಬೆಳೆದು, ಒಂದು ದಿನ ಚರ್ಚಿನ ಮೇಲಿನ ಗೌರವದ ಕಟ್ಟೆಯೊಡೆದು, ಸಂಪ್ರದಾಯ ಒಮ್ಮೆಗೆ ಸಿಡಿದು, ಯುರೋಪಿನ ಉದ್ದಗಲದಲ್ಲಿ, ಆಧುನಿಕ ರಾಜಕೀಯ ಇತಿಹಾಸದಲ್ಲಿ ಹಿಂದೆಂದೂ ಕಂಡಿರದಂತಹ ಭಯಾನಕವಾದ ಧರ್ಮಕ್ರಾಂತಿಯೊಂದು ಹುಟ್ಟಿ ಯೂರೋಪನ್ನು ಪೂರ್ಣವಾಗಿ ವ್ಯಾಪಿಸಿತು.

ಹೀಗೆ ಸುಧಾರಣೆ ಮತ್ತು ಅಭಿವೃದ್ಧಿ ಎರಡೂ ಭಿನ್ನ ಹಂತಗಳಲ್ಲಿ ನಡೆಯಿತು. ಒಂದನೆಯದಾಗಿ, ವ್ಯಕ್ತಿಗಳ ಶ್ರಮದಿಂದ, ಧಾರ್ಮಿಕ ಮಠಗಳ ಅನುಯಾಯಿಗಳಿಂದ ಮತ್ತು ಸಾಮಾನ್ಯ ಸಭೆಗಳಿಂದ. ಎರಡನೆಯದಾಗಿ, ರೋಮನ್ ಕ್ಯಾಥೋಲಿಕ್ ಚರ್ಚ್ ನಿಂದ ಹೊರಬಂದ ಹೊಸ ಸಂಸ್ಥೆಗಳನ್ನು ಕಟ್ಟುವುದರ ಮೂಲಕ. ಉದಾ : ಅಲ್ಬಿಜೆನ್ಸರು ಮತ್ತು ವಾಲ್ಡನ್ನರು. ಆರಂಭದಲ್ಲಿ ಈ ಆತಂಕಕಾರಿ ಸಂಸ್ಥೆಗಳು ಹೆಚ್ಚು ಪರಿಣಾಮ ಕಾರಿಯಾಗಿರಲಿಲ್ಲ. ಏಕೆಂದರೆ ಇವು ಬಹು ಕಡಿಮೆ ಸಂಖ್ಯೆಯಲ್ಲಿ ಕ್ರೈಸ್ತರ ಮೇಲೆ ಪ್ರಭಾವ ಬೀರಿದ್ದವು. ೧೫ನೆಯ ಶತಮಾನ ಮುಗಿಯುತ್ತಾ ಬಂದಿತ್ತು. ಆದರೆ ಈ ಮೇಲಿನ ಸಂಸ್ಥೆಗಳಿಗೆ ಹೇಳಿಕೊಳ್ಳಬಹುದಾದಂತಹ ಯಶಸ್ಸು ಬಂದಿರಲಿಲ್ಲ. ಹೊಸದಾಗಿ ಬಂದ ಎಲ್ಲಾ ಪೋಪ್‌ಗಳು ಜ್ಞಾನಾರ್ಜನೆಗೆ ಮತ್ತು ಇಟಲಿಯ ರಾಜಕೀಯಕ್ಕೆ ಹೆಚ್ಚು ಗಮನ ಹರಿಸಿದ್ದರೆ ವಿನಃ ಚರ್ಚನ್ನು ಸುಧಾರಿಸಲು ಪ್ರಯತ್ನಪಡಲಿಲ್ಲ. ರೋಮನ್ ಕ್ಯಾಥೋಲಿಕ್ ಚರ್ಚಿನಲ್ಲಿ ಸುಧಾರಣೆ ಆಗಬೇಕೆಂದು ಬಯಸಿ, ಕ್ರಮೇಣ ಅದು ಸಾಧ್ಯವಿಲ್ಲದ ಕೆಲಸ ಎಂದು ತಿಳಿದು ಸುಮಾರಷ್ಟು ನಾಯಕರುಗಳು ಸಂಘಟಿತ ರೋಮನ್ ಕ್ಯಾಥೋಲಿಕ್ ಪಂಥದಿಂದ ಹೊರಬಂದಿದ್ದರು.

ಸುಧಾರಣೆಯನ್ನು ವಿಭಿನ್ನವಾಗಿ ಚರ್ಚಿಸಿದ್ದಾರೆ ಮತ್ತು ಅವಲೋಕಿಸಿದ್ದಾರೆ. ಇತಿಹಾಸ ಕಾರರು ಸಣ್ಣ ಪುಟ್ಟ ಘಟನೆಗಳನ್ನು, ಬದಲಾವಣೆಗಳನ್ನು ಬಳಸಿ ಬೃಹತ್ತಾದ ಚಳವಳಿಯ ಪರಿಣಾಮವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದಾರೆ ಮತ್ತು ಈ ಮಾರ್ಗವನ್ನು ಕೊಲೂಗೇಟರಿ ವಿಧಾನ ಎಂದು ಕರೆದಿದ್ದಾರೆ. ರೋಮನ್ ಕ್ಯಾಥೋಲಿಕ್ ಧರ್ಮದಲ್ಲಿ ಒಡಕು ಮೂಡಿತು; ಧರ್ಮಾತೀತ ಶಕ್ತಿಗಳು ಚರ್ಚಿನ ಮೇಲೆ ಅಧಿಕಾರ ಸ್ಥಾಪಿಸಿದುವು; ಕ್ಯಾಥೋಲಿಕ್ ಮಠಗಳ ಮತ್ತು ಭಜನಾ ಕೇಂದ್ರಗಳ ದಮನವಾಯಿತು; ಕ್ಯಾಥೋಲಿಕ್ ಪೂಜೆ, ಪುರೋಹಿತ ವರ್ಗ(Clergy) ಮತ್ತು ಸಾಮಾನ್ಯ ಜನರ ಕ್ರೈಸ್ತ ಬಂಡಾಯದ ಪಂಥವೊಂದು ಶುರುವಾಯಿತು.

ಸುಧಾರಣೆ ಜರ್ಮನಿಯಲ್ಲಿ ಮೊದಲು ಆರಂಭವಾಯಿತು. ಆದ್ದರಿಂದ ಜರ್ಮನ್ನರು ಇದನ್ನು 'ಅಂತರಾಳದಿಂದ ಉಕ್ಕಿ ಬಂದ ಕುದಿ' ಎಂದು ವರ್ಣಿಸಿಕೊಂಡಿದ್ದಾರೆ; ಉಳಿದವರಿಗೂ ಅಂತರಂಗವಿರುತ್ತದೆ ಎನ್ನುವುದನ್ನು ಅವರು ಮರೆಯಬಾರದಷ್ಟೆ. ಮತ್ತೊಂದು ಇತಿಹಾಸಕಾರರ ಗುಂಪು ಜನಾಂಗೀಯ ಮತ್ತು ಭೌಗೋಳಿಕ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದೆ. ಕ್ರೈಸ್ತ ಧರ್ಮ ಬಂಡಾಯವಾದವು

ಯುರೋಪಿನ ಉತ್ತರ ಭಾಗಕ್ಕೂ ಮತ್ತು ರೋಮನ್ ಕ್ಯಾಥೋಲಿಕ್ ಧರ್ಮ ದಕ್ಷಿಣ ಭಾಗಕ್ಕೂ ಹೆಚ್ಚು ಸೀಮಿತವಾಗಿವೆ. ಆದರೆ ಯೂರೋಪ್ ಖಂಡವನ್ನು ಇಬ್ಭಾಗಿಸುವಂತಹ ಗೆರೆಯನ್ನೇನು ಎಳೆದಿಲ್ಲ.

**ಜರ್ಮನಿಯಲ್ಲಿ ಸುಧಾರಣೆ**

ಮಧ್ಯಯುಗದ ಚರ್ಚಿನಲ್ಲಿ ಉಂಟಾದ ಅಧಃಪತನದಿಂದ ಜರ್ಮನಿಗಾದಷ್ಟು ತೊಂದರೆ ಉಳಿದಾವ ರಾಷ್ಟ್ರಕ್ಕೂ ಆಗಲಿಲ್ಲ. ಪೋಪನ ದುರಾಡಳಿತದಿಂದ ಉಂಟಾದ ಈ ವಿಷಮ ಸ್ಥಿತಿಯಿಂದ ಜರ್ಮನ್ನರು ಪೋಪನನ್ನು ಅಭ್ಯುದಯದ ಮತ್ತು ಸ್ವಾತಂತ್ರ್ಯದ ಶತ್ರು ಎಂದು ಭಾವಿಸಿದರು. ಅಶಾಂತಿ ಎಲ್ಲೆಡೆ ಆವರಿಸಿತ್ತು ಮತ್ತು ಚಳವಳಿಯು ಮಂದಗತಿಯಲ್ಲಿ ಆರಂಭವಾಯಿತು. ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಧ್ಯಾಪಕರುಗಳ ನಡುವೆ ೧೫೧೭ರಲ್ಲಿ ನಡೆದ ಧಾರ್ಮಿಕ ಚರ್ಚೆಯ ಪ್ರತಿಫಲವೇ ಸುಧಾರಣೆ ಮತ್ತು ಸ್ಯಾಕ್ಸೋನಿಯ ಮೇಧಾವಿ ಎಲೆಕ್ಟರ್ ಫ್ರೆಡೆರಿಕ್, ೧೫೦೨ರಲ್ಲಿ ಆರಂಭ ಮಾಡಿದ ವಿಟ್ಟೆನ್ ಬರ್ಗ್ ವಿಶ್ವವಿದ್ಯಾನಿಲಯದ ಧರ್ಮಶಾಸ್ತ್ರ ವಿಭಾಗಕ್ಕೆ ೧೫೧೨ರಲ್ಲಿ ಮಾರ್ಟಿನ್ ಲೂಥರ್ ಸೇರಿದನು. ಮಾರ್ಟಿನ್ ಲೂಥರ್ ತುಂಬ ಬಡ ಕುಟುಂಬದಿಂದ ಬಂದವನು. ಇವನ ತಂದೆ ಕಾನೂನು ಶಾಸ್ತ್ರದಲ್ಲಿ ಪರಿಣಿತನಾಗಬೇಕೆಂದು ಬಯಸಿದ್ದನು. ಇವನ ಮನಸ್ಸಿನ ಮೇಲೆ ಚಿಕ್ಕ ವಯಸ್ಸಿನಲ್ಲಿಯೇ ಆಗಿದ್ದ ಧಾರ್ಮಿಕ ಅನುಭವದಿಂದಾಗಿ ಮತ್ತು ಅದಕ್ಕೆ ಆಕರ್ಷಿತನಾಗಿ ಮಾರ್ಟಿನ್ ಲೂಥರ್ ಎರ್‌ಫಟ್ ವಿಶ್ವವಿದ್ಯಾನಿಲಯವನ್ನು ಬಿಟ್ಟು ರೋಮನ್ ಕ್ಯಾಥೋಲಿಕ್ಕರ ನಾಲ್ಕು ಪಂಥಗಳಲ್ಲೊಂದಾದ ಅಗಸ್ಟನಿಯನ್ನರನ್ನು ಸೇರಿಕೊಂಡನು. ಮಾರ್ಟಿನ್ ಲೂಥರ್‌ನನ್ನು ೧೫೦೭ರಲ್ಲಿ ಪುರೋಹಿತನನ್ನಾಗಿ ಮಾಡಲಾಯಿತು. ಇದರ ಜತೆಗೆ ಧರ್ಮಶಾಸ್ತ್ರದಲ್ಲಿ ವಿದ್ಯಾಭ್ಯಾಸ ಮುಂದುವರೆಸಲು ಅವಕಾಶ ನೀಡಿ, ಬಹುತೇಕ ಜವಾಬ್ದಾರಿಯುತ ಸ್ಥಾನಗಳನ್ನು ನೀಡಲಾಯಿತು. ಇದೇ ಸಮಯದಲ್ಲಿ ರೋಮ್‌ಗೆ ಲೂಥರನು ಭೇಟಿಯಿತ್ತನು. ಇಲ್ಲಿ ಧಾರ್ಮಿಕ ಸ್ಥಿತಿಯನ್ನು ಕಂಡು ದಂಗು ಬಡಿದನು. ೧೫೧೨ರ ಆನಂತರದಲ್ಲಿ ಮಾರ್ಟಿನ್ ಬರೇ ಪ್ರವಚನಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡನು.

ಮಾರ್ಟಿನ್ ಲೂಥರನು ೧೫೧೯ರಲ್ಲಿ ರಚಿಸಿದ ೯೫ ಪ್ರಬಂಧಗಳಲ್ಲಿ ಚರ್ಚಿನ ಸ್ಥಿತಿಗತಿ, ಪೋಪನ ಸ್ಥಾನಮಾನ, ಪೋಪನ ಅತಿಕ್ರಮಣ ಮತ್ತು ಕ್ರಿಶ್ಚಿಯನ್ನರು ತಮ್ಮ ಆತ್ಮವನ್ನು ಉಳಿಸಿಕೊಳ್ಳಬೇಕಾದ ಅವಶ್ಯಕತೆಯ ಬಗ್ಗೆ ಬಹಿರಂಗವಾಗಿ ಚರ್ಚಿಸಿದ್ದನು. ಇದು ಅವನನ್ನು ವಿವಾದಾತ್ಮಕ ವ್ಯಕ್ತಿಯನ್ನಾಗಿ ಮಾಡಿತು.

ಡೊಮೆನಿಕ್ನರ ಧರ್ಮ ಸೇವಕ ಹಾಗೂ ಮೈಂಜ್‌ನ ಆರ್ಚ್‌ಬಿಷಪ್ಪನ ದಳ್ಳಾಳಿಯು ಆಗಿದ್ದ ಜೋಹನ್ ಟೆಟ್‌ಝೆಲ್ ಎಂಬುವವನು, ಸಂತ ಪೀಟರನ ಹೆಸರಿನಲ್ಲಿ ರೋಮ್ ನಗರದಲ್ಲಿ ಚರ್ಚೊಂದನ್ನು ನಿರ್ಮಿಸಲು ಹಣ ಸಂಗ್ರಹಿಸಲು, ವಿಟ್ಟನ್‌ಬರ್ಗ್‌ಗೆ ಬಂದಿದ್ದ ಹಾಗೂ ಈ ಸಂದರ್ಭದಲ್ಲಿ ಅವನು ಆಡಿದ ಮಾತುಗಳನ್ನು ಕೇಳಿ ಗಾಬರಿ ಗೊಂಡ ಮಾರ್ಟಿನ್ ಲೂಥರ್ ವೈಯಕ್ತಿಕ ಆಪೋತ್ತರಗಳನ್ನು ಸಾರ್ವಜನಿಕವಾಗಿ ಮಾರಾಟಕ್ಕಿಡುವ ಪದ್ಧತಿಯ ಬಗ್ಗೆ ಸಾರ್ವಜನಿಕ ಚರ್ಚೆಯಾಗಬೇಕೆಂದು ಬಯಸಿದನು. ಆದರೆ ಸಾರ್ವಜನಿಕ ಚರ್ಚೆಯ ಬದಲಾಗಿ ಜೋಹನ್‌ಎಕ್ ಎನ್ನುವ ಲೀಸ್‌ಜಿಗ್‌ನ ಧರ್ಮಶಾಸ್ತ್ರಜ್ಞನು ಲೂಥರನ ಮೇಲೆ ಧರ್ಮವಿರೋಧಿ ಚಟುವಟಿಕೆಯ ಆಪಾದನೆಯನ್ನು ಹೊರಿಸಿದನು. ತನ್ನ ಮೇಲಿನ ಆಪಾದನೆಗಳಿಗೆ ಉತ್ತರ ಕೊಡಲು ಲೂಥರ್‌ನು ಸಿದ್ಧನಿದ್ದನಾದರೂ ಆಪಾದನೆಗಳಿಗೆ ಉತ್ತರ ಕೊಡಲು ತಿರಸ್ಕರಿಸಿದನು. ಆದರೆ ಆಗ್ಸ್ ಬರ್ಗ್‌ನ ಉನ್ನತಾಧಿಕಾರದ ಡೈಯಟ್ಟಿನ ಮುಂದೆ ಹಾಜರಾಗಲು ಒಪ್ಪಿದನು. ಪೋಪನ ಪ್ರತಿನಿಧಿಯಾಗಿ ವಿಚಾರಣೆಗೆ ಬಂದಿದ್ದ ಕಾರ್ಡಿನಲ್ ಕೆಜೆಟನ್ ಎಂಬುವವನು ಲೂಥರನನ್ನು ಅವಹೇಳನ ಮಾಡಿದನು. ಅನಂತರ ಲೂಥರ್ ವಿಟ್ಟೆನ್‌ಬರ್ಗ್‌ಗೆ ಹಿಂತಿರುಗಿ ಬೋಧನೆಯನ್ನು ಮುಂದುವರೆಸಿದನು.

ಪೋಪ್ ಹತ್ತನೆಯ ಲಿಯೋ, ಜನವರಿ ೨, ೧೫೧೨ರ ಘಟನೆಯಿಂದ ತೃಪ್ತನಾಗದೆ ಮತ್ತು ಧೈರ್ಯಗೆಡದೆ ಲೂಥರನನ್ನು ಮತ್ತೆ ಅವಮಾನಗೊಳಿಸುವ ಸಲುವಾಗಿ 'ಬುಲ್ ಡಿಸಿಟ್ ಪಾಂಟಿಪೀಸಿಮ್ ರೋಮ್‌ನಂ' ಎಂಬ ಆಜ್ಞೆಯನ್ನು ಹೊರಡಿಸಿದನು. ಅದೇ ವರ್ಷ ಏಪ್ರಿಲ್ ತಿಂಗಳಿನಲ್ಲಿ ಲೂಥರನು ರಾಜ ಐದನೆಯ ಚಾರ್ಲ್ಸ್‌ನ ಮುಂದೆ ಹಾಜರಾಗ ಬೇಕಾಯಿತು. ರಾಜದ್ರೋಹದ ಆಪಾದನೆಯ ಮೇಲೆ ಲೂಥರ್‌ನನ್ನು ರಾಷ್ಟ್ರದಿಂದ ಬಹಿಷ್ಕರಿಸಲಾಯಿತು. ಆದರೆ, ಸ್ಯಾಕ್ರೋನಿಯ ಮೇಧಾವಿ ಫ್ರೆಡರಿಕ್, ಈ ವಿಷಯದಲ್ಲಿ ಮಧ್ಯಪ್ರವೇಶ ಮಾಡಿ

ಲೂಥರ್‌ನಿಗೆ, ವಾರ್ಟ್‌ಬರ್ಗ್‌ನ ಕೊತ್ತಲದಲ್ಲಿ ಆಶ್ರಯ ದೊರಕಿಸಿದನು. ಲೂಥರನು ಇಲ್ಲಿ ಬೈಬಲನ್ನು ಜರ್ಮನ್ ಭಾಷೆಗೆ ಅನುವಾದಿಸಿದನು. ಇದು ಕ್ರಮೇಣ ಪರಿಣಾಮಕಾರಿಯಾಗಿ ಕೆಲಸ ಮಾಡಿತು.

ತಾನೊಬ್ಬ ಸುಧಾರಕ, ತನ್ನ ಹಿಂದಿನ ಸುಧಾರಕರು ಜೀವನ ಕ್ರಮವನ್ನು ಪ್ರಶ್ನಿಸಿದ್ದಾರೆ, ತಾನು ಚರ್ಚಿನ ನೀತಿಗಳನ್ನು ಪ್ರಶ್ನಿಸುತ್ತಿದ್ದೇನೆ, ಇಷ್ಟೇ ವ್ಯತ್ಯಾಸ ಎಂದು ತನ್ನ ಬಗ್ಗೆ ಲೂಥರ್ ಹೇಳಿಕೊಂಡನು. ಮನುಷ್ಯ ತಾನು ಮಾಡಿದ ಪಾಪ ಕೃತ್ಯಗಳನ್ನು ಒಪ್ಪಿಕೊಳ್ಳು ವುದರಿಂದ, ಶಿಕ್ಷೆ ಅನುಭವಿಸುವುದರಿಂದ ಆ ತಪ್ಪುಗಳನ್ನು ತೊಡೆದು ಹಾಕಬಹುದು ಎನ್ನುವ ಚರ್ಚಿನ ವಿದ್ವಾಂಸಿಕ ನಿಲುವಿನಿಂದ ಸಂಪೂರ್ಣವಾಗಿ ಭ್ರಮನಿರಸನಾಗಿದ್ದನು. ತನ್ನ ಹತಾಶೆಯ ಸ್ಥಿತಿಯಲ್ಲಿಯೂ ಕೂಡ ಲೂಥರನು ಶ್ರದ್ಧೆಯುಳ್ಳವನಾಗಿದ್ದನು, ದೇವರ ಮತ್ತು ಕ್ರೈಸ್ತನ ಮುಂದೆ ತಾನೊಬ್ಬ ಸಾಮಾನ್ಯ ಮನುಷ್ಯ, ಕಣ ಎಂದು ನಂಬಿದ್ದನು. ದೇವರ ಕರುಣೆ ವರವಾಗಿ, ಕೊಡುಗೆಯಾಗಿ ಬರುವ ಸಾಮಾನ್ಯ ಮಾರ್ಗಗಳಿಗಿಂತ ಆಶ್ರಮ ಜೀವನ ಉನ್ನತವಾದದ್ದು ಎಂದು ನಂಬಿದ್ದನು. ಲೂಥರನು ಸನ್ಯಾಸಿಯಾಗಿದ್ದು, ಕಠಿಣವಾದ ಬ್ರಹ್ಮಚರ್ಯ ಜೀವನವನ್ನು ಅಳವಡಿಸಿಕೊಂಡನು. ತನ್ನಂತಹ ಪಾಪಿ, ಕುಬ್ಜ ಮನುಷ್ಯನೊಬ್ಬ ದೇವರ ಸಮಕ್ಷಮ ನ್ಯಾಯಸ್ಥಾನದಲ್ಲಿ ನಿಲ್ಲುವೆನೆಂಬ ಅಭಿಪ್ರಾಯ ಅವನಲ್ಲಿ ಎಂದೂ ಸುಳಿಯಲಿಲ್ಲ. ನಿರಂತರವಾಗಿ ತಪ್ಪನ್ನು ಒಪ್ಪಿಕೊಳ್ಳುತ್ತಲೇ ಇರುವುದು ಮನುಷ್ಯನನ್ನು ರೋಗಗ್ರಸ್ಥನನ್ನಾಗಿ ಮಾಡುತ್ತದೆ ಎನ್ನುವುದು ಅವನ ಅನುಭವವಾಗಿತ್ತು. ಮನುಷ್ಯನನ್ನು ದುರ್ಬಲನನ್ನಾಗಿ ಮತ್ತು ಅಸಹಾಯಕನನ್ನಾಗಿ ಮಾಡಿದ ನಂತರ ಅವನನ್ನು ನಾಶಮಾಡುವ ದೇವರನ್ನು ಅಮೂಲಾಗ್ರವಾಗಿ ಪ್ರಶ್ನಿಸಲು ಲೂಥರನು ಆರಂಭಿಸಿದನು. ಅರ್ಥಮಾಡಿ ಕೊಳ್ಳಲಾಗದ ದೇವರನ್ನು ಅವನು ದ್ವೇಷಿಸಲೂ ಆರಂಭಿಸಿದನು. ಸ್ಸಾಲ್ಮ್‌ಸ್ ಅನ್ನು ಓದಿದಾಗ ಅವನ ಮನಸ್ಸು ಸ್ವಲ್ಪ ಹಗುರವಾಯಿತು. "ನನ್ನ ದೇವರೇ, ನನ್ನ ದೇವರೇ, ನನ್ನ ದೇವರೇ, ನನ್ನನ್ನು ಏಕೆ ಕಡೆಗಣಿಸಿದ್ದೀಯೇ" ಎಂಬ ಮಾತುಗಳು ಸ್ಸಾಲ್ಮ್‌ಸ್‌ನ ೨೨ನೆಯ ಭಾಗದಲ್ಲಿತ್ತು. ಇದು ಲೂಥರನಿಗೆ ಒಂದು ರೀತಿಯ ದೈವವಾಣಿಯಾಗಿ ಕಂಡಿತು. ಯಾವ ಪಾಪವನ್ನೂ ಮಾಡದ ಕ್ರಿಸ್ತನು, ಪಾಪವನ್ನು ಎಸಗಿಸುವ ಮಾನವರ ಜತೆ ತನ್ನನ್ನು ತಾನು ಗುರುತಿಸಿಕೊಳ್ಳುವುದರ ಮೂಲಕ ದೇವರಿಗೂ ಮನುಷ್ಯನಿಗೂ ಅಂತರವಿದೆ ಎನ್ನುವುದನ್ನು ತೋರಿಸಿದ್ದನು. ಕಾಮನ ಬಿಲ್ಲಿನ ಮೇಲೆ ನ್ಯಾಯಾಧೀಶನಾಗಿ ಕುಳಿತಿದ್ದ ಕ್ರಿಸ್ತನು ಶಿಲುಬೆಯ ಮೇಲೆ ಅನಾಥನಾಗಿದ್ದನು. ಶಿಲುಬೆಯ ಮೇಲಿನ ಕ್ರಿಸ್ತನಲ್ಲಿ ಮನುಷ್ಯರ ಮೇಲಿನ ಕೋಪ ಮತ್ತವರ ಮೇಲಿನ ಕರುಣೆ ಒಂದುಗೂಡಿದೆ. ಆದ್ದರಿಂದಲೇ ಸದಾಚಾರವಿಲ್ಲದ, ಯೋಗ್ಯರಲ್ಲದ ಎಷ್ಟೋ ಜನರನ್ನು ದೇವರು ಕ್ಷಮಿಸುವುದು ಸಾಧ್ಯ ವಾಗುತ್ತದೆ. ಅನ್ಯಾಯವನ್ನು ಕ್ರಿಸ್ತನು ನ್ಯಾಯ ಸಮ್ಮತಗೊಳಿಸಿದ್ದನು. ಆದ್ದರಿಂದ ಮನುಷ್ಯ ಮುಖ್ಯವಾಗಿ ಮಾಡಬೇಕಾದ ಕೆಲಸವೆಂದರೆ ದೇವರು ಕೊಟ್ಟಿದ್ದನ್ನು ನಂಬಿಕೆಯಿಂದ ಒಪ್ಪಿಸಿಕೊಳ್ಳುವುದು ಹಾಗೂ ಅವನಲ್ಲಿ ನಂಬಿಕೆಯಿಡುವುದು. ಈ ಮಾತುಗಳು ಸುಧಾರಣಾ ಕಾಲದ ಮುಖ್ಯ ಅಂಶಗಳಾದುವು.

ದೇವರು ಮತ್ತು ಮನುಷ್ಯರ ನಡುವಿನ ಸಂಬಂಧವನ್ನು ಚರ್ಚು ಒಂದು ಪುಸ್ತಕ ವ್ಯವಹಾರವನ್ನಾಗಿ ನೋಡುವ ರೀತಿ ಮತ್ತು ಚರ್ಚಿನವರಲ್ಲಿನ ಅತಿಯಾದ ಪ್ರಾಪಂಚಿಕತೆ ಲೂಥರನಲ್ಲಿ ಅಪಾರ ಕೋಪವನ್ನುಂಟುಮಾಡಿತ್ತು. ಅವನ ವಾದದಲ್ಲಿ ಮೂರು ಮುಖ್ಯ ಅಂಶಗಳಿದ್ದವು: ೧. ಹಣಕಾಸಿನ ಅವ್ಯವಹಾರ, ೨. ಸಿದ್ಧಾಂತಗಳಲ್ಲಿನ ಲೋಪದೋಷಗಳು, ೩. ಧಾರ್ಮಿಕ ಅವ್ಯವಹಾರಗಳು.

೧೫೨೦ರ ಬೇಸಿಗೆಯಲ್ಲಿ ಸುಧಾರಣೆಯ ಬಹುದೊಡ್ಡ ಪ್ರಣಾಳಿಕೆಗಳನ್ನು ಹೊರತಂದನು. ಜರ್ಮನಿ ರಾಷ್ಟ್ರದ ಆಳುವ ವರ್ಗಕ್ಕೆ ಸೇರಿದ ಕ್ರೈಸ್ತ ಮತೀಯರಿಗೊಂದು ಭಾಷಣ ಎನ್ನುವುದು ಜರ್ಮನಿಯ ಆಳುವ ವರ್ಗದವರನ್ನು ಮತ್ತು ಚಕ್ರವರ್ತಿಯನ್ನು ಧರ್ಮ ಪ್ರವರ್ತಕರ ಕಾಲದ ಸರಳ ಜೀವನಕ್ಕೆ ಮತ್ತು ಬಡತನಕ್ಕೆ ಮರಳುವಂತೆ ಕರೆಯೊಂದನ್ನು ನೀಡಿತ್ತು. ಈ ಭಾಷಣದ ಹೆಸರು 'ದಿ ಬೆಬಿಲೋನ್ಯನ್ ಕ್ಯಾಪ್ಟಿವಿಟಿ' ಅಂದರೆ ಬ್ಯಾಬಿಲೋನಿಯಾದ ಬಂಧನ. ಧರ್ಮೋಪದೇಶವು ಚರ್ಚಿನ ಖೈದಿಯಾಗಿದೆ ಎಂಬುವುದು ಇದರರ್ಥವಾಗಿತ್ತು. ಧರ್ಮೋಪದೇಶಗಳನ್ನು ಪ್ರಾಯೋಗಿಕವಾಗಿ ನೋಡಿದ ಲೂಥರನು ಅವುಗಳನ್ನು ಏಳರಿಂದ ಎರಡಕ್ಕೆ ಇಳಿಸಿದನು. ತನ್ನ ಧರ್ಮೋಪದೇಶವನ್ನು ಕ್ರಿಸ್ತನೇ ಆರಂಭಿಸಿದ ಒಂದು ಆಚರಣೆ ಎಂದು ವ್ಯಾಖ್ಯಾನಿಸಿಕೊಂಡನು. ದೀಕ್ಷಸ್ನಾನ ಅಥವಾ ಜ್ಞಾನಸ್ನಾನ ಮತ್ತು ಪ್ರಭು ಭೋಜನ ಸಂಸ್ಕಾರ ಮಾತ್ರ ಕರಾರುವಾಕ್ಕಾಗಿ ಧರ್ಮೋಪದೇಶ ಅಥವಾ ಧಾರ್ಮಿಕ ಕರ್ಮ ಆಗಿವೆ, ಉಳಿದಂತೆ ಪಶ್ಚಾತ್ತಾಪ ಕೇವಲ ಪಾಪ ನಿವೇದನೆ ಮಾತ್ರ. ದ್ರಾಕ್ಷಾರಸ ಮತ್ತು ರೊಟ್ಟಿ(ಕ್ರೈಸ್ತ ಧರ್ಮದಲ್ಲಿ ಪಾರಮಾರ್ಥದ ಹಿನ್ನೆಲೆಯಿರುವ ಈ ವಸ್ತುಗಳು) ಸಾಮಾನ್ಯ ಜನರಿಗೂ ಸಿಗಬೇಕು ಎಂದು ವಾದಿಸಿದನು. ಲೂಥರನು ಆರಾಧನೆಯಲ್ಲಿ ಅತಿ ದೊಡ್ಡ ಆಕ್ರಮಣವನ್ನು ಮಾಡಿದನು. ಪ್ರಭು ಭೋಜನ ಸಂಸ್ಕಾರವಿಲ್ಲದೆ, ಪಾದ್ರಿ ಒಬ್ಬನಿಂದಲೇ ಸತ್ತವರಿಗೆ ಆರಾಧನೆ ನಡೆಯಬಾರದು. ಏಕೆಂದರೆ ಪ್ರಭು ಭೋಜನ ಕ್ರಿಸ್ತನಲ್ಲಿ

ನಂಬಿಕೆಯಿರುವವರನ್ನೆಲ್ಲ ಒಳಗೊಂಡಿರುತ್ತದೆ. ಅವನ ಇನ್ನೂ ಮುಖ್ಯವಾದ ವಾದವೆಂದರೆ ವಸ್ತು ಸ್ಥಿತಿ ಬದಲಾವಣೆಯ ಉಪದೇಶವನ್ನು ಸಂಪೂರ್ಣವಾಗಿ ಅಲ್ಲಗಳೆದಿರುವುದು. ವಸ್ತು ಸ್ಥಿತಿ ಬದಲಾವಣೆ ಉಪದೇಶವೆಂದರೆ -ರೊಟ್ಟಿ ಮತ್ತು ದ್ರಾಕ್ಷಾರಸಗಳು, ಕ್ರಿಸ್ತನ ರಕ್ತ ಮತ್ತು ಮಾಂಸ ಎನ್ನುವ ಕ್ಯಾಥೋಲಿಕ್ಕರ ನಂಬಿಕೆ. ಇದು ಕ್ರೈಸ್ತ ಧರ್ಮ ಮಠಗಳ ವಿಧಿತದಿಂದಾಗಿ ಕ್ರಿಸ್ತನ ರಕ್ತ ಮಾಂಸವಾಗುವುದು ಸಾಧ್ಯವಿಲ್ಲ ಎಂದು ವಾದಿಸಿದನು.

ಇದರ ಅರ್ಥ ಕ್ರಿಸ್ತನ ದೇಹವು ಪೂಜೆಯ ಪವಿತ್ರ ಸ್ಥಾನದಲ್ಲಿ ಇರಲಿಲ್ಲ ಎಂದಲ್ಲ. ಬದಲಾವಣೆ ಏನೂ ಆಗದಿದ್ದ ಪಕ್ಷದಲ್ಲಿ ಕ್ರಿಸ್ತನ ದೇಹವು ಪೂಜೆಯ ಪವಿತ್ರ ಸ್ಥಾನದಲ್ಲಿರಲು ಸಾಧ್ಯವಿಲ್ಲ. ಇದು ಹೀಗಾಗದಿರಲು ಕಾರಣ ಕ್ರಿಸ್ತನ ದೇಹ ಎಲ್ಲೆಡೆಯೂ ಇದೆ ಎಂಬ ಕಾರಣಕ್ಕಲ್ಲ. ಎಲ್ಲೆಡೆಯೂ ಇದ್ದರೆ, ವಿಶೇಷವಾಗಿ ಇಲ್ಲೇಕೆ? ಇದು ಏಕೆಂದರೆ, ಮಾನವನ ಮಿತಿಗಳನ್ನು ಗಮನದಲ್ಲಿಟ್ಟುಕೊಂಡು ದೇವರು ಎರಡು ಪ್ರಕಾರವಾಗಿ ತನ್ನ ಆತ್ಮ ಬಹಿರಂಗವಾಗುವುದನ್ನು ವಿಧಿಸಿದ್ದಾನೆ. ಒಂದು ಅವನ ವಾಕ್ಯವನ್ನು ಉಪದೇಶಿಸು ವುದರಿಂದ ಮತ್ತು ಇನ್ನೊಂದು, ಧಾರ್ಮಿಕ ಕರ್ಮ ಬೋಧನೆಯಿಂದ. ಇಲ್ಲಿ ದೇವರಲ್ಲಿ ನಂಬಿಕೆಯಿಡುವವನ ಕಣ್ಣುಗಳು ತೆರೆಯಲ್ಪಡುತ್ತವೆ. ಈ ಅಭಿಪ್ರಾಯ ಪೌರೋಹಿತ್ಯದ ಪ್ರಾಬಲ್ಯವನ್ನು ಮೊಟಕುಗೊಳಿಸುತ್ತದೆ. ಏಕೆಂದರೆ- ಪುರೋಹಿತನ ನುಡಿಗಳಿಂದ ಕ್ರಿಸ್ತನ ದೇಹವನ್ನು ಪವಿತ್ರ ಪೂಜಾಸ್ಥಾನಕ್ಕೆ ತರಲಾಗುವುದಿಲ್ಲ. ಆದ್ದರಿಂದ ಪೋಪನನ್ನು ಹಿರಿಯ ನನ್ನಾಗಿ ಮಾಡುವ ಪೌರೋಹಿತ್ಯದ ಶ್ರೇಣೀಕೃತ ಸಮಾಜವು ಇಲ್ಲವಾದಂತಾಗುತ್ತದೆ.

ಲೂಥರನು ಬೈಬಲ್ಲನ್ನು ಜರ್ಮನ್ ಭಾಷೆಗೆ ಅನುವಾದ ಮಾಡಿದ ವಿಷಯ ಕೆಲವರಿಗೆ ಸಮಾಧಾನ ತಂದರೆ ಮತ್ತೆ ಕೆಲವರಿಗೆ ಅಸಮಾಧಾನ ತಂದಿತ್ತು. ದೇವರು ಒಬ್ಬ ಸರ್ವಾಧಿ ಕಾರಿಯಂತೆ ಪೂರ್ವನಿಯೋಜಿತವಾಗಿ ಮನುಷ್ಯರನ್ನು ಒಳ್ಳೆಯವರು ಮತ್ತು ಕೆಟ್ಟವರೆಂದು ಸೃಷ್ಟಿಸಿರುತ್ತಾನೆ ಮತ್ತು ತನ್ನ ವ್ಯಾಖ್ಯಾನ ಸರಿಯಾಗಿದೆ ಎನ್ನುವ ಲೂಥರನ ವಾದದಿಂದ ಸುಮಾರಷ್ಟು ಮುಕ್ತ ಮನಸ್ಸಿನ ಕ್ಯಾಥೊಲಿಕ್ ಸುಧಾರಕರು ಹಿಂದೆ ಸರಿದರು. ಜರ್ಮನಿಯ ರಾಷ್ಟ್ರೀಯ ಚಳವಳಿಯು ಮುರಿದು ಬಿದ್ದಿತು. ಇದಕ್ಕೂ ಮಿಗಿಲಾಗಿ, ಲೂಥರನ ಪ್ರಭಾವ ವಲಯದಲ್ಲೇ ವಿವಿಧ ರೀತಿಯ ಕ್ರೈಸ್ತ ಬಂಡಾಯವಾದಗಳು ಹುಟ್ಟಿಕೊಂಡವು. ಇವು ಗಳನ್ನು ಬಹುತೇಕವಾಗಿ ವಾಮ ಪಂಥೀಯ ಸುಧಾರಣೆ ಅಥವಾ ತೀವ್ರಗಾಮಿ ಸುಧಾರಣೆ ಎಂದು ಬಣ್ಣಿಸಲಾಗಿದೆ.

ಉತ್ತರ ಜರ್ಮನಿಯಲ್ಲಿ ಲೂಥರನ ವಾದ ಬಹು ವೇಗವಾಗಿ ಹಬ್ಬಿತು. ಸುಮಾರು ೧೫೫೫ರ ವೇಳೆಗೆ ಉತ್ತರದ ರಾಜಕುಮಾರರು ಲೂಥರನ ಚರ್ಚ್ ವ್ಯವಸ್ಥೆಗೆ ಸೇರ್ಪಡೆಯಾದರು. ಸ್ಕಾಂಡಿನೇವಿಯನ್ ರಾಷ್ಟ್ರಗಳಾದ ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಐಸ್ಲೆಂಡ್ ಮುಂತಾದವುಗಳು ಲೂಥರನ ಬೋಧನೆಯನ್ನೇ ನಿಜವಾದ ಧರ್ಮವೆಂದು ತಿಳಿದು ಅಳವಡಿಸಿಕೊಳ್ಳಲು ಆರಂಭಿಸಿದವು. ರಾಜಕುಮಾರರೇ ಪ್ರಥಮವಾಗಿ ಧಾರ್ಮಿಕ ವಿಷಯಗಳಲ್ಲಿ ಆಸಕ್ತಿ ವಹಿಸಿದ್ದರಿಂದ ಹಾಗೂ ವಿಶೇಷವಾಗಿ ಪೋಪನ ಹಣಕಾಸಿನ ನೀತಿಯನ್ನು ವಿರೋಧಿಸಿದ್ದರಿಂದ, ಇವರೇ ಲೂಥರನ ಆರಂಭದ ಬೆಂಬಲಿಗರಾಗಿದ್ದರು.

ವೈಕ್ಲಿಪ್ ಮತ್ತು ಹಸ್‌ನಿಂದ ಹುಟ್ಟಿಕೊಂಡಿದ್ದ ಚರ್ಚಿನ ತೀವ್ರಗಾಮಿವಾದವನ್ನು ಲೂಥರನ ವಾದ ಪೂರ್ಣವಾಗಿ ತಿರಸ್ಕರಿಸಿತ್ತು. ಸ್ವಿಸ್ ದೇಶದ ಸಮಾಜ ಸುಧಾರಕನಾದ ಆಲ್ರಿಚ್ ಜ್ವಿಂಗ್ಲಿ(೧೪೮೪-೧೫೩೧) ಮತ್ತು ಸ್ವಿಟ್ಜರ್‌ಲ್ಯಾಂಡ್‌ನಿಂದ ಹಿಡಿದು ಫ್ರಾನ್ಸ್, ನೆದರ್‌ಲ್ಯಾಂಡ್, ಬ್ರಿಟಿಷ್ ದ್ವೀಪಗಳಿಗೆ ಚರ್ಚಿನ ಸುಧಾರಣೆಯನ್ನು ಹಬ್ಬಿಸಿದ ಜಾನ್ ಕಾಲ್ವಿನ್ ಅವರುಗಳು ವೈಕ್ಲಿಫ್ ಮತ್ತು ಹಸ್‌ನಿಂದ ಪ್ರಭಾವಿತರಾಗಿದ್ದರು.

ಲೂಥರನಿಗೆ ಮಾನವವಾದದೊಡನೆ ಸಂಪರ್ಕವಾಗಲಿ ಅಥವಾ ಅದರ ಬಗ್ಗೆ ಅನುಕಂಪವಾಗಲಿ ಇರಲಿಲ್ಲ. ಆದರೆ ಜ್ವಿಂಗ್ಲಿಯು ತನ್ನ ಇಡೀ ಜೀವಮಾನವನ್ನು ಗ್ರೀಕ್ ಮತ್ತು ಲ್ಯಾಟಿನ್‌ನ ಶ್ರೇಷ್ಠ ಸಾಹಿತ್ಯ ಮತ್ತು ಉತ್ತಮ ಗ್ರಂಥಗಳನ್ನು ಓದುವುದಕ್ಕೆ ಮುಡುಪಾಗಿಟ್ಟಿದ್ದನು. ಜ್ವಿಂಗ್ಲಿಯು ಉತ್ತಮ ವಿಚಾರವಂತನಾಗಿದ್ದನು ಮತ್ತು ಅವನ ಪ್ರಕಾರ ಪ್ರಭು ಭೋಜನವು ಮೊದಲನೆಯ ಪವಿತ್ರ ಗುರುವಾರವನ್ನು ಪುನರ್‌ಚಿತ್ರಿಸುವ ಸಂಕೇತವಾಗಿದೆಯೇ ವಿನಃ, ಕ್ರಿಸ್ತನು ಈ ಧಾರ್ಮಿಕ ಕರ್ಮದಲ್ಲಿ ನಿಜವಾಗಿ ಪ್ರತ್ಯಕ್ಷ ವಾಗಿರುವುದಿಲ್ಲ. ಸ್ಥಳೀಯ ಚರ್ಚುಗಳು ಧರ್ಮಾವಲಂಬಿಗಳ ಸಮುದಾಯವಾಗಿವೆ ಎಂಬುದನ್ನು ಜ್ವಿಂಗ್ಲಿಯು ಪ್ರಮುಖವಾಗಿ ಪರಿಗಣಿಸಿದ್ದನು. ೧೪೨೩ರ ವೇಳೆಗೆ

ಸ್ವಿಟ್ಜರ್ ಲ್ಯಾಂಡಿನ ಜೂರಿಚ್‌ನಲ್ಲಿರುವ ಕ್ಯಾಂಟನ್‌ನಲ್ಲಿ ಇವನ ಬೆಂಬಲಿಗರು ಹುಟ್ಟಿಕೊಂಡರು. ಜ್ವಿಂಗ್ಲಿಯು ಲೂಥರನ ಪವಿತ್ರ ಐಕ್ಯತೆಯ ವ್ಯಾಖ್ಯಾನವನ್ನು ಒಪ್ಪಿಕೊಳ್ಳಲಿಲ್ಲ ಹಾಗೂ ತನ್ನ ಚಳವಳಿಯನ್ನು ಸಮರ್ಥಿಸಿಕೊಂಡನು. ಜೂರಿಚ್‌ಅನ್ನು ರಕ್ಷಿಸುವ ಯುದ್ಧದಲ್ಲಿ ಜ್ವಿಂಗ್ಲಿಯು ಮಡಿದನಾದರೂ ಅವನ ನಾಯಕತ್ವ ವ್ಯರ್ಥವಾದುದಲ್ಲ. ಅವನ ನಂತರ ಬಂದವರು ಚಳವಳಿಯನ್ನು ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಮುಂದುವರೆಸಿ ಮತ್ತು ಕ್ರಮೇಣವಾಗಿ ಜ್ಯೂರಿಚ್‌ನ ಚರ್ಚನ್ನು ಜಾನ್ ಕಾಲ್ವಿನ್ ತನ್ನ ನಾಯಕತ್ವದಲ್ಲಿ ಸ್ಥಾಪಿಸಿದ್ದ, ಸುಧಾರಿತ ಚರ್ಚಿನ ಜತೆ ಒಂದುಗೂಡಿಸಿದನು.

ತನ್ನ ಬೋಧನೆಗಳಲ್ಲಿ ಜ್ವಿಂಗ್ಲಿಯು ಸಾಮಾನ್ಯ ತರದ ಧರ್ಮ ದುರುಪಯೋಗವನ್ನು ಖಂಡಿಸಿದ್ದನು ಮತ್ತು ಹಳೆಯ ವ್ಯವಸ್ಥೆಯು ಸಂಪೂರ್ಣವಾಗಿ ಮುರಿದು ಬೀಳುವಂತೆ ತೀವ್ರಗಾಮಿಯ ಧರ್ಮಶಾಸ್ತ್ರವನ್ನು ಘೋಷಿಸಿದನು. ಲೂಥರನಂತೆ ಇವನೂ ಕೂಡ ಮನುಷ್ಯ ಮತ್ತು ದೇವರ ನಡುವಿನ ಸಂಬಂಧಕ್ಕೆ ಪ್ರಾಮುಖ್ಯತೆಯನ್ನು ನೀಡಿದ್ದನು ಮತ್ತು ಆಚರಣೆಗಳು ಮತ್ತು ವ್ರತಗಳು ಶುದ್ಧಿಗೊಳ್ಳಬೇಕು ಎಂದು ಒತ್ತಾಯಿಸಿದ್ದನು. ಲೂಥರನಿ ಗಿಂತ ಜ್ವಿಂಗ್ಲಿಯು ತುಸು ವಿಭಿನ್ನವಾಗಿದ್ದನು ಮತ್ತು ಗತಕಾಲದ ಸಂಪ್ರದಾಯಗಳಿಂದ ಧರ್ಮ ಸಂಪೂರ್ಣವಾಗಿ ಬೇರ್ಪಡಿಸಬೇಕು, ಪ್ರತಿಮೆಗಳ ಸಂಹಾರವಾಗಬೇಕು ಮತ್ತು ಆರಾಧನೆಯ ನಿರಾಕರಣೆ ಆಗಬೇಕೆಂದು ಬಯಸಿದನು. ಜ್ವಿಂಗ್ಲಿಯ ಧರ್ಮಶಾಸ್ತ್ರವು ಸಂಪೂರ್ಣವಾಗಿ "ಆಧ್ಯಾತ್ಮಿಕ"ವಾದುದ್ದಾಗಿತ್ತು. ಅವನ ಪ್ರಕಾರ ಮುಕ್ತಿ ಒಂದು ಅಂತರಂಗದ ಅನುಭವವಾಗಿತ್ತು. ಇದರಲ್ಲಿ ಧಾರ್ಮಿಕ ಕರ್ಮಕ್ಕಾಗಲಿ ಮತ್ತು ಆಚರಣೆಗಳಾಗಲಿ ಯಾವುದೇ ಪಾತ್ರವಿಲ್ಲ. ಜನವರಿ ೧೫೨೩ರಲ್ಲಿ ಅವನ ಪ್ರವಚನಗಳ ಸತ್ವಪರೀಕ್ಷೆ ನಡೆಯಿತು. ಅದರಲ್ಲಿ ಅವನು ಯಶಸ್ವಿಯಾಗುವ ವೇಳೆಗೆ ಇವನ ಪ್ರವಚನಗಳು ಅಪಾರವಾಗಿ ಅಶಾಂತಿಯನ್ನು ಉಂಟುಮಾಡಿದ್ದವು. ಇವನ ಯಶಸ್ವಿನ ನಂತರ ಜ್ಯೂರಿಚ್‌ನ ಚರ್ಚು ಸಂಪೂರ್ಣವಾಗಿ ಸುಧಾರಿಸಲ್ಪಟ್ಟಿತು.

ಲೂಥರ್ ಮತ್ತು ಜ್ವಿಂಗ್ಲಿಯ ವಾದದ ನಡುವಿನ ವ್ಯತ್ಯಾಸಗಳು ತುಂಬ ಪ್ರಮುಖ ವಾದವು. ಇವುಗಳ ತಿಕ್ಕಾಟದಿಂದ ಇವೆರಡು ಚಳವಳಿಗಳ ಮೂಲಭೂತವಾದ ಅಂಶಗಳು ಹೊರಬಂದವು. ಕ್ರಿಸ್ತನ ಅಂತಿಮ ಭೋಜನವು ಈ ಎರಡು ಚಳವಳಿಗಳ ನಡುವಿನ ಭಿನ್ನಾಭಿಪ್ರಾಯಕ್ಕೆ ರಹಸ್ಯ ಕೇಂದ್ರವಾಗಿತ್ತು. ಲೂಥರ್ ಮತ್ತು ಜ್ವಿಂಗ್ಲಿ ಅವರುಗಳು ವಸ್ತುಸ್ಥಿತಿ ಬದಲಾವಣೆ ಧರ್ಮಗ್ರಂಥಗಳಲ್ಲಿ ಪುರಾವೆಗಳಿಲ್ಲದೆ ಪುರೋಹಿತರು ಸೃಷ್ಟಿಸಿರುವ ಒಂದು ಮೋಡಿಯ ವಿಷಯವಾಗಿದೆ ಎಂದು ಪರಿಗಣಿಸಿದ್ದರು. "ಇದು ನನ್ನ ದೇಹ" ಎನ್ನುವ ಕ್ರಿಸ್ತನ ಮಾತುಗಳ ಮೇಲೆ ಲೂಥರನು ಹೆಚ್ಚು ಒತ್ತು ನೀಡಿದ್ದರಿಂದ, ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ಕ್ರಿಸ್ತನ ಮಾಂಸ ಮತ್ತು ರಕ್ತವಿದೆ ಎಂಬುವ ವಿಷಯದಲ್ಲಿ, ಯಾವುದೇ ಆಧಾರವಿಲ್ಲದಿದ್ದರೂ, ಅವನಿಗೆ ನಂಬಿಕೆಯಿತ್ತು. ಧಾರ್ಮಿಕ ಕರ್ಮವು ಕ್ರಿಸ್ತನ ದೇಹ ಮತ್ತು ರಕ್ತವನ್ನು ಹೊಂದಿದ್ದು, ಇದನ್ನು ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ಕಾಣಬಹುದಾಗಿದೆ ಎಂದೂ ಕೂಡ ನಂಬಿದ್ದನು. ಕ್ರಿಸ್ತನ ದೇಹ ಮತ್ತು ರಕ್ತದ ಅಂಶ ಗಳನ್ನು ರೊಟ್ಟಿ ಮತ್ತು ದ್ರಾಕ್ಷಾರಸದಲ್ಲಿ ಕಾಣುವ ಲೂಥರನ ದೃಷ್ಟಿಯು ಸೃಷ್ಟಿಯ ಪ್ರಕ್ರಿಯೆಯಲ್ಲಿ ಆದಿಯಿಂದಲೂ, ಕ್ರಿಸ್ತನ ಅಂಶ ಎಲ್ಲೆಲ್ಲಿಯು ಅಡಗಿದೆ ಎನ್ನುವ ನಂಬಿಕೆಯಿಂದ ಬಂದುದ್ದಾಗಿತ್ತು. ಈ ಉಪದೇಶದಲ್ಲಿ ತೊಂದರೆಗಳಿದ್ದವು. ಆದ್ದರಿಂದ ಜ್ವಿಂಗ್ಲಿಯು ಕ್ರಿಸ್ತನ ಅಂಶವು ಭೌತಿಕವಾಗಿ ಪ್ರತ್ಯಕ್ಷವಾಗಿದೆ ಎನ್ನುವ ವಿಷಯವನ್ನು ಸಂಪೂರ್ಣವಾಗಿ ತಳ್ಳಿಹಾಕಿದ್ದನು.

ರೊಟ್ಟಿ ಮತ್ತು ದ್ರಾಕ್ಷಾರಸವನ್ನು ಜ್ವಿಂಗ್ಲಿಯು ಸಾಂಕೇತಿಕವಾಗಿ ಮಾತ್ರ ನೋಡಲು ಸಿದ್ಧನಿದ್ದನು. ಮುಕ್ತಿ ನಂಬಿಕೆಯಿಂದ ಬರುತ್ತದೆ ಮತ್ತು ದೈವವಿಲಾಸ ಧಾರ್ಮಿಕ ಕರ್ಮದ ಮುಖಾಂತರವಾಗಿ ಧರ್ಮನಂಬಿಕೆಯುಳ್ಳವನ ಅಂತರಂಗವನ್ನು ಪ್ರವೇಶಿಸುತ್ತದೆ. ಇದರಲ್ಲಿ ಯಾವುದೇ ಭೌತಿಕ ಮಾರ್ಗವಿರುವುದಿಲ್ಲ ಎಂಬುದು ಜ್ವಿಂಗ್ಲಿಯ ನಂಬಿಕೆಯಾಗಿತ್ತು. ಈ ವಿವಾದಗಳು ಚಳವಳಿಯಲ್ಲಿ ಭಾಗವಹಿಸುತ್ತಿರುವ ಹಿಂಬಾಲಕರಿಗೆ ತುಂಬ ಮುಖ್ಯವಾದ ವಿಷಯಗಳಾಗಿದ್ದವು. ಹೀಗೆ ಪ್ರಭು ಭೋಜನದ ವಿಷಯ ಸುಧಾರಣಾ ಚಳವಳಿಯ ಉದ್ದಗಲಕ್ಕೆ ಹರಡಿಕೊಂಡಿತ್ತು. ಮುಂದಿನ ೧೫೦ ವರ್ಷಗಳಲ್ಲಿ ಈ ಧರ್ಮಶಾಸ್ತ್ರ ಏನನ್ನೆಲ್ಲ ನಾಶಪಡಿಸಿತು ಮತ್ತು ಎಷ್ಟು ಜೀವಗಳನ್ನು ಆಹುತಿ ತೆಗೆದುಕೊಂಡಿತು ಎನ್ನುವುದನ್ನು ನಾವು ಇಲ್ಲಿ ಮುಖ್ಯವಾಗಿ ಗುರುತಿಸಬೇಕಾಗುತ್ತದೆ.

**ಕ್ಯಾಲ್ವಿನ್‌ವಾದ**

ಕ್ರೈಸ್ತ ಧರ್ಮದ ಮತ್ತೊಂದು ಬಂಡಾಯವಾದ ಜಾನ್ ಕ್ಯಾಲ್ವಿನ್‌ನ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಇವನು ಫ್ರಾನ್ಸ್ ದೇಶಕ್ಕೆ ಸೇರಿದವನಾಗಿದ್ದನು ಮತ್ತು ಮಾನವ ಶಾಸ್ತ್ರ ಮತ್ತು ಕಾನೂನು ಶಾಸ್ತ್ರದಲ್ಲಿ ಅಧ್ಯಯನ ನಡೆಸಿದ್ದನು. ಜ್ವಿಂಗ್ಲಿಯಂತೆ ಇವನೂ ಕೂಡ ಧರ್ಮ ಮತ್ತು ರಾಜಕೀಯ ವ್ಯವಸ್ಥೆಗಳೆರಡೂ ಒಂದೇ ಸಮುದಾಯವಾಗಿ ವಿಲೀನ ಗೊಳ್ಳಬೇಕು ಎಂದು ಬಯಸಿದ್ದನು. ಧರ್ಮವನ್ನು ರಕ್ಷಿಸುವುದರ ಜತೆಗೆ ಮೂರ್ತಿ ಆರಾಧನೆ, ದೇವರ ಹೆಸರಿನಲ್ಲಿ ಆಗುವ ಅನ್ಯಾಯ, ಧರ್ಮ ಪ್ರವಚನಗಳಲ್ಲಿ, ಧರ್ಮಶಾಸ್ತ್ರ ವ್ಯಾಖ್ಯಾನಗಳಲ್ಲಿ, ಪತ್ರಗಳಲ್ಲಿ, ತನ್ನ ಮತ್ತು ಜಿನೀವ ನಗರ ಸಭೆಯ ನೇರ ಸಂಬಂಧದಲ್ಲಿ, ಇನ್ನೂ ಮುಖ್ಯವಾಗಿ ತನ್ನ ಪ್ರಮುಖ ಗ್ರಂಥವಾದ ಕ್ರೈಸ್ತ ಧರ್ಮಸಂಸ್ಥೆಗಳು ಅನ್ನುವಲ್ಲಿ ನಿಜವಾದ, ಪ್ರಾಯೋಗಿಕವಾದ, ಬೌದ್ಧಿಕವಾದ ಮತ್ತು ಕ್ರೈಸ್ತ ಧರ್ಮಕ್ಕೆ ಕ್ರಮವಾದ ಒಂದು ತಳಹದಿಯನ್ನು ನಿರ್ಮಿಸಲು ಹೋರಾಟ ನಡೆಸಿದ್ದಾನೆ. ಜ್ವಿಂಗ್ಲಿಯು ಆಶಾವಾದಿಯಾದರೆ, ಕ್ಯಾಲ್ವಿನ್ ಮನುಷ್ಯನು ಹುಟ್ಟಿನಿಂದ ಪಾಪಿಯಾದ್ದರಿಂದ ಭಯ ಭಕ್ತಿ ಮೂಡಿಸುವ ಭಗವಂತನನ್ನು ಎದುರಾಗಬೇಕಾಗುತ್ತದೆ ಎಂದು ನಂಬಿದ್ದನು. ಎಲ್ಲಾ ಮಧ್ಯವರ್ತಿಗಳು, ದೇವತೆಗಳು, ಸಂತರು ಈ ಹೋರಾಟದ ಮುನ್ನವೇ ಕಾಣೆಯಾದರು. ಒಂದು ವೇಳೆ, ಮನುಷ್ಯನಿಗೆ ಭರವಸೆ ಎನ್ನುವುದೊಂದಿದ್ದರೆ ಅದು ಕ್ರಿಸ್ತನ ತ್ಯಾಗದಿಂದ ಮಾತ್ರ. ಏಕೆಂದರೆ ಮನುಷ್ಯರಲ್ಲಿ ಅಪೂರ್ಣವಾದ, ದೋಷಾಯುಕ್ತವಾದ ಎಲ್ಲವೂ ಕ್ರಿಸ್ತನ ಪಾವಿತ್ರತೆಯಲ್ಲಿ ಅಡಕವಾಗಿದೆ. ಕ್ರಿಸ್ತನ ಪಾವಿತ್ರತೆ ಮನುಷ್ಯನ ಒಳಿತಿಗಾಗಿ ಇದೆ. ಈ ಹೋರಾಟದಲ್ಲಿ ಮಾನವನ ಪ್ರಯತ್ನಗಳು ಅಲ್ಪವಾದವು. ಎಲ್ಲಾ ಮನುಷ್ಯರು ಮುಕ್ತಿಗಾಗಿ ಇಲ್ಲವೇ ನಾಶಕ್ಕಾಗಿಯೇ ಪೂರ್ವನಿಯೋಜಿತವಾಗಿ ಸೃಷ್ಟಿಯಾಗಿದ್ದಾರೆ ಎನ್ನುವ ಈ ವಾದವು ಲೂಥರನ ಅಭಿಪ್ರಾಯಕ್ಕೆ ಹತ್ತಿರವಾಗಿರುತ್ತದೆ. ಮನುಷ್ಯನು ತನ್ನೊಳಗೆ ಮತ್ತು ಪ್ರಪಂಚದಲ್ಲಿ ದೇವರ ಯುದ್ಧವನ್ನು ಮಾಡಬೇಕಾಗಿರುವುದರಿಂದ, ಮನುಷ್ಯನ ಬದುಕು ಪೂರ್ವ ನಿಯೋಜಿತವಾಗಿ ಬರುತ್ತದೆ, ಅದು ನಿರ್ಲಿಪ್ತತೆಯಿಂದ ಬಂದಿರುವುದಿಲ್ಲ ಎನ್ನುವುದು ಕ್ಯಾಲ್ವಿನ್ನನ ವಾದವಾಗಿತ್ತು. ಸಂಗೀತ ಮತ್ತು ಸಾಹಿತ್ಯಗಳ ವಿಷಯದಲ್ಲಿ ಕ್ಯಾಲ್ವಿನ್ನನು ಮಧ್ಯಮ ಮಾರ್ಗ ಹಿಡಿದಿದ್ದನು. ದೇವರ ಸ್ತೋತ್ರಗಳನ್ನು ಸಾಮೂಹಿಕವಾಗಿ ಹಾಡುವುದನ್ನು ಇವನು ಉತ್ತೇಜಿಸಿದನು. ಇದು ಕ್ರಮೇಣ ಫ್ರಾನ್ಸ್‌ನ ಹ್ಯೂಗ್ಯೂನಾಟ್ಸ್‌ರಲ್ಲಿ, ಸ್ಕಾಟ್‌ಲ್ಯಾಂಡಿನ ಪ್ರಿಸ್ಬಿಟೇರಿಯನ್ಸ್‌ನಲ್ಲಿ ಮತ್ತು ಅಮೆರಿಕದಲ್ಲಿ ಒಂದು ಪ್ರಮುಖ ಅಂಶವಾಗಿ ಬೆಳೆಯಿತು. ಸಂತರ ಮತ್ತು ಶಿಲುಬೆಯ ಮೇಲಿನ ಕ್ರಿಸ್ತನ ಪ್ರತಿಮೆಯ ವಿಷಯಗಳು ಕಲೆಗೆ ಸಂಬಂಧಪಟ್ಟಿದ್ದರಿಂದ ಇವು ಸರಳವಾಗಿರಬೇಕೆಂದು ಬಯಸಿದನು.

ಲೂಥರನ ಮಾರ್ಗದಲ್ಲೇ ಕ್ಯಾಲ್ವಿನ್ನನು ಮೂಲವಾಗಿ ಮುಂದುವರಿದಂತೆ ಕಂಡು ಬಂದರೂ, ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸಗಳಿವೆ. ನಂಬಿಕೆಯಿಂದ ಭಗವಂತನ ಸಮರ್ಥನೆ ಆರಂಭವಾಗುವುದಿಲ್ಲ ಅದು ಜ್ಞಾನದಿಂದ ಆಗುತ್ತದೆ. ಲೂಥರನು ಭಗವಂತನ ಕ್ರೌರ್ಯಗಳಿಗೆ ಕ್ರಿಸ್ತನ ಕರುಣೆಯಲ್ಲಿ ನೆಮ್ಮದಿಯನ್ನು ಕಂಡನು. ಭಗವಂತನ ಭಯಾನಕ ತೀರ್ಪುಗಳು ಆಯ್ದವರ ಮೇಲೆ ಬೀಳುವುದಿಲ್ಲವಾದ್ದರಿಂದ ಕ್ಯಾಲ್ವಿನ್ನನು ಇನ್ನು ಶಾಂತವಾಗಿ ಭಗವಂತನ ಭಯಾನಕ ತೀರ್ಪುಗಳ ಮೇಲೆ ಧ್ಯಾನ ನಡೆಸುವಂತವನಾಗಿದ್ದನು.

ಭಗವಂತನ ಆಯ್ಕೆಗೆ ಯಾರು ಅರ್ಹರು ಎನ್ನುವುದನ್ನು ತಿಳಿಯುವುದು ಲೂಥರನಿಗೆ ಅಸಾಧ್ಯವಾದ ಕೆಲಸವಾಗಿತ್ತು. ಅವನಿಗೆ ತನ್ನಲ್ಲಿಯೇ ಭರವಸೆಯಿರಲಿಲ್ಲ. ಆದ್ದರಿಂದ ತನ್ನ ಜೀವನದ ಉದ್ದಕ್ಕೂ ನಂಬಿಕೆಗಾಗಿ ಮತ್ತು ಭರವಸೆಗಾಗಿ ಹೋರಾಟ ನಡೆಸಿದನು. ಕ್ಯಾಲ್ವಿನ್ ಮತ್ತೊಂದೆಡೆ ಪರೀಕ್ಷೆಗಳನ್ನು ನಡೆಸಿದನು. ಕ್ಯಾಲ್ವಿನ್ನನಿಗೆ ಹೊಸ ಹುಟ್ಟು ಅಥವಾ ಜನ್ಮದ ಅನುಭವ ಬೇಕಾಗಿರಲಿಲ್ಲ. ಏಕೆಂದರೆ ಇವುಗಳು ಮನುಷ್ಯನಲ್ಲಿ ಆಗಲೇ ಇರುವಂತವು ಮತ್ತು ಅನುಭವಕ್ಕೆ ಲಭ್ಯವಾಗುವಂತವು. ಕ್ರಮೇಣ ಕ್ಯಾಲ್ವಿನ್ನನ ವಾದ ಅವನ ಮುಖ್ಯ ವಿಚಾರ ಸರಣಿಯಿಂದ ದೂರ ಸರಿದು, ಚರ್ಚ್‌ನ ಚುನಾವಣೆಯಲ್ಲಿ ಅಂಕಗಳನ್ನು ಗಳಿಸುವ ವಿಷಯಗಳಿಗೆ ಸೀಮಿತವಾಗಿ ಬೆಳೆಯಿತು. ಮೂರು ಪರೀಕ್ಷೆಗಳು ಕ್ಯಾಲ್ವಿನ್ನನಿಗೆ ಮುಖ್ಯವಾಗಿದ್ದವು: ನಂಬಿಕೆಯಿಂದ ನಡೆದುಕೊಳ್ಳುವುದು, ಕಠಿಣವಾದ ಶಿಸ್ತುಗಳಿಂದ ಕೂಡಿದ ಕ್ರೈಸ್ತ ವಿಭಾಗ ಮತ್ತು ಧಾರ್ಮಿಕ ಕರ್ಮ. ಒಬ್ಬ ವ್ಯಕ್ತಿ ಈ ಮೂರು ವಿಷಯಗಳಲ್ಲಿ ಸಮರ್ಥನಾಗಿದ್ದರೆ ಅವನ ಆಯ್ಕೆ ಪೂರ್ವನಿಯೋಜಿತವಾಗಿದೆ ಎಂಬುದು ಖಚಿತವಾದಂತೆ ಎನ್ನುವುದು ಕ್ಯಾಲ್ವಿನ್ನನ ನಂಬಿಕೆಯಾಗಿತ್ತು.

ಅಖಂಡ ಭರವಸೆಯನ್ನು ಸಾಧಿಸಿದ ವ್ಯಕ್ತಿಯಿಂದ ಅಪಾರವಾದ ಶಕ್ತಿಯು ಹೊಮ್ಮುತ್ತದೆ. ಆ ಶಕ್ತಿಯಿಂದ ಪ್ರಪಂಚದಲ್ಲಿ ಭಗವಂತನ ಹಿರಿಮೆಯನ್ನು ಸಾರಬಹುದು ಮತ್ತು ಪವಿತ್ರವಾದ ಪ್ರಜಾಪ್ರಭುತ್ವ ಸಾಮ್ರಾಜ್ಯವನ್ನು ಸ್ಥಾಪಿಸಬಹುದು. ಅಮೆರಿಕ ಸಂಸ್ಥಾನಗಳಲ್ಲಿ ಇದು ಸರ್ವೇಸಾಮಾನ್ಯವಾದ ಮಾತಾಯಿತು. ಸುಧಾರಣೆಗೊಂಡ ಚರ್ಚು ದೇವರ ಸಾಮ್ರಾಜ್ಯವೆಂದು ತಿಳಿಯಲಾಗಿತ್ತು. ಕ್ಯಾಲ್ವಿನ್ನನಿಗೆ ತನ್ನ ಆದರ್ಶಗಳನ್ನು ಈಡೇರಿಸಿಕೊಳ್ಳಲು ಒಳ್ಳೆಯ ಅವಕಾಶವಿತ್ತು. ಆರಂಭದಲ್ಲಿ ಅದು ಕಡಿಮೆ ಪ್ರಮಾಣದಲ್ಲಿ ಸಾಧ್ಯವಾಗಿತ್ತು. ಜಿನೀವ ನಗರವು ಇತ್ತೀಚೆಗೆ ಅಲ್ಲಿನ ಬಿಷಪ್‌ನನ್ನು ಮತ್ತು ಸವೋಯ್ ನಗರದ ಸಂಸ್ಥಾನಿಕ(duke)ನನ್ನು ಹೊರಗೆ ಹಾಕಿತ್ತು. ಆದರೆ, ಬಂಡಾಯದ ತವರಾದ ಬೆರ್ನ್ ನಗರವು ಸ್ವಾತಂತ್ರ್ಯದ ಚಳವಳಿಯಲ್ಲಿ ಸವೋಯ್ ನಗರಕ್ಕೆ ಸಹಾಯ ಮಾಡಿದ್ದರೂ, ಅದು ಇನ್ನೂ ಸ್ವಿಟ್ಜರ್‌ಲ್ಯಾಂಡಿನ ಬಂಡಾಯ ಸಂಯುಕ್ತ ಸಂಸ್ಥಾನಕ್ಕೆ ಸೇರಿರಲಿಲ್ಲ. ಬಂಡಾಯದ ಧರ್ಮ ಪ್ರವಾಚಕರುಗಳು ಬರ್ನಿಯನ್ನರ ಮೂಲಕ ಜಿನೀವ ನಗರವನ್ನು ಸುವಾರ್ತೆಗಳ ಬೋಧನೆಯಿಂದ ಮುಳುಗಿಸಿದ್ದರು. ಇದೇ ವೇಳೆಗೆ ಆಂತರಿಕ ಯುದ್ಧವಾಗುವ ಸಾಧ್ಯತೆಗಳೂ ಇದ್ದವು. ಯುದ್ಧ ಪ್ರಿಯನಾದ ಮತ್ತು ಧರ್ಮಬೋಧಕನೂ ಆದ ಗಿಲ್ಲೇಮ್ ಫಾತೆಲ್ ಎಂಬುವವನು ನಾಯಕತ್ವವನ್ನು ವಹಿಸಲಾಗದೆ ಜಿನೀವವನ್ನು ಹಾದು ಹೋಗುತ್ತಿದ್ದ ಕ್ಯಾಲ್ವಿನ್ನನ್ನು ಹಿಡಿದು ಬಲವಂತವಾಗಿ ನಾಯಕತ್ವದ ಪಟ್ಟ ಕಟ್ಟಿಸಿದನು. ಇದು ಅವನ ದೈವ ಪ್ರೇರಣೆಯಾಗಿತ್ತು. ಆಮೇಲೆ ಸುಮಾರು ವರ್ಷಗಳ ಹೋರಾಟದ ಜೀವನವನ್ನು ನಡೆಸಿ ಒಮ್ಮೆ ರಾಷ್ಟ್ರದಿಂದ ಉಚ್ಚಾಟಿತನಾಗಿ ಮತ್ತೆ ಹಿಂತಿರುಗಿ, ತನ್ನ ಜೀವನದ ಕಡೆಯ ಎರಡು ದಶಕಗಳವರೆಗೂ ಸಬಲನಾಗಿದ್ದು ಜಿನೀವ ನಗರಕ್ಕೆ ನಾಯಕತ್ವವನ್ನು ನೀಡಿದನು. ಜಾನ್ ನಾಕ್ಸ್ ಎಂಬುವವನು ಇವನ ಕಾಲದ ಜಿನೀವ ನಗರವನ್ನು "ಧರ್ಮಪ್ರವರ್ತಕರ ನಂತರ ಮತ್ತೊಂದು ಸುಂದರವಾದ ನಗರ" ಎಂದು ಪರಿಗಣಿಸಿದನು. ಥಾಮಸ್ ಮೂರ್ ತನ್ನ ಸ್ವರ್ಗದ ಕಲ್ಪನೆಯಲ್ಲಿ ಕಂಡಿರುವ ಅಂಶಗಳೆಲ್ಲವನ್ನು ಜಿನೀವ ನಗರವು ಅಂದು ಹೊಂದಿತ್ತು.

ಇವೆಲ್ಲ ಘರ್ಷಣೆಗಳ ನಡುವೆಯೂ ಈ ಕಾರ್ಯಕ್ರಮವು ಸಾಧ್ಯವಾಗಲು ಕಾರಣ ಜಿನೀವ ನಗರದಲ್ಲಿ ನಾಗರಿಕರನ್ನು ಆಯ್ಕೆ ಮಾಡಲು ಇದ್ದ ಪದ್ಧತಿ. ಕ್ಯಾಲ್ವಿನ್ನನ ಬೋಧನೆ ಯಲ್ಲಿ ನಂಬಿಕೆಯಿಲ್ಲದ ಎಲ್ಲಾ ಕ್ಯಾಥೋಲಿಕ್ಕರು ನಗರವನ್ನು ಯಾವ ಮುಲಾಜಿಲ್ಲದೆ ಬಿಡಬೇಕಿತ್ತು. ಅಲ್ಲಿಯೇ ಉಳಿದುಕೊಂಡಿವರಿಗೆ ಚರ್ಚಿನಿಂದ ಬಹಿಷ್ಕಾರ, ಆ ನಂತರ ಆರು ತಿಂಗಳಲ್ಲಿ ಅವರು ಹೊರ ಹೋಗದಿದ್ದರೆ, ಈ ಬಹಿಷ್ಕಾರ ನಗರದಿಂದ ಉಚ್ಚಾಟನೆ ಮಾಡಿದಷ್ಟೇ ತೀವ್ರವಾಗುತ್ತಿತ್ತು. ದೀರ್ಘವಾದ ಹೋರಾಟ ನಡೆದ ನಂತರ ಬಹಿಷ್ಕಾರ ಹಾಕುವುದು ಚರ್ಚಿನ ಅಧಿಕಾರಕ್ಕೆ ಒಳಪಟ್ಟಿತ್ತು. ರಾಜಕೀಯ ಕಾರಣಗಳಿಗಾಗಿ ಈ ಮೊದಲು ರಾಜ್ಯವು ಬಹಿಷ್ಕಾರ ಹಾಕುತ್ತಿದ್ದು, ಅಪಾರ ನೋವನ್ನು ಅನುಭವಿಸಿತ್ತು. ಆದ್ದರಿಂದ ಚರ್ಚಿಗೆ ಬಹಿಷ್ಕಾರ ಹಾಕುವ ಅಧಿಕಾರ ಕೊಡಲು ರಾಜ್ಯವು ಹಿಂಜರಿದಿತ್ತು. ಸ್ಟ್ರಾಸ್‌ಬರ್ಗ್ ಮತ್ತು ಬೇಸೆಲ್ ನಗರಗಳ ಬಂಡಾಯ ಚರ್ಚುಗಳು ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದಾಗ ಕ್ಯಾಲ್ವಿನ್ ಯಶಸ್ವಿಯಾಗಿದ್ದನು. ಇದರ ಪರಿಣಾಮವಾಗಿ ಚರ್ಚಿನ ಕೃಪೆಗೆ ಯಾರು ಪಾತ್ರನಾಗುವುದಿಲ್ಲವೋ ಅವನು ಸಮುದಾಯದಲ್ಲಿ ಒಬ್ಬ ಸದಸ್ಯನಾಗಿ ಇರಲು ಸಾಧ್ಯವಿರಲಿಲ್ಲ. ಅಯ್ಕೆ ಮಾಡಿದ ೧೩ ಸಾವಿರ ಜನಗಳುಳ್ಳ ಜಿನೀವ ಪ್ರದೇಶವು ಫ್ರಾನ್ಸ್, ಇಟಲಿ, ಸ್ಪೈಯಿನ್ ಮತ್ತು ಸ್ವಲ್ಪ ಕಾಲದ ತನಕ ಇಂಗ್ಲೆಂಡಿನಿಂದ ಧರ್ಮದ ಹಿಂಸಾಚಾರ ತಡೆಯಲಾಗದೆ ವಲಸೆ ಬಂದ ಸುಮಾರು ೬,೦೦೦ ನಿರಾಶ್ರಿತರುಗಳಿಂದ ಇನ್ನೂ ಬಲಗೊಂಡಿತು. ಹೀಗಾಗಿ ಜಿನೀವದಲ್ಲಿ ಚರ್ಚು, ರಾಜ್ಯ ಮತ್ತು ಸಮುದಾಯ ಒಂದೇ ಆಗಿರಲು ಸಾಧ್ಯವಾಯಿತು. ಮಂತ್ರಿಗಳ ಮತ್ತು ನ್ಯಾಯಾಧೀಶರ ಕಾರ್ಯವಿಧಾನದಲ್ಲಿ ವ್ಯತ್ಯಾಸಗಳಿದ್ದಾಗ್ಯೂ ಹೊಸ ಇಸ್ರೇಲಿಗೆ ಜಿನೀವ ನಗರವನ್ನು ಹೋಲಿಸಿರುವುದು ತುಂಬ ಗಮನಾರ್ಹವಾದ ವಿಷಯ. ಏಕೆಂದರೆ ಜಿನೀವ ನಗರದಲ್ಲಿ ಆಂತರಿಕ ಐಕ್ಯತೆ ತೀವ್ರಗೊಳಿಸಬೇಕಾಗಿದ್ದ ಸಂದರ್ಭದಲ್ಲಿ ಸವೋಯ್ ಮತ್ತು ಆಲ್ಪದ ಸಂಸ್ಥಾನಿಕರುಗಳು ಹಳೆಯ ಪ್ಯಾಲೆಸ್ತ್ರೀನಿನ ಕೇನನ್ನರಂತೆ ಬದ್ಧ ವೈರಿಗಳಾಗಿ ಕಾದಾಡುತ್ತಿದ್ದರು.

**ಫ್ರಾನ್ಸ್‌ನಲ್ಲಿ ಕ್ಯಾಲ್ವಿನ್‌ವಾದ ಜ್ವಿಂಗ್ಲಿಯ ಸುಧಾರಣೆಗಳಿಗೆ ಸಂಬಂಧಿಸಿದ ಸುಧಾರಕರು**

ತೀವ್ರಗಾಮಿ ಸುಧಾರಣೆಯಲ್ಲಿ ಈ ಸುಧಾರಕರುಗಳು ತುಂಬ ಮುಖ್ಯರಾಗಿದ್ದರು. ತೀವ್ರಗಾಮಿಗಳು ತಮ್ಮ ಧರ್ಮ ಸುಧಾರಣೆಯನ್ನು ಹೊಸ ಒಡಂಬಡಿಕೆಗೆ ಸೀಮಿತಗೊಳಿಸಿಕೊಂಡು ಕೇವಲ ಮೂರು ಅಂಶಗಳನ್ನು ಮಾತ್ರ ತೀವ್ರವಾಗಿ ಪರಿಗಣಿಸಿದರು. ಅವು ಇಂದು ಅಮೆರಿಕದ ಚರ್ಚಿನ ಮಂತ್ರ ಮಾರ್ಗದರ್ಶಿಗಳಾಗಿವೆ. ೧. ಚರ್ಚು ಮತ್ತು ರಾಜ್ಯದ ವಿಭಜನೆ ೨. ಸ್ವಯಂ ಚರ್ಚು ಮತ್ತು ೩. ಧಾರ್ಮಿಕ ಸ್ವಾತಂತ್ರ್ಯ.

ಇವರು ತಮ್ಮನ್ನು ಅನಬ್ಯಾಪ್ಟಿಸ್ಟ್(ಪುನರ್ಜ್ಞಾನ ಸ್ನಾನವಾದಿಗಳು) ಎಂದು ಕರೆದು ಕೊಂಡರು. ಕಾರಣ ಬಾಲ್ಯ ಧರ್ಮದೀಕ್ಷೆಯನ್ನು ಇವರು ಧಿಕ್ಕರಿಸಿದರು ಮತ್ತು ಬಾಲ್ಯಾವಸ್ಥೆಯಲ್ಲಿ ಜ್ಞಾನದೀಕ್ಷೆಯಾಗಿದ್ದವರಿಗೆ ಪ್ರೌಢಾವಸ್ಥೆಯಲ್ಲಿ ಮತ್ತೆ ಇವರು ಜ್ಞಾನಸ್ನಾನ ದೀಕ್ಷೆ ಮಾಡಿಸಿದ್ದರು. ಇವರು ತಮ್ಮನ್ನು ತಾವು ಬೇಪ್ಟಿಸ್ಟ್ ಎಂದು ಕರೆದುಕೊಂಡರು ಮತ್ತು ಹಸುಮಕ್ಕಳಿಗೆ ಮಾಡಿಸಿದ ಜ್ಞಾನಸ್ನಾನ, ಧರ್ಮದೀಕ್ಷೆ ಆಗು ವುದಿಲ್ಲ ಎಂದು ಸಾರಿದರು. ಧರ್ಮದೀಕ್ಷೆಯಷ್ಟೇ ಮನುಷ್ಯನನ್ನು ಪುನಶ್ಚೇತನ ಗೊಳಿಸಲಾರದು. ಅದು ಆಂತರಿಕ ಅನುಭವದ ಬಾಹ್ಯಸಂಕೇತ ಅಷ್ಟೇ, ಆತ್ಮದಲ್ಲಾದ ಪುನರ್ಜನ್ಮ - ಈ ಅನುಭವ ಪ್ರೌಢನಿಗೆ ಮಾತ್ರ ಸಾಧ್ಯ ಎಂಬುದು ಅವರ ಮುಖ್ಯ ಮಂತ್ರವಾಗಿತ್ತು. ಹೊಸ ಒಡಂಬಡಿಕೆಯ ಅನುಸಾರವಾಗಿ ಪ್ರಮಾಣವಚನ ಸ್ವೀಕರಿಸುವುದನ್ನು, ಹಿಂಸಾಚಾರವನ್ನು ಇವರು ಬಹಿಷ್ಕರಿಸಿದರು. ಇದು ರಾಜಕೀಯವಾಗಿ ಮತ್ತು ಸಾಮಾಜಿಕವಾಗಿ ಸಮಸ್ಯಾತ್ಮಕವಾಗಿತ್ತು. ಏಕೆಂದರೆ ಯಾವುದೇ ಸಮಾಜವು ಖಡ್ಗವನ್ನು ತ್ಯಜಿಸಿರಲಿಲ್ಲ. ಕ್ಯಾಥೋಲಿಕ್ಕರು ಮತ್ತು ಪ್ರಾಟೆಸ್ಟಂಟರು ಮೊದಲಾಗಿ ಇವರನ್ನು ಚಿತ್ರಹಿಂಸೆಗೊಳಿಸಿದರು. ಇವರ ಮೊದಲನೆಯ ನಾಯಕ ಫೆಲಿಕ್ಸ್ ಮೇನ್ಸ್ ೧೫೨೭ರಲ್ಲಿ ಜ್ಯೂರಿಚ್‌ನಲ್ಲಿ ನೀರಿನಲ್ಲಿ ಮುಳುಗಿ ಸತ್ತನು. ೧೫೨೯ರಲ್ಲಿ ಸ್ಪೆಯರ್‌ನ ಅಂತಾರಾಷ್ಟ್ರೀಯ ಸಭೆ ಅನ್‌ಬಾಪ್ಟಿಸ್ಟರನ್ನು ಸಾವಿನ ಶಿಕ್ಷೆಗೆ ಗುರಿಪಡಿಸಿತು. ಲೂಥರನ ಅನುಯಾಯಿಗಳೂ ಕೂಡ ಇವರ ವಿರುದ್ಧ ಇಲ್ಲಿ ಪ್ರತಿಭಟಿಸಿದರು. ಪ್ರಮುಖರಾದ ನಾಯಕರುಗಳು ಮರಣದಂಡನೆಯನ್ನು ಅನುಭವಿಸಿದ ನಂತರ ಅಷ್ಟೇನೂ ಸಮರ್ಥರಲ್ಲದವರು ನಾಯಕ ಪಟ್ಟವಹಿಸಿದರು ಮತ್ತು ಪ್ರಭುವಿನ ಮರು ಆಗಮನದ ದಿನವನ್ನು ಸಾರಿದರು. ಅನಬಾಪ್ಟಿಸ್ಟ್‌ರನ್ನು ಒಳಗೊಂಡ ಒಂದು ಗುಂಪು (೧೫೩೪) ವೆಸ್ಟ್ ಫೇಲಿಯ ನಗರವನ್ನು, ತನ್ನ ಧಾರ್ಮಿಕ ನೀತಿಗೆ ವಿರುದ್ಧವಾಗಿ ಕತ್ತಿಯನ್ನು ಬಳಸಿ, ತನ್ನ ವಶಕ್ಕೆ ತೆಗೆದುಕೊಂಡು ಬಹುಪತ್ನಿತ್ವವನ್ನು ಮರಳಿ ಜಾರಿಗೆ ತಂದಿತು. ಈ ನಗರವನ್ನು ಲೂಥರನ ಅನುಯಾಯಿಗಳು ಮತ್ತು ಕ್ಯಾಥೋಲಿಕ್ಕರು ತಮ್ಮ ವಶಕ್ಕೆ ಮತ್ತೆ ತೆಗೆದುಕೊಂಡು ಅನಬಾಪ್ಟಿಸ್ಟ್ ನಾಯಕರನ್ನು ಕೊಂದು ಹಾಕಿದರು. ತನ್ನ ಅನುಯಾಯಿಗಳ ಪಂಥವನ್ನೇ ಕ್ರಮೇಣ ಕಟ್ಟಿದ ಹಾಲೆಂಡಿನ ಮನ್ನೋಸಮೆನ್ಸ್ ಎಂಬುವವನು ಹಿಂಸಾಚಾರ ಮತ್ತು ಬಹುಪತ್ನಿತ್ವವನ್ನು ಧಿಕ್ಕರಿಸಿ ಮೂಲ ಧರ್ಮಪ್ರವಾದಿಗಳ ಬೋಧನೆಗಳಿಗೆ ಮರಳಿದನು. ಹಾಲೆಂಡ್‌ನಲ್ಲಿ ಸೈನಿಕ ಸೇವೆಗೆ ಈ ಪಂಥದವರನ್ನು ಸೇರಿಸಿಕೊಂಡಿದ್ದರಿಂದ, ಅಲ್ಲದೆ ಪೂರ್ವ ಯೂರೋಪ್ ಮತ್ತು ಅಮೆರಿಕಕ್ಕೆ ವಲಸೆ ಹೋದುದರಿಂದ ಮೆನ್ನೂನ ಅನುಯಾಯಿಗಳು ಜೀವ ಉಳಿಸಿಕೊಳ್ಳಲು ಸಾಧ್ಯವಾಯಿತು. ಜಕೋಬ್ ಹಟ್ಟರ್ ಎಂಬುವವನಿಂದ ಹಟ್ಟರ್ ಅನುಯಾಯಿಗಳು ಎಂಬ ಮತ್ತೊಂದು ಗುಂಪು ಮೋರೋವಿಯದ ಶಾಂತಪ್ರಿಯ ಜಮೀನುದಾರರ ಅನುಗ್ರಹದಿಂದಾಗಿ ಅಸ್ತಿತ್ವಕ್ಕೆ ಬಂತು. ಹಿಂಸಾಚಾರದಿಂದಾಗಿ ಈ ಗುಂಪುಗಳೂ ಕೂಡ ಅಮೆರಿಕ ಸಂಸ್ಥಾನಗಳಿಗೆ ವಲಸೆ ಹೋದವು. ಅರ್ನಿಶ್ ಪಂಥದ ಸ್ವಿಲ್ ಎನ್ನುವ ಒಂದು ಗುಂಪು ಕೂಡ ಅಮೆರಿಕದಲ್ಲಿ ಉಳಿದುಕೊಂಡಿತು. ಈ ಎಲ್ಲಾ ವಿಚಾರಗಳನ್ನು, ಇತ್ತೀಚಿನ ಇತಿಹಾಸದಲ್ಲಿ ವಿವಿಧ ರೀತಿಯಲ್ಲಿ ಹೊಂದಾಣಿಕೆಗೊಂಡು, ಬ್ರದರನ್ ಮತ್ತು ಕ್ವೇಕರ್ಸ್ ಪಂಥದವರಲ್ಲಿಯೇ ಅಲ್ಲದೆ, ಚರ್ಚಿಗೂ ಸರ್ಕಾರಕ್ಕೂ ಯಾವುದೇ ಸಂಬಂಧ ಇರಕೂಡದೆಂದು ಬಯಸುವ ಎಲ್ಲಾ ಪಂಥಗಳಲ್ಲೂ ಕಾಣಬಹುದಾಗಿದೆ.

**ಲೂಥರನಿಗೆ ಸಂಬಂಧಿಸಿದ ಸುಧಾರಕರುಗಳು**

ಬಹುಮುಖ್ಯವಾಗಿ ಇಬ್ಬರು ಪ್ರಧಾನರಾಗಿರುತ್ತಾರೆ. ಮೊದಲನೆಯದಾಗಿ ಕಾರ್ಲ್ ಸ್ಟ್ಯಾಡ್ಟ್ ಎಂಬುವವನು. ಧರ್ಮದಲ್ಲಿ ಕಲೆ ಮತ್ತು ಸಂಗೀತವು ಸಂಪೂರ್ಣವಾಗಿ ಬಹಿಷ್ಕಾರವಾಗಬೇಕೆಂದು ಮತ್ತು ಪವಿತ್ರ ಪೂಜಾ ಸ್ಥಳದಲ್ಲಿ ಕ್ರಿಸ್ತನ ದೇಹದ ಇರುವಿಕೆಯನ್ನು ಆಧ್ಯಾತ್ಮಿಕವಾಗಿ ಅರ್ಥೈಸಬೇಕೆಂದು ಹೇಳಿರುತ್ತಾನೆ. ಮೂರ್ತಿ ಆರಾಧನೆಗೆ ಸಂಬಂಧಿಸಿದಂತೆ ಅವನ ವಿಚಾರಧಾರೆ ದಂಗೆಯನ್ನು ಎಬ್ಬಿಸಿತು. ಲೂಥರನಂತೆ ಇವನು ಕೂಡ ಎಲ್ಲ ಸಾಮಾನ್ಯ ಜನರು ಧರ್ಮಾಧಿಕಾರಿಗಳು ಎಲ್ಲಾ ಕ್ರೈಸ್ತ ಪುರೋಹಿತರು ಮದುವೆಯಾಗಬೇಕೆಂದು ನಂಬಿದ್ದನು. ಧಾರ್ಮಿಕ ವಿರಾಮದ ದಿನವನ್ನು ಸರ್ವರೂ ಕಡ್ಡಾಯವಾಗಿ ಅನುಸರಿಸಬೇಕು. ಈ ವಿಷಯ ಧಾರ್ಮಿಕ ಶುದ್ಧಿಯ ವಾದದ ಚಳವಳಿ ಯನ್ನು ನವೀಕರಿಸುತ್ತಿತ್ತು. ಈ ವಿಚಾರ ಆಧ್ಯಾತ್ಮವನ್ನು, ಆದರ್ಶವನ್ನು ಬೆಸೆಯುತ್ತಿತ್ತು. ಆಧ್ಯಾತ್ಮದಲ್ಲಿ ಉನ್ನತ ಸ್ಥಾನದಲ್ಲಿರುವವರು ಇಂದ್ರಿಯಗಳ ಮೂಲಕ ಗೋಚರಪಡಿಸಿ ಕೊಳ್ಳುವಂತಹ ಧಾರ್ಮಿಕ ಸಾಧನಗಳನ್ನು ಕೈಬಿಡಬೇಕು ಮತ್ತು ಕಾನೂನಿನ ಮುಖಾಂತರ ಸಾಮಾನ್ಯ ಜನರಿಂದಲೂ ಈ ಮಾರ್ಗ ಅನುಸರಿಸುವುದನ್ನು ಕಿತ್ತುಕೊಳ್ಳಬೇಕು ಎಂದು ಉಪದೇಶಿಸಿದನು.

ಥಾಮಸ್ ಮಂಟ್‌ಜರ್ ಎಂಬುವವನು ಅಪಾರವಾದ ಜಿಜ್ಞಾಸೆಗೆ ಗುರಿಯಾದವನು ಮತ್ತು ಆಳವಾಗಿ ಅಧ್ಯಯನ ನಡೆಸಿದ್ದವನು ಹಾಗೂ ಉರಿಯುವ ಬೆಂಕಿಯಂತೆ ನಾಯಕತ್ವದ ಗುಣವುಳ್ಳವನಾಗಿದ್ದನು. ಇವನು ಕ್ರೈಸ್ತ ಬಂಡಾಯದ ಪವಿತ್ರ ಸ್ವತಂತ್ರ್ಯ ಸಂಸ್ಥೆಯ ಸಿದ್ಧಾಂತವನ್ನು ಮೊದಲು ರಚಿಸಿದನು. ದೇವರ ಮುಕ್ತಿಗೆ ಪಾತ್ರರಾದವರನ್ನು ಗುರುತಿಸಬಹುದಾಗಿದೆ ಎಂದು ನಂಬಿದ್ದನು. ಈ ಜಗತ್ತಿನಲ್ಲಿ ದೇವರ ರಾಜ್ಯವನ್ನು ಮತ್ತು ಪವಿತ್ರ ಪ್ರಜಾಪ್ರಭುತ್ವವನ್ನು ಸ್ಥಾಪಿಸಬೇಕೆನ್ನುವುದು ಮತ್ತು ಕೆಟ್ಟದನ್ನು ನಿರ್ನಾಮ ಮಾಡಬೇಕೆಂಬುದೇ ಈತನ ಜೀವನದ ಪರಮ ಗುರಿಯಾಗಿತ್ತು. ಈ ದಿಸೆಯಲ್ಲಿ ಕೆಲಸ ಮಾಡುತ್ತಾ, ದೇವರ ಆಯ್ಕೆಗೆ ಗುರಿಯಾಗಿರುವವರು ನೋವನ್ನು ಅನುಭವಿಸಿರಬೇಕು ಮತ್ತು ಕ್ರಿಸ್ತನು ನಡೆದಿರುವ ಮಾರ್ಗವನ್ನು ಅನುಸರಿಸುತ್ತಾ ಶಿಲುಬೆಯತ್ತ, ಸತ್ವಪರೀಕ್ಷೆಯತ್ತ ನಡೆದರೆ ಜೀವನದಲ್ಲಿ ಜಯ ಲಭಿಸುತ್ತದೆ ಎಂದು ನಂಬಿದ್ದನು. ನೋವನ್ನು ಅನುಭವಿ ಸುವುದು, ನೋವನ್ನು ಪರರ ಮೇಲೆ ಹೇರುವುದು ಒಂದಕ್ಕೊಂದು ಸಮನಾದ ವಿಷಯ ವಲ್ಲ. ಮಂಟ್‌ಜನುರ ತನ್ನ ಬೋಧನೆಗಳನ್ನು ಜಾರಿಗೊಳಿಸುವಂತೆ ಸ್ಯಾಕ್ಸನ್ ಅರಸು ಕುಮಾರರನ್ನು ಆಗ್ರಹಿಸಿದನು. ಆದರೆ ಇವನ ಬೇಡಿಕೆಯನ್ನು ತಿರಸ್ಕರಿಸಿದುದೇ ಅಲ್ಲದೆ ಇವನನ್ನು ಉಚ್ಚಾಟನೆ ಕೂಡ ಮಾಡಲಾಯಿತು. ಸಹಾನುಭೂತಿಯಿಂದ ಇವನ ಮಾತು ಗಳನ್ನು ಕೇಳಿದ, ದಂಗೆಯೆದ್ದಿದ್ದ ರೈತರುಗಳ ಸಹಾಯದೊಡನೆ ಫ್ರಾಂಕನ್‌ಹೂಸನ್ ಎನ್ನುವ ಸ್ಥಳದಲ್ಲಿ ಯುದ್ಧ ನಡೆಸಿದನು. ರೈತರೆಲ್ಲ ಈ ಯುದ್ಧದಲ್ಲಿ ಸರ್ವನಾಶವಾದರು. ಮಂಟ್‌ಜರ್ ಸೆರೆಯಾಗಿ ನಂತರ ಶಿರಚ್ಛೇದನ ಅನುಭವಿಸಿದನು. ದೇವರ ವಾಣಿಗೆ ಬದಲಾಗಿ ಖಡ್ಗವನ್ನು ಹಿಡಿದ ಮಂಟ್‌ಜರ್ ನಂಥವರನ್ನು ಸ್ಮರಿಸುವುದು ಅಸಹ್ಯವಾದ ಕೆಲಸ ಎನ್ನುವುದು ಇವನ ಮೇಲೆ ಲೂಥರನ ಅಭಿಪ್ರಾಯವಾಗಿತ್ತು. ಆದರೆ ಮಾರ್ಕ್ಸ್ ವಾದಿಗಳು ಮಂಟ್‌ಜರ್‌ನನ್ನು ಸಮಾಜಕ್ರಾಂತಿಯ ಪ್ರವಾದಿ ಎಂದು ಎತ್ತರಕ್ಕೇರಿಸಿದ್ದಾರೆ.

**ಫ್ರಾನ್ಸ್‌ನಲ್ಲಿ ಕ್ಯಾಲ್ವಿನ್ನನ ಪ್ರಭಾವ**

ಲೂಥರನಿಗೆ ಅಥವಾ ಜ್ವಿಂಗ್ಲಿಗೆ ಸಮನಾಗುವಂತಹ ಮುಂದಾಳುಗಳು ಸುಧಾರಣೆ ಆರಂಭವಾದ ದಿನಗಳಲ್ಲಿ ಯಾರೂ ಇರಲಿಲ್ಲ. ಇವರ ಅರ್ಧಮಟ್ಟಕ್ಕಾದರೂ ನಿಲ್ಲುವ ಮಹಾ ಮಾನವವಾದಿ ಎಂದರೆ ಜಾನ್ ಜಾಕ್ಸ್ ಲುಫ್‌ರೆರ. ಇವನ ಹೆಸರು ಲ್ಯಾಟಿನ್ ಭಾಷೆಯಲ್ಲಿ ಫೇಬರ್ ಸ್ಟೆಪುಲೆನ್ಸಸ್ ಎಂದು ಕೂಡ ಇದೆ. ಇವನು ಬೈಬಲನ್ನು ಫ್ರೆಂಚ್‌ಗೆ ತರ್ಜುಮೆ ಮಾಡುವುದರ ಮೂಲಕ ಲೂಥರನಿಗೆ ಮೊದಲೆ ಫ್ರಾನ್ಸ್‌ನಲ್ಲಿ ಸುಧಾರಣೆ ಮುಂದುವರೆಯುವಂತೆ ಮಾಡಿದ್ದನು. ಕ್ರಿಯೆಗಳಿಗಿಂತ ಮಿಗಿಲಾಗಿ ನಂಬಿಕೆಯಿಂದ ಧಾರ್ಮಿಕ ಜೀವನವನ್ನು ನಡೆಸುವುದು ಉತ್ತಮ ಎಂದು ನಂಬಿದ್ದನು. ಇವನ ಶಿಷ್ಯನಾದ ಮೀಕ್ಸ್‌ನ ಬಿಷಪ್ ಗಿಲ್ಲಾಮ್ ಬ್ರಿಕನ್ನೆಟ್ ಎಂಬುವವನು ಸುಧಾರಣೆಯ ಬಗ್ಗೆ ಕೆಲಸ ವನ್ನು ತನ್ನ ಪ್ರಾಂತದಲ್ಲಿ ಕೈಗೊಂಡು, ಸುಧಾರಣೆಯ ಕಾಳಜಿವುಳ್ಳವರನ್ನು ಉತ್ತೇಜಿಸಿದನು. ಇವನು ಎಂದೂ ಕೂಡ ಕ್ಯಾಥೋಲಿಕ್ ಧರ್ಮವನ್ನು ಬಿಟ್ಟು ದೂರ ಸರಿದಿರಲಿಲ್ಲ. ಆದರೆ ಸುಧಾರಣೆಯ ಬೋಧಕರನ್ನು ಉತ್ತೇಜಿಸುವ ಬಗ್ಗೆ ವಿರೋಧ ಬಂದಾಗ ಸ್ವಲ್ಪ ಹಿಂಜರಿದಿದ್ದನು.

ಫ್ರಾನ್ಸ್‌ನ ದೊರೆ ಮೊದಲನೆ ಫ್ರಾನ್ಸಿಸ್ಸನಿಗೆ ಸುಧಾರಣೆಗಳ ಬಗ್ಗೆ ಒಂದೇ ತರಹದ ಧೋರಣೆ ಇರಲಿಲ್ಲ. ರಾಜಕೀಯ ಪರಿಸ್ಥಿತಿಗಳಿಗನುಗುಣವಾಗಿ ನಡೆದುಕೊಳ್ಳುತ್ತಿದ್ದನು. ಆದರೆ ಕ್ರಮೇಣ ಕ್ರೈಸ್ತ ಬಂಡಾಯವಾದವನ್ನು ಸಂಪೂರ್ಣವಾಗಿ ತಿರಸ್ಕರಿಸಿದನು. ಜರ್ಮನಿಯಲ್ಲಿನ ರೈತರ ದಂಗೆ ಅವನನ್ನು ಚಿಂತಿಸುವಂತೆ ಮಾಡಿತ್ತು. ಹೊಸ ಧಾರ್ಮಿಕ ನಂಬಿಕೆಗಳು ತನ್ನ ರಾಜ್ಯದಲ್ಲೂ ಅರಾಜಕತೆಯನ್ನು ಹುಟ್ಟು ಹಾಕಬಹುದೆಂದು ಹೆದರಿದ್ದನು. ತನ್ನ ಆಳ್ವಿಕೆಯ ಅಂತಿಮ ದಿನಗಳಲ್ಲಿ ಧರ್ಮ ವಿರೋಧಿ ಚಟುವಟಿಕೆಗಳ ವಿರುದ್ಧ ಕಠಿಣವಾದ ಕಾನೂನುಗಳನ್ನು ಜನಗಳ ಮೇಲೆ ಹೇರಿದರೂ, ಬಂಡಾಯವಾದವು ಫ್ರಾನ್ಸ್‌ನಲ್ಲಿ ಮುಂದುವರೆಯುವುದನ್ನು ಇವನಿಂದ ತಡೆಗಟ್ಟಲಾಗಲಿಲ್ಲ.

ಅಧಿಕಾರ ವಿಕೇಂದ್ರೀಕರಣ ಫ್ರಾನ್ಸಿನಲ್ಲಿ ಅಷ್ಟೇನೂ ಉತ್ತಮವಾಗಿರಲಿಲ್ಲವಾದರೂ, ಕೆಲವೇ ಪ್ರಾಂತ್ಯಗಳು ಹೇಳಬಹುದಾದಷ್ಟು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದವು. ಉದಾ : ದಕ್ಷಿಣ ಪ್ರಾಂತದ ಮಿಡಿ ಮತ್ತು ನವ್‌ರೆರ ಎನ್ನುವ ಪ್ರದೇಶಗಳು. ಈ ಪ್ರದೇಶ ಗಳಲ್ಲೇ ಮೊದಲಿಗೆ ಕ್ರೈಸ್ತಧರ್ಮ ಬಂಡಾಯವಾದ ಆರಂಭವಾದದ್ದು. ಈ ದೃಷ್ಟಿಯಲ್ಲಿ ನೋಡಿದಾಗ ಫ್ರಾನ್ಸ್‌ನಲ್ಲಿನ ಸುಧಾರಣಾ ಚಳವಳಿ ಜರ್ಮನಿಗಿಂತ ಏನೂ ವಿಭಿನ್ನವಾಗಿರಲಿಲ್ಲ.

ಫ್ರಾನ್ಸಿನಲ್ಲಿ ಲೆಫ್ೇರೆರ ಮತ್ತು ಬ್ರಿಕನ್ನೆಟ್‌ರ ಪ್ರಯತ್ನಗಳಿಂದಾಗಿ ಪರಿಸ್ಥಿತಿಯು ಸುಧಾರಣೆಗೆ ಹದವಾಗಿತ್ತು. ರಾಜ ಮೊದಲನೆಯ ಫ್ರಾನ್ಸಿಸ್ ಮತ್ತವನ ಆಂಗೌಲೆಮ್ಮೆಯ ತಂಗಿ ಮಾರ್ಗರೆಟ್ ಅಂಧಶ್ರದ್ಧೆಯ ಚಳವಳಿಕಾರರಿಂದ ಮಾನವೀಯ ಸುಧಾರಕರನ್ನು ರಕ್ಷಿಸಲು ಮಧ್ಯ ಪ್ರವೇಶ ಮಾಡುತ್ತಿದ್ದರು. ಫ್ರಾನ್ಸ್‌ನ ಉದ್ದಗಲಕ್ಕೆ ಲೂಥರನ ಗಾಳಿ ಬೀಸುತ್ತಿದ್ದ ಸಮಯದಲ್ಲಿ ಮೊದಲನೆಯ ಫ್ರಾನ್ಸಿಸ್ಸನು ತನ್ನ ನೀತಿಯಲ್ಲಿ ಏಕಾತ್ಮತೆಯನ್ನು ಅನುಸರಿಸದೆ ಸಮಯಕ್ಕೆ ತಕ್ಕಂತೆ, ರಾಜಕೀಯ ಪರಿಸ್ಥಿತಿಗೆ ಅನುಗುಣವಾಗಿ ಪೋಪನನ್ನು, ಟರ್ಕರನ್ನು, ಲೂಥರನ ಪ್ರಭಾವದ ಜರ್ಮನ್ನರನ್ನು ಅವಲಂಬಿಸುತ್ತಿದ್ದನು. ೧೫೩೪ರಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ಪ್ಯಾರಿಸ್ ನಗರವನ್ನು ಆವರಿಸಿತು. ಗೋಡೆಗಳ ಮೇಲೆ ಚೇಟಿಗಳನ್ನು ಅಂಟಿಸಲಾಯಿತು ಮತ್ತು ಸಾರ್ವಜನಿಕರ ಮೇಲೆ ಹಲ್ಲೆ ಶುರುವಾಯಿತು. ಅನಂತರ ಈ ಪರಿಸ್ಥಿತಿಯನ್ನು ಕಠಿಣವಾಗಿ ಹತ್ತಿಕ್ಕುವಾಗ ಬ್ರಿಕನ್ನೆಟ್ಸ್‌ನು ರಾಜನಿಗೆ ಮಣಿದನು. ಫ್ಯಾರೆಲ್ -ಜಿನೀವಕ್ಕೆ, ಲೆಫೆರೆ-ಸ್ಟ್ರಾಸ್‌ಬರ್ಗ್‌ಗೆ ಕ್ಯಾಲ್ವಿನ್-ಬೇಸೆಲ್‌ಗೆ ಓಡಿ ಹೋದರು. ಮೊದಲನೆಯ ಫ್ರಾನ್ಸಿಸ್‌ನ ಮಗನಾದ ಮೊದಲನೆಯ ಹೆನ್ರಿಯ ಕಾಲದಲ್ಲಿ ಸುಧಾರಕರುಗಳ ಮೇಲಿನ ಹಿಂಸಾಚಾರ ಮತ್ತಷ್ಟು ಹೆಚ್ಚಾಯಿತು. ಒಂದು ವೇಳೆ ರಾಜ ಒಂದನೆಯ ಹೆನ್ರಿ ಸಾಯದಿದ್ದರೆ ಕ್ರೈಸ್ತ ಧರ್ಮ ಬಂಡಾಯವಾದಿಗಳ ಮೇಲಿನ ಹಿಂಸಾಚಾರ ಕಡಿಮೆಯಾಗುತ್ತಲೇ ಇರಲಿಲ್ಲ.

ಫ್ರಾನ್ಸಿನಲ್ಲಿ ಶ್ರೀಮಂತರುಗಳ ನಡುವಿನ ವೈರತ್ವ ಧಾರ್ಮಿಕ ಹೊಡೆದಾಟದ ರೂಪವನ್ನು ತಳೆದಿತ್ತು. ರಾಜಮನೆತನಕ್ಕೆ ಬೆಂಬಲವಾಗಿ ನಿಂತಿದ್ದ ಗೈಸ್‌ರ ಮನೆತನ ಕ್ಯಾಥೊಲಿಕ್ ಪಂಥಕ್ಕೆ ಸೇರಿತ್ತು ಮತ್ತು ಇವರು ಸ್ಪೈಯಿನ್ ದೇಶದವರ ಸಹಾಯ ಪಡೆಯಲು ಸಿದ್ಧನಿದ್ದರು. ಅಂತೆಯೇ ನೌಕಾಬಲದ ಅಧಿಪತಿಯಾಗಿದ್ದ ಕೊಲಿಗ್ನೆ ಕ್ರೈಸ್ತ ಬಂಡಾಯ ಪಂಥಕ್ಕೆ ಸೇರಿದವನಾಗಿದ್ದು, ಇಂಗ್ಲೆಂಡ್ ಮತ್ತು ಜರ್ಮನಿಯ ಸಹಾಯ ಪಡೆಯಲು ಸಿದ್ಧನಿದ್ದನು. ಎರಡನೆಯ ಫ್ರಾನ್ಸಿಸ್‌ನ ಅಧಿಕಾರವಧಿಯಲ್ಲಿ ಗೈಸ್‌ರ ಮನೆತನ ಉನ್ನತ ಮಟ್ಟಕ್ಕೇರಿತ್ತು. ಕಾರಣ ಎರಡನೆಯ ಫ್ರಾನ್ಸಿಸ್‌ನ ಹೆಂಡತಿ ಇವರ ಮನೆತನಕ್ಕೆ ಸೇರಿದವಳಾಗಿದ್ದಳು. ಕ್ರೈಸ್ತ ಬಂಡಾಯವಾದಿಗಳೂ ಅಂದರೆ ಪ್ರಾಟೆಸ್ಟಂಟರು, ಫ್ರಾನ್ಸಿನಲ್ಲಿ ಹುಗೆನಾಟ್ಸ್ ಎಂದೂ ಕೂಡ ಗುರುತಾಗಿದ್ದರು. ಇವರು ತಮಗೆ ಕಾದಿದ್ದ ಹಿಂಸಾಚಾರವನ್ನು ಪರಿಗಣಿಸಿ ಗೈಸ್ ಮನೆತನದ ಮುಖ್ಯರನ್ನು ಕೊಲೆ ಮಾಡಲು ಅಂಬಿಯೋಸ್ ಎಂಬಲ್ಲಿ ಸಂಚು ನಡೆಸಿದ್ದರು. ಆದರೆ ಈ ಸಂಚು ಸಫಲವಾಗಲಿಲ್ಲ. ಎರಡನೆ ಫ್ರಾನ್ಸಿಸ್ಸನು ಮರಣ ಹೊಂದಿದ ನಂತರ ಇವನ ಕಿರಿಯ ತಮ್ಮ ಒಂಬತ್ತನೆಯ ಚಾರ್ಲ್ಸ್ ಪಟ್ಟಕ್ಕೆ ಬಂದನು. ರಾಜಮಾತೆ ಕ್ಯಾಥರೀನ್ ಡಿ ಮೆಡಿಸಿ ಧರ್ಮದ ಹೆಸರಿನಲ್ಲಿ ಯುದ್ಧಗಳಾಗುವುದನ್ನು ತಡೆಗಟ್ಟಲು, ಕ್ರೈಸ್ತ ಬಂಡಾಯವಾದಿಗಳ ವಿಷಯವನ್ನು ತನ್ನ ಕೈಗೆತ್ತಿಕೊಂಡು ಅವರ ಬಗ್ಗೆ ಶಾಂತಿ ನೀತಿಯನ್ನು ತಳೆದು ಪ್ರತ್ಯೇಕವಾದ ಸ್ಥಳಗಳಿಗೆ ಸೀಮಿತವಾದಂತೆ ಸ್ವಲ್ಪ ಸ್ವಾತಂತ್ರ್ಯವನ್ನು ೧೫೬೨ರ ರಾಜಶಾಸನದ ಮೂಲಕ ನೀಡಿದಳು. ಗೊತ್ತುಪಡಿಸಿದ ಧಾರ್ಮಿಕ ವಿಧಿ ನಿಯಮಗಳನ್ನು ಬಿಟ್ಟು ಕ್ರೈಸ್ತ ಬಂಡಾಯವಾದಿಗಳು ತಮ್ಮದೇ ರೀತಿಯ ಆಚರಣೆ ವಿಧಿಗಳನ್ನು ನಡೆಸುತ್ತಿದ್ದಾರೆ ಎಂದು ಗೈಸ್‌ನ ಮನೆತನದ ಫ್ರಾಂಕಾಯಿಸ್ ಗೈಸ್‌ಗೆ ತಿಳಿದಾಗ ಯುದ್ಧ ಆರಂಭವಾಯಿತು. ಸುಮಾರು ಹತ್ತು ವರ್ಷಗಳ ಕಾಲ ಯುದ್ಧ ಉಗ್ರವಾಗಿಯೇ ನಡೆಯಿತು. ಇದನ್ನು ಕಂಡ ರಾಜಮಾತೆ ಕ್ಯಾಥರೀನಳು ತನ್ನ ಮಗಳಾದ ಮಾರ್ಗರೆಟ್ಟಳನ್ನು ನವ್‌ರೆರಯಾ ಜಾನ್ ಡಿ ಆಲ್ಬರ್ಟ್‌ನ ಮಗನಾದ, ಬೋರ್ಬನ್ ವಂಶಕ್ಕೆ ಸೇರಿದ ಮತ್ತು ಕ್ರೈಸ್ತ ಬಂಡಾಯವಾದಿಗಳ ಭರವಸೆಯೂ ಆಗಿದ್ದ, ಹೆನ್ರಿಗೆ ಕೊಟ್ಟು ಮದುವೆ ಮಾಡಿದಳು. ಮದುವೆಯ ಸಂದರ್ಭದಲ್ಲಿ ಕೋಲಿಗ್ನೆಯನ್ನು ಹತ್ಯೆ ಮಾಡಲು ಗೈಸ್‌ನ ಸಂಸ್ಥಾನಿಕ ಪ್ರಯತ್ನಪಟ್ಟನಾದರೂ ಸಫಲವಾಗಲಿಲ್ಲ. ಅನಂತರ ೧೫೭೨ರ ಆಗಸ್ಟ್ ತಿಂಗಳಲ್ಲಿ ಸೈಂಟ್ ಬಾರ್ಥಲೋಮಿಯೋ ಬಳಿ ನಡೆದ ಸಾಮೂಹಿಕ ಹತ್ಯಾಕಾಂಡದಲ್ಲಿ ಗೈಸನು ಕ್ರೈಸ್ತ ಬಂಡಾಯವಾದಿಗಳ ಮುಖಂಡರೆಲ್ಲರನ್ನೂ ನಿರ್ನಾಮ ಮಾಡಲು ಪ್ರಯತ್ನಿಸಿದನು. ಇನ್ನೂ ಕೆಲವೆಡೆ ಇಂಥವೇ ಹತ್ಯಾಕಾಂಡ ನಡೆದವು. ಒಂಬತ್ತನೆಯ ಚಾರ್ಲ್ಸ್‌ನ ತಮ್ಮ ಮೂರನೆಯ ಹೆನ್ರಿ ೧೫೭೪ರಲ್ಲಿ ಪಟ್ಟಕ್ಕೆ ಬಂದನು. ನವ್‌ರೆರಯ ಬಂಡಾಯವಾದಿಗಳು ರಾಜನ ಜತೆ ಕೈಗೂಡಿಸುವುದರ ಮುಖಾಂತರ ಇವನು ರಾಜ್ಯಭಾರವನ್ನು ಸುಗಮವಾಗಿ ನಡೆಸಲು ಯತ್ನಿಸಿದನು. ಕ್ಯಾಥೋಲಿಕ್ ಕೋಮುವಾದಿ ಯೊಬ್ಬನು ರಾಜನನ್ನು ಕೊಲೆಗೈದನು. ನವ್‌ರೆರಯ ಹೆನ್ರಿಯು ನಾಲ್ಕನೆಯ ಹೆನ್ರಿಯಾದನು. ಆದರೆ ಇವನು ಕ್ರೈಸ್ತ ಬಂಡಾಯವಾದಿಯಾಗಿರುವ ತನಕವೂ ಪ್ಯಾರಿಸ್‌ನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಮತ್ತು ಫ್ರಾನ್ಸನ್ನು ಆಳಲು ಸಾಧ್ಯವಾಗಲಿಲ್ಲ. ಕ್ರೈಸ್ತ ಬಂಡಾಯವಾದಿ ಗಳೊಡನೆ ಸಹಿಷ್ಣುತೆ ಸಾಧಿಸುವ ಸಲುವಾಗಿ ರೋಮಿನ ಸಹಕಾರವನ್ನು ಪಡೆದುಕೊಂಡು ನೆಂಟಸ್ ಎಂಬಲ್ಲಿ, ೧೫೯೮ರಲ್ಲಿ ಒಂದು ಶಾಸನವನ್ನು ಹೊರಡಿಸಿದನು. ಇದರ ಪ್ರಕಾರ, ಕೆಲವೇ ಸ್ಥಳಗಳಲ್ಲಿ ಕ್ರೈಸ್ತ ಬಂಡಾಯವಾದಿಗಳು ತಮ್ಮ ಆರಾಧನೆಗಳನ್ನು ನಡೆಸಿಕೊಳ್ಳಲು ಮತ್ತು ಸಾರ್ವಜನಿಕ ಜೀವನವನ್ನು ನಡೆಸಲು ಹಕ್ಕನ್ನು ನೀಡಿದನು. ಈ ಕಾನೂನು ೧೬೮೫ ರವರೆಗೆ ಜಾರಿಯಲ್ಲಿದ್ದಿತು.

**ಇಂಗ್ಲೆಂಡ್ ಮತ್ತು ಸ್ಕಾಟ್‌ಲ್ಯಾಂಡ್‌ಗಳಲ್ಲಿ ಸುಧಾರಣೆ**

ಇಂಗ್ಲೆಂಡ್‌ನಲ್ಲಿ ಸುಧಾರಣೆಯು ಧಾರ್ಮಿಕವಾಗಿರದೆ ಮೂಲತಃ ರಾಜಕೀಯವಾಗಿತ್ತು. ಅಂದರೆ ಇದು ಇಂಗ್ಲೆಂಡಿನ ರಾಜ ಮತ್ತು ಪೋಪನ ನಡುವಿನ ಜಗಳವಾಗಿತ್ತು. ಇಂಗ್ಲೆಂಡಿನ ರಾಜನು ತನ್ನ ದೇಶದ ಸಿಂಹಾಸನವನ್ನೇರಲು ಒಬ್ಬ ಉತ್ತರಾಧಿಕಾರಿಯನ್ನು ತರಬೇಕಾಗಿತ್ತು. ಫ್ರಾನ್ಸಿನಲ್ಲಿರುವಂತೆ ಸ್ತ್ರೀಯರು ಇಂಗ್ಲೆಂಡಿನಲ್ಲಿ ಪಟ್ಟವನ್ನೇರುವಂತಿರಲಿಲ್ಲ. ಎಂಟನೆಯ ಹೆನ್ರಿಯ ಹೆಂಡತಿ ಆರೆಗಾನಿನ ಕ್ಯಾಥರೀನ್ ಸುಮಾರಷ್ಟು ಮಕ್ಕಳನ್ನು ಹಡೆದಿದ್ದಳಾದರೂ ಬದುಕುಳಿದವಳು ರಾಜಕುಮಾರಿ ಮೇರಿ ಮಾತ್ರ. ಒಂದು ಮದುವೆಯನ್ನು ಅನೂರ್ಜಿತಗೊಳಿಸಬೇಕಿದ್ದರೆ ಮದುವೆಯಲ್ಲಿ ನಡೆದಿರಬಹುದಾದ ಒಂದು ತಪ್ಪನ್ನು ಮುಖ್ಯವಾಗಿ ತೋರಿಸಬೇಕಿತ್ತು. ಕ್ಯಾಥರೀನಳು ಹೆನ್ರಿಯ ತಮ್ಮನಾದ ಆರ್ಥರ್‌ನ ಜತೆ ಮೊದಲೇ ವಿವಾಹವಾಗಿದ್ದುದು ಇವಳ ಮದುವೆಯಲ್ಲಿದ್ದ ದೋಷವಾಗಿತ್ತು. ಇಂಗ್ಲೆಂಡಿನ ಶಾಸನದ 'ಲೆವಿಟಿಕಸ್' ಎನ್ನುವ ಪುಸ್ತಕದ ಪ್ರಕಾರ ಸತ್ತು ಹೋದ ಸಹೋದರನ ಪತ್ನಿಯೊಡನೆ ನಡೆಯುವ ವಿವಾಹ ಕಾನೂನು ಬಾಹಿರವಾದದ್ದು. ಆದರೆ, ಮದುವೆಯ ಸಂದರ್ಭದಲ್ಲಿ ಕಾನೂನನ್ನು ತಿದ್ದುಪಡಿ ಮಾಡಿ ಮದುವೆ ನಡೆಸಲಾಗಿತ್ತು. ಆದ್ದರಿಂದ ಸದ್ಯದ ಪ್ರಶ್ನೆ ದೈವದತ್ತವಾದ ಕಾನೂನುಗಳನ್ನು ಬದಲು ಮಾಡಲು, ಪೋಪನಿಗೆ ಅಧಿಕಾರವಿದೆಯೇ ಎನ್ನುವುದಾಗಿತ್ತು. ಅರ್ಥರ್‌ನ ಜೊತೆ ತನ್ನ ಮದುವೆ ಪೂರ್ಣವಾಗಿರಲಿಲ್ಲ. ಆದ್ದರಿಂದ ತನ್ನಿಂದ ಹೆನ್ರಿಗೆ ಯಾವ ತೊಂದರೆಯೂ ಆಗುವುದಿಲ್ಲ ಎನ್ನುವುದು ಈ ವಿಷಯದಲ್ಲಿ ಕ್ಯಾಥರೀನಳ ವಾದವಾಗಿತ್ತು. ಇದೂ ಅಲ್ಲದೆ, ಚಕ್ರವರ್ತಿ ಐದನೆಯ ಹೆನ್ರಿಯ ಚಿಕ್ಕಮ್ಮ ಕ್ಯಾಥರೀನ್ ಆಗಿದ್ದಳು ಹಾಗೂ ಪೋಪನು ಚಕ್ರವರ್ತಿಯ ಕೈಗೊಂಬೆ ಯಾಗಿದ್ದನು. ಈ ಪರಿಸ್ಥಿತಿಯಲ್ಲಿ ಕ್ಯಾಥರೀನಳು ನಿರ್ಗತಿಕಳಾಗುವುದು ಯಾರಿಗೂ ಇಷ್ಟವಿರಲಿಲ್ಲ. ಪೋಪ್ ಏಳನೆಯ ಕ್ಲೆಮಾಂತನು ಚಕ್ರವರ್ತಿಯ ಮನಸ್ಸನ್ನು ಅಸಂತೋಷ ಗೊಳಿಸಲು ಬಯಸಲಿಲ್ಲವಾದ್ದರಿಂದ ಈ ವಿಷಯದ ಮೇಲೆ ಯಾವುದೇ ತೀರ್ಮಾನ ತೆಗೆದುಕೊಳ್ಳುವುದನ್ನು ಎಷ್ಟೊಂದು ತಡ ಮಾಡಿದನೆಂದರೆ, ಎಂಟನೆಯ ಹೆನ್ರಿಯು ಎಲ್ಲಾ ವಿಷಯಗಳನ್ನು ತನ್ನ ಕೈಗೆತ್ತಿಕಂಡು, ಪೋಪನ ಅಧಿಕಾರವನ್ನು ಮೊಟಕುಗೊಳಿಸಿ, ೧೫೩೪ರಲ್ಲಿ ಒಂದು ಶಾಸನವನ್ನು ಜಾರಿಗೊಳಿಸಿ, ಆ ಮೂಲಕ ಆಂಗ್ಲಿಕನ್ ಚರ್ಚನ್ನು ತನ್ನ ಹತೋಟಿಗೆ ತೆಗೆದುಕೊಂಡು ರಾಜನೇ ಅದರ ಮುಖ್ಯಸ್ಥನೆಂದು ಘೋಷಿಸಿದನು. ಚರ್ಚಿನ ಧರ್ಮಗುರು ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ಪನು ಹೆನ್ರಿಯ ಮದುವೆಯನ್ನು ಆನ್ನೆ ಬೋಲೆಯನ್ ಎಂಬುವಳ ಜತೆ ನಡೆಸಿದನು. ಇವಳು ರಾಜಕುಮಾರಿ ಎಲಿಜಬೆತ್ತಳಿಗೆ ಜನ್ಮವಿತ್ತಳು. ರಾಜ ಹೆನ್ರಿಯು ಮತ್ತೋರ್ವ ರಾಣಿಯಿಂದ ಮಾತ್ರ ಗಂಡು ಮಗುವಿಗೆ ತಂದೆಯಾದನು. ಆ ಗಂಡು ಮಗನೇ ಕ್ರಮೇಣ ಆರನೆಯ ಎಡ್ವರ್ಡ್ ಅಗಿ ಅವನ ನಂತರ ಪಟ್ಟಕ್ಕೇರಿದನು.

ಹೆನ್ರಿಯ ಮುಖ್ಯ ಉದ್ದೇಶ ರಾಜಕೀಯವೇ ಆಗಿದ್ದರೂ ಅವನು ಚರ್ಚಿನ ವ್ಯವಸ್ಥೆ ಯಲ್ಲಿ ತಂದ ಬದಲಾವಣೆಗಳು ಕ್ರಮೇಣ ಚರ್ಚಿನಲ್ಲಿ ಧಾರ್ಮಿಕ ಬದಲಾವಣೆಗಳನ್ನು ತರಲು ಅನುವು ಮಾಡಿಕೊಟ್ಟಿತು. ಲೂಥರನ ಚಳವಳಿ ಮತ್ತು ಈರಾಸ್ಮಸ್‌ನ ಕ್ರೈಸ್ತ ಮಾನವೀಯತೆಯ ಪ್ರಭಾವ ಇದಕ್ಕೆ ಭಾಗಶಃ ಕಾರಣವಾಯಿತು. ಹೆನ್ರಿಯ ಆಡಳಿತಾವಧಿ ಯಲ್ಲಿ ಕ್ರೈಸ್ತ ಮಠಗಳ ಅಧಿಕಾರವು ಕಡಿತವಾಗಿತ್ತು. ಸ್ಥಳೀಯ ಭಾಷೆಯ ಬೈಬಲ್‌ಗಳು ಚರ್ಚಿನಲ್ಲಿ ಬಳಕೆಯಾದುವು. ಕ್ರೈಸ್ತ ಪುರೋಹಿತರುಗಳಿಗೆ ಮದುವೆಯಾಗುವ ಅವಕಾಶವಿತ್ತು (ಕ್ರಮೇಣ ತೆಗೆದು ಹಾಕಲಾಯಿತು). ಹೆನ್ರಿಯು ಯಾರ ಪರವನ್ನು ವಹಿಸದೆ ವಸ್ತುನಿಷ್ಟ ನಾಗಿದ್ದನು ಹಾಗೂ ತನ್ನ ಚರ್ಚಿನ ಕ್ರಾಂತಿಕಾರಕ ಸುಧಾರಣೆಯನ್ನು ಒಪ್ಪದ ಲೂಥರನ್ನು ಮತ್ತು ಚರ್ಚಿನ ಮೇಲಿನ ರಾಜಪ್ರಭುತ್ವವನ್ನು ಒಪ್ಪದ ಕ್ಯಾಥೋಲಿಕ್ಕರನ್ನು ಸುಟ್ಟು ಹಾಕಿದನು. ಹೀಗೆ ಅವನ ಶಿಕ್ಷೆಗೆ ಗುರಿಯಾದವರೆಂದರೆ ಜಾನ್ ಫಿಶರ್ ಮತ್ತು ಥಾಮಸ್ ಮೂರ್.

ಸುಧಾರಣೆಯು ರಾಜಕುಮಾರ ಆರನೆಯ ಎಡ್ವರ್ಡ್‌ನ ಕಾಲದಲ್ಲಿ ಇನ್ನೂ ಬಂಡಾಯ ತರವಾದ ಉಗ್ರ ರೂಪವನ್ನು ತಳೆಯಿತು. ಸಾಮಾನ್ಯ ಪ್ರಾರ್ಥನಾ ಪುಸ್ತಕವನ್ನು ಎರಡು ಸಂಪಾದನೆಗಳಲ್ಲಿ ಬಳಕೆಗೆ ತರಲಾಯಿತು. ಇವನ ನಂತರ ಸ್ಪೈಯಿನಿನ ಎರಡನೆಯ ಫಿಲಿಪ್ಸ್‌ನನ್ನು ವಿವಾಹವಾದ ರಾಜಕುಮಾರಿ ಮೇರಿಯು ಪಟ್ಟಕ್ಕೇರಿದಳು. ಇವಳು ಚರ್ಚ್ ನಲ್ಲಿ ಮತ್ತೆ ಕ್ಯಾಥೋಲಿಕ್ ಧರ್ಮವನ್ನು ಜಾರಿಗೊಳಿಸಿದಳು ಮತ್ತು ಸುಮಾರು ೨೮೮ ಮಂದಿ ಆಂಗ್ಲಿಕನ್ ಚರ್ಚಿನ ನಾಯಕರನ್ನು ಬಹಿರಂಗವಾಗಿ ಸುಟ್ಟು ಹಾಕಿಸಿದಳು. ಹೀಗೆ ಸತ್ತವರಲ್ಲಿ ಕ್ಯಾಂಟರ್‌ಬರಿಯ ಆರ್ಚ್‌ಬಿಷಪ್ಪನೂ ಸೇರಿದ್ದನು. ೧೫೫೮ರಲ್ಲಿ ಎಲಿಜಬೆತ್ ರಾಣಿಯು ಸಿಂಹಾಸನಾರೂಢಳಾಗುವುದರ ಜತೆಗೆ ಮಿತವಾದ ಕ್ರೈಸ್ತ ಬಂಡಾಯವಾದವನ್ನು ಬೆಳೆಸಿದಳು. ಈ ಮಿತ ಬಂಡಾಯವಾದಕ್ಕೆ ದೇಶೀಯ ಅಂಶಗಳು ಸೇರಿಕೊಂಡು, ರಾಷ್ಟ್ರೀಯವಾದ ಚರ್ಚೊಂದು ಬೆಳೆಯಲು ಸಾಧ್ಯವಾಯಿತು. ಎಲಿಜಬೆತ್ ರಾಣಿಯ ಆಡಳಿತಾವಧಿ ಸುಮಾರು ೪೫ ವರ್ಷಗಳಾದರೆ,

ಮೇರಿಯದು ಕೇವಲ ಐದು ವರ್ಷ ವಾಗಿತ್ತು. ಎಲಿಜಬೆತ್ ರಾಣಿಯ ಉದ್ದೇಶ ರಾಜಕೀಯವಾಗಿತ್ತು. ಪೋಪನಿಗೆ ಎಲಿಜಬೆತ್ತಳ ಮೇಲೆ ಬಹಿಷ್ಕಾರ ಹಾಕಲು ಮತ್ತು ಇವಳ ಪ್ರಜೆಗಳನ್ನು ಚರ್ಚಿನಿಂದ ಹೊರಹಾಕಲು ಸ್ವಾತಂತ್ರ ಇತ್ತು. ಆದ್ದರಿಂದ ಪೋಪನಿಗೆ ವಿಧೇಯತೆ ತೋರುವುದು ಎಂದರೆ ರಾಣಿಯನ್ನು ತಿರಸ್ಕರಿಸಿದಂತೆ ಎಂಬ ಸಂದಿಗ್ಧ ಪರಿಸ್ಥಿತಿಯಲ್ಲಿ ಎಲಿಜಬೆತ್ ರಾಣಿಯ ಆಳ್ವಿಕೆ ನಡೆಯಿತು.

ಇತಿಹಾಸದ ದೃಷ್ಟಿಯಲ್ಲಿ ತುಂಬ ಪ್ರಭಾವಿಯುತನೂ ಮತ್ತು ಶಕ್ತಿಶಾಲಿಯೂ ಆದ ಜಾನ್‌ಸನ್ ಎಂಬುವವನು ಸ್ಕಾಟ್‌ಲೆಂಡಿನಲ್ಲಿ ಧಾರ್ಮಿಕ ಸುಧಾರಣೆಯನ್ನು ಮಾಡಿದವರಲ್ಲಿ ಅತಿ ಮುಖ್ಯನಾದವನು. ಸುಮಾರು ೧೫೦೫ ರಿಂದ ೧೫೧೫ರೊಳಗೆ ಹ್ಯಾಡಿಂಗ್ಟನ್ ಎಂಬಲ್ಲಿ ಜನ್ಮ ತಳೆದ ಇವನನ್ನು ಪಾದ್ರಿಯನ್ನಾಗಿ ಮಾಡಲಾಗಿತ್ತು. ಧಾರ್ಮಿಕ ಸುಧಾರಣೆಯ ಇತಿಹಾಸವೆಂಬ ತನ್ನ ಆತ್ಮ ಕಥನದಲ್ಲಿ ಇವನ ಯೌವ್ವನ ಕಾಲದ ಬಗ್ಗೆ ಏನನ್ನೂ ಬರೆಯಲಾಗಿಲ್ಲ. ಆದರೆ ಏಕಾಕಿ ಇವನನ್ನು ಜಾರ್ಜ್ ವಿಷಾರ್ಟ್ ಎಂಬುವವನ ಪರಮಶಿಷ್ಯನೆಂದೂ ಮತ್ತು ಅವನ ಕೆಚ್ಚೆದೆಯ ಅಂಗರಕ್ಷಕನಾಗಿದ್ದನು ಎಂಬುದಾಗಿ ಪರಿಚಯ ಮಾಡಿಕೊಡಲಾಗಿದೆ. ವಿಷಾರ್ಟ್‌ನ ಬಂಧನವಾದ ನಂತರ ನಾಕ್ಸ್ ಅಲೆಮಾರಿ ಯಾದನು ಮತ್ತು ಧರ್ಮ ಅನ್ವೇಷಣೆಯಲ್ಲಿ ಪೋಪನ ರಾಯಭಾರಿಯಾದ ಬೀಟನ್‌ನನ್ನು ಕೊಲೆ ಮಾಡಿದ ಗುಂಪಿಗೆ ಸೇರಿಕೊಂಡನು. ಈ ಗುಂಪಿನ ಜನರು ಇವನೇ ತಮ್ಮ ನಾಯಕನಾಗಬೇಕು ಎಂದು ಬಯಸಿದಾಗ ಒಪ್ಪಿಕೊಂಡನು. ಮೈನವಿರೇಳುವಂತೆ ಮಾಡುವ ಇವನ ಬೋಧನೆಯನ್ನು ಅವರೆಂದೂ ಕೇಳೇ ಇರಲಿಲ್ಲ. ರೋಮನ್ ಚರ್ಚು ಸೈತಾನದ ದೇವಸ್ಥಾನ ಮತ್ತು ಬೈಬಲ್ಲಿನ ಭವಿಷ್ಯ ದರ್ಶನದ ಭಾಗದಲ್ಲಿ ಬಣ್ಣಿಸಲಾಗಿರುವ ಭಯಾನಕವಾದ ಪ್ರಾಣಿ ಎಂದು ಚರ್ಚನ್ನು ಖಂಡಿಸಿದನು.

ಮನುಷ್ಯನು ತನ್ನ ನಂಬಿಕೆಯಿಂದ ಮತ್ತು ಕ್ರಿಸ್ತನು ಶಿಲುಬೆಯ ಮೇಲೆ ಎಲ್ಲ ಜನರಿಗಾಗಿ ಸುರಿಸಿದ ರಕ್ತದಿಂದಾಗಿ ಮುಕ್ತಿಯನ್ನು ಪಡೆಯುತ್ತಾನೆ ಎನ್ನುವ ಲೂಥರನ ವಾದದಲ್ಲಿ ನಂಬಿಕೆಯಿಟ್ಟಿದ್ದನು. ಫ್ರಾನ್ಸ್ ದೇಶದ ನೌಕಾಬಲದಲ್ಲಿ ಹುಟ್ಟು ಹಾಕುವ ಗುಲಾಮನಾಗಿ ಕೆಲಸ ಮಾಡಿದ ನಂತರ, ನಾಕ್ಸ್ ಬಂಡಾಯ ಕ್ರೈಸ್ತರ ಪುರೋಹಿತನಾಗಿ ಇಂಗ್ಲೆಂಡಿನಲ್ಲಿ ಸೇವೆ ಸಲ್ಲಿಸಿದನು. ೧೫೫೧ರಲ್ಲಿ ಆರನೆಯ ಎಡ್ವರ್ಡ್‌ನ ಸಮ್ಮುಖದಲ್ಲಿ ನಾರ್ಥಂಬರ್-ಲ್ಯಾಂಡ್‌ನಲ್ಲಿ ಭಾಷಣ ಮಾಡುವಾಗ ತುಂಬ ಆಚಾರವಂತರಾಗಿರುವ ರಾಜಕುಮಾರರುಗಳೇ ಅನಾಚಾರವನ್ನು ಆಚರಿಸುತ್ತಿದ್ದಾರೆ ಎಂಬ ಪ್ರಶ್ನೆಯನ್ನು ಎತ್ತಿದನು. ಸಂಸ್ಥಾನಿಕನು ಇವನ ಬಾಯಿ ಮುಚ್ಚಿಸಲು ಪ್ರಯತ್ನಪಟ್ಟರೂ ಸಫಲವಾಗಿಲಿಲ್ಲ. ಆದರೆ ಮೇಲೆ ಟ್ಯೂಕರ್ ಅತಿ ಭಯಾನಕಳಾಗಿದ್ದಳು. ನಾಕ್ಸ್ ಜಿನೀವ ನಗರಕ್ಕೆ ಓಡಿ ಹೋದನು. ಅವನ ಮುಖ ತುಂಬ ಭಯಾನಕವಾಗಿದ್ದರಿಂದ(ಜಿನೀವ ನಗರದಲ್ಲಿ ನಾಗರಿಕರನ್ನು ಆಯ್ಕೆ ಮಾಡುವ ರೀತಿ ಜಾರಿಯಲ್ಲಿ ಇದ್ದುದರಿಂದ), ಇವನನ್ನು ನಗರದಿಂದ ಹೊರಹಾಕಿದರು. ಸ್ಕಾಟ್‌ಲ್ಯಾಂಡಿನಲ್ಲಿ ಕ್ಯಾಥೋಲಿಕ್ಕಳಾದ ಮೇರಿ ಸ್ಟುವರ್ಟ್‌ಳ ಆಡಳಿತಾವಧಿಯಲ್ಲಿ ಬರ್ಬರತೆ ನಡೆಯಬಹುದೆಂದು ನಿರೀಕ್ಷಿಸಿ ಅವಳ ಶಾಸನಗಳನ್ನು ಉಲ್ಲಂಘಿಸಿದನು. ಇವನೋರ್ವ ಸಾಮಾನ್ಯ ಮನುಷ್ಯನಾಗಿದ್ದರೂ, ಸ್ಕಾಟ್‌ಲ್ಯಾಂಡೆಲ್ಲವೂ ತನ್ನ ವೈಯಕ್ತಿಕ ಸ್ವತ್ತು ಎನ್ನುವ ಧಾಟಿಯಲ್ಲಿ ರಾಣಿಯನ್ನು ಮಾತನಾಡಿಸಿದನು. ೧೫೬೦ಕ್ಕೆ ಮೊದಲು ಕೆಳ ಪ್ರದೇಶಗಳು ಜಾನ್ ಕ್ಯಾಲ್ವಿನ್ನನ ಧರ್ಮಾಚರಣೆಗೆ ಮತಾಂತರಗೊಂಡಿದ್ದವು. ಸಮಾನ ಪದವಿಯುಳ್ಳ ಆಡಳಿತಾಧಿಕಾರಿಗಳನ್ನೊಳಗೊಂಡ ಅಧಿಕಾರ ವ್ಯವಸ್ಥೆಯನ್ನು ಚರ್ಚಿಗೆ ಕಲ್ಪಿಸಲಾಗಿತ್ತು. ಚರ್ಚಿಗೆ ಒಂದು ಸಾಮಾನ್ಯ ಸಭೆಯು ಇತ್ತು. ಈ ಸಭೆಗೆ, ಸಂಸತ್ತಿಗೆ ಇರುವಷ್ಟೇ ಅಧಿಕಾರವಿತ್ತು. ತನ್ನ ಮತಿಹೀನತೆಯಿಂದಾಗಿ ಮತ್ತು ಅಪರಾಧಗಳಿಂದಾಗಿ ಮೇರಿಯು ಇಂಗ್ಲೆಂಡಿನಲ್ಲಿ ಪ್ರಾಣ ರಕ್ಷಣೆ ಪಡೆಯಬೇಕಾದ ದುಸ್ಥಿತಿ ಒದಗಿ ಬಂತು. ಮೇರಿಯ ದೆಸೆಯಿಂದಾಗಿ ಎಲಿಜಬೆತ್ ರಾಣಿಯನ್ನು ಕೊಲೆ ಮಾಡಲು ಸಂಚುಗಳು ನಡೆದವು. ಕಡೆಗೆ ಸ್ಕಾಟ್‌ಲ್ಯಾಂಡಿನಲ್ಲಿ ಸಂಸತ್ತು ಅಸ್ತಿತ್ವಕ್ಕೆ ಬಂತು. ಇದರಿಂದಾಗಿ ಕ್ರಮೇಣ ಇಂಗ್ಲೆಂಡ್ ಮತ್ತು ಸ್ಕಾಟ್‌ಲ್ಯಾಂಡ್‌ಗಳು ಒಂದಾಗಲು ಸಾಧ್ಯವಾಯಿತು.

ಐರೋಪ್ಯ ಖಂಡದ ಉದ್ದಗಲಕ್ಕೆ ನಡೆಯುತ್ತಿದ್ದ ಧಾರ್ಮಿಕ ಸುಧಾರಣೆಯ ಚಳವಳಿ ಇಂಗ್ಲೆಂಡಿನಲ್ಲಿ ನಿಜವಾದ ಅರ್ಥದಲ್ಲಿ ಶುರುವಾದದ್ದು ೧೭ನೆಯ ಶತಮಾನದಲ್ಲಿ ಮಾತ್ರ. ಏಕೆಂದರೆ, ಸಾಮಾನ್ಯ ಜನರು ಧಾರ್ಮಿಕ ವಿಷಯಗಳಲ್ಲಿ ವಿಪರೀತವಾಗಿ ಪಾಲ್ಗೊಂಡು ಹತ್ತು ಹಲವಾರು ಪಂಥಗಳಾಗಿ ಹರಿದು ಹಂಚಿ ಹೋಗಿದ್ದು ಇದೇ ಕಾಲದಲ್ಲಿ. ಇಂಗ್ಲೆಂಡಿನ(ಬಾಪ್ಟಿಸ್ಟರು) ದೀಕ್ಷಾವಾದಿಗಳು ಬಾಲ್ಯದಲ್ಲಿ ಕ್ರೈಸ್ತ ಧರ್ಮ ದೀಕ್ಷೆ ಕೊಡುವುದನ್ನು ತಿರಸ್ಕರಿಸಿದರು ಹಾಗೂ ಜಾನ್‌ಫಾಕ್ಸ್‌ನ ಹಿಂಬಾಲಕರಾದ ಕ್ವೇಕರ್ಸ್ ಮಿತ್ರ ಮಂಡಲಿಯವರು ಯುದ್ಧ ಮತ್ತು ಪ್ರಮಾಣವಚನ ಸ್ವೀಕರಿಸುವುದನ್ನು ತಿರಸ್ಕರಿಸಿದ್ದರು. ಐದನೆಯ ರಾಜಪ್ರಭುತ್ವದ ಜನರು ಶಸ್ತ್ರಾಸ್ತ್ರ ದಂಗೆಯನ್ನು ಆಹ್ವಾನಿಸಿದ್ದರು. ಧರ್ಮ ದೀಕ್ಷಾವಾದಿಗಳು, ಕ್ರೈಸ್ತಮತದ ನ್ಯಾಯ ನಿರ್ಣಯಾಧಿಕಾರಿಗಳು ಮನಃಪೂರ್ವಕವಾಗಿ ಒಪ್ಪಿ,

ನಂಬಿಕೆಯಿರುವವರು ಮಾತ್ರ ಚರ್ಚಿನಲ್ಲಿ ಸೇರಬೇಕು ಎನ್ನುವ ವ್ಯವಸ್ಥೆಗಾಗಿ ಒತ್ತಾಯಪಡಿಸಿದ್ದರು. ಆದರೆ ಇವರೆಲ್ಲರೂ ಕೂಡ ಇಂಗ್ಲಿಷ್ ಚರ್ಚಿನಲ್ಲಿ ಪೋಪನ ಅಧಿಕಾರ ವ್ಯವಸ್ಥೆಯನ್ನು ತೀವ್ರವಾಗಿ ಪ್ರಶ್ನಿಸಿದ್ದರು.

ಈ ಭಿನ್ನವಾದ ವಾದಗಳು ಬಹುಧರ್ಮೀಯ ಸಮಸ್ಯೆಗೆ ಎಡೆಮಾಡಿಕೊಟ್ಟವಲ್ಲದೆ, ರಾಷ್ಟ್ರದಲ್ಲಿ ಆಂತರಿಕ ಯುದ್ಧ ಆರಂಭವಾಗಲು ಕಾರಣವಾದವು. ಇದು ಕ್ರಮೇಣ ಧಾರ್ಮಿಕ ಸ್ವಾತಂತ್ರ್ಯ ಮತ್ತು ರಾಜಕೀಯ ಸ್ವಾತಂಥ್ರ್ಯವನ್ನು ಮೊಟಕುಗೊಳಿಸಬೇಕೆನ್ನುವ ಬೇಡಿಕೆಗೆ ದಾರಿಮಾಡಿಕೊಟ್ಟಿತು.

ದಂಗೆಯು ತನ್ನದೇ ಆದ ರೀತಿ ರಿವಾಜುಗಳಲ್ಲಿ ನಡೆಯುತ್ತದೆ. ಇದು ಇಂಗ್ಲೆಂಡಿನಲ್ಲೂ ನಡೆಯಿತು. ಮೊದಲಿಗೆ ರಾಜನು ದುಷ್ಟ ಸಲಹೆಗಾರರಿಂದ ಸುತ್ತುವರಿದಿದ್ದಾನೆ ಎನ್ನುವ ಮಾತು ಹೆಚ್ಚಿತು. ಅನಂತರ ರಾಜನನ್ನು ಸಂಸತ್ತು (ಪಾರ್ಲಿಮೆಂಟ್) ನಿಯಂತ್ರಿಸಬಹುದಾಗಿದೆ ಎಂಬ ಅಭಿಪ್ರಾಯ ಬಂತು. ನಂತರ ಸಂಸತ್ತು ಉನ್ನತವಾದದ್ದು, ಇದಕ್ಕೆ ರಾಜನ ಜೀವವನ್ನು ಬೇಕಾದರೂ ತೆಗೆಯುವ ಹಕ್ಕಿದೆ ಎಂಬ ಅಭಿಪ್ರಾಯ ಹುಟ್ಟಿಬಂತು. ಒಂದನೆಯ ಚಾರ್ಲ್ಸ್‌ನ ಮರಣ ದಂಡನೆಯಾದ ನಂತರ, ಒಂದನೆಯ ಜೇಮ್ಸ್‌ನ ಉತ್ತರಾಧಿಕಾರಿ ಕ್ರಾಂವೆಲ್ ಎಂಬುವನು ರಾಷ್ಟ್ರೀಯ ಧರ್ಮ ವ್ಯವಸ್ಥೆಯೊಂದನ್ನು ಸ್ಥಾಪಿಸಿದನು. ಇವನು ಸ್ಥಾಪಿಸಿದ ವ್ಯವಸ್ಥೆಯಲ್ಲಿ ಮೂರು ಮುಖ್ಯವಾದ ಅಂಶಗಳಿದ್ದವು: ಪ್ರೆಸ್ಬಿಟೇರಿಯನ್ಸ್, ಕಾಂಗ್ರಿಗೇಷನಲಿಸ್ಟ್, ಬಾಪ್ಟಿಸ್ಟ್ ಅಂದರೆ ಕ್ರಮವಾಗಿ, ಸಮಾನ ಪದವಿಯ ಮಠದ ಹಿರಿಯರು, ಕ್ರೈಸ್ತ ಧರ್ಮ ನ್ಯಾಯಾಧಿಕಾರಿಗಳು ಮತ್ತು ದೀಕ್ಷಾವಾದಿಗಳು. ಕ್ಯಾಥೋಲಿಕ್ಕರನ್ನು ಮತ್ತು ಕ್ರೈಸ್ತ ಧರ್ಮದಲ್ಲಿ ಒಂದೇ ದೇವರೆಂದು ವಾದಿಸುವ ಯುನಿಟೇರಿಯನ್ನರನ್ನು, ಕ್ವೇಕರ್ಸ್- ಜಾನ್ ಫಾಕ್ಸ್‌ನ ಅನುಯಾಯಿಗಳನ್ನು ಪ್ರಮಾಣವಚನ ಸ್ವೀಕರಿಸಲು ಧಿಕ್ಕರಿಸಿದ ತಾತ್ವಿಕ ನೆಲೆಯ ಮೇಲೆ ಧರ್ಮದಿಂದ ಹೊರಗಿಡಲಾಯಿತು.

ಎರಡನೆಯ ಚಾರ್ಲ್ಸ್‌ನ ಆಡಳಿತಾವಧಿಯು ತಾಳ್ಮೆ ಮತ್ತು ಸಹಿಷ್ಣುತೆಯ ಆಧಾರದ ಮೇಲೆ ಶುರುವಾದ ಕೂಡಲೆ ಮುರಿದು ಬಿತ್ತು. ಕಾರಣ, ಕ್ಯಾಥೋಲಿಕ್ಕರನ್ನು ಧರ್ಮಕ್ಕೆ ಸೇರ್ಪಡೆ ಮಾಡಿದ್ದನ್ನು ಜನರು ಸಹಿಸಲಿಲ್ಲ. ಸ್ಪಷ್ಟ ಮತ್ತು ನಿರ್ದಿಷ್ಟವಾದ ಶಾಸನವು ವಿಲಿಯಂ ಮತ್ತು ಮೇರಿಯರ ಕ್ರಾಂತಿಕಾರಕ ಕಾಲದಲ್ಲಿ ೧೬೮೮ರಲ್ಲಿ ಬಂತು. ಎಲ್ಲಾ ಇಂಗ್ಲೀಷ್ ಜನರನ್ನು ಒಂದೇ ಚರ್ಚಿನ ಅಡಿಯಲ್ಲಿ ತರುವ ಆದರ್ಶವನ್ನು ಕೈಬಿಟ್ಟು ಇಂಗ್ಲೆಂಡಿನ ಚರ್ಚು ಸ್ಥಾಪಿತವಾಯಿತು ಮತ್ತು ಇದರ ವಿರೋಧಿಗಳ ಬಗ್ಗೆ ಸಹಿಷ್ಣುತೆಯನ್ನು ತಳೆಯಲಾಯಿತು. ಆದರೆ ಕ್ಯಾಥೋಲಿಕ್ಕರಿಗೆ ಸ್ವಾತಂತ್ರ್ಯವು ೧೮೨೯ರವರೆಗೂ ಸಿಗಲಿಲ್ಲ.

**ಸುಧಾರಣೆಯ ವಿಸ್ತರಣೆ ಸ್ಕಾಂಡಿನೇವಿಯ**

ಸುಮಾರು ಕ್ರಿ.ಶ.೧೫೦೦ರ ವೇಳೆಗೆ ಜನರ ಧರ್ಮಶ್ರದ್ಧೆ ಸ್ಕಾಂಡಿನೇವಿಯಾದ ಚರ್ಚನ್ನು ಆರ್ಥಿಕವಾಗಿ ಶ್ರೀಮಂತಗೊಳಿಸಿತ್ತು. ಡೆನ್ಮಾರ್ಕ್‌ನಲ್ಲಿ ಅರ್ಧದಷ್ಟು ಭೂಮಿಯ ಒಡೆತನ ಚರ್ಚ್‌ನದಾಗಿತ್ತು. ಕೂಪನ್ ಹೇಗನ್ ಒಂದು ಧಾರ್ಮಿಕ ಜಹಗೀರಾಗಿತ್ತು. ಪುರೋಹಿತರು ಮತ್ತು ಶ್ರೀಮಂತರು ನೆಲ ಕಂದಾಯ ಕೊಡುವುದರಿಂದ ಮುಕ್ತರಾಗಿದ್ದರು. ಪುರೋಹಿತರು ಆರಾಧನೆಗಳನ್ನು, ಪೂಜೆಗಳನ್ನು ನಡೆಸುವವರಾದ್ದರಿಂದ ಅವರಿಗೆ ತೆರಿಗೆ ವಿನಾಯಿತಿ ಸಿಕ್ಕಿತ್ತು. ಶ್ರೀಮಂತರು ತಮ್ಮ ಯುದ್ಧವನ್ನು ತಾವೇ ತಮ್ಮ ಖರ್ಚಿನಿಂದ ನಡೆಸುವವರಾದ್ದರಿಂದ ಅವರಿಗೂ ತೆರಿಗೆ ವಿನಾಯಿತಿ ದೊರೆತಿತ್ತು. ವರ್ತಕರು, ಪುರೋಹಿತರ ಮತ್ತು ಶ್ರೀಮಂತರ ವಿರುದ್ಧ ಸ್ಪರ್ಧಿಸಬೇಕಾಗಿತ್ತು.

ಈ ಮೂರು ರಾಷ್ಟ್ರಗಳಲ್ಲಿಯೂ, ಡೆನ್ಮಾರ್ಕ್‌ನ ರಾಜ ಒಂದನೆಯ ಕ್ರಿಶ್ಚಿಯನ್ ಎಂಬುವವನು ಪುನರ್‌ನವೀಕರಿಸಿದ ಸ್ಕಾಂಡಿನೇವಿಯಾದ ಕಾಲ್ಮರ್ ಒಕ್ಕೂಟಕ್ಕೆ ಬೆಂಬಲ ವಿತ್ತು. ಆದರೆ ಸ್ವೀಡನ್‌ನಲ್ಲಿ ಪಟ್ಟಣಿಗರದಿಂದ ಮತ್ತು ರೈತರಿಂದ ಕೂಡಿದ್ದ ರಾಷ್ಟ್ರೀಯ ಪಕ್ಷವು ಸ್ಕಾಂಡಿನೇವಿಯಾದ ಒಕ್ಕೂಟವನ್ನು ತಿರಸ್ಕರಿಸಿದುದೇ ಅಲ್ಲದೇ, ಕಿರಿಯನಾದ ಸ್ಟೆನ್‌ಸ್ಟೂರ್ ಎಂಬುವನನ್ನು ಸ್ವತಂತ್ರ ಸ್ವೀಡನ್ನಿನ ಸಾಮಂತನೆಂದು ಸಾರಿತು. ಉಪ್ಪಸಾಲದ ಆರ್ಚ್‌ಬಿಷಪ್ ಗುಸ್ತಾವ್ ಟ್ರೋಲೆ ಸ್ಕಾಂಡಿನೇವಿಯಾದ ಒಕ್ಕೂಟವನ್ನು ಸಮರ್ಥಿಸಿ ಕೊಂಡಿದ್ದನು. ಇದೇ ಕಾರಣಕ್ಕಾಗಿ ಸ್ಟೆನ್‌ಸ್ಟೂರ್ ಇವನನ್ನು ಕಿತ್ತೊಗೆದಿದ್ದನು. ಪೋಪನಾದ ಹತ್ತನೆಯ ಲಿಯೋ ಗುಸ್ತಾವ್‌ನನ್ನು ಅವನ ಸ್ಥಾನದಲ್ಲಿಯೇ ಉಳಿಸು ಎಂಬದು ಆಜ್ಞೆ ಮಾಡಿದನು. ಸ್ಟೆನ್‌ಸ್ಟೂರ್ ಕೇಳದಿದ್ದಾಗ, ಡೆನ್ಮಾರ್ಕಿನ ರಾಜ ಎರಡನೆಯ ಕ್ರಿಶ್ಚಿಯನ್ನನಿಗೆ

ಸ್ವೀಡನ್ನನ್ನು ದಾಳಿ ಮಾಡಿ ಸಾಮಂತ ರಾಜನನ್ನು ಶಿಕ್ಷಿಸುವಂತೆ ಪೋಪನು ಕೆಲಸ ವಹಿಸಿದ್ದನು. ಎರಡನೆಯ ಕ್ರಿಶ್ಚಿಯನ್ನನ ಮೊದಲನೇ ಪ್ರಯತ್ನ ಫಲ ನೀಡಲಿಲ್ಲ. ಆದರೆ ಅವನು ಸುಮಾರು ಜನರನ್ನು ಸಂಧಿಯ ಒತ್ತೆಯಾಳುಗಳನ್ನಾಗಿ ತನ್ನೊಡನೆ ಕೂಪ್‌ನ್‌ಹೇಗನ್ನಿಗೆ ಕರೆದೊಯ್ದನು. ಗುಸ್ತಾವುಸ್ ಈ ಒತ್ತೆಯಾಳುಗಳಲ್ಲಿ ಒಬ್ಬನು. ಕ್ರಮೇಣ ಇವನೇ ಸ್ವೀಡನನ್ನು ಸ್ವತಂತ್ರಗೊಳಿಸಿದನು. ಕ್ರಿಶ್ಚಿಯನ್ನನು ತನ್ನ ಎರಡನೆ ಪ್ರಯತ್ನದಲ್ಲಿ ಸಫಲವಾದನು. ಸ್ಟೆನ್‌ಸ್ಟೂರ್ ಇದರಲ್ಲಿ ಮಡಿದನು. ಕ್ರಿಸ್ಚಿಯನ್ನನು ಸ್ವೀಡನ್ನಿನ ಹೊಸ ರಾಜನನ್ನು ಪಟ್ಟಾಭಿಷೇಕ ಮಾಡಿದನು. ಸ್ಟಾಕ್‌ಹೋಮ್‌ನಲ್ಲಿ ಸ್ಟೆನ್‌ಸ್ಟೂರ್‌ನನ್ನು ಬೆಂಬಲಿಸುತ್ತಿದ್ದವರ ಕಗ್ಗೊಲೆಯಾಯಿತು. ಈ ಘಟನೆ “ಸ್ಟಾಕ್ ಹೋಂನ ಮಹಾ ರಕ್ತಪಾತವೆಂದು” ಇತಿಹಾಸದಲ್ಲಿ ಸ್ಥಾನ ಪಡೆದಿದೆ. ಆದರೆ ಈ ರಕ್ತಪಾತವು ಚರ್ಚಿನ ಗೌರವವನ್ನು ಸಾಮಾನ್ಯ ಜನರ ದೃಷ್ಟಿಯಲ್ಲಿ ನೆಲಕ್ಕೆ ಕಚ್ಚಿಸಿತು.

ಗುಸ್ತಾವುಸ್ ತಲೆ ತಪ್ಪಿಸಿಕೊಂಡನು. ಸ್ಟಾಕ್‌ಹೋಮಿನ ರೈತರಿಗೆ ರಕ್ತಪಾತದ ವಿಷಯವೆಲ್ಲ ತಿಳಿಯಿತು. ರಾಜನು ಸ್ವೀಡನ್ನಿನಲ್ಲಿ ಪ್ರಯಾಣ ಮಾಡಿ ದಾರಿಯುದ್ದಕ್ಕೂ ನೇಣುಗಂಬ ಕಟ್ಟಿಸುವನೆಂಬ ಗುಮಾನಿ ಹಬ್ಬಿತ್ತು. ಹೊಸ ತೆರಿಗೆಗಳನ್ನು ವಿಧಿಸಲಾಯಿತು. ಆರ್ಚ್‌ಬಿಷಪ್ ಗುಸ್ತಾವ್ ಮೋರ ಪ್ರಾಂತ್ಯದ ಜನರನ್ನು ಕೂಡಿಕೊಂಡು ವೆಸ್ಟರೆಸ್ ಮತ್ತು ಉಪ್ಪಸಾಲವನ್ನು ವಶಪಡಿಸಿಕೊಂಡನು. ಈ ರೀತಿಯಾಗಿ ಒಂದಾದ ಮೇಲೊಂದರಂತೆ ಎಲ್ಲಾ ಪ್ರಾಂತಗಳು ಜೂನ್ ೭, ೧೫೨೩ರೊಳಗೆ ಗುಸ್ತಾವುಸ್‌ನ ವಶಕ್ಕೆ ಬಂದವು. ಈ ಪ್ರದೇಶಗಳಿಗೆ ಗುಸ್ತಾವುಸ್ಸನೇ ರಾಜನೆಂದು ಘೋಷಿಸಲಾಯಿತು.

ರಾಷ್ಟ್ರದ ಹಣಕಾಸಿನ ಪರಿಸ್ಥಿತಿ ಆರೋಗ್ಯಕರವಾಗಿರಲಿಲ್ಲ. ಶ್ರೀಮಂತರು ಮಾತ್ರ ಏನಾದರು ಮಾಡುವ ಸ್ಥಿತಿಯಲ್ಲಿದ್ದರು. ರಾಜನು ಇವರ ಸಹಾಯ ಕೇಳಿದರೂ ಏನೂ ಪ್ರಯೋಜನವಾಗಲಿಲ್ಲ. ಈ ವೇಳೆಗಾಗಲೆ ಲೂಥರನ ವಾದವನ್ನು ಸ್ವೀಡನ್ನಿನಲ್ಲಿ ಪ್ರಚಾರ ಮಾಡಲಾಗಿತ್ತು. ಇದರ ಜತೆಗೆ ಸ್ಟಾಕ್‌ಹೋಮಿನ ಸ್ಯೆಂಟ್ ನಿಕೋಲಸ್ ಚರ್ಚಿನಲ್ಲಿದ್ದ ಓಲಂಪೆಟ್ರಿ ಎಂಬುವವನು ಲೂಥರನ ವಾದವನ್ನು ಸಮರ್ಥಿಸಿಕೊಂಡಿದ್ದನು. ಪೆಟ್ರಿ ಮತ್ತು ಅವನ ತಮ್ಮ ಲಾರನ್ಸಿಯಸ್‌ರನ್ನು ಸ್ವೀಡಿಸ್ ಭಾಷೆಗೆ ಬೈಬಲ್ಲನ್ನು ತರ್ಜುಮೆ ಮಾಡಲು ನೇಮಿಸಲಾಗಿತ್ತು. ಇದು ರಾಷ್ಟ್ರೀಯ ಭಾಷೆ ಮತ್ತು ಧರ್ಮದ ಕಲ್ಪನೆ ಬೆಳೆಯಲು ಸಹಕಾರಿಯಾಯಿತು. ಪುರೋಹಿತರಿಂದ ಗುಸ್ತಾವುಸ್ಸನು ಆಸ್ತಿಯನ್ನು ವಶಪಡಿಸಿ ಕೊಂಡನು. ಸ್ವೀಡನ್ನಿನ ಪೂಜಾರಿಗಳಿಗೆ ಮದುವೆಯಾಗುವ ಸ್ವಾತಂತ್ರ್ಯವನ್ನು ಕಲ್ಪಿಸಿಕೊಟ್ಟನು. ಏಳನೆಯ ಕ್ಲೆಮಾಂತ್ ಪೋಪನು ಇದನ್ನು ಸಹಿಸಲಿಲ್ಲವಾದರೂ, ಗುಸ್ತಾವುಸ್ಸನು ಸುಮಾರಷ್ಟು ಸುಧಾರಣೆಗಳನ್ನು ಮಾಡಿದ್ದನು. ೧೫೨೭ರಲ್ಲಿ ವಸ್ಟೇರ್ಸ್‌ನ ಸಭೆಯಲ್ಲಿ ಸುಧಾರಣೆಯನ್ನು ಬಹಿರಂಗವಾಗಿ ಘೋಷಿಸಿದನು. ಜನಸಾಮಾನ್ಯರಿಗೆ ಸಹಾಯ ಮಾಡುವಂತೆ ಚರ್ಚನ್ನು ಕೇಳಿಕೊಂಡನು. ಸಭೆಯು ಈ ವಿಷಯದ ಬಗ್ಗೆ ಚರ್ಚೆ ನಡೆಸಿತು. ತನ್ನ ಸುಧಾರಣೆಗಳನ್ನು ಒಪ್ಪಿಕೊಳ್ಳದಿದ್ದರೆ ರಾಜ ಪದವಿಗೆ ರಾಜಿನಾಮೆ ನೀಡಿ ರಾಷ್ಟ್ರ ಬಿಟ್ಟು ಹೋಗುತ್ತೇನೆಂದು ಸಭೆಯಲ್ಲಿ ಬೆದರಿಕೆ ಹಾಕಿದನು. ಬೇರೆ ದಾರಿಯಿಲ್ಲದೆ ಸಭೆಯು ಕಡೆಗೆ ಗುಸ್ತಾವುಸ್ಸನ ಸುಧಾರಣೆಗಳನ್ನು ಒಪ್ಪಿಕೊಂಡಿತು. ಸುಧಾರಣೆಯಿಂದಾಗಿ ಸ್ವೀಡನ್ನಿನ ಧರ್ಮವು ರಾಷ್ಟ್ರೀಕೃತವಾಯಿತು ಮತ್ತು ರಾಜ್ಯವು ಚರ್ಚಿನ ಮೇಲೆ ಜಯವನ್ನು ಸಾಧಿಸಿತು.

ಪೂರ್ವ ಯುರೋಪಿನಲ್ಲಿ ರಾಜರುಗಳು ದುರ್ಬಲರಾಗಿದ್ದರಿಂದ, ಶ್ರೀಮಂತರು ಪ್ರಬಲರಾಗಿದ್ದರಿಂದ ತೀವ್ರಗಾಮಿಯ ಹಲವಾರು ಮಾದರಿಯ ಕ್ರೈಸ್ತ ಬಂಡಾಯವಾದಗಳು ಬೆಳೆಯುವುದಕ್ಕೆ ಇದು ಪ್ರಾಶಸ್ತ್ಯವಾದ ಸ್ಥಳವಾಗಿತ್ತು. ಕೆಲವೇ ನಗರಗಳಿದ್ದವು ಮತ್ತು ಅನೇಕ ಧಾರ್ಮಿಕ ಪಂಥಗಳು ಅಸ್ತಿತ್ವದಲ್ಲಿದ್ದವು. ಜರ್ಮನಿಯಿಂದ ಬಂದ ಲೂಥರ್ ವಾದಿಗಳನ್ನು ಪೋಲಂಡ್ ಒಪ್ಪಿಕೊಂಡಿತ್ತು. ಇದರ ಜತೆಗೆ ಇಟಲಿಯ ತ್ರಿಮೂರ್ತಿ ವಾದದ ವಿರೋಧಿಗಳೂ ಕೂಡ ಪೋಲ್ಯಾಂಡಿಗೆ ವಲಸೆ ಬಂದರು. ಪೋಲೆಂಡಿನ ರಾಣಿ ಬೋನ ಸ್ಪೋರ್ಜ್ ಇಟಲಿಯವಳಾದುದ್ದರಿಂದ ಇವರಿಗೆ ಪ್ರಾಣರಕ್ಷಣೆ ನೀಡಿದ್ದಳು. ಕ್ಯಾಲ್ವಿನಿಸ್ಟರ ವಲಸೆಯೂ ಕೂಡ ಇನ್ನೂ ಬೃಹತ್ತಾಗಿತ್ತು. ಇದು ಪೋಲೆಂಡಿಗೆ ಮಾತ್ರ ಸೀಮಿತವಾಗಿರದೆ ಇಡೀ ಯೂರೋಪನ್ನೇ ಆವರಿಸಿತ್ತು. ಧರ್ಮ ಸುಧಾರಣೆ ಸೀಮಿತವಾಗಿರದೆ ಇಡೀ ಯುರೋಪನ್ನೇ ಆವರಿಸಿತ್ತು. ಧರ್ಮ ಸುಧಾರಣೆ ಜರ್ಮನಿಯದಾಗಲಿ ಅಥವಾ ಫ್ರಾನ್ಸ್‌ನದಾಗಲಿ ಆಗಿರಲಿಲ್ಲವಾದ್ದರಿಂದ ಕ್ರೈಸ್ತ ಬಂಡಾಯವಾದದ ವೈವಿಧ್ಯತೆಗಳು ಎಲ್ಲ ಜನರ ಮನಸ್ಸನ್ನು ಸೆಳೆದಿದ್ದವು. ಪೋಲೆಂಡಿನ ರಾಜಧಾನಿಯಾದ ವಾರ್ಸಾದಲ್ಲಿ ೧೫೭೩ರಲ್ಲಿ ಪ್ಯಾಕ್ಸ್‌ಅಸ್ಸಿಡೆಂಟಿಯಂ- “ಭಿನ್ನಾಭಿಪ್ರಾಯವುಳ್ಳವರ ಶಾಂತಿ” ಎಂಬ ಒಪ್ಪಂದವೂ ಜರುಗಿತ್ತು. ಕ್ಯಾಥೋಲಿಕ್ಕರೂ ಲೂಥರನ್ನರೂ ಕ್ಯಾಲ್ವಿನಿಸ್ಟರೂ ಮತ್ತು ಬೊಹೊಮಿಯನ್ನರು ಶಾಂತಿ ಮತ್ತು ಸಹಿಷ್ಣುತೆಯಿಂದ ಬಾಳುವೆ ನಡೆಸುವಂತೆ ಒಪ್ಪಂದವು ಆಜ್ಞಾಪಿಸಿತು.

ಇಟಲಿ ಮತ್ತು ಸ್ಪೈಯಿನಿನಲ್ಲಿ ಸುಧಾರಣೆ ಅಷ್ಟೇನೂ ಪರಿಣಾಮಕಾರಿಯಾಗಲಿಲ್ಲ. ಸ್ಪೈಯಿನಿನಲ್ಲಿ ಕ್ರಿಶ್ಚಿಯನ್ನರು ಸುಮಾರು ನೂರು ವರ್ಷಗಳ ಕಾಲ ಯಹೂದಿಗಳನ್ನು ಮತ್ತು ಅರಬ್ ಬರ್ಬರ ಸಂತತಿಯಿಂದ ಬಂದ ಮುಸಲ್ಮಾನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲು ಅಥವಾ ಸ್ಪೈಯಿನ್‌ನಿಂದ ಅವರನ್ನು ಹೊರ ಓಡಿಸಲು ನಡೆಸಿದ ಪ್ರಯತ್ನಗಳ ಸುತ್ತಮುತ್ತವೇ ಸುಧಾರಣೆಯ ವಿಷಯವು ಅಂಟಿಕೊಂಡಿತ್ತು.

ಕ್ರಿಶ್ಚಿಯನ್ನರಾಗಿ ಮತಾಂತರಗೊಂಡವರಲ್ಲಿದ್ದ ಯಹೂದಿ ಆಚರಣೆಗಳನ್ನು ಸಂಪೂರ್ಣ ವಾಗಿ ತೊಡೆದು ಹಾಕಲು ೧೪೮೨ರಲ್ಲಿ ಕ್ರೈಸ್ತ ಧರ್ಮ ವಿರೋಧಿ ಚಟುವಟಿಕೆಗಳ ವಿಚಾರಣೆಯನ್ನು ಜಾರಿಗೊಳಿಸಲಾಯಿತು. ಕ್ರಿಶ್ಚಿಯನ್ನರಲ್ಲದ ಯಹೂದಿಗಳನ್ನು ೧೪೯೨ರಲ್ಲಿ ರಾಷ್ಟ್ರದಿಂದ ಹೊರಹಾಕಲಾಯಿತು. ಇದರಿಂದ ಗ್ರ್ಯಾನೆಡ ಮುರಿದು ಬಿತ್ತು. ಅರಬ್ ಬರ್ಬರ ಸಂತತಿಯಿಂದ ಮತಾಂತರಗೊಂಡ ಮುಸಲ್ಮಾನರನ್ನು, ಮತಾಂತರಗೊಳ್ಳದವರನ್ನು ನೂರು ವರ್ಷಗಳ ನಂತರ ರಾಷ್ಟ್ರದಿಂದ ಹೊರ ಹಾಕಲು ಇದೇ ತಂತ್ರವನ್ನು ಬಳಸಲಾಯಿತು. ಈ ಪ್ರಕ್ರಿಯೆ ಯಶಸ್ವಿಯಾಯಿತು. ೧೬ನೆಯ ಶತಮಾನದ ಆದಿಭಾಗದಲ್ಲಿ ರಾಜಕೀಯ ಒತ್ತಡಗಳು ಕಡಿಮೆಯಾದುವು. ಒಂದು ದಶಕದ ಕಾಲ ಈರಾಸ್ಮಸ್‌ನ ಉದಾರವಾದವು ಸ್ಪೈಯಿನ್ ದೇಶದಲ್ಲಿ ೧೫೨೦ರವರೆಗೂ ಸುಸ್ಥಿತಿಯಲ್ಲಿತ್ತು. ಆದರೆ ಲೂಥರನ ವಾದ ಸ್ಪೈಯಿನ್‌ಗೆ ಹಬ್ಬಲು ಆರಂಭವಾದಾಗ ಜನರ ಮೇಲೆ ಹತೋಟಿಯನ್ನು ಹೇರಲಾಯಿತು.

ಇಟಲಿಯಲ್ಲಿ ರಾಜಕೀಯ ಹೊಂದಾಣಿಕೆಯೇ ಶೂನ್ಯವಾಗಿತ್ತು. ಇಲ್ಲಿ ಐದು ಮುಖ್ಯ ರಾಜ್ಯಗಳಿದ್ದವು. ಅವುಗಳೆಂದರೆ ಫ್ಲಾರೆನ್ಸ್, ಮಿಲನ್, ವೆನಿಸ್, ನೇಪಲ್ಸ್ ಮತ್ತು ರೋಮ್. ರೋಮಿನ ಆಧ್ಯಾತ್ಮಿಕ ಪ್ರಭುತ್ವ ಈ ನಗರಗಳ ಮೇಲೆ ಇದ್ದುದರಿಂದ ಒಂದು ತೆರಹನಾದ ಹೊಂದಾಣಿಕೆಯನ್ನು ಕಾಣಬಹುದಾಗಿತ್ತಾದರೂ, ರೋಮಿಗೆ ಯಾವ ನಗರ ರಾಜ್ಯವೂ ಗುಲಾಮನಂತೆ ನಡೆದುಕೊಳ್ಳುತ್ತಿರಲಿಲ್ಲ. ಮಧ್ಯಯುಗದ ಕಡೆಯ ದಿನಗಳಲ್ಲಿ, ಧರ್ಮ ವಿರೋಧಿ ಮತ್ತು ಪ್ರತ್ಯೇಕತಾವಾದದ ಚಳವಳಿಗಳು ಇಟಲಿಯಲ್ಲಿ ಹಬ್ಬಿದವು. ಆದರೆ ಅವುಗಳನ್ನು ಹತ್ತಿಕ್ಕಲಾಗಿತ್ತು. ಇಟಲಿಯನ್ನರಿಗೆ ಇಂತಹ ದಂಗೆಗಳು ಅನರ್ಥವೆಂದು ಕಂಡಿರಬೇಕು. ಇದಕ್ಕೂ ಮಿಗಿಲಾಗಿ ಕ್ರೈಸ್ತ ಭಿಕ್ಷುಗಳು ನೀತಿ ಸಂಹಿತೆಯನ್ನು ಬೋಧಿಸುತ್ತಿದ್ದರು. ಕಪುಚಿನ್, ಥಿಯಾಟೈನ್ಸ್ ಮತ್ತು ಜೆಸುಯಿಟ್ಸ್ ಎಂಬ ಮೂರು ಪಂಥಗಳು ಪೋಪನ ಆಶೀರ್ವಾದದಿಂದ ಬಲಶಾಲಿಯಾಗಿ ಬೆಳೆದ ಕ್ರೈಸ್ತ ಬಂಡಾಯವಾದವನ್ನು ಹತ್ತಿಕ್ಕಲು ಪ್ರಯತ್ನಪಟ್ಟವು. ಆದರೂ ಕ್ರೈಸ್ತ ಬಂಡಾಯವಾದ ಇಟಲಿಯಲ್ಲಿ ಬೆಳೆಯುವುದನ್ನು ತಪ್ಪಿಸಲಾಗಲಿಲ್ಲ.

ಧಾರ್ಮಿಕ ಸುಧಾರಣೆ ಒಂದು ಚಳವಳಿಯಾಗಿ, ವೈಯಕ್ತಿಕವಾಗಿ ರಾಜಕೀಯ ಸ್ವಾತಂತ್ರ್ಯವನ್ನು, ಸಾರ್ವಜನಿಕವಾಗಿ ಸಾಮಾಜಿಕ ಸ್ವಾತಂತ್ರ್ಯವನ್ನು ತಂದುಕೊಟ್ಟಿತು. ಇದರಿಂದಾಗಿ ಮದುವೆಯ ವಿಷಯಗಳಲ್ಲಿ ಸುಮಾರಷ್ಟು ಹೊಸ ಕಾನೂನುಗಳು ಬಂದುವು. ಇವು ಸಾಮಾನ್ಯ ಜನರ ಜೀವನವನ್ನು ಸರಳ ಮತ್ತು ಮಾನವೀಯವನ್ನಾಗಿಸಿದವು. ಬೈಬಲ್ಲನ್ನು ಆಳವಾಗಿ ಅಭ್ಯಸಿಸಲಾಯಿತು. ಬೈಬಲ್ ಏನನ್ನು ಒಳಗೊಂಡಿದೆ ಎನ್ನುವ ಕಾರಣಕ್ಕಾಗಿಯೇ ಅದನ್ನು ಓದಲಾಯಿತು. ಮನುಷ್ಯನ ಚಿಂತಿಸುವ ಶಕ್ತಿಗೆ ಗೌರವ ಮತ್ತು ಮೌಲ್ಯ ಪ್ರಾಪ್ತವಾಯಿತು. ಹೀಗೆ ಸುಧಾರಣೆಯ ಕಾಲ ಮಾನವನ ಬೆಳವಣಿಗೆಗೆ ಮತ್ತು ಪ್ರಗತಿಗೆ ಭದ್ರ ಬುನಾದಿಯನ್ನು ರಚಿಸಿತು.

<u>ಪರಾಮರ್ಶನ ಗ್ರಂಥಗಳು</u>

೧. ಎಲ್ಟನ್, ಜೆ.ಆರ್., **ರಿಫಾರ್ಮೇಷನ್ ಯುರೋಪ್ : ೧೫೧೭–೧೫೯೯.**

೨. ಚಾಡ್ವಿಕ್, ಓವೆಲ್, **ದಿ ರಿಫಾರ್ಮೇಷನ್.**

೩. ಗ್ರಿಮ್, ಆರ್.ಜೆ., **ದಿ ರಿಫಾರ್ಮೇಷನ್ ಎರಾ : ೧೫೦೦–೧೬೫೦.**

೪. **ದಿ ನ್ಯೂ ಕೇಂಬ್ರಿಡ್ಜ್ ಮಾಡರ್ನ್ ಹಿಸ್ಟರಿ,** ಸಂ.೨, ದಿ ರಿಫಾರ್ಮೇಷನ್ ೧೫೨೦- ೧೫೨೯'.

೫. ವಿಲಿಯನ್ಸ್ ಜೆ.ಎಚ್., **ದಿ ್ಯಾರಡಿಕಲ್ ರಿಫಾರ್ಮೇಷನ್.**

# ೧೧. ಯುರೋಪಿನಲ್ಲಿ ಆಧುನಿಕ ನಾಗರಿಕತೆಯ ಉದಯ

**ಬಂಡವಾಳಶಾಹಿ ಪದ್ಧತಿಯ ಬೆಳವಣಿಗೆ**

ಆಧುನಿಕ ಅರ್ಥವ್ಯವಸ್ಥೆಯ ಒಂದು ವೈಶಿಷ್ಟ್ಯಪೂರ್ಣ ಗುಣಲಕ್ಷಣವಾದ ಬಂಡವಾಳಶಾಹಿ ಪದ್ಧತಿಯು ವಾಣಿಜ್ಯ ಕ್ರಾಂತಿಯ ಫಲ. ಸಾಮಾನ್ಯವಾಗಿ ಬಂಡವಾಳಶಾಹಿ ಎಂಬುದು ಒಂದು ವ್ಯಕ್ತಿ ಅಥವಾ ವ್ಯಕ್ತಿಗಳ ಗುಂಪೊಂದು ರಚಿಸಿಕೊಂಡ ಬೃಹತ್ ಪ್ರಮಾಣದ ಒಂದು ವ್ಯಾಪಾರಿ ಸಂಸ್ಥೆ. ಕಚ್ಚಾವಸ್ತುಗಳು, ಉಪಕರಣಗಳು ಹಾಗೂ ಕಾರ್ಮಿಕರನ್ನು ನಿಯಮಿಸಿಕೊಂಡು, ಲಾಭಕ್ಕಾಗಿ ಹೆಚ್ಚ ಸರಕುಗಳನ್ನು ಉತ್ಪಾದಿಸಲು ಅಗತ್ಯವಾದ ಸಂಪತ್ತನ್ನು ಗಳಿಸುವುದು ಇದರ ಉದ್ದೇಶ. ಇದರ ಮುಖ್ಯ ಗುರಿ ಲಾಭ. ಈ ವ್ಯವಸ್ಥೆಯಿಂದ ಸಂಪತ್ತು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗಿ, ದೊಡ್ಡ ಪ್ರಮಾಣದ ಕೈಗಾರಿಕಾ ಉದ್ಯಮಗಳು ಹುಟ್ಟಿಕೊಳ್ಳುವುದು ಅನಿವಾರ್ಯವಾಯಿತು. ಇದರ ಜೊತೆಗೆ ಸಾಲ ಒದಗಿಸಲು, ಬ್ಯಾಂಕ್ ವ್ಯವಸ್ಥೆಯ ಸ್ಥಾಪನೆ ಮತ್ತು ಬಂಡವಾಳದ ಹರಿಯುವಿಕೆಯೂ ಅನಿವಾರ್ಯವಾಯಿತು. ಬಂಡವಾಳಶಾಹಿ ಪದ್ಧತಿಯ ಉಗಮದಿಂದ ಮಧ್ಯಯುಗದ ಲಕ್ಷಣಗಳುಳ್ಳ ಅರ್ಥವ್ಯವಸ್ಥೆಯು ಅಂತ್ಯಗೊಂಡಿತು. ಬಂಡವಾಳಶಾಹಿ ಪದ್ಧತಿಯು ಕೈಗಾರಿಕಾ ಬೆಳವಣಿಗೆಯನ್ನು ತೀವ್ರಗೊಳಿಸಿ, ಸಂಘವ್ಯವಸ್ಥೆ (ಗಿಲ್ಡ್)ಯನ್ನು ನಾಶಗೊಳಿಸಿತು.

ಕೈಗಾರಿಕಾ ಬಂಡವಾಳಶಾಹಿ ಪದ್ಧತಿಯ ಬೆಳವಣಿಗೆಯಿಂದ ಇಂಗ್ಲೆಂಡಿನಂತಹ ದೇಶಗಳಲ್ಲಿ ಅಧಿಕ ಸಂಪತ್ತು ಶೇಖರವಾಯಿತು. ಇಲ್ಲಿ ಸರಕುಗಳ ಅಧಿಕ ಉತ್ಪಾದನೆ ನಡೆಯಿತು. ಅದರಿಂದಾಗಿ ಅಗ್ಗದ ಹಾಗೂ ಪ್ರಮಾಣಬದ್ಧ ಸರಕುಗಳ ಬೃಹತ್ ಉತ್ಪಾದನೆ ಸಾಧ್ಯವಾಯಿತು. ಇದು ನಗರಗಳು ಮತ್ತು ದೊಡ್ಡ ಪಟ್ಟಣಗಳ ಉಗಮಕ್ಕೆ ಕಾರಣವಾಯಿತು. ಪರಿಣಾಮವಾಗಿ ಗ್ರಾಮೀಣ ಪರಿಸರದಿಂದ ನಗರ ವಲಯಗಳಿಗೆ ಜನರ ವರ್ಗಾವಣೆಯಾಯಿತು. ಇದು ಸುಖ ಮತ್ತು ಸೌಲಭ್ಯವನ್ನು ಒದಗಿಸಿದುದರಿಂದ ಮಾನವ ಕುಲಕ್ಕೇ ಒಂದು 'ವರ'ವೆನಿಸಿಕೊಂಡಿತು. ಆದರೆ ಕಾರ್ಮಿಕರನ್ನು ಕಷ್ಟಕ್ಕೆ ಈಡು ಮಾಡಿತು. ಬಂಡವಾಳಗಾರನು ಕಾರ್ಮಿಕರ ಬಗ್ಗೆ ನಿರ್ದಯ ಮನೋಧರ್ಮವನ್ನು ಹೊಂದಿದ್ದನು. ಕಾರ್ಮಿಕನು ಯಂತ್ರದ ಗುಲಾಮನಾದನು. ಇತರ ಹಲವಾರು ಸಾಮಾಜಿಕ ಸಮಸ್ಯೆಗಳ ಜೊತೆಗೆ ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರ ಹೆಚ್ಚಾಯಿತು.

ಬಂಡವಾಳಶಾಹಿ ಪದ್ಧತಿಯು ಕೇವಲ ದೇಶದೊಳಗಿನ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲಿ ಬದಲಾವಣೆ ತಂದದ್ದಷ್ಟೇ ಅಲ್ಲದೆ, ವಿದೇಶೀಯ ಸಂಬಂಧಗಳ ಮೇಲೂ ಪ್ರಭಾವ ಬೀರಿತು. ಕೈಗಾರಿಕಾಕ್ರಾಂತಿಯು ವಸಾಹತುಶಾಹಿ, ಸಾಮ್ರಾಜ್ಯಶಾಹಿ ಮತ್ತು ಯುದ್ಧಗಳಂತಹ ಅನೇಕ ಪಿಡುಗುಗಳಿಗೆ ಮೂಲವಾಯಿತು. ಬಂಡವಾಳಶಾಹಿಗಳು ಅವರ ಹೊಟ್ಟೆಬಾಕ ಯಂತ್ರಗಳಿಗೆ ಅಗ್ಗದ ಕಚ್ಚಾವಸ್ತುಗಳನ್ನು ಪೂರೈಸಲು ಮತ್ತು ಸಿದ್ಧ ವಸ್ತುಗಳಿಗೆ ಮಾರುಕಟ್ಟೆಗಳನ್ನು ಒದಗಿಸಲು, ಆ ಮೂಲಕ ಗಳಿಸಿದ ಅಧಿಕ ಲಾಭವನ್ನು ಉಪಯೋಗಿಸಿಕೊಂಡು ರಾಜಕೀಯ ಶಕ್ತಿಯನ್ನು ಸ್ವಾಧೀನಪಡಿಸಿಕೊಂಡರು. ಬ್ರಿಟನ್‌ನಲ್ಲಿ ಬಂಡವಾಳಶಾಹಿಗಳು ಸಂಸತ್ತಿನ (ಪಾರ್ಲಿಮೆಂಟ್) ಮೇಲೆ ಅಧಿಕಾರ ಸ್ಥಾಪಿಸಿದರು. ತಮ್ಮ ಇಚ್ಛೆಗೆ ಅನುಗುಣವಾಗಿ ಸರಕಾರದ ಮೇಲೆ ಪ್ರಭಾವವನ್ನು ಬೀರಿದರು. ತಮ್ಮ ಅನುಕೂಲಕ್ಕೆ ಹೊಂದುವಂತಹ ಕಾನೂನುಗಳನ್ನು ರಚಿಸಿದರು. ಇದೆಲ್ಲವೂ ಇಂಗ್ಲೆಂಡಿನಲ್ಲಿ ಹೊಸ ವಸಾಹತುಗಳ ನಿರ್ಮಾಣ ಹಾಗೂ ದೊಡ್ಡ ಸಾಮ್ರಾಜ್ಯದ ಸ್ಥಾಪನೆಗೆ ಕಾರಣವಾಯಿತು.

ಈ ಪ್ರಭಾವದಿಂದ ಇತರೇ ಯುರೋಪಿಯನ್ ದೇಶಗಳೂ ಸಹ ವಸಾಹತುಗಳು, ಸಾಮ್ರಾಜ್ಯಗಳು, ಕಚ್ಚಾವಸ್ತು ಮತ್ತು ಮಾರುಕಟ್ಟೆಗಳಿಗಾಗಿ ಇಂತಹ ಸ್ಪರ್ಧೆಗೆ ಇಳಿದವು. ಹತ್ತಿ ಗಿರಣಿಗಳಲ್ಲಾದ ಕ್ರಾಂತಿಯಿಂದಾಗಿ ಬಂಡವಾಳಶಾಹಿ ಪದ್ಧತಿಯು ತೀವ್ರವಾಗಿ ಬೆಳೆಯಿತು. ಈಸ್ಟ್ ಇಂಡಿಯಾ ಕಂಪನಿಯಿಂದ ಹೊಸದಾಗಿ ಪರಿಚಯಿಸಲ್ಪಟ್ಟ ಹತ್ತಿ ಬಟ್ಟೆಗಳು ಯುರೋಪಿನಲ್ಲಿ ಅತ್ಯಂತ ಜನಪ್ರಿಯವಾಯಿತು. ಇದರಿಂದ ಹತ್ತಿ ಬಟ್ಟೆ ಗಳಿಗಾಗಿ ಬೇಡಿಕೆ ಅಧಿಕವಾಯಿತು.

ಇದರಿಂದಾಗಿ ಹೊಸ ಶೋಧನೆಗೆ ಮತ್ತು ಉದ್ಯಮಶೀಲತೆಗೆ ಸಾಕಷ್ಟು ಪ್ರತಿಫಲ ದೊರೆಯಿತು. ೧೭೩೩ರಷ್ಟು ಹಿಂದೆಯೇ ಜಾನ್‌ಕೆಯೆ ನೇಯ್ಗೆಯಲ್ಲಿ 'ಹಾರುವ ಲಾಳಿ'ಯನ್ನು ಕಂಡುಹಿಡಿದಿದ್ದನು. ಇದರಿಂದ ಶೀಘ್ರ ಸಮಯದಲ್ಲಿ ಹೆಚ್ಚಿನ ಶ್ರಮವಿಲ್ಲದೆ ನೇಯ್ಗೆ ಸಾಧ್ಯವಾಯಿತು.

ಜೇಮ್ಸ್ ಹಾರ್‌ಗ್ರೀಸ್‌ನ 'ತಿರುಗುವ ಚೆನ್ನಿ', ರಿಚರ್ಡ್ ಆರ್ಕ್‌ರೈಟ್‌ನ 'ನೀರಿನ ಚೌಕಟ್ಟು', ಸ್ಯಾಮ್ಯುಎಲ್ ಎರೋಂಜೋನ್‌ನ 'ಹೇಸರಗತ್ತೆ', ವಿಟ್ನಿಯ ಕಾಲಿನ್ ಟ್ರಿನ್(೧೭೯೩), ಕಾರ್ಟ್‌ರೈಟ್‌ನ 'ಯಾಂತ್ರಿಕ ಮಗ್ಗ (೧೭೮೫) ಮತ್ತು ಉಣ್ಣೆ, ರೇಷ್ಮೆ ಹಾಗೂ ಲಿನನ್ ಬಟ್ಟೆಗಳ ಉತ್ಪಾದನೆಯಲ್ಲಿ ರೂಪಿಸಿದ ಹೊಸ ವಿಧಾನಗಳಿಂದ ನೇಯ್ಗೆ ಉತ್ಪಾದನೆಯು ಕನಿಷ್ಟ ೨೦೦ ಪಟ್ಟು ಹೆಚ್ಚಿತು. ಕಬ್ಬಿಣ, ಗಣಿ ಕೈಗಾರಿಕೆಗಳು ಮತ್ತು ಸಾರಿಗೆ ವ್ಯವಸ್ಥೆಗಳಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಉಂಟಾದವು. ೧೯ನೆಯ ಶತಮಾನದಲ್ಲಿ ವಸಾಹತುಗಳನ್ನು ಪಡೆಯಲು ಮತ್ತು ಅಗ್ಗದ ಹಾಗೂ ಪರಿಣಾಮಕಾರೀ ಮಾರುಕಟ್ಟೆಗಳನ್ನು ಪಡೆಯುವಲ್ಲಿ ಪ್ರಭಾವ ಬೀರಲು ಸಾಮ್ರಾಜ್ಯಶಾಹಿ ಶಕ್ತಿಗಳ ನಡುವೆ ಸ್ಪರ್ಧೆ ಉಂಟಾಯಿತು. ಕ್ರಮೇಣ ವಸಾಹತುಶಾಹಿಯ ಹಳೆಯ ಪರಿಕಲ್ಪನೆಯ ಕ್ಷೀಣಗೊಂಡು, ಒಂದು ಸಾಮ್ರಾಜ್ಯಶಾಹಿ ಪ್ರಭುವಿನ ನಿರ್ದಿಷ್ಟ ಕೈಗಾರಿಕಾ ಅಗತ್ಯಗಳಿಗಾಗಿ ಎಲ್ಲಾ ದೇಶಗಳೂ ಸೇವೆ ಸಲ್ಲಿಸುವಂತಹ ಸಾಮ್ರಾಜ್ಯಶಾಹಿ ಪದ್ಧತಿ ಬೆಳೆಯಿತು. ಈ ಪೈಪೋಟಿಗಳು ಪ್ರಾಪಂಚಿಕ ಘರ್ಷಣೆ ಮತ್ತು ವಿಶ್ವಯುದ್ಧಗಳಿಗೆ ಕಾರಣವಾಯಿತು. ಇದು ರಾಷ್ಟ್ರೀಯವಾದದ ಅಗತ್ಯಗಳನ್ನು ಪೂರೈಸಿ, ಅದರ ಮಿತಿಗಳನ್ನು ಮೀರುವಂತೆ ಮಾಡಿತು.

**ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನೆಗಳು**
**ಗೆಲಿಲಿಯೋ-ನ್ಯೂಟನ್-ಡಾರ್ವಿನ್-ಐನ್‌ಸ್ಟಿನ್**

ಮಧ್ಯಯುಗದಲ್ಲಿ ವಿಜ್ಞಾನವು ಸ್ವಲ್ಪ ಮಟ್ಟಿನ ಪ್ರಗತಿಯನ್ನು ಸಾಧಿಸಿತು. ಆದರೆ ಆಧುನಿಕ ವಿಜ್ಞಾನದ ನಿಜವಾದ ಚೈತನ್ಯವನ್ನು ನಾವು ಕಾಣುವುದು ಪುನರುತ್ಥಾನದ ಕಾಲದಲ್ಲಿ. ಮಧ್ಯಯುಗದಲ್ಲಿ ವಿಜ್ಞಾನವು ನಿರ್ಬಂಧಗಳಿಂದ ಕೂಡಿದ್ದ, ಜನಸಮೂಹದಲ್ಲಿ ಸಾಮಾನ್ಯವಾಗಿದ್ದ ಮೂಢನಂಬಿಕೆಗಳ ವಿರುದ್ಧ ಹೋರಾಡಿತು.

**ಗೆಲಿಲಿಯೋ (೧೫೬೪-೧೬೪೨)**

ಇವರು ೧೬೦೯ರಲ್ಲಿ ದೂರದರ್ಶಕವನ್ನು ಕಂಡುಹಿಡಿದು, ಕೊಪರ್ನಿಕಸನ ಪೂರ್ವ ಸಿದ್ಧಾಂತಕ್ಕೆ ಹೊಸ ಪುರಾವೆಯನ್ನು ಒದಗಿಸಿ, ಹೀಗೆ ನಿರೂಪಿಸಿದನು, 'ಆಕಾಶಕಾಯಗಳು ಭೂಮಿಯ ಸುತ್ತ ತಿರುಗುವುದಿಲ್ಲ. ಬದಲಾಗಿ ಅವು ಸೂರ್ಯನ ಸುತ್ತ ಪರಿಭ್ರಮಿಸುತ್ತವೆ. ಮೇಲಾಗಿ ಸೂರ್ಯ ಕೇವಲ ಭೂಮಿಯನ್ನಲ್ಲದೆ ಸೌರವ್ಯೆಹದ ಇತರ ಆಕಾಶಕಾಯಗಳನ್ನು ನಿಯಂತ್ರಿಸುತ್ತದೆ.' ದೂರದರ್ಶಕದಿಂದ ಚಂದ್ರನ ಮೇಲೆ ಪರ್ವತಗಳಿರುವುದನ್ನು, ಶನಿಯ ಸುತ್ತ ಉಂಗುರಗಳಿರುವುದನ್ನು ಗುರುತಿಸಿದನು. ವಿಶ್ವವು ನೈಸರ್ಗಿಕ ನಿಯಮಗಳಿಂದ ನಿಯಂತ್ರಿಸಲ್ಪಟ್ಟಿದ್ದು ಅದಕ್ಕೊಂದು ಕ್ರಮಬದ್ಧ ವ್ಯವಸ್ಥೆ ಇರುವುದನ್ನು ಕಂಡುಕೊಂಡನು. ಅವನ ಸಂಶೋಧನೆಗಳು, ಚರ್ಚಿನ ನಂಬಿಕೆಗಳನ್ನು ಖಂಡಿಸುವಂತಹುವಾಗಿದ್ದವು. ಆದ್ದರಿಂದ ಗೆಲಿಲಿಯೋ ಮುಂದೆ ಪ್ರವಚನ ನೀಡುವುದನ್ನೂ ಬರೆಯುವುದನ್ನೂ ಪೋಪನ ನ್ಯಾಯಾಲಯವು ನಿಷೇಧಿಸಿತು.

**ನ್ಯೂಟನ್ (೧೬೪೨-೧೭೨೭)**

ಎಲ್ಲಾ ಆಕಾಶಕಾಯಗಳ ಚಲನೆಯು ಗುರುತ್ವಾಕರ್ಷಣೆಯಿಂದ ನಿಯಂತ್ರಿಸಲ್ಪಟ್ಟಿರುತ್ತದೆ ಎಂಬುದನ್ನು ನ್ಯೂಟನ್ ನಿರೂಪಿಸಿದನು. ಎರಡು ಕಾಯಗಳ ನಡುವಿನ ಪರಸ್ಪರ ಆಕರ್ಷಣ ಶಕ್ತಿಯು ಭಿನ್ನವಾಗಿರುತ್ತದೆ. ಏಕೆಂದರೆ ಅವುಗಳ ದ್ರವ್ಯರಾಶಿಯ ಒಟ್ಟು ಮೊತ್ತ ಅವುಗಳ ನಡುವಿನ ಅಂತರದ ವರ್ಗಮಾನಕ್ಕೆ ವಿರುದ್ಧವಾಗಿರುತ್ತದೆ ಎಂಬುದು ಇವನ ಗುರುತ್ವಾಕರ್ಷಣ ಸಿದ್ಧಾಂತ.

**ಚಾರ್ಲ್ಸ್ ಡಾರ್ವಿನ್(೧೮೦೯-೧೮೮೨)**

ಈತ ಒಬ್ಬ ವೈದ್ಯರ ಮಗ. ವೈದ್ಯವೃತ್ತಿಯನ್ನು ಡಾರ್ವಿನ್ನನೂ ಅವಲಂಬಿಸಬೇಕೆಂದು ತಂದೆ ಬಯಸಿದ್ದರೂ, ಡಾರ್ವಿನ್ ಪ್ರಕೃತಿ ವಿಜ್ಞಾನಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸಲು ಇಚ್ಛಿಸಿದನು. ಪ್ರಾಣಿಗಳ ಮತ್ತು ಸಸ್ಯಗಳ ಸಹಜ ಸಿದ್ಧ ಪರಿಸರ ಮತ್ತು ಒಗ್ಗಿಸಲ್ಪಟ್ಟ ಪರಿಸರದಲ್ಲಿನ ಬೆಳವಣಿಗೆಗಳ ವ್ಯತ್ಯಾಸಗಳ ಬಗ್ಗೆ, ಸಾಧ್ಯವಾದಷ್ಟು ಮಾಹಿತಿಗಳನ್ನು ಕಲೆಹಾಕಲು ಪ್ರಾರಂಭಿಸಿದ. ಇದರಿಂದ ಅವುಗಳ

ಪರಿವರ್ತನೆಯ ಹಾಗೂ ಒಗ್ಗಿಸಿ ಕೊಳ್ಳುವಿಕೆಯ ಕಾರಣಗಳನ್ನು ಕಂಡುಹಿಡಿದನು. ತನ್ನ ಸಿದ್ಧಾಂತವನ್ನು ೧೮೫೯ರಲ್ಲಿ ರೂಪಿಸಿದನು. ಇದೇ ಮುಂದೆ "ಸ್ವಾಭಾವಿಕ ಆಯ್ಕೆಯ ಮೂಲಕ ಜೀವಿಗಳ ಉಗಮ" ಅಥವಾ "ಬದುಕಿನ ಹೋರಾಟದಲ್ಲಿ ಒಪ್ಪಿತವಾದ ತಳಿಗಳ ಸಂರಕ್ಷಣೆ"(ದಿ ಅರಿಜಿನ್ ಆಫ್ ಸ್ಪೀಸಿಸ್ ಬ ಮೀನ್ಸ್ ಆಫ್ ನ್ಯಾಚುರಲ್ ಸೆಲೆಕ್ಷನ್ ಆರ್ ದಿ ಪ್ರಿಸರ್ವೇಷನ್ ಆಫ್ ಫೇವರ್ಡ್ ರೇಸಸ್ ಇನ್ ದಿ ಸ್ಟ್ರಗಲ್ ಫಾರ್ ಲೈಫ್) ಎಂಬ ಪುಸ್ತಕವು ವೈಜ್ಞಾನಿಕ ಬರವಣಿಗೆಯ ಒಂದು ಶಾಸ್ತ್ರೀಯ ಗ್ರಂಥವೆಂದು ಪರಿಗಣಿಸಲ್ಪಟ್ಟಿದೆ.

ಇಷ್ಟು ಹೊತ್ತಿಗಾಗಲೇ ಡಾರ್ವಿನ್ ಸಸ್ಯಗಳು ಮತ್ತು ಪ್ರಾಣಿಗಳ ಹೋರಾಟವನ್ನು ಕಂಡಿದ್ದನು. ಈ ಸನ್ನಿವೇಶದಲ್ಲಿ ಒಪ್ಪಿತವಾಗುವ ಜೈವಿಕ ವರ್ಗಗಳು ಸಂರಕ್ಷಿತಗೊಂಡು, ಒಪ್ಪಿತವಾಗದವು ನಾಶವಾಗುತ್ತದೆ ಎಂಬುದು ಅವನಿಗೆ ಹೊಳೆಯಿತು. ಇದು ಹೊಸ ಜೈವಿಕ ವರ್ಗದ ಉದಯಕ್ಕೆ ನಾಂದಿಯಾಯಿತು. ಈ ಪ್ರಕ್ರಿಯೆಯನ್ನು ಆತನು 'ಸ್ವಾಭಾವಿಕ ಆಯ್ಕೆ', "ಉಳಿವಿಗಾಗಿ ಹೋರಾಟ, ಬಲಶಾಲಿಯ ಉಳಿವು" ಎಂದು ಹೆಸರಿಸಿದನು.

ಅವನ ಪ್ರಕಾರ ಸ್ವಾಭಾವಿಕ ಆಯ್ಕೆಯ ರೂಪಾಂತರಕ್ಕೆ ಅತ್ಯಂತ ಪ್ರಮುಖ ಮಾಧ್ಯಮ. "ಪ್ರಾಣಿ ಮತ್ತು ಸಸ್ಯದ ವಿಕಾಸ" ಮತ್ತು "ಮಂಗನಿಂದ ಮಾನವ" ಎಂಬ ಅವನ ಸಿದ್ಧಾಂತಗಳು ವಿಕ್ಟೋರಿಯನ್ ಯುಗದ ಮತ್ತು ಬಿಷಪ್ ವಿಲ್‌ಬರ್ ಫೋರ್ಸ್‌ರ ಸ್ವಪ್ರತಿಷ್ಠೆಗೆ ಪ್ರಹಾರ ಮಾಡಿದಂತಾಯಿತು. ಬಿಷಪ್‌ರವರು ಡಾರ್ವಿನ್‌ನನ್ನು ಪರಿಹಾಸ್ಯ ಮಾಡಿ ಈ ಸಿದ್ಧಾಂತವನ್ನು ಲೇವಡಿ ಮಾಡಿದರು.

ಡಾರ್ವಿನ್ನನ ವಿಕಾಸವಾದವು ಮಾನ್ಯವಾಯಿತು. ಆದರೆ ಆತನ ಸಿದ್ಧಾಂತವು ಅಂತಿಮ ನಿರ್ಣಯವಲ್ಲ. ಅನಂತರ ಹಲವಾರು ಸಂಶೋಧನೆಗಳು ಈ ದಿಸೆಯಲ್ಲಿ ನಡೆದಿವೆ. ಆದರೆ ಆತನ ಸಿದ್ಧಾಂತದ ತಿರುಳು ಇಂದಿಗೂ ಪ್ರಸ್ತುತ.

**ಐನ್‌ಸ್ಟೀನ್(೧೮೭೫-೧೯೫೫)**

ಇವನ ಸಾಪೇಕ್ಷ ಸಿದ್ಧಾಂತವು ೨೦ನೆಯ ಶತಮಾನದಲ್ಲಿ ಭೌತಶಾಸ್ತ್ರ ಅಧ್ಯಯನದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ಉಂಟುಮಾಡಿತು. ಈ ಸಾಪೇಕ್ಷ ಸಿದ್ಧಾಂತದ ಪ್ರಕಾರ ಕಾಲ ಮತ್ತು ದೇಶ (ಅವಕಾಶಗಳ ನಡುವೆ ಯಾವುದೇ ಪ್ರತ್ಯೇಕವಾದ ವ್ಯತ್ಯಾಸಗಳಿಲ್ಲ. ಅಂದರೆ ಕಾಲವು ಅವಕಾಶದ ನಾಲ್ಕನೆಯ ಆಯಾಮ) ಮತ್ತು ಭೌತಿಕತೆಯ ಅಂತಿಮ ಘಟ್ಟವೇ ಶಕ್ತಿ. ಆತನು ಹೇಳುವಂತೆ ವಸ್ತುವು ಶಕ್ತಿಯ ಒಂದು ರೂಪ ಮತ್ತು ಗುರುತ್ವಾಕರ್ಷಣೆಯು ವಸ್ತುವಿನ ಒಂದು ಲಕ್ಷಣ. ಸಾಪೇಕ್ಷ ಸಿದ್ಧಾಂತವು ಸೂಚಿಸುವಂತೆ ಬೆಳಕಿನ ಕಿರಣಗಳು ಗುರುತ್ವಾಕರ್ಷಣ ನಿಯಮಗಳಿಗೆ ಒಳಪಟ್ಟಿವೆ. ಇದರ ಪರಿಣಾಮವಾಗಿ ಗುರುತ್ವಾಕರ್ಷಣ ನಿಯಮಗಳು ಮತ್ತು ವಿದ್ಯುತ್-ಚಲನಶಾಸ್ತ್ರಗಳು ಒಂದಕ್ಕೊಂದು ಪೂರಕವಾಗಿದೆ. ಇದರ ಪ್ರಕಾರವಾಗಿ ಬೆಳಕು ಒಂದು ಸೆಕೆಂಡಿಗೆ ಸುಮಾರು ೧೮೬೦೦೦ ಮೈಲುಗಳಷ್ಟು ವೇಗವಾಗಿ ಚಲಿಸುತ್ತದೆ. ಈತನ ಸಂಶೋಧನೆಯಿಂದ ನ್ಯೂಟನ್ನಿನ ಕಲ್ಪನೆಗಳು ನೆಲಸಮವಾದವು. ಇವೆಲ್ಲ ತನಿಖೆಗಳು ಮತ್ತು ಸಂಶೋಧನೆಗಳಿಗೆ ಒಂದು ಗಟ್ಟಿಯಾದ ವೈಜ್ಞಾನಿಕ ಪ್ರಕ್ರಿಯೆಯ ತಳಹದಿ ಇದ್ದರೂ ವೇದಾಂತದ ಪಾಂಡಿತ್ಯವನ್ನೊಳ ಗೊಂಡಿರಲಿಲ್ಲ. ಹಾಗಾಗಿ ನಂತರದ ದಿನಗಳಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಾದ ಬೆಳವಣಿಗೆ ಗಳಿಂದಾಗಿ ಚರ್ಚಿನ ಪ್ರಭಾವವು ಕ್ಷೀಣಿಸಿ, ಸುಧಾರಣೆಗಳಿಗೆ ದಾರಿಮಾಡಿಕೊಟ್ಟಿತು.

**ಊಳಿಗಮಾನ್ಯ ಪದ್ಧತಿಯ ಉಗಮ**

ಮಧ್ಯಯುಗದ ಯುರೋಪಿಯನ್ ಸಮಾಜಕ್ಕೆ ಆಧಾರವಾಗಿದ್ದ ಊಳಿಗಮಾನ್ಯ ಪದ್ಧತಿಯ ಮೂಲಗಳು ಕತ್ತಲಯುಗದಲ್ಲಿವೆ. ರೋಮನ್ ಸಾಮ್ರಾಜ್ಯವಾಗಲೀ ಅಥವಾ ಜರ್ಮನಿಯ ರಾಜಮನೆತನವಾಗಲೀ ಬರ್ಬರ ದಾಳಿ ಮತ್ತು ಯುದ್ಧಗಳನ್ನು ತಡೆಗಟ್ಟಲು ಬೇಕಾಗುವ ರಕ್ಷಣೆಯನ್ನು ಒದಗಿಸುವಷ್ಟು ಶಕ್ತವಾಗಿರಲಿಲ್ಲ. ಹಾಗಾಗಿ ಬಡ, ದುರ್ಬಲ ಮತ್ತು ಸಣ್ಣ ಜಮೀನುದಾರರು ಬಲಶಾಲಿ ಶ್ರೀಮಂತರು ಹಾಗೂ ದೊಡ್ಡ ಜಮೀನು ದಾರರೊಂದಿಗೆ ಪರಸ್ಪರ ವಿಮೆಯ ಒಪ್ಪಂದಗಳನ್ನು ಮಾಡಿಕೊಂಡರು. ಇದಕ್ಕೆ ಪ್ರತಿಯಾಗಿ ತಮಗೆ ರಕ್ಷಣೆಯನ್ನು ಪಡೆದುಕೊಂಡರು. ಅಂಧಯುಗದ ಫ್ರಾನ್ಸ್ ಮತ್ತು ರೋಮನ್ ಸಾಮ್ರಾಜ್ಯಗಳಲ್ಲಿ "ರಕ್ಷಣ ಮತ್ತು ಸೇವೆಯ ವ್ಯವಸ್ಥೆಯು" ಸಾಮಾನ್ಯ ಲಕ್ಷಣವಾಗಿತ್ತು.

ಊಳಿಗಮಾನ್ಯ ಪದ್ಧತಿಯಲ್ಲಿ ಇಂತಹ ಖಾಸಗೀ ಒಪ್ಪಂದಗಳು ಭೂಮಿಯ ಒಡೆತನ ಹಾಗೂ ಅನುಭೋಗದ ಬಗೆಗಿನ ಒಪ್ಪಂದವಾಗಿತ್ತು. ಇಂತಹ ವ್ಯವಸ್ಥೆಯಲ್ಲಿ ಒಬ್ಬ ನಿರ್ಬಲ ವ್ಯಕ್ತಿಯು ತನ್ನ ಜಮೀನಿನ ಒಡೆತನವನ್ನು ಬಲಿಷ್ಟ ನೆರೆಯವನಿಗೆ ಒಪ್ಪಿಸಿಕೊಟ್ಟು, ಅದೇ ಜಾಗದಲ್ಲಿ ತಾನೊಬ್ಬ ಕೂಲಿಯಾಳಾಗಿಯೋ ಅಥವಾ ಗೇಣಿದಾರನಾಗಿಯೋ ಬಾಳುತ್ತಿದ್ದನು. ಕಾಲಕ್ರಮೇಣ ಪಶ್ಚಿಮ ಯುರೋಪಿನ ಪ್ರಭುತ್ವಗಳು, ರಾಜರು, ಚಕ್ರವರ್ತಿಗಳಲ್ಲದೆ ನಗರಗಳು ಮತ್ತು ಚರ್ಚುಗಳೂ ಸಹ ಈ ಜಮೀನ್ದಾರಿ ಒಪ್ಪಂದಗಳಿಗೆ ಒಳಗಾಗಿದ್ದವು. ಸರ್ವಸ್ವತಂತ್ರರಾದ ಮಹಾರಾಜರೂ ಈ ಶ್ರೀಮಂತರಿಗೆ ಅವರ ಸ್ಥಿರಾಸ್ತಿ ಹಾಗೂ ಹಕ್ಕು ಬಾಧ್ಯತೆಗಳ ಒಡೆತನವನ್ನು ಕಿಂಚಿತ್ತೂ ಮುಕ್ಕಾಗದಂತೆ ಬಿಟ್ಟುಕೊಡಲು ತಯಾರಿದ್ದರು. ಹಾಗಾಗಿ ಜಮೀನ್ದಾರಿ ಪದ್ಧತಿಯು ಭೂಮಿಯ ಗೇಣಿಪದ್ಧತಿಯ ಮೇಲೆ ಆಧರಿತವಾಗಿತ್ತು. ಜೊತೆಗೆ ಶ್ರೀಮಂತರಿಂದ ದೊರಕಿದ ಸೈನಿಕ ಸಹಾಯದಿಂದ ಹಿಡುವಳಿ ದಾರನು ವಾರ್ಷಿಕ ಹಣ ಪಾವತಿಯ ಮೂಲಕ ಗೌರವ ಸಲ್ಲಿಸಬೇಕಾಗಿತ್ತು. ಜಮೀನ್ದಾರಿ ಸಮಾಜವು ಸಾಮಾನ್ಯ ಜನರ ಮೇಲೆ ಹಲವು ಕರ್ತವ್ಯಗಳನ್ನು, ನಿಯಮಗಳನ್ನು ವಿಧಿಸಿತ್ತು. ಇದು ರಾಜಕೀಯ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯಾಗಿತ್ತು.

೧೨ನೆಯ ಶತಮಾನದ ಹೊತ್ತಿಗೆ ಊಳಿಗಮಾನ್ಯ ಪದ್ಧತಿಯಲ್ಲಿ ಬಿರುಕು ಕಾಣಿಸಿ ಕೊಂಡಿತು. ತನ್ನೆಲ್ಲ ಕೊರತೆಗಳ ನಡುವೆ ಈ ಸಮಾಜವು ಕಾಲದ ಗತಿಗೆ ಹೊಂದಿಕೊಳ್ಳಲು ಸಾಧ್ಯವಾಗಲಿಲ್ಲ. ಅದು ಹಂತಹಂತವಾಗಿ ಅವನತಿ ಹೊಂದಲು ಪ್ರಾರಂಭಿಸಿತು. ಅದರ ಅವನತಿಗೆ ಈ ಕೆಳಗಿನ ಕಾರಣಗಳನ್ನು ಕೊಡಬಹುದು.

೧. ರಾಷ್ಟ್ರೀಯವಾದ, ಪ್ರಜಾಪ್ರಭುತ್ವದಂತಹ ಭಾವನೆಗಳ ಉಗಮ, ಅದರಲ್ಲೂ ಸ್ವಾತಂತ್ರ್ಯ ಮತ್ತು ಸಮಾನತೆಯ ನೀತಿಗಳ ಮುಂದೆ ಊಳಿಗಮಾನ್ಯ ಸಮಾಜದ ಉಳಿವು ಬಹಳ ಮಟ್ಟಿಗೆ ಅಸಾಧ್ಯವಾಗಿತ್ತು.

೨. ಬಲಶಾಲಿ ಚಕ್ರಾಧಿಪತ್ಯದ ಬೆಳವಣಿಗೆಯೂ ಜಹಗೀರುದಾರರ ಸಾಮರ್ಥ್ಯವನ್ನು ಕುಸಿಯುವಂತೆ ಮಾಡಿತು. ಉದಾಹರಣೆಗೆ ಬ್ರಿಟನ್ನಿನ ೬ನೆಯ ಹೆನ್ರಿ ದೊರೆಯು ಶ್ರೀಮಂತರ ಪ್ರಭಾವವನ್ನು ನಾಶಗೊಳಿಸುವ ಹಲವಾರು ಉಪಾಯಗಳನ್ನು ಯೋಜಿಸಿದ್ದನು.

೩. ಜಮೀನ್ದಾರಿ ಯುಗದ ಯುರೋಪಿನ ಎಲ್ಲೆಡೆಯಲ್ಲೂ ದಮನಕಾರೀ ಪ್ರವೃತ್ತಿಯ ಜಹಗೀರುದಾರರ ವಿರುದ್ಧ ಅಭಿಪ್ರಾಯ ಬೆಳೆದಿತ್ತು.

೪. ಮಧ್ಯಮ ವರ್ಗದ ಬೆಳವಣಿಗೆಯು ಒಂದು ಸುಭದ್ರ ಸರಕಾರ ಕಟ್ಟುವುದಕ್ಕೆ ಅನುಕೂಲಕರವಾಗಿದ್ದುದರಿಂದ ಜಮೀನುದಾರರ ಹಿಡಿತ ದುರ್ಬಲವಾಯಿತು. ರಾಜರಿಗೆ ಮಧ್ಯಮ ವರ್ಗದಿಂದ ಸಂಪೂರ್ಣ ಸಹಕಾರ ದೊರಕಿತು.

೫. ಸಿಡಿಮದ್ದಿನ ಆವಿಷ್ಕಾರ ಮತ್ತು ಬಳಕೆಯು ರಾಜಮನೆತದ ಏಕಸ್ವಾಮ್ಯದಲ್ಲಿದ್ದುದರಿಂದ ಜಹಗೀರುದಾರರು ನಿಸ್ಸಹಾಯಕರಾದರು. ಜಹಗೀರುದಾರರನ್ನು ಕಾಪಾಡುತ್ತಿದ್ದ ಕೋಟೆಗಳನ್ನು ಈಗ ಸಿಡಿಮದ್ದಿನಿಂದ ನುಚ್ಚುನೂರು ಮಾಡಬಹುದಾಗಿತ್ತು.

೬. ಪಟ್ಟಣ ಮತ್ತು ನಗರಗಳ ಬೆಳವಣಿಗೆಯೂ ಸಹ ಜಮೀನ್ದಾರಿ ಪದ್ಧತಿಯನ್ನು ದುರ್ಬಲಗೊಳಿಸಿತು.

೭. ಸರಕು ವಿನಿಮಯ ಪದ್ಧತಿಯು ಇಳಿಮುಖಗೊಂಡಿದ್ದು ಮತ್ತು ಹಣಕಾಸು ವ್ಯವಹಾರದ ಅರ್ಥ ವ್ಯವಸ್ಥೆಯ ಪ್ರಾರಂಭವಾದದ್ದರಿಂದಲೂ ಜಮೀನ್ದಾರಿ ಪದ್ಧತಿಯು ದುರ್ಬಲ ಹೊಂದಿತು. ಜನರು ತಮ್ಮ ಯಜಮಾನರಿಗೆ ಅರಿವಾಗದಂತೆ ಅಕ್ಕಪಕ್ಕದ ಪಟ್ಟಣಗಳಿಗೆ ತಮ್ಮ ಸರಕುಗಳನ್ನು ಹಣಕ್ಕಾಗಿ ಮಾರಬಹುದಾಗಿತ್ತು.

೮. ಸಾಮಾನ್ಯವಾಗಿ ಶ್ರೀಮಂತರು ಬಗೆಹರಿಯದ ಯುದ್ಧಗಳಲ್ಲಿ ಮುಳುಗಿರುತ್ತಿದ್ದುದರಿಂದ ಅಂತಿಮವಾಗಿ ದುರ್ಬಲರಾದರು. ಮುಸಲ್ಮಾನರ ವಿರುದ್ಧದ ಅವರ ಹೋರಾಟಗಳು ಅವರ ಆರ್ಥಿಕ ದಿವಾಳಿತನಕ್ಕೆ ಕಾರಣವಾಯಿತು. ಈ ಶ್ರೀಮಂತರಿಗೆ ಪಟ್ಟಣ ಹಾಗೂ ನಗರಗಳು ಭಾರೀ ಮೊತ್ತಗಳನ್ನು ಪಾವತಿಸಿ ಸ್ವಾತಂತ್ರ್ಯವನ್ನು ಒದಗಿಸಿಕೊಟ್ಟಿತು. ಇದರಿಂದ ಸಮಾಜದ ಮೇಲಿನ ಜಮೀನ್ದಾರಿ ಪದ್ಧತಿಯ ಅಧಿಕಾರವನ್ನು ಅವರು ಕಳೆದುಕೊಳ್ಳಬೇಕಾಯಿತು.

೯. ಮಧ್ಯಕಾಲದ ಪೂರ್ವಘಟ್ಟದಲ್ಲಿನ ಪ್ರಗತಿಗಾಮಿ ಶಕ್ತಿಗಳು ಜಮೀನ್ದಾರಿ ಪದ್ಧತಿಯ ಮುಂದುವರಿಕೆಯನ್ನು ಇನ್ನಷ್ಟು ಕಷ್ಟಸಾಧ್ಯವಾಗಿಸಿತು. ಶಾಂತಿ, ರಕ್ಷಣೆ ಹಾಗೂ ಗೇಣಿ ಪದ್ಧತಿಯ ಅಗತ್ಯ ಕಂಡುಬರಲಿಲ್ಲ. ಹಾಗಾಗಿ ಊಳಿಗಮಾನ್ಯ ಪದ್ಧತಿಯು ತೊಲಗಲೆ ಬೇಕಾಯಿತು.

ಜಮೀನ್ದಾರಿ ಪದ್ಧತಿಯು ಸಾರ್ವತ್ರಿಕವಾಗಿದ್ದರೂ ಅದೊಂದು ನಿರ್ದಿಷ್ಟ ವ್ಯವಸ್ಥೆ ಯಾಗಿರಲಿಲ್ಲ. ಅದನ್ನು ಆಧರಿಸಿದ ಒಪ್ಪಂದಗಳು ಸದಾ ಬದಲಾಗುತ್ತಲೇ ಇದ್ದವು. ಒಂದು ದೇಶಕ್ಕೂ ಇನ್ನೊಂದು ದೇಶಕ್ಕೂ, ಒಂದು ಸ್ಥಿರಾಸ್ತಿಗೂ ಇನ್ನೊಂದಕ್ಕೂ, ಒಬ್ಬ ವ್ಯಕ್ತಿಗೂ ಇನ್ನೊಬ್ಬ ವ್ಯಕ್ತಿಗೂ ಕಾಣುವ ವಿವರ-ವ್ಯತ್ಯಾಸಗಳು ಅಸಂಖ್ಯ. ಆದರೆ ಊಳಿಗಮಾನ್ಯ ಪದ್ಧತಿಯ ಆಚರಣೆಯ ಹಂತದಲ್ಲಿ ಹಲವು ಸಾಮಾನ್ಯ ಅಂಶಗಳಿದ್ದವು. ೧೫ನೆಯ ಶತಮಾನದ ವೇಳೆಗೆ ಇದು ಬಹುಪಾಲು ಎಲ್ಲಾ ದೇಶಗಳಲ್ಲಿಯೂ ಕೊನೆಗೊಂಡಿತು. ಆದರೆ ಫ್ರಾನ್ಸ್, ರಷ್ಯಾ ಮತ್ತು ಇತರೆ ಹಲವು ದೇಶಗಳಲ್ಲಿ ಮುಂದೆಯೂ ಸ್ವಲ್ಪಕಾಲ ಉಳಿದುಕೊಂಡಿತು.

**ಯುರೋಪಿನ ವಿಸ್ತರಣೆ**

ಕ್ರಿಶ್ಚಿಯನ್ ಶಕೆಯ ಮೊದಲ ನಾಲ್ಕು ಶತಮಾನಗಳಲ್ಲಿ ರೋಮನ್ ಸಾಮ್ರಾಜ್ಯವು ಉತ್ತರ ಸೀಮೆಯ ರೈನ್ ಮತ್ತು ಡಾನ್ಯೂಬ್ ನದಿಗಳವರೆಗೆ ಹರಡಿತ್ತು. ದಕ್ಷಿಣ ಭಾಗದಲ್ಲಿ ಹೆಚ್ಚು ಭೂಭಾಗಗಳಿರಲಿಲ್ಲ. ಉತ್ತರ ಯುರೋಪಿನಲ್ಲಿ ವಾಸಿಸುತ್ತಿದ್ದ ಬುಡಕಟ್ಟಿನ ಜನಾಂಗದವರು ಬೇರೆ ಬೇರೆ ಭಾಷೆಗಳನ್ನು ಮಾತನಾಡುತ್ತಿದ್ದರು. ಗ್ರೀಕರು ಮತ್ತು ರೋಮನ್ನರು ಇಂಥವರನ್ನು ಅಸಂಸ್ಕೃತರೆಂದು ಗುರುತಿಸುತ್ತಿದ್ದರು.

ಇಂಥ ಅಸಂಸ್ಕೃತರಲ್ಲಿ ಜರ್ಮನ್ನರು ಪ್ರಮುಖರು. ಇವರು ಯುರೋಪಿನ ವಾಯುವ್ಯ ಪ್ರಾಂತ್ಯದಲ್ಲಿ ವಾಸವಾಗಿದ್ದು, ತಮ್ಮ ವಸಾಹತನ್ನು ಈಶಾನ್ಯದಲ್ಲಿ ಫಿನ್ ಲ್ಯಾಂಡ್‌ವರೆಗೂ, ಸ್ಲಾವ್‌ರನ್ನು ಬಗ್ಗುಬಡಿದು ಆಗ್ನೇಯ ದಿಕ್ಕಿಗೂ, ಸೆಲ್ಟರನ್ನು ಸೋಲಿಸಿ ದಕ್ಷಿಣ ಹಾಗೂ ಆಗ್ನೇಯ ದಿಕ್ಕಿಗೂ ಹಬ್ಬಿಸಿಕೊಂಡಿದ್ದರು. ಅದು ರೋಮನ್ ಗಣರಾಜ್ಯವು ಚಕ್ರಾಧಿಪತ್ಯವಾಗಿ ಪರಿವರ್ತಿತವಾಗುತ್ತಿದ್ದ ಕಾಲ. ರೋಮನ್ ಚಕ್ರಾಧಿಪತಿಗಳು ಉತ್ತರದ ಅನಾಗರಿಕರ ಆಕ್ರಮಣದ ವಿರುದ್ಧ ರೈನ್ ಮತ್ತು ಡಾನ್ಯೂಬ್ ನದಿಗಳ ಆಸುಪಾಸಿನ ಸ್ಥಳಗಳನ್ನು ಭದ್ರಪಡಿಸಿಕೊಂಡಿದ್ದರು.

ಮೊದಲನೆಯದರಿಂದ ನಾಲ್ಕನೆಯ ಶತಮಾನದವರೆಗೂ ಅವರು ರೋಮನ್ ಸಾಮ್ರಾಜ್ಯದೊಳಗೆ ವಲಸೆ ಬಂದು ಅಲ್ಲಿಯೇ ಸ್ಥಿರವಾಗಿ ನೆಲಸಿದರು. ಆದರೆ ೫ನೆಯ ಶತಮಾನದಲ್ಲಿ ಜರ್ಮನ್ನರು ರೋಮನ್ ಸಾಮ್ರಾಜ್ಯದ ಪಶ್ಚಿಮ ಪ್ರಾಂತ್ಯದಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸಿಕೊಂಡರು.

ಫ್ರಾಂಕ್‌ರೆನ್ನುವ ಜರ್ಮನ್ ಬುಡಕಟ್ಟಿನವರು ರೈನ್ ನದಿಯ ಉತ್ತರ ದಿಕ್ಕಿನಲ್ಲಿ ಡೆನ್‌ಮಾರ್ಕ್‌ನವರೆಗೂ ತಮ್ಮ ನೆಲೆಗಳನ್ನು ಹೊಂದಿದ್ದರು. ಅಲೀಮನ್ನರೂ, ಬರ್ಗುಂಡಿ ಯನ್ನರು ದಕ್ಷಿಣ ಜರ್ಮನಿಯ ಹಂಗೇರಿ ಮತ್ತು ಡ್ಯಾನ್ಯುಬ್ ನದಿಯ ಮೇಲ್ದಂಡೆಯಲ್ಲಿರುವ ಹಂಗೇರಿ ಮತ್ತು ಆಸ್ಟ್ರೀಯಾದ ಮೈದಾನಗಳಿಗೆ ಹೊಂದಿಕೊಂಡಂತೆ ಇರುವ ಮುಖ್ಯ ವ್ಯಾಂಡಲ್‌ನ ಕಣಿವೆಯಲ್ಲಿ ವಾಸವಾಗಿದ್ದರು. ಸೇವನ್ನರು, ಎಲ್ಬ್‌ನ ದಿಯ ದಂಡೆಯಲ್ಲೂ, ಹೊಂಬಾರ್ಡರು ಓದರ್ ನದಿಯ ದಂಡೆಯಲ್ಲೂ, ಪಶ್ಚಿಮದ ಗೋಥರು ಡ್ಯಾನ್ಯುಬ್ ನದಿಯ ಉತ್ತರ ಕೆಳದಂಡೆಯಲ್ಲಿಯೂ(ರುಮೇನಿಯಾ), ಪೂರ್ವದ ಗೋಥರು ಕಪ್ಪು ಸಮುದ್ರದ ಉತ್ತರ ಭಾಗದಲ್ಲಿಯೂ ವಾಸವಾಗಿದ್ದರು.

೫ನೆಯ ಶತಮಾನದ ಅಂತ್ಯದ ವೇಳೆಗೆ ಜರ್ಮನರು ತಮ್ಮ ಅಧಿಪತ್ಯವನ್ನು ಇಟಲಿ, ಗಾಲ್ಫ್, ಬ್ರಿಟನ್, ಸ್ಪೆಯಿನ್ ಮತ್ತು ಉತ್ತರ ಆಫ್ರಿಕಾದ ಬಹುಭಾಗಗಳಲ್ಲಿ ಸ್ಥಾಪಿಸಿ ಕೊಂಡಿದ್ದರು. ಜರ್ಮನ್ನರ ಆಡಳಿತದಲ್ಲಿದ್ದ ಈ ಎಲ್ಲಾ ಪ್ರಾಂತ್ಯಗಳೂ ಅತ್ಯಂತ ಕಡಿಮೆ ಪ್ರಮಾಣದಲ್ಲಿ ರೋಮನೀಕರಣಗೊಂಡಿದ್ದವು.

೬ನೆಯ ಶತಮಾನದಲ್ಲಿ ರೋಮನ್ ಸಾಮ್ರಾಜ್ಯವು ಪಶ್ಚಿಮ ಮೆಡಿಟರೇನಿಯನ್ ಭಾಗದಲ್ಲಿ ಜರ್ಮನ್ನರನ್ನು ಸೋಲಿಸುವುದರ ಮೂಲಕ ತನ್ನ ಪ್ರಾಬಲ್ಯವನ್ನು ಪ್ರದರ್ಶಿಸಿ, ತನ್ನ ಅಧಿಕಾರವನ್ನು ಪುನಃ ಸ್ಥಾಪಿಸಿಕೊಂಡಿತು. ಜಸ್ಟೀನಿಯನ್ ಚಕ್ರವರ್ತಿಯ ಅವಧಿಯಲ್ಲಿ (ಕ್ರಿ.ಶ.೫೨೭-೫೬೮) ಕ್ರಿ.ಶ.೫೩೩ರಲ್ಲಿ ಇಟಲಿ ಮತ್ತು ಕ್ಯಾಥೋಜ್‌ಗಳನ್ನು ಮತ್ತೆ ಆಕ್ರಮಿಸಿಕೊಂಡನು. ಆದರೆ ಆರನೆಯ ಶತಮಾನದ ಉತ್ತರಾರ್ಧದ ವೇಳೆಗೆ ಇಟಲಿ ಮತ್ತು ಆಫ್ರಿಕಾಗಳು ಪುನಃ ಜರ್ಮನ್ನರ ಪಾಲಾದವು. ಮಧ್ಯ ಏಷ್ಯಾದ ಅಲೆಮಾರಿಗಳು ನೈರುತ್ಯ ಸೈಬೀರಿಯಾ, ಮಂಗೋಲಿಯಾ, ತುರ್ಕಿಸ್ಥಾನ (ರಷ್ಯಾ ಮತ್ತು ಚೈನಾ) ಮತ್ತು ಈಶಾನ್ಯ ಪರ್ಷಿಯಾಕ್ಕೆ ಆಗಿಂದಾಗ್ಗೆ ಭೇಟಿಕೊಡುತ್ತಿದ್ದರು. ಇವರು ಹೂಣರ ನೇತೃತ್ವದಲ್ಲಿ ಪೂರ್ವಭಾಗದಿಂದ ರೋಮನ್ನರ ಸಾಮ್ರಾಜ್ಯದ ಮೇಲೆ ಒತ್ತಡ ಹೇರುತ್ತಿದ್ದರು.

ಜರ್ಮನ್ನರು ಹಾಗೂ ಸ್ಲಾವರು ಸಹ ಇದರ ಪರಿಣಾಮವನ್ನು ಎದುರಿಸಬೇಕಾಯಿತು. ೬ನೆಯ ಶತಮಾನದಲ್ಲಿ ಸ್ಲಾವರು ಮೆಸಲೋನಿಯ ಮೇಲೆ ಆಕ್ರಮಣ ಮಾಡಿ ಕಾನ್ ಸ್ಟಾಂಟಿನೋಪಲ್‌ನ ಚಕ್ರವರ್ತಿಗೆ ಭಯ ಹುಟ್ಟಿಸಿದ್ದರು. ಜಸ್ಟೀನಿಯನ್ ದೊರೆಯು ಇವರ ವಿರುದ್ಧ ಹೋರಾಡಿದ್ದನು. ಅವನ ಮರಣಾನಂತರ ಸ್ಲಾವರು ೭ನೆಯ ಶತಮಾನದ ಹೊತ್ತಿಗೆ ಕ್ರಮೇಣ ಬಾಲ್ಕನ್ ಪರ್ಯಾಯ ದ್ವೀಪದಲ್ಲಿ ಶಾಶ್ವತ ನೆಲೆಯನ್ನು ಸ್ಥಾಪಿಸಿದ್ದರು.

೭ನೆಯ ಶತಮಾನದಲ್ಲಿ ರೋಮನ್ ಚಕ್ರಾಧಿಪಾತ್ಯವು ಬಹಳಷ್ಟು ಕುಗ್ಗಿತು. ಜರ್ಮನ್ನರು ಗಾಲ್ಫ್, ಬ್ರಿಟನ್ ಹಾಗೂ ಸ್ಪೆಯಿನ್ ದೇಶಗಳನ್ನು ಆಕ್ರಮಿಸಿದ್ದರು. ಇಟಲಿಯು ಒಂದು ಹೊಸ ಸ್ವತಂತ್ರ ಲಂಬಾರ್ಡ್ ಸಾಮ್ರಾಜ್ಯದ ತವರಾಯಿತು. ಸ್ಲಾವರು ಇಲಿರಿಯಾ, ಮೆಸಲೋನಿಯಾ, ಗ್ರೀಸ್ ಹಾಗೂ ಇನ್ನಿತರ ದೇಶಗಳನ್ನು ಗೆದ್ದುಕೊಂಡರು. ೭ನೆಯ ಶತಮಾನದ ವೇಳೆಗೆ ಕಾನ್‌ಸ್ಟಂಟಿನೋಪಲ್‌ನ ಚಕ್ರವರ್ತಿಯು ಹಿಂದೆ ಗೆದ್ದಿದ್ದ ಆಫ್ರಿಕಾವನ್ನು ಕಳೆದುಕೊಂಡನು ಮತ್ತು ಏಷ್ಯಾ ಪ್ರಾಂತ್ಯದ ಬಹುಭಾಗಗಳು ಅಂತಿಮವಾಗಿ ರೋಮನ್ ಸಾಮ್ರಾಜ್ಯಕ್ಕೆ ಸೇರಿಕೊಂಡಿತು. ಪರ್ಷಿಯಾ ಮತ್ತು ರೋಮ್‌ಗಳ ನಡುವಿನ ಯುದ್ಧ ೬ನೆಯ ಶತಮಾನದ ಹೊತ್ತಿಗೆ ತೀವ್ರಗೊಂಡಿತು. ಪರ್ಷಿಯನ್ನರು ಜೋರೋಸ್ಟರ್ ಧರ್ಮವನ್ನು ಮತ್ತು ರೋಮನ್ನರು ಕ್ರೈಸ್ತಧರ್ಮವನ್ನು ಬೆಂಬಲಿಸಿದರು. ನಂತರ ಕ್ರೈಸ್ತ ಧರ್ಮವು ರೋಮ್‌ನ ರಾಷ್ಟ್ರಧರ್ಮವಾಯಿತು.

೭ನೆಯ ಶತಮಾನದ ವೇಳೆಗೆ ಪರ್ಷಿಯಾದ ದೊರೆ ೨ನೆಯ ಕಾಸ್‌ರಾಸ್ ಮೆಸ ಪೊಟೇಮಿಯಾ, ಸಿರಿಯಾವರೆಗಿನ ಆರ್ಮೇನಿಯಾಗಳನ್ನು ಆಕ್ರಮಿಸಿಕೊಂಡನು. ಆಥಿಯಾಸ್ ಮತ್ತು ಡಮಾಸ್ಕಸ್‌ಗಳನ್ನು ಗೆದ್ದುಕೊಂಡನು. ಕ್ರಿ.ಶ.೬೧೪ರಲ್ಲಿ ಜೆರೂಸೆಲೆಮ್‌ನ್ನು, ಕ್ರಿ.ಶ.೬೧೫ರಲ್ಲಿ ಏಷ್ಯಾಮೈನರ್‌ನ್ನು ಆಕ್ರಮಿಸಿ ಕೊಂಡನು, ಮತ್ತು ಕಾನ್‌ಸ್ಟಂಟಿನೋಪಲ್‌ನ ವಿರುದ್ಧ ಸೈನ್ಯವನ್ನು ಕಟ್ಟಿದನು. ಕ್ರಿ.ಶ. ೬೧೭ರಲ್ಲಿ ಈಜಿಪ್ಟ್‌ನವರೆಗೂ ಯುದ್ಧವನ್ನು ಮುಂದುವರಿಸಿ, ಅಲೆಗ್ಸಾಂಡ್ರಿಯಾವನ್ನು ಆಕ್ರಮಿಸಿದನು. ಹೆರಾಕ್ಲಿಸ್‌ನ ನೇತೃತ್ವದಲ್ಲಿ ರೋಮನ್ನರು ಏಷ್ಯಾಮೈನರ್, ಸಿರಿಯಾ ಮತ್ತು ಈಜಿಪ್ಟ್‌ಗಳನ್ನು ವಾಪಸ್ಸು ಪಡೆದು ಕೊಂಡನು. ಕ್ರಮೇಣ ಜರ್ಮನ್ನರು ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು. ಗಾಲ್ಫ್, ಫ್ರಾನ್ಸ್ ಎನಿಸಿಕೊಂಡಿತು. ಫ್ರಾಂಕ್‌ರ ಸಾಮ್ರಾಜ್ಯವಾದ ಫ್ರಾನ್ಸ್ ದೇಶವು ರೋಮ್‌ನಲ್ಲಿರುವ ಪೋಪ್‌ಗಳಿಂದ "ಚರ್ಚಿನ ಹಿರಿ ಮಗಳೆಂದು' ಹೊಗಳಿಸಿಕೊಂಡಿತು ಮತ್ತು ಸ್ಪೆಯಿನ್ ದೇಶವು ಎರಡನೆಯ ಮಗಳಾಯಿತು. ೭ನೆಯ ಶತಮಾನದ ಹೊತ್ತಿಗೆ ಇಂಗ್ಲೆಂಡ್ ಕ್ರೈಸ್ತಧರ್ಮಕ್ಕೆ ಮತಾಂತರಗೊಂಡಿತು. ಅಂದರೆ ಬ್ರಿಟನ್ ಕ್ರೈಸ್ತ ನಾಗರಿಕತೆಗೆ ತನ್ನನ್ನು ಒಡ್ಡಿಕೊಳ್ಳುವುದರ ಮೂಲಕ ಯುರೋಪಿನ ಚರಿತ್ರೆಯ ಮುಖ್ಯವಾಹಿನಿಗೆ ಪುನಃ ಸೇರಿಕೊಂಡಿತು.

ವೇಲ್ಸ್, ಐರ್‌ಲ್ಯಾಂಡ್ ಮತ್ತು ಸ್ಕಾಟ್‌ಲ್ಯಾಂಡ್‌ನ ಸೆಲ್ಟಿಕ್ ಕ್ರೈಸ್ತರು ಕ್ಯಾಥೊಲಿಕ್ ಪಂಥದ ಅನುಯಾಯಿಗಳಾಗಿದ್ದರು, ಹಾಗೂ ಅವರ ಭಾಷೆ ಲ್ಯಾಟಿನ್ ಆಗಿತ್ತು. ೭ನೆಯ ಶತಮಾನದಲ್ಲಿ ಇಟಲಿಯ ಲಂಬಾರ್ಡರು ಕ್ರೈಸ್ತಧರ್ಮಕ್ಕೆ ಮತಾಂತರ ಗೊಂಡರು. ಇದೇ ಕಾಲದಲ್ಲಿ ಇಸ್ಲಾಂಧರ್ಮವು ಪೂರ್ವದಲ್ಲಿ ಉದಯವಾಯಿತು.

ನಾಲ್ವರ ಕದನದಲ್ಲಿ ಅರಬ್ಬರು ಫ್ರಾನ್ಸ್ ಮತ್ತು ಸ್ಪೈಯಿನ್ ದೇಶಗಳ ಮೇಲೆ ದಾಳಿ ನಡೆಸಿದರು. ಕ್ರಿ.ಶ.೬೩೭ರಲ್ಲಿ ಅವರು ಪರ್ಷಿಯಾವನ್ನು ಗೆದ್ದಕೊಂಡರು. ೭ನೆಯ ಶತಮಾನದ ಅಂತ್ಯದಲ್ಲಿ ಸಿರಿಯಾ, ಮೆಸಪೊಟೇಮಿಯಾ, ಆರ್ಮೇನಿಯಾ, ಈಜಿಪ್ಟ್ ಮತ್ತು ಆಫ್ರಿಕಾದಲ್ಲಿನ ರೋಮನ್ ಸಾಮ್ರಾಜ್ಯಗಳನ್ನು ಅರಬ್ಬರು ಕೊನೆಗೊಳಿಸಿದರು. ಕ್ರಿ.ಶ.೮೦೨ರಲ್ಲಿ ಇಂಗ್ಲೀಷ್ ದೊರೆ ಎಗ್ಬರ್ಟನ್ ರಾಜನಾದನು ಮತ್ತು ಆ

ಮೂಲಕ ಇತರೆ ಎಲ್ಲ ಆಂಗ್ಲೋ-ಸ್ಯಾಕ್ಸನ್ ರಾಜ್ಯಗಳ ಮೇಲೆ ಪ್ರಭುತ್ವ ಸ್ಥಾಪಿಸಿದನು. ಇದರ ಪರಿಣಾಮವಾಗಿ ಇಂಗ್ಲೆಂಡಿನ ಸಂಯುಕ್ತ ರಾಜ್ಯಗಳ(ಯು.ಕೆ.) ಸೃಷ್ಟಿಯಾಯಿತು.

ಚಾರ್ಲ್ಸ್ ಮ್ಯಾಗ್ನಸ್‌ನ ತರುವಾಯ ಆತನ ಮಕ್ಕಳಾದ ಲೋಥರ್ , ಲೂಯಿ ಮತ್ತು ಚಾರ್ಲ್ಸ್‌ರು ಸಾಮ್ರಾಜ್ಯವನ್ನು ವಿಭಾಗಿಸಿದರು ಮತ್ತು ಕ್ರಿ.ಶ.೮೪೩ರಲ್ಲಿ ವರ್ಧಾನಿನ ಒಪ್ಪಂದವನ್ನು ಮುಕ್ತಾಯಗೊಳಿಸಿದರು. ಇದರ ಪ್ರಕಾರ ಲೋಥರನು ಚಕ್ರವರ್ತಿಯ ಬಿರುದನ್ನೂ ಜೊತೆಗೆ ಇಟಲಿ ಮತ್ತು ಆಲ್ಪ್ಸ್ ಹಾಗೂ ರೈನ್ ನದಿಯ ಮಧ್ಯದ ಒಂದು ಇಕ್ಕಟ್ಟಾದ ಪ್ರದೇಶವನ್ನು ಉಳಿಸಿಕೊಂಡನು. ರೈನ್ ನದಿಯ ವಾಯುವ್ಯ ದಿಕ್ಕಿನ ತೀರದ ಪ್ರದೇಶದಿಂದ ಹಿಡಿದು ಉತ್ತರ ಸಮುದ್ರದವರೆಗೂ ಇವನ ರಾಜ್ಯಭಾರವಿತ್ತು.

ಲೂಯಿಯನ್ನು ಬಾರ್ಬೇರಿಯನ್ನರು, ಸಾಕ್ಸನ್ನರು, ಥುರಿಂಜಿಯನ್ನರು ಮತ್ತು ಅಲಮನ್ನರನ್ನೊಳಗೊಂಡಂತಿರುವ ಜರ್ಮನಿಯ ರಾಜನೆಂದು ಪರಿಗಣಿಸಲಾಯಿತು. ಮೂಲದ ಫ್ರಾನ್ಸ್ ದೇಶವನ್ನು ಚಾರ್ಲ್ಸ್‌ನಿಗೆ ನೀಡಲಾಯಿತು. ಅಣ್ಣತಮ್ಮಂದಿರ ನಡುವಿನ ವ್ಯಾಜ್ಯಗಳು ಜರ್ಮನಿಯಲ್ಲಿ ಸಾಕ್ಸನ್ನರ ದೊರೆಯ ಬದಲಾವಣೆ ಹಾಗೂ ಕೊನೆಗೆ ಬಾರ್ಬೇಯನ್ನರ ದಾಳಿಯಿಂದಾಗಿ ಚಾರ್ಲ್ಸ್‌ನ ಸಾಮ್ರಾಜ್ಯವು ೯ನೆಯ ಶತಮಾನದಲ್ಲಿ ನಿರ್ನಾಮವಾಯಿತು (ಕ್ರಿ.ಶ.೯೧೯).

ಹೀಗೆ ಪಶ್ಚಿಮದ ಸಾಮ್ರಾಜ್ಯ ಅಥವಾ ರೋಮನ್ನರ ಸಾಮ್ರಾಜ್ಯವು ಓಟೋವಿನ ರಾಜ್ಯಭಾರದಲ್ಲಿ ಕ್ರಿ.ಶ.೯೬೨ರಲ್ಲಿ ಪುನರ್‌ನಿರ್ಮಾಣವಾಗಿ ಕ್ರಿ.ಶ.೧೮೦೬ರವರೆಗೂ ಮುಂದುವರೆಯಿತು. ಆದರೆ ಇದು ಎಂದಿಗೂ ಚಾರ್ಲ್ಸ್‌ನ ಸಾಮ್ರಾಜ್ಯದಷ್ಟು ವ್ಯಾಪಕ ವಾಗಿರಲಿಲ್ಲ. ಇದು ಫ್ರಾನ್ಸ್ ಮತ್ತು ಸ್ಪೈಯಿನ್‌ಗಳನ್ನು ಒಳಗೊಂಡಿರಲಿಲ್ಲ. ಅದು ಜರ್ಮನ್ ಮತ್ತು ಇಟಲಿಯನ್ ದೇಶಗಳ ರೋಮನ್ ಸಾಮ್ರಾಜ್ಯ ಮಾತ್ರವಾಗಿತ್ತು.

**ಬೈಜಾಂಟೈನ್ ಸಾಮ್ರಾಜ್ಯ**

ಕ್ರಿ.ಶ.೩೪೦ ರಿಂದ ೧೪೫೩ ರವರೆಗಿನ ಸುಮಾರು ೧೧ ಶತಮಾನಗಳ ಅವಧಿಯಲ್ಲಿ ಕಾನ್‌ಸ್ಟಾಂಟಿನೋಪಲ್ ಅಥವಾ ಬೈಜಾಂಟೈನ್ ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿ ನಗರವೆಂದು ಪರಿಗಣಿತವಾಗಿತ್ತು. ಕ್ರಿ.ಶ.೧೦೫೪ರ ನಂತರ ಯುರೋಪಿನಲ್ಲಿ ೨ ಪ್ರತ್ಯೇಕವಾದ ಚರ್ಚುಗಳಿದ್ದವು. ೧. ಸಾಂಪ್ರದಾಯಿಕ ಚರ್ಚಿನಲ್ಲಿ ಅಧಿಕೃತ ಭಾಷೆ ಗ್ರೀಕ್ ಆಗಿದ್ದು ಅಲ್ಲಿನ ಪಿತೃಪ್ರಧಾನ ಪರಂಪರೆಯು ಬೈಜಾಂಟೈನ್ ಸಾಮ್ರಾಜ್ಯಕ್ಕೆ ಹಾಗೂ ಕಾನ್‌ಸ್ಟಾಂಟಿನೋಪಲ್‌ನ ಕುಲಪತಿಗೆ ತನ್ನ ಶ್ರದ್ಧೆಯನ್ನು ಹೊಂದಿಸಿಕೊಂಡಿತ್ತು. ೨. ಪವಿತ್ರ ರೋಮನ್ ಸಾಮ್ರಾಜ್ಯವನ್ನು ನಂಬಿಕೊಂಡಿದ್ದ ಕ್ಯಾಥೊಲಿಕ್ ಚರ್ಚ್ ರುಮೇನಿಯ, ಜರ್ಮನ್ ಮತ್ತು ಸಲ್ಟಿಕ್ ಜನಗಳನ್ನೊಳಗೊಂಡಿತ್ತು, ಇದರ ಅಧಿಕೃತ ಭಾಷೆ ಲ್ಯಾಟಿನ್ ಆಗಿದ್ದು, ತನ್ನ ಪರಂಪರೆಯನ್ನು ಪೋಪ್‌ಗೆ ಶ್ರದ್ಧೆಯಿಂದ ಒಪ್ಪಿಸಿಕೊಂಡಿತ್ತು.

ಊಳಿಗಮಾನ್ಯ ಪದ್ಧತಿಯು ಸಮಾಜದ ತಳಹದಿಯಾಗಿತ್ತು. ಧರ್ಮಯುದ್ಧಗಳು ನಡೆಯುತ್ತಿದ್ದವು. ಹೀಗೆ ಪೂರ್ವ ಮತ್ತು ಪಶ್ಚಿಮದ ಕ್ರೈಸ್ತಧರ್ಮಗಳ ನಡುವೆ ಸಂಘರ್ಷ ಹೆಚ್ಚಾಯಿತು. ಕ್ರಿ.ಶ.೧೨೬೧ರಲ್ಲಿ ನಿಸಾಕದ ಚಕ್ರವರ್ತಿಯು ಕಾನ್‌ಸ್ಟಾಂಟಿನೋಪಲನ್ನು ವಶಪಡಿಸಿಕೊಂಡು ಲ್ಯಾಟಿನ್ ಸಾಮ್ರಾಜ್ಯವನ್ನು ಕೊನೆಗೊಳಿಸಿದನು. ಕ್ರಿ.ಶ.೧೨೦೪ರಲ್ಲಿ ಲ್ಯಾಟಿನ್ನರು ಪುನಃ ತಮ್ಮ ಹತೋಟಿಯನ್ನು ಸ್ಥಾಪಿಸಿದರು. ಆದರೆ ೧೨೬೧ರಲ್ಲಿ ಮತ್ತೊಮ್ಮೆ ಗ್ರೀಕ್ ಆಡಳಿತವನ್ನು ಪುನರ್‌ಸ್ಥಾಪಿಸಲಾಯಿತು. ಆದರೆ ವೆನಿಸ್ ಪ್ರಭುತ್ವದಲ್ಲಿ ಕ್ರೀಟ್ ಮತ್ತು ಈಜಿಯನ್ ದ್ವೀಪಗಳನ್ನು ಹಾಗೂ ಗ್ರೀಕ್ ಪರ್ಯಾಯ ದ್ವೀಪದ ಹೆಚ್ಚಿನ ಭಾಗವನ್ನು ಉಳಿಸಿಕೊಳ್ಳಲಾಯಿತು. ಒಟ್ಟೋವಿನ ಸಾಮ್ರಾಜ್ಯದ ಸರಹದ್ದಿನಿಂದ ಕ್ರೈಸ್ತಧರ್ಮೀಯ ಬೈಜಾಂಟೈನ್ ಸಾಮ್ರಾಜ್ಯವು ವೃದ್ಧಿಗೊಂಡಿತು. ಇದರಿಂದಾಗಿ ಸಂಕುಚಿತ ಗೊಂಡ ಏಷಿಯಾ ಮೈನರ್ ಪ್ರದೇಶವು ಕೊನೆಗೆ ತುರ್ಕರಿಗೆ ಶರಣಾಗತವಾಯಿತು. ಬಾಲ್ಕನ್ ಪರ್ಯಾಯ ದ್ವೀಪವನ್ನು ಎರಡು ಸ್ವತಂತ್ರ ರಾಜ್ಯಪ್ರಭುತ್ವಗಳಾದ ಯುಗೋಸ್ಲಾವಿಯಾ ಮತ್ತು ಬಲ್ಗೇರಿಯನ್ನರು ನಿಯಂತ್ರಿಸುತ್ತಿದ್ದರು. ಇಟಲಿ ಇಟಾಲಿಯನ್ನರ ಆಡಳಿತದಲ್ಲಿತ್ತು.

**ಯುರೋಪಿನ ಮೇಲೆ ತುರ್ಕರ ದಾಳಿ**

ಕ್ರಿ.ಶ.೧೩೫೭ರಲ್ಲಿ ತುರ್ಕರು ಅಡ್ರಿಯೇನೋಪಲ್‌ನ್ನು ವಶಪಡಿಸಿಕೊಂಡು ಅದನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಕ್ರಿ.ಶ.೧೩೮೭ರಲ್ಲಿ 'ಸಲೋನಿ'ಯನ್ನು ವಶಪಡಿಸಿಕೊಂಡರು ಮತ್ತು ಯೂಗೋಸ್ಲಾವರನ್ನು ಸೋಲಿಸಿದರು. ೧೩೯೩ರಲ್ಲಿ ಬಲ್ಗೇರಿಯನ್ನರನ್ನು ಸೋಲಿಸಿ, ಕ್ರಿ.ಶ.೧೪೦೨ರಲ್ಲಿ ಕಾನ್‌ಸ್ಟಾಂಟಿನೋಪಲ್‌ಗೆ ಮುತ್ತಿಗೆ ಹಾಕಿದರು.

೧೫ನೆಯ ಶತಮಾನದಲ್ಲಿ ಒಟ್ಟೋವಿಯನ್ನರು ಕಾನ್‌ಸ್ಟಾಂಟಿನೋಪಲ್ ಒಂದನ್ನು ಹೊರತುಪಡಿಸಿ ಇಡೀ ಬಾಲ್ಕನ್ ಪರ್ಯಾಯ ದ್ವೀಪದ ಮೇಲೆ ಆಧಿಪತ್ಯವನ್ನು ಸ್ಥಾಪಿಸಿದ್ದರು. ಕ್ರಿ.ಶ.೧೪೫೩ರಲ್ಲಿ ಎರಡನೆಯ ಮಹಮ್ಮದ್‌ನು ಕಾನ್‌ಸ್ಟಾಂಟಿನೋಪಲ್‌ಗೆ ಮುತ್ತಿಗೆ ಹಾಕಿ, ಅದನ್ನು ವಶಪಡಿಸಿಕೊಂಡನು. ಇದು ಬೈಜಾಂಟೈನ್ ಸಾಮ್ರಾಜ್ಯದ ಕೊನೆಗಾಲವನ್ನು ಸೂಚಿಸಿತು.

**ನೂರುವರ್ಷಗಳ ಯುದ್ಧ (ಕ್ರಿ.ಶ.೧೩೩೭–೧೪೫೩)**

ಇದು ಜಹಗೀರುದಾರಿ ಯುದ್ಧದಂತೆ ಪ್ರಾರಂಭವಾದರೂ ರಾಷ್ಟ್ರೀಯ ಯುದ್ಧವಾಗಿ ಕೊನೆಗೊಂಡಿತು. ಅಂತಿಮ ವಿಜಯ ಫ್ರೆಂಚರದಾಗಿತ್ತು. ೬ನೆಯ ಚಾರ್ಲ್ಸ್‌ಗೆ ಫ್ರಾನ್ಸ್ ಸಂಪೂರ್ಣವಾಗಿ ವಶವಾಯಿತು. ಕೇವಲ ಕಲಾಯ್ಸ ಪಟ್ಟಣ ಮಾತ್ರ ಇಂಗ್ಲಿಷರ ಬಳಿ ಉಳಿದುಕೊಂಡಿತು. ಈ ಯುದ್ಧಗಳ ನಂತರ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಲ್ಲಿ ನಿರಂಕುಶ ಪ್ರಭುತ್ವ ಮತ್ತು ಅಂತರ್ಯುದ್ಧಗಳು ಪ್ರಾರಂಭವಾಯಿತು.

ಇಂಗ್ಲೆಂಡಿನಲ್ಲಿ ಟ್ಯೂಡರರ ರಾಜಪ್ರಭುತ್ವವು ಮೊದಲನೆಯ ಟ್ಯೂಟರ್ ೭ನೆಯ ಹೆನ್ರಿ (೧೪೮೫-ಕ್ರಿ.ಶ.೧೫೦೯)ಯಿಂದ ಆರಂಭಗೊಂಡಿತು. ಫ್ರಾನ್ಸ್‌ನ ರಾಜಪ್ರಭುತ್ವವು ೭ನೆಯ ಚಾರ್ಲ್ಸ್‌ನಿಂದ ಬಲಗೊಂಡಿತು.

೧೬ನೆಯ ಶತಮಾನದಲ್ಲಿ ಧಾರ್ಮಿಕ ಅಶಾಂತಿ ಮತ್ತು ಅಂತರ್ಯುದ್ಧಗಳಿಂದ ಫ್ರಾನ್ಸ್‌ನಲ್ಲಿ ನಿರಂಕುಶ ಪ್ರಭುತ್ವದ ಉಗಮವಾಯಿತು. ಇದು ೧೮ನೆಯ ಶತಮಾನದವರೆಗೂ ಮುಂದುವರೆಯಿತು.

**ಸ್ಪೈಯಿನ್ :** ಫರ್ಡಿನಾಂಡ್ ಮತ್ತು ಇಸಬೆಲಾರ ಜೋಡಿ ಆಳ್ವಿಕೆಯಲ್ಲಿ ನಿರಂಕುಶ ಪ್ರಭುತ್ವದ ಉಗಮವಾಯಿತು. ಇವರು ಸ್ಪಾನಿಷ್ ವಸಾಹತುಶಾಹಿ ಚಕ್ರಾಧಿಪತ್ಯಕ್ಕೆ ಭದ್ರ ಬುನಾದಿಯನ್ನು ಹಾಕಿದರು.

**ಸ್ಕ್ಯಾಂಡಿನೇವಿಯಾ :** ಸ್ಕ್ಯಾಂಡಿನೇವಿಯಾದಲ್ಲಿ ಕಲ್‌ನುರ್‌ದ ಸಂಯುಕ್ತ ಸಂಸ್ಥಾನವು (ಕ್ರಿ.ಶ.೧೩೯೭) ಡೆನ್ಮಾರ್ಕ್, ನಾರ್ವೆ ಮತ್ತು ಸ್ವೀಡನ್‌ನ ರಾಜ್ಯಗಳನ್ನು ಒಂದುಗೂಡಿಸಿತು. ಅದರೆ ೧೭ನೆಯ ಶತಮಾನದಲ್ಲಿ ಈ ಒಕ್ಕೂಟವು ವಿಫಲವಾಯಿತು. ಗುಸ್ತಾವುಸ್‌ವಾಸನ ಆಳ್ವಿಕೆಯಲ್ಲಿ ಸ್ವೀಡನ್ ಹಾಗೂ ಡೇನಿಷ್ ಆಳ್ವಿಕೆಯಲ್ಲಿ ನಾರ್ವೆಯು ಬೇರೆಯಾಯಿತು.

**ಜರ್ಮನಿ ಮತ್ತು ಇಟಲಿ :** ಪವಿತ್ರವಾದ ರೋಮನ್ ಸಾಮ್ರಾಜ್ಯವು ಹಾಬ್ಸ್‌ಬರ್ಗ್ ಕುಟುಂಬದ ಮುಖ್ಯಸ್ಥನಾಗಿದ್ದ ಮತ್ತು ಆಸ್ಟ್ರಿಯಾವನ್ನು ವಂಶಪಾರಂಪರ್ಯವಾಗಿ ಆಳುತ್ತಿದ್ದ ದುರ್ಬಲ ರೋಮನ್ ಚಕ್ರವರ್ತಿಯ ಕೈಕೆಳಗೆ ಇತ್ತು. ಇಟಲಿ ದೇಶವು ತನ್ನ ಗಣತಂತ್ರ ನಗರ ರಾಜ್ಯಗಳ ಆಳ್ವಿಕೆಯಿಂದ ನಿರಂಕುಶ ಹಾಗೂ ವಂಶಪಾರಂಪರ್ಯ ಆಳ್ವಿಕೆಯತ್ತ ಬದಲಾಗುವ ಮನೋಭಾವವನ್ನು ತೋರುತ್ತಿತ್ತು.

**ಸ್ಕಾಟ್ಲೆಂಡ್ ಮತ್ತು ಪೋಲೆಂಡಿನಲ್ಲಿದ್ದ ನಿರಂಕುಶ ಪ್ರಭುತ್ವ**

ಪೋಲೆಂಡಿನಲ್ಲಿ ಶ್ರೀಮಂತರು ರಾಜ್ಯಭಾರವನ್ನು ನಡೆಸುತ್ತಿದ್ದು, ರಾಜಪ್ರಭುತ್ವಕ್ಕೆ ಚುನಾಯಿಸುವ ಪದ್ಧತಿಯನ್ನು ಅನುಸರಿಸುತ್ತಿದ್ದರು. ಹಾಗಾಗಿ ವಂಶಪಾರಂಪರ್ಯ ಆಳ್ವಿಕೆ ಯನ್ನು ತಡೆಗಟ್ಟಿದ್ದರು. ೧೬ನೆಯ ಶತಮಾನದ ಉತ್ತರ ಭಾಗದಲ್ಲಿ ೬ನೆಯ ಜೇಮ್ಸ್‌ನ

ಆಳ್ವಿಕೆಯಲ್ಲಿನ ಸ್ಕಾಟ್ಲೆಂಡ್ ದೇಶದಲ್ಲಿ ಶ್ರೀಮಂತ ಪ್ರಭುತ್ವದ ಉದಯವಾಯಿತು. (ಹಾಬ್ಸ್‌ಬರ್ಗ್‌ನ ಚಾರ್ಲ್ಸ್‌ನು ನೆದರ್ ಲ್ಯಾಂಡ್, ಸ್ಪೇಯಿನ್, ಸಿಸಿಲಿ ಮತ್ತು ದಕ್ಷಿಣ ಇಟಲಿಯ ಉತ್ತರಾಧಿಕಾರಿಯಾಗಿದ್ದನು.)

ಕ್ಯಾಟ್‌ಕ್ಯಾನ್ ಕ್ಯಾಂಬ್ರಿಸಿಸ್ ಒಪ್ಪಂದದ ನಂತರ (೧೫೫೯) ಮಿಲಾನ್ ಮತ್ತು ನೇಪಲ್ಸ್‌ಗಳು ಹಾಪ್ಸ್‌ಬರ್ಗ್‌ನಲ್ಲೇ ಉಳಿದುಕೊಂಡವು. ಆದರೆ ಜರ್ಮನ್ ನಗರಗಳಾದ ಮಿಡ್ಸ್‌ಟೌಲ್ ಮತ್ತು ವರ್ಧೂನ್‌ಗಳನ್ನು ಫ್ರೆಂಚರಿಗೆ ಒಪ್ಪಿಸಿದರು.

**೧೭ನೆಯ ಶತಮಾನದಲ್ಲಿ ಇಂಗ್ಲೆಂಡ್**

ರಾಣಿ ಎಲಿಜಬೆತ್‌ಳ ಮರಣಾನಂತರ ಕೊನೆಯ ಟ್ಯೂಡರ್ ಸಾಮ್ರಾಜ್ಯವು ಆಕೆಯ ದಾಯಾದಿ ಸ್ಕಾಟ್‌ಲ್ಯಾಂಡಿನ ೬ನೆಯ ಜೇಮ್ಸ್‌ಗೆ ಹಸ್ತಾಂತರಗೊಂಡಿತು. ಆತನಿಂದ ಸ್ಟುವರ್ಟ್ ಕುಟುಂಬದ ಆಳ್ವಿಕೆ ಪ್ರಾರಂಭವಾಯಿತು.

**ಹಕ್ಕುಗಳ ವಿಜ್ಞಾಪನೆ (ಕ್ರಿ.ಶ.೧೬೨೮) :** ಕ್ರಿ.ಶ.೧೬೪೨ರಲ್ಲಿ ನಡೆದ ಅಂತರ್ಯುದ್ಧದಲ್ಲಿ ರಾಜರು, ಸೈನಿಕರು ಮತ್ತು ಸಂಸತ್ತಿನ ಸದಸ್ಯರು ಆಲಿವರ್ ಕ್ರಾಮ್‌ವೆಲ್‌ನ ಸರ್ವಾಧಿಕಾರಕ್ಕೆ ಒಳಪಟ್ಟರು. ಕ್ರಿ.ಶ.೧೬೪೯ರಲ್ಲಿ ಚಾರ್ಲ್ಸ್ ದೊರೆಯು ಇಂಗ್ಲೆಂಡನ್ನು ಪ್ರಜಾಪ್ರಭುತ್ವವೆಂದು ಘೋಷಿಸಿದನು. ಆದರೆ ಆಲಿವರ್ ಕ್ರಾಮ್‌ವೆಲ್‌ನ ಆಳ್ವಿಕೆಯಿಂದ ೧೬೫೮ರಲ್ಲಿ ಈ ಪ್ರಜಾಪ್ರಭುತ್ವವು ಕುಸಿಯಿತು.

೨ನೆಯ ಚಾರ್ಲ್ಸ್ (ಕ್ರಿ.ಶ.೧೬೬೦-೮೫) ಮತ್ತು ೨ನೆಯ ಜೇಮ್ಸ್ (ಕ್ರಿ.ಶ.೧೬೮೫-೮೮) ಸ್ಟುವರ್ಟ್‌ನ ಕುಟುಂಬವನ್ನು ಪುನಃ ಸ್ಥಾಪಿಸಿದರು. ೧೬೮೮ರಲ್ಲಿ ನಡೆದ ಮಹಾಕ್ರಾಂತಿಯಿಂದಾಗಿ ನಿರಂಕುಶ ಪ್ರಭುತ್ವದ ಮೇಲೆ ಪ್ರಜಾಪ್ರಭುತ್ವದ ವಿಜಯ ಸಾಧ್ಯವಾಯಿತು.

**ಹಕ್ಕುಗಳ ಸೂಚಿ (ಕ್ರಿ.ಶ.೧೬೮೩) ಮತ್ತು ರಾಜಕೀಯ ಪಕ್ಷಗಳ ಉದಯ**

೧೮ನೆಯ ಶತಮಾನದ ಹೊತ್ತಿಗೆ ಇಂಗ್ಲೆಂಡ್‌ನಲ್ಲಿ ಆಧುನಿಕ ರಾಜಕೀಯ ಪಕ್ಷಗಳ ವ್ಯವಸ್ಥೆ ಮತ್ತು ಮಂತ್ರಿಮಂಡಲದ ವ್ಯವಸ್ಥೆಯಿಂದ ಕೂಡಿದ ಒಂದು ನಿಯಮಿತ ರಾಜಪ್ರಭುತ್ವವಿತ್ತು.

**ಫ್ರೆಂಚ್ ರಾಜಪ್ರಭುತ್ವ**

೧೭ನೆಯ ಶತಮಾನದಲ್ಲಿ ಫ್ರಾನ್ಸ್ ಸಿಂಹಾಸನವನ್ನು ಬೂರ್ಬನ್ ಕುಟುಂಬವು ಪಡೆದುಕೊಂಡಿತು.

೧. ನಾಲ್ಕನೆಯ ಹೆನ್ರಿ(ಕ್ರಿ.ಶ.೧೫೮೯-೧೬೧೦)ಯು ಬಲಶಾಲಿ ಹಾಗೂ ಜನಪ್ರಿಯನಾಗಿದ್ದನು.

೨. ೧೩ನೆಯ ಲೂಯಿ (ಕ್ರಿ.ಶ.೧೬೧೦-೧೬೪೩) ನಿರ್ಬಲ ಹಾಗೂ ಅದಕ್ಷನಾಗಿದ್ದನು.

೩. ೧೪ನೆಯ ಲೂಯಿ (ಕ್ರಿ.ಶ.೧೬೪೩-೧೭೧೫)ಯ ಆಡಳಿತವನ್ನು ಮಜರಿನ್ ನಿಯಂತ್ರಿಸುತ್ತಿದ್ದನು. ಮಜರಿನ್‌ನ ಮರಣಾನಂತರ ೧೪ನೆಯ ಲೂಯಿ ಆಡಳಿತ ವಹಿಸಿಕೊಂಡು ಅಪ್ಪಟ ನಿರಂಕುಶ ಆಳ್ವಿಕೆ ನಡೆಸಿದನು.

೪. ೧೪ನೆಯ ಲೂಯಿಯ ಅಬ್ಬರದ ಪ್ರಭುತ್ವದಲ್ಲಿ ೩೦ ವರ್ಷಗಳ ಕಾಲ ಯುದ್ಧ ನಡೆಸಿದನು.

೫. ೧೫ನೆಯ ಲೂಯಿ (ಕ್ರಿ.ಶ.೧೭೧೫-೧೭೭೪)ಯ ನಿರಂಕುಶ ಪ್ರಭುತ್ವ ಆಳ್ವಿಕೆಯು ಜನ ಬೆಂಬಲವನ್ನು ಕಳೆದುಕೊಂಡಿತು.

೬. ೧೬ನೆಯ ಲೂಯಿಯ (ಕ್ರಿ.ಶ.೧೭೭೪-೧೭೭೫) ಕಾಲದಲ್ಲಿ ೧೭೮೯ರ ಕ್ರಾಂತಿಯ ಮುಖಾಂತರ ಪ್ರಭುತ್ವವು ಕೊನೆಗೊಂಡಿತು.

**ರಷ್ಯಾ :** ರಷ್ಯಾ ದೇಶವು ಮಸ್ಕಾನಿಮ್ ಸರದಾರರಿಂದ ಬೆಳವಣಿಗೆ ಹೊಂದಿತು. ಅದು ಉತ್ತರಕ್ಕೆ ಬಿಳಿ ಸಮುದ್ರದವರೆಗೂ, ದಕ್ಷಿಣಕ್ಕೆ ಕಾಸ್ಪಿಯನ್ ಸಮುದ್ರದವರೆಗೂ, ಪೂರ್ವಕ್ಕೆ ಸೈಬೀರಿಯಾದವರೆಗೂ ಹಬ್ಬಿತ್ತು. ಹಾಗಾಗಿ ಈ ಸರದಾರರು ಜಾರ್ (ತ್ಸಾರ್) ಎಂಬ ಬಿರುದಿನೊಂದಿಗೆ ಖ್ಯಾತರಾದರು. ಇವರಲ್ಲಿ ಮೊದಲಿಗರು ರೋಮನೋವ್ ಕುಟುಂಬದವರು. ಈ ರೋಮನೋವ್ ಕುಟುಂಬದಲ್ಲಿ ಅಪ್ಪಟ ನಿರಂಕುಶ ಪ್ರಭುವಾದ ಪೀಟರನು ಪ್ರಖ್ಯಾತನಾಗಿದ್ದನು. ಖ್ಯಾತಿಯಲ್ಲಿ ಕ್ಯಾಥರಿನ್‌ಗೆ ನಂತರದ ಸ್ಥಾನ. ಕ್ಯಾಥರೀನ್‌ನ ಆಳ್ವಿಕೆಯಲ್ಲಿ ರಷ್ಯಾ ದೇಶವು ಕಪ್ಪು ಸಮುದ್ರದವರೆಗೂ ವಿಸ್ತಾರಗೊಂಡಿತ್ತು. ಕ್ರಿ.ಶ.೧೬೫೫ರಲ್ಲಿ ಪ್ರಷ್ಯಾವನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳಲಾಯಿತು. ನಂತರ ಇದು ಮೊದಲನೆ ಫ್ರೆಡ್ರಿಕ್ ದೊರೆಯ ಆಳ್ವಿಕೆಯಲ್ಲಿ ಒಂದು ಸ್ವತಂತ್ರ ರಾಜ್ಯವಾಯಿತು.

**ಕತ್ತಲಯುಗ**

ಭದ್ರವಾಗಿ ನೆಲೆಯೂರಿದ್ದ ಎಲ್ಲಾ ಜರ್ಮನರಿಗಿಂತಲೂ ಫ್ರಾಂಕರೇ ಪ್ರಮುಖವಾಗಿ ಆಡಳಿತ ನಡೆಸುತ್ತಿದ್ದರು. ಆದರೆ ಕಾಲಕ್ರಮೇಣ ಈ ರಾಜ್ಯವು ಬಹುಭಾಗಗಳಾಗಿ ಬೇರ್ಪಟ್ಟವು. ಒಡೆಯರು ನಿರ್ಬಲರಾಗಿದ್ದುದರಿಂದ ಅರಮನೆಯ ಪಾಲಕನೇ ಪ್ರಾಮುಖ್ಯತೆ ಪಡೆದಿದ್ದನು. ಅಧಿಕಾರವು ಆತನ ಮಗನಾದ ಚಾರ್ಲ್ಸ್ ಮಾರ್ಟೈಲ್‌ಗೆ ಹಸ್ತಾಂತರವಾಯಿತು. ನಂತರ ಆತನ ಮಗನಾದ ಪೆಪಿನ್‌ಗೆ ದೊರೆಯಿತು. ಕೆರೋಲಿಂಗಿಯನ್ ರಾಜವಂಶವೆಂಬ ಹೊಸ ಮನೆತನವನ್ನು ಸ್ಥಾಪಿಸಿದನು. ಆತನ ಮಗನಾದ ಚಾರ್ಲ್ಸ್ ಮ್ಯಾಗ್ನೆ (ಕ್ರಿ.ಶ.೭೪೨-೮೧೪)ಯ ಕಾಲದಲ್ಲಿ ಪೋಪರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಕಾತುರರಾಗಿದ್ದರು. ಆಗಲೇ ಕ್ರೈಸ್ತ ಪ್ರಪಂಚದಲ್ಲಿ ಟ್ವಾಯ್ ಚಕ್ರಾಧಿಪತ್ಯವು ಸ್ಥಾಪಿತವಾಯಿತು. ಪೂರ್ವಕ್ಕೆ ಕಾನ್‌ಸ್ಟಾಂಟಿನೋಪಲ್‌ನ್ನು ಪಶ್ಚಿಮಕ್ಕೆ ಐಕ್ಸ್‌ನ್ನು ರಾಜಧಾನಿಯಾಗಿಸಿಕೊಂಡರು. ಪೂರ್ವದ ಸಾಮ್ರಾಜ್ಯದಲ್ಲಿ ಬಹಪಾಲು ಬಿಜಾಂಟೈನರು ಎಂದು ಹೇಳುವ ಗ್ರೀಕರೇ ಇದ್ದರು. ಪಶ್ಚಿಮಕ್ಕೆ ಇದ್ದುದು ಪವಿತ್ರ ರೋಮನ್ ಸಾಮ್ರಾಜ್ಯ.

೮ನೆಯ ಶತಮಾನದ ಕೊನೆಗೆ ಈ ಎರಡು ರೋಮನ್ ಸಾಮ್ರಾಜ್ಯಗಳು ಬ್ರಿಟಿಷ್ ದ್ವೀಪಗಳು ಮತ್ತು ಸ್ಪೆಯಿನ್‌ಗಳನ್ನು ಹೊರತುಪಡಿಸಿ ದಕ್ಷಿಣ ಹಾಗೂ ಮಧ್ಯಯುರೋಪಿನ ಬಹಳಷ್ಟು ಭಾಗಗಳನ್ನು ಆಕ್ರಮಿಸಿಕೊಂಡಿತ್ತು.

<u>ಪರಾಮರ್ಶನ ಗ್ರಂಥಗಳು</u>

೧. ಜಾಕಬ್ ಮಾರ್ಗರೇಟ್ ಸಿ., ೧೯೮೮. **ದಿ ಕಲ್ಚರಲ್ ಮೀನಿಂಗ್ ಆಫ್ ದಿ ಸೈಂಟಿಫಿಕ್ ರೆವಲ್ಯೂಶನ್,** ನ್ಯೂಯಾರ್ಕ್

೨. ಸ್ಟೀಫನ್ ಜೆ.ಲೀ., ೧೯೮೮, **ಆಸ್ಪೆಕ್ಟ್ಸ್ ಆಫ್ ಯುರೋಪಿಯನ್ ಹಿಸ್ಟರಿ,** ಲಂಡನ್: ರೂಟ್ಲೆಜ್.

# ೧೨. ಆಳ್ವಿಕೆಯ ವಿವಿಧ ಮಾದರಿಗಳು, ವ್ಯಾಖ್ಯಾನ ಹಾಗೂ ಸ್ವರೂಪ

ಎರಡು ಸಾವಿರ ವರುಷಗಳ ಮೊದಲೇ ಗ್ರೀಕ್ ತತ್ವಶಾಸ್ತ್ರಜ್ಞ ಅರಿಸ್ಟಾಟಲ್ 'ನಾವೆಲ್ಲರೂ ರಾಜಕಾರಣ ಜೀವಿಗಳು' ಎಂದು ನುಡಿದ ನಿತ್ಯ ಸತ್ಯವು ಎಂದೆಂದಿಗೂ ಒಪ್ಪಿಕೊಳ್ಳುವಂತಹುದಾಗಿದೆ. ರಾಜಕೀಯವು ಸಾಮಾಜಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿ ಮಾನವನ ಇತಿಹಾಸದೊಂದಿಗೆ ಬೆಳೆದು ಬಂದಿರುವ ವಿಚಾರವು ಎಲ್ಲರಿಗೂ ಗೊತ್ತು. ಎಲ್ಲ ಸಮಾಜಗಳಲ್ಲಿಯೂ ಸಂಪನ್ಮೂಲಗಳು ಬೇಡಿಕೆಗಿಂತ ಕಡಿಮೆಯಿದ್ದು ಅವುಗಳಿಗೆಂದು ಸ್ಪರ್ಧಿಸುವ ವ್ಯಕ್ತಿಗಳ ಸಂಖ್ಯೆ ಹೆಚ್ಚಿರುವುದರಿಂದ 'ಯಾರು' ಯಾವಾಗ ಎಷ್ಟನ್ನು ಪಡೆಯುತ್ತಾರೆ' ಎಂಬ ಪ್ರಶ್ನೆ ಹಾಗೂ ಆ ಪ್ರಶ್ನೆಗೆ ಸಂಬಂಧಿಸಿದ ಕ್ರಿಯಾತ್ಮಕ ಪ್ರಕ್ರಿಯೆಗಳು ಸದಾ ಜೀವಂತವಿರುತ್ತವೆ. ಹೀಗೆ ನಡೆಯುವ ಅವಕಾಶಗಳ ಹಂಚಿಕೆಯ ಹಾಗೂ ಅದಕ್ಕೆ ಸಂಬಂಧಿಸಿದ ಸ್ಪರ್ಧೆಯ ಪ್ರಕ್ರಿಯೆಯನ್ನು ವಿಶಾಲವಾದ ಅರ್ಥದಲ್ಲಿ 'ರಾಜಕೀಯ'ವೆಂದು ಹೇಳಬಹುದು.

ರಾಜತಾಂತ್ರಿಕ ಸಂಸ್ಥೆಗಳು, ಅಧಿಕಾರದ ಹಂಚುವಿಕೆಯ ರೀತಿ-ನೀತಿಗಳು, ಹಾಗೂ ರಾಜನೀತಿಯ ನಡವಳಿಕೆಗಳು ಸಮಾಜದಿಂದ ಸಮಾಜಕ್ಕೆ ಭಿನ್ನವಾಗಿರುತ್ತವೆ; ಆದರೆ ರಾಜಕೀಯ ಪ್ರಕ್ರಿಯೆಯು ಮಾತ್ರ ವಿಶ್ವವ್ಯಾಪ್ತಿಯಾದುದು.

ಮಾನವನ ಚರಿತ್ರೆಯಲ್ಲಿ ಅಧಿಕಾರದ ಹಾಗೂ ಅವಕಾಶಗಳ ಹಂಚುವಿಕೆಯ ವಿವಿಧ ಬಗೆಗಳು ಕಂಡುಬರುವುದು ಸಹಜ. ವಿವಿಧ ಕಾಲಘಟ್ಟಗಳಲ್ಲಿ ಸಮಯ ಹಾಗೂ ಪರಿಸ್ಥಿತಿಗಳನ್ನು ಅನುಸರಿಸಿ ಅನೇಕ ಬಗೆಯ ಆಡಳಿತ ವ್ಯವಸ್ಥೆಗಳನ್ನು ಕಾಣಬಹುದು. ರಾಜ್ಯ, ರಾಷ್ಟ್ರ, ದೇಶ, ಸರಕಾರ, ಪಕ್ಷಗಳಂಥ ಅನೇಕ ಪರಿಕಲ್ಪನೆಗಳು ಹಾಗೂ ಆಡಳಿತದ ಮಾದರಿಗಳು ಸಮುದಾಯ ಇತಿಹಾಸದ ಪುಟಗಳನ್ನಲಂಕರಿಸಿವೆ. ರಾಜನೀತಿ ಶಾಸ್ತ್ರದ ಬಹುಮುಖ್ಯ ಅಂಗವಾಗಿ ಪ್ರಜೆಗಳನ್ನು ಆಡಳಿತದ ಬಂಧನಕ್ಕೊಳಪಡಿಸುವ ಸಂಸ್ಥೆಗಳು ಮತ್ತು ರಚನೆಗಳನ್ನು ಚರ್ಚಿಸಲಾಗುತ್ತಿದೆ. ಇಂಥ ಕೆಲವು ಪ್ರಮುಖ ಜನಾಡಳಿತದ ಮಾದರಿಗಳನ್ನು ಸ್ಥೂಲವಾಗಿ ಈ ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಬರಹವು ಇಂಥ ಮಾದರಿಗಳ ಸಾಮಾನ್ಯ ವಿವರಗಳನ್ನು ನೀಡುವುದೇ ವಿನಃ ಇವುಗಳ ಕುರಿತಾದ ವಿಮರ್ಶಾತ್ಮಕ ದೃಷ್ಟಿಕೋನವನ್ನು ಸಾದರಪಡಿಸುವ ಉದ್ದೇಶ ಹೊಂದಿಲ್ಲ.

ರಾಷ್ಟ್ರವೆಂಬ ಪರಿಕಲ್ಪನೆಯು ತೀರ ಇತ್ತೀಚಿನದಾಗಿದ್ದು ಇದಕ್ಕೆ ಕೆಲವೇ ಶತಮಾನಗಳ ಇತಿಹಾಸವಿದೆ. ಇದಕ್ಕಿಂತ ಮೊದಲು ಆಳುವವರು ಸಾಧ್ಯವಾದಷ್ಟು ಹೆಚ್ಚು ಭೂಭಾಗವನ್ನು ಆಕ್ರಮಿಸಿ ಆ ಪ್ರದೇಶದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಲು ಮುಂದುವರಿಸಲು ಸದಾ ಯತ್ನ ನಡೆಸುತ್ತಿದ್ದರು. ಒಳಜಗಳಗಳು ಹಾಗೂ ಹೊರಗಿನ ದಾಳಿಗಳಿಂದಾಗಿ ಇಂಥ ಆಡಳಿತವು ಹೆಚ್ಚು ಕಾಲ ಮುಂದುವರಿಯುತ್ತಿರಲಿಲ್ಲ. ರೋಮ್‌ನಂತಹ ಪ್ರಾಚೀನ ಸಾಮ್ರಾಜ್ಯಗಳೂ ಸಹ 'ನಗರ-ರಾಜ್ಯ' ಮತ್ತು ಮಾಂಡಲಿಕ ರಾಜ್ಯಗಳ ನಡುವಿನ ಒಪ್ಪಂದದ ಆಧಾರದ ಮೇಲೆಯೇ ಸ್ಥಾಪಿಸಲ್ಪಟ್ಟಿದ್ದವು. ಪ್ರಜಾಪ್ರಭುತ್ವ ಮಾದರಿಯ ಆಡಳಿತ ವ್ಯವಸ್ಥೆಯು ಬರುವ ಮೊದಲು ಎಂದರೆ, ಇತ್ತೀಚಿನವರೆಗೂ ರಾಜಸತ್ತೆಯು ವೈವಿಧ್ಯಮಯ ರೂಪಗಳಲ್ಲಿ ಅಭಿವ್ಯಕ್ತಿಗೊಂಡು ಇಂಥ ಎಲ್ಲ ಮಾದರಿಗಳೂ ತಮ್ಮ ಪ್ರದೇಶ, ಪರಿಸರ, ಸಂಸ್ಕೃತಿಗಳ ಚೌಕಟ್ಟಿನಲ್ಲಿ ವೈಶಿಷ್ಟ್ಯ ಪೂರ್ಣವಾಗಿ ಹಬ್ಬಿದ್ದವು. ರಾಜಸತ್ತೆಯ ಇಂಥ ಕೆಲವು ವ್ಯವಸ್ಥೆಗಳ ಸಾಮಾನ್ಯ ಚಾರಿತ್ರಿಕ ಅವಲೋಕನವು ಈ ಲೇಖನದ ಉದ್ದೇಶವಾಗಿದೆ.

ಪ್ರಸ್ತುತ ಪ್ರಬಂಧವು ಕೆಳಗಿನ ರಾಜಕೀಯ ಆಡಳಿತದ ಮಾದರಿಗಳ ಸ್ಥೂಲ ವಿವರಣೆ ನೀಡುತ್ತದೆ.

೧. ರಾಜತ್ವ
೨. ಅಲ್ಪಸಂಖ್ಯಾಧಿಪತ್ಯ
೩. ಕುಲೀನಸತ್ತೆ
೪. ಧರ್ಮಸತ್ತೆ
೫. ಪ್ರಾಚೀನ ಗಣರಾಜ್ಯ
೬. ಪ್ರಜಾಪ್ರಭುತ್ವ

**೧. ರಾಜತ್ವ**

'ರಾಜ' ಎಂಬ ಪದದ ಇಂಗ್ಲಿಷಿನ ಸಮಪದವು 'ಕಿಂಗ್' ಎಂಬುದಾಗಿದ್ದು ಈ ಶಬ್ದದ ಮೂಲ 'ಕಿನ್'(ಎಂದರೆ 'ವೈಭವೋಪೇತ' ಎಂಬ ಅರ್ಥದಲ್ಲಿ; 'ಬಂಧು' ಎಂಬ ಅರ್ಥದಲ್ಲಲ್ಲ) ಎನ್ನುವ ಪದದಲ್ಲಿ ಇದೆ. 'ರಾಜತ್ವ' ಅಥವಾ 'ರಾಜ' ಪದವಿಯನ್ನು ಹೊಂದಿದವನೇ ಅರಸನು. ಇಂಥ ವ್ಯಕ್ತಿಯು ಸಾಮ್ರಾಟ/ಚಕ್ರವರ್ತಿ ಪದವಿ ಯನ್ನು ಹೊರತುಪಡಿಸಿ ಉಳಿದೆಲ್ಲ ಅಧಿಕಾರ ವ್ಯವಸ್ಥೆಗಳಿಗಿಂತ ಹೆಚ್ಚಿನ ಶಕ್ತಿ ಹೊಂದಿರುತ್ತಾನೆ. ಭಾರತೀಯ ಆಡಳಿತ ಪರಂಪರೆಯಲ್ಲಿ ರಾಜನನ್ನು ಅತ್ಯುನ್ನತ ಹಾಗೂ ಅತಿ ಬಲಾಢ್ಯನೆಂದು ಗಣಿಸಲಾಗಿದೆ. ಅನೇಕ ಬಾರಿ ಇಂಥ ರಾಜರು ಸಾಮ್ರಾಟರ ಮಾಂಡಳಿಕ ರಾಜರಾಗಿದ್ದು ಸಾಮ್ರಾಜ್ಯದ ಒಳಗಿರುವ ತಮ್ಮ ಭೂಪ್ರದೇಶದಲ್ಲಿ ಪೂರ್ಣ ಅಧಿಕಾರ ಹೊಂದಿರುತ್ತಿದ್ದರು.

'ರಾಜತ್ವ'ವು ಜಗತ್ತಿನ ಬಹುತೇಕ ಎಲ್ಲ ಸಮಾಜಗಳ ಇತಿಹಾಸದಲ್ಲಿಯೂ ಕಾಣ ಸಿಗುವ ಆಡಳಿತ ಪದ್ಧತಿ. ಮಧ್ಯಯುಗದ ಜರ್ಮನಿಯಲ್ಲಿ ರಾಜತ್ವವು ಐಚ್ಛಿಕ ವಾಗಿದ್ದುದು ಇತರ ಐತಿಹಾಸಿಕ ಸತ್ಯವಾದರೂ, ಇದೊಂದು 'ಅಪವಾದ' ಅಥವಾ ಅಪರೂಪದ ಉದಾಹರಣೆ. ಸಾಮಾನ್ಯವಾಗಿ ರಾಜತ್ವವು ವಂಶಪಾರಂಪರ್ಯವಾದುದು. ಪ್ರಾಚೀನ ಭಾರತದಲ್ಲಿ ಪ್ರಚಲಿತವಿದ್ದ ಹಾಗೆ ರಾಜತ್ವಕ್ಕೆ ಧಾರ್ಮಿಕ ಶಕ್ತಿಯು ಅರೋಪಿಸಲ್ಪಡಬಹುದು. ಇಂಥ ವ್ಯವಸ್ಥೆಯು ಅಖಂಡ ಹಾಗೂ ಪ್ರಶ್ನಾತೀತ ಅಧಿಕಾರವನ್ನು ಹೊಂದಿರಬಹುದು ಇಲ್ಲವೆ ಸಂವಿಧಾನಾತ್ಮಕ ಅಧಿಕಾರ ಪಡೆದಿರಬಹುದು. ಪ್ರಾಚೀನ 'ಸ್ಪಾರ್ಟಾ'ದಲ್ಲಿ ಒಂದೇ ಭೂಪ್ರದೇಶವನ್ನು ಇಬ್ಬರು ರಾಜರು ಒಟ್ಟಾಗಿ ಆಳುತ್ತಿದ್ದ 'ದ್ವಿ-ರಾಜತ್ವ'ದ ಉದಾಹರಣೆ ಇದೆಯಾದರೂ ಸಾಮಾನ್ಯವಾಗಿ ಒಂದೇ ಪ್ರದೇಶಕ್ಕೆ ಒಬ್ಬನೇ ರಾಜನಿರುವುದು ವಾಡಿಕೆ. ಎಷ್ಟೋ ಸಲ ರಾಜನು ಪ್ರಜೆಗಳು ಹಾಗೂ ದೈವೀಶಕ್ತಿಗಳ ನಡುವಿನ ಕೊಂಡಿಯಾಗಿ ಅಥವಾ ಮಧ್ಯವರ್ತಿಯಾಗಿ ಕಾರ್ಯ ನಡೆಸುವನೆಂದು ನಿರೀಕ್ಷಿಸಲಾಗುತ್ತಿತ್ತು. ಪ್ರಾಚೀನ ಸುಮೇರ್ ಮತ್ತು ಭಾರತದಲ್ಲಿ ರಾಜತ್ವದ ಕುರಿತಾದ ದೈವೀ ನಂಬಿಕೆಗಳು ಪ್ರಚಾರದಲ್ಲಿದ್ದುದನ್ನು ಇಲ್ಲಿ ಉದಾಹರಿಸಬಹುದು.

ರಾಜನೇ ದೇವರ ರೂಪವೆಂದೋ, ಪ್ರತಿನಿಧಿಯೆಂದೋ ಪ್ರಜೆಗಳು ನಂಬಿದ್ದು ಇತಿಹಾಸದಲ್ಲಿ ಕ್ವಚಿತ್ತೇನಲ್ಲ. ಸಂತಾನಕ್ಕೆ ಸಂಬಂಧಿಸಿದ ಪ್ರಜೆಗಳ ಧಾರ್ಮಿಕ ವಿಧಿಗಳಲ್ಲಿ ಅನೇಕ ಬಾರಿ ರಾಜನು ಕೇಂದ್ರ ಬಿಂದುವಾಗಿ ಕಾಣಿಸಿರುವುದನ್ನು ಸಂಸ್ಕೃತಿಗಳ ಇತಿಹಾಸವು ತಿಳಿಸುತ್ತದೆ. ಪ್ರಜೆಗಳ ಕಲ್ಯಾಣಕ್ಕಾಗಿ ರಾಜನು (ಅಥವಾ ರಾಜನ ಪರ್ಯಾಯ ವ್ಯಕ್ತಿಯು) ಯಜ್ಞದ ಬಲಿಯಾಗಿ ಮರಣವನ್ನಪ್ಪುವ ಪದ್ಧತಿಯು ಕೂಡ ಪ್ರಚಲಿತದಲ್ಲಿತ್ತು. ಈಜಿಪ್ಟ್ ಮೂಲದಿಂದ ಬೆಳೆದ ರಾಜನ್ ದೈವೀಶಕ್ತಿಯ ಕಲ್ಪನೆಯು ಗ್ರೀಕ್ ಸಂಸ್ಕೃತಿಯ ಉದ್ದಕ್ಕೂ ಹರಡಿತ್ತು. ಇದೇ ಕಲ್ಪನೆಯು ನಂತರದ ರೋಮ್ ಚಕ್ರವರ್ತಿಗಳಿಂದಲೂ ಪ್ರಸಿದ್ಧಿಗೆ ಬಂತು. ರೋಮ್‌ದ ಕ್ರೈಸ್ತ ಚಕ್ರವರ್ತಿಗಳು ತಾವು ದೇವದೂತರೆಂದೂ, ದೈವೀಶಕ್ತಿಯ ಪ್ರತಿನಿಧಿಗಳೆಂದೂ ವಾದಿಸಿ ಅಧಿಕಾರವನ್ನು ವಶದಲ್ಲಿಟ್ಟುಕೊಂಡಿದ್ದರು. ಮಧ್ಯಯುಗದಲ್ಲಿ ಪ್ರಚಲಿತವಿದ್ದ ರಾಜನೀತಿ ಸಿದ್ಧಾಂತದಲ್ಲಿ ರಾಜತ್ವವು ಪುರೋಹಿತ ಶಕ್ತಿಗೆ ಸಮನಾಗಿ ಪರಿಗಣಿಸಲ್ಪಟ್ಟಿದ್ದಿತ್ತು. ರಾಜನ ಪಟ್ಟಾಭಿಷೇಕ ವಿಧಿ ಭಾರತದ ರಾಜಕೀಯ ಸಂದರ್ಭದಲ್ಲಿ ವಿಶೇಷವೆನಿಸಿದ್ದರೆ, ಕಿರೀಟಧಾರಣೆಯ ಸಮಯದಲ್ಲಿ 'ಎಣ್ಣೆ ಹನಿಸುವ ವಿಧಿ' ಮಧ್ಯಯುಗದ ಐರೋಪ್ಯ ಸಮಾಜಗಳಲ್ಲಿ ಮಹತ್ವದ್ದೆನಿಸಿತ್ತು. ಹದಿನಾರರಿಂದ ಹದಿನೆಂಟನೆಯ ಶತಮಾನದ ಪ್ರಾರಂಭದವರೆಗೆ ಸಾರ್ವಭೌಮತ್ವಗಳು ರಾಷ್ಟ್ರೀಯ ಚರ್ಚ್ ಮತ್ತು ಇನ್ನಿತರ ಧಾರ್ಮಿಕ ಸಂಸ್ಥೆಗಳಿಂದ ತಮ್ಮ ಬಲ ಪಡೆದಿದ್ದವು. ಆದರೆ ಹದಿನೇಳನೆಯ ಶತಮಾನದಲ್ಲಿ ಇಂಗ್ಲೆಂಡಿನ ರಾಜತ್ವವು ಸಂವಿಧಾನಾತ್ಮಕ ಆಡಳಿತ ಶಕ್ತಿಯಾಗಿ ಮಾರ್ಪಡಿ ಸಲ್ಪಟ್ಟ ನಂತರ ಉಳಿದ ದೇಶಗಳೂ ಇದೇ ಮಾದರಿಯನ್ನು ಅನುಸರಿಸಿ 'ರಾಜತ್ವದ ಶಕ್ತಿಯ ಮೂಲ ಸ್ತೋತ್ರವು ಪ್ರಜೆಗಳೇ ಹೊರತು ದೈವೀ ಶಕ್ತಿಯಲ್ಲ' ಎಂಬ ವಿಚಾರವನ್ನು ಪ್ರಚುರ ಪಡಿಸಿದುವು.

ರಾಜತ್ವ ಪರಿಕಲ್ಪನೆಯು ರಾಜಕೀಯ ಇತಿಹಾಸದಲ್ಲಿ ಅತಿ ಮಹತ್ವದ ವಿಚಾರಗಳಲ್ಲಿ ಒಂದೆನಿಸಿದೆ. ಯಾವುದೇ ಒಂದು ರಾಜಕೀಯ ಸಮುದಾಯವಿರಲಿ, ತನ್ನ ಒಳಗಿನ ದ್ವಂದ್ವಗಳನ್ನು, ವಿರೋಧಾಭಾಸಗಳನ್ನು ಮತ್ತು ಸಂಘರ್ಷಗಳನ್ನು ಬಗೆಹರಿಸಿಕೊಳ್ಳದೆ ಮುಂದುವರಿಯುವುದು ಅಸಾಧ್ಯ. ರಾಜನು ನ್ಯಾಯಾಧೀಶನಾಗಿ, ದುಷ್ಟ ಶಕ್ತಿಗಳನ್ನು ನಿಗ್ರಹಿಸುವವನಾಗಿ ಮಧ್ಯಯುಗದಲ್ಲಿ ಪ್ರಜೆಗಳ ಮೇಲೆ ಅಪಾರವಾದ ಪ್ರಭಾವ ಹೊಂದಿದ್ದನೆನ್ನುವುದು ನಿಸ್ಸಂದೇಹ. ಇವನಿಗೆ ಜನರ ಮೇಲೆ ಎಲ್ಲ ರೀತಿಯ ಒತ್ತಡ ಗಳನ್ನು ಹೇರುವ ಅಧಿಕಾರವಿತ್ತು. ರಾಜ್ಯವು ಯಾವ ಉದ್ದೇಶಕ್ಕಾಗಿ ದೇವರಿಂದ ಸೃಷ್ಟಿಸಲ್ಪಟ್ಟಿತ್ತೊ, ಆ ಮಹೋದ್ದೇಶದ ಸಾಧನೆಯ ಮಾರ್ಗದರ್ಶಿಯಾಗಿ ರಾಜನು ಪ್ರಜೆಗಳ ಮೇಲೆ ಪ್ರಭುತ್ವ ಪಡೆದಿರುತ್ತಿದ್ದನು. ಆಡಳಿತವನ್ನು ಒಂದು ಸತ್ಕಾರ್ಯವೆಂದು ಭಾವಿಸಲಾಗುತ್ತಿತ್ತು ಮತ್ತು ಈ ಸತ್ಕಾರ್ಯದಲ್ಲಿ ರಾಜನಿಗೆ ನೆರವಾಗುವ ಪ್ರಜೆಗಳನ್ನು ರಾಜದ್ರೋಹಿಗಳೆಂದು ಗಣಿಸಲಾಗುತ್ತಿತ್ತು. ರಾಜನು ಪ್ರಜೆಗಳ ಹಿತರಕ್ಷಕನು ಮತ್ತು ಉಳಿದವರಿಗಿಂತ ಶ್ರೇಷ್ಠನು ಎನ್ನುವುದನ್ನು ಎಲ್ಲರೂ ಒಪ್ಪಿಕೊಳ್ಳುತ್ತಿದ್ದುದರಿಂದ ಪ್ರಜಾ ಪರಿಪಾಲನೆಯು ರಾಜನ ಒಂದು ಧಾರ್ಮಿಕ ಕರ್ತವ್ಯವಾಗಿ ವ್ಯಾಖ್ಯಾನಿಸಲ್ಪಡುತ್ತಿತ್ತು.

ರಾಜನ ಕರ್ತವ್ಯಗಳ ನಿರ್ವಹಣೆಯಲ್ಲಿ ಪ್ರಜೆಗಳು ಶ್ರದ್ಧೆ ಮತ್ತು ಐಕ್ಯತೆಯನ್ನು ಕಾಪಾಡಿಕೊಳ್ಳುವುದು ಅತ್ಯಗತ್ಯವೆಂದು ರಾಜರು ನಂಬಿದ್ದರು. ಜನರಲ್ಲಿ ಒಗ್ಗಟ್ಟಿನ ಕೊರತೆಯಾದಾಗ ರಾಜ್ಯಭಾರವು ಅಸಾಧ್ಯವೆಂದು ತಿಳಿಯಲಾಗಿತ್ತು. ರಾಜನು ಸಂಪೂರ್ಣ ನ್ಯಾಯ ನಿಷ್ಠುರನೂ ಹಾಗೂ ಪ್ರಜಾಹಿತರಕ್ಷಕನೂ ಎಂದು ಪರಿಗಣಿಸಲ್ಪಟ್ಟಿದ್ದರಿಂದ ಜನರು ರಾಜರಿಗೆ ಅತಿ ಹೆಚ್ಚಿನ ಅಧಿಕಾರವನ್ನು ನೀಡಿದ್ದರು. ರಾಜ್ಯದಲ್ಲಿದ್ದ ಎಲ್ಲಾ ಗೌರವಗಳೂ ಪ್ರಶಸ್ತಿಗಳೂ ಪದವಿಗಳೂ ಮತ್ತು ಸೌಲಭ್ಯಗಳೂ ರಾಜನಿಂದ ಮಾತ್ರವೇ ನೀಡಲ್ಪಡುತ್ತಿದ್ದು

ಉಳಿದವರಿಗೆ ಅವನ್ನು ಕೊಡುವ ಅರ್ಹತೆ ಇರಲಿಲ್ಲ; ಸ್ವೀಕರಿಸುವ ಅರ್ಹತೆ ಮಾತ್ರವೇ ಇತ್ತು. ಮಂತ್ರಿಮಂಡಲದ ಆಯ್ಕೆ, ರಾಜ್ಯದ ಗಡಿಯ ರಕ್ಷಣೆ, ಆಂತರಿಕ ಶಾಂತಿ, ಶಿಕ್ಷಣ ಪ್ರಸಾರ, ಮಾಂಡಲಿಕರು/ಪಾಳೆಯಗಾರರು ಬಂಡೆದ್ದು ಜನಾಂದೋಲನವಾಗದಂತೆ ತಡೆಯುವದು, ಧಾರ್ಮಿಕ ಕರ್ತವ್ಯಗಳ ಪೂರ್ಣನಿರ್ವಹಣೆ ಮುಂತಾದವು ರಾಜನು ಮಾಡಲೇಬೇಕಾದ ಕಾರ್ಯಗಳೆಂದು ತಿಳಿಯಲ್ಪಟ್ಟಿದ್ದವು. ಒಂದೇ ವಾಕ್ಯದಲ್ಲಿ ಹೇಳುವುದಾದರೆ, ಅಧಿಕಾರ, ಗುಣ ಹಾಗೂ ಕರ್ತವ್ಯಗಳಲ್ಲಿ ರಾಜನು ಭೂಮಿಗೆ ಇಳಿದು ಬಂದ ಭಗವಂತನೆಂದು ತಿಳಿಯಲಾಗುತ್ತಿತ್ತು.

ತನಗೆ ಲಭ್ಯವಾಗಿದ್ದ ಅಪರಿಮಿತ ಅಧಿಕಾರದಿಂದಾಗಿ ರಾಜನು ಕೆಲವೊಮ್ಮೆ ಪ್ರಜಾ ಪೀಡಿತ ದೊರೆಯಾಗಿ, ಭಯೋತ್ಪಾದಕ ಶಕ್ತಿಯಾಗಿ ಬದಲಾದ ಉದಾಹರಣೆಗಳೂ ಇವೆ. ಇಂಥ ಸಂದರ್ಭದಲ್ಲಿ ಸಾಮಾಜಿಕ ಆಂದೋಲನಗಳು ಹುಟ್ಟಿಕೊಂಡು ಪ್ರಜೆಗಳು ಅಥವಾ ಮಾಂಡಲಿಕರು ರಾಜನನ್ನು ರಾಜಸತ್ತೆಯಿಂದ ಹೊರತಳ್ಳಿ ಹೊಸರಾಜನನ್ನು ಅಧಿಕಾರಕ್ಕೆ ತಂದ ಸಂದರ್ಭಗಳೂ ಅಪರೂಪವೇನಲ್ಲ.

ಇಂದು ರಾಜಸತ್ತೆಯನ್ನು ಅವಲಂಬಿಸಿದ ಆಡಳಿತವು ವಿರಳವಾಗಿದ್ದು ಅಳಿದುಳಿದ ರಾಜರು ಬಿರುದು ಮಾತ್ರವಾಗಿ ಅಥವಾ ಸಂವಿಧಾನಾತ್ಮಕ ಅಧಿಕಾರದ ಲಾಂಛನವಾಗಿ ಉಳಿದಿದ್ದಾರೆ. ರಾಜತ್ವವು ಮಾನವನ ಇತಿಹಾಸದ ರಂಜಕ ಭಾಗವಾಗಿ ಬಹುಕಾಲದವರೆಗೂ ದಾಖಲೆಗಳಲ್ಲಿ ಉಳಿಯುವುದರಲ್ಲಿ ಸಂದೇಹವಿಲ್ಲ. ಬ್ರಿಟನ್, ಜಪಾನ್, ಭಾರತ ಮುಂತಾದ ದೇಶಗಳಲ್ಲಿರುವ 'ರಾಜಸತ್ತೆ'ಯು ಇಂದು ಒಂದು ಪರ್ಯಾಯ ಆಡಳಿತ ವ್ಯವಸ್ಥೆಯನ್ನು ಪ್ರತಿನಿಧಿಸುವುದಕ್ಕಿಂತ ಹೆಚ್ಚಾಗಿ, ಈ ಸಮಾಜಗಳಲ್ಲಿರುವ ಸಾಂಸ್ಕೃತಿಕ ರಾಜನೀತಿ ಪರಂಪರೆಯ ಅಭಿವ್ಯಕ್ತ ರೂಪವಾಗಿದೆ ಎನ್ನುವುದೇ ಹೆಚ್ಚು ಸೂಕ್ತವಾದೀತು.

**೨. ಅಲ್ಪಸಂಖ್ಯಾಧಿಪತ್ಯ**

ಅಲ್ಪ ಸಂಖ್ಯಾಧಿಪತ್ಯ ಅಥವಾ ಅತಿಬಲಾಢ್ಯರ ಚಿಕ್ಕಗುಂಪು ಎನ್ನುವುದು ಪ್ರಜಾಪ್ರಭುತ್ವದ ಮೌಲ್ಯಗಳನ್ನು ಧಿಕ್ಕರಿಸುವ ಹಾಗೂ ರಾಜಕೀಯ ವೈವಿಧ್ಯತೆಯನ್ನು ತಿರಸ್ಕರಿಸುವ ರಾಜಕೀಯ ಆಡಳಿತಾತ್ಮಕ ವ್ಯವಸ್ಥೆಗೆ ಒಂದು ಉದಾಹರಣೆ. ಜರ್ಮನಿಯ ರಾಜನೀತಿಜ್ಞ-ಸಮಾಜವಿಜ್ಞಾನಿಯಾದ ರಾಬರ್ಟ್ ಮಿಶೆಲ್ಸ್ (೧೯೧೧)ನು ತನ್ನ ದೇಶದ ಪ್ರಮುಖ ರಾಜಕೀಯ ಪಕ್ಷವಾದ 'ಸೋಶಿಯಲ್ ಡೆಮಾಕ್ರೆಟ್ಸ್ ' (ಸಮಾಜವಾದಿ ಪ್ರಜಾಪ್ರಭುತ್ವ) ಪಕ್ಷದಲ್ಲಿ ಕ್ರಿಯಾತ್ಮಕವಾಗಿದ್ದ ಅವಧಿಯಲ್ಲಿ ಕಂಡ ಕೆಲವು ಅವಲೋಕನಗಳ ಆಧಾರದ ಮೇಲೆ ಅಲ್ಪಸಂಖ್ಯಾಧಿಪತ್ಯದ ಕುರಿತು ಒಂದು ಸಿದ್ಧಾಂತವನ್ನೇ ಮಂಡಿಸಿದ್ದಾನೆ. 'ಅಲ್ಪ ಸಂಖ್ಯಾಧಿಪತ್ಯವನ್ನು ಕಬ್ಬಿಣದ ಕಾನೂನು' ಎಂಬ ಇವನ ಸಿದ್ಧಾಂತವನ್ನು ಅಲ್ಪಸಂಖ್ಯಾಧಿ ಪತ್ಯದ ರಾಜಕೀಯ ವಿಶ್ಲೇಷಣೆಯಲ್ಲಿ ಇಂದಿಗೂ ಪರಿಣಾಮಕಾರಿಯಾಗಿ ಬಳಸಿಕೊಳ್ಳ ಲಾಗುತ್ತಿದೆ.

ಅತಿಬಲಾಢ್ಯರ ಚಿಕ್ಕ ಗುಂಪಿನ 'ಅಲ್ಪಸಂಖ್ಯಾಧಿಪತ್ಯ'ಕ್ಕೆ ದೀರ್ಘ ಇತಿಹಾಸವಿದೆ. ಗ್ರೀಕ್ ಮೂಲದ 'ಓಲಿಗಾರ್ಕಿ' ಎಂಬ ಪದದ ಶಾಬ್ದಿಕ ಅರ್ಥ 'ಕೆಲವರ ಆಡಳಿತ' ಎಂದು. ಕೃಷಿ ಸಮಾಜಗಳ ಪ್ರಾರಂಭಿಕ ಅವಸ್ಥೆಯಲ್ಲಿ 'ಸರ್ವಾಧಿಕಾರ' ಹಾಗೂ 'ಕೆಲವರ ಅಧಿಕಾರ'ಗಳೇ ಸರಕಾರಗಳಾಗಿ ಮಾರ್ಪಡುತ್ತಿದ್ದವು. ಉದಾಹರಣೆಗೆ, ಹಿಂದೆ ಚರ್ಚಿಸಿದಂತೆ ಯುರೋಪಿನಲ್ಲಿ ಹಾಗೂ ಭಾರತದೆಲ್ಲೆಡೆಯಲ್ಲಿ ರಾಜನು ಇಡೀ ರಾಜ್ಯದ ಪೂರ್ಣ ಆಡಳಿತವನ್ನು ತನ್ನ ನೇರ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಅನೇಕ ಬಾರಿ ಸಾಧ್ಯ ವಾಗುತ್ತಿರಲಿಲ್ಲ. ಆದ್ದರಿಂದ ದೂರ ಮತ್ತು ದುರ್ಗಮ ಕ್ಷೇತ್ರಗಳ ಆಡಳಿತವನ್ನು ಇಂತಹ ಅಲ್ಪಸಂಖ್ಯಾತ ಅತಿಬಲಾಢ್ಯರ ಕೈಗೆ ಒಪ್ಪಿಸಲಾಗುತ್ತಿತ್ತು. ಈ ಅತಿಬಲಾಢ್ಯ ವ್ಯಕ್ತಿಗಳು ಆಯಾ ಪ್ರಾಂತ್ಯಗಳಲ್ಲಿ ತಮ್ಮ ವಂಶ, ವರ್ಚಸ್ಸು ಮತ್ತು ಶಕ್ತಿಗೆ ಅನುಗುಣವಾಗಿ ಅಧಿಕಾರ ಹೊಂದಿದವರಾಗಿದ್ದು ಅನೇಕ ಬಾರಿ ಆ ಕ್ಷೇತ್ರಗಳ ಶ್ರೀಮಂತ ಭೂಮಾಲಿಕರೂ ಕೂಡ ಆಗಿರುತ್ತಿದ್ದರು. ಈ ಶ್ರೀಮಂತರ ನಡುವೆ ಆಡಳಿತಾತ್ಮಕ ಹೊಂದಾಣಿಕೆ ಇದ್ದು ಅವರು ಒಂದು ಚಿಕ್ಕ ಗುಂಪಾಗಿ ಜನರ ಮೇಲೆ ನಿಯಂತ್ರಣ ಪಡೆದಿರುತ್ತಿದ್ದರು.

ಹಳ್ಳಿಗಳು ನಗರ ಸಮಾಜಗಳಾಗಿ ಬೆಳೆದು, ರಾಜಮನೆತನಗಳ ಉದಯವಾಗಿ ಪ್ರಭುಗಳು ಪಟ್ಟಣ ಪ್ರದೇಶಗಳನ್ನು ನಿರ್ಮಿಸಿಕೊಂಡು ಕೋಟೆ-ಕೊತ್ತಲಗಳನ್ನು ರಚಿಸಿ ಕೊಂಡು, ಆಳುತ್ತಿರುವಾಗಲೂ ಬಲಾಢ್ಯರ ಚಿಕ್ಕ ಗುಂಪು ತನ್ನ ಅಧಿಪತ್ಯ ಶಕ್ತಿಯಿಂದ ಮಹತ್ವದ್ದೆನಿಸಿತ್ತು. ನಂತರದ ದಿನಗಳಲ್ಲಿ ರಾಜಕೀಯ ಪರಿವರ್ತನೆಗಳು ಉಂಟಾಗಿ ಪ್ರಜಾ ಪ್ರಭುತ್ವದಂತಹ ಕ್ರಾಂತಿಕಾರಿ ವ್ಯವಸ್ಥೆಗಳು ಹುಟ್ಟಿದವಾದರೂ ಆಡಳಿತದಲ್ಲಿ ನಿಜವಾದ ಜನತಾ ಪ್ರಾತಿನಿಧ್ಯಕ್ಕೆ ಅಲ್ಪಸಂಖ್ಯಾಧಿಪತ್ಯದ ಗುಂಪುಗಳೇ ಅಡ್ಡಿಯಾದವು. ರಾಜಕೀಯ ಪಕ್ಷಗಳ ನಿತ್ಯದ

ಚಟುವಟಿಕೆಗಳಲ್ಲಿ ಬಲಾಢ್ಯರ ಚಿಕ್ಕ ಗುಂಪೊಂದು ಕಾಣಿಸಿಕೊಂಡು ಜನ ಪ್ರತಿನಿಧಿಗಳು ಸುಗಮವಾಗಿ ಕೆಲಸ ನಿರ್ವಹಿಸುವಲ್ಲಿ ಆಡಚಣೆಗಳನ್ನು ಉಂಟುಮಾಡುವುದನ್ನೇ ಮಿಶಲ್ಸ್ 'ಅಲ್ಪಸಂಖ್ಯಾಧಿಪತ್ಯದ ಕಬ್ಬಿಣದ ಕಾನೂನು' ಎಂದು ಬಣ್ಣಿಸಿ ಅಂತಹ ಅಡಚಣೆಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಶ್ಲೇಷಿಸಿದ್ದಾನೆ. ಪಕ್ಷಗಳ ಪ್ರಮುಖರೇ ಸಭೆ ಕರೆಯುವ, ಸದಸ್ಯರನ್ನು ಕಲೆ ಹಾಕುವ, ಸಮೂಹ ಮಾಧ್ಯಮಗಳಿಗೆ ಸಂದರ್ಶನ ನೀಡುವ, ಹಾಗೂ ಜನರೆದುರು ಪಕ್ಷಗಳ ತತ್ವಾದರ್ಶಗಳನ್ನು ವಿವರಿಸುವ ಅಧಿಕಾರ ಪಡೆದಿರುವುದರಿಂದ ಇಂಥ ಪ್ರಮುಖರು ಪಕ್ಷದ ಕಾರ್ಯಕರ್ತರ ಮೇಲೆ ಮುಸುಕಿನ ತೆರೆ ಎಳೆಯುತ್ತಾರೆ. ಇವರು ತಮ್ಮ ಲಾಭಕ್ಕೆಂದು ತೆರೆಮರೆಯ ಚಟುವಟಿಕೆಗಳಲ್ಲಿ ತೊಡಗಿರುತ್ತಾರೆ. ಅಧಿಕಾರಕ್ಕೆ ಬಂದ ತಕ್ಷಣವೇ ಆ ಅಧಿಕಾರದ ಕ್ರೋಢೀಕರಣ ಹಾಗೂ ಮುಂದುವರಿಕೆಯನ್ನು ತಮ್ಮ ಪ್ರಮುಖ ಧ್ಯೇಯವಾಗಿಸಿಕೊಳ್ಳುತ್ತಾರೆ. ಆಡಳಿತಾರೂಢ ಗುಂಪಿನ ಉಳಿದ ಸದಸ್ಯರ ನಿರುತ್ಸಾಹವು ಇಂಥ ಅಲ್ಪಸಂಖ್ಯಾಧಿಪತ್ಯದ ಚಟುವಟಿಕೆಗಳಿಗೆ ಪರೋಕ್ಷ ಬೆಂಬಲ ನೀಡುತ್ತದೆ. ಇದು ಮಿಶಲ್ಸ್ ಮಂಡಿಸಿದ ಆಧುನಿಕ ಅಲ್ಪಸಂಖ್ಯಾಧಿಪತ್ಯದ ವಿವರಣೆ.

ಸುಮಾರು ೮೫ ವರ್ಷಗಳ ಹಿಂದೆ ಮಂಡಿಸಲ್ಪಟ್ಟ ಮಿಶಲ್ಸ್‌ನ ಅಲ್ಪಸಂಖ್ಯಾಧಿಪತ್ಯದ ಸೈದ್ಧಾಂತಿಕ ವಾದವನ್ನು ನಂತರದ ಸಮಾಜಶಾಸ್ತ್ರೀಯ ಸಂಶೋಧನೆಗಳು ದೃಢಪಡಿಸಿವೆ. ಉದಾಹರಣೆಗೆ, ೧೯೫೦ರ ದಶಕದಲ್ಲಿ 'ಲಿಪ್‌ಸೆಟ್' ಎಂಬ ಅಮೆರಿಕಾದ ಸಮಾಜಶಾಸ್ತ್ರಜ್ಞನು ಈ ವಿಷಯವನ್ನು ಚರ್ಚಿಸುತ್ತಾ 'ಸದಸ್ಯರು - ಕನಿಷ್ಠ ಬಹುಮಂದಿ ಸದಸ್ಯರು ಪಕ್ಷದ ಧ್ಯೇಯ ಧೋರಣೆಗಳನ್ನು ರೂಪಿಸುವಲ್ಲಿ ಸಕ್ರಿಯವಾಗಿ ಪಾಲ್ಗೊಂಡಾಗಲಷ್ಟೇ ಪ್ರಜಾಪ್ರಭುತ್ವ ಮಾದರಿಯ ಆಡಳಿತದ ಸಾಧ್ಯ; ಅದಿಲ್ಲವಾದಲ್ಲಿ ಆಡಳಿತವು ತನ್ನಿಂದ ತಾನೇ ಅಲ್ಪಸಂಖ್ಯಾಧಿಪತ್ಯವಾಗಿ ಬದಲಾಗುವುದು' ಎಂದು ಅಭಿಪ್ರಾಯಪಡುತ್ತಾನೆ.

ಮಾನವ ಸಂಸ್ಕೃತಿಯ ಇತಿಹಾಸವನ್ನು ಗಮನಿಸಿದಾಗ ಅಲ್ಪಸಂಖ್ಯಾಧಿಪತ್ಯ ಮಾದರಿಯ ಆಡಳಿತವು ಕೃಷ್ಯೇತರ ವ್ಯವಸಾಯ ಮತ್ತು ಕೃಷಿ ಸಮಾಜದ ಪ್ರಾರಂಭದ ದಿನಗಳಲ್ಲಿ ಪ್ರಬಲವಾಗಿತ್ತೆಂಬುದನ್ನು ಕಾಣಬಹುದು. ಆಧುನಿಕ ಸಮಾಜದಲ್ಲಿ ಈ ಪದ್ಧತಿಯು ಮೇಲೆ ಚರ್ಚಿಸಿದಂತೆ ರೂಪಾಂತರಗೊಂಡು ಕೆಲಸ ಮಾಡುತ್ತದೆ. ಸಂಕೀರ್ಣವಾದ, ಭೌಗೋಳಿಕವಾಗಿ ಹಾಗೂ ಜನಸಂಖ್ಯೆಯಿಂದ ದೊಡ್ಡದಾಗಿರುವ ರಾಷ್ಟ್ರದಲ್ಲಿ ಕೇಂದ್ರ ಸರ್ಕಾರಿ ಹಾಗೂ ರಾಜಕೀಯ ಪಕ್ಷಗಳು ದೇಶದ ಎಲ್ಲ ಭಾಗಗಳನ್ನೂ ಎಲ್ಲ ವ್ಯವಸ್ಥೆಗಳನ್ನೂ ಸ್ವತಃ ನಿಯಂತ್ರಿಸಲು ಸಾಧ್ಯವಾಗಲಾರದು. ಆಗ ಇಂಥ ಆಡಳಿತ ವ್ಯವಸ್ಥೆಗಳು ಸ್ಥಾನೀಯ ಮಟ್ಟದಲ್ಲಿ ಆಡಳಿತದ ಗುಂಪುಗಳನ್ನು ಮಾಡಿ ಪ್ರಾದೇಶಿಕ ವಿಷಯಗಳಲ್ಲಿ ಈ ಗುಂಪುಗಳಿಗೆ ಸ್ವಾಯತ್ತತೆ ನೀಡುತ್ತದೆ. ಇಂಥ ಸ್ಥಾನೀಯ ಗುಂಪುಗಳು ಕ್ರಮೇಣ ಅಲ್ಪಸಂಖ್ಯಾಧಿಪತ್ಯದ ರಚನೆ ಪಡೆದು ಆ ಪ್ರದೇಶಗಳನ್ನು ನೇರ ಹತೋಟಿಯಲ್ಲಿ ಇಟ್ಟುಕೊಳ್ಳುವುದೂ ಉಂಟು.

ಅಲ್ಪಸಂಖ್ಯಾಧಿಪತ್ಯ ಆಡಳಿತ ವ್ಯವಸ್ಥೆಯು ಬೇರೂರಬೇಕಾದರೆ ಕೆಲವು ಪೂರ್ವಭಾವೀ ಅಗತ್ಯತೆಗಳು ಪೂರೈಸಲ್ಪಡಬೇಕು. ಅಂಥ ಮಹತ್ವದ ಪೂರ್ವಭಾವೀ ಅವಶ್ಯಕತೆಗಳನ್ನು ಕೆಳಗಿನಂತೆ ಗುರುತಿಸಬಹುದು.

೧. ಪಕ್ಷದ-ಗುಂಪಿನ ಕೆಳಸ್ಥರದ ಸದಸ್ಯರಲ್ಲಿ ಗುಂಪಿನ ಕಾರ್ಯಗಳಲ್ಲಿ ನಿರಾಸಕ್ತಿ ಹಾಗೂ ನಿರುತ್ಸಾಹ.

೨. ಇಂಥ ಸದಸ್ಯರಲ್ಲಿ ತಮ್ಮ ಕೆಲಸಕ್ಕೆ, ತಮಗೆ ಸರಿಯಾದ ಪ್ರೋ ಮತ್ತು ಅಗತ್ಯವಾದ ಗುರುತಿಸುವಿಕೆ ಕೊಡಲ್ಪಡುತ್ತಿಲ್ಲವೆಂಬ ನಿರಾಶೆ.

೩. ಆಂತರಿಕ ಸಂಘರ್ಷಗಳು ವಿಚಾರಗಳಿಗೆ ಸಂಬಂಧಿಸದೆ ಗುಂಪಿನ ಸದಸ್ಯರ ನಡುವೆ ವೈಯಕ್ತಿಕ ಕಲಹಗಳಾಗಿ ಮಾರ್ಪಡುವುದು.

ಅಲ್ಪಸಂಖ್ಯಾಧಿಪತ್ಯದಲ್ಲಿ ಪ್ರಜಾಪ್ರಭುತ್ವದಲ್ಲಿರುವಂತೆ ಸರ್ಕಾರವು ಪ್ರಜೆಗಳಿಗೆ ಪೂರ್ಣ ಹೊಣೆಯಾಗಿರಬೇಕೆಂಬ ತಾತ್ವಿಕ ನಿರ್ಬಂಧವಿಲ್ಲ. ಪ್ರಾಚೀನ ಗ್ರೀಸಿನ ಥೀಬ್ಸ್, ಮೆಗಾರ್, ಕಾರಿಂತ್‌ಗಳಲ್ಲಿ ಇಂಥ ಸರ್ಕಾರಗಳಿದ್ದುದನ್ನು ನಾವು ಗಮನಿಸುತ್ತೇವೆ. ಕುಲೀನ ಸತ್ತೆಯೇ ಕ್ರಮೇಣ ಅಲ್ಪಸಂಖ್ಯಾಧಿಪತ್ಯವಾಗಿ ಮಾರ್ಪಡುವುದೆಂಬ ಅಭಿಪ್ರಾಯವಿದೆ ಯಾದರೂ ಅವೆರಡಕ್ಕೂ ಖಚಿತವಾದ ವ್ಯತ್ಯಾಸವಿದೆ. ಅಲ್ಪಸಂಖ್ಯಾಧಿಪತ್ಯ ವ್ಯವಸ್ಥೆಯು ಶ್ರೀಮಂತಾಧಿಪತ್ಯ; ಅಲ್ಲಿ ಆಡಳಿತ ವರ್ಗವು ತನ್ನ ಹಿತ, ಮೇಲ್ಮೆಗಳಿಗಾಗಿ ಅಧಿಕಾರದ ಭದ್ರತೆಗಾಗಿ

ಮಾತ್ರ ವ್ಯವಹರಿಸುತ್ತದೆ. ಕುಲೀನ ಸತ್ತೆಯಲ್ಲಿ ಆಡಳಿತವು 'ಉತ್ತಮ'ರ ಕೈಯಲ್ಲಿರುವುದರಿಂದ ಸಾರ್ವಜನಿಕರ ಹಿತಚಿಂತನೆಯೇ ಅದರ ಗುರಿಯಾಗಿರುತ್ತದೆ. ಇಂಥ ಕುಲೀನ ಸತ್ತೆಯ ವಿವರಗಳನ್ನು ಮುಂದಿನ ಪರಿಚ್ಛೇದದಲ್ಲಿ ವಿವರಿಸಲಾಗಿದೆ.

**೩. ಕುಲೀನಸತ್ತೆ**

'ಕುಲೀನಸತ್ತೆ' ಎಂಬ ಕನ್ನಡ ಪದದ ಮೂಲ ಇಂಗ್ಲೀಷ್ ಶಬ್ದವು 'ಅರಿಸ್ಟಾಕ್ರಸಿ'. ಈ ಶಬ್ದವು ಗ್ರೀಕ್ ಮೂಲದ 'ಅರಿಸ್ಟೋ' (ಎಂದರೆ, ಅತ್ಯುತ್ಕೃಷ್ಟ) ಎಂಬ ಪದದಿಂದ ಬಂದುದಾಗಿದೆ. ಪರ್ಯಾಯವಾಗಿ ಹೇಳಬೇಕೆಂದರೆ, ಕುಲೀನಸತ್ತೆಯನ್ನು 'ವಿಶೇಷವಾಗಿ ಆರಿಸಲ್ಪಟ್ಟ ಕೆಲವರ ಆಳ್ವಿಕೆ' ಎಂದು ಸುಲಭವಾಗಿ ವ್ಯಾಖ್ಯಾನಿಸಬಹುದು. ಇದನ್ನು ಸ್ಪಷ್ಟ ಶಬ್ದಗಳಲ್ಲಿ ವಿವರಿಸುವಾಗ ಹುಟ್ಟಿದ ಕುಟುಂಬ, ಸಂಪತ್ತು, ಅಂತಸ್ತು ಹಾಗೂ ಸಹಜ ಸಾಮರ್ಥ್ಯದಿಂದಾಗಿ ಜನರಿಂದ ಆಡಳಿತಕ್ಕೆಂದು ಒಪ್ಪಿಕೊಳ್ಳಲ್ಪಡುವ ಚಿಕ್ಕಗುಂಪನ್ನು ಕುಲೀನಸತ್ತೆ ಎನ್ನಬಹುದು. ಕುಲೀನಸತ್ತೆಯನ್ನು ಹೊಂದಿದ ಚಿಕ್ಕಗುಂಪು ತನ್ನನ್ನು ಉಳಿದ ಸಾಮಾನ್ಯ ಪ್ರಜೆಗಳಿಗಿಂತ ಮೇಲೆಂದು ಗುರುತಿಸಿಕೊಂಡು ತನ್ನ ಇಂಥ ವರ್ಚಸ್ಸನ್ನು ಕಾಯ್ದುಕೊಳ್ಳಲು ಸದಾ ಹೋರಾಟ ನಡೆಸುತ್ತಲೇ ಇರುತ್ತದೆ. ಕುಲೀನಸತ್ತೆಯನ್ನು ಸರಕಾರದ ಉಳಿದ ಮಾದರಿಗಳಿಗೆ ಹೋಲಿಸಿದಾಗ ಈ ವರ್ಗವು ಹೇಗೆ ಸಾಮಾನ್ಯ ಪ್ರಜಾವರ್ಗವನ್ನು ತನ್ನ ನಿರಂಕುಶ ಆಡಳಿತದ ಒಳಸುಳಿಗೆ ಸೆಳೆಯುತ್ತದೆ ಎಂಬುದು ಮನದಟ್ಟಾಗುತ್ತದೆ. ಸಾಮುದಾಯಿಕ ಆಡಳಿತದ ಧೋರಣೆ ಮತ್ತು ಕಾರ್ಯ ನೀತಿಯ ದೃಷ್ಟಿಯಿಂದ ವಿಶೇಷ ಗುಣಗಳನ್ನು ಹೊಂದಿರುವರೆಂದು ಹೇಳಲಾಗುವ ಕೆಲವೇ ವ್ಯಕ್ತಿಗಳು ಆಡಳಿತ ರಚಿಸುವುದನ್ನು ಕುಲೀನಸತ್ತೆ ಎಂಬುದಾಗಿ ಕರೆಯಬಹುದು.

ರಾಜಸತ್ತೆ ಹಾಗೂ ಅಲ್ಪಸಂಖ್ಯಾಧಿಪತ್ಯದ ಹಾಗೆಯೇ ಕುಲೀನಸತ್ತೆಯೂ ಕೂಡ ವರ್ಣರಂಜಿತ ಇತಿಹಾಸ ಹೊಂದಿದೆ. ಇಂತಹ ಅಧಿಕಾರ ವ್ಯವಸ್ಥೆಯಲ್ಲಿ ಶಕ್ತಿಹೊಂದಿರುವ ಈ ಚಿಕ್ಕಗುಂಪು ರಕ್ತ ಸಂಬಂಧ, ಕುಟುಂಬ, ಸಂಪತ್ತು, ಶಿಕ್ಷಣ, ಜನಾಕರ್ಷಕ ವ್ಯಕ್ತಿತ್ವ, ದೈಹಿಕ ಶಕ್ತಿ ಮುಂತಾದ ಮಹತ್ವದ ಅಂಶಗಳನ್ನು ಜನರ ಮುಂದಿಟ್ಟು ರಾಜಕೀಯ ಅಧಿಕಾರದ ಕಡಿವಾಣವನ್ನು ಕೈಗೆತ್ತಿಕೊಳ್ಳುತ್ತದೆ. ಅನೇಕ ಬಾರಿ ಕುಲೀನಸತ್ತೆಯನ್ನು ಹೊಂದಿರುವ ಗುಂಪು ತನ್ನಲ್ಲಿರುವುದೆಂದು ಹೇಳಲಾದ ಪ್ರತಿಭೆ, ಬುದ್ದಿಮತ್ತೆ, ನಿಷ್ಣಾತತೆ ಗಳನ್ನು ಬದಿಗೊತ್ತಿ ಶ್ರೀಮಂತಿಕೆ, ದರ್ಪ, ಕುಟುಂಬದ ಘನತೆಗಳನ್ನೇ ಎತ್ತಿಹಿಡಿದು ಅಲ್ಪಸಂಖ್ಯಾಧಿಪತ್ಯವಾಗಿ ಪರ್ಯವಸಾನಗೊಂಡಿರುವ ಮಾದರಿಗಳೂ ಇವೆ. ಇನ್ನೂ ಕೆಲವೊಮ್ಮೆ ಇಂತಹ ಕುಲೀನ ಸತ್ತೆಯು ತನ್ನ 'ಕುಲೀನತೆ'ಯನ್ನು ಕಳೆದುಕೊಂಡು ರೋಗಗ್ರಸ್ಥವೂ ದುರ್ಬಲವೂ ಆದ ಆಡಳಿತ ವ್ಯವಸ್ಥೆಯಾಗಿ ಮಾರ್ಪಟ್ಟು ಜನಸಮೂಹದ ಶೋಷಣೆಯ ಕೆಲಸದಲ್ಲಿಯೋ ಅಥವಾ ಅರಾಜಕತೆಯ ಗೊಂದಲದಲ್ಲಿಯೋ ಕೊನೆಗೊಂಡಿದ್ದನ್ನು ನಾವು ಕಾಣಬಹುದು. ಹಾಗೆ ನೋಡಿದರೆ. ಆಧುನಿಕ ರಾಜಕೀಯದಲ್ಲಿ ಸೈದ್ಧಾಂತಿಕ-ವೈಚಾರಿಕ ಸ್ಥರದಲ್ಲಿ ಕುಲೀನಸತ್ತೆ ಮತ್ತು ಅಲ್ಪಸಂಖ್ಯಾಧಿಪತ್ಯಗಳಲ್ಲಿ ಸ್ಪಷ್ಟವಾಗಿ ಜಾರಿಗೆ ಬರುತ್ತಿದ್ದಂತೆಯೇ 'ಅತಿ ಬುದ್ದಿವಂತ ಹಾಗೂ ಅತ್ಯುತ್ತಮ ವ್ಯಕ್ತಿಗಳ ಸರಕಾರವು' ರೂಪಾಂತರಗೊಂಡು 'ಅತ್ಯಂತ ಶ್ರೀಮಂತ, ಅಲ್ಪಸಂಖ್ಯಾತರ ಸರ್ಕಾರ'ವಾಗಿ ಬದಲಾಗುವುದನ್ನು ನೋಡಬಹುದು.

ಇಂಥ ರೂಪಾಂತರಕ್ಕೆ ಕಾರಣವಿಲ್ಲದಿಲ್ಲ. ರಾಜತ್ವ, ಪ್ರಜಾಪ್ರಭುತ್ವ, ಸರ್ವಾಧಿಕಾರಗಳಂತೆ ಕುಲೀನಸತ್ತೆಯೂ ತನ್ನದೇ ಆದ ಸ್ವತಂತ್ರ ರೂಪದಲ್ಲಿ ಜಾರಿಯಲ್ಲಿ ಇದ್ದ ದಾಖಲೆಗಳು ಇಲ್ಲ. ಬದಲಾಗಿ ಈ ಪದ್ಧತಿಯು ಏಕಚಕ್ರಾಧಿಪತ್ಯದ ನೆರಳಿನಲ್ಲಿಯೇ ಬೆಳೆಯಿತಲ್ಲದೇ ಅನುವಂಶೀಯತೆ ಮತ್ತು ಸಂಪತ್ತುಗಳ ಜೊತೆಗೆ ರಾಜಾಶ್ರಯವನ್ನು ಒಂದು ಪ್ರಮುಖ ಗುಣಲಕ್ಷಣವಾಗಿ ಹೊಂದಿತ್ತು. ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಆಸ್ಟ್ರೀಯಾ-ಹಂಗೇರಿ, ಸ್ಪೈಯಿನ್ ಮತ್ತು ರಷ್ಯಾಯಾ ದೇಶಗಳನ್ನು ಇಲ್ಲಿ ಉದಾಹರಿಸಬಹುದು. ಬಂಡವಾಳ ಹಾಗು ಕುಲೀನತೆಯೇ ಪ್ರಧಾನವೆಂದು ಗಣಿಸಿದ ಈ ಎಲ್ಲ ರಾಜಕೀಯ ವ್ಯವಸ್ಥೆಗಳೂ ಜನಾಂದೋಲನದಿಂದಾಗಿ ಹೊರಗೆಸೆಯಲ್ಪಟ್ಟಂತವು. ಪ್ರಜಾಪ್ರಾತಿನಿಧ್ಯದ ಮೌಲ್ಯಗಳಿಗೆ ತಾತ್ವಿಕವಾಗಿ ವಿರೋಧಿಯಾಗಿದ್ದ ಕುಲೀನಸತ್ತೆಯು ವಂಶಪಾರಂಪ್ಯರವಾಗಿ ಬಂದ ಶ್ರೀಮಂತಿಕೆ ಹಾಗೂ ಅಂತಸ್ತುಗಳ ವರ್ಚಸ್ಸು ಆಡಳಿತದಲ್ಲಿ ಕಡಿಮೆಯಾಗಿ ಜನಪ್ರಿಯ ಸರಕಾರಗಳು ಸ್ಥಾಪಿತವಾಗುತ್ತಿರುವಂತೆ ಸಮಸ್ಯೆಗಳನ್ನು ಎದುರಿಸಿತು. ತನ್ನ ಆಡಳಿತಾತ್ಮಕ ಸಾಂಸ್ಥಿಕ ರೂಪವನ್ನು ಕಳೆದುಕೊಂಡು ರಾಜಕೀಯ ಚಿಂತನೆಯಲ್ಲಿ ಒಂದು ಅನುಪಯುಕ್ತ ಮತ್ತು ಪೂರ್ವಾಗ್ರಹ ಪೀಡಿತ ಆಡಳಿತ ವ್ಯವಸ್ಥೆಯೆಂದು ಪರಿಗಣಿಸಲ್ಪಟ್ಟಿತು. ಆದ್ದರಿಂದಲೇ ಇಂದಿನ ರಾಜಕೀಯ ಮೌಲ್ಯಗಳು ಮತ್ತು ತತ್ವಾದರ್ಶಗಳು ಕುಲೀನಸತ್ತೆಯಂತಹ ಸರ್ಕಾರದ ವ್ಯವಸ್ಥೆಯನ್ನು ಮಾನ್ಯ ಮಾಡುವುದಿಲ್ಲ.

ಕುಲೀನಸತ್ತೆಯು ಈ ಕೆಳಗಿನ ವಿಶೇಷ ಗುಣಲಕ್ಷಣಗಳನ್ನು ಹೊಂದಿರುತ್ತದೆ.

೧. ಕುಲೀನಸತ್ತೆಯು ಒಂದು ಸಾಮಾನ್ಯವಾದ ಹಾಗೂ ನೈಸರ್ಗಿಕ ಆಡಳಿತ ಪದ್ಧತಿಯೆಂದು ಪರಿಗಣಿಸಲ್ಪಟ್ಟಿದೆ. ಇದಕ್ಕೆ ಕಾರಣಗಳನ್ನು ಹೊಸದಾಗಿ ಹುಡುಕಬೇಕಿಲ್ಲ. ಸಮಾಜದ ಸದಸ್ಯರಲ್ಲಿ ಶ್ರೇಷ್ಠ, ಸಾಮಾನ್ಯ ಮತ್ತು ಕನಿಷ್ಠರೆಂಬ ಗುಂಪುಗಳನ್ನು ನಿಸರ್ಗವೇ ಮಾಡಿದ್ದೆಂದೂ, ತಮ್ಮ ಬುದ್ಧಿವಂತಿಕೆ ಹಾಗೂ ಮೇಲ್ಮೆಯಿಂದ ಶ್ರೇಷ್ಠರು ಉಳಿದೆರಡು ಗುಂಪುಗಳನ್ನು ತಮ್ಮ ಅಧೀನದಲ್ಲಿ ಇಟ್ಟುಕೊಳ್ಳುವುದು ಸಹಜವೆಂದು ಜಗತ್ತಿನೆಲ್ಲೆಡೆ ನಂಬಲಾಗುತ್ತಿದೆ. ಇಂಥ ಶ್ರೇಷ್ಠರು ಉಳಿದವರಿಗಿಂತ ಕಡಿಮೆ ಸಂಖ್ಯೆಯಲ್ಲಿರುವುದರಿಂದ ಈ ಅಲ್ಪಸಂಖ್ಯಾತ ಗುಂಪುಗಳು ಬಹುಸಂಖ್ಯಾತ ಸಾಮಾನ್ಯರನ್ನು ಆಳುವುದು ನಿಸರ್ಗದ ನಿಯಮವೆನ್ನುವುದು ಈ ವಾದದ ತಿರುಳು.

೨. ಕುಲೀನಸತ್ತೆ ಆಡಳಿತವು ಕ್ಷಿಪ್ರ ಮತ್ತು ಕ್ರಾಂತಿಕಾರಿ ಬದಲಾವಣೆಗಳನ್ನು ಪ್ರೋ ವುದಿಲ್ಲ. ಇಂಥ ಆಡಳಿತದಲ್ಲಿ ಬದಲಾವಣೆಗಳು ಅತ್ಯಂತ ನಿಧಾನ ಗತಿಯಲ್ಲಿದ್ದು, ಮೂಲಭೂತ ಪರಿವರ್ತನೆಗಳು ಸಾಮಾಜಿಕ ರಚನೆಗೆ ಅಪಾಯಕಾರಿ ಯೆಂದೂ ಗ್ರಹಿಸಲಾಗುತ್ತದೆ. ಆದ್ದರಿಂದ ಸಾಮಾಜಿಕ ಸಾಂಸ್ಕೃತಿಕ-ಆರ್ಥಿಕ ಸಂಪ್ರದಾಯ ಗಳನ್ನು ಯಥಾಸ್ಥಿತಿಯಲ್ಲಿ ಮುಂದುವರಿಸಿಕೊಂಡು ಹೋಗುವಲ್ಲಿ ಕುಲೀನಸತ್ತೆಯು ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದಲೇ ಈ ಆಳ್ವಿಕೆಯಲ್ಲಿ ಸಂಶೋಧನೆ, ಅನ್ವೇಷಣೆ ಮತ್ತು ಹೊಸಪ್ರಯೋಗಗಳಿಗೆ ಅಷ್ಟಾಗಿ ಪ್ರೋ ಸಿಗದಿರುವುದನ್ನು ಗಮನಿಸಬಹುದು.

೩. ಕುಲೀನಸತ್ತೆಯಲ್ಲಿ ಗುಂಪುಗಾರಿಕೆ ಮತ್ತು ಗುಂಪು ಕಲಹಗಳಿಗೆ ಅವಕಾಶವಿಲ್ಲದ ಪ್ರಯುಕ್ತ ಆಡಳಿತದಲ್ಲಿ ಹೆಚ್ಚಿನ ಸ್ಥಿರತೆ ಇರುತ್ತದೆ. ಎಂದರೆ ಕುಲೀನಸತ್ತೆಯ ಸರಕಾರವು ತೌಲನಿಕವಾಗಿ ಸ್ಥಿರವಾದ ಸರ್ಕಾರವಾಗಿರುತ್ತದೆ.

೪. ಕುಲೀನಸತ್ತೆಯಲ್ಲಿ ವ್ಯಕ್ತಿಗಳ 'ಗುಣಾತ್ಮಕ' ಅಂಶಗಳಿಗೆ ಮಹತ್ವ ನೀಡಲಾಗುವುದು. ಉದಾಹರಣೆಗೆ ಜವಾಬ್ದಾರಿಯ ಕೆಲಸಗಳಿಗೆ ಜನರನ್ನು ನೇಮಿಸುವಾಗ ಬಹುಮತದಂತಹ ನೀತಿ ಅನ್ವಯವಾಗುವುದಿಲ್ಲ. ಬದಲಾಗಿ ವ್ಯಕ್ತಿಗಳಲ್ಲಿರುವ ವಿಶೇಷ ಗುಣ ಹಾಗೂ ಅರ್ಹತೆಗಳು ಪರಿಗಣಿಸಲ್ಪಡುತ್ತವೆ.

೫. ಕುಲೀನಸತ್ತೆಯು ರಾಜಕೀಯ ಸ್ಥಿರತೆಗೆ ಹೆಚ್ಚಿನ ಲಕ್ಷ್ಯ ನೀಡುವುದರಿಂದಾಗಿ ಸರ್ಕಾರದ ಧೋರಣೆಗಳಲ್ಲಿ, ಗುರಿ ನೀತಿಗಳಲ್ಲಿ ನಿರಂತರತೆ ಇದ್ದು ಆಡಳಿತಾತ್ಮಕವಾಗಿ ಹೆಚ್ಚು ಪರಿಣಾಮಕಾರಿಯಾಗಲು ಸಾಧ್ಯ. ಎಂದರೆ ಕುಲೀನಸತ್ತೆಯಲ್ಲಿ ಹಿಂದಿಗಿಂತ ಅತಿ ಭಿನ್ನ ವಾದ ಧ್ಯೇಯ ಧೋರಣೆಗಳ ಅನುಸರಣೆಯನ್ನು ನಿರೀಕ್ಷಿಸಲಾಗದು.

ಕುಲೀನಸತ್ತೆಯು ಆಡಳಿತದ ಒಂದು ಮಾದರಿಯಾಗಿ ಕೆಲವು ಮಿತಿ ಮತ್ತು ದೌರ್ಬಲ್ಯಗಳನ್ನು ಹೊಂದಿದೆ. ಮೊದಲನೆಯದಾಗಿ, ಈ ವಿಧಾನದಲ್ಲಿ ಸ್ಫುಟವಾಗಿ ಎದ್ದು ಕಾಣುವ ಒಂದು ದೊಡ್ಡ ಕೊರತೆಯೆಂದರೆ ಸಂಕುಚಿತ ಹಾಗೂ ಸಾಂಪ್ರದಾಯಿಕ ಆಡಳಿತ ವ್ಯವಸ್ಥೆ. ಈ ಕೊರತೆಯಿಂದಾಗಿ ಕುಲೀನಸತ್ತೆಯು ಸಾಮಾನ್ಯ ಜನರಿಂದ ದೂರವಿರುವ ಪ್ರತ್ಯೇಕತಾ ವಾದವನ್ನು ಆಡಳಿತದಲ್ಲಿ ರೂಢಿಗೆ ತಂದಿದೆ.

ಎರಡನೆಯ ಸಮಸ್ಯೆಯೆಂದರೆ ಈ ಆಳ್ವಿಕೆಯಲ್ಲಿ ಶ್ರೀಸಾಮಾನ್ಯನ ಬುದ್ಧಿವಂತಿಕೆ, ಪರಿಣತಿ ಮತ್ತು ಕ್ರಿಯಾಶಕ್ತಿಗಳಿಗೆ ಸಾಕಷ್ಟು ಪ್ರೋ ಅವಕಾಶಗಳು, ದೊರೆಯದ ಕಾರಣ ಪ್ರಜೆಗಳು ಹತಾಶರಾಗುವ ಸಂಭವವಿರುತ್ತದೆ. ಮೂರನೆಯ ಹಾಗೂ ಅತೀ ಮಹತ್ವದ ದೋಷವು ಈ ಮಾದರಿಯ ಸತ್ತೆಯ 'ಆನುವಂಶೀಯತೆ' ತತ್ವದಲ್ಲಿದೆ. 'ಶ್ರೇಷ್ಟತೆಯು ಅನುವಂಶೀಯವಲ್ಲ ಹಾಗೂ ಬುದ್ಧಿವಂತಿಕೆಯು ಸಮಾಜದ ವಿವಿಧ ಸ್ಥರಗಳಲ್ಲಿ ಹಂಚಲ್ಪಟ್ಟಿರುತ್ತದೆ' ಎಂಬ ಸೈದ್ಧಾಂತಿಕ ವಾದಕ್ಕೆ ಮನ್ನಣೆ ದೊರೆಯದೆ ಇರುವುದು ಈ ಆಡಳಿತ ನಮೂನೆಯ ದೊಡ್ಡ ದೌರ್ಬಲ್ಯವೆನಿಸಿದೆ. ನಾಲ್ಕನೆಯದಾಗಿ, ಕುಲೀನಸತ್ತೆಯು ಸ್ವಪ್ರತಿಷ್ಠೆಯ ಆಡಂಬರ ಮತ್ತು ಪ್ರದರ್ಶನಗಳಲ್ಲಿ ನಂಬಿಕೆ ಇಡುವುದ ರಿಂದಾಗಿ ಸಾರ್ವಜನಿಕ ಸಂಪನ್ಮೂಲಗಳ ಅನಗತ್ಯ ಹಾಗೂ ದುಂದು ವೆಚ್ಚವಾಗಿ ಪ್ರಜೆಗಳು ಹಾನಿಯನ್ನು ಎದುರಿಸಬೇಕಾಗುತ್ತದೆ. ಕೊನೆಯದಾಗಿ, ನೈಸರ್ಗಿಕ ಅಸಮಾನತೆ ತತ್ವವನ್ನು ಆಧಾರವಾಗಿ ಇಟ್ಟುಕೊಂಡ ಇಂಥ ಸರ್ಕಾರವು ಆ ತತ್ವವನ್ನು ಸೈದ್ಧಾಂತಿಕವಾಗಿ ಪ್ರಶ್ನಿಸಿದ ಕೂಡಲೇ ಕುಸಿದು ಬೀಳುವ ಸಂಭವವಿರುತ್ತದೆ.

ಇಷ್ಟೆಲ್ಲ ಮಿತಿಗಳನ್ನು ಹೊಂದಿದ್ದರೂ ಕುಲೀನಸತ್ತೆಯು ಆಳ್ವಿಕೆಯ ಒಂದು ಮಾದರಿ ಯಾಗಿ ಸಾಕಷ್ಟು ಪ್ರಸಿದ್ಧಿ ಪಡೆದಿದೆ. ಆಧುನಿಕ ಪ್ರಜಾಪ್ರಭುತ್ವದಂತಹ ಆಳ್ವಿಕೆಯ ನಮೂನೆಯಲ್ಲಿಯೂ 'ಕುಲೀನಸತ್ತೆಯ' ತತ್ವಗಳೂ, ಅಲ್ಪಸಂಖ್ಯಾಧಿಪತ್ಯದ ನಿಯಮಗಳೂ ಎಡೆಬಿಡದೆ ಅನ್ವಯಿಸಲ್ಪಡುತ್ತವೆ. ಎಂದರೆ ಆಳ್ವಿಕೆಯ ಈ ಮಾದರಿಗಳು ಇಂದಿಗೂ ಜನರ ಆಡಳಿತದಲ್ಲಿ ತಮ್ಮ ವರ್ಚಸ್ಸನ್ನು ಹೊಂದಿವೆ ಎಂಬುದರಲ್ಲಿ ಸಂದೇಹವಿಲ್ಲ.

**೪. ಧರ್ಮಸತ್ತೆ**

ಎರಡು ಮಹತ್ವದ ಸಾಮಾಜಿಕ ಸಂಸ್ಥೆಗಳಾಗಿ 'ಧರ್ಮ' ಹಾಗೂ 'ರಾಜಕೀಯ'ಗಳ ನಡುವಿನ ಸಂಬಂಧಗಳು ಸಾವಿರಾರು ವರ್ಷಗಳಿಂದಲೂ ಚಿಂತಕರ ಗಮನ ಸೆಳೆದಿದೆ. 'ಧರ್ಮಸತ್ತೆ' ಆಳ್ವಿಕೆಯ ಮಾದರಿಯು ಈ ಎರಡೂ ಸಂಸ್ಥೆಗಳು ಒಗ್ಗೂಡಿದ ಆಡಳಿತ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ.

'ಧರ್ಮಸತ್ತೆ'ಯು ರಾಜಕೀಯ ಹಾಗೂ ಧಾರ್ಮಿಕ ಅಭಿರುಚಿ-ಅಭಿವ್ಯಕ್ತಿಗಳ ಮಾದರಿ. ಇಲ್ಲಿ ರಾಜಕೀಯ, ಧಾರ್ಮಿಕ ಹಾಗೂ ಸೈನಿಕ ಕ್ರಿಯೆಗಳ ನಡುವಿನ ಅಂತರವು ಆಡಳಿತಾತ್ಮಕವಾಗಿ ಮಾಯವಾಗುತ್ತದೆ. ರಾಜನೀತಿಯ ದೈವೀಶಕ್ತಿಯ ಒಂದು ಅಭಿವ್ಯಕ್ತಿ ಮತ್ತು ಯುದ್ಧವು ಧಾರ್ಮಿಕ ಯುದ್ಧ ಎನ್ನುವ ವಿಚಾರಗಳು ಒಪ್ಪಿಕೊಳ್ಳಲ್ಪಡುತ್ತವೆ. ಧರ್ಮ ಮತ್ತು ರಾಜಕೀಯ ಶಕ್ತಿಗಳೆರಡೂ ಒಟ್ಟಾಗಿ ಒಬ್ಬ ಧಾರ್ಮಿಕ ಮುಖಂಡನಲ್ಲಿ ಅಥವಾ ಒಂದು ಧಾರ್ಮಿಕ ಗುಂಪಿನಲ್ಲಿ ಮೈಗೂಡಿ, ಈ ವ್ಯಕ್ತಿ ಅಥವಾ ಗುಂಪು ಆಡಳಿತದ ಚುಕ್ಕಾಣಿ ಹಿಡಿಯುವುದನ್ನು 'ಧರ್ಮಸತ್ತೆ' ಎಂದು ಕರೆಯಲಾಗುತ್ತದೆ. 'ರಾಜತ್ವ'ದಲ್ಲಿ ರಾಜನಾದ ಒಬ್ಬ ವ್ಯಕ್ತಿಗೆ ಧಾರ್ಮಿಕ ಶಕ್ತಿಯು ಆರೋಪಿಸಲ್ಪಟ್ಟರೆ, ಧರ್ಮಸತ್ತೆಯಲ್ಲಿ ಒಬ್ಬ ಧಾರ್ಮಿಕ ಮುಂದಾಳು ರಾಜನಾಗಿ ಮಾರ್ಪಡುತ್ತಾನೆ. ಐತಿಹಾಸಿಕವಾಗಿ ಆಡಳಿತಗಾರನು 'ಧರ್ಮರಾಜ' ('ಸೀಜರ್')ನಾಗುವ ಉದಾಹರಣೆಗಳು ಜಗತ್ತಿನೆಲ್ಲೆಡೆ ದೊರೆಯುತ್ತವೆ. ಭಾರತದ ಚರಿತ್ರೆಯಲ್ಲಿ ಕೌಟಿಲ್ಯನಂತಹ ಬ್ರಾಹ್ಮಣನು ಆಡಳಿತದ ಮುಂದಾಳತ್ವ ವಹಿಸಿ 'ನಂದ'ರ ವಿರುದ್ಧ ಧರ್ಮಯುದ್ಧ ಸಾರಿದರೆ, ಮಯೂರ ಶರ್ಮನು 'ಮಯೂರವರ್ಮ'ನಾದ ಕಥೆ ಎಲ್ಲರೂ ತಿಳಿದದ್ದೇ ಆಗಿದೆ. ಇರಾನ್ ದೇಶದ 'ಮೌಲ್ವಿ' ಆಡಳಿತದ ಹಿನ್ನೆಲೆ ಯಾರಿಗೆ ಗೊತ್ತಿಲ್ಲ? ಯುರೋಪಿನ ಚರಿತ್ರೆಯಲ್ಲೂ ಇಂಥ ಸಾಕಷ್ಟು ಉದಾಹರಣೆಗಳನ್ನು ಕಾಣಬಹುದು. ರೋಮ್ ಸಾಮ್ರಾಜ್ಯದ ಅವಧಿಯಲ್ಲಿ (೩೧೩ ರಿಂದ ೪೭೫) ಮತ್ತು ಬೈಜಾಟಿನ್ ಸಾಮ್ರಾಜ್ಯದಲ್ಲಿ (೩೩೦-೧೪೫೩) ಇಂಥ ಧರ್ಮಸತ್ತೆಯ ಆಡಳಿತವನ್ನು ಗಮನಿಸುತ್ತೇವೆ. ಮುಸಲ್ಮಾನ್ ಧರ್ಮದಲ್ಲಿ ಇಂಥ ಆಡಳಿತವು ಬಹು ಸಾಮಾನ್ಯವಾದುದು. ಈ ಧರ್ಮದ ಮೂಲ ಪ್ರವಾದಿ ಮೊಹಮ್ಮದನು (೫೭೦-೬೩೨) ರಾಜಕೀಯ ಹಾಗೂ ಧಾರ್ಮಿಕ ಶಕ್ತಿಗಳೆರಡನ್ನೂ ಒಳಗೊಂಡ ಆಡಳಿತಗಾರನೆಂದು ಪ್ರಸಿದ್ಧನಾಗಿದ್ದನು. ಇಂದಿನ ಇರಾನ್ ದೇಶದ ಧರ್ಮಸತ್ತೆಯು ಮೊಹಮ್ಮದ ಪೈಗಂಬರನಿಂದ ಕೊಡಲ್ಪಟ್ಟ ಆಡಳಿತ ಕಲ್ಪನೆಯ ಒಂದು ಒಳ್ಳೆಯ ಉದಾಹರಣೆ ಎನಿಸಿದೆ.

ಧರ್ಮಸತ್ತೆ ಮಾದರಿಯ ಆಡಳಿತವು ಸಾಮಾನ್ಯವಾಗಿ ಒಂದೇ ಧರ್ಮೀಯರಿರುವ ಸಮಾಜದಲ್ಲಿ ಕಂಡುಬರುತ್ತದೆ. ಕೆಲವೊಮ್ಮೆ ಅನೇಕ ಧರ್ಮಗಳು ಬಳಕೆಯಲ್ಲಿದ್ದರೂ ಯಾವುದೋ ಒಂದು ಧಾರ್ಮಿಕ ತತ್ವಾದರ್ಶವು ಬಹುಸಂಖ್ಯಾತ ಸದಸ್ಯರಿಂದ ಒಪ್ಪಿಕೊಳ್ಳಲ್ಪಟ್ಟರೆ, ಅಲ್ಲಿ ಧರ್ಮಸತ್ತೆ ಮಾದರಿಯ ಆಡಳಿತವು ಸಾಧ್ಯ. ಆಧುನಿಕ ರಾಜಕೀಯ ಮೌಲ್ಯಗಳಾದ ಸಮಾನತೆ, ಸ್ವಾತಂತ್ರ್ಯ, ಧರ್ಮನಿರಪೇಕ್ಷತೆ ಮುಂತಾದವು ಧರ್ಮಸತ್ತೆಯ ಆಡಳಿತ ಮಾದರಿಗೆ ಸಮಸ್ಯೆಯನ್ನುಂಟು ಮಾಡುತ್ತವೆ. ವಿವಿಧ ಧಾರ್ಮಿಕ ನಂಬಿಕೆಗಳನ್ನು ಹೊಂದಿರುವ ಇಂದಿನ ಜಗತ್ತಿನಲ್ಲಿ ಜಾಗತಿಕ ಅಂತರ್ ಸಂಬಂಧಗಳು ಬಹುಮುಖ್ಯವಾಗಿರುವಾಗ ಧರ್ಮಸತ್ತೆ ಒಂದು ಯೋಗ್ಯವಾದ ಆಡಳಿತ ಮಾದರಿಯಾಗಿ ಕಾರ್ಯ ನಿರ್ವಹಿಸಲು ಶಕ್ತವಾಗಲಾರದು.

**೫. ಪ್ರಾಚೀನ ಗಣರಾಜ್ಯ**

ಪುರಾತನ ಗಣರಾಜ್ಯ ಆಡಳಿತ ಮಾದರಿಗೆ ಇಂದು ಐತಿಹಾಸಿಕ ಮಾದರಿಯೆಂದು ಮಾತ್ರವೇ ಗುರುತಿಸುವಿಕೆ ಇದೆ. ಹಾಗಿದ್ದರೂ ಗಣರಾಜ್ಯದ ಕಲ್ಪನೆ ಆಧುನಿಕ ರಾಜಕೀಯ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುವುದರಿಂದ ಇಂದಿನ ಪ್ರಜಾಪ್ರಭುತ್ವ ಆಡಳಿತ ಪದ್ಧತಿಗೆ ಹಿನ್ನೆಲೆಯಾಗಿ ಪುರಾತನ ಗಣರಾಜ್ಯ ವ್ಯವಸ್ಥೆಯನ್ನು ನೋಡುವುದು ಸೂಕ್ತ ವೆನಿಸುತ್ತದೆ.

'ಗಣರಾಜ್ಯ'ವೆಂದರೆ ಒಂದು ಜನಸಮೂಹದಿಂದ ಪ್ರತಿನಿಧಿಗಳು ಚುನಾಯಿತರಾದ ಜನರಿಗೆ ತಾತ್ವಿಕವಾಗಿ ಜವಾಬ್ದಾರರಾಗಿರುವ ಪ್ರಾತಿನಿಧಿಕ ಆಡಳಿತ ವ್ಯವಸ್ಥೆಯೆನ್ನಬಹುದು. ಇಂದಿನ ರಾಜಕೀಯ ಪ್ರಪಂಚದಲ್ಲಿ ಗಣರಾಜ್ಯ ಕಲ್ಪನೆಯು ಬಹುಮಹತ್ವ ಪಡೆದು ಬಳಕೆಯಲ್ಲಿದೆ. ಚಾರಿತ್ರಿಕವಾಗಿ ಈ ಆಡಳಿತ ವ್ಯವಸ್ಥೆಯ ಮೂಲವನ್ನು ರೋಮನ್ ಸಾಮ್ರಾಜ್ಯದಲ್ಲಿ ನೋಡಬಹುದು. ಪ್ರಾಚೀನ ರೋಮನ್ ಗಣರಾಜ್ಯವು ಇಂದಿನ ಗಣರಾಜ್ಯಕ್ಕಿಂತ ಭಿನ್ನವಾಗಿದ್ದು, ಮೂಲತಃ ಒಂದು ಶ್ರೀಮಂತ ಕುಲೀನಸತ್ತೆಯಾಗಿತ್ತು. ಇದು ಉತ್ತಮ ಕುಲವರ್ಗದ(ಪೇಟ್ರಿಶನ್ ಕ್ಲಾಸ್) ನಿಯಂತ್ರಣಕ್ಕೆ ಒಳಪಟ್ಟಿತ್ತು. ಪ್ರಾಚೀನ ಗ್ರೀಸ್‌ನ ಗಣರಾಜ್ಯದಲ್ಲಿ ಎಲ್ಲ ಪ್ರಜೆಗಳಿಗೂ ಆಡಳಿತಾಧಿಕಾರವು ತಾತ್ವಿಕವಾಗಿ ದತ್ತ ವಾಗಿತ್ತು. ಆದರೆ ರೂಢಿಯಲ್ಲಿ ಗ್ರೀಸ್‌ನ ಪ್ರಜಾಪ್ರಭುತ್ವದಲ್ಲಿ ನೇರವಾದ ಆಡಳಿತದ ಅಧಿಕಾರವಿದ್ದದ್ದು ಆಯ್ದ ಕೆಲವೇ ಜನವರ್ಗಕ್ಕೆ.

ಪ್ರಾಚೀನ ರೋಮ್ ಸರ್ಕಾರವನ್ನು ಚರಿತ್ರೆಕಾರರು ಪ್ರಪ್ರಥಮ ಗಣರಾಜ್ಯವೆಂದು ಕರೆದಿದ್ದಾರೆ. ಇಟ್ರಸ್ಕನ್ ದೊರೆಗಳನ್ನೂ ಟಾರ್ಕ್ವಿನ್‌ರನ್ನೂ ಹೊರಗೋಡಿಸಿದ ನಂತರ ಹಾಗೂ ಆಗಸ್ಟಸ್ ಸಾಮ್ರಾಟನ ಚಕ್ರಾಧಿಪತ್ಯವು ಸ್ಥಾಪನೆಯಾಗುವ ಮೊದಲು ಇದ್ದ ಆಡಳಿತ ವ್ಯವಸ್ಥೆಯೇ ಈ ಗಣರಾಜ್ಯವಾಗಿತ್ತು. ಇದರ ಎರಡು ಮುಖ್ಯ ಲಕ್ಷಣಗಳೆಂದರೆ ೧. ರಾಜತ್ವವಿಲ್ಲದಿರುವುದು, ಹಾಗೂ ೨. ಸರ್ಕಾರವು ಸಾಮೂಹಿಕ ಹಿತರಕ್ಷಣೆಗೆ ಇರುವುದು ಎಂದು ಚರಿತ್ರೆಯು ತಿಳಿಸುತ್ತದೆ. ಕೆಲವು ಇತಿಹಾಸಕಾರರು ಪ್ರಾಚೀನ ಗ್ರೀಸ್ ದೇಶದ ನಗರ-ರಾಜ್ಯವನ್ನೂ ಗಣರಾಜ್ಯವೆಂದು ಕರೆದಿದ್ದಾರೆ. ಅವರ ಅಭಿಮತದಂತೆ ಗ್ರೀಕ್ ಮಾದರಿಯ ನಗರ-ರಾಜ್ಯದಲ್ಲಿ ಗಣರಾಜ್ಯದ ಮೂಲತತ್ವಗಳಾದ ಸಮಾನಹಿತ ಮತ್ತು ಅಧಿಕಾರದಲ್ಲಿ ಜನರ ಪಾಲ್ಗೊಳ್ಳುವಿಕೆ ಇವೆರಡೂ ಅಡಕವಾಗಿವೆ.

ಪ್ರಾಚೀನ ಭಾರತದಲ್ಲಿಯೂ ಸಹ ಗಣರಾಜ್ಯ ಪದ್ಧತಿಯು ರಾಜತ್ವ ಹಾಗೂ ಅಲ್ಪಸಂಖ್ಯಾಧಿಪತ್ಯಗಳೊಂದಿಗೆ ಜಾರಿಯಲ್ಲಿತ್ತೆಂದು ಸಂಶೋಧಕರಾದ ಜಯಸ್ವಾಲ್, ಘೋಶಾಲ್, ಅಳ್ಟೇಕರ್ ಮುಂತಾದವರು ಅಭಿಪ್ರಾಯಪಟ್ಟಿದ್ದಾರೆ. ಪ್ರಾಚೀನ ಭಾರತದಲ್ಲಿ 'ಗಣ' ಎಂದು ಶಬ್ದಕ್ಕೆ ಖಚಿತವಾದ ರಾಜಕೀಯ ಮತ್ತು ಕಾನೂನು ಸಂಬಂಧಿ ಅರ್ಥವಿತ್ತು. ಪ್ರಾಚೀನ ಭಾರತದಲ್ಲಿ ಕಂಡುಬರುವ ಆಡಳಿತ ವ್ಯವಸ್ಥೆಗಳಾದ ಮಾಲವಗಣ, ಯೂಹೂದೇಯಗಣ ಮುಂತಾದವು ಸುವ್ಯವಸ್ಥಿತ ಆಡಳಿತ ಪದ್ಧತಿಗಳೆಂದು ದಾಖಲಿ ಸಲ್ಪಟ್ಟಿವೆ.

ಮಧ್ಯಯುಗದಲ್ಲಿ ಅಲ್ಲಲ್ಲಿ ಕೆಲವು ಗಣರಾಜ್ಯಗಳು ತಲೆ ಎತ್ತಿದ್ದನ್ನು ಕಾಣಬಹುದು. ಇಟಲಿಯ ನಗರ-ರಾಜ್ಯಗಳಾದ ವೆನಿಸ್ ಮತ್ತು ಪ್ಲಾರೆನ್ಸ್‌ಗಳಲ್ಲಿ ಗಣರಾಜ್ಯ ಸರ್ಕಾರಗಳು ಹೆಚ್ಚು ಪ್ರಬಲ ಹಾಗೂ ಸತ್ವಶಾಲಿ ಆಡಳಿತ ವ್ಯವಸ್ಥೆಯ ರೂಪಗಳೆನಿಸಿದವು. ಇವುಗಳಲ್ಲಿ ರಾಜರಹಿತ ಅಧಿಕಾರ ರಚನೆಯೇ ಮುಖ್ಯ ಅಂಶವಾಗಿ ಹೊರಹೊಮ್ಮಿದೆ. ಈ ಎರಡೂ ನಗರಗಳಲ್ಲಿ ಅಧಿಕಾರವು ಯಾವುದೇ ಒಬ್ಬ ವ್ಯಕ್ತಿಯ ಕೈಯಲ್ಲಿರದೆ ಹಲವು ಶ್ರೀಮಂತರಲ್ಲಿ ಅಡಕವಾಗಿತ್ತು. ಆದರೆ ಈ ಶ್ರೀಮಂತರು ಕೆಲವು ಮಟ್ಟಿಗೆ ತಮ್ಮ ಪ್ರಜಾವರ್ಗಗಳ ಹಿತರಕ್ಷಣೆಯ ನೇರ ಜವಾಬ್ದಾರಿ ವಹಿಸಿದ್ದರು. ನಂತರ ಇಂಗ್ಲೆಂಡಿನಲ್ಲಿ ಉಂಟಾದ ಕ್ರಾಮ್‌ವೆಲ್ ಬಂಡಾಯದ ಫಲವಾಗಿ ಆಡಳಿತಾರೂಢ ಅರಸೊತ್ತಿಗೆಯು ವಿರೋಧವನ್ನು ಎದುರಿಸಿತು. ಅದರ ಪರಿಣಮವಾಗಿ ಗಣರಾಜ್ಯ ತತ್ವಗಳು ಬೆಳಕಿಗೆ ಬಂದವು. ಈ ತತ್ವಗಳು ಮುಂದಿನ ದಿನಗಳಲ್ಲಿ ಪ್ರಜಾಪ್ರಭುತ್ವ ಮಾದರಿಯ ಆಡಳಿತ ವ್ಯವಸ್ಥೆಗೆ ಬುನಾದಿ ಹಾಕಿದವು.

**೬. ಪ್ರಜಾಪ್ರಭುತ್ವ**

'ಪ್ರಜಾಪ್ರಭುತ್ವ' ಮಾದರಿಯ ಆಳ್ವಿಕೆಯ ವ್ಯವಸ್ಥೆಗೆ ಅತ್ಯಂತ ರೋಚಕ ಇತಿಹಾಸ ಹಾಗೂ ಅತ್ಯಂತ ವರ್ಣಮಯ ವರ್ತಮಾನಗಳಿವೆ. 'ಪ್ರಜಾಪ್ರಭುತ್ವ'ವೆಂಬ ಆಡಳಿತ ಮಾದರಿಯು ಪಶ್ಚಿಮದ ಸಾಂಸ್ಕೃತಿಕ-ರಾಜಕೀಯ ಸಂದರ್ಭದಲ್ಲಿ ಹುಟ್ಟುಕೊಂಡಿದ್ದು. ಈ ಶಬ್ದದ ಆಂಗ್ಲ ಮೂಲವಾದ 'ಡೆಮಾಕ್ರಸಿ'ಎಂಬ ಪದದ ಶಾಬ್ದಿಕ ಅರ್ಥವೆಂದರೆ 'ಜನರ ಆಳ್ವಿಕೆ'. ಇದರ ಆದರ್ಶರೂಪವೆಂದರೆ ಅಬ್ರಾಹಂ ಲಿಂಕನ್ ಹೇಳಿದಂತೆ "ಜನರೇ ಜನರಿಗಾಗಿ ಜನರಿಂದ ರಚಿಸಿಕೊಳ್ಳುವ ಆಡಳಿತ ವ್ಯವಸ್ಥೆ."

ಆದರೆ ಚರಿತ್ರೆಯನ್ನು ಅವಲೋಕಿಸಿದರೆ ಇಂಥ ಆಡಳಿತ ವ್ಯವಸ್ಥೆ ಬಹುಶಃ ಯಾವುದೇ ಕಾಲದಲ್ಲಿಯೂ ನಿಜವಾಗಿ ಇದ್ದಿರಲಿಕ್ಕಿಲ್ಲ. ಗ್ರೀಕರ 'ನಗರ-ರಾಜ್ಯ'ಕಲ್ಪನೆ ಹಾಗೂ ಹೊಸ ಇಂಗ್ಲೆಂಡ್‌ನ ಪ್ರಾರಂಭಿಕ ವರ್ಷಗಳ ನಗರಾಡಳಿತಗಳು 'ಪ್ರಜಾಪ್ರಭುತ್ವ' ಪದ್ಧತಿಯ ಆದರ್ಶ ಮಾದರಿಯನ್ನು ಹತ್ತಿರದಿಂದ ಹೋಲುತ್ತಿದ್ದವೆನ್ನ ಬಹುದು. ಅಥೆನ್ಸ್ ನಗರದ ನೇರ ಪ್ರಜಾಪ್ರಭುತ್ವವನ್ನು ಇಂಥ ಆದರ್ಶ ಪ್ರಜಾಪ್ರಭುತ್ವ

ಮಾದರಿಯೆಂದು ಬಣ್ಣಿಸಲಾಗಿದೆ. ಹಾಗಿದ್ದರೂ ಸಹ ಈ ಎಲ್ಲಾ ಮಾದರಿಗಳಲ್ಲಿಯೂ ಕೆಲವು ವರ್ಗದ ಜನರಿಗೆ ಆಡಳಿತ ದಲ್ಲಿ ಭಾಗವಹಿಸಲು ಹಾಗೂ ಪ್ರಾತಿನಿಧ್ಯ ಪಡೆಯಲು ಅರ್ಹತೆಯಿರಲಿಲ್ಲ. ಉದಾಹರಣೆಗೆ : ಗ್ರೀಸ್ ದೇಶದ ಪ್ರಜಾಪ್ರಭುತ್ವದ ಮಹಿಳೆಯರು ಹಾಗೂ ಗುಲಾಮರಿಗೆ ಭಾಗವಹಿಸಲು ಅವಕಾಶವಿರಲಿಲ್ಲ; ಹೊಸ ಇಂಗ್ಲೆಂಡಿನ ಪ್ರಜಾಪ್ರಭುತ್ವ ಮಾದರಿಯಲ್ಲಿ ಮಹಿಳೆಯರನ್ನು ಆಡಳಿತದ ಭಾಗವಹಿಸುವಿಕೆಯಿಂದ ದೂರವಿಡಲಾಗಿತ್ತು. ಆದ್ದರಿಂದ ಹಿಂದಿನ ಪ್ರಜಾಪ್ರಭುತ್ವ ಆಳ್ವಿಕೆಯ ಮಾದರಿಗಳೆಲ್ಲವೂ ತಮ್ಮ ನೈಜ ಸ್ವರೂಪದಲ್ಲಿ ಅಲ್ಪಸಂಖ್ಯಾತರ ಆಡಳಿತ ವಾಗಿಯೇ ಬದಲಾಗಿದ್ದವೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ.

ಔದ್ಯೋಗಿಕ ಕ್ರಾಂತಿಗಿಂತ ಮೊದಲು ಒಂದು ಕಲ್ಪನೆಯಾಗಿಯೂ ಕೂಡ ಪ್ರಜಾಪ್ರಭುತ್ವದ ಕ್ವಚಿತ್ತಾಗಿಯಷ್ಟೇ ಬಳಕೆಯಲ್ಲಿತ್ತು. ಆದರೆ ಹದಿನೆಂಟನೆಯ ಶತಮಾನದಲ್ಲಿ ನಡೆದ ಹೊಸ ಸಂಶೋಧನೆಗಳು, ಹೊಸ ಅವಿಷ್ಕಾರಗಳು ಹಾಗೂ ಹೊಸ ಭೂಭಾಗಗಳ ಶೋಧನೆಗಳು ವ್ಯಾಪಾರೀ ಹಾಗೂ ಮಧ್ಯಮ ವರ್ಗಗಳನ್ನು ಗಣನೀಯವಾಗಿ ಹೆಚ್ಚಿಸಿದ್ದಷ್ಟೇ ಅಲ್ಲದೆ ಹದಿನಾರನೆಯ ಶತಮಾನದಲ್ಲಿ ಪಶ್ಚಿಮದಲ್ಲಿ ನಡೆದ ಕ್ರೈಸ್ತಧರ್ಮದ ಸುಧಾರಣಾ ಚಳವಳಿಯಿಂದಾಗಿ, ಸರ್ವಾಧಿಕಾರಿ, ಪಟ್ಟಭದ್ರ, ಜಿಗುಟು ಸ್ವಭಾವವ ಧಾರ್ಮಿಕ ಧುರೀಣತ್ವವನ್ನು ಧಾರ್ಮಿಕ ರಂಗದಲ್ಲಿ ಸಾಮಾನ್ಯರು ನೇರವಾಗಿ ಎದುರಿಸಲು ಸಾಧ್ಯ ವಾಯಿತು. ತಂತ್ರಜ್ಞಾನದ ಮುನ್ನಡೆ ವಿಶೇಷವಾಗಿ ಯಂತ್ರಗಳ ಬಹುದೊಡ್ಡ ಪ್ರಮಾಣದ ಬಳಕೆಯಿಂದಾಗಿ ವ್ಯಾಪಾರೀ ವರ್ಗದ ಅಧಿಕ ಸಂಖ್ಯೆಯ ಬೆಳವಣಿಗೆಯೊಂದಿಗೆ ವಲಸೆಗಳು ಹಾಗೂ ಮಾರುಕಟ್ಟೆಗಳ ನಡುವೆ ಅಂತರ್ಸಂಬಂಧಗಳು ಅನಿವಾರ್ಯವಾದವು. ಜೊತೆಗೆ ಇವೆಲ್ಲವುಗಳನ್ನೂ ಸಮುದಾಯದ ಮಟ್ಟದಲ್ಲಿ ನಿಯಂತ್ರಿಸಿ ಮಾರ್ಗದರ್ಶನ ನೀಡುವ ಹಾಗೂ ಹತೋಟಿಯಲ್ಲಿಡುವ ಆಡಳಿತ ವ್ಯವಸ್ಥೆಯೂ ಸಹ ಅಗತ್ಯವಾಯಿತು. ಪ್ರಜಾಪ್ರಭುತ್ವದ ಸಾಂಸ್ಥಿಕ ಪರಿಕಲ್ಪನೆ ಇಂಥ ಸಂದರ್ಭದಲ್ಲಿ ರೂಪುಗೊಂಡು ಜಗತ್ತಿನೆಲ್ಲೆಡೆ ಪ್ರಸಾರ ಪಡೆಯಿತು. ಇಂದು ನಮ್ಮ ರಚನೆ, ಕಾರ್ಯ, ಪರಿಣಾಮಗಳ ದೃಷ್ಟಿಯಿಂದ ತುಂಬ ಭಿನ್ನವಾಗಿದ್ದರೂ, ಕೂಡ ಎಲ್ಲ ರಾಷ್ಟ್ರಗಳೂ ತಮ್ಮನ್ನು ಒಂದು 'ಪ್ರಜಾಪ್ರಭುತ್ವ' ಎಂದು ಕರೆದುಕೊಳ್ಳಲು ಉತ್ಸುಕವಾಗಿರುತ್ತವೆ. ಎಂದರೆ 'ಪ್ರಜಾಸತ್ತೆ' ಅಥವಾ ಪ್ರಜಾಪ್ರಭುತ್ವ ಮಾದರಿಯ ರಾಜಕೀಯ ಆಡಳಿತ ವ್ಯತ್ಯಸ್ಥೆಯ ಒಂದು ಆದರ್ಶ ಪರಿಕಲ್ಪನೆಯಾಗಿ ಪರಿಗಣಿಸಲ್ಪಟ್ಟು ಜಗತ್ತಿನಾದ್ಯಂತ ಮನ್ನಣೆ ಪಡೆದಿದೆ.

ಆಧುನಿಕ ಪ್ರಜಾಪ್ರಭುತ್ವವು 'ಪ್ರಾತಿನಿಧಿಕ ತತ್ವ'ವನ್ನು ಆಧರಿಸಿ ನಿಂತಿದೆ. ಇಂಥ ಒಂದು ವ್ಯವಸ್ಥೆಯಲ್ಲಿ ಜನರು ತಮ್ಮ ಅಧಿಕಾರವನ್ನು ತಮ್ಮನ್ನು ಪ್ರತಿನಿಧಿಸುವ 'ಪ್ರಜಾ ಪ್ರತಿನಿಧಿ'ಗಳಿಗೆ ನಿಗದಿತ ಸಮಯಾವಧಿಗೆಂದು ಹಸ್ತಾಂತರಗೊಳಿಸಿರುತ್ತಾರೆ. ಪ್ರಜಾ ಪ್ರಾತಿನಿಧ್ಯವನ್ನು ಹೊಂದಿರುವ ಭಾರತ, ಅಮೆರಿಕಾ ಸಂಯುಕ್ತ ಸಂಸ್ಥಾನ, ಕೆನಡಾ, ಫ್ರಾನ್ಸ್‌ದಂತಹ ರಾಷ್ಟ್ರಗಳಲ್ಲಿ ನಾವು ಕೆಳಗಿನ ಕೆಲವು ಮಹತ್ತ್ವದ ಅಂಶಗಳನ್ನು ಗುರುತಿಸಲು ಸಾಧ್ಯವಾಗುವುದು.

**೧. ವ್ಯಕ್ತಿನಿಷ್ಠತೆ**

ಪ್ರಜಾಪ್ರಭುತ್ವ ವ್ಯವಸ್ಥೆಯ ಆಳ್ವಿಕೆಯಲ್ಲಿ ವ್ಯಕ್ತಿ (ಪ್ರಜೆ)ಯು ಕೇಂದ್ರಬಿಂದುವಾಗಿ ಮಾರ್ಪಡುತ್ತಾನೆ. ವರ್ಗ, ಬುಡಕಟ್ಟು, ಭಾಷೆ, ಸಂಸ್ಕೃತಿ, ಜಾತಿಗಳಂಥ ಅಂಶಗಳ ಭೇದವಿಲ್ಲದೆ ಪ್ರಜೆಗಳೆಲ್ಲರೂ ಸಮಾನರು ಎಂಬ ಅಂಶವನ್ನು ಈ ವ್ಯವಸ್ಥೆಯಲ್ಲಿ ಅಳವಡಿಸಲಾಗಿದೆ.

**೨. ಸಂವಿಧಾನಾತ್ಮಕ ಸರಕಾರ**

ಪ್ರಜಾಪ್ರಭುತ್ವ ಮಾದರಿಯ ಸರಕಾರಗಳೆಲ್ಲವೂ ಕಾಯ್ದೆ-ಕಾನೂನುಗಳ ಆಧಾರದ ಮೇಲೆ ನಡೆಯುತ್ತವೆ. ಇಂಥ ಕಾನೂನುಗಳು ಲಿಖಿತ ರೂಪದಲ್ಲಿ ಇರಬಹುದು. ಯಾವುದೇ ರೂಪದಲ್ಲಿದ್ದರೂ ಇವು ವ್ಯಕ್ತಿ, ಸರಕಾರ ಹಾಗೂ ಸಮಾಜಗಳಿಗಿಂತ ಉನ್ನತ ಸ್ಥಾನದಲ್ಲಿದ್ದು, ದೇಶದ ಅಧಿಕಾರಕ್ಕೆ ಸಂಬಂಧಿಸಿ ಎಲ್ಲ ಚಟುವಟಿಕೆ-ವಿಚಾರಗಳನ್ನೂ ನಿಯಂತ್ರಿಸುತ್ತವೆ. ಭಾರತೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ತಾವು ಲಿಖಿತ ಸಂವಿಧಾನವನ್ನು ಹೊಂದಿದ್ದು, ಇದು ನಮ್ಮ ರಾಷ್ಟ್ರದ ಮೂಲಭೂತ ಕಾನೂನು ಹಾಗೂ ಉಳಿದೆಲ್ಲಾ ಕಾಯ್ದೆಗಳ ತಳಪಾಯ ಎಂದು ಗಣಿಸಲ್ಪಡುತ್ತದೆ.

**೩. ಆಡಳಿತ ಪದ್ಧತಿಗೆ ಜನರ ಒಪ್ಪಿಗೆ ಅಗತ್ಯ**

ಪ್ರಜಾಪ್ರಭುತ್ವದ ಬಹುಮಹತ್ವದ ಅಂಶವೆಂದರೆ ಚುನಾವಣೆ. ನಿಗದಿತ ಕಾಲದಲ್ಲಿ ಚುನಾವಣಾ ಪ್ರಕ್ರಿಯೆಯ ಮೂಲಕ ಜನರು ತಮ್ಮ ಅಭಿಪ್ರಾಯಗಳ ತಳಹದಿಯ ಮೇಲೆ ಪ್ರತಿನಿಧಿಗಳನ್ನು ಅರಿಸುತ್ತಾರೆ. ಇಂಥ ಪ್ರಜಾಪ್ರತಿನಿಧಿಗಳು ಸಾಮಾನ್ಯ ಮತದಾರಿಗೆ ಬಾಧ್ಯಸ್ಥರಾಗಿರಬೇಕಾಗುತ್ತದೆ. ಚುನಾವಣೆಗಳು ಅಧಿಕಾರದ ಹಂಚುವಿಕೆ ಹಾಗೂ ಉಪಯೋಗದ ಅವಧಿಯನ್ನು ಸಹ ನಿರ್ಣಯಿಸುತ್ತವೆ.

**೪. ಪ್ರಜಾನಿಷ್ಠ ವಿರೋಧಿ ಪಕ್ಷ**

ಪ್ರಜಾಸತ್ತೆಯಂಥ ಆಡಳಿತ ಪದ್ಧತಿಯಲ್ಲಿ ಕನಿಷ್ಠ ಎರಡಾದರೂ ರಾಜಕೀಯ ಪಕ್ಷಗಳು ಇರುವುದು ಅಗತ್ಯ. ಆಡಳಿತರೂಢ ಪಕ್ಷದ ಹೊರತಾಗಿರುವ ಪಕ್ಷಗಳು ಜನನಿಷ್ಠ ವಿರೋಧಿ ಪಕ್ಷಗಳಾಗಿ ಕೆಲಸ ಮಾಡುತ್ತವೆ. ಆದ್ದರಿಂದ ಅಧಿಕಾರವನ್ನು ಪಡೆದಿರುವ ಪಕ್ಷಕ್ಕಿಂತ ಭಿನ್ನ ಧೋರಣೆಯುಳ್ಳ ಪ್ರಜೆಗಳಿಗೂ ವಿರೋಧಿಪಕ್ಷದ ಮೂಲಕ ಆಡಳಿತದಲ್ಲಿ ತಮ್ಮ ಅಭಿಪ್ರಾಯಗಳನ್ನು ಅಭಿವ್ಯಕ್ತಿಸಲು ಸಾಧ್ಯವಾಗುತ್ತದೆ. ಆದ್ದರಿಂದ ಸಾಮಾನ್ಯವಾಗಿ ಪ್ರಜಾಪ್ರಭುತ್ವ ಮಾದರಿಯಲ್ಲಿ ಆಡಳಿತ ಪಕ್ಷಗಳು ವಿರೋಧಿ ಪಕ್ಷಗಳನ್ನು ನಿಯಂತ್ರಿಸುವಲ್ಲಿ ಸೈನ್ಯ, ಪೋಲೀಸ್ ಅಥವಾ ಉಳಿದ ಬಲ ಪ್ರಯೋಗವನ್ನು ಅವಲಂಬಿಸಿರುವುದಿಲ್ಲ.

ಮಾನವ ಸಂಸ್ಕೃತಿಯ ಇತ್ತೀಚಿಗಿನ ಇತಿಹಾಸವನ್ನು ಅಧ್ಯಯನ ಮಾಡಿದಾಗ ಪ್ರಜಾಪ್ರಭುತ್ವ ಮಾದರಿಯ ಸರಕಾರವು ಯಶಸ್ವಿಯಾಗಲು ಕೆಲವು ಪೂರಕ ಅಂಶಗಳನ್ನು ಕಾಣಬಹುದಾಗಿದೆ. ಈ ಎಲ್ಲಾ ಅಂಶಗಳೂ ಪ್ರಜಾಸತ್ತೆಯ ಉಳಿಯುವಿಕೆಯಲ್ಲಿ ಇರಲೇ ಬೇಕೆಂದೇನೂ ಅಲ್ಲವಾದರೂ ಇವು ಈ ಮಾದರಿಯ ಜನಸತ್ತೆಯ ಮುಂದು ವರಿಕೆಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ ಎನ್ನುವುದಂತೂ ಖಚಿತ. ಆದ್ದರಿಂದ ಈ ಅಂಶಗಳನ್ನು ನಾವು ಪ್ರಜಾಸತ್ತೆಯ ಪೂರ್ವಭಾವೀ ಅವಶ್ಯಕತೆಗಳು ಎಂದು ಕರೆಯಬಹುದು. ಅವು ಯಾವುದೆಂದರೆ :

**೧. ಉತ್ತಮ ಮಟ್ಟದ ಆರ್ಥಿಕಾಭಿವೃದ್ಧಿ:** ಪ್ರಸಿದ್ಧ ಸಮಾಜಶಾಸ್ತ್ರಜ್ಞ ಲಿಪಸೆಟ್ (೧೯೫೯) ಅವರು ಮಾಡಿದ ನಲವತ್ತೆಂಟು ರಾಷ್ಟ್ರಗಳ ಅಧ್ಯಯನದ ನಂತರ ಪ್ರಜಾಪ್ರಭುತ್ವ ಸಂಸ್ಥೆಗಳು ಹಾಗೂ ಉತ್ತಮ ಅರ್ಥಿಕಾಭಿವೃದ್ಧಿಯ ಮಟ್ಟಗಳ ನಡುವೆ ಧನಾತ್ಮಕ ಸಂಬಂಧವಿರುವುದು ದೃಢಪಟ್ಟಿದೆ. ಈ ಸಂಬಂಧಗಳ ಕಾರಣಗಳು ಸಂಕೀರ್ಣವಾಗಿದ್ದರೂ ಎರಡೂ ಅಂಶಗಳು ಈ ನಿಟ್ಟಿನಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ. ಮೊದಲನೆಯದಾಗಿ ಆರ್ಥಿಕ ಪರಿಸ್ಥಿತಿಯು ಉತ್ತಮವಾಗಿರುವ ಸಮಾಜವು ಸಹಜವಾಗಿಯೇ ನಗರೀಕರಣ ಗೊಂಡಿರುವ ಹಾಗೂ ಶೈಕ್ಷಣಿಕವಾಗಿ ಮುಂದುವರೆದಿರುವ ರಾಷ್ಟ್ರವಾಗಿರುತ್ತದೆ. ಇಂಥ ಸಮಾಜದಲ್ಲಿ ನಾಗರಿಕರು ರಾಜಕೀಯ ಪ್ರಕ್ರಿಯೆಯಲ್ಲಿ ಭಾಗವಹಿಸಲು ಬೇಕಾಗಿರುವ ಮೂಲಭೂತ ಅಂಶಗಳು ಹುಟ್ಟಿಕೊಳ್ಳುತ್ತವೆ. ಎರಡನೆಯದಾಗಿ, ಆರ್ಥಿಕ ಅಭಿವೃದ್ಧಿಯು ಸಾಮಾಜಿಕ ಹಾಗೂ ರಾಜಕೀಯ ಸ್ಥಿರತೆಗಳನ್ನು ತರುವಲ್ಲಿ ಸಹಯಕಾರಿ. ಇಂಥ ಸ್ಥಿರತೆ ಪ್ರಜಾಪ್ರಭುತ್ವ ಮಾದರಿಯ ಆಳ್ವಿಕೆಗೆ ಬಹು ಅಗತ್ಯವಾದುದು.

**೨. ಸರಕಾರದ ಶಕ್ತಿಯ ಮೇಲೆ ಹಿಡಿತ:** ಸರಕಾರದ ಶಕ್ತಿ-ಅಧಿಕಾರಗಳ ಮೇಲೆ ಸಾಮಾಜಿಕ ಸಂಸ್ಥೆಗಳ ನಿಯಂತ್ರಣವಿದ್ದಾಗಲಷ್ಟೇ ಪ್ರಜಾಸತ್ತೆ ಯಶಸ್ವಿಯಾಗಲು ಸಾಧ್ಯ. ಇಂಥ ನಿಯಂತ್ರಣಗಳು ಭಿನ್ನ ಮಾದರಿಯವಾಗಿರಬಹುದು. ಉದಾಹರಣೆಗೆ, ರಾಜಕೀಯ ಪಕ್ಷಗಳ ಮೇಲೆ ಕಾನೂನಿನ ಅಂಕುಶ, ಸ್ವತಂತ್ರ ಹಾಗೂ ನಿಷ್ಪಕ್ಷಪಾತ ಸಮೂಹ ಮಾಧ್ಯಮಗಳು, ಭ್ರಷ್ಟ ಅಧಿಕಾರಿಗಳನ್ನು ಶಿಕ್ಷಿಸುವಲ್ಲಿ ಸಂವಿಧಾನಾತ್ಮಕ ರಕ್ಷಣೆಗಳು, ನಿರ್ಭೀತ ನ್ಯಾಯಾಂಗ ಇತ್ಯಾದಿ.

**೩. ಸಮಾಜದಲ್ಲಿ ಪ್ರಮುಖ ಸೀಳುಗಳಿಲ್ಲದಿರುವುದು:** ಸಾಮಾಜಿಕ ಸ್ಥಿರ ವಿನ್ಯಾಸವು ಜಗತ್ತಿನ ಎಲ್ಲ ಸಮಾಜಗಳಲ್ಲಿಯೂ ಕಂಡುಬರುವ ಒಂದು ಜಾಗತಿಕ ಸತ್ಯ. ಆದರೂ ಯಾವ ಸಮಾಜದಲ್ಲಿ ಅಡಿಯಿಂದ ಮುಡಿಯವರೆಗೆ ಲಂಬಾಂತರವಾಗಿ ಇಬ್ಭಾಗವಾಗಿರುವ ಗುಂಪುಗಳಿರುವವೋ ಅಂಥ ಸಮಾಜದಲ್ಲಿ ಪ್ರಜಾಪ್ರಭುತ್ವವು ಪೂರ್ಣಯಶಸ್ವಿ ಯಾಗುವುದು ಅಸಂಭವನೀಯ. ಸ್ಪಷ್ಟವಾಗಿ ಇಬ್ಭಾಗಿಸಲ್ಪಟ್ಟ ಸಮಾಜದಲ್ಲಿ ಪರಸ್ಪರರನ್ನು ವಿರೋಧಿಸುವ ಗುಂಪುಗಳು ತಮ್ಮಲ್ಲಿ ಯಾವುದೇ ರೀತಿಯ ಹೊಂದಾಣಿಕೆ

ಒಡಂಬಡಿಕೆಗಳನ್ನು ಮಾಡಿಕೊಳ್ಳಲು ಒಪ್ಪುವುದಿಲ್ಲ. ವಿರೋಧಿ ಗುಂಪುಗಳು ಯಾವ ಹಂತದಲ್ಲಿಯೂ ಪರಸ್ಪರರ ವಿಚಾರಗಳನ್ನು ಗೌರವಿಸಿ ಭಿನ್ನತೆಯನ್ನು ಒಪ್ಪಿಕೊಳ್ಳದಿದ್ದರೆ ಪ್ರಜಾಸತ್ತಾತ್ಮಕತೆ ಗಟ್ಟಿಯಾಗಿ ನೆಲೆಯೂರಲು ಸಾಧ್ಯವಿಲ್ಲ.

**೪. ನಿರಾಕರಣೆಯ ಸಹಿಷ್ಣುತೆ :** ವಿಮರ್ಶೆ ಹಾಗೂ ಟೀಕೆಗಳನ್ನು ಒಪ್ಪಿಕೊಳ್ಳಲಾರದ ಪಕ್ಷ-ಪಂಗಡಗಳಿದ್ದಾಗ ಪ್ರಜಾಪ್ರಭುತ್ವವು ಮುಂದುವರಿಯಲು ಸಾಧ್ಯವಿಲ್ಲ. ಆಡಳಿತ ಪಕ್ಷಗಳು ಹಾಗೂ ವಿರೋಧ ಪಕ್ಷಗಳು ಎರಡೂ ನಿರಾಕರಣೆಯನ್ನು ಒಪ್ಪಿ ಗೌರವಿಸಿದಾಗಲೇ ವಿವಿಧ ಅಭಿಪ್ರಾಯಗಳನ್ನು ಹೊಂದಿರುವ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆ ಹಾಗೂ ಅದನ್ನು ನಿಯಂತ್ರಿಸುವ ಜನಶಾಹಿ ರಾಜಕೀಯ ವ್ಯವಸ್ಥೆ ಸಾಧ್ಯವಾಗುವುದು. ಅಲ್ಲದೆ ಕೇವಲ 'ಬಹುಮತ'ವಿರುವ ಕಾರಣದಿಂದ ಉಳಿದ 'ಅಲ್ಪಮತ'ಗಳಿಸಿರುವ ವಿರೋಧಿ ಪಕ್ಷಗಳ ಅಭಿಪ್ರಾಯವನ್ನು ಕಡೆಗಣಿಸುವುದರಿಂದ ಸಮಾಜದ ಹಲವು ಗುಂಪುಗಳ ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಮನ್ನಣೆ ನೀಡದಂತಾಗುವುದರಿಂದ ಪ್ರಜಾಸ್ತತಾತ್ಮಕ ರಾಜಕೀಯವು ವಿಫಲವಾಗುವುದು.

**೫. ಮಾಹಿತಿಯ ಲಭ್ಯತೆ:** ಯಶಸ್ವೀ ಪ್ರಜಾಪ್ರಭುತ್ವದ ಅಡಿಗಲ್ಲು ನಾಗರಿಕರಿಗೆ ಮಾಹಿತಿಯ ದೊರಕುವಿಕೆಯೆಂದು ಹೇಳಬಹುದು. ಅಗತ್ಯದ ಮಾಹಿತಿಯು ದೊರಕಿದಾಗಲಷ್ಟೇ ಪ್ರಜೆಗಳು ವಿವಿಧ ಪರ್ಯಾಯ ದಾರಿಗಳಲ್ಲಿ ತಮಗೆ ಸೂಕ್ತವೆನಿಸಿದ್ದನ್ನು ಆಯ್ದುಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದಲೇ ವಾಕ್‌ಸ್ವಾತಂತ್ರ್ಯ, ಮಾಧ್ಯಮ ಸ್ವಾತಂತ್ರ್ಯಗಳು ಪ್ರಜಾ ಪ್ರಭುತ್ವಕ್ಕೆ ಪೂರ್ವಭಾವೀ ಅವಶ್ಯಕತೆಗಳು.

**೬. ಅಧಿಕಾರದ ವಿಕೇಂದ್ರೀಕರಣ:** ಸಮಾಜದ ಅಧಿಕಾರಗಳು ಬೇರೆ ಬೇರೆ ಗುಂಪುಗಳಲ್ಲಿ ಹಂಚಲ್ಪಟ್ಟಿದ್ದು ಯಾವುದೇ ಒಂದು ಗುಂಪು ಸರ್ವಾಧಿಕಾರವನ್ನು ಹೊಂದಿಲ್ಲದಿದ್ದಲ್ಲಿ, ಅಂತಹ ಸಮಾಜದಲ್ಲಿ ಪ್ರಜಾಪ್ರಭುತ್ವವು ಯಶಸ್ವಿಯಾಗುವ ಸಂಭವ ಹೆಚ್ಚು. ಆದ್ದರಿಂದಲೇ ಭಾರತೀಯ ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ, ಕಾರ್ಯಾಂಗ, ಮತ್ತು ನ್ಯಾಯಾಂಗಗಳೆಂಬ ಬೇರೆ ಬೇರೆ ಶಾಖೆಗಳು ಆದ ಅಧಿಕಾರ ಕಕ್ಷೆಗಳನ್ನು ಹೊಂದಿವೆ.

ಈ ಎಲ್ಲವೂ ಪ್ರಜಾಪ್ರಭುತ್ವಕ್ಕೆ ಪೂರ್ವಭಾವೀ ಅಂಶಗಳೇ ಹೊರತೂ ಈ ಎಲ್ಲ ಅಂಶಗಳಿರದೆ ಪ್ರಜಾಪ್ರಭುತ್ವವು ಸಾಧ್ಯವೇ ಇಲ್ಲ ಎನ್ನಲಾಗದು. ಮತ್ತೊಂದು ವಿಷಯ ವನ್ನೂ ಕೂಡ ಸೂಕ್ಷ್ಮವಾಗಿ ಪ್ರಸ್ತಾಪಿಸುವುದು ಅಗತ್ಯ. ಅನೇಕರು ಅಂದುಕೊಂಡಂತೆ ಪ್ರಜಾಪ್ರಭುತ್ವವು ಯಾವಾಗಲೂ ಬಹುಮತ ಪಕ್ಷದ ಸರಕಾರವನ್ನೇ ರಚಿಸುತ್ತದೆ ಎಂಬ ಅಂಶ ಯಾವಾಗಲೂ ಸತ್ಯವಲ್ಲ. ಬಹುಪಕ್ಷಗಳುಳ್ಳ ರಾಜಕೀಯ ವ್ಯವಸ್ಥೆಯಲ್ಲಿ ಪ್ರಜೆಗಳ ಮತಗಳು ಅನೇಕ ಪಕ್ಷಗಳ ನಡುವೆ ಹಂಚಿ-ಹೋಗುವುದರಿಂದ ಅತಿಹೆಚ್ಚು ಮತ ಪಡೆದ ಪಕ್ಷ ಹಾಗೂ ಅಭ್ಯರ್ಥಿ ಆಯ್ಕೆಯಾಗುವುದು ಸಾಮಾನ್ಯ. ಇಂಥ ಎಲ್ಲ ಸಂದರ್ಭಗಳಲ್ಲಿಯೂ ಅತ್ಯಧಿಕ ಮತಗಳಿಸಿದ ಅಭ್ಯರ್ಥಿ ಹಾಗೂ ಪಕ್ಷಗಳು ಬಹುಮತ ಗಳಿಸದೆ ಇರುವ ಸಂದರ್ಭಗಳು ಇರುತ್ತವೆ. ಭಾರತೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವು ಇದನ್ನು ಅನೇಕ ಬಾರಿ ಕಾಣುತ್ತೇವೆ. ಆದ್ದರಿಂದಲೇ ಅಮೆರಿಕಾ ದೇಶದಂಥ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ನಾವು ಎರಡೇ ಪಕ್ಷಗಳ ಸ್ಪರ್ಧೆಯನ್ನು ಕಾಣಬಹುದು.

ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಕೆಲವು ನ್ಯೂನ್ಯತೆಗಳಿದ್ದರೂ ಸಹ ಉಳಿದ ರಾಜಕೀಯ ಆಡಳಿತ ಪದ್ಧತಿಗಳಿಗೆ ಹೋಲಿಸಿದಾಗ ಇದು ಜನಮನವನ್ನು ಅತ್ಯಂತ ಸಮರ್ಥವಾಗಿ ಪ್ರತಿನಿಧಿಸುವ ಶಕ್ತಿ ಹೊಂದಿದೆ. ಆಧುನಿಕ ರಾಷ್ಟ್ರಗಳ ಚರಿತ್ರೆಯಲ್ಲಿ ಈ ವ್ಯವಸ್ಥೆಯ ವ್ಯಾಖ್ಯೆಯು ದೇಶದಿಂದ ದೇಶಕ್ಕೆ, ಸಮಾಜದಿಂದ-ಸಮಾಜಕ್ಕೆ ವ್ಯತ್ಯಾಸವಾಗಿದ್ದರೂ ತನ್ನ ಒಡಲಿನಲ್ಲಿ ವೈವಿಧ್ಯತೆಯನ್ನು ಪ್ರತಿನಿಧಿಸುವ ಶಕ್ತಿ ಪಡೆದಿರುವುದರಿಂದ ಔದ್ಯಮಿಕ ಆಧುನಿಕ ಸಮಾಜದಲ್ಲಿ ಪ್ರಜಾಪ್ರಭುತ್ವದ ಕಲ್ಪನೆಯು ಎಲ್ಲ ಸ್ಥರಗಳಲ್ಲಿಯೂ ಒಂದು ಸಕಾರಾತ್ಮಕ ರಾಜಕೀಯ ಮೌಲ್ಯವಾಗಿ ಪರಿಗಣಿಸಲ್ಪಟ್ಟಿದೆ.

**ಉಪಸಂಹಾರ**

ಮಾನವ ಸಂಸ್ಕೃತಿಯ ಬೆಳವಣಿಗೆಯುದ್ದಕ್ಕೂ ಅಧಿಕಾರದ ಹಂಚಿಕೆ, ನಿರ್ವಹಣೆ ಹಾಗೂ ಬಳಕೆಗಳು ತಮ್ಮ ಸಂಕೀರ್ಣತೆಯಿಂದಾಗಿ ವೈವಿಧ್ಯಮಯ ಚರ್ಚೆ ಹಾಗೂ ಪ್ರಯೋಗಗಳಿಗೆ ಒಳಗಾಗಿವೆ. ಅಧಿಕಾರ ಹಾಗೂ ಅವಕಾಶಗಳ ಆಡಳಿತವು ಇತಿಹಾಸದ ಎಲ್ಲ

ಘಟ್ಟಗಳಲ್ಲಿಯೂ ಅತಿ ಮಹತ್ವದ್ದೆನಿಸಿದೆ. ಈ ಲೇಖನದಲ್ಲಿ ವಿವರಿಸಲ್ಪಟ್ಟ ಎಲ್ಲ ರಾಜಕೀಯ ಆಳ್ವಿಕೆಯ ಮಾದರಿಗಳೂ ಇಂದಿನ ಆಧುನಿಕ ರಾಜಕಾರಣದ ಸ್ವರೂಪಕ್ಕೆ ತಮ್ಮ ಕಾಣಿಕೆ ನೀಡಿವೆ. ಜನರನ್ನು, ಒಂದು ಭೌಗೋಳಿಕ ಪ್ರದೇಶದ ಚೌಕಟ್ಟಿನೊಳಗೆ, ವ್ಯಾಖ್ಯಾನಿಸಲ್ಪಟ್ಟ ಆಡಳಿತದ ನಿಯಮಗಳಿಗೆ ಅನುಸಾರವಾಗಿ, ಆಳ್ವಿಕೆಗೆ ಒಳಪಡಿಸುವ ವಿವಿಧ ಮಾದರಿಗಳಾಗಿ ಈ ಎಲ್ಲ ರಾಜಕೀಯ ಪ್ರಬೇಧಗಳೂ ಬಹಳ ಮಹತ್ವದವು. ಈ ಎಲ್ಲ ಮಾದರಿಗಳಲ್ಲಿಯೂ ಗುಣ-ದೋಷಗಳಿವೆ, ಎಲ್ಲವಕ್ಕೂ ಪ್ರತ್ಯೇಕವಾದ ಇತಿಮಿತಿ ಗಳಿವೆ. ಇಂದು ನಮ್ಮ ಎದುರಿಗಿರುವ ಪ್ರಜಾಪ್ರಾತಿನಿಧಿಕ ಆಡಳಿತ ವ್ಯವಸ್ಥೆಯು ಈ ಎಲ್ಲ ಆಳ್ವಿಕೆಗಳಿಂದ ಸಾಕಷ್ಟು ಪ್ರಭಾವಿಸಲ್ಪಟ್ಟಿದ್ದು, ಇಂಥ ಆಡಳಿತ ಪದ್ಧತಿಗಳ ಅನೇಕ ಅಂಶಗಳನ್ನು ಪ್ರತಿಫಲಿಸುತ್ತವೆ.

ಇಂದು ನಮಗೆ ಈ ರಾಜಕೀಯ ಆಳ್ವಿಕೆಯ ವ್ಯವಸ್ಥೆಗಳಲ್ಲಿ ಅನೇಕ ದೋಷಗಳೂ, ದೌರ್ಬಲ್ಯಗಳೂ ಕಾಣಬಹುದು. ಆದರೆ ಈ ಎಲ್ಲ ವಿಷಯಗಳನ್ನು ಸಮಕಾಲೀನ ಪ್ರಜ್ಞೆಯಿಂದ ನೋಡಿ ವಿಶ್ಲೇಷಿಸುವುದು ಅತಿ ಅಗತ್ಯ. ಇವೆಲ್ಲ ಮಾನವ ಸಮಾಜವು ತನ್ನ ಅಭಿವೃದ್ಧಿಯ ಹಾದಿಯಲ್ಲಿ ಸಾಮುದಾಯಿಕ ಐಕ್ಯಮತ್ಯವನ್ನು ಗಳಿಸಲು, ಉಳಿಸಲು ಮಾಡಿದ, ಮಾಡುತ್ತಿರುವ ರಾಜಕೀಯ ಪ್ರಯೋಗಗಳು.

<u>ಪರಾಮರ್ಶನ ಗ್ರಂಥಗಳು</u>


೧. ರೈಸ್, ಇ.ಎಫ್., ೧೯೭೦. **ದಿ ಫೌಂಡೇಶನ್ಸ್ ಆಫ್ ಅ್ಲಿರ ಮಾಡರ್ನ್ ಯುರೋಪ್,** ಲಂಡನ್.

೨. ಮೆಕ್‌ನಿಲ್ ಡಬ್ಲ್ಯು ಹೆಚ್., ೧೯೮೬. **ಹಿಸ್ಟರಿ ಆಫ್ ವೆಸ್ಟರ್ನ್ ಸಿವಿಲೈಜೇಶನ್,** ಚಿಕಾಗೋ.


## ೧೩. ಯುರೋಪಿನ ನಿರಂಕುಶಪ್ರಭುತ್ವ ಸ್ವರೂಪ ಹಾಗೂ ವ್ಯಾಪ್ತಿ

ನಿರಂಕುಶಪ್ರಭುತ್ವ ಒಂದು ರಾಜಕೀಯ ಸಿದ್ಧಾಂತ, ಸಂಪೂರ್ಣ ಅಧಿಕಾರ ಅರಸನಲ್ಲಿಯೇ ಕೇಂದ್ರೀಕೃತವಾಗಿದ್ದು ಅವನನ್ನು ಪ್ರಶ್ನಿಸುವ ಹಕ್ಕು ಪ್ರಜೆಗಳಿಗೆ ಇರುವುದಿಲ್ಲ. ಅರಸ ಎಲ್ಲ ರೀತಿಯಲ್ಲಿಯೂ ಸಂಪೂರ್ಣನಾಗಿದ್ದು ದೇವರಿಗೆ ಸಮಾನ ನಾಗಿರುತ್ತಾನೆ. ಈ ರೀತಿಯ ಬೆಳವಣಿಗೆಯನ್ನು ನಾವು ಹದಿನೇಳು ಮತ್ತು ಹದಿನೆಂಟನೆಯ ಶತಮಾನದ ಯುರೋಪಿನ ಇತಿಹಾಸವನ್ನು ಅವಲೋಕಿಸುವಾಗ ಗಮನಿಸಲು ಸಾಧ್ಯ. ಕ್ರಿ.ಶ.೧೬೪೮ ರಿಂದ ೧೭೮೯ರವರೆಗಿನ ಅವಧಿಯನ್ನು ಯುರೋಪಿನಲ್ಲಿ "ನಿರಂಕುಶ ಪ್ರಭುತ್ವದ ಯುಗ"ವೆಂದು ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ನಿರಂಕುಶಪ್ರಭುತ್ವ ಬಲವಾಗಿ ಬೇರೂರಿತ್ತು ಎನ್ನುವುದಕ್ಕೆ ಸಾಕಷ್ಟು ಆಧಾರಗಳಿವೆ. ಆದರೆ ಇದು ಎಲ್ಲಾ ರಾಷ್ಟ್ರಗಳಲ್ಲಿಯೂ ಒಂದೇ ತರನಾಗಿ ರೂಪುಗೊಂಡಿರಲಿಲ್ಲ. ಒಂದು ರಾಷ್ಟ್ರದ ನಿರಂಕುಶಪ್ರಭುತ್ವ ಇನ್ನೊಂದು ರಾಷ್ಟ್ರಕ್ಕಿಂತ ಭಿನ್ನವಾದದ್ದಾಗಿತ್ತು. ಈ ಬದಲಾವಣೆ ಸಹಜ, ಏಕೆಂದರೆ ಅದು ಆಯಾ ದೇಶದ ಒಟ್ಟು ಪರಿಸ್ಥಿತಿಯನ್ನು ಅವಲಂಬಿಸಿಕೊಂಡಿರುತ್ತದೆ. ೧೭ ಮತ್ತು ೧೮ನೆಯ ಶತಮಾನಗಳಲ್ಲಿ ಯುರೋಪಿನ ಒಟ್ಟು ಸ್ಥಿತಿಗತಿಗಳಲ್ಲಿನ ಮೂಲಭೂತ ಬದಲಾವಣೆಗೆ ಮೂಲಕಾರಣ ಆರ್ಥಿಕ ರೂಪಾಂತರ. ಇದು ನೇರವಾಗಿ ಮಧ್ಯಮ ವರ್ಗ ಹಾಗೂ ಶ್ರೀಮಂತ ವರ್ಗದ ಜನರೊಳಗೆ ಮನಸ್ತಾಪಕ್ಕೆ ಎಡೆಮಾಡಿಕೊಟ್ಟು ನಿರಂಕುಶಪ್ರಭುತ್ವದ ಹುಟ್ಟು ಮತ್ತು ಏಳಿಗೆಗೆ ಕಾರಣವಾಯಿತು.

ಹದಿನೇಳನೆಯ ಶತಮಾನ ನಿರಂಕುಶಪ್ರಭುತ್ವದ ಯುಗ ಎಂಬುದಾಗಿ ನಿರ್ಣಯವನ್ನು ಕೈಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಹದಿನೇಳನೆಯ ಶತಮಾನದ ಆರಂಭಕಾಲದಲ್ಲಿನ ಅರಸರುಗಳು ಸಮರ್ಥ ಆಡಳಿತಗಾರರಾಗಿರಲಿಲ್ಲ. ಅವರ ವೈಯಕ್ತಿಕ ವರ್ಚಸ್ಸು ಇಲ್ಲಿ ಚರ್ಚೆಗೊಳಪಡುವ ವಸ್ತುವಾಗುತ್ತದೆ. ಹದಿನೇಳನೆಯ ಶತಮಾನದ ಪ್ರಥಮಾರ್ಧವನ್ನು "ಮಂತ್ರಿಗಳಯುಗ" ಎಂದು ಕರೆದರೂ ತಪ್ಪಾಗಲಾರದು. ಅರಸರುಗಳು ಸಮರ್ಥ ಆಡಳಿತಗಾರರಾಗಿಲ್ಲವಾದ್ದರಿಂದ ಮಂತ್ರಿಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದರು. ಈ ವ್ಯವಸ್ಥೆ ಪ್ರಭುತ್ವ ವ್ಯವಸ್ಥೆಗೆ ತಾತ್ಕಾಲಿಕವಾಗಿ ಪೂರಕವಾಗಿದ್ದರೂ ಶಾಶ್ವತವಾದ ಪರಿಹಾರವಾಗಿರಲಿಲ್ಲ. ಏಕೆಂದರೆ ಮಂತ್ರಿಮಂಡಲದ ರಚನೆ ನಿರಂಕುಶಪ್ರಭುತ್ವದ ಮೂಲ ಉದ್ದೇಶಕ್ಕೆ ವಿರುದ್ಧವಾದದ್ದಾಗಿದೆ. ಬವೇರಿಯಾದ ಅರಸ ಎರಡನೆಯ ಫಿಲಿಫ್, ಸ್ಪೈಯಿನ್ ದೇಶದ

ನಾಲ್ಕನೆಯ ಫಿಲಿಫ್, ಫ್ರಾನ್ಸ್‌ನ ಹದಿಮೂರನೆಯ ಲೂಯಿ, ಪೋಲೆಂಡ್ ದೇಶದ ಮೂರನೆಯ ಸಿಗಿಸ್‌ಮೂನ್ಡ್ ಇತ್ಯಾದಿ ಅರಸುಗಳು ನಿರಂಕುಶ ಪ್ರಭುತ್ವದ ಹರಿಕಾರರಾಗಿದ್ದರೂ ಸಮರ್ಥ ಆಡಳಿತಗಾರರಾಗಿರಲಿಲ್ಲ. ಕಲಾವಿದರಾಗಿ, ಹಾಡುಗಾರರಾಗಿ ಇಲ್ಲವೇ ಸಾಹಿತಿಗಳಾಗಿ ಇವರು ತಮ್ಮನ್ನು ಗುರುತಿಸಿಕೊಂಡಿದ್ದರು. ಇದು ಜನರನ್ನು ಪ್ರಭಾವಗೊಳಿಸಬಹುದೇ ವಿನಹ ಹತೋಟಿಯಲ್ಲಿಡಲು ಸಾಧ್ಯವಿಲ್ಲ. ಇದೇ ಕಾರಣಕ್ಕಾಗಿ ಫ್ರಾನ್ಸ್‌ನಲ್ಲಿ ರಿಚಲಿಯೋ ಮತ್ತು ಮಜಾರಿನ್, ಸ್ಪೈಯಿನ್‌ನಲ್ಲಿ ಲೆರ್ಮ ಮತ್ತು ಆಲಿವೇರಸ್, ಇಂಗ್ಲೆಂಡ್‌ನಲ್ಲಿ ಬಕ್ಕಿಂಗ್‌ಹಾಮ್ ಮುಂತಾದ ವ್ಯಕ್ತಿಗಳ ಮಂತ್ರಿಗಳಾಗಿ ನೇಮಕಗೊಂಡು ತಾವು ಪ್ರತಿನಿಧಿಸುತ್ತಿದ್ದ ಅರಸು ಮನೆತನಗಳ ಭವಿಷ್ಯವನ್ನು ನಿರ್ಧರಿಸುವಷ್ಟು ಪ್ರಭಾವಶಾಲಿಗಳಾಗಿದ್ದರು.

ಮಂತ್ರಿಮಂಡಲದ ರಚನೆ, ವಿಭಾಗಗಳ ಆಡಳಿತ ಇವೆಲ್ಲಾ ಅರಸು ಮನೆತನಗಳ ಮೂಲಭೂತ ಸಿದ್ಧಾಂತಕ್ಕೆ ವಿರುದ್ಧವಾದದ್ದರಿಂದ ಹದಿನೇಳನೆಯ ಶತಮಾನದ ದ್ವಿತೀಯಾರ್ಧದಲ್ಲಿ ನೇರವಾಗಿ ಅರಸರುಗಳೇ ಆಳ್ವಿಕೆ ನಡೆಸಲು ಪ್ರಾರಂಭಿಸಿದರು. ಫ್ರಾನ್ಸ್‌ನಲ್ಲಿ ಹದಿನಾಲ್ಕನೆಯ ಲೂಯಿ; ಇಂಗ್ಲೆಂಡಿನ ಎರಡನೆಯ ಚಾರ್ಲ್ಸ್, ಒಂದನೆಯ ಲಿಯೋಪೋಲ್ಡ್ ಇವರುಗಳು ಮಂತ್ರಿಗಳನ್ನು ನೇಮಕ ಮಾಡುವ ಪದ್ಧತಿಯನ್ನು ರದ್ದುಗೊಳಿಸಿದರು. ಇದು ನಿರಂಕುಶಪ್ರಭುತ್ವದ ಆಳ್ವಿಕೆಯ ಪ್ರಾರಂಭದ ಹಂತ. ಈ ಹಂತದಲ್ಲಿ ನಾವು ಗಮನಿಸಬಹುದಾದ ಬೆಳವಣಿಗೆಯೆಂದರೆ ಅರಸ ಸಂಬಂಧವಾದ ರಾಜಕೀಯ ವ್ಯವಸ್ಥೆ ಜನ ಸಂಬಂಧವಾದ ವ್ಯವಸ್ಥೆಯಾಗಿ ಮಾರ್ಪಾಡುಗೊಳ್ಳಲಾರಂಭಿ ಸಿದ್ದುದು. ಇದಕ್ಕೆ ಮುಖ್ಯ ಕಾರಣ ಯುರೋಪಿನ ಆರ್ಥಿಕ ಪರಿಸ್ಥಿತಿಯಲ್ಲಾದ ಬದಲಾವಣೆ. ಅಂದರೆ ಊಳಿಗಮಾನ್ಯ ಪದ್ಧತಿ ಹಿಡಿತದಲ್ಲಿದ್ದ ಯುರೋಪಿನ ಒಟ್ಟು ರಾಜಕೀಯ ವ್ಯವಸ್ಥೆ ಆಗ ತಾನೇ ಹುಟ್ಟುತ್ತಿದ್ದ ಮಧ್ಯಮ ವರ್ಗದ ಹೊಸ ವ್ಯವಸ್ಥೆಯತ್ತ ತನ್ನ ದಿಕ್ಕು ಬದಲಾಯಿಸಿದ್ದು. ಇದರಿಂದಾಗಿ ಊಳಿಗ ಪದ್ಧತಿಯ ಅರಸರುಗಳು ತಮ್ಮ ಅಧಿಕಾರವನ್ನು ಕಳೆದುಕೊಂಡು ಹೊಸ ಆಳ್ವಿಕೆ ರೂಪುಗೊಳ್ಳಲಾರಂಭಿಸಿತು.

ಕಾರ್ಲ್‌ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ಪ್ರಕಾರ ನಿರಂಕುಶಪ್ರಭುತ್ವ ಒಂದು ರಾಜಕೀಯ ಪದ್ಧತಿ ಅಥವಾ ಬಂಡವಾಳದ ಪ್ರಾಬಲ್ಯತೆ. ಹದಿನಾಲ್ಕು ಮತ್ತು ಹದಿನೈದನೆಯ ಶತಮಾನದಲ್ಲಿನ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಸ್ಥಿತ್ಯಂತರಗಳ ನೇರ ಫಲಿತಾಂಶವೇ ನಿರಂಕುಶ ರಾಷ್ಟ್ರಗಳ ಉಗಮ. ಯುರೋಪಿನ ಕೇಂದ್ರೀಕೃತ ರಾಜಮನೆತನಗಳು ಮಧ್ಯಯುಗೀನ ಸಾಮಾಜಿಕ ರಚನೆಯನ್ನೇ ಪ್ರತಿನಿಧಿಸುತ್ತಿದ್ದವು. ಎಂಗೆಲ್ಸ್‌ರವರು ದರ್ಪಿಷ್ಟ ರಾಜಪ್ರಭುತ್ವವನ್ನು ಈ ರೀತಿ ವ್ಯಾಖ್ಯಾನಿಸಿದ್ದಾರೆ. "ಇದೊಂದು ಹಳೆಯ ಊಳಿಗ ಪದ್ಧತಿಯ ಶ್ರೀಮಂತ ವರ್ಗ ಹಾಗೂ ಹೊಸ ಮಧ್ಯಮ ವರ್ಗಗಳ ನಡುವಿನ ವರ್ಗ ಹೊಂದಾಣಿಕೆಯ ಉತ್ಪತ್ತಿ." ಅಂದರೆ ಊಳಿಗಮಾನ್ಯ ಪದ್ಧತಿ ಮತ್ತು ಅದನ್ನು ವಿರೋಧಿಸುವ ಮಧ್ಯಮ ವರ್ಗದ ಎರಡೂ ಲಕ್ಷಣಗಳನ್ನು ಹೊಂದಿರುವ ನೂತನ ವ್ಯವಸ್ಥೆ. ದರ್ಪಿಷ್ಟ ರಾಜಪ್ರಭುತ್ವದ ಎಲ್ಲಾ ಲಕ್ಷಣಗಳು ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಗೆ ಪೂರಕವಾಗಿಯೇ ಇವೆ. ಊಳಿಗಮಾನ್ಯ ಉತ್ಪಾದನಾ ವ್ಯವಸ್ಥೆಯಿಂದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಗೆ ಯುರೋಪಿನ ಒಟ್ಟು ಪರಿಸ್ಥಿತಿ ಬದಲಾಗುವ ಮೊದಲು ನಿರಂಕುಶಪ್ರಭುತ್ವ ಊಳಿಗ ವ್ಯವಸ್ಥೆಯನ್ನೇ ಅನುಸರಿಸುತ್ತಿದ್ದ ಶ್ರೀಮಂತವರ್ಗದ ಜನರ ಹತೋಟಿಯಲ್ಲಿತ್ತು. ಮಧ್ಯಮ ವರ್ಗದ ಕ್ರಾಂತಿಯ ಪ್ರವೇಶ ಒಟ್ಟು ಪರಿಸ್ಥಿತಿಯ ಮೇಲೆ ಆಮೂಲಾಗ್ರವಾದ ಬದಲಾವಣೆಯನ್ನು ತಂದಿತು. ರಾಜಪ್ರಭುತ್ವದ ಉಳಿವು ಹಾಗೂ ಭವಿಷ್ಯದ ದೃಷ್ಟಿಯಿಂದ ಶ್ರೀಮಂತ ಹಾಗೂ ಮಧ್ಯಮ ವರ್ಗದ ಜನರ ನಡುವೆ ಹೊಂದಾಣಿಕೆ ಏರ್ಪಡಿಸುವುದು ಅಂದಿನ ತುರ್ತುಗಳಲ್ಲಿ ಒಂದಾಗಿತ್ತು. ಆದ್ದರಿಂದಲೇ ನಿರಂಕುಶ ಪ್ರಭುತ್ವವನ್ನು ಶ್ರೀಮಂತವರ್ಗ ಹಾಗೂ ಮಧ್ಯಮವರ್ಗಗಳ ನಡುವಿನ ರಾಜಕೀಯ ಸಮತೋಲನವನ್ನು ಕಾಪಾಡಿಕೊಳ್ಳುವ ಸಾಧನವೆಂದು ಪರಿಗಣಿಸಲಾಯಿತು. ಆದರೆ ಈ ರಾಜಕೀಯ ಸಮತೋಲನ ಶಾಶ್ವತವಾಗಿರದೆ ತಾತ್ಕಾಲಿಕವಾದದ್ದಾಗಿತ್ತು. ಇಲ್ಲಿ ಸಮಸ್ಯೆಯನ್ನು ಸಂಕೀರ್ಣಗೊಳಿಸಿರುವ ಅಂಶಗಳೆಂದರೆ ಪರಸ್ಪರ ವೈಮನಸ್ಸು ಹಾಗೂ ಆರ್ಥಿಕತೆಯ ರೂಪಾಂತರ. ಕಾರ್ಲ್‌ಮಾರ್ಕ್ಸ್‌ರವರ ಮಾತಿನಲ್ಲಿಯೇ ಹೇಳುವುದಾದರೆ, ನಿರಂಕುಶಪ್ರಭುತ್ವದ ಲಕ್ಷಣಗಳು ಮುಖ್ಯವಾಗಿ ಬಂಡವಾಳವಾದಿ ಲಕ್ಷಣಗಳಾಗಿಯೇ ಗೋಚರಿಸುತ್ತವೆ. ಉದಾಹರಣೆಗೆ, ಶಾಶ್ವತ ಅಧಿಕಾರಶಾಹಿತ್ವ, ರಾಷ್ಟ್ರಿಯ ತೆರಿಗೆ ನೀತಿ, ಕಾನೂನು ವ್ಯವಸ್ಥೆ, ಏಕೀಕೃತ ಮಾರುಕಟ್ಟೆ ಹಾಗೂ ಶಾಶ್ವತ ಸೈನ್ಯ.

ಯುರೋಪಿನ ಒಟ್ಟು ವ್ಯವಸ್ಥೆ ಊಳಿಗಮಾನ್ಯ ಪದ್ಧತಿಯಿಂದ ಬಂಡವಾಳಶಾಹಿ ವ್ಯವಸ್ಥೆಗೆ ಬದಲಾವಣೆ ಹೊಂದಿರುವ ಬಗೆಯನ್ನು ರೋಡ್ನೀ ಹಿಲ್ಟನ್ ಪೀಠಿಕೆ ಬರೆದಿರುವ ದಿ ಟ್ರಾನ್ಸಿಷನ್ ಫ್ರಮ್ ಫ್ಯುಡಾಲಿಸಮ್ ಟು ಕ್ಯಾಪಿಟಲಿಸಮ್ ಎಂಬ ಗ್ರಂಥದಲ್ಲಿ ವಿವರವಾಗಿ

ಚಿತ್ರಿತವಾಗಿದೆ. ಈ ಗ್ರಂಥ ಒಂದು ಸಂವಾದದಂತಿದ್ದು ಇದರಲ್ಲಿ ಪೌಲ್ ಸ್ವೀಸಿ, ಮೌರಿಸ್ ಡೋಬ್, ಕ್ರಿಸ್ಟೋಫರ್ ಹಿಲ್, ಜೋರ್ಜ್ ಲೆಫಬ್ರೆವ್, ಎರಿಕ್ ಹಾಬ್ಸ್ ಬಾಮ್, ಹಿಲ್ಟನ್, ತಕಾಹಶಿ ಮತ್ತು ಜೋನ್ ಮಿರಿಂಗ್‌ಟಂನ್ ಇವರುಗಳ ವಿಮರ್ಶಾತ್ಮಕ ಲೇಖನಗಳಿವೆ. ಇವು ಯುರೋಪ್ ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಗೆ ಪರಿವರ್ತನೆ ಹೊಂದುತ್ತಿರುವ ಹಾದಿಯಲ್ಲಿ ನಿರಂಕುಶಪ್ರಭುತ್ವ ಒಂದು ಸಂಕೀರ್ಣ ಕಾಲಘಟ್ಟ ಎನ್ನುವ ವಾಸ್ತವವನ್ನು ವಿವರಿಸುತ್ತವೆ. ಯುರೋಪಿನ ರಾಜಕೀಯ ರಚನೆ ಕುರಿತಾಗಿಯೂ ವಿಮರ್ಶಾತ್ಮಕವಾಗಿ ಚಿಂತಿಸಲಾಗಿದೆ. ಮೌರಿಸ್ ಡೋಬ್‌ನ ಸ್ಟಡಿಸ್ ಇನ್ ದಿ ಡೆವಲಪ್‌ಮೆಂಟ್ ಆಫ್ ಕ್ಯಾಪಿಟಾಲಿಸಮ್ ಎಂಬ ಗ್ರಂಥ ಮಾರ್ಕ್ಸಿಸ್ಟ್ ಸೈದ್ಧಾಂತಿಕ ಹಿನ್ನೆಲೆಯಲ್ಲಿಟ್ಟುಕೊಂಡು ಊಳಿಗಮಾನ್ಯ ಪದ್ಧತಿ, ನಿರಂಕುಶ ಪ್ರಭುತ್ವ ಹಾಗೂ ಬಂಡವಾಳಶಾಹಿ ವ್ಯವಸ್ಥೆಯನ್ನು ನಿರೂಪಿಸಿದೆ. ನಿರಂಕುಶಪ್ರಭುಗಳ ಬಂಡವಾಳ ಕ್ರೋಢೀಕರಣ ಪ್ರಕ್ರಿಯೆ ಇಲ್ಲಿ ಚರ್ಚೆಗೊಳಗಾಗಿರುವ ಮುಖ್ಯ ವಸ್ತುವಾಗಿದೆ.

ಹದಿನೆಂಟನೆಯ ಶತಮಾನದ ಯುರೋಪಿನ ನಿರಂಕುಶ ರಾಜಪ್ರಭುತ್ವವನ್ನು ಎರಡು ಗುಂಪುಗಳಾಗಿ ವಿಂಗಡಿಸಲು ಸಾಧ್ಯ. ರಷ್ಯಾ ಮತ್ತು ಪ್ರಷ್ಯಾ ಒಂದು ಗುಂಪಾದರೆ ಇಂಗ್ಲೆಂಡ್ ಇನ್ನೊಂದು ಗುಂಪು. ಫ್ರಾನ್ಸ್, ಸ್ಪೈಯಿನ್ ಹಾಗೂ ಹಾಬ್ಸಬರ್ಗ್ ಈ ದೇಶಗಳು ಮೊದಲೆರಡೂ ಗುಂಪುಗಳ ಮಧ್ಯದಲ್ಲಿ ನಿಲ್ಲುತ್ತವೆ. ಹದಿನೆಂಟನೆಯ ಶತಮಾನದ ಯುರೋಪಿನ ಇತಿಹಾಸವನ್ನು ಗಮನಿಸುವಾಗ ವೇದ್ಯವಾಗುವ ಅಂಶವೆಂದರೆ ತುಂಬಾ ಪ್ರಾಮುಖ್ಯವಾದ ಹಾಗೂ ಕುತೂಹಲಕಾರಿಯಾದ ಆಡಳಿತಾತ್ಮಕ ಇತಿಹಾಸ. ರಾಜಕೀಯ ಹಾಗೂ ಸಂವಿಧಾನಾತ್ಮಕ ಇತಿಹಾಸದ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ಇರಲಿಲ್ಲ ವೆಂದೇ ಹೇಳಬೇಕಾಗುತ್ತದೆ. ಆಡಳಿತಾತ್ಮಕ ದಾಖಲೆಗಳು ಅರಸ ಹಾಗೂ ಆತನ ಸಚಿವರುಗಳ ನಡುವಿನ ಸಂಬಂಧಗಳ ಕುರಿತು ಹೆಚ್ಚಿನ ವಿವರಗಳನ್ನು ನೀಡುತ್ತವೆ. ಅರಸನ ಕೃಪೆಗೆ ಪಾತ್ರರಾಗಲು ಮಂತ್ರಿಗಳ ನಡುವೆ ಸ್ಪರ್ಧೆ ಹಾಗೂ ವೈಮನಸ್ಸು ಇತ್ತು. ಈ ರೀತಿಯ ಬೆಳವಣಿಗೆ ಇಡೀ ದೇಶದ ಆಂತರಿಕ ಹಾಗೂ ವಿದೇಶಾಂಗ ನೀತಿಯಲ್ಲಿ ಮಹತ್ತರ ಬದಲಾವಣೆಗಳನ್ನು ತರುತ್ತಿದ್ದವು. ನೀತಿಯಲ್ಲಿ ಮಾರ್ಪಾಡುಗಳುಂಟಾದವು. ಇಂಗ್ಲೆಂಡಿ ನೊಡನಿದ್ದ ಹಗೆತನ ಮಾಯವಾಗಿ ಮೈತ್ರೀ ಭಾವನೆಗಳು ಮೂಡಲಾರಂಭಿಸಿದವು. ರಾಜ ಅಥವಾ ಮಂತ್ರಿ ತಮ್ಮ ಸ್ಥಾನದಿಂದ ಬದಲಾದಾಗ ಈ ರೀತಿಯ ಬದಲಾವಣೆಗಳು ಉಂಟಾಗುತ್ತಿದ್ದವು. ಒಂದನೆಯ ಕೇಥರಿನ್‌ನ ನಂತರ ಅಧಿಕಾರಕ್ಕೆ ಬಂದ ಕೌಂಟ್ ಬೆಸ್ಟುಜೇವ್ ಪ್ರಷ್ಯಾ ವಿರೋಧಿ ನೀತಿಯನ್ನು ಅನುಸರಿಸಿದ. ಇದೇ ರೀತಿಯ ಬೆಳವಣಿಗೆಗಳನ್ನು ನಾವು ಪ್ರಷ್ಯಾದಲ್ಲೂ ಕಾಣಲು ಸಾಧ್ಯ. ಎರಡನೆಯ ಫ್ರೆಡ್‌ರಿಕ್ ಅಧಿಕಾರಕ್ಕೆ ಬಂದ ತರುವಾಯವೇ ಪ್ರಷ್ಯಾ ಸಿಲೀಸಿಯಾದ ಮೇಲೆ ಯುದ್ಧ ಪ್ರಾರಂಭಿಸಿತು. ಈ ಎರಡೂ ರಾಷ್ಟ್ರಗಳಲ್ಲಿಯೂ ಸಾರ್ವಜನಿಕರ ಅಭಿಪ್ರಾಯಕ್ಕೆ ಯಾವ ಮನ್ನಣೆ ಅಥವಾ ಮೌಲ್ಯವೂ ಇರಲಿಲ್ಲ. ಸರಕಾರ ಒಂದು ವರ್ಗದ ಜನರ ಹತೋಟಿಯಲ್ಲಿತ್ತು. ಅದು ಭೂಮಾಲಿಕ ಶ್ರೀಮಂತವರ್ಗ. ಆರಂಭದಲ್ಲಿ ಇಂಗ್ಲೆಂಡಿನಲ್ಲಿಯೂ ನಿರಂಕುಶ ರಾಜಪ್ರಭುತ್ವವೇ ದೇಶದ ರಾಜಕೀಯ ಜೀವನದ ಕೇಂದ್ರಬಿಂದುವಾಗಿತ್ತು. ಪಾರ್ಲಿರಮೆಂಟ್ ಎನ್ನುವ ವ್ಯವಸ್ಥೆ ಅಸ್ತಿತ್ವದಲ್ಲಿದ್ದರೂ ರಾಜಮನೆತನದ ಹತೋಟಿಯಲ್ಲಿತ್ತು. ಹದಿನೇಳನೆಯ ಶತಮಾನದ ದ್ವಿತೀಯಾರ್ಧದಲ್ಲಿ ರೂಪುಗೊಂಡ ಮಧ್ಯಮವರ್ಗ ನಿರಂಕುಶ ಪ್ರಭುತ್ವಕ್ಕೆ ಬಲವಾದ ತಡೆಗೋಡೆಯಾಗಿ ಅವನತಿಯನ್ನು ಕಾಣುವಂತೆ ಮಾಡಿತು. ಈ ವಿಷಯ ಕುರಿತು ಲೇಖನದ ಮುಂದಿನ ಭಾಗದಲ್ಲಿ ವಿವರವಾಗಿ ಚರ್ಚಿಸಲಾಗಿದೆ. ಫ್ರಾನ್ಸ್ ದೇಶದಲ್ಲಿನ ರಾಜಪ್ರಭುತ್ವ ಈಗ ತಾನೇ ವಿವರಿಸಿದ ಹಾಗೆ ರಷ್ಯಾ, ಪ್ರಷ್ಯಾ ಹಾಗೂ ಇಂಗ್ಲೆಂಡಿನ ರಾಜಪ್ರಭುತ್ವದ ಕೆಲವೊಂದು ಲಕ್ಷಣಗಳನ್ನು ಒಳಗೊಂಡಿತ್ತು. ಫ್ರಾನ್ಸ್ ದೇಶದ ಅರಸರುಗಳು ಹೆಚ್ಚಿನ ವೈಯಕ್ತಿಕ ಅಧಿಕಾರವನ್ನು ಪಡೆದುಕೊಂಡುದ್ದು ನಿಜ. ದೇಶದಲ್ಲಿನ ಎಲ್ಲಾ ಆಡಳಿತಾತ್ಮಕ ಹಾಗೂ ಇನ್ನಿತರ ಚಟುವಟಿಕೆಗಳು ನೇರವಾಗಿ ಅರಸನಿಂದಲೇ ನಡೆಯಬೇಕಾಗಿತ್ತು. ಉದಾಹರಣೆಗೆ, ಫ್ರಾನ್ಸಿನ ಅರಸ ಹದಿನಾಲ್ಕನೆಯ ಲೂಯಿ "ನಾನೇ ರಾಷ್ಟ್ರ" ಎಂಬುದಾಗಿ ತನ್ನನ್ನು ತಾನು ಗುರುತಿಸಿಕೊಂಡಿದ್ದ. ನಾವು ಸೂಕ್ಷ್ಮವಾಗಿ ಫ್ರಾನ್ಸಿನ ನಿರಂಕುಶ ಪ್ರಭುತ್ವವನ್ನು ಅವಲೋಕಿಸಿದಾಗ ಮಂತ್ರಿಗಳ ಹಾಗೂ ಪ್ರಾಂತೀಯ ಅಧಿಕಾರಿಗಳ ಒಳ ಹಾಗೂ ಹೊರ ರಾಜಕೀಯ ಗೋಚರಿಸುತ್ತದೆ. ಫ್ರಾನ್ಸ್‌ನಲ್ಲಿಯೂ ಹದಿನೆಂಟನೆಯ ಶತಮಾನದಲ್ಲಿ ಕ್ರಾಂತಿಯ ಛಾಯೆ ಮೂಡುತ್ತಿದ್ದಂತೆಯೇ ಪ್ರಾಂತ್ಯಾಧಿಕಾರಿಗಳು ಸ್ವತಂತ್ರವಾಗಿ ವ್ಯವಹರಿಸಲು ಪ್ರಾರಂಭಿಸಿದರು. ಈ ಅಧಿಕಾರದ ವಿಕೇಂದ್ರಿಕರಣ ಫ್ರಾನ್ಸಿನ ನಿರಂಕುಶ ಪ್ರಭುತ್ವದ ಅವನತಿಯನ್ನು ಸೂಚಿಸಿತು.

ಲೇಖನದ ಮುಂದಿನ ಭಾಗದಲ್ಲಿ ಯುರೋಪಿನ ಬೇರೆ ಬೇರೆ ರಾಷ್ಟ್ರಗಳಲ್ಲಿ ಯಾವ ರೀತಿಯ ನಿರಂಕುಶಪ್ರಭುತ್ವ ಅಸ್ತಿತ್ವದಲ್ಲಿತ್ತು ಮತ್ತು ಅದರ ಸ್ವಭಾವ ಹಾಗೂ ವ್ಯಾಪ್ತಿಯ ಕುರಿತು ಚರ್ಚಿಸಲಾಗುವುದು. ಮುಖ್ಯವಾಗಿ ಇಂಗ್ಲೆಂಡ್, ಫ್ರಾನ್ಸ್, ಪ್ರಷ್ಯಾ, ರಷ್ಯಾ, ಸ್ಪೈನ್, ಪೋಲೆಂಡ್, ಅಸ್ಟ್ರಿಯಾ, ಸ್ವೀಡನ್, ಡಚ್ ಗಣರಾಜ್ಯ ಮುಂತಾದ ದೇಶಗಳಲ್ಲಿನ ಅಧಿಕಾರದ ಸ್ವರೂಪ ಹಾಗೂ ರಾಜಕೀಯ ಸಂಕೀರ್ಣತೆಯ ಕುರಿತು ಇಲ್ಲಿ ಚರ್ಚೆ ನಡೆಸಲಾಗಿದೆ.

ಇಂಗ್ಲೆಂಡಿನ ನಿರಂಕುಶಪ್ರಭುತ್ವದ ಕುರಿತು ಚರ್ಚಿಸುವಾಗ ಇದು ಯುರೋಪಿನ ಇತರ ರಾಷ್ಟ್ರಗಳಿಗಿಂತ ಭಿನ್ನವಾಗಿ ಕಂಡುಬರುತ್ತದೆ. ಮಧ್ಯಯುಗೀನ ಇಂಗ್ಲೆಂಡಿನ ರಾಜಪ್ರಭುತ್ವ ಊಳಿಗಮಾನ್ಯ ಪದ್ಧತಿಯ ಬಿಗಿಮುಷ್ಟಿಯಲ್ಲಿ ಕಾರ್ಯನಿರ್ವಹಿಸುವುದು ಅನಿವಾರ್ಯ ವಾಗಿತ್ತು. ಊಳಿಗಮಾನ್ಯ ಪದ್ಧತಿ ಮಧ್ಯಯುಗೀನ ಯುರೋಪಿನ ಒಟ್ಟಾರೆ ಜನಜೀವನದ ಸಾಮಾನ್ಯ ಲಕ್ಷಣವಾಗಿ ಕಂಡುಬರುತ್ತದೆ. ಅರಸುಮನೆತನಗಳೂ ಈ ವ್ಯವಸ್ಥೆಯ ಚೌಕಟ್ಟಿನಿಂದ ಹೊರಬರಲು ಪ್ರಯತ್ನಿಸುತ್ತಿರಲಿಲ್ಲವೆಂದೇ ಹೇಳಬಹುದು. ಇಂಗ್ಲೆಂಡಿನ ಮಧ್ಯಯುಗೀನ ರಾಜಪ್ರಭುತ್ವ ಬಲಿಷ್ಠವಾಗಿದ್ದಿದ್ದೇ ಅದು ಯುರೋಪ್ ಖಂಡದಲ್ಲಿ ಆಡಳಿತಾತ್ಮವಾಗಿ ತನ್ನ ಭೌಗೋಳಿಕ ಮೇರೆಗಳನ್ನು ವಿಸ್ತರಿಸಲು ಪ್ರೇರಣೆ ನೀಡಿದ್ದು. ಇಲ್ಲಿ ನಾವು ಇಂಗ್ಲೆಂಡಿನ ನಿರಂಕುಶಪ್ರಭುತ್ವದ ಇತಿಹಾಸವನ್ನು ಅವಲೋಕಿಸಿದರೆ ಅದು ನೋರ್ಮಾರನ್ ಮತ್ತು ಆ್ಯಂಗೀವ್ನ್ ರಾಜವಂಶಗಳ ಆಳ್ವಿಕೆಯಿಂದಲೇ ಪ್ರಾರಂಭವಾಗಿದೆ ಎಂಬುದಾಗಿ ತಿಳಿದುಬರುತ್ತದೆ. ಈ ರಾಜವಂಶಗಳ ಆಳ್ವಿಕೆಯಲ್ಲಿ ಪಾರ್ಲಿಮೆಂಟ್ ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪಡೆದುಕೊಂಡಿರಲಿಲ್ಲ.

ಟ್ಯೂಡರ್ ವಂಶ ಮತ್ತು ಸ್ಟುವರ್ಟ್ ವಂಶಗಳು ಇಂಗ್ಲೆಂಡಿನ ನಿರಂಕುಶಪ್ರಭುತ್ವಕ್ಕೆ ಹೊಸ ಆಯಾಮಗಳನ್ನು ಕಲ್ಪಿಸಿದರೂ ಪಾರ್ಲಿಮೆಂಟಿನೊಡನೆ ಉಂಟಾದ ಆಂತರಿಕ ಕಲಹದಿಂದಾಗಿ ನಿರಂಕುಶ ಆಡಳಿತವನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ. ಪಾರ್ಲಿಮೆಂಟ್ ಅರಸರುಗಳ ಅಧಿಕಾರವನ್ನು ಪ್ರಶ್ನಿಸುವ ಹಾಗೂ ನಿಯಂತ್ರಿಸುವಷ್ಟು ಸಾಮರ್ಥ್ಯವನ್ನು ಹಂತಹಂತವಾಗಿ ಪಡೆದುಕೊಂಡಿತು. ಒಂದನೆಯ ಎಡ್ವರ್ಡ್‌ನ ನಂತರದ ಯಾವ ಅರಸರೂ ಪಾರ್ಲಿಮೆಂಟಿನ ಅನುಮತಿ ಇಲ್ಲದೆ ಹೊಸ ಸೌಲಭ್ಯಗಳನ್ನು ಹೊಂದುವಂತಿರಲಿಲ್ಲ. ಈ ಅಂಶವನ್ನು ಜಿ.ಪಿ.ಕೂಪರ್ ತಮ್ಮ "ಡಿಫರೆನ್ಸಸ್ ಬಿಟ್ ವೀನ್ ಇಂಗ್ಲೀಷ್ ಆ್ಯಂಡ್ ಕಾಂಟಿನೆಂಟಲ್ ಗವರ್ನ್‌ಮೆಂಟ್ಸ್ ಇನ್ ದಿ ಆರ್ಲೀ ಸೆವೆಂಟೀನ್ತ್ ಸೆಂಚುರಿ" ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ. ಒಂದನೆಯ ಚಾರ್ಲ್ಸ್‌ನ ಅವಧಿಯಲ್ಲಿಯೇ ಆಂತರಿಕ ಕಲಹ ಪ್ರಾರಂಭಗೊಂಡಿತ್ತು. ಚರ್ಚ್ ಮತ್ತೊಮ್ಮೆ ಇಂಗ್ಲೆಂಡಿನ ರಾಜಕೀಯ ಜೀವನದ ಕೇಂದ್ರಬಿಂದುವಾಗಿ ತನ್ನನ್ನು ಶುದ್ಧೀಕರಿಸುವ ಪ್ರಕ್ರಿಯೆ ಪ್ರಾರಂಭಿಸಿದ್ದೇ ವಿರೋಧಕ್ಕೆ ಎಡೆಮಾಡಿಕೊಟ್ಟಿತು ಎಂಬುದು ಇತಿಹಾಸಕಾರರ ವಾದವಾಗಿದೆ. ಈ ವಿರೋಧಿಸುವ ಪ್ರಕ್ರಿಯೆಯಲ್ಲಿ ಪಾಲುಗೊಂಡಿದ್ದವರು ವ್ಯಾಪಾರಸ್ಥರು ಹಾಗೂ ಶ್ರೀಮಂತ ಮಧ್ಯಮ ವರ್ಗದ ಜನರು. ಈ ವರ್ಗದ ಜನರು ತಮ್ಮ ಆರ್ಥಿಕ ಚಟುವಟಿಕೆಯಿಂದಾಗಿ ಇಂಗ್ಲೆಂಡಿನಲ್ಲಿ ಪ್ರಭಾವಶಾಲಿ ವರ್ಗವಾಗಿ ರೂಪುಗೊಂಡು ಪಾರ್ಲಿಮೆಂಟಿನಲ್ಲಿ ನಿರ್ಣಾಯಕ ತೀರ್ಮಾನಗಳನ್ನು ಕೈಗೊಳ್ಳುವಷ್ಟು ಸಮರ್ಥರಾಗಿದ್ದರು.

ಈ ಬೆಳವಣಿಗೆ ನೇರವಾಗಿ ಇಂಗ್ಲೆಂಡಿನ ರಾಜವಂಶ ಹಾಗೂ ಪಾರ್ಲಿಮೆಂಟಿನೊಡನೆ ಕಲಹ ಏರ್ಪಡುವಂತೆ ಮಾಡಿತು. ಆಲಿವರ್ ಕ್ರೋಮ್‌ವೆಲ್, ಎರಡನೆಯ ಚಾರ್ಲ್ಸ್ ಹಾಗೂ ಎರಡನೆಯ ಜೇಮ್ಸ್‌ನ ಅವಧಿಯಲ್ಲಿ ಆಂತರಿಕ ಕಲಹ ಉತ್ತುಂಗಕ್ಕೇರಿತ್ತು. ಕ್ರಿ.ಶ.೧೬೮೮ರಲ್ಲಿ ರಕ್ತರಹಿತ ಕ್ರಾಂತಿ ನಡೆದು ಸ್ಟುವರ್ಟ್ ರಾಜವಂಶದ ಆಳ್ವಿಕೆ ಕೊನೆಗೊಂಡಿತು. ಪಾರ್ಲಿಮೆಂಟ್ ಇಂಗ್ಲೆಂಡಿನಲ್ಲಿ ಸಂಪೂರ್ಣ ಅಧಿಕಾರವನ್ನು ಪಡೆದು ಕೊಂಡಿತು. ಡಚ್‌ನ ರಾಜಕುಮಾರ ವಿಲ್ಯಮ್‌ನನ್ನು ಹೊಸ ಸಂವಿಧಾನಾತ್ಮಕ ಅರಸನನ್ನಾಗಿ ನೇಮಕ ಮಾಡಲಾಯಿತು. ಇದರಿಂದಾಗಿ ಪಾಶ್ಚಿಮಾತ್ಯ ಯುರೋಪಿನ ಬಲಿಷ್ಠ ರಾಷ್ಟ್ರವಾಗಿ ಇಂಗ್ಲೆಂಡ್ ರೂಪುಗೊಂಡರೂ ನಿರಂಕುಶ ಪ್ರಭುತ್ವ ಬಹುಬೇಗನೆ ತನ್ನ ಅಂತ್ಯವನ್ನು ಕಂಡುಕೊಂಡಿತು. ಯುರೋಪಿನ ಬಿಟ್ಟು ಇತಿಹಾಸವನ್ನು ಗಮನಿಸಿದರೆ ಇಂಗ್ಲೆಂಡಿನ ನಿರಂಕುಶಪ್ರಭುತ್ವ ದೌರ್ಬಲ್ಯಗಳಿಂದ ಕೂಡಿದ್ದು ಮತ್ತು ಅಲ್ಪ ಅವಧಿಯದ್ದಾಗಿತ್ತೆಂದು ತೋರುತ್ತದೆ. ನಿರಂಕುಶಪ್ರಭುತ್ವ ಬೆಳವಣಿಗೆ ಹೊಂದುವ ಹಾದಿಯಲ್ಲೇ ಮಧ್ಯಮ ವರ್ಗದ ಕ್ರಾಂತಿಗೆ ಸಿಲುಕಿ ಅವನತಿಯನ್ನು ಹೊಂದಿತು ಅಥವಾ ಬೆಳವಣಿಗೆಯ ಹಂತದಲ್ಲೇ ಮುಗ್ಗರಿಸಿತು. ಇಂಗ್ಲೆಂಡಿನ ಪ್ರಜಾಸತ್ತಾತ್ಮಕ ಬೆಳವಣಿಗೆಗಳು ಯುರೋಪಿನ ಇತರ ರಾಷ್ಟ್ರಗಳಿಗೆ ಹೋಲಿಸಿದರೆ ಒಂದು ಅಪವಾದದಂತಿದ್ದರೂ ಯುರೋಪಿನಾದ್ಯಂತ ಹೊಸ ಅರಿವಿನ ಸೃಷ್ಟಿಗೆ ದಾರಿಮಾಡಿಕೊಟ್ಟಿರುವುದಂತು ನಿಜ.

ಫ್ರಾನ್ಸ್‌ನ ನಿರಂಕುಶಪ್ರಭುತ್ವ ಹದಿನಾಲ್ಕನೆಯ ಲೂಯಿಯ ಅವಧಿಯಲ್ಲಿ ಉತ್ತುಂಗಕ್ಕೇರಿತ್ತು ಎಂಬುದಾಗಿ ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಫ್ರಾನ್ಸ್ ಎನ್ನುವ ಭೌಗೋಳಿಕ ಭೂಪ್ರದೇಶ ಹದಿನಾಲ್ಕನೆಯ ಲೂಯಿಯ ಹೆಸರಿನಲ್ಲಿ ಗುರುತಿಸಲ್ಪ ಡುತ್ತಿತ್ತು. ಇಲ್ಲಿ ರಾಷ್ಟ್ರ ಎನ್ನುವ ಕಲ್ಪನೆ ಪ್ರಾಮುಖ್ಯವೆನಿಸುವುದಿಲ್ಲ. ಒಬ್ಬ ವ್ಯಕ್ತಿ ರಾಷ್ಟ್ರಕ್ಕೆ ಸಮನಾಗಿರುತ್ತಾನೆ. ನಾನೇ ರಾಷ್ಟ್ರ ಎಂಬುದಾಗಿ ಹದಿನಾಲ್ಕನೆಯ ಲೂಯಿ ಸ್ವಯಂ ಘೋಷಿಸಿಕೊಂಡಿದ್ದ. ಇವನ ಆಳ್ವಿಕೆಯನ್ನು ವೈಭವದ ರಾಜಪ್ರಭುತ್ವವೆಂದೂ ಕರೆಯಲಾಗಿದೆ. ಆದರೆ ಇದು ಆರ್ಥಿಕ ದಿವಾಳಿತನಕ್ಕೆ ಎಡೆಮಾಡಿಕೊಟ್ಟು ಫ್ರಾನ್ಸಿನ ನಿರಂಕುಶಪ್ರಭುತ್ವ ಹಂತಹಂತವಾಗಿ ಕುಸಿಯಲು ಪ್ರಾರಂಭಿಸಿದ್ದನ್ನು ನಾವು ಫ್ರಾನ್ಸ್‌ನ ಇತಿಹಾಸದಿಂದ ತಿಳಿಯಲು ಸಾಧ್ಯ. ಈ ಪ್ರಕ್ರಿಯೆಗೆ ಹದಿನೈದನೆಯ ಲೂಯಿ ಹಾಗೂ ಹದಿನಾರನೆಯ ಲೂಯಿ ನೇರವಾಗಿ ಬಲಿಯಾಗುತ್ತಾರೆ.

ಬೂರ್ಬನ್ ವಂಶದ ಅರಸ ನಾಲ್ಕನೆಯ ಹೆನ್ರಿಯ ಮರಣದ ನಂತರ ತಲೆದೋರಿದ ಅರಾಜಕತೆಯನ್ನು ಹೋಗಲಾಡಿಸಿ ಫ್ರಾನ್ಸ್‌ನಲ್ಲಿ ಬೂರ್ಬನ್ ವಂಶದ ಆಳ್ವಿಕೆಯನ್ನು ಪುನರ್‌ಸ್ಥಾಪಿಸಿದ ವ್ಯಕ್ತಿ ರಿಚಲ್ಯೂ. ಇವನು ಹದಿಮೂರನೆಯ ಲೂಯಿಯ ಪರವಾಗಿ ಆಳ್ವಿಕೆ ನಡೆಸುತ್ತಿದ್ದ. ಫ್ರಾನ್ಸಿನ ನಿರಂಕುಶಪ್ರಭುತ್ವ ಅಲ್ಲಿನ ಪ್ರಧಾನಮಂತ್ರಿಗಳಿಂದಲೇ ಪ್ರಾರಂಭಗೊಂಡಿತು ಎನ್ನುವ ಅಂಶವೂ ವೇದ್ಯವಾಗುತ್ತದೆ. ಇದರಿಂದಾಗಿಯೇ ನಿರಂಕುಶ ಪ್ರಭುತ್ವದ ಆಳ್ವಿಕೆಯ ಜೊತೆ ಜೊತೆಗೇ ಸಂವಿಧಾನಾತ್ಮಕ ಬೆಳವಣಿಗೆಗಳೂ ಕಂಡುಬರಲು ಪ್ರಾರಂಬಿಸಿದವು. ಇದು ಸಹಜ ಬೆಳವಣಿಗೆ ಎಂದೆನಿಸುತ್ತದೆ. ಹದಿನಾಲ್ಕನೆಯ ಲೂಯಿಯ ಆಳ್ವಿಕೆಯ ಪ್ರಥಮಾರ್ಧದಲ್ಲಿ ಮಜಾರಿನ್ ಎಂಬ ಮಂತ್ರಿ ಆತನ ಪರವಾಗಿ ಆಳ್ವಿಕೆ ನಡೆಸುತ್ತಿದ್ದ. ಇವನು ರಿಚಲ್ಯೂವಿನ ಮಾದರಿಯನ್ನೇ ಅನುಸರಿಸಿ ಫ್ರಾನ್ಸ್‌ನಲ್ಲಿ ಬಲಿಷ್ಠ ವಾದ ನಿರಂಕುಶ ಪ್ರಭುತ್ವ ರೂಪುಗೊಳ್ಳುವುದಕ್ಕೆ ಪ್ರಾಮುಖ ಕಾರಣನಾದ. ಇವನ ಪ್ರಕಾರ ಅರಸರು ದೇವರ ಜೀವಂತ ಪ್ರತಿಮೆ. ಹದಿನಾಲ್ಕನೆಯ ಲೂಯಿ ತನ್ನ ವೈಯಕ್ತಿಕ ಆಳ್ವಿಕೆಯನ್ನು ಪ್ರಾರಂಭಿಸಿದ್ದು ಕ್ರಿ.ಶ.೧೬೬೧ರಿಂದ. ಇವನ ಆಳ್ವಿಕೆಯಲ್ಲಿ ಕೋಲ್ಬರ್ಟ್ ಪ್ರಧಾನಮಂತ್ರಿಯಾಗಿದ್ದರೂ ರಿಚಲ್ಯೂವಿನಷ್ಟು ಅಧಿಕಾರ ಚಲಾಯಿಸಲು ಸಾಧ್ಯವಾಗು ತ್ತಿರಲಿಲ್ಲ. ಏಕೆಂದರೆ ಅರಸ ಸ್ವತಹ ತಾನೇ ರಾಜಕೀಯ ನಿರ್ಣಯಗಳನ್ನು ಕೈಗೊಳ್ಳುತ್ತಿದ್ದ. ಆದರೂ ಸಂಪೂರ್ಣವಾಗಿ ತನ್ನ ಆಳ್ವಿಕೆಯನ್ನು ಯುದ್ಧಗಳಿಗಾಗಿಯೇ ಮೀಸಲಿಟ್ಟ. ಹದಿನಾಲ್ಕನೆಯ ಲೂಯಿಗೆ ಕೋಲ್ಬರ್ಟ್‌ನ ಆರ್ಥಿಕ ನೀತಿಗಳು ಬೆಂಬಲ ನೀಡುತ್ತಿದ್ದವು.

ಹದಿನಾಲ್ಕನೆಯ ಲೂಯಿ ಎಷ್ಟೇ ಸಮರ್ಥ ಅರಸನಾಗಿದ್ದರೂ ಆತನ ಆಳ್ವಿಕೆಯುದ್ದಕ್ಕೂ ಶ್ರೀಮಂತ ವರ್ಗದ ಹಾಗೂ ಮಧ್ಯಮ ವರ್ಗದ ಜನರ ನಡುವಿನ ತಿಕ್ಕಾಟ ನಡೆದೇ ಇತ್ತು. ಇಲ್ಲಿ ನಾವು ಊಳಿಗಮಾನ್ಯ ಪದ್ಧತಿಯ ಮುಂದುವರಿಕೆಯನ್ನು ಗಮನಿಸಲು ಸಾಧ್ಯ. ರಾಷ್ಟ್ರ ಎನ್ನುವ ಕಲ್ಪನೆ ಅಮೂರ್ತ ರೂಪದಲ್ಲಿದ್ದರೂ ಆ ಭಾವನೆ ರೂಪುಗೊಳ್ಳುವುದಕ್ಕೆ ಮತ್ತು ಬಲಗೊಳ್ಳುವುದಕ್ಕೆ ಪೂರಕವಾದ ಅಂಶಗಳನ್ನು ಹದಿನಾಲ್ಕನೆಯ ಲೂಯಿಯ ಆಳ್ವಿಕೆಯಲ್ಲೇ ಗಮನಿಸಲು ಸಾಧ್ಯ. ಫ್ರಾನ್ಸಿನ ರಾಜಕೀಯ ವ್ಯವಸ್ಥೆಯ ಒಳಹೊಕ್ಕು ನೋಡಿದಾಗ ಊಳಿಗ ದೊರೆಗಳು ಹೆಚ್ಚಿನ ಅಧಿಕಾರ ಹಾಗೂ ಸವಲತ್ತುಗಳನ್ನು ಹೊಂದಿರುತ್ತಿದ್ದದ್ದು ಕಂಡು ಬರುತ್ತದೆ. ಇದು ಅರಾಜಕತೆಗೆ ಎಡೆಮಾಡಿಕೊಟ್ಟು ರಾಷ್ಟ್ರ ಎನ್ನುವ ಸಂಸ್ಥೆ ರೂಪುಗೊಳ್ಳು ವುದಕ್ಕೆ ನೇರವಾಗಿ ಕಾರಣವಾಯಿತು. ಕ್ರಿ.ಶ.೧೭೮೯ರಲ್ಲಿ ಫ್ರಾನ್ಸ್‌ನಲ್ಲಿ ನಡೆದ ಮಹಾ ಕ್ರಾಂತಿಯ ಬೀಜ ಮೊಳಕೆಯೊಡೆಯಲು ಪ್ರಾರಂಭಿಸಿದ್ದು ಈ ಅವಧಿಯಲ್ಲಿಯೇ. ಕುಲೀನ ವರ್ಗದ ಜನರ ವಿರೋಧವನ್ನು ಅರ್ಥೈಸಿಕೊಂಡ ಹದಿನಾಲ್ಕನೆಯ ಲೂಯಿ ಅವರನ್ನೆಲ್ಲಾ ತನ್ನ ಸಭಾಸದರನ್ನಾಗಿ ಮಾಡಿ ಅವರ ವಿಶ್ವಾಸವನ್ನು ಗಳಿಸುವಲ್ಲಿ ಯಶಸ್ವಿಯಾಗಿದ್ದ. ಮಧ್ಯಮವರ್ಗದ ಜನರು ಅಪಾರ ಸಂಪತ್ತನ್ನು ಗಳಿಸಿ ಅಧಿಕಾರ ಮತ್ತು ಸವಲತ್ತುಗಳನ್ನು ಪಡೆಯಲು ಹಂಬಲಿಸುತ್ತಿದ್ದರು. ಇದಕ್ಕೆ ಪೂರಕವೆಂಬಂತೆ ಸಾಮಾನ್ಯ ಜನರ ಬೆಂಬಲವು ಸಿಕ್ಕಿತು. ಹೆಚ್ಚು ಹೆಚ್ಚು ಪೇಟೆ-ಪಟ್ಟಣಗಳು ಅಸ್ತಿತ್ವಕ್ಕೆ ಬರಲಾರಂಭಿಸಿದವು. ಈ ನಗರೀಕರಣ ಪ್ರಕ್ರಿಯೆ ಫ್ರಾನ್ಸಿನ ಆರ್ಥಿಕತೆಯ ಮೇಲೆ ಅದರಲ್ಲೂ ಮುಖ್ಯವಾಗಿ ಮಧ್ಯಮವರ್ಗದ ಜನರ ಆರ್ಥಿಕ ಮಟ್ಟವನ್ನು ಮೇಲಕ್ಕೇರಿಸಿತು. ಈ ಆರ್ಥಿಕತೆಯಲ್ಲಿನ ಬದಲಾವಣೆ ಊಳಿಗಮಾನ್ಯ ಪದ್ಧತಿಯ ಅವನತಿಗೆ ಕಾರಣವಾಗಿರುವುದು ಸಹಜವೆನಿಸುತ್ತದೆ. ಹದಿನೆಂಟನೆಯ ಶತಮಾನದ ದ್ವಿತೀಯಾರ್ಧದಲ್ಲಿ ಬೂರ್ಬನ್ ರಾಜವಂಶದ ಆಳ್ವಿಕೆ ಕೊನೆಗೊಳ್ಳುವುದಕ್ಕೂ ಇದೇ ಪ್ರಮುಖ ಕಾರಣ. ಫ್ರಾನ್ಸ್‌ನ ಅಲಕ್ಷಿತ ವರ್ಗದ ಜನರು ತಮ್ಮ ಮೂಲಭೂತ ಬೇಡಿಕೆಗಳನ್ನು ಈಡೇರಿಸು ವುದಕ್ಕೋಸ್ಕರ ಮಧ್ಯಮ ವರ್ಗದೊಡನೆ ಸೇರಿಕೊಂಡು ಕ್ರಾಂತಿ ಗಟ್ಟಿಯಾಗಿ ಬೇರೂರುವಂತೆ ಮಾಡುತ್ತಾರೆ. ಇದರಿಂದಾಗಿ ಹದಿನಾಲ್ಕನೆಯ ಲೂಯಿಯಿಂದ ಪ್ರಾರಂಭಗೊಂಡ

ವೈಭವದ ರಾಜಪ್ರಭುತ್ವ ಅನೇಕ ಚಾರಿತ್ರಿಕ ತಿರುವುಗಳನ್ನು ಪಡೆದುಕೊಂಡು ಕ್ರಿ.ಶ.೧೭೮೯ರ ಹೊತ್ತಿಗೆ ಸಾಮಾನ್ಯ ಮತ್ತು ಮಧ್ಯಮ ವರ್ಗದ ಜನರ ಕ್ರಾಂತಿಗೆ ಸಿಲುಕಿ ಅವನತಿಯನ್ನು ಹೊಂದಿತು.

ಪ್ರಷ್ಯಾ ದೇಶದಲ್ಲಿ ಹೊಹೆನ್‌ಜೊಲೆರೆನ್ಸ್ ವಂಶದ ಅರಸರು ಆಳ್ವಿಕೆ ನಡೆಸುತ್ತಿದ್ದರು. ಈ ವಂಶದ ಪ್ರಸಿದ್ಧ ಅರಸ ಎರಡನೆಯ ಫ್ರೆಡ್‌ರಿಕ್. ಇವನ ಆಳ್ವಿಕೆಯ ಅವಧಿ ಕ್ರಿ.ಶ.೧೭೪೦ ರಿಂದ ೧೭೮೬ರವರೆಗೆ. ಫ್ರೆಂಚ್ ದಾರ್ಶನಿಕ ವೊಲ್ಟೇರ್ ಫ್ರೆಡ್‌ರಿಕ್‌ನ ಆಳ್ವಿಕೆಯನ್ನು ಉದಾರವಾದಿ ನಿರಂಕುಶಪ್ರಭುತ್ವ ಎಂಬುದಾಗಿ ಕರೆದಿದ್ದಾನೆ. ರಾಜಪ್ರಭುತ್ವದ ಅಧಿಕಾರದ ಸ್ವರೂಪವನ್ನು ಗಮನಿಸಿ ನಿರಂಕುಶ, ಉದಾರವಾದಿ ಹಾಗೂ ಪ್ರಜ್ಞಾವಂತ ಎಂಬುದಾಗಿ ಸರಕಾರದ ವಿವಿಧ ಮಾದರಿಗಳನ್ನು ವರ್ಗೀಕರಿಸಬಹುದು. ಈ ಹಿನ್ನೆಲೆಯಿಂದಲೇ ವೋಲ್ಟೇರ್ ಫ್ರೆಡ್‌ರಿಕನ ಆಳ್ವಿಕೆಯನ್ನು ಉದಾರವಾದಿ ನಿರಂಕುಶಪ್ರಭುತ್ವ ಎಂಬುದಾಗಿ ಕರೆದಿರಬೇಕು. ಫ್ರೆಡ್‌ರಿಕನನ್ನು 'ಮಹಾಶಯ' ಎಂಬುದಾಗಿಯೂ ಯುರೋಪಿನ ಇತಿಹಾಸದಲ್ಲಿ ಗುರುತಿಸಲಾಗಿದೆ. ಇವನ ಆಳ್ವಿಕೆಯಲ್ಲಿ ನಡೆದ ಪ್ರಮುಖ ಘಟನೆಗಳೆಂದರೆ ಕೇಂದ್ರೀಕೃತ ಅಧಿಕಾರಶಾಹಿಯ ಧೋರಣೆ ಮತ್ತು ಸಿಲೀಸಿಯಾ ಯುದ್ಧ. ಇವೆರಡೂ ಪ್ರತಿಷ್ಠೆಯ ಪ್ರಶ್ನೆ ಹಾಗೂ ಪ್ರಭುತ್ವದ ಮುಂದುವರಿಕೆಯ ಸಂಕೀರ್ಣ ಘಟ್ಟವಾಗಿದ್ದು ಫ್ರೆಡ್‌ರಿಕ್ ತುಂಬಾ ಚಾಣಾಕ್ಷತನದಿಂದ ನಿಭಾಯಿಸುವಲ್ಲಿ ಯಶಸ್ವಿಯಾದ.

ಕೇಂದ್ರೀಕೃತ ಅಧಿಕರಶಾಹಿಯ ಧೋರಣೆ ಆಂತರಿಕ ಸಮಸ್ಯೆಯಾಗಿದ್ದು ನಿರಂಕುಶ ಪ್ರಭುತ್ವವನ್ನು ಗಟ್ಟಿಗೊಳಿಸುವ ಅಂಶವಾಗಿದೆ. ಶ್ರೀಮಂತ ವರ್ಗದ ಅಧೀನದಲ್ಲಿದ್ದ ಅನೇಕ ಪ್ರಾಂತ್ಯಗಳನ್ನು ಕೇಂದ್ರದೊಡನೆ ವಿಲೀನಗೊಳಿಸುವ ಉದ್ದೇಶದಿಂದ ಮತ್ತು ಒಂದು ಬಲಿಷ್ಠ ಹಾಗೂ ಸ್ಥಿರವಾದ ಸೈನ್ಯವನ್ನು ಹೊಂದುವ ಉದ್ದೇಶಕ್ಕಾಗಿ ಕೇಂದ್ರೀಕೃತ ಅಧಿಕಾರಶಾಹಿ ಧೋರಣೆಯ ಅಗತ್ಯತೆ ಮತ್ತು ಜರೂರು ಫ್ರೆಡ್‌ರಿಕನಿಗೆ ಕಂಡುಬಂತು. ದೇಶದ ಪ್ರಗತಿಗೆ ಸರಕಾರದ ಹಸ್ತಕ್ಷೇಪ ಅನಿವಾರ್ಯ ಎಂಬ ಧೋರಣೆಯನ್ನು ಫ್ರೆಡ್‌ರಿಕ್ ಹೊಂದಿದ್ದ. ಅಂದರೆ ಆಡಳಿತದ ಪ್ರತಿಯೊಂದು ಮಜಲುಗಳಲ್ಲೂ ಸರಕಾರ ನೇರ ಹಸ್ತಕ್ಷೇಪ ನಡೆಸಿದರೆ ಮಾತ್ರ ಆರ್ಥಿಕ ಪ್ರಗತಿ ಸಾಧ್ಯ ಎಂಬ ಮನೋಭಾವನೆಯನ್ನು ಹೊಂದಿದ್ದ. ಫ್ರೆಡ್‌ರಿಕ್‌ನ ಆಳ್ವಿಕೆಯಲ್ಲಿ ಕೃಷಿ ಮತ್ತು ಕೈಗಾರಿಕೆಗಳಿಗೆ ಹೆಚ್ಚಿನ ಒತ್ತನ್ನು ನೀಡಿ ನೀತಿಗಳನ್ನು ರೂಪಿಸಲಾಗುತ್ತಿತ್ತು. ಧಾರ್ಮಿಕ ಗಲಭೆಗಳೇ ಮುಖ್ಯವಾಗಿದ್ದು ಅಂದಿನ ಯುರೋಪಿನ ಪರಿಸ್ಥಿತಿಯಲ್ಲಿ ಪ್ರಷ್ಯಾ ಮಾತ್ರ ಒಂದು ಅಪವಾದದಂತಿತ್ತು.

ಪ್ರಷ್ಯಾದ ವಿದೇಶಾಂಗ ನೀತಿಯಲ್ಲಿ ಪ್ರಮುಖವಾಗಿ ಚರ್ಚೆಗೆ ಆಸ್ಪದವಾಗಿರುವ ಸಂಗತಿ ಸಿಲೀಸಿಯಾ ವಿವಾದಕ್ಕೆ ಸಂಬಂಧಪಟ್ಟದ್ದು. ಇದನ್ನು ಸಪ್ತ ವಾರ್ಷಿಕ ಯುದ್ಧವೆಂದೇ ಕರೆಯಲಾಗಿದೆ. ಯುರೋಪಿನ ಅನೇಕ ದೇಶಗಳೂ ಈ ಯುದ್ಧದಲ್ಲಿ ಪರೋಕ್ಷವಾಗಿ ಭಾಗಿಗಳಾಗಿದ್ದವು. ಪ್ರಷ್ಯಾ ಹಾಗೂ ಆಸ್ಟ್ರೀಯಾ ದೇಶಗಳ ನಡುವೆ ನಡೆದ ಈ ಯುದ್ಧದಲ್ಲಿ ಪ್ರಷ್ಯಾ ಜಯಶಾಲಿಯಾಗಿ ಸಿಲೀಸಿಯಾವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು. ಸಿಲೀಸಿಯಾ ಪ್ರಕರಣ ಯುರೋಪ್ ಖಂಡದ ಎಲ್ಲಾ ದೇಶಗಳ ಗಮನ ಸೆಳೆದದ್ದು ಮಾತ್ರವಲ್ಲದೆ ಫ್ರೆಡೆರಿಕ್ ಒಬ್ಬ ಉತ್ತಮ ರಾಜ್ಯತಂತ್ರಜ್ಞ ಎಂಬುದನ್ನು ಸಾಬೀತುಪಡಿಸಿತು. ಇಲ್ಲಿ, ನಾವು ಚರ್ಚಿಸಬೇಕಾದ ಅಂಶವೆಂದರೆ ಪ್ರಷ್ಯಾ ಸಿಲೀಸಿಯಾಕ್ಕೆ ಅಷ್ಟೊಂದು ಪ್ರಾಮುಖ್ಯತೆಯನ್ನು ಕೊಡಲು ಇದ್ದ ಕಾರಣ. ಯುರೋಪಿನ ಇತರ ರಾಷ್ಟ್ರಗಳಾದ ಇಂಗ್ಲೆಂಡ್, ಸ್ವೀಡನ್, ಸ್ಪೈನ್, ಫ್ರಾನ್ಸ್ ಮತ್ತು ರಷ್ಯಾ ದೇಶಗಳಂತೆ ಪ್ರಷ್ಯಾಕ್ಕೆ ಅನುಕೂಲಕರವಾದ ಭೌಗೋಳಿಕ ಪರಿಸರ ಇರಲಿಲ್ಲ. ಭೌಗೋಳಿಕತೆಯು ಒಂದು ದೇಶದ ರಾಜಕೀಯ ವ್ಯವಸ್ಥೆಯ ಮೇಲೆ ಮಹತ್ತರ ಪ್ರಭಾವವನ್ನು ಬೀರುತ್ತದೆ ಎನ್ನುವ ವಸ್ತುನಿಷ್ಠ ಸತ್ಯವನ್ನು ಅಲ್ಲಗಳೆಯುವಂತಿಲ್ಲ. ಇದು ಇತಿಹಾಸದ ಅಧ್ಯಯನದಿಂದ ತಿಳಿದು ಬರುವ ಸಂಗತಿಯಾಗಿದೆ. ಸಿಲೀಸಿಯಾ, ರೈನ್‌ಲ್ಯಾಂಡ್ ಮತ್ತು ವೆಸ್ಟ್ ಫಾಲಿಯಾಗಳು ಪ್ರಷ್ಯಾಕ್ಕೆ ಸೇರ್ಪಡೆಗೊಂಡ ನಂತರ ಸಾಕಷ್ಟು ಸಂಪನ್ಮೂಲಗಳು ಒದಗಿ ಪ್ರಷ್ಯಾದಲ್ಲಿ ರಾಜಪ್ರಭುತ್ವ ಭದ್ರವಾಗಿ ನೆಲೆಯೂರಲು ಕಾರಣವಾಯಿತು. ಇದರಿಂದಾಗಿಯೇ ಆಸ್ಟ್ರೀಯಾದ ರಾಣಿ ಮಾರಿಯಾ ತೆರೇಸಾ ಹಾಗೂ ಫ್ರೆಡ್‌ರಿಕ್‌ರೊಳಗೆ ಮನಸ್ತಾಪ ಉಂಟಾಗಿದ್ದು.

ರಷ್ಯಾ ಹದಿನೇಳು ಮತ್ತು ಹದಿನೆಂಟನೆಯ ಶತಮಾನದ ನಿರಂಕುಶಪ್ರಭುತ್ವಕ್ಕೆ ಒಂದು ಉತ್ತಮ ನಿದರ್ಶನ. ಇಲ್ಲಿನ ಬೆಳವಣಿಗೆಯನ್ನು ನಾವು ಮೂರು ಹಂತದಲ್ಲಿ ವಿವೇಚಿಸಲು ಸಾಧ್ಯತೆಗಳಿವೆ. ಕ್ರಿ.ಶ.೧೬೮೯ರಿಂದ ೧೭೨೫ರ ವರೆಗಿನ ಪ್ರಥಮ ಹಂತದಲ್ಲಿ ಪೀಟರ್ ಮಹಾಶಯ ರಷ್ಯಾದ ನಿರಂಕುಶ ಪ್ರಭುವಾಗಿದ್ದ. ೧೭೨೫ರಿಂದ ೧೭೬೨ರ ಎರಡನೆಯ ಹಂತ ಹೆಚ್ಚು ಕ್ರಿಯಾಶೀಲವಾಗಿದ್ದು ಈ ಅವಧಿಯನ್ನು ಹೊಸ ಪ್ರಯೋಗಗಳ ಅವಧಿ ಎಂದು ಪರಿಗಣಿಸಲಾಗಿದೆ. ಈ ಅವಧಿಯಲ್ಲಿ ರಷ್ಯಾ ಪಾಶ್ಚಿಮಾತ್ಯ ರಾಷ್ಟ್ರಗಳೊಡನೆ

ನೇರವಾಗಿ ವ್ಯವಹರಿಸಲು ಪ್ರಾರಂಭಿಸಿತು. ೧೭೬೨ರಿಂದ ೧೭೯೬ರ ಮೂರನೆಯ ಹಂತ ದಲ್ಲಿ ರಷ್ಯಾದ ರಾಣಿ ಕೆಥೆರಿನ್ ನಿರಂಕುಶ ಅಧಿಕಾರವನ್ನು ಹೊಂದಿದ್ದಳು. ಯುರೋಪಿನಲ್ಲಿ ಹುಟ್ಟಿಕೊಂಡಿದ್ದ ಅನೇಕ ಹೊಸ ಸಿದ್ಧಾಂತಗಳನ್ನು ತನ್ನ ಆಳ್ವಿಕೆಯಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನವನ್ನು ಮಾಡಿದಳು.

ನಿರಂಕುಶಪ್ರಭುತ್ವದ ಸಹಜ ಲಕ್ಷಣವಾದ ನಿರಂಕುಶ ಯುದ್ಧವನ್ನು ಪೀಟರನ ಆಳ್ವಿಕೆಯಲ್ಲು ಗಮನಿಸಬಹುದು. ಅವನು ಮೂವತ್ತಾರು ವರುಷದ ದೀರ್ಘ ಆಳ್ವಿಕೆಯಲ್ಲಿ ಇಪ್ಪತ್ತಾರು ವರುಷವನ್ನು ಟರ್ಕಿ ಮತ್ತು ಸ್ವೀಡನ್ ದೇಶಗಳೊಡನೆ ಯುದ್ಧ ಮಾಡುವುದ ಕ್ಕಾಗಿಯೇ ಮುಡಿಪಾಗಿಟ್ಟ. ಪೀಟರ್ ಮಹಾಶಯನ ಆಳ್ವಿಕೆಯ ಬಗ್ಗೆ ರಷ್ಯಾದ ಇತಿಹಾಸಕಾರರ ಪ್ರತಿಕ್ರಿಯೆ ಮಿಶ್ರವಾದದ್ದಾಗಿದೆ. ಕೆಲವರು ಕ್ರಾಂತಿಕಾರಿ ಎಂಬುದಾಗಿ ಬಣ್ಣಿಸಿದರೆ ಇನ್ನು ಕೆಲವರು ಸಂಪ್ರದಾಯವಾದಿ ಎಂಬುದಾಗಿ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ. ಸೋಲೋವೀವ್ ಎಂಬ ಇತಿಹಾಸಕಾರನ ಪ್ರಕಾರ ರಷ್ಯಾ ಪ್ರಗತಿಪಥದಲ್ಲಿ ಮುಂದುವರಿಯಲು ಪೀಟರನ ಸುಧಾರಣೆಗಳೇ ಪ್ರಮುಖ ಕಾರಣ. ಪೀಟರ್‌ನನ್ನು ರಷ್ಯಾದ ನೌಕಾದಳದ ಪಿತಾಮಹ ಎಂದು ಕರೆಯಲಾಗಿದೆ. ಯುದ್ಧೋಪಕರಣಗಳ ಉತ್ಪಾದನೆಗೆ ಪೂರಕವಾದ ಕೈಗಾರಿಕೆಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತನ್ನು ನೀಡಲಾಯಿತು. ಇಲ್ಲಿ ನಾವು ಗಮನಿಸತಕ್ಕಂತಹ ಅಂಶವೆಂದರೆ ಪೀಟರನ ಸುಧಾರಣೆಗಳು ವೈಯಕ್ತಿಕ ಹಿತಾಸಕ್ತಿಗಳನ್ನು ಈಡೇರಿಸುವುದಕ್ಕೋಸ್ಕರ ರೂಪಿತವಾಗಿದ್ದವೇ ಹೊರತು ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸುವುದಕ್ಕಾಗಿರಲಿಲ್ಲ. ರಷ್ಯಾದ ಆಡಳಿತಾತ್ಮಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಪೀಟರ್ ಸಂಪೂರ್ಣವಾಗಿ ವಿಫಲನಾಗಿದ್ದ. ಇವನ ಆಳ್ವಿಕೆಯಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಸೆನೆಟ್ ೧೭೧೧ರ ನಂತರ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಒಂದನೆಯ ಕೆಥೇರಿನ್, ಎರಡನೆಯ ಪೀಟರ್ ಮತ್ತು ಅನ್ನಾ ಇವರುಗಳು ಸೆನೆಟನ್ನು ನಿರ್ಲಕ್ಷಿಸಿ ನೊಬಿಲಿಟಿಯ ಸಲಹೆಯಂತೆ ಆಡಳಿತ ನಡೆಸಲು ಪ್ರಾರಂಭಿಸಿದನು. ನಂತರ ಅಧಿಕಾರಕ್ಕೆ ಬಂದ ಎಲಿಜಬೆತ್ ಸೆನೆಟನ್ನು ಪುನರ್ ಸ್ಥಾಪಿಸಿದರೂ ಆಗ ತಾನೇ ಹುಟ್ಟಿಕೊಂಡಿದ್ದ ನೊಬಿಲಿಟಿಯ ಪ್ರಾಬಲ್ಯವುಳ್ಳ ಕಾನ್ ಪೆರೆಂಟ್ಸ್ ಎಂಬ ಸಂಸ್ಥೆಯಿಂದಾಗಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಲಿಲ್ಲ.

ಕೆಥಿರೆನ್, ಸೆನೆಟಿನ ಅಧಿಕಾರವನ್ನು ಕುಂಠಿತಗೊಳಿಸಿ ತನ್ನದೇ ಆದ ಇಂಪೀರಿಯಲ್ ಕೌನ್ಸಿಲ್‌ನ ಸಹಾಯದಿಂದ ಅಧಿಕಾರ ನಡೆಸಲು ಪ್ರಾರಂಭಿಸಿದಳು. ಇವಳ ಆಳ್ವಿಕೆ ರಷ್ಯಾದ ಇತಿಹಾಸಕ್ಕೆ ಹೊಸ ತಿರುವನ್ನು ತಂದುಕೊಟ್ಟರೂ ಅಸ್ಪಷ್ಟವಾದ ವಿರೋಧಗಳಿಂದ ಕೊನೆ ಗೊಂಡಿತು. ಹದಿನೆಂಟನೆ ಶತಮಾನದಲ್ಲಿ ಯುರೋಪಿನಾದ್ಯಂತ ಪ್ರಾರಂಭಗೊಂಡ ಹೊಸ ಚಿಂತನೆಗಳೊಡನೆ ಕೆಥೆರಿನ್ ನೇರ ಸಂಪರ್ಕ ಹೊಂದಿದ್ದಳು. ಫ್ರೆಂಚ್ ದಾರ್ಶನಿಕರಾದ ಮೊಂಟೆಸ್ಕ್ಯೂ, ವಾಲ್ಟೇರ್, ಡಿಡಿರೋಟ್, ಡಿ' ಆಲಮ್‌ಬರ್ಟ್‌ಮುಂತಾದವರ ಸೈದ್ಧಾಂತಿಕ ನಿಲುವುಗಳನ್ನು ತನ್ನ ಆಳ್ವಿಕೆಯಲ್ಲಿ ಅನುಷ್ಠಾನಗೊಳಿಸುವ ಪ್ರಯತ್ನವನ್ನು ಮಾಡಿದಳು. ಇಲ್ಲಿ ನಾವು ರಾಣಿಯ ರಾಜಕೀಯ ಉದ್ದೇಶಗಳನ್ನೂ ಗಮನದಲ್ಲಿ ಇಟ್ಟುಕೊಂಡಿರಬೇಕಾಗು ತ್ತದೆ. ಈ ಹೊಸ ಪ್ರಯೋಗ ಯಶಸ್ವಿಯಾಗದೆ ಸಾಂಪ್ರದಾಯಿಕ ಸುಧಾರಣೆಗಳನ್ನೇ ಜಾರಿಗೆ ತರಬೇಕಾಯಿತು. ಇದಕ್ಕೆ ಉತ್ತಮ ಉದಾಹರಣೆ ಕ್ರಿ.ಶ.೧೭೭೩ರ ಪುಗೇಚೆವ್ ದಂಗೆ.

ರಷ್ಯಾದಲ್ಲಿ ಅಪಾರ ಸಂಖ್ಯೆಯಲ್ಲಿದ್ದ ಜೀತದಾಳುಗಳು ತಮ್ಮ ಸಾಮಾಜಿಕ ಬೇಡಿಕೆ ಗಳನ್ನು ಈಡೇರಿಸುವುದಕ್ಕೋಸ್ಕರ ಮತ್ತು ದಾಸತ್ವವನ್ನು ರದ್ದುಗೊಳಿಸಲು ೧೭೭೩ರಲ್ಲಿ ಸರಕಾರದ ವಿರುದ್ಧ ದಂಗೆ ಎದ್ದರು. ಈ ದಂಗೆಯನ್ನು ಪುಗೇಚೆವ್ ದಂಗೆ ಎಂದು ಕರೆಯಲಾಗಿದೆ. ಈ ಸಂಕೀರ್ಣ ಸಂದರ್ಭದಲ್ಲಿ ಕೆಥೆರಿನ್ ನೊಬಿಲಿಟಿಯನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ದಂಗೆಯನ್ನು ಹತ್ತಿಕ್ಕಿದಳು. ಇಲ್ಲಿ ನಾವು ಮೂರು ರೀತಿಯ ಪ್ರಶ್ನೆಗಳನ್ನು ಎತ್ತಬೇಕಾಗುತ್ತದೆ. ಒಂದು ರಷ್ಯಾದ ಒಟ್ಟು ಆಡಳಿತ ಕ್ರಮದಲ್ಲಿ ನೊಬಿಲಿಟಿ ವಹಿಸು ತ್ತಿದ್ದ ಪಾತ್ರ. ಎರಡನೆಯದು, ರಾಣಿಯ ಸಾಮಾಜಿಕ ಕಳಕಳಿ ಹಾಗೂ ಮೂರನೆ ಯದಾಗಿ, 'ಹೊಸ ಚಿಂತನೆಗಳಿಂದ ರೂಪಿತಗೊಂಡ ಸರಕಾರ' ಎಂಬ ಶೀರ್ಷಿಕೆಗೆ ಸಂಬಂಧಪಟ್ಟದ್ದು. ನೊಬಿಲಿಟಿ ರಷ್ಯಾದಲ್ಲೂ ನಿರ್ಣಾಯಕ ಪಾತ್ರವನ್ನು ವಹಿಸುತ್ತಿತ್ತು ಎನ್ನುವ ಸಂಗತಿ ಈ ದಂಗೆಯ ಹತ್ತಿಕ್ಕುವಿಕೆಯಿಂದ ಸ್ಪಷ್ಟವಾಗುತ್ತದೆ. ಉಳಿದೆರಡು ಪ್ರಶ್ನೆಗಳು ಕೇವಲ ಜನರ ಬೆಂಬಲವನ್ನು ಪಡೆಯುವುದಕ್ಕೋಸ್ಕರ ರೂಪಿಸಿದ ತಂತ್ರ ಎನ್ನುವುದು ವಾಸ್ತವ. ರಷ್ಯಾದ ಖ್ಯಾತ ಚಿಂತಕ ಹಾಗೂ ಬರಹಗಾರ ಅಲೆಗ್ಸಾಂಡರ್ ರೆಡಿಸ್ಕೇವ್ ತನ್ನ, ಜರ್ನೀ ಫ್ರಮ್ ಸೈಂಟ್ ಪೀಟರ್ಸ್ ಬರ್ಗ್ ಟು ಮೋಸ್ಕೋ (೧೭೯೦) ಎಂಬ ಗ್ರಂಥದಲ್ಲಿ ಕೆಥೆರಿನ್‌ಳ ಆಡಳಿತ ಕ್ರಮದ ಕುರಿತು ಚರ್ಚಿಸಿದ್ದಾನೆ. ಕೆಥೆರಿನ್ ತನ್ನ ಆಳ್ವಿಕೆಯ ಆರಂಭದಲ್ಲಿನ ಪ್ರಗತಿಪರ ಚಿಂತನೆಗಳಿಂದ ಎಷ್ಟು ಹಿಂದಕ್ಕೆ ಸರಿದಿದ್ದಾಳೆಂದು ಅಲ್ಲಿರುವ ದ್ವಂದ್ವಗಳನ್ನು ಚೆನ್ನಾಗಿ ವಿಮರ್ಶಿಸಿದ್ದಾನೆ.

ರಷ್ಯಾದಲ್ಲಿ ನಿರಂಕುಶ ಪ್ರಭುತ್ವವನ್ನು ಮುಂದುವರಿಸಿಕೊಂಡು ಹೋಗುವುದೇ ಕೆಥೆರಿನ್‌ಳ ಮೂಲ ಉದ್ದೇಶವಾಗಿತ್ತು ಎನ್ನುವುದು ರೆಡಿಸ್ಕೇವ್‌ರವರ ವಾದವಾಗಿದೆ.

ಆಸ್ಟ್ರೀಯಾ ದೇಶದ ನಿರಂಕುಶಪ್ರಭುತ್ವ ಕುರಿತು ಚರ್ಚಿಸುವಾಗ ಮಾರಿಯ ತೆರೆಸಾ ಮತ್ತು ಎರಡನೆಯ ಜೋಸೆಫ್ ಪ್ರಮುಖರಾಗುತ್ತಾರೆ. ಇವರಿಬ್ಬರೂ ಆಸ್ಟ್ರೀಯಾದ ಆಂತರಿಕ ಸುಧಾರಣೆಗೆ ಪ್ರಥಮ ಆದ್ಯತೆಯನ್ನು ನೀಡಿದರು. ಮಾರಿಯ ತೆರೆಸಾಳ ಪ್ರಕಾರ ಸುಧಾರಣೆ ಅಂದಿನ ತುರ್ತು. ಇದಕ್ಕೆ ಬಲವಾದ ಕಾರಣ ಇದೆ. ಕ್ರಿ.ಶ.೧೭೪೦ ರಿಂದ ೧೭೪೫ರವರೆಗೆ ನಡೆದ ಪ್ರಥಮ ಮತ್ತು ದ್ವಿತೀಯ ಸಿಲೀಸಿಯಾ ಯುದ್ಧದಲ್ಲಿ ಆಸ್ಟ್ರಿಯಾ ಪ್ರಷ್ಯಾ ದೇಶದೆದುರು ಹೀನಾಯ ಸೋಲನ್ನು ಅನುಭವಿಸಬೇಕಾಗಿ ಬಂತು. ಮತ್ತೊಮ್ಮೆ ಬಲಿಷ್ಠವಾದ ಆಸ್ಟ್ರಿಯಾವನ್ನು ನಿರ್ಮಿಸುವುದಕ್ಕೆ ಆಂತರಿಕ ಸುಧಾರಣೆಯ ಅಗತ್ಯವಿತ್ತು. ಇಲ್ಲಿ ಸುಧಾರಣೆ ಎಂದಾಕ್ಷಣ ಮಾರಿಯ ತೆರೆಸಾ ಯುರೋಪಿನಾದ್ಯಂತ ಪ್ರಚಾರಗೊಳ್ಳುತ್ತಿದ್ದ ಹೊಸ ಸಿದ್ಧಾಂತಗಳ ಕಡೆಗೆ ಆಕರ್ಷಿತಳಾಗಿದ್ದಳು ಎನ್ನುವುದು ತಪ್ಪಾಗುತ್ತದೆ. ಅವಳ ಸುಧಾರಣೆ ನಿರಂಕುಶಪ್ರಭುತ್ವವನ್ನು ಗಟ್ಟಿಗೊಳಿಸುವ ಅಂಶವಾಗಿ ಮಾತ್ರ ಕಾರ್ಯ ನಿರ್ವಹಿಸಿತ್ತು. ಹೊಸ ಸಿದ್ಧಾಂತಗಳಿಂದ ಪ್ರಭಾವಿತರಾದ ಆಸ್ಟ್ರಿಯಾದ ಜನರು ರಾಜಕುಮಾರ ಎರಡನೆಯ ಜೋಸೆಫ್‌ನೊಡನೆ ಗುಟ್ಟಾಗಿ ವ್ಯವಹರಿಸುತ್ತಿದ್ದರು. ಇದರಿಂದಾಗಿ ರಾಣಿ ಮಾರಿಯಾ ತೆರೆಸಾ ತನ್ನ ಆಳ್ವಿಕೆಯ ದ್ವಿತೀಯಾರ್ಧದಲ್ಲಿ ಅಧಿಕಾರವನ್ನು ಉಳಿಸು ವುದಕ್ಕೋಸ್ಕರವಾಗಿಯೇ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟಂತೆ ಕಾಣುತ್ತದೆ. ಇಂದು ನಮಗೆ ನಿರಂಕುಶ ಪ್ರಭುತ್ವದ ಮಿತಿಗಳನ್ನು ಸೂಚಿಸುತ್ತದೆ. ಅಂದರೆ ನಿರಂಕುಶ ಪ್ರಭುತ್ವ ಕೇಂದ್ರದಲ್ಲಿನ ಸರಕಾರದ ಅಥವಾ ವ್ಯಕ್ತಿಯ ಸಾಮರ್ಥ್ಯವನ್ನು ಅವಲಂಬಿಸಿಕೊಂಡಿರುತ್ತದೆ. ಇದು ನಿರಂಕುಶಪ್ರಭುತ್ವದ ದೌರ್ಬಲ್ಯವೂ ಹೌದು.

ಮಾರಿಯಾ ತೆರೆಸಾಳ ನಂತರ ಅಧಿಕಾರಕ್ಕೆ ಬಂದ ಎರಡನೆಯ ಜೋಸೆಫ್ ನಿರಂಕುಶ ಪ್ರಭುವಾಗಿದ್ದರೂ ಜನಪರ ಧೋರಣೆಗಳನ್ನು ಹೊಂದಿದ್ದ. ಇವನ ಆಳ್ವಿಕೆಯನ್ನು ಪ್ರಜ್ಞಾವಂತ ರಾಜಪ್ರಭುತ್ವವೆಂದು ಕರೆಯಲಾಗಿದೆ. ಜೋಸೆಫ್‌ನ ಮಾತಿನಲ್ಲಿಯೇ ಹೇಳುವುದಾದರೆ, “ನಾನು ಸಿಂಹಾಸನಕ್ಕೆ ಬಂದ ದಿನದಿಂದ ತತ್ವಜ್ಞಾನವನ್ನು ತನ್ನ ಸಾಮ್ರಾಜ್ಯದ ವಿಧಿ ಸ್ಥಾಪಕನನ್ನಾಗಿ ಮಾಡಿದ್ದೇನೆ. ನಾನು ಒತ್ತುಕೊಟ್ಟು ಹೇಳುತ್ತಿರುವುದು ಏನೆಂದರೆ ನಾನು ಹೊರಡಿಸಿದ ಆಜ್ಞೆಗಳು ಮತ್ತು ತತ್ವಗಳನ್ನು ಯಾವ ವಿನಾಯಿತಿಯೂ ಇಲ್ಲದೆ ಪ್ರತಿಯೊಬ್ಬರೂ ಅನುಸರಿಸಬೇಕು.” ಇಲ್ಲಿ ನಾವು ಇಬ್ಬಗೆಯ ವಾದಗಳನ್ನು ಗುರುತಿಸಲು ಸಾಧ್ಯ. ಒಂದನೆಯದು ನಿರಂಕುಶಪ್ರಭುತ್ವದ ಅವಶ್ಯಕತೆ, ಎರಡನೆಯದು ತತ್ವಜ್ಞಾನಗಳ ಅನುಷ್ಠಾನ. ಅಂದರೆ ಹೊಸ ಸಿದ್ಧಾಂತಗಳನ್ನು ಅನುಷ್ಟಾನಗೊಳಿಸಬೇಕಾದರೆ ನಿರಂಕುಶ ಪ್ರಭುತ್ವದ ಅವಶ್ಯಕತೆ ಇದೆ ಎಂದಾಯಿತು. ಇಲ್ಲಿ ಬಲವಂತವಾಗಿ ಹೊಸ ಯೋಜನೆಗಳನ್ನು ಅಥವಾ ನೀತಿಗಳನ್ನು ಜನಸಾಮಾನ್ಯರ ಮೇಲೆ ಹೇರುವ ಹುನ್ನಾರ ಅಡಕವಾಗಿದೆ. ಎರಡನೆಯ ಜೋಸೆಫ್‌ನ ಆಳ್ವಿಕೆಯಲ್ಲಿನ ದೌರ್ಬಲ್ಯವೆಂದರೆ, ಸಾಕಷ್ಟು ಪೂರ್ವತಯಾರಿ ಇಲ್ಲದೇ ಅಥವಾ ಸಮಾಲೋಚನೆ ನಡೆಸದೆ ನಿರ್ಣಯಗಳನ್ನು ಕೈಗೊಳ್ಳು ವುದು. ಈ ರೀತಿ ಜಾರಿಗೆ ತಂದ ಸುಧಾರಣೆಗಳಿಂದಾಗಿ ಜನರಿಂದ ವಿರೋಧವನ್ನು ಎದುರಿಸಬೇಕಾಗಿ ಬಂತು. ಆಡಳಿತ ಉದ್ದೇಶಕ್ಕಾಗಿ ಮಂತ್ರಿಗಳನ್ನು ನೇಮಕ ಮಾಡಿ ಕೊಂಡಿದ್ದರೂ ಅವರ ಸಲಹೆ ಸೂಚನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಗುತ್ತಿರಲಿಲ್ಲ. ಅರಸು ಮನೆತನದ ಅಧಿಕಾರ ಕುಂಠಿತಗೊಳ್ಳಬಹುದು ಎನ್ನುವ ಭಯವೇ ಇದಕ್ಕೆ ಮುಖ್ಯ ಕಾರಣ. ಇದೇ ರೀತಿಯ ಅಭಿಪ್ರಾಯವನ್ನು ಪ್ರಷ್ಯಾದ ಅರಸ ಫೆಡ್‌ರಿಕನೂ ಹೊಂದಿದ್ದ. ಆದರೂ ರಷ್ಯಾಕ್ಕೆ ಹೋಲಿಸಿದರೆ ಆಸ್ಟ್ರೀಯಾ ಮತ್ತು ಪ್ರಷ್ಯಾ ದೇಶದ ಅರಸರುಗಳು ಮಂತ್ರಿಗಳಿಗೆ ಹೆಚ್ಚಿನ ಸ್ವಾತಂತ್ರ್ಯವನ್ನು ನೀಡಿದ್ದರು ಎಂಬುದಾಗಿಯೇ ಹೇಳಬೇಕಾಗುತ್ತದೆ. ಮಹತ್ತರ ರಾಜಕೀಯ ನಿರ್ಧಾರಗಳನ್ನು ಕೈಗೊಳ್ಳಬೇಕಾದರೆ ಮಂತ್ರಿಮಂಡಲದ ಸಭೆಯನ್ನು ಕರೆಯುತ್ತಿದ್ದರು. ಸಚಿವರುಗಳ ಸ್ಥಾನಮಾನ ಅರಸರ ಆಸಕ್ತಿಯನ್ನು ಅವಲಂಬಿಸಿ ಕೊಂಡಿರುತ್ತಿತ್ತು.

ಸ್ವೀಡನ್ ದೇಶದಲ್ಲಿ ಹದಿನೇಳು ಮತ್ತು ಹದಿನೆಂಟನೆಯ ಶತಮಾನದಲ್ಲಿ ಅಸ್ತಿತ್ವ ದಲ್ಲಿದ್ದ ಸರಕಾರದ ಕುರಿತು ಚರ್ಚಿಸುವಾಗ ಇಬ್ಬರು ವ್ಯಕ್ತಿಗಳೂ ಪ್ರಮುಖರಾಗುತ್ತಾರೆ. ಅವರುಗಳೆಂದರೆ ಗುಸ್ಟೋವಸ್ ಅಡಾಲ್ಪಸ್(೧೬೧೧-೩೨) ಮತ್ತು ಹನ್ನೆರಡನೆಯ ಚಾರ್ಲ್ಸ್ (೧೬೯೭-೧೭೧೮). ಸ್ವೀಡನ್ ದೇಶದ ಅರಸರುಗಳ ನಿರಂಕುಶಪ್ರಭುತ್ವದ ಸಾಮರ್ಥ್ಯ ಹಾಗೂ ಮಿತಿಗಳು ಅಲ್ಲಿನ ಸೈನ್ಯದ ಸಾಮರ್ಥ್ಯವನ್ನು ಅವಲಂಬಿಸಿತ್ತು. ಯುರೋಪಿನಲ್ಲಿ ಸ್ವೀಡನ್ ಒಂದು ಬಲಿಷ್ಟ ರಾಷ್ಟ್ರವಾಗಿ ರೂಪುಗೊಳ್ಳಲು ಇದೇ ಪ್ರಮುಖ ಕಾರಣ. ಗುಸ್ಟೋವ್ ಅಡಾಲ್ಪಸ್ ಅತ್ಯಾಧುನಿಕವಾದ ತಂತ್ರಜ್ಞಾನವನ್ನು ಅಳವಡಿಸಿ ಸೈನ್ಯದಲ್ಲಿ ಮಹತ್ತರ ಸುಧಾರಣೆಯನ್ನು ಜಾರಿಗೆ ತರುವ

ಯೋಜನೆಯನ್ನು ಹಮ್ಮಿಕೊಂಡಿದ್ದ. ಈ ಸೈನಿಕ ಸುಧಾರಣೆಯಿಂದಾಗಿಯೇ ಯುರೋಪಿನ ಇತಿಹಾಸದಲ್ಲೇ ಪ್ರಸಿದ್ಧವಾದ ಮೂವತ್ತು ವರ್ಷಗಳ ಯುದ್ಧದಲ್ಲಿ ಸ್ವೀಡನ್ ಜಯಶಾಲಿಯಾಯಿತು ಮತ್ತು ಬಾಲ್ಟಿಕ್ ಪ್ರಾಂತ್ಯದ ಪ್ರಶ್ನಾತೀತ ರಾಣಿಯಾಗಿ ರೂಪುಗೊಂಡಿತು. ದೇಶದ ಆರ್ಥಿಕ ಪ್ರಗತಿಯ ಉದ್ದೇಶಕ್ಕಾಗಿ ಉತ್ತರ ಹಾಗೂ ಮಧ್ಯ ಯುರೋಪಿನ ರಾಷ್ಟ್ರಗಳೊಡನೆ ಉತ್ತಮ ವ್ಯಾಪಾರ ಸಂಬಂಧವನ್ನು ಹೊಂದಿಕೊಂಡಿತ್ತು. ಸ್ವೀಡನ್‌ನಲ್ಲಿ ಅಗಾಧವಾದ ಕಬ್ಬಿಣದ ಅದಿರು ಹಾಗೂ ತಾಮ್ರ ಲಭ್ಯವಿದ್ದುದರಿಂದಾಗಿ ಯುರೋಪಿನ ಮಾರುಕಟ್ಟೆಯಲ್ಲಿ ಏಕಸ್ವಾಮ್ಯವನ್ನು ಹೊಂದಲು ಸಾಧ್ಯವಾಯಿತು. ಇದು ಅಲ್ಲಿನ ನಿರಂಕುಶ ಪ್ರಭುತ್ವಕ್ಕೆ ಬೇಕಾದ ಅವಶ್ಯಕತೆಗಳನ್ನು ಪೂರೈಸಲು ಸಹಕಾರಿಯಾಯಿತು.

ಗುಸ್ಟೋವ್ ಅಡಾಲ್ಪಸ್ ಸಂವಿಧಾನಾತ್ಮಕ ಪ್ರಭುತ್ವದಲ್ಲಿ ನಂಬಿಕೆಯಿಟ್ಟಿದ್ದ. ಶಾಸಕಾಂಗ ಹಾಗೂ ಕೌನ್ಸಿಲ್‌ನೊಡನೆ ಉತ್ತಮ ಸಂಬಂಧವನ್ನು ಹೊಂದಿದ್ದ. ರಷ್ಯಾದ ಅರಸ ಪೀಟರ್ ಜಾರಿಗೆ ತಂದಿದ್ದ ಆಡಳಿತ ಕ್ರಮವನ್ನು ಸ್ವೀಡನ್‌ನಲ್ಲಿ ಅನುಷ್ಠಾನಕ್ಕೆ ತರುವ ಪ್ರಯತ್ನವನ್ನು ಮಾಡಿದ. ಇವನ ಆಡಳಿತದಲ್ಲಿ ಆ್ಯಕ್ಸಲ್ ಓಕ್ಸನ್ ಸ್ಟೀರ್‌ನಾ ಎಂಬ ಸಚಿವ ಪ್ರಮುಖ ಸ್ಥಾನವನ್ನು ಹೊಂದಿದ್ದ. ಇವನು ಆಡಳಿತದ ವಿಕೇಂದ್ರೀಕರಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ ಸಂವಿಧಾನಾತ್ಮಕ ಮಾದರಿಯ ಸರಕಾರದ ರಚನೆಗೆ ಪ್ರೋತ್ಸಾಹವನ್ನು ನೀಡಿದ. ಆದರೆ ಕುಲೀನ ಪ್ರಭುತ್ವದ ಪ್ರಭಾವದಿಂದಾಗಿ ನಿರಂಕುಶ ಆಡಳಿತವೇ ಕೇಂದ್ರದಲ್ಲಿ ಗಟ್ಟಿಯಾಗಿ ರೂಪುಗೊಳ್ಳಲಾರಂಭಿಸಿತು. ಸ್ವೀಡನ್‌ನಲ್ಲಿ ಅಸೆಂಬ್ಲಿಗೆ ತನ್ನ ದೈನಂದಿನ ಕಾರ್ಯ ಕಲಾಪಗಳನ್ನು ನಿಭಾಯಿಸಲು ಒಂದು ಖಾಯಂ ಸ್ಥಳವೇ ಇರಲಿಲ್ಲ. ಅಲ್ಲಿ ನೊಬಿಲಿಟಿಯ ಪ್ರತಿಷ್ಠೆಯನ್ನು ಹೆಚ್ಚಿಸುವುದಕ್ಕೋಸ್ಕರ ಅಸೆಂಬ್ಲಿಯನ್ನು ಉಪಯೋಗಿಸಲಾಗುತ್ತಿತ್ತು. ಹನ್ನೆರಡನೆಯ ಚಾರ್ಲ್ಸ್‌ನ ಆಡಳಿತವೂ ಈ ಬೆಳವಣಿಗೆಗೆ ಹೊರತಾಗಿರಲಿಲ್ಲ. ಆದ್ದರಿಂದ ಸಂವಿಧಾನಾತ್ಮಕ ಮಾದರಿಯ ಸರಕಾರದ ಪ್ರಯತ್ನ ವಿಫಲಗೊಂಡಿತು. ಸ್ವೀಡನ್ ದೇಶದ ನಿರಂಕುಶಪ್ರಭುತ್ವ ಕೇವಲ ಸೈನ್ಯದ ಸಾಮರ್ಥ್ಯವನ್ನು ಮಾತ್ರ ಅವಲಂಬಿಸಿಕೊಂಡಿದ್ದರಿಂದಾಗಿ ಅಂತಾರಾಷ್ಟ್ರೀಯ ನೆಲೆಯಲ್ಲಿ ಭದ್ರವಾಗಿ ನಿಲ್ಲಲು ಸಾಧ್ಯವಾಗಲಿಲ್ಲ. ಬಲಿಷ್ಠವಾದ ಸೈನ್ಯಕ್ಕೆ ಅಷ್ಟೇ ಸಾಮರ್ಥ್ಯದ ಹಾಗೂ ಗುಣಾತ್ಮಕವಾದ ಅಂತಾರಾಷ್ಟ್ರೀಯ ನೀತಿ ಮತ್ತು ರಾಯಭಾರಿತ್ವದ ಅಗತ್ಯತೆ ಇರುತ್ತದೆ. ಇದರ ಜತೆಗೇ ಆಂತರಿಕ ಹಾಗೂ ವಿದೇಶಾಂಗ ನೀತಿಯಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವುದೂ ಪ್ರಾಮುಖ್ಯವಾಗುತ್ತದೆ. ಈ ಎಲ್ಲಾ ಅಂಶಗಳ ವಿಫಲತೆಯೇ ಸ್ವೀಡನ್ ದೇಶದ ನಿರಂಕುಶ ಪ್ರಭುತ್ವ ಅವನತಿಯನ್ನು ಹೊಂದಲು ಮೂಲಭೂತ ಕಾರಣವಾಯಿತು. ಹನ್ನೆರಡನೆಯ ಚಾರ್ಲ್ಸ್‌ನ ಆಳ್ವಿಕೆಯ ನಂತರದ ಅವಧಿಯಲ್ಲಿ ಸ್ವೀಡನ್, ಸಂವಿಧಾನಾತ್ಮಕ ರಾಜಪ್ರಭುತ್ವ ಹಾಗೂ ಆಡಳಿತದ ವಿಕೇಂದ್ರೀಕರಣದಿಂದಾಗಿ ಅಂತರಿಕ ಸ್ಥಿರತೆಯನ್ನು ಸಾಧಿಸಲು ಸಾಧ್ಯವಾಯಿತು.

ಸ್ಪೈಯಿನ್‌ನಲ್ಲಿ ಬೂರ್ಬನ್ ರಾಜವಂಶದ ಆಳ್ವಿಕೆ ಇದ್ದುದ್ದರಿಂದಾಗಿ ಹದಿನಾಲ್ಕನೆಯ ಲೂಯಿಯ ಆಡಳಿತಕ್ರಮವನ್ನೇ ಅನುಸರಿಸಲಾಗುತ್ತಿತ್ತು. ಇಲ್ಲಿ ಅರಸರಿಗಿಂತ ಮಂತ್ರಿಗಳೇ ಹೆಚ್ಚು ಪ್ರಭಾವಶಾಲಿಯಾಗಿದ್ದರು. ಇಲ್ಲಿನ ಸರಕಾರವನ್ನು ಮಂತ್ರಿಗಳ ನಿರಂಕುಶ ಪ್ರಭುತ್ವ ಎಂಬುದಾಗಿಯೂ ಕರೆಯಲಾಗಿದೆ. ಉದಾಹರಣೆಗೆ, ಆರನೆಯ ಪರ್ಡಿನೇಂಡ್‌ನ ಅವಧಿಯಲ್ಲಿ ಎನ್‌ಸಿನೇಡಾ ಮತ್ತು ಅರೇಂಡಾ ಎಂಬ ಮಂತ್ರಿಗಳು ಸಂಪೂರ್ಣವಾಗಿ ಆಡಳಿತವನ್ನು ನಡೆಸುತ್ತಿದ್ದರು. ಐದನೆಯ ಫಿಲಿಫ್‌ನ ಆಡಳಿತ ಅವಧಿಯಲ್ಲಿ ಜಿಯಾನ್ ಓರೀ, ಕಾರ್ಡಿನಲ್ ಆರ್‌ಬೆರೋನಿ, ಪೆಟಿನೋ ಮುಂತಾದ ಮಂತ್ರಿಗಳು ಆಡಳಿತವನ್ನು ನಿರ್ವಹಿ ಸುತ್ತಿದ್ದರು. ಐದನೆಯ ಫಿಲಿಪ್ ಬೂರ್ಬನ್ ವಂಶಸ್ಥನಾಗಿದ್ದು ಒಂದು ಸಂಕೀರ್ಣ ರಾಜಕೀಯ ಸ್ಥಿತ್ಯಂತರದ ಫಲವಾಗಿ ಸ್ಪೈಯಿನ್‌ನ ಅರಸನಾಗಿ ನೇಮಕಗೊಂಡ. ಸ್ಪೈಯಿನ್ ನಲ್ಲಿ ಸಿಂಹಾಸನಕ್ಕಾಗಿ ಕಿತ್ತಾಟ ಪ್ರಾರಂಭವಾಗಿ ಸ್ಪೈಯಿನ್ ವಿಭಜನೆಯಾಗುವ ಹಂತಕ್ಕೆ ತಲುಪಿತ್ತು. ಫ್ರಾನ್ಸ್‌ನ ಬೂರ್ಬನ್ ಅರಸರ ಮಧ್ಯಪ್ರದೇಶದಿಂದಾಗಿ ಹೋರಾಟ ಕೊನೆಗೊಂಡು ಬೂರ್ಬನ್ ವಂಶಸ್ಥನೇ ಹೊಸ ಅರಸನಾಗಿ ನೇಮಕಗೊಂಡ. ಇದು ಯುರೋಪಿನ ರಾಜವಂಶಗಳ ಸಾಮ್ರಾಜ್ಯದ ವಿಸ್ತರಣೆಯ ನೀತಿಯನ್ನು ಸೂಚಿಸುತ್ತದೆ.

ಸ್ಪೈಯಿನ್‌ನಲ್ಲಿ ನಿರಂಕುಶ ಪ್ರಭುತ್ವ ರೂಪುಗೊಳ್ಳುವುದಕ್ಕೆ ಎರಡು ಪ್ರಮುಖ ಕಾರಣ ಗಳಿವೆ. ಒಂದನೆಯದಾಗಿ ಕ್ಯಾಸ್ಟಿಲೇ ಮತ್ತು ಅರೆಗೋನ್ ಎಂಬ ಎರಡು ರಾಷ್ಟ್ರಗಳು ಸ್ಪೈಯಿನ್‌ನೊಡನೆ ವಿಲೀನಗೊಂಡಿರುವುದು. ಇದು ವೈವಾಹಿಕ ಸಂಬಂಧದ ಮೂಲಕ ಸಾಧ್ಯವಾಯಿತು. ಅಂದರೆ ಸ್ಪೈಯಿನ್‌ನ ಅರಸ ಎರಡನೆಯ ಫರ್ಡಿನೇಂಡ್‌ನ ವಿವಾಹ ಹಾಬ್ಸ್‌ಬರ್ಗ್ ಮನೆತನದ ಒಂದನೆಯ ಇಸಾಬೆಲ್ಲಾಳೊಡನೆ ನಡೆಯಿತು. ಎರಡನೆಯದಾಗಿ, ಸಮುದ್ರದಾಚೆಯ ಸಾಮ್ರಾಜ್ಯದ ಸ್ಥಾಪನೆ. ಹದಿನೇಳನೆಯ ಶತಮಾನದ

ದ್ವಿತೀಯಾರ್ಧದಲ್ಲಿ ಸ್ಪೆಯಿನ್ ಪ್ರಪಂಚದ ಅನೇಕ ಭಾಗಗಳಲ್ಲಿ ವ್ಯಾಪಾರಿ ಕೇಂದ್ರಗಳನ್ನು ಸ್ಥಾಪಿಸಿತು. ಹೊರದೇಶಗಳೊಡನೆ ಹೊಂದಿದ್ದ ವ್ಯಾಪಾರ ಸಂಬಂಧ ಸ್ಪೆಯಿನ್‌ನ ಆರ್ಥಿಕ ಏಳಿಗೆಗೆ ದಾರಿಮಾಡಿಕೊಟ್ಟಿತು. ಸ್ಪೆಯಿನ್‌ನ ಆಂತರಿಕ ವ್ಯವಸ್ಥೆಯ ಕುರಿತು ಚರ್ಚಿಸುವಾಗ ಇದು ಯುರೋಪಿನ ಇತರ ರಾಷ್ಟ್ರಗಳಿಗಿಂತ ಭಿನ್ನವಾಗಿ ಕಂಡುಬರುತ್ತದೆ. ಇಲ್ಲಿ ನೊಬಿಲಿಟಿ ಇತರ ರಾಷ್ಟ್ರಗಳಿಗಿಂತ ಭಿನ್ನವಾಗಿ ಕಂಡುಬರುತ್ತದೆ. ಇಲ್ಲಿ ನೊಬಿಲಿಟಿ ಹೆಚ್ಚಿನ ಅಧಿಕಾರ ಮತ್ತು ಸವಲತ್ತುಗಳನ್ನು ಹೊಂದಿತ್ತು. ನೆಪೋಲಿಯನ್ ಬೊನೋಪಾರ್ಟೆಯ ಆಳ್ವಿಕೆಯ ಅವಧಿಯಲ್ಲೂ ಈ ವರ್ಗ ಸ್ಪೆಯಿನ್‌ನ ಅರ್ಧದಷ್ಟು ಭೂಪ್ರದೇಶದ ಮೇಲೆ, ಅದರಲ್ಲೂ ಮುಖ್ಯವಾಗಿ ಪೇಟೆ-ಪಟ್ಟಣಗಳ ಮೇಲೆ ತನ್ನ ಹತೋಟಿಯನ್ನು ಸಾಧಿಸಿದ್ದು ಕಂಡುಬರುತ್ತದೆ. ಸ್ಪೆಯಿನ್‌ನ ನೊಬಿಲಿಟಿಯನ್ನು ಗ್ರಾಂಡೀಸ್ ಎಂಬ ಹೆಸರಿನಿಂದ ಕರೆಯಲಾಗಿದೆ. ನೊಬಿಲಿಟಿಗೆ ಅಷ್ಟೊಂದು ಅಧಿಕಾರವನ್ನು ನೀಡಲು ಮುಖ್ಯ ಕಾರಣ, ಅರಸುಮನೆತನಗಳ ಆಳ್ವಿಕೆಯ ಮುಂದುವರಿಕೆಯ ಮತ್ತು ಸರಕಾರವನ್ನು ದಿವಾಳಿತನದಿಂದ ಕಾಪಾಡುವ ಉದ್ದೇಶವೇ ಆಗಿತ್ತು. ಊಳಿಗದೊರೆಗಳು, ಪಾದ್ರಿಗಳು ಮತ್ತು ಇತರ ಕುಲೀನ ವರ್ಗದ ಜನರು ಆಡಳಿತಾತ್ಮಕ ಹಾಗೂ ನ್ಯಾಯ ವ್ಯವಹಾರದ ಅಧಿಕಾರವನ್ನು ಪಡೆದುಕೊಂಡಿದ್ದರು. ಇಲ್ಲಿ ನಿರಂಕುಶ ಪ್ರಭುತ್ವ ಒತ್ತಡ ಹೇರುವ ವರ್ಗಗಳೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಅನಿವಾರ್ಯವಾಯಿತು.

ಪೋಲೆಂಡ್‌ನಲ್ಲಿ ಯುರೋಪಿನ ಇತರ ರಾಷ್ಟ್ರಗಳಿಗಿಂತ ಭಿನ್ನವಾದ ರಾಜಕೀಯ ವ್ಯವಸ್ಥೆ ಇತ್ತು. ಇಲ್ಲಿ ಗಣರಾಜ್ಯ ವ್ಯವಸ್ಥೆ ಇದ್ದರೂ ಅದು ರಾಜಪ್ರಭುತ್ವವಾಗಿ ಪರಿವರ್ತನೆ ಹೊಂದಬೇಕಾಯಿತು. ಚುನಾವಣೆಗಳು ನಡೆಯುವ ಸಂದರ್ಭದಲ್ಲಿ ರಾಜಕೀಯ ಗಲಭೆಗಳು ಪ್ರಾರಂಭವಾಗಿ ಹೊರರಾಜ್ಯಗಳು ಹಸ್ತಕ್ಷೇಪ ನಡೆಸಲಾರಂಭಿಸಿದವು. ಇದರೊಡನೆ ಆರ್ಥಿಕ ಪರಿಸ್ಥಿತಿಯೂ ಹದಗೆಟ್ಟಿದ್ದರಿಂದಾಗಿ ಪೋಲೆಂಡ್ ಗಣತಂತ್ರವಾದಿ ವ್ಯವಸ್ಥೆಯನ್ನು ಬಲಪಡಿಸಲಾಗಲಿಲ್ಲ. ರಷ್ಯಾ, ಪ್ರಷ್ಯಾ ಹಾಗೂ ಆಸ್ಟ್ರೀಯಾ ದೇಶಗಳು ತಮ್ಮ ಸ್ವಂತ ಹಿತಾಸಕ್ತಿಗಳ ಈಡೇರಿಕೆಗೆ ಪೋಲೆಂಡ್ ದೇಶವನ್ನು ಸಾಧನವನ್ನಾಗಿ ಉಪಯೋಗಿಸಿಕೊಂಡರು. ನಿರಂಕುಶ ಪ್ರಭುತ್ವವನ್ನು ಬಲಪಡಿಸದ ಅಥವಾ ಆ ನೀತಿಯನ್ನು ಅಳವಡಿಸದ ರಾಷ್ಟ್ರಗಳ ಪರಿಸ್ಥಿತಿ ಪೋಲೆಂಡ್ ದೇಶದಂತೆಯೇ ಆಗುತ್ತಿತ್ತು. ಗಣತಂತ್ರವಾದಿ ವ್ಯವಸ್ಥೆ ಯುರೋಪಿನಲ್ಲಿ ಹದಿನೇಳು ಮತ್ತು ಹದಿನೆಂಟನೆಯ ಶತಮಾನಗಳಲ್ಲಿ ಅಲ್ಲಲ್ಲಿ ಕಾಣಿಸಿಕೊಂಡರೂ ಗಟ್ಟಿಯಾಗಿ ನಿಲ್ಲಲು ಸಾಧ್ಯವಾಗಲಿಲ್ಲ.

ಯುರೋಪಿನ ಸರಕಾರದ ವಿವಿಧ ಮಾದರಿಗಳ ಕುರಿತು ಚರ್ಚಿಸುವಾಗ ಗಣರಾಜ್ಯ ವ್ಯವಸ್ಥೆಯೂ ಪ್ರಾಮುಖ್ಯವೆನಿಸುತ್ತದೆ. ಏಕೆಂದರೆ ಇದು ನಿರಂಕುಶ ಪ್ರಭುತ್ವದ ವಿರುದ್ಧ ದಂಗೆ ಏಳುತ್ತಿದ್ದವು. ಆದರೆ ದಂಗೆ ಕ್ರಾಂತಿಯ ಸ್ವರೂಪವನ್ನು ಪಡೆದಿರಲಿಲ್ಲ. ಗಣ ರಾಜ್ಯಗಳು ಸೀಮಿತ ಭೂಪ್ರದೇಶವನ್ನು ಹೊಂದಿದ್ದವು ಎನ್ನುವ ಅಂಶ ನಮ್ಮ ಗಮನಕ್ಕೆ ಬರುತ್ತದೆ. ಇಲ್ಲಿ ಅಧಿಕಾರದ ವಿಕೇಂದ್ರೀಕರಣವಿದ್ದು ಕಾರ್ಯಾಂಗ, ನ್ಯಾಯಾಂಗ ಮತ್ತು ಶಾಸಕಾಂಗವೆನ್ನುವ ಆಡಳಿತದ ಮೂರು ವ್ಯವಸ್ಥೆಗಳು ಇರುತ್ತಿದ್ದವು. ಇಲ್ಲಿ ಮಂತ್ರಿ ಮಂಡಲದ ಸಲಹೆ ಸೂಚನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯತೆ ಇದ್ದು ಬಹುಮತದ ಆಧಾರದ ಮೇಲೆ ಸರಕಾರ ಕಾರ್ಯ ನಿರ್ವಹಿಸಬೇಕಿತ್ತು. ಪ್ರಮುಖ ಗಣರಾಜ್ಯಗಳನ್ನು ಉದಾಹರಿಸು ವುದಾದರೆ, ಡಚ್ ಗಣರಾಜ್ಯ ಇಟಲಿ ದೇಶದ ಕೆಲವು ಪ್ರಾಚೀನ ರಾಜ್ಯಗಳಾದ ವೇನಿಸ್, ಜಿನೋವಾ, ಲುಕ್ಕಾ ಇತ್ಯಾದಿ.

ತಮ್ಮ ಸಮಕಾಲೀನ ನಿರಂಕುಶ ಪ್ರಭುತ್ವವಾದಿ ಬೃಹತ್ ರಾಷ್ಟ್ರಗಳನ್ನು ಪ್ರಶ್ನಿಸುವಷ್ಟು ಸಾಮರ್ಥ್ಯವನ್ನು ಗಣತಂತ್ರವಾದಿ ದೇಶಗಳು ಹೊಂದಿರಲಿಲ್ಲ. ಆದ್ದರಿಂದ ಮೇಲೆ ಹೆಸರಿಸಿದ ದೇಶಗಳಲ್ಲಿ ಯಾವುದೇ ರೀತಿಯ ದಂಗೆ ನಡೆದರೂ ಯುರೋಪಿನಾದ್ಯಂತ ಪ್ರಭಾವ ಬೀರುವಲ್ಲಿ ಯಶಸ್ವಿಯಾಗುತ್ತಿರಲಿಲ್ಲ. ಆದರೂ ಜನಸಾಮಾನ್ಯರಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಿಸುವಲ್ಲಿ ಮಾತ್ರ ಸಫಲವಾಗಿದ್ದವು. ಇದಕ್ಕೆ ಉತ್ತಮ ನಿದರ್ಶನ ಹದಿನೆಂಟನೆಯ ಶತಮಾನದ ದ್ವಿತೀಯಾರ್ಧದಲ್ಲಿ ಆರಂಭವಾದ ಕ್ರಾಂತಿಗಳು. ಗಣತಂತ್ರ ವ್ಯವಸ್ಥೆಯಲ್ಲಿ ಅನೇಕ ಪ್ರಾಂತ್ಯಗಳಿದ್ದು ಪ್ರತಿಯೊಂದು ಪ್ರಾಂತ್ಯವೂ ಪ್ರಾಂತ್ಯಾಧಿಕಾರಿಗಳನ್ನು ಹೊಂದಿರುತ್ತಿತ್ತು. ಕೇಂದ್ರದ ಹಸ್ತಕ್ಷೇಪವಿಲ್ಲದೆ ಪ್ರಾಂತ್ಯಗಳಲ್ಲಿ ಪ್ರಾಂತ್ಯಾಧಿಕಾರಿಗಳೇ ಆಡಳಿತವನ್ನು ನಡೆಸುತ್ತಿದ್ದರು. ಪ್ರತಿಯೊಂದು ಪ್ರಾಂತ್ಯವೂ ಕೌನ್ಸಿಲ್ (ಆಲೋಚನಾ ಸಭೆ) ಹೊಂದಿದ್ದು ಒಮ್ಮತದ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿತ್ತು. ವಿಶಾಲಾರ್ಥದಲ್ಲಿ ಗಣರಾಜ್ಯಗಳ ಒಟ್ಟು ಸ್ವರೂಪವನ್ನು ಕುರಿತು ಚರ್ಚಿಸುವಾಗ ಶಾಂತಿ, ತಟಸ್ಥ ನೀತಿ, ಧಾರ್ಮಿಕ ಸಹಿಷ್ಣುತೆ, ವ್ಯಾಪಾರದ ಅಭಿವೃದ್ಧಿಗೆ ಪೂರಕವಾಗಿರುವ ನೀತಿಗಳನ್ನು ಕಾಣಬಹುದು. ಒಟ್ಟಾರೆಯಾಗಿ ಹದಿನೇಳನೆಯ ಮತ್ತು ಹದಿನೆಂಟನೆಯ ಶತಮಾನದ ಗಣರಾಜ್ಯಗಳ ಅಧ್ಯಯನ ನಡೆಸುವಾಗ ಆಶಾದಾಯಕ ಉತ್ತರ ಸಿಗುವುದಿಲ್ಲ.

ಹದಿನೆಂಟನೆಯ ಶತಮಾನದ ಯುರೋಪನ್ನು 'ಪ್ರಜ್ಞಾವಂತ ರಾಜಪ್ರಭುತ್ವದ ಯುಗ' ಎಂಬುದಾಗಿಯೂ ಕರೆಯಲಾಗಿದೆ. ಇದು ಯುರೋಪ್‌ಕೇಂದ್ರಿತ ಅಧ್ಯಯನದ ಸೃಷ್ಟಿಯಾದರೂ ಕೆಲವೊಂದು ಸಿದ್ಧಾಂತಗಳು ರೂಪುಗೊಂಡಿರುವುದಂತೂ ನಿಜ. ತಮ್ಮ ಪ್ರಜೆಗಳ ಬೆಂಬಲವನ್ನು ಪಡೆಯುವ ಉದ್ದೇಶದಿಂದ ಜನಪರ ಧೋರಣೆಗಳನ್ನು ತಳೆದ ಅರಸರುಗಳನ್ನು ಪ್ರಜಾವಂತ ರಾಜರುಗಳು ಎಂದು ಹೆಸರಿಸಲಾಗಿದೆ. ಫ್ರಾನ್ಸಿನ ತತ್ವಜ್ಞಾನಿ ಗಳಾದ ಮೊಂಟೆಸ್ಕ್ಯೊ ಇಂಗ್ಲೆಂಡಿನ ಅಧಿಕಾರದ ಸ್ವರೂಪದತ್ತ ಒಲವು ತೋರಿಸಿದರೆ, ವಾಲ್ಟೇರ್ ಪ್ರಷ್ಯಾದ ಉದಾರವಾದಿ ನಿರಂಕುಶ ಪ್ರಭುತ್ವವನ್ನು ಬೆಂಬಲಿಸುತ್ತಾನೆ. ಆದರೆ ರೂಸ್ಸೋ ಜನಸಾಮಾನ್ಯರ ಶ್ರೇಷ್ಠಾಧಿಕಾರದ ಕುರಿತು ತನ್ನ ಸಿದ್ಧಾಂತವನ್ನು ಮಂಡಿಸುತ್ತಾನೆ. ಜೋನ್‌ಲಾಕ್, ಸಿಡ್ನೀ ಮುಂತಾದ ಅನೇಕ ತತ್ವಜ್ಞಾನಿಗಳು ನಿರಂಕುಶಪ್ರಭುತ್ವ, ಚರ್ಚ್ ಹಾಗೂ ಊಳಿಗಮಾನ್ಯ ಪದ್ಧತಿಯ ವಿರುದ್ಧ ತಮ್ಮ ಬರವಣಿಗೆಯ ಮೂಲಕ ಜನಜಾಗೃತಿ ಯನ್ನು ಉಂಟುಮಾಡಲು ಶ್ರಮಿಸುತ್ತಿದ್ದನು. ಪ್ರಜ್ಞಾವಂತ ಅರಸರುಗಳ ಕೇಂದ್ರ ಮನೋ ಭಾವನೆಯನ್ನು ಈ ರೀತಿ ವ್ಯಾಖ್ಯಾನಿಸಲು ಸಾಧ್ಯ, "ಅರಸ ಎಷ್ಟಾದರೂ ನಿರಂಕುಶ, ಆದರೆ ಅವನು ಪ್ರಜೆಗಳ ಶ್ರೇಷ್ಠ ಪ್ರತಿನಿಧಿ ಮತ್ತು ಪ್ರಥಮ ಸೇವಕ." ಈ ಹಿನ್ನೆಲೆಯಲ್ಲಿ ಅರಸರುಗಳು ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು. ಈ ಸುಧಾರಣೆಗಳು ತತ್ವಜ್ಞಾನಿಗಳ ಸಿದ್ಧಾಂತಗಳಲ್ಲಿ ಅಡಕವಾಗಿರುವ ಅಂಶಗಳೇ ಆಗಿದ್ದುವು. ಆದರೆ ನಿರಂಕುಶ ಆಡಳಿತವೂ ಇದ್ದುದ್ದರಿಂದಾಗಿ ಹೊಸ ಸುಧಾರಣೆಗಳು ಅಷ್ಟೊಂದು ಸುಲಭವಾಗಿ ಜಾರಿಗೆ ಬರುವಂತಿರಲಿಲ್ಲ. ಇದಕ್ಕೆ ಕ್ರಾಂತಿಯ ಅನಿವಾರ್ಯತೆ ಇತ್ತು.

ನಿರಂಕುಶಪ್ರಭುತ್ವದ ಪರ ಹಾಗೂ ವಿರೋಧಿ ನಿಲುವುಗಳನ್ನು ಇಲ್ಲಿ ಅಧ್ಯಯನ ನಡೆಸುವುದು ಸೂಕ್ತ ಎನಿಸುತ್ತದೆ. ಹದಿನೇಳನೆಯ ಶತಮಾನದ ದ್ವಿತೀಯಾರ್ಧರ್ ಮತ್ತು ಹದಿನೆಂಟನೆಯ ಶತಮಾನದ ಅಂತ್ಯದ ನಡುವಿನ ಅವಧಿಯಲ್ಲಿ ವಿಚಾರ ಯುಗ ಕಾಣಿಸಿಕೊಂಡಿತು. ಇದನ್ನು ಸಿದ್ಧಾಂತಗಳ ಯುಗ ಅಥವಾ ನಂಬಿಕೆಯ ಯುಗ ಎಂದೂ ಕರೆಯಲಾಗಿದೆ. ಈ ಬೆಳವಣಿಗೆಗೆ ಸ್ವಲ್ಪ ಹಿಂದೆ ಅಂದರೆ ಕ್ರಿ.ಶ.ಹದಿನಾರನೆಯ ಶತಮಾನ ದಲ್ಲಿ ನಿರಂಕುಶ ಪ್ರಭುತ್ವಕ್ಕೆ ಸಿಕ್ಕಿದ ಕೊಡುಗೆಯೆಂದರೆ ಮೆಕ್ಯಾವಿಲೆಯ ಪ್ರಿನ್ಸ್. ಈ ಪುಸ್ತಕ ನಿರಂಕುಶ ಪ್ರಭುತ್ವವನ್ನು ನ್ಯಾಯ ಸಮ್ಮತಗೊಳಿಸಿದ್ದು ಮಾತ್ರವಲ್ಲದೆ ನಿರಂಕುಶಪ್ರಭು ಹೊಂದಿರಬೇಕಾದ ಎಲ್ಲಾ ಗುಣಗಳನ್ನು ಗರ್ಭೀಕರಿಸಿಕೊಂಡಿತ್ತು. ಹದಿನೇಳನೆಯ ಶತಮಾನದಲ್ಲಿ ನಾವು ಡೆಕಾರ್ಟ್, ಬೇಕನ್, ನ್ಯೂಟನ್,  ಸ್ಪಿನೋಚಾ, ಹಾಬ್ಸ್, ಬೋಸ್ ವೆಟ್, ಫಿಲ್ಮರ್, ಲಾಕ್ ಮುಂತಾದವರನ್ನು ಹೆಸರಿಸಿದರೆ, ಹದಿನೆಂಟನೆಯ ಶತಮಾನದಲ್ಲಿ ಡಿಡಿರೋಟ್, ಮೊಂಟೆಸ್ಕ್ಯೂ, ಕ್ವೆಸ್ನೇ, ಡೇವಿಡ್ ಹ್ಯೂಮ್, ವಾಲ್ಟೇರ್, ರೂಸ್ಸೋ ಮುಂತಾದವರನ್ನು ಹೆಸರಿಸಬಹುದು. ಇವರಲ್ಲಿ ಕೆಲವರು ನಿರಂಕುಶ ಪ್ರಭುತ್ವವನ್ನು ಪುಷ್ಟಿಕರಿಸಿದರೆ ಇನ್ನು ಕೆಲವರು ವಿರೋಧಿಸಲು ಪ್ರಾರಂಭಿಸಿದರು. ಉದಾಹರಣೆಗೆ, ಹೋಬ್ಸ್, ಬೊಸ್‌ವೆಟ್, ಫಿಲ್ಮರ್ ಇವರುಗಳು ನಿರಂಕುಶ ಪ್ರಭುತ್ವದ ಪರವಾಗಿ ವಾದಿಸಿದರೆ, ಸಿಡ್ನೀ, ಜೋನ್ ಲಾಕ್, ಮೊಂಟೆಸ್ಕ್ಯೊ, ರೂಸ್ಸೋ ಇವರುಗಳು ನಿರಂಕುಶ ಪ್ರಭುತ್ವವನ್ನು ಬಲವಾಗಿ ಟೀಕಿಸಿ ತಮ್ಮ ವಾದ ಮಂಡಿಸಿದರು. ಇಲ್ಲಿ ವಾದ ಯಾವ ರೀತಿಯದ್ದಾದರೂ ಯುರೋಪಿನಲ್ಲಿ ಒಂದು ಹೊಸ ಆಲೋಚನಾ ಕ್ರಮವನ್ನು ಹುಟ್ಟ ಹಾಕಿದ್ದಂತೂ ನಿಜ.

ಯುರೋಪಿನ ಬಹುತೇಕ ಎಲ್ಲಾ ರಾಷ್ಟ್ರಗಳೂ ನಿರಂಕುಶ ಪ್ರಭುತ್ವದ ಸಂಕೀರ್ಣತೆಯ ಅನುಭವಗಳನ್ನು ತಮ್ಮ ಇತಿಹಾಸದಲ್ಲಿ ದಾಖಲಿಸಿಕೊಂಡಿವೆ. ದರ್ಪಿಷ್ಟತೆ ಹಾಗೂ ದಬ್ಬಾಳಿಕೆಯಿಂದಲೇ ತಮ್ಮ ಇರುವಿಕೆಯನ್ನು ಗುರುತಿಸಿಕೊಳ್ಳಬೇಕಾದ ಅಗತ್ಯತೆ ಅಂದಿನ ಅರಸು ಮನೆತನಗಳಿಗೆ ಇತ್ತು ಎನ್ನುವ ಅಂಶ ಇಂದಿನ ಸಂಶೋಧನೆಗಳಿಂದ ವ್ಯಕ್ತವಾಗಿರುವ ಸಂಗತಿ. ಇದು ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ, ನಿರ್ದಿಷ್ಟ ಭೌಗೋಳಿಕ ಪ್ರದೇಶಕ್ಕೆ ಸಂಬಂಧಪಟ್ಟಂತೆ ಸ್ವರೂಪದಲ್ಲಿ ಬದಲಾವಣೆಗಳನ್ನು ಕಂಡಿರುವ ಅಂಶವನ್ನು ಈಗಾಗಲೇ ಚರ್ಚಿಸಲಾಗಿದೆ. ಉದಾಹರಣೆಗೆ, ನಿರಂಕುಶ, ಉದಾರವಾದಿ, ಪ್ರಜ್ಞಾವಂತ ರಾಜಪ್ರಭುತ್ವ ವೆನ್ನುವ ಸರಕಾರದ ವಿವಿಧ ಮಾದರಿಗಳು. ನಿರಂಕುಶ ಪ್ರಭುತ್ವ ಪರಿಸ್ಥಿತಿ ಹಾಗೂ ಪರಿಸರಕ್ಕೆ ಅನುಗುಣವಾಗಿ ಕೆಲವೊಂದು ಮಾರ್ಪಾಡುಗಳೊಂದಿಗೆ ಬಣ್ಣ ಬದಲಾಯಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದೂ ಉಂಟು. ಈ ಬೆಳವಣಿಗೆ ವಂಶಪಾರಂಪರ್ಯವಾಗಿ ಬಂದ ಅಧಿಕಾರವನ್ನು ಅನುಭವಿಸಲು ಹಾಗೂ ಮುಂದುವರಿಸಿಕೊಂಡು ಹೋಗಲು ಅವಶ್ಯಕ ವಾಗಿದ್ದಿರಬೇಕು. ನಿರಂಕುಶಪ್ರಭುತ್ವ ತನ್ನ ಹುಟ್ಟಿನಿಂದ ಅವನತಿಯವರೆಗೂ ವಿರೋಧಗಳನ್ನು ಎದುರಿಸುತ್ತಲೇ ಇರಬೇಕಾಗಿತ್ತು. ವಿರೋಧಗಳು ಅನೇಕ ಬಗೆಯವು. ಶ್ರೀಮಂತ ವರ್ಗದ ವಿರೋಧ, ಮಧ್ಯಮ ವರ್ಗದ ವಿರೋಧ, ಮಂತ್ರಿಗಳ ಹಾಗೂ ಇನ್ನಿತರ ಅಧಿಕಾರಗಳ ವಿರೋಧ, ತತ್ವಜ್ಞಾನಿಗಳ ಸೈದ್ಧಾಂತಿಕ ನಿಲುವುಗಳು ಹಾಗೂ ಇತರ ರಾಜಮನೆತನಗಳ ವಿರೋಧ. ಈ ಎಲ್ಲಾ ವಿರೋಧಗಳಿದ್ದರೂ ಇದು ಯುರೋಪಿನಲ್ಲಿ ಕ್ರಾಂತಿಯ ಯುಗ ಆರಂಭವಾಗುವಲ್ಲಿಯವರೆಗೆ

ಒಟ್ಟು ರಾಜಕೀಯ ವ್ಯವಸ್ಥೆಯ ಮೇಲೆ ಹಿಡಿತವನ್ನು ಸಾಧಿಸಿತ್ತು. ನಿರಂಕುಶ ಪ್ರಭುತ್ವ ಒಂದು ಸಿದ್ಧಾಂತವಾಗಿ ರೂಪುಗೊಂಡಿದ್ದು ಹತ್ತೊಂಬತ್ತ ನೆಯ ಶತಮಾನದಲ್ಲಿ. ಇದರಿಂದಾಗಿ ಸಂಶೋಧನಾ ಅಧ್ಯಯನಗಳು ಆರಂಭಗೊಂಡು ನಿರಂಕುಶ ಪ್ರಭುತ್ವದ ಸ್ವರೂಪ ಹಾಗೂ ವ್ಯಾಪ್ತಿ ಚರ್ಚೆಯ ವಸ್ತುವಾಯಿತು.


<u>ಪರಾಮರ್ಶನ ಗ್ರಂಥಗಳು</u>

೧. ಜ್ಯೋಫ್ರೀ ಪಾರ್ಕರ್, ೧೯೭೯. **ಯುರೋಪ್ ಇನ್ ಕ್ರೈಸಿಸ್ ೧೫೯೮–೧೬೪೮,** ಫಾಂಟಾನಾ ಪ್ರೆಸ್.

೨. ಅಲ್ವಿನ್ ಹಫ್ಟನ್, **ಯುರೋಪ್: ಪ್ರಿವಿಲೇಜ್ ಆ್ಯಂಡ್ ಪ್ರೊಟೆಸ್ಟ್: ೧೭೩೦–೧೭೮೯,** ಫಾಂಟಾನಾ ಫ್ರೆಸ್.

೩. ಪೆರ್ರೀ ಆ್ಯಂಡರ್‌ಸನ್, ೧೯೭೮. **ಲಿನ್ಯೇಜಸ್ ಆಫ್ ಅಬ್ಸಲ್ಯೂಟಿಸ್ಟ್ ಸ್ಟೇಟ್,** ಲಂಡನ್: ಹ್ಯುಮೇನಿಟೀಸ್ ಪ್ರೆಸ್.

೪. ಆ್ಯಂಡರ್‌ಸನ್ ಎಂ.ಎಸ್., ೧೯೭೬. **ಯುರೋಪ್ ಇನ್ ದ ಎಟೀನ್ತ್ ಸೆಂಚುರಿ** (ಎರಡನೆಯ ಮುದ್ರಣ), ಲಾಂಗ್ ಮೇನ್

೫. ಥಿಯೋಡೋರ್ ರಾಬ್ ಕೆ., ೧೯೭೫. **ಸ್ಟ್ರಗಲ್ ಫಾರ್ ಸ್ಟೆಬಿಲಿಟಿ ಇನ್ ದ ಆರ್ಲೀ ಮಾಡರ್ನ್ ಯುರೋಪ್,** ನ್ಯೂಯಾರ್ಕ್: ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್.

೬. ಹಿಲ್ಟನ್ ರೋಡ್ನೀ, ೧೯೭೮. **ದ ಟ್ರಾನ್ಸೀಶ್ಯನ್ ಪ್ರಮ್ ಫ್ಯೂಡಲಿಸಂ ಟು ಕ್ಯಾಪಿಟಾಲಿಸಂ,** ವರ್ಸೋ

೭. ವಿಲ್ಯಮ್ ಡೋಯ್ಲಿ, ೧೯೭೮. **ದಿ ಓಲ್ಡ್ ಯುರೋಪಿಯನ್ ಆರ್ಡರ್ ೧೬೬೦–೧೮೦೦,** ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್


## ೧೪. ಕೈಗಾರಿಕಾ ಕ್ರಾಂತಿ ಮತ್ತು ಬಂಡವಾಳವಾದದ ಉಗಮ


**ವಿ.ಎಸ್.ಎಲಿಜಬೆತ್**

**ಅನುವಾದ: ಎಸ್. ಸಿರಾಜ್ ಅಹಮದ್**


ವೈಚಾರಿಕತೆ, ವಿಜ್ಞಾನ ಮತ್ತು ಪ್ರಗತಿ-ಇವು ಸಮಾಜವಾದ ಎಂಬ ಹೊಸ ಸಿದ್ಧಾಂತದ ಮೂಲಭೂತ ತತ್ವಗಳಾಗಿದ್ದವು. ಸಮಾಜವಾದಿಗಳು ಕೈಗಾರಿಕಾ ಕ್ರಾಂತಿಯನ್ನು ಸಂಪೂರ್ಣವಾಗಿ ಒಪ್ಪಿಕೊಂಡಿದ್ದರಿಂದ ಆಧುನಿಕ ಸಮಾಜವಾದ ಹುಟ್ಟಲು ಕಾರಣವಾಯಿತು. ಸಮಾಜವಾದಿ ಸಿದ್ಧಾಂತವನ್ನು ಯುರೋಪಿನ ಇತಿಹಾಸದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಪಾದಿಸಲಾಗಿದೆ ಹಾಗೂ ಆಚರಣೆಗೆ ತರಲಾಗಿದೆ. ಹತ್ತೊಂಬತ್ತನೆಯ ಶತಮಾನದ ಕೈಗಾರಿಕಾ ಕ್ರಾಂತಿಯ ಫಲವಾಗಿ ಹುಟ್ಟಿದ ವ್ಯಕ್ತಿವಾದ ಮತ್ತು ಉದಾರ ಆರ್ಥಿಕ ನೀತಿಗಳು ದುಡಿಯುವ ವರ್ಗದ ಜನರ ಕಷ್ಟಗಳಿಗೆ ಕಾರಣವಾದವು. ಇವು ನಂತರ ಜನರಲ್ಲಿ ಪ್ರತಿಭಟನೆಯ ಶಕ್ತಿ ತುಂಬುವ ಸಾಮಾಜಿಕ ಚಳವಳಿಗಳ ಬೆಳವಣಿಗೆಗೆ ಕಾರಣವಾದವು.

### ಯುಟೋಪಿಯನ್ ಸಮಾಜವಾದ

೧೮೪೮ರ ಕ್ರಾಂತಿಗಿಂತಲೂ ಮೊದಲಿನ ಸಮಾಜವಾದಿಗಳು ಬೇರೆ ಬೇರೆ ಬಗೆಯ ವರಾಗಿದ್ದರೂ ಕೆಲವು ಸಮಾನ ಅಭಿಪ್ರಾಯಗಳನ್ನು ಹೊಂದಿದ್ದರು. ಅವರೆಲ್ಲರ ಅಭಿಪ್ರಾಯದಲ್ಲಿ ಆಗಿನ ಆರ್ಥಿಕ ವ್ಯವಸ್ಥೆ ಗೊತ್ತುಗುರಿಯಿಲ್ಲದ, ನಿರ್ದಿಷ್ಟ ಸ್ವರೂಪವಿಲ್ಲದ ಹಾಗೂ ನಿಸ್ಸಂಶಯವಾಗಿ ಅನ್ಯಾಯದ ತಳಹದಿಯ ಮೇಲೆ ನಿಂತ ವ್ಯವಸ್ಥೆಯಾಗಿತ್ತು. ಅವರೆಲ್ಲರೂ ಖಾಸಗಿ ಒಡೆತನವನ್ನು ವಿರೋಧಿಸಿದರು ಮತ್ತು ಬ್ಯಾಂಕುಗಳು, ಕಾರ್ಖಾನೆಗಳು, ಯಂತ್ರಗಳು, ಭೂಮಿ ಮತ್ತು ಸಾರಿಗೆಯಂಥ ಉತ್ಪಾದಕ ಸಂಸ್ಥೆಗಳಲ್ಲಿ ಸಾಮೂಹಿಕ ಒಡೆತನವನ್ನು ಸ್ಥಾಪಿಸುವುದನ್ನು ಅನುಮೋದಿಸಿದರು. ಅವರೆಲ್ಲರೂ ಸ್ಪರ್ಧೆಯಷ್ಟನ್ನೇ ಮೂಲತತ್ವವನ್ನಾಗಿ ಒಪ್ಪಿಕೊಳ್ಳದೆ ಅದಕ್ಕೆ ಬದಲಾಗಿ ಸಾಮರಸ್ಯ, ಸಹಭಾಗಿತ್ವ, ಸಂಘಗಳು ಅಥವಾ ಸಂಘಟಿತ ಯತ್ನವನ್ನು ಅಂಗೀಕರಿಸಿದರು. ಅವರೆಲ್ಲರೂ ಆರ್ಥಿಕ

ಚಟುವಟಿಕೆಗಳಲ್ಲಿ ರಾಜ್ಯ ಹಸ್ತಕ್ಷೇಪ ಮಾಡಬಾರದು ಎನ್ನುವ ಉದಾರವಾದಿಗಳ ಹಾಗೂ ರಾಜಕೀಯ ಅರ್ಥಶಾಸ್ತ್ರಜ್ಞರ "ಲೆಸ್ಸ-ಫೇರ್" ಎಂಬ ಸಿದ್ಧಾಂತವನ್ನು ಸಾರಾಸಗಟಾಗಿ ತಿರಸ್ಕರಿಸಿದರು. ಮೊದಲ ಹಂತದ ಈ ಸಮಾಜವಾದಿಗಳು ಉತ್ಪಾದನೆಯನ್ನು ಹೆಚ್ಚಿಸುವ ವಿಧಾನಗಳಿಗಿಂತ, ಆದಾಯವನ್ನು ಸಮಾಜದ ಉಪಯುಕ್ತ ಸದಸ್ಯರ ನಡುವೆ ಹೇಗೆ ಸಮಾನವಾಗಿ ಮತ್ತು ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಹಂಚಬೇಕು ಎನ್ನುವ ಬಗ್ಗೆ ಯೋಚಿಸಿದರು. ಫ್ರೆಂಚ್ ಕ್ರಾಂತಿಯು ತಂದುಕೊಟ್ಟ ನಾಗರಿಕ ಹಾಗೂ ಕಾನೂನು ಬದ್ಧ ಸಮಾನತೆಗಿಂತ ಮಿಗಿಲಾಗಿ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯನ್ನು ಗಳಿಸಿಕೊಳ್ಳಲು ಪ್ರಯತ್ನ ನಡೆಸಬೇಕೆಂಬುದು ಅವರ ನಂಬಿಕೆಯಾಗಿತ್ತು. ಈ ಸಮಾಜವಾದಿಗಳು - ಜನಗಳ ನಡುವೆ ಪರಸ್ಪರ ಸಹಕಾರ, ಶ್ರಮದ ಮಹತ್ವ ಮತ್ತು ಉಪಯೋಗ, ಮನುಷ್ಯ ಕುಲವನ್ನು ಪುನಶ್ಚೇತನಗೊಳಿಸಲು ಬೇಕಾದ ಸಾಮರಸ್ಯದಿಂದ ತುಂಬಿದ ಸಮಾಜ ಇತ್ಯಾದಿ ನೈತಿಕ ಮೌಲ್ಯಗಳನ್ನು ಬಲವಾಗಿ ಪ್ರತಿಪಾದಿಸಿದರು. ಅವರು ಪ್ರತಿಪಾದಿಸಿದ ಹೊಸ ಸಮಾಜದಲ್ಲಿ ಪ್ರತಿಯೊಬ್ಬರೂ ಸಂತೋಷವಾಗಿರುವುದಷ್ಟೇ ಅಲ್ಲದೆ, ಅಲ್ಲಿ ಬದುಕುವ ಪ್ರತಿ ವ್ಯಕ್ತಿಯೂ ತನ್ನ ಸಾಮರ್ಥ್ಯವನ್ನು ಅರಿತುಕೊಂಡವ ನಾಗಿರುತ್ತಿದ್ದ. ಅಲ್ಲಿ ಸ್ವಾತಂತ್ರ್ಯವೇ ಸಾರ್ವಭೌಮವಾಗಿದ್ದು ಸರ್ಕಾರವು ಕಡ್ಡಾಯವಾಗಿ ಇಲ್ಲದಾಗಬೇಕಿತ್ತು. ಇಷ್ಟೇ ಅಲ್ಲದೆ ಈ ಅವಧಿಯ ಸಮಾಜವಾದಿಗಳು ಇಂಥ ಕಾಲ್ಪನಿಕ ರಾಜ್ಯ-ಯುಟೋಪಿಯಾವನ್ನು ಸ್ಥಾಪಿಸುವ ರೀತಿಗಳನ್ನೂ ಸಹ ಸೂಚಿಸಿದರು. ಅವರು ಮನುಷ್ಯ ಮೂಲತಃ ಸಂಘಜೀವಿ ಎಂಬ ಮಾನವ ಸಮುದಾಯದ ಅತ್ಯಂತ ಪ್ರಾಚೀನ ತತ್ವವನ್ನು ತಮ್ಮ ಸಿದ್ಧಾಂತವಾಗಿಸಿಕೊಂಡರು. ಅವರ ರಮ್ಯ ಆದರ್ಶಗಳು ಮತ್ತು ಕಾಲ್ಪನಿಕ ಸಿದ್ಧಾಂತಗಳು ಅವರಿಗೆ ನಿಜವಾದ ಅರ್ಥದಲ್ಲಿ ಯುಟೋಪಿಯನ್ ಸಮಾಜ ವಾದಿಗಳೆಂಬ ಹೆಸರನ್ನು ತಂದುಕೊಟ್ಟವು. ಅವರ ಪರಿಪೂರ್ಣತೆಯ ಹಂಬಲವೇ ಅವರನ್ನು ನಿರಾಶೆಯ ಅಂಚಿಗೆ ತಳ್ಳಿತು.

ಮೊದಲ ಹಂತದ ಈ ಸಮಾಜವಾದಿಗಳಲ್ಲಿ ಮುಖ್ಯನಾದವನು ರಾಬರ್ಟ್ ಓವೆನ್ (೧೭೭೧-೧೮೭೮). ಬಟ್ಟೆ ಕೈಗಾರಿಕೆಯ ಮುಂಚೂಣಿಯಲ್ಲಿದ್ದ ಈತ ಒಳ್ಳೆಯ ಸಮಾಜವೊಂದನ್ನು ಕಟ್ಟುವ ಸಾಧ್ಯತೆಯನ್ನು ಮನುಷ್ಯನ ಪ್ರಾವೀಣ್ಯತೆಯಲ್ಲಿ ಮಾತ್ರವಲ್ಲ, ಕೈಗಾರಿಕಾ ಕ್ರಾಂತಿ ಸೃಷ್ಟಿಸಿದ ವಿಪುಲ ಅವಕಾಶಗಳಲ್ಲಿ ಸಹ ಕಂಡುಕೊಂಡಿದ್ದ. ತನ್ನ ಕೆಲಸಗಾರರಿಗಾಗಿ ಈತ ಕಟ್ಟಬೇಕೆಂದು ಬಯಸಿದ ಮಾದರಿ ಸಮಾಜದಲ್ಲಿ ಕೆಲಸಗಾರರಿಗೆ ಹೆಚ್ಚು ಸಂಬಳವಿದ್ದರೂ ಕಡಿಮೆ ಕೆಲಸವಿತ್ತು. ಅಲ್ಲಿ ಅವರಿಗಾಗಿ ಶಾಲೆಗಳು, ವಸತಿ ಮತ್ತು ಕಡಿಮೆ ದರದಲ್ಲಿ ಕೆಲಸಗಾರರಿಗೆ ಅಗತ್ಯ ವಸ್ತುಗಳನ್ನು ಮಾರುವ ಕಂಪನಿ ಸ್ಟೋರ್ ಗಳಿದ್ದವು. ಹಾಗೆಯೇ ಅಲ್ಲಿ ಕುಡಿತಕ್ಕೆ, ಕೆಟ್ಟ ಅಭ್ಯಾಸಗಳಿಗೆ ಕಠಿಣ ಶಿಕ್ಷೆ ಕಾದಿತ್ತು. ಧಾರ್ಮಿಕ ವಿಷಯಗಳ ಬಗ್ಗೆ ರಾಬರ್ಟ್ ಓವೆನ್‌ನ ವೈಚಾರಿಕ ನಿಲುವುಗಳಿಗೆ ಇದ್ದ ವಿರೋಧ ಮತ್ತು ಇತರ ಕೈಗಾರಿಕೋದ್ಯಮಿಗಳ ವಿರೊಧದ ನಡುವೆಯೂ, ಈತ ತನ್ನ ಜೀವನದ ಬಹುಪಾಲು ಸಮಯವನ್ನು ಸಾಮಾಜಿಕ ಸುಧಾರಣೆಯನ್ನು ತರಲು ಹೋರಾಡುವುದರಲ್ಲಿ ಕಳೆದ.

ಮೊದಲ ಅವಧಿಯ ಬಹುಪಾಲು ಸಮಾಜವಾದಿಗಳು ಫ್ರೆಂಚರಾಗಿದ್ದರು. ಅವರು ಪೂರ್ಣಗೊಳ್ಳದ ಒಂದು ಕ್ರಾಂತಿಯ ಅರಿವಿನಿಂದ ಪ್ರೇರಣೆ ಪಡೆದಿದ್ದರು. ಅವರಲ್ಲಿ ಒಬ್ಬ ಗಣ್ಯವ್ಯಕ್ತಿ ಕೌಂಟ್ ಡಿ ಸೇಂಟ್ ಸಿಮೋನ್(೧೭೬೦-೧೮೨೫). ಈತ ಮತ್ತು ಈತನ ಅನುಯಾಯಿಗಳು ವ್ಯವಸ್ಥಿತ ಸಮಾಜವೊಂದರ ಕಲ್ಪನೆಯನ್ನು ತಿರಸ್ಕರಿಸಿದರು. ಇವರು ಕೈಗಾರಿಕಾ ಯಂತ್ರಗಳ ಮೇಲೆ ಸಾಮೂಹಿಕ ಒಡೆತನವನ್ನು ಪ್ರತಿಪಾದಿಸಿದರು. ಅಷ್ಟೇ ಅಲ್ಲ, ಜನರಿಗೆ ಉಪಯೋಗವಾಗುವಂಥ ಬೃಹತ್ ಯೋಜನೆಗಳನ್ನು ರೂಪಿಸುವ, ಉದಾಹರಣೆಗೆ : ಸೂಯೆಜ್ ಕಾಲುವೆಯನ್ನು ನಿರ್ಮಿಸುವುದು ಮತ್ತು ಕೆಲಸಗಾರರೊಂದಿಗೆ ಒಡನಾಡುತ್ತ ಎಲ್ಲ ಸಂಪನ್ಮೂಲಗಳನ್ನು, ಅಭಿವೃದ್ಧಿಗೆ ಬಳಸುವ ಸಾಮರ್ಥ್ಯ ಇರುವಂಥವರ ಕೈಯಲ್ಲಿ ಮಾತ್ರ ಇತರ ಬಂಡವಾಳದ ವಹಿವಾಟುಗಳನ್ನು ನೀಡಬೇಕು ಎಂದು ಅಭಿಪ್ರಾಯಪಟ್ಟರು. ಇವರಿಗಿಂತ ಭಿನ್ನವಾದ ಇನ್ನೊಬ್ಬ ಚಿಂತಕ ಚಾರ್ಲ್ಸ್ ಫೋರಿಯ (೧೭೭೨-೧೮೩೭). ಸ್ವಲ್ಪಮಟ್ಟಿಗೆ ಯಾವಾಗಲೂ ಸಿದ್ಧಾಂತಗಳನ್ನು ಪ್ರತಿಪಾದಿಸುವುದನ್ನು ಅಭ್ಯಾಸ ಮಾಡಿಕೊಂಡಿದ್ದ ಈತ ಎಲ್ಲ ರೀತಿಯ ಸಂಸ್ಥೆಗಳನ್ನು ಕಟುವಾಗಿ ಟೀಕಿಸಿದ. ಈತ ಸಮಾಜವನ್ನು "ಫ್ಯಾಲೆಂಸ್ಟೀರ್" ಎಂದು ಕರೆಯುವ ಸಣ್ಣಸಣ್ಣ ಭಾಗಗಳನ್ನಾಗಿ ವಿಭಜಿಸಬೇಕೆಂದು ಹೇಳಿದ. ಈ ಪ್ರತಿಯೊಂದು ಭಾಗದಲ್ಲಿಯೂ ಒಟ್ಟು ೧೬೨೦ ಜನಗಳಿದ್ದು, ಅವರು ತಮಗಿಷ್ಟವಾದ ಕೆಲಸಗಳನ್ನು ಮಾಡಬಹುದಿತ್ತು. ಆದರೆ ಮೊದಲ ಹಂತದ ಸಮಾಜವಾದಿಗಳು ಪ್ರತಿಪಾದಿಸಿದ ಈ ಫ್ಯಾಲೆಂಸ್ಟೀರ್‌ಗಳು ಹಾಗೂ ಪ್ರಾಯೋಗಿಕವಾಗಿ ರೂಪಿಸಿದ ಕಾಲೋನಿಗಳು ಅಮೆರಿಕಾದಲ್ಲಿ

ಐದು ವರ್ಷಗಳಿಗಿಂತ ಹೆಚ್ಚು ಕಾಲ ಉಳಿಯಲಿಲ್ಲ. ಯಾಕೆಂದರೆ ಈ ಯೋಜನೆಗಳು ಜನರಿಗೆ ತಮ್ಮಷ್ಟಕ್ಕೆ ತಾವೇ ಬದುಕುವ ಅವಕಾಶ ನೀಡಲಿಲ್ಲ ಮತ್ತು ಇವುಗಳಿಂದ ಒಟ್ಟಾರೆಯಾಗಿ ಔದ್ಯೋಗಿಕ ಯುಗದ ಸಮಾಜದ ಸಮಸ್ಯೆಗಳ ಪರಿಹಾರ ಸಾಧ್ಯವಿರಲಿಲ್ಲ.

ರಾಜಕೀಯವಾಗಿ ಬಹಳ ಮುಖ್ಯವಾದ ಹಾಗೂ ಸಮಾಜವಾದದ ಅತ್ಯಂತ ಪ್ರಾಚೀನ ರೂಪ ಯಾವುದೆಂದರೆ, ಫ್ರಾನ್ಸ್‌ನ ದುಡಿಯುವ ವರ್ಗದ ನಡುವೆ ಕ್ರಾಂತಿಕಾರಿ ಪ್ರಜಾಪ್ರಭುತ್ವ ಮತ್ತು ಸಮಾಜವಾದಗಳ ಮಿಶ್ರಣದಿಂದ ಹುಟ್ಟಿದ ಒಂದು ಚಳವಳಿ. ರಾಜಕೀಯವಾಗಿ ಪ್ರಜ್ಞಾವಂತರಾದ ಪ್ಯಾರಿಸ್‌ನ ದುಡಿಯುವ ವರ್ಗದ ಜನ ತಮ್ಮ ಆಶೋತ್ತರಗಳ ವಕ್ತಾರನನ್ನು ಅಲ್ಲಿನವನೇ ಆದ ಲೂಯಿ ಬ್ಲಾಂಕ್ ಎಂಬ ಪತ್ರಕರ್ತನಲ್ಲಿ ಕಂಡುಕೊಂಡರು. ಈತ 'ರಿವ್ ಡಿ ಪ್ರೊಗ್ರೆಸ್' ಎಂಬ ಪತ್ರಿಕೆಯ ಸಂಪಾದಕನಾಗಿದ್ದೇ ಅಲ್ಲದೆ ಸಮಾಜವಾದದ ಆದಿ ಭಾಗವನ್ನು ಕುರಿತು ಬರೆದ ಬಹಳ ಪರಿಣಾಮಕಾರಿ ಪುಸ್ತಕ 'ಆರ್ಗನೈಜೇಶನ್ ಆಫ್ ವರ್ಕ್'ನ ಲೇಖಕನೂ ಆಗಿದ್ದ.

**ವೈಜ್ಞಾನಿಕ ಸಮಾಜವಾದ**

ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಒಂದು ವಿಶಿಷ್ಟ ಬಗೆಯ ಸಮಾಜವಾದ ಅಥವಾ ಕಮ್ಯೂನಿಸಂ ಕಂಡುಬಂತು. ಅದು ಸಂಪೂರ್ಣವಾಗಿ ಭೌತಿಕ ಉದ್ದೇಶಗಳನ್ನಿಟ್ಟುಕೊಂಡಿದ್ದರೂ ವೈಜ್ಞಾನಿಕವೆಂದು ತೋರಿಸಿಕೊಂಡಿದ್ದರಿಂದ ಅಂದಿನ ವಿಜ್ಞಾನದ ಮತ್ತು ಭೌತಿಕವಾದದ ಯುಗದಲ್ಲಿ ಬಹಳಷ್ಟು ಜನರನ್ನು ಆಕರ್ಷಿಸಿತು.

ಎಂಗೆಲ್ಸ್ ಮತ್ತು ಮಾರ್ಕ್ಸ್ ಅವರುಗಳು ತಾವು ಬದುಕುತ್ತಿದ್ದ ಸಮಾಜದಲ್ಲಿದ್ದ ಕೈಗಾರಿಕತೆ, ಹೆಚ್ಚುತ್ತಿದ್ದ ಭೌತಿಕವಾದ, ಲೋಕಸಿದ್ಧವಾದ(ಪಾಸಿಟಿವಿಸಂ) ಮತ್ತು ವೈಚಾರಿಕ ಮನೋಭಾವಗಳಿಂದ ಪ್ರಭಾವಿತರಾಗಿದ್ದರು. ಮಾರ್ಕ್ಸ್ ಕಮ್ಯುನಿಸಂ ಅನ್ನು "ಔದ್ಯೋಗಿಕತೆಯ ಫಲವಾಗಿ ಬೆಳೆದ ಪರಕೀಯತೆಯನ್ನು ಇಲ್ಲವಾಗಿಸಿ ಮಾನವತಾ ವಾದದವನ್ನು ಮತ್ತೆ ಸ್ಥಾಪಿಸುವ ಒಂದು ಪ್ರಯತ್ನ" ಎಂದು ವ್ಯಾಖ್ಯಾನಿಸಿದ (ಪ್ಯಾರಿಸ್ ಹಸ್ತಪ್ರತಿಗಳು, ೧೮೪೪). ಈ ರೀತಿ ಒಂದು ಹೊಸ ಬಗೆಯ ಸಮಾಜವಾದವನ್ನು ಪ್ರತಿಪಾದಿಸಿದ ಕಾರ್ಲ್‌ಮಾರ್ಕ್ಸ್ ಹುಟ್ಟಿದ್ದು ೧೮೧೮ರಲ್ಲಿ, ಪ್ರಷ್ಯಾದ ಟ್ರಯರ್ ಎಂಬ ಸ್ಥಳದಲ್ಲಿ ಯಹೂದಿ ಮೂಲದ ದಂಪತಿಗಳ ಮಗನಾಗಿ ಮಾರ್ಕ್ಸ್ ಜನಿಸಿದ. ಈತ ೧೮೪೩-೪೪ರಲ್ಲಿ ದೇಶಭ್ರಷ್ಟನಾಗಿ ಪ್ಯಾರಿಸ್‌ನಲ್ಲಿ ಆಶ್ರಯ ಪಡೆದ. ೧೮೪೫ರಲ್ಲಿ ಪ್ಯಾರಿಸ್‌ನಿಂದ ಬಹಿಷ್ಕೃತನಾಗಿ, ಅಲ್ಲಿಂದ ಬ್ರಸ್ಸೆಲ್ಸ್‌ಗೆ ಪ್ರಯಾಣ ಬೆಳೆಸಿದ. ಮಾರ್ಕ್ಸ್‌ಗೆ ಪ್ಯಾರಿಸ್‌ನಲ್ಲಿರುವಾಗಲೇ ಫ್ರೆಡರಿಕ್ ಎಂಗೆಲ್ಸ್‌ನನ್ನು ಭೇಟಿ ಮಾಡುವ ಅವಕಾಶ ಒದಗಿಬಂತು. ನಂತರ ಮಾರ್ಕ್ಸ್ ಮತ್ತು ಎಂಗೆಲ್ಸ್ ಇಬ್ಬರೂ ೧೮೪೭ರಲ್ಲಿ 'ಕಮ್ಯೂನಿಸ್ಟ್ ಲೀಗ್' ಎಂಬ ಹೊಸ ಹೆಸರು ಪಡೆದ 'ಲೀಗ್ ಆಫ್ ದ ಜಸ್ಟ್' ಎಂಬ ಸಂಘಟನೆಯನ್ನು ಸೇರಿದರು. ಇದಾದ ಮೇಲೆ ಮಾರ್ಕ್ಸ್ ಮತ್ತು ಎಂಗೆಲ್ಸ್ ಇಬ್ಬರೂ ಸೇರಿ ೧೮೪೮ರಲ್ಲಿ ಕಮ್ಯುನಿಸ್ಟ್ ಲೀಗ್‌ನ ಪ್ರಣಾಳಿಕೆ (ಕಮ್ಯುನಿಸ್ಟ್ ಮ್ಯಾನಿಪೆಸ್ಟೊ)ಯನ್ನು ರಚಿಸಿದರು. ಈ ಕಮ್ಯುನಿಸ್ಟ್ ಪ್ರಣಾಳಿಕೆ ತನ್ನ ವರ್ಗ ಸಂಘರ್ಷ ಮತ್ತು ಕ್ರಾಂತಿಯ ತತ್ವಗಳಿಂದ ಓವೆನ್ಸ್, ಸೇಂಟ್ ಸಿಮೋನ್, ಫೋರಿಯೆ ಮತ್ತು ಲೂಯಿ ಬ್ಲಾಂಕ್ ಮುಂತಾದವರು ಪ್ರತಿಪಾದಿಸಿದ ಯುಟೋಪಿಯನ್ ಹಾಗೂ ಆದರ್ಶವಾದಿ ಸಮಾಜವಾದವನ್ನು ಬದಿಗೊತ್ತಿತು. ಮಾರ್ಕ್ಸ್ ಕಲೋನ್‌ಗೆ ಭೇಟಿ ನೀಡಲು ಬ್ರಸ್ಸೆಲ್ಸ್‌ಗೆ ತೆರಳಿದ. ನಂತರ ಅಲ್ಲಿಂದ ಬ್ರಿಟನ್‌ಗೆ ಹೋಗಿ ಅಲ್ಲಿಯೇ ತನ್ನ ಬೃಹತ್ ಗ್ರಂಥ "ದಾಸ್ ಕ್ಯಾಪಿಟಲ್" ಅನ್ನು ಬರೆದ. ಮುಂದೆ ಈ ಪುಸ್ತಕ ಇಪ್ಪತ್ತು ವರ್ಷಗಳಲ್ಲಿಯೇ ಯುರೋಪಿನ ಮೂಲೆ ಮೂಲೆಗಳಿಗೂ ತಲುಪಿ ಎಲ್ಲೆಡೆ ಪ್ರಭಾವ ಬೀರಿತು. ಮತ್ತು ನೂರು ವರ್ಷಗಳಲ್ಲಿ ಮಾನವ ಜನಾಂಗದ ಅರ್ಧದಷ್ಟು ಜನರ ಅಧಿಕೃತ ರಾಜಕೀಯ ಸಿದ್ಧಾಂತವಾಗಿ ರೂಪುಗೊಂಡಿತು. ಆಧುನಿಕ ಇತಿಹಾಸದಲ್ಲಿ ಈ ಪುಸಕ ಮಹತ್ವದ ದಾಖಲೆಯಾಗಿ ಉಳಿದಿದೆ.

ಮಾರ್ಕ್ಸ್‌ನ ಸಿದ್ಧಾಂತದ ಮೂಲತತ್ತ್ವ ಐತಿಹಾಸಿಕ ಭೌತಿಕವಾದ. ಮಾರ್ಕ್ಸ್ ಇತಿಹಾಸದ ಬೆಳವಣಿಗೆಯನ್ನು, ತಡೆಯಲು ಸಾಧ್ಯವಾಗದ ಹಾಗೂ ಪರಿವರ್ತನೆ ಮಾಡಲು ಅಸಾಧ್ಯವಾದ ಆರ್ಥಿಕ ಶಕ್ತಿಗಳ ದ್ವಂದ್ವಾತ್ಮಕ ಪ್ರಕ್ರಿಯೆಯ ಹಿನ್ನೆಲೆಯಲ್ಲಿ ವಿಶ್ಲೇಷಿಸಲು ಯತ್ನ ನಡೆಸಿದ. ಈ ಆರ್ಥಿಕ ಶಕ್ತಿಗಳ ಪ್ರಚೋದನೆಯೇ ಮನುಷ್ಯನ ಎಲ್ಲ ಹಂಬಲ ಆಕಾಂಕ್ಷೆಗಳ ಮೂಲ ಎಂಬುದು ಮಾರ್ಕ್ಸ್‌ನ ಮೂಲ ಸಿದ್ಧಾಂತ ಮತ್ತು ಈ ಪ್ರಚೋದನೆಯೇ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ಮನುಷ್ಯನ ಎಲ್ಲ ಚಟುವಟಿಕೆಗಳು, ನಿರ್ಧಾರಗಳು, ಸಂಸ್ಥೆಗಳು ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಇಡೀ ಸಮಾಜವನ್ನು ನಿಯಂತ್ರಿಸಬಲ್ಲದು ಎಂದು ವಾದಿಸಿದ. ಮೂಲತಃ ಧರ್ಮ, ಕಲೆ ಮತ್ತು ತತ್ವಶಾಸ್ತ್ರದ

ಸಿದ್ಧಾಂತಗಳು ಈ ಆರ್ಥಿಕ ಶಕ್ತಿಗಳ ಪರಿಣಾಮದಿಂದ ಸೃಷ್ಟಿಯಾಗುತ್ತವೆ ಎಂದು ಪ್ರತಿಪಾದಿಸಿದ. ಹಾಗೆಯೇ ಇತಿಹಾಸದಲ್ಲಿನ ಸ್ಥಿತ್ಯಂತರಗಳು ಹಾಗೂ ಬಿಕ್ಕಟ್ಟುಗಳು ನಿಜವಾದ ಅರ್ಥದಲ್ಲಿ ಆರ್ಥಿಕ ನೆಲೆಯಲ್ಲಿಯೇ ಉಂಟಾಗುತ್ತವೆ ಎಂದು ವಿವರಿಸಿದ.

೧೮೪೮ರ ನಂತರ ವಿಜ್ಞಾನ ಸಮಾಜದಲ್ಲಿ ಮಹತ್ವದ ಪಾತ್ರ ವಹಿಸಿತು. ಆ ಸಂದರ್ಭದಲ್ಲಿ ಎಲ್ಲ ರಾಜಕೀಯ ಚಿಂತಕರು ಮತ್ತು ಸಮಾಜವಾದಿಗಳು ವೈಜ್ಞಾನಿಕ ಚಿಂತನೆಯಿಂದ ಪ್ರಭಾವಿತರಾದರು. ಈ ರೀತಿಯ ಬೌದ್ಧಿಕ ಕ್ರಾಂತಿಯಿಂದ ಉಂಟಾದ ಹೊಸ ಪರಿಸರದಲ್ಲಿ ಮಾರ್ಕ್ಸ್‌ವಾದ ಎಲ್ಲ ಕಡೆ ಹರಡಲು ಈ ಸಂದರ್ಭ ಸಮ ಯೋಚಿತವಾಗಿತ್ತು. ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರುಗಳು ನೀಡಿದ ಆರ್ಥಿಕ ಅಂಕಿ ಅಂಶಗಳ ವಿವರಗಳು ವೈಜ್ಞಾನಿಕ ವಿಶ್ಲೇಷಣಾ ಕ್ರಮಗಳಾದ ಅವಲೋಕನ, ಸಂಗ್ರಹಣೆ ಮತ್ತು ಪರಿಶೀಲನೆಯ ಆಧಾರದ ಮೇಲೆ ನಿಂತಿದ್ದವು. ಅವರು ಪ್ರತಿಪಾದಿಸಿದ- ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಬದಲಾವಣೆಗಳು ಉತ್ಪಾದನಾ ವಿಧಾನಗಳ ಬದಲಾವಣೆಯಿಂದ ಮಾತ್ರ ಸಾಧ್ಯ ಮತ್ತು ಎಲ್ಲ ಇತಿಹಾಸಗಳೂ ವರ್ಗ ಸಂಘರ್ಷದ ಇತಿಹಾಸಗಳೇ ಆಗಿವೆ. ಇದಕ್ಕೆ ಆರ್ಥಿಕ ವ್ಯವಸ್ಥೆ ಕಾರಣ ಎಂಬ ಎರಡೂ ತತ್ವಗಳು ಮೇಲೆ ಹೇಳಿದ ಅಂಕಿ ಅಂಶಗಳ ಆಧಾರ ಮೇಲೆಯೇ ಪ್ರತಿಪಾದಿಸಲ್ಪಟ್ಟಿವೆ. ಇವುಗಳು ಯಾರ ವೈಜ್ಞಾನಿಕ ಸಿದ್ಧಾಂತದ ತತ್ವಗಳಿಗಿಂತ ಕಡಿಮೆಯೇನಲ್ಲ. ಮಾರ್ಕ್ಸ್ ಪ್ರತಿಪಾದಿಸಿದ ಈ ತತ್ವಗಳು ಹಳೆಯ ರಮ್ಯ ಅಥವಾ ಯುಟೋಪಿಯನ್ ಸಮಾಜವಾದದ ತತ್ವಗಳ ಸ್ಥಾನವನ್ನು ಪಲ್ಲಟಗೊಳಿಸಿದವು. ಈ ಹೊಸ ಸಮಾಜವಾದದ ಸಿದ್ಧಾಂತವು ತಾನು ಅನುಸರಿಸಿದ ವೈಜ್ಞಾನಿಕ ವಿಶ್ಲೇಷಣಾ ಕ್ರಮದಿಂದ ಎಲ್ಲರಿಂದ ಅತ್ಯಂತ "ವೈಜ್ಞಾನಿಕ" ಸಿದ್ಧಾಂತ ಎಂಬ ಮನ್ನಣೆ ಗಳಿಸಿತು. ಅದು ಮನುಷ್ಯನ ಸೀಮಿತ ಉದ್ದೇಶಗಳು, ಹಂಬಲಗಳನ್ನು ಕುರಿತದ್ದಾಗಿರಲಿಲ್ಲ. ಬದಲಾಗಿ ಅದು ಮನುಷ್ಯ ಸಮಾಜದ ರೂಢಿಗತ ಪದ್ಧತಿಯನ್ನು ಕುರಿತು ವಿಶ್ಲೇಷಣೆ ನಡೆಸಿತು ಮತ್ತು ಸಮಾಜದ ಭೌತಿಕ ಪರಿಸರವು ಎಲ್ಲ ಬಗೆಯ ಸಂಘರ್ಷಗಳಿಗೂ ಮೂಲ ಕಾರಣ ಎಂಬುದನ್ನು ತೋರಿಸಿಕೊಟ್ಟಿತು.

ಮಾರ್ಕ್ಸ್‌ವಾದ ಹುಟ್ಟಿದ್ದು ಕೈಗಾರಿಕಾ ಯುಗದ ದುಡಿಯುವ ವರ್ಗದ ಜನರಲ್ಲಿ ಉಂಟಾದ ರಾಜಕೀಯ ಪ್ರಜ್ಞೆ ಮತ್ತು ರಾಜಕೀಯ ಅಧಿಕಾರಿಗಳ ಅರಿವಿನ ಕಾರಣದಿಂದ. ಮಾರ್ಕ್ಸ್‌ನ ಸಾಮಾಜಿಕ ಚಿಂತನೆ ಈ ಅಂಶಗಳ ಆಧಾರದ ಮೇಲೆಯೇ ನಿಂತಿದೆ. ಈ ವಿಷಯವನ್ನು ಜನರ ಗಮನಕ್ಕೆ ತಂದವರಲ್ಲಿ ಮಾರ್ಕ್ಸ್ ಮೊದಲಿಗ ಎನ್ನಬಹುದು. ಹತ್ತೊಂಬತ್ತನೆಯ ಶತಮಾನದಲ್ಲಿ ಉಂಟಾದ ಸಾಮಾಜಿಕ ಬದಲಾವಣೆಯಲ್ಲಿ ರಾಜಕೀಯ ಪ್ರಜ್ಞೆ ಮತ್ತು ಅಧಿಕಾರಗಳ ಪಾತ್ರ ಮುಖ್ಯವಾದದ್ದು. ಈ ಬದಲಾವಣೆಯನ್ನು ಬಹಳ ಬೇಗ ಗ್ರಹಿಸಿದ ಮಾರ್ಕ್ಸ್ ಮೊಟ್ಟಮೊದಲ ಬಾರಿಗೆ ಬಂಡವಾಳಶಾಹಿಯನ್ನು ಕುರಿತು ವಿಶ್ಲೇಷಿಸಿದ. ಮಾರ್ಕ್ಸ್‌ನ ಪ್ರಕಾರ ಬಂಡವಾಳಶಾಹಿಯು ಒಂದು ಭದ್ರ ವ್ಯವಸ್ಥೆಯಾಗಿದ್ದು, ಅದರಿಂದಾಗಿಯೇ ಸಮಾಜದ ಒಂದು ವರ್ಗದ ಜನ ಯಾವತ್ತಿಗೂ ದುಡಿಮೆಯ ಆಧಾರದ ಮೇಲೆ ಬದುಕುವಂತಾಗಿತ್ತು. ಅವರಿಗೂ ಮಾಲಿಕರಿಗೂ ಇದ್ದ ಒಂದೇ ಒಂದು ಸಂಬಂಧವೆಂದರೆ ಅದು ಹಣದ ಸಂಬಂಧ ಮಾತ್ರ. ಈ ಕಾರಣದಿಂದ ಮಾಲಿಕ ಮತ್ತು ಕೆಲಸಗಾರರ ನಡುವೆ ಯಾವ ಮನುಷ್ಯ ಸಂಬಂಧವೂ ಏರ್ಪಡದೆ ಅವರಿಬ್ಬರ ನಡುವೆ ಯಾವ ನೈತಿಕ ಜವಾಬ್ದಾರಿಗಳೂ ಇರಲಿಲ್ಲ. ಅದು ಬರೀ ಒಂದು ಅಧಿಕಾರದ ಸಂಬಂಧ ಮಾತ್ರ ಆಗಿತ್ತು. ಆಧುನಿಕ ಇತಿಹಾಸದಲ್ಲಿ ಅತ್ಯಂತ ಮಹತ್ವದ ಅಂಶವಾಗಿರುವ ಈ ವಿಷಯವನ್ನು ಮಾರ್ಕ್ಸ್ ಸಮರ್ಥವಾಗಿ ಗ್ರಹಿಸಿದ. ಮಾಲಿಕತ್ವ ಉತ್ಪಾದನೆ ಮತ್ತು ಲಾಭ ಗಳಿಸುವ ಒಂದೇ ಒಂದು ಉದ್ದೇಶ ಇವುಗಳನ್ನು ಇಟ್ಟುಕೊಂಡ ವರ್ಗ ಒಂದು ಕಡೆ ಮತ್ತು ಯಾವುದೇ ಬಗೆಯ ಅಧಿಕಾರ ಇಲ್ಲದ ಬಡ ಕೂಲಿಕಾರ ವರ್ಗ ಇನ್ನೊಂದು ಕಡೆ ಇದ್ದಂಥ ಸಂದರ್ಭದಲ್ಲಿ ಬಲಿಷ್ಠ ಜನ ಸಂಘಟನೆಗಳನ್ನು ಕಟ್ಟುವ ಮೂಲಕ ಮಾತ್ರ ದುಡಿಯುವ ವರ್ಗದ ಜನರಿಗೆ ಅಧಿಕಾರ ನೀಡಲು ಸಾಧ್ಯ ಮತ್ತು ಅವರ ಜೀವನ ಮಟ್ಟವನ್ನು ಸುಧಾರಿಸಲು ಸಾಧ್ಯ ಎಂದು ಮಾರ್ಕ್ಸ್ ಅರ್ಥಮಾಡಿಕೊಂಡ. ಈ ಐತಿಹಾಸಿಕ ಸತ್ಯವನ್ನು ಅರಿತುಕೊಂಡಿದ್ದ ಮಾರ್ಕ್ಸ್‌ಗೆ ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿದ್ದು ಕಾಲಾತೀತವಾದ ಆರ್ಥಿಕ ನೀತಿಗಳಿಂದ ಅಲ್ಲ, ಬದಲಾಗಿ ಅದು ಆಧುನಿಕ ಸಮಾಜದ ವಿಕಾಸದ ಒಂದು ಹಂತ ಎಂದು ತಿಳಿದಿತ್ತು. ದುಡಿಯುವ ವರ್ಗದ ಜನ ಅಧಿಕಾರಕ್ಕಾಗಿ ಸಂಘರ್ಷ ನಡೆಸಲು ಸಹಾಯಕವಾಗುವಂಥ ಸಾಮಾಜಿಕ ಸಿದ್ಧಾಂತವನ್ನು ಮಾರ್ಕ್ಸ್ ರೂಪಿಸಿದ. ದುಡಿಯುವ ವರ್ಗದ ಬಡ ಜನಸಮೂಹ ತನ್ನ ಅಧಿಕಾರಗಳನ್ನು ಪಡೆಯಲು ಸಾಮಾಜಿಕ ಕ್ರಾಂತಿ ಅನಿವಾರ್ಯ ಎಂದು ಮಾರ್ಕ್ಸ್ ನಂಬಿದ್ದ. ಇದು ಅಧಿಕಾರದಲ್ಲಿದ್ದ ಮಾಧ್ಯಮ ವರ್ಗವನ್ನು ಬದಿಗೊತ್ತಿ, ಯಾವುದೇ ಆಸ್ತಿ ಇಲ್ಲದ ಮನುಷ್ಯನ ಹಕ್ಕುಗಳನ್ನು ಪ್ರತಿಪಾದಿ ಸುವ ಸಮಾಜವಾದಿ ಸಿದ್ಧಾಂತಗಳಲ್ಲಿ ನಂಬಿಕೆ ಇದ್ದ ದುಡಿಯುವ ವರ್ಗದವರಿಂದ ಮಾತ್ರ ಸಾಧ್ಯವಾಗುವ ವಿಷಯವಾಗಿತ್ತು. ಈ ಮೊದಲು ನಡೆದ ಕ್ರಾಂತಿಗಳ ಹಾಗೆ ದುಡಿಯುವ

ವರ್ಗದ ಜನರ ಕ್ರಾಂತಿಯು, ಶೋಷಣೆಯನ್ನು ಮುಂದುವರಿಸುವ ಸಲುವಾಗಿ ಅಧಿಕಾರವನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹಸ್ತಾಂತರಿಸದೆ ಶೋಷಣೆಯನ್ನೇ ಸಂಪೂರ್ಣವಾಗಿ ನಾಶಗೊಳಿಸುವ ಉದ್ದೇಶ ಹೊಂದಿತ್ತು. ಯಾಕೆಂದರೆ ದುಡಿಯುವ ವರ್ಗದವರ ಅಧೀನದಲ್ಲಿ ಯಾವ ವರ್ಗವೂ ಇಲ್ಲದೇ ಇದ್ದುದರಿಂದ ಅಲ್ಲಿ ಶೋಷಣೆ ಉಳಿಯುವ ಹಾಗಿರಲಿಲ್ಲ. ಈ ಕ್ರಾಂತಿಯನ್ನು ಯಾವುದೇ ವರ್ಗ ಭೇದಗಳಿಲ್ಲದ ಸಮಾಜವನ್ನು ನಿರ್ಮಿಸುವ ದಿಕ್ಕಿನಲ್ಲಿ ಮೊದಲ ಹೆಜ್ಜೆ ಎಂದು ಭಾವಿಸಲಾಯಿತು ಮತ್ತು ಈ ಕ್ರಾಂತಿಯ ಅವಧಿಯನ್ನು ಮನುಷ್ಯನ ಅಸ್ತಿತ್ವದ ಮಹತ್ವವನ್ನು ಅರ್ಥಮಾಡಿಕೊಂಡ ಯುಗದ ಆರಂಭ ಎನ್ನಲಾಯಿತು. ಮನುಷ್ಯ ಸಮಾಜದ ನೈಜ ಚಿತ್ರವನ್ನು ಅರ್ಥಮಾಡಿಕೊಂಡಿದ್ದ ಮಾರ್ಕ್ಸ್‌ವಾದಿ ಸಿದ್ಧಾಂತ ಸಾಧಿಸಲು ಹೊರಟಿದ್ದು ಇದನ್ನೇ. ಹಾಗೆಯೇ ಒಂದು ರಾಜಕೀಯ ಪ್ರಕ್ರಿಯೆ ಪರಿಣಾಮಕಾರಿಯಾಗಿ ನಡೆಯಲಿಕ್ಕಾಗಿ ಹಂತಹಂತವಾಗಿ ಇತಿಹಾಸವು ಸರಿಯದ ದಿಕ್ಕಿನಲ್ಲಿ ವಿಕಾಸ ಹೊಂದುತ್ತಿರುವುದನ್ನು ಅರ್ಥಮಾಡಿಕೊಳ್ಳಬೇಕು ಎಂಬುದು ಮಾರ್ಕ್ಸ್‌ನ ಅಭಿಪ್ರಾಯವಾಗಿತ್ತು. ಮಾರ್ಕ್ಸ್‌ನ ಪ್ರಕಾರ ಬಡ ಕೂಲಿಕಾರನ ಪಾತ್ರದಿಂದ ಸಾಮಾಜಿಕ ಇತಿಹಾಸ ಅತ್ಯಂತ ಎತ್ತರಕ್ಕೆ ಏರಿತು ಮತ್ತು ಈ ವರ್ಗ ಮುಂದೆ ಸಮಾಜದ ರಚನೆಯಲ್ಲಿ ಎಷ್ಟು ಪ್ರಮುಖವಾದ ಸ್ಥಾನ ಪಡೆಯಬಹುದು ಎಂಬುದರ ಬಗ್ಗೆ ಅವನು ಬಹಳ ಕಾತರಗೊಂಡಿದ್ದ.

ಮಾರ್ಕ್ಸ್‌ನ ಇತಿಹಾಸದ ಪರಿಕಲ್ಪನೆಯಲ್ಲಿ, ಉತ್ಪಾದನಾ ಶಕ್ತಿಗಳು ಆರ್ಥಿಕ ವಿತರಣೆಯ ಕ್ರಮ ಮತ್ತು ಇವುಗಳಿಂದ ಸಮಾಜದಲ್ಲಿ ಉಂಟಾದ ವರ್ಗ ವಿಭಜನೆಗಳೇ ಇತಿಹಾಸವನ್ನು ಮುನ್ನಡೆಸುವ ಚಾಲಕ ಶಕ್ತಿಗಳಾಗಿರುತ್ತವೆ. ವರ್ಗಗಳ ನಡುವಿನ ಸಂಘರ್ಷವೇ ಅಭಿವೃದ್ಧಿಯನ್ನು ಉಂಟು ಮಾಡುತ್ತದೆ. ಆದ್ದರಿಂದಲೇ ಮಾರ್ಕ್ಸ್‌ಗೆ ರಾಷ್ಟ್ರೀಯತೆಯಲ್ಲಿ ನಂಬಿಕೆ ಇರಲಿಲ್ಲ. ಇದಕ್ಕೆ ಬದಲಾಗಿ ದುಡಿಯುವ ವರ್ಗದ ಜನರ ನಡುವೆ ಪರಸ್ಪರ ನಂಬಿಕೆ ವಿಕಾಸಗಳಿಗೆ ಪ್ರಾಮುಖ್ಯತೆ ನೀಡಿದ. ಮಾರ್ಕ್ಸ್‌ನ ಸಿದ್ಧಾಂತ ಸಾಮಾಜಿಕ ಕ್ರಾಂತಿಗೆ ಅಗತ್ಯವಾದ ಪ್ರೇರಣೆಯನ್ನು ಹಾಗೂ ಶ್ರಮಿಕ ವರ್ಗದವರನ್ನು ಬಡತನ ಮತ್ತು ಶೋಷಣೆ ಯಿಂದ ಮುಕ್ತವಾಗಿಸುವ ಮಾರ್ಗವನ್ನು ತೋರಿಸಿಕೊಟ್ಟಿತು.

ಸಮಾಜಶಾಸ್ತ್ರದ ವಿಷಯಗಳನ್ನು ಭೌತಶಾಸ್ತ್ರದಂಥ ವಿಜ್ಞಾನದ ವಿಷಯಗಳಂತೆ ನಿಖರವಾಗಿ, ಕರಾರುವಕ್ಕಾಗಿ ಅಧ್ಯಯನ ಮಾಡಲು ಸಾಧ್ಯ ಎಂಬುದನ್ನು ತೋರಿಸಲು ಮಾರ್ಕ್ಸ್ ದ್ವಂದ್ವಾತ್ಮಕ ಅಥವಾ ತಾರ್ಕಿಕ ಭೌತಿಕವಾದ ಎಂಬ ತತ್ತ್ವವನ್ನು ತನ್ನ ವಿಶ್ಲೇಷಣೆಯಲ್ಲಿ ಬಳಸಿದ. ಸಮಾಜದ ಭೌತಿಕ ಸ್ಥಿತಿಗತಿಗಳೇ ಇತಿಹಾಸವನ್ನು ನಿರ್ಧರಿಸುವ ಅಂಶಗಳು ಎಂದು ಮಾರ್ಕ್ಸ್ ನಂಬಿದ್ದ. ಎರಡನೆಯದಾಗಿ ಭೌತಿಕವಾದವು ಧರ್ಮದ ಪ್ರಾಮುಖ್ಯತೆಯನ್ನು ತಿರಸ್ಕರಿಸಿ, ಒಂದು ರೀತಿಯಲ್ಲಿ, ಉಗ್ರರೂಪದ ನಾಸ್ತಿಕವಾದವಾಗಿ ಪರಿಣಮಿಸಿತು. ದ್ವಂದ್ವಮಾನ ಭೌತಿಕವಾದವು ಎಲ್ಲ ಬಗೆಯ ಪರಿಪೂರ್ಣ ಸತ್ಯಗಳು ಹಾಗೂ ಮನುಷ್ಯ ಅನುಭವವನ್ನು ಮೀರಿದ ಅತೀಂದ್ರಿಯ ಮೌಲ್ಯಗಳನ್ನು ಪ್ರಶ್ನಿಸಿತು. ಮಾರ್ಕ್ಸ್‌ನ ತೀರ್ಮಾನದಲ್ಲಿ ಇಂಥ ಎಲ್ಲ ಬಗೆಯ ಸತ್ಯಗಳು ಸಮಾಜವನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು, ಶೋಷಣೆ ಮಾಡುವ ವರ್ಗವನ್ನು ಪೋಷಿಸಲು ಸೃಷ್ಟಿ ಯಾದಂಥವುಗಳಾಗಿದ್ದವು. ಆದ್ದರಿಂದ ಧರ್ಮವು ಅಲ್ಲಿಯವರೆಗೆ, ನಿಜವಾದ ಸಂತೋಷವನ್ನು ನೀಡದೆ ಸಂತೋಷದ ಭ್ರಮೆಯನ್ನು ಮಾತ್ರ ಜನರಲ್ಲಿ ಉಂಟುಮಾಡುತ್ತಿತ್ತು. ಆದ್ದರಿಂದ ಧರ್ಮವು ಶೋಷಿತ ಜನರನ್ನು ಯಾವುದೇ ರೀತಿಯ ಪ್ರತಿಭಟನೆಗೆ ಪ್ರೇರೇಪಿಸದಂತೆ ತಡೆದು ಅವರನ್ನು ಭ್ರಮಾಲೋಕಕ್ಕೆ ತಳ್ಳುವ ಆಫೀಮು ಎಂಬ ಮಾರ್ಕ್ಸ್ ನಿರ್ಧರಿಸಿದ.

ಭೌತಿಕವಾದವು ಕ್ರಾಂತಿಯನ್ನು ನಿಜವಾಗಿಸುವ, ಅತ್ಯಂತ ದೂರಗಾಮಿ ಪರಿಣಾಮವನ್ನು ಮಾಡುವ ಒಂದು ಹೊಸ ರೀತಿಯ ಸಾಧನವಾಗಿತ್ತು. ಯಾಕೆಂದರೆ ಉತ್ಪಾದನೆಯ ವಿಧಾನಗಳು ಸಾಮಾಜಿಕವಾದ ಮೇಲೆ ಅಲ್ಲಿ ಶೋಷಣೆಗೆ, ಸಾಮಾಜಿಕ ಅಸಮಾನತೆಗೆ ಸ್ಥಾನವಿರಲಿಲ್ಲ.

**ಕೈಗಾರಿಕಾ ಕ್ರಾಂತಿ ಮತ್ತು ಬಂಡವಾಳವಾದದ ಉಗಮ**

ಇದು ಮೂಲಭೂತವಾಗಿ ಆರ್ಥಿಕ ಕ್ರಾಂತಿಯಾಗಿತ್ತು. ಆದ್ದರಿಂದ ಇಲ್ಲಿ 'ಕ್ರಾಂತಿ' ಯನ್ನು ಸಾಂಕೇತಿಕ ಅರ್ಥದಲ್ಲಿ ಪರಿಭಾವಿಸಬೇಕು. ಇದು ಸಂಪತ್ತಿನ ಉತ್ಪಾದನೆ, ಉತ್ಪಾದನೆಯ ತಾಂತ್ರಿಕ ವಿಧಾನಗಳು, ನೈಸರ್ಗಿಕ ಸಂಪನ್ಮೂಲಗಳ ಬಳಕೆ ಮತ್ತು ಗ್ರಾಹಕರಿಗೆ ಉತ್ಪಾದಿಸಿದ

ವಸ್ತುಗಳನ್ನು ವಿತರಿಸುವ ಕ್ರಮದಂಥ ವಿಷಯಗಳಿಗೆ ಪ್ರಾಮುಖ್ಯತೆ ನೀಡಿತು. ಕೈಗಾರಿಕಾ ಕ್ರಾಂತಿಯು ಮಾನವ ಜನಾಂಗ ಇದುವರೆಗೂ ಕಾಣದಿದ್ದ ಮಹತ್ವಪೂರ್ಣ ಬದಲಾವಣೆಗಳನ್ನು ತಂದಿತು. ಈ ಕ್ರಾಂತಿಯು ಇನ್ನೊಂದು ಬಗೆಯಲ್ಲಿ ಹತ್ತೊಂಬತ್ತನೆಯ ಹಾಗೂ ಇಪ್ಪತ್ತನೆಯ ಶತಮಾನದ ನಾಗರಿಕತೆಗಳ ಆರಂಭಕ್ಕೆ ಕಾರಣವಾಯಿತು. ಕೈಗಾರಿಕಾ ಕ್ರಾಂತಿ ಎಂಬ ಪದವು ೧೮೮೦ ರಿಂದ ಬಳಕೆಗೆ ಬಂತು. ಮುಖ್ಯವಾಗಿ ೧೮ನೆಯ ಶತಮಾನದ ಎರಡನೆಯ ಭಾಗದಲ್ಲಿ ಬಹಳ ಕ್ಷಿಪ್ರಗತಿ ಯಲ್ಲಿ ಉಂಟಾದ ತಾಂತ್ರಿಕ ಬೆಳವಣಿಗೆಗಳ ಕಾರಣದಿಂದ ಇದನ್ನು ಸಾಮಾನ್ಯವಾಗಿ "ಕೈಗಾರಿಕಾ ಕ್ರಾಂತಿ" ಎಂದು ಕರೆಯಲಾಗುತ್ತದೆ. ೧೮೦೦ಕ್ಕಿಂತ ಮುಂಚೆ ಸನ್ನೆಗಳು ಅಥವಾ ಏತಗಳನ್ನು ಬಳಸಿ ಮನುಷ್ಯ ಅಥವಾ ಪ್ರಾಣಿಗಳ ಬಲದ ಸಹಾಯದಿಂದ ಶಕ್ತಿಯನ್ನು ಉತ್ಪಾದಿಸಲಾಗುತ್ತಿತ್ತು. ಇದಕ್ಕೆ ಪೂರಕವಾಗಿ ರಭಸದಿಂದ ಹರಿಯುವ ನೀರು ಮತ್ತು ಬೀಸುವ ಗಾಳಿಯನ್ನು ಬಳಸಲಾಗುತ್ತಿತ್ತು. ಇದಾದ ನಂತರ ಮನುಷ್ಯ ತನ್ನ ನೈಪುಣ್ಯತೆಯನ್ನು ಬಳಸಿ, ಹಬೆ, ವಿದ್ಯುತ್, ಅನಿಲಗಳ ದಹನ ಮತ್ತು ಕೊನೆಗೆ ಪರಮಾಣುಗಳ ಸಹಾಯದಿಂದಲೂ ಸಹ ಶಕ್ತಿಯನ್ನು ಉತ್ಪಾದಿಸುವ ವಿಧಾನಗಳನ್ನು ಕಂಡುಹಿಡಿದ. ಮನುಷ್ಯ ಕೈಯಿಂದ ಬಳಸುವ ಸಾಧನಗಳ ಹಂತದಿಂದ, ವಿವಿಧ ಶಕ್ತಿಗಳ ಸಹಾಯದಿಂದ ಚಲಿಸುವ ಯಂತ್ರಗಳನ್ನು ಬಳಸುವ ಸ್ಥಿತಿಗೆ ತಲುಪಿದ್ದು, ಕೈಗಾರಿಕಾ ಕ್ರಾಂತಿಯು ತಂದ ಬಹುಮುಖ್ಯ ಬದಲಾವಣೆ.

ಕೈಗಾರಿಕಾ ಕ್ರಾಂತಿಯು ಯಾವಾಗ ಆರಂಭವಾಯಿತು ಎಂಬುದನ್ನು ನಿಖರವಾಗಿ ಹೇಳಲು ಸಾಧ್ಯವಿಲ್ಲದಿದ್ದರೂ, ಅದು ೧೭೮೦ರ ನಂತರದ ಐವತ್ತು ವರ್ಷಗಳಲ್ಲಿ ಗ್ರೇಟ್ ಬ್ರಿಟನ್‌ನಲ್ಲಿ ಸ್ಪಷ್ಟ ಸ್ವರೂಪವನ್ನು ಪಡೆಯಿತು ಎಂದು ಹೇಳಲಾಗುತ್ತದೆ. ೧೮೭೦ರವರೆಗೆ ಕೈಗಾರಿಕಾ ಕ್ರಾಂತಿಯು ಬ್ರಿಟನ್ನಿಗೆ ಮಾತ್ರ ಸೀಮಿತವಾಗಿತ್ತು. ನಂತರದ ಅವಧಿಯಲ್ಲಿ ಇದು ಯೂರೋಪಿನ ಎಲ್ಲ ಕಡೆ ಹರಡಿ, ನಂತರ ನಿಧಾನವಾಗಿ ಪಾಶ್ಚಿಮಾತ್ಯ ನಾಗರಿಕತೆಯ ಗಡಿಗಳನ್ನು ದಾಟಿ ಬೆಳೆಯಲಾರಂಭಿಸಿತು. ಇದು ಇಂಗ್ಲೆಂಡಿನಲ್ಲಿಯೇ ಹುಟ್ಟುವುದಕ್ಕೆ ಇಂಗ್ಲಿಷ್ ಸಮಾಜದ ರಾಜಕೀಯ ಲಕ್ಷಣಗಳು ಕಾರಣವಾಗಿದ್ದವು. ಮೇಲಾಗಿ ಇಂಗ್ಲೆಂಡಿಗೆ ಕೈಗಾರಿಕೆ ಹಾಗೂ ನೌಕಾಯಾನಗಳ ಯಶಸ್ಸಿನಿಂದ ಪ್ರಪಂಚದ ಮಾರುಕಟ್ಟೆಗಳಿಗೆ ಪ್ರವೇಶ ಲಭ್ಯವಿತ್ತು. ಈ ಬೆಳವಣಿಗೆಗಳು ಹೊಸದನ್ನು ಆವಿಷ್ಕರಿಸುವ ಮನಸ್ಸುಗಳಿಗೆ ಸಹಾಯಕಾರಿ ಯಾಗಿದ್ದವು. ಇನ್ನೊಂದು ಮುಖ್ಯ ಅಂಶವೆಂದರೆ ಇದಕ್ಕಿಂತ ಹಿಂದೆ ವ್ಯವಸಾಯ ಕ್ಷೇತ್ರದಲ್ಲಿ ನಡೆದ ಕ್ರಾಂತಿ. ಇದರಿಂದಾಗಿ ಕೂಲಿಕಾರ ವರ್ಗ ಹಾಗೂ ಸಂಪತ್ತು ಒಂದು ಕಡೆಯಿಂದ ಇನ್ನೊಂದು ಕಡೆಗೆ ಚಲಿಸುವಂತಾಯಿತು. ಈ ಎರಡೂ ಕಾರಣಗಳು ಕೈಗಾರಿಕಾ ಕ್ರಾಂತಿಯನ್ನು ಸಾಧ್ಯವಾಗಿಸಲು ಅತ್ಯಗತ್ಯವಾಗಿದ್ದವು. ವ್ಯವಸಾಯ ಕ್ರಾಂತಿಯ ಪರಿಣಾಮಗಳು ಹದಿನೆಂಟನೆಯ ಶತಮಾನದ ಅವಧಿಯಲ್ಲಿ, ನಂತರ ಹತ್ತೊಂಬತ್ತನೆಯ ಶತಮಾನದಲ್ಲಿ ಆಗುವ ಸಮಯದಲ್ಲಿಯೇ ಬ್ರಿಟೀಷರು ತಮ್ಮ ವಸಾಹತುಶಾಹಿ ಸಾಮ್ರಾಜ್ಯವನ್ನು ಸ್ಥಾಪಿಸಿದ್ದರು. ಅಷ್ಟೇ ಅಲ್ಲದೆ ಅವರು ಅಮೆರಿಕಾ ಮತ್ತು ಯೂರೋಪಿನ ಎಲ್ಲ ಕಡೆ ಮಾರುಕಟ್ಟೆಗಳನ್ನು ಆರಂಭಿಸಿ, ಬೃಹತ್ ನೌಕಾನೆಲೆಗಳನ್ನು ಸ್ಥಾಪಿಸಿ ಸಮುದ್ರದ ಮೇಲೂ ತಮ್ಮ ಅಧಿಪತ್ಯವನ್ನು ವಿಸ್ತರಿಸಿದ್ದರು. ಬ್ರಿಟೀಷ್ ವರ್ತಕ ಹೆಚ್ಚು ಉತ್ಪಾದಿಸಿದರೆ ಮಾತ್ರ ಹೆಚ್ಚು ವಸ್ತುಗಳನ್ನು ಮಾರುವ ಸ್ಥಿತಿಯಲ್ಲಿದ್ದ. ಅವನಿಗೆ ತನ್ನ ವಸ್ತುಗಳನ್ನು ಕೊಳ್ಳುವ ಗ್ರಾಹಕರಿದ್ದರು, ಹಡಗುಗಳಿದ್ದವು ಮತ್ತು ಹೊಸ ಯೋಜನೆಗಳನ್ನು ಆರಂಭಿಸಲು ಬಂಡವಾಳ ಸಿಗುತ್ತಿತ್ತು. ಹೀಗಿದ್ದಾಗ ಲಾಭದ ಹಂಬಲ ಅವನನ್ನು ಇನ್ನೂ ತ್ವರಿತ ಗತಿಯಲ್ಲಿ ವಸ್ತುಗಳನ್ನು ಉತ್ಪಾದಿಸುವ ವಿಧಾನಗಳನ್ನು ಕಂಡುಹಿಡಿಯಲು ಪ್ರೇರೇಪಿಸಿತು. ವಿವಿಧ ಕ್ರೆಡಿಟ್ ಹಾಗೂ ಸ್ಟಾಕ್ ಕಂಪನಿಗಳು ಮತ್ತು ಬ್ಯಾಂಕಿಂಗ್ ವ್ಯವಸ್ಥೆಯ ಆರಂಭದಿಂದ ಬಂಡವಾಳವು ಎಲ್ಲ ರೂಪಗಳಲ್ಲೂ ದೊರೆಯು ತ್ತಿತ್ತು. ಯಾವ ದೇಶ ವ್ಯಾಪಾರ ಮತ್ತು ವ್ಯವಸಾಯ ರಂಗದಲ್ಲಿ ಸಂಪದ್ಭರಿತವಾಗಿತ್ತೋ ಅಂಥ ದೇಶಕ್ಕೆ ಮಾತ್ರ ಯಂತ್ರ ನಾಗರಿಕತೆಯನ್ನು ಅಳವಡಿಸಿಕೊಳ್ಳಲು ಸಾಧ್ಯವಿತ್ತು. ಇಂಗ್ಲೆಂಡ್ ಅಂಥ ದೇಶಗಳಲ್ಲಿ ಮೊಟ್ಟಮೊದಲನೆಯದಾಯಿತು. ಆ ಸಮಯದಲ್ಲಿಯೇ ಪ್ರಜಾಪ್ರಭುತ್ವಕ್ಕಾಗಿ ಇಂಗ್ಲೆಂಡಿನಲ್ಲಿ ಕ್ರಾಂತಿಯಾಗುತ್ತಿತ್ತು. ಇವೆರಡರ ಸಹಾಯದಿಂದ ಪಾಶ್ಚಾತ್ಯರಿಗೆ ಹಿಂದೆಂದೂ ಸಾಧ್ಯವಾಗದ ರೀತಿಯಲ್ಲಿ ಬಹಳ ಕಾಲದವರೆಗೆ ಹಾಗೂ ಬಹಳ ದೂರದವರೆಗೆ ಜನರನ್ನು ಮತ್ತು ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಸಂಘಟಿಸಲು ಸಾಧ್ಯವಾಯಿತು. ಅಲ್ಲಿಯವರೆಗೆ ಪ್ರಪಂಚದ ಯಾವ ದೇಶದಲ್ಲೂ ಇಂಥ ಬೃಹತ್ ಪ್ರಮಾಣದಲ್ಲಿ ಬದಲಾವಣೆ ಸಾಧ್ಯ ವಾಗಿರಲಿಲ್ಲ. ಇದು ಇಂಗ್ಲೆಂಡ್‌ನಲ್ಲಿ ಸಾಧ್ಯವಾಗಿದ್ದರಿಂದಲೇ ಅಲ್ಲಿನ ಜನರಿಗೆ ಪ್ರಪಂಚದ ಎಲ್ಲ ಭಾಗದ ಜನರನ್ನು ತಲುಪಲು ಸಾಧ್ಯವಾಯಿತು.

ಹದಿನೆಂಟನೆಯ ಶತಮಾನದಲ್ಲಿ ಆದ ಅತ್ಯಂತ ದೊಡ್ಡ ತಾಂತ್ರಿಕ ಬೆಳವಣಿಗೆಗಳು ಮೊದಲು ಬ್ರಿಟನ್ನಿನ ಬಟ್ಟೆ ಕೈಗಾರಿಕೆಗೆ ಮಾತ್ರ ಸೀಮಿತವಾಗಿದ್ದವು. ೧೭೬೯ರ ನಂತರ ಜೇಮ್ಸ್‌ವ್ಯಾಟ್ ಹಬೆಯ ಶಕ್ತಿಯನ್ನು ಬಳಸಿಕೊಳ್ಳುವ ಬಗೆಯನ್ನು ಕಂಡುಹಿಡಿದ ನಂತರ ಹಬೆಯ

ಎಂಜಿನ್ನುಗಳನ್ನು ಬಳಸಬಹುದಾದ ಹೊಸ ಯಂತ್ರಗಳನ್ನು ಸೃಷ್ಟಿಸಲಾಯಿತು. ಹತ್ತೊಂಬತ್ತನೆಯ ಶತಮಾನದಲ್ಲಿ ತಂತ್ರಜ್ಞಾನದ ಕ್ಷೇತ್ರದಲ್ಲಿ ಆದ ಆಮೂಲಾಗ್ರ ಬೆಳವಣಿಗೆಗಳು ಎಲ್ಲ ಕಡೆಯ ಉತ್ಪಾದನಾ ಕೇಂದ್ರಗಳಿಗೆ ತಲುಪಿದವು. ಇದರಿಂದ ಬೃಹತ್ ಕೈಗಾರಿಕಾ ಕೇಂದ್ರಗಳನ್ನು ತೆರೆಯಲು ಹಾಗೂ ಹಿಂದೆಂದೂ ಉತ್ಪಾದಿಸದೇ ಇದ್ದ ವಸ್ತುಗಳನ್ನು ತಯಾರಿಸಲು ಸಾಧ್ಯವಾಯಿತು.

ಈ ಬೆಳವಣಿಗೆಗಳನ್ನು ಎರಡು ಹಂತಗಳಲ್ಲಿ ಕಾಣಬಹುದು. ೧೮೭೦ರವರೆಗೆ ನಡೆದ ಬಹುಪಾಲು ಪ್ರಾಯೋಗಿಕ ಆವಿಷ್ಕಾರಗಳು, ಸಾಮಾನ್ಯಜ್ಞಾನ ಮತ್ತು ಪರಂಪರಾನುಗತ ಕುಶಲತೆಗಳನ್ನು ನಂಬಿದ ತಾಂತ್ರಿಕ ಪರಿಣತರಿಂದ ಹಾಗೂ ಶ್ರಮವಹಿಸಿ ಕೆಲಸ ಮಾಡುವ ಉದ್ಯಮಿಗಳಿಂದ ಮಾತ್ರ ಕೈಗೂಡುತ್ತಿದ್ದವು. ಅವರಿಗೆ ಕ್ರಮಬದ್ಧ ಸಂಶೋಧನೆ ಅಥವಾ ಶಿಸ್ತುಬದ್ಧ ವಿಜ್ಞಾನದ ಅಂಶಗಳಾದ ಕಲ್ಲಿದ್ದಲು, ಹಬೆ, ರೈಲು ಮಾರ್ಗಗಳು, ಹಡಗುಗಳ ಮೂಲಕ ವ್ಯಾಪಾರ, ಉಕ್ಕು, ಹಬೆಯಿಂದ ಚಲಿಸುವ ಯಂತ್ರಗಳು ಇತ್ಯಾದಿಗಳ ಪರಿಚಯ ಇರಲಿಲ್ಲ. ಈ ಹಂತದಲ್ಲಿ ತಂತ್ರಜ್ಞಾನ ಹಾಗೂ ಕೈಗಾರಿಕೆಗಳ ಪ್ರತಿಯೊಂದು ವಿಭಾಗದ ಮೇಲೂ ಬ್ರಿಟನ್ ತನ್ನ ಅಧಿಕಾರವನ್ನೂ ಸ್ಥಾಪಿಸಿತು. ಹೊಸ ತಂತ್ರಜ್ಞಾನಕ್ಕೆ ಬೇಕಾದ ಅಡಿಪಾಯವನ್ನು ಬಟ್ಟೆ ಕೈಗಾರಿಕೆಯು ಯಂತ್ರಗಳು, ಹಬೆಯ ಎಂಜಿನ್‌ಗಳು, ರೈಲು ಮಾರ್ಗಗಳು, ಹಬೆಯಿಂದ ಚಲಿಸುವ ಹಡಗುಗಳು, ಕಲ್ಲಿದ್ದಲು ಮತ್ತು ಉಕ್ಕಿನ ಕೈಗಾರಿಕೆ ಗಳು ಒದಗಿಸಿಕೊಟ್ಟವು. ಇವೆಲ್ಲವನ್ನೂ ಮೊದಲು ಆರಂಭ ಮಾಡಿದ ಅಥವಾ ಇವು ಗಳನ್ನು ಹೇರಳ ಪ್ರಮಾಣದಲ್ಲಿ ಉತ್ಪಾದಿಸಿದ ಶ್ರೇಯಸ್ಸು ಬ್ರಿಟನ್‌ಗೆ ಸಿಕ್ಕುತ್ತದೆ.

ವಿದ್ಯುತ್ ತಂತ್ರಜ್ಞಾನದ ಬೆಳವಣಿಗೆಯ ಜೊತೆಗೆ ರಸಾಯನಶಾಸ್ತ್ರದ ಅವಿಷ್ಕಾರಗಳು ಕೈಗಾರಿಕೆಗಳಲ್ಲಿ ಬಳಕೆಯಾದದ್ದರಿಂದ ಕೈಗಾರಿಕಾ ಕ್ರಾಂತಿಗೆ ಹೊಸದಿಕ್ಕು ಕಾಣಿಸಿತು. ವಿಜ್ಞಾನದ ಹೊಸ ಹೊಸ ಸಿದ್ಧಾಂತಗಳು ಮತ್ತು ತಂತ್ರಜ್ಞಾನದ ಬೆಳವಣಿಗೆಗಳನ್ನು ಅರಿತು ಕೊಂಡಿದ್ದ ವಿಜ್ಞಾನಿಗಳು, ಇಂಜಿನಿಯರುಗಳು ಬಹಳ ಕ್ರಮಬದ್ಧವಾಗಿ ಪ್ರಯೋಗಾಲ ಯಗಳಲ್ಲಿ ಸಂಶೋಧನೆಗಳನ್ನು ನಡೆಸಲು ಆರಂಭಿಸಿದ್ದರಿಂದ, ಕ್ರಮೇಣ ಬೇರೆ ಬೇರೆ ವ್ಯಕ್ತಿಗಳು ಅಲ್ಲಲ್ಲಿ ನಡೆಸುತ್ತಿದ್ದ ಸಂಶೋಧನೆಗಳಿಗೆ ಪ್ರಾಮುಖ್ಯತೆ ಕಡಿಮೆಯಾಯಿತು.

ಈ ಎಲ್ಲ ಬದಲಾವಣೆಗಳಿಂದ ಅತ್ಯಂತ ಹೆಚ್ಚಿನ ಪ್ರಯೋಜನ ಪಡೆದದ್ದು ಜರ್ಮನಿ. ಯಾಕೆಂದರೆ ಜರ್ಮನಿಯಲ್ಲಿ ಇಂಥ ಸಿದ್ಧಾಂತಗಳಲ್ಲಿ ತರಬೇತಿ ಹಾಗೂ ಕುಶಲತೆ ಪಡೆದ ಬಹಳಷ್ಟು ಜನ ದೊರಕುತ್ತಿದ್ದರು. ಆದ್ದರಿಂದಲೇ ಮೊದಲನೆಯ ಮಹಾಯುದ್ಧ ಆರಂಭವಾಗುವ ವೇಳೆಗೆ ಜರ್ಮನಿಯೊಂದೇ ಎಲ್ಲಾ ಕಡೆಗಳಿಗೆ ಕೈಗಾರಿಕೆಗಳಿಗೆ ಬೇಕಾದ ರಾಸಾಯನಿಕಗಳನ್ನು ಪೂರೈಸುತ್ತಿತ್ತು. ಇಷ್ಟೇ ಅಲ್ಲ ಜರ್ಮನಿಯ ವಿದ್ಯುತ್ ಕೈಗಾರಿಕೆಗಳು ತಮ್ಮ ಕುಶಲತೆ ಮತ್ತು ದಕ್ಷತೆಯಿಂದ ಎಲ್ಲರಿಗಿಂತ ಮುಂಚೂಣಿಯಲ್ಲಿದ್ದವು. ಜರ್ಮನಿ ಯಲ್ಲಿ ಗೊತ್ತಾದ ಉದ್ದೇಶಗಳಿಗಾಗಿ ಅವಿಷ್ಕಾರಗಳನ್ನು ಮಾಡಬೇಕಾದ ಅಗತ್ಯ ಉಂಟಾಗಿದ್ದು ಇಪ್ಪತ್ತನೆಯ ಶತಮಾನದಲ್ಲಿ ನಡೆದ ಎರಡು ಮಹಾಯುದ್ಧಗಳ ಕಾಲ ದಲ್ಲಿ ಮಾತ್ರ, ಅದಕ್ಕಿಂತ ಮುಂಚೆ ಅಲ್ಲ.

ಹೀಗೆ ಕೈಗಾರಿಕೆಗಳು ಹೆಚ್ಚುತ್ತಾ ಹೋದಂತೆ ಹಳೆಯ ತಾಂತ್ರಿಕ ವಿಧಾನಗಳಲ್ಲಿ ಮತ್ತು ತಯಾರಿಕೆಯ ತಂತ್ರಜ್ಞಾನದಲ್ಲಿ ಮೂಲಭೂತ ಬದಲಾವಣೆಗಳು ಉಂಟಾದವು. ಇದರಲ್ಲಿ ಅತ್ಯಂತ ಮಹತ್ವದ ಬದಲಾವಣೆ ಯಾವುದೆಂದರೆ ಉತ್ಪಾದನಾ ತಂತ್ರಜ್ಞಾನ ಹಾಗೂ ಉತ್ಪಾದಿಸಿದ ವಸ್ತುಗಳಲ್ಲಿ ಆದ ಸುಧಾರಣೆ. ಇದು ಇನ್ನೊಂದು ರೀತಿಯಲ್ಲಿ ಕೆಲಸಗಾರರ ಕಾರ್ಯಕ್ಷಮತೆಯಲ್ಲಿಯೂ ಸುಧಾರಣೆ ತಂದಿತು. ಅದು ಹೇಗೆಂದರೆ ಪ್ರತಿಯೊಬ್ಬ ಕೆಲಸಗಾರನೂ ಒಂದು ನಿಯಮಿತ ಸಮಯ ಹಾಗೂ ನಿಯಮಿತ ವೇಗದಲ್ಲಿ ವಸ್ತುಗಳನ್ನು ಉತ್ಪಾದಿಸುವ ಕ್ರಮವನ್ನು ಅರಿತುಕೊಳ್ಳಬೇಕಾಯಿತು. ಇದರಿಂದ ಕೈಗಾರಿಕೆಯ ಒಟ್ಟು ಕೆಲಸ ಕಾರ್ಯಗಳು ಸುಗಮವಾಗಿ ನೆರವೇರುತ್ತಿದ್ದವು. ಯಾವುದೇ ಕಾರಣಕ್ಕಾಗಿ ಕೆಲಸ ಮಾಡುವ ಮನುಷ್ಯರಿಂದ ಅಥವಾ ಉತ್ಪಾದನೆಗೆ ಬೇಕಾದ ವಸ್ತುಗಳಿಂದ ಕೆಲಸ ಸ್ಥಗಿತಗೊಂಡರೆ ಅದರಿಂದ ಬಹಳ ಹಾನಿ ಉಂಟಾಗುತ್ತಿತ್ತು. ಆದ್ದರಿಂದ ಹೇರಳವಾದ ಪ್ರಮಾಣದಲ್ಲಿ ಕಚ್ಚಾವಸ್ತುಗಳು, ಬಂಡವಾಳ ಮತ್ತು ಕೆಲಸಗಾರರನ್ನು ಸಂಗ್ರಹಿಸಿಟ್ಟು ಕೊಳ್ಳಲಾಗುತ್ತಿತ್ತು. ಇವುಗಳಲ್ಲಿ ಯಾವುದರ ಕೊರತೆ ಉಂಟಾದರೂ ಇಡೀ ಕಾರ್ಖಾನೆ ಸ್ಥಗಿತಗೊಳ್ಳುತ್ತಿತ್ತು. ಇಷ್ಟಕ್ಕೂ ಮೀರಿ ಕೆಲಸ ಸ್ಥಗಿತಗೊಂಡರೆ ಆದ ಹಾನಿಯನ್ನು ತುಂಬಿ ಕೊಳ್ಳಲಿಕ್ಕಾಗಿ ಎಲ್ಲ ವಸ್ತುಗಳು ಸರಿಯಾದ ಪ್ರಮಾಣದಲ್ಲಿ ದೊರಕುತ್ತಿದ್ದ ಸಂದರ್ಭದಲ್ಲಿ ಉತ್ಪಾದನೆಯ ಪ್ರಮಾಣವನ್ನು ಹೆಚ್ಚಿಸಲಾಗುತ್ತಿತ್ತು. ಇಂಥ ತ್ವರಿತಗತಿಯ ಉತ್ಪಾದನೆಯಿಂದ ಹಳೆಯ ಕರಕುಶಲ ಕಲೆಗಳು ಮೂಲೆ ಗುಂಪಾದವು. ಹಳೆಯ ವಿಧಾನಗಳನ್ನು ಮಾತ್ರ ಅರಿತಿದ್ದ ಕುಶಲಕರ್ಮಿಗಳಿಗೆ ಅಗ್ಗದ ದರದಲ್ಲಿ ಯಂತ್ರಗಳ ಸಹಾಯದಿಂದ ಸಾಮೂಹಿಕವಾಗಿ ತಯಾರಾದ ವಸ್ತುಗಳ ಜೊತೆ ಸ್ಪರ್ಧಿಸಲು ಆಗಲಿಲ್ಲ.

ಆದ್ದರಿಂದ ಕೈಗಾರಿಕಾ ಕ್ರಾಂತಿಯ ಎದ್ದು ಕಾಣುವ ಲಕ್ಷಣಗಳು ಯಾವುದೆಂದರೆ ಹೆಚ್ಚು ಶಕ್ತಿ, ಕಚ್ಚಾವಸ್ತುಗಳು, ಹೆಚ್ಚು ಉತ್ಪಾದನೆ, ನಷ್ಟ, ಸಾರಿಗೆ, ಗುಮಾಸ್ತರು, ಗ್ರಾಹಕರು, ಮಾರಾಟಗಾರರು, ಯಥೇಚ್ಛ ಬಂಡವಾಳವಿರುವ ಉದ್ಯಮಗಳು ಮತ್ತು ಬಹಳ ಸಂಖ್ಯೆಯ ಕೆಲಸಗಾರರು ಹಾಗೂ ಕಾರ್ಮಿಕರು. ಈ ಕ್ಷೇತ್ರದಲ್ಲಿ ರೈಲುಮಾರ್ಗಗಳನ್ನು ಅಭಿವೃದ್ಧಿಪಡಿಸಿದ್ದರಿಂದ ಬೇರೆ ಎಲ್ಲ ರೀತಿಯ ರಸ್ತೆಸಾರಿಗೆ ವಿಧಾನಗಳು ಹೆಸರಿಲ್ಲದಂತಾದವು. ರೈಲುಮಾರ್ಗಗಳನ್ನು ಆರಂಭಿಸಿದ್ದರಿಂದ ದೇಶದ ಒಳಭಾಗಗಳಿಗೆ ತಲುಪಲು ಸಾಧ್ಯವಾಯಿತು ಮತ್ತು ಅಪಾರ ಪ್ರಮಾಣದಲ್ಲಿ ಕಚ್ಚಾವಸ್ತುಗಳಾದ ಕಬ್ಬಿಣದ ಅದಿರು ಮತ್ತು ಕಲ್ಲಿದ್ದಲನ್ನು ದೂರದ ಪ್ರದೇಶಗಳಿಗೆ ಸಾಗಿಸಲು ಸಾಧ್ಯವಾಯಿತು.

ಅತ್ಯಂತ ದೊಡ್ಡ ಪ್ರಮಾಣದಲ್ಲಿ ಬೆಳೆದ ಕೈಗಾರಿಕಾ ಯುಗದಲ್ಲಿ ಸಂಪರ್ಕ ಮಾಧ್ಯಮ ಗಳು ಮಹತ್ವದ ಪಾತ್ರ ವಹಿಸಿದವು. ಬ್ರಿಟನ್ನಿನ "ದಿ ಪಬ್ಲಿಕ್ ಪೆನ್ನಿ ಪೋಸ್ಟ್" (೧೮೪೦) ನಿಂದಾಗಿ ಆಧುನಿಕ ಅಂಚೆ ವ್ಯವಸ್ಥೆಯು ಆರಂಭಗೊಂಡಿತು. ೧೮೩೭ರಲ್ಲಿ ವಿದ್ಯುತ್ ಟೆಲಿಗ್ರಾಫ್ ವಿಧಾನವನ್ನು ಕಂಡುಹಿಡಿಯಲಾಯಿತು. ಇದು ಅತ್ಯಂತ ಕಡಿಮೆ ದರದಲ್ಲಿ ದೊರಕುತ್ತಿದ್ದುದರಿಂದ ಎಲ್ಲ ಪಾಶ್ಚಿಮಾತ್ಯ ದೇಶಗಳಲ್ಲಿ ಬಹಳ ಬೇಗ ಹರಡಿತು. ಸಂಪರ್ಕ ಸಾಧನಗಳ ಅಭಿವೃದ್ಧಿಯಿಂದ ಶರವೇಗದಲ್ಲಿ ಸುದ್ದಿಗಳ ವಿನಿಯಮವಾಗಿ ೧೮೫೦ರ ನಂತರ ಅಸ್ತಿತ್ವಕ್ಕೆ ಬಂದ ಪತ್ರಿಕೆಗಳ ಪ್ರಸಾರ ಸಂಖ್ಯೆ ಹೆಚ್ಚಾಯಿತು. ಜನಗಳು ಬೇರೆ ಬೇರೆ ವಿಷಯಗಳ ಮೇಲೆ ತಮ್ಮ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಪತ್ರಿಕೆಗಳ ಪುಟಗಳಲ್ಲಿ ವ್ಯಕ್ತಪಡಿಸುತ್ತಿದ್ದುದರಿಂದ ರಾಜಕೀಯ ನಾಯಕರಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗುತ್ತಿತ್ತು. ಕೆಲವೊಮ್ಮೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಪತ್ರಿಕೆಗಳು ಸಹಾಯಕಾರಿಯೂ ಆಗಿದ್ದವು. ಆದ್ದರಿಂದ ಸಂಪರ್ಕ ಮಾಧ್ಯಮಗಳ ಬೆಳವಣಿಗೆಯು ರಾಜಕೀಯ ಚಟುವಟಿಕೆಗಳನ್ನು ಸಹ ಪ್ರಭಾವಿಸಿತು.

**ಕೈಗಾರಿಕಾ ಕ್ರಾಂತಿಯ ಪರಿಣಾಮಗಳು**

ಕೈಗಾರಿಕಾ ಕ್ರಾಂತಿಯಿಂದ ಮುಖ್ಯವಾಗಿ ಪಾಶ್ಚಿಮಾತ್ಯ ದೇಶಗಳ ಸಂಪತ್ತು ಅಭಿವೃದ್ಧಿ ಯಾಯಿತು. ಜನರ ಸ್ವಚ್ಛತೆಯ ಮಟ್ಟ, ಆರೋಗ್ಯ ಮತ್ತು ಸೌಕರ್ಯಗಳ ವಿಷಯದಲ್ಲಿ ಆಮೂಲಾಗ್ರ ಅಭಿವೃದ್ಧಿಯಾಯಿತು. ಆರಂಭದಲ್ಲಿ ನಗರಗಳು, ಕೈಗಾರಿಕಾ ಪ್ರದೇಶಗಳು ಬಹಳ ವೇಗದಿಂದ ಬೆಳೆದು ಅಲ್ಲಿ ಕೂಲಿಕಾರರು, ಕಾರ್ಮಿಕರು ಕಿಕ್ಕಿರಿದ ಸಂಖ್ಯೆಯಲ್ಲಿ ತುಂಬಿದ್ದರಿಂದ ಕೆಲವೊಂದು ಸಾಮಾಜಿಕ ಸಮಸ್ಯೆಗಳು ಹುಟ್ಟಿಕೊಂಡವು. ವೇಗದಿಂದ ಬೆಳೆಯುತ್ತಿದ್ದ ಹೊಸ ಸಾಮಾಜಿಕ ವ್ಯವಸ್ಥೆಯ ಜೊತೆ ಸರಿಸಾಟಿಯಾಗಲು ಪಾರಂಪರಿಕ ಸಂಸ್ಥೆಗಳಿಗೆ ಸಾಧ್ಯವಿರಲಿಲ್ಲ. ಇದು ಒಂದು ಅರ್ಥದಲ್ಲಿ ಮಾರ್ಕ್ಸ್‌ನ ಸಿದ್ಧಾಂತವಾದ ಶೋಷಣೆಯನ್ನು ವಿರೋಧಿಸಲು ದುಡಿಯುವ ವರ್ಗದ ಕ್ರಾಂತಿಯನ್ನು ಸಾಧ್ಯವಾಗಿಸಿತು.

೧೮೪೮-೪೯ರ ನಂತರ ಹಲವಾರು ಸಾಮಾಜಿಕ ಆವಿಷ್ಕಾರಗಳು ಔದ್ಯೋಗಿಕ ಸಮಾಜದ ಸಮಸ್ಯೆಗಳನ್ನು ಹೆಚ್ಚಿಸಿದವು. ೧೮೪೦ರ ದಶಕದಲ್ಲಿ ನಗರ ಪೋಲೀಸ್ ವ್ಯವಸ್ಥೆಯ ಸ್ಥಾಪನೆಯಾಯಿತು. ಇದರಷ್ಟೇ ಮುಖ್ಯವಾಗಿ ಚರಂಡಿ ವ್ಯವಸ್ಥೆ, ಕಸವನ್ನು ಸಂಗ್ರಹಿಸಿ ಬೇರೆ ಕಡೆ ಸಾಗಿಸುವ ವ್ಯವಸ್ಥೆ, ಪಾರ್ಕುಗಳು, ಆಸ್ಪತ್ರೆಗಳು, ಆರೋಗ್ಯ ಮತ್ತು ಅಪಘಾತ ವಿಮಾ ಯೋಜನೆಗಳು, ಪಬ್ಲಿಕ್ ಸ್ಕೂಲುಗಳು, ಕಾರ್ಮಿಕ ಸಂಘಟನೆಗಳು, ಅನಾಥಾಶ್ರಮಗಳು, ಧರ್ಮಶಾಲೆಗಳು, ಜೈಲುಗಳು ಮತ್ತು ಹಲವಾರು ಉದಾರ ಸಂಘಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು.

ಎರಡನೆಯದಾಗಿ ಕೈಗಾರಿಕಾ ಕ್ರಾಂತಿಯಿಂದ ಜನಸಂಖ್ಯೆಯ ಪ್ರಮಾಣದಲ್ಲಿ ಹೆಚ್ಚಳ ಉಂಟಾಯಿತು. ಯಾಕೆಂದರೆ ವೈದ್ಯಕೀಯ ಕ್ಷೇತ್ರದಲ್ಲಿ ಆದ ಬೆಳವಣಿಗೆಗಳು, ಸಾರ್ವಜನಿಕ ಆರೋಗ್ಯ, ಆಹಾರ ಪದಾರ್ಥಗಳ ಸರಬರಾಜಿನಲ್ಲಿ ಆದ ಅಭಿವೃದ್ಧಿ ಇತ್ಯಾದಿಗಳ ಕಾರಣದಿಂದ ಜನರ ಜೀವನ ಸ್ಥಿತಿ ಸುಧಾರಿಸಿತ್ತು. ಹಾಗೆಯೇ ಜನರ ಮರಣದ ಪ್ರಮಾಣವೂ ಕಡಿಮೆಯಾಗಿತ್ತು.

ಬಹಳ ಕಡಿಮೆ ಕಾಲದಲ್ಲಿಯೇ ಪಶ್ಚಿಮ ಯೂರೋಪಿನ ಕೈಗಾರಿಕಾ ಕ್ರಾಂತಿಯು ಫ್ರೆಂಚ್ ಕ್ರಾಂತಿಯು ಪ್ರತಿಪಾದಿಸಿದ ಉದಾರವಾದಿ ಮತ್ತು ಆಧುನೀಕರಣದ ತತ್ವಗಳನ್ನೇ ಎತ್ತಿಹಿಡಿಯಿತು ಮತ್ತು ಖಾಸಗಿ ಆಸ್ತಿಯನ್ನು ರಾಜ್ಯದ ಹಕ್ಕಿನಿಂದ ರಕ್ಷಿಸಿತು. ಆಸ್ತಿಯನ್ನು ಹೊಂದುವುದು ವೈಯಕ್ತಿಕ ಸ್ವಾತಂತ್ರ್ಯ, ರಾಜಕೀಯ ಸ್ವಾತಂತ್ರ್ಯ, ಭವಿಷ್ಯದಲ್ಲಿ ಲಾಭದ ನಿರೀಕ್ಷೆ ಮತ್ತು ಬಂಡವಾಳವನ್ನು ಹೊಸ ರೀತಿಯ

ಹಾಗೂ ಭರವಸೆ ಇಲ್ಲದ ಉದ್ಯಮಗಳಲ್ಲಿ ವಿನಿಯೋಗಿಸುವುದಕ್ಕೆ ಅಗತ್ಯ ಎಂದು ಭಾವಿಸಲಾಗಿತ್ತು. ಆದ್ದರಿಂದ ಯೂರೋಪಿನಲ್ಲಿ ಕೈಗಾರಿಕಾ ಕ್ರಾಂತಿಯು ಬಂಡವಾಳಶಾಹಿ ಸ್ವರೂಪದ್ದಾಗಿತ್ತು. ಈ ಮಧ್ಯೆ ಕೈಗಾರಿಕಾ ಕ್ರಾಂತಿಯ ಕಾರಣದಿಂದ ಯೂರೋಪ್ ಖಂಡವು ಪ್ರಪಂಚದ ಬೇರೆಲ್ಲ ಭಾಗಗಳಿಗಿಂತ ಬಲಿಷ್ಠವಾಯಿತು. ಇದರಿಂದಾಗಿ ಇಡೀ ಪ್ರಪಂಚವನ್ನು ವಸಾಹತುಶಾಹಿಯ ರೂಪದಲ್ಲಿ ಯೂರೋಪ್ ತನ್ನ ಹತೋಟಿಯಲ್ಲಿಟ್ಟುಕೊಂಡಿತು. ಇದಾದ ನಂತರ ಇಪ್ಪತ್ತನೆಯ ಶತಮಾನದ ವೇಳೆಗೆ ಬೇರೆಲ್ಲ ರಾಷ್ಟ್ರಗಳು ಪಾಶ್ಚಿಮಾತ್ಯ ದೇಶಗಳಿಗೆ ಸರಿಸಮಾನವಾಗಬೇಕೆಂಬ ಹಂಬಲದಿಂದ ತಮ್ಮಲ್ಲಿಯೂ ಬಹಳ ಬೇಗ ಕೈಗಾರಿಕೀಕರಣದ ಪ್ರಕ್ರಿಯೆಗೆ ಚಾಲನೆ ನೀಡಿದವು ಮತ್ತು ಜನರ ಜೀವನ ಮಟ್ಟವನ್ನು ಸುಧಾರಿಸಲು ತೀವ್ರ ಪ್ರಯತ್ನ ನಡೆಸಿದವು.

ಈ ಕಾರಣದಿಂದ ಇಡೀ ಪಾಶ್ಚಿಮಾತ್ಯ ಜಗತ್ತಿನಲ್ಲಿ ಹೊಲದಿಂದ ಕಾರ್ಖಾನೆಗೆ, ಹಳ್ಳಿಯಿಂದ ನಗರಗಳಿಗೆ ಪಲ್ಲಟ ಹೊಂದುವ ಸ್ಥಿತಿ ಉಂಟಾಯಿತು. ಇದರ ಪರಿಣಾಮವಾಗಿ ಜನರ ಜೀವನ ಶೈಲಿಯಲ್ಲಿಯೂ, ನವಶಿಲಾಯುಗದಿಂದ ಒಂದು ಹೊಸ ಬಗೆಯ ಜೀವನ ಕ್ರಮಕ್ಕೆ ಬದಲಾಗುವ ಅಗತ್ಯ ಕಂಡುಬಂತು. ೧೮೩೫ರವರೆಗೆ ಇಂಗ್ಲೆಂಡಿನಲ್ಲಿ ನಗರಗಳಿಗೆ ಹೋಗಿ ನೆಲೆಸುವ ವಿಷಯದ ಬಗ್ಗೆ ಯಾವುದೇ ನಿಯಮಿತ ಕಾನೂನು ಇರಲಿಲ್ಲ. ಇಂಗ್ಲೆಂಡಿನ ನಗರ ವ್ಯವಸ್ಥೆಯು ಪ್ರಷ್ಯಾ ಅಥವಾ ಫ್ರಾನ್ಸ್‌ಗಿಂತಲೂ ಹಿಂದುಳಿದ ಸ್ಥಿತಿಯಲ್ಲಿತ್ತು. ಮಧ್ಯಕಾಲದ ಸ್ವರೂಪದ ಹೊರತಾಗಿ ಈ ನಗರಗಳಿಗೆ ಯಾವುದೇ ರೀತಿಯ ಅಸ್ತಿತ್ವ ಇರಲಿಲ್ಲ. ಅಲ್ಲಿ ಸರಿಯಾದ ಅಧಿಕಾರಿಗಳು, ತೆರಿಗೆಯನ್ನು ವಸೂಲು ಮಾಡುವ ವಿಧಾನಗಳು ಮತ್ತು ಕಾನೂನನ್ನು ರೂಪಿಸುವ ಅಧಿಕಾರಿಗಳು ಯಾವುದೂ ಸರಿಯಾದ ಕ್ರಮದಲ್ಲಿ ಇರಲಿಲ್ಲ. ಆದ್ದರಿಂದ ಮ್ಯಾಂಚೆಸ್ಟರ್ ಮತ್ತು ಅಂತಹ ಇತರ ಕೈಗಾರಿಕಾ ನಗರಗಳಿಗೆ ವೇಗದಿಂದ ಆಗುತ್ತಿದ್ದ ನಗರೀಕರಣದ ಸಮಸ್ಯೆಗಳು, ಪೋಲೀಸ್ ರಕ್ಷಣೆ, ನೀರು, ಚರಂಡಿ ವ್ಯವಸ್ಥೆ ಮತ್ತು ಕಸವನ್ನು ವ್ಯವಸ್ಥಿತವಾಗಿ ಬೇರೆಡೆಗೆ ಸಾಗಿಸಬೇಕಾದಂತಹ ಸಮಸ್ಯೆಗಳನ್ನು ಹೇಗೆ ಬಗೆಹರಿಸಬೇಕೆಂದು ತಿಳಿಯಲಿಲ್ಲ. ಜನ ನಗರಗಳಿಗೆ ವಲಸೆ ಹೋಗಿದ್ದರಿಂದ ಸರಿಯಾಗಿ ನಿರ್ಮಿಸಿದ ಮತ್ತು ಒತ್ತೊತ್ತಾಗಿ ಒಂದರ ಪಕ್ಕ ಒಂದು ಕಟ್ಟಿದ ಮನೆಗಳು ಇತ್ಯಾದಿಗಳಿಂದ ಗಂಭೀರವಾದ ವಸತಿ ಸಮಸ್ಯೆಯೂ ಉಂಟಾಯಿತು.

ಈ ಸಂದರ್ಭದಲ್ಲಿ ನುರಿತ ಕೆಲಸಗಾರರಿಗೆ ಒಮ್ಮೊಮ್ಮೆ ಕೆಲಸವೇ ಸಿಕ್ಕುತ್ತಿರಲಿಲ್ಲ, ಸಿಕ್ಕರೂ ಅತ್ಯಂತ ಕಡಿಮೆ ಕೂಲಿ ದೊರೆಯುತ್ತಿತ್ತು. ಎಲ್ಲಾ ಕೆಲಸಗಳಲ್ಲಿ ಹೆಂಗಸರು ಮತ್ತು ಮಕ್ಕಳಿಗೆ ಹೆಚ್ಚಿನ ಆದ್ಯತೆ ದೊರೆಯಿತು. ಎಲ್ಲವೂ ಯಂತ್ರಗಳ ಸಹಾಯದಿಂದ ನಡೆಯುತ್ತಿದ್ದರಿಂದ ಮನುಷ್ಯರ ಅಗತ್ಯ ಬಹಳ ಕಡಿಮೆ ಇತ್ತು. ಇಂತ ಸಂದರ್ಭದಲ್ಲಿ ಹೆಂಗಸರು, ಮಕ್ಕಳನ್ನು ಬಹಳ ಸುಲಭವಾಗಿ ಹತೋಟಿಯಲ್ಲಿಟ್ಟುಕೊಳ್ಳಬಹುದಾಗಿತ್ತು. ಅವರಿಂದ ಶೋಷಣೆಗೆ ಯಾವ ವಿರೋಧವೂ ಬರುವಂತಿರಲಿಲ್ಲ. ಹದಿನಾಲ್ಕು ಗಂಟೆಗಳ ದೀರ್ಘ ದುಡಿಮೆ, ಕೆಟ್ಟ ವಾತಾವರಣದಲ್ಲಿ ಕೆಲಸ ಮತ್ತು ಕಡಿಮೆ ಬಿಡುವು ಇವುಗಳು ಹತ್ತೊಂಬತ್ತನೆಯ ಶತಮಾನದ ಕೂಲಿಕಾರರ ನಿತ್ಯದ ಅನುಭವಗಳಾಗಿದ್ದವು. ಇದರೊಂದಿಗೆ ಕೆಲಸವು ಅತ್ಯಂತ ಕಷ್ಟದಾಯಕವಾಗಿದ್ದು ಕೆಲಸಗಾರನಲ್ಲಿ ಒಂದು ಬಗೆಯ ಪರಕೀಯ ಭಾವನೆಯನ್ನು ಹುಟ್ಟಿಸುತ್ತಿತ್ತು. ಕೂಲಿಕಾರರು ಮತ್ತು ಕಾರ್ಮಿಕ ವರ್ಗದ ಜನ ಕೈಗಾರಿಕಾ ಕ್ರಾಂತಿಯ ಆರಂಭದ ದಿನಗಳಲ್ಲಿ ಸಂಘಟಿತರಾಗದೇ ಇದ್ದುದರಿಂದ ಕಡಿಮೆ ವೇತನ ಪಡೆಯುವುದು ಕೈಗಾರಿಕೀಕರಣ ಪ್ರಕ್ರಿಯೆಯ ಭಾಗವೇ ಆಗಿತ್ತು.

ಮುಕ್ತ ವ್ಯಾಪಾರ ಸಿದ್ಧಾಂತವನ್ನು ಸರ್ಕಾರವು ವ್ಯಾಪಾರದ ವ್ಯವಹಾರಗಳಲ್ಲಿ ಅಡ್ಡ ಬರದಂತೆ ತಡೆಯಲು ಅಳವಡಿಸಿಕೊಳ್ಳಲಾಗಿತ್ತು. ಈ ಎಲ್ಲ ಬೆಳವಣಿಗೆಗಳ ಕಾರಣದಿಂದ ಉದಾರವಾದ ಮತ್ತು ಸಮಾಜವಾದದಂತಹ ಹೊಸ ಸಿದ್ಧಾಂತಗಳು ಹುಟ್ಟಿಕೊಂಡವು. ಈ ಸಿದ್ಧಾಂತಗಳು ಆರ್ಥಿಕ ಕ್ಷೇತ್ರಗಳಲ್ಲಿ ಆದ ಬದಲಾವಣೆಗಳನ್ನು ವಿವರಿಸಲು ಯತ್ನಿಸಿದವು. ಹಾಗೆಯೇ ಆಗಿನ ಕೆಲವು ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದಕ್ಕಾಗಿ ಮತ್ತು ಆರ್ಥಿಕ ಬದಲಾವಣೆಗಳಿಗೆ ಅನುಗುಣವಾಗಿ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತರುವುದಕ್ಕಾಗಿ ಈ ಸಿದ್ಧಾಂತಗಳು ರೂಪುಗೊಂಡವು. ಆದ್ದರಿಂದ ಈ ಕೈಗಾರಿಕಾ ಕ್ರಾಂತಿಯ ಅವಧಿಯ ಎರಡನೆಯ ಭಾಗದಲ್ಲಿ ಇಡೀ ಪ್ರಪಂಚವನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದ ಶಕ್ತಿಗಳನ್ನು ಹತೋಟಿಗೆ ತರಲು ಬಹಳ ವ್ಯವಸ್ಥಿತವಾದ ಪ್ರಯತ್ನಗಳು ನಡೆದವು. ತಮ್ಮ ಪ್ರಭಾವದಿಂದ ಸಮಾಜದ ಕೆಲವು ವರ್ಗಗಳನ್ನು ನಿರಂತರವಾಗಿ ರೂಪಿಸುತ್ತಿದ್ದ ಶಕ್ತಿಗಳನ್ನು ನಿಯಂತ್ರಿಸಲು ಈ ಹೊಸ ಚಿಂತನೆಗಳು ಸಹಾಯಕವಾದವು. ಐವತ್ತು ವರ್ಷಗಳಲ್ಲಿ ಅಂದರೆ ೧೮೩೨ರ ಮಹಾ ಸುಧಾರಣೆ ಮಸೂದೆ ಬರುವವರೆಗೆ, ಸಾಮಾಜಿಕ ಪರಿಣಾಮಗಳ ದೃಷ್ಟಿಯಲ್ಲಿ ಕೈಗಾರಿಕಾ ಕ್ರಾಂತಿಯು ಬಹಳ ಅಪಾಯಕಾರಿಯಾಗಿತ್ತು. ಅದು ನಗರ

ಗ್ರಾಮಗಳೆರಡರಲ್ಲೂ ಹಳೆಯ ಇಂಗ್ಲಿಷ್ ಸಮಾಜದ ಧರ್ಮ ನಿಷ್ಠೆಯನ್ನು ಹಾಗೂ ಅದರ ಸ್ವರೂಪವನ್ನು ನಾಶಪಡಿಸಿತು. ಈ ಅಂಶಗಳನ್ನು ಅದು ಹೊಸ ಯಂತ್ರ ನಾಗರಿಕತೆಯ ಸಮಾಜಕ್ಕೆ ರಕ್ಷಿಸಿ ತರಲಾಗಲಿಲ್ಲ. ಸರ್ಕಾರವು ಎಲ್ಲ ರೀತಿಯ ಕಾಯಿದೆ ಬದ್ಧ ಹಾಗೂ ರಾಜಕೀಯ ಬದಲಾವಣೆಗಳಿಗೆ "ಜಾಕೋಬಿಯನ್" ಎಂಬ ಹಣೆಪಟ್ಟಿ ಹಚ್ಚಿ ನಿರ್ಬಂಧ ಹೇರಿತು ಮತ್ತು ಆರ್ಥಿಕ ಕ್ರಾಂತಿಗೆ ಮಾತ್ರ ಪ್ರಾಮುಖ್ಯತೆ ನೀಡಿತು. ಇದರ ಪರಿಣಾಮವಾಗಿ ೧೮೩೨ರ ಹೊತ್ತಿಗೆ ಜನಗಳ ರಾಜಕೀಯ, ಸ್ಥಳೀಯ ಆಡಳಿತ, ಶೈಕ್ಷಣಿಕ ಅಗತ್ಯಗಳು ಕೊನೆಗೆ ಆರೋಗ್ಯ ಸಂಬಂಧಿ ಅಗತ್ಯಗಳನ್ನು ಪೂರೈಸಲೂ ಸಹ ಯಾವುದೇ ಅವಕಾಶ ಇರಲಿಲ್ಲ. ಇವರಲ್ಲಿ ಬಹಳಷ್ಟು ಜನರಿಗೆ ಕನಿಷ್ಟ ಉಡಲು ಬಟ್ಟೆ, ತಿನ್ನಲು ಆಹಾರವೂ ಸಿಗುತ್ತಿರಲಿಲ್ಲ. ಕಾನೂನು ವ್ಯವಸ್ಥೆ ಇತ್ಯಾದಿಗಳು ಒಂದು ದಿಕ್ಕಿನಲ್ಲಿ ಚಲಿಸಿದರೆ, ಆಗಿನ ಸಮಾಜ ಅದರ ಆರ್ಥಿಕ ಸ್ಥಿತಿಗತಿಗಳು ಇನ್ನೊಂದು ದಿಕ್ಕಿನಲ್ಲಿ ಚಲಿಸುತ್ತಿದ್ದವು.

ಹೊಸ ಪ್ರಪಂಚವನ್ನು ಕಟ್ಟುವ ಮತ್ತು ಒಂದು ಹೊಸ ರೀತಿಯ ಸಮಾಜವನ್ನು ಕಟ್ಟುವ ಪ್ರಯತ್ನಗಳು ಈ ಅವಧಿಯ ಎರಡನೆಯ ಭಾಗದ ಮುಖ್ಯ ಲಕ್ಷಣಗಳಲ್ಲಿ ಒಂದಾಗಿವೆ.


<u>ಪರಾಮರ್ಶನ ಗ್ರಂಥಗಳು</u>

೧. ವಿಲಿಯಂ ಮ್ಯಾಕನೀಲ್ ಹೆಚ್., ೧೯೭೧. **ಎ ವರ್ಲ್ಡ್ ಹಿಸ್ಟರಿ, ಓ.ಯು.ಪಿ,** ಯು.ಎಸ್.ಎ.

೨. ಕೊಲ್ಟನ್ ಜೋಯೆಲ್ ಮತ್ತು ಪಾಮರ್ ಆರ್., ೧೯೭೮. **ಎ ಹಿಸ್ಟರಿ ಆಫ್ ವರ್ಲ್ಡ್, ಯು.ಎಸ್.ಎ.,** ಆಲ್‌ಫ್ರೆಡ್ ನಾಫ್.

೩. ಎರಿಕ್ ಹಾಬ್ಸ್‌ವಾಮ್, ೧೯೯೨. **ದಿ ಏಜ್ ಆಫ್ ರೆವಲ್ಯೂಷನ್, *೧೭೮೯–೧೮೪೮,*** ಕಲ್ಕತ್ತಾ.


## ೧೫. ೧೮ನೆಯ ಶತಮಾನದ ಚಿಂತನೆಗಳು ಸಂಸ್ಥೆಗಳು ಮತ್ತು ಚಳವಳಿಗಳು

ಹದಿನೇಳನೆಯ ಶತಮಾನವನ್ನು ಪ್ರತಿಭೆಯ ಶತಮಾನವೆಂದು ಪರಿಗಣಿಸಿದರೆ, ಹದಿನೆಂಟನೆಯ ಶತಮಾನವನ್ನು ಜ್ಞಾನೋದಯದ ಜ್ಞಾನಕೋಶದ ಶತಮಾನವೆಂದು ಪರಿಗಣಿಸಬಹುದು. ಈ ಶತಮಾನದ ಚಿಂತನೆಗಳು ಹೆಚ್ಚು ಕಡಿಮೆ ಹಿಂದಿನ ಶತಮಾನ ದಲ್ಲಾದ ಬೌದ್ಧಿಕ ಬೆಳವಣಿಗೆಗಳಿಂದ ಹೆಚ್ಚು ಸ್ಫೂರ್ತಿಗೊಂಡು, ಅಂದಿನ ಚಿಂತನೆಗಳನ್ನು ಪ್ರತಿಪಾದಿಸುವುದು ಮತ್ತು ಅನುಷ್ಠಾನಗೊಳಿಸುವುದಾಗಿತ್ತು. ಯುರೋಪಿನ ಚಿಂತನಕಾರರು, ಅದರಲ್ಲೂ ಪ್ರಮುಖವಾಗಿ ಫ್ರಾನ್ಸಿನ ಚಿಂತನಕಾರರು ಹೆಚ್ಚಾಗಿ ವೈಜ್ಞಾನಿಕ ಕ್ರಾಂತಿಯ ಪಿತಾಮಹನೆನಿಸಿದ ಫ್ರಾನ್ಸಿನ ಬೇಕಾನ್‌ನ ಇಂಡಕ್ಟೀವ್ ಲಾಜಿಕ್ ಮತ್ತು ಡೆಕಾರ್ಟೆಯ ಗಣಿತ ವಿಧಾನಗಳಿಂದ ಹೆಚ್ಚು ಪ್ರಭಾವಿತಗೊಂಡಿದ್ದರು. ಡೆಕಾರ್ಟೆಯು ಬೌದ್ಧಿಕ ಚಳವಳಿಯ ಪ್ರವರ್ತಕರಲ್ಲಿ ಒಬ್ಬನಾಗಿದ್ದನು.

ಹದಿನೆಂಟನೆಯ ಶತಮಾನದ ಪ್ರಮುಖ ಬೆಳವಣಿಗೆಯೆಂದರೆ ಜ್ಞಾನೋದಯ, ಅಥವಾ ಬೌದ್ಧಿಕ ಚಳವಳಿ. ಇದು ಚಿಂತನೆಯಲ್ಲಿ ಕ್ರಾಂತಿಯನ್ನುಂಟು ಮಾಡಿ ಹಲವಾರು ಕ್ಷೇತ್ರಗಳಲ್ಲಿ ಅದರಲ್ಲೂ ವಿಶೇಷವಾಗಿ ಧರ್ಮ, ದೇವರು, ವೈಚಾರಿಕತೆ ಮತ್ತು ಮನುಷ್ಯನಿಗೆ ಸಂಬಂಧಪಟ್ಟಂತೆ ಹೆಚ್ಚು ಪ್ರಭಾವ ಬೀರಿತು. ಮಾನವ ಹಿಂದೆ ನಂಬಲಾಗಿದ್ದ ಮತ್ತು ಪ್ರತಿಪಾದಿಸಲ್ಪಟ್ಟಿದ್ದ ವಿಷಯಗಳನ್ನು ಪರೀಕ್ಷೆಗೊಳಪಡಿಸಿ ಅವುಗಳ ಸತ್ಯಾಸತ್ಯತೆ ಗಳನ್ನು ತಿಳಿದುಕೊಂಡನು. ಮೊಟ್ಟಮೊದಲ ಬಾರಿಗೆ ಪುರೋಹಿತಶಾಹಿ ಚರ್ಚು ಮತ್ತು ನಿರಂಕುಶ ಪ್ರಭುತ್ವ ಬಲವಾದ ಟೀಕೆಗೊಳಪಟ್ಟವು. ಜ್ಞಾನೋದಯದ ಮೂಲವು ಗ್ರೀಕ್ ತತ್ವಜ್ಞಾನಿಗಳಿಂದ ಉಂಟಾಯಿತೆನ್ನಬಹುದು. ಹದಿನಾರನೆಯ ಶತಮಾನದಲ್ಲಿ ಜರ್ಮನಿಯ ಮಾರ್ಟಿನ್ ಲೂಥರ್ ಧಾರ್ಮಿಕ ಮತ್ತು ವೈಚಾರಿಕ ಕ್ಷೇತ್ರದಲ್ಲಿ ಬಂಡಾಯವನ್ನೆಬ್ಬಿಸಿದನು. ಇದಕ್ಕೆ ಇರೇಸಮಸ್ ಹೆಚ್ಚು ಪುಷ್ಟಿ ನೀಡಿದ್ದನು. ಹದಿನೇಳನೆಯ ಶತಮಾನದ ಸಮಯಕ್ಕೆ ಇಡೀ ಯುರೋಪ್ ಸಮಾಜವು ವೈಚಾರಿಕತೆಯ ಪ್ರಭಾವಕ್ಕೊಳಗಾಗಿ, ಹದಿನೆಂಟನೆಯ ಶತಮಾನದಲ್ಲಿ ಅತ್ಯುನ್ನತ ಮಟ್ಟಕ್ಕೇರಿತು.

ಕ್ರೈಸ್ತ ಧರ್ಮವು ಹೊಸ ವಿಷಯ ಮತ್ತು ನಿರ್ಣಯಗಳಿಂದಾಗಿ ಪ್ರಬಲವಾದ ವಿರೋಧವನ್ನು ಎದುರಿಸಬೇಕಾಯಿತು. ಹದಿನೆಂಟನೆಯ ಶತಮಾನದ ಮೊದಲರ್ಧ ಭಾಗದಲ್ಲಿ ತೀವ್ರಗಾಮಿಗಳ ಚಿಂತನೆಗಳು ಧಾರ್ಮಿಕ ವಿಷಯದಲ್ಲಿ ಚರ್ಚೆಯನ್ನುಂಟು ಮಾಡಲು ದಾರಿ

ಮಾಡಿಕೊಟ್ಟವು. ತೀವ್ರಗಾಮಿಗಳು ಬೇರೆ ನಾಗರಿಕತೆಯ ಸಮಾಜದ ಧರ್ಮಗಳನ್ನು ಅಂದರೆ ಈಜಿಪ್ಟಿನ ಸಿಯಾಮಿಸ್ ಮತ್ತು ಚೀನಾದ ಸಮಾಜಗಳನ್ನು ಅಧ್ಯಯನ ಮಾಡಿದ ನಂತರ, ಇವು ಯಾವುದೇ ಸಂಘಟಿತ ಧರ್ಮ ಹೊಂದಿಲ್ಲವಾದರೂ ಸಮಾಜ, ಮಾನವ ಅತ್ಯಂತ ಸದ್ಗುಣವುಳ್ಳವರಾಗಿದ್ದುವೆಂದು ಅಭಿಪ್ರಾಯಪಟ್ಟರು. ಆದರೆ ಕ್ರೈಸ್ತ ಧರ್ಮವು ಪ್ರಕೃತಿಯ ನಿಯಮಗಳು ಮತ್ತು ವೈಜ್ಞಾನಿಕ ಪ್ರಯೋಗದ ಎದುರು ನಿಲ್ಲಲಾರದಾಯಿತು.

**ಆಸ್ತಿಕವಾದದ ಉಗಮ**

ಲಾರ್ಡ್ ಹರ್ಬರ್ಟ್ ತನ್ನ ಪುಸ್ತಕ ಡಿವೆಂಟೀಟ್‌ನಲ್ಲಿ ಸ್ವಾಭಾವಿಕ ಪ್ರಕೃತಿ ಧರ್ಮದ ಬಗ್ಗೆ ವ್ಯಾಖ್ಯಾನ ನೀಡಿದ್ದಾನೆ. ಅವನ ಪ್ರಕಾರ ಕೆಲವು ನಂಬಿಕೆಗಳು ಎಲ್ಲಾ ವಿಚೇಚನಾ ಶಕ್ತಿಯುಳ್ಳ ಜನತೆಯಿಂದ ಮಾನ್ಯ ಮಾಡಲ್ಪಡುತ್ತವೆ. ಒಂದೇ ದೇವರ ಅಸ್ತಿತ್ವದ ಮತ್ತು ಅವನ ಕಾರ್ಯಗಳಾದ ದುಷ್ಟ ಶಿಕ್ಷಕ, ಶಿಷ್ಟ ಪರಿಪಾಲನೆ ಮತ್ತು ಅವನನ್ನು ಒಲಿಸಿಕೊಳ್ಳುವುದು ಮಾನವನ ಸದ್ಗುಣಗಳಿಂದ ಸಾಧ್ಯ. ಇಂತಹ ವರ್ತನೆಯಿಂದ ಮಾನವನಿಗೆ ಇಹಲೋಕದಲ್ಲಷ್ಟೇ ಅಲ್ಲದೆ ಪರಲೋಕದಲ್ಲಿಯೂ ಸಹ ಮುಕ್ತಿ ಸಿಗುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾನೆ. ಈ ತತ್ವಗಳು ಥಾಮಸ್ ಪೈನೇ ಪುಸ್ತಕ ದಿ ಏಜ್ ಆಫ್ ರೀಜನ್ ಪ್ರಕಟವಾಗುವವರೆಗೂ ಹೆಚ್ಚು ಪ್ರಚಲಿತದಲ್ಲಿದ್ದವು.

ಆಸ್ತಿಕರು ದೇವರು, ಧರ್ಮ, ವಿವೇಚನೆ ಮತ್ತು ಪ್ರಕೃತಿ ನಿಯಮ ನಡುವಣ ಇದ್ದ ಸಮನ್ವಯತೆಯನ್ನು ಕಾಪಾಡಿಕೊಂಡಿದ್ದರು. ಇವರ ಪ್ರಕಾರ ಯಾವುದೇ ಧರ್ಮ, ತತ್ವವು ಸ್ವಾಭಾವಿಕ ವಿಜ್ಞಾನದ ಪದ್ಧತಿಯ ಮೇಲೆ ಆಧರಿಸಿರಬೇಕು. ಪ್ರಸಕ್ತ ಧರ್ಮವು ಯಾವುದೇ ವೈಜ್ಞಾನಿಕ ಸಿದ್ಧಾಂತದ ಮೇಲೆ ನಿಂತಿಲ್ಲ. ಹಾಗಾಗಿ ಅದರಲ್ಲಿ ನಂಬಿಕೆಯಿಡುವುದು ತಪ್ಪು ಎಂದು ಪ್ರತಿಪಾದಿಸಿದರು. ಕ್ರೈಸ್ತ ಧರ್ಮದ ಹಳೆಯ ಒಡಂಬಡಿಕೆಯು ತೀವ್ರ ಪರೀಕ್ಷೆ ಗೊಳಪಟ್ಟು, ಟೀಕೆಗೊಳಪಟ್ಟು, ಅದರಲ್ಲಿದ್ದ ಕೆಲವು ದೋಷಪೂರಿತ ಅಭಿಪ್ರಾಯಗಳು ತಿರಸ್ಕರಿಸ್ಪಟ್ಟವು. ಇದೇ ರೀತಿ ಆಸ್ತಿಕರು ಬೈಬಲನ್ನು ಸಹ ತಿರಸ್ಕರಿಸಿ, ದೇವರ ಪುನರ್ ಅವತಾರ ಅಂದರೆ ದೇವರು ಮಾನವ ರೂಪವನ್ನು ತಾಳಿದ್ದು ಮತ್ತು ಪವಾಡಗಳನ್ನು ಹಾಸ್ಯಾಸ್ಪದಗಳೆಂದು ಅಭಿಪ್ರಾಯ ಪಡಲಾಯಿತು. ಪವಾಡಗಳು ಪ್ರಕೃತಿ ನಿಯಮಕ್ಕೆ ವಿರುದ್ಧವಾದವುಗಳು. ಇದರಿಂದಾಗಿ ದೇವರು ತಾನೇ ಸೃಷ್ಟಿಸಿದ ನಿಯಮಗಳನ್ನು ತಾನೇ ಉಲ್ಲಂಘನೆ ಮಾಡಿದಂತಾಗುತ್ತದೆ ಎಂದು ಅಭಿಪ್ರಾಯ ಪಡಲಾಯಿತು.

ಅಸ್ತಿಕವಾದವು ಮೊದಲು ಬ್ರಿಟನ್ನಿನಲ್ಲಿ ಪ್ರಾರಂಭವಾಗಿ ಹದಿನೆಂಟನೆಯ ಶತಮಾನದ ಹೊತ್ತಿಗೆ ಇಡೀ ಯೂರೋಪ್ ಖಂಡಕ್ಕೆ ಪಸರಿಸಿತು. ಫ್ರಾನ್ಸ್‌ನಲ್ಲಿ ಹದಿನಾಲ್ಕನೆ ಲೂಯಿ ಆಡಳಿತದಿಂದ ಬೇಸತ್ತ ಜನತೆ ಈ ತತ್ವದ ಕಡೆ ಹೆಚ್ಚು ಪ್ರೋ ಕೊಡಲಾರಂಭಿಸಿದರು. ಇಲ್ಲಿ ವಾಲ್ಟೇರ್ ಕ್ರೈಸ್ತ ಧರ್ಮದ ವಿರುದ್ಧ ಚಳವಳಿ ಪ್ರಾರಂಭಿಸಿದನು. ತನ್ನ ಪುಸ್ತಕವಾದ ಲೆಟರ್ಸ್ ಫಿಲಾಸಪಿಕ್ಸ್‌ನಲ್ಲಿ ಆಸ್ತಿಕವಾದವನ್ನು ಪ್ರತಿಪಾದಿಸಿದನು. ಇವನು ಪ್ರಕೃತಿಯಲ್ಲಿ ದೇವರನ್ನು ನೋಡಲಾರಂಭಿಸಿ, ನಂತರ ಆಸ್ತಿಕವಾದವು ಸಮಾಜದ ಭದ್ರ ವ್ಯವಸ್ಥೆಗೆ ಅವಶ್ಯಕವೆಂದು ಅಭಿಪ್ರಾಯಪಟ್ಟನು. ಇವನು ಕ್ರೈಸ್ತ ಪಾದ್ರಿಗಳನ್ನು ಕಟುವಾಗಿ ಟೀಕಿಸಿ, ಪ್ರತಿಯೊಬ್ಬ ಗೌರವಾನ್ವಿತ ಮತ್ತು ವಿವೇಚನಶಕ್ತಿಯುಳ್ಳ ವ್ಯಕ್ತಿಯು ಕ್ರೈಸ್ತ ಧರ್ಮವನ್ನು ವಿರೋಧಿಸಬೇಕು ಎಂದು ಅಭಿಪ್ರಾಯಪಟ್ಟನು.

ಜೀನ್ ಜಾಕಸ್ ರೋಸೋ ಸಹ ವಾಲ್ಟೇರ್ ರೀತಿ ಯುರೋಪಿನ ಧಾರ್ಮಿಕ ನಂಬಿಕೆ ಮತ್ತು ಸಿದ್ಧಾಂತಗಳನ್ನು ಕಟುವಾಗಿ ಟೀಕಿಸಲಾರಂಭಿಸಿದನು. ಅವನಿಗೆ ವಿವೇಚನೆಯು ಪ್ರಮುಖ ಅಸ್ತ್ರವಾಗಿ ಕಂಡುಬಂದಿತು. ತನ್ನ ಅಸ್ತಿತ್ವ ವಾದವನ್ನು ತನ್ನ ಕಾದಂಬರಿ ಇಮೇಲ್‌ನಲ್ಲಿ ಪ್ರತಿಪಾದಿಸಿದ್ದಾನೆ. ಫ್ರಾನ್ಸಿನಾದ್ಯಂತ ಚರ್ಚನ್ನು ವಿರೋಧಿಸುವ, ಪ್ರಶ್ನಿಸುವ ಚಳವಳಿಯು ಹರಡಿತು. ಅಲ್ಲಿಂದ ಇದು ಜರ್ಮನಿ ಮತ್ತು ಇಂಗ್ಲೆಂಡ್‌ನ ಅಮೆರಿಕಾದ ಕಾಲೋನಿಗಳಿಗೂ ಹರಡಿತು. ಹದಿನೆಂಟನೆಯ ಶತಮಾನದ ಅಂತ್ಯದವರೆಗೂ ಈ ಚಳವಳಿ, ಚಿಂತನೆಗಳು ಪ್ರಬಲವಾಗಿದ್ದವು. ಆದರೆ ಕೊನೆಯಲ್ಲಿ ಸಂಘಟನೆಯ ಕೊರತೆ, ಪವಿತ್ರ ಗ್ರಂಥವಿಲ್ಲದ್ದು ಮತ್ತು ಧೀಮಂತ ಮುಖಂಡನಿಲ್ಲದ ಕಾರಣ ಇದರ ಪ್ರಾಬಲ್ಯ ಕ್ರಮೇಣ ಕಡಿಮೆಯಾಗತೊಡಗಿತು.

ಸಂಘಟಿತ ಸಂಪ್ರದಾಯ ಸಮಾಜಗಳು ಅಸ್ತಿತ್ವವಾದದ ಹೊಡೆತಕ್ಕೆ ಈಡಾದಾಗ ಸ್ವಾಭಾವಿಕವಾಗಿ ಅವು ತಮ್ಮ ಪ್ರತಿಷ್ಠೆಗೋಸ್ಕರ ಅಸ್ತಿತ್ವವಾದವನ್ನು ವಿರೋಧಿಸಲಾರಂಬಿ ಸಿದವು. ತಮ್ಮ ನಂಬಿಕೆ ಮತ್ತು ನಿಲುವುಗಳನ್ನೇ ಪ್ರತಿಪಾದಿಸಲು ಚರ್ಚು ಮತ್ತು

ಮುದ್ರಣಾಲಯವು ಹಲವಾರು ಗ್ರಂಥಗಳನ್ನು ಕ್ಯಾಥೋಲಿಕ್ ಕ್ರಿಶ್ಚಿಯನ್ ಧರ್ಮದ ಭದ್ರತೆಗೆ ಪ್ರಕಟಿಸಿ, ಅಸ್ತಿತ್ವ ವಾದವನ್ನು ಹತ್ತಿಕ್ಕಲು ಮತ್ತು ಅದಕ್ಕೆ ಸಂಬಂಧಪಟ್ಟ ಸಾಹಿತ್ಯವನ್ನು ಬಹಿಷ್ಕರಿಸಲು, ಮುದ್ರಣದ ಮೇಲೆ ರಾಜ್ಯದ ಹತೋಟಿ ಸ್ಥಾಪಿಸಲಾಯಿತು. ಹೆರಸಿಯು (ಪಾಷಂಡ ವಾದ) ಪ್ರಮುಖ ಶಕ್ತಿಯಾಗಿ ಮಾರ್ಪಾಟಾಯಿತು. ಕ್ರೈಸ್ತರು ಮತ್ತು ಆಸ್ತಿಕರ ನಡುವೆ ವೈಚಾರಿಕ ವ್ಯತ್ಯಾಸಗಳಿದ್ದರೂ ಸಹ ಅಂತ್ಯದಲ್ಲಿ ಅವರು ದೇವರು ಸೃಷ್ಟಿ ಮತ್ತು ಅವನ ಅಸ್ತಿತ್ವವನ್ನು ಒಪ್ಪಿಕೊಳ್ಳಲಾರಂಭಿಸಿದರು.

**ನಾಸ್ತಿಕವಾದ**

ಇದೇ ಅವಧಿಯಲ್ಲಿ ನಾಸ್ತಿಕವಾದವು ಆಸ್ತಿಕ ವಾದಕ್ಕೆ ಬಲವಾದ ಪೆಟ್ಟು ಕೊಡಲಾರಂಭಿ ಸಿತು. ನಾಸ್ತಿಕವಾದವು ಭೌತಿಕವಾದದ ತಳಹದಿಯ ಮೇಲೆ ಆಧಾರಿತವಾದದ್ದು. ಇದರ ಪ್ರವರ್ತಕ ಎಪಿಕುರಸ್. ಹದಿನೇಳನೆಯ ಶತಮಾನದಲ್ಲಿ ಪಿಯರ್ಸ್‌ಗಸ್ಸೆಂದಿಯು ಇದನ್ನು ಮುಂದುವರಿಸಿದನು. ಡೆಕಾರ್ಟೆಯು ತನ್ನ ವಾದದಲ್ಲಿ ವಿಶ್ವವು ಆತ್ಮ, ಪ್ರಾಣ ಮತ್ತು ವಸ್ತುವಿನಿಂದ ಕೂಡಿದ್ದಾಗಿದೆ ಎಂದು ತಿಳಿಸಿದನು. ಹದಿನೆಂಟನೆಯ ಶತಮಾನದಲ್ಲಿ ವಿಜ್ಞಾನದ ಬೆಳವಣಿಗೆಯೊಂದಿಗೆ ಗಸ್ಸೆಂದಿಯ ವಾದವು ಮರು ಪ್ರಚಾರಗೊಂಡಿತು. ಇಂಗ್ಲೆಂಡಿನಲ್ಲಿ ಡೇವಿಡ್ ಹಾರ್ಟಲಿ ಜಾನ್‌ಲಾಕನ್ ವಾದವನ್ನು ಪುನಃ ಬರೆದು ಅದರಲ್ಲಿ ಮಾನವಿಕ ಜೀವನವನ್ನು ಭೌತಶಾಸ್ತ್ರದ ವಿಧಾನದಲ್ಲಿ ವಿವರಿಸಿದನು. ಫ್ರಾನ್ಸಿನಲ್ಲಿ ಲಾ ಮೆಟ್ರಿಯು ಮಾನವನನ್ನು ಸಹ ಇತರ ವಸ್ತುಗಳ ರೀತಿ ಚಲನ ಸಿದ್ಧಾಂತಕ್ಕೊಳಪಡಿಸ ಬಹುದೆಂದು ಅಭಿಪ್ರಾಯಪಟ್ಟನು. ನಾಸ್ತಿಕದಲ್ಲಿ ಬಹಳ ಪ್ರಬಲವಾದವೆಂದರೆ ಜರ್ಮನಿಯ ಬಾರನ್ ಡಿ ಹೊಲಿ ಬಾಚ್. ಇವನ ಪ್ರಕಾರ ಧರ್ಮವು ಮಾನವನನ್ನು ಅಧಃಪತನ ಗೊಳಿಸುವುದರಲ್ಲಿ ಪ್ರಮುಖವಾದದ್ದು.

**ಸಂದೇಹವಾದ**

ನಾಸ್ತಿಕವಾದದ ಜೊತೆಗೆ ಸಂದೇಹ ವಾದವು ಸಹ ಅಸ್ತಿತ್ವವಾದ ಮತ್ತು ಕ್ರೈಸ್ತ ಧರ್ಮಕ್ಕೆ ಬಲವಾದ ಪೆಟ್ಟು ಕೊಡಲಾರಂಭಿಸಿತು. ಇದು ಸಹ ಪ್ರಾಚೀನ ಕಾಲದಿಂದ ಮುಂದುವರಿದು ಬಂದ ತತ್ವವಾಗಿತ್ತು. ಪಿಯರಿ ಬೇಲೆಯ ಡಿಕ್ಸನ್ಯರಿ ಈ ನಿಟ್ಟಿನಲ್ಲಿ ಅಮೋಘ ಜಯಗಳಿಸಿತು. ಇದರಲ್ಲಿ ಮುಖ್ಯವಾಗಿ ಧರ್ಮದ ಪಾಪಗಳನ್ನು ಎತ್ತಿ ಹಿಡಿಯಲಾಗಿತ್ತು. ಇದರಿಂದ ೨ನೆಯ ಫ್ರೆಡರಿಕ್, ಅಮೆರಿಕಾದ ಬೆಂಜಮಿನ್ ಫ್ರಾಂಕ್ಲಿನ್ ಮತ್ತು ಥಾಮಸ್ ಜೆಫರ್‌ಸನ್ ಹೆಚ್ಚು ಪ್ರಭಾವಿತಗೊಂಡರು. ವಾಲ್ಟೇರ್ ಸಹ ಇದರಿಂದ ಪ್ರಭಾವಿತಗೊಂಡು ತನ್ನ ಡಿಕ್ಸನರಿ ಫಿಲಾಸಫಿ ಪುಸ್ತಕವನ್ನು ಬರೆದನು. ಡೈಡರಾಟ್ ಮತ್ತು ಡೇವಿಡ್‌ಹ್ಯೂಮ್ ಸಹ ಬೇಲೇಯಿಂದ ಹೆಚ್ಚು ಪ್ರಭಾವಿತಗೊಂಡರು. ಹ್ಯೂಮ್ ತನ್ನ ಪುಸ್ತಕ ಡೈಯಲಾಗ್ಸ್ ಕನ್ಸ್‌ನಿರಂಗ್ ನ್ಯಾಚುರಲ್ ರಿಲಿಜಯನ್‌ನಲ್ಲಿ, ಮಾನವನ, ವ್ಯವಹಾರಗಳಿಂದ ಎಲ್ಲಾ ನಿಶ್ಚಯಗಳನ್ನು ಕಂಡು ಹಿಡಿದನು. ಕಾರ್ಯಕಾರಣ ಸಂಬಂಧದ ತಪ್ಪುಗಳು ಮತ್ತು ಮಾನವನ ವೈಚಾರಿಕತೆಗಳು ಕ್ರಮೇಣವಾಗಿ ಧಿಕ್ಕರಿಸಲ್ಪಟ್ಟವು. ನಂಬಿಕೆಯ ತತ್ವವು ಸಹ ತಿರಸ್ಕರಿಸಲ್ಪಟ್ಟಿತು. ಹ್ಯೂಮನ ಪ್ರಕಾರ ಆದಿಮಾನವನು ಭಯದಿಂದಾಗಿ ತನ್ನ ರಕ್ಷಣೆಗೋಸ್ಕರ ಹಲವಾರು ದೇವರುಗಳನ್ನು ಸೃಷ್ಟಿಸಿಕೊಂಡನು. ತದನಂತರ ಇದು ಏಕದೇವವಾದ ರೂಪ ತಾಳಿತು. ಇದರ ಪರಿಣಾಮವೆಂದರೆ, ದೇವರು ಸೃಷ್ಟಿಯ ಪ್ರಕಾರ ತನ್ನ ಎಲ್ಲಾ ಗುಣಗಳನ್ನು ಮಾನವನಿಗೆ ಬಳುವಳಿಯಾಗಿ ನೀಡಿದುದು. ಆದರೆ ನೈಜವಾಗಿ ಮಾನವ ತನ್ನ ಎಲ್ಲಾ ಗುಣಗಳನ್ನು, ರೂಪವನ್ನು ದೇವರಿಗೆ ಸೇರಿಸಿದ. ಸಂದೇಹವಾದವು ಸಹ ಏನನ್ನು ನಿಖರವಾಗಿ ತಿಳಿಸದೆ ಅಸ್ಪಷ್ಟತೆಯಿಂದ ಕೂಡಿತ್ತು.

ಸಂಪ್ರದಾಯ ಕ್ರಿಶ್ಚಿಯನ್ನರ ದೃಷ್ಟಿಯಲ್ಲಿ ಹದಿನೆಂಟನೆಯ ಶತಮಾನದ ಬೆಳವಣಿಗೆಗಳು ದುಷ್ಟಶಕ್ತಿಗಳಿಂದ ಪ್ರೇರೇಪಿಸಲ್ಪಟ್ಟವು. ಫ್ರಾನ್ಸಿನ ಜೇನ್ಸನಿಸ್ಟ್ ಬ್ಲೇಸ್ ಫಾಸ್ಕಲ್ ಪ್ರಕಾರ ಮಾನವನ ವೈಚಾರಿಕತೆಗೆ ಅಂತಿಮ ತತ್ವ ಜ್ಞಾನವನ್ನು ತಿಳಿಯುವ ಶಕ್ತಿಯಿಲ್ಲ. ಇದಕ್ಕೆ ನೈತಿಕ ಶಕ್ತಿ ಇರಬೇಕು. ನೈತಿಕ ಶಕ್ತಿಯಿಂದ ಮಾತ್ರ ದೈವ ಮತ್ತು ದೃಷ್ಟಿಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯ. ವಿಶ್ವವು ತುಂಬಾ ವಿಶಾಲವಾದುದು, ಆದರೆ ಮಾನವ ನಿಕೃಷ್ಟ. ಮಾನವನ ಆತ್ಮಗಳು ದೇವರ ಮೇಲೆ ಅವಲಂಬಿಸಿವೆಯೆಂದು ತಿಳಿಸಿದನು. ಪಾಸ್ಕಲ್ ನಂತರ ಜಾನ್‌ವೆಸ್ಲಿಯು ಕ್ರೈಸ್ತ ಧರ್ಮವನ್ನು ಕಾಪಾಡಿದವರಲ್ಲಿ ಪ್ರಮುಖನಾದವನು. ಇವನ ಪ್ರಕಾರ ಮಾನವನ ವೈಚಾರಿಕತೆಯಿಂದ ದೇವರ ಪ್ರೀತಿಯನ್ನು ಸೃಷ್ಟಿಸುವುದು ಅಥವಾ ಸಂಪಾದಿಸುವುದು ಸಾಧ್ಯವಿಲ್ಲ. ಕ್ರೈಸ್ತನಲ್ಲಿ ನಂಬಿಕೆಯಿರುವವರನ್ನು ಅವನಿಂದ

ಬೇರ್ಪಡಿಸುವುದು ಸಾಧ್ಯವಿಲ್ಲವೆಂದು ಸಾರಿದನು. ಈ ರೀತಿಯಲ್ಲಿ ಹದಿನೆಂಟನೆಯ ಶತಮಾನದ ಅಂತ್ಯದ ಹೊತ್ತಿಗೆ ಕ್ರೈಸ್ತ ಧರ್ಮವನ್ನು ವೈಜ್ಞಾನಿಕ ವಿಧಿವಿಧಾನಗಳಿಂದ ಮತ್ತು ವೈಚಾರಿಕತೆಗಳಿಂದ ಅರ್ಥೈಸುವ ಅಥವಾ ತಿಳಿಯುವ ರೀತಿಯನ್ನು ತಳ್ಳಿಹಾಕಲಾಯಿತು.

ಇದೇ ಸಮಯದಲ್ಲಿ ಮಾನವನ ಸ್ವಭಾವವನ್ನು ಹೊಸ ವಿಚಾರಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವ ಪ್ರಯತ್ನವು ಕ್ಲಿಷ್ಟ ಸಮಸ್ಯೆಗಳನ್ನು ಉಂಟುಮಾಡಿತು. ಸಂಪ್ರದಾಯ ಕ್ರೈಸ್ತ ಧರ್ಮದ ಪ್ರಕಾರ ಮಾನವ ಹುಟ್ಟಿನಿಂದಲೇ ಪಾಪಗಳನ್ನು ಪಡೆದಿರುತ್ತಾನೆ. ಆದ್ದರಿಂದ ಮಾನವ ತನ್ನ ಪಾಪಗಳನ್ನು ಕಡಿಮೆ ಮಾಡಿಕೊಳ್ಳಲು ಮತ್ತು ಪುಣ್ಯವನ್ನು ಪಡೆಯಲು ಕ್ರೈಸ್ತ ಧರ್ಮದಲ್ಲಿ ನಂಬಿಕೆಯಿಡಬೇಕು. ಆದರೆ ಪುನರುಜ್ಜೀವನ ನಂತರ ಈ ನಂಬಿಕೆ ಭಾವನೆಯು ತಿರಸ್ಕರಿಸಲ್ಪಟ್ಟು, ದೇವರು ತನ್ನ ಎಲ್ಲಾ ಒಳ್ಳೆಯ ಗುಣಗಳನ್ನು ಮಾನವನಿಗೆ ಹುಟ್ಟಿನಿಂದಲೇ ನೀಡಿದ್ದಾನೆ, ಹಾಗಾಗಿ ಮಾನವ ಹುಟ್ಟಿನಿಂದ ಪಾಪಿಯಲ್ಲ; ದೇವರ ಸೃಷ್ಟಿಯಲ್ಲಿ ಹುಟ್ಟಿನಿಂದ ಎಲ್ಲರೂ ಸಮಾನರೂ. ಆದರೆ ಅವನು ಬೆಳೆದ ಪರಿಸರ ದಿಂದಾಗಿ ಅವನು ಕೆಟ್ಟವನಾಗಬಹುದು ಅಥವಾ ಒಳ್ಳೆಯವನಾಗಬಹುದು. ಇದರಲ್ಲಿ ದೇವರ ಅಥವಾ ಪಾದ್ರಿಯ ಕೈವಾಡ ಅಥವಾ ಮಧ್ಯಸ್ಥಿಕೆಯ ಅವಶ್ಯಕತೆಯಿಲ್ಲದಂತಾಯಿತು.

ಜಾನ್‌ಲಾಕ್ ತನ್ನ ತತ್ವಶಾಸ್ತ್ರದ ಪ್ರಮಾಣ ಪ್ರಮೇಯ ವಿಚಾರದಲ್ಲಿ ಮಾನವನ ಜ್ಞಾನದ ವ್ಯಾಪ್ತಿ ಮತ್ತು ಪರಿಮಿತಿಯನ್ನು ಮನಸ್ಸಿನ ಕಾರ್ಯಾಚಾರಣೆಯ ಮುಖಾಂತರ ತಿಳಿಯಲು ಪ್ರಯತ್ನಿಸಿದನು. ಇದರ ಪರಿಣಾಮವಾಗಿ ಇವನು ಅಂತ್ಯದಲ್ಲಿ ಮಾನವನ ಜ್ಞಾನಕ್ಕೆ ಕಡಿಮೆ ಮಿತಿಯಿದೆ ಎಂದು ತಿಳಿಸಿದನು. ಹದಿನೆಂಟನೆಯ ಶತಮಾನದ ಅತ್ಯಂತ ಶ್ರೇಷ್ಟ ಶಿಕ್ಷಕನಾದ ಲಾಕ್ ಪ್ರಕಾರ ಎಲ್ಲಾ ಜ್ಞಾನವು ಅನುಭವದಿಂದ ಉತ್ಪತ್ತಿಯಾದದ್ದು. ಹುಟ್ಟಿನಿಂದ ಯಾವ ವೈಚಾರಿಕತೆ, ವಿಚಾರಗಳು ಯಾರಿಗೂ ಬರುವುದಿಲ್ಲ. ಪ್ರತಿಯೊಂದು ಶಿಶುವು ಹುಟ್ಟುವಾಗ ಖಾಲಿ ಕಾಗದದ ಹಾಳೆಯಿದ್ದಂತೆ. ಅದರ ಮೇಲೆ ಹೊರಗಿನ ಶಕ್ತಿಗಳು, ಪರಿಸರ ವಿವಿಧ ರೀತಿಯ ಬರವಣಿಗೆಯನ್ನು ಮೂಡಿಸುತ್ತವೆ. ಆದರೆ ಲಾಕ್‌ನ ಅಭಿಪ್ರಾಯಗಳು ಬಿಷಪ್ ಬಿರ್ಕಲಿಯಿಂದ ಟೀಕೆಗೊಳಪಟ್ಟವು.

ಲಾಕ್‌ನ ಮಾನವ ತಪಾಸಣೆಯು ಅಂತರ ವಿಚಾರಗಳನ್ನು ಮತ್ತು ಅಂತರ ಜ್ಞಾನಗಳನ್ನು ಧೂಳಿಪಟ ಮಾಡಿತು. ಲಾಕ್ ಪ್ರಕಾರ ಪರಿಸರವು ಮಾನವನ ವೈಚಾರಿಕತೆಯನ್ನು ಸೃಷ್ಟಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಆದ್ದರಿಂದ ಮಾನವನನ್ನು ಪ್ರಗತಿ ಪಥದಲ್ಲಿ ನಡೆಸಬೇಕೆಂದರೆ ಪರಿಸರವನ್ನು ಹಸನಾಗಿಡುವುದು ಮತ್ತು ಉದ್ಧಾರ ಮಾಡುವುದು. ಈ ರೀತಿಯಲ್ಲಿ ಜಾನ್ ಲಾಕ್‌ನು ತನ್ನ ಹೊಸ ವೈಚಾರಿಕತೆಯಿಂದ ಮಾನವನ ಅಧ್ಯಯನಕ್ಕೆ ಹೊಸ ತಿರುವು ನೀಡಿದನು.

ಜಾನ್‌ಲಾಕ್‌ನು ಮೂಲತಃ ತತ್ವಶಾಸ್ತ್ರದ ಪ್ರಮಾಣೀಕರಣಕ್ಕೆ ಹೆಚ್ಚು ಒತ್ತು ಕೊಟ್ಟು, ಅಬೌದ್ಧಿಕ ವಿಷಯಗಳಿಗೆ ಅಷ್ಟೊಂದು ಪ್ರಾಶಸ್ತ್ಯ ನೀಡಲಿಲ್ಲ. ಅಂದಿನ ಮುಖ್ಯ ವಿಷಯಗಳೆಂದರೆ ಮಾನವನ ಮನಸ್ಸು ಮತ್ತು ಭಾವನೆಗಳನ್ನು ಅಧ್ಯಯನ ಮಾಡುವುದು ಆಗಿತ್ತು. ವಿಚಾರವಾದದಿಂದಾಗಿ ಮಾನವನ ಒಳ್ಳೆಯ ಗುಣಗಳೆಂಬ ವಾದವು ನಂಬಲಾಗ ದಂತಾಯಿತು. ಡೇವಿಡ್ ಹ್ಯೂಮ್ ಸಂದೇಹವಾದದಿಂದ ಪರಿವರ್ತನೆಗೊಂಡು ಮಾನವೀಯತೆಗೆ ಹೆಚ್ಚು ಆಸಕ್ತಿ ಬೆಳೆಸಿಕೊಂಡನು. ಇವನ ಗೆಳೆಯ ಪ್ರಸಿದ್ಧ ಅರ್ಥಶಾಸ್ತ್ರಜ್ಞ ನಾದ ಆ್ಯಡಂ ಸ್ಮಿತನು ಕರುಣೆಯೆ ಮಾನವನ ಜೀವನದ ದಾರಿದೀಪವೆಂದು ಅರಿತುಕೊಂಡನು. ವಾಲ್ಟೇರ್ ಕೂಡ ಮಾನವನಲ್ಲಿ ಸ್ವಾಭಾವಿಕ ಒಳ್ಳೆಯ ಗುಣಗಳನ್ನು ಕಂಡನು. ತೀವ್ರಗಾಮಿ ಯಾದ ಮಾರೆಲ್ಲಿಯು ಸಹ ಒಳ್ಳೆಯತನವು ಎಲ್ಲಾ ವೈಚಾರಿಕತೆಯಿಂದ ಶ್ರೇಷ್ಠವಾದದ್ದೆಂದು ಅಭಿಪ್ರಾಯಪಟ್ಟನು. ಸಾಪ್ಟಸ್ಬರಿಯು ವೈಚಾರಿಕತೆ ಮತ್ತು ನೈತಿಕತೆ ಒಂದಕ್ಕೊಂದು ವಿರೋಧವಾದರೂ ಅವೆರಡೂ ಪ್ರಕೃತಿಯ ಕೊಡುಗೆಗಳಾಗಿವೆ ಎಂದು ತಿಳಿಸಿದನು. ಬಟ್ಲರ್ ಪರಿಜ್ಞಾನಕ್ಕೆ ತನ್ನದೇ ಆದ ವೈಚಾರಿಕ ಶಕ್ತಿಯಿದೆ ಎಂದು ತಿಳಿಸಿದ್ದನು. ಆದರೆ ಹದಿನೆಂಟನೆಯ ಶತಮಾನದ ಎರಡನೇ ಭಾಗದಲ್ಲಿ ಈ ಅಭಿಪ್ರಾಯಗಳು ತಿರಸ್ಕರಿಸಲ್ಪಡ ತೊಡಗಿದವು. ಆ್ಯಡಂ ಸ್ಮಿತ್‌ನು ಕರುಣೆ ಮತ್ತು ವೈಚಾರಿಕತೆ ನೈತಿಕತೆಯನ್ನು ರೂಪಿಸಬಲ್ಲವು ಎಂಬುದನ್ನು ಹೇಳಲಾರದಾದನು. ಹ್ಯೂಮ್ ಪ್ರಕಾರ ವೈಚಾರಿಕತೆಯು ಮನೋವಿಕಾರದ ಸೇವಕನಾಗಿರಬೇಕು. ವೈಚಾರಿಕತೆಗೆ ಯಾವುದೇ ರೀತಿಯ ಪ್ರಾಶಸ್ತ್ಯ ಸಿಗಬಾರದು. ರೊಸೋನ ಹಲವಾರು ಬರವಣಿಗೆಗಳು ಸಹ ವೈಚಾರಿಕತೆ ಮತ್ತು ಮನೋವಿಕಾರದ ನಡುವೆ ಮುಕ್ತ ಕಲಹವನ್ನು ಒಳಗೊಂಡಿದ್ದವು.

ಇದೇ ಸಮಯದಲ್ಲಿ ನೈತಿಕತೆಯ ಮೇಲಿನ ಚರ್ಚೆಯು ಒಂದು ಪ್ರಮುಖ ಸ್ವಾರಸ್ಯ ದೆಡೆಗೆ ಗಮನಹರಿಸಿತು. ಸಾಂಪ್ರದಾಯಿಕ ಕ್ರೈಸ್ತಧರ್ಮವು ಯಾವಾಗಲೂ ನರಕದ ಯಾತನೆಯನ್ನು ಮತ್ತು ಸ್ವರ್ಗದ ಸಂತೋಷವನ್ನು ಒತ್ತಿ ಹೇಳುತ್ತಿತ್ತು. ಜೀವನದ ಪ್ರಮುಖ ಗುರಿ ಸುಖಪಡುವುದು ಮತ್ತು ಯಾತನೆಗಳನ್ನು ದೂರವಿಡುವುದಾಗಿತ್ತು. ಜಾನ್ ಲಾಕ್ ಪ್ರಕಾರ ಸುಖದುಃಖಗಳು ಒಳ್ಳೆಯತನ ಮತ್ತು ಕೆಟ್ಟತನಗಳನ್ನು ಪ್ರೇರೇಪಿಸುತ್ತವೆ. ಈ ನಡವಳಿಕೆಗಳ ಮೇಲೆ ನಮ್ಮ ಭಾವೋದ್ರೇಕಗಳು ರೂಪುಗೊಳ್ಳುತ್ತವೆ. ಡೈಡರಾಟ್ ಮನೋವಿಕಾರಗಳನ್ನು ಹೊಗಳಿ ವೈಚಾರಿಕತೆಯನ್ನು ಅಲ್ಲಗಳೆದನು.

ಇದರಿಂದಾಗಿ ಕೆಲವರು ಸುಖವನ್ನು ಅನುಭವಿಸುವುದು ಒಂದು ರೀತಿಯಲ್ಲಿ ನೈತಿಕ ಧರ್ಮವೆಂದು ಭಾವಿಸಲಾರಂಭಿಸಿದರು. ಮಾನವನ ನಡವಳಿಕೆಗಳು ಮತ್ತು ನಿರ್ಧಾರಗಳು ಭೌತಿಕ ಚಲನೆಯ ಪರಿಣಾಮಗಳು. ಆದ್ದರಿಂದ ಮಾನವನ ಜೀವನದ ಮೇಲೆ ಯಾವುದೇ ರೀತಿಯ ನೈತಿಕತೆಯ ಹತೋಟಿಯಿರಬಾರದೆಂದು ಪರಿಗಣಿಸಲಾಯಿತು. ಆದರೆ ವೈಯಕ್ತಿಕ ದುರ್ನಡತೆಯ ಮೇಲೆ ಒಂದು ರೀತಿಯ ಕಡಿವಾಣ ಹಾಕಲಾಯಿತು. ಬೇರೆಯವರ ಜೊತೆ ವಾಸಿಸುವುದರಿಂದ ಪರಸ್ಪರ ಹೊಂದಾಣಿಕೆಯು ಬೆಳೆಯುತ್ತದೆ. ಹಾಗಾಗಿ ವೈಯಕ್ತಿಕ ಆಸಕ್ತಿ ಮತ್ತು ಸಾಮಾನ್ಯ ಒಳಿತಿನ ನಡುವೆ ಹೊಂದಾಣಿಕೆಯುಂಟಾಗುತ್ತದೆ. ಮಾಂಟೆಸ್ಕ್ಯೂ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯು ಸಾಮಾನ್ಯ ಒಳಿತಿನಲ್ಲಿ ವೈಯಕ್ತಿಕ ಲಾಭ ಪಡೆಯಲು ಪ್ರಯತ್ನಿಸು ತ್ತಾನೆ. ೧೭೩೦ರ ದಶಕದಲ್ಲಿ ವಿಚಾರವಾದಿಗಳು ಒಂದು ಪ್ರಸಿದ್ಧ ಹೇಳಿಕೆ ಹೊರಡಿಸಿದರು. ಅದೇನೆಂದರೆ ಅತಿ ಹೆಚ್ಚು ಜನರಿಗೆ ಅತಿ ಹೆಚ್ಚು ಸುಖ, ಲಾಭ ದೊರೆಕಿಸುವುದು. ಕ್ಲಾಡ್ ಎಡ್ರಿಯನ್ ಹೆಲ್ವಿಟಾಸ್ ತನ್ನ ಪುಸ್ತಕ ಡಿಲಸ್ಸಿರಿಟ್‌ನಲ್ಲಿ ಸ್ವಾರ್ಥಭಾವನೆಗಳಿಂದ ಕೂಡಿದ ವ್ಯಕ್ತಿಯನ್ನು ಹೇಗೆ ಸಮಾಜ ಜೀವಿ ಮಾಡುವುದು ಎಂಬುದನ್ನು ಚರ್ಚಿಸಿದ್ದಾನೆ. ಹಾಗೆಯೇ ಒಳ್ಳೆಯ ಕಾನೂನುಗಳಿಂದ ಮಾತ್ರ ಗುಣವಂತ ವ್ಯಕ್ತಿಗಳನ್ನು ರೂಪಿಸಬಹುದು. ಶಾಸಕರ ಮುಖ್ಯ ಕೆಲಸವೆಂದರೆ ವ್ಯಕ್ತಿಗಳನ್ನು ದಯಾಪರರು ಹಾಗೂ ಪರೋಪಕಾರಿ ಮತ್ತು ನ್ಯಾಯವಂತರಾಗಿ ಇತರರಿಗೆ ಇರುವುದು. ಇಂತಹ ವಿಚಾರಗಳಿಂದ ಸ್ಫೂರ್ತಿ ಪಡೆದ ಜೆರಿಮಿ ಬೆಂಥಾಮ್ ತನ್ನ ಸಿದ್ಧಾಂತವಾದ ಮುಕ್ತ ಮಾರುಕಟ್ಟೆ ರಚಿಸಿದನು.

**ಮಾನವತಾವಾದ**

ದೈವಾಸಕ್ತರ ಪ್ರಕೃತಿ ಧರ್ಮದ ಹುಡುಕುವಿಕೆಯಿಂದ, ಇಡೀ ಜಗತ್ತಿನ ಮಾನವ ಸ್ವಭಾವವನ್ನು ಅರಿಯಲು ನೆರವಾಯಿತು. ಈ ಅಧ್ಯಯನ ಯಾವುದೇ ದೇಶ, ಭಾಷೆಗಳಿಗೆ ಮಿಸಲಿರದೆ ಇಡೀ ಮನುಕುಲವನ್ನು ಒಳಗೊಂಡಿತ್ತು. ಡೇವಿಡ್ ಹ್ಯೂಮ್ ಪ್ರಕಾರ ಮಾನವನ ಕ್ರಿಯೆಗಳು, ಭಾವನೆಗಳು, ಸ್ವಭಾವಗಳು ಎಲ್ಲಾ ಕಾಲಕ್ಕೂ ಎಲ್ಲಾ ದೇಶಗಳಲ್ಲಿಯೂ ಒಂದೇ ರೀತಿ ಆಗಿರುತ್ತದೆ. ಇತಿಹಾಸದ ಅಧ್ಯಯನದಿಂದ ಈ ಸತ್ಯವನ್ನು ಅರಿಯಬಹುದು. ಇದರಿಂದಾಗಿ ಮಾನವನ ನಿರಂತರ ಮತ್ತು ಸರ್ವಕಾಲಿಕ ನಿಯಮಗಳನ್ನು ಅರಿಯುವಂತಾಯಿತು. ಎಲ್ಲಾ ಜನರ ಒಟ್ಟು ಅನುಭವಗಳು ಮತ್ತು ಪ್ರಕ್ರಿಯೆಗಳು ಮಾನವೀಯತೆಯನ್ನು ಉಂಟುಮಾಡಿತು. ಇದರ ಪರಿಣಾಮವಾಗಿ ವೈಚಾರಿಕೆ ಯನ್ನು ಒಪ್ಪಬಹುದಾಗಿತ್ತು. ಪ್ರಕೃತಿ ನಿಯಮದ ತತ್ವಗಳನ್ನು ಸಾಮಾಜಿಕ ಸಮಸ್ಯೆಗಳಿಗೆ ಅನ್ವಯಿಸತೊಡಗಿದಾಗ ಮಹತ್ವಪೂರ್ಣ ಬದಲಾವಣೆಯನ್ನುಂಟು ಮಾಡಲು ಪ್ರಾರಂಭ ವಾಯಿತು. ಅಂದಿನಿಂದ ಇದು ಹಿಂದಿನದಕ್ಕೆ ಹೆಚ್ಚು ಒತ್ತುಕೊಡದೆ ಮುಂದಿನದು ಹೇಗಿರಬೇಕು ಎಂಬುದನ್ನು ತಿಳಿಸಲಾರಂಭಿಸಿತು. ಹೀಗಾಗಿ ಜ್ಞಾನೋದಯವು ಕಠಿಣವೂ, ಸುಧಾರಣೆಯಾಗಿಯೂ ಮತ್ತು ಕ್ರಾಂತಿಕಾರಿಯಾಗಿಯೂ ಮಾರ್ಪಾಟಾಯಿತು.

ಜಾನ್‌ಲಾಕ್‌ನ ವಿಚಾರವಾದ ಪರಿಸರವು ಮಾನವನನ್ನು ರೂಪಿಸಿದ್ದು ಎಂಬುದು ಪ್ರಬಲವಾದ ಸ್ಫೂರ್ತಿಯನ್ನು ನೀಡಿ ಪ್ರಚಲಿತದಲ್ಲಿದ್ದ ದೋಷಗಳನ್ನು ನಿರ್ಮೂಲನ ಮಾಡಲು ಅನುವು ಮಾಡಿಕೊಟ್ಟಿತು. ಹಿಂದಿನ ಚಿಂತನೆಗಳು, ಭಾವನೆಗಳು, ತತ್ವಗಳು ಮಾನವನ ಸುಖದುಃಖಗಳಿಗೆ ಅಸಂಬಂಧಗಳಾಗಿ ಕಂಡುಬಂದವು. ಮೇಲಾಗಿ ವೈಯಕ್ತಿಕ ಸ್ವಾತಂತ್ರ್ಯವು ಹೆಚ್ಚು ಉಪಯೋಗಕಾರಿಯಾಗಿ ಕಂಡುಬಂದಿತು. ಇದರಿಂದ ಅಮಾನವೀ ಯತೆಯು ತೀಕ್ಷ್ಣವಾದ ಟೀಕೆಗೊಳಪಟ್ಟಿತು. ಯುರೋಪಿನ ಬಡಜನತೆಯು ಈ ಚಿಂತನೆ ಗಳಿಗೆ ಹೆಚ್ಚು ಆಕರ್ಷಿಸಲ್ಪಟ್ಟಿತು. ದೈವಾಸಕ್ತರು ಮತ್ತು ನಾಸ್ತಿಕರು ಇಬ್ಬರೂ ಸಹ ಗುಲಾಮಗಿರಿಯನ್ನು ಖಂಡಿಸಿ, ಅದರ ನಿರ್ಮೂಲನೆಗಾಗಿ ಶ್ರಮಿಸತೊಡಗಿದರು. ಧಾರ್ಮಿಕ ತೀವ್ರಗಾಮಿಗಳು ಮತ್ತು ಸಂಪ್ರದಾಯ ಕ್ರಿಶ್ಚಿಯನರು ಸಹ ವಿಶ್ವ ಭ್ರಾತೃತ್ವಕ್ಕೆ ಹೆಚ್ಚು ಒಟ್ಟು ಕೊಡಲಾರಂಭಿಸಿದರು. ಇದಕ್ಕೆ ತೊಡಕಾಗಿದ್ದುದು ನಿರಂಕುಶ ಪ್ರಭುತ್ವ ಅಥವಾ ರಾಜ್ಯ. ಇದು ಯಾವಾಗಲೂ ಜನತೆಯ ವಿಧೇಯತೆ

ಮತ್ತು ಅದರ ರಕ್ತ, ಶ್ರಮವನ್ನೇ ಬಯಸುತ್ತಿತ್ತು. ರಾಷ್ಟ್ರೀಯತೆಯ ಭಾವನೆಯು ಎಲ್ಲಾ ವರ್ಗದ ಜನತೆಯನ್ನು ಒಂದಾಗಿಸಲು ಮತ್ತು ಅದರಿಂದ ಶಾಂತಿ ಮತ್ತು ಸಹಬಾಳ್ವೆ ನಡೆಸಲು ಕರೆ ನೀಡಲಾರಂಭಿಸಿತು. ಅಬ್ಬ್ ಡಿ ಸೈಂಟ್ ಪಿಯರ್ಸ್ ೧೭೧೩ರಲ್ಲಿ ಯುರೋಪಿನಾದ್ಯಂತ ಶಾಂತಿ ಸುವ್ಯವಸ್ಥೆಯನ್ನು ಯುದ್ಧ ನಿರ್ಮೂಲನ ಮಾಡುವುದರಿಂದಾಗಿ ಸ್ಥಾಪಿಸಲು ಶ್ರಮಿಸಿದನು.

**ರಾಜಕೀಯ ಚಿಂತನೆಗಳು**

ಧರ್ಮ ಸುಧಾರಣಾ ಚಳವಳಿಯು ಆರಂಭಿಕ ಸಮಾಜವಾದದಿಂದ ಹಿಡಿದು ನಿರಂಕುಶ ರಾಜಪ್ರಭುತ್ವದವರೆಗೂ ಹಲವಾರು ಸಿದ್ಧಾಂತಗಳನ್ನು ನೀಡಿತು. ಬ್ರಿಟಿಷ್ ಬಿಷೆಪ್‌ರವರು ಮತ್ತು ೧೪ನೆಯ ಲೂಯಿ ನಡುವೆ ಇದ್ದ ವಿಶೇಷ ಸಂಬಂಧವನ್ನು ಒತ್ತಿ ಹೇಳಿದನು. ಆದರೆ ಪ್ರಕೃತಿ ನಿಯಮವು ರಾಜ್ಯದ ಸ್ವರೂಪ, ಸಾಮಾಜಿಕ ಒಪ್ಪಂದ ಮತ್ತು ಸ್ವಾಭಾವಿಕ ಹಕ್ಕುಗಳನ್ನು ಹೆಚ್ಚಾಗಿ ಮರುಕಳಿಸುತ್ತಿದ್ದವು. ಈ ಸಿದ್ಧಾಂತಗಳು ತೀವ್ರಗಾಮಿತ್ವದ ಕಡೆ ಹೆಚ್ಚು ಒತ್ತು ಕೊಡಲಾರಂಭಿಸಿದವು. ಥಾಮಸ್ ಹಾಬ್ಸ್ ಪ್ರಕೃತಿಯ ಕಾನೂನಿನಿಂದ ಪ್ರಾರಂಭಿಸಿ ಲೌಕಿಕ ಸರ್ವಾಧಿಕಾರ ಸ್ಥಾಪಿಸುವ ಕಡೆಗೆ ಪ್ರಯತ್ನಿಸಿದನು. ಇವನ ಪ್ರಕಾರ ಮಾನವ ತನ್ನ ಜೀವಿತದಲ್ಲಿ ಕಷ್ಟಗಳನ್ನು ಕಡಿಮೆ ಮಾಡಿಕೊಂಡು ಹೆಚ್ಚು ಸುಖ ಅನುಭವಿಸುವುದಾಗಿತ್ತು. ವ್ಯಕ್ತಿಯು ಸುಖವಾಗಿರಲು ತನ್ನ ಎಲ್ಲಾ ಸ್ವಾತಂತ್ರ್ಯಗಳನ್ನು ಓರ್ವ ಸರ್ವಾಧಿಕಾರಿಗೆ ಒಪ್ಪಿಸಬೇಕಾಯಿತು. ಇದರಿಂದಾಗಿ ಸರ್ವಾಧಿಕಾರಿಯು ಹೆಚ್ಚು ಪ್ರಬಲನೂ ಹಾಗೂ ಮಿತಿಯಲ್ಲದ ಅಧಿಕಾರ ಹೊಂದಿ ರಾಜ್ಯಕ್ಕೆ ಮತ್ತು ಜನತೆಗೆ ಶಾಂತಿ, ನೆಮ್ಮದಿ ಮತ್ತು ಪ್ರಗತಿಯೆಡೆಗೆ ಶ್ರಮಿಸುತ್ತಾನೆ.

ಅರ್ಧ ಶತಮಾನದ ನಂತರ ಜಾನ್‌ಲಾಕ್ ಹಾಬ್ಸನ ಪ್ರಬಲ ವೈಯಕ್ತಿಕತೆಯನ್ನು ಮತ್ತು ಅವನ ರಾಜ್ಯದ ಸ್ವರೂಪ, ಭಾವನೆಯನ್ನು ಕೇವಲ ಅನುಕೂಲಕ್ಕಾಗಿಯೇ ಹೊರತು ಅದು ದೈವಾಂಶ ಸಂಸ್ಥೆಯಲ್ಲವೆಂದು ಒಪ್ಪಿಕೊಂಡನು. ತನ್ನ ಪುಸ್ತಕ ಟುಟ್ರಿಯ ಟೈಸನ್ ಆಫ್ ಗೌರ್ನಮೆಂಟ್‌ನಲ್ಲಿ ರಾಜ್ಯದ ಸ್ವರೂಪವು ಮಾನವನ ಒಳ್ಳೆಯ ಅಭಿಪ್ರಾಯಗಳಿಂದ ಕೂಡಿದುದಾಗಿದೆ ಎಂದನು. ಪ್ರಕೃತಿ ನಿಯಮವು ಮಾನವನಿಗೆ ಹಲವು ಹಕ್ಕುಗಳನ್ನು ನೀಡಿದೆ. ಅದರಲ್ಲಿ ಪ್ರಮುಖವಾದವು ಜೀವಿಸುವುದು. ವ್ಯಕ್ತಿ ಸ್ವಾತಂತ್ರ್ಯ ಮತ್ತು ಆಸ್ತಿ ಹೊಂದುವುದು. ಈ ಹಕ್ಕುಗಳು ಕೆಲವು ತೊಡಕುಗಳನ್ನು ಸಮಸ್ಯೆಗಳನ್ನೇ ಉಂಟು ಮಾಡುವಲ್ಲಿ ನೆರವಾದವು. ಲಾಕ್ ಪ್ರಕಾರ ರಾಜ್ಯ ಸರ್ಕಾರವು ಜನತೆಯ ಸರ್ವ ಸಮ್ಮತ ಒಪ್ಪಿಗೆಯಿಂದ ರಚನೆಗೊಂಡು ಬಹುಮತದ ತೀರ್ಪಿನ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತದೆ. ಆದ್ದರಿಂದ ಈ ತತ್ವದ ಪ್ರಕಾರ ನಿರಂಕುಶಾಧಿಕಾರಕ್ಕೆ ಎಳ್ಳಷ್ಟು ಆದ್ಯತೆಯಿಲ್ಲ. ಲಾಕ್‌ನ ಮುಖ್ಯ ಉದ್ದೇಶ ೨ನೆಯ ಚಾರ್ಲ್ಸ್‌ನ ತಮ್ಮನ ಆಳ್ವಿಕೆಯನ್ನು ವಿರೋಧಿಸುವುದಾಗಿತ್ತು. ಇವನ ಚಿಂತನೆಗಳು ತತ್ವಗಳಿಂದಾಗಿ ಇಂಗ್ಲೆಂಡಿನಲ್ಲಿ ಪ್ರಸಿದ್ಧ ಕ್ರಾಂತಿಯಾಗಿ ನಿರಂಕುಶ ಪ್ರಭುತ್ವವನ್ನು ನಿರ್ಮೂಲನ ಮಾಡಿ ಸಂವಿಧಾನಾತ್ಮಕ ರಾಜಪ್ರಭುತ್ವವನ್ನು ಸ್ಥಾಪಿಸುವಲ್ಲಿ ಇಂಗ್ಲೆಂಡ್ ಜನತೆ ಯಶಸ್ವಿಯಾಯಿತು. ಲಾಕ್‌ನ ಕ್ರಾಂತಿಕಾರಿ ಪಥವು ಕ್ರಾಂತಿಯ ಕವಚವಾಗಿ ಮಾರ್ಪಾಟಾಯಿತು.

ಇಂಗ್ಲೆಂಡ್ ರಾಜಕೀಯ ಕ್ಷೇತ್ರದಲ್ಲಿ ಕ್ಷಿಪ್ರ ಮಾರ್ಪಾಟಿಗೆ ಈಡಾಗಿದ್ದರೆ, ಇತರ ಯುರೋಪಿನ ರಾಷ್ಟ್ರಗಳು ಇನ್ನೂ ಮಧ್ಯಯುಗೀನ ರಾಜಕೀಯ ತತ್ವಗಳಿಗೆ ಸಿದ್ಧಾಂತಗಳಿಗೆ ಅಂಟಿಕೊಂಡಿದ್ದವು. ಜರ್ಮನಿಯಲ್ಲಿ ಕೆಲವು ಗುಂಪಿನ ಜನತೆ ಮಾತ್ರ ನಿಯಮಬದ್ಧ ಚಿಂತನೆಗಳಿಗೆ ತತ್ವಗಳಿಗೆ ಗಮನ ಹರಿಸಲಾರಂಭಿಸಿದರು. ಫ್ರಾನ್ಸಿನಲ್ಲಿ ಬೂರ್ಬನ್ ಆಳ್ವಿಕೆಯು ಸಂಪೂರ್ಣವಾಗಿ ಊಳಿಗಮಾನ್ಯದ ಬೇರುಗಳನ್ನು ಕಿತ್ತು ಹಾಕಲಾಗಲಿಲ್ಲ. ಮೇಲಾಗಿ ಕ್ಯಾಥೊಲಿಕ್ ಕ್ರೈಸ್ತ ಧರ್ಮಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದರಿಂದ ರಾಜ್ಯದ ಸರ್ವಾಧಿಕಾರವು ಸಹ ಕ್ರೈಸ್ತ ಧರ್ಮದ ರೀತಿಯಲ್ಲಿಯೇ ಟೀಕೆಗೊಳಪಟ್ಟಿತು. ರಾಜಕೀಯ ಚಿಂತಕರಿಗೆ ಇದರ ಪರಿಣಾಮಗಳು ಬಹಳ ಅಪಾಯಕಾರಿಯಾಗಿ ಕಂಡುಬಂದವು.

ವಾಲ್ಟೇರ್ ತನ್ನ ಜೀವನವಿಡೀ ಉದಾರವಾದಿ ರಾಜಪ್ರಭುತ್ವಕ್ಕೆ ಪ್ರೋ ಸಂವಿಧಾನಾತ್ಮಕ ಸರ್ಕಾರವನ್ನು ವಿರೋಧಿಸಿದನು. ಇವನಿಗೆ ಜನಪ್ರಿಯ ಗಣರಾಜ್ಯಗಳಲ್ಲಿ ನಂಬಿಕೆಯಿರಲಿಲ್ಲ. ಹಾಗಾಗಿ ಇವನು ತತ್ವಜ್ಞಾನಿ ರಾಜನಿಗೆ ಹೆಚ್ಚು ಪ್ರಾಶಸ್ತ್ಯ ನೀಡಿದನು. ಮಧ್ಯಯುಗೀನ ನ್ಯಾಯಾಲಯಗಳು ಶ್ರೀಮಂತರಿಂದ ವಿರೋಧಿಸಲ್ಪಟ್ಟವು. ಮಾಂಟೆಸ್ಕ್ಯೂ ಅಧಿಕಾರ ವಿಭಜನೆಗೆ ಪ್ರಾಶಸ್ತ್ಯ ಕೊಟ್ಟರೂ ಸಹ ಅವನು ಶ್ರೀಮಂತ ವರ್ಗಕ್ಕೆ ಸೇರಿದವ ನಾದ್ದರಿಂದ, ಶ್ರೀಮಂತ ವರ್ಗಕ್ಕೆ ಸರ್ಕಾರದಲ್ಲಿ ಹೆಚ್ಚು ಪ್ರಾಧಾನ್ಯತೆಯಿರಬೇಕೆಂದು ಒತ್ತು ನೀಡಿದನು.

ಇವನಿಗೂ ಸಹ ಜನಸಾಮಾನ್ಯರ ಸರ್ಕಾರದಲ್ಲಿ ನಂಬಿಕೆಯಿರಲಿಲ್ಲ. ಇದಕ್ಕಾಗಿಯೇ ಏನೋ ಅವನು ಬ್ರಿಟಿಷ್ ಶ್ರೀಮಂತ ಸಭೆಯನ್ನು ಅತಿ ಎತ್ತರದಲ್ಲಿ ಎತ್ತಿ ಹಿಡಿದಿದ್ದನು. ಡೈಡರಾಟ್ ಪ್ರಕಾರ ಹದಿನಾಲ್ಕನೆಯ ಲೂಯಿ ಸೇರಿ ಎಲ್ಲಾ ರಾಜರು ತಪ್ಪುಗಳಿಂದ ಕೂಡಿದ್ದರು. ಆದರೆ ಅವನು ಎಲ್ಲಿಯೂ ರಾಜಪ್ರಭುತ್ವದ ಬಗ್ಗೆ ತನ್ನ ಅನುಮಾನಗಳನ್ನು ಅಭಿಪ್ರಾಯಗಳನ್ನು ಹೇಳಿಕೊಂಡಿರಲಿಲ್ಲ. ಇದೇ ಅವಧಿಯಲ್ಲಿ ಇಡೀ ಯುರೋಪ್ ಖಂಡದಲ್ಲಿ ಸ್ಪೈಯಿನ್‌ನಿಂದ ಹಿಡಿದು ರಷ್ಯಾದವರೆಗೂ ಹೊಸ ಗಾಳಿ, ಅಲೆ ಬೀಸಲಾರಂಭಿಸಿತು. ಮಾನವನ ಬಯಕೆಯಾದ ಸುಧಾರಣೆಗಳು ಪ್ರಬಲ ಆಡಳಿತ, ರಾಜರಿಂದ ಎಂಬುದು ಅರಿವಾಯಿತು. ಪ್ರಮುಖ ರಾಜಧಾನಿಗಳಲ್ಲಿ ರಾಜರುಗಳು ತಮ್ಮ ಆಡಳಿತ ಸರ್ಕಾರವನ್ನು ಪುನರ್‌ರಚಿಸತೊಡಗಿದರು. ತೆರಿಗೆಗಳು, ಮತ್ತಿತರ ಹೊರೆಯನ್ನು ವಾಣಿಜ್ಯ ಕ್ಷೇತ್ರದಲ್ಲಿ ತೆಗೆದು ಹಾಕಲಾರಂಭಿಸಿದರು. ಹಾಗೂ ಕಾನೂನಿನ ಕಟ್ಟುಪಾಡುಗಳನ್ನು ಸಹ ಕುಂಠಿತಗೊಳಿಸಿದರು. ಆದರೆ ಫ್ರಾನ್ಸ್ ಮತ್ತಿತರ ರಾಷ್ಟ್ರಗಳಲ್ಲಿ ನಿರಂಕುಶ ಪ್ರಭುತ್ವದ ಇನ್ನೊಂದು ಮುಖವಾದ ಯುದ್ಧ ಮತ್ತು ಆಕ್ರಮಣಗಳನ್ನು ಜನತೆ ಅರಿತುಕೊಳ್ಳಲಾಗಲಿಲ್ಲ.

ಕ್ರಿ.ಶ.೧೭೬೨ರಲ್ಲಿ ರೂಸೊ ತನ್ನ ಪುಸ್ತಕ ಸಾಮಾಜಿಕ ಒಪ್ಪಂದದಲ್ಲಿ ನೈತಿಕ ಶಕ್ತಿಯುಳ್ಳ ವ್ಯಕ್ತಿಗತವಾದ ಸಮಾಜವನ್ನು ಕಟ್ಟಲು ಉದ್ದೇಶಿಸಿದನು. ಈ ಸಮಾಜದಲ್ಲಿ ವ್ಯಕ್ತಿಯ ವೈಯಕ್ತಿಕತೆಗೆ, ಸ್ವಾತಂತ್ರ್ಯಕ್ಕೆ ಕುಂದು ಬಾರದಂತೆ, ನೈತಿಕತೆಗೆ ಹೆಚ್ಚು ಒತ್ತು ಕೊಡಲಾಯಿತು. ರೊಸೋ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯು ತನ್ನ ಹಕ್ಕು ಮತ್ತು ಅಧಿಕಾರವನ್ನು ಸಾಮಾನ್ಯ ಒಪ್ಪಂದಕ್ಕೆ ವಹಿಸಿಕೊಟ್ಟು ಇದರಲ್ಲಿ ತಾನು ಸಹ ಅವಿಭಾಜ್ಯ ಅಂಗವಾಗಿರುತ್ತಾನೆ. ಇಂತಹ ವ್ಯವಸ್ಥೆಯಲ್ಲಿ ಹಕ್ಕು ಮತ್ತು ಅಧಿಕಾರ ಕರ್ತವ್ಯಗಳ ನಡುವಣ ವ್ಯತ್ಯಾಸವನ್ನು ವ್ಯಾಖ್ಯಾನಿಸಲಾಯಿತು. ಹಾಗೂ ಸಮಾಜದ ಕರ್ತವ್ಯಗಳನ್ನು ಸಹ ಗೊತ್ತುಪಡಿಸಲಾಯಿತು. ರೂಸೊ ಪ್ರಕಾರ ವ್ಯಕ್ತಿಯು ತಾನು ಒಪ್ಪಂದದ ನಂತರವೂ ಮೊದಲಿನಂತೆಯೇ ಸ್ವತಂತ್ರನಾಗಿ ಉಳಿಯುತ್ತಾನೆ. ಆದರೆ ನಂತರದ ಓದುಗರು, ವಿಮರ್ಶಕರು ಸಾಮಾಜಿಕ ಒಪ್ಪಂದದಲ್ಲಿ ಸರ್ವಾಧಿಕಾರದ ಅಂಶಗಳನ್ನು ಕಾಣಲಾರಂಭಿಸಿ ದರು. ರೊಸೋ ಜಾನ್‌ಲಾಕ್‌ನ ತತ್ವಗಳನ್ನು ಆಧರಿಸಿ ಸ್ವಾತಂತ್ರ್ಯದ ಕರಡನ್ನು ಸಿದ್ಧಪಡಿಸಿದನು. ಒಂದು ದಶಕದ ನಂತರ ಫ್ರಾನ್ಸ್‌ನ ಕ್ರಾಂತಿಕಾರರು ಅಮೆರಿಕನ್ನರಿಂದ ಮತ್ತಷ್ಟು ಪ್ರಭಾವಿತರಾಗಿ ತಮ್ಮದೇ ಆದ ಕರಡನ್ನು ಸಿದ್ಧಪಡಿಸಿ ಅದರಲ್ಲಿ ರೊಸೋನ ಸಾಮಾನ್ಯ ಒಪ್ಪಿಗೆ ಮತ್ತು ರಾಷ್ಟ್ರದ ಸಾರ್ವಭೌಮತ್ವಕ್ಕೆ ಹೆಚ್ಚು ಆದ್ಯತೆ ನೀಡಿದರು. ಅಟ್ಲಾಂಟಿಕ್ ಸಮುದ್ರದ ತೀರ ಪ್ರದೇಶಗಳಲ್ಲಿ ಅಂದರೆ ಅಮೆರಿಕಾ ಮತ್ತು ಯುರೋಪ್‌ನಲ್ಲಿ ಜನಪ್ರಿಯ ಸರ್ಕಾರದ ಬಗ್ಗೆ ಮೂಲಭೂತ ಪ್ರಶ್ನೆಗಳು ಕೇಳಿಬರಲಾರಂಭಿಸಿದವು. ಇದಲ್ಲದೆ ಮತವನ್ನು ಯಾರು ಚಲಾಯಿಸಬೇಕು ಎಂಬುದರ ಬಗ್ಗೆಯೂ ಹೆಚ್ಚು ಚರ್ಚೆ ಗಳು ಪ್ರಾರಂಭವಾದವು.

ಜ್ಞಾನೋದಯದ ಚಿಂತನೆಗಳ ಪ್ರಮುಖ ವಾಹಿನಿಯು ಲಾಕ್‌ನ ತತ್ವವಾದ ವೈಯಕ್ತಿಕ ಆಸ್ತಿಯನ್ನು ಹೊಂದುವುದು ಪ್ರಕೃತಿ ದತ್ತವಾದ ಹಕ್ಕು ಎಂಬುದನ್ನು ಪ್ರಶ್ನಿಸಲಿಲ್ಲ. ಆದರೂ ರೋಸೋ ಡೇವಿಡ್ ಹ್ಯೂಮ್ ರೀತಿ ಇದಕ್ಕೆ ಸಮ್ಮತಿ ನೀಡಲಿಲ್ಲ. ರೊಸೋ ಇದಕ್ಕೆ ಯಾವುದೇ ರೀತಿಯ ಪರಿಹಾರ ಸೂಚಿಸದಿದ್ದರೂ ರಾಜಕೀಯ ಪ್ರಜಾಪ್ರಭುತ್ವವು ಆರ್ಥಿಕ ಸಮಾನತೆಯಿಂದ ಕೂಡಿರದಿದ್ದರೆ, ಅಂತಹ ಪ್ರಜಾಪ್ರಭುತ್ವವು ನಿಜವಾದ ಪ್ರಜಾಪ್ರಭುತ್ವವಲ್ಲ ಹಾಗೂ ಅಂತಹ ಸರ್ಕಾರವು ಸಮರ್ಪಕವಾಗಿ ಕಾರ್ಯ ನಿರ್ವಹಿಸು ವುದಿಲ್ಲವೆಂದು ಅಭಿಪ್ರಾಯ ಪಟ್ಟನು. ಹದಿನೆಂಟನೆಯ ಶತಮಾನದ ಎರಡನೆಯ ಭಾಗದಲ್ಲಿ ಕೆಲವು ರಾಜಕೀಯ ತಜ್ಞರು ರೊಸೋ ವಿಚಾರಗಳನ್ನು ಮತ್ತಷ್ಟು ದೃಢೀಕರಿಸಿದರು. ಕ್ರಿ.ಶ.೧೭೭೫ರಲ್ಲಿ ಮಾರೆಲ್ಲಿಯೂ ಪ್ರಪಂಚದ ಎಲ್ಲಾ ವಿಧದ ಕ್ರೌರ್ಯದ ಮೂಲಬಿಂದು ಆಸ್ತಿಯೆಂದು (ಸಂಪತ್ತು) ತಿಳಿಸಿ ಹಾಗೆಯೇ ಅದನ್ನು ಪರಿಹರಿಸಲು ಸಲಹೆಯನ್ನು ನೀಡಿದನು. ಅದೇನೆಂದರೆ ಪ್ರತಿಯೊಬ್ಬ ವ್ಯಕ್ತಿಯು ತನ್ನ ಸಾಮರ್ಥ್ಯಕ್ಕೆ ಅನುಸಾರವಾಗಿ ಸರ್ವರ ಏಳಿಗೆಗೆ ಶ್ರಮಿಸಬೇಕು ದುಡಿಯಬೇಕು. ಅದೇ ರೀತಿ ತಾನು ತನ್ನ ಸಾಮರ್ಥ್ಯಕ್ಕನು ಸಾರವಾಗಿ ಹಿಂದಕ್ಕೆ ಪಡೆಯಬೇಕು ಎಂದು ತಿಳಿಸಿದನು. ಎರಡು ದಶಕಗಳ ನಂತರ ಅಬ್ಬೆ ಡಿ ಮಾಬ್ಲಿಯು ಸಮಾನತೆಯು ಪ್ರಕೃತಿಯ ನಿಯಮವೆಂದು ಅಭಿಪ್ರಾಯಪಟ್ಟು ಇವನು ಸಹ ಮಾರೆಲ್ಲಿ ಜೊತೆಗೂಡಿ ಆಸ್ತಿಯು ಮಾನವನ ಸುವರ್ಣ ಯುಗವನ್ನು ನಾಶ ಮಾಡಿತೆಂದು ತಿಳಿಸಿದನು. ನಂತರ ನೊಯಲ್ ಬೇಬೋಫನು ಪ್ರಕೃತಿಯ ನಿಜವಾದ ಸಮಾನತೆಯನ್ನು ಪಡೆಯಲು ಕ್ರಾಂತಿಯಲ್ಲಿ ಮತ್ತೊಂದು ಕ್ರಾಂತಿಯನ್ನುಂಟುಮಾಡಲು ಯತ್ನಿಸಿದನು. ಇಂಗ್ಲೆಂಡಿನಲ್ಲಿ ವಿಲಿಯಂ ಗಾಡ್‌ವಿನ್ ಪ್ರಕೃತಿ ನಿಯಮದ ಸಮಾನತೆಯನ್ನು ಆಧರಿಸಿ ತನ್ನ ವೈಚಾರಿಕತೆ ತತ್ವದಲ್ಲಿ ಆಸ್ತಿಯನ್ನು ಟೀಕಿಸುವುದರ ಜೊತೆಗೆ ರಾಜ್ಯ ಮತ್ತು ವಿವಾಹ ಎಂಬ ಸಂಘಟನೆಗಳನ್ನು ಸಹ ಖಂಡಿಸಿದನು. ಆದರೆ ಇಂತಹ ವಿಚಾರಗಳು, ವಾದಗಳು ಹೆಚ್ಚು ಕಾಲ ಹೆಚ್ಚು ಜನರಿಂದ ಪ್ರೋತ್ಸಾಹ ಪಡೆಯದೆ ತನ್ನ ತೀವ್ರತೆಯನ್ನು ಕಳೆದುಕೊಂಡಿತು.

**ಆರ್ಥಿಕ ಸಿದ್ಧಾಂತಗಳು**

ಜ್ಞಾನೋದಯದ ಚಿಂತನೆಗಳು ಮಾನವನ ಆರ್ಥಿಕ ಜೀವನದ ಮೇಲೆ ಹೆಚ್ಚು ಪರಿಣಾಮವನ್ನುಂಟು ಮಾಡಿದವು. ಆರ್ಥಿಕ ಕ್ಷೇತ್ರದಲ್ಲಿ ಸರ್ಕಾರದ ರಾಜ್ಯದ ಮಧ್ಯಸ್ಥಿಕೆ ಯಿಂದಾಗಿ ವ್ಯಕ್ತಿಗತ ಖಾಸಗಿ ಆರ್ಥಿಕ ವ್ಯವಸ್ಥೆಯು ಅಸ್ತವ್ಯಸ್ತಗೊಂಡಿತ್ತು. ಇದರಿಂದ ಬೇಸತ್ತ ಮಧ್ಯಮವರ್ಗವು ತನ್ನ ವಿರೋಧವನ್ನು ಸರ್ಕಾರದ ಮೇಲೆ ತೋರಿಸಲಾರಂಭಿಸಿತು. ಫ್ರಾನ್ಸಿನಲ್ಲಿ ಹದಿನಾಲ್ಕನೆಯ ಲೂಯಿನ ಯುದ್ಧಗಳಿಂದಾಗಿ ಅಲ್ಲಿಯ ಅರ್ಥವ್ಯವಸ್ಥೆಯು ಸಂಪೂರ್ಣವಾಗಿ ಹದಗೆಟ್ಟಿತು. ಇದನ್ನು ಸುಧಾರಿಸಲು ಕೆಲವು ವಿಚಾರವಾದಿಗಳು ಮುಖ್ಯವಾಗಿ ಬಾಯ್ಸ ಗಿಲ್ಬರ್ಟನು ರಾಜ್ಯದ ಮಧ್ಯಸ್ತಿಕೆಯು ಪ್ರಕೃತಿ ನಿಯಮದ ವಿರುದ್ಧವಾಗಿದೆ. ಆದ್ದರಿಂದ ಇದನ್ನು ಸರಿಪಡಿಸಲು ಮುಕ್ತ ಮಾರುಕಟ್ಟೆ ಮತ್ತು ಖಾಸಗಿ ಬಂಡವಾಳದ ಪಾತ್ರ ಸೂಕ್ತವಾದ ಮಾರ್ಗವೆಂದು ಅಭಿಪ್ರಾಯ ಪಟ್ಟನು. ಈ ಸಿದ್ಧಾಂತದ ಆಧಾರದ ಮೇಲೆ ಹದಿನೆಂಟನೆಯ ಲೂಯಿಸ್‌ನ ವೈದ್ಯನಾದ ಫ್ರಾಂಕಾಯೆನ್ ಕ್ರಿಸಾನಿಯು ಪ್ರಕೃತಿ ಸಂಪತ್ತನ್ನು ಅಧ್ಯಯನ ಮಾಡುವ ಶಾಲೆಯನ್ನು ಸ್ಥಾಪಿಸಿದನು. ಈ ಶಾಲೆಯ ತತ್ವಗಳಿಂದ ವೈಯಕ್ತಿಕ ಖಾಸಗಿ ಹಿತಾಸಕ್ತಿಯಲ್ಲಿ ಹೆಚ್ಚು ಗಮನಕೊಟ್ಟರೂ ಪ್ರಕೃತಿಯ ನಿಯಮವಾದ ಸಾಮರಸ್ಯತೆಗೆ ಹೆಚ್ಚು ಆಸಕ್ತಿ ತೋರಿಸುವಂತಾಯಿತು. ಇದರಿಂದಾಗಿ ಸಾರ್ವಜನಿಕ ಅಭಿವೃದ್ಧಿಗೆ ಖಾಸಗಿ ಬಂಡವಾಳದ ಪಾತ್ರ ಅತ್ಯಂತ ಪರಿಣಾಮಕಾರಿಯಾಗಿ ಕಂಡುಬಂದಿತು. ಆ್ಯಡಂ ಸ್ಮಿತನು ತನ್ನ ಪುಸ್ತಕ ವೆಲ್ತ್ ಆಫ್ ನೇಶನ್ಸ್‌ನಲ್ಲಿ ಫಿಜಿಯೋ ಕ್ರಾಟ್ಸ್‌ರು ಭೂಮಿಯ ಮೇಲೆ ತೋರಿಸಿದ ವಿಶೇಷ ಮಹತ್ವವನ್ನು ಖಂಡಿಸಿದನು. ಸ್ಮಿತನು ಖಾಸಗಿ ವೈಯಕ್ತಿಕ ಹಿತಾಸಕ್ತಿಗೆ ಹೆಚ್ಚು ಗಮನ ನೀಡದೆ, ಪ್ರಕೃತಿ ಸ್ವಾತಂತ್ರ್ಯದ ವ್ಯವಸ್ಥೆಯನ್ನು ಒತ್ತಿ ಹೇಳಿದನು. ಇವನ ಪ್ರಕಾರ ರಾಜ್ಯ ಸರ್ಕಾರವು ದುರ್ಬಲರ ಹಿತಾಸಕ್ತಿ ಗಳನ್ನು ಪ್ರಬಲರಿಂದ ರಕ್ಷಿಸುವುದು ಪ್ರಮುಖವಾಗಿತ್ತು. ಇವನ ಮುಖ್ಯ ಉದ್ದೇಶವು ಸ್ವತಂತ್ರ ವ್ಯಕ್ತಿಯು ತನ್ನ ಹಣೆಯ ಬರಹವನ್ನು ತಾನೇ ರೂಪಿಸಿಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಡುವುದಾಗಿತ್ತು. ಇವನ ತತ್ವಗಳು ಮುಂದಿನ ತಲೆಮಾರಿನವರಿಗೆ ತುಂಬಾ ಆದರ್ಶವಾಗಿ ಕಂಡುಬಂದವು.

ಹದಿನೆಂಟನೆಯ ಶತಮಾನದ ಅಂತ್ಯದ ಹೊತ್ತಿಗೆ ಸಾಮಾಜಿಕ ಅಸಂತುಷ್ಟಿ ಹೆಚ್ಚಾದಂತೆ ವೈಜ್ಞಾನಿಕ ಮತ್ತು ಭೌದ್ದಿಕ ಚಿಂತನೆಗಳು ಸದ್ದುಗದ್ದಲವಿಲ್ಲದೆ ಮಾನವನ ಸರ್ವಾಂಗೀಣ ಭೌತಿಕ ಪ್ರಗತಿಯ ಕಡೆಗೆ ಗಮನಹರಿಸಿತು. ಇಂತಹ ಜ್ಞಾನವನ್ನು ಒಳ್ಳೆಯದು ಮತ್ತು ಕೆಟ್ಟದ್ದಕ್ಕೂ ಉಪಯೋಗಿಸಿಕೊಳ್ಳಬಹುದಾಗಿತ್ತು. ಭವಿಷ್ಯದ ಪ್ರಗತಿಯು ಆಳವಾದ ಪ್ರಗತಿಪರ ವಿಚಾರಗಳಿಂದ ಮಾತ್ರ ಸಾಧ್ಯವೆಂಬ ಅರಿವು ಸಹ ಮೂಡತೊಡಗಿತು. ಹದಿನಾರನೆಯ ಲೂಯಿಯ ಮಂತ್ರಿಯಾದ ಟರ್ಗೋಟ್ ಪ್ರಕಾರ ಅನಾಗರಿಕ ಕಾಲದಲ್ಲಿಯೂ ಸಹ ಮಾನವ ಸಮಾಜದ ಪ್ರಗತಿಯೆಡೆಗೆ ನಿಧಾನವಾಗಿ ಸರಿಯಾದ ಮಾರ್ಗದಲ್ಲಿ ನಡೆದುಬಂದಿದ್ದಾನೆ. ಭವಿಷ್ಯದಲ್ಲಿಯೂ ಸಹ ಈ ಪ್ರಗತಿ ಮುಂದುವರಿಯುತ್ತದೆಂಧು ಅಭಿಪ್ರಾಯ ಪಟ್ಟಿದ್ದಾನೆ. ಟರ್ಗೋಟ್‌ನ ಸ್ನೇಹಿತ ಕಂಡೋರ್ಸಟ್ ಕೂಡ ಇದೇ ಅಭಿಪ್ರಾಯವನ್ನು ಮುಂದುವರಿಸಿ, ಪರಿಪೂರ್ಣತೆಯ ಕಡೆಗೆ ಇಟ್ಟ ಹೆಜ್ಜೆಯನ್ನು ಹಿಂದೆಗೆಯಬಾರದೆಂದು ತಿಳಿಸಿದನು. ಇವನ ಪ್ರಸಿದ್ಧ ಹೇಳಿಕೆಯೇನೆಂದರೆ ಸ್ವತಂತ್ರ ಮಾನವನ ಮೇಲೆ ಸೂರ್ಯನ ಬೆಳಕು ಬೀಳುವುದು. ಮಾನವರಿಗೆ ಯಾವ ಯಜಮಾನರು ಇರುವುದಿಲ್ಲ. ಆದರೆ ಅವನ ವೈಚಾರಿಕತೆ ಮಾತ್ರ ಅವನ ಯಜಮಾನ. ಅಂತಹ ಕಾಲ ಸನ್ನಿಹಿತವಾಗಿದೆ ಎಂಬುದು.

**ನಿರಂಕುಶಾಧಿಕಾರ**

ಹದಿನೆಂಟನೆಯ ಶತಮಾನದ ಮತ್ತೊಂದು ಪ್ರಮುಖ ಬೆಳವಣಿಗೆಯೆಂದರೆ ನಿರಂಕುಶ ರಾಜ್ಯಪ್ರಭುತ್ವ. ಇದರ ಪ್ರಕಾರ ಸರ್ಕಾರದ ಇಡೀ ಸೂತ್ರವು ಏಕೈಕ ವ್ಯಕ್ತಿಯಲ್ಲಿ ಕೇಂದ್ರಿಕೃತವಾಗಿರುವುದು. ಇಂತಹ ಅಧಿಕಾರವು ಯಾವ ಶಕ್ತಿಯಿಂದಾಗಲಿ, ವ್ಯಕ್ತಿಯಿಂದಾಗಲಿ ಅಥವಾ ಸಂಘಸಂಸ್ಥೆಯಿಂದಾಗಲಿ ಪ್ರಶ್ನಿಸಲು ಅರ್ಹವಲ್ಲ. ಹದಿನೇಳನೆಯ ಮತ್ತು ಹದಿನೆಂಟನೆಯ ಶತಮಾನದಲ್ಲಿ ಫ್ರಾನ್ಸನ್ನು ಆಳಿದ ಹದಿನಾಲ್ಕನೆಯ ಲೂಯಿ ಇದಕ್ಕೆ ಸೂಕ್ತ ಉದಾಹರಣೆ. ಇವನ ಪ್ರಕಾರ ರಾಜನೇ ರಾಜ್ಯ, ರಾಜ್ಯವೆಂದರೆ ರಾಜ ದೊರೆ. ಇದರ ಮುಂದಿನ ಬೆಳವಣಿಗೆಯೇ ಇಪ್ಪತ್ತನೆಯ ಶತಮಾನದ ಫ್ಯಾಸಿಸ್ಟ್; ನಾಜೀ ಮತ್ತು ಕಮ್ಯೂನಿಸ್ಟ್ ಸರ್ಕಾರಗಳು. ನಿರಂಕುಶಧಿಕಾರವು ಮೊದಲು ಸ್ಪೈನ್, ನಂತರ ಇಂಗ್ಲೆಂಡ್ ಮತ್ತು ಫ್ರಾನ್ಸ್ ನಲ್ಲಿ ಅಸ್ತಿತ್ವಕ್ಕೆ ಬಂದಿತು. ಇದು ಇಂಗ್ಲೆಂಡಿನಲ್ಲಿ ಹೆಚ್ಚು ಸಫಲವಾಗಲಿಲ್ಲ. ಆದರೆ ಫ್ರಾನ್ಸಿನಲ್ಲಿ ಬೋರ್ಬನ್ ಸಂತತಿಯ ಕಾಲದಲ್ಲಿ ಹೆಚ್ಚು ಯಶಸ್ವಿಯಾಯಿತು. ಈ ವ್ಯವಸ್ಥೆಗೆ ಮೂಲ ಆಧಾರವೆಂದರೆ ಅಲ್ಲಿಯ ದೊರೆಗಳು ತಾಳಿದ್ದ

ನಿಲುವು, ಧೋರಣೆಗಳು. ಏನೆಂದರೆ ಅವರ ಅಧಿಕಾರವು ದೇವರಿಂದ ಕೊಟ್ಟದ್ದು. ಅಂದರೆ ಅವರ ಅಧಿಕಾರ ದೇವರ ಕೃಪೆಯಿಂದ ಬಂದುದು. ಹಾಗೇ ಅವರು ದೈವಾಂಶ ಸಂಭೂತರು ಮತ್ತು ಅವರ ಅಧಿಕಾರ ಕೆಳಮಟ್ಟದಲ್ಲಿ ಜನತೆಯಿಂದ ಬಂದಿಲ್ಲವಾದ್ದರಿಂದ ದೊರೆಗಳು ಜನತೆಗೆ ಜವಾಬ್ದಾರರಲ್ಲ. ಕೇವಲ ದೇವರಿಗೆ ಮಾತ್ರ ಜವಾಬ್ದಾರರು. ಇದಕ್ಕೆ ತಾತ್ವಿಕ ಹಿನ್ನೆಲೆಯು ಪೂರಕವಾಗಿದ್ದರಿಂದ ತಮ್ಮನ್ನು ಸರ್ವ ಸ್ವತಂತ್ರರನ್ನಾಗಿ ರೂಪಿಸಿಕೊಂಡು, ತದನಂತರ ಚರ್ಚನ್ನು ಸಹ ತಮ್ಮ ಅಧೀನದಲ್ಲಿಟ್ಟುಕೊಳ್ಳಲಾರಂಭಿಸಿದರು. ರೋಸೋ ತನ್ನ ಕೃತಿಗಳಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ಒತ್ತು ಕೊಟ್ಟರೂ ಸಹ ಅವನ ಸಾಮಾನ್ಯ ಒಪ್ಪಂದದಲ್ಲಿ ಏಕ ವ್ಯಕ್ತಿಯ ಆಳ್ವಿಕೆಗೆ ಹೆಚ್ಚು ಒತ್ತು ಕೊಟ್ಟಿದ್ದಾನೆ.

**ಚಳವಳಿಗಳು**

ಹದಿನೆಂಟನೆಯ ಶತಮಾನದ ಈ ಎಲ್ಲಾ ಬೆಳವಣಿಗೆಗಳು ಅಂದರೆ ಒಂದು ಕಡೆ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಅಸಮಾಧಾನ ಮತ್ತು ಅಸಮಾನತೆ ಹಾಗೂ ಇನ್ನೊಂದೆಡೆ ವೈಜ್ಞಾನಿಕ ಮತ್ತು ವೈಚಾರಿಕತೆಯ ಬೆಳವಣಿಗೆಯಿಂದ ಸಮಾಜದಲ್ಲಿ ಚಳವಳಿಗಳು ಕ್ರಾಂತಿಗಳು ಯುರೋಪಿನಾದ್ಯಂತ ಹರಡಿದವು. ಅದರಲ್ಲಿ ಪ್ರಮುಖ ವಾದವುಗಳು ಅಮೆರಿಕಾದ ಸ್ವಾತಂತ್ರ್ಯ ಸಂಗ್ರಾಮ ಮತ್ತು ಫ್ರಾನ್ಸಿನ ಕ್ರಾಂತಿ. ಅಮೆರಿಕಾದ ಕ್ರಾಂತಿಕಾರರು ಫ್ರೆಂಚ್ ದಾರ್ಶನಿಕರು ತತ್ವಜ್ಞಾನಿಗಳಿಂದ ಪ್ರೇರೇಪಿತರಾಗಿ ಬ್ರಿಟಿಷರ ಆಳ್ವಿಕೆಯನ್ನು ಅಂತ್ಯಗೊಳಿಸಿ ಸಂವಿಧಾನಾತ್ಮಕ ಹಾಗೂ ಪ್ರಜಾಸತ್ತಾತ್ಮಕ ಸರ್ಕಾರವನ್ನು ಸ್ಥಾಪಿಸಿದರು. ಅಮೆರಿಕಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಫ್ರಾನ್ಸಿನ ಯೋಧರು ಈ ಪ್ರಸಿದ್ಧ ಕ್ರಾಂತಿಯಿಂದ ಸ್ಫೂರ್ತಿಗೊಂಡು ಅಂತಹದೇ ಕ್ರಾಂತಿಯನ್ನು ತಮ್ಮ ನೆಲದಲ್ಲಿಯೂ ಮಾಡಿ ನಿರಂಕುಶಪ್ರಭುತ್ವವನ್ನು ಕೊನೆಗಾಣಿಸಿ, ಮಾನವನ ಹಕ್ಕುಗಳನ್ನು ಎತ್ತಿ ಹಿಡಿಯುವುದಕ್ಕೆ ಪ್ರಯತ್ನಿಸಿದರು. ಇದರ ಪರಿಣಾಮವೇ ಫ್ರಾನ್ಸಿನ ಮಹಾಕ್ರಾಂತಿ. ಈ ಕ್ರಾಂತಿಯ ಮುಖ್ಯ ಉದ್ದೇಶ ಮಾನವ ಸ್ವಾತಂತ್ರ್ಯ, ಸಮಾನತೆ ಮತ್ತು ಭಾತೃತ್ವವನ್ನು ಹೊಂದುವುದು. ಈ ನಿಟ್ಟಿನಲ್ಲಿ ಫ್ರೆಂಚ್ ಕ್ರಾಂತಿಕಾರರು ಮುಂದುವರಿದು ಬೂರ್ಬನ್‌ಗೆ ಸಂತತಿಯ ಹದಿನಾರನೆಯ ಲೂಯಿನನ್ನು ಅವನ ಪತ್ನಿಯನ್ನು ಹಾಗೂ ಕ್ರಾಂತಿ ವಿರೋಧಿಗಳನ್ನು ಗಿಲೋಟಿನ್ ಯಂತ್ರಕ್ಕೆ ಆಹುತಿ ನೀಡಿದರು. ಇದರಿಂದಾಗಿ ಫ್ರಾನ್ಸಿನಲ್ಲಿ ತಾತ್ಕಾಲಿಕವಾಗಿ ನಿರಂಕುಶ ರಾಜಪ್ರಭುತ್ವ ಕೊನೆಗೊಂಡಿತು. ಆದರೆ ಈ ಶತಮಾನದ ಅಂತ್ಯದ ಸಮಯಕ್ಕೆ ಫ್ರಾನ್ಸ್ ಮತ್ತೊಮ್ಮೆ ನೆಪೋಲಿಯನ್ ರೂಪದಲ್ಲಿ ರಾಜಪ್ರಭುತ್ವಕ್ಕೆ ಮರಳಿತು.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಹದಿನೆಂಟನೆಯ ಶತಮಾನದ ತೀವ್ರಗಾಮಿಗಳು ಹಾಗೂ ವಿಚಾರವಾದಿಗಳು ಮಧ್ಯಯುಗದ ಸಂಘಸಂಸ್ಥೆಗಳು, ಅಧಿಕಾರ, ಆಡಳಿತ ಮತ್ತು ನಂಬಿಕೆ, ಸಂಪ್ರದಾಯ ಕ್ರೈಸ್ತಧರ್ಮದಲ್ಲಿ ಇದ್ದ ನಂಬಿಕೆಗಳನ್ನು ಕಿತ್ತೊಗೆದು ನಿರ್ಮೂಲನ ಮಾಡಿ, ಅದರ ಸ್ಥಳದಲ್ಲಿ ಮಾನವೀಯತೆ, ಪ್ರಜಾಪ್ರಭುತ್ವ ಮತ್ತು ಸಮಾನತೆಗಳನ್ನು ಸ್ಥಾಪಿಸುವ ಗುರಿ ಹೊಂದಿದ್ದರು. ಈ ವಿಚಾರಗಳು ಸುಮಾರು ಅರ್ಧ ಶತಮಾನ ಕಾಲ ಪ್ರತಿಕ್ರಿಯಾ ವಾದಿಗಳ ಕಪಿಮುಷ್ಟಿಯಿಂದ ಮುಕ್ತಿಗೊಳ್ಳಲಿಲ್ಲ. ಆದರೆ ಹತ್ತೊಂಬತ್ತನೆಯ ಶತಮಾನದ ಎರಡನೆಯ ಭಾಗದಲ್ಲಿ ೧೮ನೆಯ ಶತಮಾನದ ವೈಚಾರಿಕತೆಯ ಮತ್ತೊಮ್ಮೆ ಹೊಸ ರೂಪ, ಶಕ್ತಿ ಪಡೆದು ಹೊಸ ಶತಮಾನವನ್ನೇ ಪ್ರಾರಂಭಿಸಿತು.

**ಪರಾಮರ್ಶನ ಗ್ರಂಥಗಳು**


೧. ಬಾರ್ನೆಸ್ ಎಚ್.ಇ., ೧೯೩೭. **ಆ್ಯನ್ ಇಂಟಲೆಕ್ಚ್ಯುಲ್ ಆ್ಯಂಡ್ ಕಲ್ಚರಲ್ ಹಿಸ್ಟರಿ ಆಫ್ ದ ವೆಸ್ಟರ್ನ್ ವರ್ಲ್ಡ್,** ಸಂ.೨, ನ್ಯೂಯಾರ್ಕ್.

೨. ಅರ್ನೆಸ್ಟ್ ಕ್ಯಾಸಿರಾರ್, ೧೯೫೧. **ದಿ ಫಿಲಾಸಫಿ ಆಫ್ ದಿ ಎನ್‌ಲೈಟನ್‌ಮೆಂಟ್,** ಪ್ರಿನ್‌ಸಿಟಾನ್. .

೩. ನಾರ್ಮನ್ ಹಾಮ್ಸ್‌ಸನ್, ೧೯೬೮. **ದಿ ಎನ್‌ಲೈಟನ್‌ಮೆಂಟ್,** ಪೆಂಗ್ವಿನ್ ಬುಕ್ಸ್.

# ೧೬. ಫ್ರೆಂಚ್ ದಾರ್ಶನಿಕರು ಪ್ರಜಾಪ್ರಭುತ್ವದ ಹೊಸ ವ್ಯಾಖ್ಯಾನಗಳು

ಸುಮಾರು ೧೭ನೆಯ ಶತಮಾನದ ಭೌತಿಕ ಕ್ರಾಂತಿಯಲ್ಲಿ ನಾವು ಬೇಕನ್, ಡೆಕಾರ್ಟ್ ಮತ್ತು ಐಸಾಕ್ ನ್ಯೂಟನ್ ಇವರುಗಳ ಪ್ರಭಾವವನ್ನು ಕಾಣುತ್ತೇವೆ. ಡೆಕಾರ್ಟೆ ಆಧುನಿಕ ಐರೋಪ್ಯ ತತ್ವಜ್ಞಾನ ಸಿದ್ಧಾಂತದ ಪ್ರಾರಂಭಕಾರ ಎಂಬ ಬಿರುದಿಗೆ ಪಾತ್ರನಾದರೆ, ನ್ಯೂಟನ್ ಗಣಿತ ಮತ್ತು ಭೌತಶಾಸ್ತ್ರಕ್ಕೆ ಸಂಬಂಧಿಸಿದ ವಿಷಯದಲ್ಲಿ ಕ್ರಾಂತಿಯುತವಾದ ಬದಲಾವಣೆಯನ್ನು ತಂದ ಕೀರ್ತಿಗೆ ಪಾತ್ರನಾಗಿದ್ದಾನೆ.

ಆದರೆ ೧೮ನೆಯ ಶತಮಾನದಲ್ಲಿ ಮನುಷ್ಯನ ಸಂಬಂಧವನ್ನು(ಹ್ಯೂಮನ್ ರಿಲೇಶನ್‌ಶಿಪ್) ಅರಿಯುವ ನಿಟ್ಟಿನಲ್ಲಿ ತರ್ಕ(ರೀಜನ್)ಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಯಿತು. ತರ್ಕವನ್ನು ಆಧಾರವಾಗಿಟ್ಟು ಮನುಷ್ಯ ಸಂಬಂಧವನ್ನು ಕಲಿಯುವ ಈ ಪ್ರಯತ್ನದಿಂದಾಗಿ ಈ ಯುಗವನ್ನು ತರ್ಕ ಮತ್ತು ಭೌತಿಕ ಬದಲಾವಣೆಯ ಯುಗ ಎಂದು ಕರೆಯಬಹುದಾಗಿದೆ.

ಈ ಯುಗದ ವಿಶೇಷತೆಗಳಲ್ಲಿ ಧರ್ಮವನ್ನು, ಸತ್ಯವನ್ನು ಪ್ರಶ್ನಿಸುವುದು, ವಿವೇಚನೆಗೆ ಹೊಂದಿಕೊಳ್ಳದ ತರ್ಕದಲ್ಲಿ ನಂಬಿಕೆಯಿರದಿರುವುದು, ಪ್ರಕಟಗೊಳ್ಳದ ದೇವರು ಇರುವನೆಂಬ ನಂಬಿಕೆ (ಡಿಇಸಮ್) ಮತ್ತು ಸಾಹಿತ್ಯದಲ್ಲಿ ಹೊಸ ಬದಲಾವಣೆ ತರುವುದು ಇತ್ಯಾದಿ ಪ್ರಮುಖವಾಗಿದೆ. ಈ ಹಿನ್ನೆಲೆಯಲ್ಲೇ ಫ್ರಾನ್ಸ್ ತತ್ವಜ್ಞಾನಿಗಳಾದ ವಾಲ್ಟೇರ್, ಡಿಡಿರೋಟ್, ರುಸ್ಸೊ ಮತ್ತು ಅವರ ಸಮಕಾಲೀನರಾದ ಜಾನ್ ಲಾಕ್ ಮತ್ತು ಫ್ರಾಂಕ್‌ಲೀನ್ ಇವರುಗಳು ಮನುಷ್ಯನ ಘನತೆ, ಗೌರವ ಮತ್ತು ಹಕ್ಕಿಗೆ ಹೊಸ ಆಯಾಮವನ್ನು ಕೊಟ್ಟಿದ್ದಾರೆ. ಈ ಬದಲಾವಣೆಯ ಪರಿಣಾಮದ ಸ್ವರೂಪ ಫ್ರಾನ್ಸ್‌ನಲ್ಲಿ ೧೭೮೯ನೆಯ ಇಸವಿಯಲ್ಲಿ ಕ್ರಾಂತಿ ನಡೆಯಿತು. ಇದೇ ರೀತಿಯ ಬದಲಾವಣೆಯನ್ನು ೧೯ನೆಯ ಶತಮಾನದ ಮಧ್ಯಭಾಗದಲ್ಲಿ ರಾಜಾರಾಮ್ ಮೋಹನ್‌ರಾಯ್ ಅವರು ಭಾರತದಲ್ಲಿ ಸಾಮಾಜಿಕ ಸುಧಾರಣೆಯ ಅಲೆಯನ್ನು ಎಬ್ಬಿಸಿ ಕ್ರಾಂತಿಯುತವಾದ ಬದಲಾವಣೆಯ ಕರ್ತೃ ಆಗಿದ್ದಾರೆ.

ಐರೋಪ್ಯ ತತ್ವಜ್ಞಾನಿಗಳು ಮತ್ತು ಬರಹಕಾರರ ಈ ಸುಧಾರಣಾ ಅಲೆ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಬದಲಾವಣೆ ತಂದಿತು ಎಂಬ ಮಾತೇನೂ ಅತಿಶಯೋಕ್ತಿಯಲ್ಲ. ಗಿಬ್ಬನ್ (೧೭೩೭-೧೭೯೪), ಗೋಥೆ (೧೭೪೯-೧೮೩೨), ಲೆಸ್ಸಿಂಗ್ (೧೭೨೯-೮೧) ಕ್ಯಾಂಟ್ (೧೭೨೯-೧೮೦೪), ಮೊಂಟೆಸ್ಕ್ಯೂ(೧೬೮೯-೧೭೫೫) ವಾಲ್ ಟೇರ್ (೧೬೯೪-೧೭೭೯) ಮತ್ತು ರುಸ್ಸೋ (೧೭೧೨-೧೭೭೮) ಸೇರಿ ಐರೋಪ್ಯ ವಿಚಾರಗಳಿಗೆ ಹೊಸ ಮೆರುಗನ್ನು ನೀಡಿದರು. ೧೮ನೆಯ ಶತಮಾನದ ಈ ರೀತಿಯ ಕ್ರಾಂತಿಯುತವಾದ ಬದಲಾವಣೆ ಸಾರ್ವತ್ರಿಕವಾಗಿದ್ದು ಚರ್ಚ್ ಮತ್ತು ರಾಜ್ಯಗಳಲ್ಲಿನ ಆಡಳಿತ ವ್ಯವಸ್ಥೆ ನ್ಯೂನತೆಗಳನ್ನು ಎತ್ತಿ ಹಿಡಿಯುವ ಮತ್ತು ಪ್ರಶ್ನಿಸುವ ಹೊಸ ವಿಚಾರಗಳು ಬೆಳೆಯಲು ಅವಕಾಶ ಮಾಡಿಕೊಟ್ಟಿತು.

ವಾಲ್ಟೇರ್, ಮೊಂಟೆಸ್ಕ್ಯೂ ಮತ್ತು ರುಸ್ಸೋ ಇವರು ತಮ್ಮ ದೇಶದ ಜನರ ಮೇಲೆ ಮಾತ್ರವಲ್ಲದೆ ಇತರ ದೇಶದ ಜನರ ಮೇಲೆ ಕೂಡ ಪ್ರಭಾವವನ್ನು ಬೀರಿದವರಾಗಿದ್ದಾರೆ. ಇವರ ಸಿದ್ಧಾಂತಗಳನ್ನು ಓದಿದ ಪರಿಣಾಮವಾಗಿ ಅಧಿಕಾರಶಾಹಿ ಆಡಳಿತ, ದಬ್ಬಾಳಿಕೆ ಮತ್ತು ಪಾದ್ರಿಗಳ ಅಸಂಪ್ರದಾಯಬದ್ಧ ನಡವಳಿಕೆಯ ವಿರುದ್ಧ ಹೋರಾಟ, ರಾಜಕೀಯ ಮತ್ತು ಸಾಮಾಜಿಕ ಸುಧಾರಣೆಗಳು ಅನಿವಾರ್ಯವಾಯಿತು. ಈ ಕಾಲದಲ್ಲಿ ಫ್ರಾನ್ಸ್ ದೇಶದಲ್ಲಿ ಅರಸನೇ ಎಲ್ಲಾ ಅಧಿಕಾರಗಳನ್ನು ತನ್ನ ಕೈಯಲ್ಲಿರಿಸಿಕೊಂಡು ತನಗೆ ಬೇಕಾದವರ ಮೇಲೆ ಕೃಪಾಕಟಾಕ್ಷವನ್ನು ತೋರಿಸುತ್ತಿದ್ದ. ಈ ರೀತಿಯಾಗಿ ಸಾಮಾನ್ಯ ಜನರಿಗೆ ಸರಕಾರದಲ್ಲಿ ಯಾವ ರೀತಿಯ ಅಸ್ತಿತ್ವ ಇರಲಿಲ್ಲ. ಜನಸಾಮಾನ್ಯರ ಸ್ವತಂತ್ರ್ಯವನ್ನು ರಕ್ಷಿಸುವ ಯಾವ ಮಾರ್ಗಗಳೂ ಅಲ್ಲಿರಲಿಲ್ಲ.

ಪ್ರಜ್ಞಾವಂತ (ಎನ್‌ಲೈಟಂಡ್ ಡೆಸಪಾಟ್) ರಾಜರುಗಳು ತತ್ವಜ್ಞಾನಿಗಳ ಪ್ರಭಾವಕ್ಕೆ ಒಳಗಾದರೂ, ತಮ್ಮ ಅಧಿಕಾರಶಾಹಿ ಧೋರಣೆಗಳಿಂದ ಹೊರಬರಲು ವಿಫಲರಾಗಿ ಜನರ ಒಲವನ್ನು ಕಳೆದುಕೊಂಡರು. ಜನರು ಬಯಸಿದ ಬದಲಾವಣೆಯನ್ನು ತರುವಂತಹ ಶಕ್ತಿ ಅವರಲ್ಲಿರಲಿಲ್ಲ. ಬೇರೆ ಯಾವ ವಿಧಿಯಿಲ್ಲದೆ ಜನರ ಬದಲಾವಣಾ ಒಲವು, ಕ್ರಾಂತಿ ಯನ್ನು ತರುವುದರಲ್ಲಿ ಯಶಸ್ಸಾಯಿತು.

ವಾಲ್ಟೇರ್ ತನ್ನ ಹರಿತವಾದ ಮಾತುಗಳು ಮತ್ತು ಬರವಣಿಗೆಯ ಮೂಲಕ ಚರ್ಚ್ ಮತ್ತು ಪಾದ್ರಿಗಳ ದುರಾಡಳಿತವನ್ನು ಬೆಳಕಿಗೆ ತರುವಲ್ಲಿ ಸಫಲವಾದ.

೧೭೮೯ರ ಫ್ರಾನ್ಸ್ ಕ್ರಾಂತಿಯು ಕೆಲವು ಸಿದ್ಧಾಂತಗಳಿಗೆ ಬದ್ಧವಾಗಿದೆ. ಅವುಗಳಲ್ಲಿ ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವತೆ ಪ್ರಮುಖವಾಗಿದೆ. ಈ ಸಿದ್ಧಾಂತವು ಫ್ರಾನ್ಸ್‌ನ ಜನರ ದೇಶಾಭಿಮಾನವನ್ನು ಕೆರಳಿಸಿ ಬೂರ್ಬನ್ ಆಡಳಿತವನ್ನು ಬೇರು ಸಹಿತ ಕಿತ್ತು ಹಾಕುವ ಪ್ರಯತ್ನವನ್ನು ಮಾಡಿದೆಯಲ್ಲದೆ, ಇಲ್ಲಿಯ ತನಕ ಪುರಸ್ಕಾರಗಳು, ಮನ್ನಣೆಗಳನ್ನು ಪಡೆದುಕೊಂಡು ಬಂದ ಪಾಳೇಗಾರತನವನ್ನು ತೊಡೆದುಹಾಕುವ ದಿಟ್ಟ ಹೆಜ್ಜೆಯನ್ನು ಹಾಕಿ ರಾಜಕೀಯ, ಕಾನೂನು ಮತ್ತು ಸರಕಾರದ ಸ್ವರೂಪವನ್ನೇ ಬದಲಾಯಿಸಿದೆ.

ಫ್ರಾನ್ಸ್ ದೇಶದ ಇತಿಹಾಸದಲ್ಲಿ ಕಂಡುಬರುವ ತತ್ವಜ್ಞಾನಿಗಳು ಇತಿಹಾಸಕಾರರು ಮತ್ತು ರಾಜಕೀಯ ವಿಜ್ಞಾನಿಗಳ ಬರವಣಿಗೆಗಳು ಕೇವಲ ಆ ದೇಶದ ಜನರ ಮನಸ್ಸಿನ ಮೇಲೆ ಪ್ರಭಾವ ಬೀರಿರುವುದಷ್ಟೇ ಅಲ್ಲದೆ ಇಡೀ ಯುರೋಪ್ ಖಂಡದ ಮೇಲೆ ತನ್ನ ಛಾಯೆಯನ್ನು ಬೀರಿದೆ. ವಾಲ್ಟೇರ್ ಮತ್ತು ರುಸ್ಸೋ ಮಿಲಿಯಗಟ್ಟಲೆ ಜನರ ಮನಸ್ಸನ್ನು ಗೆದ್ದರು. ವಾಲ್ಟೇರ್ ತನ್ನ ಹರಿತವಾದ ಮತ್ತು ದ್ವಂದ್ವಾರ್ಥ ಹೊಂದಿರುವ ಮಾತುಗಳಿಂದ ಬರವಣಿಗೆಯಿಂದ ಆಗಿನ ಸಾಮಾಜಿಕ ಅವ್ಯವಸ್ಥೆಯನ್ನು ಎತ್ತಿ ತೋರಿಸಿದರೆ, ರುಸ್ಸೋ ಜನರ ಹಕ್ಕುಗಳು ಮತ್ತು ಅಧಿಕಾರಗಳತ್ತ ಗಮನ ಸೆಳೆದ. ಈ ರೀತಿಯಾಗಿ ತತ್ವಜ್ಞಾನಿಗಳು ಬಡಜನರ ಶೋಷಣೆಯ ವಿರುದ್ಧ ತಮ್ಮ ಅಸಮಾಧಾನಗಳನ್ನು ತೋಡಿಕೊಂಡ ಪರಿಣಾಮವಾಗಿ ಸಾಮಾನ್ಯ ಜನರಲ್ಲೂ ಕೂಡ ಹೊಸ ಜಾಗ್ರತಿ ಮೂಡಿ ಬಂತು. ಈ ಜಾಗೃತಿ ಕ್ರಾಂತಿಯ ಸ್ವರೂಪವನ್ನು ತಳೆಯಿತು. ಜನರು ತಮಗೆ ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯ ದೊರಕಬೇಕು ಎಂಬ ವಾದವನ್ನು ಪ್ರತಿಪಾದಿಸತೊಡಗಿದರು.

ಮೊಂಟೆಸ್ಕ್ಯೂ ಒಬ್ಬ ಪ್ರಭಾವಶಾಲಿ ತತ್ವಜ್ಞಾನಿಯಾಗಿದ್ದು ಆಂಗ್ಲ ಸಂಸ್ಕೃತಿ ಮತ್ತು ರಾಜಕೀಯ ವ್ಯವಸ್ಥೆಯಿಂದ ಪ್ರಭಾವಿತಗೊಂಡಿದ್ದ. ಅವನು ಇಂಗ್ಲೆಂಡಿನಲ್ಲಿ ಶಾಂತಿ ಸುಭಿಕ್ಷೆ ಇದ್ದರೆ ಅದು ಕೇವಲ ಆ ದೇಶದ ಉದಾರ ಸಂವಿಧಾನಾತ್ಮಕ ವ್ಯವಸ್ಥೆಯಿಂದ ಎಂದು ಅಭಿಪ್ರಾಯ ಪಟ್ಟಿದ್ದಾನೆ. ಅದೇ ರೀತಿಯ ಸಂವಿಧಾನಾತ್ಮಕ ವ್ಯವಸ್ಥೆ ಫ್ರಾನ್ಸ್ ದೇಶದಲ್ಲೂ ಮೂಡಿಬರಬೇಕು ಎಂಬುದೇ ಮೊಂಟೆಸ್‌ಕ್ಯೂ ಅಭೀಷ್ಟೆ. ಅವನ "ಕಾನೂನಿನ ಮಹತ್ವ" (ಸ್ಪಿರಿಟ್ ಆಫ್ ಲಾಸ್) ಎಂಬ ಪುಸ್ತಕದಲ್ಲಿ ಆಂಗ್ಲ ಪ್ರಭಾವ ಎದ್ದು ಕಾಣುತ್ತದೆ. ೧೭೩೪ನೆಯ ಇಸವಿಯಲ್ಲಿ ಆತ ರೋಮನ್ ಸಾಮ್ರಾಜ್ಯದ ಶ್ರೇಷ್ಟತೆ ಮತ್ತು ಅದರ ಅವನತಿಯ ಬಗ್ಗೆ ಬರೆದ ಪುಸ್ತಕದಲ್ಲಿ ೧೬ನೆಯ ಶತಮಾನದಲ್ಲಿ ಜೀವಿಸಿದ್ದ ತತ್ವಜ್ಞಾನಿಯಾದ ಜೀನ್ ಬೋದಿನ್‌ನ ಮಾದರಿಯಲ್ಲಿ ಪರಿಸರವು ಮಾನವನ ನಡತೆ ಮತ್ತು ಆ ಪರಿಸರಕ್ಕೆ ಹೊಂದಿಕೊಳ್ಳುವ ಸರಕಾರವನ್ನು ನಿರ್ಧರಿಸುತ್ತದೆ ಎಂಬ ವಾದವನ್ನು ಮಂಡಿಸಲಾಗಿದೆ. ಪರಿಸರಕ್ಕೆ ಹೊಂದಿಕೊಳ್ಳದ ಅಧಿಕಾರಶಾಹಿ ಆಡಳಿತವೇ ರೋಮನ್ ಸಾಮ್ರಾಜ್ಯದ ಪತನಕ್ಕೆ ಕಾರಣವಾಯಿತು ಎಂದು ಅಭಿಪ್ರಾಯ ಪಟ್ಟಿದ್ದಾನೆ. ಇದೇ ರೀತಿಯ ಸಿದ್ಧಾಂತವನ್ನೇ ಆಧಾರವಾಗಿಟ್ಟುಕೊಂಡು ಕಾನೂನಿನ ಮಹತ್ವ ಎಂಬ ಪುಸ್ತಕವನ್ನು ಬರೆದ. ಈ ಪುಸ್ತಕದಲ್ಲಿ ಅವನು ಯಾವ ರೀತಿಯಲ್ಲಿ ಕಾನೂನು ಆ ದೇಶದ ಸಂವಿಧಾನ ಚೌಕಟ್ಟಿನಲ್ಲಿ ಜನರ ನಡತೆ, ಹವಾಗುಣ, ಧರ್ಮ ಮತ್ತು ವಾಣಿಜ್ಯ ವ್ಯವಸ್ಥೆಗೆ ಪೂರಕವಾಗಿರಬೇಕು ಎಂಬುದನ್ನು ಪ್ರತಿಪಾದಿಸಿದ. ಅವನ ಪ್ರಕಾರ ಪ್ರಾಕೃತಿಕ ಲಕ್ಷಣಗಳು, ಹವಾಗುಣ, ಮಣ್ಣಿನ ಸಾರತೆ ಇವೆಲ್ಲ ಮನುಷ್ಯನ ಗುಣ ಲಕ್ಷಣಗಳನ್ನಷ್ಟೇ ಅಲ್ಲದೆ ಯಾವ ರೀತಿಯ ಸರಕಾರ ಬೇಕು(ರಾಜತ್ವ, ಕುಲೀನ ಪ್ರಭುತ್ವ(ಅರಿಸ್ಟೋಕ್ರೆಸಿ), ಗಣರಾಜ್ಯ ಇತ್ಯಾದಿ) ಎಂಬುದನ್ನು ನಿರ್ಧರಿಸುತ್ತದೆ. ಅದೇ ರೀತಿ ಅಧಿಕಾರಕ್ಕೆ ಬಂದ ಸರಕಾರ ಯಾವ ರೀತಿಯ ಕಾನೂನು ವ್ಯವಸ್ಥೆ ಜನರಿಗೆ ಬೇಕು ಎಂಬುದನ್ನು ನಿರ್ಧರಿಸುತ್ತದೆ.

ಪ್ರತಿಯೊಂದು ಸರಕಾರವೂ ತನ್ನದೇ ಆದ ವಿಶಿಷ್ಟ ಗುಣ ಲಕ್ಷಣಗಳನ್ನು ಹೊಂದಿರುತ್ತದೆ. ಪ್ರತಿ ಸರಕಾರದ ಹಿಂದೆ ಜನರ ಪ್ರಭಾವ ಅಡಗಿರುತ್ತದೆ. ಸರಕಾರವು ಜನರ ಪ್ರಭಾವವನ್ನು ಕಳೆದುಕೊಂಡು ಅಧಿಕಾರದಲ್ಲಿ ಮುಂದುವರಿಯುವ ಸಾಧ್ಯತೆಗಳು ವಿರಳ; ಜನರ ಬಲವನ್ನು ಕಳೆದುಕೊಂಡ ಸರಕಾರದ ಬದಲಿಗೆ ಹೊಸ ಸರಕಾರ ಅಧಿಕಾರಕ್ಕೆ ಬರುತ್ತದೆ. ಕೇವಲ ಭಯದ ವಾತಾವರಣದಲ್ಲಿ ಅಧಿಕಾರಶಾಹಿ ದಬ್ಬಾಳಿಕೆಯ ಸರಕಾರ ಅಧಿಕಾರವನ್ನು ಮಾಡಬಹುದು. ಇಂತಹ ಸರಕಾರಕ್ಕೆ ಜನರ ಬೆಂಬಲ ಇರುವುದಿಲ್ಲವಾದರೂ ಆ ಸರಕಾರ ದಬ್ಬಾಳಿಕೆಯಿಂದ ದೇಶದ ರಾಜಕೀಯ ವ್ಯವಸ್ಥೆಯನ್ನು ಸಾಮಾಜಿಕ ವ್ಯವಸ್ಥೆಯನ್ನು, ವಿದ್ಯಾ ಇಲಾಖೆಯನ್ನು ತನ್ನ ಹದ್ದುಬಸ್ತಿನಲ್ಲಿರಿಸಿಕೊಂಡು ತನಗೆ ಅನುಕೂಲಕರವಾಗುವ ರೀತಿಯಲ್ಲಿ ಕಾನೂನನ್ನು ಸೃಷ್ಟಿಸಬಹುದು. ಇಂತಹ ರಾಜಕೀಯ ವ್ಯವಸ್ಥೆ

ಮನುಷ್ಯನನ್ನು ಗುಲಾಮಗಿರಿಗೆ ಕೊಂಡೊಯ್ಯುವುದರಲ್ಲಿ ಸಂಶಯವಿಲ್ಲ ಎಂಬ ಅಭಿಪ್ರಾಯ ಪಟ್ಟಿದ್ದಾನೆ. ಗುಲಾಮಗಿರಿ, ಬಹುಪತ್ನಿತ್ವ ಮತ್ತು ಇಸ್ಲಾಂ ಧರ್ಮ ಇದ್ದ ಪ್ರದೇಶದಲ್ಲಿ ಅಧಿಕಾರಶಾಹಿ ಆಡಳಿತ ವ್ಯವಸ್ಥೆಗೆ ಒಳ್ಳೆಯ ಭವಿಷ್ಯವಿದೆ. ಇಸ್ಲಾಂ ಧರ್ಮದಲ್ಲಿ ಗುಲಾಮಗಿರಿ, ಬಹುಪತ್ನಿತ್ವಗಳಿಗೆ ಅವಕಾಶವಿರುವ ಕಾರಣ ಇಂತಹ ವಾತಾವರಣದಲ್ಲಿ ಅಧಿಕಾರಶಾಹಿ ಆಡಳಿತಕ್ಕೆ ಹೆಚ್ಚು ವಿರೋಧಗಳು ಬರಲಾರವು.

ರಾಜನನ್ನು ಗೌರವ ದೃಷ್ಟಿಯಿಂದ ನೋಡಿಕೊಳ್ಳುವುದು ರಾಜತ್ವದ ಲಕ್ಷಣ. ರಾಜನ ಘನತೆ, ಗೌರವಗಳನ್ನು ಕಾಪಾಡುವ ದೃಷ್ಟಿಯಿಂದಲೇ ಆ ದೇಶದ ಕಾನೂನು ವ್ಯವಸ್ಥೆ ಸೃಷ್ಟಿಯಾಗುತ್ತದೆ. ಕುಲೀನರು, ಪುರಸ್ಕಾರಗಳನ್ನು ಹೊಂದಿದವರನ್ನು ತಮ್ಮ ಬೆಂಬಲಕ್ಕೆ ತೆಗೆದುಕೊಂಡು ಸಾಮಾನ್ಯ ಜನರಿಗೆ ವ್ಯಾಪಾರದಲ್ಲಾಗಲಿ ಅಥವಾ ಯಾವುದೇ ವ್ಯವಸ್ಥೆ ಯಲ್ಲಾಗಲೀ(ಸಾಮಾಜಿಕ, ರಾಜಕೀಯ) ಸ್ಥಾನಮಾನ ನೀಡದೆ ಕೇವಲ ತಮ್ಮ ಅಧಿಕಾರದಲ್ಲಿ ಉಳಿಸುವ ನಿಟ್ಟಿನಲ್ಲಿ ಕಾನೂನನ್ನು ಸೃಷ್ಟಿ ಮಾಡುವ ರಾಜತ್ವದ ಸರಕಾರದಲ್ಲಿ ಗೌರವವೇ ಮೂಲಭೂತ ಲಕ್ಷಣವಾಗಿದೆ. ಇಂತಹ ಸರಕಾರ ವಿಸ್ತೀರ್ಣದಲ್ಲಿ ದೊಡ್ಡದಿರುವ, ಕೆಥೋಲಿಕ್ ಧರ್ಮವನ್ನು ಹೊಂದಿರುವ, ಒಳ್ಳೆಯ ಮಧ್ಯಮ ಹವಾಗುಣ ಹೊಂದಿರುವ ದೇಶದಲ್ಲಿ ಕಂಡುಬರುತ್ತದೆ. ಇಂತಹ ರಾಜಕೀಯ ವ್ಯವಸ್ಥೆ ೧೮ನೆಯ ಶತಮಾನದಲ್ಲಿ ಫ್ರಾನ್ಸ್ ದೇಶದಲ್ಲಿ ಕಂಡುಬರುತ್ತಿತ್ತು. ಬೂರ್ಬನ್ ರಾಜರುಗಳು ದಬ್ಬಾಳಿಕೆಯಿಂದ ಅಧಿಕಾರವನ್ನು ಮಾಡುತ್ತಿದ್ದರು.

ಕುಲೀನರ ಆಡಳಿತ ವ್ಯವಸ್ಥೆಯ ಬಂಡವಾಳ ಆಧುನಿಕತೆಯಾಗಿರುತ್ತದೆ. ಹಾಗಾಗಿ ಆ ವ್ಯವಸ್ಥೆಯಲ್ಲಿ ಹೆಚ್ಚು ಅಧಿಕಾರ, ಸಂಪತ್ತು, ಗೌರವ, ಜನರ ಗುಣ ನಡತೆ ಕಾನೂನಿನ ಪೂರಕವಾಗಿದ್ದು ಬದಲಾವಣೆಗೆ ಕಾನೂನಿನ ಬೆಂಬಲ ಇರುತ್ತದೆ. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪ್ರಭಾವವೇ ಬಂಡವಾಳ, ಮೊಂಟೆಸ್‌ಕ್ಯೂ ಪ್ರಕಾರ ದೇಶಾಭಿಮಾನ, ಸಮಾನತೆ, ಭ್ರಾತೃತ್ವತೆ, ಪ್ರಜಾಪ್ರಭುತ್ವ ಅಥವಾ ಗಣರಾಜ್ಯ ಸರಕಾರದ ಮುಖ್ಯ ಲಕ್ಷಣಗಳಾಗಿವೆ. ಈ ರೀತಿಯಾಗಿ ಗೌರವ ರಾಜತ್ವದ ಮುಖ್ಯ ಲಕ್ಷಣವಾದರೆ ರಾಜಕೀಯ ಪ್ರಭಾವವೇ ಗಣರಾಜ್ಯ ಸರಕಾರದ ಮುಖ್ಯ ಲಕ್ಷಣ. ಗಣರಾಜ್ಯ ಅಥವಾ ಪ್ರಜಾಪ್ರಭುತ್ವ ಸರಕಾರವನ್ನು ಹೊಂದಿರುವ ದೇಶ ತನ್ನ ಕಾನೂನು ವ್ಯವಸ್ಥೆಯ ಮೂಲಕ ವಿದ್ಯಾಸಂಸ್ಥೆಯ ಮತ್ತು ಒಳ್ಳೆಯ ಮಾದರಿ ಮೂಲಕ ಜನರಲ್ಲಿ ಏಕತೆ, ಸಮಾನತೆ ಮತ್ತು ದೇಶಾಭಿಮಾನದ ಮಂತ್ರವನ್ನು ಬೀರಬೇಕು ಮತ್ತು ರಾಜಕೀಯ ವ್ಯವಸ್ಥೆ ಎಷ್ಟು ಚೊಕ್ಕವಾಗಿರಬೇಕೆಂದರೆ ಎಲ್ಲಾ ಪ್ರಜೆಗಳೂ ನೇರವಾಗಿ ಅಥವಾ ಪರೋಕ್ಷವಾಗಿ ತಮ್ಮನ್ನು ಅಥವಾ ತಮ್ಮ ಪ್ರತಿನಿಧಿಗಳ ಮೂಲಕ ಸರಕಾರದಲ್ಲಿ ತೊಡಗಿಸಿ ಕೊಳ್ಳು ವಂತಾಗಿರಬೇಕು. ವ್ಯಕ್ತಿಗೆ ವಿಶೇಷ ಸ್ಥಾನಮಾನ ಇರಬಾರದು. ಮೇಲ್ವರ್ಗ, ಕೆಳವರ್ಗ ಎಂಬ ಬೇಧ ಇರಬಾರದು. ಅಧಿಕಾರದ ದುರುಪಯೋಗ ನಡೆಯದಂತೆ ಅಡೆ-ತಡೆಗಳನ್ನು ನಿರ್ಮಿಸ ಬೇಕೆಂದು ಅಭಿಪ್ರಾಯಪಟ್ಟಿದ್ದಾನೆ.

ಮೊಂಟೆಸ್ಕ್ಯೂ ತನ್ನ ಕಾಲದ ವ್ಯವಸ್ಥೆಗಳನ್ನು ಖಂಡಿಸಿದ್ದರೂ ಮಧ್ಯಮ ಮಾರ್ಗಿ ಯಾಗಿದ್ದಾನೆ. ಅವನ ದೃಷ್ಟಿಯಲ್ಲಿ ಚೈನಾ, ರಷ್ಯಾ ನಿರಂಕುಶ ಆಡಳಿತವನ್ನೂ ಫ್ರಾನ್ಸ್ ರಾಜತ್ವವನ್ನು ಹೊಂದಿದ್ದರೆ ಜಿನೇವಾ ಒಂದು ಗಣರಾಜ್ಯವಾಗಿದೆ. ಹಾಗಾಗಿ ವ್ಯವಸ್ಥೆಗಳ ಬಗ್ಗೆ ಚಿಂತನೆ ಮಾಡಿದರೂ ಮಾದರಿ ಸರಕಾರ ಇಂತಹುದೇ ಆಗಬೇಕು ಎಂಬ ಸಾಮಾನ್ಯ ಸಿದ್ಧಾಂತವನ್ನು ನೀಡಲಿಲ್ಲ. ಈ ನಿಟ್ಟಿನಲ್ಲಿ ಹೇಳುವುದಾದರೆ ಆತನು ತನ್ನ ದೇಶದ ಸರಕಾರಿ ವ್ಯವಸ್ಥೆಯನ್ನು ತನ್ನ ತಾತ್ವಿಕವಾದ ವಿವಾದಗಳ ಸರಣಿಯ ಮತ್ತು ಅವಲೋಕನಗಳ ಮುಖಾಂತರ ಮಾಡಿದ್ದಾನೆಯೇ ಹೊರತು ಐತಿಹಾಸಿಕ ಬದಲಾವಣೆಯನ್ನು ತಿಳಿದು ಅಲ್ಲ. ಮೊಂಟೆಸ್‌ಕ್ಯೂನಿಗೆ ಪ್ರಕೃತಿಯನ್ನು ನೆಚ್ಚಿಕೊಂಡಿರುವ ಮನುಷ್ಯನಲ್ಲಿ ಹೆಚ್ಚು ನಂಬಿಕೆ ಇರದಿದ್ದರೂ ಆತನು ಬರೆದ ಕಾನೂನಿನ ಮಹತ್ವಕ್ಕೆ ೧೮ನೆಯ ಶತಮಾನದಲ್ಲಿ ಹೆಚ್ಚಿನ ಮನ್ನಣೆ ಇತ್ತು.

ಮೊಂಟೆಸ್ಕ್ಯೂ ನಡೆಸಿರುವ ಸಮೀಕ್ಷೆಯಿಂದ ತಿಳಿಯುವ ವಿಷಯವೇನೆಂದರೆ ದೊಡ್ಡ ಗಾತ್ರದ ದೇಶಗಳಿಗೆ ರಾಜತ್ವವೇ ಹೇಳಿ ಮಾಡಿಸಿದ ಸರಕಾರವಾಗುವುದಾದರೆ ಸಣ್ಣ ಗಾತ್ರದ ದೇಶಗಳಿಗೆ ಗಣರಾಜ್ಯವೇ ಅತ್ಯಂತ ಸೂಕ್ತ ಸರಕಾರವಾಗಿದೆ. ಇಂತಹ ಸರಕಾರ ಗಳಿಂದಲೇ ಸ್ವಾತಂತ್ರ್ಯವನ್ನು ಕಾಪಾಡಲಿಕ್ಕೆ ಸಾಧ್ಯ. ಯಾವುದೇ ಸರಕಾರ ಅಧಿಕಾರದ ದುರುಪಯೋಗವನ್ನು ಮಾಡದೆ ನಿಷ್ಠೆಯಿಂದ ಆಡಳಿತ ಮಾಡಿದರೆ ಮಾತ್ರ ಸ್ವಾತಂತ್ರ್ಯವು ಉಳಿಯಲಿಕ್ಕೆ ಸಾಧ್ಯ. ಅಧಿಕಾರದ ದುರುಪಯೋಗ ನಡೆಯದಂತೆ ನೋಡಿಕೊಳ್ಳಲು ಸರಕಾರದ ಆಡಳಿತದಲ್ಲಿ ಕೆಲವು ಅಡೆತಡೆಗಳು ಇರುವುದು ಅನಿವಾರ್ಯ(ಚೆಕ್ಸ್ ಆ್ಯಂಡ್ ಬ್ಯಾಲನ್ಸ್).

ಮೊಂಟೆಸ್ಕ್ಯೂ ಪ್ರಕಾರ ಇಂಗ್ಲೆಂಡಿನಲ್ಲಿ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಪ್ರತ್ಯೇಕವಾಗಿರುವುದರಿಂದ ಅಲ್ಲಿನ ಜನರು ಸ್ವಾತಂತ್ರ್ಯವನ್ನು ಅನುಭವಿಸುವವರಾಗಿದ್ದಾರೆ. ಅದೇ ರೀತಿಯ ವ್ಯವಸ್ಥೆಯನ್ನು ಫ್ರಾನ್ಸ್‌ನಲ್ಲೂ ತರಬೇಕೆನ್ನುವುದೇ ಅವನ ವಾದ. ಸರಕಾರದ ಪ್ರತಿಯೊಂದು ಅಂಗವೂ ಮತ್ತೊಂದು ಅಂಗದಿಂದ ಸ್ವತಂತ್ರವಾಗಿರಬೇಕು. ಒಂದು ಅಂಗದ ಮೇಲೆ ಮತ್ತೊಂದು ಅಂಗಕ್ಕೆ ಅಧಿಕಾರ ಇರಬಾರದು. ಶಾಸಕಾಂಗ ಮತ್ತು ಕಾರ್ಯಾಂಗ ಒಬ್ಬ ವ್ಯಕ್ತಿಯನ್ನು ಹೊಂದಿಕೊಂಡಿದ್ದರೆ ಅಂತಹ ಅಪವಿತ್ರ ಸಂಬಂಧದಿಂದ ಸ್ವಾತಂತ್ರ್ಯಕ್ಕೆ ಧಕ್ಕೆ ಇದೆ. ಇಂತಹ ವ್ಯವಸ್ಥೆಯಲ್ಲಿ ಆ ಸರಕಾರ ನಡೆಸುವ ರಾಜ ಅಥವಾ ಶಾಸಕಾಂಗ ಸಭೆ ಕಠಿಣವಾದ, ದಮನೀಯ ಕಾನೂನುಗಳನ್ನು ಜಾರಿಗೊಳಿಸುವ ಸಾಧ್ಯತೆಗಳಿವೆ. ಜನರ ಜೀವ ಮತ್ತು ಸ್ವಾತಂತ್ರ್ಯ ಇಂತಹ ಅಡೆ-ತಡೆಯಿಲ್ಲದ ಸರಕಾರದ ಕೈಯಲ್ಲಿ ಸಿಕ್ಕಿ ಬಳಲುವುದು ಖಂಡಿತ. ಅದೇ ರೀತಿ ನ್ಯಾಯಾಂಗ ಮತ್ತು ಶಾಸಕಾಂಗ ಒಟ್ಟು ಸೇರಿದರೆ ಕಾನೂನು ಪರಿಪಾಲನೆ ಮಾಡುವ ನ್ಯಾಯಾಧೀಶನೇ ಶಾಸಕನಾಗಿರುತ್ತಾನೆ. ಇಂತಹ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯ ಸಿಗುವುದು ಅಲಭ್ಯ. ಹಾಗೇ ಕಾರ್ಯಾಂಗ ಮತ್ತು ನ್ಯಾಯಾಂಗ ಒಂದಾಗಿದ್ದರೆ ನ್ಯಾಯಾಧೀಶನೇ ಕ್ರೂರಿಯಾಗಿ ವರ್ತಿಸುವ ಎಲ್ಲಾ ಸಾಧ್ಯತೆಗಳಿವೆ. ಈ ರೀತಿಯ ಅಧಿಕಾರದ ದುರುಪಯೋಗವನ್ನು ತಡೆಗಟ್ಟಲು ಮೊಂಟೆಸ್‌ಕ್ಯೂ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗದ ಪ್ರತ್ಯೇಕತೆಯನ್ನು ಬೆಂಬಲಿಸಿದ್ದಾನೆ. ಮೊಂಟೆಸ್ ಕ್ಯೂ ಮಂಡಿಸಿರುವ ಈ ಸಿದ್ಧಾಂತಕ್ಕೆ ಮಾರು ಹೋದ ಅಮೆರಿಕದ ಸಂವಿಧಾನ ಕರ್ತೃ ಮಡೀಸನನು “ಮೊಂಟೆಸ್‌ಕ್ಯೂ ಯಾವಾಗಲೂ ಸಲಹೆ ಕೇಳುವ ಒಬ್ಬ ಪ್ರವಾದಿ” ಎಂದು ಬಣ್ಣಿಸಿದ್ದಾನೆ. ಆದರೆ ಸರಕಾರದ ನಡವಳಿಕೆಯಲ್ಲಿ ಈ ರೀತಿಯ ಖಡಾಖಂಡಿತವಾದ ಪ್ರತ್ಯೇಕತೆ (ಸಪರೇಶನ್ ಆಪ್ ಪವರ್ಸ್) ಸಾಧ್ಯವಿಲ್ಲದ ವಿಷಯವಾಗಿದೆ. ಅಮೆರಿಕಾದಲ್ಲೂ ಖಡಾಖಂಡಿತವಾದ ಪ್ರತ್ಯೇಕತೆ ಇಲ್ಲದಿದ್ದರೂ ಕೆಲವು ಅಡೆ-ತಡೆಗಳಿದ್ದು (ಚೆಕ್ಸ್ ಅಂಡ್ ಬ್ಯಾಲನ್ಸ್) ತನ್ಮೂಲಕ ಅಧಿಕಾರದ ದುರುಪಯೋಗವನ್ನು ತಡೆಯುವ ವ್ಯವಸ್ಥೆ ಇದೆ. ಭಾರತದ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಶಾಸಕಾಂಗವು ಕೇವಲ ಶಾಸಕಾಂಗಕ್ಕೆ ಸಂಬಂಧಿಸಿದ ವಿಷಯಕ್ಕೆ ಸೀಮಿತವಾಗಿರುವುದಾದರೆ ಸಂವಿಧಾನದ ಖಂಡ (ಆರ್ಟಿಕಲ್) ೫೩ರ ಪ್ರಕಾರ ಕಾರ್ಯಾಂಗ ಅಧಿಕಾರವು ರಾಷ್ಟ್ರಪತಿಗಳ ಕೈಯಲ್ಲಿದೆ. ಆದರೆ ನಿಜವಾದ ಅಧಿಕಾರವನ್ನು ನಡೆಸುವ ಅಧಿಕಾರ ಇರುವುದು ಜನರಿಂದ ಚುನಾಯಿತಗೊಂಡ ಪ್ರತಿನಿಧಿ ಗಳು ಪ್ರತಿನಿಧಿಸುವ ಶಾಂಸಕಾಂಗ ಸಭೆಯ ಸದಸ್ಯರನ್ನು ಹೊಂದಿರುವ ಕ್ಯಾಬಿನೆಟ್‌ಗೆ.

ಇಂಗ್ಲೆಂಡ್‌ನ ಬಗ್ಗೆ ಮೊಂಟೆಸ್‌ಕ್ಯೂ ಹೇಳುವ ಪ್ರಕಾರ ಅಲ್ಲಿ ಕೆಳಮನೆ (ಹೌಸ್ ಆಫ್ ಕಾಮನ್ಸ್) ಜನರನ್ನು ಪ್ರತಿನಿಧಿಸಿದರೆ, ಮೇಲ್ಮನೆ (ಹೌಸ್ ಆಫ್ ಲಾರ್ಡ್) ಕುಲೀನರನ್ನು (ಲಾರ್ಡ್, ಪಿಯರ್ಸ್), ಗೌರವಸ್ಥರನ್ನು ಹೊಂದಿರುತ್ತದೆ. ಅದೇ ರೀತಿ ರಾಜನ ಅಧಿಕಾರವನ್ನು ಶಾಸಕಾಂಗ ತನ್ನ ಹಿಡಿತದಲ್ಲಿ ಇರಿಸಿದರೆ, ಹಣಕಾಸಿನ ಮೇಲೆ ಹಾಗೂ ವಿಟೋ ಅಧಿಕಾರ ಚಲಾಯಿಸುವ ಹಕ್ಕನ್ನು ರಾಜನಿಗೆ ಕಾಯ್ದಿರಿಸಲಾಗಿದೆ. ಹಾಗೇ ಅವನಿಂದ ನೇಮಕಗೊಂಡ ಕ್ಯಾಬಿನೆಟ್ ಅವನಿಗೆ ಜವಾಬ್ದಾರಿಯುತವಾಗಿದೆ. ಮೊಂಟೆಸ್ ಕ್ಯೂ ಆ ದೇಶದ ಹೆಬಿಯಸ್ ಕಾರ್ಪಸ್ ಕಾಯ್ದೆ, ಕ್ರಿಮಿನಲ್ ಕಾಯ್ದೆ ಬಗ್ಗೆ ಕೂಡ ಹೇಳಿದ್ದಾನೆ. ಅವನ ಆಂಗ್ಲ ಸಂವಿಧಾನದ ಮೇಲಿನ ವ್ಯಾಮೋಹ ಎಷ್ಟರ ಮಟ್ಟಿಗಿತ್ತೆಂದರೆ ಕೆಲವೊಂದು ಬಾರಿ ಇಂಗ್ಲೆಂಡಿನ ವ್ಯವಸ್ಥೆಗಳನ್ನೂ ಮೀರಿ ಬಣ್ಣಿಸಿದ್ದಾನೆ. ಇಂಗ್ಲೆಂಡಿನ ಸರಕಾರದಲ್ಲಿ ಕೂಡಾ ಮೊಂಟೆಸ್‌ಕ್ಯೂ ಹೇಳಿದ ರೀತಿಯಲ್ಲಿ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗ ಪ್ರತ್ಯೇಕವಾಗಿಲ್ಲ. ಅಲ್ಲಿ ಕೂಡ ಪಾರ್ಲಿಮೆಂಟರಿ ಸರಕಾರ ಅಸ್ತಿತ್ವದಲ್ಲಿರು ವುದರಿಂದ ಕಾರ್ಯಾಂಗ ಪಾರ್ಲಿಮೆಂಟ್‌ನ ಹತೋಟಿಯಲ್ಲಿದ್ದು ತನ್ನ ಕಾರ್ಯಭಾರ ಮಾಡಬೇಕಾಗಿದೆ. ಅಲ್ಲಿ ಲಾರ್ಡ್ ಚ್ಯಾನ್ಸಿಲರನು ಮೇಲ್ಮನೆಯ ಅಧ್ಯಕ್ಷನೂ ಹಾಗೂ ಕ್ಯಾಬಿನೇಟ್ ಸದಸ್ಯತ್ವವನ್ನು ಹೊಂದಿರುತ್ತಾನೆ. ಹಾಗಾಗಿ ಖಡಾಖಂಡಿತವಾಗಿ ಪ್ರತ್ಯೇಕತೆ ಸಾಧ್ಯವಿಲ್ಲ. ಆದರೂ ಅಲ್ಲಿನ ಜನರು ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ. ಕಾರಣ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ಸ್ವತಂತ್ರವಾಗಿ ತನ್ನ ಕಾರ್ಯಭಾರವನ್ನು ನಿಭಾಯಿಸುತ್ತದೆ. ಅಷ್ಟು ಮಾತ್ರವಲ್ಲದೆ ಅಲ್ಲಿನ ಜನರು ದೇಶದ ಕಾನೂನಿಗೆ ತಲೆ ಬಾಗುತ್ತಾರೆ. ಕಾನೂನು ದೃಷ್ಟಿಯಿಂದ ಯಾರೂ ಕೂಡ ಮೇಲು ಕೀಳು ಎಂಬ ಮಾತಿಲ್ಲ. ಎಲ್ಲರಿಗೂ ಒಂದೇ ರೀತಿಯ ಶಿಕ್ಷೆ ಹಾಗೂ ನ್ಯಾಯವನ್ನು ಕೊಡಲಾಗುತ್ತದೆ. ಅದೇ ರೀತಿ ಭಾರತ, ಜಪಾನ್, ಫ್ರಾನ್ಸ್ ದೇಶದಲ್ಲೂ ಖಡಾಖಂಡಿತವಾದ ಪ್ರತ್ಯೇಕತೆ ಇಲ್ಲದಿದ್ದರೂ ಜನರು ಸ್ವತಂತ್ರವನ್ನು ಸಂವಿಧಾನಾತ್ಮಕ ಅಧಿಕಾರವಾಗಿ ಅನುಭವಿಸುತ್ತಿದ್ದಾರೆ.

ಮೊಂಟೆಸ್‌ಕ್ಯೂನ ಕಾಲದಲ್ಲಿ ಸರಕಾರದ ಮುಖ್ಯ ಗುರಿ ದೇಶವನ್ನು ವೈರಿಗಳಿಂದ ರಕ್ಷಿಸುವುದು, ಕಾನೂನು ಪರಿಪಾಲನೆ ಮಾಡುವುದು, ಸಾಮಾಜಿಕ ನ್ಯಾಯ ಕೊಡುವುದು ಇತ್ಯಾದಿ. ಆ ಕಾಲದಲ್ಲಿ ಹೆಚ್ಚಿನ ಸರಕಾರಗಳು ಅಧಿಕಾರಶಾಹಿ ರಾಜರುಗಳ ಕೈಯಲ್ಲಿತ್ತು. ಸುಖೀ

ರಾಜ್ಯದ ಕಲ್ಪನೆ ಆ ಕಾಲದಲ್ಲಿ ಇನ್ನೂ ಪ್ರಬುದ್ಧಮಾನ ಪರಿಸ್ಥಿತಿಗೆ ಬಂದಿರಲಿಲ್ಲ. ಆದರೆ ಇಂದಿನ ಕಾಲದಲ್ಲಿ ಸುಖೀ ರಾಜ್ಯದ (ವೆಲ್‌ಫೇರ್ ಸ್ಟೇಟ್) ಕಲ್ಪನೆಗೆ ಬಹಳಷ್ಟು ಮಹತ್ವವಿದೆ. ಹಾಗಾಗಿ ಕಾರ್ಯಾಂಗ ಹೆಚ್ಚಿನ ಅಧಿಕಾರದಿಂದ ಮತ್ತು ಜವಾಬ್ದಾರಿಯುತವಾಗಿ ಕಾರ್ಯ ಮಾಡಬೇಕಾಗಿದೆ. ಅಷ್ಟೇ ಅಲ್ಲದೆ ರಾಜಕೀಯ ಪಕ್ಷಗಳ ಬೆಳವಣಿಗೆಯಿಂದಾಗಿ ಕಾರ್ಯಾಂಗವನ್ನು ಶಾಸಕಾಂಗದಿಂದ ಪ್ರತ್ಯೇಕಿಸುವ ಮಾತು ದೂರವಾಗಿ ಉಳಿದು ಅದರ ಬದಲಾಗಿ ಈ ಎರಡೂ ಅಂಗಗಳು ಒಂದಕ್ಕೊಂದು ಹೊಂದಾಣಿಕೆಯಿಂದ ವರ್ತಿಸುವ ಕಾಲ ಒದಗಿ ಬಂದಿದೆ.

ವಾಲ್ಟೇರ್ ಫ್ರಾನ್ಸ್ ದೇಶದ ಮತ್ತೊಬ್ಬ ಖ್ಯಾತ ತತ್ವಜ್ಞಾನಿ. ಆತನು ಕೂಡ ಸಾಮಾಜಿಕ ಸುಧಾರಣೆಗೆ ಬದ್ಧವಾಗಿದ್ದು ಸಾಮಾಜಿಕ ಮತ್ತು ರಾಜಕೀಯ ಕುಂದು ಕೊರತೆಗಳನ್ನು ತನ್ನ ಹರಿತವಾದ ಮಾತುಗಳ ಮೂಲಕ ಪ್ರಕಟಪಡಿಸಿದ್ದಾನೆ. ಅವನಿಗೆ ಚರ್ಚ್‌ನಲ್ಲಿನ ಪಾದ್ರಿಗಳು ನಡೆಸುವ ಅವ್ಯವಹಾರಗಳ ಬಗ್ಗೆ ಅಸಮಾಧಾನವಿತ್ತು. ಅದೇ ರೀತಿಯಲ್ಲಿ ಆತ ರಾಜನ ದೈವದತ್ತವಾದ ಅಧಿಕಾರಗಳ ಬಗ್ಗೆ(ಡಿವೈನ್ ಒರಿಜಿನ್ ಥಿಯರಿ) ಕೂಡ ವಿರೋಧಿಯಾಗಿದ್ದ. ಧರ್ಮದ ವಿಷಯದಲ್ಲಿ ಆತ ಧರ್ಮ ಸಹಿಷ್ಣುತೆಯ ಬಗ್ಗೆ ಹೇಳಿ ದ್ದಾನೆ. ಅದರ ಸಾಮಾಜಿಕ ಪುನರ್ ನಿರ್ಮಾಣದ ಬಗ್ಗೆ ಯಾವ ಮಾತೆತ್ತಿಲ್ಲ. ಅವನ ಪ್ರಕಾರ ಫ್ರಾನ್ಸ್ ದೇಶಕ್ಕೆ, ಅಧಿಕಾರಶಾಹಿ ರಾಜತ್ವಕ್ಕೆ ಅವನು ಪ್ರಜಾಪ್ರಭುತ್ವದಲ್ಲಿ ಹೆಚ್ಚಿನ ನಂಬಿಕೆಯನ್ನು ಇಟ್ಟುಕೊಂಡಿರಲಿಲ್ಲ. ಪ್ರಜಾಪ್ರಭುತ್ವ ಅಥವಾ ಗಣರಾಜ್ಯದ ಬಗ್ಗೆ ಇರುವ ತಿರಸ್ಕಾರವು ಎಷ್ಟಿತ್ತೆಂದರೆ ಅವನ ಮಾತಿನಲ್ಲೇ ಹೇಳುವುದಾದರೆ "ನಾನು ಒಂದು ಸಿಂಹದ ಅಧಿಕಾರದ ಕೆಳಗೆ ಇರಲು ಬಯಸುತ್ತೇನೆ ವಿನಹ ನೂರು ಇಲಿಗಳು ಮಾಡುವ ಅಧಿಕಾರದ ಕೆಳಗೆ ಅಲ್ಲ." ಆದರೂ ಫ್ರಾನ್ಸ್ ದೇಶದ ಜನರ ಮೇಲೆ ವಾಲ್ಟೇರ್ ಪ್ರಭಾವ ಬಹಳಷ್ಟಿತ್ತು.

ಇವನ ವಾದ ಥಾಮಸ್ ಹಾಬ್ಸ್ ಮತ್ತು ಜಾನ್‌ಲಾಕ್ ಮಂಡಿಸಿರುವ ವಾದಕ್ಕಿಂತ ಭಿನ್ನವಾಗಿದೆ. ಹಾಬ್ಸನು ಅಧಿಕಾರಶಾಹಿ ರಾಜತ್ವದ ಪ್ರತಿಪಾದಿಯಾಗಿದ್ದಾನೆ. ಅವನು ಬರೆದ ಲೆವಿಯಾತನ್(೧೬೫೧) ರಾಜನ ದೈವದತ್ತವಾದ ಅಧಿಕಾರಗಳ ಬಗ್ಗೆ ಹೊಸ ಆಯಾಮಾನವನ್ನು ಕೊಟ್ಟಿದೆ. ಅವನ ಪ್ರಕಾರ ಎಲ್ಲಿ ಪ್ರಾಕೃತಿಕ ಸಂಪತ್ತು ಕಡಿಮೆಯಾಗಿರುತ್ತದೆ ಮತ್ತು ಜನಸಂಖ್ಯೆ ವಿಪುಲವಾಗಿರುತ್ತದೆಯೋ ಅಂಥ ಪ್ರದೇಶದಲ್ಲಿ ಜೀವನಕ್ಕಾಗಿ ಸ್ಪರ್ಧೆ ಅನಿವಾರ್ಯವಾಗುತ್ತದೆ. ಮನುಷ್ಯ ತಾನು ಬದುಕುವ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಹೆಚ್ಚು ಸಂಪತ್ತನ್ನು ಪಡೆಯಲು ಹವಣಿಸುತ್ತಾನೆ. ಅವನ ಈ ಮೇಲೆ ಇಲ್ಲದ ಆಶೆಯನ್ನು ತಡೆಗಟ್ಟಬೇಕಾದರೆ ಅಲ್ಲಿ ಅವನಿಗಿಂತ ಅಧಿಕಾರವುಳ್ಳ ರಾಜನ ಅವಶ್ಯಕತೆ ಇದೆ ಎಂದು ಹೇಳಿದ್ದಾನೆ. ಈ ರೀತಿಯಾಗಿ ಹಾಬ್ಸ್ ಅಧಿಕಾರಶಾಹಿ ರಾಜತ್ವದ ಬಗ್ಗೆ ಹೇಳಿದ್ದಾನೆ. ಆದರೆ ವಾಲ್ಟೇರ್ ಜನರ ಸ್ವಾತಂತ್ರ್ಯವನ್ನು ಉಳಿಸುವ ಮತ್ತು ದಮನಕಾರಿ ಕಾನೂನುಗಳಿಂದ ಜನರನ್ನು ರಕ್ಷಿಸುವ ದೃಷ್ಟಿಯಿಂದ ಸಂವಿಧಾನಾತ್ಮಕವಾದ ರಾಜತ್ವವನ್ನು ಬಯಸಿದ್ದಾನೆ. ಜಾನ್‌ಲಾಕ್‌ನು ಯಾವ ಸರಕಾರ ತನ್ನ ಇತಿ ಮಿತಿಗಳನ್ನು ಅರಿತು ಸಂವಿಧಾನಾತ್ಮಕವಾಗಿ ವರ್ತಿಸಿ ಜನರ ಅಧಿಕಾರಗಳನ್ನು ರಕ್ಷಿಸುತ್ತದೆ ಅಂಥ ಸರಕಾರವನ್ನು ಬಯಸಿದ್ದಾನೆ. ಈ ನಿಟ್ಟಿನಲ್ಲಿ ಸರಕಾರವನ್ನು ಆಂತರಿಕವಾಗಿ ತಡೆಗಟ್ಟುವ, ಆರೋಗ್ಯಕರವಾದ ಅಡೆ-ತಡೆಗಳ ಬಗ್ಗೆ ವಾದಿಸಿದ್ದಾನೆ.

ಎಲ್ಲಾ ತತ್ವಜ್ಞಾನಿಗಳ ಪ್ರಭಾವಕ್ಕಿಂತ ರುಸ್ಸೋ ಪ್ರಭಾವ ಜಾಸ್ತಿಯಾಗಿತ್ತು ಎಂಬ ಮಾತೇನು ಅತಿಶಯೋಕ್ತಿಯಲ್ಲ. ಆತನನ್ನು ಫ್ರಾನ್ಸ್ ಕ್ರಾಂತಿಯ ಪ್ರವಾದಿ ಎಂದೂ ಕರೆಯುವುದುಂಟು. ಆತನೊಬ್ಬ ಕ್ರಾಂತಿಕಾರಿ ತತ್ವಜ್ಞಾನಿಯಾಗಿದ್ದು ಫ್ರಾನ್ಸ್ ದೇಶದ ಸಮಕಾಲೀನ ರಾಜಕೀಯ ವ್ಯವಸ್ಥೆಗೆ ಬದಲಾದ ಹೊಸ ಬದಲಾವಣೆಯನ್ನು ಕೊಡಲು ಪ್ರಯತ್ನಿಸಿದ್ದಾನೆ. ತನ್ನ ಪುಸ್ತಕ "ಸಾಮಾಜಿಕ ಒಪ್ಪಂದದಲ್ಲಿ" (ಸೋಶಿಯಲ್ ಕಾಂಟ್ರಾಕ್ಟ್) ಸಾಮಾಜಿಕ ಕುಂದು ಕೊರತೆಗಳ ಬಗ್ಗೆ ಮಾತಾಡುತ್ತಾ ಪ್ರಾರಂಭದಲ್ಲಿ ಪ್ರಪಂಚದಲ್ಲಿ ಹುಟ್ಟಿದ ಮನುಷ್ಯ ಸಂತೋಷಿಯಾಗಿದ್ದ. ಆದರೆ ನಾಗರಿಕತೆ ಅವನನ್ನು ಕೆಡಿಸಿತು ಮತ್ತು ಅವನಲ್ಲಿ ಅನೈತಿಕತೆಯನ್ನು ತುಂಬಿಸಿತು. ಅನೈತಿಕತೆ ಅವನಲ್ಲಿ ತುಂಬುವ ಮೊದಲು ಸ್ವಾತಂತ್ರ್ಯವನ್ನು, ಸಮಾನತೆಯನ್ನು ಹೊಂದಿದ್ದ. ಆದರೆ ಶ್ರೀಮಂತ, ಬಡವನ ನಡುವಿನ ಅಂತರದ ಕೃಷಿ ಹಾಗೂ ಔದ್ಯೋಗೀಕರಣ ಬೆಳೆದಂತೆ ಸಮಾಜ ಮತ್ತು ಸರಕಾರ ವ್ಯವಸ್ಥಿತಗೊಂಡು ಶ್ರೀಮಂತರ ಅಧಿಕಾರ ಮತ್ತು ಸ್ಥಾನಮಾನಗಳನ್ನು ಕಾಪಾಡುವ ಪ್ರಯತ್ನ ನಡೆಯಿತು. ಇದು ಅಸಮಾನತೆಯ ಬೆಳವಣಿಗೆಗೆ ದಾರಿ ಮಾಡಿಕೊಟ್ಟಿತು. ಇದು ಮನುಷ್ಯನ ಎಲ್ಲಾ ದುಃಖಗಳಿಗೂ ಮೂಲ ಕಾರಣವಾಯಿತು. ಇದರ ಪರಿಣಾಮ ಶ್ರೀಮಂತರು ಬಡವರನ್ನು ಶೋಷಣೆ ಮಾಡಲು ಪ್ರಾರಂಭಿಸಿದರು.

೧೭೫೩ರಲ್ಲಿ ಬರೆದ ಅಸಮಾನತೆಯ ಮೂಲ ಎಂಬ ಪುಸ್ತಕದಲ್ಲಿ ರುಸ್ಸೋ ಯಾವ ರೀತಿಯಲ್ಲಿ ಸ್ವಾರ್ಥಿ ಜನರು ಬಡವರನ್ನು ಶೋಷಣೆ ಮಾಡಿದರು ಎಂಬ ವಿಷಯದ ಬಗ್ಗೆ ಹೇಳಿದ್ದಾನೆ. ಶ್ರೀಮಂತ ತನ್ನ ಸ್ವಾರ್ಥಕ್ಕಾಗಿ ಬಡವನನ್ನು ದುಡಿಸುತ್ತಾ ಅವನಿಂದಲೇ ತನ್ನ ಒಡೆತನವನ್ನು ಒಪ್ಪಿಕೊಳ್ಳುವಂತೆ ಮಾಡಿದ ಪರಿಣಾಮವಾಗಿ ಖಾಸಗಿ ಆಸ್ತಿ ಜಾರಿಗೆ ಬಂತು. ಇದರೊಂದಿಗೆ ಅಸಮಾನತೆ ಇನ್ನೂ ಜಾಸ್ತಿಯಾಯಿತು. ಶ್ರೀಮಂತ ಇನ್ನೂ ಶ್ರೀಮಂತನಾಗುತ್ತಾ ಮುಂದುವರಿದ.

ಥಾಮಸ್ ಹಾಬ್ಸ್ ಹೇಳುವಂತೆ ಪ್ರಾರಂಭದಲ್ಲಿ 'ತಾಕತ್ತೆ ಹಕ್ಕಾಗಿತ್ತು'. ಈ ಹಂತ ದಲ್ಲಿ ಮನುಷ್ಯ ಪ್ರಾಣಿಯ ಹಾಗೆ ವರ್ತಿಸುತ್ತಾ ಏಕಾಂಗಿ ಜೀವನವನ್ನು ನಡೆಸುತ್ತಿದ್ದ. ಜಾನ್ ಲಾಕ್ ಹೇಳುವಂತೆ

*ಪ್ರಪಂಚದ ಪ್ರಾರಂಭದಿಂದಲೂ ಮನುಷ್ಯ ಸುಖೀ ಜೀವನ ವನ್ನು ಅನುಭವಿಸುತ್ತಿದ್ದ. ಪ್ರಾಕೃತಿಕ ಕಾನೂನು ಆತನಲ್ಲಿ ಬದುಕುವ ಹಕ್ಕನ್ನು, ಆಸ್ತಿ ಹೊಂದುವ ಅಧಿಕಾರವನ್ನು ಮತ್ತು ಸ್ವತಂತ್ರವಾಗಿ ತಿರುಗಾಡುವ ಹಕ್ಕನ್ನೂ ದಯಪಾಲಿಸಿತ್ತು. ಆ ಹಂತದಲ್ಲಿ ಈ ಹಕ್ಕುಗಳನ್ನು ಪ್ರತಿಪಾದಿಸುವ ಅಧಿಕಾರವನ್ನು ಹೊಂದಿರುವ ಸರಕಾರಗಳಾಗಲೀ ಅಥವಾ ಈ ಹಕ್ಕುಗಳ ಮಿತಿ ಮೀರಿದ ಬಳಕೆಯ ಮೇಲೆ ನಿಗಾ ಇಡುವ ಮತ್ತು ಆ ಹಕ್ಕುಗಳ ವ್ಯಾಪ್ತಿಯನ್ನು ತಿಳಿಸುವ ನ್ಯಾಯಾಧಿಕಾರಿಯಾಗಲೀ ಇರಲಿಲ್ಲ. ಪ್ರತಿಯೊಬ್ಬನೂ ಕೂಡ ತನಗೆ ತೋಚಿದ ರೀತಿಯಲ್ಲಿ ಈ ಹಕ್ಕುಗಳನ್ನು ಅನುಭವಿಸುತ್ತ ಈ ಹಕ್ಕುಗಳ ಉಲ್ಲಂಘನೆಗೆ ಮೂಲ ಕಾರಣವಾಗಿ ಜಗಳಕ್ಕೆ ನಾಂದಿ ಹಾಡಿದ.*

ರುಸ್ಸೋ ಹೇಳುವಂತೆ

*ಮನುಷ್ಯ ಪ್ರಾರಂಭದಿಂದಲೂ ಸುಖಿಯಾಗಿದ್ದು ಸಮಯ ಕಳೆದಂತೆ, ಜನಸಂಖ್ಯೆ ಹೆಚ್ಚಾದಂತೆ, ಸ್ವಂತ ಆಸ್ತಿಯ ವ್ಯಾಮೋಹ ಬೆಳೆದಂತೆ ಜಗಳಗಂಟಿತನವನ್ನು ಬೆಳೆಸಿ, ಕಡೆಗೆ ತನ್ನ ಮೇಲೆ ತನಗೇ ಜಿಗುಪ್ಸೆ ಬಂದು ಈ ಸಮಸ್ಯೆಗಳ ಪರಿಹಾರ ಎಂಬಂತೆ ಒಂದು ಒಡಂಬಡಿಕೆಗೆ ಮುಂದಾದ. ಈ ಒಡಂಬಡಿಕೆಯ ಪ್ರಕಾರ ತನ್ನ ಹಕ್ಕುಗಳು ಮತ್ತು ಅಧಿಕಾರಗಳನ್ನು ಸಮಾಜಕ್ಕೆ ಒಪ್ಪಿಸಿ ಪ್ರಾಕೃತಿಕ ವ್ಯವಸ್ಥೆಯ ಮೇಲೆ ತೆರೆ ಎಳೆದ.*

ರುಸ್ಸೋ ಹೇಳುವಂತೆ "ಮನುಷ್ಯ ಸ್ವತಂತ್ರವಾಗಿ ಹುಟ್ಟಿದರೂ ಸಂಕೋಲೆಯಿಂದ ಬಂಧಿತನಾಗಿದ್ದಾನೆ." ಈ ರೀತಿಯ ಮಾತುಗಳಿಂದ ಆತ ಸಮಾಜದ ಅವ್ಯವಸ್ಥೆಯ ವಿರುದ್ಧ ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾನೆ. ಆತ ನಾವು ಮತ್ತೆ ಪ್ರಕೃತಿಯ ಮಡಿಲಿಗೆ ಹೋದಲ್ಲಿ ಮಾತ್ರ ಈ ರೀತಿಯ ಬಂಧನದಿಂದ ಮತ್ತು ಕೆಟ್ಟು ಹೋದ ಸಾಮಾಜಿಕ ವ್ಯವಸ್ಥೆಯಿಂದ ಹೊರಬರಲು ಸಾಧ್ಯ ಎಂದು ಪ್ರತಿಪಾದಿಸಿದ್ದಾನೆ. ಪ್ರಕೃತಿಯ ಮಡಿಲಿನಲ್ಲಿ ಸ್ವರ್ಗ ಸುಖವನ್ನು ಅನುಭವಿಸುತ್ತಿದ್ದ ಮನುಷ್ಯ ಕ್ರಮೇಣ ಕಾಲ ಕಳೆದಂತೆ ಕೋಪ ಆಕ್ರೋಶಗಳನ್ನು ತನ್ನಲ್ಲಿ ತುಂಬಿಕೊಂಡು ತನ್ನ ಸ್ವಾರ್ಥ ಸಾಧನೆಗೋಸ್ಕರ ಬೇರೆಯವರ ಮೇಲೆ ದ್ವೇಷ ಕಾರುವ ಮನೋಭಾವವನ್ನು ತಳೆದ. ಅವನಲ್ಲಿರುವ ಸರಳತೆ ಮಾಯವಾಗಿ ತಾನು ತನ್ನದು ಎಂಬ ಭಾವನೆ ಬೆಳೆಯಿತು. ದಿನ ಕಳೆದಂತೆ ಯುದ್ಧಗಳು ಕೊಲೆ, ದರೋಡೆ ಪ್ರಾಪಂಚಿಕವಾಯಿತು. ಈ ರೀತಿಯ ಅನಾಹುತಗಳಿಂದ ತನ್ನನ್ನು ರಕ್ಷಿಸಲು ಸಾಮಾಜಿಕ ಒಪ್ಪಂದಕ್ಕೆ ಮೊರೆ ಹೋದ. ಈ ಒಪ್ಪಂದದ ಪ್ರಕಾರ ತನ್ನ ಕೆಲವು ಸಾಮಾಜಿಕ ಅಧಿಕಾರ, ಹಕ್ಕುಗಳನ್ನು ಸಮಾಜಕ್ಕೆ ಒಪ್ಪಿಸಿದ. ಇದನ್ನು ರುಸ್ಸೋ ಜನರಲ್ ವಿಲ್ ಎಂದು ಕರೆದಿದ್ದಾನೆ. ಜನರಲ್ ವಿಲ್ ಎಲ್ಲ ಜನರ ಉದ್ಧಾರವನ್ನು ಬಯಸುವ ಮತ್ತು ದೇಶದ ಏಳಿಗೆಗೋಸ್ಕರ ತನ್ನ ಸ್ವಂತ ಹಿತಾಸಕ್ತಿಗಳನ್ನು ಕಡೆಗಣಿಸುವ ಮನೋಭಾವವನ್ನು ಪಡೆದಿತ್ತು. ಒಬ್ಬ ವ್ಯಕ್ತಿ ಸೂಚಿಸಲು ಸಾಧ್ಯವಿಲ್ಲ ಬದಲಾಗಿ ಇಡೀ ಸಮಾಜವೇ ಮುಂದೆ ಬರಬೇಕು ಎಂಬುದಾಗಿ ಅಭಿಪ್ರಾಯ ಪಟ್ಟಿದ್ದಾನೆ.

ರುಸ್ಸೋ ತನ್ನ ವ್ಯಾಖ್ಯಾನದಲ್ಲಿ ಜನರಲ್ ವಿಲ್ ವನ್ನು ಎಲ್ಲರ ಪ್ರತ್ಯಯದೊಂದಿಗೆ ಕಾಮನ್ ವಿಲ್ ಸೇರಿಸಿದ್ದಾನೆ. ಮೊದಲನೆಯ ವಿಲ್ ಸಾಮಾನ್ಯ ಜನರ ಹಿತಾಸಕ್ತಿಗಳ ಬಗ್ಗೆ ಗಮನಕೊಟ್ಟರೆ ಎರಡನೆಯ ವಿಲ್ ಖಾಸಗಿ ಹಿತಾಸಕ್ತಿಗಳ ಬಗ್ಗೆ ಗಮನ ಕೊಡಬೇಕಾಗಿದೆ. ರುಸ್ಸೋ ಇಂಡಿವೀಜುವಲ್ ವಿಲ್‌ಗೆ ಹೆಚ್ಚು ಗಮನಕೊಡದಿರುವುದು ಇಲ್ಲಿ ವ್ಯಕ್ತವಾಗಿದೆ. ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಮರಣ ದಂಡನೆ ಶಿಕ್ಷೆಯನ್ನು ಅಥವಾ ಜೀವಾವಧಿ ಶಿಕ್ಷೆಯನ್ನು ಕೊಡುವ ಅಧಿಕಾರವಿರುವುದು ಕೇವಲ ಸರಕಾರಕ್ಕೆ(ನ್ಯಾಯಾಂಗ ವ್ಯವಸ್ಥೆಗೆ ಅನುಗುಣವಾಗಿ). ಆದರೆ ರುಸ್ಸೋ ಸಾಮಾನ್ಯ ಸೂಚ್ಯ ಪ್ರತ್ಯಯದ ಮುಖೇನ ಜನಸಾಮಾನ್ಯ ಪ್ರತ್ಯಯದ ಒಮ್ಮತದ ಮೇರೆಗೆ ಕೊಡುವ

ಶಿಕ್ಷೆ ಇದಾಗಿದೆ ಎಂದು ಹೇಳಿದ್ದಾನೆ. ಅದೇ ರೀತಿ ಪ್ರಕೃತಿಯ ಮಡಿಲಿನಲ್ಲಿ ಇರುವಾಗ ಮಾನವ ಸ್ವರ್ಗ ಸುಖವನ್ನು ಅನುಭವಿಸುತ್ತಿದ್ದ ಎಂದು ಹೇಳುವ ಮಾತುಗಳು ಕೂಡ ಅಷ್ಟೇನೂ ಸಮಂಜಸವಲ್ಲ. ಸಮಸ್ಯೆಗಳೇನೋ ಇತ್ತು, ಆದರೆ ಹದ್ದುಮೀರಿ ಹೋಗುವ ಹಂತಕ್ಕೆ ತಲುಪಿರಲಿಲ್ಲ. ಹಾಗೇ ಅವನು ಹೇಳುವಂತೆ ಆ್ಯಕ್ಚ್ಯುಲ್ ವಿಲ್ ಮತ್ತು ರಿಯಲ್‌ವಿಲ್‌ಗಳ ನಡುವಿನ ಅಂತರವನ್ನು ಕೂಡ ತಪ್ಪಾಗಿ ಗ್ರಹಿಸಿಕೊಂಡಿರುವುದು ಕಂಡುಬರುತ್ತದೆ. ಅವನು ಹೇಳಿದ ರೀತಿಯಲ್ಲಿ ತಪ್ಪು ಮಾಡಿದುದಕ್ಕೆ ಶಿಕ್ಷೆಯನ್ನು ಕೊಟ್ಟಾಗ ನಿಜವಾದ ವಿಲ್ ಸಮರ್ಥನೆ ನೀಡುವುದಾದರೂ ಆ್ಯಕ್ಚ್ಯುಲ್ ವಿಲ್ ಸಮರ್ಥನೆ ನೀಡುವುದಿಲ್ಲವೆಂದು ಮಾಡಿಕೊಂಡಿರುವ ವಿಭಜನೆಗಳು ಕೇವಲ ಕೃತಕತೆಯನ್ನು ಸೂಚಿಸುವುದಾಗಿದೆ.

ರುಸ್ಸೋ ಬರೆದ ಸಾಮಾಜಿಕ ಒಪ್ಪಂದ ಒಂದು ರಾಜಕೀಯ ಸಾಧ್ಯತೆ ಮತ್ತು ಲೋಕ ಪ್ರಿಯ ಭಾವನೆಗಳನ್ನು ಕೆರಳಿಸುವ ಸಾಧನವಾಗಿದೆ. ಫ್ರಾನ್ಸ್ ದೇಶದ ಜನರ ಭಾವನೆಗಳನ್ನು ಕೆರಳಿಸಿ ಸರಕಾರದ ವಿರುದ್ಧ ನಡೆದ ಹೋರಾಟದಲ್ಲಿ ಒಂದು ಪ್ರಮುಖ ಅಸ್ತ್ರವಾಗಿ ಪರಿಣಮಿಸಿದ್ದೇನೂ ಸುಳ್ಳಲ್ಲ. ಇದನ್ನು ನೆಪೋಲಿಯನ್ ಕೂಡ ಒಪ್ಪಿದ್ದಾನೆ. ನೆಪೋಲಿಯನ್ ಹೇಳುವಂತೆ "ಒಂದು ವೇಳೆ ಫ್ರಾನ್ಸ್‌ನಲ್ಲಿ ರುಸ್ಸೋ ಹುಟ್ಟದಿದ್ದಲ್ಲಿ ಫ್ರಾನ್ಸ್‌ನ ಜನರು ಕ್ರಾಂತಿಯುತವಾದ ಬದಲಾವಣೆಯನ್ನು ಕಾಣುತ್ತಿರಲಿಲ್ಲ" ಎಂಬ ಮಾತು ರುಸ್ಸೋನ ತತ್ವಗಳ ಪ್ರಭಾವವನ್ನು ಸೂಚಿಸುತ್ತದೆ. ಆತನ ಎಲ್ಲಾ ಕೃತಿಗಳು ಕ್ರಾಂತಿಯುತ ಭಾವನೆಗಳ ತಾಣವಾಗಿದ್ದು ಪ್ರಜಾಪ್ರಭುತ್ವ ಅಥವಾ ಗಣರಾಜ್ಯದ ಅವಶ್ಯಕತೆಯನ್ನು ಪ್ರತಿಬಿಂಬಿಸು ವಂತಿತ್ತು. ಅವನ ಪ್ರಕಾರ ಗಣರಾಜ್ಯವು ಒಂದು ಮಾದರೀ ಸರಕಾರವಾಗಿದ್ದು ಅದರಲ್ಲಿ ಜನರು ತಮ್ಮ ಮತವನ್ನು ಚಲಾಯಿಸುವ ಹಕ್ಕನ್ನು ಹೊಂದಿರುತ್ತಾರೆ ಎಂದು ಹೇಳಿದ್ದಾನೆ. ಈ ಹೊಸ ತತ್ವಗಳು ೧೮ನೆಯ ಶತಮಾನದ ಜನರಲ್ಲಿ ಕುಲೀನರು ಮತ್ತು ಪುರೋಹಿತ ವರ್ಗಕ್ಕೆ ಸೇರಿದವರು ಅನುಭವಿಸುತ್ತಿರುವ ಸಾಮಾಜಿಕ, ರಾಜಕೀಯ, ಆರ್ಥಿಕ ಸ್ಥಾನ ಮಾನಗಳನ್ನು ಪ್ರಶ್ನಿಸುವ ಪ್ರಜ್ಞಾವಂತ ಭಾವನೆಗಳನ್ನು ಮೂಡಿಸಿತು ಎಂಬ ಮಾತುಗಳು ಉತ್ಪ್ರೇಕ್ಷೆಯಲ್ಲ.

ರುಸ್ಸೋ ಹೇಳಿದ ಸಾಮಾಜಿಕ ಒಪ್ಪಂದವು ರಾಜನ ದೈವದತ್ತ ಅಧಿಕಾರಗಳ ವಿರುದ್ಧ ವಾದ ಬಂಡಾಯವಾಗಿದೆ(ಡಿವೈನ್ ಓರಿಜಿನ್ ಥಿಯರಿ). ರಾಜ್ಯಗಳ ಕರ್ತೃ ದೇವರಲ್ಲ, ಬದಲಾಗಿ ಪರಿಸ್ಥಿತಿಯ ಒತ್ತಡಗಳಿಗೆ ಸಿಕ್ಕಿ ಜನರು ರಾಜನೊಂದಿಗೆ ಮಾಡಿ ಕೊಂಡ ಒಪ್ಪಂದವಾಗಿದೆ ಎಂದು ಅಭಿಪ್ರಾಯಿಸಿದ್ದಾನೆ.

ಜಾನ್ ಲಾಕ್ ಹೇಳಿದ ಪ್ರಕಾರ ಸಾಮಾಜಿಕ ಒಪ್ಪಂದ ನಾಗರಿಕ ಸಮಾಜಕ್ಕೆ ಕಾರಣ ವಾದರೆ, ಸರಕಾರದ ಒಪ್ಪಂದ ನಾಗರಿಕ ಸಮಾಜಕ್ಕೆ ಕಾರಣವಾದರೆ, ಸರಕಾರದ ಒಪ್ಪಂದ (ಗವರ್ನಮೆಂಟ್ ಕಾಂಟ್ರಾಕ್ಸ್) ಸರಕಾರದ ರಚನೆಗೆ ಕಾರಣವಾಗಿದೆ. ನಾಗರಿಕ ಹಕ್ಕುಗಳನ್ನು, ಆಸ್ತಿಯ ಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು ರಕ್ಷಿಸಲು ಸಮಾಜ ರಚನೆಯಾಗಿದೆ. ಆದರೆ ಸಮಾಜ ರಚನೆಯಾಗುವ ಹಂತದಲ್ಲಿ ಮನುಷ್ಯ ತನ್ನ ಎಲ್ಲಾ ಹಕ್ಕುಗಳನ್ನು ತ್ಯಾಜ್ಯ ಮಾಡದೆ ಕೆಲವು ಹಕ್ಕುಗಳನ್ನು ಮಾತ್ರ ಬಿಟ್ಟು ಕೊಟ್ಟಿರುತ್ತಾನೆ. ಯಾರು ಈ ಒಡಂಬಡಿಕೆಯ ವಿರುದ್ಧ ಹೋಗುತ್ತಾನೋ ಅವನನ್ನು ಕಾನೂನು ರೀತ್ಯ ಶಿಕ್ಷಿಸುವ ಹಕ್ಕನ್ನು ಸಮಾಜ ಪಡೆದಿರುತ್ತದೆ. ಈ ನಿಟ್ಟಿನಲ್ಲಿ ಸಮಾಜ ಕೆಲವೊಂದು ಅಧಿಕಾರಗಳನ್ನು ಸರಕಾರ ನಡೆಸುವ ಕೇವಲ ಕೆಲವು ಜನರ ಕೈಗೆ ಹಸ್ತಾಂತರಿಸಿರುತ್ತದೆ. ಇಂತಹ ವ್ಯವಸ್ಥೆಯನ್ನು ಸರಕಾರದ ಒಪ್ಪಂದ ಎಂದು ಲಾಕ್ ಕರೆದಿದ್ದಾನೆ. ಆದರೆ ಲಾಕ್‌ನು ರುಸ್ಸೋ ಹೇಳುವಂತೆ ಲೋಕಪ್ರಿಯ ಸಾರ್ವಭೌಮತೆಯ ಬಗ್ಗೆ ಹೆಚ್ಚು ಒತ್ತು ಕೊಡದಿರು ವುದನ್ನು ನಾವು ಕಾಣುತ್ತೇವೆ(ಪಾಪ್ಯುಲರ್ ಸಾವ್‌ರೆಂಟಿ).

ರುಸ್ಸೋ ತನ್ನ ಸಿದ್ಧಾಂತದಲ್ಲಿ ಸರಕಾರ ಮತ್ತು ಜನರ ಸಾರ್ವಭೌಮ ಅಧಿಕಾರಗಳ ನಡುವೆ ಅಂತರವನ್ನು ಕಂಡಿದ್ದಾನೆ. ಅವನ ಪ್ರಕಾರ ಸರಕಾರ ಎಂಬುದು ಕಾರ್ಯಾಂಗ ಅಧಿಕಾರಗಳನ್ನು ಹೊಂದಿದ್ದು, ಸಾರ್ವಭೌಮ ಜನರ ಹಿತಾಸಕ್ತಿಗಳನ್ನು ಕಾಪಾಡುವ ಒಂದು ಪ್ರತಿನಿಧಿಯಾಗಿದೆ. ಕಾನೂನು, ಕಟ್ಟಳೆಗಳನ್ನು ತರುವ ಅಧಿಕಾರವನ್ನು ಕೂಡ ಹೊಂದಿರುತ್ತದೆ. ಅಲ್ಲಿ ಎಲ್ಲಾ ಅಧಿಕಾರಗಳು ಜನಸಾಮಾನ್ಯನ ಅಪೇಕ್ಷೆಯಂತೆ ನಡೆಯುವ ವ್ಯವಸ್ಥೆಯಿದ್ದು ಜನಸಾಮಾನ್ಯನೇ ಸಾರ್ವಭೌಮನಾಗಿದ್ದು ಸಾರ್ವಭೌಮ ಅಧಿಕಾರಗಳನ್ನು ಅನುಭವಿಸುತ್ತಿರಬೇಕು ಎಂದಿದ್ದಾನೆ. ಅಂತಹ ವ್ಯವಸ್ಥೆಯಲ್ಲಿ ಸರಕಾರವು ಜನಸಾಮಾನ್ಯರ ಹಿಡಿತದಲ್ಲೇ ಇದ್ದು ಹದ್ದುಮೀರಿ ಹೋಗುವ ಸಾಧ್ಯತೆಗಳಿಲ್ಲ. ರುಸ್ಸೋ ತನ್ನ ಸಿದ್ಧಾಂತ ದಲ್ಲಿ ರಾಜನ ಸಾರ್ವಭೌಮತೆಯ ಬದಲಾಗಿ ಜನಸಾಮಾನ್ಯರ ಸಾರ್ವಭೌಮತೆಯನ್ನು ಪ್ರತಿಪಾದಿಸುವನಾಗಿದ್ದಾನೆ. ಅವನಿಗೆ ನೇರ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದ್ದಿತೇ ವಿನಹ ಪರೋಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಲ್ಲ.

ನಮ್ಮ ದೇಶದ ಸಂವಿಧಾನದಲ್ಲಿ ತಿಳಿಸಿರುವಂತೆ ಭಾರತ ಒಂದು ಸಾರ್ವಭೌಮ ರಾಷ್ಟ್ರವಾಗಿದ್ದು ಜನಸಾಮಾನ್ಯನು ಸಾರ್ವಭೌಮತೆಯ ಕೇಂದ್ರ ಬಿಂದುವಾಗಿದ್ದಾನೆ. ರುಸ್ಸೋ ಹೇಳುವ ಸರಕಾರವು ಎಲ್ಲಾ ಜನರ ಆಶೆ ಆಕಾಂಕ್ಷೆಗಳ ಪ್ರತಿಬಿಂಬವಾಗಿದ್ದು ಅಂತಹ ವ್ಯವಸ್ಥೆಯಲ್ಲಿ ಜನರು ತಮಗೆ ಬೇಕಾದ ಚುನಾಯಿತ ಸರಕಾರವನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆ. ಇಂತಹ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ಸಾರ್ವಭೌಮನೇ ಹೊರತು ಗುಲಾಮನಲ್ಲ. ಈ ವ್ಯವಸ್ಥೆಯಲ್ಲಿ ಆತ ಸ್ವಾತಂತ್ರ್ಯ, ಸಮಾನತೆ ಮತ್ತು ಆಸ್ತಿಯನ್ನು ಹೊಂದುವ ಹಕ್ಕನ್ನು ಪಡೆದಿರುತ್ತಾನೆ.

ರುಸ್ಸೋ ಪ್ರಜಾಪ್ರಭುತ್ವದ ಆರಾಧಕನಾಗಿದ್ದು ನೇರ ಪ್ರಜಾಪ್ರಭುತ್ವವನ್ನು ಬಯಸಿದ್ದಾನೆ. ಆದರೆ ಪರೋಕ್ಷ ಪ್ರಜಾಪ್ರಭುತ್ವವನ್ನು ಹೊಂದಿರುವ ಸರಕಾರಗಳೂ ಕೂಡ ಪ್ರಜಾ ಪ್ರಭುತ್ವವನ್ನು ಕಾಪಾಡಲು ಸಮರ್ಥವಾಗಿರುತ್ತದೆ. ಉದಾಹರಣೆಗೆ ಭಾರತದಲ್ಲಿನ ಪಂಚಾಯತ್ ರಾಜ್ಯ ವ್ಯವಸ್ಥೆ.

ಫ್ರಾನ್ಸ್‌ನ ಜನರು ರುಸ್ಸೋ ತತ್ವಗಳಿಂದ ಪ್ರಭಾವಿತಗೊಂಡು ೧೬ನೆಯ ಲೂಯಿಯ ಅಧಿಕಾರಶಾಹಿ ಆಡಳಿತದ ವಿರುದ್ಧ ದಂಗೆ ಎದ್ದು ರಾಜತ್ವವನ್ನು ಅಂತ್ಯಗೊಳಿಸಿ ಜನ ಸಾಮಾನ್ಯರ ಹಕ್ಕುಗಳನ್ನು ಪ್ರತಿಪಾದಿಸುವ ಹೊಸ ಸಂವಿಧಾನ ಮತ್ತು ಸರಕಾರದ ರಚನೆಗೆ ಕಾರ್ಯೋನ್ಮುಖರಾದ ಮಾತುಗಳು ಐತಿಹಾಸಿಕ ಸತ್ಯವಾಗಿದೆ. ಹಾಗೇ ಅಮೆರಿಕ ದೇಶ ಕೂಡಾ ಜನಸಾಮಾನ್ಯನ ಹಕ್ಕುಗಳನ್ನು ಕಾಪಾಡಲು ಮತ್ತು ದಬ್ಬಾಳಿಕೆಯನ್ನು ತಡೆಗಟ್ಟಲು ಸಂವಿಧಾನಾತ್ಮಕವಾದ ರಕ್ಷಣೋಪಾಯವನ್ನು ತೆಗೆದುಕೊಂಡಿರುವುದು ತಿಳಿದ ವಿಷಯ ವಾಗಿದೆ. ಅಮೆರಿಕ ದೇಶದ ಸ್ವಾತಂತ್ರ್ಯ ಘೋಷಣೆಯ ಸಾರಾಂಶ ಈ ಕೆಳಗಿನಂತಿದೆ.

*ಎಲ್ಲಾ ಜನರು ಸಮಾನರಾಗಿದ್ದು ಯಾರೂ ಕಸಿದುಕೊಳ್ಳದ ಅಧಿಕಾರಗಳನ್ನು ಹೊಂದಿದ್ದು, ಈ ಅಧಿಕಾರಗಳನ್ನು ಪಡೆಯಲು ಜನರ ಪ್ರತಿನಿಧಿಗಳನ್ನೊಳ ಗೊಂಡ ಸರಕಾರವನ್ನು ರಚಿಸಿ, ಅದರ ಮೂಲಕ ಜನಸಾಮಾನ್ಯರ ಸಮ್ಮತಿಗನುಗುಣವಾಗಿ ಅಧಿಕಾರವನ್ನು ನಡೆಸುವಂತಿರ ಬೇಕು. ಯಾವ ಸರಕಾರವೇ ಆಗಲಿ ಜನರು ಹಕ್ಕುಗಳನ್ನು ಬದಲಾಯಿಸುವ ಅಥವಾ ತೊಡೆದು ಹಾಕುವ ಪ್ರಯತ್ನ ಮಾಡಿದ್ದಲ್ಲಿ ಅಂತ ಸರಕಾರವನ್ನು ತೆಗೆದು ಹಾಕಿ ಅದರ ಬದಲಾಗಿ ಜನಸಾಮಾನ್ಯರ ಹಕ್ಕುಗಳನ್ನು ಕಾಪಾಡುವ ಸರಕಾರವನ್ನು ರಚಿಸದಿದ್ದಲ್ಲಿ ಜನರು ತಮ್ಮ ಸುಖ ಸಂತೋಷಗಳನ್ನು ಕಳೆದುಕೊಳ್ಳುವುದರಲ್ಲಿ ಸಂದೇಹವಿಲ್ಲ.*

ರುಸ್ಸೋ ತತ್ವಗಳು ಗುಲಾಮಗಿರಿಯಿಂದ ಬಳಲುವ ಜನರಲ್ಲಿ ಜಾಗೃತಿಯನ್ನು ಮೂಡಿಸಿ ಅಧಿಕಾರಶಾಹಿ ಮತ್ತು ಪರದೇಶಿಯ ಆಡಳಿತದಾರರ ವಿರುದ್ಧ ಹೋರಾಡುವ ಸಂಕಲ್ಪವನ್ನು ಮೂಡಿಸುವುದರಲ್ಲಿ ಯಶಸ್ವಿಯಾಗಿದೆ. ಉದಾಹರಣೆಗೆ ತೆಗೆದುಕೊಳ್ಳು ವುದಾದರೆ ನೆದರ್‌ಲ್ಯಾಂಡ್‌ನ ಜನರು ಸ್ಪೆಯಿನ್ ವಿರುದ್ಧ ಹೋರಾಡಿ ತಮ್ಮ ಕಳೆದುಹೋದ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾರೆ. ಸ್ಪೆಯಿನ್ ಮತ್ತು ಇಟಲಿ ಕೂಡ ರುಸ್ಸೋ ತತ್ವಗಳಿಂದ ಪ್ರಭಾವಿತಗೊಂಡಿತ್ತು.

ಸ್ವಾತಂತ್ರ್ಯದ ಬಗ್ಗೆ ವ್ಯಾಖ್ಯಾನ ಮಾಡುತ್ತಾ ರುಸ್ಸೋ ಹೇಳಿರುವಂತೆ

*ದೇಶಗಳು ಗಾತ್ರದಲ್ಲಿ ದೊಡ್ಡದಾದಂತೆ ಜನರು ಅನುಭವಿಸುವ ಸ್ವಾತಂತ್ರ್ಯ ತನ್ನ ಗಾತ್ರವನ್ನು ಕುಗ್ಗಿಸಿಕೊಳ್ಳುತ್ತದೆ. ಸ್ವಾತಂತ್ರ್ಯ ಅಂದರೆ ರಾಜಕೀಯ ಅಧಿಕಾರಗಳನ್ನು ಪಡೆಯುವ ಸ್ವಾತಂತ್ರ್ಯವೇ ವಿನಾ ರಾಜಕೀಯ ಹಿಡಿತದಿಂದ ಮುಕ್ತಗೊಳ್ಳುವುದಿಲ್ಲ. ಇಂಥ ಸ್ವಾತಂತ್ರ್ಯ ಕೇವಲ ಸಣ್ಣ ಮತ್ತು ನೇರ ಪ್ರಜಾಪ್ರಭುತ್ವವನ್ನು ಹೊಂದಿರುವ ದೇಶ ಗಳಲ್ಲಿ ಕಂಡು ಬರುತ್ತದೆ*

ಎಂದು ಅಭಿಪ್ರಾಯಿಸಿದ್ದಾನೆ.

ಕಾನೂನು ಒಂದು ಪಂಗಡ ಅಥವಾ ಒಂದು ಗುಂಪಿನ ಅಭಿಪ್ರಾಯವಾಗಿರದೆ ಇಡೀ ದೇಶದ ಅಭಿಪ್ರಾಯವನ್ನು ಹೊಂದಿರುತ್ತದೆ. ಹಾಗಾಗಿ ಕಾನೂನನ್ನು ಜನರ ಅಭಿಪ್ರಾಯಗಳ ಸೂಚಕ ಎಂದು ಕರೆಯುವುದರಲ್ಲಿ ಯಾವ ತಪ್ಪಿಲ್ಲ. ದೇಶದ ಹಿತಾಸಕ್ತಿಗೋಸ್ಕರ ತನ್ನ ಸ್ವಂತ

ಹಿತಾಸಕ್ತಿಗಳನ್ನು ಬದಿಗೊತ್ತಿ ಕಾನೂನಿಗೆ ತಲೆಬಾಗಿ ಸಮಾಜದ ಶ್ರೇಯಸ್ಸಿ ಗೋಸ್ಕರ ತ್ಯಾಗಮಾಡಿ ತನಗೆ ಸಿಗಬೇಕಾದ ಸ್ಥಾನಮಾನಗಳು ಮತ್ತು ಹಕ್ಕುಗಳನ್ನು ಪಡೆದು ಸ್ವಾತಂತ್ರ್ಯವನ್ನು ಅನುಭವಿಸುವ ಮಾತುಗಳು ಇಲ್ಲಿ ವ್ಯಕ್ತವಾಗಿವೆ.

ಈ ರೀತಿಯಾಗಿ ಮೊಂಟೆಸ್‌ಕ್ಯೂ ೧೭೯೧ರ ಸಂವಿಧಾನಕ್ಕೆ ಕಾರಣಕರ್ತನಾದರೆ, ವಾಲ್ಟೇರ್ ಪಾದ್ರಿಗಳ ಸಂವಿಧಾನದ ಉದಯಕ್ಕೆ ಕಾರಣವಾಗಿದ್ದಾನೆ. ಅದೇ ರೀತಿ ರುಸ್ಸೋ ಏಕಾಂಗಿಯಾಗಿ ಪ್ರಜಾಪ್ರಭುತ್ವ ಅಧಿಕಾರಗಳ ಬಗ್ಗೆ ಕೂಗಿ ಹೇಳಿದ ಮಹಾನ್ ವ್ಯಕ್ತಿಯಾಗಿದ್ದಾನೆ.

<u>ಪರಾಮರ್ಶನ ಗ್ರಂಥಗಳು</u>

೧. ಲೂಯಿ ಗೋಟ್‌ಶಾಕ್, **ಇರಾ ಆಫ್ ದಿ ಫ್ರೆಂಚ್ ರೆವಲ್ಯೂಷನ್(೧೭೧೫-೧೮೧೫).**
೨. **ಬ್ರಿಟೇನಿಕಾ ಎನ್‌ಸೈಕ್ಲೋಪೀಡಿಯಾ,** ೧೯೮೧, ೧೫ನೆಯ ಆವೃತ್ತಿ
೩. ಡೇವಿಡ್ ಥಾಮ್ಸನ್, ೧೯೬೬. **ಯುರೋಪ್ ಸಿನ್ಸ್ ನೆಪೋಲಿಯನ್,** ಪೆಲಿಕಾನ್
೪. ಕೆಟಲ್ಬ್ ಸಿ.ಡಿ.ಎಂ., ೧೭೮೯. **ಎ ಹಿಸ್ಟರಿ ಆಫ್ ಮಾಡರ್ನ್ ಟೈಮ್ಸ್**

## ೧೭. ೧೭೮೯ರ ಫ್ರಾನ್ಸಿನ ಕ್ರಾಂತಿಯ ಸ್ವರೂಪ

ಫ್ರಾನ್ಸಿನಲ್ಲಿ ೧೭೮೯ರಲ್ಲಿ ಜರುಗಿದ ಕ್ರಾಂತಿ ಚರಿತ್ರೆ ರಚನಾಶಾಸ್ತ್ರದ ದೃಷ್ಟಿಯಿಂದ ಮಹತ್ವಪೂರ್ಣ ಘಟನೆಯೆನಿಸಿದೆ. ಈ ಕ್ರಾಂತಿಯ ಸ್ವರೂಪದ ಕುರಿತು ಅನೇಕ ವಾದ-ವಿವಾದಗಳು ಈಗಾಗಲೇ ನಡೆದಿದೆ ಮತ್ತು ನಡೆಯುತ್ತಿದೆ. ಕ್ರಾಂತಿಯ ಹುಟ್ಟು, ಬೆಳವಣಿಗೆ ಮತ್ತು ಸಂದರ್ಭಕ್ಕನುಗುಣವಾಗಿ ಅದು ಪಡೆದುಕೊಂಡ ವಿವಿಧ ಆಯಾಮಗಳು ಇತಿಹಾಸಕಾರರಿಗೆ ಸಂಶೋಧನೆಯ ವಸ್ತುವಾಗಿದೆ. ಈ ಕ್ರಾಂತಿಯನ್ನು ಪರಿಪೂರ್ಣವಾಗಿ ಸಾಮಾಜಿಕ ಕ್ರಾಂತಿಯೆಂದು ಕೆಲವರು, ಮತ್ತಿತರರು ಇದನ್ನು ರಾಜಕೀಯ ಕ್ರಾಂತಿಯೆಂದು ವಾದಿಸುತ್ತಾರೆ. ಕ್ರಾಂತಿಯ ಸ್ವರೂಪಕ್ಕೆ ಸಂಬಂಧಪಟ್ಟಂತೆ ವಿದ್ವಾಂಸರುಗಳಲ್ಲಿ ಒಮ್ಮತವಿಲ್ಲ. ಫ್ರಾನ್ಸಿನ ಕ್ರಾಂತಿಯನ್ನು ಶ್ರೀಮಂತ ವರ್ಗದ ಕ್ರಾಂತಿ, ಮಧ್ಯಮ ವರ್ಗದ ಕ್ರಾಂತಿ, ಸಾಮಾನ್ಯ ವರ್ಗದ ಕ್ರಾಂತಿ, ಪ್ರಜಾಪ್ರಭುತ್ವವಾದಿ ಕ್ರಾಂತಿ ಮುಂತಾಗಿ ಬೇರೆ ಬೇರೆ ಸೈದ್ಧಾಂತಿಕ ಚೌಕಟ್ಟುಗಳ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಲಾಗಿದೆ. ಈ ಲೇಖನದಲ್ಲಿ ಈ ರೀತಿಯ ವ್ಯಾಖ್ಯಾನಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಏಕೆಂದರೆ ಕ್ರಾಂತಿಯ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ತಾತ್ವಿಕ ಕಾರಣಗಳು ಹಾಗೂ ಕ್ರಾಂತಿ ಬೆಳೆದು ಬಂದ ಬಗೆಯ ಸಾಂಪ್ರದಾಯಿಕ ವಿಶ್ಲೇಷಣೆಯ ಗಡಿಯನ್ನು ದಾಟುವ ಅಗತ್ಯ ವಿದೆ. ಕ್ರಾಂತಿಯ ನಿಜ ಸ್ವರೂಪವನ್ನು ಅರಿತುಕೊಳ್ಳಲು ಈ ರೀತಿಯ ಮರು ವ್ಯಾಖ್ಯಾನಿ ಸುವ ಪ್ರಕ್ರಿಯೆಯು ಅನಿವಾರ್ಯವೂ ಹೌದು.

ಫ್ರಾನ್ಸಿನ ಕ್ರಾಂತಿಯ ಸ್ವರೂಪ ಕುರಿತು ಚರ್ಚೆ ನಡೆಸುವಾಗ ಇದೊಂದು ಸುಧಾರಣೆ ಯಂತೆಯೂ ಕಂಡುಬರುತ್ತದೆ. ಸುಧಾರಣೆಗೆ ಕ್ರಾಂತಿಯ ಅಗತ್ಯವಿದ್ದರೂ ಇವೆರಡೂ ಬೇರೆ ಬೇರೆಯವೇ ಆಗಿವೆ. ಪ್ರಜ್ಞಾವಂತ ಅರಸರುಗಳ ಆಳ್ವಿಕೆ ಮತ್ತು ಕ್ರಾಂತಿಯ ಸಮಯದಲ್ಲಾದ ಬದಲಾವಣೆಗಳನ್ನು ಗಮನಿಸುವಾಗ ಅನೇಕ ಸಾಮ್ಯತೆಗಳು ಕಂಡುಬರುತ್ತವೆ. ಹದಿನೆಂಟನೆಯ ಶತಮಾನದ ಯುರೋಪನ್ನು 'ಪ್ರಜ್ಞಾವಂತ ರಾಜಪ್ರಭುತ್ವದ ಯುಗ' ಎಂಬುದಾಗಿಯೂ ಕರೆಯಲಾಗಿದೆ. ಈ ಪ್ರಜ್ಞಾವಂತ ಅರಸರುಗಳು ಮತ್ತು ಮಂತ್ರಿಗಳು ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು. ಈ ಸುಧಾರಣೆಗಳು ತತ್ವಜ್ಞಾನಿಗಳ ಸಿದ್ಧಾಂತಗಳಲ್ಲಿ ಅಡಕವಾಗಿರುವ ಅಂಶಗಳೇ ಆಗಿದ್ದವು. ಈ ಸುಧಾರಣೆಗಳು, ನಿರಂಕುಶ ಆಡಳಿತವೂ ಇದ್ದುದರಿಂದಾಗಿ ಅಷ್ಟೊಂದು ಸುಲಭವಾಗಿ ಜಾರಿಗೆ ಬರುವಂತಿರಲಿಲ್ಲ. ಇದಕ್ಕೆ ಕ್ರಾಂತಿಯ ಅನಿವಾರ್ಯತೆ ಇತ್ತು. ಕ್ರಾಂತಿಯುದ್ದಕ್ಕೂ ಪ್ರಜ್ಞಾವಂತ ಅರಸರುಗಳು ಯೋಜಿತ ಸುಧಾರಣೆಯನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಜಾರಿಗೆ ತರುವ ಪ್ರಯತ್ನವೇ ನಡೆಯುತ್ತಿತ್ತು ಎಂಬುದಾಗಿಯೂ ವ್ಯಾಖ್ಯಾನಿಸಬಹುದು. ರಾಷ್ಟ್ರೀಯ ಏಕತೆ, ಆಡಳಿತದ ಸುಧಾರಣೆ, ಸವಲತ್ತುಗಳನ್ನು ರದ್ದುಪಡಿಸುವುದು, ಗುಲಾಮ ಪದ್ಧತಿ ಮತ್ತು

ಊಳಿಗಮಾನ್ಯ ಪದ್ಧತಿ ಯನ್ನು ರದ್ದುಗೊಳಿಸುವುದು, ಸಂವಿಧಾನಾತ್ಮಕ ನೀತಿಗಳನ್ನು ಜಾರಿಗೆ ತರುವುದು, ಚುನಾವಣೆಗಳನ್ನು ನಡೆಸುವುದು ಇವೇ ಮುಂತಾದ ಉದ್ದೇಶವನ್ನು ಕ್ರಾಂತಿ ಹೊಂದಿತ್ತು. ಇದು ಪ್ರಜ್ಞಾವಂತ ಅರಸರುಗಳ ಪ್ರಣಾಳಿಕೆಯೂ ಆಗಿತ್ತು.

ಕ್ರಾಂತಿ ನಡೆದರೂ ಫ್ರಾನ್ಸಿನಲ್ಲಿ ರಾಜಪ್ರಭುತ್ವ ಕೊನೆಗೊಳ್ಳಲಿಲ್ಲ. ೧೬ನೆಯ ಲೂಯಿಯ ಮರಣದ ನಂತರ ರಾಜಪ್ರಭುತ್ವ ಫ್ರಾನ್ಸಿನಿಂದ ಮರೆಯಾಗುವ ಸಾಧ್ಯತೆ ಇದ್ದರೂ ೧೮ನೆಯ ಲೂಯಿ ಹೊಸ ಸಂವಿಧಾನಾತ್ಮಕ ಸುಧಾರಣೆಯೊಡನೆ ಅಧಿಕಾರಕ್ಕೆ ಬಂದ. ಕ್ರಾಂತಿಯ ಶಿಶುವೇ ಆಗಿದ್ದ ನೆಪೋಲಿಯನ್ ಬೋನಾಪಾರ್ಟೆ ಕ್ರಾಂತಿಯ ತತ್ವಗಳನ್ನು ಗಾಳಿಗೆ ತೂರಿದ್ದ. ನಂತರ ಬಂದ ಲೂಯಿ ಫಿಲಿಪ್ಪಿ ಮತ್ತು ಮೂರನೆಯ ನೆಪೋಲಿಯನ್ ಸರ್ವಾಧಿಕಾರಿಗಳೇ ಆಗಿದ್ದರು. ಅಂದರೆ ೧೭೮೯ರಲ್ಲಿ ನಡೆದ ಕ್ರಾಂತಿ ಕೊನೆಗೊಂಡಿರುವುದು ೧೮೭೧ರಲ್ಲಿ. ೧೮೭೧ರಲ್ಲಿ ನಡೆದ ಸೆಡಾನ್ ಯುದ್ಧದಲ್ಲಿ ಮೂರನೆಯ ನೆಪೋಲಿಯನ್ ಪ್ರಷ್ಯಾದ ವಿರುದ್ಧ ಸೋತಾಗ ಫ್ರಾನ್ಸನ್ನು ಗಣರಾಜ್ಯವೆಂದು ಘೋಷಿಸಲಾಯಿತು. ಇದು ಕ್ರಾಂತಿಯ ಉದ್ದೇಶವಾಗಿತ್ತು. ೧೭೮೯ರ ಕ್ರಾಂತಿಯಿಂದಾಗಿ ಫ್ರಾನ್ಸಿನಲ್ಲಿ ಅಸ್ತಿತ್ವದಲ್ಲಿದ್ದ ಸರಕಾರದ ಸ್ವರೂಪದಲ್ಲಿ ಬದಲಾವಣೆಯಾಯಿತು. ಅಂದರೆ ನಿರಂಕುಶ ರಾಜಪ್ರಭುತ್ವದಿಂದ ಸಂವಿಧಾನಾತ್ಮಕ ರಾಜಪ್ರಭುತ್ವಕ್ಕೆ ಒಟ್ಟು ವ್ಯವಸ್ಥೆ ಪರಿವರ್ತನೆಗೊಂಡಿತು. ರಾಜಪ್ರಭುತ್ವ ಹೊಸ ರೂಪವನ್ನು ಪಡೆದುಕೊಂಡಿತು. ಇಲ್ಲಿ ರಾಜಪ್ರಭುತ್ವದ ಎಲ್ಲಾ ಧೋರಣೆಗಳು ಆದೇಶದಂತಿರದೆ ಹೊಂದಾಣಿಕೆಯ ರೂಪದ್ದಾಗಿದ್ದವು. ಇಲ್ಲಿ ನಾವು ಗಮನಿಸಬೇಕಾದ ಬಹುಮುಖ್ಯವಾದ ಅಂಶವೆಂದರೆ ಕ್ರಾಂತಿಯ ಸಂದರ್ಭದಲ್ಲಿ ಅಧಿಕಾರವನ್ನು ಪಡೆದುಕೊಂಡ ಮಧ್ಯಮ ವರ್ಗದ ರಾಜಕೀಯ. ಇತಿಹಾಸಕಾರರು ಈ ಬೆಳವಣಿಗೆಯನ್ನು ಮಧ್ಯಮ ವರ್ಗದ ರಾಜಪ್ರಭುತ್ವವೆಂದೇ ಕರೆದಿದ್ದಾರೆ. ಜನಸಾಮಾನ್ಯರಿಗೆ ಫ್ರಾನ್ಸಿನಲ್ಲಿದ್ದ ಹಳೆಯ ವ್ಯವಸ್ಥೆ ಮತ್ತು ಹೊಸ ಮಧ್ಯಮ ವರ್ಗದಲ್ಲಿ ವ್ಯತ್ಯಾಸವನ್ನು ಕಾಣಲು ಸಾಧ್ಯವಾಗಲಿಲ್ಲ. ಇದು ಊಳಿಗಮಾನ್ಯ ವ್ಯವಸ್ಥೆ ಸಡಿಲಗೊಂಡು ಬಂಡವಾಳಶಾಹಿ ವ್ಯವಸ್ಥೆಯ ಆಗಮನದ ಹಂತವಾಗಿತ್ತು. ಈ ಅಂಶವನ್ನು ಆಲ್ಬರ್ಟ್ ಸಬೂಲ್‌ರವರ ಅಂಡರ್‌ಸ್ಟಾಂಡಿಂಗ್ ದಿ ಫ್ರೆಂಚ್ ರೆವಲ್ಯೂಷನ್ ಗ್ರಂಥದಲ್ಲಿ ಗಮನಿಸಬಹುದು.

ಫ್ರಾನ್ಸಿನಲ್ಲಿ ಪಾದ್ರಿಗಳು ಮತ್ತು ಶ್ರೀಮಂತ ವರ್ಗದವರು ವಿಶೇಷ ಹಕ್ಕುಬಾಧ್ಯತೆಗಳನ್ನು ಅನುಭವಿಸುತ್ತಿದ್ದರು. ಫ್ರಾನ್ಸ್‌ನ ಒಟ್ಟು ಜನಸಂಖ್ಯೆಯಲ್ಲಿ ಇವರು ಅಲ್ಪಸಂಖ್ಯಾತರಾಗಿದ್ದರೂ ಬಹುಪಾಲು ಭೂಮಿ ಹಾಗೂ ಸಂಪತ್ತು ಇವರ ಅಧೀನದಲ್ಲಿದ್ದವು. ಊಳಿಗಮಾನ್ಯ ವ್ಯವಸ್ಥೆ ಇನ್ನೂ ಬಿಗಿಯಾಗಿಯೇ ಇತ್ತು. ಆದರೆ ಶ್ರೀಮಂತವರ್ಗ ಹೊಂದಿದ್ದ ಅಧಿಕಾರ ಮತ್ತು ಸವಲತ್ತು ಬೂರ್ಬನ್ ಅರಸರುಗಳಿಗೆ ತಮ್ಮ ವಂಶಪಾರಂಪರ್ಯದ ಆಳ್ವಿಕೆಯನ್ನು ಮುಂದುವರಿಸಿಕೊಂಡು ಹೋಗುವಲ್ಲಿ ತಡೆಗೋಡೆಯಾಗಿ ಪರಿಣಮಿಸಿತು. ಶ್ರೀಮಂತ ವರ್ಗದ ಅಧಿಕಾರವನ್ನು ಸೀಮಿತಗೊಳಿಸುವ ಉದ್ದೇಶದಿಂದ ರಾಜಪ್ರಭುತ್ವ ಕೆಲವೊಂದು ಮಾರ್ಪಾಡುಗಳನ್ನು ಮಾಡಿಕೊಂಡಿತು. ಇದು ವಿರೋಧದ ರೂಪದಲ್ಲಿರದೆ ಹೊಂದಾಣಿಕೆಯ ಅಥವಾ ಓಲೈಸುವ ರೀತಿಯದ್ದಾಗಿತ್ತು. ಶ್ರೀಮಂತವರ್ಗದ ರಾಜಕೀಯ ಅಧಿಕಾರ ಮತ್ತು ಸವಲತ್ತುಗಳನ್ನು ಕಸಿದುಕೊಂಡು ಸಾಮಾಜಿಕ ಸವಲತ್ತುಗಳನ್ನು ನೀಡಲಾಯಿತು. ಈ ವ್ಯವಸ್ಥೆ ರಾಜಪ್ರಭುತ್ವದ ಸಾಮರ್ಥ್ಯವನ್ನು ಅವಲಂಬಿಸಿಕೊಂಡಿರುತ್ತಿತ್ತು. ೧೪ನೆಯ ಲೂಯಿಯ ಆಳ್ವಿಕೆಯ ಸಂದರ್ಭದಲ್ಲಿ ಈ ಪ್ರಯತ್ನವನ್ನು ಮಾಡಲಾಯಿತು. ಶ್ರೀಮಂತ ವರ್ಗದ ವಿರೋಧವನ್ನು ತಪ್ಪಿಸಲು ಅವರನ್ನು ಕೋರ್ಟಿನ ಸದಸ್ಯರನ್ನಾಗಿ ಮಾಡಲಾಯಿತು. ಆದರೆ ೧೪ನೆಯ ಲೂಯಿಯ ಮರಣದ ನಂತರ ರಾಜಕೀಯ ಸ್ಥಿತಿಗತಿಗಳು ಬದಲಾದವು. ೧೫ನೆಯ ಲೂಯಿ ಮತ್ತು ೧೬ನೆಯ ಲೂಯಿ ಶ್ರೀಮಂತ ವರ್ಗದ ಜನರನ್ನು ಹಿಡಿತದಲ್ಲಿಟ್ಟುಕೊಳ್ಳುವಷ್ಟು ಸಮರ್ಥರಾಗಿರಲಿಲ್ಲ. ಈ ಸಂದರ್ಭದಲ್ಲಿಯೇ ಶ್ರೀಮಂತ ವರ್ಗದವರು ನಿರಂಕುಶ ಪ್ರಭುತ್ವವನ್ನು ವಿರೋಧಿಸಿ ಅಧಿಕಾರದಲ್ಲಿ ಸಮಾನ ಹಕ್ಕನ್ನು ಪ್ರತಿಪಾದಿಸಿದರು. ಅರಸರ ಆಳ್ವಿಕೆಯ ವಿರುದ್ಧ ಶ್ರೀಮಂತ ವರ್ಗದ ಹೋರಾಟ ಇಲ್ಲಿಂದಲೇ ಪ್ರಾರಂಭಗೊಂಡಿತು. ಈ ಬದಲಾವಣೆಯನ್ನೇ ಫ್ರಾನ್ಸಿನ ಕ್ರಾಂತಿ ಶ್ರೀಮಂತ ವರ್ಗದ ಕ್ರಾಂತಿಯಾಗಿ ಪ್ರಾರಂಭಗೊಂಡಿತು ಎಂಬುದಾಗಿ ವ್ಯಾಖ್ಯಾನಿಸಲಾಗಿದೆ. ಆದರೆ ಇದನ್ನು ಕ್ರಾಂತಿ ಎಂಬುದಾಗಿ ಕರೆಯಲು ಸಾಧ್ಯವಿಲ್ಲ. ಏಕೆಂದರೆ ತಮ್ಮ ವೈಯಕ್ತಿಕ ಹಿತಾಸಕ್ತಿಗಳನ್ನು ಈಡೇರಿಸುವುದೇ ಶ್ರೀಮಂತ ವರ್ಗದ ಉದ್ದೇಶವಾಗಿತ್ತು.

ಸಾಮಾಜಿಕವಾಗಿ ಸ್ಥಾನಮಾನಗಳಿದ್ದರೂ ರಾಜಕೀಯವಾಗಿ ಶ್ರೀಮಂತ ವರ್ಗದ ಎಲ್ಲಾ ಸವಲತ್ತುಗಳನ್ನು ಕಿತ್ತುಕೊಳ್ಳಲಾಗಿತ್ತು. ಈ ಕಾರಣಕ್ಕಾಗಿಯೇ ಬೂರ್ಬನ್ ಅರಸರುಗಳ ನಿರಂಕುಶ ಪ್ರಭುತ್ವವನ್ನು ವಿರೋಧಿಸಿ ಅಧಿಕಾರದಲ್ಲಿ ಸಮಪಾಲನ್ನು ಅಥವಾ ಸಮಾನ ಹಕ್ಕನ್ನು ಪ್ರತಿಪಾದಿಸಲಾಯಿತು. ಇಲ್ಲಿ ಊಳಿಗಮಾನ್ಯ ಪದ್ಧತಿಯ ಮುಂದುವರಿಕೆಯೂ ಪ್ರಮುಖ ಅಂಶವಾಗಿತ್ತು. ಅರಸ ಕೇಂದ್ರಿತ ವ್ಯವಸ್ಥೆ ೧೬ನೆಯ ಲೂಯಿಯ ಆಳ್ವಿಕೆಯ ಸಂದರ್ಭದಲ್ಲಿ ಸಡಿಲವಾಗಿದ್ದರಿಂದಾಗಿ ಶ್ರೀಮಂತ ವರ್ಗ ಅಧಿಕಾರವನ್ನು ಪಡೆಯಲು

ಹಾತೊರೆಯುತ್ತಿತ್ತು. ಇವರು ಅಧಿಕಾರ ಮತ್ತು ಸ್ವಾತಂತ್ರ್ಯದ ಜತೆಗೇ ಸವಲತ್ತುಗಳನ್ನೂ ಯಾಚಿಸುತ್ತಿದ್ದರು. ಈ ಉದ್ದೇಶಕ್ಕಾಗಿಯೇ ಎಸ್ಟೇಟ್ ಜನರಲ್ಸ್‌ನ ಸಭೆ ಕರೆಯುವುದನ್ನು ಶ್ರೀಮಂತ ವರ್ಗ ವಿರೋಧಿಸಿತು. ಏಕೆಂದರೆ ಎಸ್ಟೇಟ್-ಜನರಲ್ಸ್ ನ ಸಭೆಯನ್ನು ಕರೆದರೆ ಮೂರನೆಯ ಎಸ್ಟೇಟ್ ತನ್ನ ಹಕ್ಕನ್ನು ಪ್ರತಿಪಾದಿಸುತ್ತದೆ ಮತ್ತು ಬೇಡಿಕೆಗಳನ್ನು ಮುಂದೊಡ್ಡುತ್ತದೆ. ಈ ಕಾರಣಕ್ಕಾಗಿಯೇ ೧೬೧೪ರಿಂದ ಎಸ್ಟೇಟ್-ಜನರಲ್ಸ್‌ನ ಸಭೆಯನ್ನು ಫ್ರಾನ್ಸಿನಲ್ಲಿ ಕರೆದಿರಲಿಲ್ಲ. ಆದರೆ ೧೭೮೯ರಲ್ಲಿ ಮೂರನೆಯ ಎಸ್ಟೇಟ್‌ನ ಒತ್ತಡಕ್ಕೆ ಮಣಿದು ಸಭೆಯನ್ನು ಕರೆಯಬೇಕಾಯಿತು. ಇದನ್ನು ಶ್ರೀಮಂತವರ್ಗ ಬಲವಾಗಿ ವಿರೋಧಿಸಿತಾದರೂ ಅದರ ವಿರೋಧ ಅಷ್ಟೇನೂ ಪರಿಣಾಮಕಾರಿಯಾಗಿರಲಿಲ್ಲ. ಆದರೆ ಈ ಸಭೆ ಮೂರನೆಯ ಎಸ್ಟೇಟ್ ತಮ್ಮ ಪ್ರಣಾಳಿಕೆಯನ್ನು ರೂಪಿಸುವುದಕ್ಕೆ ಸಹಕಾರಿ ಯಾಯಿತು. ಈ ಹಿನ್ನೆಲೆಯಿಂದಾಗಿ ಕ್ರಾಂತಿಯ ಆರಂಭದ ದಿನಗಳಲ್ಲಿ ವ್ಯಕ್ತವಾದ ವಿರೋಧವನ್ನು ಶ್ರೀಮಂತ ವರ್ಗದ ವಿರೋಧ ಎಂಬುದಾಗಿ ಇತಿಹಾಸಕಾರರು ಪ್ರತಿಪಾದಿಸಿದ್ದಾರೆ. ಸಾಗ್ನೇಕ್ ತನ್ನ "ದ ಹಿಸ್ಟರಿ ಆಫ್ ಫ್ರಾನ್ಸ್" ಎಂಬ ಗ್ರಂಥದಲ್ಲಿ ಫ್ರಾನ್ಸಿನ ಕ್ರಾಂತಿ ಶ್ರೀಮಂತವರ್ಗದ ಕ್ರಾಂತಿಯಾಗಿ ಪ್ರಾರಂಭವಾಯಿತು ಎಂಬುದಾಗಿ ವಿವರಿಸುತ್ತಾನೆ. ಇದೇ ರೀತಿಯ ಅಭಿಪ್ರಾಯಗಳನ್ನು ಬಾರ್ನೆವ್, ತಿಯರ್ಸ್, ಗಿಸೆಟ್ ಮುಂತಾದ ವಿದ್ವಾಂಸರ ಗ್ರಂಥಗಳಲ್ಲೂ ಕಾಣಬಹುದು.

ಬಾರ್ನೆವ್ ತನ್ನ ಇನ್‌ಟ್ರುಡಕ್ಷನ್ ಟು ದಿ ಫ್ರೆಂಚ್ ರೆವಲ್ಯೂಷನ್ ಗ್ರಂಥದಲ್ಲಿ ಶ್ರೀಮಂತ ವರ್ಗ ಹುಟ್ಟುಹಾಕಿದ ಅನೇಕ ಊಳಿಗಮಾನ್ಯ ಸಂಸ್ಥೆಗಳು ಹೊಸ ವ್ಯವಸ್ಥೆಯ ಆಗಮನವನ್ನು ತಡೆಹಿಡಿದ ಬಗೆಯನ್ನು ಚರ್ಚಿಸುತ್ತಾನೆ. ಇಲ್ಲಿ ಹೊಸ ವ್ಯವಸ್ಥೆಯೆಂದರೆ ಕಾರ್ಲ್‌ಮಾರ್ಕ್ಸ್‌ರವರ 'ಕಮ್ಯೂನಿಸ್ಟ್ ಮ್ಯಾನಿಫೆಸ್ಟೋ' ಮತ್ತು 'ದಾಸ್ ಕ್ಯಾಪಿಟಲ್' ನಲ್ಲಿ ಚರ್ಚಿಸಿರುವಂತಹ ಸಾಮಾಜಿಕ ಮತ್ತು ಆರ್ಥಿಕ ಕ್ರಾಂತಿ. ಅಂದರೆ ಸಂಪತ್ತು ಮತ್ತು ಅಧಿಕಾರದ ಮರುಹಂಚುವಿಕೆ ಎಂದರ್ಥ. ಫ್ರಾನ್ಸಿನ ಕ್ರಾಂತಿಯನ್ನು ಸಾಮಾಜಿಕ ಹಿನ್ನೆಲೆಯಿಂದ ಲೆಪಬ್ರೆವ್, ಬಾರ್ನೆವ್, ಜೂರಿಸ್, ಆಲರ್ಡ್, ಮಥಾಯಿಸ್ ಮುಂತಾದ ಅನೇಕ ವಿದ್ವಾಂಸರು ಅಧ್ಯಯನ ನಡೆಸಿದ್ದಾರೆ. ಇವರ ಪ್ರಕಾರ ಫ್ರಾನ್ಸಿನ ಕ್ರಾಂತಿ ಹಿಂದಿನಿಂದಲೇ ನಡೆದು ಬಂದ ಆರ್ಥಿಕ ಮತ್ತು ಸಾಮಾಜಿಕ ವಿಕಸನದ ಪರಿಣಾಮ. ಈ ಪ್ರಕ್ರಿಯೆ ನಿರಂತರವಾಗಿದ್ದು ಇದು ಮಧ್ಯಮ ವರ್ಗವು ಅಧಿಕಾರ ಮತ್ತು ಸಂಪತ್ತನ್ನು ಹೊಂದುವಂತೆ ಮಾಡಿತು. ಆದರೆ ಈ ರೀತಿಯ ವ್ಯಾಖ್ಯಾನಗಳನ್ನು ಆರ್.ಆರ್.ಪಾಮರ್, ಆಲ್‌ಫ್ರಡ್ ಕೋಬ್ಬನ್ ಮುಂತಾದ ವಿದ್ವಾಂಸರು ವಿರೋಧಿಸಿದರು.

ಆರ್.ಆರ್. ಪಾಮರ್ ತನ್ನ ದಿ ಏಜ್ ಆಫ್ ದಿ ಡೆಮೋಕ್ರಾಟಿಕ್ ರೆವಲ್ಯೂಷನ್ ಎಂಬ ಗ್ರಂಥದಲ್ಲಿ ಜಿಯಾನ್ ಜೂರಿಸ್‌ನಿಂದ ಜೋರ್ಜ್ ಲೆಪಬ್ರೆವ್ ವರೆಗಿನ ಇತಿಹಾಸ ವನ್ನು ಸಂಪೂರ್ಣವಾಗಿ ಅಲ್ಲಗಳೆಯುತ್ತಾನೆ. ಇವನು ಫ್ರೆಂಚ್ ಕ್ರಾಂತಿ ಊಳಿಗಮಾನ್ಯ ವಿರೋಧಿ ಮತ್ತು ಮಧ್ಯಮ ವರ್ಗದ ಸ್ವರೂಪದ್ದು ಎನ್ನುವ ವಾದವನ್ನು ಒಪ್ಪುವುದಿಲ್ಲ. ಅದೇ ರೀತಿ ರಾಷ್ಟ್ರೀಯ ಕ್ರಾಂತಿ ಎನ್ನುವ ವಾದವನ್ನೂ ತಳ್ಳಿ ಹಾಕುತ್ತಾನೆ. ಪಾಮರ್‌ನ ಪ್ರಕಾರ ಫ್ರಾನ್ಸಿನ ಕ್ರಾಂತಿ ಪ್ರಜಾಪ್ರಭುತ್ವವಾದಿ ಕ್ರಾಂತಿ ಅಥವಾ ಅಟ್ಲಾಂಟಿಕ್ ಕ್ರಾಂತಿ. ಫ್ರಾನ್ಸಿನಲ್ಲಾದ ಬದಲಾವಣೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ರಾಜಕೀಯ ಬದಲಾವಣೆಯ ಪ್ರತಿಫಲನ ಎಂಬ ತತ್ವವನ್ನು ಮಂಡಿಸುತ್ತಾನೆ. ಇದು ಪ್ರಥಮ ಬಾರಿಗೆ ಅಮೇರಿಕಾದಲ್ಲಿನ ಬ್ರಿಟೀಷ್ ವಸಾಹತು ನೆಲೆಗಳಲ್ಲಿ ೧೭೬೩ರಿಂದ ಪ್ರಾರಂಭಗೊಂಡಿತು. ಇಲ್ಲಿ ಅಟ್ಲಾಂಟಿಕ್ ಮಹಾಸಾಗರ ಮಹತ್ವದ ಪಾತ್ರವನ್ನು ವಹಿಸಿತು. ಫ್ರಾನ್ಸಿನಲ್ಲಿ ಕ್ರಾಂತಿ ಆರಂಭವಾಗುವ ಮೊದಲು ಸ್ವಿಟ್ಜರ್‌ಲ್ಯಾಂಡ್, ನೆದರ್‌ಲ್ಯಾಂಡ್ ಮತ್ತು ಐರ್ಲೆಂಡ್‌ಗಳಲ್ಲಿ ಕ್ರಾಂತಿ ಕಾಣಿಸಿ ಕೊಂಡಿತ್ತು. ಇಲ್ಲಿ ಪ್ರಜಾಸತ್ತಾತ್ಮಕ ಬೆಳವಣಿಗೆಗಳು ಕಂಡುಬಂದವು. ಈ ಕಾರಣಕ್ಕಾಗಿ ಫ್ರಾನ್ಸಿನ ಕ್ರಾಂತಿಯನ್ನು ಪ್ರಜಾಪ್ರಭುತ್ವವಾದಿ ಅಥವಾ ಅಟ್ಲಾಂಟಿಕ್ ಕ್ರಾಂತಿ ಎಂಬುದಾಗಿ ಗುರುತಿಸಲಾಗಿದೆ. ಪಾಮರ್‌ರವರ ಪ್ರಕಾರ ಈ ಬೆಳವಣಿಗೆಯ ಲಾಭವನ್ನು ಪಡೆದುಕೊಂಡವರು ಮಧ್ಯಮ ವರ್ಗದ ಜನರು. ಆದ್ದರಿಂದಲೇ ಮಧ್ಯಮ ವರ್ಗದ ಕ್ರಾಂತಿ ಸ್ವಾಭಾವಿಕವಾಗಿತ್ತು ಮತ್ತು ಇದು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ಕ್ರಾಂತಿಯ ಆಮದು ಮಾತ್ರ ಆಗಿದೆ ಎನ್ನುವ ನಿಲುವನ್ನು ಪಾಮರ್‌ರವರು ತಳೆಯುತ್ತಾರೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿನ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿ ಫ್ರಾನ್ಸಿಗಿಂತ ಭಿನ್ನವಾಗಿತ್ತು ಎನ್ನುವ ಅಂಶವನ್ನು ನಾವು ಗಮನದಲ್ಲಿ ಇಟ್ಟುಕೊಳ್ಳಬೇಕಾಗು ತ್ತದೆ. ಈ ಹಿನ್ನೆಲೆಯಲ್ಲಿ ಫ್ರಾನ್ಸಿನ ಕ್ರಾಂತಿಯನ್ನು ಅಟ್ಲಾಂಟಿಕ್ ಕ್ರಾಂತಿ ಅಥವಾ ಪ್ರಜಾಪ್ರಭುತ್ವವಾದಿ ಕ್ರಾಂತಿ ಎನ್ನುವ ನಿರ್ಣಯವನ್ನು ಕೈಗೊಳ್ಳುವುದು ತಪ್ಪಾಗುತ್ತದೆ.

ಆಲ್‌ಫ್ರೆಡ್ ಕೋಬ್ಬನ್ ಫ್ರಾನ್ಸಿನ ಸಂಪ್ರದಾಯವಾದಿ ವಿಚಾರಧಾರೆಯನ್ನು ವಿರೋಧಿಸಿ ದನು. ಕೋಬ್ಬನ್‌ನು ಪಾಮರ್‌ನಂತೆಯೇ ಊಳಿಗಮಾನ್ಯ ವಿರೋಧಿ ಮತ್ತು ಮಧ್ಯಮ ವರ್ಗದ ಕ್ರಾಂತಿ ಎಂಬ ಸಿದ್ಧಾಂತವನ್ನು ಒಪ್ಪುವುದಿಲ್ಲ. ಇಲ್ಲಿ ಚರ್ಚೆಗೆ ಬರುವ ವಸ್ತುಗಳೆಂದರೆ

ಊಳಿಗಮಾನ್ಯ ವಿರೋಧಿ ಮತ್ತು ಶ್ರೀಮಂತ ವರ್ಗದ ವಿರೋಧಿ ಹಾಗೂ ಇದು ನಿಜವಾಗಿಯೂ ಮಧ್ಯಮ ವರ್ಗ ಮತ್ತು ಬಂಡವಾಳಶಾಹಿತ್ವದ ಸಮಾಜವಾಗಿ ರೂಪುಗೊಂಡಿದೆಯೇ ಎನ್ನುವ ಸಂಗತಿ. ಬಾರ್ನೆವ್, ತಿಯರ್ಸ್, ಗಿಸೆಟ್‌ರವರ ಬರಹ ಗಳಲ್ಲಿ ಕಂಡುಬರುವ ವರ್ಗ ಹೋರಾಟದ ಕಲ್ಪನೆಯನ್ನು ಕೋಬ್ಬನ್ ಒಪ್ಪುವುದಿಲ್ಲ. ಏಕೆಂದರೆ ಇವನ ಪ್ರಕಾರ ಫ್ರಾನ್ಸಿನ ಕ್ರಾಂತಿ ಆರಂಭವಾಗುವ ಮೊದಲೇ ಊಳಿಗಮಾನ್ಯ ಪದ್ಧತಿ ಕೊನೆಗೊಂಡಿತ್ತು. ಕ್ರಾಂತಿ ಬಂಡವಾಳಶಾಹಿ ವ್ಯವಸ್ಥೆಯ ಕೆಲಸವಲ್ಲ. ಇದು ಮಧ್ಯಮ ವರ್ಗದ ಜನರ ಕೆಲಸ. ಇಲ್ಲಿ ಕೋಬ್ಬನ್‌ನು ಬಂಡವಾಳಶಾಹಿ ಮಧ್ಯಮ ವರ್ಗ ಮತ್ತು ಮಧ್ಯಮ ವರ್ಗ ಎಂಬ ವಿಭಜನೆಯನ್ನು ಮಾಡುತ್ತಾನೆ. ಇವನು ಫ್ರಾನ್ಸಿನ ಕ್ರಾಂತಿ ಮಧ್ಯಮ ವರ್ಗದ ಕ್ರಾಂತಿ ಎಂಬುದನ್ನು ಒಪ್ಪುತ್ತಾನೆ. ಆದರೆ ಇವರು ಬಂಡವಾಳ ಶಾಹಿಗಳಲ್ಲ. ಕೋಬ್ಬನ್‌ನ ಪ್ರಕಾರ ಫ್ರಾನ್ಸಿನ ಕ್ರಾಂತಿ ರಾಜಕೀಯ ಕ್ರಾಂತಿಯಾಗಿ ಸಾಮಾಜಿಕ ಸುಧಾರಣೆಗಳನ್ನು ಜಾರಿಗೆ ತಂದಿತೇ ವಿನಾ ಸಾಮಾಜಿಕ ಕ್ರಾಂತಿಯಾಗಿ ರಾಜಕೀಯ ಸುಧಾರಣೆಗಳನ್ನು ಜಾರಿಗೆ ತಂದಿಲ್ಲ.

ಫ್ರಾನ್ಸಿನ ಕ್ರಾಂತಿಯನ್ನು ಮಧ್ಯಮ ವರ್ಗದ ಕ್ರಾಂತಿ ಎಂಬ ನೆಲೆಯಲ್ಲಿ ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. ಲೆಪಬ್ರೆವ್, ಟೋಕಿವೆಲ್ಲೆ, ಆಲ್ಬರ್ಟ್ ಸಬೂಲ್ ಮುಂತಾದ ವಿದ್ವಾಂಸರು ಮಧ್ಯಮ ವರ್ಗದ ಕ್ರಾಂತಿಯ ಸ್ವರೂಪದ ಕುರಿತು ಚರ್ಚೆ ನಡೆಸಿದ್ದಾರೆ. ಮಧ್ಯಮ ವರ್ಗ ಫ್ರಾನ್ಸಿನ ಕ್ರಾಂತಿಯ ಸಂದರ್ಭದಲ್ಲಿ ಹುಟ್ಟಿದ ವರ್ಗವಲ್ಲ. ಇದಕ್ಕೆ ಅನೇಕ ವರ್ಷಗಳ ಇತಿಹಾಸವಿದೆ. ಆದರೆ ೧೭೮೯ರಲ್ಲಿ ನಡೆದ ರಾಜಕೀಯ ವಿದ್ಯಮಾನಗಳು ಮಧ್ಯಮ ವರ್ಗ ತನ್ನ ಹಕ್ಕನ್ನು ಪ್ರತಿಪಾದಿಸುವಂತೆ ಪ್ರಚೋದನೆ ನೀಡಿತು. ಇಲ್ಲೂ ಶ್ರೀಮಂತ ಮಧ್ಯಮ ವರ್ಗ ಮತ್ತು ಕೆಳಮಧ್ಯಮ ವರ್ಗ ಎಂದು ವಿಂಗಡನೆ ಮಾಡಬೇಕಾಗುತ್ತದೆ. ಕೆಳಮಧ್ಯಮ ವರ್ಗ ಸಾಮಾನ್ಯ ವರ್ಗದೊಡನೆ ಸೇರಿಕೊಂಡರೆ, ಶ್ರೀಮಂತ ಮಧ್ಯಮ ವರ್ಗ ನೊಬಿಲಿಟಿಯ ಸ್ಥಾನಮಾನಕ್ಕೆ ಹಾತೊರೆಯುತ್ತಿತ್ತು. ಮಧ್ಯಮ ವರ್ಗ ಸಂಪತ್ತನ್ನು ಹೊಂದಿದ್ದರೆ ಅಧಿಕಾರವನ್ನು ಹೊಂದಿರಲಿಲ್ಲ. ಶ್ರೀಮಂತವರ್ಗ ಅಧಿಕಾರವನ್ನು ಹೊಂದಿದ್ದು ಸಾಕಷ್ಟು ಸಂಪತ್ತು ಇರಲಿಲ್ಲ. ಇದೇ ಫ್ರಾನ್ಸಿನಲ್ಲಿ ಅಸಮಾನತೆ ಉಂಟಾಗಲು ಪ್ರಮುಖ ಕಾರಣ. ೧೮ನೆಯ ಶತಮಾನದಲ್ಲಿ ಮಧ್ಯಮ ವರ್ಗ ಫ್ರಾನ್ಸಿನ ಹಣಕಾಸು, ವಾಣಿಜ್ಯ ಮತ್ತು ಕೈಗಾರಿಕೆಗಳ ಮೇಲೆ ಹಿಡಿತವನ್ನು ಸಾಧಿಸಿತ್ತು. ತತ್ವಜ್ಞಾನಿಗಳ ಪ್ರಭಾವದಿಂದಾಗಿ ತಮ್ಮ ಬೇಡಿಕೆಗಳನ್ನು ಬಲವಾಗಿ ಪ್ರತಿವಾದಿಸತೊಡಗಿತು.

೧೭೮೯ರಲ್ಲಿ ರಾಷ್ಟ್ರೀಯ ಸಭೆ ರಚನೆಗೊಂಡ ನಂತರ ಸಂವಿಧಾನವನ್ನು ರಚಿಸಲಾಯಿತು. ೧೭೯೧ರ ಸಂವಿಧಾನವನ್ನು ಮಧ್ಯಮ ವರ್ಗದ ಸಂವಿಧಾನ ಎಂಬ ಹೆಸರಿನಿಂದ ಕರೆಯ ಲಾಯಿತು. ಏಕೆಂದರೆ ಸಂವಿಧಾನವನ್ನು ತಮ್ಮ ಹಿತಾಸಕ್ತಿಗಳಿಗನುಗುಣವಾಗಿ ರಚಿಸಿ ಕೊಳ್ಳಲಾಯಿತು. ೧೭೯೩ ಮತ್ತು ೧೭೯೫ರ ಸಂವಿಧಾನಗಳೂ ಇದೇ ಮಾದರಿ ಯದ್ದಾಗಿವೆ. ಮಧ್ಯಮ ವರ್ಗದ ಜನರು ಶ್ರೀಮಂತ ವರ್ಗದಂತೆ ಅಧಿಕಾರ ಮತ್ತು ಸ್ವಾತಂತ್ರ್ಯವನ್ನು ಮಾತ್ರ ಕೇಳುತ್ತಿರಲಿಲ್ಲ. ಶ್ರೀಮಂತ ವರ್ಗದ ಅತಿಯಾದ ಸವಲತ್ತುಗಳನ್ನು ರದ್ದುಪಡಿಸುವುದು ಮತ್ತು ಸಮಾನ ಹಕ್ಕನ್ನು ಪಡೆಯುವುದೂ ಇವರ ಪ್ರಣಾಳಿಕೆಯಲ್ಲಿ ಸೇರಿಕೊಂಡಿತ್ತು. ಬಾರ್ನೆವ್ ತನ್ನ ಇಂಟ್ರಡಕ್ಷನ್ ಟು ದಿ ಫ್ರೆಂಚ್ ರೆವಲ್ಯೂಷನ್ ಗ್ರಂಥದಲ್ಲಿ ಮಧ್ಯಮ ವರ್ಗದ ಕ್ರಾಂತಿಯ ಕುರಿತು ಚರ್ಚಿಸುವಾಗ ಈ ವಿವರಗಳನ್ನು ಮಂಡಿಸುತ್ತಾನೆ. ಮಧ್ಯಮ ವರ್ಗಕ್ಕೆ ತನ್ನ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಇತರ ವರ್ಗಗಳೊಡನೆ ಹೊಂದಾಣಿಕೆಯನ್ನು ಏರ್ಪಡಿಸಿಕೊಳ್ಳುವುದು ಅನಿವಾರ್ಯವಾಗಿತ್ತು. ಶ್ರೀಮಂತ ವರ್ಗದೊಡನೆ ಅಧಿಕಾರಕ್ಕಾಗಿ ಹೊಂದಾಣಿಕೆ ನಡೆಸಲು ಪ್ರಯತ್ನಿಸುತ್ತಿತ್ತು. ಆದರೆ ಈ ಪ್ರಯತ್ನ ಯಶಸ್ವಿಯಾಗಲಿಲ್ಲ. ಆದ್ದರಿಂದ ಸಾಮಾನ್ಯ ವರ್ಗದ ಜನರ ಬೆಂಬಲವನ್ನು ಪಡೆದುಕೊಂಡಿತು. ಆಲೆನ್ ಡಿ. ಟೋಕಿವೆಲ್ಲೆ ತನ್ನ ದಿ ಏನ್‌ಶ್ಯಾನ್ ಆಂಡ್ ದ ರೆವಲ್ಯೂಷನ್ ಗ್ರಂಥದಲ್ಲಿ ಈ ರೀತಿಯ ಹೊಂದಾಣಿಕೆಯ ಕುರಿತು ವಿವರಿಸುತ್ತಾನೆ.

ಮಧ್ಯಮ ವರ್ಗದ ಕ್ರಾಂತಿಯ ಕುರಿತು ಚರ್ಚಿಸುವಾಗ ಫ್ರಾನ್ಸಿನ ಒಟ್ಟು ವ್ಯವಸ್ಥೆ ಊಳಿಗಮಾನ್ಯ ಪದ್ಧತಿಯಿಂದ ಬಂಡವಾಳಶಾಹಿ ವ್ಯವಸ್ಥೆಗೆ ಪರಿವರ್ತನೆ ಹೊಂದಿರುವ ಬಗೆ ಪ್ರಾಮುಖ್ಯವೆನಿಸುತ್ತದೆ. ಕಾರ್ಲ್‌ಮಾರ್ಕ್ಸ್ ತನ್ನ 'ಕ್ಯಾಪಿಟಲ್'ನಲ್ಲಿ ಈ ಪರಿವರ್ತನೆ ಎರಡು ರೀತಿಯಲ್ಲಿ ನಡೆಯುವ ಸಾಧ್ಯತೆಗಳಿವೆ ಎನ್ನುತ್ತಾನೆ. ಒಂದು ಕ್ರಾಂತಿಕಾರಿ ಬದಲಾವಣೆಯಾದರೆ ಇನ್ನೊಂದು ಹೊಂದಾಣಿಕೆಯ ಸ್ವರೂಪದ್ದು. ಹಳೆಯ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಾಶಪಡಿಸಿ ಪರಿವರ್ತನೆ ಹೊಂದುವುದು ಕ್ರಾಂತಿಕಾರಿ ಬದಲಾವಣೆಯಾದರೆ, ಹಳೆಯ ಉತ್ಪಾದನಾ ವ್ಯವಸ್ಥೆಯನ್ನು ಗರ್ಭೀಕರಿಸಿಕೊಂಡು ಅಸ್ತಿತ್ವಕ್ಕೆ ಬರುವ ಹೊಸ ಬಂಡವಾಳಶಾಹಿ ಸಮಾಜ ಹೊಂದಾಣಿಕೆಯ ಸ್ವರೂಪದ್ದಾಗಿರು ತ್ತದೆ. ಇದರ ಕುರಿತಾಗಿ ಅನೇಕ ವಾಗ್ವಾದಗಳು ನಡೆದವು. ಆಲ್ಬರ್ಟ್

ಸಬೂಲ್‌ರವರ ಪ್ರಕಾರ ಫ್ರಾನ್ಸಿನ ಕ್ರಾಂತಿ ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಗೆ ಕ್ರಾಂತಿಕಾರಿ ಬದಲಾವಣೆಯನ್ನು ತಂದಿತು. ಈ ಪರಿವರ್ತನೆಗೆ ಆರ್ಥಿಕ ಕಾರಣಗಳಲ್ಲದೆ ಸಾಮಾಜಿಕ ರಚನೆ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅಂಶಗಳೂ ಕಾರಣಗಳಾಗುತ್ತವೆ ಎನ್ನುವ ವಾಸ್ತವಾಂಶವನ್ನು ಗಮನಿಸಬೇಕಾಗುತ್ತದೆ.

ಫ್ರಾನ್ಸಿನ ಕ್ರಾಂತಿಯನ್ನು ಸಾಮಾನ್ಯ ವರ್ಗದ ಕ್ರಾಂತಿ ಎಂಬ ರೀತಿಯಲ್ಲೂ ಅಧ್ಯಯನ ನಡೆಸಲಾಗಿದೆ. ಕ್ರಾಂತಿಯ ಆರಂಭದಿಂದ ಡೈರೆಕ್ಟರಿಯ ಆಳ್ವಿಕೆಯವರೆಗೆ ಅಂದರೆ ರಾಷ್ಟ್ರೀಯ ಸಭೆ, ಶಾಸಕಾಂಗ ಸಭೆ ಮತ್ತು ರಾಷ್ಟ್ರೀಯ ಸಮಿತಿಯ ಆಳ್ವಿಕೆಯ ಸಂದರ್ಭ ಗಳಲ್ಲಿ ಫ್ರಾನ್ಸಿನ ಸಾಮಾನ್ಯವರ್ಗ ನಿರ್ಣಾಯಕ ಪಾತ್ರವನ್ನು ವಹಿಸಿತ್ತು. ಜಾಕೋಬಿನ್ ಕ್ಲಬ್, ಕಾರ್ಡಿಲಿಯರ್ ಕ್ಲಬ್ ಮತ್ತು ಪ್ಯಾರಿಸ್ ಕಮ್ಯೂನ್ ಸಾಮಾನ್ಯ ವರ್ಗದ ಪರವಾಗಿ ಕಾರ್ಯನಿರ್ವಹಿಸುತ್ತಿದ್ದವು. ಫ್ರಾನ್ಸಿನ ಬಡ ಜನರನ್ನು ಸಾನ್‌ಸ್ಕಿಲ್ಯೋಟ್ಸ್ ಎಂಬ ಹೆಸರಿ ನಿಂದ ಕರೆಯಲಾಗಿದೆ. ಇದು ಸಾನ್‌ಸ್ಕಿಲ್ಯೋಟಿಸಂ ಎಂಬ ಸಿದ್ಧಾಂತವಾಗಿ ರೂಪುಗೊಂಡಿತು. ಇದರಲ್ಲಿ ರೈತರು, ಕೈಗಾರಿಕಾ ಕಾರ್ಮಿಕರು, ಕುಶಲಕರ್ಮಿಗಳು, ನಗರವಾಸಿಗಳು, ಕೆಳಮಧ್ಯಮ ವರ್ಗದ ಜನರು, ಸಣ್ಣಪುಟ್ಟ ವ್ಯಾಪಾರಿ ಮಳಿಗೆಗಳನ್ನು ಹೊಂದಿದವರು ಇವರೆಲ್ಲಾ ಸೇರಿಕೊಂಡಿದ್ದರು. ಇವರೆಲ್ಲರನ್ನೂ ಒಟ್ಟಾಗಿ ಸಾನ್‌ಸ್ಕಿಲ್ಯೋಟ್ಸ್ ಎಂದು ಕರೆಯಲಾಗಿದೆ. ಜಾರ್ಜ್ ರೂದೆ ತನ್ನ ಕ್ರೌಡ್ ಇನ್ ದಿ ಫ್ರೆಂಚ್ ರೆವಲ್ಯೂಷನ್ ಗ್ರಂಥದಲ್ಲಿ ಸಾಮಾನ್ಯ ವರ್ಗದ ಭಾಗವಹಿಸುವಿಕೆಯ ಕುರಿತು ಕೂಲಂಕಷವಾಗಿ ವಿವರಿಸಿದ್ದಾನೆ. ರೂದೆಯ ಪ್ರಕಾರ ೧೭೮೯ರ ಕ್ರಾಂತಿ ಸಾಮಾನ್ಯವರ್ಗದ ಜನರ ಕ್ರಾಂತಿ. ಇವರ ಮುಖ್ಯ ಬೇಡಿಕೆಯೆಂದರೆ ನ್ಯಾಯ, ಭೂಮಿ ಮತ್ತು ಆಹಾರ. ಮಧ್ಯಮ ವರ್ಗದ ಜನರಿಗೆ ತಮ್ಮ ಸಮಸ್ಯೆಗಳಿಗೆ ಸ್ಪಂದಿಸುವ ಮತ್ತು ಪರವಾಗಿ ಹೋರಾಡುವ ಜನವರ್ಗದ ಅಗತ್ಯವಿತ್ತು. ಇದಕ್ಕಾಗಿಯೇ ಸಾನ್‌ಸ್ಕಿಲ್ಯೋಟ್ಸ್‌ನೊಡನೆ ಹೊಂದಾಣಿಕೆ ಮಾಡಿಕೊಂಡಿತು. ಮಧ್ಯಮ ವರ್ಗ ಫಾನ್ಸ್‌ನ್ನು ಸುಧಾರಿಸುವ ಪ್ರಯತ್ನವನ್ನು ಮಾಡತೊಡಗಿತು. ಸಾರ್ವಜನಿಕರ ಹಿತಾಸಕ್ತಿಗಳನ್ನು ಕಾಪಾಡುವ ಬ್ಯಾನರ್‌ನೊಡನೆ ತನ್ನ ಕಾರ್ಯವನ್ನು ಪ್ರಾರಂಭಿಸಿತು. ಇದರಿಂದಾಗಿಯೇ ಫ್ರಾನ್ಸ್‌ನ ಸಾಮಾನ್ಯವರ್ಗ ಮಧ್ಯಮ ವರ್ಗದ ಕಡೆಗೆ ಹೆಚ್ಚು ಆಕರ್ಷಿತವಾಯಿತು. ಆದರೆ ನೊಬಿಲಿಟಿಯಂತೆಯೇ ಮಧ್ಯಮ ವರ್ಗವೂ ಅಧಿಕಾರದಲ್ಲಿ ಸಮಪಾಲು ಪಡೆಯುವುದಕ್ಕೋಸ್ಕರವೇ ಹೋರಾಟ ನಡೆಸುತ್ತಿದ್ದುದು ಸಾನ್‌ಸ್ಕಿಲ್ಯೋಟ್ಸ್‌ಗೆ ಪ್ರಾರಂಭಿಕ ಹಂತದಲ್ಲಿ ತಿಳಿಯಲಿಲ್ಲ. ತಿಳಿಯುವಷ್ಟು ಹೊತ್ತಿಗೆ ಮಧ್ಯಮ ವರ್ಗ ಹಳೆಯ ವ್ಯವಸ್ಥೆಯ ಊಳಿಗಮಾನ್ಯ ಪದ್ಧತಿಯಷ್ಟೇ ಬಲಿಷ್ಠವಾಗಿ ಸಂಘಟನೆಗೊಂಡಿತ್ತು.

ಫ್ರಾನ್ಸಿನಲ್ಲಿ ಕ್ರಾಂತಿ ಯಶಸ್ವಿಯಾಗುವುದಕ್ಕೆ ಮೂಲ ಕಾರಣ ಜನಸಾಮಾನ್ಯರ ಹೋರಾಟ. ಬ್ಯಾಸ್ಟಿಲ್ ಸೆರೆಮನೆಯ ಪತನ ಮತ್ತು ವರ್ಸೇಲ್ಸ್ ಮೇಲೆ ಮಹಿಳೆಯರ ಮುತ್ತಿಗೆ ಅಥವಾ ರೊಟ್ಟಿಯ ಹಗರಣ ಇದಕ್ಕೆ ಉತ್ತಮ ನಿದರ್ಶನವಾಗಿದೆ. ಇ.ಎಲ್.ಐಸೆನ್ ಸ್ಟೈನ್ ಪ್ರಕಾರ ಫ್ರಾನ್ಸಿನ ಕ್ರಾಂತಿಯ ರೂವಾರಿಗಳು ಜನಸಾಮಾನ್ಯರು ಮತ್ತು ಈ ಕ್ರಾಂತಿಯಲ್ಲಿ ಮಧ್ಯಮ ವರ್ಗ ಪ್ರಮುಖ ಪಾತ್ರವನ್ನು ವಹಿಸಲಿಲ್ಲ. ಕಾರ್ಲ್‌ಮಾರ್ಕ್ಸ್ ಈ ಕ್ರಾಂತಿಯನ್ನು ವರ್ಗಹೋರಾಟ ಅಥವಾ ಆಂತರಿಕ ಕಲಹವನ್ನಾಗಿ ವಿವರಿಸಿದ್ದಾನೆ. ಇಲ್ಲಿ ವರ್ಗ ಹೋರಾಟ ಸಾನ್‌ಸ್ಕಿಲ್ಯೋಟ್ಸ್ ಮತ್ತು ಬಂಡವಾಳಶಾಹಿ ಮಧ್ಯಮ ವರ್ಗದ ನಡುವೆ ನಡೆಯಿತು. ಮಾರ್ಕ್ಸ್ ತನ್ನ ದಿ ಸಿವಿಲ್ ವಾರ್ ಇನ್ ಫ್ರಾನ್ಸ್ ಎಂಬ ಲೇಖನ ದಲ್ಲಿ ಈ ಕುರಿತು ಚರ್ಚಿಸಿದ್ದಾರೆ. ಲೆನಿನ್ ಮಾರ್ಕ್ಸ್‌ನ ವಾದವನ್ನೇ ಮುಂದುವರಿಸುತ್ತಾ 'ಪ್ಯಾರಿಸ್ ಕಮ್ಯೂನ್' ಕಾರ್ಮಿಕ ಕ್ರಾಂತಿಯ ಪ್ರಯತ್ನದ ಫಲವೆನ್ನುತ್ತಾನೆ. ಇವನ ಪ್ರಕಾರ ಪ್ಯಾರಿಸ್ ಕಮ್ಯೂನ್ ಫ್ರಾನ್ಸಿನ ಕ್ರಾಂತಿಯ ದಿಕ್ಕನ್ನೇ ಬದಲಾಯಿಸಿತು ಮತ್ತು ೧೯೧೭ರಲ್ಲಿ ರಷ್ಯಾದಲ್ಲಿ ಕಮ್ಯೂನಿಸ್ಟ್ ಸರಕಾರ ಅಸ್ತಿತ್ವಕ್ಕೆ ಬರುವುದಕ್ಕೆ ಫ್ರಾನ್ಸಿನ ಕ್ರಾಂತಿಕಾರಿ ಧೋರಣೆಗಳೇ ಪ್ರಮುಖ ಕಾರಣ. ಸಾನ್‌ಸ್ಕಿಲ್ಯೋಟಿಸಂನ ತತ್ವಗಳು ಮಾರತ್, ಹಿಬರ್ಟ್, ಬೇಬ್ಯುಪ್, ಬ್ಲಾಂಕಿ ಮತ್ತು ಲೆನಿನ್ ಇವರುಗಳ ಸಿದ್ಧಾಂತಗಳಲ್ಲಿ ಮುಂದು ವರಿಯಿತು.

ಸಾನ್‌ಸ್ಕಿಲ್ಯೋಟ್ಸ್ ಬೆಂಬಲವನ್ನು ಪಡೆದುಕೊಂಡು ಅಧಿಕಾರ ಗಳಿಸಿಕೊಂಡ ಮಧ್ಯಮ ವರ್ಗ ನಂತರ ತನ್ನ ಹಿಂದಿನ ಧೋರಣೆಯನ್ನು ಬದಲಾಯಿಸಿಕೊಂಡಿತು. ಸಾಮಾನ್ಯವರ್ಗದ ಜನರ ಸಮಸ್ಯೆಗಳ ಕುರಿತು ಯಾವ ನಿರ್ಧಾರವನ್ನೂ ತೆಗೆದುಕೊಳ್ಳಲಿಲ್ಲ. ರೊಬಿಸ್‌ಪಿಯರ್‌ನ ಮರಣದ ನಂತರ ಸಾನ್‌ಸ್ಕಿಲ್ಯೋಟ್ಸ್ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂತು. ಇದನ್ನು ರಾಷ್ಟ್ರೀಯ ಸಮಿತಿಯ ಆಳ್ವಿಕೆಯ ಕೊನೆಯ ಅವಧಿಯಲ್ಲಿ ಗಮನಿಸಬಹುದು. ಇದನ್ನು ಥರ್ಮಿಡೋರಿಯನ್ ಪ್ರತಿಕ್ರಿಯೆ ಎಂಬುದಾಗಿ ಕರೆಯಲಾಗಿದೆ. ಜಾಕೋಬಿನ್ ಆಳ್ವಿಕೆ ಕೊನೆಯಾದ ನಂತರ ಮಧ್ಯಮ ವರ್ಗದ ಪುನರಾಗಮನ ಸಾನ್‌ಸ್ಕಿಲ್ಯೋಟ್ಸ್‌ಗೆ ಆತಂಕದ ಪರಿಸ್ಥಿತಿಯನ್ನು

ಮೂಡಿಸಿತು. ಇವರ ಪ್ರತಿಕ್ರಿಯೆಯನ್ನು ಸುಲಭವಾಗಿ ಹಿಮ್ಮೆಟ್ಟಿಸಿದ ಮಧ್ಯಮ ವರ್ಗ ಮತ್ತೊಮ್ಮೆ ಫ್ರಾನ್ಸಿನಲ್ಲಿ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಆರಂಭಿಸಿತು.

ಜಾರ್ಜ್ ಲೆಪಬ್ರೆವ್ ತನ್ನ ಸೊಶ್ಯಲಿಸ್ಟ್ ಹಿಸ್ಟರಿ ಆಫ್ ದಿ ಫ್ರೆಂಚ್ ರೆವಲ್ಯೂಷನ್ ಗ್ರಂಥದಲ್ಲಿ ಫ್ರಾನ್ಸಿನ ಕ್ರಾಂತಿಯನ್ನು ರೈತರ ಹೋರಾಟ ಎಂಬುದಾಗಿ ಕರೆಯುತ್ತಾನೆ. ಲೆಪಬ್ರೆವ್ ಮಾರ್ಕ್ಸಿಸ್ಟ್ ಅಧ್ಯಯನ ವಿಧಾನವನ್ನು ಅಳವಡಿಸಿಕೊಂಡಿದ್ದ. ಇವನ ಪ್ರಕಾರ ಫ್ರಾನ್ಸಿನ ಕ್ರಾಂತಿಗೆ ಪ್ರಮುಖ ಕಾರಣ ಆರ್ಥಿಕ ಅಂಶಗಳು. ಇವನು ಫ್ರಾನ್ಸಿನ ಕೃಷಿಕರ ಮತ್ತು ನಗರವಾಸಿಗಳ ಜೀವನಕ್ರಮದ ಕುರಿತು ಅಧ್ಯಯನ ನಡೆಸಿದ್ದಾನೆ. ೧೭೮೯ ರಿಂದ ೧೭೯೨ರವರೆಗೆ ನಡೆದ ರೈತ ಚಳವಳಿಗಳು ಬಂಡವಾಳ ಕ್ರೋಢೀಕರಣದ ಉದ್ದೇಶ ಹೊಂದಿದ್ದ ಮಧ್ಯಮ ವರ್ಗಕ್ಕೆ ಸಹಕಾರಿಯಾಯಿತು ಎನ್ನುತ್ತಾನೆ. ಸಾನ್‌ಸ್ಕಿಲ್ಯೊಟ್ಸ್ ಊಳಿಗಮಾನ್ಯ ಪದ್ಧತಿಯನ್ನು ರದ್ದುಗೊಳಿಸುವುದಕ್ಕಾಗಿ ಮಧ್ಯಮ ವರ್ಗದ ಜತೆ ಸೇರಿಕೊಂಡಿತು. ಲೆಪಬ್ರೆವ್‌ನ ಪ್ರಕಾರ ಫ್ರಾನ್ಸಿನ ಕ್ರಾಂತಿಯ ಹೃದಯದಲ್ಲಿರುವುದು ರೈತರ ಕ್ರಾಂತಿ. ಊಳಿಗಮಾನ್ಯ ಪದ್ಧತಿಯನ್ನು ರದ್ದುಗೊಳಿಸಿದರೂ ರೈತರಿಗೆ ಭೂಮಿಯನ್ನು ನೀಡಲಿಲ್ಲ. ಇಲ್ಲಿ ಮುಖ್ಯವಾಗಿ ನೋರ್ಡ್ ರೈತ ಹೋರಾಟವನ್ನು ಉದಾಹರಿಸಬಹುದು. ಇದರ ಉದ್ದೇಶ ಊಳಿಗಮಾನ್ಯ ವ್ಯವಸ್ಥೆಯನ್ನು ರದ್ದುಗೊಳಿಸುವುದು ಮತ್ತು ಶ್ರೀಮಂತ ವರ್ಗದ ಜನರ ಅಧಿಕಾರವನ್ನು ಕುಂಠಿತಗೊಳಿಸುವುದು. ಆದರೆ ರೈತ ಹೋರಾಟಗಳು ಮಧ್ಯಮ ವರ್ಗದ ಇಬ್ಬಗೆಯ ನೀತಿಯಿಂದಾಗಿ ಹೆಚ್ಚಿನ ಯಶಸ್ಸನ್ನು ಪಡೆಯಲಿಲ್ಲ. ಫ್ರಾನ್ಸಿನ ಕ್ರಾಂತಿಯ ಕುರಿತಾದ ಈ ಎಲ್ಲಾ ಅಧ್ಯಯನಗಳು ಕ್ರಾಂತಿಯ ಸ್ವರೂಪವನ್ನು ಅರ್ಥೈಸಿಕೊಳ್ಳುವುದಕ್ಕೆ ಹಾಗೂ ಹೊಸ ದೃಷ್ಟಿಕೋನದಿಂದ ನೋಡುವುದಕ್ಕೆ ಸಹಕಾರಿ ಯಾಗುತ್ತದೆ.


ಪರಾಮರ್ಶನ ಗ್ರಂಥಗಳು

೧. ಕೋಬ್ಬನ್ ಎ., ೧೯೬೪. **ದಿ ಸೋಶ್ಯಲ್ ಇಂಟರ್‌ಪ್ರಿಟೇಷನ್ ಆಫ್ ಫ್ರೆಂಚ್ ರೆವಲ್ಯೂಷನ್,** ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್.

೨. ಜೋನ್ಸ್ ಪಿ., ೧೯೮೮. **ದಿ ಪೆಸೆಂಟ್ರೀ ಇನ್ ದಿ ಫ್ರೆಂಚ್ ರೆವಲ್ಯೂಷನ್,** ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯೂನಿವರ್ಸಿಟಿ ಪ್ರೆಸ್.

೩. ಆಲ್ಬರ್ಟ್ ಸಬೂಲ್, ೧೯೮೯. **ಅಂಡರ್‌ಸ್ಟಾಂಡಿಂಗ್ ದಿ ಫ್ರೆಂಚ್ ರೆವಲ್ಯೂಷನ್,** ನ್ಯೂಡೆಲ್ಲಿ: ಪೀಪಲ್ಸ್ ಪಬ್ಲಿಷಿಂಗ್ ಹೌಸ್.

೪. ಲೂಯಿಸ್ ಗ್ವಿನ್ನಿ, ೧೯೯೩, **ದಿ ಫ್ರೆಂಚ್ ರೆವಲ್ಯೂಷನ್–ರಿ ಥಿಂಕಿಂಗ್ ದಿ ಡಿಬೇಟ್,** ನ್ಯೂಯಾರ್ಕ್: ರೌಟ್ಲೇಡ್ಜ್.


# ೧೮ ಫ್ರಾನ್ಸಿನ ಮಹಾಕ್ರಾಂತಿಯಿಂದ ನೇಶನ್ ಸ್ಟೇಟ್ನವರೆಗೆ (೧೭೮೯-೧೮೭೧)

ಫ್ರೆಂಚ್ ಕ್ರಾಂತಿಯಿಂದಾಗಿ ಫ್ರಾನ್ಸ್‌ನಲ್ಲಿದ್ದ ಪ್ರಾಚೀನ ಆಳ್ವಿಕೆಯು ಕೊನೆ ಗೊಂಡು, ಸ್ವಾತಂತ್ರ್ಯ, ಒಗ್ಗಟ್ಟು ಮತ್ತು ಸಮಾನತೆಗಳ ನಿಯಮದ ಮೇಲೆ ಆಧರಿತವಾದ ಹೊಸ ವ್ಯವಸ್ಥೆಯೊಂದು ಸ್ಥಾಪಿತವಾಯಿತು. ೧೬ನೆಯ ಲೂಯಿ ಆಳ್ವಿಕೆಯಲ್ಲಿ ಬೂರ್ಬನ್ ರಾಜವಂಶವು ಪತನ ಹೊಂದಿದ ನಂತರ ರಾಷ್ಟ್ರೀಯ ಸಭೆಯು ಮಾನವನ ಹಕ್ಕುಗಳ ಬಗ್ಗೆ ಒಂದು ಪ್ರಕಟಣೆ ಹೊರಡಿಸಿತು. ರಾಜ್ಯವ್ಯವಸ್ಥೆಯನ್ನು ನಿಧಾನವಾಗಿ ವಿಸ್ತರಿಸಿ ರಚಿಸ ಲಾಯಿತು. ೧೭೯೧ರ ರಾಜ್ಯ ವ್ಯವಸ್ಥೆಯ ಮೂಲಕ, ೭೪೫ ಮಂದಿ ಸದಸ್ಯರನ್ನೊಳ ಗೊಂಡ ಸಭೆಗೆ ತಮ್ಮ ೨ ವರ್ಷಗಳ ಅವಧಿಗೆ ಚುನಾಯಿತಗೊಳ್ಳಲು, ಶಾಸನಾಧಿಕಾರದ ಹಕ್ಕನ್ನು ನೀಡಲಾಯಿತು. ನ್ಯಾಯಾಂಗದ ಹಕ್ಕನ್ನು ಸಂಪೂರ್ಣವಾಗಿ ಮಾರ್ಪಡಿಸಲಾಯಿತು. ಇದುವರೆವಿಗೂ ಫ್ರಾನ್ಸ್‌ನಲ್ಲಿ ಅಪರಿಚಿತವಾದ 'ನ್ಯಾಯದರ್ಶಿ ವ್ಯವಸ್ಥೆ'ಯನ್ನು ಪ್ರಾರಂಭಿಸ ಲಾಯಿತು. ಹಾಗಾಗಿ ಒಂದು ಹಿರಿಯ ಕೇಂದ್ರೀಕೃತ ರಾಜ್ಯ ವ್ಯವಸ್ಥೆಯನ್ನು ಹೊಂದಿದ್ದ ಫ್ರಾನ್ಸ್ ದೇಶವು ವಿಕೇಂದ್ರೀಕೃತವಾಯಿತು. ಚರ್ಚಿಗೆ ಸಂಬಂಧಿಸಿದ ಭೂಮಿಯನ್ನು ರಾಷ್ಟ್ರೀಯ ಆಸ್ತಿಯೆಂದು ಘೋಷಿಸಲಾಯಿತು. ಚರ್ಚಿಗೆ ಸಂಬಂಧಿಸಿದ ಇನ್ನೊಂದು ಶಾಸನದಲ್ಲಿ ಪುರೋಹಿತ ವರ್ಗದ ವ್ಯವಸ್ಥೆಯಲ್ಲಿ ನಾಗರಿಕ ಸಮುದಾಯದ ಸೇರ್ಪಡೆ ಯಾಗಿತ್ತು.

ಶಾಸಕಾಂಗ ಸಭೆಯ ಮನೋವೃತ್ತಿಯಲ್ಲಿ ರಾಜಪ್ರಭುತ್ವದ ಅಂಶಗಳಿದ್ದುದರಿಂದ ಫ್ರಾನ್ಸ್ ದೇಶಕ್ಕೆ ತಾನೊಂದು ಗಣರಾಜ್ಯವಾಗುವ ಸಾಧ್ಯತೆಗಳಿರಲಿಲ್ಲ. ಆದರೆ ಪ್ರಾಚೀನ ಆಳ್ವಿಕೆಯ ವಿರುದ್ಧ ಒಂದು ಖಚಿತವಾದ ಮತ್ತು ನಿರ್ದಿಷ್ಟವಾದ ತಿರಸ್ಕಾರವಿತ್ತು. ನಂತರದಲ್ಲಿ ಪ್ರಪಂಚಕ್ಕೆ ತಿಳಿದುಬಂದ ಸ್ವದೇಶೀಯ ರಾಜಕೀಯದ ಹಲವು ಹೊಸ ಅಂಶಗಳು ಈ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತಿದ್ದವು. ಹಲವು ರಾಜಕೀಯ ಸಂಘಗಳ ಅಸ್ತಿತ್ವದ ಸುಳಿವೂ ಕಾಣಸಿಗುತ್ತಿತ್ತು. ಜಾಕೋಬಿಯನ್ ಹಾಗೂ ಕಾರ್ಡೆಲಿಯರ್ ಸಂಘಗಳು ಅಂಥಹವುಗಳು. ಜಾಕೋಬಿಯನ್ ಸಂಘದಲ್ಲಿ ಸಭೆಯ ಹಾಗೂ ಬೇರೆ ಸದಸ್ಯರು ಮತ್ತು ಪ್ಯಾರಿಸ್‌ನ ನಾಗರಿಕರು ಸೇರಿಕೊಂಡಿದ್ದರು. ರಾಬಿಸ್ಪಿಯರನು ಅದರ ಅತ್ಯಂತ ಪ್ರಭಾವಶಾಲೀ ನಾಯಕನಾಗಿದ್ದನು. ಕ್ರಮೇಣ ಜಾಕೋಬಿಯನ್ ಸಂಘವು ರಾಷ್ಟ್ರೀಯ ಸಭೆಯ ಪ್ರತಿಸ್ಪರ್ಧಿಯಾಯಿತು. ಇನ್ನೊಂದು ಕಡೆ ಕಾರ್ಡಿಲಿಯರ್ ಸಂಘವು ಹೆಚ್ಚಿನ ಮಟ್ಟದಲ್ಲಿ ತೀವ್ರವಾದಿಯಾಗಿದ್ದಿತು. ಡಾಂಟನ್ನನು ಇದರ ನಾಯಕನಾಗಿದ್ದನು. ಈ ಎರಡೂ ಸಂಘಗಳು ಸಾರ್ವಜನಿಕರನ್ನು ಪ್ರಭಾವಿತಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದವು.

ಶಾಸಕಾಂಗ ಸಭೆಯಲ್ಲಿ ಗಿರಾಂಡಿಸ್ಟರೆಂಬ ಸದಸ್ಯರ ಗುಂಪೊಂದಿತ್ತು. ಜಾಕೋಬಿಯನ್ನರು ಹಾಗೂ ಗಿರೋಂಡಿಸ್ಟರದು ಸಂಪೂರ್ಣವಾಗಿ ಬೇರೆಯೇ ಗುಂಪುಗಳಾಗಿದ್ದಿತು ಮತ್ತು ಒಂದಕ್ಕೊಂದು ಪ್ರಬಲ ಪ್ರತಿಸ್ಪರ್ಧಿಗಳಾಗಿದ್ದವು. ಈ ಸಂದರ್ಭದಲ್ಲಿ ಹಲವು ಹೊಸ ಗುಂಪುಗಳು ಸೇರಿಕೊಂಡು, ಸಂಘರ್ಷಪೂರ್ಣ ನಾಟಕದ ತಮ್ಮ ಪಾತ್ರಗಳನ್ನು ನಿಭಾಯಿಸಲು ತಯಾರಾಗಿದ್ದವು. ಇದರಿಂದ ವಾತಾವರಣದಲ್ಲಿ ಮಿಂಚಿನ ಅಂಶಗಳು ಸೇರ್ಪಡೆಯಾದವು. ಜನಸಮುದಾಯವು ರಾಜನನ್ನು ಸೆರೆಗೆ ದಬ್ಬಿದಾಗ ಫ್ರಾನ್ಸಿನಲ್ಲಿ ಬಿಸಿ ವಾತಾವರಣ ನಿರ್ಮಾಣವಾಯಿತು. ಇದು ಕುಖ್ಯಾತ ಸೆಪ್ಟೆಂಬರ್ ಕಗ್ಗೊಲೆಗೂ ಕಾರಣವಾಯಿತು. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಮರಾತ್‌ನಿಂದ ಪ್ರಚೋದನೆಗೊಂಡ ಸಮುದಾಯದ ಹಿಂಸಾತ್ಮಕ ಗುಂಪುಗಳು ದುರುಪಯೋಗಪಡಿಸಿಕೊಂಡವು.

ರಾಷ್ಟ್ರೀಯ ಒಕ್ಕೂಟವೇ ಮೂರನೆಯ ಕ್ರಾಂತಿಕಾರಿ ಸಂಘಟನೆ. ಇದು ೧೭೯೨ ರಿಂದ ೧೭೯೫ ರವರೆಗೂ ಅಸ್ತಿತ್ವದಲ್ಲಿತ್ತು. ೧೬ನೆಯ ಲೂಯಿಯನ್ನು ಹೊರದೂಡಿದ ನಂತರ ರಾಜಪ್ರಭುತ್ವದ ರದ್ಧತಿಯಿಂದ ಅನಿವಾರ್ಯವಾದ ಹೊಸ ಸಂವಿಧಾನದ ರಚನೆಯನ್ನು ಈ ಒಕ್ಕೂಟವು ಪ್ರೇರೇಪಿಸಿತು. ಜಾಕೋಬಿಯನ್ನರು ಹಾಗೂ ಗಿರೋಂಡಿಸ್ಟರ ನಡುವಿನ ಸಂಘರ್ಷದಿಂದ ೧೬ನೆಯ ಲೂಯಿಯನ್ನು ವಿಚಾರಣೆಗೆ ಗುರಿಪಡಿಸಿ ಮರಣದಂಡನೆ ವಿಧಿಸಲಾಯಿತು. ಈ ಮರಣ ದಂಡನೆಯ ತಕ್ಷಣದ ಪರಿಣಾಮವೆಂದರೆ ಶತ್ರುಗಳ ಸಂಖ್ಯೆ ಹೆಚ್ಚಿತು. ಜಾಕೋಬಿಯನ್ನರನ್ನು ಬೆಂಬಲಿಸುತ್ತಿದ್ದ ಜನಸಮುದಾಯವು ಈ ಸಂಘರ್ಷದಲ್ಲಿ ಸೇರಿಕೊಂಡು ಗಿರೋಂಡಿಸ್ಟರ ವಿರುದ್ಧದ ದಂಗೆಯನ್ನು ಸಂಘಟಿಸಿತು. ಈ ಸಂದಿಗ್ಧ ಪರಿಸ್ಥಿತಿಯನ್ನೆದುರಿಸಲು ಎಲ್ಲ ಅಡೆತಡೆಗಳನ್ನು ಎದುರಿಸಿ, ಫ್ರಾನ್ಸ್‌ನ ಅಭಿವೃದ್ಧಿಗಾಗಿ ಒಂದು ಹಂಗಾಮಿ ಸರಕಾರವನ್ನು ರಚಿಸಲಾಯಿತು. ಆದರೆ ಈ ಸರಕಾರವು ಮುಂದೆ ಯಾವ ದೇಶವೂ ಕಾಣಲಾಗದಂತಹ ಪರಿಹಾಸ ಮಾದರಿಯ ಒಂದು ಭೀತಿಯ ಸಾಮ್ರಾಜ್ಯವನ್ನು ಅವಿಷ್ಕರಿಸಿತು.

ಈ ಸರಕಾರವು ಸಾರ್ವಜನಿಕ ಭದ್ರತೆಗಾಗಿ ಒಂದು ಸಮಿತಿ, ಒಂದು ಕ್ರಾಂತಿಕಾರಿ ನ್ಯಾಯಮಂಡಳಿ ಹಾಗೂ ಶಂಕಿತರಿಗಾಗಿ ಕಾನೂನುಗಳನ್ನು ರಚಿಸಿತು. ಲಿಯೋನ್ಸ್ ನಗರ ವನ್ನು ನಾಶಪಡಿಸಬೇಕು ಎನ್ನುವ ತೀರ್ಪನ್ನು ಈ ಸಭೆಯು ನೀಡಿತು. ವೆಂಡೀ ನಗರದ ಮೇಲೆ ಭೀಕರ ಕ್ರೌರ್ಯವನ್ನು ಎಸಗಲಾಯಿತು. ಕ್ರಾಂತಿಕಾರಿ ನ್ಯಾಯಪೀಠವು ಸಾವಿರಾರು ಜನರ ಶಿರಚ್ಛೇದ ಮಾಡಿತು. ಹೀಗೆ ಬಲಿಯಾದವರಲ್ಲಿ ಮದಾಮ್ ರೋಲಾನ್ ಸಹ ಒಬ್ಬನು. "ಭೀತಿಯ ಆಳ್ವಿಕೆ"ಯ ನೇತಾರರಿಗೆ ದುರಂತ ಸಾವು ಕಾದಿತ್ತು. ರಾಬಿಸ್ಪಿಯರ್‌ನ್ನು ೧೭೯೪ರಲ್ಲಿ ಗಲ್ಲಿಗೇರಿಸಿದ ನಂತರ ಈ ಭೀತಿಯು ಅನುಷಂಗಿಕವಾಗಿ ಕೊನೆಗೊಂಡಿತು.

ಫ್ರಾನ್ಸ್ ಈಗ ನಿರಾಳವಾಗಿ ಉಸಿರಾಡಿತು. ಭೀತಿಯ ವಾತಾವರಣವು ನಿಧಾನವಾಗಿ ಕೊನೆಗೊಂಡು ಒಂದು ಸೌಮ್ಯ ಸಾಮ್ರಾಜ್ಯವು ಸ್ಥಾಪಿತವಾಯಿತು. ೧೭೯೫ರಲ್ಲಿ ಸಭೆಯು ಒಂದು ಹೊಸ ಸಂವಿಧಾನವನ್ನು ರೂಪಿಸಿತು. ಐದರು ಸದಸ್ಯರನ್ನು ಒಳಗೊಂಡ ವ್ಯವಸ್ಥಾಪಕ ಮಂಡಳಿಯ (ಡೈರೆಕ್ಟರಿ) ಕಾರ್ಯನಿರ್ವಾಹಕ ಅಧಿಕಾರವನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ಆದರೆ ೧೭೯೫ರ ಅಕ್ಟೋಬರಿನಲ್ಲಿ ಈ ಸಭೆಯು ಬರಬಾಸ್ತಾಗಿದೆ ಯೆಂದು ಸ್ವಯಂ ಘೋಷಿಸಿಕೊಂಡಿತು. ಈ ಸಭೆಯು ರಾಜಪ್ರಭುತ್ವದ ಶ್ರೇಷ್ಠನಾಡಿನಲ್ಲಿ ಗಣರಾಜ್ಯವನ್ನು ಘೋಷಿಸಿತು. ಐದು ಸಂವಿಧಾನಗಳಿಗಾಗಿ ಒಪ್ಪಿಗೆ ನೀಡಿತು, ರಾಜನನ್ನು ಗಲ್ಲಿಗೇರಿಸಿತು ಹಾಗೂ ಹಿಂಸೆಯ ಸಾಮ್ರಾಜ್ಯವನ್ನು ನಡೆಸಿತು. ಶಾಂತಿಯುತ ಬೆಳವಣಿಗೆಯ ಹಾದಿಯು ಸುಗಮವಾಗುವಂತೆ ಶ್ರಮಿಸಿತು. ನಿಯಮಗಳನ್ನು

ಕಾಯಿದೆಯಾಗಿ ಪರಿವರ್ತಿಸಲು ಬೇಕಾಗುವ ಪೂರ್ವಭಾವಿಯಾದ ಕೆಲಸ ಕೈಗೆತ್ತಿಕೊಳ್ಳುವುದರ ಮೂಲಕ ಒಂದು ಭದ್ರವಾದ ಅಡಿಪಾಯವನ್ನು ಹಾಕಿತು. ಈ ಸಾಧನೆಯನ್ನೇ ಮುಂದೆ ನೆಪೋಲಿಯನ್ನನು ಪೂರ್ಣಗೊಳಿಸಿ ಪ್ರಖ್ಯಾತನಾದನು.

ಇದರ ವ್ಯವಸ್ಥಾಪಕ ಮಂಡಲಿ ೧೭೯೫ನೆಯ ಅಕ್ಟೋಬರ್‌ನಿಂದ ೧೭೯೯ನೇ ನವೆಂಬರ್ ವರೆಗೂ ಊರ್ಜಿತಗೊಂಡಿತು. ಗಣರಾಜ್ಯದ ಕಾರ್ಯನಿರ್ವಾಹಕ ಶಾಖೆಯಿಂದ ತನ್ನ ಹೆಸರನ್ನು ಆಯ್ದುಕೊಂಡಿತು. ನಿಲ್ಲದೆ ಮುಂದುವರೆದ ಯುದ್ಧವೇ ಇದರ ಮೊದಲ ದೊಡ್ಡ ಸಮಸ್ಯೆಯಾಯಿತು. ಗಣರಾಜ್ಯದ ವಿರುದ್ಧ ಇಂಗ್ಲೆಂಡ್, ಆಸ್ಟ್ರಿಯ ಮತ್ತು ಕಿರಿಯ ಜರ್ಮನ್ ರಾಜ್ಯಗಳು ಯುದ್ಧದಲ್ಲಿ ತೊಡಗಿದ್ದವು. ಹಾಗಾಗಿ ಈ ವ್ಯವಸ್ಥಾಪಕ ಮಂಡಲಿಗೆ ಯುದ್ಧವನ್ನು ಮುಂದುವರೆಸುವುದೇ ಒಂದು ಕರ್ತವ್ಯವಾಯಿತು. ಇಟಲಿಯ ವಿರುದ್ಧದ ಕಾರ್ಯಾಚರಣೆಯ ಜವಾಬ್ದಾರಿಯನ್ನು ಜನರಲ್ ಬೋನಾಪಾರ್ಟನೊಬ್ಬನೆ ತೆಗೆದುಕೊಂಡನು. ಈ ಹಂತದಲ್ಲಿ ನೆಪೋಲಿಯನ್ ಹಾಗೂ ಆತನ ಅಧಿಕಾರದ ಉತ್ಕರ್ಷವನ್ನು ಗುರುತಿಸಬಹುದು. ಈತ ಹುಟ್ಟಿದ್ದು ಕೊರ್ಸಿಕಾದ ಅಜಾಚಿಯಾದಲ್ಲಿ. ಇಂಗೋರ್ ವಾಲ್ಟೇರ್ ಹಾಗೂ ರೂಸೋರವರ ಬರಹಗಳು ಯುವ ನೆಪೋಲಿಯನ್‌ನ ಮೇಲೆ ಬಹಳಷ್ಟು ಪ್ರಭಾವ ಬೀರಿದವು. ಇಟಲಿಯ ವಿರುದ್ಧ ಯುದ್ಧ ನಡೆಸುತ್ತಿದ್ದ ಫ್ರೆಂಚ್ ಸೈನ್ಯದ ನಾಯಕತ್ವವನ್ನು ಇವನಿಗೆ ವಹಿಸಲಾಯಿತು.

**೧೭೯೬-೯೭ ಇಟಲಿಯ ದಂಡಯಾತ್ರೆ**

ಸೈನಿಕ ಸಮುದಾಯದ ದೃಷ್ಟಿಯಲ್ಲಿ ನೆಪೋಲಿಯನ್‌ನ ಇಟಲಿಯ ದಂಡಯಾತ್ರೆಯು ಇಂದಿಗೂ ಯುದ್ಧ ಕಲೆಯಲ್ಲಿ ಒಂದು ಉತ್ಕೃಷ್ಟ ಮಾದರಿಯೆಂದು ಪರಿಗಣಿಸಲ್ಪಟ್ಟಿದೆ. ಸುಮಾರು ಒಂದು ವರ್ಷದವರೆಗೂ ನಡೆದ ಈ ಯುದ್ಧವನ್ನು "ಅವನು ಬಂದ- ಅವನು ನೋಡಿದ- ಅವನು ಗೆದ್ದ" ಎಂಬ ನಾಣ್ಣುಡಿಯ ಮೂಲಕ ಸಂಕ್ಷೇಪವಾಗಿ ವಿವರಿಸಬಹುದು. ಅವನು ಸಾರ್ಡೀನಿಯಾ ಹಾಗೂ ಆಸ್ಟ್ರಿಯಾದ ಸಂಯುಕ್ತ ಸೈನ್ಯವನ್ನು ಎದುರಿಸಿ ಹೋರಾಡಿದನು. ಕೊನೆಗೆ ಸಾರ್ಡೀನಿಯಾದ ಸೈನ್ಯವು ಸಾವಾಯ್ ಮತ್ತು ನೀಸ್ ಪ್ರಾಂತ್ಯಗಳನ್ನು ಬಿಟ್ಟುಕೊಡುವುದರ ಮೂಲಕ ಶಾಂತಿಯ ಪ್ರಸ್ತಾಪ ಮಾಡಿತು. ನಂತರ ಬೋನಾಪಾರ್ಟನು ತನ್ನ ಗಮನವನ್ನು ಲಂಬಾರ್ಡಿಯನ್ನು ಹಿಡಿತದಲ್ಲಿಟ್ಟು ಕೊಂಡಿದ್ದ ಆಸ್ಟ್ರಿಯಾದ ಸೈನ್ಯದ ಕಡೆ ಹರಿಸಿದನು. ಆಗ ನಡೆಸಿದ ದಾಳಿಯಿಂದ ಮಿಲಾನ್‌ಗೆ ಅವನು ವಿಜಯದ ದಾಪುಗಾಲು ಹಾಕಿದನು. ಆಸ್ಟ್ರಿಯನ್ನರು ಅಡಗಿಕೊಂಡಿದ್ದ ಮಾಂಡುವಾ ಕೋಟೆಯನ್ನು ಆಕ್ರಮಿಸಿದನು ಹಾಗೂ ಅವರನ್ನು ನಾಲ್ಕು ಬಾರಿ ಸೋಲಿಸಿದನು.

ರಿವೋಲಿಯಲ್ಲಿ ಮತ್ತೊಂದು ಹಾತಾಶೆಯ ಕದನ ನಡೆಯಿತು. ಬೋನಾಪಾರ್ಟೆಯಿಂದ ಆಸ್ಟ್ರಿಯನ್ನರು ಅವಮಾನಕರ ಸೋಲನ್ನುಂಡು ನಿರ್ನಾಮಗೊಂಡರು. ಹೀಗೆ ಅವನ ಅದೃಷ್ಟವು ದಿಗಂತದಲ್ಲಿ ತನ್ನೆಲ್ಲ ಪ್ರಕಾಶದೊಂದಿಗೆ ಮಿನುಗಿತು. ಈ ದಂಡಯಾತ್ರೆಯ ನಂತರ ಅವನು ರಾಜ್ಯಗಳ ಸೃಷ್ಟಿಕರ್ತ ಹಾಗೂ ವಿನಾಶಕ ಎಂದೆನಿಸಿಕೊಂಡನು. ವೆನಿಸ್ ನಗರದ ಪ್ರಖ್ಯಾತ ಗಣರಾಜ್ಯವನ್ನು ಕೆಳಗೆ ಬೀಳಿಸಿದುದೇ ಆತನ ಅತ್ಯಂತ ಕುಪ್ರಸಿದ್ಧ ಕೆಲಸವೆಂದು ಪರಿಗಣಿಸಲಾಗಿದೆ. ಯೂರೋಪಿನಲ್ಲೇ ಅತ್ಯಂತ ಹಳೆಯ ಹಾಗೂ ಹೆಮ್ಮೆಯ ರಾಜ್ಯಗಳಲ್ಲೊಂದಾದ ವೆನಿಸ್ ನಗರವನ್ನು ಗೆದ್ದುಕೊಂಡಿದ್ದಲ್ಲದೆ, ಅದನ್ನು ರಾಜಕೀಯ ಕೌಶಲ್ಯದಾಟದಲ್ಲಿ ಒಂದು ದಾಳವನ್ನಾಗಿ ಉಪಯೋಗಿಸಿಕೊಂಡನು. ೧೭೯೭ರ ಏಪ್ರಿಲ್‌ನಲ್ಲಿ ಆಸ್ಟ್ರಿಯಾವು 'ಕ್ಯಾಂಪೊಫೋರ್ಮಿಯೋದ'ದ ಕೊನೆಯ ಶಾಂತಿ ಒಪ್ಪಂದಕ್ಕೆ ಅಂದರೆ ಲಿಯೋಬಾನ್‌ನ ಶಾಂತಿಗೆ ಸಮ್ಮತಿಸಿತು.

ಈ ಒಪ್ಪಂದದ ಮೂಲಕ ಆಸ್ಟ್ರಿಯಾವು ಬೆಲ್ಜಿಯಂನಲ್ಲಿದ್ದ ತನ್ನ ಸ್ವತ್ತುಗಳನ್ನು ಫ್ರಾನ್ಸ್‌ಗೆ ಬಿಟ್ಟುಕೊಟ್ಟಿತು ಹಾಗೂ ರೈನ್ ನದಿಯ ಎಡದಂಡೆಯನ್ನು ತ್ಯಜಿಸಿತು. ಲಂಬಾರ್ಡಿಯಾದ ತನ್ನ ಹಕ್ಕುಗಳನ್ನು ವರ್ಜಿಸಿತು. ಬೋನಾಪಾರ್ಟೆಯು ಇಟಲಿಯನ್ನು ವಶಪಡಿಸಿಕೊಂಡಿದ್ದಷ್ಟೇ ಅಲ್ಲದೆ, ಲಾಭದ ಗಳಿಕೆಯಿಂದ ಅದನ್ನು ಕೊಳ್ಳೆ ಹೊಡೆದನು. ಮೊಡೆನಾದ ಡ್ಯೂಕನನ್ನು ಹತ್ತು, ಜಿನಿವಾದ ಗಣರಾಜ್ಯವನ್ನು ಹದಿನೈದು ಹಾಗೂ ಪೋಪನನ್ನು ಇಪ್ಪತ್ತು ಮಿಲಿಯ ಫ್ರಾಂಕ್ ಕೊಡುವಂತೆ ಒತ್ತಾಯ ಹೇರಿದನು. ಇಟಲಿಯ ಕಲಾ ಸಂಪತ್ತನ್ನು ಸೂರೆಹೊಡೆದನು. ಇಟಲಿಯ ದಂಡಯಾತ್ರೆಯಲ್ಲಿನ ಈ ಕ್ಷಿಪ್ರ 'ಜ್ಞಾನಾರ್ಜನೆ'ಯ ನಂತರ ಬೋನಾಪಾರ್ಟೆಯು ಪ್ಯಾರಿಸ್‌ಗೆ ಹಿಂದಿರುಗಿದನು.

ಕ್ಯಾಂಪೋಫೋರ್ಮಿಯಾದ ಶಾಂತಿ ಒಪ್ಪಂದದ ನಂತರ ಇಂಗ್ಲೆಂಡ್ ಮಾತ್ರವೆ ಯುದ್ಧದಲ್ಲಿ ಮುಂದುವರೆಯಿತು.

ತನ್ನ ಸರ್ಕಾರದಿಂದ ಇಂಗ್ಲೆಂಡ್‌ನ ರಾಜಪ್ರಭುತ್ವವನ್ನು ನಾಶಗೊಳಿಸಬೇಕು. ಅಥವಾ ಚುರುಕಾಗಿರುವ ಆ ದ್ವೀಪವಾಸಿಗಳಿಂದಲೇ ನಾಶ ಹೊಂದಬೇಕು. ನಮ್ಮ ಶಕ್ತಿಯನ್ನು ನೌಕಾಬಲದ ಮೇಲೆ ಕೇಂದ್ರೀಕರಿಸಿ, ಇಂಗ್ಲೆಂಡನ್ನು ನಿರ್ನಾಮಗೊಳಿಸಬೇಕು. ಇದಾದರೆ ಇಡೀ ಯೂರೋಪ್ ನಮ್ಮ ಕಾಲಿನ ಬಳಿ ಇರುತ್ತದೆ

ಎಂಬುದು ಬೋನಾಪಾರ್ಟೆಯ ಅಭಿಪ್ರಾಯವಾಗಿತ್ತು. ನಂತರ ವ್ಯವಸ್ಥಾಪಕ ಮಂಡಳಿಯು ಬೋನಾಪಾರ್ಟೆಯನ್ನು ಇಂಗ್ಲೆಂಡ್‌ನ ಸೈನ್ಯಕ್ಕೆ ದಂಡನಾಯಕನನ್ನಾಗಿ ಆರಿಸಿತು. ಅವನು ಈಜಿಪ್ಟಿನ ಮೇಲೆ ದಾಳಿ ನಡೆಸಲು ನಿರ್ಧರಿಸಿ ದನು. ಅದನ್ನೊಮ್ಮೆ ಆಕ್ರಮಿಸಿಕೊಂಡರೆ ಭಾರತದ ವಿರುದ್ಧದ ದಂಡಯಾತ್ರೆಗೆ ಅನುಕೂಲ ವಾಗುವಂತಹ ಮುಕ್ತದೇಶವೊಂದರ ಅವಕಾಶ ದೊರೆಯುವುದು ಎನ್ನುವ ಅಭಿಪ್ರಾಯವಿತ್ತು.

ಆದರೆ ಈ ದಂಡಯಾತ್ರೆಯಲ್ಲಿ ವಿಪರೀತವಾದ ಅಪಾಯಗಳಿದ್ದವು. ಮೆಡಿಟರೇನಿಯನ್ ಪ್ರದೇಶದಲ್ಲಿ ಸೇನಾಧಿಪತಿ ನೆಲ್ಸನ್ನನು ಬಲಿಷ್ಠವಾದ ಇಂಗ್ಲೀಷ್ ನೌಕಾಪಡೆಯೊಂದಿಗೆ ತಯಾರಿದ್ದನು. ಟರ್ಕಿಯ ಸುಲ್ತಾನನು ಈಜಿಪ್ಟ್‌ನ ನಾಮಮಾತ್ರ ರಾಜನಾಗಿದ್ದನು. ಅಲೆಗ್ಸಾಂಡ್ರಿಯಾವನ್ನು ಆಕ್ರಮಿಸಿಕೊಂಡ ನಂತರ ಫ್ರೆಂಚ್ ಸೈನ್ಯವು ಕೈರೋಗೆ ಹೊರಟಿತು. ಮರಳುಗಾಡಿನ ಸುಡುನೆಲದ ಅಪಾಯಕಾರಿ ಪ್ರಯಾಣಕ್ಕೆ ಒಂದು ಉತ್ತೇಜಕ-ಹಿತಕರ ಅಂಶವಾಗಿ ಈ ಸೈನ್ಯಕ್ಕೆ ಮಾಮೆಲುಕ್‌ರ ಸಂಪೂರ್ಣ ಸೋಲು ನೆರವಾಯಿತು. ೧೭೯೮ರಲ್ಲಿ ನಡೆದ 'ಪಿರಮಿಡ್ಡುಗಳ ಯುದ್ಧ"ದಿಂದ ಕೈರೋ ಮೇಲೆ ಫ್ರೆಂಚರು ಹಿಡಿತ ಸಾಧಿಸಿದರು. ಆಗಸ್ಟಿನಲ್ಲಿ ನೆಲ್ಸನ್ನನು ಅಬುಕಿರ್ ಕೊಲ್ಲಿಯ ಬಂದರಿನಲ್ಲಿ ತಂಗಿದ್ದ ಫ್ರೆಂಚ್ ನೌಕಾಪಡೆಗೆ ಅಚ್ಚರಿಯ ಪೆಟ್ಟು ನೀಡಿದನು. ಈ ನೈಲ್ ಯುದ್ಧವು ಈ ಇಡೀ ಅವಧಿಯಲ್ಲೇ ನಡೆದ ಅತ್ಯಂತ ನಿರ್ಣಾಯಕ ಸಾಗರ ಯುದ್ಧಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ಇದರಿಂದಲೇ ಬೋನಾಪಾರ್ಟೆಗೆ ಬ್ರಿಟೀಷರ ನೌಕಾಶಕ್ತಿಯ ಮೊದಲ ಪರಿಚಯವಾಯಿತು.

**ಸಿರಿಯಾ ಮೇಲಿನ ದಂಡಯಾತ್ರೆ**

ಟರ್ಕಿಯ ಸುಲ್ತಾನನು ತನ್ನ ಮೇಲೆ ಯುದ್ಧವನ್ನು ಸಾರಿದ್ದಾನೆಂದು ತಿಳಿದುಬಂದ ಕೂಡಲೇ ಬೋನಾಪಾರ್ಟೆಯು ೧೭೯೯ರಲ್ಲಿ ಸಿರಿಯಾವನ್ನು ಮುತ್ತಿಗೆ ಹಾಕುವ ನಿರ್ಧಾರ ಕೈಗೊಂಡನು. ಗಾಜಾ ಮತ್ತು ಟಫಾ ಕೋಟೆಗಳು ಕೈವಶವಾದವು. ಆದರೆ ಬ್ರಿಟೀಷರ ನೌಕಾಪಡೆಯ ಬಲದ ಮುಂದೆ ಅದಕ್ಕಿಂತಲೂ ಹೆಚ್ಚಿನದನ್ನು ಸಾಧಿಸಲಾಗಲಿಲ್ಲ. ಹಲವು ವಾರಗಳ ನಂತರ ಅವನು ಅಬುಕಿರ್ ಕದನದಲ್ಲಿ ವಿಜಯಿಯಾದನು. ಈಜಿಪ್ಟಿನ ದಂಡಯಾತ್ರೆಯ ನಂತರ ಅವನು ಪ್ಯಾರಿಸ್ಸಿಗೆ ಹಿಂತಿರುಗಲು ನಿರ್ಧರಿಸಿದನು. ಪ್ಯಾರಿಸ್ ನಲ್ಲಿದ್ದ ಸರ್ಕಾರವು ಅತ್ಯಂತ ಅದಕ್ಷ ಹಾಗೂ ಭ್ರಷ್ಟಾಚಾರದಿಂದ ಕೂಡಿದ್ದನ್ನು ಕಂಡನು. ಹಿಂದಿದ್ದ ಸರ್ಕಾರವನ್ನು "ವಿಪ್ಲವಕಾರಿ ಸರ್ಕಾರ ಬದಲಾವಣೆ"ಯ ಮೂಲಕ ಸೋಲಿಸಲಾಗಿತ್ತು.

ಭಾನುವಾರದಂದು, ೧೯ನೇ ಬುಮ್ಮೈರ್ ಹಿರಿಯರ ಸಮಿತಿ ಹಾಗೂ ೫೦೦ ಸದಸ್ಯರ ಸಮಿತಿಯು ಸೇಂಟ್ ಕ್ಲಾಡ್‌ನ ಅರಮನೆಯಲ್ಲಿ ಸಭೆ ಸೇರಿತು. ಅಲ್ಲಿ ತೆಗೆದುಕೊಂಡ ತೀರ್ಮಾನಗಳೆಂದರೆ, ನಿರ್ದೇಶಕ ಮಂಡಲಿಯನ್ನು ಬರಖಾಸ್ತುಗೊಳಿಸುವುದು, ಪ್ಯಾರಿಸ್‌ನಲ್ಲಿ ರಾಯಭಾರಿ ಕಛೇರಿಯನ್ನು ಸ್ಥಾಪಿಸುವುದು. ಸಿಯೀಸ್, ಡ್ಯೂಕೋಸ್ ಮತ್ತು ಬೋನಾಪಾರ್ಟೆ ಯನ್ನು ಪ್ರತಿನಿಧಿಗಳನ್ನಾಗಿ ನೇಮಕ ಮಾಡಿಕೊಳ್ಳಲಾಯಿತು. ಗಣರಾಜ್ಯಕ್ಕೆ ನಿಷ್ಠೆ, ಸ್ವಾತಂತ್ರ್ಯಕ್ಕೆ ಆದ್ಯತೆ ಮತ್ತು ಪ್ರತಿನಿಧಿ ಪದ್ಧತಿಯ ಸರ್ಕಾರದ ಸ್ಥಾಪನೆಯೇ ಈ ಮೂವರು ನೀಡಿದ ಆಶ್ವಾಸನೆಯಾಗಿತ್ತು.

ಈ ರೀತಿಯಿಂದ ಒಬ್ಬ ಪ್ರಖ್ಯಾತ ಯುವ ಸೇನಾನಿಯ 'ವಿಪ್ಲವಕಾರಿ ಸರ್ಕಾರ ಬದಲಾವಣೆಯ" ಮೂಲಕ ಅಧಿಕಾರವನ್ನು ಪಡೆದುಕೊಂಡರೂ, ಅದನ್ನು ಬಹಳ ಬೇಗನೆ ಕಳೆದುಕೊಳ್ಳುವಂತಾಯಿತು. ಕ್ರಾಂತಿಯ ನಂತರದ ನಾಲ್ಕನೆಯದಾದ ೧೭೯೯ರ ಸಂವಿಧಾನವು ರಚಿತವಾಗಿ ಕಾರ್ಯರೂಪಕ್ಕೆ ಬಂದಿತು. ಕಾರ್ಯನಿರ್ವಾಹಕ ಅಧಿಕಾರವನ್ನು ಮೂರು ಪ್ರತಿನಿಧಿಗಳಿಗೆ ವಹಿಸಲಾಯಿತು.

ಇದರಲ್ಲಿ ಬೋನಾಪಾರ್ಟೆಯೇ ಮೊದಲಿಗ, ಆತನ ಪದವಿಯು ಬಹು ಉನ್ನತ ಮಟ್ಟದಲ್ಲಿದ್ದು, ಅದು ಬಹುಪಾಲು ದೈವಿಕ ಹಕ್ಕಿನಿಂದ ಕೂಡಿದ ರಾಜಪ್ರಭುತ್ವವನ್ನೇ ಹೋಲುತ್ತಿತ್ತು.

ಹೀಗೆ ತನ್ನ ದೇಶವನ್ನು ಓರಣವಾಗಿಟ್ಟುಕೊಂಡ ನಂತರ, ಆತನು "ಫ್ರಾನ್ಸ್‌ನ ಹೊರಶತ್ರುಗಳ ಮೇಲೆ ಗಮನ ಹರಿಸಿದನು. ಆಸ್ಟ್ರೀಯ, ಇಂಗ್ಲೆಂಡ್ ಹಾಗೂ ರಷ್ಯಗಳನ್ನು ಒಳಗೊಂಡ ಒಂದು ಒಕ್ಕೂಟವು ರಚನೆಗೊಂಡಿತು. ಆತನು ೧೮೦೦ರಲ್ಲಿ ಎರಡನೆಯ ಇಟಲಿ ದಂಡಯಾತ್ರೆಯ ನೇತೃತ್ವ ವಹಿಸಿದನು. ನೆಪೋಲಿಯನ್ ಹಾಗೂ ಆತನ ದಂಡನಾಯಕ ಮೋರಿಯೋ ಆಸ್ಟ್ರಿಯನ್‌ರನ್ನು ಸೋಲಿಸಿದರು. ಆಸ್ಟ್ರಿಯನ್ನರು ಉತ್ತರ ಇಟಲಿಯ ಭಾಗಗಳನ್ನು ಫ್ರೆಂಚರಿಗೆ ಬಿಟ್ಟುಕೊಡುವುದರ ಮೂಲಕ ಯುದ್ಧ ವಿರಾಮವನ್ನು ಘೋಷಿಸಿದರು. ೧೯೦೧ರಲ್ಲಿ ಆಸ್ಟ್ರಿಯನ್ನರು ಲೂನೆವಿಲ್ಲೆ ಒಪ್ಪಂದಕ್ಕೆ ಸಹಿಹಾಕಿ ಶಾಂತಿಯ ಪ್ರಸ್ತಾಪ ಮಾಡಿದರು.

ಈಗ ಫ್ರಾನ್ಸ್ ದೇಶವು ಕೇವಲ ಇಂಗ್ಲೆಂಡ್‌ನ ವಿರುದ್ಧ ಮಾತ್ರ ಯುದ್ಧ ಮುಂದು ವರೆಸಿತು. ಫ್ರೆಂಚ್ ನೌಕಾಪಡೆಯನ್ನು ಇಂಗ್ಲೆಂಡ್ ಸೋಲಿಸಿತಲ್ಲದೆ, ಅದರ ಬಹುತೇಕ ವಸಾಹತುಗಳನ್ನು ವಶಪಡಿಸಿಕೊಂಡಿತು. ಕೊನೆಗೆ ಅದು ಶಾಂತಿ ಒಪ್ಪಂದ ಕುರಿತು ಸಮಾಲೋಚನೆ ನಡೆಸಲು ಮುಂದೆ ಬಂದಿತು. ೧೯೦೨ರಲ್ಲಿ ಅಮೀನ್ ಶಾಂತಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಫ್ರಾನ್ಸ್‌ನ ಗಣರಾಜ್ಯದ ಅಸ್ತಿತ್ವವನ್ನು ಒಪ್ಪಿಕೊಳ್ಳುವುದರೊಂದಿಗೆ ಇಂಗ್ಲೆಂಡ್ ಎಲ್ಲಾ ಫ್ರೆಂಚ್ ವಸಾಹತುಗಳನ್ನು ಪುನರ್ ಸ್ಥಾಪಿಸಿತು.

ಕ್ರಾಂತಿ ಸಾಧನೆಯ ಬಹುಪಾಲು ಅಂಶವನ್ನು ಪ್ರತಿನಿಧಿ ಹಾಗೂ ರಾಜಪ್ರಭುತ್ವಗಳು ಕಾಪಾಡಲು ಪ್ರಯತ್ನಿಸಿದವು. 'ಪ್ರತಿಭೆಗೆ ತೆರೆದ ವೃತ್ತಿ' ಅನ್ನುವ ತತ್ತ್ವಕ್ಕೆ ಬೋನಾಪಾರ್ಟೆಯು ಬದ್ಧನಾಗಿದ್ದನು. ಅವನ ಆಳ್ವಿಕೆಯಲ್ಲಿ ಯಾವುದೇ ರೀತಿಯ ಕೃತ್ರಿಮ ಅಡೆತಡೆಗಳಿರಲಿಲ್ಲ. ಯಾರೇ ಆಗಲಿ, ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಉನ್ನತ ಸ್ಥಾನಗಳಿಗೆ ಬರಬಹುದಾಗಿತ್ತು. ಪ್ರಭುತ್ವಕ್ಕೆ ಎಷ್ಟು ವಿಧೇಯತೆಯಿಂದ ಇದ್ದಾನೆ ಎನ್ನುವ ಆಧಾರದ ಮೇಲೆ ಒಬ್ಬ ವ್ಯಕ್ತಿಯ ಸೇವೆಯು ಒಪ್ಪಿತವಾಗುತ್ತಿತ್ತು. ಮೊರೆಂಗೊ ತರುವಾಯ ಮತ್ತು ಶಾಂತಿಸ್ಥಾಪನೆಯ ಸಣ್ಣ ಅವಧಿಯಲ್ಲಿ ಬೋನಾಪಾರ್ಟೆಯು ಪ್ರತಿನಿಧಿಯಾಗಿ ನಡೆಸಿದ ಚಟುವಟಿಕೆಗಳು ನಿರಂತರ ವಾಗಿಯೂ, ದೂರದೃಷ್ಟಿಯುಳ್ಳದ್ದಾಗಿಯೂ ಇದ್ದವು. ಅವನು ಧಾರ್ಮಿಕ ಭಿನ್ನಾಭಿಪ್ರಾಯ ಗಳನ್ನು ನಿವಾರಿಸುವಲ್ಲಿ ತೊಡಗಿಸಿಕೊಂಡಿದ್ದನು. ವಲಸೆ ಬಂದವರ ವಿರುದ್ಧವಿದ್ದ ಕಾನೂನುಗಳನ್ನು ಸಡಿಲಗೊಳಿಸಿದನು. ಒಟ್ಟಿನಲ್ಲಿ ಆತನು ಸ್ವತಃ ಯಾವುದೇ ಧಾರ್ಮಿಕ ಭಾವನೆಗಳಿಲ್ಲದೆ, ಕೇವಲ ರಾಜಕೀಯ ಭಾವನೆಗಳಿಗೆ ಮಾತ್ರ ಸ್ಪಂದಿಸುತ್ತಿದ್ದನು. ಆತನೇ ಹೇಳಿಕೊಳ್ಳುವಂತೆ "ಈಜಿಪ್ಟಿನಲ್ಲಿ ಮಹಮ್ಮದೀಯನಾಗಿಯೂ ಫ್ರಾನ್ಸ್‌ನಲ್ಲಿ ಕ್ಯಾಥೋಲಿಕ್ ನಾಗಿಯೂ" ಇರುತ್ತಿದ್ದನು.

ಕ್ಯಾಥೊಲಿಕ್ ಧರ್ಮವನ್ನು ಫ್ರೆಂಚ್ ಸಮುದಾಯದ ಬಹುಭಾಗವು ಒಪ್ಪಿಕೊಂಡಿತ್ತು ಹಾಗೂ ಮುಕ್ತ ಪ್ರಚಾರಕ್ಕೂ ಅವಕಾಶವಿತ್ತು. ಮೊದಲನೆಯ ಪ್ರತಿನಿಧಿಯು ಬಿಷಪ್‌ರನ್ನು ನೇಮಿಸಿಕೊಳ್ಳುತ್ತಿದ್ದು, ಅವರು ರಾಜ್ಯದ ಮುಖ್ಯಸ್ಥರ ಮುಂದೆ ನಿಷ್ಠೆಯ ಪ್ರಮಾಣ ವಚನ ಸ್ವೀಕರಿಸಬೇಕಾಗಿತ್ತು.

ಆತನು ನೆಪೋಲಿಯನ್ ನಿಯಮವನ್ನು ಜಾರಿಗೆ ತಂದನು. ಇದರಲ್ಲಿ ೨೦ ಮಂದಿ ಶುದ್ಧ ಫ್ರೆಂಚರಿದ್ದು ಕಾನೂನಿನ ಒಂದು ಸಂಸ್ಥೆಯನ್ನು ಹೊಂದಿದ್ದು, ಸ್ಪಷ್ಟ, ಸಮರ್ಪಕವಾದ ಹಾಗೂ ತರ್ಕಬದ್ಧ ವ್ಯವಸ್ಥೆಯನ್ನು ಹೊಂದಿತ್ತು. ಫ್ರಾನ್ಸ್‌ನ ಬ್ಯಾಪ್ ವ್ಯವಸ್ಥೆ ಹಾಗೂ ಗೌರವ ಸೈನ್ಯದಳವನ್ನು ಜಾರಿಗೆ ತಂದನು. ಪ್ರತಿನಿಧಿತ್ವದ ಈ ಕಾಲಘಟ್ಟವು ಬೋನಾಪಾರ್ಟೆಯ ಜೀವನ ಕ್ರಮದಲ್ಲಿ ಅತ್ಯಂತ ಉಪಯುಕ್ತವಾದ ಒಂದು ಅಂಶವಾಗಿತ್ತು. ಆತನ ದೇಶದ ಒಳಿತಿಗಾಗಿ ಅತ್ಯಂತ ಲಾಭದಾಯಕವಾಗಿತ್ತು.

ಹಲವು ದಿನಗಳ ತರುವಾಯ ನೆಪೋಲಿಯನ್ ತನ್ನ ಪರಾಕ್ರಮವನ್ನು ಒಗ್ಗೂಡಿಸುವ ಪ್ರಯತ್ನದಲ್ಲಿ ಇನ್ನೊಂದು ಹೆಜ್ಜೆ ಮುಂದಿಟ್ಟನು. ೧೮೦೨ರಲ್ಲಿ ಹತ್ತು ವರ್ಷಗಳ ಕಾಲ ತನ್ನ ಪ್ರತಿನಿಧಿತ್ವವನ್ನು ಮುಂದುವರೆಸಿದ್ದು, ಅದನ್ನು ಜೀವನಪರ್ಯಂತ ಇರುವಂತೆ ಬದಲಾಯಿಸಿಕೊಂಡನು. ೧೮೦೪ರಲ್ಲಿ ತನ್ನನ್ನು 'ಫ್ರಾನ್ಸ್‌ನ ಚಕ್ರವರ್ತಿ' ಎಂದು ಘೋಷಿಸಿಕೊಳ್ಳುವುದರ ಮೂಲಕ ಉಳಿದ ಮತ್ತೊಂದು ಕ್ರಮವನ್ನು ಪೂರೈಸಿದನು. "ನಾನು ಭೂಮಿಯಲ್ಲಿ ಬಿದ್ದಿದ್ದ ಫ್ರಾನ್ಸ್‌ನ ಕಿರೀಟವನ್ನು ಕಂಡುಹಿಡಿದೆ ಮತ್ತು ಅದನ್ನು ನನ್ನ ಕತ್ತಿಯಿಂದ ಹಿಡಿದೆತ್ತಿದೆ" ಎಂದು ಹೇಳಿಕೊಂಡನು.

೧೮೦೪ ರಿಂದ ೧೮೧೪ರವರೆಗೆ ನೆಪೋಲಿಯನ್ ಯುಗವು ೧೦ ವರ್ಷಗಳ ಕಾಲ ಉಳಿಯಿತು. ಅದೊಂದು ಅವಿರತ ಸಂಗ್ರಾಮಗಳಿಂದಲೂ, ಸುದೀರ್ಘವಾದ ವಿಸ್ಮಯಕಾರಕ ವಿಜಯಗಳಿಂದಲೂ ಕೂಡಿದ ಕಾಲಘಟ್ಟವಾಗಿತ್ತು. ಆದರೆ ಅತಿಶಯವಾದ ಸೋಲಿನಿಂದ ಕೊನೆಗೊಂಡಿತು. ನೆಪೋಲಿಯನ್ನನು ಅಲೆಗ್ಸಾಂಡರ್, ಸೀಸರ್, ಚಾರ್ಲ್‌ಮ್ಯಾನ್ ಮಟ್ಟದ ಚರಿತ್ರೆಯ ಅತ್ಯಂತ ಸಮರ್ಥ ಜಯಶಾಲಿ ಆಡಳಿತಗಾರನೆಂದು ಪರಿಗಣಿಸಲ್ಪಡು ತ್ತಾನೆ. ಕೆಲಸವೆಂದರೆ ನೆಪೋಲಿಯನ್ನನಿಗೆ ಬಹಳ ಪ್ರೀತಿ. "ಕೆಲಸ ನನ್ನ ಮೂಲಧಾತು ಗಳಲ್ಲೊಂದು. ಅದಕ್ಕಾಗಿಯೇ ನಾನು ಹುಟ್ಟಿದೆ ಮತ್ತು ಸಜ್ಜುಗೊಂಡೆ" ಎನ್ನುತ್ತಾನೆ.

ನೆಪೋಲಿಯನ್ ಒಂದು ರಾಜಾಸ್ಥಾನವನ್ನು ಸ್ಥಾಪಿಸಿ, ಒಂದು ಅತ್ಯುತ್ತಮ ಸಮಾರಂಭ ವನ್ನು ನಾರ್ಟ್‌ಡಾಮ್‌ನಲ್ಲಿ ಏರ್ಪಡಿಸಿಕೊಂಡು, ಆದರೆ ಪ್ರಭುವಾಗಿ ಅಧಿಕಾರವಹಿಸಿ ಕೊಂಡನು. ಈ ಪ್ರಭುತ್ವದ ಚರಿತ್ರೆಯ ೧೦ ವರ್ಷಗಳ ಅವಧಿಯಲ್ಲಿ ನಿರಂತರವಾಗಿ ಯುದ್ಧಗಳು ನಡೆಯುತ್ತಿದ್ದವು. ಇಂಗ್ಲೆಂಡಿನಿಂದ ನಿರ್ದೇಶಿತಗೊಂಡ ನೌಕಾಪಡೆ ಹಾಗೂ ನೆಪೋಲಿಯನ್‌ನು ನಿರ್ದೇಶಿಸಿದ ಸೈನಿಕ ಪಡೆಗಳ ನಡುವೆ ನಡೆದ ಹೋರಾಟವೇ ಇದರ ಎದ್ದುಕಾಣುವ ಅಂಶ. ೧೮೦೪ರಲ್ಲಿ ಫ್ರಾನ್ಸ್‌ನ ವಿರುದ್ಧದ ಒಕ್ಕೂಟವು ರಚಿತವಾಯಿತು. ಕ್ಯಾಂಫೋ ಫೋರ್ಮಿಯೊ ಹಾಗೂ ಲೂನೆವಿಲ್ಲೆಯ ಒಪ್ಪಂದಗಳಿಂದ ಲಭ್ಯವಾದ ಫ್ರಾನ್ಸ್‌ನ ವಿಸ್ತರಣೆ ಯಿಂದ ಇಂಗ್ಲೆಂಡ್‌ಗೆ ಮತ್ಸರ ಹುಟ್ಟಿತು. ೧೮೦೩ರಲ್ಲಿ ಈ ಎರಡು ದೇಶಗಳ ನಡುವೆ ಯುದ್ಧ ಪ್ರಾರಂಭವಾಯಿತು. ನೆಪೋಲಿಯನ್ನನು ಜರ್ಮನಿಯ ಹಿಡಿತದಲ್ಲಿದ್ದ ಹನೋವರ್‌ನ್ನು ವಶಪಡಿಸಿಕೊಂಡನು. ಈ ಮಧ್ಯೆ ಇಂಗ್ಲೆಂಡ್, ರಷ್ಯಾ ಮತ್ತು ಆಸ್ಟ್ರಿಯಾದ ಒಕ್ಕೂಟವು ರಚಿತವಾಯಿತು.

ಆಸ್ಟ್ರಿಯಾದ ವಿರುದ್ಧ ನೆಪೋಲಿಯನ್ನನು ಮೂರನೆಯ ದಂಡಯಾತ್ರೆಯನ್ನು ಪ್ರಾರಂಭಿಸಿದನು. ೧೮೦೫ರ ದಂಡಯಾತ್ರೆಯು ನೆಪೋಲಿಯನ್ನನ ಮತ್ತೊಂದು ಅನುಪಮ ಸಾಧನೆಯಾಯಿತು. ಇದು ಆಸ್ಟರ್‌ಲಿಟ್ಜ್ ಯುದ್ಧಕ್ಕೆ ಕಾರಣವಾಯಿತು. ಇದರ ಫಲಿತಾಂಶವು ನಿರ್ಣಾಯಕವೂ ಅಪಾಯಕವೂ ಆಗಿದ್ದು ಮೈತ್ರಿಕೂಟವನ್ನು ಸದೆ ಬಡಿಯಿತು. ಆಸ್ಟ್ರಿಯನ್ನರು ನೆಪೋಲಿಯನ್ ನಿರ್ದೇಶಿಸಿದ "ಪ್ರೆಸ್‌ಬರ್ಗ್‌ನ ಸಂಧಿ"ಯ ಮೂಲಕ ಶಾಂತಿಗೆ ಒಪ್ಪಿದರು. ಆತನು ಆಸ್ಟ್ರಿಯವನ್ನು ಮೂರನೆಯ ಸಾರಿಗೆ ಘೋರವಾಗಿ ಬಗ್ಗು ಬಡಿದನು. ಆಸ್ಟ್ರಿಯ ಮತ್ತು ಡಾಲ್ಮಶಿಯಾಗಳು ನೆಪೋಲಿಯನ್‌ನ ವಶವಾದವು.

ಆಸ್ಟ್ರಿಯಾದ ದಂಡಯಾತ್ರೆಯಿಂದ ಕೌಟುಂಬಿಕ ಲಾಭಗಳನ್ನು ಹೊರತುಪಡಿಸಿ ಉಂಟಾದ ಮತ್ತೊಂದು ಮುಖ್ಯ ಪರಿಣಾಮವೆಂದರೆ ಜರ್ಮನಿಯ ಪರಿವರ್ತನೆ. ಪ್ಯಾರಿಸ್ ನಗರವು ೧೮೦೩ರಿಂದ ಜರ್ಮನ್ ರಾಜಕೀಯದ ಹಾಗೂ ಒಳಸಂಚುಗಳ ಕೇಂದ್ರ ಸ್ಥಾನವಾಗಿತ್ತು. ಇದರ ಪರಿಣಾಮವಾಗಿ ೧೮೦೬ರಲ್ಲಿ ಬವರಿಯಾ ಹಾಗು ವೊಟೆಂಬರ್ಗ್ ಮತ್ತು ಇತರೆ ಜರ್ಮನ್ ಪ್ರಾಂತ್ಯಗಳ ಹೊಸ ರಾಜರು ಜರ್ಮನಿಯ ಚಕ್ರವರ್ತಿಯೊಂದಿಗೆ ಇದ್ದ ತಮ್ಮ ಮೈತ್ರಿಯನ್ನು ನಿರಾಕರಿಸಿ "ರೈನ್ ಒಕ್ಕೂಟ"ವನ್ನು ರಚಿಸಿಕೊಂಡರು. ಆ ಮೂಲಕ ನೆಪೋಲಿಯನ್ನನನ್ನು 'ರಕ್ಷಕನೆಂದು ಗುರುತಿಸಿಕೊಂಡು' ತಮ್ಮ ಆಕ್ರಮಣದ ಮತ್ತು ರಕ್ಷಣೆಯ ಒಪ್ಪಂದಗಳನ್ನು ಮಾಡುವುದರೊಂದಿಗೆ ಆತನಿಗೆ ವಿದೇಶೀಯ ನೀತಿಯ ಮೇಲೆ ಅಧಿಕಾರವನ್ನು ನೀಡಿದರು.

ಪವಿತ್ರ ರೋಮನ್ ಚಕ್ರಾಧಿಪತ್ಯದ ಪತನದ ನಂತರ (೧೮೦೬) ಜರ್ಮನ್ನರ ನಾಗರಿಕ ಬದುಕಿನ ಮೇಲೆ ಫ್ರೆಂಚರ ಯೋಜನಾ ರೀತಿಗಳು ಪ್ರಭಾವ ಬೀರಿದವು. ಈ ರೀತಿಯ ವಿದೇಶಿಯ ಆಳ್ವಿಕೆಯಿಂದಾಗಿ ಜರ್ಮನ್ನರು ಆತ್ಮಗೌರವವನ್ನು ಕಳೆದುಕೊಂಡರು. ನಂತರದ ದಾಳಿ ಪ್ರಷ್ಯಾದ ಮೇಲಾಯಿತು. ಟಿನಾ ಮತ್ತು ಆವರ್‌ಸ್ಟಾಡ್ಟ್‌ಗಳಲ್ಲಿ ಪ್ರಷ್ಯನ್ನರು ಪರಾಭವಗೊಂಡರು. ಸಾವಿರಾರು ಜನ ಪ್ರಷ್ಯನ್ನರನ್ನು ಸೆರೆಹಿಡಿಯಲಾಯಿತು ಹಾಗೂ ನಂತರದ ದಿನಗಳಲ್ಲಿ ದೇಶವನ್ನು ಫ್ರೆಂಚ್ ಸೈನ್ಯಾಧಿಕಾರಿಗಳು ವಶಪಡಿಸಿಕೊಂಡರು. ಹೀಗೆ ಕುಸಿತವು ಪೂರ್ಣಗೊಂಡಿತು. ಅಕ್ಟೋಬರ್ ೨೫ರಂದು ನೆಪೋಲಿಯನ್‌ನು ಬರ್ಲಿನ್ ನಗರಕ್ಕೆ ವಿಜಯಶಾಲಿಯಾಗಿ ಪ್ರವೇಶ ಮಾಡಿದನು. ಅಲ್ಲಿಂದಲೇ ಆತನು ಬರ್ಲಿನ್ ಶಾಸನಗಳನ್ನು ಹೊರಡಿಸಿದನು. ಇದರ ಪ್ರಕಾರ ಬ್ರಿಟೀಷ್ ದ್ವೀಪಗಳಿಗೆ ದಿಗ್ಭಂಧನ ವಿಧಿಸಲಾಯಿತು.

ನಂತರದ ದಾಳಿ ರಷ್ಯಾದ ಮೇಲಾಯಿತು. ಪೋಲಾಂಡಿನ ಆ ಪ್ರದೇಶದ ಮುಖ್ಯ ಪಟ್ಟಣವಾದ ವಾರ್ಸಾಕ್ಕೆ ಹೋಗುವ ಹಾದಿಯಲ್ಲಿ ಎಲಾನ್ ಹಾಗೂ ಫ್ರೈಡ್‌ಲ್ಯಾಂಡ್‌ನ ಬಳಿ ಎರಡು ಪ್ರಮುಖ ಯುದ್ಧಗಳಾದವು. ವೈಸ್‌ರಾಯನು ಎಷ್ಟು ನಿರ್ಣಾಯಕ ಅಭಿಪ್ರಾಯವನ್ನು

ಹೊಂದಿದ್ದನೆಂದರೆ, ಜಾರ್‌ನಾದ ಒಂದನೆಯ ಅಲೆಗ್ಸಾಂಡರನು ಶಾಂತಿ ಒಪ್ಪಂದಕ್ಕೆ ಸಮ್ಮತಿಸಿದನು. ಇಬ್ಬರು ದೊರೆಗಳು ಸೇರಿ ಟಿಲ್ಸಿತ್ ಒಪ್ಪಂದವನ್ನು ಮಾಡಿಕೊಂಡರು. ಹೀಗೆ ನೆಪೋಲಿಯನ್‌ನು ರಷ್ಯಾನ್ನರ ಮೇಲೆ ವಿಜಯ ಸಾಧಿಸಿದನು. ಅಲೆಗ್ಸಾಂಡರನು ತಾನೇ ಸ್ವತಃ ಮುಂದೆ ಬಂದು ಘನಶತ್ರುಗಳಾದ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ನಡುವೆ ಮಧ್ಯವರ್ತಿಯಾಗಿ ವ್ಯವಹರಿಸಿದನು.

ಪ್ರಷ್ಯ ದೇಶವು ಎಲ್ಬ್ ನದಿಯ ಪಶ್ಚಿಮ ದಂಡೆಯಲ್ಲಿರುವ ಎಲ್ಲಾ ಪ್ರದೇಶವನ್ನು ಬಿಟ್ಟುಕೊಟ್ಟಿತು. ಜರ್ಮನಿಯ ಪ್ರದೇಶಗಳನ್ನು ತೆಗೆದುಕೊಂಡು, ನೆಪೋಲಿಯನ್‌ನು ವೆಸ್ಟ್‌ಫೇಲಿಯಾ ಎಂಬ ಹೊಸ ಸಂಸ್ಥಾನವನ್ನು ರಚಿಸಿ, ಅದನ್ನು ತನ್ನ ಸಹೋದರ ಚೆರೋಮ್‌ಗೆ ನೀಡಿದನು. ಪ್ರಷ್ಯಾದ ಪೂರ್ವಪ್ರಾಂತ್ಯಗಳು ಕುಗ್ಗಿದವು. ಈಗ ಇಂಗ್ಲೀಷರು ಮಾತ್ರ ಶತ್ರುಗಳಾಗಿ ಉಳಿದಿದ್ದರು. ಟಿಲ್ಸಿತ್‌ನ ತರುವಾಯ ಇಂಗ್ಲೆಂಡ್ ಮಾತ್ರ ಎಂದಿಗೂ ಫ್ರಾನ್ಸ್‌ನ ಶತ್ರುವಾಗಿ ಉಳಿದಿತ್ತು. ಆತನು ತನ್ನ ಗಮನವನ್ನು ಇಂಗ್ಲೆಂಡ್‌ನ ಮೇಲೆ ಕೇಂದ್ರೀಕರಿಸಿದನು. ಸಾಗರದ ಮಹಾರಾಣಿಯಂತೆ ಮೆರೆದು ೧೮೦೫ರಲ್ಲಿ ನಡೆದ ಟ್ರಗಾಲ್ಗರ್ ಯುದ್ಧದಲ್ಲಿ ಫ್ರೆಂಚ್‌ನ ನೌಕಾಪಡೆಯನ್ನು ನಾಶಗೊಳಿಸಿತ್ತು. ಹಾಗಾಗಿ ಆತನಿಗೆ ಇಂಗ್ಲೆಂಡ್‌ನ್ನು ಸೋಲಿಸುವ ಇತರೆ ಮಾರ್ಗಗಳನ್ನು ಹುಡುಕುವ ಒತ್ತಾಸೆ ಇದ್ದೇ ಇತ್ತು. ಆದರೆ ಹೇಗೆಂಬುದೇ ಸಮಸ್ಯೆಯಾಯಿತು. ಬರ್ಲಿನ್ ಶಾಸನದ ಪ್ರಕಾರ ನೆಪೋಲಿಯನ್‌ನು ಬ್ರಿಟೀಷ್ ದ್ವೀಪಗಳಿಗೆ ದಿಗ್ಬಂಧನ ವಿಧಿಸಿ ಅದರ ಜೊತೆ ಯಾವುದೇ ರೀತಿಯ ವ್ಯಾಪಾರಿ ಸಂಬಂಧಗಳಿಗೂ, ಪತ್ರ ವ್ಯವಹಾರಗಳಿಗೂ ನಿರ್ಬಂಧವನ್ನು ಹೊರಿಸಿ, ಫ್ರಾನ್ಸ್‌ನಲ್ಲಿ ದೊರಕಿದ ಎಲ್ಲ ಇಂಗ್ಲಿಷ್ ಸರಕುಗಳನ್ನು ಮುಟ್ಟುಗೋಲು ಹಾಕಿಕೊಂಡು ನಾಶಗೊಳಿಸಿದನು. ಇದೊಂದು ರೀತಿಯ ಆರ್ಥಿಕ ಯುದ್ಧವಾಗಿತ್ತು. ಎಲ್ಲೆಡೆಯಲ್ಲೂ ಯೂರೋಪಿನ ವ್ಯವಸ್ಥೆಯನ್ನು ಜಾರಿಗೊಳಿಸಿ ಇಂಗ್ಲೆಂಡ್ ದೇಶದ ನಿರ್ನಾಮವಾಗುವ ರೀತಿಯನ್ನು ಅಳವಡಿಸಿದನು. ನೆಪೋಲಿಯನ್‌ನು ಈ ರೀತಿ ದಿಗ್ಬಂಧನವನ್ನು ಜಾರಿ ಗೊಳಿಸುವಲ್ಲಿ ಬಾರಿಬಾರಿಗೂ ಆಕ್ರಮಣ ಮಾಡಬೇಕಾಯಿತು. ಈ ನೀತಿಯಿಂದಾಗಿ ಪೋರ್ಚುಗಲ್ ಮತ್ತು ಸ್ಪೇನ್ ದೇಶಗಳಲ್ಲಿ ಪ್ರಖ್ಯಾತ ಹಾಗೂ ವಿಪತ್ಕಾರಿ ದುಸ್ಸಾಹಸಗಳಿಗೆ ಬಲಿಯಾಗಬೇಕಾಯಿತು. ಪೋರ್ಚುಗಲ್ ದೇಶವು ಇಂಗ್ಲೆಂಡ್ ನೊಂದಿಗೆ ಆಪ್ತವಾದ ಆರ್ಥಿಕ ಹಾಗೂ ರಾಜಕೀಯ ಸಂಬಂಧಗಳನ್ನು ಹೊಂದಿದ್ದು ಈ ದಿಗ್ಬಂದನಕ್ಕೆ ಒಪ್ಪಿಗೆ ನೀಡಲಿಲ್ಲ.

ಸ್ಪೈನ್ ದೇಶದಲ್ಲಿ ಮರೆಮಾಚುವ ನಾಟಕ, ನಿಂದನೆ, ಬೆದರಿಕೆಯಂತಹ ಆಟವನ್ನಾಡಿ ಇಡೀ ರಾಜ ಪರಿವಾರವನ್ನೇ ಕಿತ್ತೊಗೆದನು. ಚಾರ್ಲ್ಸ್‌ನು ತನ್ನ ಸಿಂಹಾಸನವನ್ನು ನೆಪೋಲಿಯನ್‌ಗೆ ಒಪ್ಪಿಸಿದನು. ಫರ್ಡಿನಾಂಡ್ ಮತ್ತು ಅವನ ಸೋದರನನ್ನು ಸೆರೆಮನೆಗೆ ತಳ್ಳಲಾಯಿತು. ನಂತರ ಆತನ ಸಹೋದರನಾದ ಜೋಸೆಫ್‌ನಿಗೆ ಪಟ್ಟ ಕಟ್ಟಲಾಯಿತು. ಆದರೆ ನಂತರ ನೆಪೋಲಿಯನ್ ಹೇಳಿಕೊಂಡಂತೆ, ಈ ಸ್ಪೆಯಿನ್ ದೇಶದ ಹುಣ್ಣು ಆತನನ್ನು ಹಾಳುಮಾಡಿತು. ಸ್ಪೆಯಿನ್‌ನಲ್ಲಿ ಆತನು ಎದುರಿಸಿದ ವಿರೋಧಗಳೇ ತೀರಾ ಬೇರೆ ರೀತಿಯದಾಗಿದ್ದವು. ಇತರೆ ದೇಶಗಳಲ್ಲಾದರೋ ಆತನು ಯುದ್ಧ ಹೂಡುತ್ತಿದ್ದುದು ಆಯಾ ಸರ್ಕಾರಗಳ ವಿರುದ್ಧವಾಗಿತ್ತು. ಆದರೆ ಸ್ಪೆಯಿನ್‌ನಲ್ಲಿ ಅದು ಜನರ ವಿರುದ್ಧವೇ ಆಯಿತು. ಸ್ಪೆಯಿನ್ ದೇಶೀಯರು ಯುದ್ಧ ಮಾಡುತ್ತಿದ್ದ ರೀತಿಯೇ ಭಿನ್ನವಾಗಿತ್ತು. ಅದು ಆ ದೇಶದ ಭೂಲಕ್ಷಣಗಳಿಂದ ನಿರ್ಧರಿತವಾಗಿದ್ದು ಇದನ್ನೆದುರಿಸಲು ನೆಪೋಲಿಯನ್‌ನಿಗೆ ಅಸಾಧ್ಯವಾಗಿ ಅತ್ಯಂತ ಅನಾಹುತಕಾರಿಯಾಗಿ ಪರಿಣಮಿಸಿತು. ನಂತರದಲ್ಲಿ ಆತನು ಸ್ಪೆಯಿನ್‌ನ ಮೇಲೆ ತನ್ನ ಪ್ರಭುತ್ವವನ್ನು ಭದ್ರವಾಗಿ ಸಾಧಿಸಬಹುದಿತ್ತು. ಆದರೆ ಫ್ರಾನ್ಸ್ ನಲ್ಲಿ ಆತಂಕಕಾರಿ ಪರಿಸ್ಥಿತಿ ಇದ್ದುದರಿಂದ ವಾಪಸ್ಸಾಗಲೇ ಬೇಕಾಯಿತು.

ಬವೇರಿಯಾದಲ್ಲಿ ೧೮೦೯ರಲ್ಲಿ ಆಸ್ಟ್ರಿಯಾದ ಜೊತೆ ಯುದ್ಧ ನಡೆಸಿ, ಅದನ್ನು ನಾಲ್ಕನೆಯ ಸಾರಿ ಗೆದ್ದುಕೊಂಡನು. ನಂತರ ವಾಗ್ರಾಂ ನಡೆಸಿದನು. ಇದಾದ ನಂತರ ವಿಯೆನ್ನಾದ ಸಂಧಿ ಪ್ರಸ್ತಾಪಕ್ಕೆ ಸಹಿ ಹಾಕಲಾಯಿತು. ಆತನು ಆಸ್ಟ್ರಿಯಾದ ಮೇರಿ ಲೂಯಿಯೊಂದಿಗೆ ಮದುವೆ ಪ್ರಸ್ತಾಪ ಮಾಡಿದನು. ಈಗ ನೆಪೋಲಿಯನ್‌ನು ತನ್ನ ಸಾಮ್ರಾಜ್ಯದ ಮೇಲೆ ನೇರ ಆಳ್ವಿಕೆ ನಡೆಸುತ್ತಿದ್ದನು. ೧೮೦೯ರಲ್ಲಿ ಇಟಲಿಯ ಉಳಿದ ಪೋಪನಿಗೆ ಸಂಬಂಧಿಸಿದ ಎಲ್ಲಾ ರಾಜ್ಯಗಳನ್ನು ಸೇರಿಸಿಕೊಂಡನು. ಯೂರೋಪಿನ ಇಷ್ಟು ದೊಡ್ಡ ಭಾಗಕ್ಕೆ ಚರಿತ್ರೆಯಲ್ಲಿ ಯಾವ ರಾಜನೂ ಎಂದೂ ಪ್ರಭುತ್ವ ಸಾಧಿಸಿರಲಿಲ್ಲ. ಕೇವಲ ಇಂಗ್ಲೆಂಡ್ ಮಾತ್ರ ಹೊರತಾಗಿತ್ತು.

ಬೆಳೆಯುತ್ತಿದ್ದ ರಾಷ್ಟ್ರೀಯತೆಯ ಸ್ಫೂರ್ತಿ, ಟೆನಾದ ಸೋಲಿನ ನಂತರದಲ್ಲಿ ಬರಹಗಾರರಿಂದ ಪ್ರೇರಿತಗೊಂಡ ಪ್ರಷ್ಯಾದ ಪುನರ್ಸಂಘಟನೆ ಹಾಗೂ ಯುರೋಪಿನ ದಿಗ್ಬಂಧನದ ಸಲುವಾಗಿ ಫ್ರಾನ್ಸ್ ಹಾಗೂ ಪ್ರಷ್ಯಾಗಳ ನಡುವೆ ಇದ್ದ ಮೈತ್ರಿಯಲ್ಲಿ ಬಂದ ಬಿರುಕು-ಇವಿಷ್ಟು ಅಂಶಗಳು ಈ ಸಂರಚನೆಯನ್ನು ಬಲಹೀನಗೊಳಿಸಿದವು.

೧೮೧೨ರಲ್ಲಿ ರಷ್ಯಾದ ವಿರುದ್ಧ ದಂಡಯಾತ್ರೆ ಪ್ರಾರಂಭವಾಯಿತು. ಆದರೆ ರಷ್ಯಾವು ಹಿಂದಕ್ಕೆ ಸರಿಯುವ ಮತ್ತು ನೆಪೋಲಿಯನ್ ಪ್ರಾಕೃತಿಕವಾಗಿ ಕಷ್ಟ ನಷ್ಟಗಳನ್ನು ಅನುಭವಿಸುವಂಥ ನೀತಿಯನ್ನು ಅನುಸರಿಸಿದ್ದರಿಂದ ಇದು ದಯನೀಯ ಸೋಲನ್ನು ಕಂಡಿತು. ಲಿಪ್‌ಜಿಗ್ ಕದನ ಅಥವಾ "ರಾಷ್ಟ್ರಗಳ ಕದನ" (೧೮೧೩)ರಲ್ಲಿ ಬೋನಾಪಾರ್ಟೆಯ ಭವಿಷ್ಯವು ಅಂತ್ಯಗೊಂಡಿತು. ಆಸ್ಟ್ರಿಯ, ಪ್ರಷ್ಯಾ ಹಾಗೂ ರಷ್ಯಾದ ಜಂಟಿ ಶಕ್ತಿ ಆತನಿಗೆ ಭಾರಿಪೆಟ್ಟು ನೀಡಿತು. ಆದರೂ ಆತನಿಗೆ ಎಲ್ಬಾವನ್ನು ಮಾತ್ರ ಆಳುವ ಅಧಿಕಾರ ದೊರಕಿತು.

ನೆಪೋಲಿಯನ್ನನು ರಾಜ್ಯ ತ್ಯಜಿಸಿದ ದಿನದಂದೇ ೧೮ನೇಯ ಲೂಯಿ (ಬೂರ್ಬನ್ ದೊರೆ)ಯು ಸಿಂಹಾಸನಾಧೀಶನಾದನು. ಇದಕ್ಕೆ ಮುನ್ನ ನೆಪೋಲಿಯನ್ನನು ಸುಮಾರು ೧೦ ತಿಂಗಳ ಕಾಲ ತನ್ನ ಪುಟ್ಟ ಸಾಮ್ರಾಜ್ಯದಲ್ಲಿದ್ದನು. ಪ್ಯಾರಿಸ್‌ಗೆ ಹಿಂದಿರುಗಿದ ನಂತರ "ನೂರು ದಿನಗಳ ಕಾಲ" ಆಳ್ವಿಕೆ ನಡೆಸಿದನು. ನೆಪೋಲಿಯನ್ ಮತ್ತು ಆತನ ಖ್ಯಾತಿಗಳೆರಡೂ ಕೊನೆಗೊಮ್ಮೆ "ವಾಟರ್‌ಲೂ ಕದನ"(೧೮೧೫)ದೊಂದಿಗೆ ಸಮಾಪ್ತಿ ಹೊಂದಿದವು. ದುರಾದೃಷ್ಟಕರವಾಗಿ ಸೋಲುವುದರೊಂದಿಗೆ ಆಸ್ಟರ್‌ಲಿಟ್ಜ್‌ನ ಸೂರ್ಯನು ಕೊನೆಯ ಬಾರಿಗೆ ಅಸ್ತಂಗತನಾದನು. ಆತನು ಪ್ಯಾರಿಸ್‌ಗೆ ಓಡಿಹೋಗಿ ನಂತರ ಅಲ್ಲಿಂದ ಸಂಯುಕ್ತ ಸಂಸ್ಥಾನಕ್ಕೆ ಹೋದನು. ಆಮೇಲೆ ಆತನನ್ನು ಬ್ರಿಟಿಷ್ ಪಡೆಗಳು ಸೆರೆಹಿಡಿದು ಸೆಂಟ್ ಹೆಲೆನಾಗೆ ಸಾಗಿಸಲಾಯಿತು. ಅಲ್ಲಿ ಕನಿಷ್ಟ ಹಾಗೂ ಹೀನಮಟ್ಟದ ಕಣ್ಗಾವಲಿನಲ್ಲಿದ್ದು, ಆರು ವರ್ಷಗಳ ನಂತರ ಹೊಟ್ಟೆಯ ಕ್ಯಾನ್ಸರ್‌ನಿಂದ ಅಸುನೀಗಿದನು.

**ವಿಯೆನ್ನಾ ಕಾಂಗ್ರೆಸ್**

ನೆಪೋಲಿಯನ್‌ನ ಸೋಲಿನಿಂದ ರಾಜನೀತಿ ನಿಪುಣರಿಗೆ ಮತ್ತು ರಾಯಭಾರಿಗಳಿಗೆ ಅತ್ಯಂತ ಜಟಿಲವಾದ ಮತ್ತು ಕಷ್ಟಕರವಾದ ಸಮಸ್ಯೆಗಳು ಎದುರಾದವು. ನೆಪೋಲಿಯನ್‌ನ ಆಳ್ವಿಕೆಯ ಪತನದ ನಂತರ ಯುರೋಪಿನ ಪುನರ್‌ರಚನೆಯು ಆಗಲೇಬೇಕಾಗಿತ್ತು. ಯುರೋಪಿನ ಚರಿತ್ರೆಯಲ್ಲೇ ಅತ್ಯಂತ ಶ್ರೇಷ್ಠಮಟ್ಟದ ರಾಯಭಾರಿಗಳ ಕೂಟವಾದ ವಿಯೆನ್ನಾದ ಸಭೆಯೊಂದರಲ್ಲಿ ಈ ಪುನರ್‌ರಚನೆಯ ಕೆಲಸವನ್ನು ಕೈಗೆತ್ತಿಕೊಳ್ಳಲಾಯಿತು. ಫ್ರಾನ್ಸ್ ದೇಶದಿಂದ ಒತ್ತಾಯಪೂರ್ವಕವಾಗಿ ಬಿಡಿಸಿಕೊಂಡ ಪ್ರಾಂತ್ಯಗಳನ್ನು ಹಂಚುವುದೇ ಈ ಸಭೆಯ ಬಹುಮುಖ್ಯ ಕೆಲಸವಾಗಿದ್ದಿತು. ಹಾಲೆಂಡ್ ದೇಶಕ್ಕೆ ಬೆಲ್ಜಿಯಂನ್ನು ಸೇರಿಸಲಾಯಿತು.

ರಷ್ಯಾದ ಚಕ್ರವರ್ತಿಯಾದ ಒಂದನೇ ಅಲೆಗ್ಸಾಂಡರ್‌ನು ತನಗೆ ವಾರ್ಸಾದ ಹಿರಿಯ ಸಂಸ್ಥಾನವು ಬೇಕೆಂದು ಕೇಳಿದನು. ಸಾಕೋನಿಯ ಶ್ರೀಮಂತ ರಾಜಮನೆತನದ ಮೇಲೆ ಪ್ರಷ್ಯಾವು ಕಣ್ಣಿಟ್ಟಿದ್ದು, ಡ್ರೆಸ್ಡೆನ್ ಮತ್ತು ಲಿಪ್‌ಜಿಗ್‌ಗಳು ತನಗೆ ಪರಿಹಾರವಾಗಿ ಸಿಗಬೇಕೆಂದು ಕೇಳಿಕೊಂಡನು. ಈ ಸಭೆಯಿಂದ ರಷ್ಯಾವು ಬಹಳಷ್ಟು ದೇಶಗಳನ್ನು ಸೇರಿ ಕೊಂಡಿತು. ಫಿನ್‌ಲ್ಯಾಂಡ್‌ನ್ನು ತನ್ನ ಬಳಿಯೇ ಉಳಿಸಿಕೊಂಡಿದ್ದಲ್ಲದೆ ಸ್ವೀಡನ್, ಬೆಸರಾಬಿಯಾ ಹಾಗೂ ವಾರ್ಸಾದ ಹಿರಿಯ ಸಂಸ್ಥಾನದ ಹೆಚ್ಚು ಭಾಗವನ್ನು ವಶಪಡಿಸಿ ಕೊಂಡಿತು.

ಆಸ್ಟ್ರಿಯಾವು ತನ್ನ ಪೋಲೆಂಡ್ ಪ್ರಾಂತ್ಯಗಳನ್ನು ಉಳಿಸಿಕೊಂಡಿತು ಮತ್ತು ನೆದರ್ಲ್ಯಾಂಡ್‌ಗೆ ಪರಿಹಾರವಾಗಿ ಉತ್ತರ ಇಟಲಿಯನ್ನು ಅಥವಾ ಲಂಬಾರ್ಡ-ವೆನಿಶಿಯನ್ ರಾಜ್ಯವನ್ನು ಪಡೆಯಿತು. ಫ್ರಾನ್ಸ್‌ನಿಂದ ವಹಿಸಿಕೊಂಡ ಬಹಳಷ್ಟು ಪ್ರಾಂತ್ಯ ಗಳನ್ನು ಮುಖ್ಯವಾಗಿ ಹಾಲೆಂಡ್, ಮಾಲ್ಟ, ಅಯೋನಿಯನ್ ದ್ವೀಪಗಳು, ಕೇಪ್ ವಸಾಹತು, ಸಿಲೋನ್ ಮತ್ತು ಇತರೆ ದ್ವೀಪಗಳನ್ನು ಇಂಗ್ಲೆಂಡ್ ಉಳಿಸಿಕೊಂಡಿತು. ಆಸ್ಟ್ರಿಯಾವು ಲಂಬಾರ್ಡ ಹಾಗೂ ವೆನಿಷಿಯಗಳನ್ನು ಪಡೆದುಕೊಂಡಿತು. ಪೋಪನ ರಾಜ್ಯಗಳೂ ಪುನರ್ ಸ್ಥಾಪಿತಗೊಂಡವು. ನಾರ್ವೆಯ ಆಳ್ವಿಕೆಯನ್ನು ಡೆನ್ಮಾರ್ಕಿನಿಂದ ಬೇರ್ಪಡಿಸಿ ಅದನ್ನು ಸ್ವೀಡನ್ ಜೊತೆಗೆ ಸೇರಿಸಲಾಯಿತು. ಸ್ಪೆಯಿನ್ ಹಾಗೂ ಪೋರ್ಚು ಗಲ್‌ನ ಪ್ರಾಂತ್ಯಗಳನ್ನು ಹಾಗೆಯೇ ಬಿಟ್ಟು ಬಿಡಲಾಯಿತು.

ಹೀಗೆ ವಿಯೆನ್ನಾದ ಸಭೆಯು ವೈಭವಶಾಲಿಗಳ ಸಭೆಯಾಗಿತ್ತು. ಇವರಿಗೆ ಫ್ರೆಂಚ್ ಕ್ರಾಂತಿಯು ಘೋಷಿಸಿದ ರಾಷ್ಟ್ರೀಯ ಹಾಗೂ ಪ್ರಜಾಪ್ರಭುತ್ವದ ಆಲೋಚನೆಗಳು ಗಹನವಾದದ್ದು, ಅನಿಷ್ಟವಾದದ್ದೂ ಆಗಿತ್ತು. ದೊರೆಗಳು ತಮಗಿಷ್ಟ ಬಂದ ರೀತಿಯಲ್ಲಿ ತಮ್ಮ ಆಸ್ತಿಯೆಂಬಂತೆ ಯುರೋಪನ್ನು ಪುನರ್‌ವಿಂಗಡಿಸಿದರು. ಒಕ್ಕೂಟವು ಸಹಿ ಮಾಡಿದ ವಿಯೆನ್ನಾದ ಈ ಸಂಧಿಯ ಜೊತೆ ೧೮೧೫ರಲ್ಲಿ ಇನ್ನೂ ಎರಡು ದಾಖಲೆಗಳು ಒಪ್ಪಿತವಾದವು. ೧. ಪವಿತ್ರ ಒಪ್ಪಂದ, ೨. ಕ್ವಾಡ್ರುಸಲ್ಸ್ ಒಪ್ಪಂದ.

ಇದರಲ್ಲಿ ಮೊದಲನೆಯ ಒಪ್ಪಂದವು ರಷ್ಯಾದ ಒಂದನೆಯ ಅಲೆಗ್ಸಾಂಡರನ ನೇತೃತ್ವದಲ್ಲಿ ನಡೆಯಿತು. ಇದರ ಐಕೈಕ ಮುಖ್ಯ ಅಂಶವೆಂದರೆ ರಷ್ಯ, ಪ್ರಷ್ಯಾ ಹಾಗೂ ಆಸ್ಟ್ರೀಯಾದ ರಾಜರು ತೋರುವ ಈ ಒಪ್ಪಂದದ ಲಕ್ಷಣ ಹಾಗೂ ನೀತಿಗಳಿಗೆ ವಿರುದ್ಧ ವಾಗಿ ನಡೆಯುತ್ತಿದ್ದುದು.

೧೮೧೫ರಲ್ಲಿ ಜಾರಿಗೆ ಬಂದ ಮೈತ್ರಿಕೂಟಗಳಲ್ಲಿ "ಪವಿತ್ರ ಮೈತ್ರಿಕೂಟ" ಮತ್ತು "ಚತುರ್ ರಾಷ್ಟ್ರ ಮೈತ್ರಿಕೂಟ"ಗಳು ಮುಖ್ಯವಾದವು. ಇವುಗಳಲ್ಲಿ ಅಧಿಕಾರವನ್ನು ಕಾಲಕಾಲಕ್ಕೆ ವಹಿಸಿಕೊಂಡು ತಮ್ಮ ಸಮಾನ ಆಶಯಗಳು ಹಾಗೂ ಯೂರೋಪಿನ ಅಗತ್ಯಕ್ಕೆ ಅನುಗುಣವಾಗಿ ನಡೆದುಕೊಳ್ಳುವ ಅವಕಾಶ ನೀಡಲಾಯಿತು. ನಂತರದ ವರ್ಷಗಳಲ್ಲಿ ಈ ರೀತಿಯಾಗಿ ಸೇರಿದ ಸಭೆಗಳ ಮುಖಾಂತರ ಎಲ್ಲಾ ಕಡೆಗಳಲ್ಲೂ ದಬ್ಬಾಳಿಕೆ ನಡೆಸಲಾಯಿತು. ಪ್ರಮುಖವಾಗಿ ಆಸ್ಟ್ರಿಯಾ ಚಕ್ರಾಧಿಪತ್ಯದ ಕುಲಗುರುವಾದ ರಾಜಕುಮಾರ ಮೆಟರ್‌ನಿಕ್‌ನ ಪ್ರಭಾವವು ಅವರ ಆಲೋಚನಾ ಕ್ರಮಗಳ ಮೇಲೆ ನಿರ್ಣಾಯಕವಾಗಿದ್ದಿತು.

**ಫ್ರಾನ್ಸ್‌ನಲ್ಲಿ ಪ್ರತಿಕ್ರಿಯೆ ಹಾಗೂ ಕ್ರಾಂತಿ**

೧೮೧೪ರಲ್ಲಿ ನೆಪೋಲಿಯನ್‌ನನ್ನು ವಶಪಡಿಸಿಕೊಂಡ ಒಕ್ಕೂಟವು ಬೂರ್ಬನ್ ಕುಟುಂಬದ ೧೮ನೆಯ ಲೂಯಿಯನ್ನು ಸಿಂಹಾಸನಕ್ಕೆ ಉತ್ತರಾಧಿಕಾರಿಯನ್ನಾಗಿ ನೇಮಕ ಮಾಡಿತು. ಲೂಯಿಯು ಕಂಡುಕೊಂಡಂತೆ ಫ್ರಾನ್ಸ್‌ನಲ್ಲಿ ನಿರಂಕುಶ ಪ್ರಭುತ್ವದ ಕಾಲ ಮುಗಿದಿತ್ತು. ಪ್ರಭುತ್ವವು ಅಸ್ತಿತ್ವದಲ್ಲಿರಬೇಕಾದರೆ ಅದು ಸಂವಿಧಾನಬದ್ಧವಾಗಿರಬೇಕಾಗಿತ್ತು. ಅಲ್ಲದೆ ಕ್ರಾಂತಿಯಿಂದ ಒದಗಿದ ಹಲವಾರು ಲಾಭಗಳನ್ನು ರಕ್ಷಿಸಿಕೊಳ್ಳಬೇಕಾಗಿತ್ತು. ಹಾಗಿಲ್ಲದಿದ್ದರೆ ಈ ಪ್ರಭುತ್ವವು ಬಹಳಕಾಲ ಉಳಿಯಲಾರದು. ಇದನ್ನು ಮನಗಂಡ ದೊರೆಯು ಆ ಕಾಲದ ಮನೋಧರ್ಮದೊಂದಿಗೆ ಹೊಂದಾಣಿಕೆ ಮಾಡಿಕೊಂಡು, ೧೮೧೪ರಲ್ಲಿ ಸಂವಿಧಾನಾತ್ಮಕ ಶಾಸನವನ್ನು ರೂಪಿಸಿದನು. ಈ ಸಂವಿಧಾನಾತ್ಮಕ ಶಾಸನವು ಫ್ರೆಂಚರ ನಾಗರಿಕ ಹಕ್ಕುಗಳ ಬಗ್ಗೆ ವಿವರ ನೀಡಿತು. ಇದು ಎಲ್ಲ ಫ್ರೆಂಚರೂ ಕಾನೂನಿನ ಮುಂದೆ ಸಮಾನರು ಎಂದು ಘೋಷಿಸಿತು ಮತ್ತು ಕ್ರಾಂತಿಯ ಮೂಲಭೂತ ತತ್ವಗಳಿಗೆ ರಕ್ಷಣೆ ನೀಡಿತು. ಹಾಗಾಗಿ ನಾಗರಿಕ ಮತ್ತು ಮಿಲಿಟರಿ ಹುದ್ದೆಗಳನ್ನು ಹೊಂದಲು ಎಲ್ಲರೂ ಸಮಾನವಾಗಿ ಅರ್ಹರು ಎಂದಾಯಿತು. ೧೮ನೆಯ ಲೂಯಿಯು ತನ್ನ ವ್ಯಕ್ತಿತ್ವವನ್ನು ಪರಿಸ್ಥಿತಿಗೆ ತಕ್ಕಂತೆ ಹೊಂದಿಸಿಕೊಂಡನು. ಈತನು ಹಲವು ವರ್ಷಗಳವರೆಗೂ ತೀವ್ರವಾದಿ ಪಕ್ಷವನ್ನು ತಡೆಹಿಡಿಯುವಲ್ಲಿ ಜಯಶೀಲನಾಗಿ, ಮಂದಗಾಮಿ ನೀತಿಗಳನ್ನು ಜಾರಿಗೆ ತರಲು ಶಕ್ತನಾಗಿದ್ದನು. ತೀವ್ರವಾದಿಗಳು ರಾಜನ ಮತ್ತು ನೀತಿಗಳನ್ನು ಜಾರಿಗೆ ತರಲು ಶಕ್ತನಾಗಿದ್ದನು. ಅದನ್ನು ನಾಶಪಡಿಸಲೇಬೇಕೆಂದು ತೀರ್ಮಾನಿಸಿದ್ದರು. ೧೮೨೪ರಲ್ಲಿ ೧೮ನೆಯ ಲೂಯಿಯು ಅಸುನೀಗಿ ಆತನ ಸಹೋದರನಾದ ಆರ್ಬೋಯಿಯ ಸರದಾರನು ಅಧಿಕಾರವನ್ನು ಮುಂದುವರಿಸಿದನು. ಇವನು ೧೦ನೆಯ ಚಾರ್ಲ್ಸ್‌ನಾದನು.

ಹೊಸರಾಜನ ವೈಶಿಷ್ಟ್ಯವು ಎಲ್ಲರಿಗೂ ತಿಳಿದುದೇ ಆಗಿತ್ತು. ಆತನು ಫ್ರಾನ್ಸ್‌ನಲ್ಲಿ ೧೮೧೪ ರಿಂದ ೩೦ರವರೆಗೆ ಪ್ರತಿಗಾಮಿಗಳ ನಂಬುಗೆಗಳಿಂದ ನಾಯಕನಾಗಿದ್ದನು. ತನ್ನ ಸಹೋದರನ ಉದಾರವಾದಕ್ಕೆ ವಿರೋಧಿಯಾಗಿದ್ದನು. ಈ ರಾಜನು ಒತ್ತು ನೀಡಿದ ಶಾಸನಗಳು ಹಾಗೂ ಅವು ಜಾರಿಗೊಂಡ ರೀತಿಯಿಂದ ಸರಕಾರದ ನಿಧಾನಗತಿಯ ರಾಜಕೀಯ ಹಾಗೂ ಸಾಮಾಜಿಕ ಆಲೋಚನೆಗಳು ವ್ಯಕ್ತವಾಗುತ್ತಿದ್ದವು. ಮತ್ತೊಂದು ಜನಪ್ರಿಯವಲ್ಲದ ಕಾನೂನು ಚರ್ಚ್‌ನ ಪರವಾಗಿದ್ದಿತು. ಬಹಳಷ್ಟು ಮಂದಿ ಫ್ರೆಂಚರು ರಾಜಕೀಯ ಮತ್ತು ಸಾಮಾಜಿಕ ಪ್ರಕ್ರಿಯೆಗಿಂತಲೂ ಪಾದ್ರಿಗಳ (ಚರ್ಚಿನ) ಪ್ರತಿಕ್ರಿಯೆಯ ಬಗ್ಗೆ ಹೆಚ್ಚು ಗಾಬರಿಗೊಂಡಿದ್ದರು. ಈ ಆಡಳಿತದ ಅತ್ಯಂತ ಪ್ರತಿಗಾಮಿ ಮಂತ್ರಿಯಾಗಿದ್ದ ಪೋಲಿನೆ ಅಧಿಕಾರ ಸ್ವೀಕರಿಸಿದ ನಂತರ "ಸಮಾಜವನ್ನು ಪುನರ್ ಸಂಘಟಿಸಬೇಕು, ಪಾದ್ರಿಗಳಿಗೆ ಹಿಂದಿದ್ದ ಪ್ರಾಶಸ್ತ್ಯವೇ ದೊರೆಯಬೇಕು, ಒಂದು ಬಲಿಷ್ಟ ನಿರಂಕುಶ ಪ್ರಭುತ್ವವನ್ನು ಸೃಷ್ಟಿಸಬೇಕು" ಎಂದು ಘೋಷಿಸಿದನು. ಆಗ ೧೦ನೆಯ

ಚಾರ್ಲ್ಸ್ ಮತ್ತು ಆತನ ಪ್ರತಿನಿಧಿಗಳ ಮಂಡಲಿಯ ನಡುವೆ ಘರ್ಷಣೆ ಏರ್ಪಟ್ಟಿತು. ಇಂತಹ ಜನಪ್ರಿಯವಲ್ಲದ ಸಚಿವ ಸಂಪುಟವನ್ನು ತ್ಯಜಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಮುಂದೆ ನಡೆದ ಚುನಾವಣೆಯಲ್ಲಿ ರಾಜ ಹಾಗೂ ಅವನ ಮಂತ್ರಿಮಂಡಲವು ದಯನೀಯವಾದ ಸೋಲನ್ನು ಅನುಭವಿಸಿತು. ನಂತರ ೧೮೩೦ರಲ್ಲಿ ರಾಜನು ಪತ್ರಿಕಾ ಸ್ವಾತಂತ್ರ್ಯದ ವಜಾ, ಚುನಾವಣಾ ವ್ಯವಸ್ಥೆಯ ಅವಹೇಳನ ಹಾಗೂ ಪ್ರತಿನಿಧಿ ಮಂಡಲಿಯ ವಿಸರ್ಜನೆಯಂತಹ ಹಲವಾರು ಶಾಸನಗಳನ್ನು ಜಾರಿಗೊಳಿಸಿದನು. ನಂತರ ಈ ಶಾಸನಗಳ ಪ್ರಾಮುಖ್ಯತೆ ವ್ಯಕ್ತವಾಗುತ್ತಿದ್ದಂತೆ ಜನರ ಆಕ್ರೋಶವೂ ಹೊರಹೊಮ್ಮಿತು. "ಮಂತ್ರಿಮಂಡಲಕ್ಕೆ ಧಿಕ್ಕಾರ" "ಚಾರ್ಟರ್ ಸನ್ನದಿಗೆ ಜಯವಾಗಲಿ" ಎನ್ನುವ ಘೋಷಣೆಯೊಂದಿಗೆ ಜನರು ಗುಂಪುಗೂಡುತ್ತಿದ್ದರು. ೧೮೩೦ರ ಜುಲೈ ೨೮ರಂದು ಅಂತರ್ ಯುದ್ಧ ಪ್ರಾರಂಭವಾಯಿತು. ಇದೊಂದು ಮೂರುದಿನಗಳ ಪ್ರಖ್ಯಾತ ಯುದ್ಧವೆನಿಸಿತು.

ರಾಜಪ್ರಭುತ್ವ ಹಾಗೂ ಪ್ರಜಾಪ್ರಭುತ್ವದ ನಡುವಿನ ಅಂತಿಮ ತೀರ್ಮಾನವು ಗಣತಂತ್ರವಾದಿಗಳ ನಿಜನಾಯಕನಾದ ಸೇಫ್ಎಲೆಟಿಕ್‌ನ ಕೈಯಲ್ಲಿತ್ತು. ಕೊನೆಗೆ ಆತನು ತನ್ನ ಪ್ರಭಾವವನ್ನು ಲೂಯಿ ಫಿಲಿಪ್‌ನ ಮೇಲೆ ಬೀರಿದನು. ಜುಲೈ ಕ್ರಾಂತಿಯು ಹೀಗೆ ಒಂದು ಅನಿರೀಕ್ಷಿತವಾಗಿ ಹಾಗೂ ಕ್ಷಣಸ್ಫುರಣೆಯ ಕಾರ್ಯವಾಗಿತ್ತು. ಒಬ್ಬ ರಾಜನನ್ನು ಕೆಳಗೆ ಬೀಸಿ, ಮತ್ತೊಬ್ಬ ರಾಜನನ್ನು ಅಧಿಕಾರಕ್ಕೇರಿಸಿ ಶಾಸನವನ್ನು ಬದಲಿಸಲಾಯಿತು. ಬೂರ್ಬನ್ನರ ಬಿಳಿಧ್ವಜದ ನಂತರ ತ್ರಿವರ್ಣಧ್ವಜವು ಹಾರಾಡಿತು. ಹೀಗೆ ಶುರುವಾದದ್ದು ಲೂಯಿ ಫಿಲಿಪ್‌ನ ಆಳ್ವಿಕೆ.

ಜುಲೈ ಕ್ರಾಂತಿಯ ಪ್ರಭಾವವು ಇಡೀ ಯೂರೋಪಿನ ಮೇಲೆ ಅಂದರೆ ಪೋಲಾಂಡ್, ಜರ್ಮನ್, ಸ್ವಿಟ್ಜರ್‌ಲ್ಯಾಂಡ್, ಇಂಗ್ಲೆಂಡ್ ಮತ್ತು ನೆದರ್‌ಲ್ಯಾಂಡ್‌ಗಳ ಮೇಲೆ ಆಯಿತು. ಇದು ಜನಪ್ರಿಯ ಆಂದೋಲನಗಳಿಗೆ ಸಂಕೇತ. ಸ್ವಲ್ಪ ಸಮಯದವರೆಗೂ ೧೮೧೫ರಲ್ಲಿ ವಿಯೆನ್ನಾದಲ್ಲಿ ರಚಿಸಲ್ಪಟ್ಟ ಇಡೀ ಸಾಮಾಜಿಕ ಚೌಕಟ್ಟಿಗೆ ಆಪತ್ತೊದಗಿದಂತಾಯ್ತು. ೧೮೧೫ರ ಮತ್ತೊಂದು ಚಾತುರ್ಯರಪೂರ್ಣ ರಚನೆಯನ್ನು ಕಿತ್ತುಹಾಕಲಾಯಿತು. ವಿಯೆನ್ನಾದ ಸಭೆಯು ಫ್ರಾನ್ಸ್‌ನ ಉತ್ತರಭಾಗದಲ್ಲಿ ಒಂದು ಕೃತ್ರಿಮವಾದ ರಾಜ್ಯ ವ್ಯವಸ್ಥೆಯನ್ನು ನೆದರ್‌ಲ್ಯಾಂಡ್‌ನ ರಾಜಪ್ರಭುತ್ವವನ್ನು ನಿರ್ಮಿಸಿತ್ತು. ಹಾಲೆಂಡ್‌ಗೆ ಅದರ ಬಲವರ್ಧನೆಗಾಗಿ ಬೆಲ್ಜಿಯಂನ ಪ್ರಾಂತ್ಯವನ್ನು ಸೇರಿಸಿಕೊಳ್ಳಲಾಗಿತ್ತು. ಇವೆರಡೂ ದೇಶಗಳ ಜನರು ವಿಧಿಯುಕ್ತ ವಾಗಿ ಒಬ್ಬ ರಾಜನ ಪ್ರಭುತ್ವದಡಿಯಲ್ಲಿ ಒಂದು ಗೂಡಿದರು. ಆದರೆ ಬೆಲ್ಜಿಯನ್ನರಿಗೆ ಡಚ್ಚರ ಜೊತೆಗೆ ಮೈತ್ರಿಯು ನಿರಾಶಾದಾಯಕವೂ, ಅತೃಪ್ತಿಕರವೂ ಆಗಿತ್ತು. ಡಚ್ ಭಾಷೆಯನ್ನು ಅನಗತ್ಯವಾಗಿ ವಿಶೇಷ ಹಕ್ಕೆಂಬಂತೆ ತಮ್ಮ ಮೇಲೆ ರಾಜನು ಹೇರಿದ್ದಕ್ಕಾಗಿ ಅಸಮ್ಮತಿ ಸೂಚಿಸಿದರು.

ಈ ಎಲ್ಲ ಉದ್ರೇಕಕಾರಿ ವಾತಾವರಣದ ನಡುವೆ ಜುಲೈ ಕ್ರಾಂತಿಯು ಕಿಡಿಯಂತೆ ಹೊತ್ತಿಕೊಂಡಿತು. ಕ್ರಾಂತಿಯು ಬಹುಬೇಗನೆ ಎಲ್ಲೆಡೆ ಹರಡಿತು. ರಾಜಪಡೆಗಳನ್ನು ಆಚೆಗೆ ನೂಕಲಾಯಿತು. ಹೀಗೆ ಯೂರೋಪಿನಲ್ಲಿ ಒಂದು ಹೊಸ ಸಾಮ್ರಾಜ್ಯ ಉದಯಿಸಿತು.

ಅಲೆಗ್ಸಾಂಡರನು ಪೋಲೆಂಡ ದೇಶವನ್ನು ಅದು ೧೮ನೆಯ ಶತಮಾನದ ಸಮಯದಲ್ಲಿ ಹೊಂದಿದ್ದ ಎಲ್ಲ ಸೌಕರ್ಯಗಳನ್ನು ಪುನಃಸ್ಥಾಪಿಸುವ ಉದ್ದೇಶ ಹೊಂದಿದ್ದ. ಆತನು ಪೋಲೆಂಡ್‌ನ್ನು ರಷ್ಯಾದ ಚಕ್ರಾಧಿಪತ್ಯದಿಂದ ಸಂಪೂರ್ಣವಾಗಿ ಹೊರತಾದ ಒಂದು ರಾಜ್ಯವಾಗಬೇಕೆಂದು ಒತ್ತಾಯಸಿದನು. ಆತನು ರಷ್ಯಾದ ಚಕ್ರವರ್ತಿಯೂ ಪೋಲೆಂಡಿನ ದೊರೆಯೂ ಆಗಬಯಸಿದ. ೧೮೧೫ರಲ್ಲಿ ಕಟ್ಟಿದ ಪೋಲೆಂಡ್‌ನ ರಾಜ್ಯವು ಐತಿಹಾಸಿಕ ಪೋಲೆಂಡ್‌ನ ಒಂದು ಭಾಗವಾಗಿ ಮಾತ್ರ ಉಳಿದುಕೊಂಡಿತ್ತು. ಅಲ್ಲದೆ ರಷ್ಯಾವು ಆಕ್ರಮಿಸಿದ್ದ ಎಲ್ಲ ಪೋಲಿಷ್ ಪ್ರಾಂತ್ಯಗಳನ್ನು ಒಳಗೊಂಡಿರಲಿಲ್ಲ. ರೋಮ್‌ನ ಕ್ಯಾಥೊಲಿಕ್ ಮತವು ಅಧಿಕೃತ ಧರ್ಮವೆಂದು ಪರಿಗಣಿತವಾಯಿತು. ಪೋಲಿಷ್ ಭಾಷೆಯನ್ನು ಅಧಿಕೃತಗೊಳಿಸಲಾಯಿತು. ಸರ್ಕಾರದ ಎಲ್ಲ ಉನ್ನತ ಹುದ್ದೆಗಳಿಗೂ ರಷ್ಯನ್ನರನ್ನು ಬಿಟ್ಟು ಪೋಲಿಷ್ ಜನರನ್ನೇ ಆಯ್ಕೆ ಮಾಡಬೇಕಾಯಿತು. ಆದರೆ ರಷ್ಯಾದ ಸೈನ್ಯಬಲವು ಅತ್ಯಂತ ಪ್ರಬಲವಾಗಿದ್ದುದರಿಂದ ಪೋಲೆಂಡ್ ತನ್ನ ರಾಷ್ಟ್ರೀಯ ಸ್ವಾತಂತ್ರ್ಯವನ್ನು ಒಂಟಿಯಾಗಿ ಸಾಧಿಸಲಾಗುತ್ತಿರಲಿಲ್ಲ. ಹಾಗಾಗಿ ಪೋಲೆಂಡ್ ಜನರು ಹೊರದೇಶದ ಪಾರುಪತ್ಯವನ್ನು ಇದಿರುನೋಡುತ್ತಿದ್ದರು. ಆದರೆ ಆದಾವುದೂ ಘಟಿಸಲಿಲ್ಲ. ಇದೊಂದೇ ಒಬ್ಬಂಟಿಯಾಗಿ ರಷ್ಯಾದ ವಿರುದ್ಧ ಹೋರಾಡಬೇಕಾಯಿತು. ಯುದ್ಧವು ನಡೆಯುತ್ತಿದ್ದ ಹಾಗೆ ಸಮರ್ಪಕ ನಾಯಕತ್ವದ, ಸಂಘಟನೆಯ ಕೊರತೆಯಿಂದಾಗಿ ವಾರ್ಸಾವು ರಷ್ಯಾದೆದುರು ಸೋತಿತು. ಪ್ರತ್ಯೇಕ ರಾಜ್ಯವಾಗಿ ಉಳಿದುಕೊಳ್ಳಲಿಲ್ಲ. ಸಂವಿಧಾನವನ್ನು ರದ್ದುಗೊಳಿಸಿದ್ದೇ ಅಲ್ಲದೆ ದಂಗೆಕೋರರನ್ನು ಶಿಕ್ಷಿಸಲಾಯಿತು.

ಫ್ರೆಂಚರ ಹೊಸ ಅಧಿಪತಿಯಾದ ಲೂಯಿ ಫಿಲಿಫ್‌ನು ಪುನಃಸ್ಥಾಪನೆಯ ಅವಧಿಯಲ್ಲಿ ತನ್ನ ೫೭ನೆಯ ವರ್ಷಕ್ಕೆ ಕಾಲಿಟ್ಟಿದ್ದನು. ಪ್ಯಾರಿಸ್‌ನ ಮಧ್ಯಭಾಗದಲ್ಲಿರುವ ಪ್ರಖ್ಯಾತ ವೈಭವಪೂರ್ಣ ಅರಮನೆಯಲ್ಲಿ ವಾಸವಾಗಿದ್ದನು. ಹಲವು ಸಂಬಂಧಗಳನ್ನು ಬೆಳೆಸಿಕೊಂಡು ಅದರ ಗಟ್ಟಿತನಕ್ಕೆ ಒತ್ತು ನೀಡುತ್ತ ಮುಂದೆ ಎಂದಾದರೊಮ್ಮೆ ಉಪಯೋಗಕ್ಕೆ ಬರಬಹುದು ಎಂಬ ಆಸೆ ಇಟ್ಟುಕೊಂಡಿದ್ದನು. ಆದರೆ ಆತನ ಈ ಗಣತಂತ್ರೀಯ ಸರಳತನದ ಹಿಂದೆ ಸ್ವಂತದ ಅಧಿಕಾರ ದಾಹವೂ ಪ್ರಬಲವಾಗಿತ್ತು.

ಲೂಯಿ ಫಿಲಿಫ್‌ನ ಆಳ್ವಿಕೆಯ ಮೊದಲ ಅವಧಿಯು ಸಂಕಷ್ಟಗಳಿಂದ ಕೂಡಿತ್ತು. ಕ್ರಮಬದ್ಧತಾವಾದಿಗಳೂ, ಬೋನಾಪಾರ್ಟೆ ತತ್ವಾದಿಗಳು ಮತ್ತು ಗಣತಂತ್ರವಾದಿಗಳೂ ಅವನ ಶತ್ರುಗಳಾಗಿದ್ದರು. ಕ್ರಮಬದ್ಧವಾದಿಗಳು ೧೦ನೆಯ ಚಾರ್ಲ್ಸ್‌ನ ಹಕ್ಕುಗಳ ಬೆಂಬಲಿಗರಾಗಿದ್ದರು. ಅವರು ಲೂಯಿ ಫಿಲಪ್‌ನನ್ನು ಶಕ್ತಿವಂತ ನಾಯಕನೆಂದು ಪರಿಗಣಿಸಿದ್ದರು. ಆದರೆ ಗಣತಂತ್ರವಾದಿಗಳ ವಿರುದ್ಧದ ಲೂಯಿ ಫಿಲಿಫ್‌ನ ಹೋರಾಟವು ಇನ್ನೂ ತೀಕ್ಷ್ಣ ಸ್ವರೂಪದ್ದಾಗಿತ್ತು. ಬದಲಾಗುತ್ತಿದ್ದ ಪರಿಸ್ಥಿತಿಗಳನ್ನು ಕಂಡು ಗಣತಂತ್ರವಾದಿ ಗಳಿಗೆ ಬಹಳ ನಿರಾಶೆಯಾಯಿತು. ತಕ್ಷಣವೇ ಅವರು ಜುಲೈನ ರಾಜಪ್ರಭುತ್ವದ ಶತ್ರುಗಳಾದರು. ಅವರ ಬಂಡಾಯ ಗಂಭೀರ ಸ್ವರೂಪದ್ದಾಗಿದ್ದರೂ ಬಹುಬೇಗನೇ ಹತ್ತಿಕ್ಕಲಾಯಿತು. ಸರಕಾರವು ಈ ಪಕ್ಷವನ್ನು ಹತ್ತಿಕ್ಕಲು ಉಗ್ರವಾದ ಕ್ರಮಗಳನ್ನು ಅನುಸರಿಸಿತು. ಅವರ ಸಂಸ್ಥೆಗಳನ್ನು ಒಡೆದು ಸಂಘಟನೆಯ ಹಕ್ಕನ್ನು ಮೊಟಕುಗೊಳಿಸಿ, ಅದರ ಸಂಪಾದಕರನ್ನು ಶಿಕ್ಷೆಗೆ ಒಳಪಡಿಸಿತು. ಅವರ ವಾರ್ತಾಪತ್ರಿಕೆಗಳ ಮೇಲೆ ಭಾರೀ ದಂಡವನ್ನು ವಿಧಿಸಿ, ಅದರ ಪರವಾದ ಎಲ್ಲಾ ವಾದಗಳನ್ನು ಕಾನೂನು ಬಾಹಿರವೆಂದು ಘೋಷಿಸಲಾಯಿತು.

**ಸೆಪ್ಟೆಂಬರ್ ಕಾಯಿದೆಗಳು (೧೮೩೫) :** ಜುಲೈ ರಾಜಪ್ರಭುತ್ವದ ನೈತಿಕ ಅಧಿಕಾರವನ್ನು ಈ ಕಾಯಿದೆಗಳು ಬಹುವಾಗಿ ದುರ್ಬಲಗೊಳಿಸಿತು. ಎಲ್ಲಾ ವಿರೋಧ ಪಕ್ಷಗಳನ್ನು ಮೂಲೆಗೆ ತಳ್ಳಿ ಶ್ರೀಮಂತ ಪ್ರಭುತ್ವವು ಫ್ರಾನ್ಸ್‌ನ್ನು ೧೮ ವರ್ಷಗಳ ಕಾಲ ಆಳಿತು. ೧೮೩೦-೧೮೪೦ ರವರೆಗಿನ ಅವಧಿಯು ಫ್ರಾನ್ಸಿನ ಸಂಸದೀಯ ಚರಿತ್ರೆಯಲ್ಲಿ ಅಸ್ಥಿರವಾದುದೆಂದು ಪರಿಗಣಿತವಾಗಿದೆ. ೧೮೪೦ರಿಂದ ೪೮ರವರೆಗೆ ಗಿಜೋಟ್ ಎಂಬುವನು ಫ್ರಾನ್ಸ್‌ನ ರಾಜಕೀಯ ಸಂಘಟನೆಯಲ್ಲಿ ಯಾವುದೇ ರೀತಿಯ ಬದಲಾವಣೆಯ ಅಗತ್ಯವನ್ನು ಒಪ್ಪಲಿಲ್ಲ. ಅವನು ೧೮೧೫ರ ಚಾರ್ಟರ್ ಕಾನೂನಿನ ಮೇಲೆಯೇ ನಂಬಿಕೆ ಇರಿಸಿದ್ದನು. ಇದರ ನಂತರದ ಯಾವುದೇ ಸುಧಾರಣೆಯು ಅನಗತ್ಯವೂ ಅಪಾಯಕಾರಿಯೂ ಆದುದು ಎಂದು ಭಾವಿಸಿದ್ದನು. ಆತನು ಮತದಾನದ ಹಕ್ಕನ್ನು ವಿಸ್ತರಿಸುವುದು ಮತ್ತು ಕಾರ್ಮಿಕ ವರ್ಗದ ಸುಧಾರಣೆಗಾಗಿ ಯಾವುದೇ ಕಾನೂನುಗಳನ್ನು ತರುವುದನ್ನು ವಿರೋಧಿಸುತ್ತಿದ್ದನು. ಈ ಹದಿನೆಂಟು ವರ್ಷಗಳ ಅವಧಿಯಲ್ಲಿ ಇದ್ದ ಕಾನೂನು ಜನರ ಅಗತ್ಯಗಳನ್ನು ಪೂರೈಸುವ ಯಾವುದೇ ಪ್ರಯತ್ನವನ್ನೂ ಮಾಡಲಿಲ್ಲ.

ಗಿಜೋಟ್‌ನ ಇಂತಹ ನೀತಿಯು ಜಿಗುಟಾದ ಸಂಪ್ರದಾಯವಾಗಿದ್ದು ಇದನ್ನು ಉದಾರವಾದಿಗಳು ತೀವ್ರವಾಗಿ ವಿರೋಧಿಸಿದರು. ಜನಸಾಮಾನ್ಯರ ಪರಿಸ್ಥಿತಿಯನ್ನು ಕುರಿತು ಸಾಕಷ್ಟು ಬಿಸಿಯಾದ ಚರ್ಚೆಗಳು ನಡೆದವು. ಬಹಳಷ್ಟು ಬರಹಗಾರರು ಕೈಗಾರಿಕೆಯ ವ್ಯವಸ್ಥೆ ಮತ್ತು ಬಂಡವಾಳ ಹಾಗೂ ಕೂಲಿ ಸಂಬಂಧದಂತಹ ಸೂಕ್ಷ್ಮ ಪ್ರಶ್ನೆಗೆ ಸಂಬಂಧಿಸಿದಂತಹ ಒಂದು ಹೊಸ ಸಂಹಿತೆಯನ್ನು ಪ್ರಚಾರ ಮಾಡಲು ಪ್ರಾರಂಭಿಸಿದರು. ಬಹುಸಂಖ್ಯಾತರ ಇಚ್ಛೆಗಳನ್ನು ಪೂರೈಸುವಲ್ಲಿ ಸಮಾಜದ ಪುರ್ನಸಂಘಟನೆಗಾಗಿ ಒಂದು ಸಮಾಜವಾದಿ ವ್ಯವಸ್ಥೆಯನ್ನು ಸಾರಿದವರಲ್ಲಿ ಸೈಂಟ್ ಸೈಮನ್ ಮೊದಲಿಗ. ಪ್ರಭುತ್ವವು ಉತ್ಪಾದನೆಯ ಸಾಧನಗಳ ಒಡೆತನ ಹೊಂದಿರಬೇಕು ಹಾಗೂ "ಸಾಮರ್ಥ್ಯಕ್ಕೆ ಅನುಗುಣವಾಗಿ ಶ್ರಮ ಮತ್ತು ಸೇವೆಗೆ ಅನುಗುಣವಾದ ಪ್ರತಿಫಲ" ಅನ್ನುವ ತತ್ವದ ಮೇಲೆ ಕೈಗಾರಿಕೆ ಯನ್ನು ವ್ಯವಸ್ಥೆಗೊಳಿಸಬೇಕು ಎಂದು ಆತನು ನಂಬಿದ್ದ. ಪ್ರಸ್ತುತವಿದ್ದ ಆರ್ಥಿಕ ಪರಿಸ್ಥಿತಿಯ ಕೆಡುಕುಗಳನ್ನು ಫ್ರಾನ್ಸಿನ ಕಾರ್ಮಿಕರಿಗೆ ತನ್ನ ಬರಹಗಳಿಂದ ಮನದಟ್ಟು ಮಾಡಲು ಪ್ರಯತ್ನಿಸಿದ. ಲೂಯಿಬ್ಲ್ಯಾಂಕ್ ಎಂಬ ಮತ್ತೊಬ್ಬ ಸಮಾಜವಾದದ ಬೆಂಬಲಿಗ ಎಲ್ಲರಿಗೂ ಉದ್ಯೋಗದ ಹಕ್ಕು ಇರಬೇಕು ಮತ್ತು ಪ್ರಭುತ್ವವು ಅದನ್ನು ಪೂರೈಸಬೇಕೆಂದು ಘೋಷಿಸಿದ. ಉದ್ಯಮಗಳನ್ನು ಸಂಘಟಿಸಿದಾಗ ಮಾತ್ರ ಇದು ಸಾಧ್ಯ. ಹೀಗೆ ಒಂದು ಸಮಾಜವಾದಿ ಪಕ್ಷದ ಉದಯವಾಯಿತು. ಇದು ಗಣರಾಜ್ಯ ವ್ಯವಸ್ಥೆ ಯಲ್ಲಿ ನಂಬಿಕೆಯಿರಿಸಿಕೊಂಡಿತ್ತು. ಆದರೆ ಇತರೇ ಗಣತಂತ್ರವಾದಿಗಳಿಗಿಂತ ಭಿನ್ನವಾಗಿತ್ತು. ಚುನಾವಣಾ ಮತ್ತು ಸಂಸದೀಯ ಸುಧಾರಣೆಗಳಿಗಾಗಿ ಬಹುವಾದ ಬೇಡಿಕೆ ಹುಟ್ಟಿಕೊಂಡಿತು. ಈ ಪರಿಸ್ಥಿತಿಯನ್ನೆದುರಿಸಲು ಒಂದು ಪಕ್ಷವು ಕ್ರಮೇಣ ರೂಪುಗೊಳ್ಳುತ್ತಾ ಹೋಯಿತು. ಪ್ರತಿನಿಧಿ ಸಭೆಯ ರಚನೆಯಲ್ಲಿ ಬದಲಾವಣೆ ಮತ್ತು ಮತದಾನದ ಹಕ್ಕಿನ ವಿಸ್ತರಣೆಗೆ ಸಂಸದೀಯ ಹಾಗೂ ಚುನಾವಣಾ ಸುಧಾರಣೆಗೆ ತಮ್ಮ ಬೇಡಿಕೆಯನ್ನು ಪಕ್ಷವು ಮುಂದಿಟ್ಟಿತು. ಇದನ್ನು ಸಾಬೀತುಗೊಳಿಸಲು ಬಹುಸಂಖ್ಯೆಯಲ್ಲಿ ಈ ಸುಧಾರಣಾ ಔತಣ ಕೂಟಗಳಲ್ಲಿ ಜನರು ಪಾಲ್ಗೊಂಡರು ಮತ್ತು

ಸುಧಾರಣಾವಾದಿಗಳ ಭಾಷಣಗಳನ್ನು ಆಲಿಸಿದರು. ೧೮೪೮ರಲ್ಲಿ ಪ್ಯಾರಿಸ್ ನಗರದ ಮಧ್ಯಭಾಗದಲ್ಲಿ ಸಮಾವೇಶಗೊಂಡ ಇಂತಹ ಒಂದು ಸಭೆಯಲ್ಲಿ ಬೃಹತ್ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ಇತರ ಜನರ ಪಾಲ್ಗೊಳ್ಳುವಿಕೆಯನ್ನು ನಿಷೇಧಿಸಲಾಯಿತು. ಆ ಸಭೆಗೆ ನಾಯಕನೂ ಇರಲಿಲ್ಲ, ಒಂದು ನಿರ್ದಿಷ್ಟ ಗುರಿಯೂ ಇರಲಿಲ್ಲ. ಪ್ರಭುತ್ವವು ರಾಷ್ಟ್ರೀಯ ರಕ್ಷಣಾಪಡೆಗೆ ಹೇಳಿಕಳುಹಿಸಿದರೂ ಅವರು ಈ ಬಂಡಾಯಗಾರರ ಮೇಲೆ ದಾಳಿ ನಡೆಸಲು ಒಪ್ಪಲಿಲ್ಲ. ಸಭಿಕರು "ಸುಧಾರಣೆ ಚಿರಾಯುವಾಗಲಿ", "ಗಿಜೋಟ್‌ಗೆ ಧಿಕ್ಕಾರ" ಎಂದು ಒಕ್ಕೊರಲಿನಿಂದ ಕೂಗಿದರು. ಗಣತಂತ್ರವಾದಿಗಳು ಈ ಸಂದರ್ಭದಲ್ಲಿ ಬಂದು ಸೇರಿಕೊಂಡರು. ರಾಷ್ಟ್ರೀಯ ರಕ್ಷಣಾಪಡೆಯ ಮೇಲೆ ಗುಂಡು ಹಾರಿಸಲಾಯಿತು. ಹೀಗೆ ರಾಜ ಪ್ರಭುತ್ವವು ಅಂತ್ಯಗೊಂಡಿತು. ಸೇಡಿನ ಕೂಗು ಹಿಂಬಾಲಿಸಿತು. ಹೀಗೆ ದಂಗೆಯು ಪ್ರಾರಂಭವಾಯಿತು. ತನ್ನ ತೀವ್ರತೆಯಿಂದ ಮುಂದಿದ್ದ ಎಲ್ಲ ಅಡೆತಡೆಗಳನ್ನು ಧೂಳೀಪಟ ಮಾಡಿತು. ಹಿಂದಿದ್ದ "ಸುಧಾರಣೆ ಚಿರಾಯುವಾಗಲಿ' ಎನ್ನುವ ಘೋಷಣೆಗೆ ಬದಲಾಗಿ ಈಗ "ಗಣತಂತ್ರ ಚಿರಾಯುವಾಗಲಿ" ಎಂದು ಕೇಳಹತ್ತಿತು.

ಲೂಯಿ ಫಿಲಿಫ್‌ನನ್ನು ಕೆಳಗಿಳಿಸಿ, ಆತನ ಮೊಮ್ಮಗನನ್ನು ಪಟ್ಟಕ್ಕೇರಿಸಲಾಯಿತು. ಆದರೆ ಗಣತಂತ್ರವಾದಿಗಳು ಹಾಗೂ ಸಮಾಜವಾದಿಗಳು ಪ್ರಾಂತೀಯ ಸರ್ಕಾರವನ್ನು ಸೃಷ್ಟಿಸಲು ಶಕ್ತರಾಗಿದ್ದರು. ಇದರಲ್ಲಿ ಎರಡೂ ಪಕ್ಷಗಳ ನಾಯಕರಿದ್ದರು. ಹೀಗೆ ಜನರ ನಂಬುಗೆಯ ಆಧಾರದ ಮೇಲೆ ಎರಡನೆಯ ಗಣತಂತ್ರವು ಘೋಷಿಸಲ್ಪಟ್ಟಿತು.

೧೮೪೮ರ ಮೊದಲ ಭಾಗದಲ್ಲಿ ಮಧ್ಯಯುರೋಪ್ ಅಶಾಂತಿ, ಅಸಮಾಧಾನ ಮತ್ತು ಕಾತುರದ ಸ್ಥಿತಿಯಲ್ಲಿತ್ತು. ಎಲ್ಲೆಡೆಯೂ ಜನರು ಹಳೆಯ ವ್ಯವಸ್ಥೆಯ ಬಗ್ಗೆ ಭ್ರಮನಿರಸನ ಹೊಂದಿದ್ದರು. ಅವರಿಗೆ ಬದಲಾವಣೆಯ ಅಗತ್ಯವಿತ್ತು. ಕ್ರಾಂತಿಯ ಕೆಚ್ಚಿನಿಂದ ಕೂಡಿದ ಜನಮನವು ಜರ್ಮನಿ, ಇಟಲಿ ಮತ್ತು ಆಸ್ಟ್ರಿಯಾಗಳಲ್ಲಿ ಉತ್ತೇಜನಕಾರಕವಾಗಿತ್ತು. ೧೮೪೮ರ ಫ್ರೆಂಚ್ ಕ್ರಾಂತಿ ಆ ಶತಮಾನದ ಅತ್ಯಂತ ತೀವ್ರವಾದ ಅಶಾಂತಿಯನ್ನು ಉಂಟು ಮಾಡುವಂತಹುದಾಗಿತ್ತು. ಕ್ರಾಂತಿಗಳು ಒಂದೆಡೆ ಬಾಲ್ಟಿಕ್ ಸರೋವರದಿಂದ ಮೆಡಿಟರೇನಿಯನ್ ಸಮುದ್ರದವರೆಗೂ ಇನ್ನೊಂದೆಡೆ ರಷ್ಯನ್ ಸರಹದ್ದಿನವರೆಗೂ ಹರಡಿತ್ತು. ಈ ಕ್ರಾಂತಿಯ ಕೇಂದ್ರಬಿಂದು ಸ್ಥಾಪಿತ ವ್ಯವಸ್ಥೆಯ ಕೋಟೆಯಾದ ವಿಯೆನ್ನಾ ಆಗಿತ್ತು. ಕ್ರಾಂತಿಯ ಶಿಕ್ಷಣದ ಕಿಡಿಯು ಹಂಗೇರಿಯಿಂದ ಪ್ರಾರಂಭವಾಯಿತು. ಇಲ್ಲಿ ಬಹಳ ವರ್ಷಗಳ ಕಾಲ ರಾಷ್ಟ್ರೀಯತೆ ಹಾಗೂ ಸುಧಾರಣಾ ಚಳವಳಿಗಳು ನಡೆಯುತ್ತಿದ್ದವು. ಹಂಗೇರಿಯಲ್ಲಿದ್ದ ಸಂಸ್ಥೆಗಳು ಮಧ್ಯಯುಗೀಯವಾಗಿದ್ದವು. ಪಶ್ಚಿಮ ಯೂರೋಪಿನ ಚಿಂತನೆಗಳಿಂದ ಪ್ರಭಾವಿತಗೊಂಡ ಒಂದು ಉದಾರವಾದಿ ಹಾಗೂ ಪ್ರಜಾಪ್ರಭುತ್ವವಾದೀ ಪಕ್ಷವು ಹಂಗೇರಿಯ ಪ್ರಖ್ಯಾತ ನಾಯಕರಲ್ಲೊಬ್ಬನಾದ ಲೂಯಿ ಕೊಸುಥ್‌ನ ನೇತೃತ್ವದಲ್ಲಿ ಬೆಳೆದಿತ್ತು. ಕೊಸುಥ್‌ನು ತನ್ನ ಕಾಲದ ಪ್ರಜಾಪ್ರಭುತ್ವವಾದಿ ಚಿಂತನೆಗಳ ಸಾಕಾರ ಮೂರ್ತಿಯೇ ಆಗಿದ್ದನು. ರಾಷ್ಟ್ರೀಯ ಬದುಕಿನ ಎಲ್ಲಾ ರಂಗಗಳಲ್ಲೂ ಸುಧಾರಣೆಗಳನ್ನು ತರಲು ಶ್ರಮಿಸಿದ್ದನು. ಶ್ರೀಮಂತರ ಮೇಲೆ ತೆರಿಗೆ ಹೇರಬೇಕೆನ್ನುವುದು, ಎಲ್ಲ ರಾಷ್ಟ್ರೀಯ ಖರ್ಚುವೆಚ್ಚಗಳ ಮೇಲೂ ನಿಯಂತ್ರಣ ಸಾಧಿಸುವುದು, ಪತ್ರಿಕೆಗಳಿಗೆ ಇನ್ನೂ ಹೆಚ್ಚಿನ ಸ್ವಾತಂತ್ರ್ಯ ನೀಡುವುದು ಆತನ ಧ್ಯೇಯವಾಗಿತ್ತು. ಲೂಯಿ ಫಿಲಿಫ್‌ನ ಸುದ್ದಿಯು ಮಿಂಚಿನಂತೆ ಹರಡಿತು. ಕೊಸುಥ್‌ನ ತೀಕ್ಷ್ಣವಾದ ಭಾಷಣಗಳು ಆ ಸಂದರ್ಭದ ಭಾವನೆಗಳನ್ನು ವ್ಯಕ್ತಪಡಿಸುವಂತಹುದಾಗಿತ್ತು. ಹತ್ತು ದಿನಗಳ ನಂತರ ಹೆಚ್ಚಿನ ಮಟ್ಟದಲ್ಲಿ ವಿದ್ಯಾರ್ಥಿಗಳು ಮತ್ತು ಕಾರ್ಮಿಕರೇ ಸಂಘಟಿಸಿದಂತಹ ಒಂದು ದಂಗೆಯು ವಿಯೆನ್ನಾದಲ್ಲಿ ಪ್ರಾರಂಭವಾಯಿತು. ಗುಂಪು ಚಕ್ರವರ್ತಿಯ ಅರಮನೆಗೆ ನುಗ್ಗಿ, ಸಭಾಂಗಣಕ್ಕೆ ಮುತ್ತಿಗೆ ಹಾಕಿ "ಮೆಟರ್ನಿಕ್‌ಗೆ ಧಿಕ್ಕಾರ" ಎಂಬ ಘೋಷಣೆಗಳನ್ನು ಕೂಗಿತು. ಕೊಸುಥ್‌ನ ಭಾಷಣೆಗಳ ದಾಳಿಯಲ್ಲಿ ಹಂಗೇರಿಯು ವಿಯೆನ್ನಾದ ಮೇಲೆ ತನ್ನ ಪ್ರಭಾವವನ್ನು ಬೀರಿತು. ವಿಯೆನ್ನಾದ ಜನರ ಕ್ರಿಯೆಗಳು ಹಂಗೇರಿಯ ಮೇಲೆ ತನ್ನ ಪ್ರಭಾವವನ್ನು ಬೀರಿತು. ಮಾರ್ಚ್ ಕಾನೂನುಗಳು ಹಂಗೇರಿಯನ್ನು ಆಧುನೀಕರಣಗೊಳಿಸುವ ದಿಸೆಯಲ್ಲಿದ್ದವು. ಅವು ಹಿಂದಿದ್ದ ನಿರಂಕುಶ ಪ್ರಭುತ್ವದ ರಾಜಕೀಯ ವ್ಯವಸ್ಥೆಯನ್ನು ಧೂಳೀಪಟ ಮಾಡಿದವು. ಪತ್ರಿಕಾ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಹಾಗೂ ನ್ಯಾಯ ತೀರ್ಮಾನದ ಮೂಲಕ ಶಿಕ್ಷೆಯಂತಹ ವ್ಯವಸ್ಥೆಗಳು ಸ್ಥಾಪಿತಗೊಂಡವು. ಹಂಗೇರಿಯ ಈ ಉದಾಹರಣೆಯನ್ನು ಬೊಹೀಮಿಯಾ ದೇಶವು ಬಹಳ ಬೇಗ ಅನುಸರಿಸಿತು. ಬೊಹೀಮಿ ಯಾದಲ್ಲಿ ಮುಖ್ಯವಾಗಿ ಎರಡು ಜನಾಂಗಗಳಿದ್ದವು. ಅಲ್ಪಸಂಖ್ಯಾತರಾದ ಜರ್ಮನ್ನರು ವಿದ್ಯಾವಂತರಾಗಿದ್ದರು. ಆದರೆ ಬಹುಸಂಖ್ಯಾತರು ಬಡವರಾಗಿದ್ದರು. ಅವರು ಹಂಗೇರಿಯನ್ನರಂತೆಯೇ ತಮ್ಮ ಬೇಡಿಕೆಗಳನ್ನು ಮುಂದಿಟ್ಟರು.

ವಿಯೆನ್ನಾದ ಪಶ್ಚಿಮಕ್ಕಿರುವ ಆಸ್ಟ್ರಿಯಾದ ಪ್ರಾಂತ್ಯಗಳು ಸರಿಸುಮಾರು ಇಂತಹುದೇ ಬೇಡಿಕೆಗಳನ್ನು ಹೊಂದಿದ್ದವು. ಇಂತಹ ಅಸಹಾಯಕ ಪರಿಸ್ಥಿತಿಗೆ ಮುಖ್ಯವಾಗಿ ಇಟಲಿ ಯಲ್ಲಿದ್ದ ಕಠಿಣ ಪರಿಸ್ಥಿತಿಯೇ ಕಾರಣವಾಗಿತ್ತು. ೧೮೧೫ರಲ್ಲಿ ಲಂಬಾರ್ಡಿ ಮತ್ತು ವೆನಿಶಿಯಾವು ಹಾಪ್ಸ್‌ಬರ್ಗ್ ಕುಟುಂಬದವರಿಂದ ಆಳಲ್ಪಟ್ಟಿತು. ಇಂತಹ ವಿದೇಶೀಯ ಆಡಳಿತಕ್ಕೆ ಜನರ ವಿರೋಧವಿತ್ತು. ಇದೇ ರೀತಿ ಟಸ್ಕನಿ ಮತ್ತು ಪೋಪನ ಆಡಳಿತದಲ್ಲಿದ್ದ ಇತರೇ ಇಟಲಿಯ ರಾಜ್ಯಗಳೂ ಸಹ ಜನಪ್ರಿಯ ಒತ್ತಡಕ್ಕೆ ಸಿಲುಕಿದ್ದವು. ಇದೇ ರೀತಿ ಜರ್ಮನಿಯಲ್ಲೂ ಸಹ ಸೈನಿಕ ಆಡಳಿತದ ದಿನಗಳಿದ್ದವು. ಪ್ರಷ್ಯಾದ ರಾಜನು ಒಂದು ಸಂವಿಧಾನವನ್ನು ರಚಿಸುವ ಭರವಸೆ ನೀಡಿದ್ದನು. ಆದರೆ ಬರ್ಲಿನ್‌ನ ಜನರು ದಂಗೆ ಯೆದ್ದರು. ಇದರ ಫಲವಾಗಿ ಹಲವಾರು ಮುಳ್ಳು ಬೇಲಿಗಳೆದ್ದವು. ರಾಜನು ಜರ್ಮನಿಯ ಏಕೀಕರಣದ ಪ್ರಯತ್ನಕ್ಕಾಗಿ ನಾಯಕತ್ವವನ್ನು ವಹಿಸಿಕೊಳ್ಳುವ ಭರವಸೆಯನ್ನು ಸಹ ನೀಡಿದ್ದನು. ೧೮೪೮ರ ಮಾರ್ಚ್ ಕೊನೆಯ ವೇಳೆಗೆ ಎಲ್ಲೆಡೆಯೂ ಹಬ್ಬಿದ್ದ ಕ್ರಾಂತಿಯು ಸಫಲವಾಯಿತು. ಒಂದು ತಲೆಮಾರಿನವರೆಗೂ ಸರಕಾರದ ವ್ಯವಸ್ಥೆಯನ್ನು ಹಿಡಿತದಲ್ಲಿಟ್ಟು ಕೊಂಡಿದ್ದ ಪ್ರಖ್ಯಾತ ಮಾರ್ಚ್ ದಿನಗಳು ನಿರ್ನಾಮವಾದವು. ಆಸ್ಟ್ರಿಯಾ ಚಕ್ರಾಧಿಪತ್ಯವು ಇದ್ದ ಎಲ್ಲೆಡೆಯಲ್ಲೂ ಅಂದರೆ ಜರ್ಮನಿ ಮತ್ತು ಇಟಲಿಗಳಲ್ಲಿ ಕ್ರಾಂತಿಯು ಸಫಲ ವಾಯಿತು. ಹಂಗೇರಿ ಮತ್ತು ಬೋಹೀಮಿಯಾಗಳಿಗೆ ಹೆಚ್ಚಿನ ಮಟ್ಟದ ರಿಯಾಯಿತಿಗಳು ದೊರೆತವು. ಲಂಬಾರ್ಡಿ, ವೆನೀಶಿಯಾ ಚಕ್ರಾಧಿಪತ್ಯವು ತಾನು ಆಸ್ಟ್ರಿಯಾದಿಂದ ಮುಕ್ತ ನಾಗಿದ್ದೇನೆ ಎಂದು ಘೋಷಿಸಿಕೊಂಡಿತು.

ಕ್ರಾಂತಿಯ ಗೆಲುವು ಸೀಮಿತ ಅವಧಿಯದ್ದಾಗಿತ್ತು. ಆಸ್ಟ್ರಿಯಾವು ಪುನರುತ್ಥಾನದ ಸೂಚನೆಗಳನ್ನು ತೋರಿಸಿತು. ಆಸ್ಟ್ರಿಯಾದ ಜನಾಂಗಗಳ ನಡುವಿನ ಹಾಗೂ ಸೈನಿಕ ಶಕ್ತಿಯ ನಡುವಿನ ವೈರುಧ್ಯದಲ್ಲಿ, ಅದರ ಮುಕ್ತಿಯು ಅಡಗಿತ್ತು. ೧೮೪೮ರಲ್ಲಿ ವಿಂಡೀಸ್ ಚಗಾರ್ಸ್‌ನು ಪ್ರೇಗ್ ರಾಜಪ್ರಭುತ್ವದ ಸೇನೆಯ ದಂಡನಾಯಕನಾಗಿದ್ದನು. ಆತನು ಪ್ರೇಗ್ ನಗರವನ್ನು ಧೂಳೀಪಟ ಮಾಡಿ ಸರ್ವಾಧಿಕಾರಿಯಾದನು.

ಇಟಲಿಯಲ್ಲಿಯೂ ಸಹ ಸೇನೆಯು ವಿಜಯ ಸಾಧಿಸಿತು. ಮೊದಲಿನ ಉತ್ಸಾಹದ ಚಿಲುಮೆಯ ನಂತರ ಇಟಾಲಿಯನ್ನರು ಈರ್ಷ್ಯೆ ಹಾಗೂ ಭಿನ್ನಾಭಿಪ್ರಾಯಗಳಿಂದ ಅವರ ಒಗ್ಗಟ್ಟು ಛಿದ್ರವಾಯಿತು. ಟಸ್ಕನಿ, ನೇಪಲ್ಸ್ ಹಾಗೂ ಪೋಪ್ ಆಡಳಿತದ ರಾಜ್ಯಗಳ ರಾಜರು ರಾಷ್ಟ್ರೀಯ ಧ್ಯೇಯಗಳನ್ನು ಬಿಟ್ಟುಕೊಟ್ಟರು. ಆಸ್ಟ್ರೀಯಾದ ಪ್ರತಿಗಾಮಿ ಗುಂಪು ಬೊಹೀಮಿಯಾ ಮತ್ತು ಇಟಲಿಗಳಲ್ಲಿ ಸೇನೆಯ ಭಾಗಶಃ ಗೆಲುವಿನಿಂದ ಬಲಿಷ್ಠರಾಗಿ, ರಾಜ್ಯಗಳ ಮೇಲೆ ತಮ್ಮ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಿದರು. ಇದರಿಂದಾಗಿ ಫರ್ಡಿನಾಂಡನು ತನ್ನ ಪದವಿಯನ್ನು ಕಳೆದುಕೊಳ್ಳಬೇಕಾಯಿತು. ೧೮೪೮ರಲ್ಲಿ ಆತನ ಸೋದರಳಿಯನಾದ ೧ನೆಯ ಫ್ರಾನ್ಸಿಸ್ ಜೋಸೆಫ್‌ನು ಅಧಿಕಾರ ವಹಿಸಿಕೊಂಡನು. ಈತನ ಪ್ರಭುತ್ವವು ಬಹಳ ಕಾಲದವರೆಗೆ ಗಮನಾರ್ಹ ಘಟನೆಗಳಿಂದ ಕೂಡಿದ್ದುದಾಗಿತ್ತು.

೧೮೪೯ರಲ್ಲಿ ಹಂಗೇರಿಯಲ್ಲಿ ಮಹಾಯುದ್ಧ ಪ್ರಾರಂಭವಾಯಿತು. ರಷ್ಯಾದ ಜಾರ್ ದೊರೆ ಒಂದನೆಯ ನಿಕೊಲಸ್ ಕಳುಹಿಸಿದ ಬೃಹತ್ ಸೇನೆಯನ್ನು ಹೊಂದಿದ ಆಸ್ಟ್ರಿಯಾವು ಹಂಗೇರಿಯ ಮೇಲೆ ಆಕ್ರಮಣ ನಡೆಸಿತು. ಅವರ ಸ್ವಾತಂತ್ರ್ಯ ಚಳವಳಿಯನ್ನು ಬೇರು ಸಹಿತ ಕಿತ್ತು ಹಾಕಿತು. ಕೊಸುಥ್ ಮತ್ತು ಇತರೇ ನಾಯಕರುಗಳನ್ನು ತೀವ್ರವಾಗಿ ಶಿಕ್ಷೆಗೆ ಗುರುಪಡಿಸಿ ಸೆರೆಮನೆಗೆ ತಳ್ಳಲಾಯಿತು.

ಇದೇ ಸಂದರ್ಭದಲ್ಲಿ ಆಸ್ಟ್ರಿಯಾದ ಸೈನಿಕ ಶಕ್ತಿಯ ಸಹಾಯದಿಂದ ಇಟಲಿಯನ್ನು ಸಹ ಮತ್ತೆ ಕೈವಶ ಮಾಡಿಕೊಳ್ಳಲಾಯಿತು. ೧೮೪೮ರಲ್ಲಿ ಸಾರ್ಡೀನಿಯಾದ ದೊರೆ ಚಾರ್ಲ್ಸ್ ಆಲ್ಬರ್ಟ್‌ನ ನಾಯಕತ್ವದಲ್ಲಿ ಆಸ್ಟ್ರಿಯಾದ ವಿರುದ್ಧ ಇಟಾಲಿಯನ್ನರ ದಂಗೆ ಆರಂಭವಾಯಿತು. ಚಾರ್ಲ್ಸ್ ಆಲ್ಬರ್ಟ್‌ನು ೧೮೪೯ರಲ್ಲಿ ವಸಂತ ಋತುವಿನಲ್ಲಿ ಆಸ್ಟ್ರಿಯಾದ ವಿರುದ್ಧದ ಹೋರಾಟದಲ್ಲಿ ನಾಯಕತ್ವ ವಹಿಸಿದ್ದನು. ಆದರೆ ಅವರಲ್ಲಿ ಒಗ್ಗಟ್ಟಿರಲಿಲ್ಲ. ಇತರೇ ರಾಜ್ಯಗಳಿಂದಲೇ ಸಹಾಯ ಸಿಗಲಿಲ್ಲ. ನಂತರ ಅವನು ೨ನೆಯ ವಿಕ್ಟರ್ ಇಮ್ಯಾನುಯಲ್‌ಗೆ ತನ್ನ ಸಿಂಹಾಸನವನ್ನು ಬಿಟ್ಟುಕೊಡಬೇಕಾಯಿತು. ೧೮೪೯ರಲ್ಲಿ ಫ್ಲಾರೆನ್ಸ್, ರೋಮ್ ಹಾಗೂ ವೆನಿಸ್ಸಿನ ಗಣರಾಜ್ಯಗಳು ಒಂದಾದ ಮೇಲೊಂದರಂತೆ ಸೋಲಿಸಲ್ಪಟ್ಟಿತು. ೧೮೪೮ರ ಉಜ್ವಲ ಆಶಾಕಿರಣಗಳು ಶೀಘ್ರವಾಗಿ ನಂದಿಹೋದವು. ಆಸ್ಟ್ರಿಯಾದ ಸೈನ್ಯಬಲವು ಪುನಃ ಸ್ಥಾಪಿತವಾಯಿತು.

ಇಟಲಿ ಮತ್ತು ಆಸ್ಟ್ರಿಯಾಗಳಲ್ಲಿ ಈ ಘಟನೆಗಳು ಸಂಭವಿಸುತ್ತಿದ್ದ ಹಾಗೆ ಜರ್ಮನಿ ಯಲ್ಲಿ ಸಹ ಉದಾರವಾದಿಗಳ ಗೆಲುವು ಸೋಲಿನತ್ತ ವಾಲುತ್ತಿತ್ತು. ಅವರೆಲ್ಲರ ಆಸೆಗಳು ಫ್ರಾಂಕ್‌ಫರ್ಟ್‌ನಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಆಧರಿಸಿತ್ತು. ಈ ಫ್ರಾಂಕ್‌ಫರ್ಟ್ ಅಧಿವೇಶನವು ಒಂದು ನೈಜ ಜರ್ಮನ್ ರಾಷ್ಟ್ರಕ್ಕಾಗಿ ಹುಟ್ಟಿದ ಜನಪ್ರಿಯ ಬೇಡಿಕೆಗೆ ಎಡೆಮಾಡಿಕೊಟ್ಟಿತು. ಆದರೆ ಜರ್ಮನಿಯ ರಾಜರುಗಳು ಅದರಲ್ಲೂ ಪ್ರಷ್ಯಾ ಮತ್ತು ಆಸ್ಟ್ರಿಯಾದ ರಾಜರುಗಳ ವಿರೋಧದಿಂದಾಗಿ ಫ್ರಾಂಕ್‌ಫರ್ಟ್ ಸಮಾವೇಶವು ಸೋಲನ್ನು ಕಂಡಿತು. ಪ್ರಷ್ಯಾದ ದೊರೆಯಾದ ಳನೆಯ ಫೆಡ್ರಿಕ್ ವಿಲಿಯಂನು ಸಂಯುಕ್ತ ಜರ್ಮನಿಯ ಚಕ್ರಾಧಿಪತ್ಯವನ್ನು ಒಪ್ಪಿಕೊಳ್ಳಲು ನಿರಾಕರಿಸಿದ್ದುದರಿಂದ ಗೊಂದಲ ವೇರ್ಪಟ್ಟಿತು.

ಫ್ರಾಂಕ್‌ಫರ್ಟ್ ಅಧಿವೇಶನದ ವೈಫಲ್ಯವು ಒಂದು ದೊಡ್ಡ ನಿರಾಸೆಯನ್ನು ಉಂಟುಮಾಡಿತು. ಪ್ರಷ್ಯಾದ ದೊರೆಯು ಫ್ರಾಂಕ್‌ಫರ್ಟ್ ಒಪ್ಪಂದವು ನೀಡಿದ ಸಂಯುಕ್ತ ಜರ್ಮನಿಯ ನಾಯಕತ್ವವನ್ನು ನಿರಾಕರಿಸಿದನು. ಅವರ ಎಲ್ಲಾ ಶ್ರಮವನ್ನು ನಿಷ್ಫಲಗೊಳಿಸಿ ದನು. ೧೮೧೫ರ ಹಳೆಯ ಜರ್ಮನ್ ಒಕ್ಕೂಟವು ೧೮೪೮ರಲ್ಲಿ ರದ್ದಾಗಿದ್ದು ಅದರ ರದ್ಧತಿಯು ಈಗ ಪುನಃ ಅಸ್ತಿತ್ವಕ್ಕೆ ಬರಬೇಕೆಂದು ಆಸ್ಟ್ರಿಯಾ ಒತ್ತಾಯಿಸಿತು. ಮಧ್ಯಕಾಲದ ಯೂರೋಪಿನಲ್ಲಿ ಈ ಶತಮಾನದ ಮಧ್ಯದಲ್ಲಿ ಒದಗಿದ ಶಾಶ್ವತ ಪರಿಣಾಮಗಳು ಅತ್ಯಲ್ಪ. ಎಲ್ಲೆಡೆಯಲ್ಲಿಯೂ ಹಳೆಯ ಪ್ರಭುತ್ವಗಳು ಹುಟ್ಟಿಕೊಂಡವು. ೧೮೪೮ರಲ್ಲಿ ಚಾರ್ಲ್ಸ್ ಆಲ್ಬರ್ಟ್‌ನಿಂದ ಪಡೆದುಕೊಂಡ, ಸಂವಿಧಾನಾತ್ಮಕ ಅಸ್ತಿತ್ವವನ್ನು ಪಡೆದ ಸಾರ್ಡೀನಿಯಾವು ಒಂದು ನೈಜ ಸಂಸದೀಯ ಸರಕಾರವನ್ನು ಸ್ಥಾಪಿಸಿತು. ಇಟಲಿಯಲ್ಲಿ ಇಂತಹುದು ಇದೊಂದೇ ಆಗಿತ್ತು. ೧೮೫೦ರಲ್ಲಿ ಅಂತಿಮವಾಗಿ ರೂಪಿಸಿ ಪ್ರಷ್ಯಾದ ರಾಜನು ಹೊರಡಿಸಿದ ಸಂವಿಧಾನದಲ್ಲಿ ಉದಾರವಾದೀ ಅಂಶಗಳು ಹೆಚ್ಚಾಗಿರಲಿಲ್ಲ. ನಂತರದಲ್ಲಿ ಎರಡು ಹಂತಗಳ ವ್ಯವಸ್ಥೆ ಹೊಂದಿದ್ದ ಸಂಸತ್ತು ಕಾರ್ಯರೂಪಕ್ಕೆ ಬಂದಿತು. ಈ ಸಂವಿಧಾನ ಚುನಾವಣೆಗೆ ಇದ್ದ ಮತದಾರರ ವಿಭಜನೆಯ ವ್ಯವಸ್ಥೆ ಮತ್ತು ತೆರಿಗೆ ಪದ್ಧತಿಯು ಮಹಾಯುದ್ಧವು ಮುಗಿಯುವವರೆಗೂ ಮುಂದುವರಿದಿತ್ತು.

**ಎರಡನೆಯ ಗಣರಾಜ್ಯ**

೧೮೪೮ರ ಕ್ರಾಂತಿಯ ಮುಖಾಂತರ ಹುಟ್ಟಿದ ಗಣರಾಜ್ಯವು ನಾವು ಗಮನಿಸಿದಂತೆ ಕೇವಲ ೫ ವರ್ಷಗಳ ಕಾಲ ಅಂದರೆ ೧೮೫೨ರವರೆಗೆ ಅಸ್ತಿತ್ವದಲ್ಲಿತ್ತು. ಈ ಅವಧಿಯಲ್ಲಿ ಹಂಗಾಮಿ ಸರ್ಕಾರ (ಇದು ಮೊದಲಿಗೆ ಗಣರಾಜ್ಯದ ಸಂವಿಧಾನವನ್ನು ರಚಿಸಿತು) ಮತ್ತು ರಾಷ್ಟ್ರೀಯ ಸಂಸದೀಯ ಸಭೆ ಹಾಗೂ ನಂತರದಲ್ಲಿ ಆ ಸಂವಿಧಾನವು ಸೃಷ್ಟಿಸಿದ ಶಾಸಕಾಂಗ ಸಭೆ ಮತ್ತು ಅಧ್ಯಕ್ಷರಿಂದ ಆಡಳಿತ ನಡೆಸಲ್ಪಟ್ಟಿತು. ಈ ಹಂಗಾಮಿ ಸರಕಾರವು ಮೊದಲಿನಿಂದಲೂ ಎರಡು ಅಂಗಗಳನ್ನು ಒಳಗೊಂಡಿತ್ತು. ಲಾಮರ್ಟೈನ್‌ನ ನೇತೃತ್ವದಲ್ಲಿದ್ದ ಹಿರಿಯ ಸದಸ್ಯರು ಗಣತಂತ್ರವಾದಿಗಳಾಗಿದ್ದರು. ಎರಡನೆಯ ವಿಭಾಗದಲ್ಲಿ ಗಣತಂತ್ರದಲ್ಲಿ ನಿಜವಾಗಿ ನಂಬಿಕೆಯಿದ್ದ ಲೂಯಿ ಬ್ಲಾಂಕ್‌ನ ನೇತೃತ್ವದ ಗುಂಪಿದ್ದಿತು.

ಹಂಗಾಮಿ ಸರ್ಕಾರವು ಸಮಾಜವಾದಿಗಳು ಮತ್ತು ಸಮಾಜವಾದಿ ವಿರೋಧಿಗಳೆಂಬ ಎರಡು ಬಣಗಳಾಗಿ ವಿಭಜನೆಗೊಂಡಿದ್ದವು. ಆಂತರಿಕ ವಿರೋಧಗಳಿಂದ ಒಳಗೊಂಡ ಇಂತಹ ಒಕ್ಕೂಟವು ನಿಷ್ಕ್ರಿಯವಾಯಿತು. ಗಣರಾಜ್ಯದ ಬೇಡಿಕೆಗಾಗಿ ಲಾಮರ್ಟೈನ್‌ನು ಮಾಡಿದ ಭಾಷಣ ಎಷ್ಟು ಉತ್ತೇಜನಕಾರಿ ಮತ್ತು ಅದ್ಭುತವಾಗಿತ್ತೆಂದರೆ, ಎಲ್ಲಾ ಕಾರ್ಮಿಕರು ಸ್ವತಃ ತಾವಾಗಿಯೇ ಕೆಂಪು ಧ್ವಜದ ಕೆಳಗೆ ಸೇರಿದರು. ರಾಷ್ಟ್ರೀಯ ಕಾರ್ಯಾಗಾರಗಳು, ಆಧುನಿಕ ಕೈಗಾರಿಕಾ ವ್ಯವಸ್ಥೆಯ ಕಾರ್ಮಿಕರ ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸುತ್ತವೆ ಎಂಬ ಆಶಯವುಳ್ಳವರಿಗೆ ಅತೀವ ನಿರಾಸೆಯಾಯಿತು. ಸರಕಾರವು ಚಮ್ಮಾರರು, ಬಡಗಿಗಳು, ಕಮ್ಮಾರರಂತಹ ವಿವಿಧ ಕುಶಲಕರ್ಮಿಗಳ ಗುಂಪನ್ನು ಮಾತ್ರ ನಿರ್ಮಿಸಿತು. ಅವರು ಸೈನಿಕರಂತೆ ಸಂಘಟಿತರಾಗಿದ್ದರು. ಇಂತಹ ರಾಷ್ಟ್ರೀಯ ಕಾರ್ಯಾಗಾರಗಳಿಗೆ ಬಂದು ಸೇರುತ್ತಿದ್ದ ಜನರ ಸಂಖ್ಯೆ ಮಿತಿಮೀರಿತು. ಎಲ್ಲರಿಗೂ ಸಾಕಾಗುವಷ್ಟು ಕೆಲಸ ಇಲ್ಲದುದರಿಂದ ಕೆಲಸದ ದಿನಗಳನ್ನು ಕಡಿಮೆ ಮಾಡಲಾಯಿತು. ಇದು ಸಮಾಜವಾದಿ ಆಂದೋಲನಗಳು ಹುಟ್ಟಲು ಒಳ್ಳೆಯ ಬುನಾದಿ ದೊರಕಿಸಿಕೊಟ್ಟಿತು. ಹೊಸ ಸಂವಿಧಾನವು ರಚಿತವಾಗುವವರೆಗೂ ಈ ಹಂಗಾಮಿ ಸರ್ಕಾರವು ಕೇವಲ ತಾತ್ಕಾಲಿಕ ಸಂಘಟನೆಯಾಗಿ ಉಳಿಯಿತು. ೧೮೪೮ರಲ್ಲಿ ಸೇರಿದ ರಾಷ್ಟ್ರೀಯ ಸಂಸದೀಯ ಸಭೆಯಲ್ಲಿ ಸಾರ್ವತ್ರಿಕ ಮತದಾನದ ಹಕ್ಕನ್ನು ದೃಢಪಡಿಸಿತು.

ಈ ಸಭೆಯು ಪ್ಯಾರಿಸ್‌ನ ಸಮಾಜವಾದಿಗಳನ್ನು ತೀವ್ರವಾಗಿ ವಿರೋಧಿಸಿತು. ಮುಂಬರಲಿರುವ ಸಂಘರ್ಷದ ಕ್ಲಿಷ್ಟ ಪರಿಸ್ಥಿತಿಯನ್ನು ಮನಗಂಡಿತು. ಜನರಲ್ ಕಾವಿಗ್ನಾಕ್‌ನಿಗೆ ಸಭೆಯು ಸರ್ವಾಧಿಕಾರಿಯ ಅಧಿಕಾರವನ್ನು ನೀಡಿತು. ಪ್ಯಾರಿಸ್ ಸುಂದರ ರಸ್ತೆಗಳು, ಗಾಬರಿಗೊಳಿಸುವ ಮುಳ್ಳುಬೇಲಿಗಳ ಹಂದರದಿಂದ ಕೂಡಿತ್ತು. ಹೀಗೆ ಮಂದಗಾಮಿ ಗಣತಂತ್ರವಾದಿಗಳು ಸಮಾಜವಾದಿ ಗಣತಂತ್ರವಾದಿಗಳ ಮೇಲೆ ನಿಶ್ಚಯವಾದ ಜಯಗಳಿಸಿದ್ದರು. ಕಾವಿಗ್ನಾಕ್ ಸರ್ವಾಧಿಕಾರತ್ವ ಅಕ್ಟೋಬರ್‌ರವರೆಗೆ ಮುಂದುವರಿಯಿತು. ಎರಡನೆಯ ಗಣರಾಜ್ಯವು ಸೇನೆಯ ಅಂಕೆಯಲ್ಲಿತ್ತು. ಸಮಾಜವಾದಿ ಆಂದೋಲನದ ಪರಿಣಾಮಗಳು ದೊಡ್ಡ ಪ್ರಮಾಣದಲ್ಲಿದ್ದವು. ಸಮಾಜವಾದಿಗಳನ್ನು ಹತ್ತಿಕ್ಕಿದ ನಂತರ ಸಂಸದೀಯ ಸಭೆಯು ಸಂವಿಧಾನವನ್ನು ರಚಿಸಲು ತೊಡಗಿತು. ಒಂದು ಗಣರಾಜ್ಯವನ್ನು ಫ್ರಾನ್ಸ್‌ನ ಖಚಿತ ಸ್ವರೂಪದ ಸರಕಾರವೆಂದು ಘೋಷಿಸಿತು. ಕಾರ್ಯ ನಿರ್ವಾಹಕರನ್ನು ಅಧ್ಯಕ್ಷರು ನಾಲ್ಕು ವರ್ಷದ ಅವಧಿಗಾಗಿ ಚುನಾಯಿಸಬೇಕಾಗಿದ್ದಿತು. ಅತನನ್ನು ಮತದಾರರೇ ನೇರವಾಗಿ ಚುನಾಯಿಸಬೇಕಾಗಿತ್ತು. ಪ್ರಖ್ಯಾತ ನೆಪೋಲಿಯನ್ನನ ಸೋದರಳಿ ಯನಾದ ಲೂಯಿ ನೆಪೋಲಿಯನ್ ಬೋನಾಪಾರ್ಟೆಯನ್ನು ಅಧ್ಯಕ್ಷನನ್ನಾಗಿ ಚುನಾಯಿಸ ಲಾಯಿತು. ಆತನು ಹಿಂದೆ ಹಾಲೆಂಡ್‌ನ ರಾಜನಾಗಿದ್ದ ಲೂಯಿಯ ಮಗ ನಾಗಿದ್ದನು. ಇದಕ್ಕೂ ಹಿಂದೆ ಆತನು ಫ್ರಾನ್ಸ್‌ನ್ನು ಆಳಲು ಪ್ರಯತ್ನ ನಡೆಸಿದ್ದನು. ಆದರೆ ಇದನ್ನು ಸಾಧಿಸಿದ ಬಗ್ಗೆ ಯಾವ ದಾಖಲೆಗಳೂ ಇಲ್ಲ. ಸಂಸದೀಯ ಸಭೆಗೆ ಆತನು ಆಯ್ಕೆ ಗೊಂಡನು. ನೆಪೋಲಿಯನ್ನನ ಹೆಸರಿನಿಂದಾಗಿ ರೈತಾಪಿ ಜನರೆಲ್ಲರ ಮತಗಳೂ ಅವನಿಗೇ ಸಿಕ್ಕಿತು. ೧೮೪೮ರಲ್ಲಿ ಅಧ್ಯಕ್ಷ ಸ್ಥಾನಕ್ಕಾಗಿ ನಡೆದ ಚುನಾವಣೆಯಲ್ಲಿ ಆತನೊಬ್ಬ ವಚನಬದ್ಧ ಅಭ್ಯರ್ಥಿಯಾಗಿದ್ದನು.

ಲೂಯಿ ಬೋನಾಪಾರ್ಟೆಯು ಆಯ್ಕೆಯಾದ ನಂತರ ಪ್ರಜಾಪ್ರಭುತ್ವವಾದಿ ಗಣತಂತ್ರಕ್ಕೆ ನಿಷ್ಠನಾಗಿ ಉಳಿಯುತ್ತೇನೆಂದು ಸಭೆಗೆ ಪ್ರಮಾಣ ನೀಡಿದನು ಮತ್ತು "ನನ್ನ ಕರ್ತವ್ಯಗಳ ಬಗ್ಗೆ ನಾನು ಸ್ಪಷ್ಟವಾಗಿ ತಿಳಿದಿದ್ದೇನೆ" ಎಂದು ಹೇಳಿದನು. ಮೂರು ವರ್ಷಗಳ ಅವಧಿಗಾಗಿ ಪ್ರಮಾಣವಚನ ಸ್ವೀಕರಿಸಿದನು ಮತ್ತು ಅಧಿಕಾರದಲ್ಲಿ ಉಳಿಯಲು ಇಚ್ಛಿಸಿದನು. ಒಂದನೆಯ ನೆಪೋಲಿಯನ್ನನ ಜೀವನ ಚರಿತ್ರೆಯ ಒಂದಂಶವನ್ನು ತೆಗೆದುಕೊಂಡು ಕ್ಷಿಪ್ರಕ್ರಾಂತಿಯ ಮುಖಾಂತರ ಅಧಿಕಾರವನ್ನು ಗಳಿಸಿದನು. ಶಾಸಕಾಂಗ ಭವನವನ್ನು ಆಕ್ರಮಿಸಲು ಕಾಲಾಳು ಪಡೆಯನ್ನು ಕಳುಹಿಸಿದನು. ಅಧ್ಯಕ್ಷರ ಧ್ಯೇಯಗಳನ್ನು ವಿವರಿಸುವ ಜಾಹಿರಾತುಗಳನ್ನು ಪ್ಯಾರಿಸ್ಸಿನ ಎಲ್ಲ ಗೋಡೆಗಳ ಮೇಲೂ ಅಂಟಿಸಿದನು. ಜನಪ್ರಿಯ ದಂಗೆಗಳ ಪಡೆಗಳನ್ನು ಎದುರಿಸಲು, ಅನಿರೀಕ್ಷಿತ ಸಂದರ್ಭಗಳಿಗಾಗಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಮರೆಯಲಿಲ್ಲ. ಆತನು ಪೋಲೀಸರ ವ್ಯವಸ್ಥೆ ಹಾಗೂ ಮುದ್ರಣ ವ್ಯವಸ್ಥೆಯನ್ನು ಸಂಪೂರ್ಣವಾಗಿ ಹತೋಟಿಯಲ್ಲಿಟ್ಟುಕೊಂಡಿದ್ದನು. ೩ನೆಯ ತಾರೀಖಿನಂದು ಮುಳ್ಳುಬೇಲಿಗಳನ್ನು ನಿರ್ಮಿಸಲಾಯಿತು. ೪ರಂದು ಬೋಲ್ವಾರ್ಡ್‌ರ ಪ್ರಖ್ಯಾತ ನರಮೇಧ ನಡೆಯಿತು. ಈ ಕ್ಷಿಪ್ರಕ್ರಾಂತಿಯು ಸಫಲವಾಯಿತು. ನೆಪೋಲಿಯನ್ನನನ್ನು ವಿರೋಧಿಸಿದವರೆಲ್ಲರನ್ನು ಗಡೀಪಾರು ಮಾಡಲಾಯಿತು ಅಥವಾ ಸೆರೆಮನೆಗೆ ತಳ್ಳಲಾಯಿತು. ಎಲ್ಲಾ ವಿರೋಧಿ ನಾಯಕತ್ವವನ್ನು ರದ್ದು ಮಾಡಿದ ನಂತರ ಆತನು ಸಂವಿಧಾನವನ್ನು ಪುನಃರಚಿಸುವ ಜವಾಬ್ದಾರಿಯನ್ನು ತನಗೇ ನೀಡಬೇಕೆಂದು ಕೇಳಿಕೊಂಡನು.

ಈ ಗಣರಾಜ್ಯವು ಒಂದು ವರ್ಷಕಾಲ ಮುಂದುವರಿದು, ನಂತರ ನಿಷ್ಕ್ರಿಯವಾಯಿತು. ಫ್ರಾನ್ಸಿನ ಜನರಿಗೆ ಚಕ್ರಾಧಿಪತ್ಯದ ಗೌರವವನ್ನು ಪುನಃಸ್ಥಾಪಿಸುವ ಪ್ರಶ್ನೆಯ ಬಗ್ಗೆ ಮತದಾನ ಮಾಡಲು ಅನುಮತಿ ನೀಡಲಾಯಿತು ಹಾಗೂ ಲೂಯಿ ನೆಪೋಲಿಯನ್ ಬೋನಾಪಾರ್ಟೆಯನ್ನು ೩ನೆಯ ನೆಪೋಲಿಯನ್ ಎಂಬ ಹೆಸರಿನಲ್ಲಿ ಚಕ್ರವರ್ತಿಯನ್ನಾಗಿ ಘೋಷಿಸಲಾಯಿತು. ಹೀಗೆ ಎರಡನೆಯ ಸಾಮ್ರಾಜ್ಯವು ಸ್ಥಾಪಿತವಾಯಿತು. ಒಬ್ಬ ಪ್ರಜ್ಞಾವಂತ ಹಾಗೂ ಉದಾರವಾದಿಗೆ ನಿರಂಕುಶ ವ್ಯಕ್ತಿಯು ಒಂದು ಸರಕಾರವನ್ನು ಘೋಷಿಸಿದ. ಪುನರ್‌ರಚನೆಯ ಕಾರ್ಯವು ಭರದಿಂದ ಸಾಗಿತು ಹಾಗೂ ರಾಷ್ಟ್ರೀಯ ಜನಜೀವನವು ಆರೋಗ್ಯಪೂರ್ಣವಾಯಿತು. ಚರಿತ್ರೆಯ ಈ ಎರಡನೆಯ ಚಕ್ರಾಧಿಪತ್ಯವನ್ನು ಎರಡು ಕಾಲಘಟ್ಟಗಳಲ್ಲಿ ವಿವರಿಸಲಾಗಿದೆ. ೧೮೫೨-೬೦ರವರೆಗಿನ ಅನಿಯಮಿತ ನಿರಂಕುಶ ಪ್ರಭುತ್ವ ಮತ್ತು ೧೮೬೦-೧೮೭೦ರವರೆಗಿನ ಉದಾರವಾದದ ಬೆಳವಣಿಗೆ.

ಈ ಚಕ್ರಾಧಿಪತ್ಯದ ರಾಜಕೀಯ ಸಂಸ್ಥೆಗಳು ರಾಯಭಾರಿತ್ವದ ಮೇಲೆ ಆಧಾರಿತವಾಗಿತ್ತು. ವ್ಯವಸ್ಥೆಯು ವಿಸ್ತೃತ ರೂಪದಲ್ಲಿತ್ತು. ಸಾರ್ವತ್ರಿಕ ಮತದಾನದ ನೀತಿಯನ್ನು ಉಳಿಸಿಕೊಳ್ಳ ಲಾಯಿತು. ಶಾಸಕಾಂಗ ಮತ್ತು ಸೆನೆಟ್‌ಗಳಿದ್ದವು. ಗಣತಂತ್ರವಾದಿಗಳ ದಮನ ನೀತಿಯನ್ನು ಈ ಹೊಸ ರಾಜನು ಅಳವಡಿಸಿಕೊಂಡಿದ್ದನು. ರಾಜಕೀಯದಲ್ಲಿ ಸ್ವಾತಂತ್ರ್ಯಕ್ಕಾಗಿ ನಡೆದ ಎಲ್ಲ ಚಟುವಟಿಕೆಗಳನ್ನು ಒಬ್ಬ

ನಿರಂಕುಶ ಪ್ರಭುವಾಗಲಿ, ಪ್ರತಿಗಾಮಿಯಾಗಲಿ ಹತ್ತಿಕ್ಕು ತ್ತಾನೆ. ಆದರೆ ನೆಪೋಲಿಯನ್ ಒಬ್ಬ ಪ್ರಗತಿಗಾಮಿ. ಅದೊಂದು ವ್ಯಾಪಾರಿ ವಹಿವಾಟಿನ ಹಾಗೂ ಅದೃಷ್ಟದ ಕಾಲಘಟ್ಟವಾಗಿತ್ತು. ಪ್ಯಾರಿಸ್ ನಗರವು ಆಧುನೀಕರಣಗೊಂಡಿತು.

೧೮೪೫೮ರ ವೇಳೆಗೆ ೩ನೆಯ ನೆಪೋಲಿಯನ್ನನು ತನ್ನ ಅಧಿಕಾರದ ಪರಮೋಚ್ಚ ಸ್ತರದಲ್ಲಿದ್ದನು. ಇತರ ಎಲ್ಲ ಸಾಮ್ರಾಜ್ಯಗಳೂ ಈ ಚಕ್ರಾಧಿಪತ್ಯವನ್ನು ಅಂಗೀಕರಿಸಿದ್ದವು. ಈ ಚಕ್ರವರ್ತಿಯು ಇಂಗ್ಲೆಂಡನ್ನು ಮಿತ್ರಕೂಟವನ್ನಾಗಿಸಿಕೊಂಡು ರಷ್ಯಾದ ವಿರುದ್ಧ ಯುದ್ಧದಲ್ಲಿ ಜಯಶಾಲಿಯಾದನು. ಅವನ ಬೆಂಬಲಕ್ಕೆ ಯೂರೋಪಿನ ಅತ್ಯುತ್ತಮ ಸೇನೆಯೂ ಇದ್ದಿತು. ಈ ಚಕ್ರಾಧಿಪತ್ಯವು ತನ್ನ ಕ್ಷಿತಿಜವನ್ನು ತಲುಪಿಯಾಗಿತ್ತು. ಆತನು ಈ ಸಂದರ್ಭದಲ್ಲಿ ಅಪಾಯಕಾರೀ ಮತ್ತು ಪ್ರದರ್ಶಕ ವಿದೇಶೀ ನೀತಿಯನ್ನು ಅಳವಡಿಸಿಕೊಂಡಿದ್ದನು. ಇದರ ಫಲಿತಾಂಶಗಳು ತೊಡಕುಂಟು ಮಾಡುವಂತಹುದು. ೧೮೫೯ರಲ್ಲಿ ಆತನು ಭಾಗವಹಿಸಿದ ಇಟಾಲಿಯನ್ ಯುದ್ಧದಿಂದ ಗಂಭೀರ ಸ್ವರೂಪದ ತೊಂದರೆಗಳು ಪ್ರಾರಂಭವಾದವು. ೧೮೬೦-೭೦ರ ವರೆಗಿದ್ದ ಎರಡನೆಯ ಚಕ್ರಾಧಿಪತ್ಯವನ್ನು ಅರ್ಥ ಮಾಡಿಕೊಳ್ಳಲು ೩ನೆಯ ನೆಪೋಲಿಯನ್ನನು ಆಧುನಿಕ ಇಟಲಿಯನ್ನು ಕಟ್ಟಲು ಪಟ್ಟ ಶ್ರಮವನ್ನು ಅರ್ಥ ಮಾಡಿಕೊಳ್ಳಬೇಕು. ಇದರ ಪರಿಣಾಮಗಳು ಅತ್ಯಂತ ಅನಿರೀಕ್ಷಿತವೂ, ದೂರಗಾಮಿತ್ವವನ್ನು ಹೊಂದಿದ್ದು ವಿನಾಶಕಾರಿಯೂ ಆದುದಾಗಿತ್ತು.

**ಇಟಲಿ ಸಾಮ್ರಾಜ್ಯದ ಸ್ಥಾಪನೆ**

ಇಟಲಿಯು ಚಿಕ್ಕರಾಜ್ಯಗಳ ನಾಡಾಗಿತ್ತು. ಒಂದು ಸ್ಥಿರ ಸರ್ಕಾರವಿಲ್ಲದ ಇಟಲಿಯು ಆಸ್ಟ್ರಿಯಾದ ದಬ್ಬಾಳಿಕೆಗೆ ಒಳಪಟ್ಟಿತ್ತು. ೧೮೪೮-೪೯ರಲ್ಲಿ ನಡೆದ ಕ್ರಾಂತಿಕಾರಿ ಹಾಗೂ ಸ್ವಾತಂತ್ರ್ಯ ಹೋರಾಟಗಳು ವಿಫಲಗೊಂಡಿದ್ದವು. ಲಂಬಾರ್ಡಿ ಮತ್ತು ವೆನಿಶಿಯಾದ ಸಾಮ್ರಾಜ್ಯಗಳನ್ನು ಆಸ್ಟ್ರಿಯಾ ಆಳುತ್ತಿತ್ತು. ಸಾರ್ಡೀನಿಯಾದ ದೊರೆ ಮಾತ್ರ ನಿಜವಾಗಿಯೂ ಸ್ವತಂತ್ರ ನೀತಿಯನ್ನು ಅನುಸರಿಸುತ್ತಿದ್ದನು. ರಾಷ್ಟ್ರೀಯತೆಯ ಮತ್ತು ಸ್ವಾತಂತ್ರ್ಯದ ಭಾವನೆಗಳಿಗೆ ಎಲ್ಲಿಯೂ ಮಾನ್ಯತೆ ಸಿಕ್ಕಿರಲಿಲ್ಲ.

ಇಟಾಲಿಯನ್ನರ ಅಂತರಾಳದ ಅಕಾಂಕ್ಷೆಗಳಿಗೆ ಕೊನೆಗೂ ಒಂದು ಸ್ಪಷ್ಟವಾದ, ದಿಟ್ಟವಾದ ಹಾಗೂ ರೋಮಾಂಚಕಾರಿಯಾದ ಧ್ವನಿ ಜೋಸೆಫ್ ಮ್ಯಾಜಿನಿಯಿಂದ ದೊರೆಯಿತು. ಇಟಲಿಯ ರಿಸಾರ್ಜಿಮೆಂಟೋ(ರಾಷ್ಟ್ರೀಯ ಚಳವಳಿ) ಅಥವಾ ಪುನರುತ್ಥಾನದ ಸ್ಫೂರ್ತಿಯ ನೆಲೆ ಮತ್ತು ಶಕ್ತಿಯು ಇವನಾಗಿದ್ದರು. ಆತನ ಎಲ್ಲಾ ಚಟುವಟಿಕೆಗಳು ಸಾಹಿತ್ಯಿಕ ಮತ್ತು ಬದುಕಿನತ್ತ ವಾಲಿದ್ದವು. ತನ್ನ ಕ್ರಾಂತಿಕಾರಿ ಚಟುವಟಿಕೆಗಳಿಗೆ ಆತನು 'ಕಾರ್ಬೋನಾರಿ'ಗೆ ಸೇರಿದನು. ೧೮೩೧ರಲ್ಲಿ ಮ್ಯಾಜಿನಿಯು "ಯುವ ಇಟಲಿ"ಎಂಬ ಸಂಘವನ್ನು ಸ್ಥಾಪಿಸಿ, ಆ ಮೂಲಕ ನವ ಇಟಲಿಯ ನಿರ್ಮಾಣಕ್ಕೆ ಪ್ರಯತ್ನಿಸಿದನು. ಇದೊಂದು ರಹಸ್ಯ, ಗುಪ್ತ ಸಂಘಟನೆಯಾಗಿದ್ದು, ಶೈಕ್ಷಣಿಕವೂ, ಆದರ್ಶವಾದಿಯೂ ಆಗಿದ್ದು, ಮ್ಯಾಜಿನಿಯ ಬೆಂಬಲಕ್ಕಿತ್ತು. ಇಟಲಿಯ ಸ್ವಾತಂತ್ರ್ಯ ಮತ್ತು ಏಕೀಕರಣದ ವಾದವು ಒಂದು ಹೊಸ ಧರ್ಮವೇ ಆಗಿದ್ದು ಎಡಪಂಥೀಯರ ಭಾವನೆಗಳಿಗೆ ಸ್ಪಂದಿಸುವಂತಿತ್ತು. ಸಂಪೂರ್ಣ ತ್ಯಾಗವನ್ನು, ಆದರ್ಶಕ್ಕಾಗಿ ಸಮರ್ಪಣಾ ಮನೋಭಾವವನ್ನು ಹೊಂದಿದ್ದ ಯುವಜನರಿಂದ ಕೂಡಿತ್ತು. ಎಲ್ಲ ರಾಷ್ಟ್ರೀಯ ಚಳವಳಿಗಳು ಅನಾಮಧೇಯ ಜನರಿಂದಲೇ ಪ್ರಾರಂಭವಾಗುತ್ತದೆ. "ಅವರು ಯಾವುದೇ ಪ್ರಭಾವವೂ ಇಲ್ಲದೆ ಕಾಲ ಮತ್ತು ಕಷ್ಟಗಳ ಪರಿವೆ ಇಲ್ಲದೆ ನಂಬಿಕೆ ಮತ್ತು ಛಲಗಳಿಂದ ಕೂಡಿರುತ್ತಾರೆ" ಎಂಬುದು ನಾಯಕನಾದ ಮ್ಯಾಜಿನಿಯ ನಂಬುಗೆಯಾಗಿತ್ತು. ಈ ಸಂಘದ ಕಾರ್ಯಕ್ರಮವು ಅತ್ಯಂತ ಸ್ಪಷ್ಟವೂ ಸಂಪೂರ್ಣವೂ ಆಗಿದ್ದಿತು. "ಮೊದಲು ಆಸ್ಟ್ರಿಯಾದ ಆಳ್ವಿಕೆಯನ್ನು ಕೊನೆಗಾಣಿಸಬೇಕು. ಇದಕ್ಕಾಗಿ ಯುದ್ಧವನ್ನು ಎಷ್ಟು ತ್ವರಿತವಾಗಿ ಮಾಡ ಬೇಕಾದರೂ ಒಳ್ಳೆಯದು." ಆತನು ಗಣತಂತ್ರವಾದಿ ಚಿಂತನೆಗಳಿಗೆ ಹಾಗೂ ಗಣತಂತ್ರವಾದಿ ಸರ್ಕಾರದ ರಚನೆಗೆ ಬದ್ಧನಾಗಿದ್ದನು. ಒಕ್ಕೂಟಕ್ಕಾಗಿ ಇರುವ ಎಲ್ಲಾ ವಾದಗಳೂ ಐಕ್ಯತೆಗಾಗಿ ಇರುವ ವಾದಗಳೇ ಆಗಿದ್ದವು. "ಇಟಲಿ ಮತ್ತು ಇಟಲಿಯ ಎಲ್ಲಾ ರಾಜ್ಯಗಳಿಗಾಗಿ ಮಾತ್ರ ದನಿಯೆತ್ತಿರಿ" ಎನ್ನುತ್ತಿದ್ದ. ಇವನು ಇಟಲಿಯ ಮುಖ್ಯ ನಿರ್ಮಾಪಕರಲ್ಲಿ ಒಬ್ಬನಾಗಿದ್ದ. ಆದರೆ ಮ್ಯಾಜಿನಿಯ ಇಚ್ಛೆ ಮತ್ತು ಭರವಸೆಗಳ ನಡುವೆಯೂ ಇಟಲಿಯು ಗಣತಂತ್ರವಾಗಲಿಲ್ಲ. ಏಕೆಂದರೆ ಈ ಪರ್ಯಾಯ ದ್ವೀಪದ ವಾಯುವ್ಯ ಭಾಗದಲ್ಲಿ ಒಬ್ಬ ನಿರಂಕುಶ ಪ್ರಭುವು ಆಳುತ್ತಿದ್ದು, ಅಲ್ಲಿ ರಾಜಪ್ರಭುತ್ವವು ಪ್ರಾಮುಖ್ಯತೆ ಪಡೆದಿತ್ತು. ಅತ್ಯಂತ ಪ್ರಾಮಾಣಿಕ ರಾಜನೆಂದು ಹೆಸರು ಗಳಿಸಿದ ವಿಕ್ಟರ್ ಇಮ್ಯಾನುಯಲ್‌ನೇ ಆ ರಾಜ. ಇಮ್ಯಾನುಯಲ್‌ನಿಗೆ ಸರದಾರನಾದ ಕೌಂಟ್-ಡಿ-ಕೆವೂರ್ ಒಬ್ಬ ಮುಖ್ಯಮಂತ್ರಿ ಯಾಗಿದ್ದು, ತನ್ನ ಉದಾರವಾದಿ ಅಭಿಪ್ರಾಯವನ್ನು ಮುಕ್ತವಾಗಿ ಅಭಿವ್ಯಕ್ತಪಡಿಸುವ ವನಾಗಿದ್ದು, ಮುಂದೆ ಚಳವಳಿಯ ನೇತಾರನಾದನು. ಈ ಮಧ್ಯೆ

ಅತನು ಇಂಗ್ಲೀಷ್ ಸಂಸದೀಯ ವ್ಯವಸ್ಥೆಯನ್ನು ಮಾದರಿಯಾಗಿಟ್ಟುಕೊಂಡು ತನ್ನ ದೇಶಕ್ಕೆ ಸರಿಹೊಂದುವ ವ್ಯವಸ್ಥೆಯನ್ನು ಹೊರ ದೇಶಕ್ಕೆ ಹೋಗಿ ಅಧ್ಯಯನ ಮಾಡಿದ. ಇಟಲಿ "ಸ್ವಾತಂತ್ರ್ಯದ ಮೂಲಕವೇ ತನ್ನನ್ನು ನಿರ್ಮಿಸಿಕೊಳ್ಳಬೇಕು" ಎಂದು ಅವನು ಅಭಿಪ್ರಾಯಪಟ್ಟನು. ಮೊದಲನೆಯ ಸಂಸತ್ತಿಗೆ ಅವನು ಚುನಾಯಿಸಲ್ಪಟ್ಟು, ೧೮೫೦ರಲ್ಲಿ ಮಂತ್ರಿಮಂಡಲದಲ್ಲಿ ಆಯ್ಕೆಯಾದನು. ೧೮೫೨ರಲ್ಲಿ ಪ್ರಧಾನಿಯಾದನು. ಕೆವೂರನ ಆಲೋಚನೆಗಳು ಮ್ಯಾಜಿನಿಯ ಆಲೋಚನೆಗಿಂತ ವಿಭಿನ್ನವಾಗಿತ್ತು. ಕೆವೂರನ ಆಲೋಚನೆಯು ವ್ಯವಹಾರಿಕವೂ ಇತ್ಯಾತ್ಮಕವೂ ಆಗಿದ್ದು ಮ್ಯಾಜಿನಿಯಂತೆ ಕಾವ್ಯಾತ್ಮಕವೂ ಕಾಲ್ಪನಿಕವಾದದ್ದೂ ಆಗಿರಲಿಲ್ಲ. ಕೆವೂರ್‌ನು ಇಟಲಿಯ ಐಕ್ಯತೆ ಮತ್ತು ಸ್ವಾತಂತ್ರ್ಯವನ್ನು ಬಯಸಿದ್ದನು. ಇತರೆ ದೇಶಭಕ್ತರಂತೆ ಇವನೂ ಕೂಡ ಆಸ್ಟ್ರಿಯನ್ನರನ್ನು ಇಟಲಿಯಿಂದ ಹೊರದೂಡಬೇಕೆಂದು ಬಯಸಿದ್ದನು.

ಇಟಲಿಯ ಸ್ವಾತಂತ್ರ್ಯ ಹಾಗೂ ಐಕ್ಯತೆ ಕಾರ್ಯವನ್ನು ಸಾಧಿಸಲು ಸೆವಾಯ್ ಕುಟುಂಬ ಮತ್ತು ಪೀಡ್‌ಮಾಂಟ್‌ನ ರಾಜಪ್ರಭುತ್ವ ಮಾತ್ರ ನಾಯಕತ್ವ ವಹಿಸಿಕೊಳ್ಳಲು ಸಾಧ್ಯ. ನಿಜವಾದ ರಾಜ್ಯ ವ್ಯವಸ್ಥೆಯೆಂದರೆ ಸಂವಿಧಾನಾತ್ಮಕ ರಾಜಪ್ರಭುತ್ವ ಎಂಬುದು ಕೆವೂರ್‌ನ ನಂಬಿಕೆಯಾಗಿತ್ತು. ಪೀಡ್‌ಮಾಂಟ್‌ನ್ನು ಒಂದು ಮಾದರಿ ರಾಜ್ಯವನ್ನಾಗಿಸಬೇಕು ಎಂಬುದು ಅವನ ಆಶಯವಾಗಿತ್ತು. ಆರ್ಥಿಕ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು, ಕೃಷಿಯನ್ನು ಆಧುನೀಕರಣಗೊಳಿಸುವುದು ಮತ್ತು ರೈಲು ರಸ್ತೆಯನ್ನು ಕಟ್ಟುವುದಕ್ಕಾಗಿ ಶ್ರಮಿಸಿದನು.

ಪ್ರತಿಯೊಂದು ಆಶಯದ ಮೂಲಕ ಪ್ರತಿಯೊಂದು ಕಾರ್ಯವನ್ನು ನಿರ್ಧರಿಸುವುದು ಮತ್ತು ಆ ಮೂಲಕ ಹೆಚ್ಚಿನ ಶಕ್ತಿಯನ್ನು ಪಡೆಯುವುದು, ಈ ನಾಯಕನ ಬದುಕಿನ ಸತತವಾದ ಮುಂದಾಲೋಚನೆಯ ಮೂಲಭೂತ ಉದ್ದೇಶ. ಇಂತಹ ಗ್ರಹಿಕೆಗೆ ನಿಲುಕದ, ದುಸ್ಸಾಧ್ಯವಾದ ಗುರಿಯತ್ತ ಸಾಗುವಾಗ ಅತಿಯಾದ ಕೌಶಲ್ಯವನ್ನು ತೋರಿಸಿದನು. ಕೆವೂರ್‌ನಿಗೆ ಇಂಗ್ಲೆಂಡ್ ಅಥವಾ ಫ್ರಾನ್ಸಿನ ಬೆಂಬಲದ ಅಗತ್ಯವಿತ್ತು. ಇಡೀ ಯೂರೋಪಿ ನಲ್ಲೇ ಫ್ರಾನ್ಸ್ ದೇಶವು ಅತ್ಯುತ್ತಮ ಸೇನೆಯನ್ನು ಹೊಂದಿತ್ತು. ೨ನೆಯ ನೆಪೋಲಿಯನ್ ಒಬ್ಬ ಮಹತ್ವಾಕಾಂಕ್ಷೆಯ ಮನುಷ್ಯ. 'ಇಷ್ಟವಿರಲಿ, ಇಲ್ಲದಿರಲಿ ನಮ್ಮ ಭವಿಷ್ಯ ಪ್ರಾನ್ಸಿನ ಮೇಲೆ ಅವಲಂಬಿತವಾಗಿದೆ ಎಂದು ಹೇಳಿದ್ದನು. ಅವನು ೩ನೆಯ ನೆಪೋಲಿಯನ್ನನ ಜೊತೆಗೆ ಸಮೀಕರಿಸಿಕೊಂಡಿದ್ದನು. ಕ್ರೀಮಿಯನ್ ಯುದ್ಧವು ಒಂದು ಅವಕಾಶವನ್ನು ಒದಗಿಸಿಕೊಟ್ಟಿತು. ೧೮೫೧ರಲ್ಲಿ ಪೀಡ್‌ಮಾಂಟ್ ರಷ್ಯಾದೊಡನೆ ಕಾದಾಡುವುದಕ್ಕೆ ಬದಲಾಗಿ ಅನಿರ್ಬಂಧಿತ ಹಾಗೂ ಅಪಾಯಕಾರಿಯಾದ ಒಪ್ಪಂದವನ್ನು ಫ್ರಾನ್ಸ್ ಹಾಗೂ ಇಂಗ್ಲೆಂಡ್ ಜೊತೆ ಮಾಡಿಕೊಂಡಿತು.

ಮೂರನೆಯ ನೆಪೋಲಿಯನ್ನನು ಕೆವೂರ್‌ನನ್ನು ಪಾಂಬ್ಲಿಯರ್ಸ್‌ಗೆ ಬರಮಾಡಿಕೊಂಡನು. ಇಟಲಿಗೆ ಆಲ್ಪ್ಸ್‌ನಿಂದ ಅಡ್ರಿಯಾಟ್ರಿಕ್‌ವರೆಗೆ ಸ್ವಾತಂತ್ರ್ಯ ಕೊಡಲು ನಿರ್ಧರಿಸಿದನು. ಪೋಪನ ಆಳ್ವಿಕೆಯಿರುವ ರಾಜ್ಯದ ಒಂದು ಭಾಗವಾಗಿ ಪೀಡ್‌ಮಾಂಟ್‌ಗೆ ಲಂಬಾರ್ಡಿ ಮತ್ತು ವೆನಿಶಿಯಾಗಳನ್ನು ನೀಡಬೇಕು. ನಂತರ ಪೋಪನನ್ನು ಅಧ್ಯಕ್ಷನನ್ನಾಗಿಸಿ, ಇಟಲಿಯ ರಾಜ್ಯಗಳ ಒಂದು ಒಕ್ಕೂಟವನ್ನು ರಚಿಸಬೇಕು. ಸವಾಯ್‌ಯನ್ನು ಫ್ರಾನ್ಸ್‌ಗೆ ನೀಡಬೇಕು ಎಂದು ತೀರ್ಮಾನಿಸಲಾಯಿತು.

ನೆಪೋಲಿಯನ್‌ನ ಸಂತತಿಗೆ ಅವಹೇಳನವನ್ನು ಉಂಟು ಮಾಡಿದಂತಹ ೧೮೧೫ರ ಈ ಒಪ್ಪಂದವನ್ನು ೩ನೆಯ ನೆಪೋಲಿಯನ್ ಮುರಿಯಲು ನಿರ್ಧರಿಸಿದನು. ಆ ಮೂಲಕ ಆತನು ಚಕ್ರಾಧಿಪತ್ಯದ ವೈಭವವನ್ನು ಮತ್ತೆ ಪಡೆಯಬಹುದೆಂಬ, ತನ್ನ ಸರಹದ್ದನ್ನು ವಿಸ್ತರಿಸಬಹುದೆಂದು ಆಸೆ ಪಟ್ಟನು.

**ಫ್ರಾಂಕೋ–ಸಾರ್ಡೀನಿಯನ್–ಆಸ್ಟ್ರಿಯನ್ ಯುದ್ಧ (೧೮೫೯)**

೧೮೫೯ರಲ್ಲಿ ಒಂದೆಡೆ ಆಸ್ಟ್ರಿಯಾ ಮತ್ತು ಪೀಡಮಾಂಟ್ ಹಾಗೂ ಇನ್ನೊಂದೆಡೆ ಫ್ರಾನ್ಸ್ ಇವೆರಡರ ನಡುವೆ ಯುದ್ಧವು ಸಂಭವಿಸಿತು. ಫ್ರಾನ್ಸ್, ಮ್ಯಾಜೆಂಟಾ ಮತ್ತು ಸಾಲ್‌ಫಿನೋದ ಮಹಾಯುದ್ಧಗಳಲ್ಲಿ ವಿಜಯಶಾಲಿಯಾಯಿತು. ಲಂಬಾರ್ಡಿಯು ಸಂಪೂರ್ಣವಾಗಿ ಕೈವಶವಾಯಿತು ಮತ್ತು ಮಿಲಾನ್ ನಗರವನ್ನು ವಶಪಡಿಸಿಕೊಳ್ಳಲಾಯಿತು. ವಿಜಯದ ಅಲೆಯ ಮೇಲೆ ಕುಳಿತಿದ್ದ ನೆಪೋಲಿಯನ್ನನು ವಿಲ್ಲಾಫ್ರಾಂಕ್ ಎಂಬಲ್ಲಿ ಆಸ್ಟ್ರಿಯಾದ ಚಕ್ರವರ್ತಿಯ ಜೊತೆ ಮಾತನಾಡಲು ನಿರ್ಧರಿಸಿದನು. ಅಲ್ಲಿ ಒಂದು ಪ್ರಖ್ಯಾತ ಯುದ್ಧವಿರಾಮವನ್ನು

ಘೋಷಿಸಲಾಯಿತು. ಲಂಬಾರ್ಡಿಯನ್ನು ಪೀಡ್‌ಮಾಂಟ್‌ಗೆ ವರ್ಗಾಯಿಸಲಾಯಿತು. ವೆನಿಶಿಯಾವು ಆಸ್ಟ್ರಿಯಾದಲ್ಲಿ ಉಳಿಯಬೇಕಾಯಿತು.

ಇಟಾಲಿಯನ್ನರಿಗೆ ಈ ಶಾಂತಿ ಒಪ್ಪಂದವು ತೀವ್ರವಾದ ನಿರಾಸೆಯನ್ನುಂಟು ಮಾಡಿತು. ನೆಪೋಲಿಯನ್ನನ ನಂಬಿಕೆ ದ್ರೋಹಕ್ಕೆ ಕೋಪಗೊಂಡು ಕೆವೂರನು ಕುಪಿತನಾಗಿ ಸಂಯಮ ಕಳೆದುಕೊಂಡು ತನ್ನ ಅಧಿಕಾರವನ್ನು ಕಿತ್ತೆಸೆದನು. ನೆಪೋಲಿಯನ್ನನು ಇಟಲಿಗೋಸ್ಕರ ಅವನು ಅಂದುಕೊಂಡದ್ದನ್ನೆಲ್ಲ ಕಾರ್ಯಗತ ಗೊಳಿಸಲಾಗಲಿಲ್ಲ. ಆದರೆ ಲಂಬಾರ್ಡಿ ಮತ್ತು ಪೀಡ್‌ಮಾಂಟ್‌ನ್ನು ಗಳಿಸಿಕೊಟ್ಟಿದ್ದು ಒಂದು ಮುಖ್ಯ ಸೇವೆಯಾಯಿತು. ಆದರೆ ಕೇವಲ ಫ್ರಾನ್ಸ್ ಮತ್ತು ಆಸ್ಟ್ರಿಯಾದ ಚಕ್ರವರ್ತಿಗಳಿಂದ ಮಾತ್ರ ಇಟಲಿಯ ಭವಿಷ್ಯ ನಿರ್ಧಾರವಾಗುವಂತಿರಲಿಲ್ಲ. ಯುದ್ಧವು ನಡೆಯುತ್ತಿದ್ದಾಗ ಮೊಡೇನಾ, ಫಾರ್ಮ ಮತ್ತು ಟಸ್ಕನಿಯ ರಾಜರುಗಳನ್ನು ಜನರ ದಂಗೆಗಳಿಂದ ಮತ್ತು ರೋಮಾಗ್ನದ ಮೇಲಿನ ಪೋಪನ ಅಧಿಕಾರಗಳಿಂದಾಗಿ ಕೆಳಗೆ ಬೀಳಿಸಲಾಗಿತ್ತು. ೧೮೬೦ರಲ್ಲಿ ವಿಕ್ಟರ್ ಇಮ್ಯಾನುಯಲ್‌ನು ತನಗೆ ನೀಡಿದ ಪ್ರಭುತ್ವವನ್ನು ಒಪ್ಪಿಕೊಂಡನು ಮತ್ತು ವಿಸ್ತಾರಗೊಂಡ ಚಕ್ರಾಧಿಪತ್ಯದ ಮೊದಲನೆಯ ಸಂಪತ್ತಿನ ಅಧಿವೇಶನ ಟುರಿನ್‌ನಲ್ಲಿ ನಡೆಯಿತು. ಇಟಲಿಗೆ ಸಂಬಂಧಿಸಿದಂತೆ ಹೇಳುವುದಾದರೆ ಇದು ೧೮೧೫ರ ಒಪ್ಪಂದಗಳನ್ನು ಕಸದ ಬುಟ್ಟಿಗೆ ಎಸೆಯಿತು. ಆ ಸಭೆಯಲ್ಲಿ ಕೈಗೊಂಡ ನಿರ್ಧಾರವು ರಾಷ್ಟ್ರದ ನಿರ್ಮಾಣದ ಒಂದು ಭೌಗೋಳಿಕ ಅಭಿವ್ಯಕ್ತಿ ಮಾತ್ರವಾಗಿತ್ತು.

ಈ ಒಪ್ಪಂದದ ಮೇಲೆ ೩ನೆಯ ನೆಪೋಲಿಯನ್ನನು ತನಗಾಗಿ ಸವಾಯ್ ಮತ್ತು ನೀಸ್ ಪ್ರದೇಶಗಳನ್ನು ಪಡೆದುಕೊಂಡನು. ವಿಲ್ಲಾಫ್ರಾಂಕಾದ ಶಾಂತಿ ಒಪ್ಪಂದವೂ ಎಂದಿಗೂ ಕಾರ್ಯಗತವಾಗಲಿಲ್ಲ. ಪೋಪನ ಆಡಳಿತದ ದೊಡ್ಡ ಭಾಗವಾಗಿದ್ದ ವೆನೀಶಿಯಾ ಮತ್ತು ನೇಪಲ್ಸ್‌ನ ಚಕ್ರಾಧಿಪತ್ಯಗಳು ಇನ್ನೂ ಪರಿಧಿಯ ಆಚೆಗೇ ಇದ್ದವು. ೧೮೬೦ರಲ್ಲಿ ಮೊದಲಲ್ಲಿ ಸಿಸಿಲಿಯನ್ನರು ತಮ್ಮ ಹೊಸ ರಾಜನಾದ ಎರಡನೆಯ ಫ್ರಾನ್ಸಿಸ್‌ನ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದರು. ಈ ಬಂಡಾಯವು ಗ್ಯಾರಿಬಾಲ್ಡಿಯಂತಹ, ಈಗಾಗಲೇ ಪ್ರಖ್ಯಾತನಾದ ಆದರೆ ತನ್ನ ದೇಶಕ್ಕಾಗಿ ಅದ್ಭುತ ಸಾಧನೆಯನ್ನು, ಸೇವೆಯನ್ನು ಮಾಡಲು ಕಾದು ಕುಳಿತಿದ್ದ ವ್ಯಕ್ತಿಗೆ ಒಳ್ಳೆಯ ಅವಕಾಶವನ್ನು ದೊರಕಿಸಿಕೊಟ್ಟಿತು. ಈಗಾಗಲೇ ಪ್ರಖ್ಯಾತನಾಗಿದ್ದ ಸೈನಿಕ ಮುಖಂಡನಿಗೆ, ಅಜೇಯ ಧೈರ್ಯಶಾಲಿಯೆನ್ನುವಂತಹ ಅರೆ ಪೌರಾಣಿಕ ವ್ಯಕ್ತಿತ್ವವು ದೊರಕಿತು. ಇವನು ಮೊದಲು 'ಯಂಗ್ ಇಟಲಿ'ಯ ಸದಸ್ಯನಾಗಿದ್ದನು. ಹಲವಾರು ಯುದ್ಧಗಳಲ್ಲಿ ಭಾಗವಹಿಸಿದ್ದನು. ಪ್ರಖ್ಯಾತ ಇಟಲಿಯ ಸೈನ್ಯದ ಜೊತೆಗೂಡಿದ್ದನು. ಬಹಳ ವರ್ಷಗಳವರೆಗೆ ಗ್ಯಾರಿಬಾಲ್ಡಿಯು ಸಮುದ್ರಯಾನ ಮಾಡುತ್ತಾ, ಪೆರುವಿನ ನೌಕಾಪಡೆಗೆ ದಂಡನಾಯಕನಾಗಿದ್ದನು. ಸ್ವಯಂಸೇವಕರ ನಾಯಕನಾಗಿ ಆಸ್ಟ್ರಿಯಾದ ವಿರುದ್ಧ ಯುದ್ಧಕ್ಕೆ ಧುಮುಕಿದ ನಂತರ ಇವನ ಖ್ಯಾತಿಯು ಹೆಚ್ಚಿತು. ೧೮೬೦ರಲ್ಲಿ ಸಿಸಿಲಿಯ ಮೇಲೆ ದಂಡಯಾತ್ರೆ ಮತ್ತು ನೇಪಲ್ಸ್‌ನ ಚಕ್ರಾಧಿಪತ್ಯದ ಮೇಲೆ ಮಾಡಿದ ದಾಳಿಗಳು ಅವನ ಬದುಕಿನ ಅತ್ಯಂತ ಮಹತ್ವದ ಘಟನೆಗಳಾಗಿದ್ದವು. ನಂತರ ಸ್ವತಃ ತಾನೇ ಎರಡನೇ ಫ್ರಾನ್ಸಿಸ್ ರಾಜನ ವಿರುದ್ಧ ನಡೆಸಲಾದ ದಂಗೆಯಲ್ಲಿ ಸಿಸಿಲಿಯನ್ನರ ಸಹಾಯಕ್ಕಾಗಿ ತಾನೇ ಮುಂದಾದನು.

೧೮೬೦ರ ಮೇ ತಿಂಗಳಿನಲ್ಲಿ "ಸಾವಿರದಳ" ಅಥವಾ "ಕೆಂಪು ಅಂಗಿಗಳು" ಜಿನೀವಾ ದಿಂದ ಎರಡು ಉಗಿ ಹಡಗುಗಳ ಮೂಲಕ ದಾಳಿಯನ್ನು ಪ್ರಾರಂಭಿಸಿದರು. ನೇಪಲ್ಸ್‌ನ ದೊರೆಯು ದೊಡ್ಡ ಸೇನೆಯನ್ನು ನಿಯಮಿಸಿದನು. ಹಲವು ವಾರಗಳ ದಂಡಯಾತ್ರೆಯ ನಂತರ ಸಾಹಸಪೂರ್ಣ ಹೋರಾಟದಿಂದ, ಈ ದ್ವೀಪದ ಅಧಿಪತಿಯಾಗಿ ಮೆರೆದನು. ಕೆಚ್ಚೆದೆಯಿಂದ ವಿಜಯ ಸಾಧ್ಯವಾಯಿತು. ಸಿಸಿಲಿಯಲ್ಲಿ ಆತನು ಎರಡನೆ ವಿಕ್ಟರ್ ಇಮ್ಯಾನುಯಲ್ ಎಂಬ ಬಿರುದಿನಿಂದ ಸರ್ವಾಧಿಕಾರಿಯಾದನು.

ನಂತರ ಗ್ಯಾರಿಬಾಲ್ಡಿಯು ಜಲಸಂಧಿಗಳನ್ನು ದಾಟಿ, ಮೂಲ ಪ್ರದೇಶಕ್ಕೆ ಬಂದು ನೇಪಲ್ಸ್‌ನ ಸಂಪೂರ್ಣ ರಾಜ್ಯಗಳನ್ನು ಗೆಲ್ಲುವ ದೃಢಸಂಕಲ್ಪ ಮಾಡಿಕೊಂಡನು. ಆದರೆ ನೆಪೋಲಿಯನ್ನನ ರಾಜ್ಯವನ್ನು ಗೆಲ್ಲಲಾಗಲಿಲ್ಲ. ಬದಲಾಗಿ ಅದೇ ನಾಶವಾಯಿತು. ಸೆಪ್ಟೆಂಬರ್ ೬ರಂದು ಎರಡನೆಯ ಫ್ರಾನ್ಸಿಸ್‌ನು ನೇಪಲ್ಸ್‌ನ್ನು ತೊರೆದು ಗಯಾಟಕ್ಕೆ ಹೋದನು. ಮಾರನೆಯದಿನ ಗ್ಯಾರಿಬಾಲ್ಡಿಯು ತನ್ನ ೫ ಮಂದಿ ಸಹಾಯಕರೊಂದಿಗೆ ರೈಲಿನಲ್ಲಿ ನೇಪಲ್ಸ್‌ಗೆ ಬಂದನು. ರೋಮ್ ನಗರವನ್ನು ಮುತ್ತಿಗೆ ಹಾಕುವುದು ಆತನ ಮುಂದಿನ ಉದ್ದೇಶವಾಗಿತ್ತು. ಕೆವೂರ್‌ಗೆ ಮುಂದಿನ ಪರಿಸ್ಥಿತಿ ಅತ್ಯಂತ ಅಪಾಯಕಾರಿಯಾಗಿ ತೋರಿತು. ರೋಮನ್ನು ಫ್ರೆಂಚ್ ಸೈನ್ಯವು ವಶಪಡಿಸಿಕೊಂಡಿತು. ಆದ್ದರಿಂದ ಕೆವೂರ್‌ನು ಮಧ್ಯೆಪ್ರವೇಶಿಸಿ, ಈ ಸಂದರ್ಭವನ್ನು ಗ್ಯಾರಿಬಾಲ್ಡಿಯ ಹಿಡಿತದಿಂದ ಬಿಡಿಸಿಕೊಂಡು ತಾನೇ ಮುನ್ನಡೆಸಿ, ತನ್ನ

ಭವಿಷ್ಯವನ್ನು ನಿರ್ಧರಿಸಿಕೊಳ್ಳಲು ನಿರ್ಧರಿಸಿದನು. ಪೋಪನ ಆಡಳಿತವಿರುವ ರಾಜ್ಯಗಳ ಮೇಲೆ ವಿಕ್ಟರ್ ಇಮ್ಯಾನುಯಲ್‌ನು ಸೈನ್ಯದ ಸಮೇತ ಹೋದನು. ಆದರೆ ಅದನ್ನು ರೋಂನವರೆಗೂ ನಡೆಸಲಾಗಲಿಲ್ಲ. ಏಕೆಂದರೆ ಮೂರನೆಯ ನೆಪೋಲಿಯನ್‌ಗೆ ಗಟ್ಟಿಯಾದ ಕ್ಯಾಥೊಲಿಕ್ ಬೆಂಬಲ ಫ್ರಾನ್ಸ್‌ನಲ್ಲಿ ಇದ್ದುದು ಅವನಿಗೆ ತಿಳಿದಿತ್ತು. ಹಾಗಾಗಿ ಪೋಪನ ರಾಜಧಾನಿಯನ್ನು ಕೈವಶಮಾಡಿಕೊಳ್ಳಲು ಸಾಧ್ಯವಾಗದೆಂದು ಅರಿತಿದ್ದನು. ವಿಕ್ಟರ್ ಇಮ್ಯಾನುಯಲ್ಲನು ಇಟಲಿಯ ರಾಜನೆಂದು ಘೋಷಿಸಲ್ಪಟ್ಟನು. ಕ್ಯಾಸ್ಟೆಲ್ ಪಿಡಾರ್ಡೋನಲ್ಲಿ ವಿಕ್ಟರ್ ಇಮ್ಯಾನುಯಲ್ಲನು ಪೋಪನ ಸೈನ್ಯವನ್ನು ಸೋಲಿಸಿದನು. ನಂತರ ಆತನು ನೇಪಲ್ಸ್‌ನ ಪ್ರದೇಶವನ್ನು ಪ್ರವೇಶಿಸಿದನು. ಗ್ಯಾರಿಬಾಲ್ಡಿಯು ಈ ಮಟ್ಟದವರೆಗೂ ತಂದಿದ್ದ ವಿಜಯವನ್ನು ವಿಕ್ಟರ್ ಇಮ್ಯಾನುಯಲ್ ಪೂರೈಸಿದನು. ೧೮೬೧ರ ಫೆಬ್ರವರಿ ೧೮ರಂದು ವೆನಿಶಿಯಾ ಮತ್ತು ರೋಂಗಳನ್ನು ಹೊರತುಪಡಿಸಿ, ಉಳಿದೆಲ್ಲ ಇಟಲಿಯ ಭಾಗಗಳನ್ನು ಪ್ರತಿನಿಧಿಸುವ ಒಂದು ಹೊಸ ಸಂಸತ್ತಿನ ಅಧಿವೇಶನವು ಟುರಿನ್‌ನಲ್ಲಿ ಸೇರಿತು. ಸಾರ್ಡೀನಿಯಾದ ರಾಜಪ್ರಭುತ್ವವು ಇಟಲಿಯ ರಾಜಪ್ರಭುತ್ವಕ್ಕೆ ಎಡೆಮಾಡಿಕೊಟ್ಟಿತು. ವಿಕ್ಟರ್ ಇಮ್ಯಾನುಯಲ್‌ನು "ದೇವರ ಅನುಗ್ರಹದಿಂದ ಮತ್ತು ದೇಶದ ಸಂಕಲ್ಪ ಬಲದಿಂದ, ಇಟಲಿಯ ರಾಜನೆಂದು" ಘೋಷಿಸಲ್ಪಟ್ಟನು.

ಈ ಹೊಸ ರಾಜಪ್ರಭುತ್ವವು ಸುಮಾರು ೨ ಮಿಲಿಯನ್‌ದಷ್ಟು ಜನಸಂಖ್ಯೆಯನ್ನು ಒಳಗೊಂಡಿತ್ತು. ಆದರೆ ಇಟಲಿಯ ರಾಜಪ್ರಭುತ್ವವು ಮಾತ್ರ ಇನ್ನೂ ಅಸಂಪೂರ್ಣವಾಗಿಯೇ ಉಳಿದಿತ್ತು. ವೆನಿಶೀಯಾವು ಇನ್ನೂ ಆಸ್ಟ್ರಿಯಾದ ಹಿಡಿತದಲ್ಲಿಯೇ ಇದ್ದಿತು. ರೋಂ ಸಹ ಇನ್ನೂ ಪೋಪನ ಆಡಳಿತದಲ್ಲಿಯೇ ಇದ್ದಿತು. "ರೋಮನ್ನು ಒಳಗೊಳ್ಳದೆ ಇಟಲಿಯ ಅಸ್ತಿತ್ವವಿಲ್ಲ"ವೆಂಬುದು ಕೆವೂರ್‌ನ ಅಭಿಪ್ರಾಯ ವಾಗಿತ್ತು. ಪೋಪ್ ಹಾಗೂ ಕ್ಯಾಥೊಲಿಕ್ ಪ್ರಪಂಚವನ್ನು ಎಲ್ಲೆಡೆಯೂ ಒಂದುಗೂಡಿಸಿ, ಹೊಸ ರಾಜಪ್ರಭುತ್ವಕ್ಕೆ ರೋಂ ನಗರಕ್ಕೆ ರಾಜಧಾನಿಯಾಗಿ ಮಾನ್ಯತೆ ಗಳಿಸಿಕೊಡುವ ಒಂದು ವಿಧಾನವನ್ನು ರೂಪಿಸಿದ್ದನು. ತನ್ನ ಜೀವಿತಾವಧಿಯಲ್ಲಿ ಕೆವೂರ್‌ನು ತನ್ನ ಮೂಲಭೂತ ರಾಜಕೀಯ ತತ್ವಕ್ಕೆ ಅಂದರೆ ಸಂಸತ್ತಿನ ಮೂಲಕ ನಡೆಯುವ ಸರ್ಕಾರ ಹಾಗೂ ಸಂವಿಧಾನಾತ್ಮಕ ಸುಧಾರಣೆ ಗಳಿಗೆ ಬದ್ಧನಾಗಿದ್ದನು. "ನನ್ನ ಮೂಲಕ್ಕೆ ನಾನೆಂದೂ ಮೋಸ ಮಾಡುವುದಿಲ್ಲ. ನಾನು ಬದುಕಿರುವವರೆಗೂ ನನ್ನ ತತ್ವಗಳನ್ನೆಂದೂ ನಿರಾಕರಿಸುವುದಿಲ್ಲ, ನಾನು ಸ್ವಾತಂತ್ರ್ಯ ಮಾತೆಯ ಪುತ್ರ. ನಾನೇನಾಗಿರುವೆನೋ ಅದಕ್ಕೆಲ್ಲವೋ ಆಕೆಯೇ ಕಾರಣ" ಎಂದು ಬರೆದುಕೊಂಡಿದ್ದಾನೆ.

**ಜರ್ಮನಿಯ ಏಕೀಕರಣ**

೧೮೪೮ ಹಾಗೂ ೧೯೪೯ರಲ್ಲಿ ಜರ್ಮನಿಯ ಉದಾರವಾದಿ ಶಕ್ತಿಗಳು, ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಲು ಒಂದು ಪ್ರಾಮಾಣಿಕ ಪ್ರಯತ್ನ ನಡೆಸಿದ್ದವು. ಆದರೆ ಫ್ರಾಂಕ್ ಫರ್ಟ್‌ನ ಸಂಸತ್ತಿನ ಕಾರ್ಯವನ್ನು ಮುಂಚೂಣಿಯಲ್ಲಿದ್ದ ಆಸ್ಟ್ರಿಯಾ ಹಾಗೂ ಪ್ರಷ್ಯಾದ ದೊರೆಗಳು ತಿರಸ್ಕರಿಸಿದ್ದರು ಮತ್ತು ನಿಷ್ಕ್ರಿಯಗೊಳಿಸಿದ್ದರಿಂದ ಹಳೆಯ ಒಕ್ಕೂಟವನ್ನೇ ಪುನರ್ ಸ್ಥಾಪಿಸಲಾಯಿತು.

೧೮೬೧ರಲ್ಲಿ ವಿಲಿಯಂನು ಪ್ರಷ್ಯಾದ ದೊರೆಯಾದನು. ಪ್ರಷ್ಯಾದ ಸೈನ್ಯ ಬಲವನ್ನು ವೃದ್ಧಿಗೊಳಿಸಬೇಕೆಂದು ನಂಬಿದ್ದ ಆತನು ಅದನ್ನು ದ್ವಿಗುಣಗೊಳಿಸುವ ಒಂದು ಯೋಜನೆ ಯನ್ನು ತಯಾರಿಸಿದನು. ಸಂಸತ್ತಿಗೆ ಅಗತ್ಯವಾದ ಗುರಿಗಳಿಗಾಗಿ ಆಗ್ರಹ ಪಡಿಸಿದನು. ರಾಜಪ್ರಭುತ್ವ ಮತ್ತು ಪ್ರತಿನಿಧಿ ಸಭೆಗಳ ನಡುವೆ ಒಂದು ಕಹಿಯಾದ, ಸುದೀರ್ಘವಾದ ವಿವಾದವೇರ್ಪಟ್ಟಿತು. ಇಡೀ ಸಂಸತ್ತನ್ನೇ ನಿಷೇಧಗೊಳಿಸಬೇಕಾದ ಪರಿಸ್ಥಿತಿಯೊದಗಿತು. ಆದರೆ ಆತನು ಸಂವಿಧಾನವನ್ನು ಬೆಂಬಲಿಸುವ ಪ್ರಮಾಣವಚನ ಸ್ವೀಕರಿಸಿದ್ದರಿಂದ ಹಾಗೆ ಮಾಡಲಾಗಲಿಲ್ಲ. ಬದಲಾಗಿ ಪದವಿಯನ್ನೇ ತ್ಯಾಗಮಾಡಲು ಸಿದ್ಧನಾದನು. ೧೮೬೨ರಲ್ಲಿ ಒಟ್ಟೋವನ್ ಬಿಸ್ಮಾರ್ಕ್‌ನನ್ನು ಮಂತ್ರಿಮಂಡಲದ ಅಧ್ಯಕ್ಷನನ್ನಾಗಿ ನೇಮಿಸಿಕೊಳ್ಳಲಾಯಿತು. ಹೀಗೆ ಯುರೋಪಿನ ರಾಜಕೀಯ ರಂಗಕ್ಕೆ ಪ್ರವೇಶಿಸಿದ ಆ ವ್ಯಕ್ತಿಯು ಆ ಶತಮಾನದಲ್ಲೇ ಸ್ವಂತಿಕೆ ಹಾಗೂ ಅಸಾಧಾರಣ ವ್ಯಕ್ತಿತ್ವವುಳ್ಳವರಲ್ಲಿ ಒಬ್ಬನಾಗಿದ್ದನು. ಕೆವೂರ್‌ನು ತನ್ನ ದೇಶವು ಹೇಗಾಗಬೇಕೆಂಬುದಕ್ಕೆ ಇಂಗ್ಲೆಂಡ್‌ನ ಮಾದರಿಯನ್ನು ಕಂಡುಕೊಳ್ಳುತ್ತಿದ್ದ. ಆಗ ಬಿಸ್ಮಾರ್ಕ್‌ನ ರಾಜಕೀಯ ಚಿಂತನೆಗಳು, ಪ್ರಷ್ಯಾದ ರಾಜಪ್ರಭುತ್ವದಲ್ಲಿ ಆತನು ಇರಿಸಿದ್ದ ಅಪಾರ ನಂಬುಗೆಯ ಮೇಲೆ ಕೇಂದ್ರೀಕೃತವಾಗಿದ್ದವು. ಪ್ರಷ್ಯಾವನ್ನು ಖ್ಯಾತಿಗೊಳಿಸಿದ್ದು ಅದರ ದೊರೆಗಳೇ ಹೊರತು ಅದಕ್ಕೆ ಅಲ್ಲಿಯ ಜನರದ್ದೇನೂ ಕೊಡುಗೆ ಇರಲಿಲ್ಲ. ಬಿಸ್ಮಾರ್ಕ್‌ನು ಪ್ರಜಾಪ್ರಭುತ್ವವನ್ನು ಸಂಸತ್ತು ಹಾಗೂ ಸಂವಿಧಾನಗಳಷ್ಟೇ ತೀವ್ರವಾಗಿ ದ್ವೇಷಿಸುತ್ತಿದ್ದನು. "ಪ್ರಷ್ಯಾದ ಗೌರವವು ಎಲ್ಲಕ್ಕಿಂತಲು ಮಿಗಿಲಾಗಿ ಪ್ರಜಾಪ್ರಭುತ್ವದ ಜೊತೆಗೆ

ಯಾವುದೇ ರೀತಿಯ ಅವಮಾನಕಾರೀ ಸಂಬಂಧವನ್ನು ಇರಿಸಿಕೊಳ್ಳದಿರುವುದೇ ಆಗಿದೆ" ಎಂದಿದ್ದನು. ಆಸ್ಟ್ರಿಯಾದ ವಿರುದ್ಧ ತೀಕ್ಷ್ಣವಾದ ಭಾವನೆಗಳನ್ನು ಹೊಂದಿದ್ದನು.

೧೮೬೨ರಲ್ಲಿ ಆತನು ಪ್ರಷ್ಯಾ ಮಂತ್ರಿಮಂಡಲದ ಅಧ್ಯಕ್ಷ ಸ್ಥಾನವನ್ನು ಪಡೆದುಕೊಂಡನು. ಈ ಸಂದರ್ಭದಲ್ಲಿ ರಾಜ ಹಾಗೂ ಸಂಸತ್ತುಗಳು ಪರಸ್ಪರ ಕೋಪಗ್ರಸ್ಥ ವಿವಾದದಲ್ಲಿ ತೊಡಗಿದ್ದವು. ಈ ಘರ್ಷಣೆಯ ಸುಮಾರು ೪ ವರ್ಷಗಳ ಕಾಲ ಮುಂದುವರಿಯಿತು. ಈ ಅವಧಿಯು ನಿಜವಾಗಿಯೂ ಸರ್ವಾಧಿಕಾರದ್ದಾಗಿತ್ತು. ಸಂಸತ್ತು ಸೋತಿತು. ಸೈನ್ಯದ ಹೆಚ್ಚಳ ಸಾಧ್ಯವಾಯಿತು. ಆದರೆ ಸೈನ್ಯವೆನ್ನುವುದು ಗುರಿ ಸಾಧನೆಯ ಒಂದು ಮಾರ್ಗ ಮಾತ್ರ. ಪ್ರಷ್ಯಾದ ಮೂಲಕ ಹಾಗೂ ಅದರ ಒಳಿತಿಗಾಗಿ ಜರ್ಮನಿಯ ಏಕೀಕರಣವನ್ನು ಸಾಧಿಸುವುದೇ ಬಿಸ್ಮಾರ್ಕ್‌ನ ಅಭಿಪ್ರಾಯವಾಗಿತ್ತು. ಅವನ ಪ್ರಕಾರ ಏಕೀಕರಣವನ್ನು ಯುದ್ಧದ ಮೂಲಕ ಸಾಧಿಸಬಹುದಾಗಿತ್ತು. ಭಾಷಣಗಳಿಂದಾಗಲೀ, ಬಹುಸಂಖ್ಯಾತ ಮತಗಳಿಂದಾಗಲೀ, ಸದ್ಯದ ಮಹತ್ವದ ಸಮಸ್ಯೆಯನ್ನು ಬಗೆಹರಿಸುವುದು ಸಾಧ್ಯವಿಲ್ಲ. ೧೮೪೮ ಮತ್ತು ೧೮೪೯ರಲ್ಲಿ ಇಂತಹ ದೊಡ್ಡ ತಪ್ಪನ್ನೆಸಗಲಾಯಿತು. ರಕ್ತ ಹಾಗೂ ಕತ್ತಿಗಳಿಂದ ಮಾತ್ರ ಇದನ್ನು ಸಾಧಿಸಬಹುದು ಎಂದು ಅವನು ತನ್ನ ಜೀವನದ ಅತ್ಯಂತ ಪ್ರಖ್ಯಾತ ಭಾಷಣವೊಂದರಲ್ಲಿ ಹೇಳಿದ್ದಾನೆ.

**ಪ್ರಷ್ಯಾದ ಮೂರು ಯುದ್ಧಗಳು**

ಜರ್ಮನಿಯ ಸಾಮ್ರಾಜ್ಯವು 'ರಕ್ತ ಮತ್ತು ಕತ್ತಿ'ಯ ನೀತಿಯನ್ನು ಅಳವಡಿಸಿಕೊಂಡೇ ಕಟ್ಟಲ್ಪಟ್ಟಿತು. ಇದನ್ನು ಪ್ರಷ್ಯಾವು ೯ ವರ್ಷದ ಸಣ್ಣ ಅವಧಿಯಲ್ಲಿ ಮೂರು ಯುದ್ಧಗಳ ಮೂಲಕ ಸಾಧಿಸಿತು. ೧. ೧೮೬೪ರಲ್ಲಿ ಡೆನ್ಮಾರ್ಕಿನ ವಿರುದ್ಧ ನಡೆದ ಯುದ್ಧ, ೨. ೧೮೬೬ರಲ್ಲಿ ಆಸ್ಟ್ರಿಯಾ ವಿರುದ್ಧ ನಡೆದ ಯುದ್ಧ ಮತ್ತು ೩. ೧೮೭೦ರಲ್ಲಿ ಫ್ರಾನ್ಸ್‌ನ ವಿರುದ್ಧ ನಡೆದ ಯುದ್ಧ. ಇದರಲ್ಲಿ ಮೊದಲ ಯುದ್ಧವು ಷ್ಲೇಷ್‌ವಿಗ್ ಮತ್ತು ಹೋಲ್‌ಸ್ಟೈನ್ ಭವಿಷ್ಯವನ್ನು ನಿರ್ಧರಿಸುವಂತಹ ಅತ್ಯಂತ ಜಟಿಲ ಸಮಸ್ಯೆಯಿಂದ ಹುಟ್ಟಿಕೊಂಡಿತು. ಇವೆರಡೂ ಡೆನ್ಮಾರ್ಕಿನ ಪರ್ಯಾಯ ದ್ವೀಪದಲ್ಲಿರುವ ರಾಜ್ಯಗಳು. ಹೋಲ್‌ಸ್ಟೈನ್‌ನಲ್ಲಿ ಜರ್ಮನ್ ಜನರಿದ್ದರು ಮತ್ತು ಷ್ಲೇಷ್‌ವಿಗ್‌ನಲ್ಲಿ ಡೇನರು ಹಾಗೂ ಜರ್ಮನರೂ ಇದ್ದರು. ಇವೆರಡೂ ರಾಜ್ಯಗಳು ಡೆನ್ಮಾರ್ಕಿನ ಜೊತೆ ಒಂದುಗೂಡಿದ್ದವು.

ಈ ಪರಿಸ್ಥಿತಿಯಲ್ಲಿ ಪ್ರಷ್ಯಾದ ಉನ್ನತಿಗೆ ಒಂದು ಅವಕಾಶವಿದೆಯೆಂದು ಬಿಸ್ಮಾರ್ಕನು ಕಂಡುಕೊಂಡನು. ಇದು ಆಸ್ಟ್ರಿಯಾದ ಮೇಲೆ ಯುದ್ಧ ನಡೆಸಬಹುದಾಗಿದ್ದ ಸ್ಥಿತಿಯಾಗಿತ್ತು. ಮೇಲಿನ ಸಮಸ್ಯೆಗೆ ಪರಿಹಾರವೆಂಬಂತೆ ಆತನು ಆಸ್ಟ್ರಿಯಾವು ಪರ್ಷಿಯಾದೊಡನೆ ಸಹಕರಿಸುವಂತೆ ಪ್ರೇರೇಪಿಸಿದನು. ಅವು ಡೆನ್ಮಾರ್ಕಿಗೆ ತೀರ್ಮಾನ ತೆಗೆದುಕೊಳ್ಳಲು ಅಂತಿಮ ಅವಕಾಶ ನೀಡಿದವು. ಇವೆರಡೂ ದೇಶಗಳ ತೀರ್ಮಾನಕ್ಕೊಪ್ಪದ ಡೇನರು ಯುದ್ಧವನ್ನು ಘೋಷಿಸಿದರು. ಇದರಲ್ಲಿ ಆಸ್ಟ್ರಿಯಾ ಮತ್ತು ಪ್ರಷ್ಯಾಗಳು ಸುಲಭವಾಗಿ ಜಯ ಗಳಿಸಿದವು. ಆದರೆ ಈ ವಿಜಯದ ತೀರ್ಮಾನಕ್ಕಾಗಿಯೇ ಇವೆರಡೂ ಶಕ್ತಿಗಳು ಬಡಿದಾಡಿದವು. ಕೊನೆಗೆ ೧೮೬೬ರ ಜೂನ್‌ನಲ್ಲಿ ಯುದ್ಧ ಪ್ರಾರಂಭವಾಯಿತು. ಹೀಗೆ ಒಂದೇ ಜನಾಂಗದ ಜನರ ನಡುವೆ ಅಧಿಕಾರಕ್ಕಾಗಿ ನಡೆಯುವ ತನ್ನ ಕನಸಿನ ಕಲಹವನ್ನು ಬಿಸ್ಮಾರ್ಕನು ನನಸಾಗಿಸಿದನು. ಇದನ್ನು ಏಳುವಾರಗಳ ಯುದ್ಧವೆಂದು ಹೇಳುತ್ತಾರೆ. ಇದು ಪ್ರೇಗ್‌ನಲ್ಲಿ ಖಚಿತವಾದ ಶಾಂತಿ ಒಪ್ಪಂದದೊಂದಿಗೆ ಮುಕ್ತಾಯವಾಯಿತು. ಪ್ರಷ್ಯಾಕ್ಕೆ ಒಂದು ಮುಖ್ಯವಾದ ಬೆಂಬಲ ಇಟಲಿಯಿಂದ ದೊರಕಿತ್ತು. ಅದಿಲ್ಲದೆ ವಿಜಯ ಸಾಧಿಸಲಾಗುತ್ತಿರಲಿಲ್ಲ. ವೆನಿಶಿಯಾ ಇಟಲಿಯ ವಶವಾಯಿತು. ಆಸ್ಟ್ರಿಯಾ ಸೋತಿತು.

ಪ್ರಷ್ಯಾದ ಪಡೆಗಳು ಉತ್ತರ ಜರ್ಮನ್, ಹನೋವರ್, ಡ್ರೆಸ್ಡೆನ್ ಮತ್ತು ಕ್ಯಾಸೆಲ್ ಗಳನ್ನು ವಶಪಡಿಸಿಕೊಂಡವು. ಉತ್ತರ ಜರ್ಮನಿಯನ್ನರ ಮೇಲೆ ಸಂಪೂರ್ಣವಾಗಿ ಪ್ರಷ್ಯಾವು ಹಿಡಿತ ಸಾಧಿಸಿತು. ಏಳುವಾರಗಳ ಯುದ್ಧದ ಪರಿಣಾಮಗಳು ಅತ್ಯಂತ ಮಹತ್ವದ್ದಾಗಿದ್ದವು. ಆಸ್ಟ್ರಿಯಾವು ವೆನಿಶಿಯಾವನ್ನು ಇಟಲಿಗೆ ಬಿಟ್ಟುಕೊಡಬೇಕಾಯಿತು. ಅದು ಜರ್ಮನ್ ಒಕ್ಕೂಟದ ಹೊರಗುಳಿಯಬೇಕಾಯಿತು ಹಾಗೂ ಒಂದು ಹೊಸ ಒಕ್ಕೂಟವನ್ನು ಸ್ಥಾಪಿಸುವುದಕ್ಕಾಗಿ ಪ್ರಷ್ಯಾಕ್ಕೆ ಅವಕಾಶ ನೀಡಬೇಕಾಯಿತು.

ಹನೋವರ್‌ನ ರಾಜಪ್ರಭುತ್ವ, ನಾಸ್ಸೋ, ಹೆಸ್ಸ-ಕ್ಯಾಸೆಲ್, ಫ್ರಾಂಕ್‌ಫರ್ಟ್ ನಗರ, ಷ್ಲೇಷ್‌ವಿಗ್ ಮತ್ತು ಹೋಲ್‌ಸ್ಟೈನ್ ರಾಜ್ಯಗಳು ಪ್ರಷ್ಯಾದ ರಾಜಪ್ರಭುತ್ವದಲ್ಲಿ ಸೇರಿಕೊಂಡವು. ಈಗ ನಿರ್ಮಾಣವಾದ ಉತ್ತರ ಜರ್ಮನಿಯ ಒಕ್ಕೂಟದಲ್ಲಿ ರೈನ್ ನದಿಯ ಉತ್ತರ ಭಾಗದ

ಜರ್ಮನಿಯ ಎಲ್ಲಾ ಪ್ರದೇಶಗಳೂ ಸೇರಿದ್ದವು. ಇದರ ನಿರ್ಮಾಣವನ್ನು ಬಿಸ್ಮಾರ್ಕ್‌ನು ವಹಿಸಿಕೊಂಡನು. ಈ ಒಕ್ಕೂಟಕ್ಕೆ ಪ್ರಷ್ಯಾದ ರಾಜನು ಅಧ್ಯಕ್ಷನಾದನು. ಒಂದು ಒಕ್ಕೂಟ ಸಮಿತಿಯಲ್ಲಿ ವಿವಿಧ ರಾಜ್ಯಗಳಿಂದ ದೊರೆಗಳು ಕಳುಹಿಸಿದ ಪ್ರತಿನಿಧಿಗಳಿದ್ದರು. ಜನರಿಂದ ಚುನಾಯಿತನಾದ ಒಬ್ಬ ರೀಚ್‌ಸ್ಟಾಗ್ ಇದ್ದನು. ೧೮೬೭ರ ಜುಲೈನಲ್ಲಿ ಹೊಸ ಸಂವಿಧಾನವು ಅಸ್ತಿತ್ವಕ್ಕೆ ಬಂದಿತು. ಉತ್ತರ ಜರ್ಮನಿಯ ಒಕ್ಕೂಟವು ಕೇವಲ ನಾಲ್ಕು ವರ್ಷಗಳು ಮಾತ್ರ ಅಸ್ತಿತ್ವದಲ್ಲಿತ್ತು. ನಂತರ ೧೮೭೦ರಲ್ಲಿ ನಡೆದ ಫ್ರಾಂಕೋ ಪ್ರಷ್ಯಾದ ಯುದ್ಧದಲ್ಲಿ ಅದನ್ನು ಜರ್ಮನಿಯ ಚಕ್ರಾಧಿಪತ್ಯವು ವಹಿಸಿಕೊಂಡಿತು.

೧೮೬೬ರ ಅವಧಿಯು ಪ್ರಷ್ಯಾ, ಆಸ್ಟ್ರಿಯಾ, ಫ್ರಾನ್ಸ್ ಹಾಗೂ ಆಧುನಿಕ ಯೂರೋಪಿನ ಚರಿತ್ರೆಯಲ್ಲೇ ಒಂದು ತಿರುವು ಪಡೆಯಿತು. ತನ್ನ ಶಕ್ತಿಯಿಂದಾಗಿ ಪ್ರಷ್ಯಾವು ಇಡೀ ಯೂರೋಪ್‌ಗೆ ಅಚ್ಚರಿ ಮೂಡಿಸಿತು. ಅದು ಪ್ರಬಲವಾದ ಸೈನ್ಯವನ್ನು, ಪ್ರಬಲರಾದ ನಾಯಕರನ್ನೂ ಹೊಂದಿತ್ತು. ಮೂರನೆಯ ನೆಪೋಲಿಯನ್‌ನ ಪ್ರಭಾವವು ಈಗ ಕುಂಠಿತ ಗೊಂಡಿತು. ಫ್ರಾನ್ಸ್‌ಗಾಗಿ ಆತನು ಏನನ್ನೂ ಸಾಧಿಸಲಾಗದಿದ್ದರೂ, ಹೊಸ ಒಕ್ಕೂಟವು ಮೈನ್ ನದಿಯ ದಕ್ಷಿಣ ಭಾಗಕ್ಕೆ ವಿಸ್ತರಿಸಬಾರದೆಂದು ಒತ್ತಾಯಿಸುತ್ತಿದ್ದನು. ಇದು ಪ್ರಷ್ಯಾಕ್ಕೆ ಕಿರಿಕಿರಿಯನ್ನುಂಟು ಮಾಡಿತು.

ಮೂರನೆಯ ನೆಪೋಲಿಯನ್ನನು ಈ ಸಂದರ್ಭದಲ್ಲಿ ಮತ್ತೊಂದು ಗಂಭೀರ ಸ್ವರೂಪದ ತಪ್ಪನ್ನೆಸಗಿದನು. ಆತನ ಮೆಕ್ಸಿಕೋದ ಸಾಹಸಕಾರ್ಯವು ಅತ್ಯಂತ ಅನಗತ್ಯವೂ ದುಸ್ಸಾಹಸದ್ದೂ ಆಗಿತ್ತು. ಮೆಕ್ಸಿಕೋ ದೇಶವು ಒಂದು ಗಣತಂತ್ರವಾಗಿತ್ತು. ಆದರೆ ಅದರಲ್ಲಿದ್ದ ಒಂದು ಗುಂಪು ಗಣತಂತ್ರವನ್ನು ಸೋಲಿಸಲು ತಯಾರಾಗಿತ್ತು. ಫ್ರೆಂಚರಿಂದ ಪ್ರೇರಿತರಾಗಿ ಅವರ ನಿರ್ದೇಶನದಲ್ಲಿ ಫ್ರಾನ್ಸಿಸ್ ಜೋಸೆಫ್‌ನ ಸಹೋದರನಾದ ಆಸ್ಟ್ರಿಯಾದ ಆರ್ಕ್‌ಡ್ಯೂಕ್ ಮಾಕ್ಸ್‌ಮಿಲಾನ್‌ಗೆ ಪ್ರಭುತ್ವವನ್ನು ನೀಡಬೇಕೆಂದು ತೀರ್ಮಾನಿಸಲಾಯಿತು.

ಮೂರನೆಯ ನೆಪೋಲಿಯನ್‌ನ ಬುದ್ಧಿವಂತಿಕೆಯಿಂದಾಗಿ ಈ ಉದ್ದೇಶವು ಸಂಪೂರ್ಣವಾಗಿ ನಾಶವಾಗಬೇಕಾಗಿದ್ದಿತು. ಗೆರಿಲ್ಲಾ ಯುದ್ಧವು ಪ್ರಾರಂಭವಾಯಿತು. ನೆಪೋಲಿಯನ್ನನು ಈ ದೇಶದ ಜೊತೆ ಸೆಣಸುವಂತಹ ಸಾಹಸವನ್ನು ಕೈಗೆತ್ತಿಕೊಳ್ಳಲು ಸಿದ್ಧನಿರಲಿಲ್ಲ. ಆದ್ದರಿಂದ ತನ್ನ ಸೈನ್ಯವನ್ನು ಮೆಕ್ಸಿಕೋದಿಂದ ಹಿಂತೆಗೆಯುವ ವಾಗ್ದಾನ ನೀಡಿದನು. ಮಾಕ್ಸ್‌ಮಿಲಾನನು ಬಹಳ ಕಾಲದವರೆಗೆ ಚಕ್ರವರ್ತಿಯಾಗಿ ಉಳಿಯಲು ಸಾಧ್ಯವಾಗಲಿಲ್ಲ. ೧೮೬೭ರಲ್ಲಿ ಅವನನ್ನು ಹಿಡಿದು ಗುಂಡಿಕ್ಕಿ ಕೊಲ್ಲಲಾಯಿತು.

ಇದು ಫ್ರಾನ್ಸ್‌ನ ಚಕ್ರವರ್ತಿಗೆ ಅಮೂಲ್ಯ ಪಾಠವಾಯಿತು. ಅವನ ಆಶ್ರಿತನೊಬ್ಬನು ಅವನನ್ನು ತ್ಯಜಿಸಿದ್ದರಿಂದ ಯೂರೋಪಿನ ಮುಂದೆ ಆತನ ನೈತಿಕ ಸ್ಥೈರ್ಯ ಮಂಕಾಯಿತು. ಸ್ವದೇಶದಲ್ಲಿ ಆತನ ಗೌರವ ಕಡಿಮೆಯಾಯಿತು. ಹಲವಾರು ಸುಧಾರಣೆಗಳನ್ನು ಜಾರಿಗೆ ತಂದು ನೆಪೋಲಿಯನ್ನನು ಉದಾರವಾದಿಗಳ ಮನಸ್ಸನ್ನು ಗೆಲ್ಲಲು ಪ್ರಯತ್ನಿಸಿದ.

ಮೂರನೆಯ ನೆಪೋಲಿಯನ್ನನ ಚಕ್ರಾಧಿಪತ್ಯದ ಸುತ್ತಲೂ ಕಾರ್ಮೋಡಗಳು ಕವಿದಿದ್ದವು. ಆಂತರಿಕ ತೊಂದರೆಗಳೂ ಹೆಚ್ಚಿದವು. ಆದರೆ ಹೊರದೇಶೀಯ ಸಂಬಂಧಗಳೇ ಆತನಿಗೆ ಕಳವಳಕಾರಿಯಾದವು. ಈ ಅಪಾಯದ ಸಂಕೇತ ಫ್ರಾನ್ಸ್‌ನ ಎಲ್ಲೆಡೆಗೂ ಹರಡಿತು. 'ಸಡೋವದ ವಿರುದ್ಧ ಸೇಡು ತೀರಿಸಿಕೊಳ್ಳಬೇಕು' ಎನ್ನುವ ಕೂಗು ಕೇಳಿಬಂತು.

೧೮೬೬ ರಿಂದ ೧೮೭೦ರವರೆಗೆ ಫ್ರಾನ್ಸ್ ಮತ್ತು ಪ್ರಷ್ಯಾ ದೇಶಗಳ ಜನರ, ಸರ್ಕಾರಗಳ ಮನಸ್ಸಿನಲ್ಲಿ, ಕೊನೆಗೆ ಇಬ್ಬರ ನಡುವೆಯೂ ಯುದ್ಧ ನಡೆದೇ ತೀರಬೇಕೆಂಬ ವಿಚಾರ ಮೂಡಿತು. ಬಿಸ್ಮಾರ್ಕ್‌ನು ಜರ್ಮನಿಯ ಏಕೀಕರಣವನ್ನು ಪೂರೈಸುವ ರೀತಿಯೆಂಬಂತೆ ಈ ಯುದ್ಧವನ್ನು ಸ್ವಾಗತಿಸಿದನು. ಫ್ರಾಂಕೋ-ಪ್ರಷ್ಯನ್ ಯುದ್ಧವು ಯಾರೂ ಇದಿರು ನೋಡದ ರೀತಿಯಲ್ಲಿ ಯೂರೋಪಿನ ಮೇಲೆ ಬಿರುಗಾಳಿ ಮಳೆಯಂತೆ ಆರಂಭವಾಯಿತು. ಸ್ಪೈನಿನ ಚಕ್ರಾಧಿಪತ್ಯವು ಖಾಲಿಯಾಗಿಯೇ ಉಳಿದಿತ್ತು. ಈ ವಿಷಯವು ಪ್ಯಾರಿಸ್‌ಗೆ ತಲುಪಿತು ಹಾಗೂ ಪ್ರಷ್ಯಾದ ರಾಜನ ಸಂಬಂಧಿಕನಾದ ಹೋಹೆನ್‌ಜೋಲೆರನ್ ಲಿಯೋಪೋಲ್ಡ್‌ನು ಸ್ಪೈನಿನ ರಾಜಮನೆತನವನ್ನು ಧರಿಸಿದನು. ಆದರೆ ಇವನ ಉಮೇದುವಾರಿಕೆಗೆ ಬಿಸ್ಮಾರ್ಕನ ಬೆಂಬಲವಿದ್ದಿತು.

ಪ್ರಷ್ಯಾದ ರಾಜನು ಆತನ ಹೋಹೆನ್‌ಜೊಲೆರನ್‌ನ ಉಮೇದುವಾರಿಕೆಯು ಪುನಃ ಮುಂದುವರಿಯದಿರುವ ಭರವಸೆ ನೀಡಬೇಕೆಂದು ಫ್ರಾನ್ಸ್‌ನ ಮಂತ್ರಿಮಂಡಲವು ಒಂದು ಹೊಸ ಬೇಡಿಕೆಯನ್ನಿಟ್ಟಿತು. ಇಲ್ಲಿ ಬಿಸ್ಮಾರ್ಕ್‌ಗೆ ಒಂದು ಒಳ್ಳೆಯ ಅವಕಾಶ ಸಿಕ್ಕಿತು ಮತ್ತು ಅವನು ಅದನ್ನು ಸಂತೋಷವಾಗಿ ಮತ್ತು ನಿರ್ದಯವಾಗಿ ಉಪಯೋಗಿಸಿಕೊಂಡು, ಫ್ರೆಂಚರು ಯುದ್ಧವನ್ನು ಪ್ರಕಟಿಸುವಂತೆ ಪ್ರೇರೇಪಿಸಿದನು. ಇಷ್ಟೇ ಸಾಲದೆಂಬಂತೆ ಎರಡೂ ದೇಶಗಳ ಪತ್ರಿಕೆಗಳು ಸುಳ್ಳು, ನಿಂದಾತ್ಮಕ ಹಾಗೂ ರೊಚ್ಚಿಗೆಬ್ಬಿಸುವಂತಹ ಸುದ್ದಿಗಳನ್ನೇ ಅಚ್ಚು ಮಾಡಿದವು.

ಫ್ರಾನ್ಸ್‌ನ ಚರಿತ್ರೆಯಲ್ಲಿಯೇ ಈ ಯುದ್ಧವು ಅತ್ಯಂತ ವಿನಾಶಕಾರಿಯಾಗಿ ಪರಿಣಮಿಸಿತು. ಪ್ರಷ್ಯಾದ ದಾಳಿಗೆ ಬವೇರಿಯಾ, ಸೇಡವ್ ಹಾಗೂ ವ್ರಟ್ಟಂಬರ್ಗ್‌ಗಳು ಸೇರಿಕೊಂಡವು. ಫ್ರಾನ್ಸ್‌ನ ಸೈನ್ಯವು ತೀರಾ ಕೆಳದರ್ಜೆಯಲ್ಲಿ ಅಣಿಗೊಂಡಿತ್ತು. ಸಂಖ್ಯಾ ಬಲದಲ್ಲಾಗಲೀ, ಸೇನಾಧಿಪತಿಗಳ ತಾಕತ್ತಿನಲ್ಲಾಗಲೀ, ಪ್ರಷ್ಯಾದ ಸೈನ್ಯಕ್ಕಿಂತಲೂ ಕೆಳಮಟ್ಟದಲ್ಲಿತ್ತು. ಜರ್ಮನ್ನರು ರೈನ್ ನದಿಯನ್ನು ದಾಟಿ ಆಲ್ಸೇಸ್ ಮತ್ತು ಲೊರೈನ್‌ಗಳಿಗೆ ಮುತ್ತಿಗೆ ಹಾಕಿ ಭೀಕರ ಕಾಳಗದ ನಂತರ ಜಯಶೀಲರಾದರು.

ಸೆಡಾನಿನಲ್ಲಿ ಮತ್ತೊಂದು ಫ್ರೆಂಚ್ ಸೈನ್ಯವನ್ನು ಸೋಲಿಸಲಾಯಿತು ಹಾಗೂ ಅವರನ್ನು ಜರ್ಮನ್ನರು ಸೆರೆಹಿಡಿದರು. ನೆಪೋಲಿಯನ್ ಸಹ ಒಬ್ಬ ಯುದ್ಧ ಕೈದಿಯಾದ. ಫ್ರೆಂಚರು ಸೋತರು. ಈ ಅನಾಹುತದ ತೀವ್ರತೆ ಜಗತ್ತಿನಲ್ಲೆಲ್ಲಾ ಮಾರ್ದನಿಗೊಂಡಿತು. ಫ್ರೆಂಚರಿಗೀಗ ಸೈನ್ಯವಿರಲಿಲ್ಲ. ಒಂದು ಭಾಗವಾಗಲೇ ಸೆಡಾನ್‌ನಲ್ಲಿ ಶರಣಾಗತವಾಗಿತ್ತು. ಮತ್ತೊಂದು ಭಾಗವನ್ನು ಮೆಟ್ಜ್‌ನಲ್ಲಿ ಬಂಧಿಸಿದ್ದರು. ಜನರ ಗುಂಪು ಮುತ್ತಿಗೆ ಹಾಕಿ "ಚಕ್ರಾಧಿಪತ್ಯಕ್ಕೆ ಧಿಕ್ಕಾರ, ಗಣತಂತ್ರ ಚಿರಾಯುವಾಗಲಿ" ಎಂಬ ಘೋಷಣೆಗಳನ್ನು ಹಾಕಿದರು.

ಫ್ರಾಂಕೋ-ಜರ್ಮನ್ ಯುದ್ಧವು ಆರು ತಿಂಗಳ ಕಾಲ ನಡೆಯಿತು. ಇದು ಚಕ್ರಾಧಿಪತ್ಯ ಹಾಗೂ ಗಣತಂತ್ರವೆಂಬ ಎರಡು ಅವಧಿಗಳಲ್ಲಾಗಿದೆ. ಚಕ್ರಾಧಿಪತ್ಯವು ಕೊನೆಗೊಂಡು ಚಕ್ರಾಧಿಪತಿಯು ಜರ್ಮನಿಯಲ್ಲಿ ಕೈದಿಯಾದನು. ಜರ್ಮನ್ನರು ಪ್ಯಾರಿಸ್‌ಗೆ ನುಗ್ಗಿದರು. ಕಾದಾಟ ನಾಲ್ಕು ತಿಂಗಳವರೆಗೆ ನಡೆಯಿತು. ಪ್ರಷ್ಯನ್ ಸೇನೆಗೆ ಸಂಪೂರ್ಣವಾಗಿ ಶರಣಾದ ಫ್ರಾನ್ಸ್ ೧೮೭೧ರ ಮೇ ೧೦ರಂದು ಫ್ರಾಂಕ್‌ಫರ್ಟ್ ಒಪ್ಪಂದಕ್ಕೆ ಸಹಿ ಹಾಕಿತು. ಬಿಸ್ಮಾರ್ಕನು ಶಾಂತಿ ಒಪ್ಪಂದದ ಕರಾರುಗಳನ್ನು ರೂಪಿಸಿದನು. ಈ ಕರಾರುಗಳು ಫ್ರಾನ್ಸ್‌ಗೆ ಅವಮಾನಕಾರಿಯಾದ, ನೋವಿನ ರೀತಿಯದ್ದಾಗಿದ್ದವು. ಒಪ್ಪಂದದ ಪ್ರಕಾರ ಫ್ರಾನ್ಸ್ ತನ್ನ ದೇಶಗಳಾದ ಆಲ್ಸೇಸ್, ಲೊರೈನ್ ಹಾಗೂ ಮೆಟ್ಜ್ ಕೋಟೆಯನ್ನು ಪ್ರಷ್ಯಾಕ್ಕೆ ಬಿಟ್ಟುಕೊಡಬೇಕಾಯಿತು. ಅದೇ ರೀತಿ ಯುದ್ಧದ ಎಲ್ಲಾ ಖರ್ಚು ವೆಚ್ಚಗಳನ್ನೂ ನೋಡಿಕೊಳ್ಳಬೇಕಾಯಿತು.

ಫ್ರಾಂಕೋ-ಪ್ರಷ್ಯಾನ್ ಯುದ್ಧ ಇಟಲಿಯ ಏಕೀಕರಣವನ್ನು ಪೂರ್ಣಗೊಳಿಸಿತು. ವಿಕ್ಟರ್ ಇಮ್ಯಾನ್ಯೂಯಲ್ ರೋಮ್‌ಗೆ ಪ್ರವೇಶಿಸಿ ಪೋಪನನ್ನು ಸಿಂಹಾಸನದಿಂದ ಕೆಳಗಿಳಿಸಿದನು. ಫ್ರಾನ್ಸ್ ಈ ಸಂದರ್ಭದಲ್ಲಿ ಅಸಹಾಯಕವಾಗಿತ್ತು. ರೋಮ್ ಇಟಲಿ ಯೊಂದಿಗೆ ಐಕ್ಯವಾಗಿ ರಾಜಧಾನಿಯಾಯಿತು.

ಈ ಯುದ್ಧದ ಪ್ರಮುಖ ಪರಿಣಾಮವೆಂದರೆ ಜರ್ಮನಿಯ ಏಕೀಕರಣ ಪೂರ್ಣ ಗೊಂಡಿರುವುದು ಮತ್ತು ಹೊಸ ಜರ್ಮನ್ ಸಾಮ್ರಾಜ್ಯ ಅಸ್ತಿತ್ವಕ್ಕೆ ಬಂದಿರುವುದು. ಉತ್ತರ ಜರ್ಮನಿಯ ಒಕ್ಕೂಟದಿಂದ ಹೊರಗುಳಿದಿದ್ದ ದಕ್ಷಿಣ ಜರ್ಮನಿಯ ಉಳಿದೆಲ್ಲಾ ರಾಜ್ಯಗಳು ಈ ಯುದ್ಧದ ನಂತರ ಉತ್ತರ ಜರ್ಮನ್ ಒಕ್ಕೂಟಕ್ಕೆ ಸೇರಿಕೊಂಡವು. ಇದರಿಂದಾಗಿ ಜರ್ಮನಿಯ ಏಕೀಕರಣ ಪೂರ್ಣಗೊಂಡಿತು. ೧೮೭೧ರ ಜನವರಿ ೧೮ರಂದು ವರ್ಸೇಲ್ಸ್‌ನ ಅರಮನೆಯಲ್ಲಿ ಒಂದನೇ ವಿಲಿಯಂ ಜರ್ಮನಿಯ ಚಕ್ರವರ್ತಿಯಾಗಿ ಅಧಿಕಾರವಹಿಸಿಕೊಂಡನು.

೧೮೬೬ರ ಯುದ್ಧ ಆಸ್ಟ್ರಿಯಾವನ್ನು ಜರ್ಮನಿ ಮತ್ತು ಇಟಲಿಯಿಂದ ಹೊರನಡೆಯುವಂತೆ ಮಾಡಿತು. ೧೮೭೦ರ ಯುದ್ಧ ಜರ್ಮನಿ ಮತ್ತು ಇಟಲಿಯ ಏಕೀಕರಣವನ್ನು ಪೂರ್ಣಗೊಳಿಸಿತು. ಬರ್ಲಿನ್ ಜರ್ಮನಿಯ ರಾಜಧಾನಿಯಾದರೆ, ರೋಮ್ ಇಟಲಿಯ ರಾಜಧಾನಿಯಾಯಿತು.

**ಪರಾಮರ್ಶನ ಗ್ರಂಥಗಳು**

೧. ಆಲ್ಬರ್ಟ್ ಸಬೂಲ್, ೧೯೮೯. **ಅಂಡರ್‌ಸ್ಟಾಂಡಿಂಗ್ ದಿ ಫ್ರೆಂಚ್ ರೆವಲ್ಯೂಷನ್,** ಕೇಂಬ್ರಿಡ್ಜ್: ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್.

೨. ಡೇವಿಡ್ ಥಾಮ್ಸನ್, ೧೯೬೬, **ಯುರೋಪ್ ಸಿನ್ಸ್ ನೆಪೋಲಿಯನ್,** ಪೆಲಿಕಾನ್.

೩. ಮ್ಯಾಕ್‌ಸ್ಮಿತ್ ಡಿ., ೧೯೬೮. **ದಿ ಮೇಕಿಂಗ್ ಆಫ್ ಇಟಲಿ,** ಲಂಡನ್.

೪. ಹಾಲ್‌ಬಾರ್ನ್ ಹೆಚ್., ೧೯೬೯, **ಎ ಹಿಸ್ಟರಿ ಆಫ್ ಮಾಡರ್ನ್ ಜರ್ಮನಿ.**

# ೧೯. ಪ್ರಥಮ ಮಹಾಯುದ್ಧ ಹಾಗೂ ರಾಷ್ಟ್ರ ಸಂಘದ ರಚನೆ

ಇಪ್ಪತ್ತನೆಯ ಶತಮಾನವು ಎರಡು ಭೀಕರ ಮಹಾಯುದ್ಧಗಳನ್ನು ಕಂಡಿದೆ. ಮೊದಲ ಮಹಾಯುದ್ಧವು ೧೯೧೪ರ ಆಗಸ್ಟ್‌ನಲ್ಲಿ ಆರಂಭಗೊಂಡು ೧೯೧೮ರ ನವೆಂಬರ್‌ನಲ್ಲಿ ಕೊನೆಯಾಯಿತು. ಎರಡು ಸಂಗ್ರಾಮಗಳು ಕೆಲವೇ ಕೆಲವು ದೇಶಗಳಿಗೆ ಸೀಮಿತವಾಗಿರದೆ ವಿಶ್ವವ್ಯಾಪ್ತಿಯಾಗಿ ಭಯಾನಕ ಪರಿಣಾಮಗಳನ್ನು ಉಂಟು ಮಾಡಿದವು. ಆದುದರಿಂದ ಅವು ಜಾಗತಿಕ ಯುದ್ಧಗಳೆಂದು ಗುರುತಿಸಲ್ಪಟ್ಟಿವೆ.

**ಪ್ರಥಮ ಮಹಾಯುದ್ಧದ ಕಾರಣಗಳು**

೧. ಯುರೋಪಿನ ಮೇಲೆ ಸರ್ವಾಧಿಪತ್ಯವನ್ನು ಸಾಧಿಸುವ ಸಲುವಾಗಿ ಜರ್ಮನಿ ಹೊಂದಿದ್ದ ಮಹತ್ವಾಕಾಂಕ್ಷೆಯು ಪ್ರಥಮ ಮಹಾಯುದ್ಧಕ್ಕೆ ಮುಖ್ಯ ಕಾರಣವಾಯಿತು. ಯುರೋಪಿನ ಚಕ್ರಾಧಿಪತ್ಯದಲ್ಲಿ ೧೮೭೦ರ ಫ್ರಾಂಕೋ-ಜರ್ಮನ್ ಯುದ್ಧವು ಹೊಸಯುಗದ ಆರಂಭಿಕ ಅಂಶವಾಯಿತು. ಈ ಯುದ್ಧದ ಫಲಶ್ರುತಿಯಾಗಿ ಜರ್ಮನಿಯು ಏಕಶಕ್ತಿಯಾಗಿ ರೂಪುಗೊಂಡಿತು. ವಾಸ್ತವವಾಗಿ ತನ್ನ ಹುಟ್ಟಿನ ಕ್ಷಣದಿಂದಲೇ ಜರ್ಮನ್ ಸಾಮ್ರಾಜ್ಯವು ಜಗತ್ತಿನ ಅತ್ಯಂತ ಶಕ್ತಿಶಾಲಿ ಮಿಲಿಟರಿ ರಾಜ್ಯವಾಗಿತ್ತು. ೧೮೭೧ ರಿಂದ ೧೮೯೦ರ ತನಕ ಜರ್ಮನ್ ಸಾಮ್ರಾಜ್ಯದ ರೂವಾರಿ ಹಾಗೂ ವಿದೇಶಾಂಗ ಕಾರ್ಯದರ್ಶಿಯಾಗಿದ್ದ ಬಿಸ್ಮಾರ್ಕನು ಆ ಇಪ್ಪತ್ತು ವರ್ಷಗಳಲ್ಲಿ ನಿಸ್ಸಂಶಯವಾಗಿ ಯುರೋಪಿನ ಪ್ರಬಲಶಕ್ತಿಯಾಗಿದ್ದನು. ಅವನ ವಿದೇಶಾಂಗ ನೀತಿಯು ರಾಷ್ಟ್ರದ ಮಿಲಿಟರಿ ಔನ್ನತ್ಯವನ್ನು ಕಾಪಾಡಿಕೊಳ್ಳುವುದು ಮತ್ತು ಅಭಿವೃದ್ದಿಪಡಿಸುವುದಾಗಿತ್ತು. ಜರ್ಮನಿಯ ಜನತೆ ತಾವೇ ವಿಶ್ವದ ಶ್ರೇಷ್ಠ ಜನಾಂಗವೆಂದೂ, ತಾವು ಮಾತ್ರವೇ ಜಗತ್ತನ್ನು ಆಳಲು ಅಧಿಕಾರವುಳ್ಳವರೆಂದೂ ನಂಬಿದ್ದರು. ಅದಕ್ಕೆ ಅಗತ್ಯವೆನಿಸುವ ಯಾವ ತ್ಯಾಗಕ್ಕೂ ಜರ್ಮನಿಯ ಯುವ ಜನಾಂಗ ಸನ್ನದ್ಧವಾಗಿತ್ತು. ಈ ರೀತಿಯ ಯುದ್ಧ ತಯಾರಿಯು ನಾಗರಿಕತೆಯ ವಿರುದ್ಧದ ಅಪರಾಧವಾಗಿರದೆ ರಾಷ್ಟ್ರದ ನೈತಿಕ ಇತಿಹಾಸಕ್ಕೆ ಉತ್ತಮ ಹಾಗೂ ಅವಶ್ಯವಾದ ಸಿದ್ಧೌಷಧವೆಂದೂ ಅವರು ನಂಬಿದ್ದರು.

೨. ಸಂಕುಚಿತ ರಾಷ್ಟ್ರೀಯತೆ ಅಥವಾ ಸ್ಪರ್ಧಾತ್ಮಕ ರಾಷ್ಟ್ರಭಕ್ತಿಯು ಪ್ರಥಮ ಮಹಾಯುದ್ಧದ ಇನ್ನೊಂದು ಮುಖ್ಯ ಕಾರಣವಾಗಿತ್ತು. ದೇಶದ ಬಗೆಗಿನ ಗಾಢಪ್ರೇಮ ಇತರ ದೇಶಗಳ ದ್ವೇಷವನ್ನು ಕಟ್ಟಿಕೊಂಡಿತು. ಜರ್ಮನ್ನರ ದೇಶಪ್ರೇಮವು ಫ್ರಾನ್ಸನ್ನು ದ್ವೇಷಿಸು ವಂತೆಯೂ, ಫ್ರೆಂಚರ ದೇಶಪ್ರೇಮವು ಜರ್ಮನಿಯನ್ನು ದ್ವೇಷಿಸುವಂತೆಯೂ ಮಾಡಿತು. ಸರ್ಬಿಯಾದ ಉಗ್ರ ರಾಷ್ಟ್ರೀಯತೆಯು ಸರ್ಬಿಯಾ ಮತ್ತು ಆಸ್ಟ್ರಿಯಾಗಳ ನಡುವೆ ಪರಿಸ್ಥಿತಿಯನ್ನು ಬಿಗಡಾಯಿಸಿತು.

೩. ಎರಡನೆಯ ಕೈಸರ್ ವಿಲಿಯಂನ ವರ್ತನೆಯೂ ಯುದ್ಧಕ್ಕೆ ಇನ್ನೊಂದು ಮಹತ್ವದ ಕಾರಣವಾಯಿತು. ಅವನ ರಾಜಕೀಯ ಅಪನಂಬಿಕೆ ಮತ್ತು ಹಿಂಸಾತ್ಮಕ ವಿಭ್ರಾಂತಿಗಳು ಯುರೋಪನ್ನು ಭೀತಿಯ ವಾತಾವರಣಕ್ಕೆ ತಳ್ಳಿತು. ಅವನ ಸಾರ್ವಜನಿಕ ಭಾಷಣಗಳ ಕೆಲವು ಮಾತುಗಳು ಹುಚ್ಚುತನದ ಪರಮಾವಧಿಯದಾಗಿದ್ದವು. ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಯುದ್ಧ ಅನಿವಾರ್ಯವೆಂದೂ ಸೇವಕರು ಸೇವಕರಾಗಿಯೇ ಇರಲು ಹುಟ್ಟಿದವರು ಆಳ್ವಿಕೆ ನಡೆಸುವುದಕ್ಕಲ್ಲ ಎಂದೂ ಅವನು ಬೋಧಿಸುತ್ತಿದ್ದನು. ಕೈಸರನು

ಹಠವಾದಿಯಾಗಿದ್ದನು. ಜರ್ಮನಿಯು ಜಗತ್ತಿನ ಅತ್ಯಂತ ಶಕ್ತಿಶಾಲಿ ರಾಷ್ಟ್ರ ವಾಗಬೇಕೆಂದು ಅವನು ಬಯಸಿದ್ದನು. "ವಿಶ್ವಶಕ್ತಿ ಇಲ್ಲವೇ ಅಳಿವು" ಎಂಬುದು ಅವನು ನಂಬಿದ್ದ ತತ್ವವಾಗಿತ್ತು.

೪. ವಸಾಹತು ಮತ್ತು ವಾಣಿಜ್ಯ ಉತ್ಕರ್ಷದ ನಂತರ ವಸಾಹತುಗಳ ಅನ್ವೇಷಣೆ ಹಾಗೂ ವ್ಯಾಪಾರೋದ್ದಿಮೆಗಳ ಸಂಘರ್ಷ ಯುರೋಪಿನ ರಾಷ್ಟ್ರಗಳ ನಡುವೆ ಆರಂಭವಾಯಿತು. ಎಲ್ಲರನ್ನೂ ತೃಪ್ತಿಪಡಿಸುವಷ್ಟು ಸಂಪನ್ಮೂಲಗಳು ಇದ್ದುದರಿಂದ ಮೊದಮೊದಲಿಗೆ ಯಾವುದೇ ಸ್ಪರ್ಧೆಯಿರಲಿಲ್ಲ. ಆದರೆ ಆಫ್ರಿಕಾ ಮತ್ತು ಆಸ್ಟ್ರೇಲಿಯಾಗಳನ್ನು ವಸಾಹತುಗೊಳಿಸಿದ ನಂತರ ಹೆಚ್ಚಿನ ಭೂಸಂಪತ್ತು ಅಲಭ್ಯವಾಯಿತು. ಇದು ಯುರೋಪಿನ ದೇಶಗಳ ನಡುವೆ ಸ್ಪರ್ಧೆಯನ್ನು ಉಂಟುಮಾಡಿತು. ಹೊಸ ಮಾರುಕಟ್ಟೆ ಗಳನ್ನು ಮತ್ತು ಕಚ್ಚಾವಸ್ತುಗಳ ಮೇಲೆ ನಿಯಂತ್ರಣ ಸಾಧಿಸುವುದಕ್ಕಾಗಿ ಸ್ಪರ್ಧೆ ಅಧಿಕವಾಯಿತು. ಫ್ರಾಂಕೋ-ಜರ್ಮನ್ ಯುದ್ಧದ ನಂತರ ಜರ್ಮನಿಯು ಒಂದು ಮುಖ್ಯವಾದ ಉತ್ಪಾದಕ ರಾಷ್ಟ್ರವಾಯಿತು. ಶಿಕ್ಷಣ, ವೈಜ್ಞಾನಿಕ ಸಂಶೋಧನೆಗಳು ಮತ್ತು ರಾಜ್ಯದ ಅನುದಾನಿತ ಉದ್ಯಮಗಳು ಜರ್ಮನಿಯನ್ನು ಆರ್ಥಿಕ ಅಭಿವೃದ್ಧಿಯೆಡೆಗೆ ಕೊಂಡೊಯ್ದವು. ಹಾಗಾಗಿ ಜರ್ಮನಿಯು ವಸ್ತುಗಳನ್ನು ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಲು ತೊಡಗಿತು. ಸಹಜವಾಗಿ ಈ ಬೆಳವಣಿಗೆಯು ಬ್ರಿಟಿಷ್ ಆರ್ಥಿಕ ವಲಯದಲ್ಲಿ ಭಯ ಮತ್ತು ಅಸೂಯೆಯ ವಾತಾವರಣವನ್ನು ಉಂಟುಮಾಡಿತು.

೫. ಮೊರೊಕ್ಕೋ ಬಿಕ್ಕಟ್ಟು ಪ್ರಥಮ ಮಹಾಯುದ್ಧದ ಇನ್ನೊಂದು ಕಾರಣವಾಗಿದೆ. ಫ್ರಾನ್ಸ್ ದೇಶದ ಮೊರೊಕ್ಕೋದಲ್ಲಿ ಮುಕ್ತ ವಹಿವಾಟು ನಡೆಸಲು ಬಯಸಿತ್ತು. ಫ್ರಾನ್ಸ್ ದೇಶವು ಈಜಿಪ್ಟನ್ನು ಇಂಗ್ಲೆಂಡಿನ ವಶಕ್ಕೆ ಒಪ್ಪಿಸಿ ಅದರ ವಿರೋಧವನ್ನು ನಿವಾರಿಸಿಕೊಂಡಿತು.

ಫ್ರಾನ್ಸ್‌ನ ವಿಸ್ತರಣವಾದಿಗಳು ಮೊರೊಕ್ಕೋದಲ್ಲಿ ನೆಲೆಯೂರಿ ಅದನ್ನು ಫ್ರೆಂಚ್‌ನ ಆಳ್ವಿಕೆಗೊಳಪಟ್ಟ ಪ್ರದೇಶವೆಂಬಂತೆ ಪರಿಗಣಿಸತೊಡಗಿದಾಗ ಮೊದಲನೆಯ ಮೊರೊಕ್ಕೋ ಬಿಕ್ಕಟ್ಟು ೧೯೦೫ (ಮಾರ್ಚ್ ೩೧)ರಲ್ಲಿ ಕಾಣಿಸಿಕೊಂಡಿತು. ಫ್ರಾನ್ಸಿನ ಸಖ್ಯ ರಾಷ್ಟ್ರ ವಾಗಿದ್ದ ರಷ್ಯಾದ ಮಿಲಿಟರಿ ದುರ್ಬಲತೆಯಿಂದಾಗಿ ಜರ್ಮನಿಯ ಆಕ್ರಮಣವನ್ನು ವಿರೋಧಿಸಲು ಫ್ರಾನ್ಸಿಗೆ ಸಾಧ್ಯವಾಗಲಿಲ್ಲ. ಪರಿಣಾಮವಾಗಿ ಅದು ಜರ್ಮನಿಗೆ ಶರಣಾಯಿತು, ಮತ್ತು ಮೊರೊಕ್ಕೋ ಸಮಸ್ಯೆಯನ್ನು ಅಂತಾರಾಷ್ಟ್ರೀಯ ಕಾಂಗ್ರೆಸ್ಸಿಗೆ ಒಪ್ಪಿಸಲು ಒಪ್ಪಿಕೊಂಡಿತು. ಜನವರಿಯಿಂದ ೧೯೦೬ರ ಏಪ್ರಿಲ್ ತನಕ ಸ್ಪೇಯಿನ್‌ನ ಅಲ್ಗೆಸಿರಾಸ್‌ನಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ಸಭೆಯಲ್ಲಿ ಮೊರೊಕ್ಕೋದ ಸಮಗ್ರತೆಯನ್ನು ಮತ್ತು ಸುಲ್ತಾನದ ಸಾರ್ವಭೌಮತೆಯನ್ನು ಗೌರವಿಸಬೇಕು ಎಂದು ವಾಗ್ದಾನವಾಯಿತು. ಸಹಿ ಹಾಕಿದ ರಾಷ್ಟ್ರಗಳ ವ್ಯಾಪಾರಸ್ಥರಿಗೆ ಮತ್ತು ಬಂಡವಾಳದಾರರಿಗೆ ಮುಕ್ತ ಅವಕಾಶದ ಭರವಸೆ ನೀಡಲಾಯಿತು.

ಮೊರೊಕ್ಕೋದ ಒಳಜಗಳ ಮತ್ತು ಫ್ರೆಂಚರ ವಿರುದ್ಧದ ದುರಾಕ್ರಮಣದಿಂದಾಗಿ ಫ್ರೆಂಚ್ ಸರಕಾರವು ೧೯೦೭ರ ಆಗಸ್ಟ್‌ನಲ್ಲಿ ಕಸಾಬ್ಲಾಂಕಾದಲ್ಲಿ ಭೂ ಸೈನ್ಯವನ್ನು ನಿಯಮಿಸಿತು. ಫ್ರೆಂಚ್ ಸರ್ಕಾರದ ಪಡೆಗಳು ಆ ಪ್ರದೇಶದಲ್ಲಿ ಶಾಶ್ವತವಾಗಿ ನೆಲೆಯೂರಿದ ವಿರುದ್ಧ ಜರ್ಮನಿಯು ಪ್ರತಿಭಟಿಸಿತು. ಅಂತಿಮವಾಗಿ ಈ ವಿವಾದವನ್ನು ಹೇಗ್ ನ್ಯಾಯಾಲಯಕ್ಕೆ ಒಪ್ಪಿಸಲಾಯಿತು. ಮುಂದಕ್ಕೆ ಯಾವುದೇ ಅಪನಂಬಿಕೆಗಳು ಉಂಟಾಗದಂತೆ ಎಚ್ಚರ ವಹಿಸುವುದಾಗಿ ಫ್ರಾನ್ಸ್ ಮತ್ತು ಜರ್ಮನಿಗಳು ಒಪ್ಪಿಕೊಂಡವು.

ಆದರೆ ಈ ಹೊಂದಾಣಿಕೆಗಳು ಜರ್ಮನ್ ದೇಶಭಕ್ತರಿಗೆ ಮತ್ತು ಪ್ರಿನ್ಸ್ ವಾನ್ ಬುಲೋಗೆ ರುಚಿಸಲಿಲ್ಲ. ೧೯೧೧ರಲ್ಲಿ ಫ್ರಾನ್ಸ್ ದೇಶವು ಮೊರೊಕ್ಕೋದ ರಾಜಧಾನಿ ಫೆಜ್ ನಗರವನ್ನು ಆಕ್ರಮಿಸಿತು. ಜರ್ಮನಿ, ಫ್ರಾನ್ಸ್ ಗಳೆರಡರಲ್ಲಿಯೂ ಯುದ್ಧ ಸಿದ್ಧತೆಗಳು ತೀವ್ರಗೊಂಡವು. ಜಪಾನಿನ ಯುದ್ಧದ ನಂತರ ರಷ್ಯಾವು ಪೂರ್ಣವಾಗಿ ಚೇತರಿಸಿಕೊಂಡಿರಲಿಲ್ಲ. ಬ್ರಿಟೀಷ್ ವಿದೇಶಾಂಗ ಕಾರ್ಯದರ್ಶಿ ಎಡ್ವರ್ಡ್ ಕ್ರೇಯು ತನ್ನ ರಾಷ್ಟ್ರ ಫ್ರಾನ್ಸನ್ನು ಬೆಂಬಲಿಸುವುದಾಗಿ ಘೋಷಿಸಿದನು. ಜರ್ಮನಿಯು ಪೂರ್ಣ ವಾಗಿ ಯುದ್ಧವನ್ನು ಬಯಸಲಿಲ್ಲ ಮತ್ತು ಫ್ರಾಂಕೋ ಜರ್ಮನ್ ಸಮಾವೇಶವನ್ನು ಆಯೋಜಿಸುವುದರಲ್ಲಿ ತೃಪ್ತಿಪಟ್ಟಿತು. ಜರ್ಮನಿಯ ಮೇಲೆ ಫ್ರಾನ್ಸಿನ ಆಳ್ವಿಕೆ ಸ್ಥಾಪಿಸಿರುವುದನ್ನು ವಿರೋಧಿಸದಂತೆ ಜರ್ಮನಿಯು ಭರವಸೆ ನೀಡಿತು. ಮೊರೊಕ್ಕೋ ದಲ್ಲಿ ಮುಕ್ತ ಅವಕಾಶವನ್ನು ಕಾಯ್ದುಕೊಳ್ಳಲು ಫ್ರಾನ್ಸ್ ಒಪ್ಪಿಕೊಂಡಿತು. ಫ್ರಾನ್ಸ್ ಜಯಶಾಲಿಯಾದರೂ ಜರ್ಮನಿಯನ್ನು ದ್ವೇಷಿಸಿತು, ಜರ್ಮನಿಯ ದ್ವೇಷವನ್ನು ಕಟ್ಟಿಕೊಂಡಿತು.

೬. ಪೌರಾತ್ಯ ಸಮಸ್ಯೆಯು ಪ್ರಥಮ ಮಹಾಯುದ್ಧದ ಇನ್ನೊಂದು ಕಾರಣವಾಗಿದೆ. ಯುರೋಪಿನ ಶಕ್ತಿಗಳ ಸಂಘರ್ಷಾತ್ಮಕ ಹಿತಾಸಕ್ತಿಗಳಿಂದಾಗಿ ಬಾಲ್ಕನ್ ಸ್ಥಿತಿಯು ಭೀಕರಗೊಂಡಿತು. ಜರ್ಮನಿಯು ಬಾಲ್ಕನ್ ರಾಜ್ಯಗಳನ್ನು ಮತ್ತು ಅಟ್ಟೋಮನ್ ಸಾಮ್ರಾಜ್ಯವನ್ನು ಜರ್ಮನೀಕರಣಗೊಳಿಸಲು ಆಸಕ್ತವಾಗಿತ್ತು. ಹಾಗಾಗಿ ಪೂರ್ಣ ಸಾಮರಸ್ಯದಿಂದ ವರ್ತಿಸುತ್ತಿದ್ದ ಜರ್ಮನಿ ಮತ್ತು ಆಸ್ಟ್ರಿಯಾಗಳು ನಿಧಾನವಾಗಿ ಅವುಗಳ ರಾಜಕೀಯ ಮತ್ತು ಆರ್ಥಿಕ ಪ್ರಭಾವವನ್ನು ದಕ್ಷಿಣ-ಪೂರ್ವ ಯುರೋಪಿನಲ್ಲಿ ವಿಸ್ತರಿಸತೊಡಗಿದವು. ೧೮೯೮ರಲ್ಲಿ ಬರ್ಲಿನ್ ಮತ್ತು ವಿಯೆನ್ನಾದಿಂದ ಕಾನ್ ಸ್ಟಾಂಟಿನೋಪಲ್ ವರೆಗೆ ನೇರ ರೈಲ್ವೇ ಸಂಪರ್ಕ ಏರ್ಪಟ್ಟಿತು. ಏಷ್ಯಾಮೈನರ್ ಮತ್ತು ಯುಫ್ರಟೀಸ್, ಟೈಗ್ರೀಸ್‌ನ ಫಲವತ್ತಾದ ಕಣಿವೆಗಳ ಮೂಲಕ ಬಾಗ್ದಾದ್‌ವರೆಗೆ ರೈಲ್ವೇ ಹೆದ್ದಾರಿಯನ್ನು ನಿರ್ಮಿಸುವಲ್ಲಿ ಜರ್ಮನಿಯು ರಿಯಾಯಿತಿಯನ್ನು ಪಡೆಯಿತು. ಯುರೋಪಿನಿಂದ ಟರ್ಕರನ್ನು ಹೊರದಬ್ಬುವ ರಷ್ಯಾದ ನಿರ್ಧಾರಕ್ಕೆ ಟ್ಯುಟೋನಿಕ್ ಶಕ್ತಿಗಳು ಅಡ್ಡಿಯಾದವು. ಟ್ಯುಟೋನಿಕ್ ಶಕ್ತಿಗಳು ಟರ್ಕಿಯ ಸೈನ್ಯವನ್ನು ತರಬೇತುಗೊಳಿಸಲು ದಕ್ಷಿಣ-ಪೂರ್ವ ಯುರೋಪಿನಲ್ಲಿ ರಷ್ಯನ್ ಮತ್ತು ಬ್ರಿಟಿಷ್ ಎರಡರ ಪ್ರಭಾವವನ್ನು ಕಡಿಮೆಗೊಳಿಸುವಂತೆ ತನ್ನ ದೇಶವನ್ನು ತೊಡಗಿಸಲು ಟರ್ಕಿಯನ್ನು ಪ್ರೇರೇಪಿಸಿತು.

೧೯೦೪ರ ಬಲ್‌ಗ್ರೇಡ್ ಕ್ರಾಂತಿಯು ಸರ್ಬಿಯಾದಲ್ಲಿ ಅಸ್ಟ್ರಿಯನ ರಾಜಪ್ರಭುತ್ವ ವನ್ನು ಕೊನೆಗೊಳಿಸಿ ಸರ್ಬ್‌ಜನರ ರಾಷ್ಟ್ರೀಯವಾದಿ ಪ್ರಚಾರಕ್ಕೆ ಬೆಂಬಲಿಗನಾಗಿದ್ದ ಮತ್ತು ರಷ್ಯಾಕ್ಕೆ ವಿಧೇಯನಾಗಿದ್ದ ಕಿಂಗ್ ಪೀಟರ್‌ನನ್ನು ಸಿಂಹಾಸನಕ್ಕೆ ತಂದಿತು. ಬೋಸ್ನಿಯಾದ ಆಕ್ರಮಣವು ಪ್ರಥಮ ಮಹಾಯುದ್ಧಕ್ಕೆ ಕಾರಣವಾಯಿತು. ೧೮೭೮ರ ಕಾಂಗ್ರೆಸ್ ಸಭೆಯು ಆಸ್ಟ್ರಿಯಾಕ್ಕೆ ಬೋಸ್ನಿಯಾ ಮತ್ತು ಹರ್ಜೆ ಗೋವಿನಾಗಳನ್ನು ಆಡಳಿತಕ್ಕಾಗಿಯಷ್ಟೆ ನೀಡಿತ್ತು ಆಕ್ರಮಣಕ್ಕಾಗಿ ಅಲ್ಲ. ಆದರೆ ೧೯೦೮ರಲ್ಲಿ ಟರ್ಕಿಯ ಆಂತರಿಕ ಕ್ರಾಂತಿಯ ಉಪಯೋಗ ಪಡೆದು ಆಸ್ಟ್ರೀಯಾ, ಹಂಗೇರಿಗಳು ಬೋಸ್ನಿಯಾ ಮತ್ತು ಹರ್ಜೆಗೋವಿನಾಗಳು ಸರ್ಬ್ ಮಾತಾಡುವ ಪ್ರಾಂತ್ಯಗಳನ್ನು ತನ್ನೊಳಗೆ ಸೇರಿಸಿಕೊಂಡವು. ಇದು ಸರ್ಬಿಯಾ ಮತ್ತು ಮೋಂಟೆನಿಗ್ರೋ ದೇಶಗಳಲ್ಲಿ ಸಿಟ್ಟು ಮತ್ತು ಅಸಮಾಧಾನ ಎಬ್ಬಿಸಿತು. ರಷ್ಯಾವು ಆ ಕೂಡಲೇ ಸರ್ಬ್ ರಾಷ್ಟ್ರಗಳಲ್ಲಿ ರಕ್ಷಿಸಲು ಮತ್ತು ಆಸ್ಟ್ರಿಯನ್ನರ ದುರಾಕ್ರಮಣ ತಡೆಯೊಡ್ಡಲು ಕ್ರಮಗಳನ್ನು ಕೈಗೊಂಡಿತು. ಹೀಗೆ ರಷ್ಯಾವು ಕಾರ್ಯನಿರತವಾದಾಗ ಆಸ್ಟ್ರಿಯಾ ಮತ್ತು ಹಂಗೇರಿಗಳಿಗೆ ಪೂರ್ಣ ಮಿಲಿಟರಿ ಬೆಂಬಲ ನೀಡುವ ತನ್ನ ಇರಾದೆಯನ್ನು ಜರ್ಮನಿಯು ಘೋಷಿಸಿತು. ರಷ್ಯಾವು ಜಪಾನ್ ಯುದ್ಧದಿಂದ ಪೂರ್ಣವಾಗಿ ಚೇತರಿಸಿಕೊಂಡಿರದ ಕಾರಣ ಸುಮ್ಮನಿರಬೇಕಾಯಿತು. ಹಾಗಿದ್ದರೂ ರಷ್ಯಾದ ಪ್ಯಾನ್ ಸ್ಲಾವಿಸ್ಟರು ಜರ್ಮನ್ನರ ಈ ಅವಮಾನವನ್ನು ಮರೆತಿರಲಿಲ್ಲ. ಭವಿಷ್ಯದಲ್ಲಿ ಇಂತಹ ಅವಮಾನ ಗಳನ್ನು ತಡೆಯಲು ರಷ್ಯಾವು ತನ್ನ ಸೈನ್ಯವನ್ನು ಪುನರ್ ಸಂಘಟಿಸಲು ಮತ್ತು ಶಸ್ತ್ರಾಸ್ತ್ರ ಸಿದ್ಧತೆಯಲ್ಲಿ ತೊಡಗಿತು.

೧೯೧೨-೧೩ರಲ್ಲಿ ಸರ್ಬಿಯಾ, ಮೊಂಟೆನಿಗ್ರೋ, ಬಲ್ಗೇರಿಯಾ, ಗ್ರೀಸ್‌ಗಳ ಬಾಲ್ಕನ್ ಸಂಸ್ಥಾನಗಳು ಟರ್ಕಿಯನ್ನು ಆಕ್ರಮಿಸಿ ಸೋಲಿಸಿದಾಗ ಈ ಸಮಸ್ಯೆಯು ಯುದ್ಧಕ್ಕೆ ಒಂದು ಕಾರಣವಾಯಿತು. ಈ ಸಮಯದಲ್ಲಿ ಆಕ್ರಮಿತ ಟರ್ಕಿಯ ಸಂಸ್ಥಾನಗಳನ್ನು ವಿಜಯಶಾಲಿ ರಾಷ್ಟ್ರಗಳು ಹೇಗೆ ಹಂಚಿಕೊಳ್ಳಬೇಕೆಂಬುದು ಪ್ರಶ್ನೆ ಯಾಯಿತು. ಸರ್ಬಿಯಾದ ಯುಗೋಸ್ಲಾವ್ ರಾಜ್ಯಗಳು ಮತ್ತು ಮೊಂಟೆನಿಗ್ರೋಗಳು ತಾವು ಬಯಸಿದಷ್ಟು ಸಂಸ್ಥಾನಗಳನ್ನು ವಶಪಡಿಸಿಕೊಳ್ಳುವುದನ್ನು ಆಸ್ಟ್ರಿಯಾ ಮತ್ತು ಹಂಗೇರಿಗಳು ಇಷ್ಟಪಡಲಿಲ್ಲ. ಆದರೆ ಅವರುಗಳಿಗೆ ರಷ್ಯಾದ ಬೆಂಬಲವಿತ್ತು. ಹಾಗಾಗಿ ರಷ್ಯಾ ಆಸ್ಟ್ರಿಯಾಗಳ ಯುದ್ಧ ಆರಂಭವಾಯಿತು. ಅದೃಷ್ಟವಶಾತ್, ಬ್ರಿಟನ್ನಿನ ವಿದೇಶಾಂಗ ಕಾರ್ಯದರ್ಶಿ ಸರ್ ಎಡ್ವರ್ಡ್ ಗ್ರೇ ತಮ್ಮ ಸಮ್ಮೇಳನ ಸರಣಿಗಳ ಹಾಗೂ ಸಮಯೋಚಿತ ಹೊಂದಾಣಿಕೆಗಳ ಮೂಲಕ ಈ ಯುದ್ಧವನ್ನು ತಡೆಯಲು ಸಫಲರಾದರು. ಇದರಿಂದಾಗಿ ತಮ್ಮ ಸಾಮ್ರಾಜ್ಯದ ಬಹುಪಾಲು ಭಾಗ ಕೈ ತಪ್ಪಿ ಹೋಗುವುದು ಎಂಬ ಭೀತಿಯಿಂದಾಗಿ ಜರ್ಮನ್ - ಆಸ್ಟ್ರೇಲಿಯಾಗಳು ಅಸಮಾಧಾನ ಗೊಂಡವು. ೧೯೧೩ರಲ್ಲಿ ಸರ್ಬಿಯಾದ ಆಕಾಂಕ್ಷೆಗೆ ತಡೆಯೊಡ್ಡಬೇಕೆಂದು ಆಸ್ಟ್ರಿಯಾವು ತನ್ನ ಮಿತ್ರ ರಾಷ್ಟ್ರಗಳಿಗೆ ರಹಸ್ಯ ಸೂಚನೆ ನೀಡಿತು.

೭. ಯುದ್ಧ ಸನ್ನದ್ಧತೆಯು ಪ್ರಥಮ ಮಹಾಯುದ್ಧದ ಇನ್ನೊಂದು ಕಾರಣ. ತತ್ಕಾಲಕ್ಕೆ ಶಾಂತಿ ನೆಲೆಸಿದ್ದರೂ ಯಾವ ಕ್ಷಣದಲ್ಲಿ ಯುದ್ಧ ಭುಗಿಲೇಳಬಹುದು ಎಂಬುದು ಯಾರಿಗೂ ತಿಳಿದಿರಲಿಲ್ಲ. ಪ್ರಬಲ ರಾಷ್ಟ್ರಗಳು ಅವಿರತವಾಗಿ ತಮ್ಮ ಸೈನ್ಯ ಬಲಗಳನ್ನು ಬಲಪಡಿಸಿಕೊಳ್ಳುತ್ತಿದ್ದವು. ೧೯೧೪ರ ಜೂನ್ ನಲ್ಲಿ ಪೆಟ್ರೋಗಾರ್ಡ್ ಪತ್ರಿಕೆಯು "ರಷ್ಯಾ ಸಿದ್ಧವಾಗಿದೆ, ಅಂತೆಯೇ ಫ್ರಾನ್ಸ್ ಕೂಡಾ

ಸಿದ್ಧವಾಗಿದೆ" ಎಂದು ಘೋಷಿಸಿತು. ಅಲ್ಲದೆ ಈ ಸಮಯದಲ್ಲಿ ಪತ್ರಿಕೆಗಳೂ ಜನರಲ್ಲಿ ದ್ವೇಷ, ವಿಷ ಭಾವನೆಗಳನ್ನು ಬಿತ್ತಿದವು. ಅಲ್ಲದೆ ಎರಡೂ ರಾಷ್ಟ್ರಗಳ ಪತ್ರಿಕೆಗಳು ವಿವಾದಾಸ್ಪದ ವಿಷಯಗಳನ್ನೆತ್ತಿಕೊಂಡು ಪತ್ರಿಕಾ ಸಮರವನ್ನು ಪ್ರಾರಂಭಿಸಿದವು.

೮. ಆಸ್ಟ್ರಿಯಾದ ಆರ್ಚ್‌ಡ್ಯೂಕನ ಕಗ್ಗೊಲೆಯು ಪ್ರಥಮ ವಿಶ್ವ ಸಮರದ ತತ್‌ಕ್ಷಣದ ಮತ್ತು ಸ್ಫೋಟಕ ಕಾರಣವಾಯಿತು. ೧೯೧೪ರ ಜೂನ್ ೨ ರಂದು ಬೋಸ್ನಿಯಾದ ಸೆರಾಜಿವೊ ಪಟ್ಟಣಕ್ಕೆ ಭೇಟಿ ನೀಡಿದ ಆಸ್ಟ್ರಿಯಾದ ಯುವರಾಜ ಆರ್ಚ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನಂಡ್ ಮತ್ತು ಅವನ ಪತ್ನಿಯನ್ನು ಇಬ್ಬರು ಯುಗೋಸ್ಲಾವಿಯನ್ನರು ಕೊಲೆಗೈದರು. ಕೊಲೆಯಾದ ಫ್ರಾನ್ಸಿಸನು ಆಸ್ಟ್ರಿಯಾದ ಚಕ್ರವರ್ತಿ ಫ್ರಾನ್ಸಿಸ್ ಜೋಸೆಫ್‌ನ ಅಳಿಯ ಹಾಗೂ ಉತ್ತರಾಧಿಕಾರಿಯಾಗಿದ್ದ ಕಾರಣ ಈ ಘಟನೆಯು ಆಸ್ಟ್ರಿಯಾದ ಪರಿಸ್ಥಿತಿಯನ್ನು ವಿಷಮ ಸ್ಥಿತಿಗೆ ತಂದೊಡ್ಡಿತು. ಕೊಲೆಗಾರರು ಆಸ್ಟ್ರಿಯನ್ನರಾದರೂ ಅವರು ಸರ್ಬಿಯಾ ಜನಾಂಗಕ್ಕೆ ಸೇರಿದವರಾಗಿದ್ದರು. ಅಲ್ಲದೆ ಸರ್ಬಿಯಾದೊಂದಿಗಿನ ಆಸ್ಟ್ರಿಯನ್ನರ ಸಂಬಂಧ ಉತ್ತಮವಾಗಿರದ ಕಾರಣ ಈ ಕುರಿತು ಸರ್ಬಿಯಾಕ್ಕೆ ಶಿಕ್ಷೆಯಾಗುವುದು ಅನಿವಾರ್ಯವೆಂದು ಆಸ್ಟ್ರಿಯನ್ನರು ಭಾವಿಸಿದರು.

ವಾಸ್ತವವಾಗಿ ಕೊಲೆಗಾರರು ಆಸ್ಟ್ರೋ-ಹಂಗೇರಿಗೆ ಸೇರಿದವರಾಗಿದ್ದರು. ಆಸ್ಟ್ರಿಯಾದ ಒಬ್ಬ ಗೂಢಚಾರನ ಮೂಲಕ ಈ ಕೊಲೆಯ ಹಿನ್ನೆಲೆಯಲ್ಲಿ ಸರ್ಬಿಯಾದ ಕೈವಾಡವಿಲ್ಲವೆಂದು ರುಜುವಾತಾದರೂ, ಆಸ್ಟ್ರಿಯಾದ ವಿದೇಶಾಂಗ ಮಂತ್ರಿ ಕೌಂಟ್ ಬರ್ಕ್ ಟೋಲ್ಡನು ಈ ವಿಷಯವನ್ನು ಮುಚ್ಚಿಟ್ಟು ಜನರಲ್ಲಿ ಸರ್ಬಿಯಾವೇ ಅಪರಾಧಿಯೆಂಬ ಭಾವನೆಯು ಬೆಳೆಯುವಂತೆ ಮಾಡಿದನು. ಅವನ ಉದ್ದೇಶದ ಪ್ರಕಾರ ಈ ವಿಚಾರವು ಸರ್ಬಿಯಾವನ್ನು ಶಿಕ್ಷಿಸಲು ಆಸ್ಟ್ರಿಯಾಕ್ಕೆ ಪೂರಕ ಕಾರಣವಾಗುವುದಲ್ಲದೆ ಸರ್ಬಿಯವನ್ನು ಶಾಶ್ವತವಾಗಿ ವಿಕಲಾಂಗಗೊಳಿಸಲು ಇದೇ ಸೂಕ್ತ ಸುಸಂದರ್ಭ ಎಂಬುದಾಗಿತ್ತು.

೧೯೧೪ರ ಜುಲೈ ೨೩ರಂದು ಕೌಂಟ್ ಬರ್ಕ್ ಟೋಲ್ಡನು ಆಸ್ಟ್ರಿಯನ್ ವಿರೋಧಿ ಪತ್ರಿಕೆಗಳನ್ನು, ಪ್ರಕಟಣೆಗಳನ್ನು, ಶಿಕ್ಷಕರನ್ನು, ಪಠ್ಯಪುಸ್ತಕಗಳನ್ನು ಬಹಿಷ್ಕರಿಸುವ ಬೇಡಿಕೆಗಳನ್ನು ಒಳಗೊಂಡ ಅಂತಿಮ ಸೂಚನೆಯನ್ನು ಸರ್ಬಿಯಾಕ್ಕೆ ಕಳಿಹಿಸಿದನು. ವಾಸ್ತವವಾಗಿ ಇದು ಸರ್ಬಿಯಾದ ಸ್ವಾತಂತ್ರ್ಯವನ್ನು ಕಸಿಯುವ ಹುನ್ನಾರವಾಗಿತ್ತು. ಸರ್ಬಿಯಾವು ಈ ಸೂಚನೆಗೆ ೪೮ ಗಂಟೆಗಳೊಳಗೆ ಉತ್ತರಿಸಬೇಕಿತ್ತು. ತನ್ನ ರಾಷ್ಟ್ರೀಯ ಗೌರವಕ್ಕೆ ಕುಂದು ತರುವ ಸೂಚನೆಗಳೆಂಬ ಕಾರಣದಿಂದ ಸರ್ಬಿಯಾವು ೧೯೧೪ರ ಜುಲೈ ೨೫ ರಂದು ಅದರಲ್ಲಿನ ಕೆಲವು ಬೇಡಿಕೆಗಳನ್ನು ತಿರಸ್ಕರಿಸಿತು. ಆದರೆ ಈ ಪ್ರಶ್ನೆಗಳನ್ನು ಹೇಗ್ ನ್ಯಾಯಾಲಯದ ಅಥವಾ ಪ್ರಮುಖ ರಾಷ್ಟ್ರಗಳ ಮುಂದಿಡುವುದಾಗಿ ಒಪ್ಪಿಕೊಂಡಿತು. ರಷ್ಯಾ ಮತ್ತು ಇಂಗ್ಲೆಂಡ್‌ಗಳು ಮಾತುಕತೆಗೆ ಸಮಯಾವಕಾಶ ಬೇಡಲು ಹೇಳಿಕೊಂಡವು. ಆಸ್ಟ್ರಿಯಾವು ಈ ಉತ್ತರವನ್ನು ಪಲಾಯನವಾದ ಹಾಗೂ ಅತೃಪ್ತಿಕರವೆಂದು ಪರಿಗಣಿಸಿ ಸರ್ಬಿಯಾದೊಂದಿಗೆ ರಾಜತಾಂತ್ರಿಕ ಸಂಬಂಧಗಳನ್ನು ಕಡಿದುಕೊಂಡು ಜುಲೈ ೨೮ ರಂದು ಯುದ್ಧ ಘೋಷಣೆ ಮಾಡಿತು.

ರಷ್ಯಾವು ಈಗ ಸರ್ಬಿಯಾದ ಹಿರಿ ಸಹೋದರರಂತೆ ವರ್ತಿಸಿ, ಸ್ಲಾವ್ ರಾಜಧಾನಿಯನ್ನು ಆಕ್ರಮಿಸದಿರುವಂತೆ ಆಸ್ಟ್ರಿಯಾವನ್ನು ಎಚ್ಚರಿಸಿತು. ಯುದ್ಧಕ್ಕಾಗಿ ಎಂಬಂತೆ ರಷ್ಯಾವು ತನ್ನೆಲ್ಲ ಸೈನ್ಯದ ಒಗ್ಗೂಡುವಿಕೆಗೆ ಆಜ್ಞಾಪಿಸಿತು. ಜರ್ಮನಿಯು ಆಸ್ಟ್ರಿಯಾದ ನೆರವಿಗೆ ನಿಂತು ಯುದ್ಧ ಸಿದ್ಧತೆ ಕೊನೆಗೊಳಿಸುವಂತೆ ರಷ್ಯಾವನ್ನು ಕೇಳಿಕೊಂಡಿತು. ಆದರೆ ರಷ್ಯಾವು ಅದನ್ನು ತಿರಸ್ಕರಿಸಿತು. ಆದ್ದರಿಂದ ಜರ್ಮನಿಯು ರಷ್ಯಾದ ಮೇಲೆ ೧೯೧೪ರ ಅಗಸ್ಟ್ ೧ರಂದು ಯುದ್ಧ ಘೋಷಿಸಿತು. ಫ್ರಾನ್ಸ್ ದೇಶವು ರಷ್ಯಾದ ಪರವಾಗಿದ್ದುದರಿಂದ, ಅದು ರಷ್ಯಾಕ್ಕೆ ಸಹಾಯ ಮಾಡಲಿರುವುದೇ ಎಂದು ಜರ್ಮನಿಯು ಫ್ರೆಂಚ್ ಸರ್ಕಾರದಿಂದ ಉತ್ತರ ಬಯಸಿತು. ಫ್ರಾನ್ಸ್ ದೇಶವು ತಟಸ್ಥವಾಗಿರಲು ಒಪ್ಪದಾದಾಗ ಜರ್ಮನಿಯು ಅದರ ಮೇಲೆ ೧೯೧೪ರ ಆಗಸ್ಟ್ ೩ರಂದು ಯುದ್ಧ ಘೋಷಿಸಿತು. ಜರ್ಮನಿಯು ಆಸ್ಟ್ರಿಯಾದ, ರಷ್ಯಾವು ಸರ್ಬಿಯಾದ ಬೆಂಬಲಕ್ಕೆ ನಿಂತಾಗ ಇಟಲಿ, ಫ್ರಾನ್ಸ್, ಬ್ರಿಟನ್, ಅಮೆರಿಕಾ, ಜಪಾನ್ ಮುಂತಾದ ರಾಷ್ಟ್ರಗಳು ಯುದ್ಧ ಕಣಕ್ಕಿಳಿದವು. ಒಂದು ಬಣದಲ್ಲಿ ಆಸ್ಟ್ರಿಯಾ, ಜರ್ಮನಿ, ಬಲ್ಗೇರಿಯಾ, ಟರ್ಕಿಗಳಂತಹ ದೇಶಗಳಿದ್ದರೆ ಅವುಗಳ ವಿರುದ್ಧದ ಬಣದಲ್ಲಿ ರಷ್ಯಾ, ಫ್ರಾನ್ಸ್, ಬ್ರಿಟನ್, ಅಮೆರಿಕಾ, ಜಪಾನ್ , ಕೆನಡಾ, ಚೈನಾ ಮತ್ತಿತರ ರಾಷ್ಟ್ರಗಳಿದ್ದವು.

ಜರ್ಮನಿ, ಆಸ್ಟ್ರಿಯಾ-ಹಂಗೇರಿ ಮತ್ತು ರಷ್ಯಾಗಳೇ ಪ್ರಥಮ ಮಹಾಯುದ್ಧದ ಮುಖ್ಯ ಕಾರಣಗಳೆಂದರೂ, ಒಟ್ಟಿನಲ್ಲಿ ಈ ಕೆಳಗಿನ ಮೂಲಭೂತ ಕಾರಣಗಳೂ ಮುಖ್ಯವಾಗಿವೆ-

೧. ಅಂತಾರಾಷ್ಟ್ರೀಯ ಅರಾಜಕತೆ.
೨. ಪ್ರಾಂತ್ಯಗಳ ಬಗೆಗಿನ ರಾಷ್ಟ್ರೀಯ ಸಮಸ್ಯೆಗಳು.
೩. ಯುದ್ಧವೆಂದರೆ 'ಬಲಶಾಲಿಯ ಉಳಿವು' ಎಂಬ ತಪ್ಪುಭಾವನೆ.
೪. ರಾಷ್ಟ್ರೀಯ ಘನತೆಯ ತಪ್ಪು ಗ್ರಹಿಕೆ.
೫. ಮಿಲಿಟರಿ ಪ್ರಾಬಲ್ಯ.
೬. ನೌಕಾ ಪ್ರಾಬಲ್ಯ.
೭. ರಹಸ್ಯ ರಾಜತಾಂತ್ರಿಕ ಒಪ್ಪಂದಗಳು ಇತ್ಯಾದಿ.

**ಯುದ್ಧದ ನಡೆ**

ಪ್ರಥಮ ಜಾಗತಿಕ ಯುದ್ಧವು ಭೂ, ಜಲ ಮತ್ತು ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ಯುದ್ಧ ವಿಮಾನಗಳನ್ನು ಉಪಯೋಗಿಸಿಕೊಂಡ ಯುದ್ಧವಾಗಿದೆ. ಜರ್ಮನಿಯು ಹೊಸ ಮತ್ತು ಶಕ್ತಿಶಾಲಿ ಶಸ್ತ್ರಾಸ್ತ್ರಗಳನ್ನು, ಯುದ್ಧ ವಾಹನಗಳನ್ನು, ಮಾರಕ ಶೆಲ್ ಗಳನ್ನು, ವಿಷಾನಿಲ, ಮೆಷಿನ್‌ಗನ್‌ಗಳನ್ನು ಬಳಸಿಕೊಂಡಿತು. ಜರ್ಮನಿಯ ಜಲಾಂತರ್ಗಾಮಿ ಗಳು ಮಿತ್ರ ರಾಷ್ಟ್ರಗಳ ನೌಕೆಗಳನ್ನು ನಾಶಪಡಿಸಿದವು. ಬೇಕಾಬಿಟ್ಟಿ ಬಾಂಬ್‌ಗಳನ್ನು ವಿಮಾನಗಳ ಮೂಲಕ ಪ್ರಯೋಗಿಸಲಾಯಿತು. ಹೀಗೆ ಯುದ್ಧವು ಭೀಕರವಾಗಿ ಅಸಂಖ್ಯ ಜನರನ್ನು ಬಲಿ ತೆಗೆದುಕೊಂಡಿತು. ಆರಂಭದಲ್ಲಿ ಜರ್ಮನಿ ಜಯಶಾಲಿಯಾಗುತ್ತ ಬಂತು. ಅನಂತರ ನೌಕಾ ಪ್ರಾಬಲ್ಯ ಮತ್ತು ಸಮೃದ್ಧತೆಯಿಂದಾಗ ಮಿತ್ರ ರಾಷ್ಟ್ರಗಳ ಕೈಮಿಗಿಲಾಯಿತು. ಅಮೆರಿಕಾದ ಪ್ರವೇಶದ ಬಳಿಕವಂತೂ ಮಿತ್ರರಾಷ್ಟ್ರಗಳ ಯಶಸ್ಸು ನಿಶ್ಚಿತವಾಯಿತು. ಜರ್ಮನಿಯು ಹೀನಾಯ ಸೋಲನ್ನನುಭವಿಸಿತು ಮತ್ತು ನವೆಂಬರ್ ೧೯೧೮ರಲ್ಲಿ ಬೇಷರತ್ತಾಗಿ ಶರಣಾಯಿತು.

**ವರ್ಸೈಲ್ಸ್ ಒಪ್ಪಂದ-೧೯೧೯**

ವಿಜೇತ ಮಿತ್ರರಾಷ್ಟ್ರಗಳು ಶಾಂತಿ ಸ್ಥಾಪನೆಯ ಕರಾರುಗಳನ್ನು ನಿವಾರಿಸಲು ೧೯೧೯ರ ಜನವರಿ ೧೮ರಂದು ಪ್ಯಾರಿಸ್‌ನಲ್ಲಿ ಸಭೆ ಸೇರಿದವು. ಮೂವತ್ತೆರಡು ರಾಷ್ಟ್ರಗಳ ಪ್ರತಿನಿಧಿಗಳು ಈ ಸಭೆಯಲ್ಲಿ ಪಾಲ್ಗೊಂಡಿದ್ದರು. ಅವರಲ್ಲಿ ಪ್ರಧಾನ ಮಂತ್ರಿಗಳು, ರಾಜಕೀಯ ಮುಖಂಡರು, ವಿದೇಶಾಂಗ ಮಂತ್ರಿಗಳು ಮತ್ತು ರಾಯಭಾರಿಗಳು ಸೇರಿದ್ದರು. ಅಮೆರಿಕಾದ ವುಡ್ರೋವಿಲ್ಸನ್, ಇಂಗ್ಲೆಂಡಿನ ಲ್ಯಾಯ್ಡಾ ಜಾರ್ಜ್, ಫ್ರಾನ್ಸಿನ ಜಾರ್ಜ್ ಕ್ಲೆಮೆನ್ಸಿಯೋ, ಇಟಲಿಯ ಒರ್ಲೆಡೋ, ಗ್ರೀಸ್‌ನ ವೆನಿಜೆಲೋಸ್, ಜಪಾನಿನ ಮಾರ್ಕ್ವಿಸ್ ಸೇನೋಯ್ ಅವರಲ್ಲಿ ಮುಖ್ಯರಾಗಿದ್ದರು. ಶ್ರೇಷ್ಠ ಆದರ್ಶವಾದಿಯೂ, ಶಾಂತಿಪ್ರಿಯನೂ ಆಗಿದ್ದ ವುಡ್ರೋವಿಲ್ಸನ್‌ನು ನಡೆದ ಯುದ್ಧವನ್ನು "ಯುದ್ಧ ಕೊನೆಗೊಳಿಸಲು ನಡೆದ ಯುದ್ಧ"ವೆಂದು ಪರಿಗಣಿಸಿ, ಜಗತ್ತನ್ನು ಪ್ರಜಾಪ್ರಭುತ್ವಕ್ಕೆ ಅನುವಾಗುವಂತೆ ಮಾಡಬೇಕೆಂದು ಬಯಸಿದ್ದನು. ಅವನು ತನ್ನ ಹದಿನಾಲ್ಕು ಅಂಶಗಳ ಕಾರ್ಯಯೋಜನೆಯನ್ನು ಮುಂದಿರಿಸಿದನು. ಆದರೆ ಕ್ಲೆಮೆನ್ಸಿಯೋ, ಲ್ಯಾಯ್ಡಾ ಜಾರ್ಜ್ ಮುಂತಾದ ನಾಯಕರು ಜರ್ಮನಿಯನ್ನು ಇನ್ನೂ ದ್ವೇಷಿಸುತ್ತಿದ್ದರು. "ಕೈಸರನನ್ನು ಗಲ್ಲಿಗೇರಿಸಿ", "ಜರ್ಮನ್ನರು ಯುದ್ಧದ ಫಲವುಣ್ಣಲಿ" "ಜರ್ಮನರು ನಾಶವಾಗಲಿ" ಎಂಬುದು ಅವರ ಘೋಷಣೆಗಳಾದವು. ಯುದ್ಧವೇ ಒಂದು ದುರಂತವಾಗಿತ್ತು, ಆದರೆ ಅದರ ನಂತರದ ಶಾಂತಿ ಒಪ್ಪಂದಗಳು ಇನ್ನೂ ಹೆಚ್ಚಿನ ದುರಂತವಾಗಿತ್ತು. ಅಂತಿಮವಾಗಿ ಐದು ಒಪ್ಪಂದಗಳು ರೂಪುಗೊಂಡವು. ಅವು ಜರ್ಮನಿಯೊಂದಿಗೆ ವರ್ಸೈಲ್ಸ್ ಒಪ್ಪಂದ, ಆಸ್ಟ್ರಿಯಾದೊಂದಿಗೆ ಸೈಂಟ್ ಜರ್ಮೇನ್ ಒಪ್ಪಂದ, ಹಂಗೇರಿಯಾದೊಂದಿಗಿನ ಟ್ರಿಯೊನಾನ್ ಒಪ್ಪಂದ, ಬಲ್ಗೇರಿಯಾದೊಂದಿಗಿನ ನೆವಿಲ್ಲೀ ಒಪ್ಪಂದ ಮತ್ತು ಟರ್ಕಿಯೊಂದಿಗೆ ಸರ್ವ್ಸ್ ಮತ್ತು ಲೌಸಾನ್ ಒಪ್ಪಂದ.

**ವರ್ಸೈಲ್ಸ್ ಒಪ್ಪಂದದ ಕರಾರುಗಳು**

ಜರ್ಮನಿಯೊಡನೆ ಶಾಂತಿಯ ಕರಾರುಗಳನ್ನು ವರ್ಸೈಲ್ಸ್ ಒಪ್ಪಂದವು ಒಳಗೊಂಡಿತ್ತು. ಮಿತ್ರರಾಷ್ಟ್ರಗಳೊಡನೆ ಚರ್ಚಿಸಲು ಜರ್ಮನಿಗೆ ಯಾವುದೇ ಅವಕಾಶ ಕೊಡದೆ, ಪ್ರಸ್ತಾಪಗಳನ್ನು ಸ್ವೀಕರಿಸುವಂತೆ, ಕೊನೆಯದಾಗಿ ಸಹಿ ಹಾಕುವಂತೆ ಒತ್ತಾಯಿಸಲಾಯಿತು. ವರ್ಸೈಲ್ಸ್ ಒಪ್ಪಂದಕ್ಕೆ ೧೯೧೯ರ ಜೂನ್ ೨೮ರಂದು ಸಹಿ ಹಾಕಲಾಯಿತು.

೧. ಜರ್ಮನಿಯು ತನ್ನ ಪ್ರಾಂತ್ಯಗಳನ್ನು ಫ್ರಾನ್ಸಿಗೆ ಬಿಟ್ಟುಕೊಡಬೇಕಾಗಿ ಬಂತು. ಅಲ್ಸೇಸ್ ಮತ್ತು ಲೊರೈಸ್ ಪ್ರಾಂತ್ಯಗಳನ್ನು ಫ್ರಾನ್ಸ್ ಪಡೆದುಕೊಂಡಿತು. ೧೫ ವರ್ಷಗಳ ತನಕ ಜರ್ಮನಿಯು ಖನಿಜ ಸಂಪದ್ಭರಿತವಾದ ಸ್ಹಾರ್ ಕಣಿವೆಯನ್ನು ಫ್ರಾನ್ಸಿಗೆ ಬಿಟ್ಟಕೊಡಬೇಕಾಯಿತು.

೨. ರಷ್ಯಾದಿಂದ ಪ್ರತ್ಯೇಕಗೊಂಡು ಪೋಲೆಂಡ್ ಪ್ರತ್ಯೇಕ ರಾಷ್ಟ್ರವಾಯಿತು. ಪ್ರಷ್ಯಾ ಮತ್ತು ಆಷ್ಟ್ರಿಯಾಗಳನ್ನು ಸ್ವತಂತ್ರ ಸಂಸ್ಥಾನಗಳನ್ನಾಗಿಸಲಾಯಿತು. ಪೋಸೆನ್ ಮತ್ತು ಪಶ್ಚಿಮ ಪ್ರಷ್ಯಾದ ದೊಡ್ಡ ಭಾಗವನ್ನು ಪೋಲೆಂಡ್ ಪಡೆಯಿತು. ಡೇನ್‌ಜಿಗ್ ನಗರವನ್ನು 'ಮುಕ್ತ ನಗರ'ವೆಂದು ಘೋಷಿಸಲಾಯಿತು.

೩. ಡೇನ್‌ಜಿಗ್ ನಗರವನ್ನು ಜರ್ಮನಿಯಿಂದ ಮುಕ್ತ ನಗರವೆಂದು ಪ್ರತ್ಯೇಕಿಸಿ ರಾಷ್ಟ್ರ ಸಂಘದ ಮೇಲುಸ್ತುವಾರಿಗೆ ವಹಿಸಲಾಯಿತು. ಡೇನಜಿಗ್ ನಗರದಲ್ಲಿ ಪೋಲೆಂಡ್ ವಿಶೇಷ ಹಕ್ಕುಗಳನ್ನು ಪಡೆಯಿತು.

೪. ಜರ್ಮನಿಯು ಸಾಗರೋತ್ತರ ವಸಾಹತುಗಳ ಮೇಲೆ ಹತೋಟಿ ಕಳೆದುಕೊಂಡಿತು. ರೈನ್ ಭೂ ಪ್ರದೇಶವನ್ನು ನಿಶ್ಯಸ್ತ್ರೀಕರಣಗೊಳಿಸಬೇಕಾಗಿ ಬಂತು.

೫. ಉತ್ತರ ಫ್ರಾನ್ಸಿನ ಕಲ್ಲಿದ್ದಲು ಗಣಿಗಳನ್ನು ನಾಶಪಡಿಸಿದ್ದಕ್ಕಾಗಿ ಪರಿಹಾರವೆಂಬಂತೆ ಜರ್ಮನಿಯು ಸ್ಹಾರ್ ಪ್ರದೇಶದ ಕಲ್ಲಿದ್ದಲು ಗಣಿಗಳ ಅಧಿಕಾರವನ್ನು ಶಾಶ್ವತವಾಗಿ ಫ್ರಾನ್ಸಿಗೆ ಒಪ್ಪಿಸಬೇಕಾಯಿತು.

೬. ಮೋರ್ಸೆನೆಟ್, ಇಯೋಪೆನ್, ಮಲ್ಮೆಡಿ ಪ್ರದೇಶಗಳು ಬೆಲ್ಜಿಯಂಗೆ ಸೇರ್ಪಡೆಯಾದವು.

೭. ಮೆಮೆಲ್ ನಗರವು ಲಿಥುವೇನಿಯಾಕ್ಕೆ ಸೇರ್ಪಡೆಗೊಂಡಿತು.

೮. ಮೇಲಿನ ಸಿಲೇಸಿಯಾದ ಭಾಗವನ್ನು ಜೆಕೋಸ್ಲಾವಾಕಿಯಾ ಪಡೆದುಕೊಂಡಿತು.

೯. ಉತ್ತರ ಶೆಲ್ಸ್ಂಗ್ ಪ್ರದೇಶವು ಡೆನ್ಮಾರ್ಕಿಗೆ ಹಸ್ತಾಂತರವಾಯಿತು.

೧೦. ಯುರೋಪಿನ ಭೂ ಪ್ರಾಂತ್ಯಗಳನ್ನಲ್ಲದೆ, ಜರ್ಮನಿಯು ಸಾಗರೋತ್ತರ ವಸಾಹತು ಗಳನ್ನೂ ಕಳೆದುಕೋಂಡಿತು. ಈ ವಸಾಹತುಗಳ ಆಡಳಿತ ಉಸ್ತುವಾರಿಯನ್ನು 'ಮ್ಯಾಂಡೇಟ್ ಪದ್ಧತಿ'ಯಂತೆ ಮಿತ್ರರಾಷ್ಟ್ರಗಳು ನೋಡಿಕೊಳ್ಳಲಾರಂಭಿಸಿದವು.

೧೧. ಜರ್ಮನಿಯ ಮಿಲಿಟರಿ ಶಕ್ತಿಯನ್ನು ಶಾಶ್ವತವಾಗಿ ಕೆಡವಿ ಹಾಕಲು ಪ್ರಯತ್ನಗಳು ನಡೆದವು. ಶಸ್ತ್ರಾಸ್ತ್ರ ಉತ್ಪಾದನೆಯ ಮೇಲೆ ನಿಯಂತ್ರಣ ಹೇರಲಾಯಿತು. ಯುದ್ಧ ಸಾಮಗ್ರಿಗಳ ಆಮದು ರಫ್ತು ವ್ಯಾಪಾರವನ್ನು ತಡೆಹಿಡಿಯಲಾಯಿತು.

೧೨. ಜರ್ಮನಿಯು ಅತಿ ಸಣ್ಣ ಪ್ರಮಾಣದಲ್ಲಿ ನೌಕಾಪಡೆಯನ್ನು ಹೊಂದಬಹುದಾಗಿತ್ತು. ಜಲಾಂತರ್ಗಾಮಿಗಳಿಗೆ ಅವಕಾಶವಿರಲಿಲ್ಲ. ಜರ್ಮನಿಯು ತನ್ನೆಲ್ಲಾ ಯುದ್ಧನೌಕೆಗಳನ್ನು ನಾಶಪಡಿಸಬೇಕಿತ್ತು. ಇಲ್ಲವೇ ವ್ಯಾಪಾರೋದ್ದೇಶಗಳಿಗಾಗಿ ಬಳಸಬೇಕಿತ್ತು ಅಥವಾ ಮಿತ್ರಕೂಟಕ್ಕೆ ಹಸ್ತಾಂತರಿಸಬೇಕಿತ್ತು.

೧೩. ಜರ್ಮನಿಯ ದೊರೆಯಾಗಿದ್ದ ಎರಡನೆಯ ವಿಲಿಯಂನ ವಿರುದ್ಧ ಗಂಭೀರ ಆರೋಪಗಳನ್ನು ಹೊರಿಸಲಾಯಿತು. ನ್ಯಾಯಾಲಯದಲ್ಲಿ ಇದು ನಿರ್ಣಯವಾಗ ಬೇಕಿತ್ತಾದರೂ ಮಿತ್ರಕೂಟಕ್ಕೆ ಆತನನ್ನು ಹಸ್ತಾಂತರಿಸಲು ಹಾಲೆಂಡ್ ಸರ್ಕಾರವು ತಿರಸ್ಕರಿಸಿದ ಕಾರಣ ಅದು ಸಾಧ್ಯವಾಗಲಿಲ್ಲ.

೧೪. ಪ್ರಥಮ ಮಹಾಯುದ್ಧಕ್ಕೆ ಜರ್ಮನಿಯು ತಾನೇ ಕಾರಣವೆಂದು ಒಪ್ಪಿಕೊಳ್ಳಬೇಕಾಯಿತು. ಯುದ್ಧದ ಸಂದರ್ಭದಲ್ಲಿ ಪಡೆದ ಹಣವನ್ನು ಜರ್ಮನಿಯು ಶೇ.೫ರ ಬಡ್ಡಿಯೊಂದಿಗೆ ಬೆಲ್ಜಿಯಂಗೆ ಪರಿಹಾರವಾಗಿ ನೀಡಬೇಕಾಯಿತು.

೧೫. ಫ್ರಾಂಕೋ-ಪ್ರಷ್ಯನ್ ಯುದ್ಧದಲ್ಲಿ ಫ್ರಾನ್ಸ್‌ನಿಂದ ವಶಪಡಿಸಿಕೊಂಡಿದ್ದ ಕಲಾಕೃತಿಗಳನ್ನು, ಮತ್ತಿತರ ಮೌಲ್ಯಯುತ ವಸ್ತುಗಳನ್ನು ಜರ್ಮನಿ ಹಿಂತಿರುಗಿಸಬೇಕಾಯಿತು.

೧೬. ಜರ್ಮನಿಯು ೫೪ ಬಿಲಿಯನ್ ಡಾಲರ್‌ಗಳನ್ನು ಯುದ್ಧಪರಿಹಾರವಾಗಿ ನೀಡಬೇಕೆಂದು ಆಜ್ಞಾಪಿಸಲಾಯಿತು.

೧೭. ಒಪ್ಪಂದದ ಕರಾರಿನಂತೆ ಜರ್ಮನಿಯು ಬೆಲ್ಜಿಯಂ, ಪೋಲೆಂಡ್ , ಜೆಕೋಸ್ಲಾವಾಕಿಯಾ ಮತ್ತು ಜರ್ಮನ್-ಆಸ್ಟ್ರಿಯಾಗಳ ಸ್ವಾತಂತ್ರ್ಯವನ್ನು ಒಪ್ಪಿಕೊಂಡಿತು.

೧೮. ಬ್ರೆಸ್ಟ್ ಲಿಟೋವ್‌ಸ್ಕ್ ಮತ್ತು ಬುಖರೆಸ್ಟ್‌ಗಳಲ್ಲಿ ರಷ್ಯಾ ಮತ್ತು ರುಮೇನಿಯಾ ಗಳೊಡನೆ ಮಾರ್ಚ್ ೧೯೧೮ರಲ್ಲಿ ಸಹಿ ಹಾಕಿದ ಒಪ್ಪಂದಗಳನ್ನು ಅಸಿಂಧುವೆಂದು ಪರಿಗಣಿಸಲು ಜರ್ಮನಿಯು ಒಪ್ಪಿಗೆ ನೀಡಬೇಕಾಯಿತು. ಪೂರ್ವ ಯುರೋಪಿನ ವ್ಯವಹಾರಗಳಲ್ಲಿ ಹೊಸ ವ್ಯವಸ್ಥೆ ತರಲು ಮಿತ್ರಕೂಟಕ್ಕೆ ಅದು ಅನುಮತಿ ನೀಡಿತು.

೧೯. ಜರ್ಮನಿಯು ತನ್ನ ಯುದ್ಧಾಪರಾಧವನ್ನು ಒಪ್ಪಿಕೊಳ್ಳುವಂತೆ ಒತ್ತಾಯ ಹೇರಲಾಯಿತು.

**ವರ್ಸೈಲ್ಸ್ ಶಾಂತಿ ಒಪ್ಪಂದದ ಟೀಕೆ**

ವರ್ಸೈಲ್ಸ್ ಒಪ್ಪಂದದ ಕರಾರುಗಳು ಜರ್ಮನಿಗೆ ಅತ್ಯಂತ ಕ್ರೂರವೂ ಅಪಮಾನಕರವೂ ಆಗಿದ್ದವು. ಫ್ರೆಡ್ರಿಕ್ ಮಹಾಶಯನ ಸಮಯದಿಂದ ಪಡೆದುಕೊಂಡಿದ್ದ ಯುರೋಪಿನ ಎಲ್ಲ ಸಂಸ್ಥಾನಗಳನ್ನು ಜರ್ಮನಿಯು ಕಳೆದುಕೊಂಡಿತು. ಒಟ್ಟಿನಲ್ಲಿ ಜರ್ಮನಿಯನ್ನು ಅಮಾನುಷವಾಗಿ ಶಿಕ್ಷಿಸಲಾಯಿತು, ನಿಶ್ಯಸ್ತ್ರಗೊಳಿಸಲಾಯಿತು ಮತ್ತು ಅವಮಾನಗೊಳಿಸ ಲಾಯಿತು.

೧. ಯುರೋಪಿನಲ್ಲಿ ರಾಷ್ಟ್ರೀಯತೆ ಮತ್ತು ಸ್ವ ಇಚ್ಛೆಗಳ ತತ್ವದ ಮೇಲೆ ಪ್ರಾಂತೀಯ ಪುನರ್ ಸಂಘಟನೆಗೊಳಿಸಲಾಯಿತು. ಆಸ್ಟ್ರಿಯಾವು ಈ ತತ್ವದಡಿಯಲ್ಲಿ ಯುಗೋ ಸ್ಲಾವಿಯಾ ಮತ್ತು ಜೆಕೋಸ್ಲಾವಾಕಿಯಾಗಳನ್ನು ಉಂಟುಮಾಡಿತು. "ಯುರೋಪನ್ನು ಬಾಲ್ಕನ್‌ನಂತೆ ಮಾಡಲಾಯಿತು. ಅಂದರೆ, ಅದು ಹಲವು ಹೋಳುಗಳಾಗಿ ಹರಿದು ಹಂಚಿಹೋಯಿತು."(ಜೆ.ಎಲ್.ಕಾರ್ವಿನ್)

೨. ಒಪ್ಪಂದದ ಕರಾರುಗಳು ಕ್ರೂರವೂ ಅವಮಾನಕರವೂ ಆಗಿದ್ದವು. ಅವುಗಳಲ್ಲಿ ಕೆಲವಂತು ಅಸಾಧ್ಯವೆನ್ನುವಷ್ಟು ಕಠಿಣವಾಗಿದ್ದವು.

೩. ವಿಮರ್ಶಕರ ಪ್ರಕಾರ ವರ್ಸೈಲ್ಸ್ ಒಪ್ಪಂದವು ಜರ್ಮನಿಯ ಜನತೆಯ ಮೇಲೇ ಹೇರಿದ ಒಪ್ಪಂದವಾಗಿತ್ತು. "ಹೇಳಿ ಬರೆಸಿದ" ಶಾಂತಿಯಾಗಿತ್ತು. ವಿಲ್ಸನನ ೧೪ ಅಂಶಗಳು ೧೪ ನಿರಾಶೆಗಳಾದವು. ಜರ್ಮನರು ಈ ಒಪ್ಪಂದವನ್ನು ಒಪ್ಪಿಕೊಳ್ಳುವ ಹಾಗಿರಲಿಲ್ಲವಾದರೂ ಬಲವಂತಕ್ಕೆ ಒಪ್ಪಿಕೊಂಡರು. ಆದರೆ ಮುಂದೆ ಹಿಟ್ಲರನು ಈ ಒಪ್ಪಂದವನ್ನು ಚೂರುಚೂರಾಗಿಸಿ ಸಿಡಿದು ನಿಂತನು.

೪. ಶಾಂತಿ ಒಪ್ಪಂದಗಳು ಸೇಡಿನ ಉದ್ದೇಶವನ್ನು ಹೊಂದಿದ್ದವು. ಗೆದ್ದ ರಾಷ್ಟ್ರಗಳು ಹೊಸದಾಗಿ ಅಸ್ತಿತ್ವಕ್ಕೆ ಬಂದ ಜರ್ಮನ್ ದೇಶದೊಂದಿಗೆ ಶಾಂತಿಯಿಂದ ವರ್ತಿಸಬೇಕಿತ್ತು. ಆದರೆ ಜರ್ಮನಿಯ ಬಗೆಗಿನ ಮಿತ್ರರಾಷ್ಟ್ರಗಳ, ಮುಖ್ಯವಾಗಿ ಫ್ರಾನ್ಸಿನ ಕೆಟ್ಟ

ನಡವಳಿಕೆಗಳು ಜರ್ಮನಿಯ ಪ್ರಗತಿಗೆ ಅಡ್ಡಿಯಾದವು. ಈ ಹಿನ್ನೆಲೆಯಲ್ಲಿ ೧೯೩೩ ರಲ್ಲಿ ಹಿಟ್ಲರನು ಹೊಸ ಶಕ್ತಿಯಾಗಿ ಜರ್ಮನಿಯಲ್ಲಿ ರೂಪುಗೊಂಡನು. ಮಿತ್ರಕೂಟಗಳ ಈ ರೀತಿಯ ಶಾಂತಿ ಪ್ರಯತ್ನವು ಎರಡನೆಯ ಮಹಾಯುದ್ಧಕ್ಕೆ ದಾರಿಮಾಡಿತು. ಒಪ್ಪಂದವು ತನ್ನ ಒಡಲಿನಲ್ಲಿ ಎರಡನೆಯ ವಿಶ್ವ ಸಮರದ ವಿಷಬೀಜವನ್ನು ಹೊಂದಿತ್ತು.

೫. ಜರ್ಮನಿಯು ನಿಶ್ಯಸ್ತ್ರೀಕರಣಗೊಳ್ಳುವಾಗ, ಇತರ ಎಲ್ಲ ರಾಷ್ಟ್ರಗಳೂ ತನ್ನಂತೆ ನಿಶ್ಯಸ್ತ್ರೀಕರಣವನ್ನು ಪಾಲಿಸಬೇಕೆಂದು ಬಯಸಿತು. ಆದರೆ, ಇಂಗ್ಲೆಂಡಿನ ಹೊರತಾಗಿ ಇತರ ರಾಷ್ಟ್ರಗಳೆಲ್ಲ ಸಶಸ್ತ್ರವಾಗಿ ಉಳಿದವು. ಯುದ್ಧ ಸಾಮಗ್ರಿಗಳನ್ನು ಕಡಿಮೆಗೊಳಿಸಲು ಒಪ್ಪದೆ ಅವು ಭವಿಷ್ಯದಲ್ಲಿ ಮತ್ತೊಂದು ಯುದ್ಧಕ್ಕೆ ತಯಾರಿ ನಡೆಸುತ್ತಿವೆ ಎಂಬ ಭಾವನೆಯನ್ನು ಉಂಟು ಮಾಡಿದವು. ಇದು ಶಸ್ತ್ರಾಸ್ತ್ರ ಪೈಪೋಟಿಗೆ ಕಾರಣವಾಗಿ ೧೯೩೯ರ ಯುದ್ಧದಲ್ಲಿ ಫಲಿತವಾಯಿತು.

**ರಾಷ್ಟ್ರ ಸಂಘ**

ಪ್ರಥಮ ವಿಶ್ವ ಸಮರದಿಂದ ಸಂತ್ರಸ್ತವಾದ ಜಗತ್ತಿಗೆ 'ರಾಷ್ಟ್ರ ಸಂಘ'ವು ವುಡ್ರೋವಿಲ್ಸನನ ಕೊಡುಗೆಯಾಗಿದೆ. ಅವನ ಹದಿನಾಲ್ಕು ಅಂಶಗಳ ಕಾರ್ಯಕ್ರಮಗಳಲ್ಲಿ ರಾಷ್ಟ್ರಸಂಘದ ಅಗತ್ಯವನ್ನು ಪ್ರಸ್ತಾಪಿಸಲಾಗಿತ್ತು. ಅವನು ಪ್ಯಾರಿಸ್‌ನ ಶಾಂತಿ ಸಮ್ಮೇಳನದಲ್ಲಿ ಈ ಅಂಶವನ್ನು ಪ್ರತಿಪಾದಿಸಿ ರಾಷ್ಟ್ರ ಸಂಘವು ರೂಪುಗೊಳ್ಳುವುದಕ್ಕೆ ಕಾರಣಕರ್ತನಾದನು. ಪ್ರಥಮ ವಿಶ್ವ ಸಮರದ ಘೋರ ಪರಿಣಾಮಗಳನ್ನು ಎದುರಿಸುತ್ತಿದ್ದ ರಾಷ್ಟ್ರಗಳಿಗೆ ಹೊಸತಾದ ಶಾಶ್ವತವಾದ ಶಾಂತಿ ನೆಲೆಗೊಳಿಸುವ ಕೆಲಸ ತುರ್ತಾಗಿ ಆಗಬೇಕಿತ್ತು. ಸ್ವತಃ ವಿಲ್ಸನ್ನನೇ ರಾಷ್ಟ್ರ ಸಂಘದ ರೂಪರೇಷೆಗಳನ್ನು ಮಾಡಿದ್ದನು. ೧೯೨೦ರ ಜನವರಿ, ೧೦ ರಲ್ಲಿ ರಾಷ್ಟ್ರಸಂಘ ತನ್ನ ಮೊದಲ ಸಭೆ ನಡೆಸಿತು. ಅದರ ಪ್ರಮುಖ ಕಛೇರಿಯು ಸ್ವಿಡ್ಜರ್ಲೆಂಡಿನ ಜಿನೀವಾದಲ್ಲಿದೆ.

**ಧ್ಯೇಯೋದ್ದೇಶಗಳು**

೧. ಯುದ್ಧ ಸಾಧ್ಯತೆಗಳನ್ನು ನಿವಾರಿಸಿ ಅಂತಾರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಗಳನ್ನು ಸಾಧಿಸುವುದು, ನ್ಯಾಯ-ಗೌರವಗಳನ್ನು ವೃದ್ಧಿಸುವುದು.

೨. ಜಗತ್ತಿನ ರಾಷ್ಟ್ರಗಳ ನಡುವೆ ಭೌತಿಕ ಮತ್ತು ಬೌದ್ಧಿಕ ಸಹಕಾರವನ್ನು ವೃದ್ಧಿಸುವುದು.

೩. ರಾಷ್ಟ್ರೀಯ ಮಿಲಿಟರಿ ಶಸ್ತಾಸ್ತ್ರಗಳನ್ನು ಕಡಿಮೆಗೊಳಿಸುವುದು.

೪. ಅಂತಾರಾಷ್ಟ್ರೀಯ ಒಪ್ಪಂದಗಳ ಅಡಿಯಲ್ಲಿ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿ ಶಾಂತಿಯುತ ಬದಲಾವಣೆಗಳನ್ನು ತರುವುದು.

೫. ಸಾಮಾಜಿಕ ಭದ್ರತೆಯ ತತ್ವದ ಆಧಾರದ ಮೇಲೆ ಸದಸ್ಯ ರಾಷ್ಟ್ರಗಳ ಪ್ರಾಂತೀಯ ಐಕ್ಯತೆ ಮತ್ತು ರಾಜಕೀಯ ಸ್ವಾತಂತ್ರ್ಯಗಳನ್ನು ಹೊರಗಿನ ಆಕ್ರಮಣಗಳಿಂದ ರಕ್ಷಿಸುವುದು.

೬. ಮ್ಯಾಂಡೇಟರಿ ಪದ್ಧತಿಯ ಉಸ್ತುವಾರಿ ನೋಡಿಕೊಳ್ಳುವ ಕೆಲಸವನ್ನು ವಹಿಸುವುದು ಮತ್ತು ಮಾನವ ಕಲ್ಯಾಣವನ್ನು ಉತ್ತೇಜಿಸುವುದು.

೭. ಸಂಘದ ಸಂವಿಧಾನವನ್ನು ವಿರೋಧಿಸುವ ರಾಷ್ಟ್ರಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದು.

೮. ಆರೋಗ್ಯ, ಸಾಮಾಜಿಕ, ಆರ್ಥಿಕ ಮತ್ತು ವಾಣಿಜ್ಯ ಸಮಸ್ಯೆಗಳಿಗೆ ಸ್ಪಂದಿಸಿ ಅಂತಾರಾಷ್ಟ್ರೀಯ ಸಹಕಾರವನ್ನು ವೃದ್ಧಿಸುವುದು.

**ರಾಷ್ಟ್ರ ಸಂಘದ ಅಂಗಗಳು**

**೧. ಸಭೆ**

ಅಸೆಂಬ್ಲಿಯು ಸಂಘದ ಆಯ್ದ ಸದಸ್ಯರನ್ನು ಒಳಗೊಂಡಿತ್ತು. ಪ್ರತಿಯೊಂದು ರಾಷ್ಟ್ರದಿಂದ ಮೂರು ಮಂದಿ ಪ್ರತಿನಿಧಿಗಳನ್ನು ಕಳಿಸಬಹುದಾಗಿತ್ತು. ಒಂದು ರಾಷ್ಟ್ರಕ್ಕೆ ಒಂದು ಮತ ನೀಡುವ ಅಧಿಕಾರವಿದ್ದಿತು. ಅಸೆಂಬ್ಲಿಯು ಜಿನೀವಾದಲ್ಲಿ ವರ್ಷಕ್ಕೊಂದು ಬಾರಿ ಸೆಪ್ಟೆಂಬರ್ ತಿಂಗಳಲ್ಲಿ ಸಭೆ ಸೇರುತ್ತಿತ್ತು. ವಿಶ್ವಶಾಂತಿ ಹಾಗೂ ಭದ್ರತೆಯ ಕುರಿತಾದ ಎಲ್ಲ ವಿಷಯಗಳನ್ನೂ ಅಸೆಂಬ್ಲಿಯಲ್ಲಿ ಚರ್ಚಿಸಬಹುದಿತ್ತು. ಅದರ ಮುಖ್ಯ ಕಾರ್ಯಗಳಲ್ಲಿ ಹೊಸ ಸದಸ್ಯರ ಪ್ರವೇಶವನ್ನು ನಡೆಸುವ, ಸಮಿತಿಗೆ ಅಶಾಶ್ವತ ಸದಸ್ಯರನ್ನು ನೇಮಿಸುವ, ನ್ಯಾಯಾಲಯಕ್ಕೆ ನ್ಯಾಯಾಧೀಶರನ್ನು ಚುನಾಯಿಸುವ, ಮುಂಗಡ ಪತ್ರವನ್ನು ಪರಿಶೀಲಿಸುವ ಮತ್ತು ವಿಶ್ವಶಾಂತಿಗೆ ಸಂಬಂಧಿಸಿದ ಯಾವುದೇ ವಿಷಯವನ್ನು ಚರ್ಚಿಸುವ ಕಾರ್ಯಗಳು ಸೇರಿದ್ದವು. ಅಲ್ಲದೆ ವಿಶೇಷ ಅಧಿವೇಶನಗಳನ್ನು ಅಗತ್ಯ ಸಂದರ್ಭದಲ್ಲಿ ನಡೆಸಲಾಗುತ್ತಿತ್ತು.

**೨. ಸಮಿತಿ**

ಸಮಿತಿಯು ಶಾಸಕಾಂಗದಂತೆ ಕಾರ್ಯನಿರ್ವಹಿಸುತ್ತಿತ್ತು. ಸಂಯುಕ್ತ ಸಂಸ್ಥಾನಗಳು, ಅಮೆರಿಕಾ, ಫ್ರಾನ್ಸ್, ಇಟಲಿ ಮತ್ತು ಜಪಾನ್‌ಗಳನ್ನು ಮತ್ತು ಮೂರು ವರ್ಷಗಳ ಮಟ್ಟಿಗೆ ಚುನಾಯಿಸಿದ ನಾಲ್ಕು ಅಶಾಶ್ವತ ಸದಸ್ಯರನ್ನು ಸಮಿತಿಯು ಹೊಂದಿತ್ತು. ಸಮಿತಿಯ ಸದಸ್ಯ ಬಲವನ್ನು ಹೆಚ್ಚಿಸುವ ಅವಕಾಶವಿತ್ತು. ಅಮೆರಿಕಾವು ರಾಷ್ಟ್ರಸಂಘವನ್ನು ಸೇರಲು ನಿರಾಕರಿಸಿದ್ದರಿಂದ ಶಾಶ್ವತ ಹಾಗೂ ಅಶಾಶ್ವತ ಸದಸ್ಯರ ಪ್ರಮಾಣ ನಾಲ್ಕರಲ್ಲಿ ಉಳಿಯಿತು. ಅಶಾಶ್ವತ ಸದಸ್ಯರ ಸಂಖ್ಯೆ ಮುಂದಕ್ಕೆ ಹೆಚ್ಚಿತು. ಕೊನೆಯಲ್ಲಿ ಅದು ೧೧ ಸದಸ್ಯರನ್ನು ಹೊಂದಿತ್ತು. ಅನುಗುಣವಾಗಿ ೧೯೨೬ರಲ್ಲಿ ಜರ್ಮನಿಯ ಸೇರ್ಪಡೆಯೊಂದಿಗೆ ಶಾಶ್ವತ ಸದಸ್ಯ ಸಂಖ್ಯೆ ೪ ರಿಂದ ೫ಕ್ಕೇರಿತು. ರಷ್ಯಾದ ಸೇರ್ಪಡೆಯೊಂದಿಗೆ ೧೯೩೪ರಲ್ಲಿ ಶಾಶ್ವತ ಸದಸ್ಯ ಸಂಖ್ಯೆ ೬ಕ್ಕೇರಿತು. ಸಮಿತಿಯು ಸಭೆಗಿಂತ ಅಧಿಕ ಬಾರಿ ಕಲಾಪಗಳನ್ನು ನಡೆಸುತ್ತಿತ್ತು. ಹೊರಗಿನ ಅತಿಕ್ರಮಿಗಳಿಂದ ಸದಸ್ಯ ರಾಷ್ಟ್ರಗಳನ್ನು ರಕ್ಷಿಸಲು ಸೂಕ್ತ ಕ್ರಮ ಕೈಗೊಳ್ಳುವುದು, ತನಗೆ ಒದಗಿಸಲಾದ ವಿಚಾರಗಳ ತನಿಖೆ ನಡೆಸುವುದು, ಶಸ್ತ್ರಾಸ್ತ್ರ ಸಂಗ್ರಹವನ್ನು ಕಡಿಮೆಗೊಳಿಸುವ ಯೋಜನೆಯನ್ನು ಹಾಕಿಕೊಳ್ಳುವುದು, ಮ್ಯಾಂಡೇಟರಿಗಳು ಸಲ್ಲಿಸಿದ ವಾರ್ಷಿಕ ವರದಿಗಳನ್ನು ಗಮನಿಸುವುದು ಮುಂತಾದ ಕೆಲಸಗಳನ್ನು ಸಮಿತಿಯು ನಿರ್ವಹಿಸುತ್ತಿತ್ತು.

**೩. ಪ್ರಧಾನ ಕಛೇರಿ**

ರಾಷ್ಟ್ರ ಸಂಘದ ಪ್ರಧಾನ ಕಛೇರಿಯ ಸ್ವಿಡ್ಜರ್‌ಲ್ಯಾಂಡಿನ ಜಿನೀವಾದಲ್ಲಿತ್ತು. ಪ್ರಧಾನ ಕಾರ್ಯದರ್ಶಿಯು ಅದರ ಮುಖ್ಯಸ್ಥನಾಗಿದ್ದು ಕಛೇರಿಯು ಬೇರೆ ಬೇರೆ ರಾಷ್ಟ್ರಗಳನ್ನು ಪ್ರತಿನಿಧಿಸುವ ಬಹುಸಂಖ್ಯೆಯ ಅಧಿಕಾರಗಳನ್ನು ಹೊಂದಿದ್ದಿತು. ರಾಷ್ಟ್ರಸಂಘವು ನಡೆಸುವ ವ್ಯವಹಾರಗಳ ಎಲ್ಲ ದಾಖಲೆಗಳೂ ಕಾರ್ಯಾಲಯದ ಕಾ್ಯರವ್ಯಾಪ್ತಿಗೆ ಬರುತ್ತಿದ್ದವು. ತನ್ನ ವ್ಯವಹಾರಗಳ ಪತ್ರ ಸಂಪರ್ಕ ನಡೆಸುವುದು, ದಾಖಲೆ ಸಂಗ್ರಹಣೆ, ಅಂತಾರಾಷ್ಟ್ರೀಯ ಒಡಂಬಡಿಕೆಗಳ ಪ್ರತಿಗಳನ್ನು ಕಾಯ್ದಿರಿಸುವುದು, ಇವೇ ಮುಂತಾದ ಕೆಲಸಗಳು ಪ್ರಧಾನ ಕಛೇರಿಯಲ್ಲಿ ನಡೆಯುತ್ತಿದ್ದವು. ೧೯೨೦ ರಿಂದ ೧೯೩೩ರ ತನಕ ಸರ್ ಎಡಿಕ್ ಡ್ರೂಮೆಂಡ್, ೧೯೩೩ ರಿಂದ ೧೯೪೦ರವರೆಗೆ ಫ್ರಾನ್ಸಿನ ಜೋಸೆಫ್ ಅವೆನೋಲ್ ಮತ್ತು ೧೯೪೦ರಲ್ಲಿ ಐರ್ಲೆಂಡಿನ ಸೀನ್‌ಲೆಸ್ಟರ್ ಪ್ರಧಾನ ಕಾರ್ಯದರ್ಶಿಗಳಾಗಿದ್ದರು.

**೪. ಅಂತಾರಾಷ್ಟ್ರೀಯ ನ್ಯಾಯಾಲಯ**

೧೯೨೨ರಲ್ಲಿ ಹಾಲೆಂಡಿನ ಹೇಗ್ ಎಂಬಲ್ಲಿ ಅಂತಾರಾಷ್ಟ್ರಿಯ ನ್ಯಾಯಾಲಯವನ್ನು ಸ್ಥಾಪಿಸಲಾಯಿತು. ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರಗಳ, ಮತ್ತಿತರ ಕಾನೂನು ಸಂಬಂಧಿ ಅಂತಾರಾಷ್ಟ್ರೀಯ ವಿಚಾರಗಳನ್ನು ಈ ನ್ಯಾಯಾಲಯವು ಕೈಗೆತ್ತಿಕೊಂಡು ತೀರ್ಪು ಹೊರಡಿಸುತ್ತಿತ್ತು. ಅಸೆಂಬ್ಲಿ, ಕೌನ್ಸಿಲ್‌ಗಳೂ ನ್ಯಾಯಾಲಯದ ಮಾರ್ಗದರ್ಶನ ಪಡೆಯುತ್ತಿದ್ದವು. ನ್ಯಾಯಾಲಯವು ಅಸೆಂಬ್ಲಿ ಮತ್ತು

ಕೌನ್ಸಿಲ್‌ಗಳಿಂದ ೯ ವರ್ಷಗಳ ಕಾಲಾವಧಿಗೆ ಅರಿಸಲ್ಪಟ್ಟ ೧೫ ಸದಸ್ಯರನ್ನು ಒಳಗೊಂಡಿತ್ತು. ಶಾಂತಿ ಪ್ರಯತ್ನಗಳಿಗೆ ಒಡಂಬಡದ ರಾಷ್ಟ್ರಗಳ ವಿರುದ್ಧ ಮಿಲಿಟರಿ ಮತ್ತು ನೌಕಾ ಕಾರ್ಯಾಚರಣೆಗೆ ನ್ಯಾಯಾಲಯವು ಆದೇಶ ನೀಡಬಹುದಾಗಿತ್ತು.

**೫. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ**

೧೯೧೯ರಲ್ಲಿ ಜಿನಿವಾದಲ್ಲಿ ಸ್ಥಾಪಿಸಲಾದ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪ್ರಧಾನ ಕಛೇರಿಯು ಜಿನೀವಾದಲ್ಲಿತ್ತು. ಅದೊಂದು ಸ್ವಾಯತ್ತ ಸಂಸ್ಥೆಯಾಗಿತ್ತು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಸಾಮಾನ್ಯ ಸಭೆ, ಆಡಳಿತಾಂಗ ಮತ್ತು ಅಂತಾರಾಷ್ಟ್ರೀಯ ಕಾರ್ಮಿಕ ಕಛೇರಿಗಳನ್ನು ಒಳಗೊಂಡಿತ್ತು. ಸಾಮಾನ್ಯ ಸಭೆಯು ತಲಾ ನಾಲ್ಕು ಮಂದಿ ಚುನಾಯಿತ ಪ್ರತಿನಿಧಿಗಳನ್ನೊಳಗೊಂಡ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳನ್ನೂ ಒಳಗೊಂಡಿತ್ತು. ಅವರು ಕಾರ್ಮಿಕರ ಹಲವರು ಸಮಸ್ಯೆಗಳನ್ನು ಚರ್ಚಿಸಿ, ಕಾರ್ಮಿಕರ ಅಭಿವೃದ್ಧಿ ಕಾರ್ಯ ವಿಧಾನಗಳನ್ನು ರೂಪಿಸುತ್ತಿದ್ದರು. ಆಡಳಿತಾಂಗವು ೩೨ ಸದಸ್ಯರ ನ್ನೊಳಗೊಂಡ ಅಂತಾರಾಷ್ಟ್ರೀಯ ಕಾರ್ಮಿಕ ಕಛೇರಿಗೆ ನಿರ್ದೇಶಕನೊಬ್ಬನನ್ನು ಆಯ್ಕೆ ಮಾಡುತ್ತಿತ್ತು. ಅಂತಾರಾಷ್ಟ್ರೀಯ ಕಾರ್ಮಿಕ ಕಛೇರಿಯು ಕಾರ್ಮಿಕ ಸ್ಥಿತಿಗತಿಗಳ ಬಗೆಗೆ ಮಾಹಿತಿ ಸಂಗ್ರಹಿಸುತ್ತಿತ್ತು, ನಿಯತಾಲಿಕೆಗಳನ್ನು ಪ್ರಕಟಿಸುತ್ತಿತ್ತು. ಕಾರ್ಮಿಕ ಸಂಸ್ಥೆಯು ಜಗತ್ತಿನಾದ್ಯಂತದ ಕಾರ್ಮಿಕರ, ವಿಶೇಷವಾಗಿ ಮಹಿಳೆ ಮತ್ತು ಮಕ್ಕಳ ಸ್ಥಿತಿಗತಿಗಳನ್ನು ಸುಧಾರಿಸಲು ಶ್ರಮಿಸುತ್ತಿತ್ತು.

ರಾಷ್ಟ್ರಸಂಘವು ಸಮಾಜಸೇವೆ, ಆರೋಗ್ಯ ಸಮಸ್ಯೆ, ಸಾಮಾಜಿಕ ಪಿಡುಗುಗಳು, ಅಂತಾರಾಷ್ಟ್ರೀಯ ವ್ಯಾಪಾರದ ನಿಯಂತ್ರಣ, ಯುದ್ಧ ಸಂತ್ರಸ್ತ ದೇಶಗಳ ಆರ್ಥಿಕ ಸ್ಥಿತಿ ಯನ್ನು ಉತ್ತಮಪಡಿಸುವುದು, ಸಾಂಕ್ರಾಮಿಕಗಳು ಹರಡದಂತೆ ತಡೆಯುವುದು, ಬೌದ್ಧಿಕ ಸಹಕಾರ, ಗುಲಾಮಗಿರಿ ನಿವಾರಣೆ, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ ಹಿತರಕ್ಷಣೆ ಮೊದಲಾದ ಕೆಲಸಗಳನ್ನು ನೋಡಿಕೊಳ್ಳುವುದಕ್ಕಾಗಿ ರಾಷ್ಟ್ರಸಂಘವು ಹಲವು ಪ್ರಯತ್ನಗಳನ್ನು ಮಾಡಿತು.

**ರಾಷ್ಟ್ರ ಸಂಘದ ಸಾಧನೆಗಳು**

ರಾಷ್ಟ್ರಸಂಘವು ಅನೇಕ ಸಣ್ಣಪುಟ್ಟ ವಿವಾದಗಳನ್ನು ಪರಿಹರಿಸಿತು. ೧೯೨೪-೨೫ರಲ್ಲಿ ಇರಾಕ್-ಟರ್ಕಿಗಳ ವಿವಾದವನ್ನು ಪರಿಹರಿಸಲು ರಾಷ್ಟ್ರ ಸಂಘವು ಆಯೋಗವೊಂದನ್ನು ನೇಮಿಸಿತು. ಅದರ ಆದೇಶವನ್ನು ಎರಡೂ ರಾಷ್ಟ್ರಗಳು ಒಪ್ಪಿಕೊಂಡವು. ೧೯೨೫ರಲ್ಲಿ ಬಲ್ಗೇರಿಯಾ, ಗ್ರೀಸ್‌ಗಳ ನಡುವೆ ಗಡಿ ವಿವಾದ ಏರ್ಪಟ್ಟಿತು. ಗ್ರೀಸ್ ತನ್ನ ಸೈನ್ಯವನ್ನು ಬಲ್ಗೇರಿಯಾದ ನೆಲದಿಂದ ಹಿಂತೆಗೆದುಕೊಳ್ಳುವಂತೆ ಮತ್ತು ಕಾನೂನುಬದ್ಧವಲ್ಲದ ಆಕ್ರಮಣಕ್ಕಾಗಿ ಅದು ಬಲ್ಗೇರಿಯಾಕ್ಕೆ ಪರಿಹಾರವನ್ನು ನೀಡುವಂತೆ ರಾಷ್ಟ್ರ ಸಂಘ ಆದೇಶಿಸಿತು.

ರಾಷ್ಟ್ರ ಸಂಘವು ಪೋಲೆಂಡ್ ಮತ್ತು ಲಿಥುವೇನಿಯಾಗಳ ಮಧ್ಯ ಪ್ರವೇಶಿಸಿ ಅವುಗಳ ನಡುವಿನ ಆತಂಕವನ್ನು ಕಡಿಮೆಗೊಳಿಸಿತು. ಉತ್ತರ ಸಿಲೇಸಿಯಾದಲ್ಲಿನ ಗಡಿಗಳ ಬಗ್ಗೆ ಪೋಲೆಂಡ್ ಮತ್ತು ಜರ್ಮನಿಗಳ ನಡುವಿನ ವಿವಾದಕ್ಕೆ ಪರಿಹಾರವೊದಗಿಸಿತು. ಆಲೆಂಡ್ ದ್ವೀಪಗಳ ಕುರಿತ ಫಿನ್ಲೆಂಡ್ ಮತ್ತು ಸ್ವೀಡನ್‌ಗಳ ನಡುವಿನ ವಿವಾದಕ್ಕೆ ಪರಿಹಾರ ನೀಡಿತು. ಅಲ್ಬೇನಿಯಾದಿಂದ ಪಡೆಗಳನ್ನು ಹಿಂತೆಗೆದುಕೊಳ್ಳುವಂತೆ ಸರ್ಬಿಯಾದ ಮೇಲೆ ಒತ್ತಾಯ ಹೇರಿತು. ಗ್ರೀಕೋ-ಇಟಾಲಿಯನ್ ಸಂಘರ್ಷವನ್ನು ನಿವಾರಿಸಿತು. ೧೯೩೩ರಲ್ಲಿ ಪೆರು ಮತ್ತ ಕೊಲಂಬಿಯಾಗಳ ಗಡಿ ಸಮಸ್ಯೆಯನ್ನು ಶಾಂತಿಯುತವಾಗಿ ಪರಿಹರಿಸಿತು.

ಮ್ಯಾಂಡೇಟರಿ ಪದ್ಧತಿಯ ಸಮರ್ಥ ಕಾರ್ಯಚರಣೆಯು ರಾಷ್ಟ್ರಸಂಘದ ಅತ್ಯಂತ ಮುಖ್ಯ ಸಾಧನೆಯೆಂಬ ಹೆಗ್ಗಳಿಕೆ ಪಾತ್ರವಾಗಿದೆ. ರಾಷ್ಟ್ರಸಂಘವು ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳಲ್ಲಿ ಮ್ಯಾಂಡೇಟರಿ ಶಕ್ತಿಯಾಗಿ ನೇಮಿಸಿ, ಅಧಿನ ರಾಷ್ಟ್ರಗಳು ಸ್ವಾತಂತ್ರ್ಯಕ್ಕೆ ಅರ್ಹರಾಗುವ ತನಕ ಅವುಗಳ ಒಳಿತನ್ನು ಬಯಸಿತು. ೧೯೨೦ರಲ್ಲಿ ಅಧೀನರ ಪ್ರಗತಿ ಪರಿಶೀಲಿಸಲು ಮ್ಯಾಂಡೇಟರಿ ಆಯೋಗವನ್ನು ನೇಮಿಸಲಾಯಿತು.

ಆರ್ಥಿಕ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಸಹಕಾರವನ್ನು ಉತ್ತೇಜಿಸಲಾಯಿತು. ಅನೇಕ ಮಾನವೀಯ ಕಾರ್ಯಕ್ರಮಗಳನ್ನು ವಿವಿಧೆಡೆಗಳಲ್ಲಿ ಹಮ್ಮಿಕೊಳ್ಳಲಾಯಿತು. ಸ್ತ್ರೀಯರ ಮಾರಾಟವನ್ನು ತಡೆಗಟ್ಟುವುದು, ನಿರಾಶ್ರಿತರ ಪುನರ್ವಸತಿ, ಮಕ್ಕಳ ಹಿತರಕ್ಷಣೆ, ಮಲೇರಿಯಾದಂತಹ ಸಾಂಕ್ರಾಮಿಕಗಳ ನಿವಾರಣೆ ಇವೆ ಮೊದಲಾದ ಕೆಲಸಗಳನ್ನು ರಾಷ್ಟ್ರ ಸಂಘವು ಮಾಡಿತು. ಯುದ್ಧದಿಂದ ಕಷ್ಟ ನಷ್ಟಗಳಿಗೆ ಗುರಿಯಾದ ದೇಶಗಳಿಗೆ ಆರ್ಥಿಕ ಸಹಕಾರ ಒದಗಿಸಿತು. ಸಾರ್ ಮತ್ತು ಡೇನ್‌ಜಿನ್ ನಗರಗಳ ಆಡಳಿತವನ್ನು ಪರಿಣಾಮಕಾರಿ ಯಾಗಿ ನಡೆಸಿತು. ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಕಾರ್ಮಿಕರ ಸ್ಥಿತಿಗತಿಗಳನ್ನು ಉತ್ತಮಪಡಿಸುವಲ್ಲಿ ಮಹತ್ತರ ಕೆಲಸ ಮಾಡಿತು. ಜಗತ್ತಿನ ವಿವಿಧ ರಾಷ್ಟ್ರಗಳಲ್ಲಿ ಬೌದ್ಧಿಕ ಸಹಕಾರ ವೃದ್ಧಿಸುವಲ್ಲಿ ಸಂಘವು ಕೆಲಸ ಮಾಡಿತು. ರಾಷ್ಟ್ರಸಂಘವು ಪೂರ್ವ ಮತ್ತು ಮಧ್ಯಯುರೋಪಿನಲ್ಲಿ ವಾಸಿಸುತ್ತಿದ್ದ ಮೂರು ಕೋಟಿ ರಾಷ್ಟ್ರೀಯ ಅಲ್ಪಸಂಖ್ಯಾತ ಸದಸ್ಯರನ್ನು ನೋಡಿಕೊಂಡಿತು. ಜಗತ್ತಿನಾದ್ಯಂತ ಪ್ರಪ್ರಥಮಬಾರಿಗೆ ಜನರಲ್ಲಿ ಅಂತರ ರಾಷ್ಟ್ರೀಯ ಸಹಕಾರದ ಚಿಂತನೆಯನ್ನು ಹರಡಿತು. ಗುಲಾಮಗಿರಿಯನ್ನು ತಡೆಗಟ್ಟುವ ಪ್ರಯತ್ನ ಮಾಡಿತು. ಹೀಗೆ ರಾಷ್ಟ್ರಸಂಘವು ವಿವಿಧ ನೆಲೆಗಳಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿತು.

**ರಾಷ್ಟ್ರಸಂಘದ ವಿಫಲತೆ**

ತನ್ನೆಲ್ಲ ಸಾಧನೆಗಳ ಹೊರತಾಗಿಯೂ ಜಗತ್ತಿನಲ್ಲಿ ಶಾಂತಿಯನ್ನು ಪುನರ್ ಸ್ಥಾಪಿಸುವ ತನ್ನ ಮೂಲಭೂತ ಉದ್ದೇಶದಲ್ಲೇ ರಾಷ್ಟ್ರ ಸಂಘ ವಿಫಲವಾಯಿತು. ಎರಡು ದಶಕಗಳ ಅದರ ಪ್ರಯತ್ನದ ಹೊರತಾಗಿಯೂ ೧೯೩೯ರಲ್ಲಿ ಜಗತ್ತು ಮತ್ತೊಮ್ಮೆ ಯುದ್ಧವನ್ನು ಎದುರಿಸಬೇಕಾಯಿತು. ಆ ಹೊತ್ತಿಗಾಗಲೇ ರಾಷ್ಟ್ರ ಸಂಘದ ವ್ಯವಸ್ಥೆ ಪೂರ್ಣವಾಗಿ ಕುಸಿಯಲು ಆರಂಭವಾಗಿತ್ತು.

೧. ವರ್ಸೈಲ್ಸ್ ಒಪ್ಪಂದವು ರಾಷ್ಟ್ರ ಸಂಘದ ವಿಫಲತೆಗೆ ಕಾರಣವಾದುದು ದುರಾದೃಷ್ಟ ವೆನ್ನಬೇಕು. ಹಲವು ಮುಖ್ಯ ರಾಷ್ಟ್ರಗಳು ಈ ಒಪ್ಪಂದವನ್ನು ಸೇಡು ತೀರಿಸುವ ಸದಾವಕಾಶವೆಂದು ಭಾವಿಸಿ ಅದೇ ರೀತಿಯಲ್ಲಿ ವರ್ತಿಸಿತು. ಹಾಗಾಗಿ ಶಾಂತಿ ಸ್ಥಾಪನೆಯ ಮೂಲೋದ್ದೇಶ ಮರೆಯಾಗಿ ಸೋತ ರಾಷ್ಟ್ರಗಳ ಮೇಲೆ ದಬ್ಬಾಳಿಕೆ ನಡೆಸುವ ಶಕ್ತರಾಷ್ಟ್ರಗಳ ದ್ವೇಷ ದುರಾಕ್ರಮಣಗಳೇ ಮುಖ್ಯವಾದವು. ಆದ್ದರಿಂದ ರಾಷ್ಟ್ರಸಂಘ ವಿಫಲವಾಯಿತು.

೨. ಪ್ರಬಲ ರಾಷ್ಟ್ರಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳು ರಾಷ್ಟ್ರ ಸಂಘವು ವಿಫಲವಾಗಿತ್ತು. ೧೯೩೧ರಲ್ಲಿ ಜಪಾನ್ ಮಂಚೂರಿಯಾವನ್ನು ಆಕ್ರಮಿಸಿದಾಗ, ಇಟಲಿಯು ೧೯೩೫ರಲ್ಲಿ ಅಬೆಸೀನಿಯಾವನ್ನು ಆಕ್ರಮಿಸಿದಾಗ, ೧೯೩೧ರಲ್ಲಿ ಜಪಾನ್ ಮಂಚೂರಿಯಾವನ್ನು ಆಕ್ರಮಿಸಿದಾಗ, ಇಟಲಿಯು ೧೯೩೫ರಲ್ಲಿ ಅಬೆಸೀನಿಯಾವನ್ನು ಆಕ್ರಮಿಸಿದಾಗ, ೧೯೩೮ರಲ್ಲಿ ಜರ್ಮನಿಯು ಆಸ್ಟ್ರೀಯಾವನ್ನು ಮತ್ತು ೧೯೩೯ರಲ್ಲಿ ಪೋಲೆಂಡ್‌ನ್ನು, ರಷ್ಯಾವು ೧೯೩೯ರಲ್ಲಿ ಫಿನ್ಲೆಂಡನ್ನು ಆಕ್ರಮಿಸಿದಾಗ, ರಾಷ್ಟ್ರ ಸಂಘದ ದೌರ್ಬಲ್ಯ ಸಂಪೂರ್ಣ ಬದಲಾಯಿತು. ಪ್ರಬಲ ಆಕ್ರಮಣಕಾರಿ ರಾಷ್ಟ್ರಗಳು ಒಂದರ ಹಿಂದೆ ಒಂದರಂತೆ (ಜಪಾನ್, ಜರ್ಮನಿಗಳು ೧೯೩೩ರಲ್ಲಿ, ಇಟಲಿ ೧೯೩೭ರಲ್ಲಿ) ರಾಷ್ಟ್ರ ಸಂಘದಿಂದ ಹೊರಬಿದ್ದವು. ೧೯೪೦ರ ವೇಳೆಗೆ ಪ್ರಬಲ ರಾಷ್ಟ್ರಗಳ ಪೈಕಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ಮಾತ್ರ ಸಂಘದಲ್ಲಿ ಉಳಿದಿದ್ದವು. ಹೀಗೆ ಮುಖ್ಯ ಶಕ್ತಿಗಳಿಲ್ಲದೆ ರಾಷ್ಟ್ರ ಸಂಘವು ದುರ್ಬಲವಾಗಿ ಅವನತಿ ಹೊಂದಬೇಕಾಯ್ತು.

೩. ಇಟಲಿ, ಜರ್ಮನಿ ಮತ್ತು ಜಪಾನ್‌ಗಳಲ್ಲಿ ಸರ್ವಾಧಿಕಾರದ ಬೆಳವಣಿಗೆಯು ರಾಷ್ಟ್ರ ಸಂಘದ ಯಶಸ್ಸಿನ ಅವಕಾಶಗಳನ್ನು ಕುಂಠಿತಗೊಳಿಸಿತು.

೪. ಹೊರಗಿನ ಆಕ್ರಮಣಗಳಾದಾಗ ರಾಷ್ಟ್ರ ಸಂಘದಿಂದ ತಮಗೆ ರಕ್ಷಣೆ ಸಿಗುವುದೆಂಬ ಧೈರ್ಯ ವಿಶ್ವಾಸವನ್ನು ಸಣ್ಣ ಪುಟ್ಟ ರಾಷ್ಟ್ರಗಳು ಕಳೆದುಕೊಂಡವು.

೫. 'ಸಾಮೂಹಿಕ ಹೊಣೆಗಾರಿಕೆ'ಯ ತತ್ವ ಕಾರ್ಯರೂಪದಲ್ಲಿ ಬರಲಿಲ್ಲ. ಮಂಚೂರಿಯಾ ಮತ್ತು ಅಬೆಸೀನಿಯಾಗಳ ಸಮಸ್ಯೆಗಳಿಗೆ ಸಂಬಂಧಿಸಿ ಜಪಾನ್ ಮತ್ತು ಇಟಲಿಗಳೊಂದಿಗೆ ಎಲ್ಲ ರಾಷ್ಟ್ರಗಳೂ ಕೈಜೋಡಿಸಿದ್ದರೆ ಆಕ್ರಮಣಗಳನ್ನು ತಡೆಯಬಹುದಾಗಿತ್ತು ಮತ್ತು ರಾಷ್ಟ್ರ ಸಂಘದ ಘನತೆ ಹೆಚ್ಚುತ್ತಿತ್ತು.

೬. ರಾಷ್ಟ್ರಸಂಘವು ಅತ್ಯಂತ ಸಣ್ಣ ಪ್ರಮಾಣದಲ್ಲಿ ಮಾತ್ರ ಮಿಲಿಟರಿ ಮತ್ತು ಆಡಳಿತಾತ್ಮಕ ಶಕ್ತಿಯನ್ನು ಹೊಂದಿತ್ತು. ಆದ್ದರಿಂದ ಬಂಡುಕೋರ ಸಂಸ್ಥಾನಗಳ ಮೇಲೆ ಹತೋಟಿ ಸಾಧಿಸಲು ಅದು ವಿಫಲವಾಯಿತು.

೭. ಸದಸ್ಯ ರಾಷ್ಟ್ರಗಳ ನಡುವೆ ಸಹಕಾರ ಮನೋಭಾವವಿರಲಿಲ್ಲ. ಅವುಗಳು ಪರಸ್ಪರ ಅಪನಂಬಿಕೆ, ಅವಿಶ್ವಾಸ, ಸಂದೇಹ, ಭಯ ಹೊಂದಿದ್ದವು. ಸಂಘದ ಉದ್ದೇಶಗಳಿಗೆ ಕೆಲವು ರಾಷ್ಟ್ರಗಳು ಬದ್ಧರಾಗಿ ಉಳಿಯಲಿಲ್ಲ.

೮. ರಾಷ್ಟ್ರಸಂಘವು ಬ್ರಿಟನ್, ಫ್ರಾನ್ಸ್, ಇಟಲಿ, ಜಪಾನ್‌ಗಳ ಪ್ರಭುತ್ವದಲ್ಲಿ ಸಣ್ಣ ರಾಷ್ಟ್ರಗಳು ದನಿ ಕಳೆದುಕೊಂಡವು.

೯. ಶಕ್ತಿಶಾಲಿ ರಾಷ್ಟ್ರಗಳ ಸ್ವಾರ್ಥ ಹಾಗೂ ಸಂಘರ್ಷಾತ್ಮಕ ಹಿತಾಸಕ್ತಿಗಳು ರಾಷ್ಟ್ರಸಂಘದ ವೈಫಲ್ಯಕ್ಕೆ ಮೂಲಕಾರಣವಾದವು.

೧೦. ಅಮೆರಿಕಾವು ರಾಷ್ಟ್ರಸಂಘದಲ್ಲಿಲ್ಲವಾದುದು ಸಂಘದ ನೈತಿಕ ಸ್ಥೈರ್ಯದ ತುಂಬಲಾರದ ನಷ್ಟವೆನಿಸಿತು. ಅಮೆರಿಕಾದ ಅಧ್ಯಕ್ಷನಾಗಿದ್ದ ವುಡ್ರೋವಿಲ್ಸನ್‌ನ ಶಾಂತಿ ಪ್ರಯತ್ನದ ಫಲವಾಗಿ ರಾಷ್ಟ್ರ ಸಂಘವು ಅಸ್ತಿತ್ವಕ್ಕೆ ಬಂದಿತ್ತು. ಆದರೆ ಅಮೆರಿಕಾದ ಸೆನೆಟ್ ವರ್ಸೈಲ್ಸ್ ಒಪ್ಪಂದವನ್ನು ತಿರಸ್ಕರಿಸಿದ ಕಾರಣ ಅಮೆರಿಕಾವನ್ನು ರಾಷ್ಟ್ರಸಂಘದ ಸಕ್ರಿಯ ಸದಸ್ಯನನ್ನಾಗಿ ಮಾಡಬೇಕೆಂಬ ವಿಲ್ಸನನ ಕನಸು ನನಸಾಗಲಿಲ್ಲ.

೧೧. ರಾಷ್ಟ್ರಸಂಘದ ಮುಖ್ಯ ಶಕ್ತಿಗಳು ತಮ್ಮ ಸಾರ್ವಭೌಮತ್ವದ ಬಗ್ಗೆ ನಂಬಿಕೆಯಿರಿಸಿದ್ದವು. ಮಾತ್ರವಲ್ಲ, ಅವುಗಳ ಆಕ್ರಮಣಗಳ ವಿರುದ್ಧ ಸಂಘವು ದನಿಯೆತ್ತುವುದನ್ನು ಅವು ಸಹಿಸಲಿಲ್ಲ. ಆದ್ದರಿಂದ ಇಟಲಿ, ಜರ್ಮನಿ, ಜಪಾನ್‌ಗಳಂತಹ ಪ್ರಬಲ ರಾಷ್ಟ್ರಗಳು ರಾಷ್ಟ್ರ ಸಂಘವನ್ನು ತ್ಯಜಿಸಿ ಹೊರಬಂದವು.

೧೨. ಶಕ್ತರಾಷ್ಟ್ರಗಳು ತಮ್ಮ ಸ್ವಾರ್ಥಕ್ಕಾಗಿ ರಾಷ್ಟ್ರ ಸಂಘವನ್ನು ದುರುಪಯೋಗ ಪಡಿಸಿಕೊಂಡವು. ಯುರೋಪಿನಲ್ಲಿ ಶಕ್ತಿಯ ಸಮತೋಲನಕ್ಕಾಗಿ ಬ್ರಿಟನ್ ಬಯಸಿದರೆ, ಜರ್ಮನಿಯ ಆಕ್ರಮಣ ತಡೆಯಲು ಇರುವ ಭದ್ರತೆಯೆಂಬಂತೆ ಫ್ರಾನ್ಸ್ ಭಾವಿಸಿತು.

೧೩. ವಿಜೇತ ರಾಷ್ಟ್ರಗಳ ಪರ ವಹಿಸಿದ್ದ ಶಾಂತಿ ಒಪ್ಪಂದಗಳು ಏಕಮುಖವಾಗಿ ಇದ್ದುದ ರಿಂದ ಸೋತ ರಾಷ್ಟ್ರಗಳು ರಾಷ್ಟ್ರ ಸಂಘವನ್ನು ಪ್ರಬಲ ರಾಷ್ಟ್ರಗಳ ಪರವಾದ ಸಂಸ್ಥೆಯೆಂಬಂತೆ ನೋಡತೊಡಗಿದವು.

ಹೀಗೆ ರಾಷ್ಟ್ರ ಸಂಘವು ಜಗತ್ತಿನಲ್ಲಿ ಶಾಂತಿ ಸ್ಥಾಪಿಸುವ ತನ್ನ ಪ್ರಾಥಮಿಕ ಉದ್ದೇಶ ದಲ್ಲಿಯೇ ವಿಫಲವಾಯಿತು. ಜಗತ್ತನ್ನು ಎರಡನೆಯ ಮಹಾಯುದ್ಧದಿಂದ ರಕ್ಷಿಸಲು ರಾಷ್ಟ್ರ ಸಂಘಕ್ಕೆ ಸಾಧ್ಯವಾಗಲಿಲ್ಲ. ಹೀಗಾಗಿದ್ದರೂ ಮಾನವ ಕಲ್ಯಾಣಕ್ಕಾಗಿ ಶ್ರಮಿಸಿದ ಅದರ ಪ್ರಯತ್ನ, ಸೇವೆ ಗಣನೀಯವಾಗಿ ಉಳಿದಿದೆ. ಅವು ಮುಂದಿನ ರಚನಾತ್ಮಕ ಕಾರ್ಯಗಳ ಬೆಳವಣಿಗೆಗೆ ಪ್ರೇರಣೆಯಾದವು ಎಂಬುದು ಮತ್ತಷ್ಟು ಮಹತ್ವದ ವಿಚಾರವಾಗಿದೆ.

<u>ಪರಾಮರ್ಶನ ಗ್ರಂಥಗಳು</u>

೧. ಕಿಂಗ್ ಸಿ.(ಸಂ), ೧೯೭೨. **ದಿ ಫಸ್ಟ್ ವರ್ಲ್ಡ್ ವಾರ್,** ಲಂಡನ್

೨. ಹೆನಿಗ್ ಆರ್.(ಸಂ), ೧೯೭೩. **ದಿ ಲೀಗ್ ಆಫ್ ನೇಶನ್ಸ್,** ಎಡಿನ್‌ಬರ್ಗ್

# ೨೦. ರಷ್ಯಾದ ಮಹಾಕ್ರಾಂತಿ ಸ್ವರೂಪ ಹಾಗೂ ಪ್ರಕ್ರಿಯೆ

ರಷ್ಯಾದಲ್ಲಿ ೧೯೧೭ರಲ್ಲಿ ನಡೆದ ಅಕ್ಟೋಬರ್ ಕ್ರಾಂತಿ ಮಾನವ ಇತಿಹಾಸದಲ್ಲಿ ಅತ್ಯಂತ ಮಹತ್ವದ ಹಾಗೂ ಅತ್ಯದ್ಭುತವಾದ ಘಟನೆಯಾಗಿದೆ. ಈ ಕ್ರಾಂತಿಯ ಮೂಲಕ ಸಮಾಜದ ಅತ್ಯಂತ ಕೆಳಸ್ತರದಲ್ಲಿದ್ದ ಮತ್ತು ಶತಮಾನಗಳಿಂದ ತೀವ್ರ ಶೋಷಣೆಗೊಳಗಾದ ದುಡಿಯುವ ಜನರ-ಕಾರ್ಮಿಕರ ಮತ್ತು ರೈತರ ಪ್ರಭುತ್ವವನ್ನು ಜಗತ್ತಿನಲ್ಲಿಯೇ ಮೊತ್ತ ಮೊದಲಬಾರಿಗೆ ರಷ್ಯದಲ್ಲಿ ಸ್ಥಾಪಿಸಲಾಯಿತು. ಅಲ್ಲಿಯವರೆಗೆ ಮಾನವ ಇತಿಹಾಸದ ವಿವಿಧ ಕಾಲಘಟ್ಟಗಳಲ್ಲಿ ಮತ್ತು ಜಗತ್ತಿನ ವಿವಿಧ ಪ್ರದೇಶಗಳಲ್ಲಿ ರಾಜಮಹಾರಾಜರು, ಚಕ್ರವರ್ತಿಗಳು, ರಾಜಪುರೋಹಿತರು, ಶ್ರೀಮಂತ ಭೂಮಾಲಿಕರು, ವ್ಯಾಪಾರೋದ್ಯಮಿಗಳು, ಬಂಡವಾಳಶಾಹಿಗಳು ರಾಜ್ಯಪ್ರಭುತ್ವದಲ್ಲಿ ರಾರಾಜಿಸಿದ್ದರು. ರಷ್ಯಾದಲ್ಲಿ ೧೯೧೭ರ ಫೆಬ್ರವರಿ ಕ್ರಾಂತಿಯಲ್ಲಿ ಝಾರ್ ಚಕ್ರವರ್ತಿಯ ಪ್ರಭುತ್ವವನ್ನು ಮತ್ತು ಅಕ್ಟೋಬರ್ ಕ್ರಾಂತಿಯನ್ನು ಬಂಡವಾಳಶಾಹಿ-ಭೂಮಾಲಿಕ ಪ್ರಭುತ್ವವನ್ನು ಪದಚ್ಯುತಿಗೊಳಿಸಿರುವುದು ಒಂದು ಐತಿಹಾಸಿಕ ಮಹತ್ವದ ದಾಖಲೆಯಾಗಿದೆ.

ಅಕ್ಟೋಬರ್ ಮಹಾನ್ ಕ್ರಾಂತಿಯ ಯಶಸ್ಸಿನ ತಾತ್ವಿಕ, ಸೈದ್ಧಾಂತಿಕ, ಪ್ರಾಯೋಗಿಕ, ಸಂಘಟನಾ ಹಾಗೂ ಚಾರಿತ್ರಿಕ ಹಿನ್ನೆಲೆಗಳನ್ನು ೧೯ನೇ ಶತಮಾನದ ಮಧ್ಯಕಾಲದಿಂದ ಕಾರ್ಮಿಕ ವರ್ಗದ ತತ್ವಜ್ಞಾನ ಎಂದೇ ಪ್ರಸಿದ್ಧಿ ಪಡೆದ ಮಾರ್ಕ್ಸ್‌ವಾದದಲ್ಲಿ ಕಂಡುಕೊಳ್ಳಬೇಕಾಗಿದೆ. ಈ ಕಾಲಘಟ್ಟದಲ್ಲಿ ಫ್ರಾನ್ಸ್, ಜರ್ಮನಿ ಮತ್ತು ಇತರ ಐರೋಪ್ಯ ದೇಶಗಳಲ್ಲಿ ಬಂಡವಾಳಶಾಹಿ ಸಮಾಜದ ದೌರ್ಜನ್ಯ, ದಾಳಿ, ದಬ್ಬಾಳಿಕೆ ಶೋಷಣೆಗಳ ಅಸಹನೀಯ ಪರಿಸ್ಥಿತಿಗಳನ್ನು ಕಿತ್ತೊಗೆಯಲು ಕಾರ್ಮಿಕರು ಕ್ರಾಂತಿಕಾರಿ ಹೋರಾಟಗಳಲ್ಲಿ ಧುಮುಕಿದ್ದರು. ಆಗ ಜರ್ಮನಿಯ ಇಬ್ಬರು ಪ್ರತಿಭಾವಂತ ಹಾಗೂ ಉತ್ಸಾಹಿ ತರುಣರಾದ ಕಾರ್ಲ್‌ಮಾರ್ಕ್ಸ್(೧೮೧೮-೧೮೮೩) ಮತ್ತು ಅವರ ಜೀವದ ಗೆಳೆಯ ಹಾಗೂ ನಿಕಟವರ್ತಿ ಫ್ರೆಡರಿಕ್ ಎಂಗೆಲ್ಸ್(೧೮೨೦-೧೮೯೫) ೧೮೪೮ರಲ್ಲಿ ತಮ್ಮ ಕಮ್ಯುನಿಸ್ಟ್ ಘೋಷಣೆಯಲ್ಲಿ (ಕಮ್ಯುನಿಸ್ಟ್ ಮ್ಯಾನಿಫೆಸ್ಟೊ) ಮೊತ್ತ ಮೊದಲಬಾರಿಗೆ ಸಮಾಜವಾದದ ಕನಸನ್ನು ನನಸು ಮಾಡುವ ವೈಜ್ಞಾನಿಕ ವಿಧಾನಗಳನ್ನು ತಿಳಿಸಿದರು ಮತ್ತು "ವೈಜ್ಞಾನಿಕ ಸಮಾಜವಾದ"ವನ್ನು ಪ್ರತಿಪಾದಿಸಿದರು. ಈ ಘೋಷಣೆಯ ಮಿಲಿಯಾಂತರ ಪ್ರತಿಗಳು ವಿಶ್ವದಾದ್ಯಂತ ವಿವಿಧ ಭಾಷೆಗಳಲ್ಲಿ ರಷ್ಯಾ ದೇಶವೂ ಸೇರಿದಂತೆ ಜಗತ್ತಿನ ಶ್ರಮಿಕ ವರ್ಗಕ್ಕೆ ತಮ್ಮ ಬಂಧ ವಿಮೋಚನೆಗೆ ಜ್ಞಾನದೀಪವಾಗಿ, ದಿವ್ಯಾಸ್ತ್ರವಾಗಿ ದೊರಕಿದವು.

ಮುಂದೆ ಎಂಗೆಲ್ಸ್‌ರ ನೆರವಿನಿಂದ ಮಾರ್ಕ್ಸ್ ಶೋಷಣೆಯ ಮೂಲದ ಸಂಶೋಧನೆಯ ಬಂಡವಾಳ (ಕ್ಯಾಪಿಟಲ್) ಗ್ರಂಥವನ್ನು ರಚಿಸಿದರು. ಶೋಷಣೆಯನ್ನು ನಿರ್ಮೂಲ ಮಾಡಲು ನಡೆಸಬೇಕಾದ ಸಮಾಜವಾದಿ ಕ್ರಾಂತಿಗಾಗಿ ಕಾರ್ಮಿಕರ ಅಂತರಾಷ್ಟ್ರೀಯ ಸಂಘಟನೆಗಳನ್ನು ಕಟ್ಟಿ ಬೆಳೆಸಿದರು. ಆದಿ ಸಮಾಜದಿಂದ ತನ್ನ ಕಾಲದವರೆಗೆ ವಿಶ್ವದಾದ್ಯಂತ ನಡೆದ ಎಲ್ಲಾ ಕ್ರಾಂತಿಗಳನ್ನು ವಿಶ್ಲೇಷಿಸಿದರು. ೧೬೪೮ರಲ್ಲಿ ಇಂಗ್ಲೆಂಡಿನಲ್ಲಿ ಮತ್ತು ೧೭೮೯ರಲ್ಲಿ ಫ್ರಾನ್ಸ್‌ನಲ್ಲಿ ಉದಯೋನ್ಮುಖಿ ಬಂಡವಾಳಶಾಹಿಗಳು ಕಾರ್ಮಿಕರ ನೆರವಿನಿಂದ ಅರಸೊತ್ತಿಗೆಯನ್ನು, ಪಾಳೆಯಗಾರಿ ಪ್ರಭುತ್ವವನ್ನು ಬೇರುಸಹಿತ ಕಿತ್ತುಹಾಕಿ "ಬಂಡವಾಳ ಪ್ರಜಾಪ್ರಭುತ್ವ" ಸ್ಥಾಪಿಸಿದುದರ ಅನುಭವಗಳನ್ನು ದಾಖಲಿಸಿದರು. ಆ ಸಂದರ್ಭಗಳಲ್ಲಿ ಮೂಡಿಬಂದ "ಸ್ವಾತಂತ್ರ್ಯ", "ಸಮಾನತೆ", "ಭ್ರಾತೃತ್ವ" ಧ್ಯೇಯದ ಉದ್ಘೋಷಗಳನ್ನು ಮುಂದೆ ಕಾರ್ಮಿಕವರ್ಗ ಬಂಡವಾಳಶಾಹಿ ಪ್ರಭುತ್ವವನ್ನು ಪದಚ್ಯುತಗೊಳಿಸಿ ಸಮಾಜವಾದಿ ಕ್ರಾಂತಿಯನ್ನು ಯಶಸ್ವಿಗೊಳಿಸಲು ಮೈಗೂಡಿಸಿಕೊಳ್ಳುವಂತೆ ಇವರು ಪ್ರೇರೇಪಿಸಿದರು. ೧೮೭೧ರಲ್ಲಿ ಕಾರ್ಮಿಕರ ನೇತೃತ್ವದಲ್ಲಿ ಫ್ರಾನ್ಸ್‌ನಲ್ಲಿ ನಡೆದ ಕ್ರಾಂತಿಯಿಂದ ಮೊದಲಬಾರಿಗೆ ಸ್ಥಾಪಿಸಿದ "ಪ್ಯಾರಿಸ್ ಕಮ್ಯುನ್ " ಶ್ರಮಿಕ ವರ್ಗದ ೭೦ ದಿನಗಳ ಪ್ರಭುತ್ವದ ಸೋಲು ಗೆಲುವುಗಳನ್ನು ವಿಶ್ಲೇಷಿಸಿ ಮುಂದಿನ ಕ್ರಾಂತಿಗಳಿಗೆ ಮಾರ್ಗದರ್ಶನ ನೀಡಿದರು. ೧೭೭೬ರಲ್ಲಿ ಬ್ರಿಟಿಷ್ ವಸಾಹತುವಿನಿಂದ ಸ್ವತಂತ್ರಗೊಂಡ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ "ಬಂಡವಾಳಶಾಹಿ ಪ್ರಜಾಪ್ರಭುತ್ವ" ಸ್ಥಾಪನೆಗೊಂಡು, ೧೮೮೬ರಲ್ಲಿ ಕಾರ್ಮಿಕರು ತಮ್ಮ ಕೆಲಸದ ಅವಧಿಯನ್ನು ೮ ಗಂಟೆಗಳಿಗೆ ಸೀಮಿತಗೊಳಿಸಲು, ಚಿಕಾಗೋ ನಗರದಲ್ಲಿ ವೀರೋಚಿತವಾದ "ಮೇ ಹೋರಾಟ" ನಡೆಸಿದರು. ೧೮೮೯ರ ಮೇ ೧ ರಂದು ಜಗತ್ತಿನಾದ್ಯಂತ ಅಂತರ್‌ರಾಷ್ಟ್ರೀಯ ಕಾರ್ಮಿಕರ ದಿನಾಚರಣೆ ಪ್ರಾರಂಭ ವಾಯಿತು. ಇವೆಲ್ಲವುಗಳಿಂದ "ವೈಜ್ಞಾನಿಕ ಸಮಾಜವಾದ" ಸಿದ್ಧಾಂತ ಮತ್ತು ಪ್ರಯೋಗ ಇನ್ನಷ್ಟು ಶ್ರೀಮಂತವಾದವು.

ಹಿಂದೆ ನಡೆದ ಎಲ್ಲ ಕ್ರಾಂತಿಗಳು ಸ್ವಯಂ ಪ್ರೇರಿತವಾಗಿದ್ದವೆಂದೂ, ಅನೇಕ ಸೋಲು ಗಳನ್ನು ಅನುಭವಿಸಿವೆಯೆಂದೂ, ಮುಂದೆ ಕಾರ್ಮಿಕರ ನೇತೃತ್ವದಲ್ಲಿ ನಡೆಯಲಿರುವ ಸಮಾಜವಾದಿ ಕ್ರಾಂತಿಗಳನ್ನು ಯೋಜನಾ ಬದ್ಧವಾಗಿ ನಡೆಸಿ ಯಶಸ್ವಿಗೊಳಿಸಬಹುದೆಂದೂ, ಅಂತಹ ಕ್ರಾಂತಿಗಳು ಯೂರೋಪಿನ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ದೇಶಗಳಲ್ಲಿ ಸಂಭವಿಸಲಿವೆ ಎಂದೂ ಮಾರ್ಕ್ಸ್ ನಿರೀಕ್ಷಿಸಿದ್ದರು. ಆದರೆ, ಅವರ ಜೀವಿತದ ಕೊನೆಯ ಕಾಲಘಟ್ಟದಲ್ಲಿ ಬಂಡವಾಳಶಾಹಿ ವಿಜ್ಞಾನ, ತಂತ್ರಜ್ಞಾನಗಳ ಗರಿಷ್ಠ ಬಳಕೆಯಿಂದ ಸಾಮ್ರಾಜ್ಯಶಾಹಿ ಮಟ್ಟಕ್ಕೆ ದೈತ್ಯಾಕಾರವಾಗಿ ಬೆಳೆದು ಬಂದಿತು. ಬಂಡವಾಳಶಾಹಿ ಪ್ರಭುತ್ವಗಳು ತಮ್ಮ ಆಂತರಿಕ ಆರ್ಥಿಕ-ರಾಜಕೀಯ ಬಿಕ್ಕಟ್ಟುಗಳ ಭಾರವನ್ನು ಜಗತ್ತಿನಾದ್ಯಂತ ತಮ್ಮ ವಸಾಹತುಗಳ ಮೇಲೆ ಹೇರಿ ತಮ್ಮ ಪ್ರಭುತ್ವಗಳನ್ನು ಬಲಪಡಿಸಿಕೊಂಡವು. ೧೯ನೇ ಶತಮಾನದ ಕೊನೆಯಲ್ಲಿ ಮಾರ್ಕ್ಸ್‌ವಾದದಿಂದ ಪ್ರಭಾವಿತರಾದ ರಷ್ಯಾದ ವಿ.ಐ.ಲೆನಿನ್‌ರವರು(೧೮೭೦-೧೯೨೪) ಜಾಗತಿಕ ಸಾಮ್ರಾಜ್ಯಶಾಹಿ ಬಂಡವಾಳಶಾಹಿಯ ಅತ್ಯುನ್ನತ ಘಟ್ಟ ಎಂದೂ, ಅದರ ಅತಿ ದುರ್ಬಲ ಕೊಂಡಿಯಾದ ರಷ್ಯಾದಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ರೈತವರ್ಗದ ಸಖ್ಯತೆಯೊಂದಿಗೆ ಪಾಳೆಯಗಾರಿ ಹಾಗೂ ಬಂಡವಾಳಶಾಹಿ ಪ್ರಭುತ್ವಗಳನ್ನು ಏಕಕಾಲದಲ್ಲಿ ಪದಚ್ಯುತಗೊಳಿಸಬಹುದೆಂದೂ ವ್ಯಾಖ್ಯಾನಿಸಿದರು.

ಸಾಮ್ರಾಜ್ಯಶಾಹಿಗಳು ತಮ್ಮ ಬಂಡವಾಳದ ಲಾಭಗಳಿಕೆಯ ಹೆಚ್ಚಳದ ಸ್ಪರ್ಧೆಗಾಗಿ, ಜಾಗತಿಕ ಮಾರುಕಟ್ಟೆ ಹಾಗೂ ವಸಾಹತುಗಳನ್ನು ತಮ್ಮೊಳಗೆ ಹಂಚಿಕೊಳ್ಳುವ ಸ್ಪರ್ಧೆಗಾಗಿ ಅನತಿ ಕಾಲದಲ್ಲಿಯೇ ಪರಸ್ಪರ ಯುದ್ಧಕ್ಕೆ ಇಳಿಯಲಿದ್ದಾರೆಂದೂ, ಅದು ಜಾಗತಿಕ ಯುದ್ಧವಾಗಿಯೇ ಪರಿಣಮಿಸಲಿದೆ ಎಂದೂ ಲೆನಿನ್ ಕಂಡುಕೊಂಡರು. ಆ ಯುದ್ಧ ಕಾಲದಲ್ಲಿ ಎಲ್ಲಾ ದೇಶಗಳ ಕಾರ್ಮಿಕರು ಹುಸಿ ರಾಷ್ಟ್ರಭಕ್ತಿ ತೋರಿಸದೆ, ಜಾಗತಿಕ ಯುದ್ಧ ಇಕ್ಕುಳದಲ್ಲಿ ಸಿಲುಕಿದ ಬಂಡವಾಳಶಾಹಿ ಪ್ರಭುತ್ವಗಳನ್ನು ಪದಚ್ಯುತಗೊಳಿಸಿ ತಮ್ಮ ದೇಶಗಳಲ್ಲಿ ಸಮಾಜವಾದಿ ಕ್ರಾಂತಿ ಯಶಸ್ಸುಗೊಳಿಸಲು ಕರೆಕೊಟ್ಟರು. ಕಾರ್ಮಿಕ ವರ್ಗಕ್ಕೆ ತನ್ನದೇ ಆದ ಪಕ್ಷ ಇರಬೇಕೆಂದೂ, ತನ್ನ ಬೆಂಬಲಕ್ಕಾಗಿ ಬಡರೈತರ ಸಖ್ಯತೆ ಬೆಳೆಸಿ ಕೊಳ್ಳಬೇಕೆಂದೂ ಬಂಡವಾಳಶಾಹಿಗಳು ಮತ್ತು ಅದರ ಬೆಂಬಲಿಗರು ಪ್ರತಿಕ್ರಾಂತಿ ನಡೆಸಬಹುದಾದುದರಿಂದ ಅವರನ್ನು ಯಾವುದೇ ದಯೆ ದಾಕ್ಷಿಣ್ಯ ಇಲ್ಲದೇ ನಿಗ್ರಹಿಸಲು ಮತ್ತು ಕ್ರಾಂತಿಯನ್ನು ರಕ್ಷಿಸಲು ಕಾರ್ಮಿಕರ-ರೈತರ "ಕೆಂಪು ಸೇನೆ" ಸಜ್ಜುಗೊಳಿಸಬೇಕೆಂದೂ ಲೆನಿನ್ ಕರೆ ನೀಡಿದರು. ಪ್ಯಾರಿಸ್ ಕಮ್ಯುನ್ ನಡೆಸಿದ ಕಾರ್ಮಿಕರಿಗೆ ಇವೆಲ್ಲವುಗಳ ಕೊರತೆ ಇದ್ದುದರಿಂದಲೇ ಸೋಲುಂಟಾಯಿತು ಎಂದು ತಿಳಿಸಿ ಹೇಳಿದರು. ಕ್ರಾಂತಿಯ ಮುಖ್ಯವಾಹಿನಿಯಲ್ಲಿ ಮೂಡಿಬರಬಹುದಾದ ಬಲಪರಿಷ್ಕರಣವಾದಿಗಳನ್ನು, ಆರ್ಥಿಕ ಬೇಡಿಕೆಗಳಿಗೆ ಮತ್ತು ಸಂಸದೀಯ ವಿಧಾನಗಳಿಗೆ ಜೋತು ಬೀಳುವವರನ್ನು, ಅವಸರದಲ್ಲಿ ಪಿತೂರಿಯಂತೆ ಕ್ರಾಂತಿಮಾಡಿ ಮುಗಿಸುವ ಸಾಹಸವಾದಿಗಳನ್ನು ಮತ್ತು ಒಂದೇ ದೇಶದಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸಲಾರದೆಂಬ ನಿರಾಶಾವಾದಿಗಳನ್ನೂ ಲೆನಿನ್ ನಿರ್ದಾಕ್ಷಿಣ್ಯವಾಗಿ ತರ್ಕಬದ್ಧವಾಗಿ ಖಂಡಿಸುತ್ತಾ ನಿಜವಾದ ಕ್ರಾಂತಿಕಾರಿಗಳಲ್ಲಿ ವಿಶ್ವಾಸ ತುಂಬಿಸಿದರು. ಈ ಮೂಲಕ ಲೆನಿನ್ ಮಾರ್ಕ್ಸ್‌ವಾದವನ್ನು ಇನ್ನಷ್ಟು ಶ್ರೀಮಂತಗೊಳಿಸಿದರು ಮತ್ತು ಪರಿಪೂರ್ಣಗೊಳಿಸಿದರು. ಸಹಜವಾಗಿಯೇ ೨೦ನೇ ಶತಮಾನದ ಪ್ರಾರಂಭದಿಂದ ಕಾರ್ಮಿಕ ವರ್ಗದ ತತ್ವಜ್ಞಾನವನ್ನು "ಮಾರ್ಕ್ಸ್‌ವಾದ ಲೆನಿನ್ ವಾದ" ಎಂದೇ ಗುರುತಿಸ ಲಾಗಿದೆ.

ಲೆನಿನ್ ೧೮೯೫ರಷ್ಟರಲ್ಲಿಯೇ ಕಾರ್ಮಿಕ ವರ್ಗದ ವಿಮೋಚನೆಗಾಗಿ ಹೋರಾಟದ ಸಂಸ್ಥೆಯನ್ನು ರಚಿಸಿದರು. ನಂತರ ಮೂರು ವರ್ಷಗಳಲ್ಲಿ, ೧೮೯೮ರಲ್ಲಿ ರಷ್ಯಾದ ಸೋಶಿಯಲ್-ಡೆಮಾಕ್ರೆಟಿಕ್ ಲೇಬರ್‌ಪಾರ್ಟಿ(ಆರ್.ಎಸ್.ಡಿ.ಎಲ್.ಪಿ)ಯನ್ನು ಸ್ಥಾಪಿಸಿ ದರು. ಆ ಪಕ್ಷದಿಂದಲೇ ಬೋಲ್‌ಶೆವಿಕರು, ಕ್ರಾಂತಿಯ ಮುಖ್ಯವಾಹಿನಿಯ ಪರವಾದ ಬಹುಸಂಖ್ಯಾತರು ಮೂಡಿಬಂದರು. ಅದರಲ್ಲಿದ್ದ ಅಲ್ಪಸಂಖ್ಯಾತರನ್ನು, ಸಂಸದೀಯ ವಿಧಾನಕ್ಕೆ ಅಂಟಿಕೊಂಡವರನ್ನು ಮೆನಶೆವಿಕ್‌ರೆಂದೂ ಗುರುತಿಸಲಾಯಿತು. ೧೯೦೫ರಲ್ಲಿ ಜಪಾನ್ ರಷ್ಯಾದ ಮೇಲೆ ದಾಳಿ ನಡೆಸಿ ಸೋಲಿಸಿತು. ಬೋಲ್‌ಶೆವಿಕ್‌ರಿಗೆ ಝಾರ್ ಚಕ್ರವರ್ತಿಯ ಪ್ರಭುತ್ವದ ಅವಸಾನ ಸಮೀಪಿಸುತ್ತಿರುವುದು ತಿಳಿಯಿತು. ಆ ವರ್ಷವೇ ಬೋಲ್‌ಶೆವಿಕ್‌ರ ನೇತೃತ್ವದಲ್ಲಿ ಕಾರ್ಮಿಕರು ಮತ್ತು ರೈತರು ಬಂಡಾಯವೆದ್ದರು. ಆದರೆ, ಸಾಕಷ್ಟು ಪೂರ್ವ ತಯಾರಿ ಇಲ್ಲದೇ ಬಂಡಾಯ ವಿಫಲವಾಯಿತು. ಬೋಲ್‌ಶೆವಿಕ್ ಪಕ್ಷವನ್ನು ಕಾನೂನುಬಾಹಿರಗೊಳಿಸಲಾಯಿತು. ಅಸಂಖ್ಯಾತ ಕ್ರಾಂತಿಕಾರಿಗಳನ್ನು ಕೊಲೆ ಮಾಡಲಾಯಿತು. ಹಲವರನ್ನು ದೂರದ ಸೈಬೀರಿಯಾಕ್ಕೆ ಜೈಲುವಾಸಕ್ಕಾಗಿ ಕಳುಹಿಸಲಾಯಿತು. ಲೆನಿನ್ ಅವರನ್ನು ಗಡಿಪಾರು ಮಾಡಲಾಯಿತು. ಈ ವಿಫಲ ಕ್ರಾಂತಿಯ ಅನುಭವಗಳನ್ನು ಲೆನಿನ್ ವಿಶ್ಲೇಷಿಸಿ ಮುಂದಿನ ಕ್ರಾಂತಿಗೆ

ಭೂಗತರಾಗಿಯೇ ತಯಾರಿ ನಡೆಸಿದರು. ೧೯೦೫-೦೭ರ ಕ್ರಾಂತಿಯ ಕಾಲದಲ್ಲಿ, ಪ್ರತಿ ಗ್ರಾಮ ಹಾಗೂ ಪಟ್ಟಣದ ಮಟ್ಟಗಳಲ್ಲಿ ರೈತರ ಹಾಗೂ ಕಾರ್ಮಿಕರ ಪ್ರಾತಿನಿಧ್ಯವುಳ್ಳ ಪ್ರಾದೇಶಿಕ ಸಮಿತಿಗಳನ್ನು - ಸೋವಿಯತ್‌ಗಳನ್ನು ರಷ್ಯಾ ದೇಶಾದ್ಯಂತ ಸ್ಥಾಪಿಸಲು ಬೊಲ್‌ಶೆವಿಕರು ಶ್ರಮಿಸಿದರು. ಮುಂದೆ ಈ ಸೋವಿಯತ್‌ಗಳೇ ಕ್ರಾಂತಿಯ ಕುಡಿಗಳಾಗಿ ಬೆಳೆದು ಬಂದವು.

ಮೊದಲೇ ತಿಳಿಸಿದಂತೆ, ಬೊಲ್‌ಶೆವಿಕ್ ಪಕ್ಷ ರಷ್ಯಾದ ಕಾರ್ಮಿಕರನ್ನು ಮತ್ತು ಅತ್ಯಂತ ಬಡ ರೈತರನ್ನು ಪ್ರತಿನಿಧಿಸಿತ್ತು. ಆ ಪಕ್ಷದ ಕಾರ್ಯಕ್ರಮದಲ್ಲಿ ಝಾರನ ನಿರಂಕುಶ ಅರಸೊತ್ತಿಗೆಯನ್ನು ಪದಚ್ಯುತಗೊಳಿಸುವುದು ಮತ್ತು ಬಂಡವಾಳಶಾಹಿ ವರ್ಗವನ್ನು ಪ್ರಭುತ್ವದಿಂದ ಕಿತ್ತು ಹಾಕುವುದು, ಅಂತಿಮವಾಗಿ ಶ್ರಮಿಕ ವರ್ಗದ - ಕಾರ್ಮಿಕರ ಹಾಗೂ ರೈತರ ಸಮಾಜವಾದಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವುದು, ಕೈಗಾರಿಕಾ ಉತ್ಪಾದನಾ ಸಾಧನಗಳನ್ನು ಖಾಸಗೀ ಸ್ವಾಮ್ಯದಿಂದ ಸಾಮಾಜಿಕ ಸ್ವಾಮ್ಯಕ್ಕೆ ಹಸ್ತಾಂತರಿಸು ವುದು, ಭೂಮಾಲಿಕ ಪದ್ಧತಿಯನ್ನು ಅಳಿಸಿಹಾಕಿ ಉಳುವವನಿಗೆ ಹೊಲ ಕೊಡಿಸುವುದು, ಮತ್ತು ಈ ಎಲ್ಲಾ ವಿಧಾನಗಳಿಂದ ಜನಸಂಖ್ಯೆಯ ಶೇ.೯೫ರಷ್ಟಿರುವ ಕಾರ್ಮಿಕರಿಗೆ ಮತ್ತು ಬಡರೈತರಿಗೆ ಆರ್ಥಿಕ, ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಸಮಾನತೆಗಳನ್ನು ಮತ್ತು ಸಮಾನ ಅವಕಾಶಗಳನ್ನು ಒದಗಿಸುವಂತೆ ಮಾಡುವುದು, ಅವರ ಸರ್ವಾಂಗೀಣ ಅಭಿವೃದ್ಧಿ ಗಾಗಿ ಕಾರ್ಮಿಕ ವರ್ಗದ ಪ್ರಜಾಪ್ರಭುತ್ವ ಯೋಜನಾ ಬದ್ಧವಾಗಿ ಶ್ರಮಿಸುವುದು ಎಂದು ಪ್ರಸ್ತಾಪಿಸಲಾಗಿತ್ತು.

೨೦ನೇ ಶತಮಾನದ ಪ್ರಾರಂಭದಲ್ಲಿ ರಷ್ಯಾದಲ್ಲಿ ಬೊಲ್‌ಶೆವಿಕ್ ಪಕ್ಷದ ಹೊರತಾಗಿ ಹಲವಾರು ರಾಜಕೀಯ ಪಕ್ಷಗಳಿದ್ದವು. ಅವುಗಳಲ್ಲಿ ಮುಖ್ಯವಾದವುಗಳು ನಾಲ್ಕು. ಅವುಗಳ ಗುಣಲಕ್ಷಣಗಳು ಹೀಗಿವೆ.

**೧. ಕೆಡೆಟ್ಸ :** ರಾಜವಂಶ ಬೆಂಬಲಿತ ಉದಾರವಾದಿ ಬಂಡವಾಳಶಾಹಿ ಪಕ್ಷ, ಸಂಸದೀಯ ಪ್ರಜಾಪ್ರಭುತ್ವವಾದಿ ಪಕ್ಷ.

**೨. ಪ್ರೊಗ್ರೆಸ್‌ಸಿಸ್ಟ್ಸ್ :** ಪುರೋಗಾಮಿ ಪಕ್ಷ, ದೊಡ್ಡ ಬಂಡವಾಳಶಾಹಿಗಳು ರಾಷ್ಟ್ರಿಯ ಉದಾರವಾದಿ ಪಕ್ಷ.

**೩. ಟ್ರುಡೋವಿಕ್ಸ್ (ಲೇಬರ್ ಗ್ರೂಪ್) :** ಗ್ರಾಮೀಣ ಬಂಡವಾಳಶಾಹಿಗಳ ಪಕ್ಷ, ಸಹಕಾರಿ ಸಂಘಗಳಲ್ಲಿ ಆಸಕ್ತಿ.

**೪. ಸೋಷಿಯಲಿಸ್ಟ್ – ರೆವಲ್ಯೂಶನರೀಸ್ಟ್ಸ್ :** ಸಮಾಜವಾದಿ - ಕ್ರಾಂತಿಕಾರಿಗಳ ಪಕ್ಷ, ನಗರ ಹಾಗೂ ಗ್ರಾಮೀಣ ಪುಟ್ಟ ಬಂಡವಾಳಶಾಹಿಗಳ ಪಕ್ಷ.

ಎಲ್ಲಾ ಸುಧಾರಣೆಗಳಿಗೆ ಅಡ್ಡ ಬರುತ್ತಿರುವ ಝಾರನ ಅರಸೊತ್ತಿಗೆಯನ್ನು ಎದುರಿಸಿ ರಷ್ಯಾದಲ್ಲಿ ಕ್ರಾಂತಿ ಮಾಡುವ ಯಾವುದೇ ರಾಜಕೀಯ ಪಕ್ಷ ಇಲ್ಲ ಎಂದು ಈ ನಾಲ್ಕು ಪಕ್ಷಗಳು ನಿರಾಸೆಗೊಂಡಿದ್ದವು.

**ಕ್ರಾಂತಿಯ ಕಿಡಿಗಳು**

ಲೆನಿನ್ ನಿರೀಕ್ಷಿಸಿದಂತೆ, ೧೯೧೪ರ ಜೂನ್ ೧೫ರಂದು ಸಾಮ್ರಾಜ್ಯಶಾಹಿಗಳ ಮಧ್ಯೆ ಮೊದಲಬಾರಿಗೆ ಭೀಕರ ಜಾಗತಿಕ ಯುದ್ಧ ಪ್ರಾರಂಭವಾಯಿತು. ಒಂದೆಡೆ ಜರ್ಮನಿ, ಆಸ್ಟ್ರಿಯಾ, ಹಂಗೇರಿ ಮತ್ತು ಟರ್ಕಿ; ಇನ್ನೊಂದೆಡೆ ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ. ಎರಡೂ ಬಣಗಳು ಅನುಕ್ರಮವಾಗಿ ೭,೯೯೨,೦೦೦ ಮತ್ತು ೧೦,೧೧೯,೦೦೦ ಸೈನಿಕ ಪಡೆಗಳಿಂದ ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಂದ ಸಜ್ಜಿತವಾಗಿದ್ದವು. ೧೯೧೮ರವರೆಗೆ ಮುಂದುವರೆದ ಈ ಮಹಾಯುದ್ಧದಲ್ಲಿ ೧೫೦ ಕೋಟಿ ಜನಸಂಖ್ಯೆ ಇವರು ೩೮ ರಾಷ್ಟ್ರಗಳು ಭಾಗವಹಿಸಿದ್ದವು. ಈ ಭೀಕರ ಯುದ್ಧದಲ್ಲಿ ೯೫ ಲಕ್ಷ ಜನರು ಸಾವಿಗೀಡಾದರು. ೨೦೦ ಲಕ್ಷ ಜನರು ಗಾಯಗೊಂಡರು ಮತ್ತು ೩೫ ಲಕ್ಷ ಜನರು ಖಾಯಂ ಅಂಗವಿಕಲರಾದರು. ಜನರು ಅಪಾರ ಆಸ್ತಿಪಾಸ್ತಿಗಳನ್ನು ಮತ್ತು ಉತ್ಪಾದನಾ ಸಂಪನ್ಮೂಲಗಳನ್ನು ಕಳೆದುಕೊಂಡರು. ನಿರುದ್ಯೋಗ, ಬೆಲೆ ಏರಿಕೆಗಳ ಬೇಗೆಯಿಂದ ಅವರು ತತ್ತರಿಸಿದರು. ಆದರೆ, ಈ ಯುದ್ಧದ ರಕ್ತಕುಂಡಗಳಿಂದಲೇ ಶಸ್ತ್ರಾಸ್ತ್ರಗಳನ್ನು, ಆಹಾರ ಪದಾರ್ಥಗಳನ್ನು, ಔಷಧಗಳನ್ನು, ಸಾರಿಗೆ ಸಂಪರ್ಕಗಳನ್ನು ಸರಬರಾಜು ಮಾಡುತ್ತಿದ್ದ ಎಲ್ಲಾ ದೇಶದ ವ್ಯಾಪಾರೋದ್ಯಮಿಗಳು,

ಮುಖ್ಯವಾಗಿ ಯುದ್ಧದ ಕೊನೆಯಲ್ಲಿ ಬಂದು ಸೇರಿದ ಅಮೆರಿಕಾ ಸಂಯುಕ್ತ ಸಂಸ್ಥಾನದವರು ಅಪಾರ ಲಾಭಗಳಿಸಿ ಕೋಟ್ಯಾಧೀಶರಾದರು.

ಈ ಮಧ್ಯೆ ರಷ್ಯಾದಲ್ಲಿ ೧೯೧೧ ರಿಂದ ೧೯೧೭ರವರೆಗೆ ಲಕ್ಷಾಂತರ ಕಾರ್ಮಿಕರ ಮುಷ್ಕರಗಳ ಸರಮಾಲೆಯಿಂದ ಕ್ರಾಂತಿಯ ಕಿಡಿಗಳು ಸಿಡಿಯಲಾರಂಭಿಸಿದವು. ರಾಜಧಾನಿ ಪೆಟ್ರೋಗ್ರಾಡ್‌ನಲ್ಲಿ ೧೯೧೭ರ ಫೆಬ್ರವರಿ ೧೦ ರಂದು ಕಾರ್ಮಿಕರು ಮತ ಪ್ರದರ್ಶನ ಮಾಡಿದರು. ೧೪ ರಂದು ೫೮ ಕೈಗಾರಿಕಾ ಸಂಸ್ಥೆಗಳ ೯೦,೦೦೦ ಕಾರ್ಮಿಕರು ಸಲಕರಣೆಗಳ ವಿನ್ಯಾಸ ನಡೆಸಿದರು. ೨೩ ರಂದು ನಡೆದ ಅಂತರ್ ರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಬೆಂಬಲಿಸಿ ೧೨೮,೦೦೦ ಕಾರ್ಮಿಕರು ಮುಷ್ಕರ ನಡೆಸಿದರು. ಬೃಹತ್ ಸಂಖ್ಯೆಯಲ್ಲಿ ಭಾಗವಹಿಸಿದ ಮಹಿಳೆಯರು "ಯುದ್ಧಕ್ಕೆ ಧಿಕ್ಕಾರ" "ನಮಗೆ ಅನ್ನ ಕೊಡಿ" "ಮಹಿಳೆ ಯರಿಗೆ ಮತದಾನದ ಹಕ್ಕು ಕೊಡಿ" ಎಂದು ಗಗನ ಮುಟ್ಟುವಂತೆ ಘೋಷಣೆಗಳನ್ನು ಕೂಗಿದರು. ೨೪ ರಂದು ಮುಷ್ಕರನಿರತ ಕಾರ್ಮಿಕರ ಸಂಖ್ಯೆ ೨೧೪,೦೦೦ಕ್ಕೇರಿತು. ೨೫ ರಿಂದ ರಾಜಕೀಯ ಸಾರ್ವತ್ರಿಕ ಮುಷ್ಕರ ಪ್ರಾರಂಭವಾಯಿತು. ೨೬ ರಂದು ನಗರದ ವಿವಿಧ ಪ್ರದೇಶಗಳಲ್ಲಿ ಕಾರ್ಮಿಕರ ಮತ್ತು ಪೋಲೀಸರ - ಸೈನಿಕರ ನಡುವೆ ರಕ್ತ ಸಿಂಚಿತ ಘರ್ಷಣೆ ಗಳಾದವು. ಕಾರ್ಮಿಕರನ್ನು ಬೆಂಬಲಿಸಿ ಮಹಿಳೆಯರೂ ಹೋರಾಟಗಳಲ್ಲಿ ಪಾಲ್ಗೊಂಡಿದ್ದರು. ಹೋರಾಟ ನಿಲ್ಲಿಸಲು ಝಾರನ ಮಿಲಿಟರಿ ಅಧಿಕಾರಿ ನೀಡಿದ ಆದೇಶವನ್ನು ತಿರಸ್ಕರಿಸ ಲಾಯಿತು. ಯುದ್ಧರಂಗದಿಂದ ಬರಿಗಾಲಿನ, ಕೆಸರು ಮತ್ತು ರಕ್ತತಪ್ತ ಕಾಲುಗಳಿಂದ, ಖಾಯಿಲೆಗಳಿಂದ ಹಾಗೂ ಹಸಿವಿನಿಂದ ಯುದ್ಧ ಟ್ರೆಂಚ್‌ಗಳಲ್ಲಿ ನರಳುತ್ತಿರುವ ಸಾವಿರಾರು ಸೈನಿಕರು ಹಿಂದಿರುಗುತ್ತಿದ್ದರು. ಅವರು ತಮಗೆ ಓದಲು ಏನಾದರೂ ಕೊಡಿ ಎಂದು ಬೊಲ್‌ಶೆವಿಕರನ್ನು ಕೇಳುತ್ತಿದ್ದರು. ಅಕ್ಟೋಬರ್ ೨೭ ಮತ್ತು ೨೮ರಂದು ೪೫೪,೦೦೦ ಸೈನಿಕರು ಸಾರ್ವತ್ರಿಕ ಮುಷ್ಕರನಿರತ ಕಾರ್ಮಿಕರನ್ನು ಕೂಡಿಕೊಂಡರು ಮತ್ತು ಕ್ರಾಂತಿಕಾರಿಗಳ ಶಕ್ತಿಯನ್ನು ಹೆಚ್ಚಿಸಿದರು.

ಫೆಬ್ರವರಿ ೨೭ರಂದು ಪೆಟ್ರೋಗ್ರಾಫ್ ಸೋವಿಯತ್‌ಗೆ ಕಾರ್ಮಿಕರ ಮತ್ತು ಸೈನಿಕರ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ಜನರು ಹೊಸತಾಗಿ ಆಯ್ಕೆಗೊಂಡ ಸೋವಿಯತ್‌ಗೆ ಸಂಪೂರ್ಣ ಅಧಿಕಾರ ನೀಡಿ ಬೆಂಬಲಿಸಿದರು. ಅದೇ ದಿನ ರಾತ್ರಿ ಡೂಮಾದ-ಸಂಸದೀಯ ತಾತ್ಕಾಲಿಕ ಸಮಿತಿಯನ್ನು ಸ್ಥಾಪಿಸಲಾಯಿತು. ಝಾರನ ಕಾಲದ ಸಂಸತ್ತಿನಲ್ಲಿದ್ದ ಬಂಡವಾಳಶಾಹಿ ಪರವಾದ ಪ್ರತಿನಿಧಿಗಳು ಹೊರಗಿನ ಕ್ರಾಂತಿಕಾರಕ ಪರಿಸ್ಥಿತಿಯ ಲಾಭ ಪಡೆದರು. ಮಾರ್ಚ್ ೨ ರಂದು ಸಂಸದೀಯ ಸಮಿತಿಯ ಮೂಲಕ ಝಾರನೊಂದಿಗೆ ಸಂಧಾನ ನಡೆಸಿ, ಅವನು ಸಿಂಹಾಸನ ತ್ಯಾಗ ಮಾಡುವಂತೆ ಮನವೊಲಿಸಿದರು. ಮಿಂಚಿನ ವೇಗದಲ್ಲಿ ಸಂಸದೀಯ ಸಮಿತಿ, ಅಸ್ಥಿರತೆಯಿಂದ ಇದ್ದ ಪೆಟ್ರೋಗ್ರಾಡ್ ಸೋವಿಯತ್‌ನ ಕೆಲವು ಪ್ರತಿನಿಧಿಗಳ ನೆರವಿನಿಂದ, ತಾತ್ಕಾಲಿಕ ಸರಕಾರವನ್ನು ರಚಿಸಿಯೇ ಬಿಟ್ಟರು. ಝಾರನ ಬದಲಿಗೆ ಕ್ರಾಂತಿವಿರೋಧಿ ಬಂಡವಾಳಶಾಹಿಗಳು ಪ್ರತಿನಿಧಿಗಳ ಪ್ರಭುತ್ವ ಅಧಿಕಾರಕ್ಕೆ ಬರುವಂತಾಯಿತು. ನಾಮಫಲಕವಷ್ಟೇ ಬದಲಾಯಿತು. ತೋರಿಕೆಗೆ ತಾತ್ಕಾಲಿಕ ಸರಕಾರದ ಮಂತ್ರಿಮಂಡಲವೂ "ಕ್ರಾಂತಿಗೆ ಜಯವಾಗಲಿ", "ನಾವು ಜನರ ಜೊತೆಗಿದ್ದೇವೆ" "ಪ್ರಜಾಪ್ರಭುತ್ವ-ಭ್ರಾತೃತ್ವ-ಸಮಾನತೆ ಚಿರಾಯುವಾಗಲಿ" ಎಂದು ಘೋಷಿಸಿದರು. ಆದರೆ, ಫೆಬ್ರವರಿ ಕ್ರಾಂತಿಯ ಮೂಲಕ ೩೦೦ ವರ್ಷಗಳ ದೀರ್ಘಕಾಲದ ಕ್ರೂರ, ಜನ ವಿರೋಧಿ ರೋಮೊನೋವ್ ವಂಶದ ಆಳ್ವಿಕೆ ಕೊನೆಗೊಂಡಿರುವುದು ನಿಜವಾಯಿತು.

ರಷ್ಯಾದಲ್ಲಿ ಈಗ ಎರಡು ಪ್ರಭುತ್ವಗಳಿರುವುದನ್ನು ಲೆನಿನ್ ಗುರುತಿಸಿದರು. ಒಂದನೆಯದು ಬಂಡವಾಳಶಾಹಿಗಳ ತಾತ್ಕಾಲಿಕ ಸರಕಾರ ಮತ್ತು ಎರಡನೆಯದು ಪೆಟ್ರೋಗ್ರಾಡ್ ಸೋವಿಯತ್‌ನದ್ದು. ಎರಡನೇ ಪ್ರಭುತ್ವದ ಮೂಲಕ ಮುಂದಿನ ದಿನಗಳಲ್ಲಿ ಸಮಾಜವಾದಿ ಕ್ರಾಂತಿಯನ್ನು ಯಶಸ್ಸುಗೊಳಿಸುವ ಜವಾಬ್ದಾರಿ ಇತ್ತು. ಪೆಟ್ರೋಗ್ರಾಡ್ ಸೋವಿಯತ್ ಕಾರ್ಮಿಕರ ಕೆಲಸದ ಅವಧಿಯನ್ನು ೮ ಗಂಟೆಗಳಿಗೆ ನಿಗದಿಗೊಳಿಸಿತು. ತಾತ್ಕಾಲಿಕ ಸರಕಾರ ಈ ಆದೇಶವನ್ನು ವಿರೋಧಿಸುವ ಸ್ಥಿತಿಯಲ್ಲಿರಲಿಲ್ಲ. ಏಪ್ರಿಲ್ ೩ ರಂದು ಲೆನಿನ್ ಪೆಟ್ರೋಗ್ರಾಡ್‌ಗೆ ವಾಪಸ್ಸಾದರು. ಮುಂದಿನ ಕ್ರಾಂತಿಯ ನೇತೃತ್ವ ವಹಿಸಿದರು. ಕ್ರಾಂತಿ ಮುಂದಿನ ಹಂತದಲ್ಲಿ ಲೆನಿನ್ ಜನರ ಮುಂದೆ ಅತ್ಯಂತ ಸರಳ-ಸುಲಭವಾದ ಘೋಷಣೆಗಳನ್ನು ಇಟ್ಟರು. ಸೈನಿಕರಿಗೆ ಶಾಂತಿ, ಕಾರ್ಮಿಕರಿಗೆ ಆಹಾರ, ರೈತರಿಗೆ ಭೂಮಿ ಮತ್ತು ಎಲ್ಲರಿಗೂ ಸ್ವಾತಂತ್ರ್ಯ ಎಂದರು ತಾತ್ಕಾಲಿಕ ಸರಕಾರ ಜನರ ಯಾವುದೇ ಬೇಡಿಕೆಗಳನ್ನು ಈಡೇರಿಸಲಾರದು ಎಂದು ಲೆನಿನ್ ತಿಳಿಸಿದರು. ಪೆಟ್ರೋಗ್ರಾಡ್ ಮತ್ತು ರಷ್ಯಾದ ಎಲ್ಲಾ ಪ್ರದೇಶಗಳಲ್ಲಿ ನೂರಾರು ಸಾವಿರಾರು ಸಭೆಗಳು, ಭಾಷಣಗಳು ನಡೆದವು. ಭಿತ್ತಿಪತ್ರಗಳ, ಕರಪತ್ರಗಳ, ವಾರ್ತಾಪತ್ರಗಳ ಮೂಲಕ ಪ್ರಚಾರ ಪ್ರಕ್ಷೋಭೆಗಳು ಏರ್ಪಟ್ಟವು.

ತಾತ್ಕಾಲಿಕ ಸರಕಾರ ತನ್ನ ನೆಲೆಯನ್ನು ಕಳೆದುಕೊಳ್ಳಲು ಪ್ರಾರಂಭಿಸಿತು. ಹಲವು ಬಾರಿ ಅದರ ಮಂತ್ರಿಮಂಡಲವನ್ನು ಬದಲಾಯಿಸಲಾಯಿತು. ಆಗಸ್ಟ್‌ನ ಪ್ರಾರಂಭದಲ್ಲಿ ಕೆರೆನ್‌ಸ್ಕಿ ತಾತ್ಕಾಲಿಕ ಸರಕಾರದ ಪ್ರಧಾನಿಯಾದನು. ಕೋರ್ನಿಲೋವ್ ಮುಖ್ಯ ಸೇನಾಧಿಪತಿಯಾದನು. ಇಬ್ಬರೂ ಕ್ರಾಂತಿಯ ಬೆಂಬಲಿಗರೆಂದು ಹೇಳುತ್ತಾ, ಬೊಲ್ ಶೆವಿಕ್‌ರನ್ನು ಸದೆಬಡಿಯಲು ಮಿಲಿಟರಿ ಸರ್ವಾಧಿಕಾರವನ್ನು ಪ್ರತಿಪಾದಿಸುತ್ತಿದ್ದರು. ತಾತ್ಕಾಲಿಕ ಸರಕಾರ ಮುಷ್ಕರಗಳನ್ನು, ಮತಪ್ರದರ್ಶನಗಳನ್ನು, ಸಭೆ ಸಮಾವೇಶಗಳನ್ನು ನಿರ್ದಯದಿಂದ ಹತ್ತಿಕ್ಕುತ್ತಿತ್ತು. ಬೊಲ್‌ಶೆವಿಕ್‌ರ ವಿರುದ್ಧ ಭಾರಿ ಅಪಪ್ರಚಾರ ನಡೆಸುತ್ತಿತ್ತು. ತಾನೇ ಕ್ರಾಂತಿಯ ರಕ್ಷಕ ಎಂದು ಹೇಳಿಕೊಳ್ಳುತ್ತಿತ್ತು. ೧೯೧೭ರ ಜುಲೈ ನಲ್ಲಿ ತಾತ್ಕಾಲಿಕ ಸರಕಾರ ಪ್ರತಿಕ್ರಾಂತಿಗಳಿಂದ ತುಂಬಿ ತುಳುಕುತ್ತಿತ್ತು. ಲೆನಿನ್-ಬೊಲ್ ಶೆವಿಕರು ಅದರ ಅಧಿಕಾರವನ್ನು ಮಾನ್ಯ ಮಾಡುವುದನ್ನು ಬಿಟ್ಟು ಬಿಟ್ಟರು. ಅಧಿಕಾರವೆಲ್ಲ ಸೋವಿಯತ್‌ಗಳಿಗೇ ಎಂದು ಘೋಷಿಸಲಾಯಿತು. ತಡಮಾಡದೇ ತಾತ್ಕಾಲಿಕ ಸರಕಾರ ಬೊಲ್‌ಶೆವಿಕ್ ಪಕ್ಷವನ್ನು ಕಾನೂನುಬಾಹಿರಗೊಳಿಸಿತು. ಲೆನಿನ್‌ರನ್ನು ದಸ್ತಗಿರಿ ಮಾಡಲು ಪ್ರಯತ್ನಿಸಿತು. ಅಂದಿನಿಂದ ಮುಂದಿನ ಕ್ರಾಂತಿಗಾಗಿ ಭೂಗತ ಕಾರ್ಯಾಚರಣೆಗಳು ಪ್ರಾರಂಭವಾದವು. ಅದರ "ಪ್ರಾವ್ದಾ" ಪತ್ರಿಕೆಯು ಎಲ್ಲಾ ದಮನಕಾರಿ ಕಾರ್ಯಕ್ರಮಗಳನ್ನೂ ವಿರೋಧಿಸುತ್ತಾ, ಬೇರೆ ಬೇರೆ ಹೆಸರುಗಳಿಂದ ಕ್ರಾಂತಿಕಾಲದ ಉದ್ದಕ್ಕೂ ಪ್ರಕಟಗೊಂಡು ಕ್ರಾಂತಿಯ ಯಶಸ್ವಿಗೆ ಮಾರ್ಗದರ್ಶಿಯಾಯಿತು. ಜುಲೈ ೨೬ ರಿಂದ ಆಗಸ್ಟ್ ೩೧ರ ವರೆಗೆ ಪೆಟ್ರೋಗ್ರಾಡ್‌ನಲ್ಲಿ ನಡೆದ ಬೊಲ್‌ಶೆವಿಕ್ ಪಕ್ಷದ ೬ನೇ ಅಧಿವೇಶನದಲ್ಲಿ ಮುಂದಿನ ರಾಷ್ಟ್ರೀಯ ಬಿಕ್ಕಟ್ಟು ತೀವ್ರಗೊಳ್ಳುತ್ತಿರುವಾಗ ಕ್ರಾಂತಿಯ ವಿಜಯಕ್ಕಾಗಿ ಜನರನ್ನು ಸಶಸ್ತ್ರ ಬಂಡಾಯ ಹೂಡುವಂತೆ ತಯಾರುಗೊಳಿಸಬೇಕೆಂದೂ ಠರಾವನ್ನು ಅಂಗೀಕರಿಸಲಾಯಿತು.

೧೯೧೭ರ ಆಗಸ್ಟ್ ೨೧ರಿಂದ ೩೧ರ ವರೆಗೆ ಸೇನಾನಾಯಕ ಕೊರ್ನಿಲೋವ್ ತನ್ನ ಸೇನೆಯನ್ನು ಪೆಟ್ರೋಗ್ರಾಡ್‌ಗೆ ಸಾಗಿಸಿತು. ರಷ್ಯಾದಲ್ಲಿ ಮಿಲಿಟರಿ ಸರ್ವಾಧಿಕಾರ ಸ್ಥಾಪಿಸಲು ಪ್ರಯತ್ನಿಸಿದನು. ಆದರೆ, ಬೊಲ್‌ಶೆವಿಕ್‌ರ ಕ್ರಾಂತಿಸೇನೆ ಮಿಲಿಟರಿ ದಂಗೆಯನ್ನು ವಿಫಲಗೊಳಿಸಿತು. ಇದರಿಂದ ಬೊಲ್‌ಶೆವಿಕ್‌ರ ಪ್ರತಿಷ್ಠೆ ದೇಶಾದ್ಯಂತ ಹೆಚ್ಚಿತು. ಜನರಿಗೆ ತಾತ್ಕಾಲಿಕ ಸರಕಾರದ ಗುಣಲಕ್ಷಣಗಳು ಇನ್ನಷ್ಟು ಸ್ಪಷ್ಟವಾದವು. ಅವರು ಕ್ರಾಂತಿಕಾರರನ್ನು ಹೆಚ್ಚು ಹೆಚ್ಚು ಬೆಂಬಲಿಸತೊಡಗಿದರು. ಇದೇ ಸಂದರ್ಭ ಜನರ ಪಡಿತರವು ಎರಡು ವಾರಗಳಲ್ಲಿ ಆರು ಪಟ್ಟು ಕಡಿತಗೊಂಡಿತು. ಒಬ್ಬ ಮಹಿಳೆಯ ವೇತನ ೩೫ ರೂಬಲ್ ಗಳಾಗಿದ್ದು, ಚಳಿಗಾಲದ ಒಂದು ಜೊತೆ ಬೂಟ್ಸಿಗೆ ೧೦೦ ರೂಬಲಗಳಷ್ಟು ಬೆಲೆ ಇತ್ತು. ಚಳಿಗಾಲದಲ್ಲಿ ಜನರು ಭಾರೀ ಕಷ್ಟ-ಕಾರ್ಪಣ್ಯಗಳಿಗೊಳಗಾಗಿ ಬೊಲ್‌ಶೆವಿಕ್‌ರ ಬೆಂಬಲ ಕುಗ್ಗುವುದೆಂದು ಪ್ರತಿಕ್ರಾಂತಿಕಾರಿಗಳು ನಿರೀಕ್ಷಿಸಿದ್ದರು. ಆದರೆ, ದುಃಸ್ಥಿತಿಗಳಿಂದ ಜನರು ತಾತ್ಕಾಲಿಕ ಸರಕಾರದಿಂದಲೇ ಬಹಳ ದೂರ ಸರಿಯುವಂತಾಯಿತು.

**ಕ್ರಾಂತಿಯ ಬಿರುಗಾಳಿ**

೧೯೧೭ರ ಅಕ್ಟೋಬರ್‌ನ ಪ್ರಾರಂಭದಲ್ಲಿ ಲೆನಿನ್ ಫಿನ್‌ಲ್ಯಾಂಡ್‌ನಿಂದ ಮೈಮರೆಸಿ ಕೊಂಡು ಪುನಃ ಪೆಟ್ರೋಗ್ರಾಡ್‌ಗೆ ಬಂದರು. ಮುಂದಿನ ಸಶಸ್ತ್ರ ಬಂಡಾಯಕ್ಕೆ ಒಂದು ಸ್ಪಷ್ಟ ಯೋಜನೆ ರೂಪಿಸಿದರು. ಅಕ್ಟೋಬರ್ ೧೦ ರಂದು ಬೊಲ್‌ಶೆವಿಕ್ ಪಕ್ಷದ ಕೇಂದ್ರ ಸಮಿತಿ ಈ ಯೋಜನೆಯ ಆಧಾರದಲ್ಲಿ ಒಂದು ಠರಾವನ್ನು ಅಂಗೀಕರಿಸಿತು. ಅದರಂತೆ ಕ್ರಾಂತಿಕಾರಿ ಮಿಲಿಟರಿ ಕೇಂದ್ರವನ್ನು ಸ್ಥಾಪಿಸಲಾಯಿತು. ಪೆಟ್ರೋಗ್ರಾಡ್‌ಗೆ ಮುನ್ನುಗ್ಗುವ ಸೈನ್ಯ ಮತ್ತು ಅದಕ್ಕೆ ಬೆಂಬಲವಾಗಿ ಬಾಲಿಸ್ಟಿಕ್ ಹಡಗು ಪಡೆಯ ನಾವಿಕರು ಹಾಗೂ ಮಾರ್ಚ್ ೧೯೧೭ರಲ್ಲಿಯೇ ಸ್ಥಾಪಿತವಾದ ಕೆಂಪು ಸೇನೆ-ರೆಡ್ ಗಾರ್ಡ್ಸ್‌ನ ಮುಂಚೂಣಿಯಲ್ಲಿ, ಸ್ಥಳೀಯ ಕ್ರಾಂತಿಕಾರಿ ಮಿಲಿಟರಿ ಸಮಿತಿಗಳು, ಆಯಕಟ್ಟಿನ ಸಂಸ್ಥೆಗಳಾದ ಟೆಲಿಗ್ರಾಫ್, ಟೆಲಿಫೋನ್ ಆಫೀಸ್‌ಗಳಿಗೆ ಮತ್ತು ರೈಲ್ವೆ ಸ್ಟೇಶನ್‌ಗಳಿಗೆ ಕ್ರಾಂತಿಕಾರಿ ಸೇನೆಗಳನ್ನು ರವಾನಿಸುವುದು ಮುಂತಾದ ಎಲ್ಲಾ ಸಿದ್ಧತೆಗಳೂ ನಡೆದವು. ಕಾರ್ಮಿಕರು ಕೈಗಾರಿಕೆಗಳ ಆಡಳಿತದವರನ್ನು ಕಿತ್ತು ಹಾಕಿ ತಾವೇ ವಹಿಸಿಕೊಂಡರು. ಸೈನಿಕರು ಯುದ್ಧದ ೪ನೇ ವರ್ಷದ ಚಳಿಗಾಲದ ಟ್ರೆಂಚ್ ಜೀವನ ಸಹಿಸಲಾರದೇ ಬೃಹತ್ ಸಂಖ್ಯೆಯಲ್ಲಿ ಬಂದು ಕ್ರಾಂತಿಕಾರಿಗಳನ್ನು ಕೂಡಿಕೊಂಡರು. ರೈತರು ಭೂಮಾಲಿಕರನ್ನು ಓಡಿಸಿ, ಅವರ ಭೂ ಹಿಡುವಳಿಗಳನ್ನು ಮತ್ತು ವ್ಯವಸಾಯ ಸಲಕರಣೆಗಳನ್ನು ತಮ್ಮೊಳಗೆ ಹಂಚಿಕೊಳ್ಳಲು ಪ್ರಾರಂಭಿಸಿದರು. ತುಳಿತಕ್ಕೆ ಒಳಗಾದ ರಷ್ಯಾದ ವಿವಿಧ ರಾಷ್ಟ್ರೀಯತೆಗಳ ಜನರಿಗೆ ಹೊಸ ಗರಿ ಬಂದಂತಾಯಿತು. ಎಲ್ಲಾ ರಾಷ್ಟ್ರೀಯತೆಗಳಿಗೆ ಸಮಾನತೆ ಮತ್ತು ಅವುಗಳಿಗೆ ಸ್ವಾತಂತ್ರ್ಯ, ರಾಜ್ಯ ರಚಿಸಿಕೊಳ್ಳಲು

ಸಂಪೂರ್ಣ ಸ್ವಾತಂತ್ರ್ಯ ನೀಡುವುದಾಗಿ ಬೋಲ್‌ಶೆವಿಕರು ಭರವಸೆ ನೀಡಿದರು. ಅವರು ಕಾರ್ಮಿಕರ ಮತ್ತು ರೈತರ ಹೋರಾಟಗಳೊಂದಿಗೆ ಐಕ್ಯರಂಗ ರಚಿಸಿಕೊಂಡರು.

ರಷ್ಯಾದ ಆರ್ಥಿಕತೆ ಸಂಪೂರ್ಣ ಕುಸಿದು ಬೀಳತೊಡಗಿತು. ಬಂಡವಾಳಶಾಹಿ ಪಕ್ಷಗಳು ನಿಸ್ಸಹಾಯಕವಾದವು. ಆಳುವ ವರ್ಗದವರು ಸಂಭವಿಸುತ್ತಿರುವ ಅನಾಹುತಗಳನ್ನು ತಡೆಯಲು ಅಸಮರ್ಥರಾದರು. ತಾತ್ಕಾಲಿಕ ಸರಕಾರ ನಿರ್ವೀರ್ಯಗೊಂಡಿತು. ಅನಿವಾರ್ಯವಾಗಿ, ಅಂತಿಮ ಘಟ್ಟದಲ್ಲಿ ಪುಟ್ಟ ಬಂಡವಾಳಶಾಹಿಗಳ ಪಕ್ಷಗಳು ತಮ್ಮ ಕಾರ್ಯಕ್ರಮಗಳು ಜಾರಿಗೊಳ್ಳಲಾರವೆಂದು ಮನಗಂಡು, ಬೊಲ್‌ಶೆವಿಕ್‌ರನ್ನು ಮತ್ತು ಅವರ ವಸ್ತುನಿಷ್ಠ ಕಾರ್ಯಕ್ರಮವನ್ನು ಬೆಂಬಲಿಸಿದರು. ಪೆಟ್ರೋಗ್ರಾಡ್‌ನ ರಸ್ತೆಗಳಲ್ಲಿ ಎರಡು ಜಗತ್ತುಗಳ ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗಗಳ ನಡುವೆ ನೇರ ಸಂಘರ್ಷಗಳು ಪ್ರಾರಂಭಗೊಂಡವು. ನಗರಸಭೆ ಕುಸಿದುಬಿದ್ದಿತು. ಅರಾಜಕತೆ ಉಂಟಾಗಿ ಕೊಲೆ ದರೋಡೆಗಳು ಹೆಚ್ಚಾದವು. ಕಾರ್ಮಿಕರು ನಗರದ ರಸ್ತೆಗಳಲ್ಲಿ ರಾತ್ರಿ ಗಸ್ತು ತಿರುಗುತ್ತಾ ಅಪರಾಧಿಗಳನ್ನು ಮತ್ತು ಕೊಲೆಗಡುಕರನ್ನು ಓಡಿಸುತ್ತಿದ್ದರು. ಅವರಿಂದ ಶಸ್ತ್ರಾಸ್ತ್ರಗಳನ್ನು ಕಸಿದುಕೊಂಡು ಕ್ರಾಂತಿಸೈನ್ಯಕ್ಕೆ ಜಮಾಯಿಸುತ್ತಿದ್ದರು. ಆಗಲೇ ಕಾರ್ಮಿಕರ, ಸೈನಿಕರ, ರೈತರ ಪ್ರತಿನಿಧಿಗಳ ಸೋವಿಯತ್‌ಗಳ ಅಖಿಲ ರಷ್ಯಾ ಅಧಿವೇಶನ ಪ್ರಾರಂಭವಾಗುವುದಿತ್ತು. ದೇಶದ ಮೂಲೆ ಮೂಲೆಗಳಿಂದ ಬಂದ ಪ್ರತಿನಿಧಿಗಳು ತಮ್ಮ ಹೆಸರುಗಳನ್ನು ನೊಂದಾಯಿಸಬೇಕಾಗಿತ್ತು. ಕೆರೆನ್‌ಸ್ಕಿ ಸರಕಾರ ಬೊಲ್‌ಶೆವಿಕರ ವಿರುದ್ಧ ಭಾರಿ ಅಪಪ್ರಚಾರ ನಡೆಸುತ್ತಲೇ ಇತ್ತು. ತನ್ನ ಉಳಿವಿಗೆ ಏನೂ ಧಕ್ಕೆ ಆಗಲಾರದೆಂಬ ಭ್ರಮೆಯಲ್ಲಿತ್ತು. ಅಕ್ಟೋಬರ್ ೨೩ರ ರಾತ್ರಿ 'ರಾಬೊಚಿ'(ಪ್ರಾವ್ಡಾದ ಇನ್ನೊಂದು ಹೆಸರು) ಪತ್ರಿಕಾ ಕಾರ್ಯಾಲಯಕ್ಕೆ ತನ್ನ ಸೈನಿಕರನ್ನು ನುಗ್ಗಿಸಿ ಮರುದಿನ ಪತ್ರಿಕೆ ಪ್ರಕಟವಾಗದಂತೆ ವಿಫಲ ಪ್ರಯತ್ನ ಮಾಡಲಾಯಿತು. ತಾತ್ಕಾಲಿಕ ಸರಕಾರದ ಸೇನೆ ಪೆಟ್ರೋಗ್ರಾಡ್‌ಗೆ ಬರದಿರುವಂತೆ ತಡೆಯಲು ಕ್ರಾಂತಿಕಾರಿಗಳನ್ನು ಸಜ್ಜುಗೊಳಿಸಿದರು. ತಾತ್ಕಾಲಿಕ ಸರಕಾರವು ಸೇತುವೆಗಳನ್ನು ಉರುಳಿಸಲು ಪ್ರಯತ್ನಿಸಿತು. ಆದರೆ, ಕೆಂಪು ಸೇನೆ ಅವುಗಳನ್ನು ರಕ್ಷಿಸಿತು. ಕ್ರಾಂತಿಯ ಕೇಂದ್ರಾಲಯ ಇದ್ದ ಸ್ಮೊಲ್ನಿ ಸಂಸ್ಥೆಯ ಬಳಿ ಕ್ರಾಂತಿಕಾರಿ ಸೇನೆಗಳು ಬೃಹತ್ ಪ್ರಮಾಣದಲ್ಲಿ ಜಮಾಯಿಸತೊಡಗಿದವು.

ಅಕ್ಟೋಬರ್ ೨೪ರ ಸಂಜೆ ತಲೆಮರೆಸಿಕೊಂಡಿದ್ದ ಲೆನಿನ್ ಮತ್ತೆ ನೇರವಾಗಿ ಕ್ರಾಂತಿಯ ನಾಯಕತ್ವ ವಹಿಸಲು ಬಹಿರಂಗವಾಗಿ ಹೊರಬಂದರು. ಬೊಲ್‌ಶೆವಿಕ್ ಪಕ್ಷದ ಕೇಂದ್ರ ಸಮಿತಿಗೆ ಆ ದಿನ ಬರೆದ ಪತ್ರದಲ್ಲಿ ಬಂಡಾಯಕ್ಕೆ ಸಮಯಪಕ್ವವಾಗಿದೆ. ಇನ್ನು ತಡಮಾಡ ಬಾರದು, ಅಖಿಲ ರಷ್ಯಾ ಸೋವಿಯತ್‌ಗಳ ೧ನೇ ಅಧಿವೇಶನಕ್ಕಾಗಿ ಕಾಯುವ ಅಗತ್ಯ ಇಲ್ಲ ಎಂದರು. ಅಧಿವೇಶನದ ಮರುದಿನ ೨೫ರಂದು ಪ್ರಾರಂಭವಾಗುವಾಗಲೇ ಬಂಡಾಯದ ಕಾರ್ಯಾಚರಣೆ ಮಾಡಬೇಕೆಂದೂ ಅಧಿಕಾರ ತಮ್ಮ ಕೈಗೆ ಬಂದಿದೆ ಎಂದು ಅಧಿವೇಶನ ದಲ್ಲಿಯೇ ಘೋಷಿಸಬಹುದು ಎಂದೂ ತಿಳಿಸಿದರು. ಕೆಲವರು ಕ್ರಾಂತಿ ಯಾವಾಗ ನಡೆಯಬೇಕು ಎಂದು ಅಧಿವೇಶನದಲ್ಲಿಯೇ ಚರ್ಚಿಸಿ ನಿರ್ಧರಿಸಲು ಬಯಸಿದ್ದರು. ಹಾಗಾಗಿದ್ದರೆ, ಕೆರೆನ್‌ಸ್ಕಿ ಸರಕಾರಕ್ಕೆ ಬಂಡಾಯದ ಕುರಿತು ಮುನ್ಸೂಚನೆ ನೀಡಿದಂತಹ ಪ್ರಮಾದವಾದೀತೆಂದೂ, ತಡ ಮಾಡಿದರೆ ಕ್ರಾಂತಿಯ ಉದ್ದೇಶವೇ ವಿಫಲವಾದೀತೆಂದೂ, ತಾತ್ಕಾಲಿಕ ಸರಕಾರಕ್ಕೆ ಒಂದು ಹೊಡೆತ ಕೊಟ್ಟರೆ ಅದು ಕುಸಿದು ಬೀಳುವುದೆಂದೂ ಲೆನಿನ್ ದೃಢ ವಿಶ್ವಾಸ ಹೊಂದಿದ್ದರು.

ಅಕ್ಟೋಬರ್ ೨೫ರಂದು ೧.೨೫ಗಂಟೆಯಿಂದ, ಅಂದರೆ ಮಧ್ಯರಾತ್ರಿಯಿಂದ ಬಂಡಾಯ ಕಾರ್ಯಾಚರಣೆ ಪ್ರಾರಂಭವಾಯಿತು. ನಿಮಿಷ-ನಿಮಿಷಗಳಲ್ಲಿ ಬೆಳಿಗ್ಗೆ ೮ ಗಂಟೆಯ ಒಳಗಾಗಿ ಪೂರ್ವ ಯೋಜನೆಯಂತೆ ಅಂಚೆಯ ಕೇಂದ್ರ ಕಛೇರಿ, ರೈಲ್ವೆ ಸ್ಟೇಶನ್, ವಿದ್ಯುತ್ ಸ್ಟೇಶನ್, ಸ್ಟೇಟ್ ಬ್ಯಾಂಕ್, ಕೇಂದ್ರ ಟೆಲಿಫೋನ್ ವಿನಿಮಯ ಕಛೇರಿ ಇತ್ಯಾದಿ ಗಳು ಸೇರಿದಂತೆ ಇಡೀ ಪೆಟ್ರೋಗ್ರಾಡ್ ನಗರ ಕ್ರಾಂತಿಕಾರಿಗಳ ಕೈವಶವಾಯಿತು. ೨೫ರ ಮುಂಜಾನೆ ಕ್ರೂಯಿಸರ್ ಯುದ್ಧ ಹಡಗಿನಿಂದ ತಾತ್ಕಾಲಿಕ ಸರಕಾರದ ಚಳಿಗಾಲದ ಅರಮನೆಗೆ ಒಂದೇ ಒಂದು ಹುಸಿ ಗುಂಡನ್ನು ಹಾರಿಸಲಾಯಿತು. ಕ್ರಾಂತಿಕಾರಿಗಳು ಮನಸ್ಸು ಮಾಡಿದ್ದರೆ ಅರಮನೆಯನ್ನು ಮತ್ತು ಅಲ್ಲಿದ್ದವರನ್ನೆಲ್ಲಾ ಸುಟ್ಟು ಬೂದಿ ಮಾಡಬಹುದಿತ್ತು. ಆದರೆ, ಅದು ಅವರ ಉದ್ದೇಶವಾಗಿರಲಿಲ್ಲ. ಪ್ರತಿಕ್ರಾಂತಿಕಾರಿಗಳ ಅಧಿಕಾರವನ್ನು ಸ್ತಬ್ಧಗೊಳಿಸುವುದಷ್ಟೆ ಅವರ ಗುರಿಯಾಗಿತ್ತು. ೨೫ರ ಮುಂಜಾನೆ ಲೆನಿನ್ "ರಷ್ಯಾದ ನಾಗರಿಕರಿಗೆ ಒಂದು ಮನವಿ" ಪ್ರಕಟಿಸಿದರು. ಅದನ್ನು ಕ್ರಾಂತಿಕಾರಿ ಮಿಲಿಟರಿ ಕೇಂದ್ರ ಸಮಿತಿ ಅಂಗೀಕರಿಸಿತು. ಅದರಲ್ಲಿ "ನಡುಗಾಲ ಸರಕಾರವನ್ನು ಪದಚ್ಯುತಗೊಳಿಸಲಾಗಿದೆ. ಜನರ ಕೈಗೆ-ಕಾರ್ಮಿಕರಿಗೆ ಮತ್ತು ರೈತರಿಗೆ ಅಧಿಕಾರ ಬಂದಿದೆ. ಯಾವ ಉದ್ದೇಶಕ್ಕಾಗಿ ಜನರು ದೀರ್ಘಕಾಲದಿಂದ ಹೋರಾಡುತ್ತಿದ್ದರೋ ಅದು ಸಫಲವಾಗಿದೆ. ಕ್ರಾಂತಿ

ಚಿರಾಯುವಾಗಲಿ" ಎಂದು ಬರೆದಿದ್ದರು. ೨೬ ರಂದು ಬೆಳಿಗ್ಗೆ ೨.೧೦ ಗಂಟೆಗೆ ತಾತ್ಕಾಲಿಕ ಸರಕಾರದ ಮಂತ್ರಿಗಳನ್ನು ದಸ್ತಗಿರಿ ಮಾಡಲಾಯಿತು. ಅರಮನೆಯಲ್ಲಿ ಅಧಿಕಾರಿಗಳನ್ನು ಮತ್ತು ಸೈನಿಕರನ್ನು ನಿಶ್ಯಸ್ತ್ರೀಕರಿಸಿ ಬಿಟ್ಟುಬಿಡಲಾಯಿತು. ಪ್ರಧಾನಿ ಕೆರೆನ್‌ಸ್ಕಿ ಹೆಣ್ಣುವೇಷ ಧರಿಸಿ ತಲೆತಪ್ಪಿಸಿಕೊಂಡು ಹೋದರು. ಇದು ಕ್ರಾಂತಿಯ ವಿಜಯದ ಪ್ರಾರಂಭ.

ಸಶಸ್ತ್ರ ಬಂಡಾಯ ತುತ್ತತುದಿಯಲ್ಲಿರುವಾಗ, ಸೋವಿಯತ್‌ಗಳ ಅಧಿವೇಶನ ೨೫ರ ರಾತ್ರಿಯಿಂದ ೨೭ರ ಬೆಳಗಿನವರೆಗೆ ನಡೆಯಿತು. ಅಧಿವೇಶನದಲ್ಲಿ ಜಗತ್ತಿನ ಮೊತ್ತಮೊದಲ ಕಾರ್ಮಿಕರ ಮತ್ತು ರೈತರ ಸರಕಾರವನ್ನು ರಚಿಸಲಾಯಿತು. ಜನರ ಕಮಿಸಾರರ ಮಂಡಳಿಯನ್ನು ಸ್ಥಾಪಿಸಲಾಯಿತು. ಲೆನಿನ್ ನೂತನ ಸರಕಾರದ ಮುಖ್ಯಸ್ಥರಾಗಿ ಆಯ್ಕೆಗೊಂಡರು. ಜನರ ಕಮಿಸಾರರ ಮಂಡಳಿಯ ನಿಯಂತ್ರಣ ಮತ್ತು ಅವರನ್ನು ಬದಲಾಯಿಸುವ ಹಕ್ಕು ಅಖಿಲ ರಷ್ಯಾ ಕಾರ್ಮಿಕರ, ರೈತರ, ಸೈನಿಕರ ಸೋವಿಯತ್‌ಗಳ ಪ್ರತಿನಿಧಿಗಳಿಗೆ ಮತ್ತು ಅದರ ಕೇಂದ್ರ ಸಮಿತಿಗೆ ಪರಮಾಧಿಕಾರ ನೀಡಲಾಯಿತು. ಮುಂದೆ ಸೋವಿಯತ್ ಜನರು ತಮ್ಮನ್ನು ತಾವೇ ಆಳಿಕೊಳ್ಳುವಂತಹ ಸಮಾಜವಾದಿ ಪ್ರಜಾಪ್ರಭುತ್ವದ ಕಾರ್ಯಾಚರಣೆ ಪ್ರಾರಂಭವಾಯಿತು. ೨೭ರಂದೇ ಶಾಂತಿ ಕುರಿತು, ಭೂ ಸಂಬಂಧದ ಬದಲಾವಣೆ ಕುರಿತು, ಕೈಗಾರಿಕೆಗಳ ರಾಷ್ಟ್ರೀಕರಣ ಕುರಿತು ಹಲವು ಆದೇಶಗಳನ್ನು ಘೋಷಿಸಲಾಯಿತು. ನೂರಾರು ವರ್ಷಗಳ ಝಾರ ಆಳ್ವಿಕೆಯಲ್ಲಿ ಮತ್ತು ಅಲ್ಪಕಾಲದ ತಾತ್ಕಾಲಿಕ ಸರಕಾರದ ಆಳ್ವಿಕೆಯಲ್ಲಿ ಮಾಡಲಾಗದಿದ್ದುದನ್ನು, ಸೋವಿಯತ್ ಸರಕಾರ ಒಂದೇ ದಿನದಲ್ಲಿ ನೆರವೇರಿಸಿತು.

ಝಾರನ ಕಾಲದಲ್ಲಿ ಸಂಸತ್ತಿನ ೪೦೦ ಸದಸ್ಯರಲ್ಲಿ ಕೇವಲ ೧೦-೧೨ ಕಾರ್ಮಿಕರ ಪ್ರತಿನಿಧಿಗಳಿದ್ದರು. ರೈತರ ಪ್ರತಿನಿಧಿಗಳು ಇನ್ನೂ ಕಡಿಮೆ. ಹೊಸ ಸರಕಾರದಲ್ಲಿ ಎಲ್ಲಾ ಸ್ಥಾನಗಳೂ ಕಾರ್ಮಿಕರ ಮತ್ತು ರೈತರ ಪ್ರತಿನಿಧಿಗಳಿಗೆ ದೊರೆಯಿತು. ಶೋಷಕರು-ಸ್ವಂತ ದುಡಿಮೆ ಇಲ್ಲದೇ ಆದಾಯ ಉಳ್ಳವರು ದೇಶದ ಶೇ.೨ರಷ್ಟೇ ಇದ್ದು ಅವರಿಗೆ ಮತದಾನದ ಹಕ್ಕನ್ನು ನಿರಾಕರಿಸಲಾಯಿತು. ಆದರೆ, ಶೇ.೯೦ರಷ್ಟಿರುವ ಕಾರ್ಮಿಕರಿಗೆ ಮತ್ತು ರೈತರಿಗೆ ಮತದಾನದ ಹಕ್ಕನ್ನು ನೀಡಲಾಯಿತು. ಕಾಲಕ್ರಮೇಣ ಹಿಂದಿನ ಆಳ್ವಿಕೆಯ ಕಾಲದ ಬುದ್ಧಿಜೀವಿಗಳು, ಅಧಿಕಾರಿಗಳು, ಮಿಲಿಟರಿ ತಜ್ಞರು, ಮಾಜಿ ಬಂಡವಾಳಶಾಹಿಗಳು ಹೊಸ ಪ್ರಭುತ್ವದ ನೆರವಿಗೆ ಬಂದರು. ಇವೆಲ್ಲವುಗಳಿಂದ ಸೋವಿಯತ್ ಪ್ರಭುತ್ವ ಜನರ-ಕಾರ್ಮಿಕರ ಮತ್ತು ರೈತರ ಪ್ರಭುತ್ವ ಎಂದು ಜನರಿಗೆ ವಿಶ್ವಾಸ ಬಂದಿತು. ಆದುದರಿಂದಲೇ ಮುಂದಿನ ದಿನಗಳಲ್ಲಿ ಕ್ರಾಂತಿಯ ರಕ್ಷಣೆಗೆ ಅವರು ಕಂಕಣಬದ್ಧರಾದರು.

೧೯೧೭ರ ನವೆಂಬರ್ ೨ ರಂದು ಸೋವಿಯತ್ ಸರಕಾರ ರಷ್ಯಾದ ಜನರ ಹಕ್ಕುಗಳ ಬಗ್ಗೆ ಘೋಷಿಸಿತು. ರಾಷ್ಟ್ರೀಯತೆಗಳ ಪ್ರಶ್ನೆಯನ್ನು ಪರಿಹರಿಸಲು ಮುಖ್ಯ ಸೂತ್ರಗಳನ್ನು ಘೋಷಿಸಿತು. ಇವುಗಳ ಮುಖ್ಯಾಂಶಗಳು :

೧. ರಷ್ಯಾದ ಎಲ್ಲಾ ಜನರಿಗೆ ಸಮಾನತೆ ಮತ್ತು ಸಾರ್ವಭೌಮತೆ.

೨. ರಷ್ಯಾದಲ್ಲಿ ನೆಲೆ ನಿಂತಿರುವ ರಾಷ್ಟ್ರೀಯ ಅಲ್ಪಸಂಖ್ಯಾತರ ಮತ್ತು ಜನಾಂಗೀಯ ಗುಂಪುಗಳಿಗೆ ಅಭಿವೃದ್ಧಿಗೆ ಮುಕ್ತ ಅವಕಾಶ.

೩. ರಷ್ಯಾದ ದೂರ ಪ್ರಾಚ್ಯದ ಎಲ್ಲಾ ದುಡಿಯುವ ಮುಸ್ಲಿಂಗೆ ಅವರ ರಾಷ್ಟ್ರೀಯತೆಯ, ಸಾಂಸ್ಕೃತಿಕ ಸಂಸ್ಥೆಗಳ, ಸಂಪ್ರದಾಯಗಳ, ನಂಬಿಕೆಗಳ ಸ್ವಾತಂತ್ರ್ಯ. ಅವುಗಳನ್ನು ಯಾರೂ ಬದಲು ಮಾಡಲಾರರೆಂದು ಆಶ್ವಾಸನೆ. ತಮ್ಮ ಬದುಕನ್ನು ಸಾಗಿಸಲು ಅವರಿಗೆ ಸಂಪೂರ್ಣ ಸ್ವಾತಂತ್ರ್ಯ.

೪. ರಾಷ್ಟ್ರೀಯ, ಧಾರ್ಮಿಕ ವಿಶೇಷ ಸವಲತ್ತುಗಳಿಗೆ ಮತ್ತು ಅಡೆತಡೆಗಳಿಗೆ ನಿಷೇಧ.

೫. ರಷ್ಯಾದ ಯಾವುದೇ ಪ್ರದೇಶದ ಜನರಿಗೆ ಸ್ವಯಂ ನಿರ್ಧಾರದ ಹಕ್ಕು. ರಷ್ಯಾದಿಂದ ಪ್ರತ್ಯೇಕಗೊಂಡು ಸ್ವತಂತ್ರ ರಾಷ್ಟ್ರವಾಗಿ ರೂಪಿಸಿಕೊಳ್ಳಲು ಹಕ್ಕು. ಇದರಿಂದ ೩೧-೧೨-೧೯೧೭ರಂದು ಫಿನ್‌ಲ್ಯಾಂಡ್ ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಯಿತು.

೬. ಶತಮಾನಗಳಿಂದ ತಮ್ಮ ಇತಿಹಾಸ, ಪರಂಪರೆ, ವೀರಕತೆಗಳನ್ನು ಮೌಖಿಕವಾಗಿ ವರ್ಗಾಯಿಸುತ್ತಾ ಬಂದ ಜನರಿಗೆ, ಲಿಪಿ ಇಲ್ಲದೇ ಮತ್ತು ಲಿಖಿತ ಸಾಹಿತ್ಯವಿಲ್ಲದೇ ಇರುವ ಜನರಿಗೆ, ಅವರವರ ಭಾಷೆಗಳಲ್ಲಿ ಹೊಸ ಲಿಪಿಗಳನ್ನು ಒದಗಿಸಿಕೊಟ್ಟು ಶಿಕ್ಷಣ ಸೌಲಭ್ಯಗಳನ್ನು ನೀಡುವುದು. ಅವರು ಮುಂದೆ ಪ್ರತಿಭಾವಂತ ಇಂಜಿನೀಯರುಗಳಾಗಿ, ವೈದ್ಯರಾಗಿ, ಶಿಕ್ಷಕರಾಗಿ, ಬರಹಗಾರರಾಗಿ ಬೆಳೆದು ಬರಲು ಪೂರ್ಣ ಅವಕಾಶ.

೭. ದೊಡ್ಡ ಪ್ರಮಾಣದಲ್ಲಿ ಸಾಕ್ಷರತಾ ಆಂದೋಲನ. ಜನರ ಶಾಲೆಗಳನ್ನು ತೆಗೆದು ಎಲ್ಲರೂ ಉಚಿತವಾಗಿ ತಮ್ಮ ಮಾತೃಭಾಷೆಯಲ್ಲಿ ಕಲಿಯಲು ಅವಕಾಶ. ಇದರಲ್ಲಿ ಲೆನಿನ್ ಮೊದಲುಗೊಂಡು ಎಲ್ಲ ಬೊಲ್‌ಶೆವಿಕರಿಗೂ, ಸುಶಿಕ್ಷಿತರಿಗೂ ಸಾಕ್ಷರತಾ ಆಂದೋಲನದಲ್ಲಿ ಪ್ರಮುಖ ಪಾತ್ರ.

ಮುಂದೆ ಈ ಎಲ್ಲಾ ಅಂಶಗಳನ್ನು ಒಳಗೊಂಡು ಅಖಿಲ ರಷ್ಯಾ ಸೋವಿಯತ್‌ಗಳ ೫ನೇ ಅಧಿವೇಶನದಲ್ಲಿ ಒಂದು ಹೊಸ ಸಂವಿಧಾನವನ್ನು ಅಂಗೀಕರಿಸಲಾಯಿತು.

**ಕ್ರಾಂತಿಯ ರಕ್ಷಣೆ**

"ಯಾವುದೇ ಕ್ರಾಂತಿ ತನ್ನನ್ನು ತಾನೇ ರಕ್ಷಿಸಿಕೊಳ್ಳದಿದ್ದರೆ ಅದು ನಿಷ್ಪ್ರಯೋಜನ" ಎಂದರು ಲೆನಿನ್. ಅಕ್ಟೋಬರ್ ೨೫ರಂದು ಬೊಲ್‌ಶೆವಿಕರಿಗೆ ಪ್ರಭುತ್ವ ಹಸ್ತಾಂತರವಾದ ದಿನವೇ, ಪ್ರಧಾನಿ ಕೆರ್‌ನಸ್ಕಿ ಮತ್ತು ಸೇನಾಧಿಪತಿ ಕಾರ್ನಿಲೋವ್ ಪ್ರತಿಕ್ರಾಂತಿಯನ್ನು ಸಂಘಟಿಸಿದರು. ಅಕ್ಟೋಬರ್ ಕ್ರಾಂತಿ ಭೀಕರ ಆಂತರಿಕ ಯುದ್ಧವನ್ನು ಎದುರಿಸಬೇಕಾಯಿತು. ಅಕ್ಟೋಬರ್ ೩೦ ರಂದು ಇವರಿಬ್ಬರೂ ತಮ್ಮ ಸೇನೆಗಳೊಂದಿಗೆ ಪೆಟ್ರೋಗ್ರಾಡ್‌ನತ್ತ ನುಗ್ಗಿ ಬಂದರು. ಹಲವು ತಾಸುಗಳ ಕದನದಿಂದ ಪ್ರತಿಕ್ರಾಂತಿಗಳನ್ನು ಹಿಮ್ಮೆಟ್ಟಿಸಲಾಯಿತು. ನವೆಂಬರ್ ೧ ರಂದು ದಂಗೆಯನ್ನು ಅಡಗಿಸಲಾಯಿತು. ಕೆರೆನ್‌ಸ್ಕಿ ತಪ್ಪಿಸಿಕೊಂಡು ಹೋದರು. ಪ್ರತಿಕ್ರಾಂತಿಗಳನ್ನು ಪುನರ್‌ಸಂಘಟಿಸಲು ಸೇನಾಧಿಪತಿಯನ್ನು ಮತ್ತು ಅವನ ಸೈನಿಕರನ್ನು ಸೆರೆ ಹಿಡಿಯಲಾಯಿತು. ಇದು ಪೆಟ್ರೋಗ್ರಾಡ್‌ನ ಶ್ರಮಿಕ ವರ್ಗದ ಮೊದಲ ವಿಜಯ. ಹೊಸ ಪ್ರಭುತ್ವಕ್ಕೆ ಆಂತರಿಕವಾಗಿ ಮತ್ತು ಬಾಹ್ಯವಾಗಿ ಹಲವಾರು ವೈರಿಗಳು ಹುಟ್ಟಿಕೊಂಡರು. ಅದರ ವಿರುದ್ಧ ವಿವಿಧ ಪಿತೂರಿಗಳನ್ನು ಹೂಡಿದರು. ಸೋವಿಯತ್ ರಷ್ಯಾ ಶಾಂತಿಗಾಗಿ ಹಾತೊರೆಯಿತು. ಅದಕ್ಕಾಗಿ ಯಾವುದೇ ತ್ಯಾಗಕ್ಕೂ ಸಿದ್ಧವಿತ್ತು. ಅನಿವಾರ್ಯವಾಗಿ, ೧೯೧೭ರ ಡಿಸೆಂಬರ್ ೨ ರಂದು ರಷ್ಯಾವು ಜರ್ಮನಿಯೊಂದಿಗೆ ಅತ್ಯಂತ ಅವಮಾನಕಾರಿ ಹಾಗೂ ಅಸಮಾನತೆಯ ತಾತ್ಕಾಲಿಕ ಶಾಂತಿ ಒಪ್ಪಂದವನ್ನು ಮಾಡಿಕೊಳ್ಳಬೇಕಾಯಿತು. ಮೊದಲ ಜಾಗತಿಕ ಯುದ್ಧದಲ್ಲಿ ಎರಡು ವಿರುದ್ಧ ಬಣಗಳಲ್ಲಿದ್ದ ಬ್ರಿಟನ್, ಫ್ರಾನ್ಸ್, ಅಮೆರಿಕಾ, ಜಪಾನ್, ಇಟಲಿ ಸಾಮ್ರಾಜ್ಯಶಾಹಿಗಳು ಸಮಾಜವಾದಿ ಸೋವಿಯತ್ ರಷ್ಯಾದ ವಿಷಯದಲ್ಲಿ ಒಂದಾದವು. ರಷ್ಯಾದ ಕೌಕಾಸಸ್, ಡೋನ್, ದ್ಯುಖಾನ್, ಒರೆನ್‌ಬರ್ಗ್ ಉಕ್ರೈನ, ಕ್ರಿಮಿಯಾ, ಸೈಬೀರಿಯಾ, ದೂರಪ್ರಾಚ್ಯ ಮೊದಲಾದ ಪ್ರದೇಶಗಳನ್ನು ತಮ್ಮೊಳಗೆ ಹಂಚಿಕೊಳ್ಳಲು ಹವಣಿಸಿದವು. ಈ ಪ್ರದೇಶಗಳ ಬಂಡವಾಳಶಾಹಿಗಳನ್ನು, ಶ್ರೀಮಂತ ಭೂಮಾಲಿಕರನ್ನು, ಝಾರ್ ಪರಿವಾರವನ್ನು, ಯುದ್ಧಕೋರರನ್ನು ಪ್ರತಿಕ್ರಾಂತಿಕಾರಿಗಳ ನೆರವಿಗಾಗಿ ಬರುವಂತೆ ಮಾಡಲು ಸಾಮ್ರಾಜ್ಯಶಾಹಿ ದೇಶಗಳು ಹಣಕಾಸು ಸೇರಿದಂತೆ ಎಲ್ಲಾ ಸಹಾಯಗಳನ್ನೂ ನೀಡಿದವು.

ಆದರೂ, ಹೊರಗಿನಿಂದ ಸಾಮ್ರಾಜ್ಯಶಾಹಿಗಳ ಮತ್ತು ಒಳಗಿನಿಂದ ಪ್ರತಿಕ್ರಾಂತಿಕಾರಿಗಳ ದಂಗೆಗಳನ್ನು ಅತ್ಯಂತ ನಿರ್ಣಾಯಕವಾಗಿ ಮತ್ತು ಸಾಹಸ ಶೌರ್ಯಗಳಿಂದ ಬೊಲ್ ಶೆವಿಕ್‌ರು ಎದುರಿಸಿದರು. ಅಕ್ಟೋಬರ್ ೨೫ ರಿಂದ ನವೆಂಬರ್ ೨ ರವರೆಗೆ ಕ್ರೆಮ್ಲಿನ್ ಹತ್ತಿರ ಮಾಸ್ಕೋದಲ್ಲಿ ಎರಡೂ ಪಡೆಗಳ ನಡುವೆ ಭೀಕರ ಕದನ ನಡೆಯಿತು. ಪೆಟ್ರೋಗ್ರಾಡ್‌ನ ಸೈನಿಕರು, ನಾವಿಕರು ಮತ್ತು ಬಾಲ್ಟಿಕ್ ಹಡಗು ಪಡೆಯವರು ಇವರ ನೆರವಿಗೆ ಧಾವಿಸಿದರು. ಅಪಾರ ಸಾವು-ನೋವುಗಳನ್ನು ಅನುಭವಿಸಿ ಬೊಲ್‌ಶೆವಿಕ್‌ರು ಜಯಶಾಲಿಗಳಾದರು. ಕೈಗಾರಿಕಾ ಕೇಂದ್ರಗಳಲ್ಲಿ ಅವರ ಪ್ರಭುತ್ವ ಸುಲಭವಾಗಿ ಸ್ಥಾಪಿತಗೊಂಡಿದೆ. ಈ ಮಧ್ಯ ಸೋವಿಯತ್‌ಗಳು ಬಾಲ್ಟಿಕ್ ರಾಜ್ಯಗಳಾದ ಎಸ್ಟೋನಿವಾ ಮತ್ತು ಲಾಟ್‌ವಿಯಾ ರಾಜ್ಯಗಳ ಬಹುಪಾಲನ್ನು ತಮ್ಮ ವಶಕ್ಕೆ ಪಡೆದುಕೊಂಡು, ಅಲ್ಲಿಂದ ಪೆಟ್ರೋಗ್ರಾಡ್ ಕಡೆ ಪ್ರತಿಕ್ರಾಂತಿಕಾರಿಗಳ ಸೈನ್ಯ ಸಾಗದಂತೆ ತಡೆದರು. ಬದಲು ಲೆಟಶ್ ಪಡೆಗಳು ೪೦೦೦೦ ರೈಫಲ್‌ಗಳೊಂದಿಗೆ ಪೆಟ್ರೋಗ್ರಾಡ್

ಕ್ರಾಂತಿಕಾರರ ನೆರವಿಗೆ ಬಂದರು. ಲೆಟಶ್ ಪಡೆ ಸೋವಿಯತ್‌ನ ಅತ್ಯಂತ ಸಮರ ಧೀರವಾದುದು. ಅಕ್ಟೋಬರ್ ೨೭ರಲ್ಲಿಯೇ ಕೀವ್‌ನ ಶಸ್ತ್ರಾಗಾರದಲ್ಲಿ ಪ್ರತಿಕ್ರಾಂತಿಕಾರಿಗಳ ದಾಳಿಗಳನ್ನು ಹಿಮ್ಮೆಟ್ಟಿಸ ಲಾಯಿತು. ತಾತ್ಕಾಲಿಕ ಸರಕಾರ ಇಲ್ಲಿ ಭಾರೀ ಶಸ್ತ್ರಾಸ್ತ್ರಗಳನ್ನು ಕೂಡಿ ಹಾಕಿತು. ಅವೆಲ್ಲವುಗಳೂ ಕ್ರಾಂತಿಕಾರಿಗಳ ವಶವಾದವು.

ಅಕ್ಟೋಬರ್ ಕ್ರಾಂತಿಯು ೧೯೧೮ರ ಹೊಸ ವರ್ಷವನ್ನೂ ಪ್ರವೇಶಿಸಿತು. ಆ ವರ್ಷ ಭರವಸೆಯ ಹಾಗೂ ಆತಂಕದ ವರ್ಷವಾಯಿತು. ಅವರಲ್ಲಿ ಕೆಲವೇ ದಿನಗಳಿಗೆ ಸಾಕಾಗುವಷ್ಟು ಇಂಧನವಿತ್ತು. ನಂತರ ಕಾರ್ಖಾನೆಗಳನ್ನು ಮುಚ್ಚುವ ಅಪಾಯವಿತ್ತು. ಆದರೆ, ಹೊಸ ವರ್ಷದಲ್ಲಿ ಬಾಲ್ಟಿಕ್ ಹಡಗು ಪಡೆಯಿಂದ ೩೦೦೦ ಟನ್ ಕಲ್ಲಿದ್ದಲು ಬಂದಿತು. ಕೈಗಾರಿಕೆಗಳ ಚಕ್ರಗಳು, ಹಾಗೆಯೇ ಕ್ರಾಂತಿಯ ಚಕ್ರಗಳು ಪುನಃ ತಿರುಗಲಾರಂಭಿಸಿದವು. ಅಂತರ್‌ಯುದ್ಧ ನಡೆಯುತ್ತಿದ್ದಾಗಲೂ ಲೆನಿನ್ ಕ್ರಾಂತಿಕಾರಿಗಳನ್ನು ಅತ್ಯುನ್ನತ ಮಟ್ಟದ ನೈತಿಕತೆಗೆ ಏರಿಸಿದರು. ವರ್ಗ ವೈರಿಗಳು ಬಿಟ್ಟು ಹೋದ ಅರಮನೆಗಳು, ಕಟ್ಟಡಗಳು ಬೆಲೆಬಾಳುವ ಕಲಾಕೃತಿಗಳು ಹಾಗೂ ವಿವಿಧ ವಸ್ತು ವಿಶೇಷಗಳು ಸುರಕ್ಷಿತವಾಗಿರುವಂತೆ ಮತ್ತು ಅವುಗಳನ್ನು ತಮಗೆ ಚರಿತ್ರೆ ಒದಗಿಸಿಕೊಟ್ಟ ಬಳುವಳಿ ಎಂದು ತಿಳಿದು, ಮುಂದಿನ ಪೀಳಿಗೆಗಾಗಿ ಕಾದಿಡಲು ಕರೆ ನೀಡಿದರು. ಹೊಸ ಸರಕಾರದಲ್ಲಿ ಆಡಳಿತ, ಕೈಗಾರಿಕೆ, ಸಾರಿಗೆ, ಸಂಪರ್ಕ, ಶಿಕ್ಷಣ, ಆರೋಗ್ಯ ಸಂಸ್ಥೆಗಳನ್ನು ನಡೆಸಲು ಕಾರ್ಮಿಕರೇ ಕಲಿತುಕೊಂಡರು. ಭಾರೀ ಕೊರತೆ ಇರುವ ಜೀವನಾವಶ್ಯಕ ವಸ್ತುಗಳನ್ನು ಸುವ್ಯವಸ್ಥಿತ ಸಾರ್ವಜನಿಕ ವಿತರಣಾ ವ್ಯವಸ್ಥೆಯಿಂದ ಜನರಿಗೆ ಒದಗಿಸ ಲಾಯಿತು. ಈ ಮೊದಲೇ ತಿಳಿಸಿದಂತೆ, ಸಾಕ್ಷರತಾ ಆಂದೋಲನವನ್ನು ಪರಿಣಾಮಕಾರಿಯಾಗಿ ಜಾರಿ ಮಾಡಲಾಯಿತು. ಜನರ ಸಾಂಸ್ಕೃತಿಕ ಮಟ್ಟವನ್ನು ಏರಿಸಲಾಯಿತು.

ಆಂತರಿಕ ಯುದ್ಧದ ಮಧ್ಯವೂ ಸಂವಿಧಾನಾತ್ಮಕ ಸಂಸತ್ತಿಗೆ ಚುನಾವಣೆ ನಡೆಯಿತು. ಪೆಟ್ರೋಗ್ರಾಡ್‌ನ ೧೯ ಟಿಕೇಟುಗಳಿಗೆ ೧೯೧೭ರ ನವೆಂಬರ್ ೩೦ರಂದು ಪ್ರಕಟಿಸಿದ ಚುನಾವಣಾ ಫಲಿತಾಂಶದಲ್ಲಿ ೯೪೦,೭೪೩ ಮತಗಳು ಚಲಾಯಿಸಲ್ಪಟ್ಟಿದ್ದವು. ಅವುಗಳಲ್ಲಿ ಬೋಲ್‌ಶೆವಿಕರು : ೪೨೪,೦೨೭, ಕ್ಯಾಡೆಟ್‌ಗಳು : ೨೪೫,೦೦೬, ಎಡಪಂಥೀಯ ಸಮಾಜವಾದಿ ಕ್ರಾಂತಿಕಾರಿಗಳು : ೧೫೨,೨೩೦ ಮತಗಳನ್ನು ಗಳಿಸಿದ್ದವು. ಉಳಿದ ೧೫ ಪಕ್ಷಗಳು ಕನಿಷ್ಠ ೧೫೮ ರಿಂದ ಗರಿಷ್ಠ ೧೯೧೦೯ ಮತಗಳನ್ನು ಪಡೆದಿದ್ದವು. ಸಂವಿಧಾನಾತ್ಮಕ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಕೈಗಾರಿಕಾ ಪ್ರದೇಶಗಳಿಂದ ಬೋಲ್‌ಶೆವಿಕರು ನಿರ್ಣಾಯಕ ಜಯಗಳಿಸಿದ್ದರು. ಅವರನ್ನು ಬಹುಪಾಲು ಕಾರ್ಮಿಕರು, ಅರ್ಧಾಂಶ ಸೈನಿಕರು ಬೆಂಬಲಿಸಿದ್ದರು. ೧೯೧೮ರ ಜನವರಿ ೫ ರಂದು ಸಂವಿಧಾನಾತ್ಮಕ ಸಂಸತ್ತಿನ ಅಧಿವೇಶನವನ್ನು ಕರೆಯಲಾಗಿತ್ತು. ಬಂಡವಾಳಶಾಹಿ ಪ್ರತಿನಿಧಿಗಳು ಅಲ್ಲಿ ಗದ್ದಲ ಮಾಡಿ ಸಭೆ ನಡೆಯದಂತೆ ಮಾಡಿದರು ಮತ್ತು ಸೋವಿಯತ್ ಪ್ರಭುತ್ವವನ್ನು ಮಾನ್ಯ ಮಾಡುವುದಿಲ್ಲ ಎಂದು ಬೊಬ್ಬೆ ಹಾಕಿದರು. ಅನಿವಾರ್ಯವಾಗಿ, ಬೋಲ್‌ಶೆವಿಕರು ಸಭಾತ್ಯಾಗ ಮಾಡಬೇಕಾಯಿತು. ಕ್ರಾಂತಿಯ ಮುನ್ನಡೆಯಲ್ಲಿ ಒಂದು ದಿನ ಹಾಳಾಯಿತು. ಜನವರಿ ೧೦ ರಂದು ಅಖಿಲ ರಷ್ಯಾ ಸೋವಿಯತ್‌ಗಳ ಮೂರನೆ ಅಧಿವೇಶನದಲ್ಲಿ ರಷ್ಯಾವನ್ನು ಕಾರ್ಮಿಕರ, ಸೈನಿಕರ ಮತ್ತು ರೈತರ ಪ್ರತಿನಿಧಿಗಳ ಸೋವಿಯತ್‌ಗಳ, ಗಣರಾಜ್ಯ ಎಂದು ಅಧಿಕೃತವಾಗಿ ಲೆನಿನ್ ಘೋಷಿಸಿದರು. ರಾಜ್ಯಪ್ರಭುತ್ವವನ್ನು ಈ ಸಂಸ್ಥೆಗಳಿಗೆ ಹಸ್ತಾಂತರಿಸಲಾಯಿತು. ಸಂವಿಧಾನಾತ್ಮಕ ಸಂಸತ್ ಸಭೆಗೆ ಬಂದ ಪ್ರತಿನಿಧಿಗಳ ಸಂಖ್ಯೆಗಿಂತ ಈ ಅಧಿವೇಶನಕ್ಕೆ ಬಂದ ಪ್ರತಿನಿಧಿಗಳ ಸಂಖ್ಯೆ ಇಮ್ಮಡಿಯಾಗಿತ್ತು.

ಈ ಮಧ್ಯೆ, ಸೋವಿಯತ್ ದೇಶ ಯುದ್ಧ ನಿರತ ದೇಶಗಳಿಗೆ ಯುದ್ಧ ನಿಲ್ಲಿಸಿ ಶಾಂತಿ ಸ್ಥಾಪಿಸಲು ಮೇಲಿಂದ ಮೇಲೆ ಕರೆ ಕೊಟ್ಟಿತು. ಶಾಂತಿ ಒಪ್ಪಂದ ಆಗದಂತೆ ಪ್ರತಿಕ್ರಾಂತಿಕಾರಿಗಳು ಪ್ರಯತ್ನಿಸಿದರು. ಫೆಬ್ರವರಿ ೧೮ರಂದು ಜರ್ಮನ್ನರು ರಷ್ಯಾದೊಂದಿಗಿನ ತಾತ್ಕಾಲಿಕ ಶಾಂತಿ ಒಪ್ಪಂದವನ್ನು ಮುರಿದು ಪೂರ್ವರಂಗದಲ್ಲಿ ರಷ್ಯಾದ ಮೇಲೆ ದಾಳಿ ನಡೆಸಿದರು. ಮತ್ತೊಮ್ಮೆ ಶಾಂತಿ ಒಪ್ಪಂದ ಮಾಡಲು ಆತುನಿಯಾ, ಪೋಲೆಂಡ್, ಬೈಲೋ ರಷ್ಯಾದ ಒಂದು ಭಾಗ, ಲಾಟಿವಿಯಾ, ಎಸ್ಟೋಮಿಯಾ, ಟರ್ಕಿಸ್ತಾನ, ಕಾರ್ಸ, ಕರ್ಜಗಿಸ್ಥಾನ, ಬಾಟುಮ್, ಅರ್ಡಗಾನ್ ಪ್ರದೇಶಗಳನ್ನು ಮಿತ್ರ ರಾಷ್ಟ್ರಗಳಿಗೆ ಬಿಟ್ಟುಕೊಡಲು ಜರ್ಮನಿ ಇನ್ನಷ್ಟು ಕಠಿಣ ಶರತ್ತುಗಳನ್ನು ಹೇರಿತು. ಅನಿವಾರ್ಯವಾಗಿ, ಸೋವಿಯತ್ ರಷ್ಯಾ ಪುನಃ ಈ ಅವಮಾನಕಾರಿ ಹಾಗೂ ಅಸಮಾನತೆಯ ಒಪ್ಪಂದಕ್ಕೆ ಸಹಿ ಹಾಕಿತು. ಈ ಶಾಂತಿ ಒಪ್ಪಂದವನ್ನು ಮಾರ್ಚ್ ೧೪ ರಂದು ಮಾಸ್ಕೋದಲ್ಲಿ ಅನುಮೋದಿಸಲಾಯಿತು. ಜರ್ಮನ್ನರು ಈ ಎಲ್ಲಾ ಪ್ರದೇಶಗಳನ್ನು ಆಕ್ರಮಿಸಿದರು. ಇಷ್ಟರಲ್ಲಿ ಸೋವಿಯತ್ ದೇಶದ ರಾಜಧಾನಿಯನ್ನು ಪೆಟ್ರೋಗ್ರಾಡ್‌ನಿಂದ ಮಾಸ್ಕೋ ನಗರಕ್ಕೆ ಸ್ಥಳಾಂತರಿಸಲಾಗಿತ್ತು. "ಈ ಶಾಂತಿ ಒಪ್ಪಂದ

ಸಹಿಸಲಾರದಷ್ಟು ದುರ್ದಮವಾಗಿತ್ತು. ಆದರೆ, ಭವಿಷ್ಯ ನಮ್ಮದಾಗಿದೆ. ಚರಿತ್ರೆ ನಾವು ಸರಿ ಎಂದು ತೋರಿಸಲಿದೆ" ಎಂದು ಲೆನಿನ್ ಆ ದಿನ ಬರೆದರು.

ದೇಶದ ದಕ್ಷಿಣ ಮತ್ತು ಪೂರ್ವ ಭಾಗದಲ್ಲಿ ಪ್ರತಿಕ್ರಾಂತಿಕಾರಿಗಳ ದೊಡ್ಡ ಸೈನ್ಯವನ್ನು ಸಂಘಟಿಸಲಾಯಿತು. ಕೆಂಪು ಕ್ರಾಂತಿಯ ಬದಲು ಬಿಳಿ ಕ್ರಾಂತಿಯನ್ನು ಯಶಸ್ವಿಗೊಳಿಸಲು ಪಣ ತೊಡಲಾಯಿತು. ಅದಕ್ಕೆ ಎದುರಾಗಿ ಕೆಂಪು ಸೇನೆಯ ಬಲವನ್ನು ೮೦೦,೦೦೦ಕ್ಕೆ ಏರಿಸಲಾಯಿತು. ೧೯೧೮ರ ಜುಲೈ ೧೦ ರಂದು ಅಖಿಲ ರಷ್ಯಾ ಸೋವಿಯತ್ ಪ್ರತಿನಿಧಿಗಳ ಕಾಂಗ್ರೆಸ್ ಕೆಂಪು ಸೇನೆಯನ್ನು ಅಧಿಕೃತವಾಗಿ ಸ್ಥಾಪಿಸಿತು. ೧೯೧೮ರ ಒಂದು ಕರಪತ್ರದಲ್ಲಿ ಕೆಂಪು ಸೈನಿಕರು ತಮ್ಮ ತಾಯ್ನಡಿಗಾಗಿ ಹೋರಾಡಲು ಈ ರೀತಿ ಕರೆ ಕೊಡಲಾಗಿತ್ತು.

*ಸಂಗಾತಿಗಳೇ, ನಮ್ಮಲ್ಲಿ ೬ ಜನರಲ್ಲಿ ಒಬ್ಬರಿಗೆ ಮಾತ್ರ ಒಂದು ರೈಫಲ್ ಇದೆ. ಬ್ರಿಟೀಷರ ಟ್ಯಾಂಕರ್ ಇಲ್ಲ, ಜರ್ಮನಿಯ ಯುದ್ಧ ವಿಮಾನಗಳಿಲ್ಲ; ಆದರೆ, ನಾವು ಪ್ರತಿಕ್ರಾಂತಿಕಾರಿಗಳನ್ನು ಖಂಡಿತವಾಗಿಯೂ ಮಟ್ಟಹಾಕು ತ್ತೇವೆ. ನಾವು ಕಾರ್ಮಿಕರ, ರೈತರ ಪ್ರಭುತ್ವಕ್ಕಾಗಿ ಹೋರಾಡುತ್ತಿದ್ದೇವೆ. ಸಂಗಾತಿಗಳೇ, ನಿಮ್ಮ ರೈಫಲ್‌ಗಳನ್ನು ಕಾಯ್ದುಕೊಳ್ಳಿ. ಅದು ದುಡಿಯುವ ಜನರನ್ನು ರಕ್ಷಿಸುವ ದಿವ್ಯಾಸ್ತ್ರ. ಪ್ರತಿಯೊಬ್ಬರಿಗೆ ಒಂದು ರೈಫಲ್ ಇಲ್ಲದ ಎಂತಹ ಸೈನ್ಯ ಇದು ಎಂದು ನೀವು ನಗಬಹುದು. ನೀವು ಓಡಿ ಹೋಗಬೇಡಿ, ರೈಫಲಿನ ಕೊನೆಯ ಗುಂಡು ಇರುವವರೆಗೆ ಹೋರಾಡಿ. ನಿಮ್ಮನ್ನು ನೀವು ರಕ್ಷಿಸಿಕೊಳ್ಳು ವಾಗಲೂ, ಹಿಂಜರಿಯವಾಗಲೂ ನೀವು ಸಾವಿರಾರು ಜನರನ್ನು ನಿಷ್ಪ್ರಯೋಜಕ ಸಾವಿನಿಂದ ರಕ್ಷಿಸುತ್ತಿರುವಿರಿ ಎಂದು ತಿಳಿಯಿರಿ.*

೧೯೧೮ರ ಮಾರ್ಚ್ ೯ರಿಂದ ಸಾಮ್ರಾಜ್ಯಶಾಹಿಗಳು ರಷ್ಯಾದ ವಿವಿಧ ರಂಗಗಳಿಂದ ಪ್ರಾದೇಶಿಕ ಪ್ರತಿಕ್ರಾಂತಿಕಾರಿಗಳೊಂದಿಗೆ ದಾಳಿ ಪ್ರಾರಂಭಿಸಿದರು. ಈ ವರ್ಷದ ಬೇಸಿಗೆಯಲ್ಲಿ ಮುಕ್ಕಾಲುಪಾಲು ರಷ್ಯಾ ಇವರ ವಶದಲ್ಲಿತ್ತು. ಝಾರನ ಆಳ್ವಿಕೆಯಲ್ಲಿ ಪೂರ್ವ ರಷ್ಯಾದಲ್ಲಿ ೫೦೦೦೦ ಝೆಕ್ ಮತ್ತು ಸ್ಲಾವೋಕ್ ಪಡೆಗಳು ಝೆಕೊಸ್ಲೋವಾಕಿಯಾ ದಂಗೆಕಾರರಿಂದ ಆವರಿಸಿದ್ದವು. ಈ ಪಡೆಗಳನ್ನು ಸುರಕ್ಷಿತವಾಗಿ ತಮ್ಮ ತಾಯ್ನಡಿಗೆ ಮರಳಿಸಲು ಸೋವಿಯತ್ ಪಡೆಗಳು ಪ್ರಯತ್ನಿಸುತ್ತಿದ್ದವು. ಆದರೆ, ಸಾಮ್ರಾಜ್ಯಶಾಹಿಗಳು ಮಾಸ್ಕೋ ನಗರದ ಫ್ರೆಂಚ್ ರಾಜತಾಂತ್ರಿಕ ಕಚೇರಿಯಲ್ಲಿ ಈ ಸೇನಾಪಡೆ ತಮಗೆ ಸೇರುವಂತೆ ಭಾರೀ ಆಸೆ ಆಮೀಷಗಳನ್ನು ಒಡ್ಡಿದರು. ಆದರೆ, ಈ ಪಡೆಯವರು ಸೋವಿಯತ್‌ನ ಕೆಂಪು ಸೇನೆಗೆ ಸೇರುವುದಾಗಿ ಪತ್ರ ಮೂಲಕ ತಿಳಿಸಿ ತಮ್ಮ ಕ್ರಾಂತಿಕಾರಿ ಭ್ರಾತೃತ್ವವನ್ನು ಮೆರೆಸಿದರು. ಆಕ್ರಮಣಕಾರರು ಅಮಾನುಷ ದೌರ್ಜನ್ಯ ನಡೆಸಿದರು. ನಾಗರಿಕರ ಸಮೂಹ ಹತ್ಯೆ ಮಾಡಿದರು. ಕೆಲವರನ್ನು ಜೈಲಿಗೆ ಕಳುಹಿಸಿದರು. ಕೆಲವರನ್ನು ಸೈಬೀರಿಯಾದ ಕಾನ್‌ಸನ್‌ಟ್ರೇಶನ್ ಕ್ಯಾಂಪ್‌ಗೆ ರವಾನಿಸಿದರು. ವೈರಿ ಜಪಾನಿ ಸೇನೆ ಸೋವಿಯತ್ ಭೂಗತ ಕಾರ್ಯಕರ್ತರನ್ನು ಹಿಡಿದು ರೈಲ್ವೆಯ ಅಗ್ನಿಕುಂಡಕ್ಕೆ ಎಸೆದುಸುಟ್ಟಿತು. ಆಗಸ್ಟ್ ೩೦ ರಂದು ಲೆನಿನ್‌ರ ಮೇಲೆ ಮರಣಾಂತಿಕ ಬಾಂಬ್ ಸ್ಫೋಟಗಳಾದವು. ಸುದೈವದಿಂದ ಅವರನ್ನು ಸಕಾಲದಲ್ಲಿ ವೈದ್ಯರು ಚಿಕಿತ್ಸೆ ನಡೆಸಿ ಬದುಕಿಸಿದರು. ಪೆಟ್ರೋಗ್ರಾಡ್‌ನ ಸೋವಿಯತ್ ಮುಖ್ಯಸ್ಥರಾದ ಯುರಿಟ್ಸಕಿಯನ್ನು ಹತ್ಯೆ ಮಾಡಲಾಯಿತು.

ಕೆಂಪು ಸೇನೆಯು ಕಾರ್ಮಿಕರ ಮತ್ತು ರೈತರ ಸೇನೆ. ಅದನ್ನು ಶಾಂತಿ ಕಾಲದಲ್ಲಿ ಕಟ್ಟಿದ್ದಲ್ಲ. ಬದಲು ಯುದ್ಧ ಕಾಲದಲ್ಲಿ ಅಲ್ಪಾವಧಿಯಲ್ಲಿ ಹೆಚ್ಚು ಪೂರ್ವ ತಯಾರಿ ಇಲ್ಲದೇ ಸಂಘಟಿಸಲಾಗಿತ್ತು. ಅದಕ್ಕೆ ಸೇರಿದ ಕಾರ್ಮಿಕರು, ರೈತರು ತಮ್ಮದೇ ಕನಸು ಕಾಣುತ್ತಿದ್ದರು. ತಾವು ಇಂಜನೀಯರ್ ಆಗಬೇಕು, ಡಾಕ್ಟರ್ ಆಗಬೇಕು, ಶಿಕ್ಷಕರಾಗಬೇಕು, ಕೃಷಿ ತಜ್ಞರಾಗಬೇಕು... ಎಂದು. ಅವರೆಲ್ಲರ ಕನಸುಗಳು ನನಸಾಗುವುದು ಕ್ರಾಂತಿ ಯಶಸ್ವಿಯಾದ ಮೇಲೆ ಎಂದು ಅವರು ತಿಳಿದಿದ್ದರು. ಅದಕ್ಕಾಗಿ ಅವರು ಹೋರಾಡಲು ಸಿದ್ಧವಾಗಿದ್ದರು. ಮಿಲಿಟರಿ ಶಾಲೆಗಳಿಗೆ ಹಾಜರಾಗುತ್ತಿದ್ದರು. ಸೋವಿಯತ್ ಸರಕಾರ ಝಾರನ ಕಾಲದ ಅನುಭವಸ್ಥ ಮಿಲಿಟರಿ ಅಧಿಕಾರಿಗಳನ್ನು ತನ್ನ ಕಡೆ ಸೆಳೆದುಕೊಳ್ಳಲು ಯಶಸ್ವಿಯಾಯಿತು. ಕೆಂಪು ಸೇನೆ ಸ್ಥಾಪಿಸಿದ ಒಂದೇ ವರ್ಷದಲ್ಲಿ ಅದು ೩೫೦೦ ಪರಿಣಿತ ಸೈನಿಕ ಅಧಿಕಾರಿಗಳನ್ನು ಒಳಗೊಂಡಿತ್ತು. ಅವರಲ್ಲಿ ಅನೇಕರು ಝಾರನ ಕಾಲದವರು. ಅವರಲ್ಲಿ ಹಲವರು ಶ್ರೇಷ್ಠ ಮಟ್ಟದ ಸೇನಾನಿಗಳೂ ಇದ್ದರು. ಜೊತೆಗೇ ಹಿಂದಿನ ಕಾರ್ಮಿಕರು, ರೈತರು, ಖಾಸಗಿ ಸೈನಿಕರು ಇಂದಿನ ಕೆಂಪು ಸೇನೆಯ ಪ್ರತಿಭಾವಂತ ಸೇನಾನಿಗಳಾಗಿ ಮೂಡಿ ಬಂದರು. ಅವರಲ್ಲಿ ಹಲವಾರು ಪ್ರಖ್ಯಾತರಾಗಿ ರಾಷ್ಟ್ರಪ್ರಶಸ್ತಿಗಳನ್ನೂ ಪಡೆದರು.

**ಕ್ರಾಂತಿಯ ಅಂತಾರಾಷ್ಟ್ರೀಯತೆ**

ರಷ್ಯಾದಲ್ಲಿ ನಡೆಯುತ್ತಿದ್ದುದು ಬಂಡವಾಳಶಾಹಿಗಳ ಸಾಮ್ರಾಜ್ಯಶಾಹಿಗಳ ಮತ್ತು ಕಾರ್ಮಿಕರ ನಡುವಿನ ಘೋರ ವರ್ಗ ಯುದ್ಧ. ಮುಂದೆ ಇಂತಹ ಯುದ್ಧಗಳಾಗದಿರಲಿ ಎಂದೇ ಕಾರ್ಮಿಕರು ಶಾಂತಿಗಾಗಿ ನಡೆಸುತ್ತಿದ್ದ ಯುದ್ಧ. ಅದುದರಿಂದಲೇ, ಜಗತ್ತಿನಾದ್ಯಂತ ಈ ಯುದ್ಧಕ್ಕೆ ಎಲ್ಲಾ ಶೋಷಿತರು, ಕಾರ್ಮಿಕರು, ರೈತರು, ಪ್ರಜಾಪ್ರಭುತ್ವವಾದಿಗಳು ಬೆಂಬಲಿಸಿದರು. ರಷ್ಯಾದ ಕ್ರಾಂತಿಯ ವಿಜಯದಿಂದ ಅವರ ಆಶೆಗಳು ಚಿಗುರುವ ಸಾಧ್ಯತೆಗಳಿವೆ. ಅವರ ದೇಶದಲ್ಲಿಯೂ ಬಂಡವಾಳಶಾಹಿ-ಭೂಮಾಲಿಕ ಪ್ರಭುತ್ವಗಳನ್ನು ಕಿತ್ತೊಗೆದು ಸಮಾಜವಾದಿ ಸಮಾಜ ಸ್ಥಾಪಿಸುವ ಮೂಲಕ ಶೋಷಣಾ ಮುಕ್ತರಾಗಿ ತಮ್ಮ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸಬಹುದೆಂದು ಕನಸು ಕಾಣುತ್ತಿದ್ದರು. ಸಾಮ್ರಾಜ್ಯಶಾಹಿಗಳ ಬಿಗಿ ಮುಷ್ಟಿಯಿಂದ ಬಿಡುಗಡೆ ಪಡೆಯಬಹುದೆಂದು ಅವರು ನಿರೀಕ್ಷಿಸುತ್ತಿದ್ದರು.

ಸಹಜವಾಗಿಯೇ ರಷ್ಯಾದ ಯುದ್ಧಕ್ಕೆ ಶಸ್ತ್ರಾಸ್ತ್ರಗಳನ್ನು ಹಡಗುಗಳಿಗೆ ತುಂಬುವುದಿಲ್ಲ. ರಷ್ಯಾದಿಂದ ಸೇನೆ ವಾಪಸು ತೆಗೆದುಕೊಳ್ಳಿ ಎಂದು ಲಂಡನ್ ಬಂದರು ನೌಕರರು ಮುಷ್ಕರ ಹೂಡಿದರು. ರಷ್ಯಾದಲ್ಲಿ ಯುದ್ಧ ನಿಲ್ಲಿಸಿರಿ, ನಮ್ಮ ಮಕ್ಕಳನ್ನು-ಸೈನಿಕರನ್ನು ತಾಯ್ನಡಿಗೆ ವಾಪಸು ತರಿಸಿರಿ ಎಂದು ಅಮೆರಿಕಾದ ಕಾರ್ಮಿಕರು, ಜನರು ಪ್ರತಿಭಟನಾ ಮೆರವಣಿಗೆ ನಡೆಸಿದರು. ವೈಟ್‌ಗಾರ್ಡ್ಸ್ ಮತ್ತು ಆಕ್ರಮಣಕಾರರಿಗೆ ಇಂತಹ ಅಪೂರ್ವ ಅಂತರ್ ರಾಷ್ಟ್ರೀಯ ಸೌಹಾರ್ದತೆ ಅಕ್ಟೋಬರ್ ಕ್ರಾಂತಿಯನ್ನು ಬೆಂಬಲಿಸಿ ಸರಿಯಾದ ಸವಾಲಾಯಿತು. ಕೆಂಪು ಸೇನೆಯಲ್ಲಿ ವಿವಿಧ ಭಾಷೆಗಳ, ಜನಾಂಗಗಳ, ಸಂಸ್ಕೃತಿಗಳ ದೇಶಗಳ ಪಡೆಗಳಿದ್ದವು. ಯಾವ ಭಾಷೆಯಲ್ಲಿ ಸೇನಾಧಿಪತಿಗಳು ಆಜ್ಞೆ ಮಾಡಬೇಕೆಂದು ಪ್ರಶ್ನೆ ಬಂದಾಗ ಸೈನಿಕರು ಹೇಳುತ್ತಾರೆ. "ನೀವು ಯಾವುದೇ ಭಾಷೆಯಲ್ಲಿ ಆಜ್ಞಾಪಿಸಿರಿ. ನಮಗೆ ತಿಳಿಯುತ್ತದೆ, ನಿಮ್ಮ-ನಮ್ಮ ಭಾಷೆ ಒಂದೇ, ಕ್ರಾಂತಿಗೆ ಜಯವಾಗಲಿ" ಎಂದು.

**ನಿರ್ಣಾಯಕ ವಿಜಯದತ್ತ**

೧೯೧೮ರ ನವೆಂಬರ್ ೭ (ಹಳೆಯ ಕ್ಯಾಲೆಂಡರ್‌ನಲ್ಲಿ ಅಕ್ಟೋಬರ್ ೨೫ ಕ್ರಾಂತಿಯ ನಂತರ ಇಲ್ಲಿ ಹೊಸ ಕ್ಯಾಲೆಂಡರನ್ನು ಅಳವಡಿಸಲಾಯಿತು) ಅಕ್ಟೋಬರ್ ಕ್ರಾಂತಿಯ ಮೊದಲ ವರ್ಷ "ಕ್ರಾಂತಿ ಚಿರಾಯುವಾಗಲಿ" ಎಂದು ಅತ್ಯಂತ ವಿಶ್ವಾಸದಿಂದ ಪೆಟ್ರೋ ಗ್ರಾಡ್ ಮತ್ತು ದೇಶದ ಇತರ ಪ್ರದೇಶಗಳಲ್ಲಿ ಘೋಷಣೆಗಳು ಮೊಳಗಿದವು. ಉತ್ತರ ಕ್ಷೇತ್ರದಲ್ಲಿ ಕೆಂಪು ಸೇನೆ ವೈರಿಗಳನ್ನು ಮುನ್ನುಗ್ಗಲು ಬಿಡಲಿಲ್ಲ. ದಕ್ಷಿಣದಲ್ಲಿ ಅದು ಸೋಲು ಅನುಭವಿಸಿತು. ಗಂಭೀರ ಮಿಲಿಟರಿ ಪರಿಸ್ಥಿತಿ, ಹಸಿವು, ಸರ್ವನಾಶ, ವೈರಿಗಳ ಪಿತೂರಿಗಳು ಇವೆಲ್ಲವುಗಳನ್ನು ಎದುರಿಸುತ್ತಾ ಸೋವಿಯತ್ ಪ್ರಭುತ್ವ ಉಳಿದಿದೆ ಮತ್ತು ಕ್ರಾಂತಿ ಮುಂದುವರೆದಿದೆ. ಜರ್ಮನಿಯಲ್ಲಿ ನವೆಂಬರ್ ೯ ರಂದು ಅತ್ಯದ್ಭುತ ಎಂಬಂತೆ ಕಾರ್ಮಿಕರ ನೇತೃತ್ವದಲ್ಲಿ ಕ್ರಾಂತಿ ಸಂಭವಿಸಿತು. "ಎಲ್ಲಾ ಅಧಿಕಾರ ಸೋವಿಯತ್‌ಗಳಿಗೆ" ಎಂದು ಜಯಘೋಷಗಳು ಮೊಳಗಿದವು. ಜರ್ಮನಿಯ ಆಳುವ ವರ್ಗದವರು ತತ್ತರಿಸಿ ನಡುಗಿದರು. ಅರಸೊತ್ತಿಗೆ ಕುಸಿದು ಬಿತ್ತು. ವಿಲಿಯಂ ಕೈಸರ್ ಪದತ್ಯಾಗ ಮಾಡಿದರು. ಆದರೆ, ೧೯೧೯ರ ಮೇ ಹೊತ್ತಿಗೆ ಪ್ರತಿಗಾಮಿಗಳ ಕೈ ಮೇಲಾಯಿತು. ಜನತಾ ಗಣರಾಜ್ಯವನ್ನು ರಕ್ತದ ಮಡುವಿನಲ್ಲಿ ಕೆಡೆದು ಉರುಳಿಸಲಾಯಿತು. ಬಂಡವಾಳಶಾಹಿ ಗಣರಾಜ್ಯ ಸ್ಥಾಪಿಸಲಾಯಿತು. ೧೯೧೯ರ ಮಾರ್ಚ್ ೨೧ ರಂದು ಹಂಗೇರಿಯಲ್ಲಿ ಕ್ರಾಂತಿ ವಿಜಯ ಗಳಿಸಿತು. ಹಂಗೇರಿಯಲ್ಲಿ ಸೋವಿಯತ್‌ಗಳ ಗಣರಾಜ್ಯವನ್ನು ಘೋಷಿಸಲಾಯಿತು. ಅದು ಆಗಸ್ಟ್ ೧ರ ವರೆಗೆ ಮಾತ್ರ ಉಳಿಯಿತು.

೧೯೧೮ರ ನವೆಂಬರ್ ೧೧ ರಂದು ಒಂದು ರೈಲು ಬಂಡಿಯಲ್ಲಿ ಫ್ರಾನ್ಸ್ ಮತ್ತು ಜರ್ಮನಿ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದವು. ಸೋವಿಯತ್ ರಷ್ಯಾವು ಜಾಗತಿಕ ಕ್ರಾಂತಿಕಾರಿ ಸನ್ನಿವೇಶದಲ್ಲಿ ತಾವು ವೈರಿಗಳೆಂಬುದನ್ನು ಮರೆಯಬೇಕೆಂದು ಅಭಿಪ್ರಾಯ ಪಟ್ಟರು. ಜರ್ಮನ್ ಪಶ್ಚಿಮ ರಾಷ್ಟ್ರಗಳಿಂದ ತನ್ನ ಸೇನೆಗಳನ್ನು ವಾಪಸ್ಸು ಪಡೆದು ಕೊಳ್ಳಬೇಕೆಂದೂ, ಜರ್ಮನ್ ಮಿತ್ರರಾಷ್ಟ್ರಗಳಿಗೆ ಭಾರಿ ಮೊತ್ತದ ಯುದ್ಧ ಪರಿಹಾರ ನೀಡಬೇಕೆಂದೂ ಒಪ್ಪಂದದಲ್ಲಿ ತಿಳಿಸಲಾಗಿತ್ತು. ಆದರೆ, ಜರ್ಮನ್ ಸೈನ್ಯವನ್ನು ರಷ್ಯಾದಿಂದ ವಾಪಸ್ಸು ತೆಗೆದುಕೊಳ್ಳದೇ ಅಲ್ಲಿ ಕ್ರಾಂತಿಯನ್ನು ಮುರಿಯುವ ಪ್ರಯತ್ನ ಮುಂದುವರೆಸಬೇಕೆಂದೂ ಅದರಲ್ಲಿ ಸ್ಪಷ್ಟಪಡಿಸಲಾಯಿತು. ಈ ಮೂಲಕ, ನಾಲ್ಕೂವರೆ ವರ್ಷಗಳ ದೀರ್ಘಕಾಲದ ಮೊದಲ ಜಾಗತಿಕ ಯುದ್ಧ ಮುಕ್ತಾಯವಾಯಿತು. ಗಣನೀಯವಾಗಿ ಬದಲಾದ

ಅಂತರ್‌ರಾಷ್ಟ್ರೀಯ ಪರಿಸ್ಥಿತಿ ಸೋವಿಯತ್ ರಷ್ಯಾದ ಮೇಲೂ ಪರಿಣಾಮ ಬೀರಿದವು. ಜರ್ಮನಿಯ ಸೋಲಿನಿಂದಾಗಿ ಈ ಹಿಂದೆ ರಷ್ಯಾ ಅದರೊಂದಿಗೆ ಮಾಡಿಕೊಂಡ ಅವಮಾನಕಾರಿ ಒಪ್ಪಂದ ತನ್ನಿಂದ ತಾನೇ ಅವಸಾನ ಹೊಂದಿತು. ೧೯೧೮ರ ನವೆಂಬರ್ ಹಾಗೂ ಡಿಸೆಂಬರ್ ಮತ್ತು ೧೯೧೯ರ ಜನವರಿಯಲ್ಲಿ ಜರ್ಮನ್ ಆಕ್ರಮಿತ ಇಸ್ಟೋನಿಯಾ, ಲಾಟ್ವಿಯಾ, ಆತುನಿಯಾ, ಬೈಲೊರಷ್ಯಾ ರಾಜ್ಯಗಳಲ್ಲಿ ಸೋವಿಯತ್ ಪ್ರಭುತ್ವವನ್ನು ಸ್ಥಾಪಿಸಲಾಯಿತು. ಈ ಎಲ್ಲಾ ರಾಜ್ಯಗಳಲ್ಲಿ ಕಾರ್ಮಿಕರು, ಸೈನಿಕರು, ರೈತರು ಸೋವಿಯತ್ ಪರ ನಿಂತರು. 'ಭವಿಷ್ಯ ನಮ್ಮದು' ಎಂಬ ಲೆನಿನ್‌ರ ಭವಿಷ್ಯವಾಣಿ ನಿಜವಾಯಿತು.

ಬ್ರಿಟನ್ ಮತ್ತು ಫ್ರಾನ್ಸ್ ಜರ್ಮನಿಯನ್ನು ಸೋಲಿಸಿ ತಮ್ಮ ಎಲ್ಲಾ ಶಕ್ತಿಗಳನ್ನು ಸೋವಿಯತ್ ರಷ್ಯಾದ ವಿರುದ್ಧ ಕ್ರೋಢೀಕರಿಸಿದವು. ಕಪ್ಪು ಸಮುದ್ರವನ್ನು ಪ್ರವೇಶಿಸಿ ರಷ್ಯಾದ ಕರಾವಳಿಯತ್ತ ಮುನ್ನುಗ್ಗಿದವು. ಆದರೆ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳಲ್ಲಿ ಕಾರ್ಮಿಕರು ಮತ್ತು ರೈತರೇ ಹೆಚ್ಚಾಗಿದ್ದಾರೆ ಮತ್ತು ಆ ಕಾರಣಕ್ಕಾಗಿ ಅವರು ಸೋವಿಯತ್ ಸಹೋದರರ ವಿರುದ್ಧ ಯುದ್ಧ ಮಾಡಲಾರರು ಎಂದು ಭರವಸೆ ಇತ್ತು. ಮಾಸ್ಕೋದಲ್ಲಿ ವಿದೇಶಿ ಕಮ್ಯುನಿಸ್ಟರ ಗುಂಪಿನಲ್ಲಿ ಫ್ರೆಂಚ್ ಕಮ್ಯುನಿಸ್ಟ್ ಪಕ್ಷದ ಒಬ್ಬ ಮಹಿಳಾ ಧುರೀಣಳೂ ಇದ್ದಳು. ಅವರೆಲ್ಲರೂ ಸೋವಿಯತ್ ಕ್ರಾಂತಿಯ ಯಶಸ್ಸಿಗೆ ಶ್ರಮಿಸಿದರು. ಪರಿಣಾಮವಾಗಿ, ಫ್ರೆಂಚ್ ಸೇನೆಯಲ್ಲಿ ದಂಗೆ ಎದ್ದಿತು. ಫ್ರಾನ್ಸ್ ದಂಗುಗೊಂಡಿತು. ಕೂಡಲೇ ತನ್ನ ಸೈನ್ಯವನ್ನು ವಾಪಸು ಕರೆಯಿಸಿಕೊಂಡಿತು. ಬ್ರಿಟಿಷ್ ಸೇನೆಯನ್ನು ಕೇಸ್ಪಿಯನ್ ಸಮುದ್ರ ತೀರದಿಂದ ವಾಪಸು ಕರೆಯಿಸಿಕೊಳ್ಳಲಾಯಿತು. ದಕ್ಷಿಣದ ಉಕ್ರೈನ್ ಮತ್ತು ಕ್ರಿಮಿಯಾದಲ್ಲಿ ಸೋವಿಯತ್ ಪ್ರಭುತ್ವವನ್ನು ಮರುಸ್ಥಾಪಿಸಲಾಯಿತು. ಸೋವಿಯತ್ ರಷ್ಯಾದ ಶಾಂತಿದಾಹವನ್ನು ಸಾಮ್ರಾಜ್ಯಶಾಹಿಗಳು ಅರಿತುಕೊಂಡರು. ಫೆಬ್ರವರಿ ೧೯೧೯ರಲ್ಲಿ ಪ್ರಿನ್ಸಸ್ ದ್ವೀಪದಲ್ಲಿ ಕ್ರಾಂತಿಕಾರಿಗಳ ಹಾಗೂ ಪ್ರತಿಕ್ರಾಂತಿಕಾರಿಗಳ ಪ್ರತಿನಿಧಿಗಳನ್ನು ಕರೆಯಿಸಿ ಶಾಂತಿ ಮಾತುಕತೆಯ ನಾಟಕ ಆಡಿದರು. ಕ್ರಾಂತಿಯ ಮುನ್ನಡೆಯಲ್ಲಿ ಗೊಂದಲ ಉಂಟು ಮಾಡಲು ವಿಫಲ ಪ್ರಯತ್ನ ಮಾಡಿದರು.

೧೯೧೯ರ ಕಾಲದಲ್ಲಿ ಮಿತ್ರ ರಾಷ್ಟ್ರಗಳು ರಷ್ಯಾದ ಮೇಲೆ ಹೊಸ ಆಕ್ರಮಣ ನಡೆಸಿದವು. ಅಡ್ಮಿರಲ್ ಕೊಲ್ಚಾಕ್‌ನ ನೇತೃತ್ವದಲ್ಲಿ ೪೦೦,೦೦೦ ಸೈನಿಕರ ಪಡೆಯನ್ನು ಜಮಾಯಿಸಲು ನೆರವಾದರು. ಪ್ರತಿಕ್ರಾಂತಿಕಾರಿಗಳು ಗೆದ್ದ ಮೇಲೆ ಅವನನ್ನೇ ರಷ್ಯಾದ ಸರ್ವಾಧಿಕಾರಿಯಾಗಿ ಮಾಡುವುದಾಗಿ ಭರವಸೆಕೊಟ್ಟರು. ಬಂಡವಾಳಶಾಹಿಗಳಿಗೆ ಸಾಮ್ರಾಜ್ಯಶಾಹಿಗಳಿಗೆ ಪ್ರಜಾಪ್ರಭುತ್ವದಲ್ಲಿ ಎಷ್ಟು ವಿಶ್ವಾಸ ಇದೆ ಎಂದು ಜಗತ್ತಿಗೆ ತಿಳಿಯಿತು. ಕೆಂಪು ಸೇನೆ ವಿವಿಧೆಡೆಗಳಲ್ಲಿ ಸಮರಧೀರ ಹೋರಾಟ ನಡೆಸಿ ಜಯಗಳಿಸುತ್ತ ಬಂದಿತು. ಕೊಲ್ಚಾಕ್‌ನನ್ನು ಉರಾಲ್‌ನಲ್ಲಿ ಮತ್ತು ಡೆನಿಕಿನ್‌ನನ್ನು ಮಾಸ್ಕೋದಲ್ಲಿ, ಯುಡಿವಿಚ್‌ನನ್ನು ಪೆಟ್ರೋಗ್ರಾಡ್‌ನಲ್ಲಿ ಸೋಲಿಸಿ ಕೆಡವಿತು. ಸೈಬೀರಿಯಾ, ದೂರ ಪೂರ್ವದಲ್ಲಿಯೂ ಕೆಂಪು ಸೈನ್ಯ ಜಯಭೇರಿ ಬಾರಿಸಿತು. ಈಗ ರಷ್ಯಾದ ಪೂರ್ವ, ದಕ್ಷಿಣ, ಉತ್ತರ ಭಾಗಗಳು ಸೋವಿಯತ್ ಪ್ರಭುತ್ವಕ್ಕೆ ಪುನಃ ಒಳಗಾದವು.

ಇದೇ ಸಂದರ್ಭ ಇಂಗ್ಲೆಂಡಿನಲ್ಲಿ ಶಸ್ತ್ರಾಗಾರಗಳಲ್ಲಿ ಕಾರ್ಮಿಕರು ಮುಷ್ಕರ ನಡೆಸಿ ದರು. ಈ ದೇಶದಿಂದ ರಷ್ಯಾಕ್ಕೆ ಶಸ್ತ್ರಾಸ್ತ್ರಗಳನ್ನು ಮತ್ತು ಟ್ಯಾಂಕರ್‌ಗಳನ್ನು ಸಾಗಿಸುವುದನ್ನು ತಡೆದರು. ೧೯೨೦ರ ಏಪ್ರಿಲ್ ೪ ರಂದು ಬ್ರಿಟಿಷರು ರಷ್ಯಾ ಬಿಟ್ಟು ಓಡಿ ಹೋಗ ಬೇಕಾಯಿತು. ಇಂಗ್ಲೆಂಡಿನ ಕಾರ್ಮಿಕರಂತೆಯೇ ಫ್ರಾನ್ಸ್, ನಾರ್ವೆ, ಹಂಗೇರಿ ಮೊದಲಾದ ದೇಶಗಳ ಕಾರ್ಮಿಕರು ಯುದ್ಧವಿರೋಧಿ ಚಳವಳಿ ನಡೆಸಿದರು ಮತ್ತು ರಷ್ಯಾದ ತಮ್ಮ ಸಹೋದರ ಸಂಗಾತಿಗಳಿಗೆ ಸೌಹಾರ್ದತೆ ನೀಡಿದರು. ೧೯೨೦ರ ಪ್ರಾರಂಭದಲ್ಲಿ ಮಿತ್ರರಾಷ್ಟ್ರಗಳ ಸೈನಿಕ ಪಡೆಗಳು ರಷ್ಯಾದಿಂದ ಕಾಲು ತೆಗೆಯಲಾರಂಭಿಸಿದವು.

ಆದರೂ ರಷ್ಯಾವನ್ನು ಧ್ವಂಸ ಮಾಡುವ ದುಃಸ್ಸಾಹಸ ಸಾಮ್ರಾಜ್ಯಶಾಹಿಗಳಲ್ಲಿ ಇನ್ನೂ ಜೀವಂತವಾಗಿತ್ತು. ೧೯೨೦ರ ಏಪ್ರಿಲ್‌ನಲ್ಲಿ ಪೋಲೆಂಡ್‌ನ ಬಂಡವಾಳಶಾಹಿ ಸೈನ್ಯ ಮತ್ತು ಬಾರೋನ್ ರೋಂಜೇವ್ ಇವೆರಡೂ ಸಾಮ್ರಾಜ್ಯಶಾಹಿಗಳ ಎರಡು ಕರಾಳ ಕೈಗಳು- ಕೀವ್, ಪೆಟ್ರೋಗ್ರಾಡ್, ಮಾಸ್ಕೋ ನಗರಗಳ ಮೇಲೆ ಮರುದಾಳಿ ನಡೆಸಿದವು. ಪುನಃ ಕೆಂಪುಸೇನೆ ಪೋಲಿಷ್ ಸೇನೆಯೊಡನೆ ಭೀಕರ ಕದನ ನಡೆಸಿ ಜಯಗಳಿಸಿತು. ಪೋಲಿಷ್ ಬಿಳಿಸೇನೆಯ ಸೋಲಿನಿಂದಾಗಿ ಪೋಲ್ಯಾಂಡ್‌ನ ಸ್ವಾತಂತ್ರ್ಯಕ್ಕೆ ಒಂದಿಷ್ಟು ಸೋವಿಯತ್‌ನಿಂದ ಧಕ್ಕೆ ಆಗಲಾರದೆಂದು ಬೋಲ್‌ಶೆವಿಕ್ ಕೇಂದ್ರಸಮಿತಿ ಘೋಷಿಸಿತು. ಸಮಾಜವಾದಿಗಳು ಎಂದಿಗೂ ಆಕ್ರಮಣಕಾರಿಗಳಲ್ಲ ಎಂಬುದನ್ನು ಈ ಘಟನೆ ಜಗತ್ತಿಗೆ ಎತ್ತಿ ತೋರಿಸಿತು. ದೇವರಿಗೂ ದಾಟಲಾಗದ ಸಿವಾಶ್ ಅಖಾತವನ್ನು ಕೆಂಪುಸೇನೆ ರಾತ್ರಿ ಹೊತ್ತಿಗೆ

ನೀರಿಳಿತವಿದ್ದಾಗ ದಾಟಿತು. ಬಾರೋನ್ ರೋಂಜೇವ್‌ನ ಸೈನ್ಯವನ್ನು ಹಿಂದಿನಿಂದ ಮಿಂಚಿನಂತೆ ದಾಳಿ ನಡೆಸಿ ನುಚ್ಚುನೂರು ಮಾಡಿತು. ಈ ಮೂಲಕ, ೧೯೨೧ರಷ್ಟರಲ್ಲಿ ರಷ್ಯಾದಲ್ಲಿ ಆಂತರಿಕ ಯುದ್ಧ ಕೊನೆಗೊಂಡಿತು; ಸಾಮ್ರಾಜ್ಯಶಾಹಿಗಳ ಮಿತ್ರ ರಾಷ್ಟ್ರಗಳ ದುಷ್ಟಕೂಟ ಮತ್ತು ಆಂತರಿಕ ಬಂಡವಾಳಶಾಹಿ-ಭೂಮಾಲಿಕ ಪ್ರತಿಕ್ರಾಂತಿಕಾರಿಗಳು ಸಂಪೂರ್ಣವಾಗಿ ಸೋತರು.

ಸಾಮ್ರಾಜ್ಯಶಾಹಿಗಳೊಡನೆ ಹಣ, ಶಸ್ತ್ರಾಸ್ತ್ರ ಸಜ್ಜಿತ ಸೇನೆ, ಟ್ಯಾಂಕರುಗಳು, ವಿಮಾನಪಡೆಗಳು ಇದ್ದವು. ಆದರೆ ಗೆಲ್ಲಲಿಲ್ಲ. ರಷ್ಯಾದ ಅಕ್ಟೋಬರ್ ಕ್ರಾಂತಿಯ ವಿಜಯವು ಜಗತ್ತಿನಲ್ಲಿಯೇ ಒಂದು ಅದ್ಭುತ ಪವಾಡ ಎನ್ನುತ್ತಾರೆ ಯುಗಪುರುಷ ಲೆನಿನ್. ಆ ಪವಾಡವನ್ನು ನಡೆಸಿದವರು ಶತಮಾನಗಳಿಂದ ಶೋಷಣೆಗೊಳಗಾದ ಕಾರ್ಮಿಕರು ಮತ್ತು ರೈತರು ಮತ್ತು ಅವರಿಗೆ ಬೆಂಬಲ ನೀಡಿದ ಅಂತಾರಾಷ್ಟ್ರೀಯ ಶ್ರಮಿಕ ವರ್ಗದವರು. "ಒಂದು ರಾಷ್ಟ್ರದಲ್ಲಿ ಬಹುಪಾಲು ಜನರು ಕಾರ್ಮಿಕರು ಮತ್ತು ರೈತರಾಗಿದ್ದು, ಅವರು ಕಾರ್ಮಿಕ ವರ್ಗದ ಆಳ್ವಿಕೆಗಾಗಿ ಹೋರಾಡುತ್ತಿರುವುದನ್ನು ನೋಡುತ್ತಿರುವಾಗ ಅದರ ವಿಜಯವು ಅವರಿಗೆ ಮತ್ತು ಅವರ ಮಕ್ಕಳಿಗೆ, ಮಾನವ ಶ್ರಮದಿಂದ ಇದುವರೆಗೆ ಸೃಷ್ಟಿಸಿದ ಎಲ್ಲಾ ಸಂಸ್ಕೃತಿಯ ಸೌಲಭ್ಯಗಳೂ ಸಿಗುವುವು ಎಂದು ಖಾತರಿ ಇರುವುದರಿಂದ ಅಂತಹ ರಾಷ್ಟ್ರವನ್ನು ಯಾರು ನಾಶಗೊಳಿಸಲಾರರು" ಎನ್ನುತ್ತಾರೆ ಲೆನಿನ್. ಆದರೆ, ಈ ವಿಜಯಕ್ಕಾಗಿ ರಷ್ಯಾ ಭಾರಿ ಬೆಲೆ ತೆರಬೇಕಾಯಿತು. ದೇಶದ ಗ್ರಾಮಾಂತರ ಪ್ರದೇಶಗಳಲ್ಲಿ ಮಿಲಿಯಗಟ್ಟಲೆ ಜನ ಸಾವನ್ನಪ್ಪಿದರು. ವ್ಯವಸಾಯ ಮಾಡಲು ಜನರು ಇರಲಿಲ್ಲ. ಇದ್ದವರೂ ಕೆಂಪು ಸೇನೆಯಲ್ಲಿ ಸೇರಿ ಯುದ್ಧನಿರತರಾಗಿದ್ದರು. ಕೃಷಿ ಉತ್ಪಾದನೆ ಗಣನೀಯವಾಗಿ ಕುಸಿದಿತ್ತು. ಜನರು ಹಸಿವಿನಿಂದ ನರಳುತ್ತಿದ್ದರು. ೧೯೨೦ರಲ್ಲಿ ಬೃಹತ್ ಕೈಗಾರಿಕೆಗಳ ಉತ್ಪಾದನೆಯ ೧೯೧೩ರ ಉತ್ಪಾದನೆ ಕೇವಲ ಶೇ.೧೩.೮ರಷ್ಟಾಗಿತ್ತು. ಯುದ್ಧಕಾಲದಲ್ಲಿ ರಷ್ಯ ೧/೩ರಷ್ಟು ಚಿನ್ನದ ಠೇವಣಿ ಕಳೆದುಕೊಂಡಿತು. ೧೯೧೪ ರಿಂದ ೧೯೨೧ರವರೆಗೆ ೭ ವರ್ಷಗಳ ಕಾಲದಲ್ಲಿ ರಷ್ಯಾದ ಆರ್ಥಿಕ ವ್ಯವಸ್ಥೆ ಸಂಪೂರ್ಣ ನಾಶವಾಗಿತ್ತು. ಆ ನಷ್ಟವನ್ನು ಯುದ್ಧಕೋರ ಸಾಮ್ರಾಜ್ಯಶಾಹಿಗಳು ಭರ್ತಿ ಮಾಡುವಂತಿರಲಿಲ್ಲ.

ಆದರೂ ಯುದ್ಧ ಕಾಲದಲ್ಲಿ ಸಮಾಜವಾದಿ ಕೆಲಸ ಕಾರ್ಯಗಳೂ ನಡೆದಿದ್ದವು. ರೈತರಿಗೆ ಬೇಕಾದ ಸರಕು ಸಾಮಗ್ರಿಗಳನ್ನು, ಸಲಕರಣೆಗಳನ್ನು ಕಾರ್ಮಿಕರು ಮತ್ತು ಸೈನಿಕರು ಒದಗಿಸುತ್ತಿದ್ದರು. ಅದಕ್ಕೆ ಬದಲಾಗಿ ರೈತರು ತಮ್ಮ ಕಾರ್ಮಿಕ ಮತ್ತು ಸೈನಿಕ ಸಂಗಾತಿಗಳಿಗೆ ಆಹಾರ ಧಾನ್ಯಗಳನ್ನು ಒದಗಿಸುತ್ತಿದ್ದರು. ಕಾರ್ಮಿಕ-ರೈತ ಸಖ್ಯತೆಯ ಆಧಾರದಲ್ಲಿ ಕ್ರಾಂತಿ ಯಶಸ್ವಿಯಾಯಿತು. ೧೯೨೧ರಷ್ಟರಲ್ಲಿ ಸೋವಿಯತ್ ರಷ್ಯಾದಲ್ಲಿ ೨೪೪ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲಾಗಿತ್ತು. ೧೯೧೫ರಲ್ಲಿ ಕೇವಲ ೯೧ ಅಂತಹ ಸಂಸ್ಥೆಗಳಿದ್ದವು. ೧೩೦೦೦ ಶಾಲೆಗಳನ್ನು ತೆರೆಯಲಾಯಿತು. ಜನರ ಮಾತೃಭಾಷೆಗಳಲ್ಲಿ ಉಚಿತ ಶಿಕ್ಷಣ ನೀಡಲಾಯಿತು. ಹೊಸ ಸಮಾಜದ ಹೊಸ ಜೀವನದ ಹೊಣೆಗಾರಿಕೆಯನ್ನು ನಿರ್ವಹಿಸಲು ಸಾರ್ವತ್ರಿಕ ಶಿಕ್ಷಣದ ಅಗತ್ಯತೆಯನ್ನು ಅರಿತುಕೊಳ್ಳಲಾಯಿತು.

೧೯೨೨ರಲ್ಲಿ ಮಾಸ್ಕೋದಲ್ಲಿ ಆಂತರಿಕ ಯುದ್ಧದ ಕೊನೆಯ ಕುರುಹು ಕೂಡ ಅಳಿಯಿತು. ಕ್ರಾಂತಿಯು ತನ್ನನ್ನು ತಾನು ರಕ್ಷಿಸಿಕೊಂಡಿತು. ಮಾಸ್ಕೋದಲ್ಲಿ ಸೋವಿಯತ್ ಗಳ ಪ್ರತಿನಿಧಿಗಳು ರಷ್ಯಾವನ್ನು "ಯುನೈಟೆಡ್ ಸೋವಿಯತ್ ಸೋಶಲಿಸ್ಟ್ ರಿಪಬ್ಲಿಕ್ಸ್" (ಯು.ಎಸ್.ಎಸ್.ಆರ್.) ಎಂಬ ಘೋಷಣೆಗೆ ಸಹಿ ಹಾಕಿದರು. ಇದು ರಷ್ಯಾದ ಅಕ್ಟೋಬರ್ ಕ್ರಾಂತಿಯ ಫಲಶೃತಿ. ಕ್ರಾಂತಿ ಒಂದೆರಡು ತಿಂಗಳುಗಳಿಗಿಂತ ಹೆಚ್ಚು ಕಾಲ ಉಳಿಯಲಾರದು ಎಂದು ರಷ್ಯಾ ಕುರಿತಾದ ತಜ್ಞರು, ಪ್ರತಿಕಾಕರ್ತರು, ಪ್ರಚಾರಕರು, ಚರಿತ್ರಕಾರರು, ಸಮಾಜವಾದಿಗಳು ದೇಶವಿದೇಶಗಳಲ್ಲಿ ಅಭಿಪ್ರಾಯಪಟ್ಟಿದ್ದರು. ಆದರೆ, ಕ್ರಾಂತಿಗೆ ವಿಶ್ವದಾದ್ಯಂತ ಬೆಂಬಲ ದೊರಕಿತು. ಕ್ರಾಂತಿ ಚಿರಾಯುವಾಯಿತು. ೧೯೨೨ರಲ್ಲಿ ಜಿನೇವಾದಲ್ಲಿ ನಡೆದ ೩೪ ದೇಶಗಳ ಸಮ್ಮೇಳನದಲ್ಲಿ ರಷ್ಯಾ ಪಾಲ್ಗೊಂಡಿತು. ಜಾಗತಿಕ ಶಾಂತಿ ಹಾಗೂ ನಿಶ್ಯಸ್ತ್ರೀಕರಣಕ್ಕಾಗಿ ಪ್ರಸ್ತಾಪನೆ ಸಲ್ಲಿಸುವ ಮೂಲಕ ತನ್ನ ಮೊದಲ ಹೆಜ್ಜೆ ಇಟ್ಟಿತು.

ಮುಂದೆ ಯುದ್ಧಕಾಲದ ಆರ್ಥಿಕ ನೀತಿಯ ಬದಲು, ಹೊಸ ಆರ್ಥಿಕ ನೀತಿಯನ್ನು ಲೆನಿನ್ ಜಾರಿಗೊಳಿಸಿದರು. ಪಂಚವಾರ್ಷಿಕ ಯೋಜನೆಗಳ ಮೂಲಕ ಪ್ರಾದೇಶಿಕ ಸಮತೋಲನ ಕಾಯ್ದುಕೊಂಡು ಶೀಘ್ರಗತಿಯಲ್ಲಿ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸ ಲಾಯಿತು. ಮಹಾನ್ ಕ್ರಾಂತಿಯನ್ನು ಯಶಸ್ವಿಗೊಳಿಸಿದವರಿಗೆ, ಮಹಾನ್ ಆರ್ಥಿಕ ಮತ್ತು ಸಾಂಸ್ಕೃತಿಕ ಯೋಜನೆಗಳನ್ನು ರೂಪಿಸಿ ಸಾಕಾರಗೊಳಿಸಲು ಸಾಧ್ಯವಾಯಿತು. ಶ್ರಮಿಕ ವರ್ಗದ ಸಮಾಜವಾದಿ ರಷ್ಯಾ ಜಗತ್ತಿನ ಅಗ್ರಗಣ್ಯ ರಾಷ್ಟ್ರವಾಗಿ ಎದ್ದು ಬಂದಿತು. ೧೯೨೦ರ ಅಕ್ಟೋಬರ್ ೬ ರಂದು ಖ್ಯಾತ ವೈಜ್ಞಾನಿಕ ಕಾದಂಬರಿಗಾರ ಎಚ್.ಜಿ.ವೆಲ್ಸ ಮಾಸ್ಕೋದಲ್ಲಿ ಲೆನಿನ್‌ರನ್ನು ಭೇಟಿ ಆದರು. ಆಗ

ಲೆನಿನ್ ವಿದ್ಯುತೀಕರಣ ಕುರಿತು ಯೋಜನೆ ರೂಪಿಸುತ್ತಿರುವುದನ್ನು ತಿಳಿದು ಎಚ್.ಜಿ.ವೆಲ್ಸರು ಲೆನಿನ್‌ರನ್ನು ತನಗಿಂತಲೂ ಹೆಚ್ಚು ರೋಮಾಂಚಕಾರಿ ವೈಜ್ಞಾನಿಕ ಕಾದಂಬರಿಗಾರರೆಂದು ಉದ್ಗರಿಸಿದರು. ಇನ್ನು ಕೆಲವೇ ವರ್ಷಗಳಲ್ಲಿ ರಷ್ಯಾಕ್ಕೆ ಬಂದು ತಮ್ಮ ಯೋಜನೆಗಳು ಸಾಕಾರಗೊಳ್ಳುವುದನ್ನು ನೋಡಲು ಎಚ್.ಜಿ.ವೆಲ್ಸರಿಗೆ ಲೆನಿನ್‌ರು ತಿಳಿಸಿದರು.

**ಕ್ರಾಂತಿಯ ಮುನ್ನಡೆ**

ಮುಂದೆ ಸಾಮ್ರಾಜ್ಯಶಾಹಿಗಳ ಆರ್ಥಿಕ ದಿಗ್ಬಂಧನಕ್ಕೊಳಗಾಗಿದ್ದರೂ ಸೋವಿಯತ್ ಒಕ್ಕೂಟ ಆರ್ಥಿಕ ವೈಜ್ಞಾನಿಕ, ತಾಂತ್ರಿಕ ಹಾಗೂ ಸಾಂಸ್ಕೃತಿಕ ರಂಗಗಳಲ್ಲಿ ಗಳಿಸಿದ ಮಹತ್ವದ ಸಾಧನೆಗಳೂ ಅಕ್ಟೋಬರ್ ಕ್ರಾಂತಿಯ ಮುನ್ನಡೆಗಳೇ ಆಗಿವೆ. ಎರಡನೆಯ ಜಾಗತಿಕ ಯುದ್ಧದಲ್ಲಿ (೧೯೩೯-೪೫) ಸೋವಿಯತ್ ಒಕ್ಕೂಟ ಜಾಗತಿಕ ಫ್ಯಾಸಿಸಂ ಮತ್ತು ನ್ಯಾಜಿಸಂಗಳ ಮೇಲೆ ಸಾಧಿಸಿದ ವಿಜಯ, ಯುದ್ಧಾನಂತರ ಸಮಾಜವಾದದತ್ತ ಸಾಗಲು ಪೂರ್ವ ಯೂರೋಪಿನ ದೇಶಗಳು ಮತ್ತು ಚೀನಾ, ಕೊರಿಯಾ, ವಿಯಟ್ನಾಂ, ಕ್ಯೂಬಾ ಮೊದಲಾದ ದೇಶಗಳಲ್ಲಿ ನಡೆದ ಯಶಸ್ವಿ ಜನತಾ ಪ್ರಜಾಪ್ರಭುತ್ವ ಕ್ರಾಂತಿಗಳು, ಭಾರತವೂ ಸೇರಿದಂತೆ ೧೫೦ಕ್ಕೂ ಹೆಚ್ಚು ವಸಾಹತು ರಾಷ್ಟ್ರಗಳೂ ಸಾಮ್ರಾಜ್ಯಶಾಹಿಗಳಿಂದ ವಿಮೋಚನೆಗೊಂಡು ಸ್ವಾತಂತ್ರ್ಯ ಗಳಿಸಿರುವುದು, ಸಾಮ್ರಾಜ್ಯಶಾಹಿಗಳು ತಮ್ಮ ಅಣ್ವಸ್ತ್ರಗಳನ್ನು ಪ್ರಯೋಗಿಸದೇ ಇರುವಂತೆ ಜಾಗತಿಕ ಶಾಂತಿ ಹಾಗೂ ನಿಶ್ಯಸ್ತ್ರೀಕರಣಕ್ಕಾಗಿ ನಡೆದ ಹೋರಾಟಗಳು ಇತ್ಯಾದಿ ಅಕ್ಟೋಬರ್ ಕ್ರಾಂತಿಯ ನಿರಂತರ ಮುನ್ನಡೆಗಳೇ ಆಗಿವೆ.

೧೯೮೦ರ ದಶಕದ ಕೊನೆಯಿಂದ ಜಾಗತಿಕ ಸಮಾಜವಾದಕ್ಕೆ ತೀವ್ರ ಹಿನ್ನಡೆಯಾಗಿರುವುದು ನಿಜ. ರಷ್ಯಾದಲ್ಲಿ ಸಮಾಜವಾದಿ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯೂರೋಪ್ ದೇಶಗಳಲ್ಲಿ ಸಮಾಜವಾದಿ ಪ್ರಭುತ್ವಗಳು ಅಲ್ಲಿನ ಅನೇಕ ಆಂತರಿಕ ಲೋಪದೋಷಗಳಿಂದ ಮತ್ತು ಸಾಮ್ರಾಜ್ಯಶಾಹಿಗಳ ಬಾಹ್ಯ ಒತ್ತಡಗಳಿಂದ ಅಳಿದುಹೋಗಿ, ಪುನಃ ಬಂಡವಾಳಶಾಹಿ ಪ್ರಭುತ್ವಗಳು ಅಧಿಕಾರಕ್ಕೆ ಬಂದಿರುವುದು ವಿಷಾದನೀಯವೇ ಸರಿ. ವಿಜ್ಞಾನ ತಂತ್ರಜ್ಞಾನಗಳ ಅದ್ಭುತ ಮುನ್ನಡೆಗಳಿಂದ ಉಂಟಾದ ಜೈವಿಕ ಹಾಗೂ ಮಾಹಿತಿ ತಂತ್ರಜ್ಞಾನಗಳ ಹೊಸ ಕ್ರಾಂತಿಕಾರಿ ಆವಿಷ್ಕಾರಗಳಿಂದ, ಶೇ.೧೫ರಷ್ಟೇ ಜನಸಂಖ್ಯೆ ಇರುವ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ರಾಷ್ಟ್ರಗಳು ತಮ್ಮ ಬಹುರಾಷ್ಟ್ರೀಯ ಸಂಸ್ಥೆಗಳ ಮೂಲಕ ಸ್ವಾರ್ಥ ಸಾಧನೆಗಾಗಿ ಜಗತ್ತಿನ ಶೇ.೮೫ರಷ್ಟು ವ್ಯಾಪಾರೋದ್ಯಮಗಳ ಮತ್ತು ಸಂಪನ್ಮೂಲಗಳ ಮೇಲೆ ಸ್ವಾಮ್ಯ ರೂಪಿಸಿವೆ. ಪರಿಣಾಮವಾಗಿ ಜಗತ್ತಿನ ಶೇ.೮೫ ರಷ್ಟು ಜನಸಂಖ್ಯೆ ಇರುವ ಭಾರತವೂ ಸೇರಿದಂತೆ ನೂರಾರು ಅಭಿವೃದ್ಧಿಶೀಲ ದೇಶಗಳು ಬಡತನ, ದಾರಿದ್ರ್ಯ, ನಿರುದ್ಯೋಗ, ಅನಾರೋಗ್ಯ, ಅನಕ್ಷರತೆಗಳಿಂದ ನರಳುವಂತಾಗಿದೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣ ಆಧಾರಿತ ಆರ್ಥಿಕ ನೀತಿಗಳಿಂದ ಈ ದೇಶಗಳನ್ನು ನವ ವಸಾಹತುಗಳನ್ನಾಗಿ ಪರಿವರ್ತಿಸಲಾಗುತ್ತಿದೆ. ಆದುದರಿಂದ ಸಮಾಜವಾದ ಮತ್ತು ಸಾಮ್ರಾಜ್ಯಶಾಹಿಯ ನಡುವೆ, ಸಾಮ್ರಾಜ್ಯಶಾಹಿಗಳ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ನಡುವೆ, ಬಂಡವಾಳಶಾಹಿ ಮತ್ತು ಕಾರ್ಮಿಕ ವರ್ಗಗಳ ನಡುವೆ, ಸಾಮ್ರಾಜ್ಯಶಾಹಿಗಳ ನಡುವೆ ಈಗಾಗಲೇ ಇರುವ ವೈರುಧ್ಯಗಳು ತೀವ್ರಗೊಂಡಿವೆ. ಮಾನವ ಸಮಾಜದ ವಿಕಾಸದಲ್ಲಿ ಬಂಡವಾಳಶಾಹಿಯೇ ಕೊನೆಯದಾಗಲಾರದು. ನೂರೈವತ್ತು ವರ್ಷಗಳಿಗೂ ಹೆಚ್ಚು ಕಾಲದ ಮಾರ್ಕ್ಸ್‌ವಾದ -ಎಲ್ಲಾ ವಿಜ್ಞಾನಗಳ ವಿಜ್ಞಾನ ಇನ್ನಷ್ಟು ಶ್ರೀಮಂತವಾಗಿ ಬೆಳೆದು ಶೋಷಿತ ಜನರಿಗೆ ಮಾರ್ಗದರ್ಶನವಾಗುವ ಸಾಧ್ಯತೆಗಳು ಹೆಚ್ಚು.


<u>ಪರಾಮರ್ಶನ ಗ್ರಂಥಗಳು</u>

೧. ಜಾನ್ ರೀಡ್, ೧೯೮೭. **ಜಗತ್ತನ್ನು ತಲ್ಲಣಗೊಳಿಸಿದ ೧೦ ದಿನಗಳು: ೧೯೧೭.** ಕನ್ನಡಕ್ಕೆ: ಹರಿಶಂಕರ ಎಸ್.ಎನ್., ಬೆಂಗಳೂರು: ನವಕರ್ನಾಟಕ ಪ್ರಕಾಶನ

೨. ಸೊಬೊಲೆವ್ ಪಿ.ಎನ್. ಮತ್ತು ಇತರರು, ೧೯೬೪. **ಅಕ್ಟೋಬರ್ ಕ್ರಾಂತಿಯ ಇತಿಹಾಸ,** ಮಾಧವ ಮತ್ತು ಇತರರು(ಅನು), ಬೆಂಗಳೂರು: ನವಕರ್ನಾಟಕ ಪ್ರಕಾಶನ

೩. ಶ್ರೀಕಂಠಯ್ಯ ಎಲ್., ೧೯೫೭. **ಕಮ್ಯೂನಿಸಂ,** ಮೈಸೂರು: ಕನ್ನಡ ಗ್ರಂಥ ಮಾಲೆ, ಮೈಸೂರು ವಿಶ್ವವಿದ್ಯಾನಿಲಯ

೪. ಐಜಾಝ್, ಅಹಮ್ಮದ್ ಇರ್ಫಾನ್ ಹಬೀಬ್, ಪ್ರಭಾತ್ ಪಟ್ನಾಯಕ್, **ಎ ವರ್ಲ್ಡ್ ಟು ವಿನ್,** ೧೯೯೯. ಕಮ್ಯುನಿಸ್ಟ್ ಘೋಷಣೆಯ ೧೫೦ನೆಯ ವರ್ಷಾಚರಣೆಯ ಪ್ರಕಟಣೆ, ಪ್ರಕಾಶ ಕಾರಟ್(ಸಂ), ನವದೆಹಲಿ: ಲೆಫ್ಟ್ ವರ್ಡ್

# ೨೧. ಜಾಗತಿಕ ಯುದ್ಧಗಳ ನಡುವಿನ ಯುರೋಪ್

ಮಾನವಕೋಟಿಯ ಇತಿಹಾಸದಲ್ಲಿ ಎರಡು ಮಹಾಯುದ್ಧಗಳ ನಡುವಿನ (೧೯೧೯-೧೯೩೯) ಐತಿಹಾಸಿಕ ಸಂಗತಿಗಳು ಯುರೋಪಿನ ವಿಭಜನೆ ಮತ್ತು ಯುದ್ಧಗಳಿಗೆ ಕಾರಣವಾಗಿ ಅರಾಜಕತೆ, ಭೀತಿ ಮತ್ತು ಅಶಾಂತಿಗಳು ಎಲ್ಲೆಡೆ ಕಾಣಿಸಿಕೊಂಡವು. ಯುರೋಪಿನ ವಿಭಜನೆಯ ಮತ್ತು ಇಪ್ಪತ್ತನೆಯ ಶತಮಾನದಲ್ಲಿ ರಾಜಕೀಯ ಶಕ್ತಿಗಳಾಗಿ ರಾರಾಜಿಸಿದ ಪ್ರಜಾಪ್ರಭುತ್ವ, ಸಮತಾವಾದ, ಫ್ಯಾಸಿಸಂ, ನಾಜಿಸಂ ಮತ್ತು ಜಪಾನಿನಲ್ಲಿಯ ಉಗ್ರರಾಷ್ಟ್ರೀಯತೆ ಬೆಳವಣಿಗೆಯ ಹಿನ್ನೆಲೆಯಲ್ಲಿ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಕಾಣುತ್ತೇವೆ. ತಮ್ಮದೇ ಆದ ಸರ್ಕಾರವನ್ನು ಸ್ಥಾಪಿಸಿಕೊಂಡು ದೇಶಾಭಿಮಾನ ಮತ್ತು ಅದರ ಸಮಗ್ರತೆ ಹಾಗೂ ಸಂಸ್ಕೃತಿಯ ಪ್ರತೀಕಗಳಾದ ನೆಲ, ಭಾಷೆ, ಜನಾಂಗ, ಧರ್ಮ, ಕಲೆ, ಸಾಹಿತ್ಯ, ಸಂಗೀತ ಇತ್ಯಾದಿಗಳನ್ನು ರಕ್ಷಿಸಿಕೊಳ್ಳುವಲ್ಲಿ ರಾಷ್ಟ್ರೀಯತೆ ನಿರ್ಣಾಯಕ ಪಾತ್ರ ವಹಿಸಿದೆ. ೧೭೭೬ರ ಅಮೆರಿಕ ಸ್ವಾತಂತ್ರ್ಯ ಯುದ್ಧ ಮತ್ತು ೧೭೮೯ರ ಫ್ರಾನ್ಸ್ ಕ್ರಾಂತಿಯಿಂದ ಯುರೋಪಿನಲ್ಲಿ ರಾಷ್ಟ್ರೀಯತೆಯ ಭಾವನೆ ರೂಪುಗೊಂಡಿತು. ಇಂಗ್ಲೆಂಡಿನಲ್ಲಿ ರಾಷ್ಟ್ರೀಯತೆಯ ಉದಯದಲ್ಲಿ ಚರ್ಚಿನ ಚಟುವಟಿಕೆಗಳು ಕಾರಣವಾದರೆ ಫ್ರಾನ್ಸಿನಲ್ಲಿ ರೂಸೋ ಪ್ರತಿಪಾದಿಸಿದ ಮಾನವ ಹಕ್ಕುಗಳು ಹಾಗೂ ಸ್ವಾತಂತ್ರ್ಯದ ವಿಚಾರಗಳು (ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವ) ರಾಷ್ಟ್ರೀಯತೆ ರೂಪುಗೊಳ್ಳಲು ಕಾರಣವಾದವು. ರಾಷ್ಟ್ರೀಯತೆಯ ಬೆಳವಣಿಗೆಯಿಂದ ಕಾಲಕ್ರಮೇಣ ಅರಸೊತ್ತಿಗೆ, ಊಳಿಗಮಾನ್ಯ ಪದ್ಧತಿಗಳು ಜನರಿಂದ ತಿರಸ್ಕರಿಸಲ್ಪಟ್ಟು ಜಾತ್ಯಾತೀತ ಹಾಗು ಪ್ರಜಾಪ್ರಭುತ್ವ ತತ್ವಗಳು ಪುರಸ್ಕರಿಸಲ್ಪಟ್ಟವು. ರಾಷ್ಟ್ರೀಯತೆ ಮತ್ತು ದೇಶಭಕ್ತಿ ಇವುಗಳ ಅರ್ಥ ಅವಿನಾಭಾವ ಸಂಬಂಧವುಳ್ಳದ್ದಾಗಿದೆ.

**ರಾಷ್ಟ್ರೀಯತೆ**

ಜನತೆಗಾಗಿ ದೇಶ ಹಾಗೂ ದೇಶಕ್ಕಾಗಿ ಜನರ ಸ್ವಯಂ ಆಡಳಿತ ಎಂಬ ಹೊಸ ಪ್ರಜ್ಞೆ ರಾಷ್ಟ್ರೀಯತೆಯಿಂದ ಮೂಡಿತು. ಇದರಿಂದ ಫ್ರಾನ್ಸಿನ ಬೋರ್ಬನ್ ವಂಶದ ರಾಜಪ್ರಭುತ್ವ ನಶಿಸಿ ಸಮಾನತೆ, ಸ್ವಾತಂತ್ರ್ಯ ಹಾಗೂ ಭ್ರಾತೃತ್ವ ವಿಚಾರಗಳ ತಳಹದಿಯ ಮೇಲೆ ಫ್ರಾನ್ಸಿ ನಲ್ಲಿ ಪ್ರಜಾರಾಜ್ಯ ಅಸ್ತಿತ್ವಕ್ಕೆ ಬಂದಿತು. ರಾಷ್ಟ್ರೀಯತೆಯ ಭಾವನೆ ಪ್ರಬಲವಾದದ್ದರಿಂದ, ಸ್ಪೆಯಿನ್ ಮತ್ತು ಪೋರ್ಚುಗೀಸರು ಭಾವನಾತ್ಮಕವಾಗಿ ಹೋರಾಡಿ ಇಡೀ ಯುರೋಪನ್ನಾಳಿದ ನೆಪೋಲಿಯನ್ನನ ಸೈನ್ಯವನ್ನು ಸ್ಪೆಯಿನಿನ ದ್ವೀಪದಿಂದ ಹೊಡೆದೋಡಿಸಿ ತಮ್ಮ ತಾಯ್ನಡಿನ ಸ್ವಾತಂತ್ರ್ಯವನ್ನು ರಕ್ಷಿಸಿದರು. ೧೮೩೦ರಲ್ಲಿ ಫ್ರಾನ್ಸಿನ ದೊರೆ ಹತ್ತನೆಯ ಚಾರ್ಲ್ಸನು ಪತ್ರಿಕಾ ಸ್ವಾತಂತ್ರ್ಯವನ್ನು ಕಳೆದುಕೊಂಡು ಜನರ ಮತದಾನದ ಹಕ್ಕನ್ನು ಮೊಟಕುಗೊಳಿಸಲೆತ್ನಿಸಿದಾಗ ಅಲ್ಲಿನ ಜನರು ಈತನ ವಿರುದ್ಧ ಕ್ರಾಂತಿ ಮಾಡಲು ಅವರಲ್ಲಿದ್ದ ರಾಷ್ಟ್ರೀಯ ಪ್ರಜ್ಞೆ ಕಾರಣವಾಯಿತು. ತಮ್ಮ ಹಕ್ಕುಗಳನ್ನು ಮರಳಿ ಪಡೆಯಲು ಜನತೆ ಚಾರ್ಲ್ಸನನ್ನು ಉಚ್ಛಾಟಿಸಿ ಜನಾಭಿಮಾನಿಯಾಗಿದ್ದ ಲೂಯಿ ಫಿಲಪ್ ನನ್ನು ಫ್ರೆಂಚರು ದೊರೆಯನ್ನಾಗಿ ಮಾಡಿಕೊಂಡರು. ೧೮೧೫ರ ವಿಯನ್ನ ಸಮ್ಮೇಳನವು ಬೆಲ್ಜಿಯನ್ನರ ಇಚ್ಛೆಗೆ ವಿರುದ್ಧವಾಗಿ ಬೆಲ್ಜಿಯಮ್ ಅನ್ನು ಹಾಲೆಂಡಿನೊಡನೆ ವಿಲೀನಗೊಳಿಸಿತ್ತು. ಬೆಲ್ಜಿಯನ್ನರು ಭಾಷೆ, ಧರ್ಮ ಹಾಗೂ ಆರ್ಥಿಕ ಜೀವನದ ದೃಷ್ಟಿಯಿಂದ ಹಾಲೆಂಡಿನ ಡಚ್ಚರಿಗಿಂತ ಭಿನ್ನರಾಗಿದ್ದರು. ಬೆಲ್ಜಿಯಂ ಕ್ಯಾಥೊಲಿಕ್ ನಾಡಾಗಿತ್ತು. ಹಾಲೆಂಡ್ ಪ್ರೊಟೆಸ್ಟಂಟರ ನಾಡಾಗಿತ್ತು. ಅಲ್ಪ ಸಂಖ್ಯಾತರಾಗಿದ್ದ ಡಚ್ಚರು ಬೆಲ್ಜಿಯನ್ನರಿಗಿಂತಲೂ ಅಧಿಕ ಪ್ರಮಾಣದ ರಾಜಕೀಯ ಅಧಿಕಾರ

ಚಲಾಯಿಸುವುದನ್ನು ಕಂಡ ಬೆಲ್ಜಿಯನ್ನರಿಗೆ ಸ್ವಾಭಾವಿಕವಾಗಿಯೇ ತೀವ್ರ ಅಸಮಾಧಾನವಾಗಿತ್ತು. ಡಚ್ಚರು ಡಚ್ ಭಾಷೆಯನ್ನು ಆಡಳಿತಭಾಷೆಯಾಗಿ ಮಾಡಲು ಯತ್ನಿಸಿದ್ದಾರೆಂದು ಬೆಲ್ಜಿಯನ್ನರು ಕೋಪೋದ್ರಿಕ್ತರಾದರು. ಅವರು ಪ್ರತ್ಯೇಕ ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸುವಂತೆ ಹಾಲೆಂಡಿನ ದೊರೆಯನ್ನು ಒತ್ತಾಯಿಸಿದರು. ದೊರೆ ವಿಲಿಯಂನು ಅವರ ಬೇಡಿಕೆಯನ್ನು ತಿರಸ್ಕರಿಸಿದನು. ೧೮೩೦ರ ಫ್ರಾನ್ಸಿನ ಜುಲೈ ಕ್ರಾಂತಿಯಿಂದ ಸ್ಫೂರ್ತಿ ಪಡೆದು ಹಾಲೆಂಡಿನ ಪ್ರಭುತ್ವದ ವಿರುದ್ಧ ದಂಗೆ ಎದ್ದರು. ದೊರೆಯ ಸೈನ್ಯವನ್ನು ಸೋಲಿಸಿ ೧೮೩೦ರ ಅಕ್ಟೋಬರ್‌ನಲ್ಲಿ ತಮ್ಮ ಸ್ವಾತಂತ್ರ್ಯವನ್ನು ಘೋಷಿಸಿದರು. ಬೆಲ್ಜಿಯಂನ ಸ್ವಾತಂತ್ರ್ಯ ರಾಷ್ಟ್ರೀಯತೆಯ ತತ್ವಕ್ಕೆ ಲಭಿಸಿದ ವಿಜಯವಾಗಿತ್ತು.

ರಾಷ್ಟ್ರೀಯತೆಯ ಪ್ರಜ್ಞೆಯಿಂದಾಗಿ ರಷ್ಯಾ ಪುನರುತ್ಥಾನ ಹೊಂದಿತ್ತು. ತದನಂತರ ೧೮೪೮ರಲ್ಲಿ ಫ್ರಾನ್ಸಿನ ಜನತೆಯು ಬೋರ್ಬನ್ ವಂಶದ ದೊರೆ ಲೂಯಿ ಫಿಲಿಫನ ವಿರುದ್ಧ ದಂಗೆ ಎದ್ದು ಅವನನ್ನು ಹಾಗೂ ಅವನ ಪ್ರಧಾನಮಂತ್ರಿ ಗಿಜೋಟ್‌ನನ್ನು ಪದಚ್ಯುತಗೊಳಿಸಿ ಫ್ರಾನ್ಸಿನಲ್ಲಿ ಎರಡನೆಯ ಗಣರಾಜ್ಯವನ್ನು ಸ್ಥಾಪಿಸಿದರು. ಈ ಕ್ರಾಂತಿಯ ಪರಿಣಾಮವಾಗಿ ವಿಯನ್ನಾದಲ್ಲಿ ೧೯೪೮ರ ಮಾರ್ಚ್ ೧೩ರಂದು ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ದಂಗೆಯೆದ್ದು "ಮೆಟರ್ನಿಕ್ ತೊಲಗಲಿ" ಎಂಬ ಘೋಷಣೆಯೊಂದಿಗೆ ಕ್ರಾಂತಿ ಮಾಡಿದರು. ಇದರಿಂದಾಗಿ ೩೯ ವರ್ಷಗಳ ಕಾಲ ಆಸ್ಟ್ರಿಯಾ ಸಾಮ್ರಾಜ್ಯದ ಚಾನ್ಸಲರಾಗಿದ್ದ ಮೆಟರ್ನಿಕ್‌ನು ರಾಜಿನಾಮೆ ನೀಡಿ ಇಂಗ್ಲೆಂಡಿಗೆ ಪಲಾಯನ ಮಾಡಿದನು. ಅಲ್ಲದೆ ಆಸ್ಟ್ರಿಯಾದ ಚಕ್ರವರ್ತಿ ಒಂದನೆಯ ಫರ್ಡಿನಾಂಡನು ಪತ್ರಿಕಾ ಸ್ವಾತಂತ್ರ್ಯ, ಪೌರಸ್ವಾತಂತ್ರ್ಯ ಮತ್ತು ಪಾರ್ಲಿಮೆಂಟ್ ತತ್ವದಿಂದ ಕೂಡಿದ ಹೊಸ ಉದಾರವಾದ ಸಂವಿಧಾನವನ್ನು ಜನರಿಗೆ ದಯಪಾಲಿಸಿದನು. ಈ ಘಟನೆ ಆಸ್ಟ್ರಿಯನ್ನರ ರಾಷ್ಟ್ರೀಯತೆಯ ಪ್ರಜ್ಞೆಗೆ ಕುರುಹಾಗಿದೆ. ಜನರು ರಾಷ್ಟ್ರೀಯತೆಯಿಂದ ಪ್ರಭಾವಿತರಾಗಿ ತಮ್ಮ ರಾಷ್ಟ್ರದ ಏಕತೆ ಮತ್ತು ಸಮಗ್ರತೆಗಾಗಿ ಆದಮ್ಯ ಹೋರಾಟ ನಡೆಸಿದರು. ಬಿಸ್ಮಾರ್ಕನ ನಾಯಕತ್ವದಲ್ಲಿ ಜರ್ಮನಿ ಮತ್ತು ಜೋಸೆಫ್ ಮೆಜನಿ, ಗಾರಿಬಾಲ್ದಿ, ಕೆವೂರ್ ಇವರ ನಾಯಕತ್ವದಲ್ಲಿ ಇಟಲಿ ದೇಶಗಳ ಏಕೀಕರಣದ ಆಂದೋಲನಗಳು ಇದಕ್ಕೆ ನಿದರ್ಶಗಳಿವೆ. ರೋಂ ಸಾಮ್ರಾಜ್ಯದ ಮೌಲ್ಯಗಳನ್ನು ರೂಢಿಸಿಕೊಳ್ಳಲು ಹಾಗೂ ಅವುಗಳನ್ನು ಯುರೋಪಿನಲ್ಲಿ ಪ್ರಚಾರ ಮಾಡಲು ಇಟಲಿಯನ್ನರ ಏಕತೆ ಅವಶ್ಯಕವೆಂದು ತಿಳಿಸಿದ ಜೋಸೆಫ್ ಮೆಜನಿ ತನ್ನ ಗುರಿ ಸಾಧಿಸಲು ಯಂಗ್ ಇಟಲಿಯನ್ನು ಬಳಸಿದನು. ಗಾರಿಬಾಲ್ದಿಯ ಗುಪ್ತಸಂಘಗಳು ಇಟಲಿಯು ಇಟಲಿಯನ್ನರಿಗಾಗಿ ಎಂದು ವಾದಿಸಿ ಅವರಲ್ಲಿ ಏಕತೆಯ ಸ್ಫೂರ್ತಿ ಉಂಟುಮಾಡಿದನು. ಇಂಗ್ಲಿಷ್ ಉದಾರವಾದ ಮತ್ತು ಸಂವಿಧಾನತೆಯಲ್ಲಿ ವಿಶ್ವಾಸ ಹೊಂದಿದ ಇಟಲಿಯ ಕೆವೂರ್(೧೮೧೦-೬೧) ಭೌಗೋಳಿಕ ನೆಲಗಟ್ಟಿನಲ್ಲಿ ಆರ್ಥಿಕ ಸಂಪನ್ಮೂಲಗಳನ್ನು ಮುಕ್ತವ್ಯಾಪಾರಕ್ಕೆ ಒಳಪಡಿಸಿ ರಾಜಕೀಯ ಹಾಗೂ ಆರ್ಥಿಕ ಸ್ಥಿರತೆಯನ್ನು ಸಾಧಿಸಲು ಸಂಸದೀಯ ತಳಹದಿಯ ಅಖಂಡರಾಜ್ಯವು ಇಟಲಿಯನ್ನರಿಗೆ ಅವಶ್ಯವೆಂದು ಪ್ರತಿಪಾದಿಸಿದನು. ಬಾಲ್ಕನ್ ರಾಜ್ಯಗಳ ಉದಯಕ್ಕೆ ಅಲ್ಲಿಯ ಜನರ ರಾಷ್ಟ್ರೀಯತೆಯ ಪ್ರಜ್ಞೆಯೆ ಕಾರಣ. ತಮ್ಮ ಜನಾಂಗ ಹಾಗೂ ಪ್ರದೇಶಗಳ ಸ್ವಾತಂತ್ರ್ಯಕ್ಕಾಗಿ ಬಾಲ್ಕನ್ನರು ಗುಲಾಮಗಿರಿಯನ್ನು ವಿರೋಧಿಸಿದರು. ೧೮೭೮ರ ಹೊತ್ತಿಗೆ ಯುರೋಪಿನಲ್ಲಿ ಮಿಲಿಟರಿ ಸ್ವರೂಪದ ರಾಷ್ಟ್ರೀಯತೆಯ ಬೆಳವಣಿಗೆಯಿಂದಾಗಿ ವಿಯನ್ನಾ ಕಾಂಗ್ರೆಸ್‌ನಿಂದ ಆರಂಭಗೊಂಡಿದ್ದ ಪ್ರತಿಗಾಮಿಗಳ ಯುಗ ಕೊನೆಗೊಂಡಿತು. ಸಮಾಜವಾದಿಗಳ ಉದಯ ಆರಂಭಗೊಂಡು ಯುರೋಪಿನಲ್ಲಿ ಗಣರಾಜ್ಯಗಳು ಉದಯವಾದವು. ಆಟೋಮನ್ ಸಾಮ್ರಾಜ್ಯದ ಸುಲ್ತಾನ್ ಎರಡನೆಯ ಅಬ್ದುಲನ ವಿರುದ್ಧ ೧೯೦೯ರಲ್ಲಿ ಕೆಮಲ್ ಪಾಷಾನ ನಾಯಕತ್ವದಲ್ಲಿ ನಡೆದ ಯಂಗ್‌ಟರ್ಕ್ ಚಳವಳಿಯು ಬಲ್ಗೇರಿಯನ್ನರಲ್ಲಿ, ರುಮೇನಿ ಯನ್ನರಲ್ಲಿ, ಅಲ್ಬೆನಿಯನ್ನರಲ್ಲಿ, ಅರಮಿನ್‌ರಲ್ಲಿ, ಸರ್ಬಿಯನ್ನರಲ್ಲಿ ಮತ್ತು ಗ್ರೀಕರಲ್ಲಿ ಸ್ವಾತಂತ್ರ್ಯ ದಾಹವನ್ನು ಹೆಚ್ಚಿಸಿತು. ಯುರೋಪಿನ ರಾಜಕೀಯ ಮತ್ತು ಆರ್ಥಿಕ ಸಾರ್ವಭೌಮತ್ವ ಸ್ಥಾಪಿಸಲು ಪ್ರಬಲ ರಾಷ್ಟ್ರಗಳಾದ ಇಂಗ್ಲೆಂಡ್ ಹಾಗೂ ಫ್ರಾನ್ಸ್‌ಗಳ ವಿರುದ್ಧ ಹೋರಾಡಲು ಇಟಲಿ ಮತ್ತು ಜರ್ಮನ್ ದೇಶಗಳಿಗೆ ರಾಷ್ಟ್ರೀಯತೆ ಸ್ಫೂರ್ತಿ ದಾಯಕವಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರಥಮ ಮಹಾಯುದ್ಧವು ಯುರೋಪಿನ ರಾಷ್ಟ್ರೀಯತೆಗೆ ದೊರೆತ ವಿಜಯವಾಗಿತ್ತು. ಪ್ರಜಾಪ್ರಭುತ್ವದ ಪ್ರಸಾರವು ಪ್ರಥಮ ಮಹಾಯುದ್ಧದ ಮಹತ್ವದ ಪರಿಣಾಮಗಳಲ್ಲಿ ಒಂದಾಗಿತ್ತು. ಜರ್ಮನಿ, ಆಸ್ಟ್ರಿಯಾ, ರಷ್ಯಾ ಹಾಗು ಆಟೋಮನ್ ಸಾಮ್ರಾಜ್ಯಗಳು ಪತನ ಹೊಂದಿ ಅವುಗಳ ಅವಶೇಷಗಳ ಮೇಲೆ ಉದಯಿಸಿದ ನೂತನ ಗಣರಾಜ್ಯಗಳು ಪ್ರಜಾಸತ್ತಾತ್ಮಕ ಸಂವಿಧಾನಗಳನ್ನು ಅಂಗೀಕರಿಸಿದವು. ಸಾಮ್ರಾಜ್ಯಶಾಹಿ ರಷ್ಯಾ ಪತನಗೊಂಡು ಅಲ್ಲಿ ಸ್ವತಂತ್ರ ಗಣರಾಜ್ಯಗಳಾದ ಫಿನ್ಲೆಂಡ್, ಇಸ್ಟೋನಿಯ, ಲಾಟ್ವಿಯ ಮತ್ತು ಲಿತ್ವಾನಿಯ ಉದಯಿಸಿದವು. ಇದರಂತೆ ಆಸ್ಟ್ರಿಯಾ, ಜರ್ಮನಿ ಮತ್ತು ರಷ್ಯಾಗಳ ಅಧೀನದಲ್ಲಿ ತುಂಡುತುಂಡಾಗಿ ಹೋಗಿದ್ದ ಪೋಲೆಂಡ್ ಸ್ವತಂತ್ರ ರಾಜ್ಯವಾಗಿ ಹೊರಹೊಮ್ಮಿತ್ತು.

ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಆಡಳಿತಾತ್ಮಕ ವಿಷಯಗಳ ಪ್ರಾಬಲ್ಯಕ್ಕಾಗಿ ಜನಾಂಗ, ಭಾಷೆ ಮತ್ತು ಧಾರ್ಮಿಕ ಭಿನ್ನತೆಗಳು ಕಾಣಿಸಿಕೊಂಡಾಗ ಯುರೋಪಿನಲ್ಲಿ ರಾಷ್ಟ್ರೀಯತೆ ಸಂಘರ್ಷದ ರೂಪತಾಳಿ ಬೆಳೆಯಿತು. ಉದಾಹರಣೆಗೆ ಬೊಹಿಮಿಯಾದಲ್ಲಿ ರೈತರು ಮತ್ತು ಭೂ ಒಡೆಯರು ಕ್ಯಾಥೊಲಿಕ್ ಧರ್ಮಕ್ಕೆ ಸೇರಿದವರಾಗಿದ್ದರು. ಅಲ್ಲಿಯ ಬಹುಸಂಖ್ಯಾತ ರೈತರು ಜೆಕ್ ಭಾಷೆಯವರಾಗಿದ್ದರು. ಆದರೆ ಭೂ ಒಡೆಯರು ಜರ್ಮನ್ ಭಾಷೆಯವರಾಗಿದ್ದರು. ಗಲಿಸಿಯಾದಲ್ಲಿ ರೈತರು ರುಥೀನಿಯನ್ನರಾಗಿದ್ದು ಅವರು ಧರ್ಮ ದಲ್ಲಿ ಏಕಾಭಿಪ್ರಾಯ ಹೊಂದಿದ್ದರು. ಆದರೆ ಅವರ ಆಡಳಿತಗಾರರು ರೋಮನ್ ಕ್ಯಾಥೊಲಿಕ್ ಧರ್ಮಕ್ಕೆ ಸೇರಿದ ಪೊಲ್ಸರಾಗಿದ್ದರು. ಸ್ಲಾವಕಿಯಾದಲ್ಲಿ ಸ್ಲಾವರು ರೈತರಾಗಿ ದ್ದರು. ಆದರೆ ಅವರ ಒಡೆಯರು ಹಂಗೇರಿಯನ್ನರಾಗಿದ್ದರು. ಬಾಲ್ಕನ್ ರಾಜ್ಯಗಳ ಸೈನ್ಯ ಮತ್ತು ಕೇಂದ್ರಾಡಳಿತದಲ್ಲಿ ಮಹಮ್ಮದೀಯರಿದ್ದರು. ಆದರೆ ಅಲ್ಲಿನ ಜನರು ಹೆಚ್ಚಾಗಿ ಕ್ರಿಶ್ಚಿಯನ್ನರಾಗಿದ್ದರು. ಟರ್ಕಿಯಲ್ಲಿ ಗ್ರೀಕರ ಆಡಳಿತ ಪ್ರಾಬಲ್ಯ ಹೆಚ್ಚಿತು. ಈ ನಿಮಿತ್ತ ಆಯಾ ಜನಾಂಗ, ಭಾಷೆ, ಧರ್ಮದ ಜನರು ತಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿ ಕೊಳ್ಳುವ ಸಲುವಾಗಿ ಪ್ರತ್ಯೇಕ ಪ್ರಾದೇಶಿಕ ಒಡೆತನ ಮತ್ತು ಅದರ ಸ್ವಾತಂತ್ರ್ಯ ಸಾಧಿಸಲು ರಾಷ್ಟ್ರೀಯತೆಯ ಸ್ಪೂರ್ತಿಯಿಂದ ಹೋರಾಡಲು ಮುಂದಾದರು. ರಾಷ್ಟ್ರಗೀತೆಗಳು ಕವಿಗಳಿಂದ ರಚಿತಗೊಂಡವು. ಉದಾ. ಟ್ರೈನ್ಸಿಲ್‌ವೇನಿಯಾದ ಪ್ರಣಯ ಗೀತೆಗಳ ಕವಿ ಆ್ಯಂಡ್ರೂ ಮುರಿಸಿನು ರುಮಾನಿಯಾ ಸ್ವಾತಂತ್ರ್ಯಕ್ಕೆ ಜನರನ್ನು ಈ ರೀತಿ ಹುರಿದುಂಬಿಸಿದನು. "ಎದ್ದೇಳಿ ರುಮಾನಿಯನ್ನರೆ, ಸಾವಿನ ಶಯನದಿಂದೇಳಿ; ಶತೃಗಳ ನೆತ್ತರ ಹೀರಿ, ಗುಲಾಮಗಿರಿಯನಳಿಸಲು ಭವ್ಯತೆಯ ಬಾಳ ಭವಿಷ್ಯ ರೂಪಿಸಲು". ಅಲ್ಲದೇ ಫ್ಯಾಸಿಸಂ, ನಾಜಿಸಂ, ಸ್ಪೆಯಿನಿನ ಅಂತರ್ ಯುದ್ಧ ಹಾಗೂ ರೋಂ-ಬರ್ಲಿನ್-ಟೊಕಿಯೊ ಆ್ಯಕ್ಸಿನ್ ಒಪ್ಪಂದಗಳನ್ನು ಉಲ್ಲೇಖಿಸಿ ಯುದ್ಧ ಬೆಂಬಲಿಸುವ ಹಾಗೂ ಈ ದೇಶಗಳು ಸ್ವಾತಂತ್ರ್ಯ ಪಡೆಯುವ ವಿಚಾರವಾಗಿ ಅನೇಕ ಯುದ್ಧ ಕವಿಗಳು ದೇಶಭಕ್ತಿ ಗೀತೆಗಳನ್ನು ರಚಿಸಿ ರಾಷ್ಟ್ರೀಯತೆಯನ್ನು ಪೋಷಿಸಿದರು. ಪ್ರಥಮ ಮಹಾಯುದ್ಧದಲ್ಲಿ ವಿಜಯಿಗಳಾದ ಮಿತ್ರರಾಷ್ಟ್ರಗಳು ಯುದ್ಧದ ಹೊಣೆ ಮತ್ತು ವೆಚ್ಚಗಳನ್ನು ಜರ್ಮನಿಯ ಮೇಲೆ ಹೇರಲು ೧೯೧೯ರಲ್ಲಿ ವರ್ಸೇಲ್ಸ್ ಒಪ್ಪಂದ ಮಾಡಿಕೊಂಡಾಗ ಯುರೋಪಿನಲ್ಲಿ ರಾಷ್ಟ್ರೀಯತೆ ಉಗ್ರರೂಪ ಅಥವಾ ಸೈನಿಕ ಸ್ವರೂಪ(ಮಿಲಿಟೆಂಟ್ ನ್ಯಾಷನಲಿಸಂ) ತಾಳಿತು. ೧೯೧೯-೧೯೩೯ರ ಅವಧಿಯಲ್ಲಿ ಜನಾಂಗ ಆಧಾರಿತ ರಾಷ್ಟ್ರೀಯ ಪ್ರಜ್ಞೆಯ ಭಾವನಾತ್ಮಕ ಅತಿರೇಕವನ್ನು ಮುಟ್ಟಿದಾಗ ಮತ್ತು ಯುರೋಪ್ ೧೯೨೩ ಹಾಗು ೧೯೨೯ರಲ್ಲಿ ಆರ್ಥಿಕ ಸಂಕಷ್ಟಕ್ಕೊಳಗಾದಾಗ(ಎಕನಾಮಿಕ್ ಡಿಪ್ರೆಷನ್) ಅಲ್ಲಿಯ ಜನರು ತಮ್ಮ ತಮ್ಮ ಜನಾಂಗಗಳ ಶ್ರೇಷ್ಠತೆ ಮತ್ತು ಸಂಸ್ಕೃತಿ ಆಧಾರದ ಮೇಲೆ ರಾಷ್ಟ್ರದ ಅಭಿವೃದ್ಧಿ ಸಾಧಿಸಲು(ಪ್ರಜಾಪ್ರಭುತ್ವಾಧಾರಿತ ಗಣರಾಜ್ಯಗಳು ವಿಫಲವಾದಾಗ) ಮುಸ್ಸೋಲಿನಿಯ ಫ್ಯಾಸಿಸಂ, ಹಿಟ್ಲರನ ನ್ಯಾಸಿಸಂ ಮತ್ತು ಲೆನಿನ್- ಸ್ಟಾಲಿನ್ನರ ಕಮ್ಯುನಿಸಂ ಸರಕಾರಗಳ ಅಡಳಿತಕ್ಕೊಳಗಾದರು. ಪ್ರಥಮ ಮಹಾಯುದ್ಧದ ನಂತರ ವಿಶ್ವದಲ್ಲಿ ಶಾಂತಿಯನ್ನು ನೆಲೆಗೊಳಿಸಲು ಅಮೆರಿಕದ ಅಧ್ಯಕ್ಷನಾದ ವುಡ್ರೊವಿಲ್ಸನ್ನನ "ಸ್ವಯಂ ನಿರ್ಧಾರದ ಹಾಗೂ ರಾಷ್ಟ್ರೀಯತೆಯ" ಸೂತ್ರಗಳನ್ನಯ ಘೋಷಿಸಿದ ೧೪ ಅಂಶಗಳು ಯುರೋಪಿನಲ್ಲಿ ರಾಷ್ಟ್ರೀಯತೆ ಬೆಳವಣಿಗೆಗೆ ಪ್ರೋ ನೀಡಿದವು. ಆದರೆ ಶಾಂತಿಗಾಗಿ ಸ್ಥಾಪಿಸಲ್ಪಟ್ಟ ರಾಷ್ಟ್ರ ಸಂಘವು ಕೇವಲ ಬೃಹತ್ ರಾಷ್ಟ್ರಗಳ ಆಶೆ ಆಕಾಂಕ್ಷೆಗನುಗುಣವಾಗಿ ವರ್ತಿಸಿದಾಗ ಜರ್ಮನಿ, ಇಟಲಿ ಹಾಗೂ ಜಪಾನ್ ದೇಶಗಳು ತಮ್ಮ ದೇಶಗಳ ಹಿತಾಸಕ್ತಿಗಳನ್ನು ಕಾಪಾಡಲು ೧೯೩೩ರಲ್ಲಿ ನಡೆದ ಜಿನೀವಾ ನಿಶ್ಯಸ್ತ್ರೀಕರಣ ಸಮ್ಮೇಳನದಿಂದ ಹೊರಬಂದು ರಾಷ್ಟ್ರ ಸಂಘದ ಸಂಬಂಧವನ್ನು ಕಡಿದುಕೊಂಡವು. ಸ್ವಾತಂತ್ರ್ಯ ಮತ್ತು ಜನಾಂಗಗಳ ರಕ್ಷಣೆಗೋಸ್ಕರ ಫ್ರಾನ್ಸ್, ಅಮೆರಿಕ, ಇಂಗ್ಲೆಂಡ್, ರಷ್ಯಾಗಳ ಮಾದರಿಯಲ್ಲಿ ಹಿಟ್ಲರ್ ಮತ್ತು ಮುಸ್ಸೊಲಿನಿ, ಮಾರಕ ಶಸ್ತ್ರಾಸ್ತ್ರಗಳ ಉತ್ಪಾದನೆಗೆ ಮಹತ್ವ ಕೊಟ್ಟರು, ಸೈನ್ಯ, ನೌಕ ಮತ್ತು ವಿಮಾನ ಬಲಗಳನ್ನು ಅಪಾರವಾಗಿ ವೃದ್ಧಿಸಿಕೊಂಡರು. ಮುಸ್ಸೊಲಿನಿ ಕಳೆದು ಹೋದ ರೋಂ ಸಾಮ್ರಾಜ್ಯವನ್ನು ಹಾಗೂ ಅವುಗಳಲ್ಲಿ ಅಡಕವಾಗಿರುವ ಯುರೋಪ್ ನಾಗರಿಕತೆಯ ಮೌಲ್ಯಗಳನ್ನು ಪುನಃ ಸ್ಥಾಪಿಸಲು ನಿರ್ಧರಿಸಿದರೆ, ಇತ್ತ ಹಿಟ್ಲರನು ಜರ್ಮನ್ ಜನಾಂಗದ ಶ್ರೇಷ್ಠತೆಯನ್ನು ವಿಶ್ವಕ್ಕೆ ತೋರಿಸಲು ಆಸ್ಟ್ರಿಯಾ ಜಕೊಸ್ಲೊವಾಕಿಯಾ ಮತ್ತು ಪೋಲೆಂಡ್‌ಗಳನ್ನೊಳಗೊಂಡ ಜರ್ಮನಿಯ ಸ್ಥಾಪನೆಗೆ ಮುಂದಾದನು. ಜರ್ಮನ್ನರ ಬಡತನ, ಅಸಮಗ್ರತೆಗೆ ಮತ್ತು ಪ್ರತಿಷ್ಠೆಗಳ ಕ್ಷೀಣತೆಗೆ ಯಹೂದಿ ಜನಾಂಗ ಕಾರಣವೆಂದು ವಾದಿಸಿ, ಹಿಟ್ಲರನು ಯಹೂದಿರಹಿತ ಜರ್ಮನ್ ನಿರ್ಮಾಣಕ್ಕೆ ಏಕತೆ ಅವಶ್ಯವೆಂದು ಸಾರಿದನು. ಲೆನಿನ್, ಮುಸ್ಸೊಲಿನಿ ಮತ್ತು ಹಿಟ್ಲರನ ರಾಜಕೀಯ ಸಿದ್ಧಾಂತಗಳು ಇಡೀ ಯುರೋಪಿನಲ್ಲಿ ಸೈನಿಕ ಸ್ವರೂಪದ ರಾಷ್ಟ್ರೀಯತೆಯ ಬೆಳವಣಿಗೆಗೆ ಕಾರಣವಾಗಿ ೧೯೩೯ರಲ್ಲಿ ಎರಡನೆಯ ಮಹಾಯುದ್ಧಕ್ಕೆ ಎಡೆಮಾಡಿಕೊಟ್ಟಿ ತೆಂಬುದನ್ನು ಇಲ್ಲಿ ಸ್ಮರಿಸಬಹುದು. ಈ ತರಹದ ಉಗ್ರ ರಾಷ್ಟ್ರೀಯತೆ ಯುರೋಪಿನ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡದೆ ಅದರ ಮತ್ತು ಅಂತರ್‌ರಾಷ್ಟ್ರೀಯ ಶಾಂತಿ ಸೌಹಾರ್ದತೆಯನ್ನು ಕಲಕಿದ್ದು ಈಗ

ಇತಿಹಾಸವಾಗಿದೆ. ಪ್ರಾದೇಶಿಕ ಮತ್ತು ಕೋಮುಭಾವನೆ ಗಳನ್ನು ಉದ್ರೇಕಿಸದ, ಯುದ್ಧ ಮತ್ತು ವ್ಯಕ್ತಿಪೂಜೆಯನ್ನು ವಿರೋಧಿಸುವ, ಭಾಷೆ, ಸಂಸ್ಕೃತಿ ಮತ್ತು ಸ್ವಾತಂತ್ರ್ಯಗಳನ್ನು ಪೋಷಿಸುವಂತಹ ರಾಷ್ಟ್ರೀಯತೆಯನ್ನು ವಿಶ್ವವು ಇಂದು ಪ್ರೋ

**ಎರಡು ಜಾಗತಿಕ ಯುದ್ಧಗಳ ನಡುವಿನ ಯುರೋಪ್(೧೯೧೯-೧೯೩೯)**

ಎರಡು ಮಹಾಯುದ್ಧಗಳ ನಡುವಣ ಇತಿಹಾಸವನ್ನು 'ವಿಫಲತೆಯ ಇತಿಹಾಸ'ವೆಂದು ಸಾಮಾನ್ಯವಾಗಿ ಕರೆಯಲಾಗಿದೆ. ಯುದ್ಧವನ್ನು ಪೂರ್ಣಗೊಳಿಸಿ ಜಗತ್ತನ್ನು ಶಾಂತಿ ಮತ್ತು ಪ್ರಜಾಸತ್ತೆಗೆ ಕೊಂಡೊಯ್ಯಲು ಅಮೆರಿಕದ ಅಧ್ಯಕ್ಷ ವುಡ್ರೊವಿಲ್ಸನ್ ಮಾಡಿದ ಘೋಷಣೆ ಕೇವಲ ಘೋಷಣೆಯಾಗಿ ಉಳಿಯಿತು. ಯುದ್ಧ ಕೊನೆಗೊಳಿಸಲು ಮಾಡಿಕೊಂಡ ಪ್ಯಾರಿಸ್ ಸಮ್ಮೇಳನದ ಒಪ್ಪಂದಗಳು ಯುರೋಪಿನಲ್ಲಿ ಶಾಂತಿ, ಸಂತೃಪ್ತಿ ಸಮಾಧಾನಗಳನ್ನು ಉಂಟು ಮಾಡುವ ಬದಲು ಅಶಾಂತಿ, ಅಸಂತೃಪ್ತಿ, ಅಸಮಾಧಾನಗಳನ್ನು ಮತ್ತು ಸೇಡಿನ ಕಿಡಿಗಳನ್ನು ಸೃಷ್ಟಿಸಿದವು. ಈ ಒಪ್ಪಂದಗಳು ಯುರೋಪಿನ ವಿಭಜನೆಗೆ ಕಾರಣವಾಗಿ ಅನೇಕ ಪ್ರಜಾಪ್ರಭುತ್ವ ಆಧಾರಿತ ಗಣರಾಜ್ಯಗಳನ್ನು ಸೃಷ್ಟಿಸಿದವು. ಆದರೆ ಇವೆಲ್ಲವುಗಳ ಸೃಷ್ಟಿಯ ಹಿಂದೆ ವಿಜೇತ ರಾಷ್ಟ್ರಗಳು ಸೋತ ರಾಷ್ಟ್ರಗಳಾದ ಜರ್ಮನಿ, ಆಸ್ಟ್ರೀಯಾ ಮತ್ತು ಟರ್ಕಿದೇಶಗಳ ಸ್ವಾತಂತ್ರ್ಯ, ಆತ್ಮ ಗೌರವ ಮತ್ತು ಸಾರ್ವಭೌಮತ್ವವನ್ನು ಸಮಾಧಿ ಮಾಡಿದವು. ತತ್ಪರಿಣಾಮವಾಗಿ ರಾಷ್ಟ್ರ ರಾಷ್ಟ್ರಗಳ ನಡುವೆ ಯುದ್ಧದ ಕಿಡಿಗಳು ಕಾಣಿಸಿ ಕೊಂಡವು. ವಿಶ್ವಶಾಂತಿಗಾಗಿ ಸ್ಥಾಪಿತಗೊಂಡ ರಾಷ್ಟ್ರ ಸಂಘವು ವಿಜೇತ ರಾಷ್ಟ್ರಗಳ ಪ್ರಭಾವಕ್ಕೊಳಗಾಗಿ ಯುರೋಪಿನಲ್ಲಿ ಸಂಭವಿಸಿದ ಯುದ್ಧಾಕ್ರಮಣಗಳನ್ನು ತಡೆಯುವಲ್ಲಿ ವಿಫಲವಾಯಿತು. ಕಾರಣ ಇಟಲಿ, ಜರ್ಮನಿ ಮತ್ತು ಜಪಾನ್ ದೇಶಗಳು ರಾಷ್ಟ್ರ ಸಂಘ ದಿಂದ ಹೊರಬಂದು ತಮ್ಮ ವಸಾಹತುಗಳನ್ನು ಪುನಃ ವಶಪಡಿಸಿಕೊಳ್ಳಲು ಶಸ್ತ್ರಾಸ್ತ್ರಗಳ ಉತ್ಪಾದನೆಯಲ್ಲಿ ತೊಡಗಿ ಮತ್ತೆ ಯುರೋಪನ್ನು ಯುದ್ಧರಂಗವನ್ನಾಗಿ ಮಾರ್ಪಡಿಸಿದವು. ರಾಷ್ಟ್ರೀಯತೆಯನ್ನು ಮೈಗೂಡಿಸಿಕೊಂಡು ಪೂರ್ವ ಮತ್ತು ಕೇಂದ್ರ ಯುರೋಪಿನಲ್ಲಿ ಅಸ್ತಿತ್ವಕ್ಕೆ ಬಂದ ಗಣರಾಜ್ಯಗಳು ಮತ್ತು ಫ್ರಾನ್ಸ್, ಇಂಗ್ಲೆಂಡ್ ಮತ್ತು ಅಮೆರಿಕಾ ದೇಶಗಳು ೧೯೨೩ ಮತ್ತು ೧೯೨೯ರ ಆರ್ಥಿಕ ಸಂಕಷ್ಟಗಳನ್ನು ಎದುರಿಸುವಲ್ಲಿ ವಿಫಲ ವಾದವು. ಈ ಪರಿಣಾಮವಾಗಿ ಜನರು ಯುರೋಪಿನಲ್ಲಿ ಪ್ರಜಾಪ್ರಭುತ್ವ ಸರಕಾರಗಳ ಮೇಲೆ ವಿಶ್ವಾಸ ಕಳೆದುಕೊಂಡರು. ಪರಿಸ್ಥಿತಿಗಳ ಉಪಯೋಗವನ್ನು ಪಡೆದು ಇಟಲಿಯಲ್ಲಿ ಫ್ಯಾಸಿಸಂ, ಜರ್ಮನಿಯಲ್ಲಿ ನಾಜಿಸಂ, ರಷ್ಯಾದಲ್ಲಿ ಬೊಲ್ಷಿವಿಸಂ ಮತ್ತು ಜಪಾನಿನಲ್ಲಿ ರಾಷ್ಟ್ರೀಯ ಚ್ಯುವಿನಿಸಂ ಸಿದ್ಧಾಂತದ ಸರಕಾರಗಳು ಅಸ್ತಿತ್ವಕ್ಕೆ ಬಂದು ಅಲ್ಲಿನ ಗಣರಾಜ್ಯಗಳು ಪತನಗೊಂಡವು. ತತ್ಪರಿಣಾಮವಾಗಿ ಎರಡು ಮಹಾಯುದ್ಧಗಳ ನಡುವಿನ ಯುರೋಪ್ ಪ್ರಜಾಪ್ರಭುತ್ವವಾದಿಗಳ ಹಾಗೂ ಸರ್ವಾಧಿಕಾರಿ ಸಿದ್ಧಾಂತಗಳ ರಣರಂಗವಾಗಿ ಯುರೋಪಿಯನ್ನರಿಗೆ ೧೯೧೯-೧೯೩೯ರ ಅವಧಿಯಲ್ಲಿ ಶಾಂತಿ, ಸಮೃದ್ಧಿಗಳ ಗಗನ ಕುಸುಮಗಳಾದವು.

**ಪ್ಯಾರಿಸ್ ಶಾಂತಿ ಒಪ್ಪಂದಗಳು–ಪರಿಣಾಮಗಳು**

ಪ್ರಥಮ ಮಹಾಯುದ್ಧವು ೧೯೧೯ ಜನವರಿ ೧೮ರಂದು ಪ್ಯಾರಿಸ್ಸಿನ ವರ್ಸೇಲ್ಸ್‌ನಲ್ಲಿ ೭೦ಕ್ಕೂ ಹೆಚ್ಚು ಯುರೋಪ್ ದೇಶಗಳ ಪ್ರತಿನಿಧಿಗಳು ಶಾಂತಿ ಸಮ್ಮೇಳನದಲ್ಲಿ ಕೈಗೊಳ್ಳಲಾದ ಒಪ್ಪಂದಗಳೊಂದಿಗೆ ಕೊನೆಗೊಂಡಿತು. ಅಮೆರಿಕದ ಅಧ್ಯಕ್ಷ ವುಡ್ರೊವಿಲ್ಸನ್, ಇಂಗ್ಲೆಂಡಿನ ಪ್ರಧಾನಿ ಜಾರ್ಜ್‌ಲಾಯ್ಡ, ಫ್ರಾನ್ಸಿನ ಪ್ರಧಾನಿ ಕ್ಲೆಮಿನ್ ಸೊ, ಇಟಲಿಯ ಪ್ರಾಧಾನಿ ಒರ್ಲಾ ಡೊ, ಪೋಲೆಂಡಿನ ಓವಸ್ಕಿ ಮುಂತಾದವರು ಪ್ಯಾರಿಸ್ ಸಮ್ಮೇಳನದ ಪ್ರಮುಖ ವ್ಯಕ್ತಿಗಳಾಗಿದ್ದರು. ಸೋತ ರಾಷ್ಟ್ರಗಳ ಅನುಪಸ್ಥಿತಿಯಲ್ಲಿ ಅವರ ವಿಚಾರಗಳನ್ನು ನಿರ್ಲಕ್ಷಿಸಿ ಹಾಗೂ ಆ ರಾಷ್ಟ್ರಗಳನ್ನು ಬಲಹೀನಗೊಳಿಸುವ ದೃಷ್ಟಿಯಿಂದ ಪ್ರಬಲ ವಿಜೇತ ರಾಷ್ಟ್ರಗಳಾದ ಫ್ರಾನ್ಸ್, ಅಮೆರಿಕ, ಇಂಗ್ಲೆಂಡ್, ಇಟಲಿ ಮತ್ತು ಜಪಾನ್‌ಗಳ ಸೂಚನೆಯಂತೆ ಪ್ಯಾರಿಸ್ ಸಮ್ಮೇಳನದಲ್ಲಿ ಕೆಲವು ಪ್ರಮುಖ ಒಪ್ಪಂದಗಳನ್ನು ಕೈಗೊಳ್ಳಲಾಯಿತು. ಅವುಗಳಲ್ಲಿ ೧೯೧೯ ಜೂನ್ ತಿಂಗಳಲ್ಲಿ ಜರ್ಮನ್ ದೇಶದೊಡನೆ ಮಾಡಿಕೊಂಡ ವರ್ಸೇಲ್ಸ್ ಒಪ್ಪಂದ, ಸೆಪ್ಟೆಂಬರ್ ತಿಂಗಳಲ್ಲಿ ಬಲ್ಗೇರಿಯಾದೊಂದಿಗೆ ಮಾಡಿಕೊಂಡ ನೆವುಲಿ ಒಪ್ಪಂದ, ೧೯೨೦ ಜೂನ್ ತಿಂಗಳಲ್ಲಿ ಹಂಗೇರಿಯಾದೊಂದಿಗೆ ಮಾಡಿಕೊಂಡ ಟ್ರಿಯಾನ್ ಒಪ್ಪಂದ ಮತ್ತು ಟರ್ಕಿಯೊಡನೆ ಮಾಡಿಕೊಂಡ ಸೇವರ್ಸ್ ಒಪ್ಪಂದಗಳು ಪ್ರಮುಖವಾದವು.

ಪ್ಯಾರಿಸ್ ಶಾಂತಿ ಒಪ್ಪಂದಗಳಿಗನುಗುಣವಾಗಿ ಇಡೀ ಯುರೋಪಿನ ರಾಜ್ಯಗಳನ್ನು ವಿಭಜಿಸಿ ಪುನರ್ರಚಿಸಿಲಾಯಿತು. ವರ್ಸೇಲ್ಸ್ ಒಪ್ಪಂದದ ಪ್ರಕಾರ ಜರ್ಮನಿಯ, ಅಲ್ ಸೇಸ್-ಲೊರೈನ್ ಪ್ರದೇಶಗಳು ಫ್ರಾನ್ಸ್‌ಗೆ ಸೇರ್ಪಡೆಯಾದವು. ಇದರಿಂದ ಫ್ರಾನ್ಸ್ ದೇಶವು ಸಹರ ಕಲ್ಲಿದ್ದಲು ಪ್ರದೇಶದ ಮೇಲೆ ಹಿಡಿತಹೊಂದಿತು. ರಷ್ಯಾ, ಪ್ರಷ್ಯಾ ಮತ್ತು ಆಸ್ಟ್ರಿಯಾದ ಕೆಲವು ಪ್ರದೇಶಗಳನ್ನೊಳಗೊಂಡ ಸ್ವತಂತ್ರ ಪೋಲೆಂಡ್ ರಾಜ್ಯ ರಚನೆಯಾಯಿತು. ಷೆಲ್ಸವಿಗ್ ಪ್ರದೇಶದ ಡ್ಯಾನಿಷ್ ಜಿಲ್ಲೆಗಳನ್ನು ಡೆನ್‌ಮಾರ್ಕಿಗೆ ವರ್ಗಾಯಿಸಲಾಯಿತು. ಡ್ಯಾನ್ಜಿಗ್‌ನ್ನು ರಾಷ್ಟ್ರ ಸಂಘದ ಅಧೀನದಲ್ಲಿ ಮುಕ್ತನಗರವನ್ನಾಗಿ ಮಾಡಲಾಯಿತು. ಬೊಹಿಮಿಯಾ ಮತ್ತು ಮೊರ್ವಿಯಾ ಪ್ರದೇಶಗಳನ್ನೊಳಗೊಂಡ ಪ್ರದೇಶವನ್ನು ಜೆಕೊಸ್ಲೊವಾಕಿಯಾ ಎಂದು ಕರೆಯಲಾಯಿತು. ಆಸ್ಟ್ರಿಯಾ ಮತ್ತು ಹಂಗೇರಿ ಪ್ರತ್ಯೇಕ ಸ್ವತಂತ್ರ್ಯಗಣರಾಜ್ಯಗಳಾದವು. ಜರ್ಮನಿಯ ವಶದಲ್ಲಿದ್ದ ಆಫ್ರಿಕನ್ ವಸಾಹತುಗಳು ಮಿತ್ರರಾಷ್ಟ್ರಗಳ ಆಡಳಿತಕ್ಕೊಳಪಟ್ಟವು. ಆಸ್ಟ್ರಿಯಾದ ದಕ್ಷಿಣ ಟೈರೋಲ್ ದ್ವೀಪ ಇಟಲಿಯ ವಶವಾಯಿತು. ೧೯೧೯ರ ನೆವುಲಿ ಒಪ್ಪಂದದ ಪ್ರಕಾರ ಬಲ್ಗೇರಿಯಾವು ತನ್ನ ಕರಾವಳಿ ಪ್ರದೇಶವನ್ನು ಗ್ರೀಸ್‌ಗೆ ಬಿಟ್ಟುಕೊಟ್ಟಿತು. ೧೯೨೦ರ ಟ್ರೆಯಾನ್ ಒಪ್ಪಂದದ ಪ್ರಕಾರ ಹಂಗೇರಿ ಚಿಕ್ಕ ಸ್ವತಂತ್ರ ರಾಜ್ಯವಾಯಿತು. ಸೆವರ್ಸ ಒಪ್ಪಂದದ ಪ್ರಕಾರ ಏಷಿಯಾ ಮೈನರ್ ಸೇರಿದಂತೆ ಟರ್ಕಿಯ ಅನೇಕ ಪ್ರದೇಶಗಳು ಗ್ರೀಸ್‌ನ ವಶವಾದವು. ಫಿನ್ ಲ್ಯಾಂಡ್, ಎಸ್ಟೋನಿಯ, ಲಿಥೊನಿಯಗಳನ್ನು ರಷ್ಯಾ ಪ್ರದೇಶದಿಂದ ಬೇರ್ಪಡಿಸಿ, ಸ್ವತಂತ್ರ ಗಣರಾಜ್ಯಗಳನ್ನಾಗಿ ಮಾಡಲಾಯಿತು.

ವುಡ್ರೋವಿಲ್ಸನ್ನನ ೧೪ ಅಂಶಗಳು ಸ್ವಯಂ ನಿರ್ಧರಿತ ಹಾಗೂ ರಾಷ್ಟ್ರೀಯತೆಯ ತತ್ವಗಳ ಆಧಾರದ ಮೇಲೆ ರೂಪುಗೊಂಡಿದ್ದವು. ಗೌಪ್ಯರಹಿತ ಒಪ್ಪಂದ, ಮುಕ್ತಮನಸ್ಸಿನ ಅಂತಾರಾಷ್ಟ್ರೀಯ ವ್ಯವಹಾರ ವಸಾಹತುಗಳ ರಕ್ಷಣೆಯಲ್ಲಿ ಪಕ್ಷಪಾತ ನಿವಾರಣೆ, ಜನಾಂಗ ಭೇದಭಾವ ವಿರುದ್ಧ ಸಮರ, ಸಮುದ್ರದ್ವಾರ ವ್ಯಾಪಾರ ಸೌಲಭ್ಯಕ್ಕೆ ಸ್ವಾತಂತ್ರ್ಯ, ಯುದ್ಧ ನಿವಾರಣೆಗಾಗಿ ನಿಶ್ಯಸ್ತ್ರೀಕರಣ ಮತ್ತು ಸೈನ್ಯಮಿತಿ ಹಾಗೂ ಸಣ್ಣ ಸಣ್ಣ ರಾಷ್ಟ್ರಗಳ ಸ್ವಾತಂತ್ರ್ಯ ರಕ್ಷಣೆ ಮುಂತಾದವುಗಳು ವಿಲ್ಸನ್ ಪ್ರತಿಪಾದಿಸಿದ ಅಂಶಗಳಾಗಿದ್ದವು. ಈ ಅಂಶಗಳ ಮೇಲೆ ಪ್ಯಾರಿಸ್ ಶಾಂತಿ ಒಪ್ಪಂದಗಳು ರೂಪುಗೊಳ್ಳುವವೆಂಬ ಭರವಸೆಯನ್ನು ವಿಜೇತ ರಾಷ್ಟ್ರಗಳು ಈ ಪ್ಯಾರಿಸ್ ಸಮ್ಮೇಳನದಲ್ಲಿ ಉಲ್ಲಂಘಿಸಿದ್ದು ದುರದೃಷ್ಟಕರ ಸಂಗತಿಯಾಯಿತು. ಯುದ್ಧಪೂರ್ವದ ಜರ್ಮನಿ, ಟರ್ಕಿ, ಬಲ್ಗೇರಿಯಾಗಳ ಸಾಮ್ರಾಜ್ಯಗಳನ್ನು ವಿಭಜಿಸಿ ಯುರೋಪನ್ನು ಪುನ್‌ರರಚಿಸಿದ ಮಿತ್ರರಾಷ್ಟ್ರಗಳು ಈ ದೇಶಗಳ ಆತ್ಮಗೌರವಕ್ಕೆ ಧಕ್ಕೆ ತರುವ ರೀತಿಯಲ್ಲಿ ಮತ್ತು ಊಹಿಸಲಾಗದಷ್ಟು ಯುದ್ಧ ವೆಚ್ಚಗಳನ್ನೆಲ್ಲ ಇವುಗಳ ಮೇಲೆ ಹೇರಲಾಯಿತು. ಮಿತ್ರ ರಾಷ್ಟ್ರಗಳು ಯುದ್ಧನಷ್ಟದ ಹಣ ೬,೬೦,೦೦೦,೦೦೦ ಪೌಂಡ್ಸಗಳನ್ನು ಜರ್ಮನ್ ರಾಷ್ಟ್ರ ಒಂದೇ ಕೊಡಬೇಕೆಂದು ವಿಧಿಸಿದವು. ತತ್ಪರಿಣಾಮವಾಗಿ ಜರ್ಮನಿಯ ಜನರು ಮತ್ತು ಗಣರಾಜ್ಯದ ಪ್ರತಿನಿಧಿಗಳು ವರ್ಸೇಲ್ಸ್ ಒಪ್ಪಂದವನ್ನು ವಿರೋಧಿಸಿದರು. ಜರ್ಮನಿ ಅರಾಜಕತೆಯ ತಾಣವಾಯಿತು. ಜನರ ವಿರೋಧವನ್ನು ಎದುರಿಸಲಾರದೆ ದೊರೆ ಕೈಸರ್ ವಿಲಿಯಂನು ಹಾಲೆಂಡಿಗೆ ಪಲಾಯನ ಗೈದನು. ಇತ್ತ ಟರ್ಕಿಯಲ್ಲಿ ರಾಷ್ಟ್ರೀಯವಾದಿ ಪಕ್ಷವು ಮುಸ್ತಾಫ್ ಕೆಮಲನ ನಾಯಕತ್ವದಲ್ಲಿ ಸೇವರ್ಸ ಒಪ್ಪಂದವನ್ನು ಉಗ್ರವಾಗಿ ವಿರೋಧಿಸಿತು. ರಷ್ಯಾದೇಶವು ತನ್ನ ಯುರೋಪಿನ ಮುಕ್ತ ವ್ಯಾಪಾರಕ್ಕೆ ತಡೆ ಒಡ್ಡಲು ಫಿನ್‌ಲ್ಯಾಂಡ್ ಮತ್ತು ಲಿಥೊನಿಯಾ ರಾಜ್ಯಗಳನ್ನು ನಿರ್ಮಿಸಿ ದ್ದಕ್ಕೆ ತನ್ನ ಪ್ರತಿನಿಭಟನೆಯನ್ನು ವ್ಯಕ್ತಪಡಿಸಿತು. ಈ ರೀತಿ ಪ್ಯಾರಿಸ್ ಶಾಂತಿ ಒಪ್ಪಂದಗಳು ಯುರೋಪಿನಲ್ಲಿ ರಾಜಕೀಯ ಸ್ಥಿರತೆಯನ್ನು ಒದಗಿಸುವ ಬದಲು ರಾಜಕೀಯ ಅರಾಜಕತೆ ಯನ್ನು ಮತ್ತು ಸೇಡನ್ನು ಸೃಷ್ಟಿಸಿದವು.

**ಪ್ರಜಾಪ್ರಭುತ್ವದ ಪ್ರಸಾರ**

ಪ್ರಜಾಪ್ರಭುತ್ವದ ಪ್ರಸಾರವು ಪ್ರಥಮ ಮಹಾಯುದ್ಧದ ಪರಿಣಾಮಗಳಲ್ಲಿ ಒಂದಾಗಿತ್ತು. ಪೂರ್ವ ಹಾಗೂ ಮಧ್ಯ ಯುರೋಪಿನಲ್ಲಿಯ ಜರ್ಮನಿ, ಆಸ್ಟ್ರಿಯಾ, ರಷ್ಯಾ, ಬಲ್ಗೇರಿಯಾ, ಟರ್ಕಿ (ಆಟೋಮನ್ ಸಾಮ್ರಾಜ್ಯ) ಸಾಮ್ರಾಜ್ಯಗಳು ಪತನಗೊಂಡು ಅವುಗಳ ಅವಶೇಷಗಳ ಮೇಲೆ ಉದಯಿಸಿದ ಅನೇಕ ಗಣರಾಜ್ಯಗಳು ಪ್ರಜಾಸತ್ತಾತ್ಮಕ ಸಂವಿಧಾನಗಳನ್ನು ಅಂಗೀಕರಿಸಿದವು. ಹೀಗಾಗಿ ಯುರೋಪಿನಲ್ಲಿ ಅನೇಕ ಪಕ್ಷಗಳು ಅಂದರೆ ಸಮಾಜವಾದಿ, ಕನ್‌ಜರ್‌ವೇಟಿವ್, ಕಮ್ಯುನಿಸ್ಟ್, ಫ್ಯಾಸಿಸ್ಟ್ ಮತ್ತು ನಾಸಿಸ್ಟ ಪಕ್ಷಗಳು ಅಸ್ತಿತ್ವಕ್ಕೆ ಬಂದು ಚುನಾವಣೆ ಮುಖಾಂತರ ಅಧಿಕಾರ ಗ್ರಹಣ ಮಾಡಿ ಸರಕಾರ ರಚಿಸುವ ಪದ್ಧತಿ ಆರಂಭವಾಯಿತು. ೧೯೧೮ರಲ್ಲಿ ಡಾಕ್ಟರ್ ಕಾರ್ಲರಿನೆ ಆಸ್ಟ್ರಿಯಾ ಗಣರಾಜ್ಯದ, ಕೌಂಟ ಮೈಕಲ್ ಹಂಗೇರಿ ಗಣರಾಜ್ಯದ, ಜನರಲ್ ಫಿಲ್ಸಿಡಸ್ಕಿ ಪೋಲಂಡ ಗಣರಾಜ್ಯದ ಅಧ್ಯಕ್ಷರುಗಳಾಗಿ ಆಯ್ಕೆಯಾದರು. ೧೯೧೯ರಲ್ಲಿ ಜರ್ಮನಿ ವೀಮರ್ ಸಂವಿಧಾನವನ್ನು ಅಳವಡಿಸಿಕೊಂಡು ಇಬರ್ಟನ ಅಧ್ಯಕ್ಷತೆಯಲ್ಲಿ

ಗಣರಾಜ್ಯವಾಯಿತು. ೧೯೨೨ರಲ್ಲಿ ಕೆಮಲ ಪಾಷಾನ ಅಧ್ಯಕ್ಷತೆಯಲ್ಲಿ ಟರ್ಕಿ ಗಣರಾಜ್ಯವಾಯಿತು. ಬ್ರಿಟನಿನಲ್ಲಿ ಪ್ರಜಾಪ್ರಭುತ್ವ ಮತ್ತಷ್ಟು ಸತ್ವಶಾಲಿಯಾಯಿತು. ಅಲ್ಲದೆ ಬ್ರಿಟಿಷ್ ಪಾರ್ಲಿಮೆಂಟು ೧೯೨೮ರಲ್ಲಿ ಶಾಸನ ಒಂದನ್ನು ಜಾರಿಮಾಡಿ, ೨೧ ವರ್ಷ ವಯಸ್ಸಾದ ಎಲ್ಲಾ ಸ್ತ್ರೀ ಪುರುಷರಿಗೂ ಮತದಾನದ ಹಕ್ಕನ್ನು ಒದಗಿಸಿತು.

**ಸರ್ವಾಧಿಕಾರಿ ಸರಕಾರಗಳ ಸ್ಥಾಪನೆ**

ಪ್ಯಾರಿಸ್ ಒಪ್ಪಂದದ ಫಲವಾಗಿ ಯುರೋಪಿನಲ್ಲಿ ಸೃಷ್ಟಿಯಾದ ಗಣರಾಜ್ಯಗಳು ಬಹುಕಾಲ ಉಳಿಯಲಿಲ್ಲ. ಪ್ರಜಾಪ್ರಭುತ್ವದ ಈ ಗಣರಾಜ್ಯಗಳು ಜನರ ಆಶೋತ್ತರಗಳಿಗೆ ಸ್ಪಂದಿಸಲು ವಿಫಲವಾದವು. ಅಲ್ಲದೆ ೧೯೨೩ ಮತ್ತು ೧೯೨೯ರಲ್ಲಿ ಅಮೆರಿಕ ಮತ್ತು ಯುರೋಪಿನಲ್ಲಿ ಸಂಭವಿಸಿದ ಆರ್ಥಿಕ ಸಂಕಷ್ಟವನ್ನು(ಎಕನಾಮಿಕ್ ಡಿಫ್ರೆಷನ್) ಎದುರಿಸು ವಲ್ಲಿ ಈ ರಾಷ್ಟ್ರಗಳು ಅಸಮರ್ಥವಾದುವು. ಯುರೋಪಿನ ಅನೇಕ ರಾಜ್ಯಗಳಲ್ಲಿ ವ್ಯವಸಾಯೋತ್ಪನ್ನ ಹೆಚ್ಚಿದರೂ ರೈತರ ಉತ್ಪಾದನೆಗಳಿಗೆ ಮಾರುಕಟ್ಟೆ ದೊರೆಯದೆ ರೈತರ ಆದಾಯದಲ್ಲಿ ಕಡಿತವುಂಟಾಯಿತು. ಯುರೋಪಿನ ಪೂರ್ವ ಮತ್ತು ಪಶ್ಚಿಮ ರಾಜ್ಯಗಳಲ್ಲಿ ಮಹಾಯುದ್ಧದ ದುಷ್ಪರಿಣಾಮದಿಂದ ಮತ್ತು ಅವುಗಳ ಪುನ್ ರರಚನೆಯಿಂದ ಹಾಗೂ ಆ ರಾಜ್ಯಗಳಲ್ಲಿ ಸಂಭವಿಸಿದ ಅತಿವೃಷ್ಟಿ, ಅನಾವೃಷ್ಟಿಗಳಿಂದ ಹಣದುಬ್ಬರದ ಸಮಸ್ಯೆ ತಲೆದೋರಿತು. ತತ್ಪರಿಣಾಮವಾಗಿ ಯುರೋಪಿನಲ್ಲಿ ಬ್ಯಾಂಕುಗಳು ದಿವಾಳಿಯಾದವು. ರಫ್ತು ಮತ್ತು ಆಮದುಗಳು ಕುಗ್ಗಿದವು. ನಿರುದ್ಯೋಗ ಸಮಸ್ಯೆ ಹೆಚ್ಚಿತು ಮತ್ತು ಬಂಗಾರದ ಮಟ್ಟವನ್ನು(ಗೋಲ್ಡ ಸ್ಟ್ಯಾಂಡರ್ಡ್) ನಿರ್ಲಕ್ಷಿಸಿ ಹಣಮುದ್ರಿತಗೊಂಡಿತು. ಈ ಕಾರಣಗಳಿಂದ ಈ ರಾಜ್ಯಗಳಲ್ಲಿ ಐಕ್ಯತೆ ನಶಿಸಿ ಆರ್ಥಿಕ ವಿಷಯಗಳಲ್ಲಿ ತಮ್ಮ ಸ್ವಾರ್ಥ ಸಾಧಿಸಲು ಪ್ರಯತ್ನಿಸಿದವು. ಇದು ಅತಿ ಪ್ರಸರಣಕ್ಕೆ ಕಾರಣವಾಯಿತು. ಜರ್ಮನಿ ಹಾಗೂ ಇತರ ರಾಷ್ಟ್ರಗಳು ಇಂಗ್ಲೆಂಡಿನಿಂದ ಸಾಲ ಪಡೆದಿದ್ದವು. ಇಂಗ್ಲೆಂಡ್ ಅಮೆರಿಕದಿಂದ ನೂರು ಕೋಟಿ ಪೌಂಡುಗಳ ಸಾಲ ಪಡೆದಿತ್ತು. ಆರ್ಥಿಕ ಸಂಕಷ್ಟಕ್ಕೊಳಗಾದ ಅಮೆರಿಕ, ಇಂಗ್ಲೆಂಡನ್ನು ಸಾಲಮರುಪಾವತಿಗೆ ಆಗ್ರಹಿಸಿತು. ಇದಕ್ಕನುಗುಣವಾಗಿ ಇಂಗ್ಲೆಂಡ್ ತನ್ನ ಸಾಲಗಾರರನ್ನು ಸಾಲ ಮರುಪಾವತಿಗೆ ಕೇಳಿಕೊಂಡಿತು. ಇಂತಹ ಸಂದರ್ಭದಲ್ಲಿ ಜರ್ಮನಿ ಯನ್ನೊಳಗೊಂಡು ಸೋತ ರಾಷ್ಟ್ರಗಳು ಯುದ್ಧವೆಚ್ಚವನ್ನು ಭರಿಸುವ ಶಕ್ತಿಯನ್ನು ಕಳೆದುಕೊಂಡು ವರ್ಸೇಲ್ಸ್ ಒಪ್ಪಂದವನ್ನು ಉಲ್ಲಂಘಿಸಿದವು. ಈ ಪರಿಸ್ಥಿತಿಯಲ್ಲಿ ಯುರೋಪಿನಲ್ಲಿ ತಮ್ಮ ಆರ್ಥಿಕ ಹಿಡಿತವನ್ನು ಸಾಧಿಸಲು ಪ್ರಬಲ ಪ್ರಜಾಪ್ರಭುತ್ವ ರಾಷ್ಟ್ರ ಗಳಾದ ಅಮೆರಿಕ, ಫ್ರಾನ್ಸ್ ಮತ್ತು ಇಂಗ್ಲೆಂಡ್ ಪುನ್ ರರಚಿತವಾದ ಸಣ್ಣ ಸಣ್ಣ ಗಣರಾಜ್ಯಗಳನ್ನು ತಮ್ಮ ವಸಾಹತುಗಳಂತೆ ಉಪಯೋಗಿಸುವ ನಿಟ್ಟಿನಲ್ಲಿ ವಿದೇಶಿ ನೀತಿಯನ್ನು ರೂಪಿಸಿದವು. ಇದು ಪ್ರಜಾಪ್ರಭುತ್ವ ಹೊಂದಿದ ರಾಜ್ಯಗಳಲ್ಲಿ ಅತೃಪ್ತಿ ವಾತಾವರಣ ಮತ್ತು ಪರಸ್ಪರ ವೈಮನಸ್ಸಿಗೆ ಕಾರಣವಾಯಿತು.

ಯುರೋಪ್ ರಾಷ್ಟ್ರಗಳು ಪ್ಯಾರಿಸ್ ಒಪ್ಪಂದದ ಬಗ್ಗೆ ಅತೃಪ್ತಿ, ಅಸಮಾಧಾನಗಳನ್ನು ಪ್ರಕಟಿಸಿದ್ದವು. ವರ್ಸೇಲ್ಸ್ ಒಪ್ಪಂದದಿಂದ ಜರ್ಮನ್ ರಾಜ್ಯದ ಸಮಗ್ರತೆ ಜನಾಂಗದ ಪ್ರತಿಷ್ಠೆಗಳಿಗೆ ಕುಂದುಂಟಾಗಿ ಅಂತರ್ ರಾಷ್ಟ್ರೀಯ ಮಟ್ಟದಲ್ಲಿ ಅದು ತನ್ನ ವರ್ಚಸ್ಸನ್ನು ಕಳೆದುಕೊಂಡಿತ್ತು. ಮಂಚೂರಿಯಾ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವ ವಿಷಯದಲ್ಲಿ ಜಪಾನ್ ಮತ್ತು ಚೇನಾ ದೇಶಗಳಲ್ಲಿ ವೈಮನಸ್ಸುಂಟಾಯಿತು. ಇಟಲಿ ತನಗೆ ಬರಬೇಕಾದ ಪ್ರದೇಶಗಳು ಬರಲಿಲ್ಲವೆಂದು ಗೊಣಗಾಡಿತು. ಇಸ್ತೋನಿಯ, ಲಾಟ್ವಿಯಾ ಮತ್ತು ಲಿಥೀನಿಯ ರಾಜ್ಯಗಳ ನಿರ್ಮಾಣದಿಂದ ರಷ್ಯಾವು ಯುರೋಪಿನೊಡನೆ ನೇರ ವ್ಯಾಪಾರ ಸಂಪರ್ಕದ ಕೊರತೆಯುಂಟಾದ್ದರಿಂದ ಜರ್ಮನಿ ಮತ್ತು ಜಪಾನ್ ರಾಜ್ಯಗಳ ಜೊತೆ ಸ್ನೇಹ ಬೆಳೆಸಿತು.

ಈ ಎಲ್ಲಾ ಆರ್ಥಿಕ ಮತ್ತು ರಾಜಕೀಯ ಅಸಂತೃಪ್ತಿಗಳ ಉಪಯೋಗ ಪಡೆದು ಮುಸ್ಸೊಲಿನಿಯು ಬ್ಲ್ಯಾಕ್ ಷರ್ಟ್ಸ್ ಪಡೆಗಳ ಮುಖಾಂತರ ರೋಮನ್ ಸಾಮ್ರಾಜ್ಯದ ವೈಭವವನ್ನು ಪುನರುಜ್ಜೀವನಗೊಳಿಸಿ ಇಟಲಿ ದೇಶವನ್ನು ಮಹಾಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡಲು ೧೯೨೯ರ ಚುನಾವಣೆಯಲ್ಲಿ ಗ್ರ್ಯಾಂಡ್ ಕೌನ್ಸಿಲಿನ ೨/೩ ರಷ್ಟು ಸ್ಥಾನಗಳನ್ನು ಗೆದ್ದು ಇಟಲಿಯ ಫ್ಯಾಸಿಸ್ಟ್ ಸರಕಾರದ ಸರ್ವಾಧಿಕಾರಿಯಾದನು. ಇತ್ತ ಜರ್ಮನಿಯಲ್ಲಿ ಹಿಟ್ಲರನು ರೈತರ, ಕಾರ್ಮಿಕರ ಹಾಗೂ ವಿದ್ಯಾರ್ಥಿಗಳ ಬೆಂಬಲದೊಂದಿಗೆ ಕಮ್ಯುನಿಸ್ಟರ, ಯಹೂದಿಗಳ ಮತ್ತು ಅಸಮರ್ಥ ರಿಪಬ್ಲಿಕ್ ಪಕ್ಷ ಇವುಗಳನ್ನು ತುಳಿದು ನಾಜಿ ಸಿದ್ಧಾಂತವನ್ನು ಕಾರ್ಯಗತಗೊಳಿಸಲು ೧೯೩೩ರಲ್ಲಿ ತನ್ನ ಸ್ಟಾರ್ಮ ಟ್ರೂಪರ್ಸ ಪಡೆಗಳ ಸಹಾಯದಿಂದ ಸರ್ವಾಧಿಕಾರಿಯಾದನು. ರಷ್ಯಾದಲ್ಲಿ ೧೯೧೭ರ ಕ್ರಾಂತಿಯ ಮೂಲಕ ಲೆನಿನ್ನನು ಜಾರ್

ಎರಡನೆಯ ನಿಕೋಲಸ್‌ನ ಅರಸೊತ್ತಿಗೆಯನ್ನು ಕಿತ್ತೆಸೆದು ಕಮ್ಯುನಿಸ್ಟ್ ಆಡಳಿತದ ಸರ್ವಾಧಿಕಾರಿ ಯಾದನು. ಜಪಾನಿನಲ್ಲಿ ರಾಷ್ಟ್ರೀಯ ಷಾವಿನಿಸಂ ಪ್ರಬಲಗೊಂಡಿತು. ೧೯೧೭-೧೯೩೩ರ ಅವಧಿಯ ರಾಜಕೀಯ ಬೆಳವಣಿಗೆಯನ್ನು ವಿಶ್ಲೇಷಿಸಿದಾಗ ಯುರೋಪ್ ನಲ್ಲಿ ಪ್ರಜಾಪ್ರಭುತ್ವವಾದಿಗಳ ಹಾಗೂ ಸರ್ವಾಧಿಕಾರಿಗಳ ರಾಜ್ಯಗಳು ಉದಯವಾಗಿ ತಮ್ಮ ಪ್ರಾಬಲ್ಯ ಸ್ಥಾಪಿಸಲು ಸಮರಕ್ಕೆ ಸಜ್ಜಾದವು.

**ಯುರೋಪಿನಲ್ಲಿಯ ಯುದ್ಧಾಕ್ರಮಣಗಳು ಮತ್ತು ಒಪ್ಪಂದಗಳು**

ಬಲಾತ್ಕಾರವಾಗಿ ಜರ್ಮನಿಯ ಮೇಲೆ ಹೇರಿದ್ದ ವರ್ಸೇಲ್ಸ್ ಒಪ್ಪಂದವನ್ನು ಉಲ್ಲಂಘಿಸಿ ಸಮರದ ಮೂಲಕ ಆಸ್ಟ್ರಿಯಾ, ಜಕೊಸ್ಲೊವಾಕಿಯಾ ಮತ್ತು ಪೋಲೆಂಡ್ ಗಳನ್ನು ವಶಪಡಿಸಿಕೊಂಡ ಜರ್ಮನ್ ಜನಾಂಗದ ವಿಶಾಲ ಸಾಮ್ರಾಜ್ಯ ಸ್ಥಾಪಿಸುವುದು ತನ್ನ ಗುರಿಯೆಂದು ಹಿಟ್ಲರನು ಘೋಷಣೆ ಮಾಡಿದನು. ಫ್ರಾನ್ಸ್, ಇಂಗ್ಲೆಂಡ್, ರಷ್ಯಾ ದೇಶಗಳು ಹೊಂದಿದ್ದ ಶಸ್ತ್ರಾಸ್ತ್ರಗಳನ್ನು ಗಮನಿಸಿ ಅವರಿಗೆ ಸಮನಾದ ಮಾರಕಾಸ್ತ್ರಗಳನ್ನು ಉತ್ಪಾದಿಸಲು ಕ್ರಮಕೈಕೊಂಡನು. ೧೯೩೩ರಲ್ಲಿ ಜಿನೀವಾ ನಿಶ್ಯಸ್ತ್ರೀಕರಣ ಸಮ್ಮೇಳನದಿಂದ ಮತ್ತು ರಾಷ್ಟ್ರ ಸಂಘದಿಂದ ಜರ್ಮನಿ ಹೊರಬರುವಂತೆ ಮಾಡಿದನು. ಮಿತ್ರ ರಾಷ್ಟ್ರಗಳ ಹಿತಾಸಕ್ತಿಗೆ ವಿರುದ್ಧವಾಗಿ ರೀನಿಲ್ಯಾಂಡನ್ನು ವಶಪಡಿಸಿಕೊಂಡನು. ತನ್ನ ಶಕ್ತಿಯನ್ನು ವೃದ್ಧಿಸಿಕೊಳ್ಳಲು ೧೯೩೬ರಲ್ಲಿ ಸ್ಪೇಯಿನ್ ಅಂತಃಕಲಹದಲ್ಲಿ(ಇಟಲಿಯ ಮುಸ್ಸೊಲಿನಿ ಸಹಾಯದಿಂದ) ಹಸ್ತಕ್ಷೇಪಮಾಡಿ ಸ್ಪೆಯಿನಿನ ಜನರಲ್ ಫ್ರಾಂಕೊನಿಗೆ ಸೈನಿಕ ನೆರವು ನೀಡಿ ಆತನನ್ನು ಅಧಿಕಾರಕ್ಕೆ ತಂದನು. ಇಂಗ್ಲೆಂಡ್, ಫ್ರಾನ್ಸ್, ರಷ್ಯಾಗಳಿಂದೊದಗುವ ಅಪಾಯವನ್ನು ಲಕ್ಷಿಸಿ ಇಟಲಿ ಮತ್ತು ಜಪಾನ್ ದೇಶಗಳೊಂದಿಗೆ "ರೋಮ್-ಬರ್ಲಿನ್-ಟೋಕಿಯೊ ಆ್ಯಕ್ಸಿಸ್" ಎನ್ನುವ ರಕ್ಷಣಾ ಒಪ್ಪಂದವನ್ನು ೧೯೩೭ರಲ್ಲಿ ಮಾಡಿಕೊಂಡನು. ೧೯೩೮ ಮಾರ್ಚ್ ೧೨ರಂದು ಜರ್ಮನ್ ಸೇನಾಪಡೆಗಳು ಆಸ್ಟ್ರಿಯಾದ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡವು. ನಂತರ ಜಕೊಸ್ಲೊವಾಕಿಯಾದ ಮೇಲೆ ದಾಳಿ ಮಾಡಿ ಅದನ್ನು ವಶಪಡಿಸಿಕೊಂಡನು.

ಇತ್ತ ಇಟಲಿಯ ಮುಸ್ಸೊಲಿನಿಯು ಪೋಪನೊಡನೆ ಸೌಹಾರ್ದ ಒಪ್ಪಂದ (೧೯೨೯ರ ಲ್ಯಾಟಿರಾನ್ ಒಪ್ಪಂದ) ಮಾಡಿಕೊಂಡು ಇಟಲಿ ದೇಶವನ್ನು ಮಹಾಶಕ್ತಿಶಾಲಿ ದೇಶವನ್ನಾಗಿ ಮಾಡಲು ನಿರ್ಧರಿಸಿದನು. ಟರ್ಕಿದೇಶದ ಮೇಲೆ ಯುದ್ಧಸಾರಿ ಲೋಸಾನಿ ಒಪ್ಪಂದ ಮಾಡಿಕೊಂಡು ಮೆಡಿಟರೇನಿಯನ್ ಸಮುದ್ರದ ಮೇಲೆ ಹಿಡಿತ ಸಾಧಿಸಿದನು. ಇಟಲಿಯನ್ನರಿಗೆ ಕೊಟ್ಟ ವಾಗ್ದಾನದಂತೆ ೧೯೨೪ರಲ್ಲಿ ಯುಗೊಸ್ಲಾವಿಯಾದ ಮೇಲೆ ದಾಳಿಮಾಡಿ ಮಿತ್ರ ರಾಷ್ಟ್ರಗಳು ಕೊಡಲು ನಿರಾಕರಿಸಿದ ಫಿಯುಮಿ (ಕೋಟೆ)ಯನ್ನು ವಶಪಡಿಸಿಕೊಂಡನು. ಮುಂದೆ ೧೯೩೫ರಲ್ಲಿ ಅಲ್ಬೇನಿಯ ಮತ್ತು ೧೯೩೯ರಲ್ಲಿ ಅಬ್ಸೀನಿಯಗಳ ಮೇಲೆ ದಾಳಿಮಾಡಿ ಅವುಗಳನ್ನು ವಶಪಡಿಸಿಕೊಂಡನು. ೧೯೩೧ರಲ್ಲಿ ಜಪಾನ್, ಚೀನಾದೇಶದ ಮಂಚೂರಿಯಾದ ಮೇಲೆ ದಾಳಿಮಾಡಿ ಅದನ್ನು ಆಕ್ರಮಿಸಿ ಅದು ಸ್ವತಂತ್ರ ರಾಜ್ಯವೆಂದು ಘೋಷಿಸಿತು. ರಾಷ್ಟ್ರ ಸಂಘವು ಜಪಾನಿನ ಈ ಕ್ರಮವನ್ನು ಅನುಮೋದಿಸಲು ನಿರಾಕರಿಸಿದಾಗ, ಜಪಾನ್ ರಾಷ್ಟ್ರ ಸಂಘದಿಂದ ಹೊರಬಂದಿತು. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳ ವಿದೇಶ ನೀತಿಯನ್ನು ಪ್ರತಿಭಟಿಸಿ ರಾಷ್ಟ್ರಸಂಘದಿಂದ ಹೊರಬಿದ್ದ ಮುಸ್ಸೊಲಿನಿಯು ಜರ್ಮನಿ ಮತ್ತು ಜಪಾನುಗಳೊಂದಿಗೆ ಸ್ನೇಹ ಬೆಳೆಸಿದನು. ಜರ್ಮನಿ, ಇಟಲಿ ಮತ್ತು ಜಪಾನು ದೇಶಗಳು ಸೈನಿಕ ಶಕ್ತಿಯನ್ನು ಅಪಾರಮಟ್ಟದಲ್ಲಿ ವೃದ್ಧಿಸಿಕೊಂಡದ್ದನ್ನು ಅವುಗಳು ಮಾಡಿದ ದಾಳಿಗಳನ್ನು ಲಕ್ಷಿಸಿದ ರಷ್ಯಾ, ಫ್ರಾನ್ಸ್, ಪೋಲೆಂಡ್, ಇಂಗ್ಲೆಂಡ್, ಬೆಲ್ಜಿಯಂ ದೇಶಗಳು ಹಿಟ್ಲರ್ ಮತ್ತು ಮುಸ್ಸೊಲಿನಿಯ ದಾಳಿಗಳನ್ನೆದುರಿಸಲು ಸೈನಿಕ ಒಪ್ಪಂದವನ್ನು ಮಾಡಿಕೊಂಡವು. ಹೀಗಾಗಿ ಯುರೋಪ್ ಎರಡು ವಿರೋಧಿ ಸೈನಿಕ ಶಿಬಿರಗಳ ನೆಲೆಯಾಗಿ ಪರಿವರ್ತನೆಗೊಂಡಿತು.

**ರಾಷ್ಟ್ರ ಸಂಘದ ಕಾರ್ಯವೈಫಲ್ಯ**

ಪ್ಯಾರಿಸ್ ಶಾಂತಿ ಒಪ್ಪಂದದ ಪರಿಣಾಮವಾಗಿ ಜನಿಸಿದ ರಾಷ್ಟ್ರ ಸಂಘವು ಪ್ರಥಮ ಮಹಾಯುದ್ಧದ ವಿಜೇತ ರಾಷ್ಟ್ರಗಳ ಹಿತಾಸಕ್ತಿಗಳನ್ನು ರಕ್ಷಿಸುವ ಸಂಸ್ಥೆಯಾಯಿತು. ಯುರೋಪಿನಲ್ಲಿ ಸಂಭವಿಸಿದ ಯುದ್ಧಗಳನ್ನು ನಿಯಂತ್ರಿಸುವಲ್ಲಿ ವಿಫಲವಾಯಿತು. ಅಮೇರಿಕ, ರಷ್ಯಾಗಳನ್ನೊಳಗೊಂಡು ಅನೇಕ ರಾಷ್ಟ್ರಗಳು ರಾಷ್ಟ್ರ ಸಂಘದ ಸದಸ್ಯತ್ವವನ್ನು ತ್ಯಜಿಸಿದವು. ಜರ್ಮನಿಯನ್ನು ಯಾವಾಗಲೂ ಅಪರಾಧ ದೃಷ್ಟಿಯಿಂದ ನೋಡುವ ರಾಷ್ಟ್ರ ಸಂಘವು ಯುರೋಪಿನಲ್ಲಿ ಜರ್ಮನಿ ಮತ್ತು ರಷ್ಯಾಗಳ ಆಕ್ರಮಣಗಳನ್ನು ನಿಯಂತ್ರಿಸಲು ಗ್ರೀಕೋ-

ಇಟಲಿಯನ್ನರ ಹಾಗೂ ಸ್ಪ್ಯಾನಿಷ್ ಅಂತರ್ಯುದ್ಧವನ್ನು ನಿಲ್ಲಿಸಲು ಅಸಮರ್ಥ ವಾಯಿತು. ರಾಷ್ಟ್ರೀಯತೆ ಮತ್ತು ಜನಾಂಗ ಗೌರವಗಳನ್ನು ಕಾಪಾಡುವಲ್ಲಿ ರಾಷ್ಟ್ರ ಸಂಘ ಯಶಸ್ವಿಯಾಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಪೋಲೆಂಡಿನ ಮೇಲೆ ದಾಳಿ ನಿಲ್ಲಿಸುವಂತೆ ಮಿತ್ರರಾಷ್ಟ್ರಗಳಾದ ಫ್ರಾನ್ಸ್ ಮತ್ತು ಇಂಗ್ಲೆಂಡ್‌ಗಳು ಹಿಟ್ಲರನಿಗೆ ಆದೇಶವಿತ್ತವು. ಹಿಟ್ಲರನು ಇವರ ಆದೇಶವನ್ನು ಧಿಕ್ಕರಿಸಿ ಸೆಪ್ಟಂಬರ್ ೧, ೧೯೩೯ ಬೆಳಗಿನ ಜಾವ ೫-೩೦ ಗಂಟೆಗೆ ಪೋಲೆಂಡಿನ ಮೇಲೆ ದಾಳಿಮಾಡಿದಾಗ ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಜರ್ಮನಿಯ ಮೇಲೆ ಯುದ್ಧ ಘೋಷಿಸಿದವು. ಇದರಿಂದ ಎರಡನೆಯ ಮಹಾಯುದ್ಧ ಆರಂಭವಾಯಿತು.

**ಸಮತಾವಾದದ ಪ್ರಸಾರ**

ಯುರೋಪಿನಲ್ಲಿ ಕೈಗಾರಿಕಾ ಕ್ರಾಂತಿಯ ಫಲವಾಗಿ ಬಂಡವಾಳಶಾಹಿಗಳು, ವ್ಯಾಪಾರ ಮತ್ತು ಕೈಗಾರಿಕೆಗಳ ಮೇಲೆ ವಿಧಿಸಿದ ಅನೇಕ ಸರ್ಕಾರದ ನಿಬಂಧನೆಗಳು ತಮ್ಮ ಉತ್ಸಾಹವನ್ನು ತಡೆದು ದೇಶದ ಸಂಪತ್ತಿಗೆ ಅಡಚಣೆಯನ್ನುಂಟುಮಾಡಿವೆಯೆಂದು ಆಪಾದಿಸಲು ಆರಂಭಿಸಿದರು. ಇದೇ ಕಾಲಕ್ಕೆ ಮತ್ತೊಂದು ವರ್ಗವು ಎಲ್ಲಾ ಉತ್ಪಾದಕ ಕೈಗಾರಿಕೆಗಳನ್ನು ಸರಕಾರವೇ ವಹಿಸಿಕೊಂಡು ಪ್ರತಿಯೊಬ್ಬ ವ್ಯಕ್ತಿಗೂ ಉದ್ಯೋಗಾವಕಾಶ ಗಳನ್ನು ಕಲ್ಪಿಸಿಕೊಡಬೇಕೆಂಬ ವಾದವನ್ನು ಮಂಡಿಸಿತು. ಈ ವಿಚಾರ ಸಂಘರ್ಷವು ಸಮತಾವಾದದ ಹುಟ್ಟು ಮತ್ತು ಬೆಳವಣಿಗೆಗೆ ಕಾರಣವಾಯಿತೆಂದು ಹೇಳಬಹುದು. ಸಮತಾವಾದಕ್ಕೆ ಮಾರ್ಕ್ಸ್‌ವಾದ, ವೈಜ್ಞಾನಿಕ ಸಮಾಜವಾದ, ಕ್ರಾಂತಿಕಾರಕ ಸಮಾಜವಾದ ಎಂಬ ಹೆಸರುಗಳಿವೆ. ಸಮತಾವಾದ ಸಿದ್ಧಾಂತದ ಪ್ರತಿಪಾದಕ ಜರ್ಮನಿಯ ಅರ್ಥಶಾಸ್ತ್ರಜ್ಞ ರಾಗಿದ್ದಂತಹ ಕಾರ್ಲ್‌ಮಾರ್ಕ್ಸ್. ಈತನನ್ನು ಸಮಾಜವಾದದ ಪಿತಾಮಹನೆನ್ನುವರು. ಇವರ ಪ್ರಸಿದ್ಧ ಕೃತಿ 'ದಾಸ್ ಕ್ಯಾಪಿಟಲ್' (ಬಂಡವಾಳ) ಮತ್ತು ತನ್ನ ಸಹೋದ್ಯೋಗಿ ಫೆಡರಿಕ್ ಏಂಗೆಲ್ಸನೊಂದಿಗೆ ರಚಿಸಿದ "ದಿ ಕಮ್ಯುನಿಸ್ಟ್ ಮ್ಯಾನಿಫೆಸ್ಟೊ" (ಕಮುನಿಸ್ಟ್ ಘೋಷಣೆ) ಸಮತಾವಾದದ ಮೂಲ ಗ್ರಂಥಗಳಾಗಿವೆ. ಕಾರ್ಲ್‌ಮಾರ್ಕ್ಸ್‌ನ ನಂತರ ರಷ್ಯಾದ ನಾಯಕರುಗಳಾದ ಲೆನಿನ್ ಮತ್ತು ಸ್ಟ್ಯಾಲಿನ್ ಹಾಗು ಚೀನಾ ದೇಶದ ಮಾವೋತ್ಸೆತುಂಗ ಅವರು ಮಾರ್ಕ್ಸನ ಸಿದ್ಧಾಂತಗಳನ್ನಳವಡಿಸಿಕೊಂಡು ಸಮತಾವಾದವನ್ನು ಕಾರ್ಯರೂಪಕ್ಕಿಳಿಸಿದರು.

ಸಮತಾವಾದದ ಸಿದ್ಧಾಂತವು ಪ್ರಾಚೀನ ಕಾಲದಿಂದಲೂ ತಿಳುವಳಿಕೆ ಮತ್ತು ಸೌಮ್ಯ ಸ್ವರೂಪದ ಕಾರ್ಯಾಚರಣೆಯಲ್ಲಿತ್ತು. ಗ್ರೀಸ್ ದೇಶದ ತತ್ವಜ್ಞಾನಿ ಪ್ಲೇಟೊ ರಚಿಸಿರುವ "ರಿಪಬ್ಲಿಕ್" ಗ್ರಂಥದಲ್ಲಿ ಸಮತಾವಾದದ ಸಿದ್ಧಾಂತದ ಮೂಲಗಳನ್ನು ಕಾಣುತ್ತೇವೆ. ಮೆಕ್ಸಿಕೊ ಪ್ರಾಂತದ ಇಜಿಡೊದಲ್ಲಿ ಕೈಗೊಳ್ಳುತ್ತಿದ್ದ ಸಾಮೂಹಿಕ ಬೇಸಾಯ ಹಾಗೂ ಪರಿ ಶ್ರಮಕ್ಕೆ ತಕ್ಕಂತೆ ಅದರ ಉತ್ಪನ್ನದ ಹಂಚಿಕೆ ಕ್ರಮಕಾಲ ಸಮತಾವಾದದ ಸ್ವರೂಪವನ್ನು ತಿಳಿಸುತ್ತದೆ. ಕೆಲವು ವರ್ಷಗಳನಂತರ ಅಂದರೆ ಕ್ರಿ.ಶ.೧೭೯೭ರಲ್ಲಿ ಬಾಬಿಫ್ ಎಂಬ ಫ್ರೆಂಚ್ ವಿಚಾರವಾದಿ ಸಂಪತ್ತಿನ ಹಾಗೂ ಆರ್ಥಿಕ ಅವಕಾಶದ ಅಸಮಾನತೆಯನ್ನಿಟ್ಟುಕೊಂಡು ರಾಜಕೀಯ ಮತ್ತು ಸಾಮಾಜಿಕ ಸಮಾನತೆಯ ಬಗ್ಗೆ ಮಾತನಾಡುವುದು ಸರಿಯಲ್ಲವೆಂದು ಪ್ರಚಾರ ನಡೆಸಿ ಸಮತಾವಾದ ವಿಚಾರಕ್ಕೆ ಪ್ರೋ ದೊರೆಯುವಂತೆ ಮಾಡಿದನು. ತತ್ಪರಿಣಾಮವಾಗಿ ಫ್ರಾನ್ಸಿನ ಅರಸರು ಈತನನ್ನು ಮರಣಕ್ಕೀಡು ಮಾಡಿದರು.

೧೮ನೆಯ ಶತಮಾನದ ಕೈಗಾರಿಕಾ ಕ್ರಾಂತಿಯ ತರುವಾಯ ಪ್ರಸಿದ್ಧ ಸಮಾಜವಾದಿ ಹಾಗೂ ಮಾನವತಾವಾದಿ ಚಿಂತಕರಾಗಿದ್ದ ರಾಬರ್ಟ್ ಓವನ್(೧೭೧೭-೧೮೫೮, ಇಂಗ್ಲಿಷ್ ಸಮತಾವಾದಿ ಪಿತಾಮಹ), ಚಾರ್ಲ್ಸ್ ಪೋರಿಯರ್, ಸೇಂಟ ಸೈಮನ್, ಲಾರ್ಡ್ ಯಾಸ್ಲಿ, ಲುಯಿಬ್ಲಾಂಕನ್ ಮುಂತಾದವರು ಕಾರ್ಮಿಕರ ಹಾಗೂ ರೈತರ ಹಿತಾಸಕ್ತಿಗಳ ಬಗ್ಗೆ ಹೋರಾಟ ನಡೆಸಿದರು. ಇದರಿಂದಾಗಿ ಇಂಗ್ಲೆಂಡಿನಲ್ಲಿ ೧೮೩೩ರಲ್ಲಿ ಕಾರ್ಖಾನೆ ಕಾನೂನನ್ನು ಜಾರಿಗೆ ತರಲಾಯಿತು. ನೂಲುವ ಹಾಗು ನೇಯ್ಗೆಯ ವಿರುದ್ಧ ಕೂಗೆಬ್ಬಿಸಲಾಯಿತು. ೧೮ನೆಯ ಶತಮಾನದಲ್ಲಿ ಉದ್ಯಮಿದಾರರು ಹಾಗು ಶ್ರೀಮಂತರು ಬಡವರನ್ನು ಹಾಗೂ ಕಾರ್ಮಿಕರನ್ನು ಹೇಗೆ ಶೋಷಿಸುತ್ತಿದ್ದರೆನ್ನುವುದನ್ನು ಚಾರ್ಲ್ಸ್ ಡಿಕನ್ಸನು (೧೮೧೨-೧೮೭೦) ತನ್ನ ಪ್ರಸಿದ್ಧ ಕೃತಿ ಡೇವಿಡ್ ಕಾಪರ್‌ಫೀಲ್ಡನಲ್ಲಿ ಚಿತ್ರಿಸಿದ್ದಾನೆ. ೧೮೩೩ರ ನಂತರ ಜಾರಿಗೊಳಿಸಲಾದ ಕಾರ್ಮಿಕರ ಶಾಸನಗಳು ಕಾರ್ಮಿಕ ಜಗತ್ತಿನಲ್ಲಿ ಜಾಗೃತಿಯನ್ನು ಮೂಡಿಸಿ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಬಂಡವಾಳಗಾರರ ವಿರುದ್ಧ ಕ್ರಾಂತಿಯ ಕಹಳೆಯನ್ನು ಊದಲು ಆರಂಭಿಸಿದರು. ಇದೇ ಅವಧಿಯಲ್ಲಿ ಫ್ರಾನ್ಸಿನಲ್ಲಿಯೂ ಸಹ ಲೂಯಿ ಫಿಲಿಫ್ ಹಾಗೂ ಅವನ ಪ್ರಧಾನ ಮಂತ್ರಿ ಗಿಜೋಟ್‌ನ ಬಿಗಿಯಾದ ಸಾಂಪ್ರದಾಯ ಧೋರಣೆಯನ್ನು ಬಲವಾಗಿ ವಿರೋಧಿಸಿದರು.

ಈ ಬೆಳವಣಿಗೆಗಳಿಂದಾಗಿ ಯುರೋಪಿನ ಬುದ್ಧಿಜೀವಿಗಳು ಹಾಗು ಲೇಖಕರು ಔದ್ಯಮಿಕ ಸಂಘಟನೆ, ಹಣ ಮತ್ತು ಮಾನವಶ್ರಮ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಸಂದಿಗ್ಧ ಸಮಸ್ಯೆಗಳನ್ನು ಕುರಿತು ಹೊಸ ಸಿದ್ಧಾಂತಗಳನ್ನು ಬೆಳಕಿಗೆ ತಂದರು. ಇವುಗಳನ್ನು ಸಮಾಜವಾದಿ ಸಿದ್ಧಾಂತಗಳೆಂದು ಕರೆಯಲಾಯಿತು. ಯುರೋಪಿ ನಾದ್ಯಂತ ಬಂಡವಾಳಶಾಹಿಗಳ ಕಠೋರ ನೀತಿಯಿಂದಾಗಿ ತಮ್ಮ ಶ್ರಮಕ್ಕೆ ಅನುಗುಣವಾಗಿ ಪ್ರತಿಫಲ ದೊರೆಯಲಿಲ್ಲವೆಂದು ನಂಬಿಕೊಂಡಿದ್ದ ಲಕ್ಷೋಪಲಕ್ಷ ಶ್ರಮಜೀವಿಗಳು ಈ ಸಿದ್ಧಾಂತಗಳಿಂದ ಆಕರ್ಷಿತರಾದರು. ಬಹುಸಂಖ್ಯೆ ಜನತೆಯ ಹಿತಾಸಕ್ತಿಗನುಗುಣವಾಗಿ ಸಮಾಜ ಪುನಾರಚನೆಯ ವಿಚಾರವನ್ನು ಕ್ಲೌಡಿ ಸೇಂಟ ಸೈಮನ್‌ನು ಮಂಡಿಸುತ್ತ ಉತ್ಪಾದನೆಯ ಸಾಧನಗಳನ್ನು ಸರ್ಕಾರವು ತನ್ನ ಅಧೀನದಲ್ಲಿರಿಸಿಕೊಂಡು 'ಸಾಮರ್ಥ್ಯಕ್ಕೆ ತಕ್ಕ ಶ್ರಮ' ಹಾಗೂ 'ಸೇವೆಗೆ ತಕ್ಕ ಪ್ರತಿಫಲ' ಎಂಬು ತತ್ವಕ್ಕನುಗುಣವಾಗಿ ಉದ್ಯಮಗಳನ್ನು ಸಂಘಟಿಸಬೇಕೆಂದು ಘೋಷಿಸಿದನು. ಈತನು ಪ್ರತಿಪಾದಿಸಿದ ತತ್ವದಂತೆ ಯುರೋಪಿನ ಪ್ರಬಲ ರಾಜಕೀಯ ಶಕ್ತಿಯಾಗಿದ್ದ ಲೂಯಿ ಬ್ಲಾಂಕನು ಸಮಾಜವಾದಿ ಪಕ್ಷ ಸ್ಥಾಪಿಸಿ ಲೂಯಿ ಫಿಲಿಪ್ ಕಾರ್ಮಿಕ ಹಾಗೂ ರೈತ ವಿರೋಧಿ ಅರಸೊತ್ತಿಗೆಯನ್ನು ಕಿತ್ತೊಗೆಯುವಲ್ಲಿ ಮತ್ತು ಅನಂತರ ಸ್ಥಾಪಿಸಲ್ಪಟ್ಟ ಗಣರಾಜ್ಯದಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದನು. ಉದ್ಯೋಗಾವಕಾಶ ಪ್ರತಿಯೊಬ್ಬನ ಹಕ್ಕೆಂದು ಅದನ್ನು ಒದಗಿಸುವುದು ಸರ್ಕಾರದ ಕರ್ತವ್ಯವೆಂದು ಲೂಯಿ ಬ್ಲಾಂಕನು ಘೋಷಿಸಿದನು. ಸರಕಾರವು ತನ್ನ ಸ್ವಂತ ಹಣ ತೊಡಗಿಸಿ ರಾಷ್ಟ್ರೀಯ ಉದ್ಯಮಗಳನ್ನು ಸ್ಥಾಪಿಸಬೇಕು. ಶ್ರಮ ಜೀವಿಗಳೇ ಅಂತಹ ಆಡಳಿತವನ್ನು ನಿರ್ವಹಿಸಿ ಶ್ರಮದ ಸಂಪೂರ್ಣ ಲಾಭವನ್ನು ಪಡೆಯಬೇಕೆಂದು ತಿಳಿಸಿದನು. ಈ ಸಿದ್ಧಾಂತವು ಕೈಗಾರಿಕೆಗಳ ರಾಷ್ಟ್ರೀಕರಣಕ್ಕೆ ನಾಂದಿ ಹಾಡಿ ಬಂಡವಾಳಶಾಹಿ ಮತ್ತು ಕಾರ್ಮಿಕರ ನಡುವೆ ಹೋರಾಟ ಸೃಷ್ಟಿಸಿ ವೈಜ್ಞಾನಿಕ ಸಮಾಜವಾದ ಸ್ಥಾಪನೆಗೆ(ಕಮ್ಯುನಿಸಂ) ಅನುವು ಮಾಡಿಕೊಟ್ಟಿತು.

ಕ್ರಾಂತಿಗಾಗಿ ಕಾರ್ಮಿಕರನ್ನು ಹಾಗೂ ರೈತರನ್ನು ಸಂಘಟಿಸಲು ಬ್ರಿಸೆಲ್‌ಗೆ ಕಾರ್ಲ್‌ಮಾರ್ಕ್ಸ್ ತೆರಳಿದನು. ಅಲ್ಲಿ 'ಸಮತಾವಾದಿಗಳ ಪಡೆ' ಎಂಬ ಸಂಘವನ್ನು ಕಟ್ಟಿದನು. ೧೮೪೭ರಲ್ಲಿ ಈ ಪಡೆಯ ಸಮ್ಮೇಳನ ಲಂಡನ್ನಿನಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ತಾನು ಮಂಡಿಸಿದ ಕಮ್ಯುನಿಸ್ಟ್ ಮ್ಯಾನಿಫೆಸ್ಟೊಗೆ ಸರ್ವಸಮ್ಮತಿ ದೊರೆಯಿತು. ಕಮ್ಯುನಿಸ್ಟ್ ಘೋಷಣೆ ಕುರಿತು ಮಾತನಾಡುತ್ತ ಕಾರ್ಲ್‌ಮಾರ್ಕ್ಸ್ ಈ ರೀತಿ ಹೇಳುತ್ತಾನೆ.

*ಎಲ್ಲ ಸಮಾಜಗಳ ಇತಿಹಾಸವು ವರ್ಗ ಕಲಹಗಳ ಇತಿಹಾಸ ಸಮಾಜದ ಯಾವ ಅಂಶದ ಪ್ರಗತಿಗೇ ಆಗಲಿ ಅದಕ್ಕೆ ವ್ಯತಿರಿಕ್ತವಾದ ವಿರುದ್ಧ ಶಕ್ತಿಯೊಂದು ಬೆಳೆಯುತ್ತದೆ. ಈ ಎರಡು ಶಕ್ತಿಗಳು ಸಂಘರ್ಷಿಸಿದಂತೆ ಅವೆರಡಕ್ಕೂ ಭಿನ್ನವಾದ ನೂತನ ಅಂಶವೊಂದು ಸಿದ್ಧಿಸುತ್ತದೆ. ಈ ಸತ್ಯಾಂಶ ಆರ್ಥಿಕ ಸಮಸ್ಯೆಗಳಿಗೂ ಅನ್ವಯಿಸುತ್ತದೆ. ಜಗತ್ತಿನಲ್ಲಿ ಬಂಡವಾಳಶಾಹಿಗಳು ರಾಷ್ಟ್ರದ ಸಂಪನ್ಮೂಲಗಳಿಗೆ ಒಡೆಯರಾಗಿ ಅವರು ನಡೆಸುವ ಶೋಷಣೆಯ ಫಲವಾಗಿ ಕಾರ್ಮಿಕರ ಕಷ್ಟಗಳು ಹೆಚ್ಚುತ್ತವೆ. ಎಲ್ಲರಿಗೂ ಸಮಾನ ಹಕ್ಕು ಬಾಧ್ಯತೆಗಳಿದ್ದು, ಸಮಾನ ಆಸ್ತಿಪಾಸ್ತಿಗಳನ್ನು ಹೊಂದಲು ಬಂಡವಾಳಶಾಹಿತ್ವ ರೂಪುಗೊಳ್ಳಲು ಅವಕಾಶವಿಲ್ಲದ ರಾಜ್ಯ ಪದ್ಧತಿಯನ್ನು ಕಟ್ಟಬೇಕಾಗಿದೆ. ಇದು ಕ್ರಾಂತಿಯಿಂದ ಮಾತ್ರ ಸಾಧ್ಯವೆಂದು*

ಸಾರಿದನು. ಜಮೀನ್ದಾರಿ ಪದ್ಧತಿಯನ್ನು ರದ್ದುಗೊಳಿಸಿ ರಾಷ್ಟ್ರೀಕರಣದ ನೀತಿಯೊಂದಿಗೆ ಸಾಮೂಹಿಕ ಬೇಸಾಯವನ್ನು ಆರಂಭಿಸಲು ಬೇಕಾಗುವ ಸರ್ಕಾರವನ್ನು ಸ್ಥಾಪಿಸಲು ರೈತ ಹಾಗೂ ಕಾರ್ಮಿಕರ ನಡುವೆ ಮಧುರ ಬಾಂಧವ್ಯವನ್ನು ಕಲ್ಪಿಸುವ ವಿಷಯವನ್ನು ಒತ್ತಿ ಹೇಳಿದನು.

ಯುರೋಪ್ ದೇಶಗಳ ಮೇಲೆ ಈ ಘೋಷಣೆ ಮಹತ್ವಪೂರ್ಣ ಪ್ರಭಾವ ಬೀರಿತು. ಭೂ ಒಡೆಯರಿಗೂ ಶ್ರಮಜೀವಿಗಳಿಗೂ ಉದ್ದಿಮೆದಾರರಿಗೂ ಮತ್ತು ಕಾರ್ಮಿಕರಿಗೂ ಎಲ್ಲೆಡೆ ಘರ್ಷಣೆ ಆರಂಭವಾದುವು. ೧೮೪೮ರಲ್ಲಿ ಫ್ರಾನ್ಸ್‌ನಲ್ಲಿ ಕ್ರಾಂತಿ ನಡೆಯಿತು. ನಂತರ ಮಾರ್ಕ್ಸ್‌ನು ಪ್ಯಾರಿಸ್‌ಗೆ ಹೋಗಿ ಪ್ರಾನ್ಸಿನ ಕಾರ್ಮಿಕರಿಗೆ ಮಾರ್ಗದರ್ಶನ ಮಾಡಲು ಪ್ರಾರಂಭಿಸಿದನು. ಮಾರ್ಕ್ಸ್‌ನನ್ನು ಅಪಾಯಕಾರಿ ವ್ಯಕ್ತಿಯೆಂದು ಘೋಷಿಸಿ ಸರ್ಕಾರ ಆತನನ್ನು ಅಲ್ಲಿಂದ ಓಡಿಸಿತು. ಮಾರ್ಕ್ಸನು ಜರ್ಮನಿಗೆ ಬಂದು 'ಕ್ರಾಂತಿ' ಎಂಬ ಪತ್ರಿಕೆಯೊಂದನ್ನು ಆರಂಭಿಸಿ ಯುರೋಪ್ ದೇಶಗಳಲ್ಲಿ ಕಾರ್ಮಿಕ ಮುಖಂಡರ ಬೆಂಬಲವನ್ನು ಸಮತಾವಾದಕ್ಕೆ ದೊರಕಿಸಿಕೊಟ್ಟನು.

ಸಮಾಜದಲ್ಲಿ ಬಂಡವಾಳಶಾಹಿ ಪದ್ಧತಿಯನ್ನು ತೊಡೆದುಹಾಕಿ ಕೇಂದ್ರೀಕೃತ ಸಂಪತ್ತನ್ನು ವಿಕೇಂದ್ರಗೊಳಿಸಿ, ದುಡಿಯುವ ಕೈಗಳಿಗೆ ಸಮಾನ ಅವಕಾಶ ಕಲ್ಪಿಸಿ, ಮಾದರಿ ರಾಜ್ಯ (ಸರ್ವರ) ಹಿತ ಸಾಧಿಸುವುದು ಸಮತಾವಾದದ ಗುರಿಯಾಗಿತ್ತು. ಇದರ ಮುಖ್ಯ ತತ್ವಗಳು ವರ್ಗ ಸಂಘರ್ಷ ಮತ್ತು ಮಹಾಕ್ರಾಂತಿ ಅಂದರೆ ಹಿಂಸಾತ್ಮಕ ಮಾರ್ಗದ ಮೂಲಕ ಕಾರ್ಮಿಕರ ಸರ್ವಾಧಿಕಾರವನ್ನು ವ್ಯಕ್ತಿ ಸ್ವಾತಂತ್ರ್ಯ, ಸೃಜನಶೀಲತೆ ಮತ್ತು ಆತನ ಸರ್ವಾಂಗೀಣ ಅಭಿವೃದ್ಧಿಗಾಗಿ ಬಲಾತ್ಕಾರ ಪೂರ್ವಕವಾಗಿ ಸ್ಥಾಪಿಸುವುದು.

ಕಾರ್ಮಿಕರ ಸರ್ವಾಧಿಕಾರದ ಕುರಿತು ಮಾರ್ಕ್ಸ್ ಈ ರೀತಿ ಅಭಿಪ್ರಾಯಪಡುತ್ತಾನೆ.

*ಹಳೆಯ ಸಮಾಜವನ್ನು ಕೊನೆಗೊಳಿಸಿ ಹೊಸ ಸಮಾಜ ಸ್ಥಾಪನೆಗೆ ಕಾರ್ಮಿಕರ ಸರ್ವಾಧಿಕಾರದ ಸ್ಥಾಪನೆ ಅಗತ್ಯ. ಇಂತಹ ರಾಜ್ಯದಲ್ಲಿ ಅಧಿಕಾರ ಸೂತ್ರವನ್ನು ವಹಿಸುವ ನಾಯಕರ ಅಧಿಕಾರ ವ್ಯಾಪ್ತಿಗೆ ಮಿತಿ ಇರಬಾರದು. ಅಂದಾಗ ಮಾತ್ರ ರಾಜ್ಯದ ನೈಸರ್ಗಿಕ ಸಂಪತ್ತನ್ನು ರಾಷ್ಟ್ರೀಕರಣಗೊಳಿಸಲು ಮತ್ತು ಬಂಡವಾಳ ಪದ್ಧತಿಯನ್ನು ನಿರ್ಮೂಲ ಮಾಡಲು ಸಾಧ್ಯ. ಇಂತಹ ಸಮತಾವಾದ ಸರ್ಕಾರ ವರ್ಗ ರಹಿತ ಸಮಾಜವನ್ನು ಸೃಷ್ಟಿಸಿ ಜನರ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸಬಲ್ಲದು. ಕಾರ್ಲ್ ಮಾರ್ಕ್ಸನು ಈ ಆದರ್ಶ ರಾಜ್ಯದ ಪ್ರಾರಂಭದಲ್ಲಿ ಜನರು ಪರಿಶ್ರಮಕ್ಕೆ ತಕ್ಕ ಫಲವನ್ನು ಅಪೇಕ್ಷೆ ಮಾಡಿ ಮುಂದಿನ ದಿನಗಳಲ್ಲಿ ಕೆಲಸ ಸಂಸ್ಕೃ ತಿಯನ್ನು ರೂಢಿಸಿಕೊಳ್ಳುವರು. ಆಗ ಜನರು ಹೆಚ್ಚು ಹೆಚ್ಚು ದುಡಿದು ರಾಜ್ಯದ ಸಂಪತ್ತನ್ನು ಹೆಚ್ಚಿಸುವರು. ಉತ್ಪಾದನೆಯ ಎಲ್ಲಾ ಸಂಪತ್ತು ರಾಜ್ಯದ ಸೊತ್ತಾಗಿರುವುದರಿಂದ ಜನರ ಎಲ್ಲ ಅವಶ್ಯಕತೆಗಳನ್ನು ಈಡೇರಿಸುವ ರಚನಾತ್ಮಕ ಕಾರ್ಯಕ್ರಮಗಳನ್ನು ಸರಕಾರವೇ ಹಮ್ಮಿಕೊಳ್ಳುತ್ತದೆ. ತತ್ಪರಿಣಾಮವಾಗಿ ಶ್ರೀಮಂತ, ಬಡವ ಎನ್ನುವ ಭೇದ ನಶಿಸಿ ಬಡತನ ನಿವಾರಣೆಯಾಗಿ ಶಾಂತಿ ಮತ್ತು ಸುಖವುಳ್ಳ ಸಮಾಜದಲ್ಲಿ ನೆಲೆಗೊಳ್ಳ ವುದು. ಸಮತಾವಾದದ ತತ್ವಗಳಿಂದಾಗಿ ರಾಷ್ಟ್ರೀಯ ಪ್ರಜ್ಞೆಯ ಜೊತೆಗೆ ಅಂತಾರಾಷ್ಟ್ರೀಯ ಪ್ರಜ್ಞೆ ಉದಯಿಸಿ ಯುದ್ಧ ಭೀತಿಗಳು ಮಾಯವಾಗುತ್ತದೆ.*

ಕಾರ್ಲ್‌ಮಾರ್ಕ್ಸ್‌ನ ಮೇಲಿನ ವಿಚಾರಗಳಿಂದ ಪ್ರೇರಿತವಾಗಿ ೧೯೧೭ರಲ್ಲಿ ಲೆನಿನ್ ಮತ್ತು ಸ್ಟಾಲಿನ್‌ರು ರಷ್ಯಾದಲ್ಲಿ ಕ್ರಾಂತಿ ಮಾಡಿ ಸಮತಾವಾದ ರಾಜ್ಯವನ್ನು ಸ್ಥಾಪಿಸಿದರು. ಕಾರ್ಲ್‌ಮಾರ್ಕ್ಸನ ಸಿದ್ಧಾಂತಗಳನ್ನು ಜರ್ಮನಿಯಲ್ಲಿ ಅನುಷ್ಠಾನಗೊಳಿಸಲು ಕಮ್ಯುನಿಸ್ಟರು ೧೯೨೩ರವರೆಗೂ ತಮ್ಮನ್ನು ರಾಜಕೀಯದಲ್ಲಿ ಸಕ್ರಿಯವಾಗಿ ಅರ್ಪಿಸಿಕೊಂಡರು. ೧೯೧೯ರಲ್ಲಿ ಹಂಗೇರಿ ಕಮ್ಯುನಿಸ್ಟರ ಆಡಳಿತಕ್ಕೊಳಪಟ್ಟಿತ್ತು. ೧೯೪೮ರಲ್ಲಿ ಚೀನಾ ದೇಶದಲ್ಲಿ ಮಾವೋತ್ಸೆತುಂಗ್‌ನ ನಾಯಕತ್ವದಲ್ಲಿ ಕ್ರಾಂತಿ ಸಂಭವಿಸಿ ಸಮತಾವಾದದ ಸರ್ಕಾರವು ಸ್ಥಾಪಿಸಲ್ಪಟ್ಟಿತು. ಮುಂದಿನ ದಿನಗಳಲ್ಲಿ ಯುಗೋಸ್ಲೋವಿಯ, ಉತ್ತರ ವಿಯಟ್ನಾಂ ಮತ್ತು ಕ್ಯೂಬಾ ದೇಶಗಳು ಮಾರ್ಕ್ಸ್ ತತ್ವಾಧಾರಿತ ಸಮತಾವಾದದ ಸರ್ಕಾರಗಳಿಗೆ ಅವಕಾಶ ಮಾಡಿಕೊಟ್ಟವು.

ರಷ್ಯಾದಲ್ಲಿ ಝಾರನ ಪ್ರಭುತ್ವವನ್ನು ಕೊನೆಗಾಣಿಸಿದ ಲೆನಿನ್ನನು ಕಾರ್ಲ್‌ಮಾರ್ಕ್ಸನ ವಿಚಾರಧಾರೆಯನ್ನು ರಷ್ಯಾದಲ್ಲಿ ಹರಡಿದನು. ಲೆನಿನ್ನನು ರಷ್ಯಾದ ರಾಜಧಾನಿಯನ್ನು ಸೇಂಟ ಪೀಟರ್ಸ್‌ಬರ್ಗ್‌ನಿಂದ ಮಾಸ್ಕೊಗೆ ವರ್ಗಾಯಿಸಿ ತ್ವರಿತಗತಿಯಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳನ್ನು ಕೈಕೊಂಡನು. ಸಮತಾವಾದದ ತತ್ವಗಳನ್ನು ಪ್ರಸಿದ್ಧ ಕಾದಂಬರಿಕಾರನಾಗಿದ್ದ ಮ್ಯಾಕ್ಸಿಂಗಾರ್ಕಿ ಹರಡಿದನು. ೧೯೧೮ರಲ್ಲಿ ಸೋವಿಯತ್ ಸಂವಿಧಾನವು ಶಾಸಕಾಂಗವನ್ನು ಸ್ಥಾಪಿಸಿತು. ಈ ನಿಮಿತ್ತ ಬೊಲ್ಷವಿಕ್ ಅಥವಾ ಕಮ್ಯುನಿಸ್ಟ್ ಪಕ್ಷವನ್ನು ಹೊರತು ಎಲ್ಲ ಪಕ್ಷಗಳನ್ನು ಲೆನಿನ್ ನಿಷೇಧಿಸಿದನು. ಲೆನಿನ್ನನು “ಹೊಸ ಆರ್ಥಿಕ ನೀತಿ”ಯನ್ನು ಉದ್ಘಾಟಿಸುತ್ತ “ಭಯೋತ್ಪಾದನೆ ಹಾಗೂ ಹಿಂಸಾಚಾರ ಗಳಿಲ್ಲದೆ ಶ್ರಮಜೀವಿಗಳ ಸರ್ವಾಧಿಕಾರತ್ವ ಸಾಧ್ಯವಿಲ್ಲ. ಬಂಡವಾಳಶಾಹಿಗಳ ವಿರುದ್ಧ ರಕ್ತಪಾತ ಮಾಡುವುದನ್ನು ದೃಢವಾಗಿ ಸಮರ್ಥಿಸುತ್ತೇನೆ” ಎಂದು ಸಾರಿದನು. ತನ್ನ ಆರ್ಥಿಕ ನೀತಿಯಂತೆ ಬಲಾತ್ಕಾರವಾಗಿ ಎಲ್ಲ ಖಾಸಗಿ ಆಸ್ತಿಯನ್ನು ಜಪ್ತಿ ಮಾಡಲಾಯಿತು. ಕಾರ್ಖಾನೆಗಳು, ಗಿರಿಣಿಗಳು, ರೈಲುಗಳು ಮತ್ತು ಬ್ಯಾಂಕುಗಳು ಸಹ ರಾಷ್ಟ್ರದ ಒಡೆತನಕ್ಕೆ ಸೇರಿದವು. ಜಮೀನುದಾರರ ಜಾಗೀರುಗಳನ್ನು ಸ್ವಾಧೀನಪಡಿಸಿಕೊಂಡ ಪರಿಣಾಮವಾಗಿ ಬಹುಶಃ ೧೩ ಕೋಟಿ ೫೦ ಲಕ್ಷ ಎಕರೆ ಜಮೀನು ಜನತೆಯ ಒಂದು ಹೊಸ ವರ್ಗಕ್ಕೆ ವರ್ಗಾವಣೆಯಾಯಿತು. ಮಧ್ಯಮ ಹಾಗು ಶ್ರೀಮಂತ ವರ್ಗಗಳು ನಾಶವಾದವು. ರೈತರು ಮತ್ತು ಕಾರ್ಮಿಕರು ಸರಕಾರ ನಡೆಸುವ ಅಧಿಕಾರ ಪಡೆದು ರಷ್ಯಾದ ಹಳೆಯ ರಾಜಕೀಯ ವ್ಯವಸ್ಥೆಯನ್ನು ಕೊನೆಗೊಳಿಸಿದರು. ಸಾವಿರಾರು ಜನರ ಜೀವ ಮತ್ತು ಸ್ವಾತಂತ್ರ್ಯಗಳನ್ನು ಬಲಿ ತೆಗೆದುಕೊಂಡು ಲೆನಿನ್ನನು ಈ ಗುರಿಯನ್ನು ಸಾಧಿಸಿದನು.

ಲೆನಿನ್ನನ ನಂತರ ಅಧಿಕಾರಕ್ಕೆ ಬಂದ ಸ್ಟ್ಯಾಲಿನ್ನನು ಎಲ್ಲ ಖಾಸಗಿ ಒಡೆತನವನ್ನು ರದ್ದುಗೊಳಿಸಿ ರಷ್ಯಾದ ಸರ್ವತೋಮುಖ ಅಭಿವೃದ್ಧಿಗಾಗಿ ೧೯೨೮ರಲ್ಲಿ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತಂದನು. ಇದರಿಂದ ಕೈಗಾರಿಕಾ ಉತ್ಪನ್ನಗಳು ಹೆಚ್ಚಿದವು. ಉದ್ದಿಮೆ ಮತ್ತು ವ್ಯಾಪಾರಗಳನ್ನು ರಾಷ್ಟ್ರೀಕರಣಗೊಳಿಸಿ ಸಾಮೂಹಿಕ ಪದ್ಧತಿಯ ಬೇಸಾಯವನ್ನು ಜಾರಿಗೆ ತಂದನು. ಇತ್ತ ಯುಗೋಸ್ಲಾವಿಯಾದಲ್ಲಿ ಎರಡನೆ ಮಹಾಯುದ್ಧ ನಡೆಯುವಾಗ ಜೆ.ಬಿ.ಟಿಟೊನ್ (೧೮೨೯-೧೯೮೦) ನಾಯಕತ್ವದಲ್ಲಿ ಕಮ್ಯುನಿಸ್ಟ್ ಚಳವಳಿ ಪ್ರಬಲಗೊಂಡಿತು. ಚೀನಾದಲ್ಲಿ ೧೯೨೧ರಲ್ಲಿ ಮಾವೋತ್ಸೆತುಂಗನ (೧೮೯೩-೧೯೭೬) ನಾಯಕತ್ವದಲ್ಲಿ ಕಮ್ಯುಮಿಸ್ಟ್ ಪಕ್ಷ ಉದಯವಾಯಿತು. ಈತನು ರಾಜಪ್ರಭುತ್ವವಾದಿಯಾದ ಕೈಷೇಕ್‌ನ ವಿರುದ್ಧ ಕ್ರಾಂತಿಮಾಡಿ ೧೯೪೮ರಲ್ಲಿ ಚೀನಾ ದೇಶದಲ್ಲಿ ಕಮ್ಯುನಿಸ್ಟ್ ಸರಕಾರ ವನ್ನು ಸ್ಥಾಪಿಸಿದನು. ೧೯೧೯ರ ಮಾರ್ಚ್‌ನಲ್ಲಿ ಬೇಲಾಕುನ್ ಹಾಗೂ ಅವನ ಸಂಗಡಿಗರು ಹಂಗೇರಿಯಲ್ಲಿ ಕಮ್ಯುನಿಸ್ಟ್ ಸರಕಾರವನ್ನು ಸ್ಥಾಪಿಸಿದನು. ರಷ್ಯಾ ಮಾದರಿಯಲ್ಲಿ ಸುಧಾರಣೆ ಕೈಕೊಂಡ ಕಮ್ಯುನಿಸ್ಟ್ ನಾಯಕ ಬೇಲಾಕುನ್‌ನು ಆರು ತಿಂಗಳ ನಂತರ ಅಂದರೆ ಆಗಸ್ಟ್ ೧೯೧೯ರಲ್ಲಿ ಜನತೆಯ ವಿರೋಧವನ್ನೆದುರಿಸಲಾರದೆ ಅಧಿಕಾರ ಕಳೆದುಕೊಂಡನು. ಯುರೋಪಿನಲ್ಲಿ ಸಮತಾವಾದದ ಬೆಳವಣಿಗೆಯಿಂದಾಗಿ ಸಮಾಜವಾದ, ಸಾಮೂಹಿಕವಾದ ಮತ್ತು ಮಾರ್ಕ್ಸ್‌ವಾದಗಳು ಜನ ಸಾಮಾನ್ಯನ ಹೃದಯದಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಭಾತೃತ್ವ ತತ್ವಗಳಷ್ಟೇ ಜನಪ್ರಿಯವಾಗಿ ನೆಲೆಸಿದವು.

**ಇಟಲಿಯಲ್ಲಿ ಫ್ಯಾಸಿಸಂ-ಫ್ಯಾಸಿಸ್ಟ್ ಸಿದ್ಧಾಂತದ ಉದಯ**

ಔದ್ಯೋಗಿಕರಣ ಮತ್ತು ನಗರೀಕರಣಗಳ ವೈಫಲ್ಯಗಳಿಂದಾಗಿ ಮತ್ತು ಪ್ರಥಮ ಮಹಾಯುದ್ಧದ ನಂತರ ಯುರೋಪಿನಲ್ಲಿ ಕಾಣಿಸಿಕೊಂಡ ರಾಜಕೀಯ ಮತ್ತು ಆರ್ಥಿಕ ಅವ್ಯವಸ್ಥೆಗಳಿಂದಾಗಿ ಬಂಡವಾಳಶಾಹಿ ವ್ಯವಸ್ಥೆ, ಪ್ರಜಾಪ್ರಭುತ್ವ ಮತ್ತು ಕಮ್ಯುನಿಸ್ಟ್ ನೀತಿಗಳನ್ನು ಅಲ್ಲಿಯ ಜನ ಅದರಲ್ಲೂ ಇಟಲಿಯನ್ನರು ಮತ್ತು ಜರ್ಮನ್ನರು ತಿರಸ್ಕರಿಸಿ ದರು. ಈ ಸನ್ನಿವೇಶದಲ್ಲಿ ಜನ್ಮತಾಳಿದ ಫ್ಯಾಸಿಸ್ಟವಾದವು ಇಪ್ಪತ್ತನೆಯ ಶತಮಾನದ (೧೯೨೨-೧೯೪೫) ಇಟಲಿಯ ರಾಜಕೀಯ ಸಿದ್ಧಾಂತವಾಗಿದೆ. ಇದಕ್ಕೆ ಚಾರಿತ್ರಿಕ ಘಟನೆಗಳನ್ನು ಬಿಟ್ಟರೆ ಬೇರೆ ಯಾವ ತತ್ವಗಳು ಕಾಣುವುದಿಲ್ಲ. ಕೆಳಕಾಣಿಸಿದ ಅಂಶಗಳನ್ನು ಬೆನಿಟೊ ಮುಸ್ಸಲೋನಿ ಪ್ರತಿಪಾದಿಸಿದ, ಫ್ಯಾಸಿಸಂನ ಉದಯಕ್ಕೆ ಕಾರಣವಾದವು. ಇಟಲಿಯ ನೆರವಿನೊಂದಿಗೆ ಜಯ ಸಾಧಿಸಿದ ಮಿತ್ರ ರಾಷ್ಟ್ರಗಳು ಪ್ರಥಮ ಮಹಾಯುದ್ಧದ ನಂತರ ತಮ್ಮ ಆಶ್ವಾಸನೆಯಂತೆ ಆಸ್ಟ್ರಿಯಾಕ್ಕೆ ಸೇರಿದ ಎರಡು ಜಿಲ್ಲೆಗಳಾದ ಟ್ರೆನ್‌ಟಿನೊ ಮತ್ತು ಟ್ರಿಸ್ಟೆಗಳನ್ನು ಆಫ್ರಿಕಾದ ಜರ್ಮನ್ ವಸಾಹತುಗಳನ್ನು, ಫಿಯುಮಿ ಕೋಟೆಯನ್ನು ಇಟಲಿಗೆ ಕೊಡಲು ನಿರಾಕರಿಸಿದವು. ಇದರಿಂದಾಗಿ ಇಟಲಿಯ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರತಿಷ್ಟೆಗೆ ಧಕ್ಕೆಯುಂಟಾಯಿತು.

ಯುದ್ಧದಲ್ಲಿ ಹೋರಾಡಿ ಘಾಸಿಗೊಂಡಿದ್ದ ಮುಸ್ಸೊಲೋನಿಯು, ಅನೇಕ ದೇಶಭಕ್ತರು, ಕಾರ್ಮಿಕರು, ಬುದ್ಧಿಜೀವಿಗಳು, ಮಾಜಿ ಸೈನಿಕರು ಹಾಗು ಕ್ರಾಂತಿಕಾರಿ ಸಮಾಜವಾದಿಗಳು ಇತರರು ಮಿತ್ರರಾಷ್ಟ್ರಗಳ ಧೋರಣೆಯಿಂದ ಅವಮಾನಿತರಾದರು. ಇವರೆಲ್ಲರು ಯುದ್ಧೋತ್ತರ ಇಟಲಿಯಾ ಈ ದುಸ್ಥಿತಿಗೆ ಇಟಲಿಯ ಗಿಯೊಲಿಟ್ಟಿ (ಮಧ್ಯಮ ವರ್ಗದ ಉದಾರವಾದಿ) ನಾಯಕತ್ವದ ದುರ್ಬಲ ಸರಕಾರವೆ ಕಾರಣವೆಂದು ನಿರ್ಧರಿಸಿ ಆತನ ಸರಕಾರವನ್ನು ಕಿತ್ತೆಸೆಯಲು ಪಣತೊಟ್ಟರು. ಇವರೆಲ್ಲ “ಫ್ಯಾಸಿಯೊ” ಎಂಬ ಸಂಘವನ್ನು ಮುಸೊಲೋನಿ ನಾಯಕತ್ವದಲ್ಲಿ ಕಟ್ಟಿಕೊಂಡು ಇಟಲಿಯಲ್ಲಿಯ ರಾಜಕೀಯ ಅಸ್ಥಿರತೆಗೆ (ಬೊಲ್ಷವಿಕ್ಸ್) ಮತ್ತು ಅರಾಜಕತೆಗೆ ಕಾರಣರಾದ ಸಮಾಜವಾದಿಗಳ, ಕಮ್ಯುನಿಸ್ಟರ ಹಾಗೂ ರಷ್ಯಾ ಪ್ರೇರಿತ (ಬೊಲ್ಷವಿಕ್ಸ್) ಕ್ರಾಂತಿಕಾರಿ ದುಷ್ಟ ಶಕ್ತಿ ಸಂಘಟನೆಗಳನ್ನು ಬಗ್ಗು ಬಡಿಯಲು ಪ್ರತಿಜ್ಞೆಗೈದರು. ಕಳೆದು ಹೋದ ಇಟಲಿಯ ರೋಮ್ ಸಾಮ್ರಾಜ್ಯದ ವೈಭವವನ್ನು ಪುನಃಸ್ಥಾಪಿಸಿ ಸಂಸ್ಕೃತಿ ಪರಂಪರೆಯನ್ನು ಕಾಯ್ದುಕೊಂಡು ಹೋಗಲು ನಿರ್ಧರಿಸಿದರು. ಪ್ರಥಮ ಮಹಾಯುದ್ಧದ ಪರಿಣಾಮವಾಗಿ ಇಟಲಿ ಆರ್ಥಿಕ ಸಂಕಷ್ಟಕ್ಕೊಳ ಗಾಯಿತು. ಹಣವು ತನ್ನ ಮೌಲ್ಯವನ್ನು ಕಳೆದುಕೊಂಡದ್ದರಿಂದ ಇಟಲಿಯನ್ನರು ಹಣ ದುಬ್ಬರದ ಸಮಸ್ಯೆಯನ್ನು ಎದುರಿಸಬೇಕಾಯಿತು. ವಾಣಿಜ್ಯ ವ್ಯಾಪಾರಗಳು ಸ್ಥಗಿತಗೊಂಡವು. ನಿರುದ್ಯೋಗ ಸಮಸ್ಯೆಯು ಅಲ್ಲಿನ ಯುವಕರನ್ನು ಮಾಜಿ ಸೈನಿಕರನ್ನು ಹಾಗೂ ಕಾರ್ಮಿಕರನ್ನು ಕಂಗೆಡಿಸಿತು. ತತ್ಪರಿಣಾಮವಾಗಿ ಬಡತನ, ಅರಾಜಕತೆ ತಾಂಡವವಾಡಲು ಪ್ರಾರಂಭಿಸಿತು.

ದೋಷಪೂರಿತ ಮತದಾನ ವ್ಯವಸ್ಥೆಯಿಂದ ಇಟಲಿಯ "ಚೇಂಬರ್ ಆಫ್ ಡೆಪ್ಯುಟಿಸ್" (ಪಾರ್ಲಿಮೆಂಟ)ಗೆ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾದ ಸಮಾಜವಾದಿಗಳು, ಕಮ್ಯುನಿಸ್ಟರು, ಪಾಪ್ಯುಲರ್ ಪಕ್ಷದವರು, ಕೇವಲ ಸರ್ಕಾರವನ್ನು ಟೀಕಿಸುವುದರಲ್ಲಿ ಮತ್ತು ಪಕ್ಷ ಜಗಳಗಳಲ್ಲಿ ಕಾಲಕಳೆದರು. ಸಮರ್ಥ ನಾಯಕರಿಲ್ಲದ ಪ್ರಯುಕ್ತ ಇವರಾರು ಇಟಲಿಗೆ ಸ್ಥಿರ ಸರಕಾರವನ್ನು ಕೊಡುವ ಸ್ಥಿತಿಯಲ್ಲಿರಲಿಲ್ಲ. ಇದು ಇಟಲಿಯಾದ್ಯಂತ ರಾಷ್ಟ್ರೀಯರ ಹಾಗು ದೇಶಾಭಿಮಾನಿಗಳ ಮನಸ್ಸನ್ನು ಕೆರಳಿಸಿ ಇಟಾಲಿಯನ್ನರ ಅತೃಪ್ತಿ ಅಸಮಾಧಾನಗಳಿಗೆ ಕಾರಣವಾಯಿತು. ಇಂತಹ ಪರಿಸ್ಥಿತಿಯನ್ನು ಗಮನಿಸಿದ ಜನರು ಮತ್ತು ಮಾಜಿ ಸೈನಿಕರುಗಳು ಇಟಲಿಯ ಏಕತೆ, ಶಕ್ತಿ ಮತ್ತು ಶಿಸ್ತಿನ ಸಂಕೇತವಾಗಿದ್ದ ಮುಸ್ಸೊಲೊನಿ ನಾಯಕತ್ವದ ಕ್ರೀಯಾಶೀಲ ರಾಜಕೀಯ 'ಫ್ಯಾಸಿಸ್ಟ್' ಪಕ್ಷವನ್ನು ಬೆಂಬಲಿಸಲು ನಿರ್ಧರಿಸಿದ ಪರಿಣಾಮವಾಗಿ 'ಫ್ಯಾಸಿಸಂ ಉದಯಿಸಿತು.'

**ಬೆನಿಟೊ ಮುಸ್ಸೊಲೊನಿ (೧೮೮೩-೧೯೪೫)**

ಬೆನಿಟೊ ಮುಸ್ಸೊಲೊನಿ ಇಟಲಿಯ ರೊಮಾಗ್ನ ಪ್ರಾಂತದ ಪ್ರಡಾಸಿಯೊ ಎಂಬ ಸ್ಥಳದಲ್ಲಿ ೧೮೮೩ರಲ್ಲಿ ಕಾರ್ಮಿಕ ವರ್ಗದ ಕಮ್ಮಾರ ಕುಟುಂಬದಲ್ಲಿ ಜನಿಸಿದನು. ಸ್ವಿರ್ಜರ್ಲೆಂಡಿನ ವಿಶ್ವವಿದ್ಯಾಲಯದಲ್ಲಿ ಶಿಕ್ಷಣ ಪೂರೈಸಿಕೊಂಡು ಶಿಕ್ಷಕನಾಗಿ ತನ್ನ ವೃತ್ತಿಯನ್ನು ಪ್ರಾರಂಭಿಸಿದನು. ಫ್ರಾನ್ಸಿನ ತತ್ವಜ್ಞಾನಿ ಜಾರ್ಜಸ್ ಸೊರೆಲ್(೧೮೪೭-೧೯೨೨) ಅವರ ತತ್ವಗಳಿಂದ ಪ್ರಭಾವಿತನಾಗಿ (ಉಗ್ರರಾಷ್ಟ್ರೀಯತೆ, ತಾರ್ಕಿಕವಾದ, ಪುರಾಣ ತಳಹದಿಯ ಮೇಲೆ ರಾಜಕೀಯ ಶಕ್ತಿಯ ಬೆಳವಣಿಗೆ, ಉತ್ಕೃಷ್ಟನಾಯಕತ್ವ) ಸಮಾಜವಾದಿ ಪಕ್ಷದ ಸದಸ್ಯನಾಗಿ ಎಡಪಂಥಿ ವಿಚಾರಗಳನ್ನು ಇಟಲಿಯ ಭದ್ರತೆ ಮತ್ತು ಸರ್ವತೋಮುಖ ಅಭಿವೃದ್ದಿಗಾಗಿ ಪ್ರತಿಪಾದಿಸಿದನು. ಮುಂದೆ ಸಮಾಜವಾದಿ ಪಕ್ಷದ ವರ್ತಮಾನ ಪತ್ರಿಕೆ 'ಆವಂತಿ'ಯ ಸಂಪಾದಕನಾಗಿ ಸೇವೆ ಸಲ್ಲಿಸಿದನು.

ಸ್ವಿಡ್ಜರ್‌ಲೆಂಡ್‌ನಲ್ಲಿ ತಾನು ನಡೆಸಿದ ಕ್ರಾಂತಿಕಾರಕ ಚಟುವಟಿಕೆಗಳಿಗಾಗಿ ಬಂಧಿತನಾದನು. ನಂತರ ಈತನನ್ನು ಸರ್ಕಾರವು ಗಡಿಪಾರು ಮಾಡಿತು. ಪ್ರಥಮ ಮಹಾಯುದ್ಧದಲ್ಲಿ ಇಟಲಿಯ ಪರ ಕಲಿತನದಿಂದ ಯುದ್ಧದಲ್ಲಿ ಹೋರಾಡಿ ತನ್ನ ಸಾಹಸ ಕಾರ್ಯಗಳಿಂದ ಅನೇಕ ಬಿರುದುಗಳನ್ನು ಪದಕಗಳನ್ನು ಪಡೆದನು. ಉನ್ನತಮಟ್ಟದ ಸಂಘಟನೆ, ಶಿಸ್ತಿನ ಬುದ್ದಿ, ವಿವೇಚನಾ ಶಕ್ತಿ ಮತ್ತು ಸಮಯೋಚಿತ ಪ್ರಜ್ಞೆಯ ಸಾಕಾರ ಮೂರ್ತಿಯಾಗಿದ್ದ ಮುಸ್ಸೊಲೊನಿ ಇಟಲಿಯ ಗೌರವ ಮತ್ತು ಹಿತಾಸಕ್ತಿಗಳನ್ನು ಕಾಪಾಡಲು ಸಮಾಜವಾದಿ ಮತ್ತು ಕಮ್ಯುನಿಸ್ಟರ ಆಡಳಿತವನ್ನು ಕೊನೆಗಾಣಿಸಿ ಫ್ಯಾಸಿಸ್ಟ್ ಸರ್ವಾಧಿಕಾರದ ಸರಕಾರ ಸ್ಥಾಪನೆಗೆ ಕ್ರಾಂತಿಕಾರಕ ಜನಾಂದೋಲನವನ್ನು ಪ್ರಾರಂಭಿಸಿದನು. ತನ್ನ ಫ್ಯಾಸಿಸ್ಟವಾದದ ತತ್ವಗಳನ್ನು ಪ್ರಚಾರಮಾಡಲು 'ಇಟಾಲಿಯ' ಎನ್ನುವ ಪತ್ರಿಕೆಯನ್ನು ಆರಂಭಿಸಿದನು.

**ಫ್ಯಾಸಿಸ್ಟ್ ತತ್ವಗಳು**

ಫ್ಯಾಸಿಸಂ ಎಂಬ ಇಂಗ್ಲಿಷ್ ಪದವು ಲ್ಯಾಟಿನ್‌ನ ಫ್ಯಾಸಿಯೊ ಪದದಿಂದ ಬಂದಿದೆ. ಫೈಸಿಯೊ ಎಂದರೆ ದಂಡಗಳ ಕಟ್ಟು ಮತ್ತು ಒಂದು ಕೊಡಲಿ ಎಂದಾಗುತ್ತದೆ. ಪ್ರಾಚೀನ ರೋಂ ಚಕ್ರಧಿಪತ್ಯದಲ್ಲಿ ಇವುಗಳು ರಾಜ್ಯ ಸರ್ವಾಧಿಕಾರದ ಚಿಹ್ನೆಯಾಗಿ ಏಕತೆ, ಶಕ್ತಿ ಮತ್ತು ಶಿಸ್ತನ್ನು ಸೂಚಿಸುತ್ತವೆ. ಮುಸ್ಸೊಲೊನಿ ಪ್ರತಿಪಾದಿಸಿದ ಫ್ಯಾಸಿಸ್ಟ್ ಸಿದ್ಧಾಂತದ ಮೂಲಸ್ವರೂಪಗಳನ್ನು ಕೆಳಗಿನಂತೆ ವಿವರಿಸಬಹುದು. ಈ ಸಿದ್ಧಾಂತಕ್ಕೆ ಕ್ರಾಂತಿಕಾರಕ ಚಳವಳಿಯೆ ಮೂಲಾಧಾರವಾಗಿದೆ. ಇದನ್ನು ವಿವರಿಸುವ ಮೂಲಗ್ರಂಥಗಳಿಲ್ಲ. ಜೋಸೆಫ್ ಮೆಜನಿಯಾ ಆದರ್ಶವಾದ, ಸೊರೆಲ್ಲನ ಕಾರ್ಯವಿಧಾನ, ಹೆಗಲ್‌ನ ರಾಷ್ಟ್ರೀಯವಾದ ಹಾಗೂ ಸರ್ವಾಧಿಕಾರ ತತ್ವ, ಬರ್ಗಸನ್‌ನ ಬುದ್ಧಿ ವಿರೋಧವಾದ ಮೊದಲಾದವುಗಳನ್ನು ತನಗೆ ಅನುಕೂಲವಾಗುವಂತೆ ಮಾರ್ಪಡಿಸಿಕೊಂಡು ಫ್ಯಾಸಿಸಂ ವಾದದ ವಿಚಾರಗಳನ್ನು ತಿಳಿಸುತ್ತಾನೆ.

**ವಾಸ್ತವಿಕತೆ**

ಅನುಭವ ಮತ್ತು ವಾಸ್ತವಿಕತೆಯು ಫ್ಯಾಸಿಸಂನ ತಿರುಳು. ಮುಸ್ಸೊಲೊನಿ ಅಭಿಪ್ರಾಯ ದಂತೆ ಸಮತಾವಾದದ ಆಧಾರದ ಸಿದ್ಧಾಂತವಾದರೆ, ವಾಸ್ತವಿಕತೆಯು ಫ್ಯಾಸಿಸ್ಟವಾದದ ಆಧಾರವಾಗಿದೆ. ಅವನು ಹೇಳಿರುವಂತೆ

*ನಾವು ಖಂಡಿತವಾದಿಗಳು ವಾಸ್ತವಿಕವಾಗಿ ಮತ್ತು ನಿಜವಾಗಿ ವರ್ತಿಸಬೇಕು. ತರ್ಕ, ವಿತರ್ಕ, ಮತ್ತು ಸಿದ್ಧಾಂತಗಳ ಮಬ್ಬು ಮುಸುಕಿನಿಂದ ಹೊರಬರಲು ಬಯಸುತ್ತೇವೆ. ಕಾರ್ಯಸಾಧನೆಯೆ ನಮ್ಮ ಕಾರ್ಯಕ್ರಮ, ಬರಿಯ ಮಾತಲ್ಲ.*

**ಪ್ರಜಾಪ್ರಭುತ್ವದ ವಿರೋಧ**

ಮಸ್ಸೊಲೊನಿ ಪ್ರಜಾಪ್ರಭುತ್ವದ ವಿರೋಧಿಯಾಗಿದ್ದಾನೆ. ಈತನ ದೃಷ್ಟಿಯಲ್ಲಿ ಪ್ರಜಾಪ್ರಭುತ್ವ ಕೊಳೆತು ನಾರುತ್ತಿರುವ ಹೆಣ. ಇದು ಶ್ರೀಮಂತರ ಮತ್ತು ಬಡವರ ನಡುವಿನ ಅಂತರವನ್ನು ಹೆಚ್ಚಿಸಿ ರಾಷ್ಟ್ರದ ಅಭ್ಯುದಯಕ್ಕೆ ಮಾರಕವಾಗುವುದು.

**ಉಗ್ರರಾಷ್ಟ್ರೀಯತೆ**

ಫ್ಯಾಸಿಸ್ಟಸ್‌ವಾದವು ಉಗ್ರರಾಷ್ಟ್ರೀಯತೆ ಮತ್ತು ಕ್ಷಾತ್ರ ಭಾವವನ್ನು ಆಧರಿಸಿದೆ. ಫ್ಯಾಸಿಸ್ಟ್ ವಾದಿಗಳ ಪ್ರಕಾರ ರಾಜ್ಯಕ್ಕಾಗಿ ವ್ಯಕ್ತಿಯೆ ಹೊರತು ವ್ಯಕ್ತಿಗಾಗಿ ರಾಜ್ಯವಲ್ಲ. ಪ್ರತಿಯೊಬ್ಬನು ರಾಜ್ಯದ ಹಿತಕ್ಕಾಗಿ ಸರ್ವಸ್ವವನ್ನು ತ್ಯಾಗಮಾಡಬೇಕು. ರಾಜ್ಯಕ್ಕೋಸ್ಕರ ಒಬ್ಬ ಶ್ರೇಷ್ಠ ವ್ಯಕ್ತಿ ಎನ್ನುವ ಹೆಗೆಲ್‌ನ ವಾದವನ್ನು ಫ್ಯಾಸಿಸ್ಟರು ಒಪ್ಪುತ್ತಾರೆ. ರಾಜ್ಯದ ಹಿತಕ್ಕಾಗಿ ವ್ಯಕ್ತಿ ಸ್ವಾತಂತ್ರ್ಯವನ್ನು ವಿರೋಧಿಸಬೇಕು. ರೇಡಿಯೊ, ಸಿನಿಮಾ, ಶಿಕ್ಷಣ, ಪತ್ರಿಕೆ, ಹಣ, ಪರಿಶ್ರಮ, ಸಂಪನ್ಮೂಲಗಳು ರಾಜ್ಯದ ಹತೋಟಿಯಲ್ಲಿರಬೇಕು. ಈ ದೃಷ್ಟಿಯಿಂದ ಪ್ರತಿಯೊಂದು ವಸ್ತು ರಾಜ್ಯಕ್ಕಾಗಿ, ರಾಜ್ಯಕ್ಕೆ ವಿರೋಧವಾದದ್ದೇನು ಇಲ್ಲ, ರಾಜ್ಯದ ಹೊರಗಡೆ ಏನು ಇಲ್ಲ ಅಥವಾ ರಾಜ್ಯವೇ ಸ್ವರ್ಗ ಎನ್ನುವುದು ಫ್ಯಾಸಿಸ್ಟರ ವಾದ. ಈ ಹಿನ್ನೆಲೆಯಲ್ಲಿ ಮುಸ್ಸೊಲಿನಿಯ ಸರ್ಕಾರ ಬಂಡವಾಳಗಾರರ ಸಂಪತ್ತನ್ನು ಅವರ ಇಚ್ಛೆಯಂತೆ ವಿನಿಯೋಗಿಸಲು ಅನುಮತಿಸಲಿಲ್ಲ. ಅಲ್ಲದೆ ಕಾರ್ಮಿಕರು ಕೈಕೊಳ್ಳುವ ಸಂಪಿನ ಅಧಿಕಾರವನ್ನು ಮೊಟಕುಗೊಳಿಸಿತು. ಹೀಗಾಗಿ ಬಂಡಾವಾಳಗಾರರು ಮತ್ತು ಕಾರ್ಮಿಕರು ರಾಜ್ಯದ ಅಧೀನರಾದರು.

**ರಾಜ್ಯದ ಸರ್ವಸ್ವಾಮ್ಯಸ್ವರೂಪ**

ಸಮತಾವಾದದ ಮತ್ತು ಪ್ರಜಾಪ್ರಭುತ್ವದ ವಿರೋಧಿಗಳಾಗಿದ್ದ ಫ್ಯಾಸಿಸ್ಟರ ವಿಚಾರದಲ್ಲಿ ರಾಜ್ಯವು ಎಲ್ಲಾ ಆಡಳಿತ ವಿಷಯಗಳಲ್ಲಿ ಪರಮಾಧಿಕಾರ ಹೊಂದಿದೆ. ರಾಜ್ಯದ ಸ್ಥಿರತೆ ಮತ್ತು ಸಮಗ್ರತೆಗಾಗಿ ವ್ಯಕ್ತಿಯ ಸಾಮಾಜಿಕ ಧಾರ್ಮಿಕ, ಆರ್ಥಿಕ, ನೈಸರ್ಗಿಕ, ನೈತಿಕ ಮೊದಲಾದ ಪ್ರತಿಯೊಂದು ಕ್ಷೇತ್ರದಲ್ಲಿ ಪ್ರವೇಶಿಸಲು ರಾಜ್ಯಕ್ಕೆ ಸರ್ವಾಧಿಕಾರವಿದೆ.

**ಏಕಪಕ್ಷ ಮತ್ತು ಏಕನಾಯಕ**

ರೋಮ್ ಸಾಮ್ರಾಜ್ಯದ ವೈಭವ ಮತ್ತು ಇಟಲಿಯನ್ನರ ಸಂಸ್ಕೃತಿ ಮತ್ತು ಪರಂಪರೆ ಯನ್ನು ಕಾಪಾಡಿಕೊಂಡು ಹೋಗಲು ಬಹುಪಕ್ಷ ಪದ್ಧತಿ ಮತ್ತು ಬಹುನಾಯಕತ್ವವನ್ನು ಫ್ಯಾಸಿಸ್ಟರು ವಿರೋಧಿಸಿದರು. ಇದರಿಂದಾಗಿ ವಿರೋಧಪಕ್ಷಗಳನ್ನೆಲ್ಲ ರದ್ದುಪಡಿಸಿ ಮುಸ್ಸೊಲೊನಿ ತನ್ನ ಏಕೈಕ ಫ್ಯಾಸಿಸ್ಟ್ ಪಕ್ಷದ ನಿರಂಕುಶ ಪ್ರಭುವಾಗಿ ಇಟಲಿಯನ್ನು ಆಳಿದನು. ಸರಕಾರದ ನೀತಿಗಳನ್ನು ಟೀಕಿಸಲು ಯಾರಿಗೂ ಅಧಿಕಾರವಿಲ್ಲ. ರಾಜ್ಯದ ರಕ್ಷಣೆಗಾಗಿ ಹಾಗೂ ವಿರೋಧಿಗಳನ್ನು ಸದೆಬಡಿಯಲು ಗುಪ್ತ ಪೋಲೀಸ್ ಪಡೆಯನ್ನು ಮುಸ್ಸೊಲೊನಿ ರಚಿಸಿದನು.

**ಸಾಮ್ರಾಜ್ಯ ಪದ್ಧತಿ ಮತ್ತು ಯುದ್ಧ ಬೆಂಬಲ**

ಮನೋೕಕಾರ್ಲಿಯನ ಅಭಿಪ್ರಾಯದಂತೆ ಫ್ಯಾಸಿಸ್ಟ್ ಸಿದ್ಧಾಂತವು ಯುದ್ಧದಿಂದ ಹುಟ್ಟಿದೆ. ಅವರ ಶಕ್ತಿ, ಸಾಮರ್ಥ್ಯದ ಪ್ರದರ್ಶನಕ್ಕೆ ಯುದ್ಧವು ಸ್ತ್ರೀಯರಿಗೆ ಮಕ್ಕಳನ್ನು ಹೆರುವುದು ಎಷ್ಟು ಸ್ವಾಭಾವಿಕವೊ ಹಾಗೆಯೇ ಯುದ್ಧ ಮಾಡುವುದು ಫ್ಯಾಸಿಸ್ಟರಿಗೆ ಸ್ವಾಭಾವಿಕವೆಂದು ಮುಸ್ಸೊಲೊನಿಯು ಸಾರಿದನು. ಫ್ಯಾಸಿಸ್ಟರು ಶಾಂತಿ ಪ್ರಿಯರಾಗಿರಲಿಲ್ಲ. ಶಾಂತಿ ತಮ್ಮ ರಾಷ್ಟ್ರದ ವೈಭವ, ಘನತೆ, ಗೌರವಗಳಿಗೆ ಕುಂದು ಎಂದು ಭಾವಿಸಿದ್ದರು.

**ಸಂಸ್ಥಾರೂಪದ ರಾಜ್ಯ**

ಮುಸ್ಸೊಲೊನಿಯ ಸಂಸ್ಥಾರೂಪದ ರಾಜ್ಯನಿರ್ಮಾಣದ ಗುರಿ ಹೊಂದಿದ್ದನು. ಈತನ ಪ್ರಕಾರ ಫ್ಯಾಸಿಸ್ಟ್ ನಾಯಕರಿಗೆ ಮಾತ್ರ ದೇಶದ ಹಾಗೂ ಜನತೆಯ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿದೆ. ಅಂತೆಯೇ ಫ್ಯಾಸಿಸ್ಟ ನಾಯಕರೆ ಅಧಿಕಾರದ ಚುಕ್ಕಾಣಿ ಹಿಡಿಯಲು ಅರ್ಹರು. ಕಾರ್ಮಿಕರು, ರೈತರು, ವಕೀಲರು, ಭೂ ಒಡೆಯರು ಮತ್ತು ಬಂಡವಾಳಗಾರರು ಮೊದಲಾದವರಿಗೆ ತಮ್ಮ ಉದ್ಯೋಗಗಳಲ್ಲಿ ಬರುವ ಸಮಸ್ಯೆಗಳನ್ನು ಮಾತ್ರ ಅರ್ಥವಾಗುವುದರಿಂದ ಅವರಿಗೆ ದೇಶದ ಸಮಸ್ಯೆಗಳು ಅರ್ಥವಾಗುವುದಿಲ್ಲ. ಇದಕ್ಕಾಗಿ ರಾಷ್ಟ್ರದ ಆರ್ಥಿಕ ವ್ಯವಸ್ಥೆಯ ಸೇರಿದಂತೆ ಎಲ್ಲವೂ ಸಂಪೂರ್ಣವಾಗಿ ಸಂಸ್ಥಾರೂಪದ ರಾಜ್ಯದ ಹತೋಟಿಯಲ್ಲಿರಬೇಕು ಎಂಬುದಾಗಿತ್ತು.

**ಮುಸ್ಸೊಲಿನಿಯ ಅಧಿಕಾರ ಗ್ರಹಣ**

ಮೇಲ್ಕಾಣಿಸಿದ ಫ್ಯಾಸಿಸ್ಟ್ ವಿಚಾರಗಳನ್ನು ಇಟಲಿಯಲ್ಲಿ ಅನುಷ್ಠಾನಗೊಳಿಸಲು ಮುಸ್ಸೊಲಿನಿ ಫ್ಯಾಸಿಸ್ಟ್ ಪಕ್ಷ ಸ್ಥಾಪಿಸಿ ಮಾರ್ಚ್ ೨೩, ೧೯೧೯ರಲ್ಲಿ ಮಿಲನ್ ಎಂಬ ಸ್ಥಳದಲ್ಲಿ ಸೈನಿಕ ಸಂಘಟನೆಯನ್ನು ಮಾಡಿದನು. ಇದಕ್ಕೆ "ಕಪ್ಪು ಅಂಗಿಗಳ ಸೈನ್ಯ"ವೆಂದು ಕರೆದನು. ದೇಶಾಭಿಮಾನವು ಫ್ಯಾಸಿಸ್ಟ್ ವಾದದ ಜೀವದುಸಿರಾಗಿತ್ತು. ಸಮತಾವಾದದ ಸಾವು ಫ್ಯಾಸಿಸ್ಟರ ಸೂತ್ರವಾಗಿತ್ತು. ಅನೇಕ ಒಳಜಗಳಗಳಿಂದ ರಾಜಕಾರಣಿಗಳ ಸ್ವಾರ್ಥದಿಂದ ಮತ್ತು ಮಹಾಯುದ್ಧದ ದುಷ್ಪರಿಣಾಮಗಳಿಂದ ಪಾತಾಳಕ್ಕೆ ತಳ್ಳಲ್ಪಟ್ಟ ಇಟಲಿ ದೇಶವನ್ನು ಫ್ಯಾಸಿಸ್ಟರು ಮಾತ್ರ ಉಳಿಸಬಲ್ಲರೆಂಬ ಭರವಸೆ ಇಟಲಿ ದೇಶದ ಜನರಲ್ಲಿ ಮೂಡಿತು. ಸಂದರ್ಭದ ಸದಾವಕಾಶವನ್ನು ಉಪಯೋಗಿಸಿಕೊಂಡ ಮುಸ್ಸೊಲೊನಿ ಕಮ್ಯುನಿಸ್ಟರ ಹಾಗೂ ಸಮಾಜವಾದಿಗಳ ದೌರ್ಬಲ್ಯಗಳ ಬಗ್ಗೆ ವಿದ್ವತ್ಪೂರ್ಣ ಭಾಷಣಗಳನ್ನು ಮಾಡಿದನು. ತತ್ಪರಿಣಾಮವಾಗಿ ಕಮ್ಯುನಿಸ್ಟರಿಗೂ ಮತ್ತು ಫ್ಯಾಸಿಸ್ಟರಿಗೂ ಘರ್ಷಣೆಗಳುಂಟಾದವು. ೧೯೨೧ರ ಫೆಬ್ರವರಿ ವೇಳೆಗೆ ಇಟಲಿಯಲ್ಲಿ ಅಂತರ್ಯುದ್ಧದ ಪರಿಸ್ಥಿತಿಯುಂಟಾಯಿತು. ಕಮ್ಯುನಿಸ್ಟರು ಫ್ಯಾಸಿಸ್ಟರನ್ನು, ಫ್ಯಾಸಿಸ್ಟರು ಕಮ್ಯುನಿಸ್ಟರನ್ನು ಕೊಲೆ ಮಾಡಿದರು. ಈ ಸಂದರ್ಭದಲ್ಲಿ ಶಿಸ್ತಿನ ಸೇನಾನಿಗಳು ಕಪ್ಪು ಅಂಗಿಗಳು ಬೀದಿ ಬೀದಿಗಳಲ್ಲಿ ಸಂಚರಿಸಿ ಬಾಂಬು ಮತ್ತು ಇತರ ಮಾರಕಾಸ್ತ್ರಗಳನ್ನು ಉಪಯೋಗಿಸಿ ಕಮ್ಯುನಿಸ್ಟರ ದುಷ್ಕೃತ್ಯಗಳನ್ನು ಅಡಗಿಸಿದರು. ಮಧ್ಯಮವರ್ಗದ ಜನರಿಗೆ, ರೈತರಿಗೆ ರಕ್ಷಣೆ ಕೊಡುವುದರ ಮೂಲಕ ಮುಸ್ಸೊಲೊನಿ ಸೇನಾನಿಗಳು ಇಟಾಲಿಯನ್ನರ ಆಶಾ ಕಿರಣವಾದರು, ಕಮ್ಯುನಿಸ್ಟರನ್ನು ಎದುರಿಸುವಾಗ ಈ ಸೇನಾನಿಗಳು ಫ್ಯಾಸಿಸ್ಟ ಪಕ್ಷವನ್ನು "ನಂಬಿರಿ, ಅದಕ್ಕೆ ವಿಧೇಯರಾಗಿರಿ ಮತ್ತು ಅದರೊಡನೆ ಕೂಡಿ ಹೋರಾಡಿರಿ" ಎನ್ನುವ ಘೋಷಣೆಗಳನ್ನು ಕೂಗುತ್ತಿದ್ದರು. ಭೀತಿ ಮತ್ತು ಹಿಂಸೆಗಳಿಂದ ಕೂಡಿದ ವಾತಾವರಣದಲ್ಲಿ ೧೯೨೧ರ ಮೇ ತಿಂಗಳಲ್ಲಿ ಸಾರ್ವಜನಿಕ ಚುನಾವಣೆಗಳು ನಡೆದವು. ಕೈಗಾರಿಕೆಗಳ ರಾಷ್ಟ್ರೀಕರಣ, ಆರ್ಥಿಕ ಸ್ಥಿರತೆ, ದುಡಿಯುವ ಕೈಗಳಿಗೆ ಕೆಲಸ, ಅತಿ ಭಾರದ ತೆರಿಗೆ ರದ್ಧತಿ, ಶ್ರಮಜೀವಿಗಳಿಗೆ ಎಂಟು ತಾಸು ಕೆಲಸ, ಬೇಸಾಯ ಸುಧಾರಣೆ, ಸೆನೆಟ್‌ನ ರದ್ಧತಿ ಮತ್ತು ಮಹಾಯುದ್ಧದಲ್ಲಿ ಮಿತ್ರರಾಷ್ಟ್ರಗಳು ಕೊಡಲು ನಿರಾಕರಿಸಿದ ಪ್ರದೇಶಗಳನ್ನು ವಶಪಡಿಸಿ ಕೊಳ್ಳುವಿಕೆ ಮೊದಲಾದ ಭರವಸೆಗಳನ್ನು ಜನತೆಗೆ ಮುಸ್ಸೊಲೊನಿ ನೀಡಿದನು. ಫ್ಯಾಸಿಸ್ಟರು ಈ ಚುನಾವಣೆಯಲ್ಲಿ ಮುಸ್ಸೊಲೊನಿಯನ್ನೊಳಗೊಂಡು ಮುವತ್ತೈದು ಸದಸ್ಯರು ಚುನಾಯಿತರಾದರು. ೧೯೨೨ ಮಾರ್ಚ್ ಮೂರರಂದು ಫ್ಯಾಸಿಸ್ಟರು ಪಿತೂರಿ ನಡೆಸಿ ದಂಗೆ ಎದ್ದು ಫಿಯುಮಾದಲ್ಲಿ ಪ್ರಾಂತೀಯ ಸರಕಾರವನ್ನು ಉರುಳಿಸಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರು. ತದನಂತರ ಆಗಸ್ಟ್ ತಿಂಗಳಲ್ಲಿ ಕಮ್ಯುನಿಸ್ಟರು ವ್ಯವಸ್ಥೆ ಗೊಳಿಸಿದ್ದ ರಾಷ್ಟ್ರಮಟ್ಟದ ಮುಷ್ಕರವನ್ನು ದಮನ ಮಾಡಿ ಮುಷ್ಕರದ ವೇಳೆಯಲ್ಲಿ ಜನತೆಗೆ ರಕ್ಷಣೆ ಮತ್ತು ಅವರು ಬಯಸುವ ಅತ್ಯಾವಶ್ಯಕ ವಸ್ತುಗಳನ್ನು ಒದಗಿಸಿದರು. ಈ ಬೆಳವಣಿಗೆ ಕಮ್ಯುನಿಸ್ಟರಿಗೆ ಭಾರಿ ಆಘಾತವನ್ನುಂಟುಮಾಡಿತು.

೧೯೨೨ ಅಕ್ಟೋಬರ್ ೨೪ರಂದು ನವಲ್ಸ್‌ನಲ್ಲಿ ಮುಸ್ಸೊಲಿನಿಯು ತನ್ನ ರಾಜಕೀಯ ಶಕ್ತಿಯನ್ನು ತೋರಿಸಲು ಗ್ರಾಂಡ್ ಫ್ಯಾಸಿಸ್ಟ್ ಸಮ್ಮೇಳನವನ್ನು ಕರೆದನು. ಈ ಸಮ್ಮೇಳನದಲ್ಲಿ ಸೈನಿಕ ಸಮವಸ್ತ್ರ ಧರಿಸಿದ್ದ ನಲವತ್ತು ಸಾವಿರ ಫ್ರಾಸಿಸ್ಟ್ ಸೈನಿಕ ಪಡೆ ಪಥ ಚಲನೆ ನಡೆಸಿತು. ಈ ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತ ಇಟಲಿಯ ಅರಸ ನಮಗೆ ಸರಕಾರವನ್ನು ಒಪ್ಪಿಸಬೇಕು. ಇಲ್ಲವಾದಲ್ಲಿ ಅದನ್ನು ಹೇಗೆ ವಶಪಡಿಸಿಕೊಳ್ಳ ಬೇಕೆಂಬುದು ಫ್ಯಾಸಿಸ್ಟರಿಗೆ ಗೊತ್ತಿದೆಯೆಂದು ಬೆದರಿಗೆ ಹಾಕಿದನು. ತರುವಾಯ ತನ್ನ ಕಪ್ಪು ಅಂಗಿಯ

ಸೇನಾನಿಗಳಿಗೆ ರೋಂ ನಗರದ ಮೇಲೆ ದಾಳಿ ಮಾಡಲು ಸೂಚಿಸಿದ ಪರಿಣಾಮವಾಗಿ ೧೯೨೨ರ ಅಕ್ಟೋಬರ್ ೨೮ರಂದು ಕ್ಷಿಪ್ರ ಮಿಲಿಟರಿ ಕ್ರಾಂತಿ ನಡೆಸಿ ಮುಸ್ಸೊಲೊನಿ ರೋಂ ನಗರವನ್ನು ವಶಪಡಿಸಿಕೊಳ್ಳಲು ಮುಂದಾದನು. ಈ ಬೆಳವಣಿಗೆ ಯಿಂದ ಭಯಭೀತನಾದ ಇಟಲಿಯ ಅರಸ ಮೂರನೆಯ ವಿಕ್ಟರ್ ಇಮ್ಯಾನುಯಲ್‌ನು ಸೈನ್ಯವನ್ನುಪಯೋಗಿಸಿ ಮುಸ್ಸೊಲೋನಿಯನ್ನು ಹತ್ತಿಕ್ಕುವ ಬದಲು ದಿನಾಂಕ ಅಕ್ಟೋಬರ್ ೩೦, ೧೯೨೨ರಂದು ಮುಸ್ಸೊಲೊನಿಯನ್ನು ಪ್ರಧಾನ ಮಂತ್ರಿಯನ್ನಾಗಿ ನಿಯಮಿಸಿದನು. ಅಧಿಕಾರ ಸ್ವೀಕರಿಸಿದ ಮುಸ್ಸೊಲೊನಿಯು "ಫ್ಯಾಸಿಸ್ಟ ಸರಕಾರ ಹೇಗೆ ಆಡಳಿತ ನಡೆಸಬೇಕೆಂಬುದನ್ನು ತಿಳಿದುಕೊಂಡಿದೆ. ಹಾಗೂ ಆ ರೀತಿ ಆಡಳಿತ ನಡೆಸುವುದೆಂದು" ಪ್ರಕಟಿಸಿದನು.

**ಫ್ಯಾಸಿಸ್ಟ್ ಸರ್ವಾಧಿಕಾರ**

ಮುಸ್ಸೊಲೊನಿಯು ತನ್ನ ನಾಯಕತ್ವದಲ್ಲಿ ಫ್ಯಾಸಿಸ್ಟ್ ಸರ್ವಾಧಿಕಾರ ಸ್ಥಾಪನೆಯಾದ ಆರಂಭದ ವರ್ಷಗಳಲ್ಲಿ ಬಹು ಜಾಗರೂಕತೆಯಿಂದ ಕಾರ್ಯಕ್ರಮಗಳನ್ನು ಕೈಕೊಂಡನು. ದೇಶದಲ್ಲಿ ಅನಿಶ್ಚಿತತೆ ಮತ್ತು ಅಶಾಂತಿಯನ್ನು ಹೋಗಲಾಡಿಸಲು ಒಂದು ವರ್ಷದ ಮಟ್ಟಿಗೆ ತನಗೆ ಸರ್ವಾಧಿಕಾರ ನೀಡುವಂತೆ ಅರಸರನ್ನು ಮತ್ತು ಸಂಸತ್ತನ್ನು ಒತ್ತಾಯಿಸಿ ಒಪ್ಪಿಗೆ ಪಡೆದು ರಾಷ್ಟ್ರದ ಸರ್ವಾಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಂಡನು. ಅರಸ ಮತ್ತು ಸಂಪತ್ತನ್ನು(ಚೇಂಬರ್ ಆಫ್ ಡೆಪ್ಯುಟೀಸ್) ಮೂಲೆಗುಂಪು ಮಾಡಿದನು. ತನಗೆ ನಿಷ್ಠೆ ತೋರಿಸುವ ಫ್ಯಾಸಿಸ್ಟರನ್ನು ಆಡಳಿತದ ಉನ್ನತ ಹುದ್ದೆಗಳಿಗೆ ನೇಮಿಸಿದನು. ೧೯೨೩ರಲ್ಲಿ ಸುಸಜ್ಜಿತ ಸೈನ್ಯವನ್ನು ಕಟ್ಟಿ ಸೇನೆಯ ಅಧಿಕಾರಗಳು ಅರಸನಿಗೆ ನಿಷ್ಠೆಯಿಂದಿರುವ ಬದಲು ತನಗೆ ನಿಷ್ಠೆಯಿಂದಿರಬೇಕೆಂದು ಕರೆಕೊಟ್ಟನು.

ಈ ಕರೆಯಿಂದ ಪ್ರೇರಿತರಾದ ಸೈನ್ಯಾಧಿಕಾರಿಗಳು ಕಮ್ಯುನಿಸ್ಟ್ ಮತ್ತು ಸಮಾಜವಾದಿ ಪಕ್ಷದ ಅನುಯಾಯಿಗಳನ್ನು ಮತ್ತು ಮುಸ್ಸೊಲೊನಿಯನ್ನು ವಿರೋಧಿಸುವ ಶಕ್ತಿಗಳನ್ನು ಕೊಲೆ, ಸುಲಿಗೆ, ಬೆಂಕಿ ಹಚ್ಚುವುದು, ಇವುಗಳ ಮೂಲಕ ಧ್ವಂಸ ಮಾಡಿದನು. ಸಮಾಜ ವಾದಿ ಪಕ್ಷದ ಧುರೀಣ ಗಯಕೊಮೊಮಟ್ಟಿಯೊಟ್ಟಿ ಎಂಬಾತನನ್ನು ಫ್ಯಾಸಿಸ್ಟರು ಕೊಲೆ ಮಾಡಿದರೆನ್ನುವ ವದಂತಿ ಎಲ್ಲಾ ಕಡೆಗೂ ಹರಡಿತು. ೧೯೨೪ ಮತ್ತು ೧೯೨೮ರ ಚುನಾವಣೆಯಲ್ಲಿ ಫ್ಯಾಸಿಸ್ಟರೆ ಅತ್ಯಧಿಕ ಸಂಖ್ಯೆಯಲ್ಲಿ ಆರಿಸಿ ಬರುವಂತೆ ಮಾಡಲು ಚುನಾವಣೆ ಕಾನೂನನ್ನು ಮಾರ್ಪಡಿಸಿದನು. ಇದಕ್ಕೂ ಪೂರ್ವದಲ್ಲಿ ಅಂದರೆ ೧೯೨೫ರಲ್ಲಿ ಕಾನೂನು ರಚಿಸಿ ಫ್ಯಾಸಿಸ್ಟರನ್ನು ವಿರೋಧಿಸುವ ಪಕ್ಷಗಳನ್ನು ಸಂಘ ಸಂಸ್ಥೆಗಳನ್ನು ಪತ್ರಿಕೆಗಳನ್ನು ನಿಷೇಧಿಸಿದನು. ೧೯೨೭ರಲ್ಲಿ ಕಾರ್ಮಿಕರಿಗೆ ಸಂಬಂಧಪಟ್ಟ ಸನದು (ಚಾರ್ಟರ್) ಜಾರಿಗೊಳಿಸಿ ಉತ್ಪಾದನಾ ಕೇಂದ್ರಗಳ ಹಾಗೂ ಪ್ರಸಾರ ಮಾಧ್ಯಮಗಳ ಮೇಲೆ ನಿಯಂತ್ರಣ ಇಟ್ಟುಕೊಂಡನು. ಹಳ್ಳಿ ಮತ್ತು ಪಟ್ಟಣಗಳಲ್ಲಿನ ಪುರಸಭೆಗಳ ಸ್ವಾಯತ್ತತೆಯನ್ನು ರದ್ದುಗೊಳಿಸಿ, ಅವುಗಳ ಆಡಳಿತಕ್ಕಾಗಿ ಪೊಡೆಸ್ಟಸ್ ಎಂಬ ಆಡಳಿತಾಧಿಕಾರಿಗಳನ್ನು ನೇಮಿಸಿದನು. ೧೯೨೯ರಲ್ಲಿ ಚುನಾವಣೆಯಲ್ಲಿ ೨/೩ರಷ್ಟು ಫ್ಯಾಸಿಸ್ಟ್ ಪಕ್ಷದ ಅಭ್ಯರ್ಥಿಗಳು ಸಂಪತ್ತಿಗೆ ಆರಿಸಿ ಬಂದರು. ಇಂತಹ ಸಂಸತ್ತನ್ನೇ ವಿಸರ್ಜಿಸಿ ಸಂಸತ್ತಿನ ಸ್ಥಾನದಲ್ಲಿ ಗ್ರಾಂಡ ಕೌನ್ಸಿಲ್ ಎನ್ನುವ ಮಂಡಳಿ ರಚಿಸಿ ಅವರ ಸಹಾಯದಿಂದ ದೇಶದ ಆಡಳಿತವನ್ನು ನಡೆಸಿದನು. ಈ ಮಂಡಳಿಯ ಸದಸ್ಯರು ಫ್ಯಾಸಿಸ್ಟರಾಗಿದ್ದು ಮುಸ್ಸೊಲೊನಿಯ ನಾಯಕತ್ವದಲ್ಲಿ ಮಂತ್ರಿಗಳಾಗಿ ದೇಶ ಮತ್ತು ವಿದೇಶೀಯ ನೀತಿಗಳನ್ನು ರೂಪಿಸಿದರು. ಫ್ಯಾಸಿಸ್ಟ ಶಿಕ್ಷಕರು ಶಿಕ್ಷಣ ಸಂಸ್ಥೆಗಳಲ್ಲಿ ನೇಮಕಗೊಂಡರು. ಈ ರೀತಿಯಾಗಿ ದೇಶದ ಸರ್ವಾಧಿಕಾರಗಳನ್ನು ಪಡೆದು ಜನಪ್ರಿಯ ನಾಯಕ ಅಂದರೆ ಡ್ಯೂಸ್(ಲೀಡರ್) ಎನ್ನುವ ಬಿರುದನ್ನು ಪಡೆದನು. ಹೀಗಾಗಿ ಮುಸ್ಸೊಲೊನಿ ಇಟಲಿಯಲ್ಲಿ ಸರ್ವಾಧಿಕಾರತ್ವ ಸ್ಥಾಪಿಸಿ ಪ್ರಜಾಪ್ರಭುತ್ವಕ್ಕೆ ಮಂಗಲ ಹಾಡಿದನು.

**ಮುಸ್ಸೊಲೊನಿಯ ಆಂತರಿಕ ನೀತಿ**

ಫ್ಯಾಸಿಸ್ಟ್ ಆಳ್ವಿಕೆಯಿಂದಾಗಿ ಇಟಲಿಯ ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಆಮೂಲಾಗ್ರ ಬದಲಾವಣೆಗಳಾದವು. ಇಟಲಿಯನ್ನರ ಭಾವನೆಗಳನ್ನರಿತು ಮುಸ್ಸೊಲೊನಿಯು ಇಟಲಿಯನ್ನು ಅಭಿವೃದ್ಧಿ ಮತ್ತು ಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡಿದನು. ರಾಜಕೀಯ ಅರಾಜಕತೆಯಿಂದಾಗಿ ಇಟಲಿಯಲ್ಲಿ ಸಂಭವಿಸಿದ ಆಂತರ್ಯುದ್ಧವನ್ನು ತಡೆದು ಅಲ್ಲಿ ಶಾಂತಿ, ಸುವ್ಯವಸ್ಥೆ ನೆಲೆಸುವಂತೆ ಮಾಡಿದನು. ರಾಷ್ಟ್ರವಿರೋಧಿ ಮತ್ತು ಭ್ರಷ್ಟ ಅಧಿಕಾರಿಗಳನ್ನು ಸೇವೆಯಿಂದ ಕಿತ್ತೆಸೆದನು. ತತ್ಪರಿಣಾಮವಾಗಿ

ಆಡಳಿತ ಯಂತ್ರ ಚುರುಕುಗೊಂಡಿತು. ಹಣದ ಅಪಮೌಲ್ಯವನ್ನು ತಡೆದು ರಫ್ತುಗಳಿಗೆ ಉತ್ತೇಜನ ನೀಡಿ ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕಿದನು. ಉತ್ಪನ್ನವನ್ನು ಹೆಚ್ಚಿಸಿ ಇಟಲಿಗೆ ಆರ್ಥಿಕ ಸ್ಥಿರತೆ ಕೊಡಲು ಕಾರ್ಪೋರೇಟ ರಾಜ್ಯವನ್ನು ನಿರ್ಮಿಸಿ ಮುಷ್ಕರ ಮತ್ತು ಬೀಗಮುದ್ರೆಗಳನ್ನು ನಿಷೇಧಿಸಿದನು. ಕಾರ್ಖಾನೆಗಳನ್ನು ರಾಷ್ಟ್ರೀಕರಣಗೊಳಿಸಿ ಉತ್ಪನ್ನಕ್ಕೆ ಪ್ರೋತ್ಸಾಹ ಹಾಗೂ ಉದ್ಯೋಗಾವಕಾಶಗಳನ್ನು ಕಲ್ಪಿಸಿದನು. ಕಾರ್ಮಿಕರ ಸಮಸ್ಯೆಗಳನ್ನು ಪರಿಹರಿಸಲು ಕಾರ್ಮಿಕ ಸನದನ್ನು ಜಾರಿಗೊಳಿಸಿ ಕಾರ್ಮಿಕರಿಗೆ ನಿರೀಕ್ಷಿತ ವೇತನ ಕೊಟ್ಟು ಅವರ ಭದ್ರತೆಗಾಗಿ ಜೀವವಿಮೆ ಸೌಲಭ್ಯಗಳನ್ನು ಒದಗಿಸಿಕೊಟ್ಟನು. ರಸ್ತೆ ಸಾರಿಗೆ ಸಂಪರ್ಕವನ್ನು ವೃದ್ಧಿಗೊಳಿಸಿ ಹೈಡ್ರೊ ಎಲೆಕ್ಟ್ರಿಕ್ ಪವರ್ ಪ್ಲಾಂಟ್ಸ್‌ಗಳನ್ನು ಸ್ಥಾಪಿಸಿದನು. ಅನಕ್ಷರತೆಯನ್ನು ಹೋಗಾಲಾಡಿಸಲು ಫ್ಯಾಸಿಸ್ಟ್ ಶಿಕ್ಷಣವನ್ನು ಕಡ್ಡಾಯ ಗೊಳಿಸಿ ಪ್ರತಿಯೊಬ್ಬ ಇಟಲಿಯ ಪ್ರಜೆಗೆ ಮಿಲಿಟರಿ ತರಬೇತಿ ಕೊಡಿಸಿದನು. ಇಟಲಿಯ ಸಮಗ್ರತೆಯನ್ನು ಕಾಯ್ದುಕೊಳ್ಳಲು ಜರ್ಮನ್ ಮತ್ತು ಫ್ರಾನ್ಸ್ ಶಕ್ತಿಗಳಿಗನುಗುಣವಾದ ವಾಯುಸೇನೆ, ಭೂ ಸೇನೆ ಹಾಗು ನೌಕಾಪಡೆಗಳನ್ನು ಬಲಪಡಿಸಿದನು.

**ಪೋಪನೊಡನೆ ಸೌಹಾರ್ದತೆ**

೧೮೭೦ ರಿಂದಲೂ ಇಟಲಿ ಮತ್ತು ಪೋಪನ ನಡುವೆ ಇದ್ದ ವಿವಾದವನ್ನು ಫ್ಯಾಸಿಸ್ಟ್ ಸರಕಾರವು ಸೌಹಾರ್ದಯುತವಾಗಿ ಬಗೆಹರಿಸಿತು. ಮುಸ್ಸೊಲೊನಿಯ ಫೆಬ್ರವರಿ ೧೧, ೧೯೨೯ರಂದು ಲ್ಯಾಟರಾನ್ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದದ ಮುಖ್ಯಾಂಶ ಗಳೆಂದರೆ: ಮುಸ್ಸೊಲೊನಿಯ ಸಾರ್ವಭೌಮತ್ವವನ್ನು ಪೋಪನು ಒಪ್ಪಿದನು. ಇದಕ್ಕನುಗುಣವಾಗಿ ಇಟಲಿ ಸರ್ಕಾರವು ವ್ಯಾಟಿಕನ್ ಪ್ರದೇಶದಲ್ಲಿ ಪೋಪನ ಪರಮಾಧಿಕಾರ ವನ್ನು ಒಪ್ಪಿತು. ಫ್ಯಾಸಿಸ್ಟ ಸರಕಾರವು ರೋಮನ್ನು ಕ್ಯಾಥೊಲಿಕ್ ಧರ್ಮವನ್ನು ಇಟಲಿ ರಾಜ್ಯದ ಏಕೈಕ ಧರ್ಮವೆಂದು ಪರಿಗಣಿಸಿತು. ಫ್ಯಾಸಿಸ್ಟ ಸರ್ಕಾರವು ಒಪ್ಪಿಗೆ ಪಡೆದು ಬಿಷಪರ್ ಮತ್ತು ಧರ್ಮಪ್ರಚಾರಕರನ್ನು ನೇಮಕ ಮಾಡುವ ಅಧಿಕಾರ ವನ್ನು ಪೋಪನಿಗೆ ಕೊಡಲಾಯಿತು. ಆದರೆ ರಾಜಕೀಯ ವಿಚಾರಗಳಲ್ಲಿ ಧಾರ್ಮಿಕ ಪ್ರಭಾವ ಪ್ರವೇಶಿಸದಂತೆ ಷರತ್ತನ್ನು ಸರಕಾರ ವಿಧಿಸಿತು.

**ಫ್ಯಾಸಿಸ್ಟ್ ಸರಕಾರದ ವಿದೇಶಿ ನೀತಿ**

ಇಟಲಿ ದೇಶವನ್ನು ಮಹಾಶಕ್ತಿಶಾಲಿ ರಾಷ್ಟ್ರವನ್ನಾಗಿ ಮಾಡಿ ಪ್ರಾಚೀನ ರೋಮನ್ ಸಾಮ್ರಾಜ್ಯದ ವೈಭವವನ್ನು ಪುನರುಜ್ಜೀವನಗೊಳಿಸುವ ಸಂಕಲ್ಪದಿಂದ ವಿದೇಶಾಂಗ ನೀತಿಯನ್ನು ಮುಸ್ಸೊಲೊನಿ ರೂಪಿಸಿದನು. ಯುದ್ಧದಿಂದ ಈ ಗುರಿಯನ್ನು ಸಾಧಿಸಲು ನಿರ್ಧರಿಸಿ ಆಕ್ರಮಣ ನೀತಿಯನ್ನು ಅನುಸರಿಸಿದನು. ಇಟಲಿಯಲ್ಲಿ ಮಿತಿಮೀರಿ ಬೆಳೆದ ಜನಸಂಖ್ಯೆಯಿಂದ ಆಹಾರ ಸಮಸ್ಯೆಯುಂಟಾಗಿತ್ತು. ಕಾರಣ ಉತ್ಪಾದನೆ ಹೆಚ್ಚಿಸಲು ಯುರೋಪಿನಲ್ಲಿಯ ವಸಾಹತುಗಳನ್ನು ಆಕ್ರಮಿಸಲು ನಿರ್ಧರಿಸಿದನು. ತತ್ಪರಿಣಾಮವಾಗಿ ಟರ್ಕಿ ದೇಶದ ಮೇಲೆ ಯುದ್ಧ ಸಾರಿ ಲೋಸಾನಿ ಒಪ್ಪಂದ ಮಾಡಿಕೊಂಡು ಮೆಡಿಟೇರಿಯನ್ ಸಮುದ್ರದ ಮೇಲೆ ಹಿಡಿತ ಸಾಧಿಸಿದನು. ಇಟಲಿಯನ್ನರಿಗೆ ಕೊಟ್ಟ ವಾಗ್ದಾನದಂತೆ ೧೯೨೪ರಲ್ಲಿ ಯುಗೋಸ್ಲಾವಿಯಾದ ಮೇಲೆ ದಾಳಿ ಮಾಡಿ ಮಿತ್ರರಾಷ್ಟ್ರಗಳು ಕೊಡಲು ನಿರಾಕರಿಸಿದ ಫಯೂಮಿ (ಕೋಟೆ) ವಶಪಡಿಸಿಕೊಂಡನು. ೧೯೩೯ರಲ್ಲಿ ಆರ್ಥಿಕ ನೆರವನ್ನು ನೀಡಿ ಅಲ್ಬಾನಿಯಾದಲ್ಲಿ ಇಟಲಿಯ ಪ್ರಭಾವವನ್ನು ಹೆಚ್ಚಿಸಿದನು, ಮುಂದೆ ಅಲ್ಬಾನಿಯಾ ಮುಸ್ಸೊಲೊನಿಯ ವಶವಾಯಿತು. ರಷ್ಯಾ ಜೊತೆ ವ್ಯಾಪಾರ ಸಂಬಂಧಗಳನ್ನು ವೃದ್ಧಿಸಿ ಕೊಂಡನು. ಜರ್ಮನಿಯ ಹಿಟ್ಲರನಿಂದ ಉದ್ಭವಿಸಬಹುದಾದ ಯುದ್ಧಗಳನ್ನೆದುರಿಸಲು ಇಂಗ್ಲೆಂಡ್ ಮತ್ತು ಫ್ರಾನ್ಸ್‌ನೊಂದಿಗೆ ಒಪ್ಪಂದ ಮಾಡಿಕೊಂಡನು. ಚೀನಾ ದೇಶದ ಮಂಚೂರಿಯಾದ ಮೇಲೆ ಜಪಾನ್‌ದೇಶ ಕೈಕೊಂಡ ದಾಳಿಯಿಂದ ಪ್ರೇರಿತನಾಗಿ ಅಬ್ಸೀನಿಯಾವನ್ನು ಆಕ್ರಮಿಸಿಕೊಂಡನು. ಇಟಲಿಯ ಹಿತಾಸಕ್ತಿಗಳನ್ನು ಪ್ರಜಾಪ್ರಭುತ್ವವಾದಿ ರಾಷ್ಟ್ರಗಳಿಂದ ರಕ್ಷಿಸುವ ದೃಷ್ಟಿಯಿಂದ ಮುಸ್ಸೊಲೊನಿಯ ರಾಷ್ಟ್ರ ಸಂಘದ ಸದಸ್ಯತ್ವವನ್ನು ತ್ಯಜಿಸಿ ಜರ್ಮನಿಯ ಮತ್ತು ಜಪಾನರ ನಿಷ್ಠಾವಂತ ಸ್ನೇಹಿತನಾಗಿ ಅವರೊಡನೆ ೧೯೩೭ರಲ್ಲಿ "ರೋಂ-ಬರ್ಲಿನ್ -ಟೋಕಿಯೊ ಆಕ್ಸಿಸ್ " ಎಂಬ ಒಪ್ಪಂದ ಮಾಡಿಕೊಂಡನು. ಇದಕ್ಕೂ ಮುಂಚೆ ಸ್ಪೆಯಿನಿನಲ್ಲಿ ತಲೆದೋರಿದ್ದ ಅಂತರ್ಯುದ್ಧದಲ್ಲಿ ಹಸ್ತಕ್ಷೇಪ ನಡೆಸಿ ತನ್ನ ಸೈನ್ಯದ ನೆರವು ನೀಡಿ ಅಲ್ಲಿಯ ಜನರಲ್ ಫ್ರಾಂಕೊ ಅಧಿಕಾರಕ್ಕೆ ಬರುವಂತೆ ಮಾಡಿದನು. ಈ ರೀತಿಯಾಗಿ ಇಟಲಿ ದೇಶವನ್ನು ಶಕ್ತಿಯುತ ರಾಷ್ಟ್ರವನ್ನಾಗಿ ಮಾಡಿದ ಬೆನೆಟೊ ಮುಸ್ಸೊಲೋನಿ ಎರಡನೆಯ ಮಹಾಯುದ್ಧದಲ್ಲಿ ಜರ್ಮನಿ ಜೊತೆಯಾಗಿ ಹೋರಾಡಿ ಮಿತ್ರರಾಷ್ಟ್ರಗಳಿಗೆ ಸೋತಾಗ ಫ್ಯಾಸಿಸ್ಟ್ ವಿರೋಧಿ ಗುಂಪೊಂದು ಮುಸ್ಸೊಲೊನಿ

ಯನ್ನು ಬಂಧಿಸಿ ೧೯೪೫ರ ಏಪ್ರಿಲ್ ೨೮ರಂದು ಕೊಂದುಹಾಕಿತು. ಫ್ಯಾಸಿಸ್ಟ್ ತತ್ವ ಮುಸ್ಸೊಲೊನಿಯ ಮರಣದೊಂದಿಗೆ ನಿರ್ನಾಮವಾಯಿತು.

**ಜರ್ಮನಿಯಲ್ಲಿ ನಾಜಿವಾದ: ನಾಜಿಸಂನ ಉದಯ**

ಫ್ಯಾಸಿಸ್ಟ್‌ವಾದದಂತೆ ನಾಜಿವಾದವು ಪ್ರಥಮ ಜಾಗತಿಕ ಮಹಾಯುದ್ಧದ ಫಲವಾಗಿದೆ. ಬಿಸ್ಮಾರ್ಕನು ಸ್ಥಾಪಿಸಿದ ಜರ್ಮನ್ ಸಾಮ್ರಾಜ್ಯವು ಮಹಾಯುದ್ಧದ ನಂತರ ಬಿದ್ದು ಹೋಯಿತು. ಸಿಂಹಾಸನವನ್ನವಲಂಬಿಸಿದ್ದ ಕೈಸರ್ ವಿಲಿಯಂನು ಹಾಲೆಂಡಿಗೆ ಓಡಿಹೋದನು. ಈ ಸನ್ನಿವೇಶದಲ್ಲಿ ಸಮಾಜವಾದಿ ರಿಪಬ್ಲಿಕನ್ ಪಕ್ಷದವರು ತಾತ್ಕಾಲಿಕವಾಗಿ ಫೆಡರಿಕ್ ಇಬರ್ಟನ ನಾಯಕತ್ವದಲ್ಲಿ ಸರಕಾರವನ್ನು ರಚಿಸಿದರು. ೧೯೧೯ರಲ್ಲಿ ಜರ್ಮನಿ ವೀಮರ್ ಸಂವಿಧಾನವನ್ನು ಅಳವಡಿಸಿಕೊಂಡು ಗಣರಾಜ್ಯವಾಯಿತು. ಸುಮಾರು ಅರ್ಧ ಶತಮಾನದ ಕಾಲ ತನ್ನ ಬಲದಿಂದ ವಿಜಯೋನ್ಮತ್ತವಾಗಿದ್ದ ಮತ್ತು ವೈಯಕ್ತಿಕ ಶಕ್ತಿಯಿಂದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಥಾನಮಾನ ಹೊಂದಿದ ಜರ್ಮನಿ ಪ್ರಥಮ ಮಹಾಯುದ್ಧದಲ್ಲಿ ಸೋತು ವಿನಾಶದ ಹಾದಿ ಹಿಡಿಯಿತು. ಯುದ್ಧದಲ್ಲಿ ಜರ್ಮನಿ ಅನುಭವಿಸಿದ ಅವಮಾನಕರವಾದ ಸೋಲು ಮತ್ತು ಯುದ್ಧದ ನಂತರ ಪ್ಯಾರಿಸ್ ಶಾಂತಿ ಸಮ್ಮೇಳನದಲ್ಲಿ ಬಲಾತ್ಕಾರವಾಗಿ ಹೊರಿಸಲ್ಪಟ್ಟ ವರ್ಸೇಲ್ಸ್ ಒಪ್ಪಂದ (೧೯೧೯) ಜರ್ಮನಿಯನ್ನು ಜರ್ಜರಿತಗೊಳಿಸಿದವು. ಅಪಾರ ರಾಷ್ಟ್ರಾಭಿಮಾನದಿಂದ ಬೀಗುತ್ತಿದ್ದ ಜರ್ಮನ್ ಜನತೆ, ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಸಂಪೂರ್ಣ ಹಾಳಾಯಿತು. ವಿಜೇತ ರಾಷ್ಟ್ರಗಳು ಜರ್ಮನಿಯ ಸೈನಿಕ ಶಕ್ತಿಯನ್ನು ನಾಶಪಡಿಸಲು ಅನೇಕ ಕ್ರಮಗಳನ್ನು ಕೈಕೊಂಡವು. ಜರ್ಮನಿ ವಸಾಹತುಗಳನ್ನು ಕಳೆದುಕೊಂಡಿತು. ಅಲ್ಲದೆ ಜರ್ಮನಿಯೇ ಯುದ್ಧಕ್ಕೆ ಹೊಣೆ ಎಂಬುದನ್ನು ಒಪ್ಪಿಕೊಳ್ಳುವಂತೆ ಮಾಡಿ ವಿಜೇತ ರಾಷ್ಟ್ರಗಳು ಅಪಾರ ಯುದ್ಧ ನಷ್ಟ ೬,೬೦೦,೦೦೦,೦೦೦ ಪೌಂಡ್ಸ್‌ಗಳನ್ನು ದಂಡರೂಪದಲ್ಲಿ ಜರ್ಮನಿ ಕೊಡಬೇಕೆಂದು ವಿಧಿಸಿದವು. ಯುದ್ಧದಲ್ಲಿ ಬಲವಾಗಿ ಪೆಟ್ಟು ತಿಂದ ಜರ್ಮನಿಯ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿ ಸ್ಥಿರತೆ ಕುಸಿದು ಅಸಮಾನತೆ, ಅರಾಜಕತೆ ಕಾಣಿಸಿಕೊಂಡವು, ನಿರುದ್ಯೋಗ ಮತ್ತು ಹಣದುಬ್ಬರ ಸಮಸ್ಯೆಗಳಿಂದ ಜರ್ಮನರು ಕಂಗಾಲಾದರು. ಜರ್ಮನ್ ಗಣರಾಜ್ಯದ ಅಧ್ಯಕ್ಷ ಫೆಡರಿಕ್ ಇಬರ್ಟನನ್ನು ಗಣರಾಜ್ಯದ ಪ್ರತಿನಿಧಿಗಳು ಅವಿವೇಕಿಯೆಂದು ಕರೆದು ವರ್ಸೇಲ್ ಒಪ್ಪಂದವನ್ನು ವಿಜೇತ ರಾಷ್ಟ್ರಗಳು ಜರ್ಮನಿಯ ಮೇಲೆ ಹೇರಲು ಈತನ ಸಮ್ಮತಿಯೇ ಕಾರಣವೆಂದು ದೋಷಾರೋಪಣೆ ಮಾಡಿದನು. ವರ್ಸೇಲ್ಸ್ ಒಪ್ಪಂದವನ್ನು ಪ್ರತಿಭಟಿಸುವ ಅನೇಕ ಗುಂಪುಗಳು ಜರ್ಮನಿಯಲ್ಲಿ(೧೯೧೯-೧೯೨೫) ಅಸ್ತಿತ್ವಕ್ಕೆ ಬಂದವು. ಅದರಲ್ಲಿ ಜರ್ಮನ್ ಕಾರ್ಮಿಕರ ಪಕ್ಷವೂ ಒಂದು. ೧೯೨೦ರಲ್ಲಿ ಇದರ ಹೆಸರನ್ನು 'ರಾಷ್ಟ್ರೀಯ ಸಮಾಜವಾದಿ ಜರ್ಮನ್ ಕಾರ್ಮಿಕ ಪಕ್ಷ' ಎಂದು ಬದಲಾಯಿಸಲಾಯಿತು. ಮುಂದೆ ಅಡಾಲ್ಫ್ ಹಿಟ್ಲರನ ನಾಯಕತ್ವದಲ್ಲಿ ಇದು ನಾಜಿ ಪಕ್ಷವಾಯಿತು.

**ಅಡಾಲ್ಫ್ ಹಿಟ್ಲರ್ (೧೮೮೯-೧೯೪೫)**

ಅಡಾಲ್ಫ್ ಹಿಟ್ಲರನು ೧೮೮೯ರ ಏಪ್ರಿಲ್ ೨೦ ರಂದು ಸಾಮಾನ್ಯ ಸುಂಕದ ಅಧಿಕಾರಿಯ ಮಗನಾಗಿ ಬ್ರಾನಾಲ್ ಎಂಬಲ್ಲಿ ಜನಿಸಿದನು. ಹುಟ್ಟಿನಿಂದ ಈತನು ಆಸ್ಟ್ರಿಯಾ ನಾಗರಿಕನಾಗಿದ್ದನು. ಚಿಕ್ಕಂದಿನಲ್ಲಿ ತಂದೆತಾಯಿಗಳನ್ನು ಕಳೆದುಕೊಂಡು ತಬ್ಬಲಿ ಯಾದನು. ಜರ್ಮನ್ ರಾಷ್ಟ್ರೀಯತ್ವವು ಈತನಿಗೆ ಜೀವನದಲ್ಲಿ ಸ್ಫೂರ್ತಿಯ ಸೆಲೆಯಾಯಿತು. ಹೆಚ್ಚಿನ ಶಿಕ್ಷಣವನ್ನು ಪಡೆಯದೆ ಹಿಟ್ಲರನು ಆರಂಭದಲ್ಲಿ ಕಲೆಯ ಉಪಾಸಕನಾಗಿದ್ದನು. ೧೯೦೯ರಲ್ಲಿ ಕಲೆಯ ವಿಷಯದ ಬಗ್ಗೆ ಅಭ್ಯಾಸ ಮಾಡಲು ಅಂದರೆ ತನ್ನ ೧೮ನೆಯ ವಯಸ್ಸಿನಲ್ಲಿ ವಿಯನ್ನಾಕ್ಕೆ ತೆರಳಿದನು. ಅವಕಾಶಗಳಿಂದ ವಂಚಿತನಾದ ಹಿಟ್ಲರನು ಜರ್ಮನ್ನರ ಬಡತನ, ಅಪಮಾನ ಹಾಗು ಪ್ರತಿಷ್ಟೆಗಳ ಕುಸಿತಕ್ಕೆ ಯೆಹೂದಿಗಳೆ ಕಾರಣರೆಂದು ತಿಳಿದು ಅವರನ್ನು ದ್ವೇಷಿಸುವುದನ್ನು ಕಲಿತನು. ಯೆಹೂದ್ಯರ ಜೀವನವನ್ನು ಅಭ್ಯಸಿಸಿದ ನಂತರ ಅವರು ಜರ್ಮನ್ ರಾಷ್ಟ್ರೀಯತೆ ಹಾಗೂ ಜನಾಂಗ ಧೋರಣೆಯ ಬದ್ಧ ವೈರಿಗಳೆಂದು ಹಾಗೂ ಮಾನವತೆಯನ್ನು ಕೊನೆಗಾಣಿಸುವ ಆಲೋಚನೆಯನ್ನಿಟ್ಟು ಕೊಂಡು ಮಾರ್ಕ್ಸ್‌ವಾದದೊಂದಿಗೆ ಕಲೆತು ಹೊಂಚು ಹಾಕಿರುವರೆಂದು ಹಿಟ್ಲರ್ ದೃಢವಾಗಿ ನಂಬಿದನು. ೧೯೧೩ರಲ್ಲಿ ವಿಯನ್ನಾವನ್ನು ತೊರೆದು ಮ್ಯೂನಿಚ್ ನಗರಕ್ಕೆ ಬಂದು ಯೆಹೂದಿ ವಿರೋಧಿಗಳ ಅಸಮರ್ಥ ರಿಪಬ್ಲಿಕ್ ಪಕ್ಷದ ಮತ್ತು ಕಮ್ಯುನಿಸ್ಟರ ಅಪಾಯದ ಬಗ್ಗೆ

ಜರ್ಮನರನ್ನು ಆಕರ್ಷಿಸಿ ಭಾಷಣಗಳನ್ನು ಪ್ರಾರಂಭಿಸಿದನು. ವಿರಾಮದ ವೇಳೆಯಲ್ಲಿ ತನ್ನ ವೃತ್ತಿ ಜೀವನಕ್ಕೆ ಪೋಷಕವಾಗಿದ್ದ ಮನೆಗಳಿಗೆ ಬಣ್ಣ ಹಚ್ಚುವ ಕೆಲಸ ಮಾಡುತ್ತಿದ್ದನು.

ಬಾವೇರಿಯದ ಸೈನ್ಯವನ್ನು ೧೯೧೪ರಲ್ಲಿ ಸೇರಿದ ಹಿಟ್ಲರನು ಪ್ರಥಮ ಮಹಾಯುದ್ಧದಲ್ಲಿ ದೇಶಕ್ಕಾಗಿ ಹೋರಾಡಿ ಗಾಯಗೊಂಡನು. ಯುದ್ಧರಂಗದಲ್ಲಿ ತೋರಿದ ಸಾಹಸಕ್ಕಾಗಿ ಐರನ್ ಕ್ರಾಸ್ ಎಂಬ ಪದಕವನ್ನು ಗಳಿಸಿದನು. ಮ್ಯೂನಿಚ್ ನಗರದಲ್ಲಿ ಸ್ಥಾಪಿಸಲಾಗಿದ್ದ ನ್ಯಾಷನಲ್ ಸೋಷಿಯಲಿಸ್ಟ್ ಜರ್ಮನ್ ಕಾರ್ಮಿಕರ ಪಕ್ಷವನ್ನು ನಾಜಿ ಪಕ್ಷವನ್ನಾಗಿ ಮಾರ್ಪಡಿಸಿಕೊಂಡು "ಸ್ವಸ್ತಿಕ್" ಅನ್ನು ಪಕ್ಷದ ಚಿಹ್ನೆಯಾಗಿ ಮಾಡಿಕೊಂಡನು.

**ಅಧಿಕಾರಗ್ರಹಣ**

ಹಿಟ್ಲರನು ತನ್ನ ಪಕ್ಷದ ಮುಖಾಂತರ ನಾಜಿ ಸಿದ್ಧಾಂತಗಳನ್ನು ಪ್ರಚಾರ ಮಾಡುತ್ತಾಪ್ರಥಮ ಮಹಾಯುದ್ಧದಿಂದ ಸಂಭವಿಸಿದ ಜರ್ಮನಿಯ ಆಂತರಿಕ ಮತ್ತು ಬಾಹ್ಯ ಸಮಸ್ಯೆಗಳಿಗೆ ಕಮ್ಯುನಿಸ್ಟರು ಆಳುವ ಸಮಾಜವಾದಿ ರಿಪಬ್ಲಿಕನ್ನರು ಮತ್ತು ಯಹೂದಿ ಪ್ರಜಾಪ್ರಭುತ್ವ ವಾದಿಗಳು ಕಾರಣವೆಂದು ತಿಳಿಸಿದನು. ಅಲ್ಲದೆ ತನ್ನ ಪಕ್ಷಕ್ಕೆ ಮಾತ್ರ ಜರ್ಮನಿಯನ್ನಾಳುವ ಶಕ್ತಿ ಸಾಮರ್ಥ್ಯಗಳಿರುವುದರಿಂದ, ಕಳೆದು ಹೋದ ಜರ್ಮನ್ ಸಾಮ್ರಾಜ್ಯದ ಪ್ರತಿಷ್ಠೆಯನ್ನು ಮತ್ತೆ ಸ್ಥಾಪಿಸಲು ಜನತೆಯ ಬೆಂಬಲ ಕೋರಿದನು. ಇಟಲಿಯಲ್ಲಿ ಅಗಾಧವಾಗಿ ಬೆಳೆಯುತ್ತಿದ್ದ ಮುಸ್ಸೊಲೊನಿಯ ಕಾರ್ಯಕ್ರಮಗಳಿಂದ ಪ್ರೇರಿತನಾಗಿ ಜರ್ಮನಿಯ ಅಭ್ಯುದಯ ಕ್ಕೋಸ್ಕರ ಶತ್ರು ಪಕ್ಷದವರನ್ನು ಮೆಟ್ಟಿಹಾಕಲು ಮುಸ್ಸೊಲೊನಿಯ ಕಪ್ಪು ಅಂಗಿಗಳ ಮಾದರಿಯಲ್ಲಿ ಜರ್ಮನಿಯಲ್ಲಿ ಹೋರಾಟಗಾರರ ಪಡೆ ಅಂದರೆ ಕಂದುಬಣ್ಣದ ಅಂಗಿಗಳ ಪಡೆಯನ್ನು(ಬ್ರೌನ್ ಶರ್ಟ್ಸ್) ನಿರ್ಮಿಸಿದನು.

೧೯೨೦ರಲ್ಲಿ ಜರ್ಮನಿಯ ಸರ್ವತೋಮುಖ ಅಭಿವೃದ್ಧಿಗೆ ೨೫ ಅಂಶಗಳ ಕಾರ್ಯ ಕ್ರಮವನ್ನು ಪ್ರಕಟಿಸಿದನು. ವರ್ಸೇಲ್ಸ್ ಶಾಂತಿ ಒಪ್ಪಂದದ ಸಂಕೋಲೆಗಳಿಂದ ಜರ್ಮನಿಯನ್ನು ಬಿಡುಗಡೆ ಮಾಡುವುದು, ಯುದ್ಧದಿಂದ ಕಳೆದುಹೋದ ವಸಾಹತುಗಳನ್ನು ಪಡೆಯುವುದು, ಜರ್ಮನ್ ಜನಾಂಗದ ಆಳುವ ಶಕ್ತಿಯ ಶ್ರೇಷ್ಠತೆ ತೋರಿಸುವುದು, ಸ್ವಯಂ ನಿರ್ಣಯ ತತ್ವದ ಆಧಾರದ ಮೇಲೆ ವಿಶಾಲ ಜರ್ಮನಿಯನ್ನು ರಚಿಸುವುದು, ಕಳ್ಳ ಧನವನ್ನು ವಶಪಡಿಸಿಕೊಳ್ಳುವುದು, ದೊಡ್ಡ ಮಳಿಗೆಗಳನ್ನು ಮುರಿಯುವುದು, ಮತ್ತು ಅವುಗಳ ಆವರಣಗಳನ್ನು ಸಣ್ಣಪುಟ್ಟ ವ್ಯಾಪಾರಸ್ಥರಿಗೆ ಹಂಚುವುದು, ದೊಡ್ಡ ದೊಡ್ಡ ಟ್ರಸ್ಟ್‌ಗಳನ್ನು ರಾಷ್ಟ್ರೀಕರಣ ಮಾಡುವುದು, ಕಾರ್ಮಿಕರು ಲಾಭಗಳಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದು ಇತ್ಯಾದಿ ಅಂಶಗಳನ್ನು ಹಿಟ್ಲರನು ಪಕ್ಷದ ಪ್ರಣಾಳಿಕೆಯಲ್ಲಿ ಘೋಷಿಸಿದನು. ೧೯೨೩ರಲ್ಲಿ ತನ್ನ ಕ್ರಾಂತಿಕಾರಿ ಪಡೆಗಳ ಸಹಾಯದಿಂದ "ಮ್ಯೂನಿಚ್ ಬಾರ್ ಹಾಲ್"ನ ಕ್ಷಿಪ್ರಕ್ರಾಂತಿ ಮೂಲಕ ಸರಕಾರವನ್ನು ಉರುಳಿಸಲು ಯತ್ನಿಸಿದನು. ಆದರೆ ಈತನ ತಂತ್ರ ಫಲಿಸದಿದ್ದುದರಿಂದ ಸರಕಾರವು ಹಿಟ್ಲರನನ್ನು ರಾಜ್ಯದ್ರೋಹದ ಆಪಾದನೆಗೊಳಪಡಿಸಿ ಆತನನ್ನು ಐದು ವರ್ಷದ ಶಿಕ್ಷೆಗೊಳಪಡಿಸಿತು. ಜರ್ಮನರ ಸಹಾನುಭೂತಿ ಗಳಿಸಿದ್ದ ಹಿಟ್ಲರನನ್ನು ಒಂದು ವರ್ಷದ ಶಿಕ್ಷೆಯ ನಂತರ ಜೈಲಿನಿಂದ ಬಿಡುಗಡೆ ಮಾಡಿತು. ಕಾರಾಗೃಹದ ಅವಧಿಯಲ್ಲಿ "ಮೈನ್ ಕಾಂಫ್"(ನನ್ನ ಹೋರಾಟ) ಎನ್ನುವ ಗ್ರಂಥವನ್ನು ರಚಿಸಿದನು. ಇದು ನಾಜಿ ಸಿದ್ಧಾಂತದ ಮುಖ್ಯ ಲಕ್ಷಣಗಳು ಮತ್ತು ಅಖಂಡ ಜರ್ಮನಿಯನ್ನು ನಿರ್ಮಿಸುವ ಯೋಜನೆಯನ್ನು ತಿಳಿಸುತ್ತದೆ. ೧೯೨೪ರಲ್ಲಿ ಜೈಲಿನಿಂದ ಬಿಡುಗಡೆಯಾದ ಹಿಟ್ಲರನು ನಾಜಿ ಪಕ್ಷವನ್ನು ಸಂಘಟಿಸುವ ಕಾರ್ಯದಲ್ಲಿ ನಿರತನಾದನು. ೧೯೨೫ ರಿಂದ ೧೯೨೮ರವರೆಗೆ ಜರ್ಮನಿ ಶಾಂತಿ ಸಮೃದ್ಧಿಯನ್ನು ಕಂಡಿತು. ೧೯೨೯ರಲ್ಲಿ ಯುರೋಪಿನಾದ್ಯಂತ ಆರ್ಥಿಕ ಬಿಕ್ಕಟ್ಟು ತಲೆದೋರಿದ್ದರಿಂದ (ಗ್ರೇಟ್ ಡಿಪ್ರೆಷನ್) ವಿದೇಶಿ ಸಾಲಗಳ ಹೊರೆ ಹೆಚ್ಚಾಯಿತು. ಕೈಗಾರಿಕೆಗಳು ಮುಚ್ಚಲ್ಪಟ್ಟವು. ನಿರುದ್ಯೋಗ ಸಮಸ್ಯೆ ಹೆಚ್ಚಿತು. ಕಾರ್ಮಿಕರ ಸ್ಥಿತಿ ಅಧೋಗತಿಗಿಳಿಯಿತು. ೧೯೧೯ರ ಚುನಾವಣೆಯಲ್ಲಿ ಏಳುಸ್ಥಾನ ಮತ್ತು ೧೯೨೪ರ ಚುನಾವಣೆಯಲ್ಲಿ ೩೨ ಸ್ಥಾನ ಪಡೆದಿದ್ದ ನಾಜಿಪಕ್ಷವು ೧೯೩೨ರ ಚುನಾವಣೆಯಲ್ಲಿ ೨೩೦ ಸ್ಥಾನ ಪಡೆದು ಜರ್ಮನ್ ಸಂಸತ್ತಿನಲ್ಲಿ (ರಿಕ್ ಸ್ಟಾಗ್) ಅಧಿಕ ಸ್ಥಾನ ಪಡೆದ ಪಕ್ಷವಾಗಿ ಹೊರಹೊಮ್ಮಿತು. ಈ ಸಂದರ್ಭದಲ್ಲಿ ಯಾವ ಪಕ್ಷವು ಬಹುಮತ ಪಡೆಯದಿದ್ದುದರಿಂದ ಮತ್ತು ಜರ್ಮನಿಯಲ್ಲುಂಟಾದ ರಾಜಕೀಯ ಅಭದ್ರತೆಯನ್ನು ಗುರುತಿಸಿ ಜರ್ಮನ್ ಗಣರಾಜ್ಯದ ಅಧ್ಯಕ್ಷನಾದ ಹಿಂಡೆನ್ ಬರ್ಗ್ ೧೯೩೩ರಲ್ಲಿ ಜರ್ಮನಿಯ ಆಡಳಿತ ಸೂತ್ರ ಹಿಡಿಯಲು ನಾಜಿ ಪಕ್ಷದ ನಾಯಕನಾದ ಹಿಟ್ಲರನ್ನು ಚಾನ್ಸಲರನ್ನಾಗಿ ನೇಮಿಸಿದನು.

**ಹಿಟ್ಲರನ ಸರ್ವಾಧಿಕಾರ**

ಜರ್ಮನ್ ಗಣರಾಜ್ಯದ ಚಾನ್ಸಲರ್‌ನಾಗಿ ಅಧಿಕಾರವಹಿಸಿಕೊಂಡ ಹಿಟ್ಲರನು ಸರ್ವಾಧಿಕಾರ ಸ್ಥಾಪನೆಯ ದೃಷ್ಟಿಯಿಂದ ಪ್ರಜಾಸತ್ತಾತ್ಮಕ ಸಂವಿಧಾನ ಮತ್ತು ಸಂಸತ್ತನ್ನು ಕಡೆಗಣಿಸಿದನು. ನಾಜಿ ಪಕ್ಷವನ್ನು ಹೊರತುಪಡಿಸಿ ಇತರ ಎಲ್ಲ ರಾಜಕೀಯ ಪಕ್ಷಗಳನ್ನು ಸಂಘ ಸಂಸ್ಥೆಗಳನ್ನು ಮತ್ತು ಅವುಗಳ ವರ್ತಮಾನ ಪತ್ರಿಕೆಗಳನ್ನು ನಿಷೇಧಿಸಿದನು. ಹಿಟ್ಲರನ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂತ್ರಿಯಾದ ಡಾಕ್ಟರ್ ಜೊಸೆಫ್ ಗೊಯೆಬೆಲ್ಸ್‌ನು ಹಿಟ್ಲರನ ನಾಜಿ ಸಿದ್ಧಾಂತವನ್ನು ಪರಿಣಾಮಕಾರಿಯಾಗಿ ಪ್ರಚಾರ ಮಾಡಿ ಅವುಗಳನ್ನು ವಿದ್ಯಾರ್ಥಿಗಳಿಗೆ ಬೋಧಿಸುವಂತೆ ಕಡ್ಡಾಯಗೊಳಿಸಿದನು. 'ಹಿಟ್ಲರನ ಸೇವೆ ಮಾಡುವುದು ಜರ್ಮನಿಯ ಸೇವೆ ಮಾಡಿದಂತೆ; ಜರ್ಮನಿಯ ಸೇವೆ ಮಾಡುವುದು ದೇವರ ಸೇವೆ ಮಾಡಿದಂತೆ' ಎನ್ನುವ ಪ್ರಕಟನೆ ಹಾಗೂ ಭಿತ್ತಿಪತ್ರಗಳು ಜರ್ಮನಿಯಾದ್ಯಂತ ರಾರಾಜಿಸಿದವು. ೧೯೩೩ ಫೆಬ್ರವರಿ ೨೭ರಂದು ರಿಕ್ ಸ್ಟ್ಯಾಗ್ ಕಟ್ಟಡವನ್ನು (ಸಂಸತ್ತು) ಸುಟ್ಟಾಗ, ಹಿಟ್ಲರನು ತನಿಖೆಗೆ ಆಜ್ಞೆ ಮಾಡಿ ಈ ದುರಂತಕ್ಕೆ ಕಮ್ಯುನಿಷ್ಟರೆ ಕಾರಣವೆಂಬ ಆಪಾದನೆಯನ್ನು ರುಜುವಾತುಪಡಿಸಿ ಕಮ್ಯುನಿಸ್ಟರ ಹಾವಳಿ ಮತ್ತು ಪ್ರಭಾವವನ್ನು ನಾಶಮಾಡಿದನು. ಪರಿಣಾಮವಾಗಿ ನಾಜಿ ಪಕ್ಷವು ೧೯೩೩ರ ಚುನಾವಣೆಯಲ್ಲಿ ೨೮೮ ಸ್ಥಾನಗಳನ್ನು ಗಳಿಸಿ ರಿಕ್‌ಸ್ಟಾಗ್‌ನಲ್ಲಿ ಬಹುಮತ ಪಡೆಯಿತು. "ಆ್ಯಕ್ಟ್ ಆಫ್ ಆಥರೈಜೇಷನ್" ಎಂಬ ಮಸೂದೆಯನ್ನು ರಿಕ್‌ಸ್ಟಾಗ್ ಮುಂದೆ ತಂದು ಅದರ ಅನುಮತಿ ಪಡೆದು ಹಿಟ್ಲರನು ಸರ್ವಾಧಿಕಾರಿಯಾದನು.

ಸಂಸತ್ ಸದನಗಳ ಗಮನಕ್ಕೆ ತರದೆ ಹಿಟ್ಲರನ ಮಂತ್ರಿಮಂಡಲ ಶಾಸನಗಳನ್ನು ರಚಿಸಿತು. ೧೯೩೪ರ ಆಗಸ್ಟ್ ತಿಂಗಳಲ್ಲಿ ಗಣರಾಜ್ಯದ ಅಧ್ಯಕ್ಷ ಹಿಂಡನ್‌ಬರ್ಗ್ ಮರಣ ಹೊಂದಿದನು. ಕೂಡಲೆ ಹಿಟ್ಲರನು ತಾನೆ ಅಧ್ಯಕ್ಷನೆಂದು ಘೋಷಿಸಿ ಅಧಿಕಾರ ಸೂತ್ರವನ್ನೆಲ್ಲ ತನ್ನಲ್ಲಿ ಕೇಂದ್ರೀಕರಿಸಿಕೊಂಡು ಸರ್ವಾಧಿಕಾರಿಯಾದನು. ಎಲ್ಲ ಮಿಲಿಟರಿ ಅಧಿಕಾರಿಗಳು ಮಂತ್ರಿಗಳು ಮತ್ತು ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಂಗ ಹಿಟ್ಲರನ ನಿರಂಕುಶ ಪ್ರಭುತ್ವವನ್ನು ಸಮ್ಮತಿಸಿದವು. ಜರ್ಮನಿಯಲ್ಲಿ "ಎಲೈಟೆ ಗಾರ್ಡ್" ಎಂಬ ವಿಶೇಷ ಗುಪ್ತಾಚಾರ ವಿಭಾಗವನ್ನು ತೆರೆದನು. ನಾಜಿ ಕಾರ್ಯಕರ್ತರ ರಕ್ಷಣೆಗೋಸ್ಕರ ಅರೆ ಸೈನಿಕ ದಳವನ್ನು ಸ್ಥಾಪಿಸಿದನು. ನಿರಂಕುಶ ಪ್ರಭುತ್ವದ ಸಂಕೇತವಾಗಿ ಫ್ಯೂರರ್ (ಪ್ರಶ್ನಾತೀತ ನಾಯಕ) ಎಂಬ ಬಿರುದು ಧರಿಸಿದನು.

**ನಾಜಿ ವಾದದ ಮುಖ್ಯಾಂಶಗಳು–ಜರ್ಮನ್ ಜನಾಂಘದ ಶ್ರೇಷ್ಟತೆ**

ನಾಜಿವಾದವು ಜರ್ಮನ್ ಜನಾಂಗ ಪ್ರಪಂಚದಲ್ಲಿ ಅತ್ಯಂತ ಶ್ರೇಷ್ಠ ಜನಾಂಗವೆಂದು ಪರಿಗಣಿಸಿತ್ತು. ಹಿಟ್ಲರನ ಅಭಿಪ್ರಾಯದಲ್ಲಿ "ಮಾನವ ಕುಲಗಳಲ್ಲಿ ಶ್ವೇತ ವರ್ಣಕುಲ ಶ್ರೇಷ್ಠವಾದದ್ದು. ಅದರಲ್ಲಿ ಟ್ಯೂಟನ್ ಪಂಗಡಕ್ಕೆ ಸೇರಿದವರು ಸರ್ವಶ್ರೇಷ್ಠರು. ಟ್ಯೂಟನ್ ಪಂಗಡಗಳಲ್ಲಿ ಜರ್ಮನ್ ಜನಾಂಗ ಅತ್ಯಂತ ಶ್ರೇಷ್ಠ" ಎಂಬುದಾಗಿತ್ತು. ಜರ್ಮನಿಯ ಸರ್ವ ಸಂಕಟಗಳಿಗೆ ಜರ್ಮನ್ ಜನಾಂಗಕ್ಕೆ ವಿರೋಧಿಗಳಾದ ಯಹೂದಿಗಳ ಅಸ್ತಿತ್ವವೇ ಕಾರಣ. ಇದರಿಂದ ಜರ್ಮನಿಯನ್ನು ರಕ್ಷಿಸುವುದು ನಾಜಿವಾದದ ಉದ್ದೇಶ ವಾಗಿತ್ತು. ಜರ್ಮನಿಯು ಇನ್ನೂ ಯುದ್ಧದಿಂದ ಸೋತಿಲ್ಲ. ಜರ್ಮನರೆಲ್ಲ ಒಂದಾಗಿ ಯಹೂದಿಗಳನ್ನು ಮತ್ತು ಕಮ್ಯುನಿಸ್ಟರನ್ನು ರಾಷ್ಟ್ರದಿಂದ ಹೊರದೂಡಿದರೆ ಜರ್ಮನಿಯ ಇತಿಹಾಸ ಮತ್ತು ಸಂಸ್ಕೃತಿಗೆ ಹೊಸ ಮಾನ್ಯತೆ ಮತ್ತು ಭವ್ಯತೆ ದೊರಕುತ್ತದೆಂದು ನಾಜಿವಾದಿಗಳು ನಂಬಿದ್ದರು. ಜರ್ಮನಿ ಯಾವಾಗಲೂ ಶ್ರೇಷ್ಟ ಹಾಗೂ ಸಾಹಸಿಗಳ ಜನಾಂಗವನ್ನು ಹೊಂದಬೇಕೆನ್ನುವ ದೃಷ್ಟಿಯಿಂದ ಯುದ್ಧಕ್ಕೆ ಹೆದರುವವರು ಮತ್ತು ರೋಗರುಜಿನಗಳಿಗೆ ತುತ್ತಾದವರು ಸಂತಾನೋತ್ಪತ್ತಿ ಮಾಡದೆ ಬಂಜೆತನದಿಂದ ಜೀವಿಸಬೇಕೆಂದು ತಿಳಿಸಿದನು.

**ನಿರಂಕುಶ ಪ್ರಭುತ್ವ**

ದೇಶದ ರಕ್ಷಣೆ ಮತ್ತು ಬೆಳವಣಿಗೆಗೆ ಫ್ಯಾಸಿಸ್ಟ್ ವಾದದಂತೆ ನಾಜಿವಾದವು ಏಕನಾಯಕ ಹಾಗೂ ಏಕಪಕ್ಷೀಯ ನಿರಂಕುಶ ಪ್ರಭುತ್ವದಲ್ಲಿ ನಂಬಿಕೆ ಇರಿಸಿತ್ತು. ಈ ದೃಷ್ಟಿಯಿಂದ ಹಿಟ್ಲರನು ತನ್ನ 'ಸ್ಟಾರಂ ಟ್ರುಪರ್ಸ' ಬಳಸಿ ನಾಜಿ ಪಕ್ಷವನ್ನು ವಿರೋಧಿಸು ವವರನ್ನು ದೇಶದ್ರೋಹಿಗಳೆಂದು ಪರಿಗಣಿಸಿ, ಅಂಥವರನ್ನು ಗಡಿಪಾರು ಮಾಡಿದ್ದನ್ನು ಮತ್ತು ಲಕ್ಷಾಂತರ ಯಹೂದಿಗಳನ್ನು ಕೊಲೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. ಜರ್ಮನರಿಗೆ ಬೇಡವಾದ ವರ್ಸೇಲ್ಸ್ ಒಪ್ಪಂದವನ್ನು ತಿರಸ್ಕರಿಸಲು ಮತ್ತು ಶಿಕ್ಷಣ, ಬ್ಯಾಂಕು ಮತ್ತು

ಉದ್ಯಮಗಳನ್ನು ರಾಷ್ಟ್ರೀಕರಿಸಿ ಜರ್ಮನ್ ದೇಶವನ್ನು ಬೃಹತ್ ಶಕ್ತಿಯುಳ್ಳದ್ದನ್ನಾಗಿ ಮಾಡಲು ನಿರಂಕುಶ ಪ್ರಭುತ್ವ ಅವಶ್ಯವೆಂಬುದು ನಾಜಿಗಳ ವಾದವಾಗಿತ್ತು.

**ರಾಜ್ಯಕ್ಕೆ ಪ್ರಾಮುಖ್ಯ**

ಹೆಗಲ್, ಕಾಂಟ್ ಮೊದಲಾದ ಆದರ್ಶವಾದಿಗಳ ತತ್ವಗಳಿಂದ ಪ್ರಭಾವಿತರಾದ ನಾಜಿವಾದಿಗಳು ವ್ಯಕ್ತಿಯು ರಾಜ್ಯಕ್ಕಾಗಿಯೆ ಹೊರತು, ರಾಜ್ಯ ವ್ಯಕ್ತಿಗಳಿಗಾಗಿ ಅಲ್ಲ. ಕಾರಣ ಎಲ್ಲಾ ವ್ಯಕ್ತಿಗಳು ಹಾಗೂ ಉತ್ಪಾದನಾ ಸಂಪನ್ಮೂಲ ಶಕ್ತಿಗಳು ಜರ್ಮನ್ ಸಾಮ್ರಾಜ್ಯಕ್ಕಾಗಿ ಸರ್ವತ್ಯಾಗಮಾಡಲು ಸಿದ್ಧರಿರಬೇಕು. ರಾಜ್ಯದ ವಿರುದ್ಧ ಮಾತನಾಡಲು ಯಾವ ವ್ಯಕ್ತಿಗಳಿಗೂ ಹಕ್ಕಿಲ್ಲವೆಂಬುದು ನಾಜಿಗಳ ವಾದವಾಗಿತ್ತು.

**ಧರ್ಮವಿರೋಧ**

ಜರ್ಮನರ ಭಾವನೆ, ವಿಚಾರ, ಅಭಿಪ್ರಾಯ ಮತ್ತು ನಡತೆಯಲ್ಲಿ ಏಕರೂಪತೆಯನ್ನು ಸಾಧಿಸುವ ದೃಷ್ಟಿಯಿಂದ ರಾಜಕೀಯದಲ್ಲಿ ಧರ್ಮ ಪ್ರವೇಶಿಸಬಾರದೆಂಬುದು ನಾಜಿಗಳ ವಾದವಾಗಿತ್ತು. ಹೀಗಾಗಿ ನಾಜಿಗಳು ಕ್ರೈಸ್ತಧರ್ಮಕ್ಕೆ ಮನ್ನಣೆ ನೀಡಲಿಲ್ಲ. ರೋಮನ್ ಕ್ಯಾಥೊಲಿಕ್ ಮತ್ತು ಪ್ರಾಟೆಸ್ಟಂಟ್ ಧರ್ಮಗಳೆರಡೂ ನಾಜಿ ವಾದವನ್ನು ಮನ್ನಿಸಿದವು. ಹಿಟ್ಲರನು ಪರಮ ಗುರುವಾದನು. ಹಿಟ್ಲರನು ಕ್ರೈಸ್ತನಿಗಿಂತ ಶ್ರೇಷ್ಠವೆಂದು ನಾಜಿಗಳ ನಂಬಿಕೆಯಾಗಿತ್ತು.

**ಹಿಟ್ಲರನು ತಪ್ಪು ಮಾಡದ ನಾಯಕ**

ನಾಜಿಗಳ ಅಭಿಪ್ರಾಯದಲ್ಲಿ ಹಿಟ್ಲರ್ ತಪ್ಪು ಮಾಡದ ಶ್ರೇಷ್ಠ ನಾಯಕ. ಎಲ್ಲ ರಾಜ್ಯಾಧಿಕಾರಿಗಳು ಹಿಟ್ಲರನಿಗೆ ಸೇರಿವೆ. ಈತನ ಪಕ್ಷ, ಸರಕಾರ ಹಾಗು ರಕ್ಷಣಾಪಡೆಗಳ ನಾಯಕ. ಜರ್ಮನಿ ಜರ್ಮನ್ನರಿಗಾಗಿ ಎನ್ನುವ ಹಿಟ್ಲರ್ ಜರ್ಮನಿಯ ದೇವಮಾನವ. ಆತನದು ದಿವ್ಯವಾಣಿ. ಕಾರಣ ಆತನ ಪೂಜೆಯೆಂದರೆ ದೇಶ ಮತ್ತು ದೇವರ ಪೂಜೆಯೆಂದು ನಾಜಿಗಳು ಭಾವಿಸಿದ್ದರು.

**ಪ್ರಜಾಪ್ರಭುತ್ವದ ವಿರೋಧ**

ನಿರಂಕುಶ ಪ್ರಭುತ್ವಕ್ಕೆ ಅವಕಾಶ ಕಲ್ಪಿಸುವ ನಾಜಿಗಳು ಪ್ರಜಾಪ್ರಭುತ್ವ ಅದರ ತತ್ವಗಳು ಮತ್ತು ಸಂಸದೀಯ ಪದ್ಧತಿಯ ಕಾರ್ಯವಿಧಾನಗಳಲ್ಲಿ ನಂಬಿಕೆಯಿಲ್ಲದವ ರಾಗಿದ್ದರು.

**ಯುದ್ಧ, ಉಗ್ರರಾಷ್ಟ್ರೀಯತೆ ಹಾಗೂ ಸಾಮ್ರಾಜ್ಯ ಪದ್ಧತಿ**

ನಾಜಿಗಳು ಇವುಗಳಲ್ಲಿ ನಂಬಿಕೆಯುಳ್ಳವರಾಗಿದ್ದರು. ಬಲದ ಬಳಕೆಯನ್ನು ಉತ್ತೇಜಿಸಿದ ಹಿಟ್ಲರ್ 'ಬಲವಿರುವವನು ಮಾತ್ರ ಬದುಕಿರಲಲು ಅರ್ಹನು' ಎಂದು ಸಮರ್ಥಿಸಿದನು. ಜೀವರಾಶಿಯಲ್ಲಿ ಯಾವಾಗಲೂ ಹೋರಾಟ ನಡೆಯುತ್ತಿರುವುದು. ಈ ಹೋರಾಟದಲ್ಲಿ ಬಲವಾದ ರಾಜ್ಯಗಳು ಗೆಲ್ಲುತ್ತವೆ. ಬಲವಾದ ರಾಜ್ಯ ಸ್ಥಾಪನೆಗೆ ಉಗ್ರರಾಷ್ಟ್ರೀಯತೆ ಮತ್ತು ಯುದ್ಧವಾದವನ್ನು ಪ್ರತಿಯೊಬ್ಬರೂ ಸಮರ್ಥಿಸಿ ಹೋರಾಡಲು ಸಿದ್ಧರಾಗಬೇಕು. ಯುದ್ಧಬೇಡ ಎನ್ನುವವರಿಗೆ ಈ ಪ್ರಪಂಚದಲ್ಲಿ ಜೀವಿಸುವ ಹಕ್ಕು ಇಲ್ಲವೆಂದು ಸಾರಿದನು. ಅವಮಾನ ಮಾಡಿದ ರಾಷ್ಟ್ರಗಳ ಮೇಲೆ ಯುದ್ಧ ಸಾರಿ ಅವುಗಳನ್ನು ಜರ್ಮನ್ ವಸಾಹತುಗಳನ್ನಾಗಿ ಮಾಡಿಕೊಂಡು ಅವರ ಮೇಲೆ ಸೇಡು ತೀರಿಸಿಕೊಳ್ಳುವುದು ಜರ್ಮನ್ ಜನಾಂಗಕ್ಕೆ ಭೂಷಣವೆಂದು ಸಾರಿದನು.

**ನಾಜಿ ಸರ್ಕಾರದ ಆಂತರಿಕ ನೀತಿ**

ಸರ್ವಾಧಿಕಾರಿ ಹಿಟ್ಲರನು ಎಲ್ಲ ಪ್ರತ್ಯೇಕ ಪ್ರಾಂತೀಯ ಸರಕಾರಗಳನ್ನು ರದ್ದುಗೊಳಿಸಿ ಕೇಂದ್ರೀಕೃತ ಆಡಳಿತ ವ್ಯವಸ್ಥೆಯನ್ನು ಜರ್ಮನಿಯಲ್ಲಿ ಜಾರಿಗೆ ತಂದನು. ಬರ್ಲಿನ್ ಆಡಳಿತ ಕೇಂದ್ರವಾಯಿತು. ಶಿಕ್ಷಣ ಸಂಸ್ಥೆಗಳಲ್ಲಿ ನಾಜಿ ತತ್ವಗಳನ್ನು ಜಾರಿಗೊಳಿಸಿದ್ದರಿಂದ ಜರ್ಮನ್ನೇತರರು ರಚಿಸಿದ ಗ್ರಂಥಗಳನ್ನು ನಿಷೇಧಿಸಲಾಯಿತು. ಕಮ್ಯುನಿಸ್ಟ್ ಮತ್ತು ಯಹೂದಿಗಳ ರಾಜಕೀಯ ಶಕ್ತಿ ಸಂಘಟನೆಗಳನ್ನು ನಿಷೇಧಿಸಿ ಅವರನ್ನು ಗುಲಾಮರನ್ನಾಗಿ ಮಾಡಿದನು. ಅವರ ಪೌರ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ಅವರ ಮೇಲೆ ಹೆಚ್ಚಿನ ತೆರಿಗೆ ವಿಧಿಸಿ ಅವರು ಜರ್ಮನ್ ದೇಶವನ್ನು ಬಿಟ್ಟು ಹೋಗುವಂತೆ ಮಾಡಿದನು. ಹಿಟ್ಲರನ ತತ್ವ ವಿರೋಧಿಸುವ ಯಹೂದಿಗಳ ಕಗ್ಗೊಲೆಯಾಯಿತು. ಸೈನಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿದನು. ಹಿಟ್ಲರನು ಲಕ್ಷಗಟ್ಟಲೆ ಜರ್ಮನರನ್ನು ಸೈನ್ಯಕ್ಕೆ ಸೇರಿಸಿಕೊಂಡು ಸೈನ್ಯವನ್ನು ಬಲಪಡಿಸಿದನು.

ಆರ್ಥಿಕ ರಂಗದಲ್ಲಿ ಜರ್ಮನಿ ಪ್ರಗತಿ ಸಾಧಿಸಿತು. ಔದ್ಯಮಿಕ ಶಾಂತಿಯನ್ನು ಸ್ಥಾಪಿಸಿ ಕಾರ್ಮಿಕರ ಹಿತಾಸಕ್ತಿಯನ್ನು ಕಾಪಾಡಲು "ಜರ್ಮನ್ ಲೇಬರ್ ಫ್ರಂಟ್ " ಸ್ಥಾಪಿಸಿದನು. ಮುಷ್ಕರ ಮತ್ತು ಬೀಗದ ಮುದ್ರೆಗಳನ್ನು ನಿಷೇಧಿಸಿದನು. ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ಬಂಜರು ಭೂಮಿಯನ್ನು ಕೃಷಿಗೆ ಯೋಗ್ಯವಾದ ಭೂಮಿಯನ್ನಾಗಿ ಪರಿವರ್ತಿಸಿದನು. ಭೂಮಿಯ ಇಳುವರಿಯನ್ನು ಹೆಚ್ಚಿಸಲು ಆಧುನಿಕ ಯಂತ್ರೋಪಕರಣಗಳನ್ನು ಮತ್ತು ರಸಗೊಬ್ಬರಗಳನ್ನು ರೈತರಿಗೆ ಒದಗಿಸಿದನು. ಹಾಲು ಕೊಡುವ ಉತ್ತಮ ತಳಿಯ ಆಕಳು ಗಳನ್ನು ವಿವಿಧ ಭಾಗಗಳಿಂದ ತರಿಸಿ ಹಾಲಿನ ಉತ್ಪನ್ನವನ್ನು ಹೆಚ್ಚಿಸಿದನು. ಜರ್ಮನಿಗೆ ಆವಶ್ಯವಿದ್ದ ಹತ್ತಿ ಬಟ್ಟೆ, ರಬ್ಬರ್, ಕಬ್ಬಿಣ, ಉಕ್ಕು, ನಿಕಲ್, ಪಾದರಸ ಮೊದಲಾದ ವಸ್ತುಗಳನ್ನು ಮಾತ್ರ ವಿದೇಶಗಳಿಂದ ಆಮದು ಮಾಡಿಕೊಂಡನು. ಶಸ್ತ್ರಾಸ್ತ್ರಗಳನ್ನು ತಯಾರಿಸಲು ಮತ್ತು ಕಚ್ಚಾವಸ್ತುಗಳನ್ನುಪಯೋಗಿಸಿ ದೇಶಕ್ಕೆ ಬೇಕಾಗಿದ್ದ ವಸ್ತು ಸಾಮಗ್ರಿಗಳನ್ನು ತಯಾರಿಸಲು ಪ್ರೋ ಕೊಡುವುದರ ಮೂಲಕ ಉದ್ಯೋಗಾವ ಕಾಶಗಳನ್ನು ಹೆಚ್ಚಿಸಿದನು. ಮಾನವ ಶಕ್ತಿಗಳನ್ನು ಪೋಲಾಗದಂತೆ ರಚಾನಾತ್ಮಕ ಕಾರ್ಯ ಕ್ರಮಗಳಿಗೆ ಬಳಸಿಕೊಂಡು ಹಿಟ್ಲರನು ಅಧಿಕಾರ ಸ್ವೀಕರಿಸಿದ ಐದು ವರ್ಷಗಳಲ್ಲಿ ಜರ್ಮನ್ ದೇಶ ಸ್ವಾವಲಂಬಿ ದೇಶವಾಯಿತು. ತತ್ಪರಿಣಾಮವಾಗಿ ಸರ್ವಾಧಿಕಾರಿ ಹಿಟ್ಲರನು ಜನಮನವನ್ನು ಗೆದ್ದನು.

**ಹಿಟ್ಲರನ ವಿದೇಶಾಂಗ ನೀತಿ–ವರ್ಸೇಲ್ಸ್ ಒಪ್ಪಂದದ ಉಲ್ಲಂಘನೆ**

ಪ್ರಥಮ ಮಹಾಯುದ್ಧದಲ್ಲಿ ತೇಜೋವಧೆಯನ್ನನುಭವಿಸಿದ್ದ ಜರ್ಮನಿಗೆ ಅಂತಾರಾಷ್ಟ್ರೀಯತೆ ಪ್ರತಿಷ್ಟೆಯನ್ನು ದೊರಕಿಸಿ ಕೊಡುವ ಗುರಿಯೊಂದಿಗೆ ಹಿಟ್ಲರನು ತನ್ನ ವಿದೇಶಾಂಗ ನೀತಿಯನ್ನು ರೂಪಿಸಿದನು. ಅಧಿಕ ಸಂಖ್ಯೆಯಲ್ಲಿ ಆಧುನಿಕ ವಿಮಾನಗಳನ್ನು ಯುದ್ಧ ನೌಕೆಗಳನ್ನು ನಿರ್ಮಿಸಿದನು. ನವೀನ ಶಸ್ತ್ರಾಸ್ತ್ರಗಳನ್ನು ಹೊಂದುವ ದೃಷ್ಟಿಯಿಂದ ೧೯೩೩ರಲ್ಲಿ ಜಿನೀವಾ ನಿಶಸ್ತ್ರೀಕರಣ ಸಮ್ಮೇಳನದಿಂದ ಹೊರಬಂದು ರಾಷ್ಟ್ರ ಸಂಘದ ಜೊತೆ ಸಂಬಂಧವನ್ನು ಕಡಿದುಕೊಂಡನು. ಬಲಾತ್ಕಾರವಾಗಿ ಜರ್ಮನಿಯ ಮೇಲೆ ಹೇರಿದ್ದ ವರ್ಸೇಲ್ಸ್ ಒಪ್ಪಂದವನ್ನು ಉಲ್ಲಂಘಿಸಿ ಸಮರದ ಮೂಲಕ ಆಸ್ಟ್ರಿಯಾ ಜೆಕೊಸ್ಲೋವಾಕಿಯಾ ಮತ್ತು ಪೋಲೆಂಡ್‌ಗಳನ್ನು ವಶಪಡಿಸಿಕೊಂಡು ಜರ್ಮನ್ ಜನಾಂಗದ ವಿಶಾಲ ಸಾಮ್ರಾಜ್ಯವನ್ನು ಸ್ಥಾಪಿಸುವುದು ಹಿಟ್ಲರನ ಗುರಿಯಾಗಿತ್ತು. ಫ್ರಾನ್ಸ್ , ಇಂಗ್ಲೆಂಡ್ ಮತ್ತು ರಷ್ಯಾದೇಶಗಳು ಹೊಂದಿದ್ದ ಶಸ್ತ್ರಾಸ್ತ್ರಗಳನ್ನು ಗಮನಿಸಿ ಅವರಿಗೆ ಸಮನಾದ ಮಾರಕ ಶಸ್ತ್ರಾಸ್ತಗಳನ್ನು ಉತ್ಪಾದಿಸಲು ಕ್ರಮ ಕೈಕೊಂಡನು. ಈ ಹಿನ್ನೆಲೆಯಲ್ಲಿ ವರ್ಸೇಲ್ಸ್ ಒಪ್ಪಂದ ಉಲ್ಲಂಘನೆ ಘೋಷಣೆ ಮಾಡಿ ಯುರೋಪಿನ ರಾಷ್ಟ್ರಗಳನ್ನು ಚಕಿತಗೊಳಿಸಿದನು. ಹಿಟ್ಲರನು ತನ್ನ ಸೈನ್ಯಕ್ಕೆ ರೈನ್‌ಲ್ಯಾಂಡ್‌ನ್ನು ವಶಪಡಿಸಿಕೊಳ್ಳಲು ಆಜ್ಞಾಪಿಸಿದನು. ಜರ್ಮನಿಯ ವಸಾಹತುಗಳನ್ನು ತಕ್ಷಣವೇ ಹಿಂದಿರುಗಿಸಬೇಕೆಂದು ಮಿತ್ರ ರಾಷ್ಟ್ರಗಳಿಗೆ ಸೂಚಿಸಿದನು.

**ಸ್ಪೇಯಿನ್ ಅಂತಃಕಲಹ**

ಸ್ಪೆಯಿನಿನಲ್ಲಿ ೧೯೩೬ರ ಚುನಾವಣೆಯಲ್ಲಿ ಕನ್‌ಜರ್‌ವೇಟಿವ್ ಪಕ್ಷ ಮತ್ತು ಪ್ರೊಗ್ರೆಸ್ಸಿವ್ ಪಕ್ಷಗಳು ಸಮಬಲವನ್ನು ಪಡೆದು ಪ್ರಜಾಪ್ರಭುತ್ವ ಸರಕಾರವನ್ನು ನಡೆಸುವಲ್ಲಿ ವಿಫಲಗೊಂಡಾಗ ಅಲ್ಲಿ ಅಂತರ್ಯುದ್ಧ ಪ್ರಾರಂಭವಾಯಿತು. ಸ್ಪೆಯಿನಿನ ಆಂತರಿಕ ವಿಷಯಗಳಲ್ಲಿ ಯಾರೂ

ಮಧ್ಯಪ್ರದೇಶಿಸಬಾರದೆನ್ನುವ ಬ್ರಿಟನ್ ಮತ್ತು ಫ್ರಾನ್ಸ್ ಸರಕಾರಗಳ ಸೂಚನೆಯನ್ನು ಧಿಕ್ಕರಿಸಿ, ಹಿಟ್ಲರ್ ಮತ್ತು ಇಟಲಿಯ ಮುಸ್ಸೊಲೊನಿ ಸ್ಪೆಯಿನಿನಲ್ಲಿ ಸರ್ವಾಧಿಕಾರಿ ಶಕ್ತಿಯನ್ನು ಬೆಳೆಸಲು ಅಲ್ಲಿಯ ಜನರಲ್ ಫ್ರಾಂಕೊನಿಗೆ ಸೈನಿಕ ನೆರವು ನೀಡಿ ಆತನನ್ನು ಅಧಿಕಾರಕ್ಕೆ ತಂದನು.

**ರೋಂ–ಬರ್ಲಿನ್–ಟೋಕಿಯೊ ಆ್ಯಕ್ಸಿಸ್**

ರಷ್ಯಾದಿಂದ ಒದಗಬಹುದಾದ ಅಪಾಯವನ್ನು ಲಕ್ಷಿಸಿ ಹಿಟ್ಲರನು ಜಪಾನ್ ದೇಶದೊಂದಿಗೆ ೧೯೩೯ರಲ್ಲಿ ರಕ್ಷಣಾ ಒಪ್ಪಂದವನ್ನು ಮಾಡಿಕೊಂಡನು. ಇದನ್ನು ಆ್ಯಂಟಿ ಕೊಮಿಂಟರ್ನ್ ಒಪ್ಪಂದವೆಂದು ಕರೆಯುತ್ತಾರೆ. ಇಟಲಿಯು ೧೯೩೭ರಲ್ಲಿ ಈ ಒಪ್ಪಂದಕ್ಕೆ ಸೇರಿಕೊಂಡಿತು. ಆಗ ಈ ಒಪ್ಪಂದದ ಹೆಸರನ್ನು ರೋಂ-ಬರ್ಲಿನ್-ಟೋಕಿಯೊ ಆ್ಯಕ್ಸಿಸ್ ಎಂದು ಕರೆಯಲಾಯಿತು. ಮಿಶ್ರರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್ ಮತ್ತು ರಷ್ಯಾಗಳನ್ನು ಬಗ್ಗಬಡಿಯುವುದು ಈ ಒಪ್ಪಂದದ ಉದ್ದೇಶವಾಗಿತ್ತು.

**ಆಸ್ಟ್ರಿಯಾದ ಮೇಲೆ ದಾಳಿ**

ಆಸ್ಟ್ರಿಯಾವು ಮಹಾಯುದ್ಧ ಪೂರ್ವದಲ್ಲಿ ಜರ್ಮನಿಯ ಅವಿಭಾಜ್ಯ ಅಂಗವಾಗಿತ್ತು. ಯುದ್ಧದ ನಂತರ ಪ್ಯಾರಿಸ್ ಒಪ್ಪಂದದ ಪ್ರಕಾರ ಇದು ಸ್ವತಂತ್ರ ರಾಜ್ಯವಾಗಿತ್ತು. ಶುಶಿನಿಗ್ ಇಲ್ಲಿಯ ಚಾನ್ಸಲರ್ ಆಗಿ ಆಳುತ್ತಿದ್ದನು. ಈತನು ಆಸ್ಟ್ರಿಯಾದಲ್ಲಿ ಜರ್ಮನ್ ಜನಾಂಗದವರಿಗೆ ಕಿರುಕುಳ ಕೊಡುತ್ತಿದ್ದಾನೆಂದು ಅಪವಾದ ಹೊರಿಸಿ, ಅಲ್ಲಿಯ ನಾಜಿ ಅನುಯಾಯಿಗಳು ಅರಾಜಕತೆಯನ್ನು ಸೃಷ್ಟಿಸಿದರು. ಆಸ್ಟ್ರೀಯಾದಲ್ಲಿರುವ ನಾಜಿಗಳ ಹಿತವನ್ನು ಕಾಪಾಡುವ ನೆಪದಲ್ಲಿ ೧೯೩೮ರಲ್ಲಿ ಮಾರ್ಚ್ ೧೨ರಂದು ಜರ್ಮನ್ ಸೇನಾಪಡೆಗಳು ಆಸ್ಟ್ರಿಯಾದ ಮೇಲೆ ದಾಳಿ ಮಾಡಿದವು. ಶುಶಿನಿಗ್‌ನನ್ನು ಬಂಧಿಸಲಾಯಿತು. ಆಸ್ಟ್ರೀಯಾವನ್ನು ಜರ್ಮನಿಯ ಒಕ್ಕೂಟಕ್ಕೆ ಸೇರಿಸಿಕೊಳ್ಳಲಾಯಿತು.

**ಜೆಕೊಸ್ಲೊವಾಕಿಯಾದ ಮೇಲೆ ಆಕ್ರಮಣ**

ಜೆಕೊಸ್ಲೊವಾಕಿಯಾದ ದೊಡ್ಡ ಪ್ರದೇಶವಾದ ಬೊಹೆನಿಯಲ್ಲಿ ೩೨ ದಶಲಕ್ಷ ಸುಡೇಟನ್ ಜರ್ಮನ್ನರು ವಾಸವಾಗಿದ್ದರು. ಇವರೆಲ್ಲರು ಹಿಟ್ಲರನ ಅಭಿಮಾನಿಗಳು. ಇವರು ತಮ್ಮ ಪ್ರದೇಶಕ್ಕೆ ಸ್ವಯಂ ಆಡಳಿತವನ್ನು ಕೊಡಬೇಕೆಂದು ಜೆಕೊಸ್ಲೊವಾಕಿಯಾ ಸರಕಾರವನ್ನು (ಮಸಾರಿಕ್ ಸರಕಾರ) ಒತ್ತಾಯಿಸಿದರು. ಅಲ್ಲದೆ ಫ್ರಾನ್ಸ್‌ನೊಂದಿಗೆ ಸಂಬಂಧವನ್ನು ಕಡಿದುಕೊಂಡು ಜರ್ಮನಿಯೊಂದಿಗೆ ಸ್ನೇಹ ಬೆಳೆಸಬೇಕೆಂಬ ಬೇಡಿಕೆಯನ್ನು ಇಟ್ಟರು. ಜೆಕೊಸ್ಲೊವಾಕಿಯ ಸರಕಾರ ಈ ಬೇಡಿಕೆಗಳನ್ನು ನಿರಾಕರಿಸಿದಾಗ ಹಿಟ್ಲರನು ಚೆಕೊಸ್ಲೊವಾಕಿಯದ ಮೇಲೆ ದಾಳಿ ಮಾಡುವ ಬೆದರಿಕೆ ಹಾಕಿದನು. ಯುದ್ಧದ ದುರಂತವನ್ನು ತಪ್ಪಿಸಲು ೧೯೩೮ರಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿ ಚೇಂಬರ್‌ಲಿನ್ ಈ ವಿಷಯದಲ್ಲಿ ಮಧ್ಯಸ್ತಿಕೆ ವಹಿಸಿ ಹಿಟ್ಲರನನ್ನು ತೃಪ್ತಿ ಪಡಿಸಲು ಜೆಕೊಸ್ಲೊವಾಕಿಯ ಸರಕಾರವನ್ನು ಮ್ಯೂನಿಚ್ ಒಪ್ಪಂದಕ್ಕೆ ಸಹಿಹಾಕಲು ಒಪ್ಪಿಸಿದನು. ಈ ಒಪ್ಪಂದದ ಪ್ರಕಾರ ಜೆಕೊಸ್ಲೊವಾಕಿಯಾಕ್ಕೆ ಸೇರಿದ್ದ ಸುಡೇಟನ್ನರ್ ಪ್ರದೇಶವು ಜರ್ಮನಿಯ ವಶವಾಯಿತು. ಯುದ್ಧ ವಿಜಯಗಳಿಂದ ಉತ್ಸಾಹಗೊಂಡಿದ್ದ ಹಿಟ್ಲರನು ಆರು ತಿಂಗಳ ನಂತರ ಇಡೀ ಜೆಕೊಸ್ಲೊವಾಕಿಯಾವನ್ನು ವಶಪಡಿಸಿಕೊಂಡನು. ನಂತರ ಲಿಥೇನಿಯಾವನ್ನು ಬೆದರಿಸಿ ಮೆಮಲ್ ನಗರವನ್ನು ವಶಪಡಿಸಿಕೊಂಡನು. ೧೯೩೯ರ ಸೆಪ್ಟೆಂಬರ್‌ನಲ್ಲಿ ಪೋಲೆಂಡ್‌ನ ಮೇಲೆ ದಾಳಿಮಾಡಲು ಸಿದ್ಧನಾದಾಗ ಯುರೋಪ್ ಖಂಡದ ಫ್ರಾನ್ಸ್, ಬ್ರಿಟನ್, ರಷ್ಯಾ ಮತ್ತು ಅಮೆರಿಕ ದೇಶಗಳು ಹಿಟ್ಲರನ ಅತಿಯಾದ ಆಕ್ರಮಣಗಳನ್ನು ಒಟ್ಟಾಗಿ ಎದುರಿಸಲು ನಿರ್ಧರಿಸಿದವು. ಇದರಿಂದ ಎರಡನೆಯ ಮಹಾಯುದ್ಧ ಅನಿವಾರ್ಯವಾಯಿತು. ಈ ಯುದ್ಧದಲ್ಲಿ ಜರ್ಮನಿ ಸೋತಾಗ ಸರ್ವಾಧಿಕಾರಿ ಹಿಟ್ಲರನು ೧೯೪೫ರಲ್ಲಿ ಆತ್ಮಹತ್ಯೆ ಮಾಡಿಕೊಂಡನು.

<u>ಪರಾಮರ್ಶನ ಗ್ರಂಥಗಳು</u>

೧. **ದಿ ನ್ಯೂ ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ,** ಸಂಪುಟ ೧೨.

೨. ಹೆಝುನ್ ಸಿ.ಡಿ, ೧೯೭೮. **ಆಧುನಿಕ ಯುರೋಪ್,** ಘಟಪಣದಿ ಎಸ್.ಜಿ.(ಅನು), ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯ.

೩. ಲಿಪ್ಸನ್ ಈ., ೧೯೮೦. **ಯುರೋಪ್ ಇನ್ ದಿ ನೈಂಟೀಥ್ ಆ್ಯಂಡ್ ಟ್ವೆಂಟೀಥ್ ಸೆಂಚುರಿ,** ನ್ಯೂಡೆಲ್ಲಿ: ಎಲಿಯಡ್ ಪಬ್ಲಿಷರ್ಸ್ ಪ್ರೈವೇಟ್ ಲಿಮಿಟೆಡ್.

೪. ರಾವ್ ವಿ.ಬಿ, ೧೯೮೫. **ಹಿಸ್ಟರಿ ಆಫ್ ಮಾಡರ್ನ್ ಯುರೋಪ್,** ನ್ಯೂಡೆಲ್ಲಿ: ಸ್ಟೆರ್ಲಿಂಗ್ ಪಬ್ಲಿಷರ್ಸ್, ಪ್ರೈವೇಟ್ ಲಿಮಿಟೆಡ್,

# ೨೨. ದ್ವಿತೀಯ ಮಹಾಯುದ್ದ ಹಾಗೂ ವಿಶ್ವಸಂಸ್ಥೆಯ ರಚನೆ

ಪ್ರಥಮ ವಿಶ್ವ ಸಮರದ ಕಷ್ಟನಷ್ಟಗಳಿಂದ ಇನ್ನೂ ಚೇತರಿಸಿಕೊಂಡಿರದ ಜಗತ್ತು ಕ್ರಿ.ಶ.೧೯೩೯ರಲ್ಲಿ ಮತ್ತೊಂದು ವಿಶ್ವ ಸಮರವನ್ನು ಕಂಡಿತು. ಪ್ರಥಮ ಮಹಾಯುದ್ಧ ಕ್ಕಿಂತಲೂ ಭೀಕರ ಪರಿಣಾಮಗಳನ್ನು ಜಗತ್ತು ಎದುರಿಸಿತು. ರಾಷ್ಟ್ರಸಂಘದ ಶಾಂತಿ ಪ್ರಯತ್ನಗಳು ವಿಫಲವಾಗಿ, ಪ್ರಬಲ ರಾಷ್ಟ್ರಗಳ ದ್ವೇಷ, ಅಸೂಯೆ, ಪ್ರತೀಕಾರ ಮನೋಭಾವ, ಹಿಂಸಾ ಪ್ರವೃತ್ತಿಗಳು ತಾಂಡವವಾಡಿದವು. ಈ ದಳ್ಳುರಿಯು ಜನಜೀವನವನ್ನು ದಹಿಸಿತು.

**ದ್ವಿತೀಯ ಮಹಾಯುದ್ಧದ ಕಾರಣಗಳು**

**೧. ಜರ್ಮನ್ನರ ಸೇಡಿನ ಮನೋಭಾವ**

ಪ್ರಥಮ ಮಹಾಯುದ್ಧದಲ್ಲಿ ಹೇಳ ಹೆಸರಿಲ್ಲದಂತಾಗಿದ್ದ ಜರ್ಮನಿಯು ಆ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಮತ್ತೆ ಪೂರ್ಣವಾಗಿ ಚೇತರಿಸಿಕೊಂಡು, ಯುದ್ಧ ಸನ್ನದ್ಧವಾಗಿ ನಿಂತದ್ದು ವಿಧಿಯ ವಿಕಟ ವಿಡಂಬನೆಯೆನ್ನಬೇಕು. ಯಾವುದೇ ಮಾನದಂಡದಿಂದ ಜರ್ಮನಿಯ ಚೇತರಿಕೆ ಗಣನೀಯವಾದುದು. ವರ್ಸೈಲ್ಸ್ ಒಪ್ಪಂದವು ಜರ್ಮನಿಯನ್ನು ತೀವ್ರವಾಗಿ ಅವಮಾನಗೊಳಿಸಿತ್ತು. ಜರ್ಮನ್ನರಲ್ಲಿ ಈ ಬೆಂಕಿ ಒಳಗೊಳಗೇ ದಹಿಸುತ್ತಿತ್ತು. ಈ ಯುದ್ಧ ಅವರ ಆಯ್ಕೆಯದ್ದಾಗಿರಲಿಲ್ಲ; ಅನಿವಾರ್ಯ ಹಠವಾಗಿತ್ತು. ಅಮೆರಿಕಾದ ಅಧ್ಯಕ್ಷ ವುಡ್ರೋವಿಲ್ಸನ್ನನು ಶಾಂತಿ ಕರಾರುಗಳನ್ನು ಮುಂದಿಟ್ಟಾಗ ಜರ್ಮನಿಯು ಅದಕ್ಕೆ ಒಪ್ಪಲು ಸಿದ್ಧವಾಗಿತ್ತು. ಆದರೆ, ಪ್ಯಾರಿಸ್ ಶಾಂತಿ ಸಮಾವೇಶದಲ್ಲಿ ಚರ್ಚೆಗಳಾದ ನಂತರ ಮಿತ್ರಕೂಟವು ವಿಲ್ಸನನ ಶಾಂತಿ ಪ್ರಸ್ತಾವಗಳನ್ನು ತನ್ನ ಅನುಕೂಲಕ್ಕೆ ಬದಲಾಯಿಸಿ ಜರ್ಮನಿಯನ್ನು ಸಹಿ ಹಾಕುವಂತೆ ಒತ್ತಾಯಿಸಿತು. ಜರ್ಮನಿಯು ಅದಕ್ಕೆ ಒಪ್ಪದೇ ಹೋದರೆ ಮತ್ತೊಮ್ಮೆ ಯುದ್ಧ ಘೋಷಿಸುವ ಭಯವನ್ನು ಹುಟ್ಟಿಸಿತು. ಇಂತಹ ಅಸಹಾಯಕ ಸ್ಥೀತಿಯಲ್ಲಿ ಜರ್ಮನಿಯು ಅನಿವಾರ್ಯವಾಗಿ ವರ್ಸೈಲ್ಸ್ ಒಪ್ಪಂದಕ್ಕೆ ಸಹಿ ಹಾಕಿತ್ತು. ಯುದ್ಧಾಪರಾಧಕ್ಕಾಗಿ ಜರ್ಮನಿಯ ಮೇಲೆ ದೊಡ್ಡ ಪ್ರಮಾಣದಲ್ಲಿ ಪರಿಹಾರ ಧನ ನೀಡುವಂತೆ ಒತ್ತಡ ಹೇರಲಾಯಿತು. ಜರ್ಮನಿಯು ಆ ಸ್ಥಿತಿಗೆ ಬರಲು ಸಾಧ್ಯವಿಲ್ಲ ಎಂಬುದು ಮಿತ್ರರಾಷ್ಟ್ರಗಳಿಗೆ ಚೆನ್ನಾಗಿ ತಿಳಿದಿತ್ತು. ಜರ್ಮನಿಯು ಇಂತಹ ಅವಕಾಶವನ್ನು ಎದುರು ನೋಡುತ್ತಿತ್ತು. ವರ್ಸೈಲ್ಸ್ ಒಪ್ಪಂದವೇ ಜರ್ಮನಿಯ ಸೇಡಿನ ಮನೋಭಾವಕ್ಕೆ ಪ್ರೇರಣೆಯಾಯಿತು.

**೨. ಜಪಾನಿನ ಸಾಮ್ರಾಜ್ಯಶಾಹಿತ್ವ**

ಜರ್ಮನಿಯ ಮಹತ್ವಾಕಾಂಕ್ಷೆಯು ಪ್ರಥಮ ಮಹಾಯುದ್ಧದ ಕಾಲದಿಂದ ಹೆಚ್ಚಾಗತೊಡಗಿತು. ಜಪಾನ್ ಮತ್ತು ಚೀನಾಗಳು ಪ್ರಥಮ ಮಹಾಯುದ್ಧಗಳಲ್ಲಿ ಮಿತ್ರ ಕೂಟಗಳ ಪರವಾಗಿ ಹೋರಾಡಿದರೂ ಜಪಾನ್ ಮಾತ್ರವೇ ವಿಶೇಷ ಮನ್ನಣೆಗೆ ಪಾತ್ರ ವಾಯಿತು. ಜಪಾನ್ ತನ್ನ ನೌಕಾಬಲವನ್ನು ಅಭಿವೃದ್ಧಿಪಡಿಸಲು ಆರಂಭಿಸಿತು. ಜಪಾನಿನ ಯುವಜನತೆ ಸರಕಾರದ ಈ ಪ್ರಯತ್ನಗಳನ್ನು ಬೆಂಬಲಿಸಿತು.

ಕ್ರಿ.ಶ.೧೯೩೦ರ ವೇಳೆಗೆ ಜಪಾನಿನ ಶಕ್ತಿ ಅದ್ಭುತವಾಗಿ ಬೆಳೆದುಬಿಟ್ಟಿತ್ತು. ಕ್ರಿ.ಶ.೧೯೩೧ರಲ್ಲಿ ಮಂಚೂರಿಯಾದ ವಿಷಯದಲ್ಲಿ ತಲೆ ಹಾಕಿತು. ರಾಷ್ಟ್ರ ಸಂಘವನ್ನು ನಿರ್ಲಕ್ಷಿಸಿ ಮಂಚೂರಿಯಾವನ್ನು ಆಕ್ರಮಿಸಿ, ವಶಪಡಿಸಿಕೊಂಡಿತು. ಆದರೆ ಇಷ್ಟಕ್ಕೇ ಜಪಾನ್ ತೃಪ್ತವಾಗಲಿಲ್ಲ. ಜುಲೈ ೧೯೩೭ರಲ್ಲಿ ಯಾವುದೇ ಪೂರ್ವ ಸೂಚನೆಗಳಿಲ್ಲದೆ ಜಪಾನ್ ಮತ್ತು ಚೀನಾಗಳ ನಡುವೆ ಯುದ್ಧ ಪ್ರಾರಂಭವಾಯಿತು. ಚೀನಾದ ಪೀಕಿಂಗ್, ನೇನ್ ಕಿಂಗ್ ಮುಂತಾದ ನಗರಗಳು ಜಪಾನಿನ ವಶವಾದವು. ಎರಡನೆಯ ಮಹಾಯುದ್ಧ ಆರಂಭಗೊಂಡಾಗ ಸಿನೋ-ಜಪಾನ್ ಯುದ್ಧವು ಪ್ರಗತಿಯಲ್ಲಿತ್ತು. ಜಪಾನ್ ಕ್ರಿ.ಶ. ೧೯೪೧ರಲ್ಲಿ ಪರ್ಲ್ ಬಂದರನ್ನು ವಶಪಡಿಸಿಕೊಳ್ಳುವ ಮೂಲಕ ಯುದ್ಧಕ್ಕೆ ಪ್ರವೇಶಿಸಿತು. ಜಪಾನಿನ ವಿಸ್ತರಣಾಕಾಂಕ್ಷೆ, ಸಾಮ್ರಾಜ್ಯವಾದಗಳು ಯುದ್ಧಕ್ಕೆ ಕಾರಣವಾದವು. ಆ ಸ್ಥಿತಿಯಲ್ಲಿ ಶಾಂತಿಪಾಲನೆ ಅಸಾಧ್ಯವೇ ಆಗಿತ್ತು.

### ೩. ಯುರೋಪಿನಲ್ಲಿ ಸರ್ವಾಧಿಕಾರತ್ವದ ಏಳಿಗೆ

ಯುರೋಪಿನ ಯುದ್ಧೋತ್ತರ ಸ್ಥಿತಿಗತಿಗಳು ಸರ್ವಾಧಿಕಾರದ ಏಳಿಗೆಗೆ ನಿಸ್ಸಂಶಯವಾಗಿ ಪೂರಕ ಅಂಶಗಳಾದವು. ಯುದ್ಧಪೀಡಿತ ರಾಷ್ಟ್ರಗಳು ಸರ್ವಾಧಿಕಾರಿಗಳ ಬೆಳವಣಿಗೆಗೆ ನೆಲೆ ನೀಡಿದವು. ಪರಿಸ್ಥಿತಿಯನ್ನು ಸರಿಯಾಗಿಸುವ ಭರವಸೆಗಳೊಂದಿಗೆ ಇಟಲಿಯಲ್ಲಿ ಮುಸ್ಸೊಲೋನಿಯು ಅಧಿಕಾರಕ್ಕೆ ಬಂದನು. ರಷ್ಯಾದಲ್ಲಿ ಸ್ಟಾಲಿನ್ನನು ವೈಯಕ್ತಿಕ ಹಿತಾಸಕ್ತಿ ಗಳನ್ನು ಕಡೆಗಣಿಸಿ ರಾಷ್ಟ್ರದ ಪ್ರಗತಿಗೆ ಗಮನ ಕೊಡಬೇಕೆಂಬ ಆದೇಶದೊಂದಿಗೆ ಐದು ವರ್ಷಗಳ ಯೋಜನೆಯನ್ನು ಪ್ರತಿಪಾದಿಸಿದನು. ಜರ್ಮನಿಯಲ್ಲಿ ಹಿಟ್ಲರನು ಶಕ್ತಿಯಾಗಿ ಸರ್ವಾಧಿಕಾರಿಯಾಗಿ ಆಳ್ವಿಕೆಗೆ ಬಂದನು. ಜರ್ಮನಿಯ 'ನಾಜಿಸಂ'ಮತ್ತು ಇಟಲಿಯ 'ಫ್ಯಾಸಿಸಂ'ಗಳು ಇಡೀ ಜಗತ್ತನ್ನು ಯುದ್ಧ ಭೀತಿಗೆ ತಳ್ಳಿದವು. ಮುಸ್ಸೊಲೊನಿ ಮತ್ತು ಅವನ ಫ್ಯಾಸಿಸ್ಟ್ ಹಿಂಬಾಲಕರು ಹಳೆಯ ರೋಮ್ ಸಾಮ್ರಾಜ್ಯದ ವೈಭವವನ್ನು ಪುನರ್‌ಸ್ಥಾಪಿಸುವ ಆದರ್ಶವನ್ನು ಪ್ರತಿಪಾದಿಸಿದರು. ಸ್ಪೆಯಿನ್‌ನ ಒಳಜಗಳವು ಜನರಲ್ ಫ್ರಾಂಕೋ ಎಂಬ ಇನ್ನೋರ್ವ ಸರ್ವಾಧಿಕಾರಿಯ ಏಳ್ಗೆಗೆ ದಾರಿ ಮಾಡಿಕೊಟ್ಟಿತು. ಇಟಲಿಯ ಸ್ವಯಂಸೇವಕರು ಸ್ಪೆಯಿನ್‌ನ ಸಹಾಯಕ್ಕೆ ಬದ್ಧರಾದರು. ಹಾಗೆಯೇ ಪೋರ್ಚುಗಲ್ ಕೂಡ ಸರ್ವಾಧಿಕಾರದ ಬೆಳವಣಿಗೆಯನ್ನು ಕಂಡಿತು. ಹೀಗೆ, ಮಹಾತ್ವಾಕಾಂಕ್ಷೆ ಹೊಂದಿದ್ದ ಸರ್ವಾಧಿಕಾರಿಗಳ ಉದಯದಿಂದಾಗಿ ಯುರೋಪಿನ ವಿದ್ಯಾಮಾನಗಳು ತೀವ್ರ ಬದಲಾವಣೆ ಹೊಂದಿದವು.

### ೪. ಮೌಲ್ಯಗಳ ಸಂಘರ್ಷ, ಸರ್ವಾಧಿಕಾರ ಮತ್ತು ಪ್ರಜಾಪ್ರಭುತ್ವ

ಜರ್ಮನಿ, ಇಟಲಿ ಮತ್ತು ಜಪಾನ್ ದೇಶಗಳು ಒಂದು ಬಗೆಯ ಮೌಲ್ಯವನ್ನು ಪ್ರತಿಪಾದಿಸಿದರೆ, ಬ್ರಿಟನ್, ಫ್ರಾನ್ಸ್ ಮತ್ತು ಅಮೆರಿಕಾಗಳು ಅದಕ್ಕೆ ತೀರಾ ವಿಭಿನ್ನವಾದ ಮೌಲ್ಯಗಳನ್ನು ಎತ್ತಿ ಹಿಡಿಯಿತು. ಈ ಎರಡು ವಿಧದ ಮೌಲ್ಯಗಳ ಸಂಘರ್ಷವೆನ್ನಬಹುದು. ಎರಡನೆಯ ಮಹಾಯುದ್ಧವನ್ನು ಸರ್ವಾಧಿಕಾರಿ ಮುಸ್ಸೊಲೊನಿಯ ಈ ಎರಡು ಬಣಗಳ ಸಂಘರ್ಷದ ಕುರಿತು ಹೀಗೆ ಹೇಳಿದ್ದನು, "ಈ ಎರಡು ಬೇರೆ ಬೇರೆ ಜಗತ್ತುಗಳ ನಡುವಿನ ಯುದ್ಧದಲ್ಲಿ ಸಂಧಾನವೆನ್ನುವುದು ಸಾಧ್ಯವೇ ಇಲ್ಲ. ಒಂದೋ ನಾವಿರಬೇಕು ಇಲ್ಲ ಅವರಿರಬೇಕು." ಈ ಎರಡು ಮೌಲ್ಯಗಳ ವ್ಯತ್ಯಾಸವು, ರಾಷ್ಟ್ರದಲ್ಲಿ ವ್ಯಕ್ತಿಯು ಹೊಂದಿರಬೇಕಾದ ಸ್ಥಾನಮಾನಗಳ ಮೇಲೆ ಅವಲಂಬಿತವಾಗಿದೆ. ಪ್ರಜಾಪ್ರಭುತ್ವ ವ್ಯಕ್ತಿಗೆ ಸಾಕಷ್ಟು ಹೆಚ್ಚಿನ ಪ್ರಾಧಾನ್ಯ ನೀಡುತ್ತದೆ. ರಾಷ್ಟ್ರದ ಚಟುವಟಿಕೆಗಳ ಪ್ರಯೋಜನಗಳು ಅಂತಿಮವಾಗಿ ವ್ಯಕ್ತಿಗೆ ಸಲ್ಲುತ್ತದೆ ಎಂದು ಅದು ನಂಬುತ್ತದೆ. ಸರ್ವಾಧಿಕಾರದಲ್ಲಿ ವ್ಯಕ್ತಿ ಸ್ವಾತಂತ್ರ್ಯ ತೀರಾ ಅಲ್ಪ. ರಾಷ್ಟ್ರದ ಧೋರಣೆ ಇಲ್ಲಿ ಮುಖ್ಯ. ರಾಷ್ಟ್ರದಿಂದ ಪ್ರಯೋಜನ ಹೊಂದುವುದನ್ನು ಅದು ನಿರಾಕರಿಸುತ್ತದೆ. ಈ ಎರಡು ಮೌಲ್ಯಗಳು ಆಧ್ಯಾತ್ಮಿಕ, ಪ್ರಾಂತೀಯ ಮತ್ತು ಆರ್ಥಿಕ ಯಾವುದೇ ವಿಚಾರದಲ್ಲಿ ವಿಭಿನ್ನ ಧ್ರುವಗಳಾದವು. ಬ್ರಿಟನ್ ಮತ್ತು ಫ್ರಾನ್ಸ್‌ಗಳು ಮಾತ್ರವೇ ಯಾಕಾಗಿ ದೊಡ್ಡ ದೊಡ್ಡ ವಸಾಹತುಗಳನ್ನು ಹೊಂದಿರಬೇಕು. ನಾವೂ ಹೊಂದಬಾರದೇಕೆ ಎಂಬುದು ಜರ್ಮನ್ನರ ಪ್ರಶ್ನೆಯಾಯಿತು. ಅವರು ಜಗತ್ತಿನ ಅತ್ಯಂತ ಶ್ರೇಷ್ಠ ಕುಲಜರು ತಾವೇ ಎಂದು ನಂಬಿದ್ದರು. ಹಾಗಾಗಿ, ಎರಡನೆಯ ಮಹಾಯುದ್ಧವನ್ನು ವಿಚಾರಗಳ ಸಂಘರ್ಷವೆಂದೂ ಕರೆಯಬಹುದು.

**೫. ಪ್ರಜಾತಂತ್ರ ರಾಷ್ಟ್ರಗಳ ದೌರ್ಬಲ್ಯ**

ಕ್ರಿ.ಶ.೧೯೧೦ರ ಬಳಿಕ ಗ್ರೇಟ್ ಬ್ರಿಟನ್ ಯುರೋಪಿನ ರಾಜಕೀಯದಿಂದ ಪ್ರತ್ಯೇಕವಾಗಿ ನಿಲ್ಲುವ ತತ್ವವನ್ನು ಅನುಸರಿಸತೊಡಗಿತು ಮತ್ತು ಶಾಂತಿಪಾಲನೆಯ ಬದ್ಧತೆಯನ್ನು ಒಪ್ಪಿಕೊಳ್ಳಲು ನಿರಾಕರಿಸಿತು. ಯುರೋಪಿನ ವಿದೇಶಾಂಗ ವಿಚಾರಗಳಿಗಿಂತ ಹೆಚ್ಚಾಗಿ ತನ್ನ ಆಂತರಿಕ ವ್ಯಾಪಾರೋದ್ದಿಮೆಗಳ ಬಗೆಗೆ ಹೆಚ್ಚಿನ ಗಮನ ನೀಡಲಾರಂಭಿಸಿತು. ಆದರೆ ಫ್ರಾನ್ಸಿನ ವಿಚಾರದಲ್ಲಿ ಹಾಗಾಗಲಿಲ್ಲ. ಜರ್ಮನಿಯ ವಿರುದ್ಧ ವಿಜಯ ಸಾಧಿಸಿದ ಮೇಲೆ ಫ್ರಾನ್ಸ್, ಜರ್ಮನಿಯ ವಿಷಯವಾಗಿ ಭಯಪಟ್ಟುಕೊಳ್ಳತೊಡಗಿತು. ಜರ್ಮನಿಯ ಜನಸಂಖ್ಯೆ ಹೆಚ್ಚುತ್ತಿದೆಯೆಂದೂ, ತನ್ನ ಜನಸಂಖ್ಯೆ ಕಡಿಮೆಯಾಗುತ್ತಿದೆಯೆಂದೂ ಅದು ಭಾವಿಸಲಾರಂಭಿಸಿತು. ಎಲ್ಲಕ್ಕಿಂತ ಹೆಚ್ಚಾಗಿ, ಕ್ರಿ.ಶ.೧೯೧೯ರಲ್ಲಿ ತನಗಾದ ಅವಮಾನಕ್ಕೆ ಜರ್ಮನಿಯು ಸೇಡು ತೀರಿಸುವ ಸಾಧ್ಯತೆಗಳಿದ್ದವು. ಫ್ರಾನ್ಸ್ ದೇಶವು ಬ್ರಿಟನ್ ಮತ್ತು ಅಮೆರಿಕಾಗಳಿಂದ ಭದ್ರತೆಯನ್ನು ಅಪೇಕ್ಷಿಸಿತು. ಅದನ್ನು ಗಳಿಸಲು ಫ್ರಾನ್ಸ್ ಅಶಕ್ಯವಾದಾಗ, ಅದು ಪೋಲೆಂಡ್, ಬೆಲ್ಜಿಯಂ, ಜೆಕೋಸ್ಲಾವಾಕಿಯಾ ಮುಂತಾದ ಸಣ್ಣ ರಾಷ್ಟ್ರಗಳೊಡನೆ ಮೈತ್ರಿ ಬೆಳೆಸಿಕೊಂಡಿತು. ದುರದೃಷ್ಟವಶಾತ್ ಫ್ರಾನ್ಸಿನ ಮೈತ್ರಿಯು ಲಾಭಕ್ಕಿಂತ ಹೆಚ್ಚಾಗಿ ನಷ್ಟವನ್ನೇ ಉಂಟುಮಾಡಿತು. ಸ್ವತಃ ಗ್ರೇಟ್‌ಬ್ರಿಟನ್ ಯುದ್ಧಕ್ಕೆ ಸಿದ್ಧವಿರಲಿಲ್ಲ. ಪರಿಣಾಮವಾಗಿ ಕ್ರಿ.ಶ.೧೯೩೮ರವರೆಗೆ ತಮ್ಮ ಉದ್ದೇಶಗಳನ್ನು ಸಾಧಿಸಲು ಕಟಿಬದ್ಧರಾಗಿದ್ದ ಆಕ್ರಮಣಕಾರರನ್ನು ನಿಯಂತ್ರಿಸಲು ಏನೂ ಮಾಡಲಾಗಲಿಲ್ಲ.

**೬. ಮಿಲಿಟರಿ ಪೈಪೋಟಿ**

ಮಿಲಿಟರಿ ಸನ್ನದ್ಧತೆಯೂ ಪ್ರಥಮ ಮಹಾಯುದ್ಧಕ್ಕೆ ಒಂದು ಕಾರಣವಾಗಿತ್ತು. ಮಿಲಿಟರಿ ಪೈಪೋಟಿಯನ್ನು ಕಡಿಮೆಗೊಳಿಸುವುದು ಮತ್ತು ಜಗತ್ತಿನಲ್ಲಿ ಶಾಂತಿಯನ್ನು ಕಾಪಾಡುವ ಉದ್ದೇಶಗಳಿಂದ ರಾಷ್ಟ್ರಸಂಘವು ಪ್ರಥಮ ಮಹಾಯುದ್ಧದ ಬಳಿಕ ಅಸ್ತಿತ್ವಕ್ಕೆ ಬಂದಿತ್ತು. ವರ್ಸೈಲ್ಸ್ ಒಪ್ಪಂದವು ಜರ್ಮನಿಯನ್ನು ನಿಶ್ಯಸ್ತ್ರಗೋಳಿಸಿತ್ತು. ಎಲ್ಲ ಶಕ್ತಿಗಳೂ ನಿಶ್ಯಸ್ತ್ರೀಕರಣಕ್ಕೆ ಬದ್ಧವಾಗಿರಬೇಕೆಂದು ಜರ್ಮನಿಯು ಬಯಸಿತು. ಆದರೆ ಗ್ರೇಟ್‌ಬ್ರಿಟನ್ ಹೊರತಾಗಿ ಬೇರಾವ ದೇಶವೂ ಈ ತತ್ವಕ್ಕೆ ಬದ್ಧವಾಗಲಿಲ್ಲ. ಫಲಿತಾಂಶವೆಂಬಂತೆ, ಜರ್ಮನಿಯಲ್ಲಿ ಹಿಟ್ಲರನು ಆಡಳಿತ ಚುಕ್ಕಾಣಿ ಹಿಡಿದಾಗ ಅವನು ಜರ್ಮನ್ ನೌಕಾದಳ, ಭೂ ಸೇನೆ ಮತ್ತು ವಾಯುಪಡೆಗಳನ್ನು ಬಲಪಡಿಸಲು ತೊಡಗಿದನು. ಕ್ರಿ.ಶ.೧೯೩೫ರಲ್ಲಿ ಕಡ್ಡಾಯ ಮಿಲಿಟರಿ ವ್ಯವಸ್ಥೆಯನ್ನು ಜರ್ಮನಿಯಲ್ಲಿ ಜಾರಿಗೆ ತರಲಾಯಿತು. ಇಟಲಿ ಮತ್ತು ಜಪಾನ್‌ಗಳು ಮಿಲಿಟರಿ ಪ್ರಾಬಲ್ಯವನ್ನು ಪಡೆಯುತ್ತಿದ್ದವು. ಇಂತಹ ರಾಷ್ಟ್ರಗಳ ಮಿಲಿಟರಿ ಸಿದ್ಧತೆಯಿಂದಾಗಿ ಪ್ರಜಾತಂತ್ರ ರಾಷ್ಟ್ರಗಳೂ ತಮ್ಮ ಶಸ್ತ್ರಾಸ್ತ್ರಗಳನ್ನು ಹೆಚ್ಚಿಸಿಕೊಂಡವು. ವಿಶೇಷವಾಗಿ ಕ್ರಿ.ಶ.೧೯೩೦ರ ಬಳಿಕ ಈ ಬೆಳವಣಿಗೆ ಗಳಾದವು. ಅಂತಿಮವಾಗಿ ಮಿಲಿಟರಿ ಪೈಪೋಟಿಯು ಶಸ್ತ್ರಾಸ್ತ್ರ ಯುದ್ಧಕ್ಕೆ ಕಾರಣವಾಯಿತು.

**೭. ವಸಾಹತು, ಕಚ್ಚಾವಸ್ತು, ಮಾರುಕಟ್ಟೆಗಳಿಗಾಗಿ ಪೈಪೋಟಿ**

ಯುರೋಪಿನ ಹಲವು ರಾಷ್ಟ್ರಗಳು ಕಚ್ಚಾವಸ್ತುಗಳ ಸಂಪನ್ಮೂಲವನ್ನು ನಿಯಂತ್ರಿಸು ತ್ತಿದ್ದವು. ಯುರೋಪಿನ ಹೊರಗೆ ಸುಮಾರು ಕಾಲು ಭಾಗದ ವಿಶ್ವದ ಪ್ರಾಂತ್ಯಗಳನ್ನು ಬ್ರಿಟನ್ ನಿಯಂತ್ರಿಸುತ್ತಿತ್ತು. ಫ್ರಾನ್ಸ್, ಬೆಲ್ಜಿಯಂ ಮತ್ತು ನೆದರ್ಲೆಂಡ್‌ಗಳೂ ವಿಶಾಲವಾದ ವಸಾಹತು ಸಾಮ್ರಾಜ್ಯಗಳನ್ನು ಹೊಂದಿದ್ದವು. ಆದರೆ ಜರ್ಮನಿ ಮತ್ತು ಇಟಲಿಗಳು ವಸಾಹತುಗಳ ಬೇಟೆಯಲ್ಲಿ ಹಿಂದುಳಿದಿದ್ದವು. ರಾಜಕೀಯ ಏಕೀಕರಣದ ನಂತರ ಅವುಗಳು ಆಂತರಿಕ ಭದ್ರತೆಯೆಡೆಗೆ ಗಮನಕೊಡುವುದರಲ್ಲಿ ಮಗ್ನವಾಗಿದ್ದವು. ಅವು ವಸಾಹತುಗಳ ಹುಡುಕಾಟದಲ್ಲಿ ತೊಡಗಿದ್ದ ವೇಳೆಗಾಗಲೇ ಮುಖ್ಯ ಪ್ರದೇಶಗಳು ಇನ್ನಿತರ ದೇಶಗಳ ವಶವಾಗಿದ್ದವು. ಆದ್ದರಿಂದ ಅವುಗಳ ವಸಾಹತು ಪ್ರಾಬಲ್ಯವು ಸಂಘರ್ಷಕ್ಕೆ ಪ್ರೇರಣೆಯಾಯಿತು. ಇಟಲಿ, ಜರ್ಮನಿ ಮತ್ತು ಜಪಾನ್‌ಗಳು 'ವಸಾಹತು ಹೊಂದಿರದ' ಗುಂಪಾಯಿತು. ತಮ್ಮ ಕೈಗಾರಿಕೆ ಮತ್ತು ಭೌಗೋಳಿಕ ಅಗತ್ಯಗಳನ್ನು ಪೂರೈಸಬಲ್ಲ ಪ್ರಾಕೃತಿಕ ಸಂಪನ್ಮೂಲಗಳಿಲ್ಲದೆ ಆ ದೇಶಗಳು ಪ್ರತ್ಯೇಕವಾಗಿ ಉಳಿಯ ಬೇಕಾಯಿತು.

ಯುರೋಪಿನ ರಾಷ್ಟ್ರಗಳು ತಮ್ಮ ಸಿದ್ಧವಸ್ತುಗಳು ಹೊರದೇಶಗಳಿಗೆ ಹರಿದು ಹೋಗ ದಂತೆ ಪ್ರತಿಬಂಧಕಗಳನ್ನು ಏರ್ಪಡಿಸಿದವು. ಕ್ರಿ.ಶ.೧೯೨೯-೩೦ರ ಮಹಾ ಆರ್ಥಿಕ ಹಿಂಜರಿತದ ಸಮಯದಲ್ಲಂತೂ ಸಮಸ್ಯೆ ತೀವ್ರವಾಯಿತು. ವಸಾಹತುಗಳ ಮತ್ತು ದೇಶಗಳ ಬಾಹ್ಯ ವ್ಯಾಪಾರಗಳಿಗೆ ತಡೆಯೊಡ್ಡಿದವು. ಸ್ವದೇಶಿ ವಸ್ತುಗಳಿಗೆ ಬೇಡಿಕೆ ಹೆಚ್ಚಿಸುವ ಸಲುವಾಗಿ ಜನರಲ್ಲಿ ಒತ್ತಾಯ ತರುವ ಪ್ರಯತ್ನಗಳಾದವು. ವಸ್ತುಗಳನ್ನು ಮಾರಾಟ ಮಾಡುವ ಮತ್ತು ಅಗತ್ಯ ಕಚ್ಚಾವಸ್ತುಗಳನ್ನು ಗಳಿಸುವಲ್ಲಿ ವಿಫಲವಾದಾಗ ಕೆಲವು ದೇಶಗಳ ಆರ್ಥಿಕ ಸ್ಥಿತಿ ಉಸಿರು ಕಟ್ಟುವಂತಾಯಿತು. ಅವಶ್ಯವೆನಿಸುವಷ್ಟು ಸಂಪನ್ಮೂಲಗಳನ್ನು ಪಡೆಯಲು ಅಸಮರ್ಥವಾದಾಗ ಈ ಮೂರು ರಾಷ್ಟ್ರಗಳು (ಇಟಲಿ, ಜರ್ಮನಿ ಮತ್ತು ಜಪಾನ್) ಬಲವನ್ನು ಉಪಯೋಗಿಸಿ ಈ ಕೆಲಸಕ್ಕೆ ಇಳಿದವು. ಪರಿಣಾಮವಾಗಿ ಜಪಾನ್ ಮಂಚೂರಿಯಾವನ್ನು ಆಕ್ರಮಿಸಿತು. ಇಟಲಿ ಇಥಿಯೋಪಿಯಾ ವನ್ನು ವಶಪಡಿಸಿಕೊಂಡಿತು. ಆಸ್ಟ್ರಿಯಾ ಹಿಟ್ಲರನ ವಶವಾಯಿತು.

**೮. ರಾಷ್ಟ್ರೀಯ ಅಲ್ಪಸಂಖ್ಯಾತರ ಸಮಸ್ಯೆ**

ಕಾಲಾನುಕ್ರಮದಲ್ಲಿ ಅಸಂಖ್ಯಾತ ವಲಸೆಗಳಿಂದಾಗಿ ಹಲವಾರು ರಾಷ್ಟ್ರೀಯರು ಕೆಲವು ನಿರ್ದಿಷ್ಟ ಪ್ರದೇಶಗಳಲ್ಲಿ ಸಮ್ಮಿಶ್ರವಾಗಿದ್ದುದು ಮುಖ್ಯ ಸಮಸ್ಯೆಯನ್ನುಂಟು ಮಾಡಿತು. ಅಲ್ಪಸಂಖ್ಯಾತ ಗುಂಪುಗಳ ಜನ ಸುಮಾರು ೩೦ ಮಿಲಿಯನ್‌ಗಳಷ್ಟಿದ್ದರು. ಈ ಅಲ್ಪಸಂಖ್ಯಾತರು ವಿದೇಶಗಳಲ್ಲಿ ಬದುಕುವುದನ್ನು ಹೆಚ್ಚು ಇಷ್ಟಪಡಲಿಲ್ಲ. ಅವರು ತಮ್ಮ ಮಾತೃಭೂಮಿಯ ಸಂಬಂಧವನ್ನು ಕಡಿದುಕೊಳ್ಳುವ ಹಾಗಿರಲಿಲ್ಲ. ಪೂರಕವಾಗಿ ಮಾತೃರಾಷ್ಟ್ರಗಳು ಅವರ ಪುನರ್ ಸಂಘಟನೆಗೆ ಉತ್ತೇಜನ ನೀಡಿದವು. ಜರ್ಮನಿಯ ನಾಜೀಗಳು ಸ್ವನಿರ್ಧಾರದ ಈ ತತ್ವವನ್ನು ಪೂರ್ಣವಾಗಿ ಉಪಯೋಗಿಸುವ ಸಾಧ್ಯತೆಗಳನ್ನು ಬಳಸಿಕೊಂಡು ೩.೫ ಮಿಲಿಯನ್ ಜರ್ಮನ್ನರಿಂದ (ಜಿಕೋಸ್ಲಾವಾಕಿಯಾದ) ಸುಡೆನಾನ್ ಜಿಲ್ಲೆಗಳನ್ನು ಮತ್ತು ಆಸ್ಟ್ರಿಯಾವನ್ನು ಅಕ್ರಮಿಸಿ ಸಮರ್ಥಿಸಿಕೊಂಡವು. ಕ್ರಿ.ಶ.೧೯೩೯ರಲ್ಲಿ ಜರ್ಮನಿಯು ತನ್ನ ಅಲ್ಪಸಂಖ್ಯಾತರನ್ನು ಹೊಂದಿದ್ದ ಪೋಲೆಂಡನ್ನು ಆಕ್ರಮಿಸಲು ಅದೇ ಕಾರಣವನ್ನು ಬಳಸಿಕೊಂಡಿತು.

ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸುವ ಸಲುವಾಗಿನ ಒಪ್ಪಂದಕ್ಕೆ ಸಹಿ ಹಾಕುವಂತೆ ಮಿತ್ರಪಕ್ಷಗಳು ಆಸ್ಟ್ರಿಯಾ, ಹಂಗೇರಿ, ಪೋಲೆಂಡ್, ಗ್ರೀಸ್, ರುಮೇನಿಯಾ, ಜೆಕೋಸ್ಲಾ ವಾಕಿಯ ಮತ್ತು ಯುಗೋಸ್ಲಾವಾಕಿಯ -ಈ ಏಳು ರಾಷ್ಟ್ರಗಳನ್ನು ಒತ್ತಾಯಿಸಿದವು. ಆದರೆ ಬಹುತೇಕ ಸಂದರ್ಭಗಳಲ್ಲಿ ಈ ಒಪ್ಪಂದಗಳಿಗೆ ನ್ಯಾಯ ದೊರಕಲಿಲ್ಲ. ಆದುದರಿಂದ ಅಲ್ಪಸಂಖ್ಯಾತ ಗುಂಪುಗಳು ಅತಂತ್ರವಾದವು. ಮಾತೃದೇಶಗಳೊಡನೆ ಒಂದಾಗುವ ಅವುಗಳ ಬಯಕೆ ಬಲವಾಯಿತು.

**೯. ರಾಷ್ಟ್ರ ಸಂಘದ ವಿಫಲತೆ**

ರಾಷ್ಟ್ರಸಂಘವು ತನ್ನ ಕರ್ತವ್ಯವನ್ನು ಸರಿಯಾಗಿ ಪಾಲಿಸಿದ್ದಿದ್ದರೆ ಯಾವುದೇ ನಿಟ್ಟಿ ನಿಂದಲೂ ಯುದ್ಧ ಘೋಷಣೆಯಾಗುತ್ತಿರಲಿಲ್ಲ. ಜಗತ್ತಿನ ಜನರ ನಿರೀಕ್ಷೆಯ ಮಟ್ಟಕ್ಕೆ ರಾಷ್ಟ್ರ ಸಂಘವು ಏರಲಿಲ್ಲ. ಬಹುಮುಖ್ಯ ವಿಚಾರಗಳ ಕುರಿತಂತೆ ಪ್ರಬಲ ರಾಷ್ಟ್ರಗಳ ಸಹಯೋಗ ಮತ್ತು ಸಹಕಾರಗಳಿಲ್ಲದೆ, ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವ ಅಂತರ ರಾಷ್ಟ್ರೀಯ ವ್ಯವಸ್ಥೆಯಾಗಿದ್ದ ರಾಷ್ಟ್ರ ಸಂಘದ ಪ್ರಶಂಸಾರ್ಹತೆ ಶಕ್ತಿಗುಂದ ಲಾರಂಭಿಸಿತು. ಇಟಲಿ, ಜಪಾನ್ ಮತ್ತು ಜರ್ಮನಿಗಳು ಆಕ್ರಮಣಕಾರಿ ನಿಲುವು ತಳೆದು ರಾಷ್ಟ್ರ ಸಂಘವನ್ನು ಟೀಕಿಸತೊಡಗಿದವು. ಶಕ್ತರಾಷ್ಟ್ರಗಳ ಹಠಸಾಧನೆಯಿಂದ ಜಾಗತಿಕ ನಿಶ್ಯಸ್ತ್ರೀಕರಣದ ಉದ್ದೇಶದಲ್ಲಿ ರಾಷ್ಟ್ರಸಂಘ ವಿಫಲವಾಯಿತು. ಶಸ್ತ್ರಸಜ್ಜಿತ ದೇಶಗಳನ್ನು ತಡೆಯುವ ರಾಷ್ಟ್ರ ಸಂಘದ ಪ್ರಯತ್ನಗಳು ಕೈಗೂಡಲಿಲ್ಲ. ಜರ್ಮನಿಯು ರಹಸ್ಯವಾಗಿ ಮಾರಕ ಆಯುಧಗಳನ್ನು ಉತ್ಪಾದಿಸಲು ತೊಡಗಿತು. ೧೯೩೫ರ ಒಪ್ಪಂದದ ಮೂಲಕ ಬ್ರಿಟನ್ ಜರ್ಮನಿಗೆ ತನ್ನ ನೌಕಾಬಲವನ್ನು ಹೆಚ್ಚಿಸಿಕೊಳ್ಳಲು ಒಪ್ಪಿಗೆ ನೀಡಿತು. ವಾಸ್ತವವಾಗಿ ವರ್ಸೈಲ್ಸ್ ಒಪ್ಪಂದದ ಸಂದರ್ಭದಲ್ಲಿ ಜರ್ಮನಿಯಂತೆಯೇ ತಾವೂ ನಿಶಸ್ತ್ರರಾಗುವ ಭರವಸೆಯನ್ನು ನೀಡಲಾಗಿತ್ತು. ಈ ಭರವಸೆಯನ್ನು ರಾಷ್ಟ್ರಸಂಘವು ಉಳಿಸಿಕೊಳ್ಳಲಾಗಲಿಲ್ಲ.

ಮಂಚೂರಿಯಾ ಮತ್ತು ಅಬಿಸೀನಿಯಾಗಳ ಸಮಸ್ಯೆಗಳನ್ನು ಬಗೆಹರಿಸಲಾರದ ಸೋಲಿನ ಮೂಲಕ ರಾಷ್ಟ್ರ ಸಂಘವು ತನ್ನ ಪೂರ್ಣ ವೈಫಲ್ಯವನ್ನು ಸಾಬೀತುಪಡಿಸಿತು. ಸಣ್ಣ ಹಾಗೂ ದೊಡ್ಡ ರಾಷ್ಟ್ರಗಳು ಸಂಘದ ವಿಶ್ವಾಸ ಕಳೆದುಕೊಂಡವು. ಇಟಲಿಯ

ಕಾರ್ಯಾಚರಣೆಯು ರಾಷ್ಟ್ರ ಸಂಘಕ್ಕೆ ಮಾರಕವಾದ ಹೊಡೆತ ನೀಡಿತು. ರಾಷ್ಟ್ರ ಸಂಘವು ಸದಸ್ಯ ರಾಷ್ಟ್ರಗಳು ತಮ್ಮೊಳಗೆ ಹೊಡೆದಾಡುವುದನ್ನು ತಡೆಗಟ್ಟದು ಎಂಬುದನ್ನೂ, ಇಟಲಿಯು 'ಶಕ್ತನ ಉಳಿವು' ಎಂಬುದನ್ನೂ ಸಾಮೂಹಿಕ ಭದ್ರತೆಯೆಂಬುದು ಬೆಲೆಯಿಲ್ಲದ ಕನಸೆಂದೂ ಸಾಬೀತುಪಡಿಸಿತು.

**ಎರಡನೆಯ ವಿಶ್ವಸಮರದ ನಡೆ**

೧೯೩೯ರ ಸೆಪ್ಟೆಂಬರ್ ೧ ರಂದು ಜರ್ಮನಿಯು ಪೋಲೆಂಡನ್ನು ಆಕ್ರಮಿಸು ವುದರೊಂದಿಗೆ ದ್ವಿತೀಯ ಮಹಾಯುದ್ಧ ಆರಂಭವಾಯಿತು. ಎಲ್ಲ ಪ್ರತಿರೋಧಗಳನ್ನು ಮುರಿದು ಪೋಲೆಂಡಿನ ರಾಜಧಾನಿಯಾದ 'ವಾರ್ಸೊ' ಜರ್ಮನಿಯ ವಶವಾಯಿತು. ಆ ಬಳಿಕ ಹಿಟ್ಲರನು ನಾರ್ವೆ, ಅನಂತರ ಡೆನ್ಮಾರ್ಕ್, ಹಾಲೆಂಡ್, ಬೆಲ್ಜಿಯಂ, ಫ್ರಾನ್ಸ್ ಒಂದರ ಹಿಂದೆ ಒಂದನ್ನು ವಶಪಡಿಸಿಕೊಳ್ಳುತ್ತಾ ಸಾಗಿದನು. ಬ್ರಿಟನ್ ತನ್ನ ಪಡೆಗಳನ್ನು ಹಿಂತೆಗೆದುಕೊಂಡಾಗ ಫ್ರಾನ್ಸಿಗೆ ಜರ್ಮನಿಯನ್ನು ಎದುರಿಸಲಾಗಲಿಲ್ಲ. ಅದು ಜೂನ್ ೫ ರಂದು ಬೇಷರತ್ತಾಗಿ ಶರಣಾಯಿತು. ಮುಸ್ಸೊಲೊನಿಯ ನೇತೃತ್ವದಲ್ಲಿ ಇಟಲಿಯು ಜರ್ಮನಿಯೊಂದಿಗೆ ಕೈಗೂಡಿಸಿತು.

**ಬ್ರಿಟನ್‌ನೊಡನೆ ಯುದ್ಧ ೧೯೪೦-೪೧**

ಜರ್ಮನಿಯ ವ್ಯಾಪಕ ಬಾಂಬ್ ದಾಳಿ ಮತ್ತು ಜಲಾಂತರ್ಗಾಮಿಗಳ ಬಳಕೆಯಿಂದಾಗಿ ದೊಡ್ಡ ಮೊತ್ತದ ನೌಕಾಪಡೆಗಳು ನಾಶವಾದವು. ಹಿಟ್ಲರ್‌ನು ಭೀಕರ ವಾಯು ದಾಳಿಯಿಂದ ಬ್ರಿಟನ್‌ನಲ್ಲಿ ವ್ಯಾಪಕ ಕಷ್ಟ-ನಷ್ಟಗಳನ್ನು ಉಂಟುಮಾಡಿದನು. ಕೈಗಾರಿಕಾ ವಲಯಗಳು ಮತ್ತು ಬಂದರುಗಳು ಮತ್ತು ಸ್ವತಃ ಲಂಡನ್ ನಗರವೇ ಬಾಂಬ್ ದಾಳಿಗೆ ತುತ್ತಾಗಿ ಅಸಂಖ್ಯಾತ ಜನರನ್ನು ಬಲಿತೆಗೆದುಕೊಂಡಿತು. ಇಷ್ಟಾದರೂ ವಿನ್‌ಸ್ಟಂಟ್ ಚರ್ಚಿಲ್ಲರ ಮಿಂಚಿನ ಕಾರ್ಯಾಚರಣೆಯಿಂದ ಬ್ರಿಟನ್ ಕೂಡಲೇ ಚೇತರಿಸಿಕೊಂಡಿತು. "ದೇಶಕ್ಕಾಗಿ ಬೇರೇನೂ ಕೊಡಬೇಕಾಗಿಲ್ಲ. ರಕ್ತ, ಶ್ರಮ, ಕಣ್ಣೀರು ಮತ್ತು ಬೆವರು ಇಷ್ಟು ನೀಡಿದರೆ ಸಾಕು" ಎಂಬ ಕರೆ ಬ್ರಿಟನ್ನಿನಲ್ಲಿ ವಿದ್ಯುತ್ ಸಂಚಾರವನ್ನುಂಟುಮಾಡಿತು. "ನಾವೇ ಸೋತೆವೆಂದಾದರೆ ಬೇರೆ ಯಾರು ಗೆಲ್ಲುವವರು" "ಸೋಲುವ ಸಾಧ್ಯತೆಗಳಲ್ಲಿ ನಾವು ಆಸಕ್ತರಾಗಿಲ್ಲ, ಸೋಲೆನ್ನುವುದೇ ಅಸ್ತಿತ್ವದಲ್ಲಿಲ್ಲ" ಇವೆಲ್ಲಾ ಅದರ ಧ್ಯೇಯಗಳಾದವು. ವ್ಯಾಪಕ ನಷ್ಟಗಳ ಹೊರತಾಗಿಯೂ ಬ್ರಿಟನ್ ಕೆಚ್ಚೆದೆಯಿಂದ ಹೋರಾಡಿತು. ಬ್ರಿಟನನ್ನು ಬಗ್ಗುಬಡಿಯಲ್ಲಿ ಜರ್ಮನ್ನರ ವಿಫಲತೆ ಅಂತಿಮವಾಗಿ ಜರ್ಮನಿಯ ಸೋಲಿಗೆ ಕಾರಣವಾಯಿತು.

**ಉತ್ತರ ಆಫ್ರಿಕಾ ಕಾರ್ಯಾಚರಣೆಯಲ್ಲಿ ಇಟಲಿಯ ಸೋಲು**

ಫ್ರಾನ್ಸಿನ ಪತನಾನಂತರ ಇಟಲಿಯು ಮಿತ್ರಕೂಟದ ಮೇಲೆ ಯುದ್ಧ ಘೋಷಿಸಿತು. ಉತ್ತರ ಆಫ್ರಿಕಾದ ಬ್ರಿಟಿಷ್ ವಸಾಹತುಗಳನ್ನು ಮತ್ತು ಈಜಿಪ್ಟ್ ಮತ್ತು ಸೂಯೆಜ್ ಕಾಲುವೆಗಳನ್ನು ವಶಪಡಿಸಿಕೊಳ್ಳಲು ಮುಸ್ಸೊಲೊನಿಯು ಬಯಸಿದ್ದನು. ಇಲ್ಲಿ ಇಟಲಿ ಸೋಲಲಾರಂಭಿಸಿದಾಗ ಜರ್ಮನಿಯು ಅದರ ಸಹಾಯಕ್ಕೆ ನಿಂತು ಮೊದಮೊದಲಿಗೆ ಜಯಗಳಿಸಿತು. ಆದರೆ ಕ್ರಿ.ಶ.೧೯೪೨ರಲ್ಲಿ ಬ್ರಿಟನ್ ಯಶಸ್ಸು ಗಳಿಸುವುದರೊಂದಿಗೆ ಅದು ಯುದ್ಧದ ಮುಖ್ಯ ತಿರುವುಗಳಲ್ಲೊಂದಾಯಿತು. ಮುಸ್ಸೊಲೊನಿಯು 'ಆಫ್ರಿಕಾದ ಜೂಜಾಟ'ದಲ್ಲಿ ಸೋಲೊಪ್ಪಿದನು.

**ರಷ್ಯಾದ ಮೇಲೆ ಜರ್ಮನಿಯ ಆಕ್ರಮಣ**

೧೯೪೧ರಲ್ಲಿ ಹಿಟ್ಲರನು ಯಾವುದೇ ಪೂರ್ವ ಸೂಚನೆಗಳನ್ನು ನೀಡದೆ ಏಕಾಏಕಿ ರಷ್ಯಾವನ್ನು ಆಕ್ರಮಿಸಿದನು. ಜರ್ಮನಿಯು ರಷ್ಯಾದ ಮೇಲೆ ಸುಲಭ ಜಯ ಸಾಧಿಸಿ. ಉಕ್ರೇನ್ ಮತ್ತು ಕಾಕಸಸ್‌ಗಳಿಂದ ಆಹಾರ ಮತ್ತು ತೈಲ ಪೂರೈಕೆಗಳನ್ನು ಗಳಿಸಬಹುದೆಂದು ಊಹಿಸಿತ್ತು. ಜರ್ಮನಿಯ ದಾಳಿ ಆರಂಭವಾದಾಗ ರಷ್ಯಾದ ವಿದೇಶಾಂಗ ಮಂತ್ರಿ ಮೋಲೊಟೋವ್ ರಷ್ಯಾದ ಜನತೆಗೆ ಕರೆ ನೀಡಿದನು

*ಈ ಯುದ್ಧವನ್ನು ನಮ್ಮ ಮೇಲೆ ಹೇರಿದವರು ಜರ್ಮನಿಯ ಜನವರ್ಗವಲ್ಲ, ಶ್ರಮಿಕರೂ ಅಲ್ಲ, ರೈತರು ಬುದ್ಧಿಜೀವಿಗಳು ಯಾರೂ ಅಲ್ಲ. ಅವರ ಕಷ್ಟಗಳನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು. ಆದರೆ ಫ್ರೆಂಚ್, ಜೆಕೋಸ್ಲಾವಾಕಿಯಾ, ಪೋಲೆಂಡ್, ಸೈಬೀರಿಯಾ, ನಾರ್ವೆ, ಬೆಲ್ಜಿಯಂ, ಡೆನ್ಮಾರ್ಕ್, ಹಾಲೆಂಡ್, ಗ್ರೀಸ್ ಮತ್ತಿತರ ದೇಶಗಳನ್ನು ಗುಲಾಮರನ್ನಾಗಿ ಮಾಡಿ ಜರ್ಮನಿಯ ರಕ್ತಪಿಪಾಸುಗಳಾಗಿರುವ ನಾಜೀ ನಾಯಕರು ತಮ್ಮ ಮೇಲೆ ಯುದ್ಧ ಹೇರಿದ್ದಾರೆ... ನಮ್ಮದು ನ್ಯಾಯ ಯುತ ಹೋರಾಟ, ವೈರಿಗಳನ್ನು ಸೋಲಿಸಬೇಕು. ವಿಜಯ ಪತಾಕೆ ನಮ್ಮದಾಗಬೇಕು.*

ರಷ್ಯಾವು ಜರ್ಮನಿಯ ಆಕ್ರಮಣಕ್ಕೊಳಗಾದಾಗ ರಷ್ಯಾಕ್ಕೆ ಬಂದ ಕ್ರಿಪ್ಸ್‌ಮಿಷೆನ್ ಅದರ ಯಶಸ್ವಿಗೆ ಕಾರಣವಾಯಿತು. ಇಂಗ್ಲೆಂಡ್ ಮತ್ತು ರಷ್ಯಾಗಳ ನಡುವೆ ಏರ್ಪಟ್ಟ ಒಪ್ಪಂದದ ಪ್ರಕಾರವಾಗಿ ನವೆಂಬರ್ ೧೯೪೧ರಲ್ಲಿ ಅಧ್ಯಕ್ಷ ಎಫ್.ಡಿ. ರೂಸ್‌ವೆಲ್ಟ್ ರಷ್ಯಾದ ಜನತೆಗೆ ಶುಭಾಶಯ ತಿಳಿಸಿದನು ಮತ್ತು ರಷ್ಯಾದ ಸಹಾಯಕ್ಕೆಂದು ೧೦೦೦ ಮಿಲಿಯನ್ ಡಾಲರ್‌ಗಳನ್ನು ದೇಣಿಗೆ ನೀಡಿದನು. ರಷ್ಯಾವು ಬೃಹತ್ ಪ್ರಮಾಣದ ಟ್ಯಾಂಕ್‌ಗಳನ್ನು, ವಿಮಾನಗಳನ್ನು, ಮೋಟಾರು ಕಾರುಗಳನ್ನು ಮತ್ತಿತರ ಯುದ್ಧ ಸಾಮಾಗ್ರಿ ಗಳನ್ನು ಪಡೆದುಕೊಂಡಿತು. ರಷ್ಯನ್ನರು ಜರ್ಮನಿಯ ವಿರುದ್ಧ ಧೈರ್ಯದಿಂದ ಹೋರಾಡಿದರು. ಜರ್ಮನಿಯು ತೀವ್ರವಾದ ಆಘಾತಕ್ಕೊಳಗಾಗಬೇಕಾಯಿತು. ಅದರ ಸೈನ್ಯಬಲ ೩,೩೦,೦೦೦ ರಿಂದ ೧೨,೦೦೦ಕ್ಕೆ ಇಳಿಯಿತು. ಇದು ಜರ್ಮನಿಯ ಪತನದ ಆರಂಭವಾಗಿತ್ತು.

**ಪರ್ಲ್‌ಹಾರ್ಬರ್ ಮೇಲೆ ಜಪಾನಿನ ದಾಳಿ**

ಅಮೆರಿಕಾದ ನೌಕಾಕೇಂದ್ರವಾಗಿದ್ದ ಪೆಸಿಫಿಕ್ ಸಾಗರದ ಪರ್ಲ್‌ಹಾರ್ಬರ್ ಮೇಲೆ ದಾಳಿ ಮಾಡಲು ಜಪಾನ್ ಸಜ್ಜಾಗುತ್ತಿತ್ತು. ಡಿಸೆಂಬರ್ ೭, ೧೯೪೧ ರಂದು ಜಪಾನ್ ಆ ಪ್ರದೇಶವನ್ನು ಆಕ್ರಮಿಸಿತು. ಜಪಾನಿನ ವಿಮಾನಗಳಿಂದ ಅನಿರೀಕ್ಷಿತವಾಗಿ ಆಕ್ರಮಣವಾದು ದರಿಂದ ಅಮೆರಿಕಾದ ಎಂಟು ಸುಸಜ್ಜಿತ ಯುದ್ಧ ಹಡಗುಗಳು ಮತ್ತು ಹಲವು ನೌಕೆಗಳು ಧ್ವಂಸವಾದವು. ಕೋಪಗೊಂಡ ಅಮೆರಿಕಾವು ತನ್ನ ತಾಟಸ್ಥ್ಯವನ್ನು ಕೊನೆಗೊಳಿಸಿ ಜಪಾನಿನ ಮೇಲೆ ಯುದ್ಧ ಘೋಷಿಸಿತು. ಜರ್ಮನಿ ಮತ್ತು ಇಟಲಿಗಳು ಜಪಾನಿನ ಮೇಲೆ ಯುದ್ಧ ಘೋಷಿಸಿತು. ಜರ್ಮನಿ ಮತ್ತು ಇಟಲಿಗಳು ಜಪಾನಿನ ಪರವಾಗಿ ಅಮೆರಿಕಾದ ವಿರುದ್ಧ ಯುದ್ಧಕ್ಕೆ ನಿಂತವು. ಜಪಾನೀಯರು ಇನ್ನೆರಡು ಬ್ರಿಟಿಷ್ ನೌಕೆಗಳನ್ನು ಮುಳುಗಿಸಿದರು. ಅನಂತರ ಹಾಂಗ್‌ಕಾಂಗ್, ಮಲಯಾ, ಸಿಂಗಪೂರ್, ಬರ್ಮಾ, ಡಚ್, ಫಿಲಿಪೈನ್ಸ್ ಮುಂತಾದ ಪ್ರದೇಶಗಳನ್ನು ಯಶಸ್ವಿಯಾಗಿ ವಶಪಡಿಸಿಕೊಂಡರು.

**ಇಟಲಿಯ ಶರಣಾಗತಿ-೧೯೪೩**

ಸುಸಜ್ಜಿತ ಬ್ರಿಟಿಷ್ ಮತ್ತು ಅಮೆರಿಕನ್ ಪಡೆಗಳು ಅಮೆರಿಕಾದ ಸೇನಾಧಿಪತಿ ಜನರಲ್ ಹೋವರ್‌ನ ನೇತೃತ್ವದಲ್ಲಿ ಅಲ್ಜೀರಿಯಾದ ಸಮೀಪ ನೆಲೆಯಾದವು. ಶತ್ರು ಸೈನ್ಯವನ್ನು ಶರಣಾಗುವಂತೆ ಕೇಳಿಕೊಳ್ಳಲಾಯಿತು. ಹಾಗೆ ಉತ್ತರ ಆಫ್ರಿಕಾವು ವೈರಿಗಳಿಂದ ಮುಕ್ತವಾಯಿತು. ಬ್ರಿಟಿಷ್-ಅಮೆರಿಕನ್ ಸೈನ್ಯವು ಸಿಸಿಲಿಯನ್ನು ಆಕ್ರಮಿಸಿ ವಶಪಡಿಸಿ ಕೊಂಡವು. ಇಟಲಿಯ ಮುಖ್ಯ ಪ್ರದೇಶಗಳನ್ನು ದಾಟಿ ರೋಮಿನೆಡೆಗೆ ಸೈನ್ಯ ಬರಲಾರಂಭಿಸಿತು. ಇಟಲಿ ಶರಣಾಯಿತು. ಆದರೆ ಜರ್ಮನಿಯ ಸೈನ್ಯವು ಐದು ತಿಂಗಳು ಗಳಷ್ಟು ಕಾಲ ಪ್ರಬಲ ಪ್ರತಿರೋಧವನ್ನು ಒಡ್ಡಿತು. ಪಲಾಯನಗೈದ ಮುಸ್ಸೊಲೊನಿಯು ಫ್ಯಾಸಿಸ್ಟ್ ವಿರೋಧಿಗಳಿಂದ ದಾರುಣವಾಗಿ ಕೊಲೆಯಾದನು.

**ಜರ್ಮನಿಯ ಶರಣಾಗತಿ-೧೯೪೫**

ಈ ನಡುವೆ, ಮಿತ್ರಕೂಟವು ದಕ್ಷಿಣ ಭಾಗದಿಂದ ಜರ್ಮನಿಯನ್ನು ಆಕ್ರಮಿಸಲು ಸಿದ್ಧವಾಗುತ್ತಿತ್ತು. ೧೯೪೪ರ ಜೂನ್ ೬ರಂದು ಜನರಲ್ ಹೋವರ್‌ನ ನೇತೃತ್ವದಲ್ಲಿ ದೊಡ್ಡ ಸೈನ್ಯ ನೋರ್ಮಂಡಿ ಎಂಬಲ್ಲಿ ನೆಲೆಹೂಡಿತು. ಜರ್ಮನ್ನರು ಹಿಂದಕ್ಕೆ ಸರಿದರು. ೧೯೪೪ರ ಆಗಸ್ಟ್‌ನಲ್ಲಿ ಪ್ಯಾರಿಸ್ಸನ್ನು ಮುಕ್ತಗೊಳಿಸಲಾಯಿತು. ಇದಾದ ಬಳಿಕ ಜರ್ಮನ್ನರು ಬೆಲ್ಜಿಯಂ ಹಾಗೂ ಹಾಲೆಂಡ್‌ಗಳಿಂದ ಕಾಲ್ಕಿತ್ತರು. ೧೯೪೪ರ ಕೊನೆಯಲ್ಲಿ ಮಿತ್ರ ಪಡೆಗಳು ಜರ್ಮನಿಯ ಬಹುತೇಕ ದಕ್ಷಿಣ ಭಾಗಗಳನ್ನು ವಶಪಡಿಸಿಕೊಂಡಿತ್ತು. ಈ ನಡುವೆ ರಷ್ಯನ್

ಸೈನ್ಯವು ಬರ್ಲಿನ್‌ನಲ್ಲಿ ಹೋರಾಡುತ್ತಿತ್ತು. ೧೯೪೫ರ ಮೇ ೭ರಂದು ಹಿಟ್ಲರನು ಆತ್ಮಹತ್ಯೆ ಮಾಡಿಕೊಂಡಾಗ ಜರ್ಮನಿಯು ಶರಣಾಯಿತು.

**ಜಪಾನಿನ ಶರಣಾಗತಿ–೧೯೪೫**

ಇಟಲಿ ಮತ್ತು ಜರ್ಮನಿಗಳು ಶರಣಾಗಿದ್ದರೂ ಜಪಾನ್ ಇನ್ನೂ ಸೋಲದೆ ಯುದ್ಧದಲ್ಲಿ ನಿರತವಾಗಿತ್ತು. ಈಗ ಮಿತ್ರ ಪಕ್ಷಗಳು ಜಪಾನನ್ನು ಸೋಲಿಸುವ ಕಡೆಗೆ ಗಮನಹರಿಸಿದವು. ಬರ್ಮಾದ ಅರಣ್ಯ ಪ್ರದೇಶದಲ್ಲಿ ಬ್ರಿಟಿಷ್ -ಭಾರತೀಯ ಪಡೆಗಳು ನಿರಂತರವಾಗಿ ಹೋರಾಡುತ್ತಿದ್ದವು. ಸೋಲೊಮೆನ್ಸ್, ಮರಿಯಾನಾ ಮತ್ತಿತರ ದ್ವೀಪಗಳು ನಾಶವಾದವು. ಕೂಡಲೇ ಶರಣಾಗುವಂತೆ ಇಲ್ಲದಿದ್ದರೆ ಭೀಕರ ಪರಿಣಾಮಗಳನ್ನು ಎದುರಿಸುವಂತೆ ಜಪಾನಿಗೆ ಅಂತಿಮ ಸೂಚನೆ ನೀಡಲಾಯಿತು. ಜಪಾನ್ ಸರಕಾರ ಈ ಮಾತನ್ನು ತಿರಸ್ಕರಿಸಿತು. ಆದ್ದರಿಂದ, ಅಮೆರಿಕಾವು ಯುದ್ಧವನ್ನು ಶೀಘ್ರವಾಗಿ ಕೊನೆ ಗೊಳಿಸಲು ಯೋಚಿಸಿ ಹಿರೋಷಿಮಾ ನಗರ ಮತ್ತು ನಾಗಸಾಕಿ ನಗರಗಳ ಮೇಲೆ ಅತ್ಯಂತ ಭೀಕರವಾದ ಅಣುಬಾಂಬುಗಳನ್ನು ಪ್ರಯೋಗಿಸಿತು. ಜಪಾನಿಯರ ಪಾಲಿಗೆ ೧೯೪೫ ಆಗಸ್ಟ್ ೬, ಮತ್ತು ೯, ದುರಂತದ ದಿನಗಳಾಗಿದ್ದವು. ಜಪಾನ್ ಮರುಮಾತಿಲ್ಲದೆ ಶರಣಾಗಬೇಕಾಯಿತು.

**ದ್ವಿತೀಯ ಮಹಾಯುದ್ಧದ ಪರಿಣಾಮಗಳು**

೧. ಐದು ವರ್ಷ ಮತ್ತು ಹತ್ತು ತಿಂಗಳ ಯುದ್ಧದ ಕಾರ್ಯಾಚರಣೆಯಲ್ಲಿ ಸುಮಾರು ೧೨ ಮಿಲಿಯನ್ ಸೈನಿಕರು ಮಡಿದರೆ, ೨೫ ಮಿಲಿಯನ್ ನಾಗರಿಕರು ರೋಗ ಮತ್ತು ಹಸಿವಿನಿಂದ ದಾರುಣವಾಗಿ ನರಳಿ ಸತ್ತರು. ೧,೬೦,೦೦೦ ಜನ ಜಪಾನೀಯರು ಹಿರೋಷಿಮಾ-ನಾಗಸಾಕಿಗಳ ಮೇಲೆ ಪ್ರಯೋಗಿಸಲಾದ ಅಣುಬಾಂಬಿನಿಂದ ಕೊಲ್ಲಲ್ಪ ಟ್ಟರು. ಅಮೆರಿಕಾವು ಸುಮಾರು ೩೫೦ ಬಿಲಿಯನ್ ಡಾಲರ್‌ಗಳನ್ನು ವೆಚ್ಚಮಾಡಿತು. ಇತರ ರಾಷ್ಟ್ರಗಳು ಸುಮಾರು ೧೦೦೦ ಬಿಲಿಯನ್ ಖರ್ಚು ಮಾಡಿದವು. ನಾಶದ ಪ್ರಮಾಣವನ್ನೆಲ್ಲ ಪರಿಗಣಿಸಿದರೆ ಆ ಮೊತ್ತ ಮತ್ತೊಂದು ೧೦೦೦ ಬಿಲಿಯನ್‌ಗಳಷ್ಟಾಗ ಬಹುದೆಂದು ಅಂದಾಜಿಸಲಾಗಿದೆ.

೨. ಅಸಂಖ್ಯ ನಾಗರಿಕರ ಪ್ರಾಣಗಳೊಂದಿಗೆ ಚೆಲ್ಲಾಟವಾಡಿದ, ನೈತಿಕತೆಯ ಅಧಃಪತನ ಹಾಗೂ ಯುದ್ಧಗಳ ಬಗೆಗೆ ವಿಶ್ವದ ಜನತೆ ಗಾಢ ವಿಷಾದವನ್ನು ಹೊಂದಿದವು. ಹಿರೋಷಿಮಾ, ನಾಗಸಾಕಿಗಳ ಮುಗ್ಧ ನಾಗರಿಕರ ಮೇಲೆ ಅಣುಬಾಂಬುಗಳನ್ನು ಪ್ರಯೋಗಿಸಿದ ಪಾಶವೀಕೃತ್ಯ, ಮಾನವತೆಗೆ ಹಿಂದೆಂದೂ ಬಗೆದಿರದ ಅಮಾನುಷ ಅಪರಾಧವಾಗಿತ್ತು.

೩. ಎರಡನೆಯ ಮಹಾಯುದ್ಧವು ದೇಶ ಮತ್ತು ಖಂಡಗಳ ಸ್ಥಾನಮಾನದಲ್ಲಿ ಬದಲಾವಣೆ ತಂದಿತು. ಅಗ್ರಮಾನ್ಯ ಶಕ್ತಿಗಳಾಗಿದ್ದ ಬ್ರಿಟನ್ ಮತ್ತು ಫ್ರಾನ್ಸ್‌ಗಳು ತಮ್ಮ ಸ್ಥಾನ ಕಳೆದುಕೊಂಡವು. ಯುದ್ಧದ ನಂತರದಲ್ಲಿ ಬ್ರಿಟನ್, ಜಪಾನ್‌ಗಳು ಅನೇಕ ಆಂತರಿಕ ಹಾಗೂ ಬಾಹ್ಯ ಸಮಸ್ಯೆಗಳನ್ನು ಹೊಂದಿದ್ದವು.

೪. ಅಮೆರಿಕಾವು ವಿಶ್ವಶಕ್ತಿಯಾಗಿ ಹೊರಹೊಮ್ಮಿತು. ತನ್ನ ಸುವಿಶಾಲ ಸಂಪನ್ಮೂಲಗಳನ್ನು ಬಳಸಿಕೊಂಡು ಅಮೆರಿಕವೂ ಕೈಗಾರಿಕಾ ರಂಗದ ಮುಂಚೂಣಿಯಲ್ಲಿ ನಿಂತಿತು.

೫. ರಷ್ಯಾವು ಮತ್ತೊಂದು ಮುಖ್ಯ ಶಕ್ತಿಯಾಗಿ ರೂಪುಗೊಂಡಿತು. ಜರ್ಮನಿಯ ವಿರುದ್ಧ ಜಯ ಗಳಿಸುವಲ್ಲಿ ರಷ್ಯಾ ಪಾಲು ಪಡೆದಿದೆ.

೬. ಆಹಾರದ ಅಭಾವ, ಹಣದುಬ್ಬರ, ನಿರುದ್ಯೋಗ, ರೋಗ-ರುಜಿನ ಮುಂತಾದ ಪಿಡುಗುಗಳು ಯುದ್ಧದ ವಿಕಾರ ಫಲಗಳಾದವು.

೭. ಆಫ್ರಿಕಾ ಮತ್ತು ಏಷ್ಯಾಗಳಲ್ಲಿ ವಸಾಹತುಶಾಹಿಯ ಅಂತ್ಯವನ್ನು ಯುದ್ಧೋತ್ತರ ಯುರೋಪ್ ಕಂಡಿತು. ಅಲ್ಲಿನ ಜನರು ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಅವುಗಳ ಬೇಡಿಕೆ ಈಡೇರುವುದು ಅಗತ್ಯವಾಗಿತ್ತು. ಆಸ್ಟ್ರೋ-ಏಷಿಯನ್ ದೇಶಗಳು ಒಂದರ ಹಿಂದೆ ಒಂದರಂತೆ ಸ್ವತಂತ್ರವಾದವು.

೮. ಎರಡನೆಯ ಮಹಾಯುದ್ಧದ ಐತಿಹಾಸಿಕ ಫಲವೆಂದರೆ ವಿಶ್ವಸಂಸ್ಥೆಯ ಹುಟ್ಟು. ರಾಷ್ಟ್ರ ಸಂಘವು ತನ್ನ ಉದ್ದೇಶಗಳಲ್ಲಿ ಬಹುತೇಕ ವಿಫಲವಾಗಿದ್ದಿತು. ಆದರೂ, ಶಾಂತಿ, ವಿಶ್ವಕಲ್ಯಾಣ, ಅಂತರರಾಷ್ಟ್ರೀಯ ಸಾಮರಸ್ಯ, ಸಹಕಾರ, ಸಂಘಟಿತ ಅಭಿವೃದ್ಧಿ ಮೊದಲಾದ ರಾಷ್ಟ್ರ ಸಂಘದ ಕನಸುಗಳನ್ನು ನನಸಾಗಿಸುವ ನಿಟ್ಟಿನಲ್ಲಿ ದುಡಿಯುತ್ತಿರುವ ವಿಶ್ವಸಂಸ್ಥೆಯು ದ್ವಿತೀಯ ಮಹಾಯುದ್ಧದ ನಂತರ ಅಸ್ತಿತ್ವಕ್ಕೆ ಬಂದಿರುವುದು ಬಹುಮುಖ್ಯ ವಿಚಾರವಾಗಿದೆ.

**ವಿಶ್ವಸಂಸ್ಥೆ**

ಇಪ್ಪತ್ತನೆಯ ಶತಮಾನದ ಆದಿ ಮತ್ತು ಮಧ್ಯಭಾಗದಲ್ಲಿ ನಡೆದ ಎರಡು ವಿಶ್ವ ಸಮರಗಳು (ವಿಶೇಷವಾಗಿ ಎರಡನೆಯ ವಿಶ್ವಸಮರ) ಜಗತ್ತಿನ ಜನತೆ ಶಾಂತಿಗಾಗಿ ತುಡಿಯುವಂತೆ ಮಾಡಿದವು. ಯುದ್ಧದ ಪರಿಣಾಮಗಳು ಅತ್ಯಂತ ಘೋರವಾಗಿದ್ದವು ಮತ್ತು ಅಪರಿಮಿತ ಕಷ್ಟ ನಷ್ಟಗಳನ್ನು ಉಂಟುಮಾಡಿದ್ದವು. ಅಮೆರಿಕಾದ ರೂಸ್‌ವೆಲ್ಟ್, ರಷ್ಯಾದ ಸ್ಟಾಲಿನ್, ಬ್ರಿಟನ್ನಿನ ವಿನ್ಸೆಂಟ್ ಚರ್ಚಿಲ್ ಮುಂತಾದ ನಾಯಕರು ಡಿಸೆಂಬರ್ ೧೯೪೩ರಲ್ಲಿ ಸಭೆ ಸೇರಿ ಜಗತ್ತನ್ನು ಭಯಮುಕ್ತಗೊಳಿಸುವ ಸಲುವಾಗಿ ಮಾತುಕತೆ ನಡೆಸಿದರು. ಆ ಬಳಿಕವೂ ಹಲವೆಡೆಗಳಲ್ಲಿ ಇಂತಹ ಸಭೆಗಳು ನಡೆದು ವಿಶ್ವಸಂಸ್ಥೆಯ ರೂಪರೇಷೆ ಸಿದ್ಧವಾದವು. ಕ್ರಿ.ಶ.೧೯೪೫ರ ಜೂನ್‌ನಲ್ಲಿ ಸ್ಯಾನ್‌ಫ್ರಾನ್ಸಿಸ್ಕೋ ನಗರದಲ್ಲಿ ವಿಶ್ವಸಂಸ್ಥೆಯ ಕಾರ್ಯಸೂಚಿಗೆ ಸಹಿ ಹಾಕಲಾಯಿತು. ಅದರಂತೆ ಕ್ರಿ.ಶ.೧೯೪೫ರ ಅಕ್ಟೋಬರ್ ೨೪ ರಂದು ಅಧಿಕೃತವಾಗಿ ವಿಶ್ವಸಂಸ್ಥೆಯು ಸ್ಥಾಪಿತವಾಯಿತು. ವಿಶ್ವಸಂಸ್ಥೆಯು ನ್ಯೂಯಾರ್ಕ್‌ನಲ್ಲಿ ತನ್ನ ಪ್ರಧಾನ ಕಛೇರಿಯನ್ನು ಹೊಂದಿದೆ. ಅಂತರ ರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆ, ರಾಷ್ಟ್ರ ರಾಷ್ಟ್ರಗಳ ನಡುವೆ ಪರಸ್ಪರ ಸೌಹಾರ್ದ ಸಹಕಾರವನ್ನು ಬೆಳೆಸುವುದು, ಆರ್ಥಿಕ, ಸಾಮಾಜಿಕ ಮತ್ತು ಮಾನವೀಯ ವಿಚಾರಗಳಿಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಇತ್ಯರ್ಥಗೊಳಿಸಿ ಅಂತರರಾಷ್ಟ್ರೀಯ ಸಹಕಾರವನ್ನು ಸಾಧಿಸುವುದು, ಜನಾಂಗ, ಲಿಂಗ ಭಾಷೆ, ಮತ, ಯಾವ ತಾರತಮ್ಯವೂ ಇರದೆ ಎಲ್ಲರ ಮಾನವ ಹಕ್ಕುಗಳು ಮತ್ತು ಮೂಲಭೂತ ಸ್ವಾತಂತ್ರ್ಯವನ್ನು ಗೌರವಿಸುವುದು ಇತ್ಯಾದಿ ಈ ಎಲ್ಲ ಉದ್ದೇಶಗಳು ವಿಶ್ವಸಂಸ್ಥೆಯ ಸ್ಥಾಪನೆಯ ಹಿಂದಿವೆ. ತನ್ನ ಆಶಯಗಳನ್ನು ಒಪ್ಪಿಕೊಳ್ಳುವ ಯಾವುದೇ ರಾಷ್ಟ್ರಕ್ಕೂ ವಿಶ್ವಸಂಸ್ಥೆಯ ಮುಕ್ತ ಅವಕಾಶವಿತ್ತು. ಯಾವುದೇ ರಾಷ್ಟ್ರದ ಪ್ರವೇಶವನ್ನು ಒಪ್ಪಿಕೊಳ್ಳುವ ಇಲ್ಲವೇ ನಿರಾಕರಿಸುವ ಕೆಲಸವು ಭದ್ರತಾ ಸಮಿತಿಯ ಮುಂದಿರುತ್ತದೆ.

ವಿಶ್ವಸಂಸ್ಥೆಯ ಅಂಗಗಳು

೧. ಸಾಮಾನ್ಯ ಸಭೆ
೨. ಭದ್ರತಾ ಸಮಿತಿ
೩. ಆರ್ಥಿಕ ಮತ್ತು ಸಾಮಾಜಿಕ ಸಮಿತಿ
೪. ಧರ್ಮದರ್ಶಿ ಸಮಿತಿ
೫. ಅಂತರರಾಷ್ಟ್ರೀಯ ನ್ಯಾಯಾಲಯ
೬. ಪ್ರಧಾನ ಕಛೇರಿ

**೧. ಸಾಮಾನ್ಯ ಸಭೆ**

ಆರಂಭದಲ್ಲಿ ೫೦ ಮಂದಿ ಸ್ಥಾಪಕ ಸದಸ್ಯರನ್ನು ಹೊಂದಿದ್ದ ಸಾಮಾನ್ಯ ಸಭೆಯು ೧೯೯೨ರಲ್ಲಿ ೧೮೯ ಸದಸ್ಯರನ್ನು ಹೊಂದಿತ್ತು. ನಿಯಮದಂತೆ ಸಾಮಾನ್ಯ ಸಭೆಯು ವರ್ಷಕ್ಕೊಂದು ಬಾರಿ ಸಭೆ ಸೇರುತ್ತದೆ. ವಿಶ್ವಸಂಸ್ಥೆಯ ಎಲ್ಲ ಸದಸ್ಯರೂ ಈ ಸಾಮಾನ್ಯ ಸಭೆಯ ಸದಸ್ಯರಾಗಿರುತ್ತಾರೆ. ವಿಶ್ವಸಂಸ್ಥೆಯ ಒಟ್ಟು ಕಾರ್ಯಗಳನ್ನು ಚರ್ಚಿಸುವ, ಪುನರ್‌ಪರಿಶೀಲಿಸುವ, ಮೇಲುಸ್ತುವಾರಿ ವಹಿಸುವ, ವಿಮರ್ಶಿಸುವ ಅಧಿಕಾರವನ್ನು ಸಾಮಾನ್ಯ ಸಭೆ ಹೊಂದಿರುತ್ತದೆ. ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಗಳ ಬಗ್ಗೆ ಚರ್ಚಿಸಿ ಸಲಹೆ ಸೂಚನೆಗಳನ್ನು ಅದು ನೀಡುತ್ತದೆ. ಸಂಸ್ಥೆಯ ಹಣಕಾಸು ವಿಚಾರಗಳನ್ನು ನೋಡಿಕೊಳ್ಳುತ್ತದೆ. ಸದಸ್ಯ ರಾಷ್ಟ್ರಗಳಿಂದ ತಲಾ ಐದು

ಮಂದಿ ಪ್ರತಿನಿಧಿಗಳನ್ನು ಸಾಮಾನ್ಯ ಸಭೆಗೆ ಕಳುಹಿಸಬಹುದಾಗಿದ್ದು, ಒಂದು ರಾಷ್ಟ್ರಕ್ಕೆ ಒಂದು ಮತದಾನದ ಅವಕಾಶವಿರುತ್ತದೆ. ವರ್ಷಕ್ಕೊಮ್ಮೆ ಸಭೆ ಸೇರುವುದಾದರೂ ಕೆಲವು ಮುಖ್ಯ ಸಂದರ್ಭಗಳಲ್ಲಿ ವಿಶೇಷ ಅಧಿವೇಶನಗಳೂ ನಡೆಯುತ್ತವೆ.

**೨. ಭದ್ರತಾ ಸಮಿತಿ**

ಭದ್ರತಾ ಸಮಿತಿಯು ವರ್ಷದಲ್ಲಿ ಹಲವು ಸಲ ಸಭೆ ಸೇರುತ್ತದೆ. ಅದರಲ್ಲಿ ೧೧ ಮಂದಿ ಸದಸ್ಯರಿರುತ್ತಾರೆ. ೫ ಮಂದಿ ಸದಸ್ಯರು ಶಾಶ್ವತ ಸದಸ್ಯರಾಗಿದ್ದರೆ, ಉಳಿದ ೬ ಮಂದಿ ಅಶಾಶ್ವತ ಸದಸ್ಯರು ೨ ವರ್ಷಗಳ ಮಟ್ಟಿಗೆ ಸಾಮಾನ್ಯ ಸಭೆಯಿಂದ ಅರಿಸಲ್ಪಟ್ಟವರಾಗಿರುತ್ತಾರೆ. ಬ್ರಿಟನ್, ಅಮೆರಿಕಾ, ಫ್ರಾನ್ಸ್, ರಷ್ಯಾ ಮತ್ತು ಚೈನಾಗಳು ಶಾಶ್ವತ ಸದಸ್ಯರಾಗಿದ್ದವು. ೧೯೬೫ರ ವೇಳೆಗೆ ಅಶಾಶ್ವತ ಸದಸ್ಯರ ಸಂಖ್ಯೆಯನ್ನು ಆರರಿಂದ ಹತ್ತಕ್ಕೇರಿಸಲಾಯಿತು. ಹಾಗಾಗಿ ಭದ್ರತಾ ಸಮಿತಿಯ ಒಟ್ಟು ಬಲ ಆರರಿಂದ ಹತ್ತಕ್ಕೇರಿತು. ಯಾವುದೇ ನಿರ್ಣಯವು ಜಾರಿಗೆ ಬರಬೇಕಿದ್ದಲ್ಲಿ ೯/೧೫ ಮತಗಳು ಬೀಳಬೇಕಿತ್ತು. ಅಂತರ ರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯ ಕಾರ್ಯಕ್ರಮಗಳು ಈ ಸಮಿತಿಯ ಪ್ರಧಾನ ಕರ್ತವ್ಯವಾಗಿದೆ. ತನ್ನ ವಾರ್ಷಿಕ ವರದಿಯನ್ನು ಭದ್ರತಾ ಸಮಿತಿಯು ಸಾಮಾನ್ಯ ಸಭೆಗೆ ಒಪ್ಪಿಸಬೇಕಾಗುತ್ತದೆ. ತನ್ನ ಸಮರ್ಥ ಅಧಿಕಾರಗಳನ್ನು ಉಪಯೋಗಿಸಿಕೊಂಡು ಶಾಂತಿಯುತ ವಿಧಾನಗಳಿಂದ ಅಂತರ ರಾಷ್ಟ್ರೀಯ ವಿವರಗಳನ್ನು ಭದ್ರತಾ ಮಂಡಳಿಯು ಪರಿಹರಿಸುತ್ತದೆ. ಯಾವುದೇ ರಾಷ್ಟ್ರವು ತೀರ್ಮಾನಗಳ ಉಲ್ಲಂಘನೆ ಮಾಡಿದಲ್ಲಿ ದಿಗ್ಬಂದನೆ ವಿಧಿಸುವುದು, ಸೈನಿಕ ಕಾರ್ಯಚಾರಣೆ ನಡೆಸುವುದು ಅಥವಾ ಉಳಿದ ದೇಶಗಳ ಸಂಬಂಧವನ್ನು ಆ ದೇಶದಿಂದ ಕಡಿದು ಹಾಕುವುದು ಈ ಯಾವುದೇ ರೀತಿಯಲ್ಲಿ ವರ್ತಿಸುವ ಅಧಿಕಾರವನ್ನು ಭದ್ರತಾ ಸಮಿತಿ ಹೊಂದಿದೆ.

**೩. ಆರ್ಥಿಕ ಮತ್ತು ಸಾಮಾಜಿಕ ಸಮಿತಿ**

ಆರಂಭದಲ್ಲಿ ಮೂರು ವರ್ಷಗಳ ಕಾಲಾವಧಿಗೆ ಚುನಾಯಿತರಾಗಿದ್ದ ೧೮ ಮಂದಿ ಸದಸ್ಯರನ್ನು ಆರ್ಥಿಕ-ಸಾಮಾಜಿಕ ಸಮಿತಿ ಹೊಂದಿತ್ತು. ಕ್ರಿ.ಶ.೧೯೬೫ರಲ್ಲಿ ಈ ಸಂಖ್ಯೆ ೨೭ಕ್ಕೆ ಏರಿತು. ವರ್ಷದಲ್ಲಿ ಸಾಮಾನ್ಯವಾಗಿ ಸಮಿತಿಯು ಮೂರು ಬಾರಿ ಸಭೆ ಸೇರುತ್ತದೆ. ಅಂತರರಾಷ್ಟ್ರೀಯ ಸಾಂಸ್ಕೃತಿಕ, ಶೈಕ್ಷಣಿಕ, ಆರೋಗ್ಯ ಮತ್ತಿತರ ವಿಷಯಗಳ ಅಧ್ಯಯನ ನಡೆಸುವುದು ಇವೇ ಮೊದಲಾದವು ಆರ್ಥಿಕ-ಸಾಮಾಜಿಕ ಸಮಿತಿಯ ಮುಖ್ಯ ಕಾರ್ಯವಾಗಿದೆ. ಹಣಕಾಸಿನ ಆಯೋಗ, ಜನಸಂಖ್ಯೆಯ ಆಯೋಗ, ಮಾನವ ಹಕ್ಕುಗಳ ಆಯೋಗ ಮುಂತಾದ ಆಯೋಗಗಳನ್ನು ಈ ಸಮಿತಿಯು ನೋಡಿಕೊಳ್ಳುತ್ತದೆ.

**೪. ಧರ್ಮದರ್ಶಿ ಸಮಿತಿ**

ರಾಷ್ಟ್ರಸಂಘವು ಹೊಂದಿದ್ದ ಮ್ಯಾಂಡೇಟ್ ಪದ್ಧತಿಯ ಸುಧಾರಿತ ರೂಪವಾಗಿದೆ ಧರ್ಮದರ್ಶಿ ಸಮಿತಿ. ವಿಶ್ವಸಂಸ್ಥೆಯ ಅಧೀನದಲ್ಲಿರುವ ಪ್ರದೇಶಗಳ ಆಡಳಿತ ವಹಿಸು ವುದು, ಅಭಿವೃದ್ಧಿ ಕಾರ್ಯಗಳನ್ನು ನಡೆಸುವುದು ಧರ್ಮದರ್ಶಿ ಸಮಿತಿಯ ಪ್ರಧಾನ ಕಾರ್ಯಗಳಾಗಿವೆ. ಅಲ್ಲಿನ ಸಮಸ್ಯೆಗಳನ್ನು ಸಮೀಕ್ಷಿಸಿ ಅವುಗಳನ್ನು ಪರಿಹರಿಸಲು ಸಮಿತಿ ಸೂಕ್ತ ಕ್ರಮ ಕೈಗೊಳ್ಳುತ್ತದೆ. ವಿಶ್ವಸಂಸ್ಥೆಯಿಂದ ಪಡೆದ ಪ್ರದೇಶಗಳಲ್ಲಿ ಆಳ್ವಿಕೆ ನಡೆಸುವ ರಾಷ್ಟ್ರಗಳು, ಪ್ರದೇಶಗಳನ್ನು ಹೊಂದಿರದ ಸದಸ್ಯ ರಾಷ್ಟ್ರಗಳು ಮತ್ತು ಸಾಮಾನ್ಯ ಸಭೆಯಿಂದ ಮೂರು ವರ್ಷಗಳ ಕಾಲಾವಧಿಗೆ ಆರಿಸಲ್ಪಟ್ಟ ರಾಷ್ಟ್ರಗಳು ಹೀಗೆ ಮೂರು ವಿಧದ ಸದಸ್ಯತ್ವವನ್ನು ಧರ್ಮದರ್ಶಿ ಸಮಿತಿ ಹೊಂದಿರುತ್ತದೆ.

**೫. ಅಂತಾರಾಷ್ಟ್ರೀಯ ನ್ಯಾಯಾಲಯ**

ಅಂತಾರಾಷ್ಟ್ರೀಯ ನ್ಯಾಯಾಲಯವು ಸಾಮಾನ್ಯ ಸಭೆಯಿಂದ ಚುನಾಯಿತರಾದ ೧೫ ಮಂದಿ ಪರಿಣತ ಸದಸ್ಯರನ್ನು(ನ್ಯಾಯಾಧೀಶರನ್ನು) ಹೊಂದಿದೆ. ಒಂದು ಸದಸ್ಯ ರಾಷ್ಟ್ರದ ಒಬ್ಬರು ಮಾತ್ರವೇ ಒಂದು ಬಾರಿಗೆ ನ್ಯಾಯಾಧೀಶರಾಗುವ ಅವಕಾಶವಿರುತ್ತದೆ. ಹಾಲೆಂಡಿನ ಹೇಗ್‌ನಲ್ಲಿ ಅಂತರ ರಾಷ್ಟ್ರೀಯ ನ್ಯಾಯಾಲಯದ ಪ್ರಧಾನ ಕಛೇರಿಯಿದೆ. ಅಂತರ ರಾಷ್ಟ್ರೀಯ

ಕಾನೂನು ಸಮಸ್ಯೆಗಳನ್ನು ಪರಿಶೀಲಿಸಿ, ತೀರ್ಮಾನ ನೀಡುವುದು ಇದರ ಮುಖ್ಯ ಕೆಲಸ. ಅಲ್ಲದೆ ಸಾಮಾನ್ಯ ಸಭೆ ಭದ್ರತಾ ಸಮಿತಿ ಮತ್ತು ಉಪಾಂಗಗಳಿಗೆ ನ್ಯಾಯಾಲಯವು ಕಾನೂನು ಸಲಹೆ ನೀಡುತ್ತದೆ. ನ್ಯಾಯಾಧೀಶರ ಕಾರ್ಯಾವಧಿ ೯ ವರ್ಷಗಳಾಗಿರುತ್ತದೆ.

**೬. ಪ್ರಧಾನ ಕಾರ್ಯಾಲಯ**

ಪ್ರಧಾನ ಕಾರ್ಯದರ್ಶಿಯು ಕಾರ್ಯಾಲಯದ ಮುಖ್ಯಸ್ಥನಾಗಿರುತ್ತಾನೆ. ಭದ್ರತಾ ಮಂಡಳಿಯ ಆದೇಶದಂತೆ ಸಾಮಾನ್ಯ ಸಭೆಯು ಐದು ವರ್ಷಗಳ ಕಾರ್ಯಾವಧಿಗೆ ಆರಿಸುತ್ತದೆ. ಪ್ರಧಾನ ಕಾರ್ಯದರ್ಶಿಯ ಅಧೀನದಲ್ಲಿ ವಿವಿಧ ರಾಷ್ಟ್ರಗಳ ಅನೇಕ ಅಧಿಕಾರಿಗಳಿರುತ್ತಾರೆ. ಸಭೆಗಳನ್ನು ಏರ್ಪಡಿಸುವುದು, ನಿರ್ಧಾರಗಳನ್ನು ಮತ್ತು ದಾಖಲೆ ಗಳನ್ನು ಸಂಗ್ರಹಿಸುವುದು ಇವೆಲ್ಲ ಕೆಲಸಗಳು ಪ್ರಧಾನ ಕಛೇರಿಯಲ್ಲಿ ನಡೆಯುತ್ತವೆ. ಈ ಕಾರ್ಯಾಲಯವು ನ್ಯೂಯಾರ್ಕ್‌ನಲ್ಲಿದೆ.

**ವಿಶ್ವಸಂಸ್ಥೆಯ ಕೆಲವು ಉಪಾಂಗಗಳು**

೧. ಅಂತರರಾಷ್ಟ್ರೀಯ ಕಾರ್ಮಿಕ ಸಂಘ
೨. ಅಂತರರಾಷ್ಟ್ರೀಯ ಹಣಕಾಸು ನಿಧಿ
೩. ಅಂತರರಾಷ್ಟ್ರೀಯ ಪುನರ್ ನಿರ್ಮಾಣ ಮತ್ತು ಅಭಿವೃದ್ಧಿ ಬ್ಯಾಂಕ್
೪. ವಿಶ್ವಸಂಸ್ಥೆಯ ಶೈಕ್ಷಣಿಕ, ವೈಜ್ಞಾನಿಕ ಮತ್ತು ಸಾಂಸ್ಕೃತಿಕ ಸಂಘ
೫. ಸಾರ್ವತ್ರಿಕ ಅಂಚೆ ಸಂಸ್ಥೆ
೬. ಆಹಾರ ಮತ್ತು ಕೃಷಿ ಸಂಸ್ಥೆ
೭. ಅಂತರರಾಷ್ಟ್ರೀಯ ದೂರ ಸಂಪರ್ಕ ಸಂಸ್ಥೆ
೮. ವಿಶ್ವ ಆರೋಗ್ಯ ಸಂಸ್ಥೆ ಇತ್ಯಾದಿ.

**ವಿಶ್ವಸಂಸ್ಥೆಯ ಸಾಧನೆ**

ವಿಶ್ವಸಂಸ್ಥೆಯು ತನ್ನ ಉದ್ದೇಶದಂತೆ ಸಾಕಷ್ಟು ರಾಜಕೀಯಕ್ಕೆ ಸಂಬಂಧಿಸಿದಂತೆ ಮಹತ್ತ್ವದ ಸಾಧನೆಗಳನ್ನು ಮಾಡಿದೆ. ರಾಷ್ಟ್ರ ಸಂಘವು ಈ ನಿಟ್ಟಿನಲ್ಲಿ ಅಷ್ಟೊಂದು ಸಫಲತೆಯನ್ನು ತೋರಲಿಲ್ಲ. ವಿಶ್ವಸಂಸ್ಥೆಯು ಅದನ್ನು ಸಮರ್ಥವಾಗಿ ನಿರ್ವಹಿಸಿತು. ಬ್ರಿಟನ್ ಸಿರಿಯಾವನ್ನು ಆಕ್ರಮಿಸಿದಾಗ, ಫ್ರಾನ್ಸ್ ಲೆಬನಾನ್‌ನನ್ನು ಆಕ್ರಮಿಸಿದಾಗ, ರಷ್ಯಾವು ಇರಾನನ್ನು ಆಕ್ರಮಿಸಿದಾಗ, ವಿಶ್ವಸಂಸ್ಥೆಯು ಮಧ್ಯಪ್ರವೇಶಿಸಿ ಆಕ್ರಮಣವನ್ನು ನಿಲ್ಲಿಸುವಂತೆ ಆಜ್ಞೆ ನೀಡಿತು. ಡಚ್ಚರ ಕೈಯಿಂದ ಇಂಡೋನೇಷಿಯಾವನ್ನು ಸ್ವತಂತ್ರಗೊಳಿಸಿತು. ಇಸ್ರೇಲ್ ಹಾಗೂ ಅರಬ್ಬರ ನಡುವೆ ಭೀಕರ ಸಮರ ನಡೆಯುತ್ತಿದ್ದಾಗ ವಿಶ್ವಸಂಸ್ಥೆಯು ಪ್ರವೇಶಿಸಿ ಯುದ್ಧವನ್ನು ನಿಲ್ಲಿಸಿತು. ಭಾರತದ ವಿರುದ್ಧ ಪಾಕಿಸ್ತಾನವು ಪಿತೂರಿ ನಡೆಸಿ ಹಲವು ಬಾರಿ ಆಂತರಿಕ ದಂಗೆಗಳಿಗೆ ಪ್ರೇರಣೆ ನೀಡಿತು. ವಿಶ್ವಸಂಸ್ಥೆ ಭಾರತ-ಪಾಕ್ ನಡುವೆ ಕದನವಿರಾಮ ಏರ್ಪಡಿಸಿತಾದರೂ ಕಾಶ್ಮೀರ ಗಡಿ ಸಮಸ್ಯೆ ಇತ್ಯರ್ಥವಾಗದೆ ಇನ್ನೂ ಹಾಗೇ ಉಳಿದಿದೆ. ಇತ್ತೀಚೆಗೆ ಪಾಕಿಸ್ತಾನಿ ಪಡೆಗಳು ಪರೋಕ್ಷವಾಗಿ ಆಕ್ರಮಣ ನಡೆಸಿದಾಗ ಭಾರತದ ಸೈನ್ಯ ಪಡೆಗಳು ಅದನ್ನು ಹಿಂದಕ್ಕೆ ಅಟ್ಟಿದ್ದು ಇತಿಹಾಸವಾಗಿದೆ. ಚೀನಾದೊಂದಿಗೆ ಸೇರಿಕೊಂಡು ಉತ್ತರ ಕೊರಿಯಾವು ದಕ್ಷಿಣ ಕೊರಿಯಾದ ಮೇಲೆ ಆಕ್ರಮಣ ನಡೆಸಿದಾಗ ವಿಶ್ವಸಂಸ್ಥೆಯು ದಕ್ಷಿಣ ಕೊರಿಯಾದ ರಕ್ಷಣೆಗೆ ನಿಂತು ಅದಕ್ಕೆ ಸೈನಿಕ ನೆರವು ನೀಡಿತು. ಹೀಗೆ ವಿಶ್ವದಾದ್ಯಂತ ರಾಜಕೀಯ ಸಮಸ್ಯೆಗಳಿಗೆ, ಯುದ್ಧಗಳಿಗೆ ವಿಶ್ವಸಂಸ್ಥೆಯು ನೀಡಿದ ಪರಿಹಾರ, ತಂದುಕೊಟ್ಟ ಕದನ ವಿರಾಮಗಳು ಗಣನೀಯವಾಗಿವೆ.

ರಾಜಕೀಯ ರಂಗದಲ್ಲಿ ಮಾಡಿರುವಷ್ಟೇ ಮಹತ್ವದ ಸಾಧನೆಗಳನ್ನು ರಾಜಕೀಯೇತರ ಕ್ಷೇತ್ರಗಳಲ್ಲಿಯೂ ವಿಶ್ವಸಂಸ್ಥೆಯು ಸಾಧಿಸಿದೆ ಎನ್ನುವುದು ಅದರ ಬಗ್ಗೆ ಅಭಿಮಾನ ಮೂಡಿಸುವ ವಿಚಾರ. ಅದರ ಹಲವು ಉಪಾಂಗಗಳಾಗಿರುವ ಯುನೆಸ್ಕೋ, ಕಾರ್ಮಿಕ ಸಂಸ್ಥೆ, ಆರೋಗ್ಯ ಸಂಸ್ಥೆ, ಹಣಕಾಸು ನಿಧಿ, ಐಬಿಆರ್‌ಡಿ ಮುಂತಾದವುಗಳು ತಮ್ಮ ಧ್ಯೇಯೋದ್ದೇಶಗಳಲ್ಲಿ ವಿಫಲವಾಗಿಲ್ಲ. ಯೂನಿಸೆಫ್ ಮಹಿಳಾ

ಮತ್ತು ಶಿಶು ಅಭಿವೃದ್ಧಿ ಕೆಲಸದಲ್ಲಿ ತೊಡಗಿ, ಆಹಾರ, ಔಷಧ ಮತ್ತಿತರ ಅಗತ್ಯ ವಸ್ತುಗಳನ್ನು ಪೂರೈಸುತ್ತಿದೆ. ಅದರ ವೈದ್ಯಕೀಯ ಸೇವೆಯು(ಉದಾ : ಇಂಡೋನೇಷ್ಯಾದಲ್ಲಿ) ಗಣನೀಯವಾದುದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಶಾಂತಿಯನ್ನು ಉಳಿಸುವ ನಿಟ್ಟಿನಲ್ಲಿ ವೈಜ್ಞಾನಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯ, ಕಾರ್ಯಕ್ರಮಗಳನ್ನು ಯುನೆಸ್ಕೋ ನಡೆಸುತ್ತಿದೆ. ಅರಿವನ್ನು ವಿಸ್ತರಿಸುವ ಕರಪತ್ರ, ನಿಯತಕಾಲಿಕೆ, ಪುಸ್ತಕಗಳನ್ನು ಪ್ರಕಟಿಸುತ್ತಿದೆ. ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆಯು ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ಶ್ರಮಿಸುತ್ತಿದೆ. ವಿಶ್ವ ಕಾರ್ಮಿಕ ಸಂಸ್ಥೆಯು ವಿಶ್ವದೆಲ್ಲೆಡೆ ಕಾರ್ಮಿಕರ ಹಿತಾಸಕ್ತಿಗಳನ್ನು ರಕ್ಷಿಸುತ್ತಿದೆ. ವಿಶ್ವ ಆರೋಗ್ಯ ಸಂಸ್ಥೆಯು ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದ ದೇಶ, ಪ್ರದೇಶಗಳಲ್ಲಿ ಸಾಂಕ್ರಾಮಿಕ ಮತ್ತಿತರ ರೋಗಗಳನ್ನು ತಡೆಹಿಡಿಯಲು, ಔಷಧ ಪೂರೈಸಲು ಒಟ್ಟಾರೆಯಾಗಿ ಜೀವನ ಕ್ರಮವನ್ನು ಉತ್ತಮಗೊಳಿಸಲು ದುಡಿಯುತ್ತಿದೆ. ಈ ರೀತಿಯಲ್ಲಿ ವಿಶ್ವಸಂಸ್ಥೆಯು ಮಾನವ ಕಲ್ಯಾಣ ವನ್ನು ಧ್ಯೇಯವಾಗಿಟ್ಟುಕೊಂಡು ಕಾರ್ಯನಿರ್ವಹಿಸುತ್ತಿದೆ.

**ವಿಶ್ವಸಂಸ್ಥೆಯಲ್ಲಿನ ದೋಷಗಳು**

ತನ್ನ ಸಾಧನೆಗಳ ಹೊರತಾಗಿಯೂ ವಿಶ್ವಸಂಸ್ಥೆ ಕೆಲವಾರು ದೋಷಗಳನ್ನು ಹೊಂದಿದೆ. ರಾಷ್ಟ್ರ ಸಂಘದಂತೆಯೇ ವಿಶ್ವಸಂಸ್ಥೆಯಲ್ಲಿ ಶಕ್ತಿಶಾಲಿ ರಾಷ್ಟ್ರಗಳು ಹೆಚ್ಚಿನ ಅಧಿಕಾರ ಚಲಾಯಿಸುತ್ತವೆ. ಅವುಗಳು ಮಾತ್ರವೇ ವಿಶೇಷಾಧಿಕಾರ ಹೊಂದಿವೆ. ವಿಶ್ವಸಂಸ್ಥೆಯು ಅವುಗಳ ವಿಚಾರದಲ್ಲಿ ಆದೇಶ ಹೊರಡಿಸಲು, ನಿಯಂತ್ರಿಸಲು ಶಕ್ತವಾಗಿಲ್ಲ.

ವಿಶ್ವಸಂಸ್ಥೆಯ ಕಾರ್ಯದಲ್ಲಿ ವಿಶೇಷ ಸಾಮರ್ಥ್ಯವಿರಲಿಲ್ಲ. ಶಕ್ತರಾಷ್ಟ್ರಗಳು ಸೋವಿಯೆತ್ ಮತ್ತು ಅಮೆರಿಕನ್ ಬಣಗಳಾಗಿ ಒಡೆದಿದ್ದವು. ತಮ್ಮ ಸಮಸ್ಯೆಯನ್ನು ನಿವಾರಿಸಿಕೊಳ್ಳುವುದು ಅವರ ಉದ್ದೇಶವಾಗಿರದೆ ಪರಸ್ಪರ ದಮನಗೊಳಿಸಲು ಪ್ರಯತ್ನಿಸು ವುದೇ ಆಗಿದ್ದಿತು. ಅವುಗಳ ತತ್ವಾದರ್ಶಗಳು ಪೂರ್ಣವಾಗಿ ಭಿನ್ನಭಿನ್ನವಾಗಿದ್ದು ವಿಶ್ವಸಂಸ್ಥೆಯ ಸಭೆಗಳಲ್ಲಿ ಯಾವಾಗಲೂ ವಾಗ್ಯುದ್ಧವಾಗುತ್ತಿದ್ದವು.

ತಪ್ಪಿತಸ್ಥ ದೇಶವನ್ನು ಶಿಕ್ಷಿಸಲು ಯಾವುದೇ ವಿಶೇಷಾಧಿಕಾರವೂ ಭದ್ರತಾ ಸಮಿತಿಗಿಲ್ಲ. ರಾಷ್ಟ್ರಗಳನ್ನು ರಕ್ಷಿಸುವ ಸಲುವಾಗಿ ತನ್ನದೇ ಆದ ಪ್ರಬಲ ಸೈನಿಕ ಬಲವನ್ನು ವಿಶ್ವ ಸಂಸ್ಥೆಯು ಹೊಂದಿಲ್ಲ.

ಸದಸ್ಯ ರಾಷ್ಟ್ರಗಳನ್ನು ನೇಮಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಸಮಾನತೆ ಮತ್ತು ಸಾರ್ವತ್ರಿಕವಾದ ಅಂಶವಿಲ್ಲ. ಸದಸ್ಯರಾಗಲು ಬಯಸುವ ರಾಷ್ಟ್ರಗಳಿಗೆ ಆ ಆರ್ಹತೆ, ಸಾಮರ್ಥ್ಯವಿದೆಯೇ ಎಂಬುದನ್ನು ಪರೀಕ್ಷಿಸುವ ಮತ್ತು ಅವು ಶಾಂತಿಪ್ರಿಯ ರಾಷ್ಟ್ರವೇ ಎಂದು ಗಮನಿಸುವ ಅಧಿಕಾರವನ್ನು ಭದ್ರತಾ ಮಂಡಳಿಗೆ ವಹಿಸಲಾಗಿತ್ತು. ಇಲ್ಲಿಯೂ ಪ್ರಬಲ ರಾಷ್ಟ್ರಗಳ ತಾರತಮ್ಯ ಧೋರಣೆ ಕೆಲಸ ಮಾಡುತ್ತಿತ್ತು.

ಮುಖ್ಯ ಕಾರ್ಯದರ್ಶಿಯನ್ನು ನೇಮಕಗೊಳಿಸುವ ವಿಧಾನವೂ ದೋಷಪೂರಿತವಾದುದು ಎನ್ನಲಾಗಿದೆ. ಪ್ರಬಲ ಶಕ್ತಿಗಳಿಗೆ ಆಯ್ಕೆ ಹಿಡಿಸದೇ ಹೋದಾಗ ಆ ಸ್ಥಾನ ಖಾಲಿ ಬೀಳುವ ಸಾಧ್ಯತೆಗಳಿವೆ.

ಇಂತಹ ಸಣ್ಣಪುಟ್ಟ ಕಂದುಕೊರತೆಗಳಿದ್ದರೂ ಮನುಷ್ಯನ ಮೂಲಭೂತ ವಿಷ ಪ್ರವೃತ್ತಿಗಳಂತಿರುವ ಹಿಂಸಾಪ್ರಿಯತೆ ಮತ್ತು ಯುದ್ಧಗಳ ಭೀತಿಯಿಂದ ಜಗತ್ತನ್ನು ರಕ್ಷಿಸುವ ಸಲುವಾಗಿ ಇರುವ ಏಕೈಕ ಅಧಿಕೃತ ಆಶಾಕಿರಣವಾಗಿದೆ ವಿಶ್ವಸಂಸ್ಥೆ. ಈ ಐವತ್ತು ವರ್ಷಗಳಲ್ಲಿ ತನ್ನ ಸಾಧನೆಗಳಿಂದ ಎಷ್ಟೋ ಸಂಭಾವ್ಯ ಯುದ್ಧಗಳನ್ನು ನಿವಾರಿಸಿ, ಇನ್ನೆಷ್ಟೋ ವಿವಾದಗಳಿಗೆ ಶಾಶ್ವತ ತೆರೆಯೆಳೆದಿದೆ. ಕೆಲವು ಸಮಸ್ಯೆಗಳು ಇನ್ನೂ ಹಾಗೇ ಉಳಿದುಕೊಂಡಿರುವುದಾದರೆ ಅದಕ್ಕೆ ವಿಶ್ವಸಂಸ್ಥೆಯೇ ಹೊಣೆಗಾರನಲ್ಲ. ಹೀಗಿದ್ದೂ ವಿಶ್ವಸಂಸ್ಥೆ ತನ್ನ ಬಲವನ್ನು ವಿಸ್ತರಿಸುವ ಅಗತ್ಯವಿದೆ. ಕೆಲವೇ ಕೆಲವು ಬಲಗಳ ಹಿಡಿತ ದಿಂದ ಮುಕ್ತನಾಗಿ, ನಿಷ್ಪಕ್ಷಪಾತವಾಗಿ ತೀರ್ಮಾನ ನೀಡುವಲ್ಲಿ ಇನ್ನೂ ಹೆಚ್ಚಿನ ಸ್ಥೈರ್ಯ ತೋರಬೇಕಿದೆ. ವಿಚಾರ ವಿನಿಮಯದ ಮಾಧ್ಯಮ ಮಾತ್ರವಾಗಿರದೆ ಶಾಂತಿ ಸ್ಥಾಪನೆಯ ಕಾರ್ಯರೂಪದಲ್ಲಿ ಸಾಕಾರಗೊಳ್ಳಬೇಕು. ವಿಶ್ವಸಂಸ್ಥೆಯ ಸಣ್ಣಪುಟ್ಟ ದೋಷಗಳನ್ನು ವೈಫಲ್ಯವೆನ್ನಲಾಗದು. ಒಟ್ಟಿನಲ್ಲಿ ವಿಶ್ವಸಂಸ್ಥೆಯ ಭವಿಷ್ಯವು ಮಾನವೀಯತೆಯ ಭವಿಷ್ಯ ಹಾಗೂ ಅಳಿವು ಉಳಿವಿನ ಪ್ರಶ್ನೆ ಎಂಬುದರಲ್ಲಿ ಸಂದೇಹವಿಲ್ಲ.

**ಪರಾಮರ್ಶನ ಗ್ರಂಥಗಳು**

೧. ಟೈಲರ್ ಎ.ಜೆ.ಪಿ. ೧೯೬೧. **ದಿ ಆರಿಜಿನ್ ಆಫ್ ದಿ ಸೆಕೆಂಡ್ ವರ್ಲ್ಡ್ ವಾರ್,** ಲಂಡನ್

೨. ಕ್ಯಾಲ್‌ವೊಕಾರೆಸ್ ಪಿ., ೧೯೬೮. **ವರ್ಲ್ಡ್ ಪಾಲಿಟಿಕ್ಸ್ ಸಿನ್ಸ್ ೧೯೪೫.**

# ೨೩. ಯುರೋಪಿನ ಬಿಕ್ಕಟ್ಟು ಹಾಗೂ ಶೀತಲ ಸಮರ

ಎರಡನೆಯ ಮಹಾಯುದ್ಧ ಕೊನೆಗೊಂಡ ನಂತರದ ಅರ್ಧಶತಮಾನದ ಅವಧಿಯಲ್ಲಿ ವಿಶ್ವವು ನಾಟಕೀಯವಾಗಿ ಬಹಳಷ್ಟು ಬದಲಾಯಿತು. ವಿಶ್ವದ ರಾಜಕೀಯ ರೂಪು-ರೇಶೆಗಳು ಸಂಪೂರ್ಣವಾಗಿ ಬದಲಾದವು. ಈ ಅವಧಿಯಲ್ಲಿ ವಿಶ್ವದ ಸಾಮ್ರಾಜ್ಯಶಾಹಿ ದಬ್ಬಾಳಿಕೆ ಹಾಗೂ ಅದರೊಂದಿಗೆ ಯುರೋಪ್ ಖಂಡದ ಸಾರ್ವಭೌಮತೆ ಕೂಡ ವಿನಾಶ ವನ್ನು ಕಂಡಿತು. ಸುಮಾರು ಐವತ್ತು ರಾಷ್ಟ್ರಗಳು ಸೇರಿ ೧೯೪೫ರಲ್ಲಿ ವಿಶ್ವಸಂಸ್ಥೆಯನ್ನು ಸ್ಥಾಪಿಸಿದವು. ಸೋವಿಯತ್ ಒಕ್ಕೂಟದ ಪತನ ಹಾಗೂ ಏಷ್ಯಾ ಮತ್ತು ಆಫ್ರಿಕಾ ಖಂಡಗಳ, ಇದುವರೆಗೆ ವಸಾಹತುಗಳಾಗಿದ್ದ ರಾಷ್ಟ್ರಗಳಿಗೆ ಸ್ವಾತಂತ್ರ್ಯ - ಈ ಕಾರಣಗಳಿಂದಾಗಿ ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳ ಸಂಖ್ಯೆ ಇಂದು ೧೯೦ರ ಗಡಿಯನ್ನು ಮುಟ್ಟಿದೆ.

ಎರಡನೆಯ ಮಹಾಯುದ್ಧದಲ್ಲಿ ಜರ್ಮನಿ, ಜಪಾನ್ ಹಾಗೂ ಇಟಲಿ ರಾಷ್ಟ್ರಗಳು ಸೋಲನ್ನುಂಡವು. ಬ್ರಿಟನ್ ಹಾಗೂ ಫ್ರಾನ್ಸ್ ದೇಶಗಳು ತಮ್ಮ ಬೇರೆ ಬೇರೆ ಖಂಡಗಳಲ್ಲಿದ್ದ ಸಾಮ್ರಾಜ್ಯಗಳನ್ನು ಕಳೆದುಕೊಂಡವು. ಇದರಿಂದಾಗಿ ಕಳೆದ ಐವತ್ತು ವರ್ಷಗಳಿಂದ ವಿಶ್ವಶಕ್ತಿಯಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನ ಹಾಗೂ ಸೋವಿಯತ್ ಒಕ್ಕೂಟ(ರಷ್ಯಾ)ಗಳು ಮೆರೆದವು; ವಿಶ್ವದ ರಾಜಕೀಯ, ಆರ್ಥಿಕ ಹಾಗೂ ಸೈನಿಕ ವ್ಯವಸ್ಥೆ ಹಾಗೂ ಬೆಳವಣಿಗೆಗಳ ಮೇಲೆ ಅದ್ಭುತ ನಿಯಂತ್ರಣ ಸಾಧಿಸಿದವು. ಅಲ್ಲದೆ ಯುದ್ಧದ ನಂತರ ಅಸ್ತಿತ್ವಕ್ಕೆ ಬಂದ ಎರಡು ಶಕ್ತಿ ಬಣಗಳು ನಾಯಕರಾದವು.

ಅಮೆರಿಕಾ ಸಂಯುಕ್ತ ಸಂಸ್ಥಾನವು ಪಾಶ್ಚಿಮಾತ್ಯ ಬಣದ(ವೆಸ್ಟರ್ನ್ ಬ್ಲಾಕ್) ನಾಯಕನಾದರೆ, ಸೋವಿಯತ್ ಒಕ್ಕೂಟವೂ ಪೌರ್ವಾತ್ಯ ಬಣದ(ಈಸ್ಟರ್ನ್ ಬ್ಲಾಕ್) ನಾಯಕನಾಯಿತು. ಪಾಶ್ಚಿಮಾತ್ಯ ಬಣದಲ್ಲಿ ಪಶ್ಚಿಮ ಯುರೋಪ್, ಉತ್ತರ ಅಮೆರಿಕಾ ಮತ್ತು ಪೆಸಿಫಿಕ್ ರಾಷ್ಟ್ರಗಳು ಸೇರಿಕೊಂಡವು. ಈ ರಾಷ್ಟ್ರಗಳು ತಮ್ಮನ್ನು "ಮುಕ್ತ ಪ್ರಪಂಚ"(ಫ್ರೀ ವರ್ಲ್ಡ್) ಎಂದು ಕರೆದುಕೊಂಡವು. ಈ ಬಣವನ್ನು ಬಂಡವಾಳಶಾಹಿ ಬಣವಂತಲೂ (ಕ್ಯಾಪಿಟಲಿಸ್ಟ್ ಬ್ಲಾಕ್) ಕರೆಯಲಾಗುತ್ತದೆ. ಸೋವಿಯತ್ ಒಕ್ಕೂಟವು ನಾಯಕನಾದ ಬಣವನ್ನು ಸಮಾಜವಾದಿ ಬಣವೆಂದೂ ಕರೆಯುತ್ತಾರೆ. ಪೂರ್ವ ಯುರೋಪಿನ ಹಲವು ರಾಷ್ಟ್ರಗಳು ಎರಡನೆಯ ಮಹಾಯುದ್ಧದ ನಂತರ, ಸೋವಿಯತ್ ಒಕ್ಕೂಟದ ಪ್ರಭಾವದಿಂದಾಗಿ ಕಮ್ಯೂನಿಸ್ಟ್ ಸರ್ಕಾರ ಹಾಗೂ ರಾಜ್ಯವ್ಯವಸ್ಥೆಯನ್ನು ಒಪ್ಪಿಕೊಂಡಿತು. ಆದ್ದರಿಂದ ಸಹಜವಾಗಿಯೇ ಪೂರ್ವ ಯೂರೋಪ್, ಸೋವಿಯತ್ ರಷ್ಯಾದ ತೆಕ್ಕೆಗೆ ಬಿದ್ದಿತು.

ಈ ಮೇಲಿನ ಎರಡು ಶಕ್ತಿ ಬಣಗಳಲ್ಲಾಗಲಿ ಅಥವಾ ರಾಷ್ಟ್ರಗಳ ಗುಂಪಿನಲ್ಲಾಗಲಿ ಹಲವಾರು ಬದಲಾವಣೆಗಳಾದರೂ ಕೂಡ, ಅಮೆರಿಕಾ ಸಂಯುಕ್ತ ಸಂಸ್ಥಾನ ಹಾಗೂ ಸೋವಿಯತ್ ಒಕ್ಕೂಟಗಳ -ವಿಶ್ವದ ಅಗ್ರಮಾನ್ಯ ಮಿಲಿಟರಿ ಶಕ್ತಿಗಳಾಗಿ -ಸ್ಥಾನದಲ್ಲಿ ೧೯೮೦ರ ದಶಕದವರೆಗೆ ಯಾವುದೇ ಬದಲಾವಣೆಗಳಾಗಲಿಲ್ಲ.

**ಶೀತಲ ಸಮರ ಮತ್ತು ನಂತರದ ಬೆಳವಣಿಗೆಗಳು (೧೯೪೫–೧೯೯೦)**

ಎರಡನೆಯ ಮಹಾಯುದ್ಧದ ಅಂತ್ಯವಾದಲ್ಲಿಂದ ೧೯೯೦ರ ದಶಕದವರೆಗೆ, ಸುಮಾರು ನಲವತ್ತೈದು ವರ್ಷಗಳ ಅವಧಿಯಲ್ಲಿ ನಡೆದ ವಿವಿಧ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಬದಲಾವಣೆಗಳನ್ನು ಸಮಾಜವಾದಿ ಹಾಗೂ ಬಂಡವಾಳಶಾಹಿ ಎಂಬುದಾಗಿ

ವಿಂಗಡಿಸಲಾಗಿದೆ. ಈ ಎರಡೂ ಬಣಗಳು ತಮ್ಮ ಸೈದ್ಧಾಂತಿಕ ಗಡಿಯನ್ನು ಮೀರಿ ಹಲವಾರು ಮುಖ್ಯ ಬದಲಾವಣೆಗಳಿಗೊಳಗಾಯಿತು. ಮುಂದುವರಿದ ಬಂಡವಾಳಶಾಹಿ ವ್ಯವಸ್ಥೆಯಿದ್ದ ರಾಷ್ಟ್ರಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಹಕ್ಕುಗಳಿಗೆ ಸರ್ವಮಾನ್ಯ ಮನ್ನಣೆಯಿತ್ತು. ಇದಕ್ಕೆ ಸ್ವಲ್ಪ ಮಟ್ಟಿಗೆ ಕಾರಣ ಕಾರ್ಮಿಕ ಸಂಘಗಳು ಹಾಗೂ ಸಮಾಜ ವಾದಿ ಚಳವಳಿಗಳು. ಇಂದು ಬಹಳಷ್ಟು ಮುಂದುವರಿದ ಬಂಡವಾಳಶಾಹಿ ವ್ಯವಸ್ಥೆಯನ್ನು ಹೊಂದಿದ ರಾಷ್ಟ್ರಗಳು ಜನೋಪಯೋಗಿ ನೀತಿಗಳನ್ನು ಅನುಸರಿಸುತ್ತಿವೆ. ಇದರಿಂದಾಗಿ ಎರಡನೇ ಮಹಾಯುದ್ಧದ ಪೂರ್ವದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಉಂಟುಮಾಡಿದ್ದ ಕಷ್ಟಕಾರ್ಪಣ್ಯಗಳು ಕಡಿಮೆಯಾಗಿದೆ.

ಪೂರ್ವ ಯುರೋಪಿನಲ್ಲಿ ಹಾಗೂ ತನ್ನಲ್ಲಿ ಸೋವಿಯತ್ ಒಕ್ಕೂಟ ಕಟ್ಟಿದ ಸಮಾಜ ವಾದಿ ವ್ಯವಸ್ಥೆಯನ್ನು, ಬಂಡವಾಳಶಾಹಿ ವ್ಯವಸ್ಥೆಗೆ ಪರ್ಯಾಯವಾದ ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆ ಎಂಬುದಾಗಿ ಭಾವಿಸಲಾಗಿತ್ತು. ಈ ಸಮಾಜವಾದಿ ವ್ಯವಸ್ಥೆ ಪತನಗೊಳ್ಳುವ ಮೊದಲು ಹಲವು ರೀತಿಯಲ್ಲಿ ಬದಲಾವಣೆಗೊಳಗಾಯಿತು. ಹೊಸದಾಗಿ ಸಮಾಜವಾದಿ ವ್ಯವಸ್ಥೆಯಿಂದ ಹೊರಬಂದ ರಾಷ್ಟ್ರಗಳು ತಮ್ಮ ರಾಜ್ಯಗಳ ಪುನರ್ ಸಂಘಟನೆಯಲ್ಲಿ ತೊಡಗಿವೆ. ಪ್ರಪಂಚದ ಇತರೆಡೆಯ ರಾಷ್ಟ್ರಗಳು ವಸಾಹತುಶಾಹಿ ಆಡಳಿತದಿಂದ ಬಿಡುಗಡೆ ಹೊಂದಿ ಸ್ವತಂತ್ರರಾಗಿದ್ದರೂ ಬಡತನ ಹಾಗೂ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿವೆ. ಪ್ರಪಂಚದ ಅರ್ಥವ್ಯವಸ್ಥೆ ಅಸಮಾನತೆಯಿಂದ ಕೂಡಿದ್ದು, ಇದು ಈ ರಾಷ್ಟ್ರಗಳ ಮುಂದುವರಿದ ಆರ್ಥಿಕ ದಿವಾಳಿತನಕ್ಕೆ ಕಾರಣವಾಗಿದೆ. ಹೀಗಾಗಿ ಈ ರಾಷ್ಟ್ರಗಳನ್ನು ಒಟ್ಟಾಗಿ "ಮೂರನೆಯ ವಿಶ್ವ" ಎಂದು ಕರೆಯಲಾಗುತ್ತಿದೆ.

ಎರಡನೆಯ ವಿಶ್ವಯುದ್ಧದ ನಂತರ ಸುಮಾರು ಐವತ್ತು ವರ್ಷಗಳ ಅವಧಿಯಲ್ಲಿ ಪ್ರಪಂಚದಲ್ಲಿ ಅಚ್ಚರಿಯನ್ನುಂಟು ಮಾಡುವಷ್ಟು ತಾಂತ್ರಿಕ ಬದಲಾವಣೆಗಳಾಗಿವೆ. ತಂತ್ರ ಕ್ಷೇತ್ರದಲ್ಲಾದ ಈ ಬದಲಾವಣೆಗಳು ಮುಖ್ಯವಾಗಿ ಅಭಿವೃದ್ಧಿ ಹೊಂದಿದ್ದ ಬಂಡವಾಳಶಾಹಿ ರಾಷ್ಟ್ರಗಳ ಅರ್ಥವ್ಯವಸ್ಥೆಯ ಸ್ವರೂಪವನ್ನು ಬದಲಾಯಿಸಿವೆ. ಇದರಿಂದಾಗಿ ಅಮೆರಿಕಾ, ಜಪಾನ್ ಮತ್ತು ಜರ್ಮನಿ ರಾಷ್ಟ್ರಗಳು ಪ್ರಮುಖ ಆರ್ಥಿಕ ಶಕ್ತಿಗಳಾಗಿ ಹೊರಹೊಮ್ಮಿವೆ. ಇದರ ಇನ್ನೊಂದು ಮುಖ್ಯ ಪರಿಣಾಮವೆಂದರೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಹಾಗೂ 'ಮೂರನೆಯ ವಿಶ್ವ'ದ ನಡುವಣ ಅಂತರ ಹೆಚ್ಚಿದೆ ಹಾಗೂ ಹೆಚ್ಚುತ್ತಿದೆ.

ಎರಡನೆಯ ವಿಶ್ವಯುದ್ಧದ ನಂತರದ ಕಾಲವು ಬಿಕ್ಕಟ್ಟು ವೈಷಮ್ಯ ಹಾಗೂ ಹೋರಾಟದ ಕಾಲವಾಗಿತ್ತು. ಪೌರ್ವಾತ್ಯ ಹಾಗೂ ಪಾಶ್ಚಿಮಾತ್ಯ ಬಣಗಳ ನಡುವಿನ ತಿಕ್ಕಾಟ ಬಹು ವರ್ಷಗಳ ಕಾಲ ನಡೆದು ಅದನ್ನು 'ಶೀತಲ ಸಮರ' ಎಂದು ಕರೆಯಲಾಗಿದೆ. ಇದರೊಡನೆ ವಿನಾಶಕಾರಿ ಶಸ್ತ್ರಾಸ್ತ್ರಗಳ ತಯಾರಿಕೆಯ ಪೈಪೋಟಿಯೂ ಸೇರಿಕೊಂಡು ಬಿಕ್ಕಟ್ಟು ತೀವ್ರವಾಯಿತು. ಇದರ ಪರಿಣಾಮವಾಗಿ ಎರಡೂ ಶಕ್ತಿಬಣಗಳಿಗೆ ಸೇರಿದ ಕೆಲವು ರಾಷ್ಟ್ರಗಳ ಮಧ್ಯೆ ಯುದ್ಧಗಳು ನಡೆದವು. ಆದರೆ ಈ ಯುದ್ಧಗಳು ಸ್ಥಳೀಯ ಯುದ್ಧ ಗಳಾಗಿ ಮುಂದುವರಿದು ಅಂತ್ಯಗೊಂಡದ್ದು ಮಾನವ ಜನಾಂಗದ ಅದೃಷ್ಟವೆನ್ನಬಹುದು. ವಿಶ್ವವು ಹಲವು ಬಾರಿ ಈ ರೀತಿಯ ತಿಕ್ಕಾಟಗಳಿಂದಾಗಿ ಮತ್ತೊಂದು ವಿಶ್ವಯುದ್ಧದ ಅಂಚಿಗೆ ಬಂದಿತ್ತೆಂದರೆ ಅಚ್ಚರಿಯಾಗದಿರದು.

ಏಷ್ಯಾ ಮತ್ತು ಆಫ್ರಿಕಾ ಖಂಡಗಳಲ್ಲಿ ಸ್ವತಂತ್ರ ರಾಷ್ಟ್ರಗಳ ಉದಯ ಯುದ್ಧೋತ್ತರ ಯೂರೋಪಿನ ಒಂದು ಮುಖ್ಯ ಲಕ್ಷಣ. ಈ ರಾಷ್ಟ್ರಗಳು ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳೊಂದಿಗೆ ಸೇರಿ ಪ್ರಪಂಚದ ರಾಜಕೀಯದಲ್ಲಿ ಸ್ವತಂತ್ರ ಪಾತ್ರವಹಿಸಲು ನಿರ್ಧರಿಸಿದವು. ಶೀತಲ ಸಮರದ ಕಾಲದಲ್ಲಿ ಯಾವುದೇ ಶಕ್ತಿ ಬಣಕ್ಕೆ ಸೇರಲು ನಿರಾಕರಿಸಿದ ಈ ರಾಷ್ಟ್ರಗಳಿಂದಾಗಿ ಶಾಂತಿಯ ವಾತಾವರಣ ಸ್ವಲ್ಪ ಮಟ್ಟಿಗೆ ಪ್ರಾಪ್ತಿಯಾಯಿತು. ಈ ರಾಷ್ಟ್ರಗಳು ಒಟ್ಟಾಗಿ ಅಲಿಪ್ತ ಆಂದೋಳನವನ್ನು ಪ್ರಾರಂಭಿಸಿದವು. ಅಲಿಪ್ತ ಆಂದೋಳನವು ಪ್ರಪಂಚದಲ್ಲಿ ಬಿಕ್ಕಟ್ಟನ್ನು ಕಡಿಮೆ ಮಾಡಿತಲ್ಲದೆ ವಸಾಹತುಶಾಹಿ ಸಾಮ್ರಾಜ್ಯವಾದ ಹಾಗೂ ಜನಾಂಗ ವಿಭೇದ ನೀತಿ ಮುಂತಾದವುಗಳ ವಿನಾಶಕ್ಕೆ ಮಹತ್ತರ ಕಾಣಿಕೆ ನೀಡಿತು; ಅಭಿವೃದ್ಧಿಯ ವಿಷಯವನ್ನು ಒಂದು ಅಂತರರಾಷ್ಟ್ರೀಯ ವಿಷಯವನ್ನಾಗಿ ಮಾಡಿತು.

೧೯೬೦ರ ದಶಕದಿಂದ ಆಗಿಂದಾಗ್ಗೆ ಅಲ್ಲಲ್ಲಿ ಶಾಂತಿಪರ್ವದ ಕಾಲಗಳು ಬಂದಿದೆ ಹಾಗೂ ಸ್ವಲ್ಪ ಮಟ್ಟಿಗಿನ ಬಿಕ್ಕಟ್ಟಿನ ಶಮನ ಉಂಟಾಗಿದೆ. ಆದರೆ ೧೯೯೦ರ ದಶಕದ ಪ್ರಪಂಚ ಖಂಡಿತವಾಗಿಯೂ ಶೀತಲ ಸಮರೋತ್ತರ ಪ್ರಪಂಚ ಎಂದರೆ ತಪ್ಪಾಗಲಾರದು. ಇದು ನಿಜವಾಗಿಯೂ ಶಾಂತ, ಬಿಕ್ಕಟ್ಟು-ರಹಿತ, ಪ್ರಪಂಚದ ಆರಂಭದ ಚಿನ್ಹೆಯೇ ಎಂದು ಹೇಳಲು ಸ್ವಲ್ಪ ಕಷ್ಟವಾದರೂ ಶೀತಲ ಯುದ್ಧದ

ಎಲ್ಲಾ ಲಕ್ಷಣಗಳು ಮಾಯವಾಗಿವೆ ಎಂದರೆ ತಪ್ಪಾಗಲಾರದು. ಭಯಾನಕ ಶಸ್ತ್ರಾಸ್ತ್ರಗಳ ಉತ್ಪಾದನೆ ಮತ್ತು ಸಂಗ್ರಹ ನಿಂತು, ನಿಶಸ್ತ್ರೀಕರಣ ನಡೆದು ನಿಜವಾದ ಅಂತರರಾಷ್ಟ್ರೀಯ ಸಹಕಾರದ ಮೂಲಕ ಯುದ್ಧಗಳನ್ನು ತಡೆಹಿಡಿದರೆ ಮಾತ್ರ ಶಾಂತಿಯನ್ನು ಚಿರವಾಗಿ ಸ್ಥಾಪಿಸಬಹುದು.

**ಶೀತಲಯುದ್ಧ**

ಎರಡನೆಯ ಮಹಾಯುದ್ಧ ಪ್ರಗತಿಯಲ್ಲಿರುವಾಗಲೇ ಮಿತ್ರರಾಷ್ಟ್ರಗಳಾದ ಬ್ರಿಟನ್, ಅಮೆರಿಕಾ ಸಂಯುಕ್ತ ಸಂಸ್ಥಾನ ಮತ್ತು ಸೋವಿಯತ್ ಒಕ್ಕೂಟಗಳು ಆಗಿಂದಾಗ್ಗೆ ಸಮ್ಮೇಳನವನ್ನು ನಡೆಸಿ ಯುದ್ಧ ನಂತರದ ಯುರೋಪಿನ ಪರಿಸ್ಥಿತಿ, ಹಾಗೂ ವಿಮೋಚನೆಗೊಂಡ ರಾಷ್ಟ್ರಗಳ ಭವಿಷ್ಯದ ಬಗ್ಗೆ ಚರ್ಚೆ ನಡೆಸುತ್ತಿದ್ದವು. ಟೆಹರಾನ್, ಯಾಲ್ಟಾ ಹಾಗೂ ಪೋಟ್ಸ್ ಡ್ಯಾಂ ಮುಂತಾದ ಸ್ಥಳಗಳಲ್ಲಿ ವಿಚಾರ ವಿನಿಮಯಗಳು ನಡೆದವು. ೧೯೪೭ರ ವೇಳೆಗೆ ಮಾತುಕತೆಗಳು ಮುಗಿದು ಶತ್ರುರಾಷ್ಟ್ರಗಳಾದ ಇಟಲಿ, ರುಮೇನಿಯಾ, ಬಲ್ಗೇರಿಯಾ, ಹಂಗೇರಿ ಮತ್ತು ಫಿನ್‌ಲೆಂಡ್‌ಗಳೊಡನೆ ಮಿತ್ರರಾಷ್ಟ್ರಗಳು ಒಪ್ಪಂದಗಳನ್ನು ಮಾಡಿಕೊಂಡವು. ೧೯೫೫ರಲ್ಲಿ ಆಸ್ಟ್ರೀಯ ದೇಶದೊಡನೆ ಒಪ್ಪಂದ ವೇರ್ಪಟ್ಟು ಮಿತ್ರ ರಾಷ್ಟ್ರಗಳ ಸೈನ್ಯ ಅಲ್ಲಿಂದ ಹಿಂದೆ ಸರಿಯಿತು. ಜರ್ಮನಿ ಮತ್ತು ಜಪಾನ್ ದೇಶಗಳಿಗೆ ಸಂಬಂಧಿಸಿದಂತೆ ಸೋವಿಯತ್ ಒಕ್ಕೂಟ ಮತ್ತು ಉಳಿದ ಮಿತ್ರ ರಾಷ್ಟ್ರಗಳ ನಡುವೆ ಯಾವುದೇ ಒಪ್ಪಂದ ಆಗುವುದು ಕಷ್ಟವಾಯಿತು. ಆದರೂ ಪಾಶ್ಚಿಮಾತ್ಯ ರಾಷ್ಟ್ರಗಳು ಜಪಾನ್‌ನೊಡನೆ, ಸೋವಿಯತ್ ಒಕ್ಕೂಟದ ಪ್ರತಿಭಟನೆಯ ಮಧ್ಯೆ, ಒಪ್ಪಂದವೊಂದಕ್ಕೆ ಸಹಿ ಹಾಕಿದವು. ಆದರೆ ಜರ್ಮನಿಯ ಭವಿಷ್ಯದ ವಿಷಯದಲ್ಲಿ ಈ ಎರಡು ಗುಂಪುಗಳ ಮಧ್ಯೆ ತೀವ್ರ ಭಿನ್ನಾಭಿಪ್ರಾಯಗಳುಂಟಾಗಿ ಅದು ನಿರಂತರ ತಿಕ್ಕಾಟಕ್ಕೆ ಎಡೆಮಾಡಿಕೊಟ್ಟಿತು. ಈ ರೀತಿ ಯುದ್ಧ ನಂತರ, ಯುದ್ಧಕಾಲೀನ ಒಕ್ಕೂಟ ಗಳು ಮುರಿದು ಬಿದ್ದು, ಶೀತಲಸಮರದ ಕಾಲ ಅಥವಾ "ಶಸ್ತ್ರಾಸ್ತ್ರ ಶಾಂತಿ" ಪ್ರಾರಂಭವಾಯಿತು.

**ಶೀತಲ ಸಮರದ ಆರಂಭ**

ಇತಿಹಾಸಕಾರರು ಶೀತಲ ಸಮರದ ಮೂಲವನ್ನು ೧೯೧೭ರ ರಷ್ಯಾದ ಬೋಲ್ಷೆವಿಕ್ ಕ್ರಾಂತಿಗೆ ಕೊಂಡೊಯ್ಯುತ್ತಾರೆ. ರಷ್ಯಾದಲ್ಲಿ ಕ್ರಾಂತಿಯಾದ ನಂತರ ಸ್ಥಾಪಿತವಾದ ಸೋವಿಯತ್ ಸರ್ಕಾರವನ್ನು ನಾಶಮಾಡಲು ಹಲವು ಪಾಶ್ಚಿಮಾತ್ಯ ರಾಷ್ಟ್ರಗಳು ಸೈನ್ಯವನ್ನು ಕಳುಹಿಸಿದವು. ಆದರೆ ವಿದೇಶಿ ಮಧ್ಯಪ್ರವೇಶ ವಿಫಲವಾಗಿ ಅದು ೧೯೨೦ರಲ್ಲಿ ಕೊನೆಗೊಂಡಿತು. ಅನಂತರ ಈ ರಾಷ್ಟ್ರಗಳು ಸೋವಿಯತ್ ಒಕ್ಕೂಟದ ಮೇಲೆ ರಾಜತಾಂತ್ರಿಕ ಬಹಿಷ್ಕಾರವನ್ನು ವಿಧಿಸಿದವು. ಸೋವಿಯತ್ ದೇಶದ ಅಸ್ತಿತ್ವವನ್ನು ಮನ್ನಿಸಿ ಅದರೊಡನೆ ರಾಜತಾಂತ್ರಿಕ ಸಂಬಂಧವೇರ್ಪಡಿಸಲು ಇತರ ರಾಷ್ಟ್ರಗಳಿಗೆ ಹಲವಾರು ವರ್ಷಗಳೇ ಹಿಡಿಯಿತು. ಫ್ಯಾಸಿಸ್ಟ್ ಶಕ್ತಿಗಳು ಜರ್ಮನಿಯಲ್ಲಿ ಮೇಲುಗೈ ಪಡೆದ ನಂತರ ಜರ್ಮನಿಯ ಆಕ್ರಮಣಕಾರಿ ನೀತಿಯು ಸೋವಿಯತ್ ಒಕ್ಕೂಟದತ್ತ ಕೇಂದ್ರೀಕರಿಸಬಹುದೆಂದು ಪಾಶ್ಚಿಮಾತ್ಯ ಶಕ್ತಿಗಳು ಯೋಜನೆ ಹಾಕಿದವು ಮತ್ತು ಶತ್ರುರಾಷ್ಟ್ರಗಳ ಪಕ್ಷ ಗಳೊಂದಿಗೆ ಹೊಂದಾಣಿಕೆಯ ನೀತಿಯನ್ನು ಅನುಸರಿಸಲು ಪ್ರಾರಂಭಿಸಿದವು. ಸೋವಿಯತ್ ಒಕ್ಕೂಟದ ಮೇಲೆ ನಡೆಯುವ ಆಕ್ರಮಣವನ್ನು ತಡೆಯಲು ಅದರೊಡನೆ ಯಾವುದೇ ಒಪ್ಪಂದಕ್ಕೆ ಬರಲು ಅವು ನಿರಾಕರಿಸಿದವು.

ಯುದ್ಧ ನಡೆಯುತ್ತಿದ್ದ ಸಂದರ್ಭದಲ್ಲಿ ಸೋವಿಯತ್ ಒಕ್ಕೂಟದ ಮೇಲೆ ಜರ್ಮನಿಯ ಆಕ್ರಮಣದ ನಂತರ, ಸೋವಿಯತ್ ಒಕ್ಕೂಟ - ಬ್ರಿಟನ್ - ಅಮೆರಿಕಾ ದೇಶಗಳ ಒಕ್ಕೂಟ ರಚನೆಯಾಯಿತು. ಈ ಒಕ್ಕೂಟದಿಂದಾಗಿಯೇ ಅಂತಿಮವಾಗಿ ಜರ್ಮನಿ ಮತ್ತು ಶತ್ರು ಪಕ್ಷಗಳ ಸೋಲಾಯಿತು. ಮಿತ್ರರಾಷ್ಟ್ರಗಳ ಒಕ್ಕೂಟವು ಯುದ್ಧ ಚಾಲ್ತಿಯಲ್ಲಿರು ವಾಗಲೂ, ಆಂತರಿಕ ಬಿಕ್ಕಟ್ಟುಗಳಿಂದ ಮುಕ್ತವಾಗಿರಲಿಲ್ಲ. ಯುರೋಪಿನ ಭವಿಷ್ಯದ ಬಗ್ಗೆ ಅಮೆರಿಕಾ-ಬ್ರಿಟನ್‌ಗಳು ತೆಗೆದುಕೊಳ್ಳುತ್ತಿದ್ದ ನಿರ್ಧಾರಗಳ ಬಗ್ಗೆ ಸೋವಿಯತ್ ಒಕ್ಕೂಟಕ್ಕೆ ಭಿನ್ನಾಭಿಪ್ರಾಯವಿತ್ತು. ಉದಾಹರಣೆಗೆ ಪೋಲೆಂಡಿನ ಬಗ್ಗೆ ಎರಡೂ ಪಂಗಡಕ್ಕೂ ಭಿನ್ನಾಭಿಪ್ರಾಯ ವಿತ್ತು. ಇಂತಹ ಕೆಲವು ಸಂಶಯಗಳನ್ನು ಟೆಹರಾನ್, ಯಲ್ಟಾ ಮತ್ತು ಪೋಟ್ಸ್ ಡ್ಯಾಂ ಸಭೆಗಳಲ್ಲಿ ಪರಿಹರಿಸಿಕೊಂಡರೂ ಸೋವಿಯತ್ ಒಕ್ಕೂಟದ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳಿಗಿದ್ದ ಸಂಶಯಗಳು ಹಾಗೆಯೇ ಉಳಿದವು. ಸೋವಿಯತ್ ಒಕ್ಕೂಟವು ಜರ್ಮನಿ ಹಾಗೂ ಪೂರ್ವ

ಯೂರೋಪಿನಲ್ಲಿ ಗಳಿಸಿದ ವಿಜಯವು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅತೃಪ್ತ ಭಾವನೆಗಳನ್ನು ಉಂಟುಮಾಡಿತು. ಸೋವಿಯತ್ ಸೈನ್ಯವು ಬರ್ಲಿನ್‌ನತ್ತ ಮುನ್ನುಗ್ಗುತ್ತಿದ್ದಂತೆ ಬ್ರಿಟನ್ ಎಚ್ಚರಗೊಂಡಿತ್ತಲ್ಲದೆ, ಅದನ್ನು ತಡೆಯಲು ಬ್ರಿಟನ್ನಿನ ಪ್ರಧಾನಿ ಚರ್ಚಿಲ್ ಅಮೆರಿಕಾದ ಅಧ್ಯಕ್ಷ ರೂಸ್‌ವೆಲ್ಟ್‌ರ ಮೇಲೆ ಒತ್ತಡವನ್ನು ತಂದಿದ್ದರು.

**ಪೂರ್ವ ಯುರೋಪಿನಲ್ಲಿ ಕಮ್ಯುನಿಸ್ಟ್ ಸರ್ಕಾರಗಳು**

ಪೂರ್ವ ಯುರೋಪಿನಲ್ಲಿಯ ಘಟನಾವಳಿಗಳು ಪಶ್ಚಿಮ ಯುರೋಪಿನ ರಾಷ್ಟ್ರಗಳಿಗೆ ಕಮ್ಯುನಿಸಂನ ಬಗ್ಗೆ ಯುದ್ಧ ಪೂರ್ವ ಭೀತಿಗಳನ್ನು ಪುನರ್ಜೀವಗೊಳಿಸಿತು. ಯಾಲ್ಟಾ ರಂಗ ಸಭೆಯಲ್ಲಿ ಬ್ರಿಟನ್, ಅಮೆರಿಕಾ ಹಾಗೂ ಸೋವಿಯತ್ ಒಕ್ಕೂಟಗಳು ಒಟ್ಟಾಗಿ "ವಿಮೋಚಿತ ಯುರೋಪಿನ ಬಗ್ಗೆ ಘೋಷಣೆ"ಯೊಂದನ್ನು ಹೊರಡಿಸಿತು. ಈ ಘೋಷಣೆಯ ಪ್ರಕಾರ ಮೇಲಿನ ಮೂರು ಮಿತ್ರ ರಾಷ್ಟ್ರಗಳು ವಿಮೋಚಿತವಾದ ಯುರೋಪಿನ ರಾಷ್ಟ್ರಗಳಲ್ಲಿ ಮುಕ್ತ ಚುನಾವಣೆಗಳ ಮೂಲಕ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಸ್ಥಾಪಿಸಲು ಸಹಾಯ ಮಾಡಬೇಕಿತ್ತು. ಸೋವಿಯತ್ ಸೈನ್ಯ ಶಕ್ತಿಯಿಂದ ಬಿಡುಗಡೆ ಹೊಂದಿದ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟರೇ ಮೇಲುಗೈ ಸಾಧಿಸಿ ಕೆಲವೇ ವರ್ಷಗಳಲ್ಲಿ ಸರ್ಕಾರ ಸ್ಥಾಪಿಸಿದರು. ಪೋಲೆಂಡ್, ಜೆಕೊಸ್ಲೋವಾಕಿಯಾ, ಬಲ್ಗೇರಿಯಾ, ರುಮೇನಿಯಾ, ಹಂಗೇರಿ, ಯುಗೋಸ್ಲಾವಿಯಾ ಹಾಗೂ ಅಲ್ಬೇನಿಯಾ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಕಮ್ಯೂನಿಸ್ಟ್‌ರ ಮೇಲುಗೈಯನ್ನು ಬಂಡವಾಳಶಾಹಿ ರಾಷ್ಟ್ರಗಳಾದ ಬ್ರಿಟನ್ ಹಾಗೂ ಅಮೆರಿಕಾಗಳು ತಮ್ಮ "ಮುಕ್ತ ಪ್ರಪಂಚ"ದ ಕಲ್ಪನೆಗೆ ಅಪಾಯದ ಸಂಕೇತವಾಗಿ ಭಾವಿಸಿದರು. ಜರ್ಮನಿಯಲ್ಲಿ ನಡೆದ ಬೆಳವಣಿಗೆಗಳು ಕೂಡ ಈ ಎರಡು ಬಣಗಳ ನಡುವಿನ ಭಿನ್ನಾಭಿಪ್ರಾಯಗಳು ಉಲ್ಬಣಗೊಳ್ಳಲು ಕಾರಣವಾಯಿತು. ನಾಲ್ಕು ಭಾಗವಾದ ಜರ್ಮನಿಯಲ್ಲಿ ಪೂರ್ವ ಭಾಗದಲ್ಲಿ ಕಮ್ಯೂನಿಸ್ಟ್ ಆಳ್ವಿಕೆಯು ಪಶ್ಚಿಮ ಜರ್ಮನಿಯಲ್ಲಿ ಪ್ರಜಾಪ್ರಭುತ್ವ ಆಳ್ವಿಕೆಯು ಅಸ್ತಿತ್ವಕ್ಕೆ ಬಂದಿತು. ಇದೇ ವೇಳೆಗೆ ಕಮ್ಯೂನಿಸ್ಟರು ಅಧಿಕಾರಕ್ಕೆ ಬರುವುದನ್ನು ತಡಯಲು ಗ್ರೀಸಿಗೆ ಅಮೆರಿಕಾ ದೇಶವು ಕೋಟ್ಯಾಂತರ ರೂಪಾಯಿಗಳನ್ನು ಚೆಲ್ಲಲು ಪ್ರಾರಂಭಿಸಿತು. ಈ 'ಘನ' ಕಾರ್ಯದಲ್ಲಿ ಟರ್ಕಿಯೂ ತನ್ನ ಸಹಕಾರವನ್ನು ನೀಡಿತು.

ಶೀತಲ ಸಮರದಲ್ಲಿ ಇನ್ನೊಂದು ಮುಖ್ಯ ಘಟ್ಟ ಎಂದರೆ ಗ್ರೀಸಿನಲ್ಲಿ ನಡೆದ ನಾಗರಿಕ ಕ್ಷೋಭೆ. ಕಮ್ಯೂನಿಸ್ಟರ ಪ್ರಾಬಲ್ಯವನ್ನು ಮುರಿದು ರಾಜಪ್ರಭುತ್ವದ ಮುಂದುವರಿಕೆಗೆ ಬ್ರಿಟನ್ ಮತ್ತು ಅಮೆರಿಕಾ ಪ್ರಯತ್ನಿಸಿದಾಗಿ ಈ ನಾಗರಿಕ ಕ್ಷೋಭೆ ಪ್ರಾರಂಭವಾಯಿತು. ೧೯೪೭ರಲ್ಲಿ ಬ್ರಿಟನ್ ತನ್ನ ಸೈನ್ಯವನ್ನು ಹಿಂದೆಗೆದುಕೊಂಡಿತು. ಕಮ್ಯೂನಿಸ್ಟ್‌ರ ಏಳಿಗೆ ಯನ್ನು ಹತ್ತಿಕ್ಕುವುದೇ ಮುಖ್ಯವಾದ ಉದ್ದೇಶವಾಗಿದ್ದ ಕಾರಣ ಅಮೆರಿಕಾ ಗ್ರೀಸ್‌ನ್ನು ಪ್ರವೇಶಿಸಿ ನಾಗರಿಕ ಯುದ್ಧವನ್ನು ತಡೆಗಟ್ಟುವ ಪ್ರಯತ್ನ ಮಾಡಿದಾಗ, ಅಮೆರಿಕಾ ಹಾಗೂ ಸೋವಿಯತ್ ಒಕ್ಕೂಟದ ಮಧ್ಯೆ ಶೀತಲ ಯುದ್ಧವೇ ಪ್ರಾರಂಭವಾಯಿತು.

**ಟ್ರೂಮನ್ ಸಿದ್ಧಾಂತ**

೧೯೪೫-೪೭ರ ಅವಧಿಯನ್ನು ಶೀತಲ ಸಮರದ ಆರಂಭದ ಕಾಲವೆಂದು ಪರಿಗಣಿಸುತ್ತಾರೆ. ಇದಕ್ಕೆ ಮುನ್ನುಡಿ ಬರೆದವನು ವಿನ್‌ಸ್ಟನ್ ಚರ್ಚಿಲ್. ಅಲ್ಲದೆ ಅವನು ಪೂರ್ವ ಯುರೋಪಿನ ರಾಷ್ಟ್ರಗಳು ಹಾಗೂ ಪಶ್ಚಿಮ ಯುರೋಪಿನ ಮಧ್ಯೆ 'ಕಬ್ಬಿಣದ ಪರದೆ' ಸೃಷ್ಟಿಯಾಗಿರುವುದನ್ನು ಹೇಳುತ್ತಾನೆ. ಅಲ್ಲದೆ ಪೂರ್ವ ಯುರೋಪಿನ ರಾಷ್ಟ್ರಗಳಲ್ಲಿ ಕಮ್ಯೂನಿಸ್ಟ್ ಸರ್ಕಾರಗಳನ್ನು ಅಸ್ತಿತ್ವಕ್ಕೆ ತಂದು ಅವುಗಳ ಮೇಲೆ ಹತೋಟಿ ಸಾಧಿಸಿದ ಸೋವಿಯತ್ ಒಕ್ಕೂಟದ ವಿರುದ್ಧ ಹೋರಾಡಲು ಅವನು ಬ್ರಿಟನ್ ಹಾಗೂ ಅಮೆರಿಕಾ ಗಳ ನಡುವೆ ರಾಜಕೀಯ ಹಾಗೂ ಸೈನಿಕ ಒಕ್ಕೂಟದ ರಚನೆಗೆ ಕರೆಕೊಡುತ್ತಾನೆ. ಈ ವೇಳೆಗೆ ಗ್ರೀಸ್ ಸರ್ಕಾರಕ್ಕೆ ಕಮ್ಯುನಿಸ್ಟರ ವಿರುದ್ಧವಾಗಿ ಹೋರಾಡಲು ಬಲ ನೀಡಲು ಅದಕ್ಕೆ ೪೦೦ ಮಿಲಿಯನ್ ಡಾಲರ್ ಮೊತ್ತದ ಸೈನಿಕ ಹಾಗೂ ಆರ್ಥಿಕ ಸಹಾಯ ನೀಡಲು ಅಮೆರಿಕಾದ ಅಧ್ಯಕ್ಷ ಟ್ರೂಮನ್ ನಿರ್ಧರಿಸಿದನು. ಇದನ್ನು "ಟ್ರೂಮನ್ ಸಿದ್ಧಾಂತ" ಎಂದು ಕರೆಯುತ್ತಾರೆ. ಟ್ರೂಮನ್ ಸಿದ್ಧಾಂತವು, 'ಕಮ್ಯುನಿಸ್ಟ್ ಸಿದ್ಧಾಂತವು "ಮುಕ್ತಪ್ರಪಂಚ"ದ ವ್ಯವಸ್ಥೆಗೆ ದೊಡ್ಡ ಬೆದರಿಕೆ' ಎಂದು ಸಾರಿತು. ಅಲ್ಲದೆ ಕಮ್ಯೂನಿಸಂನ ಪ್ರಸಾರದ ತಡೆಯೇ ಇದರ ಮುಖ್ಯ ಗುರಿಯಾಯಿತು. ಈ ಸಿದ್ಧಾಂತ ಮುಂದೆ ಅಮೆರಿಕಾದ ವಿದೇಶಾಂಗ ನೀತಿಯ ಮೂಲತತ್ವವಾಗಿ, ಸುಮಾರು ನಲವತ್ತು

ವರ್ಷಗಳ ಕಾಲ ಚಾಲ್ತಿಯಲ್ಲಿರುತ್ತದೆ. ಶೀತಲ ಸಮರವು ಬಿಗಡಾಯಿಸಲು ಟ್ರೂಮನ್ ಸಿದ್ಧಾಂತವು 'ಅಪಾರ' ಕೊಡುಗೆಯನ್ನಿತ್ತಿತ್ತೆಂದರೆ ಅತಿಶಯೋಕ್ತಿಯಾಗಲಾರದು.

ಬರ್ಲಿನ್ ದಿಗ್ಬಂದನ ಹಾಗೂ ಜರ್ಮನಿಯ ವಿಭಜನೆ(೧೯೪೮-೪೯)ಗಳು ಶೀತಲ ಸಮರದ ಆರಂಭದ ಕಾಲಗಳಲ್ಲಿ ನಡೆದ ಕೆಲವು ಮುಖ್ಯ ಘಟನೆಗಳು. ಬರ್ಲಿನ್ ದಿಗ್ಬಂದನ ವಿಶ್ವವನ್ನು ಇನ್ನೊಂದು ಮಹಾಯುದ್ಧದ ಅಂಚಿಗೆ ಕೊಂಡೊಯ್ದಿತ್ತು. ಈ ಸಮಯದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ಸೈನಿಕ ಒಕ್ಕೂಟವೊಂದು ಅಮೆರಿಕಾದ ನಾಯಕತ್ವದಲ್ಲಿ ಸೃಷ್ಟಿಯಾಯಿತು. ೧೯೪೯ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನ ಹಾಗೂ ಯುರೋಪಿನ ಮುಖ್ಯ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸ್, ಬಿಲ್ಜಿಯಂ, ಲುಕ್ಸೆಂಬರ್ಗ್, ಹಾಲೆಂಡ್, ನಾರ್ವೆ, ಡೆನ್ಮಾರ್ಕ್, ಪೋರ್ಚುಗಲ್, ಇಟಲಿ, ಐಲ್ಯಾಂಡ್ ಮತ್ತು ಕೆನಡಾಗಳು ಸೇರಿ ನ್ಯಾಟೋ(ನಾರ್ತ್ ಅಟ್ಲಾಂಟಿಕ್ ಟ್ರೇಟಿ ಆರ್ಗನೈಶನ್) ಎಂಬ ಸೈನಿಕ ಒಕ್ಕೂಟವನ್ನು ಕಟ್ಟಿಕೊಂಡವು. ಈ ಒಕ್ಕೂಟದ ಮೂಲಕ ಪಾಶ್ಚಿಮಾತ್ಯ ರಾಷ್ಟ್ರಗಳು, ಯೂರೋಪಿನಲ್ಲಿ "ರಷ್ಯಾದ ವಿಸ್ತರಣೆಯನ್ನು ಹಾಗೂ ಕಮ್ಯೂನಿಸಂನ ಪ್ರಸಾರವನ್ನು ಪಡೆಯಲು ಬೃಹತ್ ಪ್ರಮಾಣದಲ್ಲಿ ಸಶಸ್ತ್ರೀಕರಣ ಹಾಗೂ ಸೈನಿಕೀಕರಣವನ್ನು ಪ್ರಾರಂಭಿಸಿದರು. ಮುಂದಿನ ಆರು ವರ್ಷಗಳಲ್ಲಿ ಅಮೆರಿಕಾವು ನ್ಯಾಟೋ ರಾಷ್ಟ್ರಗಳಿಗೆ ಬೃಹತ್ ಸೈನಿಕ ನೆರವನ್ನು ನೀಡಿತು. ೧೯೫೨ರಲ್ಲಿ ಗ್ರೀಸ್ ಮತ್ತು ಟರ್ಕಿ ರಾಷ್ಟ್ರಗಳು ನ್ಯಾಟೋದ ಸದಸ್ಯರಾದವು.

೧೯೫೫ರಲ್ಲಿ ಪಶ್ಚಿಮ ಜರ್ಮನಿಯ ನ್ಯಾಟೋವನ್ನು ಸೇರಿಕೊಂಡಾಗ ಸೋವಿಯತ್ ಒಕ್ಕೂಟ ಹಾಗೂ ಪೂರ್ವ ಯೂರೋಪಿನ ಕಮ್ಯೂನಿಸ್ಟ್ ರಾಷ್ಟ್ರಗಳು ಒಟ್ಟಾಗಿ ತಮ್ಮದೇ ಆದ ಸೈನಿಕ ಒಕ್ಕೂಟವನ್ನು ರಚಿಸಿಕೊಂಡವು. ಅದನ್ನು "ವಾರ್ಸಾ ಒಪ್ಪಂದ"ವೆಂದು ಕರೆಯುತ್ತಾರೆ. ಈ ಅವಧಿಯಲ್ಲಿ ಶೀತಲ ಸಮರವು ಯುರೋಪಿನಿಂದ ಪ್ರಪಂಚದ ಇತರೇ ಭಾಗಗಳಿಗೂ ಕೂಡ ಹರಡಲಾರಂಭಿಸಿತು. ಇದೇ ಅವಧಿಯಲ್ಲಿ ಶೀತಲ ಸಮರಕ್ಕೆ ಹೊಸ ತಿರುವೊಂದನ್ನು ನೀಡಿದ ಇನ್ನೊಂದು ಅಂಶವೆಂದರೆ ಎರಡು ಶಕ್ತಿ ಬಣಗಳ ನಡುವೆ ಶಸ್ತ್ರಾಸ್ತ್ರ ಪೈಪೋಟಿ. ೧೯೪೫ರಲ್ಲಿ ಅಮೆರಿಕಾವು ಅಣುಬಾಂಬನ್ನು ಸ್ಫೋಟಿಸಿ ಪರಮಾಣು ರಾಷ್ಟ್ರವಾಯಿತು. ಇದಾದ ನಾಲ್ಕು ವರ್ಷಗಳ ನಂತರ ಸೋವಿಯತ್ ಒಕ್ಕೂಟವು ನ್ಯೂಕ್ಲಿಯರ್ ಬಾಂಬನ್ನು ತಯಾರಿಸಿ ಪರೀಕ್ಷೆ ನಡೆಸಿದಾಗ ಅಮೆರಿಕಾದ ಏಕಸ್ವಾಮ್ಯಕ್ಕೆ ದಕ್ಕೆಯಾಯಿತ್ತಲ್ಲದೆ, ತೀವ್ರ ರೀತಿಯ ಶಸ್ತ್ರಾಸ್ತ್ರ ಪೈಪೋಟಿಗೆ ಅದು ಎಡೆಮಾಡಿಕೊಟ್ಟಿತು.

ಶೀತಲ ಸಮರವು ಬಿಗಡಾಯಿಸುತ್ತಿದ್ದ ಇದೇ ಸಂದರ್ಭದಲ್ಲಿ ಎರಡು ಶಕ್ತಿ ಬಣಗಳ ನಡುವೆ ಪರಸ್ಪರ ಗೂಢಚಾರಿಕೆ ಹಾಗೂ ಮಿಲಿಟರಿ ರಹಸ್ಯಗಳು ಕದಿಯಲ್ಪಡುತ್ತಿರುವ ಆರೋಪಗಳ ವಿನಿಯಮವಾಗತೊಡಗಿತು. ಕಮ್ಯೂನಿಸ್ಟ್ ಗೂಢಚಾರರು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸೇರಿಕೊಂಡು ಮಿಲಿಟರಿ ರಹಸ್ಯಗಳನ್ನು ಕದಿಯುತ್ತಿದ್ದಾರೆಂದು ಪಾಶ್ಚಿಮಾತ್ಯ ರಾಷ್ಟ್ರಗಳು ಸೋವಿಯತ್ ಒಕ್ಕೂಟದ ಮೇಲೂ ಹಾಗೂ ಇದೇ ಆರೋಪವನ್ನು ಕಮ್ಯೂನಿಸ್ಟ್ ರಾಷ್ಟ್ರಗಳು ಬಂಡವಾಳಶಾಹಿ ರಾಷ್ಟ್ರಗಳ ಮೇಲೂ ಮಾಡತೊಡಗಿದವು. ಈ ರೀತಿ ಗೂಢಚಾರಿಕೆಯ ಹೆದರಿಕೆಯೂ ಎರಡು ಶಕ್ತಿ ಬಣಗಳ ನಡುವೆ ತೀವ್ರ ಸಂಶಯ ಹಾಗೂ ಬಿಕ್ಕಟ್ಟನ್ನುಂಟುಮಾಡಿತು.

**ಶೀತಲ ಸಮರದ ತೀವ್ರ ಬಿಗಡಾಯಿಸುವಿಕೆ: 'ಬ್ರಿಂಕ್‌ಮ್ಯಾನ್‌ಶಿಪ್' ಹಾಗೂ 'ಡಿಟರೆನ್ಸ್' ಸಿದ್ಧಾಂತಗಳು**

ಐವತ್ತರ ದಶಕದಲ್ಲಿ ಅಮೆರಿಕಾದ ವಿದೇಶಾಂಗ ನೀತಿಯ ಮೇಲೆ ಅಪಾರ ಪ್ರಭಾವ ಬೀರಿದವರು ಅದರ ವಿದೇಶಾಂಗ ಕಾರ್ಯದರ್ಶಿ ಜಾನ್ ಪೋಸ್ಟರ್ ಡಲ್ಲೇಸ್ (೧೯೫೩-೧೯೫೯). ಕಮ್ಯೂನಿಸಂನ ಹಾಡುವಿಕೆಯನ್ನು ತಡೆಯಲು ಅಮೆರಿಕಾವು ಅನುಸರಿಸುತ್ತಿರುವ ನೀತಿಯು ದುರ್ಬಲವಾದುದು, ಅದಕ್ಕಿಂತ ಉಗ್ರವಾದ ನೀತಿಯನ್ನು ರಷ್ಯಾದ ವಿರುದ್ಧ ಅನುಸರಿಸಬೇಕು. ಕಮ್ಯೂನಿಸ್ಟ್ ಸರ್ವಾಧಿಕಾರತ್ವದಿಂದ ರಾಷ್ಟ್ರಗಳನ್ನು ವಿಮೋಚನೆಗೊಳಿಸುವ ಉಗ್ರನೀತಿ ಅಮೆರಿಕಾದ್ದಾಗಬೇಕು ಎಂದು ಅವನು ಕರೆಕೊಡುತ್ತಾನೆ; ಕೆಲವು ಬಹಳ ಅಪಾಯಕಾರಿಯಾದ ಸಿದ್ಧಾಂತಗಳನ್ನು ಅವನು ಮುಂದಿಡುತ್ತಾನೆ. ನ್ಯೂಕ್ಲಿಯರ್ ಶಕ್ತಿಯನ್ನು ಉಪಯೋಗಿಸಿ "ಬೃಹತ್ ಪ್ರಮಾಣದಲ್ಲಿ ಇದಿರೇಟನ್ನು" ಕಮ್ಯೂನಿಸ್ಟರಿಗೆ ಉಣಿಸುವ ಸಿದ್ಧಾಂತ ಬೋಧಿಸುತ್ತಾನೆ. ಇನ್ನೊಂದು ಸಿದ್ಧಾಂತವೆಂದರೆ "ಬ್ರಿಂಕ್‌ಮ್ಯಾನ್ ಶಿಪ್". ಇದರರ್ಥ ಸೋವಿಯತ್ ಒಕ್ಕೂಟವನ್ನು ಯುದ್ಧದ ಅಂಚಿಗೆ ತಳ್ಳಿ, ಯುದ್ಧ ವನ್ನು ಮಾಡದೆ ಸೋವಿಯತ್ ಒಕ್ಕೂಟದಿಂದ ರಿಯಾಯಿತಿಗಳನ್ನು ಸೆಳೆದುಕೊಳ್ಳುವ ತಂತ್ರ. ಇದೇ ಸಂದರ್ಭದಲ್ಲಿ "ಡಿಟರೆನ್ಸ್" ಸಿದ್ಧಾಂತವು ಮಹತ್ವವನ್ನು ಪಡೆದು ಪರಮಾಣು

ಬಾಂಬುಗಳ ಉತ್ಪಾದನೆಗೆ ವಿವಿಧ ರಾಷ್ಟ್ರಗಳು ಪ್ರಯತ್ನಿಸುವಂತೆ ಮಾಡಿತು. ತನ್ನಲ್ಲಿ ಪರಮಾಣು ಶಕ್ತಿ ಇದ್ದಲ್ಲಿ ಇನ್ನೊಂದು ಪರಮಾಣು ರಾಷ್ಟ್ರ ತನ್ನ ಮೇಲೆ ದಾಳಿ ಮಾಡಲು ಸಾಧ್ಯವಿಲ್ಲ; ಏಕೆಂದರೆ ದಾಳಿ ಮಾಡಿದ ರಾಷ್ಟ್ರಕೂಡ ದಾಳಿಯನ್ನನುಭವಿಸಿದ ರಾಷ್ಟ್ರದ ಪರಮಾಣೂ ದಾಳಿಯಿಂದ ನಾಶವಾಗುವ ಸಾಧ್ಯತೆ ಇದೆ ಎಂಬ ಅಂಶ "ಡಿಟರೆಂಟ್"(ತಡೆ) ಆಗಿ ವರ್ತಿಸುವ ಕಾರಣದಿಂದಾಗಿ 'ಡಿಟರೆಂಟ್' ಸಿದ್ಧಾಂತವು ಹಲವು ರಾಷ್ಟ್ರಗಳಲ್ಲಿ ಪರಮಾಣು ಶಸ್ತ್ರ ಪೈಪೋಟಿಗೆ ಎಡೆಮಾಡಿಕೊಟ್ಟಿತು. ೧೯೫೦ರ ನವೆಂಬರ್‌ನಲ್ಲಿ ಅಮೆರಿಕಾವು ಮೊದಲ ಹೈಡ್ರೋಜನ್ ಬಾಂಬನ್ನು ಪರೀಕ್ಷಿಸಿತು. ೧೯೫೩ರ ಆಗಸ್ಟ್‌ನಲ್ಲಿ ರಷ್ಯಾ ಕೂಡ ಇದರ ಪರೀಕ್ಷೆ ನಡೆಸಿತು. ೧೯೫೭ರಲ್ಲಿ ಬ್ರಿಟನ್, ಕ್ರಮೇಣ ಫ್ರಾನ್ಸ್ ಹಾಗೂ ಚೀನಾ ದೇಶಗಳು ಪರಮಾಣು ಪರೀಕ್ಷೆಗಳನ್ನು ನಡೆಸಿ 'ಡಿಟರೆಂಟ'ಗಳನ್ನು ಪಡೆದುಕೊಂಡವು.

ಇಲ್ಲಿ ನಾವು ಯೂರೋಪಿನಲ್ಲಿ ಮಾತ್ರ ಹೇಗೆ ಶೀತಲ ಸಮರ ಪ್ರಾರಂಭವಾಗಿ ವಿವಿಧ ರೀತಿಯಲ್ಲಿ ಪರಿಣಾಮಗಳನ್ನು ಬೀರಿತು ಎಂಬುದರ ಬಗ್ಗೆ ಅಧ್ಯಯನ ಮಾಡುತ್ತಿರುವುದರಿಂದ ಇತರೇ ಖಂಡಗಳಲ್ಲಿ ಶೀತಲ ಸಮರ ಹರಡಿದ ಬಗ್ಗೆ ಬೆಳಕು ಚೆಲ್ಲಿಲ್ಲ.

**ಶೀತಲ ಸಮರದ ಮುಕ್ತಾಯ**

ಈಗ ವಿಶ್ವವು ಶೀತಲ ಸಮರೋತ್ತರ ಕಾಲದಲ್ಲಿದೆ ಎಂದು ಈಗಾಗಲೇ ನೋಡಿದ್ದೇವೆ. ೧೯೫೦ರ ದಶಕದಿಂದಲೂ ಎರಡು ಶಕ್ತಿ ಬಣಗಳ ನಡುವೆ ಬಿಕ್ಕಟ್ಟನ್ನು ಶಮನಗೊಳಿಸಲು ಹಲವಾರು ಪ್ರಯತ್ನಗಳು ನಡೆಯುತ್ತಲೇ ಇತ್ತು. ಹಲವುಬಾರಿ ಈ ಎರಡೂ ಬಣಗಳು "ಒಪ್ಪಂದ"ದ ಯುಗವನ್ನು ಪ್ರವೇಶಿಸಿವೆ ಎಂದು ಕಂಡುಬಂದಿತ್ತು. ಅಲಿಪ್ತ ಚಳವಳಿಯು ಇದರಲ್ಲಿ ಮಹತ್ತರ ಪಾತ್ರವಹಿಸಿತ್ತು. ಆದರೂ ಆಗಿಂದಾಗ್ಗೆ ಹೊಸ ಬಿಕ್ಕಟ್ಟುಗಳು ಹಾಗೂ ಮನಸ್ತಾಪಗಳು ಹುಟ್ಟಿಕೊಳ್ಳಲು ಪ್ರಾರಂಭಿಸಿದವು.

ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಜಗಳದ ದಾರಿಯಾಗಲಿ ಅಥವಾ ಸಂಪೂರ್ಣ ಯುದ್ಧದ ನೀತಿಯಾಗಲಿ ಯಾವುದನ್ನು ಸಾಧಿಸಲಾರದು ಎಂಬ ಜ್ಞಾನೋದಯ ಶೀತಲ ಸಮರದ ಮುಕ್ತಾಯಕ್ಕೆ ಕಾರಣವಾಯಿತು. ನ್ಯೂಕ್ಲಿಯರ್ ಯುದ್ಧದ ಪರಿಣಾಮಗಳ ಬಗ್ಗೆ ವಿಜ್ಞಾನಿಗಳ ವರದಿಗಳು ಮತ್ತು ಶಸ್ತ್ರಾಸ್ತ್ರ ಪೈಪೋಟಿಗಳ ಬಗ್ಗೆ ಅಂತರರಾಷ್ಟ್ರೀಯ ಸಮುದಾಯದ ವಿರೋಧ ಇತ್ಯಾದಿಗಳು "ಡಿಟರೆಂಟ್"(ಒಪ್ಪಂದ) ವಾತಾವರಣವನ್ನು ಸೃಷ್ಟಿಸಿ ಬಿಗಡನ್ನು ಕಡಿಮೆ ಮಾಡಿತು.

೧೯೬೦ರ ದಶಕದ ಆರಂಭದಿಂದಲೇ ಕಠಿಣ ಸೈನಿಕ ಒಕ್ಕೂಟಗಳು ಮುರಿದುಬೀಳುವ ಪ್ರವೃತ್ತಿಗಳನ್ನು ತೋರಿಸಲಾರಂಭಿಸಿತು. ೧೯೫೬ರಿಂದ ಸೋವಿಯತ್ ನಾಯಕರು ಶಾಂತಿಯುತ ಸಹಬಾಳ್ವೆಯ ಮೇಲೆ ಹೆಚ್ಚು ಒತ್ತು ಕೊಡಲಾರಂಭಿಸಿದರು. ೧೯೫೦ರ ದಶಕದ ಅಂತಿಮ ಭಾಗದಲ್ಲಿ ಕಮ್ಯೂನಿಸ್ಟ್ ಚಳವಳಿಯಲ್ಲಿ ಬಿರುಕು ಉಂಟಾಯಿತು. ಕಮ್ಯೂನಿಸಂನ ಪ್ರಸಾರದ ಸಿದ್ಧಾಂತವು ತನ್ನ ಮಹತ್ವವನ್ನು ಕಳೆದುಕೊಳ್ಳತೊಡಗಿತು. ಚೀನಾ ಮತ್ತು ಸೋವಿಯತ್ ಒಕ್ಕೂಟಗಳ ನಡುವಣ ವೈರತ್ವ ಕಮ್ಯೂನಿಸಂನ ಬಗ್ಗೆ ಇದ್ದ ಹೆದರಿಕೆಯನ್ನು ಕಡಿಮೆಗೊಳಿಸಿತು. ಅಲ್ಬೇನಿಯಾವು ೧೯೬೧ರಲ್ಲಿ ವಾರ್ಸಾ ಒಪ್ಪಂದದಿಂದ ಹಿಂದೆ ಸರಿಯಿತು. ರುಮೇನಿಯಾವು, ಸೋವಿಯತ್‌ನಿಂದ ಸ್ವತಂತ್ರವಾದ ಪಾತ್ರವಹಿಸಲು ಪ್ರಾರಂಭಿಸಿತು. ಅಮೆರಿಕಾ ನಾಯಕತ್ವದ ನ್ಯಾಟೋ ಮಿಲಿಟರಿ ಸಂಘಟನೆಯಲ್ಲಿ ಕೂಡ ಹಲವಾರು ಬದಲಾವಣೆಗಳಾಯಿತು. ಫ್ರಾನ್ಸ್ ದೇಶವು ನ್ಯಾಟೋದಿಂದ ೧೯೬೬ರಲ್ಲಿ ತನ್ನ ಸೈನಿಕ ಪಡೆಗಳನ್ನು ಹಿಂದೆಗೆದುಕೊಂಡಿತು. ಮತ್ತು ನ್ಯಾಟೋ ಸೈನ್ಯಪಡೆಗಳು ಹಾಗೂ ಸೈನಿಕ ನೆಲೆಗಳನ್ನು ಫ್ರಾನ್ಸ್‌ನಿಂದ ತೆಗೆದುಹಾಕಲಾಯಿತು.

ಶೀತಲ ಸಮರದ ಅಂತ್ಯದ ಪ್ರಕ್ರಿಯೆ ಸುಲಭವಾದುದಾಗಿರಲಿಲ್ಲ. ಈಗಾಗಲೇ ನಾವು ಶೀತಲ ಸಮರವು "ಬಿಸಿಯುದ್ಧ"ಗಳಾಗಿ ಪರಿವರ್ತನೆಯಾಗುವ ಸಾಧ್ಯತೆಗಳಿದ್ದ ಹಲವಾರು ನಿದರ್ಶನಗಳನ್ನು ನೋಡಿದ್ದೇವೆ. ೧೯೫೬ರಲ್ಲಿ ಹಂಗೇರಿಯಲ್ಲಿ, ೧೯೬೮ರಲ್ಲಿ ಜೆಕೊಸ್ಲೋವಾಕಿಯಾದಲ್ಲಿ ದಂಗೆಗಳಾದಾಗ ಸೋವಿಯತ್ ಒಕ್ಕೂಟವು ಶಸ್ತ್ರಾಸ್ತ್ರ ಪ್ರವೇಶವನ್ನು ಮಾಡಿ "ಕಮ್ಯುನಿಸ್ಟ್" ಸರ್ಕಾರಗಳನ್ನು ರಕ್ಷಿಸಿತು. ಈಸ್ಟ್ ಜರ್ಮನಿಯ ಪೂರ್ವ ಹಾಗೂ ಪಶ್ಚಿಮ ಬರ್ಲಿನ್‌ಗಳ ನಡುವೆ ಗೋಡೆ ನಿರ್ಮಿಸಿ ಜನರ ಚಲನವಲನದ ಮೇಲೆ ನಿರ್ಬಂಧ ಹೇರಿದಾಗ, ೧೯೭೯ರಲ್ಲಿ ಸೋವಿಯತ್ ಒಕ್ಕೂಟ ಅಫಘಾನಿಸ್ತಾನಕ್ಕೆ ಸೇನೆಯನ್ನು ಕಳುಹಿಸಿದಾಗ, ಲ್ಯಾಟಿನ್ ಅಮೆರಿಕಾ, ಆಫ್ರಿಕಾ

ಖಂಡಗಳ ರಾಷ್ಟ್ರಗಳಲ್ಲಿ ಅಮೆರಿಕಾವು ಸೋವಿಯತ್ ಪರ ಸರ್ಕಾರಗಳ ವಿರುದ್ಧ ಮಿಲಿಟರಿ ಸಂಚು ನಡೆಸಿದಾಗ ಶೀತಲ ಸಮರ ಮರುಕಳಿಸುತ್ತಿತ್ತು.

**ನಿಶಸ್ತ್ರೀಕರಣದತ್ತ**

ಮಾನವ ಜನಾಂಗಕ್ಕೆ ವಿನಾಶಕಾರಿಯಾದ ಭಾರಿ ಶಸ್ತ್ರಾಸ್ತ್ರಗಳ ನಾಶವೇ ಶಾಂತಿಗೆ ದಾರಿ ಮಾಡಿಕೊಡುವ ಏಕೈಕ ಅಂಶ. ಜನ ಸಾಮಾನ್ಯರ ಕಲ್ಪನೆಗೆ ನಿಲುಕದಷ್ಟು ಭೀಕರವಾದ ಹಾನಿಯನ್ನುಂಟು ಮಾಡುವ ಶಸ್ತ್ರಾಸ್ತ್ರಗಳ ಅಸ್ತಿತ್ವವೇ ಶಕ್ತಿಬಣಗಳ ನಡುವಿನ ತೀವ್ರ ಬಿಕ್ಕಟ್ಟಿಗೆ ಕಾರಣವಾಗಿತ್ತು. ೧೯೬೦ರ ದಶಕದಲ್ಲಿ ಎರಡೂ ಶಕ್ತಿ ಬಣಗಳ ನಡುವೆ ತಿಕ್ಕಾಟ ಕಡಿಮೆಯಾದಾಗ ನಿಶಸ್ತ್ರೀಕರಣದ ಮಾತುಕತೆಗಳು ಪ್ರಾರಂಭವಾದವು ಮತ್ತು ಈ ದಿಸೆಯಲ್ಲಿ ಕೆಲವು ಸ್ವಾಗತಾರ್ಹ ಹೆಜ್ಜೆಗಳ್ನನಿಡಲಾಯಿತು. ೧೯೬೩ರಲ್ಲಿ ವಾತಾವರಣ ದಲ್ಲಾಗಲಿ ಬಾಹ್ಯಾಕಾಶದಲ್ಲಾಗಲಿ ಅಥವಾ ಸಮುದ್ರದೊಳಗಡೆಯಾಗಲಿ ಪರಮಾಣು ಪರೀಕ್ಷೆ ಮಾಡುವುದನ್ನು ನಿಷೇಧಿಸುವ ಒಪ್ಪಂದಕ್ಕೆ, ಅಮೆರಿಕ, ಸೋವಿಯತ್ ಒಕ್ಕೂಟ ಹಾಗೂ ಬ್ರಿಟನ್‌ಗಳು ಸಹಿ ಹಾಕಿದವು. ಅಲ್ಲದೆ ೧೯೭೨ರಲ್ಲಿ ಅಮೆರಿಕಾ ಮತ್ತು ಸೋವಿಯತ್ ಒಕ್ಕೂಟಗಳು ಸಾಲ್ಟ್(ಸ್ಟ್ರಟೆಜಿಕ್ ಆರ್ಮ್ಸ್ ಲಿಮಿಟೇಷನ್ ಟಾಕ್ಸ್) ಒಪ್ಪಂದಕ್ಕೆ ಸಹಿ ಹಾಕಿ ಕೆಲವು ಮಾದರಿಗಳ ಕ್ಷಿಪಣಿಗಳ ತಯಾರಿಕೆಯನ್ನು ನಿಲ್ಲಿಸಲು ನಿರ್ಧರಿಸಿದವು.

ನಿರಂತರವಾಗಿ ಎರಡೂ ಶಕ್ತಿಬಣಗಳ ನಾಯಕ ರಾಷ್ಟ್ರಗಳೊಂದಿಗೆ ನಡೆಯುತ್ತಿದ್ದ ನಿಶಸ್ತ್ರೀಕರಣ ಮಾತುಕತೆಗಳಿಗೆ ಎಂಬತ್ತರ ದಶಕದಲ್ಲಿ ಸ್ವಲ್ಪ ತಡೆಯುಂಟಾಯಿತು. ಅಮೆರಿಕಾ ಸಂಯುಕ್ತ ಸಂಸ್ಥಾನವು ಹೊಸ ರೀತಿಯ ಶಸ್ತ್ರ ವ್ಯವಸ್ಥೆಯನ್ನು ರೂಪಿಸಲು ಪ್ರಾರಂಭಿಸಿದ್ದೆ ಇದಕ್ಕೆ ಕಾರಣವಾಯಿತು. ಈ ಹೊಸ ರೀತಿಯ ಶಸ್ತ್ರ ವ್ಯವಸ್ಥೆಗೆ ಎಸ್.ಡಿ.ಐ.(ಸ್ಟ್ರಟೇಜಿಕ್ ಡಿಫೆನ್ಸ್ ಇನಿಶ್ಯೇಟಿವ್) ಅಥವಾ ಜನಪ್ರಿಯವಾಗಿ 'ತಾರಯುದ್ಧಗಳ' ಕಾರ್ಯಕ್ರಮ ಎಂದು ಕರೆಯಲಾಯಿತು. ಶಸ್ತ್ರಾಸ್ತ್ರ ಪೈಪೋಟಿಯನ್ನು ಬಾಹ್ಯಾಕಾಶಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನವಿದಾಯಿತು. ನ್ಯೂಕ್ಲಿಯರ್ ಬಾಂಬುಗಳ ಪ್ರಸರಣಕ್ಕೆ ತಡೆ ಹಾಕುವ ಒಪ್ಪಂದವೊಂದಕ್ಕೆ ೧೯೬೮ರಲ್ಲಿ ಕೆಲವು ರಾಷ್ಟ್ರಗಳು ಸಹಿ ಹಾಕಿದವು. ಇದನ್ನು ಎನ್.ಪಿ.ಟಿ.(ನ್ಯೂಕ್ಲಿಯರ್ ನಾನ್ ಪೊಲೀಪರೇಶನ್ ಟ್ರೀಟಿ) ಎಂದು ಕರೆಯುತ್ತಾರೆ. ಈ ಒಪ್ಪಂದವು ಪಕ್ಷಪಾತದಿಂದ ಕೂಡಿದ್ದರಿಂದ ಹಲವು ರಾಷ್ಟ್ರಗಳು ಭಾರತವು ಸೇರಿ, ಇದಕ್ಕೆ ಸಹಿ ಹಾಕಲು ನಿರಾಕರಿಸಿದವು. ಎನ್.ಪಿ.ಟಿ.ಯ ಮುಖ್ಯ ಉದ್ದೇಶವಿಷ್ಟೆ; ಯಾವ ರಾಷ್ಟ್ರಗಳು ಪರಮಾಣು ಶಕ್ತಿಯನ್ನು ಪಡೆದಿಲ್ಲವೊ ಅಂತಹ ರಾಷ್ಟ್ರಗಳು ಅವುಗಳನ್ನು ಎಂದಿಗೂ ಪಡೆಯದಂತೆ ನಿರ್ಬಂಧಿಸುವುದು. ಈ ಕಾರಣದಿಂದಾಗಿ ಯಾವ ರಾಷ್ಟ್ರಗಳು ಈಗಾಗಲೇ ಪರಮಾಣು ಬಾಂಬ್‌ಗಳನ್ನು ಹೊಂದಿದೆಯೊ ಅವುಗಳು ತಮ್ಮಲ್ಲಿರುವ ಬಾಂಬುಗಳನ್ನು ನಾಶಪಡಿಸುವ ಅವಶ್ಯಕತೆಯಿರು ವುದಿಲ್ಲ. ಈ ರೀತಿ ಪಕ್ಷಪಾತದಿಂದ ಕೂಡಿದ ಎನ್.ಪಿ.ಟಿ ಒಪ್ಪಂದವು ಇನ್ನೂ ಕೂಡ, ಶೀತಲ ಸಮರೋತ್ತರ ಕಾಲದಲ್ಲೂ ಅತ್ಯಂತ ವಿವಾದಾತ್ಮಕ ಹಾಗೂ ಚರ್ಚೆಯ ವಿಷಯವಾಗಿದೆ.

**ಶೀತಲ ಸಮರೋತ್ತರ ಯುರೋಪ್**

ಶೀತಲ ಸಮರವು ಎಪ್ಪತ್ತರ ದಶಕದ ಕೊನೆಯ ಭಾಗದಲ್ಲಿ ಅಂತ್ಯಗೊಂಡಿತ್ತೆನ್ನಬಹುದು. ಶೀತಲ ಸಮರದ ಅಂತ್ಯ ಎರಡು ಮಿಲಿಟರಿ ಬಣಗಳ ನಡುವಿನ ಬಿಕ್ಕಟ್ಟು ಹಾಗೂ ಕಲಹದ ಅಂತ್ಯ ಎನ್ನಬಹುದು. ಆದರೆ ಇದರಿಂದಾಗಿ ಎರಡು ಪಂಗಡಗಳ ನಡುವಿನ ಸಂಶಯಗಳು, ಸಮಸ್ಯೆಗಳು ಸಂಪೂರ್ಣವಾಗಿ ಮಾಯವಾಯಿತು ಎನ್ನುವುದು ತಪ್ಪು. ಆದರೆ ಇಡೀ ಪ್ರಪಂಚವನ್ನು ಇನ್ನೊಂದು ಮಹಾಯುದ್ಧದ ಅಂಚಿಗೆ ನೂಕುವ ಸಾಧ್ಯತೆ ಖಂಡಿತವಾಗಿ ಕಡಿಮೆಯಾಯಿತು.

ಶೀತಲ ಸಮರದ ನಂತರ, ಯೂರೋಪಿನಲ್ಲಿ ನಾನಾ ರೀತಿಯ ಬೆಳವಣಿಗೆಗಳುಂಟಾದವು. ಯುರೋಪನ್ನು ಒಂದು ಭೌಗೋಳಿಕ ಘಟಕವಾಗಿ ಈ ಸಂದರ್ಭದಲ್ಲಿ ಅಧ್ಯಯನ ಮಾಡುವುದು ಕಷ್ಟ. ಪೂರ್ವ ಯುರೋಪ್ ಹಾಗೂ ಪಶ್ಚಿಮ ಯುರೋಪ್‌ನ ರಾಷ್ಟ್ರಗಳ ಮಧ್ಯೆ ಸೈದ್ಧಾಂತಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಭಿನ್ನತೆಯಿದ್ದು, ಬೇರೆ ಬೇರೆ ರೀತಿಯ ಬೆಳವಣಿಗೆಗಳು ನಡೆದಿರುವ ಕಾರಣ ನಾವು ಕೆಲವು ರಾಷ್ಟ್ರಗಳನ್ನು ವೈಯಕ್ತಿಕವಾಗಿ ಅಧ್ಯಯನ ಮಾಡಬೇಕಾಗಿದೆ.

## ಯುರೋಪಿಯನ್ ಕಮ್ಯುನಿಸಂನ ಪತನ

ಪೂರ್ವಯುರೋಪಿನ ರಾಷ್ಟ್ರಗಳ ಎರಡನೆಯ ಮಹಾಯುದ್ಧದ ಕಾಲದಲ್ಲಿ ಜರ್ಮನಿ ಹಾಗೂ ಇಟಲಿಗಳ ದಾಳಿಯಿಂದ ನರಳಿದಾಗ, ಸೋವಿಯತ್ ಒಕ್ಕೂಟವು ಅವುಗಳನ್ನು ವಿಮೋಚನೆಗೊಳಿಸಿತು. ಈ ರಾಷ್ಟ್ರಗಳು ರಷ್ಯಾ ದೇಶದ "ಉಪಗ್ರಹ"ಗಳಾಗಿ ವಾರ್ಸಾ ಒಪ್ಪಂದಕ್ಕೆ ಸೇರಿಕೊಂಡವು. ಕಮ್ಯುನಿಸ್ಟ್ ಸರ್ಕಾರಗಳನ್ನು ಹೊಂದಿದ್ದ ಕಾರಣ ಈ ರಾಷ್ಟ್ರಗಳಿಗೆ "ಯುರೋಪಿಯನ್ ರಿಕವರಿ ಪ್ರೋಗ್ರಾಂ" ನಡಿಯಲ್ಲಿ ಹಣಕಾಸಿನ ನೆರವು ಸಿಗಲಿಲ್ಲ. ಇದರಿಂದಾಗಿ ಅವು ಸೋವಿಯತ್ ಒಕ್ಕೂಟದ ಮೇಲೆ ಹೆಚ್ಚು ಅವಲಂಬಿತ ವಾದವು. ಆದರೆ ಸೋವಿಯತ್ ಅರ್ಥ ವ್ಯವಸ್ಥೆಯು ಅಮೆರಿಕಾ ಸಂಯುಕ್ತ ಸಂಸ್ಥಾನದ ಆರ್ಥಿಕ ವ್ಯವಸ್ಥೆಯಷ್ಟು ಸಮೃದ್ಧಿಯಾಗದೆ ಇದ್ದ ಕಾರಣ, ಸೋವಿಯತ್ ಒಕ್ಕೂಟಕ್ಕೆ ತನ್ನ "ಉಪಗ್ರಹ" ರಾಷ್ಟ್ರಗಳನ್ನು ಆರ್ಥಿಕವಾಗಿ ಪ್ರೋ ಶಕ್ತಿಯಿರಲಿಲ್ಲ. ಪೂರ್ವ ಯುರೋಪ್ ಇದರ ಪರಿಣಾಮವಾಗಿ ಕೃಷಿ ಪ್ರಧಾನ ಅರ್ಥ ವ್ಯವಸ್ಥೆಯಾಗಿಯೇ ಮುಂದುವರಿಯಿತು. ಆದರೂ ಕೂಡ ಖಾಸಗಿ ಕ್ಷೇತ್ರಗಳಲ್ಲಿ ಆರ್ಥಿಕ ಶಕ್ತಿಯ ಕೇಂದ್ರೀಕರಣ ದಿಂದ ಉಂಟಾಗುವ ದುಷ್ಪರಿಣಾಮಗಳು ಮಾಯವಾಗಿ, ಆಳುವ ವರ್ಗಗಳ ಹಾಗೂ ದೊಡ್ಡ ಜಮೀನುದಾರರ ಹಿಡಿತ ಸಂಪೂರ್ಣವಾಗಿ ಈ ರಾಷ್ಟ್ರಗಳಲ್ಲಿ ಅಳಿದುಹೋದವು.

ಕಮ್ಯುನಿಸಂನ ಅಂತ್ಯ ಆರಂಭವಾಗುವ ಮೊದಲ ಸಂಕೇತ ದೊರೆತದ್ದು ೧೯೮೦ರಲ್ಲಿ, ಪೋಲೆಂಡಿನಲ್ಲಿ. ಅಲ್ಲಿನ ಕಾರ್ಮಿಕರು 'ಸಾಲಿಡಾರಿಟಿ' ಎಂಬ ಕಮ್ಯುನೀಷ್ಟೆತರ ಕಾರ್ಮಿಕ ಸಂಘವನ್ನು ಲೆಸ್ ವಲೆಂಸಾ ಎಂಬ ಮುಖಂಡನ ನಾಯಕತ್ವದಲ್ಲಿ ಸ್ಥಾಪಿಸಿದರು. ಹೆಚ್ಚಿನ ವೇತನ, ಚಳವಳಿಯ ಹಕ್ಕು, ವಿಸ್ತೃತ ರಾಜಕೀಯ ಹಕ್ಕುಗಳು ಇತ್ಯಾದಿಗಳು ಕಾರ್ಮಿಕರ ಮುಖ್ಯ ಬೇಡಿಕೆಗಳಾಗಿದ್ದವು. "ಸಾಲಿಡಾರಿಟಿ"ಯ ಚಳವಳಿಯನ್ನು ಹತ್ತಿಕ್ಕುವುದಾಗಿ ರಷ್ಯಾದ ನಾಯಕ ಬ್ರೆಝ್ನೇವ್ ಬೆದರಿಕೆ ಹಾಕಿದರೂ, ಅವರು ಸೈನ್ಯವನ್ನು ಕಳುಹಿಸಿಲಿಲ್ಲ. "ಸಾಲಿಡಾರಿಟಿ"ಯು ಉಳಿದು ಬೆಳೆಯಿತು. ಆದರೆ ಬ್ರೇಜ್ನಿವ್ ೧೯೭೯ರಲ್ಲಿ ಕುಸಿಯುತ್ತಿದ್ದ ಕಮ್ಯೂನಿಸ್ಟ್ ಸರ್ಕಾರವನ್ನು ರಕ್ಷಿಸಲು ಅಫಘಾನಿಸ್ತಾನಕ್ಕೆ ಸೋವಿಯತ್ ಸೈನ್ಯವನ್ನು ಕಳುಹಿಸಿದ್ದರು.

೧೯೮೨ರಲ್ಲಿ ಬ್ರೇಜ್ನಿವ್ ತೀರಿಕೊಂಡರು. ಅವರ ನಂತರ ವಯೋವೃದ್ಧ ನಾಯಕರ ನೇಕರು ರಷ್ಯಾದ ಗಾದಿಗೆ ಬಂದರು. ಅವರು ಬಹಳಷ್ಟು ಕಾಲ ಅಧಿಕಾರದಲ್ಲಿ ಉಳಿಯ ಲಿಲ್ಲ. ಈ ವೇಳೆಗೆ ಅಫಘಾನಿಸ್ತಾನದಲ್ಲಿ ರಷ್ಯಾದ ಮಧ್ಯಪ್ರದೇಶಕ್ಕೆ ತೀವ್ರ ಪ್ರತಿರೋಧ ಕಂಡುಬಂದು ಅದೊಂದು ಗೆಲ್ಲಲಾರದ ಯುದ್ಧವಾಗಿ ಪರಿವರ್ತನೆಗೊಂಡಿತು.

ರಷ್ಯಾದಲ್ಲಿ ೧೯೮೫ರಲ್ಲಿ ಬಹಳಷ್ಟು ಯುವ ಹಾಗೂ ಪ್ರಗತಿಶೀಲ ಚಿಂತನೆಯ, ಸುಧಾರಣವಾದಿ ನಾಯಕ ಅಧಿಕಾರಕ್ಕೆ ಬಂದನು. ಮಿಖೈಲ್ ಗೋರ್ಬಚೇವ್ ಆ ನಾಯಕ ನಾಗಿದ್ದು ಉದಾರ ನೀತಿಯ ಸರ್ಕಾರವನ್ನು ಸ್ಥಾಪಿಸಿದನು. "ಗ್ಲಾಸ್‌ನೋಸ್ಟ್" (ಮುಕ್ತ ಚಿಂತನೆ) ಹಾಗೂ "ಪೆರೆಸ್ಟ್ರೋಯಿಕ"(ಪುನರ್ಸಂಘಟನೆ) ನೀತಿಗಳು ಆತನ ಸರ್ಕಾರದ ತಳಹದಿಯಾಯಿತು. ಇದನ್ನು ಸೋವಿಯತ್ ಒಕ್ಕೂಟದ ಎರಡನೇ ಕ್ರಾಂತಿ ಎನ್ನುತ್ತಾರೆ.

ಗ್ಲಾಸ್‌ನೋಸ್ಟ್ ಎಂದರೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ವಿಷಯದ ಬಗ್ಗೆ ಮುಕ್ತ ಹಾಗೂ ವಾಸ್ತವಿಕ ಚರ್ಚೆ ಹಾಗೂ ನಾಗರಿಕ ಹಕ್ಕುಗಳ ಮೇಲಣ ನಿರ್ಬಂಧಗಳ ನಿರ್ಮೂಲನ. ಇದರಿಂದಾಗಿ ಕಮ್ಯೂನಿಸ್ಟ್ ಪಕ್ಷದ ಹಿಂದಿನ ಹಿಡಿತ ಸಡಿಲಗೊಂಡು ೧೯೯೦ರಲ್ಲಿ ಕಮ್ಯೂನಿಸ್ಟೇತರ ಪಕ್ಷಗಳು ಅಸ್ತಿತ್ವಕ್ಕೆ ಬರಲು ಅವಕಾಶವಾಯಿತು.

ಪೆರೆಸ್ಟ್ರೋಯಿಕ, ಸೋವಿಯತ್ ಅರ್ಥವ್ಯವಸ್ಥೆಯನ್ನು ಸುಧಾರಿಸುವತ್ತ ಒಂದು ಪ್ರಯತ್ನ. ಆದರೆ ಈ ನೀತಿಯು ಬಹಳಷ್ಟು ಯಶಸ್ಸನ್ನು ಗಳಿಸಲಿಲ್ಲ. ವಿದೇಶಾಂಗ ನೀತಿಯಲ್ಲಿ ಕೂಡ ಗೋರ್ಬಚೆವ್ ಕಾಲದಲ್ಲಿ ಕೆಲವು ದೊಡ್ಡ ಬದಲಾವಣೆಗಳಾದವು. ಸಮಾಜವಾದಿ ಸರ್ಕಾರಗಳ ಅಸ್ತಿತ್ವಕ್ಕೆ ಆಂತರಿಕವಾಗಿ ಅಥವಾ ಬಾಹ್ಯವಾಗಿ ಬೆದರಿಕೆಗಳು ಬಂದಾಗ ಆ ಸರ್ಕಾರಗಳ ರಕ್ಷಣೆಗಾಗಿ ಮಧ್ಯ ಪ್ರವೇಶ ಮಾಡುವುದು ಇನ್ನೊಂದು ಸಮಾಜವಾದಿ ಸರ್ಕಾರದ ಕರ್ತವ್ಯ ಎಂದು ಸಾರಿದ ಬ್ರೆಷ್ನೇವ್ ನೀತಿಗೂ, ಇದರ ವಿರುದ್ಧವಾಗಿ ನಿರ್ಧಾರ ತೆಗೆದುಕೊಂಡ ಗೋರ್ಬಚೆವ್ ನೀತಿಗೂ ಅಜಗಜಾಂತರ ವ್ಯತ್ಯಾಸವಿತ್ತು. ಅದರಂತೆಯೇ ೧೯೮೯ರಲ್ಲಿ ಅಫಘಾನಿಸ್ತಾನದಿಂದ ರಷ್ಯಾದ ಸೇನೆಯನ್ನು ಸಂಪೂರ್ಣವಾಗಿ ಹಿಂದಕ್ಕೆ ಕರೆಸಿಕೊಳ್ಳಲಾಯಿತು.

ಯಾವಾಗ ಕಮ್ಯುನಿಸ್ಟ್ ರಾಷ್ಟ್ರಗಳಿಗೆ ತಮ್ಮ ಮೇಲಿನ ನಿರ್ಬಂಧಗಳು ಸಡಿಲವಾಗುತ್ತಿದೆ ಎಂದು ಕಂಡುಬಂದಿತೋ ಆಗ ಕಮ್ಯುನಿಸ್ಟೇತರ ಶಕ್ತಿಗಳು ಉತ್ತೇಜಿತರಾಗಿ ಯೂರೋಪಿ ನಲ್ಲಿ ಕಮ್ಯುನಿಸ್ಟ್ ಸರ್ಕಾರಗಳನ್ನು ಕಿತ್ತೆಸೆಯಲು ಪ್ರಾರಂಭಿಸಿದರು. ಇಡೀ ಕಮ್ಯುನಿಸ್ಟ್ ಒಕ್ಕೂಟ ವ್ಯವಸ್ಥೆ ಅನಿರೀಕ್ಷಿತ ವೇಗದಲ್ಲಿ ಕುಸಿಯತೊಡಗಿತು. ಸೋವಿಯತ್ ಒಕ್ಕೂಟದ ಅವಿಭಾಜ್ಯ ಅಂಗಗಳಾಗಿದ್ದ ಹದಿನೈದು ಸ್ವಾಯತ್ತ ಗಣರಾಜ್ಯಗಳು ಒಕ್ಕೂಟ ವ್ಯವಸ್ಥೆಯಿಂದ ಹೊರಬಂದು ಸ್ವತಂತ್ರವಾದುವು. ೧೯೯೦ರಲ್ಲಿ "ಸಾಲಿಡಾರಿಟಿ"ಯು ಅಧಿಕಾರಕ್ಕೆ ಬರುವುದರ ಮೂಲಕ ಪೋಲೆಂಡಿನಲ್ಲಿ ಸಮಾಜವಾದಿ ವ್ಯವಸ್ಥೆ ಮಾಯವಾಗಿ ಪ್ರಜಾಪ್ರಭುತ್ವ ಅಧಿಕಾರಕ್ಕೆ ಬಂದಿತು. ೧೯೮೯ರಲ್ಲಿ ಹಂಗೇರಿಯ ಕಮ್ಯೂನಿಸ್ಟ್ ಪಾರ್ಟಿಯು ತನ್ನ ಹೆಸರನ್ನು ಬದಲಾಯಿಸಿ ಕೊಂಡಿತು ಮತ್ತು ಚುನಾವಣೆಯಲ್ಲಿ ಸೋಲನ್ನುಂಡಿತು. ಜೆಕೋಸ್ಲೊವಾಕಿಯಾದಲ್ಲಿ ಸುಧಾರಣ ಚಳವಳಿಯು ೧೯೮೯ರಲ್ಲಿ ಪ್ರಾರಂಭವಾಯಿತು. ಇದರ ಪರಿಣಾಮವಾಗಿ ಕಮ್ಯೂನಿಸ್ಟ್ ಪಕ್ಷ ವಿಸರ್ಜನೆಗೊಂಡಿತ್ತಲ್ಲದೆ 'ವಕ್ಲಾವ್ ಹೇವಲ್' ಎಂಬ ಸಾಹಿತಿ ೧೯೮೯ರ ಡಿಸೆಂಬರ್‌ನಲ್ಲಿ ಅಧ್ಯಕ್ಷನಾಗಿ ಆಯ್ಕೆಯಾದರು. ೧೯೯೦ರ ಆಗಸ್ಟ್‌ನಲ್ಲಿ ಬಲ್ಗೇರಿಯಾವು ಮೊದಲ ಕಮ್ಯುನಿಸ್ಟೇತರ ನಾಯಕನನ್ನು ಆಯ್ಕೆ ಮಾಡಿತು. ರುಮೇನಿಯಾದಲ್ಲಿ, ೧೯೮೯ರ ಡಿಸೆಂಬರಿನಲ್ಲಿ, ಅಲ್ಲಿಯವರೆಗೆ ಆ ದೇಶವನ್ನು ಉಗ್ರ ಮುಷ್ಟಿಯಲ್ಲಿಟ್ಟುಕೊಂಡು ಆಳಿದ ಸರ್ವಾಧಿಕಾರಿ ನಿಕೋಲೆಚೆಚೆಸ್ಕ್ಯೂ, ಪತ್ನಿ ಸಮೇತವಾಗಿ ವಧಿಸಲ್ಪಟ್ಟನು. ೧೯೯೨ರ ಫೆಬ್ರವರಿಯಲ್ಲಿ ಕಮ್ಯುನಿಸ್ಟೇತರ ಸರ್ಕಾರ ಅಸ್ತಿತ್ವಕ್ಕೆ ಬಂದಿತು.

ಇತರೆಡೆಗಳಂತೆ ಯುಗೋಸ್ಲಾವಿಯಾದಲ್ಲೂ ೧೯೯೦ರ ವೇಳೆಗೆ ಕಮ್ಯುನಿಸ್ಟ್ ಸರ್ಕಾರ ಪತನವಾಯಿತು. ೧೯೯೨ರ ಆರಂಭದಲ್ಲಿ ಯುಗೋಸ್ಲೋವಿಯಾದ ರಾಜ್ಯಗಳಾದ ಕ್ರೊವೇಶಿಯಾ, ಸ್ಲೋವೆನಿಯಾ, ಮ್ಯಾಸಿಮೋನಿಯಾ ಹಾಗೂ ಬೋಸ್ನಿಯಾ- ಹರ್ಜೆಗೋ ವಿನಾಗಳು ಯುಗೋಸ್ಲಾವಿಯಾದಿಂದ ಸ್ವಾತಂತ್ರ್ಯವನ್ನು ಘೋಷಿಸಿಕೊಂಡವು. ಸರ್ಬಿಯ ಹಾಗೂ ಮಾಂಟೆನೇಗ್ರೊಗಳು ಸೇರಿ ಹೊಸ ಯುಗೋಸ್ಲಾವಿಯಾ ರಾಜ್ಯವನ್ನು ರಚಿಸಿ ಕೊಂಡವು. ಬೋಸ್ನಿಯಾ-ಹರ್ಜೆಗೋವಿನಾ ರಾಜ್ಯ ತನ್ನ ಸ್ವಾತಂತ್ರ್ಯವನ್ನು ಘೋಷಿಸಿ ಕೊಂಡದ್ದು ಬೋಸ್ನಿಯಾದ ಸರ್ಬರಿಗೆ ಸರಿಹೋಗದೆ ಅವರು ಸರ್ಬಿಯಾದ ನೆರವಿನಿಂದ, ಬೋಸ್ನಿಯಾದ ಮುಸ್ಲಿಂರನ್ನು ಹತ್ತಿಕ್ಕುವ ಕಾರ್ಯಚರಣೆಯನ್ನು ಪ್ರಾರಂಭಿಸಿದರು. ಇದರಿಂದಾಗಿ ಪೂರ್ವ ಯುರೋಪಿನ ಈ ಭಾಗ ಈಗಲೂ ಹಿಂಸಾ ಘಟನೆಗಳನ್ನು ಅನುಭವಿಸುತ್ತಿರುವುದನ್ನು ನಾವು ಕಾಣಬಹುದು.

೧೯೮೯ರ ಬದಲಾವಣೆಯ ಗಾಳಿಯ ಸುಳಿಗೆ ಸಿಕ್ಕಿ ನಡೆದ ಇನ್ನೊಂದು ಮಹತ್ತರ ಘಟನೆ ಎಂದರೆ ಜರ್ಮನಿಗಳ ಏಕೀಕರಣ. ೧೯೮೯ರ ನವೆಂಬರ್‌ನಲ್ಲಿ ಬರ್ಲಿನ್ ಗೋಡೆಯನ್ನು ತೆರೆದಿಡುವುದಕ್ಕೆ ಪೂರ್ವ ಜರ್ಮನಿ ಸರ್ಕಾರ ನಿರ್ಧರಿಸಿತು. ೧೯೯೦ರಲ್ಲಿ ಪೂರ್ವ ಜರ್ಮನಿ ಸರ್ಕಾರವು (ಕಮ್ಯೂನಿಸ್ಟ್ ಸರ್ಕಾರ), ತಾನು, ಪೂರ್ವ ಮತ್ತು ಪಶ್ಚಿಮ ಜರ್ಮನಿಗಳ ಏಕೀಕರಣದ ಪರವಾಗಿದ್ದೇನೆಂದು ಘೋಷಿಸಿತು. ಇದರ ಫಲವಾಗಿ ಪೂರ್ವ ಜರ್ಮನಿ(ಜರ್ಮನ್ ಡೆಮೊಕ್ರಾಟಿಕ್ ರಿಪಬ್ಲಿಕ್) ಮತ್ತು ಪಶ್ಚಿಮ ಜರ್ಮನಿ (ಫೆಡರಲ್ ಜರ್ಮನ್ ರಿಪಬ್ಲಿಕ್)ಗಳು ಒಟ್ಟಾಗಿ ಒಂದು ಏಕೀಕೃತ ಜರ್ಮನಿಯು ೧೯೯೦ರ ಅಕ್ಟೋಬರ್ ಮೂರರಂದು ಅಸ್ತಿತ್ವಕ್ಕೆ ಬಂದಿತು. ಪ್ರಜಾಪ್ರಭುತ್ವ ವ್ಯವಸ್ಥೆಯು ಜನರಿಚ್ಛೆಯಂತೆ ಸ್ಥಾಪಿತವಾಯಿತು.

ಪೂರ್ವ ಯುರೋಪಿನಲ್ಲಿ ಎಲ್ಲಾ ಕಮ್ಯೂನಿಸ್ಟ್ ಸರ್ಕಾರಗಳು ಉರುಳಿ ಬಿದ್ದಾಗ, ಅವುಗಳ ರಕ್ಷಣೆಗೆಂದೇ ಸೃಷ್ಟಿಯಾಗಿದ್ದ ವಾರ್ಸಾ ಒಪ್ಪಂದ ಕೂಡ ತನ್ನ ಅವಶ್ಯಕತೆಯನ್ನು, ಮಹತ್ವವನ್ನು ಕಳೆದುಕೊಂಡು ೧೯೯೧ರಲ್ಲಿ ವಿಸರ್ಜಿಸಲ್ಪಟ್ಟಿತು. ಪೂರ್ವ ಯುರೋಪಿನಲ್ಲಿ ಶೀತಲ ಸಮರೋತ್ತರ ಕಾಲದಲ್ಲಿ ಮೇಲ್ಕಂಡ ಬದಲಾವಣೆ ಗಳು ನಡೆಯುತ್ತಿದ್ದರೆ, ಪಶ್ಚಿಮ ಯುರೋಪಿನಲ್ಲಿ ಇನ್ನೊಂದು ರೀತಿಯ ಬದಲಾವಣೆಗಳು ರೂಪುಗೊಳ್ಳುತ್ತಿದ್ದವು.

**ಯುರೋಪಿನ ಒಗ್ಗಟ್ಟು**

ಪಶ್ಚಿಮ ಯುರೋಪಿನ ಏಕೀಕರಣಕ್ಕಾಗಿ ಚಳವಳಿಯೊಂದು ಎಂಬತ್ತರ ದಶಕದಲ್ಲಿ ಬಲಗೊಂಡಿತು. ಈ ದಿಶೆಯಲ್ಲಿ ಮೊದಲ ಹೆಜ್ಜೆ ಇಟ್ಟ ರಾಷ್ಟ್ರ ವೆಂದರೆ ಫ್ರಾನ್ಸ್. ತಾನು ಏಕೀಕೃತ ಪಶ್ಚಿಮ ಯುರೋಪಿನ ಸ್ವಾಭಾವಿಕ ನಾಯಕನೆಂದು ಫ್ರಾನ್ಸ್ ನಂಬಿತ್ತು. ಏಕೀಕರಣದ ಪ್ರಕ್ರಿಯೆಯಲ್ಲಿ ಮೊದಲ ಘಟ್ಟ ೧೯೫೭ರಲ್ಲಿ ರಚಿಸಲ್ಪಟ್ಟ ಐರೋಪ್ಯ ಆರ್ಥಿಕ ಸಮುದಾಯ. ಇದರಲ್ಲಿದ್ದ ರಾಷ್ಟ್ರಗಳೆಂದರೆ ಫ್ರಾನ್ಸ್, ಪಶ್ಚಿಮ

ಜರ್ಮನಿ, ಬೆಲ್ಜಿಯಂ, ಹಾಲೆಂಡ್, ಲುಕ್ಸೆಂಬರ್ಗ್ ಹಾಗೂ ಇಟಲಿ. ಈ ರಾಷ್ಟ್ರಗಳು ಸೇರಿ ಐರೋಪ್ಯ ಸಾಮಾನ್ಯ ಮಾರುಕಟ್ಟೆಯನ್ನು ಸ್ಥಾಪಿಸಿದವು. ಈ ಸಮುದಾಯಕ್ಕೆ ಮುಂದೆ ಇಂಗ್ಲೆಂಡ್, ಡೆನ್ಮಾರ್ಕ್ ಹಾಗೂ ಐರ್ಲೆಂಡ್‌ಗಳು ಸೇರಿಕೊಂಡವು. ತೀರ ಇತ್ತೀಚೆಗೆ ಗ್ರೀಸ್, ಸ್ಪೇನ್ ಹಾಗೂ ಪೋರ್ಚುಗಲ್‌ಗಳು ಕೂಡ ಸೇರಿಕೊಂಡವು. ತಮ್ಮ ಸಂಘಟನೆಯ ಆಡಳಿತಕ್ಕಾಗಿ ಐರೋಪ್ಯ ಪಾರ್ಲಿಮೆಂಟ್‌ನ್ನು ಕೂಡ ರಚಿಸಿಕೊಂಡವು.

ಈ ಎಲ್ಲಾ ಬೆಳವಣಿಗೆಗಳಿಂದ ಪಶ್ಚಿಮ ಯುರೋಪ್ ಒಂದು ಬಲಶಾಲಿಯಾದ ರಾಜಕೀಯ ಘಟಕವಾಗಿ ಹೊರಹೊಮ್ಮುವ ಸಾಧ್ಯತೆ ನಿಜವಾಗಿದೆ. ಈಗಾಗಲೇ ಇ.ಇ.ಸಿ. ರಾಷ್ಟ್ರಗಳಲ್ಲಿ ಒಂದೇ ನಾಣ್ಯ ಪದ್ಧತಿಯನ್ನು ತರುವ ಪ್ರಯತ್ನ ನಡೆದಿದೆ. ಇ.ಇ.ಸಿ ರಾಷ್ಟ್ರಗಳಲ್ಲಿ ಪ್ರವಾಸ ಮಾಡುವ ಐರೋಪ್ಯರಿಗೆ ಪಾಸ್‌ಪೋರ್ಟನ್ನು ರದ್ದು ಮಾಡುವ ಚಿಂತನೆ ಅನುಷ್ಠಾನವಾಗುವ ಸಾಧ್ಯತೆಯಿದೆ. ಜರ್ಮನಿಯು ಅತ್ಯಂತ ಬಲಶಾಲಿಯಾದ ಆರ್ಥಿಕ ಶಕ್ತಿಯಾಗಿ ಇ.ಇ.ಸಿ. ಸೇರಿದೆ. ವಸಾಹತುಗಳನ್ನು, ಸಾಮ್ರಾಜ್ಯಗಳನ್ನು ಹಾಗೂ ಅಪಾರ ವ್ಯಾಪಾರ-ವಾಣಿಜ್ಯಗಳನ್ನು ಕಳೆದುಕೊಂಡರೂ, ಪಶ್ಚಿಮ ಯುರೋಪಿನ ರಾಷ್ಟ್ರಗಳು ಒಟ್ಟಿಗೆ ಸೇರಿ, ಶೀತಲ ಸಮರೋತ್ತರ ಕಾಲದಲ್ಲಿ ಪ್ರಪಂಚದಲ್ಲಿ ಹೊಸಶಕ್ತಿಯಾಗಿ ಹೊರಹೊಮ್ಮುತ್ತಿದೆ. ಇದರಿಂದಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಮೇಲೆ ಯುರೋಪಿನ ಆರ್ಥಿಕ ಅವಲಂಬನೆ ಕಡಿಮೆಯಾಗಿದೆ ಮತ್ತು ವಿಶ್ವ ರಾಜಕೀಯದಲ್ಲಿ ಸ್ವತಂತ್ರ್ಯವಾಗಿ ವ್ಯವಹರಿಸುವ ತಾಕತ್ತು ಗಳಿಸಿಕೊಂಡಿದೆ.

ಈ ರೀತಿ ಶೀತಲ ಸಮರೋತ್ತರ ಕಾಲದಲ್ಲಿ ಯುರೋಪಿನಲ್ಲಿ ಬಹುತೇಕ ಬದಲಾವಣೆ ಗಳು, ಅಚ್ಚರಿಯೆನಿಸುವಷ್ಟು ಶಾಂತ ರೀತಿಯಲ್ಲಿ ನಡೆಯಿತ್ತಲ್ಲದೆ ಯುರೋಪ್ ಇಂದು ಒಂದು ವಿಶ್ವ ಶಕ್ತಿಯಾಗಿ ಹೊರಹೊಮ್ಮುತ್ತಿದೆ.

<u>ಪರಾಮರ್ಶನ ಗ್ರಂಥಗಳು</u>


೧. ಗೋರ್ಬಚವ್ ಎಂ.ಎಸ್., ೧೯೮೭. **ಪೀಸ್ ಹ್ಯಾಸ್ ನೋ ಆಲ್ಟರ್‌ನೇಟೀವ್, ಸ್ಪೀಚಸ್, ಆರ್ಟಿಕಲ್ಸ್,** ನ್ಯೂಡೆಲ್ಲಿ: ಇಂಟರ್‌ವ್ಯೆಸ್.

೨. ಮಾರ್ಟನ್ ಮತ್ತು ಜೆರಾಲ್ಡ್ ಸೆಗಲ್(ಸಂ), ೧೯೮೪. **ಸೋವಿಯತ್ ಸ್ಟ್ರ್ಯಾಟಜಿ ಟ್ಯುವರ್ಡ್ ವೆಸ್ಟರ್ನ್ ಯುರೋಪ್,** ಲಂಡನ್.

೩. ಇಂಡಿಯನ್ ಕೌನ್ಸಿಲ್ ಆಫ್ ಹಿಸ್ಟಾರಿಕಲ್ ರಿಸರ್ಚ್, ೧೯೮೮. **ಚೇಂಜಿಂಗ್ ಪರ್ ಸೆಪ್ಷನ್ಸ್ ಆಫ್ ಇಂಟರ್‌ನೇಷನಲ್ ರಿಲೇಶನ್ಸ್,** ದೆಹಲಿ

೪. ಸುಬ್ರಮಣ್ಯಂ ಕೆ.(ಸಂ), ೧೯೮೮. **ದಿ ಸೆಕೆಂಡ್ ಕೋಲ್ಡ್ ವಾರ್,** ದೆಹಲಿ


## ೨೪. ಸೋವಿಯೆತ್ ವಿಘಟನೆ-ಪೆರೆಸ್ಟ್ರೊಯಿಕಾ ಮತ್ತು ಗ್ಲಾಸ್ ನೋಸ್ತ್ ವಿಘಟನೆಯ ನಂತರ ಕುಸಿತ ಮತ್ತು ಚೇತರಿಕೆ

ಎಪ್ಪತ್ತು ವರ್ಷಕ್ಕೂ ಹೆಚ್ಚು ಕಾಲ ಸ್ಥಿರವಾಗಿ ಇದ್ದು, ಹಲವು ದಶಕಗಳ ಕಾಲ ಎರಡನೆಯ ಸೂಪರ್ ಪವರ್ ಆಗಿ ಮೆರೆದ ಮತ್ತು ಹೊಸ ಸಾಮಾಜಿಕ ವ್ಯವಸ್ಥೆಯನ್ನೇ ಕಟ್ಟಿ ಬೆಳೆಸಿ ನಿರ್ಮಿಸಿದ ಸೋವಿಯತ್ ಒಕ್ಕೂಟದಂತಹ ದೊಡ್ಡ ದೇಶ ಹಠಾತ್ತಾಗಿ ಮಾಯವಾಗಿದ್ದು ಹೇಗೆ? ಇದಕ್ಕೆ ಕಾರಣಗಳೇನು? ಇದರ ಅರ್ಥ ಏನು? ಪರಿಣಾಮಗಳೇನು? ಅದರ ಸಾಧನೆಗಳೇನು? ಸಾರ್ವಕಾಲಿಕ ಕೊಡುಗೆಗಳೇನು? ಇದರಿಂದ ಏನು ಕಲಿಯಬಹುದು? ಇವೆಲ್ಲ ಪ್ರಶ್ನೆಗಳು ಏಕಕಾಲಕ್ಕೆ ಮೂಡುತ್ತವೆ. ಇವೆಲ್ಲದಕ್ಕೂ ಆಖೈರು ಎನ್ನಬಹುದಾದ ಮತ್ತು ಸರ್ವಸಮ್ಮತ ಉತ್ತರ ಇಲ್ಲ.

ಸೋವಿಯತ್ ವಿಘಟನೆ ಯಾಕೆ? ಹೇಗೆ? ಎಂಬ ಪ್ರಶ್ನೆಯನ್ನು ಮೊದಲಿಗೆ ಎತ್ತಿಕೊಂಡರೆ, ಇದಕ್ಕೆ ಹಲವು ಉತ್ತರಗಳಿವೆ. ಬಂಡವಾಳಶಾಹಿ ವ್ಯವಸ್ಥೆಯೇ ಅತ್ಯಂತ ಸರಿಯಾದ ಏಕಮಾತ್ರ ವ್ಯವಸ್ಥೆ ಎಂದು ನಂಬಿರುವವರ ಉತ್ತರ ಇದಕ್ಕೆ ಬಹಳ ಸರಳ. ಸೋವಿಯತ್ ಒಕ್ಕೂಟ ಸ್ಥಾಪಿಸಿ ಬೆಳೆಸಲು ಪ್ರಯತ್ನಿಸಿದ ಸಮಾಜವಾದಿ ವ್ಯವಸ್ಥೆ ಕಾರ್ಯ ಸಾಧ್ಯವಾದ ವ್ಯವಸ್ಥೆ ಅಲ್ಲ. ಸಂಪತ್ತಿನ ಖಾಸಗಿ ಒಡೆತನ. ಹಣ ಸಂಗ್ರಹಿಸಲು ಆಸೆ. ಸಾರ್ವತ್ರಿಕ ಮತದಾನ ಮತ್ತು ಬಹುಪಕ್ಷೀಯ ಪ್ರಜಾಪ್ರಭುತ್ವ ಇಲ್ಲದ ವ್ಯವಸ್ಥೆ ಸಾಧ್ಯವಿಲ್ಲ. ಯಾರಾದರೂ ಅಂತಹ ವ್ಯವಸ್ಥೆ ಬಲವಂತವಾಗಿ ಕಟ್ಟಲು ಪ್ರಯತ್ನಿಸಿದರೆ ಅದು ಹೆಚ್ಚು ಕಾಲ ಬಾಳಲು ಸಾಧ್ಯವಿಲ್ಲ. ಅದೇ ಸೋವಿಯತ್ ಒಕ್ಕೂಟಕ್ಕೆ ಆದದ್ದು, ಅದರಲ್ಲಿ ಏನೂ ಆಶ್ಚರ್ಯವಿಲ್ಲ. ಅದು ಅನಿವಾರ್ಯವಾಗಿತ್ತು ಮತ್ತು ಒಳ್ಳೆಯ ಬೆಳವಣಿಗೆ ಕೂಡಾ. ಈ ಅಭಿಪ್ರಾಯ ಹೊಂದಿರುವವರು ಸೋವಿಯತ್ ಒಕ್ಕೂಟ ಎಪ್ಪತ್ತರಷ್ಟು ಹೆಚ್ಚು ವರ್ಷ ಕಾಲ ಸ್ಥಿರವಾಗಿ ಹೇಗೆ ಇತ್ತು? ವಿಶಿಷ್ಟವಾದ ಸಾಧನೆಗಳನ್ನು, ಚಾರಿತ್ರಿಕ ಮೈಲಿಗಲ್ಲುಗಳನ್ನು ಹೇಗೆ ಸೃಷ್ಟಿಸಿತು ಎಂಬುದಕ್ಕೆ ಸಮಜಾಯಿಷಿ ಕೊಡಬೇಕಾಗುತ್ತದೆ.

ಸಮಾಜವಾದಿ ವ್ಯವಸ್ಥೆಯ ಬೆಂಬಲಿಗರು ಮತ್ತು ಅದರ ಚಾರಿತ್ರಿಕ ಮಹತ್ತರ ಬಗ್ಗೆ ಆಸಕ್ತಿ ಇರುವವರಲ್ಲೂ ಈ ಬಗ್ಗೆ ಒಮ್ಮತವಿಲ್ಲ. ಸಮಾಜವಾದಿಗಳು, ಮಾರ್ಕ್ಸ್ ವಾದಿಗಳಲ್ಲೂ ಒಂದು ವಿಭಾಗ ಸಹ ಇದು ಅನಿವಾರ್ಯವಾಗಿತ್ತು, ಸೋವಿಯತ್ ಸಮಾಜ ವ್ಯವಸ್ಥೆ(ಆಶ್ಚರ್ಯಕರ ರೀತಿಯಲ್ಲಿ) ಕಾರ್ಯಸಾಧ್ಯ ವ್ಯವಸ್ಥೆ ಆಗಿರಲಿಲ್ಲ ಎಂದು ಮೊದಲನೆಯ ಗುಂಪಿನವರ ಅಭಿಪ್ರಾಯಕ್ಕೆ ಪ್ರತಿ ಧ್ವನಿ ಕೊಡುತ್ತಾರೆ. ಇವರ ಪ್ರಕಾರ ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದಿ ವ್ಯವಸ್ಥೆ ಇರಲಿಲ್ಲ. ಅದು ಒಂದು ಪಕ್ಷದ ಸರ್ವಾಧಿಕಾರವಾಗಿತ್ತು. ಕಾರ್ಮಿಕ ವರ್ಗದ ನಾಯಕತ್ವದ ಸಮಾಜವಾದಿ ಪ್ರಭುತ್ವ ಆಗಿರಲೇ ಇಲ್ಲ ಎನ್ನುತ್ತಾರೆ ಇವರು. ಇದೇ ಅಭಿಪ್ರಾಯದ ಇನ್ನೊಂದು ವಿಧ ಎಂದರೆ ಒಂದೇ ದೇಶದಲ್ಲಿ ಸಮಾಜವಾದಿ ವ್ಯವಸ್ಥೆ ಕಟ್ಟಲು ಸಾಧ್ಯವಿಲ್ಲ. ಅದರಲ್ಲೂ ಬಂಡವಾಳ ಶಾಹಿ ಬೆಳೆಯಿಂದ ಹಿಂದುಳಿದ ಕೃಷಿ ಪ್ರಧಾನ ದೇಶದಲ್ಲಿ ಸಮಾಜವಾದ ಕಟ್ಟುವುದು ಸಾಧ್ಯವಿಲ್ಲ. ಆದ್ದರಿಂದ ಅಂತಹ ಪ್ರಯತ್ನ ಒಂದಲ್ಲ ಒಂದು ದಿನ ವಿಫಲವಾಗುವುದು ನಿರೀಕ್ಷಿತವಾಗಿತ್ತು. ಸಮಾಜವಾದ ಅತ್ಯಂತ ಅಭಿವೃದ್ಧಿಗೊಂಡ ಬಂಡವಾಳಶಾಹಿ ದೇಶಗಳಲ್ಲೆಲ್ಲಾ ಏಕಕಾಲಕ್ಕೆ ಆಗಬೇಕು. ಆಗ ಮಾತ್ರ ಅದು 'ಶಾಶ್ವತ ಕ್ರಾಂತಿ'ಯಾಗುತ್ತದೆ. ಇದು ಟ್ರಾಟಸ್ಕಿವಾದ. ಈ ಗುಂಪಿನವರೂ ಈ ವ್ಯವಸ್ಥೆ ಎಪ್ಪತ್ತಕ್ಕೂ ಹೆಚ್ಚು ವರ್ಷಗಳ ಕಾಲ ಕಾರ್ಯ ಸಾಧ್ಯ ವ್ಯವಸ್ಥೆಯಾಗಿತ್ತು. ಅದರ ಸಾಧನೆಗಳು, ಅದು ವಹಿಸಿದ ಚಾರಿತ್ರಿಕ ಪಾತ್ರ, ಮಾಡಿದ ಭಾರಿ ಬದಲಾವಣೆಗಳ ಬಗ್ಗೆ ಸಮಜಾಯಿಷಿ ಕೊಡಬೇಕಾಗುತ್ತದೆ.

ಮೂರನೆಯ ಗುಂಪಿನಲ್ಲಿ ಸಮಾಜವಾದಿ ವ್ಯವಸ್ಥೆಯ ಹೆಚ್ಚು ಬೆಂಬಲಿಗರು ಮತ್ತು ಈ ವ್ಯವಸ್ಥೆ ಬಗ್ಗೆ ಮೆಚ್ಚುಗೆ, ಗೌರವ, ಆಸಕ್ತಿ ಇರುವವರು ಬರುತ್ತಾರೆ. ಸೋವಿಯತ್ ಒಕ್ಕೂಟದ ವ್ಯವಸ್ಥೆ ಉತ್ತಮವಾಗಿತ್ತು. ಖಂಡಿತ ಹಲವು ಸಮಸ್ಯೆಗಳು ಇದ್ದವು. ಆದರೆ ಅವು ಪರಿಹಾರ ಕಾಣದ ಸಮಸ್ಯೆಗಳೇನೂ ಆಗಿರಲಿಲ್ಲ. ಒಕ್ಕೂಟದ ಮತ್ತು ವ್ಯವಸ್ಥೆಯ ವಿಫಲತೆಗೆ ಮುಖ್ಯ ಕಾರಣ ಬಾಹ್ಯ(ಅಮೆರಿಕಾ) ಹಸ್ತಕ್ಷೇಪ. ಗ್ಲಾಸ್‌ನೋಸ್ತ್ ಮತ್ತು ಪೆರೆಸ್ತ್ರೊಯಿಕ ಹೆಸರಲ್ಲಿ ಗೋರ್ಬಚೇವ್ ಈ ಹಸ್ತಕ್ಷೇಪಕ್ಕೆ ಸುಲಭವಾಗಿ ಅವಕಾಶ ಮಾಡಿಕೊಟ್ಟರು. ಈ ವಾದದ ಇನ್ನೊಂದು ವಿಧ ಎಂದರೆ ಗೊರ್ಬಚೇವ್ ಅಮೆರಿಕನ್ ಏಜೆಂಟ್‌ನಾಗಿದ್ದ. ಅಮೆರಿಕ ಗೋರ್ಬಚೇವ್‌ನನ್ನು ಬಳಸಿ ಸೋವಿಯತ್ ಒಕ್ಕೂಟದ ವಿಘಟನೆಗೆ ಭಾರಿ ಸಂಪನ್ಮೂಲ ಸುರಿದು ಅದು ಆಗುವಂತೆ ಮಾಡಿತು. ಅಮೆರಿಕ ಮಾತ್ರವಲ್ಲ, ಇನ್ನು ಹಲವು ಪಾಶ್ಚಿಮಾತ್ಯ ದೇಶಗಳು ಸೋವಿಯತ್ ಒಕ್ಕೂಟದ ವಿಘಟನೆಗೆ ಹಸ್ತಕ್ಷೇಪ ಮಾಡಲು ಪ್ರಯತ್ನಿಸುತ್ತಿದ್ದವು. ಭಾರಿ ಸಂಪನ್ಮೂಲಗಳನ್ನು ಖರ್ಚು ಮಾಡಿದ್ದವು. ಆದರೆ ಎಪ್ಪತ್ತು ವರ್ಷಗಳ ಕಾಲ ಅದನ್ನು ಎದುರಿಸಿ ಸೋವಿಯತ್ ಒಕ್ಕೂಟ ಬೆಳೆದಿತ್ತು. ಗೋರ್ಬಚೆವ್ ಅವರನ್ನು ಬಾಹ್ಯಶಕ್ತಿಗಳು ನಿಯಂತ್ರಿಸಿದ್ದು ನಿಜವಾದರೆ ಈ ವ್ಯವಸ್ಥೆಯ ಬೆನ್ನೆಲುಬಾಗಿದ್ದ, ಹಿಂದೆ ಇಂತಹ(ಹಲವು ಬಾರಿ ಇದಕ್ಕಿಂತಲೂ ಹೆಚ್ಚು ತೀವ್ರವಾಗಿದ್ದ) ಬಾಹ್ಯ ಅತಿಕ್ರಮಣ (ಫ್ಯಾಸಿಸ್ಟ್ ವಿರೋಧಿ ಯುದ್ಧ ಇದಕ್ಕೆ ಉತ್ತಮ ಉದಾಹರಣೆ) ಎದುರಿಸಿ ಗೆದ್ದಿದ್ದ, ಕಮ್ಯುನಿಸ್ಟ್ ಪಕ್ಷದ ಹೆಚ್ಚು ಕಡಿಮೆ ಒಂದು ಕೋಟಿ ಸದಸ್ಯರು ಮತ್ತು ಕಾರ್ಮಿಕ ವರ್ಗ ದೇಶದ ವ್ಯವಸ್ಥೆಯ ರಕ್ಷಣೆಗೆ ಧಾವಿಸಲಿಲ್ಲವೇಕೆ? ಕನಿಷ್ಟ ಪ್ರತಿರೋಧವೂ ತೋರಿಸಲಿಲ್ಲವೇಕೆ? ಎಂಬುದರ ಬಗ್ಗೆ ವಿವರಣೆ ನೀಡಬೇಕಾಗುತ್ತದೆ. ಈ ಗುಂಪಿನವರು ಸ್ವಾಭಾವಿಕವಾಗಿಯೇ ಈ ವಿಘಟನೆ ಅನಿವಾರ್ಯವಿರಲಿಲ್ಲ, ಅಮೆರಿಕನ್ ಹಸ್ತಕ್ಷೇಪವಿಲ್ಲದಿದ್ದರೆ ಇದು ನಡೆಯುತ್ತಿರಲಿಲ್ಲ ಎನ್ನುತ್ತಾರೆ.

ನಾಲ್ಕನೆಯ ಗುಂಪು - ಸೋವಿಯತ್ ವಿಭಜನೆ ಪ್ರಮುಖವಾಗಿ ಆಂತರಿಕ ಕಾರಣಗಳಿಂದ ಆಗಿದ್ದು, ಅಮೆರಿಕನ್ ಹಸ್ತಕ್ಷೇಪದ ಪಾತ್ರ ಇತ್ತಾದರೂ ಅದು ನಿರ್ಣಾಯಕ ಪಾತ್ರ ವಹಿಸಲಿಲ್ಲ ಎನ್ನುತ್ತಾರೆ. ಈ ಗುಂಪಿನಲ್ಲಿ ಜಗತ್ತಿನ ಹೆಚ್ಚಿನ ಕಮ್ಯುನಿಸ್ಟ್ ಪಕ್ಷಗಳು ಬರುತ್ತವೆ.

೧೯೯೩ರಲ್ಲಿ ಕಲ್ಕತ್ತಾದಲ್ಲಿ ನಡೆದ ಅಂತಾರಾಷ್ಟ್ರೀಯ(ಮಾರ್ಕ್ಸ್‌ನ ೧೭೫ನೆಯ ಹುಟ್ಟುಹಬ್ಬದ ಸಂದರ್ಭದಲ್ಲಿ ನಡೆದ) ವಿಚಾರ ಸಂಕಿರಣದಲ್ಲಿ ೨೭ ಕಮ್ಯುನಿಸ್ಟ್ ಪಕ್ಷಗಳು ವ್ಯಕ್ತಪಡಿಸಿದ ಅಭಿಪ್ರಾಯದಿಂದ ವ್ಯಕ್ತವಾಗುತ್ತದೆ. ನಮ್ಮ ದೇಶದ ಸಿಪಿಐ(ಎಂ) ಈ ಗುಂಪಿನ ಅಭಿಪ್ರಾಯವನ್ನು ಪ್ರತಿನಿಧಿಸುವಂತಹದ್ದು. ಸಿಪಿಐ(ಎಂ) ೧೯೯೨ರ ೧೪ನೆಯ ಮಹಾಧಿವೇಶನದಲ್ಲಿ ಅಂಗೀಕರಿಸಿದ ನಿರ್ಣಯ(ಈ ಕೆಳಗಿನ ಭಾಗ ತೋರಿಸುವಂತೆ) ಈ ಅಭಿಪ್ರಾಯದ ಉತ್ತಮ ಉದಾಹರಣೆ.

೧೯೮೯ರಲ್ಲಿ ಚೀನಾ ಜನತಾ ಗಣರಾಜ್ಯದಲ್ಲಿ ಸಮಾಜವಾದವನ್ನು ಆಂತರಿಕವಾಗಿಯೇ ಬುಡಮೇಲು ಮಾಡಲು ಸಾಮ್ರಾಜ್ಯಶಾಹಿಯ ಇಂಥದೇ ಪ್ರಯತ್ನವನ್ನು ಚೀನಾ ಕಮ್ಯುನಿಸ್ಟ್ ಪಕ್ಷ ಮತ್ತು ಜನತಾ ವಿಮೋಚನೆ ಸೇನೆ (ಪಿಎಲ್‌ಎ) ಯಶಸ್ವಿಯಾಗಿ ವಿಫಲಗೊಳಿಸಿತು. ಸಮಾಜವಾದವನ್ನು ನಾಶ ಮಾಡುವ ಮತ್ತು ಒಕ್ಕೂಟವನ್ನು ವಿಚ್ಛಿದ್ರಗೊಳಿಸುವ ಪ್ರಕ್ರಿಯೆ ಯನ್ನು ತಡೆಯಲು ಸೋವಿಯತ್ ಒಕ್ಕೂಟದಲ್ಲಿ ಕೂಡಾ ಪ್ರಯತ್ನ ನಡೆಸಲಾಯಿತು. ಆದರೆ ಅದು ವಿಫಲವಾಯಿತು. ಆ ಹಿನ್ನೆಲೆಯಲ್ಲಿ ವ್ಯಾಪಕ ಕಮ್ಯುನಿಸ್ಟ್ ವಿರೋಧ ಶಕ್ತಿಗಳ ಈ ಯಶಸ್ಸುಗಳಿಗೆ ಜನರಲ್ಲಿ ಅತೃಪ್ತಿ ಉಂಟಾಗಿ ಅವರು ಪಕ್ಷದಿಂದಲೂ, ಪ್ರಭುತ್ವದಿಂದಲೂ ದೂರ ಸರಿಯುವಂತೆ ಮಾಡಿದ ಕಾರಣವಾಗಿ ಹಿಂದಿನ ದೌರ್ಬಲ್ಯಗಳು, ತಪ್ಪುಗಳು ಮತ್ತು ವಿಕೃತಿಗಳೇ ಮುಖ್ಯ ಕಾರಣ ಎಂದು ಒತ್ತಿ ಹೇಳಲೇಬೇಕು. ಇದನ್ನು ತಿದ್ದಿಕೊಂಡು ಸರಿಪಡಿಸುವ ಬದಲು, ೨೦ನೆಯ ಮಹಾಧಿವೇಶನ ನಂತರ ಸೋವಿಯತ್ ಕಮ್ಯುನಿಸ್ಟ್ ಪಕ್ಷ ಅನುಸರಿಸಿಕೊಂಡು ಬಂದ ಮತ್ತು ಗೋರ್ಬಚೇವ್ ನಾಯಕತ್ವದಲ್ಲಿ ತೀವ್ರಗೊಂಡ ಪರಿಷ್ಕರಣವಾದಿ ನೀತಿಗಳು, ಸಮಾಜವಾದಿ ವ್ಯವಸ್ಥೆ ಮತ್ತು ಸೋವಿಯತ್ ಒಕ್ಕೂಟವನ್ನು ಕಳಚಿ ಹಾಕುವುದಕ್ಕೆ ಕಾರಣವಾದವು.

ಸಿಪಿಐ(ಎಂ)ನ ಈ ನಿರ್ಣಯದಲ್ಲಿ ಈ ನ್ಯೂನ್ಯತೆಗಳು, ತಪ್ಪುಗಳು ಮತ್ತು ವಿಕೃತಿಗಳು ಯಾವುವು ಎಂದು ಗುರುತಿಸಲಾಗಿದೆ.

೧. ಸಮಾಜವಾದಿ ಪ್ರಜಾಪ್ರಭುತ್ವ ವಿಸ್ತರಿಸಿ ಅದನ್ನು ಆಳಗೊಳಿಸುವಲ್ಲಿ, ಜನಗಳು ಹೆಚ್ಚು ಹೆಚ್ಚಾಗಿ ಭಾಗವಹಿಸುವಲ್ಲಿನ ಪೂರ್ಣ ಸಾಮರ್ಥ್ಯವನ್ನು ಸಾಧಿಸಲು ಸಾಧ್ಯವಾಗದ ನ್ಯೂನ್ಯತೆ.

೨. ಹೆಚ್ಚುತ್ತಿದ್ದ ಅಧಿಕಾರಶಾಹಿತ್ವ, ಸಮಾಜವಾದಿ ಕಾನೂನು ಬದ್ಧತೆಯ ಉಲ್ಲಂಘನೆ, ವೈಯಕ್ತಿಕ ಸ್ವಾತಂತ್ರ್ಯದ ದಮನ ಮುಂತಾದ ವಿಕೃತಿಗಳು.

೩. 'ಕಾರ್ಮಿಕ ವರ್ಗದ ಸರ್ವಾಧಿಕಾರ' ಎಂಬ ಪರಿಕಲ್ಪನೆ, ಜಾರಿ ಮಾಡುವಾಗ ಕಮ್ಯುನಿಸ್ಟ್ ಪಕ್ಷದ ಅಥವಾ ಕೆಲವು ನಾಯಕರ ಸರ್ವಾಧಿಕಾರವಾಗಿ ವಿಕೃತಗೊಂಡಿದ್ದು.

೪. ಆಳುವ ಕಮ್ಯುನಿಸ್ಟ್ ಪಕ್ಷಗಳಲ್ಲಿ ಆಂತರಿಕ ಪ್ರಜಾಪ್ರಭುತ್ವದ ನೀತಿಗಳ ತೀವ್ರ ಉಲ್ಲಂಘನೆ.

೫. ಕೇಂದ್ರೀಕೃತ ಯೋಜನೆಯ ವ್ಯವಸ್ಥೆಯಲ್ಲಿ ಹಲವು ಬಾರಿ ಕೆಳಮಟ್ಟದಲ್ಲಿ ಉತ್ಪಾದಕ ಶಕ್ತಿಗಳ ಬೆಳವಣಿಗೆಯಲ್ಲಿ ಸೃಜನಶೀಲತೆ ಮತ್ತು ಮುಂದಾಳತ್ವ ಹೊಸಕುವ ಅತಿ-ಕೇಂದ್ರೀಕರಣದ ತಪ್ಪುಗಳು.

೬. ಪ್ರತಿ ಹಂತದ ಆರ್ಥಿಕ ಬೆಳವಣಿಗೆ ತಕ್ಕುದಾದ ಆರ್ಥಿಕ ನಿರ್ವಹಣಾ ವಿಧಾನಗಳನ್ನು ಬದಲಾಯಿಸುವುದರಲ್ಲಿ ವಿಳಂಬ ಮತ್ತು ನ್ಯೂನ್ಯತೆಗಳು.

೭. ಹಲವು ರೂಪಗಳ ಆಸ್ತಿಯ ಅಗತ್ಯತೆಯನ್ನು ಮನಗಾಣದೆ ಹೋದದ್ದು ಮತ್ತು ಈ ರೂಪಗಳ ಆಸ್ತಿದಾರರ ಹಕ್ಕುಗಳ ಉಲ್ಲಂಘನೆಯ ತಪ್ಪು.

೮. ಯೋಜನೆಯ ವಿಧಾನ ಮಾರುಕಟ್ಟೆ ಶಕ್ತಿಗಳು ಮತ್ತು ಸೂಚಕಗಳನ್ನು ಬಳಸದೆ ಹೋದ ತಪ್ಪು.

೬. ಪಕ್ಷದ ನಾಯಕತ್ವದಲ್ಲಿ, ಸದಸ್ಯರಲ್ಲಿ ಮತ್ತು ಜನಸಾಮಾನ್ಯರಲ್ಲಿ ಕ್ರಾಂತಿಕಾರಿ ಎಚ್ಚರ ಮತ್ತು ಸಮಾಜವಾದಿ ಸಾಮೂಹಿಕ ಪ್ರಜ್ಞೆ ಸವೆದು ಹೋದದ್ದು.

ಸ್ವಾಭಾವಿಕವಾಗಿಯೇ ಈ ಗುಂಪು ಸಮಾಜವಾದ ಮತ್ತು ಸೋವಿಯತ್ ವಿಘಟನೆ ಅನಿವಾರ್ಯವಾಗಿರಲಿಲ್ಲ. ಅದರ ನ್ಯೂನ್ಯತೆಗಳು, ತಪ್ಪುಗಳು, ವಿಕೃತಿಗಳಿಂದ ಕಲಿತು ಸಮಾಜವಾದಿ ವ್ಯವಸ್ಥೆ ಬೆಳೆಯಲು, ಮುಂದೆ ಹೋಗಲು ಸಾಧ್ಯ. ಇಂತಹ ತಪ್ಪು, ವಿಕೃತಿಗಳಿಲ್ಲದ ಚೀನಾ, ವಿಯೆಟ್ನಾಮ್, ಕ್ಯೂಬಾ ಮುಂತಾದ ಕಡೆ ಸಮಾಜವಾದಿ ವ್ಯವಸ್ಥೆ ಮುಂದುವರೆಯುತ್ತಿರುವುದು; ಬಂಡವಾಳಶಾಹಿ ವ್ಯವಸ್ಥೆ ಜಗತ್ತಿನ ಸಮಸ್ಯೆಗಳಿಗೆ ಪರಿಹಾರ ಒದಗಿಸದೆ ಇರುವುದು; ಅದಕ್ಕೆ ಬದಲಾಗಿ ಸಮಾಜವಾದಿ ವ್ಯವಸ್ಥೆ ಬೆಳೆಸ ಬೇಕಾಗಿರುವುದು - ಮುಂದೇನು? ಎಂಬ ಪ್ರಶ್ನೆಗೆ ಗುಂಪಿನ ಉತ್ತರ.

ಇವು ನಾಲ್ಕು ಪ್ರಮುಖ ಉತ್ತರಗಳಾದರೂ, ಇನ್ನೂ ಹಲವು ವಿವರಣೆಗಳು ಇವೆ. ಈ ಪ್ರಶ್ನೆಗಳಿಗೆ ವಿವರವಾದ ಉತ್ತರ ಸಮಾಜಶಾಸ್ತ್ರೀಯ ಅಧ್ಯಯನದಲ್ಲಿ ಪ್ರಮುಖ ಸಂಶೋಧನೆಯ ವಿಷಯ ಆಗಿದ್ದು, ಹಲವು ಅಕಾಡೆಮಿಕ್ ಸಂಶೋಧಕರು ಈ ಬಗ್ಗೆ ವಿವರವಾದ ಅಧ್ಯಯನ ಮಾಡುತ್ತಿದ್ದಾರೆ. ಇದು ವಿಘಟನೆಯ ನಂತರ ಮಾಜಿ ಸೋವಿಯತ್ ಒಕ್ಕೂಟದ ದೇಶಗಳ ವಿದ್ಯಮಾನಗಳನ್ನು ಅರ್ಥಮಾಡಿಕೊಳ್ಳಲಿಕ್ಕೆ ಅಗತ್ಯ ಮಾಹಿತಿ ಕೂಡಾ. ಇಂತಹ ಅಕಾಡೆಮಿಕ್ ಉತ್ತರಗಳಿಂದ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಬಹುದು. ಅಕ್ಟೋಬರ್ ಕ್ರಾಂತಿಯ ನಂತರ ಸಮಾಜವಾದಿ ವ್ಯವಸ್ಥೆ ಕಟ್ಟುವಲ್ಲಿ ಅದ್ಭುತ ಪ್ರಗತಿ ತೋರಿಸಿದ್ದರೂ, ಅದು ಕಳೆದ ಕೆಲವು ದಶಕಗಳಿಂದ ಸಮಾಜವಾದಿಯಾಗಿ ಉಳಿದಿರಲಿಲ್ಲ. ಸೋವಿಯತ್ ಒಕ್ಕೂಟದ ಬೆಳವಣಿಗೆಯ ಒಂದು ಹಂತದಲ್ಲಿ(ಸುಮಾರು ೪೦-೫೦ರ ದಶಕದಲ್ಲಿ) ಪಕ್ಷದ ಉನ್ನತ ನಾಯಕತ್ವ, ಹಿರಿಯ ಮಿಲಿಟರಿ ನಾಯಕತ್ವ, ಕೈಗಾರಿಕಾ-ಕೃಷಿ ಸಂಕೀರ್ಣಗಳ ಡೈರೆಕ್ಟರುಗಳು. ವಿಜ್ಞಾನ-ತಂತ್ರಜ್ಞಾನ ಸಂಸ್ಥೆಗಳ ನಾಯಕತ್ವ ಇತ್ಯಾದಿಗಳು ಸೇರಿದ ಮೇಲಿನ ಪದರ ಒಂದು ವರ್ಗವಾಗಿ ಬೆಳೆಯಿತು. ಗೋರ್ಬಚೇವ್, ಯೆಲ್ಸಿನ್, ಪುಟಿನ್ ಈ ವರ್ಗದ ಪ್ರತಿನಿಧಿ ಗಳು. ಈ ವರ್ಗ ರೂಪಗೊಂಡು ಬಲಗೊಂಡು ತನ್ನ ಹಿತಾಸಕ್ತಿಗಳಿಗೆ ಬೇಕಾದ ಸುಧಾರಣೆಗೆ ಹಿಂದಿನ ವ್ಯವಸ್ಥೆಯೊಳಗೆ ಮೊದಲು ಪ್ರಯತ್ನಿಸಿ, ಆಗದೆ ವ್ಯವಸ್ಥೆಯಲ್ಲಿ ಭಾರಿ ಬದಲಾವಣೆ ತಂದಿತು. ಪ್ರಭುತ್ವ ಈಗಾಗಲೇ ಈ ವರ್ಗದ ಕೈಯಲ್ಲಿ ಇದ್ದದ್ದು ಈ ಬದಲಾವಣೆ ಶಾಂತಿಯುತವಾಗಿ ಆಗಲು ಸಾಧ್ಯವಾಯಿತು. ವಿದೇಶಿ ಶಕ್ತಿಗಳು ಮತ್ತು ಈ ವರ್ಗದ ಹಿತಾಸಕ್ತಿಗಳಲ್ಲಿ ಬಹಳ ಸಾಮ್ಯ ಇದ್ದುದರಿಂದ ಇದು ಇನ್ನಷ್ಟು ಸುಲಭವಾಯಿತು. ಈ ವಿವರಣೆ ಪ್ರತಿಪಾದಿಸುವವರಿಗೆ ಉದಾಹರಣೆ 'ಮಂತ್ಲೀ ರಿವ್ಯೆ' ಎಂಬ ಅಮೆರಿಕನ್ ಪತ್ರಿಕೆಯ ಸಂಪಾದಕೀಯ ಗುಂಪು ಮತ್ತು ಡೇವಿಡ್ ಲೇನ್ ಎಂಬ ವಿಶ್ವವಿದ್ಯಾಲಯದ ಪ್ರೊಫೆಸರ್, ಸೋವಿಯತ್ ಒಕ್ಕೂಟ ಆರಂಭಿಸಿದ 'ಮಾರುಕಟ್ಟೆ ಸುಧಾರಣೆ'ಗಳು ಇಡೀ ದೇಶದ, ವ್ಯವಸ್ಥೆಯ ವಿಭಜನೆಯಲ್ಲಿ ಪರಿಣಮಿಸುವುದು ಅನಿವಾರ್ಯವಾಗಿರಲಿಲ್ಲ; ಇದಕ್ಕೆ ಸೋವಿಯತ್ ನಾಯಕತ್ವದ ಕೆಲವು ಗುರುತರ ತಪ್ಪುಗಳು ಕಾರಣ; ಇಂತಹ ತಪ್ಪುಗಳನ್ನು ಮಾಡದ ಚೀನಾದಲ್ಲಿ ಇಂತಹುದೇ ಸುಧಾರಣೆಗಳು ಬಹಳ ಸಫಲವಾಗಿದ್ದು ಇದಕ್ಕೆ ದೃಷ್ಟಾಂತ ಎನ್ನುತ್ತಾರೆ ನೊಬೆಲ್ ಪ್ರಶಸ್ತಿ ವಿಜೇತ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಜೋಸೆಫ್ ಸ್ಟಿಗಲಿಟ್ ಝ್. ಸೋವಿಯತ್ ಸುಧಾರಣೆಗಳ ವೈಫಲ್ಯ ಮತ್ತು ಚೀನಾದ ಸುಧಾರಣೆಗಳ ಸಫಲತೆಯನ್ನು ಕೂಲಂಕಷವಾಗಿ ಅಧ್ಯಯನ ಮಾಡುವ ಪರಂಪರೆ ಬೆಳೆದಿದೆ. ಇದರಲ್ಲಿ ಕೆಲವರು ಚೀನಾದ ಬೆಳವಣಿಗೆಯ ಈ ಹಂತದ ನೀತಿಗಳು, ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದಿದ ಹಂತದಲ್ಲಿದ್ದ ಸೋವಿಯತ್ ಸುಧಾರಣೆಗಳಿಗೆ ಉತ್ತರವಾಗಿರಲು ಸಾಧ್ಯವಿಲ್ಲ. ಸೋವಿಯತ್ ಆರ್ಥಿಕ ಮತ್ತು ಸಮಾಜ ಎದುರಿಸಿದ ಸಮಸ್ಯೆಗಳು ವಿಶಿಷ್ಟವಾಗಿದ್ದು, ಇಲ್ಲಿಯವರೆಗೆ ಗೊತ್ತಿರುವ ಸಿದ್ಧ ಪರಿಹಾರಗಳು ಯಾವುದೂ ಕೆಲಸ ಮಾಡುತ್ತಿರಲಿಲ್ಲ. ಚೀನಾ ಮುಂದಿನ ಹಂತದಲ್ಲಿ ಇದನ್ನು ಎದುರಿಸಲಿದೆ ಎನ್ನುತ್ತಾರೆ.

ಸೋವಿಯತ್ ಒಕ್ಕೂಟದ ವಿಘಟನೆಗೆ ಕಾರಣವಾದ ನ್ಯೂನ್ಯತೆಗಳು, ಸಮಸ್ಯೆಗಳು ಮತ್ತು ವಿಕೃತಿಗಳ ಬಗ್ಗೆ ನೋಡಲಾಗಿದೆ. ಅದರ ಕೊಡುಗೆಗಳು, ಸಾಧನೆಗಳು, ಅನುಸರಿಸ ಬಹುದಾದ ಒಳ್ಳೆಯ ಮಾದರಿಗಳು ಏನು ಎಂಬುದರ ಬಗೆಗೂ ಒಮ್ಮತದ ಅಭಿಪ್ರಾಯ ಗಳಿಲ್ಲ. ಆದರೆ ಕೆಲವು ಸರ್ವೇ ಸಾಮಾನ್ಯವಾದ ಅಂಶಗಳನ್ನು ಹೀಗೆ ಗುರುತಿಸಬಹುದು.

೧. ಬಂಡವಾಳಶಾಹಿ ಸಾಧಿಸಿದ ಎಲ್ಲಾ ಬೆಳವಣಿಗೆಗಳನ್ನು (ಕೈಗಾರಿಕೆ, ತಂತ್ರಜ್ಞಾನ) ಬಳಸಿ, ಅದೇ ಅಥವಾ ಇನ್ನೂ ಹೆಚ್ಚಿನ ಮಟ್ಟದ ಸಮೃದ್ಧಿ ಸಾಧಿಸಿ ಅದನ್ನು ಸಮಾನತೆ, ಶಾಂತಿಯ ಧ್ಯೇಯ ಈಡೇರಿಸಲು ಬಳಸಲು ಸಾಧ್ಯ ಎಂದು ತೋರಿಸಿಕೊಟ್ಟಿದ್ದು.

೨. ಬಂಡವಾಳಶಾಹಿ ಪ್ರಮುಖ ಸಮಸ್ಯೆಗಳು (ನಿರುದ್ಯೋಗ, ಯುದ್ಧ, ಶೋಷಣೆ) ಇಲ್ಲದ ಸಮಾಜ ನಿರ್ಮಾಣ ಮಾಡಲಿಕ್ಕೆ ಸಾಧ್ಯವಿದೆ ಎಂದು ತೋರಿಸಿಕೊಟ್ಟಿದ್ದು.

೩. ಹಿಂದುಳಿದ ಕೃಷಿ-ಪ್ರಧಾನ ದೇಶಕ್ಕೆ ತೀವ್ರ ಬೆಳವಣಿಗೆಗೆ ಬಂಡವಾಳಶಾಹಿ ಅಲ್ಲದ ಹಲವು ದಾರಿಗಳಿವೆ ಎಂದು ತೋರಿಸಿಕೊಟ್ಟಿದ್ದು.

೪. ಸಮಾಜದ ಆರ್ಥಿಕ-ಸಾಮಾಜಿಕ ಸಮತೋಲಿತ ಬೆಳವಣಿಗೆಗೆ ಸಮಗ್ರ ಯೋಜನೆ ಅಗತ್ಯ. ಇಂತಹ ಯೋಜನೆ ಮಾಡಿ ತೀವ್ರ ಬೆಳವಣಿಗೆ ಸಾಧಿಸಲು ಸಾಧ್ಯ.

೫. ಈ ಎಲ್ಲಾ ಮಹಾನ್ ಬದಲಾವಣೆಗಳಲ್ಲಿ ಚರಿತ್ರೆಯಲ್ಲೇ ಕಂಡರಿಯದ ಪ್ರಮಾಣದಲ್ಲಿ ಬಹುಸಂಖ್ಯಾತ ದುಡಿಯುವ ಜನತೆಯನ್ನು ಒಳಗೊಂಡದ್ದು.

೬. ಸಮಾಜದ ಒಳತಿಗೆ ಬೇಕಾದ, ಮನುಕುಲದ ಕುತೂಹಲ, ಜ್ಞಾನದ ದಾನ ತಣಿಸುವ ವಿಜ್ಞಾನ-ತಂತ್ರಜ್ಞಾನವನ್ನು ಸಾಮಾಜಿಕವಾಗಿ ಯೋಜಿತವಾಗಿ ಬೆಳೆಸಲು ಸಾಧ್ಯ. ಇದು ಕೆಲವು ಸ್ವಯಂ-ಸ್ಫೂರ್ತ ವಿಜ್ಞಾನಿಗಳಿಂದ ಅಥವಾ ಭಾರಿ ಶ್ರೀಮಂತಿಕೆ ತಂದುಕೊಡುವ ಸಂಶೋಧನೆಗಳ ದಾರಿಯೇ ತುಳಿಯಬೇಕಾಗಿಲ್ಲ ಎಂದು ತೋರಿಸಿಕೊಟ್ಟದ್ದು.

೭. ಒಂದು ಸಮಾಜದ ಬೆಳವಣಿಗೆಗೆ ಮುಂಚೂಣಿ ಪಾತ್ರ ವಹಿಸುವ, ಅದಕ್ಕೆ ಬೇಕಾದ ಉನ್ನತ ಪ್ರಜ್ಞೆಯ, ವೈಜ್ಞಾನಿಕ ಕಣ್ಣೋಟ ಹೊಂದಿದ, ಸಾಮಾಜಿಕ ಒಳಿತಿಗೆ ಬದ್ಧವಾದ ವ್ಯಕ್ತಿಗಳ ಒಂದು ಪಕ್ಷದ ನಾಯಕತ್ವದ ದೊಡ್ಡ ರೀತಿಯಲ್ಲಿ ಸಹಾಯ ಮಾಡುತ್ತದೆ.

ಅದೇ ರೀತಿ ಸೋವಿಯತ್ ಒಕ್ಕೂಟ ತನ್ನ ವಿಶಿಷ್ಟವಾದ ಚರಿತ್ರೆಯಲ್ಲಿ ಯಾರೂ ಕಂಡರಿಯದ ಪಯಣದಲ್ಲಿ ತೀವ್ರ ಅಡೆ-ತಡೆಗಳನ್ನು ಎದುರಿಸಿತು. ಭಾಗಶಃ ಈ ತಪ್ಪು ಗಳು, ನ್ಯೂನ್ಯತೆಗಳು, ವಿಕೃತಿಗಳಿಗೆ ಕಾರಣವಾಗಿದೆ. ಅಂತಹ ಅಡೆತಡೆಗಳನ್ನು ಹೀಗೆ ಗುರುತಿಸಬಹುದು.

ಸತತವಾಗಿ ಬಾಹ್ಯ ಶಕ್ತಿಗಳಿಂದ(೧೯೧೭-೨೧ರಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳು, ೧೯೩೯-೪೫ರಲ್ಲಿ ಫ್ಯಾಸಿಸ್ಟ್ ಶಕ್ತಿಗಳು ೧೯೪೫ ರಿಂದ ಅಮೆರಿಕದ ಅಣ್ವಸ್ತ್ರಗಳು) ಸತತ ಅಪಾಯ ಶಸ್ತ್ರಾಸ್ತ್ರಗಳ ಮೇಲೆ ಆಗಿನ ಆರ್ಥಿಕ ಶಕ್ತಿ ಮೀರಿದ ಭಾರಿ ಸಂಪನ್ಮೂಲಗಳನ್ನು ತೆಗೆದಿರಿಸುವುದು ಮತ್ತು ಹಲವು ಆಂತರಿಕ ವಿಕೃತಿಗಳಿಗೆ ಕಾರಣವಾಯಿತು.

ಸಮಾಜವಾದಿ ಹಾದಿಯಲ್ಲಿ ನಡೆದ ಮೊದಲ ದೇಶವಾಗಿ ಯಾವುದೇ ಮಾದರಿ ಉದಾಹರಣೆಗಳು ಇರಲಿಲ್ಲ. ಪ್ರತಿಯೊಂದಕ್ಕೂ ಮೊದಲ ಮಾದರಿ ತಾವೇ ತಯಾರಿಸ ಬೇಕಿತ್ತು. ಈ ಪ್ರಕ್ರಿಯೆಯಲ್ಲಿ ಚರ್ಚೆ ವಾದ-ವಿವಾದಗಳು ಸ್ವಾಭಾವಿಕ. ಈ ಚರ್ಚೆ ವಾದ-ವಿವಾದಗಳು ಸಾಧ್ಯವಾದಷ್ಟು ಪ್ರಜಾಸತ್ತಾತ್ಮಕವಾಗಿ ನಡೆದು, ಬೇಗನೆ ಸರ್ವಸಮ್ಮತ ನಿರ್ಧಾರಕ್ಕೆ ಬರುವುದು ಯಾವಾಗಲೂ ಸಾಧ್ಯವಿರಲಿಲ್ಲ. ಇದು ಭಿನ್ನಮತದ ದಮನದಂತಹ ವಿಕೃತಿಗಳಿಗೆ ಕಾರಣವಾಯಿತು.

ಅಕ್ಟೋಬರ್ ಕ್ರಾಂತಿಗೆ ಮತ್ತು ಆ ಮೇಲಿನ ಹಂತಗಳಲ್ಲೂ ಭಾರಿ ತ್ಯಾಗ-ಬಲಿದಾನಗಳನ್ನು ಮಾಡಿದ ದುಡಿಯುವ ಜನತೆಯ ಜೀವನ ಮಟ್ಟದಲ್ಲಿ ಸತತ ಏರಿಕೆಯ ಆಶೋತ್ತರಗಳನ್ನು ಈಡೇರಿಸುವುದು, ಇದಕ್ಕಾಗಿ ಸತತವಾಗಿ ತೀವ್ರ ಬೆಳವಣಿಗೆಯ ದರಕ್ಕೆ ಒತ್ತಡ ಹಲವು ಅವಸರದ ತಪ್ಪು ನಿರ್ಧಾರಗಳಿಗೆ, ವಿಕೃತಿಗಳಿಗೆ ಕಾರಣವಾಯಿತು.

ಸೋವಿಯತ್ ಒಕ್ಕೂಟದ ಈ ಸಾಧನೆಗಳು, ಕೊಡುಗೆಗಳು(ತೀವ್ರ ಅಡೆತಡೆಗಳಿ ದ್ದಾಗ್ಯೂ) ಅದರ ವಿಘಟನೆಯಿಂದಾಗಿ ಅಪ್ರಸ್ತುತವಾಗಿವೆ ಎಂದು ಪರಿಗಣಿಸಬೇಕಾಗಿಲ್ಲ. ಅದರ ನ್ಯೂನ್ಯತೆ, ವಿಕೃತಿ, ತಪ್ಪುಗಳನ್ನು ಮಾಡದೆ (ಅಥವಾ ಅಂತಹ ತೀವ್ರ ಅಡೆತಡೆಗಳು ಇಲ್ಲವಾದಾಗ) ಕೊಡುಗೆಗಳನ್ನು, ಸಾಧನೆಗಳನ್ನು ಪುನರಾವರ್ತಿಸಲು ಪ್ರಯತ್ನಿಸಬಹುದು. ಇದು ಈ ಎಪ್ಪತ್ತು ವರ್ಷಗಳ ಅನುಭವದ ಸಾರ ಎನ್ನಬಹುದು.

**ಪೆರೆಸ್ತ್ರೊಯಿಕಾ-ಗ್ಲಾಸ್‌ನೋಸ್ತ್(೧೯೮೫-೧೯೯)**

೧೯೮೦ರ ದಶಕದ ಆರಂಭದ ಹೊತ್ತಿಗೆ ತಲೆದೋರಿದ್ದ ಆರ್ಥಿಕ ಸ್ಥಗಿತತೆ, ಜೀವನ ಮಟ್ಟ ಸಹ ಸ್ಥಗಿತಗೊಂಡಿದ್ದರ ಬಗ್ಗೆ ಜನತೆಯ ತೀವ್ರ ಅತೃಪ್ತಿ, ಪ್ರಜಾಪ್ರಭುತ್ವ ಮತ್ತು ನಾಗರಿಕ ಹಕ್ಕುಗಳ ಉಲ್ಲಂಘನೆಗಳಿಗೆ ಕಾರಣವಾದ ಅಧಿಕಾರಶಾಹಿಯ ಬೆಳವಣಿಗೆ, ಅಮೆರಿಕಾದ ಮಿಲಿಟರಿ ಬೆದರಿಕೆ, ವಿಸ್ತಾರದ ಹಾದಿಯಿಂದ ತೀವ್ರವಾದ ಬೆಳವಣಿಗೆ ಹಾದಿಗೆ ಬದಲಾಯಿಸುವುದರಲ್ಲಿ ವಿಳಂಬ, ಕೃಷಿ-ಕೈಗಾರಿಕೆಗಳ ದಕ್ಷತೆ ಹೆಚ್ಚಿಸುವ ಸವಾಲು- ಇವೆಲ್ಲ ಒಟ್ಟಾಗಿ ಬಿಕ್ಕಟ್ಟಿನ ಸ್ಥಿತಿ ಬಂದಿತ್ತು. ೧೯೮೫ರಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ನಾಯಕತ್ವ ಇದಕ್ಕಾಗಿ ಸಮಾಜವಾದಿ ವ್ಯವಸ್ಥೆಯಲ್ಲಿ ಸಮಗ್ರ ಸುಧಾರಣೆಗಳನ್ನು ತರುವ ಬಗ್ಗೆ ತೀವ್ರ ಚರ್ಚೆ ನಡೆಸಿತು. ಇದು ೧೯೮೬ರಲ್ಲಿ ನಡೆದ ಪಕ್ಷದ ೨೭ನೆಯ ಮಹಾಧಿವೇಶನದಲ್ಲಿ ನಿಶ್ಚಿತ ರೂಪ ತಳೆದವು. ೨೭ನೆಯ ಮಹಾಧಿವೇಶನದಲ್ಲಿ ಅಂಗೀಕರಿಸಲಾದ ನಿರ್ಣಯಗಳಲ್ಲಿ ಸಮಗ್ರ ಮತ್ತು ತೀವ್ರ ಸುಧಾರಣೆಗಳಿಗೆ ಹಲವು ನಿರ್ದಿಷ್ಟ ಪ್ರಸ್ತಾಪಗಳಿದ್ದವು. ವ್ಯಾಪಕ ಹಂತದಿಂದ ತೀವ್ರತೆಯ ಹಂತಕ್ಕೆ ಆರ್ಥಿಕ ಬೆಳವಣಿಗೆಯನ್ನು ಬದಲಾಯಿಸಲು ಮತ್ತು ವೇಗವರ್ಧನೆಗೆ ಮಹಾಧಿವೇಶನ ಹಲವು ನಿರ್ದೇಶನ ಸೂತ್ರಗಳನ್ನು ಕೊಟ್ಟಿತು. ವೈಜ್ಞಾನಿಕ ಮತ್ತು ತಾಂತ್ರಿಕ ಕ್ರಾಂತಿಯ ಫಲಗಳನ್ನು ಬಳಸಿ ಆರ್ಥಿಕವನ್ನು ಆಧುನೀಕರಿಸುವುದು, ಸಮಗ್ರ ಆಹಾರ ಕಾರ್ಯಕ್ರಮಕ್ಕೆ ಆದ್ಯತೆ, ಆರ್ಥಿಕ ನಿರ್ವಹಣಾ ಕ್ರಮಗಳನ್ನು ಹೊಸ ಸವಾಲುಗಳನ್ನು ಎದುರಿಸಲು ತಕ್ಕಂತೆ ಬದಲಾಯಿಸುವುದು, ವಿಶ್ವಶಾಂತಿ ಸಾಧಿಸಲು ಸಮಗ್ರ ನಿಶ್ಶಸ್ತ್ರೀಕರಣಕ್ಕೆ ಹೊಸ ದಿಟ್ಟ ಪ್ರಸ್ತಾವಗಳನ್ನು ಮಂಡಿಸುವುದು, ಹೆಚ್ಚೆ ಹೆಚ್ಚು ಸಮಾಜದ ಪ್ರಜಾಪ್ರಭುತ್ವೀಕರಣ, ಜನತೆಯ ಸಮಾಜವಾದಿ ಸ್ವರಾಜ್ಯಕ್ಕೆ ಪ್ರೋ ಜನತೆಯ ಜತೆ ಪಕ್ಷದ ಸದಸ್ಯರ ಸಂಬಂಧ ಉತ್ತಮಪಡಿಸುವುದು ಇತ್ಯಾದಿ ಆ ನಿರ್ದೇಶನ ಸೂತ್ರಗಳು ಆಗಿದ್ದವು. ಆರ್ಥಿಕ-ಸಾಮಾಜಿಕ ಬೆಳವಣಿಗೆಯ ೧೫ ವರ್ಷಗಳ(೨೦ನೆಯ ಶತಮಾನದ ಕೊನೆಯವರೆಗಿನ ಅವಧಿಗೆ) ನೀಲನಕ್ಷೆ, ೧೨ನೆಯ ಯೋಜನೆಯ ಮುಖ್ಯ ಅಂಶಗಳ ಬಗ್ಗೆ ನಿರ್ದೇಶನವನ್ನು- ೨೭ನೆಯ ಮಹಾಧಿವೇಶನ ಅಂಗೀಕರಿಸಿತು. ಕಮ್ಯುನಿಸ್ಟ್ ಪಕ್ಷದ ಕಾರ್ಯಕ್ರಮವನ್ನು ಪುನರ್ನವೀಕರಿಸಿ ಅಂಗೀಕರಿಸಲಾಯಿತು. ಹೊಸ ಕಾರ್ಯಕ್ರಮ ಸಮಾಜವಾದಿ ವ್ಯವಸ್ಥೆಯನ್ನು ಬೆಳೆಸಿ ಕ್ರೋಢೀಕರಿಸಲು ೭೦ ವರ್ಷಗಳ ಸತತ ಪ್ರಯತ್ನದ ಫಲಾಫಲಗಳನ್ನು ಪರಾಮರ್ಶೆ ಮಾಡಿತು. ವಿವಿಧ ಹಂತಗಳಲ್ಲಿ ಪಕ್ಷ ಕೈಗೊಂಡ ನೀತಿಗಳ ಪುನರ್ವಿಮರ್ಶೆ ಮಾಡಿತು. ಪ್ರಸ್ತುತ ಜಾಗತಿಕ ಪರಿಸ್ಥಿತಿಯನ್ನು ವಿಶ್ಲೇಷಿಸಿ, ಪಕ್ಷದ ಕರ್ತವ್ಯಗಳು ಮತ್ತು ಕಾರ್ಯ ಯೋಜನೆಯನ್ನು ಮಂಡಿಸಿತು.

ಸೋವಿಯತ್ ಕಮ್ಯುನಿಸ್ಟ್ ಪಕ್ಷದ ೨೭ನೆಯ ಮಹಾಧೀವೇಶನದಲ್ಲಿ ಪಕ್ಷ ಮುಂದಿಟ್ಟ ಸಮಗ್ರ ಸುಧಾರಣೆಗಳು, ಬೆಳವಣಿಗೆಯ ವೇಗವರ್ಧನೆ ಮತ್ತು ಪ್ರಜಾ ಪ್ರಭುತ್ವೀಕರಣದ ಪ್ರಸ್ತಾವಗಳಿಗೆ ಸೋವಿಯತ್ ಒಕ್ಕೂಟದಲ್ಲಿ, ಇಡೀ ಜಗತ್ತಿನಲ್ಲೂ ಸಂಭ್ರಮದ ಸ್ವಾಗತ ಸಿಕ್ಕಿತು. ಎಲ್ಲೆಡೆ ಈ ಬಗ್ಗೆ ಹಿಂದೆಂದೂ ಕಾಣದ ಆಸಕ್ತಿ, ಉತ್ಸಾಹ ಕಂಡುಬಂತು. ೨೭ನೆಯ ಮಹಾಧಿವೇಶನದಲ್ಲಿ ಪಕ್ಷದ ಮಹಾಕಾರ್ಯದರ್ಶಿಯಾಗಿ ಆಯ್ಕೆಯಾದ ಮಿಖೈಲ್ ಗೋರ್ಬಚೆವ್ ಈ ಮಹಾಧಿವೇಶನದ ಪ್ರಸ್ತಾವಗಳನ್ನು ಜನತೆಯ ಬಳಿ ಕೊಂಡೊಯ್ಯಲು ಎರಡು ಪದಗಳಲ್ಲಿ ಅದನ್ನು ಸಂಕ್ಷೇಪಿಸುವ ಪ್ರಯತ್ನ ಮಾಡಿದರು. ಗ್ಲಾಸ್‌ನೋಸ್ತ್ ಮತ್ತು ಪೆರೆಸ್ತ್ರೊಯಿಕ-ಇವೇ ಆ ಎರಡು ರಷ್ಯನ್ ಪದಗಳು. ಗ್ಲಾಸ್‌ನೋಸ್ತ್(ಓಪನ್‌ನೆಸ್)ಅಂದರೆ ಮುಕ್ತತೆ ಎಂದು ರಷ್ಯಾನ್‌ನಲ್ಲಿ ಅರ್ಥ. ಪೆರೆಸ್ತ್ರೊಯಿಕ ಎಂದರೆ ಪುನರ್‌ರಚನೆ(ರಿಸ್ಟ್ರಕ್ಚರಿಂಗ್)ಎಂದರ್ಥ. ಗೋರ್ಬಚೇವ್ ಈ ಎರಡು ಶಬ್ದಗಳ ಮೂಲಕ ಸಮಗ್ರ ಸುಧಾರಣೆಗಳ ಆಶಯ ಮತ್ತು ಸಾರವನ್ನು ಸೋವಿಯತ್ ಮತ್ತು ಜಗತ್ತಿನ ಜನತೆಗೆ ಹರಡಿ ಆ ಬಗ್ಗೆ ಪ್ರಜ್ಞೆ, ಆಸಕ್ತಿ ಮತ್ತು ಉತ್ಸಾಹ ತುಂಬುವುದರಲ್ಲಿ ಸಾಕಷ್ಟು ಯಶಸ್ವಿಯಾದರು. 'ಪೆರೆಸ್ತ್ರೊಯಿಕ' ಎಂಬ ಅವರ ಪುಸ್ತಕ ಜಗತ್ತಿನಲ್ಲೇ ಜನಪ್ರಿಯವಾಯಿತು. "ಈ ಮಹಾನ್ ಕ್ರಾಂತಿಯ ೭೦ನೆಯ ವಾರ್ಷಿಕೋತ್ಸವ ಒಂದು ಹೆಮ್ಮೆಯ ಕ್ಷಣ.. ಸಮಾಜವಾದಕ್ಕಾಗಿ ದುಡಿದ ಲಕ್ಷಾಂತರ ಜನರನ್ನು ನೆನೆಸಿಕೊಳ್ಳುವ ಒಂದು ನೆನಪಿನ ಕ್ಷಣ. ಸಮಾಜವಾದದ ವಿಜಯಗಳು, ಸೋಲುಗಳ ಬಗ್ಗೆ ಒಂದು ಚಿಂತನೆಯ ಕ್ಷಣ. ವಿಶ್ವದ ಭವಿಷ್ಯದ ಬಗ್ಗೆ ಒಂದು ಮುಂಗಾಣ್ಕೆಯ ಕ್ಷಣ.." ಎಂದು ಗೋರ್ಬಚೆವ್ ಅಕ್ಟೋಬರ್ ಕ್ರಾಂತಿಯ ೭೦ನೆಯ ವಾರ್ಷಿಕೋತ್ಸವದಲ್ಲಿ ಕೊಟ್ಟ ಸಮಾಜವಾದಿ ಪುನರ್ನವೀಕರಣದ ಚೈತನ್ಯಶೀಲ ಸಂದೇಶ ಇಡೀ ಜಗತ್ತಿನ ಜನತೆಯಲ್ಲಿ ಪುಳಕ ತಂದಿತು.

೨೭ನೆಯ ಮಹಾಧಿವೇಶನ ನಿರ್ಣಯದಂತೆ ವಿಶ್ವಶಾಂತಿಗೆ ಗೋರ್ಬಚೆವ್ ಸೋವಿಯತ್ ಒಕ್ಕೂಟದ ಕಡೆಯಿಂದ ಹಲವು ಹೊಸ ದಿಟ್ಟ ಪ್ರಸ್ತಾವಗಳನ್ನು ಪುಂಖಾನುಪುಂಖವಾಗಿ, ಅಮೆರಿಕ ಮತ್ತು ಪಶ್ಚಿಮ ಯುರೋಪಿನ ದೇಶಗಳ ಮುಂದಿಟ್ಟರು. ಹಲವು ಸೋವಿಯತ್

ಶಸ್ತ್ರಾಸ್ತ್ರ ಕಡಿತಗಳು, ಮೊದಲ ಅಣ್ವಸ್ತ್ರ ದಾಳಿ ಸನ್ಯಾಸ, ಹೊಸ ರೀತಿಯ ಶಸ್ತ್ರಾಸ್ತ್ರ ಬೆಳವಣಿಗೆ ಸನ್ಯಾಸ -ಮುಂತಾದ ಸ್ವಯಂ-ಸ್ಫೂರ್ತ ನಿರ್ಧಾರಗಳನ್ನು ಘೋಷಿಸಿದರು. ಸಾಮೂಹಿಕ ನಾಶದ ಮಾರಕಾಸ್ತ್ರಗಳನ್ನು ತೀವ್ರವಾಗಿ ಕಡಿತ ಮಾಡಿ ೨೦೦೦ರೊಳಗೆ ಪೂರ್ಣ ನಾಶ ಮಾಡುವ ಅವರ ಪ್ರಸ್ತಾವಕ್ಕೆ ಪಾಶ್ಚಿಮಾತ್ಯ ಜಗತ್ತಿನಲ್ಲೂ ಜನತೆಯ ಅತ್ಯುತ್ಸಾಹಭರಿತ ಸಂಭ್ರಮದ ಪ್ರತಿಕ್ರಿಯೆ ವ್ಯಕ್ತವಾಯಿತು. ಇದು ಪಾಶ್ಚಿಮಾತ್ಯ ಸರ್ಕಾರಗಳು ಅದರಲ್ಲೂ ಅಮೆರಿಕನ್ ಸರ್ಕಾರದ ಮೇಲೆ ಭಾರಿ ಒತ್ತಡ ಹೇರಿತು. ಇದಕ್ಕೆ ಗೋರ್ಬಚೇವ್‌ರ ನಾಯಕತ್ವದಲ್ಲಿ ಸೋವಿಯತ್ ಶಾಂತಿ ದಾಳಿ ಎನ್ನುತ್ತಾರೆ. ಇದು ಗೋರ್ಬಚೇವ್‌ಗೆ ವಿಶ್ವದಲ್ಲೆಲ್ಲಾ ಶಾಂತಿಯ ಹರಿಕಾರ ಎಂಬ ಪ್ರಸಿದ್ಧಿ ತಂದುಕೊಟ್ಟಿತು. ವಿಶ್ವಶಾಂತಿಗೆ ಸೋವಿಯತ್ ಒಕ್ಕೂಟ ಪೂರ್ಣವಾಗಿ ಬದ್ಧವಾಗಿದೆ. ಇದು ಸೋವಿಯತ್ ಒಕ್ಕೂಟಕ್ಕೂ ಇಡೀ ವಿಶ್ವಕ್ಕೂ ಒಳ್ಳೆಯದು. ಶಸ್ತ್ರಾಸ್ತ್ರ ಪೈಪೋಟಿಯನ್ನು ತೀವ್ರವಾಗಿ ಕಡಿತ ಮಾಡಿ ನಾಶ ಮಾಡುವ ಮತ್ತು ಆ ಮೂಲಕ ಸಿಗುವ ಅಪಾರ ಸಂಪನ್ಮೂಲಗಳನ್ನು ಜನರ ಜೀವನಮಟ್ಟ ಉತ್ತಮಪಡಿಸಲು ತೀವ್ರ ಬೆಳವಣಿಗೆಯ ಹೂಡಿಕೆಗೆ ಬಳಸುವುದು, ಗೋರ್ಬಚೆವ್ 'ಶಾಂತಿದಾಳಿ'ಯ ಉದ್ದೇಶವಾಗಿತ್ತು. ಅಲ್ಲದೆ ಸೋವಿಯತ್ ಒಕ್ಕೂಟದ ರಕ್ಷಣೆಗೆ ಹೆಚ್ಚೆ ಹೆಚ್ಚು ಶಸ್ತ್ರಾಸ್ತ್ರಗಳ ಉತ್ಪಾದನೆಯ ಬದಲು ಶಾಂತಿ ಬಗ್ಗೆ ತೀವ್ರ ರಾಜಕೀಯ ಪ್ರಚಾರದ, ಸೋವಿಯತ್ ಮತ್ತು ವಿಶ್ವದ ಜನತೆಯ ರಾಜಕೀಯ ಪ್ರಜ್ಞೆ ಎತ್ತರಿಸುವ ಹೊಸ ವಿಧಾನ ಅನುಸರಿಸಿದರು. ಮೊದಲ ಹಂತಗಳಲ್ಲಿ ಇದು ಸಾಕಷ್ಟು ಯಶಸ್ವಿಯೂ ಆಯಿತು. ಆಗಿದ್ದ ಅಣ್ವಸ್ತ್ರಗಳ ಐದನೆಯ ಒಂದು ಭಾಗ ಮತ್ತು ದೂರಗಾಮಿ ಕ್ಷಿಪಣಿಗಳಲ್ಲೂ ಕಡಿತವಾಯಿತು. ಎರಡನೆಯ ಮಹಾಯುದ್ಧದ ಭೀಕರ ಅನುಭವ ಇದ್ದ ಸೋವಿಯತ್ ಜನತೆ ಸಹ 'ಶಾಂತಿದಾಳಿ'ಯನ್ನು ಉತ್ಸಾಹದಿಂದ ಸ್ವಾಗತಿಸಿದರು. ಶಾಂತಿ ಮತ್ತು ಬೆಳವಣಿಗೆಯ ಈ ಹೊಸ ಪ್ರಯೋಗವನ್ನು ಜಗತ್ತಿನ ಜನ ಅತಿ ಕುತೂಹಲದಿಂದ ಗಮನಿಸುತ್ತಿದ್ದರು.

ಸಮಾಜವಾದಿ ಪ್ರಜಾಪ್ರಭುತ್ವ ಬೆಳೆಸುವ ನಿಟ್ಟಿನಲ್ಲೂ ಉತ್ತಮ ಆರಂಭಿಕ ಪ್ರಗತಿ ಆಯಿತು. ಸುಪ್ರೀಮ್ ಸೋವಿಯತ್ ಬದಲು, ಜನತಾ ಪ್ರತಿನಿಧಿಗಳ ಕಾಂಗ್ರೆಸ್ (ನಮ್ಮ ಪಾರ್ಲಿಮೆಂಟಿನಂತೆ) ಅಸ್ತಿತ್ವಕ್ಕೆ ಬಂತು. ಈ ಕಾಂಗ್ರೆಸ್‌ನ ಮೂರನೆಯ ಎರಡು ಭಾಗ ಸದಸ್ಯರು ನೇರವಾಗಿ ಆಯ್ಕೆಯಾದರು. ಎಲ್ಲಾ ಹಂತಗಳಲ್ಲೂ ಸೋವಿಯತ್ ಚುನಾಯಿತ ಸಂಸ್ಥೆ ಆಗಿರಬೇಕು. ಪಕ್ಷ ತನ್ನ ಸದಸ್ಯರನ್ನು ಚುನಾವಣೆಗೆ ಅಭ್ಯರ್ಥಿ ಮಾಡುವ ಮೂಲಕ ಭಾಗವಹಿಸಬೇಕು. ಪಕ್ಷ ಸ್ಥೂಲ ನೀತಿ ನಿರ್ದೇಶನ, ಕಾರ್ಯಕ್ರಮಗಳನ್ನು ಕೊಡಬೇಕು. ಕಾನೂನು ಮಾಡುವ, ಕಾರ್ಯಕ್ರಮಗಳ ಜಾರಿ, ದೈನಂದಿನ ಆಡಳಿತ ಸೋವಿಯತ್ ಗಳದ್ದು ಆಗಿರಬೇಕು ಎಂಬ ಬದಲಾವಣೆ ತರಲಾಯಿತು. ಸೋವಿಯತ್‌ಗಳಲ್ಲಿ ತೀವ್ರ ಚರ್ಚೆಗಳಾದವು. ಭಿನ್ನಮತದ ಬಗ್ಗೆ ಸರ್ಕಾರ, ಪಕ್ಷಗಳ ನೀತಿ ಬದಲಾಗಿ ಸಾಕಷ್ಟು ಉದಾರವಾಯಿತು. ನಿಜವಾದ ಮುಕ್ತತೆ(ಗ್ಲಾಸ್‌ನೋಸ್ತ್) ಕಾಣಲಾರಂಭಿಸಿತು. ದೇಶದ ಎಲ್ಲಾ ಸಮಸ್ಯೆಗಳ, ಪರಿಹಾರದ ಹಾದಿಗಳ ಬಗ್ಗೆ ಆವೇಶಭರಿತ ಸಾಮೂಹಿಕ ಚರ್ಚೆ ಗಳಾದವು. ಗ್ಲಾಸ್‌ನೋಸ್ತ್ ಪತ್ರಿಕೆ, ಟೀವಿ, ರೇಡಿಯೋ ಮುಂತಾದ ಸಾಮೂಹಿಕ ಮಾಧ್ಯಮಗಳಲ್ಲೂ, ಪುಸ್ತಕ ಸಾಹಿತ್ಯಗಳಲ್ಲೂ ಪರಿಣಾಮ ಬೀರಿದವು. ಪ್ರಸಿದ್ಧ ಭಿನ್ನಮತೀಯರಾಗಿದ್ದ ಸಖರೋವ್ ಮತ್ತು ಇತರರನ್ನು ಬಿಡುಗಡೆ ಮಾಡಲಾಯಿತು. ಸಖರೋವ್ ಜನತಾ ಪ್ರತಿನಿಧಿಗಳ ಕಾಂಗ್ರೆಸ್ ಸದಸ್ಯನಾಗಿ ಆಯ್ಕೆಯಾದ ಕೂಡಾ. ಕಾಂಗ್ರೆಸ್‌ನ ಮತ್ತು ಸೋವಿಯತ್‌ಗಳ ವಿದ್ಯಮಾನವನ್ನು 'ನೇರ ಪ್ರಸಾರ' ಮಾಡುವ ಪದ್ಧತಿಯನ್ನು ಜಗತ್ತಿನಲ್ಲೇ ಮೊದಲ ಬಾರಿಗೆ ತರಲಾಯಿತು. ಕಾಂಗ್ರೆಸ್ ಅಧ್ಯಕ್ಷರನ್ನು ನೇರವಾಗಿ ಆರಿಸುವ ಪದ್ಧತಿ ಜಾರಿಗೆ ಬಂದಿತು. ಜನತಾ ಪ್ರತಿನಿಧಿಗಳ ಕಾಂಗ್ರೆಸ್ ಗೋರ್ಬಚೇವ್‌ರನ್ನು ಅಧ್ಯಕ್ಷರಾಗಿ ಆರಿಸಿತು. ಒಟ್ಟಾರೆಯಾಗಿ ಶಾಂತಿ, ಪ್ರಜಾಪ್ರಭುತ್ವ ಮತ್ತು ಮುಕ್ತತೆಯಲ್ಲಿ ಉತ್ತಮ ಆರಂಭಿಕ ಪ್ರಗತಿ 'ಗ್ಲಾಸ್‌ನೋಸ್ತ್'- ಪೆರೆಸ್ಟ್ರೊಯಿಕ' ಬಗ್ಗೆ ಜನತೆಯ ನಿರೀಕ್ಷೆಗಳನ್ನು ಗಗನಕ್ಕೇರಿಸಿತು.

ಆದರೆ ಪೆರೆಸ್ಟ್ರೊಯಿಕ ಮತ್ತು ಗ್ಲಾಸ್‌ನೋಸ್ತ್ ಕ್ರಮೇಣ ಹಲವು ಭಾಷ್ಯಗಳಿಗೆ ಅರ್ಥಗಳಿಗೆ ಒಳಗಾಗುತ್ತಾ ಹೋಯಿತು. ಪಕ್ಷ, ಸರ್ಕಾರ ಮತ್ತು ಸೋವಿಯತ್ ಸಮಾಜದಲ್ಲೂ ಈ ಹಲವು ಭಾಷ್ಯಗಳಿಗೆ-ಅರ್ಥಗಳಿಗೆ ಅಂಟಿಕೊಂಡ ಹಲವು ಬಣಗಳು ಹುಟ್ಟಿಕೊಂಡವು. ೨೭ನೆಯ ಮಹಾಧಿವೇಶನ ಹಾಕಿಕೊಟ್ಟಿದ್ದ ಹಾದಿಯಲ್ಲಿ ಹೋಗುವ ಬದಲು, ಮುಂದಿನ ಹಾದಿಯ ಬಗ್ಗೆ ಚರ್ಚೆ ವಿವಾದ ಆರಂಭವಾಯಿತು. ಇಂತಹ ಚರ್ಚೆ ವಿವಾದ ಸೋವಿಯತ್ ಸಮಾಜದಲ್ಲಿ ಹೊಸತೇನಲ್ಲ. ಸೋವಿಯತ್ ಕಮ್ಯುನಿಸ್ಟ್ ಪಕ್ಷ ಮತ್ತು ಸರ್ಕಾರದ ಹಿರಿಯ ನಾಯಕತ್ವ ಈ ಚರ್ಚೆ ವಿವಾದಗಳನ್ನೆಲ್ಲಾ ಕ್ರೋಢೀಕರಿಸಿ, ಸಂಯೋಜಿಸಿ ಸಾಧ್ಯವಾದಷ್ಟು ಸರ್ವಸಮ್ಮತ ಹಾದಿ ಆಯ್ಕೆ ಮಾಡುವುದರಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿದ್ದರು. ಗೋರ್ಬಚೆವ್ ಮತ್ತು ಅವರ ಸುತ್ತಲಿನ ನಾಯಕತ್ವ ಈ ಪಾತ್ರ ವಹಿಸುತ್ತಾರೆ ಎಂಬ ನಿರೀಕ್ಷೆ ಇತ್ತು. ಗೋರ್ಬಚೇವ್

ಒಮ್ಮೆ ಈ ಬಣದ, ಇನ್ನೊಮ್ಮೆ ಆ ಬಣದ ವಕ್ತಾರನಾಗಿ; ಮತ್ತೊಮ್ಮೆ ಎಲ್ಲಾ ಬಣಗಳನ್ನು ಕ್ರೋಢೀಕರಿಸಿ ಒಮ್ಮತ ತರುವ ನಾಯಕ-ಈ ರೀತಿ ಬಹುಪಾತ್ರಗಳನ್ನು ವಹಿಸಲಾರಂಭಿಸಿದರು. ಹಿಂದೆ ಇದ್ದಂತೆ ಸರ್ವಸಮ್ಮತ ಹಾದಿ ಆಯ್ಕೆ ಮಾಡುವುದರಲ್ಲಿ ನಿರ್ಣಾಯಕ ಪಾತ್ರ ವಹಿಸುವುದರಲ್ಲಿ ವಿಫಲರಾದರು. ಅದರಲ್ಲೂ ಆರ್ಥಿಕ ನೀತಿಗಳಿಗೆ ಬಂದಾಗ ಚರ್ಚೆ ವಿವಾದಗಳು ಹೆಚ್ಚು ಹೆಚ್ಚು 'ಅರಾಜಕ'ವಾದವು. ಹಲವು ಹಾದಿಗಳು/ಬಣಗಳು ಹುಟ್ಟಿಕೊಂಡವು. ಸೋವಿಯತ್ ಒಕ್ಕೂಟ ಈ ಬಣಗಳ ತಿಕ್ಕಾಟದ ರಣರಂಗವಾಯಿತು.

**ಈ ತಿಕ್ಕಾಟದಲ್ಲಿ ಹೊಮ್ಮಿದ ಮೂರು ಹಾದಿಗಳು ಹೀಗಿವೆ:** ಆಗಿದ್ದ ಸಮಾಜವಾದಿ ವ್ಯವಸ್ಥೆಯ ಚೌಕಟ್ಟಿನೊಳಗೆ ಸಮಗ್ರ ತೀವ್ರ ಸುಧಾರಣೆಗಳನ್ನು ತರಲು ಪಕ್ಷದ ೧೭ನೆಯ ಮಹಾಧಿವೇಶನ ನಿರ್ಧರಿಸಿದ ಯೋಜನೆಗಳನ್ನು ಜಾರಿಗೆ ತರುವುದು ಒಂದು ಹಾದಿ. ಉತ್ತರ ಮತ್ತು ಪಶ್ಚಿಮ ಯುರೋಪಿನ ಸೋಶ್ಯಲಿಸ್ಟ್ ಪಕ್ಷಗಳ(ಸೋಶಿಯಲ್ ಡೆಮೊಕ್ರಾಟಿಕ್ ಎನ್ನುತ್ತಾರೆ ಇದಕ್ಕೆ) ಬಂಡವಾಳಶಾಹಿ-ಕಾರ್ಮಿಕ ವರ್ಗಗಳ ನಡುವೆ ಸಮಾಜಾಯಿಷಿ ಆಧರಿಸಿದ್ದು ಇನ್ನೊಂದು ಹಾದಿ. 'ಮಾರುಕಟ್ಟೆ ಆರ್ಥಿಕ' ಸ್ಥಾಪನೆಯ ಹೆಸರಿನಲ್ಲಿ ಬಂಡವಾಳಶಾಹಿ ಸ್ಥಾಪಿಸುವುದು ಮೂರನೆಯ ಹಾದಿ. ಎರಡನೆಯ ಹಾದಿ ಸಹ ಬಹಳ ಮಟ್ಟಿಗೆ ಬಂಡವಾಳಶಾಹಿ ವ್ಯವಸ್ಥೆಯ ಕಡೆಯೇ ವಾಲುತ್ತಿತ್ತು. ಗೋರ್ಬಚೆವ್ ಮೊದಮೊದಲು ಎರಡನೆಯ ಬಣದ ಪರವಾಗಿದ್ದರು. ಕ್ರಮೇಣ ಮೂರನೆಯ ಬಣ ಅಮೆರಿಕನ್ ಸರ್ಕಾರದ ಬೆಂಬಲದಿಂದ ಪ್ರಬಲವಾಗುತ್ತಿದ್ದಂತೆ ಅದರ ಒತ್ತಡಕ್ಕೆ ಒಳಗಾಗಿ ಹೊಯ್ದಾಡುತ್ತಿದ್ದರು. ಗ್ಲಾಸ್‌ನೋಸ್ತ್ ಮತ್ತು ಪೆರೆಸ್ತ್ರೊಯಿಕಾದ ಹಲವು ಭಾಷ್ಯಗಳು ಅರ್ಥಗಳು ಒದಗಿಸಿದ ಅವಕಾಶಗಳ ದುರುಪಯೋಗ ಮಾಡಿ ಹಲವು ನಕಾರಾತ್ಮಕ ಪ್ರವೃತ್ತಿಗಳು ಮೂಡಿ ಬರಲಾರಂಭಿಸಿದವು. ಸಮಾಜವಾದದ ಸಮಸ್ಯೆಗಳಿಗೆ ಪರಿಹಾರ ಎಂದು ಒಂದೊಂದಾಗಿ ಬಂಡವಾಳಶಾಹಿ ಪಥ್ಯಗಳನ್ನು ಸೂಚಿಸಲಾಯಿತು. ಈ ನಕಾರಾತ್ಮಕ ಪ್ರವೃತ್ತಿಗಳು ಹಿಂದಿನ ಸಮಾಜವಾದಿ ಸಾಧನೆಗಳನ್ನೇ ಸಂಪೂರ್ಣವಾಗಿ ನಿರಾಕರಿಸುವ ಮಟ್ಟದವರೆಗೆ ತೀಕ್ಷ್ಣವಾಗಿ ವ್ಯಕ್ತಗೊಂಡವು. ಸೋವಿಯತ್ ಭೂತಕಾಲದ ಅ-ಚಾರಿತ್ರಿಕ (ಹಲವು ಬಾರಿ ಸತ್ಯಕ್ಕೆ ದೂರವಾದ) ಟೀಕೆ, ಪಾಶ್ಚಿಮಾತ್ಯ ದೇಶಗಳಿಗೆ ಸಂಬಂಧಿಸಿದ (ಬಂಡವಾಳಶಾಹಿ ವ್ಯವಸ್ಥೆ ಸೇರಿದಂತೆ) ಎಲ್ಲದರ ಬಗ್ಗೆ ಅಂಧವಿಶ್ವಾಸ ವ್ಯಾಪಕವಾಯಿತು. ಹಲವು ಬಾರಿ ಇಂತಹ ಮಾತುಗಳು ಪಕ್ಷದ, ಸರ್ಕಾರದ ಹಿರಿಯ ನಾಯಕರುಗಳಿಂದ ಬಂದು ಜನತೆಯನ್ನು ಮತ್ತು ಪಕ್ಷದ ಕಾರ್ಯಕರ್ತರನ್ನು ಗೊಂದಲಕ್ಕೀಡು ಮಾಡಿದವು, ನಿಶ್ಯಸ್ತ್ರಗೊಳಿಸಿದವು. ಆರ್ಥಿಕ ನೀತಿಗಳಲ್ಲಿ ಯಾವುದೇ ಸ್ಪಷ್ಟ ದಿಕ್ಕು ಇಲ್ಲದಂತಾಯಿತು. ಹಳೆಯ ವ್ಯವಸ್ಥೆಯನ್ನು 'ಕಮಾಂಡ್ ಆರ್ಥಿಕ' ಎಂದು ಜರೆದು ಕಿತ್ತು ಹಾಕುವ ಭರದಲ್ಲಿ ಯೋಜನಾ ವ್ಯವಸ್ಥೆಯಲ್ಲಿ ತೀವ್ರ ಏರುಪೇರು ಆಯಿತು. ಸೋವಿಯತ್ ಆರ್ಥಿಕದ ಆಧಾರ ಸ್ತಂಭವಾಗಿದ್ದ ಯೋಜನೆಯೇ ಅಸ್ಥಿರವಾದಾಗ, ಸ್ವಾಭಾವಿಕವಾಗಿಯೇ ಇದು ಆರ್ಥಿಕ ಅರಾಜಕತೆ ತಂದಿತು. ಯೋಜನೆ ಮತ್ತು ಮಾರುಕಟ್ಟೆಯ ಸಾವಯವ ಸಂಬಂಧ ಗಮನದಲ್ಲಿಟ್ಟುಕೊಂಡು ಅಗತ್ಯ ಮಾರುಕಟ್ಟೆ ವಿಧಾನಗಳನ್ನು ರಚಿಸುವ ೧೭ನೆಯ ಮಹಾಧಿವೇಶನದ ನಿರ್ಣಯ ಮರೆತು, ಪೂರ್ಣ ಪ್ರಮಾಣದ 'ಮಾರುಕಟ್ಟೆ ಆರ್ಥಿಕ' ಜಾರಿಗೆ ತರುವ ಪ್ರಯತ್ನ ನಡೆಯಿತು. ಅಮೆರಿಕನ್ ಆರ್ಥಿಕ ತಜ್ಞರ(ವಿಶ್ವಬ್ಯಾಂಕ್-ಐ.ಎಂ.ಎಸ್ ಸೇರಿದಂತೆ) ಪ್ರಭಾವ ಅತಿಯಾಗಿ, ಗೋರ್ಬಚೇವ್‌ನ ಹಲವು ನಿಕಟ ಸಲಹಾಗಾರರು ಆರ್ಥಿಕ ನೀತಿ ರೂಪಿಸುವ ಜವಾಬ್ದಾರಿಯನ್ನು 'ಹೈಜಾಕ್' ಮಾಡಿದರು. 'ಮಾರುಕಟ್ಟೆ ಆರ್ಥಿಕತೆ' ಜಾರಿಗೆ ತರುವುದರಲ್ಲಿ 'ಬೆಲೆ ಸುಧಾರಣೆ'ಗಳು(ಎಲ್ಲಾ ಬೆಲೆ ಗಳನ್ನು ಮಾರುಕಟ್ಟೆಯೇ ನಿರ್ಧರಿಸುವ, ಬೆಲೆ ಮೇಲೆ ಇರುವ ಎಲ್ಲಾ ಸರ್ಕಾರಿ ನಿಯಂತ್ರಣ, ನಿರ್ಬಧಗಳನ್ನು ಕಿತ್ತುಹಾಕುವ) ಅಗತ್ಯ ಮೊದಲ ಹೆಜ್ಜೆ ಎನ್ನಲಾಯಿತು.

ಇದು 'ಶಾಕ್ ಚಿಕಿತ್ಸೆ' (ಆರ್ಥಿಕಕ್ಕೆ ಶಾಕ್ ಮಾಡಿ ಏಕಾಏಕಿ ಬದಲಾಯಿಸುವ ವಿಧಾನ). ತೀವ್ರ ಬದಲಾವಣೆಗಳನ್ನು ವೇಗವಾಗಿ ತರಲು ಇದು ಅಗತ್ಯ. ಬೆಲೆ ಸುಧಾರಣೆಗಳನ್ನು ಜಾರಿ ಮಾಡಲಾಯಿತು. ಬೆಲೆಗಳು ಏರಿದವು. ಆಗಲೇ ಯೋಜನೆಯ ವ್ಯವಸ್ಥೆಯಲ್ಲಿ ತೀವ್ರ ಏರುಪೇರು ಆದ್ದರಿಂದ ಅಗತ್ಯ ವಸ್ತುಗಳ ಕೊರತೆ ಹೆಚ್ಚಿದವು. ಕೊರತೆಯಿಂದಾಗಿ ಬೆಲೆ ಇನ್ನಷ್ಟು ಏರಿದವು. ಆರ್ಥಿಕತೆಯಲ್ಲಿ ಬೆಲೆಗಳಲ್ಲಿ ಸರ್ಕಾರ ನಿಯಂತ್ರಣ/ನಿರ್ಬಂಧದ ಕ್ರಮಗಳನ್ನು ಈಗಾಗಲೇ ಹಿಂತೆಗೆದುಕೊಂಡಿದ್ದರಿಂದ ಸರ್ಕಾರ ಏನು ಮಾಡುವಂತಿರಲಿಲ್ಲ. ಆರಂಭಿಕ 'ಶಾಕ್' ನಂತರ ಪರಿಸ್ಥಿತಿ ಹತೋಟಿಗೆ ಬರುತ್ತದೆ ಎಂಬ ಗೋರ್ಬಚೇವ್ ಸಲಹಾಗಾರರ ಸಮಜಾಯಿಷಿ ಹುಸಿಯಾಯಿತು. ಕಾಂಗ್ರೆಸ್, ಸರ್ಕಾರ, ಯಾರಿಗೂ ಪರಿಸ್ಥಿತಿ ಮೇಲೆ ನಿಯಂತ್ರಣ ಇರಲಿಲ್ಲ. ಗೋರ್ಬಚೇವ್ ಅವರ ಕೆಲವು ಸಲಹೆಗಾರರು ಆರ್ಥಿಕ ನೀತಿಗಳನ್ನು 'ಹೈಜಾಕ್' ಮಾಡಿದ್ದರು. ಅವರನ್ನು ಯಾರೂ ಪ್ರಶ್ನಿಸುತ್ತಿರಲಿಲ್ಲ. 'ಬೆಲೆ ಏರಿಕೆ-ಕೊರತೆ-ಇನ್ನಷ್ಟು ಬೆಲೆ ಏರಿಕೆ'ಯ ಚಕ್ರ ಸುತ್ತುತ್ತಿದ್ದಂತೆ ಕಾಳಸಂತೆ ಆರಂಭವಾಯಿತು. ಹಿಂದೆ ಸರ್ಕಾರಿ ಅಂಗಡಿಗಳಲ್ಲಿ ಇದ್ದ ಕ್ಯೂನಲ್ಲಿ ನಿಂತ ಮೇಲಾದರೂ ಸಿಗುತ್ತಿದ್ದ ಬ್ರೆಡ್

ಮತ್ತು ಇತರ ಅಗತ್ಯ ವಸ್ತುಗಳು ಈಗ ಕಾಳಸಂತೆಯ ದುಬಾರಿ ಬೆಲೆಯಲ್ಲೂ ಅಪರೂಪವಾದವು. ಅಗತ್ಯ ವಸ್ತುಗಳಲ್ಲಿ ವೈವಿಧ್ಯತೆ, ಧಂಡಿ ಲಭ್ಯತೆ, ಅಗ್ಗದ ಬೆಲೆ ನಿರೀಕ್ಷಿಸಿದ್ದ ಜನತೆಯಲ್ಲಿ ತೀವ್ರ ಅತೃಪ್ತಿ ಹರಡಿತು. ಈ ವರ್ಷಗಳಲ್ಲಿ ಬಂಪರ್ ಬೆಳೆ ಆಗಿದ್ದರೂ, ಆರ್ಥಿಕ ನಿರ್ವಹಣೆಯಲ್ಲಿ ಅರಾಜಕತೆಯಿಂದಾಗಿ ಸರ್ಕಾರ ಆಹಾರಧಾನ್ಯ ಆಮದು ಮಾಡುವಂತಾಯಿತು. ಪರಿಸ್ಥಿತಿ ಬಿಗಡಾಯಿಸುತ್ತಾ ಹೋಯಿತು. ಕೈಗಾರಿಕೆಯಲ್ಲಿ ಸ್ವಯಂ-ಜವಾಬ್ದಾರಿ ಪದ್ಧತಿ ಮತ್ತು ಕೃಷಿಯಲ್ಲಿ ಕುಟುಂಬಗಳಿಗೆ ಕಾಂಟ್ರಾಕ್ಟ್ ಕೊಡುವ ಪದ್ಧತಿ ಸಹ ಸರಿಯಾಗಿ ಜಾರಿ ಆಗದೆ ಅಥವಾ ಕೆಲಸ ಮಾಡದೆ ಉತ್ಪಾದನೆಯಲ್ಲಿ ಏರುಪೇರಿನ ತೀವ್ರ ಸಮಸ್ಯೆ ಉಂಟಾದವು. ಜನರಲ್ಲಿ ಹೊಸ ಆರ್ಥಿಕ ನೀತಿಗಳ ಬಗ್ಗೆ ಅತೃಪ್ತಿ ತೀವ್ರವಾಗಿ ಏರಿತು.

ಪ್ರಜಾಪ್ರಭುತ್ವೀಕರಣ ಸಹ ಆರಂಭಿಕ ಸಫಲತೆಯ ನಂತರ ಕುಂಟತೊಡಗಿತು. ದೇಶದ ಅಧ್ಯಕ್ಷ ಮತ್ತು ಪಕ್ಷದ ಮಹಾಕಾರ್ಯದರ್ಶಿಯಾಗಿ ಎಲ್ಲಾ ಅಧಿಕಾರ ಗೋರ್ಬಚೇವ್‌ರಲ್ಲಿ ಕೇಂದ್ರೀಕೃತವಾಯಿತು. ರಾಜ್ಯಗಳಲ್ಲೂ ಅಧ್ಯಕ್ಷರಲ್ಲಿ ಭಾರಿ ಅಧಿಕಾರ ಕೇಂದ್ರೀಕೃತವಾಯಿತು. ಪಕ್ಷದ ಕೇಂದ್ರ ಸರ್ಕಾರದಲ್ಲೂ, ಜನತಾ ಕಾಂಗ್ರೆಸ್‌ನಲ್ಲಿ, ಸೋವಿಯತ್‌ಗಳಲ್ಲಿ ಚರ್ಚೆ ಅಲಂಕಾರಿಕವಾಗಿತ್ತು. ಅಧ್ಯಕ್ಷರ ನಿಕಟವರ್ತಿ ವಿಶೇಷ ಸಲಹಾಗಾರರು ಎಲ್ಲಾ ಕ್ಷೇತ್ರಗಳಲ್ಲಿ ನೀತಿ-ನಿರ್ದೇಶನ ಆರಂಭಿಸಿದರು. ಗೋರ್ಬಚೇವ್ ಸುಗ್ರೀವಾಜ್ಞೆಗಳ ಮೂಲಕ ಆಳಲು ಆರಂಭಿಸಿದರು. ಪ್ರಜಾಪ್ರಭುತ್ವೀಕರಣದ ಹೆಸರಲ್ಲಿ ಇವೆಲ್ಲಾ ನಡೆಯುತ್ತಿದ್ದರೂ, ಇದನ್ನು ವಿರೋಧಿಸುವವರು ಯಾರು ಇರಲಿಲ್ಲ. ವಿರೋಧಿಸಿದರೆ ಅದನ್ನು ಕೇಳುವವರೂ ಇರಲಿಲ್ಲ. ಪಕ್ಷ, ಕಾಂಗ್ರೆಸ್, ಸೋವಿಯತ್ -ಎಲ್ಲವೂ ಹಲವು ದನಿಗಳಲ್ಲಿ ದಿನಕ್ಕೊಂದು ರೀತಿಯಲ್ಲಿ ಮಾತನಾಡಿ ಜನ ಮತ್ತು ಪಕ್ಷದ ಕಾರ್ಯಕರ್ತರು ತೀರಾ ಗೊಂದಲಕ್ಕೆ ಒಳಗಾದರು.

೧೯೯೦ರಲ್ಲಿ ಪಕ್ಷದ ೨೮ನೆಯ ಮಹಾಧಿವೇಶನದ ಹೊತ್ತಿಗೆ ಪಕ್ಷದ ಮುಂದೆ ಮೂರು 'ವೇದಿಕೆ'ಗಳಿದ್ದವು. ಮೂರು ಬಣಗಳ ಹಾದಿಗಳು ಬೇರೆ ಬೇರೆಯಾಗಿ ಮೂರು ವೇದಿಕೆಗಳಾಗಿದ್ದವು. ೨೮ನೆಯ ಮಹಾಧಿವೇಶನದ ಮುಂದೆ ಸಾಮಾನ್ಯವಾಗಿ ಮಹಾ ಕಾರ್ಯದರ್ಶಿಯ ವರದಿಯ ರೂಪದಲ್ಲಿ ಒಂದು ವರದಿ ಇಡುವ ಬದಲು ಈ ಮೂರು ವೇದಿಕೆಗಳ ಕರಡು ವರದಿಗಳು ಚರ್ಚೆಗೊಳಗಾದವು. ತೀವ್ರ ಭಿನ್ನಾಭಿಪ್ರಾಯಗಳು ಇದ್ದದ್ದರಿಂದ ಒಂದು 'ಚಿತ್ರಾನ್ನ'ದಂತಹ ನಿರ್ಣಯವನ್ನು ಮಹಾಧಿವೇಶನ ಅಂಗೀಕರಿಸಿತು. ಈ ನಿರ್ಣಯ ೨೭ನೆಯ ಮಹಾಧಿವೇಶನ ಹಲವು ಸರಿಯಾದ ನೀತಿ-ನಿರ್ದೇಶನಗಳಲ್ಲಿ ತೀವ್ರ ಬದಲಾವಣೆ ತಂದು ಪೂರ್ಣ 'ಮಾರುಕಟ್ಟೆ ಆರ್ಥಿಕತೆ'(ಅಂದರೆ ಮೂರನೆಯ ಹಾದಿ)ಯ ಹಾದಿ ಹಿಡಿದಿತ್ತು. ಅಮೆರಿಕನ್ ಸಾಮ್ರಾಜ್ಯಶಾಹಿಯಿಂದ ಶಾಂತಿಗೆ ಅಪಾಯ ನಿರಾಕರಿಸುವ, ಯೋಜನೆಯ ವ್ಯವಸ್ಥೆಯನ್ನು ಕಳಚಿ ಹಾಕುವ, ಪಕ್ಷದ ಪಾತ್ರ ಕಡೆಗಣಿಸುವ, ಹಲವು ಪ್ರಮುಖ ಬದಲಾವಣೆಗಳು, ಪಕ್ಷದ ಸದಸ್ಯರಲ್ಲಿ ಜನತೆಯಲ್ಲಿ (೨೭ನೆಯ ಮಹಾಧಿವೇಶನ ಮಾಡಿದ್ದಂತೆ) ಉತ್ಸಾಹ, ಆಸಕ್ತಿ, ಮಾರ್ಗದರ್ಶನ ನೀಡುವುದರ ಬದಲು-ಗೊಂದಲ, ನಿರುತ್ಸಾಹ, ಪರಕೀಯತೆ ಉಂಟು ಮಾಡಿದವು.

೨೮ನೆಯ ಮಹಾಧಿವೇಶನದ ನಂತರವೂ ಮೂರು ಬಣಗಳ ನಡುವೆ ಭಿನ್ನಾಭಿಪ್ರಾಯ, ಅನೈಕ್ಯತೆ ಮುಂದುವರೆಯಿತು. ಸಮಾಜವಾದದ ವ್ಯವಸ್ಥೆಯ ಎಲ್ಲಾ ಸಾಧನೆಗಳನ್ನು, ವಿಧಾನಗಳನ್ನು ನಿರಾಕರಿಸುವ ತಿರಸ್ಕರಿಸುವ ಅದನ್ನು ಕಳಚು ಹಾಕುವ, ಬಂಡವಾಳಶಾಹಿ ಸ್ಥಾಪಿಸುವ ಮೂರನೆಯ ಬಣ ಪ್ರಬಲವಾಯಿತು. ಇದು ಸೋವಿಯತ್ ಒಕ್ಕೂಟವನ್ನು, ಸಮಾಜವಾದಿ ವ್ಯವಸ್ಥೆಯನ್ನು ಬುಡಮೇಲು ಮಾಡಲು ಅವಕಾಶಕ್ಕೆ ಕಾಯುತ್ತಿದ್ದ ವಿದೇಶಿ (ಮುಖ್ಯವಾಗಿ ಅಮೆರಿಕನ್) ಶಕ್ತಿಗಳಿಗೆ ಹಸ್ತಕ್ಷೇಪಕ್ಕೆ ಉತ್ತಮ ಅವಕಾಶ ಮಾಡಿಕೊಟ್ಟಿತು. ಮೂರನೆಯ ಬಣಕ್ಕೆ ಎಲ್ಲಾ ರೀತಿಯ ವಿದೇಶಿ ಬೆಂಬಲ ಒದಗಿಸಲಾಯಿತು. ಮೊದಲು ಮೂರನೆಯ ಬಣಕ್ಕೆ ವಿರುದ್ಧವಾಗಿದ್ದ ಗೊರ್ಬಚೇವ್‌ರನ್ನು - ವಿಶ್ವಶಾಂತಿ ಮತ್ತು ಜಾಗತಿಕ ಆರ್ಥಿಕ ವ್ಯವಸ್ಥೆ ಸೇರಲು ಐ.ಎಂ.ಎಫ್ ಸದಸ್ಯತ್ವ, ವಿದೇಶಿ ಬಂಡವಾಳ-ತಂತ್ರಜ್ಞಾನ ಹೂಡಿಕೆ -ಇವೆಲ್ಲವನ್ನೂ 'ಹೆಚ್ಚು ಹೆಚ್ಚು ಮಾರುಕಟ್ಟೆ ಸುಧಾರಣೆ'ಗಳನ್ನು ಮಾಡುವವರೆಗೆ ಹಿಡಿದಿಡುವ ಬೆದರಿಕೆ ಮೂಲಕ ಮಣಿಸಲಾಯಿತು. ಈ ಮೂರನೆಯ ಬಣದ ನಾಯಕನಾಗಿ ಈ ಅವಧಿಯಲ್ಲಿ ಹೊಮ್ಮಿದ ಯೆಲ್ಸಿನ್ ರಷ್ಯಾದ ಅಧ್ಯಕ್ಷನಾಗಿ ಆಯ್ಕೆಯಾದ ನಂತರ ಈ ಬಣ ಪ್ರಬಲವಾಗುತ್ತಾ ಹೋಯಿತು. ಮೊದಲು ಗೊರ್ಬಚೇವ್ ಬೆಂಬಲಿಗನಾಗಿ ಮಾಸ್ಕೋ ಪಕ್ಷದ ಕಾರ್ಯದರ್ಶಿಯಾಗಿದ್ದ ಯೆಲ್ಸಿನ್ ಆಮೇಲೆ ಗೊರ್ಬಚೇವ್ ವಿರೋಧಿಯಾದ. ೧೯೮೭ರಲ್ಲಿ ಬಣಗಳ ತಿಕ್ಕಾಟದಲ್ಲಿ ಯೆಲ್ಸಿನ್‌ರನ್ನು ಮಾಸ್ಕೋ ಕಾರ್ಯದರ್ಶಿ ಸ್ಥಾನದಿಂದ ಬರ್ಖಾಸ್ತು ಮಾಡಲಾಗಿತ್ತು. ವಿದೇಶಿ, ಐ.ಎಂ.ಎಫ್ ಒತ್ತಡದಿಂದ ಹೆಚ್ಚು ಹೆಚ್ಚು 'ಮಾರುಕಟ್ಟೆ ಸುಧಾರಣೆ' ಮಾಡುತ್ತಾ ಹೋದ ಹಾಗೆ ಪರಿಸ್ಥಿತಿ ಕೆಡುತ್ತಾ ಹೋಯಿತು. ಆರ್ಥಿಕ ವ್ಯವಸ್ಥೆಯ ಚುಕ್ಕಾಣಿ ಹಿಡಿದಿದ್ದ ಗೋರ್ಬಚೇವ್ ಸಲಹೆಗಾರರಿಗೆ ಸೋವಿಯತ್ ಆರ್ಥಿಕ

ವ್ಯವಸ್ಥೆ ಹೇಗೆ ಕೆಲಸ ಮಾಡುತ್ತಿದೆ ಎಂಬ ಅರಿವು ಇರಲಿಲ್ಲ. ಅದರ ನಿಜವಾದ ಸಮಸ್ಯೆಗಳ ಆಳ ಅಗಲಗಳ ಬಗ್ಗೆ ಪರಿಚಯವಿರಲಿಲ್ಲ. ಅವರ ಹಿಂದೆ ಇದ್ದ ಅಮೆರಿಕನ್ ಆರ್ಥಿಕ ತಜ್ಞರಿಗೂ ಅದು ಗೊತ್ತಿರಲಿಲ್ಲ. ಅವರಿಗೆ ಬೇಕಾಗೂ ಇರಲಿಲ್ಲ. ಅವರಿಗೆ 'ಮಾರುಕಟ್ಟೆ ಸುಧಾರಣೆ' ಹೆಸರಲ್ಲಿ ಏನಕೇನ ಪ್ರಕಾರೇಣ ಸಮಾಜವಾದಿ ವ್ಯವಸ್ಥೆ ನಾಶ ಮಾಡುವುದು, ಸೋವಿಯೆತ್ ಒಕ್ಕೂಟವನ್ನು ಬಲಹೀನ ಗೊಳಿಸುವುದು ಬೇಕಾಗಿತ್ತು. ಸೋವಿಯೆತ್ ಸಮಾಜದಲ್ಲಿ, ಆರ್ಥಿಕದಲ್ಲಿ ನಿಜವಾದ ಸುಧಾರಣೆಗಳನ್ನು ತರುವುದರಲ್ಲಿ ಅವರಿಗೆ ಬಹಳ ಆಸಕ್ತಿ ಇರಲಿಲ್ಲ. ಸ್ವಾಭಾವಿಕವಾಗಿಯೇ ಇಂತಹ ಸುಧಾರಣೆಗಳು ಸೋವಿಯೆತ್ ಸಮಾಜ ಮತ್ತು ಆರ್ಥಿಕತೆಯನ್ನು ಇನ್ನಷ್ಟು ತೀವ್ರ ಬಿಕ್ಕಟ್ಟಿಗೆ ತೆಗೆದುಕೊಂಡು ಹೋದವು.

ಸೋವಿಯತ್ ಒಕ್ಕೂಟ ಹಲವು ರಾಷ್ಟ್ರೀಯತೆ-ಜನಾಂಗಗಳ ಒಕ್ಕೂಟ. ಒಕ್ಕೂಟಕ್ಕೆ ಸೇರಿದ ೧೫ ಗಣರಾಜ್ಯಗಳಲ್ಲೂ ಹಲವು ರಾಷ್ಟ್ರೀಯತೆ-ಜನಾಂಗಗಳು ವಾಸಿಸುತ್ತಿದ್ದವು. ಗಣರಾಜ್ಯಗಳೊಳಗೆ ಸಹ ನಿರ್ದಿಷ್ಟ ರಾಷ್ಟ್ರೀಯತೆ-ಜನಾಂಗದವರೂ ಬಹುಸಂಖ್ಯಾತರಾಗಿ ಇರುವ ಪ್ರದೇಶಗಳನ್ನು ಸ್ವಾಯತ್ತ ಪ್ರದೇಶಗಳಾಗಿ ಪರಿಗಣಿಸಲಾಗಿತ್ತು. ಹಲವು ಶತಮಾನಗಳ ಕಾಲ ಝಾರ್ ಸಾಮ್ರಾಜ್ಯಶಾಹಿಯಿಂದ ದಮನ-ದಬ್ಬಾಳಿಕೆಗಳನ್ನು ಅನುಭವಿಸಿದ್ದ ಹಲವು, ರಾಷ್ಟ್ರೀಯತೆ ಜನಾಂಗಗಳಿಗೆ ಅಕ್ಟೋಬರ್ ಕ್ರಾಂತಿಯ ನಂತರ "ಝಾರ್‌ಶಾಹಿ ಸೆರೆಮನೆ"ಯಿಂದ ವಿಮೋಚನೆ ಸಿಕ್ಕಿತು. ಈ ರಾಷ್ಟ್ರೀಯತೆ-ಜನಾಂಗಗಳು ಗುಂಪುಗಳು ಸೋವಿಯತ್ ಒಕ್ಕೂಟ(ಅದರಲ್ಲೂ ವಿಶೇಷವಾಗಿ ಹಿಂದುಳಿದವು ಉದಾಃ ಮಧ್ಯ ಏಷ್ಯಾದ ಕಝಾಕಿಸ್ತಾನ, ತಾಝಿಕಿಸ್ತಾನ, ಉಝ್‌ಬೇಕಿಸ್ತಾನ್ ಇತ್ಯಾದಿ) ಇದುವರೆಗೆ ಶತಮಾನಗಳ ಕಾಲ ಕಂಡಿರದ ಮುನ್ನಡೆ ಸಾಧಿಸಿದ್ದವು. ಅವುಗಳ ಸಂಸ್ಕೃತಿ, ಪರಂಪರೆ ವಿಕಾಸಗೊಳಿಸುವುದರ ಜತೆ ಸಾಮಾಜಿಕ ಆರ್ಥಿಕ ವಿಕಾಸವೂ ಆಗಿತ್ತು. ಆದರೆ ನೂರಕ್ಕೂ ಹೆಚ್ಚು ರಾಷ್ಟ್ರೀಯತೆ-ಜನಾಂಗೀಯ ಗುಂಪುಗಳು ಇರುವ ವಿಶಾಲವಾದ ಒಕ್ಕೂಟದ ಬೆಳವಣಿಗೆಯ ಈ ಹಂತದಲ್ಲಿ ಹೊಸ ಸಮಸ್ಯೆಗಳು ಉದ್ಭವಿಸುವುದು ಸಹಜವಾಗಿತ್ತು. ಆದರೆ ಸೋವಿಯತ್ ಒಕ್ಕೂಟದ ಆಗಿನ ಸ್ಥಿತಿಯಲ್ಲಿ ಸಮಸ್ಯೆ ಉಲ್ಬಣವಾಯಿತು. ಕಝಾಕಿಸ್ತಾನ, ಬಾಲ್ಟಿಕ್ ಪ್ರದೇಶ, ಅರ್ಮೇನಿಯಾ, ಅಜರ್ ಬೈಜಾನ್, ಜಾರ್ಜಿಯಾ ಮುಂತಾದ ಕಡೆ ಜನಾಂಗೀಯ-ರಾಷ್ಟ್ರೀಯತೆಯ ಹಲವು ತಿಕ್ಕಾಟಗಳು ಈ ಅವಧಿಯಲ್ಲಿ ನಡೆದವು. ಕೇಂದ್ರದ ವಿರುದ್ಧ ಪ್ರತಿಭಟನೆಗೆ ಈ ತಿಕ್ಕಾಟಗಳನ್ನು ಬಳಸಲಾಯಿತು. ಹಲವು ಬಂಡವಾಳಶಾಹಿ-ಸುಧಾರಣಾವಾದಿಗಳು ಇದನ್ನು ದುರ್ಬಳಕೆ ಮಾಡಿದರು. ಸಮಾಜವಾದಿ ಸಿದ್ಧಾಂತದ ಮೇಲೆ ದಾಳಿ, ಅವರ ಸೈದ್ಧಾಂತಿಕ ಪ್ರಭಾವ ಹಿಂದೆ ಸರಿಯುತ್ತಿದ್ದ ಹಿನ್ನೆಲೆಯಲ್ಲಿ ಧರ್ಮ, ಭಾಷೆ, ರಾಷ್ಟ್ರೀಯತೆ ಸೈದ್ಧಾಂತಿಕ ನಿರ್ವಾತದ ಜಾಗ ತುಂಬಿದವು. ಸಮಾಜವಾದಿ ಸಿದ್ಧಾಂತ ಬೇರೆ ಬೇರೆ ಧರ್ಮ, ಭಾಷೆ, ರಾಷ್ಟ್ರೀಯದವರನ್ನು ಒಂದುಗೂಡಿಸುತ್ತಿತ್ತು. ಆದರೆ ಧರ್ಮ-ಭಾಷೆ-ರಾಷ್ಟ್ರೀಯತೆಯನ್ನು ಸಿದ್ಧಾಂತವಾಗಿ ಅಂಗೀಕರಿಸಿದ ಚಳವಳಿಗಳು ಜನರ ನಡುವೆ ಒಡಕು ತಿಕ್ಕಾಟ, ಪ್ರತ್ಯೇಕತೆ ತಂದಿಟ್ಟವು.

೧೯೮೯ರಲ್ಲಿ ಎಲ್ಲಾ ಗಣರಾಜ್ಯಗಳಲ್ಲಿ ಚುನಾವಣೆಗಳು ನಡೆದಾಗ ಹಲವು ಅಭ್ಯರ್ಥಿಗಳು ರಾಷ್ಟ್ರೀಯತೆ-ಜನಾಂಗೀಯ ನೆಲೆ ಮತ್ತು ಸಮಸ್ಯೆಗಳ ದುರ್ಬಳಕೆ ಮಾಡಿ ಬೆಂಬಲ ಗಳಿಸಿಕೊಳ್ಳಲು ಪ್ರಯತ್ನಸಿದರು. ಆ ಮೇಲೂ ಈ ಆಧಾರದ ಮೇಲೆ ಸ್ವಾತಂತ್ರ್ಯ-ಪ್ರತ್ಯೇಕತೆಗೆ ಜನರನ್ನು ಅಣಿಗೊಳಿಸಲು ಉತ್ತಮ ಆಯುಧವಾಯಿತು. ಆದ್ದರಿಂದ ಈ ಸಮಸ್ಯೆಗಳು ಉಲ್ಬಣಗೊಂಡವು. ಆರ್ಥಿಕ ಅರಾಜಕತೆ, ಭಾಷೆ-ರಾಷ್ಟ್ರೀಯತೆ ಜನಾಂಗೀಯ ಆಧಾರದ ಮೇಲೆ ವಿಭಜನೆಗೆ ಇನ್ನಷ್ಟು ಕುಮ್ಮಕ್ಕು ನೀಡಿತು. ಈ ಸಮಸ್ಯೆಗಳು ಉಲ್ಬಣಗೊಂಡ ಹಾಗೆ ಹಲವು ಕಡೆ ಕೇಂದ್ರ ಸರ್ಕಾರ ಬಲ ಪ್ರಯೋಗ ಮಾಡಬೇಕಾಯಿತು. ಸೈನ್ಯ ಕಳಿಸಬೇಕಾಯಿತು. ಗಣರಾಜ್ಯಗಳಲ್ಲಿ ಸ್ವಾಯತ್ತ ಪ್ರದೇಶಗಳಲ್ಲಿ ಪ್ರತ್ಯೇಕತಾವಾದ ತಲೆ ಎತ್ತಿದಾಗಲೂ ಇಂತಹುದೇ ಸನ್ನಿವೇಶ ಉಂಟಾಯಿತು. ಒಕ್ಕೂಟ ಮತ್ತು ಗಣರಾಜ್ಯಗಳ ಸರ್ಕಾರಗಳು ಕೆಲವೊಮ್ಮೆ ಈ ಪ್ರತ್ಯೇಕವಾದಿಗಳ ಜತೆ ಸಮಜಾಯಿಷಿ ಮಾಡಿಕೊಂಡವು. ರಾಷ್ಟ್ರೀಯ ಭಾಷೆ ಜನಾಂಗೀಯ ಆಧಾರದ ಮೇಲೆ ಸ್ವಾತಂತ್ರ್ಯ, ಪ್ರತ್ಯೇಕತೆಯ ಕೂಗು ಹೆಚ್ಚಾಗುತ್ತಿದ್ದ ಹಾಗೆ, ಈ ಬಗ್ಗೆ ಜನಮತ ಸಂಗ್ರಹ ಮಾಡಲು ನಿರ್ಧರಿಸಲಾಯಿತು. ಅದರಲ್ಲಿ ಒಕ್ಕೂಟ ಐಕ್ಯತೆ ಕಾಪಾಡಬೇಕೆಂಬ ಅಭಿಪ್ರಾಯಕ್ಕೆ ಸ್ಪಷ್ಟ ಬಹುಮತ ಸಿಕ್ಕಿತು. ಆದರೆ ಈ ನಡುವೆ ಗೊರ್ಬಚೇವ್ ನಾಯಕತ್ವ ಹೊಸ ಒಕ್ಕೂಟದ ಕರಡು ಸಿದ್ಧಪಡಿಸಿತು. ಈ ಒತ್ತಡದಲ್ಲಿ ಸಡಿಲ ಫೆಡರೇಷನ್ ಹೆಸರಲ್ಲಿ ಎಲ್ಲಾ ಅಧಿಕಾರಗಳನ್ನು ಗಣರಾಜ್ಯಗಳಿಗೆ ಕೊಡಲಾಗಿತ್ತು. ಜನರ ಬೆಂಬಲ ಪಡೆದು ಪ್ರತ್ಯೇಕತಾ ಶಕ್ತಿಗಳ ವಿರುದ್ಧ ಹೋರಾಡಿ ಒಕ್ಕೂಟ ಉಳಿಸಿಕೊಳ್ಳುವ ಬದಲು, ಅವುಗಳ

ಒತ್ತಡಕ್ಕೆ ಗೋರ್ಬಚೇವ್ ನಾಯಕತ್ವ ಮಣಿದಿತ್ತು. ಕೇಂದ್ರ ಬಜೆಟ್ ಮೇಲೂ ಗಣರಾಜ್ಯಗಳಿಗೆ ವಿಟೋ ಅಧಿಕಾರ ಇತ್ತು. ಈ ಒಪ್ಪಂದದ ಕರಡು ಆಗಲೇ ವಿಘಟನೆಯ ಬೀಜ ಬಿತ್ತಿತ್ತು. ಇದು ಕೆಲವು ತಿಂಗಳುಗಳ ಹಿಂದೆಯಷ್ಟೇ ನಡೆದ ಜನಮತದ ಉಲ್ಲಂಘನೆ ಕೂಡ ಆಗಿತ್ತು.

ಪೆರೆಸ್ಟ್ರೊಯಿಕ ಮತ್ತು ಗ್ಲಾಸ್‌ನೋಸ್ತ್ ಹೊರ ಜಗತ್ತಿಗೆ ತೆರೆದುಕೊಳ್ಳುವ ತರಾತುರಿಯಲ್ಲಿ, ಸೋವಿಯತ್ ಒಕ್ಕೂಟದ ಪೂರ್ವ ಯುರೋಪಿನ ಸಮಾಜವಾದಿ ದೇಶಗಳ ಹಿತಾಸಕ್ತಿಗಳನ್ನು ಮರೆತುಬಿಟ್ಟಿತು. ಸೋವಿಯತ್ ಒಕ್ಕೂಟದ ಜತೆ ಪರಸ್ಪರ ಪ್ರಯೋಜನಕಾರಿ ಆರ್ಥಿಕ ರಾಜಕೀಯ ಸಂಬಂದ ಹೊಂದಿದ್ದ ಈ ದೇಶಗಳಲ್ಲಿ ಆಗಲೇ ಸಮಾಜವಾದಿ ವ್ಯವಸ್ಥೆಯಲ್ಲಿ ಸುಧಾರಣೆಗಳಿಗೆ ಒತ್ತಡ, ಆ ಸುಧಾರಣೆಗಳಿಗೆ ಪ್ರಯತ್ನ, ಆ ಪರಿಸ್ಥಿತಿಯನ್ನು ಬಳಸಿ ವಿದೇಶಿ ಹಸ್ತಕ್ಷೇಪ, ಸುಧಾರಣೆಗಳನ್ನು ಬಂಡವಾಳಶಾಹಿ ದಿಕ್ಕಿನಲ್ಲಿ ಒಯ್ಯುವ ಪ್ರಯತ್ನ-ಇವೆಲ್ಲಾ ನಡೆದಿತ್ತು. ಗೋರ್ಬಚೇವ್ ನಾಯಕತ್ವ ಪೂರ್ವ ಯುರೋಪಿನ ದೇಶಗಳ ಮಿಲಿಟರಿ ರಕ್ಷಣೆ ಸೋವಿಯತ್ ಒಕ್ಕೂಟದ ಮೇಲೆ ಭಾರ ಎಂಬಂತೆ ನಡೆದುಕೊಂಡಿತು. ಅವುಗಳ ಜತೆ ಇದ್ದ ಪರಸ್ಪರಾವಲಂಬನ ಸಹ ಕಡಿಮೆ ಮಾಡತೊಡಗಿತು. ಇದರಿಂದಾಗಿ ರಾಜಕೀಯವಾಗಿ ಸೋವಿಯತ್ ರೀತಿಯ ಸುಧಾರಣೆಗಳನ್ನು ಅಲ್ಲೂ ಮಾಡುವಂತೆ ಒತ್ತಡ ಬಂತು. ಸೋವಿಯತ್ ಒಕ್ಕೂಟ ಆರ್ಥಿಕ ಮತ್ತು ಮಿಲಿಟರಿ ಬೆಂಬಲ ಹಿಂತೆಗೆದುಕೊಳ್ಳುತ್ತಿದ್ದಂತೆ, ಅಲ್ಲಿನ ಕಮ್ಯುನಿಸ್ಟ್ ಸರ್ಕಾರಗಳು ಬಲಹೀನವಾದವು. ಆಗಲೇ ಹೆಪ್ಪುಗಟ್ಟಿ, ಗುಡ್ಡೆಯಾಗಿದ್ದ ಸಮಸ್ಯೆಗಳು; ಜನರ ಅತೃಪ್ತಿ, ಆಕ್ರೋಶಗಳನ್ನು ವಿರೋಧ ಪಕ್ಷಗಳು ಮತ್ತು ವಿದೇಶಿ ಶಕ್ತಿಗಳು ಉಪಯೋಗಿಸಿಕೊಂಡವು. ಒಂದಾದ ಮೇಲೊಂದರಂತೆ ಅಲ್ಲಿನ ಸರ್ಕಾರಗಳು ಉರುಳಿದವು. ಈ ಪ್ರಕ್ರಿಯೆಯ ಭಾಗವಾಗಿ ಬರ್ಲಿನ್ ಗೋಡೆ ಉರುಳಿ, ಪೂರ್ವ ಜರ್ಮನಿ ಮತ್ತು ಪಶ್ಚಿಮ ಜರ್ಮನಿ ಐಕ್ಯವಾದವು. ಈ ಎಲ್ಲಾ ಘಟನೆಗಳು ನಡೆಯುತ್ತಿದ್ದಂತೆ ಸೋವಿಯತ್ ಕಮ್ಯುನಿಸ್ಟ್ ಪಕ್ಷ ಮತ್ತು ಸರ್ಕಾರ ಯಾವುದೇ ರೀತಿಯ ಪ್ರತಿಕ್ರಿಯೆ ವ್ಯಕ್ತಪಡಿಸಲಿಲ್ಲ. ೧೯೯೧ರಲ್ಲಿ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಾಜವಾದಿ ದೇಶಗಳ ನಡುವೆ ನಿಕಟ ಆರ್ಥಿಕ-ರಾಜಕೀಯ ಸಂಬಂಧಗಳ ಸಂಘಟನಾ ರೂಪವಾಗಿದ್ದ ವಾರ್ಸಾ ಒಪ್ಪಂದ ಮತ್ತು ಕಾಮೆಕಾನ್ ವಾಣಿಜ್ಯ ಕೂಟವನ್ನು ಸಹ ವಿಸರ್ಜಿಸಲಾಯಿತು.

ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದಿ ಸರ್ಕಾರಗಳ ಪತನ, ಸೋವಿಯತ್ ಗಣರಾಜ್ಯಗಳಲ್ಲಿ ಸ್ವಾತಂತ್ರ್ಯ ಮತ್ತು ಪ್ರತ್ಯೇಕತೆಯ ಕೂಗಿಗೆ ಕುಮ್ಮಕ್ಕು ಕೊಟ್ಟಂತಾಯಿತು. ಯೆಲ್ಸಿನ್ ಎಲ್ಲಾ ಗಣರಾಜ್ಯಗಳಿಗೆ ಆರ್ಥಿಕ ಸ್ವಾತಂತ್ರ್ಯ ಸಾರ್ವಭೌಮತೆ ಬೇಕು ಎಂದು ಒತ್ತಾಯಿಸಹತ್ತಿದ್ದರು. ಆರ್ಥಿಕ ನೀತಿಗಳ ಬಗ್ಗೆ ಚರ್ಚೆ ವಿವಾದ ನಡೆಯುತ್ತಿದ್ದಂತೆ, ಒಕ್ಕೂಟ ಮತ್ತು ಗಣರಾಜ್ಯಗಳ ನಡುವೆ ಈ ಭಿನ್ನಾಭಿಪ್ರಾಯ ಪರಸ್ಪರ ವಿರುದ್ಧ ಕಾನೂನುಗಳನ್ನು ಪಾಸು ಮಾಡುವುದರಲ್ಲಿ ವ್ಯಕ್ತವಾದವು ೧೯೯೧ರಲ್ಲಿ ರಷ್ಯಾ ಗಣರಾಜ್ಯ 'ಮಾರುಕಟ್ಟೆ ಆರ್ಥಿಕ ನೀತಿ' ಬಗ್ಗೆ ಕಾನೂನು ಮಾಡಿತು. ಅಧ್ಯಕ್ಷ ಯೆಲ್‌ಸಿನ್ ರಷ್ಯಾದಲ್ಲಿ ಇದ್ದ ಸೋವಿಯತ್ ಒಕ್ಕೂಟದ ಸಂಸ್ಥೆಗಳ ಅನುದಾನ ಕಡಿತ ಮಾಡಿದರು. ಸೋವಿಯತ್ ಒಕ್ಕೂಟಕ್ಕೆ ಮತ್ತು ಸಮಾಜವಾದಿ ವ್ಯವಸ್ಥೆಗೆ ಅಪಾಯವಿದೆ ಎಂದು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ನಾಯಕತ್ವಕ್ಕೆ ಅನಿಸಿತ್ತು. ಇದನ್ನು ತಡೆಯಬೇಕು ಎಂದು ಕೆಲವು ನಾಯಕರು ಮಿಲಿಟರಿ ಕಾರ್ಯಾಚರಣೆ ನಡೆಸಿ ಕ್ಷಿಪ್ರ ಕ್ರಾಂತಿಯ ಪ್ರಯತ್ನ ಮಾಡಿದರು. ಅಧ್ಯಕ್ಷ ಗೋರ್ಬಚೇವ್‌ರನ್ನು ಅವರು ಹೋಗಿದ್ದ ವಿಹಾರ ಧಾಮದಲ್ಲಿ ಬಂಧಿಸಲಾಯಿತು. ಕ್ರಾಂತಿಕಾರಿ ಮಂಡಳಿ ಅಧಿಕಾರ ವಹಿಸಿಕೊಂಡಿತು. ಯೆಲ್ಸಿನ್ ಈ ಕಾರ್ಯಾಚರಣೆ ವಿರುದ್ಧ ತಮ್ಮ ಬೆಂಬಲಿಗರನ್ನು ಸಂಘಟಿಸಿದರು. ಬೀದಿ ಕಾಳಗ ನಡೆಯಿತು. ಕ್ರಾಂತಿಕಾರಿ ಮಂಡಳಿಯ ಪರವಾಗಿ ಜನ ಬೀದಿಗಿಳಿಯಲಿಲ್ಲ. ಆದ್ದರಿಂದ ಈ ಪ್ರಯತ್ನ ವಿಫಲವಾಯಿತು. ಗೋರ್ಬಚೇವ್ ಅವರು ಕ್ರಾಂತಿಕಾರಿ ಮಂಡಳಿಯ ಸದಸ್ಯರಿಗೆ ಈ ಕ್ಷಿಪ್ರ ಕ್ರಾಂತಿ ನಡೆಸುವಂತೆ ಸೂಚನೆ ನೀಡಿದ್ದರು ಎನ್ನಲಾಗಿದೆ. ಇಂತಹ ಕಾರ್ಯಾಚರಣೆ ಅಗತ್ಯ ಎಂದು ಅವರ ಅಭಿಪ್ರಾಯವೂ ಅಗಿತ್ತಂತೆ. ಆದರೆ ಅವರ ವಿಫಲತೆ ನಂತರ, ಯೆಲ್ಸಿನ್ ಕೈ ಮೇಲಾಯಿತು. ಯೆಲ್ಸಿನ್ ಏಕಪಕ್ಷೀಯವಾಗಿ ಅಧಿಕಾರ ವಹಿಸಿಕೊಂಡರು. ಆಗಲೇ ಮಾಸ್ಕೋದಲ್ಲಿ ಯೆಲ್ಸಿನ್‌ರೇ ಅಧಿಕಾರ ಚಲಾಯಿಸುತ್ತಿದ್ದರು. ಅವರು ರಷ್ಯಾದಲ್ಲಿ ಸೋವಿಯೆತ್ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿ, ಅದರ ಎಲ್ಲಾ ಆಸ್ತಿಗಳನ್ನು ಮುಟ್ಟುಗೋಲು ಹಾಕುವಂತೆ ಸುಗ್ರೀವಾಜ್ಞೆ ಹೊರಡಿಸಿದರು. ಯೆಲ್ಸಿನ್ ಸಂಘಟಿಸಿದ ಗಣರಾಜ್ಯಗಳ ಅಧ್ಯಕ್ಷರುಗಳು ಸಮಾವೇಶದಲ್ಲಿ ಸೋವಿಯತ್ ಒಕ್ಕೂಟ ವಿಸರ್ಜನೆ, ಸ್ವತಂತ್ರ ಗಣರಾಜ್ಯಗಳ ಕಾಮನ್ ವೆಲ್ತ್ ಎಂಬ ಸಡಿಲವಾದ ಫೆಡರೇಷನ್ ರಚನೆಯಾದ ಬಗ್ಗೆ ಘೋಷಣೆ ಮಾಡಲಾಯಿತು. ಈ ವೇಗದ ರಾಜಕೀಯ ಬೆಳವಣಿಗೆಗಳಿಂದ ಅಪ್ರತಿಭರಾದ ಗೋರ್ಬಚೇವ್ ರಾಜೀನಾಮೆ ಕೊಟ್ಟರು. ಒಕ್ಕೂಟದ ಸುಪ್ರೀಮ್ ಸೋವಿಯೆತ್ತನ್ನು ವಿಸರ್ಜಿಸಲಾಯಿತು.

ಹೀಗೆ ೨೦ನೆಯ ಶತಮಾನದ ಉದ್ದಕ್ಕೂ ಚರಿತ್ರೆಯ ಹಲವು ಮೈಲಿಗಲ್ಲುಗಳನ್ನು ಸೃಷ್ಟಿಸಿದ್ದ ಸೋವಿಯತ್ ಒಕ್ಕೂಟ ಹಠಾತ್ತಾಗಿ ಚರಿತ್ರೆಯ ಭಾಗವಾಯಿತು. ಸೋವಿಯತ್ ಒಕ್ಕೂಟದ ಹುಟ್ಟು, ವೇಗದ ಬೆಳವಣಿಗೆ, ಹಠಾತ್ ವಿಘಟನೆ-೨೦ನೆಯ ಶತಮಾನದ ವಿಸ್ಮಯಗಳಲ್ಲೊಂದಾಯಿತು.

**ವಿಘಟನೆಯ ನಂತರದ ಕುಸಿತ ಮತ್ತು ಚೇತರಿಕೆ (೧೯೯೧-೨೦೦೬)**

ಸೋವಿಯತ್ ಒಕ್ಕೂಟದ ವಿಭಜನೆಯೊಂದಿಗೆ ಅದರ ಉತ್ತಾರಾಧಿಕಾರಿಗಳಾಗಿ ೧೫ ದೇಶಗಳು ಹುಟ್ಟಿಕೊಂಡವು. ಅತಿ ದೊಡ್ಡ ದೇಶವಾದ ರಷ್ಯಾ ಅಲ್ಲದೆ; ಪೂರ್ವ ಯುರೋಪಿನ-ಉಕ್ರೇನ್, ಬೆಲರಸ್ (ಹಿಂದಿನ ಬೈಲೋರಷ್ಯಾ), ಮೊಲ್ಡೊವಾ; ಕಕೇಶಿಯನ್ ಪ್ರದೇಶದ ದೇಶಗಳಾದ-ಜಾರ್ಜಿಯಾ, ಅರ್ಮೇನಿಯಾ, ಅಜರ್ ಬೈಜಾನ್; ಮಧ್ಯ ಏಷ್ಯಾದ-ಕಝಾಕಿಸ್ತಾನ, ಕಿರ್ಜಿಗಿಸ್ತಾನ್, ತಾಜಕಿಸ್ತಾನ್, ಉಜ್ಬೇಕಿಸ್ತಾನ್, ತುರ್ಕೆ ಮಾನಿಸ್ತಾನ್; ಬಾಲ್ಟಿಕ್ ಪ್ರದೇಶದ ಎಸ್ಟೋನಿಯಾ, ಲಿಥುವಾನಿಯಾ, ಲ್ಯಾಟಿವಿಯಾ;- ಆ ೧೫ ದೇಶಗಳು. ಬಾಲ್ಟಿಕ್ ಪ್ರದೇಶದ ೩ ದೇಶಗಳು ಮತ್ತು ತುರ್ಕೇಮಾನಿಸ್ತಾನ ಬಿಟ್ಟರೆ ಇತರ ೧೧ ದೇಶಗಳು ಸಿ.ಐ.ಎಸ್(ಸ್ವತಂತ್ರ ದೇಶಗಳು ಮಹಾ ಒಕ್ಕೂಟ) ಎಂಬ ಸಡಿಲವಾದ ಒಕ್ಕೂಟದಲ್ಲಿ ಪಾಲ್ಗೊಂಡಿವೆ. ಆದರೆ ಕೆಲವು ವಿಷಯಗಳ ಬಗ್ಗೆ ಸಂಯೋಜನೆ ಬಿಟ್ಟರೆ, ಇವೆಲ್ಲಾ ಸ್ವತಂತ್ರ-ಸಾರ್ವಭೌಮ ದೇಶಗಳಾಗಿವೆ. ಕೆಲವು ವರ್ಷಗಳ ಒಳಗೆ ಪೂರ್ವ ಯರೋಪಿನ ಮತ್ತು ಮಾಜಿ ಸೋವಿಯತ್ ಒಕ್ಕೂಟದ ಭಾಗವಾಗಿದ್ದ ಗಣರಾಜ್ಯಗಳ ನಡುವೆ ಇದ್ದ ಪರಸ್ಪರಾವಲಂಬನೆಯ ಸಂಬಂಧಗಳು- ವಿದ್ಯುತ್, ರೈಲು, ಹೆದ್ದಾರಿ, ರಕ್ಷಣೆಗಳ ಜಾಲ; ರಫ್ತು-ಆಮದು ವ್ಯಾಪಾರ; ಕಚ್ಚಾ ಸಾಮಗ್ರಿಗಳ ಮೂಲ; ಉತ್ಪನ್ನಗಳಿಗೆ ಮಾರುಕಟ್ಟೆ-ಸಡಿಲವಾದವು ಅಥವಾ ಹೆಚ್ಚು ಕಡಿಮೆ ಇಲ್ಲವಾದವು. ಹಲವು ಪೂರ್ವ ಯುರೋಪಿನ ದೇಶಗಳು ಪಾಶ್ಚಿಮಾತ್ಯ ದೇಶಗಳನ್ನು ಮಾರುಕಟ್ಟೆಯಾಗಿ ಬಯಸಿದವು. ಆದರೆ ಕಚ್ಚಾವಸ್ತು, ಮೂಲ ಸೌಕರ್ಯಗಳಿಗೆ ಮಾಜಿ ಸೋವಿಯತ್ ದೇಶಗಳನ್ನು ಅವಲಂಬಿಸಿದ್ದವು. ವಿದ್ಯುತ್ ಶಕ್ತಿ, ತೈಲ, ಗ್ಯಾಸ್‌ಗಳಲ್ಲಿ ರಷ್ಯಾ ಮತ್ತು ಕೆಲವು ಮಾಜಿ ಸೋವಿಯೆತ್ ದೇಶಗಳು ಮೂಲ ಪೂರೈಕೆ ಮಾಡುವ ದೇಶಗಳಾಗಿದ್ದವು. ಎಲ್ಲಾ ಕಡೆ 'ಮಾರುಕಟ್ಟೆ ಆರ್ಥಿಕತೆ' ಜಾರಿಯಾಗುತ್ತಿದ್ದಂತೆ. ಅವುಗಳ ಹಿಂದಿನ ಬೆಲೆಯಲ್ಲಿ ಭಾರಿ ವ್ಯತ್ಯಾಸಗಳಾದವು. ಎಲ್ಲಾ ದೇಶಗಳು, ಸರ್ಕಾರಗಳು ತಮಗೆ ಲಾಭವಾಗುವ ಸಂಬಂಧಗಳನ್ನು ಉಳಿಸುತ್ತಾ, ನಷ್ಟ ತರುವ ಸಂಬಂಧಗಳನ್ನು ತತ್‌ಕ್ಷಣ ಕಳಚಿ ಹಾಕುವ ತರಾತುರಿಯಲ್ಲಿದ್ದರು. ಹಲವು ಇಂತಹ ನಿರ್ಧಾರಗಳನ್ನು ಈ ಹೊಸ ದೇಶಗಳಿಗೆ ಸಾಲ ನೀಡುವ ಐ.ಎಂ.ಎಫ್, ವಿಶ್ವಬ್ಯಾಂಕ್‌ಗಳು, ಪಾಶ್ಚಿಮಾತ್ಯ ದೇಶಗಳು ಹೊರಿಸಿದವು. ಪ್ರತ್ಯೇಕ ದೇಶವಾಗಿ(ಒಂದು ಒಕ್ಕೂಟ, ಬಣದ ಭಾಗವಾಗಿ ಇರದೆ) ಈ ಹೊಸ ದೇಶಗಳ ಚೌಕಾಶಿ ಸಾಮರ್ಥ್ಯ ಸೀಮಿತವಾಗಿತ್ತು.

ಒಟ್ಟಾರೆಯಾಗಿ ಮೊದಲ ೫-೬ ವರ್ಷಗಳಲ್ಲಿ ಎಲ್ಲಾ ದೇಶಗಳಲ್ಲಿ ಬೇರೆ ಬೇರೆ ಕಾರಣಗಳಿಂದ ಆದರೆ ಒಟ್ಟಾರೆಯಾಗಿ ಪೂರ್ಣ ಪ್ರಮಾಣದ ಆರ್ಥಿಕ ಅಲ್ಲೋಲ ಕಲ್ಲೋಲಗಳಾದವು. ಒಂದೇ ವರ್ಷದಲ್ಲಿ ಒಟ್ಟು ಉತ್ಪಾದನೆ ಹಿಂದಿನ ವರ್ಷದ ಶೇಕಡ ೮೬ರ ಮಟ್ಟಕ್ಕೆ ಕುಸಿಯಿತು. ಹೆಚ್ಚಿನ ದೇಶಗಳಲ್ಲಿ ಹಲವು ವರ್ಷಗಳ ಕಾಲ ಕುಸಿಯುತ್ತಾ ಹೋಯಿತು. ಒಟ್ಟು ಉತ್ಪಾದನೆಯಲ್ಲಿ ಆದ ನಷ್ಟದ ಅರ್ಧಭಾಗ ಒಕ್ಕೂಟ ಮತ್ತು ಪೂರ್ವ ಯುರೋಪ್ ಸಮಾಜವಾದಿ ಕೂಡ ಬಿದ್ದು ಹೋದದ್ದರ ನೆಯರ ಫಲವಾಗಿತ್ತು. ೨೦೦೪ರ ಹೊತ್ತಿಗೆ ಕೂಡ, ಕೇವಲ ಆರು ದೇಶಗಳ(ಮೂರು ಬಾಲ್ಟಿಕ್ ದೇಶಗಳು, ಅರ್ಮೇನಿಯಾ, ಬೆಲರಸ್, ಕಝಾಕಿಸ್ತಾನ) ಒಟ್ಟು ಉತ್ಪಾದನೆ ೧೯೯೧ರ(ವಿಘಟನೆ ಪೂರ್ವ) ಉತ್ಪಾದನೆಯ ಮಟ್ಟ ಮುಟ್ಟಿವೆ. ಅಂದರೆ ಉಳಿದ ೯ ದೇಶಗಳು ೧೯೯೧ರ ಉತ್ಪಾದನೆಯ ಮಟ್ಟ ಇನ್ನೂ ತಲುಪಿಲ್ಲ. ಹೆಚ್ಚಿನ ದೇಶಗಳು ಸೂಪರ್ ಹಣದುಬ್ಬರ ಕಂಡವು. ೧೯೯೨ರಲ್ಲಿ ರಷ್ಯಾ ಶೇಕಡಾ ೨೪೫ ಹಣದುಬ್ಬರ ಕಂಡಿತು. ಒಕ್ಕೂಟದ ಮತ್ತು ಸಮಾಜವಾದಿ ಬಣದ ವಿಘಟನೆಯ ಆರ್ಥಿಕ ಪರಿಣಾಮ ಅಷ್ಟು ಭೀಕರವಾಗಿತ್ತು. ರಷ್ಯಾದ ಅಧ್ಯಕ್ಷ ಯೆಲ್ಸಿನ್ ಸೋವಿಯತ್ ವಿಘಟನೆಯ ಕೊನೆಯ ವರ್ಷಗಳಲ್ಲಿ ಇತರ ಗಣರಾಜ್ಯಗಳಿಗೆ ಮಾದರಿಯಾಗಿದ್ದರು. ರಷ್ಯಾದಲ್ಲಿ ಯೆಲ್ಸಿನ್ ಪೂರ್ಣ ಪ್ರಮಾಣದ ಬಂಡವಾಳಶಾಹಿ ಬೆಳೆಸುವ ಪ್ರಯತ್ನದಲ್ಲಿದ್ದರು. ಈ ಪ್ರಯತ್ನದಲ್ಲಿ ತಮ್ಮಲ್ಲಿ ಎಲ್ಲಾ ಅಧಿಕಾರಗಳನ್ನು ಕೇಂದ್ರೀಕರಿಸಿ, ಸರ್ವಾಧಿಕಾರಿಯಂತೆ ವರ್ತಿಸುವುದು, ಸುಗ್ರೀವಾಜ್ಞೆಗಳಿಂದ ಆಳುವುದು-ಇದು ಅವರ ವೈಶಿಷ್ಟವಾಗಿತ್ತು. ಇವೆಲ್ಲವೂ ಇತರ ಗಣರಾಜ್ಯಗಳಿಗೆ ಮಾದರಿ ಯಾಯಿತು. ಹೆಚ್ಚಿನವರು ಯೆಲ್ಸಿನ್ ಹಾದಿ ತುಳಿದರು.

ರಷ್ಯಾದಲ್ಲಿ ಅಧ್ಯಕ್ಷ ಯೆಲ್ಸಿನ್‌ಗೂ, ಸೋವಿಯತ್ ಅವಧಿಯಲ್ಲಿ ಚುನಾಯಿತವಾಗಿದ್ದ ಡೂಮಾ(ಪಾರ್ಲಿಮೆಂಟ್)ಗೂ ಸತತ ತಿಕ್ಕಾಟ ನಡೆಯಿತು. ಪಾರ್ಲಿಮೆಂಟ್ ಅಧ್ಯಕ್ಷ ಯೆಲ್ಸಿನ್ ರ ಬಂಡವಾಳಶಾಹಿ ವ್ಯವಸ್ಥೆ ಕಟ್ಟುವ, ಹಳೆಯ ವ್ಯವಸ್ಥೆಯನ್ನು ತರಾತುರಿಯಲ್ಲಿ ಕಿತ್ತು ಹಾಕುವ ಪ್ರಯತ್ನಗಳಿಗೆ ತೀವ್ರ ಅಡೆತಡೆಗಳನ್ನು ಒಡ್ಡಿತು. ಕಮ್ಯುನಿಸ್ಟ್ ಪಕ್ಷದ ಸದಸ್ಯರು ಬಹುಸಂಖ್ಯೆಯಲ್ಲಿದ್ದ ಪಾರ್ಲಿಮೆಂಟ್ ಹಲವು ನೀತಿಗಳನ್ನು ಮಂಜೂರು ಮಾಡಲಿಲ್ಲ. ಈ ತಿಕ್ಕಾಟ ತೀವ್ರವಾಗಿ ಯೆಲ್ಸಿನ್ ಪಾರ್ಲಿಮೆಂಟ್ ಸದಸ್ಯರನ್ನು ಮಣಿಸಲು ಸೈನ್ಯ ಕಳುಹಿಸಿದರು. ಸೈನ್ಯ ಪಾರ್ಲಿಮೆಂಟ್‌ನ್ನು ಸುತ್ತುವರೆದು. ಹಲವು ದಿನಗಳ ಕಾಲ ಮುಖಾಮುಖಿ ಮುಂದುವರೆಯಿತು. ಯೆಲ್ಸಿನ್ ತಮ್ಮ ಸರ್ವಾಧಿಕಾರ ಬಳಸಿ ಡೂಮಾವನ್ನು ವಿಸರ್ಜಿಸಿದರು. ಅಧ್ಯಕ್ಷರಿಗೆ ಅಪಾರ ಅಧಿಕಾರ ಕೊಡುವ ಹೊಸ ಸಂವಿಧಾನ ಜಾರಿಗೆ ಬಂತು. ರಷ್ಯಾದಲ್ಲಿ ಈ ಹೊತ್ತಿಗೆ ಯೆಲ್ಸಿನ್‌ರದ್ದೇ ಒಂದು ಪಕ್ಷ. ಕಮ್ಯುನಿಸ್ಟ್ ಪಕ್ಷ, ಅರೆ-ಫ್ಯಾಸಿಸ್ಟ್ ಜನಾಂಗವಾದಿ ಪಕ್ಷ. ಮತ್ತು ಇತರ ಬಂಡವಾಳಶಾಹಿಪರ (ಗೋರ್ಬಚೇವ್ ಮುಖ್ಯ ಸಲಹಾಗಾರನಾಗಿದ್ದ ಗೈದರ್‌ನ ಪಕ್ಷ ಸೇರಿದಂತೆ) ಪಕ್ಷಗಳು ಇದ್ದವು. ೧೯೯೫ರಲ್ಲಿ ನಡೆದ ಚುನಾವಣೆಗಳಲ್ಲಿ ಕಮ್ಯುನಿಸ್ಟ್‌ರು ಅತಿ ದೊಡ್ಡ ಪಕ್ಷ (ಮೂರನೆಯ ಒಂದು ಭಾಗ ಬಹುಮತ)ವಾಗಿ ಹೊಮ್ಮಿದರು. ಆದರೂ ಅಧ್ಯಕ್ಷರಿಗೆ ಇದ್ದ ಹೆಚ್ಚಿನ ಅಧಿಕಾರದಿಂದಾಗಿ, ಯೆಲ್ಸಿನ್ ತಮಗೆ ಮನಬಂದ ನೀತಿಗಳನ್ನು ಜಾರಿಗೆ ತಂದರು. ನೀತಿಗಳನ್ನು ಮನಬಂದಂತೆ ಬದಲಿಸಿದರು.

೧೯೯೬ರಲ್ಲಿ ಹೊಸ ಸಂವಿಧಾನ ಪ್ರಕಾರ ನಡೆದ ಚುನಾವಣೆಯಲ್ಲಿ ಯೆಲ್ಸಿನ್ ಪುನರಾಯ್ಕೆಯಾದರು. ಆದರೆ ರಾಜಕೀಯ ಸ್ಥಿರತೆ ಇರಲಿಲ್ಲ. ಯೆಲ್ಸಿನ್ ಅಧ್ಯಕ್ಷರಾಗಿ ಇದ್ದಷ್ಟು ದಿನ ಪ್ರಧಾನಿಗಳು, ಮಂತ್ರಿಮಂಡಲಗಳು ಬಹಳ ವೇಗವಾಗಿ ಬದಲಾಗುತ್ತಿದ್ದವು. ಈ ಸಂವಿಧಾನದ ಪ್ರಕಾರ ಅಧ್ಯಕ್ಷರು ಪ್ರಧಾನಿಯನ್ನು ನೆಯಮಿಸುವುದು. ಪ್ರಧಾನಿ ಮಂತ್ರಿ ಮಂಡಲ ರಚಿಸಿ ಪಾರ್ಲಿಮೆಂಟಿನ ಮಂಜೂರಾತಿ ಪಡೆಯಬೇಕಿತ್ತು. ಹಲವು ಬಾರಿ ಡೊಮಾ ಮಂಜೂರಾತಿ ಇಲ್ಲದೆ ಯೆಲ್ಸಿನ್ ಬದಲಾವಣೆ ಮಾಡಬೇಕಾಗುತ್ತಿತ್ತು. ಯೆಲ್ಸಿನ್ ಆಡಳಿತ ಆರ್ಥಿಕ ಕ್ಷೇತ್ರದಲ್ಲಿ ವೈಫಲ್ಯಗಳನ್ನು (ಅದು ತಮ್ಮದೇ ನೀತಿಗಳಿಂದ ಆಗಿದ್ದರೂ) ಪ್ರಧಾನಿ ಮತ್ತು ಮಂತ್ರಿಮಂಡಲದ ಮೇಲೆ ಹೊರಿಸಿ, ಸರ್ಕಾರವನ್ನು ವಜಾ ಮಾಡುತ್ತಿದ್ದರು. ೧೯೯೮ರಲ್ಲಿ ತೀವ್ರ ರಾಜಕೀಯ-ಆರ್ಥಿಕ ಬಿಕ್ಕಟ್ಟು ಎರಡೂ ಬಂತು. ಹದಿನೆಂಟು ತಿಂಗಳಲ್ಲಿ ಐದು ಪ್ರಧಾನಿ ಮತ್ತು ಇನ್ನೂ ಹೆಚ್ಚು ಮಂತ್ರಿ ಮಂಡಲಗಳ ಬದಲಾವಣೆ ಆಯಿತು. ಚೆಚನ್ಯಾದಲ್ಲಿ ರಷ್ಯಾದ ವಿರುದ್ಧ ಪ್ರತ್ಯೇಕತೆ ಒತ್ತಾಯಕ್ಕೆ ಸಶಸ್ತ್ರ ಬಂಡಾಯ ಆರಂಭವಾಗಿತ್ತು. ಚೆಚನ್ಯಾಕ್ಕೆ ವಿದೇಶಿ ಸಹಾಯ ಬರುತ್ತಿದೆ. ಅವರು ಭಯೋತ್ಪಾದಕರು ಎಂದೆಲ್ಲಾ ಯೆಲ್ಸಿನ್ ಗುಡುಗಿದರು. ಪಾಶ್ಚಿಮಾತ್ಯ ದೇಶಗಳಲ್ಲಿ ಚೆಚನ್ಯಾ ಬಂಡಾಯಗಾರರು ಸ್ವಾತಂತ್ರ್ಯ ಹೋರಾಟಗಾರರು ಎನ್ನಲಾಯಿತು. ಯೆಲ್ಸಿನ್ ವಿದೇಶ ನೀತಿಯಲ್ಲಿ ಸೈದ್ಧಾಂತಿಕವಾಗಿ ಅಮೆರಿಕಾ ಜತೆ ಅತ್ಯಂತ ನಿಕಟವಾಗಿದ್ದರೂ, ಚೆಚನ್ಯಾದಂತಹ ಸಮಸ್ಯೆಗಳನ್ನು ಅಮೆರಿಕ ಬಳಸದೆ ಇರಲಿಲ್ಲ. ೧೯೯೫ ಆಗಸ್ಟ್‌ನಲ್ಲಿ ಪುಟಿನ್ ಪ್ರಧಾನಿಯಾಗಿ ನೆಯಮಕರಾದರು. ಭಾರಿ ರಾಜಕೀಯ ಅಸ್ಥಿರತೆ, ತಾಕಲಾಟಗಳ ನಂತರ ತೀವ್ರ ಅನಾರೋಗ್ಯ ಮತ್ತು ವಿರೋಧ ಎದುರಿಸುತ್ತಿದ್ದ ಯೆಲ್ಸಿನ್ ರಾಜೀನಾಮೆ ಕೊಟ್ಟರು.

ಪ್ರಧಾನಿ ಪುಟಿನ್ ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು. ೨೦೦೦ ಮಾರ್ಚ್‌ನಲ್ಲಿ ಪುಟಿನ್ ಅಧ್ಯಕ್ಷರಾಗಿ ಆಯ್ಕೆಯಾದರು. ಪುಟಿನ್ ಅಧ್ಯಕ್ಷರಾಗಿ ತೀವ್ರ ಆರ್ಥಿಕ ಬಿಕ್ಕಟ್ಟು ಮತ್ತು ರಷ್ಯಾದಾದ್ಯಂತ ಚೆಚನ್ಯಾ ಉಗ್ರಗಾಮಿಗಳ ಭಯೋತ್ಪಾದಕ ಕೃತ್ಯಗಳನ್ನು ಎದುರಿಸಬೇಕಾಯಿತು. ೨೦೦೩ ಚುನಾವಣೆಯಲ್ಲಿ ಪುಟಿನ್ ರಚಿಸಿದ ಪಕ್ಷಕ್ಕೆ ಭಾರಿ ಬಹುಮತ ಬಂತು. ೨೦೦೪ರಲ್ಲಿ ಪುಟಿನ್ ಅಧ್ಯಕ್ಷರಾಗಿ ಪುನಾರಾಯ್ಕೆಯಾದರು. ಈ ಅವಧಿಯ ಪಾರ್ಲಿಮೆಂಟು, ಅಧ್ಯಕ್ಷೀಯ ಚುನಾವಣೆಗಳಲ್ಲಿ ಕಮ್ಯನಿಸ್ಟ್ ಪಕ್ಷ ಹಿಂದಿನ ಅವಧಿಗೆ ಹೋಲಿಸಿದರೆ ಬಲಹೀನವಾಯಿತು. ಅಧ್ಯಕ್ಷ ಪುಟಿನ್, ಯೆಲ್ಸಿನ್‌ಗೆ ಹೋಲಿಸಿದರೆ ಆರ್ಥಿಕ ನೀತಿಗಳಲ್ಲಿ, ವಿದೇಶಿ ನೀತಿಯಲ್ಲಿ ಹೆಚ್ಚೆಚ್ಚು ಸ್ವತಂತ್ರ ನೀತಿ (ಅಮೆರಿಕದ ಪ್ರಭಾವ ಒತ್ತಡಕ್ಕೆ ಮಣಿಯದೆ)ಗಳನ್ನು ಅನುಸರಿಸಲು ಆರಂಭಿಸಿದರು. ರಷ್ಯಾದ ಸ್ವಾತಂತ್ರ್ಯ ಸಾರ್ವಭೌಮತೆಗೆ ಒತ್ತು ಕೊಡಲಾರಂಭಿಸಿತು.

ಇತರ ಗಣರಾಜ್ಯಗಳಲ್ಲಿ ಹೆಚ್ಚು ಕಡಿಮೆ ೧೯೮೯ ಸೋವಿಯತ್ ಅವಧಿಯ ಗಣರಾಜ್ಯದಲ್ಲಿ ಆಯ್ಕೆಯಾದ ಅಧ್ಯಕ್ಷರು, ಪಾರ್ಲಿಮೆಂಟ್ ವ್ಯವಸ್ಥೆ ಹೆಚ್ಚು ಕಡಿಮೆ ಮುಂದುವರೆಯಿತು. ಕೆಲವು ಕಡೆ ಕಮ್ಯುನಿಸ್ಟ್ ಪಕ್ಷಗಳ ನಾಯಕರು ತಮ್ಮ ಪಕ್ಷದ ಹೆಸರು ಅಥವಾ ಸ್ವಭಾವ (ಅಥವಾ ಎರಡೂ) ಬದಲಾಯಿಸಿ ಅಧಿಕಾರದಲ್ಲಿ ಮುಂದುವರೆದಿದ್ದರು. ಕೆಲವು ಕಡೆ ರಾಷ್ಟ್ರೀಯತೆ-ಜನಾಂಗ ಪ್ರದೇಶ ಆಧಾರಿತ ಹೊಸ ಪಕ್ಷಗಳು ಹುಟ್ಟಿಕೊಂಡಿದ್ದವು. ಈ ಹೊಸ ಪಕ್ಷಗಳು ಕೆಲವು ಕಡೆ ಅಧಿಕಾರ ವಹಿಸಿಕೊಂಡಿದ್ದವು. ಕೆಲವು ಕಡೆ ಪಾಶ್ಚಿಮಾತ್ಯ ಮಾದರಿಯ

ಆರ್ಥಿಕ-ರಾಜಕೀಯ ವ್ಯವಸ್ಥೆ ಬೆಂಬಲಿಸುವ, ವಿದೇಶಿ ಸಂಪರ್ಕ ಇರುವ ಪಕ್ಷಗಳು ಹುಟ್ಟಿಕೊಂಡವು. ಅವುಗಳು ಮತ್ತು ಆಗಿನ ಆಳುವ ಪಕ್ಷಗಳ ನಡುವೆ ಚುನಾವಣೆಯಲ್ಲಿ ಮತ್ತು ಆ ನಂತರವೂ ರಾಜಕೀಯ ಹಣಾಹಣಿ ನಡೆಯುತ್ತಿತ್ತು. ಅಮೆರಿಕಾ ಹೆಚ್ಚು ಕಡಿಮೆ ಎಲ್ಲಾ ಸ್ವತಂತ್ರ ದೇಶಗಳಲ್ಲಿ ತನಗೆ ಅನುಕೂಲಕರವಾದ (ಕನಿಷ್ಟ ವಿರೋಧವಿಲ್ಲದ, ಸಾಧ್ಯವಾದರೆ ಬಾಲಬಡುಕ), ಸರ್ಕಾರ, ಅಧ್ಯಕ್ಷರುಗಳನ್ನು ಹೊಂದಲು ಈ ಅವಧಿಯಲ್ಲಿ ಮುಕ್ತವಾಗಿ ಹಸ್ತಕ್ಷೇಪ ಮಾಡಿತು - ಪ್ರಜಾಪ್ರಭುತ್ವವನ್ನು ಬೆಂಬಲಿಸುವ ನೆಪದಲ್ಲಿ. ಅಥವಾ ಅಧಿಕಾರದಲ್ಲಿರುವ ಪಕ್ಷ, ವ್ಯಕ್ತಿಗಳನ್ನು ಲಂಚ-ಸವಲತ್ತು-ಧನ ಸಹಾಯಗಳಿಂದ ಗೆದ್ದುಕೊಂಡಿದೆ. ತಮ್ಮ ಹಿತಾಸಕ್ತಿಗೆ ವಿರೋಧವಾಗಿರುವ ದೇಶಗಳಲ್ಲಿ ಸರ್ಕಾರ ಬದಲಾಯಿಸಲು ವ್ಯಾಪಕ ಹಸ್ತಕ್ಷೇಪ ಮಾಡಿದೆ.

ಇದಕ್ಕಾಗಿ 'ಬಣ್ಣ ಬಣ್ಣದ ಕ್ರಾಂತಿ'ಯ ಯೋಜನೆ ಹಾಕಿ ಜಾರಿಗೆ ತಂದಿದೆ. ಇಂತಹ ಕ್ರಾಂತಿಗೆ ಹಲವು ವರ್ಷಗಳ ತಯಾರಿ ನಡೆಯುತ್ತದೆ. ಸಾಮಾನ್ಯವಾಗಿ ಇಂತಹ ಬಣ್ಣದ ಕ್ರಾಂತಿಗಳು ಚುನಾವಣೆಯ ಸಮಯದಲ್ಲಿ ಆಗಿವೆ. ಸಾಮಾನ್ಯವಾಗಿ ವಿರೋಧ ಪಕ್ಷ ಒಂದನ್ನು ಅಥವಾ ಪ್ರಮುಖ ನಾಯಕನನ್ನು ಆರಿಸಿಕೊಳ್ಳಲಾಗುತ್ತದೆ -'ಕ್ರಾಂತಿ'ಯ ನಂತರ ಅಧಿಕಾರಕ್ಕೆ ತರಲು. ಈಗಿರುವ ಅಧಿಕಾರದಲ್ಲಿದ್ದ ಪಕ್ಷ-ವ್ಯಕ್ತಿಯ ಮೇಲೆ ಆಪಾದನೆ-ದಾಳಿ, ಅಧಿಕಾರಕ್ಕೆ ಬರಬೇಕಾಗಿರುವವನ ಬಗ್ಗೆ ಗುಣಗಾನ-ಪ್ರಚಾರ ಆರಂಭವಾಗುತ್ತದೆ. ಇದಕ್ಕಾಗಿ ಇರುವ ಪತ್ರಿಕೆ, ಟಿ.ವಿ.ಚಾನೆಲ್‌ಗಳನ್ನು ಕೊಳ್ಳಲಾಗುತ್ತದೆ. ಇಲ್ಲವೆ ಸ್ಥಾಪಿಸಲಾಗು ತ್ತದೆ. ವಿದ್ಯಾರ್ಥಿ-ಯುವಕರ, ಸ್ವಯಂ-ಸೇವಕರ ಸಂಘಟನೆಯ ಪಡೆ ಕಟ್ಟಲಾಗುತ್ತದೆ. ಚುನಾವಣೆಯ ಮೊದಲು ಸಮೀಕ್ಷೆಗಳನ್ನು ನಡೆಸಿ ಬೇಕಾದ ಫಲಿತಾಂಶಕ್ಕೆ 'ನಿರೀಕ್ಷೆ' ಆರಂಭವಾಗುತ್ತದೆ. ಚುನಾವಣೆಯ ಸಮಯದಲ್ಲೂ ಸ್ವತಂತ್ರ ಪಾಶ್ಚಿಮಾತ್ಯ ವೀಕ್ಷಕರು, ಅಂತಾರಾಷ್ಟ್ರೀಯ ಪಾರ್ಲಿಮೆಂಟರಿ ತಂಡದ ಹೆಸರಲ್ಲಿ ಚುನಾವಣೆ ಮೇಲೆ ಪ್ರಭಾವ ಬೀರಲು ಪ್ರಯತ್ನ ನಡೆಯುತ್ತದೆ. ಚುನಾವಣೆಯಲ್ಲಿ ಬೇಕಾದ ಫಲಿತಾಂಶ ಬಂದರೆ ಸರಿ. ಇಲ್ಲದಿದ್ದರೆ ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು 'ಸ್ವತಂತ್ರ' ಮಾಧ್ಯಮಗಳು, ವೀಕ್ಷಕರು, ಅಂತಾರಾಷ್ಟ್ರೀಯ ಪಾರ್ಲಿಮೆಂಟರಿ ತಂಡದ ನಾಯಕರು 'ತೀರ್ಪು' ಕೊಡುತ್ತಾರೆ. ಅದಕ್ಕೂ ಮಣಿಯದಿದ್ದರೆ ಭಾರಿ 'ಜನತಾ ಹೋರಾಟ' ಆರಂಭವಾಗುತ್ತದೆ. ಲಕ್ಷಾಂತರ ಜನ ಟೆಂಟುಗಳ ಜತೆ ಅಧಿಕಾರದ ಕೇಂದ್ರವಾದ ಪಾರ್ಲಿಮೆಂಟು ಅಥವಾ ಅಧ್ಯಕ್ಷೀಯ ಭವನದ ಸುತ್ತ ಬೀಡು ಬಿಡುತ್ತಾರೆ. ಇಷ್ಟು ಹೊತ್ತಿಗೆ ಜಗತ್ತಿನ ಸುತ್ತ ಈ 'ಭಾವೀ ಕ್ರಾಂತಿ'ಯ ನೇರ ಪ್ರಸಾರ ನಡೆಯುತ್ತಿರುತ್ತದೆ. ಸಾಮಾನ್ಯವಾಗಿ ಸರ್ಕಾರಗಳು ಇಷ್ಟು ಹೊತ್ತಿಗೆ ಮಣಿಯುತ್ತವೆ. ಸರ್ಕಾರಗಳು ಬಲಪ್ರಯೋಗಕ್ಕೆ ಇಳಿದರೆ ಅದಕ್ಕೂ ಸಿದ್ಧತೆ ಇರುತ್ತದೆ.

ಹೀಗೆ 'ಶಾಂತಿಯುತವಾಗಿ' ತಮಗೆ ಬೇಡದ ಸರ್ಕಾರವನ್ನು ಬೇಕಾದಾಗ ಬದಲಾಯಿಸುವ, ಬೇಕಾದ ಸರ್ಕಾರವನ್ನು ಸ್ಥಾಪಿಸುವ 'ಬಣ್ಣ-ಬಣ್ಣದ ಜನತಾ ಕ್ರಾಂತಿ'ಗಳ ತಂತ್ರವನ್ನು ಅಮೆರಿಕ ಕರಗತ ಮಾಡಿದೆ. ಇದನ್ನು ಜಾರ್ಜಿಯಾದಲ್ಲಿ(ಗುಲಾಬಿ ಕ್ರಾಂತಿ) ಎಡ್ವರ್ಡ್ ಶೆವರ್‌ನಾದಝೆಯನ್ನು ಅಧಿಕಾರದಿಂದ ಕೆಳಗಿಳಿಸಲು. ಉಕ್ರೇನ್‌ನಲ್ಲಿ ಯಶೆಂಕೊನನ್ನು ಅಧಿಕಾರಕ್ಕೆ ತರಲು(ಕಿತ್ತಳೆ ಕ್ರಾಂತಿ) ಬಳಸಲಾಯಿತು. ಕಿರ್ಘಿಗಿಸ್ತಾನ್‌ದಲ್ಲಿ(ತುಲಿಪ್ ಕ್ರಾಂತಿ) ಲಿಕಯೆವ್‌ನನ್ನು ಅಧಿಕಾರದಿಂದ ಕೆಳಗಿಳಿಸಲಾಯಿತು. ಇವರು ಹಿಂದೆ ಅಮೆರಿಕಾಕ್ಕೆ ಬೇಕಾದ ನೆಚ್ಚಿನ ನಾಯಕರಾಗಿದ್ದರು. ಆದರೆ ತಮ್ಮ ದೇಶದ ಆರ್ಥಿಕ ಅಗತ್ಯಗಳಿಂದ, ರಷ್ಯಾದ ಜತೆ ಆರ್ಥಿಕ ಸಂಬಂಧಗಳನ್ನು ಹೊಂದಲು ಪ್ರಯತ್ನಿಸಿ ಅಮೆರಿಕಾದ 'ಹಿತಾಸಕ್ತಿ'ಗೆ ಧಕ್ಕೆ ಮಾಡಿದರು. ಪುಟಿನ್ ಅಧ್ಯಕ್ಷತೆಯಲ್ಲಿ ರಷ್ಯಾ ಸ್ವತಂತ್ರ ನೀತಿ ಅನುಸರಿಸಲು ಪ್ರಯತ್ನಿಸುತ್ತಿರುವುದರಿಂದ, ರಷ್ಯಾದ ಜತೆ ಸೇರುವವರೆಲ್ಲ ಅಮೆರಿಕಾದ ವಿರೋಧಿಗಳೂ ಅವರ ವಿರುದ್ಧ 'ಬಣ್ಣದ ಜನತಾ ಕ್ರಾಂತಿ'ಗಳನ್ನು ಬಳಸುವುದು 'ಅನಿವಾರ್ಯ'ವಾಯಿತು.

ಹಲವು ದೇಶಗಳಲ್ಲಿ ಹೊಸ 'ಬಣ್ಣದ ಜನತಾ ಕ್ರಾಂತಿ'ಗಳಿಗೆ ಸಿದ್ಧತೆ ನಡೆದಿದೆ. ಇದಕ್ಕಾಗಿ ಎನ್.ಇ.ಡಿ.(ನ್ಯಾಷನಲ್ ಎನ್‌ಡೋಮೆಂಟ್ ಫಾರ್ ಡೆಮಾಕ್ರಸಿ) ಮೂಲಕ ಭಾರಿ ಮೊತ್ತವನ್ನು ತೆಗೆದಿಡಲಾಗಿದೆ. ರಷ್ಯಾದಲ್ಲೇ ಇದನ್ನು ನಡೆಸಲು ಪ್ರಯತ್ನ ನಡೆದಿದೆ. ಇದನ್ನು ತಡೆಯಲು ರಷ್ಯಾದ ಸರ್ಕಾರ ರಾಜಕೀಯ ಉದ್ದೇಶದ ವಿದೇಶಿ ಧನ ಸಹಾಯದ ವಿರುದ್ಧ ಕಾನೂನು ಮಾಡಿದಾಗ ಹಾಹಾಕಾರ ನಡೆಯಿತು. ಅಮೇರಿಕಾದಲ್ಲಿ! ಹೆಚ್ಚಿನ ಕಡೆ ಪ್ರತ್ಯೇಕತಾ ಜನಾಂಗೀಯ ಕಲಹಗಳನ್ನು ಅಮೆರಿಕ ಬಳಸಿಕೊಳ್ಳಲು ಪ್ರಯತ್ನಿಸಿದೆ. ಕೆಲವು ಕಡೆ ಅಂತಹ ಕಲಹಗಳನ್ನು ಹುಟ್ಟುಹಾಕಿದೆ. ರಷ್ಯಾದಲ್ಲಿ ಚೆಚನ್ಯಾ-ದಾಗೇಸ್ತಾನ್, ಮೊಲ್ಡೋವಾದಲ್ಲಿ ಟ್ರಾನ್ಸಿಟ್ರೆಯಾ; ಜಾರ್ಜಿಯಾದಲ್ಲಿ ಅಬ್ ಖಾಜಿಯಾ, ದಕ್ಷಿಣ ಒಸ್ಸೆಶಿಯಾ; ಅಜರ್ ಬೈಜಾನ್‌ನಲ್ಲಿ ನಾಗರ್ನೊ-ಕಾರಾಬಾಕ್; -ಇಂತಹ ಕಲಹಗಳಿಗೆ ಪ್ರಮುಖ

ಉದಾಹರಣೆಗಳು. ಕೆಲವು ಸೋವಿಯೆತ್ ಅವಧಿಯವು. ಕೆಲವು ಹೊಸವು. ಸೋವಿಯತ್ ಅವಧಿಯಲ್ಲೇ ಅಮೇರಿಕಾ ಇಂತಹ ಕಲಹಗಳಿಗೆ ಹಿಂದಿನಿಂದ ಕುಮ್ಮಕ್ಕು ಕೊಡುತ್ತ ಬಂದಿತ್ತು.

ಸೋವಿಯತ್ ಒಕ್ಕೂಟದಲ್ಲಿ ಸಮಾಜವಾದಿ ವ್ಯವಸ್ಥೆ ಕಳಚಿ ಬಿದ್ದ ಮೇಲೆ, ಬಂಡವಾಳಶಾಹಿ ವ್ಯವಸ್ಥೆ ತರಲು ಪ್ರಯತ್ನ ನಡೆದಿದೆ. ಬಂಡವಾಳಶಾಹಿ ವರ್ಗವೇ ಇಲ್ಲದ ಈ ದೇಶಗಳಲ್ಲಿ, ಬಂಡವಾಳಶಾಹಿ ವರ್ಗ ಸೃಷ್ಟಿಸುವುದು ಪ್ರಮುಖ ಸಮಸ್ಯೆಯಾಯಿತು. ಸಾರ್ವಜನಿಕ ಆಸ್ತಿಗಳ (ಮುಖ್ಯವಾಗಿ ಕೈಗಾರಿಕೆಗಳ) ಖಾಸಗೀಕರಣದ ಭಾಗವಾಗಿ ಬಂಡವಾಳಶಾಹಿ ವರ್ಗ ಸೃಷ್ಟಿಯಾಯಿತು. ಹಿಂದೆ ಕಾನೂನು-ಬದ್ಧ ವ್ಯಾಪಾರ (ಸಣ್ಣ ವ್ಯಾಪಾರ ಮತ್ತು ಆಮದು-ರಫ್ತು ವ್ಯಾಪಾರದಲ್ಲಿ) ಮತ್ತು ಕಾನೂನು-ಬಾಹಿರ (ಕಾಳಸಂತೆ ಇತ್ಯಾದಿ) ವ್ಯಾಪಾರದಲ್ಲಿ ತೊಡಗಿದ್ದ ಶ್ರೀಮಂತರ ಒಂದು ಸಣ್ಣ ವಿಭಾಗ ಖಾಸಗೀಕರಣದಲ್ಲಿ ಭಾಗವಹಿಸಿ ಇನ್ನಷ್ಟು ಶ್ರೀಮಂತವಾಗಿತ್ತು. ಈ ವಿಭಾಗ ಬಂಡವಾಳಶಾಹಿ ವರ್ಗದ ಭಾಗವಾಯಿತು. ಗೋರ್ಬಚೇವ್ ಗ್ಲಾಸ್‌ನೋಸ್ತ್‌ನಲ್ಲಿ ಈ ವಿಭಾಗ ಬೆಳೆದಿತ್ತು. ಸರ್ಕಾರಿ ಕಂಪನಿಗಳ ಆಡಳಿತ ವರ್ಗ (ಮತ್ತು ಕೆಲವು ಸರ್ಕಾರಿ ಅಧಿಕಾರಿಗಳು) ಖಾಸಗೀಕರಣದ ಭಾಗವಾಗಿ ಮಾರಿದ ಕಂಪನಿ ಷೇರುಗಳ ದೊಡ್ಡ ಭಾಗ ಪಡೆದು, ಉಳಿದ ಭಾಗವನ್ನು ಕಾರ್ಮಿಕರಿಂದ, ನಾಗರಿಕರಿಂದ ಖರೀದಿಸಿ ಬೆಳೆದು ಬಂಡವಾಳಶಾಹಿ ವರ್ಗ ಭಾಗವಾಯಿತು. ಈ ಎರಡು ವಿಭಾಗಗಳು ಹೊಸ ಬಂಡವಾಳಶಾಹಿ ವರ್ಗದ ಭಾಗವಾದರೂ, ಇವುಗಳ ನೆಲೆ ಬಹಳ ಬೇರೆಯಾದ್ದರಿಂದ ಇವುಗಳ ಮಧ್ಯೆ ತಾಕಲಾಟ ಇದ್ದೇ ಇತ್ತು. ಎರಡನೆಯ ವಿಭಾಗಕ್ಕೆ ಕೈಗಾರಿಕಾ ನೆಲೆ, ಆಡಳಿತ ನಿರ್ವಹಣಾ ಕೌಶಲ್ಯ, ಆಧುನಿಕ ದೃಷ್ಟಿಕೋನ, ತಾಂತ್ರಿಕ ಪರಿಜ್ಞಾನ ಇವೆ. ಸೋವಿಯತ್ ಕಾಲದಲ್ಲಿ ಸ್ಥಾಪಿಸಲಾದ ಕೈಗಾರಿಕೆ ಸ್ಥಾವರಗಳ ಬಗ್ಗೆ ಮಮಕಾರವಿದೆ. ಅದೇ ರೀತಿ ಆಯಾ ಕೈಗಾರಿಕೆಗಳ ಕಾರ್ಮಿಕ ವರ್ಗದ ಜತೆ ದಶಕಗಳ ಸಂಬಂಧವಿದೆ. ದೇಶಪ್ರೇಮ, ರಾಷ್ಟ್ರೀಯ ಸ್ವಾಭಿಮಾನವು ಇದೆ. ತಮ್ಮ ಹೊಸದೇಶಗಳು ಆಯಾ ಕ್ಷೇತ್ರದಲ್ಲಿ (ಹಿಂದೆ ಸೋವಿಯತ್ ಒಕ್ಕೂಟಕ್ಕಿದ್ದ ಸ್ಥಾನ) ಉಳಿಸಿಕೊಳ್ಳಬೇಕು, ಇನ್ನಷ್ಟು ಬೆಳೆಯಬೇಕು ಎಂಬ ಆಕಾಂಕ್ಷೆ ಇದೆ. ಮೊದಲ (ವ್ಯಾಪಾರಿ) ವಿಭಾಗಕ್ಕೆ ಇವ್ಯಾವುವು ಇಲ್ಲ. ಹಿಂದಿನಿಂದಲೂ ಕಾನೂನು ಬಾಹಿರ, ಅರೆ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದು, ಅಂತಾರಾಷ್ಟ್ರೀಯ ಸಂಬಂಧ, ಸರ್ಕಾರಿ ಸಂಪರ್ಕ ಬಳಸಿ ಲಾಭ ಮಾಡುವ ಚಾಕಚಕ್ಯತೆ ಇತ್ತು. ಕೈಗಾರಿಕೆ ನೆಲೆ, ದೇಶಪ್ರೇಮ, ರಾಷ್ಟ್ರೀಯ ಸ್ವಾಭಿಮಾನ ಮುಂತಾದ ಲಾಭದಾಯಕವಲ್ಲದ್ದರ ಬಗ್ಗೆ ಕಾಳಜಿ ಇಲ್ಲದ ವಿಭಾಗ ಇದು.

ಹೊಸ ದೇಶಗಳು ರಚಿತವಾದ ಆರಂಭದಲ್ಲಿ ಈ ಎರಡು ವಿಭಾಗಗಳ ಅಧಿಕಾರವನ್ನು ಹಂಚಿಕೊಂಡವು. ಆದರೆ ಬರಬರುತ್ತಾ ತಿಕ್ಕಾಟವೂ ಆರಂಭವಾಯಿತು. ಅಮೆರಿಕಾ ಮತ್ತು ಇತರ ಪಾಶ್ಚಿಮಾತ್ಯ ದೇಶಗಳ ಜತೆ ಹೆಚ್ಚಿನ ಸಂಬಂಧ, ವಿದೇಶಿ ಬಂಡವಾಳ ಹೂಡಿಕೆ, ವಿದೇಶಿ ಬಂಡವಾಳ-ಕಂಪನಿಗಳ ಜತೆ ಪೂರ್ತಿ ಹೊಂದಾಣಿಕೆ, ಅಮೆರಿಕ ವಿದೇಶಿ ನೀತಿಗೆ ಒಪ್ಪಿಗೆ -ಇತ್ಯಾದಿ ಮೊದಲ ವಿಭಾಗದ ನೀತಿ. ವಿದೇಶಿ ತಂತ್ರಜ್ಞಾನ ಮತ್ತು ಬಂಡವಾಳ ಅಗತ್ಯವಿದ್ದಲ್ಲಿ ಮಾತ್ರ, ದೇಶದ ಕೈಗಾರಿಕೆಗಳ ಬೆಳವಣಿಗೆಗೆ ರಫ್ತಿಗೆ ಹೆಚ್ಚಿನ ಅವಕಾಶ ಕೊಡುವ ನೀತಿ. ದೇಶದ ಕೈಗಾರಿಕೆಗಳು ಕಂಪನಿಗಳು ಜಾಗತಿಕ ಮಾರುಕಟ್ಟೆ ಪಡೆದು ಬೆಳೆಯಲು ಬೇಕಾದ ವಿದೇಶಿ ನೀತಿ -ಇದು ಎರಡನೆಯ ವಿಭಾಗದ ನೀತಿ. ವಿದೇಶಿ ಶಕ್ತಿಗಳು ಸ್ವಾಭಾವಿಕವಾಗಿಯೇ ಮೊದಲನೆಯ ವಿಭಾಗದ ಜತೆ ಸಂಪರ್ಕವಿರಿಸಿಕೊಂಡು, ಅವರನ್ನು ಬಲಗೊಳಿಸಲು ಪ್ರಯತ್ನಿಸುತ್ತಿದ್ದರು. ಒಂದು ಮೂರನೆಯ ವಿಭಾಗವೂ ಇತ್ತು. ಇದು ಖಾಸಗೀಕರಣ ಗಮನಾರ್ಹ ಪ್ರಮಾಣದಲ್ಲಿ ನಡೆಯುವ ದೇಶಗಳಲ್ಲಿ ಪ್ರಬಲವಾಗಿದ್ದ, ಉಳಿದ ದೇಶಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದ ವಿಭಾಗ. ಸೋವಿಯತ್ ಕಾಲದಲ್ಲಿ ಪಕ್ಷದ ನಾಯಕರು, ಕಂಪನಿ ಡೈರೆಕ್ಟರ್‌ಗಳು, ವಿಜ್ಞಾನಿ-ತಂತ್ರಜ್ಞರು, ಮಿಲಿಟರಿ ನಾಯಕರು, ಬುದ್ಧಿ ಜೀವಿಗಳು, ಸರ್ಕಾರಿ ಅಧಿಕಾರಿಗಳು -ಈ ವಿಭಾಗದ ಭಾಗವಾಗಿದ್ದು, ಭ್ರಷ್ಟರಾಗದೆ ಖಾಸಗೀಕರಣದಲ್ಲಿ ಭಾಗವಹಿಸದೆ ತಮ್ಮ ಕರ್ತವ್ಯದಲ್ಲಿ ನಿರತರಾಗಿದ್ದರು. ಎಲ್ಲಾ ದೇಶಗಳಲ್ಲಿ ಈ ವಿಭಾಗ ದೇಶಗಳ ರಚನೆಯಾದ ಸಮಯದಲ್ಲಿ ಅಧಿಕಾರ ಹಿಡಿಯಲು ಹೋರಾಡದಿದ್ದರೂ ಸಾಕಷ್ಟು ದೊಡ್ಡ ವಿಭಾಗವಾಗಿತ್ತು. ಖಾಸಗೀಕರಣ ನಡೆಯದ ದೇಶಗಳಲ್ಲಿ ಇದೇ ಆಳುವ ವರ್ಗವಾಗಿ ಬೆಳೆಯಿತು. ಖಾಸಗೀಕರಣ ದೊಡ್ಡ ರೀತಿಯಲ್ಲಿ ನಡೆದ ದೇಶಗಳಲ್ಲಿ ಸಹ ಮೊದಲ ಎರಡು ವಿಭಾಗಗಳನ್ನು ವಿರೋಧಿಸಿ ಹಲವು ಬಾರಿ ಸರ್ಕಾರದ ಸ್ವರೂಪ, ನೀತಿಗಳಲ್ಲಿ ಬದಲಾವಣೆ ತಂದಿದೆ. ಮೊದಲನೆಯ ವಿಭಾಗದ ಪ್ರತಿನಿಧಿಗಳು ರಷ್ಯಾದ ಯೆಲ್ಸಿನ್, ಉಕ್ರೇನ್‌ನ ಯುಶೆಂಕೊ; ಎರಡನೆಯ ವಿಭಾಗದ ರಾಜಕೀಯ ಪ್ರತಿನಿಧಿಗಳು ರಷ್ಯಾದಲ್ಲಿ ಪುಟಿನ್, ಉಕ್ರೇನ್‌ನ ಕುಚ್‌ಮಾ, ಜಾರ್ಜಿಯಾದ ಶೆವರ್‌ನಾದಝೆ. ಕಳೆದ ೧೫ ವರ್ಷಗಳಲ್ಲಿ ಕೆಲವು ದೇಶಗಳಲ್ಲಿ ಭಾರಿ, ಗೊಂದಲದ ರಾಜಕೀಯ ಬದಲಾವಣೆಗಳು ಆಗಿವೆ. ಕೆಲವು ದೇಶಗಳಲ್ಲಿ ನಿಧಾನವಾಗಿಯೇ ರಾಜಕೀಯ ಬದಲಾವಣೆಗಳು ಆಗಿವೆ. ಆದರೆ ಈ ಎಲ್ಲಾ ರಾಜಕೀಯ

ಬೆಳವಣಿಗೆಗಳ ಸಾರವೆಂದರೆ ಈ ಮೂರು ವಿಭಾಗಗಳ ನಡುವೆ ಅಧಿಕಾರಕ್ಕಾಗಿ ತಿಕ್ಕಾಟ ಅಥವಾ ಹೊಂದಾಣಿಕೆ. ಇದು ಆ ದೇಶದಲ್ಲಿ ಆ ಮೂರು ವಿಭಾಗಗಳ ಬಲಾಬಲಗಳನ್ನು ಹೊಂದಿಕೊಂಡಿದೆ. ದೇಶದ ಪ್ರಸ್ತುತ ಆರ್ಥಿಕ-ರಾಜಕೀಯ, ಅಂತಾರಾಷ್ಟ್ರೀಯ ಪ್ರಭಾವ ಇವುಗಳ ಮೇಲೂ ಹೊಂದಿಕೊಂಡಿದೆ. ಈ ರಾಜಕೀಯದಲ್ಲಿ ಜನರ ಪಾತ್ರ ಇಲ್ಲವೆನ್ನುವಷ್ಟು ತೀರಾ ಕಡಿಮೆ. ಅಷ್ಟರಮಟ್ಟಿಗೆ ಪ್ರಜಾಪ್ರಭುತ್ವದ ವಿಸ್ತರಣೆ, ನಿಜವಾದ ಪ್ರಜಾಸತ್ತಾತ್ಮಕ ನಿಯಂತ್ರಣ ಸೋವಿಯತ್ ಕಾಲಕ್ಕಿಂತಲೂ ತೀರಾ ಕಡಿಮೆ ಎನ್ನಬಹುದು. ಪ್ರಜಾಪ್ರಭುತ್ವದ ವಿಸ್ತರಣೆ, ಬಲಗೊಳಿಸುವಿಕೆಯಲ್ಲೂ ಸೋವಿಯೆತ್ ನಂತರದ ವ್ಯವಸ್ಥೆ ಸೋತಿದೆ ಎನ್ನಬಹುದು.

**'ಡಕಾಯಿತ' ಬಂಡವಾಳಶಾಹಿ?**

ಸೋವಿಯತ್ ನಂತರದ ಅವಧಿಯಲ್ಲಿ ೧೫ ಹೊಸ ದೇಶಗಳಲ್ಲಿ ಆರ್ಥಿಕವಾಗಿ ಯಾವ ವ್ಯವಸ್ಥೆಯಿದೆ? ಎಲ್ಲವೂ ಹೆಚ್ಚು ಕಡಿಮೆ ಬಂಡವಾಳಶಾಹಿ ಎನ್ನಬಹುದಾದರೂ, ಬಂಡವಾಳಶಾಹಿ ವ್ಯವಸ್ಥೆಗೆ ಬದಲಾವಣೆಯ ಮಟ್ಟದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಖಾಸಗೀಕರಣದ ಮಟ್ಟ, ಒಟ್ಟು ಉತ್ಪಾದನೆಯಲ್ಲಿ ಖಾಸಗಿ ಬಂಡವಾಳದ ಭಾಗ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ೧೫ ದೇಶಗಳನ್ನು ಮೂರು ವಿಭಾಗ ಮಾಡ ಬಹುದು. ಅತ್ಯಂತ ಹೆಚ್ಚಿನ ಖಾಸಗೀಕರಣ ಕಂಡಿರುವ ದೇಶಗಳೆಂದರೆ - ಎಸ್ಟೋನಿಯಾ, ಲಿಥುವಾನಿಯಾ. ಮಧ್ಯಮ ಖಾಸಗೀಕರಣ ಆಗಿರುವ ದೇಶಗಳು- ರಷ್ಯಾ, ಅರ್ಮೆನಿಯಾ, ಲಾಟಿವಿಯಾ, ಉಕ್ರೇನ್, ಕಝಾಕಿಸ್ತಾನ, ಜಾರ್ಜಿಯಾ, ಕಿರ್ಘಿಗಿಸ್ತಾನ. ಕಡಿಮೆ ಖಾಸಗೀಕರಣವಾದ ದೇಶಗಳು- ಅಜರ್‌ಬೈಜಾನ್, ಮೊಲ್ಡೊವಾ, ತಾಜಕಿಸ್ತಾನ್, ಉಝ್ಬೇಕಿಸ್ತಾನ್, ತುರ್ಕಮಾನಿಸ್ತಾನ್, ಬೆಲರಸ್. ಅತ್ಯಂತ ಹೆಚ್ಚಿನ ಖಾಸಗೀಕರಣವಾದ ದೇಶಗಳಾದ ಎಸ್ಟೋನಿಯಾ, ಲಿಥುವಾನಿಯಾ ಯುರೋಪಿನ ಆರ್ಥಿಕತೆಯೊಂದಿಗೆ ಗರಿಷ್ಟ ಸಂಬಂಧ ಹೊಂದಿದ್ದು, ಬಂಡವಾಳಶಾಹಿ ವ್ಯವಸ್ಥೆಗೆ ಬದಲಾವಣೆಯಲ್ಲಿ ಅತ್ಯಂತ ಹೆಚ್ಚಿನ ಮಟ್ಟಕ್ಕೆ ಹೋಗಿವೆ. ಕಡಿಮೆ ಖಾಸಗೀಕರಣದ ದೇಶಗಳಲ್ಲಿ ಬಂಡವಾಳಶಾಹಿ ಬೆಳವಣಿಗೆ ಅತ್ಯಂತ ಕಡಿಮೆ. ಆದರೆ ಆರ್ಥಿಕವಾಗಿ ಅಷ್ಟೇನೂ ಬಲಶಾಲಿಯಾಗಿ ಇಲ್ಲದಿದ್ದರೂ, ಮಧ್ಯಮ ಖಾಸಗೀಕರಣದ ದೇಶಗಳ ಮೇಲೆ ಅಥವಾ ಪಾಶ್ಚಿಮಾತ್ಯ ದೇಶಗಳ ಮೇಲೆ ಅವಲಂಬನೆ ಇರುವುದರಿಂದ ಇವುಗಳ ಮೇಲೂ ಬಂಡವಾಳಶಾಹಿ ದಿಕ್ಕಿನಲ್ಲಿ ಪೂರ್ತಿ ಬದಲಾವಣೆಗೆ ಒತ್ತಡವಿದೆ. ಈ ದೇಶಗಳಲ್ಲೂ ಸಮಾಜವಾದಿ ರಚನೆ ಉಳಿಸಿಕೊಳ್ಳುವುದು ಕಷ್ಟವಾಗಿದೆ. ಮಧ್ಯಮ ಖಾಸಗೀಕರಣದ ದೇಶಗಳ ಮೇಲೆ ಅಮೆರಿಕ ಮತ್ತು ಪಶ್ಚಿಮ ಯುರೋಪಿನ ದೇಶಗಳು ತಮ್ಮ ಹದ್ದಿನ ದೃಷ್ಟಿ ಹಾಕಿವೆ. ಈ ದೇಶಗಳಲ್ಲೇ ಬಂಡವಾಳ ಹೂಡಿಕೆಗೆ, ಮಾರುಕಟ್ಟೆ ಕಸಿಯಲು ಹೆಚ್ಚಿನ ಅವಕಾಶವಿರುವುದು. ಆದ್ದರಿಂದಲೇ ಹಿಂದೆ ಚರ್ಚಿಸಿದಂತೆ ರಾಜಕೀಯ ಅಲ್ಲೋಲ ಕಲ್ಲೋಲಗೊಳಗಾದ ದೇಶಗಳೂ ಇವೇ.

ರಷ್ಯಾದಲ್ಲಿ ಖಾಸಗೀಕರಣವನ್ನು 'ಬಲಾತ್ಕಾರವಾಗಿ' ಮಾಡಿದ ರೀತಿ ಅಲ್ಲಿನ ಬಂಡವಾಳ ಶಾಹಿಯ ಸ್ವರೂಪವನ್ನು ನಿರ್ಧರಿಸಿದೆ. ರಷ್ಯಾದಲ್ಲಿ ಮೊದಲ ಸುತ್ತಿನ ಖಾಸಗೀಕರಣ ೧೯೯೨-೯೪ರಲ್ಲಿ ಆಯಿತು. ಇದಕ್ಕೆ ಸಾಮೂಹಿಕ ಅಥವಾ ವೋಚರ್ ಖಾಸಗೀಕರಣ ಎನ್ನುತ್ತಾರೆ. ಈ ಮೊದಲ ಸುತ್ತಿನಲ್ಲಿ ಅರ್ಧದಷ್ಟು ಸರ್ಕಾರಿ ಕಂಪನಿಗಳ ಖಾಸಗೀಕರಣ ಮಾಡಲಾಯಿತು. ಜನವರಿ ೯೨ರಲ್ಲಿ ಇದೇ ಅವಧಿಯಲ್ಲಿನ 'ಶಾಕ್ ಚಿಕಿತ್ಸೆ' ಆರಂಭವಾಯಿತು. ಆರು ತಿಂಗಳ ನಂತರ ಬೆಲೆಗಳ ಪೂರ್ಣ ಉದಾರೀಕರಣವಾಯಿತು. ಸರ್ಕಾರಿ ಬಜೆಟ್ ಮೇಲೆ ತೀವ್ರ ಕಡಿತ ತರಲಾಯಿತು. ೧೯೯೨-೯೫ರ ಅವಧಿಯಲ್ಲಿ ಸೂಪರ್ ಹಣದುಬ್ಬರ (ಹಲವು ಶೇಕಡಾ ನೂರಕ್ಕಿಂತಲೂ ಹೆಚ್ಚು. ಉದಾ : ೧೯೯೨ರಲ್ಲಿ ಶೇಕಡಾ ೨೪೫!) ಕಂಡುಬಂತು. ಹಣಕಾಸು ನಿಯಂತ್ರಣ, ವಿದೇಶಿ ವಿನಿಮಯ ನಿಯಂತ್ರಣ ಇವುಗಳನ್ನೆಲ್ಲಾ ತೆಗೆದು ಹಾಕಲಾಯಿತು. ರೂಬಲ್‌ನ ಬಂಡವಾಳ-ಪರಿವರ್ತನೀಯತೆ ತರಲಾಯಿತು. ಈ ಎಲ್ಲಾ ನೀತಿಗಳ ಒಟ್ಟು ಪರಿಣಾಮ ಬಂಡವಾಳದ 'ಪಲಾಯನ'. ೧೯೯೨-೯೫ರ ಅವಧಿಯಲ್ಲಿ ಮೂರು ಸಾವಿರ ಕೋಟಿ ಡಾಲರು ಬಂಡವಾಳ 'ಪಲಾಯನ' ಮಾಡಿತು. ಅಂದರೆ ಇದನ್ನು ವಿದೇಶಿ ಬ್ಯಾಂಕುಗಳಿಗೆ, ಅಕೌಂಟುಗಳಿಗೆ ಕಳಿಸಲಾಯಿತು. ಇದು ಸಾಮಾಜಿಕ ಸಂಪತ್ತಿನ ಹಗಲು ದರೋಡೆ ಅಥವಾ ಡಕಾಯತಿ ಅಲ್ಲದೆ ಬೇರೆ ಅಲ್ಲ. ಬಂಡವಾಳಶಾಹಿ ರೂಪಗೊಂಡು ಈ ಬಗೆಯಿಂದಾಗಿ ರಷ್ಯಾದ ಬಂಡವಾಳಶಾಹಿಯನ್ನು 'ಡಕಾಯಿತಿ ಬಂಡವಾಳಶಾಹಿ' ಎನ್ನಲಾಗಿದೆ. ಮೊದಲನೆಯ ಹಂತದ ಖಾಸಗೀಕರಣದ ನಂತರ ಕೈಗಾರಿಕಾ ಒಡೆತನ ವ್ಯಾಪಕವಾಗಿ ಹಂಚಿಹೋಗಿತ್ತು. ಎಲ್ಲಾ ಬಂಡವಾಳವನ್ನು 'ಉತ್ಪಾದಕ'ವಾಗಿಸಲು ಎರಡನೆಯ ಹಂತದ ಖಾಸಗೀಕರಣ ಆರಂಭವಾಯಿತು. ಎರಡನೆಯ ಹಂತದ ಖಾಸಗೀಕರಣವನ್ನು ಗುತ್ತೇದಾರಿಕರಣ ಎನ್ನುವುದು ಹೆಚ್ಚು ಸರಿಯಾದೀತು. ಯೆಲ್ಸಿನ್ ಕೆಲವು ಗುತ್ತೇದಾರಿ ಗುಂಪುಗಳನ್ನು ಸೃಷ್ಟಿಸಲು ಹಲವು ಕಾನೂನುಗಳನ್ನು ಮಾಡಿದರು. ಇದಕ್ಕಿಂತ ಮೊದಲು ಅಂದರೆ ೧೯೯೪ರ ಹೊತ್ತಿಗೆ, ಕೇವಲ ೭ ಕೈಗಾರಿಕಾ-

ಹಣಕಾಸು ಗುಂಪುಗಳು ಇದ್ದವು. ಕೈಗಾರಿಕಾ-ಹಣಕಾಸು ಗುಂಪುಗಳೆಂದರೆ ಬ್ಯಾಂಕುಗಳು ಮತ್ತಿತ್ತರೆ ಹಣಕಾಸು ಕಂಪನಿಗಳು ಮತ್ತು ಕೈಗಾರಿಕೆಗಳ ಒಂದು ಗುಂಪು ಸೇರಿ ಒಂದೇ ಗುಂಪು ಆಗುವುದು. ೧೯೯೭ರ ಹೊತ್ತಿಗೆ ಇವು ೬೦ಕ್ಕೆ ಏರಿದ್ದವು. ಅವನ್ನು ಯೆಲ್ಸಿನ್ ಕ್ರೋಢೀಕರಿಸಿ ಏಳು ಗುತ್ತೇದಾರಿ ಗುಂಪುಗಳನ್ನು ಸೃಷ್ಟಿಸಿದರು. ಈ ಖಾಸಗೀಕರಣಗಳ ನಂತರ ೧೯೯೭ರಲ್ಲಿ ಕೇವಲ ಶೇಕಡಾ ೯ ಕೈಗಾರಿಕಾ ಘಟಕಗಳು ಮಾತ್ರ ಪೂರ್ಣವಾಗಿ ಸರ್ಕಾರಿ ಒಡೆತನದಲ್ಲಿದ್ದವು. ೧೯೯೪ರ ಹೊತ್ತಿಗೆ ಮೂರನೆಯ ಎರಡರಷ್ಟು ಕಾರ್ಮಿಕರು ಖಾಸಗೀಕರಣದ ಖಾಸಗಿ ಕ್ಷೇತ್ರದ ಘಟಕಗಳಲ್ಲಿ ಕೆಲಸ ಮಾಡುತ್ತಿದ್ದರು.

ಖಾಸಗೀಕರಣ ಈಗಾಗಲೇ ಇದ್ದ ಕೈಗಾರಿಕಾ ಘಟಕಗಳ ಒಡೆತನ ಬದಲಾಯಿಸಿತು. ಕೈಗಾರಿಕೆಗಳಿಗೆ ಹೊಸ ಬಂಡವಾಳ ತರಲಿಲ್ಲ. ಬದಲಾಗಿ ಆರ್ಥಿಕದಲ್ಲಿ ಕೈಗಾರಿಕೆಯಲ್ಲಿ ಒಟ್ಟಾರೆ ಬಂಡವಾಳ ಹೂಡಿಕೆ ಕುಸಿಯಿತು. ರಷ್ಯಾದ ಡಕಾಯಿತ ಬಂಡವಾಳ ಹೀಗೆ ಲೂಟಿಯಲ್ಲೇ ಆಸಕ್ತಿ ಇದ್ದದ್ದು, ಬಂಡವಾಳ ಹೂಡಿಕೆಯಲ್ಲಿ ಅಲ್ಲ. ಹಲವು ಪಾಶ್ಚಿಮಾತ್ಯ ಸಮಾಜಶಾಸ್ತ್ರಜ್ಞರು ಇದನ್ನು ರಷ್ಯನ್ 'ಸ್ವಭಾವ'ದ ಮೇಲೆ ಆರೋಪಿಸುತ್ತಾರೆ. ಆದರೆ ಬಂಡವಾಳಶಾಹಿಯ ಉಗಮ-ವಿಕಾಸ ಅಧ್ಯಯನ ಮಾಡಿದ ಅರ್ಥಶಾಸ್ತ್ರಜ್ಞರು ಇದೇನು ರಷ್ಯನ್ ಪ್ರಕ್ರಿಯೆ ಅಲ್ಲ. ಎಲ್ಲಾ ದೇಶಗಳಲ್ಲಿ, ಎಲ್ಲಾ ಬಂಡವಾಳಶಾಹಿಗಳ ಮೂಲ ಬಂಡವಾಳ ಶೇಖರಣೆ ಆಗಿದ್ದು ಕಡಲುಗಳ್ಳರ ವಸಾಹತುಗಳ ಲೂಯಿಟಿಂದಲೇ. ಯುರೋಪಿನ ಬಂಡವಾಳಶಾಹಿಗಳ ಮೂಲ ಬಂಡವಾಳ ಶೇಖರಣೆ ಆಗಿದ್ದು ಕಡಲುಗಳ್ಳರ ವಸಾಹತುಗಳ ಲೂಟಿ-ಇತ್ಯಾದಿಗಳಿಂದಲೇ, ಕಾನೂನು-ಬದ್ಧ ವ್ಯಾಪಾರದಿಂದ ಮಾತ್ರವಲ್ಲ ಎಂದು ಅವರು ಹೇಳುತ್ತಾರೆ. ರಷ್ಯಾದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಸೃಷ್ಟಿಸುವಾಗಲೂ ಇದೇ ಆಗುತ್ತಿರುವುದು. ಖಾಸಗೀಕರಣದ ಪ್ರಕ್ರಿಯೆ ರಷ್ಯಾದಲ್ಲಿ ಮೂಲ ಬಂಡವಾಳ ಶೇಖರಣೆ ಮಾಡಲು ಸರ್ಕಾರದ ಕ್ರಮ. ರಷ್ಯಾದಲ್ಲಿ ರಚಿತವಾದ ಈ 'ಡಕಾಯತಿ ಬಂಡವಾಳಶಾಹಿ'ಗೆ ಸ್ಪಷ್ಟ ಕೈಗಾರಿಕೆ ನೆಲೆಯಿಲ್ಲದ್ದು, ರಷ್ಯಾದ ಆ ಮೇಲಿನ ಬೆಳವಣಿಗೆ ಮೇಲೆ ಭಾರಿ ಪರಿಣಾಮ ಬೀರಿದೆ.

ಬಂಡವಾಳಶಾಹಿ ವ್ಯವಸ್ಥೆ ರಷ್ಯಾದಲ್ಲಿ ರೂಪಿಸಿದವರು ಹಲವು ಕನಸುಗಳನ್ನು ಜನರಿಗೆ ಉಣಬಡಿಸಿದ್ದರು. ಬಂಡವಾಳ ಹೂಡಿಕೆ ಹಲವು ಪಟ್ಟು ಹೆಚ್ಚುತ್ತದೆ. ದಕ್ಷತೆ-ಲಾಭ-ಬಂಡವಾಳ ಹೆಚ್ಚಿ ಬೆಳವಣಿಗೆ ವೇಗವಾಗಿ ಆಗುತ್ತದೆ. ಆದರೆ ಇದು ಯಾವುದು ಆಗಲಿಲ್ಲ. ಮಾತ್ರವಲ್ಲ ಇದ್ದ ಕೈಗಾರಿಕೆಗಳು ಬಲಹೀನವಾಗಿ, ಕೆಲವು ಮುಚ್ಚಿ ಹೋಗುವ ಸ್ಥಿತಿಗೆ ಬಂದಿವೆ. ೮ ವರ್ಷಗಳ ಕಾಲ ರಷ್ಯಾದಲ್ಲಿ ಒಂದೇ ಒಂದು ಹೊಸ ಕೈಗಾರಿಕೆಯೂ ಸ್ಥಾಪಿತವಾಗಿಲ್ಲ. ೧೯೬೫-೭೦ (ಎರಡನೆಯ ಪಂಚವಾರ್ಷಿಕ ಯೋಜನೆ) ಐದು ವರ್ಷದ ಅವಧಿ ಒಂದರಲ್ಲೇ ಸುಮಾರು ೧೯೦೦ ಕೈಗಾರಿಕಾ ಘಟಕಗಳನ್ನು ಸ್ಥಾಪಿಸಲಾಗಿತ್ತು ಎಂದು ನೆನಪಿಸಿಕೊಂಡರೆ ರಷ್ಯನ್ ಕೈಗಾರಿಕೆಯ ಹೊಸ ದುಸ್ಥಿತಿಯ ಅರಿವಾಗುತ್ತದೆ. ರಷ್ಯಾದ ಒಟ್ಟು ಉತ್ಪಾದನೆ ೯೦ರ ದಶಕದಲ್ಲಿ ಅರ್ಧದಷ್ಟಾಯಿತು (೭೦೦ ಶತಕೋಟಿ ಡಾಲರುಗಳಿಂದ ೪೦೦ ಶತಕೋಟಿ ಡಾಲರಿಗೆ ಕುಸಿಯಿತು). ಅದೇ ಸಮಯದಲ್ಲಿ ಚೀನಾದ ಒಟ್ಟು ಉತ್ಪಾದನೆ ಎರಡು ಪಟ್ಟಾಗಿತ್ತು(೩೦೦ ಶತಕೋಟಿ ಡಾಲರಿಂದ ೭೦೦ ಶತಕೋಟಿ ಡಾಲರಿಗೆ ಜಿಗಿದಿತ್ತು). ೧೯೯೮ರ ಹೊತ್ತಿಗೆ ರಷ್ಯಾ ತೀರಾ ತೀವ್ರವಾದ ಆರ್ಥಿಕ ಬಿಕ್ಕಟ್ಟು ಎದುರಿಸಿತು. ೧೯೯೯ರ ನಂತರ ಒಟ್ಟು ಉತ್ಪಾದನೆ ೧೯೯೧ ರಿಂದ ಸತತವಾಗಿ ಇಳಿಯುತ್ತಿ ದ್ದುದ್ದು ನಿಂತು ಏರಲು ಆರಂಭವಾಯಿತು. ಇದಕ್ಕೆ ಮುಖ್ಯ ಕಾರಣ ತೈಲ ಬೆಲೆ ಏರಲು ಆರಂಭಿಸಿದ್ದು.

ಒಟ್ಟಾರೆಯಾಗಿ ರಷ್ಯಾದಲ್ಲಿ ಆರ್ಥಿಕ ಸ್ಥಗಿತತೆಯೇ ಇದೆ ಎನ್ನಬಹುದು. ಈ ಒಟ್ಟಾರೆ ೧೫ ವರ್ಷಗಳ ಒಟ್ಟು ಸರಾಸರಿ ಬೆಳವಣಿಗೆ ಗಮನಿಸಿದರೆ, ಅದನ್ನು ಸ್ಥಗಿತತೆಯೇ ಎನ್ನಬೇಕಾಗುತ್ತದೆ. ರಷ್ಯಾ ಒಟ್ಟು ಇತರ ದೇಶಗಳ ಸ್ಥಿತಿಯೂ ಇದೇ ರೀತಿ ಒಟ್ಟಾರೆ ಸ್ಥಗಿತತೆಯದ್ದೇ. ೧೫ ವರ್ಷಗಳ ಬಂಡವಾಳಶಾಹಿ ವ್ಯವಸ್ಥೆ ಬೆಳವಣಿಗೆಯ ವೇಗ ಏರಿಸುವ ಬದಲು ಸ್ಥಗಿತತೆ ಕೊಟ್ಟಿದೆ. ಹಿಂದೆ ಹೇಳಿದ ಮಧ್ಯಮ-ಖಾಸಗೀಕರಣದ ದೇಶಗಳಲ್ಲಿ ಸ್ಥಿಗಿತತೆ ಡಕಾಯಿತ-ಬಂಡವಾಳಶಾಹಿ ಲೂಟಿಯಲ್ಲೇ ಮಗ್ನವಾಗಿದೆ. ಹೂಡಿಕೆ-ಬೆಳವಣಿಗೆ ಬಗ್ಗೆ ತಲೆಕೆಡಿಸಿಕೊಂಡಿಲ್ಲ. ಕಡಿಮೆ-ಖಾಸಗೀಕರಣದ ದೇಶಗಳಲ್ಲಿ ಒಡೆತನದಲ್ಲಿ ಭಾರಿ ಬದಲಾವಣೆ ಆಗಿಲ್ಲ. ಆದರೆ ಒಕ್ಕೂಟದ ಪ್ರಯೋಜನಕಾರಿ ಪರಸ್ಪರಾವಲಂಬನೆ ನಾಶವಾಗಿರುವುದು, ಪಾಶ್ಚಿಮಾತ್ಯ ದೇಶಗಳಿಗೆ ಈ ದೇಶಗಳಲ್ಲಿ ಬಂಡವಾಳ ಹೂಡಿಕೆಗೆ ಆಸಕ್ತಿ ಇಲ್ಲದಿರುವುದು, ಈ ದೇಶಗಳ (ವಿಘಟನೆ ನಂತರ) ಆರ್ಥಿಕ ಸಾಪೇಕ್ಷವಾಗಿ ಹಿಂದುಳಿದಿರುವುದು - ಇವೆಲ್ಲ ಸೇರಿ ಸ್ಥಗಿತತೆ ಉಂಟಾಗಿದೆ. ದೇಶದ ಆರ್ಥಿಕ ಮಟ್ಟದಲ್ಲಿ ಬಂಡವಾಳಶಾಹಿ ವಿಫಲವಾಗಿರುವುದು ಮಾತ್ರವಲ್ಲ. ಕಂಪನಿ ಮಟ್ಟದಲ್ಲೂ ಜಾಗತಿಕ ಕಂಪನಿಗಳಿಗೆ ಹೋಲಿಸಿದರೆ, ಖಾಸಗೀಕರಣವಾಗಿ ಬಂಡವಾಳಶಾಹಿ ವ್ಯವಸ್ಥೆ ನಂತರದಲ್ಲಿ ಅವುಗಳ ಪರಿಸ್ಥಿತಿ ಉತ್ತಮವಾಗಿಲ್ಲ. ಅತ್ಯಂತ ಹೆಚ್ಚು

ಮಾರುಕಟ್ಟೆ ಬೆಲೆಯ ೫೦೦ ಕಂಪನಿಗಳಲ್ಲಿ, ರಷ್ಯಾದ ಕಂಪನಿಗಳು ಇರುವುದು ೫ ಮಾತ್ರ (ಅದೂ ಎಲ್ಲವೂ ತೈಲ-ಗ್ಯಾಸ್ ಮುಂತಾದ ಇಂಧನ ಶಕ್ತಿ ಮಾರಾಟದ ಕಂಪನಿಗಳು).

ಒಟ್ಟಾರೆಯಾಗಿ ಸೋವಿಯತ್ ಒಕ್ಕೂಟದ ದೇಶಗಳು ಮತ್ತು ಪೂರ್ವ ಯುರೋಪಿನ ಸಮಾಜವಾದಿ ದೇಶಗಳು, ಹಲವು ಆರ್ಥಿಕ ಮತ್ತು ಬೆಳವಣಿಗೆ ಸೂಚಕಗಳಲ್ಲಿ ಅಭಿವೃದ್ಧಿ ಹೊಂದಿದ ಮಧ್ಯಮ ಆದಾಯದ ದೇಶಗಳೊಂದಿಗೆ (ಮುಖ್ಯವಾಗಿ ಪಶ್ಚಿಮ ಯುರೋಪಿನ ದೇಶಗಳು) ಹೋಲಿಸುವ ಮಟ್ಟದಲ್ಲಿತ್ತು. ೯೦ರ ದಶಕದಲ್ಲಿ ಈ ದೇಶಗಳಲ್ಲಿ ಸಮಾಜ ವಾದದ ವಿಘಟನೆಯ ೧೫ ವರ್ಷಗಳ ನಂತರ, ಅಭಿವೃದ್ಧಿ ಹೊಂದುತ್ತಿರುವ ಮೂರನೆಯ ಜಗತ್ತಿನ ದೇಶಗಳ ಮಟ್ಟಕ್ಕೆ ಇಳಿದಿವೆ. ಸಾಮಾಜಿಕ ಸೂಚಕಗಳಲ್ಲೂ- ಶಿಕ್ಷಣ, ಉದ್ಯೋಗ, ಆರೋಗ್ಯ, ಸೇವೆ, ಸಾಮಾಜಿಕ ಭದ್ರತೆ, ಅಪರಾಧದ ದರ -ಇವೆಲ್ಲದರಲ್ಲಿಯೂ ಮಾಜಿ ಸೋವಿಯತ್ ದೇಶಗಳ ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ಸಾಮಾಜಿಕ ಭದ್ರತೆ, ಅಪರಾಧ ರಹಿತತೆ, ಜೀವನಮಟ್ಟಕ್ಕೆ ಹೆಸರಾಗಿದ್ದ ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ದೇಶಗಳು ಸಾಮಾಜಿಕ ಸಮಸ್ಯೆಗಳ ಕೂಪವಾಗಿವೆ.

**ದಾರುಣ ಸಾಮಾಜಿಕ ಸ್ಥಿತಿ**

ಸಾಮಾನ್ಯವಾಗಿ ಸಾಮಾಜಿಕ ಬೆಳವಣಿಗೆಯನ್ನು 'ಮಾನವ ಅಭಿವೃದ್ಧಿ ಸೂಚಕ' ಎಂಬ ವಿಶ್ವಸಂಸ್ಥೆ ಅಭಿವೃದ್ಧಿಪಡಿಸಿದ ಸೂಚಕದಲ್ಲಿ ಅಳೆಯಲಾಗುತ್ತದೆ. ೮೦ರ ದಶಕದಲ್ಲಿ ವಿಶ್ವಸಂಸ್ಥೆ ಈ ಸೂಚಕ ಸಿದ್ಧಪಡಿಸಿ ಬಿತ್ತರಿಸಲು ಆರಂಭಿಸಿತು. ೧೯೯೧ರ ಮೊದಲು ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪಿನ ಸಮಾಜವಾದಿ ದೇಶಗಳು (ರೋಮೇನಿಯಾ ಒಂದು ಬಿಟ್ಟು) ಅತ್ಯಂತ ಹೆಚ್ಚಿನ ಸೂಚಕದ ಬೆಲೆ ಇರುವ ೫೩ ದೇಶಗಳಲ್ಲಿ ಇದ್ದವು. ಹಿಂದೆ ಸೋವಿಯತ್ ಒಕ್ಕೂಟಕ್ಕೆ ೩೧ನೆಯ ಸ್ಥಾನ ಇತ್ತು. ಕಳೆದ ವರ್ಷದ ವಿಶ್ವ ಸಂಸ್ಥೆ ಬಿತ್ತರಿಸಿದ ಸೂಚಕದ ಪ್ರಕಾರ ರಷ್ಯಾ ೬೨ನೆಯ ಸ್ಥಾನಕ್ಕೆ ಇಳಿದಿದೆ. ಬೆಲರಸ್ ೬೭ನೆಯ, ಉಕ್ರೇನ್ ೭೮ನೆಯ, ಕಝಾಕಿಸ್ತಾನ ೮೦ನೆಯ ಸ್ಥಾನಕ್ಕೆ ಇಳಿದಿವೆ. ಅಂದರೆ ಮಾನವ ಅಭಿವೃದ್ಧಿಯ ಮಟ್ಟ ಕಳೆದ ೧೫ ವರ್ಷಗಳಲ್ಲಿ ಕುಸಿದಿದೆ. ಇಲ್ಲಿಯೂ ಸರಾಸರಿ ಅಭಿವೃದ್ಧಿಶೀಲ ದೇಶಗಳ ಮಟ್ಟಕ್ಕೆ ಇಳಿದಿದೆ.

ರಷ್ಯಾ ಮತ್ತು ಇತರೆಡೆ ಖಾಸಗೀಕರಣ ತೀವ್ರವಾಗಿ ಆದ ದೇಶಗಳಲ್ಲಿ ಭ್ರಷ್ಟಾಚಾರ ಮತ್ತು ಅಪರಾಧೀಕರಣ ಗಗನಕ್ಕೇರಿದೆ. ಇವೆರಡೂ ರಷ್ಯಾದ ಅತ್ಯಂತ ತೀವ್ರವಾದ ಸಮಸ್ಯೆಗಳು ಎಂದು ಅಧ್ಯಕ್ಷ ಯೆಲ್ಸಿನ್‌ರೇ ಒಪ್ಪಿಕೊಂಡಿದ್ದರು. ಇವೆರಡರ ಮೂಲವೂ ರಷ್ಯಾದಲ್ಲಿ ಮಾಡಲಾದ ವಿಶಿಷ್ಟ ಖಾಸಗೀಕರಣದ ಕಾರ್ಯಕ್ರಮಗಳೇ ಎಂದು ಈಗ ಸರ್ವ ಸಮ್ಮತ ಅಭಿಪ್ರಾಯ. ಐದು ವರ್ಷಗಳಲ್ಲಿ ೧೨೦ ಶತಕೋಟಿ ಡಾಲರುಗಳನ್ನು ಹಣ ಲೂಟಿ ಮಾಡಿ ವಿದೇಶಕ್ಕೆ ಸಾಗಿಸಲಾಯಿತು. ಇದು ರಷ್ಯಾದಲ್ಲಿ ಮಾತ್ರವಲ್ಲ. ಅಂತಾರಾಷ್ಟ್ರೀಯ ಮಟ್ಟದಲ್ಲೂ ಭಾರಿ ಅಪರಾಧಿ-ಸಿಂಡಿಕೇಟ್‌ಗಳನ್ನು ಬೆಳೆಸಿ, ಕೊಬ್ಬಿಸಲು ಅವಕಾಶ ಮಾಡಿದೆ. ರಷ್ಯಾದಲ್ಲಿ ಭೂಗತವಾಗಿ ಅಲ್ಪ ಪ್ರಮಾಣದಲ್ಲಿದ್ದ ಅಪರಾಧ-ಭ್ರಷ್ಟಾಚಾರಗಳ ಉಭಯ ಕಂಟಕಗಳು ಈಗ ರಾಜಾರೋಷವಾಗಿ ವಿಜೃಂಭಿಸುತ್ತಿವೆ. ಸರ್ಕಾರದ ಚಟುವಟಿಕೆಗಳಿಗೂ ಸಂಘಟಿತ ಅಪರಾಧಕ್ಕೂ ವ್ಯತ್ಯಾಸವೇ ಇಲ್ಲವೆನ್ನುವಷ್ಟು ಅವು ಹಾಸುಹೊಕ್ಕಾಗಿವೆ ಎಂದು ಹಲವು ಸಮಾಜಶಾಸ್ತ್ರಜ್ಞರ ಅಭಿಪ್ರಾಯ. ೧೯೯೬ರಲ್ಲಿ ಯೆಲ್ಸಿನ್ ಪುನರಾಯ್ಕೆಗೆ ಏಳು ದೊಡ್ಡ ಬ್ಯಾಂಕುಗಳು ನೆಯರವಾಗಿ ವಂತಿಗೆ ಕೊಟ್ಟವು. ಯೆಲ್ಸಿನ್ ಪ್ರತಿವರ್ಷ ಭ್ರಷ್ಟಾಚಾರದ ವಿರುದ್ಧ ತನಿಖೆಯ ಸಮರ ಹೂಡುತ್ತಿದ್ದರು. ಆದರೆ ತನಿಖೆ ವರದಿ ತೆಗೆದುಕೊಂಡು ಶಿಕ್ಷೆಯಾದದ್ದು ಬೆರಳೆಣಿಕೆಯವರಿಗೆ ಮಾತ್ರ. ೧೯೯೮ರಲ್ಲಿ ೨೫೦೦ ಉನ್ನತ ಅಧಿಕಾರಿಗಳ ಮೇಲೆ ತನಿಖೆಗೆ ಆಜ್ಞೆ ಮಾಡಲಾಯಿತು. ತನಿಖೆ ಏನಾಯಿತು ಅಂತ ಯಾರಿಗೂ ಗೊತ್ತಿಲ್ಲ. ರಷ್ಯಾ-ಉಕ್ರೇನ್‌ಗಳಲ್ಲಿ ಒಟ್ಟು ಉತ್ಪಾದನೆಯ ಶೇಕಡಾ ೫೦ರಷ್ಟು ಕಾಳಸಂತೆಯಿದೆ ಎನ್ನಲಾಗಿದೆ. ಸಿಝಿಇನ್ವೆಸ್ಟ್ ಎಂಬ ದೊಡ್ಡ ಟೆಲಿಕಾಂ ಕಂಪನಿಯ ಖಾಸಗೀಕರಣದ ಸಂದರ್ಭದಲ್ಲಿ ನಾಲ್ಕು ತಿಂಗಳ ಕಾಲ ರಷ್ಯಾದಲ್ಲಿ ಮಾಫಿಯಾ ಯುದ್ಧ ನಡೆಯಿತು. ಆಮೇಲೆ ಯೆಲ್ಸಿನ್ ಇದರಲ್ಲಿ ಭಾಗವಹಿಸಿದ್ದ ಎಲ್ಲಾ ಕಂಪನಿಗಳನ್ನು ಕರೆದು ಶಾಂತಿ ಮಾತುಕತೆ ಮಾಡಬೇಕಾಯಿತಂತೆ. ೮೦ಕ್ಕೂ ಹೆಚ್ಚು ಬ್ಯಾಂಕ್‌ನ ಹಿರಿಯ ಅಧಿಕಾರಿಗಳು, ಅವರು ಬ್ಯಾಂಕ್‌ಗೆ ಮಾಡಿದ ಮೋಸದ ಬಗ್ಗೆ ತೀವ್ರ ತನಿಖೆ ಆರಂಭಿಸಿದ ಕೂಡಲೇ ಕೊಲ್ಲಲ್ಪಟ್ಟಿದ್ದಾರೆ.

ಬಂಡವಾಳಶಾಹಿ ವ್ಯವಸ್ಥೆ ರಷ್ಯಾ ಮತ್ತು ಇತರ ಮಾಜಿ-ಸೋವಿಯತ್ ದೇಶಗಳ ಸಮಾಜವನ್ನು ಹಿಡಿದಿಟ್ಟಿದ್ದ ಎಳೆಗಳನ್ನು ಕಡಿದು ಹಾಕಿದೆ. ಆರ್ಥಿಕ ಸ್ಥಗಿತತೆ, ಬಂಡವಾಳ ಶಾಹಿ ವ್ಯವಸ್ಥೆ ಸ್ಥಾಪನೆ, ಸಾಮಾಜಿಕ ಕಲ್ಯಾಣದ ಮೇಲೆ ವೆಚ್ಚದಲ್ಲಿ ತೀವ್ರ ಕಡಿತ, ಸಾಮಾಜಿಕ ಭದ್ರತೆಯ ನಾಶ -ಇವೆಲ್ಲಾ ತೀವ್ರವಾಗಿ ಕೆಟ್ಟ ಪರಿಣಾಮ ಬೀರಿದ್ದು ಮಹಿಳೆಯ ಪರಿಸ್ಥಿತಿ ಮೇಲೆ. ಮಹಿಳೆಯರ ಸ್ಥಿತಿ ಅತ್ಯಂತ ದಾರುಣವಾಗಿದೆ. ಸೋವಿಯೆತ್ ಅವಧಿಯಲ್ಲಿ ಅತ್ಯಂತ ಹೆಚ್ಚಿನ ಸಮಾನತೆ, ಉದ್ಯೋಗ ಭದ್ರತೆ, ಸಮಗ್ರ ಬೆಳವಣಿಗೆಗೆ ಅವಕಾಶ ಪಡೆದಿದ್ದ ಮಹಿಳೆ, ಸೋವಿಯೆತ್ ವಿಘಟನೆ ನಂತರ ಡಕಾಯಿತ ಬಂಡವಾಳಶಾಹಿಯ ಅತಿ ದೊಡ್ಡ ಬಲಿಪಶು ಆಗಿದ್ದಾಳೆ. ಭ್ರಷ್ಟಾಚಾರ-ಅಪರಾಧ ಎಲ್ಲದಕ್ಕೂ ಬಲಿಪಶುವಾಗಿದ್ದಾಳೆ. ಮಹಿಳೆಯರ ದೇಹವೇ ಈ ಡಕಾಯಿತರಿಗೆ ಅತಿ ದೊಡ್ಡ ಸರಕು ಆಗಿದೆ. ದೊಡ್ಡ ಪ್ರಮಾಣದಲ್ಲಿ ವೇಶ್ಯಾಚಾರ ಬೆಳೆದಿದೆ ಮಾತ್ರವಲ್ಲ. ಅದು ಹೊಸ 'ಗೌರವ'ವನ್ನು ಪಡೆದಿದೆ. ಹೈಸ್ಕೂಲು ಹೆಣ್ಣುಮಕ್ಕಳ ಸರ್ವೇಯಲ್ಲಿ 'ಅತ್ಯಂತ ಉತ್ತಮ ವೃತ್ತಿ ವೇಶ್ಯಾವೃತ್ತಿ' ಎಂದು ವ್ಯಕ್ತವಾಯಿತಂತೆ. ದೇಶದೊಳಗೆ ಮಾತ್ರವಲ್ಲ ಸೋವಿಯತ್ ಮಹಿಳೆ ವಿದೇಶಗಳಿಗೆ ರಫ್ತಾಗುವ ಅತಿ ಅಮೂಲ್ಯ ಸರಕು ಆಗಿದ್ದಾಳೆ. ಹತ್ತು ವರ್ಷಗಳಲ್ಲಿ ಸುಮಾರು ೨ ಲಕ್ಷ ಮಹಿಳೆಯರನ್ನು ಹೊರ ದೇಶಗಳಿಗೆ ವೇಶ್ಯಾವೃತ್ತಿ, ಗುಲಾಮಗಿರಿ ಬದುಕಿಗೆ ರಫ್ತು ಮಾಡಲಾಗಿದೆ.

ಹೀಗೆ ಕಳೆದ ಸುಮಾರು ೧೫ ವರ್ಷಗಳ ಸೋವಿಯತ್ ನಂತರದ ಒಟ್ಟಾರೆ ಜಮಾ-ಖರ್ಚು ಹೇಳಬೇಕೆಂದರೆ ಯಾವುದೇ ಕ್ಷೇತ್ರದಲ್ಲಿ - ಆರ್ಥಿಕ ಬೆಳವಣಿಗೆ, ಪ್ರಜಾಪ್ರಭುತ್ವ, ಸಾಮಾಜಿಕ ಭದ್ರತೆ, ಮಾನವ ಅಭಿವೃದ್ಧಿ ಸೂಚಕ, ಸ್ವಚ್ಛ ಸಾಮಾಜಿಕ ಜೀವನ, ಮಹಿಳೆಯರ ಸ್ಥಾನ-ಮಾನ-ಹೀಗೆ ಯಾವುದೇ ರೀತಿಯಲ್ಲಿ ನೋಡಿದರೂ ಈ ೧೫ ದೇಶಗಳ ಸ್ಥಿತಿ ತೀರಾ ಹದಗೆಟ್ಟಿದೆ ಎಂಬುದು ಸ್ಪಷ್ಟವಾಗುತ್ತದೆ. ಇತ್ತೀಚೆಗೆ ರಷ್ಯಾ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡಿದ್ದು ಸಾರ್ವಭೌಮ ದೇಶದಂತೆ ಸ್ವತಂತ್ರವಾಗಿ ವರ್ತಿಸುತ್ತಿದೆ. ಆದರೆ ಒಟ್ಟಾರೆಯಾಗಿ ತಮ್ಮ ಹಿಂದಿನ ಪ್ರತಿಷ್ಠೆ, ಸ್ಥಾನಮಾನ ಕಳೆದುಕೊಂಡು ಹಲವು ಬಾರಿ ಅಪಹಾಸ್ಯಕ್ಕೆ ಈಡಾಗಿವೆ.

ಸೋವಿಯತ್ ಒಕ್ಕೂಟದ ವಿಘಟನೆ ಮತ್ತು ೧೫ ವರ್ಷಗಳ ನಂತರದ ಬಂಡವಾಳಶಾಹಿ ವ್ಯವಸ್ಥೆಯ ಒಟ್ಟು ಪರಿಣಾಮ ಆ ದೇಶಗಳ ನಾಗರಿಕರಿಗೆ ಮಾತ್ರ ನಕಾರಾತ್ಮಕವಾಗಿ ತಟ್ಟಿಲ್ಲ. ಮೂರನೆಯ ಜಗತ್ತಿನ ಮತ್ತು ಅಭಿವೃದ್ಧಿ ಹೊಂದಿದ ಅಮೆರಿಕಾ, ಪಶ್ಚಿಮ ಯುರೋಪಿನ ಎಲ್ಲಾ ದೇಶಗಳ ಜನತೆ ಮೇಲೆ ಪರಿಣಾಮ ಬೀರಿದೆ. ಮೂರನೆಯ ಜಗತ್ತಿನ ದೇಶಗಳಿಗೆ ಇದು ದೊಡ್ಡ ಆಪತ್ತಾಗಿದೆ. ಹಿಂದೆ ಇದ್ದ ಎರಡು ಬಣ (ಸಮಾಜವಾದ ಮತ್ತು ಬಂಡವಾಳಶಾಹಿ) ಈ ದೇಶಗಳಿಗೆ ಹೂಡಿಕೆ-ತಂತ್ರಜ್ಞಾನ ರಫ್ತು ಆಮದುಗಳ ಚೌಕಾಶಿಗೆ ಉತ್ತಮ ಅವಕಾಶ ಮಾಡಿಕೊಟ್ಟಿತು. ಮೂರನೆಯ ಜಗತ್ತಿನ ದೇಶಗಳಿಗೆ ಆರ್ಥಿಕ-ರಾಜಕೀಯ ಬೆಳವಣಿಗೆಗೆ ಸ್ವತಂತ್ರ ತಮ್ಮದೇ ಆದ ಹಾದಿಗೆ ಅವಕಾಶ ಇಲ್ಲವಾಗಿದೆ. ಅಂತಾರಾಷ್ಟ್ರೀಯವಾಗಿ ಅಮೆರಿಕ ಏಕಮಾತ್ರ ಸೂಪರ್ ಪವರ್ ಆಗಿ ಉಳಿದಿದ್ದು, ಎಲ್ಲಾ ಅದರ ಆಕ್ರಾಮಕ ವಿದೇಶ ನೀತಿ ಅಂತಾರಾಷ್ಟ್ರೀಯ ಕಾನೂನನ್ನು ಗಾಳಿಗೆ ತೂರಿ ಜಗತ್ತಿನಲ್ಲಿ ಅಪಾಯಕಾರಿ ಅರಾಜಕತೆ ಹರಡಿದೆ. ಇರಾಕ್ ಯುದ್ಧ ನಡೆದ ಹಲವು ವರ್ಷಗಳ ನಂತರವೂ ಇನ್ನೂ ಇರಾಕ್ ಹತ್ತಿ ಉರಿಯುತ್ತಿರುವುದು ಇದಕ್ಕೆ ಅತ್ಯಂತ ದಾರುಣ ಉದಾಹರಣೆ. ಎರಡು-ಬಣಗಳ ತಿಕ್ಕಾಟ (ಶೀತಲ ಸಮರ) ಒಂದು ಬಣ ಮಾಯವಾಗುವುದರಲ್ಲಿ ಕೊನೆಗೊಂಡಿದೆ. ಆದರೂ ಶಸ್ತ್ರಾಸ್ತ್ರದ ಮೇಲೆ ಖರ್ಚು (ಎಲ್ಲಾ ದೇಶಗಳಲ್ಲೂ) ವಿಪರೀತ ಹೆಚ್ಚಾಗಿ, ಒಟ್ಟಾರೆ ಭದ್ರತೆ ಶಾಂತಿಯ ಸಾಧ್ಯತೆ ಇನ್ನಷ್ಟು ಕಡಿಮೆಯಾಗಿದೆ. ಅಣು ಶಸ್ತ್ರಗಳ ಬಳಕೆಯ ಅಪಾಯ ಸಣ್ಣ ವಿವಾದ-ತಿಕ್ಕಾಟಗಳಲ್ಲೂ ಇನ್ನಷ್ಟು ಹೆಚ್ಚಿದೆ. ಭಾರತ, ಪಾಕಿಸ್ತಾನ, ಇರಾನ್ -ಹೀಗೆ ಒಂದೊಂದಾಗಿ ದೇಶಗಳು ಅಣ್ವಸ್ತ್ರ ಹೊಂದಲು ತರಾತುರಿಯಲ್ಲಿ ಮುಂದಾಗುತ್ತಿರುವುದು ಈ ಪರಿಸ್ಥಿತಿಯ ಫಲವೇ. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆಯ (ಅಥವಾ ಸೋವಿಯತ್ ಅಪಾಯ) ಬೆದರಿಕೆಯಿಂದ ಸಾಕಷ್ಟು ಸಮಗ್ರ 'ಕಲ್ಯಾಣ ರಾಜ್ಯ'ವನ್ನು ಬಂಡವಾಳ ದೇಶಗಳಲ್ಲಿ ಸ್ಥಾಪಿಸಲಾಗಿತ್ತು. 'ಸೋವಿಯತ್ ಬೆದರಿಕೆ' ಮಾಯವಾಗುತ್ತಲೇ ಈ 'ಕಲ್ಯಾಣ ರಾಜ್ಯ'ದ ಕ್ರಮಗಳನ್ನು ಒಂದೊಂದಾಗಿ ಹಿಂತೆಗೆಯಲಾಗುತ್ತಿದೆ. ಹೀಗೆ ಒಟ್ಟಾರೆಯಾಗಿ ಸೋವಿಯತ್ ವಿಘಟನೆಯ ಪರಿಣಾಮ - ನಂತರದ ೧೫ ವರ್ಷಗಳ ಅನುಭವದ ಆಧಾರದ ಮೇಲೆ ನೋಡಿದರೆ - ಇಡೀ ಮನುಕುಲಕ್ಕೆ ಹಾನಿಕಾರಕವಾಗಿ ಇರುವಂತೆ ಕಾಣುತ್ತದೆ.

## ಪರಾಮರ್ಶನ ಗ್ರಂಥಗಳು

೧. ಬರ್ಕಿನ್ ಐ., ೧೯೮೮. ಎ **ಶಾರ್ಟ್ ಹಿಸ್ಟರಿ ಆಫ್ ದಿ ಯುಎಸ್‌ಎಸ್‌ಆರ್,** ಮಾಸ್ಕೊ: ಪ್ರೋ ಪಬ್ಲಿಷರ್ಸ್.

೨. ಕುಮಾರ್ ಬಾಗ್ಚ್. ೧೯೮೮. *ಹಿಸ್ಟಾರಿಸೈಜಿಂಗ್ ದಿ ಪ್ರಾಬ್ಲಮ್ಸ್ ಆಫ್ ಸೋಶ್ಯಲಿಸಂ,* **ಸೋಶ್ಯಲ್ ಸೈಂಟಿಸ್ಟ್,** ಸಂ.೧೬, ನಂ.೧೮೫, ಪು.೬೩-೬೮.
೩. ಪ್ರಭಾತ್ ಪಟ್ನಾಯಕ್, ೧೯೯೭, *ದಿ ಫಾಸ್ಟ್ ಆ್ಯಂಡ್ ಫ್ಯೂಚರ್ ಆಫ್ ದಿ ಸೋಶ್ಯಲಿಸ್ಟ್ ಪ್ರಾಜೆಕ್ಟ್,* **ಸೋಶ್ಯಲ್ ಸೈಂಟಿಸ್ಟ್,** ಸಂ.೨೫, ನಂ.೨೮೬-೨೮೭, ಪು.೬೩-೬೮.
೪. ಜೋಸೆಫ್ ಸ್ಟಿಗ್ಲಿಟ್ಜ್. ೨೦೦೬. **ದಿ ಟ್ರಾನ್ಸ್‌ಶಿನ್ ಫ್ರಮ್ ಕಮ್ಯೂನಿಸಂ ಟು ದಿ ಮಾರ್ಕೆಟ್,** ಲಂಡನ್: ಲೆಕ್ಚರ್ ಎಟ್ಟ್ ಆನ್ಯುವಲ್ ಮೀಟಿಂಗ್ ಆಫ್ ಯುರೋಪಿಯನ್ ಬ್ಯಾಂಕ್ ಫಾರ್ ರಿಕನಸ್ಟ್ರಕ್ಷನ್ ಆ್ಯಂಡ್ ಡೆವಲಪ್‌ಮೆಂಟ್.

## ೨೫. ಸಮಾಜವಾದಿ ಸೋವಿಯತ್ ಒಕ್ಕೂಟದ ವಿಘಟನೆ ಹಾಗೂ ಸಾಮ್ರಾಜ್ಯಶಾಹಿಯ ಪಾತ್ರ

ಇಪ್ಪತ್ತನೆಯ ಶತಮಾನವು ಮುಗಿದು ಇಪ್ಪತ್ತೊಂದನೆಯ ಶತಮಾನದ ಹೊಸ್ತಿಲಲ್ಲಿರುವಾಗ, ಇಪ್ಪತ್ತನೆಯ ಶತಮಾನದ ಪ್ರಮುಖ ಚಾರಿತ್ರಿಕ ರಾಜಕೀಯ ಘಟನೆಗಳನ್ನು ನೆನಪಿಸಿಕೊಳ್ಳುವಾಗ ೧೯೧೪ ರಿಂದ ೧೯೧೮ರವರೆಗೆ ಮೊದಲನೆಯ ಜಾಗತಿಕ ಮಹಾಯುದ್ಧ, ೧೯೧೭ರಲ್ಲಿ ರಷ್ಯಾದಲ್ಲಿ ನಡೆದ ಅಕ್ಟೋಬರ್ ಕ್ರಾಂತಿ, ಮೂವತ್ತರ ದಶಕದಲ್ಲಿ ಸಂಭವಿಸಿದ ಬಂಡವಾಳಶಾಹಿ ಬಿಕ್ಕಟ್ಟು, ಅದರ ನಡುವೆ ಇಟಲಿಯಲ್ಲಿ ಬೆಳೆದ ಫ್ಯಾಸಿಸಂ, ಜರ್ಮನಿಯಲ್ಲಿ ಬೆಳೆದ ನಾಜಿಸಂ, ೧೯೩೯ ರಿಂದ ೧೯೪೫ರವರೆಗೆ ನಡೆದ ಎರಡನೆಯ ಜಾಗತಿಕ ಮಹಾಯುದ್ಧ, ಪೂರ್ವ ಯೂರೋಪಿನಲ್ಲಿ ಸಮಾಜವಾದಿ ದೇಶಗಳ ಉದಯ, ೧೯೪೭ರಲ್ಲಿ ಭಾರತದ ಸ್ವಾತಂತ್ರ್ಯ, ೧೯೪೯ರಲ್ಲಿ ಚೀನಾದ ಕ್ರಾಂತಿ ಯಶಸ್ವಿಯಾದುದು, ೧೯೫೧ರಲ್ಲಿ ಕೊರಿಯ ಯುದ್ಧ, ೧೯೫೯ರಲ್ಲಿ ಕ್ಯೂಬದ ಕ್ರಾಂತಿ, ೧೯೭೫ರಲ್ಲಿ ವಿಯಟ್ನಾಂ ಕ್ರಾಂತಿ, ಎರಡನೆಯ ಜಾಗತಿಕ ಮಹಾಯುದ್ಧದ ನಂತರ ಒಂದೊಂದೇ ವಸಾಹತು ದೇಶವು ವಸಾಹತು ಸಂಕೋಲೆಯನ್ನು ಕಳಚಿ ಸ್ವತಂತ್ರವಾಗುತ್ತಾ ನಿರ್ವಸಾಹತೀಕರಣವಾಗುವುದು, ಕೊನೆಯ ದಶಕದ ಪ್ರಾರಂಭದಲ್ಲಿ ಸೋವಿಯತ್ ಒಕ್ಕೂಟದ ವಿಘಟಣೆ, ಪೂರ್ವ ಯೂರೋಪಿನ ಸಮಾಜವಾದಿ ದೇಶ ಗಳಲ್ಲಿ ಸಮಾಜವಾದಕ್ಕೆ ಸೋಲು, ಜಾಗತಿಕ ಸಾಮ್ರಾಜ್ಯಶಾಹಿಗಳ ಪ್ರಾಬಲ್ಯ ಬೆಳೆದುದು ಎದ್ದು ಕಾಣುವುದು.

ಜಾಗತಿಕ ವರ್ಗ ಹೋರಾಟದಲ್ಲಿ ೧೯೧೭ ರಿಂದ ೧೯೮೯ರವರೆಗೆ ಕಾರ್ಮಿಕವರ್ಗ ಮತ್ತು ಶೋಷಿತ ಜನಸಮುದಾಯವು ಹಂತಹಂತಕ್ಕೂ ಜಯಗಳಿಸುತ್ತಾ ಬಂದುದು, ಅನಂತರದ ಕಾಲಾವಧಿಯಲ್ಲಿ ತೀವ್ರವಾದ ಸೋಲುಗಳನ್ನು ಅನುಭವಿಸುತ್ತಾ ಶೋಷಣೆ ಮಾಡುವ ವರ್ಗಗಳಿಗೆ ಗೆಲುವಾಗಿರುವುದನ್ನು ಕಾಣಬಹುದು.

ರಷ್ಯಾದಲ್ಲಿ ಅಕ್ಟೋಬರ್ ಕ್ರಾಂತಿಯಾಗಿ ಸಮಾಜವಾದಿ ಸಮಾಜದ ನಿರ್ಮಾಣ ಪ್ರಾರಂಭವಾಗುವಾಗ ಗ್ರಾಮಾಂತರ ಪ್ರದೇಶದಲ್ಲಿ ಅಂತರ್ಯುದ್ಧ ಪ್ರಾರಂಭವಾಯಿತು. ಕುಲಕ್ ಎಂದು ಕರೆಯಲ್ಪಡುವ ಶ್ರೀಮಂತ ರೈತರು ದಂಗೆಯೆದ್ದರು. ಆ ಸನ್ನಿವೇಶದಲ್ಲಿ ಅವರಿಗೆ ಬೆಂಬಲವಿತ್ತು. ಬೆಳೆಯುತ್ತಿದ್ದ ಕಾರ್ಮಿಕ ವರ್ಗದ ಪ್ರಭುತ್ವದ ಸಮಾಜವನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕಲು ಸಾಮ್ರಾಜ್ಯಶಾಹಿ ದೇಶಗಳು-ಪಶ್ಚಿಮದಿಂದ ಬ್ರಿಟನ್, ಜರ್ಮನಿ, ಅಮೆರಿಕಾ ಸಂಯುಕ್ತ ಸಂಸ್ಥಾನಗಳು ಮೊದಲಾದವುಗಳು, ಪೂರ್ವ ದಿಂದ ಜಪಾನ್ ಸೈನ್ಯದ ತುಕಡಿಗಳನ್ನು ದಂಗೆಕೋರರ ಸಹಾಯಾರ್ಥವಾಗಿ ಕಳಿಸಿದುವು. ಆ ದಂಗೆಯನ್ನಡಗಿಸಿ, ಸೈನ್ಯದ ತುಕಡಿಗಳನ್ನು ಹಿಮ್ಮೆಟ್ಟಿಸಿ, ಓಡಿಸಿ, ಸಮಾಜವಾದಿ ಸಮಾಜದ ನಿರ್ಮಾಣವನ್ನು ಮುಂದುವರಿಸಲಾಯಿತು.

ಸಮಾಜವಾದಿ ಸಮಾಜದ ನಿರ್ಮಾಣಕ್ಕಾಗಿ ಪಂಚವಾರ್ಷಿಕ ಯೋಜನೆಗಳನ್ನು ಹಾಕಲಾಗುತ್ತಿದ್ದಿತು. ಸಮಾಜವಾದಿ ಯೋಜನೆಗಳು ಗುರಿ ತಲುಪುತ್ತಿದ್ದುವು. ಇಲ್ಲವೇ ಗುರಿಯನ್ನು ಮಿರುತ್ತಿದ್ದುವು. ಐರೋಪ್ಯ ದೇಶಗಳು ಬಂಡವಾಳಶಾಹಿ ಬಿಕ್ಕಟ್ಟನ್ನು ಅನುಭವಿಸುತ್ತಿದ್ದು ಸರಕುಗಳಿಗೆ ನಿರಾಶೆ ಇಲ್ಲದ ಪರಿಸ್ಥಿತಿಯನ್ನು ಎದುರಿಸುತ್ತಿರುವಾಗ, ಸೋವಿಯತ್ ಒಕ್ಕೂಟವು ಬಿಕ್ಕಟ್ಟು ರಹಿತವಾಗಿದ್ದ ನಿರ್ಮಾಣವನ್ನು

ನಡೆಸುತ್ತಿದ್ದುದು ಮಾತ್ರವಲ್ಲದೆ ಭಾರತವೂ ಸೇರಿದಂತೆ ಪ್ರಪಂಚದ ಹಲವು ದೇಶಗಳ ಮೇಲೆ ಪ್ರಭಾವವನ್ನು ಬೀರುತ್ತಿದ್ದಿತು. ಆ ಕಾಲದಲ್ಲಿಯೇ ಜವಾಹರಲಾಲ್ ನೆಹರು ಮತ್ತು ಅವರ ತಂದೆ ಮೋತಿಲಾಲ ನೆಹರು ಸೋವಿಯತ್ ಒಕ್ಕೂಟಕ್ಕೆ ಭೇಟಿ ಇತ್ತಿದ್ದರು.

ಅಕ್ಟೋಬರ್ ಕ್ರಾಂತಿ ಮತ್ತು ಸೋವಿಯತ್ ಒಕ್ಕೂಟದಲ್ಲಿ ನಡೆಯುತ್ತಿದ್ದ ಸಮಾಜ ವಾದಿ ಸಮಾಜದ ನಿರ್ಮಾಣವು ವಸಾಹತುಗಳಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಮತ್ತು ಕ್ರಾಂತಿಕಾರಿ ಹೋರಾಟಗಳ ಮೇಲೆ ಪ್ರೋ ಪ್ರಭಾವ ವನ್ನು ಬೀರಿದುವು. ಎರಡು ದಶಕಗಳ ನಂತರ ಮಂಗೋಲಿಯವು ಸೋವಿಯತ್ ಒಕ್ಕೂಟದ ಹಾದಿಯನ್ನು ಹಿಡಿಯಿತು. ಚೀನಾದಲ್ಲಿ ಸುದೀರ್ಘವಾದ ಸಶಸ್ತ್ರ ಹೋರಾಟವು ನಡೆಯುತ್ತಿದ್ದಿತು. ಅಂದಿನ ಇಂಡೋಚೀನಾದ ವಿಯಟ್ನಾಮ್ ಮತ್ತು ಲಾವೋಸ್‌ಗಳಲ್ಲಿ ಕ್ರಾಂತಿಕಾರಿ ಹೋರಾಟಗಳು ಪ್ರಾರಂಭವಾದುವು.

ಎರಡನೆಯ ಜಾಗತಿಕ ಮಹಾಯುದ್ಧದಲ್ಲಿ ನಾಜಿ ಜರ್ಮನಿಯನ್ನು, ಅದರ ಮಿತ್ರ ಕೂಟನ್ನು ಸೋಲಿಸಿ ಪ್ರಪಂಚವನ್ನು ಫ್ಯಾಸಿಸಮ್ಮಿನ ಅಪಾಯದಿಂದ ಪಾರುಮಾಡಿ ರಕ್ಷಿಸುವಲ್ಲಿ ಸೋವಿಯತ್ ಒಕ್ಕೂಟವು ನಿರ್ಣಾಯಕ ಪಾತ್ರವನ್ನು ವಹಿಸಿತು. ಅದರ ಪರಿಣಾಮವಾಗಿ ಅಂದಿನ ಸೋವಿಯತ್ ನಾಯಕ ಜೋಸೆಫ್ ಸ್ಟಾಲಿನ್, ಸಮಾಜವಾದ, ಸಮತಾವಾದ (ಕಮ್ಯುನಿಸಂ) ಶಬ್ದಗಳು ಪ್ರಪಂಚದ ಎಲ್ಲಾ ದೇಶಗಳ ಮೂಲೆಮೂಲೆಗಳಲ್ಲಿ ಪ್ರಚಾರವಾದುವು.

ಎರಡನೆಯ ಜಾಗತಿಕ ಮಹಾಯುದ್ಧ ನಡೆಯುವ ವೇಳೆಗೆ ಪೂರ್ವ ಯೂರೋಪಿನ ಹಂಗೇರಿ, ಬಲ್ಗೇರಿಯ, ಜೆಕೋಸ್ಲೋವಾಕಿಯ, ರುಮೇನಿಯ ಮೊದಲಾದ ದೇಶಗಳಲ್ಲಿ ಫ್ಯಾಸಿಸ್ಟ್ ವಿರೋಧಿ ಸಂಯುಕ್ತ ರಂಗಗಳು ಹೋರಾಟ ನಡೆಸುತ್ತಿದ್ದುವು. ಈ ರಂಗಗಳಲ್ಲಿ ಕಮ್ಯುನಿಸ್ಟ್ ಪಕ್ಷವು ಮುಖ್ಯಪಾತ್ರವನ್ನು ವಹಿಸಿದ್ದಿತು. ಯುದ್ಧದಲ್ಲಿ ಸೋವಿಯತ್ ಒಕ್ಕೂಟದ ಒಳಗೆ ನುಗ್ಗಿದ್ದ ನಾಜಿ ಸೇನೆಯನ್ನು ಹಿಮ್ಮೆಟ್ಟಿಸಿ ಓಡಿಸಿಕೊಂಡು ಹೋದ "ಕೆಂಪು ಸೇನೆಯು" ಬರ್ಲಿನ್ ನಗರದವರೆಗೆ ಹೋಯಿತು. ನಾಜಿ ಸೇನೆಯನ್ನು ಸೋಲಿಸಿ ಹಿಂದಿರುಗುವಾಗ ಫ್ಯಾಸಿಸ್ಟ್ ವಿರೋಧಿ ಸಂಯುಕ್ತ ರಂಗಗಳಿಗೆ ಆಯಾ ದೇಶಗಳಲ್ಲಿ ಅಧಿಕಾರಕ್ಕೆ ಬರಲು ಕೆಂಪು ಸೇನೆ ಸಹಾಯ ಮಾಡಿತು.

ಜಗತ್ತಿನ ಸಾಮ್ರಾಜ್ಯಶಾಹಿಗಳು ಈ ಬೆಳವಣಿಗೆಗಳನ್ನು, ಮುಂದುವರಿಯುತ್ತಿದ್ದ ಚೀನಾದ ಕ್ರಾಂತಿಯನ್ನು ಗಮನಿಸಿ ನಡುಗಿದರು. ಜಗತ್ತಿನ ಶೋಷಕರೆಲ್ಲಾ ಚಿಂತಾಕ್ರಾಂತ ರಾದರು. ಅಮೆರಿಕ ಸಂಯುಕ್ತ ಸಂಸ್ಥಾನಗಳ 'ಬ್ರೆಟನ್‌ವುಡ್' ಎಂಬಲ್ಲಿ ಸಾಮ್ರಾಜ್ಯಶಾಹಿ ನೇತಾರರು ಸಭೆ ಸೇರಿ ಹರಡುತ್ತಿದ್ದ ಸಮಾಜವಾದವನ್ನು ತಡೆಗಟ್ಟಲು ಒಂದು ಯೋಜನೆ ಯನ್ನು ಸಿದ್ಧಪಡಿಸಿದರು. ನೇಟೋ, ಸೀಟೋ, ಸೆಂಟೋ ಎಂಬ ಮಿಲಿಟರಿ ಕೂಟಗಳನ್ನು ರಚಿಸಿ ಸಮಾಜವಾದಿ ದೇಶಗಳ ಸುತ್ತಲೂ ಸೇನಾ ನೆಲೆಗಳನ್ನು ಸ್ಥಾಪಿಸಲು ನಿರ್ಧರಿಸಿದರು. ಆ ಯೋಜನೆಯ ಇನ್ನೊಂದು ಫಲವೇ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (ಐ.ಎಂ.ಎಫ್) ಹಾಗೂ ಇಂಟರ್ ನ್ಯಾಷನಲ್ ಬ್ಯಾಂಕ್ ಫಾರ್ ರೀಕನ್ಸ್ಟ್ರಕ್ಷನ್ ಅಂಡ್ ಡೆವಲಪ್‌ಮೆಂಟ್(ಐ.ಬಿ.ಆರ್.ಡಿ). ಯುದ್ಧದಲ್ಲಿ ನಾಶವಾಗಿದ್ದ ಪಶ್ಚಿಮ ಯೂರೋಪಿನ ದೇಶಗಳ ಭಾಗಗಳನ್ನು ಪುನರ್ನಿರ್ಮಾಣ ಮಾಡಲು ಈ ಬ್ಯಾಂಕ್ ಹಣವನ್ನು ಒದಗಿಸಬೇಕಾಗಿದ್ದಿತು. ಆ ಬ್ಯಾಂಕೇ ಇಂದಿನ ವಿಶ್ವಬ್ಯಾಂಕ್. ಆ ಸಭೆಯಲ್ಲಿ ಭಾಗವಹಿಸಿದ್ದ ಅಂದಿನ ಬ್ರಿಟಿಷ್ ಪ್ರಧಾನಮಂತ್ರಿ ವಿನ್ಸ್ಟನ್ ಚರ್ಚಿಲ್ ರಷ್ಯದ ಸುತ್ತ 'ಕಬ್ಬಿಣದ ಪರದೆ' ಹಾಕಲಾಗಿದೆ ಎಂದು ಘೋಷಿಸಿದರು. ಅಂದಿನಿಂದ "ಶೀತಲಯುದ್ಧ"ವು ಪ್ರಪಂಚದಲ್ಲಿ ಪ್ರಾರಂಭವಾಯಿತು. ಸಮಾಜವಾದ ಹರಡುವುದನ್ನು ತಡೆಯಲು ಒಂದು ಕಡೆ ಸೇನೆಯನ್ನೂ, ಇನ್ನೊಂದು ಕಡೆ ಹಣವನ್ನೂ ಉಪಯೋಗಿಸಲು ಸಾಮ್ರಾಜ್ಯಶಾಹಿಗಳು ನಿರ್ಧರಿಸಿದರು.

ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷವು ೧೯೪೯ರ ಅಕ್ಟೋಬರ್ ೧ ರಂದು ಅಧಿಕಾರಕ್ಕೆ ಬಂದಿತು. ಕೊರಿಯಾ ಯುದ್ಧದ ನಂತರ ಕೊರಿಯಾ ಎರಡು ಭಾಗವಾಗಿ ಉತ್ತರ ಕೊರಿಯಾವು 'ಕೊರಿಯಾದ ಜನತಾ ಪ್ರಜಾಸತ್ತಾತ್ಮಕ ಗಣರಾಜ್ಯ'ವಾಗಿ ಸಮಾಜವಾದಿ ನಿರ್ಮಾಣದ ಪಥದಲ್ಲಿ ಮುನ್ನಡೆಯಿತು. ಪ್ರಪಂಚದ ಎಲ್ಲಾ ಸಮಾಜವಾದಿ ದೇಶಗಳೂ ಸೇರಿ 'ಜಾಗತಿಕ ಸಮಾಜವಾದಿ ಶಿಬಿರ'ವು ಉದಯವಾಯಿತು. ಪ್ರಪಂಚದ ವರ್ಗಶಕ್ತಿಗಳ ಬಲಾಬಲದಲ್ಲಿ ಗುಣಾತ್ಮಕವಾದ ಬದಲಾವಣೆಯಾಯಿತು.

ಏಷ್ಯಾ, ಆಫ್ರಿಕ ಮತ್ತು ಲ್ಯಾಟಿನ್ ಅಮೆರಿಕ ಖಂಡಗಳ ದೇಶಗಳಲ್ಲಿ ನಡೆಯುತ್ತಿದ್ದ ರಾಷ್ಟ್ರೀಯ ವಿಮೋಚನಾ ಹೋರಾಟಗಳಿಗೆ ಸೋವಿಯತ್ ಒಕ್ಕೂಟದ ನಾಯಕತ್ವದಲ್ಲಿದ್ದ ಸಮಾಜವಾದಿ ಶಿಬಿರದ ದೇಶಗಳು ಬೆಂಬಲವಿತ್ತವು. ರಾಷ್ಟ್ರೀಯ ಸ್ವಾತಂತ್ರ್ಯವನ್ನು ಪಡೆದ ದೇಶಗಳ ಬೆಳವಣಿಗೆಗೂ ಸಹಾಯ ಮಾಡಿದುವು.

ಭಾರತದ ಸ್ವಾತಂತ್ರ್ಯೋತ್ತರ ವರ್ಷಗಳಲ್ಲಿ ತೀವ್ರವಾದ ಬರಗಾಲವಿದ್ದಿತು. ಪ್ರಧಾನಿ ಜವಹರಲಾಲ್ ನೆಹರು ಆಹಾರ ಧಾನ್ಯಗಳ ನೆರವಿಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ಮನವಿ ಮಾಡಿದರು. ಅಲ್ಲಿಂದ ಏನೂ ಸಿಕ್ಕಲಿಲ್ಲ. ಆದರೆ ಸೋವಿಯತ್ ಒಕ್ಕೂಟವು ಒಂದು ಹಡಗು ಗೋಧಿಯನ್ನು ಕಳಿಸಿತು. ಚೀನಾವು ೫೦೦೦೦ ಟನ್ ಅಕ್ಕಿಯನ್ನು ಕಳಿಸಿತು. ಭಾರತದಲ್ಲಿ ಕೈಗಾರಿಕಾ ಬೆಳವಣಿಗೆಗೆ ಅಗತ್ಯವಾದ ಉಕ್ಕಿನ ಕಾರ್ಖಾನೆಗಳನ್ನು ಎರಡನೆಯ ಪಂಚವಾರ್ಷಿಕ ಯೋಜನೆಯಡಿ ಸಾರ್ವಜನಿಕ ಕ್ಷೇತ್ರದಲ್ಲಿ ಪ್ರಾರಂಭಿಸುವಾಗ ಭಿಲೈ ಉಕ್ಕಿನ ಕಾರ್ಖಾನೆಯ ನಿರ್ಮಾಣಕ್ಕೆ ಸೋವಿಯತ್ ಒಕ್ಕೂಟವು ಹಣಕಾಸನ್ನು ಕೊಟ್ಟಿದ್ದಲ್ಲದೆ ಇಂಜಿನಿಯರುಗಳನ್ನು, ತಂತ್ರಜ್ಞರನ್ನು ಕಳಿಸಿತು.

ಈ ರೀತಿ ಸಮಾಜವಾದಿ ದೇಶಗಳು ಅಭಿವೃದ್ಧಿಶೀಲ ದೇಶಗಳಿಗೆ ನೆರವಾಗುತ್ತಿದ್ದುವು. ೧೯೫೬ರಲ್ಲಿ ಬಾಂಡುಂಗ್(ಇಂಡೋನೇಷ್ಯ)ನಲ್ಲಿ ನಡೆದ ಸಮ್ಮೇಳನದಲ್ಲಿ ಅಲಿಪ್ತ ದೇಶಗಳ ಚಳವಳಿ ಆರಂಭವಾಯಿತು. ಅಂದು ಸಾಮ್ರಾಜ್ಯಶಾಹಿಗಳು ಒಂದು ಕಡೆ ಸಮಾಜವಾದಿ ಶಿಬಿರವನ್ನು ಇನ್ನೊಂದು ಕಡೆ ಅಲಿಪ್ತ ದೇಶಗಳ ಚಳವಳಿಯನ್ನೂ ಎದುರಿಸಬೇಕಾಯಿತು. ಸಾಮ್ರಾಜ್ಯಶಾಹಿ ದೇಶಗಳ ನಾಯಕ ದೇಶವಾದ ಅಮೆರಿಕ ಸಂಯುಕ್ತ ಸಂಸ್ಥಾನಗಳಿಗೆ ೯೦ ಮೈಲಿ ದೂರದಲ್ಲಿರುವ ಕ್ಯೂಬದಲ್ಲಿ ೧೯೫೯ರಲ್ಲಿ ಕ್ರಾಂತಿಯಾಗಿ ಸಮಾಜವಾದಿ ಸಮಾಜದ ನಿರ್ಮಾಣವು ಪ್ರಾರಂಭವಾಯಿತು. ಜಾಗತಿಕ ಕಮ್ಯುನಿಸ್ಟ್ ಚಳವಳಿಯಲ್ಲಿ ೧೯೬೦ರ ವೇಳೆಗೆ ಭಿನ್ನಾಭಿಪ್ರಾಯಗಳು ತಲೆದೋರಿದವು.

೧೯೭೫ರಲ್ಲಿ ವಿಯಟ್ನಾಮ್ ಕ್ರಾಂತಿಯು ಯಶಸ್ವಿಯಾಗಿ ಅಮೆರಿಕನ್ ಸಾಮ್ರಾಜ್ಯ ಶಾಹಿಗಳು ಅಲ್ಲಿಂದ ಕಾಲ್ತೆಗೆಯಬೇಕಾಯಿತು. ಕೈಗಾರಿಕಾಭಿವೃದ್ಧಿಯಲ್ಲಿ ಹಿಂದುಳಿದಿದ್ದ ಒಂದು ಪುಟ್ಟ ದೇಶವು ಜಾಗತಿಕ ಸಾಮ್ರಾಜ್ಯಶಾಹಿ ನಾಯಕ ದೇಶವನ್ನು ಸೋಲಿಸಿ ಓಡಿಸಿದುದು, ಪ್ರಪಂಚದಲ್ಲಿ ಶೋಷಣೆಯ ವಿರುದ್ಧ ಹೋರಾಡುತ್ತಿದ್ದ ಶಕ್ತಿಗಳಿಗೆ ಸ್ಫೂರ್ತಿಯನ್ನೂ, ಉತ್ತೇಜನವನ್ನು ಕೊಟ್ಟಿತು.

ಜಾಗತಿಕ ಸಾಮ್ರಾಜ್ಯಶಾಹಿಗಳು ಸಮಾಜವಾದಿಗಳ ದೇಶಗಳ ಎಲ್ಲಾ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು. ಅವುಗಳೊಳಗಿನ ನ್ಯೂನ್ಯತೆಗಳನ್ನು ಗಮನಕ್ಕೆ ತೆಗೆದು ಕೊಂಡು, ಸಮಾಜವಾದವನ್ನು ಒಡೆಯಲು, ಸೋಲಿಸಲು ಅವುಗಳನ್ನು ಉಪಯೋಗಿಸಿದರು. ಅಲ್ಲಿಯ ಸ್ಥಿತಿಗತಿಗಳನ್ನು ತಿಳಿದುಕೊಳ್ಳಲು, ಸಂಪರ್ಕಗಳನ್ನು ಬೆಳೆಸಲು ಬೇರೆ ಬೇರೆ ವೃತ್ತಿಗಳ ರೂಪದಲ್ಲಿ ಗೂಢಚಾರವನ್ನು ಕಳಿಸುತ್ತಿದ್ದರು.

ಸೋವಿಯತ್ ಒಕ್ಕೂಟದಲ್ಲಿ ಅಕ್ಟೋಬರ್ ಕ್ರಾಂತಿಯಲ್ಲಿ ನಾಯಕ ಪಾತ್ರವಹಿಸಿದ್ದ ಮುಖಂಡರು ಕಾಲ ಕಳೆದಂತೆ ವಯಸ್ಸಾಗಿ ತೀರಿಕೊಂಡರು. ಫ್ಯಾಸಿಸ್ಟ್ ವಿರೋಧಿ ಎರಡನೆಯ ಜಾಗತಿಕ ಮಹಾಯುದ್ಧದಲ್ಲಿ ಹೋರಾಡಿದ್ದ ಮುಖಂಡರೂ ಒಬ್ಬೊಬ್ಬರಾಗಿ ತೀರಿಕೊಂಡರು. ಆ ತಲೆಮಾರಿನ ಕೊನೆಯ ಧುರೀಣ ಕಾನ್‌ಸ್ಟಾಂಟಿನ್ ಚೆರ್ನೆಂಕೋ ೧೯೮೦ರ ದಶಕದ ನಡುವೆ ಸೋವಿಯತ್ ಒಕ್ಕೂಟದ ಅಧ್ಯಕ್ಷರಾದರು. ಅವರ ನಂತರ ಸೋವಿಯತ್ ಒಕ್ಕೂಟದ ವಿಘಟನೆಯಲ್ಲಿ ಮುಖ್ಯಪಾತ್ರವಹಿಸಿದ, ತಾನು ಪ್ರಧಾನ ಕಾರ್ಯದರ್ಶಿಯಾಗಿದ್ದ ಸೋವಿಯತ್ ಒಕ್ಕೂಟದ ಕಮ್ಯುನಿಸ್ಟ್ ಪಕ್ಷದ (ಸಿ.ಪಿ.ಎಸ್.ಯು) ಕೇಂದ್ರ ಸಮಿತಿಯನ್ನು ವಿಸರ್ಜಿಸಿದ ಮಿಖಾಯಿಲ್ ಗೋರ್ಬಚೇವ್ ಸೋವಿಯತ್ ಒಕ್ಕೂಟದ ಅಧ್ಯಕ್ಷರಾದರು. ಕೂಡಲೇ ಬ್ರಿಟಿಷ್ ಪ್ರಧಾನಿ ಮಾರ್ಗರೇಟ್ ಥ್ಯಾಚರ್, ಗೋರ್ಬಚೇವ್ ಸೋವಿಯತ್ ಒಕ್ಕೂಟದ ಅಧ್ಯಕ್ಷರಾದುದನ್ನು ಸ್ವಾಗತಿಸಿ ಇವರೊಂದಿಗೆ ವ್ಯವಹರಿಸಬಹುದು ಎಂದು ಹೇಳಿದರು. ಸಾಮ್ರಾಜ್ಯಶಾಹಿ ಬಣದಲ್ಲಿ ಇರುವ ಒಬ್ಬ ನಾಯಕಿ ಮಾರ್ಗರೇಟ್ ಥ್ಯಾಚರ್. 'ಶತ್ರು ನಿಮ್ಮನ್ನು ಹೊಗಳಿದರೆ ನಿಮ್ಮಲ್ಲಿ ಏನೋ ದೋಷವಿದೆ ಎಂದು ತಿಳಿದುಕೊಳ್ಳಿ' ಎಂದು ಲೆನಿನ್ ಒಂದು ಕಡೆ ಹೇಳಿದ್ದಾರೆ. ಆದರೆ ಈ ಎಚ್ಚರಿಕೆಯು ಥ್ಯಾಚರ್ ಹೇಳಿಕೆ ಬಂದಾಗ ಯಾವ ಕಮ್ಯುನಿಸ್ಟರಿಗೂ ನೆನಪಾಗಲಿಲ್ಲ.

ಗೊರ್ಬಚೇವ್ 'ಪೆರಿಸ್ಟ್ರೋಯಿಕ', 'ಗ್ಲಾಸ್‌ನೋಸ್ತ್' ಎಂಬ ಎರಡು ಕರೆಗಳನ್ನು ಕೊಟ್ಟರು. ಪ್ರಾರಂಭದಲ್ಲಿ ಅನೇಕರು ಮರುಳಾದರು. ಆದರೆ ವಾಸ್ತವವಾಗಿ ಈ ಎರಡು ಘೋಷಣೆಗಳ ಮೂಲಕ ಸೋವಿಯತ್ ಒಕ್ಕೂಟದ ವಿಘಟನೆಯನ್ನು ಪ್ರಾರಂಭಿಸಲಾಯಿತು.

ಇದರ ನಂತರದ ಕಾಲದಲ್ಲಿ ಸಾಮ್ರಾಜ್ಯಶಾಹಿಗಳ ಯೋಜನೆಯ ಕಾರ್ಯಾಚರಣೆಯು ಪ್ರಾರಂಭವಾಯಿತು. ಚೀನಾದಲ್ಲಿ ೧೯೮೯ರಲ್ಲಿ ರಾಜಧಾನಿ ಬೀಜಿಂಗಿನಲ್ಲಿ ನಮಗೆ 'ಹೆಚ್ಚು ಪ್ರಜಾಪ್ರಭುತ್ವಬೇಕು' ಎಂದು ಸಹಸ್ರಾರು ವಿದ್ಯಾರ್ಥಿಗಳು ಪ್ರದರ್ಶನ ನಡೆಸಲಾರಂಭಿಸಿದರು. ಅವರಿಗೆ ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ ಫ್ಯಾಕ್ಸ್ ಮುಖಾಂತರ ಪ್ರತಿರಾತ್ರಿ ನಿರ್ದೇಶನಗಳು ಬರುತ್ತಿದ್ದುವು! ಚೀನಾದ ಸರ್ಕಾರವು ಪರಿಶ್ರಮ, ಚಾಕಚಕ್ಯತೆಗಳಿಂದ ಚಳವಳಿಯನ್ನು ನಿಯಂತ್ರಿಸಿ, ನಿಲ್ಲಿಸಿ ಸಮಾಜವಾದದ ವಿರುದ್ಧದ ಸಾಮ್ರಾಜ್ಯಶಾಹಿಗಳ ಪಿತೂರಿಯನ್ನು ಸೋಲಿಸಿತು. ಕ್ರಾಂತಿಯ ಹಾದಿಯಲ್ಲಿ ಸುದೀರ್ಘಕಾಲ ಸಶಸ್ತ್ರ ಹೋರಾಟ ವನ್ನು ನಡೆಸಿದ್ದ ಚೀನಾದ ಕಮ್ಯುನಿಸ್ಟ್ ಪಕ್ಷವು ಅಧಿಕಾರದಲ್ಲಿದ್ದು ಆ ಅನುಭವವು ಆ ಚಳವಳಿಯನ್ನು ನಿಲ್ಲಿಸಿ, ಪಿತೂರಿಯನ್ನು ಸೋಲಿಸಲು ಸಹಾಯಕವಾಯಿತು.

ಸಾಮ್ರಾಜ್ಯಶಾಹಿ ಪಿತೂರಿಯು ೧೯೫೫-೫೬ರಲ್ಲಿ ಹಂಗೇರಿಯಲ್ಲಿ, ಒಂದು ದಶಕದ ನಂತರ ಜೆಕೊಸ್ಲೊವಾಕಿಯದಲ್ಲಿ, ಅದರ ಮುನ್ನ ಮತ್ತು ತರುವಾಯ ಪೋಲೆಂಡಿನಲ್ಲಿ ಪ್ರಚೋದನೆಗಳನ್ನುಂಟು ಮಾಡಿದ್ದಿತು.

೧೯೮೮-೮೯ರಲ್ಲಿ ಪೋಲೆಂಡ್ ರಾಜಧಾನಿ ವಾರ್ಸಾ, ಹಂಗೇರಿಯ ರಾಜಧಾನಿ ಬುಡಾಪೆಸ್ಟ್ , ಜೆಕೊಸ್ಲಾವಾಕಿಯ ರಾಜಧಾನಿ ಪ್ರಾಗ್ ನಗರಗಳಲ್ಲಿ ಜನರು ಗುಂಪುಗಳಲ್ಲಿ ಸರ್ಕಾರದ ವಿರುದ್ಧವಾಗಿ ಘೋಷಣೆಗಳನ್ನು ಪ್ರಾರಂಭಿಸಿದರು. ಇದಕ್ಕೆ ಇಡೀ ಪ್ರಪಂಚದಲ್ಲಿ ಪ್ರಸಾರ ಮಾಧ್ಯಮಗಳ ಮೂಲಕ ದೊಡ್ಡ ಪ್ರಚಾರ ದೊರೆತು ಜನರ ಗಮನವನ್ನು ಆ ಕಡೆ ಸೆಳೆಯಿತು. ಅನಂತರ ಜರ್ಮನ್ ಪ್ರಜಾಸತ್ತಾತ್ಮಕ ಗಣತಂತ್ರದ ಬರ್ಲಿನ್ ನಗರದಲ್ಲಿ, ಬಲ್ಗೇರಿಯದ ರಾಜಧಾನಿ ಸೋಫಿಯ ನಗರದಲ್ಲಿ ಇದೇ ರೀತಿಯ ಪ್ರದರ್ಶನ ಗಳು ನಡೆದುವು. ಆ ಪ್ರದೇಶಗಳ ಸರಣಿಯಲ್ಲಿಯೇ ಒಂದೊಂದಾಗಿ ಸರ್ಕಾರಗಳು ಉರುಳಿದುವು. ಕೊನೆಯಲ್ಲಿ ರುಮೇನಿಯದಲ್ಲಿಯೂ ಇದೇ ನಡೆಯಿತು. ಚೀನಾದ ಅನುಭವ ಈ ದೇಶಗಳ ಅಧಿಕಾರ ರೂಢ ಪಕ್ಷಗಳಿಗೆ ಇರದಿದ್ದುದರಿಂದ ಶತ್ರುವಿನ ಪಿತೂರಿ ಯಶಸ್ವಿಯಾಗಿ ಸಮಾಜವಾದಕ್ಕೆ ಸೋಲಾಯಿತು. ಸೋವಿಯತ್ ಒಕ್ಕೂಟದ ವಿಘಟನೆಯಾದ ನಂತರದ ವರ್ಗಶಕ್ತಿಗಳ ಜಾಗತಿಕ ಸಮತೋಲನವು ಶೋಷಣೆ ಮಾಡುವ ಶಕ್ತಿಗಳ ಮತ್ತು ಸಾಮ್ರಾಜ್ಯಶಾಹಿಗಳ ಪರವಾಗಿ ಬದಲಾಯಿತು. ಸಮಾಜವಾದಕ್ಕೆ ಭವಿಷ್ಯವಿಲ್ಲ, ಕಮ್ಯುನಿಸಂಗೆ ಭವಿಷ್ಯವಿಲ್ಲ, ಸಾಮಾಜಿಕ ವಿಕಾಸದಲ್ಲಿ ಬಂಡವಾಳಶಾಹಿಯೇ ಕೊನೆಯ ಹಂತ ಎಂದು ಪ್ರಪಂಚದಾದ್ಯಂತ ಪ್ರಸಾರ ಮಾಡಲಾಯಿತು. ಸಾಮ್ರಾಜ್ಯಶಾಹಿಗಳು ಐ.ಎಂ.ಎಫ್, ವಿಶ್ವಬ್ಯಾಂಕ್, ಬಹುರಾಷ್ಟ್ರೀಯ ಸಂಸ್ಥೆಗಳ ಮೂಲಕ ಇತರ ದೇಶಗಳ ಜನರನ್ನು ವಿಪರೀತವಾಗಿ ಶೋಷಣೆ ಮಾಡಲು, ಸಂಪತ್ತನ್ನು ದೋಚಲು ಮುಂದಾದರು. ಅಮೆರಿಕನ್ ಸಾಮ್ರಾಜ್ಯಶಾಹಿಗಳು ಇರಾಕಿನ ಮೇಲೆ ಬಾಂಬ್ ದಾಳಿಯನ್ನು ನಡೆಸಿದರು.

ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕುಗಳ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣಗಳನ್ನು ಸರಕಾರಗಳ ಮೇಲೆ ಹೇರಲಾರಂಭಿಸಿದುವು. ಭಾರತ ಸರ್ಕಾರವು ಸಹ ಈ ಅಂಶಗಳನ್ನೊಳಗೊಂಡ ಬಜೆಟ್, ಆರ್ಥಿಕ ಸುಧಾರಣೆಗಳು, ಕೈಗಾರಿಕಾ ನೀತಿ ಗಳನ್ನು ೧೯೯೧ರ ಜುಲೈನಿಂದ ಕಾರ್ಯಗತ ಮಾಡಲಾರಂಭಿಸಿತು. ಗ್ಯಾಟ್(ಜನರಲ್ ಅಗ್ರಿಮೆಂಟ್ ಆನ್ ಟ್ರೇಡ್ ಟ್ಯಾರಿಫ್ಸ್) ಮಾತುಕತೆಗಳು ಮುಕ್ತಾಯವಾಗಿ ವಿಶ್ವವ್ಯಾಪಾರ ಸಂಸ್ಥೆಯು ಅಸ್ತಿತ್ವಕ್ಕೆ ಬಂದು ಅದೂ ಸಹ ಸಾಮ್ರಾಜ್ಯಶಾಹಿಗಳ ಸೂರೆಯ ಒಂದು ಸಲಕರಣೆಯಾಯಿತು.

೧೯೬೦ರ ನಂತರದ ನಾಲ್ಕು ದಶಕಗಳಲ್ಲಿ ತಂತ್ರಜ್ಞಾನದಲ್ಲಿ ಕ್ರಾಂತಿಯಾಗಿ ಬಹಳ ಬೆಳವಣಿಗೆಗಳಾದವು. ಗಣಕ(ಕಂಪ್ಯೂಟರು)ಗಳ ಹೊಸ ಸಂಶೋಧನೆಗಳಾಗಿ ಇಂಟರ್ ನೆಟ್, ವೆಬ್ ಸೈಟ್, ಸೈಬರ್ ಕೆಫೆ ಇತ್ಯಾದಿಗಳ ಬೆಳವಣಿಗೆಗಳು ಇಂದು ಸಾಮಾನ್ಯವಾಗಿ ಬಿಟ್ಟಿವೆ. ಬಂಡವಾಳಗಾರರಿಗೆ ಇಂದು ಒಂದು ನಗರದಿಂದ ಬೇರೆ ದೇಶಗಳಲ್ಲಿರುವ ನಗರಕ್ಕೆ ಒಂದೇ ಕಡೆ ಕೂತು ಹಣವನ್ನು ಇನ್ನೊಂದು ಕಡೆಗೆ ವರ್ಗಾವಣೆ ಮಾಡಲು ಸಾಧ್ಯವಾಗಿದೆ. ಈ ತಾಂತ್ರಿಕ ಪ್ರಗತಿಯನ್ನು ಉಪಯೋಗಿಸಿ ಸಾಮ್ರಾಜ್ಯಶಾಹಿ ನಿರ್ದೇಶಿತ ಜಾಗತೀಕರಣವು ದುರ್ಬಲ ದೇಶಗಳು ಶರಣಾಗುವಂತೆ ಮಾಡಿದೆ. ಆ ದೇಶಗಳು ಮೂಲಭೂತ ಕೈಗಾರಿಕೆಗಳು, ಸೇವೆಗಳು ಮತ್ತು

ಪರಿಕರಗಳನ್ನು ಖಾಸಗೀಕರಿಸಿ ಆರ್ಥಿಕ ಸಾರ್ವಭೌಮತೆಯನ್ನು ಬಲಿದಾನ ಮಾಡುವಂತೆ ಬಲಾತ್ಕರಿಸುತ್ತಿದೆ. ಅವರು 'ಆರ್ಥಿಕ ಸುಧಾರಣೆ' ಎನ್ನುವುದರ ಅರ್ಥವೇನೆಂದರೆ 'ಆರ್ಥಿಕ ಸಾರ್ವಭೌಮತೆ'ಯನ್ನು ಕದಿಯು ವುದು. ತನಗೆ ಸರಿಸಮಾನ ಶಕ್ತಿಯಾಗಿದ್ದ ಸಮಾಜವಾದಿ ಶಕ್ತಿಯು ಕುಸಿದು ಇಲ್ಲದಂತಾಗಿರು ವುದರಿಂದ ಅಮೆರಿಕ ಸಂಯುಕ್ತ ಸಂಸ್ಥಾನಗಳ ನಾಯಕತ್ವದ ಜಾಗತಿಕ ಸಾಮ್ರಾಜ್ಯಶಾಹಿಯು ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ತನ್ನ ಅಧಿನಾಯಕತ್ವವನ್ನು ಸ್ಥಾಪಿಸಲು ತೀವ್ರವಾಗಿ ಪ್ರಯತ್ನಿಸುತ್ತಿದೆ.

ಕೊನೆಯ ದಶಕದಲ್ಲಿ ಜಾಗತಿಕ ಬಂಡವಾಳಶಾಹಿಯ ಮೂರು ಕೇಂದ್ರಗಳು ಉದಯಿಸಿವೆ. ಅವುಗಳ ನಡುವೆ ಪೈಪೋಟಿ ಇದೆ. ಹಣದ ಏಕೀಕರಣವನ್ನು ಸ್ಥಾಪಿಸಲು ಹೆಣಗುತ್ತಿರುವ ಐರೋಪ್ಯ ಒಕ್ಕೂಟವು ಒಂದು ಭಾಗವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನಗಳ ನಾಯಕತ್ವದಲ್ಲಿರುವ 'ನಾರ್ತ್ ಅಟ್ಲಾಂಟಿಕ್ ಫ್ರೀ ಟ್ರೇಡ್ ಅಸೋಸಿಯೇಷನ್' (ಎನ್.ಎ.ಎಫ್ .ಟಿ.ಎ) ಇನ್ನೊಂದು ಭಾಗವಾಗಿದ್ದು ದಕ್ಷಿಣದ ಲ್ಯಾಟಿನ್ ಅಮೆರಿಕದೊಳಗೆ ವಿಸ್ತರಿಸಲು ಪ್ರಯತ್ನಿಸುತ್ತಿದೆ. ಪೂರ್ವ ಮತ್ತು ಆಗ್ನೇಯ ಏಷ್ಯಾಕ್ಕೆ ಹರಡಲು ಯತ್ನಿಸುತ್ತಿ ರುವ ಜಪಾನ್ ಮೂರನೆಯ ಭಾಗವಾಗಿದೆ. ಈ ಮೂರು ಭಾಗಗಳ ನಡುವೆ ಸ್ಪರ್ಧೆ ಇದ್ದರೂ ಸಹ ಸಾಮ್ರಾಜ್ಯಶಾಹಿ ವ್ಯವಸ್ಥೆ ಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳು ತನ್ನ ಅಧಿನಾಯಕ ಪಾತ್ರವನ್ನು ನಿರ್ವಹಿಸುತ್ತಿದೆ.

ವಿಶ್ವರಾಷ್ಟ್ರ ಸಂಸ್ಥೆಯು ಶಾಂತಿ, ನಿಶ್ಶಸ್ತ್ರೀಕರಣ, ಅಭಿವೃದ್ಧಿಯನ್ನು ಸಾಧಿಸುವುದನ್ನು, ವಿವಾದಗಳಿಗೆ ರಾಜಕೀಯ ಪರಿಹಾರಗಳನ್ನು ಕಂಡುಹಿಡಿದು, ಅಂತರರಾಷ್ಟ್ರೀಯ ಸಹಕಾರವನ್ನು ಏರ್ಪಡಿಸುವುದನ್ನು ಬಿಟ್ಟು ಹೆಚ್ಚು ಹೆಚ್ಚಾಗಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಮತ್ತು ಮಿತ್ರರಾಷ್ಟ್ರಗಳ ಅಧಿನಾಯಕತ್ವದ ಸಲಕರಣೆಯಾಗುತ್ತಿದೆ. ಐ.ಎಂ.ಎಫ್, ವಿಶ್ವಬ್ಯಾಂಕ್, ವಿಶ್ವವ್ಯಾಪಾರ ಸಂಘಟನೆ, ನೇಟೋ(ನಾರ್ತ್ ಅಟ್ಲಾಂಟಿಕ್ ಟ್ರೀಟಿ ಆರ್ಗನೈಸೇಷನ್) ಎಂಬ ಮಿಲಿಟರಿ ಕೂಟ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತಿತರ ಸಾಮ್ರಾಜ್ಯಶಾಹಿ ಶಕ್ತಿಗಳು ಹೇಳಿದಂತೆ ನಡೆಯುವ, ವಿಶ್ವರಾಷ್ಟ್ರ ಸಂಸ್ಥೆಯು ವಿಭಿನ್ನ ಒತ್ತಡಗಳು ಮತ್ತು ಮಿಲಿಟರಿ ಮಧ್ಯಪ್ರವೇಶಗಳ ಮೂಲಕ ಸಾಮ್ರಾಜ್ಯಶಾಹಿ ಜಾಗತಿಕ ಆರ್ಥಿಕ ಕಾರ್ಯಸೂಚಿಯನ್ನು ಹೇರುವ ಹೊಸ ವ್ಯವಸ್ಥೆಯ ಆಧಾರ ಸ್ಥಂಭಗಳಾಗಿವೆ. ಬಹುರಾಷ್ಟ್ರೀಯ ಸಂಸ್ಥೆಗಳ ಜಾಗತಿಕ ಹಿತಾಸಕ್ತಿಗಳ ಸೇವೆ ಮಾಡುವ ಈ ಸಂಸ್ಥೆಗಳು ಜಾಗತಿಕ ಸರ್ಕಾರದ 'ಡಿ ಫ್ಯಾಕ್ಟೋ' ಸರ್ಕಾರದ ಸ್ವರೂಪವಾಗಿವೆ.

ಈ ಹಾದಿಯಲ್ಲಿ ಅವರು ಕುಲಸಂಬಂಧಿ, ಧಾರ್ಮಿಕ, ಗಡಿಸಂಬಂಧದ ಕಲಹಗಳನ್ನು ಹೊಡೆದೆಬ್ಬಿಸುತ್ತಾರೆ, ತೀವ್ರವಾದ ಪ್ರತಿಗಾಮಿ ಮತ್ತು ಮೂಢನಂಬಿಕೆಯ ಶಕ್ತಿಗಳನ್ನು ಬೆಳೆಸುತ್ತಾರೆ. ದಮನಕಾರಿ, ರಕ್ತಪಿಪಾಸು, ಸರ್ವಾಧಿಕಾರಗಳನ್ನು ಬೆಂಬಲಿಸುತ್ತಾರೆ. ನಾಗರಿಕರನ್ನು ಕೊಚ್ಚಿ ಹಾಕುತ್ತಾರೆ. ಜನಸಾಮಾನ್ಯರನ್ನು ಹೊಡೆದೋಡಿಸುತ್ತಾರೆ. ಬರಗಾಲಕ್ಕೆ ಗುರಿ ಮಾಡುತ್ತಾರೆ, ಪ್ರಭುತ್ವದ ಭಯೋತ್ಪಾದನೆಯನ್ನು ಪ್ರಯೋಗಿಸುತ್ತಾರೆ.

ಈಗ ಸಾಮ್ರಾಜ್ಯಶಾಹಿಯು ಎರಡು ರೀತಿಯ ತಂತ್ರಗಳನ್ನು ಅನುಸರಿಸುತ್ತಿದೆ; ಮೊದಲನೆಯದಾಗಿ ಕ್ರಾಂತಿಕಾರಿ ಮತ್ತು ಪ್ರಗತಿಶೀಲ ಶಕ್ತಿಗಳ ಮೇಲೆ ಕ್ರೂರ ದಬ್ಬಾಳಿಕೆ ಯನ್ನು ಹರಿ ಬಿಡುವುದು, ಆ ಮೂಲಕ ಜನರ ಅತೃಪ್ತಿಯ ಲಾಭವನ್ನು ಅತ್ಯಂತ ಪ್ರತಿಗಾಮಿ ಮತ್ತು ಮೂಢನಂಬಿಕೆಯ ಶಕ್ತಿಗಳು ಪಡೆಯುವಂತೆ ಮಾಡುವುದು, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಸೈದ್ಧಾಂತಿಕ ಮತ್ತು ಮಿಲಿಟರಿ ಮಧ್ಯಪ್ರದೇಶಕ್ಕೆ ಅಂತರರಾಷ್ಟ್ರೀಯ ಮತ್ತು ರಾಷ್ಟ್ರೀಯ ಬಲಾತ್ಕಾರದ ಸಲಕರಣೆಗಳನ್ನು ಬೆಳೆಸುವುದು.

**ಜಾಗತೀಕರಣದ ನಿಜಸ್ವರೂಪ ಮತ್ತು ಪರಿಣಾಮ**

ಮೂರನೆಯ ಜಗತ್ತಿನ ದೇಶಗಳಲ್ಲಿ ಜನರು ಸಾಮೂಹಿಕವಾಗಿ ಹಸಿವಿನಿಂದ ನರಳುವುದು, ಕಾಯಿಲೆ, ಅನಕ್ಷರತೆ, ನಿರುದ್ಯೋಗ, ಪೌಷ್ಟಿಕ ಆಹಾರದ ಕೊರತೆಗಳು ವಿಪರೀತವಾಗಿ ಹೆಚ್ಚಾಗಿವೆ. ಹೀಗಿರುವಾಗ ಜನರಿಗೆ ಯಾವುದೇ ಪರಿಹಾರಗಳನ್ನು ಒದಗಿಸದ ಪಾಶವೀ ಬಜೆಟ್‌ಗಳನ್ನು ಸಿದ್ಧಪಡಿಸಬೇಕೆಂದು ಐ.ಎಂ.ಎಫ್ ಮತ್ತು ವಿಶ್ವಬ್ಯಾಂಕ್ ಸರ್ಕಾರಗಳ ಮೇಲೆ ಒತ್ತಡವನ್ನು ಹೇರುತ್ತಿವೆ. ಯಾಕೆಂದರೆ ಆ ಸಂಸ್ಥೆಗಳು ಕೊಟ್ಟಿರುವ ಸಾಲದ ಮರುಪಾವತಿಗೆ ಬಜೆಟ್ಟಿನಲ್ಲಿ ಹಣ ಉಳಿದಿರಬೇಕು!

ಇನ್ನೊಂದೆಡೆ ಪ್ರಪಂಚದಲ್ಲಿ ೨೨೫ ವ್ಯಕ್ತಿಗಳ ವಾರ್ಷಿಕ ವರಮಾನವು ೧.೭ ಸಾವಿರ ಶತಕೋಟಿ ಡಾಲರುಗಳಾಗಿದೆ. ಇದು ಪ್ರಪಂಚದ ಒಟ್ಟು ಜನರ ಶೇ.೪೭ರಷ್ಟು ಮಂದಿಯ ವಾರ್ಷಿಕ ಆದಾಯಕ್ಕಿಂತಲೂ ಹೆಚ್ಚಾಗಿದೆ. ಎಂದರೆ ೨.೫.ಶತಕೋಟಿ ಜನರಿಗೆ ಜೀವಿಸಲು ಈ ೨೨೫ ಜನರಿಗಿರುವಷ್ಟು ವರಮಾನವಿಲ್ಲ. ಪ್ರಪಂಚದ ಬೃಹತ್ ಸಂಖ್ಯೆಯ ಜನರಿಗೆ ಬಂಡವಾಳಶಾಹಿ ಜಾಗತೀಕರಣವು ಒಂದು ದುರಂತವಾಗಿದೆ.

*ವಿಶ್ವರಾಷ್ಟ್ರಸಂಸ್ಥೆಯ(ಯು.ಎನ್.ಒ) ಬೆಳವಣಿಗೆ ಕಾರ್ಯಕ್ರಮದ ವರದಿಯ ಪ್ರಕಾರ ಬಡತನ ಮತ್ತು ನಿರ್ಗತೀಕರಣ ಅಭಿವೃದ್ಧಿಶೀಲ ದೇಶಗಳ ಸಮಸ್ಯೆ ಮಾತ್ರವೇ ಅಲ್ಲ. ಓಇಸಿಡಿ ದೇಶಗಳ ೧೦ ಕೋಟಿ ಗಿಂತಲೂ ಹೆಚ್ಚು ಜನರು ಬಡತನ ರೇಖೆಯ ಕೆಳಗಿದ್ದಾರೆ. ಓಇಸಿಡಿ ದೇಶಗಳಲ್ಲಿ ೩.೭ ಕೋಟಿ ಜನರು ನಿರುದ್ಯೋಗಿಗಳಾಗಿದ್ದಾರೆ. ಯುವಕ-ಯುವತಿಯರಲ್ಲಿ(೧೫ ರಿಂದ ೨೪ರ ಪ್ರಾಯ) ನಿರುದ್ಯೋಗವು ವಿಪರೀತ ವಾಗಿ ಹೆಚ್ಚಿದೆ. ಫ್ರಾನ್ಸ್ ದೇಶದಲ್ಲಿ ಯುವತಿಯರಲ್ಲಿ ಶೇ.೩೨ರಷ್ಟು, ಯುವಕರಲ್ಲಿ ಶೇ.೨೨ರಷ್ಟು ಇಟಲಿಯಲ್ಲಿ ಯುವತಿಯರಲ್ಲಿ ಶೇ.೩೯, ಯುವಕರಲ್ಲಿ ಶೇ.೩೦ ರಷ್ಟು-ಸ್ಪೇಯಿನ್‌ನಲ್ಲಿ ಯುವತಿಯರಲ್ಲಿ ಶೇ.೪೯, ಮತ್ತು ಯುವಕರಲ್ಲಿ ಶೇ.೩೬ರಷ್ಟು ನಿರುದ್ಯೋಗವಿದೆ. ಓಇಸಿಡಿ ದೇಶ ಗಳಲ್ಲಿ ಶೇ.೮ರಷ್ಟು ಮಕ್ಕಳು ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ಹತ್ತು ಕೋಟಿಗಿಂತಲೂ ಹೆಚ್ಚು ಜನರು ವಸತಿಹೀನರಾಗಿದ್ದಾರೆ.*

-ಯು.ಎನ್ .ಡಿ.ಪಿ.ವರದಿ, ೧೯೯೮.

ಇದೇ ವಿಶ್ವರಾಷ್ಟ್ರ ಸಂಸ್ಥೆಯು ೧೯೯೮ಲಕ್ಕೆ ೭೭ ದೇಶಗಳ ಬಡತನದ ಮಟ್ಟವನ್ನು (ಹೂಮನ್ ಪಾವರ್ಟಿ ಇಂಡೆಕ್ಸ್ -ಎಚ್.ಪಿ.ಎಂ) ಲೆಕ್ಕ ಹಾಕಿದ್ದಾರೆ.

೧. ಟ್ರಿನಿಡಾಡ್ ಮತ್ತು ಟೊಬಾಗೋದಲ್ಲಿ ಇದು ಶೇ.೩ರಷ್ಟಾದರೆ, ನೈಜೀರಿಯಾದಲ್ಲಿ ಶೇ.೬೨.

೨. ಮಾಲಿ, ಇಥಿಯೋಪಿಯ, ಸಿ ಎ್‌ರೆರ ಲಿಯೋನ್, ಬುರ್‌ಕಿನ್ ಫಾಸೊ ಮತ್ತು ನೈಜೀರಿಯಗಳಲ್ಲಿ ಶೇ.೫೦ರ ಮೇಲಿದೆ.

೩. ಭಾರತದಲ್ಲಿ ಶೇ.೩೫.೯, ಪಾಕಿಸ್ತಾನ, ಶೇ.೪೬, ಬಾಂಗ್ಲಾದೇಶ ಶೇ.೪೬.೫, ಶ್ರೀಲಂಕಾ ಶೇ.೨೦.೬. ಪ್ರಪಂಚದ ಜನರಲ್ಲಿ ಶೇ.೨೦ರಷ್ಟು ಶ್ರೀಮಂತರು, ಶೇ.೮೬ರಷ್ಟು ಖಾಸಗಿ ಬಳಕೆಯ ಖರ್ಚು ಮಾಡುತ್ತಾರೆ. ಅವರಲ್ಲಿ ಶೇ.೨೦ರಷ್ಟು ಬಡವರು ಶೇ.೧.೩ರಷ್ಟು ಖರ್ಚು ಮಾಡುವರು. ಜಾಗತಿಕ ಅರ್ಥ ವ್ಯವಸ್ಥೆಯ ಲಕ್ಷಣಗಳು ಸಂಕ್ಷಿಪ್ತವಾಗಿ ಹೀಗಿವೆಯೆಂದು ಹೇಳಬಹುದು.

೪. ಬೃಹತ್ ಜಾಗತಿಕ ನಿಗಮಗಳು ಪ್ರಪಂಚದ ಹಣವನ್ನು, ತಂತ್ರಜ್ಞಾನವನ್ನು ಮತ್ತು ಮಾರುಕಟ್ಟೆಗಳನ್ನು ನಿಯಂತ್ರಿಸಿ, ನಿರ್ವಹಿಸುತ್ತವೆ.

೫. ಒಂದು ಸಾಮಾನ್ಯ ಗ್ರಾಹಕರ ಸಂಸ್ಥೆಯು ಭೌತಿಕ ತೃಪ್ತಿಯ ಹುಡುಕಾಟದಲ್ಲಿರುವ ಜನರನ್ನು ಒಂದುಗೂಡಿಸಬಹುದು.

೬. ಕಾರ್ಮಿಕರ ನಡುವೆ ಹಾಗೂ ಸ್ಥಳಗಳ ನಡುವೆ ಬಂಡವಾಳ ಹೂಡುವವರಿಗೆ ತಮ್ಮ ಸೇವೆಗಳನ್ನು ಸಲ್ಲಿಸಲು, ಅತ್ಯಂತ ಅನುಕೂಲಕರವಾದ ಷರತ್ತುಗಳ ಮೇಲೆ ಸಲ್ಲಿಸಲು ಪಕ್ಕಾ ಜಾಗತಿಕ ಸ್ಪರ್ಧೆ ಇದೆ.

೭. ರಾಷ್ಟ್ರೀಯ ಮತ್ತು ಸ್ಥಳೀಯ ಪರಿಣಾಮಗಳನ್ನು ಲೆಕ್ಕಿಸದೆ ಸಂಪೂರ್ಣವಾಗಿ ವ್ಯಾಪಾರದ ಆಧಾರದ ಮೇಲೆ ವ್ಯವಹರಿಸಲು ನಿಗಮಗಳು(ಬಹುರಾಷ್ಟ್ರೀಯ ಸಂಸ್ಥೆಗಳು) ಮುಕ್ತವಾಗಿವೆ.

೮. ವೈಯಕ್ತಿಕ ಹಾಗೂ ಕಾರ್ಪೊರೇಟ್ ಸಂಬಂಧಗಳು ಸಂಪೂರ್ಣವಾಗಿ ಮಾರುಕಟ್ಟೆಯಿಂದ ನಿರ್ಧರಿಸಲ್ಪಡುತ್ತವೆ.

೯. ಊರು ಮತ್ತು ಸಮುದಾಯಗಳಿಗೆ ಇರುವ ಬದ್ಧತೆಗೆ ಬೆಲೆ ಇರುವುದಿಲ್ಲ.

ಇದು ಜಾಗತೀಕರಣ ಮಾಡಿದ ಹಾವಳಿ, ಸಾಮ್ರಾಜ್ಯಶಾಹಿಗಳ ಪ್ರಾಬಲ್ಯಗಳಿಂದ ಪ್ರಪಂಚದ ಸಾರ್ವಜನಿಕರಿಗೆ ಆಗಿರುವ ನಷ್ಟ, ಜನಸಾಮಾನ್ಯರ ಅವನತಿಯನ್ನು ಸೂಕ್ಷ್ಮವಾಗಿ ಸೂಚಿಸುವುದು.

**ಚೀನಾ**

ಈಗ ಸಾಮ್ರಾಜ್ಯಶಾಹಿಗಳ ದಾಳಿ, ಕುತಂತ್ರಗಳನ್ನು ಮೆಟ್ಟಿ ನಿಂತಿರುವ ಸಮಾಜವಾದಿ ದೇಶವಾಗಿಯೇ ಉಳಿದಿರುವ ಚೀನಾದತ್ತ ನೋಡೋಣ. ಚೀನಾವು ಪ್ರಪಂಚದ ಕಾಲು ಭಾಗದ ಜನಸಂಖ್ಯೆಯನ್ನು ಹೊಂದಿರುವ ದೇಶವಾಗಿದೆ. ಸರಕುಗಳ, ಸೇವೆಗಳ ಉತ್ಪಾದನಾ ದರದಲ್ಲಿ ಚೀನಾವು ಮೊದಲನೆಯ ಸ್ಥಾನದಲ್ಲಿದೆ. ಕೆಲವೊಮ್ಮೆ ಅದರ ಜಿ.ಡಿ.ಪಿ(ಗ್ರಾಸ್ ಡೊಮೆಸ್ಟಿಕ್ ಪ್ರಾಡಕ್ಟ್) ಶೇ.೧೨ನ್ನು ದಾಟಿದ್ದಿತು.

ಚೀನಾವು ಎರಡು ದಶಕಗಳ ಹಿಂದೆಯೇ ಆರ್ಥಿಕ ಸುಧಾರಣೆಗಳಿಗೆ ಕೈ ಹಾಕಿತು. ಸಮಾಜವಾದಕ್ಕೆ ಭವಿಷ್ಯವಿಲ್ಲ, ಬಂಡವಾಳಶಾಹಿ ಮಾರುಕಟ್ಟೆಯೇ ಶ್ರೇಷ್ಟ ಎಂದು ಸಾಮ್ರಾಜ್ಯಶಾಹಿಗಳು ಡಂಗುರ ಬಾರಿಸುತ್ತಿರುವಾಗಲೇ ಚೀನಾವು ಸಮಾಜವಾದಿ ಮಾರುಕಟ್ಟೆ ವ್ಯವಸ್ಥೆಯನ್ನು ಪ್ರಾರಂಭಿಸಿದ್ದಿತು. ಇದರಿಂದಾಗಿ ಅರ್ಥವ್ಯವಸ್ಥೆಯ ಪ್ರತಿಯೊಂದು ವಿಭಾಗದಲ್ಲೂ ಶರವೇಗದ ಪ್ರಗತಿಯನ್ನು ದಾಖಲಿಸಿ ಶಕ್ತಿಯುತವಾದ ಆರ್ಥಿಕ ಶಕ್ತಿ ಯನ್ನು ಬೆಳೆದುಬಂದಿದೆ. ಭವಿಷ್ಯದಲ್ಲಿ ಸಾಮ್ರಾಜ್ಯಶಾಹಿ ಪ್ರಾಬಲ್ಯಕ್ಕೆ ಪ್ರತಿರೋಧವ ನ್ನೊಡ್ಡಲು ಈ ಬೆಳವಣಿಗೆಯು ಸಾಧಕವಾಗುವುದು. ಹಣಕಾಸಿನ ಬಿರುಗಾಳಿಯು ರಷ್ಯಾ ದಾದ್ಯಂತ ಬೀಸಿದಾಗ ಚೀನಾವು ದೃಢವಾಗಿದ್ದು ಏಷ್ಯಾದ ಮತ್ತು ಜಾಗತಿಕ ಅರ್ಥ ವ್ಯವಸ್ಥೆಯನ್ನು ಸ್ಥೈರ್ಯಗೊಳಿಸುವುದರಲ್ಲಿ ತೊಡಗಿದ್ದಿತು.

ಇಂದು ಬಂಡವಾಳಶಾಹಿ ಪ್ರಪಂಚದಲ್ಲಿ ಬೆಳೆದು ಬಂದಿರುವ ವ್ಯವಸ್ಥೆಯ ಬಿಕ್ಕಟ್ಟು, ಉತ್ಪಾದನೆಯ ಬಿಕ್ಕಟ್ಟು, ಜನರು ಅನುಭವಿಸಬೇಕಾಗಿ ಬಂದಿರುವ ಕಷ್ಟಗಳು ಸಮಾಜವಾದ ಪದ್ಧತಿಯು ಬಂಡವಾಳಶಾಹಿ ಪದ್ಧತಿಗಿಂತಲೂ ಉತ್ತಮ ಎಂಬುದನ್ನು ತೋರಿಸುತ್ತದೆ.

**ಕ್ಯೂಬದ ಪ್ರತಿರೋಧ**

ಅಮೆರಿಕ ಸಂಯುಕ್ತ ಸಂಸ್ಥಾನಗಳ ಸಾಮ್ರಾಜ್ಯಶಾಹಿಗಳ ಅವಿರತ ದಾಳಿಗೆ, ಆರ್ಥಿಕ ದಿಗ್ಬಂಧನಕ್ಕೆ ಮತ್ತು ಬುಡಮೇಲು ಕೃತ್ಯಗಳಿಗೆ ಗುರಿಯಾಗಿರುವ ಕ್ಯೂಬವು ಇಂದು ತನ್ನ ಆರ್ಥಿಕ ಸಂಬಂಧಗಳನ್ನು ಪುನರ್‌ಸಂಘಟಿಸಿದೆ. ಕ್ಯೂಬವು ಸಮಾಜವಾದ ಪದ್ಧತಿಯ ಫಲಗಳಾದ ಸಾಮಾಜಿಕ ಸಾಧನೆಗಳನ್ನು ಧೈರ್ಯದಿಂದ ರಕ್ಷಿಸಿಕೊಳ್ಳುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಕ್ರಾಂತಿಕಾರಿ ಕಾಲಾವಧಿಯ ಕಠಿಣವಾದ ಅನುಭವವನ್ನು ಪಡೆದ ಅವರು, ಬಹಳ ಕಷ್ಟಕರವಾದ ಪರಿಸ್ಥಿತಿಗಳಲ್ಲಿ ಭೂಮಿಯ ಮೇಲಿರುವ ಅತ್ಯಂತ ಬಲಿಷ್ಟ ಶಕ್ತಿಯನ್ನು ಎದುರಿಸಿ ಯಾವುದು ಅಸಾಧ್ಯವೋ ಅದನ್ನು ಸಾಧಿಸಿದರು. ವಿನಾಶಕಾರಿ ಪರಿಸ್ಥಿತಿಯು ಮುಗಿಯಿತು. ಆದರೆ ಕಷ್ಟಗಳು ಉಳಿದಿದೆ. ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದ ಮುಂಚೂಣಿಯಲ್ಲಿದ್ದು, ಅಮೆರಿಕ ಸಂಯುಕ್ತ ಸಂಸ್ಥಾನಗಳ ಎದುರಿಗೆ ಮುಖಾಮುಖಿಯಾಗಿ ನಿಂತು ಭವಿಷ್ಯದಲ್ಲಿಯೂ ಸಹ ಎಲ್ಲಾ ಕಷ್ಟನಷ್ಟಗಳನ್ನೂ ಜಯಿಸುವ ವಿಶ್ವಾಸವು ಕ್ಯೂಬಕ್ಕಿದೆ.

ಕ್ಯೂಬದ ಕ್ರಾಂತಿಯಾಗಿ ನಲವತ್ತೊಂದು ವರ್ಷಗಳಾಗಿವೆ. ಆ ವೇಳೆಗೇನೇ ಅಮೆರಿಕ ಸಂಯುಕ್ತ ಸಂಸ್ಥಾನಗಳು ಅತ್ಯಂತ ಶಕ್ತಿಯಾದ ಸಾಮ್ರಾಜ್ಯಶಾಹಿ ದೇಶವಾಗಿದ್ದಿತು. ಈ ಕಾಲಾವಧಿಯಲ್ಲಿಯೇ ಈ ಸಾಮ್ರಾಜ್ಯಶಾಹಿಯು ಕ್ಯೂಬದ ಮೇಲೆ ಒಂದು ದಿವಸವೂ ಬಿಡದೆ ದಾಳಿ ಮಾಡುತ್ತಾ ಬಂದಿದೆ. ಈಗ ಕ್ಯೂಬದ ಒಬ್ಬ ಬಾಲಕನನ್ನು ಅ ದೇಶವು ಅಪಹರಿಸಿಕೊಂಡು ಹೋಗಿದೆ. ಕ್ಯೂಬವನ್ನು ಮೂಲೆ ಗುಂಪು ಮಾಡಬೇಕೆಂದು ಅಮೆರಿಕ ಸಂಯುಕ್ತ ಸಂಸ್ಥಾನಗಳು ಎಷ್ಟು ಪ್ರಯತ್ನಪಟ್ಟರೂ ಕ್ಯೂಬಕ್ಕೆ ಹೆಚ್ಚು ಹೆಚ್ಚಾದ ಅಂತರರಾಷ್ಟ್ರೀಯ ಬೆಂಬಲ ಸಿಕ್ಕುತ್ತಾ ಇದೆ. ಲ್ಯಾಟಿನ್ ಅಮೆರಿಕ ಮತ್ತು ಕ್ಯಾರಿಬಿಯನ್ ಗಳಲ್ಲಿ ಕೈ ಬೆರಳೆಣಿಕೆಯಷ್ಟು ದೇಶಗಳನ್ನು ಬಿಟ್ಟರೆ ಕ್ಯೂಬದೊಂದಿಗೆ ರಾಯಭಾರ ಸಂಬಂಧಗಳನ್ನು ಬೆಳೆಸಿವೆ. ವಿಶ್ವರಾಷ್ಟ್ರಸಂಸ್ಥೆಯ ಸಾಮಾನ್ಯಸಭೆಯ ಅಧಿವೇಶನದಲ್ಲಿ ಕ್ಯೂಬದ ವಿರುದ್ಧವಾಗಿರುವ ಎಲ್ಲಾ ನಿರ್ಬಂಧಗಳನ್ನು ತೆಗೆದುಹಾಕಬೇಕೆಂಬ ನಿರ್ಣಯಕ್ಕೆ ಮೂರು ದೇಶಗಳನ್ನು ಬಿಟ್ಟರೆ ಉಳಿದೆಲ್ಲಾ ದೇಶಗಳೂ ಬೆಂಬಲ ಕೊಟ್ಟಿವೆ. ಪ್ರಜಾಪ್ರಭುತ್ವ, ಶಾಂತಿ, ಸ್ವಾತಂತ್ರ್ಯಗಳಿಗೆ ಪರವಾದ ಜಾಗತಿಕ ಸಮಾವೇಶಗಳು ಕ್ಯೂಬದಲ್ಲಿ ನಡೆದಿವೆ. ೨೦೦೦ದ ಉತ್ತರಾರ್ಧದಲ್ಲಿ ಜಾಗತಿಕ ವಕೀಲರ ಸಮ್ಮೇಳನವು ಕ್ಯೂಬದ ರಾಜಧಾನಿ ಹವಾನಾದಲ್ಲಿ ನಡೆಯಲಿದೆ.

**ಕಾರ್ಮಿಕ ಪ್ರತಿಭಟನೆ**

ಜಾಗತಿಕ ಶೋಷಕ ವರ್ಗಗಳು ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ದಾಳಿಗಳನ್ನು ನಡೆಸುತ್ತಿರುವಾಗ ಕಾರ್ಮಿಕರು ಅದರ ವಿರುದ್ಧವಾಗಿ ವಿವಿಧ ರೀತಿಗಳಲ್ಲಿ ಪ್ರತಿಭಟಿಸುತ್ತಿದ್ದಾರೆ. ಬ್ರಿಟನ್, ಫ್ರಾನ್ಸ್, ಜರ್ಮನಿ ಮೊದಲಾದ ಐರೋಪ್ಯ ದೇಶಗಳಲ್ಲಿ ಮುಷ್ಕರಗಳು ನಡೆದಿವೆ. ಕಳೆದ ವರ್ಷ (೧೯೯೯) ಕಾರ್ಮಿಕರ ಮುಷ್ಕರ, ಪ್ರತಿಭಟನೆಗಳಿಂದಾಗಿ ಚುನಾವಣೆಯಲ್ಲಿ ಚಾನ್ಸೆಲರ್ ಕೋಲ್ ಸೋತರು, ಜಪಾನಿನಲ್ಲಿ, ಪೂರ್ವ ಯೂರೋಪಿನ ಮಾಜಿ ಸಮಾಜವಾದಿ ದೇಶಗಳಲ್ಲಿ, ರಷ್ಯಾದಲ್ಲಿ, ಲ್ಯಾಟಿನ್ ಅಮೆರಿಕ, ಆಫ್ರಿಕದ ದೇಶಗಳಲ್ಲಿ ಕಾರ್ಮಿಕ ವರ್ಗವು ಮುಷ್ಕರ, ಪ್ರತಿಭಟನೆಗಳನ್ನು ನಡೆಸುತ್ತಿದೆ. ಜಾಗತಿಕ ವಾರ್ತಾಸಂಸ್ಥೆಗಳು ಬಹುರಾಷ್ಟ್ರೀಯ ಸಂಸ್ಥೆಗಳ ಕೈಯಲ್ಲಿರುವುದರಿಂದ ಇವುಗಳಿಗೆ ಪ್ರಚಾರವು ಸಿಕ್ಕಲಿಲ್ಲ.

ಭಾರತದಲ್ಲಿ ೧೯೯೧ರಲ್ಲಿ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ, ಅನಂತರ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯ ಪ್ರಕಾರ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ವಿರುದ್ಧವಾಗಿ ರಾಷ್ಟ್ರವ್ಯಾಪಿ ಮುಷ್ಕರಗಳು, ಇತರ ಸ್ವರೂಪಗಳ ಪ್ರತಿಭಟನೆಗಳು ನಡೆದುವು. ೧೯೯೮ರ ಡಿಸೆಂಬರ್ ೧೧ ಮತ್ತು ೨೦೦೦ದ ಮೇ ೧೧ರಂದು ರಾಷ್ಟ್ರವ್ಯಾಪಿ ಮುಷ್ಕರಗಳು ನಡೆದುವು.

**ಹೊಸ ವಿರೋಧ**

ಹಿಂದಿನಂತಲ್ಲದೆ, ಇತ್ತೀಚೆಗಿನ ಕಾಲದಲ್ಲಿ ಅಮೆರಿಕ ನಾಯಕತ್ವದ ಮೈತ್ರಿಯು ಮೂರನೆಯ ಜಗತ್ತಿನ ದೇಶಗಳ ಮೇಲೆ ಆಕ್ರಮಣ ನಡೆಸಿದಾಗ ಹೆಚ್ಚು ವಿರೋಧವು ವ್ಯಕ್ತವಾಗಿದೆ. ವಿಶ್ವರಾಷ್ಟ್ರ ಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ರಷ್ಯ ಮತ್ತು ಚೀನಾಗಳ ವಿರೋಧವಿದ್ದುದರಿಂದ ಇರಾಕ್ ಮತ್ತು ಯುಗೊಸ್ಲಾವಿಯ ಮೇಲೆ ನಡೆದ ಆಕ್ರಮಣಗಳಿಗೆ ವಿಶ್ವಸಂಸ್ಥೆಯ ಅನುಮತಿ ಇರಲಿಲ್ಲ.

ಬೆಳೆಯುತ್ತಿರುವ ಚೀನಾದ ಶಕ್ತಿ, ಪ್ರಾಬಲ್ಯ, ಚೀನ ಮತ್ತು ರಷ್ಯಗಳ ನಡುವೆ ಕಾರ್ಯವ್ಯೆಹಾತ್ಮಕವಾದ ಪಾಲುದಾರಿಕೆಯ ಬೆಳವಣಿಗೆಗೆ ಇಟ್ಟಿರುವ ಹೆಜ್ಜೆ ಭವಿಷ್ಯದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಅಧಿನಾಯಕತ್ವಕ್ಕೆ ಪರಿಣಾಮಕಾರಿ ವಿರೋಧಿ ವೇದಿಕೆ ಯಾಗಲಿದೆ.


ಪರಾಮರ್ಶನ ಗ್ರಂಥಗಳು

೧. ಪೌಲ್ ಸ್ವೀಡಿ. ೧೯೯೧. **ದಿ ಥಿಯರಿ ಆಫ್ ಕ್ಯಾಪಿಟಲಿಸ್ಟ್ ಡೆವಲಪ್‌ಮೆಂಟ್,** ಕಲ್ಕತ್ತಾ: ಕೆ.ಪಿ.ಬಾಗ್ಚಿ ಆ್ಯಂಡ್ ಕಂಪನಿ.

೨. ಫೀಡಲ್ ಕ್ಯಾಸ್ಟ್ರೋ. ೧೯೯೯. **ಆ್ಯನ್ ಇಂಪೀರಿಯಾಲಿಸ್ಟ್ ಗ್ಲೋಬಲೈಜೇಶನ್,** ನವದೆಹಲಿ: ವರ್ಲ್ಡ್ ಬುಕ್ಸ್.

೩. ಅಶೋಕ ದೇಸಾಯಿ. ೧೯೯೯. **ದಿ ಎಕನಾಮಿಕ್ಸ್ ಆ್ಯಂಡ್ ಪಾಲಿಟಿಕ್ಸ್ ಆಫ್ ಟ್ರಾನ್ಸಿಶನ್ ಟು ಆ್ಯನ್ ಓಪನ್ ಮಾರ್ಕೆಟ್ ಎಕಾನಾಮಿ: ಇಂಡಿಯಾ,** ವರ್ಕಿಂಗ್ ಪೇಪರ್ ನಂ.೧೫೫, ಓ.ಇ.ಸಿ.ಡಿ., ಡೆವಲಪ್‌ಮೆಂಟ್ ಸೆಂಟರ್.


# ೨೮ ಜಾಗತೀಕರಣ ತಾತ್ವಿಕ ಚರ್ಚೆಗಳು

ಈ ಲೇಖನದ ಮುಖ್ಯ ಉದ್ದೇಶ ಜಾಗತೀಕರಣ ಮತ್ತು ಅದನ್ನು ಸಾಧ್ಯವಾಗಿಸಿದ ವೈಚಾರಿಕತೆಯ ಹುಟ್ಟು ಮತ್ತು ಬೆಳವಣಿಗೆಯ ಹಾದಿಯನ್ನು ಗುರುತಿಸುವುದಾಗಿದೆ. ಜಾಗತೀಕರಣ ಮತ್ತು ಇದಕ್ಕೆ ಸಂಬಂಧಿಸಿದ ಇತರ ಪದಗಳನ್ನು ಯಾವ ಅರ್ಥದಲ್ಲಿ ಬಳಸಲಾಗಿದೆ ಎನ್ನುವುದನ್ನು ಲೇಖನದ ಮೊದಲ ಭಾಗದಲ್ಲಿ ವಿವರಿಸಲಾಗಿದೆ. ಪ್ರಚಲಿತದಲ್ಲಿರುವ ಜಾಗತೀಕರಣ ತೊಂಬತ್ತರ ದಶಕದಲ್ಲಿ ಹುಟ್ಟಿಕೊಂಡ ಅಂಶವಲ್ಲ. ಬದಲಾಗಿ ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ರೂಪುಗೊಂಡ ಬಂಡವಾಳ ಆಧಾರಿತ ಉತ್ಪಾದನಾ ಘಟಕಗಳೇ ಇಂದಿನ

ಜಾಗತೀಕರಣವನ್ನು ಸಾಧ್ಯವಾಗಿಸಿದ ಸಾಂಘಿಕ ರಚನೆ ಬಹುರಾಷ್ಟ್ರೀಯ ಕಂಪನಿಗಳ ಮೂಲಗಳಾಗಿವೆ. ಇಂದು ಹೇಗಾಯಿತೆಂಬುದನ್ನು ಲೇಖನದ ಎರಡನೆಯ ಭಾಗದಲ್ಲಿ ವಿವರಿಸಲಾಗಿದೆ. ಇಲ್ಲಿ ಕೈಗಾರಿಕಾ ಕ್ರಾಂತಿ ಊಳಿಗ ಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಗೆ ಪರಿವರ್ತನೆಗೊಂಡ ಚಾರಿತ್ರಿಕ ಘಟ್ಟದ ವಿವರಣೆ ಇದೆ. ಈ ಚಾರಿತ್ರಿಕ ಘಟ್ಟಕ್ಕ ಮಹತ್ವ ಕೊಡಲು ಮುಖ್ಯ ಕಾರಣ- ೧. ಕೈಗಾರಿಕಾ ಕ್ರಾಂತಿಯ ಒಂದು ವಿವರಣೆ ಆಧುನೀಕರಣ ಥಿಯರಿಗಳ ಅಡಿಪಾಯವಾಗಿದೆ; ೨. ಆಧುನೀಕರಣ ಥಿಯರಿಗಳು ಬಂಡವಾಳದ ವೃದ್ಧಿಯನ್ನು ಅಭಿವೃದ್ಧಿಯೆಂದು ವ್ಯಾಖ್ಯಾನಿಸುವುದರ ಮೂಲಕ ಪ್ರಚಲಿತದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳ ಮೂಲರೂಪಗಳನ್ನು ಅಭಿವೃದ್ಧಿಯ ಹೆಸರಿನಲ್ಲಿ ೧೯೪೫ರ ಹೊತ್ತಿಗೆ ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಹುಟ್ಟುಹಾಕಿವೆ. ಬಂಡವಾಳ ಅದರಷ್ಟಕ್ಕೆ ಅದು ಬೆಳೆಯುವುದಿಲ್ಲ. ಅದರ ಬೆಳವಣಿಗೆಗೆ ಪೂರಕವಾದ ವಾತಾವರಣ ಕೂಡ ಅಗತ್ಯ. ಅಂತಹ ವಾತಾವರಣ ಯಾವುದೆಂದರೆ ಬಂಡವಾಳದ ಬೆಳವಣಿಗೆಯೇ ಇಡೀ ಸಮಾಜದ ಬೆಳವಣಿಗೆಯೆಂಬ ಮೌಲ್ಯ ನಿರ್ಮಾಣವಾಗುವುದು ಮತ್ತು ಈ ರೀತಿಯ ವಾತಾವರಣದ ನಿರ್ಮಾಣದ ವಿಚಾರದಲ್ಲಿ ಬಹುತೇಕ ಸಂದರ್ಭದಲ್ಲಿ ರಾಜಕೀಯ ಗಡಿಗಳು ಕೇವಲ ಕಾಲ್ಪನಿಕ ರೇಖೆಗಳಾಗಿಬಿಡುತ್ತವೆ ಎನ್ನುವುದನ್ನು ಕೂಡ ಈ ಭಾಗದಲ್ಲಿ ಚರ್ಚಿಸಲಾಗಿದೆ. ಈ ಚರ್ಚೆಯ ಮೂಲಕ ಯಾವ ರೀತಿಯಲ್ಲಿ ಅಭಿವೃದ್ಧಿಯ ವ್ಯಾಖ್ಯಾನದಲ್ಲಿ ಮತ್ತು ಆರ್ಥಿಕ ನೀತಿಗಳ ನಿರ್ಧಾರದಲ್ಲಿ ಅಂತಾರಾಷ್ಟ್ರೀಯ ರಾಜಕೀಯ ಹಾಗೂ ಆರ್ಥಿಕ ಏರುಪೇರುಗಳು ಆಂತರಿಕ ನಿರ್ಧಾರಗಳ ಮೇಲೆ ಖಚಿತವಾದ ಪ್ರಭಾವ ಬೀರುತ್ತವೆ ಎನ್ನುವುದರ ಮೇಲೆ ವಿಶೇಷ ಒತ್ತು ಕೊಡಲಾಗಿದೆ.

ಲೇಖನದ ಮೂರನೆಯ ಭಾಗದಲ್ಲಿ ವರ್ತಮಾನದಲ್ಲಿ ಚಾಲ್ತಿಯಲ್ಲಿರುವ ಜಾಗತೀಕರಣ ಚರಿತ್ರೆಯ ಯಾವ ಘಟ್ಟದಲ್ಲಿ ಮತ್ತು ಯಾವ ಕಾರಣಕ್ಕಾಗಿ ಹುಟ್ಟಿಕೊಂಡಿತ್ತು ಎನ್ನುವುದನ್ನು ವಿವರಿಸಲಾಗಿದೆ. ಇಲ್ಲಿ ಸಂದಾಯ ಶಿಲ್ಕು(ಬ್ಯಾಲೆನ್ಸ್ ಆಫ್ ಪೇಮೆಂಟ್) ಸಮಸ್ಯೆಗಳು ಮತ್ತು ಅದಕ್ಕೆ ಪರಿಹಾರವಾಗಿ ಬಂದ ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮಗಳು(ಇದು ಇಂಗ್ಲಿಷಿನಲ್ಲಿ ಸ್ಟ್ರಕ್ಚರಲ್ ಅಡ್ಜೆಸ್ಟ್‌ಮೆಂಟ್ ಪ್ರೋ- ಎಸ್.ಎ.ಪಿ. ಎಂದು ಪ್ರಚಾರ ಪಡೆದಿದೆ) ಯಾವ ರೀತಿಯಲ್ಲಿ ಅಭಿವೃದ್ಧಿ ಹೊಂದಿದ ಅದರಲ್ಲೂ ಅಮೆರಿಕಾದ ಸಮಸ್ಯೆಯಾಗಿದ್ದು, ಆದಾಗ್ಯೂ ಈ ಸಮಸ್ಯೆಯನ್ನು ಇಡೀ ಜಗತ್ತಿನ ಸಮಸ್ಯೆಯೆಂದು ವ್ಯಾಖ್ಯಾನಿಸುವುದರ ಮೂಲಕ ಎಸ್.ಎ.ಪಿ.ಯನ್ನು ಹೇಗೆ ಪ್ರಪಂಚದ ಎಲ್ಲಾ ದೇಶಗಳ ಮೇಲೆ ಅದರಲ್ಲೂ ಅಭಿವೃದ್ಧಿಶೀಲ ದೇಶಗಳ ಮೇಲೆ ಹೇರಲಾಯಿತು. ಇದಕ್ಕಾಗಿ ಈ ದೇಶಗಳು ತಮ್ಮ ಆರ್ಥಿಕ ನೀತಿಯಲ್ಲಿ ಯಾವ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಯಿತು ಎಂಬುದನ್ನು ವಿವರಿಸಲಾಗಿದೆ.

ಭಾಗ ೧

ಬಂಡವಾಳ ಎಂದರೇನು? ಚಾಗತೀಕರಣದ ಪ್ರಶ್ನೆ ಯಾಕೆ ಬಂಡವಾಳದ ಜಾಗತೀಕರಣಕ್ಕೆ ಸೀಮಿತಗೊಂಡಂತೆ ಪ್ರಚಾರ ಪಡೆಯುತ್ತಿದೆ? ಈ ಹಿಂದೆ ಬಂಡವಾಳ ಜಾಗತೀಕರಣ ಗೊಂಡಿರಲಿಲ್ಲವೆ? ಇವೇ ಮುಂತಾದ ಪ್ರಶ್ನೆಗಳು ಜಾಗತೀಕರಣ ಚರ್ಚೆಯಲ್ಲಿ ಸಹಜವಾಗುತ್ತವೆ. ಲೇಖನದ ಈ ಭಾಗದಲ್ಲಿ ಈ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಲು ಪ್ರಯತ್ನಿಸಲಾಗಿದೆ. ಈ ಉತ್ತರಗಳು ಮುಂದೆ ಬಳಸಲಿರುವ ಕೆಲವೊಂದು ಪದಗಳ ವ್ಯಾಖ್ಯಾನ ಕೂಡ ಆಗಿರುತ್ತವೆ. ಮೊದಲಿಗೆ ಬಂಡವಾಳ ಪ್ರಶ್ನೆಯನ್ನೇ ಎತ್ತಿಕೊಳ್ಳೋಣ. ಬಹು ಪ್ರಚಲಿತ ಮತ್ತು ಜನಸಾಮಾನ್ಯರು ಕೂಡ ಅರ್ಥಮಾಡಿಕೊಳ್ಳುವ ಬಂಡವಾಳದ ಕಲ್ಪನೆಯೆಂದರೆ ವ್ಯಾಪಾರದಲ್ಲಿ ಹೂಡಿದ ಅಥವಾ ವಿನಿಯೋಗಿಸಿದ ಹಣ. ಆದರೆ ಬಹುತೇಕ ಸಂದರ್ಭದಲ್ಲಿ ವ್ಯಾಪಾರವೆಂಬ ಪದವನ್ನು ನಾವು ಕೇವಲ ವಾಣಿಜ್ಯ ಚಟುವಟಿಕೆಗಳಿಗೆ ಸೀಮಿತಗೊಳಿಸುತ್ತೇವೆ, ಇದು ಸರಿಯಲ್ಲ. ಇಂಗ್ಲೀಷಿನ ಬಿಸಿನೆಸ್ ಎಂಬ ಪದದ ಕನ್ನಡ ಅರ್ಥ ವ್ಯಾಪಾರವೆಂದಾದರೆ ಇದು ವಾಣಿಜ್ಯ ಮತ್ತು ಸರಕು/ಸೇವೆಗಳ ಉತ್ಪಾದನಾ ಚಟುವಟಿಕೆಗಳನ್ನು ಕೂಡ ಒಳಗೊಂಡಿದೆ. ಈ ದೃಷ್ಟಿಯಿಂದ ಬಂಡವಾಳವನ್ನು ಎರಡು ವಿಧಗಳಾಗಿ ವಿಂಗಡಿಸಬಹುದು. ವ್ಯಾಪಾರಿ ಬಂಡವಾಳ ಮತ್ತು ಕೈಗಾರಿಕಾ ಬಂಡವಾಳ. ಸದ್ಯಕ್ಕೆ ವಾಣಿಜ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ಬಂಡವಾಳ ವನ್ನು ವ್ಯಾಪಾರಿ ಬಂಡವಾಳವೆಂದು ಮತ್ತು ಸರಕು/ಸೇವೆಗಳ ಉತ್ಪಾದನೆಯಲ್ಲಿ ವಿನಿಯೋಜಿಸಿದ ಬಂಡವಾಳವನ್ನು ಕೈಗಾರಿಕಾ ಬಂಡವಾಳವೆಂದು ಗುರುತಿಸಿಕೊಳ್ಳಬಹುದು. ಈ ಎರಡರ ಅಂದರೆ ವ್ಯಾಪಾರಿ ಮತ್ತು ಕೈಗಾರಿಕಾ ಬಂಡವಾಳದ ನಡುವಿನ ವ್ಯತ್ಯಾಸವನ್ನು ಅರ್ಥಮಾಡಿಕೊಳ್ಳಬೇಕಾದರೆ ವ್ಯಾಪಾರಿ ಬಂಡವಾಳ ಕೈಗಾರಿಕಾ ಬಂಡವಾಳವಾಗಿ ಪರಿವರ್ತಿತ ಗೊಂಡ ಚಾರಿತ್ರಿಕ ಸಾಮಾಜಿಕ ಹಾಗೂ ಆರ್ಥಿಕ ಸಂದರ್ಭವನ್ನು ಅರ್ಥಮಾಡಿಕೊಳ್ಳ ಬೇಕಾಗುತ್ತದೆ.

ಮನುಷ್ಯ ಮನುಷ್ಯರ ಮಧ್ಯೆ ಕೊಟ್ಟು ಕೊಂಡುಕೊಳ್ಳುವ ವ್ಯವಹಾರ ಶತಮಾನಗಳಿಂದ ಇದೆ. ಹಣದ ಬಳಕೆಯಾಗುವ ಮುನ್ನ ಒಂದು ವಸ್ತುವನ್ನು ಮತ್ತೊಂದು ವಸ್ತುವಿನೊಂದಿಗೆ ವಿನಿಮಯ ಮಾಡಿಕೊಳ್ಳುವ ಪದ್ಧತಿ ಇತ್ತು ಮತ್ತು ಅದನ್ನು ವಸ್ತು ವಿನಿಮಯ ಪದ್ಧತಿ ಯೆಂದು(ಬಾರ್‌ಟರ್) ಕರೆಯುತ್ತಿದ್ದರು. ಈ ಪದ್ಧತಿಯಲ್ಲಿ ಹಲವಾರು ನ್ಯೂನತೆಗಳಿದ್ದವು. ಉದಾಹರಣೆಗೆ, ವಿನಿಮಯ ಸಾಧ್ಯವಾಗಬೇಕಾದರೆ ಎರಡೂ ಪಕ್ಷಗಳ ಬೇಡಿಕೆಗಳಲ್ಲಿ ಸಹಮತ ಅಗತ್ಯವಿತ್ತು. ಅಂದರೆ ಮಾರುವವನ ಸರಕು ವಿಕ್ರಯಿಸುವವನಿಗೆ ಮತ್ತು ವಿಕ್ರಯಿಸುವವನ ಸರಕು ಮಾರುವವನ ಬೇಡಿಕೆಗೆ ಪೂರಕವಾಗಿರಬೇಕಿತ್ತು. ಆದರೆ ಈ ರೀತಿಯ ಬೇಡಿಕೆಯಲ್ಲಿನ ಸಹಮತ ಅದೆಷ್ಟೋ ಸಂದರ್ಭಗಳಲ್ಲಿ ಸಾಧ್ಯವಾಗುತ್ತಿರಲಿಲ್ಲ. ಇದನ್ನು ಹೋಗಲಾಡಿಸುವ ನಿಟ್ಟಿನಲ್ಲಿ ಹಣದ ಬಳಕೆ ಆರಂಭವಾಯಿತು. ಆರಂಭದ ದಿನಗಳಲ್ಲಿ ಹಣವಾಗಿ ಅಥವಾ ವಿನಿಮಯದ ಮಾಧ್ಯಮವಾಗಿ ಕೆಲಸ ಮಾಡುಲು ಮರದ ತೊಗಟೆ, ಚರ್ಮ, ತಾಮ್ರ, ಹಿತ್ತಾಳೆ ಮುಂತಾದ ಪದಾರ್ಥಗಳನ್ನು ಬಳಸಲಾಗುತ್ತಿತ್ತು. ಕಾಲಕ್ರಮೇಣ ನಾವು ಇಂದು ಬಳಸುತ್ತಿರುವ ಪೇಪರ್ ನೋಟುಗಳು ವಿನಿಮಯದ ಮಾಧ್ಯಮವಾಗಿ ಬಂದವು. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಹಣದ ಬಳಕೆ ವ್ಯಾಪಾರವನ್ನು ಅಂದರೆ ಸರಕಿನ ವಿನಿಮಯವನ್ನು ವೃದ್ದಿಗೊಳಿಸಿತೆಂಬ ವಿಚಾರ. ಇದರ ಜೊತೆಗೆ ಶ್ರಮದ ವಿಭಜನೆ, ವರ್ಗೀಕೃತ ಸಮಾಜ, ತಕ್ಕಮಟ್ಟಿಗೆ ಸಾಧ್ಯವಾದ ಸಾರಿಗೆ ಮತ್ತು ಸಂಪರ್ಕ, ಇವೇ ಮುಂತಾದ ಅಂಶಗಳು ವ್ಯಾಪಾರವನ್ನು ವೃದ್ದಿಯಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಗ್ರಾಮ ಅಥವಾ ಪೇಟೆಗಳಿಗೆ ಸೀಮಿತವಾಗಿದ್ದ ಸರಕು ವಿನಿಮಯ, ಕಾಲ ಕ್ರಮೇಣ ಸ್ಥಳೀಯ ಕ್ಷೇತ್ರವನ್ನು ಮೀರಿ ಬೆಳೆಯಿತು. ದಿಕ್ಸೂಚಿಯ ಆವಿಷ್ಕಾರದೊಂದಿಗೆ ಸಮುದ್ರ ಪ್ರಯಾಣ ದೇಶ ದೇಶಗಳ ನಡುವಿನ ಕೊಂಡಿಯಾಯಿತು ಮತ್ತು ಈ ಕೊಂಡಿ ವ್ಯಾಪಾರ ಅಂತರಾಷ್ಟ್ರೀಯಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿತ್ತು. ಚರಿತ್ರೆಯ ಈ ಸಂದರ್ಭದಲ್ಲಿ ನಡೆಯುತ್ತಿದ್ದ ವ್ಯಾಪಾರವನ್ನು ಕೇವಲ ಸರಕು ಮತ್ತು ಹಣದ ವಿನಿಮಯಕ್ಕೆ ಸೀಮಿತಗೊಳಿಸಲು ಸಾಧ್ಯವಿಲ್ಲ. ಅಂದು ವ್ಯಾಪಾರದ ಹಿಂದೆ ವೈಯಕ್ತಿಕ ಬೇಕು ಬೇಡಗಳ ಜೊತೆಗೆ ಬಲತ್ಕಾರದ ಅಂಶವು ಧಾರಾಳವಾಗಿತ್ತು. ಅದರಲ್ಲೂ ಅಂತಾರಾಷ್ಟ್ರೀಯ ವ್ಯಾಪಾರಗಳಲ್ಲಿ ರಾಜಕೀಯ ಹೇರುವಿಕೆಯ ಅಂಶ ಗಣನೀಯವಾಗಿತ್ತು. ಉದಾಹರಣೆಗೆ ಅಂದಿನ ಕಾಲದಲ್ಲಿ ನಮ್ಮಲ್ಲಿ ಮತ್ತು ಪ್ರಪಂಚದ ಇತರ ದೇಶಗಳಲ್ಲಿ ಕಾರುಬಾರು ಮಾಡಿದ ಬ್ರಿಟನ್ನಿನ ಈಸ್ಟ್ ಇಂಡಿಯಾ ಕಂಪನಿ, ಅಮೆರಿಕಾದಲ್ಲಿ ದಿ ಅಡಸನ್ ಬೇ ಕಂಪನಿ, ಆಫ್ರಿಕಾದಲ್ಲಿ ದಿ ರಾಯಲ್ ಆಫ್ರಿಕನ್ ಕಂಪನಿ ಮತ್ತು ಇತರ ಹಲವಾರು ತೋಟಗಾರಿಕೆ ಮತ್ತು ಗಣಿಗಾರಿಕೆಗಳಲ್ಲಿ ತೊಡಗಿಸಿಕೊಂಡ ಕಂಪನಿಗಳು ವ್ಯಾಪಾರಿ ಬಂಡವಾಳದ ಅಂತರ್‌ರಾಷ್ಟ್ರೀಯ ರೂಪಗಳೇ ಆಗಿದ್ದವು. ಆದಾಗ್ಯೂ ಅವುಗಳ ಅಸ್ತಿತ್ವಕ್ಕೆ ಬಹುತೇಕ ಸಂದರ್ಭಗಳಲ್ಲಿ ವಸಾಹತುಶಾಹಿ ಸರಕಾರದ ಅಸ್ತಿತ್ವ ಅಡಿಪಾಯವಾಗಿತ್ತು. ವಸಾಹತುಶಾಹಿ ಸರಕಾರ ಪತನದೊಂದಿಗೆ ಈ ಬೃಹತ್ ಕಂಪನಿಗಳು ಕೂಡ ತಮ್ಮ ಅಸ್ತಿತ್ವವನ್ನು ಕಳಕೊಂಡವು. ಒಂದು ರೀತಿಯಲ್ಲಿ ಇವುಗಳನ್ನು ಡಿನೋಸರಸ್‌ಗಳಿಗೆ ಹೋಲಿಸಬಹುದು. ಗಾತ್ರದಲ್ಲಿ ಹಿರಿದಾಗಿದ್ದು ಬುದ್ಧಿಯಲ್ಲಿ ಕಿರಿದಾಗಿದ್ದ ಈ ಕಂಪನಿಗಳು ಪೈಪೋಟಿಯಿಲ್ಲದ ಮತ್ತು ಸರಕಾರದ ಸಹಕಾರದೊಂದಿಗೆ ವ್ಯಾಪಾರದ ನೀತಿ ನಿಯಮದ ಪರಿಚಯವಿಲ್ಲದ ಜನರೊಂದಿಗೆ ವ್ಯವಹರಿಸುವುದರ ಮೂಲಕ ಬಂಡವಾಳ ಶೇಖರಣೆಯನ್ನು ಸಾಧ್ಯವಾಗಿಸಿವೆ. ಇಂತಹ ಬಂಡವಾಳವನ್ನು ಮಾರ್ಕ್ಸ್, ವ್ಯಾಪಾರಿ ಬಂಡವಾಳ ಎಂದು ಗುರುತಿಸಿದ್ದಾನೆ. ಈ ಬಂಡವಾಳ ಉತ್ಪಾದಕರ ಮತ್ತು ಗ್ರಾಹಕರ ಕೊಂಡಿಯಾಗಿದ್ದುಕೊಂಡು ಎರಡೂ ಕಡೆಯವರ ಮಿಗತೆ ಮೌಲ್ಯದಲ್ಲಿ ಪಾಲು ಪಡೆಯುವುದರ ಮೂಲಕ ಬಂಡವಾಳದ ಸಂಗ್ರಹಕ್ಕೆ ಎಡೆಮಾಡಿಕೊಡುತ್ತದೆ. ಈ ರೀತಿಯ ಬಂಡವಾಳದ ಸಂಗ್ರಹ ಉತ್ಪಾದನಾ ಕ್ರಮದಲ್ಲಿ ಮೂಲಭೂತ ಬದಲಾವಣೆ ಯಿಲ್ಲದೆಯೂ ಸಾಧ್ಯವಾಗುತ್ತದೆ.

ಇಂದು ಪ್ರಚಲಿತದಲ್ಲಿರುವ ಕೈಗಾರಿಕಾ ಬಂಡವಾಳಕ್ಕೂ ಈ ವ್ಯಾಪಾರಿ ಬಂಡವಾಳಕ್ಕೂ ಯಾವುದೇ ಸಂಬಂಧವಿರಲಿಲ್ಲ ಎನ್ನುವಂತಿಲ್ಲ. ಅಂತಾರಾಷ್ಟ್ರೀಯ ವ್ಯಾಪಾರಿ ಸಂಸ್ಥೆಗಳು ಮತ್ತು ಅವುಗಳು ಶೇಖರಿಸಿದ ಬಂಡವಾಳ ಕೈಗಾರಿಕಾ ಬಂಡವಾಳ ರೂಪುಗೊಳ್ಳುವಲ್ಲಿ ಮಹತ್ವದ ಪಾತ್ರವಹಿಸಿದೆ. ಇವುಗಳು ಕೈಗಾರಿಕಾ ಬಂಡವಾಳದ ಹುಟ್ಟಿಗೆ ಅಗತ್ಯವಾದ ಮೂಲಧನವನ್ನು ಶೇಖರಿಸಿಕೊಟ್ಟಿವೆ. ಈ ಮೂಲಧನ ಶೇಖರಣಾ ಪ್ರಕ್ರಿಯೆಯನ್ನು ಎಡಪಂಥೀಯರು ಅದರಲ್ಲೂ ಏ.ಜಿ.ಫ್ರಾಂಕ್ ತನ್ನ **ಡಿಪೆಂಡೆಂಟ್ ಅಕ್ಯೂಮಿಲೇಷನ್** ಪುಸ್ತಕದಲ್ಲಿ ಪ್ರಿಮಿಟಿವ್ ಆಕ್ಯುಮಿಲೇಷನ್ ಎಂದು ಕರೆದಿದ್ದಾನೆ. ಈ ಮೂಲಧನ ಸಂಗ್ರಹ ಕೇವಲ ವ್ಯಾಪಾರದಿಂದ ನಡೆದುದಲ್ಲ, ಬದಲಿಗೆ ವ್ಯಾಪಾರದ ಹೆಸರಿನಲ್ಲಿ ನಡೆದ ಕೊಲೆ, ಸುಲಿಗೆ, ದರೋಡೆ, ವಂಚನೆ, ಮುಂತಾದವುಗಳ ಪಾತ್ರ ಕೂಡ ಇದರಲ್ಲಿ ಧಾರಾಳವಾಗಿತ್ತೆಂಬುದನ್ನು ಸೂಚಿಸಲು ಪ್ರಿಮಿಟಿವ್ ಅಕ್ಯೂಮಿಲೇಷನ್ ಎಂಬ ಪದ ಬಳಕೆಯಾಗಿದೆ. ಕೈಗಾರಿಕಾ ಬಂಡವಾಳ ರೂಪುಗೊಳ್ಳುವಲ್ಲಿ ಈ ಮೂಲಧನದ ಪಾತ್ರದ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಪಶ್ಚಿಮದ ಅದರಲ್ಲೂ ಸ್ವಯಂ ತಂತ್ರವಾದಿ ನಿಲುವನ್ನು ಪ್ರತಿಪಾದಿಸುವವರು ಇದನ್ನು

ವಿರೋಧಿಸಿದರೆ, ಎಡಪಂಥಿಯರು ಮತ್ತು ತೃತೀಯ ಜಗತ್ತಿನ ಚರಿತ್ರೆಕಾರರು ಇದನ್ನು ಪ್ರತಿಪಾದಿಸುತ್ತಾರೆ. ಆದುದರಿಂದಲೇ ವ್ಯಾಪಾರಿ ಬಂಡವಾಳ ಹೊಸ ಹೊಸ ತಾಂತ್ರಿಕ ಆವಿಷ್ಕಾರಕ್ಕೆ ಎಡೆಮಾಡಿಕೊಟ್ಟಿತು ಮತ್ತು ಈ ತಾಂತ್ರಿಕ ಆವಿಷ್ಕಾರಗಳು ಕೈಗಾರಿಕಾ ಕ್ರಾಂತಿಯನ್ನು ಸಾಧ್ಯವಾಗಿಸಿದವು ಎನ್ನುವ ವಿವರಣೆ ಇದೆ. ಕೈಗಾರಿಕಾ ಕ್ರಾಂತಿ ಈ ಕ್ರಮದಿಂದಲೇ ಆಯಿತೆ ಅಥವಾ ಇತರ ಕಾರಣದಿಂದ ಆಯಿತೇ ಎನ್ನುವ ವಿಚಾರವನ್ನು ಮುಂದೆ ಚರ್ಚಿಸಲಾಗಿದೆ. ಕೈಗಾರಿಕಾ ಕ್ರಾಂತಿಯ ಸಂದರ್ಭದಲ್ಲಿ ಹುಟ್ಟಿಕೊಂಡ ಉತ್ಪಾದನಾ ಘಟಕಗಳೇ ಕೈಗಾರಿಕಾ ಬಂಡವಾಳದ ಕಲ್ಪನೆಗೆ ಅವಕಾಶ ಮಾಡಿಕೊಟ್ಟಿವೆ. ಇದು ಹೇಗೆ ಸಾಧ್ಯವಾಯಿತು ಅಥವಾ ವ್ಯಾಪಾರಿ ಬಂಡವಾಳ ಕ್ಕಿಲ್ಲದ ಹೆಚ್ಚುಗಾರಿಕೆ ಕೈಗಾರಿಕಾ ಬಂಡವಾಳಕ್ಕೆ ಯಾಕೆ ಇದೆ ಎಂದರೆ ಇಲ್ಲಿ ಬಂಡವಾಳ ಕೇವಲ ಚಲನೆ ಅಥವಾ ಸಂಗ್ರಹ ರೂಪದಲ್ಲಿ ಉಳಿಯುವುದಿಲ್ಲ. ಬದಲಿಗೆ ಉತ್ಪಾದನಾ ಮೂಲಗಳ ಸ್ವಾಧೀನತೆಯೊಂದಿಗೆ ಗುಣಾತ್ಮಕವಾಗಿ ಬೇರೆಯದ್ದೇ ಆದ ಒಂದು ಸಮಾಜದ ರೂಪುಗೊಳ್ಳುವಿಕೆಯ ಮೇಲೆ ಪ್ರಭಾವ ಬೀರುತ್ತದೆ. ಇಂತಹ ವಿವರಣೆ ಕೊಡುವಾಗ ಅದು ಒಂದು ಹಂತದಲ್ಲಿ ತುಂಬಾ ಸರಳೀಕೃತ ನಿರೂಪಣೆಗಳೇ ಆಗಿರಬಹುದು. ಯಾಕೆಂದರೆ ಇಲ್ಲಿ ಕೈಗಾರಿಕಾ ಬಂಡವಾಳ ಸಾಧ್ಯವಾಗಿಸಿದ ಹೊಸ ಸಮಾಜ ಅದು ಕೇವಲ ತಂತ್ರಜ್ಞಾನದ ಫಲಶ್ರುತಿಯಲ್ಲ. ಇಲ್ಲಿ ಇತರ ಹಲವಾರು ವಿಚಾರಗಳು ಮುಖ್ಯವಾಗಿ ಉತ್ಪಾದನಾ ಪರಿಕರಗಳ ಸ್ವಾಧೀನತೆ ಇಲ್ಲದ ಶ್ರಮಿಕ ವರ್ಗ, ಮಿಗತೆ ಮೌಲ್ಯವನ್ನು ಸ್ವಂತಕ್ಕೆ ಬಳಸಲು ಅನುಕೂಲವಾಗುವ ಮಾರುಕಟ್ಟೆಯ ವ್ಯವಸ್ಥೆ, ಮಿಗತೆ ಮೌಲ್ಯದ ಶೇಖರಣೆ ಮತ್ತೆ ಪುನರ್ ವಿನಿಯೋಜನೆ ಮಾಡುವ ಉದ್ಯಮಿಗಳ ವರ್ಗ ಇವೇ ಮುಂತಾದವುಗಳ ಪಾತ್ರ ಕೂಡ ಮುಖ್ಯವಾಗುತ್ತವೆ.

ಎರಡನೆಯದಾಗಿ ಜಾಗತೀಕರಣದ ಪ್ರಶ್ನೆ ಯಾಕೆ ಬಂಡವಾಳದ ಜಾಗತೀಕರಣಕ್ಕೆ ಸೀಮಿತಗೊಳ್ಳಬೇಕು ಎನ್ನುವುದು. ಒಂದು ವಿಧದಲ್ಲಿ ಜಾಗತೀಕರಣ ಯಾವುದೇ ವಿಚಾರ ದಲ್ಲಿ ಕಂಡುಬರಬಹುದಾದ ಅಂಶ. ಈ ದೃಷ್ಟಿಯಿಂದ ಅದನ್ನು ಬಂಡವಾಳದ ಜಾಗತೀಕರಣಕ್ಕೆ ಸೀಮಿತಗೊಳಿಸುವುದು ಸರಿಯಾಗಿರಲಿಕ್ಕಿಲ್ಲ. ಆದಾಗ್ಯೂ ಈಗ ಪ್ರಚಲಿತ ದಲ್ಲಿರುವ ಜಾಗತೀಕರಣದ ಹಿಂದೆ ಅಂತಾರಾಷ್ಟ್ರೀಯ ರಾಜಕೀಯ ಅಥವಾ ಸಾಂಸ್ಕೃತಿಕ ವಿಚಾರಗಳು ಕೇಂದ್ರಬಿಂದುಗಳಾಗಿರಲಿಲ್ಲ. ಅಂದರೆ ಆರ್ಥಿಕ ವಿಚಾರಗಳು ಈ ರೀತಿ ಅದರ ಪರಿಸರದಿಂದ ಬೇರ್ಪಟ್ಟು ಅದರಷ್ಟಕ್ಕೆ ಅದು ಪ್ರಕಟಗೊಳ್ಳುತ್ತದೆ ಎನ್ನುವುದು ಕೂಡ ನನ್ನ ವಿಚಾರವಲ್ಲ. ಇದನ್ನು ಇಂದು ಜಾಗತೀಕರಣದ ಪ್ರಶ್ನೆ ಚರ್ಚೆಯಾಗುವ ರೀತಿಯಿಂದ ಅರ್ಥಮಾಡಿಕೊಳ್ಳಬಹುದು. ಸರಕು ಮತ್ತು ಸೇವೆಗಳ ಅಂತರ್‌ರಾಷ್ಟ್ರೀಯ ವ್ಯಾಪಾರ, ಸಾರಿಗೆ ಮತ್ತು ಸಂಪರ್ಕ ಸಾಧನಗಳಿಂದಾಗಿ ಕಿರಿದಾಗುವ ಪ್ರಪಂಚ, ಎಲೆಕ್ಟ್ರಾನಿಕ್ ಮಾಧ್ಯಮಗಳಿಂದಾಗಿ ಮಾಹಿತಿ ಮತ್ತು ಮನೋರಂಜನೆಗಳು ಜಾಗತೀಕರಣಗೊಳ್ಳುವ ವಿಚಾರ ಇವೆಲ್ಲ ಒಟ್ಟಾಗಿಯೇ ಚರ್ಚೆಯಾಗುತ್ತಿವೆ. ಇವುಗಳಲ್ಲಿ ಯಾವುದರ ಪಾಲು ಎಷ್ಟು ಎಂಬುದು ಅಥವಾ ಯಾವುದನ್ನು ಯಾವುದು ನಿರ್ಧರಿಸುತ್ತವೆ ಎನ್ನುವ ವಿಚಾರ ಇಲ್ಲಿ ಪ್ರಸ್ತುತವಲ್ಲ. ಇವೆಲ್ಲವು ಬಂಡವಾಳದ ಅನಿಯಂತ್ರಿತ ಚಲನೆಯತ್ತ ಬೊಟ್ಟು ಮಾಡಿ ತೋರಿಸುತ್ತವೆ. ಭಾರತದ ಮಟ್ಟಿಗಂತು ಈ ಜಾಗತೀಕರಣದ ಪ್ರಶ್ನೆ ಹುಟ್ಟಿಕೊಂಡದ್ದು ಬಂಡವಾಳದ ಪ್ರಶ್ನೆಯೊಂದಿಗೆ. ೧೯೮೦ರ ನಂತರ ನಮ್ಮ ವಿದೇಶಿ ವಿನಿಮಯ ಕೊರತೆಯೊಂದಿಗೆ ಮತ್ತು ವಿದೇಶಿ ಸಾಲದ ಪ್ರಶ್ನೆಯೊಂದಿಗೆ ಜಾಗತೀಕರಣಕ್ಕೆ ಬಂಡವಾಳದ ಚಿತ್ರಣ ಇದೆ. ಇದರ ಜೊತೆಗೆ ನಾವು ಅನುಸರಿಸುತ್ತಿರುವ ಅಭಿವೃದ್ಧಿ ಮಾದರಿ ಬಂಡವಾಳ ವೃದ್ಧಿಯನ್ನು ಅಭಿವೃದ್ಧಿಗೆ ಸಮೀಕರಿಸಿದೆ. ಆರಂಭದ ದಿನಗಳಲ್ಲಿ ಆಮದು ಕಡಿಮೆಗೊಳಿಸಿ ರಫ್ತು ಹೆಚ್ಚಿಸುವ ನಮ್ಮ ಆರ್ಥಿಕ ನೀತಿಗಳು ಅಂದಿನ ಅಂತಾರಾಷ್ಟ್ರೀಯ ರಾಜಕೀಯ ಹಾಗೂ ಆರ್ಥಿಕ ಸ್ಥಿತಿಯಿಂದಾಗಿ (ಅದೇನೆಂದು ಮುಂದೆ ವಿಸ್ತಾರವಾಗಿ ವಿವರಿಸಲಾಗಿದೆ), ತಕ್ಕಮಟ್ಟಿನ ಸಾಧನೆ ಮಾಡಿವೆ. ಆದರೆ ಬರಬರುತ್ತ ಆಂತರಿಕ ಹಾಗು ಅಂತಾರಾಷ್ಟ್ರೀಯ ಆರ್ಥಿಕ ಕ್ಷೇತ್ರಗಳಲ್ಲಾದ ಏರುಪೇರುಗಳಿಂದ ಸ್ಥಳೀಯ ಮಾರುಕಟ್ಟೆಗಳನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಸೇರಿಸುವುದು ಅನಿವಾರ್ಯವಾಯಿತು. ಮಾರುಕಟ್ಟೆಯ ಜಾಗತೀಕರಣ ತಾತ್ವಿಕವಾಗಿ ಎಲ್ಲ ಉತ್ಪಾದನಾ ಮೂಲಗಳಿಗೂ ಸಂಬಂಧಿಸಿದ್ದರೂ ವಾಸ್ತವದಲ್ಲಿ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬಂದಿರುವುದು ಬಂಡವಾಳ, ಸರಕು ಮತ್ತು ಸೇವೆಗಳ ಮಾರುಕಟ್ಟೆ ಕುರಿತಂತೆ ಮಾತ್ರ. ಬಹುತೇಕ ಸಂದರ್ಭಗಳಲ್ಲಿ ಬಂಡವಾಳದ ಅಡ್ಡಿ ಆತಂಕವಿಲ್ಲದೆ ಚಲನೆಯೇ ಆರ್ಥಿಕ ನೀತಿಗಳಲ್ಲಿನ ಪರಿವರ್ತನೆಯ ಉದ್ದೇಶವಾಗಿರುವ ದೃಷ್ಟಿಯಿಂದ ಜಾಗತೀಕರಣವನ್ನು ಬಂಡವಾಳದ ಜಾಗತೀಕರಣಕ್ಕೆ ಸೀಮಿತಗೊಂಡಂತೆ ಚರ್ಚಿಸುವುದು ತಪ್ಪಾಗುವುದಿಲ್ಲ.

ಕೊನೆಯದಾಗಿ ಬಂಡವಾಳ ಈಗ ಹಬ್ಬುತ್ತಿದೆ ಎಂದಾದರೆ ಈ ಹಿಂದೆ ಬಂಡವಾಳ ಜಾಗತೀಕರಣಗೊಂಡಿರಲಿಲ್ಲವೆ ಎನ್ನುವ ಪ್ರಶ್ನೆ ಕೂಡ ಸಹಜವಾಗುತ್ತದೆ. ಬಂಡವಾಳದ ಕಲ್ಪನೆ ಮತ್ತು ವಿವಿಧ ರೂಪದ ಬಂಡವಾಳದ ಚರ್ಚೆಯಲ್ಲಿ ಯಾವ ರೀತಿಯಲ್ಲಿ ವ್ಯಾಪಾರಿ ಬಂಡವಾಳ

ಕೂಡ ಜಾಗತೀಕರಣಗೊಂಡಿತು ಎಂದು ವಿವರಿಸಲಾಗಿದೆ. ಆದಾಗ್ಯೂ ಈಗ ಜಾಗತೀಕರಣಕ್ಕೆ ಯಾಕೆ ಇಷ್ಟು ಅಬ್ಬರದ ಪ್ರಚಾರವಿದೆ ಎನ್ನುವುದು ಕೂಡ ಮುಖ್ಯ ವಾಗುತ್ತದೆ. ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ಜಾಗತೀಕರಣವನ್ನು ವಿಶೇಷಗೊಳಿಸುವ ಇತರ ಹಲವು ಪದಗಳನ್ನು ನಾವು ಗಮನಿಸಬೇಕಾಗಿದೆ. ವಿಶೇಷಣ ದೊಂದಿಗೆ ಕೇಳಿಬಂದ ಇತರ ಪದಗಳ ಕೆಲವು ಉದಾಹರಣೆ ಇಂತಿವೆ. 'ಹೊಸ ಅರ್ಥವ್ಯವಸ್ಥೆ' 'ಹೊಸ ಪ್ರಪಂಚ ವ್ಯವಸ್ಥೆ', 'ಚರಿತ್ರೆಯ ಕೊನೆ', 'ಶೀತಲ ಸಮರದ ಕೊನೆ' ಇವೇ ಮುಂತಾದವುಗಳು ಒಂದೇ ಚಾರಿತ್ರಿಕ ಬೆಳವಣಿಗೆಯನ್ನು ವಿವರಿಸುವ ಹಲವಾರು ಪದಗಳು. ಈ ಎಲ್ಲದರ ಅರ್ಥ ಹೆಚ್ಚು ಕಡಿಮೆ ಒಂದೇ - "ರಷ್ಯಾದ ಸಮಾಜವಾದಿ ಸರ್ಕಾರದ ಪತನದೊಂದಿಗೆ ಮಾರುಕಟ್ಟೆ ನಿಯಂತ್ರಿತ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ ಪ್ರಪಂಚದ ಹೊಸ ಅರ್ಥವ್ಯವಸ್ಥೆ ಆಗಿದೆ" ಎನ್ನುವುದೇ ಆಗಿದೆ. ಅಂದರೆ ಇದಕ್ಕೆ ಮುನ್ನ ರಷ್ಯಾ ತನ್ನ ಸರ್ಕಾರಿ ನಿಯಂತ್ರಿತ ಅಭಿವೃದ್ಧಿ ಮಾದರಿಯೊಂದನ್ನು ತೃತೀಯ ಜಗತ್ತಿಗೆ ನೀಡಿತ್ತು. ಆದರೆ ಅದು ಯಶಸ್ವಿಯಾಗಲಿಲ್ಲ. ಅಲ್ಲಿ ಬಂಡವಾಳ ಮುಕ್ತವಾಗಿರಲಿಲ್ಲ. ಸಮುದಾಯದ ಸಂಪನ್ಮೂಲ ವಿಲೇವಾರಿಯಲ್ಲಿ ಮಾರುಕಟ್ಟೆಯ ನಿಯಂತ್ರಣವಿರಲಿಲ್ಲ ಇವೇ ಮುಂತಾದ ಕಾರಣದಿಂದಾಗಿ ಅದು ಸೋತಿತು. ಅದಕ್ಕೆ ವಿರುದ್ಧವಾಗಿ ಮುಕ್ತಮಾರುಕಟ್ಟೆಯ ಮಾದರಿ ಇಂದು ಏಕಮೇವ ಆರ್ಥಿಕ ನೀತಿಯಾಗಿದೆ. ಈ ರೀತಿ ಹೇಳುವ ಮೂಲಕ ಬಂಡವಾಳದ ಆನಿಯಂತ್ರಿತ ಚಲನೆಗೆ ಇಂದು ಹಿಂದಿಗಿಂತ ಹೆಚ್ಚು ಅವಕಾಶ ಸಿಕ್ಕಿದೆ.

ಭಾಗ ೧

ಭಾಗ ಒಂದರಲ್ಲಿ ವ್ಯಾಪಾರಿ ಬಂಡವಾಳ ಕೈಗಾರಿಕಾ ಬಂಡವಾಳದ ಹುಟ್ಟಿಗೆ ಅನುಕೂಲವಾದ ಪರಿಸರ ನಿರ್ಮಿಸುವಲ್ಲಿ ಮಹತ್ತರವಾದ ಪಾತ್ರವಹಿಸಿದೆ ಎಂದು ವಿವರಿಸಲಾಗಿದೆ. ಇಲ್ಲಿ ಈ ವಿಚಾರವನ್ನು ಇನ್ನು ವಿಸ್ತಾರವಾಗಿ ಪರೀಕ್ಷಿಸಲಾಗಿದೆ. ಅಂದರೆ ವ್ಯಾಪಾರಿ ಬಂಡವಾಳದ ಜತೆಗೆ ಇತರ ಯಾವ ವಿಚಾರಗಳು ಊಳಿಗಮಾನ್ಯ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆಯ ಪರಿವರ್ತನೆಗೆ ಕಾರಣವಾಗಿವೆ ಮತ್ತು ಈ ಪರಿವರ್ತನೆ ಯಾವ ರೀತಿಯಲ್ಲಿ ವ್ಯಾಖ್ಯಾನಿಸಲ್ಪಟ್ಟಿದೆ ಎನ್ನುವುದಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಈ ಹಿಂದೆ ಸೂಚಿಸಿದಂತೆ ಕೈಗಾರಿಕಾ ಕ್ರಾಂತಿಯ ಒಂದು ವಿವರಣೆ ಆಧುನೀಕರಣ ಥಿಯರಿಗಳ ಅಡಿಪಾಯವಾಗಿದೆ; ಮತ್ತು ಅಧುನೀಕರಣ ಥಿಯರಿಗಳು ಬಂಡವಾಳದ ವೃದ್ಧಿಯನ್ನು ಅಭಿವೃದ್ಧಿಯೆಂದು ವ್ಯಾಖ್ಯಾನಿಸುವುದರ ಮೂಲಕ ಬಂಡವಾಳಶಾಹಿ ಉತ್ಪಾದನಾ ಕ್ರಮವನ್ನು ಮಹಾಯುದ್ಧದ ನಂತರ ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಅದರಲ್ಲೂ ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಅಳವಡಿಸಿವೆ. ಅಭಿವೃದ್ಧಿಯ ಹೆಸರಿನಲ್ಲಿ ಪ್ರಾರಂಭವಾದ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಅಳವಡಿಸುವಿಕೆ ಬಂಡವಾಳದ ಇಂದಿನ ಜಾಗತೀಕರಣಕ್ಕೆ ಅಗತ್ಯವಾದ ಪರಿಸರವನ್ನು ನಿರ್ಮಿಸಿದೆ. ಈ ಭಾಗದಲ್ಲಿ ಬಂಡವಾಳದ ವೃದ್ಧಿ ಯಾವ ರೀತಿಯಲ್ಲಿ ಅಭಿವೃದ್ಧಿಯೆಂದು ನಿರ್ವಚಿಸಲ್ಪಟ್ಟಿದೆ, ಬಂಡವಾಳದ ಬೆಳವಣಿಗೆ ಇಡೀ ಸಮಾಜದ ಬೆಳವಣಿಗೆಯೆಂಬ ಮೌಲ್ಯ ನಿರ್ಮಾಣ ಮಾಡಿಕೊಳ್ಳುವುದು ಸರಕಾರದ ನಿಯಂತ್ರಣದ ಮುಕ್ತತೆಯ ಜತೆಜತೆಗೆ ಸರಕಾರ ಯಾವ ರೀತಿಯಲ್ಲಿ ಬಂಡವಾಳದ ವೃದ್ಧಿಗೆ ಸಹಕಾರಿಯಾಗಬೇಕಾಗುತ್ತದೆ, ಈ ಪ್ರಕ್ರಿಯೆಯಲ್ಲಿ ಅಂತರ್‌ರಾಷ್ಟ್ರೀಯ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗತಿಗಳು ಪ್ರತಿ ದೇಶದ ಆಂತರಿಕ ಆರ್ಥಿಕ ನೀತಿಗಳ ನಿರ್ಧಾರದಲ್ಲಿ ಯಾವ ರೀತಿಯ ಪ್ರಭಾವ ಬೀರುತ್ತವೆ. ಇವೇ ಮುಂತಾದ ವಿಚಾರಗಳನ್ನು ಚರ್ಚಿಸಲಾಗಿದೆ.

ಇಲ್ಲಿನ ವಿವರಣೆಯನ್ನು ಕೈಗಾರಿಕಾ ಕ್ರಾಂತಿಯ ವಿವರಣೆಯೊಂದಿಗೆ ಪ್ರಾರಂಭಿಸಲಾಗಿದೆ. ಕ್ರಾಂತಿಯ ಕಾರಣಗಳು ಮತ್ತು ಪರಿಣಾಮಗಳನ್ನು ವಿವರಿಸುವ ಮೂಲಕ ಪ್ರಚಲಿತದಲ್ಲಿರುವ ಅಭಿವೃದ್ಧಿಯ ವ್ಯಾಖ್ಯಾನಗಳ ಮೂಲರೂಪವನ್ನು ಮತ್ತು ಅದು ಹುಟ್ಟುಹಾಕಬಹುದಾದ ಸಮಾಜದ ಗುಣಲಕ್ಷಣಗಳ ವಿವರಣೆಯನ್ನು ಕಂಡುಕೊಳ್ಳಬಹುದು. ಕೈಗಾರಿಕಾ ಕ್ರಾಂತಿ ಹಲವಾರು ರೀತಿಗಳಲ್ಲಿ ವಿವರಿಸಲ್ಪಟ್ಟಿದೆ. ಅವುಗಳೆಲ್ಲವನ್ನು ವಿಸ್ತಾರವಾಗಿ ಪರೀಕ್ಷಿಸುವುದು ಈ ಕಿರುಲೇಖನದ ವ್ಯಾಪ್ತಿಯೊಳಗೆ ಸಾಧ್ಯವಾಗದ ಕೆಲಸ, ಆದುದರಿಂದ ಎಲ್ಲಾ ರೀತಿಯ ವಿವರಣೆಗಳನ್ನು ತಕ್ಕಮಟ್ಟಿಗೆ ಒಳಗೊಳ್ಳಬಹುದಾದ ಎರಡು ಆಲೋಚನಾ ವಿಧಾನಗಳನ್ನು ಗಮನದಲ್ಲಿಟ್ಟುಕೊಂಡು ಈ ವಿವರಣೆಯನ್ನು ಕೊಡಲು ಪ್ರಯತ್ನಿಸಲಾಗಿದೆ. ಈ ವಿವರಣೆ ಗಳನ್ನು ಕೊಡುವ ಮುನ್ನ ಕೆಲವೊಂದು ವಿಚಾರದತ್ತ ಓದುಗರ ಗಮನ ಸೆಳೆಯುವುದು ಅಗತ್ಯವೆಂದು ತೋರುತ್ತದೆ.

ಒಂದನೆಯದಾಗಿ ಈ ಮುಂದೆ ವಿವರಿಸಲಿರುವ ಪರಿವರ್ತನೆಗಳು ತ್ವರಿತಗತಿಯಲ್ಲಿ ಅಥವಾ ಒಂದು ವ್ಯವಸ್ಥಿತ ರೂಪದಲ್ಲಿ ಆಗಿರುವುದಿಲ್ಲ. ಅದೇ ರೀತಿಯಲ್ಲಿ ಒಂದು ವ್ಯವಸ್ಥೆ ಮತ್ತೊಂದು ವ್ಯವಸ್ಥೆಗೆ ಪರಿವರ್ತನೆಗೊಳ್ಳುವ ಪ್ರಕ್ರಿಯೆಯ ಕಾರಣವನ್ನು ಯಾವುದೋ ಒಂದು ಅಂಶಕ್ಕೆ ಸೀಮಿತಗೊಳಿಸುವುದು, ಪರಿವರ್ತನೆಯನ್ನು ಅರ್ಥೈಸಿ ಕೊಳ್ಳುವಲ್ಲಿ ಸಹಾಯಕವಾಗುವುದಿಲ್ಲ. ಎರಡನೆಯದಾಗಿ ಪರಿವರ್ತನೆ ಒಂದು ನಿರ್ದಿಷ್ಟ ಹಂತದಲ್ಲಿ ಹುಟ್ಟಿ ಮತ್ತೊಂದು ನಿರ್ದಿಷ್ಟ ಹಂತದಲ್ಲಿ ಮುಕ್ತಾಯಗೊಂಡಿದೆ ಎನ್ನುವುದು ಕೂಡ ಹಾಸ್ಯಾಸ್ಪದವಾಗುತ್ತದೆ. ಆರಂಭದಲ್ಲಿ ಎರಡೂ ವ್ಯವಸ್ಥೆಯ ಲಕ್ಷಣಗಳು ಕಂಡು ಬಂದು ಕಾಲಕ್ರಮೇಣ ಹೊಸ ವ್ಯವಸ್ಥೆಯ ಲಕ್ಷಣಗಳು ಸ್ಫುಟವಾಗಿ ಗೋಚರಿಸಬಹುದು. ಇದರ ಅರ್ಥ ಹಿಂದಿನ ವ್ಯವಸ್ಥೆಯ ಎಲ್ಲಾ ಮೌಲ್ಯಗಳು ಸಂಪೂರ್ಣ ನಾಶಹೊಂದಿವೆ ಎಂದಲ್ಲ. ಕೆಲವೊಂದು ಬಾರಿ ಹಿಂದಿನ ವ್ಯವಸ್ಥೆಯ ಹಲವಾರು ಲಕ್ಷಣಗಳು ಬೇರೆ ರೂಪದಲ್ಲಿ ಕಂಡುಬರಬಹುದು. ಈ ಹಿನ್ನೆಲೆಯಲ್ಲಿ ನಾವು ಊಳಿಗಮಾನ್ಯ ವ್ಯವಸ್ಥೆಯಿಂದ ಉಗಮಗೊಂಡ ಬಂಡವಾಳಶಾಹಿ ವ್ಯವಸ್ಥೆಯನ್ನು ಅರ್ಥೈಸಿಕೊಳ್ಳಬೇಕಾಗುತ್ತದೆ.

ಊಳಿಗಮಾನ್ಯ ವ್ಯವಸ್ಥೆಯ ಅವನತಿಗೆ ಮುಖ್ಯ ಕಾರಣವನ್ನು ಗುರುತಿಸುವ ವಿಚಾರದಲ್ಲಿ ಬಹು ದೊಡ್ಡ ಚರ್ಚೆ ನಡೆದಿದೆ ಮತ್ತು ಇದು ಹಲವಾರು ಪ್ರಮುಖ ವಿಚಾರ ಧಾರೆಗಳ ಹುಟ್ಟಿಗೆ ಕಾರಣವಾಗಿದೆ. ಈ ವ್ಯವಸ್ಥೆಯ ಅವನತಿಯಲ್ಲಿ ವ್ಯಾಪಾರದ ಪಾತ್ರ ಕುರಿತು ಎಡಪಂಥೀಯರಲ್ಲಿ ವಿಭಿನ್ನ ಧೋರಣೆಗಳಿವೆ. ಕಟ್ಟಾ ಮಾರ್ಕ್ಸ್‌ವಾದಿಗಳೆಂದು ಗುರುತಿಸಬಹುದಾದ ಕಾರ್ಲ್‌ಪೋಲಾಯಿನಿಯಿಂದ ಹಿಡಿದು ಮೌರಿಸ್ ಡಾಬ್ ವರೆಗೆ ಊಳಿಗಮಾನ್ಯ ವ್ಯವಸ್ಥೆಯಲ್ಲಿ ವ್ಯಾಪಾರದ ಪಾತ್ರವನ್ನು ಅಲ್ಲಗಳೆಯುವುದಿಲ್ಲ. ಆದರೆ ಅದೇ ಪ್ರಮುಖ ಪಾತ್ರವಹಿಸಿದೆ ಎಂಬ ವಾದವನ್ನು ಅವರು ಬಲವಾಗಿ ವಿರೋಧಿಸುತ್ತಾರೆ. ಯಾಕೆಂದರೆ ವ್ಯಾಪಾರ ಯುರೋಪಿನ ಹಲವಾರು ದೇಶಗಳಲ್ಲಿ ಪಶ್ಚಿಮ ಯುರೋಪಿನಲ್ಲಿ ಇದ್ದುದಕ್ಕಿಂತ ಬಲವಾಗಿಯೇ ಇತ್ತು. ಆದರೆ ಈ ದೇಶಗಳಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಅವನತಿಯೂ ಆಗಲಿಲ್ಲ. ಬಂಡವಾಳಶಾಹಿ ವ್ಯವಸ್ಥೆ ಹುಟ್ಟಿಕೊಳ್ಳಲೂ ಇಲ್ಲ. ಜತೆಗೆ ವ್ಯಾಪಾರ ಹಣದ ಉಪಯೋಗವನ್ನು ಜಾರಿಗೆ ತಂದು ಊಳಿಗದ ಬದಲಿಗೆ ಹಣ ಸಂದಾಯ ಮಾಡುವುದರ ಮೂಲಕ ಆ ವ್ಯವಸ್ಥೆಯ ಬಂಧನವನ್ನು ಹಂತಹಂತವಾಗಿ ಸಡಿಲಗೊಳಿಸಿತು ಎನ್ನುವ ವಾದವನ್ನು ಕೂಡ ಅವರು ವಿರೋಧಿಸುತ್ತಾರೆ. ಅವರ ಪ್ರಕಾರ ಯಾವುದೇ ವ್ಯವಸ್ಥೆಯ ಪರಿವರ್ತನೆಯಲ್ಲಿ ಆ ವ್ಯವಸ್ಥೆಯ ಹೊರಗಿನ ಪ್ರಭಾವ ಇಲ್ಲವೆಂದಲ್ಲ. ಬದಲಿಗೆ ವ್ಯವಸ್ಥೆಯ ಒಳಗಿನ ವೈರುಧ್ಯಗಳೇ ಅತಿ ಮುಖ್ಯ ಪಾತ್ರ ವಹಿಸುತ್ತವೆ ಎನ್ನುವುದಾಗಿದೆ. ಊಳಿಗಮಾನ್ಯ ವ್ಯವಸ್ಥೆ ಅದರ ಪುನರುತ್ಪತ್ತಿಗೆ ಅವಶ್ಯವಾದ ಉತ್ಪಾದನೆ ಯನ್ನು ಪೂರೈಸಲು ವಿಫಲವಾಗುವುದರೊಂದಿಗೆ ಅವರ ಅವನತಿಗೆ ನಾಂದಿಯಾಯಿತು ಎನ್ನುವುದು ಅದರ ವಾದ. ಆದರೆ ಈ ವಿವರಣೆಯನ್ನು ಸ್ವಯಂ ತಂತ್ರವಾದಿಗಳೆಂದು ಗುರುತಿಸಬಹುದಾದ ಸಮಾಜ ಮತ್ತು ಅರ್ಥಶಾಸ್ತ್ರಜ್ಞರು ಒಪ್ಪುವುದಿಲ್ಲ. ಈ ಬಗ್ಗೆ ಅವರ ಪ್ರಮುಖ ಟೀಕೆಯೆಂದರೆ ಎಡಪಂಥೀಯರು ಇಡೀ ಪರಿವರ್ತನೆಯನ್ನು ಉತ್ಪಾದನಾ ಸಂಬಂಧಗಳ ಮೂಲಕ ನೋಡಲು ಪ್ರಯತ್ನಿಸುತ್ತಾರೆ ಎನ್ನಲಾಗಿದೆ. ಉತ್ಪಾದನಾ ಸಂಬಂಧಗಳ ಮೂಲಕ ಪರಿವರ್ತನೆಯನ್ನು ಅರ್ಥಮಾಡಿಕೊಳ್ಳುವುದು ತಪ್ಪಲ್ಲ. ಆದರೆ ಅದುವೇ ಸಂಪೂರ್ಣ ವಿವರಣೆ ಎನ್ನುವುದನ್ನು ಸ್ವಯಂ ತಂತ್ರವಾದಿಗಳು ವಿರೋಧಿಸುತ್ತಾರೆ. ಅವರ ಪ್ರಕಾರ ಈ ಪರಿವರ್ತನೆಯಲ್ಲಿ ಮೇಲ್‌ರಚನೆಗಳ ಪಾತ್ರ ಕೂಡ ಮಹತ್ವದ್ದಾಗಿದೆ. ಈ ರೀತಿಯ ವಾದವನ್ನು ಮುಂದೂಡುವವರಲ್ಲಿ ಮ್ಯಾಕ್ಸ್‌ವೇಬರ್ ಅಗ್ರಗಣ್ಯ. ಈತ ಇತರ ಹಲವಾರು ಬೆಳವಣಿಗೆಗಳ ಜೊತೆಗೆ ಧಾರ್ಮಿಕ ವಿಚಾರಗಳೂ ಕೂಡ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ ಉಗಮಕ್ಕೆ ಕಾರಣವಾಗಿದೆ ಎನ್ನುತ್ತಾನೆ. ಮುಖ್ಯವಾಗಿ ಲೆಕ್ಕ ಶಾಸ್ತ್ರದ ಬೆಳವಣಿಗೆ, ಶ್ರಮಿಕವರ್ಗದ ರೂಪುಗೊಳ್ಳುವಿಕೆ, ಅಡಳಿತ ಶಾಹಿಯ ಉಪಯೋಗ ಇವೆ ಮುಂತಾದ ವಿಚಾರಗಳು ಕೂಡ ಹೊಸ ವ್ಯವಸ್ಥೆಯ ರೂಪುಗೊಳ್ಳುವಿಕೆಯಲ್ಲಿ ನಿರ್ಣಾಯಕ ಪಾತ್ರವಹಿಸಿವೆ ಎಂಬುದು ಈತನ ಅಭಿಪ್ರಾಯ.

ಇಲ್ಲಿರುವ ಮುಖ್ಯ ಉದ್ದೇಶ ಈ ಪರಿವರ್ತನೆ ಮುಖ್ಯ ಕಾರಣವನ್ನು ಗುರುತಿಸುವುದಕ್ಕಿಂತ ಹೆಚ್ಚಾಗಿ ಪರಿವರ್ತನೆಗೊಂಡ ಸಮಾಜ ಮತ್ತು ಅದು ಯಾವ ರೀತಿಯಲ್ಲಿ ಅದರ ಹಿಂದಿನ ಊಳಿಗಮಾನ್ಯ ವ್ಯವಸ್ಥೆಗಿಂತ ಭಿನ್ನ ಎಂದು ಸಮಾಜಶಾಸ್ತ್ರಜ್ಞರು ತೋರಿಸಿದ್ದಾರೆ ಎನ್ನುವುದರ ಮೇಲೆ ಗಮನ ಹರಿಸುವುದು. ಮ್ಯಾಕ್ಸ್‌ವೇಬರ್ ಗುರುತಿಸಿದ ಮೇಲ್ ರಚನೆಯ ಅಂಶಗಳನ್ನು ಹಿಡಿದು ಪರಿವರ್ತಿತ ಸಮಾಜ ಗುಣಗಳನ್ನು ಅದರ ಹಿಂದಿನ ಸಮಾಜದ ಗುಣಗಳಿಗೆ ಹೋಲಿಸಿ ಪರಿವರ್ತನೆಯ ಥಿಯರಿಯನ್ನು ಪ್ರಾರಂಭಿಸಿದವರಲ್ಲಿ ಮುಖ್ಯವಾಗಿ ಟಾಲ್‌ಕಾಟ್ ಪಾರ್ಸನ್ ನನ್ನು ಗುರುತಿಸಬಹುದು. ಈತ ಆಧುನೀಕರಣ ಥಿಯರಿಗಳ ಪ್ರವರ್ತಕನೆಂದೇ ಗುರುತಿಸಲ್ಪಟ್ಟಿ ದ್ದಾನೆ. ಈತನ ಪ್ರಕಾರ ಸಾಂಪ್ರದಾಯಿಕ ಸಮಾಜವೊಂದು ಸಂಬಂಧ ಆಧಾರಿತ ವ್ಯವಹಾರ ಬದಲು ಒಪ್ಪಂದ ಆಧರಿತ ವ್ಯವಹಾರ, ವ್ಯವಹಾರದಲ್ಲಿ

ಹಣದ ಬಳಕೆ, ಅವಿಭಕ್ತ ಕುಟುಂಬ ಗಳು ಸಡಿಲಗೊಂಡು ವಿಭಕ್ತ ಕುಟುಂಬಗಳ ರಚನೆ, ಸಹಬಾಳ್ವೆಗಿಂತ ಸ್ಪರ್ಧಾತ್ಮಕ ಬದುಕಿಗೆ ಒತ್ತು, ಸಮುದಾಯಕ್ಕಿಂತ ವ್ಯಕ್ತಿ ಪ್ರಧಾನ ವ್ಯವಸ್ಥೆಗೆ ಪ್ರಾಧಾನ್ಯತೆ ಈ ಮುಂತಾದ ಪರಿವರ್ತನೆಗಳೊಂದಿಗೆ ಆಧುನಿಕಗೊಳ್ಳುತ್ತದೆ. ಈ ರೀತಿಯ ಪರಿವರ್ತನೆಗೆ ಮುಖ್ಯ ಕಾರಣವನ್ನು ಕೈಗಾರಿಕೀಕರಣದಲ್ಲಿ ಹುಡುಕುತ್ತಾನೆ. ಕೈಗಾರಿಕಾ ಕ್ರಾಂತಿಯಲ್ಲಿ ಉತ್ಪಾದನಾ ವಿಧಾನದಲ್ಲಿ ಆದ ಹಲವಾರು ತಾಂತ್ರಿಕ ಆವಿಷ್ಕಾರಗಳ ಪಾತ್ರ ಮಹತ್ತರವಾದುದು. ಈ ತಾಂತ್ರಿಕ ಆವಿಷ್ಕಾರಗಳು ಆರಂಭದಲ್ಲಿ ಉತ್ಪಾದನಾ ವಿಧಾನದಲ್ಲಿ ಬದಲಾವಣೆ ತಂದರೆ ಬದಲಾದ ಉತ್ಪಾದನಾ ವಿಧಾನಗಳು ಉತ್ಪಾದನಾ ಸಂಬಂಧದಲ್ಲಿ ಬದಲಾವಣೆ ತಂದವು. ಆದ್ದರಿಂದ ಬಂಡವಾಳಶಾಹಿಯ ಉತ್ಪಾದನಾ ವ್ಯವಸ್ಥೆಯನ್ನು ಅಳವಡಿಸುವುದರಿಂದ ಯಾವುದೇ ರೀತಿಯ ಸಮಾಜ ಕೂಡ ಆಧುನೀಕರಣಗೊಳ್ಳುತ್ತದೆ ಎನ್ನುವುದೇ ಆಧುನೀಕರಣ ಥಿಯರಿಯ ಮುಖ್ಯ ಅಂಶವಾಗಿದೆ. ಇದರ ಜೊತೆಗೆ ಆಧುನಿಕ ವ್ಯವಸ್ಥೆಯನ್ನು "ಮುಂದುವರಿದ" ಎಂದು ಇತರ ಅಂದರೆ ಬಂಡವಾಳಶಾಹಿ ಅಲ್ಲದ ಇತರ ವ್ಯವಸ್ಥೆಯನ್ನು ಸಾಂಪ್ರದಾಯಿಕ ಅಥವಾ "ಹಿಂದುಳಿದ" ಎಂದು ವರ್ಗೀಕರಿಸುವುದರೊಂದಿಗೆ ಈ ವಿವರಣೆಗೆ ಗುಣಾತ್ಮಕ ತೀರ್ಮಾನದ ಬಣ್ಣಕೊಡಲಾಯಿತು. ಈ ರೀತಿಯ ವಿಂಗಡಣೆ ಇತರರಿಗೆ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯನ್ನು ಒಂದು ಮಾದರಿಯಾಗಿ ತೋರಿಸಿದೆ ಮತ್ತು ಇತರರನ್ನು ಮುಂದುವರಿಯಬೇಕಾದರೆ ಈ ದಾರಿಯನ್ನು ತುಳಿಯಬೇಕೆಂದು ಪರೋಕ್ಷವಾಗಿ ಸೂಚಿಸಿದಂತಾಗುತ್ತದೆ.

ಬಂಡವಾಳದ ವೃದ್ಧಿಯನ್ನು ಅಭಿವೃದ್ಧಿ ಎಂದು ವ್ಯಾಖ್ಯಾನಿಸಿದೊಡನೆ ಪ್ರಪಂಚದ ಎಲ್ಲಾ ದೇಶಗಳು ಈ ಮಾದರಿಯನ್ನು ಅನುಸರಿಸಲು ಆರಂಭಿಸಲಿಲ್ಲ. ಯಾಕೆಂದರೆ ಇದೇ ಸಂದರ್ಭದಲ್ಲಿ ಮುಕ್ತ ಮಾರುಕಟ್ಟೆಯ ಆರ್ಥಿಕ ನೀತಿಗೆ ವಿರುದ್ಧವಾದ ಸರಕಾರ ನಿಯಂತ್ರಿತ ಅಭಿವೃದ್ಧಿಯ ಮಾದರಿ ಕೂಡ ಕಾರ್ಯರೂಪದಲ್ಲಿತ್ತು. ಆದಾಗ್ಯೂ ಬಂಡವಾಳದ ವೃದ್ಧಿಯೇ ಅಭಿವೃದ್ಧಿ ಹೇಗಾಯಿತು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ ಅಂದಿನ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗಳನ್ನು ತಿಳಿದುಕೊಳ್ಳಬೇಕಾಗಿದೆ. ಮುಂದಿನ ಪುಟಗಳಲ್ಲಿ ಆ ಸಂದರ್ಭದ ಅಂತರ್‌ರಾಷ್ಟ್ರೀಯ ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳನ್ನು ಗುರುತಿಸಲಾಗಿದೆ. ಮಾರುಕಟ್ಟೆ ಬಲಗಳು ಬೇಡಿಕೆ ಮತ್ತು ಪೂರೈಕೆ-ಮಾರುಕಟ್ಟೆ ತನ್ನಿಂದ ತಾನೇ ಸ್ಥಿರತೆಯನ್ನು ಕಾಪಾಡಿಕೊಳ್ಳುತ್ತದೆ ಎಂದು ಕ್ಲಾಸಿಕಲ್ ಅರ್ಥಶಾಸ್ತ್ರಜ್ಞರು ಬಲವಾಗಿ ನಂಬಿದ್ದರು. ಅವರ ಪ್ರಕಾರ ಮಾರುಕಟ್ಟೆಯ ವ್ಯವಹಾರದಲ್ಲಿ ಮೂಗು ತೂರಿಸುವುದು ಅನಗತ್ಯವಾಗಿತ್ತು. ಆದರೆ ಕೇನ್ಸ್ ಈ ವಾದವನ್ನು ಒಪ್ಪಿರಲಿಲ್ಲ. ಆತನ ಪ್ರಕಾರ ೧೮೩೦ ಮತ್ತು ೧೯೭೦ರ ನಡುವೆ ಕಾರ್ಮಿಕ ಸಂಘಟನೆಗಳು ಬಲಯುತಗೊಂಡು ಮಾರುಕಟ್ಟೆಯನ್ನು ನಿಷ್ಕ್ರಿಯಗೊಳಿಸಿವೆ. ಅಂದರೆ ಕಾರ್ಮಿಕರ ಸಂಬಳ ಬೇಡಿಕೆ ಮತ್ತು ಪೂರೈಕೆಗೆ ಅನುಗುಣವಾಗಿ ಆಗುವ ಬದಲು ಈ ಸಂಘಟನೆಗಳ ಪ್ರಭಾವದಿಂದ ನಿರ್ಧಾರವಾಗತೊಡಗಿತ್ತು ಮತ್ತು ಇದುವೇ ಮಹಾಯುದ್ಧದ ಸಂದರ್ಭದಲ್ಲಿ ಕಂಡು ಬಂದ ತೀವ್ರ ಕುಸಿತಕ್ಕೆ (ಗ್ರೇಟ್ ಡಿಪ್ರೆಷನ್) ಕಾರಣವಾಗಿದೆ ಎನ್ನುತ್ತಾನೆ. ತೀವ್ರ ಕುಸಿತ ಅಂದರೆ ಏನು ಎಂದು ವಿವರಿಸಿ ಇದಕ್ಕೆ ಸಂಬಂಧಿಸಿದ ಇತರ ವಿಚಾರಗಳನ್ನು ಮುಂದೆ ವಿವರಿಸಲಾಗಿದೆ. ಪ್ರಥಮ ಜಾಗತಿಕ ಯುದ್ಧದ ಬಳಿಕ ಕಾಣಿಸಿಕೊಂಡ ತೀವ್ರ ಮಾರುಕಟ್ಟೆ ಕುಸಿತವೆ ಗ್ರೇಟ್ ಡಿಪ್ರೆಷನ್. ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯಲ್ಲಿನ ಆಂತರಿಕ ವೈವಿಧ್ಯಗಳೇ ಇದರ ಮೂಲಕಾರಣವೆಂದು ಹೆನ್ರಿಮ್ಯಾಗ್ ಡೋಫ್‌ನ ಅಭಿಪ್ರಾಯ. ಈತನ ಪ್ರಕಾರ ಬಂಡವಾಳಶಾಹಿ ವ್ಯವಸ್ಥೆ ಬೇಡಿಕೆಯನ್ನು ಮೊದಲೇ ಊಹಿಸಿಕೊಂಡು ಉತ್ಪಾದನೆಯಲ್ಲಿ ತೊಡಗುತ್ತದೆ ಮತ್ತು ಅದರ ಊಹೆಗೆ ಅನುಗುಣವಾದ ಮಾರುಕಟ್ಟೆ ವಿಸ್ತರಣೆ ಸಾಧ್ಯವಿಲ್ಲದಾಗ ಪೂರೈಕೆ ಬೇಡಿಕೆಯನ್ನು ಮೀರುತ್ತದೆ ಮತ್ತು ಇದೇ ಅಂತಿಮವಾಗಿ ಮಾರುಕಟ್ಟೆ ಕುಸಿತಕ್ಕೂ ಆ ಮೂಲಕ ಆರ್ಥಿಕ ಬಿಕ್ಕಟ್ಟಿಗೂ ಎಡೆಮಾಡಿಕೊಡುತ್ತದೆ. ಕಾರ್ಮಿಕ ಸಂಘಟನೆ ಮತ್ತು ಅದು ಮಾರುಕಟ್ಟೆ ವ್ಯವಸ್ಥೆ ಮೇಲೆ ಬೀರಿದ ಪ್ರಭಾವ ಗ್ರೇಟ್ ಡಿಪ್ರೆಷನ್‌ಗೆ ಕಾರಣವಾಗಿದೆ ಎನ್ನುವುದನ್ನು ಕಾರ್ಲ್ ಪೊಲಯಾನಿ ಕೂಡ ಒಪ್ಪುತ್ತಾನೆ ಮತ್ತು ಆತ ಶ್ರಮಿ ಸಂಘಟನೆಯ ಜೊತೆ ಮುಕ್ತ ಮಾರುಕಟ್ಟೆ ನಿಯಮಕ್ಕೆ ಭೂಮಿ ಮತ್ತು ಬಂಡವಾಳ ಕೂಡ ಬದ್ಧವಾಗಿರಲಿಲ್ಲ ಎಂದು ಅಭಿಪ್ರಾಯ ಪಡುತ್ತಾನೆ. ಜರ್ಮನಿಯ ಅನುಭವದ ಆಧಾರದ ಮೇಲೆ ಆತ ಈ ಎರಡೂ ಉತ್ಪಾದನಾ ಮೂಲಗಳು ಭೂಮಿ ಮತ್ತು ಬಂಡವಾಳ-ಯಾವ ರೀತಿಯಲ್ಲಿ ಮಾರುಕಟ್ಟೆ ಮೇಲೆ ಪ್ರಭಾವ ಬೀರಿದೆ ಎಂದು ವಿವರಿಸಿದ್ದಾನೆ. ಸಾಂಪ್ರದಾಯಿಕ ಯಜಮಾನಿಕೆಯ ವರ್ಗ- ಭೂಮಾಲಿಕರು, ಚರ್ಚು ಮತ್ತು ಸೇನೆ- ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆಯ ಮಾರುಕಟ್ಟೆ ಬಲಗಳಿಗೆ ಒಡ್ಡಿಕೊಳ್ಳುವುದು ಅವರುಗಳ ಪಾರಂಪಾರಿಕ ರಾಜಕೀಯ ಶಕ್ತಿಯನ್ನು ಕುಂದಿಸುತ್ತಿತ್ತು. ಅದಕ್ಕಾಗಿ ಕೃಷಿ ಉತ್ಪನ್ನಗಳ ಆಮದಿನ ಮೇಲೆ ನಿರ್ಬಂಧ ಹೇರುವ ಮೂಲಕ ಅವರುಗಳು ತಮ್ಮ ಅಸ್ಥಿತ್ವವನ್ನು ಕಾಪಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಇದರ ಜೊತೆಗೆ ಅಂದು ಚಾಲ್ತಿಯಲ್ಲಿದ್ದ ಸ್ವರ್ಣ ಪರಿಮಾಣ (ಗೋಲ್ಡ್ ಸ್ಟ್ಯಾಂಡರ್ಡ್) ಕೂಡ ಮಹತ್ತರವಾದ ಪಾತ್ರ ವಹಿಸಿದೆ. ಸ್ವರ್ಣ ಪರಿಮಾಣವೆಂದರೆ,

ವಿನಿಯಮ ದರ ಪದ್ಧತಿ. ಈ ಪದ್ಧತಿಯಲ್ಲಿ ಹಣದ ಪರಿವರ್ತನೆಯ ದರ ಚಿನ್ನದಲ್ಲೇ ನಡೆಯುತ್ತಿತ್ತು. ಒಂದು ದೇಶದ ಆಂತರಿಕ ಮಾರುಕಟ್ಟೆಯಲ್ಲಿ ಹಣವನ್ನು ಬಿಡುಗಡೆ ಮಾಡುವಾಗಲೂ ಅದಕ್ಕೆ ಸರಿಸಮಾನವಾದ ಚಿನ್ನವನ್ನು ಹೊಂದಿರಬೇಕಿತ್ತು. ಈ ದೃಷ್ಟಿಯಿಂದ ಅಂತರ್ ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಏರಿಳಿತಗಳನ್ನು ಹಿಡಿತದಲ್ಲಿಡುವಲ್ಲಿ ಸ್ವರ್ಣ ಪರಿಮಾಣ ಒಂದು ಉತ್ತಮ ಸಾಧನವಾಗಿತ್ತು. ಒಂದು ದೇಶದ ಖರ್ಚು ಅದರ ಆದಾಯಕ್ಕಿಂತ ಹೆಚ್ಚಾದಾಗ ಚಿನ್ನ ದೇಶದಿಂದ ಹೊರಕ್ಕೆ ಹರಿಯುತ್ತಿತ್ತು ಮತ್ತು ಹಣದ ಪೂರೈಕೆ ಹಾಗೂ ಆರ್ಥಿಕ ಚಟುವಟಿಕೆಗಳು ಇಳಿಮುಖ ವಾಗುತ್ತಿದ್ದವು. ಈ ಸಂದಿಗ್ಧತೆಯಿಂದ ಪಾರಾಗಿ ಪುನಃ ಹಿಂದಿನ ಸ್ಥಿತಿ ಸ್ಥಾಪಿಸುವ ಸಾಧ್ಯತೆಗೆ ಇದ್ದ ಒಂದೇ ಒಂದು ದಾರಿಯೆಂದರೆ ಹಣಕಾಸು ಮತ್ತು ಬೇಡಿಕೆಯ ಮೇಲಿನ ಹತೋಟಿ ಮತ್ತು ಆ ಮೂಲಕ ಆಮದು ಕಡಿಮೆಗೊಳಿಸಿ ರಫ್ತನ್ನು ಹೆಚ್ಚಿಸುವುದು. ಅಂತರ್ ರಾಷ್ಟ್ರೀಯ ಮಾರುಕಟ್ಟೆಯನ್ನು ವ್ಯವಸ್ಥಿತಗೊಳಿಸಲು ಉಪಯೋಗವಾಗುತ್ತಿದ್ದ ಸ್ವರ್ಣ ಪರಿಮಾಣ ಅಂದಿನ ಶ್ರೀಮಂತ ರಾಷ್ಟ್ರಗಳ ಸ್ವೇಚ್ಛಾಚಾರದ ವ್ಯವಹಾರಗಳಿಗೆ ಒಂದು ದೊಡ್ಡ ತಡೆಯಾಗಿತ್ತು.

ಈ ರೀತಿಯಲ್ಲಿ ಕಾರ್ಮಿಕ ವರ್ಗ ನಿರುದ್ಯೋಗ ಮತ್ತು ಇಳಿಮುಖವಾಗುತ್ತಿದ್ದ ಕೂಲಿಯ ವಿರುದ್ಧ, ಬಂಡವಾಳ ಸ್ಥಿರತೆಯಿಲ್ಲದ ಬ್ಯಾಂಕಿಂಗ್ ವ್ಯವಸ್ಥೆ ವಿರುದ್ಧ ಮತ್ತು ಕೃಷಿಕರು ಸತತವಾಗಿ ಕುಸಿಯುತ್ತಿರುವ ಬೆಲೆಗಳ ವಿರುದ್ಧ ಪ್ರತಿಭಟಿಸುತ್ತಿದ್ದರು. ಈ ಎಲ್ಲದರ ಫಲಶ್ರುತಿ ಯೆಂದರೆ ರಾಷ್ಟ್ರೀಯ ಆರ್ಥಿಕ ಚಟುವಟಿಕೆಗಳನ್ನು ಅಂತಾರಾಷ್ಟ್ರೀಯ ಮಾರುಕಟ್ಟೆಯ ಏರಿಳಿತಗಳಿಂದ ರಕ್ಷಿಸಿಕೊಳ್ಳುವ ಪ್ರಯತ್ನ ೧೮೭೦ರ ನಂತರ ಎಗ್ಗಿಲ್ಲದೆ ನಡೆಯಿತು. ದೇಶೀ ಉತ್ಪನ್ನಗಳ ಮಾರುಕಟ್ಟೆಯನ್ನು ರಕ್ಷಿಸುವ ನೆವದಲ್ಲಿ ಪರದೇಶಿ ಸರಕುಗಳ ಮೇಲಿನ ನಿರ್ಬಂಧ ಹೆಚ್ಚಾಯಿತು. ಪರಿಣಾಮವಾಗಿ ಅಂತರ್‌ರಾಷ್ಟ್ರೀಯ ವ್ಯಾಪಾರದಿಂದ ರಾಷ್ಟ್ರೀಯ ಸಂಪತ್ತನ್ನು ವೃದ್ದಿಗೊಳಿಸುವ ಸಾಧ್ಯತೆಯನ್ನು ರಾಜಕೀಯಗೊಳಿಸಬೇಕಾಯಿತು. ಅಂದರೆ ಅಂತರ್ ರಾಷ್ಟ್ರೀಯ ವ್ಯಾಪಾರ ವಸಾಹತುಶಾಹಿ ಧೋರಣೆಯಡಿಯಲ್ಲಿ ಮಾತ್ರ ಸಾಧ್ಯವಾಗಬಹುದಾದ ಸ್ಥಿತಿ ನಿರ್ಮಾಣವಾಯಿತು. ಯುರೋಪಿನ ಪ್ರತಿ ರಾಷ್ಟ್ರ ಕೂಡ ಅತೀ ಹೆಚ್ಚಿನ ಸಂಖ್ಯೆಯಲ್ಲಿ ವಸಾಹತುಗಳನ್ನು ಹೊಂದಲು ಈ ಸಂದರ್ಭದಲ್ಲೇ ಪ್ರಯತ್ನಿಸಿದೆ. ಅಂತರ್‌ರಾಷ್ಟ್ರೀಯ ವ್ಯಾಪಾರ ಇಂತಹ ರಕ್ಷಣೆಯೇ ಇಲ್ಲದ ಮಾರುಕಟ್ಟೆಗಳನ್ನು ಕೊಳ್ಳೆ ಹೊಡೆಯುವುದಕ್ಕೆ ಸೀಮಿತಗೊಂಡಾಗ ಯುರೋಪಿನ ರಾಷ್ಟ್ರಗಳ ಮಧ್ಯೆ ವೈರತ್ವ ಮತ್ತು ನಂತರದ ಮಹಾ ಯುದ್ಧಗಳಿಗೆ ಕಾರಣವಾಗಿದೆ. ಒಂದನೆಯ ಮಹಾಯುದ್ಧ ಮತ್ತು ಸ್ವಯಂನಿಯಂತ್ರಿ ಸಲ್ಪಡುವ ಮಾರುಕಟ್ಟೆಯ ವಿಫಲತೆಗಳ ಸಂಬಂಧವನ್ನು ಅರಿಯಲು ಅಸಮರ್ಥರಾದ ಕಾರಣದಿಂದಾಗಿ ಈ ಹಿಂದೆ ಸ್ಥಿರತೆಯನ್ನು ಸಾಧ್ಯಗೊಳಿಸಿದ ಹಣಕಾಸು ಸಂಸ್ಥೆಗಳನ್ನು ಪುನರ್‌ಸ್ಥಾಪಿಸಲು ಪ್ರಯತ್ನಿಸಲಾಯಿತು. ಅದರಲ್ಲೂ ಸ್ವರ್ಣ ಪರಿಮಾಣದ ಅನಿವಾರ್ಯ ತೆಯ ಬಗ್ಗೆ ಸ್ವಯಂ ತಂತ್ರವಾದಿಗಳು ಮಾತ್ರವಲ್ಲ ಎಡಪಂಥೀಯರಿಗೂ ಬಲವಾದ ನಂಬಿಕೆಯಿತ್ತು. ಆದರೆ ಸ್ವರ್ಣ ಪರಿಮಾಣವನ್ನು ಪುನರ್‌ಸ್ಥಾಪಿಸುವ ಪ್ರಯತ್ನ ಅಂದಿನ ರಾಜಕೀಯ ಸಂದರ್ಭದಲ್ಲಿ ಕಷ್ಟ ಸಾಧ್ಯವಾಗಿತ್ತು. ಪಾರ್ಲಿಮೆಂಟ್ ಮಾದರಿಯ ಸರ್ಕಾರ ಕಾರ್ಮಿಕ ಸಂಘಟನೆಗಳಿಗೆ ತಮ್ಮ ಹಿತಾಸಕ್ತಿಗಳನ್ನು ಪೂರೈಸಲು ಒಂದು ಒಳ್ಳೆಯ ಮಾಧ್ಯಮವಾಗಿದ್ದು ಅನೇಕ ಕಾರ್ಮಿಕ ಕಲ್ಯಾಣ ಕಾನೂನುಗಳು ಜಾರಿ ಬಂದವು. ಅಂತರ್ ರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಸ್ಪರ್ಧೆಯ ದೃಷ್ಟಿಯಿಂದ ಈ ರಕ್ಷಿತ ಶ್ರಮಿಕ ಮಾರುಕಟ್ಟೆ ದೊಡ್ಡ ತೊಡಕಾಯಿತು. ಇದರ ಜೊತೆಗೆ ಈ ಹಿಂದೆ ವಿವರಿಸಿದ ಭೂಮಿ ಮತ್ತು ಬಂಡವಾಳದ ಮಾರುಕಟ್ಟೆಯಲ್ಲಿನ ಅಡ್ಡಿಗಳು, ಅಂತರ್‌ರಾಷ್ಟ್ರೀಯ ವ್ಯಾಪಾರದ ಮೇಲಿನ ನಿರ್ಬಂಧಗಳು, ವಸಾಹತುಗಳನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ ಯುರೋಪಿನ ರಾಷ್ಟ್ರಗಳ ಮಧ್ಯೆ ನಡೆದ ಪೈಪೋಟಿ ಇವೇ ಮುಂತಾದವುಗಳು ಎರಡನೆಯ ಮಹಾಯುದ್ಧದಲ್ಲಿ ಕೊನೆಗೊಂಡವು.

ಇಲ್ಲಿ ಮಹಾಯುದ್ಧ ಯಾಕಾಯಿತು ಎನ್ನುವುದಕ್ಕಿಂತಲೂ ಮಹಾಯುದ್ಧದ ನಂತರ ಆದ ರಾಜಕೀಯ ಮತ್ತು ಆರ್ಥಿಕ ಏರುಪೇರುಗಳು ಮಹತ್ವದ್ದು. ಮಹಾಯುದ್ಧಕ್ಕೆ ಮೊದಲೇ ಬ್ರಿಟನ್ ತನ್ನ ಅಂತರ್‌ರಾಷ್ಟ್ರೀಯ ಯಜಮಾನಿಕೆಯನ್ನು ಹಂತಹಂತವಾಗಿ ಕಳಕೊಳ್ಳುತ್ತಿತ್ತು. ಅದರ ವಶದಲ್ಲಿದ್ದ ವಸಾಹತುಗಳು ಸ್ವತಂತ್ರಗೊಂಡವು, ಅಂತರ್‌ರಾಷ್ಟ್ರೀಯ ವ್ಯಾಪಾರದಲ್ಲಿ ಬ್ರಿಟನ್‌ನ ಪಾಲು ಕಡಿಮೆಯಾಗುತ್ತಾ ಬಂತು ಮತ್ತು ಪೌಂಡು ತನ್ನ ಮೌಲ್ಯಕಳಕೊಂಡಿತ್ತು. ಯುದ್ಧದಲ್ಲಿ ನೇರವಾಗಿ ಪಾಲುಗೊಂಡ ದೇಶಗಳಲ್ಲಿನ ಆರ್ಥಿಕ ಮತ್ತು ರಾಜಕೀಯ ಸ್ಥಿತಿ ತುಂಬಾ ಶೋಚನೀಯವಾಗಿತ್ತು. ಕುಟುಂಬ ವ್ಯವಸ್ಥೆ ಕುಸಿದಿತ್ತು. ನಿರುದ್ಯೋಗ, ಬಡತನ, ವ್ಯಾಪಾರದ ಕುಸಿತ ಇವೇ ಮುಂತಾದ ಸಮಸ್ಯೆಗಳು ಯುರೋಪಿನ ರಾಷ್ಟ್ರಗಳನ್ನು ಪುನಃ ಎದ್ದುನಿಲ್ಲಬಲ್ಲವೋ ಎನ್ನುವ ಸ್ಥಿತಿಗೆ ತಂದಿದ್ದವು. ಈ ಯುದ್ಧದಲ್ಲಿ ನೇರವಾಗಿ ಪಾಲು ಗೊಳ್ಳದ ಅಮೆರಿಕಾ, ಇದೇ ಸಂದರ್ಭದಲ್ಲಿ ತನ್ನ ಯಜಮಾನಿಕೆಯನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುತ್ತಿತ್ತು. ಅಂತರ್‌ರಾಷ್ಟ್ರೀಯ

ಮಾರುಕಟ್ಟೆಯಲ್ಲಿ ಪೌಂಡಿನ ಸ್ಥಾನವನ್ನು ಡಾಲರ್ ಆಕ್ರಮಿಸಲು ಪ್ರಯತ್ನಿಸುತ್ತಿತ್ತು. ಆದಾಗ್ಯೂ ಅಮೆರಿಕಾದ ಸ್ವಯಂತಂತ್ರವಾದಿ ಅಥವಾ ಮಾರುಕಟ್ಟೆ ಆಧಾರಿತ ಅಭಿವೃದ್ಧಿ ಮಾದರಿ ಆಗತಾನೆ ಸ್ವತಂತ್ರಗೊಂಡ ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಅಪ್ಯಾಯಮಾನವಾಗಿರಲಿಲ್ಲ. ಅದಕ್ಕೆ ಮುಖ್ಯಕಾರಣಗಳು ಎರಡು - ೧. ಮುಕ್ತ ಮಾರುಕಟ್ಟೆ ಮಾದರಿಯನ್ನು ಪ್ರತಿಪಾದಿಸುವ ಯುರೋಪಿನ ದೇಶಗಳ ಆರ್ಥಿಕ ಸ್ಥಿತಿ ಎರಡು ಮಹಾಯುದ್ಧಗಳಲ್ಲಿ ಪಾಲ್ಗೊಂಡು ತುಂಬಾ ಹದಗೆಟ್ಟಿತ್ತು ಮತ್ತು ೨. ರಷ್ಯಾದ ಯೋಜಿತ ಅಭಿವೃದ್ಧಿ ಮಾದರಿ ಇದು ಪ್ರಪಂಚಕ್ಕೆ ಪಾಶ್ಚಿಮಾತ್ಯವಲ್ಲದ ಅಭಿವೃದ್ಧಿಯ ಒಂದು ಮಾದರಿಯನ್ನು ಕೊಡಲು ಪ್ರಯತ್ನಿಸುತ್ತಿತ್ತು. ಇದರ ಯೋಜಿತ ಅಭಿವೃದ್ಧಿಯ ಹಿಂದೆ ಬಹುದೊಡ್ಡ ಸಂಖ್ಯೆಯ ನರಬಲಿಯಿತ್ತು. ಅದರ ಸಾಮೂಹಿಕ ಕೃಷಿಯ ಹಿಂದೆ ಬಲಿತ್ಕಾರವಿತ್ತು- ಆದಾಗ್ಯೂ ಅದು ೧೯೨೯ ಮತ್ತು ೧೯೪೦ರ ನಡುವೆ ಬಲಿಷ್ಠವಾದ ಕೈಗಾರಿಕೆ ವ್ಯವಸ್ಥೆಯನ್ನು ನಿರ್ಮಾಣ ಮಾಡಿತ್ತೆಂದು ಎರಿಕ್ ಹಾಬ್ಸ್‌ವಾಮ್‌ನ ಅಭಿಪ್ರಾಯ. ಗಣನೀಯ ಪ್ರಮಾಣದ ಸಾಮಾಜಿಕ ಹಾಗೂ ಆರ್ಥಿಕ ಪರಿವರ್ತನೆ ಸಾಧ್ಯವಾದುದು ಕೂಡ ಈ ಯೋಜಿತ ಅಭಿವೃದ್ಧಿಯಿಂದ ಎಂದು ಆತ ಅಭಿಪ್ರಾಯ ಪಡುತ್ತಾನೆ. ಆದುದರಿಂದಲೇ ಇದು ತೃತೀಯ ಜಗತ್ತಿನ ರಾಷ್ಟ್ರಗಳಿಗೆ ಆಕರ್ಷಕವಾಗಿತ್ತು. ಇದಕ್ಕಾಗಿಯೇ ಡಬ್ಲ್ಯು. ಡಬ್ಲ್ಯು. ರಸ್ಟೊ ರಷ್ಯಾದ ಕಮ್ಯುನಿಸಂನ್ನು "ಪರಿವರ್ತನೆಯ ರೋಗ" ಎಂದು ಕರೆದಿದ್ದ ಮತ್ತು ಆರ್ಥಿಕ ಅಭಿವೃದ್ಧಿ ಮೇಲಿನ ತನ್ನ ಪುಸ್ತಕವನ್ನು "ಎ ನಾನ್ ಕಮ್ಯುನಿಸ್ಟ್ ಮೆನಿಫೆಸ್ಟ್ " ಎಂದು ಕರೆದಿದ್ದ.

ರಸ್ಟೋನ ಪುಸ್ತಕ ಬಿಡುಗಡೆಯಾದ ಎಂಟು ವರ್ಷಗಳ ನಂತರ ಸ್ಯಾಮ್ಯೆಲ್ ಹಂಟಿಂಗ್ ಟನ್ ಕೂಡ ಪಶ್ಚಿಮದ ರಾಷ್ಟ್ರಗಳನ್ನು ಈ ವಿಚಾರ ಕುರಿತು ಎಚ್ಚರಿಸಿದ್ದಾನೆ. ಅಭಿವೃದ್ಧಿಯ ಬದಲೀ ಮಾದರಿಯೊಂದನ್ನು ಕೊಡದಿದ್ದರೆ ಪಶ್ಚಿಮದ ರಾಷ್ಟ್ರಗಳು ತೃತೀಯ ಜಗತ್ತಿನಲ್ಲಿ ಲೆನಿನಿಸಂನೊಂದಿಗೆ ಸ್ಪರ್ಧಿಸುವುದು ಕಷ್ಟವಾಗಬಹುದೆಂದು ಆತ ಪಶ್ಚಿಮದ ರಾಷ್ಟ್ರಗಳನ್ನು ಎಚ್ಚರಿಸಿದ್ದಾನೆ. ಈ ಹಿನ್ನೆಲೆಯಲ್ಲಿ ಆಧುನೀಕರಣ ಥಿಯರಿಗಳ ಪಾತ್ರವನ್ನು ಗಮನಿಸ ಬೇಕಾಗಿದೆ. ಅಂತರ್‌ರಾಷ್ಟ್ರೀಯ ಆರ್ಥಿಕ ವ್ಯವಹಾರಗಳಲ್ಲಿ ಅಮೆರಿಕಾ ತನ್ನ ಯಜಮಾನಿಕೆ ಯನ್ನು ಸ್ಥಾಪಿಸಲು ಪ್ರಯತ್ನಿಸಿದರೂ ರಾಜಕೀಯವಾಗಿ ಅದು ತನ್ನ ಮುಕ್ತ ಮಾರುಕಟ್ಟೆ ಆಧಾರಿತ ಅಭಿವೃದ್ಧಿ ಮಾದರಿಯನ್ನು ಆಗ ತಾನೇ ಸ್ವತಂತ್ರಗೊಂಡ ತೃತೀಯ ಜಗತ್ತಿನ ರಾಷ್ಟ್ರಗಳ ಮೇಲೆ ಹೇರುವ ಸ್ಥಿತಿಯಲ್ಲಿರಲಿಲ್ಲ. ಆ ಸಂದರ್ಭದಲ್ಲಿ ಅಮೆರಿಕಾದ ಉಪಯೋಗಕ್ಕೆ ತುಂಬಾ ಸಹಕಾರಿಯಾದ ಅಂಶವೆಂದರೆ ಬ್ರೆಟನ್ ವೂಡ್ಸ್ ಸಂಸ್ಥೆಗಳು. ೧೯೪೪ರಲ್ಲಿ ಬ್ರೆಟನ್ ವೂಡ್ಸ್‌ನಲ್ಲಿ ನಡೆದ ಅಂತರ್‌ರಾಷ್ಟ್ರೀಯ ಆರ್ಥಿಕ ಸಮ್ಮೇಳನದಲ್ಲಿ ರೂಪಪಡೆದ ವ್ಯವಸ್ಥೆ ಇದಾದ್ದರಿಂದಲೇ ಆ ಹೆಸರು. ಇದರ ಅಡಿಯಲ್ಲಿ ಅಸ್ತಿತ್ವಕ್ಕೆ ಬಂದ ಮುಖ್ಯ ಸಂಸ್ಥೆಗಳೆಂದರೆ ಐಎಂಎಫ್, ವಿಶ್ವಬ್ಯಾಂಕ್, ಮತ್ತು ಗ್ಯಾಟ್. ಐಎಂಎಫ್ ಅಂತರ್‌ರಾಷ್ಟ್ರೀಯ ಸಹಕಾರ, ವ್ಯಾಪಾರ ಅಭಿವೃದ್ಧಿ ಮತ್ತು ವಿನಿಮಯ ದರದ ನಿಯಂತ್ರಣ ಗಳನ್ನು ತನ್ನ ಮುಖ್ಯ ಉದ್ದೇಶಗಳೆಂದು ಹೇಳಿಕೊಂಡಿದ್ದರೆ, ವಿಶ್ವಬ್ಯಾಂಕು ಹಿಂದುಳಿದ ದೇಶಗಳ ಅಭಿವೃದ್ಧಿಗಳಿಗಾಗಿ ಯೋಜನೆಗಳನ್ನು ರೂಪಿಸುವುದು, ಅವುಗಳನ್ನು ಅನುಷ್ಠಾನಕ್ಕೆ ತರುವುದು ಮತ್ತು ಅಭಿವೃದ್ಧಿ ಸಾಲ ನೀಡುವುದು ಮುಂತಾದವುಗಳನ್ನು ತನ್ನ ಮುಖ್ಯ ಆಶಯವೆಂದು ಹೇಳಿಕೊಂಡಿದೆ. ಈ ಅಂತರ್‌ರಾಷ್ಟ್ರೀಯ ಹಣಕಾಸು ವ್ಯವಸ್ಥೆ ಯಾವ ರೀತಿಯಲ್ಲಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಬಂಡವಾಳಶಾಹಿ ಉತ್ಪಾದನಾ ಕ್ರಮ ಪಸರಿಸಲು ನೆರವಾಯಿತು ಎನ್ನುವುದನ್ನು ನೋಡೋಣ. ಯುದ್ಧದಿಂದ ಗಳಿಸಲಾಗದ ಮಾರುಕಟ್ಟೆಯನ್ನು ಹೊಸ ಸಂಬಂಧಗಳು, ಹೊಸ ಆವಲಂಬನಾ ನೀತಿಗಳು ಮತ್ತು ಹೊಸ ಅಭಿವೃದ್ಧಿ ಯೋಜನೆಗಳ ಮೂಲಕ ಸಾಧಿಸಲು ಆಮೆರಿಕಾ ಬ್ರಿಟನ್ನಿನೊಡನೆ ಸೇರಿ ಮಾಡಿದ ಸನ್ನಾಹವೆ ಇಂದಿನ ಅಂತರ್‌ರಾಷ್ಟ್ರೀಯ ಹಣಕಾಸು ವ್ಯವಸ್ಥೆ. ಜಗತ್ತಿನ ಬಹುತೇಕ ರಾಷ್ಟ್ರಗಳನ್ನೊಳ ಗೊಂಡ ಈ ವ್ಯವಸ್ಥೆಗಳಿಂದಾಗಿ ತಮ್ಮ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುವಲ್ಲಿ ಅಮೆರಿಕಾ ಮತ್ತು ಅದರ ಸಹರಾಷ್ಟ್ರಗಳು ಪೂರ್ಣ ಯಶಸ್ವಿಯಾಗಿವೆ. ಹೆಚ್ಚಿನ ಬಡರಾಷ್ಟ್ರಗಳಲ್ಲಿ ಆರ್ಥಿಕ ನೀತಿಗಳಿಗೆ ಸಂಬಂಧಪಟ್ಟ ನಿರ್ಧಾರಗಳು ಅಲ್ಪಸಂಖ್ಯಾತ ಗುಂಪಿನ ಕಾರ್ಯವಾಗಿದ್ದು ಈ ವರ್ಗದ ದೃಷ್ಟಿಯಿಂದ ಅಭಿವೃದ್ಧಿ ಹೊಂದುವುದೆಂದರೆ ಅಮೆರಿಕಾ ಅಥವಾ ಇನ್ನಾವುದೇ ಪಶ್ಚಿಮದ ದೇಶಗಳು ಹೊಂದಿರುವ ಎಲ್ಲಾ ತಂತ್ರಜ್ಞಾನವನ್ನು ನಾವು ಪಡೆಯುವುದು ಎಂದಾಗಿರುವುದರಿಂದಲೇ ಬಲಿಷ್ಟ ದೇಶಗಳ ಅಭಿವೃದ್ಧಿ ರಾಜಕೀಯ ಅಂತರ್‌ರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಶಾಸನ ಬದ್ಧಗೊಂಡು ಸುಲಲಿತವಾಗಿ ನಡೆದಿದೆ. ಈ ರಾಜಕೀಯದ ಸರಳೀಕೃತ ನಡವಳಿಕೆ ಹೀಗಿರುತ್ತದೆ. ಅಭಿವೃದ್ಧಿಯೆಂದರೆ ಬಂಡವಾಳ ವೃದ್ಧಿಯೆಂದು ವ್ಯಾಖ್ಯಾನಿಸುವುದು, ಆ ವ್ಯಾಖ್ಯಾನದ ಪ್ರಕಾರ ಕೆಲವು ಸೂಚ್ಯಾಂಕಗಳನ್ನು ಗುರುತಿಸುವುದು, ಅದನ್ನು ಹಿಂದುಳಿದ ವ್ಯವಸ್ಥೆಯೊಂದಿಗೆ ಹೋಲಿಸಿ ಎಷ್ಟರ ಮಟ್ಟಿಗೆ ಅದು ಹಿಂದುಳಿದಿದೆ ಮತ್ತು ಆ ಸ್ಥಿತಿಯಿಂದ ಅದು ಮುಂದುವರಿಯಬೇಕಾದರೆ ಅಥವಾ ಅಭಿವೃದ್ಧಿ ಹೊಂದ ಬೇಕಾದರೆ ಯಾವ ಆರ್ಥಿಕ ನೀತಿಯನ್ನು ಅನುಸರಿಸಬೇಕಾಗುತ್ತದೆ ಎಂದು ಸಲಹೆ ನೀಡುವುದು. ಆಗ ಬಡದೇಶಗಳು ಈ ಕ್ರಮದ

ಅಭಿವೃದ್ಧಿಗೆ ಅಗತ್ಯವಾದ ಬಂಡವಾಳ, ತಂತ್ರಜ್ಞಾನ ಮತ್ತು ತಾಂತ್ರಿಕ ಪರಿಣತಿಗಳ ಕೊರತೆಗಳನ್ನು ಹೇಳಿಕೊಳ್ಳುತ್ತಾರೆ. ಅಂತಹ ಸಂದರ್ಭದಲ್ಲಿ ಶ್ರೀಮಂತ ರಾಷ್ಟ್ರಗಳು ತಮ್ಮ ಹತೋಟಿಯಲ್ಲಿರುವ ಅಂತರ್‌ರಾಷ್ಟ್ರೀಯ ಹಣಕಾಸು ವ್ಯವಸ್ಥೆಯ ಮೂಲಕ ಎರಡು ರೀತಿಯಲ್ಲಿ ಸಹಕರಿಸಲು ಮುಂದಾಗುತ್ತದೆ. ೧. ಸಹಾಯಧನ ನೀಡಲು ಮತ್ತು ೨. ಅಂತರ್ ರಾಷ್ಟ್ರೀಯ ಹಣಕಾಸು ವ್ಯವಸ್ಥೆಯ ಮೂಲಕ ಸಾಲ ಕೊಡಿಸಲು. ಇದು ಅಮೆರಿಕಾದ ಮಾದರಿಯ ಅಭಿವೃದ್ಧಿಯನ್ನು ಪಸರಿಸಲು ಅನುಸರಿಸಿದ ಕ್ರಮ ಮತ್ತು ಇದರಿಂದಾಗಿ ನಾವಿಂದು ಕಾಣುವ ಬಹುರಾಷ್ಟ್ರೀಯ ಕಂಪನಿಗಳ ಮೂಲರೂಪಗಳನ್ನು ಪ್ರತಿ ರಾಷ್ಟ್ರದಲ್ಲು ಹುಟ್ಟುಹಾಕಲು ಸಾಧ್ಯವಾಯಿತು.

**ಭಾಗ ೩**

ಹಿಂದಿನ ಪುಟಗಳಲ್ಲಿ ಊಳಿಗಮಾನ್ಯ ವ್ಯವಸ್ಥೆ ಬಂಡವಾಳಶಾಹಿ ಉತ್ಪಾದನಾ ವ್ಯವಸ್ಥೆ ಯಾಗಿ ಪರಿವರ್ತನೆಗೊಂಡ ಯುರೋಪಿನ ಮಾದರಿ ಯಾವ ರೀತಿಯಲ್ಲಿ ತೃತೀಯ ಜಗತ್ತಿನ ರಾಷ್ಟ್ರಗಳ ಅಭಿವೃದ್ಧಿ ಯೋಜನೆಗಳಿಗೆ ಮಾದರಿಯಾಗಿದೆ ಎಂದು ವಿವರಿಸಲಾಗಿದೆ. ಇಲ್ಲಿ ಬಂಡವಾಳ ವೃದ್ಧಿಯನ್ನು ಅಭಿವೃದ್ಧಿ ಎಂದು ವ್ಯಾಖ್ಯಾನಿಸಲಾಗಿದೆ. ಆದರೆ ಅಭಿವೃದ್ಧಿಯ ಈ ವ್ಯಾಖ್ಯಾನವನ್ನು ಅದರ ಪ್ರಚಾರದ ಮೇಲೆ ತೃತೀಯ ಜಗತ್ತಿನ ರಾಷ್ಟ್ರಗಳು ಅನುಸರಿಸಲು ಆರಂಭಿಸಲಿಲ್ಲ. ಬದಲಿಗೆ ೧೯೪೫ರ ನಂತರ ಆದ ಅಂತರ್‌ರಾಷ್ಟ್ರೀಯ ರಾಜಕೀಯ ಮತ್ತು ಆರ್ಥಿಕ ಏರುಪೇರುಗಳು ಅಭಿವೃದ್ಧಿಯ ಈ ವ್ಯಾಖ್ಯಾನ ಜಗತ್ತಿಗೆ ಹಬ್ಬುವಂತೆ ಮಾಡಿತು. ಮಹಾಯುದ್ಧದ ನಂತರ ಬ್ರಿಟನ್ ತನ್ನ ಯಜಮಾನಿಕೆ ಸ್ಥಾನವನ್ನು ಅಮೆರಿಕಕ್ಕೆ ಬಿಟ್ಟುಕೊಡ ಬೇಕಾಯಿತು, ಮತ್ತು ಅಮೆರಿಕಾ ತನ್ನ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಐಎಂಎಫ್, ವಿಶ್ವಬ್ಯಾಂಕು, ಗ್ಯಾಟ್ ಮುಂತಾದವುಗಳು ಹೇಗೆ ಸಹಕಾರಿಯಾದವು ಎಂದು ವಿವರಿಸಲಾಗಿದೆ. ಈ ಭಾಗದಲ್ಲಿ ವರ್ತಮಾನದಲ್ಲಿ ಚಾಲ್ತಿಯಲ್ಲಿರುವ ಜಾಗತೀಕರಣ ಚರಿತ್ರೆಯ ಯಾವ ಘಟ್ಟದಲ್ಲಿ ಮತ್ತು ಯಾವ ಕಾರಣಕ್ಕಾಗಿ ಹುಟ್ಟಿಕೊಂಡಿತು ಎನ್ನುವುದನ್ನು ವಿವರಿಸಲಾಗಿದೆ. ಇಲ್ಲಿ ಸಂದಾಯ ಶಿಲ್ಕು (ಬ್ಯಾಲೆನ್ಸ್ ಆಫ್ ಪೇಮೆಂಟ್) ಸಮಸ್ಯೆಗಳು ಮತ್ತು ಅದಕ್ಕೆ ಪರಿಹಾರವಾಗಿ ಹುಟ್ಟಿಕೊಂಡ ರಚನಾತ್ಮಕ ಹೊಂದಾಣಿಕೆ ಕಾರ್ಯಕ್ರಮಗಳು (ಇದನ್ನು ಇಂಗ್ಲಿಷಿನಲ್ಲಿ ಸ್ಟ್ರಕ್ಚರಲ್ ಆಡ್ಜಸ್ಟ್‌ಮೆಂಟ್ ಪ್ರೋ ಎಂದು ಕರೆಯುತ್ತಾರೆ ಮತ್ತು ಈಗ ಇದು ಎಸ್.ಎ.ಪಿ. ಎಂದು ಪ್ರಚಾರದಲ್ಲಿದೆ) ಯಾವ ರೀತಿಯಲ್ಲಿ ಅಮೆರಿಕಾ ಮತ್ತು ಇತರ ಶ್ರೀಮಂತ ರಾಷ್ಟ್ರಗಳ ಸಮಸ್ಯೆಯೂ ಆಗಿತ್ತು, ಆದಾಗ್ಯೂ ಆ ಸಮಸ್ಯೆಯನ್ನು ಇಡೀ ಜಗತ್ತಿನ ಸಮಸ್ಯೆಯೆಂದು ವ್ಯಾಖ್ಯಾನಿಸುವ ಮೂಲಕ ಎಸ್.ಎ.ಪಿ.ಹೇಗೆ ಪ್ರಪಂಚದ ಎಲ್ಲಾ ದೇಶಗಳ ಅದರಲ್ಲೂ ಅಭಿವೃದ್ಧಿಶೀಲ ದೇಶಗಳ ಮೇಲೆ ಹೇರಲಾಯಿತು. ಇದರಿಂದಾಗಿ ಈ ದೇಶಗಳು ತಮ್ಮ ಆರ್ಥಿಕ ನೀತಿಯಲ್ಲಿ ಯಾವ ಬದಲಾವಣೆಗಳನ್ನು ಮಾಡಿಕೊಳ್ಳ ಬೇಕಾಯಿತು ಎಂಬುದನ್ನು ವಿವರಿಸಲಾಗಿದೆ.

ವರ್ತಮಾನದಲ್ಲಿ ಚಾಲ್ತಿಯಲ್ಲಿರುವ ಜಾಗತೀಕರಣ ಎಂದು ಇಲ್ಲಿ ಉದ್ದೇಶ ಪೂರ್ವಕ ವಾಗಿಯೇ ಬಳಸಲಾಗಿದೆ. ಯಾಕೆಂದರೆ ಬಂಡವಾಳದ ಜಾಗತೀಕರಣ ತೊಂಬತ್ತರ ದಶಕದಲ್ಲಿ ಹುಟ್ಟಿಕೊಂಡದ್ದಲ್ಲ. ಬದಲಿಗೆ ಬಂಡವಾಳದ ಹುಟ್ಟಿನೊಂದಿಗೆ ಅದು ತನ್ನ ವಿಸ್ತರಣೆಗೆ ಪ್ರಯತ್ನಿಸಿದೆ. ವ್ಯಾಪಾರಿ ಬಂಡವಾಳ ಯಾವ ರೀತಿಯಲ್ಲಿ ಜಾಗತೀಕರಣಕ್ಕೆ ಪ್ರಯತ್ನಿಸಿತು, ಆದರೆ ಅದು ಯಾಕೆ ಸಫಲವಾಗಲಿಲ್ಲ. ಅದು ಯಾವ ರೀತಿಯಲ್ಲಿ ಕೈಗಾರಿಕಾ ಕ್ರಾಂತಿಗೆ ಅನುಕೂಲಕರವಾಗುವ ಪರಿಸರ ನಿರ್ಮಾಣ ಮಾಡಿತು ಮತ್ತು ಆ ಸಂದರ್ಭದಲ್ಲಿ ರೂಪುಗೊಂಡ ಬಂಡವಾಳಶಾಹಿ ಉತ್ಪಾದನಾ ಘಟಕಗಳೇ ಇಂದಿನ ಬಹುರಾಷ್ಟ್ರೀಯ ಕಂಪನಿಗಳ ಮೂಲ ಎಂದು ವಿವರಿಸಲಾಗಿದೆ. ಈ ಬಹುರಾಷ್ಟ್ರೀಯ ಕಂಪನಿಗಳು ಇಂದಿನ ಜಾಗತೀಕರಣದ ಸಂದರ್ಭದಲ್ಲಿ ಏಕಾಏಕಿ ಬೆಳೆದು ಪ್ರಪಂಚದ ಎಲ್ಲಾ ಮೂಲೆಗಳಿಗೆ ಹರಡಿದೆ ಎನ್ನುವುದು ಅವಾಸ್ತವಿಕ. ಬಂಡವಾಳ ಅದರಷ್ಟಕ್ಕೇ ಅದು ಬೆಳೆಯುವುದಿಲ್ಲ. ಅದರ ಬೆಳವಣಿಗೆಗೆ ಪೂರಕವಾದ ವಾತಾವರಣ ಅಗತ್ಯ. ಅದು ಯಾವುದೆಂದರೆ, ಬಂಡವಾಳದ ಬೆಳವಣಿಗೆಯು ಇಡೀ ಸಮಾಜದ ಬೆಳವಣಿಗೆ ಎನ್ನುವ ಮೌಲ್ಯ ನಿರ್ಮಾಣವಾಗುವುದು. ಇದು ನಿರ್ಮಾಣವಾದಾಗ ಬಂಡವಾಳದ ಬೆಳವಣಿಗೆಗೆ ಅಡ್ಡಿಯಾಗುವ ವಿಚಾರಗಳು ಯಾವುವು ಎಂದು ನಿರ್ಧಾರವಾಗುತ್ತವೆ. ಮತ್ತು ಆ ತಡೆಗೋಡೆಗಳನ್ನು ಇಲ್ಲದಾಗಿಸಲು ಎಲ್ಲಾ ಪ್ರಯತ್ನಗಳು ನಡೆಯುತ್ತವೆ. ಇದು ೧೯೪೫ರ ನಂತರ ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ನಡೆದಿದೆ. ವಸಾಹತುಶಾಹಿಗಳ ಬಿಗಿಮುಷ್ಟಿಯಿಂದ ಬಿಡುಗಡೆಗೊಂಡ ತೃತೀಯ ಜಗತ್ತಿನ ರಾಷ್ಟ್ರಗಳು ಬಂಡವಾಳದ ಬೆಳವಣಿಗೆಗೆ ಅಭಿವೃದ್ಧಿಯನ್ನು ವ್ಯಾಖ್ಯಾನಿಸುವ ಮೂಲಕ ಮತ್ತು ಅದನ್ನು ತಮ್ಮ ಅಭಿವೃದ್ಧಿ ಯೋಜನೆಗಳ ಅವಿಭಾಜ್ಯ ಅಂಗವಾಗಿಸಿಕೊಂಡಾಗಲೇ ನಾವಿಂದು ಕಾಣುವ ಬಹುರಾಷ್ಟ್ರೀಯ ಕಂಪನಿಗಳ ಹುಟ್ಟಿಗೆ ಅನುಕೂಲವಾದ ವಾತಾವರಣವನ್ನು ಸೃಷ್ಟಿಸಿಕೊಂಡಂತಾಗಿದೆ. ಆದ್ದರಿಂದ ಈಗಿನ ಜಾಗತೀಕರಣ ಮತ್ತು ಅದು ಪ್ರಸರಿಸಲು ನೆರವಾಗುವ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಹಬ್ಬುವಿಕೆಗೆ ಅನುಕೂಲವಾದ

ವಾತಾವರಣವನ್ನು ಈ ಹಿಂದೇಯೇ ಸೃಷ್ಟಿಸಿಕೊಂಡಿವೆ. ಬಹುರಾಷ್ಟ್ರೀಯ ಕಂಪನಿಗಳು ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಈಗ ಪ್ರಚಲಿತದಲ್ಲಿರುವ ಎಸ್.ಎ.ಪಿ.ಗಳು ಜಾರಿಗೆ ಬರುವ ಹಿಂದೆಯೇ ಕಾರ್ಯನಿರ್ವಹಿಸುತ್ತಿದ್ದವು. ಉದಾಹರಣೆಗೆ : ನಮ್ಮದೇ ದೇಶದಲ್ಲಿ ಕೆಲವು ಬಹುರಾಷ್ಟ್ರೀಯ ಕಂಪನಿಗಳನ್ನು ಹೆಸರಿಸಬಹುದು ಕಾಲ್ಗೇಟ್, ನೆಸ್ಲೆ, ಹಿಂದುಸ್ತಾನ್ ಲಿವರ್ಸ್ ಮತ್ತು ಇತರ ಹಲವಾರು ಕಂಪನಿಗಳು ವಿವಿಧ ಕ್ಷೇತ್ರಗಳಲ್ಲಿ ೧೯೯೧ರ ಮೊದಲೇ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ೧೯೭೫ರ ಎಮರ್ಜೆನ್ಸಿಯ ನಂತರ ಬಂದ ಜನತಾ ಸರ್ಕಾರ ಕೊಕೊಕೋಲವನ್ನು ನಮ್ಮಲ್ಲಿಂದ ಹೊರ ದಬ್ಬಿದ್ದು ಇನ್ನೂ ನಮ್ಮ ನೆನಪಿನಿಂದ ಮಾಸಿರಲಿಕ್ಕಿಲ್ಲ. ಇನ್ನು ಇಲ್ಲಿನ ಕಂಪನಿಗಳೊಂದಿಗೆ ಸಹಭಾಗಿಯಾಗಿ ಕಾರ್ಯನಿರ್ವಹಿ ಸುತ್ತಿರುವ ಕಂಪನಿಗಳು ಹಲವಾರು ಇದ್ದವು, ಉದಾಹರಣೆಗೆ ಮಾರುತಿ ಉದ್ಯೋಗ (ಜಪಾನಿನ ಸುಜುಕಿ ಕಂಪನಿಯೊಂದಿಗೆ), ಐ.ಟಿ.ಸಿ.(ಬ್ರಿಟಿಷ್ ಅಮೇರಿಕನ್ ಟೊಬಾಕೊ ಕಂಪನಿಯೊಂದಿಗೆ) ಮುಂತಾದ ಸಹಭಾಗಿತ್ವ ಪ್ರಕ್ರಿಯೆಗಳು ನಮ್ಮಲ್ಲಿನ ಸ್ವಯಂ ತಂತ್ರವಾದಿ ನಿಲುವಿನೊಂದಿಗೆ ಹುಟ್ಟಿಕೊಂಡವಲ್ಲ. ಅದಾಗ್ಯೂ ಬಂಡವಾಳದ ಜಾಗತೀಕರಣ ಯಾಕೆ ಇತ್ತೀಚಿನ ದಿನಗಳಲ್ಲಿ ಇಷ್ಟೊಂದು ಪ್ರಚಾರ ಪಡೆಯಿತು ಮತ್ತು ವರ್ತಮಾನದಲ್ಲಿ ಪ್ರಚಾರದಲ್ಲಿರುವ ಜಾಗತೀಕರಣ ಚರಿತ್ರೆಯ ಯಾವ ಘಟ್ಟದಲ್ಲಿ ಮತ್ತು ಯಾವ ಕಾರಣಕ್ಕಾಗಿ ರೂಪುಗೊಂಡಿತ್ತು, ಇವೇ ಮುಂತಾದ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ ಪ್ರಚಲಿತದಲ್ಲಿರುವ ಜಾಗತೀಕರಣವನ್ನು ಅರ್ಥಮಾಡಿಕೊಳ್ಳಬಹುದು.

ಈಗ ಚಾಲ್ತಿಯಲ್ಲಿರುವ ಎಸ್.ಎ.ಪಿ ಅಥವಾ ಜಾಗತೀಕರಣ (ಎಸ್.ಎ.ಪಿ ಅಂದರೆ ಬಂಡವಾಳ ಚಲನೆಗೆ ಅಡ್ಡಿಯಾಗುವ ತಡೆಗೋಡೆಗಳನ್ನು ಇಲ್ಲದಾಗಿಸಿ ಅಥವಾ ಅಡ್ಡಿ ಆತಂಕಗಳನ್ನು ಕಡಿಮೆಗೊಳಿಸಿ ಪ್ರಪಂಚದ ಎಲ್ಲಾ ಕಡೆ ಬಂಡವಾಳ ಸಲೀಸಾಗಿ ಚಲಿಸುವಂತೆ ಮಾಡುವ ಕಾರ್ಯಕ್ರಮಗಳು)ವನ್ನು ಯಾವುದೋ ಒಂದು ಚಾರಿತ್ರಿಕ ಘಟ್ಟಕ್ಕೆ ಸೀಮಿತ ಗೊಳಿಸುತ್ತಿದ್ದರೆ (ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ) ಅದನ್ನು ೧೯೭೦ರ ನಂತರದ ಅಂತರ್‌ರಾಷ್ಟ್ರೀಯ ಆರ್ಥಿಕ ಮತ್ತು ರಾಜಕೀಯ ಬೆಳವಣಿಗೆಗಳೊಂದಿಗೆ ಗುರುತಿಸಬಹು ದಾಗಿದೆ. ಇದು ಯಾಕೆಂದರೆ ೧೯೪೫ರಿಂದ ೧೯೭೩ರವರೆಗೆ ಬಂಡವಾಳ ಅತಿಯಾಗಿ ಬೆಳೆದಿದೆ ಮತ್ತು ಪ್ರಪಂಚದ ಎಲ್ಲಾ ಮೂಲೆಗಳಿಗೆ ಪಸರಿಸಲು ಅಗತ್ಯವಾದ ವಾತಾವರಣವನ್ನು ನಿರ್ಮಿಸಿಕೊಂಡಿದೆ. ಆದುದರಿಂದಲೇ ಈ ಅವಧಿಯನ್ನು ಎರಿಕ್ ಹಾಬ್ಸ್‌ವಾಮ್ ಬಂಡವಾಳದ "ಸುವರ್ಣಯುಗ" ಎಂದು ಕರೆದಿದ್ದಾನೆ. ಇದು ಹೇಗೆ ಸಾಧ್ಯವಾಯಿತು ಎನ್ನುವುದನ್ನು ತಿಳಿದು ಕೊಳ್ಳುವ ಮೂಲಕ ನಂತರದ ದಿನಗಳಲ್ಲಿ ಬಂಡವಾಳ ಕಂಡ ದುರ್ಭರ ದಿನಗಳತ್ತ ಬೆಳಕು ಚೆಲ್ಲಲು ಅನುಕೂಲವಾಗುತ್ತದೆ. ಈ ಕೆಳಗಿನ ಮೂರು ಕಾರಣಗಳಿಂದಾಗಿ ಬಂಡವಾಳ ತನ್ನ ಸುವರ್ಣಯುಗವನ್ನು ಕಾಣಲು ಸಾಧ್ಯವಾಯಿತೆಂದು ಎರಿಕ್ ಹಾಬ್ಸ್ ವಾಮ್ ಅಭಿಪ್ರಾಯಪಡುತ್ತಾನೆ. ೧. ಶೀತಲ ಸಮರ ೨. ಸಾಮ್ರಾಜ್ಯಶಾಹಿಗಳ ಹಿಡಿತದಿಂದ ಬಿಡಿಸಿಕೊಂಡು ಸ್ವತಂತ್ರಗೊಂಡ ರಾಷ್ಟ್ರಗಳಲ್ಲಿನ ಅಭಿವೃದ್ಧಿ ಯೋಜನೆಗಳು ಮತ್ತು ೩. ಎರಡನೆಯ ಮಹಾಯುದ್ಧದಲ್ಲಿ ಪಾಲ್ಗೊಂಡು ಜರ್ಜರಿತಗೊಂಡ ದೇಶಗಳ ಪುನರ್ ನಿರ್ಮಾಣ ಕಾರ್ಯಕ್ರಮಗಳು.

ಅಂತರ್‌ರಾಷ್ಟ್ರೀಯ ಹಣಕಾಸು ವ್ಯವಸ್ಥೆಯನ್ನು ರೂಪಿಸುವಲ್ಲಿ ಮುಖ್ಯ ಪಾತ್ರವಹಿಸಿದ ಅಮೆರಿಕಾ ಮತ್ತು ಬ್ರಿಟನ್‌ಗಳು ಕೇನ್ಸ್ ತಯಾರಿಸಿದ ಅಂತರ್‌ರಾಷ್ಟ್ರೀಯ ಹಣಕಾಸು ವ್ಯವಸ್ಥೆ ಆತನ ಇಚ್ಛಾ ಪ್ರಕಾರ ಕಾರ್ಯರೂಪಕ್ಕೆ ಬರದಂತೆ ನೋಡಿಕೊಂಡವು. ಯಾವುದೇ ಒಂದು ದೇಶದ ನಾಣ್ಯ ಬ್ಯಾಲೆನ್ಸ್ ಆಫ್ ಪೇಮೆಂಟಿನ ಅಥವಾ ವಿದೇಶಿ ವಿನಿಮಯದ ಮಾನದಂಡವಾಗಿರುವುದು ಸಮಸ್ಯೆಗೆ ಎಡೆಮಾಡಿಕೊಡಬಹುದೆಂದು ಕೇನ್ಸ್‌ನ ಅಭಿಪ್ರಾಯವಾಗಿತ್ತು. ಅದಕ್ಕಾಗಿ ಆತ ಐ.ಎಮ್.ಎಫ್. ರಾಷ್ಟ್ರ ರಾಷ್ಟ್ರಗಳ ನಡುವಿನ ಬ್ಯಾಲೆನ್ಸ್ ಆಫ್ ಪೇಮೆಂಟ್ ಸಮಸ್ಯೆಗಳನ್ನು ಪರಿಹರಿಸಲು ಬೇರೆಯೇ ಪರಿಹಾರ ಕಂಡುಕೊಳ್ಳಬೇಕೆಂದು ಅಭಿಪ್ರಾಯಪಟ್ಟಿದ್ದ. ಆದರೆ ಅದು ಆ ರೀತಿ ಆಗಲಿಲ್ಲ. ಆತನ ನಕ್ಷೆಯನ್ನು ಉಪಯೋಗಿಸಿಕೊಂಡು ಅಮೆರಿಕಾ ಡಾಲರನ್ನು ಅಗ್ರಪಂಕ್ತಿಯ ನಾಣ್ಯವನ್ನಾಗಿ ಖಾಯಂಗೊಳಿಸಿತ್ತು. ಪ್ರಚಲಿತದಲ್ಲಿರುವ ವ್ಯವಸ್ಥೆಯ ಪ್ರಕಾರ ಅಂತರ್‌ರಾಷ್ಟ್ರೀಯ ಹಣಕಾಸು ವ್ಯವಹಾರಗಳ ಯಾವುದೇ ನಿರ್ಣಯ ಅಂಗೀಕಾರವಾಗುವುದು ಮತ್ತು ಬದಲಾವಣೆ ಹೊಂದು ವುದು ಆ ನಿರ್ಣಯಗಳು ಪಡೆಯುವ ಓಟುಗಳ ಆಧಾರದ ಮೇಲೆ. ಶ್ರೀಮಂತ ರಾಷ್ಟ್ರಗಳು ಹೆಚ್ಚಿನ ವಂತಿಗೆ ನೀಡುವುದರಿಂದ ಅವುಗಳ ಮತದಾನದ ಹಕ್ಕು ಕೂಡ ಇತರ ಬಡರಾಷ್ಟ್ರಗಳಿಗೆ ಹೋಲಿಸಿದರೆ ಗಣನೀಯವಾಗಿ ಹೆಚ್ಚಿದೆ. ಉದಾಹರಣೆಗೆ : ಜಾಗತಿಕ ಬ್ಯಾಂಕಿನ ಒಟ್ಟು ಮತಗಳಲ್ಲಿ ಅಮೆರಿಕಾ ಒಂದೇ ಶೇಕಡಾ ೩೦ರಷ್ಟು ಹೊಂದಿದೆ. ೧೦೦ಕ್ಕಿಂತಲೂ ಹೆಚ್ಚಿರುವ ಅಭಿವೃದ್ಧಿಶೀಲ ದೇಶಗಳು ಒಟ್ಟು ಸೇರಿ ಹೊಂದಿರುವ ಮತದಾನದ ಹಕ್ಕು ಸರಿಸುಮಾರು ಇಷ್ಟೇ ಆಗುತ್ತದೆ.

ಅಂತರ್‌ರಾಷ್ಟ್ರೀಯ ಹಣಕಾಸು ಸಂಸ್ಥೆಗಳಲ್ಲಿನ ಈ ಹತೋಟಿ ಅಮೆರಿಕಾಕ್ಕೆ ತನ್ನ ಯಜಮಾನಿಕೆಯನ್ನು ಸ್ಥಾಪಿಸುವಲ್ಲಿ ಅನುಕೂಲವಾಗಿತ್ತು. ಆದರೆ ಬಹುದೊಡ್ಡ ತೊಡಕೆಂದರೆ ಆಗ ತಾನೆ ಬಲಗೊಳ್ಳುತ್ತಿದ್ದ ರಷ್ಯಾ ಮತ್ತು ಅದರ ಯೋಜಿತ ಅಭಿವೃದ್ಧಿಯ ಮಾದರಿ. ರಷ್ಯಾದ ಪ್ರಭಾವವನ್ನು ಕಡಿಮೆಗೊಳಿಸಲು ಆಗ ಅಮೆರಿಕಕ್ಕೆ ಇದ್ದ ದಾರಿಯೆಂದರೆ ಮುಕ್ತ ಮಾರುಕಟ್ಟೆಯನ್ನು ಪ್ರತಿಪಾದಿಸುತ್ತಿದ್ದ ಆದರೆ ಯುದ್ಧದಿಂದ ಜರ್ಜರಿತಗೊಂಡ ಯುರೋಪಿನ ದೇಶಗಳನ್ನು ಪುನರುಜ್ಜೀವನಗೊಳಿಸುವುದು. ಅದಕ್ಕಾಗಿ ಅಮೆರಿಕಾ ಮಾರ್ಸಲ್ ಪ್ಲಾನಿನ ಹೆಸರಿನಲ್ಲಿ ಯುರೋಪಿನ ದೇಶಗಳಿಗೆ ಡಾಲರ್‌ನ ಪ್ರವಾಹವನ್ನೇ ಹರಿಸಿತು. ಇದರ ಜೊತೆಗೆ ತನ್ನ ಮಿಲಿಟರಿ ಶಕ್ತಿಯನ್ನು ಬಲಯುತಗೊಳಿಸುವ ನೆಲೆಯಲ್ಲಿ ಅದು ಯುರೋಪ್ ಮತ್ತು ಪೂರ್ವ ಏಷ್ಯಾ ದೇಶಗಳಲ್ಲಿ ಮಿಲಿಟರಿ ನೆಲೆಗಳನ್ನು ಸ್ಥಾಪಿಸಿತು. ಅಮೆರಿಕಾದ ಈ ಕ್ರಮಗಳು ಬಂಡವಾಳದ ತೀರ ಹಿನ್ನೆಡೆಯನ್ನು ಕಂಡಿದ್ದ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಡಾಲರ್‌ನ ಚಲಾವಣೆ ತುಂಬಿಕೊಳ್ಳುವಂತೆ ಮಾಡಿದೆ. ಶೀತಲ ಸಮರದ ಸಂದರ್ಭದಲ್ಲಿ ನಡೆದ ಎರಡು ಯುದ್ಧಗಳು -ವಿಯೆಟ್ನಾಂ ಮತ್ತು ಕೋರಿಯಾ, ಜಪಾನ್ ಮತ್ತು ದಕ್ಷಿಣ ಕೋರಿಯಾ ದೇಶಗಳ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿವೆ. ತೃತೀಯ ಜಗತ್ತಿನ ರಾಷ್ಟ್ರಗಳು ಕೂಡ ತಕ್ಕಮಟ್ಟಿನ ಅಭಿವೃದ್ಧಿಯನ್ನು ಇದೇ ಸಂದರ್ಭದಲ್ಲಿ ಕಂಡಿದ್ದವು. ಇದಕ್ಕೆ ಮುಖ್ಯ ಕಾರಣ ಬಹುತೇಕ ಅಭಿವೃದ್ಧಿಶೀಲ ರಾಷ್ಟ್ರಗಳು ಮತ್ತೆ ಮಾರುಕಟ್ಟೆಯ ಬದಲು ಒಂದು ರೀತಿಯ ಮಿಶ್ರ ಆರ್ಥಿಕ ನೀತಿಗಳನ್ನು ಅನುಸರಿಸಿದ್ದಾಗಿದೆ. ಇಲ್ಲಿ ಸಾರ್ವಜನಿಕ ಮತ್ತು ಖಾಸಗಿ ಬಂಡವಾಳ ಜತೆಜತೆಯಾಗಿ ಕಾರ್ಯ ನಿರ್ವಹಿಸಬೇಕಿತ್ತು ಮತ್ತು ವಿದೇಶ ಬಂಡವಾಳದ ನೇರ ವಿನಿಯೋಜನೆಯನ್ನು ಪ್ರೋ ಕಾರ್ಯ ಕ್ರಮಗಳಿರಲಿಲ್ಲ. ಜೊತೆಗೆ ಆಮದನ್ನು ನಿಯಂತ್ರಿಸುವ ಮತ್ತು ರಫ್ತನ್ನು ಪ್ರೋ ಅಂತಾರಾಷ್ಟ್ರೀಯ ವ್ಯಾಪಾರ ನೀತಿಗೆ ಒತ್ತುಕೊಡಲಾಯಿತು. ಇವೆಲ್ಲವು ಶೀತಲ ಸಮರದ ಸಂದರ್ಭದಲ್ಲಿ ರಾಜಕೀಯ ಸ್ಥಿರತೆಯನ್ನು ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದ ದೊಡ್ಡ ಸಂಗತಿಗಳಾಗಲಿಲ್ಲ. ಈ ತಂತ್ರದಿಂದಾಗಿ ಪ್ರತಿ ತೃತೀಯ ಜಗತ್ತಿನ ರಾಷ್ಟ್ರದಲ್ಲೂ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿನ ಮಧ್ಯಮ ವರ್ಗಗಳನ್ನು ಹೋಲುವ ಒಂದು ಪ್ರತಿಷ್ಠಿತ ವರ್ಗ ರೂಪುಗೊಳ್ಳಲು ಅನುಕೂಲವಾಯಿತು ಮತ್ತು ಪ್ರಚಲಿತದಲ್ಲಿರುವ ಜಾಗತೀಕರಣಕ್ಕೆ ಮಾರುಕಟ್ಟೆಯಾಗಿ ಕೆಲಸ ಮಾಡುತ್ತಿರುವುದು ಕೂಡ ಈ ರೀತಿಯ ಆಧುನೀಕರಣ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಸ್ವಲ್ಪ ಮಟ್ಟಿಗೆ ಆಧುನೀಕರಣವನ್ನು ಮೈಗೂಡಿಸಿಕೊಂಡಿರುವ ಈ ವರ್ಗವೇ.

ಒಟ್ಟಾರೆಯಾಗಿ ಹೇಳುವುದಾದರೆ ೧೯೪೫ ಮತ್ತು ೧೯೭೦ರ ನಡುವೆ ನಡೆದ ಶೀತಲ ಸಮರ, ಪರಮಾಣು ಯುದ್ಧ ತಂತ್ರಗಾರಿಕೆಯ ಸ್ಪರ್ಧೆ, ಅವುಗಳ ಮಧ್ಯೆ ಅಮೆರಿಕಾ ನಡೆಸಿದ ಕೆಲವು ಯುದ್ಧಗಳು ಕೇವಲ ರಾಜಕೀಯ ಕಾರಣಗಳಿಂದಾಗಿ ಆಗಿದೆ ಎನ್ನುವಂತಿಲ್ಲ. ಇವುಗಳ ಹಿಂದೆ ಬಂಡವಾಳದ ಜಾಗತೀಕರಣವನ್ನು ಗಟ್ಟಿಗೊಳಿಸುವ ತಂತ್ರಗಾರಿಕೆಯು ಇತ್ತು ಎನ್ನ ಬಹುದು. ಆದರೆ ಈ ಬೆಳವಣಿಗೆಗಳನ್ನು ಕೇವಲ ನಕಾರಾತ್ಮಕ ದೃಷ್ಟಿಯಿಂದಲೇ ನೋಡ ಬೇಕೆಂದೇನಿಲ್ಲ. ಯಾಕೆಂದರೆ ಈ ಅವಧಿಯಲ್ಲಿ ಪ್ರಪಂಚದ ಬಹುತೇಕ ಪ್ರದೇಶಗಳಲ್ಲಿನ ಜನರ ಸಾಮಾಜಿಕ ಮತ್ತು ಆರ್ಥಿಕ ಬದುಕಿನಲ್ಲಿ ತಕ್ಕಮಟ್ಟಿನ ಪರಿವರ್ತನೆಯಾಗಿದೆ. ಶ್ರೀಮಂತ ದೇಶಗಳು ತಮ್ಮ ಶ್ರಮಿಕ ವರ್ಗವನ್ನು ಹತೋಟಿಯಲ್ಲಿಡುವ ಉಪಕ್ರಮವಾಗಿ ವೆಲ್‌ಫೇರ್ ಸ್ಟೇಟಿನ ಪರಿಕಲ್ಪನೆಗೆ ಒತ್ತು ನೀಡಿದ್ದವು. ಇದು ಮತ್ತು ಇತರ ಕಾರ್ಯಕ್ರಮಗಳು ಉತ್ಪಾದನೆ ಮತ್ತು ಮಾರುಕಟ್ಟೆ ವಿಸ್ತರಣೆಯಲ್ಲಿ ಖಚಿತ ಪಾತ್ರವಹಿಸಿವೆ. ಆದುದರಿಂದಲೇ ೧೯೫೦ ಮತ್ತು ೧೯೭೦ರ ನಡುವೆ ಸರಕು ಮತ್ತು ಸೇವೆಗಳ ಉತ್ಪಾದನೆ ನಾಲ್ಕು ಪಟ್ಟು ಹೆಚ್ಚಿದೆ ಮತ್ತು ಅಂತಾರಾಷ್ಟ್ರೀಯ ವ್ಯಾಪಾರ ಹತ್ತುಪಟ್ಟು ವೃದ್ಧಿಗೊಂಡಿತ್ತು. ಇದರ ಸಾಧ್ಯತೆಯಲ್ಲಿ ಬಂಡವಾಳದ ಜಾಗತೀಕರಣದ ಪಾತ್ರವನ್ನು ಕೂಡ ಅಲ್ಲಗಳೆಯುವಂತಿಲ್ಲ. ಅಭಿವೃದ್ಧಿಶೀಲ ರಾಷ್ಟ್ರಗಳು, ಶ್ರೀಮಂತ ರಾಷ್ಟ್ರಗಳು ಉತ್ಪಾದಿಸುವ ಕ್ಯಾಪಿಟಲ್ ಗೂಡ್ಸ್‌ಗಳಿಗೆ ಮಾರುಕಟ್ಟೆ ಒದಗಿಸಿದರೆ, ಬಂಡವಾಳದ ಕುಸಿತದಿಂದ ಆಗ ತಾನೇ ಚೇತರಿಸುತ್ತಿದ್ದ ಯುರೋಪಿನ ರಾಷ್ಟ್ರಗಳು ಅಮೆರಿಕಾದ ಅನುಭೋಗ ಶೈಲಿಯನ್ನು ಅನುಕರಿಸುವ ನಿಟ್ಟಿನಲ್ಲಿ ಖಾಸಗಿ ಕಾರು, ಪ್ರವಾಸೋದ್ಯಮ, ಟೆಲಿಫೋನ್, ವಾಷಿಂಗ್ ಮಿಷಿನ್ ಮುಂತಾದವುಗಳಿಗೆ ಮಾರುಕಟ್ಟೆ ಒದಗಿಸಿವೆ. ಈ ಅವಧಿಯಲ್ಲಿ ಪ್ರಪಂಚದ ಹಲವಾರು ರಾಷ್ಟ್ರಗಳು ಕೃಷಿ ಪ್ರಧಾನ ಆರ್ಥಿಕ ವ್ಯವಸ್ಥೆಯಿಂದ ಕೈಗಾರಿಕೀಕರಣದತ್ತ ಚಲಿಸಿವೆ.

ಬಂಡವಾಳದ ಈ ಸ್ವರ್ಣಯುಗ ಹೆಚ್ಚು ಸಮಯ ಮುಂದುವರಿಯಲಿಲ್ಲ. ೧೯೭೩ರ ನಂತರ ಅಂತಾರಾಷ್ಟ್ರೀಯ ಆರ್ಥಿಕ ಬೆಳವಣಿಗೆಗಳು ಹಂತಹಂತವಾಗಿ ಬಂಡವಾಳದ ಕುಸಿತವನ್ನು ತಂದವು. ಇದರಲ್ಲಿ ಅಮೆರಿಕಾದ ಪಾತ್ರ ಮಹತ್ತರವಾದುದು. ಮಹಾಯುದ್ಧದ ನಂತರ ಜಾಗತಿಕ ವ್ಯವಸ್ಥೆ ಬಹುಮಟ್ಟಿಗೆ ಅಮೆರಿಕಾದಿಂದ ಹೇರಲ್ಪಟ್ಟ ವ್ಯವಸ್ಥೆಯಾಗಿತ್ತು. ಆ ಹೊತ್ತಿಗಾಗಲೇ ಅಮೆರಿಕಾ ಶಸ್ತ್ರಾಸ್ತ್ರ ಸಂಗ್ರಹಣೆ,

ಉತ್ಪಾದನಾ ಸಾಮರ್ಥ್ಯ ಮತ್ತು ಆರ್ಥಿಕ ಬಲಗಳ ಮೂಲಕ ಇತರ ಬಂಡವಾಳಶಾಹಿ ದೇಶಗಳ ಆರ್ಥಿಕ ನೀತಿಗಳ ಮೇಲೆ ತನ್ನ ಪ್ರಭಾವ ಬೀರಲು ಶಕ್ತವಾಗಿತ್ತು. ಬ್ರಿಟನ್ ವೂಡ್ಸ್ ಒಪ್ಪಂದದಿಂದ ಮೊದಲಿದ್ದ ಸ್ವರ್ಣ ಪರಿಮಾಣ ಪದ್ಧತಿಯ ಜಾಗದಲ್ಲಿ ಅಮೆರಿಕಾ ಡಾಲರ್ ಜಗತ್ತಿನ ಮುಖ್ಯ ನಾಣ್ಯವೆಂಬ ಹೆಗ್ಗಳಿಕೆ ಜೊತೆಗೆ ಸೆಂಟ್ರಲ್ ಬ್ಯಾಂಕುಗಳು ತಾವು ಹೊಂದಿರುವ ಡಾಲರ್‌ಗಳಿಗೆ ಬದಲಾಗಿ ಚಿನ್ನವನ್ನು ಪಡೆಯಬಹುದೆಂಬ ಅಮೆರಿಕಾದ ಭರವಸೆಯಿಂದ ಡಾಲರ್‌ಗಳ ಮಹತ್ವ ಇನ್ನಷ್ಟು ಹೆಚ್ಚಾಯಿತು. ಹೀಗೆ ಪರಿಸ್ಥಿತಿಯನ್ನು ಸಂಪೂರ್ಣವಾಗಿ ತನ್ನ ಹಿಡಿತಕ್ಕೆ ತೆಗೆದುಕೊಂಡ ಅಮೆರಿಕಾ, ಇಂಗ್ಲೆಂಡ್ ತನ್ನ ಉಚ್ಛ್ರಾಯದ ದಿನಗಳಲ್ಲಿ ಮಾಡಿದಂತೆ ತಾನು ಮುಕ್ತ ಮಾರುಕಟ್ಟೆ ಮತ್ತು ಮುಕ್ತ ವ್ಯಾಪಾರ ನೀತಿಗಳನ್ನು ವಿಸ್ತರಿಸಲು ಯತ್ನಿಸುವುದು, ಸಾಮ್ರಾಜ್ಯವಾದಿ ಹಿಡಿತದಿಂದ ತಪ್ಪಿಸಿಕೊಳ್ಳಲು ಯತ್ನಿಸುವ ದೇಶಗಳನ್ನು ಯುದ್ಧ ಮತ್ತು ಇತರ ಕ್ರಮಗಳಿಂದ ಮರಳಿ ವಶಕ್ಕೆ ತೆಗೆದುಕೊಳ್ಳುವುದು ಮುಂತಾದವುಗಳ ಮೂಲಕ ತನ್ನ ಯಜಮಾನಿಕೆಯನ್ನು ಸಾಧಿಸುತ್ತಿತ್ತು. ಆದರೆ ೧೯೬೦ರಂತೆ ಇತರ ಬಂಡವಾಳಶಾಹಿ ದೇಶಗಳು ಮುಖ್ಯವಾಗಿ ಜರ್ಮನಿ ಮತ್ತು ಜಪಾನ್ ತಮ್ಮ ಆರ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡದುದಲ್ಲದೆ ಅಂತರ್‌ರಾಷ್ಟ್ರೀಯ ವ್ಯಾಪಾರ ಮತ್ತು ಹಣಕಾಸಿಗೆ ಸಂಬಂಧಿಸಿದ ಅಮೇರಿಕಾದ ಅಧಿಪತ್ಯವನ್ನು ಪ್ರಶ್ನಿಸತೊಡಗಿದವು. ಡಾಲರ್‌ಗಿದ್ದ ವಿಶೇಷ ಸ್ಥಾನಮಾನಗಳನ್ನು ಅಮೆರಿಕಾ ತನ್ನ ಸ್ವಂತದ ಲಾಭಕ್ಕಾಗಿ ಉಪಯೋಗಿಸುತ್ತಿದ್ದ ರೀತಿಯಿಂದಾಗಿಯೂ ಪ್ರಬಲ ಮಿಲಿಟರಿ ದೇಶಗಳ ಮಧ್ಯದ ಸಾಮರಸ್ಯ ಇನ್ನಷ್ಟು ಹದಗೆಟ್ಟಿತ್ತು. ಯುದ್ಧಗಳಲ್ಲಿ ತೊಡಗುವುದು, ಮಿಲಿಟರಿ ನೆಲೆಗಳನ್ನು ಬೆಳೆಸುವುದು, ಗಿರಾಕಿ ರಾಷ್ಟ್ರಗಳಿಗೆ ಹಣ ಒದಗಿಸು ವುದು ಮತ್ತು ಬಹುರಾಷ್ಟ್ರೀಯ ಕಂಪನಿಗಳ ವಿದೇಶಿ ಶಾಖೆಗಳಲ್ಲಿ ಹಣ ತೊಡಗಿಸು ವುದು ಮುಂತಾದ ಕಾರಣಗಳಿಂದಾಗಿ ಆಗಾಧ ಮಟ್ಟದ ಡಾಲರ್ ಹೊರ ದೇಶಗಳಲ್ಲಿ ಜಮಾಯಿಸತೊಡಗಿತು. ಹೀಗೆ ಮಾಡುವಾಗ ಅಮೆರಿಕಾ ವಿದೇಶಗಳಲ್ಲಿ ಸಂಗ್ರಹವಾದ ಡಾಲರ್‌ಗಳ ಮೌಲ್ಯಕ್ಕೆ ಸಮಾನವಾದ ಚಿನ್ನ ಹೊಂದಿರುವುದಾಗಿ ತಾನು ಈ ಹಿಂದೆ ನೀಡಿದ್ದ ವಾಗ್ದಾನವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿತು. ಅಮೆರಿಕಾ ತನ್ನಲ್ಲಿರುವ ಚಿನ್ನ ಕಡಿಮೆ ಯಾದಂತೆ ಐಎಮ್ಎಫ್‌ನ ಒಡಂಬಡಿಕೆಗೆ ಅನುಗುಣವಾಗಿ ತಾನು ನೀಡಿದ್ದ ವಾಗ್ದಾನವನ್ನು ಏಕಪಕ್ಷೀಯವಾಗಿ ಹಿಂತೆಗೆದುಕೊಂಡಿತು. ಈ ಬೆಳವಣಿಗೆಯಿಂದ ಅಮೆರಿಕಾ ಆವರೆಗೂ ಹೊಂದಿದ್ದ ಅನುಕೂಲಕರ ವ್ಯವಸ್ಥೆ ಕೊನೆಗೊಳ್ಳಲಿದೆ ಎಂದು ಅನೇಕರು ಭಾವಿಸಿದ್ದರು. ಆದರೆ ಹಾಗಾಗಲಿಲ್ಲ. ಆ ವೇಳೆಗೆ ಹೊರದೇಶಗಳಲ್ಲಿ ಮುಖ್ಯವಾಗಿ ಆ ದೇಶಗಳಲ್ಲಿನ ಸೆಂಟ್ರಲ್ ಬ್ಯಾಂಕುಗಳ ಬೊಕ್ಕಸಗಳಲ್ಲಿ ಡಾಲರ್‌ನ ಶೇಖರಣೆ ಎಷ್ಟು ಬೆಳೆದಿತ್ತು ಎಂದರೆ ಡಾಲರ್‌ನ ಮೌಲ್ಯ ಕುಸಿದರೆ ಅವು ಅಪಾರ ನಷ್ಟ ಅನುಭವಿಸಬೇಕಾದ ಸ್ಥಿತಿಯಿತ್ತು. ಹೀಗಾಗಿ ಅಂತಹ ದೇಶಗಳು ಡಾಲರಿನ ಮೌಲ್ಯಕ್ಕೆ ಬೆದರಿಕೆ ಒಡ್ಡುವ ಸ್ಥಿತಿಯಲ್ಲಿರಲಿಲ್ಲ. ಪರಿಣಾಮ ವಾಗಿ ೧೯೭೧ರ ನಂತರ ಅಮೆರಿಕಾ ಮೊದಲಿನಂತೆಯೇ ಡಾಲರನ್ನು ಹರಿಯಬಿಡಲಾರಂಭಿಸಿತು. ಆದರೆ ಈ ಸ್ಥಿತಿ ಹೆಚ್ಚು ಸಮಯ ಬಾಳುವಂತಾಗಿರಲಿಲ್ಲ. ಆದುದರಿಂದಲೇ ೧೯೭೩ರ ಹೊತ್ತಿಗೆ ಈ ಪ್ರಮುಖ ದೇಶಗಳು ಅಂತಾರಾಷ್ಟ್ರೀಯ ಹಣಕಾಸಿನ ವಹಿವಾಟಿನಲ್ಲಿ ಮುಕ್ತ ವಿನಿಮಯ ದರಗಳನ್ನು ಜಾರಿಗೆ ತರಲೇಬೇಕಾಯಿತು. ಬೆಲೆಗಳ ಏರುಪೇರುಗಳನ್ನು ಅವಲಂಬಿಸಿ ಲಾಭ ಗಳಿಸುವ ಚಟುವಟಿಕೆಗಳನ್ನು ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಅನಿಯಂತ್ರಿತವಾಗಿ ಹಬ್ಬಲು ಇದು ಎಡೆಮಾಡಿಕೊಟ್ಟಿತು. ವಿನಿಮಯ ದರಗಳನ್ನು ಸ್ಪರ್ಧಾತ್ಮಕ ವ್ಯಾಪಾರದ ಸಾಧನವನ್ನಾಗಿ ಉಪಯೋಗಿಸಲು ಇದು ಎಡೆಮಾಡಿಕೊಟ್ಟಿತು. ಇದರಿಂದಾಗಿ ದೇಶದೇಶಗಳ ನಡುವಿನ ಬಂಡವಾಳದ ಚಲನೆಯಲ್ಲಿ ವಿಪರೀತ ಏರುಪೇರುಗಳು ಕಾಣಿಸಿಕೊಂಡವು. ಮಾತ್ರವಲ್ಲದೆ ಮುಂದುವರಿದ ಬಂಡವಾಳಶಾಹಿ ದೇಶಗಳ ನಡುವೆ ದೊಡ್ಡ ಮಟ್ಟದ ಕರೆಂಟ್ ಅಕೌಂಟ್ ಅಸಮತೋಲನಕ್ಕೂ ಇದು ದಾರಿಮಾಡಿಕೊಟ್ಟಿತು.

ಅಮೆರಿಕಾ ತನ್ನ ಅಧಿಪತ್ಯದ ಉಳಿವಿಗಾಗಿ ಡಾಲರ್‌ನ ಪ್ರವಾಹ ಹರಿಸುವುದರೊಂದಿಗೆ ಹಲವಾರು ಶ್ರೀಮಂತ ರಾಷ್ಟ್ರಗಳು ಸಂದಾಯ ಶುಲ್ಕ ಸಮಸ್ಯೆ ಎದುರಿಸಬೇಕಾಯಿತು. ಇದೇ ಸಂದರ್ಭದಲ್ಲಿ ತಲೆದೋರಿದ ತೈಲ ಬಿಕ್ಕಟ್ಟು (ಆಯಿಲ್ ಕ್ರೈಸಿಸ್ ) ಈ ಬ್ಯಾಲೆನ್ಸ್ ಆಫ್ ಪೇಮೆಂಟ್ ಸಮಸ್ಯೆಯನ್ನು ಜಾಗತೀಕರಣಗೊಳಿಸುವಲ್ಲಿ ಸಹಕರಿಸಿತು. ೧೯೭೦ರ ನಂತರ ಪೆಟ್ರೋಲಿಯಂ ಪದಾರ್ಥವನ್ನು ಉತ್ಪಾದಿಸುವ ಮಧ್ಯಪೂರ್ವ ಅರಬ್ ರಾಷ್ಟ್ರಗಳು ಒಂದಾಗಿ ಪೆಟ್ರೋಲಿಯಂ ರಫ್ತು ಮಾಡುವವರ ಒಂದು ಒಕ್ಕೂಟವನ್ನು ರಚಿಸಿಕೊಂಡರು (ಒ.ಪಿ.ಇ.ಸಿ). ಈ ಒಕ್ಕೂಟದ ಉದ್ದೇಶ ಪೆಟ್ರೋಲಿಯಂ ಪದಾರ್ಥಗಳ ಪೂರೈಕೆಯನ್ನು ನಿಯಂತ್ರಿಸುವುದರ ಮೂಲಕ ಅದರ ಮಾರುಕಟ್ಟೆ ಮತ್ತು ಬೆಲೆಗಳ ಮೇಲೆ ಪ್ರಭಾವ ಬೀರುವುದು. ಇದರಿಂದಾಗಿ ಒಮ್ಮಿಂದೊಮ್ಮೆಲೆ ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿತು. ಇದು ಪ್ರಪಂಚದ ಎಲ್ಲಾ ದೇಶಗಳ ವಿದೇಶಿ ವಿನಿಮಯದ ಮೇಲೆ ಗಾಢವಾದ ಪರಿಣಾಮ ಬೀರಿತು. ಅದರಲ್ಲೂ ತೃತೀಯ ಜಗತ್ತಿನ ಅಭಿವೃದ್ಧಿಶೀಲ ರಾಷ್ಟ್ರಗಳು ಈ ಹೊರೆಯನ್ನು ತಮ್ಮ ರಫ್ತಿನಿಂದ ಬರುವ ಆದಾಯದಿಂದ ಬರಿಸುವ ಸಾಧ್ಯತೆಯಿರಲಿಲ್ಲ. ಇದು

ಅವರ ವಿದೇಶಿ ವಿನಿಮಯದ ಕೊರತೆಯನ್ನು ಉಲ್ಬಣಗೊಳಿಸಿತು. ಬ್ಯಾಲೆನ್ಸ್ ಆಫ್ ಪೇಮೆಂಟ್ ಸಮಸ್ಯೆಯಿಂದ ಹೊರಬರಲು ಅವರಿಗಿದ್ದ ದಾರಿಯೆಂದರೆ ಪೆಟ್ರೋಲಿಯಂ ಪದಾರ್ಥಗಳ ಬಳಕೆಯನ್ನು ಕಡಿಮೆಗೊಳಿಸುವುದು ಅಥವಾ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಸಾಲ ಮಾಡುವುದು. ಮೊದಲಿನ ಆಯ್ಕೆ ಅಂದರೆ ಪೆಟ್ರೋಲಿಯಂ ಬಳಕೆ ಕಡಿಮೆಗೊಳಿಸುವ ಸಾಧ್ಯತೆ. ಅವರುಗಳು ಅನುಸರಿಸುತ್ತಿದ್ದ ಅಭಿವೃದ್ಧಿ ಮಾದರಿ ಮತ್ತು ಅದು ಅವರಲ್ಲಿ ಅಭಿವ್ಯಕ್ತಗೊಂಡ ಕ್ರಮದಿಂದಾಗಿ ಇದು ಸಾಧ್ಯವಿರಲಿಲ್ಲ. ಇನ್ನುಳಿದ ಮಾರ್ಗವೆಂದರೆ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಸಾಲಮಾಡುವುದು. ಇದನ್ನು ಹೊರತುಪಡಿಸಿದ ಮತ್ತೊಂದು ಸಾಧ್ಯತೆಯಿತ್ತು ಮತ್ತು ಅದು ಸಾಧ್ಯವಾಗುತ್ತಿದ್ದರೆ ಇಂದು ಅಂತಾರಾಷ್ಟ್ರೀಯ ಆರ್ಥಿಕ ಸ್ಥಿತಿ ಭಿನ್ನವಾಗಿರುತ್ತಿತ್ತು. ಅದೇನೆಂದರೆ ಈ ಅರಬ್ ರಾಷ್ಟ್ರಗಳು ತಮ್ಮ ಬೊಕ್ಕಸಕ್ಕೆ ಹರಿಯುತ್ತಿದ್ದ ಪೆಟ್ರೋಲಿಯಂ ಡಾಲರ್‌ಗಳನ್ನು ಒಂದೋ ತಮ್ಮ ಸೆಂಟ್ರಲ್ ಬ್ಯಾಂಕುಗಳಲ್ಲಿ ಜಮಾಯಿಸು ವುದು ಅಥವಾ ಅರಬ್ ರಾಷ್ಟ್ರಗಳೆಲ್ಲಾ ಸೇರಿ ಈ ಪೆಟ್ರೋ ಡಾಲರ್‌ಗಳ ವ್ಯವಹಾರಕ್ಕೆ ಒಂದು ಬ್ಯಾಂಕನ್ನು ತೆರೆದು ಬಡರಾಷ್ಟ್ರಗಳಿಗೆ ಸಾಲ ಕೊಡುತ್ತಿದ್ದರೆ ಬೇರೆಯದೆ ರೀತಿಯ ಬೆಳವಣಿಗೆಯಾಗುತ್ತಿತ್ತು. ಆದರೆ ಈ ರೀತಿ ಆಗಲಿಲ್ಲ. ಅರಬ್ ರಾಷ್ಟ್ರಗಳು ತಮ್ಮ ಪೆಟ್ರೋಡಾಲರ್‌ಗಳನ್ನು ಅಮೆರಿಕಾ ಮತ್ತು ಯುರೋಪಿಯನ್ ಬ್ಯಾಂಕುಗಳಲ್ಲಿ ಜಮಾಯಿಸುವುದು ಈಗಾಗಲೇ ಅತಿ ಚಲಾವಣೆಯಲ್ಲಿದ್ದ ಡಾಲರಿನ ಸಂಗ್ರಹ ಇನ್ನು ಹೆಚ್ಚಾಗುವಂತೆ ಮಾಡಿತು. ಜೊತೆಗೆ ಬಡರಾಷ್ಟ್ರಗಳಿಗೆ ಸಾಲದ ಒಂದು ಹೊಸ ಮೂಲ ಕೂಡ ಇಲ್ಲದಾಯಿತು. ೧೯೮೦ರ ಹೊತ್ತಿಗೆ ಈ ಸಮಸ್ಯೆ ಬಿಗಡಾಯಿಸಿ ಅಭಿವೃದ್ಧಿಶೀಲ ರಾಷ್ಟ್ರಗಳು ಬ್ಯಾಲೆನ್ಸ್ ಆಫ್ ಪೇಮೆಂಟ್ ಸಮಸ್ಯೆಯಿಂದ ಹೊರಬರಲು ವಿದೇಶಿ ಸಾಲಕ್ಕಾಗಿ ವಿಶ್ವಬ್ಯಾಂಕನ್ನು ಕೋರುವುದು ಅನಿವಾರ್ಯವಾಯಿತು. ಆ ಸಂದರ್ಭದಲ್ಲಿ ವಿಶ್ವಬ್ಯಾಂಕು ಹೊಸ ಸಾಲ ಮಂಜೂರು ಆಗಬೇಕಿದ್ದರೆ ಸಾಲಕ್ಕೆ ಅರ್ಜಿ ಸಲ್ಲಿಸುವ ದೇಶಗಳು ತಮ್ಮ ಆರ್ಥಿಕ ಮಿತಿಯಲ್ಲಿ ಆಮೂಲಾಗ್ರ ಪರಿವರ್ತನೆಯನ್ನು ಮಾಡಿಕೊಳ್ಳಬೇಕೆಂಬ ಷರತ್ತನ್ನು ಇಟ್ಟಿತು. ಖಾಸಗಿ ಬಂಡವಾಳಕ್ಕೆ ಪ್ರಾಮುಖ್ಯತೆ ಕೊಡುವುದು, ವಿದೇಶ ಬಂಡವಾಳದ ಮೇಲಿನ ನಿರ್ಬಂಧವನ್ನು ಕಡಿಮೆಗೊಳಿಸುವುದು, ಸಹಾಯಧನ ಮೂಲಕ ದೇಶೀ ಬಂಡವಾಳ ರಕ್ಷಿಸುವ ಕ್ರಮವನ್ನು ಕಡಿಮೆಗೊಳಿಸುವುದು, ಇವೇ ಮುಂತಾದ ನೀತಿಗಳಿಗೆ ಒತ್ತುಕೊಡುವ ರೀತಿಯಲ್ಲಿ ತನ್ನ ಆರ್ಥಿಕ ನೀತಿಗಳನ್ನು ಬದಲಾಯಿಸಿಕೊಳ್ಳಬೇಕೆಂದು ವಿಶ್ವಬ್ಯಾಂಕು ಸೂಚಿಸಿತು. ತಮ್ಮ ಬ್ಯಾಲೆನ್ಸ್ ಆಫ್ ಪೇಮೆಂಟ್ ಸಮಸ್ಯೆಯಿಂದ ಹೊರಬರಲು ಮತ್ತು ಮುಂದಿನ ಅಭಿವೃದ್ಧಿಗೆ ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಲ್ಲಿ ಗೌರವ ಉಳಿಸಿಕೊಳ್ಳುವ ನೆಲೆಯಲ್ಲಿ ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಈ ಷರತ್ತುಗಳನ್ನು ಒಪ್ಪಿಕೊಳ್ಳುವುದು ಅನಿವಾರ್ಯವಾಗಿತ್ತು. ಈ ರೀತಿಯಲ್ಲಿ ಎಸ್.ಎ.ಪಿ.ಗಳನ್ನು ಪ್ರಪಂಚದ ಎಲ್ಲಾ ದೇಶಗಳ ಅದರಲ್ಲೂ ಅಭಿವೃದ್ಧಿ ಶೀಲ ದೇಶಗಳ ಮೇಲೆ ಹೇರಲಾಯಿತು ಮತ್ತು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಆರ್ಥಿಕ ನೀತಿಗಳಲ್ಲಿ ಮಾಡಿಕೊಂಡ ಬದಲಾವಣೆಗಳು ಬಂಡವಾಳದ ಜಾಗತೀಕರಣಕ್ಕೆ ಅನುಕೂಲವಾದ ವಾತಾವರಣ ಸೃಷ್ಟಿಸಿದವು.

<u>ಪರಾಮರ್ಶನ ಗ್ರಂಥಗಳು</u>


೧. ಕಾರ್ಲ್‌ಪೊಲಾನಿಯ, ೧೯೫೭. **ದಿ ಗ್ರೇಟ್ ಟ್ರಾನ್ಸ್‌ಫಾರ್ಮೇಷನ್,** ಬೋಸ್ಟನ್, ಬೆಕನ್ ಪ್ರೆಸ್

೨. ಡ್ರಾಫ್ ಹೆನ್ರಿ ಮ್ಯಾಗ್, ೧೯೯೭, **ಸಾಮ್ರಾಜ್ಯವಾದದ ಪರಿಕಲ್ಪನೆ ಎಷ್ಟು ಪ್ರಸ್ತುತ?** ಮಂತ್ಲಿ ರಿವ್ಯೆ, ಸೆಪ್ಟೆಂಬರ್ ೧೯೯೩, ಅನುವಾದ: ವಸಂತ ಬನ್ನಾಡಿ, ಸಂಸ್ಕೃತಿ ಚಿಂತನೆ, ಮಂಗಳಗಂಗೋತ್ರಿ: ಅರಿವು ಬರಹ ಪ್ರಕಾಶನ.

೩. ಎರಿಕ್ ಹಾಬ್ಸ್‌ವಾಮ್, ೧೯೭೫, **ದಿ ಏಜ್ ಆಫ್ ಕ್ಯಾಪಿಟಲ್, ಗ್ರೇಟ್ ಬ್ರಿಟನ್,** ಸ್ಪಿಯರ್ ಬುಕ್ಸ್

೪. ಇಮ್ಯಾನ್‌ವಲ್ ವೆಲರ್‌ಸ್ಟೇನ್, ೧೯೭೯. **ದಿ ಕ್ಯಾಪಿಟಲಿಸ್ಟ್ ವರ್ಲ್ಡ್ ಎಕಾನಮಿ,** ಲಂಡನ್: ಕೇಂಬ್ರಿಡ್ಜ್ ಯುನಿವರ್ಸಿಟಿ ಪ್ರೆಸ್,

# ೨೭ ಜಾಗತೀಕರಣ ಇತ್ತೀಚಿನ ಆಯಾಮಗಳು

ಇತ್ತೀಚಿನ ದಿನಗಳಲ್ಲಿ ಬಹುಚರ್ಚೆಗೆ ಒಳಗಾಗುತ್ತಿರುವ ಮತ್ತು ಜಗತ್ತಿನಾದ್ಯಂತ ಕಂಡುಬರುವ ಹಲವಾರು ಸಾಮಾಜಿಕ ರಾಜಕೀಯ ಮತ್ತು ಸಾಂಸ್ಕೃತಿಕ ಪಲ್ಲಟಗಳಿಗೆ ಮೂಲವೆಂದು ತಿಳಿಯಲಾಗಿರುವ ಸಂಗತಿಗಳಲ್ಲಿ ಜಾಗತೀಕರಣ ಬಹುಮುಖ್ಯವಾದುದು. ಹಾಗೆಂದು ಜಾಗತೀಕರಣವೆಂದರೆ ಏನು, ಇದನ್ನು ಯಾವ ರೀತಿಯಲ್ಲಿ ವ್ಯಾಖ್ಯಾನಿಸಬಹುದು, ಇಂತಹ ಒಂದು ಬದಲಾವಣೆ ಅಥವಾ ಬೆಳವಣಿಗೆಗೆ ಏನು ಕಾರಣವೆಂದು ಕೇಳಿದರೆ ಅದಕ್ಕೆ ನಿಖರವಾಗಿ, ಗೊಂದಲಗಳಿಗೆ ಎಡೆ ಮಾಡಿಕೊಡದೆ ಉತ್ತರಿಸಬಹುದಾದ ಪಂಡಿತರು ಸಿಗುವುದಿಲ್ಲ. ಹಲವಾರು ಗುಂಪಿನ, ಹಲವಾರು ತತ್ವಸಿದ್ಧಾಂತಗಳ ಪ್ರತಿಪಾದಕರು ತಮ್ಮ ಸಿದ್ಧಾಂತ ನಿಲುವುಗಳಿಗೆ ಅನುಸಾರವಾಗಿ ತಮ್ಮ ಮೂಗಿನ ನೇರಕ್ಕೆ ಸರಿಯಾಗಿ ಜಾಗತೀಕರಣವನ್ನು ವ್ಯಾಖ್ಯಾನಿಸುವ ಸ್ಥಿತಿಯನ್ನು ಕಾಣಬಹುದಾಗಿದೆ. ಆದರೆ ಸಮಗ್ರವಾಗಿ 'ಜಾಗತೀಕರಣ' ಎನ್ನುವ ವಿದ್ಯಮಾನ ಯಾವ ಕಾರಣದಿಂದ ಈ ರೀತಿಯಲ್ಲಿ ಅನಾವರಣಗೊಳ್ಳುತ್ತಿದೆ? ಇದರ ಹಿಂದಿರುವ ಚಾಲಕ ಶಕ್ತಿ ಯಾವುದು? ಇದೊಂದು ಪೂರ್ವಚರಿತ್ರೆ ಇಲ್ಲದ ಅನಿರೀಕ್ಷಿತ ಬೆಳವಣಿಗೆಯೇ? ಅಥವಾ ಅಭಿವೃದ್ಧಿಯ ಪಥದಲ್ಲಿ ವಿಶ್ವ ಹಾದು ಹೋಗಲೇಬೇಕಿರುವ ಒಂದು ಸ್ಥಿತಿಯಾಗಿ ಜಾಗತೀಕರಣವನ್ನು ಅರ್ಥಮಾಡಿ ಕೊಳ್ಳಬೇಕೇ? ಜಾಗತೀಕರಣ ಬೇರೆ ಬೇರೆ ದೇಶ, ಖಂಡಗಳ ಜನರ ಬದುಕಿನ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಉಂಟು ಮಾಡಬಹುದು? ಇಂತಹ ಒಂದು ಸ್ಥಿತಿಯನ್ನು ಯಾವ ರೀತಿಯಲ್ಲಿ ಸ್ವೀಕರಿಸಬೇಕು? ಇದರಿಂದ ನಮಗೆ ಒಳಿತಾಗಲಿದೆಯೇ ಅಥವಾ ನಷ್ಟವೇನಾದರೂ ಇದೆಯೇ? ದಿನ ನಿತ್ಯದ ಬದುಕಿನ ಮೇಲೆ ಜಾಗತೀಕರಣದ ಪರಿಣಾಮ ಯಾವ ರೀತಿಯಲ್ಲಿ ಆಗುತ್ತದೆ. ಇತ್ಯಾದಿ... ಇತ್ಯಾದಿ... ಪ್ರಶ್ನೆಗಳ ಬಗ್ಗೆ ಒಂದು ಪ್ರಯತ್ನವನ್ನು ಈ ಲೇಖನದಲ್ಲಿ ಮಾಡಲಾಗಿದೆ. ಆದರೆ ಈ ಲೇಖನದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಜಾಗತೀಕರಣದ ಬಗ್ಗೆ ವ್ಯಕ್ತವಾದ, ಅಭಿಪ್ರಾಯಗಳು ಮತ್ತು ವಿವಿಧ ಕೋನದಿಂದ ನಡೆಸಲಾದ ಚರ್ಚೆ ಮತ್ತು ಅಧ್ಯಯನಗಳನ್ನು ಅವಲಂಬಿಸಿ ಈ ಮೊದಲು ಎತ್ತಲಾದ ಪ್ರಶ್ನೆಗಳಿಗೆ ಉತ್ತರಿಸುವ ಪ್ರಯತ್ನ ಮಾಡಲಾಗಿದೆ. ಜಾಗತೀಕರಣದ ಬಗ್ಗೆ ಬಹಳಷ್ಟು ಅಧ್ಯಯನಗಳು, ಚರ್ಚೆಗಳು ಈಗಾಲೂ ಮುಂದುವರಿದಿದ್ದು ಒಂದು ನಿರ್ದಿಷ್ಟವಾದ ನಿಲುವಿಗೆ ಅಥವಾ ತೀರ್ಮಾನಕ್ಕೆ ಬರಲು ಸಾಧ್ಯವಾಗಿಲ್ಲ ಮತ್ತು ಅದು ಸಾಧುವೂ ಅಲ್ಲ.

ಜಾಗತೀಕರಣವೆನ್ನುವುದು ಸದ್ಯದ ಪರಿಸ್ಥಿತಿಯಲ್ಲಿ ಜಾಲ್ತಿಯಲ್ಲಿರುವ ವಿಷಯವಾದರೂ ಅದಕ್ಕೆ ಪೂರ್ವಚರಿತ್ರೆ ಇದೆ. ಈಗ ನಾವು ಜಾಗತೀಕರಣವೆಂದು ಯಾವ ಬೆಳವಣಿಗೆಯನ್ನು ಗುರುತಿಸುತ್ತೇವೋ ಅದು ಬಹಳ ಹಿಂದಿನಿಂದ ಆರಂಭವಾದ ಒಂದು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಿದ್ಧಾಂತದ ಮುಂದುವರಿಕೆಯಾಗಿದೆ. ಬೇರೆ ಬೇರೆ ಕಾರಣಗಳಿಂದ ಇದು ಇಂದು ನಾವು ಕಾಣುತ್ತಿರುವ ಅಥವಾ ಅನುಭವಿಸುತ್ತಿರುವ ಸ್ವರೂಪವನ್ನು ಪಡೆದು ಕೊಂಡಿದೆ. ಜಗತ್ತಿನಾದ್ಯಂತ ಜನರ ಮತ್ತು ಸಂಪತ್ತಿನ ಚಲನೆ ನಿರಂತರವಾಗಿ ಅಥವಾ ಅವ್ಯಾಹತವಾಗಿ ಲಾಗಾಯ್ತಿನಿಂದಲೂ ನಡೆದುಕೊಂಡು ಬಂದಿರುತ್ತದೆ.

ಪ್ರಮುಖವಾಗಿ ಇಂತಹ ಒಂದು ಬೆಳವಣಿಗೆಯನ್ನು ಐದು ಪ್ರಮುಖ ಹಂತಗಳಲ್ಲಿ ಕಾಣಬಹುದು. ಆ ಐದು ಹಂತಗಳೆಂದರೆ :

೧. ಚರಿತ್ರ ಪೂರ್ವಕಾಲ ಅಂದರೆ ಕ್ರಿ.ಪೂ.೧೦೦೦೦ ರಿಂದ ಕ್ರಿ.ಪೂ.೩೫೦೦ರ ನಡುವಿನ ಅವಧಿ.

೨. ಆಧುನಿಕ ಪೂರ್ವಕಾಲ ಅಂದರೆ ಕ್ರಿ.ಪೂ.೩೫೦೦ ರಿಂದ ಕ್ರಿ.ಶ.೧೫೦೦ರ ನಡುವಿನ ಅವಧಿ.

೩. ಆಧುನಿಕ ಕಾಲದ ಆರಂಭಿಕ ಹಂತ ಕ್ರಿ.ಶ.೧೫೦೦-೧೭೫೦ರ ನಡುವಿನ ಅವಧಿ

೪. ಆಧುನಿಕ ಯುಗ ಕ್ರಿ.ಶ.೧೭೫೦ ರಿಂದ ಕ್ರಿ.ಶ.೧೯೭೦ರವರೆಗಿನ ಕಾಲಾವಧಿ, ಮತ್ತು

೫. ವರ್ತಮಾನ ಕಾಲಾವಧಿ. ಕ್ರಿ.ಶ.೧೯೭೦ರ ನಂತರದ ಬೆಳವಣಿಗೆಗಳು.

ಹಾಗಾಗಿ ದೇಶ ದೇಶಗಳ ನಡುವೆ ನಡೆಯುವ ವ್ಯಾಪಾರ-ವಹಿವಾಟುಗಳು ಜನ ಮತ್ತು ಸಂಪತ್ತಿನ ದ್ವಿಮುಖ ಅಥವಾ ಬಹುಮುಖ ಹರಿಯುವಿಕೆ ಎನ್ನುವುದು ಹೊಸತಾದ ವಿಚಾರ ವೇನು ಅಲ್ಲ. ಆದರೆ ವಿವಿಧ ಹಂತಗಳಲ್ಲಿ ಇದ್ದಂತಹ ಸಂಬಂಧಗಳು ಮತ್ತು ಅಂತಹ ಸಂಬಂಧದ ಪರಿಣಾಮಗಳು ಒಂದೇ ಆಗಿಲ್ಲ ಎನ್ನುವುದನ್ನು 'ನಾವು' ಮುಖ್ಯವಾಗಿ ಗಮನಿಸಬೇಕು. ಒಂದು ಹಂತದಲ್ಲಿ ಅಲೆಮಾರಿಯಾಗಿದ್ದ ಮನುಷ್ಯ ಪ್ರಕೃತಿಯನ್ನು ಅವಲಂಬಿಸಿ, ಜೀವನ ನಿರ್ವಹಣೆ ಮಾಡುವ ಕಾಲದಲ್ಲಿ ಒಂದು ಭೂಭಾಗದಿಂದ ಇನ್ನೊಂದು ಭೂಭಾಗಕ್ಕೆ ಸಂಚರಿಸುತ್ತಿದ್ದ ಇಲ್ಲವೆ ವಲಸೆ ಹೋಗುತ್ತಿದ್ದ. ಆ ನಂತರದ ಕಾಲದಲ್ಲಿ ಒಂದೆಡೆ ನೆಲೆ ನಿಂತರೂ ಕುತೂಹಲ, ಹೊಸತನದ ಹಂಬಲ ವ್ಯಾಪಾರವೇ ಮುಂತಾದ ಕಾರಣಗಳಿಂದ ಸದಾ ಸಂಚಾರಿಯಾಗತೊಡಗಿದ. ಆನಂತರದ ಕಾಲದಲ್ಲಿ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ವ್ಯವಸ್ಥೆಗಳು ಒಂದು ಸಾಂಸ್ಥಿಕ ರೂಪ ಪಡೆದ ಸಮುದಾಯಗಳು ಸ್ನೇಹ ಮತ್ತು ಕದನ ಕಾರಣದಿಂದಲೂ ಸಂಚಾರ ಮಗ್ನರಾದದ್ದನ್ನು ಕಾಣಬಹುದು. ಈ ಹಂತದಲ್ಲಿ ಇವತ್ತು ನಾವು ಅಭಿವೃದ್ಧಿ ಶೀಲದೇಶಗಳು ಅಥವಾ ದಕ್ಷಿಣಾರ್ಧದ ದೇಶಗಳೆಂದು ಗುರುತಿಸುವ ಚೀನಾ, ಭಾರತ ಮತ್ತು ಆಸುಪಾಸಿನ ದೇಶಗಳಿಂದ ವಸ್ತುಗಳು, ಬೌದ್ಧಿಕ ಸಂಪತ್ತು ಪಶ್ಚಿಮದ ದೇಶಗಳೆಡೆಗೆ ವರ್ಗಾವಣೆ ಯಾಗುತ್ತಿತ್ತು. ಭಾರತ ಮತ್ತು ಚೀನಾಗಳಲ್ಲಿ ಅಸ್ತಿತ್ವದಲ್ಲಿದ್ದ ಉತ್ಪಾದನಾ ವ್ಯವಸ್ಥೆ, ಶೈಕ್ಷಣಿಕ ವಾತಾವರಣ, ವ್ಯಾಪಾರ ಜಗತ್ತಿನ ಇತರ ದೇಶಗಳಿಗೆ ಪ್ರಮುಖ ಆಕರ್ಷಣೆ ಯಾಗಿರುವುದನ್ನು ನಾವು ತಿಳಿಯಬಹುದಾಗಿದೆ. ಆದರೆ ಯುರೋಪ್‌ನಲ್ಲಿ ಆರಂಭವಾದ ಆಧುನಿಕತೆಯ ಪ್ರಭಾವ ಹೊಸ ರೀತಿಯ ಬೆಳವಣಿಗೆಗಳಿಗೆ ದಾರಿ ಮಾಡಿಕೊಟ್ಟಿತು. ಜ್ಞಾನಪರ್ವದ ಪರಿಣಾಮವಾಗಿ ಬೆಳಕು ಕಂಡು ಹೊಸ ಹೊಸ ಅನ್ವೇಷಣೆಗಳು ಯುರೋಪ್‌ನ ದೇಶಗಳಲ್ಲಿನ ಉತ್ಪಾದನಾ ವಿಧಾನದಲ್ಲಿ ಬದಲಾವಣೆಗಳನ್ನು ತಂದುವು. ಇದರ ಪರಿಣಾಮವಾಗಿ ತದನಂತರ ವಸಾಹತುಗಳು ಹುಟ್ಟಿಕೊಂಡವು. ವಸಾಹತೀಕರಣದ ಫಲವಾಗಿ ಒಂದು ಕಾಲದಲ್ಲಿ ಸಮೃದ್ಧವಾಗಿದ್ದ ಪೂರ್ವದ ದೇಶಗಳ ಸಂಪತ್ತು ಪಶ್ಚಿಮದ ದೇಶಗಳಿಗೆ ಹರಿದು ಹೋಗಿ, ಇಡೀ ಅರ್ಥವ್ಯವಸ್ಥೆ ಮಾತ್ರವಲ್ಲ ಸಾಮಾಜಿಕ ಪರಿಸ್ಥಿತಿಯೂ ನಿಸ್ತೇಜವಾಯಿತು. ಈ ಹಿಂದೆ ಇದ್ದ ಪರಿಸ್ಥಿತಿಗೆ ವಿರುದ್ಧವಾದಂತಹ ಒಂದು ಸ್ಥಿತಿ ನಿರ್ಮಾಣವಾಗತೊಡಗಿತು. ಈ ಕಾರಣದಿಂದ ಯುರೋಪಿನ ದೇಶಗಳ ಉತ್ಪನ್ನಗಳು ಪೂರ್ವದ ದೇಶಗಳ ಮಾರುಕಟ್ಟೆಗೆ ಪ್ರವೇಶ ಪಡೆಯತೊಡಗಿದುವು. ಇದರ ಪರಿಣಾಮವಾಗಿ ದೇಶಿಯ ಉದ್ಯಮಗಳು ನೆಲಕಚ್ಚ ತೊಡಗಿದವು. ಉತ್ಪಾದನಾ ವ್ಯವಸ್ಥೆ ಶಿಥಿಲವಾದ ಪರಿಣಾಮ ಇಲ್ಲಿಯ ಇತರ ವ್ಯವಸ್ಥೆಗಳೂ ಸಡಿಲಗೊಂಡುವು. ಆದರೆ ಎಲ್ಲಿ ಇಂತಹ ಮಾರುಕಟ್ಟೆಯ ವಿಸ್ತರಣೆ ಪರಿಪೂರ್ಣವಾಗಿ ಆಗಿಲ್ಲವೋ ಅಂತಹ ಕ್ಷೇತ್ರಗಳಲ್ಲಿ ಈ ಹಿಂದಿದ್ದ ಪಾರಂಪರಿಕ ವ್ಯವಸ್ಥೆಯೇ ಮುಂದುವರಿದುಕೊಂಡು ಹೋಯಿತು. ಇದರ ಪರಿಣಾಮವಾಗಿ ಪೂರ್ವದ ದೇಶಗಳಲ್ಲಿ ಆಧುನಿಕತೆ ಮತ್ತು ಪಾರಂಪರಿಕತೆ ಜೊತೆ ಜೊತೆಯಾಗಿ ಅಸ್ತಿತ್ವದಲ್ಲಿರುವ ಒಂದು ವಿಚಿತ್ರ ಸನ್ನಿವೇಶ ನಿರ್ಮಾಣವಾಯಿತು. ಇಂತಹ ದ್ವಿಮುಖತೆ ಕೆಲವೊಮ್ಮೆ ಸಹಮತದಂತೆ ಕಂಡುಬಂದರೂ ಅದೊಂದು ಸಣ್ಣ ವಿರಾಮವಾಗಿ ನಂತರ ಕ್ಷಣದಲ್ಲಿಯೇ ಆಧುನಿಕತೆ ಮತ್ತು ಪಾರಂಪರಿಕ ಮನೋದರ್ಮ ಸಂಘರ್ಷ ಕ್ಕಿಳಿಯುವ ಸ್ಥಿತಿ ನಿರಂತರವಾಗಿ ಮುಂದುವರೆದುಕೊಂಡೇ ಬಂತು.

ಯುರೋಪ್‌ಕೇಂದ್ರಿತ ಆಧುನಿಕತೆಯ ಮಾದರಿಯು ಜಗತ್ತಿನಾದ್ಯಂತ ವಸಾಹತೀಕರಣದ ಮೂಲಕ ಪ್ರಸರಿಸಿ ಎಲ್ಲ ಖಂಡಗಳಲ್ಲಿಯೂ ಬಹಳ ಸಮರ್ಥವಾಗಿ ಬೇರೂರಿತು. ಈ ಬೆಳವಣಿಗೆಗೆ ಸೋವಿಯತ್ ಒಕ್ಕೂಟದಲ್ಲಿದ್ದ ಸಮಾಜವಾದಿ ಉತ್ಪಾದನಾ ವ್ಯವಸ್ಥೆ ಒಂದು ಪರ್ಯಾಯವನ್ನು ನಿರ್ಮಿಸಿತು. ಮತ್ತು ಬಹಳ ದೀರ್ಘಕಾಲ ಈ ಪರ್ಯಾಯವನ್ನು ನಿರ್ಮಿಸಿತು. ಬಹಳ ದೀರ್ಘಕಾಲ ಈ ಪರ್ಯಾಯ ವ್ಯವಸ್ಥೆ ಯುರೋಪ್ ಕೇಂದ್ರಿತ ಬಂಡವಾಳ ಕೇಂದ್ರಿತ ಆಧುನಿಕತೆಯನ್ನು ಎದುರಿಸಿತು ಎಂದೇ ಹೇಳಬಹುದು. ಆದರೆ ದ್ವಿತೀಯ ಮಹಾಯುದ್ಧದ ನಂತರ ಅಮೇರಿಕ ಬ್ರಿಟನ್‌ನ ಸಾರ್ವಭೌಮತ್ವವನ್ನು ಹಿಂದಿಕ್ಕಿ ಜಗತ್ತಿನ ಪ್ರಮುಖ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿತು. ದ್ವಿತೀಯ ಯುದ್ಧಾನಂತರದಲ್ಲಿ ಯುದ್ಧದ ಕಾರಣದಿಂದಾಗಿ ಜರ್ಝರಿತವಾಗಿದ್ದ ಆರ್ಥಿಕ ವ್ಯವಸ್ಥೆಗಳನ್ನು ಮರು ನಿರ್ಮಿಸುವ ಉದ್ದೇಶದಿಂದ ಎರಡು ಪ್ರಮುಖ ಅಂತಾರಾಷ್ಟ್ರೀಯ ಸಂಸ್ಥೆಗಳು ಹುಟ್ಟಿಕೊಂಡವು. ಅವುಗಳೆಂದರೆ ಅಂತಾರಾಷ್ಟ್ರೀಯ ಹಣಕಾಸು ನಿಧಿ ಮತ್ತು ವಿಶ್ವಬ್ಯಾಂಕು.

ಈ ಎರಡು ಸಂಸ್ಥೆಗಳಲ್ಲದೆ ವಿಶ್ವವ್ಯಾಪಾರವನ್ನು ನಿಯಂತ್ರಿಸುವ ವ್ಯಾಪಾರಿ ಒಪ್ಪಂದವೂ ಅಸ್ತಿತ್ವಕ್ಕೆ ಬಂತು. ಎರಡನೇ ಮಹಾಯುದ್ಧದ ನಂತರ ಬಹಳಷ್ಟು ವಸಾಹತುಗಳು ಮೇಲ್ನೋಟಕ್ಕೆ ಸ್ವಾತಂತ್ರ್ಯ ಗಳಿಸಿಕೊಂಡವು. ಆದರೆ ವಾಸ್ತವಿಕವಾಗಿ ಪ್ರತ್ಯಕ್ಷವಾಗಿ ರಾಜಕೀಯ ಸ್ವಾತಂತ್ರ್ಯ ಪಡೆದರೂ ಅಪ್ರತ್ಯಕ್ಷವಾಗಿ ಯೂರೋಕೇಂದ್ರಿತ, ಅಮೇರಿಕ ನಿಯಂತ್ರಿತ ಅಭಿವೃದ್ಧಿ ಮಾದರಿಯನ್ನು ಅನುಸರಿಸುವ ಮೂಲಕ

ಅಪರೋಕ್ಷ ಆಳ್ವಿಕೆಗೆ ಒಳಗಾದವು. ದ್ವಿತೀಯ ಯುದ್ಧಾನಂತರದಲ್ಲಿ ಅಮೆರಿಕ ನಿಯಂತ್ರಿತ ಬಂಡವಾಳ ಕೇಂದ್ರಿತ ಉತ್ಪಾದನಾ ವ್ಯವಸ್ಥೆಯನ್ನು ಅಂತಾರಾಷ್ಟ್ರೀಯ ಹಣಕಾಸು ನಿಧಿ, ವಿಶ್ವಬ್ಯಾಂಕ್, ವ್ಯಾಪಾರ ಒಡಂಬಡಿಕೆ ಮತ್ತು ವಿಶ್ವಸಂಸ್ಥೆಯ ಮೂಲಕ ಯೋಜಿತವಾದ ರೀತಿಯಲ್ಲಿ ಜಗತ್ತಿನಾದ್ಯಂತ ಬೆಳೆಸಲಾಯಿತು. ಈ ಅವಧಿಯಲ್ಲಿ ನೇರವಾಗಿ ಯುದ್ಧಗಳು ಸಂಭವಿಸದೇ ಹೋದರೂ ನಿರಂತರವಾಗಿ ಅಮೆರಿಕಾ ಮತ್ತು ಸೋವಿಯತ್ ಒಕ್ಕೂಟದ ನಡುವೆ ಶೀತಲ ಸಮರ ಮುಸುಕಿನೊಳಗಿನ ಗುದ್ದಾಟದಂತೆ ಮುಂದುವರಿದುಕೊಂಡು ಬಂದಿತು. ಎರಡೂ ಪ್ರಮುಖ ಆರ್ಥಿಕ ಶಕ್ತಿಗಳು ತಮ್ಮ ಬಲವರ್ಧನೆಗೆ ಪ್ರಯತ್ನಿಸುತ್ತಾ ಬಂದರೂ ೧೯೭೦ರ ನಂತರದ ದಿನಗಳಲ್ಲಿ ಅಮೆರಿಕಾ ತನ್ನ ಹಿಡಿತವನ್ನು ಬಲಗೊಳಿಸಿತು. ಸೋವಿಯತ್ ಒಕ್ಕೂಟದಲ್ಲಿ ಬಿರುಕುಂಟಾಗಿ ಅದರ ತೆಕ್ಕೆಯಿಂದ ಕೆಲವೊಂದು ಪ್ರದೇಶಗಳು ಸ್ವತಂತ್ರವಾದುವು. ಒಕ್ಕೂಟದೊಳಗೆ ಹಲವು ರೀತಿಯ ಗೊಂದಲಗಳು ತೊಂದರೆಗಳು ಕಾಣಿಸಿಕೊಂಡವು. ಬದಲಾವಣೆಗೆ ಅನಿವಾರ್ಯವಾಯಿತೋ ಅಥವಾ ಗೋರ್ಬಚೇವ್ ಅವರಿಗೆ ಆಕರ್ಷಣೀಯವಾಗಿ ಕಂಡಿತೋ ಅಂತೂ ಸೋವಿಯತ್ ಒಕ್ಕೂಟದಲ್ಲಿ ಬೀಸಿದ ಬದಲಾವಣೆಯ ಗಾಳಿ ಶೀತಲ ಸಮರಕ್ಕೆ ಮಂಗಳ ಹಾಡಿತು. ಈ ವೇಳೆಗೆ ಬ್ರಿಟನ್‌ನಲ್ಲಿ ಅಂದಿನ ಪ್ರಧಾನಿಯಾಗಿದ್ದ ಮಾರ್ಗರೇಟ್ ಥ್ಯಾಚರ್ ಅವರ ಹೊಸ ಆರ್ಥಿಕ ನೀತಿ, ಉದಾರೀಕರಣ ಬಹಳ ವೇಗದಲ್ಲಿ ವಿಶ್ವಾದಾದ್ಯಂತ ಪ್ರಸರಿಸಲಾರಂಭಿಸಿತು. ಅಮೆರಿಕದಲ್ಲಿ ರೊನಾಲ್ಡ್ ರೇಗನ್‌ರವರ ಮುಂದಾಳತ್ವದಲ್ಲಿ ಹೊಸ ರೀತಿಯ ಬದಲಾವಣೆಯನ್ನು ಪ್ರೊತ್ಸಾಹಿಸಲಾಯಿತು. ಇದರ ಪರಿಣಾಮವಾಗಿ ಹೊಸ ತಂತ್ರಜ್ಞಾನದ ಅನ್ವೇಷಣೆಗಳಾದುವು. ಪ್ರಮುಖವಾಗಿ ಮಾಹಿತಿ ತಂತ್ರಜ್ಞಾನದಲ್ಲಿ ಉಂಟಾದ ಕ್ರಾಂತಿಯ ಪರಿಣಾಮ ದೇಶ, ಕಾಲದ ಎಲ್ಲೆಗಳನ್ನು ಮೀರಿ ಬೆಳೆಯಲಾರಂಭಿಸಿದಾಗ, ಒಂದು ರೀತಿಯ ಅವ್ಯಕ್ತ ಬದಲಾವಣೆ ಎಲ್ಲಾ ದೇಶಗಳಲ್ಲಿ ಮತ್ತು ಎಲ್ಲಾ ರಂಗಗಳಲ್ಲಿ ಕಾಣಲಾರಂಭಿಸಿತು. ಇಂತಹ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸಿದ ಮುಂದುವರಿದ ರಾಷ್ಟ್ರಗಳಿಗೆ ಇದರಿಂದ ಹೊಸ ರೀತಿಯಲ್ಲಿ ಮಿಕ್ಕುಳಿದ ಆರ್ಥಿಕ ವ್ಯವಸ್ಥೆಯನ್ನು ನಿಯಂತ್ರಿಸುವ ಸಾಧನಗಳು ದೊರೆತಂತಾಯಿತು. ಹೀಗೆ ಬದಲಾದ ತಂತ್ರಜ್ಞಾನ, ರಾಜಕೀಯ ಪರಿಸ್ಥಿತಿ ಮತ್ತು ಜಗತ್ತಿನ ಬಹುಪಾಲು ದೇಶಗಳಲ್ಲಿ ಆಧುನಿಕತೆಯ ಪ್ರಸರಣಕ್ಕೆ ಅವಶ್ಯಕವಾಗಿರುವ ಸಾಂಸ್ಥಿಕ ವ್ಯವಸ್ಥೆಯ ಬೆಳವಣಿಗೆ ಜಾಗತೀಕರಣ ಪ್ರಕ್ರಿಯೆಗೆ ಯೋಗ್ಯ ಭೂಮಿಕೆಯನ್ನು ಒದಗಿಸಿಕೊಟ್ಟಿತು. ಹಾಗಾಗಿ ಜಾಗತೀಕರಣ ಎನ್ನುವುದನ್ನು ಈ ಮೊದಲು ಉಲ್ಲೇಖಿಸಿದ ಐದು ಹಂತಗಳಲ್ಲಿ ಮುಂದುವರಿದುಕೊಂಡು ಬಂದ ವ್ಯವಸ್ಥೆಯ ಒಂದು ತಾರ್ಕಿಕ ವಿಸ್ತರಣೆಯೆಂದು ಹೇಳಬಹುದಾಗಿದೆ. ಇಂತಹ ತಾರ್ಕಿಕ ವಿಸ್ತರಣೆಯ ವೇಗ ಮತ್ತು ಗತಿ ಹಿಂದಿನ ವೇಗ ಮತ್ತು ಗತಿಗಳಿಗೆ ಹೋಲಿಸಿದರೆ ಬಹಳ ತೀವ್ರಗತಿಯಲ್ಲಿ ಆಗಿರುವ ಕಾರಣ ಮತ್ತು ಇಲ್ಲಿ ಬಳಕೆಯಾಗುತ್ತಿರುವ ತಂತ್ರಜ್ಞಾನದ ಸ್ವಭಾವದ ಕಾರಣದಿಂದಾಗಿ ಹಾಗೂ ಬದಲಾವಣೆಗಳು ಅವ್ಯಕ್ತ ರೂಪದಲ್ಲಿರುವ ಕಾರಣ, ಇದನ್ನು ಜನ ಸಾಮಾನ್ಯರ ತಿಳುವಳಿಕೆಗೆ ದಕ್ಕುವ ರೀತಿಯಲ್ಲಿ ಸರಳೀಕರಿಸಿ ಹೇಳುವುದು ಬಹಳ ತ್ರಾಸದಾಯಕ ಕೆಲಸವೆಂದೇ ಭಾವಿಸಬಹುದು. ಮಾತ್ರವಲ್ಲ ಜಾಗತೀಕರಣದ ಪ್ರಕ್ರಿಯೆಯಲ್ಲಿ ಬಹಳಷ್ಟು ಸಂಗತಿಗಳು ಏಕಕಾಲಕ್ಕೆ ಕಾರ್ಯ ಪ್ರವೃತ್ತವಾಗುವ ಕಾರಣದಿಂದಾಗಿ ಇಡೀ ಈ ಪ್ರಕ್ರಿಯೆ ತೀವ್ರ ಜಟಿಲವಾದ ವಿಷಯವಾಗಿ ನಮಗೆ ಗೋಚರವಾಗುತ್ತದೆ. ಕಳೆದ ಮೂರು ನಾಲ್ಕು ದಶಕಗಳ ಹಿಂದಿನವರೆಗೂ ಅಂದರೆ ೧೯೮೦ರವರೆಗೂ ಉತ್ಪಾದನಾ ವ್ಯವಸ್ಥೆ, ವ್ಯಾಪಾರ, ಬಂಡವಾಳ ಸಂಚಯನ, ಮಾರುಕಟ್ಟೆ ವಿಸ್ತರಣೆ, ಎಲ್ಲವೂ (ಒಂದು ಭೌಗೋಳಿಕ ಪರಿಧಿಯೊಳಗೆ) ಒಂದು ದೇಶದ ಗಡಿಗಳೊಳಗೆ, ಒಂದು ರಾಜಕೀಯ ಸಾಂಸ್ಥಿಕ ವ್ಯವಸ್ಥೆಯೊಳಗೆ, ಆ ದೇಶದ ಸಾರ್ವಭೌಮತೆ ಮತ್ತು ಶಾಸನಾತ್ಮಕ ವಿಧಿ ವಿಧಾನಗಳಿಗೆ ಅನುಸಾರವಾಗಿ ನಡೆಯುತ್ತಿತ್ತು. ದೇಶದ ಗಡಿಗಳಾಚೆಗೆ ಬಂಡವಾಳದ ವಿಸ್ತರಣೆ, ವ್ಯಾಪಾರ, ಮಾರುಕಟ್ಟೆ ವಿಸ್ತರಣೆ, ವ್ಯಾಪಾರ ಒಪ್ಪಂದ, ಉತ್ಪಾದನಾ ಚಟುವಟಿಕೆಗಳಿಗೆ ಬಹಳಷ್ಟು ಕಟ್ಟುಪಾಡುಗಳನ್ನು ದೇಶದ ಸರಕಾರಗಳು ಹೇರುತ್ತಿದ್ದವು. ಅಂದರೆ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಒಂದು ದೇಶದ ಸಾರ್ವಭೌಮತೆಗೆ ಅನುಸಾರವಾಗಿ ನಡೆಯುತ್ತಿತ್ತು. ಆದರೆ ೧೯೭೫-೮೦ರ ನಂತರ ಇಂತಹ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿರು ವುದನ್ನು ಅಥವಾ ಅಂತಹ ಬದಲಾವಣೆ ಬಹಳ ತೀವ್ರಗತಿಯಲ್ಲಿ ಆಗಿರುವುದನ್ನು ನಾವು ಗಮನಿಸಬಹುದು. ತಂತ್ರಜ್ಞಾನ, ವ್ಯಾಪಾರ ಒಪ್ಪಂದಗಳಲ್ಲಿ ಬದಲಾವಣೆ ಮತ್ತು ಅಂಥ ಹಣಕಾಸು ಸಂಸ್ಥೆಗಳು ದೇಶೀಯ ಸರಕಾರಗಳ ಮೇಲೆ ಸಾಲ ಪಡೆಯುವಾಗ ಹೇರಿದ್ದ ಶರತ್ತುಗಳು, ಹೀಗೆ ಈ ಎಲ್ಲದರ ಪರಿಣಾಮವಾಗಿ ಇಂದು ಈ ಮೊದಲು ಉಲ್ಲೇಖಿಸಿದ ಪ್ರಮುಖ ಚಟುವಟಿಕೆಗಳು ದೇಶದ ಗಡಿಗಳನ್ನು ಮೀರಿ ಜಾಗತಿಕ ಮಟ್ಟದಲ್ಲಿ ನಡೆಯುತ್ತ ಓಟಕಿತ್ತಿವೆ. ಒಂದು ಅರ್ಥದಲ್ಲಿ ಇಡೀ ಉತ್ಪಾದನಾ ವ್ಯವಸ್ಥೆ ಅಥವಾ ಅರ್ಥವ್ಯವಸ್ಥೆ ಜಾಗತಿಕ ಮಟ್ಟದಲ್ಲಿ ಹೊಸ ರೂಪದಲ್ಲಿ ಸಂಘಟಿತವಾಗುತ್ತಿವೆ. ಮತ್ತು ಈ ಹೊಸ ಬೆಳವಣಿಗೆಯನ್ನು ಜಾಗತೀಕರಣ ಎಂದು ಕರೆಯಲಾಗುತ್ತದೆ. ಈ ಹೊಸ ಬೆಳವಣಿಗೆಗೆ ಹಲವಾರು ಆಯಾಮಗಳಿರುವ ಕಾರಣ ಇದನ್ನು ಮರುನಿರೂಪಿಸುವ ವ್ಯಾಖ್ಯಾನಿಸುವ ಕೆಲಸ ಬಹಳ ತ್ರಾಸದಾಯಕವಾದದ್ದೇ ಆಗಿದೆ.

ಜಾಗತೀಕರಣವನ್ನು ಬಹಳಷ್ಟು ಪಂಡಿತರು ವ್ಯಾಖ್ಯಾನಿಸಿದ್ದಾರೆ. ಇವುಗಳಲ್ಲಿ ಕೆಲವೊಂದು ವ್ಯಾಖ್ಯಾನಗಳನ್ನು ಗಮನಿಸಿ, ಅದರ ವಿವಿಧ ಆಯಾಮಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಲೇಖನದ ಮುಂದಿನ ಭಾಗದಲ್ಲಿ ನಡೆಸಲಾಗಿದೆ.

**ಜಾಗತೀಕರಣದ ಪರಿಕಲ್ಪನೆ**

ಆ್ಯಂಟನಿ ಗಿಡ್ಡನ್ಸ್ ಅವರ ಪ್ರಕಾರ ಜಾಗತೀಕರಣವೆಂದರೆ ಜಾಗತಿಕ ಮಟ್ಟದಲ್ಲಿ ತೀವ್ರಗೊಳ್ಳುತ್ತಿರುವ ಸಾಮಾಜಿಕ ಸಂಬಂಧಗಳು ಮತ್ತು ಇಂತಹ ಬೆಳವಣಿಗೆಯ ಕಾರಣ ದಿಂದ ಸ್ಥಳೀಯ ಸಂದರ್ಭಗಳು ಘಟನೆಗಳೂ ಕೂಡಾ ಜಗತ್ತಿನ ಯಾವುದೋ ಮೂಲೆ ಯಲ್ಲಿ ನಡೆಯುವ ಘಟನೆಗಳಿಂದ ದಟ್ಟವಾದ ಪ್ರಭಾವಕ್ಕೆ ಒಳಗಾಗುತ್ತಿರುವ ವಿದ್ಯಮಾನ ವಾಗಿದೆ. ಇನ್ನೊಂದು ಸಂದರ್ಭದಲ್ಲಿ ಗಿಡ್ಡನ್ಸ್ ಜಾಗತೀಕರಣದ ಬಗ್ಗೆ ವಿವರಿಸುತ್ತಾ ಇದು ಕಾಲ ಮತ್ತು ಕ್ಷೇತ್ರಗಳನ್ನು ಕಳಚಿಕೊಂಡು, ಮಾಹಿತಿ ತಂತ್ರಜ್ಞಾನದ ಮೂಲಕ ಜಾಗತಿಕ ಮಟ್ಟದಲ್ಲಿ ಲಭ್ಯವಿರುವ ಜ್ಞಾನ ಮತ್ತು ಸಂಸ್ಕೃತಿಯನ್ನು ಎಲ್ಲಾ ಬಳಕೆದಾರರು ಏಕಕಾಲದಲ್ಲಿ ಬಳಸಬಹುದಾದಂತಹ ಒಂದು ಸಂದರ್ಭವೆಂದು ಹೇಳುತ್ತಾರೆ.

ಪ್ರೇಡ್ರಿಕ್ ಜೇಮ್ಸ್‌ನ್‌ರವರ ಪ್ರಕಾರ ಜಾಗತೀಕರಣವೆನ್ನುವುದು ಜಾಗತಿಕ ಸಂವಹನ ಮತ್ತು ಮಾರುಕಟ್ಟೆಯ ದಿಗಂತಗಳ ಅಪರಿಮಿತ ವಿಸ್ತರಣೆ ಮತ್ತು ಈ ಎರಡು ಅಂಶಗಳು ಆಧುನಿಕ ಜಗತ್ತಿನಲ್ಲಿ ಹಿಂದೆಂದಿಗಿಂತಲೂ ಹೆಚ್ಚು ವ್ಯಕ್ತವಾಗಿ ನಮಗೆ ಹತ್ತಿರವಾಗಿರುವಂತಹ ಒಂದು ವಸ್ತುಸ್ಥಿತಿಯಾಗಿದೆ.

ರಡ್ ಲಬ್ಬರ್ಸ್‌ರವರ ಪ್ರಕಾರ ದೇಶದ ಗಡಿಯಾಚೆಗೂ ನಡೆಯುವ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಸಾಮಾಜಿಕ ಸಂಬಂಧಗಳ ನಿರ್ವಚನೆ ಮತ್ತು ನಿರ್ವಚನೆಯ ವಿಷಯದಲ್ಲಿ, ಭೌಗೋಳಿಕ ಮಿತಿಗಳು ಮಹತ್ವ ಕಳಕೊಳ್ಳುತ್ತಿರುವ ಸಂದರ್ಭವಾಗಿದೆ.

ಎಡಪಂಥೀಯ ಚಿಂತಕರು ಹೇಳುವ ಪ್ರಕಾರ ಯಾವುದೇ ದೇಶ, ಸರಕಾರ ಜನರಿಗೆ ಯಾವ ಭಾದ್ಯತೆಯನ್ನು ಹೊಂದಿಲ್ಲದಿರುವ ಬಹುರಾಷ್ಟ್ರೀಯ ಸಂಸ್ಥೆಗಳು (ವ್ಯಾಪಾರ ಮತ್ತು ಹಣಕಾಸು) ಜಾಗತಿಕ ಅರ್ಥವ್ಯವಸ್ಥೆಯ ಮೇಲೆ ಸಾಧಿಸುತ್ತಿರುವ ಬಿಗಿ ಹಿಡಿತವಾಗಿದೆ. ಇಂತಹ ಒಂದು ಪ್ರಮುಖ ಬೆಳವಣಿಗೆಗೆ ಜಾಗತಿಕ ಅರ್ಥ ವ್ಯವಸ್ಥೆಯಲ್ಲಿ ಸೋವಿಯತ್ ರಷ್ಯಾ ದುರ್ಬಲವಾಗಿರುವುದೇ ಪ್ರಮುಖ ಕಾರಣವಾಗಿದೆ.

ಡೇವಿಡ್ ಹೆಲ್ಡ್ ಅವರು ಹೇಳುವಂತ ಜಾಗತೀಕರಣವೆನ್ನುವುದು ಕಳೆದ ೨೫ ವರ್ಷ ಗಳಿಂದ ಬಹುಚರ್ಚೆಗೆ ಒಳಗಾಗಿರುವ ಸಂಗತಿಯಾಗಿದೆ. ಆದರೆ ಇದರ ವ್ಯಾಖ್ಯಾನ ಬಹಳ ಜಟಿಲವಾದಂತಹ ಸಂಗತಿಯಾಗಿದೆ. ಬಹುಮುಖ ಅಯಾಮಗಳಿರುವ ಈ ವಿಷಯವು ಪರಸ್ಪರ ಪೂರಕ ಮತ್ತು ಪರಸ್ಪರ ವಿರುದ್ಧವೆಂದು ಕಂಡುಬರುವಂತಹ ಒಂದು ಸಂಕೀರ್ಣ ಸಂಗತಿಯಾಗಿದೆ. ಇದರಲ್ಲಿ ಆರ್ಥಿಕ, ರಾಜಕೀಯ, ತಾಂತ್ರಿಕ, ಸಾಂಸ್ಕೃತಿಕ ಮತ್ತು ಪರಿಸರ ಸಂಬಂಧೀ ವಿಷಯಗಳೂ ಸೇರಿಕೊಂಡಿವೆ. ಆ್ಯಂಟನಿ ಗಿಡ್ಡನ್ಸ್ ಅವರ ವ್ಯಾಖ್ಯಾನವನ್ನು ಹೋಲುವ ವಿವರಣೆಯನ್ನು ಡೇವಿಡ್ ಹೆಲ್ಡ್ ಅವರೂ ಕೂಡ ನೀಡುತ್ತಾರೆ.

ಸಮಾಜ ವಿಜ್ಞಾನಿಗಳು ನಿರೂಪಿಸಲು ಯತ್ನಿಸಿದ 'ಜಾಗತೀಕರಣ' ಸಮಗ್ರ ಸ್ಥಿತಿಯಲ್ಲಿ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ನಮ್ಮ ಅನುಭವಕ್ಕೆ ಬರಲಾರದು. ಆದಾಗ್ಯೂ ಈ ವ್ಯಾಖ್ಯಾನಗಳ ಪಠ್ಯ ಮತ್ತು ಈ ಪಠ್ಯಗಳು ನಿರೂಪಿತವಾಗಿರುವ ಸಾಮಾಜಿಕ ಹಿನ್ನೆಲೆ ಮತ್ತು ಚೌಕಟ್ಟನ್ನು ಗಮನಿಸಿದರೆ ಜಾಗತೀಕರಣ ಕುರಿತ ಕೆಲವೊಂದು ಪ್ರಮುಖ ಲಕ್ಷಣಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

**೧. ವಿಸ್ತೃತಗೊಳ್ಳುತ್ತಿರುವ ಸಾಮಾಜಿಕ ಸಂಬಂಧಗಳು**

ಇಲ್ಲಿಯವರೆಗೆ ದೇಶದ ಅಥವಾ ಪ್ರದೇಶದ ಅಥವಾ ಒಂದು ಭೌಗೋಳಿಕ ವ್ಯಾಪ್ತಿಯಲ್ಲಿ ಮಾತ್ರ ಜೋಡಣೆಯಾಗುತ್ತಿದ್ದ ಸಾಮಾಜಿಕ ಸಂಬಂಧಗಳು ದೇಶ, ಪ್ರದೇಶ, ಭಾಷೆಯ ಎಲ್ಲೆಗಳನ್ನು ಮೀರಿ ಜಗತ್ತಿನಾದ್ಯಂತ ವಿಸ್ತಾರಗೊಳ್ಳುತ್ತಿದೆ. ಅಂದರೆ ಯಾವುದೇ ಒಂದು ನೆಲೆಯಲ್ಲಿ ಸಂಘಟಿತವಾಗುವ ಅಥವಾ ಘಟಿತವಾಗುವ ಸಾಮಾಜಿಕ ಸಂಬಂಧಗಳು ಜಾಗತಿಕ ಮಟ್ಟದಲ್ಲಿ ಕಾರ್ಯಾಚರಿಸುವುದು

ಸಾಧ್ಯವಿದೆ. ಇದು ಉದ್ಯೋಗದ ವಿಷಯದಲ್ಲಿ, ಸಂಸ್ಕೃತಿಯ ವಿಚಾರದಲ್ಲಿ, ಶಿಕ್ಷಣದ ವಿಷಯದಲ್ಲಿ, ರಾಜಕೀಯದ ವಿಷಯದಲ್ಲಿ ಅಥವಾ ಧರ್ಮದ ವಿಚಾರದಲ್ಲಿ ಅಷ್ಟೇ ಏಕೆ ಭಯೋತ್ಪಾದಕ ಸಂಘಟನೆಗಳ ವಿಷಯದಲ್ಲಿಯೂ ಅನ್ವಯಿಸುವ ವಿಷಯವಾಗಿದೆ.

**೨. ತೀವ್ರಗೊಳ್ಳುತ್ತಿರುವ ಪ್ರವಹನ ಕ್ರಿಯೆ**

ಇಲ್ಲಿ ಪ್ರವಹನವೆಂದರೆ ಹರಿಯುವಿಕೆ ಅಥವಾ ಆಂಗ್ಲಭಾಷೆಯ ಹರಿಯುವಿಕೆ, ಸಾಂದ್ರವಾಗಿರುವ ಪ್ರವಾಹ ಎನ್ನುವ ಅರ್ಥದಲ್ಲಿ ಪರಿಭಾವಿಸಬಹುದಾಗಿದೆ. ಇಂದು ಮೇಲೆ ಉಲ್ಲೇಖಿಸಿದ ವಿಸ್ತೃತಗೊಳ್ಳುತ್ತಿರುವ ಸಾಮಾಜಿಕ ಸಂಬಂಧವನ್ನು ತೀವ್ರಗೊಳಿ ಸುತ್ತಿರುವ ದಿಸೆಯಲ್ಲಿ ಕೆಲಸ ಮಾಡುತ್ತಿರುವುದೇ ಈ ಪ್ರವಹನ ಕ್ರಿಯೆ. ಅಂದರೆ ಜಗತ್ತಿನ ಮೂಲೆ ಮೂಲೆಗಳಲ್ಲಿರುವ ಆಸಕ್ತಿಯ ಕೇಂದ್ರಗಳನ್ನು ಹೆಣೆಯುವ ಸಂಬಂಧ ಜಾಲದಲ್ಲಿ ಪ್ರವಹಿಸುವ ಮಾಹಿತಿ ಈ ಸಂಬಂಧಗಳನ್ನು ವೃದ್ಧಿಸುವ ಅಥವಾ ಕ್ಷಯಿಸುವ ಕೆಲಸವನ್ನು ಮಾಡುತ್ತದೆ. ಹಿಂದಿನ ದಿನಗಳಿಗೆ ಹೋಲಿಸಿದಲ್ಲಿ ಪ್ರಸ್ತುತ ಮಾಹಿತಿ ತಂತ್ರಜ್ಞಾನ ಮತ್ತು ಬಂಡವಾಳ ಸಂಚಲನ ವಿಧಾನಗಳಲ್ಲಿ ಆಗಿರುವ ಬದಲಾವಣೆಗಳ ಕಾರಣದಿಂದಾಗಿ ಅವುಗಳ ಹರಿಯುವಿಕೆ ಬಹಳ ರಭಸ ಪಡೆದುಕೊಂಡಿದೆ. ಇದು ರಭಸ ಮಾತ್ರವಲ್ಲ. ಒಂದು ರೀತಿಯಲ್ಲಿ ಅವ್ಯಕ್ತವೂ ಆಗಿರುವುದರಿಂದ ಇದನ್ನು ಸರಕಾರ ಅಥವಾ ರಾಜ್ಯಾಂಗ ವ್ಯವಸ್ಥೆ ಬಹಳ ಸುಲಭದಲ್ಲಿ ನಿಯಂತ್ರಿಸಲು ಸಾಧ್ಯವಿಲ್ಲ. ಉದಾಹರಣೆಗೆ ಆಫಘಾನಿಸ್ಥಾನದ ಗುಹೆಯೊಂದರಲ್ಲಿ ಒಸಾಮಾಬಿನ್ ಲಾದೆನ್ ಮಾಡುವ ಭಾಷಣದ ವಿಡಿಯೋ ಟೇಪ್ ಯಾವುದೋ ಒಂದು ಟೀವಿ ಚಾನೆಲ್ ತಲುಪಿದರೆ ಕ್ಷಣಾರ್ಧದಲ್ಲಿ ಅದು ಜಗತ್ತಿನಾದ್ಯಂತ ಹರಡಿಬಿಡುತ್ತದೆ. ಹಾಗೆಯೇ ಭಾರತದಲ್ಲಿ ಬ್ಯಾಂಕ್ ಖಾತೆ ಹೊಂದಿರುವ ಒಬ್ಬ ಗ್ರಾಹಕ ಜಗತ್ತಿನ ಯಾವ ಭಾಗದಲ್ಲಾದರೂ ತನ್ನ ಖಾತೆಯಿಂದ ಹಣ ಪಡೆಯಬಹುದು. ಸಂವಹನದ ಸಾಮರ್ಥ್ಯ ಮತ್ತು ವೇಗ ತೀವ್ರಗೊಂಡಿರುವ ಕಾರಣದಿಂದ ಮಾಹಿತಿಯ ಪ್ರವಹನ ಹೆಚ್ಚು ವೇಗ ಪಡೆದುಕೊಂಡಿದೆ ಎಂದು ಹೇಳಬಹುದು.

**೩. ಹೆಚ್ಚುತ್ತಿರುವ ಅಂತರ್ ಭೇದೀಕರಣ**

ಜಾಗತೀಕರಣದ ಕಾಲಘಟ್ಟದಲ್ಲಿ ಈ ಮೊದಲು ವಿವರಿಸಲಾದ ಎರಡು ಪ್ರಮುಖ ಲಕ್ಷಣಗಳ ಕಾರಣದಿಂದಾಗಿ ಜಾಗತಿಕ ಮಟ್ಟದಲ್ಲಿನ ಬಹುಪಾಲು ಸಂಗತಿಗಳು ಸುಲಭವಾಗಿ ಮುಖಾಮುಖಿಯಾಗುವುದು ಸಾಧ್ಯವಾಗಿದೆ. ಇದು ಉದ್ಯೋಗವಿರಬಹುದು, ಆಹಾರ, ಸಂಗೀತ, ನೃತ್ಯ, ಕಲೆಯ ವಿಷಯ ಇರಬಹುದು ಅಥವಾ ಶಿಕ್ಷಣವಿರಬಹುದು. ಹೀಗೆ ಒಂದು ಪ್ರದೇಶದ ಕಲೆ, ಸಂಸ್ಕತಿ ಇನ್ನೊಂದರೊಂದಿಗೆ ಮುಖಾಮುಖಿಯಾದಾಗ ಒಂದು ಇನ್ನೊಂದನ್ನು ಪ್ರಭಾವಿಸುವ ಕೆಲಸವನ್ನು ಮಾಡುತ್ತವೆ. ಅದರಲ್ಲೂ ಮುಖ್ಯವಾಗಿ ಬಂಡವಾಳದ ಹರಿಯುವಿಕೆಯನ್ನು ಪ್ರೋ ಸಂಸ್ಕೃತಿಯಂತೂ ಮಿಕ್ಕುಳಿದ ಸಂಸ್ಕೃತಿಯನ್ನು ಭೇದಿಸುವುದು ಮಾತ್ರವಲ್ಲ. ಅದನ್ನು ಅಪೋಷಣ ತೆಗೆದುಕೊಳ್ಳುವ ಸಾಧ್ಯತೆಯನ್ನು ತಳ್ಳಿಹಾಕಲಾಗದು. ಈ ಹಿಂದೆ ಇಂತಹ ಪರಿಸ್ಥಿತಿ ಇರಲಿಲ್ಲವೆಂದಲ್ಲ. ಹಿಂದೆ ಇಂತಹ ಪ್ರಭಾವ ದೀರ್ಘಾವಧಿಯಲ್ಲಿ ಆಗುತ್ತಿದ್ದುದರಿಂದ ಇದೊಂದು ವಿಕಾಸ, ಬೆಳವಣಿಗೆ ಎಂದು ಪರಿಗಣಿತವಾಗುತ್ತಿತ್ತು. ಆದರೆ ಜಾಗತೀಕರಣದ ಸಮಯದಲ್ಲಿ ಇದರ ಪರಿಣಾಮ ಬಹಳ ವೇಗವಾಗಿ ಮತ್ತು ತೀವ್ರವಾಗಿ ಆಗುತ್ತಿರುವುದರಿಂದ ಇದನ್ನು ಬದಲಾವಣೆಯೆಂದು ಕರೆಯಲಾಗುತ್ತಿದೆ. ಇಂತಹ ಬದಲಾವಣೆ ಹೆಚ್ಚುತ್ತಿರುವ ಅಂತರ್ ಭೇದೀಕರಣದ ರೂಪದಲ್ಲಿ ನಡೆಯುತ್ತಿದೆ.

**೪. ಜಾಗತಿಕ ಮೂಲಭೂತ ಸೌಕರ್ಯ**

ಈ ಮೊದಲು ಉಲ್ಲೇಖಿಸಿದ ಗುಣಲಕ್ಷಣಗಳ ವಿಸ್ತರಣೆಯಾಗಿ ಈ ನಾಲ್ಕನೆಯ ಅಂಶವನ್ನು ನಾವು ಗಮನಿಸಬೇಕು. ಇಂದು ಬಂಡವಾಳ ಮತ್ತು ತಂತ್ರಜ್ಞಾನ ವಿಶ್ವದಾದ್ಯಂತ ತನ್ನ ಜಾಲವನ್ನು ವಿಸ್ತರಿಸಿಕೊಂಡಿರುವ ಕಾರಣದಿಂದ. ಈ ತಂತ್ರಜ್ಞಾನ ಮತ್ತು ಬಂಡವಾಳ ತನ್ನ ಚಲನೆಗೆ ಬೆಳವಣಿಗೆಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಜಾಗತಿಕ ಮಟ್ಟದಲ್ಲಿ ಅಭಿವೃದ್ಧಿಪಡಿಸಲೇ ಬೇಕಾದ ಅನಿವಾರ್ಯತೆ ಇದೆ. ಒಂದು ಅರ್ಥದಲ್ಲಿ ಉತ್ಪಾದನಾ ವ್ಯವಸ್ಥೆಯೇ ಜಾಗತಿಕ ಮಟ್ಟದಲ್ಲಿ ಹೊಸ ಸ್ವರೂಪದಲ್ಲಿ ಮರುಸಂಘಟಿತ ವಾಗುತ್ತಿರುವುದರ ಹಿನ್ನೆಲೆಯಲ್ಲಿ ಜಾಗತಿಕ ಮಟ್ಟದಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿಯನ್ನು ಅರ್ಥಮಾಡಿಕೊಳ್ಳುವುದು ಅಗತ್ಯ.

**೫. ಸಾಮಾಜಿಕ ಸಂಬಂಧಗಳ ಮರುನಿರೂಪಣೆ**

ಜಾಗತೀಕರಣದ ಕಾಲಘಟ್ಟದವರೆಗೆ ಒಂದು ದೇಶೀಯ ಗಡಿಯೊಳಗೆ ಕಾರ್ಯಾ ಚರಣೆ ನಡೆಸುತ್ತಿದ್ದ ಸಾಮಾಜಿಕ ವರ್ಗಗಳ ವಿಘಟನೆಯಾಗಿ ಅದು ಇಂದು ಜಾಗತಿಕ ಮಟ್ಟದಲ್ಲಿ ಮರು ಸಂಘಟಿತವಾಗುತ್ತಿದೆ. ಉದಾಹರಣೆಗೆ ಹಿಂದೆ ಒಂದು ವಸ್ತುವಿನ ಉತ್ಪಾದನೆಯನ್ನು ಯಾವುದೋ ಒಂದು ದೇಶದ ದೊಡ್ಡ ಫ್ಯಾಕ್ಟರಿಯಲ್ಲಿ ಉತ್ಪಾದಿಸಲಾಗು ತ್ತಿತ್ತು. ಆದರೆ ಈಗ ವಾಣಿಜ್ಯ ವ್ಯವಸ್ಥೆಯ ಸ್ವರೂಪವೇ ಬದಲಾಗಿದೆ. ಯುರೋಪಿನಲ್ಲಿ ಸಿದ್ಧಪಡಿಸುವ ಉಡುಗೆಯ ಮಾದರಿಯನ್ನು ಬಾಂಗ್ಲಾದೇಶದ ಸಿದ್ದ ಉಡುಪು ಘಟಕಗಳಲ್ಲಿ ಹೊಲಿಯಲಾಗುತ್ತಿದೆ. ಅಲ್ಲಿಗೆ ಬೇಕಾಗುವ ಬಟ್ಟೆಯನ್ನು ಭಾರತದ ಗಿರಣಿಗಳಿಂದ ಆಮದು ಮಾಡಲಾಗುತ್ತಿದ್ದರೆ, ಸಿದ್ಧಪಡಿಸಿದ ಬಟ್ಟೆಗಳು ಅಮೆರಿಕಾ ಮತ್ತು ಕೆನಡಾದ ಮಾಲ್‌ಗಳಲ್ಲಿ ಮಾರಾಟ ಮಾಡಲಾಗುತ್ತಿದೆ. ಹಾಗಾಗಿ ಈ ಹಿಂದೆ ಇದ್ದ ಮಾಲಿಕರು ಕೆಲಸಗಾರರು ಎನ್ನುವ ವಿಭಜನೆ ಸಾಧ್ಯವಿಲ್ಲ. ಯಾಕೆಂದರೆ ಈಗ ಕೆಲಸಗಳು ಒಪ್ಪಂದ ಆಧಾರಿತವಾಗಿವೆ. ಒಂದು ಯೋಜನೆಯನ್ನು ಪೂರೈಸುವವರೆಗೆ ಮಾತ್ರ ಕೆಲಸ. ಆನಂತರ ಇನ್ನೊಂದು ಯೋಜನೆ ಬಂದರೆ ಮತ್ತು ಕೆಲಸಗಾರ ತೆಪ್ಪಗೆ ದುಡಿಯೋಕೆ ಸಾಧ್ಯವಿದ್ದರೆ ಮಾತ್ರ ಕೆಲಸ. ಹೀಗಾಗಿ ಉತ್ಪಾದನಾ ಚಟುವಟಿಕೆಯೇ ಮರು ಸಂಘಟಿತವಾಗುತ್ತಿದ್ದು ಇದನ್ನವಲಂಬಿಸಿದ ಸಾಮಾಜಿಕ ಸಂಬಂಧಗಳೂ ಕೂಡ ಮರು ನಿರೂಪಿತವಾಗಬೇಕಾಗಿದೆ. ಮತ್ತು ಅವು ಜಾಗತಿಕ ಮಟ್ಟದಲ್ಲಿ ಕಾರ್ಯಾಚರಿಸುವ ಸಾಮಾಜಿಕ ಸಂಬಂಧದ ಜಾಲದ ಆಧಾರದಲ್ಲಿ ಮರುನಿರೂಪಿತವಾಗುತ್ತವೆ.

ಸದ್ಯದ ಪರಿಸ್ಥಿತಿಯಲ್ಲಿ ಜಾಗತೀಕರಣದ ಕಾರಣದಿಂದ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿದರೆ ಇದು ನಾವು ಇದುವರೆಗೆ ಅನುಸರಿಸಿಕೊಂಡು ಬಂದ ಅಭಿವೃದ್ಧಿ ನೀತಿಗಳು ಅಥವಾ ಉತ್ಪಾದನಾ ವಿಧಾನಗಳು ಮತ್ತು ಅದನ್ನು ಅವಲಂಬಿಸಿ ನಿರ್ಮಾಣವಾಗಿದ್ದ ಸಾಂಸ್ಥಿಕ ಸ್ವರೂಪಗಳ ಮುಂದುವರಿದ ಭಾಗವಾಗಿದೆ ಎನ್ನಬಹುದು. ಈ ಹಿಂದೆಯೂ ಜಾಗತಿಕ ಮಟ್ಟದಲ್ಲಿ ಸಾಮಾಜಿಕ ಸಂಬಂಧ, ವ್ಯಾಪಾರ, ಬಂಡವಾಳ ಮತ್ತು ಮಾಹಿತಿಯ ಪ್ರವಹಿಸುವಿಕೆ ಇತ್ತು. ಆದರೆ ಈ ಮೊದಲಿದ್ದ ಪ್ರವಹನದ ರೀತಿಗೂ ಜಾಗತೀಕರಣದ ಈ ಕಾಲಘಟ್ಟದಲ್ಲಿ ಇರುವ ನೀತಿಗೂ ಬಹಳಷ್ಟು ವ್ಯತ್ಯಾಸವಿದೆ. ಈ ಹಿಂದೆ ಭಾರತದಿಂದ ಜ್ಞಾನ ಮತ್ತು ಸರಕುಗಳು ಅರಬ್ ವ್ಯಾಪಾರಿಗಳ ಮೂಲಕ ಜಗತ್ತಿನ ಇತರೆಡೆಗೆ ಹರಿಯು ತ್ತಿತ್ತು ಯಾ ಪ್ರವಹಿಸುತ್ತಿತ್ತು. ಭಾರತೀಯ ಉಪಖಂಡದಲ್ಲಿ ಉತ್ಪಾದನೆಯಾಗುತ್ತಿದ್ದ ವೈವಿಧ್ಯಮಯ ಸಾಮಗ್ರಿಗಳು ಜಗತ್ತಿನ ಇತರ ದೇಶಗಳ ಜನರಿಗೆ ಆಕರ್ಷಣೆಯ ಕೇಂದ್ರವಾಗಿತ್ತು. ಅಲ್ಲದೇ ಭಾರತದಲ್ಲಿ ಇದ್ದ ಬೌದ್ಧಿಕ ಸಂಪತ್ತು ಕೂಡಾ ಆಸಕ್ತಿಯ ಮುಖ್ಯ ವಿಷಯವಾಗಿತ್ತು. ಈ ಕುರಿತ ವಿವರಗಳನ್ನು ಅಮರ್ತ್ಯಸೇನ್ ಅವರು ತಮ್ಮ ಆರ್ಗ್ಯುಮೆಂಟೆಟಿವ್ ಇಂಡಿಯನ್ ಕೃತಿಯಲ್ಲಿ ಪ್ರಸ್ತಾಪಿಸುತ್ತಾರೆ. ಆದರೆ ಈಗ ಜಗತ್ತಿನ ವಿವಿಧೆಡೆ ಲಭ್ಯವಿರುವ ಎಲ್ಲಾ ರೀತಿಯ ವಸ್ತು ಯಾ ಸೇವೆಯನ್ನು ಕೊಳ್ಳುವ ಸಾಮರ್ಥ್ಯವಿರುವ ಬಳಕೆದಾರರು ಲಭ್ಯವಿರುವ ತಂತ್ರಜ್ಞಾನ ಆಧಾರಿತ ವ್ಯವಸ್ಥೆಯ ಕಾರಣದಿಂದಾಗಿ ಉಪಯೋಗಿಸುವ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಒಂದು ಪರಿಸ್ಥಿತಿಯಲ್ಲಿ ಇಡೀ ವ್ಯವಸ್ಥೆಯ ನಿಯಂತ್ರಣ ಎಲ್ಲಿ ಯಾರಿಂದ ಮತ್ತು ಹೇಗೆ ಆಗುತ್ತದೆ ಎನ್ನುವ ಗೊಂದಲದ ಸ್ಥಿತಿ ಇದೆ. ವಾಸ್ತವದಲ್ಲಿ ಸಂಪತ್ತಿನ ಮೇಲೆ, ಬಂಡವಾಳದ ಮೇಲೆ ನಿಯಂತ್ರಣ ಹೊಂದಿರುವ ಬಹುರಾಷ್ಟ್ರೀಯ ಕಂಪನಿಗಳು ಅಂತಾರಾಷ್ಟ್ರೀಯ ಸಂಸ್ಥೆಗಳ ಮೂಲಕ ಇಡೀ ಜಾಗತಿಕ ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸಿದೆ. ಮೇಲ್ನೋಟಕ್ಕೆ ಕಾಣುವ ವಿಸ್ತಾರಗೊಳ್ಳುತ್ತಿರುವ ಆಯ್ಕೆಗಳು ನಿಜವಾಗಿಯೂ ಆಯ್ಕೆಗಳಲ್ಲಿ ಬದಲಾಗಿ, ಜಾಗತಿಕ ಮಟ್ಟದಲ್ಲಿ ಬಳಕೆದಾರರು ಒಂದು ನಿಶ್ಚಿತ ಉತ್ಪಾದನಾ ವ್ಯವಸ್ಥೆಯಿಂದ ಹೊರನಡೆಯದಂತೆ ತಡೆಹಿಡಿಯಲು ಬೀಸಿರುವ ನಾಜೂಕಾಗಿರುವ ಬಲೆಯಾಗಿದೆ. ಇಂತಹ ಒಂದು ಬೆಳವಣಿಗೆ ಪ್ರಮುಖವಾಗಿ ಆರ್ಥಿಕ ಬೆಳವಣಿಗೆಗೆ ಸಂಬಂಧಿಸಿದ ವಿಷಯವಾಗಿದೆ. ಆದಾಗ್ಯೂ ಇದು ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆಗೆ ಹೇತುವಾಗಿದೆ. ಮುಂದಿನ ಭಾಗದಲ್ಲಿ ಈ ವಿಷಯಗಳ ಕುರಿತಂತೆ ಚರ್ಚಿಸಲಾಗಿದೆ.

**ಜಾಗತೀಕರಣದ ಆರ್ಥಿಕ ಆಯಾಮಗಳು**

ಜಾಗತೀಕರಣದ ಪ್ರಕ್ರಿಯೆಗಳನ್ನು ಗಮನಿಸಿದರೆ ಈ ಹಿಂದಿಗಿಂತ ಅಧಿಕ ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಲಿಲ್ಲ ಅಥವಾ ಬಂಡವಾಳ ಮತ್ತು ತಂತ್ರಜ್ಞಾನದ ಪ್ರವಹನವನ್ನು ತೀವ್ರಗೊಳಿಸಿದ ಕ್ರಮಗಳಿಂದಾಗಿ ಜಡವಾಗಿದ್ದ ಉತ್ಪಾದನಾ ಪರಿಕರಗಳು ಬಹಳ ದೊಡ್ಡ ಮಟ್ಟದಲ್ಲಿ ಕ್ರಿಯಾಶೀಲವಾಗಿರುವಂತಹ ಪರಿಸ್ಥಿತಿ ಇಲ್ಲ. ಯಾವುದೇ ಒಂದು ಉತ್ಪಾದನಾ ಕ್ರಿಯೆಯಲ್ಲಿ ಜನ ಭಾಗಿಗಳಾಗಬೇಕಾದರೆ ಅವರಲ್ಲಿ ಸಂಪನ್ಮೂಲ ಇರಬೇಕಾಗುತ್ತದೆ. ಅದು ಬಂಡವಾಳವಿರಬಹುದು, ಮಾನವ ಸಂಪನ್ಮೂಲವಿರಬಹುದು, ಭೂಮಿ ಇರಬಹುದು ಅಥವಾ ಉದ್ಯಮಶೀಲತೆಯಿರಬಹುದು. ಆದರೆ ಇದು ಯಾವುದೂ ಇಲ್ಲದ ಅನಕ್ಷರಸ್ಥರು ಮತ್ತು ಬಡವರು ಉತ್ಪಾದನಾ ಕ್ರಿಯೆಯಲ್ಲಿ

ಭಾಗವಹಿಸುವುದು ಸಾಧ್ಯವಿಲ್ಲ. ಆದರೆ ಉತ್ಪಾದನಾ ವ್ಯವಸ್ಥೆ ಅವರನ್ನು ತನಗೆ ಅನುಕೂಲಕರವಾದ ರೀತಿಯಲ್ಲಿ, ಅಗತ್ಯ ಸಂದರ್ಭಗಳಲ್ಲಿ ಬಳಸಿಕೊಳ್ಳುತ್ತದೆ. ಇಂತಹ ಜನವರ್ಗದ ಆಶೋತ್ತರಗಳನ್ನು ಹಿತ ಕಾಯುವ ಕೆಲಸವನ್ನು ಸರಕಾರಗಳು ಮಾಡಬೇಕಾಗುತ್ತದೆ. ೧೯೮೦ರ ದಶಕದವರೆಗೂ ಇಂತಹ ಒಂದು ವ್ಯವಸ್ಥೆ ಅಸ್ತಿತ್ವದಲ್ಲಿತ್ತು. ಆದರೆ ಜಾಗತೀಕರಣ ಪ್ರಕ್ರಿಯೆ ಆರಂಭವಾದ ನಂತರ ಯಾರು ಉತ್ಪಾದನಾ ವ್ಯವಸ್ಥೆಯಲ್ಲಿ ಭಾಗಿಯಾವುದಿಲ್ಲವೋ ಅಥವಾ ಅರ್ಥ ವ್ಯವಸ್ಥೆಯ ಅಂಚಿನಲ್ಲಿರುವ ಜನರಿದ್ದಾರೋ ಅಂಥವರನ್ನು ಉದ್ದೇಶಿಸಿ ಮತ್ತೊಂದು ರೀತಿಯ ಕಾರ್ಯಕ್ರಮಗಳನ್ನು ಆರಂಭಿಸಿಲಾಗಿದೆ. ಅದನ್ನು ಸರಕಾರೇತರ ಸಂಸ್ಥೆಗಳ ಅಥವಾ ಸೇವಾ ಸಂಸ್ಥೆಗಳ ಮೂಲಕ ಮತ್ತು ಸಹಕಾರಿ ತತ್ವಗಳ ಅನ್ವಯ ನಡೆಸಲು ಉದ್ದೇಶಿಸಲಾಗಿದೆ. ವಾಸ್ತವವಾಗಿ ಇದು ಉತ್ಪಾದನಾ ವ್ಯವಸ್ಥೆಯ ಮುಖ್ಯವಾಹಿನಿಗೆ ಪ್ರವೇಶವಿಲ್ಲದವರಿಗೆ ನಿರ್ಗಮನ ದಾರಿ ತೋರಿಸುವ ಕೆಲಸವನ್ನೇ ಮಾಡುತ್ತಿದೆ. ಅಂದರೆ ಉತ್ಪಾದನಾ ವಲಯ ಮಾರುಕಟ್ಟೆ ನೀತಿಯನ್ವಯ ಕಾರ್ಯ ನಿರ್ವಹಿಸುತ್ತಿದ್ದು ಅಂತಹ ವ್ಯವಸ್ಥೆಯಲ್ಲಿ ಯಾವ ವಸ್ತುವಿಗೆ ಬೇಡಿಕೆ ಇರುವುದಿಲ್ಲವೋ (ಅಂದರೆ ಅಗತ್ಯವಿರುವುದಿಲ್ಲವೋ) ಅದಕ್ಕೆ ಯಾವುದೇ ಮೌಲ್ಯವಿಲ್ಲ. ಇದಕ್ಕೆ ಮನುಷ್ಯ ಜೀವನವೂ ಹೊರತಾಗಿಲ್ಲ. ಇಲ್ಲಿ ನಾವು ಗಮನಿಸಬೇಕಾದದ್ದು, ಇಡೀ ವ್ಯವಸ್ಥೆಯಲ್ಲಿ ಜಾಗತೀಕರಣ ಪೂರ್ವದಲ್ಲಿ ಸಮಾಜಮುಖಿ, ಸಮುದಾಯ ಮುಖಿಯಾಗಿದ್ದ ನಮ್ಮ ಆರ್ಥಿಕ ನೀತಿಗಳು (ಅಥವಾ ನಮಗೆ ಹಾಗೆ ಕಾಣುತ್ತಿದ್ದ) ಇಂದು ಬಂಡವಾಳ ಯಾ ಸಂಪತ್ತಿನ ಕ್ರೂಢೀಕರಣದತ್ತ ಅರ್ಥಮುಖಿಯಾಗಿ ಹೊರಹೊಮ್ಮುತ್ತಿವೆ. ಈ ಒಂದು ಬೆಳವಣಿಗೆಯನ್ನು ಕೆಲವೊಂದು ಆರ್ಥಿಕ ಲಕ್ಷಣಗಳ ಮೂಲಕ, ಅಂತಾರಾಷ್ಟ್ರೀಯ ವಲಯದಲ್ಲಿ ನಡೆಯುತ್ತಿರುವ ವ್ಯಾಪಾರದ ಮೂಲಕ ನಾವು ತಿಳಿದುಕೊಳ್ಳಬಹುದಾಗಿದೆ.

ಜಾಗತೀಕರಣದ ನಂತರದ ದಿನಗಳಲ್ಲಿಯೂ ಈ ಹಿಂದೆ ಇದ್ದ ಮುಂದುವರಿದ ದೇಶಗಳ ಆರ್ಥಿಕ ಯಜಮಾನಿಕೆ ಮುಂದುವರಿಯುತ್ತಿದೆ. ಯಾವುದೇ ಕಾರಣದಿಂದ ಮುಂದುವರಿದ ದೇಶಗಳ ಕೂಟವಾಗಿರುವ ಹೂಡಿಕಾ ಸಮುಚ್ಛಯ ಮತ್ತು ವ್ಯಾಪಾರೀ ಸಮುಚ್ಚಯದ ಹಿಡಿತ ಸಡಿಲವಾಗುವ ಸಾಧ್ಯತೆಗಳಂತೂ ಖಂಡಿತಾ ಇಲ್ಲ. ಈ ಸಂಬಂಧ ಉತ್ತರ ಅಮೆರಿಕಾ ಮುಕ್ತ ವ್ಯಾಪಾರ ಒಪ್ಪಂದ, ಯುರೋಪಿಯನ್ ಒಕ್ಕೂಟ ಮತ್ತು ಜಪಾನ್ ದೇಶಗಳು ವಿಶ್ವದ ಉತ್ಪಾದನೆಯಲ್ಲಿ ೭೫ ಭಾಗದಷ್ಟನ್ನು ಹೊಂದಿದ್ದರೆ ಉಳಿದ ಎಲ್ಲ ದೇಶಗಳ ಉತ್ಪಾದನೆ ಶೇಕಡಾ ೨೫ ಮಾತ್ರ. ಆದರೆ ವಿಶ್ವ ಜನಸಂಖ್ಯೆಯ ಶೇಕಡಾ ೧೫ರಷ್ಟು ಜನರಿರುವ ಈ ದೇಶಗಳು ವಿಶ್ವದ ಸಂಪತ್ತಿನ ಮುಕ್ಕಾಲು ಪಾಲನ್ನು ಹೊಂದಿದ್ದಾರೆ. ಮುಕ್ತ ಅರ್ಥವ್ಯವಸ್ಥೆ, ಮಾರುಕಟ್ಟೆಯ ನೀತಿಯನ್ನು ಪ್ರತಿಪಾದಿಸುವ ಈ ಅರ್ಥವ್ಯವಸ್ಥೆಗಳು ತಮ್ಮ ಅರ್ಥವ್ಯವಸ್ಥೆ ಬಡದೇಶಗಳ ನಿಲುಕುವಿಗೆ ಸಿಗದಂತಹ ರೀತಿಯಲ್ಲಿ ಸಂರಚಿಸಿಕೊಂಡು, ತಮ್ಮ ಹಿತಾಸಕ್ತಿಯ ಬಗ್ಗೆ ಕಾಳಜಿ ವಹಿಸಿದೆ. ಈ ಕಾರಣದಿಂದಾಗಿ ಈ ದೇಶಗಳಿಗೆ ಇತರ ದೇಶಗಳು ತಮ್ಮ ಉತ್ಪಾದನೆಯನ್ನು ರಫ್ತು ಮಾಡುವುದಾಗಲೀ ಅಥವಾ ಮುಂದುವರಿದ ಈ ರಾಷ್ಟ್ರಗಳ ಮಾರುಕಟ್ಟೆಯಲ್ಲಿ ಸ್ಪರ್ಧಿಸುವುದಾಗಲೀ ಸಾಧ್ಯವಾಗುತ್ತಿಲ್ಲ.

ವಿದೇಶಿ ಬಂಡವಾಳದ ಹರಿವಿನ ವಿಷಯದಲ್ಲಿ ಮುಂದುವರಿದ ರಾಷ್ಟ್ರಗಳ ಬಂಡವಾಳಗಳು ಕೂಡಾ ಮುಂದುವರಿದ ರಾಷ್ಟ್ರಗಳ ಹಿತಾಸಕ್ತಿಯನ್ನು ರಕ್ಷಿಸುವ ದಿಸೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಹೀಗಾಗಿ ಅಭಿವೃದ್ಧಿ ಶೀಲ ದೇಶಗಳಲ್ಲಿರುವ ಬಂಡವಾಳ ಕೂಡ ಅಭಿವೃದ್ಧಿ ಹೊಂದಿರುವ ಶ್ರೀಮಂತ ದೇಶಗಳು ನಿಯಂತ್ರಿಸುವ ಬಂಡವಾಳ ಮಾರುಕಟ್ಟೆಯತ್ತ ಹರಿಯುತ್ತಿವೆ ಎಂದು ಹೇಳಿದರೂ ತಪ್ಪಾಗಲಾರದು. ಈ ಬಂಡವಾಳದ ಹರಿವು ವಿವಿಧ ರೂಪಗಳಲ್ಲಿ ನಡೆಯುತ್ತಿವೆ. ಅವುಗಳಲ್ಲಿ ಒಂದು ಅಭಿವೃದ್ಧಿಶೀಲ ದೇಶಗಳ ವಾಣಿಜ್ಯ ಮತ್ತು ಉತ್ಪಾದನಾ ಸಂಸ್ಥೆಗಳು ಬಹುರಾಷ್ಟ್ರೀಯ ಕಂಪನಿಗಳ ಪ್ರತ್ಯಕ್ಷ ಮತ್ತು ಪರೋಕ್ಷ ನಿಯಂತ್ರಣಕ್ಕೆ ಒಳಗಾಗುತ್ತಿರುವುದು. ಪ್ರತ್ಯಕ್ಷ ಎಂದರೆ ಕಂಪನಿಗಳನ್ನು ಖರೀದಿಸುವುದು ಅಥವಾ ನೇರವಾಗಿ ತನ್ನ ಸುಪರ್ದಿಗೆ ತೆಗೆದುಕೊಳ್ಳುವುದು. ಅಪ್ರತ್ಯಕ್ಷವೆಂದರೆ ಬಹುರಾಷ್ಟ್ರೀಯ ಕಂಪನಿಗಳು ತಮ್ಮ ಲಾಭದ ಹಣವನ್ನು ಅಭಿವೃದ್ಧಿಶೀಲ ದೇಶಗಳ ಬಂಡವಾಳ ಮಾರುಕಟ್ಟೆ (ಸ್ಟಾಕ್ ಎಕ್ಸ್‌ಚೇಂಜ್)ಯಲ್ಲಿ ಹೂಡಿಕೆ ಮಾಡುವ ಮೂಲಕ ಆ ದೇಶದ ಉದ್ಯಮ ವಲಯವನ್ನು ನಿಯಂತ್ರಿಸುವುದು. ಉದಾಹರಣೆಗೆ ಭಾರತದ ಬಂಡವಾಳ ಮಾರುಕಟ್ಟೆಯಲ್ಲಿ ಭಾರತೀಯ ಕಂಪನಿಗಳ ಶೇರುಗಳನ್ನು ಖರೀದಿಸುವ ಮೂಲಕ ಈ ದೇಶದ ಕಂಪನಿಗಳನ್ನು ನಿಯಂತ್ರಿಸುವುದು. ಈ ಹಿಂದೆ ಈ ರೀತಿಯ ಹೂಡಿಕೆಗಳಿಗೆ ಬಹಳಷ್ಟು ನಿಯಂತ್ರಣವಿತ್ತು. ಹಾಗಾಗಿ ಒಂದು ಸೀಮಿತ ಪ್ರಮಾಣಕ್ಕಿಂತ ಇಲ್ಲಿ ವಿದೇಶಿ ಕಂಪನಿಗಳು ಹೂಡಿಕೆ ಮಾಡುವುದಾಗಲೀ ಹೂಡಿದ ಬಂಡವಾಳವನ್ನು ಹಿಂಪಡೆದು ಬೇರೆಡೆಗೆ ವರ್ಗಾಯಿಸುವುದಾಗಲೀ ಸುಲಭವಾಗಿರಲಿಲ್ಲ. ಆದರೆ ಈ ಹೊಸ ವ್ಯವಸ್ಥೆಗೆ ಅನುಕೂಲಕರವಾಗುವ ರೀತಿಯಲ್ಲಿ ಈಗ ಶಾಸನಗಳನ್ನು ಕಾನೂನುಗಳಲ್ಲಿ ಅಮೂಲಾಗ್ರ ಬದಲಾವಣೆಗಳನ್ನು ತರಲಾಗಿದೆ.

ಉದಾಹರಣೆಗೆ ಈ ಹಿಂದೆ ಅಸ್ತಿತ್ವದಲ್ಲಿದ್ದ ಜನರಲ್ ಅಗ್ರಿಮೆಂಟ್ ಆನ್ ಟ್ರೇಡ್ ಅಂಡ್ ಟಾರಿಫ್ ಅಂದರೆ ವ್ಯಾಪಾರ ಮತ್ತು ಸುಂಕ ಪದ್ಧತಿಯ ಬಗೆಗಿನ ಸಾಮಾನ್ಯ ಒಪ್ಪಂದದ ಬದಲಿಗೆ ಈ ವಿಶ್ವವ್ಯಾಪಾರ ಒಪ್ಪಂದ ಸಂಸ್ಥೆ ಅಸ್ತಿತ್ವಕ್ಕೆ ಬಂದಿದೆ. ಈ ಸಂಸ್ಥೆ ಜಾಗತಿಕ ಮಟ್ಟದಲ್ಲಿ ದೇಶ, ದೇಶಗಳ ಮಧ್ಯೆ ವ್ಯಾಪಾರ ಯಾವ ರೀತಿ ನಡೆಯಬೇಕು, ಒಪ್ಪಂದದ ಶರತ್ತುಗಳು ಹೇಗಿರಬೇಕು, ಯಾಕಿರಬೇಕು ಎನ್ನುವುದನ್ನು ನಿರ್ಧರಿಸುತ್ತದೆ. ಈ ಸಂಸ್ಥೆ ಒಂದನೆಯದಾಗಿ ದೇಶದ ಸರಕಾರಗಳು ವ್ಯಾಪಾರ ಸರಾಗವಾಗಿ ನಡೆಯಲು ಯಾವ ರೀತಿಯ ಕಾನೂನುಗಳನ್ನು ಮಾಡಬೇಕು ಎನ್ನುವುದನ್ನು ಟಿಪ್ಪಣಿ ನೀಡುತ್ತವೆ. ಅದರಂತೆಯೇ ಅಭಿವೃದ್ಧಿಶೀಲ ದೇಶಗಳು ನಡೆದುಕೊಳ್ಳಬೇಕಾದ ಒತ್ತಡ ತಂತ್ರವನ್ನು ಅನುಸರಿಸುತ್ತವೆ. ಹಾಗಾಗಿ ಭಾರತವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ನಮ್ಮ ದೇಶದಲ್ಲಿನ ಕೈಗಾರಿಕಾ ನೀತಿ, ವಿದೇಶಿ ವಿನಿಮಯ ಮತ್ತು ವಿದೇಶಿ ಬಂಡವಾಳ ಹೂಡಿಕೆ ನೀತಿ, ನಮ್ಮ ವ್ಯಾಪಾರ ಒಪ್ಪಂದ, ಕಾರ್ಮಿಕ ಕಾನೂನು, ಎಲ್ಲವನ್ನು ಈ ಹಿನ್ನೆಲೆಯಲ್ಲಿ ಮರು ನಿರೂಪಿಸುವುದನ್ನು ನಾವು ಕಾಣಬಹುದು. ಈ ರೀತಿಯಲ್ಲಿ ಮರು ನಿರೂಪಿಸುವಾಗ ನಾವು ನಮ್ಮ ಹಿತಾಸಕ್ತಿಯನ್ನು ರಕ್ಷಿಸುವ ಸಂಪೂರ್ಣ ಅವಕಾಶದಿಂದ ವಂಚಿತರಾಗಿರುತ್ತೇವೆ. ವಿಶ್ವವ್ಯಾಪಾರ ಒಪ್ಪಂದ ಸಂಸ್ಥೆಯೊಳಗೆ ಇರುವ ವ್ಯಾಪಾರ ಮತ್ತು ಹೂಡಿಕೆ ಸಂಬಂಧಿ ಕ್ರಮಗಳು, ವ್ಯಾಪಾರಕ್ಕೆ ಸಂಬಂಧಿಸಿದ ಬೌದ್ಧಿಕ ಆಸ್ತಿಯ ಹಕ್ಕುಗಳು ಜಾಗತೀಕರಣದ ಸಂದರ್ಭದಲ್ಲಿ ಮುಂದುವರಿದ ರಾಷ್ಟ್ರಗಳಿಗೆ ಬಹಳಷ್ಟು ಅಧಿಕಾರವನ್ನು ನೀಡುತ್ತವೆ. ಆದಾಗ್ಯೂ ಅಭಿವೃದ್ಧಿ ಶೀಲ ರಾಷ್ಟ್ರಗಳು ತಮ್ಮದೇ ಗುಂಪು ಕಟ್ಟಿಕೊಂಡು ಒತ್ತಡ ತಂತ್ರವನ್ನು ನಿರ್ಮಿಸಿದರೆ ಕೆಲವೊಂದು ಸಲ ನಷ್ಟದ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳುವ ಅವಕಾಶಗಳನ್ನು ನಿರ್ಮಿಸಿಕೊಳ್ಳಬಹುದು. ವಿಶ್ವವ್ಯಾಪಾರ ಒಪ್ಪಂದ ಸಂಘಟನೆಯಲ್ಲಿ ಕೃಷಿ ಕ್ಷೇತ್ರದ ವ್ಯಾಪಾರೀ ನೀತಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ಮಾತುಕತೆಗಳಲ್ಲಿ ಭಾರತದ ಮತ್ತು ದಕ್ಷಿಣ ಅಮೆರಿಕಾದ ದೇಶಗಳು ಅನುಸರಿಸುತ್ತಿರುವ ಒತ್ತಡ ತಂತ್ರಗಳನ್ನು ಇಲ್ಲಿ ಸ್ಮರಿಸಬಹುದು.

ಈ ಮೊದಲು ಉಲ್ಲೇಖಿಸಿದಂತೆ ಜಾಗತೀಕರಣದಲ್ಲಿ ಬಂಡವಾಳ ಮತ್ತು ತಂತ್ರಜ್ಞಾನದ ಪ್ರವಹಿಸುವಿಕೆ ಸುಲಭವಾಗಿರುವ ಕಾರಣ ಉತ್ಪಾದನಾ ವ್ಯವಸ್ಥೆಯೂ ಪುನರ್ ಸಂಘಟಿತ ವಾಗುತ್ತಿರುವುದನ್ನು ಕಾಣಬಹುದಾಗಿದೆ. ಇಂತಹ ಸಂದರ್ಭದಲ್ಲಿ ಕೆಲವೊಂದು ಪ್ರದೇಶಗಳು ಕೆಲವೊಂದು ರೀತಿಯ ಉತ್ಪಾದನಾ ಸಾಮರ್ಥ್ಯದಲ್ಲಿ ಪ್ರಾವೀಣ್ಯವನ್ನು ಅಥವಾ ವಿಶೇಷ ಪರಿಣತಿಯನ್ನು ದುಡಿಸಿಕೊಳ್ಳುವ ಮೂಲಕ ಉತ್ಪಾದನಾ ಸಾಮರ್ಥ್ಯವನ್ನು ವೃದ್ಧಿಸಿಕೊಂಡಿವೆ. ಉದಾಹರಣೆಗೆ ನಮ್ಮದೇಶದಲ್ಲಿ ಮಾಹಿತಿ ತಂತ್ರಜ್ಞಾನದಂತಹ ಜ್ಞಾನ ಆಧಾರಿತ ಮತ್ತು ಚಿನ್ನಾಭರಣ, ಜವುಳಿ ಉದ್ಯಮ, ಜೈವಿಕ ತಂತ್ರಜ್ಞಾನದಂತಹ ಕ್ಷೇತ್ರಗಳು ಬಹಳ ದೊಡ್ಡ ರೀತಿಯಲ್ಲಿ ಬೆಳೆದಿವೆ ಎಂದು ಹೇಳಬಹುದು. ಆದರೆ ಅಂತಹ ಸಂಪತ್ತು ಕೆಲವೇ ಕಡೆ ಕೇಂದ್ರಿಕೃತವಾಗಿದೆ. ಅಂತಹ ಕೇಂದ್ರಗಳು ತಮ್ಮನ್ನು ಮುಂದುವರಿದ ದೇಶಗಳ ಮಾರುಕಟ್ಟೆಗೆ ಸಂಪರ್ಕಿಸಿಕೊಳ್ಳುತ್ತವೆಯೇ ಹೊರತು ದೇಶೀಯ ಅರ್ಥವ್ಯವಸ್ಥೆಯೊಂದಿಗೆ ಸಂಪರ್ಕಿಸಿಕೊಳ್ಳುತ್ತಿಲ್ಲ. ದೇಶೀಯ ಅರ್ಥವ್ಯವಸ್ಥೆಯಲ್ಲಿ ಉತ್ಪಾದನೆಗೆ ಬೇಕಾಗುವ ಪರಿಕರಗಳನ್ನು ಅತೀ ಸುಲಭದ ದರದಲ್ಲಿ ಪಡೆದು ದುಡಿಸಿ ಕೊಂಡು ಅದರ ಫಲವನ್ನು ಜಾಗತಿಕ ಮಟ್ಟದಲ್ಲಿರುವ ಶ್ರೀಮಂತ ದೇಶಗಳಿಗೆ ಕಡಿಮೆ ದರದಲ್ಲಿ ವರ್ಗಾಯಿಸುತ್ತವೆ. ಇದರಿಂದಾಗ ಅಲ್ಪಾವಧಿಯಲ್ಲಿ ದೇಶೀಯ ಮಾರುಕಟ್ಟೆಯು ಉತ್ಪಾದನೆಯನ್ನು ಪ್ರೋ ಸುವಂತೆ ಕಂಡರೂ ಅಂತಿಮವಾಗಿ ನಾವು ಜಾಗತಿಕ ವಲಯದಲ್ಲಿ ಉತ್ಪಾದನೆಯನ್ನು ತನ್ಮೂಲಕ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ನಿಯಂತ್ರಿಸುವ ಒಂದು ಸಣ್ಣ ಪ್ರಭಾವ ವಲಯಕ್ಕೆ ಇನ್ನೂ ಹೆಚ್ಚು ಇಂಬು ನೀಡುತ್ತಿದ್ದೇವೆ.

ವಿಶ್ವವ್ಯಾಪಾರ ಒಪ್ಪಂದ, ಜಾಗತಿಕ ಹಣಕಾಸು ಸಂಸ್ಥೆಗಳು ಇವತ್ತು ಜಗತ್ತಿನ ಅರ್ಥವ್ಯವಸ್ಥೆಯನ್ನು ನಿಯಂತ್ರಿಸುತ್ತಿರುವ ಕಾರಣ ದೇಶೀಯ ಅರ್ಥವ್ಯವಸ್ಥೆಗಳಲ್ಲಿ ಸ್ವರೂಪಕ್ಕೆ ಬದಲಾವಣೆಗಳನ್ನು ತಂದಿದೆ. ಇಂತಹ ಬದಲಾವಣೆಗಳನ್ನು ಗಮನಿಸಿದರೆ ಸರಕಾರದ ನಿಯಂತ್ರಣದಿಂದ ಅವು ಮುಕ್ತವಾಗಿ ಮಾರುಕಟ್ಟೆ ನಿಯಂತ್ರಿತ ವ್ಯವಸ್ಥೆಯೆಡೆಗೆ ಸಾಗುತ್ತಿರುವುದನ್ನು ಗಮನಿಸಬಹುದು. ಈ ಕಾರಣದಿಂದಾಗಿ ಪ್ರತಿಯೊಂದು ದೇಶ ಗಳಲ್ಲಿಯೂ ಬಹುರಾಷ್ಟ್ರೀಯ ಕಂಪನಿಗಳ ವ್ಯಾಪಾರ ವಹಿವಾಟು ದಿನದಿಂದ ದಿನಕ್ಕೆ ನಾಗಾಲೋಟದಲ್ಲಿ ವೃದ್ಧಿಸುತ್ತಿದೆ. ಕೆಲವೊಂದು ಸಂದರ್ಭಗಳಲ್ಲಿ ಕಂಪನಿಯ ಬಿಟ್ಟು ವ್ಯಾಪಾರ ವಹಿವಾಟು ದೇಶದ ರಾಷ್ಟ್ರೀಯ ಉತ್ಪನ್ನಕ್ಕಿಂತಲೂ ಹೆಚ್ಚಾಗಿರುವುದನ್ನು ನಾವು ಗಮನಿಸಬಹುದಾಗಿದೆ. ಈ ಕೆಳಗಿನ ಕೋಷ್ಟಕವನ್ನು ಗಮನಿಸಿದರೆ ಈ ಅಂಶ ಸ್ಪಷ್ಟ ವಾಗುತ್ತದೆ.

| ಕ್ರ. ಸಂ. | ದೇಶದ ಹೆಸರು | ರಾಷ್ಟ್ರೀಯ ಉತ್ಪನ್ನ ಮಿಲಿನಯನ್ ಡಾಲರ್ | ಕಂಪನಿಯ ಹೆಸರು | ಮಾರಾಟ ಮಿಲಿಯನ್ ಡಾಲರ್‌ಗಳಲ್ಲಿ |
|---|---|---|---|---|
| ೧ | ಡೆನ್ಮಾರ್ಕ್ | ೧೭೪೩೬೩ | ಜನರಲ್ ಮೋಟರ್ಸ್ | ೧೭೬೫೫೮ |
| ೨ | ಪೋಲಾಂಡ್ | ೧೫೪೧೪೬ | ವಾಲ್‌ಮಾರ್ಟ್ | ೧೬೬೮೦೯ |
| ೩ | ದ.ಆಫ್ರಿಕಾ | ೧೩೧೧೨೭ | ಎಕ್ಸಾನ್‌ಮೊಬಿಲ್ | ೧೬೩೮೮೧ |
| ೪ | ಇಸ್ರೇಲ್ | ೯೯೦೬೮ | ರಾಯಲ್ ಡಚ್ | ೧೦೫೩೬೬ |
| ೫ | ಐರ್ಲೆಂಡ್ | ೮೪೮೬೧ | ಐಬಿಎಂ | ೮೭೫೪೮ |
| ೬ | ಮಲೇಶಿಯಾ | ೭೪೬೩೪ | ಸಿಮನ್ಸ್ | ೭೫೩೩೭ |
| ೭ | ಚಿಲಿ | ೭೧೦೯೨ | ಹಿಟಾಚಿ | ೭೧೮೫೮.೫ |
| ೮ | ಪಾಕಿಸ್ತಾನ | ೫೮೮೮೦ | ಸೋನಿ | ೬೦೦೫೨.೭ |
| ೯ | ನ್ಯೂಜಿಲ್ಯಾಂಡ್ | ೫೩೬೨೨ | ಹೊಂಡಾ ಮೋಟಾರ್ಸ್ | ೫೪೭೭೩.೫ |
| ೧೦ | ಹಂಗೇರಿ | ೪೮೩೫೫.೦ | ಕ್ರೆಡಿಟ್ ಸೂಯಿಸ್ | ೪೬೨೬೨.೦ |

**ಆಧಾರ :** ಫಾರ್ಚೂನ್ ಜುಲೈ ೨೦೦೦ ಮತ್ತು ಜಾಗತಿಕ ಅಭಿವೃದ್ಧಿ ವರದಿ ೨೦೦೦

ಜಗತ್ತಿನ ಶೇಕಡಾ ೭೦ರಷ್ಟು ಅಂತಾರಾಷ್ಟ್ರೀಯ ವ್ಯಾಪಾರವನ್ನು ನಿಯಂತ್ರಿಸುವ ಬಹುರಾಷ್ಟ್ರೀಯ ಕಂಪನಿಗಳು ಉತ್ಪಾದನಾ ವ್ಯವಸ್ಥೆಯನ್ನು ವಿಘಟನೆಗೊಳಿಸಿ ಉಪ ಒಪ್ಪಂದದ ಮೂಲಕ ತೃತೀಯ ಜಗತ್ತಿನ ದೇಶಗಳಲ್ಲಿ ಉತ್ಪಾದಿಸಿ ವಿಶ್ವಮಾರುಕಟ್ಟೆಯಲ್ಲಿ ಮಾರಾಟವಾಗುತ್ತಿವೆ. ಉತ್ಪಾದನೆಯನ್ನು ಈ ಮೊದಲಿನ ಸ್ಥಿತಿಗೆ ಹೋಲಿಸಿದರೆ ಶೀಘ್ರವಾಗಿ ಮತ್ತು ದೊಡ್ಡ ಪ್ರಮಾಣದಲ್ಲಿ ಮಾಡಲಾಗುತ್ತಿದ್ದು ಪ್ರಸರಣದ ವೇಗವೂ ಹೆಚ್ಚಿದೆ. ಉತ್ಪಾದನಾ ಚಕ್ರವು ವೇಗವಾಗಿರುವುದರಿಂದ ಬಂಡವಾಳ ಹೆಚ್ಚು ಕ್ರಿಯಾ ಶೀಲವಾಗಿದೆ. ಹೆಚ್ಚು ಪ್ರಮಾಣದಲ್ಲಿ ಲಾಭ ಸಂಚಯನವಾಗುತ್ತಿದೆ. ಹೆಚ್ಚು ವೇಗ ಮತ್ತು ಪ್ರಮಾಣದಲ್ಲಿ ಸಂಪತ್ತಿನ ಮತ್ತು ಬಂಡವಾಳದ ಸಂಚಯನವೂ ಸಾಧ್ಯವಾಗುತ್ತಿದೆ. ದೇಶದ ಗಡಿಗಳೊಳಗೆ ಕಾರ್ಯಾಚರಿಸುವ ಬಹುರಾಷ್ಟ್ರೀಯ ಕಂಪನಿಗಳು ಆರ್ಥಿಕವಾಗಿ ಪ್ರಬಲವಾಗಿರುವುದರಿಂದ ಆ ದೇಶದ ರಾಜಕೀಯ ಮತ್ತು ಸಾಮಾಜಿಕ ಬದುಕನ್ನು ಪ್ರಭಾವಿಸುವ (ನಿಯಂತ್ರಿಸುವ) ಶಕ್ತಿಯನ್ನು ಹೊಂದಿರುತ್ತವೆ.

ಈ ಮೇಲೆ ಉಲ್ಲೇಖಿಸಿದ ಬದಲಾವಣೆಗಳನ್ನು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯನಿಸ ಲಾಗುತ್ತಿದೆ. ಅವುಗಳಲ್ಲಿ ಪ್ರಮುಖವಾದ ಎರಡು ವಿಚಾರ ಅಥವಾ ವಾದಗಳ ಬಗ್ಗೆ ಗಮನ ಹರಿಸೋಣ.

ಜಾಗತೀಕರಣವು ಹಿಂದೆ ಇದ್ದ ಜಡವಾದ ವ್ಯವಸ್ಥೆಯನ್ನು ಚುರುಕುಗೊಳಿಸಿದ್ದು, ಸಾಂಸ್ಥಿಕ ಸ್ವರೂಪದ ಬದಲಾವಣೆಗಳು ಏನೇ ಆದರೂ ಅದರಿಂದ ಜನಸಾಮಾನ್ಯರಿಗೆ ಒಳ್ಳೆಯದಾಗಿದೆ ಎನ್ನುವುದು ಈ ವಾದದ ಹಿಂದಿನ ಗ್ರಹಿತವಾಗಿದೆ. ಇಂತಹ ಒಂದು ವಾದ ಸರಣಿ ತನ್ನ ಸಮರ್ಥನೆಗಾಗಿ ಈ ಕೆಳಗಿನ ವಿಚಾರಗಳನ್ನು ಪ್ರತಿಪಾದಿಸುತ್ತದೆ.

೧. ಬಳಕೆದಾರರಿಗೆ ಮತ್ತು ಹೂಡಿಕೆದಾರರಿಗೆ ಜಾಗತೀಕರಣ ಹೆಚ್ಚು ಅವಕಾಶ ಮತ್ತು ಆಯ್ಕೆಗಳನ್ನು ಒದಗಿಸಿದೆ. ಹೀಗಾಗಿ ಇವತ್ತು ಬಳಕೆದಾರರ ಅಥವಾ ಹೂಡಿಕೆದಾರ ತನಗೆ ಇಷ್ಟವಾದ ವಸ್ತುವನ್ನು ಖರೀದಿಸಬಹುದು ಅಥವಾ ತನ್ನ ಸಂಪತ್ತನ್ನು ಇಷ್ಟ ಬಂದ ರೀತಿಯಲ್ಲಿ ಹೂಡಿಕೆ ಮಾಡಬಹುದು. ಸರಕಾರದ ನಿಯಂತ್ರಣದಿಂದ ಇಂತಹ ಆಯ್ಕೆ ಅಥವಾ ಸ್ವಾತಂತ್ರ್ಯ ಇದುವರೆಗೆ ಲಭ್ಯವಿರಲಿಲ್ಲ.

೨. ಹೆಚ್ಚು ಪ್ರಮಾಣದಲ್ಲಿ ಬಂಡವಾಳ ಸಂಚಯನವಾಗುವ ಮೂಲಕ, ಮತ್ತು ವಿದೇಶೀ ಬಂಡವಾಳ ಹರಿದು ಬರುವ ಮೂಲಕ ಬಹಳಷ್ಟು ಉದ್ಯೋಗಾವಕಾಶಗಳು ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಉಂಟಾಗಿದೆ. ಇದರಿಂದ ಮಾರುಕಟ್ಟೆ ವಿಸ್ತೃತವಾಗಿದ್ದು, ಇನ್ನಷ್ಟು ಪ್ರಮಾಣದ ಉತ್ಪಾದನೆ ಉದ್ಯೋಗ ಸೃಷ್ಟಿಯಾಗಿದೆ. ಇಂತಹ ಕ್ರಮದಿಂದ ಅಭಿವೃದ್ಧಿ ಸಾಧ್ಯವಾಗಿದೆ.

೩. ಸರಕಾರದ ನೀತಿ ನಿಯಮಗಳನ್ನು ಬಳಸಿಕೊಂಡು ಉದ್ಯಮಶೀಲತೆಯನ್ನು ಅದುಮಿಟ್ಟಿದ್ದ ಅಧಿಕಾರಶಾಹಿಗಳ ಕಪಿಮುಷ್ಟಿಯಿಂದ ಅರ್ಥವ್ಯವಸ್ಥೆ ಹೊರಬಂದಿದೆ. ನೀತಿ ನಿಯಮಗಳ ಪಾವಿತ್ರ್ಯ ಕಾಯುವ ಅಡ್ಡಿಯಿಂದ ಉತ್ಪಾದಕ ಚಟುವಟಿಕೆಗಳಿಗೆ ತೊಡರುಗಾಲು ಹಾಕುತ್ತಿದ್ದ ಸರಕಾರದ ಶಾಸನಾತ್ಮಕ ಸಂಸ್ಥೆಗಳ ತಂಡ ಕಡಿಮೆಯಾಗಿದ್ದು, ಬಹಳಷ್ಟು ಜನ ಭಾರತೀಯ ಉದ್ಯಮಶೀಲರು ಸಕ್ರಿಯರಾಗಿದ್ದಾರೆ.

೪. ಬಂಡವಾಳ ನಿಯಂತ್ರಣ, ಕಾರ್ಮಿಕ ಕಾಯಿದೆ, ಸಾಮಾಜಿಕ ಜವಾಬ್ದಾರಿಯ ವಿಷಯ ದಲ್ಲಿ ಹಿಂದೆ ಇದ್ದಂತಹ ಒಂದು ರೀತಿಯ ಜಡವಾಗಿದ್ದ ಬದಲಾವಣೆಗೆ ಒಪ್ಪಂದ ಜಿಗಟುತನದ ಪ್ರವೃತ್ತಿ ನಿಧಾನವಾಗಿ ಕರಗಿ ಹೋಗುತ್ತಿದೆ. ಈ ಕಾರಣದಿಂದ ಕಾರ್ಯ ದಕ್ಷತೆ ಕೇಂದ್ರಿತ, ಪರಿಣಾಮ ಆಧಾರಿತವಾದ ನಿರ್ಧಾರಗಳನ್ನು ಸರಕಾರದ ಮಟ್ಟ ದಲ್ಲಿಯೂ ಮಾಡಲಾಗುತ್ತಿದೆ. ಅಭಿವೃದ್ಧಿಗೆ ತೊಡಕಾಗಿರುವ ಕಾನೂನುಗಳನ್ನು ಸರಕಾರ ಇಂದು ಬದಲಾಯಿಸಲು ಉತ್ಸುಕವಾಗಿದೆ.

೫. ದೇಶದಲ್ಲಿ ಉದ್ದಿಮೆಗಳ ವಿಲೀನ, ಸಹಯೋಗಗಳು ನಡೆಯುತ್ತಿದೆ. ಇದರ ಪರಿಣಾಮವಾಗಿ ಜಾಗತಿಕ ಮಟ್ಟದಲ್ಲಿ ದಕ್ಷವಾಗಿ ಕಾರ್ಯನಿರ್ವಹಿಸಬಲ್ಲ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಸ್ಪರ್ಧೆ ನೀಡಬಲ್ಲ ಬೃಹತ್ ಉದ್ದಿಮೆಗಳು ಅಸ್ತಿತ್ವಕ್ಕೆ ಬರುತ್ತಿರುವುದು ಸ್ವಾಗತಾರ್ಹ.

೬. ಉದ್ಯಮ, ಉತ್ಪಾದನೆ, ಬಂಡವಾಳ ಸಂಚಯನ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ಈ ಹಿಂದೆ, ಈ ಕ್ಷೇತ್ರಗಳಲ್ಲಿ ಯಾವ ಅನುಭವವೂ ಇಲ್ಲದ ಸರಕಾರಿ ಅಧಿಕಾರಶಾಹಿ ಕೈಗೊಳ್ಳುತ್ತಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದ್ದು, ಈ ಮೇಲಿನ ವಿಷಯಗಳಲ್ಲಿ ವೃತ್ತಿ ನಿರತರು, ಉದ್ಯಮಪತಿಗಳು ಮತ್ತು ಅನುಭವಿಗಳು ನಿರ್ಧಾರ ಕೈಗೊಳ್ಳುವ ಪರಿಸ್ಥಿತಿ ಉಂಟಾಗಿದೆ. ಇದರಿಂದ ಈ ಹಿಂದೆ ಇದ್ದಂತಹ ಗೊಂದಲ, ಅದಕ್ಷತೆ, ಅರಾಜಕತೆ ಮಾಯವಾಗಿ ಶಿಸ್ತು, ಕಾರ್ಯದಕ್ಷತೆ, ಸಂಪನ್ಮೂಲದ ಸದುಪಯೋಗವಾಗುತ್ತಿರುವ ವಾತಾವರಣವಿದೆ.

೮. ಬಂಡವಾಳ ಮತ್ತು ತಂತ್ರಜ್ಞಾನ ಇವತ್ತು ಜಾಗತಿಕ ಮಟ್ಟದಲ್ಲಿ ಪ್ರವಹಿಸುವ ಮತ್ತು ಕಾರ್ಯಾಚರಿಸುವ ಅವಕಾಶ ನಿರ್ಮಾಣವಾಗಿದೆ. ಈ ಹಿಂದಿನಂತೆ ಇದಕ್ಕೆ ತೊಡಕಾಗಿದ್ದ ನಿಯಂತ್ರಣ ವ್ಯವಸ್ತೆಯನ್ನು ನಿವಾರಿಸಲಾಗಿದೆ.

೯. ಬಂಡವಾಳ ಮತ್ತು ತಂತ್ರಜ್ಞಾನ ಹರಿವು ಸುಲಭವಾಗಿರುವುದರಿಂದಾಗಿ ಇವತ್ತು ಹಿಂದುಳಿದ ದೇಶಗಳು ಕೂಡಾ ಅತ್ಯಾಧುನಿಕ ತಂತ್ರಜ್ಞಾನ ವ್ಯವಸ್ಥೆಯನ್ನು ಹೊಂದುವ ಮತ್ತು ದೇಶದ ಅಭಿವೃದ್ಧಿಯಲ್ಲಿ ಅದನ್ನು ಬಳಸುವ ಅವಕಾಶವನ್ನು ಪಡೆದುಕೊಂಡಿವೆ.

೧೦. ವಿಶ್ವದಾದ್ಯಂತ ಚದುರಿರುವ ವಿವಿಧ ಸಮುದಾಯಗಳನ್ನು ಮಾಹಿತಿ ತಂತ್ರಜ್ಞಾನ ಆಧಾರಿತ ಸಂಪರ್ಕ ವ್ಯವಸ್ಥೆ ಒಂದುಗೂಡಿಸುವುದು ಸಾಧ್ಯವಾಗಿದೆ. ಇಂತಹ ಒಂದು ಉನ್ನತ ತಂತ್ರಜ್ಞಾನ ದೊಡ್ಡ ಪ್ರಮಾಣದ ಸಂಶೋಧನೆಯ ಮೂಲಕ ಸಾಧ್ಯವಾಗಿದೆ. ಅಂತಹ ಸಂಶೋಧನೆಗೆ ಬೃಹತ್ ಪ್ರಮಾಣದ ಆರ್ಥಿಕ ಸಹಾಯದ ಅಗತ್ಯವಿದ್ದು, ಅದನ್ನು ಉದ್ಯಮರಂಗ ನೀಡಲು ಶಕ್ತವಾಗಿದೆ. ಹೀಗಾಗಿ ಉದ್ಯಮರಂಗದಲ್ಲಿ ಲಾಭವಾದರೆ ಅದರ ಪ್ರಯೋಜನ ಇಡೀ ವಿಶ್ವ ಸಮುದಾಯಕ್ಕೆ ದೊರಕುವುದು ಸಾಧ್ಯವಿದೆ.

ಈ ಹಿಂದೆ ಇದ್ದ ವ್ಯವಸ್ಥೆಯಲ್ಲಿ ಈ ಬೆಳವಣಿಗೆ ದೇಶದ ಗಡಿಗಳು ಮತ್ತು ಕಾನೂನುಗಳು ತಡೆ ಒಡ್ಡುತ್ತಿದ್ದವು. ಆದರೆ ಜಾಗತೀಕರಣ ಅಂತಹ ಮಿತಿಗಳನ್ನು ಮೀರಿ ಬೆಳೆಯಲು ಸಹಾಯ ಮಾಡಿದೆ.

ಮೇಲೆ ಉಲ್ಲೇಖಿಸಿದ ವಿಚಾರಗಳನ್ನು ಅಲ್ಲಗಳೆಯುವ ಅಥವಾ ಅದನ್ನು ಅಂಶಿಕ ಸತ್ಯವೆಂದು ಸಾಧಿಸುವ ಇನ್ನೊಂದು ಬಗೆಯ ತರ್ಕವೂ ಚಲಾವಣೆಯಲ್ಲಿದೆ. ತನ್ನನ್ನು ಸಮರ್ಥಿಸಲು ಅದು ಬಳಸುತ್ತಿರುವ ವಾದಗಳು ಮತ್ತು ವಿಚಾರಗಳು ಈ ಕೆಳಗಿನಂತಿವೆ.

೧. ಜಾಗತೀಕರಣವು ಸಂಪತ್ತಿನ ವಿಚರಣೆಯಲ್ಲಿದ್ದ ಅಸಮತೋಲನವನ್ನು ಇನ್ನೂ ಹೆಚ್ಚು ಮಾಡುತ್ತಾ ಹೋಗುತ್ತಿದೆ. ೭೦ರ ದಶಕದಲ್ಲಿ ವಿಶ್ವದಲ್ಲಿದ್ದ ಶ್ರೀಮಂತರ ಪೈಕಿ ಮೊದಲ ೨೦ ಶೇಕಡಾ ಜನ ಮತ್ತು ಬಡವರಲ್ಲಿ ಕೊನೆಯಲ್ಲಿರುವ ೨೦ ಶೇಕಡಾ ಜನರ ನಡುವಿನ ಸಂಪತ್ತಿನ ವಿತರಣೆಯ ಅನುಪಾತ ೩೦ಕ್ಕೆ ೧ ರಂತಿದ್ದರೆ, ೧೯೯೦ರಲ್ಲಿ ಈ ಅನುಪಾತ ೬೦ಕ್ಕೆ ಒಂದರಂತೆ ಮತ್ತು ೨೦೦೦ ಇಸವಿಯಲ್ಲಿ ಇದು ೭೪ ಕ್ಕೆ ಒಂದರಷ್ಟಾಗಿದ್ದು ಈ ಅಂತರ ಇನ್ನೂ ದೊಡ್ಡದಾಗುತ್ತಾ ಹೋಗುತ್ತಿದೆ. ಉತ್ಪನ್ನದ ಬಳಕೆಯಲ್ಲಿಯೂ ಈ ಅಂತರ ಹೆಚ್ಚಾಗುತ್ತಿದೆ. ದೇಶದ ಮಟ್ಟದಲ್ಲಿಯೂ ಈ ಅಸಮಾನತೆಯನ್ನು ನಾವು ಕಾಣಬಹುದಾಗಿದೆ. ಭಾರತದಲ್ಲಿ ಈ ಕುರಿತ ವಿವರಗಳನ್ನು ಅರ್ಜುನ ಸೇನ್ ಗುಪ್ತಾ ಅವರು ತಯಾರಿಸಿದ ವರದಿಯಲ್ಲಿ ಕಾಣಬಹುದು.

೨. ಸರಕಾರದ ನೀತಿಗಳು ಅಭಿವೃದ್ಧಿ ಯೋಜನೆಗಳು ಮತ್ತು ತಂತ್ರಜ್ಞಾನದ ಬಳಕೆಯ ಮೂಲಕ ಉದ್ಯೋಗ ಸೃಷ್ಟಿ ಮತ್ತು ಆದಾಯದ ಮರು ವಿತರಣೆಗಳು ಸಮರ್ಪಕವಾಗಿ ಆಗಿದೆ ಎನ್ನುವ ಮಾತು ಕೂಡಾ ಸರಿಯಲ್ಲ ಎನ್ನುವುದನ್ನು ಅಂಕಿ ಅಂಶಗಳು ತಿಳಿಸುತ್ತವೆ. ವಾಸ್ತವಿಕವಾಗಿ ದೇಶದೊಳಗೆ ಖಾಸಗೀ ಉದ್ಯಮ ವಲಯ, ಬಂಡವಾಳ ಹೂಡಿಕೆದಾರರು ಮತ್ತು ಬಹುರಾಷ್ಟ್ರೀಯ ಕಂಪನಿಗಳು ಗಳಿಸುವ ಲಾಭ... ಇವೆಲ್ಲವೂ ಶ್ರೀಮಂತ ದೇಶಗಳ ನಿಯಂತ್ರಣದಲ್ಲಿರುವ ಉದ್ದಿಮೆಗಳಲ್ಲಿ ಮರು ಹೂಡಿಕೆಯಾಗುತ್ತಿವೆ. ಅಂದರೆ ವಾಸ್ತವಿಕವಾಗಿ ಇದುವರೆಗೆ ಜಗತ್ತಿನ ಅಭಿವೃದ್ಧಿಶೀಲ ದೇಶಗಳಲ್ಲಿ ಇರುತ್ತಿದ್ದ ಸಂಪತ್ತು ಶ್ರೀಮಂತ ದೇಶಗಳ ಲಾಭದಾಯಕ ಉದ್ಯಮಗಳ ಬೆಳವಣಿಗೆಯಲ್ಲಿ ಉಪಯೋಗವಾಗುತ್ತಿದೆ. ಹೀಗಾಗಿ ಬಡವರ ಮತ್ತು ಶ್ರೀಮಂತರ ನಡುವಿನ ಅಂತರ ಹೊಸ ಜಾಗತಿಕ ವ್ಯವಸ್ಥೆಯಲ್ಲಿ ಮತ್ತು ಜಾಗತೀಕರಣದ ಪರಿಣಾಮವಾಗಿ ದೇಶದ ಒಳಗೆ ವಿವಿಧ ಪ್ರದೇಶ ಮತ್ತು ಸಮುದಾಯಗಳ ನಡುವೆಯೂ ಹೆಚ್ಚುತ್ತಾ ಹೋಗುತ್ತಿರುವುದನ್ನು ಅನೇಕ ಅಧ್ಯಯನಗಳು ದೃಢಪಡಿಸಿವೆ.

೩. ಉದ್ಯೋಗದ ಸ್ವರೂಪ ಮತ್ತು ಪ್ರಮಾಣದಲ್ಲಿಯೂ ಬಹಳಷ್ಟು ಬದಲಾವಣೆಗಳು ಆಗುತ್ತಿವೆ. ಈ ಮೊದಲು ಇದ್ದಂತಹ ಜೀವನ ಭದ್ರತೆ ಇರುವ ಅಥವಾ ಖಾಯಂ ನೆಲೆಯ ಉದ್ಯೋಗಗಳು ಕಡಿಮೆಯಾಗುತ್ತಿವೆ. ಸರಕಾರಿ ರಂಗದ ಉದ್ಯೋಗಗಳು ಕಡಿಮೆಯಾಗುತ್ತಿದ್ದು ಖಾಸಗೀ ರಂಗದ ಉದ್ದಿಮೆಗಳಲ್ಲಿ ಉದ್ಯೋಗಗಳು ಹೆಚ್ಚುತ್ತಿವೆ ಮಾತ್ರವಲ್ಲ ಉದ್ಯೋಗದಲ್ಲಿ ಸಾಮಾಜಿಕ ನ್ಯಾಯ ಮತ್ತು ಪ್ರಾದೇಶಿಕ ಸಮತೋಲನವನ್ನು ಕಾಯ್ದುಕೊಳ್ಳುವ ಪ್ರವೃತ್ತಿಯೂ ಮಾಯವಾಗುತ್ತಿದೆ. ಈಗಿನ ಎಲ್ಲಾ ಉದ್ಯೋಗಗಳು ಒಪ್ಪಂದ ಮಾದರಿಯ ಉದ್ಯೋಗಗಳು. ಅಂದರೆ ಒಪ್ಪಂದದ ಅವಧಿ ಮುಗಿದ ನಂತರ ಮರು ನೇಮಕದ ಯಾವ ಭರವಸೆಯೂ ಇರುವುದಿಲ್ಲ. ಕಾರ್ಮಿಕ ಸಂಘಟನೆಗಳು ತಮ್ಮ ಹಕ್ಕಿಗಾಗಿ ಹೋರಾಟ ನಡೆಸುವಂತಹ ಒಂದು ಪರಿಸ್ಥಿತಿ ಇದರಿಂದಾಗಿ ಕೊನೆಗೊಂಡಾಂತಾಗಿದೆ. ಉತ್ಪಾದನಾ ರಂಗದಲ್ಲಿ ಇದರಿಂದ ಅದಕ್ಷತೆ, ಅನಿಶ್ಚಿತತೆ, ಅನಗತ್ಯ ರಾಜಕೀಯ ಹಸ್ತಕ್ಷೇಪಗಳನ್ನು ತಡೆಯಲಾಗಿದೆಯೆಂದು ಹೇಳಿಕೊಂಡರೂ ಇದು ಮಾನವ ಸಂಪನ್ಮೂಲವನ್ನು ಶೋಷಣೆ ಮಾಡಲು ಮುಕ್ತ ಪರವಾನಗಿ ನೀಡಿದೆ ಎಂದೂ ಹೇಳಲಾಗುತ್ತಿದೆ. ನಿರುದ್ಯೋಗದ ಕಾರಣದಿಂದ ಜನ ಹೊಸ ಅವಕಾಶಗಳನ್ನು ಅರಸಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಲಸೆ ಹೋಗುವ ಪ್ರವೃತ್ತಿಯನ್ನು ನಾವು ಕಾಣಬಹುದು. ಆದರೆ ಇಂತಹ ವಲಸಿಗರ ಬಗ್ಗೆ ಸ್ಥಳೀಯರಾದ ನಿರುದ್ಯೋಗಿಗಳು ರೊಚ್ಚಿಗೇಳುವ ಪ್ರವೃತ್ತಿಯನ್ನು ಮತ್ತು ವಲಸಿಗರ ಮೇಲೆ ದಾಳಿ ಮಾಡುವ ಉದಾಹರಣೆಗಳನ್ನು ಜಾಗತಿಕ ಮಟ್ಟದಲ್ಲಿ ಮತ್ತು ದೇಶದೊಳಗೆಯೂ ನಾವು ಕಾಣಬಹುದಾಗಿದೆ. ಇದು ವ್ಯಾಪಾರದ ವಿಷಯದಲ್ಲೂ ಕಂಡುಬರುತ್ತದೆ. ಇಂತಹ ಬೆಳವಣಿಗೆಗಳು ಅಸಂಘಟಿತ ವಲಯ ಉದ್ಯೋಗ ಮತ್ತು ವ್ಯಾಪಾರ ಚಟುವಟಿಕೆಗಳಲ್ಲಿ ಕಂಡುಬರುತ್ತದೆ. ಇಂತಹ ಸಂದರ್ಭಗಳಲ್ಲಿ ನಷ್ಟಕ್ಕೆ ಗುರಿಯಾಗುವವರು ಸಮಾಜದ ಅಂಚಿನಲ್ಲಿರುವ ಜನ ಮಾತ್ರ. ದೊಡ್ಡ ಉದ್ಯೋಗಪತಿಗಳು ಮತ್ತು ವ್ಯಾಪಾರಸ್ಥರಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಅವರ ಉದ್ದಿಮೆಯನ್ನು ಸ್ಥಳಾಂತರಿಸುವುದು ಬಹಳ ಕಷ್ಟದ ವಿಷಯವಾಗುಳಿದಿಲ್ಲ.

೪. ಜಾಗತೀಕರಣದ ನಂತರದ ದಿನಗಳಲ್ಲಿ ಸರಕಾರದ ಮೇಲೆ ಅಂತರರಾಷ್ಟ್ರೀಯ ಪ್ರಭಾವ ಬೇರೆ ಬೇರೆ ರೀತಿಯಲ್ಲಿ ಆಗುತ್ತಿರುವುದರಿಂದ ಮತ್ತು ಸರಕಾರ ತನ್ನ ಆಡಳಿತವನ್ನು ದಕ್ಷತೆಯಿಂದ ನಡೆಸುವ ಹಂಗಿಗೆ ಒಳಗಾಗಿರುವ ಕಾರಣದಿಂದ 'ಲಾಭ ದಾಯಕ'ವಲ್ಲದ ಶಿಕ್ಷಣ, ಆರೋಗ್ಯ ಮತ್ತು ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಹೆಚ್ಚು ಖರ್ಚು ಮಾಡುವಂತಿಲ್ಲ. ಇದರಿಂದಾಗಿ ಇಂತಹ ನೆರವನ್ನು ನಂಬಿರುವ ಜನರಿಗೆ ತೀವ್ರ ತೊಂದರೆಯುಂಟಾಗಿದೆ. ಇದರಿಂದ ಬಡಜನತೆ ಆಹಾರ, ಶಿಕ್ಷಣ ಮತ್ತು ಆರೋಗ್ಯ ದಂತಹ ಮೂಲಭೂತ ಅನುಕೂಲಗಳಿಂದ ವಂಚಿತರಾಗಿರುವಂತಹ ಸ್ಥಿತಿ ನಿರ್ಮಾಣ ವಾಗಿದೆ. ಜನರ ಈ ಅಸಹನೆ, ಅಸಹಾಯಕತೆ ಮತ್ತು ಸಿಟ್ಟನ್ನು ಬೇರೆ, ಬೇರೆ ಹಿತಾಸಕ್ತಿ ಗುಂಪುಗಳು ತಮ್ಮ ಬೇಳೆ ಬೇಯಿಸಿಕೊಳ್ಳಲು ಉಪಯೋಗಿಸುತ್ತಿವೆ. ಪ್ರಾದೇಶಿಕ ಹಿನ್ನೆಲೆಯಲ್ಲಿ, ಜಾತಿಯ ಆಧಾರದಲ್ಲಿ ಮತ್ತು ಅಸ್ಮಿತೆಯ ಆಧಾರದಲ್ಲಿ ನಡೆಯುತ್ತಿರುವ ಹಿಂಸೆಯ ಹಿಂದಿರುವ ವಿಷಯಗಳನ್ನು ಅಧ್ಯಯನ ಮಾಡಿದರೆ ಅದರ ಹಿಂದಿರುವ ಆರ್ಥಿಕ ಲಕ್ಷಣಗಳು ಸ್ಪಷ್ಟವಾಗಿ ತಿಳಿದುಬರುತ್ತವೆ.

೫. ಸರಕಾರದ ಮೇಲೆ ಉದ್ಯಮಪತಿಗಳ, ವಿದೇಶಿ ಸಂಸ್ಥೆಗಳ ಪ್ರಭಾವ ಹೆಚ್ಚಾಗುತ್ತಿದೆ. ಇಂದು ಬೇರೆ ಬೇರೆ ದೇಶಗಳಲ್ಲಿ ಈ ಪರಿಸ್ಥಿತಿ ಕಂಡುಬರುತ್ತಿದೆ. ಇದಕ್ಕೆ ಪ್ರಮುಖ ಕಾರಣ ವ್ಯಾಪಾರೀ ಅಥವಾ ಉದ್ಯಮ ಜಗತ್ತು. ಅಪಾರ ಹಣ ಗಳಿಸಿರುವ ಕಾರಣದಿಂದ ರಾಜ್ಯಗಳಿಗೆ ಅಥವಾ ದೇಶಕ್ಕೆ ಮುಖ್ಯವಾಗಿವೆ. ಯಾಕೆಂದರೆ ಯಾವುದೇ ಅಭಿವೃದ್ಧಿ ನಡೆಸಿಕೊಂಡು ಹೋಗಬೇಕಾದರೆ ಬಂಡವಾಳದ ಅವಶ್ಯಕತೆ ಇದ್ದೇ ಇದೆ. ಸರಕಾರಗಳು ಇವತ್ತು ಅನುಸರಿಸುತ್ತಿರುವ ನೀತಿಗಳ ಕಾರಣದಿಂದ ಬೊಕ್ಕಸ ಬರಿದಾಗುತ್ತಿದೆ. ರಾಜಕರಣ ಮಾಡುವವರಲ್ಲಿ ವೈಚಾರಿಕತೆ, ದೂರದರ್ಶಿತ್ವ ಯಾವುದೂ ಇಲ್ಲದೆ ಬರೀ ಅಧಿಕಾರ ದಾಹವಿದೆ. ಈ ಕಾರಣದಿಂದ ಹಣಬಲವಿದ್ದವರನ್ನು ಓಲೈಸುವ ಪ್ರವೃತ್ತಿ ಹೆಚ್ಚುತ್ತಿದೆ. ಹೀಗಾಗಿ ಭಾರತ ದೇಶದಲ್ಲಿ ಅಂಬಾನಿ, ಬಿರ್ಲಾ, ಟಾಟಾರಂತಹ ಉದ್ಯಮಪತಿಗಳು ಸರಕಾರದ ನಿರ್ಧಾರಗಳನ್ನು ಬಹಳಷ್ಟು ಮಟ್ಟಿಗೆ ಪ್ರಭಾವಿಸು ವಂತಾಗಿದೆ. ಇನ್ನು ಕರ್ನಾಟಕದ ಉದಾಹರಣೆಯನ್ನು ತೆಗೆದುಕೊಂಡರೆ ಇನ್ಫೋಸಿಸ್, ವಿಪ್ರೋ ಮತ್ತು ಮಠಾಧೀಶರು ಅತ್ಯಂತ ಪ್ರಭಾವಿ ವ್ಯಕ್ತಿಗಳಾಗಿದ್ದಾರೆ. ಪ್ರತಿಯೊಂದು ಸಮಸ್ಯೆಗೂ ಉದ್ದಿಮಪತಿಗಳತ್ತ ನೋಡುವ ಸರಕಾರಗಳು ಜನಸಾಮಾನ್ಯರ ಬಗ್ಗೆ, ಪ್ರಜಾತಂತ್ರ ಮೌಲ್ಯಗಳ ತೀವ್ರ ಅನಾದರ ಹೊಂದಿರುವ ಒಂದು ಸ್ಥಿತಿಯನ್ನು ಗಮನಿಸ ಬಹುದಾಗಿದೆ.ಈ ಕಾರಣದಿಂದಾಗಿ ರಾಜಕೀಯ ಪಕ್ಷಗಳೊಳಗೆ ಅರ್ಥವ್ಯವಸ್ಥೆ ಯನ್ನು ಬಲಪಡಿಸುವ ಅಥವಾ ಪ್ರಜಾತಂತ್ರ ವ್ಯವಸ್ಥೆಯನ್ನು ಬಲಪಡಿಸುವ ಕಾರ್ಯ ಕ್ರಮ ಗಳಿಗಿಂತಲೂ ಉದ್ಯಮಪತಿಗಳನ್ನು ಸಂತೃಪ್ತಿಗೊಳಿಸುವ, ಮಠಾಧಿಪತಿಗಳನ್ನು ಓಲೈಸುವ ಪ್ರವೃತ್ತಿಯೇ ಕಂಡುಬರುತ್ತಿದೆ.

೬. ಉತ್ಪಾದನೆ ಬಂಡವಾಳ, ತಂತ್ರಜ್ಞಾನ ಅಭಿವೃದ್ಧಿ, ವ್ಯಾಪಾರಕ್ಕೆ ಉತ್ತೇಜನ ನೀಡುವುದಕ್ಕೆ ತೋರುತ್ತಿರುವ ಉತ್ಸಾಹದ ಒಂದಂಶವನ್ನಾದರೂ ಕಾರ್ಮಿಕ ಕಲ್ಯಾಣ, ಶಿಕ್ಷಣ ವ್ಯವಸ್ಥೆಯ ಬಲವರ್ಧನೆ, ಪ್ರಜಾಪ್ರಭುತ್ವದ ಸದೃಢತೆ, ಬಡವರಿಗೆ ಮೂಲಭೂತ ಸೌಕರ್ಯ ಒದಗಿಸುವಂತಹ ಕಾರ್ಯಕ್ರಮ ನೀಡುವುದರ ಕುರಿತು ತೋರಲಾಗುತ್ತಿಲ್ಲ. ಇದರ ಬದಲಿಗೆ ಅಸಹಾಯಕರ ನೆರವಿಗೆ ಬರಲು ಕಾರ್ಪೋರೇಟ್ ಜಗತ್ತಿನ ತೀಟೆ ಯಾಗಿರುವ ಸಮಾಜ ಕಲ್ಯಾಣ ಕಾರ್ಯಕ್ರಮ, ಧರ್ಮದ ಆಧಾರದಲ್ಲಿ ಬಡವರನ್ನು ಅಧಿಕಾರಸ್ಥರ ಪರವಾಗಿ ಸಂಘಟಿಸಲು ಮಠಮಾನ್ಯಗಳನ್ನು, ಚರ್ಚ್ ಮಸೀದಿಗಳಂತಹ ಧಾರ್ಮಿಕ ಸಂಸ್ಥೆಗಳನ್ನು ತೊಡಗಿಸುವಂತೆ ಮಾಡಲಾಗುತ್ತಿದೆ. ಇದು ಇನ್ನೊಂದಷ್ಟು ತಲೆನೋವಿಗೆ ದಾರಿ ಮಾಡಿಕೊಡುತ್ತಿದೆ.

೭. ವಿಶ್ವವ್ಯಾಪಾರ ಸಂಘಟನೆಯು ಮುಕ್ತ ಮಾರುಕಟ್ಟೆಯ ವಾದವನ್ನು ಮುಂದಿಡುತ್ತಲೇ ಬಡದೇಶಗಳು ಮತ್ತು ಅಭಿವೃದ್ಧಿಶೀಲ ದೇಶಗಳು ಶ್ರೀಮಂತ ದೇಶಗಳ ಮಾರುಕಟ್ಟೆ ಪ್ರವೇಶ ಮಾಡದಂತೆ ತಡೆಯಲಾಗುತ್ತಿದೆ. ಅಭಿವೃದ್ಧಿಶೀಲ ದೇಶಗಳು ಮತ್ತು ಬಡದೇಶಗಳಲ್ಲಿ ಮಾರುಕಟ್ಟೆಯನ್ನು ಆಕ್ರಮಿಸಿಕೊಳ್ಳುತ್ತಿರುವ ಮುಂದುವರಿದ ದೇಶಗಳು ಮಿಕ್ಕುಳಿದವರಿಗೆ ಹಲವಾರು ರೀತಿಯ ನೀತಿ ನಿಯಮಗಳನ್ನು ಪಾಲಿಸುವಂತೆ ಶರತ್ತು ಗಳನ್ನು ವಿಧಿಸುತ್ತಿವೆ. ಮತ್ತು ಅಂತಹ ಶರತ್ತುಗಳನ್ನು ಪಾಲಿಸುವಂತೆ ಒತ್ತಡ ತಂತ್ರವನ್ನು ಅನುಸರಿಸುತ್ತಿವೆ.

೮. ಅಪರಾಧೀಕರಣವೂ ಇಂದಿನ ಸಂದರ್ಭದಲ್ಲಿ ವಿಶ್ವದಾದ್ಯಂತ ಪ್ರಸರಿಸುತ್ತಿದ್ದು ಭೂಗತ ಲೋಕವೂ ಕೂಡಾ ಆಧುನಿಕ ತಂತ್ರಜ್ಞಾನ ಬಂಡವಾಳವನ್ನು ಉಪಯೋಗಿಸಿಕೊಂಡು ವ್ಯಾಪಕ ಬೆಳೆಯುತ್ತಿದೆ. ಇಂತಹ ಅಪರಾಧ ಜಗತ್ತು ಅಧಿಕಾರದ ಕೇಂದ್ರದೊಂದಿಗೆ,

ರಾಷ್ಟ್ರೀಯತೆಯ ಗುರಾಣಿಯನ್ನು ಮುಂದು ಮಾಡಿಕೊಳ್ಳುತ್ತಾ, ಸಮಾಜದಲ್ಲಿ ಆತ್ಮಸಾಕ್ಷಿಯಾಗಿ ಕಾರ್ಯನಿರ್ವಹಿಸುವ ಟೀಕಾಕಾರರ ಬಾಯಿ ಮುಚ್ಚಿಸುವ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುತ್ತಿದೆ.

**ಜಾಗತೀಕರಣದ ರಾಜಕೀಯ ಆಯಾಮಗಳು**

ಲೇಖನದ ಮೊದಲ ಭಾಗದಲ್ಲಿ ವರ್ತಮಾನದಲ್ಲಿ ಜಾಗತೀಕರಣ ಪ್ರಕ್ರಿಯೆ ಹಾದುಬಂದ ವಿವಿಧ ಹಂತಗಳ ಬಗ್ಗೆ ಉಲ್ಲೇಖಿಸಲಾಗಿದೆ. ಮೊದಲ ನಾಲ್ಕು ಹಂತಗಳ ಅವಧಿಯಲ್ಲಿ ಸರಕಾರ ಒಂದು ದೇಶದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ರಂಗದ ಮೇಲೆ ಸಂಪೂರ್ಣ ಅಧಿಕಾರ ಅಥವಾ ಹಿಡಿತ ಹೊಂದಿರುವಂತಹ ಒಂದು ಪರಿಸ್ಥಿತಿ ಇತ್ತು. ಇದರರ್ಥ ಸರಕಾರಕ್ಕೆ ಇಡೀ ವ್ಯವಸ್ಥೆಯ ಮೇಲೆ ನಿಯಂತ್ರಣವಿತ್ತು ಮತ್ತು ಅದು ಒಂದು ಸ್ವಾಯತ್ತ ಸಾಂಸ್ಥಿಕ ವ್ಯವಸ್ಥೆಯಾಗಿ ಕಾರ್ಯನಿರ್ವಹಿಸುತ್ತಿತ್ತು ಎಂದು ಹೇಳಲಾಗದಿದ್ದರೂ ರಾಜಪ್ರಭುತ್ವ ಮತ್ತು ಪ್ರಜಾಪ್ರಭುತ್ವ ಮಾದರಿಯ ಸಾಂಸ್ಥಿಕ ಸಂರಚನೆ ಅಸ್ಥಿತ್ವದಲ್ಲಿತ್ತು ಎಂದು ಹೇಳಬಹುದು. ಮಾತ್ರವಲ್ಲ ಇಂತಹ ಒಂದು ವ್ಯವಸ್ಥೆ ಆಧುನಿಕತೆಯ ನಂತರ ವ್ಯಕ್ತಿ ಸ್ವಾತಂತ್ರ್ಯವನ್ನು ಪೋಷಿಸುವ ಒಂದು ಉದಾರವಾದಿ ಉತ್ಪಾದನಾ ವ್ಯವಸ್ಥೆಯನ್ನು ಹೊಂದಿದ ಪ್ರಜಾತಂತ್ರ ವ್ಯವಸ್ಥೆಯನ್ನು ಆಧರಿಸಿ ಸಮುದಾಯ ಜೀವನ ನಡೆಯುತ್ತಿತ್ತು ಎಂದು ಹೇಳಬಹುದು. ಹಾಗಾಗಿ ಜನರ ಆಶೋತ್ತರಗಳಿಗೆ ಅನುಗುಣವಾಗಿ ರಾಜ ಪ್ರಭುತ್ವ ಮತ್ತು ಪ್ರಜಾತಂತ್ರ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿತ್ತು ಎನ್ನುವುದನ್ನು ತಾತ್ವಿಕ ವಾಗಿ ಒಪ್ಪಬಹುದಾಗಿದೆ. ಇಂತಹ ವ್ಯವಸ್ಥೆಯಲ್ಲಿ ಜಾಗತೀಕರಣದ ನಂತರ ಬಹಳಷ್ಟು ಬದಲಾವಣೆಗಳಾಗುತ್ತಲಿವೆ. ಆದರೆ ಇಂತಹ ಬದಲಾವಣೆಗಳು ವಿಶ್ವದ ಎಲ್ಲಾ ಕಡೆಗಳಲ್ಲಿ ಒಂದೇ ರೀತಿಯಲ್ಲಿ ಆಗುತ್ತಿದೆ ಎಂದು ಹೇಳಲಾಗದು. ಆದರೆ ಎಲ್ಲಿ ಎಲ್ಲ ಸರಕಾರ ಉತ್ಪಾದನಾ ವ್ಯವಸ್ಥೆಯಲ್ಲಿ ದೇಶದ ಗಡಿಯೊಳಗಿನ ಜನರ ಆಶೋತ್ತರಗಳಿಗೆ ಸ್ಪಂದಿಸುವ ಪ್ರಯತ್ನ ಮಾಡುತ್ತಿತ್ತೋ ಅಥವಾ ಎಲ್ಲಿ ಸಾಮಾಜಿಕ ಮತ್ತು ಆರ್ಥಿಕ ಯೋಜನೆಗಳ ವಿನ್ಯಾಸ ದೇಶದ ಜನರ ಅವಶ್ಯಕತೆಗಳಿಗನುಸಾರ ರೂಪುಗೊಳ್ಳುತ್ತಿತ್ತೋ ಅಂತಹ ಪರಿಸ್ಥಿತಿಯಲ್ಲಿ ಬಹಳ ವ್ಯತ್ಯಯವಾಗುತ್ತಿದೆ. ಕೆಲವೊಂದು ಸಿದ್ಧಾಂತಿಗಳು ವಾದಿಸುವ ಹಾಗೆ ರಾಜ್ಯಾಂಗ ವ್ಯವಸ್ಥೆ ಅಥವಾ ಸರಕಾರಗಳು ಖಾಸಗೀ ಉದ್ಯಮ ವಲಯ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಕೈಗೊಂಬೆಗಳಾಗಿವೆ ಎನ್ನುವುದು ಸರಿಯಲ್ಲವಾದರೂ ಅವುಗಳ ಪ್ರಭಾವ ಮತ್ತು ಹಿಡಿತ ಬಿಗಿಗೊಂಡಿರುವುದಂತೂ ಸತ್ಯ. ಸರಕಾರದ ಧ್ಯೇಯ ಗಳಲ್ಲಿ ಬದಲಾವಣೆಯಾಗುತ್ತಿದೆ, ಗುರಿಗಳಲ್ಲಿ ಬದಲಾವಣೆಯಾಗುತ್ತಿದೆ ಮತ್ತು ಸರಕಾರದ ಆಡಳಿತದ ಭಾಷೆಯಲ್ಲೂ ಬದಲಾವಣೆಯಾಗುತ್ತಿರುವುದನ್ನು ಗಮನಿಸಬಹುದು. ಒಂದು ರೀತಿಯಲ್ಲಿ ಸರಕಾರಗಳು ಆದರ್ಶ, ದೂರದರ್ಶಿತ್ವ, ಭವಿಷ್ಯತ್ತಿನ ಬಗ್ಗೆ ಮಾತನಾಡುವ ಯೋಚಿಸುವ ಬದಲಿಗೆ, ವಾಸ್ತವಿಕ ಅವಶ್ಯಕತೆಗಳು, ವ್ಯವಹಾರ ಜಾಣತನ, ಈ ಕ್ಷಣದ ಅವಶ್ಯಕತೆ ಮತ್ತು ಲಾಭ ನಷ್ಟಗಳು ಇತ್ಯಾದಿ ದೃಷ್ಟಿಕೋನವಿರುವ ವ್ಯವಹಾರಿಕ ರೀತಿಯಲ್ಲಿ ಜನರೊಂದಿಗೆ ವ್ಯವಹರಿಸಲಾರಂಭಿಸಿವೆ. ಸರಕಾರವನ್ನು ನಡೆಸುವುದೆಂದರೆ ಉದ್ಯಮ ಜಗತ್ತಿನಲ್ಲಿ ವ್ಯವಹಾರಾಡಳಿತದ ತತ್ವಗಳನ್ವಯ 'ಸಮರ್ಥ'ವಾಗಿ ಮುನ್ನಡೆಸುವುದೆನ್ನುವ ರೀತಿಯಲ್ಲಿ ಕಾರ್ಯನಿರ್ವಹಿಸಲಾರಂಭಿಸಿವೆ. ಹಾಗಾಗಿ ರಾಜಕೀಯ ಪಕ್ಷಗಳು ಜಾಹೀರಾತಿನ ಮೂಲಕ ತಮ್ಮ ತತ್ವ ಸಿದ್ಧಾಂತಗಳನ್ನು ಯಶಸ್ವಿಯಾಗಿ ಮಾರಾಟ ಮಾಡಲು ಇನ್ನಿಲ್ಲದ ಪ್ರಯತ್ನ ನಡೆಸುತ್ತಿವೆ. ಕಳೆದ ಹಲವಾರು ಚುನಾವಣೆಗಳಲ್ಲಿ ನಮ್ಮ ದೇಶದ ಪ್ರಮುಖ ಪಕ್ಷಗಳಾದ ಬಿ.ಜೆ.ಪಿ ಮತ್ತು ಕಾಂಗ್ರೆಸ್ ಉದ್ಯಮ ವಲಯದ ಜಾಹೀರಾತು ಸಂಸ್ಥೆಗಳ ಮೂಲಕ ಪ್ರಚಾರ ಕಾರ್ಯವನ್ನು ವಿನ್ಯಾಸಗೊಳಿಸಿವೆ. ಬಹಳಷ್ಟು ರಾಜಕೀಯ ನಾಯಕರು ಸುದ್ದಿಯಲ್ಲಿರುವ ಮೂಲಕ ಜನರ ನೆನಪಿನಲ್ಲಿ ಸದಾ ಹಸಿರಾಗಿರುವಂತೆ ನೋಡಿಕೊಳ್ಳಲು ಮಾಧ್ಯಮ ಪಂಡಿತರ ಸಲಹೆ ಪಡೆಯುವಂತಹ ಪರಿಸ್ಥಿತಿಯನ್ನು ಕಾಣಬಹುದು. ಇದೆಲ್ಲವನ್ನೂ ಗಮನಿಸಿದರೆ ನಮಗೆ ವಿಷಾದವಾಗುವ ಅಂಶವೆಂದರೆ ಪ್ರಜಾತಂತ್ರ ವ್ಯವಸ್ಥೆ ಉದ್ಯಮೀಕರಣಗೊಳ್ಳುತ್ತಿದೆ. ಪ್ರಜೆಗಳು ಬಳಕೆದಾರರು ಆಡಳಿತ ನಡೆಸುವವರು ಸೇವೆಯನ್ನು ಮಾರಾಟ ಮಾಡುವ ಉದ್ದಿಮೆದಾರರಾಗಿರುವಂತಹ ಸನ್ನಿವೇಶ ಸೃಷ್ಟಿಯಾಗಿದೆ. ಇದು ರಾಜಕೀಯ ಮಾತ್ರವಲ್ಲ. ಎಲ್ಲಾ ರಂಗಗಳಲ್ಲಿಯೂ ಕಂಡುಬರುತ್ತಿರುವ ಸ್ಥಿತಿಯಾಗಿದೆ.

ಜಾಗತಿಕ ಮಟ್ಟದಲ್ಲಿ ನಡೆಯುವ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಎಲ್ಲ ಏರುಪೇರುಗಳ ಹಿಂದೆಯೂ ರಾಜಕೀಯದ ವ್ಯಾಪಾರೀಕರಣವನ್ನು ನಾವು ಗುರುತಿಸಬಹುದು. ಇರಾಕ್‌ನ ಮೇಲೆ ಅಮೆರಿಕಾವು ಸದ್ದಾಂ ಹುಸೇನ್‌ನ ಬಳಿ ಇರುವ ಸಮೂಹ ನಾಶಕ ಜೈವಿಕ ಅಸ್ತ್ರಗಳನ್ನು ನಾಶಪಡಿಸುವ ಉದ್ದೇಶದಿಂದ ಯುದ್ಧ ಮಾಡಿತು. ಆದರೆ ಅಂತಹ ಸಮೂಹನಾಶಕ ಅಸ್ತ್ರಗಳು ಎಲ್ಲಿದ್ದುವು, ಅವುಗಳ ಪತ್ತೆಯಾಯಿತೇ? ಇಲ್ಲವೆಂದಾದರೆ ಸಾವಿರಾರು ಜನರ ಜೀವನ ಬಲಿ ತೆಗೆದುಕೊಂಡ ಅಮೆರಿಕವನ್ನು ಯಾರು ಶಿಕ್ಷಿಸಬೇಕು?

ಇದೀಗ ಇರಾನ್ ಮೇಲೆ ಅಮೆರಿಕಾದ ಕೆಂಗಣ್ಣು ಬಿದ್ದಿದೆ. ಜಾರ್ಜಿಯಾದಲ್ಲಿ ಪ್ರಜಾಪ್ರಭುತ್ವ ಮಾತಾಡುವ ಅಮೆರಿಕ, ಮೈಯಾನ್‌ಮಾರ್‌ನಲ್ಲಿ ನೊಬೆಲ್ ಪಾರಿತೋಷಕ ಪಡೆದ ಮತ್ತು ಅಲ್ಲಿನ ಶೇಕಡಾ ೯೦ ಜನರ ಒಪ್ಪಿಗೆ ಇರುವ ಬಹುಮತದ ನಾಯಕಿ ಲಿಂಗ್‌ಸಾನ್‌ಸೂಕಿಯ ಬಗ್ಗೆ ಅಮೆರಿಕಾದ ಅಭಿಪ್ರಾಯವೇನು? ಟಿಬೆಟ್ ಗಲಭೆಗಳ ಬಗ್ಗೆ ತೀವ್ರ ಆತಂಕ ವ್ಯಕ್ತಪಡಿಸುವ ಮುಂದುವರಿದ ದೇಶಗಳು ಯುರೋಪ್‌ನ ದೇಶಗಳಲ್ಲಿ ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ದಾಳಿಗಳ ಬಗ್ಗೆ ಮೌನವಹಿಸುತ್ತಿದೆ. ಅಂದರೆ ಬದಲಾಗುತ್ತಿರುವ ಸನ್ನಿವೇಶದಲ್ಲಿ ಅಭಿವೃದ್ಧಿಶೀಲ ದೇಶಗಳಲ್ಲಿ ಮತ್ತು ಹಿಂದುಳಿದಿರುವ ದೇಶಗಳಲ್ಲಿ ಸರಕಾರಗಳನ್ನು ನಿತ್ರಾಣಗೊಳಿಸಿ, ಅಲ್ಲಿನ ಆಂತರಿಕ ತಲ್ಲಣಗಳ ಬಗ್ಗೆ ಜನರು ಗಮನ ಹರಿಸುವಂತೆ ಮಾಡುವ ಕುಟಿಲೋಪಾಯಗಳನ್ನು ಗಮನಿಸಬಹುದು. ಈ ಎಲ್ಲಾ ಕಾರಣಗಳಿಂದ ವಿಶ್ವದಾದ್ಯಂತ ಜನ ಇವತ್ತು ಸಮಸ್ಯೆಗಳನ್ನು ತೀರಾ ಸರಳೀಕರಿಸಿ ನೋಡು ವಂತಹ ಸ್ಥಿತಿ ನಿರ್ಮಾಣವಾಗಿದೆ. ಬಹುಶಃ ಧಾರ್ಮಿಕ ಕಾರಣಗಳಿಂದಾಗಿ ಹುಟ್ಟಿಕೊಳ್ಳುವ ಭಯೋತ್ಪಾದನೆ, ಮಧ್ಯಪೂರ್ವದ ರಾಜಕೀಯ ಸಮಸ್ಯೆ, ಮತ್ತು ತೃತೀಯ ಜಗತ್ತಿನಲ್ಲಿ ಕಂಡುಬರುತ್ತಿರುವ ರಾಜಕೀಯ ತಲ್ಲಣಗಳನ್ನು ಮತ್ತು ಅವುಗಳಿಗೆ ಕಾರಣವಾದ ಸಂಗತಿಗಳನ್ನು ವಿಶ್ಲೇಷಿಸಿದರೆ ಜಾಗತೀಕರಣದ ರಾಜಕೀಯ ಆಯಾಮಗಳ ಬಗ್ಗೆ ವಿಷದವಾಗಿ ವಿಶಿಷ್ಟ ಒಳನೋಟಗಳು ದೊರೆಯಬಹುದು. ಪ್ರಾಯಶಃ ಜಾಗತೀಕರಣದ ಬಗ್ಗೆ ನಡೆಯುವ ಹಲವು ಶಿಬಿರಗಳಿಂದ ಕೇಳಿಬರುತ್ತಿರುವ ಆಪಾದನೆ ಮತ್ತು ಸಮರ್ಥನೆ ಯನ್ನು ಕೂಲಂಕಷವಾಗಿ ವಿಶ್ಲೇಷಿಸುವುದು ಸೂಕ್ತವೆನಿಸುತ್ತದೆ.

ರಾಜಕೀಯ ಆಯಾಮಗಳ ಬಗ್ಗೆ ಪ್ರಸ್ತಾಪಿಸುವಾಗ ಇನ್ನೊಂದು ಬೆಳವಣಿಗೆಯನ್ನು ಗಮನಿಸುವುದು ಸೂಕ್ತವೆನಿಸುತ್ತದೆ. ಅದೆಂದರೆ ಉದ್ಯಮ ವಲಯವಲ್ಲದೆ ತೃತೀಯ ವಲಯವೆನ್ನುವ ಇನ್ನೊಂದು ಕ್ಷೇತ್ರವನ್ನು ಮುಂದುವರಿದ ದೇಶಗಳು ಇವತ್ತು ಗುರುತಿ ಸುತ್ತಿವೆ. ಏನಿದು ತೃತೀಯ ರಂಗ ಎನ್ನುವ ಪ್ರಶ್ನೆ ಎಂಬ ಕುತೂಹಲ ಸಹಜವಾಗಿಯೇ ಮೂಡುತ್ತದೆ. ಅಭಿವೃದ್ಧಿಶೀಲ ದೇಶಗಳಲ್ಲಿ ಸರಕಾರಗಳು ತಮ್ಮ ಜವಾಬ್ದಾರಿಯಿಂದ ಹಿಂದೆ ಸರಿಯುವ ಸಮಯದಲ್ಲಿ ಅಂತಹ ಶೂನ್ಯವನ್ನು ತುಂಬುವ ಒಂದು ಪ್ರಯತ್ನವಾಗಬೇಕಿದೆ. ಇಂತಹ ಕೆಲಸ ಬಹಳ ಕಾರಣಗಳಿಗಾಗಿ ಅವಶ್ಯ. ಒಂದನೆಯದಾಗಿ ಸರಕಾರದ ಹಿಂದೆ ಸರಿಯುವಿಕೆಯಿಂದ ಉಂಟಾಗುವ ಶೂನ್ಯವನ್ನು ತುಂಬದೇ ಹಾಗೆ ಬಿಟ್ಟಲ್ಲಿ ಜನರ ಸಮಸ್ಯೆ ಉಲ್ಬಣವಾಗಿ ಅಂತಹ ಒಂದು ಅಸಹನೆ, ಸಿಟ್ಟು ಹಿಂಸಾರೂಪದಲ್ಲಿ ಅಥವಾ ಇನ್ನಾವುದೋ ರೂಪದಲ್ಲಿ ಸಾಮಾಜಿಕ ಅಶಾಂತಿಯನ್ನು ಹರಡಬಹುದು. ಹೀಗಾಗಿ ಇಂತಹ ಒಂದು ಪ್ರಯತ್ನ ಅಗತ್ಯ. ಎರಡನೆಯದಾಗಿ ಈ ಶೂನ್ಯವನ್ನು ತುಂಬುವ ಪ್ರಕ್ರಿಯೆಯಲ್ಲಿ ವಿದೇಶೀ ನೆರವನ್ನು ಪಡೆಯುವ ಸಂಸ್ಥೆಗಳು ಅವಕಾಶಗಳನ್ನು ಪಡೆಯುತ್ತವೆ. ಈ ರೀತಿಯಲ್ಲಿ ವಿದೇಶಗಳಿಂದ ಮತ್ತು ಜಾಗತಿಕ ಸಂಸ್ಥೆಗಳಿಂದ ನೆರವು ಪಡೆಯುವ ಸಂಸ್ಥೆಗಳನ್ನು ಸರಕಾರಕ್ಕಿಂತಲೂ ಸುಲಭವಾಗಿ ನಿಯಂತ್ರಿಸಬಹುದು ಮತ್ತು ಪ್ರಭಾವಿಸ ಬಹುದಾಗಿದೆ. ತೃತೀಯ ರಂಗದ ವ್ಯಾಪ್ತಿಯಲ್ಲಿ ಬರುವ ಸಂಸ್ಥೆಗಳಲ್ಲಿ ಉದ್ಯಮ ಜಗತ್ತಿ ನೊಂದಿಗೆ ನಂಟು ಹೊಂದಿರುವ ಅಥವಾ ಉದ್ಯಮ ಜಗತ್ತಿನಿಂದಲೇ ಪ್ರಾಯೋಜಿಸಲ್ಪಟ್ಟ ಸಂಸ್ಥೆಗಳೂ ಇಂದು ದೊಡ್ಡ ಸಂಖ್ಯೆಯಲ್ಲಿವೆ. ಮಾತ್ರವಲ್ಲ ಜಾಗತೀಕರಣದ ನಂತರದ ದಿನಗಳಲ್ಲಿ ಅವುಗಳ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಬೆಳೆಯುತ್ತಿದೆ. ಸರಕಾರದ ಹಿಂದೆ ಸರಿಯುವಿಕೆಯಿಂದ ಉಂಟಾದ ವಾತಾಯನವನ್ನು ತುಂಬುವ ಸಂಸ್ಥೆಗಳು ಮತ್ತು ಸ್ಥಳೀಯ ಜನರ ಮಧ್ಯೆ ತಿಕ್ಕಾಟಗಳು ನಡೆಯುವ ಸಂದರ್ಭಗಳೂ ಇದೆ. ಇಂತಹ ಸಂಘರ್ಷಗಳಿಗೆ ಬೇರೆ ಬೇರೆ ರೀತಿಯ ಹಿತಾಸಕ್ತಿಗಳು ಕಾರಣವಾಗಿದ್ದು, ಅವುಗಳಲ್ಲಿ ರಾಜಕೀಯ, ಧಾರ್ಮಿಕ ಮತ್ತು ಅಸ್ಮಿತೆಯ ಕಾರಣಗಳು ಹೆಚ್ಚಾಗಿ ಕಂಡುಬರುತ್ತಿವೆ.

ಜಾಗತೀಕರಣ ಪ್ರಕ್ರಿಯೆಯ ರಾಜಕೀಯ ಮತ್ತು ಆರ್ಥಿಕ ಆಯಾಮಗಳನ್ನು ಚರ್ಚಿಸಿದ ನಂತರ ಈ ಎರಡೂ ಅಂಶಗಳಿಂದ ನಿರ್ಧರಿತವಾಗುವ ಅಥವಾ ಪ್ರಭಾವಿಸಲ್ಪಡುವ ಸಾಂಸ್ಕೃತಿಕ ಆಯಾಮಗಳ ಕುರಿತು ಮುಂದೆ ಪ್ರಸ್ತಾಪಿಸಲಾಗಿದೆ.

**ಜಾಗತೀಕರಣದ ಸಾಂಸ್ಕೃತಿಕ ಆಯಾಮಗಳು**

ಸಂಸ್ಕೃತಿ ಎನ್ನುವುದು ಬಹಳ ವಿಸ್ತೃತ ಅರ್ಥ ಮತ್ತು ವ್ಯಾಪ್ತಿ ಇರುವ ಶಬ್ದವಾಗಿದೆ. ಇದು ವ್ಯಕ್ತಿಯ ಮತ್ತು ಸಮುದಾಯದ ಇಡೀ ಜೀವನ ವಿಧಾನಗಳನ್ನು ಒಳಗೊಳ್ಳುವ ಅರ್ಥ ಸಮುಚ್ಚಯ. ಇಂತಹ ವಿಶಾಲವಾದ ಹರುಹುಗಳಿರುವ ಈ ಪರಿಕಲ್ಪನೆಯೊಳಗೆ ಉತ್ಪಾದನಾ ಸಂಸ್ಕೃತಿ, ಆಹಾರ ಸಂಸ್ಕೃತಿ, ಕರ್ಮಸಂಸ್ಕೃತಿ ಮತ್ತು ಧರ್ಮ ಸಂಸ್ಕೃತಿಯೇ ಮುಂತಾದ ಉಪ ಶಾಖೆಗಳನ್ನು ಗಮನಿಸಬಹುದು. ಆದರೆ ಸಂಸ್ಕೃತಿ ಎನ್ನುವಾಗ ಈ ಎಲ್ಲಾ ಆಯಾಮಗಳನ್ನು ಒಳಗೊಂಡಂತೆ ಬಹಳ ಸರಳವಾದ ಅರ್ಥದಲ್ಲಿ ನಾವು ಈ ಪದವನ್ನು

ಬಳಸುತ್ತಿದ್ದೇವೆ. ಪ್ರಾಯಶಃ ಕೇವಲ ಸಂಸ್ಕೃತಿಯ ಬಗ್ಗೆಯೇ ನಾವು ಚರ್ಚಿಸು ವುದಿದ್ದರೆ ಈ ಎಲ್ಲಾ ಸೂಕ್ಷ್ಮಗಳ ಬಗ್ಗೆ ಒಳಸುಳಿವುಗಳ ಬಗ್ಗೆ ವಿಷದವಾಗಿ ಚರ್ಚಿಸ ಬಹುದೇನೋ. ಆದರೆ ಸದ್ಯದ ಸಂದರ್ಭದಲ್ಲಿ ಜಾಗತೀಕರಣ ನಮ್ಮ ಜೀವನ ವಿಧಾನಗಳನ್ನು ಯಾವ ರೀತಿಯಲ್ಲಿ ಪ್ರಭಾವಿಸುತ್ತಿದೆ ಎನ್ನುವ ಚರ್ಚೆಯ ಸಂದರ್ಭದಲ್ಲಿ ನಾವು ಬಹಳ ಸಾಮಾನ್ಯವಾದ ಅರ್ಥದಲ್ಲಿ ಅಂದರೆ ಜನಸಾಮಾನ್ಯರ ದಿನ ನಿತ್ಯದಲ್ಲಿ ಬದುಕಿನಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಕೇಂದ್ರವಾಗಿರಿಸಿ ವಿಷಯವನ್ನು ಅವಲೋಕಿಸಬೇಕಾಗಿದೆ. ಜಾಗತೀಕರಣದ ಕಾರಣದಿಂದ ನಮ್ಮ ಕರ್ಮ ಸಂಸ್ಕೃತಿ, ಆಹಾರ ಸಂಸ್ಕೃತಿ, ಮನೋರಂಜನಾ ವಿಧಾನ, ಕಲಿಕಾ ಸಂಸ್ಕೃತಿ, ರಾಜಕೀಯ ಸಂಸ್ಕೃತಿ ಎಲ್ಲವೂ ಪ್ರಭಾವಕ್ಕೆ ಒಳಗಾಗುತ್ತಿದೆ. ಇಂತಹ ಸಮಗ್ರ ಸಂಸ್ಕೃತಿಯನ್ನು ಗಮನಿಸಿದರೆ ನಾವು ಮನುಷ್ಯನ ಆಂತರಿಕ ಸುಪ್ತ ಪ್ರತಿಭೆಗೆ ಹೊಳಪು ನೀಡುವ, ಜೀವನ ಮೌಲ್ಯದ ಹುಡುಕಾಟ ನಡೆಸುವ ದೇಶೀಯ ಸಂಸ್ಕೃತಿಯಿಂದ ಭಿನ್ನವಾದ ಉಪಭೋಗ ಅಥವಾ ಮಾರುಕಟ್ಟೆ ಅಥವಾ ಕೊಳ್ಳುಬಾಕ ಸಂಸ್ಕೃತಿಯತ್ತ ಕೊಚ್ಚಿ ಹೋಗುತ್ತಿದ್ದೇವೆ. ಇಂದಿನ ಪರಿಸ್ಥಿತಿಯಲ್ಲಿ ಒಂದು ಕಾಲದಲ್ಲಿ ಮೌಲ್ಯಗಳಾಗಿದ್ದ ವಿಷಯಗಳು ಸರಕುಗಳಾಗುತ್ತಿವೆ ಮತ್ತು ಸಂಪನ್ಮೂಲವಾಗುತ್ತಿವೆ. ಪ್ರತಿನಿತ್ಯದ ನಮ್ಮ ಬದುಕಿನಲ್ಲಿ ಇಂತಹ ಬದಲಾವಣೆಗಳನ್ನು ನಾವು ಕಾಣಬಹುದು. ನಾವು ಆಚರಿಸುವ 'ಪ್ರೇಮಿಗಳ ದಿನ', 'ತಾಯಂದಿರ ದಿನಾಚರಣೆ' 'ತಂದೆಯಂದಿರ ದಿನಾಚರಣೆ', 'ಜನ್ಮದಿನಾಚರಣೆ' ಎಲ್ಲವೂ ಒಂದು ರೀತಿಯ ಚಟಗಳಾಗಿ ಬಿಟ್ಟಿವೆ. ಇವುಗಳ ಮುಖ್ಯ ಉದ್ದೇಶ ವಸ್ತುಗಳಿಗೆ ಮಾರುಕಟ್ಟೆಯೊದಗಿಸಿಕೊಡುವುದೇ ಹೊರತು ಪಾರಂಪರಿಕ ಮೌಲ್ಯಗಳನ್ನು ಹುಡುಕುವುದಾಗಿಲ್ಲ.

ಇಂದು ಕ್ರಿಕೆಟ್‌ನಂತಹ ಕ್ರೀಡೆಗಳು, ಒಲಂಪಿಕ್ಸ್‌ನಂತಹ ಕ್ರೀಡಾ ಕೂಟಗಳು ಕೂಡಾ ಇಂತಹ ಮಾರುಕಟ್ಟೆ ಪ್ರವೃತ್ತಿಗೆ ಬಲಿಯಾಗುತ್ತಿವೆ. ಇವೆಲ್ಲವೂ ವರ್ತಮಾನದ ನಾಗರಿಕತೆಯ ಔನ್ನತ್ಯದ ದರ್ಶನ ಮಾಡಿಕೊಡುವುದಿಲ್ಲ. ಬದಲಾಗಿ ಮಾರುಕಟ್ಟೆ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವ, ಉತ್ತೇಜಿಸುವ ಕ್ರಿಯೆಗಳಾಗಿ ಕಂಡುಬರುತ್ತವೆ. ಇಂತಹ ಎಲ್ಲಾ ಯೋಜನೆಗಳ ಹಿಂದೆ ಕೆಲಸ ಮಾಡುವುದು ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳ ಮಾಧ್ಯಮಗಳು, ವೃತ್ತ ಪತ್ರಿಕೆಗಳು, ಶಿಕ್ಷಣ ವ್ಯವಸ್ಥೆ, ಆರೋಗ್ಯ ತಂತ್ರಜ್ಞಾನ, ಅರ್ಥವ್ಯವಸ್ಥೆ... ಹೀಗೆ ಪ್ರತಿಯೊಂದು ಕೂಡಾ ಮನುಷ್ಯನನ್ನು ಹಣ ಸಂಪಾದಿಸುವ ಮತ್ತು ಸಂಪಾದಿಸಿದ ಹಣವನ್ನು ಖರ್ಚುಮಾಡುವ ಯಂತ್ರವನ್ನಾಗಿ ಮಾರ್ಪಡಿಸಿದೆ ಎನ್ನುವ ಅಪಾದನೆಯಿದೆ. ಒಟ್ಟಿನಲ್ಲಿ ಒಂದು ನಿರ್ದಿಷ್ಟ ಮಾದರಿಯ ಉತ್ಪಾದನಾ ವ್ಯವಸ್ಥೆಯು ಮುಂದುರಿಯುವ ಮತ್ತು ಮುಂದುವರಿದು ಬೆಳೆಯಲು ಅಗತ್ಯವಾಗಿರುವ ಭೂಮಿಕೆಯನ್ನು ಸಿದ್ಧಪಡಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಕಾರಣದಿಂದಾಗಿಯೇ ನಾವು ಬಳಸುವ ವಸ್ತುಗಳು, ನಾವು ನೋಡುವ ಚಲನಚಿತ್ರ, ಓದುವ ಪತ್ರಿಕೆಗಳ ಸ್ವರೂಪ, ಕೇಳುವ ಸಂಗೀತ, ತಿನ್ನುವ ಅಹಾರ, ನೃತ್ಯ ಚಿತ್ರಕಲೆ ಎಲ್ಲವೂ ಒಂದು ರೀತಿಯ ಸಿದ್ಧ ಮಾದರಿಯ ಚೌಕಟ್ಟಿಗೆ ಸೀಮಿತವಾಗುತ್ತಿರುವ ಬೆಳವಣಿಗೆಯನ್ನು ಕಾಣಬಹುದಾಗಿದೆ. ಒಟ್ಟಿನಲ್ಲಿ ಬದುಕಿನ ವೈವಿಧ್ಯಗಳು ಮರೆಯಾಗಿ ಒಂದು ರೀತಿಯ ಏಕತಾನತೆ ಸ್ಥಾಪಿತ ಗೊಳ್ಳುವುದನ್ನು ಕಾಣಬಹುದು. ಬಹುಶಃ ಇಂತಹ ಬೆಳವಣಿಗೆಯಿಂದಾಗಿ ವೈವಿಧ್ಯತೆ ಮಾಯವಾಗಿ, ಸಾವಿರಾರು ಭಾಷೆ, ಸಂಸ್ಕೃತಿಗಳ ಅಸ್ತಿತ್ವ ನಿರಾಕರಣೆಯಾದರೆ ಅದರಿಂದ ಬೇರೆ ಬೇರೆ ರೀತಿಯ ಪರಿಣಾಮಗಳಾಗಬಹುದು. ಇಂತಹ ಪರಿಣಾಮಗಳು ಜನರ ಬದುಕಿನಲ್ಲಿ ಒತ್ತಡಗಳನ್ನು, ತಲ್ಲಣಗಳನ್ನು ಉಂಟುಮಾಡಬಹುದು. ವೈವಿಧ್ಯ ಮರೆಯಾಗುವುದರ ಸಂಕೇತವನ್ನು, ಮರೆಯಾಗುತ್ತಿರುವ ಭಾಷೆಗಳ ಸಂಖ್ಯೆಯನ್ನು ಗಮನಿಸಿದರೆ ತಿಳಿಯುತ್ತದೆ. ಈ ಕೆಳಗೆ ನೀಡಿದ ಕೋಷ್ಟಕದಲ್ಲಿ ಈ ಬಗೆಗಿನ ವಿವರಗಳನ್ನು ನೀಡಲಾಗಿದೆ.

**ಕ್ರಿ.ಶ.೧೫೦೦ ರಿಂದ ಕ್ರಿ.ಶ.೨೦೦೦ನೆಯ ಇಸವಿಯವರೆಗೆ ಜಗತ್ತಿನಾದ್ಯಂತ ಬಳಕೆಯಲ್ಲಿರುವ ಭಾಷೆಗಳ ವಿವರಗಳು**

| ಖಂಡ | ೧೬ನೆಯ ಶತಮಾನ | ೧೭ನೆಯ ಶತಮಾನ | ೧೮ನೆಯ ಶತಮಾನ | ೧೯ನೆಯ ಶತಮಾನ | ೨೦ನೆಯ ಶತಮಾನ ಆದಿ | ೨೦ನೆಯ ಶತಮಾನ ಅಂತ್ಯ | ೨೧ನೆಯ ಶತಮಾನ |
|---|---|---|---|---|---|---|---|
| ಅಮೆರಿಕಾ | ೨೧೭೫ | ೨೦೨೫ | ೧೮೦೦ | ೧೫೦೦ | ೧೧೨೫ | ೧೦೦೫ | ೩೬೬ |
| ಆಫ್ರಿಕಾ | ೪೩೫೦ | ೪೦೫೦ | ೩೬೦೦ | ೩೦೦೦ | ೨೨೫೦ | ೨೦೧೧ | ೧೩೫೫ |

| | | | | | | | |
|---|---|---|---|---|---|---|---|
| ಯುರೋಪ್ | ೪೩೫ | ೪೦೫ | ೩೬೦ | ೩೦೦ | ೨೨೫ | ೨೦೧ | ೧೪೦ |
| ಏಷಿಯಾ | ೪೮೭೫ | ೪೪೫೫ | ೩೯೬೦ | ೩೩೦೦ | ೨೪೮೫ | ೨೨೧೨ | ೧೦೪೪ |
| ಪೆಸಿಪಿಕ್ | ೨೮೫೫ | ೨೫೬೫ | ೨೨೭೦ | ೧೯೦೦ | ೧೪೨೫ | ೧೨೮೪ | ೯೨ |
| ಜಾಗತಿಕ ಮಟ್ಟದಲ್ಲಿ | ೧೪೫೦೦ | ೧೩೫೦೦ | ೧೨೦೦ | ೧೦೦೦೦ | ೮೫೦೦ | ೬೮೦೩ | ೨೯೯೮ |

ಮೇಲೆ ಉಲ್ಲೇಖಿಸಿದ ವಿಷಯಗಳಲ್ಲದೇ ಪರಿಸರ ಮಾಲಿನ್ಯದಂತಹ ವಿಷಯಗಳು, ಉಪಭೋಗ ವಿಧಾನದಲ್ಲಿ ಅಗುತ್ತಿರುವ ಬದಲಾವಣೆಗಳು, ಜೀವ ವೈವಿಧ್ಯಕ್ಕೆ ಧಕ್ಕೆಯಾಗು ವುದರಿಂದ ಉಂಟಾಗುತ್ತಿರುವ ತೊಂದರೆಗಳು ಮುಂತಾದ ವಿಷಯಗಳು ಜಗತ್ತಿನ ವಿವಿಧ ಸಮುದಾಯದ ಜನಗಳ ಜೀವನ ವಿಧಾನದ ಮೇಲೆ ಗಂಭೀರ ಪರಿಣಾಮಗಳನ್ನು ಉಂಟು ಮಾಡುತ್ತಿದೆ. ಇದರೊಂದಿಗೇನೆ ಗುಡ್ಡಗಾಡು ಮತ್ತು ಬುಡಕಟ್ಟು ಜನರು ಆಧುನಿಕ ವ್ಯವಸ್ಥೆಯಲ್ಲಿ ಬದುಕಿನ ಹಕ್ಕಿನಿಂದ ವಂಚಿತರಾಗುತ್ತಿರುವುದನ್ನು ಗಮನಿಸಬಹುದಾಗಿದೆ.

**ಉಪಸಂಹಾರ**

ಜಾಗತೀಕರಣದ ವಿವಿಧ ಆಯಾಮಗಳ ಬಗ್ಗೆ ಚರ್ಚೆ ನಡೆಸಿದ ನಂತರವೂ ನಾವು ಈ ಪರಿಕಲ್ಪನೆಯ ಬಗ್ಗೆ ಮತ್ತು ಅದು ಜನರ ಜೀವನದಲ್ಲಿ ತರುತ್ತಿರುವ ಬದಲಾವಣೆಗಳ ಬಗ್ಗೆ ಯಾವುದೇ ಮೌಲ್ಯಾಧಾರಿತ ತೀರ್ಮಾನಗಳನ್ನು ಮಾಡಲಾಗದು. ಒಂದಂತೂ ಬಹಳ ಸತ್ಯ ಇದುವರೆಗೆ ನಾವು ಅನುಸರಿಸಿದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನೀತಿಗಳೆಲ್ಲವೂ ಬಂಡವಾಳ ಆಧಾರಿತ ಮುಕ್ತ ಮತ್ತು ಮಾರುಕಟ್ಟೆ ಆಧಾರಿತ ಚಿಂತನೆಯ ತಳಹದಿಯ ಮೇಲೆ ರೂಪು ಪಡೆದಿರುವಂತಹದು ಅಥವಾ ರಚಿತವಾದದ್ದಾಗಿದೆ. ಬಹಳ ದೀರ್ಘ ಅವಧಿಯವರೆಗೆ ಇಂತಹ ಒಂದು ವ್ಯವಸ್ಥೆಯ ಸಂಪೂರ್ಣ ಉತ್ಕರ್ಷಕ್ಕೆ ತಾತ್ವಿಕ ನೆಲೆಯಲ್ಲಿ ಅಲ್ಲವಾದರೂ ಪ್ರಾಯೋಗಿಕ ನೆಲೆಯಲ್ಲಿ ಸಮಾಜವಾದಿ ವ್ಯವಸ್ಥೆಯ ತಡೆಯಿತ್ತು. ಆದರೆ ಬದಲಾದ ಸನ್ನಿವೇಶದಲ್ಲಿ ಅಂತಹ ತಡೆಯೂ ದೂರವಾಗಿರುವುದರಿಂದ ಮುಕ್ತ ಮಾರುಕಟ್ಟೆಯ ನೀತಿ ತನ್ನ ಸಂಪೂರ್ಣ ವಿಶ್ವದರ್ಶನ ನೀಡುತ್ತಿದೆ. ಇಂತಹ ಒಂದು ಬೆಳವಣಿಗೆಯನ್ನು ತಡೆಯುವುದು ಅಗತ್ಯವೂ ಅಲ್ಲ ಅನಿವಾರ್ಯವೂ ಅಲ್ಲ. ಆದರೆ ಇಂತಹ ವ್ಯವಸ್ಥೆಯಲ್ಲಿ ಅಂಚಿಗೆ ಸರಿಯುವ ಜನರನ್ನು ಮುಖ್ಯ ವಾಹಿನಿಗೆ ತರುವ ಮತ್ತು ಅಂತಹ ಕೆಲಸವನ್ನು ತುರ್ತಾಗಿ ಮತ್ತು ಪರಿಣಾಮಕಾರಿಯಾಗಿ ಮಾಡುವುದು ಎಲ್ಲಕ್ಕಿಂತಲೂ ಮುಖ್ಯ. ಬಂಡವಾಳಶಾಹಿ ವ್ಯವಸ್ಥೆಯ ಮುಂದುವರಿಕೆಯನ್ನು ನಾವು ಒಪ್ಪಬಹುದು, ಒಪ್ಪದಿರಬಹುದು. ಆದರೆ ಅಂತಹ ಒಂದು ವ್ಯವಸ್ಥೆಗೆ ಸದ್ಯದ ಭವಿಷ್ಯದಲ್ಲಿ ಯಾವ ಪರ್ಯಾಯವೂ ಗೋಚರಿಸುತ್ತಿಲ್ಲ. ಈ ನಿಟ್ಟಿನಲ್ಲಿ ಎರಡು ಪ್ರಮುಖ ವಿಷಯಗಳ ಬಗ್ಗೆ ಚಿಂತನೆ ನಡೆಸುವ ಅವಶ್ಯಕತೆ ಇದೆ.

ಮೊದಲನೆಯದಾಗಿ ಸಮಾಜವಾದಿ ಸಿದ್ಧಾಂತದ ಬಗ್ಗೆ ಕುರುಡು ವ್ಯಾಮೋಹವನ್ನು ಬದಿಗಿಟ್ಟು, ಸಮಾಜವಾದಿ ಸಿದ್ಧಾಂತಗಳನ್ನು ಬದಲಾದ ಪರಿಸ್ಥಿತಿಯಲ್ಲಿ ಮರು ವಿಮರ್ಶಿ ಸುವ ಕಾಲ ಬಂದಿದೆ ಎನ್ನುವುದನ್ನು ಮನಗಾಣಬೇಕು. ಮಾತ್ರವಲ್ಲ ಬಹುಮತೀಯ ಸಮಾಜದಲ್ಲಿ ಸಾಮಾಜಿಕ ಬದ್ಧತೆಯನ್ನು ಪ್ರತಿಸ್ಪರ್ಧಾತ್ಮಕವಾದ ರೀತಿಯಲ್ಲಿ ಪರಿಭಾವಿಸುವ ಪ್ರವೃತ್ತಿಯನ್ನು ಬಿಟ್ಟು ಪೂರಕವಾದ ದೃಷ್ಟಿಯಿಂದ ಮರು ನಿರೂಪಿಸಿಕೊಳ್ಳಬೇಕಾಗುತ್ತದೆ. ಪ್ರಾಯಶಃ ಆಧುನಿಕತೆಯ ಮತ್ತು ಆಧುನಿಕ ಸಂಸ್ಥೆಗಳ ಬಗ್ಗೆ ಬಹಳ ತೀಕ್ಷ್ಣವಾಗಿಯೇ ಟೀಕೆ ಮಾಡಿದ ನೆಹರೂ ಚಿಂತನೆಗಳು ಇಂತಹ ದಿಸೆಯಲ್ಲಿ ನಮ್ಮ ನೆರವಿಗೆ ಬರಬಹುದೋ ಗೊತ್ತಿಲ್ಲ. ಒಟ್ಟಿನಲ್ಲಿ ಈ ಬಗ್ಗೆ ಯೋಚಿಸುವ ಅಗತ್ಯವಿದೆ. ಪ್ರತಿಯೊಬ್ಬ ವ್ಯಕ್ತಿಯ ಒಳಿತು ಸಮುದಾಯದ ಒಳಿತಿನಲ್ಲಿ ಅಡಗಿರುವುದೂ ಸತ್ಯವಾಗಿರುವ ಕಾರಣ ಸಾಮಾಜಿಕ ಕಾಳಜಿ ಗಳಿಗೆ ಸ್ಪಂದಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು ಅತ್ಯಗತ್ಯವಾಗಿದೆ. ಯಾಕೆಂದರೆ ಜಾಗತೀಕರಣದ ದಿನಗಳಲ್ಲಿ ಅಧಿಕಾರಶಾಹಿ, ಸರಕಾರಗಳು ಮತ್ತು ದೇಶ ದೇಶಗಳ ನಡುವಿರುವ ನೀತಿ ನಿಯಮಗಳು ಯಾವ ಕಾನೂನಿನ ತೊಂದರೆಗಳು ನಿವಾರಣೆಯಾಗಿರುವುದು ಸತ್ಯ. ಆದರೆ ಇಂತಹ ಬೇಲಿಗಳು ವ್ಯಕ್ತಿ, ವ್ಯಕ್ತಿಗಳ ನಡುವೆ ಹುಟ್ಟಿಕೊಂಡಿವೆ. ಜಾಗತೀಕರಣದ ದಿನಗಳಲ್ಲಿ ಅಡೆತಡೆಗಳಿರುವ ಮನಸ್ಸುಗಳ ಮಧ್ಯೆ, ಸಮುದಾಯಗಳ ಮಧ್ಯೆ, ಜಾತಿ ಮತ್ತು ಧರ್ಮಗಳ ಮಧ್ಯೆ ಈ ಗೋಡೆಗಳನ್ನು ಹೇಗೆ ಉರುಳಿಸುವುದು. ಇದು ನಮ್ಮ ಮುಂದಿರುವ ಸದ್ಯದ ಬಹುದೊಡ್ಡ ಸವಾಲು. ಸಮಾಜವಾದಿ ಸಿದ್ಧಾಂತದ ಬೇರುಗಳು ಗಟ್ಟಿಯಾಗಬೇಕಾದರೆ ವ್ಯಕ್ತಿ ಸಮಾಜ ಮುಖಿಯಾಗಿ ಚಿಂತನೆ

ನಡೆಸುವುದು ಬಹಳ ಅಗತ್ಯ. ವೈಯಕ್ತಿಕ ಕಲ್ಯಾಣದ ಬಗ್ಗೆ, ಸಾಧನೆಯ ಬಗ್ಗೆ ಯೋಚಿಸುವ ವ್ಯಕ್ತಿ ಗಳಿರುವ ಸಮುದಾಯದಲ್ಲಿ ಸಮಾಜವಾದಿ ಚಿಂತನೆಗಳು ಅಥವಾ ಸಮಾಜದ ಕಲ್ಯಾಣ ಕೇಂದ್ರಿತ ಚಿಂತನೆಗಳು ಬೆಳೆಯಲು ಸಾಧ್ಯವಿಲ್ಲವಾಗಿದೆ. ಈ ನಿಟ್ಟಿನಲ್ಲಿ ಸಮಾಜದ ಎಲ್ಲರ ಹಿತ ಮತ್ತು ಅದಕ್ಕೆ ಪೂರಕವಾದ ವೈಯಕ್ತಿಕ ಸಾಧನೆಯ ಗುರಿಗಳನ್ನು ಸರಿಹೊಂದಿಸಿ ಕೊಳ್ಳುವುದು ಅಗತ್ಯ.

ಎರಡನೆಯದಾಗಿ, ಜಾಗತೀಕರಣದ ಪ್ರಕ್ರಿಯೆ ಕೇವಲ ಬಡರಾಷ್ಟ್ರಗಳಿಗೆ ನಷ್ಟವನ್ನೇ ಅಥವಾ ಶೋಷಣೆಯನ್ನೇ ಬಳುವಳಿಯಾಗಿ ಕೊಟ್ಟಿದೆ ಎಂದು ಹೇಳುವ ಹಾಗಿಲ್ಲ. ಒಂದೊಮ್ಮೆ ಅಂತಹ ರೀತಿಯಲ್ಲಿ ನಷ್ಟವಾಗಿದ್ದರೆ, ಅದು ಉದ್ದೇಶಪೂರ್ವಕವಾಗಿ ಮತ್ತು ಪ್ರಜ್ಞಾಪೂರ್ವಕವಾಗಿ ನಡೆಯುತ್ತಿರುವ ವಿದ್ಯಾಮಾನವೆಂದೇ ಪರಿಗಣಿಸಬೇಕಾಗಿಯೂ ಇಲ್ಲ. ನಮ್ಮ ಕಾಳಜಿ ಇರಬೇಕಾದುದು ಇಂತಹ ಅನಾನುಕೂಲತೆಗಳನ್ನು ಯಾವ ರೀತಿಯಲ್ಲಿ ಸರಿದೂಗಿಸಿಕೊಂಡು ಹೋಗುವುದು ಅಥವಾ ಇಂದಿನ ಸಮಸ್ಯೆಗಳಿಗೆ ಯಾವ ರೀತಿ ಮಾರ್ಗೋಪಾಯಗಳನ್ನು ಕಂಡುಹಿಡಿಯುವುದು. ಈ ನಿಟ್ಟಿನಲ್ಲಿ ಜಾಗತೀಕರಣ ಯುಗದಲ್ಲಿ ನಮ್ಮ ನೆರವಿಗೆ ನಿಲ್ಲಬಲ್ಲ ಹಲವಾರು ಸಂಗತಿಗಳಿವೆ. ಅದರಲ್ಲಿ ಸಂಪರ್ಕ ವನ್ನು ಸುಲಭವಾಗಿಸಿದ ಕಂಪ್ಯೂಟರ್ ಆಧಾರಿತ ತಂತ್ರಜ್ಞಾನ, ಮಾಹಿತಿಯ ಲಭ್ಯತೆ, ಜಾಗತಿಕ ಮಟ್ಟದಲ್ಲಿ ಸಮಾನ ಆಸಕ್ತರು ಸಂಘಟಿತರಾಗಬಹುದಾದಂತಹ ಒಂದು ವ್ಯವಸ್ಥೆ. ಇದನ್ನು ಸರಿಯಾಗಿ ದುಡಿಸಿಕೊಂಡು, ಜಾಗತಿಕ ಮಟ್ಟದಲ್ಲಿ ಒಂದು ನಾಗರಿಕ ಸಮಾಜವನ್ನು ಕಟ್ಟಿಕೊಳ್ಳಬಹುದು. ಇಂತಹ ನಾಗರಿಕ ಸಮಾಜ ಪ್ರಾದೇಶಿಕ, ದೇಶದ ಮತ್ತು ಜಾಗತಿಕ ಮಟ್ಟದಲ್ಲಿ ಸಂಘಟಿಸಿಕೊಳ್ಳುವ ಮೂಲಕ, ಸಮುದಾಯದ ಹಿತಕ್ಕೆ ಮಾರಕವಾದಂತಹ ನೀತಿಗಳ ಬಗ್ಗೆ ಜನಾಂದೋಲನಗಳನ್ನು ರೂಪಿಸಬಹುದಾಗಿದೆ. ಉದ್ಯೋಗ, ವ್ಯಾಪಾರ ಮತ್ತು ಉತ್ಪಾದನೆಯ ವಲಯಗಳಲ್ಲಿ ಜಾಗತಿಕ ಮಟ್ಟದ ಸ್ಪರ್ಧೆ ಇರುವ ಕಾರಣದಿಂದ, ಸಾಮರ್ಥ್ಯವಂತರಿಗೆ ಜಾಗತಿಕ ಮಟ್ಟದಲ್ಲಿ ಎಲ್ಲಿಗೆ ಬೇಕಾದರೆ ಅಲ್ಲಿಗೆ ಹೋಗುವ ಒಂದು ಅವಕಾಶ ನಿರ್ಮಾಣವಾಗಿದೆ. ಬಹುರಾಷ್ಟ್ರೀಯ ಕಂಪನಿಗಳು ಉದ್ಯೋಗ ಮತ್ತು ಹೂಡಿಕೆಯ ಅವಕಾಶಗಳನ್ನು ಬಹಳ ದೊಡ್ಡ ಪ್ರಮಾಣದಲ್ಲಿಯೇ ಸೃಷ್ಟಿಸುತ್ತಿವೆ. ಇಂತಹ ಎಲ್ಲ ಅವಕಾಶಗಳ ಬಗ್ಗೆಯೂ ಗಮನಹರಿಸಬೇಕಿದೆ.

ಜಾಗತೀಕರಣವೆನ್ನುವ ಏಕಮುಖ ಬದಲಾವಣೆಯಲ್ಲಿ ನಮ್ಮ ಮುಂದಿರುವ ಆಯ್ಕೆಯೆಂದರೆ, ಮುಂದಿನ ದಿನಗಳಲ್ಲಿ ಆಯ್ಕೆಯ ಅವಕಾಶಗಳನ್ನು ಸಂರಕ್ಷಿಸುವುದು. ಇದಕ್ಕೆ ಬಹಳ ಪ್ರಮುಖವಾಗಿ ಅಗತ್ಯವಿರುವ ಅಂಶವೆಂದರೆ ಬದಲಾವಣೆಯ ವೇಗ ಮತ್ತು ಗತಿಯನ್ನು ಗ್ರಹಿಸುವ ಜಾಗೃತ ಮನಸ್ಸು. ಇಂತಹ ಮನಸ್ಸನ್ನು ಹಸನುಗೊಳಿಸಲು ಜ್ಞಾನದ ಅಗತ್ಯ ತುಂಬಾ ಇದೆ. ಬಹುಶಃ ಈ ಕಾರಣದಿಂದಾಗ 'ಜ್ಞಾನ' ಉತ್ಪಾದನಾ ಪ್ರಕ್ರಿಯೆಯಲ್ಲಿ ಅವಶ್ಯವಾಗಿರುವ ೫ನೆಯ ಪ್ರಮುಖ ಅಂಶವೆಂದು ಅರ್ಥಶಾಸ್ತ್ರಜ್ಞರು ಕೂಡಾ ಒತ್ತಿ ಹೇಳಿರುವುದು.


<u>ಪರಾಮರ್ಶನ ಗ್ರಂಥಗಳು</u>

೧. ಹೆಲ್ಡ್ ಡೇವಿಡ್(ಸಂ), ೨೦೦೦. **ಎ ಗ್ಲೋಬಲೈಸಿಂಗ್ ವರ್ಲ್ಡ್: ಕಲ್ಚರ್, ಎಕನಾಮಿಕ್ಸ್, ಪಾಲಿಟಿಕ್ಸ್,** ಲಂಡನ್: ಓಪನ್ ಯುನಿವರ್ಸಿಟಿ ಪ್ರೆಸ್.

೨. ಹೂಗ್‌ವೆಲ್ಟ್ ಆಂಕೀ, ೧೯೯೭. **ಗ್ಲೋಬಲೈಸೇಶನ್ ಆಂಡ್ ದಿ ಪೋಸ್ಟ್ ಕೊಲೋನಿಯಲ್ ವರ್ಲ್ಡ್: ದಿ ನ್ಯೂ ಎಕಾನಮಿ ಆಫ್ ಡೆವಲಪ್‌ಮೆಂಟ್**, ಲಂಡನ್: ಮ್ಯಾಕ್‌ಮಿಲನ್.

೩. ಅಮಾರ್ತ್ಯಸೆನ್, ***೨೦೦೫,*** "ದಿ ಆರ್ಗ್ಯುಮೆಂಟೇಟಿವ್ ಇಂಡಿಯನ್: ರೈಟಿಂಗ್ಸ್ ಆನ್ ಇಂಡಿಯನ್ ಕಲ್ಚರ್, ಹಿಸ್ಟರಿ ಆಂಡ್ ಐಡೆಂಟಿಟಿ, ನವದೆಹಲಿ: ಪೆಂಗ್ವಿನ್.

೪. ಗುರುಚರಣ್ ದಾಸ್, ೨೦೦೨. ***''ಇಂಡಿಯಾ ಅನ್ ಬೌಂಡ್: ಫ್ರಮ್ ಇಂಡಿಪೆಂಡೆನ್ಸ್ ಟು ಗ್ಲೋಬಲ್ ಇನ್‌ಫಾರ್ಮಮೇಶನ್ ಏಜ್'',*** ನವದೆಹಲಿ: ಪೆಂಗ್ವಿನ್.

೫. ಗಿಲೆನ್ ಮೌರೋ ಎಫ್, ೨೦೦೦. ***''ಈಸ್ ಗ್ಲೋಬಲೈಸೇಶನ್ ಸಿವಿಲೈಸಿಂಗ್, ಡಿಸ್ಟ್ರಿಕ್ಟೀವ್, ಆರ್ ಫೀಬಲ್? ಎಕ್ರಿಟೀಕ್ ಆಫ್ ಫೈವ್ ಕೀಡಿಬೇಟ್ಸ್ ಇನ್ ಸೋಶಿಯಲ್ ಸೈನ್ಸ್ ಲಿಟರೇಚರ್''*** ಆನ್ಯುವಲ್ ರಿವ್ಯೆ ಆಪ್ ಸೋಶಿಯಾಲಜಿ ವಾಲ್ಯೂಮ್ ೨೭, ವಾರ್ಟನ್ ಸ್ಕೂಲ್, ಡಿಪಾರ್ಟ್‌ಮೆಂಟ್ ಆಫ್ ಸೋಶಿಯಾಲಜಿ, ಯುನಿರ್ಸಿಟಿ ಆಫ್ ಪೆನ್ಸಿಲೇನಿಯಾ

೬. ಫ್ರೆಡ್ ಮಾನ್ ಬಿ. ಸ್ಟೆಜೆರ್, ೨೦೦೩. ***''ಗ್ಲೋಬಲೈಸೇಶನ್: ಎ ವೆರಿ ಶಾರ್ಟ್ ಇಂಟ್ರಡಕ್ಷನ್'',*** ನೂಯಾರ್ಕ: ಆರ್ಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್

೭. ಉದಯಕುಮಾರ್ ಇರ್ವತ್ತೂರು, ೨೦೦೭. ***''ಅಭಿವೃದ್ಧಿ ವಾಸ್ತವ ಮತ್ತು ವಿಕಲ್ಪ''*** ಬೆಂಗಳೂರು: ದಾಮಿನಿ ಪ್ರಕಾಶನ

೮. ಸ್ಟಿಗ್ಲಿಡ್ಜ್ ಜೋಸೆಫ್, ೨೦೦೨. ***''ಗ್ಲೋಬಲೈಸೇಶನ್ ಆ್ಯಂಡ್ ಇಟ್ಸ್ ಡಿಸ್‌ಕಂಡೆಂಟ್ಸ್''*** ನ್ಯೂಯಾರ್ಕ್: ಡಬ್ಲ್ಯೂ.ಡಬ್ಲ್ಯೂ, ನಾರ್ದನ್ ಆ್ಯಂಡ್ ಕಂಪನಿ

೯. ಬೆಹರಾ ಎಂ.ಸಿ., ೨೦೦೬. ***''ಗ್ಲೋಬಲೈಸಿಂಗ್ ರೂರಲ್ ಡೆವಲಪ್‌ಮೆಂಟ್: ಕಂಪೀಟಿಂಗ್ ಪ್ಯಾರಾಡೈಮ್ಸ್ ಆ್ಯಂಡ್ ಎಮರ್ಜಿಂಗ್ ರಿಯಾಲಿಟೀಸ್'',*** ನವದೆಹಲಿ: ಸೇಜ್ ಪಬ್ಲಿಕೇಶನ್ಸ್.

೧೦. ಪ್ರಭಾತ್ ಪಟ್ನಾಯಕ್, ೨೦೦೬. ***''ಟೆಕ್ನಾಲಜಿ ಎಂಡ್ ಎಂಪ್ಲಾಯ್‌ಮೆಂಟ್ ಇನ್ ಎನ್ ಓಪನ್ ಅಂಡರ್ ಡೆವಲಪಡ್ ಎಕಾನಮಿ'',*** ದಿ ಪಿಡಿಯಾ ವರ್ಕಿಗ್ ಪೆಪರ್ ಸೀರಿಸ್, ನಂ.೧.

೧೧. ಅಮಾರ್ತ್ಯಸೆನ್, ೨೦೦೪. ***''ಅಂಡರ್‌ಸ್ಟಾಂಡಿಂಗ್ ರಿಫಾರ್ಮ್ಸ್''*** ಗ್ಲೋಬಲ್ ಡೆವಲಪ್ ಮೆಂಟ್ ನೆಟವರ್ಕ್‌ನ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಟಿಪ್ಪಣಿ, ನವದೆಹಲಿ, ಜನವರಿ.

***